ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಅರಮನೆ

ಕುಂ.ವೀರಭದ್ರಪ್ಪ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಅರಮನೆ

ಕುಂ. ವೀರಭದ್ರಪ್ಪ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**ARAMANE** A Novel, written by **Kum. Veerabhadrappa**, Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧

ಪ್ರತಿಗಳು : ೧೦೦೦

ಪುಟಗಳು : XXXII + ೭೧೪

ಬೆಲೆ : ರೂ. ೧೫೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :

**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**

ನಂ. ೬೯, ಸುಬೇದಾರ್‌ಛತ್ರಂ ರೋಡ್

ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳದ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತಿವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳು ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ದಿನಾಂಕ ೧೬.೧೨.೨೦೧೦ ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ: ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್
**ಸದಸ್ಯ ಕಾರ್ಯದರ್ಶಿ**
ಶ್ರೀ ಮನುಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಮುನ್ನುಡಿ

'ಸಾಹಿತ್ಯವು ಕೇವಲ ಮನರಂಜನೆಯ ಸಾಧನವಲ್ಲ; ಸಾಹಿತಿಗೆ ಹಿರಿಯ ಸಾಮಾಜಿಕ ಜವಾಬ್ದಾರಿಯಿದೆ. ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಡಗಿರುವ ಅನ್ಯಾಯ-ಶೋಷಣೆಗಳ ವಿವಿಧ ಮುಖಗಳನ್ನು ಬಯಲಿಗೆಳೆದು, ಆ ಮೂಲಕ ಪ್ರಚಲಿತ ವ್ಯವಸ್ಥೆಯ ಬದಲಾವಣೆಗೆ ಪರೋಕ್ಷವಾಗಿ ಪ್ರಚೋದನೆ ನೀಡುವುದು ಸಾಹಿತಿಯ ಪ್ರಮುಖ ಕರ್ತವ್ಯ' ಈ ಬಗೆಯ ತಾತ್ವಿಕ ನಿಲುವಿನಿಂದ ೧೮ನೆಯ ಶತಮಾನದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮತ್ತು ೧೯ನೆಯ ಶತಮಾನದ ಭಾರತದಲ್ಲಿ 'ವಾಸ್ತವತಾ ವಾದ' (Realism) ಮೂಡಿ ಬಂದಿತು. ವಾಸ್ತವತಾ ವಾದದ ವೈಚಾರಿಕ ತಳಹದಿಯೆಂದರೆ, 'ಕಾರ್ಯ-ಕಾರಣ ಸಂಬಂಧ'ವನ್ನಾಧರಿಸಿದ ತರ್ಕ, ಇಂದ್ರಿಯಗ್ರಾಹ್ಯ ಸತ್ಯವನ್ನು ಮಾತ್ರಒಪ್ಪುವ ವೈಜ್ಞಾನಿಕ ದೃಷ್ಟಿಕೋನ, ಮತ್ತು ವರ್ಣ-ವರ್ಗಭೇದಗಳಿಂದ ಮುಕ್ತವಾದ ಸಮಾಜವನ್ನು ಕಟ್ಟಬಹುದೆಂಬ ಆದರ್ಶವಾದ. ಈ ತಾತ್ವಿಕ ನೆಲೆಯಿಂದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮತ್ತು ಭಾರತದಲ್ಲಿ ಕಳೆದ ನೂರಿನ್ನೂರು ವರ್ಷಗಳ ಅವಧಿಯಲ್ಲಿ ಅನೇಕ ಮಹತ್ವಪೂರ್ಣ ಕಾವ್ಯ-ನಾಟಕ-ಕಾದಂಬರಿಗಳು ಜನ್ಮ ತಳೆದುದು ಇಂದು ಇತಿಹಾಸ.

ಹಾಗೆಯೇ, ಕಳೆದ ಶತಮಾನದ ಆದಿ ಭಾಗದಲ್ಲಿಯೆ ಅನೇಕ ಸಾಹಿತಿಗಳಿಗೆ ವಾಸ್ತವತಾವಾದ ತೀವ್ರಅತೃಪ್ತಿಯನ್ನುಂಟು ಮಾಡಲು ಪ್ರಾರಂಭಿಸಿದುದೂ ಇಂದು ಇತಿಹಾಸ. ಈ ಅತೃಪ್ತಿಗೆ ಕಾರಣ ವಾಸ್ತವತಾವಾದ ಕಟ್ಟಿಕೊಡುವ 'ವಾಸ್ತವ'ದ ಸೀಮಿತ ಚೌಕಟ್ಟು; ಮತ್ತು ಆ ಚೌಕಟ್ಟಿನಿಂದ ಹೊರಗುಳಿಯುವ ಬದುಕಿನ ಅನೇಕ ಹಾಗೂ ಬಹುಮುಖ್ಯ ಸಂಗತಿಗಳು. ಸೂಕ್ಷ್ಮ ಮಾನವ ಸಂಬಂಧಗಳು ಮತ್ತು ಸಂಕೀರ್ಣ ಭಾವನೆಗಳು, ಮಾನವನಿಗೆ ಪ್ರಾಣೀ-ಪಕ್ಷಿ-ಕ್ರಿಮಿ-ಕೀಟಗಳೊಡನೆ ಇರುವ ನಿಕಟ ಸಂಪರ್ಕ ಮತ್ತು ಸಹವಾಸ, ಮುಖ್ಯವಾಗಿ ಜನ್ಮ-ಮರಣಗಳ ರಹಸ್ಯ ಮತ್ತು ಬದುಕಿನಲ್ಲಿ ದೇವರು-ಧರ್ಮ-ಧಾರ್ಮಿಕಾಚರಣೆಗಳು ಇವುಗಳಿಗಿರುವ ಸ್ಥಾನ -ಇವೆಲ್ಲವೂಕಾರ್ಯ-ಕಾರಣತರ್ಕ ಹಾಗೂ ವೈಜ್ಞಾನಿಕ ವಿಶ್ಲೇಷಣೆಯನ್ನು ಮೀರಿದವುಗಳು. ಆದ್ದರಿಂದ, ವಾಸ್ತವತಾವಾದದ ಮಿತಿಗಳನ್ನು ಮೀರಲು 'ವಾಸ್ತವ'ದ ಗ್ರಹಿಕೆಯನ್ನೇ ಹೆಚ್ಚು ವಿಶಾಲಗೊಳಿಸಲು ಸಾಹಿತಿಗಳು ಅನೇಕ ಸಾಧ್ಯ

ಮಾರ್ಗಗಳನ್ನು ಶೋಧಿಸಲು ಉದ್ಯುಕ್ತರಾದರು. ಪರಿಣಾಮತಃ ಸಾಂಕೇತಿಕತೆ(Symbolism), ಅನ್ಯ ಕೃತಿ ಸೂಚನೆಗಳು (Allusions), ಅತೀಂದ್ರಿಯವಾದ (transcendentalism) ಅತಿವಾಸ್ತವವಾದ (Surrealism) ವಾಸ್ತವ -ಭ್ರಮಾವಾದ (Magic Realism) ಇತ್ಯಾದಿ ಗ್ರಹಿಕೆಯ ಕ್ರಮಗಳು ಮತ್ತು ಕಥನ ತಂತ್ರಗಳು ಪಾಶ್ಚಿಮಾತ್ಯ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದುವು.

ಕನ್ನಡ (ಭಾರತೀಯ) ಸಾಹಿತ್ಯದಲ್ಲಿಯೂ ಇಂತಹುದೇ ಪರಿಸ್ಥಿತಿ ಕಳೆದ ಶತಮಾನದ ಕೊನೆಯ ಭಾಗದಲ್ಲಿ ಕಂಡುಬಂದಿತು. **ಇಂದಿರಾಬಾಯಿ** ಕಾದಂಬರಿಯಿಂದ ೧೮೯೯ರಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ವಾಸ್ತವತಾವಾದ ನಂತರದ ಐದಾರು ದಶಕಗಳಲ್ಲಿಯೇ ಸಾಹಿತಿಗಳಿಗೆ ಯಾಂತ್ರಿಕವಾಗಿ ಕಾಣಲಾರಂಭಿಸಿತು(ಹಾಗೆ ನೋಡಿದರೆ, ಪ್ರಗತಿಶೀಲ ಲೇಖಕರನ್ನು ಹೊರತುಪಡಿಸಿದರೆ, ನವೋದಯ-ನವ್ಯ-ನವ್ಯೋತ್ತರ ಕನ್ನಡ ಲೇಖಕರಲ್ಲಿ ಯಾರೂ ಕಟುವಾಸ್ತವವಾದಿಗಳಾಗಿರಲಿಲ್ಲ. ಕುವೆಂಪು ಅವರ **ಮಲೆಗಳಲ್ಲಿ ಮದುಮಗಳು** ಕಾದಂಬರಿಯೇ ಅನೇಕ ಸಂದರ್ಭಗಳಲ್ಲಿ 'ವಾಸ್ತವ'ದ ಗ್ರಹಿಕೆಯನ್ನು ಬದಲಾಯಿಸುತ್ತದೆ; ಕಾದಂಬರಿಯ ಜಗತ್ತಿನಲ್ಲಿ, ಮೇಗರವಳ್ಳಿಯಲ್ಲಾಗುವ ಮತಾಂತರದ ಪ್ರಯತ್ನ ದೂರದ ಸೇಂಟ್ ಲಾರೆನ್ಸ್ ದ್ವೀಪದಲ್ಲಿದ್ದ ಸ್ವಾಮಿ ವಿವೇಕಾನಂದರಿಗೆ ಕೂಡಲೇ ಅರಿವಾಗಿ ಅವರು ಘಟ್ಟಿಯಾಗಿ ನಗುವುದು 'ವಾಸ್ತವವೇ'. ಹೆಚ್ಚಿನ ಕನ್ನಡ ಲೇಖಕರು ಪಶ್ಚಿಮದ ವಾಸ್ತವತಾವಾದವನ್ನು 'ಸುಧಾರಣಾವಾದ'ವನ್ನಾಗಿ ರೂಪಾಂತರಿಸಿದ್ದರು). ಕಳೆದ ಶತಮಾನದ ಉತ್ತರಾರ್ಧದಲ್ಲಿ ಹೊರಬಂದ ಹೆಚ್ಚಿನ ಕೃತಿಗಳು (ನಮ್ಮ ಚರ್ಚೆಯನ್ನು ಕಾದಂಬರಿ ಪ್ರಭೇದಕ್ಕೆ ಸೀಮಿತಗೊಳಿಸುವುದಾದರೆ) ಪ್ರಭುಶಂಕರ ಅವರ **ಬೆರಗು,** ಕಾಮರೂಪಿ ಅವರ **ಕುದುರೆ ಮೊಟ್ಟೆ,** ಗಿರಿ ಅವರ **ಗತಿ-ಸ್ಥಿತಿ,** ತೇಜಸ್ವಿ ಅವರ **ಜುಗಾರಿ ಕ್ರಾಸ್,** ಚಂದ್ರಶೇಖರ ಕಂಬಾರರ **ಚಕೋರಿ,** ಇತ್ಯಾದಿ ಕೃತಿಗಳೆಲ್ಲಮೂವಾಸ್ತವತಾವಾದದ ಮಿತಿಗಳನ್ನು ಮೀರಲು ಪ್ರಯತ್ನಿಸುವಂತಹವುಗಳೇ. ಈ ದಿಕ್ಕಿನಲ್ಲಿ ೧೯೮೪ರಲ್ಲಿ ಹೊರಬಂದ ದೇವನೂರು ಮಹಾದೇವರ **ಕುಸುಮಬಾಲೆ** ಒಂದು ಮಹತ್ವದ ಮೈಲಿಗಲ್ಲು; ಸಮಕಾಲೀನತೆಗೆ ಬದ್ಧವಾಗಿದ್ದೂ ಪುರಾಣ-ಐತಿಹ್ಯಗಳು, ಜಾನಪದ ಕಥನ ತಂತ್ರಗಳು, ಇವೆಲ್ಲವನ್ನೂ ಅದ್ಭುತವಾಗಿ ದುಡಿಸಿಕೊಳ್ಳುವ ಕೃತಿ. ಕುಂವೀ ಅವರ **ಅರಮನೆ** ಇದೇ ದಾರಿಯಲ್ಲಿ ಇನ್ನೂ ಹೆಚ್ಚು ಮಹತ್ವಾಕಾಂಕ್ಷೆಯಿಂದ ಸಾಗುವ ಬೃಹತ್ಕೃತಿ.

ಈವರೆಗೆ ಹನ್ನೊಂದು ಕಾದಂಬರಿಗಳು, ಎಂಟು ಕಥಾ ಸಂಕಲನಗಳು,

ಚಾಪ್ಲಿನ್ ಜೀವನ ಚರಿತ್ರೆ, ಇತ್ಯಾದಿ ಒಟ್ಟು ೩೦ ಕೃತಿಗಳನ್ನು ರಚಿಸಿರುವ "ಕುಂವೀ" ಎಂದೇ ಪ್ರಸಿದ್ಧರಾಗಿರುವ ಕುಂ.ವೀರಭದ್ರಪ್ಪನವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದುದು ಉಗ್ರವಾಸ್ತವತಾವಾದಿ- ಬಂಡಾಯ ಸಾಹಿತಿಯಾಗಿಯೇ. ಅವರ "ದೇವರ ಹೆಣ".... "ಎಲುಗನೆಂಬ ಕೊರಚನೂ..."... "ಕೆಂಡದ ಮಳೆ ಕರೆವಲ್ಲಿ..." ಇತ್ಯಾದಿ ಕಥೆಗಳು; ಮತ್ತು **ಕಪ್ಪು, ಆಸ್ತಿ, ಯಾಪಿಲ್ಲು,** ಇತ್ಯಾದಿ ಕಾದಂಬರಿಗಳು ವಾಸ್ತವತಾವಾದವನ್ನೇ ಸಂಪೂರ್ಣವಾಗಿ ಒಪ್ಪಿಕೊಂಡು, ಶ್ರೇಣೀಕೃತ ಜಾತ್ಯಾಧಾರಿತ ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಉಗ್ರವಾಗಿ ಪ್ರತಿಭಟಿಸುತ್ತವೆ, ಆ ವ್ಯವಸ್ಥೆಯನ್ನು ಬದಲಾಯಿಸಲು ಒತ್ತಾಯಿಸುತ್ತವೆ.

ಆದರೆ, ಕ್ರಮೇಣ ಇವರಿಗೂ ವಾಸ್ತವತಾವಾದದ ಇತಿಮಿತಿಗಳು ಗೋಚರಿಸಲಾರಂಭಿಸಿದುವು ಎಂಬುದಕ್ಕೆ ೧೯೯೮ರಲ್ಲಿ ಹೊರಬಂದ ಇವರ **ಶಾಮಣ್ಣ** ಕಾದಂಬರಿಯೇ ಸಾಕ್ಷಿ. ಈ ಬೃಹತ್ಕಾದಂಬರಿ ಯಲ್ಲಿ ಕುಂವೀ ಉತ್ಪ್ರೇಕ್ಷೆ, ವ್ಯಂಗ್ಯ, ವಿಡಂಬನೆ, ಅನ್ಯೋಕ್ತಿ, ಇತ್ಯಾದಿ ಅನೇಕ ಕಥನ ತಂತ್ರಗಳನ್ನು ಉಪಯೋಗಿಸುತ್ತಾ, ಸಮಕಾಲೀನ ಇತಿಹಾಸ ಮತ್ತು ವಾಸ್ತವತೆ ಇವುಗಳನ್ನು ಬೆಸೆಯಲು ಪ್ರಯತ್ನಿಸುತ್ತಾರೆ. ಇವರ ಕೃತಿಯ ನಾಯಕ ಶಾಮಣ್ಣ ಪರಂಪರಾಗತ ಜಾತಿ ವ್ಯವಸ್ಥೆಯ ವಿರುದ್ಧ ತನ್ನದೇ ರೀತಿಯಲ್ಲಿ ಬಂಡು ಹೂಡುತ್ತಾನೆ. (ಆದರೆ, ಪ್ರಾಯಃ ಇನ್ನೂ ಇವರಿಗೇ ತಮ್ಮ ಮಾರ್ಗದ ಸ್ಪಷ್ಟ ಕಲ್ಪನೆ ಇಲ್ಲದಿದುದರಿಂದ ಅಥವಾ ಪ್ರಸಿದ್ಧ ಜರ್ಮನ್ ಕಾದಂಬರಿಕಾರ ಹರ್ಮನ್ ಹೆಸೆಯ **ಸ್ಟೆಪೆನ್‌ವುಲ್ಫ್** ಕಾದಂಬರಿಯನ್ನು ಮಾದರಿಯಾಗಿ ಸ್ವೀಕರಿಸಿದ್ದುದರಿಂದ?) ಕಾದಂಬರಿ ಸಂಪೂರ್ಣವಾಗಿ ಯಶಸ್ವಿಯಾಗುವುದಿಲ್ಲ.

'**ಶಾಮಣ್ಣ**' ಬರೆಯುವ ಕಾಲದಲ್ಲಿ ಮತ್ತು ಅನಂತರ ಕುಂವೀ ಅವರ ಲಕ್ಷ್ಯವಿದ್ದುದು ವಾಸ್ತವತಾವಾದದ ಮಿತಿಗಳನ್ನು ಮೀರುವುದಕ್ಕಿಂತ ಹೆಚ್ಚಾಗಿ 'ವಾಸ್ತವ' ಎಂಬ ಪರಿಕಲ್ಪನೆಯನ್ನೇ ಹೆಚ್ಚು ವಿಶಾಲವಾಗಿ ಅರ್ಥೈಸುವುದರಲ್ಲಿ; ಅವರು ಶೋಧಿಸುತ್ತಿದ್ದುದು ಚರಿತ್ರೆ, ಐತಿಹ್ಯ, ಸ್ಥಳಪುರಾಣ, ನಂಬಿಕೆಗಳು, ಆಕ್ರಮಣ-ಶೋಷಣೆ-ಪಾಲನೆ ಇತ್ಯಾದಿ ಅಧಿಕಾರಾಧಾರಿತ ಸಂಬಂಧಗಳು, ವಿವಿಧ ಸಾಮಾಜಿಕ ವರ್ಗಗಳ ಬದುಕಿನ ವಿಶಿಷ್ಟ ಗಂಭೀರ ಕ್ಷುದ್ರವಿವರಗಳು ಇವೆಲ್ಲವನ್ನೂ ಒಳಗೊಳ್ಳುವ ಒಂದು ಕಥನ ಪ್ರಕಾರವನ್ನು ಈ ಸಂದರ್ಭದಲ್ಲಿ ಅವರ ಕಣ್ಣಿಗೆ ಬಿದ್ದವುಗಳೆಂದರೆ ಕನ್ನಡದ (ಇತರ ಭಾರತೀಯ ಭಾಷೆಗಳ) ಮೌಖಿಕ ಮಹಾಕಾವ್ಯಗಳು.

**ಮಲೆ ಮಾದೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗ, ಪಾಲ್ನಾಟಿ ವೀರುಲ ಕಥಾ,** ಇತ್ಯಾದಿ ಮೌಖಿಕ ಮಹಾಕಥನಗಳ ವ್ಯಾಪ್ತಿ ಮತ್ತು ಅವುಗಳು ನಿರ್ವಹಿಸುವ

ಕಾರ್ಯಗಳು ಅದ್ಭುತ. ಈ ಮಹಾಕಥನಗಳು ನಿರಾಯಾಸವಾಗಿ ಆಯಾಯಾ ಸಮುದಾಯಗಳ/ಜನಾಂಗಗಳ ಇತಿಹಾಸ, ಧಾರ್ಮಿಕ-ನೈತಿಕ ಸಂಹಿತೆ, ಸಾಂಸ್ಕೃತಿಕ ದಾಖಲೆ ಮತ್ತು ಶೃಂಗಾರ-ವೀರ-ಕರುಣಾದಿ ರಸಗಳನ್ನೊಳಗೊಳ್ಳುವ ಸಾಹಿತ್ಯಕ ಕಥನಗಳು ಇವೆಲ್ಲಮೂಆಗುತ್ತದೆ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ಇವುಗಳ ನಿರೂಪಣಾ ಧಾಟಿ ದೇವದೇವತೆಗಳ ಮಹತ್ಕಾರ್ಯಗಳಾಗಲಿ ಅವರ ನಡುವಿನ ಕ್ಷುಲ್ಲಕ ಕಲಹಗಳಾಗಲಿ, ಅತಿ ಮಾನವರ ಸಾಹಸ ಕೃತ್ಯಗಳಾಗಲಿ ಹುಲುಮಾನವರ ಹಾಸ್ಯಾಸ್ಪದ ದೌರ್ಬಲ್ಯಗಳಾಗಲಿ, ಮಾನವ ಜಗತ್ತಿನ ನೋವು-ನಲಿವುಗಳಾಗಲಿ, ಪ್ರಾಣಿ-ಕ್ರಿಮಿ-ಕೀಟಗಳ ಕಷ್ಟ-ಕಾರ್ಪಣ್ಯಗಳಾಗಲಿ, ಒಂದೇ ಸಮಾನ ಧಾಟಿ ಯಲ್ಲಿ ಈ ಕಾವ್ಯಗಳ ನಿರೂಪಣೆ ಪ್ರಾರಂಭದಿಂದ ಮುಕ್ತಾಯದವರೆಗೂ ಸಾಗುತ್ತದೆ. ವಿಶ್ವಸೃಷ್ಟಿಯಿಂದ ಪ್ರಾರಂಭವಾಗುವ ಈ ಕಾವ್ಯಗಳ ಆಕೃತಿ ಮುಕ್ತವಾಗಿರುತ್ತದೆ; ಪೀಳಿಗೆಯಿಂದ ಪೀಳಿಗೆಗೆ, ಗಾಯಕನಿಂದ ಗಾಯಕನಿಗೆ, ಈ ಕಾವ್ಯಗಳು ಬೆಳೆಯುತ್ತವೆ, ಬದಲಾಗುತ್ತವೆ. ಕುಂವೀ ಅವರ **'ಅರಮನೆ'** ಕಾದಂಬರಿಯ ಮಾದರಿ ಈ ಬಗೆಯ ಮೌಖಿಕ ಮಹಾಕಾವ್ಯಗಳು. ಆ ಕಾರಣದಿಂದಲೇ ಅವರು ತಮ್ಮ ಕೃತಿಯನ್ನು "ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಕಥಾನಕ" ಎಂದು ನಿರ್ದೇಶಿಸುತ್ತಾರೆ.

ಆಕೃತಿ, ಧಾಟಿ-ಶೈಲಿ ಇವುಗಳ ನೆಲೆಯಲ್ಲಿ ಈ ಕೃತಿಯ ಮಾದರಿ ಮೌಖಿಕ ಮಹಾಕಾವ್ಯಗಳು, ಮತ್ತು ಈ ಆಯ್ಕೆ ಪ್ರಜ್ಞಾಪೂರ್ವಕ ಎಂಬುದು ಪ್ರಾಸಂಗಿಕವಾಗಿ ಅಲ್ಲಲ್ಲಿ ಈ ಕಾದಂಬರಿಯಲ್ಲಿ ಬರುವ ವಿವರಣೆ-ವ್ಯಾಖ್ಯಾನಗಳಿಂದ ಸ್ಪಷ್ಟವಾಗುತ್ತದೆ. ಒಂದು ಸಂದರ್ಭದಲ್ಲಿ ನಿರೂಪಕ-ಕಥನಕಾರ ಹೀಗೆ ಚಿಂತಿಸುತ್ತಾನೆ. "...ಯಿದ್ದದ್ದು ಯಿದ್ದಂಗ ಹೇಳಿದರ ಕೇಳುಗರನೆಲ್ಲಿಂದ ತರೋದು? ಮಾತಂದರ ಮಾಮೂಲಿ ಮಾತೇನ? ದಯವಕ್ಕ, ಅಲವುಕಿಕಕ್ಕ, ಆಸ್ತೀಕಕ್ಕ ಸಂಬಂಧಿಸಿದ್ದಯ್ತೆ; ಮಾತಿಗೆ ಬೆಲೆ ಬರೋದು ವಾಸ್ತವವನ್ನು ಮೆಟ್ಟಿದಾಗ ಮಾತ್ರ. ಆಗ ಮಾತ್ರಕಣ್ಣು ಮುಚ್ಚಿ ನೋಡಲಿಕ್ಕಾಯ್ತದ.. ಕಿವಿ ಮುಚ್ಚಿ ಕೇಳಲಿಕ್ಕಾಯ್ತದ.. ಮೂಗಿನ ಹಂಗು ತೊರೆದು ವಾಸಣೆ ಹಿಡೀಲಿಕ್ಕಾಯ್ತದ.. ವರ್ತಮಾನದ ರೇಜಿಗೆಯಿಂದ ದೂರ ವುಳಿದು ಲೋಕಸಂಚಾರ ಮಾಡಲಕ್ಕಾಯ್ತದ.." (ಪುಟ ೪೩೬)

**ಅರಮನೆ** ಎಂಬ ಈ ಬೃಹತ್ಕಥನ ಒಂದು ಕಾಲಘಟ್ಟದಲ್ಲಿದ್ದ ಗ್ರಾಮೀಣ ಭಾರತದ ಚಾರಿತ್ರಿಕ-ಧಾರ್ಮಿಕ-ಸಾಂಸ್ಕೃತಿಕ-ಸಾಹಿತ್ಯಕ ಆಯಾಮಗಳನ್ನು ವಸ್ತುನಿಷ«ವಾಗಿ ಆದರೆ ಆತ್ಮೀಯವಾಗಿ ಕಟ್ಟಿ ಕೊಡುತ್ತದೆ. ಈ ಕಾಲಘಟ್ಟ ಯಾವುದೆಂಬುದು ಕಥನದ ಮೊದಲನೆಯ ವಾಕ್ಯದಲ್ಲಿಯೇ ಗುರುತಿಸಲ್ಪಡು ತ್ತದೆ:

"ವಾರದ ಹಿಂದೆಯಷ್ಟೇ... ಥಾಮಸು ಮನ್ರೋ ಸಾಹೇಬನು..."

ಸರ್ ಥಾಮಸ್ ಮನ್ರೋ (೧೭೬೧-೧೮೨೭) ಐತಿಹಾಸಿಕ ವ್ಯಕ್ತಿ ಮತ್ತು ಅವನು ಮಂಗಳೂರು ಸೇರಿದಂತೆ ಕರ್ನಾಟಕದ ಮತ್ತು ಆಂಧ್ರಪ್ರದೇಶದ ಗಡಿಭಾಗಗಳಲ್ಲಿ ಕಲೆಕ್ಟರ್‌ನಾಗಿ ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದ ಬ್ರಿಟಿಷ್ ಅಧಿಕಾರಿ. ಈ ಮನ್ರೋನ ಅಧಿಕಾರಾವಧಿ ಕೃತಿಗೆ ಒಂದು ಬಗೆಯ ಸ್ಥೂಲ ಚೌಕಟ್ಟನ್ನು ಒದಗಿಸುತ್ತದೆ: ಅವನು ಕಲೆಕ್ಟರ್ ಆಗಿ ನೇಮಕವಾದಾಗಿನಿಂದ ಪ್ರಾರಂಭವಾಗುವ ಈ ಕೃತಿ (ಭಾರತದಲ್ಲಿಯೇ ಆಗುವ) ಅವನ ಮರಣದೊಂದಿಗೆ ಮುಗಿಯುತ್ತದೆ. ಈ ಸ್ಥೂಲ ಚೌಕಟ್ಟಿನೊಳಗೆ ಇತರ ಚಾರಿತ್ರಿಕ ವ್ಯಕ್ತಿ-ಘಟನೆಗಳು, ಐತಿಹ್ಯಗಳು, ಸ್ಥಳಪುರಾಣಗಳು, ಸಾಮೂಹಿಕ ಆಚರಣೆಗಳು, ರೋಚಕ ಉಪ ಕಥೆಗಳು, ಅವಾಸ್ತವ ಹಾಗೂ ವಾಸ್ತವಾತೀತ ಸಂಗತಿಗಳು-ಇವೆಲ್ಲವನ್ನೂ ಬಳಸಿಕೊಂಡು, ವಸಾಹತುಶಾಹಿಯ ಪ್ರಾರಂಭಿಕ ಘಟ್ಟದ ಗ್ರಾಮೀಣ ಭಾರತದ ಬದುಕಿನ ಒಂದು ಸಮಗ್ರಚಿತ್ರವನ್ನು ಕೃತಿ ಕಟ್ಟಿಕೊಡುತ್ತದೆ. ನಿರೂಪಣಾ ಕ್ರಮ **ಮಂಟೇಸ್ವಾಮಿ, ಎಲ್ಲಮ್ಮ ಕಥಾ,** ಇತ್ಯಾದಿ ಕಥನಗಳನ್ನು ಪ್ರಸ್ತುತಪಡಿಸುವ ನೀಲಗಾರರು, ಗೊಂದಲಿಗರು, ಮುಂತಾದ ಧಾರ್ಮಿಕ ವೃತ್ತಿಗಾಯಕರನ್ನು ಧಾಟಿ ಮತ್ತು ಶೈಲಿಗಳಲ್ಲಿ ಅನುಸರಿಸುತ್ತದೆ.

ಈಗ ಈ ಕೃತಿ ಅನಾವರಣಗೊಳಿಸುವ ವಸಾಹತುಶಾಹಿ ಯುಗದ ಆರಂಭಿಕ ಕಾಲದಲ್ಲಿದ್ದ ಗ್ರಾಮೀಣ ಭಾರತದ ವಿವಿಧ ಮುಖಗಳನ್ನು ಸ್ವಲ್ಪ ವಿವರವಾಗಿ ನೋಡಬಹುದು.

**೧. ಚಾರಿತ್ರಿಕ ಆಯಾಮ:** ಇತಿಹಾಸಕಾರರು ದಾಖಲಿಸುವಂತೆ, ಸರ್ ಥಾಮಸ್ ಮನ್ರೋ ಒಬ್ಬ ಅಪರೂಪದ ಅಸಾಧಾರಣ ವ್ಯಕ್ತಿ. ಕಾರನ್‌ವಾಲಿಸ್‌ನ ಸಮಕಾಲೀನನಾಗಿದ್ದ ಮತ್ತು ಟಿಪ್ಪುವಿನ ವಿರುದ್ಧ ಕೊನೆಯ ಮೈಸೂರು ಯುದ್ಧದಲ್ಲಿ ಭಾಗವಹಿಸಿದ್ದ ಮನ್ರೋ ಭಾರತೀಯ ಸಂಸ್ಕೃತಿಯನ್ನು, ಭಾರತೀಯ ಭಾಷೆಗಳನ್ನು, ಭಾರತದ ಜನಸಾಮಾನ್ಯರನ್ನು ಪ್ರೀತಿಸಿದಷ್ಟು ಅಂದಿನ ಕಾಲದ ಮತ್ತಾವ ಬ್ರಿಟಿಷ್/ ಭಾರತೀಯ ಅಧಿಕಾರಿಯೂ ಇರಲಿಲ್ಲ. **ಅರಮನೆ** ಈ ಅಧಿಕಾರಿಯ ವ್ಯಕ್ತಿತ್ವ-ಸಾಧನೆ-ಸಂಘರ್ಷಗಳನ್ನು ಮನೋಜ್ಞವಾಗಿ ಚಿತ್ರಿಸುತ್ತದೆ.

ಈ ಕೃತಿಯಲ್ಲಿ ಕೇಂದ್ರಪಾತ್ರವೆಂದು ಕರೆಯಬಹುದಾದದ್ದು ಯಾವುದಾದರೂ ಇದ್ದರೆ ಅದು ಮನ್ರೋ ಪಾತ್ರ. ಮನ್ರೋ ಬ್ರಿಟಿಷ್ ವಸಾಹತುಶಾಹಿಯ 'ಪ್ಯಟರ್ನಲಿಸ್ಟಿಕ್' ಅಥವಾ 'ಪಿತೃಸಮಾನ' ಮುಖವನ್ನು ಪ್ರತಿನಿಧಿಸುತ್ತಾನೆ; ಮತ್ತು ಈ ಮುಖವನ್ನು ಕೃತಿ ಆಪ್ತವಾಗಿ, ವಿವರವಾಗಿ, ದರ್ಶಿಸುತ್ತದೆ. ಬಿಡುವಿಲ್ಲದೆ

ಸದಾ ಸಂಚರಿಸುತ್ತಿದ್ದ, ದುಡಿಯುತ್ತಿದ್ದ ಮನ್ರೋ ಪ್ರತಿ ಸಣ್ಣ-ಪುಟ್ಟ ರಾಜ್ಯ-ಪಾಳೆಯ ಪಟ್ಟುಗಳಲ್ಲೂ ಆಯಾಯ ಪಾಳಯಗಾರರಿಂದ/ಜಮೀಂದಾರರಿಂದ ಭೂಮಿಯನ್ನು ವಶಪಡಿಸಿಕೊಂಡು ಸ್ಥಳೀಯ ಭೂಮಿಹೀನರಿಗೆ ಹಂಚುತ್ತಿದ್ದನು; ತನ್ನ ಕೈಕೆಳಗಿನ ಬ್ರಿಟಿಷ್ ಅಧಿಕಾರಿಗಳಿಗೆ ಪ್ರಾಂತಿಯ ಭಾಷೆ-ಸಂಸ್ಕೃತಿಗಳನ್ನು ಕಲಿಯಲೇಬೇಕೆಂದು ನಿರ್ಬಂಧಿಸುತ್ತಿದ್ದನು; ಪ್ರತಿ ಗ್ರಾಮದಲ್ಲಿಯೂ ಕನ್ನಡ/ ತೆಲುಗು ಇತ್ಯಾದಿ ಸ್ಥಳೀಯ ಭಾಷೆಗಳ ಕಲಿಕೆಗೆ ಶಾಲೆಗಳನ್ನು ತೆರೆಯುತ್ತಿದ್ದನು; ...ಮನ್ರೋನ ಇವೆಲ್ಲಾ ಗುಣಗಳನ್ನೂ ಕೃತಿ ವಿವರವಾಗಿ ದಾಖಲಿಸುತ್ತದೆ. ಮನ್ರೋ ಸತ್ತಾಗ ಹಳ್ಳಿಯ ಅಶಿಕ್ಷಿತ ಮುದುಕಿಯೊಬ್ಬಳು ಅವನ ಇಡೀ ಬದುಕಿನ ಸಾಧನೆಗಳನ್ನು ಹೀಗೆ ಗುರುತಿಸುತ್ತಾಳೆ: “ಮುದ್ಯೋರಿಗೆ ಮಗನಾಗಿದ್ದನಲ್ಲಾ.. ದಿಕ್ಕು ದೆಸೆಯಿಲ್ಲದೇವಕ್ಕೆ ತಂದೆಯಾಗಿದ್ದನಲ್ಲಾ.. ವುಳುಮೆ ಮಾಡಲಕ ಭೂಮಿಸಾಮಿ ಕೊಟ್ಟ, ದುಡಿಯೋ ಕಯ್ಯಿಗಳಿಗೆ ಕಸುವು ಕೊಟ್ಟ.. ಊರೂರಿಗೊಂದೊಂದು ಭಾವಿ ತೋಡಿಸಿ ಕುಡಿಯೋದಕ್ಕೆ ಸೇದ್ಯವಿಗೆ ನೀರು ಕೊಟ್ಟ, ಮರಗಿಡ ನೆಟ್ಟು ಕುಂಡರಲಕ ನೆಳ್ಳು ಕೊಟ್ಟ”(ಪುಟ ೫೩೫). ಈ ಕಾರಣದಿಂದಲೇ ಅವನು ಜನಸಾಮಾನ್ಯರ ಹೃದಯದಲ್ಲಿ ‘ಮಂಥೋಳ ಸಾಹೇಬ’, ‘ಮಂಡ್ರಪ್ಪ ದೊರೆ’, ‘ಮಂಡ್ರಯ್ಯ ದೇವರು’ ಇತ್ಯಾದಿ ಹೆಸರುಗಳಿಂದ ಶಾಶ್ವತವಾಗಿ ನೆಲೆಸಿದ.

ಕೃತಿಯಲ್ಲಿ ವಸಾಹತುಶಾಹಿಯ ಒಂದು ಮುಖವನ್ನು ಮನ್ರೋ ಪ್ರತಿನಿಧಿಸಿದರೆ, ಎಡವರ್ಡ್, ಹೆನ್ರಿ, ಥಾಕರೆ, ರೆಬೇರೊ, ಪಾದ್ರಿಗಳು ಇತ್ಯಾದಿ ಅದರ ಇನ್ನೊಂದು ಮುಖವನ್ನು ಪ್ರತಿನಿಧಿಸುತ್ತಾರೆ. ಅವರಿಗೆಲ್ಲಾ ಇರುವ ಏಕಮಾತ್ರಗುರಿಯೆಂದರೆ ಹೆಚ್ಚು ಹೆಚ್ಚು ಭಾಗಗಳಲ್ಲಿ ಬ್ರಿಟಿಷ್ ಅಧಿಕಾರವನ್ನು ವಿಸ್ತರಿಸುವುದು ಮತ್ತು ಆ ಮೂಲಕ ಉನ್ನತೋನ್ನತ ಪದವಿಗಳನ್ನು ಪಡೆಯುವುದು; ಅಥವಾ ಹೆಚ್ಚು ಹೆಚ್ಚು ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸುವುದು ಮತ್ತೆ ಕೆಲವು ಅಧಿಕಾರಿಗಳಿಗೆ ಭಾರತವೆಂದರೆ ಒಂದು ಸುಲಭವಾಗಿ ಕೊಳ್ಳೆ ಹೊಡೆಯಬಹುದಾದ ಅನಂತ ಭಂಡಾರ. “ತಮಗೆ ಮಾಂತರಿಕ ಸಗುತಿಯಿದ್ದಲ್ಲಿ ಯೀ ಪಟ್ಟಣದ ಮಂದಿಯನ್ನು ಪುಟ್ಟ ಪುಟ್ಟ ಗೊಂಬಿಗಳನ್ನಾಗಿ ಮಾಡಬೌದಿತ್ತಲ್ಲ... ಬೆವರು ವಾಸನೆ ಸಹಿತ ಯಿವರನ್ನು ತಮ್ಮ ಗ್ರೇಟು ಬ್ರಿಟನ್ನಿಗೋ ಫ್ರಾನ್ಸಿಗೋ ಸಾಗಾಣಿಕೆ ಮಾಡಿ ಅಪಾರ ಹಣ ಸಂಪಾದಿಸಬಹುದಿತ್ತಲ್ಲ”(ಪುಟ ೫೧) ಎಂದು ಯಸಲೆ, ಬಿಸಲೆ ಮುಂತಾದವರು ವಿಷಾದಿಸುತ್ತಾರೆ.

ಈ ಸಂದರ್ಭದಲ್ಲಿ **ಅರಮನೆ** ಕಟ್ಟಿಕೊಡುವ ಅತಿ ಮುಖ್ಯ ಚಾರಿತ್ರಿಕ ಅಂಶವೆಂದರೆ ೧೮-೧೯ನೆಯ ಶತಮಾನಗಳಲ್ಲಿ ಹೇಗೆ ಮತ್ತು ಏಕೆ ವಸಾಹತುಶಾಹಿ

ಇಡೀ ಭಾರತವನ್ನು ಸುಲಭವಾಗಿ ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳಲು ಸಾಧ್ಯವಾಯಿತು ಎಂಬುದು. ಅಂದಿದ್ದ ನೂರಾರು ರಾಜ-ಮಹಾರಾಜರ, ಸಾವಿರಾರು ಪಾಳೆಯಗಾರ-ಜಮೀನ್ದಾರರ ಊಳಿಗಮಾನ್ಯ ವ್ಯವಸ್ಥೆ ಎಷ್ಟು ಕ್ರೂರವಾಗಿತ್ತೆಂದರೆ ಭಾರತೀಯ ಜನಸಾಮಾನ್ಯರಿಗೆ ಬ್ರಿಟಿಷ್ ಆಡಳಿತ ಆ ಕ್ರೂರ ವ್ಯವಸ್ಥೆಯಿಂದ ಬಿಡುಗಡೆ ಪಡೆಯುವ ಮಾರ್ಗವಾಗಿಯೇ ಕಂಡಿತು ಎಂಬುದನ್ನು ಕೃತಿ ಸೂಕ್ಷ್ಮ ವಿವರಗಳಿಂದ ಸಾದ್ಯಂತವಾಗಿ ದಾಖಲಿಸುತ್ತದೆ: "ಮದ್ಯ ಸೇವನೆ, ಜೂಜು ಲಂಪಟತನಗಳನ್ನಂಟಿಸಿಕೊಂಡು ಚಟಗಳ ದಾಸವರೇಣ್ಯರಾಗಿದ್ದ ಪಾಳೈಗಾರರು ತಮ್ಮ ಹಣದ ಅಡಚಣೆ ನಿವಾರಿಸಲೋಸುಗ ಪ್ರಜೆಗಳ ಮ್ಯಾಲ ಹೊಸ ಹೊಸ ತೆರಿಗೆಗಳನ್ನು ಹೇರಲಾರಂಭಿಸಿದ್ದರು. ಪಿಳ್ಳೆ ನೋಡಿದರಿಷ್ಟು; ಮದುವೆ ಆದರಿಷ್ಟು; ಸೋಬನ ಪ್ರಸ್ಥವಾದರಿಷ್ಟು; ಮಕ್ಕಳಾದರೆ ಯಿಷ್ಟು ಯಂಬಂಥ ತೆರಿಗೆಗಳನ್ನು ಲೆಕ್ಕ ಹಾಕುತ್ತಾ ಹೋದರೆ..."(ಪುಟ ೭೬)

ಜರುಮಲಿಯ ರಾಜ, ನಿಚ್ಚಾಪುರದ ರಾಜ ಮುಂತಾದವರು ಹೆಚ್ಚಿನ ಆದಾಯಕ್ಕಾಗಿ ಕಳ್ಳಕಾಕರನ್ನೇ ಸಾಕುತ್ತಿದ್ದರು; ಮತ್ತೆ ಕೆಲವರು ಕಳ್ಳರಿಗೇಕೆ ಪಾಲು ಕೊಡಬೇಕೆಂದು ತಾವೇ ರಾತ್ರಿಯಲ್ಲಿ ಕಳ್ಳರಾಗುತ್ತಿದ್ದರು. ಇನ್ನು ಅವರ ನೈತಿಕತೆಯ ಬಗ್ಗೆ: ಕುದುರೆಡವು ಸಂಸ್ಥಾನದ ಕಾಟನಾಯಕನಿಗೆ ಚಿಕ್ಕ ವಯಸ್ಸಿನಲ್ಲಿಯೇ ಅವನ ಮನೆತನದ ಗೌರವಕ್ಕಾಗಿ ಐದು ಜನರೊಡನೆ ಮದುವೆ; ಮದ್ದಿಕೇರಿ ಸಂಸ್ಥಾನದ ರಾಜಾ ಕದಿರೆನಾಯಕ ಅರಮನೆಯಲ್ಲಿ ಹಣಕಾಸಿನ ಪರಿಸ್ಥಿತಿ ಬಿಗಡಾಯಿಸಿದಾಗ ಅಂತಃಪುರದಲ್ಲಿದ್ದ ನೂರಾರು ಹೆಣ್ಣಾಳುಗಳನ್ನು ಅವರ ವಯಸ್ಸು, ತೂಕ ಇತ್ಯಾದಿಗಳಿಗನುಸಾರವಾಗಿ ಹರಾಜು ಹಾಕಿ ಹಣ ಸಂಗ್ರಹಿಸು ತ್ತಾನೆ; ಸೊಕ್ಕೆ ಮಾರನಾಯಕ ಎಂಬ ಮತ್ತೊಬ್ಬ ತುಂಡು ಪಾಳೆಯಗಾರ ತನ್ನ ಕುಗ್ಗಿದ ಲೈಂಗಿಕ ಸಾಮರ್ಥ್ಯವನ್ನು ವೃದ್ಧಿ ಪಡಿಸಲೋಸುಗ ದೇವಿಗೆ ಬಲಿ ಕೊಡಲ್ಪಟ್ಟ ಕೋಣನ ವೃಷಣಗಳನ್ನು ಸದಾ ತನ್ನ ಕೊರಳಲ್ಲಿ ಧರಿಸುತ್ತಾನೆ; ಇಂತಹ ಅನೇಕಾನೇಕ ವಿಷಯಲಂಪಟರನ್ನು ಕೃತಿ ಪರಿಚಯಿಸುತ್ತದೆ.

ಇನ್ನು ಕವಿಗಳ ವಿಷಯಕ್ಕೆ ಬಂದರೆ: ಬೆಳ್ಳಿ ರೂಪಾಯಿಗಳು ಸಿಗುವುದಿದ್ದರೆ ಯಾರನ್ನು ಸ್ತುತಿಸಿದರೇನು ಎಂಬ ನಿಲುವಿನಿಂದ ಸೂರ ಎಂಬ ಕೋಣನನ್ನು ಕಂದ ಪದ್ಯಗಳಲ್ಲಿ, ಮತ್ತೇ ಭವಿಕ್ರೀಡಿತ ಮಹಾ ಸ್ರಗ್ಧರಾ ಇತ್ಯಾದಿ ವೃತ್ತಗಳಲ್ಲಿ ಸ್ತುತಿಸುವ ರಾಮುರಾಜು ಭಟ್ರಾಜು; ನಿರ್ಜೀವ ಕಳೇಬರದ ನೀಳನಾಸಿಕ-ಕೇಸಪಾಸಪ್ರಪಂಚಗಳ ಬಗ್ಗೆ ಮಹಾಕಾವ್ಯಮೊಂದನ್ನು ರಚಿಸುವ ಅಯ್ಯಾಳೇಶ್ವರ ಮಹಾಕವಿ; ಇಂಗ್ಲೀಷ್ ಭಾಷೆ ಕಲಿಯುವವರಿಗೆ ಬಹಿಷ್ಕಾರ ಹಾಕಿ ಹಿಂದೂ

ಮತದ್ರೋಹಿಯಾದ ಮನ್ರೋ ಸಾಯಲೆಂದು ಉಗ್ರಹೋಮಗಳನ್ನು ಮಾಡುವ ಅಗ್ರಹಾರಗಳ ದೀಕ್ಷಿತರು; ಒಡವೆಗಳನ್ನು ಧರಿಸಿದ ರಾಜಮಾತೆಯ ಹೆಣವನ್ನೇ ಕಳವು ಮಾಡುವ ಚೋರಾಗ್ರಣಿಗಳು; ... ಇಂತಹ ಹತ್ತೈವತ್ತು ವಿವರಗಳ ಮೂಲಕ, ಘಟನೆಗಳ ಮೂಲಕ, ವಸಾಹತುಶಾಹಿಯ ಮೊದಲ ಘಟ್ಟದ ಗ್ರಾಮೀಣ ಭಾರತದ ಪ್ರತಿಯೊಂದು ನಾಡಿ ಮಿಡಿತವನ್ನೂ ಕುಂವೀ ಈ ಕೃತಿಯಲ್ಲಿ ಸೆರೆ ಹಿಡಿಯುತ್ತಾರೆ, ಓದುಗರಿಗೆ ಕೇಳಿಸುತ್ತಾರೆ. ಹೇಗೆ "ವರ್ತಮಾನದ ಜಗಲಿ ಮ್ಯಾಲಿಂದ ಭೂತಕಾಲವನ್ನು ಕದಲಿಸಲಾಗದ" ಗ್ರಾಮೀಣ ಭಾರತ ಬ್ರಿಟಿಷ್ ಆಳ್ವಿಕೆಯನ್ನು ಎರಡೂ ಕೈಗಳಿಂದ ಸ್ವಾಗತಿಸಿತು ಎಂಬುದನ್ನು ಅನ್ಯಾದೃಶವಾಗಿ ಚಿತ್ರಿಸುತ್ತಾರೆ.

**೨. ಧಾರ್ಮಿಕ ಆಯಾಮ :** ಕೃತಿಯ ಒಂದು ಆಯಾಮ ವಸಾಹತುಶಾಹಿಯ ಆಗಮನವಾದರೆ, ಅದರ ಮತ್ತೊಂದು ಪ್ರಮುಖ ಆಯಾಮ ಪರಂಪರಾಗತ ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು.. ಕೃತಿಯ ಪ್ರಾರಂಭದಲ್ಲಿಯೇ ಈ ಆಯಾಮವನ್ನೂ ಕೃತಿಕಾರರು ನಮಗೆ ಪರಿಚಯಿಸುತ್ತಾರೆ. ಕುದುರೆಡವು ಪಟ್ಟಣದಲ್ಲಿ ಅರಮನೆಯಲ್ಲಿ ಪೀಕದಾನಿ ಹಿಡಿಯುವ ಮೂಳೆಚಕ್ಕಳಗಳ ಓಬಯ್ಯ ಎಂಬವನ ದೇಹವನ್ನು ದೇವಿ ಸಾಂಭವಿ ಪ್ರವೇಶಿಸಿ ಅದನ್ನು ತನ್ನ ವಸತಿಯನ್ನಾಗಿ ಮಾಡಿಕೊಳ್ಳುತ್ತಾಳೆ(ಇಲ್ಲಿಂದ ಮುಂದೆ ಓಬಯ್ಯನನ್ನು 'ವಸ್ತಿ' ಎಂದೇ ಕೃತಿಯಲ್ಲಿ ಕರೆಯಲಾಗುತ್ತದೆ). ಕಥಾನಕವು ಬೆಳೆದಂತೆ, ಈ 'ಪವಿತ್ರವಸ್ತಿ'ಯ ಮಹಾತ್ಮೆ, ದೇವಿ ಸಾಂಭವಿಯನ್ನು 'ಹೊಳೆಗೆ ಹೊಂಡಿಸುವ' ಅದ್ದೂರಿಯ ಆಚರಣೆ, ಜಾತ್ರೆಯ ದಿನದಂದು ಅವಳ ಪ್ರೀತ್ಯರ್ಥವಾಗಿ ಆಗುವ ಅಗಾಧ ಪ್ರಾಣಿಬಲಿ ಮತ್ತು ಇತರ ಆಚರಣೆಗಳು, ಅನಂತರ ಸಾಂಭವಿಗೆ ಮಕ್ಕಳನ್ನಾಡಿಸುವ ಆಸೆ ಮತ್ತು ಕೊನೆಗೆ ಓಬಯ್ಯನೇ ಅವಳ ಮಗುವಾಗುವುದು, ಆ ಮಗುವಿನ ಅನ್ನಪ್ರಾಶನ-ನಾಮಕರಣ-ಅಕ್ಷರಾಭ್ಯಾಸ ಇತ್ಯಾದಿ ಸಂಸ್ಕಾರಗಳು ಇವೆಲ್ಲವುಗಳನ್ನೂ ದೀರ್ಘವಾಗಿ, ವಿವರವಾಗಿ, ಕೃತಿ ದಾಖಲಿಸುತ್ತದೆ. ಏಳೆಂಟು ಪುಟಗಳಷ್ಟು ದೀರ್ಘವಾಗಿರುವ ಜಾತ್ರೆಯ ವರ್ಣನೆ ಕಣ್ಣಿಗೆ ಕಟ್ಟುವಷ್ಟು ನೈಜವಾಗಿ ಬಂದಿದೆ.

ಈ ಬಗೆಯ ಧಾರ್ಮಿಕ ಆಚರಣೆ-ನಂಬಿಕೆಗಳ ಬಗ್ಗೆ ಲೇಖಕರ ನಿಲುವೇನು ಎಂಬ ಪ್ರಶ್ನೆಗೆ ಅಷ್ಟೇನೂ ಸರಳ ಉತ್ತರವಿಲ್ಲ. ಆಧುನಿಕ ಹಾಗೂ ಪಾಶ್ಚಿಮಾತ್ಯ ಮನ್ರೋ "ವರ್ತಮಾನವೇ ಯಿಲ್ಲದ ಯಿಂಡಿಯಾ ವುದ್ಧಾರವಾಗುವುದು ಹೇಗೆ?" ಎಂದು ಪದೇ ಪದೇ ಹಲುಬುತ್ತಾನೆ. ಆದರೆ ನಿರೂಪಕನ ನಿಲುವು ಸಂದಿಗ್ಧ. ಒಂದೆಡೆ ಅವನು "...ಯಲ್ಲಂದರಲ್ಲಿ ಭೂತಕಾಲದ ತೊಗಲ ಬಾವಲಿಗಳು ಜೋತಾಡುತಲಿದ್ದುದೇನು ಹೇಳಲಿ, ಸಿವನೆ" (ಪುಟ ೫೪೩) ಎಂದು

ಉದ್ಗರಿಸುತ್ತಾನೆ. ಆದರೆ ಅದೇ ನಿರೂಪಕ ಮತ್ತೊಂದೆಡೆ, ಮುಗ್ಧನಂತೆ, ದೇವಿಗೆ ಭಕ್ತಿಯಿಂದ ಜನಸ್ತೋಮ ಪ್ರಾರ್ಥನೆ ಸಲ್ಲಿಸುವಾಗ, ಹರಕೆ ಕಟ್ಟಿಕೊಳ್ಳುವಾಗ, ಜಾತ್ರೆಯ ಉತ್ಸವ ನಡೆಯುವಾಗ, ಇತ್ಯಾದಿ ಸಂದರ್ಭಗಳಲ್ಲಿ, ಜನಸಾಮಾನ್ಯರ ನಂಬಿಕೆಗಳನ್ನು ಪ್ರಶ್ನಾತೀತವೆಂಬಂತೆ, ಆ ನಂಬಿಕೆಗಳ ಕಾರಣದಿಂದಲೇ ಅವರಿಗೆ ಪ್ರೀತಿ-ದಯೆ-ಸ್ನೇಹ ಇತ್ಯಾದಿ ಗುಣಗಳು ಸಾಧ್ಯವಾಗಿರುವಂತೆ ವರ್ಣಿಸುತ್ತಾನೆ. ಪ್ರಾಯಃ "ಭೂತಕಾಲದಿಂದ ಬೇರುಪಡಿಸಿದ ಯಿಂಡಿಯಾಕ್ಕೆ ಅಸ್ತಿತ್ವಯೆಂಬುದೇ ಇರುವುದಿಲ್ಲ" ಎಂಬ ಮನ್ರೋ- ನಿಲುವನ್ನು ನಿರೂಪಕನೂ ಒಪುŒತ್ತಾನೆ.

**೩. ಸಾಮಾಜಿಕ ಆಯಾಮ :** ಕೃತಿಯ ಮೂರನೆಯ ಆಯಾಮವೆಂದರೆ ಒಂದು ಅರಮನೆಯ ಕಥೆ- ಅಂದಿನ ಕಾಲಘಟ್ಟದಲ್ಲಿ ಭಾರತದಲ್ಲಿದ್ದ ಸಾವಿರಾರು ಅರಮನೆಗಳ, ರಾಜಮನೆತನಗಳ ಕಥೆ; ಯಾವುದೋ ಒಂದು ಸಂದರ್ಭದಲ್ಲಿ ಅಸಾಧಾರಣ ವ್ಯಕ್ತಿಯೊಬ್ಬನ ಧೈರ್ಯ ಸಾಹಸಗಳಿಂದಾಗಿ ಅಸ್ತಿತ್ವಕ್ಕೆ ಬಂದ ಇಂತಹ ರಾಜ್ಯಗಳು ಹಾಗೂ ಅರಮನೆಗಳು ಕಾಲಾಂತರದಲ್ಲಿ ಆ ರಾಜವಂಶದವರ ಉತ್ತರಾಧಿಕಾರಿಗಳ ಸ್ವಾರ್ಥ-ಲಾಲಸೆ-ದೌರ್ಬಲ್ಯಗಳಿಂದಾಗಿ ತಮ್ಮ ಭವ್ಯತೆಯನ್ನು ಕಳೆದುಕೊಂಡು, ನಿಧಾನವಾಗಿ ಹೀನಾಯ ಸ್ಥಿತಿಗೆ ಬಂದು, ಕೊನೆಗೆ ಬ್ರಿಟಿಷ್ ಸಾಮ್ರಾಜ್ಯದ ಸಾಗರದಲ್ಲಿ ಬಿಂದುವಾಗಿ ಹೋದ ಕಥೆ.

ಕೃತಿಯಲ್ಲಿ ಬರುವ ಕುದುರೆಡವು ಗ್ರಾಮದಲ್ಲಿರುವ ಅರಮನೆಯ ಕಥೆಯೂ ಇದೆ. ಕೃತಿಯ ಪ್ರಾರಂಭದಲ್ಲಿ ಆ ರಾಜಮನೆತನ ದಯನೀಯ ಸ್ಥಿತಿಯಲ್ಲಿದ್ದು, ರಾಜಮಾತೆ ಭಯ್ರುಮಾಂಬೆ ತನ್ನ ಸವತಿ ಮಗನಿಗೆ ಏನೂ ಆಸ್ತಿ ಸಿಗದಂತೆ ಮಾಡಲು ಅನೇಕ ಕುಯುಕ್ತಿಗಳನ್ನು ಯೋಜಿಸುತ್ತಿರುತ್ತಾಳೆ. ಕೃತಿ ಮುಂದುವರೆದಂತೆ, ಒಂದು ಕಾಲದಲ್ಲಿ ಅರಮನೆಯಲ್ಲಿ ಪೀಕದಾನಿ ಹಿಡಿಯುತ್ತಿದ್ದ ಓಬಯ್ಯ ಸಾಂಭವಿಯ ವಸ್ತಿಯಾಗಿ, ಅನಂತರ ಅರಮನೆಯನ್ನೇ ಆಕ್ರಮಿಸಿಕೊಂಡು, ಅಲ್ಲಿಯ ಸಿಂಹಾಸನದ ಮೇಲೇ ಕೂರುತ್ತಾನೆ." (ಇಂತಹ) ಯೋಸೋ ಸಿಮ್ಮಾಸನಗಳು ಪ್ರಜೆಗಳ ಕಾಲಿನಿಂದೊದೆಸಿಕೊಂಡು ಯಾವ ಮಾವಮೂಲು ಮಂದಿಯ ಅಂಡುಗಳಡಿ ತಳ್ಳಲ್ಪಟ್ಟುವು. ತರಕಾರಿ ಕಾಯಿಗೆಡ್ಡೇನ ಹೆಚ್ಚೋ ಸಲುವಾಗಿ ಹೆಣುಮಕ್ಕಳೆಷ್ಟೋ ಮಂದಿ ಕತ್ತಿ ಕಠಾರಿಗಳನ್ನೆತ್ತೊಯ್ದುರು... ಸಿಕ್ಕವರಿಗೆ ಸಿವಲಿಂಗಮೋ" (ಪುಟ ೫೧೭).

ಈ ಬಗೆಯ ಮೂರು ಪ್ರಮುಖ ಕಥೆಗಳಿಂದ ಕಟ್ಟಲ್ಪಟ್ಟಿರುವ ಈ ಕಥಾನಕ ಸಾಗುತ್ತಾ ಸಾಗುತ್ತಾ, ಸಾಂಪ್ರದಾಯಿಕ ಸ್ಥಳಪುರಾಣಗಳು; ತಿಲ್ಲಾನ ತಾಯಮ್ಮ ಮತ್ತವಳ ಮಗಳು ಚಿನ್ನಾಸಾನಿ ಇವರುಗಳ ಪ್ರಣಯ ಕಥೆ, ಭಾರತೀಯ

ರಾಬಿನ್‌ಹುಡ್ ಬೊಬ್ಬಿಲಿನಾಗಿರೆಡ್ಡಿಯ ಕಥೆ ಇತ್ಯಾದಿ ಹತ್ತಾರು ಉಪಕಥೆಗಳು; ಚೋರ ಶಿಖಾಮಣಿ ಆಕಾಸ ರಾಮಣ್ಣ, ಅವಧೂತ ಸುಡುಗಾಡೆಪ್ಪ ಮುಂತಾದವರ ಐತಿಹ್ಯಗಳು; ತನ್ನ ದೇಹದೊಳಗೆ ಚಿನ್ನಾಸಾನಿಯನ್ನು ಕುರಿತು ಹೆನ್ರಿಗಿರುವ ಪ್ರೇಮಭಾವನೆಗಳನ್ನು ಸಾಕ್ಷ್ಯಾತ್ಕರಿಸಿಕೊಂಡಿರುವ ಅಂಜನಿ ಎಂಬ ಕೋತಿ, ಕವಿಯ ಮೋಹಕ ಸ್ತುತಿಗೆ ಮರುಳಾಗುವ ಸೂರ ಎಂಬ ಕೋಣ, ಇತ್ಯಾದಿ ಹಾಸ್ಯ ಪ್ರಸಂಗಗಳು; ...ಇವೇ ಮುಂತಾದ ನೂರಾರು ಪಾತ್ರಗಳು-ಘಟನೆಗಳು ಇವೆಲ್ಲವನ್ನೂ ತನ್ನ ಒಡಲೊಳಗೆ ತುಂಬಿಕೊಳ್ಳುತ್ತದೆ. ಈ ಬಗೆಯ ಕಿಕ್ಕಿರಿದ ಪಾತ್ರ-ಘಟನೆ-ಪ್ರಸಂಗ ಗಳಿಂದಾಗಿ, ಒಂದು ಕಾಲಘಟ್ಟದ ಗ್ರಾಮೀಣ ಭಾರತವೇ ಈ ಕೃತಿಯಲ್ಲಿ ಉಸಿರಾಡುತ್ತದೆ ಎಂದರೆ ಅದೇನೂ ಉತ್ಪ್ರೇಕ್ಷೆಯಲ್ಲ.

ಕೃತಿಯ ಯಶಸ್ಸಿನ ಬಹು ದೊಡ್ಡ ಪಾಲು ಅದರ ಕಥನ ಶೈಲಿಗೆ ಸೇರಬೇಕು. ಈ ಮೊದಲೇ ಸೂಚಿಸಿದಂತೆ, ಸುಮಾರಾಗಿ ಗೊಂದಲಿಗರ ಕಥನ ಸಂಪ್ರದಾಯವನ್ನು ಆಧರಿಸಿರುವ (ಮತ್ತು ಎಲ್ಲಾ ಮೌಖಿಕ ಮಹಾಕಾವ್ಯಗಳಲ್ಲಿಯೂ ಕಂಡುಬರುವ) **ಅರಮನೆ**ಯ ಕಥನಶೈಲಿಯ ಗಮನೀಯ ಅಂಶಗಳು ಎರಡು: ಅದು ಕಾಲ ದೇಶಗಳನ್ನು ನಿರ್ವಹಿಸುವ ರೀತಿ ಮತ್ತು ಅದರ ರೂಪಕಾತ್ಮಕ ಭಾಷೆ.

ಕಾಲ ದೇಶಗಳ ನಿರ್ವಹಣೆಯೆಂದರೆ, ಈ ಎರಡು ಘಟಕಗಳಲ್ಲಿ ಒಂದನ್ನು ಸ್ಥಿರವಾಗಿಟ್ಟು ಮತ್ತೊಂದರ ಭಿನ್ನ ವಿನ್ಯಾಸಗಳನ್ನು ದರ್ಶಿಸುವುದು. ಸಾಧಾರಣವಾಗಿ, ಕುಂವೀ ಅವರಿಗೆ (ಮತ್ತು ಚೌಡಿಕೆಯವರು, ನೀಲಗಾರರು ಇತ್ಯಾದಿ ಧಾರ್ಮಿಕ ವೃತ್ತಿಗಾಯಕರಿಗೆ) ಪ್ರಿಯವಾದ ತಂತ್ರವೆಂದರೆ ಕಾಲವನ್ನು ಸ್ಥಿರವಾಗಿಟ್ಟು ಅದೇ ಕಾಲದಲ್ಲಿ ಭಿನ್ನ ಸ್ಥಳಗಳಲ್ಲಿ ನಡೆಯುವ ಭಿನ್ನ ಭಿನ್ನ ಕಾರ್ಯಗಳನ್ನು ದಾಖಲಿಸುವುದು. ಈ ಹೇಳಿಕೆಯನ್ನು ಸ್ಪಷ್ಟಪಡಿಸಲು ಕೃತಿಯ ಮೊದಲನೆಯ ವಾಕ್ಯವನ್ನೇ ನೋಡಬಹುದು. ಇಪ್ಪತ್ತೆರಡು ಸಾಲುಗಳಷ್ಟು ದೀರ್ಘವಾಗಿರುವ ...'ಮೋಹಿಸಿಕೊಳ್ಳುತ್ತಿರುವಾಗ್ಗೆ' '...ಮಾಡುತ್ತಿರುವಾಗ್ಗೆ', ಎಂಬಂತಹ ಅಪೂರ್ಣ ಕಾಲಸೂಚಕ ಕ್ರಿಯಾಪದಗಳ ಉಪಯೋಗದಿಂದ, ಒಂದೇ ಕಾಲದಲ್ಲಿ ಎಂಟು ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಿದ್ದ ಎಂಟು ಭಿನ್ನ ಕ್ರಿಯೆಗಳನ್ನು ಈ ವಾಕ್ಯವು ಚಿತ್ರಿಸುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ, ಒಂದು ಸಂದರ್ಭದ ವರ್ಣನೆಯನ್ನು ಅಪೂರ್ಣವಾಗಿಯೇ ನಿಲ್ಲಿಸಿ, ... ಈ ರೀತಿ ಇಡೀ ಕಥನ ಕ್ರಿಯೆ ಮುಂದುವರೆಯುತ್ತದೆ. ಇಂತಹ ಕಥನ ತಂತ್ರಕಥಾನಕದ ಬಿಡಿ ಧಾರೆಗಳನ್ನು ಒಂದೆಡೆ ತರುತ್ತದಲ್ಲದೆ ಪ್ರಸ್ತುತ ವಿಷಯದ ಅನೇಕ ಮಗ್ಗುಲುಗಳನ್ನು ಒಟ್ಟಿಗೇ

ನೋಡಲು ಅನುವು ಮಾಡಿಕೊಡುತ್ತದೆ.

ಎರಡನೆಯದಾಗಿ, ವ್ಯಂಗ್ಯ-ವಿಡಂಬನೆಗಳಿಂದ ಮುಕ್ತವಾದ ಸಮಾನ ಧೋರಣೆಯಿಂದ ಗಂಭೀರ ಹಾಗೂ ಕ್ಷುಲ್ಲಕ ಸಂಗತಿಗಳನ್ನು ವರ್ಣಿಸುವಾಗ, 'ಗಂಭೀರ-ಕ್ಷುಲ್ಲಕ' ಅಥವಾ 'ಮುಖ್ಯ-ಅಮುಖ್ಯ' ಎಂಬಂತಹ ದ್ವಿಮಾನ ಶ್ರೇಣೀಕರಣವೇ ಅಳಿಸಿ ಹೋಗಿ, ಸಕಲ ಚರಾಚರ ವಸ್ತುಗಳನ್ನು, ಜೀವಿಗಳನ್ನು, ಘಟನೆಗಳನ್ನು ಸಮಾನವಾಗಿ ನೋಡಲು ಸಾಧ್ಯವಾಗುತ್ತದೆ; ಮತ್ತು ಭಾಷೆ ಸಹಜವಾಗಿ ರೂಪಕಾತ್ಮಕ ವಾಗುತ್ತದೆ. ನಿದರ್ಶನಾರ್ಥವಾಗಿ ಈ ಕೆಲವು ವರ್ಣನೆಗಳನ್ನು ನೋಡಬಹುದು:

ಅ. "ಆಕಾಸದ ಕರಿಗಂಬಳಿ ಮ್ಯಾಲ ಕಾಳು ಕಡಿ ವಣಹಾಕಿದಂಗಿದ್ದ ಚುಕ್ಕಿ ನಕ್ಷತ್ರಗಳು ಯಿದ್ದುವು. ಅವುಗಳನು ಮಾಯಾದ ಪಕ್ಷಿಗಳು ಬಂದು ಗುಳುಂ ಗುಳುಂ ಅಂತ ನುಂಗಿಯಾವು ಯಂದು ಚಂದ್ರಾಮ ತನ್ನ ಕಯ್ಯೊಳಗ ಬಡಿಗೆ ಹಿಡಕೊಂಡು ಕಾಯಕಂತ ಯಿದ್ದನು."

ಆ. "(ಚಿನ್ನಾಸಾನಿ)ಚಂದ್ರಾಮನ ಬೆಳದಿಂಗಳನ್ನು ಸರ್‍ರಂತ ಮಯ್ಯಿ ತುಂಬ ಹೀರಿಕೊಳ್ಳುತ್ತಿದ್ದಳಷ್ಟೇ; ಬಗೆಬಗೆಯ ಪುಷ್ಪರಾಜಿಯಿಂದ ವಲಸೆ ಬರುತಲಿದ್ದ ಪರಿಮಳ ಸವುಂದರ್ಯಕ್ಕೆ ತಾನು ತನ್ನ ಸರೀರದ ತುಮ್ಬೆಲ್ಲ ಆಸ್ರಯ ನೀಡುತ್ತಿದ್ದಳಷ್ಟೇ; ನೋಡೋರ ಕಣ್ಣುಗಳೊಳಗ ಗೊಂಬಿಯಾಗಿದ್ದಳಷ್ಟೇ; ಕಾಮನಬಿಲ್ಲುಗಳಿಗೆ ತನ್ನ ಕಣ್ಣುಗಳಲ್ಲಿ ಆಶ್ರಯ ನೀಡಿದ್ದಳಷ್ಟೇ; ತಾನೇ ಒಂದು ನ[illegible]ಡೆದಾಡುವ ಹೂದೋಟ ವೆಂಬಂತೆ ದುಂಬಿ ಪತಂಗಗಳಿಗೆ ಭ್ರಮೆಯನ್ನುಂಟು ಮಾಡುತಲಿದ್ದಳಷ್ಟೇ; ..."

ಇ. "ಆ ಚಣ ಚೆಲ್ಲಿದ ಮುಗುಳು ನಗೆಯು ವಸ್ತಿಯ ಕಪ್ಪಾನು ಕಪ್ಪನೆಯ ತುಟಿಸಂದುಗಳಿಂದ ಜಿನುಗಿ ಜಿನುಗು ಹಳ್ಳವಾಗಿ ಕುದುರೆಡವು ಪಟ್ಟಣದ ಹಾದಿ ಹಾದಿಗುಂಟ, ಬೀದಿ ಬೀದಿಗುಂಟ, ಸುಧಾರಸಪ್ರಾಯವಾಗಿ ಹರಿದಾಡಿತೆಂಬಲ್ಲಿಗೆ; ಅದು ಆಸ್ತೀಕಮೂಳಗಿತ್ತೆಂಬಲ್ಲಿಗೆ; ತಾಯಂದಿರ ಮೊಲೆಗಳು ಹಾಲಿನಿಂದ ಜೀಕಾಡಿದವೆಂಬಲ್ಲಿಗೆ; ಸಂತರಸ್ತ ಕೂಸುಕಂದಮ್ಮಗಳು ಅವುಗಳ ಗುಂಡಿಗಳನ್ನು ಜಮುಡುತ್ತಾ ಅನುಗಾಲದ ಹಸಿವನ್ನು ತೀರಿಸಿಕೊಂಡವೆಂಬಲ್ಲಿಗೆ; ಕೇಕೆ ಹಾಕಲಾರಂಭಿಸಿದ ಕಂದಮ್ಮಗಳನ್ನು ಮುದ್ದಾಡಿ ಮುಗಿಲಿಗೆತ್ತಿ ಹಿಡಿದರೆಂಬಲ್ಲಿಗೆ; ... ಸಿವ ಸಂಕರ ಮಾದೇವಾಆಆಆ"

ಇಂತಹ ನಿದರ್ಶನಗಳು ಕೃತಿಯುದ್ದಕ್ಕೂ ಹಾಸುಹೊಕ್ಕಾಗಿವೆ.

ಕೊನೆಯದಾಗಿ, ಅಷ್ಟೇನೂ ಮುಖ್ಯವಲ್ಲದ ಒಂದು ಅಂಶವನ್ನು ಪ್ರಸ್ತಾಪಿಸಿ, ಈ ದೀರ್ಘ 'ಪ್ರವೇಶ'ವನ್ನು ಮುಗಿಸಬಹುದು. ಇಲ್ಲಿಯವರೆಗೂ ನಾನು

ವಿವರಿಸಿರುವ, ಚರ್ಚಿಸಿರುವ ಕಥನ ತಂತ್ರಗಳು, ಶೈಲಿ, ಧಾಟಿ-ಧೋರಣೆ ಇವೆಲ್ಲಮೂ 'ಮ್ಯಾಜಿಕ್ ರಿಯಲಿಸಂ' ಎಂದು ಪ್ರಸಿದ್ಧವಾಗಿರುವ ಕಥನಕ್ರಮಕ್ಕೆ ಅನ್ವಯಿಸುತ್ತವೆ; ಆದರೆ, ಉದ್ದೇಶಪೂರ್ವಕವಾಗಿ ನಾನು ಆ ಪರಿಕಲ್ಪನೆಯನ್ನು ಹೆಸರಿಸಿಲ್ಲ. ಕಾರಣ 'ಮ್ಯಾಜಿಕ್ ರಿಯಲಿಸಂ' ಎಂದ ಕೂಡಲೇ ರೋಲಾ ಬಾರ್ತ್, ಮಾರ್ಕ್ವೇಜ್ ಮುಂತಾದವರ ಕೃತಿಗಳು ನಮ್ಮ ಕಣ್ಣೆದುರಿಗೆ ಬರುತ್ತವೆಯೇ ಹೊರತು **ಮಲೆ ಮಾದೇಶ್ವರ, ಮಂಟೇಸ್ವಾಮಿ,** ಕಾವ್ಯಗಳಲ್ಲ. ಇಷ್ಟು ಸ್ಥಳೀಯವಾಗಿರುವ, ದೇಶೀಯವಾಗಿರುವ ಕಥನ ವಿನ್ಯಾಸಕ್ಕೆ 'ಮ್ಯಾಜಿಕ್ ರಿಯಲಿಸಂ' ಎಂಬ ಹೆಸರಿಟ್ಟು ಅದಕ್ಕೊಂದು ಕೃತ್ರಿಮ ಛವಿ ತರಲು ನನಗೇನೇನೂ ಇಷ್ಟವಿಲ್ಲವೆಂಬಲ್ಲಿಗೆ, 'ಕುಂವೀ ಅವರ ಸೃಜನಶೀಲತೆ ಇತೋಪ್ಯತಿಶಯವಾಗಿ ಮುಂದುವರೆಯಲಿ' ಎಂದು ಆಶಿಸುತ್ತೇನೆಂಬಲ್ಲಿಗೆ

ಶಿವ ಶಂಕರ ಮಾದೇವಾಆಆಆಆ...

**- ಡಾ.ಸಿ.ಎನ್.ರಾಮಚಂದ್ರನ್**

# ಬೇಲ್ದಾರನ ಭಿನ್ನಹ

**ಕುಂವೀ**

**ಅ**ರಮನೆ ಐತಿಹಾಸಿಕಮೋ, ಪೌರಾಣಿಕಮೋ, ಸಾಮಾಜಿಕಮೋ ನನಗಿನ್ನು ಸ್ಪಷ್ಟವಾಗಿಲ್ಲ. ಆದರೆ ಒಂದಂತೂ ನಿಜ ಈ ಮೂರರ ಹೊರತಾಗಿ ನಾಲ್ಕನೆಯ ಆಯಾಮಮೂಉಂಟು. ಅದು ಇನ್ನೂ ನನ್ನ ಅರಿವಿಗೆ ನಿಲುಕಿಲ್ಲ. ಬಾಣಂತಿಯ ಹೆರಿಗೆ ನೋವು ಕೂಸಿನ ಸಮಕ್ಷಮ ಗೌಣ.. ಆದರೂ ನಾಲ್ಕು ಮಾತುಗಳನ್ನು ಪೀಠಿಕಾ ರೂಪದಲ್ಲಿ ಹೇಳಿ ಕೊಂಡಲ್ಲಿ ಕಾದಂಬರಿಯ ಗ್ರಹಿಕೆ ಸರಳವಾದೀತು.

ನಾನು ಸ್ವಭಾವತಃ ಇತಿಹಾಸದ ವಿದ್ಯಾರ್ಥಿ. ಇತಿಹಾಸಕ್ಕೆ ಸಂಬಂಧಿಸಿದ್ದೆಲ್ಲವನ್ನೂ ಓದುತ್ತ ಬಂದಿರುವೆನು. ಜೊತೆಗೆ ಕೋಟೆ, ಗುಡಿ, ಗುಂಡಾರ, ಶಾಸನ, ವೀರಗಲ್ಲು, ಮಾಸ್ತಿಗಲ್ಲುಗಳನ್ನು ನೋಡುವ ಸಲುವಾಗಿ ಅನೇಕ ಊರುಗಳನ್ನು ಸುತ್ತಿರುವೆನು. **ಅರಮನೆ** ಎಂಬ ನಾಲ್ಕಕ್ಷರದ ಮಾಯಾವಿನಿ ಶಬ್ದದಿಂದ ಪರವಶ ಗೊಂಡಿರುವೆನು. ಅರಮನೆ ಒಳಹೊರಗಿನ ವಿದ್ಯಾಮಾನಗಳನ್ನು ಸೃಜನಶೀಲವಾಗಿ ಕಲ್ಪಿಸಿಕೊಳ್ಳುವುದೇ ಒಂದು ಸೊಗಸು.ಕಲ್ಪನೆ ಜ್ಞಾನಕ್ಕಿಂತ ಶಕ್ತಿಶಾಲಿ ಎಂಬ ಮಾತು ಅಕ್ಷರಶಃ ನಿಜ. ಅಸ್ತಿತ್ವದಲ್ಲಿರುವ ನಯನ ಮನೋಹರವಾದ ಅರಮನೆಗಳಿಗಿಂತ ಅಂತರ್ಧಾನವಾಗಿರುವ ಚಿಕ್ಕಪುಟ್ಟ ಪಾಳೆಪಟ್ಟುಗಳ ಅಗೋಚರ ಅರಮನೆಗಳೆ ಹೆಚ್ಚು ಸುಂದರ. ಇಂಥ ಅರಮನೆಗಳ ಕುರುಹುಗಳು ಜರಿಮಲೆ, ಗುಡೇಕೋಟೆ, ರಾಯದುರ್ಗ, ಹರಪನಹಳ್ಳಿ ಸೇರಿದಂತೆ ಅನೇಕ ಕಡೆ ಇರುವವು. ಅವುಗಳನ್ನು ನೋಡುವುದು, ಅವುಗಳಿದ್ದ ಕುರುಹುಗಳ ಮೇಲೆ ತಿರುಗಾಡುವುದು ದಯನೀಯ ಸ್ಥಿತಿಯಲ್ಲಿರುವ ಅವುಗಳ ವಾರಸುದಾರರೊಂದಿಗೆ ಮಾತಾಡುವುದು ರೋಮಾಂಚನದ ಸಂಗತಿ. ಹೇಳುವುದನ್ನೆಲ್ಲ ಹೇಳಿಯಾದ ಮೇಲೆ ಕೇಳುವುದನ್ನೆಲ್ಲ ಕೇಳಿಯಾದ ಮೇಲೆ ಕೇವಲ ಪುಡಿ ಕಾಸಿಗಾಗಿ ಕೈ ಚಾಚುವ ಅವರನ್ನು ನೋಡಿದರೆ ಎಂಥವರಿಗೂ ಮರುಕ ಹುಟ್ಟದೆ ಇರದು. ಕೂಲಿ ಕುಂಬಳಿ ಮಾಡಿ ಹೊಟ್ಟೆ ಹೊರೆಯುತ್ತಿದ್ದರೂ ಕೆಲವು ರಾಜವಂಶಸ್ಥರು ರಾಜರ ಗತ್ತು ಗೈರತ್ತು ಬಿಟ್ಟಿಲ್ಲ. ಇದಕ್ಕೆ ಉದಾಹರಣೆ ಜರಿಮಲೆ ರಾಜರನ್ನೇ ತೆಗೆದುಕೊಳ್ಳೋಣ. ಈಗವರು ಇರುವುದು ಗುಡಿಸಿಲು, ಮಣ್ಣಿನ ಮನೆಗಳಲ್ಲಿ.. ಭೂಮಿಹೀನರಾದ ಅವರೀಗ

ಕೃಷಿ ಕಾರ್ಮಿಕರು. ಒಂದು ಹೊತ್ತು ಊಟಕ್ಕೂ ಪರದಾಡುತ್ತಿರುವವರು. ಅವರ ಕುಟುಂಬ ತಿಂಗಳಿಗೆ ಅರ್ದ ಲೀಟರು ಖಾದ್ಯ ತೈಲ ಬಳಸಿದರೆ ಹೆಚ್ಚು. ವೀರಶೈವ ಪಂಚಪೀಠಗಳಲ್ಲಿ ಒಂದೆನಿಸಿದ ಉಜ್ಜಿನಿ ಮರುಳಸಿದ್ಧೇಶ್ವರ ಜಾತ್ರಾಮಹೋತ್ಸವ ಪ್ರತಿವರ್ಷ ವಿಜೃಂಭಣೆಯಿಂದ ನಡೆಯುತ್ತಿರುವುದಷ್ಟೆ.. ಈ ಭಾಗದ ಅಂದರೆ ಕುಂತಳ ನಾಡಿನ ಅನೇಕ ಪುಣ್ಯಕ್ಷೇತ್ರಗಳಿಗೆ ಈ ಭಾಗದ ಪಾಳ್ಳೇಗಾರರು ಭಕ್ತರಷ್ಟೇ ಅಲ್ಲದೆ ಮಹಾಪೋಷಕರೂ ಆಗಿದ್ದರೆಂಬುದು ಈಗ ಇತಿಹಾಸ. ಜಾತ್ರಾಸಂದರ್ಭದಲ್ಲಿ ಉಜ್ಜಿನಿಯ ದೇವಾಲಯದ ಶಿಖರಕ್ಕೆ ತೈಲಾಭಿಷೇಕ ನಡೆಯುವುದು. ಅದಕ್ಕೆ ಜರಿಮಲೆಯ ಪಾಳ್ಳೆಗಾರರು ಮಣಗಟ್ಟಲೆ ಎಣ್ಣೆ ತಂದು ಅಭಿಷೇಕ ಮಾಡಿದ ನಂತರವೇ ಕಾರ್ಯಕ್ರಮ ವಿದ್ಯುಕ್ತವಾಗಿ ಆರಂಭವಾಗುವುದು. ಈಗಲೂ ಜರಿಮಲೆಯ ಪಾಳ್ಳೆಗಾರರ ವಂಶಸ್ಥರು ತಮ್ಮ ಬಡತನ ಲೆಕ್ಕಿಸದೆ ಸಾಲಸೋಲ ಮಾಡಿ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವರು.. ಆಗ್ರಾದಲ್ಲಿ ಮೊಘಲ್ ಚಕ್ರವರ್ತಿ ಬಹದ್ದೂರ್ ಷಾ ಜಫರ್‌ನ ವಂಶಸ್ಥರೆಂದು ಹೇಳಿಕೊಳ್ಳುತ್ತಿರುವ ಅನೇಕ ಚಿಕ್ಕಪುಟ್ಟ ಕೆಲಸ ಮಾಡಿ ಬದುಕುತ್ತಿರುವರು.. ಅಕ್ಬರ್ ಭಾಷಾ (ಬಾದಷಾ) ಎಂಬ ರಿಕ್ಷಾವಾಲಾನೊಂದಿಗೆ ಅಲ್ಲಿ ತಿರುಗಾಡಿದ್ದೇನೆ.. ಬುಂದೇಲಖಂಡದ ಛತ್ತರ ಸಾಲ್‌ನ ವಂಶಸ್ಥರು ದೆಹಲಿಯ ರೇಲ್ವೆ ನಿಲ್ದಾಣದಲ್ಲಿ ಕೂಲಿಗಳಾಗಿರು ವುದನ್ನು ನೋಡಿದ್ದೇನೆ. ಇಂಥ ಉದಾಹರಣೆಗಳು ಅನೇಕ. ಈ ಒಡನಾಟ, ಈ ಅನುಭವ ನಿನ್ನೆ ಮೊನ್ನೆಯದಲ್ಲ.. ಎರಡು ಮೂರು ದಶಕಗಳಷ್ಟು ಹಳೆಯದು. ತಮ್ಮ ಇತಿಹಾಸ ಸಂಬಂಧೀ ನೆನಪು ಗಳನ್ನು ಸ್ಥಿರಾಸ್ತಿ ಎಂಬಂತೆ ಕಾಪಾಡಿಕೊಂಡು ಬಂದಿರುವ ಇವರವರು ಸ್ವಾತಂತ್ರ್ಯಪೂರ್ವವಾಗಿ ಬ್ರಿಟಿಷರನ್ನೂ, ಸ್ವಾತಂತ್ರ್ಯೋತ್ತರವಾಗಿ ಮುಖ್ಯವಾಗಿ ದಿವಂಗತ ಇಂದಿರಾಗಾಂಧಿಯವರನ್ನೂ ಕೇಳಿದವ ರೆದುರು ದೂಷಿಸುತ್ತಿರುವರು.

ದೇವರಾಜ ತನ್ನ ರಾಜಾವಳಿ ಕಥಾಸಾರದೊಳಗೆ ಹೇಳುವಂತೆ ಯಾರಷ್ಟಕ್ಕೆ ಅವರೇ ತಮ್ಮನ್ನು ತಾವು ರಾಜರೆಂದು ಘೋಷಿಸಿಕೊಂಡಿದ್ದರು. ಜಿಸ್ ಕಿ ಲಾಠಿ ಉಸ್ ಕೀ  ಬೈಂಸ್ ಅಂತಾರಲ್ಲ ಹಾಗೆ.. ಕರ್ನಾಟಕದ ಪಾಳ್ಳೇಗಾರರಿಗಿಂತ ಆಂಧ್ರಪ್ರದೇಶದಲ್ಲಿ (ಮುಖ್ಯವಾಗಿ ರಾಯಲ ಸೀಮಾದಲ್ಲಿ ಅಂದರೆ ಕಡಪಾ, ಕರ್ನೂಲು, ಅನಂತಪುರ ಜಿಲ್ಲೆಗಳಲ್ಲಿ) ಪಾಳೇಗಾರರು ಹೆಚ್ಚು  ಶೋಷಕರಾಗಿದ್ದರು. ಕಡಪಾ ಜಿಲ್ಲೆಯಲ್ಲಿ ಒಂದರಲ್ಲಿಯೇ ಎಂಬತ್ತಕ್ಕೂ ಹೆಚ್ಚು ಪಾಳೆಪಟ್ಟುಗಳಿದ್ದವು. ಟಿಪ್ಪು ಮರಣಾನಂತರ ಹೈದರಾಬಾದಿನ ನಿಜಾಂ ಇವರನ್ನು  ನಿಯಂತ್ರಿಸಲು ವಿಫಲನಾದ. ಕಡಪ ಜಿಲ್ಲೆಯನ್ನು ಸಾಲಿಯಾನ ಎರಡು ಲಕ್ಷ ಪೊಗೋಡಾಗಳಂತೆ

ಮಾಡಿ ಈಸ್ಟ್ ಇಂಡಿಯಾ ಕಂಪನಿಯ ಸುಪರ್ದಿಗೆ ಒಪ್ಪಿಸಿದ. ಕಂಪನಿ ಮಂಗಳೂರಿನಲ್ಲಿ ಕಲೆಕ್ಟರನಾಗಿದ್ದ ಥಾಮಸ್ ಮನ್ರೋನನ್ನು ಬರಮಾಡಿಕೊಂಡು ಸದರಿ ಜಿಲ್ಲೆಯನ್ನು ಒಪ್ಪಿಸಿತು.

ಸರ್ ಥಾಮಸ್ ಮನ್ರೋ ಆಡಳಿತ ವಹಿಸಿಕೊಂಡ ಅನತಿಕಾಲದಲ್ಲಿ ಪಾಳ್ಳೇಗಾರರ ಸದ್ದಡಗಿಸಿದ.. ಜನ ಸಾಮಾನ್ಯರು ಆತನನ್ನು ಮಂಥೋಳಯ್ಯ ಎಂದು ಪ್ರೀತಿಯಿಂದ ಕರೆಯತೊಡಗಿದರು.. ಕಾರ್ಲ್‌ಮಾರ್ಕ್ಸ್ ಆತನನ್ನು **'ಜಗತ್ತಿನ ರೈತರ ಕಲೆಕ್ಟರ್'** ಎಂದು ಶ್ಲಾಘಿಸಿದ್ದಾನೆ. ಆ ಜನಾನುರಾಗಿ ಬ್ರಿಟಿಷ್ ಅಧಿಕಾರಿಯ ನೆನಪು ಆಂಧ್ರದ ರಾಯಲಸೀಮಾ ಪ್ರಾಂತದಾದ್ಯಂತ ಇಂದಿಗೂ ಹಚ್ಚಹಸಿರಾಗಿ ಉಳಿದಿರುವುದು. ಆತಗೆ ಸಂಬಂಧಿಸಿದ ಅನೇಕ ವಿವರಗಳು ಸದರಿ ಕಥಾನಕದ ಉದ್ದಕ್ಕೂ ಇರುವವು...

ಸರ್ ಥಾಮಸ್ ಮನ್ರೋನ ನೆನಪು ನನ್ನನ್ನು ಕಾಡಲಾರಂಭಿಸಿ ಕಾಲು ಶತಮಾನವೇ ಆಗಿದೆ. ರಾಯಲಸೀಮಾದ ಪತ್ತಿಕೊಂಡ, ಗುತ್ತಿ ಪ್ರಾಂತದ ಹಲವೆಡೆ ಮನ್ರಪ್ಪ, ಮನ್ರಮ್ಮ ಎಂಬ ಹೆಸರಿನವರು ಈಗಲೂ ಇದ್ದಾರೆ. ಪತ್ತಿಕೊಂಡದ ಕಂದಾಯ ಕಛೇರಿ ಎದುರು ಆತನ ಪುಟ್ಟ ಶಿಲ್ಪವಿರುವುದು.. ಅದು ಈಗಲೂ ರೈತಾಪಿ ಮಂದಿಯಿಂದ ಪೂಜಿಸಿಕೊಳ್ಳುತ್ತಿರುವುದು.. ಈ ಪ್ರಾಂತದ ನಾಲಕೈದು ಗೆಜಿಟಿಯರ್‌ಗಳಲ್ಲಿ ಆತನ ಕುರಿತು ಸಾಕಷ್ಟು ವಿವರವಿರುವುದು...

ಸರ್ ಥಾಮಸ್ ಮನ್ರೋನ ಬಗ್ಗೆ ಒಂದು ಕೃತಿ ರಚಿಸುವ ಸಲುವಾಗಿ ಹತ್ತಾರು ಕಡೆ ಸುತ್ತಾಡಿ ಹಲವು ಕೃತಿಗಳನ್ನು ಅಧ್ಯಯನ ಮಾಡಿದೆನು. ಜೊತೆಗೆ ಬ್ರಿಟೀಷ್ ವಸಾಹತುಶಾಹಿಯ ವಿಸ್ತರಣೆಯನ್ನೂ ಸಹ ಸೈನಿಕ ಸಹಾಯ ಪದ್ಧತಿ ಕಂಪನಿಯ ಪ್ರಧಾನ ಅಮಿಷಗಳಲ್ಲೊಂದು. ಈ ಎಲ್ಲ ಅಧ್ಯಯನ ಮತ್ತು ಕ್ಷೇತ್ರಕಾರ್ಯ ಅನುಭವದ ತಳಹದಿಯ ಮೇಲೆ ಕಾದಂಬರಿ ಬರೆಯಬೇಕೆಂದುಕೊಂಡಿದ್ದು ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ. ಬರೆಯುವುದು, ಹರಿಯುವುದು ಮಾಡೇ ಮಾಡಿದೆನು. ಈ ಎರಡು ಕ್ರಿಯೆಗಳ ನಡುವೆ ಒಂದೊದು ವರ್ಷ ಬಿಡುವು ದೊರಕಿರುವುದು. ಆ ಬಿಡುವಿನ ವೇಳೆಯಲ್ಲಿ ಯಾಪಿಲ್ಲು, ಶಾಮಣ್ಣ, ಚಾಪ್ಲಿನ್, ಭಳಾರೆ ವಿಚಿತ್ರಂ ಕೃತಿಗಳನ್ನು ಪ್ರಕಟಿಸಿದೆನು. ಆದರೂ ಅರಮನೆ ಕಾದಂಬರಿ ಸೃಷಿ« ಕಾರ್ಯದಿಂದ ವಿರಮಿಸಿರಲಿಲ್ಲ. ಕಾದಂಬರಿಯ ಕೆಲ ಭಾಗಗಳನ್ನು ಹಿರಿ ಕಿರಿಯ ಲೇಖಕರೆದುರು, ಹೆಂಡತಿ ಎದುರು, ಶಾಲಾ ಮಕ್ಕಳೆದುರು ವಾಚಿಸುವುದರ ಮೂಲಕ ರಚನೆಯ ಹೊಸ ಆಯಾಮ ಕಂಡುಕೊಂಡೆ. ಕೇಳುಗರ ಮುಖ ಚಹರೆಯಲ್ಲಾಗುವ ಬದಲಾವಣೆಗಳನ್ನೇ ವಿಮರ್ಶೆ

ಎಂದು ಭಾವಿಸಿ ಪುನಃ ಪುನಃ ಬರೆದಿದ್ದೇನೆ. ಈ ನಡುವೆ ಕೇಂದ್ರಸಾಹಿತ್ಯ ಅಕಾಡೆಮಿಯ ಬೆಂಗಳೂರಿನ ಪ್ರಾದೇಶಿಕ ಕಾರ್ಯದರ್ಶಿಯವರೂ, ಆತ್ಮೀಯರೂ ಆದಂಥ ಅಗ್ರಹಾರ ಕೃಷ್ಣಮೂರ್ತಿಯವರು ಕಥೆ ವಾಚನ ಮಾಡುವ ಸಲುವಾಗಿ ನನ್ನನ್ನು ಕರೆಯಿಸಿಕೊಂಡರು. ನಾನು ಸದರಿ ಕಾದಂಬರಿಯ ಆರಂಭಿಕ ಪುಟಗಳನ್ನು ವಾಚಿಸಿದೆನು. ಪ್ರೊ. ಓ.ಎಲ್. ನಾಗಭೂಷಣಸ್ವಾಮಿಯವರು ಆ ಭಾಗವನ್ನು ಇಂಗ್ಲಿಷಿಗೆ ಅನುವಾದಿಸಿದ್ದೂ ಅಲ್ಲದೆ ಅದ್ಭುತ ರೀತಿಯಲ್ಲಿ ಪ್ರೆಜೆಂಟೂ ಮಾಡಿದರು. ತದನಂತರ ಉಪಸ್ಥಿತರಿದ್ದ ಕನ್ನಡದ ಪ್ರಸಿದ್ದ ಲೇಖಕರಲ್ಲದೆ ಭಾರತೀಯ ಲೇಖಕರು ಹರ್ಷಿಸಿ ನನ್ನನ್ನು ಅಭಿನಂದಿಸಿದರು. ಅದರಿಂದ ನಾನು ಸಾಕಷ್ಟು ಉತ್ತೇಜಿತನಾದೆನು. ಅದಾದ ಬಳಿಕ ನಾನೀ ಕಾದಂಬರಿಯನ್ನು ಮೂರು ಸಲ (ಅಂದರೆ ಹದಿನೈದು ನೂರು ಪುಟಗಳನ್ನು) ಬರೆದಿರಬಹುದು. ಬರೆದ ಸಲಕ್ಕೊಂದೊಂದು ರೀತಿಯೊಳಗೆ ಕಾದಂಬರಿ ಹೊಸ ಆಕಾರ ಪಡೆಯುತ್ತ ಹೋಯಿತು. ಬರೆಯುವ ಕ್ರಿಯೆಯಿಂದಾಗಿ ದೈಹಿಕ ಆರೋಗ್ಯ ಕೆಡಿಸಿಕೊಂಡರೂ ಮಾನಸಿಕವಾಗಿ, ಬೌದ್ಧಿಕಾಗಿ ಮತ್ತು ಭಾಷಿಕವಾಗಿ ಹೆಚ್ಚು ಲಾಭ ಮಾಡಿಕೊಂಡೆನು. ಇನ್ನೇನು ಫೈನಲೈಜಾಯಿತೆಂದು ಭಾವಿಸಿ ಡಿಟಿಪಿ ಮಾಡಿಸಿದೆನು. ಏಳುನೂರು ಪುಟ ದಾಟಿತ್ತು. ಮುನ್ನುಡಿ ಬರೆಸುವ ಸಲುವಾಗಿ ಓದಿದ ಡಾ.ಸಿ.ಎನ್.ರಾಮಚಂದ್ರನ್‌ರವರು ಕಾದಂಬರಿಯ ಆಶಯ ಬದಲಿಸುವಂತೆ ಸೂಚಿಸಿದರು. ಹಾಗೆಯೇ ಡಾ.ಹೆಚ್.ಎಸ್.ರಾಘವೇಂದ್ರರಾವ್ ಅವರೂ ಕೂಲಂಕಷ ಓದಿ, ಮೆಚ್ಚಿ ಎಡಿಟ್ ಮಾಡಿಕೊಟ್ಟರು. ಈ ಇಬ್ಬರು ಬಹುಶ್ರುತ ವಿದ್ವಾಂಸರ ಅಮೂಲ್ಯ ಸಲಹೆಯಂತೆ ಮತ್ತೆ ಕೆಲ ತಿಂಗಳುಗಳ ಕಾಲ ಕೂತು ಪುನಃ ಬರೆದೆನು.

ಹದಿನೈದಿಪ್ಪತ್ತು ವರ್ಷಗಳಿಂದ ನಾನು ಬರೆದ/ನನ್ನಿಂದ ಬರೆಯಿಸಿಕೊಂಡ ಕಾದಂಬರಿ **ಅರಮನೆ** ಈಗ ನಿಮ್ಮ ಕೈಯೊಳಗಿದೆ. ಇನ್ನೂ ಎರಡನೂರು ಪುಟಗಳಷ್ಟಿದ್ದ ಕಥಾನಕವನ್ನು ಬಿಟ್ಟಿದ್ದೇನೆ. ಅದಕ್ಕೆ ಕಾರಣಗಳು ತಮಗೂ ಗೊತ್ತಿರುವವೆ. ಓದುವ ಅಭಿರುಚಿ ಕಡಿಮೆಯಾಗಿರುವುದು ಒಂದು ಕಾರಣವಾದರೆ ಇನ್ನೊಂದು ಕಾರಣವೆಂದರೆ ಹೆಬ್ಬೊತ್ತಿಗೆಗಳನ್ನು ತಲೆದಿಂಬಿಗೆ ಪರ್ಯಾಯವಾಗಿ ಉಪಯೋಗಿಸ ಲಾಗುತ್ತಿದೆ ಎಂಬ ಧ್ವನಿಪೂರ್ಣ ಆರೋಪವನ್ನು ಮಿತ್ರಅಗ್ರಹಾರ ಲಿಖಿತಪೂರ್ವಕವಾಗಿ ಮಾಡಿರುವರು. ಆದ್ದರಿಂದ ಸದರಿ ಕೃತಿಯನ್ನು ಎಷ್ಟು ಸಾಧ್ಯಮೋ ಅಷ್ಟು ಹ್ರಸ್ವಗೊಳಿಸಿರುವೆನು. ಇದನ್ನು ಎಷ್ಟು ಸಾಧ್ಯಮೋ ಅಷ್ಟು ಸುಂದರವಾಗಿ ವಿನ್ಯಾಸಗೊಳಿಸಲು ಪ್ರಯತ್ನಿಸಿರುವೆನು. ಕಾದಂಬರಿಯೊಳಗಿನ ಭಾಷೆ ಬಳ್ಳಾರಿ ಜಿಲ್ಲೆಯ ಗಡಿ ಅಂಚಿನಲ್ಲಿ ಹರಿಯುತ್ತಿರುವ ವೇದಾವತಿಯ ಇಕ್ಕೆಲದ

ಸರಹದ್ದಿನದು. ಭಾಷೆ ಮತ್ತದರ ಎಲ್ಲಾ ಆಯಾಮಗಳನ್ನು ಯಥಾರೀತಿ ಬಳಸಿರುವೆ. ವಾಕ್ಯದೊಂದಿಗೆ ಸಹಜವಾಗಿ ಅರ್ಥವಾಗಲಿ ಎಂಬ ಕಾರಣಕ್ಕೆ ತೆಲುಗು ಪದಗಳಿಗೆ ಅರ್ಥ ಕೊಡಲು ಇಚ್ಛಿಸಿಲ್ಲ. ನಂಬಿಕೆ, ಸಂಪ್ರದಾಯಗಳು ಈ ಭಾಗದವು. ಇತಿಹಾಸ ಶೇಕಡಾ ಅರವತ್ತರಷ್ಟು.. ಕಲ್ಪನೆ ಶೇಕಡಾ ನಲವತ್ತರಷ್ಟುಂಟು. ಕಾದಂಬರಿಯ ಆರಂಭಿಕ ಕೆಲ ಪುಟಗಳನ್ನು ತಾಳ್ಮೆಯಿಂದ, ಗಟ್ಟಿಯಾಗಿ ಓದಿಕೊಂಡಲ್ಲಿ ಕೊನೆ ಪುಟವನ್ನು ತ್ರಾಸಿಲ್ಲದೆ ತಲುಪಬಹುದು. ಓದಿದ ನಂತರ ಈ ಕಾದಂಬರಿ ನಿಮ್ಮೊಳಗೆ ಬೆಳೆದಲ್ಲಿ ನಾನು ಬರೆದದಕ್ಕೂ ಸಾರ್ಥಕ. ದಯವಿಟ್ಟು ಓದುವಿರಿ ತಾನೆ....

# ನೆನಕೆಗಳು

ಅರಮನೆಯ ವಾಸ್ತುವನ್ನು ತಮ್ಮ ಅರ್ಥಪೂರ್ಣ ಮುನ್ನುಡಿಯೊಳಗೆ ವಿನ್ಯಾಸಗೊಳಿಸಿರುವ ಡಾ.ಸಿ.ಎನ್.ರಾಮಚಂದ್ರನ್ ಮತ್ತು ಅರಮನೆಯ ಬೆನ್ನುಗೋಡೆಯನ್ನು ತಮ್ಮ ಅಮೂಲ್ಯ ಮಾತುಗಳಿಂದ ಚಿತ್ತಾರ ಮಾಡಿರುವ ಡಾ.ಹೆಚ್.ಎಸ್.ರಾಘವೇಂದ್ರರಾವ್ ಅವರಿಗೆ..

ಥಾಮಸ್ ಮನ್ರೋ ಕುರಿತಂತೆ ಅನೇಕ ಮಾಹಿತಿ ನೀಡಿದ ಸನ್ಮಿತ್ರಎಂ.ಪಿ.ಪ್ರಕಾಶ್ ಅವರಿಗೆ..

ಡಾ.ಸುಭಾಷ್ ಭರಣಿ ಅವರಿಗೆ..

ಕಾದಂಬರಿ ಬೆಳವಣಿಗೆಯನ್ನು ಕುತೂಹಲ ಪ್ರೀತಿಯಿಂದ ಗಮನಿಸುತ್ತ.. ಉಪಯುಕ್ತ ಸಲಹೆ ನೀಡುತ್ತಿದ್ದ ಹಿರಿಯ ಸಹೋದರ ಸಮಾನರಾದ ಹೆಚ್.ಇಬ್ರಾಹಿಂ ಸಾಹೇಬರಿಗೆ..

ನನ್ನ ಸಾಹಿತ್ಯ ಕೃಷಿ ಬಗ್ಗೆ ಪ್ರೀತಿ, ಕುತೂಹಲವಿರಿಸಿಕೊಂಡಿರುವ ಡಾ.ಜಿ.ಎಸ್.ಶಿವರುದ್ರಪ್ಪ, ಡಾ. ಜಿ.ಎಸ್.ಆಮೂರ, ಡಾ.ಎಸ್.ಎಲ್.ಭೈರಪ್ಪ, ಡಾ.ಗುರುಲಿಂಗ ಕಾಪಸೆ, ಡಾ.ಪ್ರಭುಶಂಕರ ಮತ್ತು ಡಾ.ಗಿರಡ್ಡಿ ಗೋವಿಂದರಾಜ ಅವರಿಗೆ..

ಬರೆದವನ ಬವಣೆಗೆ ಸಹೃದಯತೆಯಿಂದ ಸ್ಪಂದಿಸಿದ ಮಿತ್ರರಾದ ಅಗ್ರಹಾರ ಕೃಷ್ಣಮೂರ್ತಿ ಮತ್ತು ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಮತ್ತು ಡಾ.ಬಾನಂದೂರು ಕೆಂಪಯ್ಯ ಅವರಿಗೆ..

ಕೇಳಿದೊಡನೆ ರೇಖಾಚಿತ್ರಗಳನ್ನು ಬಳಸಿಕೊಳ್ಳಲು ಒಪ್ಪಿಗೆ ನೀಡಿದ ಕಲಾವಿದ ಮಿತ್ರದಿ.ಶಂಕರ ಪಾಟೀಲರ ಮಾಮಂದಿರೂ, ನನ್ನ ಶ್ರೇಯೋಭಿಲಾಷಿಗಳೂ ಆದಂಥ ಡಾ. ಚನ್ನವೀರ ಕಣವಿ ಅವರಿಗೆ..

ತಮ್ಮ ಶಿಲ್ಪಗಳ ಪ್ರತಿಕೃತಿಗಳನ್ನು ಉಪಯೋಗಿಸಿಕೊಳ್ಳಲು ಸಮ್ಮತಿಸಿದ ಮಿತ್ರಡಾ.ಶಿವಾನಂದ ಬಂಟನೂರು, ವಿ.ಟಿ. ಕಾಳೆ ಅವರಿಗೆ..

ಅಜರಾಮರ ಕಲಾವಿದರಾದ ಹೆಬ್ಬಾರ್, ಬಾಪು ಅವರಿಗೆ..

ಹೊ.ಮ.ಪಂಡಿತಾರಾಧ್ಯ, ಕೇಶವರೆಡ್ಡಿ ಹಂದ್ರಾಳು, ಕಂನಾಡಿಗ ನಾರಾಯಣ,

ಎಂ.ಜಿ.ಗೌಡ, ಎಂ.ಎಂ.ಶಿವಪ್ರಕಾಶರಂಥ ಗೆಳೆಯರಿಗೆ..

ಪತ್ನಿ ಅನ್ನಪೂರ್ಣ ಮತ್ತು ಮಕ್ಕಳಾದ ಪುರೂರವ, ಶಾಲಿವಾಹನ, ಪ್ರವರ ಇವರುಗಳಿಗೆ..

ಲೇಖಕರ ಹಿಂಸೆಯನ್ನು ಮಹಾಪ್ರಸಾದವೆಂದೇ ಭಾವಿಸಿ ಸುಂದರವಾಗಿ ಪ್ರತಿ ಪುಟವನ್ನೂ ವಿನ್ಯಾಸಗೊಳಿಸಿರುವ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ್ ಯಾಜಿಯವರಿಗೆ..

ಮುಖಪುಟದ ಶ್ರೇಷ« ಕಲಾವಿದ ಮಿತ್ರಚಂದ್ರನಾಥ ಆಚಾರ್ಯ ಅವರಿಗೆ..

ನನ್ನ ಈ ಪ್ರೀತಿಯ ಕೃತಿಯನ್ನು ಪ್ರಕಟಿಸುತ್ತಿರುವ ನಾಡಿನ ಹೆಮ್ಮೆಯ ಪ್ರಕಾಶನ ಸಂಸ್ಥೆಯಾದ 'ಸಪ್ನ'ದ ಮಿತ್ರದೊಡ್ಡೇಗೌಡ ಅವರಿಗೆ..

ಮತ್ತು ನಿಮ್ಮೆಲ್ಲರಿಗೆ ಶರಣು...

**ಕುಂ. ವೀರಭದ್ರಪ್ಪ**

# ಪರಿವಿಡಿ


| | |
|---|---|
| ಶುಭ ಸಂದೇಶ | III |
| ಚೆನ್ನುಡಿ | IV |
| ಎರಡು ನುಡಿ | V |
| ಅಧ್ಯಕ್ಷರ ಮಾತು | VI |
| ಪ್ರಕಾಶಕರ ಮಾತು | VII |
| ಆಯ್ಕೆ ಸಮಿತಿ | IX |
| ಮುನ್ನುಡಿ | XII |
| ಬೇಲ್ದಾರನ ಭಿನ್ನಹ | XXIII |
| ನೆನಕೆಗಳು | XXVIII |
| ಅರಮನೆ | ೧–೭೧೪ |

# ಅರಮನೆ

# ಪರ್ವ : ಒಂದು

ವಾರದ ಹಿಂದೆಯಷ್ಟೆ ಬೆಳಗುಪ್ಪದ ಜಮಿಂದಾರ್ರುಚಿನ್ನೋಬುಳ ರೆಡ್ಡಿಯನ್ನೂ, ಮುಷೂ«ರು ಮಾದಿರೆಡ್ಡಿಯನ್ನೂ ಯೇಕಕಾಲಕ್ಕೆ ಮಣಿಸಿ ಕಡುಪಾದ ವಸ್ತಿವಳಗ ತನ್ನ ಸರೀರದ ಮ್ಯಾಲಿದ್ದ ಪೋಷಾಕನ್ನು ಕಳಚಿ ಕಲೆಟ್ರುಥಾಮಸು ಮನ್ರೋ ಸಾಹೇಬನು ಯದುರಿದ್ದ ನಿಲುಗನ್ನಡಿಯಲ್ಲಿ ನೋಡಿಕೊಳ್ಳುತ ತನ್ನ ಪ್ರತಿಬಿಂಬವನ್ನು ತಾನು ಮೋಹಿಸಿಕೊಳ್ಳುತ್ತಿರುವಾಗ್ಗೆ.. ಸಂಡೂರು ಗೆಡ್ಡೆಯ ಕಾರ್ತೀಕ ಸ್ವಾಮಿಯ ಕಾಡಡವಿಯಲ್ಲಿ ಕೂಡ್ಲಿಗಿಯ ಕುಂಪಣಿ ಅಧಿಕಾರಿ ಯಡ್ಡವರ್ಡನು ಹುಲಿ ಚಿರತೆಗಳನ್ನು ಶಿಕಾರು ಮಾಡುತಿರುವಾಗ್ಗೆ.. ಪದಭ್ರಷ್ಟಗೊಂಡಿದ್ದ ನಲ್ಲಚರುವಿನ ಗುರುವಪ್ಪನಾಯಕನು, ಹೆಬ್ಬೆಟದ ಪೆದ ತಿಮ್ಮಾರೆಡ್ಡಿಯು, ಹರುವಾಣದ ಹರಿಶ್ಚಂದ್ರರೆಡ್ಡಿಯು ಬೆಳಗಲ್ಲಿನ ಮೋಂಕಾರಪ್ಪನು ಪತ್ತಿಕೊಂಡ ಸಮೀಪದ ಕರಿಯೇಮಲ ದರಣ್ಯೇವ ಗುಪ್ತಜಾಗದಲ್ಲಿ ಕೂಕಂಡು ಕುಂಪಣಿ ಸರಕಾರದ ಕರಾಮತ್ತಿನ ಬಗ್ಗೆ ಚರ್ಚೆ ಮಾಡುತ್ತಿರುವಾಗ್ಗೆ.. ಕೇಳಲೂ ಬಾರದ, ಹೇಳಲೂ ಬಾರದ ಸಂಗತಿಗಳನು ತಮ ತಮ್ಮ ಕಾಲುಗಳಿಗೆ ಕಟ್ಟಿಕೊಂಡಿದ್ದ ಪಾರಿವಾಳಗಳು ಕುಂತಳ ಸೀಮೆಯ ವಳಿತದ ರಾಯದುರ್ಗದಿಂದ ಚಿತ್ರಕಲ್ಲುದುರ್ಗದ ಕಡೆಗೂ, ಜರುಮಲಿಯಿಂದ ಗುಡೇಕೋಟೆ ಕಡೆಗೂ, ಜಮ್ಮೋಬನಳ್ಳಿಯಿಂದ ಸಿಡೇಗಲ್ಲಿನ ಕಡೆಗೂ ಹಾರುತ ಮುಗುಲ ಬಯಲಲ್ಲಿ ಅಂಡಾವರನವಾಗಿರುವಾಗ್ಗೆ.. ಕೋನಾಪ್ರದ ಕೋನಪ್ಪ ನಾಯಕನಿಗೂ, ರಾಜಾಪ್ರದ ರಾಜಪ್ಪ ನಾಯಕನಿಗೂ ಬೊಮ್ಮಕ್ಕನ ರಣಬಯಲಲ್ಲಿ ನಡೆದ ಘನ ಘೋರ ಕಾಳಗದಲ್ಲಿ ಹತ್ತೋರಿಲ್ಲದೆ, ಯಿಳಿಯೋರಿಲ್ಲದೆ ತಮ ತಮ್ಮ ಬೆನ್ನು ಡುಬ್ಬಗಳನ್ನು ಹಗುರ ಮಾಡಿಕೊಂಡಿದ್ದ ನೂರಾರು ಕುದುರೆಗಳು ಯರಡು ಮೂರು ಹರದಾರಿ ದೂರವನ್ನು ಕುಂಟುತ್ತ, ತೆವುಳುತ್ತ ಕ್ರಮಿಸಿ ದರವುಜಿ ಕೆರೆಯ ನೀರಿಗೆ ಬಾಯಿ ಅಂಟಿಸಿರುವಾಗ್ಗೆ.. ತಮ್ಮ ರಾಜ ನೆಟಕಲ್ಲಪ್ಪ ನಾಯಕನ ವುಪಟಳಕ್ಕೆ ರೋಸಿ ನೂರಾರು ಮಂದಿ ಪ್ರಜೆಗಳು ಹೆಂಡರು ಮಕ್ಕಳನ್ನು ಕಟ್ಟಿಕೊಂಡು, ಸಾಮಾನು ಸರಂಜಾಮುಗಳನ್ನು ಬಂಡಿಗಳಲ್ಲಿ ಯೇರಿಕೊಂಡು ಮದ್ದಿಕೇರಿ ಗ್ರಾಮದಿಂದ

ಜೊನ್ನಗಿರಿ ಪ್ರಾಂತದ ಕಡೇಕ ಗುಳೇ ಹೊಂಟಿರುವಾಗ್ಗೆ.. ಯಿತ್ತ ಕುದುರೆಡವು ಪಟ್ಟಣದ ಅರಮನೇಲಿ ರಾಜಮಾತೆ ಭಯ್ರಮಾಂಬೆಯು ತನ್ನ ಸವತಿ ಮಗ ಕಾಟಯ್ಯ ನಾಯಕನೊಂದಿಗೆ ವಂದು ಕಾಸಿನ ಸರದ ಯಿಷಯದಲ್ಲಿ ಜಗಳವಾಡುತಲಿದ್ದಳು. ತಿರುಪಾಲಯ್ಯ ಶ್ರೇಷ್ಠಿಯು ತನ್ನ ಮನೆಯ ನೆಲಮಾಳಿಗೆಯೊಳಗೆ ತಾನೊಬ್ಬನೆ ಕೂತುಕೊಂಡು ರಾಣಿ ರೂಪಾಯಿಗಳನ್ನು ಯಣಿಕೆ ಮಾಡುತಲಿದ್ದನು. ಪ್ರಸಿದ್ಧ ಪೂರುವಿಕರ ವಂಶಸ್ಥನೂ, ಸರಸೊತಿ ದೇವಿಯ ವರಪುತ್ರನೂ ಆಗಿದ್ದಂಥ ಭಟ್ರಾಜು ರಾಮರಾಜುವು ಚುಟುಚುಟು ಗುಟ್ಟುತಲಿದ್ದ ಹೊಗಳಿಕೆಯ ಮಾತುಗಳನ್ನು ತನ್ನ ಗೇಣುದ್ದದ ನಾಲಿಗೆ ಮ್ಯಾಲಿಂದ ಯಕ್ಕಿ ತೆಗೆದು ತಾಳೆಯೋಲೆಯ ಮ್ಯಾಲೆ ಕಟೆದಿಡುತ ಹೊಗಳಿಕೆ, ತೆಗಳಿಕೆಗೆ ಸಂಬಂಧಿಸಿದ ನಿಘಂಟೊಂದನ್ನು ರಚನೆ ಮಾಡುತಲಿದ್ದನು. ಮ್ಯಾಗಳಗೇರಿಯಲ್ಲಿ ವಂದು ಕಸಬಾರಿಗೆ ಯಿಷಯದಲ್ಲಿ ಆಮಾತ್ಯ ಗವುಡಿಕೆ ಸಣಸಿದ್ದಪ್ಪನ ಚತುರ್ತ ಪತ್ನಿಯಾದ ಗವುರವ್ವನೂ, ಸೇನಾಧಿಪತಿ ಗೋಯಿಂದಪ್ಪನ ಪಂಚಮ ಪತ್ನಿಯಾದ ಯಂಕಮ್ಮನೂ ತಾಸೊತ್ತಿನಿಂದ ಜಗಳಾಡೀ ಆಡೀ ದಣದು ಅದೇ ಯಿನ್ನು ತಮ ತಮ್ಮ ಮನೆಗಳನ್ನು ಸೇರಿಕೊಂಡು ವಟವಟಗುಟ್ಟುತ ಧಮ್ಮಾರಿಸಿಕೊಳ್ಳುತಲಿದ್ದರು.. ರಣಬಯಲಲ್ಲಿದ್ದ ಹವಾ ಮಹಲೊಳಗೆ ಗೊಂಜಾಡಲರ ಡವಯ್ಯನೂ, ಮ್ಯಾಲಗಿರಿ ತಿಮ್ಮನೂ, ಕಜ್ಜುಲೀರಯ್ಯನೂ, ಸಂಧಿಯಿಗ್ರಹಿ ರಾಮಪ್ಪ ಸ್ವಾಮಿಯೂ ತಮ್ಮ ಮುಂದೆ ಚದುರಂಗದ ಪರಿಕರವನ್ನು ಯಿಟುಕೊಂಡು ರಾಜಪರಿವಾರದ ಹುದ್ದರಿಗಳಿಗಾಗಿ ಕಾಯುತಲಿದ್ದರು.. ದಿನತುಂಬಿದ ಬಸುರೇರು ನೋವು ತಿಂಬುತಲಿದ್ದರು.. ನೀರು ತರೋರು ಹೊನ್ನಮ್ಮನ ಹಳ್ಳದಿಂದ ನೀರು ತರುತಲಿದ್ದರು.. ಹೊಲದ ಬದುಕೀಗೆ ಹೋಗೋರು ತಮ ತಮ್ಮ ಹೊಲಗಳ ಕಡೀಕೆ ಹೊಂಟಿದ್ದರು.. ನೆಲ ಸಾರಿಸೋರು ನೆಲ ಸಾರಿಸುತಲಿದ್ದರು.. ಕಸ ಗುಡಿಸೋರು ಕಸ ಗುಡಿಸುತಲಿದ್ದರು.. ಹಲ್ಲಿದ್ದೋರು ಹುರುಗಡ್ಲೆ ಜಮಡುತಲಿದ್ದರು.. ಹಲ್ಲಿಲ್ಲದೋರು ಜಮ್ಕೆಕಡ್ಡಿ ನಮಲುತಲಿದ್ದರು.. ತಮ ತಮ್ಮ ಹೊಟ್ಟೆ ಪ್ರದೇಶವ ಕೆರಕೋತ ಸಿಪಾಯಿಗಳು ಅಲ್ಲೊಬ್ಬರು, ಯಿಲ್ಲೊಬ್ಬರಂತೆ ಗಸ್ತು ತಿರುಗತಲಿದ್ದರು.. ಕುದುರೆಡವು ಪಟ್ಟಣದ ವರ್ತಮಾನವನ್ನು ವಂದೇ ಮಾತಲ್ಲಿ ಹೇಳಲಕಂದರೆ ಆರು ಮೂರರ ನಡುವೆ ಮಿಸುಕಾಡುತಲಿತ್ತು. ವಂದು ಯೇರಿಕೆ ಯಂಬುದಿರಲಿಲ್ಲ, ವಂದು ಯಿಳಿಕೆ ಯಂಬುದಿರಲಿಲ್ಲ, ನಿನ್ನೆ ಯಂಬುದಿರಲಿಲ್ಲ, ಯಿಂದು ಯಂಬುದಿರಲಿಲ್ಲ, ನಾಳೆ ಯಂಬು ದಿರಲಿಲ್ಲ. ವ್ಯಾಲಿದ್ದೋರು ಕೆಳಗಿದ್ದೋರನು

ನೋಡುತಯಿರಲಿಲ್ಲ, ಕೆಳಗಿದ್ದೋರು ಮ್ಯಾಲಿದ್ದೋರನು ನೋಡುತಯಿರಲಿಲ್ಲ.. ಹಿಂದಿದ್ದೋರು ಮುಂದಿದ್ದೋರನ್ನಾಗಲೀ, ಮುಂದಿದ್ದೋರು ಹಿಂದಿದ್ದೋರನ್ನಾಗಲೀ, ಯಡಕ್ಕಿದ್ದೋರು ಬಲಕ್ಕಿದ್ದೋರನ್ನಾಗಲೀ, ಬಲಕ್ಕಿದ್ದೋರು ಯಡಕ್ಕಿದ್ದೋರ ನ್ನಾಗಲೀ ಗಮನಿಕೆ ಮಾಡುತ ಯಿರಲಿಲ್ಲ.. ಅವರದ್ದೊಂದು ನಮೂನಿ ಮಟ್ಟಸ ಬದುಕಾಗಿತ್ತು....

ಅಂಥ ಬದುಕು ಹೆಪ್ಪುಗಟ್ಟಿ ಮಲೆತು ನಿಂತಿದ್ದ ಆ ಗ್ರಾಮವು ಪಟ್ಟಣದ ಪೋಷಾಕನ್ನು ಸದಾ ಧಾರಣ ಮಾಡಿರುತಲಿತ್ತು. ಕುಂತಳ ಪ್ರಾಂತ ಯಂಬುವ ಮಜ್ಜಿಗೆ ಗುಡಾಣದೊಳಗೆ ಬೆಣ್ಣೆವುಂಡೆಯಂಗೆ ತೇಲಾಡುತ್ತಲಿದ್ದ ಆ ಪಟ್ಟಣದೊಳಗೆ ಆ ವಂದು ಚಣ ಯಾಪಾಟಿ ರುತುಮಾನ ಪರಪಾಟಾಯಿತೆಂದರೆ ಆ ದಿನ ವುದಿಸಿದ್ದೇ ವಯಶಾಖ ಜಾತಿಯ ಮದ್ಯಾಣದ ಸೂರ್ಯನು ಯೇರುತ ಯೇರುತ ಪ್ರತಿಯೊಬ್ಬರ, ಪ್ರತಿಯೊಂದರ ನೆತ್ತಿ ಮ್ಯಾಲಕ ಬಂದಾತನು ಧಗಧಗನೆ ಸುಡುತಲಿದ್ದ. ತನ್ನ ಬಿಸಿಲ ತೋಳುಗಳಿಂದ ಹೊರಗೆ ಆಡುತಲಿದ್ದ ಮಕ್ಕಳು ಮರಿಗಳನು, ಮಂದಿಯ ಕತ್ತುಗಳನು ಹಿಡಿದು ಅವರವರ ಮನೆವಳಗಡೆ ತಳ್ಳಿ ಹ್ಹಾ... ಹ್ಹೂ ಯಂದು ವುಸುರು ಬಿಡುವಂತೆ ಮಾಡಿದ. ಗಳಗ್ಗಳಿಗ್ಗೊಮ್ಮೆ ನೀರು ಕುಡಿಯುವಂತೆ ಮಾಡಿದ. ಸೆಖೆ ತಾಳಲಾರದೆ ಮಂದಿ ತನ್ನನ್ನು ಬಯ್ಯುವಂತೆ ಮಾಡಿದ. ಬಿಸಿಲ ಕೋಲುಗಳಿಂದ ವಬ್ಬೊಬ್ಬರನ್ನು ಬಡಿದು ಹಿಂಸಿಸಿದ. ನೂರಾರು ಬಿಸಿಲುಗುದುರೆಗಳನ್ನು ಬೀದಿ ಬೀದಿ ತುಂಬೆಲ್ಲ, ಬಯಲು ಬಯಲು ತುಂಬೆಲ್ಲ ಅಂಡಲೆಯುವಂತೆ ಮಾಡಿದ. ಯಿಡೀ  ಸಮಸ್ತ ಪಟ್ಟಣವನ್ನು ತನ್ನ ಅಗಾಧವಾದ ಮ್ರುಗಜಲದಿಂದ ತೊಯ್ದು ತಪಟ್ಟೆಯಾಗುವಂತೆ ಮಾಡಿದ. ಬಿಸಿಲೆಂಬುವ ಚಕ್ರಾಧಿಪತ್ಯ ಸ್ಥಾಪಿಸಿ ಬಿಸಿ ಯಂಬ ಅಧಿಕಾರವನ್ನು ತಾನು ಚಲಾಯಿಸುತ್ತಿರುವಾಗ್ಗೆ, ಅಗಾಧವಾದ ಮವುನ ಬಿತ್ತಿ ಬೆಳೆಯುತ್ತಿರುವಾಗ್ಗೆ.. ಕೊರೆದ ಚಿತ್ರದಂತೆ ಪಟ್ಟಣ ಬಿಕೋ ಅನ್ನುತ್ತಿರುವಾಗ್ಗೆ.. ಥೆಳಗೇರಿಗಳಗೆಲ್ಲ, ಮಕುಟಪ್ರಾಯದಂತಿದ್ದ ವಂದು ಥೆಳಗೇರಿಯ, ಕೆಮ್ಮಿದರೆ ವಂದು ಪುಟ್ಟಿ ಮಣ್ಣುವುದುರಿಸುತಲಿದ್ದ ವಂದು ಮನೆಯ ಅಂಗಳದಲ್ಲಿದ್ದ ವಂದು ಕಟ್ಟೆಯ ಮ್ಯಾಲ ಬಲಗಾಲನ್ನು ನೆಲಕ್ಕಿಳಿಬಿಟ್ಟು ಯಡಗಾಲ ಪಾದವನ್ನು ತೊಡೆ ಸಂದಿಗಂಟಿಸಿಕೊಂಡು, ಮೊಣಕಾಲ ಚಿಪ್ಪಿನ ಮ್ಯಾಲ ಬಲಗಯ್ಯನ್ನು ವುದ್ದೋಕೆ ಚಾಚಿ, ಯಡಗಯ್ಯನ್ನು ತಲೆಗಾನಿಸಿಕೊಂಡು ಬೀದಿಯ ತುದಿಯಲ್ಲಿ ಮೂಡಿ ಮರೆಯಾಗುತಲಿದ್ದ ಬಿಸಿಲಗುದುರೆಯತ್ತ ದ್ರುಸ್ಟಿ ಅಂಟಿಸಿ ವಡಲೊಳಗಿನ ನೀರು ಅಳ್ಳಾಡದಂಗೆ ಕೂಕಂಡಿದ್ದ....

ಗುಡಿ ಹಿಂದಲ ಮೂಳೆ ಮೋಬಯ್ಯ ಹಂಗೇ ವಂದು ಜೋಂಪು ನಿದ್ದೆ ಹೋದನು. ನಿದ್ದೆ ಹೋದೊಡನೆ ಕಂಡ ಕಣಸಲ್ಲಿ ಹೆಂಗೆಂಗೊ ಆಗತೊಡಗಿತು. ಮೂಡ ಬಾರದ ತರಾವರಿ ಚಿತ್ರಯಿಚಿತ್ರಗಳು ಮೂಡ ತೊಡಗಿರುವಂತೆ.. ಕಾಣಬಾರದ ತರಾವರಿ ಮಂದಿ ಕಾಣತೊಡಗಿರುವಂತೆ.. ಮನಯಂಬುವ ಯಿಸ್ತಾರವಾದ ಜಗುಲಿಯ ಮ್ಯಾಲ ಗುಂಪು ಗುಂಪಾಗಿ ಕೂತು ಅನುಭಾವದ ನೆಲೆಯಲ್ಲಿ ಮಾತನಾಡಲಾರಂಭಿಸಿರುವಂತೆ.. ತನ್ನ ದೇಹ ಯಂಭೋ ದೇಹವು ಗಿರಿಗುಡ್ಡ ಗವ್ವರಗಳಲ್ಲಿ ತಾನೇ ತಾನಾಗಿ ಸುಳಿದಾಡುತ್ತಿರುವಂತೆ.. ಹೆಜ್ಜೆಗೊಂದೊಂದರಂತೆ ಯದುರಾದ ಗಂಟೆ, ಜಾಗಟೆಗಳನ ಭಾರಿಸುತ್ತಿರುವಂತೆ.. ಶಂಖ ಕಹಳೆ ಮೊದುತ್ತಿರುವಂತೆ.. ತಾನು ಬಿಡುತ್ತಿರುವ ವಂದೊಂದು ವುಸುರು ಬಿರುಗಾಳಿ ಸುಂಟರುಗಾಳಿಗಳಾಗಿ ಸಂಚರಿಸುತ್ತಿರುವಂತೆ.. ತಾನು ಯಿಡುತ್ತಿರುವ ವಂದೊಂದು ಹೆಜ್ಜೆಗೆ ಭೂಮ್ತಾಯಿ ಗಡಗಡ ನಡುಗುತ್ತಿರುವಂತೆ.. ಕಾಗೆ, ಗುಬ್ಬಿ, ಹದ್ದು, ರಣಹದ್ದುಗಳಿವೇ ಮೊದಲಾದ ಪಕ್ಷಿಗಳು ಆಕಾಸದ ತುಂಬೆಲ್ಲ ಅಂಡಾವರನವಾಗಿರುವಂತೆ.. ಹುಲಿ, ಸಿಮ್ಮ, ಕರಡಿ, ಕಿರುಬಗಳಿವೇ ಮೊದಲಾದ ಮ್ರುಗಗಳು ದಿಕ್ಕಾಪಾಲಾಗಿ ಮೋಡುತ್ತಿರುವಂತೆ.. ತಾನು ತನ್ನ ಸರೀರದಿಂದ ಹೊರಬಿದ್ದು ಬಕ ಬೋರಲಾದಂತೆ.. ದಿಗ್ಗನೆದ್ದು ತನ್ನ ಸರೀರದ ಲಗಾಮವನ್ನು ಹಿಡಿದೆಳೆಯುವ ಪ್ರಯತ್ನ ಮಾಡುತ್ತಿರುವಂತೆ ಭಾಸವಾಗತೊಡಗಿತು....

ಕೇಳಲು ನೋಡಿದ, ನೋಡಲು ನೋಡಿದ, ಮಾತಾಡಲು ನೋಡಿದ, ಆದರದು ತನ್ನ ಮಾತು ಕೇಳುತ್ತಿಲ್ಲಯಂದುಕೊಳ್ಳುತ್ತಾನೆ. ಕಣಸೊಳಗೆ ಯಿದ್ದ ಮೋಬಯ್ಯನು, ಅವನ ತೊದಲುವಿಕೆ, ಕನವರಿಕೆಗಳು ವಂದಾs ಯರಡಾ ಸಿವನೇss....

ತನ್ನ ಕಣ್ಣುಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲಾಯ್.. ತನ್ನ ಕಿವಿಗಳು ತನ್ನ ಸ್ವಾಧೀನದಲ್ಲಿಲ್ಲ ವಲ್ಲಾಯ್.. ತನ್ನ ಬಾಯಿ ತನ್ನ ಸ್ವಾಧೀನದಲ್ಲಿಲ್ಲವಲ್ಲಾಯ್.. ತನ್ನ ಸರೀರ ಯಂಬುದು ತನ್ನ ಸ್ವಾಧೀನದಲ್ಲಿಲ್ಲವಲ್ಲಾಯ್.. ತಾನು ಯೀಸು ದಿನಮಾನದಿಂದ ಬದುಕುತ್ತಿದ್ದ ಬದುಕು ಗುರುತು ಸಿಗದಂಗಾಗಯ್ತಲ್ಲಾಯ್.. ಯಾದೋ ವಂದು ಅದ್ರುಸ್ಸ ಸಗುತಿ ತನ್ನನ್ನು ತನ್ನ ಸರೀರದಿಂದ ಹೊರದೊಬ್ಬಿದಂಗಾಗಯ್ತಲ್ಲಾಯ್....

ಯಿದೆಂಥಾ ಕಣಸಿದ್ದೀತಪ್ಪಾ ಸಿವನೇss....

ತಾನು ತನ್ನ ಸರೀರವನ್ನು ಕಣಸೊಳಗಾದರೂ ನೋಡಿಕೊಳ್ಳುವಂಗಾಯಿತಲ್ಲಾ.. ಆ ಸರೀರವು ತನ್ನದೆಂದು ನಂಬುವುದೋ,

ಬಿಡುವುದೋ, ಅದರೊಳಗ ತಾನಿದ್ದುದಾss ತನ್ನೊಳಗs ಅದು ಯಿತ್ತೋ, ತಾನು ನೋಡು ನೋಡುವಷ್ಟರೊಳಗss....

ಕಯ್ಯಿ ಕಾಲುಗಳು ತಾವೇ ತಾವಾಗಿ ಬೆಳೆಯಲಾರಂಭಿಸಿದಂತೆ.. ಕಿವಿಗಳು ಮಾರು ಮಾರಗಲ ವಾಗುತ್ತಿರುವಂತೆ ವಂದೊಂದು ಕಣ್ಣೊಳಗ ಸಾವುರ ಸಾವುರ ದೀವಟಿಗೆಗಳ ದಿಬ್ಬಣ ಹೊಂಟಿರುವಂತೆ.. ಬಾಯೆಂಬುದು ಬ್ರುಹತ್ ಕೂಪವಾಗುತ್ತಿರುವಂತೆ.. ಯೋಜನದುದ್ದಗೊಂಡ ಹಣೆ ನಡುವೆ ಯೇಳು ಮಾರಗಲದ ಕುಂಕುಮ ಬೊಟ್ಟೊಂದು ರಾರಾಜಿಸುತ್ತಿರುವಂತೆ.. ತನ್ನ ಕೊರಳೊಳಗಂತೂ ತರಾವರಿss..

ಯಿದೆಂಥಾ ಕಣಸಿದ್ದೀತಪ್ಪಾ ಸಿವನೇss....

ಆ ಯಿರಾಟ್ ರೂಪೀ ತನ್ನ ಸರೀರದೊಳಗೆ ತಾನು ತೂರಿಕೊಳ್ಳುವ ಪ್ರಯತ್ನಗಳನ್ನು ವಂದರ ಮ್ಯಾಲೊಂದರಂತೆ ಕುಂತ ಕುಂತಲ್ಲೆ ಮಾಡಿದನು. ಅದರ ಮ್ಯಾಲಿನ ತನ್ನ ಪರಂಪರಾಗತ ಹಕ್ಕನ್ನು ಬಿಟ್ಟುಕೊಡಬಾರದೆಂಬ ವಂದೇ ಕಾರಣಕ್ಕಾಗಿ.. ಬರಬ್ಯಾಡಪ್ಪಾ ಬರಬ್ಯಾಡ.. ನೀನಲ್ಲೇ ಯಿರು.. ನಾನಿಲ್ಲೇ ಯಿರುತೀನಿ ಯಂದು ಸರೀರ ಅಂಬುವುದೆಂದರೇನು? ಯಿದೇನು ಹೇಳುವ ಮಾತಲ್ಲ ಸಿವನೇ, ಕೇಳುವ ಮಾತಲ್ಲ ಸಿವನೇ.. ಅದರ ಮ್ಯಾಲಿದ್ದ ಬೆಮರ ಕುಣಿಗಳಿಂದ ಅಗೋಚರ ಹಸ್ತಗಳು ವಡಮೂಡಿ ತನ್ನನ್ನು ಕತ್ತು ಹಿಡಿದು ತಳ್ಳಿದಂಗಾಯ್ತಂತೆ.. ಬಲು ಬ್ಯಾಸರ ಬಂದೀವಯ್ಯ "ಯಾಕೆ ಸರೀರವೇ.. ನನ ಮ್ಯಾಲ ನೀನು ಮುನುಸಿಕೊಂಡೀ ಯಾಕೆ? ನಾನು ನಿನ್ನೊಳಗ ಯಿರೋದು ನಿಂಗೆ ಬ್ಯಾಡಾಗಯ್ತೇನು?" ಯಂದು ಕೇಳಿದನಂತೆ.. ಅದಕಿದ್ದು ಅರಮನೆಯೋಪಾದಿಯಲ್ಲಿ ಬೆಳೆಯುತಲಿದ್ದ, ನಿಗಿ ನಿಗಿ ಹೊಳೆಯುತಲಿದ್ದ ಆ ಸರೀರವು ಪಕಪಕ ನಗಾಡಿದಂಗಾಯ್ತಂತೆ.. ನಗಾಡುತ್ತಲೇ "ಯಲಾಯ್ ನರಮಾನ್ನವನೇ ಯೀ ಕ್ಷಣದಿಂದ ಯೀ ಸರೀರವು ಅಂದರೆ ನಾನು ನಿನ್ನದಲ್ಲ.. ನಾನು ಸಗುತಿ ಸಾಂಬವಿಯ ವಾಸಕ್ಕೆ ಅಣಿಗೊಂಡಿರುವೆ ಕಣಪ್ಪಾ.. ಆಕೆಯು ತನ್ನ ಸೋದರಿಯರಾದ ಸುಂಕಲೀ, ಚವುಡೀ, ವುಡುಸಲೀ, ಮಾರೀ, ಮಸಣಿಯರೇ ಮೊದಲಾದವರೊಂದಿಗೆ ದಯಮಾಡಿಸ್ಯಾಳ.. ವಬ್ಬೊಬ್ಬರು ವಂದೊಂದು ಮ್ರುಗವನ್ನು ವಾಹನ ಮಾಡಿಕೊಂಡು ದಯಮಾಡಿಸವರೆ.. ತಮ ವಂದೊಂದು ಕಯ್ಲಿ ವಂದೊಂದು ಆಯುಧವನ್ನು ಹಿಡಿದುಕೊಂಡವರೆ.. ನಾನಾ ನಮೂನಿ ಪಕ್ಷಿಗಳನ್ನು ತಮ ತಮ್ಮ ತುರುಬುಗಳಿಗೆ ಹುವ್ವಿನೋಪಾದಿಯಲ್ಲಿ ಮುಡುದವರೆ.. ಯೀರೇಳು ಲೋಕಗಳಿಗೆ ಕೇಳಿಸುವಂತೆ ನಗಾಡುತವರೆ, ಅಗೋ

ನೋಡಲ್ಲಿ” ಯಂದು ಬೊಟ್ಟು ಮಾಡಿ ತೋರಿಸಿತೆಂದರೆ ನಂಬುವುದಾ? ನಂಬದಂಗ ಯಿರುವುದಾ?

ಯಿದೆಂಥಾ ಕಣಸಿದ್ದೀತಪ್ಪಾ ಸಿವನೇ....

ಯಿವಯ್ಯ ನೋಡಲಾಗಿ ಆ ತಾಯಿಯು

ನೆಲವುಗುಲಿಗೇಕಾಗಿ, ಭೂಮಿಗಾತುರದವಳಾಗಿ, ಗೋಚರ ಮಾಡಿದಳಂತೆ.. ವಂದೊಂದು ಹೆಜ್ಜೆಗೆ ವಂದೊಂದು ಲೋಕವನ್ನಳೆದಳಂತೆ.. ಗುಡುಗು ಸಿಡಿಲುಗಳನ್ನು ತನ್ನ ನಾಲಗೆ ಮ್ಯಾಲ ವಟ್ಟಿ ಕೊಂಡಿದ್ದಳಂತೆ.. ಮಿಂಚು ಕೋಲ್ಮಿಂಚುಗಳನ್ನು ತನ್ನ ಕಣ್ಣೊಳಗೆ ಮಡುಗಿದ್ದಳಂತೆ.. ಅಷ್ಟ ದಿಗ್ಗಜಗಳ ರಸಾಸ್ವಾದನೆಯನ್ನು ತಾನು ಮಾಡುತ್ತಿದ್ದಳಂತೆ.. ಸಿವನೇ....

ಅಂಥಾ ತಾಯಿಯನ್ನು ತನ್ನ ಕಣಸೊಳಗ ಅದೇ ಮೊದಲ ಸಲ ನೋಡಿದವನಾದ ಯಿವಂಯ್ಯನು ಬೆಕ್ಕಸ ಬೆರಗಾದನಂತೆ, ಮೂಕಯಿಸುಮಿತನಾದನಂತೆ.. ಯದೆ ಝಲ್ಲಂದಂಗಾತಂತೆ.. ಕಣ್ಣು ಕುಕ್ಕಿ ದಂಗಾತಂತೆ.. ವುಗುಳು ಗಂಟಲ ಹೊಸ್ತಿಲ ಬಳಿ ಮಡುಗಟ್ಟಿ ನಿಂತಂಗಾತಂತೆ.. ಚೂರುಪಾರು ಸಗುತಿಯನ್ನು ನಾಲಗೆಗೆ ತಂದುಕೊಂಡು

“ಹ್ಹಾಂ.. ಹ್ಹಾಂ... ತಾಯಿ.. ತಾಯಿ ಅಂದರ ನೀನೆ ಕಣವ್ವಾ.. ನಿನ್ನ ದರುಸನದಿಂದ ಜಲುಮ ಸಾರ್ತಕ ಆಯಿತವ್ವಾ.. ಹೊಕ್ಕೊಳ್ಳಿಕ್ಕೆ ನಿಂಗೆ ನನ ಸರೀರವೇ ಬೇಕಾಗಿತ್ತೇನವ್ವಾ.. ನನ್ನ ಸರೀರದೊಳಗ ಯೇನಂಥ ಸಿರಿ ಸಂಪತ್ತಯ್ತಂತ ಬಂದೀಯವ್ವಾ.. ಯಿದು ಮೊದ್ಲೇ ವಂದೊಂದು ಹೆಜ್ಜೆಗೆ ವಂದೊಂದು ಸಬುಧ ಮಾಡುತಯ್ತೆ.. ಕುಂತರೆ ಯದ್ದೇಳಕಾಗೊಲ್ಲ.. ಯದ್ದರೆ ಕುಂಡರಲಕಾಗುತಿಲ್ಲ. ಜೀವಾತುಮ ಯಂಬುದು ಯಿಲ ಯಿಲನೆ ವದ್ದಾಡುತಯ್ತೆ.. ಯಿದರೊಳಗ ಮಾವುಸಗಿರ್ದ ಮಣ, ರಗುತ ಪಾಮೂವರೆ ಯಿದ್ದರ ಮಸ್ತಾದೀತು, ಯಿಂದ್ರಿಯಗಳು ಸವುಕೊಂಡು ಹೋಗ್ಯಾವ, ಯಿಂಥ ಸರೀರದೊಳಗ ಯೇನು ಅಯಿಭೋಗ ಅಯಿತಂತ ಬಂದೀಯವ್ವಾ.. ಹೆಂಗ ವಸ್ತಿ ಯಿರುತೀಯವ್ವಾ.. ಯೀ ನನ್ನ ಮಟ ಮಟ ಮಯ್ಲಿಗಿ ಸರೀರದೊಳಗ ಯಾವ ಸುಖನ ಪಡುತೀಯವ್ವಾ..” ಯಂದು ಮುಂತಾಗಿ ಯೀವಯ್ಯ ಮನಾರ ಕೇಳಿಕೊಂಡಿದ್ದಕ್ಕೆ ಸರೀರವು ಪಕಪಕ ನಗಾಡುತ ಹುಚ್ಚಪ್ಪಾ.. ನಾಡ ಹುಚ್ಚಪ್ಪಾ ಅಂದಂಗಾತಂತೆ, ಮತ್ತ ಯೀತನು....

ನೀ ಹೋಗುತೀನಂದರ ನೀನಿದ್ದಲ್ಲಿಗೆ ಬಂದು ಮಂಡೆ ಕೊಡುತೀನವ್ವಾ ಅಂದನಂತೆ.. ಕಯ್ನು ಮುಗಿತೀನಂದನಂತೆ.. ಕಾಲಿಗೆ ಕಡಕೊಂಡು

ಬೀಳುತೀನಂದನಂತೆ.. ಅದಲ್ಲದೆ ಮಯ್ನ ಅಡ್ಡಡ್ಡ ಕುಯ್ದು ಸರಗ ಚೆಲ್ಲುತೀನವ್ವಾ ಅಂದನಂತೆ.. ಆಕೆ ನಗು ನಗುತ ತನ್ನ ಸರೀರವ ಪ್ರವೇಸ ಮಾಡಿದೊಡನೆ ತರಗೆಲೆ ಹಂಗ ಹೊಯ್ದಾಡಿ ಬಿಟ್ಟನಂತೆ.. ಆ ಅಂಥ ಸರೀರದೊಳಗ ದ್ಯಾವಾನು ದ್ಯಾವತೆಗಳು ಪುಷ್ಪರುಷ್ಟಿ ಕರೆದರಂದರ ಹೆಂಗ ನಂಬಿಕೆ ಬಂದೀತು?

ಮೋಬಯ್ಯ... ನಿಂದೇನು ಸರೀರವಾ.. ಪರಂಪೂಕು ಜಮೀನಾ ಅಂತ ಆ ಕಾಲದೊಳಗ ಯಾರಾದರೂ ಕೇಳಿರಲಿಲ್ಲವಾ ಯಂಬ ಅನುಮಾನ ಯೀ ಕಾಲದ ಮಂದಿಗೆ ಬರದಾಂಗ ಯಿರುವುದಾ..? ತನ್ನ ಸರೀರದ ಬಗ್ಗೆ ತಾನೇ ಕಥೆ ಕಟ್ಟಿ ಹೇಳಿರಬೌದಾಯಂಬ ಗುಮಾನಿ ನಡುವೆಯೂ ಮುಂದೇನಾತಂತ ಕೇಳಿಕೋತ ಹೋದರ....

ಆ ವಂದು ಚಣ ಅವಯ್ಯ ತರಗೆಲೆಯಂಥಾಗಿ ತೇಲಾಡಿದನಂತೆ ಸಿವನೇ.. ಹಿಂದಕು ಮುಂದಕು ವಾಲಾಡಿದನಂತೆ.. ಮತ್ತೆ ನಿಸೂರಾಗಿ ಬಾಯಿನ ಮ್ಯಾಲ ಬೊಟ್ಟಿಟ್ಟುಕೊಂಡನಂತೆ.. ತನ್ನಂಥ ದುಡಿದುಂಬುವವರ ಸರೀರದೊಳಗ ವಸ್ತಿ ಮಾಡುವ ಹಕ್ಕನ್ನು ಸಾಂಬವಿಗೆ ಕೊಟ್ಟವರಾರು ಅಂಥ ತನಗ ತಾನ ಸಮುಸಯ ತಾಳಿಕೊಂಡನಂತೆ.. ವಂಚೂರಾರ ವುಪಕಾರ ಸ್ಮರಣೆಯಿಲ್ಲ ನಿನಗ ಅಂತ ತನ್ನ ಸರೀರವನ್ನ ತಾನ ತರಾಟೆ ತಗೊಂಡನಂತೆ.. ಹೆಂಡತಿ ಜಗಲೂರಿ ಬಂದು ಯಲ್ಲಯ್ತೆ ನಿನ್ನ ಸರೀರ ಯಂದು ಕೇಳಿದರ ಯೇನಂತ ಜವಾಬು ಕೊಡುವುದು ಯಂದು ಯಸನವನ್ನೂ ಮಾಡಿದನಂತೆ....

ಅವಯ್ಯನು ಹಗಲು ಗನಸು ಕಾಂಬುತ್ತಿದ್ದ ಹೊತ್ತಿನಲ್ಲಿ.....

ಗುಡಿ ಹಿಂದಲ ಮನೆಯಂಗಳದಲ್ಲಿ ನೆಲಮುಗಿಲಿಗೇಕಾಗಿ ಭೂಮಿ ತಾಯಿಗೆ ಛತ್ರಿಹಿಡಿದಂತೆ ಬೆಳೆದು ನಿಂತಿದ್ದ ಬೇಯಿನ ಮರವು ಯಂಟೂ ದಿಕ್ಕಿಗೂ ಹೊಯ್ದಾಡಿದಂತೆ.. ವುಘೇ ವುಘೇ ಅಂತಂತೆ ಸಿವನೇ....

ಅತ್ತ ಅರಮನೆಯೊಳಗ ಹಿಡಿಯೋರಿಲ್ಲದ ಅನಾಥವಾಗಿದ್ದ ಬಿದ್ದಿದ್ದ ಪಿಕದಾನಿಯು ನರಳಾಡಿತಂತೆ.. ರಾಜಮಾತೆ ಭಯ್ರಮಾಂಬೆಯ ಬಲಗಣ್ಣು ಹಾರಲಾರಂಭಿಸಿತಂತೆ.. ರಾಜಕುಮಾರ ಕಾಟನಾಯಕನ ಯಡದೊಡೆ ಯಡಭುಜ ಹಾರತೊಡಗಿದವಂತೆ.. ಸೂರ‍್ಯಾಮ ವಂಭಣ ಮಂಕಾದನಂತೆ. ಸುತ್ತಮುತ್ತಲಿದ್ದ ನಾಕೂ ಗುಡ್ಡಗಳ ಕಲ್ಲು ಗುಂಡುಗಳು ಜಲಜಲ ಬೆವೆತು ನೀರೊಡೆದವಂತೆ.. ಹಕ್ಕಿ ಪಕ್ಷಿಗಳು ತಮ ತಮ್ಮ ಗಂಟಲೊಳಗಿನ ತಂಬೂರಿಗಳನು ಸ್ರುತಿ ಸರಿಪಡಿಸಿ ಕೊಂಡವಂತೆ, ಪಟ್ಟಣದ ಮಂದಿಯ ಮಯ್ಯಿ ಜುಮ್ಮೆಂದಂಗಾಯಿತಂತೆ.. ಹೊರಗೋಡೋಡಿ ಬಂದು ಮುಖಯತ್ತಿ ಆಕಾಸ ಮಾರಗದಲ್ಲಿ ಮೂಡಿದ್ದ

ಹತ್ತಾರು ಕಾಮನ ಬಿಲ್ಲುಗಳನ್ನು ನೋಡಿ ಮೂಕಯಿಸುಮಿತರಾದರಂತೆ.. ಮಾರಮ್ಮನ ಗುಡಿಯಲಿದ್ದ ನಾಲಗೆಗಳಿಲ್ಲದ ಗಂಟೆಗಳು ಬಡಿದಾಡಿ ನಾದ ಮಾಡಿದವಂತೆ.. ಸಿವನೇ....

ಯಿಂಥಪ್ಪ ಅಂತೆ ಕಂತೆಗಳನ ನಂಬಲಕಾದೀತಾ.. ನಂಬದೆ ಯಿರಲಕಾದೀತಾ.. ತೊಟ್ಟಿಲೊಳಗ ಕೂಸು ಕಂದಮ್ಮಗಳನ್ನಿಟ್ಟು ಜೋಗುಳ ಪಾಡುವಂಥಾ ಸಾಂಬವಿಯು, ಲಕ್ಷೋಪಲಕ್ಷ ಪಕ್ಷಿಗಳ ಕಣ್ಣುಗಳ ಮೂಲಕ ಯೀರೇಳು ಲೋಕಗಳನ್ನು ಪರಿಪಾಲಿಸುವಂಥಾ ಸಾಂಬವಿಯು ಸದರಿ ಪಟ್ಟಣಕ್ಕೆ ಗುಳೇ ಬರುವುದೆಂದರೇನು? ವಬ್ಬ ಯಕಚಿತ್ ಗುಡಿ ಹಿಂದಲ ಮೂಳೆ ಮೋಬಯ್ಯನ ಕಣಸೊಳಗೆ ಕಾಣಿಸಿಕೊಳ್ಳುವುದೆಂದರೇನು? ಅವನ ಮುರುಕು ತಡಿಕೆಯಂಥ ಸರೀರದೊಳಗ ವಾಸ ಮಾಡಲಾರಂಭಿಸಿದ ಳೆಂದರೇನು? ಸಿವ.. ಸಿವಾ... ಈ ಸಂಗತಿಯು....

... ನಿಂತವರ ಅಂಗಾಲ ಮೂಲಕ.. ಮಲಿಕ್ಕಂಡಿದ್ದವರ ಬೆನ್ನ ಹುರಿ ಮೂಲಕ.. ಕೂಕಂಡಿದ್ದವರ ಅಂಡು ಮೂಲಕ.. ಬಕಬಾರಲು ಬಿದ್ದುಕೊಂಡಿದ್ದವರ ಗದ್ದ ಬಾಯಿ ಮೂಲಕ.. ಕಯ್ನ ಮಾರುಕೊಂಡಿದ್ದವರ ಅಂಗಯ್ಯ ಮೂಲಕ ಅವುದೋ ಅಲ್ಲಮೋ ಯಂಬಂತೆ.. ಸಬುದವಾಸನೆ ರೂಪಗಂಧಯಿಲ್ಲದೆ ಬಿತ್ತರ ಹರಕೋತ ಹೋತು.. ಯಲ್ಲಾರೊಳಗೂ ಯಂಥದೋ ವಂದು ಅಗೋಚರ ಆನಂದವು, ಅನಿರ್ವಚನೀಯ ಭಾವನೆಯು.. ಯಾಕೋ ಮುಯ್ಯಿ ಜುಮ್ಮೆಂದಂಗಾತಂತ ವಬ್ಬರು.. ಸಂದು ಸಂದೀಲಿ ಯಂಥದೋ ಹರುದಾಡುತ ಕಚಗುಳಿಯಿಟ್ಟಂಗಾತಂತ ಯಿನ್ನೊಬ್ಬರು.. ಬಟಾ ಬಯಲೊಳಗೆ ಮಂಗಳ ವಾದ್ಯಗಳ ಮೊಳಗು ಕೇಳದಂಗಾತಂತ ಮತ್ತೊಬ್ಬರು.. ಸಿರಿಗಂಧ, ಹೊನ್ನಿ, ಜುಮ್ಮಿಯೇ ಮೊದಲಾದ ಕಾಷ್ಟಗಳು ದಹಿಸುತ್ತಿರುವಂಥ ಸುವಾಸನೆಯು ತಮ್ಮ ಮೂಗಿಗೆ ಬಡಿಯಿತಂತ ಮಗುದೊಬ್ಬರು.. ಮೂಗರಿಗೆ ಮಾತಾಡತೀವೆಂಬ ಭಾವನೆ ಬಂತು. ಕಿವುಡ ಕೆಪ್ಪರ ಕಿವಿಗಳನು ಸಬುಧಗಳು ತುಂಬಿದವು. ಯೀಗಲೋ ಆಗಲೋ ಅಂತಿದ್ದ ಮುದೇರು ಗಪ್ಪಂತ ಯದ್ದು ಕೂತರು ಹರೇದ ಹುಡುಗರಂಗೆ.. ಕಜ್ಜಿಪುಳ್ಳಿ ಕಂದಮ್ಮಗಳಂತೂ ಮುಗುಲಿಗೆ ಮುಖ ಮಾಡಿ ಕೇಕೆ ಹಾಕಿದವು.. ಕಾಗೆ ಕೋಗಿಲೆಗಳ, ಕೆಂಭೂತ ನವಿಲುಗಳ, ಯಿರುವೆ ಗೊದ್ದಿಗಗಳ ನಡುವಿನ ತಾರತಮ್ಯ ಅಳಿಯಿತು.. ಅಂಗುಲಂಗುಲ ಅಂಬೆಗಾಲಿಟ್ಟು ದೂರವಳೆಯೋ ಕಂಬಳಿ ಹುಳುಗಳು ಬಣ ಬಣ್ಣದ ಚಿಟ್ಟೆಗಳಾಗಿ ಹಾರಿ ಬಯಲಿಗೆ ಕಸೂತಿ ಹಾಕಿದವಂತೆ....

ಪಟ್ಟಣದ ಹೊರ ವಳಗ ಯಿಷ್ಟೆಲ್ಲ ಸಂಭವಿಸಲಕ ತೊಂಬಲ ನಮಲಿದಷ್ಟು.. ಚಿಲುಮೆಯಿಂದ ವಂದು ಧಮ್ಮು ಯಳೆಯುವಷ್ಟು.. ಕಣ್ಣಿಂದೊಂದು ಹನಿ ವುದುರುವಷ್ಟು ವ್ಯಾಳ್ಯೆ ಹಿಡಿಯಿತಂತೆ....

ಮೋಬಯ್ಯ ದಿಗ್ಗನೆಚ್ಚರಗೊಂಡು ಬೆವರಿನಿಂದ ತೊಯ್ದು ತಪ್ಪಟೆಯಾಗಿದ್ದ ಕಟ್ಟೆ ಮ್ಯಾಲ ಕಣ್ಣುಬಿಟ್ಟು ಪಿಳಿ ಪಿಳಿ ನೋಡಲು ತನ್ನೆದುರಿಗೆ ಅಂಬ್ರಾವತಿ ಪಟ್ಟಣದ ವಂದು ಕೇರಿಯು ಮಯ್ಯ್ನ ಚೆಲ್ಲಿಕೊಂಡು ಮಲಗಿರುವಂತೆ ಭಾಸವಾಯಿತು. ತನ್ನೊಂದಿಗೆ ತನ್ನ ಸರೀರವು ಮಾತಾಡಿದಂಗಾತಲ್ಲ.. ತನ್ನ ಸರೀರದೊಳಗೆ ಸಾಂಬವಿಯು ನೆಲೆಸಿದಂತಾತಲ್ಲ.. ಯಂದನಕಂತ ತನ್ನ ಸರೀರದ ಅಂಗಾಂಗಗಳನು ಮುಟ್ಟು ಮುಟ್ಟಿ ನೋಡಿಕೊಂಡನು. ಮೊದಲೇ ಚಟವುಳ್ಳ ಮನುಷ್ಯನಾದ ತಾನು ಚಿಲುಮೆಯಿಂದ ವಂದೆರಡು ದಮ್ಮು ಮ್ಯಾಲಿಂದ ಮ್ಯಾಲೆ ಯೆಳೆದನು. ಆತನ ಕಣ್ಣಿಂದ ಪುಳಕ್ಕಂತ ವುದುರಿದ ವಂದು ಬಿಂದುವು ನೆಲಕ್ಕೆ ಬಿದ್ದೊಡನೆ ಪಳಪಳ ಹೊಳೆಯುವ ಮುತ್ತಾಗಿ ಮಾರುಪಟ್ಟು ವುರುಳಿಕೋತ ವುರುಳಿಕೋತ ಆಟುದೂರ ಹೋಗಿ ಮುಗಿಲತ್ತ ಜಿಗಿದು ಸೂರ್ಯನ ಬೆಳಕೊಳಗೆ ಲೀನವಾಯಿತಂತೆ.. ಅದೇ ಗಳಿಗೆ ವಳಗೆ ಆತನ ಸರೀರದಿಂದ ಹಳತಾದ ಭಾವನೆಗಳು ವುತಾರಗೊಂಡವಂತೆ. ಹೊಸತಾದ ಭಾವನೆಗಳು ಸೇರುಪಡೆ ಗೊಂಡವಂತೆ.. ಸಾಂಬವಿ ನೆಲೆಗೊಂಡಿರುವಂಥಾ ತನ್ನ ಸರೀರವು ಹೆಂಗಯ್ತೆ? ಯಿದರ ದರುಸನವನ್ನು ತಾನು ಪಡಕ್ಕೊಳ್ಳೋದಾದರು ಹೆಂಗೆ? ವಂದಾರ ಕನ್ನೊಡಿಹಳ್ಳು ತನ್ನ ಆಜೂಬಾಜೂಕಿಲ್ಲವಲ್ಲಾ.. ಯಂದು ಹಪಹಪಿಸಿದನಂತೆ.. ಖರೆ ಹೇಳಬೇಕೆಂದರ ಯಿದುವರೆಗೆ ತನ್ನನ್ನು ತಾನು ಯಂದೂ ನೋಡಿಕೊಂಡಾತನಲ್ಲ ಮೋಬಯ್ಯ. ಅಂಥ ಹರಕತ್ತು ಯಂದೂ ಯದುರಾಗಿರಲಿಲ್ಲ.. ತನ್ನ ಕಸುಬಿಗೆ ಆಸ್ರಯ ನೀಡಿರುವ ಪಿಕದಾನಿಯ ವುಬ್ಬು ತಗ್ಗಿನೊಳಗೆ ಆತ ತನ್ನನ್ನು ತಾನು ನೋಡಿಕೊಂಡಿರೋದುಂಟು. ಆದರೂ ಅದರ ಮಯ್ಯೊಳಗೆ ವಂದು ಕಂಡಿದ್ದರೆ ಯಿನ್ನೊಂದು ಕಂಡಿರಲಿಲ್ಲ. ಹಂಗ ನೋಡಿದರ ಕನ್ನೊಡಿ ಹಳ್ಳುಗಳಿರೋದು ಥೆಳಗೇರಿಯ ಯಲ್ಲಾರ ಕಣ್ಣುಗಳಲ್ಲಿ ಮಾತ್ರ. ಗಂಡನ ಕಣ್ಣುಗಳಲ್ಲಿ ಹೆಂಡತಿಯು, ಹೆಂಡತಿಯ ಕಣ್ಣುಗಳಲ್ಲಿ ಗಂಡನು, ಗಂಡ ಹೆಂಡಿರ ಕಣ್ಣುಗಳಲ್ಲಿ ಮಕ್ಕಳು ಮರಿಗಳು, ಮಕ್ಕಳು ಮರಿಗಳ ಕಣ್ಣುಗಳಲ್ಲಿ ಥೆಳಗೇರಿಯು, ಥೆಳಗೇರಿಯ ವಬ್ಬರಾದರೂ ಯಂದೂ ತಮ ತಮ್ಮ ನೆಳ್ಳುಗಳಿಗಾಗಿ ಆಸೆಪಟ್ಟವರಲ್ಲ.. ತಮಗೆ ತಾವು ಯಂದೂ ಮರುಳಾದವರೂ ಅಲ್ಲ....

ಹೆಂಗಪ್ಪಾ ತನ್ನ ಸರೀರವನ್ನು ತಾನು ನೋಡಿಕೊಳ್ಳುವುದು? ಅವರ ಕಣ್ಣಲ್ಲಿ ಯಿಣುಕಲೇನು? ಯಿವರ ಕಣ್ಣಲ್ಲಿ ಯಿಣುಕಲೇನು? ಮ್ರುಗ ಜಲದೊಳಗೆ ಯಿಣುಕಿ ತನ್ನ ಸರೀರದ ದರುಸನ ಪಡೆಯಲೇನು? ಬಿಸುಲುಗುದುರೆಯ ಪಾರದರುಸಕ ಮಯ್ಯೊಳಗ ಯಿಣುಕಿ ತನ್ನ ಸರೀರದ ದರುಸನ ಪಡೆಯಲೇನು? ಕಲ್ಪನಾದ ಮಾಯಾವಿ ಕರಿಗಂಬಳಿ ವ್ಯಾಲ ಕುಂತು ಹಾರಾಡಿದನು, ತೂರಾಡಿದನು, ಯಿಲಯಿಲಾಂತ ವದ್ದಾಡಿದನು.. “ಯೀ ನನ್ನ ಕರುಮಂಟ ಸರೀರವನ್ನು ಅರಮನೆ, ಗುರುಮನೆ, ತವರು ಮನೆಯನ್ನಾಗಿ ಮಾಡಿಕೊಂಡು ವಸ್ತಿ ಮಾಡಿರುವಂಥಾ ತಾಯಿ ಸಾಂಬವಿಯೇ.. ನನ್ನ ಸರೀರವು ನಂಗೆ ಕಾಂಬುವಂತೆ ಮಾಡೆವ್ವಾ.. ನನ್ನ ನೆಳ್ಳು ನಂಗೆ ಕಾಂಬುವಂತೆ ಮಾಡೆವ್ವಾ” ಯಂದು ಮುಂತಾಗಿ ಹಲುಬ್ಯಾಡಿದನು. ತನ್ನ ಸರೀರವೇ ತನಗೆ ಮೋಸ ಮಾಡಿರಬೌದೇ? ತಾನು ಕಂಡುಂಡದ್ದು ದಿವಿನಾದ ಕಣಸಿದ್ದಿರಬೌದೇ? ತಾನು ಕಿವಿಂಯಾರ ಕೇಳಿಸಿಕೊಂಡಿರೋದು ಅಸರೀರವಾಣಿ ಆಡಿದ ಮಾತುಗಳಿದ್ದಿರಬೌದೇ? ಭ್ರಮಾಯಿದ್ದಿರಬೌದೇ? ಯಂದು ತನಗೆ ತಾನೇ ಅನುಮಾನ ತಾಳಿದನಂತೆ....

ಅವನು ಹಂಗ ಅಲ್ಲಿ ಯೋಚಿಸುತ್ತಿರುವಾಗ್ಗೆ.. ವದ್ದಾಡುತ್ತಿರುವಾಗ್ಗೆ.. ಬಿಸಿಲು ಬೆಳದಿಂಗಳ ಲಂಗವನ್ನುಟ್ಟುಕೊಂಡಿತ್ತು.. ಮಲ್ಲಿಗೆ ಹುವ್ವಿನಂಥ ರವುಕೇನ ತೊಟುಕೊಂಡಿತ್ತು.. ಬೆಮರಿನ ವಕ್ರಾಣಿಯಾಗಿರುವ ಅವನ ಸರೀರವನ್ನು ತಣಿಸಲಿಕ್ಕೆಂದು, ಕಣ್ಣೀರಿನ ತತ್ರಾಣಿಯಾಗಿರುವ ಅವನ ಕಣ್ಣಿಗೆ ಮುದ ನೀಡಲಕೆಂದು ದೂರದಲ್ಲೆಲ್ಲೋ ಅವುಚಿಟ್ಟುಕೊಂಡಿದ್ದ ಬಿರುಗಾಳಿಯು ತನ್ನ ವುದುರದಿಂದ ವಂದು ಹಿಡಿ ತಂಗಾಳಿಯನ್ನು ಹೊರತೆಗೆದು “ಅಗೋ ಅಲ್ಲಿ ಥೆಳಗೇರಿವಳಗ ಜಗದಂಬೆಯನ್ನು ತನ್ನ ದೇಹದೊಳಗಿಟ್ಟು ಪಾಲನೆ ಪೋಷಣೆ ಮಾಡುತ್ತಿರುವ ಮೋಬಯ್ಯನ ಮಯ್ಗೆ ಚಾಮರದ ಸೇವೆ ಮಾಡಿ ಬಾ” ಯಂದು ಆಗ್ನಾಪಿಸಲು ಅದು ಹಂಗs ಮಾಡಿತಂತೆ....

ಆದರೆ ಅದನ್ನೆಲ್ಲ ಗಮನಿಕೆ ಮಾಡಲಕಾಗಲೀ, ಮುದಗೊಳ್ಳಲಕಾಗಲೀ ಅರುವಿಗೆ ನಿಲುಕದ ಅನುಭವದ ನಿಧಿಗೆ ವಡೆಯನಾಗಿದ್ದಂಥ ಮೋಬಯ್ಯಗೆ ಪುರುಸೊತ್ತೆಂಬುದು ಯಿರಲಿಲ್ಲ. ತನ್ನ ಸರೀರದೊಳಗಾಕೆಯು ನೆಲೆಗೊಂಡಿರಲಕಬೇಕೆಂದು ಖಾತರಿ ತಾಳಿದನಂತೆ. ಅವ್ವನ ಕರುಣೆಯ ಕಡಲಿಗೆ, ತ್ರಿಕಾಲ ಸತ್ಯೇವುಗಳಿಗೆ ಮನುಕುಲದ ಬೇಕು ಬೇಡಗಳಿಗೆ ವಡೆಯನಾಗಿರುವ ತಾನು ತನ್ನ ಪಯಿತ್ರಸರೀರವನ್ನು ಸಬುಧವಾಸನೆ, ಮುಟ್ಟು ಮಯ್ಲಿಗೆಗಳಿಂದ

ದೂರಯಿರಿಸಬೇಕೆಂದು ನಿರ್ಣಯ ತಾಳಿದನು. ಯಿನು ಮುಂದ ತಾನು ಮಾಡಲಿರುವುದು ವಂದಾ, ಹೊರಕಡೀಕೆ, ಮಜ್ಜಣಾ, ಆಡಲಿರುವ ಮಾತು, ವುಸುರಾಡುವ ಗಾಳಿ, ನಿಂತಿರುವ ನೆಲ, ಮುಟ್ಟಲಿರುವ ಜಲ, ಮಾಡುವ, ಮಾಡದೇ ಯಿರುವ ಕೆಲಸ ಕಾರ್ಯೇವುಗಳೆಲ್ಲ ಪಯಿತ್ರಯಂದು ಬಗೆಯ ಬೇಕೆಂದುಕೊಂಡನು. ಅವ್ವ ಮಲಕ್ಕೊಂಡಿರುವ ತನ್ನ ಸರೀರ ಯಂಬುವ ತೊಟ್ಟಿಲನ್ನೇ ವಂದು ಅಗೋಚರ ತೊಟ್ಟಿಲೊಳಗಿಟ್ಟು ತೂಗುತ, ಬಗೆಬಗೆಯ ಲಾಲಿಪಾಡುಗಳಿಂದ ಸಂತಯಿಸಬೇಕೆಂದುಕೊಂಡನು. ಹಿಂಗ ಯೋಚಿಸುತ್ತಿರುವಾಗ್ಗೆ ಆತನ ಸರೀರವು ಕ್ರಮ ಕ್ರಮೇಣ ಯಿಸ್ರಾಮ ಸ್ಥಿತಿಗೆ....

* * *

ವಂದು ವಪ್ಪಂದ ಮಾಡಿಕೊಳ್ಳಲಕೆಂದು ಕುಂಪಣಿ ಕಛೇರಿಗೆ ಆಗಮಿಸಿ ತಲೆ ಕೆಳಗು ಮಾಡಿ ಮೀಸೆ ಮ್ಯಾಲಕೆ ಮಾಡಿ ನಿಂತುಕೊಂಡಿದ್ದ ಚಿನ್ನೋಬುಳ ರೆಡ್ಡಿಯನ್ನೂ, ವುಯ್ಯಾವುಲ ಕೇಸವರೆಡ್ಡಿಯನ್ನೂ ಕುಳ್ಳಿರಿಸಿ ನೀವು ನಿಮ ನಿಮ್ಮ ವಳಿತದೊಳಗಿರುವ ಮೂರುಗಳಿಗೆ ಯೇನು ಮಾಡೀರಿ? ಯೇನು ಬಿಟ್ಟೀರಿ ಯಂದು ಥಾಮಸು ಮನ್ರೋ ಸಾಹೇಬ ಯಿಚಾರಿಸುತ್ತಿರುವಾಗ್ಗೆ.. ತಾನು ಬೇಟೆಯಾಡಿದ ಹುಲಿಯ ಕಳೇಬರದ ಮ್ಯಾಲ ಯಡಗಾಲಿಟ್ಟು ಯಡ್ಡವರ್ಡು ಮೆರವಣಿಗೆಯನ್ನು ಕೂಡ್ಲಿಗಿಯ ಬೀದಿ ಬೀದಿಗುಂಟ ಮಾಡಿಸಿಕೊಳ್ಳುತ್ತಿರುವಾಗ್ಗೆ.. ಕರಿಯೇಮುಲ ದಟ್ಟರಣ್ಯೇವಳಗೆ ಅಹರ್ನಿಶಿ ಚರ್ಚಿಸೀ ಚರ್ಚಿಸೀ ಗುರುಪ್ಪನಾಯಕನೂ, ಪೆದ ತಿಮ್ಮಾರೆಡ್ಡಿಯೂ, ಹರಿಶ್ಚಂದ್ರರೆಡ್ಡಿಯೂ ಕುಂಪಣಿ ಸರಕಾರಕ್ಕೆ ಸರಣಾಗಿ ಯಿಲಿಯಂಗ ಬದುಕೋದಕ್ಕಿಂತ ಅವರ ವಿರುದ್ದ ಹುಲಿಯಂಗ ಹೋರಾಡಿ ಸಾವುದೇ ಮೇಲೆಂದು ತೀರುಮಾನಿಸಿ ತಮ್ಮ ಮನೆದೇವರಾದ ಕದರಿ ನರಸಿಂಹಸ್ವಾಮಿಯನ್ನು ತಮ ತಮ್ಮ ಮನಸೊಳಗೆ ನೆನೆಯುತ್ತಿರುವಾಗ್ಗೆ.. ತಮ್ಮ ತಮ್ಮ ಕಾಲಿನುಂಗುಟಕ್ಕೆ ಕಟ್ಟಿಕೊಂಡಿದ್ದ ಪಾರಿವಾಳಗಳ ಪಯ್ಕಿ ಕೆಲವು ಗಿಡುಗಗಳ ಬೇಟೆಗೋ, ಬೇಟೆಗಾರರ ಬಾಣಗಳಿಗೋ ತುತ್ತಾಗುತ್ತಿರುವಾಗ್ಗೆ.. ಬೊಮ್ಮಕ್ಕನ ರಣಬಯ ಲಿಂದ ಗಾಯಗೊಂಡು ಹೊರಟಿದ್ದ ಕುದುರೆಗಳ ಪಯ್ಕಿ ಕೆಲವು ಗಾದರಿಮಲೆ ಅರಣ್ಯದಲ್ಲಿನ ತೋಳ, ಕಿರುಬ, ಚಿರತೆ, ಹದ್ದು, ರಣಹದ್ದುಗಳಿಗೆ ಬಲಿಯಾಗುತ್ತಿರುವಾಗ್ಗೆ.. ಮದ್ದಿಕೇರಿಯಿಂದ ಹೊರಟಿದ್ದ ಸಂತರಸ್ತರನ್ನು ಜೊನ್ನಗಿರಿಯ ಕದಿರೆಪ್ಪನಾಯಕನ ಸಯ್ನಿಕರು ನಿಮ್ಮಲ್ಲೇನುಂಟು ಯೇನಿಲ್ಲಯಂದು ಸುಲಿಗೆ ಮಾಡುತ್ತಿರುವಾಗ್ಗೆ.. ಯಿತ್ತ ಕುದುರೆಡವು ಪಟ್ಟಣದಲ್ಲಿ ರಾಜಮಾತೆ ಭಯ್ರಮಾಂಬೆಯು ತನ್ನೊಂದೊಂದು ವುಸುರಿಗೂ ಹಿಂದಕು

ಮುಂದಕೂ ಕಿರಕೂ ಕಿರಕೂ ಯಂದು ಸಬುಧ ಮಾಡುತ ವಾಲಾಡುತ್ತಿದ್ದ ಸಿಮ್ಮಾಸನವನ್ನು ತದೇಕ ಚಿತ್ತದಿಂದ ನೋಡುತ ತನ್ನ ದವಡೇಲಿದ್ದ ತೊಂಬಲ ದುಂಡೆಯನ್ನು ಯಡಕೂ ಬಲಕೂ ತಳ್ಳಾಡುತ್ತಿರುವಾಗ್ಗೆ....

ಪರಗುಣಿ ಮಾಗಿ ಯಂಬುವ ಹಚ್ಚ ಹಸುರನೆಯ ಯಿಪ್ಪತ್ತು ಕೂರಿಗೆ ಹೊಲದಲ್ಲಿ ತನ್ನೆಡಗಾಲನ್ನು ಹುಲ್ಲಿನ ಹೊರೆಯ ಮ್ಯಾಲಿಟ್ಟು ತನ್ನೆರಡೂ ಕಯ್ಯಿಗಳನ್ನು ಸೊಂಟದ ಯರಡೂ ಬದಿಯಲ್ಲಿಟ್ಟು ಜಗಲೂರೆವ್ವ "ಹೋಹೋಂಯ್ ಸೂರಾss.. ಹೋಂಯ್ ಸೂರಾss.." ಯಂದು ಕೂಗಿದೊಡನೆ ಹೊಲದ ಮ್ಯಾರೇಲಿ ಆಸು, ಬೇವು, ಹೊನ್ನಿ, ಸಾಗುವಾನಿ ಯಿವೇ ಮರಗಿಡಗಳ ಮ್ಯಾಲ ಯಿಸ್ರಮಿಸಿ ಕೊಂಡಿದ್ದ ಕಾಗೆ, ಗೂಗೆ, ಮೀನುಳ್ಳಿ, ಮಿಂಚುಳ್ಳಿಯೇ ಮೊದಲಾದ ಪಕ್ಷಿಗಳು ಬೆಚ್ಚಿಬಿದ್ದು ಹಾರಿ ಮುಗಿಲ ಬಯಲ ತುಂಬ ಅಂಡಾವರನಗೊಂಡವು....

ಮುಂಗೋಳಿ ಕೂಗಿನ ನಾದವನ್ನೆ ಹಾದಿ ಮಾಡಿಕೊಂಡು ಹೊಲ ಸೇರಿ ಯಂಟಾಳು ಮಾಡೋ ಕೆಲಸವನ್ನು ತಾನೊಬ್ಬಾಕೆಯೇ ಮಾಡಿ ಮುಗಿಸುವಂತಾಕೆಯಾದ ಜಗಲೂರೆವ್ವನ ತಂದೆ ಯಾರಪ್ಪಾ ಅಂದರೆ ಮಿಂಚೇರಿಯ ಪರಿಶೇ ಪಯ್ಕಿ ಪಯಿಲುವಾನನಾದ ಅಂತಾಡಪ್ಪನೆಂಬಾತನು, ತಾಯಿ ಯಾರಪ್ಪಾ ಅಂದರ ಕಂಬಳೆವ್ವನು, ಆ ದಂಪತಿಗಳಿಗಾಕೆ ಯಷ್ಟನೆಯವಳೆಂದರೆ ಅಷ್ಟಮ ಸುಪುತ್ರಿಯು, ತಾನು ಬಾಯಿ ಸತ್ತ ಹುಳದಂಥ ಮೋಬಯ್ಯನೆಂಬಾತನ ಕಯ್ಯಿ ಹಿಡಿದು ಆವತ್ತಿಗೆ ಬರೋಬ್ಬರಿ ಯಿಪ್ಪತ್ತೇಳು ವರುಷ ತುಂಬಿರುವುದು. ಆದರೆ ತನ್ನುದುರದೊಳಗ ವಂದಾದರು ನರಹುಳ ಕಂಡಿಲ್ಲ.. ಯರಡು ಕಂಭಗಳ ನಡುವೆ ಜ್ವಾಲೆ ಕಟ್ಟಿಲ್ಲ.. ಮೊಲೆ ವುಣುಸಿ ಲಾಲಿ ಪಾಡಿಲ್ಲ.. ಮುಟ್ಟು ನಿಲ್ಲೋ ಲಚ್ಚಣ ಕಾಣದ್ದ ರಿಂದಾಕೆಯು ಕಯ್ಯಿ ಹಿಡಿದ ಗಂಡನ ಮ್ಯಾಲ ಬ್ಯಾಸರ ಮಾಡಿಕೊಂಡಿದ್ದಿಲ್ಲ.. ವಂದಾನೊಂದಿನ ತವರು ಮನೀಗೆ ಹೋಗಿ "ಯಪ್ಪಾss ನನ್ನುದುರ ಬಿತ್ತೋರಿಲ್ಲದ, ರೆಂಟೆ ಹೊಡೆಯೋರಿಲ್ಲದ ಬರಡು ಹೊಲಾ ಆಗಯ್ತೆ.. ಮೊನ್ನೆ ವಂದಿನ ನಸುಕಿನಾಗ ಅಂಗಯ್ಲಾಡೋ ಅರಗಿಣಿ ಬಂದು ಮನೆಯಂಗಳದ ಬೇಯಿನ ಮರದ ಮ್ಯಾಲ ಕುಂತು ಬಂಜೆ ಬಂಜೆಯಂದು ಕೂಗಿದಂಗಾತು.. ನನ ಗಂಡನೆಂಬೋದು ಹಗಲಿಪ್ಪತ್ನಾಕು ತಾಸು ತೊಂಬಲ ವುಗುಳೋ ಪಿಕದಾನಿ ಹಿಡಕೊಂಡು ಅರಮನ್ಯಾಗ ಭಯ್ರಮಾಂಬೆಯ ಕಾಪಲ ಮಾಡತಯ್ತೆ.. ಅದಕ ಹೆಂಡತಿ ಯಿದ್ರೂವಂದs.. ಯಿರದಿದ್ರೂವಂದss.. ಕಂದನಿಲ್ಲದ ಬಂಜೆ ಬಾಳು ನೀಗೀ

ನೀಗಿ ಬದುಕು ಬಲು ಬ್ಯಾಸರ ಆಗಯ್ತಪ್ಪಾ.. ಆದರ ನಾನ್ಯಾದ್ಯಾರ ಯುದ್ದಕ ಹೋಗಿ ಯೀರ ಮರಣ ಸಾಯಬೇಕಂತ ಮಾಡೀನಿ. ಮಾಸ್ತಿಕಲ್ಲಿನ ಕರೆಗೆ ಓಂಗೊಡಾಕಂತ ಮಾಡೀನಿ" ಯಂದು ಕಣ್ಣಲ್ಲಿ ಯಲ್ಡು ಬೊಗಸೆ ನೀರು ತಂದುಕೊಂಡು ತನ್ನೆದೆಯಾಗಿದ್ದ ಗಿದ್ದುನ ದುಕ್ಕವನ್ನು ನಾಕು ಮಾತಲ್ಲಿ ಹೇಳಿದಳು. ಆವಾಗಿದ್ದು ಆಕೆಯ ತಾಯ್ತಂದೆಯರು ಹಂಗಾಡಬ್ಯಾಡವ್ವಾ.. ಹಂಗಾಡಬ್ಯಾಡ ಕಂದಾss ಯಂದು ಬಗೆಯಿಂದ ರಮಿಸಿದರು. ಆದರೂ ಆಕೆಯ ದುಕ್ಕ ತಮಣಿಯಾಗಲಿಲ್ಲ. ಆಗ್ಗೆ ಗವುರಮ್ಮಗೆ ಆರತಿ ಬೆಳಗಲಕಂತ ಹಿರೇ ಗವುರಮ್ಮನುಣ್ಣುಮಿಗ ಬಂದಿದ್ದಂಥ ಆಕೆಯ ಯೇಳು ಮಂದಿ ಅಕ್ಕಂದಿರು 'ದುಕ್ಕ ಮಾಡಿಕೋಬ್ಯಾಡ ತಂಗಿ.. ಬೇಕಾರ ನನ್ನ ಮಗನ್ನ ತಗಂಡು ಸಾಕ್ಕೋ' ಯಂದರು. ಅದಕಿದ್ದು ಆಕೆಯು ನಿಮ್ಮಕ್ಳು ನನ ಮಕ್ಳು ಹೆಂಗಾಕಾವ್ರಕ್ಕಾ.. ಬ್ಯಾಡ... ಬ್ಯಾಡ"ಅಂದಳು.. ಅದೇ ಹೊತ್ತಿಗೆ ಕ್ವಾಣಗರುಮೊಂದು ತನ್ನ ಹೆತ್ತವ್ವನ ಮೊಲೆ ಜಿಬುಕಿ ಜಿಕ್ಕೋತ ಜಕ್ಕೋತ ಅಲ್ಲಿಗೆ ಬಂತು. ಅದರ ಕರಿದುಟಿಗಳ ನಡುವೆ ನೊರೆವಾಲಿನ ಗೆರೆಗಳಿದ್ದವು.. ಅದರ ಮಯ್ಯಿ ಮಿರಿ ಮಿರಿ ಮಿಂಚುತಾಯಿತ್ತು.. ಅದು ಬರು ಬರುತ್ತಲೆ ತನ್ನ ನಾಲಗೆಯಿಂದ ಆಕೆಯ ಮಕಮಾರೆಯನ್ನು ನೆಕ್ಕಲಕ ಹತ್ತಿತು.. ಆ ವಂದು ಗಳಿಗೇಲಿ ಹತ್ತು ಕಂದಮ್ಮಗಳನ್ನು ಹೆತ್ತು ಆಡಿಸಿದೋಟು ಸಂತೋಷವಾಗಲು ಆಕೆಯು "ಯಪ್ಪಾ.. ನಿಮ್ಮಾಸ್ತಿ ಬ್ಯಾಡ.. ನಿಮ್ಮಡಮೂಬ್ಯಾಡss.. ಯೀ ಕ್ವಾಣಗರೂನ ಕೊಟ್ಟರಾಟೇ ಸಾಕು.. ಯಿದೇ ವಡಲ ಸವುಭಾಗ್ಯ ಯಂದಂದುಕೊಂಡು ಸಾಕೋತೀನಿ.. ಕಣ್ಣಾಗ ಕಣ್ಣಿಟ್ಟು ಜ್ವಾಪಾನ ಜತುನ ಮಾಡತೇನಿ" ಯಂದೊಂದುಸುರಿಗೆ ಅಂದಳು. ಆವಾಗಿದ್ದು ಅಂತಾಡಪ್ಪನು "ಯಾರು ಬ್ಯಾಡಂತಾರ ಮಗಳೇ" ಯಂದು ವಪ್ಪಿಗೆ ನೀಡಿದನು. ಅದಕ ಮೊಲೆ ತಿಂಭೋ ಆಸೆ ಬಲು ಅಯ್ತೆ ಯಂಬ ಕಾರಣಕ್ಕೆ ಅದನ್ನು ಅದರ ತಾಯೊಂದಿಗೆ ಆಳಿನ ಕಯ್ಲಿ ಕುದುರೆಡವಿಗೆ ಹೊಡೆದು ಕಳುವಿ ಕೊಟ್ಟನು....

ಬರು ಬರುತ್ತಲೆ ಅದಕ್ಕೆ ಸೂರ ಯಂದು ನಾಮಕರಣ ಮಾಡಿದಳು. ತನ್ನೊಡಲಿಗೆ ಕಡಿಮೆ ಮಾಡಿಕೊಂಡು ಪಾಲನೆ ಪೋಷಣೆ ಮಾಡುತ ಸಾಕಿದಳು.. ತನ್ನ ಸಂಗಾಟ ವುಂಬಲಕ ಯಿಡುತ್ತಿದ್ದಳು.. ತನ್ನ ವುಗ್ಗುಲು ಮಲಗಿಸಿಕೊಳ್ಳುತ್ತಿದ್ದಳು.. ನಯ ನಾಜೂಕು ಕಲಿಸಿದಳು, ಆಕೆಯ ಮನದಾಗಿನ ಭಾವನೆಗಳನ್ನು ಅದು ಅರ್ತಮಾಡಿಕೊಳ್ಳುತ.. ಅದರ ಮನದಾಗಿನ ಭಾವನೆಗಳನ್ನು ಆಕೆ ಅರ್ತ ಮಾಡಿಕೊಳ್ಳುತ ಪರಸ್ಪರ ಸ್ಪಂದನ ಮಾಡುತ.. ವಂದೇ ಮಾತಲ್ಲಿ ಹೇಳಲಕಂದರ ಜಾಣ ಮನುಷ್ಯನೊಬ್ಬ ಕ್ವಾಣದ ರೂಪದಲ್ಲಿದ್ದನೆಂದರೆ

ಸರಿಯಾದೀತು. ಬಿದಿಗೆ ಚಂದ್ರಾಮನಂತೆ ದಿನಕ್ಕೊಂದೊಂದು ಚಂದಲ್ಲಿ ಬೆಳೆದೂ ಬೆಳೆದೂ ಅದು ಪ್ರವುಢಾವಸ್ತೆಗೆ ಬಂತು. ಆಕೆಗೊಂದೇ ಅಲ್ಲದ ಯಿಡೀ ಕೇರಿಗೆ.. ಯಿಡೀ ಪಟ್ಟಣಕ್ಕೇನೆ ಕಣ್ಮಣಿ ಆತು. ಹರೇವಿಗೆ ಬಂದ ನಂತರ ಅದಕ್ಕೆ ಪುರುಸೊತ್ತು ಯಿಲ್ಲದಂಗಾತು. ಹಾಳೂರಿಗೆ ಹಣುಮಪ್ಪ ಚಂದ ಅನ್ನಂಗೆ ಯಿಡೀ ಪಟ್ಟಣಕ್ಕೇನೆ ಅದೊಂದೆ ಯಿತ್ತು. ಅಂದರ ಸದರಿ ಪಟ್ಟಣದೊಳಗ ಕ್ವಾಣದ ಸಂತತಿಯೇ ಯಿರಲಿಲ್ಲ ಯಂದು ಅರ್ತವಲ್ಲ.. ಯಿದ್ದವು. ಆದರೆ ತಗೊಂಡು ಯೇನು ಮಾಡೋದು? ವಂದೆಲ್ಡು ಬಾರಿ ಹಾರಿ ಸುಸ್ತಾಗಿ ಕೆಳಗಿಳಿದು ದುಸು ದುಸನೆದೇಕಿ ಆಯಾಸ ಅನುಭೋಸುತ್ತಿದ್ದವು. ಅವುಗಳಿಂದ ಹಾರಿಸಿಕೊಂಡ ಮಣಕ ಯೆಮ್ಮೆಗಳಿಗೆ ಗರ್ಭ ಕಟ್ಟುತ್ತಿರಲಿಲ್ಲ.. ಕಟ್ಟಿದರೂ ನಿಲ್ಲುತ್ತಿರಲಿಲ್ಲ.. ನಿಂತರೂ ಭಾಳ ದಿನ ಉಳಿಯುತ್ತಿರಲಿಲ್ಲ.. ಅದಕ್ಕೆಂದೇ ಪಟ್ಟಣದ ಸಮಸ್ತ ಯೆಮ್ಮೆಗಳು ಸೂರನ ಮ್ಯಾಲ ಬಿದ್ದು ಸಾಯುತ್ತಿದ್ದವು.. ಅವುಗಳ ಮಾಲಿಕರಾದರೂ ಆಟೆಯಾ.. ತಮ ತಮ್ಮ ಬೆದೆಗೆ ಬಂದ ಮಣಕ ಯಮ್ಮೆಗಳನ್ನು ಹೊಡಕೊಂಡು ಬಂದು ಸೂರನ ಹಿಂದ ಮುಂದ ಬಿಟ್ಟು, ರುಸುಮು ರೂಪದಲ್ಲಿ ವಂದು ಹೊರೆ ಮೇವನ್ನೋ, ಕಲಗಚ್ಚನ್ನೋ, ಹುಳ್ಳೀ ನುಚ್ಚನ್ನೋ ತಂದು ಅದರ ಮುಂದ ಮೇಯಲಕ ಬಿಡುತ್ತಿದ್ದರು. ಅದೊಂದೇ ಅಲ್ಲದೆ ತಮ್ಮ ಹೊಲಗದ್ದೆಗಳಲ್ಲಿ ಅದು ಮೇದರೆ ಹುಲುಸು ಹೆಚ್ಚಾಗತಯ್ತೆ ಯಂಬ ಕಾರಣಕ್ಕೆ ಅದನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದರು. ಯೇಸು ಮೇದರೂ, ಯೇನು ಮಾಡಿದರೂ ಅದನ್ನು ಗದರಿಸಿ ಗದುಮುವ ಗೋಜಿಗೆ ಯಾರೊಬ್ಬರೂ ಹೋಗುತ್ತಿರಲಿಲ್ಲ.. ಹಿಂಗಾಗಿ ಅದಕ್ಕೆ ಹರೇವು ಬಂದದ್ದಾಗಲೀ, ತಾರುಣ್ಯ ನೂರುಮಡಿಗೊಂಡದ್ದಾಗಲೀ ತಡಾಗಲಿಲ್ಲ.. ಗೂಟ ದಂದಕ್ಕಿಯು ನಿರುಬಂಧಗಳಿಲ್ಲದೆ ಅಂಕೆ ಅಟಾಟೋಪಗಳಿಲ್ಲದೆ, ಕಾಯಿದೆ ಕಾನೂನುಗಳಿಲ್ಲದೆ ಹಾರುತಯ್ತೆಯೇನೋ ಯಂಬಂತೆ ಮೋಡಾಡುತ ಸದರಿ ಪಟ್ಟಣದ ಸಕಲ ಶಾಮಲ ವರ್ಣೆಯರಾದ ಮಹಿಷೆಯರೊಂದಿಗೆ ವಡನಾಡುತ, ಗರುಭ ತುಂಬುತ, ಕೆಚ್ಚಲು ಜೀಕುತ, ಹಾಲು ಹಯನಕ್ಕೆ ಬರ ಬಾರದಂಗ ನೋಡಿಕೊಳ್ಳುತ ಅದು ಅಷ್ಟ ದಿಗ್ಗಜಗಳ ಕಣ್ಣು ಕಸುರಾಗುವಂತೆ ಬೆಳೆದು ವಂದು ಹದಕ್ಕೆ ಬಂದಿತ್ತು. ಅಂದ ಮಾತ್ರಕ್ಕೆ ಅದು ಅಜಾತ ಸತ್ರುವಾಗಿತ್ತು ಯಂದು ಭಾವಿಸಬೇಕಾದುದಿಲ್ಲ.. ಮೂರಿದ್ದಲ್ಲಿ ಹೊಲಗೇರಿ ಹೆಂಗಿರ್ತದೋ ಹಂಗೇನೆ ಅದಕ್ಕೆ ಸತ್ರುಗಳಿದ್ದರು. ಅವರ್‍ಯಾರಪ್ಪಾ ಅಂದರ ಯಮ್ಮೆ ಮಣಕಗಳನ್ನೊಂದಾದರೂ ಕಟ್ಟಿರದೋರು. ಬೆದೆಗೆ ಬಂದಾಗಂತೂ ಅದು ವಯ್ಕ ವಯ್ಕ ಯಂದು ಸುತ್ತಿಪ್ಪತ್ತೂರುಗಳಿಗೆ ಕೇಳಿಸುವಂತೆ

ಕೂಗುತಲಿತ್ತು.. ತಾಯ್ತನದ ಹಂಬಲದ ಯಮ್ಮೆ ಮಣಕಗಳು ತಮ ತಮ್ಮ ಬಂಧನ ಹರಕೊಂಡು ಜಿಕ್ಕೋತ ಜಿಕ್ಕೋತ ಅದರ ಸನೀಕ ಬರುತ್ತಿದ್ದವು. ಬರಲಿಲ್ಲಾಂದರ ಅದೇ ಹಾದಿಯಿಲ್ಲದ ಕಡೇಕ ಹಾದಿ ಮಾಡಿಕೊಂಡು ಅವುಗಳಿದ್ದಲ್ಲಿಗೆ ತಾನೋಡುತಲಿತ್ತು. ಆಗ ಅದರ ಪಾದಾಘಾತಕ್ಕೆ ಹಾಳಾಗುತ್ತಿದ್ದುದು ವಂದಾs ಯರಡಾss.. ವಂದು ಜೋಳದ ಹೊಲ ವುಳುದೀತಾ? ವಂದು ಮಲ್ಲಿಗೆ ಅಂಟಿನ ತೋಟ ವುಳುದೀತಾ.. ವಂದು ಹಿತ್ತಲು ವುಳುದೀತಾ? ಯದುರಿಗೆ ಬಂದೋರ ಸೊಂಟವುಳುದೀತಾ? ಹಾನಿಗೀಡಾದ ವಬ್ಬರಲ್ಲಾ ವಬ್ಬರು "ಅವ್ವಾ.. ತಾಯೀ.. ನೀನು ಸಾಕ್ಕೊಂಡಿರೋದು ಕ್ವಾಣನೋ ಅತುವಾ ಬಿರುಗಾಳಿಯೋ.." ಯಂದು ಅಳುತ ಅಬ್ಬರಿಸುತ ಬಂದು ಅದರ ಸಾಕು ತಾಯಿಯಾದ ಜಗಲೂರೆವ್ವಗೆ ದೂರು ನೀಡುತಲಿದ್ದುದು ಮಾಮೂಲು ಸಂಗತಿಯಾಗಿತ್ತು. ಮೇಲು ಮಾತಿಗೆ ನೀವೇ ಅದಕ ವದ್ದು ಬುದ್ದಿ ಕಲುಸಿರಿ.. ದೊಡ್ಡಿಗೆ ಕೂಡಿ ಹಾಕಿರಿ" ಯಂದನ್ನುತ್ತಿದ್ದಳು. ಪಟ್ಟಣದ ಯಾರೊಬ್ಬರಿಗೂ ಅಂಥ ಧಯರ್ಯಾಗಲೀ, ತಾಕತ್ತಾಗಲೀ ಯಿಲ್ಲವೇಯಿಲ್ಲಯಂಬುದು ತನಗೆ ಗೊತ್ತಿಲ್ಲದಿರಲಿಲ್ಲ. ಬಸುರು ಬೇಕು, ಆದರ ಹೆಸರು ಬ್ಯಾಡಾಂದರ ಹೆಂಗ? ವಂದಾನೊಂದು ಕಾಲದಲ್ಲಿ ಮಿಂಚೇರಿ ಪಟ್ಟಣವನ್ನಾಳಿದ ಸೂರನಾಯಕನೇ ಕೋಣದ ರೂಪದಲ್ಲಿರುವನೆಂದೇ ತಾನು ಭಾವಿಸಿದ್ದಳು. ತನ್ನ ಗಾಂಧಾರಿ ಗರುಭದೊಳಗೆ ಜನಿಸಬೇಕಿದ್ದ ನೂರೊಂದು ಮಂದಿ ಕವುರವರೇ ಕೋಣದ ರೂಪದಲ್ಲಿರುವರೆಂದು ತಾನು ಭಾವಿಸಿದ್ದಳು. ಜೀವಾತುಮ, ಪರಮಾತುಮರ ಸಂಬಂಧ ಯಾವ ರೀತಿಯದೋ ಅಂಥಾದ್ದೇ ಸಂಬಂಧ ತಮ್ಮಿಬ್ಬರದೆಂದು ತಾನು ಭಾವಿಸಿದ್ದಳು. ಆದ್ದರಿಂದ ಯಾರು ಯೇನೇ ಹೇಳಲಿ, ತಾನು ಮಾತ್ರಸೂರನ ಮ್ಯಾಲ ಬ್ಯಾಸರ ಮಾಡಿಕೊಳ್ಳುತ್ತಿರಲಿಲ್ಲ.. ಮಗಾ ಯಂಬ ಸಬುದದ ಹೊರತು ಯಿನ್ನೊಂದು ಮಾತು ಆಕೆಯ ಬಾಯಿ ಯಿಂದ ವುದುರುತ್ತಿರಲಿಲ್ಲ.. ಯಿದ್ಯಾವ ಸೀಮೆ ತಾಯಿ? ಯಿದ್ಯಾವ ಸೀಮೆ ಮಗ? ವಬ್ಬರಿಂದಿನ್ನೊಬ್ಬರನ್ನು ಅಗಲಿಸಿ ಪರಸ್ಪರ ಜೀವ ನಷ್ಟಾ ಮಾಡಬೇಕೆಂಬ ಯತ್ನ ಪ್ರಯತ್ನಗಳು ಪಟ್ಟಣದೊಳಗ ಕಾಲ ಧರುಮಕ್ಕನುಸಾರವಾಗಿ ನಡೆಯದೇ ಯಿರಲಿಲ್ಲ. ಆದರವು ಹಾಂಗ ನಡದು ಹೀಂಗ ಠುಸ್ಸಂದವು.. ವಟ್ಟಿನಲ್ಲಿ ಜಗಲೂರವ್ವ 'ಸೂರಾ ಸೂರಾ ಅಂದಕಂತಲೇ ಯಚ್ಚರಾಗುತ್ತಿದ್ದಳು.. ಸೂರಾs ಸೂರಾss ಅಂದಕಂತಲೇ ಮಕ್ಕಂತಿದ್ದಳು.. ಹಾಗಿತ್ತು ಅವರಿಬ್ಬರ ಸಂಬಂಧವು ಸಿವಸಂಕರ ಮಾದೇವಾss....

ಮತ್ತೊಂದು ಬಾರಿ "ಹೋಯ್ ಸೂರಾ.. ಯಲ್ಲದೀ ಮಗ್ನೇ?" ಯಂದು ಕೂಗಿದಳು. ಆಕೆಯ ಆ ಕೂಗು ಯೇಟೊಂದು ಸಕ್ತಿವುತವಾಗಿ ಯಿತ್ತೆಂದರೆ ಸೂರ್ಯಪರಮಾತುಮನು ವಂಚಣ ಮಂಕಾದನು. ಯೀಕೆ ಹಿಂಗಾ ಕೂಗಿದರೆಲ್ಲಿ ಯವ್ವನ ಯಂಬ ಪದ ಮೂನವಾಗ್ತದೋ ಯಂದು ಸಬುಧ ಭಾವಿಸಿತದು. ಗಾಳಿಯ ತುಂಡೊಂದು ಆಕೆಯ ಕೂಗನ್ನು ಮುದ್ರೆಯುಂಗು ರೋಪಾದಿಯಲ್ಲಿ ತನ್ನಂಗಯ್ಯೊಳಗಿಟು ಕೊಂಡು ಸುಯ್ಯಂತ ಹೋಗಿ ಅನತಿ ದೂರದಲ್ಲಿ ಗೋಪಿಕಾ ಸ್ತ್ರೀಯಂಥ ಮಣಕಮೊಂದನ್ನು ತನ ಮುಂದ ತರುಬಿಟ್ಟುಕೊಂಡು ಸಿರಿಕ್ರುಷ್ಣ ಪರಮಾತಮನಂತೆ ರಾಸಲೀಲಾಯಿನೋದದಲ್ಲಿ ನಿರತನಾಗಿದ್ದ ಸೂರ ಮಾಶಯನ ಕರ್ಣ ಕುಂಡಲದೊಳಗುದುರಿಸಿತು. ಅದು ಮಸ್ತಕಕ್ಕೇರಿದೊಡನೆ ಜಂಘಾಬಲ ವುಡುಗಿದಂಗಾಗಿ ಆತಂಕಕ್ಕೀಡಾದ ಪ್ರಿಯತಮೆಗೆ "ಮಾತ್ರುಕರೆಯನ್ನು ಅಲಕ್ಷಿಸುವಂತಿಲ್ಲ.. ಪ್ರಿಯೆ.. ಹೋಗಿ ಯೇನೆಂದು ಕೇಳಿ ಅನುಮತಿ ಪಡೆದು ಬರುವೆನು.. ಅಲ್ಪಕಾಲದ ಯಿರಹವನ್ನು ಸಹಿಸಿಕೋ" ಯಂದು ಹೇಳಿ ಸಮಾಧಾನಪಡಿಸಿ ಶರವೇಗದಲ್ಲಿ ಕ್ರಮಿಸಿ ತನ್ನ ತೀರ್ಥರೂಪಳನ್ನು ಸೇರಿತು. ಅದನ್ನು ನೋಡಿದೊಡನೆ ಆಕೆಗಾದ ಸಂತೋಷ ಅಷ್ಟಿಷ್ಟಲ್ಲ. ಅದರ ಮೂತಿಗೆ ಹುಸಿಪೆಟ್ಟನ್ನು ಹಾಕುತ್ತ "ನನ್ ಬಿಟ್ಟು ಯಲ್ಲೋಗಿದ್ದೋ ನೀನು. ಯೇಟು ಬಾರಿ ಕೂಗಬೇಕೆಲೋ ನಿನ್ನ.. ಯೀಟೊತ್ ಯಾವಾಕೀನ ಅಡ್ಡಾಕೊಂಡಿದ್ದೆಲೋ.. ನಿಂಗೇನು ಹೇಳೋರು ಕೇಳೋರು ಯಾರೂ ಯಿಲ್ಲಂದ್ಕಂಡೀಯಾ ಹೆಂಗೆ?" ಯಂದು ವಂದೇ ವುಸುರಿಗೆ ತರಾಟೆ ತೆಗೆದುಕೊಂಡಳು. ಆವಾಗಿದ್ದು ಅದು ಆಕೆಯ ಮುಖಮೂತಿ ಮುಂಗಯ್ಯ ನೆಕ್ಕಾಡುತ ತನ್ನ ವಯ್ಕ ವಯ್ಕನೆ ಭಾಷೆಯಲ್ಲಿ ಯೆನೇನೋ ಸಬೂಬು ಹೇಳಿತು. ಅದು ಆಕೆಗೆ ಅರ್ಥವಾಗದೆಯಿರಲಿಲ್ಲ. "ಸರ್ರೆಕಣಪ್ಪಾ.. ನಾನಿನ್ನು ಕೂಳು ಕುಚ್ಚೆಡೋದಯ್ತಪ್ಪಾ.. ಮಸ್ತು ವದಕನ ಬದುಕನ ಅದಾವ ಮನ್ಯಾಗ.. ನಾನೋಯ್ತೀನಿ.. ನೀನ್ಯಾವಾಗಾರ ಬಂದುಕಾ" ಯಂದು ಹೇಳಲು ಅದು ವಯ್ಕ ವಯ್ಕನೆ ಹಾಡುತ ಠಣ ಠಣ್ಣ ಜಿಕ್ಕೋತ ಜಿಕ್ಕೋತ ಸಂತೋಷದಿಂದ ಮೋಡಿ ಹೋಯಿತು. ಯಿನ್ನೇನದು ಮರೆಯಾಗಲಿದೆ ಅಂಬುವಾಗ "ವುಷಾರಿ ಕಣ ಮಗಾ.. ಕಾಲ ಸುಮಾರ್ರ್ಯಾಗಯ್ತೆ" ಯಂದು ಮರೆತಿದ್ದ ಮಾತನ್ನು ಕೂಗಿ ಹೇಳದೆಯಿರಲಿಲ್ಲ ಜಗಲೂರೆವ್ವ....

ಸಮಾಧಾನದ ವುಸುರು ಬಿಟ್ಟು ಸುತ್ತನ್ನಾಕಡೆ ಕಣ್ಣಾಡಿಸಿ ಸುತ್ತಮುತ್ತ ನೋಟ ಮಾತ್ರದಿಂದ ಅಗೋಚರ ಬೇಲಿ ರಚನೆ ಮಾಡಿದಳು. ಮುದ್ಯೋನು ಮನೀಗೆ ಬಂದಾನೋ, ಯಿಲ್ಲಾ ಅರಮನ್ಯಾಗಯಿದಾನೋ? ವುಂಡ್ನೋ, ಯಿಲ್ಲಾ

ವುಪಾಸ ಅದಾನೋ ಯಂದನಕಂತ ಅನುವಾದ ಹುಲ್ಲಿನ ಹೊರೆಯನ್ನು ಸರ್ರಂತ ಯತ್ತಿ ತಲಿಮ್ಯಾಲ ಯಿಟುಕೊಂಡು, ಯಿನ್ನೊಂದು ಕಯ್ಯೊಳಗೆ ಘನುವಾದ ಕುಡುಗೋಲನ್ನು ಹಿಡಕೊಂಡು ಮಾರ ಕಡೇಕಿದ್ದ ಹಾದಿಯ ಮ್ಯಾಲ ದೊಪ್ಪೆಂದು ಹೆಜ್ಜೆಯಿಟ್ಟೇಟಿಗೆ ಮಾರೊಳಗೆ ಮಾರಮ್ಮನ ಖಡುಗದ ತುದಿಮ್ಯಾಲಿದ್ದ ಗಜನಿಂಬೆ ಹಣ್ಣು ಬಿದ್ದು ವುರುಳಿಕೋತ ವುರುಳಿಕೋತ ಯಸನೋಪಾಸನೆ ಯಲ್ಲಿ ನಿರತನಾಗಿದ್ದ ಪೂಜಾರಿ ಜೆಟ್ಟೆಂಗೆಪ್ಪನ ಮುಂದ ನಿಂತಿತು. ಆಕೆ ಯಿನ್ನೊಂದು ಹೆಜ್ಜೆಯನ್ನು ದೊಪ್ಪೆಂದು ಯಿಡಲು ಮದ್ಯಾಣದ ಸುಖ ಬಿಸಿಲಿಗೆ ತಮ್ಮ ಫಳಫಳನೆ ಹೊಳೆಯುತಲಿದ್ದ ಮಯ್ನ ಚೆಲ್ಲಿ ಮಲಿಕ್ಕಂಡಿದ್ದ ಸರುಪಗಳು ಹೆದರಿ ತಮ ತಮ್ಮ ಬಿಲಪಲ ಸೇರಿಕೊಂಡವು. ಆಕೆ ಮತ್ತೊಂದು ಹೆಜ್ಜೆಯನ್ನು ದೊಪ್ಪೆಂದು ಯಿಡಲು ಅಮರಾವತಿ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರುವ ಭವುಮ, ಸುಪ್ರತೀಕ ಯಂಬುವ ಅಷ್ಟದಿಗ್ಗಜರು ತಮ ತಮ್ಮ ವಾಸಾಸ್ಥಾನಗಳಿಂದ ಹೊರಬಂದು ಹ್ಹಾ.. ಹ್ಹಾ.. ಜಗಲೂರವ್ವ ಯಂಬ ನರಮಾನ್ನವಳೇ ಯಂದು ನೋಡುತ ವುದ್ಗರಿಸಿದರು. ಆಕೆಯ ಅಗ್ನಿ ಸದ್ರುಶ ನೋಟ ತಗುಲಿದರೆಲ್ಲಿ ತಮ ತಮ್ಮ ರೆಕ್ಕೆ ಪುಕ್ಕಗಳು ಪುರುಪುರನೆ ವುರಿದು ಹೋಗುವವೋ ಯಂದು ಹೆದರಿದ ಬಾನಾಡಿಗಳು ತಾವಿದ್ದ ಜಾಗಗಳಲ್ಲಿಯೇ ಗಪ್ ಚುಪ್ ಅಂತ ಅವಿತಿಟ್ಟುಕೊಂಡವು. ವಟ್ಟಿನಲ್ಲಿ ಕಪ್ಪತ್ರಾಯ ಗುಡ್ಡವೇ ಸ್ತ್ರೀಯೋರ್ವಳ ರೂಪಧಾರಣ ಮಾಡಿ ನಡೆಯುತ್ತಿರುವುದೋ ಯಂಬ ಭ್ರಮೆಯನ್ನು ಸಚರಾಚರಕ್ಕುಂಟು ಮಾಡುತಲಿದ್ದ ಜಗಲೂರೆವ್ವನ ಭವ್ಯಾಕ್ರುತಿಯನ್ನು ಯೇಟು ಹೊಗಳಿದರೂ ಕಡಿಮೆಯೇ ಸಿವಸಂಕರ ಮಾದೇವಾss

ಅನಾದಿಕಾಲದಿಂದ ರಾಜಮಾರಾಜರಿಂದಲೂ, ಸಾಮಂತ, ಮಾಂಡಲೀಕ ಪಾಳೈಗಾರರಿಂದಲೂ ಯಲ್ಲಾಪ್ರಕೊರಚರಟ್ಟಿಕಳ್ಳಕಾಕರಿಂದಲೂ ಪೂಜೆ ಪುನಸ್ಕಾರ ಮಾಡಿಸಿಕೊಂಡಿರುವಂಥಾ.. ವುಡೇಗೊಳ್ಳ ಮಲೆಯೊಳಗೆ ನೆಲೆಗೊಂಡಿರುವಂಥಾ.. ಜಗಲೂರೆಜ್ಜನ ವರಪ್ರಸಾದ ಸಂಜಾತೆಯಾದ ಜಗಲೂರೆವ್ವ ಯಂಥಾಕಿ ಯಂದರೆ ಸಾವಿರ ನಾಲಗೆಗಳ ತಾಕತ್ತನ್ನು ತನ್ನೊಂದೆ ನಾಲಿಗೆ ಮ್ಯಾಲ ಯಿಟುಕೊಂಡಿರುವಾಕಿ, ಬಯ್ಗಳ ಫಳಾರದಂಗಡಿಯನ್ನು ತನ್ನ ಗಂಟಲೊಳಗೆ ಯಿಟ್ಟುಕೊಂಡಿರವಾಕಿ, ಭಯದ ಸುಗ್ಗಿ ವಕ್ಕಲಾಡುವಲ್ಲಿ ನಿಷ್ಣಾತೆಯಂದು ಹೆಸರಾಗಿರುವಾಕಿ, ಯಿವೆಲ್ಲಕ್ಕಿಂತ ಮಿಗಿಲಾಗಿ ಅಂತಃಕರಣದ ಕೊಪ್ಪರಿಗೆಯನ್ನು ತನ್ನ ರುದಯದಲ್ಲಿ ಯಿಟ್ಟುಕೊಂಡಿರುವಾಕಿ.. ಯಿಂಥ ಜಗಲೂರೆವ್ವ ವಂದೊಂದೆ ಹೆಜ್ಜೆಯನ್ನಿಕ್ಕುತ್ತ.. ಭೂಮ್ತಾಯಿ ಯನ್ನು ಪುಳಕಗೊಳಿಸುತ್ತ.. ವಬ್ಬೊಬ್ಬರ

ಸುಖದುಕ್ಕಗಳನು ಯಿಚಾರಿಸುತ್ತ ಥೆಳಗೇರಿಯನ್ನು ಪ್ರವೇಶ ಮಾಡಿ ತಮ್ಮ ಮನೆಯಂಗಳದಲ್ಲಿ ತಲೆಮ್ಯಾಲಿದ್ದ ಹುಲ್ಲಿನ ಹೊರೆಯನ್ನು ದೊಪ್ಪಂತ ಯತ್ತಿ ಹಾಕಿದೇಟಿಗೆ ಅಜುಬಾಜುಕಿದ್ದ ಮನೆಗಳ ಮಾಡಿನಿಂದ ತಪತಪಾಂತ ಮಣ್ಣು ಸುರಿಯಿತು. ತಮ ತಮ್ಮ ಮನೆಗಳಿಂದ ಹೊರ ಬಂದು ಜನ ಆಕೆಯ ದರುಸನ ಪಡಕೊಂಡರು. ಆಕೆಯ ಕಯ್ಲಿದ್ದ ಕುಡುಗೋಲು ಬಿಸಿಲನ್ನು ಪ್ರತಿಫಲಿಸಿದೇಟಿಗೆ ಅರಮನೆಯ ವುಪ್ಪರಿಗೆ ವಂಟಿಗಣ್ಣನ್ನು ಮುಚ್ಚಿಕೊಂಡಿತು....

ವಳಗಡೀಕಿರೋ ತನ್ನ ಗಂಡ ಹೊರೀಕೆ ಬರಲೀ ಅಂತ ವಂದು ನಿಡುಸುಯ್ದಳು. ಕೆಮ್ಮಿ ಕ್ಯಾಕರಿಸಿದಳು. ಯೇನು ಮಾಡುತ್ತಿದ್ದಾನೀ ಮುದೇತ.. ಯಂದು ಗೊಣಗಿದಳು. ವಂದೊಂದೆ ಹೆಜ್ಜೆಯನಿಕ್ಕುತ ವಳಗಡೀಕೆ ಹೋಗಿ ನೋಡುತ್ತಾಳೆ.. ವಂದು ಪುರುಷಾಕ್ರುತಿಯು ಮುಂಡಕ್ಕೆ ವಂದು ದೋತರವನ್ನುಟ್ಟುಕೊಂಡು, ತಲೆಮ್ಯಾಲ ವಂದು ಮುಂಡಾಸು ಬಿಕ್ಕೊಂಡು, ಹಣೆಮ್ಯಾಲ ರೂಪಾಯಗಲದೋಟು ಕುಂಕುಮದ ಬೊಟ್ಟಿಟ್ಟುಕೊಂಡು ಬಾಯಿಂದ ಯೇನೋ ವಟಗುಟ್ಟುತ ಕರಿಗಂಬಳಿ ಗದ್ದುಗೆ ಮ್ಯಾಲ ವಳ್ಳೆ ಮದಲಿಂಗನಂಗ ಕೂಕಂಡಿರೋದು ಕಾಣಿಸಿತು. ಯಾರಿದ್ದೀತೀತ ಅಂತ ಸನೀಕ ಹೋಗಿ ನೋಡುತ್ತಾಳೆ.. ತನ್ನ ಗಂಡ.. ನಗು ಬಂತು.. ನಕ್ಕರೆಲ್ಲಿ ಅನ್ಯಾಯವಾಗುವುದೋ ಯಂದು ಹಿಂದೇಟು ಹಾಕುತ "ಯ್ಯೋಯ್, ವಳ್ಳೆ ಮದ್ಲಿಂಗನಂಗೆ ಅಲಂಕಾರ ಮಾಡ್ಕೆಂಡು ಕೂಕಂಡಿದ್ದೀಯಲ್ಲಾ.. ವಂದು ಗಾವಾದ ಪಿಳ್ಳೇನ ತಗದು ನಾನೇ ನಿಂತಿದ್ದು ಲಗ್ಗುನ ಮಾಡಲೇನು?" ಯಂದು ಚಾಸ್ಟಿ ಮಾಡಿದಳು. ಅದಕ್ಕಾತನ ಬಾಯಿಯಿಂದ ದುಸುರಾ ಮಾತು ಹೊಂಡಲಿಲ್ಲ. ಬಗಬಗ್ಗಿ ನೋಡಿ "ಯಾಕ ಮಾರೀನ ವಂಥರಾ ದಿಮ್ಮಗ ಮಾಡಕಂಡಿಯಲ್ಲಾ?" ಅಂದಳು. ಅದಕೂ ಆತನ ಬಾಯಿಯಿಂದ ಮಾತು ವುದುರಲಿಲ್ಲ.. ಕುಂತ್ಗಾ.. ಯೇಟೊತ್ತು ಕುಂತಗಂಡಿರ್ತೀಯೋ ಕುಂತಗಂಡಿರು.. ಕುಂಡಿ ಸುಟ್ಟ ಮ್ಯಾಲ ನೀನೇ ಯದ್ದೇಳುತೀ.. ಯಂದು ತನ್ನ ಪಾಡಿಗೆ ತಾನು ಮನೆಯ ದಗದ ವದಕನಕ್ಕೆ ತೊಡಗಿದಳು. ವಟವಟ ಅನಕಂತ ಕಸ ಮುಸುರಿ ಮಾಡಿದಳು, ಮುದ್ದೆ ತಿರುವಿಟ್ಟು, ಯಿಂಡಿ ಅರೆದಿಟ್ಟು "ಯ್ಯೋಯ್.. ವುಣುವಂತಿ, ಕಯ್ಯಿಕಾಲು ಮಾರೀನ ತೊಳಕಂಡು ಬಾ" ಅಂದಳು. ಅದಕ್ಕೂ ಆ ಸರೀರ ಮಿಸುಕಾಡಲಿಲ್ಲ.. ವಡಲು ಸುಟ್ಟಮ್ಯಾಲ ನೀನೇ ವುಂಬುತಿ ಯಂದು ವಟಗುಟ್ಟುತ್ತ ತಾನೊಂದೆರಡು ತುತ್ತು ಗಂಟಲಿಗೆ ನೂಕಿ ವಂದೂವರೆ ತಂಬುಗೆ ನೀರು ಸೊಂಡಿ "ಯಾಕಿಂಗ ಕುಂತಗುಡಿರ ಬೌದೀತ?.. ನಾನೋಗೋ ಹೊತ್ತಿನಾಗ ಬೇಷಿದ್ದ.. ಬರೋ

ಹೊತ್ತಿಗೆ ಹಿಂಗಾಗಿ ಬಿಟ್ಟಿರವನಲ್ಲಾ, ಯಾದಾರ ದೆವ್ವ ಗಿವ್ವ ಬಡಕೊಂಡಿರಬೌದೋ ಹೆಂಗೆ ಅಂತ ಮಮ್ಮಲನೆ ಯೋಚಿಸಿದಳು. ಜಗಲೂರೆಜ್ಜನನ್ನು ಮನದಾಗೆ ಸ್ಮರಿಸಿದಳು. ರಾಜಮಾತೆ ಭ್ರಯ್ರಮಾಂಬೆಯ ಮೆಳ್ಳಗಣ್ಣು ತಾಕಿರಬೌದೆಂದು ಭಾವಿಸಿ ವುಪ್ಪು ಬೆಳ್ಳಗಡ್ಡೆ ಯಿಳೇ ತೆಗೆದು ಹಾಕಿ ನೋಡಿದಳು. ವಲೇಲಿ ಆಟೊಂದು ಘಾಟ ಆದರೂ ಆತನ ಮೂಗಿನಿಂದ ವಂದಾರ ಸೀನು ಬಾರಲಿಲ್ಲ.. ಕಲ್ಲು ಗುಂಡಿನಂಗ ಕೂಕಂಡೇ ಕೂಕಂಡಿದ್ದ. ಯಿಂಥ ಅನುಭವ ತನಗೆಂದೂ ಆದುದಿಲ್ಲ.. ಯಿದು ಯಿದೇ ಮೊದಲ ಸಲ.. ಯೀಸು ವರುಸ ದಿನಮಾನ ತಾನು ಹೇಳಿದಂಗ ಕೇಳಿಕಂಡಿದ್ದ ತನ್ನ ಗಂಡ ತನ್ನತ್ತ ವಂದು ಸಲ ಕಣ್ಣೆತ್ತಿ ಮಾತಾಡದಿರುವುದೆಂದರೇನು? ವಂದೇ ವಂದು ಮಾತುದುರಿಸದಿರುವು ದೆಂದರೇನು? ಯೀತನು ಯೀತನಾಗಿಲ್ಲ.. ಯೀತನೊಳಗೆ ಪೀಡೆ ಪಿಶಾಚಿ ಸೇರಿಕೊಂಡಿರಬೌದೆಂದು ಭಾವಿಸಿದ ಆಕೆಯು ಮಂತ್ರಗಾರ ಮರೆಪ್ಪನ ಮನೆಗೆ ಹೋಗಿ "ಮಾವಾ.. ಯಾಕಾ ಮುದೇತ ಅವುಸದಕ ಬೇಕಂದರ ವಂದs ವಂದ ಮಾತಾಡುತಾಯಿಲ್ಲಾ.. ಅಯ್ಲುಗೇಡಿ ಹಂಗ ಕುಂತುಗಂಡಾನ.. ವಂದs ಅಂತರ ಮಂತರಿಸಿಕೊಟ್ಟು ಆತನ್ನ ನಿಸೂರು ಮಾಡು" ಯಂದು ಕೇಳಿಕೊಂಡಿದ್ದಕ್ಕೆ ಆತನಿದ್ದು "ಯಿದು ಗಾಳಿ ಸವುಡಿರಬೇಕವ್ವಾ" ಯಂದು ಅಂತರ ಮಂತರಿಸಿ ಕೊಟ್ಟನು. ಆಕೆಯು ಅದನ್ನು ತಂದು ತನ್ನ ಮುದೇತನ ರೆಟ್ಟೆಗೆ ಕಟ್ಟಲು ಧಯರ್ಯ ಸಾಲದೆ ಮುಂದಿಟ್ಟು ಲೋಬಾನದ ಹೊಗೆ ಹಾಕಿದಳು. "ಯೀಗ್ಲಾರ ಯದ್ದೇಳೋ.. ಸಣಕಂದಮ್ಮನಂಗ ನೋಡ್ಕಂಡಿರೋ ನನ ಸಂಗಾಟ ವಂದೆಲ್ಡು ಮಾತಾಡೋ.." ಯಂದು ಗಗ್ಗರಿಸಿ ಕೇಳಿದಳು. ಆದರೆ ಆತ ತುಟಿ ಪಿಟಕ್ಕೆನ್ನಲಿಲ್ಲ.. ಹಿಂಗ ಆಕೆ ಮಾಡಿದ್ದು ತರಾವರಿ ಯತ್ನಗಳ ಪಯ್ಕಿ ವಂದಾರ ಫಲಕಾರಿಯಾಗಲಿಲ್ಲ. ಯಂದೂ ಗಂಡನೆದುರು ಅತ್ತಾಕಿಯಲ್ಲದ ಆಕೆಯ ಕಣ್ಣಲ್ಲಿ ವರತೆ ಮೂಡಿತು. ಅಯ್ಯೋ ನನ್ನ ಕರುಮವೇ.. ಯೀ ಯಿಳೀ ವಯಸ್ಸಿನಾಗ ಕಣ್ಣೀರ್ನ ಕಪಾಳಕ್ಕ ತಂದುಕೋಬೇಕಾಗಿ ಬಂತಲ್ಲಾ.. ನಾನು ಮಾಡಿರೋ ತಪ್ಪೇನಾರ ಯಿದ್ರಅದನ್ನಾರ ಹೇಳೋ" ಯಂದು ಆತನೆದುರ ತಲೆಗೆ ಕಯ್ನ ಹಚಕಂಡು ಕೂತಳು. ಆದರೂ ಆತನ ಬಾಯಿಯಿಂದ ವಂದಾರ ಮಾತು ವುದುರಲಿಲ್ಲ....

ಧಯರ್ಯ, ಆತುಮ ಯಿಸುವಾಸಕ್ಕೆ ತವರೆಂದೆನಿಸಿದ್ದ ಜಗಲೂರೆವ್ವ ಬಿರು ಬಿರನೆ ಅಂಗಳಕ್ಕೋಡಿ "ಯ್ಯೋಯ್ ಕರಯೀರಾss ಯ್ಯೋಯ್ ಮಾಳಕ್ಕಾss.. ಯ್ಯೋಯ್ ಬಾಯವ್ವತ್ತೆss ಯ್ಯೋಯ್ ಭರಮಜ್ ಮಾಮೋss.. ಬರ್ರೆಪ್ಪಾ..

ನನ ಗಂಡ ಯಾಕೋ ಮಾತಾಡುವಲ್ಲ.. ಯಂದಾಕೆ ಕೂಗಲು ಅವರೊಂದೆ ಅಲ್ಲದೆ ಅನೇಕರು ತಮ ತಮ್ಮ ಮೂಲೆಗಳಿಂದ ಬಂದರು. ಯ್ಯೋನಾಗೇತೆವ್ವಾ.. ಯ್ಯೋನು ಬುಟ್ಟಯ್ತವ್ವಾ.. ಅನಕಂತ ಬಂದು ಮೋಬಯ್ಯನನ್ನು ನೋಡಿ ಯಿಸುಮಿತಗೊಂಡರು. ಅಲಲಲಾ ಯಂದನಕಂತ ತಮ ತಮ್ಮ ಮೂಗುಗಳ ಮ್ಯಾಲ ಬೊಟ್ಟಿಟ್ಟುಕೊಂಡರು.. “ಯೇನು ಡವುಲಪ್ಪಾss ಯೇನು ಡವುಲ, ಮಡಿದೋತರ ವುಟ್ಟವನಲ್ಲಾ ಯೇನು ಡವುಲಪ್ಪಾss ಯೇನು ಡವಲು.. ತಲೆ ಮ್ಯಾಲ ರುಮ್ಮಾಲ ಬಿಗಿದವನಲ್ಲಾ.. ಯೇನು ಡವುಲಪ್ಪಾss ಯೇನು ಡವುಲು.. ಹಣೆಮ್ಯಾಲ ರೂಪಾಯಿಯೋಟಗಲ ಕುಂಕುಮ ಬೊಟ್ಟಿಟ್ಟುಕೊಂಡವನಲ್ಲಾ.. ಯೇನು ಡವುಲಪ್ಪಾss ಯೇನು ಡವುಲು.. ಯಾಕಪ್ಪಾ ತಂದೆ? ಯದರಿಕೆ ಬರೋ ಹಂಗ ಕುಂತಗಂಡೀ, ನೆಲ ಯೇನಾರ ಹಿಡಕಂಡಯ್ತಾ.. ಕುಂಡಿಗೇನಾರ ಗೆದ್ದಲು ಹತ್ತಯ್ತಾ..ಯೇನು ಥೆಳಗೇರಿ ಮ್ಯಾಲ ಮುನುಸಾss ಯಿಲ್ಲಾ ಕಯ್ಯಿ ಹಿಡಿದ ಹೆಂಡತಿ ಮ್ಯಾಲ ಮುನುಸಾ.. ನೀನಿಂಗ ಕುಂತಗಂಡಿರೋದು ನಮಗ ಪಾಡು ಕಾಣುವಲ್ಲದು..ನೀನು ಹಿಂಗ ವಾತಾಡದಿರೋದು ನಮಗ ಪಾಡು ಕಾಣುವಲ್ಲದು” ಯಂದು ಅನಕಂತ ಆತನ ಸುತಮುತ್ತ ಅಷ್ಟದಿಕ್ಕುಪಾಲಕರಂಗ, ಪಂಚ ಪರಮೇಸೂರರಂಗ ನೆರೆದು ಕಣ್‌ಕಣ್ ಬಿಟ್ಟರು. ಬಾಯಿ ಬಾಯಿ ಬಿಟ್ಟರು. ಆತನ ಸರೀರವನ್ನು ಮುಟು ಮುಟ್ಟಲಕಂತ ಹಿಂದಕ ಮುಂದಕ ಜರುಗಾಡಿದರು. ಕೊನೀಕಿದ್ದು ಅವರೆಲ್ಲ “ಯವ್ವಾ ಜಗಲೂರೆವ್ವ..ಯೀತನ ಮಯ್ಯಾಗ ಹೊಕ್ಕೊಂಡಿರೋದು ದೆವ್ವಾನೋ, ದೇವರೋ.. ಅರ್ಥಾಗಲೊಲ್ಲದು ಕಣವ್ವಾ..ಯಂದು ಹೇಳುತ ಹಿಂದ ಹಿಂದಕ ಜರುಗಲು ಆ ಸಾಧ್ವಿಗೆ ದುಕ್ಕ ವುಮ್ಮಳಿಸಿ ಬಂತು. ಯೀ ನರ ಜಲುಮ ನೀರಮ್ಯಾಗಳ ಗುಳ್ಳೆಯಿದ್ದಂಗೆ.. ನಾಳೆ ಹೋಗೋದು ಯಿವತ್ತೆ ಹೋಗಲಿ ಯಂದು ದ್ರುಢ ನಿಚ್ಚಯ ಮಾಡಿದ ಆಕೆಯು ಯರಡು ಪೂಟ ಮುಂದಕ ಜರುಗಿ “ಅಲಲಲಾs ತಲೆಯಿದ್ದಾಗಲೆ ಮೊಣಕಾಲ ಚಿಪ್ಪಿಗೆ ಪಟ್ಟಾನ ಕಟಬುಟ್ಟು ಕುಂತಗಂಡೀಯಲ್ಲಾ.. ವಂದುss ಹ್ಹಾ.. ಅನುವಲ್ಲೆಲ್ಲಾ.. ವಂದುs ಹ್ಹೂಂ ಅನುವಲ್ಲೆಲ್ಲಾ.. ನಾನಿಂಗ ಹೋಗಿ ಹಂಗ ಬರೋ ಹೊತ್ಗೆ ನೀನು ನಿನ್ನ ಸರೀರಾನ ಹಾದೀಲಿ ಹೋಗೋ ದೆವ್ವಕ್ಕೆ ಮಾರ್‍ಯೊಂಡೀಯಾ, ಬೀದೀಲಿ ಹೋಗೋ ಮಾರಮ್ಮಗ ಮಾರಿಕೊಂಡೀಯಾ” ಯಂದು ಯದೆ ಯದೆ ಬಡುಕೊಳ್ಳುತ ಅಬ್ಬರಿಸಿದಳು....

ಆಗ ಸರೀರವು ಅವುದೋ ಅಲ್ಲಮೋ ಎಂಬಂತೆ ಮಿಸುಕಾಡಲಿಕ್ಕ ಸುರುವು ಮಾಡಿತು. ಕತ್ತೊಳ್ಳಿಸಿ ಸುತಮುತ್ತ ನೋಡಿತು....

"ಯಲಯ್ ನರಮಾನ್ನವರುಗಳಾss.. ಮುಟ್ಟಿ ನನ್ನ ಮಯ್ಲಿಗಿ ಮಾಡಬ್ಯಾಡೂರಿ, ಮಾತಾಡಿ ನನ ಕಿವಿಗಳನ ಮಯ್ಲಿಗೆ ಮಾಡಬ್ಯಾಡೂರಿ" ಯಂದದು ಅನ್ನಲು ಅವರೆಲ್ಲ ಗಪಚುಪ್ಪಾದರು. ಅವರ ಪಯ್ಕಿ ಹಿರೀಕನಿದ್ದ ಗೊಡ್ಲಯ್ಯನು "ಮಯ್ಲಿಗಿ ಆಗುವಂಥಾದ್ದೇನುಂಟು ನಿನ ಮಯ್ಯೊಳಗ" ಅಂತ ಕೇಳಲದು "ನನ್ನೊಳಗೆ ಆದಿಸಗುತಿ ವಸ್ತಿ ಮಾಡುವಳೆ.. ಹರಕತ್ತು ಮಾಡಿ ತೊಂದರೆ ಕೊಡಬ್ಯಾಡೂರಿ" ಅಂದಿತು. ಆಗಿದ್ದು ಯಿನ್ನೊಬ್ಬ ಹಿರೀಕನಾದ ಯರ್‍ರಬೋರಯ್ಯನು "ತಮ್ಮಾ ಮೋಬಯ್ಯಾ.. ಯೇನಾಡ್ಲಿಕತ್ತಿಯಪ್ಪಾ" ಯಂದು ಕೇಳಲದು "ನಾನು ಮೋಬಯ್ಯನಲ್ಲಾ.. ಆತನ ಸರೀರ ಮಾತಾಡ್ತಿರೋದು.." ಅಂದಿತು. ಅದಾಡಿದ ಮಾತು ಕೇಳಿ ಯಲ್ಲಾರು ಸರೀರ ನೋಡಲಕ ಮೋಬಯ್ಯನದು.. ಆದರಾತನಲ್ಲ ಮಾತಾಡ್ತಿರೋದು ಅಂದರೇನರ್ತ? ಯಂದನಕಂತ ಪರಸ್ಪರ ಮಿಕಿ ನೋಡಿಕೊಂಡರು....

ವಂಚಣ ಮೂರ್ಛೆ ಹೋಗಿದ್ದ ಜಗಲೂರೆವ್ವ ಮರುಚಣ ಚೇತರಿಸಿಕೊಂಡು.. ಯಿದು ನನಗಂಡನ ಸರೀರ.. ನಾನು ಜ್ವಾಪಾನ ಜತುನ ಮಾಡಿರೋ ಸರೀರ.. ಯಿದು ನನ ಗಂಡನದಲ್ಲ ಅಂದರ ಯೇನರ್ತ..? ಯಂದನಕಂತ ಮುಟುಮುಟ್ಟಲಕ ಹೋಗಲು ಅದು ಹಿಂದ ಹಿಂದಕ ಜರುಗಿ "ಖಬರ್ದಾರ್.. ಮುಟ್ಟೀಯಾ ಜ್ವಾಕೆ. ನಿನ ಗಂಡ ನನ್ನೊಳಗೆ ಅದಾನಂದರ ಅದಾನ, ಯಿಲ್ಲಾಂದರ ಯಿಲ್ಲ.. ವಂದುಕಾಲಕ ನೀನವಗ ಹೆಣ್ತೆಯಿದ್ದಿರಬೌದು.. ಆದರ ಯೀಗಲ್ಲ.. ನಿನಗೂ ಅವಗೂ ಯಿದ್ದ ರಿಣ ತೀರಯ್ತೆ.. ಮರು ಮಾತಾಡದೆ ಯಿಲ್ಲಿಂದ ಹೊಂಟೋಗಿ ಬಿಡು.." ಯಂದು ಗದ್ದರಿಸಿತು.. ತನ್ನೊಂದೊಂದು ಮಾತುಗಳಿಂದ ಆಕೆಯನ್ನು ದೂರ ತಳ್ಳಿತು.. ಆಕೆ ಬೀಳೋದು, ಪುಟದಿದ್ದು ಬರೋದು ಮಾಡಿದಳು....

ನಿಟಾರನೆ ನೆಲಮುಗುಲಿಗೇಕಾಗಿ ನಿಂತುಕೊಂಡ ಆಕೆಯು.. ಅಲಲಲಾss.. ಯಾವ ಅವ್ವ, ಯೇನು ಕಥೀss.. ನಾನಿಲ್ಲದ ಯ್ಯಾಳ್ಯಾಗ ಅದೆಂಗ ತೂರಿಕೊಂಡ್ಲು ನನಗಂಡನ ಮಯ್ಯೊಳಗ. ನನ್ನೆಂಡ್ತಿ ಬರಲಿ ತಡಿ ಅಂತ ನನ ಗಂಡ ಆಕೇನ ತರುಬಬೌದಿತ್ತಲ್ಲಾ ಯಂದು ಮುಂತಾಗಿ ಅರುಭಟಿಸುತ್ತಿರಲು ಆ ಸರೀರವು "ನಾನೇ ನಿನ ಗಂಡನ್ನ ಹೊರ ಹಾಕಿ ತಾಯೀಗೆ ಆಸ್ರಯ ಕೊಟ್ಟೀನಿ... ನೀನು ಬಯ್ದು ರವುರವ ನರಕಕ್ಕ ಹೋಗಬ್ಯಾಡ.. ನನ್ನ ಪಾದಪೂಜೆ ಮಾಡಿ ಸಾಂಬವಿಗೆ ಸರಣಾಗು.. ತಿಳಿತಾ" ಯಂದಿತು....

ಅದಕಿದ್ದು ಆಕೆಯು.. "ನೀನ್ಯಾವಾಕಿಯೇ ಆಗಿರು.. ಆದರ ನೀನು ನನ

ಗಂಡನ ಸರೀರದೊಳಗೆ ತೂರ್ಕಂಡಿರೋದು ಘನಘೋರ ಅಪರಾಧ.. ನಿನಗೆ ನಾನು ಸರಣೋಗುವುದೆಂದರೇನು? ನೀನೆಂಗ ನನ ಗಂಡನ ಸರೀರದಿಂದ ಹೊರ ಹೋಗೋದಿಲ್ಲೋ ನಾನು ನೋಡ್ತೀನಿ" ಯಂದು ಗುಡು ಗುಡುಗಿದಳು.. ಸರೀರವು ತನ್ನ ನೋಟ ಮಾತ್ರದಿಂದ ಆಕೆಯನ್ನು ಮನೆಯಿಂದ ಹೊರತಳ್ಳಿತೆಂಬಲ್ಲಿಗೆ...

* * * *

ಅತ್ತ ಕಡಪಾ ಯಂಬ ಪಟ್ಟಣದೊಳಗೆ ಥಾಮಸು ಮನ್ರೋ ಸಾಹೇಬನು ನೀನು ನಿನ್ನ ಕುಟುಂಬ ಸಲುವಲು ಮುನ್ನೂರೆಕರೆ ಯಿಟ್ಟುಕೋ ಯಂದು ಚಿನ್ನೋಬುಳ ರೆಡ್ಡಿಗೂ, ನೀನು ನಿನ್ನ ಕುಟುಂಬ ಸಲುವಲು ಮುನ್ನೂರಕೆರೆ ಯಿಟ್ಟುಕೋ ಯಂದು ವುಯ್ಯಾವುಲ ಕೇಸುವರೆಡ್ಡಿಗೂ ಹೇಳಿ ನಿಗದಿ ಪಡಿಸುತ್ತಿರುವಾಗ್ಗೆ...

ಪೆದ ತಿಮ್ಮಾರೆಡ್ಡಿ ಮತ್ತಾತನ ಸಂಗಡಿಗರು ನರಸಿಮ್ಮಸ್ವಾಮಿಗೆ ಪೂಜೆ ಸಲ್ಲಿಸಿ ರಣಯೀಳ್ಯೆ ಪಡೆಯಲಕೆಂದು ಕದಿರಿಯತ್ತ ಪ್ರಯಾಣ ಬೆಳೆಸಿರುವಾಗ್ಗೆ....

ಅತ್ತ ಜರುಮಲಿ, ಮೊರಂಚಲ್ಲಿ ನುರಿತ ಬೇಟೆಗಾರರೂ, ನಿಷ್ಣಾತ ಗೂಢಾಚಾರರೂ ಆದಂಥ ಗುತ್ತೆಪ್ಪ, ವತ್ತೆಪ್ಪರೆಂಬ ಅವಳಿ ಸೋದರರು ನಿಜ್ಜಾಪುರದ ಕಡೆ ಹೊಂಟಿದ್ದ ಪಾರಿವಾಳವನ್ನು ಬಾಣ ಗುರಿಯಿಟ್ಟು ಕೆಡವಿ ಅದರ ಕಾಲ ವುಂಗುಟಕಿದ್ದ ಪತ್ತರವನ್ನು ಬಿಚ್ಚಿ, ಅಕ್ಕರಗಳನ್ನು ನೋಡಿ ತಿಕಮಕರಾಗಿರುವಾಗ್ಗೆ....

ಅತ್ತ ಜೊನ್ನಗಿರಿಯ ರಾಜ ಕದಿರೆಪ್ಪ ನಾಯಕನೆದುರು ಹಾಜರುಪಡಿಸಲೆಂದು ಮದ್ದಿಕೇರಿ ಸಂತ್ರಸ್ತರನ್ನು ಸಯ್ನಿಕರು ದರಗುಟ್ಟಿಯಳದೊಯ್ಯುತ್ತಿರುವಾಗ್ಗೆ.. ಯಿತ್ತ ಕುದುರೆಡವು ಪಟ್ಟಣದಲ್ಲಿ ರಾಜಮಾತೆ ಭಯ್ರಮಾಂಬೆಯು ಪಿಕದಾನಿ ಹಿಡಿಯೋ ಮೋಬಯ್ಯನನ್ನು ನೀನು ಕರೆದುಕೊಂಡು ಬಾ, ನೀನು ಕರೆದುಕೊಂಡು ಬಾ ಯಂದು ವುಂಡುವುಪವಾಸಿ ಬಳಸಿ ಬ್ರೆಮ್ಮಚಾರಿಗಳಂತಾಗಿದ್ದ ವಂದಿಬ್ಬರು ಸಯ್ನಿಕರನ್ನು ಥೆಳಗೇರಿಗೆ ಕಳುವಿ ಬಂದನೋ ಬಾರನೋ ಯಂಬ ನಿರೀಕ್ಷೆಯಲ್ಲಿರುವಾಗ್ಗೆ.. ರಾಜಕುಮಾರ ಕಾಟಯ್ಯ ನಾಯಕನು ತನ್ನ ಗುದದ ಬೊಕ್ಕೆ ಯಿಲಾಜು ಮಾಡಿಕೊಳ್ಳುವ ಸಲುವಾಗಿ ತಾನು ಪಗಡೆಯಾಟ ದಲ್ಲಿ ಗೆದ್ದದ್ದಂಥಾ ಮಾಯಾವಿ ಪಂಚಲೋಹದ ಗಿಂಡಿಯೊಳಗೆ ನೀರು ತುಂಬಿಕೊಂಡು ಹೊರಕಡೀಕಂತ ಕಡುದಮ್ಮನ ಹಳ್ಳದ ಸಾಲಿನ ಕಡೇಕ ಗುಟ್ಟಾಗಿ ಹೋಗುತಿರುವಾಗ್ಗೆ ಸಿವ ಸಂಕರ

ಮಾದೇವಾss

ಗುಡಿಹಿಂದಲ ಮೂಳೆ ಮೋಬಯ್ಯನ ಸರೀರದೊಳಗೆ ಸಾಂಬವಿ ವಸ್ತಿ ಮಾಡಿರುವಳೆಂಬ ವರ್ತಮಾನವನ್ನು ತನ್ನ ಮಯ್ಯ ಪದರೊಳಗೆ ತುಂಬಿಕೊಂಡು ಗಾಳಿ ಯಿತ್ತಲಿಂದ ಅತ್ತ ಸುಳುದಾಡುತ ಹೋತು, ಕಾಗೆ, ಗುಬ್ಬಿಯೇ ಮೊದಲಾದ ನಿರುಪದ್ರವಿ ಪಕ್ಷಿಗಳು ಆ ವರ್ತಮಾನದ ಮೂಟೆಯನ್ನು ತಮ ತಮ್ಮ ಹೆಗಲ ಮ್ಯಾಲ ಹೇರಿಕೊಂಡು ಯಿತ್ತಲಿಂದ ಅತ್ತ ಹಾರುತ್ತ ಹೋದವು. ಯೀ ಪರಮಾನ್ನ ಸದ್ರುಸ ಸುದ್ದಿಯನ್ನು ಮಂದಿ ತಮ ಬಾಯಿಯಿಂದ ಯಿನ್ನೊಬ್ಬರ ಕಿವಿಗೆ ಬಡಬಡಿಸತೊಡಿಗದರು. ಬಾಯಿ ಕಿವಿಗಳುಳ್ಳ ಮಂದಿ ಪಯ್ಕಿ ಕೆಲವರು ಮುಖ ಮಾರ್ಜನ ಮಾಡಿಕೊಳ್ಳೋದ ಬಿಟ್ಟು, ಯಿಸರ್ಜನ ಕಾರ್ಯೇವುಗಳನ್ನು ಆರ್ದಂಬರ್ಧಕ್ಕೆ ಬಿಟ್ಟು ಕೂಸು ಕಂದಮ್ಮ ಗಳನ್ನು ತಮ್ಮ ತಮ್ಮ ಯದೆಗವುಚಿಕೊಂಡು, ಅಂಗಿ, ಪಂಚೆ, ಕುಬುಸಗಳಿಗೆ ಗುಂಡಿ ಹಾಕಿ ಕೊಳ್ಳುತ, ಚಲ್ಲಾಣಗಳಿಗೆ ಲಾಡಿ ಬಿಗಿದು ಸರಗಂಟು ಹಾಕುತ, ಬಾಯೊಳಗೆ ಬಾನದುಂಡೆಯನ್ನು ನಮಲೋದು ಮರೆಯುತ, ಕಯ್ಯ ತಿರುಮೂತ, ಕಾಲು ಬೀಸಿ ಬೀಸಿ ಹಾಕೂತ ಹಾಕೂತ ಥೆಳಗೇರಿಯ ಗುಡಿ ಹಿಂದಲ ಮನೆಗೆ ಯಡತಾಕಿ ಮನೆಮುಂದಲ ಪಳುಗಟ್ಟೆ ಮ್ಯಾಲ ಮಟ್ಟಸವಾಗಿ ಕೂಕಂಡಿದ್ದ ಮೋಬಯ್ಯನನ್ನು ಯಿಸುಮಯದಿಂದ ನೋಡಿ "ಹಾಯ್ ಸಿವನೇ ಸಿವಸಂಕರ ಮಾದೇವಾss" ಯಂದುದ್ಗಾರ ತೆಗೆಯೂತ ತಮ ತಮ್ಮ ಮನೆಗಳಿಗೆ ವಾಪಾಸಾಗ ಲಾರಂಭಿಸಿದರು. ವಜ್ರಾಲ ಪೋಲಪ್ಪ, ಪುಂಗಿ ಪುಲ್ಲಪ್ಪ, ಮುತ್ತೇರಿ ಮಲ್ಲವ್ವ, ಬೋರಯ್ಯರೆ ಮೊದಲಾದ ಹಿರೀಕರು ಗುಡ್ಡದ ಹಿಂದು ಮುಂದುಲ ಗಂಡು ಕಲ್ಲುಗಳಂಗೆ ನೆರೆದು ಮೂಗಿನಿಂದಲೂ ಕಣ್ಣೀರು ಸುರಿಸುತಲಿದ್ದ ಜಗಲೂರೆವ್ವಗೆ ಪರಿಪರಿಯಿಂದ ಸಮಾಧಾನ ಹೇಳುತಲಿದ್ದರು. ಆಜುಡಲವ್ವ, ಗಾದೀರಮ್ಮ, ವುಲಿಗೆವ್ವ, ಯಲ್ಲಮ್ಮ, ಯಿಲ್ಲಮ್ಮ, ಅಲ್ಲೆಮ್ಮರೇ ಮೊದಲಾದ ನಿತ್ಯ ಸುಮಂಗಲೇರು ಅವ್ವನ ಸಾಲಂಕ್ರುತ ಹಡಲಿಗೆಯನ್ನು ತಮ ತಮ್ಮ ತಲೆ ಮ್ಯಾಲ ಹೊತ್ತು ಕೊಂಡಲ್ಲಿಗೆ ಬಂದು ಚವುಡಿಕೆಗಳನ್ನು ಮೀಟುತ್ತ "ಸಾಂಬವಿಯ ಮಗನಾದನೇ ನಮಮೋಬ ಜಗದಂಬೆ ಸಿಸುವಾದನೇ" ಯಂದು ಹಾಡೂತ ಪಾಡೂತ ಕುಣಿಯ ತೊಡಗಿದರು. ಥೆಳಗೇರ್‍ಯಾತಿ ಥೆಳಗೇರಿ ಕಡೇಲಿಂದ ಕಳವಳ, ತಡಸಲ, ಬಳುವಳ, ಕಡುವಲರೆಂಬ ಹೊಲೇರ ಪಡುವಲಯ್ಯನ ಮಕ್ಕಳು ಸುಯ್ಯಂತ ಬಂದು ತಮ ತಮ್ಮ ಹಲಗೆ ತಪ್ಪಡಿಗಳ ಮ್ಯಾಲ ಕೋಲಾಡಿಸಲಾರಂಭಿಸಿದರು. ಮುದ್ದ, ಸುದ್ದ, ಗುದ್ದರೆಂಬ ಸಿದ್ದನ ಮಕ್ಕಳಲ್ಲಿಗೆ ಸುಯ್ಯಂತ ಬಂದು 'ಕೂಯ್.. ಕುಕುಕೂಯ್ss' ಯಂದು

ಕಹಳೆ ಮೊದತೊಡಗಿದರು. ನೋಡು ನೋಡುತ್ತಿದ್ದಂತೆ ಗವುಳೇರ ಮೋಣಿ ಕಡೇಲಿಂದ ಪೆಟಿಗೆಪ್ಪ, ತಾಳಪ್ಪ, ದಿಮುಡೆಪ್ಪ, ಗಂಟೆಪ್ಪ, ತಪಡೆಪ್ಪ ಮೊದಲಾದ ಸ್ರೀದೇವಿ ಭಜನಾಮಂಡಳಿ ಯವರು ನಮ್ಮವ್ವ ತಾಯಿ ಜಗದಂಬಾ, ಜಗದಂಬಾ ಯಂದು ಯೇರಿಕೆ ದನಿಯಲ್ಲಿ ಭಜನಾ ಮಾಡುತ ಬಂದರು. ಅರೆಗಳಿಗೆ ವಳಗ ಯೀಯಲ್ಲ ಗಲಾಟೆ ಗದ್ದಲ ಗವುಜಗದಿಂದಾಗಿ ವಬ್ಬರ ಮಾತು ಯಿನ್ನೊಬ್ಬರಿಗೆ ಕೇಳಿಸದಂಗಾತು. ಜಗಲೂರವ್ವ "ನನ್ನ ಗಂಡನ ಸರೀರವನ್ನು ಆಕ್ಕರಮಿಸಿಕೊಂಡಾಕೆ ಯಾವಾಕೇ ಆಗಿರ್ಲಿ.. ಅವ್ಳು ರಂಡ್ಯಾಗ್ಲಿ"ಯಂದು ಮುಂತಾಗಿ ಯೇರಿಕೆ ದನಿಯಲ್ಲಿ ಆವಾಜು ಹಾಕದಿದ್ದಲ್ಲಿ ಗುಂಪು ಸಂತೆಯಾಗದೆ ಯಿರುತ್ತಿರಲಿಲ್ಲ, ಸಂತೆ ಜಾತುರೆಯಾಗದೆ ಯಿರುತ್ತಿರಲಿಲ್ಲ. ಅನುವು ಆಪತ್ತಿನಲ್ಲಿ ತಾವಾಗೋರು ಯಂಬ ಕಾರಣಕ್ಕೆ ಅಲ್ಲಿ ವುಳುಕೊಂಡಿದ್ದ ಮಂದಿ ಪಯ್ಕಿ ಹಿರೀಕನಾದ ಗೊಡ್ಲೆಯ್ಯನು "ಯಸನ ಯಂಬ ಬೆಂಕೀಗೆ ಮಯ್ನ ಕಾಸ ಬ್ಯಾಡವ್ವಾ.. ಯಾವಾಗ ನಿನ ಗಂಡ ನಿಸೂರು ಯಿದ್ದನವ್ವಾ ಮಗಳೆ.. ಅಯ್ಲುಗೇಡಿಯಂಗ ಆಡುತ್ತಿದ್ದನಲ್ಲಾ.. ಅದರಂಗ ಅವಗ ಅವ್ವ ಯಂಬ ಅಯ್ಲು ಬಡಕೊಂಡಿರಬೌದು.. ಅದು ಯಿವತ್ತಲ್ಲ ನಾಳೆ ಬುಟ್ಹೋಯ್ತದೆ.. ನಿನ ಗಂಡ ನಿನಗೆ ದಕ್ಕೇ ದಕ್ಕುತಾನ.. ಗುಡ್ಡದಂಥಾ ಮನುಶ್ಯೋಳಾದ ನೀನು ಅಳ್ಳೋಗ ಬ್ಯಾಡ ತಾಯಿ ಅಳ್ಳೋಗಬ್ಯಾಡಾss" ಯಂದು ಮುಂತಾಗಿ ಬುದ್ದಿ ಹೇಳುತಾ ಹೇಳುತಾ ಮನ್ಯಾಗೆ ಬದುಕಯ್ತೆ.. ವದಕನಯ್ತೆ ಯಂದನಕಂತ ಕುಂಡಿ ಅಡಿಯಿದ್ದ ವಲ್ಲಿಯನ್ನು ಕೊಡವಿ ಹೆಗಲ ಮ್ಯಾಲ ಹಾಕ್ಕೊಂಡು ಅಲ್ಲಿಂದ ಹೊತಾ ಹೋದನು...

ಯಷ್ಟೋ ಹೊತ್ತಿನವರೆಗೆ ವುದಿಸುತ್ತಾ ಅಸ್ತವಾಗುತಾಯಿದ್ದ ಮಂದಿ ಕ್ರಮೇಣ ಕರುಗುತಾ ಬಂತು. ಯಿನ್ನು ವುಳುಕೊಂಡಿದ್ದವೆಂದರೆ ವುಪಾಸನಾ ರೊತಾರೂಢವಾಗಿದ್ದ ಮೂರ್ನಾಕು ನಾಯಿಗಳು, ಅಯಿದಾರು ಮಂದಿ ಅವ್ವನ ಸತ್ತುಳ್ಳ ಸರಣಾರು, ತನ್ನವ್ವ ಮಾಡುತಲಿದ್ದ ದುಕ್ಕದ ರೇಶಿಮೆ ನೂಲಿನ ಗುಂಟ ನಡೆದು ಬಂದು ಸೂರ ಆಟು ದೂರದಲ್ಲಿ ನಿಂತು ಸಕಲೊಂದು ಯಿದ್ಯಾಮಾನವನ್ನು ಗಮನಿಸುತಯಿತ್ತು. ಅದು ತನ್ನವ್ವನ ಕಣ್ಣೊಳಗೂ ನೀರಿದೆಯಲ್ಲಾ ಯಂದು ಅಚ್ಚರ್ಯ ಭರಿತ ದುಕ್ಕವನ್ನನುಭೋಸುತಲಿತ್ತು. ಮಂದಿ ಮುಕ್ಕಾಲು ವೀಸೆ ಕರುಗುವುದನೇ ಯದುರು ನೋಡುತ ನಿಂತಿದ್ದ ಅದು ಬಲು ಚೂಚುಮವಾಗಿ ವಂದೊಂದೆ ಹೆಜ್ಜೆಯನಿಕ್ಕುತ ಹಿಂದೇಸಿಂದ ಅಂಜುತ, ಅಳುಕುತ ಬಂದು ತನ್ನ ಮಾತ್ರುಸೊರೂಪಿಣಿಯ ವದನದ ಮ್ಲಾನವತೆಯನ್ನು

ನಾಲಗೆಯಿಂದ ನೆಕ್ಕಿತು. ತನ್ನ ಮೂಗಿನಿಂದ ಗಾಳಿ ವುದುರಿಸಿ ಆಕೆಯ ಸೆಕೆಯನ್ನು ಕಳೆಯಿತು. ಆ ಮಾತಾಯಿ ಅದರ ಮುಖವನ್ನು ತನ್ನೆದೆಗೆ ವತ್ತಿಕೊಂಡು "ನನ್ನ ಬಾಳೇವಿಂಗಾಗಿ ಬುಟ್ಟಯ್ತಲ್ಲಾ ಸೂರಾss" ಯಂದು ದುಕ್ಕ ತೋಡಿಕೊಂಡಳು...

ಹೊತ್ತು ವುಗಲೊಳಗೆ ಯೇರೋದೂ, ಯಿಳಿದೋದು ಮಾಡುತಲಿದ್ದಿತು. ಬುದ್ದಿಭ್ರಮಣಾ ಆದಂಗಾಗಿ ಸೂರ್ಯ ಪರಮಾತುಮನು ತನ್ನ ಪರಿಭ್ರಮಣದ ಹಾದಿಯನ್ನು ಪರಪಾಟು ಮಾಡಿಕೊಂಡಿದ್ದುದೇ ಅದಕ್ಕೆ ಕಾರಣ. ಕರುಣಾಂತರಂಗದ ಬೇಯಿನ ಮರವು ತನ್ನ ನೆರಳನ್ನು ಆಕೆಯತ್ತ ಬಾಚಲು ಹರ ಸಾಹಸ ಮಾಡುತಲಿದ್ದಿತು. ಪಕ್ಷಿಗಳು ಯಂಥಾಕಿಗೆ ಯಿಂಥಾ ದುರ್ಗತಿ ವದಗಯ್ತಲ್ಲಾ ಯಂದು ರೋಧಿಸುತ ಹಾರುವುದನ್ನು ಮರೆತು ಅಲ್ಲಲ್ಲಿ ಕೂಕಂಡಿದ್ದವು. ಯಿಲಿಚೆಮ್ಮಗಳು, ಕೋಶಮ್ಮಗಳು ತಮ ತಮ್ಮ ವಯ್ರಿಭಾವ ಮರತು ದುಕ್ಕ ಅನುಭೋಸುತಲಿದ್ದವು. ಮಕ್ಕಳು ಮರಿ ಯಿಲ್ಲದಿದ್ದರೇನಂತೆ, ಜಗ್ಲೂರೆವ್ವ ಪಸು ಪಕ್ಷಿ ಮರಗಿಡ ಮೊದಲಾದವುಗಳನ್ನು ಹೆತ್ತ ಮಕ್ಕಳಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದುದೇ ಅದಕ್ಕೆ ಕಾರಣ. ವಂದು ತುತ್ತುಯಿನ್ನೊಂದಕ ಹಾಕದೆ ಯಿನ್ನೊಂದು ತುತ್ತು ವುಂಡಾಕೆಯಲ್ಲದ, ವಂದು ಗುಟುಕು ನೀರನ್ನು ಯಿನ್ನೊಂದಕ ಹಾಕದೆ ಗುಟುಕು ಕುಡುದಾಕಿಯಲ್ಲದ ಜಗಲೂರೆವ್ವನ ದುಕ್ಕವನ್ನು ಸಚರಾಚರ ತನ್ನದೆಂದು ಭಾವನ ಮಾಡಿತು.

ಹಿಂದಕ ಮುಂದಕ ಜರುಗದೆ ವಡಲೊಳಗಿನ ನೀರು ನಿಡಿ ಅಳ್ಳಾಡದಂತೆ ಆಕೆ ಕೂಕಂಡಿದ್ದ ಬಯಲೇನಿತ್ತು ಅದು ಯೀ ಕಾಲದ್ದಲ್ಲ.. ಪುರಾತನ ಕಾಲದ್ದು. ಅಂಥಪ್ಪ ಮಹಿಮಾನ್ವಿತ ಜಾಗದಲ್ಲಿ ಕೂಕಂಡಿದ್ದ ಜಗಲೂರೆವ್ವ ಹಿಂದಕ ಜರುಗು ಯಂದರ ಹೆಂಗ ಹಿಂದಕ ಜರುಗ್ಯಾಳು? ಮುಂದಕ ಜರುಗು ಯಂದರ ಹೆಂಗ ಮುಂದಕ ಜರುಗ್ಯಾಳು? ಅಲ್ಲಿ ಹಿಂದು ಮುಂದು ಯಂಬೆರಡು ಮಾಯಾವಿ ಸಂಬಂಧಗಳ ನಡುವೆ ಅಂಥ ಪರುಕುಯಿರಲಿಲ್ಲ.. ನೆಲ ಆಕೇನ ಹಿಡಕೊಂಡಿತ್ತೋ, ಆಕೇನೆ ನೆಲವನ್ನು ಹಿಡಕೊಂಡಿದ್ದಳೋ.. ವಟ್ಟಿನಲ್ಲಿ ಬುಡುಮೆ ಕಲ್ಲಿನಂಗ ನಿಚ್ಚಲ ಸ್ಥಿತೀಲಿ ಕೂಕಂಡಿದ್ದಳು.

ದುಕ್ಕ ಮಾಡೋರು ಮಾಡಿದರೇನೇ ಚಂದ. ದುಕ್ಕ ಮಾಡೋ ಕಲೆ ಸಿದ್ದಿಸೋದು ಆಟು ಸುಲಭವಲ್ಲ.. ಅದಕ್ಕೆ ಸಣ್ಣೋರಿದ್ದಾಗಲಿಂದಲೇ ಹೆತ್ತೋರಿಂದ, ಸುತ್ತಮುತ್ತಲಿನ ಪರಿಸರದಿಂದ ತಾಲೀಮು ಪಡೆದುಕೊಂಡಿರಬೇಕು, ನುರುಪಡಿ ಆಗಿರಬೇಕು, ಹಂಗಿದ್ದರೇನೆ ಅದು ಸಿದ್ದಿಸೋದು. ಆದರ ಜಗಲೂರೆವ್ವನ ಮುಖದಾಗ ದುಕ್ಕದ ವಂದೇ ವಂದು ಯಸಳನ್ನು ಕಂಡಿರೋರು ಥೆಳಗೇರಿ

ವಂದೆ ಯಾಕ, ಯಿಡೀ ಪಟ್ಟಣದೊಳಗೆ ಯಾರೂ ಯಿರಲಿಲ್ಲ ಯಿನ್ನೊಬ್ಬರ ಕಣ್ಣೀರೊರೆಸೋದರಲ್ಲಿ, ದುಕ್ಕ ಮಣಗಿಸುವಂಥ ಚಂದನೆಯ ನಾಕು ಮಾತಾಡೋದರಲ್ಲಿ, ಆತುಮ ಯಿಸುವಾಸ ತುಂಬೋದರಲ್ಲಿ, ಆಸರಾಗೋದರಲ್ಲಿ ಆಕೆಗೆ ಸರಿಸಮಕ್ಕೆ ಬರೋರು ಯಾರೂ ಯಿಲ್ಲ. ಯಂಥಾಕೆಗೆ ಯಂಥ ಗತಿ ಬಂತಪ್ಪಾ ಸಿವ ಸಂಕರ ಮಾದೇವಾss..ಯಂದು ಥೆಳಗೇರಿಗಳೆಲ್ಲ ಮಮ್ಮಲನ ಮರುಗುತ ಸುಮ್ಮಕ ಕುಂತಿರಲಿಲ್ಲ.. ವಂದಲ್ಲಾ ವಂದು ಮನೆಯಿಂದ ವಬ್ಬರಲ್ಲಾ ವಬ್ಬರು ಬರೋದು, ಸಮಾಧಾನದ ನಾಕು ಮಾತಾಡೋದು, ಹೋಗೋದು ಮಾಡತಲಿದ್ದರು.

ನೂರೊಂದು ದಿವಸಗಳ ಪರ್ಯಂತ ವಂದಗುಳು ಬಾನ ಮುಟ್ಟದೆ, ವಂದು ಗುಟುಕು ನೀರು ಕುಡಿಯದೆ ವುಪಾಸಯಿದ್ದು ಮಳೆ ಸುರಿಸಿ ನೂರೆಲ್ಡನೇ ದಿವಸದಲ್ಲಿ ಕಣ್ಣು ಮುಚ್ಚಿದ ಮಹಿಮಾನ್ವಿತೆಯಾದ ಲಚುಮವ್ವನ ತೋಪಿನ ಕಡೆಯಿಂದ ಜಡೆತಾತನು, ಕರೆಕುರಿಯಪ್ಪ, ಕೆಂಗುರಿಯಪ್ಪಾವಧೂತರೊಂದಿಗೆ ತಿಪ್ಪಯ್ಯ, ಗಾದಯ್ಯ, ಮೋದಯ್ಯರೇ ಮೊದಲಾದ ಸಿಸು ಮಕ್ಕಳೊಂದಿಗೆ ಯೇಕತಾರಿ ನುಡಿಸುತ್ತ, ಜಗದಂಬೆಯ ಗುಣಗಾನ ಮಾಡುತ್ತ ಬಂದು ವಸ್ತಿಯದುರು ಮಂಡೆಕಾಲೂರಿ ಕುಂತು "ಅಯ್ಯಾ ಮೋಬಯ್ಯಾ, ಸಾಂಬವಿಗೆ ನೀನು ನಿನ್ನ ಸರೀರವನ್ನು ಬಿಡದಿ ಮಾಡಿಕೊಟ್ಟಿರುವಿರಿ. ನೀನು ಸಾಮಾನ್ಯನಲ್ಲ.. ನೀನೇ ಸಾಂಬವಿ, ಸಾಂಬವಿಯೇ ನೀನು" ಯಂದು ತಿಳಿದು ಸಣಮಾಡುತ್ತಿದ್ದೇನೆಂದು ವುದ್ದಂಡ ಪ್ರಣಾಮ ಸಲ್ಲಿಸಲು ಸಿಸುಮಕ್ಕಳು ಸಿವನ್ನಾಮ ಪಾರೊತಿ ಪತಿ ಹರ ಹರ ಮಾದೇವಾss ಯಂದು ಜಯಘೋಷ ಮಾಡಿದರು. "ದಮ್ಮಿನ ಮ್ಯಾಲ ದಮ್ಮೆಳೆದು ನಿನ್ನೊಳಗೆಯಿರೋ ತಾಯಿಗೆ ಅಮಲೇರಿಸು" ಯಂದು ನಾಕು ತೊಲಾ ತಂಬಾಕು ತುಂಬಿದ ಮೊಳಾವರೆವುದ್ದ ಯಿದ್ದ ಯಗ್ನಕುಂಡದ ಬಾಯಂತಿದ್ದ ಗುಡುಗುಡಿಯನ್ನು ವಸ್ತಿಯ ಕಯ್ಯೊಳಗಿಟ್ಟನು. "ಯಿಗಾ ಗಟಗಟಾಂತ ವಂದೇ ಗುಟುಕಿಗೆ ಕುಡುದು ತಾಯಿ ಸಾಂಬವಿಯ ಬಾಯಾರಿಕೇನ ತಣುಸು" ಯಂದಂದು ತನ್ನ ಬಗಲಿಂದ ಹೆಂಡ ತುಂಬಿದ್ದ ತತ್ರಾಣಿಯನ್ನು ತಗದು ಕೊಟ್ಟನು. ವಸ್ತಿಯು ವಂದುಸುರಿಗೆ ಚಿಲುಮೇನ ಖಾಲಿ ಮಾಡಿದ್ದು ತಡಾಗಲಿಲ್ಲ, ವಂದು ಗುಟುಕಿಗೆ ತತ್ತರಾಣೀನ ಖಾಲಿ ಮಾಡಿ ಹೋಬ್ಬ ಯಂದು ಡೇಗಿದ್ದು ತಡಾಗಲಿಲ್ಲ.. ಮತ್ತೆ ತಾಯಿಯ ಹಸುವು ತೀರಿಸಲಕಂತ ವಂದಗೊನೆ ಬಾಳೆಹಣ್ಣು, ವಂದು ಬಿಂದಿಗೆ ನೊರೆವಾಲು..

...ಜಡೆತಾತನು ಚಿಂತಾಕ್ರಾಂತಳಾಗಿ ಕೂಕಂಡಿದ್ದ ಜಗಲೂರೆವ್ವನ ಬಳಿಗೆ

ಬಂದು “ತಾಯೀ.. ನಿನ ಗಂಡ ಮೋಬಯ್ಯ ತನ್ನ ಸರೀರದೊಳಗೆ ಅದಾನೋ ಯಿಲ್ಲಮೋ.. ಆದರ ನೀನು ಜ್ವಾಪಾನ ಜತುನ ಮಾಡಿದ್ದ ಆ ಸರೀರದೊಳಗೆ ಸಾಂಬವಿಯಿರೋದಂತು ನಮಗ ಖಾತರಿ ಆಗಯ್ತೆ.. ಹಿರೇ ಮನುಶೋಳಾದ ನೀನು ವಸ್ತಿಯ ಸೇವೆ ಮಾಡಿಕೊಂಡಿರಬೇಕವ್ವಾ.. ಹಂಗ ಮಾಡಿದರ ನಿನಗ ಪುಣ್ಯ ಭಾಗ್ಯ ಪ್ರಾಪ್ತಿ ಆಗತಯ್ತವ್ವಾ.. ಯದೆಗುಂದ ಬ್ಯಾಡ ತಾಯಿ.. ಯಾ ಸರೀರ ಯಾರಿಗೆ ಸಾಸುವತ ಹೇಳು.. ನಾಳೆ ಹೋಗೋದು ಯಿಂದೇ ತಾಯಿ ಪಾದಕ್ಕರುಪಿತವಾದರ ಯಾಕ ಯಸನ ಮಾಡಬೇಕು, ನೀನು ನಿನಗಂಡನೊಟ್ಟಿಗೆ ಅಜರಾಮರವಾಗುತ್ತೀ.. ಸೂರ್ಯ ಚಂದ್ರಾಮರಿರೋಗಂಟಾ ಲೋಕ ನಿನ್ನ ಕೊಂಡಾಡ್ತದವ್ವಾ..” ಯಂದು ತುಂಬಿದ ಕೊಡದಂಗ ನಾಕು ಮಾತುಗಳನ್ನಾಡಿ ಹೋದನು.

ಕುಕ್ಕುರು ಗಾಲೀಲೆ ಕೂಕಂಡು ಗಂಡನ ಸರೀರವನ್ನು ದಿಟ್ಟಿಸುತಲಿದ್ದ ಆಕೆ ದುಸುರಾ ಮಾತಾಡದಿದ್ದರೂss

ಪಟ್ಟಣ ಯಂಬುದು ಪಟ್ಟಣವಾ.. ಹೆಜೇನು ಗೂಡಾ.. ಯಂಬಂತಾಗಿ ಬಿಟ್ಟಿತ್ತು ಸಿವನೆ. ಯಿನ್ನೊಂದೆಲ್ಡು ನಾಲಗೆಗಳನ ಆ ದೇವರು ತಮಗೆ ಕೊಟ್ಟಿದ್ದರ ಯೇಟು ಪಾಡಿತ್ತು ಅಂದಕಂತಾರೆ ಜನ ಸೀವನೆss.. ಮೋಬಯ್ಯನ ವರ್ತಮಾನವು ಸುಡೋ ತುಪ್ಪದುಂಡೆಯಂಗ ಹಿಂದಕ ಹೊಳ್ಳದಂಗ ಮುಂದಕೂ ಹೊಳ್ಳದಂಗ ವಬ್ಬೊಬ್ಬರ ಗಂಟಲ ಜೆಗೇವಲ್ಲಿ ಚಕ್ಕಳ ಮುಕ್ಕಳ ಹಾಕ್ಕೊಂಡು ಕುಂತು ಬಿಟ್ಟಿತ್ತು ಸೀವನೇ.. ಅವರ ಪಯ್ಕಿ, ವೋಬಯ್ಯನನ್ನು ನೋಡಿದೋರಿದ್ದರು, ನೋಡಿರದೋರಿದ್ದರು. ಅವ ಯಾರಪಾ ಅಂದರ.. ಅವ ಯಿವ ಯಿದ್ದಂಗ ಯಿದ್ದನಲ್ಲಾ. ಯಿವ ಅವ ಯಿದ್ದಂಗ ಯಿದ್ದನಲ್ಲಾ.. ಮೊಂಡು ಮೂಗು ಬದ್ನೆಕಾಯಂಗಯ್ತಲ್ಲಾ.. ಕವಳೆ ಹಣ್ಣಿನಂಗ ಕಣ್ಣು ಅದಾವಲ್ಲಾ.. ದವಡೆಲುವುಗಳು ಚಾಚಿಕೊಂಡು ಮುಂದಕ ಬಂದಾವಲ್ಲ.. ಹಣೆ ಬುರುಬುರಾಂತ ಮೂದಿ ಮುಂದ ಹೊಂಟಯ್ತಲ್ಲಾ.. ಕಸಬಾರಿಗೆ ಚುಂಗಿನೋಟು ಮೀಸೆ ಬುಟ್ಟಿದ್ನಲ್ಲಾ.. ಕುತ್ತಿಗೆ ಹಿಂದ ಚುಂಡೇನ ಕಟ್ಟಿರ್ತಿದ್ದನಲ್ಲಾ.. ನೂರು ಮಾತಾಡಿದೋರೆದುರು ಹತೇ ಹತ್ತು ಮಾತಾಡ್ತಿದ್ದನಲ್ಲಾ.. ಹತ್ತು ಮಾತಾಡಿದೋರೆದುರು ವಂದೇ ವಂದು ಮಾತಾಡ್ತಿದ್ದನಲ್ಲಾ.. ಮಕ್ಕು ಮರಿಮ್ಯಾಲ ಬಲು ಜೀವ ಯಿಟುಕೊಂಡಿದ್ದನಲ್ಲಾ. ಅಕ್ಕೋರಾ.. ತಂಗ್ಯೋರಾ ಅಂತಿದ್ದನಲ್ಲಾ.. ಚೀಗ ದೊಡ್ಡಮ್ಮಾ ಅಂತಿದ್ದನಲ್ಲಾ.. ಅಣ್ಣೋರ ತಮ್ಮೋರಾ ಅಂತಿದ್ದನಲ್ಲಾ.. ಹೊತ್ತುಟ್ಟುತ್ತಲೆ ಲಟಗೂ ಪುಟುಗೂ ಹೆಜ್ಜೆ ಹಾಕುತ ಅರಮನೆಗೆ ಕಡೇಕ ಹೋಯ್ತಿದ್ದನಲ್ಲಾ.. ಮುದೇಕಿ ಭಯ್ರಮ್ಮವ್ವನ

ಬಲಕ ಪಿಕದಾನಿ ಹಿಡಕೊಂಡು ನಿಂತಿರ್ತಿದ್ದನಲ್ಲಾ.. ಅವನೇ ಕಣರಪ್ಪಾ ಮೋಬಯ್ಯಾ ಅಂದರ.. ಮೋಬಯ್ಯಾ ಅಂದರ ಅವನೇ ಕಣರಪ್ಪಾ.. ಆತ ಬಲು ನಯ ನಾಜೂಕಿನವನಾಗಿದ್ದನಪ್ಪಾ.. ಸಣ್ಣವರನು ದೊಡ್ಡವರನಕಂತ, ದೊಡ್ಡವರನು ಯಿನ್ನೂ ದೊಡ್ಡವರನಕಂತ, ಭಯ ಅಂಬುದನು ಬಲಗಯ್ಲೊ, ಭೀತಿ ಅಂಬುದನು ಯಡಗಯ್ಲೊ ಯಿಟುಕೊಂಡು ನೆಲದ ಮ್ಯಾಲ ಯಿರುವೆ ಯಣಸೂತ ತಗ್ಗಿಸಿದ ತಲೇನ ಮ್ಯಾಲಕೆತ್ತದಂಗ ಯಿದ್ದನಲ್ಲಾ, ಅವನೇ ಕನರಪ್ಪಾ ಮೋಬಯ್ಯಾ ಅಂದರ.. ತನ ಯದ್ಯಾಗ ತ್ವಾಟಾನ ಯಿಟುಕೊಂಡಿದ್ದನಲ್ಲಾ.. ಬೆಣ್ಣೆವುಂಡೆ ನಾಚೋ ಹಂಗ ಮೆತ್ತಾನ ಮೆತ್ತಗಯಿರುತ್ತಿದ್ದನಲ್ಲಾ.. ದಯಾ ಅಂಬುದನು ಯಡಕಣ್ಣೊಳಗೂ, ದಾಕ್ಷಿಣ್ಯ ಅಂಬುದನು  ಬಲಗಣ್ಣೊಳಗೂ ಯಿಟುಕೊಂಡು ದಯನೇಸಿಯಾಗಿ ನೋಡುತ್ತಿದ್ದನಲ್ಲಾ.. ಕರದೋರ ಕಾಲೀsಗ ಕೆರಾss ಆಯ್ತಿದ್ದನಲ್ಲಾ.. ಬಾ ಯಂದೋರ ಮನೆಯ ಬಾಕಲಿಗೆ ತಾನಾಯ್ತಿದ್ದನಲ್ಲಾ.. ಕುರುಕುರೂಂತ ಸಂಗನೆ ಮಾಡೋರ ಕುಂಡಿ ಬುಡಕ ಚಾಪೆ ಆಯ್ತಿದ್ದನಲ್ಲಾ.. ಕಿವಿವುಳ್ಳೋರಿಗೆ ಬಾಯಿ ಆಯ್ತಿದ್ದನಲ್ಲಾ.. ಮಾಡೋರಿಗೆ ಕಯ್ಯಿ ಆಯ್ತಿದ್ದನಲ್ಲಾ.. ನಡೆಯೋರಿಗೆ ಕಾಲಾಯ್ತಿದ್ದನಲ್ಲ.. ಅವನೇ ಕನರಪ್ಪಾ ಮೋಬಯ್ಯಾ ಅಂದರ.. ಪುಣ್ಯಾತುಮ ಅಂದರ ಅವನೆ ಕನಪ್ಪಾ.. ಭೂಮ್ತಾಯಿಗೆ ಯಲ್ಲಿ ನೋವಾಗತಯ್ತೋ ಅನ್ನೋ ಹಂಗ ನಡದಾಡ್ತ ಇದ್ದನಲ್ಲಾ.. ವಂದಾಡಿದರ ಕಡಿಮೆ, ಯಲ್ಡಾಡಿದರೆ ಹೆಚ್ಚು ಯಂಬಂತೆ ಮಾತಾಡುತ್ತಿದ್ದನಲ್ಲಾ.. ಅವನೇ ಕನಪ್ಪಾ ಮೋಬಯ್ಯಾ.. ಹಿಂಗಾss ವಬ್ಬರು ಯಿನ್ನೊಬ್ಬರ ಯದೆಯೊಳಗೆ ಅವನ ಯಿಗ್ರಹ ಕೆತ್ತಿ ನಿಲ್ಲಿಸೋ ಪ್ರಯತ್ನ ಮಾಡುತ್ತಿದ್ದುದು ಯಲ್ಲಂದರಲ್ಲಿ ಸಿವ ಸಂಕರ ಮಾದೇವಾss..

ಸಾಂಬವಿ ಹಿಂಗವಳಾss ಹಂಗವಳಾ ಯಂಬ ಮೂರು ಪ್ರಸ್ನೆಗಳನ್ನು ತಮ್ಮೊಟಕೆ ತಾವು ಹಾಕಿಕೊಳ್ಳುತ್ತ, ಯದುರಾದವರನ್ನು ಯಿಚಾರಿಸುತ.. ಹಿಂಗಿರಬೌದಾ ಯಂದು ತಮಗೆ ತಾವು ವುತ್ತರ ಪಡಕೊಳ್ಳುತ, ತಮಗೆ ತಾವು ಸಮಾಧಾನ ಪಟ್ಟುಕೊಳ್ಳುತಾ ಗಳಿಗಳಿಗೆಗೊಂದೊಂದು  ವುಸುರು ಬಿತ್ತುತಾ ಮಂದಿ ತಮ್ಮೊಳಗೆ ತಾವು ಕಲ್ಲಾವುಲ್ಲಿಯಾದರು ಸಿವಸಂಕರ ಮಾದೇವಾss..

ಸಾಗರ ಸಮುದ್ರವನ್ನು ಸೇರಿದಂತೆ, ಸಮುದ್ರನದಿಯನ್ನು ಸೇರಿದಂತೆ, ನದಿ ಹೊಳೆಯನ್ನು ಸೇರಿದಂತೆ, ಹೊಳೆ ಹಳ್ಳವನ್ನು ಸೇರಿದಂತೆ, ಹಳ್ಳ ಹನಿಯೊಳಗೆ ಆಸ್ರಯ ಪಡೆದಂತೆ ಅಗಾಧ ವಂತಿಕೆಯಾದ ಆ  ತಾಯಿ ಅವನ ಘಟಗು ಸರೀರದೊಳಗೆ ಆಸ್ರಯ ಪಡೆದಿರಬೌದಾ, ಯಂದು ಮಂದಿ ತಮಗೆ

ತಾವು ಅಲವುಕಿಕವಾಗಿ ಅಂದನಕಂತಿದ್ದುದು ಸಿವ ಸಿವಾ..

ಮೋಬಯ್ಯನು ತಾನು ಸರೀರದೊಳಗದಾನೋ ಯಿಲ್ಲಮೋ? ಯಂಬ ಪ್ರಸ್ನೆ ವಬ್ಬೊಬ್ಬರ ಮುಂದ ನೆಲ ಮುಗುಲಿಗೇಕಾಗಿ ನಿಂತುಬಿಟ್ಟಿತು. ಸಮುದ್ರದೊಳಗೆ ನದಿ ನಷ್ಟವಾದಂಗೆ, ನದಿವಳಗೆ ಹೊಳೆ ನಷ್ಟವಾದಂಗೆ, ಹೊಳೆವಳಗೆ ಹಳ್ಳ ನಷ್ಟವಾದಂಗೆ, ಹಳ್ಳದೊಳಗೆ ಬಿಂದು ನಷ್ಟವಾದಂಗೆ, ಬೀಜ ರುಕ್ಷದೊಳಗೆ ನಷ್ಟವಾದಂಗೆ ಆತನು ತನ್ನ ಸರೀರದಿಂದ ನಷ್ಟ ಹೊಂದಿರಬೌದಾ? ತನ್ನ ಸರೀರದಿಂದ ಪರಿತ್ಯಕ್ತನಾಗಿರೋ ಮೋಬಯ್ಯನು ಯೀಗೆಲ್ಲಿರಬೌದು? ಅಲ್ಲಿರಬೌದು? ಯಿಲ್ಲಿರಬೌದಾ? ಯಲ್ಲಲ್ಲಿ ಯಿರಬೌದಾ? ಯಂದು ಮುಂತಾಗಿ ಯೋಚಿಸುತ್ತಾ.. ಯೋಚಿಸುತ ಭಯ ಭೀತರಾಗುತ್ತಿದ್ದುದು ಸಿವ ಸಂಕರ ಮಾದೇವಾss..

ವಟ್ಟಲ್ಲಿ ಪಟ್ಟಣಕ್ಕೆ ಪಟ್ಟಣವು ವಂದು ಬಾಯಾಗಿ, ವಂದು ಕಿವಿಯಾಗಿ ವಂದು ಬವಕೆಯಾಗಿ ಮಾರುಪಾಡಾಗುತ್ತಿರುವಾಗ್ಗೆ...

* * * *

ಅತ್ತ ಕಡಪ ಯಂಬ ಪಟ್ಟಣಕ್ಕೆ ಯಂಟು ಗಾವುದ ದೂರದಲ್ಲಿರೋ ರಾಚೋಟಿ ಯಂಬ ಹೋಬಳಿ ಮಟ್ಟದ ಗ್ರಾಮವುಂಟು. ಆ ಗ್ರಾಮದ ವಂದು ಮೂಲೆಯ ವಂದು ಮುರುಕು ಝೋಪಡಿಯಲ್ಲಿ ಕಿಷ್ಣಯ್ಯ, ಚಿನ್ನಮ್ಮಯಂಬ ದಂಪತಿಗಳಿದ್ದರು. ಅವರಿಗೆ ವಂಬತ್ತು ಮಂದಿ ಮಕ್ಕಳು. ಕಿಷ್ಟಯ್ಯನು ಸಣಪುಟ್ಟ ಕಳ್ಳತನ ಮಾಡಿ ಸಂಸಾರ ಸಲಹುತ್ತಿದ್ದನು. ಥಾಮಸು ಮನ್ರೋ ಸಾಹೇಬನು ರಾಚೋಟಿ ಜಮೀಂದಾರನಾದ ಕಿರುಕಲ ಕೋನ ರೆಡ್ಡಿಯ ಗಾದೆಯನ್ನು ಕಬಜಾ ಮಾಡಿ ಆತನ ವಡೆತನದಲ್ಲಿದ್ದ ಮೂರು ಸಾಯಿರದಾಯಂಟುನೂರಾ ಮುವ್ವತ್ತೊಂದು ಯಕರೆ ಜಮೀನಿನ ಪಯ್ಕಿ ಯಡ್ಡೂವರೆ ಸಾಯಿರ ಯಕರೆ ಭೂಮಿಯನ್ನು ಅದೇ ಗ್ರಾಮದ ಭೂಹೀನರಿಗೆ ಹಂಚಬೇಕೆಂದು ತೀರುಮಾನಿಸಿದನು. ಅಂಥ ಭೂಹೀನರ ಪಯ್ಕಿ ವಬ್ಬನಾಗಿದ್ದ ಕಿಷ್ಣಯ್ಯನು ಕಲೆಟ್ರುಸಾಹೇಬನೆದುರು ಯಿನಯ ಪೂರಕವಾಗಿ ನಿಂತು “ಅಯ್ಯಾ, ನಾನು ಮಕ್ಕಳೊಂದಿಗ ನಿದ್ದೇನೆ.. ದುಡಿದುಂಬಲಕ ಭೂಮಿಯಿಲ್ಲದ ಕಾರಣಕ ಕಳ್ಳತನ ಮಾಡಿ ಸಂಸಾರ ಸಲುವುತ್ತಿದ್ದೇನೆ.. ತಾವು ನನಗೂ ವುಳುಮೆ ಮಾಡಲಕ ಜಮೀನು ಮಂಜೂರು ಮಾಡಿದಲ್ಲಿ ಕಳ್ಳತನ ಬಿಟ್ಟು ಮ್ಯಯಿ ಮುರುದು ದುಡಿವುತ ಗವುರವದಿಂದ ಬದುಕುವೆನು” ಯಂದು ಅಹವಾಲು ಸಲ್ಲಿಸಿದನು. ಅದನ್ನು ಕೇಳಿ ಮನ್ರೋ ಸಾಹೇಬನ ಕರುಳು ಕರಗಿತು. ಹಂಗಿದ್ದರೆ ಸರೆಯಂದು ಕುಂತ

ಬಯಟಕ್ಕೀಲೆ ಅವನಿಗೆ ಯಲ್ಡು ಕೂರಿಗೆ ಜಮೀನನ್ನು ಮಂಜೂರು ಮಾಡಿದನು. ಆಗ ಅವನ ಹೆಂಡತಿ ಯೇಳು ತಿಂಗಳ ಬಸುರಿಯಿದ್ದಳಲ್ಲ.. “ಅಯ್ಯಾ ದೊರೆಯೆ. ನಿನ್ನಿಂದ ನಾನು ವುದ್ಧಾರವಾದೆನು. ಗಂಡುಕೂಸು ಹುಟ್ಟಿದಲ್ಲಿ.. ಅದಕ್ಕೆ ನಿನ್ನ ಹೆಸರನ್ನು ಯಿಡುತ್ತೇನೆ.. ಆಗ್ಗೆ ನೀನು ತೊಟ್ಟಿಲ ಕಾರ್ಯಕ್ಕೆ ಬಂದು ನನ್ನ ಮಗನಿಗೆ ಆಸುರವಾದ ಮಾಡಬೇಕು” ಯಂದು ಯಿನಂತಿ ಮಾಡಿಕೊಂಡನು. ಅದರಂತೆ ಮುಂದೊಂದಿನ ಅವನಿಗೆ ಗಂಡುಕೂಸಾತು. ಆ ಕೂಡಲೆ ಕತ್ತೆಯೊಂದನ್ನು ಬಾಡಿಗೆ ಪಡೆದು ಅದರ ಮ್ಯಾಲ ಕುಂತು ಕಡಪ ಪಟ್ಟಣವ ತಲುಪಿ ಸಾಹೇಬನಿಗೆ ಸಾಂಪ್ರತು ಸುದ್ದಿ ಮುಟ್ಟಿಸಿದನು.. ಕೊಟ್ಟ ಮಾತಿನಂತೆ ಥಾಮಸು ಮನ್ರೋ ಸಾಹೇಬನು ರಾಚೋಟಿಯ ಆ ಬಡ ಕಿಷ್ಣನ ಮಗನ ತೊಟ್ಟಿಲು ಕಾರ್ಯದಲ್ಲಿ ಪಾಲ್ಗೊಂಡಿರುವಾಗ್ಗೆ.. ಅಯ್ನೋರು ಆ ಕೂಸಿಗೆ ಮನ್ರೋಪ್ಪನೆಂದು ನಾಮಕರಣ ಮಾಡುತ್ತಿರುವಾಗ್ಗೆ...

ಗೂಢಾಚಾರರಾದ ಗುತ್ತೆಪ್ಪ ಮತ್ತಾತನ ಸೋದರರು ನೀಡಿದ ಪತ್ತರವನ್ನು ಮೋದಿಸಿ ಕೆಂಡಮಂಡಲ ವಾದ ಜರಿಮಲೆಯ ಜಗದಪ್ಪ ನಾಯಕನು ನಿಚ್ಚಾಪುರದ ಬಾಲಪ್ಪನಾಯಕನನ್ನು ಮಿತ್ರದ್ರೋಹಿ, ಪರಮ ಘಾತಕ, ಅಮವಾಸೆ ವಳಗಾಗಿ ನಿನ್ನ ರುಂಡವನ್ನು ಚೆಂಡಾಡಿ ತಂದು ಜರಿಮಲೆಯ ಅಗಸೆ ಬಾಗಿಲಿಗೆ ಕಟ್ಟಿಸುವೆನೆಂದು ಘೋರ ಸಪಥ ಮಾಡುತ್ತಿರುವಾಗ್ಗೆ....

ತಾಸುಗಳ ಪರ್ಯಂತರ ವಂದರ ಮ್ಯಾಲೊಂದು ಪ್ರಸ್ನೆಗಳನು ಹಾಕಿ ಯಿಚಾರಿಸಿದ ನಂತರ ಜೊನ್ನಗಿರಿಯ ರಾಜನಾದ ಕದಿರೆಪ್ಪನಾಯಕನು ಮದ್ದಿಕೇರಿಯ ಸಂತರಸ್ತರನ್ನು ತನ್ನ ಸಯ್ನಕ್ಕೆ ಸೇರಿಕೊಳ್ಳುತ್ತಿರುವಾಗ್ಗೆ....

ಯಿತ್ತ ಕುದುರೆಡವು ಪಟ್ಟಣದ ಅರಮನೇಲಿದ್ದ ರಾಜವಾತೆ ಭಯ್ರಮಾಂಬೆಯ ಕಳುವಿದ್ದ ವಂದೆಲ್ಡು ಮಂದಿ ಸಯ್ನಿಕರು ಥೆಳಗೇರಿಯಿಂದ ಹೊತ್ತು ತಂದ ಯಿದ್ಯಾಮಾನಗಳನ್ನು ಕಿವಿಯಾರೆ ಕೇಳಿ ತಿಳಿದು ಭ್ರಮಾಧೀನಳಾಗಿ ರೆಟ್ಟೇಲಿರದಿದ್ದ ರವುಸವನ್ನು ವಡಲೊಳಗೆ ತಂದುಕೊಂಡು “ಯಲಮೋ.. ಮೋಬಯ್ಯನೇ.. ರಾಜಾಗ್ನೆಯನ್ನು ದಿಕ್ಕರಿಸಿದೆಯಾ.. ಮೂರು ತಲೆಮಾರು ದುಡಿದರೂ ತೀರದಷ್ಟಿರೋ ಸಾಲದ ರುಣವನ್ನು ಮರೆತೆಯಾ? ನಿನ್ನ ಯಕಃಶ್ಚಿತ್ ಮಂಯ್ನೊಳಗೆ ಸಾಂಬವಿ ಹೊಕ್ಕೊಂಡಿರುವಳೆಂದು ಕಪಟ ನಾಟಕವನ್ನಾರಂಭಿಸಿರುವೆಯಾ.. ನಿನಗೆ ತಕ್ಕ ಶಾಸ್ತಿ ಮಾಡಿಸುತ್ತೇನೆ ನೋಡುತ್ತಿರು.. ಮತ್ತೆ ನಿನ ಕಯ್ಲಿ ಪಿಕದಾನಿ ಹಿಡಿಸದಿದ್ದರೆ ನಾನು ರಾಜ ಮಾತೆಯೇ ಅಲ್ಲ” ಯಂದು ಮನದೊಳಗೆ ಸಪಥ ಮಾಡುತ ಹೊರಗಡೆ ಕೇಳಿಸುವಂತೆ

"ಹೊಹೋಯ್ ಕಾಟಯ್ಯೋ" ಯಂದು ತನ್ನ ಸವತಿ ಮಗನನ್ನು ಕೂಗಿದಾಗ್ಗೆ....

ಕಡದಮ್ಮನ ಹಳ್ಳದ ಯಡ ದಂಡೆಗುಂಟ ಬೆಳೆದಿದ್ದ ಬಾರೆ, ಕಾರೆ, ಕವಳೆ ಗಿಡಪೊದೆಗಳ ಮರೆಯಲ್ಲಿ ಬಹಿರ್ದೆಸೆಗೆ ಕೂಕಂಡಿದ್ದ ಕಾಟಯ್ಯ ನಾಯಕನು ತಿಣುಕುತ್ತ ಪ್ರಸವ ಯೇದನೆಯನ್ನು ಅನುಭವಿಸುತ್ತಿದ್ದನು. ಅದು ತನ್ನ ತಂದೆ ಪೆದ ಬೊಮ್ಮಯ್ಯ ನಾಯಕನಿಂದ ಬಳುವಳಿಯಾಗಿ ಬಂದಿರುವಂಥಾದ್ದಾಗಿತ್ತು. ಆತನಂತೆ ತಾನೆಲ್ಲಿ ಅಕಾಲಮರಣಕ್ಕೆ ತುತ್ತಾಗುವೆನೋ ಯಂದು ಹೆದರುತ್ತಿದ್ದನಾದರೂ ಯಿನ್ನೊಬ್ಬರಿಗೆ ತನ್ನ ವ್ಯಾದಿಯ ಮರುಮ ಬಿಟ್ಟುಕೊಟ್ಟಿರಲಿಲ್ಲ. ಅವರಿವರ ಮೂಲಕ ಮಾಹಿತಿ ಪಡಕೊಂಡು ದೂರದ ಜಾಟಗೆರೆಗೆ ಮಾಯಾದ ಯೇಸದಲ್ಲಿ ಹೋಗಿ ಕಾಸುಲ ಕನ್ನಿರವ್ವ ಯಂಬ ವಯ್ದೆ ಪಂಡಿತೆ ಕಯ್ಯ ಕುಡುಗೋಲಿಂದ ಮುಳ್ಳು ಕೊಯ್ಯಿಸಿಕೊಂಡು ಬಂದಿದ್ದ. ವಯ್ದಾಚ್ಚೇ ಕಾರ್ರ್ಯಾಂತೇ ಅಪ್ರಯೋಜಕಾಹ ಯಂಬ ಮಾತಿನಂತೆ ತನ್ನನ್ನು ಮರೆತು ಬಿಟ್ಟನಲ್ಲಾ, ಕೊಡೋದನು ಕೊಡಲಿಲ್ಲಾಂತ ಆಕೆಯು ತನ್ನ ಬಳಿಗೆ ಬಂದು ಹೋಗುವವರಿಗೆಲ್ಲ ಹೇಳಿ ತನ್ನ ಬಾಯಿಯ ಕಡಿತ ತೀರಿಸಿಕೊಂಡಿದ್ದಳು. "ಯಿಂಥಾ ಅನುವಾದ ಬ್ಯಾನೆ ಯಿಟು ಕಂಡೀ ಯಂತಲ್ಲಾ.. ಮಾಡಿಕೊಂಡ ಹೆಂಡ್ತಿಯಾದ ನಾನೇ ಅದ್ನ ನೋಡಿಲ್ಲಾಂದರ ಹೆಂಗೆ.. ತೋರ್ರ್‍ಸೊ.. ತೋರ್ರ್‍ಸು" ಅಂತ ಕಿರಿಯ ಹೆಂಡತಿಯೂ, ಜಮ್ಮೋಬನಹಳ್ಳಿ ವತನದಾರ ಬೋಸನಾಯಕನ ಮಗಳೂ ಆದಂಥ ತಿರುಮಲಾಂಬೆಯು ಪಟ್ಟು ಹಿಡಿಯಲು ಆತನು ಹಳ್ಳೆಣ್ಣೆ ದೀಪದ ಬೆಳಕಲ್ಲಿ "ತಗಾ ನೋಡಿಕ್ಯಾ" ಯಂದು ತೋರಿಸಿ ಬಿಟ್ಟನು. ಮುಖ ತಗ್ಗಿಸಿ ನೋಡುತ್ತಲೆ ಆಕೆ "ಅಯ್ಯಯ್ಯೋಽಗಬ್ಬುನಾಥ.. ಥೂ ನಿನ್ನ" ಯಂದು ಆಕೆ ಅಂದು ದೂರವಾದದ್ದೇ ಕಡೆ.. ವುಳಿಕೆ ಹೆಂಡರು ಸುಮ್ಮನಿದ್ದಾರೆಯೇ.. "ಯಾಕೆ ತಿರುಮಲೀ.. ಯೀಗ್ಯಾಕ ದೂರ ಮಕ್ಕಂತದೀ"ಯಂದು ಪೀಡಿಸದಕ್ಕಿದ್ದು ಆಕೆಯು "ನಾನೊಲ್ಲೆರವ್ವಾ.. ಬೇಕಾರ ನೀವೇ ಹೋಗಿ ಸುಖ ಪಡಕಳ್ರೀ.." ಯಂದು ಹೇಳಿಬಿಟ್ಟಳು. ಯಲ್ಲಾರು ಹೋಗೋದು ನೋಡೋದು, ಮುಖ ಸಿಂಡರಿಸಿಕೊಳ್ಳೋದು ಮಾಡತೊಡಗಿದರು. "ನೀನು ಬಾರೆ ಜಗದಂಬಾ.. ನೀನು ಬಾರೆ ಚಲುವಾಂಬಾ.. ನೀನು ಬಾರೆ ಲಕುಮಾಂಬ" ಯಂದು ಆತನು ಕರೆಯುತ್ತಿದ್ದುದಕ್ಕೆ ಅವರೆಲ್ಲಾ ವಕ್ಕೊರಲಿನಿಂದ "ನೀನ್ಯಾವತ್ತು ನಿನ ವ್ಯಾದೀನ ವಾಸಿ ಮಾಡ್ಕೊಂಡು ಬರ್ತಿಯೋ ಅಂದೇ ನಾವು ನಿನ ಜೋಡಿ ಮಲಿಕ್ಕೆಂಬೋದು" ಯಂದು ಕೊಸರಿ ನುಡಿದು ಬಿಡಲು ಆತನು "ಯಲಮೋ ಥಾಮಸು ಮನ್ರೋ.. ನಮ್ಮ ರಾಜಸತ್ತೇನ ಕಸ್ಕೊಂಡಿದ್ದಲ್ಲದೆ ನನ ಹೆಂಡ್ರೂನು

ನನ್ನಿಂದ ದೂರ ಮಾಡಿಬಿಟ್ಟೆಲ್ಲಾ.. ಮುಂದ ನಿನಗೂ ಯಿಂಥ ರ‍್ವಾಗ ಬಂದು ನಿನ್ನೆಂಡ್ರೂನಿನ್ನಿಂದ ದೂರಾಗ್ಲಿ"ಯಂದು ದೂರುವಾಸ ಮುನಿಯಂತೆ ಸಾಪ ಹಾಕಿದನೇ ಹೊರತು ತನ್ನ ಹೆಂಡರನ್ನು ವಾಚಾಮಗೋಚರವಾಗಿ ಬಯ್ಯುವ ಸಾಹಸಕ್ಕೆ ಮಾತ್ರಹೋಗಲಿಲ್ಲ.. ರಾಜಸತ್ತೆ ನಷ್ಟಗೊಂಡ ಮ್ಯಾಲ ಅವರು ತಮ ತಮ್ಮ ತವರುಮನೆಗಳಿಂದ ವಂದಲ್ಲಾ ವಂದು ಬೆಲೆಬಾಳುವ ವಸ್ತುಗಳನ್ನು ತರುತ್ತಿದ್ದುದೇ ಕಾರಣ. ದೋಪರಯುಗದಲ್ಲಿ ದ್ರವುಪದಿಗೆ ಅಯ್ದು ಮಂದಿ ಗಂಡರಿದ್ದರೆ ಕಲಿಯುಗದಲ್ಲಿ ತನಗೆ ಅಯ್ದು ಮಂದಿ ಹೆಂಡತಿಯರಿರುವ ಕಾರಣಕ್ಕೆ ತನ್ನನ್ನು ತಾನು ಪಂಚಾಲನೆಂದು ಕರೆಯಿಸಿಕೊಳ್ಳುತ್ತಿದ್ದ ಆತನು ಮುಂದೊಂದು ದಿವಸ ಪಗಡೆಯಾಟ ಆಡಲಕೆಂದು ಸಿಂಗನಮಲ ಯಂಬ ಗ್ರಾಮಕ್ಕೆ ಹೋಗಿದ್ದನು. ಅಲ್ಲಿ ಕುಂತಲ ಸೀಮೆ ಮಟ್ಟದ  ಪಗಡೆ ಪಂದ್ಯಾಟವು ಯೇರು ಪಾಟಾಗಿತ್ತು. ಕುಶಲ ಆಟಗಾರನಾದ ಪಾಂಚಾಲನ ಯದುರಾಳಿಯು ತನ್ನ ಸೊಂಟದಿಂದ ವಂದು ಪಾತ್ರೆತೆಗೆದು ಪಣ ವಡ್ಡಿದನು. ಅದನ್ನು ನೋಡಿ ನಗಾಡುತ ಪಂಚಾಲನು "ಯಿದ್ಯಾವ ಸೀಮೇದು" ಯಂದು ಕೇಳಿದ್ದಕ್ಕೆ "ಯಿದು ಸಾಮಾನ್ಯ ಪಾತ್ರೆಯಲ್ಲ.. ಯಿದು ಕ್ರುತಯುಗ ಕಾಲದಲ್ಲಿ ಹರಿಶ್ಚಂದ್ರನು ಶವುಚಕ್ಕೆ ಬಳಸುತ್ತಿದ್ದ.. ತ್ರೇತಾಯುಗದಲ್ಲಿ ರಾಮನೂ, ದ್ವಾಪರದಲ್ಲಿ ಕವುರವರೂ ತಮ್ಮ ಶವುಚ ಕಾರ್ಯಕ್ಕೆ ಬಳಸುತ್ತಿದ್ದರು, ಕಲಿಯುಗದಲ್ಲಿ ಗಂಗ, ಕದಂಬ, ಚಾಲುಕ್ಯರಿಂದ ಹಿಡಿದು ವಿಜಯನಗರವನ್ನಾಳಿದ ರಾಜರು ಯಿದರೊಳಗಿನ ನೀರಿನಿಂದ ತಮ ತಮ್ಮ ದ್ವಾರಗಳನ್ನು ತೊಳೆದುಕೊಂಡು ಆರೋಗ್ಯ ಸಂಪಾದಿಸಿ ಕೊಂಡಿದ್ದಾರೆ.. ಯೇನೆಂದು ತಿಳಿದುಕೊಂಡಿರುವಿ ಮೂಢಾಃ" ಯಂದು ಜಯ್ಮುನಿವರೆಗೆ ಮೋದಿಕೊಂಡಿದ್ದ ಆತನು ಯಿವರಿಸಿದನು. ಆಗಿದ್ದು ಯೀತನು "ಸರೆ ಹಂಗಯ್ತೇನು ಯಿದ್ರಸಮಾಸ್ಯಾರss.. ಯಿದು ನಿನ್ನತ್ರಹೆಂಗ ಬಂತು?" ಯಂದು ಪ್ರಸ್ನೆ ಹಾಕಿದ್ದಕ್ಕಾತನು "ನಮ್ಮ ಮನೆತನ ಯಂಥಾದ್ದು? ಯೇನುಕಥೆ? ನಾವು ಗುರ‍್ರಂ ಮನೆತನದವರು.. ನಮ್ಮ ಗಿರಿ ಮುತ್ತಾತ ಹಯವದನನು ದೂರ ದೂರದ ದೇಶಗಳಿಂದ ಸಾವಿರ ಗಟ್ಟಲೆ ಜಾತಿ ಕುದುರೆಗಳನ್ನು ತರಿಸಿ ಮೋರಂಗಲ್ಲನ್ನಾಳುತ್ತಿದ್ದ ಕಾಕತೀಯ ರಾಜರಿಂದ ಹಿಡಿದು ದಖ್ಖನದ ಮಲಬಾರಿ ಅರಸರವರೆಗೆ ಸರಬರಾಜು ಮಾಡುತ್ತಿದ್ದನು. ಪತ್ತಿಕೊಂಡವನ್ನಾಳುತ್ತಿದ್ದ ವೀರ‍್ರಾಜು ಪಾರಿತೋಷಕ ರೂಪದಲ್ಲಿ ಯಿದನ್ನು ಕೊಟ್ಟಿದ್ದನು.. ತಿಳಿತಾ.. ನೀನು ನಗಾಡಿದಲ್ಲಿ ಯಿದರೊಳಗಿರುವ ಶಕ್ತಿ ಮಾಯವಾದೀತು, ಯಚ್ಚರಿಕೆ, ಯಿದರೊಳಗೆ ವಾಯುರೂಪದಲ್ಲಿ ವಾಸಿಸುತ್ತಿರುವ ಅಶ್ವಿನಿ ದೇವತೆಗಳ ಕೋಪಕ್ಕೆ

ಗುರಿಯಾಗುವಿ" ಯಂದು ಹೇಳಿದನು. ಯಂದಿನಂತೆ ಆತ ಸೋತನು, ಯೀತ ಗೆದ್ದನು.

ಗುಟ್ಟಾಗಿ ತಂದು ತನ್ನ ಕಬ್ಬಿಣ ಪೆಠಾರಿಯೊಳಗೆ ಬಚ್ಚಿಟ್ಟನು ಪಂಚಾಲನು. ತಿಪ್ಪೆಯೊಳಗ ಹೂತರೂ ವಜ್ರಹೆಂಗ ಪ್ರಕಾಸಮಾನವಾಗಿ ಹೊಳೆವುದೋ, ಅದೇ ರೀತಿ ಆ ಪಾತ್ರೆಯು ಹೆಂಗೋ ಯಲ್ಲಾರಿಗೂ ತನ್ನ ಪರಿಚಯವನ್ನು ಮಾಡಿಕೊಂಡಿತು.. ಮುಖ್ಯವಾಗಿ ಆತನ ಹೆಂಡರಿಗೆ.. "ನಮ್ಮಯ್ವರನ್ನು ಮದುವೆಯಾಗಿ ಪಂಚಾಲಯೆಂಬುವ ಬಿರುದನ್ನು ಧರಿಸಿರೋ ನೀನೇ ನಮ್ಗೆದ್ರೋಅ ಬಗೆಯುವುದೇನು? ನಮಗೂ ಅದನ್ನು ವುಪಯೋಗ ಮಾಡೋ ಹಕ್ಕುಂಟು.. ಕೊಡು ಕೊಡು" ಯಂದು ಅವರೆಲ್ಲ ಕಲೆಬಿದ್ದರು. ಯೀ ಪರಪಂಚದೊಳಗೆ ತಾನೋರ್ವನೇ ಆರೋಗ್ಯದಿಂದ ಕಂಗೊಳಿಸುತ್ತಿರಬೇಕೆಂಬ ಯಿಚ್ಚೆವುಳ್ಳವನಾದ ಆತನು "ಪಾಲಿನ ರಾಜ್ಯವನ್ನು ಬೇಕಾದರೆ ಕೊಟ್ಟೇನು. ಆದರೆ ಅದನು ಮಾತ್ರಕೊಡಲಾರೆ" ಯಂದು ಖಡಾಖಂಡಿತವಾಗಿ ಹೇಳಿಬಿಟ್ಟನು. ತನ್ನ ಪ್ರಾಣ ಪದಕದಂತಿರೋ ಗೆಳೆಯರಾದ....

ಅಮಾತ್ಯ ಗವುಡಿಕೆ ಸಣಸಿದ್ದಪ್ಪ, ಭಂಡಾರಿ ಸನ್ಯಾಸಪ್ಪ "ಕಾಟಯ್ಯ ನಾಯಕsss'' ಯಂದು ಕಡದಮ್ಮನ ಹಳ್ಳದ ಬೇಲಿ ಸಾಲೊಳಗೆ ಬೆದಕಾಡುತ್ತಿದ್ದಾರೆ. "ಯಲ್ಲದೀ ದೊರೆsss" ಯಂದು ಕೂಗುತ್ತಿದ್ದಾರೆ.. ಕಾಟಯ್ಯನು ಅವರ ಕಣ್ಣಿಗೆ ಬೀಳಬಾರದೆಂದು ಪೊದೆಯಿಂದ ಪೊದೆಗೆ ಸರಿದಾಡುತ್ತಿ ದ್ದಾನೆ.. ಯಿನ್ನು ಸರದಾಡಲಿಕ್ಕಾಯ್ತಾಯಿಲ್ಲ.. ಪ್ರಸವ ಯೇದನೆ ಪರಾಕಾಷ್ಠೆ« ತಲುಪಿ ಬಿಟ್ಟು ಹ್ಹಾ.. ಯಂದು ಆತನು ತಿಣುಕಿದ ಸಬುಧವು ಗಿಡಮರಗಳ ಯಲೆ ಯಲೆಗೆ ತಾಕಿ ಪ್ರತಿಧ್ವನಿಸಲು..

ಅವರು ಸುಯ್ಯಂತ ತಲುಪಿ "ಯೇನು ದೊರೆ? ನಾವು ಮಾಡಿರೋ ಪಾಪವಾದರೂ ಯೇನು? ನಮ್ಮನ್ನು ಬಿಟ್ಟು ನೀನೊಬ್ನೆ ಹೊರಕಡೀಕ ಬಂದೀಯಲ್ಲ.." ಯಂದು ಆತನ ಮುಂದ ಅಲ್ಲಲ್ಲಿ ಕೂತುಕೊಳ್ಳಲು ಅದೇ ಪುವ್ವಲ ರಾಜಾಸ್ತಾನವಾಗಿ ಮಾರುಪಟ್ಟಿತು.. ಅವರ‍್ಯಾರಿಗೂ ವಂದೇ ವಂದು ಹನಿ ನೀರು ವುಳಿಯದಂತೆ ತೊಳೆದುಕೊಂಡು ನಂತರ ಅದನ್ನು ಸೊಂಟದ ಬಾಳೆ ಕಾಯಿಯೊಳಗೆ ಮರೆಮಾಚಿಕೊಂಡು ಆತನು ರಾಜಗಾಂಭೀರ್ಯದಿಂದ "ಯೇನುರಯ್ಯಾ.. ನನ್ನನ್ನು ಹುಡುಕಿಕೊಂಡು ಯಾಕ ಬಂದೀರಪ್ಪಾ? ಯೇನಾದರೂ ರಾಜಕಾರಣ ವುಂಟೇನು" ಯಂದು ಮಂತರಾಲೋಚನೆಗೆ ನಾಂದಿ ಪಲುಕಿದನು..

ಆಗ ಅವರ ಬಾಯಿಯಂಬ ಬೀಜ ಮೊಳಕೆ ಹೊಡೆಯಲು ಅದರ ಸುಳಿ ವಳಗೆ ಮೋಬಯ್ಯ ಯಂಬ ಆಕ್ರುತಿಯು ರುದ್ಗೋಚರವಾತು ಸಿವಸಂಕರ ಮಾದೇವಾss..

"ಹ್ಞಾಂ.. ವಬ್ಬ ಯಕಃಶ್ಚಿತ್ ಪಿಕದಾನಿ ಹಿಡಿಯೋನು ರಾಜಾಗ್ನೆಯನ್ನು ದಿಕ್ಕಾರ ಮಾಡಿದನೇನು? ಅವನಿಗೆ ತಕ್ಕ ಸಾಸ್ತಿ ಮಾಡಬೇಕು" ಯಂದು ಗುಡು ಗುಡಿಸುತ್ತ ಮುಂದ ಮುಂದ ಕಾಟಯ್ಯ.. ಹಿಂದ ಹಿಂದ ಆ ಮಾನವ ರೂಪಿ ಅರಮನೆಯ ಆಧಾರ ಸ್ತಂಭಗಳು.. ಮೊದಲಿನಿಂದಲೂ ಆಟೇಯಾ, ಮೋಬಯ್ಯನು ಅವರ್‍ಯಾರಿಗೂ ಆಗಿ ಬರಾಣಿಲ್ಲ.. ಪಿಕದಾನಿಯೇ ತನ್ನ ರುದಯ ಕಲಸ ಯಂದು ಭಾವಿಸಿ ರಾಜನಿಷ್ಠೆಯಿಂದ ಅರಮನೆಯ ಸೇವೆ ಮಾಡುತ್ತಿದ್ದ ಮೋಬಯ್ಯ ಯಂಬ ಪ್ರಣವಾಕ್ಷರಗಳನ್ನು ಅವರೆಲ್ಲ ತಮ ತಮ್ಮ ಬಾಯೊಳಗೆ ಜಮಡುತ ನಮಲುತ್ತ....

ಅರಮನೆಯ ದಿವಾನ ಖಾಸಾದೊಳಗ ಯಪ್ಪತ್ತೆಂಬತ್ತರ ಹರೆಯದ ರಾಜಮಾತೆಯು ಯಿಪ್ಪತ್ತರ ಹರೆಯವನ್ನು ಹ್ಞಾ.. ಹ್ಞೂ ಅಂತ ಆವಹಿಸಿಕೊಳ್ಳುವ ಯತ್ನವ ಮಾಡುತಲಿದ್ದಾಳೆ.. ಥೆಳಗೇರಿಯಿಂದ ಬರುತಲಿದ್ದ ವಂದೊಂದು ವರ್ತಮಾನವು ಕಾದ ಸೀಸದೊಪಾದಿಯಲ್ಲಿ ಆಕೆಯ ಕಿವಿಯಲ್ಲಿಳಿತಾ ಅದೆ.. ರಾಜಪರಿವಾರದೋರು ಅಲ್ಲಿ, ಮೂಳಿಗದೋರು ಯಿಲ್ಲಲ್ಲಿ ಗಪ್ ಚುಪ್ಪಾಗಿ ನಿಂತವರೆ ಕುಂತವರೆ. ಅಲ್ಲೆ ಅನತಿ ದೂರದಲ್ಲಿದ್ದ ಸಿಮ್ಮಾಸನದ ಮ್ಯಾಲ ಮಾರ್ಜಾಲ ಮೊಂದು ಹೆಬ್ಬುಲಿಯೋಪಾದಿಯಲ್ಲಿ ರಾಜನಿದುರೆ ಮಾಡುತಲಿದೆ. ಅದರ ವಡಲ ಗುರುಗುರು ನಿನಾದಕ್ಕೆ ಸಿಮ್ಮಾಸನದ ಅಂಗೋಪಾಂಗಗಳು ಕಂಪಿಸುತ್ತಿವೆ.. ಅವುದೋ ಅಲ್ಲಮೋ ಯಂಬ ನಿಷ್ಪತ್ತಿಯಲ್ಲಿ ಅದು ಹಿಂದಕು ಮುಂದುಕು ವಾಲಾಡುತಲದೆ...

ಆಕೆಯ ವುಸುರಾಟದೊಳಗೆ ಮೋಬಯ್ಯ ಮುಡು ಮುಡನೆ ಮೂಡತಲವನೆ, ಮುಳು ಮುಳುನೆ ಮುಳುಗತಲವನೆ, ಮಾತಿನ ಸಿಮುಟಿಗೆ ಸಿಲುಕದೆ ಪುಸಕ್ಕಂತವನೆ... ಅಲಲಲಾ ಮೋಬಯ್ಯ ವಂದು ಹಲ್ಲು ಮೂಡದ ಮೊಲದಂಗಿದ್ದೆಲ್ಲಾ.. ಅರಮನೆಯ ತೊಂಬಲವ ತುಂಬಿ ಕೊಂಡಿರೋ ಸರೀರವುಳ್ಳವನೇ.. ಮಯ್ಯೊಳಗ ವಂದು ನಮೂನಿ ಆಗತಂತ ಹೋದಾತ ಅತ್ಲಾಗೆ ಹೋದೆಲ್ಲಾ.. ಯಂದನಕಂತ ರಾಜಮಾತೆ ಯಲ್ಲಾರಿಗೂ ಕೇಳಿಸುವಂತೆ ಕಾಟಯ್ಯನಿಗೆ ಯೀ ಪ್ರಕಾರವಾಗಿ ಯೇನು ಹೇಳಿದಳೆಂದರೆ....

"ಅಯ್ಯಾs ರಾಜಕುಮಾರಾss.. ಕುಂಪಣೀಮಂದೀಗೆ ಅರಮನೇಲಿ

ಹುಟ್ಟಿದ ನೀವೆಲ್ಲಾರು ಅಡ್ಲಾಯ ಕೊಟ್ಟಿದ್ದಕ್ಕೆ ಮೂಳಿಗದ ಮಂದಿ ತಮ್ಮೋಟಕ ತಾವು ಕುಣೀಲಕ ಹತ್ಯಾರ, ನಿಮ್ಮಂಥ ರಾಜಕುಮಾರರು ಬಿಗುಸು ಯಿದ್ದರ ಹಿಂಗಾಗುತಿರಲಿಲ್ಲ. ಯೀಗ ಯೀತನು, ನಾಳೆ ಯಿನ್ನೊಬ್ಬಾತನು, ಅರಮನೆ ಅಂದರ ಯೇನಂತ ತಿಳಕೊಂಡಿರುವರೋ? ಯಿದು ಹಿಂಗss ಮುಂದೊರೆದರ ನಮ್ಮ ಚಾಕರಿ ನಾವೇ ಮಾಡ್ಕೋಬೇಕಾಗಿ ಬಂದೀತು, ಅದಕ ನೀನು ಆ ಮೋಬಯ್ಯನ್ನಿಲ್ಲಿಗೆ ಬರೋಹಂಗ ಮಾಡು" ಯಂದು ಹೇಳಲು.. ಅದಕಿದ್ದು ಕಾಟಯ್ಯನು "ಯವ್ವಾ.. ನೀನೆಸನ ಮಾಡಿಕೋ ಬ್ಯಾಡ, ಮೋಬಯ್ಯನೆಂಬ ದುರುಳನಿಗೆ ನಾನು ಬುದ್ದಿಕಲಿಸಿ ನಿನ್ನ ಪಾದದ ಬುಡಕ ಕೆಡವುತೀನಿ" ಯಂದು ಭರವಸೆ ನೀಡಿ ತಾನು ಬಂದ ಹಜಾರವು ಪಿಸುಮಾತಿನ ಮೊಗಸಾಲೆಯಾಗಿತ್ತು. ಹಿಂದಿನ ರಾಜಮಾರಾಜರು ಯುದ್ಧ ತಂತ್ರಗಳ ನೀಲಿನಕ್ಷೆ ರೂಪಿಸುತ್ತಿದ್ದ ಜಾಗ ಅದಾಗಿತ್ತು. ತನ್ನ ಯಡ ಬಲಕ ಆಗ್ನಾಧಾರಕರಾಗಿ ನಿಂತುಕೊಂಡಿದ್ದ ರಾಜಸೇವಾಸಕ್ತರನ್ನುದ್ದೇಶಿಸಿ....

"ತಲೆಯಿರುವಾಗಲೆ ಮೊಣಕಾಲು ಚಿಪ್ಪಿಗೆ ಪಟ್ಟಕಟ್ಟುವ ಹುನ್ನಾರು ನಡದಂಗ ಕಾಣತಯ್ತೆ. ಕಂಪಣಿ ಮಂದಿ ವಂದಪ್ಪ ಆದರ ಯೀ ಪಿಕದಾನಿ ಮೋಬಯ್ಯ ಯಿನ್ನೊಂದಪ್ಪ ಆಗ್ಯಾನ, ಯೀತ ಬರಿ ಬಾಯಿ ಮಾತೀಲೆ ಬಗ್ಗೋ ಪಯ್ಕಿ ಅಲ್ಲ.. ದಂಡಂ ದಶಗುಣಂ ಭವೇತ್ ಅಂತ ನಮಗ ಸಾಲಿ ಕಲಿಸಿದ ಗುರುಗಳು ಹೇಳ್ತಿದ್ರು.. ಅವನ್ನ ವದ್ದು ಬಡ್ದೂ ಯಳಕೊಂಡು ಬರಂಥೋರು ಯಾರದಾರ.. ಯಿದರ ಕಾಲಾಗ ವಂದ್ಯಾಕ, ಯಲ್ಡು ಬೆಳ್ಳಿ ರೂಪಾಯಿ ಖರುಚಾದ್ರುಪರವಾಯಿಲ್ಲ..." ಯಂದು ರೋಸಿ ಹೇಳಿದನು.

ಅದಕಿದ್ದು ರಾಜಸೇವಾಸಕ್ತರು ಪರಸ್ಪರ ಮುಖ ನೋಡಿಕೊಂಡರು. "ಹುಷಾರಾಗಿ ಕಾಲಿಡ್ರಿ.. ಮೋಬಯ್ಯನ ಮುಂಯ್ಯೊಳಗ ಆದಿ ಸಗುತಿಯದ್ದಂಗಯ್ದಾಳ.. ಆಳೋರಾಜ ಮುನುಸುಕೊಂಡ್ರನಿಭಾಯಿಸಬೋದು, ಅದರ ಕಾಪಾಡೋ ದಯವ ಮುನುಸುಕೊಂಡಲ್ಲಿ ಯೇನು ಗತೀ? ತಲಿ ಗಟ್ಟಿ ಅಯ್ತಂತ ಗೋಡೆಗೆ ಹಾಯ ಬ್ಯಾಡ್ರಿ"ಯಂದು ತಮ ತಮ್ಮ ಹೆಂಡರು ಆಡಿದ್ದ ಬುದ್ದಿವಾದ ವನ್ನು ನೆನಪಿಸಿಕೊಂಡರು. ಅದರ ಬ್ಯಾರೆ ಮೋಬಯ್ಯ ವುಂಡಮನೆಗೆ ಯರಡು ಬಗೆಯೋ ಪಯ್ಕಿ ಅಲ್ಲಯಂಬುದು ಯಲ್ಲಾರಿಗೂ ಗೊತ್ತಿರೋ ಸಂಗತಿ. ವಿರೋಧಿ ರಾಜರೇನಾದರೂ ಆತನನ್ನು ಪಗಡೆ ಕಾಯಾಗಿ ಬಳಸಿಕೊಂಡಿರಬೌದೇ?.. ಆತ ತನ್ನ ಅನುಚಿತ ವರ್ತನೆಗೆ ಕಂಡರಿಯದ, ಕೇಳರಿಯದ ಸಾಂಬವಿ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿರಬೌದೇ? ತಾನು

ಮೆತ್ತನ್ನ ಮೆದೆಗಳ್ಳನಾಗಿರಲೂ ಬೌದೇ? ತನ್ನೊಳಗೆ ಸಾಂಬವಿಯಿರುವಳೆಂಬುದಕ ಖಾತರಿಯೇನು? ಸಾಕ್ಷ್ಯಾಧಾರಗಳು ಯಲ್ಲವೆ?

ಅರಮನೆ ತಿನಮಾಡಿದ ವುಪ್ಪು ಅವರನ್ನು ಅಡ್ಡಡ್ಡ ಯೋಚಿಸುವಂತೆ ಮಾಡಿತು. ಅಲ್ಲದೆ ಅವರು ಕಾಟಯ್ಯನ ವುಗುಳನ್ನು ಯಂದೂ ದಾಟಿದವರಲ್ಲ.. ವಂದಲ್ಲಾ ವಂದಿನ ಆತನು ರಾಜ್ಯಭಾರ ಮಾಡೇ ಮಾಡುತ್ತಾನೆ ಯಂದು ನಂಬಿದ್ದರು.

ಮೋಬಯ್ಯನನ್ನು ಧರ್‍ರಗುಟ್ಟೆಳಕೊಂಡು ಬರುವಂಥ ಶಕ್ತಿಶಾಲಿಗಳು ತಮ್ಮ ವಳಿತದೊಳಗ ಯಾರವರೆ ಯಂದು ಪಟ್ಟಿ ಮಾಡುತಾಯಿರುವಾಗ್ಗೆ ಚಿಗ್ಯಾಟಿಯಂಬ ಮಾವುಸ ಪರುವತವು ಮಾತಿನ ಗುಂಟ ತೇಲಿ ಬಂತು. ಆತ ಯಂಥವನೆಂದರೆ.. ನಾಕು ತುತ್ತಿಗೆ ವಂದು ಟಗರನ್ನು, ಯರಡು ತುತ್ತಿಗೆ ವಂದು ಕೋಳಿಯನ್ನೂ ತಿಂಬುತ್ತಿದ್ದಂಥವನು. ಬಿಚ್ಚುಗತ್ತಿಯನ್ನು ಆ ಕೂಡಲೆ ಆತನಿದ್ದಲ್ಲಿಗೆ ಕಳುವಿ ಆ ಸ್ಥಾನಕ್ಕೆ ಕರೆ ಕಳಿಸಿಕೊಂಡು ಯಿಂಥಾದ್ದು ಯೀ ಕೂಡಲೇ ಮಾಡಬೇಕೆಂದು ಹೇಳಿದರು. ವಪ್ಪಲು ಮಿಜಿ ಮಿಜಿ ಮಾಡಿದನು. ಯಲ್ಡು ಟಗರು, ನಾಕು ಕೋಳಿ ಮತ್ತು ಮಸಾಲೆ ದಿನಿಸಿಗಂತ ವಂದು ಬೆಳ್ಳಿ ರೂಪಾಯಿ ಕೊಡುವುದಾಗಿ ಹೇಳಲು ಆತನು, “ಸಾಂಬವಿ ನಮ್ಮ ಕುಲ ದ್ಯಾವತೆ ಅಯ್ದಾಳೆ ತಂದೆಗೋಳಾ.. ನೀವು ಹತ್ತು ಸಾವ್ರಹೊನ್ನು ಕೊಟ್ರೂನಾನು ಮೋಬಯ್ಯನ ತಂಟ್ಯಾಕ ಹೋಗೋದಿಲ್ಲ” ಯಂದು ಹೇಳಿ ಹೋದನು. ಯಿನ್ಯಾರವರೆ ಯಂದು ಯೋಚಿಸೀ ಯೋಚಿಸಿ ಕೆಂಧೂಡಿಯನ್ನು ಕರೆಯಿಸಿಕೊಂಡರೆ ಆತನು “ನೀವು ನೂರುಕೂರಿಗೆ ಹೊಲಾ ಕೊಟ್ರೂನಾನು ಮೋಬಯ್ಯನ ಸರೀರದ ತಂಟ್ಯಾಕ ಹೋಗಲಾರೆ” ಯಂದು ಖಡಾಖಂಡಿತವಾಗಿ ಹೇಳಿದನು. ಹಿಂಗೆ ಕರೆಸಿಕೊಂಡವರೆಲ್ಲ ಅರಮನೆಯಂಬ ನಾಕಕ್ಕರದ ಘನವಾದ ಸಬುದಕ್ಕೆ ಕವುಡೆ ಕಿಮ್ಮತ್ತು ಕೊಡಲಿಲ್ಲ.. ನಾಯಕನು ಕಟಕಟನೆ ಹಲ್ಲು ಕಡಿಯುತ್ತಿರುವಾಗ್ಗೆ ಆತನೆಡಕಿದ್ದ ವ್ಯಕ್ತಿಯ ಜನುಮನಾಮ ಗುಡ್ಡನೆಂಬುದಾಗಿತ್ತು, ನಾಯಕನಿಟ್ಟ ಹೆಸರು ಕಳವಳ ಯಂಬುದಾಗಿತ್ತು, ಆತನು “ದೊರೆಯೇ.. ಮೋಬಯ್ಯನ ಸರೀರದೊಳಗೆ ಮೋಬಯ್ಯನಿಲ್ಲ, ಆತನನಂದಾಡಿ ಯೇನು ಪ್ರಯೋಜನ?” ಯಂದು ಬುದ್ಧಿವಾದ ಹೇಳಿದರೆ, ಬಲಕಿದ್ದ ವ್ಯಕ್ತಿಯ ಜನುಮನಾಮ ಕೋಲ ಯಂಬುದಾಗಿತ್ತು, ಕಾಟಯ್ಯನಿಟ್ಟ ಅಡ್ಡ ನಾಮ ಗಂಧೂಡಿಯಂಬುದಾಗಿತ್ತು, ಅತನು “ದೊರೆಯೇ.. ಮೋಬಯ್ಯನ ಸರೀರದೊಳಗೆ ಸಾಯಿರ ಗುಗ್ಗುಳಗಳಿಗೆ ಸಮಾನವಾದ ಕಾವಯ್ತೆ.. ಅದರ ತಂಟೆಗೆ ಹೋಗಬ್ಯಾಡೂರಿ” ಯಂದು ಬುದ್ಧಿ

ವಾದ ಹೇಳಿದನು. ಅರಮನೆಯವರು ಸಂದಾಯ ಮಾಡುತ್ತಿದ್ದ ಗವುರವ ಧನದೊಳಗೆ ಯಿಡೀ ಕುಟುಂಬವಡಗುವುದು ಅಸಾಧ್ಯವಾಗಿದ್ದುದರಿಂದಾಗಿ ಅವರೀರ್ವರು ಅಲ್ಲಿಂದ ತೊಲಗಲು ಮಾನಸಿಕವಾಗಿ ಸಂಸಿದ್ಧರಾಗಿದ್ದು ದೊರೆಗೆ ಬುದ್ಧಿವಾದ ಹೇಳುವ ಧಯರ್ಯ ಮಾಡಿದ್ದರು. ಮುನಿದು ಕಾಟನಾಯಕನು ತಮ್ಮನ್ನು ಅರಮನೆಯಿಂದ ಹೊರಹಾಕಬೌದೆಂದು ನಿರೀಕ್ಷೆ ಮಾಡಿದ್ದ ಅವರು ಅವನತಮುಖಿಗಳಾಗಲು ನಾಯಕ ಅಸಹಾಯಕತೆಯಿಂದ ಅವುಡುಗಚ್ಚಿ ತನ್ನ ದವಡೆಗಳ ಬಿಗುವನ್ನು ಸಯ್ಲು ಮಾಡಿಕೊಂಡನು...

ಅಸಾಹಯಕತೆಯನ್ನೊಳಗೊಂಡ ಅಳುಕಿನಿಂದಾತನು ಹೇಳಿದ್ದೇನೆಂದರೆ "ಅಯ್ಯಾ, ಸೇವಾಸಕ್ತರೇ, ಯಿದು ಬಲವಂತದಿಂದ ಜರುಗೋ ಕೆಲಸವಲ್ಲ.. ಬುದ್ಧಿವಂತಿಕೆಯಿಂದ ಮಾಡಬೇಕದೆ.. ಅದಕ್ಕೇನೇನು ಮಾಡಬೇಕೆಂದರೆ..."

* * * *

ಥಾಮಸು ಮನ್ರೋ ಸಾಹೇಬನು ಪುಲಿವೆಂದಲದಲ್ಲಿ ನಾಮಕರಣ ಕಾರ್ಯ ಮುಗಿಸಿಕೊಂಡು ಜನರ ಸುಖದುಕ್ಕಗಳನ್ನಾಲಿಸಿ ಕಡಪ ಹಾದಿ ಹಿಡಿದಿರುವಾಗ್ಗೆ, ಹತ್ತಾರು ವುಂದಿ ಕೊಡ ಬಿಂದಿಗೆಗಳನ್ನು ತವು ತಮ್ಮ ಹೆಗಲು ಬಗಲುಗಳಲ್ಲಿಟ್ಟುಕೊಂಡು ದೇಕುತ್ತ ನಡೆಯುತ್ತಿದ್ದುದನ್ನು ಕಂಡನು. ಅವರ ಪಯ್ಕಿ ಹಿರೀಕನಿದ್ದ ಮುದೇತನು "ರಾಯಲ ಸೀಮಾನು ರತುನಾಲ ಸೀಮ ಅಂಟಾರು.. ತ್ರಾಗಡಾನಿಕಿ ಗ್ರುಕ್ಕಿಡು ನೀಳ್ಳುಲೇದು" ಯಂದು ಮುಂತಾಗಿ ಪದ ಹಾಡುತ್ತಿದ್ದುದನು ಕೇಳಿಸಿಕೊಂಡನು. ಆಗ ಆ ಮುದೇತನನ್ನು ಹತ್ತಿರ ಕರೆದು ನಿಮ್ಮ ಕಷ್ಟಗಳೇನು ಯಂದು ಯಿಚಾರಿಸಲು ಆತನಿದ್ದು "ಯೀ ರಾಜನು ಹೋಗಿ ಆ ರಾಜ ಬಂದ್ರೂನಮ್ಗೆ ಕುಡಿಲಕ ನೀರಿಲ್ಲ.. ನಮ್ಮುಚ್ಚೇನ ನಾವ್ ಕುಡುಕಂಡು ಬದುಕದೀವಿ" ಯಂದು ಹೇಳಿದನು. ಅದನು ಕೇಳಿ ಮಮ್ಮಲನ ಮರುಗುತ್ತಲೇ ಕಡಪ ಸೇರಿಕೊಂಡ ಮನ್ರೋ ಸಾಹೇಬನು ತನ್ನ ಅಧಿಕಾರಿಗಳನ್ನು ಆಸ್ಥಾನಕ್ಕೆ ಬರಮಾಡಿಕೊಂಡು ರಾಯಲಸೀಮದೊಳಗೆ ನೀರಿನ ಸ್ಥಾವರ ಯಲ್ಲಲ್ಲುಂಟು ಯಂಬುದನು ಪತ್ತೆ ಹಚ್ಚಬೇಕೆಂದೂ.. ವಂದೊಂದು ಗ್ರಾಮ ದೊಳಗ ಬಾವಿಗಳನ್ನು ತೋಡಿಸಬೇಕೆಂದೂ.. ಆಗ್ನೆ ಮಾಡುತ್ತಿರುವಾಗ್ಗೆ....

ಅತ್ತ ಜರುಮಲಿ ರಾಜನು ತಾನು ದಂಡು ದವಲತ್ತು ಸಮೇತ ದಂಡೆತ್ತಿ ಬರಬೇಕೆಂದಿರು ವನೆಂದೂ, ಯೇಳು ದಿವಸದೊಳಾಗಿ ಕಪ್ಪ ಕಾಣಿಕೆ ತಂದು ಸರಣಾಗಿ ಪ್ರಾಣ ವುಳಿಸಿಕೊಳ್ಳ ಬೇಕೆಂದೂ ನಿಚ್ಚಾಪುರದ ರಾಜನಿಗೆ ಪರಮಾನು ಕಳಿಸುತ್ತಿರು ವಾಗ್ಗೆ.. ಮದ್ದಿಕೇರಿಯ ಸಂತರಸ್ತರ ಪಯ್ಕಿ ಗಂಡಸರು

ಜೊನ್ನಗಿರಿಯೊಳಗ ರಾಜ ಪರಿವಾರದ ನಾನಾ ನಮೂನಿಯ ಮೂಳಿಗ ಮಾಡುತ್ತಿರುವಾಗ್ಗೆ....

ಯಿತ್ತ ಕುದುರೆಡವು ಪಟ್ಟಣದೊಳಗೆ ಯಿದ್ದಂಥ ಥೆಳಗೇರಿಯಲ್ಲಿ ಮೋಬಯ್ಯನ ಸರೀರಕ್ಕೆ ಸಂಬಂಧಿಸಿದಂತೆ ನಾನಾ ರೀತಿವಳಗೆ ಯಿದ್ಯಮಾನಗಳು ಜರುಗಾಡುತ್ತಿದ್ದವು. ವಂದು ಹಸ್ತಕ್ಕಂಟಿಕೊಂಡಿರೋ ಬೊಟ್ಟುಗಳು ಯಾವ ರೀತಿ ಸರಿಸಮಾನವಾಗಿರುವುದಿಲ್ಲಮೋ ಹಂಗೆ ಜನರ ನಂಬಿಕೆಯೂ ಯಿಯಿಧ ತೆರನಾಗಿದ್ದಿತು. ಯಲ್ಲಡಗಿ ಕೊಂಡಿರಬೌದು ತಾಯಿ? ಯಾವ ರೀತಿಯಿರಬೌದು ತಾಯಿ? ಯಿದ್ದ ಪಕ್ಷದಲ್ಲಿ ಆಕೆ ವಂದಾದರೂ ಪವಾಡ ತೋರಬೌದಿತ್ತಲ್ಲ.. ವಂದಾದರೂ ಮಯ್ಮೆ ಪ್ರಕಟಮಾಡಬೌದಿತ್ತಲ್ಲ ಯಂದು ಆ ಸರೀರವನ್ನು ತಿಬ್ಬಳಿಸಿ ನೋಡುತಾ ನೋಡುತಾ ಯಿದರೊಳಗೆಂಥಾದ್ದು ಯಿದ್ದಂಗಿಲ್ಲ ಯಂದು ನಿರಾಶರಾಗಿ ಹೋಗುತಿದ್ದವರೆಷ್ಟೋ ಮಂದಿ? ಯಿರಬೌದು ಅಥವಾ ಯಿಲ್ಲದೆಯಿರಬೌದು ತಮಗ್ಯಾಕಿದರ ವುಸಾಬರಿ ಯಂದು ದೂರ ಜರುಗುತ್ತಿದ್ದವರೆಷ್ಟೋ ಮಂದಿ? ಅರೀದ ಮಳ್ಳನಂಗಿದ್ದ ಮೋಬಯ್ಯ ಆರಂಭ ಮಾಡಿರೋ ಆಟ ಯಿದು ಯಂದು ನಗು ನಗಾಡುತ ಹೋಗುತ್ತಿದ್ದವರೆಷ್ಟೋ ಮಂದಿ? ಮೋಬಯ್ಯನ ಸರೀರದೊಳಗೆ ಮೋಬಯ್ಯ ನಷ್ಟಗೊಂಡಿದ್ದಾನ.. ಯೀತನ ಸರೀರವು ಅನೇಕ ಅಲವುಕಿಕ ಲಕ್ಷಣಗಳನ್ನು ಪ್ರಕಟಮಾಡುತ್ತಿರುವುದು. ಸಾಂಬವಿಯು ಯೀತನ ಸರೀರದೊಳಗಿನ ಯಿನ್ಯಾಸವನ್ನು ತಾನು ಪರಿಚಯ ಮಾಡಿಕೊಳ್ಳೋದರಲ್ಲಿ ಮಗ್ನಳಾಗಿದ್ದಿರಬೌದು. ಸರೀರದ ಪಂಚೇಂದ್ರಿಯಗಳೊಂದಿಗೆ ತಾಲೀಮು ನಡೆಸುತ್ತಿರಬೌದು, ಸರೀರದ ಚುಕ್ಕಾಣಿ ತಾನು ಹಿಡಿಯಲಕ ರವ್ವಂತ ಕಾಲ ಹಿಡೀತದ.. ಆಟರೊಳಗ ತಮ್ಮ ಸಮಸ್ತ ಆಸ್ತೀಕ ಭಾವವನ್ನು ಧಾರೆಯೆರೆಯಬೇಕೆಂದು ಹಪಹಪಿಸುತ್ತಿದ್ದವರೆಷ್ಟೋ ಮಂದಿ? ಯಾವ ಭಾವನಕ್ಕೂ ಸಲ್ಲದಿದ್ದ ಅನೇಕ ಮಂದಿ ಮಾತಾಡಿಸಿಕೊಂಡುಹೋಗುತಲಿದ್ದ.. ಬರಲಕಂದರ ನಮ್ಮನೆ ಯಿಲ್ಲೇನವ್ವಾ ಯಂದೆನಲುತ್ತಿದ್ದ, ಯಿರಲಕಂದರ ನಮ್ಮನೆ ಯಿರಲಿಲ್ಲೇನವ್ವಾ ಯಂದನಲುತ್ತಿದ್ದ....

ಗಂಡ ವುಂಡು ಬಿಟ್ಟೆಲೆ ತಾನು, ಗಂಡ ನಮಲಗೆದುಗುಳಿರೋ ತೊಂಬದುಂಡೆ ತಾನು, ಕರೆದಲ್ಲೆಲ್ಲ ಬರಲಕಾಗಲೀ, ಯಿರಲಕಾಗಲೀ, ಯೋಗ್ಯಳಲ್ಲ ಕನರಪ್ಪಾ.. ಲೋಕಯೇನೆಂದು ಕೊಂಡೀತು ಕನರವ್ವಾ.. ಯಿದ್ದರೆ ತಾನು ತನ ಗಂಡನ ವುಸುರಳತೆ ದೂರದಲ್ಲಿರುತೀನಿ.. ಸತ್ತರೆ ತಾನು ತನ ಗಂಡನ ಕಣ್ಣಳತೆ ದೂರದಲ್ಲಿ ಸಾಯತೀನಿ.. ತನಗೆ ಮುತ್ತಯ್ದೆ ಸಾವು ಯಿವತ್ತಲ್ಲ

ನಾಳೆ ಬರಃದೆ ಯಿರಾಕಿಲ್ಲ.. ಯಂದನಕಂತ.. ಯೇನುಂಬುತೀಯವ್ವಾ.. ಯ್ಯೋನು ಕುಡಿದು ಬದುಕುತೀಯವ್ವಾ.. ಯಂದು ಕೇಳಿದ್ದಕ್ಕೆ ಸಟಕ್ಕಂತ, ಹಂಗಾರ ಯೀಗ ಸದ್ಯಕ್ಕ ನೀನು ಯಲ್ಲಿ ವಸ್ತಿಯಿರುತೀ ತಾಯಿ ಯಂದು ಮಂದಿ ಅಂದುದಕ ವುತ್ತರವಾಗಿ ಆ ಪರಮ ಸಾಧ್ವಿ ಪಡುವಲಕ ನೋಡಲಲ್ಲಿ....

ಅಲ್ಲೇ ಅಂದರೆ ಅಲ್ಲೇ, ವುಂಡು ಬಾಯಿ ಮುಕ್ಕಳಿಸಿ ವುಗುಳಿದರೆ ನೀರುಯಷ್ಟು ದೂರ ಹೋತದೋ ಅಷ್ಟು ದೂರದಲ್ಲಿ ನಲಮುಗುಲಿಗೇಕಾಗಿ, ಯಡ ಬಲಕಿದ್ದ ಹಿಂದಲಕ ಮುಂದಲಕಿದ್ದ ಬಯಲನ್ನು ತನ್ನ ತೆಕ್ಕೆಗೆ ತಕ್ಕೊಂಡು, ನೂರಾರು ಧರುವ ಛತ್ರಗಳಂತಿದ್ದ ತನ್ನ ನೂರಾರು ರೆಂಬೆ ಕೊಂಬೆಗಳಲ್ಲಿ ಹತ್ತಾರು ಯಿಧದ ಪಕ್ಷಿಗಳು ತಮ ತಮ್ಮ ಸಮುಸಾರ ಸಮೇತ ನೆಲಹಲಕ ಅನುವು ಮಾಡಿಕೊಟ್ಟಿದ್ದಂಥ.. ಯಳೆಕಂದಮ್ಮ ಬಿಡುವ ವುಸುರಿಗೆ ತಲೆದೂಗುತಲಿದ್ದ.. ಸದಾ ಹಸಿರು ಮುಕ್ಕಳಿಸುತಲಿದ್ದ ಅಗಾಧ ಗಾತುರದ ಬೇಯಿನ ಮರವು ಗೋಚರ ಮಾಡಿತು. ತಾನೀ ಮೂರಿಗೆ ಕಾಲಿಟ್ಟ ಗಳಿಗೇಲಿ ಮುಂದ ದಣಿವವರಿಗೆ ನೆಳ್ಳು ನೀಡಲಂತ, ತೂಕಡಿಸೋರು ವಂಚಾವತ್ತು ಮಲಕ್ಕಂಡು ನಿದ್ದೆ ಮಾಡಲಂತ, ಪಚ್ಚಿಗಳು ಅದರ ತುಂಬೆಲ್ಲ ನೆಲಸಲಂತಲ್ಲವಾ ತಾನು ತನ್ನ ತವರೂರಿನಿಂದ ತಂದಿದ್ದ ಸಸಿಯನ್ನಲ್ಲಿ ನೆಟ್ಟಿದ್ದು. ದಿನಾಲು ವಂದೊಂದು ಕೊಡ ನೀರೆರೆಯುತ್ತಿದ್ದುದು, ಅದೆಲ್ಲ ಯದೆ ಮಟ ಬೆಳೆಯೋವರೆಗೆ, ಆ ಮ್ಯಾಲ ತಾನು ತನ್ನ ಗಂಡ, ಬಾಳೇವು, ಬದುಕಿನ ದ್ಯಾಸದಲ್ಲಿ ಅದರ ಯೇಕರಿಕೆ ದೇಕರಿಕೇನ ತಾನು ನೋಡಿಕೊಂಡುದ್ದುಂಟಾ?

ಯೇಟೆತ್ತರ ಬೆಳೆದಯ್ತಲ್ಲಾ ತನ್ನ ತವರೂರಿನ ಕುಡಿ.. ಮಾತ್ರುವಾತ್ಸಲ್ಯದಿಂದ ಅದನ್ನು ಕಣ್ಣ ಹೆಡಿಗೇಲಿ ತುಂಬಿಕೊಂಡಳು. “ನಾನಿದ್ದೀನಿ ಕನವ್ವಾ” ಯಂದದು ಮಯ್ನ ತೊನೆದು ಕರದಂಗಾತು.. ಬಟ್ಟೆ ಬರೆ ಗಂಟು ಕಟ್ಟಿಕೊಂಡು ಅದರ ಸನೀಕ ಹೋದಳು. ಅದರ ನೆಳ್ಳಲ್ಲಿ ನಿಂತು ಕುಂತು ದಣುವಾರಿಸಿಕೊಂಡಳು. ಯಷ್ಟೋ ನೆಮ್ಮದಿ ಅನ್ನುಸುತು ಜೀವಕ್ಕೆ..

ಬುಡತಂಕ ಬಂದಿದ್ದ ಆಕೆ ಬೊಡ್ಡೆ ಮುಟ್ಟಿ ಸಣುಮಾಡಿ “ಯವ್ವಾ.. ಮರದವ್ವಾ.. ಚೋಟುದ್ದ ಯಿದ್ದಾಕಿ ತಲೆದೂಗೋ ಹಂಗ ಬೆಳಕಂಡಿರುವಿ.. ಯೋಟಿದ್ದರೂ ನೀನು ಮಿಚ್ಚೇರಿ ಮಣ್ಣೊಳಗ ವೊಳತಾಕಿ.. ಕಣ್ಣು ಕಿಸರಾಗಂಗದೀ.. ಸಾವುರಾರು ಪಚ್ಚಿಗಳು ವಾಸ ಮಾಡಲಕ ಅನುವು ಮಾಡಿಕೊಟ್ಟಿದ್ದೀ.. ದಣಕೊಂಡು ಬಂದೋರಿಗೆ ನೆಳ್ಳೆಂಬುವ ತಣ್ಣೀರು ಕೊಟ್ಟು ಆಯಾಸಾನ ಪರ್‍ಯಾರ ಮಾಡ್ತಿದ್ದೀ.. ನಿನ್ನ ತಂದಿಲ್ಲಿ ನೆಟ್ಟಿದ್ದಕ್ಕೆ ನನ್ನೊಡಲು

ಸಾರ್ತಕಾತು, ಜ್ವಾಪಾನ ಜತುನಾ ಮಾಡೀನಂತ ಹೇಳಿ ನಿನ್ನಾ ಹಂಗಿಸ್ತಿಲ್ಲವ್ವಾ, ನನ್ನುಪಕಾರ ನಿಂಗೆ ನೆಪ್ಪಿದ್ದಲ್ಲಿ.. ನೀನು ಸರಣಾಗತ ರಚ್ಚಕಿ ಆಗಿದ್ದಲ್ಲಿ ಗಂಡ ಬಿಟ್ಟಿರೋ ನನ್ನ ನಿನ್ನ ಬುಡದಾಗಿಟಕಂಡು ಕಾಪಾಡಬೇಕು ತಾಯಿ" ಯಂದೊಂದೇ ಮಾತಲ್ಲಿ ಕೇಳಿಕೊಂಡಳು. ಆಕೆಯ ಮಾತು ಕೇಳಿ ಮರದ ಕರುಳು ಕರಗಿತು. ಜಗಲೂರೆವ್ವನ ಮಯ್ಯಿ ಬೆವರಿನ ವಾಸನೆ ಕುಡುದೂ ಕುಡುದು ತನಗೀ ಬಣ್ಣ ಕಸುವು ಲಭಿಸಯ್ತೆ. ಅಲ್ಲಿದ್ದ ತನ್ನನ್ನು ಯಲ್ಲಿಗೆ ತಂದು ಪಾಲಿಸಿ ಪೋಷಿಸಿರುವಳು, ಯೀಕೆಯ ಬೇಡಿಕೇನ ತಿರಸ್ಕರಿಸಿ ರಿಣಗೇಡಿ ಆಗಬಾರದು ಯಂದು ಮುಂತಾಗಿ ರುಕ್ಷ ಯೋಚಿಸಿತು. ಆದರ ಸಡನ್ನಂತ ನಿರ್ದಾರ ತೆಗೆದುಕೊಳ್ಳಲದಕ ಸಾಧ್ಯಯಿರಲಿಲ್ಲ. ತಾನು ಹೇಳಿ ಕೇಳಿ ತಾಯಿ ಸಾಂಬವಿಯ ಆಗ್ನಾನುವರ್ತಿಯು. ಆಕೆಯ ಹಂಗು ಅನುಗ್ರಹಗಳಿಂದ ತುಂಬಿ ತುಳುಕಾಡುತಿರುವ ತಾನು ಸೊಸಂತರಾಲೋಚನೆ ಮಾಡಲಕ ಯಷ್ಟರವಳು? ತನ ಗಂಡನ ಸರೀರವನ್ನು ಮುಟ್ಟುವ ಹಕ್ಕನ್ನು ಕಳೆದುಕೊಂಡು ನಿರಾಸ್ರಿತಳಾಗಿರುವ ಜಗಲೂರೆವ್ವಗೆ ತನ್ನ ಬುಡದಲ್ಲಿ ಪುನರೊಸತಿ ಕಲುಪಿಸಿ ಕೊಡೋದು ಯಾವುದೇ ರುಕ್ಷದ ಧರುಮವು. ಕೆಲದಿವಸಗಳ ಯಿದ್ಯಾಮಾನಗಳನು ನೋಡುತ್ತಿದ್ದರೆ ತಾಯಿ ಸಾಂಬವಿಯ ವಲುಮೆ ಯೇಕೆಯ ಮ್ಯಾಲ ಯಿರುವುದೋ ಯಿಲ್ಲಮೋ ಯಂಬ ಅನುಮಾನ ಬರುವುದು. ಯೇನೇ ಆಗಲಿ, ವಂದು ಮಾತು ತಾಯೀನ ಕೇಳಿದ ಮ್ಯಾಲೆಯೇ ಮುಂದಿನಾಲೋಚನೆ ಮಾಡುವುದೆಂದು ಈ ರುಕ್ಷವು ನಿರ್ದಾರ ಮಾಡಿತಂತೆ....

ತನ್ನೊಂದು ಬೇರನ್ನು ರಾಯಭಾರಿಯನ್ನಾಗಿ ಮೋಬಯ್ಯನ ಸರೀರದೊಳಗಿದ್ದ ಸಾಂಬವಿಯ ಬಳಿಗೆ ಕಳಿಸಿತಂತೆ. ಬೇರು ಅಡಬಿದ್ದು "ತಾಯಿ ಸಾಂಬವೀ.. ನಿನ್ನಂಗೆ ಜಗಲೂರವ್ವ ಕೂಡ ವಂದು ಹೆಣ್ಣು ಅಂಬುದನು ಮರೀಬ್ಯಾಡವ್ವಾ"ಯಂದು ಬಖಯಿರು ಸಲ್ಲಿಸಿತಂತೆ. ಬಖಯರ ನ್ನಾಲಿಸಿದ ತಾಯಿಯು.. "ಆಕೆ ಪೂರವ ಜಲುಮದಲ್ಲಿ ಪಾಪ ಮಾಡಿರುವಾಕಿ.. ಅಲ್ಲದ ತಾನು ಹೆಣ್ಣಾಗಿ ಜಗಲೂರೆಜ್ಜನ್ನ ಕುಂತರೂ ನೆನೀತಾಳ.. ನಿಂತರೂ ನೆನೀತಾಳ.. ಆಕೆಯಂಥ ಹೆಣುಮಕ್ಕಳಿಗೆ ಬುದ್ದಿ ಕಲಿಸುವ ಸಲುವಾಗೇ ನಾನಾಕೆಯ ಗಂಡನ ಸರೀರದಲ್ಲಿ ವಸ್ತಿ ಮಾಡಿರೋದು. ನಾನಾ ಯಿದವಾದ ಪರೀಚ್ಚೇಲಿ ಗೆದ್ದ ಮ್ಯಾಲss ಆಕೆಗೆ ಸುಕ ಸಾಂತಿ ದೊರಕೋದು.. ಅಲ್ಲಿಗಂಟಾ ಆಕೆ ಬಿಸಿಲಾಗಿದ್ದು ತಾಪ ಪಡಲೀ.. ನೆಳ್ಳಾಗಲೀ, ಆಸ್ರಯ ಆಗಲಿ ಕೊಡಕೂಡದಂತಾ ಮರದವ್ವಗೆ ಹೇಳು" ಯಂದು ಹೇಳಿದಳಂತೆ. ಅದಕಿದ್ದು ರಾಯಭಾರಿಯು "ತಾಯಿss..

ನಿನಗೆ ಜಗಲೂರವ್ವನ ನಿಜ ಸಂಗತಿ ತಿಳದಂಗಿಲ್ಲ. ಆಕೆ ಬಲು ಕುಕ್ಕುಲಾತಿ ಹೆಣ್ಣು ಮಗಳಯ್ದಾಳ.. ಆಕೆಯ ಹೊಟ್ಟೆಯೊಳಗ ಸಾವುರ ಗಾವುದ ವುದ್ದದ ಕರುಳಯ್ತೆ.. ಆಕೆಯ ಯದೆಯೊಳಗೆ ಭೂಮಿತೂಕದ ರುದಯ ಅಯ್ತೆ.. ದುಕ್ಕ ಮಾಡೋರ ಕಣ್ಣೀರು ವರಸುತಾಳ.. ಹೆಗಲಿಗೆ ಹೆಗಲು ಕೊಡುತಾಳ.. ಬಗಲಿಗೆ ಬಗಲು ಕೊಡುತಾಳ.. ನಮ್ಮ ಯಜಮಾನಿ ಬೇಯಿನ ಮರದವ್ವನ್ನ ತನ್ನ ತವರೂರಿಂದ ತಂದು ನೆಟ್ಟಿಲ್ಲಿ ಪಾಲಿನ ಪೋಷಣೆ ಮಾಡಿದಾಕಿ ತಾನಿದ್ದಾಳ.. ನಮ್ಮಂಥ ಗಿಡ ಮರಗಳಂದರ ಆಕೆಗೆ ಪಂಚ ಪ್ರಾಣ ಕಣತಾಯಿ, ಆಕೆ ಯಿರದಿದ್ದಲ್ಲಿ ನಾವೆಲ್ಲರು ಯಂದೋ ಸರುವ ನಾಸಣ ಆಗುತಿದ್ದೆವು. ಅಂಥಾಕೀನ ಬೇಬಿಷ್ಟೆ ಮಾಡಿದಲ್ಲಿ ಲೋಕ ಯೇನಂದೀತು.. ಅದಕ ಆಕೀನ ಬಲಗಣ್ಣಿಂದ ನೀನು ನೋಡಲಕ ಬೇಕವ್ವಾ" ಯಂದು ಪರಿಪರಿಯಿಂದ ಬೇಡಿಕೊಂಡಿತಂತೆ.. ಆದರ ತಾಯಿ ರುದಯ ವಂಥಟಗಾದರೂ ಕರಗಿ ತೊಟ್ಟಿಕ್ಕಲಿಲ್ಲವಂತೆ.. ಬ್ಯಾಡ ಅಂದರೆ ಬ್ಯಾಡ ಅಂತ ನಿಷು«ರದಿಂದ ಹೇಳಿದಳಂತೆ.. ಮತ ಮತ್ತ ರಾಯಭಾರಿಯು "ರುಕ್ಷೋ ರಕ್ಷತಿ ರಕ್ಷಿತಃ ಅಂತ ಹಿರೇರು ಹೇಳುತಾರವ್ವಾ.. ಮತ್ತೊಮ್ಮೆ ಯೋಚನ ಮಾಡು" ಯಂದು ಕೇಳಿಕೊಂಡಿತಂತೆ.. ಸಹವರ್ತಿಯಾಗಿ ಬಂದಿದ್ದ ಸಾಲುಮರದವ್ವನೂ ಜಗಲೂರವ್ವನ ಪರಗಟ್ಟಿ ಹೇಳಿದಳಂತೆ.. ಆದರ ಮಾತಾಯಿ ಜುಮ್ಮನ್ನಲಿಲ್ಲವಂತೆ. ಆಗ ಬೇರವ್ವ ನಿನ್ನಿಷ್ಟ ತಾಯಿ, ನೀನು ಲೋಕಗ್ನಾನವುಳ್ಳಾಕಿ, ನಿನಗ ಯದರುತ್ತರ ಕೊಡೋ ಸಗುತಿ ನನಗಿಲ್ಲ.. ಯಿದ್ದದ್ದು ಯಿದ್ದಂಗ ನಮ ಬೇಯಿನ ಮರದವ್ವಗ ಹೇಳುತೀನಿ.. ಆಕಿ ಬಲ.. ನೀನು ಬಲ.. ಸರಣು" ಯಂದು ವಾಪಾಸಾತಂತೆ....

ಬೇರವ್ವ ಹೇಳಿದ್ದು ಕೇಳಿ ಬೇಯಿನ ಮರದವ್ವ ಮಮ್ಮಲನ ಮರುಗಿದಳಂತೆ. ಬರೋದು ಬರಲಿ ಯಂದು ನಿರ್ಧಾರ ಮಾಡಿದಳಂತೆ. ಜಗಲೂರೆವ್ವ ಲವುಕಿಕ ಲೋಕದ ಸರಣೆದಾಳ, ಮೇಲಾಗಿ ಮಾ ಪತಿವುರೊತೆ ಅದಾಳ.. ಪತಿವುರೊತಾ ಧರುಮದ ಮುಂದ ದಯವಿಕ ಸಕ್ತಿಯೇನೂ ಅಲ್ಲ.. ಬೇಯಿನ ಮರದವ್ವ 'ತಾಯಿ ಜಗಲೂರೆವ್ವ.. ನೀನು ಅನುಗಾಲ ನನ್ನ ನೆಳ್ಳೊಳಗ ಯಿದ್ದುಕಳ್ಳವ್ವಾ.. ನೀನು ಗುಡುಲು ಹಾಕ್ಕೋತೀನಂದರ ನಾನು ನನ್ನ ಕೊಂಬೆ ರೆಂಬೆ ಸೊಪ್ಪು ಸೆದೆ ಕೊಡುತೀನಿ, ವಲೆ ವುರುವಲಿಗೆ ಕಟ್ಟಿಗೆ ಕೊಡುತೀನಿ.. ನೀನು ಹೇಳಿದಂಗ ಕೇಳಬೇಕಂತ ನನ್ನ ಮ್ಯಾಲ ವಾಸ ಮಾಡುತಿರೋ ಸಕಲೊಂದು ಪಕ್ಷಿಗಳಿಗೆ ಹೇಳುತೀನಿ ಯಂದು ಹೇಳಿದಂಗಾಗಲು ನಿದ್ದೆಯೊಳಗಿಂದ ಸಡನ್ನ ಯದ್ದುಕೂತಳು ಜಗಲೂರವ್ವ.. ಯಂಥ ಕನುಕರದಾಕಿ ಕನವ್ವಾ ಯಂದು ಮರದ

ಬೊಡ್ಡೆಗೆ ಮುತ್ತುಕೊಟ್ಟಳು, ಕಣ್ಣೀರು ಸುರಿಸಿದಳು, ವುಸ್ಸಂತ ಕೂತಳು, ವಂಚೂರು ಗೆಲುವಾದಳು. ಹಸು ಮಗೀನಂಗ ಸುತಮುತ್ತ ನೋಡಿದಳು. ಅಗೋ ಅಲ್ಲಿ ತನ್ನ ಗಂಡನ ಸರೀರ, ಸಂಬಂಧ ಬಿಡುಗಡೆ ಮಾಡಿಕೊಂಡಿರೋ ಹಂಗಯ್ತೆ.. ತನ್ನತ್ತ ವಂದು ಸಲನಾದರು ನೋಡುವಲ್ಲದು.. ಯೇನು ಬಂದಿದ್ದೀತು ಅದಕ? ಯೇನು ಬಡುಕೊಂಡಿರಬೌದು ಅದಕ? ಜಗಲೂರೆಜ್ಜ ನೋಡಿದ್ಯಾ.. ಯಂದು ಆ ದಿಕ್ಕಿಗೆ ಮುಖಮಾಡಿ ಕಯ್ನ ಮುಗುದಳು.

ನಿನ್ನರುದಯ ಯೀಟೋಂದು ತಟಗಯ್ತಂತ ಗೊತ್ತಿರಲಿಲ್ಲ ಯಂದಳಾಕೆ ತನ್ನ ಗಂಡನ ಕಡೇಕ ದುರುಗುಟ್ಟಿ ನೋಡುತ್ತ....

ಅಯ್ಲುಗೇಡಿಯಂತಾಡುತಲಿದ್ದ ಅವಯ್ಯನು ಆಗೊಮ್ಮೆ ಯಿಗೊಮ್ಮೆ ತನ್ನ ಹೆಂಡತಿಯ ಕಡೇಕ ಪಿಳಕೂ ಪಿಳಕೂ ಅಂತ ನೋಡುತಲಿದ್ದನು. ನೀನು ಯಾರೋ? ತಾನು ಯಾರೋ? ಯಂಬಂತೆ ಯಿದ್ದನು. ಅಷ್ಟು ಬಿಟ್ಟರೆ ಅವರಿಬ್ಬರ ನಡುವೆ ಯಾವುದೇ ಮಾತಾಗಲೀ, ಕಥಿಯಾಗಲೀ ಯಿರಲಿಲ್ಲ. ಹೋಗೋರು ಬರೋರು ಯಿದಿಲಿಖಿತ ಎಂಬೊಂದು ಸಬುಧವನ್ನು ಆಡೋದು ಬಿಟ್ಟರೆ....

* * * *

ಅತ್ತ ಥಾಮಸು ಮನ್ರೋ ತನ್ನ ಮಯ್ಯೊಳಗ ಹುಳಾ.. ಹುಪ್ಪಡಿ ಹೊಕ್ಕೊಂಡು ಹರದಾಡಲಕ್ಕ ಹತ್ತಿರುವವೇನೋ ಯಂಬಂತೆ ವಂದಲ್ಲಾ ವಂದು ದಗದಗಳನ್ನು ಹಚಕಂಡು ಕುಂತಲ್ಲಿ ಕೂಡ್ರದೆ, ನಿಂತಲ್ಲಿ ನಿಲ್ಲದೆ ಸದಾ ಗಿಜಿಗಿಗಟ್ಟತೊಡಗಿದ್ದನು. ತನ ಕಯ್ಕಿ ಕೆಳಗಿನ ಅಧಿಕಾರಿಗಳಾದ ಅಂಥೋಣಿ, ರಾಬರ್ಟು, ಯಿಲ್ಲಿಯುಮ್ಸೂ, ಜೇಕಬ್ಬೂ, ಜಾನು, ಗೀನು ಯಿವರೇ ಮೊದಲಾದವರನ್ನು ಯದುರಿಗೆ ಕುಂಡರಿಸಿಕೊಂಡು ಕುಂಪಣಿ ಸರಕಾರದ ಬಗ್ಗೆ ಜನರು ವಲವು ತೋರಿಸಬೇಕಾದರೆ ನೀವೆಲ್ಲ ಯಿಲ್ಲಿನ ಸ್ಥಳೀಕ ಭಾಷೆಯನ್ನು ಕಲುತುಕೊಳ್ಳಬೇಕೆಂದು ತಾಕೀತು ಮಾಡುತ್ತಿದ್ದನಲ್ಲದೆ ಅವರಿಗೆ ತೆಲುಗು, ಕನ್ನಡ ಭಾಷೆಗಳನ್ನು ಮೋದಲಕ.. ಬರೆಯಲಕ.. ಕಲಿಸಲಕಂತ ಮಾಸ್ತರರನ್ನು ನೇಮಕ ಮಾಡಿ ರಾತ್ರಿಸಾಲೆಗಳನ್ನು ತೆರೆದಿದ್ದನು. ಕಲುತೋರನ್ನು ಯದುರಿಗೆ ಕರೆಯಿಸಿಕೊಂಡು ಸೊತಹ ಬಹು ಭಾಷಾ ಕೋಯಿದನಾದ ತಾನು ಪ್ರಸ್ನೆಗಳನ್ನು ಕೇಳಿ ಪರೀಕ್ಷೆ ಮಾಡುತಲಿದ್ದನು. ಜಾನಪದ ಗಾಯಕರನ್ನು ಗವುರವ ಪೂರುವಕವಾಗಿ ತನ್ನ ಆಸ್ಥಾನಕ ಬರಮಾಡಿಕೊಂಡು ಹಾಡಿಸಿ, ಕುಣಿಸಿ ಸಂತೋಷಪಟ್ಟು ಮಾನ ಸನುಮಾನ ಮಾಡಿ ಕಳುವುತಲಿದ್ದನು. ಹೀಗಾಗಿ

ಯಲ್ಲಾರು ನಾಲಿಗೆ ಮ್ಯಾಲ ತಾನೇ ತಾನಾಗಿ ಯಿಜ್ರುಂಭಿಸ ತೊಡಗಿದ್ದನು. ಬುರ್ರಕಥೆಗಳೊಳಗ, ಗೀಗೀ, ಲಾವಣಿ ಪದಗಳೊಳಗ, ಅಡುಗೂಲಜ್ಜಿ ಕಥಿಗಳೊಳಗೆ ಯಿರಾಮ ಮಾಡಿಕೊಂಡಿದ್ದ ಮನ್ರೋ ಸಾಹೇಬ.. ಅಳುವವರ ಕಣ್ಣೀರೊರೆಸಲು ಮುಂದಾಗುತಲಿದ್ದ ಮನ್ರೋ ಸಾಹೇಬ.. ಮೂಢ ನಂಬಿಕೆಗಳನು ನಿರುಮೂಲ ಮಾಡಲು ಸದಾ ಶ್ರಮಿಸುತಲಿದ್ದ ಮನ್ರೋ ಸಾಹೇಬ.. ತರತಮ ಭಾವನೆಗಳ ಯಿರುದ್ದ ಹೋರಾಡುತಲಿದ್ದ ಮನ್ರೋ ಸಾಹೇಬ.. ಮನ್ರೋ ಸಾಹೇಬಾss.. ಸಾಹೇಬಾss....

ಅತ್ತ ಜರುಮಲಿ ರಾಜನು ತನಗೆ ಕಪ್ಪಕಾಣಿಕೆ ಸಂದಾಯ ಮಾಡಿ ಸರಣಾಗಬೇಕಂದು ಕವುಡಿಕೆ ಕರೀರನೆಂಬ ಧೂತನನ್ನು ನಿಜ್ಜಾಪುರದ ರಾಜನಲ್ಲಿಗೆ ಕಳುವಿದ್ದನಷ್ಟೆ. ಪರಮಾನಿನ ಮ್ಯಾಲ ತೊಂಬಲ ವುಗುಳಿ ಧೂತನ ತಲೆ ಬೋಳಿಸಿ ಸುಣ್ಣ ಹಚ್ಚಿ ಅರೆ ನಗ್ನನನ್ನಾಗಿ ಮಾಡಿ ವಾಪಾಸು ಕಳುವಿದ್ದ ನಿಜ್ಜಾಪುರದ ರಾಜನು ಜರಮಲಿಯೊಂದಿಗೆ ಕಾದಾಡಲಕ ತನಗೆ ಸಾವುರ ಮಂದಿ ಕಾಲಾಳನ್ನು ಬಾಡಿಗೆಗೆ ತುರ್ತಾಗಿ ಕಳುವಬೇಕೆಂದು ತನ್ನ ವಳಿತದ ಕುಂಪಣಿ ಅಧಿಕಾರಿ ಯಾದ ರೆಬೆರೋ ಯಂಬಾತನನ್ನು ವಳಗೊಳಗೆ ಕೇಳಿಕೊಂಡಿದ್ದನು. ದಿನಕ್ಕೊಂದೊತ್ತು ಸಸ್ಯಾಹಾರ, ಯರಡೊತ್ತು ಮಾವುಸಾಹಾರ, ರಾತ್ರಿಕುಡಿದು ಮಲಗಲಕ ಸೆರೆ ಮತ್ತು ತಲೆಗೊಂದೊಂದರಂತೆ ಅಯ್ದು ಬೆಳ್ಳಿ ರೂಪಾಯಿ ಕೊಡಬೇಕೆಂಬ ಕರಾರು ಮಾಡಿಕೊಂಡು, ಅದಕ ದಸಗತ್ತು ಮಾಡಿಸಿಕೊಂಡು ಅದೇ ಪ್ರಾಂತದೊಳಗೆ ಹುಟ್ಟಿ ಬೆಳೆದಿದ್ದ ಸಾವುರ ಸಂಖ್ಯೆಯ ಕಾಲಾಳುಗಳನ್ನು ದತ್ತೂರಾಮನೆಂಬ ಮರಾಠಿ ಸರದಾರನ ನೇತ್ರುತ್ವದಲ್ಲಿ ನಿಜ್ಜಾಪುರದ ದಿಕ್ಕಿಗೆ ಹರಿಬಿಟ್ಟಿದ್ದನು. ಯಿಂಥದೇ ಮನವಿಯನ್ನು ಜರುಮಲಿ ರಾಜನು ರೆಬೆರೋ ಮಾಶಯನಿಗೆ ಮಾಡಿಕೊಂಡಿರದೆ ಯಿರಲಿಲ್ಲ.. ಆತನಿಂದಲೂ ಪೊಗದಿ ಗೊತ್ತುಪಡಿಸಿ ಮುಂಗಡ ಬಾಬತ್ತು ವಸೂಲಿ ಮಾಡಿಕೊಂಡು ಅಷ್ಟೇ ಸಂಖ್ಯೆಯ ಕಾಲಾಳುಗಳನ್ನು ಜರುಮಲಿಯ ಹಾದಿಗುಂಟ ಹರಿಬಿಟ್ಟಿರದೆ ಯಿರಲಿಲ್ಲ.. ಸ್ಯಾಮುಸನ್ ಯಂಬಾತಗೆ, ವಳ್ಳಿಯಮ್ಮಯಂಬ ಕೊಂಗರ ತಾಯಿಗೆ ಹುಟ್ಟಿದ್ದಂಥ ರೆಬೆರೋ, ದ್ವಾಪರ ಕಾಲದ ಸಕುನಿಯ ಕಟ್ಟಾ ಅಭಿಮಾನಿಯಾಗಿದ್ದ ರೆಬೆರೋ ವುಭಯ ರಾಜರುಗಳಿಂದ ಸುಲ್ಕದ ರೂಪದಲ್ಲಿ ಪಡೆದಂಥಾ ಅಪಾರ ಹಣವನ್ನು ಕುಂಪಣಿ ಸರಕಾರದ ಬೊಕ್ಕಸಕ್ಕೆ ಸಂದಾಯ ಮಾಡಿ ತನ್ನ ಮೇಲಧಿಕಾರಿಗಳಿಂದ ಯಿಶೇಷ ಪ್ರಶಂಸೆಗೆ ಪಾತ್ರನಾದನು.

ಅತ್ತ ಮದ್ದಿಕೇರಿ ಸಮುಸ್ಥಾನದ ಹಣಕಾಸಿನ ಪರಿಸ್ಥಿತಿ ಸತ್ತುಸಮ್ಮಾರಯಾಗ

ಮುಗಿದ ವ್ಯಾಲ ಯಷ್ಟು ಹದಗೆಟ್ಟಿತೆಂದರೆ ವಂದಿಮಾಗದವರಿಗೆ, ರಾಜನರ್ತಕಿಯರಿಗೆ ಭಕ್ಷೀಸು ಕೊಡಲಾರದಷ್ಟು ಹದಗೆಟ್ಟುಬಿಟ್ಟಿತ್ತು. ದುಬಾರಿಯ ಸತ್ರುಸಮ್ಮಾರ ಯಾಗ ಮಾಡಬೇಕೆಂಬ ಯಿರಾದೆ ರಾಜ ಕದಿರೆ ನಾಯಕನಿಗೆ ಖಂಡಿತ ಯಿರಲಿಲ್ಲ.. ಆಸ್ಥಾನ ಪುರೋಹಿತರಾದ ಸಿವಸಂಕರ ಸಾಸ್ತ್ರಿಗಳು ತಮ್ಮ ಬಂಧು ಬಳಗ ನೆಂಟರಿಷ್ಟರ ಜೀವನದ ಜೀರ್ಣೋದ್ಧಾರ ಮಾಡುವ ಸಲುವಾಗಿ ಯಿಂಥದೊಂದು ಸಲಹೆಯನ್ನು ತಮ್ಮ ನಾಯಕನ ಮುಂದಿಟ್ಟು ಅದರಿಂದಾಗುವ ಲವುಕಿಕ ಪ್ರಯೋಜನಗಳನ್ನು ಯಿವರಿಸಿ ವಪ್ಪುವಂತೆ ಮಾಡಿದ್ದರು. ದ್ವಾಪರಯುಗದಲ್ಲಿ ಪಾಂಡವರು ಮಾಡಿದ್ದ ರಾಜಾಸೂಯಯಾಗಕ್ಕೆ ಸರಿಸಮನಾದ ಸತ್ರುಸಮ್ಮಾರ ಯಾಗ ಯಂದರ ಸಣ್ಣ ಬಾಬತ್ತಿನದೇನು? ನವರಾತ್ರಿಗಳುದ್ದಕ್ಕೂ ನಡೆದ ಯಾಗಕ್ಕೆ ಯಷ್ಟು ಖರ್ಚಾಯಿತು? ಯೇನು ಕಥಿ? ಸಾವಿರದಾವಂದು ಬ್ರಾಹ್ಮಣರಿಗೆ ಧನಕನಕ ವಸ್ತ್ರಗಳನ್ನು ದಾನ ಮಾಡಲಾಯಿತಲ್ಲದೆ ಭೂರೀ ಭೋಜನದ ಯವಸ್ಥೆಯನ್ನು ಕಂದನೂಲು ಸ್ರೀಕರಾಚಾರ್ಯರ ನೇತ್ರುತ್ವದಲ್ಲಿ ಮಾಡಲಾಗಿತ್ತು. ಅಂದಮೇಲೆ ಹಣಕಾಸಿನ ಪರಿಸ್ಥಿತಿ ಚಿಂತಾಜನಕವಾಗದಿದ್ದೀತೇನು? ಭಕ್ಷೀಸು ಕೊಡೋ ಯಿಷಯದಲ್ಲಿ ರಾಜ ಕಯ್ಯಿ ಹಿಡಿದಿದ್ದರಿಂದಾಗಿ ವಂದಿಮಾಗಧರು ಹೊಗಳೋ ಯಿಷಯದಲ್ಲಿ ಗಂಟಲು ಬಿಗಿದರು. ರಾಜನರ್ತಕಿಯರು ರಾಜನಲ್ಲಿ ಹರೆಯ ಮರುಕಳಿಸುವಂತೆ ನೃತ್ಯ ಮಾಡದಾದರು. ಆಡೋ ಹುಡುಗರು ಸುಲಭವಾಗಿ ಯತ್ತಬಹುದಾದಷ್ಟು ಅರಮನೆಯ ತಿಜೋರಿಯು ಹಗುರಾಗಿಬಿಟ್ಟಿತ್ತು. ಯಿದೆಲ್ಲ ಯಂದಿನಂತೆ ಸಾಂಗೋಪಸಾಂಗವಾಗಿ ನಡೆಯಬೇಕಾದರೆ ತಾನು ಹೆಂಗಾದರೂ ಮಾಡಿ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುವಂತೆ ಮಾಡಬೇಕು.. ಗುತ್ತಿಗೆ, ತೆರಿಗೆಗಳಿತ್ಯಾದಿಗಳನ್ನು ದುಪ್ಪಟ್ಟು ಮಾಡಬೇಕೆಂದರೆ ರಾಜ್ಯದೊಳಗೆ ಸಕಾಲಕ್ಕೆ ಮಳೆ ಬೆಳೆ ಆಗದ ಕಾರಣದಿಂಗಾಗಿ ಪ್ರಜೆಗಳು ವಂದೊತ್ತು ವುಂಡು, ವಂದೊತ್ತು ವುಪಾಸಯಿರುವರು. ಕುಂತಳ ಸೀಮೆಯೊಳಗಿರುವಂಥ ಯಲ್ಲಾಪ್ರಕೊರಚರಟ್ಟಿಯು ತಮ್ಮ ರಾಜ್ಯದೊಳಗಿಲ್ಲ. ಹಿಂದೆ ಪಡೆದಿರುವುದನ್ನು ಬಡ್ಡಿ ಸಮೇತ ಚುಕ್ತಾ ಮಾಡದ ಹೊರತು ಕುಂಪಣಿ ಸರಕಾರವು ವಂದು ದಮ್ಮಡಿಯನ್ನೂ ನೀಡುವುದಿಲ್ಲ.. ಯಂದು ರಾಜ ಕದಿರೆಪ್ಪನಾಯಕ ಚಿಂತಿಸಿ ಕಳವಳಗೊಂಡನು.

ಬಲಿಪಾಡ್ಯದ ಯಿಶೇಷ ಪೂಜೆ ಮಾಡಲಕೆಂದು ಬಂದಿದ್ದ ಸಿವಸಂಕರ ಸಾಸ್ತ್ರಿಗಳನ್ನು ಯೇಕಾಂತಕ್ಕೆ ಬರಮಾಡಿಕೊಂಡು ಯಲ್ಲಯಿವರಿಸಿ ಅರಮನೆಯ ಹಣಕಾಸಿನ ಪರಿಸ್ಥಿತಿ ಹದಗೆಡಲು ಕಾರಣಕರ್ತರಾದ ನೀವೇ ಹಣ ಹರಿದು

ಬರೋ ಹಾದಿ ಹುಡುಕಿಕೊಡಬೇಕೆಂದು ಕೇಳಿಕೊಂಡನು. ಆಗ ಸಾಸ್ತ್ರಿಗಳು ಜೊನ್ನಗಿರಿ, ಯದ್ದುಲದೊಡ್ಡಿ, ಕರಿಯೇಮುಲ, ಸಿಂಗನಮಲ, ಯಾಡಕಿತಾಂಡ ಯಿವೇ ಮೊದಲಾದ ಮೂರುಗಳಿಂದ ಬಂದು ಆಸ್ರಯ ಪಡೆದಿರುವಂಥ ಸಾವುರಗಟ್ಟಲೆ ಹೆಣ್ಣು ಗಂಡುಗಳನ್ನು ಯಿಟ್ಟುಕೊಂಡು ಸಾಕುವುದು ದಂಡವೆಂದೂ, ಅವರನ್ನು ಯಿಂಥಿಂಥ ಕಡೆ, ಯಿಷ್ಟಷ್ಟಕ್ಕೆ ಯಿಲೇವಾರಿ ಮಾಡಿ ಧನವಂತನಾಗಬೇಕೆಂದೂ ಸಲಹೆ ನೀಡಿದರು. ಅದು ನಾಯಕನಿಗೆ ತುಂಬಾ ಹಿಡಿಸಿತು. ತನ್ನಲ್ಲಿದ್ದ ಸಂತರಸ್ತ ಮಂದಿಯಲ್ಲಿ ಹೆಣ್ಣಾಳೆಷ್ಟು ಸಂಖ್ಯೇ ಲಿದ್ದಾರೆ? ಗಂಡಾಳು ಯಷ್ಟು ಸಂಖ್ಯೆಯಲ್ಲಿದ್ದಾರೆ? ಅವರವರ ವಯಸ್ಸು, ತೂಕ ಯಿತ್ಯಾದಿ ಯಿವರಗಳನ್ನು ಗುಟ್ಟಾಗಿ ಸಂಗ್ರಹಿಸಿದನು. ದೂತರನ್ನು ಕಳಿಸಿ ಸುತ್ತನ್ನಾಕಡೇಲಿಂದ ಶ್ರೀಮಂತ ರನ್ನೂ, ಕುಂಪಣಿ ಸರಕಾರದ ಅಧಿಕಾರಿಗಳನ್ನೂ ಫಲನಾ ದಿವಸದಂದು ಮದ್ದಿಕೇರಿಗೆ ಬರಮಾಡಿ ಕೊಂಡನು. ವಯಸ್ಸು, ಬಣ್ಣ, ಅಗಲೆತ್ತರದ ಆಧಾರದ ಮ್ಯಾಲ ಯಿಂಥಿಂಥೋರ ಮುಖ ಬೆಲೆ ಯಿಷ್ಟಿಷ್ಟೆಂದೂ, ಸೇಕಡಾ ಹತ್ತರಷ್ಟು ಭಾಗವನ್ನು ಸೋಡಿ ಬಿಡುವುದಾಗಿಯೂ ಹೇಳಿ ಜೀವಂತ ಸರಕುಗಳನ್ನು ತೋರಿಸಿದನು. ಅತಿಥಿಗಳು ತಮ ತಮ್ಮ ಯೋಗ್ಯತೆ, ಅಭಿರುಚಿ, ಅಂತಸ್ತು ಪ್ರಕಾರ ಯಿಂಥಿಂಥೋರು ತಮಗೆ ಬೇಕೆಂದು ಹೇಳಿ ಮುಂಗಡ ಕೊಟ್ಟರು. ಫಲಾನ ದಿವಸ ನಿಮ ನಿಮ್ಮ ಸರಕುಗಳನ್ನು ನಿಮ ನಿಮಗೆ ತಲುಪಿಸುವುದಾಗಿ ಹೇಳಿದ್ದಲ್ಲದೆ ಚೆನ್ನಾಗಿ ನೋಡಿಕೊಳ್ಳಬೇಕೆಂದೂ ಕಳಕಳಿಯಿಂದ ಕೇಳಿಕೊಂಡನು. ಅವರೆಲ್ಲ ಅತ್ತ ಹೋದ ನಂತರ ಬಿಕರಿಗೊಂಡಿದ್ದಂಥ ಹೆಣ್ಣಾಳು ಗಂಡಾಳುಗಳಿಗೆ ವುಡಲಕ ಕೊಡುತ, ತಿಂಬಲಕ ನೀಡುತ ನೀವೆಲ್ಲ ನನಗೆ ಮಕ್ಕಳಿದ್ದಂಗೆ.. ಯಂದು ಹೇಳುತ ಗದ್ಗದಿತನಾಗಿ ಕಣ್ಣಲ್ಲಿ ನೀರು ತಂದುಕೊಂಡನು.. ಆಗ ಪಕ್ಕದಲ್ಲಿದ್ದ ಸಾಸ್ತ್ರಿಗಳು ತಮ್ಮ ಕಂಕುಳಿಂದ ಹೊರತೆಗೆದ ಹೊತ್ತಿಗೆಯು ಮನುಸ್ಮೃತಿ ಆಗಿತ್ತು.. ಅದರೊಂದಿಗೆ ಸ್ರೀಕ್ರುಷ್ಣ ಪ್ರಣೀತ ಭಗವದ್ಗೀತೆಯೂ ಆಲಾಪನ ಮಾಡುತಲಿತ್ತು.

ಯಿತ್ತ ಕುದುರೆಡವು ಪಟ್ಟಣದೊಳಗೆ ಹಗಲು ಪಾವಲಿ ಭಾಗ, ಯಿರುಳು ಮೂರು ಪಾವಲಿ ಭಾಗ. ಯಿರುಳಿಗೆ ಹೊಸ ಕಳೆ ಬಂದಿತ್ತು. ಸೂರ್ಯ ಹುಟ್ಟಿದಾಗ ವಂದ ನಮೂನಿ ಯಿರುಳು.. ಮುಳುಗಿದಾಗ ಯಿನ್ನೊಂದು ನಮೂನಿ ಯಿರುಳು.. ಕಣ್ಣು ತೆರಕೊಂಡರೂ ವಂದೇ.. ಕಣ್ಣು ಮುಚ್ಚಿಕೊಂಡರೂ ವಂದೆಯಾ.. ಗಂಡ ಸೇರದ ಹೆಣ್ಣು ಗುಂಡುಕಲ್ಲಿಗೆ ಸಮವಂತೆ. ಸದರಿ ಪಟ್ಟಣದೊಳಗೆ ತನ್ನ ಕಷ್ಟ ಕೇಳುವವರಿಲ್ಲ, ಸಮಾಧಾನ ಹೇಳುವವರಿಲ್ಲ. ಗಂಡ ಹೆಂಡರನು ವಂದು

ಮಾಡುವವರಿಲ್ಲ.. ನೀನು ಪಡಕೊಂಡು ಬಂದಿರೋದೇ ಯಿಷ್ಟು ಕನವ್ವಾ.. ನೀನು ಹ್ವಾದ ಜೆಲುಮದಲ್ಲಿ ಮಾಡಿರೋ ಕರುಮವನ್ನು ಯೀ ಜಲುಮದಲ್ಲಿ ತೀರಿಸಬೇಕಯ್ತವ್ವಾ.. ನೀನು ಬಲ, ನಿನ ಗಂಡ ಬಲ ಕನವ್ವಾ.. ಮಾರೊಳಗಿದು ಕೊಂಡು ವನವಾಸ ಅನುಬೋಸವ್ವಾ.. ಮಂದಿ ನಡುವೆ ಯಿದುಕೊಂಡು ಅಗ್ನಾತ ವಾಸ ಅನುಭೋಸವ್ವಾ.. ನಿನ್ನ ಸರೀರದೊಳಗೆ ಮೋಬಯ್ಯ ಅದಾನಂದರ ಅದಾನವ್ವಾ.. ಯಿಲ್ಲಾಂದರ ಯಿಲ್ಲಕನವ್ವಾ.. ನಿನಗೂ ಅವಗೂ ನಡುವೆ ಅಲವುಕಿಕ ಮಾಯ ಮುಸುಕಯ್ತವ್ವಾ.. ಅದು ಕರಗದ ಹೊರತು ನಿನ್ನ ಕಣ್ಣೊಳಗಿನ ವುದುಕ ಬತ್ತೋದಿಲ್ಲವ್ವಾ.. ಮುಂದ ವಂದಲ್ಲಾ ವಂದಿವಸ ಗಂಡ ಹೆಂಡಿರು ವಂದಾಗುತೀರವ್ವಾ.. ಅಲ್ಲಿಗಂಟಾ ಜೀವ ಹಿಡಕಳ್ಳವ್ವಾ.. ಕಣ್ಣೀರು ಸುರಿಸಿ ಕಲ್ಲು ಕರಗಿಸವ್ವಾ.. ಕರುಣೆ ಹುಟ್ಟಿಸವ್ವಾ.. ಹಿಂಗ ವಬ್ಬಬ್ಬರದು ವಂದಂದು ಮಾತು....

ಬೇಯಿನ ವರದವ್ವನ ಬುಡದಲ್ಲಿ ಜಗಲೂರೆವ್ವ ಮಲಗವಳಂದರ ಮಲಗವಳೆ, ಕಣ್ಣು ಮುಚ್ಚವಳಂದರ ಮುಚ್ಚವಳೆ.. ವಡಲೊಳಗೆ ಮಣ ಮಣ ಸಂಕಟ ತುಂಬಿಕೊಂಡಿರೋ ಆಕೆಯ ಕಣ್ಣಿಗೆ ಗಪ್ಪಂತ ನಿದುರೆ ಹತ್ತುವಲ್ಲದು.. ಚಣಚಣಕೊಂದಾವರ್ತಿ ಮಗ್ಗುಲು ಮ್ಯಾಲ ಮಗ್ಗುಲು ಬದಲಾಯಿಸುತ ತನಗೆ ತಾನು ಮರುಗುತ, ನಿಂದಿಸಿಕೊಳ್ಳುತ ರೆಪ್ಪೆಗೆ ರೆಪ್ಪೆ ಅಂಟಿಸೋದು, ತೆರೆಯೋದು ಮಾಡುತವಳೆ.. ಕಣ್ಣೀರು ಹನದೂ ಹನದೂ ನೆಲ ವಜ್ಜಲು ಮಾಡುತವಳೆ, ಸಿವಸಂಕರ ಮಾದೇವಾss..

ಮಂದಿ ಯಂಬುವ ಮಂದಿ ತನ್ನನ್ನು ನಡೋ ನೀರಿನಾಗ ಕಯ್ಯ ಬಿಟ್ಟಾರ.. ಆದರ ಅನುಗಾಲ ದಿಕ್ಕುಗಳಿಗೆ ದಿಕ್ಕು ತೋರಿಸೂತ.. ಆಕಾಸ ಮಾರಗದಲ್ಲಿ ಮಿಣುಕು ಮಿಣಕು ಮಿನುಗೂತಲಿರುವ ಚುಕ್ಕಿಗಳಿಗಾರ ತನ ಮ್ಯಾಲ ಕನುಕರ ಯಿಲ್ಲದಂಗಾಯ್ತಲ್ಲ.. ಅವುಗಳ ಮ್ಯಾಲ ತಾನು ಬಿದ್ದು ಸಾಯುತಿದ್ದೆನಲ್ಲಾ.. ವಂದೊಂದು ಚುಕ್ಕೀನ ವಾತಿನೇಣಿಯಿಂದ ಭೂಮಿಗಿಳಿಸಿಕೊಂಡು ಬಂದು ಕಥಿ ಕಟ್ಟಿ ಹೇಳುತ್ತಿದ್ದೆನಲ್ಲಾ.. ನೆಲ ಮುಗುಲ ನಡುವಿನ ದೂರ ಕಮ್ಮಿ ಮಾಡಿದ್ದೆನಲ್ಲಾ.. ತನಮ್ಯಾಲ ಅವುಕಾರsss....

ಹ್ಯಾಂಗ ಯಿಳುದು ಬರೋದೇ ತಾಯಿss.. ನೀನು ತಿಳಕೊಂಡಿರೋವಷ್ಟು ಭೂಮಿ ನಮಗ ಸನೇವಿಲ್ಲ.. ವಂದರ ಮುಂದ ಲಕ್ಷ ಸೊನ್ನೆಗಳನ್ನಿಟ್ಟರೆ ಯಷ್ಟಾಗತಯ್ತೋ ಅಷ್ಟು ದೂರ ಅದೀವಿ ಕನವ್ವಾ.. ನಮ್ಮ ಕಣ್ಣಿಂದ ವುದುರೋ ನೀರು ನೆಲಕ ತಗಲಲಕ ಯ್ಯೋಸೋ ವರುಷ ತಗಂತಯ್ತೆ ಕನವ್ವಾ.. ನಾವಾಡೋ ಮಾತು ನಿನ ಕಿವಿ ತಗಲಲಕ...

ಆಕಾಸದ ಕರಿಗಂಬಳಿ ಮ್ಯಾಲ ಕಾಳು ಕಡಿ ವಣಹಾಕಿದಂಗಿದ್ದ ಚುಕ್ಕಿ ನಕ್ಷತ್ರಗಳು ಯಿದ್ದವು. ಅವುಗಳನು ಮಾಯಾದ ಪಕ್ಷಿಗಳು ಬಂದು ಗುಳುಂ ಗುಳುಂ ಅಂತ ನುಂಗಿಯಾವು ಯಂದು ಚಂದ್ರಾಮ ತನ ಕಯ್ಯೊಳಗ ಬೆಳದಿಂಗಳ ಬಡಿಗೆ ಹಿಡಕೊಂಡು ಕಾಯಕಂತ ಯಿದ್ದನು. ಆಕೆಯ ದುಕ್ಕ ಕಂಡು ಮರುಗದೆಯಿರಲಿಲ್ಲ ಚಂದ್ರಾಮ.

ಆಕಾಸದ ಚುಕ್ಕಿಗಳಿಗೂ ದುಕ್ಕ ತಡಕೊಳ್ಳಲಾಗುತ್ತಿಲ್ಲ.. ಅಮೂಮಿಣಕೂ ಮಿಣಕೂ ಅಂತ ದುಕ್ಕ ಮಾಡುತಲಿದ್ದವು.

ಅವುಗಳ ಪಯ್ಕಿ ಒಂದು ದಂಡೆಗೆ ವಡತಿಯಾಗಿದ್ದ ಸಿವಸರಣೆ ಚನ್ನವ್ವ ತಾನೆಷ್ಟಿದ್ದರೂ ವಂದಾನೊಂದು ಕಾಲದಲ್ಲಿ ಕಾಳಿಂಗರಾಯನ ಧರುಮ ಪತ್ನಿಯಾಗಿದ್ದಾಕಿ, ಪಡಬಾರದ ಕಷ್ಟ ನಷ್ಟ ಅನುಭವಿಸಿ ಬದುಕನು ತೇದಿರುವಾಕಿ, ಪುಣ್ಯದ ಫಲವಾಗಿ ತಾನು ಚುಕ್ಕಿಯಾಗಿ ಆಕಾಸಕ್ಕ ಸೋಭೆ ತಂದಂಥಾಕಿ. ಮೂರು ಗಾವುದವುದ್ದದ ತನ್ನ ಕಥೆಯನ್ನು ಹಾಡುಕಟ್ಟಿ ಹಾಡುತ ಅಜರಾಮಗೊಳಿಸಿದಂಥಾಕಿಯಾದ ಜಗಲೂರವ್ವ ಅಂದರ ಆಕೆಗೆ ಯಷ್ಟೋ ಕಕ್ಕುಲಾತಿ. ಯಾವಾಕಿ ನೂರು ಕಾಲ ಸುಖವಾಗಿರಬೇಕಂತ ತಾನು ಅನುಗಾಲ ಬಯಸುತ್ತಿದ್ದಳೋ ಅಂಥಾಕೆ ಕುಂತಲ್ಲಿ ವನವಾಸ, ನಿಂತಲ್ಲಿ ಅಗ್ನಾತವಾಸ ಅನುಭೋಸುತ್ತಿರುವುದನ್ನು ನೋಡುತ... ಅಯ್ಯೋ, ಯಿಂಥ ಸಾಧ್ವಿಗೆ ಯಂಥ ಗತಿ ವದಗಿರುವದಲ್ಲಾ ಯಂದು ಮರುಗುತ ತಾನು ಪಡಬಾರದ ಸಂಕಟ ಪಡುತಲಿದ್ದಳು. ತಾನು ಹೆಂಗಾದರೂ ಮಾಡಿ ಆಕೆಯ ಸಂಕಟವನ್ನು ಪರಿಹಾರ ಮಾಡಬೇಕೆಂದು ನಿರ್ದರಿಸಿದಳು. ಯಡಗಯ್ಲಿ ಬೆಳಕಿನ ಬೆತ್ತವ ಹಿಡಿದು, ಬಲಗಯ್ಲಿ ಜೋಳಿಗೆ ಹಿಡಿದು ಪುಣ್ಯದ ಬಿಕ್ಷೆ ಹಾಕಿಸಿಕೊಳ್ಳುತ ಚುಕ್ಕಿಯಿಂದ ಚುಕ್ಕಿಗೆ ಅಡ್ಡಾಡುತಲಿದ್ದ ಆಕೆಯು ಪುರನರನು, ಗರಧರನು ಆಗಿದ್ದ ಪರಸಿವನಲ್ಲಿಗೆ ಹೋಗಿ ಕಯ್ನ ಮುಕ್ಕಂಡು ನಿಂತಳು. ಯೇಟೋ ಹೊತ್ತಾದ ಮ್ಯಾಲ ನೀಲಕಂಠನು ಕಣ್ಣು ತೆರೆದು ನೋಡಿ ಯಾಕ "ತಾಯಿ ಮುಖ ಮಾರೀನ ಸಪ್ಪಗೆ ಮಾಡಿಕಂಡಿದ್ದೀಯಾ?" ಯಂದು ಯಿಚಾರಿಸಿದನು. ಅದಕಿದ್ದು ಸರಣೆಯು "ಯೇನಪ್ಪಾ ಪರಮೇಸುರss.. ವಪ್ಪ ಮೋರಣದ ವುಪ್ಪರಿಗೆ ಮ್ಯಾಲ ಕುಂತಿರೋ ನಿನಗ ಭೂಲೋಕದಲ್ಲಿ ನರಮನುಶೋರು ಮಾಡುತ್ತಿರೋ ದುಕ್ಕ ಕೇಳಿಸದೇನು ತಂದೆಯೇ?" ಯಂದು ಕೇಳಿದ್ದಕ್ಕೆ ಭವಭಯಹರನು "ಯಾಕ ಕೇಳಿಸುವದಿಲ್ಲವ್ವಾ.. ಕೇಳಿಸತಯ್ತೆ.. ನನ್ನ ಗಮನಕ್ಕ ಬಾರದಿರೋದು ಯಾರಿದ್ದಾರವ್ವಾ?" ಯಂದು ಆಗ್ಗೆ ಭೂರಿ ಭೋಜನ ವುಂಡು, ಯಂಜಲಗಯ್ನ ತೊಳಕೊಂಡು ತ್ಯಾವವನ್ನು

ಹುಲಿ ಚರುಮಕ ವರಸಿಕೊಂಡು ಯಲಡಕೆ ನಮಲುತ್ತ ಗಂಧದ ಮರದಡೀಲಿ ಗದ್ದುಗೆ ಮ್ಯಾಲ ಯಿರಾಮವಾಗಿ ಕೂಕಂಡಿದ್ದ ಆ ಜಗನ್ನಾಥನು ಆಚ್ಚರ್‍ಯಪಟ್ಟು ಕೇಳಿದನು. ಆಗ ಚನ್ನವ್ವನು "ಅಗೋ ಅಣುಕಿ ನೋಡಲ್ಲಿ.. ಭೂಲೋಕಕ್ಕಧಿಕವಾಗಿ ಕುಂತಳ ದೇಸ ವಂದಯ್ತಲ್ಲ.. ಆ ಕುಂತಳ ದೇಸಕ್ಕಧಿಕವಾದ ಕುದುರೆಡವು ಪಟ್ಟಣ ವಂದಯ್ತಲ್ಲ.. ಆ ಕುದುರೆಡವು ಪಟ್ಟಣಕ್ಕಧಿಕವಾಗಿ ಥೆಳಗೇರಿ ವಂದಯ್ತಲ್ಲ.. ಆ ಥೆಳಗೇರಿಗೆ ಛತ್ರಿಚಾಮರ ಹಿಡದಂಗ ಬೇಯಿನ ಮರ ಮೊಂದಯ್ತಲ್ಲ.. ಆ ಮರದಡೀಲಿ ಜಗಲೂರೆವ್ವ ಯಂಬ ಸಾದ್ವಿಯು ಗಂಡನಿದ್ದೂ ರಂಡೆಯಾಗಿ, ಯಂಜಲೆಲೆಯಂಥಾಗಿ ದುಕ್ಕ ಮಾಡುತ್ತಿರುವಳು.. ನೋಡು" ಯಂದು ಬೊಟ್ಟು ಮಾಡಿ ತೋರಿಸಿದಳು. ಪರಮಾತುಮನು ಆಕೆ ಮಾಡಿದ ಬೊಟ್ಟಿನ ಗುಂಟ ಹೋಗಿ ನೋಡಿಯೂ ನೋಡದವನಂಗೆ "ನನ್ನ ಪರಮ ಭಕುತೆಯಾದ ಚನ್ನವ್ವನೇ.. ಚಿತ್ತಯಿಟ್ಟು ಕೇಳು ತಾಯಿss ತಿರುಗಾಡಿ ತಿರುಗಾಡಿ ಪಾದ ನೊಂದವವ್ವಾ.. ಕೊಟ್ಟೂ ಕೊಟ್ಟೂ ಕಯ್ಯಿಗಳು ನೊಂದಾವವ್ವಾ.." ಎನ್ನಲು ಆಕೆಯು "ಕಾಲನೊಂದರ ಹಿಜಗತೀನಪ್ಪಾ.. ಆದರ ನೀನು ಮಾತ್ರಜಗಲೂರವ್ವನ ದುಕ್ಕ ಕಮ್ಮಿ ಮಾಡಬೇಕಪ್ಪಾ" ಯಂದೆನ್ನಲು, ಅದಕಿದ್ದು ಆ ಸಾಯಿರ ಸರುಪಗಳ ಸರದಾರನು "ನನ್ನ ಮನೆ ವಳ ಹೊರಗ ಕಸ ಮುಸುರೆ ಮಾಡೋರಿಲ್ಲ.. ನಂದೇ ನನಗ ಮಸ್ತುದಗದ ಅಯ್ತೆ.. ನಾನು ಯೀರೇಳು ಲೋಕಕ ಮರುಗಬೇಕು.. ಆದರ ಯೀರೇಳು ಲೋಕದೊಳಗ ನನಗ ಮರುಗೋರು ಯಾರಿದ್ದಾರ ನೀನೇ ಹೇಳು ತಾಯಿ" ಯಂದೆನ್ನಲು ಅದಕಿದ್ದು ಆಕೆಯು "ಯಾಕಿಲ್ಲಪ್ಪಾ.. ನಾನೇ ನಿನ್ನ ಚಾಕರಿ ಮಾಡತೇನ.. ಆದರ ನೀನು ಮಾತ್ರಜಗಲೂರೆವ್ವನ ದುಕ್ಕ ಕಮ್ಮಿ ಮಾಡಲಕ ಬೇಕಪ್ಪಾ.." ಯಂದು ಜವಾಬಿಗೆ ಯದುರು ಜವಾಬನ ಕೊಡುತ ಅಂದಳು. ಹಿಂಗ ಅವರಿಬ್ಬರ ನಡುವೆ ವಾದ ಪ್ರತಿವಾದ ನಡೆಯಿತು. ವಬ್ಬರೂ ಸೋಲುವಲ್ಲರು, ವಬ್ಬರೂ ಮಣಿವಲ್ಲರು, ಕೊನೀಕಿದ್ದು ಚನ್ನವ್ವನು "ಹಿಂಗ ನೀನು ನೆಪ ಹೇಳಿ ಜಾರಿಕೊಂಡರ ನಾನು ನನ್ನ ಪಾತೀವ್ರತ್ಯದ ಅಸ್ತರವನ್ನು ನಿನ ಮ್ಯಾಲ ಪ್ರಯೋಗ ಮಾಡಬೇಕಾಗತಯ್ತೆ.. ಅದರ ಮ್ಯಾಲ ನಿನ್ನಿಷ್ಟ" ಯಂದು ನಿಷು«ರವಾಗಿ ಅಂದುಬಿಟ್ಟಳು. ಅದನು ಕೇಳಿ ಹೆದರಿದ ಸಿವನು "ಮಾ ಪತಿವ್ರತೆಯಾದ ನೀನೆ ಹಿಂಗಾಡಿದರ ಹೆಂಗ ಕನವ್ವಾ.. ಕಲಿ ಕಾಲ ಬಂತೂ ಬಂತು ನನ ನಸೀಬ ನೆಟ್ಟಗಿಲ್ಲದಂಗಾಗಯ್ತೆ, ಕಲಿಯ ತಿಕ್ಕಡಿ ನನಗೂ ಬಡಕೊಂಡಯ್ತೆ.. ಕೊಡೋದು ಕಾಪಾಡೋದೆಲ್ಲ ದ್ವಾಪರಕ ಮುಗುದು ಹೋಯ್ತು ತಾಯಿ.. ಜಗಲೂರೆವ್ವ ನಿನ್ನಂಗ ಸರಣೆ

ಅದಾಳ.. ಆಕೆ ಬಿಡುತಿರೋ ವಂದೊಂದುಸುರು ನನ್ನೆದೆಗೆ ಬಡೀತಯ್ತೆ.. ಆಕೆ ಮಾಡುತಿರೋ ದುಕ್ಕ ನನ್ನ ಕಿವಿಗೆ ಅಟೀತಯ್ತೆ.. ಆದರ ಯೇನು ಮಾಡಲವ್ವಾ.. ಅದು ಆಕೆಯ ಪೂರುವಾರ್ಜಿತ ಕರುಮ ಅಯ್ತೆ. ಆಕೆಗೆ, ಆಕೆಯಂಥವರಿಗ ಪಾಠ ಕಲಸಲಕೆಂದೇ ಆದಿಸಗುತಿಯು ಭೂತಪ್ರೇತಾದಿ ಗಣಗಳೊಂದಿಗೆ ಆಕೆಯ ಗಂಡನಾದ ಮೋಬಯ್ಯನ ಸರೀರದೊಳಗ ವಸ್ತಿ ಮಾಡಿದ್ದಾಳಂತೆ.. ಜಮಾ ಬಂದಿಕಾರ್‍ಯೇವ ಸುರುವು ಮಾಡುತಾಳಂತೆ.. ಅಲ್ಲೀತನಕ ಆಕೆ ದುಕ್ಕ ಮಾಡಲಕ ಬೇಕು.. ತಪ್ಪಿದ್ದಲ್ಲ..” ಯಂದು ಯಿವರಿಸಿದನು. ಅದಕಿದ್ದು ಸರಣೆ “ಆದಿಸಗುತಿ ಅಂದರ ನಿನಗ ಖಾಸಾ ಹೆಂಡತಿ ಆಗಬೇಕಲ್ಲಪ್ಪಾ.. ಖುದ್ದಾಗಿ ನೀನೇ ಆಕೆಗೆ ಬುದ್ದಿ ಹೇಳಬಾರದೇನು?” ಯಂದು ಹೇಳಿದ್ದಕ್ಕೆ ಸಿವನು “ಅದು ಆಗದ ಮಾತವ್ವಾ.. ಆಕೆ ಮಾ ಕೋಪಿಷೆ« ಅದಾಳ.. ಆಕೆ ಯದುರು ನಾನೆಷ್ಟರವನು?” ಯಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡನು.. “ಸರೆ ಬಿಡಪ್ಪ” ಯಂದಲ್ಲಿಂದ ವಾಪಸಾದ..

ಚನ್ನವ್ವ ಸಾವುರ ಬಯಲ ಹಾದಿ ಕಲೆಯುವ ಕಡೆ ನಿಂತುಕೊಂಡಳು. ತನ್ನನ್ನು ಹಾಡುಕಟ್ಟಿ ಅಜರಾಮರಗೊಳಿಸಿರುವ, ಹೆಣ್ಣುಮಕ್ಕಳಿಗೆ ಆದರ್ಸಪ್ರಾಯ ಯೆನಿಸಿರುವ ಜಗಲೂರವ್ವಗೆ ತಾನು ಆಸರೆಯಾಗಿ ನಿಲ್ಲಬೇಕು ಯಂದು ನಿರ್ಧರಿಸಿದಳು. ಭೂಮ್ತಾಯಿ ಯಲ್ಲಿದಾಳ ಯಂದು ಹುಡುಕೂತ ಪ್ರಯಾಣ ಹೊಂಟಳು. ಆಕಾಸ ಮಾರಗದಲ್ಲಿ ತಾನು ನಡೆಯುತ್ತಿರಬೇಕಾದರ ಹಾದಿಲೀ ರತುನ ಕೊಳ, ಮುತ್ತಿನ ಕೊಳ ತುಳುಕಿದಂತಾದವು, ಅವನ್ನೆಲ್ಲಾ ತನ್ನ ಮೂನ್ನೂರಾ ಮುವ್ವತ್ತು ಮೂರು ಗಾವುದ ವುದ್ದದ ಕಯ್ಯಿಗಳನು ಚಾಚಿ ಸರಿಸುತ ಮುಂದ ಮುಂದಕ ನಡೆದಳು. ತನ್ನ ಪಾಡಿಗೆ ತಾನು ಹೋಗುತ್ತಿರಬೇಕಾದರ ತನ್ನ ಹೆಸರಗುಂಟ ಯಾರೋ ಕೂಗಿದಂಗಾತು, ಅದರೊಟ್ಟಿಗೆ ಭೂಮಿಯೋಟ ಗಲದ ಜಾಗಟೆ ಭಾರಿಸಿದಂಗಾತು, ಪಾತಾಳ ಗಾತುರದ ಗಂಟೆ ಬಡದಂಗಾತು, ವಯಕುಂಠ ತೂಕದ ಸಂಖ ಮೊದಿದಂಗಾತು. ತಿರುಗಿ ನೋಡಿದಳು, ಯದುರಿಗೆ ಸತಸಹಸ್ರಸ್ಪಟಿಕ ಲಿಂಗಗಳು ಕೋರಯಿಸು ತಿರುವಂಥ ದ್ರುಸ್ಯವು, ವಂದು ನದಿ ಯಿನ್ನೊಂದು ನದಿಯೊಳಗ ಜಳಕ ಮಾಡುತ್ತಿರುವಂಥ ದ್ರುಸ್ಯವು, ಅಷ್ಟಾಶಿತಿ ಸಹಸ್ರರುಷಿಗಳು ಯೇಕಾಗಿ ನಿಂತಿರುವಂಥ ದ್ರುಸ್ಯವು, ನಾಮ ರೂಪ ಕ್ರಿಯಾ ಕಲಾಪಗಳ ಜಾಲ ಪ್ರಭಾವದೊಳಗೆ ನಿಂತಿರುವ ಯಕ್ತಿ ಕಡೇಕ ತಿಬ್ಬಳಿಸಿ ನೋಡಿದಳು. ಆಕೆ ಹೆಣ್ಣು ಹೆಂಗಸು ಯಂದು ಖಾತರಿ ಮಾಡಿಕೊಂಡಳು. ಗುರುತು ಸಿಗಲಿಲ್ಲ. ಹುಬ್ಬಿನ ಮ್ಯಾಲ ಕಯ್ಯಚ್ಚಿ ಕಣ್ಣಿಗೆ ಮಬ್ಬು ಕವಿಯುವ

ಮಟ ನೋಡೇ ನೋಡಿದಳು. ಗುರುತು ಸಿಗಲಿಲ್ಲ. ಆಗಿದ್ದು ವುಸುರಳತೆ ವಳಿತದೊಳಗ ನಿಂತು "ಯಾರು ತಾಯಿ ತಾವುದಾರು? ತಮ್ಮ ನಾಮಾಂಕಿತ ಯೇನು?" ಯಂದು ಕೇಳಿದಳು. ಅದಕ್ಕಾಕೆಯು "ಕೇಳೆನ್ನ ಹೆಸರಾss ಯಿದ್ದರ ಮಜಕೂರಾss ಯೀರೇಳು ಲೋಕದೊಳಗ ನನಗ ದರುಮ ದೇವತೇ, ದರುಮ ದೇವತೆ ಯಂದು ಕರಿತಾರವ್ವಾss.. ನಾನು ಹೊಂಟು ಬಂದಿರೋದು ತೀರ್ಥ ಯಾತ್ರಾಮಾಡಲಕ್ಕೋಸ್ಕರಾss.. ಸಂಗಡಿಲ್ಲ ಯಾರಾss.. ದಾರಿ ಬಲು ದೂರಾss.. ನಾವಿಬ್ಬರು ಕೂಡೇ ಹೋಗೋಣು ಬಾರಾss" ಯಂದು ತನ್ನ ಖೂನ ಗುರುತ ಹೇಳಿಕೊಂಡಳು. ಅದಕಿದ್ದು ಸರಣೆ "ನಿನ್ನ ಹೆಸರು ಕೇಳಿದ್ದೆ, ನೋಡಿರಲಿಲ್ಲವ್ವಾ.. ನಿನ್ನದು ಯಾವ ದೇಸ? ಯಾವ ಕಡೇಕ ಪ್ರಯಾಣ ಬೆಳೆಸೀ ತಾಯಿ? ಯಂದು ಕೇಳಲದಕ ಆಕೆಯು ನಾನು ಹಸ್ತಿನಾವತಿಯನ್ನಾಳಿದ ಅರ್ಥಶಮರ್ಥನೆಂಬುವ ಸೂರನ ಮಗಳು.. ಕಾಸೀ ಯಾತ್ರಾಮಾಡಲಕಂತ ಹೊಂಟು ಬಂದೀನಿ.. ಗಂಗಾ ನದೀಲಿ ಜಳಕಾ ಮಾಡಿ ಯಿಸ್ವಾಥಸ್ವಾಮಿಯ ದರುಸನ ಪಡೆಯಬೇಕೆಂಬೋ ಯಿಚ್ಛಾ ಅದ.. ಯಷ್ಟೋ ವರುಸುಗಳಿಂದ ವಂದೇ ಸಮಕ ನಡೀತಾ ಅದೀನಿ.. ಕಾಶೀ ಯದುರಿಗೆ ಬರುವಲ್ಲದು, ನದೀರೂಪೀ ಗಂಗಮ್ಮ ತಾಯಿ ಯದುರಿಗೆ ಬರುವಲ್ಲಳು.. ಹಾದಿ ಸವೆವಲ್ಲದು.. ಜೊತೇಲಿ ಬ್ಯಾರೆ ಯಾರೂ ಯಿಲ್ಲ. ನೀನಾರ ಬರಬೇಕು ನೋಡು ತಂಗಿ.." ಯಂದು ಹೇಳಿದಳು.

ಅದನು ಕೇಳಿ ಚನ್ನವ್ವನ ಆನಂದಕ ಪಾರವೇ ಯಿಲ್ಲದಂಗಾತು. ತನ್ನನ್ನು ತಂಗೀ ಅಂತ ಗುರುತಿಸೋರು ವಬ್ಬಾರಾರ ಅದಾರಲ್ಲ ಯಂದು ಸಮಾಧಾನಪಟ್ಟುಕೊಂಡಳು. ತನಗ ಅಕ್ಕನ ಸ್ಥಾನದಲ್ಲಿರುವಾಕಿ ಧರುಮದೇವತೆ ಅವುದೋ, ಅಲ್ಲಮೋ ಯಂಬ ಅನುಮಾನ ಬಂತು. ಸನೀಕ ಹೋಗಿ ಅಪಾದಮಸ್ತಕ ನೋಡಿದಳು. ಸಾಣಾ ಮಾಡದ ಯೇಸು ಕಾಲವಾಗಿರುವುದೋ, ಹರಕಲು ಬರಕಲು ಕಿಮುಟು ಮಯ್ಲಿಗೆ ಮಾಸಿರೋ ಸೀರೆ ಕುಬುಸ ವುಟಕೊಂಡಾಳ.. ನಡದೂ ನಡದೂ ಆಕೆಯ ಕಾಲುಗಳು ಸೀದು ಕರಕಿಟ್ಟು ಹೋದಂಗದಾವ.. ತನಗೇನೀಕಿ ಆರೀದಾಕೆಯಲ್ಲ.. ಯೇಸೋ ಯುಗಗಳ ಹಿಂದ ತಾನೀಕೇನ ನೋಡಿರುವಂಥ ನೆನಪುಂಟು. ಆಗ ಹಾಲಲಿ ಕಯ್ನ ತೊಳಕಂಡು ಮುಟ್ಟಂಗ ಬಲು ಛಂದಕ ಯಿದ್ದಳು.. ಹೆಂಗಿದ್ದಾಕೆ ಹಿಂಗಾಗಿಬುಟ್ಟವಳಲ್ಲ.. ಯಂದು ಮನದೊಳಗ ಮರುಗಿ "ಅಕ್ಕಾ.. ನಿನ್ನ ದರುಸನದಿಂದ ನಾನು ಪಾವನಳಾದೆನು. ನಿನ್ನ ಅವಸ್ಥೇನ ನೋಡಿ ದುಕ್ಕಿತಳಾದೆನು, ನೀನು ಮಜ್ಜಣ ಮಾಡಲಕ ಯಲ್ಲಾದವಕ್ಕಾ ಹೊಳೆ ಹಳ್ಳ ನದಿಗಳು,

ಯಾತ್ರೆಮಾಡಲಕ ಯಲ್ಲಯ್ತಕ್ಕಾ ಕಾಶಿ?.. ಲಿಂಗಗಳೊಳಗ ಲಿಂಗತನ ಉಲ್ಲಂಟಕ್ಕಾ?.. ಯಿಲ್ಲದವುಗಳನ್ನು ಹುಡುಕೋತಾ ಯಾಕ ಅಲೆದಾಡುತೀಯಕ್ಕಾ?" ಯಂದಳು ಸಂಕಟದಿಂದ..

ಧರುಮ ದೇವತೆಯು "ಅವುದು ತಂಗಿ, ಕಲಿ ಕಾಲದಿಂದಾಗಿ ಮಯ್ಲಿಗಿ ಮಯ್ಯ ತುಂಬಾ ಮೆತ್ತಯ್ತೆ.. ಜಳಕ ಮಾಡಿ ಪರಿಸುದ್ದಳಾಗಬೇಕಂತ ನದಿಗಳಿಗಾಗಿ ಹಂಬಲಿಸಲಕ ಹತ್ತೀನಿ.. ವಂದಾರ ಜಲಧಿ ಸಿಗವಲ್ಲದು.. ನಂದೊತ್ತಟ್ಟಿಗಿರಲಿ, ತಂಗೀ ನೀನ್ಯಾಕ ಅಲೆದಾಡುತ್ತಿರುವೆಯಲ್ಲ, ಕಾರಣವೇನು?" ಯಂದು ಕೇಳಲು

ಚನ್ನಮ್ಮ ತಾಯಿಯು ಸವಿಸ್ತಾರವಾಗಿ ಯಿವರಿಸಿದಳು. ಆ ರುದಯ ಯಿದ್ರಾವಕ ಕಥೆ ಆಲಿಸಿದ ಧರುಮ ದೇವತೆಯು ಮರುಗದೆ ಯಿರಲಿಲ್ಲ. "ತಂಗೀ ನೀನೆಂಗೋ ನಾನಂಗೆ" ಯಂದು ಹೆಗಲಿಗೆ ಹೆಗಲು ಕೊಟ್ಟಳು.

ಅವರೀರ್ವರೂ ಹಗಲಿರುಳೆನ್ನದೆ ಪ್ರಯಾಣ ಮಾಡಿ ಮಾಡಿ ಭೂಲೋಕ ತಲುಪಿದರು. ಹುಡುಕೋತ ಹುಡುಕೋತ ಕುದುರರೆಡವು ಯಂಬುವ ಚೋದ್ಯವನ್ನು ಪ್ರವೇಸ ಮಾಡಿದರು. ಸಾಂಬವಿಗಾಗಿ, ಮೋಬಯ್ಯನ ಸರೀರಕ್ಕಾಗಿ ಹುಡುಕಾಡಿ ಆ ಸರೀರದೊಳಗೆ ಪ್ರವೇಸ ಮಾಡಿದರು. "ಯಲ್ಲದಿಯೇ ತಾಯಿ.. ಯಲ್ಲದಿಯೇ?" ಯಂದು ಕೂಗಾಡಿದರು. ವಳಗಡೆ ಯಲ್ಲೋ ಯಿದ್ದ ಸಾಂಬವಿಯು ಅಮಾಯಕಳಂತೆ "ಯಾರವ್ವಾ ನೀವು? ಯದಕ ಬಂದಿರವ್ವಾ?" ಯಂದು ಕೇಳಿದಳು. ಅವರಿಬ್ಬರು ಸಣು ಮಾಡಿ ಹೇಳಿಕೊಂಡರು. ಜಗಲೂರೆವ್ವ ಮಾ ಪತಿರೊತೆ ಅದಾಳ.. ಆಕೀನ ನೀನು ಗಂಡನಿಂದ ದೂರ ಮಾಡಿರೋದು ಸರಿಯಲ್ಲ, ಸೊಲುಪ ಕರುಣೆ ತೋರಿಸವ್ವಾ.. ಯಂದು ಕಯ್ನು ಮುಗುದು ಕೇಳಿಕೊಂಡರು. ಅದಕ ಸಾಂಬವಿಯ ರುದಯ ಕರಗಲಿಲ್ಲ. ಅಲ್ಲಿಂದ ಅವರು ಹೊರ ಬಂದು ನಂಬುಗಸ್ತ ಪ್ರಾಣಿ ಪ್ರಾಕಾರವಾದ ಸುನಕ ರೂಪ ಧಾರಣ ಮಾಡಿ ಜಗೂಲುರೆವ್ವನ ಯಡ ಬಲಕ ಕಾವಲಿಗೆ ನಿಂತರೆಂಬ ಕಥೆ ನೀಲಗಾರರು ಹೇಳುತಾರ....

* * * *

ಕಸಬಾ ಕುದುರೆಡವು ಯಂಬ ಪಟ್ಟಣ ಯೀಗ ಯೇನುಂಟು, ಅದು ಹಿಂದಲ ಕಾಲದಲ್ಲಿ ಹೀಂಗಯಿರಲಿಲ್ಲ. ಸಿಲ ಸಿಲಾ ಪ್ರದೇಶವಾಗಿತ್ತು. ಪೂರುವ ಕಾಲದಲ್ಲಿ ಕೊಮಾರ ರಾಮನು ಪ್ರತಿಪಾಲನ ಮಾಡುತಲಿದ್ದಂಥ ಕಮ್ಮಟ ದುರ್ಗದ ರಾಜ್ಯದೊಳಗೆ ಯಿದು ಯಿತ್ತೂ ಅಂದರ ಯಿತ್ತು, ಯಿರಲಿಲ್ಲ ಅಂದರ ಯಿರಲಿಲ್ಲ. ಅದಕ್ಕೂ ಪೂರುವ ಕಾಲದಲ್ಲಿದ್ದಂಥಾ ವುಪನಾಮ ಆವುದೆಂದರೆ ದ್ವಾರಾವತಿ

ಪಟ್ಟಣವು. ಯೀಗದು ನೆಲದಡಿ ಆಯಿತೆಂದು ಹೇಳುತಾರೆ, ಬಿಸಳರಾಜನ ಚೊಚ್ಚಲು ಮಗ ಹಿರೇಬೊಮ್ಮಂತ ರಾಜನು ಹಲವು ಕಾಲ ಯಿರಲಾಗಿ ನರಪತಿ ವಮುಸಕ್ಕೆ ಅಳಿಯನಾಗಿದ್ದಂಥ ಮಲಕರ್ಜಿ ನಾಯಕನು ಗುಡೇಕೋಟೆ ಯಿಮ್ಮಡಿ ಭಯ್ರವ ನಾಯಕನಿಗೆ (ಅಂದರ ಯೀಗ ತಾನೆ ಕುಂಪಣಿ ಸರಕಾರಕ್ಕೆ ಸಾಲವಂದಿಗನಾಗಿರೋ ಜಗದೆಪ್ಪನಾಯಕನ ಗಿರಿಗಿರಿ ಮುತ್ತಾತನು) ಮದಕರಿ ಶೀಮೆಯ ವಳಿತವಾದ ಯೀ ಪ್ರದೇಶಕ್ಕೆ ಬಂದು ಬೀಡು ಬಿಟ್ಟಿದ್ದ ಸಮಯದಲ್ಲಿ ರುದ್ರಭೀಕರ ಕಣಸುಗಳನ್ನು ಕಂಡು ಯಿದು ಗಂಡುಮೆಟ್ಟಿನ ಭೂಮಿ ಯಿದ್ದಂಗಯ್ತೆ ಯಂದು ವುದ್ಗಾರ ಮಾಡಿದನು. ವಂದಾನೊಂದು ಕಾಲದ ಮಾತು. ಯೀ ಜಗೇವದಲ್ಲಿ ಸಿಮ್ಮವನ್ನು ನಾಯಿ ಅಟ್ಟಯಿಸಿಕೊಂಡು ಹೋಯಿತಿತ್ತಂತೆ.. ನಾಯೀನ ಮೊಲ ಅಟ್ಟಯಿಸಿಕೊಂಡು ಹೋಯಿತಿತ್ತಂತೆ, ಮಾರ್ಜಾಲ ಅರಚಿದರ ಸಾರ್ದೂಲ ಹೆದರಕಂತಿತ್ತಂತೆ.

ಯಾರೂ ಯೀ ಪ್ರದೇಶಕ್ಕ ಸುಲಭವಾಗಿ ಬರಂಗಿರಲಿಲ್ಲ, ಬಂದೋರು ಹೊರ ಹೋಗಂಗಿರಲಿಲ್ಲ, ಯಿಲ್ಲಿಗೆ ಬರಲಕ ಹೆದರುತ್ತಿದ್ದರು, ಯಿರಲಕ ಹೆದರುತ್ತಿದ್ದರು, ಕಾರಣ ಸುತ್ತಮುತ್ತ ಪಂಚಪಾಂಡವರಂಗ ಅಯ್ದು ಗುಡ್ಡಗಳಾದವ. ಅವು ಯಾವಪಾ ಅಂದರ ಯರ್‍ರಗುಡ್ಡ, ಕುರುಗುಡ್ಡ, ದ್ಯಾವರಗುಡ್ಡ, ಕೋಳಿಗುಡ್ಡೆ ಮತ್ತು ಬೂದಿಗುಡ್ಡ... ಯತ್ತರಕ, ಅಗಲಗಲಕ ಹಿಂಗ ವಂದೊಂದು ವಂದೊಂದು ನಮೂನಿ ಅದಾವ, ಯಿಂದರ ದಿಕ್ಕಿನಲ್ಲಿ ಕೆಂಪನು ಕೆಂಪನೆಯ ಕಲ್ಲು ಗುಂಡುಗಳಿಂದ ವಟ್ಟರಿಸಿರುವ ಕಾರಣಕ್ಕದಕ ಯರ್‍ರಗುಡ್ಡ ಅಂಬುತಾರ, ದ್ವಾಪರಕಾಲದೊಳಗ ಕುಂತಿ ಅರ್ಜುನನನ್ನು ಪಡಕೊಂಡ ವ್ಯಾಲ ತನ್ನ ಬಾಯೊಳಗ ವುಳಕೊಂಡಿದ್ದ ಮಂತರವನ್ನು ದಖ್ಖನದ ಕಡೇಕ ವಗದಳಂತೆ, ಅದು ಯಿಲ್ಲಿಗೆ ಬಂದು ಬಿದ್ದು ಚಿಗಿತೂ ಚಿಗಿತೂ ಗುಡ್ಡದಾಕಾರ ಪಡಕಂತಂತೆ, ಮಂತರದ ವತ್ತಕ್ಷರಗಳೆಲ್ಲ ಕೋಡುಗಲ್ಲುಗಳಾದವಂತೆ, ಮಂತರದ ಸೊನ್ನೆಗಳೆಲ್ಲ ಕಲ್ಲುಗುಂಡುಗಳಾಗಿ ವುರಿ ಹಾಕುತಾ ಹಾಕುತಾ ಹೋದವಂತೆ, ಯಮದಿಕ್ಕಿನಗುಂಟ ಅಡ್ಡಾದಿಡ್ಡಿ ಮಲಕ್ಕಂಡಿರೋ ದೇವರಗುಡ್ಡದ ಮ್ಯಾಲ ಮಲ್ಲಿಕಾರ್ಜುನ ಸೋಮಿಯು ಸ್ರೀಸಯ್ಲದಿಂದ ಬಂದು ಮಣಿಮಲ್ಲಾಸುರನೆಂಬ ರಾಕ್ಷಸನನ್ನು ಸಮ್ಮಾರ ಮಾಡಿದನಂತೆ, ಯಿನ್ನೊಂದು ದಿಕ್ಕಿನಗುಂಟಾ ಹೆಂಗ ಬೇಕಂದರ ಹಂಗ ಯಿರುವ ಕುರು ಗುಡ್ಡಕೆ ಆ ಹೆಸರು ಯಾಕ ಬಂತಪಾ ಅಂದರ ಅದಕ್ಕ ಬಂತೂ ಕನರಪ್ಪಾ. ದ್ವಾಪರ ಕಾಲದ ಗಾಂಧಾರಿ ತಾನು ಸಾಯೋಗಂಟ ಹಡಕಂತಾಲೇ ಯಿದ್ದ ಮಕ್ಕಳು ಅಲ್ಲಿ ಕಲ್ಲಾಗಿ ನಿಂತಾವಂತೆ,

ಯಿನ್ನೊಂದು ದಿಕ್ಕಿನಲ್ಲಿರೋ ಗುಡ್ಡದ ಸುತ್ತ ಮುತ್ತ ಯಿನ್ನೊಂದು ನಮೂನಿ ಪವುರಾಣಿಕ ಕಥಿ ಸುತಕೊಂಡಯ್ತೆ. ಯೀಗಿಲ್ಲಿ ಹರಿತಾಯಿರುವಂಥ ಕಡುದಮ್ಮನ ಹಳ್ಳದೊಳಗ ಬಾಯಿ ಮುಕ್ಕಳಿಸುತ, ಹೊನ್ನವ್ವನ ಹಳ್ಳದೊಳಗ ಮಜ್ಜಣ ಮಾಡುತ ಅಗಸ್ತ್ಯ ಯಂಬ ಮುನಿವರೇಣ್ಯನು ತಪ್ಪಸ್ಸು ಮಾಡುತ ಯಿದ್ದನಂತೆ.. ಅವನ ತಪಸ್ಸು ಕೆಡಿಸಲಕಂತ ಸಾವುರಾರು ಮಂದಿ ರಾಕ್ಷಸರು ಕೋಳಿ ರೂಪದಲ್ಲಿ ತೊಂದರೆ ಕೊಡುತಲಿದ್ದರಂತೆ. ರೋಸಿದ ಮುನಿಯು ಅವುಗಳನ್ನೆಲ್ಲ ಕಲ್ಲು ಮಾಡಿ ವಂದು ಕಡೆ ಕುಪ್ಪೆ ಹಾಕಿದನಂತೆ. ಅದೇ ಮುಂದಿನ ಕಾಲಾಂತರದಲ್ಲಿ ಕೋಳಿ ಗುಡ್ಡಯಂದು ಹೆಸರಾಯಿತಂತೆ.

ವಾಯುವ್ಯ ದಿಕ್ಕಿನಗುಂಟಯಿರೋ ಬೂದಿಗುಡ್ಡದ ಹಿಂದೆ ದೊಡ್ಡ ಕಥೀನೆ ಅಯ್ತೆ. ಆ ಗುಡ್ಡವು ಯತ್ತರಕ್ಕಿಂತ ಹೆಚ್ಚು ಅಗಲವಾಗಿರುವುದು, ಯಾದೇ ಕಲ್ಲನ್ನು ಮುಟ್ಟಿದರೆ ಕಯ್ಗೆ ಬೂದಿ ತಗಲುತಯ್ತೆ. ಪ್ರಾಪ್ತವಾಗಿರುವ ಬೂದಿ ಯಂಬ ನಾಮ ಯಿಶೇಷ ಕುರಿತಂತೆ ಪಟ್ಟಣದ ಹಿರೇಕರಲ್ಲಿ ಜಿಗ್ನಾಸೆವುಂಟು.

ಸ್ವಾಯಂಭುಮನುವಿನ ಪುತ್ರಿಯಾದ ಪ್ರಸೂತಿಯು ಗರ್ಭದಲ್ಲಿ ಜೆನಿಸಿದಂಥವಳೂ, ಪರಶಿವನಿಂದ ಕಯ್ನ ಹಿಡಿಸಿಕೊಂಡಂಥವಳೂ ಆದಂಥ ದಾಕ್ಷಾಯಿಣಿ ಯಾವ ಯಗ್ನಕುಂಡದಲ್ಲಿ ಬಿದ್ದು ಧಗಧಗ ದಹನಗೊಂಡು ಬೂದಿಯಾದಳೋ ಆ ಯಾಗ ನಡೆದದ್ದು ಅದೇ ಗುಡ್ಡಯಿರೋ ಜಾಗದಲ್ಲಂತೆ. ಅರ್ಜುನನಿಂದ ದಹನಗೊಂಡ ಖಾಂಡವನ ಯಿದ್ದದ್ದು ಅದೇ ಜಾಗದಲ್ಲಂತೆ. ಯಿವಿಷ್ಟು ಶಿಷ್ಟರು ಹೇಳುವಂತ ಕಥೆಗಳಾದರೆ.....

ವಂದೊಂದು ಗುಡ್ಡಕ್ಕೂ ನೂರಾರು ಕಥೆಗಳು ಅಂಟಿಕೊಂಡು ಅದಾವ. ಗುಡ್ಡಗಳಿಗಂಟಿ ಕೊಂಡಿರೋ ವಂದೊಂದು ಕಲ್ಲಿಗೂ ಮೂರ ಮಂದಿ ವಂದೊಂದು ಹೆಸರಿಟ್ಟವರೆ,

ಯರ್ರಗುಡ್ಡದ ಮ್ಯಾಲಿರೋ ನಿಲುಗಲ್ಲುಗಳು ಸುಮಾರು ನೂರೆಪ್ಪತ್ತಾರು.. ಅವು ಯಾವ್ಯಾವೆಂದರ ಚಿಂಬ, ಬುಶ್ಯ, ಕೊಟ್ರ, ಕೊಕ್ಕ, ಬುಕ್ಕ, ಕಟಿಯಾ, ಮಲಿಗಾ ಮುಂತಾದವು.

ಕುರುಗುಡ್ಡದ ನಿಲುಗಲ್ಲುಗಳ ಹೆಸರೆಂದರೆ ಪೋತುಲ, ಪೀತುಲ, ಗೊರ್ರೆಲ, ಜಂಗಲ, ನಿಂಗಲ, ತಂಗಲ, ಬೊಮ್ಮಲ, ಕೆಂಚಲ, ಪಿಂಗಲ ಯಂಬಿವೀ ಮೊದಲಾದ ವಂಬಯಿನೂರು,

ಬೋರ್ಯಾ, ಪಚ್ಯಾ, ಗುಂಡ್ಯಾ, ಪೆದ್ದ, ಚಿನ್ನಾ, ದಾನಾ, ಪಾನಾ, ಕಾನಾ, ಕೂನಾ ಯಂಬಿವೇ ಮೊದಲಾದ ಯೇಳುನೂರಾ ಅರವತ್ತೊಂದು

ನಿಲುಗಲ್ಲುಗಳುಳ್ಳ ಕೋಳಿಗುಡ್ಡವು,

ಬೂದಿಗುಡ್ಡದ ಮಯ್ಯಿ ತುಂಬೆಲ್ಲಾ ಯಿರುವ ನಿಲುಗಲ್ಲುಗಳು ವಟ್ಟು ಸಾವುರದಾ ಅಯ್ನೂರಾವಂದು. ಅವುಗಳು ಯಾವುವೆಂದರೆ ಸುಗ್ಗುಣಾಸುರ, ಮಗ್ಗುಲಾಸುರ, ನೆಗ್ಗಲಾಸುರ, ತಗ್ಗಲಾಸುರ, ಯೇಕಾಂತಾಸುರ, ಬೊಮ್ಮಲಾಸುರ, ಕಾಟಾಸುರ, ಜಕ್ಕಂತಾಸುರ ಯಿವೇ ಮೊದಲಾದವು.

ಯಿವು ಬರೀ ಕಲ್ಲು ಗುಂಡುಗಳಲ್ಲ. ವಂದೊಂದಕ್ಕೆ ಪಂಚ ಯಿಂದ್ರಿಯಗಳುಂಟು. ಕಯ್ಯಿ ಕಾಲುಗಳುಂಟು. ಮತ್ತೇನೆಲ್ಲಾ ವುಂಟು. ಗುಡ್ಡ ಗುಡ್ಡದ ನಡುವೆ ಯಗಸ್ತನ ವುಂಟು, ಬೀಗಸ್ತನ ವುಂಟು. ಆ ಗುಡ್ಡದ ಕಲ್ಲುಗಳು ಯೀ ಗುಡ್ಡಕೆ, ಯೀ ಗುಡ್ಡದ ಕಲ್ಲುಗಳು ಆ ಗುಡ್ಡಕ ಬರೋದು ಹೋಗೋದು ಮಾಡುತಾ ಯಿರುತವೆ. ಮಾತಾಡಿಕಂತ ಯಿರುತವೆ, ಜಗಳಾಡುಕಂತವೆ, ಕಿತ್ತಾಡಕಂತವೆ, ಪರಸ್ಪರ ಮದುವೆ ಮುಂಜಿ ಸೋಬನ ಪ್ರಸ್ತ ಮಾಡಕಂತಿರುತವೆ, ಹೆಣ್ಣು ಕಲ್ಲುಗಳು ಬೊಸುರಾಗ ತಿರುತವೆ, ಯಿನ್ನೊಂದು ಕಲ್ಲಿಗೆ ಜಲುಮ ನೀಡುತಿರುತವೆ.

ಸದರಿ ಪಟ್ಟಣದೊಳಗ ಯಮಧರುಮ ಬರೋ ಧಯರ್ಯ ಮಾಡೋದು ಕಡಿಮೆ. ಅದಕ ಮುಪ್ಪಾನು ಮುದೇರು ಮನೆಗೊಬ್ಬರಂತಿದಾರ, ತಮಗ ಸಾವು ಬರವಲ್ಲದು ಬರವಲ್ಲದು ಅಂತನ ಕಂತಿರುತಾರ, ತಮ ತಮ್ಮ ಪುಣ್ಯ ಬಲವಶಾತ್ ಸತ್ತೋರು ತಾಮೂವಂದು ಕೋಡು ಗಲ್ಲಾಗಿ ಯಾದಾರ ಗುಡ್ಡದೊಳಗ ಸ್ಥಾನ ಪಡಕಂತಾರೆ, ಯಿನ್ನೊಂದು ಸಂಗತಿ ಅಂದರೆ ಸದರಿ ಪಟ್ಟಣದ ಹೆಂಗಸರು ತಮ ಬಸುರೊಳಗ ಮೂಡೋದು ನಿಲುಗಲ್ಲು ಯಂದು ನಂಬುತಾರೆ, ಹುಟ್ಟುವ ಕೂಸಿಗೆ ನಿಡುಗಲ್ಲುಗಳ ಪಯ್ಕಿ ಹೆಸರೊಂದನ್ನು ಹುಡುಕಿ ತೆಗೆಸಿ ಯಿಡುತಾರೆ, ಗುಡ್ಡದ ಕಲ್ಲುಗಳು ಪಟ್ಟಣದ ಮ್ಯಾಲ, ಪಟ್ಟಣದ ಮಂದಿ ಗುಡ್ಡದ ಕಲ್ಲುಗಳ ಮ್ಯಾಲ ಸದಾ ನಿಗಾ ಯಿಟ್ಟಿರುತಾರ..

ಸದರಿ ಪಟ್ಟಣ ಭೂಮಿ ಮ್ಯಾಲ ಯಾವಾಗ ಮೂಡಿತು, ಯಾವತ್ತು ತನಗ ಕುದುರೆಡವು ಯಂಬ ನಾಮ ಪಡಕಂತು ಯಂಬುದಕ ವಂದು ಕಥೆವುಂಟು.

ಅದು ಯಾವುದೆಂದರೆ.......

ಕುದುರೆಡವು ಪಟ್ಟಣದ ಮೂಡಲಗಡೇಲಿರುವ ಗುಡೇಕೋಟೆಯಂಬ ದುರ್ಗವನ್ನು ವಳಿತು ಮಾಡಿಕೊಂಡು ಆಳುತ್ತಿದ್ದಂಥಾ ರಣ ಕದಿರೇ ನಾಯಕನಿಗೆ ವಂದು ಕಾಲದಲ್ಲಿ ಯುದುರೆಂಬುದು ಯಿರಲಿಲ್ಲ. ತನಗೆ ತಾನೇ

ಸರಿಸಾಟಿಯಾಗಿದ್ದನು. ಅವನಿಗೊಬ್ಬೇವಬ್ಬ ಮಗನಿದ್ದನು. ಹೆಸರು ಭಯ್ರುವನಾಯಕ ಯಂಬುದಾಗಿತ್ತು. ನುಂಕೇಮಲೆ ಭಯ್ರುವೇಸ್ವರನ ವರ ಪ್ರಸಾದ ಸಂಜಾತನೂ, ರೂಪದಲ್ಲಿ ಸ್ಪುರದ್ರೂಪಿಯೂ, ಕತ್ತಿವರಸೆಯಲ್ಲಿ ಅತುಲ ಪರಾಕ್ರಮಿಯೂ, ಕುದುರೆ ಸವಾರಿಯುಲ್ಲಿ ನಿಸ್ಸೀಮುನೂ ತಾನಾಗಿದ್ದನು. ರಣರಂಗದಲ್ಲಿ ಬಿರುಗಾಳಿಯಂತೆಯೂ, ಪ್ರೇಮ ಸಲ್ಲಾಪದಲ್ಲಿ ತಂಗಾಳಿಯಂತೆಯೂ ಸಂಚರಿಸುತಲಿದ್ದನು. ಅವನು ವಂದು ಕಡೆ ನೆಟ್ಟಗೆ ನಿಂತುದು ಯಿರಲಿಲ್ಲ, ವಂದು ಕಡೆಗೆ ಮಟ್ಟಗೆ ಕುಂತುದು ಯಿರಲಿಲ್ಲ. ನುಂಕೇಮಲೆ ದುರ್ಗದ ಕಾನನದೊಳಗ ಕುದುರೆಯೊಂದು ಅಜೇಯವಾಗಿ ಅಂಡಲೆಯುತಲಿದ್ದಿತು. ಅದು ಕಮ್ಮಟ ದುರ್ಗದ ಕೊಮಾರ ರಾಮನ ಕುದುರೆಯಾದ ಬೊಲ್ಲನ ವಮುಸಕ್ಕೆ ಸೇರಿದುದಾಗಿತ್ತು. ಗಂಡಸರಾದರೆ ತನ್ನನ್ನು ಹಿಡಿಯಲು ಬನ್ನಿ ಯಂದು ಕುಂತಳ ಪ್ರಾಂತದ ಯಲ್ಲಾ ರಾಜಕುಮಾರರ ಕಣಸುಗಳಲ್ಲಿ ಕಾಣಿಸಿ ಕೊಂಡು ಸವಾಲು ಹಾಕುತಲಿದ್ದಿತು. ಹಿಡಿಯಲೆಂದು ಬಂದ ರಾಜಕುಮಾರರ ಮೀಸೆಯನ್ನು ಹಣ್ಣಣ್ಣು ಮಾಡಿ ಮಣ್ಣುಣ್ಣಿಸಿ ಪಲಾಯನ ಮಾಡಿಸುತಲಿದ್ದಿತು, ಭಯ್ರುವನಾಯಕನು ಹೆತ್ತವರ ಆಸೀರುವಾದ ಪಡೆದು ಅದನ್ನು ಹಿಡಿಯಲೆಂದು ನುಂಕೇಮಲೆ ದುರ್ಗಕ್ಕೆ ಬಂದ. ಹಗಲಿರುಳು ತಾಕಲಾಡಿ ಅದನ್ನು ಹಿಡಿದು ಪಳಗಿಸಿದ. ಅದಕ್ಕೆ ಜಟಾಯು ಯಂದು ನಾಮಕರಣ ಮಾಡಿದನು, ಆ ದಿವಸ ರಾತ್ರಿಭಯ್ರುವೇಸ್ವರ ಅವನ ಕಣಸೊಳಗ ಗೋಚರಮಾಡಿ ನಿನ್ನ ಕಯ್ಯ ವಸ ಆಗಿರುವಂಥಾ ಕುದುರೆಯು ಸಾಮಾನ್ಯವಾದುದಲ್ಲ ಕಂದಾ.. ನಾನು ನನ್ನ ಹಣೆ ಬೆಮರಿನಿಂದ ಅದನು ವುತ್ಪತ್ತಿ ಮಾಡಿರುವೆನು, ನೀನುಂಬುವುದನು ಅದಕ್ಕೆ ವುಂಬುಸು, ನೀನು ಕುಡಿಯುವುದನು ಅದಕೆ ಕುಡಿಸು, ಕಣ್ಣಳತೆ, ಕೂಗಳತೆಯೊಳಗ ಅದನು ಯಿಟುಕೊಂಡು ಸಾಕಿ ಸಲವು, ಅದು ಯಡವಿ ಕುಂಟು ಬಿದ್ದ ಜಾಗದಲ್ಲಿ ಅದರ ಜೀವ ಸಮಾಧಿ ಮಾಡು, ಸಾಮುರಾಜ್ಯ ಸ್ಥಾಪನೆ ಮಾಡು, ಯಂದು ಅಪ್ಪಣೆ ಕೊಟ್ಟನು. ಜನಿವಾರದಳ್ಳಿ ಅಗ್ರಹಾರದ ಪಂಡಿತ ಭೂಸುರೋತ್ತಮ ರಿಂದ 'ರಸಿಕ ಮನೋರಂಜನ' ಯಂಬ ಬಿರುದನ್ನು ಅಲಂಕರಿಸಿಕೊಂಡಿದ್ದಂಥ ಆ ರಾಜ ಕುಮಾರನು ಅದನ್ನು ತನ್ನ ಅರಮನೆ ತುಂಬಿಸಿಕೊಂಡು ಹಂಗೇ ಜೋಪಾನ ಜತುನ ಮಾಡಿಟ್ಟು ಕೊಂಡಿದ್ದನು.

ಗುಡೇಕೋಟೆಗೆ ಹಲವು ಹರದಾರಿ ದೂರದಲ್ಲಿ ಸಿಡೇಗಲ್ಲು ಯಂಬ ಗ್ರಾಮಯಿರುವುದು. ಹಂಡೇ ಹನುಮಪ್ಪನಾಯಕನಿಗೆ ಸಾಪ ಕೊಟ್ಟು ಬಳ್ಳಾರಿ ದುರುಗವ್ವ ಬಂದು ಆ ಮೂರಲ್ಲಿ ನೆಲಗೊಂಡಿದ್ದಳು. ಪ್ರತಿ ಸಂವತ್ಸರ ಬನದುಣ್ಣುವಿ

ಯಡಬಲ ಅಲ್ಲಿ ಸೂಲದ ಹಬ್ಬವು ಬಲು ಯಿಜ್ರುಂಭಣೆಯಿಂದ ನಡೆಯುತಲಿತ್ತು. ಅದು ಮಾಮೂಲಿ ಸೂಲವಾಗಿರಲಿಲ್ಲ. ಭೂಲೋಕ ಕ್ಕಧಿಕವೆನಿಸಿದ್ದ ಕುಂತಳ ಪ್ರಾಂತದ ಆಸ್ತೀಕರನ್ನು ನೋಡುವ ಸಲುವಾಗಿ ಪರಮೇಸ್ವರನು ಹೆಂಡತಿ ಮಕ್ಕಳ ಸಮೇತ ರುಷಭ ವಾಹನವನ್ನು ಯೇರಿ ಆಕಾಸ ಮಾರ್ಗವಾಗಿ ಹೋಗುತ್ತಿರ ಬೇಕಾದರೆ ಆತನ ಕಯ್ಯಲ್ಲಿದ್ದ ತ್ರಿಶೂಲ ಆಯ ತಪ್ಪಿ ವುದುರಿ ನೆಲದ ಮ್ಯಾಲ ಸಿಕ್ಕೊಂಡಿತ್ತಲ್ಲ.. ಅದೇ ಯಿದಾಗಿತ್ತು. ಅದಕ್ಕೆ ಬಿದ್ದು ಬಲಿಗೊಂಡವರಿಗೆ ಸೊರ್ಗ ಪ್ರಾಪ್ತವಾಗುತ್ತದೆ ಯಂಬ ನಂಬಿಕೆಯಿಂದಾಗಿ ಅನಾದಿ ಕಾಲದಿಂದಲೂ ದೂರ ದೂರದಿಂದ ಅಲ್ಲಿಗೆ ಆಗಮಿಸಿ ಅದಕ್ಕೆ ಆತುಮಾರ್ಪಣ ಮಾಡಿಕೊಂಡು ಸೊರ್ಗಲೋಕದ ಕಡೆ ನಡೆದಿದ್ದರು. ಯಿಂಥ ಸ್ಥಳ ಪುರಾಣ ದಿಂದಲಂಕ್ರುತಗೊಂಡಿದ್ದ ಸಿಡೇಗಲ್ಲಿನ ಸೂಲದ ಹಬ್ಬವನ್ನು ನೋಡಲೆಂದು ಚಿಗುರು ಮೀಸೆಯ ಭಯ್ರುವ ನಾಯಕನೂ ಮಾರು ಯೇಷದಲ್ಲಿ ಅಲ್ಲಿಗೆ ಹೋಗಿದ್ದನು. ಅಲ್ಲಿ ಜನಮೋ ಜನ, ಅದರ ಮ್ಯಾಲ ಬಿದ್ದು ತಮ್ಮ ದೇಹದ ನಸ್ವರತೆಗೆ ಮಂಗಳ ಹಾಡಲಕೆಂದು ದೊಡ ದೊಡ್ಡ ಮನೆತನ ಹಿರೀಕ ಮಂದಿಯೂ ಅಲ್ಲಿಗೆ ಬಂದಿದ್ದರು. ಅವರು ನಾ ಮುಂದು ತಾ ಮುಂದು ಅಂತ ಕಿರೀಕರನು ಪೀಡಿಸುತಲಿದ್ದರು. ಹೋದ ಸಲ ಬಾಗುಳಿಯ ರಾಜಮಾತೆಯಾದ ವುಚ್ಚೆಂಗೆವ್ವ ತಾನೊಬ್ಬಳೆ ಪಾದ ಯಾತ್ರೆಹೊಂಟು ಬಂದು ಜಯನಮಂಪಾರೋತಿ ಪತಿ ಹರಹರ ಮಾದೇವ ಯಂದು ಕೂಗುತ್ತ ಸೂಲದ ಮ್ಯಾಲ ಬಿದ್ದು ಆತುಮಾಹುತಿ ಮಾಡಿಕೊಂಡಿದ್ದಳು. ಆದ್ದರಿಂದ ವರುಷೊಪ್ಪತ್ತಿನಲ್ಲಿ ಸಿಡೇಗಲ್ಲು ಕುಂತಳ ಪ್ರಾಂತದ ಸೀಮೋಲ್ಲಂಘನೆ ಮಾಡಿ ಪ್ರಸಿದ್ಧವಾಗಿತ್ತು. ದೂರ ದೂರದ ಮೂರುಗಳಿಂದ ಜನರು ಬಂದು ಕಲೆತಿದ್ದರು. ಹರೇದ ಹುಡುಗರು ಜನರನ್ನು ರಂಜಿಸಲಕೆಂದು ಅನೇಕ ಕಸರತ್ತುಗಳನ್ನು ಪ್ರದರ್ಶನ ಮಾಡುತಲಿದ್ದರು. ಗೆದ್ದು ಯಿನಾಮುಗಳನ್ನು ಪಡಕೊಳ್ಳುತಲಿದ್ದರು, ಮಾರು ಯೇಷದಲ್ಲಿದ್ದ ಭಯ್ರುವನಾಯಕನೂ ಹಿಂದೆ ಬೀಳಲಿಲ್ಲ, ಕುಸ್ತಿ, ಕತ್ತಿವರಸೆ, ಬಡಗೆ ತಿರುಮೋದು, ಮೋಡೋದು ಜಿಗಿಯೋದು, ಸರಸರನೆ ಹತ್ತೋದು, ಭರಭರನೆ ಯಿಳಿಯೋದು ಯಿವೇ ಮೊದಲಾದ ಪಂದ್ಯಾಟಗಳಲ್ಲಿ ಭಾಗವಹಿಸಿ ಯಿನಾಮುಗಳನ್ನು ಗೆದ್ದು ಸೋತವರಿಗೆ ಕೊಟ್ಟು ಯಲ್ಲಾರ ರುದಯಗಳನ್ನು ಗೆದ್ದು ಸಯ್ಯಿ ಅನ್ನಿಸಿಕೊಂಡನು.

ಆತನು ಹಂಗೇ ಸಾಂಪ್ರತು ಪರಿಶೆಯೊಳಗೆ ತಿರುಗಾಡುತ್ತಿರುವಾಗ್ಗೆ ತರುಣಿಯೋರ್ವಳ ರೂಪ ಲಾವಣ್ಯಕ್ಕೆ ಮರುಳಾದನು. ಆಕೆಯೂ ಅವನ ತಾರುಣ್ಯದಯಿಸಿರಿಗೆ ಮನ ಸೋತಳು, ತಾನಿಂಥವರ ಮಗಳೆಂಬುದನ್ನು

ಸಂಕೇತಾಕ್ಷರಗಳ ಮೂಲಕ ತಿಳಿಸಿ ಆಕೆ ತನ್ನನ್ನಲ್ಲಿಗೆ ಕರೆತಂದಿದ್ದಂಥ ದಾಸಿಯರೊಂದಿಗೆ ಹೊರಟು ಹೋದಳು.

ಆಕೆ ಬೇರಾರೂ ಆಗಿರಲಿಲ್ಲ, ಜರಿಮಲೆಯ ಚಿನ್ನನುಮಪ್ಪನಾಯಕನ ಮಗಳು ತಾನಾಗಿದ್ದಳು. ರಾಯದುರ್ಗದ ಕ್ರುಸ್ಣಪ್ಪನಾಯಕನಿಗೆ ಬೆಂಬಲ ಕೊಡುವುದೋ, ತಾಳ್ಳಕೇರಾದ ಗಾದೆರನಾಯಕನಿಗೆ ಬೆಂಬಲ ಕೊಡುವುದೋ ಯಂಬ ಯಿಷಯದಲ್ಲಿ ಜರಿಮಲಿ ನಾಯಕರಿಗೂ, ಗುಡೇಕೋಟೆ ನಾಯಕರಿಗೂ ಆ ಕಾಲದಲ್ಲೆ ವಯ್ಮನಸು ಹುಟ್ಟಿಕೊಂಡು ಯೀ ಕಾಲದಲ್ಲಿ ಮಾರುಕ್ಷವಾಗಿ ಬೆಳೆದುಬಿಟ್ಟಿತ್ತು. ಜರಿಮಲೆಯ ಹೆಸರೆತ್ತಿದರೆ ಗುಡೇಕೋಟೆಯುವರು, ಗುಡೇಕೋಟೆಯ ಹೆಸರೆತ್ತಿದರೆ ಜರಿಮಲೆಯವರೂ ಬುಸುಗುಟ್ಟುತಲಿದ್ದರು. ಯಿವತ್ತು ಯುದ್ಧ ಆದೀತು, ನಾಳೆ ಯುದ್ಧ ಆದೀತು ಯಂಬುವಷ್ಟರ ಮಟ್ಟಿಗೆ ಅವರಿಬ್ಬರ ನಡುವೆ ವಯ್ರತ್ವ ಬೆಳೆದು ಬಿಟ್ಟಿತ್ತು.

ಸಂಕೇತಾಕ್ಷರದ ವಗಟುಗಳನ್ನು ಜಾಣುಮೆಯಿಂದ ಬಿಡಿಸಿ, ಆಕೆ ಯಾರು? ಯತ್ತ? ಯಂದು ರಾಜಕುಮಾರನು ಖಾತರಿ ಮಾಡಿಕೊಂಡ. ಆಕೆಯಲ್ಲಿಗೆ ಕಳುವಿನಿಂದ ಹೋಗೋದು, ಬರೋದು ಮಾಡುತಲಿದ್ದ. ಅವರಿಬ್ಬರು ವಬ್ಬರನ್ನೊಬ್ಬರು ಬಿಟ್ಟು ಯಿರಧಂಗಾದರು. ತಾವಿಬ್ಬರು ಲಗ್ಗುನ ಆಗಲೇಬೇಕೆಂಬ ನಿರಣಯಕ್ಕೆ ಬಂದರು. ತನ್ನ ತಂದೆಗೆ ಖುದ್ದಾಮ ಹೇಳಿ ವಪ್ಪಿಸುವ ಧಯರ್ಯ ಆಕೆಗೂ (ಮೋಬುಳಾಂಬೆ) ಯಿರಲಿಲ್ಲ. ತನ್ನ ತಂದೆಗೆ ಖುದ್ದಾಮ ಹೇಳಿ ವಪ್ಪಿಸುವ ಯದೆಗಾರಿಕೆ ಯೀತಗೂ ಯಿರಲಿಲ್ಲ. ಗುಡೇಕೋಟೆ ರಾಜ ತನ್ನನ್ನು ಯಲ್ಲಿ ಕೊಲ್ಲುತಾನೋ ಯಂಬ ಜೀವ ಭಯ ಜರಿಮಲೆ ನಾಯಕನಿಗೂ ಯಿತ್ತು.

ತಮ ತಮ್ಮ ತಂದೆಗೋಳ ಮೀಸೆ ಹಣ್ಣಾದ ಮ್ಯಾಲ ಹೇಳೋದು ಕೇಳೋದು ಮಾಡಿದರಾತು ಯಂಬ ನಿರಣಯಕ್ಕೆ ಆ ಪ್ರೇಮಿಗಳಿಬ್ಬರೂ ಬಂದರು.

ಆದರೂ ಯುವರಾಜ ಭಯ್ರವ ನಾಯಕನು ರಾತ್ರಿಹೊತ್ತು ಯಲ್ಲಾರು ಗಪಚುಪ್ಪಂತ ಮಲಗಿದ ಮ್ಯಾಲ ಜಟಾಯು ಯೇರಿ ಜರಿಮಲೆ ಪಟ್ಟಣವನ್ನು ಪ್ರವೇಶಿಸಿ ಕಳುವಿನಿಂದ ಅರಮನೆಯ ಅಂತಾಪರ ಹೊಕ್ಕು ರಾಜಕುಮಾರಿ ಮೋಬುಳಾಂಬೆಯೊಂದಿಗೆ ಬೆಳ್ಳಿ ಮೂಡೋ ಮಟ ಯಿದ್ದು ವಾಪಾಸಾಗು ತಲಿದ್ದನು. ದಾಸಿಯೂ, ಅಂತಃಪುರದ ಗೂಢಾಚಾರಣಿಯೂ ಆದಂಥ ವಯ್ಯಾರವ್ವನ ಮೂಲಕ ಯೀ ಯಿಷಯ ತಿಳಿದು ಚಿನ್ನನುಮಪ್ಪನಾಯಕನು ಕೆಂಡಮಂಡಲ ವಾದನು. ಜೀವಂತವಾಗಿ, ಯಿಲ್ಲವೆ ಅವನ ಹೆಣ

ತಂದೊಪ್ಪಿಸಿರೆಂದು ಆಗ್ನಾಪಿಸಲು ಸಯ್ನಿಕರು ಹೊಂಚು ಹಾಕಿ ಕಾಯುತೊಡಗಿದರು. ಯಿನ್ನೇನು ಹಿಡಿದೇಬಿಟ್ಟರು ಅನುವಷ್ಟರಲ್ಲಿ ಭಯ್ರವನಾಯಕನು ಜಟಾಯು ಯೇರಿ ಪಲಾಯನ ಗಯ್ದನು. ಯೀತನು ಮುಂದ ಮುಂದೆ, ಸಯ್ನಿಕರು ಹಿಂದ ಹಿಂದೆ. ನಾಗಾಲೋಟದಲ್ಲಿ ಜಟಾಯು ಯಂಬ ಪಂಚ ಕಲ್ಯಾಣಿಯು ಮೋಡುತಾ ಮೋಡುತಾ ತನ್ನ ಪ್ರದೇಶವನ್ನು ಪ್ರವೇಶಿಸಿದೊಡನೆ ನೆಲದಡೀಯಿದ್ದ ಯೇಕಾಸುರಿಯು ನೆಲದ ಮ್ಯಾಲೆ ಚಾಚಿದ ಜಂಗಲಯಂಬ ಹೆಬ್ಬೆಟ್ಟನ್ನು ಯಡವಿ ವುರುಳುತುರುಳುತ್ತಾ ಹೋಗಿ ಅಷ್ಟು ದೂರದಲ್ಲಿ ಕಾಲು ಮುರಿದುಕೊಂಡು ಬಿದ್ದುಬಿಟ್ಟಿತು. ಭಯ್ರವ ಯಿನ್ನೇನು ಸತ್ರುಸಯ್ನಿಕರ ಕಯ್ಯಿಗೆ ಸಿಕ್ಕೇಬಿಟ್ಟ ಅಂಬುವಷ್ಟರಲ್ಲಿ ನಿಲುಗಲ್ಲುಗಳು ಮಾನವ ರೂಪ ಧಾರಣ ಮಾಡಿ ಹೋರಾಡಿ ಹಿಂದಕ್ಕೋಡಿಸಿಬಿಟ್ಟವಂತೆ.

ನುಂಕೇಮಲೆಯ ಪ್ರಭುವಿನ ಆಗ್ನೆಯಂತೆ ಯುವರಾಜನು ಜಟಾಯುವನ್ನು ಅದು ಬಿದ್ದ ಜಾಗದಲ್ಲಿ ಸಮಾಧಿ ಮಾಡಿದನು. ಅಲ್ಲದೆ ಆತನಿಗೆ ಯಲ್ಲಿ ತೋಡಿದಡಲ್ಲಿ ಅಪಾರ ಧನ ಸಂಪತ್ತು ದೊರಕಿತಂತೆ. ನಿಲ್ಲುಗಲ್ಲುಗಳು ಆತನ ಹೆಗಲಿಗೆ ಹೆಗಲು ಕೊಟ್ಟವಂತೆ. ಯಿದರಿಂದಾಗಿ ಆತನು ವಂದು ಪಟ್ಟಣವನ್ನು ನಿರುಮಾಣ ಮಾಡಿ ಅದಕ್ಕೆ ಕುದುರೆಡವು ಯಂದು ನಾಮಕರಣ ಮಾಡಿದನು. ಜರಿಮಲೆಯ ಚಿನ್ನನುಮಪ್ಪನಾಯಕನನ್ನು ಸೋಲಿಸಿ ಆತನ ಮಗಳಾದ ಮೋಬುಳಾಂಬೆಯನ್ನು ಮದುವೆಯಾದನು. ಸುತುಮುತ್ತಲಿದ್ದ ನಾನಾ ಪಾಳೆಪಟ್ಟುಗಳನ್ನು ಗೆದ್ದು ಬಲಾಢ್ಯ ರಾಜ್ಯವನ್ನು ಕಟ್ಟಿದನು. ಅವನ ವಮುಸಸ್ಥರೇ ಯೀ ಕಾಲದ ರಾಜಮಾತೆ ಭಯ್ರಮಾಂಬೆ, ಕಾಟಯ್ಯ ನಾಯಕ ಮುಂತಾದವರು.....

ಯೀ ಪಟ್ಟಣದೊಳಗ ವಂದು ಯೇರಿಕೆ ಯಂಬುದಿರಲಿಲ್ಲ, ವಂದು ಯಿಳಿಕೆ ಯಂಬುದಿ ರಲಿಲ್ಲ. ಆತನ ಪುಣ್ಯದ ಫಲವಾಗಿ ಪಟ್ಟಣದ ಸುತಮುತ್ತ ಹತ್ತಾರು ಹಳ್ಳಗಳು ಹಿಗ್ಗದೆ ಕುಗ್ಗದೆ ವಂದೇ ಪ್ರಕಾರವಾಗಿ ಹರಿಯುತ್ತಿರುವವು. ಅವಕ್ಕೆ ಅಡ್ಡಡ್ಡಲಾಗಿ ಪುವ್ವಲರಾಜ್ಯ ಸಮುಸ್ಥಾಪನಾಚಾರ್ಯನೆನಿಸಿದ ಭಯ್ರವ ನಾಯಕನು ಕಟ್ಟಿಸಿರುವ ಕೆರೆಗಳುಂಟು, ಅದರ ಬುಡಕ್ಕಿರೋ ಮಾಗಾಣಿಯಲ್ಲಿ ರಯ್ತರು ವಂದು ಹಿಡಿ ಬೀಜ ಚೆಲ್ಲುತಾರ, ವಂದು ಪಲ್ಲ ಬೆಳಕೊಳ್ಳುತಾರ, ಯಂಥ ರಯ್ತನ ಮನೆಯಲ್ಲಿ ಹಾಲು ಹಯನಕ್ಕ ಬರಯಿಲ್ಲ.

ಕುಲಕರುಣಿ ರಾಘುಪ್ಪಸೋಮಿ ಬರಕಂಡಿರೋ ಕಯಿಫಿಯತ್ತೊಳಗೆ ಹಿಂಗುಂಟು... ಸದರಿ ಪಟ್ಟಣದಲ್ಲಿ ಖಾ ೧॥ ರೂಪಾಯಿ ಕಿಮತದವರಿಗೆ ಆಗುತಾ

ಇದೆ. ಖಬುಣ ಆಗುವುದಿಲ್ಲ. ಯೀ ಪಟ್ಟಣದಲ್ಲಿ ಆಗುವಂಥಾ ಪಯಿರುಗಳು ಯಾವುವುಯಂದರೆ ಜೋಳ, ಸಜ್ಜೆ, ನವಣೆ, ಹೆಸರು, ಅಲಸಂದಿ, ಅವರೆ, ಕಡಲೆ, ಪುಂಡಿ, ಅವುಡಲ, ತೊಗರಿ, ಹುರುಳಿ ಮುಂತಾದುವುಗಳು. ಅಸಾಧ್ಯ ಮನುವಂತರ ಲಗಾಯ್ತು ಯೀ ಪಟ್ಟಣಕ ಆಜು ಬಾಜುದಲ್ಲಿ ಮೂರುವಕ್ಕೆ ಬೋಳು ಬಂಡೆ, ಯಂಟಾಪುರ, ಮಿಂಚೇರಿ, ಪಡುವಣ ಗಡೇಕ ಸಿಡೇಗಲ್ಲು, ಕಂದಗಲ್ಲು, ಹೂಡೇವು, ಕುಮತಿ ಖಾನಾಮಡುಗು, ತೆಂಕಣಕ್ಕೆ ಜರಿಮಲೆ, ಗಜಾಪುರ, ಅಕ್ಕಲಾಪುರ, ಜಾಜರಕಲ್ಲು, ಬಡಗಣಕ್ಕೆ ಮೋಬುಳಾಪುರ, ಹಲಕುಂದಿ ಯಿತಲಾಪುರ, ಅಂತಾಪುರ, ಗಬ್ಬಳಗುಂಡಿ ಮುಂತಾದ ಅಯ್ನೂರು ಸಣಪುಟ್ಟ ಗ್ರಾಮಗಳುಂಟು. ವಂದೊಂದು ಮೂರಿಗೂ ವಂದೊಂದು ಯಿಥದ ಸ್ಥಳ ಪುರಾಣಗಳುಂಟು. ಚಿತ್ತ ಚಂಚಲಗಳು ಸಾಯಿರಕ್ಕೂ ಮಿಕ್ಕುಂಟು....

ಪಟ್ಟಣದ ವಳಗಸೆ ಬಾಕುಲ ಬಳಿಯಿರುವ ಪೆದ್ದನುಮಂದೇವರ ಗುಡಿ ಗುಂಡಾಂತರದ ಮೇಲಿರುವ ದ್ವಿಭಾಗ ಶಿಥಿಲವಾದಂಥಾ ಸ್ವೇತ ಶಿಲಾದ ಮೇಲಿರುವ ಶಾಸನದಲ್ಲಿ ಕನುಡಾದಲ್ಲಿ ಬರದು ಯಿರುವ ಪ್ರಕಾರ ಜೆನರು ಹಂಗ ನಡದುಕೊಳ್ಳಬೇಕೆಂಬುದರ ಯಿವರ ಅದೆ...

* * * *

ತನ್ನ ಕಯ್ಯಿ ಕೆಳಗಿನ ಅಧಿಕಾರಿಗಳಿಗೆ ನಯನಾಜೂಕು ಕಲಿಸೂತ, ಪ್ರಜೆಗಳ ರುದಯ ಗೆಲ್ಲುವ ಬಗೆ ಹೇಗೆಂದು ಬಿಡಿಸಿ ಹೇಳೂತ, ಹಠವಾರಿ ಅಧಿಕಾರಿಗಳನ್ನು ಯುತ್ತಂಗಡಿ ಮಾಡೂತ, ಪ್ರಜೆಗಳ ಪಾಲಿಗೆ ಕುಠಾರಪ್ರಾಯರಾಗಿರುವ ಜಮೀಂದಾರರಿಗೆ ತಕ್ಕ ಪಾಠ ಕಲಿಸೂತ ಕಲೆಟ್ರುಥಾಮಸು ಮನ್ರೋ ಸಾಹೇಬಗೆ ಪುರುಸೊತ್ತೆಂಬುದು ಯಿಲ್ಲದಂಗಾಗಿತ್ತು. ಅದು ಬದುಕುತ್ತಿರುವ ಭೂತಕಾಲದ ಕಪಿಮುಷ್ಟಿಯಿಂದ ಸದರಿ ಯಿಂಡಿಯಾದ ವರ್ತಮಾನವನ್ನು ಹೆಂಗಪ್ಪಾ ಪಾರು ಮಾಡುವುದು ಯಂದೂ, ಸದರಿ ಯಿಂಡಿಯಾದ ಮಂದಿ ವರ್ತಮಾನವನ್ನು ಕೂಲಂಕಷವಾಗಿ ಬದುಕಲಕ ತಾನೇನು ಮಾಡಬೇಕೆಂದೂ ಸದಾ ಚಿಂತಿಸುತಲಿದ್ದ ಆತನು ವಂದು ಕಡೇಕ ನೆಟ್ಟಗ ನಿಲ್ಲುತಲಿರಲಿಲ್ಲ.. ರೆಪ್ಪೆಗೆ ರೆಪ್ಪೆ ಅಂಟಿಸಿ ಸರಿಯಾಗಿ ನಿದ್ದೆ ಮಾಡುತಲಿರಲಿಲ್ಲ.. ಸುಂಟರ ಗಾಳಿಯಂಗ ತಾನು ಸದಾ ಸುತ್ತಾಡುತಲಿದ್ದನು. ಕಾಗೆ ಹೊಕ್ಕವರ ಮನೆಗೆ, ಹಂದಿ ಹೊಕ್ಕವರ ಮನೆಗೆ, ಹೆರಿಗೆ ಆದೋರ ಮನೆಗೆ, ನಾಮಕರಣ ಮಾಡೋರ ಮನೆಗೆ, ಮದುವೆ ಮುಂಜಿ ಮಾಡೋರ ಮನೆಗೆ, ಸಾವು ಸಂಭವಿಸಿದೋರ ಮನೆಗೆ, ಗಂಗಾಜಲ ಸ್ವಾಗತಿಸೋರ ಮನೆಗೆ ಹಿಂಗ ಕರೆದಲ್ಲೆಲ್ಲ

ಕಡೇಕ ಸವುಡು ಮಾಡಿಕೊಂಡು ತಾನು ಹೋಗದೆ ಯಿರುತಲಿರಲಿಲ್ಲ. ಮಾರಿ ಮಸಣಿ ಹೊಂಡಿಸೋರ ಮೂರಿಗೆ, ಅಗಸೆ ಬಾಕುಲು ಪೂಜೆ ಮಾಡೋರ ಮೂರಿಗೆ, ಹಬ್ಬಹರಿದಿನ ಮಾಡೋರ ಮೂರಿಗೆ ತಾನು ಸವುಡು ಮಾಡಿಕೊಂಡು ಹೋಗದೆಯಿರುತಲಿರಲಿಲ್ಲ. ದತ್ತ ಮಂಡಲದ ಪಯ್ಕಿ ಕಡಪ ಅನಂತಪುರಗಳ ಆಜು ಬಾಜೂಕಿದ್ದ ಪ್ರತಿಯೊಂದು ಗ್ರಾಮವು ಆತನ ಬರುವಿಕೆಗಾಗಿ ತುದಿಗಾಲಲ್ಲಿ ನಿಂತು ಯಾವಾಗ ಬರುವನೋ ನಮಪ್ಪ ಯಂದು ಯದುರು ನೋಡುತಲಿತ್ತು. ವಂದೇ ಮಾತಲಿ ಹೇಳಲಕಂದರ ದತ್ತ ಮಂಡಲದ ಹಳ್ಳೀ ಮಂದಿಗೆ ಮನ್ರೋ ಯಂಬ ತಿಕ್ಕಡಿ ಬಡಕಂಡಿತ್ತು. ಅವಯ್ಯನ ಜಪ ಮಾಡಿಕೋತ ಮಲಗುತಲಿತ್ತು, ಯೇಳುತಲಿತ್ತು. ಸಿಂಧವಾಡಿ ಸೀಮೆಯ ವುಳ್ಳವರ ಕಣ್ಣಿಗೆ ಮನ್ರೋನು ವುರುಕುಂದಿ ಯೀರಣ್ಣನ ಅಪರಾವತಾರವೆಂಬಂತೆ ಗೋಚರಿಸಿದರೆ, ಅನಂತಪುರ ಸೀಮೆಯವುಳ್ಳವರು ಕದಿರಿ ನರಸಿಮ್ಮ ಸೋಮಿಯೇ ಮನ್ರೋನ ಯಾಸದಲ್ಲಿ ಯಿರುವನು ಯಂದೇ ಭಾವಿಸಿದ್ದರು. ಬಲಕುಂದಿಯ ಪರಗಣಸೀಮೆಯ ಆರಾಧ್ಯ ದಯವವಾದ ಹಳೇಕೋಟೆ ಯೀರಭದ್ದರದೇವರೂ, ಬಲುನಾಡು ಪ್ರಾಂತದ ಲಚುಮೀನರಸಿಮ್ಮ, ಕುಂತಳ ಪ್ರಾಂತದ ವುಗ್ಗರನರಸಿಮ್ಮ ಯಿವೇ ಮೊದಲಾದ ಯಿಟ್ಟರೆ ಸಾಪ, ಕೊಟ್ಟರೆ ವರ ಜಾಯಮಾನದ ದೇವರುಗಳು ಮನ್ರೋನ ಸರೀರದೊಳಗೆ ಆಸ್ರಯ ಪಡಕೊಂಡವೆ ಯಂದು ವುಂಡು ವುಗುಳೋರೆಲ್ಲ ನಂಬುತಲಿದ್ದರು. ದತ್ತ ಮಂಡಲದ ಗವುಡ, ರೆಡ್ಡಿ, ಪಟುವಾರಿ, ಜಾಗೀರಿ, ಪಾಟಿಲು, ಪಟೇಲಾದಿಗಳ ಪಯ್ಕಿ ವಬ್ಬರಲ್ಲಾ ವಬ್ಬರು ಮನ್ರೋನ ಹೆಸರಲ್ಲಿ ಮಾಟ ಮಂತರ ಮಾಡಿಸೀ ಮಾಡಿಸೀ ಸುಸ್ತಾಗಿದ್ದರು. ಮಾಟಗಾರ, ಮಂತರಗಾರ, ಮೋಡಿಕಾರರಿಗೆ ತಮ ತಮ್ಮ ಯಿಲಾಖಾದೊಳಗೆ ಕಣ್ಣಳತೆ ಕೂಗಳತೆಯಲ್ಲಿರಿಸಿ ಕೊಂಡಿದ್ದರು. ಅವರ ವಾಮಾಚಾರದ ವುದ್ದೇಶ ಬರೀ ಕಲೆಟ್ರುಸಾಹೇಬ ಆಗಿರಲಿಲ್ಲ. ವಬ್ಬರೊಬ್ಬರ ವರ್ಚಸ್ಸು ಕುಂದಿಸಲು, ಅಂಗಾಂಗಗಳನ್ನು ವೂನಮಾಡಲು, ನಾಶ ಮಾಡಲು ಮಂತರ ಮಾಟಗಳ ಮೊರೆ ಹೋಗುತಲಿದ್ದರು. ಯೀ ಸಂಗತಿ ಮನ್ರೋ ಸಾಹೇಬನಿಗೆ ಗೊತ್ತಿರಲಿಲ್ಲ ಯಂದಲ್ಲ. ಆ ಯಲ್ಲ ವುಪಟಳವನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸುತಲಿದ್ದನು. ಅಲ್ಲದೆ ಮಂತರಗಾರಿಕೆ, ಮೋಡಿಗಾರಿಕೆ ಯೀ ಎಲ್ಲ ಯಿದ್ಯೆಗಳನ್ನು ಕಲಾಪ್ರಕಾರಗಳ ಪಯ್ಕಿ ವಂದೆಂದೇ ತಾನು ಭಾವಿಸಿದ್ದನು. ಅಂಥವರನ್ನು ತಾನಿದ್ದಲ್ಲಿಗೆ ಬರಮಾಡಿಕೊಂಡು ಸತ್ಕಾರ ಮಾಡಿ ಗವುರವಿಸುತಲಿದ್ದನು. ಅಂಥ ಪ್ರಯೋಗಗಳಿಗೆ ತನ್ನನ್ನು ತಾನು ವಡ್ಡಿಕೊಂಡು

ಭಲಾಯಂದು ವುದ್ಗರಿಸುತ್ತಲಿದ್ದನು. ತನಗೆ ತಾನು ಮ್ರುತ್ತುಂಜಯನೆ ಆಗಿದ್ದನು ಸಿವ ಸಂಕರ ಮಾದೇವಾss

ಅತ್ತ ಜರುಮಲಿಗೂ ನಿಚ್ಚಾಪುರಕೂ ನಡುವೆ ನಿಲುವಂಜಿಯಿಂದ ವುತಾರಗೊಂಡಿದ್ದ ಸಾವುರೆಕರೆ ಬಯಲಲ್ಲಿ ವಾರ ದಿನಮಾನ ಪರ್ಯಂತ ಘನಘೋರ ಕಾಳಗ ಸಂಭವಿಸಿತಷ್ಟೆ. ಅವರ ಪಯ್ಕಿ ಯಾರೂ ಸೋಲಲಿಲ್ಲ, ಯಾರೂ ಗೆಲ್ಲಲಿಲ್ಲ. ಯರಡೂ ಕಡೇಲಿ ವಂದೇ ಮೂಲದಿಂದ ಬಂದಿದ್ದ ಸಯ್ನಿಕರು ವಬ್ಬರನ್ನೊಬ್ಬರು ಸತ್ತುಗೊಲ್ಲುವುದು ಯಾಕಂತ ಹೋರಾಟವನ್ನು ನುರಿತ ನಟರಂತೆ ಅಭಿನಯಿಸಿದರೆಂದೇ ಹೇಳಬೇಕು. ಹಿಮ್ಮೆಟ್ಟಿಸಿದಂತೆ ಮಾಡಿದರು, ಹಿಮ್ಮೆಟ್ಟಿದಂತೆ ಮಾಡಿದರು, ತಮ ತಮ್ಮ ಸರೀರಗಳನ್ನು ಗೀರಿಕೊಂಡು ರಾವಾ ರಗುತ ರಂಪಾಟ ಮಾಡಿಕೊಂಡವರಂತೆ ತೋರುಪಡಿಸಿಕೊಂಡರು. ಯೀ ಅಯ್ತಿಹಾಸಿಕ ಕಾಳಗದಿಂದಾಗಿ ರುಣವಂದಿಗರಾದ ಆಯಾ ರಾಜರು ತಮ ತಮ್ಮ ಕಯ್ಯಿಗಳನ್ನು ಹಿಚುಕಿ ಕೊಂಡರೇ ಹೊರತು ವಬ್ಬರ ಮ್ಯಾಲೊಬ್ಬರು ಹಲ್ಲು ಕಡಿಯುವುದನ್ನು ಮಾತ್ರನಿಲ್ಲಿಸಲಿಲ್ಲ. ನಗದುಕೊಟ್ಟು ಬಡ್ಡಿ ಚಕ್ಕರಬಡ್ಡಿ ತೀರಿಸಲಾಗದ್ದಕ್ಕೆ ಜರಿಯಲೆ ರಾಜನು ತನ್ನ ರಾಜ್ಯದ ಕೆರೆಕವುಲರ ಹಟ್ಟಿ, ಅಮರದೇವರ ಗುಡ್ಡ, ಭಯ್ರದೇವರ ಗುಡ್ಡ, ಅಮ್ಮನಕೇರಿಗಳನ್ನೂ, ನಿಚ್ಚಾಪುರದ ರಾಜನು ತನ್ನ ರಾಜ್ಯದ ಪ್ರುಥಯೀಸ್ವರ, ಚಿಗಟೇರಿ, ಮಯ್ಯೂರು, ಯಿಟ್ಟಿಗೆ, ಹೊಂಬಳಗಟ್ಟಿಗಳನ್ನೂ ಪರಿಪಾಲನಾರ್ತವಾಗಿ ಕುಂಪಣಿ ಸರಕಾರದ ಸುಪರ್ದಿಗೆ ಬಿಟ್ಟುಕೊಟ್ಟನು ಯಂಬಲ್ಲಿಗೆ ಸಿವಸಂಕರ ಮಾದೇವಾs.. ಚಾಣಾಕ್ಷ ಅಧಿಕಾರಿಯಾದ ರೆಬೆರೋ ಮಾಶಯನು ತಾನಿದ್ದಲ್ಲಿ ಜರಿಮಲೆ ರಾಜನನ್ನು ಬರಮಾಡಿಕೊಂಡು "ಜಗದಪ್ಪ ನಾಯಕರೇ.. ನೀವು ಕುಂಪಣಿ ಸರಕಾರಕ್ಕೆ ಕ್ಷೇಮ ಬಯಸುತ್ತಿರುವಿರಿ.. ನಿಮ್ಮ ಯೋಗಕ್ಷೇಮವನ್ನು ಕುಂಪಣಿ ಸರಕಾರ ಯಿಚಾರಿಸುತ್ತಿರುವುದು. ನಿಚ್ಚಾಪುರದ ರಾಜ ನಿಮಗೆ ಮಾಡಿರೋ ದ್ರೋಹ ಸರಕಾರದ ಗಮನಕ್ಕೆ ಬಂದಿರುವುದು. ಅದಕ್ಕೆ ಮುಂದೊಂದು ದಿನ ಕುಂಪಣಿ ಸರಕಾರ ನಿಚ್ಚಾಪುರದ ಮ್ಯಾಲ ದಂಡೆತ್ತಿ ಹೋಗಬೇಕೆಂದಿರುವುದು.. ಆಗ ನೀವು ದಂಡು ದವಲತ್ತು ಸಮೇತ ಬಂದು ಸಾಯ ಮಾಡ್ಬೇಕು" ಯಂದು ಕೇಳಿಕೊಂಡನು. ಅದಕ್ಕೆ ನಾಯಕನು ಹಿಂದಕು ಮುಂದಕು ನೋಡದೆ ವಪ್ಪಿಕೊಂಡು ಕರಾರಿಗೆ ದಸಗತ್ತು ಹಾಕಿ ಬೀಳುಕೊಂಡು ಹೊರಟು ಹೋದನು. ಮುಂದೊಂದು ದಿವಸ ರೆಬೆರೋ ಮಾಶಯನು ತಾನಿದ್ದಲ್ಲಿಗೆ ನಿಚ್ಚಾಪುರದ ರಾಜನನ್ನು ಬರಮಾಡಿಕೊಂಡು "ಬಾಲಪ್ಪ ನಾಯಕರೇ"

ಯಂದು ಸಂಬೋಧಿಸುತ್ತ ಜಗದೆಪ್ಪ ನಾಯಕನಿಗೆ ಹೇಳಿದಂತೆ ಹೇಳಿದನು. ಬಾಲಪ್ಪ ನಾಯಕನು ಅದಕಿದ್ದು "ಜರಿಮಲೆ ಮ್ಯಾಲೆ ನೀವು ಮಾಡಬೇಕೆಂದಿರುವ ದಾಳಿಗೆ ನಾನು ದಂಡದವಲತ್ತು ಕಳಿಸಿ ಸಾಯ ಮಾಡುವೆನು" ಯಂದು ವಪ್ಪಿಗೆ ಸೂಚಿಸಿದನಲ್ಲದೆ ಕರಾರಿಗೆ ದಸಗತ್ತು ಹಾಕಿ ಬೀಳುಕೊಂಡು ಹೊರಟು ಹೋದನು.

ಯಿೊ ಯರಡೂ ಕರಾರು ಪತ್ರಗಳನ್ನು ಆಧಾರವಾಗಿಟ್ಟುಕೊಂಡು ತಾನು ಯಾಕೆ ಬಡತಿ ಪಡೆಯಬಾರದು ಯಂದು ರೆಬೆರೋ ಯೋಚಿಸುತ್ತಿರುವಾಗ್ಗೆ...

ಅತ್ತ ಕೂಡ್ಲಿಗಿ ಪಟ್ಟಣದೊಳಗೆ ತಾಲ್ಲೂಕಾಧಿಕಾರಿಯಾದ ಯಡ್ಡವರ್ಡನು ಯಿನ್ನು ಮುಂದೆ ತಾನು ಕಾಡುಪ್ರಾಣಿಗಳನ್ನು ಸೋದರರಂತೆ ಕಾಣುವುದಾಗಿ ಸಂತ ಜೋಸೆಫರ ಮ್ಯಾಲ ಕಯ್ಯಿಟ್ಟು ಪ್ರಮಾಣ ಮಾಡಿ ತನ್ನ ಹೆಂಡತಿ ಜೆನ್ನಿಫರಳನ್ನು ಸಮಾಧಾನಪಡಿಸಿದನು. ಆಕೆಯ ಅಪೇಕ್ಷೆಯಂತೆ ತನ್ನ ಯಿಲಾಖಾದೊಳಗಿದ್ದ ಗಿರಿದುರುಗ ಕಾಡು ಮೇಡುಗಳಲ್ಲಿ ಬೇಟೆ ಸಿಕಾರಿಗಳನ್ನು ನಿಷೇಧಿಸಿದನು. ಹೂಡೇಮು, ಕುಮಸಿ, ಹನಸಿ, ಕೊಪ್ಲ ಮೊದಲಾದ ಅಯವತ್ತೆಂಟು ಹಳ್ಳಿಗಳ ಆದಿವಾಸಿ ಜನಾಂಗದವರು ತುಕುಡಪ್ಪ ಮತ್ತು ತುಂಡಪ್ಪರೆಂಬ ಹಿರೀಕ ಅವಳಿ ಸೋದರರ ಮುಖಂಡತ್ವದಲ್ಲಿ ಯಡ್ಡವರ್ಡನಿದ್ದಲ್ಲಿಗೆ ಬಂದು "ದೊರೆಯೇ ಬೇಟೆಯಾಡುವುದು ನಮ್ಮ ಕುಲರುತ್ತಿ ಅಯ್ತೆ.. ಯಿದನು ನಾವು ತಲತಲಾಂತರದಿಂದ ಮಾಡಿಕೊಂಡು ಬಂದಿರುವೆವು. ಕಾಡುಪ್ರಾಣಿಗಳೊಂದಿಗೆ ನಮ್ಮ ಬೀಗುಸ್ತನ, ತೆಗಸ್ತನ ಯಿರುವುದು ಸೋಮಿ, ಕಾಡುಪ್ರಾಣಿಗಳ ರಗುತ ಕೊಬ್ಬಿನಿಂದ ವಾತಾ ಪಿತ್ತ ಕಫ ಮುಂತಾದ ರೋಗಗಳಿಗೆ ಅವುಸಧ ತಯಾರು ಮಾಡತೇವಿ, ಕಲ್ಲು ಲೋಬಾನ, ಕವಡೆ ಲೋಬಾನ ಹುಡುಡುಕಿ ತರತೇವಿ. ಯಿದು ನಮ್ಮ ಕುಲ ಕಸುಬು ಅಯ್ತೆ ದೋರೆಯೇ.. ಕಾಡು ನಮ್ಮ ತವರುಮನೆ ಅಯ್ತೆ.. ಅದರಿಂದ ನಮ್ಮನ್ನು ಬೇರೆ ಮಾಡಿ ವುಪಾಸ ಕೆಡವಬೇಡಿ ತಂದೆ" ಯಂದು ಗಲಗಲಾಂತ ಬೇಡಿಕೊಂಡರು. ಅದಕ್ಕಿದ್ದು ಯಡ್ಡವರ್ಡುನ ಮನಸ್ಸು ಕರಗಲಿಲ್ಲ. ಮೂರೊಳಗೆ ನಾಕಾರು ಮಂದಿಯಂತೆ ಭೂಮಿ ಸಾಮಿ ಮಾಡಿಕೊಂಡು ಹೊಟ್ಟೆ ಹೊರೀರಿಯಂದು ನಿಷೂ«ರವಾಗಿ ಹೇಳಿ ಕಳುವಿದನು. ಅವರು ಯಾರಿಗೂ ಅರ್ಥವಾಗದ ಭಾಷೆಯಲ್ಲಿ ಅವನನ್ನು ಹಿಗ್ಗಾಮುಗ್ಗಾ ಸಾಪಳಿಸುತ್ತ ಹೊರಟುಹೋದರು. ಅದಾದ ಕೆಲ ದಿವಸಕ್ಕೆ ಸಂಡೂರು ಗೆಡ್ಡೆಯ ರಾಜ ಶಿವರಾವ್ ಘೋರ್ಪಡೆ, ಸೀನೋಜಿ, ದಾಂಡೋಬ, ಖಾಂಡೋಬರೇ ಮೊದಲಾದ ಸಾಡೇಸಾತ್ ಸಾಮಂತರನ್ನು ಹಿಂದಿಟ್ಟುಕೊಂಡು

ಬಂದು ತಮ್ಮ ಮನರಂಜನೆಗೇನು ಮಾಡಬೇಕು? ವಾರಕ್ಕೆ ಮೂರು ಸಲವಾದರೂ ಕಾಡುಪ್ರಾಣಿಗಳ ಮಾಂಸಾಹಾರವನ್ನು ಭುಂಜಿಸುವ ತಮ್ಮ ರಾಣಿ ವಾಸದವರನ್ನು ಹೇಗೆ ಸಂತಯಿಸಬೇಕು? ಕಾಡುಪ್ರಾಣಿಗಳನ್ನು ಬೇಟೆಯಾಡದಿದ್ದಲ್ಲಿ ತಮ್ಮ ಪ್ರಜೆಗಳು ತಮ್ಮನ್ನು ಹೇಡಿಗಳೆಂದು ಹೀಯಾಳಿಸದೆ ಯಿದ್ದಾರೆಯೇ? ಯಂಬಿವೇ ಮೊದಲಾದ ಪ್ರಸ್ನೆಗಳನ್ನು ಹಾಕಲು ಯಡ್ಡವರ್ಡನು ವುತ್ತರ ಕೊಡಲು ತಡವರಿಸಿದನು. ಹತ್ತಾರೂ ಸೂರ ಸರದಾರರಿಗೆ ವಡೆಯನಾಗಿರುವ ಘೋರ್ಪಡೆಯು ಕುಂಪಣಿ ಸರಕಾರದ ನಿಷಾ«ವಂತ ಅನುಯಾಯಿಯು, ಆತನು ಯೀಗಾಗಲೇ ಕುಂಪಣಿ ಸರಕಾರದ ಮೇಲಧಿಕಾರಿಗಳಿಗೆ ಹುಲಿ ಯುಗುರು, ಹುಲಿ ಚರುಮ, ಕಾಡುಕೋಣದ ಮುಖ, ವುಡದೆಣ್ಣೆ, ನವುಲು ಮಾಮುಸ ಯಿವೇ ಮೊದಲಾದ ಕಾಡಿನ ವುತ್ಪನ್ನಗಳನ್ನು ಸರಬರಾಜು ಮಾಡಿ ಸಯ್ಯಿ ಅನ್ನಿಸಿಕೊಂಡಿರುವನು. ಅದೂ ಅಲ್ಲದೆ ಹುಲಿ ಸಿಕಾರೀ ಯಿದ್ಯೆಯನ್ನು ತನಗೆ ಹೇಳಿಕೊಟ್ಟ ಪ್ರಪ್ರಥಮ ಗುರುವು ತಾನಾಗಿರುವನು. ನಿಜ ಹೇಳಬೇಕೆಂದರೆ ಹೋದ ಸಲ ಹುಲಿಯನ್ನು ಅವನೇ ಕೊಂದು ಅದರ ಪರಾಕ್ರಮವನ್ನು ವುದಾರವಾಗಿ ತನಗೆ ನೀಡಿ ವರ್ಚಸ್ಸು ಹೆಚ್ಚಿಸಿದ್ದನು. ಅಂಥಾತನು ಬಂದು ಕೇಳುತ್ತಿರುವುದಕ್ಕೆ ಯೇನೆಂದು ಸಮಾಧಾನ ನೀಡುವುದು? ಧರುಮ ಸಂಕಟದಲ್ಲಿ ಸಿಲುಕಿದ ಯಡ್ಡವರ್ಡನು ಕೊನೆಗೂ ಬೇಟೆಯಾಡಿಕೊಳ್ಳಲು ಪರವಾನಿಗಿ ನೀಡಿ ಕಳುವಿದನು. ಸಿಡಿಮಿಡಿಗುಟ್ಟಿದ ಹೆಂಡತಿ ಜೆನ್ನಿಫರಳಿಗೆ ಯಿದೇ ಮುತ್ಸದ್ದಿತನ ಯಂದು ಹೇಳಿ ಸಿಟ್ಟು ತಮಣಿ ಮಾಡಿದನು. ಆಕೆಯ ಪ್ರೀತ್ಯರ್ಥವಾಗಿ ಹಲವು ಕಡೆ ಅಭಯಾರಣ್ಯಗಳನ್ನು ನಿರುಮಿಸಿದನು. ಸದರೀ ಪಟ್ಟಣದೊಳಗೆ ವಂದು ಮುೃಗಾಲಯ ಸ್ಥಾಪಿಸಿ ಅದರ ಮೇಲುಸುಸ್ತುವಾರಿಕೆಯನ್ನು ತನ್ನ ಪತ್ನಿಗೆ ವಹಿಸಿದನು. ಮಾಂಸಾಹಾರಿ ಪ್ರಾಣಿಗಳನ್ನು ಸಸ್ಯಾಹಾರಿ ಪ್ರಾಣಿಗಳನ್ನಾಗಿ ಮಾಡುವುದು ಹೇಗೆ ಯಂದು ಅಧ್ಯಯನ ನಡೆಯಲು ಆಕೆಯು ಗುಣಸಾಗರ ಅಗ್ರಹಾರದ ಯೇದಾಂತಿ ಯಂಕಟರಮಣ ಸಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವಂದು ಸಮಿತಿಯನ್ನು ರಚಿಸಿದಳು.. ಆ ಸಮಿತಿಯ ಸದಸ್ಯರು ಯಾರು ಯಾರು ಅಂದರೆ ಯ್ಯಾಕರಣ ಸಾರ ಚಂದ್ರೋದಯ....

ಅತ್ತ ಕುದುರೆಡವು ಪಟ್ಟಣದ ಕನ್ನಿಕಾಪರಮೇಸ್ವರಿ ದೇವಾಲಯ ಕಟ್ಟಡ ಯಬ್ಬಿಸಲಕಂದು ಕಳೆದ ಯಪ್ಪತ್ತಾರು ವರುಷಗಳ ಹಿಂದೆಯೇ ಮೀಸಲಿರಿಸಿರುವ ನಿವೇಶನಕ್ಕಂಟಿಕೊಂಡಿರುವ ಗಾರೆ ಮನೆ ಯಷ್ಟುಗಟ್ಟಿಮುಟ್ಟಾಗಿರುವುದೆಂದರೆ ಅಷ್ಟು ಗಟ್ಟಿ ಮುಟ್ಟಾಗಿರುವವು.. ಅದರೊಳಗಿರುವ ವಂದು ಕೋಣೆಯು ಯೇಳು

ಸಮುದ್ಧರದಾಚೆಯ ಕೀಳು ಸಮುದ್ಧರ ಅಂತಾರಲ್ಲ.. ಹಾಗಿರುವುದು.. ಅದರೊಳಗೆ ವಂದು ನೊರಜು ಸಲೀಸಾಗಿ ಪುಸುಗುವಂತಿಲ್ಲ. ಆ ಅಂಥ ಕೋಣೆಯೊಳಗೆ ಯತ್ತರಕ್ಕಿಂತ ಹೆಚ್ಚು ಅಗಲ ಯಿರುವಂಥಾತನೂ, ಹನ್ನೊಂದು ಮಣ ತೂಕದ ವಲವು ಸರೀರಕ್ಕೊಡೆಯನೂ, ಬಡಬಗ್ಗರಿಂದಲೂ, ಲೇವಾದೇವಿಗಾರರಿಂದಲೂ ಸದಾ ಸೇವಿಸಿಕೊಳ್ಳು ತ್ತಿದ್ದಂಥಾತನೂ, ಕೂಡ್ಲಿಗಿ ಪಟ್ಟಣದ ವಂಕದಾರಿ ಗೋಯಿಂದ ಶ್ರೇಷಿ«ಯ ಭಾವಮಯ್ದುನನೂ, ಕೀರ್ತಿಸೇಷ ಟೀಕಾ ಸಂಜೀವಪ್ಪ ಶ್ರೇಷಿ«ಯ ಯೇಕ ಮಾತ್ರಪುತ್ರನೂ ಆದಂತ ತಿರುಪಾಲಯ ಶ್ರೇಷಿ«ಯು ಗಳಿಗೆ ಗಳಿಗೊಂದು ಸಲದಂತೆ ತನ್ನ ಕುಲದಯವವಾದ ತಿರುಪತಿ ಯಂಕಟೇಸ್ವರ ಸ್ವಾಮಿಯ ನಾಮಸ್ಮರಣೆ ಮಾಡುತ ಚಿನ್ನದ ನಾಣ್ಯಗಳೊಳಗಿನಿಂದ ಬೆಳ್ಳಿ ನಾಣ್ಯಗಳನ್ನೂ, ಬೆಳ್ಳಿ ನಾಣ್ಯಗಳೊಳಗಿನಿಂದ ಚಿನ್ನದ ನಾಣ್ಯಗಳನ್ನು ಬೇರೆ ಮಾಡುತ, ಅವುಗಳನ್ನು ನೂರರ ಲೆಕ್ಕಾಚಾರದಲ್ಲಿ ಜಿಂಕೆ ಚರುಮದ ಚೀಲದಲಿ ತುಂಬುತ, ಬಾಯಿಗೆ ಸರಗುಣಿಕೆ ಬಿಗಿಯುತ, ಕಬ್ಬಿಣದ ಪೆಟಾರಿ ಯೊಳಗಿಡುತ ದೇವರೇ ಯಲ್ಲಾಪ್ರಕೊರಚರಟ್ಟಿ ಕಳ್ಳರ ಕಣ್ಣಿಗೆ ಬೀಳದಂತೆ ಮಾಡು ಯಂದು ಬೇಡಿಕೊಳುತ ಯಿರುವಾಗ್ಗೆ...

ಸದರಿ ಮನೆಯಂಗಳದಲ್ಲಿ ಅದೇ ತಾನೆ ನಿಂತುಕೊಂಡ ವಂದೆರಡು ಕುದುರೆಗಳ ಡುಬ್ಬದ ಮ್ಯಾಲಿಂದ ಮೂರು ಮಂದಿ ಕೆಳಕ್ಕಿಳಿದರು.. ಅವರ ಪಯ್ಕಿ ಯಿಬ್ಬರು ಪರಂಗಿ ಮಂದಿಯೂ, ವಬ್ಬಾತನು ಜುಮ್ಮೋಜನೂ ಆಗಿದ್ದನು. ಹುಡುಗರುಪ್ಪಡಿ ತೀರಾ ಅವರ ಸನೀಹಕ್ಕೆ ಹೋಗುವ ಹಠದಿಂದಾಗಿ ತುಸು ದೂರವೇ ನಿಂತಿದ್ದರು. ತಮ ತಮ್ಮ ಮಕ್ಕಳು ಮರಿಗಳನ್ನಲ್ಲಿಂದ ಯಳದೊಯ್ಯ ಲೆಂದು ಬಂದಿದ್ದ ತಂದೆ ತಾಯಂದಿರು ಅವರ ಕೆಂದೊಗಲಿಗೆ ಮಳ್ಳಾಗಿ ತಮ್ಮ ಕರತವ್ಯ ಮರೆತು ಅಲಲ್ಲೇ ನಿಂತು ವುಳಕೊಂಡುಬಿಟ್ಟಿದ್ದರು. ಆ ಪರಂಗಿ ಮಂದಿ ಸದರಿ ಪಟ್ಟಣಕ್ಕೆ ಹೊಸಬರೇನೂ ಅಲ್ಲ. ಚೂರುಪಾರು ದುಭಾಷಿಯೆನಿಸಿದ್ದ ಜುಮ್ಮೋಬನೂ ಸಹ. ಪರಂಗಿ ಮುಂದಿಯ ಪಯ್ಕಿ ವಬ್ಬಾತ ಯಸಲೆ, ಯಿನ್ನೊಬ್ಬಾತ ಬಿಸಲೆ.. ಆದರೆ ಯಿದಾವುದು ಪಕ್ಕ ಅಲ್ಲ.. ಮಂದಿ ಬಾಯೊಳಗೆ ಯೇನೇನೋ ಯಿದ್ದದ್ದು ಯಿನ್ನೇನೋ ಆಗಿಬಿಟ್ಟಿತ್ತು. ರಾಜ ಮಾರಾಜರು ಬಳಸಿ ಬಿಸಾಡಿರುವ ಯಾದೇ ಹಳೇ ಪಳೆಯ ವಸ್ತುಗಳನ್ನು ಖರೀದಿ ಮಾಡಲಕೆಂದು ಅವರು ಆಗೊವ್ಮೆ ಯೀಗೊವ್ಮೆ ಯಿಂಥ ಪಟ್ಟಣಗಳಿಗೆ ಬಂದು ಹೋಗುವುದುಂಟು. ಅವರು ಬಂದೊಡನೆ ಮಂದಿಯು ನಂದಿದು ತಗಳ್ಳಪ್ಪ.. ನಂದದು ತಗಳ್ಳಪ್ಪ ಯಂದು ಅವರನ್ನು ಮುಕ್ಕರಿಸಿಕೊಳ್ಳುತ್ತಿದ್ದುದುಂಟು.. ಯೀ

ಮೊದಲು ಯೀತೆರನ ಕೊಡು  ಕೊಳ್ಳೋದು ಕದ್ದು ಮುಚ್ಚಿ ನಡೆಯುತಲಿದ್ದುದು ಥಾಮಸು ಮನ್ರೋನ ಅಗ್ನೆಮೇರೆಗೆ. ಯಡ್ಡವರ್ಡನು ಸದರಿ ಪಟ್ಟಣದ ಚರಾಸ್ತಿಯನ್ನು ಮುಟ್ಟುಗೋಲು ಹಾಕಿದ್ದಲ್ಲದೆ ಸ್ಥಿರಾಸ್ತಿಯ ವುತ್ಪನ್ನವನ್ನು ಸ್ಥಗಿತ ಗೊಳಿಸಿದ ಲಗಾಯ್ತು ಅಂದರೆ ದೀಡುವರುಷಗಳಿಂದ ರಾಜಾರೋಷವಾಗಿ ನಡೆಯುತ್ತಿರುವುದು. ರಾಜಮಾತೆ ಭಯ್ರಮಾಂಬೆಯು ತಮ್ಮ ಅರಮನೆಯ ಹಳೆಪಳೆಯ ವಸ್ತುಗಳ ಕಳ್ಳ ಸಾಗಾಣಿಕೆ ತಡೆಯುವ ಸಲುವಾಗಿ ಅವರ ಆಗಮನ, ನಿರಗಮನದ ಮ್ಯಾಲ ನಿರುಬಂಧ ಹೇರಿ ಯಿಫಲ ಳಾಗಿರುವುದೂ ವುಂಟು. ಅರಸೊತ್ತಿಗೆ ಕಳಕೊಂಡಿರುವ ಅರಮನೆಯೂ ವಂದೆ, ಹಲ್ಲು ಕಳಕೊಂಡಿ ರುವ ರುದ್ಧ ಕಾಳಿಂಗ ಸರುಪಮೂವಂದೆ. ತನಗೆ ಅಂಜುವವರೂ ಯಿಲ್ಲದೆ, ಅಳುಕುವವರೂ ಯಿಲ್ಲದೆ ಅರಮನೆಯೆಂಬುದು ಪಟ್ಟಣದ ಮಂದಿಗೆ ಆಟದ ಆಟಿಗೆಯಾಗಿ ಬಿಟ್ಟಿರುವುದು. ನಗೆಪಾಟಲಾಗಿ ಬಿಟ್ಟಿರುವುದು.. ಅರಮನೆಯನ್ನು ಅಣಕಿಸಲೆಂದೇ ಯಸಲೆ, ಬಿಸಲೆ ಬಂದು ತಮಗೆ ಬೇಕು ಬೇಕಾದ್ದನ್ನು ಖರೀದಿಸಿಕೊಂಡು ಹೋಗುತ್ತಿರುವುದು. ತಾವು ಯಂಥ ನಿರಭಯರು ಯಂದು ಸಾಧಿಸಿ ತೋರಿಸಲಿಕ್ಕೆಂದೇ ಯೀಗ್ಗೆ ಸೊಲುಪ ಹೊತ್ತಿನ ಹಿಂದೆಯಷ್ಟೆ ಅರಮನೆಯಂ ಪೊಕ್ಕು, ರಾಜ ಪರಿವಾರದವರ ಕ್ಷೇಮ ಲಾಭ ಯಿಚಾರಿಸಿ ಹಿಡಿಯೋರಿಲ್ಲದೆ ಬಿಕೋಯನ್ನು ತಲಿದ್ದ ಪಿಕದಾನಿಯನ್ನು ಯತ್ತಿ ಪರೀಕ್ಷಿಸಿ, ಯಿದನ್ನು ಮಾರಾಟ ಮಾಡುವಿರಾ ಯಂದು ಕೇಳಿ ಯಬಡಾ ದಬಡಾ ಬಯ್ಯಿಸಿಕೊಂಡು ಸಾಗಾಣಿಕೆಗೆ ಅನುಕೂಲವಾಗುವಷ್ಟು ಚಿಕ್ಕದಿದ್ದಲ್ಲಿ ಯಿದನ್ನೂ ಖರೀದಿಸಿ ಕುದುರೆ ವ್ಯಾಲಿಟ್ಟುಕೊಂಡು ಹೋಗಬಹುದಿತ್ತಲ್ಲ ಯಂದು ಆಸೆಗಣ್ಣಿಂದ ಅರಮನೆಯನ್ನು ಯಿಯಿಧ ಕೋನಗಳಿಂದ ನೋಡುತ ಸದರೀ ತಿರುಪಾಲಯ್ಯನ ಮನೆಗೆ ಅದೇ ತಾನೆ ಬಂದಿದ್ದರು.

ಕಾಲ ಸುಮಾರು ಯಂಬ ಕಾರಣದಿಂದ ಶ್ರೇಷ್ಠಿಯು ವಳಗಿದ್ದನಷ್ಟೆ. ಶ್ರೇಷ್ಠಿಯ ಮಕ್ಕಳಾದ ಪಾಂಡು,ಗೋವರ್ಧನರು ಅವರನ್ನು ಸ್ವಾಗತಿಸಿ ವುಚಿತಾಸನದಲ್ಲಿ ಕುಳ್ಳಿರಿಸಿ ಲಿಂಬೆರಸ ಮಿಸ್ರಿತ ಬೆಲ್ಲದ ನೀರನ್ನು ನೀಡಿ ಸತ್ಕರಿಸಿದರು. ಆಳುಗಳಾದ ಯಿಂದರವ್ವ, ಚಂದರವ್ವರಿಗೆ (ಯಿವರಿಬ್ಬರ ಮೂಲ ಹೆಸರು ಕಟಂಬಲವ್ವ, ಚುಚುಗವ್ವ... ತಮ್ಮ ಮನೆಯ ವರ್ಚಸ್ಸನ್ನು ಕಾಪಾಡಲೋಸುಗ ಶ್ರೇಷ್ಠಿಯು ಯಿವರಿಗೆ ಮರು ನಾಮಕರಣ ಮಾಡಿಟ್ಟುಕೊಂಡಿದ್ದನು) ಗಾಳಿ ಬೀಸಲು ಹೇಳಿ ತಮ್ಮ ತಂದೆಯನ್ನು ಕರೆ ತರುವ ನಿಮಿತ್ತ ವಳಗೆ ಹೋದರು. ಕುಂತು ಕುಂತಂತೆಯೇ ಪರಂಗಿ ಮಂದಿಯ ಕಣ್ಣುಗಳು ಪ್ರತಿಯೊಬ್ಬರನ್ನು

ಮುಟು ಮುಟ್ಟಿ ಬಂದು ಬೆವರಿನ ಸಹಿತ ವರದಿ ಮಾಡುತಲಿದ್ದವು. ತಮಗೆ ಮಾಂತರಿಕ ಸಗುತಿಯಿದ್ದಲ್ಲಿ ಯೀ ಪಟ್ಟಣದ ಮಂದಿಯನ್ನು ಪುಟ ಪಟ್ಟಿ ಗೊಂಬಿಗಳನ್ನಾಗಿ ಮಾಡಬೌದಿತ್ತಲ್ಲ.. ಬೆವರು ವಾಸನೆ ಸಹಿತ ಯಿವರನ್ನು ತಮ್ಮ ಗ್ರೇಟು ಬ್ರಿಟನ್ನಿಗೋ, ಪ್ರಾನ್ಸಿಗೋ ಸಾಗಾಣಿಕೆ ಮಾಡಿ ಅಪಾರ ಹಣ ಸಂಪಾದಿಸ ಬಹುದಿತ್ತಲ್ಲ.. ಮಾಂಚೆಸ್ಟರಿನ ಪ್ರಸಿದ್ಧ ಪ್ರಾಚ್ಯ ವಸ್ತು ಸಂಗ್ರಹಕಾರನಾದ ಸರ್‌ಕಿಸ್ಟೋಪರನು ಯಿಂಡಿಯಾದಿಂದ ವಂದು ಸಿಲಿಂಡರಷ್ಟಾದರೂ ಬೆವರಿನ ವಾಸನೆಯನ್ನು ತನಗೆ ರಪ್ತು ಮಾಡಬೇಕೆಂದು ಕಳಿಸಿದ್ದ ಸಂದೇಶವನ್ನು ಅವರಿಬ್ಬರು ಮತ ಮತ್ತೆ ಗ್ನಾಪಿಸಿಕೊಂಡರು. ಯಸಲೆಯು ಯಿಂದರವ್ವನ ಮಯ್ಯಿಂದಲೂ, ಬಿಸಲೆಯು ಚಂದರವ್ವನ ಮಯ್ಯಿಂದಲೂ ಹೊರಹೊಮ್ಮುತಲಿದ್ದ ಬೆವರಿನ ಕಾಕು ಪರಿಮಳವನ್ನು ಆಘ್ರಾಣಿಸುತ ಅಮಲೇರಿರುವಾಗ್ಗೆ, ತಮ ತಮ್ಮ ಕಯ್ಲಿರೋ ವಸ್ತುಗಳಿಗೆ ಬೇಡಿಕೆ ಬರಬೌದೆಂದು ಕೆಲಮಂದಿಯು ಅಲ್ಲಲ್ಲಿ ನಿಂತು ಕಾಯುತಿರುವಾಗ್ಗೆ, ಬಾಲಕಿಯೋರ್ವಳು ತನ ಯಡಗಯ್ಯ ಹೆಬ್ಬೊಟ್ಟನ್ನು ಬಾಯೊಳಗಿಟುಕೊಂಡು ಜಿಬುಕುತಿರುವಾಗ್ಗೆ, ತಾಯೋರ್ವಳ ಕಂಕುಳಲ್ಲಿದ್ದ ಹಸುಗೂಸು ಹಾಲು ತುಂಬಿದ ಮೊಲೆಗಾಗಿ ಹುಡುಕಾಟ ನಡೆಸಿರುವಾಗ್ಗೆ, ಬಾಲಕನೋರ್ವನ ಮೂಗಲ್ಲಿ ಸಿಂಬಳಗೊಣ್ಣಿಯೇರು ತಿಳಿಯುತಿರುವಾಗ್ಗೆ, ಸೂರ್ಯ ತನ್ನ ತೀಕ್ಷ್ಣಗಣ್ಣಿಂದ ಗಾರೆಮನೆಯ ಯಿದ್ಯಾಮಾನಗಳನ್ನು ಗಮನಿಸುತಿರುವಾಗ್ಗೆ, ತನ್ನನ್ನು ಖರೀದಿಸಿದರೆ ಕಷ್ಟ ಯಂದು ಭಾವಿಸಿ ಗಾಳಿಯು ಅಲ್ಲಿಂದ ಪರಾರಿಯಾಗಿರುವಾಗ್ಗೆ,

ಕತ್ತಲೆಮೂಟೆಯಂಥಾಕ್ರುತಿಯೊಂದು 'ಯೇಡುಕೊಂಡಲವಾಡಾs ಯೇಡುಕೊಂಡಲವಾಡಾ' ಯಂದನಕಂತ ಪಂಚಲೋಹದ ತಗಡುಗಳನ್ನು ಬಡಿದಿದ್ದ ಹೊಸ್ತಿಲನ್ನು ದಾಟಿ ನವನೀತ ದಂತೀಚೆ ಕಾಣಿಸಿಕೊಂಡು "ಹೋಹೋ ಯಪ್ಪುಡು ವಚ್ಚಿತಿರಿ.. ಹ್ಹಾ.. ಹ್ಹಾ.. ಯಪ್ಪುಡು ವಚ್ಚಿತಿರಿ" ಯಂದು ಅವರನ್ನು ತಗಲಿಕಂತು. ಅವರ ಹಸ್ತಲಾಘವ ಮಾಡಿತು.. ಗವುರವ ಪೂರಕವಾಗಿ ಮನೆ ವಳಗಡೆ ಕರೆದೊಯ್ಯಿತು. ವುಂಬಲಕ ಕೊಟ್ಟಿತು, ಕುಡಿಯಲಕ ಕೊಟ್ಟಿತು, ಯಂಜಲಗಯ್ನ ಬಾಯ್ನ ವರಸಿಗಂಬಲಕ ಕೊಟ್ಟಿತು. ತನ್ನ ಸರೀರದ ವಝನ ತಿಂಗಳೊಪ್ಪತ್ತಿನಲ್ಲಿ ವಂದು ಮಣ ಹೆಚ್ಚಾಗಯ್ತೆ ಯಂಬ ಕಾರಣಕ, ಯೇರಿದರೆ ಮಾಡು ತಡಕಳ್ಳಲ್ಲ ಯಂಬ ಕಾರಣಕ ಮಕ್ಕಳ ಕಯ್ಲಿಂದ ವುಪ್ಪರಿಗೆ ಮ್ಯಾಲಿದ್ದುದನ್ನು ಕೆಳಗಡೆ ತರಿಸಿಕಂತು.. ವಂದೊಂದು ವಸ್ತುವನ್ನು ಅವರ ಮುಂದೆ ಹರಡಿತು.. ಅದು ಹಾಂಗ ಹರಡಿದ ವಸ್ತುಗಳು ಕೇವಲ ಸದರಿ ಪಟ್ಟಣದ

ಅರಮನೆಗೆ, ಯಿತಿಹಾಸಕ್ಕೆ ಸಂಬಂಧಪಟ್ಟವುಗಳಾಗಿರಲಿಲ.. ಸುತಮುತ್ತಲ ಗ್ರಾಮ ಗಳಿಂದ ಸಂಗ್ರಹಿಸಿ ತಂದಂಥಮೂಯಿದ್ದವು.. ಗುಲಗಂಜಿಗಾತುರದಿಂದ ಹಿಡಿದು ವನಕೆ ಗಾತುರದ ವರೆಗೆ ಯಿಯಿಧ ರೀತಿಯಲ್ಲಿದ್ದವು.. ಪಲಾನ ಯಿಂಥ ಕಾಲದಲ್ಲಿ ಯಿಂಥರಾಜನು ತನ್ನ ಕಿವಿಯು ಕೂಕಣಿ ತೆಗೆಯುಲು ಯಿದನ್ನು ವುಪಯೋಗಿಸುತಲಿದ್ದನು, ಪಲಾನ ಯಿಂಥ ಕಾಲದಲ್ಲಿ ಯಿಂಥ ರಾಜನು ತನ್ನ ಹಲ್ಲು ಸಂದಿಯ ಮಾವುಸಾಹಾರದ ಕೂಳೆ ಗೆಬರಲು ಯಿದನ್ನು ವುಪಯೋಗಿಸುತ ಲಿದ್ದನು ಯಂದು ಮುಂತಾಗಿ ಶ್ರೇಷಿ«ಯು ವಂದೊಂದು ವಸ್ತುವಿನ ಕಾಲ ಗುಣ ಯಿಶೇಷವನ್ನು ಪರಂಗಿ ಮಂದಿಗೆ ಯಿವರಿಸುತ್ತಿರುವಾಗ್ಗೆ, ತನ್ನ ಪ್ರತಿಬಿಂಬವನ್ನು ನೋಡಿಕೊಂಡು ಕ್ರುತಾರ್ಥಳಾಗುವ ಸಲುವಾಗಿ ಅಷ್ಟ ಲೋಹದ ದರುಪಣವನ್ನು ಶ್ರೇಷಿ«ಯ ಧರುಮಪತ್ನಿ ರುಕ್ಕುಮಿಣಮ್ಮ ಕಳುವು ಮಾಡಿ ತನ್ನ ಸಂದೂಕದೊಳಗೆ ತೂರಿಸುತ್ತಿರುವಾಗ್ಗೆ,

ಸದರಿ ಪಟ್ಟಣದ ಯಿನ್ನೊಂದು ಮನೆಯಲ್ಲಿ ಅಂದರೆ ಆಮಾತ್ಯ ಗವುಡಿಕೇ ಸಣಸಿದ್ದಪ್ಪನ ಮನೆಯ ವುಪ್ಪರಿಗೆಯಲ್ಲಿ ಕೋಣನತಂಬಿಗೆ ರುದರೇಗವುಡಗೂ, ರಾಜಕುಮಾರ ಕಾಟನಾಯಕನಿಗೂ ನಡುವೆ ಚದುರಂಗದಾಟವು ನಡಿತಾ ನಡಿತಾ ಬಲು ಬಿಸಿಯೇರಿಬಿಟ್ಟಿತ್ತು. ಹಬ್ಬದೂಟ ವುಣಲಕಂತ, ಅಮಾತ್ಯನ ಖಾಸಾ ಅಳಿಯನನ್ನು ಸಾಂಪ್ರತ ಮಾತನಾಡಿಸಲಕಂತ ಕಾಟಯ್ಯ ಮುಂಜಾನೆಯೇ ಅಲ್ಲಿಗೆ ಬಂದು ತಲುಪಿದ್ದ. ತನ್ನ ಅಳಿಯ(ಅಂದರೆ ಮಗಳು ಗವುರಮ್ಮನ ಗಂಡ)ನು ರಾಜಕುಮಾರನನ್ನು ಚದುರಂಗದಾಟ ದಲ್ಲಿ ಸೋಲಿಸಲೆಂದೇ ಅಮಾತ್ಯನು ಕವಳದ ವ್ಯೂಹ ರಚಿಸಿ ಬರಮಾಡಿಕೊಂಡಿದ್ದನು. ಕಾಲಕ್ಷೇಪ ಮಾಡಲಕೆಂದೇ ಅವರು ಆಟ ಆರಂಭಿಸಿದ್ದು. ಆದರೆ ಕಾವು ಯೇರುತಾ ಯೇರುತಾ ಹೋಗಿತ್ತು. ಬೇಕೆಂದೇ ಅಮಾತ್ಯನು ಅರಮನೆ ಸಂಬಂಧೀ ಅಹಿತಕರ ಘಟನಾವಳಿಗಳನ್ನು ವಂದರ ಮ್ಯಾಲೊಂದರಂತೆ ಪ್ರಸ್ತಾಪಿಸೀ ಪ್ರಸ್ತಾಪಿಸೀ ಕಾಟ ನಾಯಕ ಸೋಲುಗಳ ಸರವಾಲೆಯನ್ನಲಂಕರಿಸುವಂತೆ ಮಾಡಿದ್ದನು. ರಾಜಕುಮಾರನು ಬಕ್ಕಣದಲ್ಲಿದ್ದುದನ್ನು, ಕಿವಿ, ಕೊಳ್ಳಲಿದ್ದುದನ್ನು ಅಮಾತ್ಯನಿಂದ ನೂರಾರು ಬೆಳ್ಳಿ ರೂಪಾಯಿ ಗಳನ್ನು ಸಾಲ ಪಡೆದು ಪಣಕ್ಕಿಟ್ಟು ಕಳಕೊಂಡನು. ಆದರೂ ಆ ಛಲದಂಕಮಲ್ಲನು ಆಟದಿಂದ ಯಿರಮಿಸಿಕೊಳ್ಳಲಿಲ್ಲ.. ರುದರೇಗವುಡನಂಥ ಯಕಃಶ್ಚಿತ್ ಜಾಮಾತ್ರುಕಯ್ಲಿ ಪುವ್ವುಲ ರಾಜವಮುಸಸ್ಥನಾದ ತಾನು ವಂದು ಆಟವನ್ನಾದರೂ ಗೆಲ್ಲಲೇಬೇಕೆಂದು ಕ್ರುತನಿಶ್ಚಯವಂ ಮಾಡಿ ತನ್ನ ಕಯ್ಲಿದ್ದ ಪಂಚಲೋಹದ ತಂಬಿಗೆಯನ್ನು (ಮಿಂಜಾನೆ ದೊಡ್ಡಿಯ ಸಲುವಾಗಿ ತನ್ನೊಂದಿಗೆ

ಯಿಟ್ಟುಕೊಂಡಿದ್ದನಷ್ಟೆ. ಚವುಚ ಕಾರ್ಯ ಮುಗಿಸಿಕೊಂಡು ಹಂಗೆ ಹೊರಟು ಬಂದಿದ್ದನಷ್ಟೆ) ಪಣಕ್ಕಿಟ್ಟನು. ಆದರೆ ಜಾಮಾತ್ರುಅದನ್ನು ತಿರಸ್ಕರಿಸಿದನಲ್ಲದೆ ಹೀಗಳೆದನು. ತಂಬಿಗೆಯ ಅಯ್ತಿಹಾಸವನ್ನೂ, ಅದರ ಗುಣ ಯಿಶೇಷಗಳನ್ನು ವರಣಿಸೀ ವರಣಿಸೀ ರಾಜಕುವರ ಸುಸ್ತಾದನು. ಆಗಿದ್ದು ಆಮಾತ್ಯನು 'ನಾಯಕರೇ, ಯೆಸ್ಲೇ, ಬಿಸ್ಲೇ ಬಂದು ತಿರುಪಾಲಯ್ಯನ ಮನೇಲಿ ಬೀಡು ಬಿಟ್ಟಿದ್ದಾರಂತೆ. ಯೀ ಕೂಡಲೆ ನೀವು ಹೋಗಿ ಯೀ ನಿಮ್ಮ ಅಪೂರ್ವ ವಸ್ತುವನ್ನು ಅವರಿಗ್ಯಾಕೆ ಮಾರಬಾರದು?" ಯಂದು ಸಕಾಲಿಕ ಸಲಹೆ ನೀಡಿದನು. ವಲ್ಲದ ಮನಸ್ಸಿನಿಂದ ಕಾಟಯ್ಯನು ಆ ತಂಬಿಗೆಯೊಡನೆ....

ಶ್ರೇಷಿ« ಭೌವಚನಸಯ್ತು ಸ್ವಾಗತಿಸದೆ ಯಿರಲಿಲ್ಲ, ಅವುಪಚಾರಿಕವಾಗಿ ಪರಂಗಿ ಮಂದಿಯನ್ನು ಪರಿಚಯಿಸದೆ ಯಿರಲಿಲ್ಲ, ನಿಂಬೆ ಪಾನಕಕೊಟ್ಟು ನಾಯಕನ ಹೊಟ್ಟೆ ತಣ್ಣಗೆ ಮಾಡದೆ ಯಿರಲಿಲ್ಲ. ರಾಜಪರಿವಾರದವರ ಪಯ್ಕಿ ಅಪರಿಮಿತ ಲೇವಾದೇವಿಯಿಟ್ಟುಕೊಂಡಿರುವ ನಾಯಕನನ್ನು ಅಲ್ಲಿಂದ ಸಾಗುಹಾಕಲು ಶ್ರೇಷಿ« ಮಾಡಿದ ಹತ್ತು ಹಲವು ಪ್ರಯತ್ನಗಳು ವಿಫಲಗೊಂಡವು. ತನಗೆ ತುರ್ತಾಗಿ ಸಾವುರ ರೂಪಾಯಿ ಬೇಕೆಂದು ಹೇಳುತ ನಾಯಕನು ತನ್ನ ಸೊಂಟದ ಮೂಲೆಯಿಂದ ಮಾಯಾವೀ(?) ತಂಬಿಗೆಯನ್ನು ತೆಗೆದು ಅವರ ಮುಂದಿಟ್ಟನು. ಯಿದೇನಿದ್ದೀತು ಅಂತ ಅವರು ತಿಕಿತಿಕ್ಕಿ ನೋಡುತ್ತಿರುವಾಗ್ಗೆ ಅದರ ಪ್ರಾಚೀನತೆಯನ್ನು ಯಿವರಿಸಿದನು. ಪರಂಗಿ ಮಂದಿಯು ಯಿದಕ್ಕೆ ಕಿಲುಬು ಕಾಸಿನ ಬೆಲೆಯಿಲ್ಲ ಯಂದು ಹೇಳಿ ದರಲ್ಲದೆ ಪಿಕದಾನಿ ತಂದುಕೊಟ್ಟಲ್ಲಿ ಅಯವತ್ತು ರೂಪಾಯಿ ಕೊಡುವುದಾಗಿ ಹೇಳುತ್ತಿರುವಾಗ್ಗೆ, ಅದನ್ನು ಕೇಳಿ ನಾಯಕನು ಪರಪರ ತಲೆಯನ್ನು ಕೆರೆದುಕೊಳ್ಳುತ್ತಿರುವಾಗ್ಗೆ...

ಅದೇ ಕುದುರೆಡವು ಪಟ್ಟಣದ ಥೆಳಗೇರಿಯಲ್ಲಿ ಜಗ್ಲೂರೆವ್ವ ತನ್ನ ಗಂಡನನ್ನು ತಾನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನದಿಂದ ಯಿರಮಿಸಿರಲಿಲ್ಲ. ತನ್ನ ಕೊಳ್ಳಾಗಿನ ತಾಳಿ ಭಾಗ್ಯ ವುಳುಕಿಸಿಕೊಳ್ಳಲಕ, ತನ್ನ ಹಣೆಯ ಕುಂಕುಮ ಬೊಟ್ಟು ವುಳುಸಿಕೊಳ್ಳಲಕ, ತನ್ನ ಸತೀತನದ ಗವುರವವ ಕಾಪಾಡಿಕೊಳ್ಳಲಕ ಆಕೆಯು ತನಗೆ ಆಸ್ರಯ ಕರುಣಿಸಿದ್ದಂಥಾ ಬೇಯಿನಮರದವ್ವನ ಅಗಾಧ ಬೊಡ್ಡೆಗೆ ಹಣೆ ಅಂಟಿಸಿ ಸಣುಮಾಡಿ ಚಕ್ರಾಲಕ ಹೋಗಿ ಮೋಡಿಕಾರ ಸಂಗಪ್ಪನನ್ನು ಕಂಡು ಬಂದಿದ್ದಳು, ಯಕ್ಕಗೇರಿಗೆ ಹೋಗಿ ಮಾಮಂತುರವಾದಿ ಮಶಲಪ್ಪನನ್ನು ಕಂಡು ಬಂದಿದ್ದಳು, ಬಂಡರೀಗೆ ಹೋಗಿ ಲಚ್ಚಯ್ಯ ಸಾಸ್ತ್ರೀನ ಕಂಡು ಬಂದಿದ್ದಳು, ಅವರು ಮಂತರಿಸಿ ಕೊಟ್ಟಿರುವಂಥಾ ತಾಯಿತ, ಲೋಬಾನ

ಅಂಗಯ್ಯೊಳಗೆ ಅಡಗುವಂಥಾ ಭೂಮಂತರಗಾಳಿ ಗೊಂಬಿಗಳು ಆಕೆಯ ವುಡುಲಲ್ಲಿ ಯಿಲ್ಲದೆ ಯಿರಲಿಲ್ಲ. ಗಂಡನ ವುಡುದಾರಕ್ಕೆ ತಾಯಿತವನ್ನು ತಾನು ಪೋಣಿಸಲಿಕ್ಕಾದೀತೇನು? ಆತನನ್ನು ಹುಟ್ಟು ಮಾರಗದೆಸೀಲೆ ನಿಲ್ಲಿಸಿ ತಾನು ಲೋಬಾನದ ಹೊಗೆಯಾಡಿಸಲಿಕ್ಕಾದೀತೇನು? ತಾನು ಆ ಮನೆಯ ತಲಬಾಕಲ ಯಡಕ ಬಲಕ ಭೂಮಂತರಗಾಳಿ ಗೊಂಬಿಗಳನು ಕಟ್ಟಲಿಕ್ಕಾದೀತೇನು? ತಾನು ಆತನ ಕಿವಿಗಳಲ್ಲಿ ಹ್ರಾಂ ಹ್ರೀಂ ಹ್ರೂಂ ಮಂತರ ಗಳನ್ನು ವುದುರಿಸಲಿಕ್ಕಾದೀತೇನು? ಯಿವೇ ಮೊದಲಾದ ಚಿಂತೆಗಳ ಕಾಲಡಿ ಕಸವಾಗಿ ದಿನಗಳ ಸಮಸ್ತತೆಯನ್ನು ಕಳದಿದ್ದಳು. ಸುನಕ ರೂಪೀ ಸಿವಸರಣೆಯರಾದ ಚೆನ್ನಮ್ಮ, ಧರುಮದೇವತೇರು ವಳಗೊಳಗೆ ಮರುಗುತ ವುಸುರು ಬಿಡುತಲಿದ್ದರು.

ಸುತಮುತ್ತಲ ಯಿದ್ಯಾಮಾನಗಳು ವಂದಾಗಿರಲಿಲ್ಲ.. ಯರಡಾಗಿರಲಿಲ್ಲ.. ವಂದರೊಳ ಗಿನ್ನೊಂದರಂತೆ ಹುಟುಹುಟ್ಟಿಕೊಳ್ಳುತ್ತಲೇಯಿದ್ದವು. ಆಕೆಯನ್ನು ಆ ಜಾಗದಿಂದ ಕದಲಿಸಲಕ, ಕದಲಿಸಿ ತವರುಮನೆಯಿರುವ ಮಿಚ್ಚೇರಿಗೆ ಕಳುವಲಕ, ವರ್ತಮಾನದ ಬೇಗುದಿ ಸಂಕಟಗಳಿಂದ ಪಾರುಮಾಡಲಕಯಂದು ಥೆಳಗೇರಿಯ ಹಿರೀಕರಾದ ವುದ್ದಾನಜ್ಜ, ಅಗಲಾನಜ್ಜ, ಗಿಡ್ಡಾ ನಜ್ಜಂದಿರೇ ಮೊದಲಾದವರು ತವ ತಮ್ಮ ನಾಲಿಗೆ ಯಂಬುವ ತಳಿಗೆಯಿಂದ ಸಾಂತುವನದ ಮಾತುಗಳನ್ನುದಿರುಸುತಲಿದ್ದರು. "ಮಗಳಾss.. ನೀನಿಲ್ಲಿ ಸಂಕಟ ಅನುಭೋಸುತ ಯಿದ್ದರ ನಾವೆಂಗ ಬೊದುಕಲಾದೀತೇ ಯವ್ವಾ.. ನಿನ ಗಂಡನ ಸರೀರದೊಳಗ ನಿನ್ನ ಗಂಡಯಿಲ್ಲ ಕನವ್ವಾ.. ನೀನಂದರ ಬಲೂ ಜೀವ ಮಾಡುತಲಿದ್ದಾತನು ಯೀಸು ದಿವಸ ಸುಮ್ಮಕ ಯಿರುತ ಲಿದ್ದನೇನು? ಯೀಗಾತ ಗಾಳ್ಯಾಗ ಅದಾನಭೇ.. ನಿನ್ನ ಮುತ್ತಯಿದೇತನ ಯಾವತ್ತೋ ಮುಗುದು ಹೋಗಯ್ತೆ.. ತಾಳಿ ಕುಂಕುಮ ಧರುಸಿಕೊಂಡು ನಿನ್ನನ್ನು ನೀನೇ ಮೋಸ ಮಾಡಿಕೋಬ್ಯಾಡ.. ತಗದಾಕಿ ಯಿಲ್ಲಾರ ಯಿರು.. ತವರೂರಿಗಾರ ಹೋಗಿಬಿಡು.. ಅದಕ ನಾವು ಸಾಯ ಮಾಡತೀವಿ.." ಯಂದು ಮುಂತಾಗಿ ಗಿಣೀಗ ಹೇಳಿದಂಗ ಹೇಳದೆಯಿರಲಿಲ್ಲ.. ಅದಕುತ್ತರವಾಗಿ ಆಕೆ "ಮುದ್ಯೋರಾಗಿ ಯಂಥಾ ಮಾತಾಡುತೀರಪ್ಪಾ ನೀವು.. ನನ ಗಂಡನ ಸರೀರ ನನ್ನೆದುರೀಗಯ್ತೆ.. ನನ ಗಂಡ ನಷ್ಟ ಆಗಿದ್ದ ಪಕ್ಷದಲ್ಲಿ ಅದು ಮಣ್ಣು ಕಾಣಬೇಕಿತ್ತಲ್ಲ.. ತಾಳಿ ಕುಂಕುಮ ತಗದು ನಾನು ರಂಡಮುಂಡೆ ಪಟ್ಟಕ್ಕೇರಲಕ ಯೇಟೊತ್ತು ಬೇಕು..? ತಗದ ಮ್ಯಾಲ ನನ ಗಂಡ ನಿಸೂರಾಗಿ ರಂಡಿ ಆಗಿದ್ದೀ ಯಾಕ ಅಂತ ಕೇಳಿದರ ಯೇನು ಮಾಡಲೀ..? ನಿಮಗ ತಿಳೀವಲ್ದು ಅಜ್ಜೋರಾ.. ನನ ಗಂಡನ ಸರೀರದೊಳಗೆಂಥದೋ ಕರಾಮತ್ತು ನಡೀತ್ತಿದ್ದಂಗಯ್ತೆ.. ಈ

ಸರೀರದ ನಾದ ಯೀಸೊರುಷ ಬಾಳುವೆ ಮಾಡಿರೋ ನನಗ ಗೊತ್ತು" ಯಂದು ಆತುಮ ಯಿಸುವಾಸದಿಂದ ಹೇಳಿದ್ದಕ್ಕೆ ಗದ್ದಲಯ್ಯನು "ನಿನ ಗಂಡನ ಸರೀರದ ಹದ ಹೆಂಡತಿಯಾದ ನಿನಗೇ ಗೊತ್ತು. ನಮಗಲ್ಲ ಹೆಂಗ ತಿಳೀತಯ್ತ ಮಗಳೆ.. ಅದಿರ್‍ಲಿ, ವುಂಬಲಕ ಯೇನು ಮಾಡುತೀಯವ್ವಾ..? ತಿಂಬಲಕ ಯೇನು ಮಾಡುತೀಯವ್ವಾ?" ಯಂದು ಹಗುರಾದ ಪ್ರಸ್ನೇನ ಹಾಕಿದನು. ಮಣ್ಣು ಮುಕ್ಕನ ಹಾವಿನಂಗ ವುಪಾಸ ವನುವಾಸ ಯಿರೋದರಲ್ಲಿ ನಿಷ್ಣಾತಳಾಗಿದ್ದ ಆಕೆಯು ಅದಕಿದ್ದು "ವಂದೆಲೆ, ವಂದಡಕೆ, ವಂದಗಳು ಸುಣ್ಣ, ಹೆಬ್ಬೊಟ್ಟು ಗಾತುರದ ತಂಬಾಕು.. ಯಿಷ್ಟಿದ್ದರ ಸಾಕಪ್ಪ ನನಗ. ಹಳ್ಳಗಳು ನೀರು ಕುಡಿಬ್ಯಾಡಂತಾವೇನು? ಗಾಳಿ ವುಸುರಾಡಬ್ಯಾಡ ಅಂತಾತೇನು..? ಮಲಿಕ್ಕಂಬಲಕ ನೆಲ ಅಯ್ತೆ.. ಹೊದ್ದುಕೊಳ್ಳಲಕ ಆಕಾಸ ಅಯ್ತೆ.." ಯಂದು ಹೇಳಿದಳು. ಆಗಿದ್ದು ಅಗಲಯ್ಯನು "ಆಸರಿಕೇಗ ಆಗಲಕ.. ಬ್ಯಾಸರಿಕೇನ ಬಳಿಯಲಕ ನನ್ನೋರು ತನ್ನೋರು ಅಂಬೋರು ಬೇಕಲ್ಲವ್ವಾ.. ನಿನ ತಂದೆಗೆ ಖಬುರು ಕಳುವಲೇನು?" ಯಂದು ಕೇಳಿದ್ದಕ್ಕೆ ಆಕೆಯು "ನಿಮ್ಮೆದೆಯೊಳಗ ಮಸ್ತು ಕನುಕರ ಅಯ್ತಲ್ಲಾ.. ಆಟು ಸಾಕಪ್ಪಾ.. ನನ್ನೆದೆಯ ಸಂಕಟದ ಹೊಳೆಗುಂಟ ನನ ತಂದೆ ವಂದಲ್ಲಾ ವಂದಿವಸ ಯೀಜಿಕೋತ ಬಂದೇ ಬರುತಾನಪ್ಪ.. ಮಿಚ್ಚೇರಿಗೆ ನೀವು ಖಬರು ಕಳುವಬ್ಯಾಡರಿ" ಯಂದು ಹೇಳಿದಳು. ಆಗಿದ್ದು ಅವರೆಲ್ಲ "ಸರೆ ಕನವ್ವಾ.. ನಿನ ಬೊದುಕು ನಿನಮಾತು" ಯಂದು ಹೇಳಿ ಅಲ್ಲಿಂದ ತಮ ತಮ್ಮ ಮನೆಗಳಿಗೆ ಹೊಂಟು ಹೋಗಲು....

ಜಗಲೂರೆವ್ವ ಸೂರನ ಕಿವಿಯೊಳಗ ಬಾಯಿಯಿಟ್ಟು.. "ನನಗೇನು ಬಂದಯಿತಂತ ಮಾರೀನ ಸಪ್ಪಗ ಮಾಡಿಕೊಂಡೀಯಲೋ? ಹೆಂಗುಸಾದ ನಾನೇ ಯೇಟು ಗೆಲುವಾಗಿದೀನಿ.. ಗಂಡುಸಾದ ನಿನಗೇನು ದಾಢಿ? ಯಸನ ಮಾಡಬ್ಯಾಡ.." ಯಂದು ಹೇಳಿ ಯಡಗಯ್ಲಿ ಚೆನ್ನವ್ವನ್ನೂ, ಬಲಗಯ್ಲಿ ಧರುಮ ದೇವತೇನೂ ಅವುಚಿಕೊಂಡು "ಜಗಲೂರೆಜ್ಜಾ.. ನೀನು ನನ್ನ ಕಯ್ಯಿಬಿಡ ಬ್ಯಾಡಪ್ಪಾ" ಯಂದು ಹೇಳಿಕಂತ ನೆಲಕ್ಕ ಮಯ್ನ ಚೆಲ್ಲಿದಳು.

ಆಗ್ಗೆ ನೂರೊಂದು ರಾತ್ರಿಯ ಕತ್ತಲು ಮಿದ್ದು ಕಣಕ ಮಾಡುವಷ್ಟು ಆವರಿಸಿಬಿಟ್ಟಿತು. ಯಲ್ಲಂದರಲ್ಲಿ ಕಾವಳದ ವಜ್ಜಲೊಜ್ಜಲು. ಬಾಯಿ ತೆರೆದರೆಲ್ಲಿ ತಮ ನಾಲಗೆಗೆ ಕತ್ತಲು ಮೆತ್ತಿಕೊಳ್ಳುವುದೋ ಯಂದು ಹೆದರಿ ನಾಯಿಗಳು ಕೂಗುವ ಧಯರ್‍ಯ ಮಾಡಲಿಲ್ಲ. ತೆರಕಂಡರೆಲ್ಲಿ ಕತ್ತಲು ತುಂಬಿಕೊಳ್ಳುವುದೋ ಯಂದು ಹೆದರಿ ಬೆಕ್ಕುಗಳು ಕಣ್ಣು ಬಿಚ್ಚುವ ದಯರ್‍ಯ ಮಾಡಲಿಲ್ಲ. ಕತ್ತಲು

ಹೆಪ್ಪು ಗಟ್ಟುತಾ ಹೋಯಿತು.

ಅತ್ತ...

ಹನುಮನೆಂಬ ಹುಂಜವು ತಾನಿದ್ದ ಗೂಡೊಳಗೆ ಕಣ್ಣು ಮುಚ್ಚೋದು ತೆರೆಯೋದು ಮಾಡುತಲಿತ್ತು. ಸದ್ದಡಗಿತೆಂದರೆ ಅದಕ್ಕೆ ಬಲು ತ್ರಾಸು. ಗೂಡಿನಿಂದ ಕತ್ತು ಹೊರ ಚಾಚಿ ಮುಗುಲ ಕಡೇಕ, ಮೂಡಲಕ ಕಡೇಕ ನೋಡೋದು, ವುಳಕೊಂಡಲ್ಲೇ ವುಳಕೊಂಡಿವೆಯಲ್ಲಾ.. ಯಿವುಗಳ ಕಾಲಿಗೆ ಬರಬಾರದ ಬ್ಯಾನೆ ಬಂದಿರುವುದೋ ಯೇನೋ ಯಂದು ಚುಕ್ಕಿಗಳನ್ನು ಸಾಪಳಿಸೋದು ಮತ್ತೆ ಕತ್ತನ್ನು ವಳ ಯಳಕೊಳ್ಳೋದು ಮಾಡುತಲಿತ್ತು.. ಮಯ್ಯಿ ಸಾಬರಿಕೇದು ಯಿದ್ದಂಗಯ್ತೆ ಯಂದು ಬೆಳ್ಳಿಯನ್ನು ಬಯ್ಕಂತು. ಅದೀಟು ಹೊತ್ತಿಗೆ ಮೂಡಲ ಕಡೇಲಿ ತಲೆ ತುರಾಯಿ ತೂರಿಸಬೇಕಿತ್ತು. ಯಲ್ಲರಂಗೆ ಅದೂ ಕತ್ತಲ ಕೊಚ್ಚೆಯಲ್ಲಿ ಸಿಕ್ಕುಹಾಕಿ ಕೊಂಡಿರು ವುದೋ ಯೇನೊ? ಅದು ಮೂಡದ ಹೊರತು ಸೂರ್ಯ ಮೂಡೊಲ್ಲ, ಸೂರ್ಯ ಮೂಡಿದರೇನೆ ಯೀ ಕುದುರೆಡವು ಪಟ್ಟಣದೊಳಗೆ ನಡೆಯಬೇಕಾಗಿರೋ ಅನಿಯಮಿತ ಕಾರ್ಯಕ್ರಮಗಳಿಗೆ ಹೊಸ ಚಾಲನೆ ಸಿಗಲಕ ಸಾಧ್ಯ ಯಂದು ತನಗೆ ತಾನ ಅಂದುಕೊಂಡ ಅದು ಹೊತ್ತು ಯಷ್ಟಾದರು ಆಗಿರಲಿ ತಾನು ಕೂಗಿಯೇ ಬಿಡುವುದೆಂದು ನಿರ್ಧರಿಸಿತು. ಗೂಡಿನಿಂದ ಹೊರಗೆ ಬಂದು ನೋಡತಯ್ತೆ ಸುತ್ತಮುತ್ತ, ಯಡಕೂ ಬಲಕೂಸ, ಮ್ಯಾಲಕೂ ಕೆಳಗು ಯಲ್ಲಿ ನೋಡಿದರು ಕತ್ತಲ ರಾಡಿ. ಅದು ತನ್ನ ಮಯ್ಯಿಗೆಲ್ಲ ವರಕೊಂಡಂತೆ ಭಾಸವಾಯಿತು. ಕತ್ತಾಲು ಯಿಲ್ಲದ ಜಗೇವು ಯಲ್ಲಯಿತಂತ ಹುಡುಕೋದು? ಠಣ್ಣ.. ಠಣ್ಣ ಜಿಕ್ಕೋತ ಜಿಕ್ಕೋತ ಹೋತೂ ಹೋತು.. ಹಾರಿ ಕಾವಲಿ ಅಂಜಿನಕ್ಕನ ಗುಡ್ಲು ಹಿಂದಲ ಮೋಟುಗೋಡೆಯೇರಿ ಸುತಮುತ್ತ ಸಿಮ್ಮಾವಲೋಕನ ಮಾಡುತಯ್ತೆ, ಅಗಾ.. ಅಲ್ಲಂದರ ಕತ್ತಾಲು.. ಯಿಗಾ ಯಿಲ್ಲಂದರ ಕತ್ತಾಲು.. ಅಲ್ಲಿಂದ ಯೇನು ಮಾಡಿತದು.. ಜಿಕ್ಕೋತ ಜಿಕ್ಕೋತ ಗೊಂಜಾಡ್ಲರ ಅಡಿವೆಪ್ಪನ ತಿಪ್ಪೆಯ ಶಿಖರಾಗ್ರದ ಮ್ಯಾಲ ತ್ರಿಯಿಕ್ರಮನಂತೆ ನಿಂತಿತು. ಬೆಳ್ಳಿಯ ಬೆಳಕಿನ ಪಯ್ಕಿ ವಂದು ನೂಲಿನೆಳೆ ಯಷ್ಟಾದರೂ ಅಯಿತೋ ಯಿಲ್ಲಮೋ? ಮೂಡಣದ ಸದರ ಕಡೇಕ ತಲೆ ನಿಗುರಿಸಿ ನೋಡಿತು. ಅಲ್ಲೆಲ್ಲೂ ನೀರುಮಜ್ಜಿಗೆ ಯಷ್ಟಾದರೂ ಬೆಳಕು ಯಿರಲಿಲ್ಲ. ತಾನು ಕೂಗಿದರೆಲ್ಲಿ ಹೊತ್ತಲ್ಲದ ಹೊತ್ತಲ್ಲಿ ಬೆಳಕು ಮೂಡಿ ಬಿಡುವುದೋ? ಕೂಗದಿದ್ದಲ್ಲಿ ಬೆಳಕು ಮೂಡಿ ತನ್ನ ಮುಂಗೋಳಿತನಕ್ಕೆ ಅಪಚಾರ ವದಗುವುದೋ..? ಹಿಂಗ ಸಂದಿಗ್ಧಕ್ಕೆ ಸಿಲುಕಿದ ಅದು ಮತ್ತೆ ಹನುಮಕ್ಕನ ಮೋಟು ಗೋಡೆ ಮ್ಯಾಲ ರೆಪ್ಪೆ ರೆಪ್ಪೆ ಅಂಟಿಸದೆ

ನಿದ್ದೆ ಮಾಡುತ್ತಿರುವಾಗ್ಗೆ, ವುಳಿಕೆ ಹಿಮ್ಮೇಳದ ಹುಂಜಗಳು ಹನುಮ ಕೂಗುವುದನ್ನೇ ಕಾಯುತ್ತಿರುವಾಗ್ಗೆ, ಅರಮನೆಯು ಪ್ರಹರಿಗಳೂ ಕಾಯುತ್ತಿರುವಾಗ್ಗೆ.. ಹುಂಜಗಳು ಕೂಗಲು ಹೆದರಿಕಂಡವೆ ಯಂದು ಕಾವಳದ ನೀರವತೆ ಮೀಸೆ ತಿರುವುತ್ತಿರುವಾಗ್ಗೆ...

ಅದೇ ಥೆಳಗೇರಿಯ, ಅದೇ ಹಾದಿಯ ಕೊನೇಲಿದ್ದ ಹುಲಿಕುಂಟೆಪ್ಪನ ಮಗಳು, ಅಂದರ ನೆಟಕಲ್ಲಯ್ಯನ ಹೆಂಡತಿ, ಅಂದರ ಸಿಡೇಗಲ್ಲು ಗ್ರಾಮದ ಬುಸ್ಸೆಪ್ಪನ ಮಗಳು, ಅಂದರ ಕರಿಯಮ್ಮನ ತಂಗಿ, ಅಂದರ ಸಕ್ಕರಮ್ಮನ ಅಕ್ಕಳಾದ ಬೂವಮ್ಮ ತಿಂಬುತಲಿದ್ದ ಹೆರಿಗೆ ಬ್ಯಾನಿಗೆ ನೆಲ ನಡುಗುತಲಿತ್ತು. ಹೆರಿಗೆ ಮಾಡಿಸಲೋಸುಗ ಆಕೆ ಸುತ್ತಮುತ್ತ ಟೊಂಕ ಕಟ್ಟಿ ನಿಂತಿದ್ದ ಅರೆಕರೆ ಬೋರಕ್ಕ, ಗುಡಿಮುಂದಲ ಬನಜ್ಜಿ, ಕರಸಲ ಸಿವಕ್ಕ "ನೋವು ಹೆಂಗೆಂಗೆ ತಿಂಬುತಾ ಹೋದರ ಕೂಸು ಹಂಗಂಗ ತಿರುಗುತಾ ದ್ವಾರದ ಬುಡಕ ಬರತಯ್ತೆ ಕನವ್ವಾ.. ಬ್ಯಾನೆ ತಿಂಬು.. ಬ್ಯಾನೆ ತಿಂಬು" ಅನ್ನುತಲಿದ್ದರು. ಕಿಪ್ಪೊಟ್ಟೆಮ್ಯಾಲ ಹಳ್ಳೆಣ್ಣೆ ಹಚ್ಚಿ ನೀವಿದಾಗ ಕೂಸು ಮುಂದಕ ಜರುಗೋದು, ಹಿಂದಕ ಸರಿಯೋದು ಮಾಡುತಲಿತ್ತು. ಭೂಲೋಕದ ಮ್ಯಾಲ ವುದುರುಲಕ ಹಿಂದು ಮುಂದು ನೋಡುತಲಿತ್ತು, ಬಲು ತ್ರಾಸು ಕೊಡಲಕ ಹತ್ತಿತ್ತು, ಗರುಭಿಣಿ ಬ್ಯಾನೆ ತಿಂಬೂ ತಿಂಬೂ ಅಂದರ ಹೆಂಗ ತಿಂದಾಳು? ಯೇಟಂತ ತಿಂದಾಳು? ಮೊದಳೇ ಆಕಿ ಮಯ್ಯ ನೆರೆತು ವರುಷ ತುಂಬಿರಲಿಲ್ಲ. "ಯವ್ವಾss ಬ್ಯಾನೆ ತಿಂಬೋದು ನನ ಕಯ್ಲಿ ಆಗಲಕಿಲ್ಲವ್ವಾ.. ಸಾಯೋದೆ ಮ್ಯಾಲನಸತಯ್ತೆ.. ನಾನು ಸತ್ತರೆ ನನ ಗಂಡಗೆ ನನ ತಂಗಿ ಕರಿಯವ್ವನ್ನ ಕೊಟ್ಟು ಮದುವಿ ಮಾಡಿರವ್ವಾ.. ನನ ಗಂಡ ಥಲೋತ ಅದಾನ.. ಯಲ್ಲಾದನ ಕರೀರವ್ವಾ ಆತನ್ನ.. ಆತನ ಮಾರೀನ ನೋಡಿ ಪಿರಾಣ ಬುಡುತೀನಿ." ಯಂದು ಚೀರಾಡಲಕ ಹತ್ತಿದ್ದಳು.. ಹೊರಗಡೆ ಪಳುಗಟ್ಟೆ ಮ್ಯಾಲ ಆಕೀ ಗಂಡ ನೆಟಕಲ್ಲ ಬಲು ದುಕ್ಕ ಮಾಡುತ ಕಂಗಾಲಾಗಿ ಕೂಕಂಡಿದ್ದನು, ಮಾವ ಹುಲುಕಂಟೆಪ್ಪ ಕಂಗಾಲಾಗಿದ್ದನು, ಅತ್ತೆ ಗೂಳೆವ್ವ ಕಂಗಾಲಾಗಿದ್ದಳು, ಕಾದು ಕುಂತಿದ್ದ ವರ್ತಮಾನವು ಕಂಗಾಲಾಗಿದ್ದಿತು.

ಆಕೆ ಯೇನು ಸುಮ್ಮಕ ಮನೆ ತುಂಬಿದಾಕೆಯಲ್ಲ. ಅಯಿದತ್ತು ತೆರವು ತಿಂದಿರುವಾಕೆ. ಸಿಡೇಗಲ್ಲು ಕುಲಕರುಣಿ ಕಿಷ್ಣಯ್ಯನು ರೂಪಾಯಿ ಪಾವಲಿ ತೆರಿಗೆ ಕಟ್ಟಿಸಿಕೊಂಡು ಮದುವೆಗೆ ಪರವಾನಿಗಿ ಬರೆದುಕೊಟ್ಟಿದ್ದನು. ಮಯ್ಯಿ ನೆರೆಯದಿದ್ದರೂ ವುಂಡಕಂಡು ತಿಂದಕಂಡು ಪಿಳ್ಳೆ ವಳ್ಳೆ ಟಗರಿನಂಗೆ ಮಯ್ಯಿ ಬಿಟ್ಟಿತ್ತು. ಮನೆ ಹೊಲದ ದಗದ ವದಕನಗಳನ್ನು ಮಸ್ತು ಮಾಡಿ ಕೊಂಡು

ಹೋತತೆಂದೇ ಹುಲುಕುಂಟೆಪ್ಪ ಕಾಲುಮರಿ ಸವೆಯೋ ಹಂಗ ಕುದುರೆಡವಿಗೂ, ಸಿಡೇಗಲ್ಲಿಗೂ ಅಡ್ಡಾಡಿ ಬುಸ್ಸಪ್ಪನ ಮನ ವಲಿಸಿ ಲಗ್ಗುನ ಮಾಡಿಸಿಕೊಂಡು ಮನೆ ತುಂಬಿಸಿ ಕೊಂಡಿದ್ದ. ಮನೆ ತುಂಬಿದ್ದೇ ತುಂಬಿದ್ದು ಪಿಳ್ಳೆ ವಂದಿನಾರ ಮಯ್ಯಿ ಸಾಬರಿಕೆಯಿಂದ ಮನೇಲಿ ಕುಂತಿದ್ದಿರಲಿಲ್ಲ. ಯಂಟಾಳಿನ ವದಕನಾನ ತಾನೊಬ್ಬಳೆ ಮಾಡುತ ಸಯ್ಯಿ ಅನ್ನಿಸಿಕೊಂಡಿದ್ದಳು. ನೋಡು ನೋಡುತ್ತಿದ್ದಂಗ ಬಸುರಾಗಿದ್ದಳು. ಮುದೇಕಿ ತಿಂದವ್ವ ಸತ್ತ ಸೂತಕ ಯಿದ್ದುದರಿಂದ ಬುಸ್ಸಪ್ಪ ಚೊಚ್ಚುಲು ಬಾಣಂತನ ಕುದುರೆಡವಲ್ಲಾಗಲಿ ಯಂದಿದ್ದ.

ಆನೆಯಂಥಾ ಸೊಸೆ ಯಂದು ಮಾವನೂ, ಹುಲಿಯಂಥಾ ಹೆಣತಿ ಯಂದು ಗಂಡನೂ, ಮೇಟಿ ಗೂಟದಂಥಾ ಸೊಸೆ ಮುದ್ದೆ ಯಂದು ಅತ್ತೆಯೂ ಅಂಗಳದೊಳಗ ಕಯ್ನ ಬಾಯಿಗೆ ತಂದುಕೊಂಡು ದುಕ್ಕ ಮಾಡುತವರೆ ಸಿವನೇss..

ತುಂಬು ಬೊಸುರಿ ಬೂವವ್ವ ನೊವ್ವು ತಿಂಬಲಾಗದೆ ಕೆಳಗಣ್ಣು, ಮ್ಯಾಲಗಣ್ಣು ಮಾಡುತವಳೇ, ತಿಣುತಿಣುಕಿ ವುಸುರು ಯಳಕಂತವಳೆ, ವುಸುರು ಬಿಡುತವಳೇ.. ಆಕೆ ಬಸುರೊಳಗ ಕೂಸು ಅಡ್ಡಾಗಿ ಮಲಕ್ಕಂಡಯ್ತೆ.. ಸೂಲಗಿತ್ತೇರು ಮಾಡೀ ಮಾಡಿ ರೋಸಿ ಹೋಗಿ ಮುಗುಲ ಕಡೆ ಮಾರಿ ಮಾಡಿದರು.

ಆಗವರೆಲ್ಲರಿಗೆ ಗ್ನಾನೋದಯು ಆತು. ಸೂಲಗಿತ್ತೇರಿಗೆಲ್ಲ ಚಕ್ರವರ್ತಿಣಿಯಂತಿರುವ ಜಗಲೂರೆವ್ವನ ಹೆಸರು ಅವರೆಲ್ಲರ ನಾಲಗೆ ಮ್ಯಾಲ ಸುಳುದಾಡಲಕ ಹತ್ತಿತು. ಆ ಮಾತಾಯೀನ ಕರಕಂಡು ಬನ್ರೆಪ್ಪಾ.. ಯಂದು ಯಾರೋ ಕೂಗಿದರು ಸಿವನೆ.. ಅರೆ ಅವುದಲ್ಲ ಯಂದರು ಸಿವನೆ, ಮೂರಲ್ಲಿದ್ದುಕೊಂಡು ವನವಾಸ ಅನುಭೋಸ್ತಿರೋ ಆಕೇನ ಹೆಂಗ ಕರೆವುದು ಸಿವನೇ, ಜನರ ನಡುವೆ ಯಿದ್ದುಕೊಂಡು ಅಗ್ನಾತವಾಸ ಅನುಭೋಸ್ತಿರೋ ಆಕೇನ ಹೆಂಗ ಕರೆವುದು ಸಿವನೇ, ಕಣ್ಣು ಕೆರೇನ ಮಾಡಿಕೊಂಡಿರೋ, ಗಂಟಲೊಳಗೆ ದುಕ್ಕ ವಸ್ತಿ ಮಾಡಿರೋ ಆಕೇನ ಹೆಂಗ ಕರೆವುದು ಸಿವನೇ ಯಂದವರೆಲ್ಲ ಕಯ್ನ ಕಯ್ನ ಹಿಚುಗಿಕೊಂಡರು, ತಲಾಕೊಂದುದು ನಮೂನಿ ಪೇಚಾಡಿಕೊಂಡರು. ಆಟೊತ್ತಿಗೆ ತಳಮೂರಿದ್ದ ಅಗಲಯ್ಯನು "ಅಯವ್ವಗ ಕರಗೋ ಕಳ್ಳು ಅಯ್ತಪ್ಪಾ.. ಕರದರ ಬರಾಕಿಲ್ಲ ಅಂಬುವಾಕೆಯಲ್ಲ.. ಸಡನ್ನ ಹೋಗಿ ಕರದರ ಲಟಕ್ಕನ ಹೊಂಟು ಬರುವಾಕೆಯಪ್ಪಾ.." ಯಂದು ಹೇಳಲು ಹುಲುಕುಂಟಪ್ಪನು ತನ ಮಯ್ಯಿ ತುಂಬ ಕಾಲುಮುಡಕೊಂಡು ಕೂಗಳತೆ

ದೂರದಲ್ಲಿದ್ದ ಬೇಯಿನ ಮರದ ಬುಡಕೆ ಹೋದನು. 'ಯಕ್ಕೋಯ್' ಯಂದೊಂದು ಸಲ ಕೂಗಿದೇಟಿಗೆ ಯಚ್ಚರಗೊಂಡಾಯವ್ವಗೆ ಹಿಂಗಂಗವ್ವಾ ಅಂತ ಯಿವರಿಸಿದನು ಹೇಳಾಕೋ ಬ್ಯಾಡಲೋ ಅಂತ. ವುದ್ದನೆಯ ಕಾಲುಳ್ಳವಳಾದ ಆಕೆಯು ನಡಕೋತ ಹೋಗಿ ಮುಟ್ಟಿ ಬಾಣಂತನಕ ಕಯ್ನ ಹಚ್ಚಿದಳು. ತಗಾದಿ ಯಡಕಾಗಲಿ ಯಂದು ಸಿವಸರಣೆ ಚನ್ನವ್ವನೂ, ಬಾಗಾದಿ ಬಲಕಾಗಲಿಯಂದು ಧರುಮದೇವತೆಯು ಹರಸಿದರು. ನಿಸ್ಸೀಮ ಸೂಲಗಿತ್ತಿಯಾದ ಜಗಲೂರೆವ್ವಗೂ ಆ ಬಾಣಂತನ ಕಯ್ಯಾರ ಮೀರಿರದೆ ಯಿರಲಿಲ್ಲ. ಕೂಸು ಕೆಳಕ್ಕಿಳಿಯೋದೂ, ಮ್ಯಾಲಕೇರೋದು ಮಾಡುತಲಿತ್ತು. ಆಕೆ ತನ್ನ ಕುಲದಯವವಾದ ಜಗಲೂರೆಜ್ಜನ ಮ್ಯಾಲ ಭಾರ ಹಾಕಿ ಮಿಕ್ಕು ಯತ್ನವ ಮಾಡಿದಳು. ಹುಟ್ಟಿದಾರಾಭ್ಯ ತನ್ನ ರೆಟ್ಟೇಲಿದ್ದ ತಾಯಿತವನ್ನು ಬಾಣಂತಿಯ ರೆಟ್ಟೆಗೆ ಕಟ್ಟಿದಳು. ಬಾಣಂತನಕ ಕಂಟಕಪ್ರಾಯವಾಗಿದ್ದ ಡಕ್ಕಿ, ಡಮರುಗ ಯಂಬಿವೇ ಮೊದಲಾದ ಪಿಚಾಚಿಗಳನ್ನು ಲೋಬಾನದ ಹೊಗೆ ಹಾಕಿ ಮೋಡಿಸಿದಳು. ಅದಾದ ಸೊಲುಪ ಹೊತ್ತಿಗೆ ಕೂಸು ಸುಸೂತ್ರವಾಗಿ ಕವುದಿ ಮ್ಯಾಲುದುರಿ ಅವ್ವಾ ಯಂದು ಅಳಲಾರಂಭಿಸಲು...

ಮೋಟು ಗೋಡೆ ಮ್ಯಾಲಿದ್ದ ಕಾವಲಿ ಅಂಜಿನೆವ್ವನ ಹುಂಜವು ಮುಗುಲಿಗೆ ಮುಖ ಯತ್ತಿ ಕೊಕ್ಕೋಕೋ ಯಂದು ಕೂಗು ಹಾಕಿತು. ಅದು ಯಲ್ಲಿಯವರೆಗೆ ಕೇಳಿಸಿತೆಂದರೆ ವಂದು ಗಾವುದ ದೂರದವರೆಗೆ, ಪಟ್ಟಣದೊಳಗ ಸತ್ತವರಂಗ ಮಲಿಕ್ಕೊಂಡಿದ್ದ ಮಂದಿಯ ಕಪಾಳಕ್ಕೆ ಛಟಾರಂತ ಬಾರಿಸಿತು ಆ ಕೂಗು. ಥೆಳ್ಳಗೆ ಹರಿದ ಬೆಳಕಿಗಷ್ಟು ದೂರಕ ಪಟ್ಟಣವು ನಿಂತು ಆಕಳಿಸುತ್ತ ಮಯ್ನ ಮುರಕಂತು. ದಂತದಾವನ ಮಾಡಿಕೊಳ್ಳಲೆಂದು ಬರುವವರನ್ನು, ತಮ ತಮ್ಮ ಕಿರು ಕೊಬೆರೆಂಬೆಗಳ ಕಡೀಕ ಕಯ್ನ ಚಾಚಲೆಂದು ಬರುವವರನ್ನು ಸ್ವಾಗತಿಸಲಿಕೆಂದು ಬೇಯಿನ ಮರಗಳು ಮಯ್ನ ವನದಾಡಿ ಸಜ್ಜುಗೊಂಡವು. ಚಿನಬೊಮ್ಮಂತರಾಜನು ಕಟ್ಟಿಸಿದ್ದೆನ್ನಲಾದ ಗಾದರಿಪಾಲನಾಯಕ, ಯತ್ತಪ್ಪ, ಜುಂಜಪ್ಪ, ದಮ್ಮೂರು ಯಂಕಪ್ಪ ತಾತ, ತೆಕ್ಕಲಕೋಟೆ ಕಾಡುಸಿದ್ದಪ್ಪ ತಾತ, ಗೂಳ್ಯೇದ ಗಾದಿಲಿಂಗಪ್ಪ ತಾತ, ಸುಡುಗಾಡಪ್ಪ ತಾತ, ಸೀಪುರದ ಸಿಪಾಯಿ ತಾತ, ಮಾದಾಪುರದ ಮುನುಸೋಬ ತಾತರೇ ಮೊದಲಾದ ತ್ರಿಷಷಿ«ೀ ಪುರಾತನರು ಮಜ್ಜಣ ಮಾಡಿದ್ದರೆನ್ನಲಾದ ಮೂರು ತೂಬುಗಳಿದ್ದ ಕೆರೆಯ ನೀರ ಯಿಸ್ತಾರದ ಮ್ಯಾಲ ಬೆಳಕಿನ ಕೋವಿಗಳು ಕುಣುದಾಡಲಕ ಹತ್ತಿದವು. ಬಾಯಿ ಮುಕ್ಕಳಿಸಲಕ, ಮುಖಮಾರೆ ತೊಳಕೊಳ್ಳಲಕ ಮಂದಿ ಬರುತಾರ

ಯಂಬ ವುದ್ದೇಸದಿಂದ ಕನ್ನೀರವ್ವನ ಬಾವಿಯೊಳಗೆ ಕಪ್ಪೆಗಳು ಠಣಕು ಠಣಕು ಜಿಗಿದು ತಮ ತಮ್ಮ ಸುರಂಗದರಮನೆಗಳನ್ನು ಸೇರಿಕೊಂಡವು. ಯೀ ಪ್ರಕಾರವಾಗಿ...

* * * *

ಅತ್ತ ಬಳ್ಳಾರಿ ವಳಿತದೊಳಗಿದ್ದ ಥಾಮಸು ಮನ್ರೋ ಸಾಹೇಬನು ಬಾಳೆಹಣ್ಣು ತಿಂಬುತ ವಂದು ಪುಸ್ತಕವನ್ನು ಮೋದಿ ಮುಗಿಸಿದನು, ಸೇಬುಹಣ್ಣು ತಿಂಬುತ ಯಿನ್ನೊಂದು ಪುಸ್ತಕವನ್ನು ಮೋದಿ ಮುಗಿಸಿದನು, ದರಾಕ್ಷಿ ಹಣ್ಣು ತಿಂಬುತ ಮತ್ತೊಂದು ಪುಸ್ತಕವನ್ನು ಮೋದಿ ಮುಗಿಸಿದನು. ಅಂಜೂರಿ ಹಣ್ಣು ತಿಂಬುತ ಮಗುದೊಂದು ಪುಸ್ತಕವನ್ನು ಮೋದಿ ಮುಗಿಸಿದನು, ಅದೆಲ್ಲ ತಿಂದಾದ ಮ್ಯಾಲ ವಂದು ಜಾಮು ನಿಂಬೆಹಣ್ಣಿನ ಸರಬತ್ತನ್ನು ಕುಡಿದು ಹಾಸಿಗೆ ಮ್ಯಾಲ ಮಯ್ಯಿ ಚೆಲ್ಲಿದನು. ತಾನು ಮುಚ್ಚಬೇಕೆಂದಿದ್ದ ಕಣ್ಣುಗಳೊಳಗೆ ತರಾವರಿ ವಯುಸರಾಯಿಗಳು, ಗವರುನರುಗಳು ಮುಡುಮುಡನೆ ಮೂಡಿ ಮರೆಯಾಗತೊಡಗಿದರು. ಲಂಡನ್ನಿನ ಬಂಕಿಂಗು ಹ್ಯಾಮು ಅರಮನೆ ತನ್ನೆಲ್ಲ ಗತ್ತು ಗಯರತ್ತುಗಳೊಡನೆ ತೇಲಾಡತೊಡಗಿತು, ಮಹಾಸಾಗರದ ಯದೆ ಮ್ಯಾಲ ನಿಶ್ಚಲ ಸೂರ್ಯನ ಕಡೆಗೆ ಗುರಿಯಿಟ್ಟು ಸಾಗುತ್ತಿರುವ, ತನ್ನನ್ನು ಬೆಂಬತ್ತಿ ಬರುತ್ತಿರುವ ಚಂಡಮಾರುತಗಳನ್ನು ಹಿಂದೆ ಹಾಕುತ ಚಲಿಸುತ್ತಿರುವ ಬಹುದೊಡ್ಡ ಹಡಗಿನಂತೆ.. ಸೂರ್ಯನನ್ನು ತಲುಪುವ, ತಲುಪಿ ಹಿಡಿದು ಬಂಧಿಸಲೇ ಬೇಕೆಂಬ ಅದರ ಹಠಮಾರಿತನ ಕಂಡು ನಗುವುದೋ? ಅಳುವುದೋ? ಅದು ಯಷ್ಟು ದಿನಾಂತ ದಣಿವರಿಯದೆ ಪ್ರಯಾಣ ಮಾಡಲು ಸಾಧ್ಯ? ಅದರೊಳಗಿನ ಸಂಪನ್ಮೂಲಗಳು ತೀರಿದಲ್ಲಿ, ಅಟ್ಟಹಾಸ, ಅಹಂಕಾರದ ಜಾಗದಲ್ಲಿ ಹಾಹಾಕಾರ ತುಂಬಿದಲ್ಲಿ, ಮುಳುಗಿ ಕಡಲ ತಳದಡಿ ನಿಶ್ಯೇಷವಾದಲ್ಲಿ, ಮನ್ರೋ ದಿಗ್ಗನೆ ಯಚ್ಚರಗೊಂಡ. ಮುಳುಗಲಿರುವ ಸಹಸ್ರಾರು ಮಂದಿ ಪಯ್ಕಿ ಮೋರ್ವನಾದ ತಾನು, ಹಡಗಿನ ಚುಕ್ಕಾಣಿ ಹಿಡಿದಿರುವ ಸಹಸ್ರಾರು ಕಯ್ಯಿಗಳ ಪಯ್ಕಿ ತನ್ನಮೂಯರಡು ಕಯ್ಯಿಗಳಿವೆ ಯಂದು ಭಾವಿಸಿದವನಾದ ತಾನು.. ವಳಿತು ಕೆಡಕುಗಳ, ಸರಿ ತಪ್ಪುಗಳ, ಪಾಪ ಪುಣ್ಯಗಳ, ತ್ರಿಕಾಲ ಸತ್ಯಗಳ, ಯಿತಿಹಾಸದ ಪುಟಗಳ ಕಾಲಧೂಳಿನಲ್ಲಿ ಕೊಚ್ಚಿ ಹೋಗುತ್ತಿರುವ ತಾನು, ಆಸೆ ಅಮಿಷಗಳೆಂಬ ಬಿಸಿಲುಗುದುರೆಗಳನ್ನು ಬೆಂಬೆತ್ತಿರುವ ತಾನು, ಬಿರುದು ಬಾವಲಿಗಳೆಂಬ ಮ್ರುಗ ಜಲಧಿಯಲ್ಲಿ ಯೀಜುತ್ತಿರುವ ತಾನು, ವ್ಯಾಲಾಗಿ ಗುಲಾಮರಲ್ಲಿ ಗುಲಾಮನಾಗಿರುವ ತಾನು..

ಕಣ್ಣು ತೆರೆದು ನೋಡಿದ.. ನಿಧ ನಿಧಾನವಾಗಿ ಆವರಿಸುತ್ತಿರುವ ಕತ್ತಲು.. ಹಗಲನ್ನೂ ಕಬಳಿಸಲು ಹೊಂಚಿರುವ ಕತ್ತಲು, ತನ್ನದೆಯಿಂದ ಪ್ರವಹಿಸುತ್ತಿರುವ ಕತ್ತಲು, ಕುಂಪಣಿ ಸರಕಾರದ ದಫ್ತರುಗಳೊಳಗಿಂದ ಹರಿಯುತ್ತಿರುವ ಕತ್ತಲು, ಯಿಂಗ್ಲೀಷು ಭಾಷೆಯ ಬೀಜಾಕ್ಷರ ಗಳೊಳಗಿನಿಂದ ಜಿನುಗುತ್ತಿರುವ ಕತ್ತಲು, ಬೆಳಕನ್ನು ನಿತ್ರಾಣ ಮಾಡುತ್ತಿರುವ ಕತ್ತಲು.. ತನ್ನ ಆತ್ಮಯಿಸ್ವಾಸವನ್ನು ಕಬಳಿಸಲು ಹೊಂಚುಹಾಕಿರುವ ಕತ್ತಲು..

ಕತ್ತಲ ವಿರಾಟ್‌ರೂಪವನ್ನು ಯಂದೂ, ಯಾವತ್ತೂ ಕಡರಿಯದಿದ್ದ, ಅನುಭವಿಸಿರದಿದ್ದ ಮನ್ರೋ ತನ್ನ ಕಣ್ಣುಗಳನ್ನು ಮತ್ತಷ್ಟು ಹಿಗ್ಗಲಿಸಿ ನೋಡಿದ.. ಅಗೋ ಅಲ್ಲಿದೆ ಲಾಂದ್ರ.. ತಳಮಟ್ಟ ಕುಟುಕು ಬೆಳಕನ್ನು ಸಹಿಸಿಕೊಂಡಿರುವ ಲಾಂದ್ರ.. ಕಯ್ಯಳತೆಯಿಂದ ದೂರ ಸರಿದಿರುವ, ಸರಿಯುತ್ತಿರುವ ಲಾಂದ್ರ..

ಅತ್ತ ರೆಬರೋ ನಿಚ್ಚಾಪುರದವರ ಸಾಯದಿಂದ ಜರುಮಲಿಯನ್ನೂ, ಜರುಮಲಿಯವರ ಸಾಯದಿಂದ ನಿಚ್ಚಾಪುರವನ್ನೂ ಹಣ್ಣುಗಾಯಿ ನೀರುಗಾಯಿ ಮಾಡಿ ಮದರಾಸಿನ ಅಯಿಷಿನ್ ಸ್ಟೆನ್ ಮಾಶಯನಿಂದ ಮೆಚ್ಚುಗೆ ಪಡೆದುಕೊಂಡಿದ್ದನು. ತನಗೆ ಬಡತಿ ದೊರಕಬೌದೆಂದು ಕಣಸು ಕಾಣುತ್ತಲೇ ಕೂಡ್ಲಿಗಿಯ ಯಡ್ಡವರ್ಡನ ಹುಟ್ಟುಹಬ್ಬದಲ್ಲಿ ಭಾಗವಹಿಸಿದ್ದನು. ತಮ್ಮತ್ತ ಕಣ್ಣು ಕೆಂಪಗ ಮಾಡಿಕೊಳ್ಳದಿರಲೆಂದು ಮಲ್ಲಾಕನಹಳ್ಳಿ, ತಿಮ್ಮಲಾಪುರ, ಕಂದಗಲ್ಲು, ದೂಪದಹಳ್ಳಿಯೇ ಮೊದಲಾದ ಕೂಡ್ಲಿಗಿ ವಳಿತದೊಳಗಿದ್ದ ಚವ್ವೀಸು ಗ್ರಾಮಗಳ ಸೊಯಂ ಘೋಷಿತ ರಾಜರುಗಳಾದ ಸ್ರೀರಂಗದೇವರಾಯಲು, ಗಂಡ್ರುಪಾಲ ನಾಯಕ, ಗಾದೆಪ್ಪನಾಯಕ, ಚವುಡಪ್ಪನಾಯಕ, ದುರುಗಪ್ಪ ನಾಯಕ, ಕೆಂಗಪ್ಪನಾಯಕರೇ ಮೊದಲಾದವರು ಉಂಗುರ, ಸರ, ಕಡಗ, ಡಾಬು ಯಿವೇ ಮೊದಲಾದ ಆಭರಣಗಳನ್ನೂ, ನವಿಲು, ಮೊಲ, ಮಾತಾಡುವ ಗಿಣಿ, ಬೇಟೆನಾಯಿ, ಅಯ್ದುಕಾಲಿನ ಆಕಳು, ಮೂರು ಕೋಡಿನ ಟಗರು, ಹಾರಲಾರದ ದೊಡ್ಡ ರೆಕ್ಕೆಯ ಪಕ್ಷಿ ಯಿವೇ ಮೊದಲಾದ ಪ್ರಾಣಿ ಪಕ್ಷಿಗಳನ್ನೂ, ಮಾಳಿಗಕ್ಕೆ ಸಮರ್ಥರೂ, ನಂಬುಗಸ್ಥರೂ ಆದ ಹೆಣ್ಣಾಳು, ಗಂಡಾಳುಗಳನ್ನೂ, ದೇವಾಲಯಗಳ ಪ್ರತಿಕ್ರುತಿಗಳನ್ನೂ ಬರೋಬ್ಬರಿ ನಲವತ್ತು ತುಂಬಿದ್ದ ಯಡ್ಡವರ್ಡನಿಗೆ ಕಾಣಿಕೆ ರೂಪದಲ್ಲಿ ಸಂದಾಯ ಮಾಡಿದರು. ಬಗೆಬಗೆಯ ಕೇಶಾಲಂಕಾರ ಮಾಡಿಕೊಂಡಿದ್ದ ಆಯಾ ರಾಜರುಗಳನ್ನುದ್ದೇಸಿಸಿ ಜೆನ್ನಿಫರಳು ಅಹಿಂಸೆ, ಪ್ರಾಣಿ ದಯೆ ಕುರಿತು ಅಮೋಘವಾಗಿ ಮಾತಾಡಿದಳಲ್ಲದೆ ಪ್ರತಿಯೊಂದು ಮಾರೊಳಗೆ ಕುಂಪಣಿ ಸರಕಾರದ ಪ್ರೀತ್ಯರ್ಥವಾಗಿ ವಂದಾದರೂ ಮ್ರುಗಾಲಯ

ಸ್ಥಾಪಿಸಬೇಕೆಂದು ಕರೆ ನೀಡಿದಳು. ಅಲ್ಲದೆ ತಾನು ಸ್ಥಾಪಿಸಿರುವ ಸೇಂಟ್ ಥಾಮಸ್ ಮ್ರುಗಾಲಯಕ್ಕೆ ಚಿತ್ರಯಿಚಿತ್ರಪ್ರಾಣಿ ಪಕ್ಷಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ದೇಣಿಗೆ ರೂಪದಲ್ಲಿ ನೀಡಬೇಕೆಂದು ಕರತಾಡನದ ನಡುವೆ ಯಿನಂತಿ ಮಾಡಿಕೊಂಡಳು. ತನ್ನ ಕಂಕುಳು ಸದಾ ಸುವಾಸನೆಯುಕ್ತವಾಗಲಕೆಂದು ಬಗಲೊಳಗೆ ಪುನುಗು ಬೆಕ್ಕನ್ನು ಯಿಟ್ಟುಕೊಂಡಿದ್ದ ರೆಬೆರೊ ಯಿದ್ಯುಕ್ತವಾಗಿ ಮನರಂಜನಾ ಕಾರ್ಯಕ್ರಮಗಳನ್ನು ವುದ್ಘಾಟಿಸಿದ್ದಲ್ಲದೆ ಕೆರೆಕವುಲರಟ್ಟಿಯ ಸ್ತ್ರೀ ಕಲಾಯಿದೆಯರೊಂದಿಗೆ ನರ್ತನವನ್ನೂ ಮಾಡಿ ಯಲ್ಲರ ಯಿಶೇಷ ಮೆಚ್ಚುಗೆಗೆ ಪಾತ್ರನಾದನು. ತದನಂತರ ಅವರವರ ಜಾತಿ, ಅಂತಸ್ತುಗಳಿಗನುಸಾರವಾಗಿ ಯಾರ್‍ಯಾರು ಯಲ್ಲೆಲ್ಲಿ ಕೂಂಡ್ರಬೇಕೋ ಅಲ್ಲಲ್ಲಿ ಕೂಕಂಡು ಸಸ್ಯಾಹಾರ, ಮಾವುಸಾಹಾರ ಭಕ್ಷ ಭೋಜ್ಯಗಳನ್ನು ಯಥೇಚ್ಚವಾಗಿ ಸ್ವೀಕಾರ ಮಾಡಿ ಯಡ್ಡವರ್ಡನನ್ನು ಬಲಗಣ್ಣ ಗುಡ್ಡೆಯೊಳಗೂ, ರೆಬೆರೋನನ್ನು ಯಡಗಣ್ಣ ಗುಡ್ಡೆಯೊಳಗೂ ತುಂಬಿಕೊಂಡು ತಮ ತಮ್ಮ ಸಮುಸ್ಥಾನಗಳಿಗೆ ಹೊರಟು ಹೋಗುತ್ತಿರುವಾಗ್ಗೆ...

ಯಿತ್ತ ಕುದುರೆಡೆವು ಪಟ್ಟಣದೊಳಗ ಪುವ್ವುಲ ರಾಜಮಾರಾಜರುಗಳಿಂದ ತಾಂಬೂಲ ಕಯಂಕರ್‍ಯಾರ್ತವಾಗಿ ವುಪಯೋಗ ಮಾಡುತಲಿದ್ದ ಪಿಕದಾನಿಯನ್ನು ಅಪಹರಿಸುವ ವಂದಲ್ಲಾ ವಂದು ಪ್ರಯತ್ನವ ಮಾಡಿ ಯಿಪಲಗೊಂಡಿದ್ದ ಕಾಟಯ್ಯನಾಯಕನು ವಾರೊಪ್ಪತ್ತಿನಲ್ಲಿ ಅದನು ತಂದು ವಪ್ಪಿಸುವುದಾಗಿ ತಿರುಪಾಲಯ್ಯ ಶ್ರೇಷಿ«ಗೆ ವಾತು ಕೊಟ್ಟು ಯಿಪ್ಪತ್ತೆರಡು ಮುಕ್ಕಾಲು ರೂಪಾಯಿಗಳನ್ನು ಮುಂಗಡವಾಗಿ ಯಿಸಕೊಂಡು ತನ್ನ ಅಮಾತ್ಯ, ಸೇನಾಧಿಪತಿ, ಭಂಡಾರಿ ಯವರೊಂದಿಗೆ ಕಡುದಮ್ಮನ ಹಳ್ಳದ ಕಣಿವೆಗೆ ಹೋಗಿ ಅಲ್ಲಿ ಯೀಡಿಗರ ರಾಮಯ್ಯನು ಕಜ್ಜೂರ, ಬಾಳೆಹಣ್ಣು, ಬ್ಯಾಲದ ಚಕ್ಕೆಯಿಂದ ಅದೇ ತಾನೆ ಭಟ್ಟಿ ಯಿಳಿಸಿದ್ದ ಸರಾಯಿಯನ್ನು ಮಣ್ಣಿನ ಚಿಪುEಗಳಿಗೆ ಬಗ್ಗಿಸಿಕೊಂಡು ಸೇವಿಸುತ್ತ ತನ್ನ ನತದೃಷ್ಟತನವನ್ನು ಸುಸ್ರಾವ್ಯವಾಗಿ ಹಳಿದುಕೊಳ್ಳುತ್ತ ಕಾಲು ಚಾಚಿ ಅರಳೇಮರದ ಬೊಡ್ಡೆಗೆ ವರಗಿರುವ ಸಂಗತಿಯನ್ನು ತಳವಾರನೂ, ಗೂಡಾಚಾರಿಯೂ ಆದ ವುರಗಯ್ಯನು ರಾಜಮಾತೆ ಭಯ್ರಮಾಂಬೆಗೆ ಯಿವರಿಸು ವಾಗ್ಗೆ ಹತ್ತು ಬಾರಿ ವುಗುಳು ನುಂಗಿ ಗಂಟಲು ಸರಿಪಡಿಸಿಕೊಂಡಿರಬೌದು. ಅರಮನೆಯ ಅಂತಃಪುರದೊಳಗೆ ಸೋಮರಸ ಸೇವನ ಮಾಡಲಕೆಂದೇ ತಮ್ಮ ಹಿಂದಿನ ರಾಜರು ಸುರಾಲಯವನ್ನೇ ಕಟ್ಟಿಸಿರುವ ಸಂಗತಿಯನ್ನು ಬದಿಗೊತ್ತಿ, ಪಿಂಗಾಣಿ ಪಾತ್ರೆಗಳಲ್ಲಿ ಸೋಮರಸ ವನ್ನು ಜಿನುಗಿಸಲಕೆಂದೇ ಮೂಳಿಗದವರನ್ನು

ತಮ್ಮ ರಾಜರು ನಿಯುಕ್ತ ಮಾಡಿರುವರೆಂಬ ಸಂಗತಿಯನ್ನು ಬದಿಗೊತ್ತಿ ಕಾಟಯ್ಯನು ಯೀಡಿಗರ ಪಾಲಾಗಿರುವನಲ್ಲಾ, ರಾಜ ಮರ್ಯ್ಯಾದೆಯನ್ನು ಗಾಳಿಗೆ ತೂರಿರುವನಲ್ಲಾ.. ಯಂದು ರುದ್ದ ರಾಜಮಾತೆಯು ಸೊಗತದಲ್ಲಿ ಅಂದುಕೊಂಡು ಬಹಿರಂಗವಾಗಿ ರಾಜಕುವರನನ್ನು ಯೀಗಿಂದೀಗಲೇ ಕರೆತರುವಂತೆ ಆಗ್ನಾಪಿಸಲು ವುರಗಯ್ಯನು ತಲೆಬಾಗಿಲಿಂದಾಚೆ ತಾನು ಬಿಟ್ಟಿರುವ ಕಾಲ್ಮರಿಗಳು ಸವಕಂಡು ಹೋಗಿರುವುದನ್ನು ಗ್ನಪ್ತಿಮಾಡಿ ಕೊಂಡನು. "ಯವ್ವಾ ತಾಯೀ.." ಅಂದನು. "ಯೇನಲೋ" ಅಂದಳು ರಾಜಮಾತೆ. "ಅರಮನೆ ಯಿಂದ ಸಂಬಳವಗಯ್ರೆಚುಕ್ತಾ ಆಗದೆ ನಾಕು ತಿಂಗಳ ಮ್ಯಾಲಾಗಿರುವುದು. ಪುಗಸಟ್ಟೆ ಚಾಕರಿ ಮಾಡುತಲಿದ್ದರ ಹೆಂಡರುಮಕ್ಕಳು ವುಂಬಲಕ ತಿಂಬಲಕ ಜೋಡಿಸುವುದೆಂಗೆ? ಅರಮನೇನೂ ಬ್ಯಾಡ.. ಅರಮನೆಯ ಮೂಳಿಗಮೂಬ್ಯಾಡ.. ಬಿಡುಗಡೆ ಮಾಡಿರಿ. ಹೊಂಟೋಯ್ತೀನಿ. ಕೂಲಿನಾಲಿ ಮಾಡಿ ಬದುಕುತೀನಿ" ಯಂಬಂಥ ಖಾರದ ಮಾತುಗಳನ್ನು ಆಡೇ ಬಿಡಲಕಂತ ಗಂಟಲವರೆಗೆ ತಂದುಕೊಂಡನು. ಆದರ ಹಂಗಾಡಲಕ ಮನಸ್ಸು ಬರಲಿಲ್ಲ. ವುಪುಔಳಿ, ಡೋಮ, ಕರೆಲ್ಲಯ್ಯರಂತೆ ಅರಮನೆಯ ಮೂಳಿಗವನ್ನು ಬಿಟ್ಟರೆ ದಯವ ಮುನಿದುಕೊಳ್ಳುವುದೆಂಬ ಪಾಪ ಪ್ರಗ್ನೆ ಕಾಡಿತು. ಅರಮನೆಯ ವಳ ಹೊರಗ ಅಡ್ಡಾಡಿದರ ತನ್ನ ಮಯ್ಗೆ ಯೇನೋ ವಂದು ನಮೂನಿ ಕಸುವು. ಅದಕಿದ್ದು ವುರಗಯ್ಯನು "ಯೇನಿಲ್ಲ ತಾಯಿ.. ಕರಕಂಡು ಬರುತೀನಿ ತಾಯಿ.. ಬಂದ ಕೂಡಲ ಯಲ್ಡು ಗಿದ್ದುನ ಕಾಳುಕಡಿ ಅಳದರ ಹೆಂಡರು ಮಕ್ಕಳು ಬದುಕುತಾ ರವ್ವಾ.." ಯಂದು ಅರಕೆ ಮಾಡಿಕೊಂಡು ಕಡುದಮ್ಮನಹಳ್ಳದ ಕಡೆ ಮುಖ ಮಾಡಿ ತಲುಪಿದನು.

ಅಲ್ಲಿ ಕಾಟಯ್ಯನು ಅಳತೆಗೆ ಮೀರಿ ಸೇವನೆ ಮಾಡಿದ್ದಕ್ಕಿದ್ದ ಕಾರಣಗಳು ವಂದಾ ಯರಡಾ, ಅವುಗಳ ಪಯ್ಕಿ ಮುಖ್ಯವಾದುದೆಂದರೆ ಹೋದ ವಾರಾನೆ ಕೂಡ್ಲಿಗಿಯಿಂದ ಮುಕುದಂ ಯಂಬ ಕುದುರೆ ಸವಾರನೋರ್ವ ಬಂದು ಫಲಾನ ದಿವಸದಂದು ಯಡ್ಡುವರ್ಡು ಸಾಹೇಬರ ಹುಟ್ಟುಹಬ್ಬ ಯಿರುವುದೆಂದೂ, ಆಗಮಿಸಿ ತಕ್ಕ ಕಾಣಿಕೆ ವುಡುಗೊರೆಗಳನ್ನರುಪಿಸಿ ಸಾಹೇಬರ ಕ್ರುಪೆಗೆ ಪಾತ್ರರಾಗತಕ್ಕದೆಂದು ಹೇಳಿ ಹೋಗಿದ್ದನು. ಆ ಸಮಾರಂಭಕ ರಾಜ ಪೋಷಾಕು ಧರಿಸಿ ತಾನೂ ಹೋಗುವುದಾಗಿಯೂ, ಸಾರೋಟೂ, ಆಳುಕಾಳೂ ರೊಕ್ಕ ಯಿತ್ಯಾದಿ ಯವಸ್ಥೆ ಮಾಡಬೇಕೆಂದೂ ಕಾಟಯ್ಯ ಯಿನಂತಿಮಾಡಿಕೊಂಡಿದ್ದಕ್ಕೆ ರಾಜಮಾತೆಯು ವಂದಲ್ಲಾ ನೂರು ಮಾತು ಅಂದಾಡಿದ್ದಳು. ಸವತಿಯ ಮಗನಾದ ಕಾಟಯ್ಯನು ರಾಜಪೋಷಾಕು ಧರಿಸುವುದು ಆಕೆಗೆ ಸುತಾರಾಂ ಯಿಷ್ಟಯಿರಲಿಲ್ಲ. ತಮ್ಮ

ಯೀ ಸಮುಸ್ತಾನವನ್ನು ರುದಯ ಯಿದ್ರಾವಕವಾಗಿ ಯೀ ಅವಸ್ಥೆಗೆ ತಂದಿರುವ, ಯಿನಾ ಕಾರಣ ಚರಾಸ್ತಿಯನ್ನು ಮುಟ್ಟುಗೋಲು ಹಾಕ್ಕೊಂಡಿರುವ, ಸ್ಥಿರಾಸ್ತಿಯ ಯಜಮಾನಿಕೆಯನ್ನು ಸ್ಥಗಿತಗೊಳಿಸಿರುವ ಯಡ್ಡವರುಡಿಗೆ ಯಷ್ಟು ವರುಷ ತುಂಬಿದರೇನು? ಅಲ್ಲಿಗೆ ಹೋಗುವುದರಿಂದ ಅರಮನೆಗಾಗುವ ಲಾಭಯೇನು? ಯಂಬಿವೇ ಮೊದಲಾದ ಲೆಕ್ಕಾಚಾರಗಳಿಂದ ಆಕೆಯು ರಾಜಪೋಷಾಕನ್ನು ಕಬ್ಬಿಣ ಪೆಟಾರಿ ತೆಗೆದುಕೊಡುವ ಗೋಜಿಗೆ ಹೋಗಿರಲಿಲ್ಲ. ಪಿಕದಾನಿಯನ್ನು ಅಪಹರಿಸಲು ಹಿಂದೆ ಮುಂದೆ ನೋಡದವನು ರಾಜಪೋಷಾಕನ್ನು ಯಾರಿಗಾದರೂ ಮಾರದಿರುತ್ತಾನೆಯೇ? ಬಂದ ಹಣವನ್ನು ಚದುರಂಗ ದಾಟಕ್ಕೆ ಪಣ ವಡ್ಡದಿರುತ್ತಾನೆಯೇ? ಅಲ್ಲದೆ ಅವಯ್ಯ ಮುಗಬೊಟ್ಟುಗಳೆಂದರ ಮೂಗು ಕುಯ್ಯಿಸಿಕೊಳ್ಳುತ್ತಾನೆ ಯಂಬ ಸಾರುವಜನಿಕ ದೂರುಗಳುಂಟು. ಆ ವಂದು ಗಳಿಗೆ ವಳಗ ರಾಜಮಾತೆ ತನ್ನ ಬಗ್ಗೆ ಮೂಹಿಸಿಕೊಂಡಳೆಂಬ ಸಂಗತಿ ಗೊತ್ತಿದ್ದೇ ಕಾಟಯ್ಯ ಕಾಡಿದ, ಬೇಡಿದ. ಕೊನೆಗೆ ದಿಕ್ಕರಿಸಿ ಮಾತಾಡಿದ. ನೀವು ಹಡದಾಕಿಯಾಗಿದ್ದರೆ ನನ್ನನ್ನಲ್ಲಿಗೆ ಕಳಿಸದೆ ಯಿರುತ್ತಿರಲಿಲ್ಲ ಯಂದಾಡಿ ರಾಜಮಾತೆಯ ಕರುಳಿಗೆ ಬರೆಯೆಳೆದಿದ್ದ. ಆ ಕ್ಷಣದಿಂದ ಅವರಿಬ್ಬರ ನಡುವೆ ಮಾತುಕತೆ ಸ್ಥಿರಾಸ್ತಿಯಂತೆ ಸ್ಥಗಿತಗೊಂಡಿತ್ತು.

ಸಣ ಕೂಸಿನಂತೆ ಚಂಡಿ ಹಿಡಿದಾತನು ಅಳುತ್ತಿದ್ದಾಗ ಅಷ್ಟೇ ಪ್ರಮಾಣದಲ್ಲಿ ಅಮಲೇರಿದ್ದರೂ ವಾಸ್ತವವನ್ನು ಅರ್ಥಮಾಡಿಕೊಂಡಿದ್ದ. ಮುವ್ವರು ಆತನನ್ನು ಪರಿಪರಿಯಿಂದ ರಮಿಸುತ್ತಿದ್ದಾಗ ವುರಗಯ್ಯನು ಅಲ್ಲಿಗೆ ಹೋದನು. ತಾನು ಬಂದ ಕಾರಣವನ್ನು ಯಿವರಿಸಿದನು. ಸಿಮ್ಮಾಸನದ ಮ್ಯಾಲ ಕ್ರೂಡಲಿ, ಬಿಡಲಿ ರಾಜಮಾತೆ ರಾಜಮಾತೆಯೇ.. ಯಂಬ ಕಾರಣಕ್ಕೆ ವುನ್ನತ ದರ್ಜೆಯವರಾದ ಆ ಮುವ್ವರು ಅಮಲೇರಿಸುವುದರಲ್ಲಿ, ಅಮಲಿಳಿಸುವುದರಲ್ಲಿ ನಿಷ್ಣಾತರಾಗಿದ್ದ ಆ ಮುವ್ವರು ಬಗೆ ಬಗೆ ರೀತಿಯಲ್ಲಿ ಪ್ರಯತ್ನಿಸಿ ಕಾಟಯ್ಯನ ತಲೆಯಲ್ಲಮರಿದ್ದ ಅಮಲನ್ನು ಪಾದದುಂಗುಟದವರೆಗೆ ಯಿಳಿಸುವುದರಲ್ಲಿ ಅಂತೂ ಯಿಂತೂ ಯಶಸ್ವಿಯಾದರು. ಅಂಗಯಿಕಲನನ್ನು ನಡೆಸಿಕೊಂಡು ಬರುವಂತೆ ನಡೆಸಿಕೊಂಡು ಬಂದು ಅರಮನೆ ತಲುಪಿ ತಮ್ಮನ್ನು ಹಾಗೂ ನಾಯಕರನ್ನೂ ಕ್ಷಮಾ ಮಾಡುವಂತೆ ರಾಜಮಾತೆಯಲ್ಲಿ ಯಿನಂತಿಸಿಕೊಂಡರು. ಕುಂಪಣಿ ಸರಕಾರ ಕುದುರೆಡವು ಸಮುಸ್ಥಾನವನ್ನು ಕಬ್ಜಾ ಮಾಡಿಕೊಂಡಂದಿನಿಂದ ದಣಿವರಿಯದೆ ಕ್ಷಮಾ ಮಾಡುತ್ತ ಬಂದಿರುವ.. ಅದೇ ಅಭ್ಯಾಸವಾಗಿರುವ ರಾಜಮಾತೆ ಕಾಟಂಯ್ಯನನ್ನು ತಬ್ಬಿ ಕೊಂಡಳು. ನಾಕು ಅಕ್ಕರೆಯ ಮಾತಾಡಿ

ಸಮಾಧಾನಪಡಿಸಿದಳು. “ಹುಚ್ಚಪ್ಪಾ ಹೆತ್ತ ತಾಯಿಗಿಂತ ನಾನು ಯಾವುದರಲ್ಲಿ ಕಡಿಮೆ ಅದೀನಪ್ಪಾ” ಯಂದಳು. “ಯಿದರಲ್ಲಿ ನಿನಗೆ ಅರ್ಥ ಆಗದ ರಾಜಕಾರಣ ಅಯ್ತಪ್ಪಾ.. ನಾಳೆ ಸಿಮ್ಮಾಸನದ ಮ್ಯಾಲ ಕೂಡ್ರೋ ನೀನೇ ಯಿದನು ಅರ್ಥಮಾಡಿಕೊಳ್ಳದಿದ್ದರ ಹೆಂಗ?” ಯಂದಾಕೆ ಹೇಳಿದೊಡನೆ ಕಾಟಯ್ಯ ಸಿಮ್ಮಾಸನವನ್ನು ಕಣ್ಣಲ್ಲಿ ತುಂಬಿಕೊಂಡು ಕರಗಿ ಹೋದನು. ಆ ಕ್ಷಣ ರಾಜಾಧಿರಾಜನಂತೆ ಗಂಭೀರನಾದನು.

ತಮ ಗಂಡ ಮುಂದೊಂದು ಸಲಕ ರಾಜನಾತಾನಂತಂತ ಅಯ್ದುಮಂದಿ ಹೆಂಡರಿಂದ ಸಯ್ತೋಪಚಾರ ಮಾಡಿಸಿಕೊಂಡು ಮೊದಲಿನಂತಾಗದಿದ್ದಾನಾ ಕಾಟಯ್ಯನಾಯಕ? ಯಾವ ಗಳಿಗೆಯಲ್ಲಾದರೂ ರಾಜನಾಗಲಿರುವ ತಾನು ಹೆಂಗಿರಬೇಕೋ ಹಂಗೇ ಯಿರುವುದಾಗಿ ತನ್ನ ವುಸಾಬರಿ ವಳಿತದೊಳಗಿದ್ದ ಯಲ್ಲಾರಿಗೂ ಮನದಟ್ಟುಮಾಡಿಕೊಟ್ಟವನಾದ ಕಾಟಯ್ಯನು ಪಿಕದಾನಿ ನೋಡುತ್ತಲೇ ಗುಡಿ ಹಿಂದಲ ಮನೆಯ ಮೂಳೆ ಮೋಬಯ್ಯನನ್ನು ಗ್ನಾಪಕ ಮಾಡಿಕೊಂಡನು. “ಯಮ್ಮೋಯೇನು ಯೋಚನೆ ಮಾಡಿದಿ ತಾಯೀ” ಅಂದುದಕೆ ರಾಜಮಾತೆಯು “ಅವನೊಬ್ಬನೇ ಪುವ್ವುಲ ರಾಜಮನೆತನಕ್ಕೆ ಸೊಕ್ಕಿನಿಂದ ಬರೆ ಯಳದಿರು ವನಪ್ಪಾ.. ಕಲೆಟ್ರುಸಾಹೇಬ ವಂದು ತೂಕ ಆಗಿದ್ದರ, ಅವನೊಬ್ಬನೆ ವಂದು ತೂಕ ಆಗವನೆ ಕಣಪ್ಪಾ.. ನೀನಿವನ ಗೂಢಾನ ಭೇದಿಸಿಕೊಂಡು ಬಂದರ ಸಯ್ಯಿ ಅಂತೀನಿ ನೋಡು” ಯಂದು ವಂದು ವುಸುರು ಬಿಟ್ಟಳು. ಅದು ಅವನ ಯದೆಯೊಳಗೆ ಮುರುಕಂತು. “ಯವ್ವಾ ಯೀ ಯಿಳಿ ವಯಸಿನಾಗ ಯೊಟೊಂದು ಯಸನ ಮಾಡಬ್ಯಾಡವ್ವಾ.. ಅವನಾದರೊ ವುಘಂತ ಮಾದಿದರ ವುದುರಿ ಬೀಳಂಗದಾನ.. ಅವನ ವುಸಾಬರೀನ ನನಗ ಬಿಡು.. ನೀನು ವುಟ್ಟುಂಡು ನೆಮ್ಮದಿ ಯಿಂದಿರು” ಯಂದು ಆಸ್ವಾಸನೆ ನೀಡಿದ ಬಳಿಕ ತಾನು ಸುಮ್ಮಕಯಿರಲಿಲ್ಲ..

ಆಗಿಂದಾಗಲೆ ಕರೆಸಿದೊಡನೆ ಬಂದವರಾದ ಆಮಾತ್ಯ ಗವುಡಿಕೆ ಸಣಸಿದ್ದಪ್ಪ, ಸೇನಾಧಿಪತಿ ಗೋಯಿಂದಪ್ಪ, ಭಂಡಾರಿ ಸನ್ಯಾಸಪ್ಪಂದಿರನ್ನು ಅರಮನೆಯ ವುಪ್ಪರಿಗೆ ಮ್ಯಾಲ ಕುಂಡಿರಿಸಿಕೊಂಡು ಸಮಾಲೋಚನೆ ನಡೆಸಿದನು. ಯಾವ ಕಾರಣಕ್ಕೂ ಮೋಬಯ್ಯನ ಸರೀರದ ತಂಟೆಗೆ ಮಾತ್ರಹೋಗಬ್ಯಾಡ್ರಿ, ಯಾವ ಹುತ್ತದೊಳಗ ಯಾವ ಹಾವಿರುವುದೋ ಯೇನೋ ಯಂದು ತಮ ತಮ್ಮ ಹೆಂಡರು ಹೇಳಿ ಕಳುವಿದ್ದರೂ ನಾಲಿಗೆ ಚಪಲ ತೀರಿಸಲೋಸುಗ ನಾಕು ಮಾತು ವಗೆದರು. ಅವರೆಲ್ಲರ ಯದೆ ವಳಾಗೆ ಅಳುಕು ಯಿಲ್ಲದಿರಲಿಲ್ಲ.

ಯೀ ಚತುಷ್ಟಯವು ಯೀವರೆಗೆ ಮಾಡಿದ ಯತ್ನ ಪ್ರಯತ್ನಗಳು ವಂದಲ್ಲ ಯರಡಲ್ಲ. ಜೆಟ್ಟಿಂಗೆಪ್ಪನ ಮೂಲಕ ಗ್ರಾಮದೇವತೆಯಾದ ಮೂರಮ್ಮನನ್ನು ಯತ್ತಿ ಕಟ್ಟಲಕ ನೋಡಿದ್ದರು, ಮಾಟ ಮಂತರ ಮಾಡಿಸಲಕ ನೋಡಿದ್ದರು, ನಿದ್ದೇಲಿರುವಾಗ ಮೋಬಯ್ಯನನ್ನು ಕಾಲು ಮುರಿಸಲಕ ನೋಡಿದ್ದರು, ಯಾವ ಬಾಡ್ಯಾರಲೋ ನಿಮ್ಮಲ್ಲಿಗೆ ಕಳಿಸಿದ್ದು ಯಂದು ಜಗಲೂರೆವ್ವನ ಕಯ್ಲಿ ಬಯ್ಯಿಸಿ ಕೊಂಡಿದ್ದರು. ಆದರೂ ಗ್ನಾನೋದಯವಾಗಿರಲಿಲ್ಲ. ಕಾಟಯ್ಯನು ಕೊನೆಯ ಅಸ್ತರ ಪ್ರಯೋಗ ಮಾಡಲಕೆಂದೇ ಆ ಮುವ್ವರನ್ನು ಮೇಲುಪ್ಪರಿಗೆಗೆ ಕರೆಯಿಸಿಕೊಂಡಿದ್ದ.

ಪುವ್ವಲ ಸಾಮುರಾಜ್ಯ ಕುಂತಳ ಸೀಮೆವಳಗ ಯದೆಸೆಟೆಸಿ ನಿಲ್ಲುವಂಗ ಮಾಡಿದ ಅವರ ಪೂರ್‍ವಿಕರನ್ನು ಕೊಂಡಾಡಿದ. ಸಿಮ್ಮಾಸನದೊಳಗ ಯಿಸ್ನೇವು ಯಿರುವುದೆಂದು ಹೇಳಿದ, ಸರೀರ ನಾಕು ಬಗೆಯಾಗಿದ್ದರೂ ಆತುಮ ವಂದೇ ಯಿರುವುದೆಂದೂ ಯಿವರಿಸಿದ, ಬಿಟ್ಟು ತಾನು ತಿಂದದ್ದುಂಟಾ.. ಬಿಟ್ಟು ತಾನು ಕುಡಿದದ್ದುಂಟಾ ಯಂದು ಅನ್ನದ ರುಣ ನೆನಪು ಮಾಡಿಕೊಟ್ಟ. ಪ್ರತಿಯೊಂದಕ್ಕೂ ಅವರು ಅವುದು ದೊರೆಯೇ ಅವುದು ಯಂದು ತಲೆ ಅಲ್ಲಾಡಿಸಿದರು. "ರುಣ ತೀರಿಸಲಕ ಯೇನು ಮಾಡಲಕ ಬೇಕಪ್ಪಾ ದೊರೆಯೇ?" ಯಂದವರು ಕೇಳಿದ್ದಕ್ಕೆ ಆ ನಾಯಕನು ಮುಂಡಾಸನ್ನು ತಲೆಗೆ ಸುತ್ತಿಕೊಂಡು ಅದೇ ಕಿರೀಟಯಂದು ಭಾವಿಸಿ, "ನೋಡಿರಪ್ಪಾ ಜೀವದ ಗೆಳೆಯರಾ.. ಯೀಗಿಂದೀಗಲೇ ನೀವು ನಿಮನಿಮ್ಮ ಯೇಷ ಭೂಷಣ ಧರಿಸಿ ಪರಾಕು ಹೇಳಿಸಿಕಂತ ಥೆಳಗೇರಿಗೆ ನಡಕೋತ ಹೋಗಬೇಕು. ಅರಮನೆಯ ಯಂಜಲುಂಡು ಬೆಳೆದಿರೋ ಮೋಬಯ್ಯನನ್ನು ಕಾಣಬೇಕು. ಪಿಕದಾನಿಗಿಂತ ಸಾಂಬವಿಯ ಅಯ್ಲು ಬಡಕಂಡಯ್ತಲ್ಲಾ ಯಂದು ಖುಲ್ಲಮ ಖುಲ್ಲ ಹೇಳಬೇಕು. ಸಾಂಬವಿ ಮಯ್ಯೊಳಗ ಅದಾಳಂಬುದಕ ವಂದು ಕೂನ ಗುರುತು ತೋರುಸು ಯಂದು ಬಲವಂತ ಮಾಡಬೇಕು. ತೋರಿಸಿದ ಪಕ್ಷದಲ್ಲಿ ಅರಮನೆಗೆ ಅರಮನೆಯೇ ಮಂಡಿಮೂರಿ ಸರಣಾಯ್ತದೆ ಯಂದು ಆಮಿಷ ವಡ್ಡಬೇಕು. ಯಕಚ್ಚಿತ್ತು ಆ ನರಮಾನ್ನವನು ಅದನ್ನೆಲ್ಲ ಮಾಡಾಕಿಲ್ಲ.. ಆಗ ನೀವು ಮೂರು ಮಂದೀನು ಅವನ್ನ ವದ್ದು ಯಳಸಿಕೊಂಡು ತಂದು ಅರಮನೆಯ ಕಂಭಕ್ಕೆ ಕಟ್ಟಯಿಸಬೇಕು.. ಯೇನಂಬ್ತೀರಿ?" ಯಂದು ಹೇಳಿದ್ದಕ್ಕೆ ಅವರು "ಹಂಗೆ ಆಗಲಿ ದೊರೆಯೇ" ಯಂದರು. ತಮಗೆ ವಮುಸ ಪಾರಂಪರ್‍ಯ ಲಗಾಯ್ತು ಲಭಿಸಿರುವ ರಾಜಗವುರ ವುಳುಸಿಕೊಳ್ಳಬೇಕೆಂದು ನಿರ್‍ದರಿಸಿದರು. ಸರಸರಾಂತ ಅವರು ತಮ್ಮ ಮನೆಗಳಿಗೆ

ಹರಕೋತ ಹೋದರು. ಕಬ್ಬಿಣ ಪೆಟಾರಿ ತೆರೆದು ಕಿಲುಬಿ ನಾತ ಯಿಟ್ಟಿದ್ದ ತಮ ತಮ್ಮ ದರ್ಜೆಯ ಪೋಷಾಕುಗಳನ್ನು ಹೊರ ತೆಗೆದು ಕೊಡವಿದರು. ಹಬ್ಬಿದ ವುಚ್ಚೆ ಚಿಂಗು ವಾಸನೆಯೊಳ ಗಿಂದುದಿಸಿದ ಅವರವರ ಹೆಂಡರು ಮಕ್ಕಳು "ಅವನ್ನು ಧರಿಸಬ್ಯಾಡೀರಿ.. ಧರಿಸಿ ಥೆಳಗೇರ್‍ಯಾಗ ಹೋಗಬ್ಯಾಡೂರಿ, ಹೋಗಿ ಸಾಂಬವಿಯ ಕಣ್ಣು ಕಿಸರು ಮಾಡಬ್ಯಾಡೀರಿ.. ದಯವದ ಅವಕ್ರುಪೆಗೆ ಪಾತ್ರರಾಗಬ್ಯಾಡೀರಿ" ಯಂದು ತರುಬಲುಪಕ್ರಮಿಸಿದರು. ಅದನ್ನೆಲ್ಲ ಲೆಕ್ಕಿಸದೆ ಅವರು ಹೆಂಡರನ್ನು ಯಡಕ ತಳ್ಳಿ, ಮಕ್ಕಳನ್ನು ಬಲಕ ತಳ್ಳಿ ದಾರಿ ಮಾಡಿಕೊಂಡು.. ಮುಂದಕ ಯಿಬ್ಬರಂತೆ, ಹಿಂದಕ ಯಿಬ್ಬರಂತೆ ಅರೆಕಾಲಿಕ ಭಟರನ್ನು ಬಂದೋಬಸ್ತಿಗಂತ ಯಿಟುಗೊಂಡು.. ಮುಖ ಯದ್ದು ಕಾಣಲಕಂತ ತಂಬುಲದುಂಡೆಯನ್ನು ದವಡೆಯೊಳಗಾಸರೆಯಾಗಿ ಯಿಟುಗೊಂಡು ವಂದೊಂದು ಹೆಜ್ಜೆಯನ್ನು ಅವುರೀಕೀಲೆ ಹಾಕುತ್ತ.. ಮೀಸೆ ತಿರುವುತ್ತ... ತಮ್ಮೊಳಗೆ ತಮ್ಮನ್ನು ಕಲ್ಪಿಸಿಕೊಳ್ಳುತ್ತ.. ಮೂರು ದಾರಿ ಕಲೆವಲ್ಲಿ ಸೇರಿ ವಟ್ಟಾದರು ಸಿವನೇ...

ದುಷ್ಟತ್ರಯವನ್ನು ನೋಡಲಕ ವಳಗಿದ್ದವರು ಹೊರ ಬಂದರು, ಹೊರ ಬಂದವರು ಅಂಗಳಕ ಬಂದರು.. ದ್ರುಸ್ಟಿ ಮದ್ಯಯಿದ್ದವರು ಹುಬ್ಬಿಗೆ ಕಯ್ನ ಹಚ್ಚಿದರು.. ಮುವ್ವರ ಪಯ್ಕಿ ಯಾರು ಯಾರಾಗಿದ್ದಿರಬೌದೆಂದು ಪರಪಾಟಿಗೆ ಬಿದ್ದರು. ಥೆಳಗೇರಿಯೆಂಬುವ ಅಗ್ನಿಕುಂಡದತ್ತ ಗುಳೇ ಹೊಂಟಿರೋ ಮಿಡತೆಗಳೋ.. ಮೋಬಯ್ಯನೆಂಬುವ ಸೂರ್‍ಯಗೋಳ ವನ್ನಪ್ಪಿಕೊಳ್ಳಲೆಂದು ಹೊಂಟಿರುವ ತರಗೆಲೆಗಳೋ ಯಂಬಂತೆ ಭಾಸವಾದರಾ ಮುವ್ವರು ಮಂದಿ ಕಣ್ಣಿಗೆ.. ಕಡ್ಡಿಪುಡಿ, ಯಲಡಕೆಯಾದರು ಮಂದಿ ಬಾಯಿಗೆ,

"ಯಿವಕೇನು ಬಂದಯ್ತೆಪ್ಪಾ.. ವಾತಾಯೀನ ತಡುವಿ ಕೇರು ಬಿಡಿಸಿಕೊಳ್ಳಲಕ ಹೊಂಟಿರು ವವಲ್ಲಾ.. ಕೂಳು ಹೆಚ್ಚಾದರ ಕುವ್ವಾಡ ಹೆಚ್ಚಾಯ್ತದಮುತಾರಲ್ಲ... ಯಿದಕ ನೋಡು.." ಯಂದೊಬ್ಬ ಗೊಣಗುವುದಕ್ಕೂ ಅವರು ಥೆಳಗೇರಿ ಪ್ರವೇಶ ಮಾಡುವುದಕೂ ಸರಿಹೋಯಿತು. ಅವರು ತಲುಪಿದ ಗುಡಿ ಹಿಂದಲ ಮನಿ ಮುಂದಲಕಿದ್ದ ಪಳುಗಟ್ಟೆಯ ಮ್ಯಾಲ ಮೋಬಯ್ಯನ ಸರೀರವು ಯಿರಾಜಮಾನ ವಾಗಿತ್ತು. ಅದೇ ಅವರನ್ನು ಹತ್ತಿರಕ ಬಿಟ್ಟುಕೊಂಡಿತು. ಮಾನವರೂಪಿ ಸೊನ್ನೆಗಳಂತೆ ನೋಡಿತು. ಅತ್ತ ಧರಿ, ಯಿತ್ತ ಪುಲಿ ಯೆಂಬಂತಾದ ಅವರು ತುಸು ಹೊತ್ತು ಅಲ್ಲಲ್ಲೆ ನಿಂತುಕೊಂಡರು. ತದನಂತರ ಅಲ್ಲಲ್ಲೆ ಅಂಡೂರಿ ಮಿಕುಮಿಕಿ ದಿಟ್ಟಿಸಿದರು. ತಮ್ಮನ್ನು ನೋಡಿ ಯದ್ದು "ಸ್ರೀಮಂತರಾ ಯೀಟು ದೂರ ಯಾಕ ದಯಮಾಡಿಸಿ ನಿಮ ನಿಮ್ಮ ಪಾದಗಳಿ

ಗ್ಯಾಕ ದಣುವು ಮಾಡಿಕೊಂಡಿರಿ ತಂದೆಗೋಳಾ.. ಕುಂತಲ್ಲೆ ಕಯ್ಯಿ ಸನ್ನೆ ಮಾಡಿದ್ದರ ಮೋಡೋಡಿ ಬರುತಿದ್ದೆನೆಲ್ಲಾ.. ನಿಮ್ಮ ಪಾದ ಸ್ಪರೂಷದಿಂದ ಥೆಳಗೇರಿ ಪಯಿತ್ರಆಯ್ತು.. ಯಾಕ ದಯಮಾಡಿ ಸಿದಿರಿ.. ಯೀ ನಿಮ ತೊತ್ತಿನ ಮಗನಿಂದ ಯೇನು ಆಗುವುದಯ್ತೆ. ಕಾಲಿಂದ ಹೇಳಿದರ ತಲೇಲಿ ಹೊತ್ತು ಮಾಡುತೀನಿ" ಯಂಬಂಥ ಮಾತುಗಳ ಪಯ್ಕಿ ವಂದೇ ವಂದನ್ನು ಮಾತಾಡು ವುದು ವತ್ತಟ್ಟಿಗಿರಲಿ ಯದ್ದು ನಿಂತಾದರೂ ತಮಗೆ ಗವುರವ ಕೊಡಬಾರದೇನು? ತಾವು ಕುಂಡ್ರಲಕ ಕಟ್ಟೆ ಬಿಟ್ಟುಕೊಡಬಾರದೇನು? ಬೀಸಣಿಕೆ ಬೀಸಿ ಗಾಳಿ ಹಾಕಬಾರದೇನು? ಯಿದೆಲ್ಲ ವತ್ತಟ್ಟಿಗಿರಲಿ, ನೋಡಿದೊಡನೆ ಸಣುಮಾಡಿ ನಡುಬಗ್ಗಿಸಬಾರದೇನು? ವಂದು ಸವುಜನ್ಯಪೂರುವಕ ನೋಟ ಬೀರಿ ಗವುರವಿಸಬಾರದಿತ್ತೇನು? ಹ್ಞೂ.. ಹ್ಞು ಅದಾವುದೂ ವಂಚೂರೂ ಯಿಲ್ಲ. ತಮ ಬಗೆಗಾಗಲೀ, ವರ್ತಮಾನದ ಬಗೆಗಾಗಲೀ ಯಳ್ಳೋಟು ಖಬುರಿದ್ದಂಗಿಲ್ಲ.. ಯಿವನನ್ನು ಹೆಂಗಂತ ಮಾತಾಡಿಸುವುದು, ಯೇನಂತ ಮಾತಾಡಿಸುವುದು, ವಬ್ಬರ ಮಾರೀನ ವಬ್ಬರು ನೋಡಿಕೊಂಡರು, ನೀನು ಮಾತಾಡಿಸು, ತಾನು ಮಾತಾಡಿಸು ಅಂತ ಕಣ್ಣು ಸನ್ನೆ ಬಾಯಿ ಸನ್ನೆ ಮಾಡಿದರು, ಆದರ ಹಿಂಜರಿದರು.

ಆವಾಗಿದ್ದು ಸಾಂಬವೀಯ ಪರಮ ಭಕುತನಾದ ಜಡೆತಾತನು "ಯಾಕರಪ್ಪಾ ಅವ್ವನ್ನ ಮಾತಾಡಿಸದಂಗ ಸುಮಕ ಕೂಕಂಡುಬಿಟ್ಟಿರಲ್ಲ.. ನೀವು ಯದಕ ಬಂದೀರೆಂಬುದನ್ನು ಸ್ಪಷ್ಟ ಮಾಡಿರಿ" ಯಂದಾಡಿ ಪುಟುಗಿ ಕೊಟ್ಟನು. ಸೊಲುಪ ಮೇಲುದರ್ಜೆಯ ಅಧಿಕಾರಿಯಾದ ಆಮಾತ್ಯ ಗವುಡಿಕೆ ಸಣಸಿದ್ದಪ್ಪನು "ಯಜಮಾನ.. ನಮ್ಮ ಮೋಬಯ್ಯ ಅರಮನೆಯ ಪರಿಚಾರಕನಪ್ಪಾ.." ಅಂದುದಕ್ಕೆ ಆತನು "ಅವುದಪ್ಪ.. ಅದೆಲ್ಲ ಹಿಂದಿನ ಜಲುಮದ ಮಾತು.. ಯೀಗವನಿಲ್ಲ" ಅಂದನು. "ಹಂಗಾರ.. ಯೀ ತನ್ನ ಸರೀರದೊಳಗ ತಾನಿಲ್ಲಂದ ಮ್ಯಾಲ.. ಯಾರವರಪ್ಪಾ?" ಯಂದು ಗೋಯಿಂದಪ್ಪ ಕೇಳಿದ್ದಕ್ಕೆ ಮುದೇತನು "ಜಗಾನುಮಾತೆಯಾದ ಸಾಂಬವಿ ಬೀಡು ಬಿಟ್ಟಿರುವಳಪ್ಪ" ಯಂದನು. "ಯಜ್ಜಾ ನಮಗೆ ಅಪೂಟ ನಂಬುಕೆ ಬರಾಣಿಲ್ಲ ನೋಡು. ಯೀ ಪಿಕದಾನಿ ಹಿಡಿಯುವನ ಸಂಗತಿ ನಮಗ ಗೊತ್ತಿಲ್ಲದ್ದೇನಯ್ತೆ? ಮೆತ್ತನ್ನ ಮೆದೆಗಳ್ಳನಿದ್ದಾನಿವ. ಗುಮ್ಮನ ಗುಸುಗನಿದ್ದಾನಿವ.. ಬಾಯೊಳಗ ಬೊಟ್ಟಿಟ್ಟರ ಕಡೀಲಕ ಬರದಂಗನಿದ್ದವ.. ಯಿದು ಮೂರಿಗೆಲ್ಲ ಗೊತ್ತಯ್ತೆ.. ತಿಂಗಳುಗಟ್ಟಲೆ ಯಿವ ಮಯ್ಗೆ ನೀರೆರಕಂತಿದ್ದುಂಟಾ.. ಬಟ್ಟೆ ಬರೆ ತೊಳ್ಕಂಡಿಕಳ್ಳಿದ್ದುಂಟಾ.. ಬಾಯಿಗೆ ನೀರ ಹಾಕ್ಕಂಡು

ಮುಕ್ಕಳಿಸುತ್ತಿದ್ದುದುಂಟಾ.. ಯಿವನ ಮಯ್ನ ಕಿಮುಟು ವಾಸನೆಗೆ ಯಿಡೀ ಪಟ್ಟಣವೆ ಮೂಗು ಮುಚ್ಚಿಕೊಳ್ಳುತ್ತಿದ್ದುದುಂಟು.. ಕಜ್ಜಿ ಹತ್ತಿ ನಾರುತ್ತಿರುವ ಯಿವನ ಮಯ್ಯೊಳಗ ಸಾಂಬವಿ ಬೀಡು ಬಿಟ್ಟಿರುವಳಂದರ ನಂಬಲಕ ನಾವೇನು ದಡ್ಡರಂದುಕೊಂಡೀಯಾ..” ಯಂದು ಆಮಾತ್ಯನು ಗೊಳ್ಳನೆ ನಗಾಡಲು ಅದು ಸಾಂಕ್ರಾಮಿಕವಾಗಿ  ತಗುಲಿ ಸೇರಿದ್ದ ಮುಕ್ಕಾಲು ವಾಸಿ ಮಂದಿ ಪಕಪಕನೆ ನಗಾಡಿದರು. ಹುಚ್ಚುಕಥಿ.. ಕಾಗಕ್ಕ ಗುಬ್ಬಕ್ಕನ ಕಥಿ ಯಂದು ಕೆಲವರು ಬಹಿರಂಗವಾಗಿಯೇ ಗೊಣಗಾಡಿದರು. ಅದರಿಂದ ಹುರುಪುಗೊಂಡ ತಾಪತ್ರಯರು ತಮ ತಮ್ಮ ಕಯ್ಯಿಗಳಿಂದ ವಸ್ತಿಯನ್ನು ತಿವಿದಾಡಿ ಯಿಸ್ಸಿ ಯಿಸ್ಸಿ ಅಂತ ದೋತರಕ್ಕೊರೆಸಿ ಕೊಂಡರು. ಕೊನೀಕಿದ್ದು ಸನ್ಯಾಸಪ್ಪನು “ನಿಮ್ಮ ಸಾಂಬವಿ ಯೀ ಯಿವನ ನಿಕ್ರುಸ್ಟ ಸರೀರದೊಳಗ ಯಿರುವುದೇ ಖರೆವಾದಲ್ಲಿ ವಂದಲ್ಲಾ ವಂದು ಖೂನ ಗುರುತಾ ತೋರಿಸಬೇಕು, ಯೇನಂತಿಯಾ ಮುದ್ಯಾ” ಯಂದು ಜಗ್ಗಿಸಿ ಕೇಳಿದ್ದಕ್ಕೆ ಜಡೆತಾತನು “ನಿಮಗೇನು ಕೇಡುಗಾಲ ಬಂದಯಿತ್ರೋ.. ಯೀಗ ನೀವು ಯಲ್ಡು ಕಯ್ಲಿಂದ ವುಂಬುತಿರೋದು ಮರೆತಿರೇನು? ಹಿಂಗೆಲ್ಲ ಬಾಯಿಗೆ ಬಂದಂಗ ಮಾತಾಡಿ ರವುರವ ನರಕಕ್ಕ ಹೋಗಬ್ಯಾಡೂರಿ. ನೀವು ಹೇಳಿದ್ದನ್ನೆಲ್ಲ ಮಾಡಲಕೇನು ಸಾಂಬವಿ ಬುಡುಬುಡುಕ್ಯೋಳು ಅಂದುಕೊಂಡಿರಾ, ಮೋಡಿಗಾರ್ತಿ ಅಂದುಕೊಂಡೀರಾ, ಕುವ್ವಾಡ ಮಾಡಿ ಕೇಡು ತಂದುಕೋ ಬ್ಯಾಡೂರಿ.. ದಯವವನ್ನು ಯದುರು ಹಾಕ್ಕೊಂಡು ಅರಮನೆಗೆ ಮುಳ್ಳು ಬಡಿಯ ಬ್ಯಾಡೂರಿ.. ನಂಬಿದರ ನಂಬಬೇಕು.. ಯಿಲ್ಲಾಂದರ ತೆಪ್ಪಗ ಮುಕುಳಿ ಬಾಯಿ ಮುಚ್ಚುಕೊಂಡಿರಬೇಕರಪ್ಪಾ..” ಯಂದು ರವುಸದಿಂದ ಮಾತಾಡಿದನು. ಅದಕೂ ತಮಣಿಗೊಳ್ಳದ ತಾಪತ್ರಯರು “ಲೇ ಮುದ್ಯಾ.. ಮೋಬಯ್ಯನೂ, ನೀನೂ ಸೇರಿಕೊಂಡು ರಾಜ್ಯಕ್ಕೆ ದ್ರೋಹ ಬಗಿತಾ ಅದೀರ.. ಯಿದಕ ಶಿಕ್ಷೆ ಮರಣದಂಡನೆ ಅಂಬುದನು ಮರೀಬ್ಯಾಡಾ.. ಯೀಗ್ಯಾಕ ಅದೆಲ್ಲ.. ಸಾಂಬವಿ ಅದಾಳಂಬುದಕ ಹೊತ್ತು ಮುಳುಗಿ ಹೊತ್ತು ಹುಟ್ಟುವುದರೊಳಗಾಗಿ ಖೂನ ಗುರುತು ತೋರಿಸಬೇಕು.. ಯಿಲ್ಲಾಂದರ ಅರಮನೆಯ ಅಂಗಳದ ಕಂಭಕ್ಕೆ ಕಟ್ಟಿ ಚರುಮ ಸುಲಸತೀವಿ.. ವುಸಾರ್..” ಯಂದು ರಾಜಾರೋಷವಾಗಿ ಯಚ್ಚರಿಸಿ ಅಲ್ಲಿಂದ ಹೊರಟು ಹೋದರೆಂಬಲ್ಲಿಗೆ ಸಿವ ಸಂಕರ ಮಾದೇವಾss..

* * * *

ಅತ್ತ ಕರನೂಲು ಪತ್ತಿಕೊಂಡದ ನಡೂಕೆ ಕೋಡಮೂರು ಯಂಬ ಹೋಬುಳಿ ಗ್ರಾಮ ವಂದಿತ್ತು. ಅದನ್ನು ವಮುಸ ಪಾರಂಪರ್ಯವಾಗಿ

ಸಿಖಾಮಣಿನಾಯ್ಡು ಯಂಬ ಜಾಗೀರುದಾರನು ಹತ್ತು ನಮೂನಿ ಥರದ ಪದಾತಿ ದಳಗಳನ್ನು ಯಿಟುಕೊಂಡು ತನ್ನ ಮೂಗಿನ ನೇರಕ್ಕೆ ಪರಿಪಾಲಿಸುತಲಿದ್ದನು. ಯಿಪ್ಪತ್ತು ಹಳ್ಳಿಗಳೊಳಗ ಆತನದೇ ಜಮೀನು ಯಿತ್ತು, ಯಿನ್ನೊಬ್ಬರದು ಯಿರಲಿಲ್ಲ. ಸಾಯಿರಾರು ಮಂದಿ ಬೇಚಿರಾಕಾಗಿ ಆತನ ಜಮೀನೊಳಗ ದುಡುಮೆ ಮಾಡುತ ಲಿದ್ದರು. ಅವರಿಗೆ ಅವರ ಸರೀರ ಹೊರತು ಸೊಂತದ್ದೆಂಬುದು ಯಿನ್ನೊಂದಿರಲಿಲ್ಲ. ವಂದು ಹೊತ್ತಿಗೆ ಬಾನ, ಮಯ್ಯ ಮುಚ್ಚಲಕ ವಂದು ತುಂಡು ಅರಿವೆ ಕೊಟ್ಟು ನಾಯ್ಡು ಅವರನು ಬದುಕು, ಸಾವಿನ ನಡುವೆ ತೂಗುಬಿಟ್ಟಿದ್ದನು. ಆತನಿಂದ ತಮ ತಮ್ಮ ಕುಂಡಿ ಮ್ಯಾಲ ಬರೆ ಹಾಕಿಸಿಕೊಂಡು ಮಂದಿ ರೋಸಿಹೋಗಿದ್ದರು. ಅಂಥವರಿಂದಲೇ ತುಂಬಿ ತುಳುಕಾಡುತಲಿದ್ದ ತಲಚರುವಿ, ಕುಂದರ್ಪಿ, ಪೆದಪಾಡು, ಚಿನಪಾಡುಗಳಿವೇ ಮೊದಲಾದ ಪಂಚಯಿಂಸತಿ ಕುಗ್ರಾಮಗಳಲ್ಲಿ ಗೂಢಾಚಾರರನ್ನಲೆದಾಡಿಸಿ ತರಾವರಿ ಯಿಷಯಗಳನ್ನು ಸಂಗ್ರಹಿಸಿಟ್ಟುಕೊಂಡೇ ಮನ್ರೋ ಸಾಹೇಬನು ಗೊನೆಪಾಡು ಕುರುಚಲು ಕಾಡಿನಲ್ಲಿ ಬೀಡು ಬಿಟ್ಟಿದ್ದನು. ಕಪ್ಪಕಾಣಿಕೆ ಸಮೇತ ಬಂದು ಕಾಣುವಂತೆ ಹೇಳಿ ಕಳುವಿದನಾದರೂ ನಾಯ್ಡು ಬಂದು ಕಾಣುವುದು ವತ್ತಟ್ಟಿಗಿರಲಿ ಕುಂಪಣಿ ಸರಕಾರದ ದೂತರ ತಲೆ ಬೋಳಿಸಿ, ಹಣೆಮ್ಯಾಲ ಕುಂಕುಮದ ಬೊಟ್ಟಿಟ್ಟು, ಕಯ್ಗೆ ಬಳೆ ತೊಡಿಸಿ ಕಲೆಟ್ರುಗೂ ಯಿದೇ ಗತಿ ಕಾದಯ್ತೆ ಯಂದು ಹೇಳಿ ಕಳುವಿದ್ದನು. ಆಗಿದ್ದು ಕುಸಲ ರಾಜಕೀಯ ಮುತ್ಸದ್ದಿಯಾದ ಸ್ರೀಪಾದ ಸಾಸ್ತ್ರಿಯು ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂದು ನೀಡಿದ ಸಲಹೆ ಹಿತಯನ್ನಿಸಿ ಮನ್ರೋ ಸಾಹೇಬನು ಆಗಿಂದಾಗಲೆ ತುಗ್ಗಲಿಯಿಂದ ಬೋಸಪ್ಪನನ್ನೂ, ನಮಚೆರಲದಿಂದ ಗೋಯಿಂದ ನಾಯ್ಡು ನನ್ನೂ, ಪೆದ್ದ ಹರಿವಾಣದಿಂದ ಕುರುವುಲ ಹುಲೆಪ್ಪ ನಾಯಕನನ್ನೂ ಸಯ್ನ ಸಮೇತ ತಾನಿದ್ದಲ್ಲಿಗೆ ಕರೆಯಿಸಿಕೊಂಡು ನೀವೆಲ್ಲ ವಟ್ಟಾಗಿ ಕೋಡಮೂರು ಮ್ಯಾಲ ದಾಳಿ ಮಾಡಿ ಸಿಖಾಮಣಿ ನಾಯ್ಡುನನ್ನು ಹೆಡಮುರುಗಿ ಕಟ್ಟಿ ಯಳಕೊಂಡು ಬರಬೇಕೆಂದು ಆಗ್ನೆ ಮಾಡಿದನೆಂಬಲ್ಲಿಗೆ,

ಅತ್ತ ರೆಬೆರೋ ಸಯ್ನಿಕರ ತುಂಡು ತುಕಡಿ ಕಟ್ಟಿಕೊಂಡು ಅವರನ್ನು ಹಂಗ ಗೆಲ್ಲಬೇಕು ಯಿವರನ್ನು ಹಿಂಗ ಗೆಲ್ಲಬೇಕು, ಗೆಲ್ಲುತಾ ಗೆಲ್ಲುತಾ ಬಡತಿ ಪಡಕೊಂಡು ವುತ್ತರಕ್ಕ ಹೋಗ ಬೇಕೆಂದು ಕಣಸು ಕಾಣೂತ ನಿಲುವಂಜಿಯಿಂದಾ ಗುಲಗಂಜಿಗೆ, ತಾಂಡಾಪರದಿಂದ ಗಿಂಡಾಪರಕ ದಟ್ಟಂಡಿ ದಾರಂಡಿ ಅಲದಾಡಲಕ ಹತ್ತಿದ್ದನು ಅಂತರ ಪಿಶಾಚಿಯಂಗ.

ಅತ್ತ ಕೂಡ್ಲಿಗಿ ಪಟ್ಟಣದೊಳಗ ಯಡ್ಡವರ್ಡ್ಡಂಗೂ, ಜೆನ್ನಿಫರಳಿಗೂ ನಡೂಕೆ ಮಸ್ತ ಮನಸ್ತಾಪ ಹುಟ್ಟುತಲಿತ್ತು.. ಕರಗುತಲಿತ್ತು. ನನಗಿಂತಲೂ ನಿನಗ ಮ್ರುಗಾಲಯಗಳೇ ಹೆಚ್ಚಾದವಲ್ಲಾ ಯಂದು ಗಂಡನೂ, ನನಗಿಂತಲೂ ನಿನಗೂ ಕುಂಪಣಿ ಸರಕಾರವೆ ಹೆಚ್ಚಾಗಯ್ತಲ್ಲಾ ಯಂದು ಹೆಂಡತಿಯೂ... ಅತ್ತ ಯಲ್ಲಾಪ್ರಕೊರಚರಟ್ಟಿಯೊಳಗ ಪೊಲಾರಮ್ಮನ ಜಾತುರಿ ಸಿವನೇ,

ತಿರುಕಪ್ಪ ಗವುಡನ ಮಗಳಾದ ಪಾರೋತಿಯು ಮಯ್ನೆರೆತಿರುವ ಸಂಭರಮದಲ್ಲಿ ಸೊನ್ನಮ್ಮೂ... ಚವುಡವ್ವ ಮುನುಸಿಕೊಂಡಿರುವ ಮಡರಳ್ಳಿಯೂ, ಮಣ್ಣಾಗಿರುವ ಮೀಸೆಯನ್ನು ತಿವುಡಿಕೊಳ್ಳುತ್ತಿರುವ ಜರಮಲಿಯೂ, ಮೀಸೆಯ ಗಲೀಜನ್ನು ಕಣ್ಣ ವುದಕದಿಂದ ತೊಳೆದು ಕೊಳ್ಳುತ್ತಿರುವ ನಿಚ್ಚಾಪುರಮ್ಮೂ, ನರಭಕ್ಷಕ ಸಾರ್ದೂಲದುಪಟಳದಿಂದ ತತ್ತರಿಸಿರುವ ಅರಸನಾಳೂ, ನಾರದೇವಂಗೆ ಮಯ್ಯೂರಿನ ಮುದ್ದವ್ವಳನ್ನು ತಂದು ಮದುವೆ ಮಾಡಬೇಕೆಂಬ ವುತ್ಸಾಹ ದಲ್ಲಿರುವ ಚಿಗಟೇರಿಯೂ, ಅದೇ ತಾನೆ ಮಂಗಣ್ಣನನ್ನು ಹಿಡಿದು ತಂದಿರುವ ತಿಕ್ಕಡನು ಅದಕ ಅಂಜಿಣಿಯಂದು ನಾಮಕರಣ ಕಾರ್ಯವನ್ನು ಹಮ್ಮಿಕೊಂಡಿರುವ ಕಾಸರಕನಡವಿ ಯೊಳಗಿರುವ ಕಕ್ಕುಪ್ಪಿಯೂ.. ಹಿಂಗ ಕುಂತಳ ಸೀಮೆಯ ವಂದಲ್ಲಾವಂದು ಗ್ರಾಮದೊಳಗ ವಂದಲ್ಲಾವಂದು ಯಿದ್ಯಮಾನವು.. ಆಗ ಯೇಟು ಹೊತ್ತಾಗಿತ್ತೆಂದರ ಭೂವವ್ತಾಯಿ ಯಿರುಳೆಂಬ ಹೆಸರಿನ ಗರಿಗಂಬಳಿಯೊಳಗ ನಿದ್ದೆ ಬಾರದೆ ಮಗ್ಗುಲು ಮಗ್ಗುಲು ಹೊಳ್ಳಾಡಲಕ ಹತ್ತಿದ್ದಳು..

ಅಂಥಾದ್ದೊಂದು ಹೊತ್ತು ಅತ್ತ ಯಿದ್ದ ಕುದುರೆಡವು ಪಟ್ಟಣದೊಳಗ.. ಗುಡಿ ಹಿಂದಲ ಮೂಳೆಮೋಬಯ್ಯನ ಸರೀರದ ಅಡ್ಲಾಯದ ವಜ್ಜಲೊಜ್ಜಲು ಹಾದಿ ಬೀದಿ ತುಂಬೆಲ್ಲ.. ಬಾಯಿ ಕಿವಿ ಪೊಟರೆ ತುಂಬೆಲ್ಲ.. ಪಾಪ ಯೇನಾಯ್ತದೋ? ಮೂಡಲ ಮನೆಯೊಳಗಿನ ದೀಪದ ಕುಡಿಗೆ ಬೆಳಕು ತಾಕದೆ ಯಿರಲಿ ಸಿವನೆ.. ಯಂದನಕಂತ ಮಂದಿಯು ರಾತಿರಿಯಾಗುತ್ತಲೆ ಯಚ್ಚರಾಗಲಕ ಬೆಳಕು ಕೊಟ್ಟಾತನನ್ನು, ವುಸುರಾಡಲಕ ಗಾಳಿ ಕೊಟ್ಟಾತನನ್ನು, ಬಾಯಾರಿಕೆ ತೀರುಸಿಕೊಳ್ಳಲಕ ನೀರು ನಿಡಿ ಕೊಟ್ಟಾತನನ್ನು, ವುಂಡು ಹಸುವೆ ತೀರುಸಿಕೊಳ್ಳಲಕ ವಂದು ತುತ್ತು ಬಾನ ಕೊಟ್ಟಾತನನ್ನು, ತಮ ತಮ್ಮ ಸರೀರಗಳೊಳಗೆ ಜೀವಯಂಬುವ ಗುಬ್ಬೆಮ್ಮನನ್ನು ಯಿಟ್ಟಾತನನ್ನು ಗ್ನಾಪಕ ಮಾಡಿಕೊಂಡೋ, ಗ್ನಾಪಕ ಮಾಡಿಕೊಳ್ಳದೆಯೋ ಮಲಗಿಕೊಂಡಿದ್ದ ಸಂದರ್ಭದೊಳಗ ಅಡರಿದ್ದ ನಿದ್ದೆ ನಿದ್ದೆಯಾಗಿರಲಿಲ್ಲ.. ಕಂಡ ಕಣಸು

ಕಣಸಾಗಿರಲಿಲ್ಲ..ಕನವರಿಕೆ ಕನವರಿಕೆ ಆಗಿರಲಿಲ್ಲ.. ಬೆಬ್ಬಳಿಕೆ ಬೆಬ್ಬಳಿಕೆಯಾಗಿರಲಿಲ್ಲ ಸಿವನೇ.. ಸಕಲ ಮಂದಿಯು ಗಾಳಿ ತುಂಬಿದ ವುಸಾಬುಲ್ಡಿಗಳಂತೆ ಕವುದಿ ಮ್ಯಾಲ ವುರುಳಾಡಲಕ ಹತ್ತಿದ್ದರು.. ವಂದೊಂದು ಮನೆಯೊಳಗೆ ವಂದೊಂದು ಯಿಥದ ಅಲವುಕಿಕ ಸಪ್ಪಳ.. ಯಡಬಿಡದೆ ತ್ರಿಲೋಕ ಸಂಚಾರ ಮಾಡಿರುವಂಥ ದಣುವು.. ಯಚ್ಚರದ ಬೆನ್ನ ಮ್ಯಾಲ ಮಚ್ಚರಮೋ, ಮಚ್ಚರದ ಬೆನ್ನ ಮ್ಯಾಲ ಯಚ್ಚರಮೋ..

ಹೊತ್ತು ಮುಳುಗಿದೊಡನೆ ವುದಯಕ್ಕಾಗಿ ಹಂಬಲಿಸುವ ಜಾಯಮಾನದ ಕಾವಲಿ ಹನುಮಕ್ಕನ ಅಂಜಣಿ ಯಾವತ್ತಾದರು ಕಣ್ಣು ಮುಚ್ಚಿ ಗಪ್ಪಂತ ನಿದ್ದೆ ಮಾಡಿದ್ದುಂಟಾ. ಅರಮನೆಯ ಪಹರೆ ಮಂದಿ ವಂದು ತೂಕಯಿದ್ದರೆ ಅಂಜಣಿಯದ್ದು ಯಿನ್ನೊಂದು ತೂಕ.. ಅದರ ಯಸನವೆ ಯಸನ ಕಣ ಸಿವನೇ..

ಕಳುವಿಗೆ ಹೆಸರಾಗಿದ್ದ ಮುಳುಗುರುಕುಂದಿಗೆ, ತುಡುಗಿಗೆ ಹೆಸರಾಗಿದ್ದ ದಳವಾಯಿ ಕೆಂಜೆಡೆಯ ಅವರೀರುವರೂ ತಕ್ಕಮಟ್ಟಿಗೆ ನಿಶಾಚರರಾಗಿದ್ದರು. ಅವರಿಗೆ ಮನೆಮಠ, ಹೆಂಡತಿ ಮಕ್ಕಳು, ನನ್ನೋರು ತನ್ನೋರು ಯಂಬುವವರಿರಲಿಲ್ಲ.. ಸದರಿ ಪಟ್ಟಣದ ಮಂದಿ ಮಾ ಸೊಂಬೇರಿಗಳೂ, ನಿದುರಾಪ್ರಯೀಣರೂ ಯಂಬುದನ್ನು ಯಾದೋ ಮೂಲದಿಂದ ತಿಳಿದುಕೊಂಡೋ, ವೂಹಿಸಿಯೋ ಜರುಮಲಿ ವಳಿತದೊಳಗಿರುವ ಕಣಕುಪ್ಪಿಗ್ರಾಮದಿಂದ ವಲಸೆ ಬಂದವರಾಗಿದ್ದರು. ವಂದೇ ಹೊಟ್ಟೆಯಲ್ಲಿ ಹುಟ್ಟಿ ಬಂದವರಂತಿದ್ದರು. ಆದರವರಿಬ್ಬರ ಜಾಯಮಾನ ವಂದೇ ತೆರನದ್ದಾಗಿರಲಿಲ್ಲ. ವಂದು ಕಾಲಕ್ಕೆ ಯಲ್ಲಾಪ್ರಕೊರಚರಟ್ಟಿಯ ಆಕಾಸರಾಮಣ್ಣನ ಶಿಷ್ಯರಲ್ಲಿ ಅಗ್ರಗಣ್ಯನೂ, ಪ್ರಾಣಿ ಪಕ್ಷಿಗಳ ಕೂಗನ್ನು ಅನುಕರಿಸುವಂಥವನೂ ಆಗಿದ್ದ ವುರುಕಂದಿಯು ಮೂರ ವಳ ಹೊರಗೆ ಸಣಪುಟ್ಟ ಕಳ್ಳತನ ಮಾಡುತಲಿದ್ದರೆ, ಕೆಂಜೆಡೆಯನು ವಬ್ಬಂಟಿ ಹೆಂಗಸರ ಗಂಡಂದಿರಂತೆ ನಟಿಸ ಬರಬಲ್ಲವನಾಗಿದ್ದನು. ಯಿಂಥ ಕುಕ್ರುತ್ಯಗಳಲ್ಲಿ ಸದಾ ಪುರುಸೊತ್ತಿಲ್ಲದಂತೆ ದುಡಿಯುತಲಿದ್ದ ಅವರಿಗೆ ಮೂರಿನ ಯಿದ್ಯಾಮಾನಗಳ ಕಡೆ ಅನ್ನದ ಅಗುಳಿನಷ್ಟಾದರೂ ಗಮನ ಯಿರಲಿಲ್ಲ. ಅರಮನೆಯೊಳಗೋ, ತಿರುಪಾಲಯ್ಯ ಸ್ರೇಷ್ಟಿ ಮನೆಯೊಳಗೋ ಯಿದೆ ಯನ್ನಲಾದ ನಿಧಿಯನ್ನು ದೋಚುವ ಕಾರಣಕ್ಕಾಗಿ ಪಟ್ಟಣದೊಳಗೆ ಬೀಡು ಬಿಟ್ಟಿದ್ದರು. ಆ ಕಾರಣಕ್ಕಾಗಿ ಕೆಂಜೆಡೆಯನು ಜೋಗಿ ಜಂಗಮ ರೂಪದಲ್ಲಿ ತಿರುಗಾಡುತ ಆ ಯರಡು ಮನೆಗಳ ಲಯಿಂಗಿಕ ಅತ್ರುಪ್ತ ಹೆಂಗಸರ ಬಹುದೊಡ್ಡ ಯಾದಿಯನ್ನೇ ತಯಾರಿಸಿಕೊಂಡಿದ್ದನು. ಅವರ ಪಯ್ಕಿ ವಂದಿಬ್ಬರನ್ನು ತನ್ನ

ಬಲೆಗೆ ಕೆಡವಿಕೊಂಡಿದ್ದನು.

ಆ ರಾತ್ರಿಕೂಡ ಅವರಿಬ್ಬರೂ...

ಆ ಕಡೆಯಿಂದವನೂ ಯೀ ಕಡೇಲಿಂದೀತನೂ ರಿಕ್ತ ಹಸ್ತಂಬುಲತೋ ಬಂದು ಕನ್ನೀರವ್ವನ ಬಾವಿ ಕಟ್ಟೆಯ ಮ್ಯಾಲ ಕೂತು ತಮ ತಮ್ಮ ಅನುಭವ ಗಳನ್ನು ಹಂಚಿಕೊಳ್ಳತೊಡಗಿದರು. ಯಷ್ಟೋ ಹೊತ್ತಿನ ತನಕ ಅಗೋ ಅಲ್ಲಿ ಮೂಡಣದ ತಲಬಾಲಕ ಮ್ಯಾಲ ಬೆಳ್ಳಿ ಚುಕ್ಕಿ... ಯಿಗೋ ಯಿಲ್ಲಿ ಅಂಜಿಣಿ ಬತೇರಿಯಂಥ ಮೋಟುಗೋಡೆ ಮ್ಯಾಲೇರಿ ಕೊಕ್ಕೋಕೋss ಯಂದು ಗಂಟಲ ಶಹನಾಯಿ ನುಡಿಸಿತು. ಕ್ರಮೇಣ ಬೆಳಕು ಮಿಸುಕಾಡುತಾ.. ಅಗಲವಾಗುತಾ ಹೋಯಿತು. ಮೂರ ಕಡೇಲಿಂದ ಪಕ್ಕವಾದ್ಯಗಳೋಪಾದಿಯಲ್ಲಿ ಆಕಳಿಕೆ ಸದ್ದು, ದನಕರುಗಳ ಅಂಬಾ ಸದ್ದು, ಕೂಸು ಕಂದಮ್ಮಗಳ ಛಟಾರನೆ ಚೀರಿಕೊಳ್ಳುತ್ತಿರುವ ಸದ್ದು, ವಂದರ ಹಿಂದೊಂದ ರಂತೆ ಕೇಳಿಬರಲಕ ಹತ್ತಿದವು. ವೂರೊಳಗ ಅಡ್ಡಾಡಲಕಂತ ಹೋಗಿದ್ದ ವಂದೆರಡು ಗೂಗೆಗಳು ಲಗುಬಗೆಯಿಂದ ಹಾರುತ ಬಂದು ಬಾವಿಯ ಪೊಟರೆಯೊಳಗೆ ತೂರಿಕೊಂಡವು.

ಯಿನ್ನೇನು ಪುಟ್ಟಂಪೂರುತಿ ಬೆಳಗಾಗಲಕ ತಡ ಹಿಡಿಯದು. ಕಡುದಮ್ಮನ ಹಳ್ಳದ ಕಡೇಕ ಹೋಗಿ ಯಲ್ಡಾಕಾದರೂ ಕುಂತೆದ್ದು ಬರೋಣಾಂತ ಅವರಿಬ್ಬರ ಅಗಸೆ ಬಾಕಲಿಂದೊಡಮೂಡಿದ್ದ ಹಾದಿಗುಂಟ ನಡೆಯುವಷ್ಟರಲ್ಲಿ.. ಅಗೋ ಅಲ್ಲೊಂದು ಗುರುತು, ಯಿಗೋ ಯಿಲ್ಲೊಂದು ಗುರುತು.. ಮತ್ತಲ್ಲೊಂದು ಗುರುತು ಮಗುದಿಲ್ಲೊಂದು ಗುರುತು.. ವಂದೊಂದು ಗುರುತನ್ನು ಪರದಕ್ಷಿಣೆ ಹಾಕಿದರಂತೆ.. ಬಗ್ಗಿ ನೋಡಿದರಂತೆ.. ಅದರೊಳಗಿಳಿಯಲು ಪ್ರಯತ್ನಿಸಿದರಂತೆ.. ಅವು ಯೇನೆಂಬುದನ್ನು ಅರ್ಥ ಮಾಡಿಕೊಳ್ಳಲಕೆಂದು ದೂರದ ಪಹರೆ ಗೋಡೆಯನ್ನೇರಿ ನೋಡಿದರಂತೆ.. ಅವು ಪಾದದಾಕಾರದ ಹೆಜ್ಜೆ ಗುರುತುಗಳಾಗಿದ್ದವಂತೆ. ಹೆಜ್ಜೆ ಗುರುತುಗಳೇ ಹಿಂಗಿರಬೇಕಾದರ ಅಡ್ಡಾಡಿದೋರು ಹೆಂಗಿರಬ್ಯಾಡ? ಆ ಆಕಾರವನ್ನು ಕಲ್ಪನ ಮಾಡಿಕೊಳ್ಳುತಾ, ಮಾಡಿಕೊಳ್ಳುತಾ ಹೊಟ್ಟೆ ರುಮ್ಮಂದಗಾತಂತೆ.. ಬುಳ್ಳಂತ ದೋತರದೊಳಗ ವಂದಾನೆ ಮಾಡಿಕೊಂಡರಂತೆ.. ಬವಳಿ ಬಂದಂತಾಗಿ ಬಿದ್ದೆದ್ದರಂತೆ. ಬಿದ್ದೆದ್ದವರೆ ತಡಕೊಳ್ಳಲಾರದೆ ಲಬೋ ಲಬೋ ಬಾಯಿ ಬಡ ಕೊಂಡರು. ಆ ಸಬುಧಕ್ಕೆ ಮಂದಿ ತಮ ತಮ್ಮ ಮನೆಯೊಳಗಿಂದ ಹೊರಗುದುರುತ ಬಂದು "ಯಾಕರಪ್ಪಾ.. ಯೇನಾತರಪ್ಪಾ" ಯಂದು ಕೇಳಿದರು.. ವಬ್ಬೊಬ್ಬರಿಗೂ ಬೊಟ್ಟು ಮಾಡಿ

ತೋರಿಸುತ "ನೋಡಿರಪ್ಪಾ.. ಅಗೋ ಅಲ್ಲಿ.. ವಂದೊಂದು ಹೆಜ್ಜೆ ಗುರುತು ಯೇಟೊಂದು ಅಗಾಧ ಅದಾವ.. ಆಕಾಸದುದ್ದದ ಮಾನವ ಪಟ್ಟಣ ಪ್ರಯೇಸ ಮಾಡಿದಾಂಗಯ್ತರಪ್ಪಾ" ಯಂದರು.. ಜನ ಯಲ್ಲ ನೋಡೂತ ದಿಗ್ಭ್ರಮೆ ಅನುಭವಿಸುತಿರಬೇಕಾದರಿವರು "ಯೀ ಮೂರಿನ ಸಾವಾಸವೇ ಬ್ಯಾಡ.. ಮೂರೊಳೀಕ್ಕೆ ಪರುವುತಗಾತುರದ ಯಕ್ತಿ ಹೋದಂಗಯ್ತೆ.. ಅದು ಯಾರನ್ನು ಯೇನು ಮಾಡುತಯ್ತೋ? ಯೇನು ಬಿಡುತಯ್ತೋ? ಕಳುವು ತುಡುಗು ಮಾಡುವ ನಮಗಿಲ್ಲಿ ವುಳುಗಾಲಯಿಲ್ಲ" ಯಂದನಕಂತ ಅವರು ದೂರದಿಂದಲೇ ಪಾದ ಮುದ್ರೆಗಳಿಗೆ ಸಣುಮಾಡಿ ಕಾಲಿಗೆ ಬುದ್ದಿ ಹೇಳಿದರಂತೆ ಸಿವನೇ.

ಹ್ಹಾ.. ಹ್ಹಾ... ಅನಕಂತ ಮಂದಿ ಬೀದಿಗೆ ಬಂತು. ಹೋ ಹೋ ಅನಕಂತ ಕೋಟೆಗೋಡೆ, ಬತೇರಿ ಮ್ಯಾಲೇರಿತು, ನೋಡು ನೋಡುತ ಅಯ್ಯಯ್ಯೋ ಯಂದು ಅರಚಿಕೋತ ಯಿಳಿದು ಹರದಾಡಿತು. ಯಾರೋ ಆಕಾಸದೆತ್ತರದೋರು, ಯಾರೋ ಪರುವುತಗಾತುರದೋರು ಮೂರೊಳೀಕ್ಕೆ ಬಂದು ಯಲ್ಲದಾರ, ಅವರಲ್ಲಿ ಅವಿತಿರಬೌದೇ, ಅವರಿಲ್ಲಿ ಅವತಿರಬೌದೇ, ಯಂದನಕಂತ ಅನಕಂತ ಪಟ್ಟಣದ ಮೂಲೆ ಮೂಲೆ ಬೆದಕಾಡಿತು. ಗುಡಗುಡ್ಡ ಬೆದಕಾಡಿತು. ಗವಿಗವ್ವರ ಹೊಕ್ಕು ಹೊರ ಬಂದಿತು. ಅಂಥ ಯಾರೊಬ್ಬರ ಸುಳಿವಿಲ್ಲಾss ಸುಳಿವಿಲ್ಲಾss

ಯಾರು ಬಂದಿರಬೌದಪ್ಪ ಸಿವನೇ? ಯದಕ ಬಂದಿರಬೌದೆಪ್ಪ ಸಿವನೆ? ಆದಿಕಾಲದ ಯೇಕಾಸುರಿ ಯೇನಾರ ಬಂದಿರಬೌದಾ? ಯಲ್ಲಂದರಲ್ಲಿ ಮಯ್ನ ಚೆಲ್ಲಿತು ಮಂದಿ, ಕಯ್ನ ಚೆಲ್ಲಿತು ಮಂದಿ, ಕಾಲ್ನ ಚೆಲ್ಲಿತು ಮಂದಿ.. ತಮ ತಮ್ಮ ಸರೀರಗಳಿಂದ ಪಂಚೇಂದ್ರಿಯಂಗಳನು ವುದುರುಬಿಟ್ಟಿತು ಮಂದಿ. ಬಿಕುಬಿಕ್ಕಿ ಅಳಲಾಕ ಹತ್ತಿತು ಮಂದಿ.. ಹೊಲಬುಗೆಟ್ಟಿತು ಮಂದಿ, ತಲುಬುಗೆಟ್ಟಿತು ಮಂದಿ..

ಯಿಷ್ಟಗಲ ಅಷ್ಟುದದ ಪಾದಗಳು ಸಾಮಾನ್ಯದವರವಿದ್ದಂಗಿರಲಿಲ್ಲವಂತೆ.. ಬಲಿ ಚಕ್ಕರವರ್ತಿಯನ್ನು ಪಾತಾಳಕ್ಕದುಮಿದ ಪಾದಗಳಿದ್ದಂಗಿದ್ದವಂತೆ.. ಪಾದಮುದ್ರೆಗಳಿಗೆ ಪೂಜೆ ಪುನಸ್ಕಾರ ಸಲ್ಲಿಕೆ ಮಾಡಲಾರಂಭಿಸಿತಂತೆ ಮಂದಿ..

ಅಗೋ ಅಲ್ಲಿ ಹೆಜ್ಜೆ ಗುರುತುಗಳು, ಯಿಗೋ ಯಿಲ್ಲಿ ತೊಂಬಲದ ವಾಸನೆಯು ಅದು ಯಿದು, ಯಿದು ಅದು, ತಾಳೆ ಹಾಕತಯ್ತೆ.. ಯಿದೆಲ್ಲ ಹೆಣ್ಣಿಂದೆಂದು ತೀರುಮಾನ ಮಾಡಿಕೊಳ್ಳುತಯ್ತೆ.

ಯಿದೆಲ್ಲ ಮೂರ ಹೊರಗಿನ ಕಥಿ ಕಣ ಸಿವನೇ.. ಯಿನ್ನು ಮೂರವಳಾಗಿನ ಕಥಿಯು ಸಿವ ಸಿವಾ. ಮೂರ ವಳಾಗೆ ಮೋಬಯ್ಯನ ಸರೀರದ ಕಡೇಕ

ಕೆಕ್ಕರಿಸಿ ನೋಡಿದೋರು ಯಿದ್ದರಲ್ಲ.. ನಗೆ ಚಾಟಿಕೆ ಹಾರಿಸಿದವರಿದ್ದರಲ್ಲಾ.. ಆ ಸರೀರಕ ತಕ್ಕ ಸಿಕ್ಸೆ ಆಗಬೇಕೆಂದು ಬಯಸಿದವ ರಿದ್ದರಲ್ಲಾ.. ಅವರ ಸ್ಥಿತಿಯು ಘನ ಘೋರವಾಗಲಕ ತೊಡಗಿತಂತೆ ಸಿವ ಸಂಕರ ಮಾದೇವಾ..

ಅದು ಹೆಂಗಂದರ, ಅಂಥವರ ಪಂಚೇಂದ್ರಿಯಂಗಳು ತಮ ತಮ್ಮ ಸರೀರಗಳ ಯಿರುದ್ದಾನೇ ಬಂಡೆದ್ದಿದ್ದವಂತೆ, ಪಿತೂರಿ ನಡೆಸಿದ್ದವಂತೆ. ಕೇಳಾಕಿಲ್ಲ ಅನುತಲಿದ್ದವಂತೆ ಕಿವಿ, ನೋಡಾಕಿಲ್ಲ ಅನುತಲಿದ್ದವಂತೆ ಕಣ್ಣು, ಮೂಸಾಕಿಲ್ಲ ಅನುತಲಿದ್ದವಂತೆ ಮೂಗು, ರುಚಿ ನೋಡಾಕಿಲ್ಲ ಅನುತಲಿದ್ದವಂತೆ ನಾಲಗೆ, ಸ್ಪರುಷಗ್ನಾನದಿಂದ ದೂರವುಳಕೊಂಡುಬಿಟ್ಟವಂತೆ ಚರುಮ.. ಯಪ್ಪೋ ನನಗ ಕಾಣುವಲ್ಲದು, ಕೇಳುವಲ್ಲದು, ಕಯ್ಯಿ ಯೇಳುತಾಯಿಲ್ಲ.. ಕಾಲಲುಗಾಡುತಾಯಿಲ್ಲ.. ಯೀ ಪ್ರಕಾರವಾಗಿ ಕಣ್ಣೀರನ್ನು ಕಪಾಳಕ್ಕೆ ತಂದುಕೊಂಡವರು ಹೇಳಹೇಳತಿರಲಕ್ಕ ಬಾಯಿ ಬಿದ್ದು ಮೂಗರಾಗಿಬಿಡುತಲಿದ್ದ ದೃಸಾವಳಿಂಯೇ ಪ್ರಭಾವಳಿಯಾಗುತಿರಲ್ಲಕ್ಕss

ಯಪ್ಪಾ ಮಾರೊಳಗ ಹೊಕ್ಕವಳು ನೋಡುವ, ಕೇಳುವ, ಮೂಸುವ, ಮುಟ್ಟುವ ಸಗುತಿ ಗಳನ್ನು ಗುಳುಂ ಗುಳುಂ ಅಂತ ನುಂಗಲಕ ಹತ್ಯಾಳ.. ಕಯ್ನ ಹಿಡಿದು ಬೇಡಿಕೊಳ್ಳಲಕಂದರ ಕಯ್ಗೆ ಸಿಕ್ಕಳು, ಕಾಲ್ನ ಹಿಡಿದು ಬೇಡಿಕೊಳ್ಳಲಕಂದರ.. ಹಿಂಗ ವಂದೊಂದು ಮನಿ ವಳಗ ವಬ್ಬೊಬ್ಬರು ತಮತಮ ಕರುಳು ಬಳ್ಳೀನ ಬಾಯೊಳಗ ತಕ್ಕೊಂಡು....

ಅತ್ತ ಅಮಾತ್ಯನ ಮನೆಯೊಳಗಿನ ಪರಿಸ್ಥಿತೀನ ಯೇನಂತ ಹೇಳಲಿ ಸಿವನೇ, ರಾತಿರಿ ಪರ್ಯಂತರ ಗಪ್ಪಂತ ಮಲಕ್ಕೊಂಡಿದ್ದ ಗವುಡಿಕೆ ಸಣಸಿದ್ದಪ್ಪ ಬೆಳಗಾಗುತ್ತ ಕಣ್ಣು ಬಿಚ್ಚುತ್ತಾನೆ. ತನ್ನ ವಬ್ಬೊಬ್ಬ ಮಗನೂ ವಂದೊಂದು ರೀತಿ ಗೋಚರ ಮಾಡುತ್ತಿರುವುದು ಕಂಡು ಅಯ್ಯೋ... ಹಾಳಾಗ ಯಂದು ಕೂಗಾಡಲಕ ಹತ್ತಿದನು.

ಅತ್ತ ಬಡಕಲರೋಣಿಯಲ್ಲಿ ಅಟ್ಟಹಾಸಯಂಬ ಹೆಸರಿನ ಸೇನಾಧಿಪತಿಯ ಮನೆಯ ಪರಿಸ್ಥಿತೀನ ಯೇನಂತ ಹೇಳಲಿ ಸಿವನೇ. ಸಭ್ಯಸ್ಥ ಮಂದಿ ಹೇಳಿಕೊಳ್ಳಲಕ ನಾಚುವಂಥ ಸುದ್ದಿ ಅದಾಗಿತ್ತು.

ಗೋಯಿಂದಪ್ಪ ಯಲ್ಲಾರಂತೆ ಮಲಕ್ಕೊಂಡೆದ್ದ. ತನ್ನದೆಂಬ ಸ್ಥಿರಾಸ್ತಿಯೊಂದು ತನ್ನ ಸರೀರಕ್ಕಂಟಿರುತ್ತಿತ್ತಲ್ಲ. ಯದ್ದೊಡನೆ ಸಾಂಪ್ರತು ಅದನು ಮುಟ್ಟಿಕೊಂಡು ಸ್ಪರುಷದ್ವಾರಾ ಯಿಚಿತ್ರಾನುಭೂತಿ ಹೊಂದುವುದು, ಖಾತರಿ ಮಾಡಿಕೊಳ್ಳುವುದು ಮಾಮೂಲು.. ತನ್ನನ್ನು ತಾನು ಪುರುಷಸಿಮ್ಮ ಯಂದೂ,

ಯೀರ್‍ಯದ ಅಕ್ಷಯ ಪಾತ್ರೆಯೇ ತನ್ನ ಕಿಪ್ಪೊಟ್ಟೆ ಕೆಳಗಿರುವುದೆಂದೂ ಅನ್ಯಥಾ ಭಾವಿಸಿಕೊಂಡಿರುತ್ತಿದ್ದುದೇ ಅದಕ್ಕೆ ಕಾರಣ. ನಿದ್ದೆಗಣ್ಣಲ್ಲಿ ತಾನೂ ಯಚ್ಚರಗೊಂಡೆನು ಯಂದು ಸಾರಲಿಕ್ಕೆ ಹೋ ಯಂದಾ ಕಳಿಸುವುದು ಮಾಮೂಲು. ಅದರಂತೆ ಕಯ್ಯಿಗಳನ್ನಾಡಿಸಿ ನೋಡಿಕೊಂಡ. ಕಯ್ಗೆ ಅದು ತಗಲಲಿಲ್ಲ.. ಮಲಗಿಕೊಳ್ಳೋ ಮುಂದುಗಡೆ ಇದ್ದಂಥ, ರಾತಿರಿ ಪರ್‍ಯಂತರ ಜಾಗರಗೊಂಡಿದ್ದಂಥ ಅದು ಯಲ್ಲೋಯ್ತು? ಅದು ತನ್ನ ಸರೀರದ ಮ್ಯಾಲಿಲ್ಲ ಯಂದು ಅವರಿವರಿಗೆ ಹೇಳಲಕ, ಕೇಳಲಕ ನಾಚಿಕೊಂಡು ಆ ಪುರುಷಪುಂಗವನು ಹಾಸಿಗೆ ಯಲ್ಲೇನಾದರೂ ವುದುರಯ್ತಾಗಿದರಯ್ತಾ ಯಂದು ಕವುದಿ ಕಂಬಳಿ ಕೊಡಕೊಡವಿ ನೋಡಿದ, ಯಲ್ಲೂ ಕೋರೈಯಿಸಲಿಲ್ಲ. ಅಲ್ಲೇನಾದರಯ್ತಾ, ಯಿಲ್ಲೇನಾದರಯ್ತಾ ಯಂದು ಮಲಿಕ್ಕೆಂಭೋ ಕೋಣೆಯ ಮೂಲೆ ಮುರುಕಟ್ಟುಗಳನ್ನು ಬೆದಕಾಡಿದ, ಗೋಚರಾಗಲಿಲ್ಲ. ಬುಟ್ಟ ದೋತರ ದೊಳಗೇನಾದರು ಸಿಕ್ಕಂಡಿರಬೌದಾ ಯಂದು ಕೊಡವಿದ, ವುದುರಲಿಲ್ಲ. ರಾತ್ರಿತನ್ನ ಕೂಡೆ ಯಾರು ಮಲಿಕ್ಕಂಡಿದ್ದರೆಂಬುದನ್ನು ನೆಪ್ಪು ಮಾಡಿಕೊಂಡ. ಮೂರನೆಯಾಕೆಯಾದ ಗಂಗೀ ಯಂದು ಕೂಗಿದ. ಅಡುಗೆ ಮನೆಯಿಂದ ಬಂದ ಆಕೆ 'ಯ್ಯೋನು' ಯಂದು ಕೇಳಿದಳು. 'ನಂದೇನಾದರೂ ನಿನ್ನತ್ರಅಯ್ತಾ' ಯಂದು ಕೇಳಿದ. "ಯಾವುದು? ಯೇನು ಕಥೆಯು?" ಆಕೆಗೆ ಅರ್ಥ ಆಗಲಿಲ್ಲ.. ಹೇಳದೆ ಕೇಳದೆ ಆಕೆಯ ಸೀರೆಯನ್ನು ಜಾಲಾಡಿದ, ವುದುರಲಿಲ್ಲ. ತಾನು ಗಾಢ ನಿದ್ದೆಯಲ್ಲಿದ್ದಾಗೇನಾದರೂ ಅದು ರೋಸಿ ವಾಯು ಯಿಹಾರಕ್ಕೇನಾದರೂ ಹೋಗಿರಬೌದಾ ಯಂದು ಅನುಮಾನಿಸಿದ. ಅದು ಹಾಂಗ ಯಾವತ್ತೂ ಹೋದುದಿಲ್ಲ.. ಆದರೂ.. ಮನೆಯ ಮೂಲೆ ಮೂಲೆಯಲ್ಲಿ.. ಅಡಕಲ ಗಡಿಗೆಗಳಲ್ಲಿ.. ಬಟ್ಟೆ ಗಂಟುಗಳಲ್ಲಿ.. ದವಸ ಧಾನ್ಯ ತುಂಬುವ ವಾಡೇವುಗಳಲ್ಲಿ.. ಹಿತ್ತಲಲ್ಲಿ.. ಅಂಗಳದಲ್ಲಿ.. ಮರಗಿಡಗಳ ಪೊಟರೆಗಳಲ್ಲಿ ಹುಡುಕಾಡೇ ಹುಡುಕಾಡಿದ. ಮನೆ ಯಜಮಾನನಾದ ಆತನ ಹಾರಾಟ ಹುಡುಕಾಟ ಕಂಡು ಮನೆಮಂದಿಯು ಕಳಕೊಂಡಿರುವುದಾದರೂ ಯೇನು? ಬಂಗಾರದ್ದಾ? ಬೆಳ್ಳೀದ್ದಾ.. ಯಲ್ಲಿಟ್ಟಿದ್ದಿ? ಹೆಂಗಿಟ್ಟಿದ್ದಿ ಯಂದು ಕೇಳಿದರು. ಅದಕ್ಕಾತ ವುತ್ತರವನ್ನು ಲಗೂನ ಕೊಡಲಿಲ್ಲ.. ತಡವರಿಸಿದ. "ಸಂದೂಕದಲ್ಲೇನಾದರೂ ಯಿಟ್ಟು ಮರತುಬಿಟ್ಟಿರುವಿಯೇನೋ ನೋಡು ನೀನು ಮೊದಲೇ ವುರುವುಗೇಡಿ" ಯಂದು ಹಿರಿಯ ಹೆಂಡತಿ ಸಲಹೆ ನೀಡಿದಳು. ತಲತಲಾಂತರದಿಂದ ಬಂದಿದ್ದಂಥ ಸಂದೂಕದ ಬಾಯಿ ತೆರೆದು ಬೆದಕಾಡಿದ. ಆದರದು ಥಳಥಳ

ಹೊಳೆಯಲಿಲ್ಲ. ಯಿಲ್ಲೂ ಯಿಲ್ಲ ಸಿವನೇ.. ಅಲ್ಲೂ ಯಿಲ್ಲ ಸಿವನೇ.. ಯಲ್ಲೆಲ್ಲೂ ಯಿಲ್ಲ ಸಿವನೇ... ತನ್ನ ಸರೀರಕ್ಕೆ ಸೋಡಾ ಸೀಟಿ ಕೊಟ್ಟು ಅದು ಪಲಾಯನಗಯದಯ್ತೆ ಸಿವನೇ.. ಅದಿಲ್ಲದ ತನ್ನ ಸರೀರವು ನಿರಾಭರಣವಾಗಯ್ತೆ ಸಿವನೇ.. ಅದು ತನ್ನ ಪಾಲಿಗೆ ಜೀವಾತುಮ, ಪರಮಾತುಮವಾಗಿತ್ತು ಸಿವನೇ.. ಅದಿಲ್ಲದೆ ತಾನು ಹೆಂಗ ಬಾಳಲಿ ಸಿವನೇ.. ತನ್ನ ಸರೀರ ಸಿರಿಯನ್ನೇ ನಂಬಿ ಬದುಕುತ್ತಿರುವ ಚತುರಿಂಸತಿ ಸುಂದರಿಯರಿಗೆ ಮುಖಮಾರಿಯನ್ನೆಂಗೆ ತೋರಿಸಲಿ ಸಿವನೇ.. ಆ ಬಲಾಢ್ಯ ಸೇನಾಪತಿಯ ಬಾಯಿಯಿಂದುದುರುತಲಿದ್ದ ವಂದೊಂದು ಆಣಿಮುತ್ತನ್ನು ಕಿವೀಲೆತ್ತಿಕೊಂಡು ಹ್ವಾ.. ಹ್ವಾ.. ಹೋ ಹೋ ಯಂದುದ್ಗಾರ ತೆಗೆದರು ಮನೆಮಂದಿಯು.. "ಮಕ್ಳೂನ್ನ ಕಂಡಿರುವಿ.. ಮೊಮ್ಮಕ್ಕಳೂನ ಕಂಡಿರುವಿ.. ಅದು ಹೋದ್ರುಹೋಯ್ತು ಬಿಡು.. ಅದರ ರಿಣ ತೀರ್ತೂಂತ ತಿಳಕೊಂಡು ತೆಪ್ಪಗಿರಬಾರ್ದೇನು.. ಕೇಳಸಿಕೊಂಡ ನಾಕುಮಂದಿ ಯೇನೆಂದುಕೊಂಡಾರು" ಯಂದು ಹೆಂಡಂದಿರು ಸಂತಯಿಸುತ್ತಿದ್ದರು ಸಿವನೇss..

ಅತ್ತ ಭಂಡಾರಿಯವರ ಮನೆಯಿಂದ ಬಂದಂಥ ವರ್ತಮಾನ ಯಿನ್ನೊಂದು ತೆರನಾಗಿದ್ದಿತು ಸಿವನೆ.

ಭಂಡಾರಿ ಸನ್ಯಾಸಪ್ಪ ಮಾ ಸೊಗಸುಗಾರನೆಂದೇ ಪಟ್ಟಣದಾದ್ಯಂತ ಹೆಸರುವಾಸಿಯಾಗಿದ್ದ. ತಾನಾಟೊಂದು ಛಲುವನಾಗಿರದಿದ್ದರೂ ತನ್ನನ್ನು ತಾನು ಮನುಮಥನೆಂದೇ ರುಥಾ ಆರೋಪ ಮಾಡಿಕೊಂಡಿದ್ದನು. ತನ್ನ ಛಲುವನ್ನು ನೂರು ಮುಡಿಯಾಗಿಡಲೆಂದೇ ವರಮಾನದ ಭೋಪಾಲನ್ನು ಖರ್ಚು ಮಾಡುತಲಿದ್ದನು.. ತಲೆಮ್ಯಾಲಿನ ಕೂದಲು, ದೊಣ್ಣೆ ಮೂಗು ಕೆಳಗಿನ ಮೀಸೆಯ ಗಾತರ ಕುರಿತು ದಿನಂಪ್ರತಿ ಜಾಗರೂಕತೆ ವಹಿಸುತಲಿದ್ದನು. ತನ್ನ ಯಿರುವಿಕೆ ಆಗಲೀ, ಆಗಮನವಾಗಲೀ ಯಿಡೀ ವೋಣಿ ಮಂದಿಗೆ ಮುಂಗಡ ತಿಳಿಯಲಕಂತ, ಗವುರವ ಕೊಡಲಕಂತ ಘಮ್ಮೆಂದೆಣ್ಣೆ ತನ್ನ ಗಿಡ್ಡ ಸರೀರದ ತುಂಬೆಲ್ಲ ಪೂಸಿಕೊಂಡಿರುತಲಿದ್ದನು. ತನ್ನನ್ನು ಹೊಗಳುವವರನ್ನು ಸತ್ಕರಿಸುತ್ತಲೂ, ತೆಗಳುವವರನ್ನು ಸಿಕ್ಷಿಸುತ್ತಲೂ ಯಿದ್ದನು. ತನ್ನ ಬಗ್ಗೆ ಯಾರ್‍ಯಾರು ಯೇನೇನು ಮಾತಾಡಿಕೊಳ್ಳುವರೆಂಬುದನು ಪತ್ತೆಹಚ್ಚಲಕೆಂದೇ ಖಾಸಗೀ ಗೂಢಾಚಾರರನ್ನು ನೇಮಿಸಿಟ್ಟುಕೊಂಡಿದ್ದನು. ದಿನಕ್ಕೊಂದು ಸಲವಾದರೂ ನಾಕಾರು ಮಂದಿ ಯನ್ನು ತರುಬಿ ಯದುರಿಗೆ ಕೂಡ್ರಿಸಿಕೊಂಡು ನೀವೆಲ್ಲ ನಿಮ ನಿಮ್ಮ ಸರೀರಗಳ ಸವುಂದರ್ಯದ ಕಡೆ ಹೆಚ್ಚು ಗಮನ ಕೊಡುತ್ತಿರಬೇಕೆಂದೂ, ಸುಂದರ ಪ್ರಜೆಗಳೇ ಸಾಮುರಾಜ್ಯದ ಸಂಪತ್ತೆಂದೂ ತಿಳುವಳಿಕೆ ಹೇಳುತಲಿದ್ದನು. ಯಿಂಥ

ಜಾಯಮಾನದ ಸನ್ಯಾಸಪ್ಪ ಆ ಹಿಂದಣ ರಾತಿರಿ ಸರುವರಂತೆ ಮಲಗಿ ಸರುವರಂತೆ ಯಚ್ಚರಗೊಂಡು ಅಂಗಯ್ನ ನೋಡುತ ಕರಾಗ್ರೆವಸತೇ ಲಚುಮೀ ಯಂದು ಗೊಣಗಿ ಹಾಗೇ ಕಣ್ಣು ಮುಚ್ಚಿಕೊಂಡು ಯಂದಿನಂತೆ ತನ್ನ ಪ್ರತಿಬಿಂಬವ ನೋಡಿಕೊಳ್ಳುವ ಸಲುವಾಗಿ ತಡಕಾಡತೊಡಗಿದನು. (ಯಾತಕ್ಕೆಂದರೆ ಸಪ್ತಲೋಹದಿಂದ ಮಾಡಲ್ಪಟ್ಟಿದ್ದ ಕನ್ನೊಡಿ ಹಳ್ಳಿಗಾಗಿ, ಅದರಲ್ಲಿಣುಕಿ ನೋಡಿಕೊಂಡ ನಂತರವೇ ವಗಯ್ರೆ.. ವಗಯ್ರೆ..) ಅದು ಯೀಗ ಸಿಕ್ಕೀತು, ಆಗ ಸಿಕ್ಕೀತು.. ಅಂತೂ ಕೊನೀಕೂ ಸಿಕ್ಕೇಬಿಟ್ಟಿತು. ಅದನ್ನು ಕಯ್ಲೆತ್ತಿಕೊಂಡು ಜಾಲಾಂದರದ ಸನೀಕ ವಯ್ದು ಅದರೊಳಗಿಣೂಕಿ ತನ್ನನ್ನು ತಾನು ನೋಡಿಕೊಂಡು ಮನುಸಾಗಲಿಕ್ಕ ಹತ್ತಿತು. ಅದೇ ಹೊತ್ತಿಗೆ ಹೆಂಡರೂ, ಮಕ್ಕಳೂ, ಸೊಸ್ತೆಯರೂ, ಮೊಮ್ಮಕ್ಕಳೂ ಯ್ಯೋನಾತಲೋ ಯ್ಯೋನಾತಲೋ ಯಂದನಕಂತ ಬಂದು ನೋಡುತ್ತಾರೆ.. ಸನ್ಯಾಸಪ್ಪ ಥೇಟ್...

ಅತ್ತ ಅರಮನೆಯೊಳಗೆ.. ಸಿವನೇ.. ಸಿವನೇ..

ಅನುವಾದ ಸೀರಣಿಕೆಯನ್ನು ಸೂಳೆಯೋಪಾದಿಯಲ್ಲಿ ಸದಾ ಬಕ್ಕಣದಲ್ಲಿಟ್ಟುಕೊಂಡಿರು ತಲಿದ್ದ ಕಾಟನಾಯಕನಿಗೋ, ತನ್ನ ಸರೀರದ ಮ್ಯಾಲ ಯಲ್ಲಂದರಲ್ಲಿ ಪುಷ್ಕಳವಾಗಿ ಬೆಳೆದಿರುವ ರೋಮದ ಮ್ಯಾಲ ಯಣೆಯಿಲ್ಲದಷ್ಟು ಕಕ್ಕುಲಾತಿಯಿತ್ತು ಸಿವನೇ.. ತನ್ನ ರೋಮದಿಂದಾವ ರಿಸಿರುವ ಯದೆಯೋ, ಭುಜಕೀರ್ತಿಯೋಪಾದಿಯಲ್ಲಿ ರೋಮ ತುಳುಕುತ್ತಿರುವ ಹೆಗಲೋ, ಪೊದೆ ಪೊದೆ ಹುಬ್ಬುಗಳೋ, ತಲೆ ಹಿಂದುಗಡೆ ಟೆಮುಟ ಗಾತುರದ ತುರುಬೋ, ಅವಗುಂಟನ ರೋಮದಿಂದ ತುಂಬಿರುವ ಮೂಗೋ, ಬಂದಳಿಕೆ ಪೊದೆಯಂಥ ಮೀಸೆಯೋ.. ಯಿಂಥೆಲ್ಲ ಸಲ್ಲಚ್ಛಣಗಳು ತನ್ನ ಕೀರ್ತಿಸೇಷ ತಂದೆಗೂ ಯಿದ್ದವಂತೆ. ರೋವುದೊಡಗೂಡಿ ತಾನು ಜೆನಿಸಿ ದ್ದಂತೆ.. ಜೋತಿಷಿಗಳು ಸಿಸುಪ್ರಾಯದಲ್ಲಿದ್ದಾಗ ಯೀತನು ಅರಿಭಯಂಕರನಾಗುವನೆಂದೂ, ಪುವ್ವಲ ವಮುಸದ ಕೀರ್ತಿ ಪತಾಕೆಯನ್ನು ಚಿತ್ತರಕಲ್ಲುದುರುಗದ ಬುರುಜಿನ ಮ್ಯಾಲಕೂ ಹಾರಿಸುವನೆಂದೂ ನುಡಿದಿದ್ದರಂತೆ. ಆವತ್ತಿನಿಂದಿವತ್ತಿನತನಕ ಕಾಟನಾಯಕನು ರೋಮವೇ ಸಕಲ ಸರುವಸ್ಸುವಯಂದು ಭಾವಿಸಿ ಪೋಷಿಸಿಕೊಂಡು ಬಂದಿದ್ದನು. ರೋಮದ ಕಾರಣದಿಂದ ಪ್ರಜೆಗಳ ಬಾಯಿಯಿಂದ ಜಾಂಬುವಂತ ನಾಯಕನೆಂದೂ ಕರೆಯಿಸಿ ಕೊಳ್ಳುತಲಿದ್ದನು. ತನ್ನ ಯಿರಾಮದ ಯೇಳೆಯನ್ನು ಕೂದಲನ್ನು ವಪ್ಪ ವೋರಣದಿಂದಿಡಲು ಯಿನಿಯೋಗಿಸುತಲಿದ್ದನು. ರೋಮಯೆಂದರೆ ಪರಾಕ್ರಮ, ಪರಾಕ್ರಮಯೆಂದರೆ ರೋಮವು ಯಂದು

ಗುರುತರವಾಗಿ ನಂಬಿಕೊಂಡು ಬಂದಿದ್ದನು ಸೀವನೇss

ಸದರಿ ದಿನದ ಬೆಳಗಾ ಮುಂಜಾನೆ ಬಲು ಯಿಸ್ತಾರವಾದ ಲಟಗೂ ಪುಟುಗೂ ಮಂಚದ ಮ್ಯಾಲ ಯಂದಿನಂತೆ ತಾನು ಮಲಗಿಕೊಂಡಿದ್ದನಷ್ಟೆ. ಜಾವ ಆರಂಭಗೊಂಡಾಗ ತನ್ನ ಸರೀರ ದಾದ್ಯಂತ ಯೇನೋ ಬುಳು ಬುಳು ಹರದಾಡುತ್ತಿರುವಂತೆ ಭಾಸವಾಯಿತು. ಹಾಸಿಗೆ ವಳಾಗಿನಿಂದ ಹುಳುಪ್ಪಟೆಗಳೇನಾದರೂ ತನ್ನ ಸರೀರಕ್ಕಮರಿಕೊಂಡಿರಬೌದೇ ಯಂದು ಪರ‍್ರಪರ‍್ರಕೆರೆದುಕೊಂಡು ವಂದಕ ಹೋಗಿ ಬಂದು ಅಳಾರಾದನು. ಆದರೆ ಬುಳುಬುಳು ಹೆಚ್ಚಾಯಿತೇ ಹೊರತು ಕಡಿಮೆ ಆಗಲಿಲ್ಲ. ರಾಜರಾದೋರು ಸೂರ್ಯೋದಯಕ್ಕೂ ಮೊದಲೇ ಯದ್ದಲ್ಲಿ ರಾಜ್ಯವು ಸುಭಿಕ್ಷವಾಗಿರತಯ್ತೆ ಯಂದು ಭಾವಿಸಿ ಯದ್ದು ಸೀರುಣಿಕೆಯನ್ನು ಕಯ್ಗೆತ್ತಿಕೊಂಡು ತನ್ನ ಸರೀರದ ವಂದೊಂದು ಭಾಗವನ್ನು ಸೀರಿಕೊಳ್ಳಲಕ ಹತ್ತಿದನು. ಸೀರುಣಿಕೆ ಗುಂಟ ತುಪ್ಪಳ ಪೆಂಡೆ ಪೆಂಡೆಯಾಗಿ ವುದುರುತ್ತಿರುವುದ ಕಂಡು ಅಯ್ಯಯ್ಯೋ ಯಂದು ವುದ್ಗಾರವ ಮಾಡುತ.. ತೊಡೆ ಮ್ಯಾಗಳ, ಪೊದೆ ಮ್ಯಾಗಳ.. ಯದೆ ಮ್ಯಾಗಳ, ತಲೆ ಮ್ಯಾಗಳ, ವುಂಗುಟ ಮ್ಯಾಗಳ ರೋಮವಳಿದೂs ಅಳಿದು ಸರೀರವು ಬೋಳಾಯಿತು. ವಂದೊಂದು ಬೊಗಸೆಯಿಂದ ರೋಮವನ್ನೆತ್ತಿಕೊಂಡು "ನಿಮಗೆ ನಾನೇನಂಥಾ ದ್ರೋಅ ಮಾಡಿದ್ದೇ ಅಂತ ವುದುರಿ ಹೋದಿರಿ.. ನಿಮ್ಮನ್ನ ನಾನಾರನೇ ಹೆಂಡತೀಂತ ತಿಳಕೊಂಡು ಪಾಲನೆ ಪೋಸಣೆ ಮಾಡುತ್ತಿದ್ದೆನಲ್ಲಾ.. ಯಿನ್ನಾದರು ಅಂಟುಕೊಳ್ಳರಿ ಯಂದು ತೊಡೆ ಭಾಗದ ಕೂದಲನ್ನು ಮೂಗಿನಡಿಗೂ.. ಮೂಗಿನಡಿ ಕೂದಲನ್ನು ತಲೆಯ ಮ್ಯಾಲಕ್ಕೂ ಅಂಟಿಸುವ ಯಿಫಲ ಪ್ರಯತ್ನ ನಡೆಸಿದನು ಮತಿಗೆಟ್ಟವನಂತೆ.. ಅಂಟಿಕೊಳ್ಳದೆ ಅವು ವುದುರುದುರಿ ಬಿದ್ದವು.. "ಅಯ್ಯೋ ನನಕೂದಲೂ.. ನನ ಕೂದಲೂ.. ರೋಮವಿಲ್ಲದ ನನ ಬೋಳು ಸರೀರವನ್ನು ಹೆಂಡರಿಗೆಂಗ ತೋರಿಸಲಿ.. ಪ್ರಜೆಗಳಿಗೆಂಗ ತೋರಿಸಲಿ. ಕುದುರೆಡವು ಸಾಮುರಾಜ್ಯ ಲಚ್ಚುಮಿಯು ನನ್ನನ್ನು ತಿರಸ್ಕಾರ ಮಾಡಿದರೇನು ಗತಿ.." ಯಂದವನು ಗಗ್ಗರಿಸಿ ಅಳುತಲಿದ್ದ ದೊನಿಯು ಲೋಬಾನದ ಹೊಗೆಯಂಗೆ ಅರಮನೆಯ ತುಂಬೆಲ್ಲ ಘಮ್ಮಂತ ಪಸರಿಸಿತು ಸಿವನೇ..

ರಾಜಮಾತೆ ವಳಗೊಳಗೆ ಸಂತೋಷಪಡುತ "ಹಿಂದಲ ಜಲುಮದ ಪಾಪ ಯೀ ಜಲುಮದೊಳಗ ಕಾಣಿಸಿದ್ದಂಗಯ್ತೆ ರಾಜ ಕೊಮ್ಮಾರ.. ಪುವ್ವುಲ ರಾಜರಂದರ ಕೂದಲನು ಕರಡೀಗಳಿಗೆ ಕಡ ಕೊಡುತ್ತಿದ್ದಂಥೋರು ಕನಪ್ಪಾ..

ಯೀಗ ನಿನ ಮಯ್ಯಿ ಮ್ಯಾಲ ಕೂದಲಿಲ್ಲಾಂದರ ಪುವು°ಲ ವಮುಸಕ್ಕೆ ಅವಮಾನ.. ಪೆದ ಭಯ್ರುವ ರಾಜ ಕಟ್ಟಿಸಿರೋ ಯೀ ಅರಮನೆಗೇ ಅವಮಾನ.. ಅದಕ ನೀನು ಅರಮನೆ ಬಿಟ್ಟು ಕದಲ ಬ್ಯಾಡ.. ಹೊರಗ ಹೋಗ ಬ್ಯಾಡ.. ನಾಕು ಮಂದಿ ಕಣ್ಣಿಗ ಬೀಳಬ್ಯಾಡ.. ಬಿದ್ದು ಕಿಸುರಾಗಬ್ಯಾಡಪ್ಪ.. ಪಾಲಿಗೆ ಬಂದದ್ದು ಪಂಚಾಂಬ್ರುತ ಅಂತ ತಿಳಕೊಂಡು ವಳಾಗ ಯಿರಬೇಕಪ್ಪ..'' ಯಂದು ಹೇಳಿತಲ್ಲದೆ ರಾಜಪರಿವಾರದ ಮಂದಿಗೆ, ಪರಿಚಾರಕ ಮಂದಿಗೆ ಯೀ ಸುದ್ದಿ ಅರಮನೆ ಬಿಟ್ಟು ಸೋರಿ ಹೊರಗ ಹೋಗಧಂಗ ನೋಡಿಕೊಳ್ಳಿರೆಂದು ತಾಕೀತು ಮಾಡಿತು. ಪುವ್ವುಲ ರಾಜರ ಪಯಿತ್ರದವು ಯಂಬ ಕಾರಣಕ್ಕೆ ರೋಮಗಳನ್ನೆಲ್ಲ ಬಳಿದು ಪಿತಾಂಬರದ ಬಟ್ಟೆಯೊಳಗಿಟ್ಟು ಗಂಟು ಕಟ್ಟಿದರು ಸಿವನೇ.. ಅದು ಮೊದಲೇ ರಾಜ ವಮುಸದವರ ರೋಮವಪ್ಪಾ. ತುಳಿದ ಕಾಲಿಗೆ ಕೇಡು, ಬಿದ್ದ ನೆಲವೆಲ್ಲ ಬೀಳುಬೀಡು.. ಅದನು ಗಂಗಾನದಿಯೊಳಗೆ ಯಿಸರ್ಜನೆ ಮಾಡಬೇಕು.. ಯಿದೆಲ್ಲ ವಂದಲ್ಲಾ ವಂದು ತಿಕ್ಕಡಿ ಹತ್ತಿರೋ ಅರಮನೆಯಿಂದ ಆಗದ ಮಾತು. ಮುಂದೊಂದಿವಸ ಚರಾಸ್ತಿ ಸಿಗಲಿ. ಆಗ ಬಿಟ್ಟುದ ಬಿಟ್ಟು ಮಾಡಿದರಾಯಿತು. ಅದೇ ಹೊತ್ತಿಗೆ ಗುಟ್ಟಾಗಿ ಕರೆದಿದ್ದ ಕಾರಣಕ್ಕೆ ಬಂದಿದ್ದ ವೈಯ್ದನೂ, ಜೋತಿಷಿಯೂ ಆದಂಥ ವಂಟೇಮಲ್ಲಯ್ಯನು (ತನ್ನ ಹರೆಯದ ಕಾಲದಲ್ಲಿ ಗುಂಡುಮುಳುಗು ಸಮುಸ್ಥಾನಿಕರಿಂದ ಭಕ್ಷೀಸು ರೂಪದಲ್ಲಿ ವಂಟೆಯನ್ನು ಪಡಕೊಂಡು ಅದರ ಮ್ಯಾಲ ಅಡ್ಡಾಡುತಲಿದ್ದ ಕಾರಣಕ್ಕೆ ಆ ಹೆಸರು ಪ್ರಾಪ್ತವಾಗಿತ್ತು. ಅಡಚಣೆ ಯಿಂದಾಗಿ ಬಕರೀದು ಆಚರಿಸಲಿದ್ದ ಮಸೂದಿಪುರದ ಮುಸಲಮಾನರಿಗೆ ಮಾರಿದ್ದನು) ನಾಡಿಯೊಂದಲ್ಲದೆ ವಾತಕಫ ಪಿತ್ತಾದಿಗಳನ್ನು ಕೂಲಂಕಷ ಪರಿಶೀಲಿಸಿ ಅಂಟರಪುಳಕ, ಯಾಲಪಿ, ಮಯ್ಲುತುತ್ತ, ಸೇಂದ್ರೀಯ ಲವಣ, ಕಾಗೆ ಪಿಚ್ಚೆ ಯಿವನೆಲ್ಲ ಅರೆದು ಕಾಟಯ್ಯ ಸರೀರದಾದ್ಯಂತ ಲೇಪನ ಮಾಡಿ ವಾರೊಪ್ಪತ್ತು ದಿವಸ ಮಿಸುಕಾಡದಿರುವಂತೆ ಸೂಚಿಸಿದನು. ಯಿನ್ನು ಜೋತಿಷ್ಯ ಗುಣಾಕಾರ ಭಾಗಾಕಾರ ಮಾಡಿ ಯಿದು ಭೂತ ಚಾಷ್ಟಿಯಂದೂ, ಹೊಗೆ ಹಾಕುತ್ತಿರಬೇಕೆಂದೂ ಹೇಳಿ ಲೋಬಾನ ಮಂತ್ರಿಸಿ ಕೊಟ್ಟನು. ಯೀ ಪ್ರಕಾರವಾಗಿ ನಖಶಿಖಾಂತ ಕರಮಂಟ ಗೊಂಡವ ನಾದ ಕಾಟನಾಯಕನು..

ಯಷ್ಟು ಬಂಧೋಬಸ್ತು ಮಾಡಿದ್ದರೂ ಯೀ ರಮ್ಯಾತಿ ರಮ್ಯ ಸುದ್ದಿಯು ಅರಮನೆಯ ಅಸಂಖ್ಯಾತ ರಂಧ್ರಗಳ ಮೂಲಕ ಹೊರ ಹರಿದು ಸಮಸ್ತ ಪಟ್ಟಣವನ್ನು ತೊಯ್ದು ತಪ್ಪಡಿ ಮಾಡಿತು.. ರಾಜ ಬೋಳಪ್ಪನಾಗಿರುವನಂತಲ್ಲಾ..

ಬೋಳಾಗಿರುವ ರಾಜನನ್ನು ನೋಡಿ ಆನಂದಿಸಬೇಕೆಂಬ ಆನಂದೇಚ್ಛೆವುಳ್ಳವರಾಗಿ, ಅಯ್ಯೋ ಪಾಪ ಯಂಬ ಅನುಕಂಪವುಳ್ಳವರಾಗಿ, ಸಾಮುರಾಜ್ಯದ ಗತಿಯೇನು ಯಂಬ ಕಳಕಳಿವುಳ್ಳವರಾಗಿ ಪ್ರಜೆಗಳು ತಂಡೋಪತಂಡವಾಗಿ ಅರಮನೆಯನ್ನು ತಮ್ಮ ಗಂಟಲೊಳಗೆ ತುಂಬಿಕೊಂಡು...

ತಂಬೂರ್‍ಯೋರು ಆ ಕಡೇಲಿಂದ, ಯೀ ಕಡೇಲಿಂದ ಚವುಡಿಕ್ಯೋರು.. ಯ್ಯೋಳುಕೊಳ್ಳ ದೆಲ್ಲಮ್ಮಾ, ಹುಲಿಗೀಯ ಹುಲಿಗೆಮ್ಮೋsಮಡ್ಲೇರಿ ಮಾರಮ್ಮೋs.. ಯ್ಯೋಳೂರು ಯ್ಯೋಳು ಮುಖದಮ್ಮೋs ದರೂರು ದುರುಗಮ್ಮೋ, ಮೂಳೂರು ವುಡುಸಲೆಮ್ಮೋs ತಾಳೂರು ತಾಯಮ್ಮೋ.. ತಮ ತಮ್ಮ ನಾಲಗೆಯಿಂದ ಸತ ಸಹಸ್ರತಾಯಂದಿರ ನಾಮಸ್ಮರಣೆ ಮಾಡೂತ ತೂರಾಡಿ ಮುಗುಲ ಬಯಲೊಳಗೆ ಕುಂಕುಮ ಭಂಡಾರ ಯಿಬತ್ತಿಗಳ ಸಮಿಸ್ರಸರಕಾರ ರಚನೆ ಮಾಡೂತ ಆರೋಹಣದಲ್ಲಿ ಮುಂದಕ ಜಿಗಿಯೂತ, ಅವರೋಹಣದಲ್ಲಿ ಹಿಂದಕ್ಕೆ ಪುಟಿಯೂತ, ಅಗೋ ಅಲ್ಲಿ ಧಗಧಗನೆ ವುರಿವುತಾಳ ದ್ಯಾವಿ ದ್ಯಾವಮ್ಮಾ, ಯಿಗೋ ಯಿಲ್ಲಿ ಕೆಂಡದುಂಡೆಗಳ ತೂರಾಡುತಾಳೆ ಮಾತಾಯಿ ಮಾಳಮ್ಮ, ಭೂದೇವಿಗೆ ಸಗುತಿ ಸೊರೂಪಿಣಿಗೆ ಜಯ್, ಆದಿಸಗುತಿಯ ಪಾದಾರಯಿಂದಕ್ಕೆ ಜಯ್, ಸಿವನ್ನಾಮ ಪಾರೋತಿ ಪತಿಹರ ಹರ ಮಾದೇವೂss.. ಲಚುಮೀ ರಮಣ ಗೋಯಿಂದಾ ಗೋಯಿಂದಾ.. ಯಂದು ಮುಂತಾಗಿ ಜಯಕಾರ ಹಾಕೂತ.. ಗುಂಪು ಗುಂಪಿಗೆ ಬೆರೆತು, ಪರಿಶೆ ಜಾತುರಿಗೆ ಬೆರೆತು ನಿರುಮಾಣಗೊಂಡ ಜನ ಸಾಗರವು ದಿವಿನಾದ ರೂಪದಲ್ಲಿ ಅಂಬೆಗಾಲಿಡುತಾ.. ಅಂಬೆಗಾಲಿಡುತಾ ಸದರಿ ಪಟ್ಟಣದ ರುದಯ ಭಾಗವಾದ ಚವುರಸ್ತಾ ತಲುಪಲದಕ ಅಲ್ಲೊಂದು ಯಿಚಿತ್ರವು ಅದಕ್ಕಾಗಿ ಅಲ್ಲಿ ಕಾದಿತ್ತು. ಬಡೇಲಡಕು, ಕುಮತಿ, ಕಾನಾಮಡುಗು ಗುಂಡುಮುಳುಗು ಯಂಬಭಿಧಾನ ಹೊತ್ತಿದಂಥಾ ನಾಕು ಗ್ರಾಮಗಳಿಂದ ಸುಮಾರು ನಾಕುನೂರು ಮಂದಿ ವುಧೋ ವುಧೋ ಯಾಕ್ಕುಲ್ದೇ ವುಧೋ ವುಧೋ ಯಂದು ಕೂಗುತ್ತ ಸಜ್ಜಾಗಿ ನಿಂತಿತ್ತು. ವಂದು ಕಾಲಕ್ಕೆ ಆ ನಾಕೂ ಮಾರುಗಳು ಕುದುರೆಡಮೊಳಗೆ ವಡಹುಟ್ಟಿದವುಗಳಂತಿದ್ದವು.. ದಾಯಾದಿಗಳಂತೆ ಸಿಡಿದು ಹೋಗಿ ಕೂಗಳತೆ ದೂರದಲ್ಲಿ ತಳಮಾರಿದ್ದವು. ವಂದೇ ಯರಕ ವುಯ್ದು ಮಾಡಲ್ಪಟ್ಟವುಗಳಂತೆ ಅವು ಯಿದ್ದವಷ್ಟೆ. ಕುದುರೆಡವಿಗೆ ಹೊಟ್ಟೆನೊವ್ವು ಬಂದಲ್ಲವು ಕಷಾಯ ಕುಡಿಯುತ್ತಿದ್ದವಷ್ಟೆ.. ಕುದುರೆಡವಿನತ್ತ ಸದಾ ತಮ್ಮ ಪಂಚೇಂದ್ರಿಯಂಗಳನು ಹರಿಬಿಟ್ಟಿರುವುತ್ತಿದ್ದವಷ್ಟೆ..

ಭಜಣೆ ಮಾಡುತ ಮೂಡಣ ದಿಕ್ಕಿನಿಂದ ಬಡೇಲಡಕಿನೋರೂ, ಡೊಳ್ಳು

ಬಡಿಯೂತ ಪಡುವಲ ಹಾದಿಗುಂಟ ಕುಮತಿಯೋರೂ, ತಾಳಮದ್ದಳೆ ನುಡಿಸೂತ ತೆಂಕಣ ಹಾದಿಗುಂಟ ಗುಂಡು ಮುಳುಗಿನೋರೂ, ತಪ್ಪಟೆ ಬಡಿಯೂತ ಬಡಗಣ ಹಾದಿಗುಂಟ ಕಾನಾ ಮಡುಗಿನೋರೂ, ಯೇಕ ಕಾಲಕ್ಕೆ ತಮ ತಮ್ಮ ಮೂರುಬಿಟ್ಟು ಯೇಕ ಕಾಲಕ್ಕೆ ಚವುರಸ್ತಾ ಸೇರಿಬಿಟ್ಟಿದ್ದರು. ಅವರು ಹೇಳಿದ್ದನ್ನಿವರು, ಯಿವರು ಹೇಳಿದ್ದನ್ನವರು ಹೇಳಿಕೊಂಡರು, ಕೇಳಿಕೊಂಡರು.

*ಬೂದಿಮುಚ್ಚಿದ ಕೆಂಡದಂಥ ಮೋಬಯ್ಯನೆಲ್ಲಿ?*

*ಭೂಲೋಕದ ವುದ್ದಂಡವ್ವೆಯನ್ನು ರುದಯದಲ್ಲಿ ಯಿಟುಕೊಂಡಿರುವ ಮೋಬಯ್ಯನೆಲ್ಲಿ..?*

*ಸಪ್ತ ಸಾಗರಗಳನ್ನು ವಡಲೊಳಗಿಟ್ಟುಕೊಂಡಿರುವ ಮೋಬಯ್ಯನೆಂಬ ಬಿಂದುವೆಲ್ಲಿ?*

ಯಂದು ಮುಂತಾಗಿ ಹುಲುಬೂತ ಜನಸಾಗರವು ಪ್ರವೇಶಿಸಿದ ಥೆಳಗೇರಿಯು ಥೆಳಗೇರಿ ಆಗಿರಲಿಲ್ಲ... ದಾರಿ ಸಾಗವಲ್ಲದು, ಮೋಬಯ್ಯನ ಸರೀರವು ಗೋಚರ ಆಗವಲ್ಲದು. ಅದು ಮುಂದ ಮುಂದಕ ಹೋದಂಗ ಆಗತಯ್ತೆ. ತಾವು ಹಿಂದ ಹಿಂದಕ ವುಳುದಂಗ ಆಗತಯ್ತೆ, ಬಿಸಿಲು ವಯಿಶಾಖದ ಮುಖವಾಡ ಧರಿಸಿಧಂಗಯ್ತೆ, ನೆಲ ಕಾದ ಕಾವಲಿ ಆದಂಗಯ್ತೆ, ತಾವು ವಂದೆಂಬುವ ಹೆಜ್ಜೆಯನಿಡಲದು ವಂದು ಯೋಜನ ದೂರಕ, ತಾವು ಯರಡು ಯಂಬುವ ಹೆಜ್ಜೆಯ ನಿಡಲದು ಯರಡು ಯೋಜನ ದೂರಕ ಸರಕಂತಯ್ತೆ.. ಅವ್ವನ ಅರಮನೆಯಾಗಿರ್ಪ ಮೋಬಯ್ಯನ ಸರೀರ ಯಂಬುವ ಮನೆಯು... ಅಂತೂ ಮೆರವಣಿಗೆಯು ಕಷ್ಟಗಳ ಸೋಸೀ ಸೋಸೀ ಮೋಬಯ್ಯನ ಮನೆಯನ್ನೇನೋ...

ತಲುಪಿ ನೋಡುತಯ್ತೆ ಮನೆ ಹೊರಗೆ ಮನೆಯೊಡೆಯನಿಲ್ಲ.. ವಳಗೆ ಮನೆ ವಡೆಯನಿಲ್ಲ.. ಯಲ್ಲವನೆ ಮೋಬಯ್ಯ? ಯಲ್ಲವಳೆ ತಾಯಿ ಸಾಂಬವಿ.. ತಬ್ಬಲಿಯಂತೆ ಹಂಬಲಿಸಿತು ಜನಸಾಗರವು. ಬೇರು ಸಯ್ತು ಕಿತ್ತೆಸೆದ ಯಳೆ ಬಳ್ಳಿಯಂತೆ ಬಾಡಿ ಮುದುಡಿತು ಜನಸಾಗರವು, ಅವನು ಕುಂತೇಳುತಲಿದ್ದಂಥ ಜೆಗೇವುಗಳನ್ನೆಲ್ಲ ಜಾಲಾಡಿತು. ಅವರ ಪಯ್ಕಿ ಯಿದ್ದಂಥ ಬಡಕಲೋರು ನರಸಿಂಗನು ತನ ಬಾಯೊಳಗೆ ತುಳುಕಿ ಬಂದ ಕಾರಣಿಕವನ್ನು "ಆ ಕಡೇಲಿರೋ ಕುರುಗುಡ್ಡದ ತಪ್ಪಲಲೊಂದು ಟಗರು ಮೇಯುತಯ್ತೆ, ಯೀಚೆ ಕಡೇಲಿರೋ ಬೂದಿಗುಡ್ಡದ ತಪ್ಪಲಲೊಂದು ತೋಳ ಮೇಯುತಯ್ತೆ, ಅದು ಯಿದನು ದುರುಗುಟ್ಟಿ ನೋಡುತಯ್ತೆ.. ಯಿದು ಅದನು ದುರುಗುಟ್ಟಿ ನೋಡುತಯ್ತೆ,

ತೋಳದ ಬೆನ್ನಮ್ಯಾಲ ಟಗರು ಸವಾರಿ ಮಾಡೋ ಕಾಲ ಬಂದೀತು ಭೋ ಪರಾಕ್" ಯಂದು ಕೂಗಿ ವುದುರಿಸಿದನು.

ನರಸಿಂಗನ ಬಾಯಿಯ ಗವ್ವರದಿಂದ ಹೊರಗೆ ತುಳುಕಿದ ಕಾರಣಿಕ ಪಕ್ಷಿಯು ಕೇಳು ಕೇಳುತಿರಲಕ್ಕ ಯಿಡೀ ಪಟ್ಟಣವನ್ನು ಆವರಿಸಿದ್ದಾಗಲೀ, ಸಾವುರ ರೆಕ್ಕೆಗಳನು ವಮುಡಕೊಂಡ ದ್ದಾಗಲೀ, ಹಾರುತಾರುತ ಹೋಗಿ ಅಂತರ್ಧಾನಗೊಂಡದ್ದಾಗಲೀ ತಡಾಗಲಿಲ್ಲ. ಯೋಚಿಸ ತೋಚಿಸುತ್ತ ಮಂದಿ ಬೆಕ್ಕಸ ಬೆರಗಾಗಿ ಬಿಟ್ಟಿತು. ಕಾರಣಿಕದ ವಂದೊಂದು ಅರ್ಥ ಪೋಣಿಸುತ್ತ ಗಡಗಡ ನಡುಗಲಾರಂಭಿಸಿತು. ಆಯ್ ಕಾಯ್ ಜಾಯ್‌ಕಾಯ್ ಬೆಂಕೀಲಿ ಬೆಂದ್ಕಾಯ್ ಆಗಿಬಿಟ್ಟಿತು. ನೋಡುನೋಡುತಿರಲಿಕ್ಕೆ ವಳಿತದೊಳಗಿದ್ದ ನಾಕೂ ಗುಡ್ಡಗಳಿಗೆ ಅಂಟರು ಪುಳುಕೆಗಳಂತೆ ಅಂಟರಗಾಲು ಹಾಕಿಬಿಟ್ಟಿತು ಮಂದಿ, ಗುಡ್ಡದ ವಂದೊಂದು ಕೋಡುಗಲ್ಲನ್ನವುಚಿ ಕೊಂಡು ಮೋಬಯ್ಯಾ.. ಮೋಬಯ್ಯಾ.. ತಾಯೀ ಯಂದೊರಲಿತು ಮಂದಿ, ಮೊರಲೀ ಮೊರಲೀ ತಮ ತಮ್ಮ ಗಂಟಲನ್ನು ಸವೆಸಿಕೊಂಡಿತು ಮಂದಿ. ಗಾವುದ ದೂರ ಹೋಗುವಂತೆ ವುಸುರು ಬಿಟ್ಟಿತು ಮಂದಿ, ಯೋಜನ ದೂರದವರೆಗೆ ನಾಲಗೆ ಚಾಚಿತು ಮಂದಿ....

* * * *

ಆದವಾನಿ ವಳಿತದ ಮೂಲೆಯಲ್ಲಿದ್ದ ಕುರುಮಯ ಗೂಡೆಂಗೆ ಥಾಮಸು ಮನ್ರೋ ಸಾಹೇಬನು ಯಾಕೆ ಹೋಗಬೇಕಾಗಿ ಬಂದಿತೆಂದರೆ? ಸರಕಾರದ ಯಾದಿಯಲ್ಲಿ ಅದು ಯಿರಲಿಲ್ಲ. ಅಲ್ಲಿ ಜಮೀಂದಾರಿಕೆಯ ವುಪಟಳಯಿರಲಿಲ್ಲ. ಮ್ಯಾಲು ನೋಟಕ್ಕೆ ಅಲ್ಲಿ ಕೇವಲ ಯರಡು ಜಾತಿಗಳು. ಅವೆಂದರೆ ಬ್ಯಾಡರು ಮತ್ತು ಕುರುಬರು ಮಾತ್ರ. ವಂದೊಂದು ಜಾತಿಯೊಳಗೆ ಹತ್ತಾರು ವುಪಜಾತಿ ಪಂಗಡಗಳಿದ್ದವು. ವಂದೊಂದು ವುಪಜಾತಿಗೂ ವಬ್ಬೊಬ್ಬ ಮುಖಂಡನಿದ್ದನು. ಆತನು ತನ್ನ ಕೋಮನ್ನು ಯಿನ್ನೊಂದು ಕೋಮಿನ ಯಿರುದ್ದ ಸದಾ ಯತ್ತಿಕಟ್ಟುತ ಲಿದ್ದನು. ಪರಸ್ಪರ ಕಣ್ಣು ಕೆಂಪಗೆ ಮಾಡಿಕೊಂಡು ನೋಡುವುದು, ಹಲ್ಲು ಮಸೆಯುವುದು ನಡೆದೇಯಿತ್ತು. ಕ್ಷುಲ್ಲಕ ಕಾರಣಗಳಿಗಾಗಿ ವುಪ ಪಂಗಡಗಳ ನಡುವೆ ಜಗಳ, ಹೊಡೆದಾಟ ವರುಷೊಪ್ಪತ್ತಿನಲ್ಲಿ ಮೂರುನಾಕು ಸಲವಾದರೂ ನಡಯದೇ ಯಿರುತ್ತಿರಲಿಲ್ಲ.. ರಾಮಾರಗುತ ಮಾಡಿಕೊಂಡವರು ಗ್ರಾಮದ ಗಡಿ ದಾಟಿ ರಕ್ಷಕ ಠಾಣೆಗೆ ಹೋಗಿ ದೂರು ಸಲ್ಲಿಸುತ್ತಿರಲಿಲ್ಲ.. ಕುಂಪಣಿ ಸರಕಾರದ ಸಾಯದಿಂದ ಚಿಕಿತ್ಸೆ ಪಡೆಯುತ್ತಿರಲಿಲ್ಲ. ಹಾಗೆ ಮಾಡುವುದರಿಂದ ತಮ್ಮ ಕೋಮಿನ ಕುಲದೇವತೆ ಮುನುಸಿಕೊಳ್ಳುತ್ತಾಳೆ ಯಂಬ ಅಚಲ

ನಂಬುಗೆಯಿಂದ, ದೂರುಕೊಟ್ಟಲ್ಲಿ ಕುಂಪಣಿ ಮಂದಿ ಕರಗಲ್ಲು ದಾಟುವುದರ ಮೂಲಕ ತಮ್ಮ ಗ್ರಾಮವನ್ನು ಮಯ್ಲಿಗೆ ಮಾಡುವರು ಯಂಬ ಯಿನ್ನೊಂದು ಕಾರಣಮೂಯಿಲ್ಲದಿರಲಿಲ್ಲ. ಸಮುದ್ರದರುಸನ ಮಾಡಿದೋರನು, ಸಮುದ್ರದ ಗುಂಟ ಪ್ರಯಾಣ ಮಾಡೋರನು ತಮ್ಮ ಗ್ರಾಮಕ್ಕೆ ಹತ್ತಿರ ಸುಳಿಯಗೊಡುವುದಿಲ್ಲ ಆ ಗೂಡೇಮಿನವರು. ಕುಂಪಣಿ ಮಂದಿ ಅಂದರ ಸಮುದ್ರದಾಟಿ ಬಂದಿರೋರು ತಾನೆ?

ಥಾಮಸು ಮನ್ರೋ ಸಾಹೇಬನ ಮಧ್ಯಸ್ಥಿಕೆಗೆ ಹಂಬಲಿಸಿದ ಘಟನೆ ಯಾವುದೆಂದರೆ... ಅದೆಯಾ....

ಯೀ ಪ್ರಕಾರವಾಗಿ ಚಾಣಾಕ್ಷ ಅಧಿಕಾರಿಯಾದ ಮನ್ರೋ ಸಾಹೇಬನು ಕೊಡಲಿ ಯಿಂದಾಗೋ ಕಾರ್‍ಯವನ್ನು ವುಗುರಿನಿಂದಲೂ, ವುಗುರಿನಿಂದಾಗೋ ಕೆಲಸವನ್ನು ಕಣ್ಸನ್ನೆ ಯಿಂದಲೂ, ಕಣ್ಸನ್ನೆ ಯಿಂದಾಗೋ ಕೆಲಸವನ್ನು ಬಾಯಿಮಾತಿನಿಂದಲೂ ಮಾಡುತ, ಯಲ್ಲ ರಿಂದಲೂ ಸಯ್ಯನ್ನಿಸಿಕೊಳ್ಳುತ, ಜಾತಿ ಜಾತಿ ನಡುವೆ, ಕೋಮು ಕೋಮಿನ ನಡುವೆ ಸವುಹಾರ್ದ ವಾತಾವರಣವನ್ನುಂಟುಮಾಡುತ...

ಅತ್ತ ಕೂಡ್ಲಿಗಿ ವಳಿತದೊಳಗಿದ್ದ ಪಾಳೆಪಟ್ಟುಗಳು ಅಡಚಣೆಗಳ ಆಕ್ರಮಣಕ್ಕೆ ತುತ್ತಾಗಿ ತತ್ತರಿಸತೊಡಗಿದ್ದವು. ಮದ್ಯಸೇವನೆ, ಜೂಜು ಲಂಪಟತನಗಳನ್ನಂಟಿಸಿಕೊಂಡೂ ಚಟಗಳ ದಾಸವರೇಣ್ಯರಾಗಿದ್ದ ಪಾಳ್ಳೇಗಾರರು ತಮ್ಮ ಹಣದ ಅಡಚಣೆ ನಿವಾರಿಸಲೋಸುಗ ಪ್ರಜೆಗಳ ಮ್ಯಾಲ ಹೊಸ ಹೊಸ ತೆರಿಗೆಗಳನ್ನು ಹೇರಲಾರಂಭಿಸಿದ್ದರು. ಪಿಳ್ಳೆ ನೋಡಿದರಿಷ್ಟು, ಮದುವೆ ಆದರಿಷ್ಟು, ಸೋಬನ ಪ್ರಸ್ತವಾದರಿಷ್ಟು, ಮಕ್ಕಳಾದರೆ ಯಿಷ್ಟು ಯಂಬಂಥ ತೆರಿಗೆಗಳನ್ನು ಲೆಕ್ಕ ಹಾಕುತ್ತ ಹೋದರೆ... ಹರಪನಹಳ್ಳಿ ಪ್ರಾಂತದ ಅರಸನಾಳು, ಕುಂಚೂರು, ತೆಲಿಗೆ, ದುಗ್ಗಾವತಿ ಗ್ರಾಮಗಳ ಪ್ರಜೆಗಳಂತೂ ತೆರಿಗೆ ಸಂದಾಯ ಮಾಡಲಾಗದೆ ಆಳುವವರ ಯಿರುದ್ಧ ತಿರುಗಿ ಬಿದ್ದಿದ್ದರು.. ತೆರಿಗೆ ವಸೂಲಿ ಮಾಡಲಕಂತ ಬಂದವರನ್ನು ವದ್ದೋಡಿಸಲಾರಂಭಿಸಿದ್ದರು. ಸಯ್ನಿಕರಿಗೂ, ಪ್ರಜೆಗಳಿಗೂ ನಡುವೆ ಗುಂಪು ಘರ್ಷಣೆ ದಿನಂಪ್ರತಿ ನಡೆಯುತ್ತಲೇಯಿತ್ತು.. ತೆರಿಗೆ ನಿರಾಕರಿಸುವವರನ್ನು, ರಾಜಾಜ್ಞೆಗಳನ್ನು ದಿಕ್ಕರಿಸುವವರನ್ನು ದ್ರೋಹಿಗಳೆಂದು ಪರಿಗಣಿಸಿ ಅಂಥವರಿಗೆ ಮರಣದಂಡನೆಯನ್ನು ಯಿಧಿಸಲಾಗುತ್ತದೆ ಯಂದು ರಾಜರುಗಳು ಪ್ರಚಾರ ಮಾಡುತ್ತಿದ್ದುದು ಮಾಮೂಲು ಸಂಗತಿ ಆಗಿತ್ತು. ಅದರ ಬೆನ್ನ ಹಿಂದೆಯೇ ಕ್ರುಷಿ ಕಾರ್ಮಿಕರ ಸಣ್ಣ ಹಿಡುವಳಿದಾರರ ಸಂಘಟನೆಗಳು ಚಕಚಕಾಂತ

ಚಿಗಿತುಕೊಳ್ಳುತ್ತಿದ್ದವು. ಅಂಥ ಸಂಘ, ಸಂಘಟನೆಗಳ ಮುಖಂಡರನ್ನು ಬಹಿರಂಗವಾಗಿ ಯದುರಿಸುವ, ಯಿಚಾರಿಸುವ ಯದೆಗಾರಿಕೆ ಯಿರದಿದ್ದ ರಾಜರುಗಳು ಸಿಪಾಯಿಗಳ ಸಾಯದಿಂದ ರಾತಿರೋರಾತಿರಿ ಅಪಹರಿಸಿ ದೂರ ಕರೆದೊಯ್ದು ಕೊಲೆ ಮಾಡಿಸಲಾರಂಭಿಸಿ ದ್ದರು. ಯಿದಕ್ಕೆಂದೇ ಕೆಲವು ಪಾಳೆಗಾರರು ನಿರ್ದಯ ಕೊಲೆಗಡುಕರನ್ನು ಬಾಡಿಗೆ ಪಡೆದಿಟ್ಟುಕೊಂಡಿದ್ದರು. ಯಿನ್ನೂ ಕೆಲವು ರಾಜರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಲಕೆಂದೇ ಕಳ್ಳಕಾಕರನ್ನು ಸಾಕಲಾರಂಭಿಸಿದ್ದರು. ಪ್ರತಿಯೊಂದು ಮೂರುಗಳೊಳಗೆ ಅಂಥ ಚೋರಾಗ್ರೇಸರರು ಹಗಲು ಹೊತ್ತಿನಲ್ಲಿ ಸಾಮಾಜಿಕರ ನಡುವೆ ಮಹಾ ಧರುಮಭೀರುಗಳಂತೆಯೂ ಮುಖವಾಡ ಧರಿಸಿ ಜೀವನ ಮಾಡುತಲಿದ್ದುದು ಸಾಮಾನ್ಯ ದ್ರುಶ್ಯವಾಗಿತ್ತು. ಯೀ ಪ್ರಾಂತದ ಕಳ್ಳರು ಆ ಪ್ರಾಂತದಲ್ಲೂ, ಆ ಪ್ರಾಂತದ ಕಳ್ಳರು ಯೀ ಪ್ರಾಂತದಲ್ಲೂ ಕಾರ್ಯತತ್ಪರರಾಗಿರುತ್ತಿದ್ದರು. ವುಗಾದಿ, ಮಾನವಮಿ, ದೀಪಾವಳಿಯಂಥ ಹಬ್ಬಹರಿದಿನಗಳಲ್ಲಿ ಕಳ್ಳಕಾಕರನ್ನು, ಕೊಲೆಗಡುಕರನ್ನು ಸಾರುವಜನಿಕವಾಗಿ ವುಚಿತಾಸನಗಳಲ್ಲಿ ಕುಂಡ್ರಿಸಿ ಬಿರುದು ಬಾವಲಿ, ನಗದು ಬಹುಮಾನ ಕೊಟ್ಟು ಸತ್ಕಾರ ಮಾಡುವ ರಾಜರುಗಳು ಮೂರಿಗೊಬ್ಬೊಬ್ಬ ರಂತಿದ್ದರು. ಹಿಂಗಾಗಿ ಸೂಕ್ತ ರಕ್ಷಣೆಯಿಂದ ವಂಚಿತರಾಗಿದ್ದ ಪ್ರಜೆಗಳ ಬದುಕು ಅತ್ತ ದರಿ, ಯಿತ್ತ ಪುಲಿ ಯಂಬಂತಾಗಿತ್ತು. ವಂದು ವುದಾಹರಣೆ ಕೊಡಲಕಂದರೆ ಜರುಮಲಿಯ ರಾಜನು ಅಪರಿಮಿತ ಆಸೆ ಆಮಿಷವಡ್ಡಿ ನಿಚ್ಚಾಪುರ ರಾಜ್ಯದ ಚೋರರರನ್ನು, ಕೊಲೆಗಡುಕರನ್ನು ಬರಮಾಡಿಕೊಂಡು ಅವರಿಗೆ ರಾಜಾಸ್ರಯ ನೀಡುತಲಿದ್ದರೆ, ನಿಚ್ಚಾಪುರದ ರಾಜನೂ ಅದೇ ಕಾರ‍್ಯ ಮಾಡುತಲಿದ್ದನು.. ಯಿಂಥ ತಮ ತಮ್ಮ ರಾಜರುಗಳ ದುರಾಡಳಿತಕ್ಕೆ ರೋಸಿ ಪ್ರಜೆಗಳು ಮನೆಮಟ, ಆಸ್ತಿಪಾಸ್ತಿ ಬಿಟುಕೊಟ್ಟು ಹೆಂಡಿರು ಮಕ್ಕಳನ್ನು ಕಟ್ಟಿಕೊಂಡು ದಾವಣಗೆರೆಗೋ, ಹೊಸಪೇಟೆಗೋ ವಲಸೆ ಹೋಗಿ ಕೂಲಿನಾಲಿ ಮಾಡಿ ಬದುಕತಲಿದ್ದರು (ಅದೂ ತಮ್ಮ ಮೂರುಪಾರು ಹೆಸರುಗಿಸರುಗಳನ್ನು ಮರೆಮಾಚಿಕೊಂಡು).. ಯಿಂಥ ಪ್ರಜೆಗಳು ತಂಡೋಪತಂಡವಾಗಿ ಕೂಡ್ಲಿಗಿ ಪಟ್ಟಣವನ್ನೂ ತುಂಬಿಕೊಳ್ಳದಿರಲಿಲ್ಲ.. ತಮ್ಮ ಸವಲತ್ತುಗಳನ್ನು ಯಿವರೂ ಹಂಚಿಕೊಳ್ಳುವರೆಂಬ ಕಾರಣದಿಂದ ಸ್ಥಳೀಕರಿಗೂ, ಸಂತರಸ್ತರಿಗೂ ನಡುವೆ ವಾದೋಪವಾದ, ಜಗಳ ಗಲಾಟೆ ಹೊಡೆದಾಟ ನಡೆಯದೆ ಯಿರಲಿಲ್ಲ.. ಸಂತರಸ್ತರು ಗುಂಪುಗುಂಪಾಗಿ ಕುಂಪಣಿ ಅಧಿಕಾರಿ ಯಡ್ಡವರ್ಡನನ್ನು ಕಂಡು ತಮ್ಮ ಅತಂತರ ಸ್ಥಿತಿಯನ್ನು ಯಿವರಿಸದೆ

ಯಿರಲಿಲ್ಲ.. ಅವರವರ ಸ್ವಾಸ್ಥಿಗಳಿಗೆ ಅವರವರನ್ನು ಮರಳಿಸುವುದಾಗಲೀ, ಅವರ ಬದುಕಿಗೆ ಕಾಮುಗಾರಿ ವದಗಿಸುವುದಾಗಲೀ ಸುಲಭದ ಕೆಲಸವಲ್ಲ. ಮ್ರುಗಾಲಯದಲ್ಲಿ ಮ್ರುಗಗಳ ಬದಲಿಗಾಗಲೀ.. ಮ್ರುಗಗಳೊಂದಿಗಾಗಲೀ.. ಹುಯಿಲಿಡುತಲಿದ್ದ ಅತಂತರಸ್ಥರನ್ನು ಕಾನೂನಿನ ಮೂಲಕ ಜಬರದಸ್ತಿನಿಂದ ದೂರ ಮಾಡಲಕಂದರೆ ವಬ್ಬರೇ ಯಿಬ್ಬರೇ.. ಅವರ ಪುನರ್ವಸತಿ ತಿಳಿದುಕೊಳ್ಳುವ ಸಲುವಾಗಿ ತನ್ನ ಕಯ್ಯಿ ಕೆಳಗಿನ ಅಧಿಕಾರಿಗಳೊಂದಿಗೆ ವಂದು ಸುತ್ತು ಮಾತುಕತೆ ನಡೆಸಿದ. ಸಂತರಸ್ತರ ಅತಂತರಸ್ಥ ಸ್ಥಿತಿ ಮುಂದುವರಿದದ್ದೇ ಆದಲ್ಲಿ ಕಳುವು, ದರೋಡೆ, ಕೊಲೆ, ಸುಲಿಗೆ ಹೆಚ್ಚಬಹುದೆಂದೂ, ಅವರವರಿಗೆ ಅವರವರ ಅಂತಸ್ತಿನ ಪ್ರಕಾರ ಗುರುತಿನ ಚೀಟಿ ನೀಡಿದರೊಳಿತೆಂಬ ಅಭಿಪ್ರಾಯ ಸಮಾಲೋಚನೆಯಲ್ಲಿ ಮೂಡಿಬಂತು. ಮೂಡಿಬಂದ ಯಿನ್ನೊಂದು ಅಭಿಪ್ರಾಯ ಯಂದರೆ ಹರಪನಹಳ್ಳಿ, ಸಂಡೂರು, ಚೋರನೂರು ಮುಂತಾದ ಕುಂಪಣಿ ಸರಕಾರ ಪಾಲಿತ ಕೇಂದ್ರಗಳ ಸ್ಥಿತಿಗತಿಗಳನ್ನು ಕೂಲಂಕಷ ತಿಳಿದುಕೊಳ್ಳುವುದು.. ಕೂಡಲೆ ಯಡ್ಡವರ್ಡನು ಸಂತರಸ್ಥರಿಗೆ ಗುರುತಿನ ಚೀಟಿ ಕೊಡುವ ಯವಸ್ಥೆ ಮಾಡಿದನಲ್ಲದೆ ಮಲ್ಹಾರಿರಾವ್ ಚವುಗಲೆ ಯಂಬ ದಕ್ಸ ಅಧಿಕಾರಿಯ ನೇತ್ರುತ್ವದಲ್ಲಿ ವಂದು ಸಮಿತಿ ರಚಿಸಿ ಸುತಮುತ್ತಲ ಕೇಂದ್ರಗಳಿಗೆ ಹೋಗಿ ಸಂತರಸ್ಥರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ತಿಂಗಳೊಪ್ಪತ್ತಿನಲ್ಲಿ ವರದಿ ಸಲ್ಲಿಸಬೇಕೆಂದು ಆಗ್ನೆ ಮಾಡಿದನು. ಅಷ್ಟಕ್ಕೆ ತಾನು ಸಮಾಧಾನದ ವುಸುರು ಬಿಡುವ ಸ್ಥಿತಿಯಲ್ಲಿರಲಿಲ್ಲ.. ಸುತಮುತ್ತ ಯಂಥೆಂಥಮೋ ತಗಾದೆಗಳು, ಅಡಚಣೆಗಳು.. ಆಡಳಿತದ ಪಗಡೆಯೊಳಗೆ ಕಪ್ಪೆಗಳನ್ನಿಟ್ಟು ತೂಗೀ ತೂಗೀ ತನ್ನ ಕಯ್ಯಿಗಳು ನಿಲಿಬಿದ್ದುಬಿಟ್ಟಿರುವವು. ವಂದು ಯಿನ್ನೊಂದಕ್ಕೆ ಕೂಡಿ ಬರುತಾಯಿಲ್ಲ. ತಂದೆ ಸ್ಥಾನದಲ್ಲಿದ್ದು ಪ್ರಜೆಗಳನ್ನು ಪಾಲಿಸಬೇಕಾದ ರಾಜರೇ ಕಳ್ಳಕಾಕರ ಮಾ ಪೋಷಕರಾಗಿರುವರೆಂಬ ವರ್ತಮಾನವು, ವಾಮ ಮಾರಗದಿಂದ ಸಂಪಾದಿಸಿರುವ ಹಣದಿಂದ ಸರಕಾರದ ಸಾಲಸೋಲಕ್ಕೆ ಜಮಾ ಮಾಡಿ ರುಣಮುಕ್ತರಾಗುತ್ತಿರುವ ವರ್ತಮಾನವು, ತಮ್ಮ ಸರಕಾರವೇ ಯಿಂಥದೊಂದು ಯಿಷಮ ಪರಿಸ್ಥಿತಿ ನಿರುಮಾಣವಾಗುವುದಕ್ಕೆ ಕಾರಣವಾಗಿರುವುದು, ಯೀ ತಪ್ಪನ್ನು ಸರಿಪಡಿಸುವ ದಿಸೆಯಲ್ಲಿ ಕಳ್ಳಕಾಕರನ್ನು ಸೆರೆಹಿಡಿಯುವುದೋ, ರಾಜರನ್ನು ನಿಗ್ರಹಿಸುವುದೋ, ರಾಜನೊಳಗೆ ಕಳ್ಳನನ್ನು ಪತ್ತೆಮಾಡುವುದಾಗಲೀ, ಕಳ್ಳನೊಳಗೆ ರಾಜನನ್ನು ಪತ್ತೆಮಾಡುವುದಾಗಲೀ ಸುಲಭದ ಕೆಲಸವಲ್ಲ.. ತನ್ನ ಹೆಂಡತಿಯೂ, ಕುಸಾಗ್ರಮತಿಯೂ ಆದ ಜೆನ್ನಿಫರಳ ಸಲಹೆ ಪಡೆಯಬೇಕೆಂದರೆ ಆಕೆ ಸಡನ್ನ

ಮುಖದೊಳಗ ರಕುತ ತಂದುಕೊಳ್ಳುತ್ತಾಳೆ, ಮುಖವನ್ನು ಸಿಂಡರಿಸಿಕೊಳ್ಳುತ್ತಾಳೆ. ಯಿಂಥವನ್ನೆಲ್ಲಾ ಹೇಳಿ ತನ್ನ ಮೂಡು ಕೆಡಿಸಬ್ಯಾಡಿರೆಂಬ ಮಾತುಗಳನ್ನು ಮುಲಾಜಿಲ್ಲದೆ ಸಿಂಪಡಿಸುತ್ತಾಳೆ. ತೇಲಲಿಕ್ಕೂ ಬಿಡದ, ಮುಳುಗಲಿಕ್ಕೂ ಬಿಡದ ಯಿಂಥ ಹೆಂಡತಿಯನ್ನು ತಾನು ಅಕ್ಲಂಡಿನ ಕ್ರೂಸೋನ ಮನೆಯಲ್ಲಿಯೇ ಬಿಟ್ಟು ಬರಬೇಕಿತ್ತು. ಮದುವೆಯಾಗಿದ್ದ ರೇನಾಯಿತು.. ಯಂದು ಆ ಯತ್ತರ ನಿಲುವಿನ ಸ್ತ್ರೀಮಂತನಿಗೆ ಭರವಸೆ ನೀಡಿದರೂ ಸಾಕಾಗಿತ್ತು. ಕಂಪನಿ ಸರಕಾರದ ಸೇವೆಯಲ್ಲಿರುವವರು ಅವಿವಾಹಿತರಿರಬೇಕು ಅಥವಾ ಯಿದುರರೋ, ಪರಿತ್ಯಕ್ತರೋ, ಯಿಚ್ಛೇದಿತರೋ ಆಗಿದ್ದರೆ ವಳ್ಳೆಯದು ಯಂದು ಡ್ಯೂಕ್ ಸಾಹೇಬ ಗ್ರಿಗೋರಿ ವುಪನ್ಯಾಸಮೊಂದರಲ್ಲಿ ಹೇಳಿದ್ದರಲ್ಲಿ ಸತ್ಯಾಂಶ ಯಿಲ್ಲದಿಲ್ಲ. ಹೊರಡುವ ಮುಂದುಗಡೆ ಯಿಂಡಿಯಾ, ಯಿಂಡಿಯಾ ಯಂದು ಕುಣಿದಾಡಿದ್ದಳು, ನಿಕೋಲಾಯ್ ಮನೋಚಿಯ ಪ್ರವಾಸ ಕಥನವನ್ನು ಜಾರ್ಜಿನ ತುಂಬೆಲ್ಲ ಮೋದಿದ್ದಳು.. ಕಾಲಿಕತ್ತ ತಲುಪಿದೊಡನೆ ಆಕೆ ಜಾರ್ಜಿನಿಂದ ಹೊರ ಜಿಗಿದದ್ದೇನು? ಹ್ಹಾ.. ಹ್ಹಾ ನನ್ನ ಯಿಂಡಿಯಾ ಯಂದುದ್ಗಾರ ತೆಗೆದು ನೆಲಕ್ಕೆ ಮುತ್ತಿಕ್ಕಿದ್ದೇನು? ತೀರದ ಮರಳನ್ನು ತನ್ನ ಮಯ್ಗೆ ಯರಚಿಕೊಂಡಿದ್ದೇನು? ಕಪುE ಜನರ ನಡುವೆ ತಾನು ಮಿರಿಮಿರಿ ಮಿಂಚಿದ್ದೇನು? ಹುಚ್ಚು ಹುಡುಗಿ ತನ್ನ ಜೆನ್ನಿಫರು. ಯೋಚನೆಗಳಿಂದ ಅದೇ ತಾನೆ ತಹಬಂದಿಗೆ ಬಂದ ಯಡ್ಡವರ್ಡು ತನ್ನ ಖಾಸಾ ಬಂಗಲೆ ಪ್ರವೇಶ ಮಾಡಿದೊಡನೆ ಮರ್ಲಿನಾಳನ್ನು ಬಾಚಿ ತಬ್ಬಿಕೊಂಡು ತುಪ್ಪಳದ ಮಯ್ಯ ನೇವರಿಸಿದಳು..

ಅತ್ತ ಕುದುರೆಡವು ಪಟ್ಟಣದೊಳಗ ಮಯ್ಯ ನೇವರಿಸುವಾಕಿ, ಕಣಸೊಳಗ ಮೂಡುವಾಕಿ, ಮನದೊಳಗ ಮುಣುಗುವಾಕಿ, ಭ್ರೂಮದ್ಯೆ ಕುಂಕುಮದ ಬೊಟ್ಟಾಗಿ ಕಾಣಿಸಿಕೊಳ್ಳುವಾಕಿ ಯಿಲ್ಲಿದಾಳ, ಅಲ್ಲಿದಾಳ, ಯಲ್ಲೆಲ್ಲಿದಾಳೆ.. ಪಟ್ಟಣದಿಂದ ನಗೆಯನ್ನು ಅಪಹರಣ ಮಾಡಿದಾಕಿ ಯಲ್ಲಿದಾಳೆ, ಅಲ್ಲಿ ಕಾಣೆ, ಯಿಲ್ಲಿ ಕಾಣೆ, ಯಲ್ಲೆಲ್ಲಿ ಕಾಣೆ... ನಮ್ಮವ್ವನ್ನ ಯಲ್ಲಿ ಕಾಣೆ.. ಹುಡುಕೀ ಹುಡುಕೀ ಮಂದಿನ ಮಂದಿ ಮುಂಗಾಲ ಕಸುವು ಕಳಕಂಡು, ಹಿಂದಿನ ಹಿಂಗಾಲ ಕಸುವು ಕಳಕೊಂಡು, ಕಣ್ಣೊಳಗಿನ ದೀವಿಗೆ ಕಳಕೊಂಡು, ಮನದೊಳಗ ಮಾತು ಕಳಕೊಂಡು, ನೊಣ, ನೊರಜು, ದೊಮ್ಮಾರಿಗಳನ್ನು ಹೊಡಕೊಳ್ಳುವ ತಾಕತ್ತಿಲ್ಲದೆ ತಮ ತಮ್ಮ ಮನೆವಳಗೆ, ಹೊರಗೆ, ಪಳುಗಟ್ಟೆ ಕಿರುಗಟ್ಟೆ ಕೋಟೆ ಕೊತ್ತಳ ಬುರುಜು, ಮಾಳಿಗೆ ಕುಂಭಗಳ ಮ್ಯಾಲ ಸಿಲಾ ಯಿಗ್ರಹಗಳಂತೆ ಗಪ್ಪಂತ ಕೂಕಂಡಯ್ತೆ.. ತಾಯಿ ದರುಸನಕ್ಕಾಗಿ ಕಣ್ಣು ಹರ ಬಿಟ್ಟಯಿತೆ, ತಾಯಿಯ

ಕಾಲಂದಿಗೆ ಸಪ್ಪಳಕಾಗಿ ಕಿವಿಯ ಹರ ಬಿಟ್ಟಯಿತೆ, ತಾಯಿಯಿಂಥಲ್ಲಿ ಅದಾಳೆಂದರೆ ಅಂಥಲ್ಲಿ ದುಡುದುಡನೆ ಮೋಡಲಿಕ್ಕಾಗಿ ಕಾಲುಗಳನು ಸಜ್ಜು ಮಾಡಿಕೊಂಡಯಿತೆ, ತಾಯಿ ರೂಪ ಗೋಚರವಾದೊಡನೆ ಮುಗಿಯಲಿಕ್ಕಾಗಿ ತಮ ತಮ್ಮ ಕಯ್ಯಿಗಳನು ಸಜ್ಜು ಮಾಡಿಟ್ಟುಕೊಂಡಯಿತೆ, ಬೆವರಿನಲ್ಲಿ ಮಜ್ಜಣಗಯ್ದು ಮಡಿವುಡಿ ಆಗಯ್ತೆ.. ತಾಯಿಗೆ ಬೆಳಗಲಿಕ್ಕೆಂದು ತಮ ತಮ್ಮ ಕಣ್ಣಗಳೊಳಗೆ ಮಂಗಳಾರತಿ ಸಜ್ಜು ಮಾಡಿಟ್ಟುಕೊಂಡಯ್ತೆ. ತಾಯಿಯ ವಲುಮೆ ಪಡೆಯಲಿಕ್ಕೆಂದು, ಆಕೆಯ ಕೋಪ ತಮಣಿ ಮಾಡಲಕೆಂದು ತಮ ತಮ್ಮ ಯದೆಗಳೊಳಗೆ ಹಾಡುಗಳನು ತರುಬಿಟ್ಟುಕೊಂಡಯಿತೆ ಮಂದಿ..

ಕುದುರೆಡಮೊಳಗೆ ಮಾಯವಾಗಿರುವ ಸುದ್ದಿ, ಹುಬ್ಬುಗಳು ನೆತ್ತಿಮ್ಯಾಲ ಅಂತರ್ಧಾನವಾಗಿರುವ ಸುದ್ದಿ, ಹಾಲು ನೀರಾಗುತ್ತಿರುವ ಸುದ್ದಿ, ಆ ಸುದ್ದಿ, ಯೀ ಸುದ್ದಿ ಮುಂತಾದ ಛಪ್ಪನ್ನಾರು ಸುದ್ದಿಗಳು ಗಾಳಿಗುಂಟ ಸವಾರಿ ಹೊಂಟ ಪರಿಣಾಮವಾಗಿ, ಪಕ್ಷಿಗಳ ಗಂಟಲೊಳಗ ಅಡಗಿ ಪಯಣ ಹೊಂಟ ಪರಿಣಾಮವಾಗಿ, ಕಣಸೊಳಗ ಮೂಡಿ ಕಯಿಫಿಯತ್‌ಗಳನ್ನೋದಿದ ಪರಿಣಾಮವಾಗಿ ಸುತ್ತನ್ನಾ ಕಡೇಲಕಿದ್ದ ಗುಂಡುಮುಳುಗು, ಕಾನಾಮಡುಗು, ಕುಮತಿ, ಕಮತಿಯೇ ಮೊದಲಾದ ದೇಸ ಯಿದೇಸಗಳಿಂದ ಮಂದಿ ಯಂಭೋ ಮಂದಿಯು ತಮ ತಮ್ಮ ಯದೆಗೂಡು ಗಳಲ್ಲಿ ಕವುತುಕದ ಮೊಟ್ಟೆಗಳನ್ನು ಯಿಟುಕೊಂಡು ಸದರಿ ಪಟ್ಟಣದತ್ತ ಸಾಲಿಟ್ಟಿತು ಸಿವನೇ. ಬರೋರನ್ನು ಯಾಕ ಬಂದಿರಿ ಯಂದು ಕೇಳುವವರಿರಲಿಲ್ಲ.. ಹೆಸರು ಖೂನ ಕೇಳಿ ಬರಕೊಳ್ಳುವ ವರಿರಲಿಲ್ಲ.. ಯಾರ್‍ಯಾರ ಬಂದುಕೊಳ್ಳಲಿ, ಯದಕಾರ ಬಂದುಕೊಳ್ಳಲಿ ಯಂದು ನಾಕಾಬಂದಿ ಸಯ್ನಿಕರು ಪಟ್ಟಣದ ಸಮಸ್ತ ದಿಡ್ಡಿ ಬಾಕುಲುಗಳನು ಹಾರೊಡೆದಿದ್ದರು ಸಿವನೇ.. ಬರೋರ ಕಡೇಕ ಬೆನ್ನುಮಾಡಿಬಿಟ್ಟಿದ್ದರು ಸಿವನೇ.. ಹಿಂಗಾಗಿ ಸದರಿ ಪಟ್ಟಣಕ್ಕ ಪರಸ್ಥಳದ ಮಂದಿ ಬರುತ್ತಿದ್ದುದೇನು? ತಾಯಿಯ ಪಾದ ಗುರುತುಗಳ ದರುಸನ ಪಡೆಯುತ್ತಿದ್ದುದೇನು? ಕಿವಿ ಕಣ್ಣುಮುಚ್ಚಿ ತಮತಮ್ಮೆದೆಯೊಳಗೆ ತಾಯಿಯ ಅಗಾಧ ರೂಪವ ತಲುಪಿಸಿಕೊಳ್ಳುತ್ತಿದ್ದುದೇನು? ಸಿವಸಂಕರ ಮಾದೇವಾss... ತಾಯಿಗೆ ತನ್ನ ಸರೀರವನ್ನು ಭೋಗ್ಯ ನೀಡಿದ ಭಾಗ್ಯಶಾಲಿ ಮೂಳೆ ಮೋಬಯ್ಯನ ಮನಿಯಿದ್ದ ಥೆಳಗೇರಿಯ ಗುಡಿ ಹಿಂದಲಕ ಹೋಗುತ್ತಿದ್ದುದೇನು? ಆತನು ಕುಂದುರುತ್ತಿದ್ದಂಥ, ನಿಂದಿರುತ್ತಿದ್ದಂಥ ಮಲಿಕ್ಕಂಬುತ್ತಿದ್ದಂಥ, ಜಳಕ ಮಾಡುತ್ತಿದ್ದಂಥ ಜಗೇವುಗಳನು ನೋಡುತ್ತಿದ್ದುದೇನು ಸಿವ ಸಿವಾ.. ಸಣುಮಾಡುತ್ತಿದ್ದುದೇನು ಸಿವ ಸಿವಾ.. ಅಗೋ ಅಲ್ಲಿ ಮರದವ್ವ,

ತಾಯಿಯ ಅವಕ್ರುಪೆ ತಾಕಿ ಬಡಕಲಾಗುತ್ತಿರುವ ಬೇಯಿನ ಮರದವ್ವನ ಸನೀಕ ಹೋಗುತ್ತಿದ್ದುದೇನು? ಆಕೆಯ ಬೊಡ್ಡೆಮುಟ್ಟಿ ಸಣುಮಾಡುತ್ತಿದ್ದುದೇನು? ಅಲ್ಲಿಯೇ ಹರಕು ಬರಕು ನೆಳ್ಳ ತಡಿಮ್ಯಾಲ ನೆಲವನ್ನು ಮುಗುಲೆಂದು, ಮುಗುಲನ್ನು ನೆಲ ಯಂದು ಭಾವಿಸಿ ಕೂಕಂಡಿರುತ್ತಿದ್ದ ಸಂತರಸ್ತೆ ಜಗಲೂರೆವ್ವನ ಸುತಮುತ್ತ ಗುಂಪು ಸೇರುತ್ತಿದ್ದುದೇನು ಸಿವಸಿವಾ.. ಗುಸುಗುಸು ಮಾತಾಡುತ್ತಿದ್ದುದೇನು ಸಿವನೇ..

ಥೆಳಗೇರಿಗಳ ತಂಟೆಗೆ ಹೋಗಿಲ್ಲದ ತಾಯಿ, ಹೊಲಗೇರಿ ತಂಟೆಗೆ ಹೋಗಿಲ್ಲದ ತಾಯಿ, ದುಡಿದುಂಬೋರ ತಂಟೆಗೆ ಹೋಗಿಲ್ಲದ ತಾಯಿಯು ತಂಟೆಗೆ ಹೋಗಿರುವುದು ತನ್ನನ್ನಂದಾಡಿದ ವ್ಯಾಗಳಗೇರಿಗಳಿಗೇಯಾ, ತಡವಿರೋದು ತನ್ನನ್ನು ಕುವ್ವಾಡ ಮಾಡಿದೋರನ್ನೇಯಾ.. ಆಕೆಯ ಸಾಪ ತಗುಲಿಕೊಂಡಿರೋದು ತಿಂದ ಕೂಳು ಅರಗಿಸಿಕೊಳ್ಳುಲಕ ಕುವ್ವಾಡ ಮಾಡಿ ದೋರನ್ನೇಯಾ.. ಅವರವರು ಯಲ್ಲಲ್ಲಿರುವರೆಂದರೆ ಅಲ್ಲಲ್ಲೆ ಯಿರುವರು. ಅಗೋ ಅಲ್ಲಿರುವವರ ಕಡೇಕ, ಯಿಗೋ ಯಿಲ್ಲಿರುವವರ ಕಡೇಕ ಮಂದಿಯು ಕವುತುಕದ ಕಂಬಳಿ ಹೊದ್ದುಕೊಂಡು ದಟ್ಟಂಡಿ ದಾರಂಡಿ ಯಿಟ್ಟಿರುವುದು, ಸಿವಸಂಕರ ಮಾದೇವಾ ss..

ಪರಸ್ಥಳದ ಮಂದಿ, ಪರದೇಸದ ಮಂದಿ ವುಸುರು ಬಿಗಿ ಹಿಡಿದು ನೋಡುತಲಿದ್ದ ದ್ರುಸ್ಯಗಳು ವಂದಾ ಯರಡಾ... ತಾಯಿಯ ತಂಟೆಗೆ ಹೋಗಿ ಕೇರು ಬಡಿಸಿಕೊಂಡಿರೋರು ಅಗೋ ಅಲ್ಲಿ, ಯಿಗೋ ಯಿಲ್ಲಿ..

ಯೀಪ್ರಾಕಾರವಾಗಿ ವಬ್ಬೊಬ್ಬರನ್ನು ನೋಡುತಾ ನೋಡುತಾ ಅಳಬೇಕೋ ನಗಬೇಕೋ ವಂದು ತಿಳಿವಲ್ಲದಂಗಾತಿತ್ತು, ಅಳುಅಳುತಲೇ ನಗಾಡುವಂತಾತಿತ್ತು.. ನಗುನಗುತ್ತಲೇ ಅಳುವಂಗಾತಿತ್ತು, ಲವುಕಿಕದಿಂದ ಅಲವುಕಿಕಕ್ಕ ಯೇರಿದಂಗಾತಿತ್ತು. ಅಲವುಕಿಕದಿಂದ ವಮ್ಮೆಗೆ ಲವುಕಿಕಕ್ಕೆ ಸರ್ರಂತ ಯಿಳಿಧಂಗಾತಿತ್ತು. ಯಂಥವರ ಕಲ್ಲೆದೆಯೂ ಕರಗಿ ವುದಕವಾಗಿ ಹರಿದು ಸರೀರದ ವಳಾಗೆಲ್ಲ ವಜ್ಜಲೊಜ್ಜುಲಾದಂಗಾತಿತ್ತು. ತಲಾ ವಬ್ಬೊಬ್ಬರಿಗೂ ವಂದೇರಿಕೆಯಾಗಲೀ, ವಂದಿಳಿಕೆಯಾಗಲೀ ಯಿರದಿದ್ದ ಅರಮನೆಯ ಯಲ್ಲಾ ದ್ರುಸ್ಯಾವಳಿ ನೋಡುತ ಕಯ್ನ ಕಟ್ಟಿ ಕುಂತಗಂಡಿರಲಿಲ್ಲ.. ತನ್ನ ಆಳುಕಾಳುಗಳನ್ನು ಹಿಂದ ಮುಂದ ಯಿಟುಕೊಂಡು ಖುದ್ದ ರಾಜಮಾತೆ ಭಯ್ರಮಾಂಬೆಯು ಹರೇದ ಹುಡುಗಿಯಂತೆ ವಂದು ಹಾದಿಯನ್ನದೆ, ವಂದು ಬೀದಿಯನ್ನದೆ ಅಡ್ಡಾಡುತಲಿದ್ದುದು ಸಾಮಾನ್ಯ ದ್ರುಸ್ಯವಾಗಿತ್ತು. ಅಯ್ಯೋ ಮೋಡಿಕಾರ ಮೋಬಯ್ಯನೇ, ಅಯ್ಯೋ ಮಾಯಕಾರ

ಮೋಬಯ್ಯನೇ, ಪಟ್ಟಣದಿಂದ ನಗೆ, ಸುಖ ಸಂತೋಷವನ್ನಪಹರಣ ಮಾಡಿಬುಟ್ಟು ಮಂಗಮಾಯವಾಗಿಬಿಟ್ಟಿರುವಿಯಲ್ಲಾ, ವುಂಡ ಮನೆಗೆ ಯರಡು ಬಗೆದಿರುವ ನೀನೆಲ್ಲೋ, ಬೆಳೆದ ಪಟ್ಟಣವನ್ನು ಕಣ್ಣೀರೊಳಗ ಕಯ್ಯಬುಟ್ಟು ನೀನೋದಿಯಲ್ಲೋ, ನಗಿ ಯಲ್ಲಯ್ತೆ ತಾ.. ಸುಖ ಸಂತೋಷ ಯಲ್ಲಯ್ತೆ ತತ್ತಾರೋ.. ನರಮನುಶ್ಯೋರೆಂದ ಮ್ಯಾಲ ಕುವ್ವಾಡ ಮಾಡದಂಗಿರುತಾರಾ.. ವಂದು ಚಾಸ್ಟಿ ಮಾಡದಂಗಿರುತಾರಾ.. ಅದಕ ಯಿಷ್ಟು ಘನ ಘೋರ ಶಿಕ್ಷೆ ಕೊಡಲಕ ನಿನಗ್ಯಾರು ಅಧಿಕಾರ ಕೊಟ್ಟರಲೋ.. ನಿನ್ನ ನೀನು ರಾಜನಂದುಕೊಂಡ್ಯಾ.. ಗುಡಿ ಹಿಂದಲ ಮನೇನ ಅರಮನೆ ಅಂದುಕೊಂಡ್ಯಾ... ಯಂದು ಮುಂತಾಗಿ ತನಪಾಡಿಗೆ ತಾನು ವಟವಟಗುಟ್ಟೂತ, ಕಯ್ಯಲ್ಲಿದ್ದ ರಾಜದಂಡವನ್ನು ಹೆಜ್ಜೆಹೆಜ್ಜೆಗೆ ಕುಟ್ಟೂತ.. ಸಾರಾಸಗಟ ಅರಮನೇನೇ ತನ್ನಂಥ ರುದ್ದೆಯಾತೀ ರುದ್ದರೂಪದಲ್ಲಿ ಬೀದಿ ತುಂಬೆಲ್ಲ ನಡೆದಾಡಲಕ ಹತ್ತಯಿತೆ ಯಂಬುದನು ಸಾಬೀತು ಪಡಿಸೂತ, ಕಣ್ಣೀರು ವರೆಸುವ ನೆಪದಲ್ಲಿ ಕಯ್ಯಿಗಳನು ಚಾಚೂತ, ಚಾಚಿ ತನ್ನ ಮುಂಗಯ್ಯಿಗಿದ್ದ ಕಡಗಗಳು ನಕಲಿಯವಲ್ಲ ಯಂದು ಜಗಜ್ಜಾಹೀರು ಮಾಡುತ ನಸುಗುನ್ನಿಕಾಯಿ ವಡೆದು ಸಾವುರು ರೂಪ ಧಾರಣ ಮಾಡಿರುವಂತೆ ಹಾದಿ ಬೀದಿ ತುಂಬೆಲ್ಲ ಹರಿದಾಡಲಕ್ಕ ತೊಡಗಿದ್ದಳು. ತಾನು ಯೇಸು ವಾಡುತಲಿದ್ದರೂ ತನ್ನ ಹೆಸರು ನೊಂದವರ ಬಾಯೊಳಗ ಸಬುಧಧಾರಣ ಮಾಡುತಾ ಯಿಲ್ಲಲ್ಲಾ.. ಪ್ರತಿಯೊಬ್ಬರ ಬಾಯೊಳಗ ಸಾಂಬವಿ ಯಂಬ ಮೂರಕ್ಕರದ ಕಮಲ ಅರಳುತಲಿರುವುದಲ್ಲಾ.. ಅಯ್ಯೋ ತನ್ನ ನತದ್ರುಸ್ಟವೇ.. ಅಯ್ಯೋ ತನ್ನ ಕರುಮವೇ..

ರಾಜಸತ್ತೆಯ ಡುಬ್ಬದ ಮ್ಯಾಲ ಬರೆ ಹಾಕಿದಂತೆ ಸಂತರಸ್ತ ತಾಯಂದಿರು ರಾಜಮಾತೆ ಯಂಬ ಪೂರುವ ಕಾಲದ ಮುದೇಕಿ ಅಗಾ ಅಲ್ಲಿ ಬರುತಾಳಂದರ ಯಿಗಾ ಯಿಲ್ಲಿ ವಂದು ಜಾವು ತುಂಬ ಕಣ್ಣೊಳಗಿಂದ ನೀರನ್ನು ಬಸಿದಿಟ್ಟುಕೊಂಬುಲಿದ್ದರು, ಹತ್ತಿರ ಬಂದೊಡನೆ ಆಕೆ ಯದುರು ಜಿಗಿದು “ನಡದೂ ನಡದೂ ನೀರಡಕೆ ಆಗಯ್ತೇನವ್ವಾ.. ಯಿಕಾ ಕುಡುದು ದಾಹ ಪರ್ಯ್ಯಾರ ಮಾಡಿಕೊಳ್ಳವ್ವಾ” ಯಂದು ಬ್ರುತಿಮಾಲ್ಯಾಡುತಲಿದ್ದರು.. ಹ್ವಾ..ಹ್ವಾ..ತನ್ನ ಪ್ರಜೆಗಳಿಗೆ ತನ್ನ ಮ್ಯಾಲ ಯೇಟೊಂದು ಗವುರವ, ಕನುಕರ ಅಯಿತೆಂದು ಭಾವಿಸಿ ಮುದೇಕಿ ಗಟಗಟಾಂತ ಕುಡುದು.. ವುಪ್ಪುಪ್ಪಯಿತೆ, ವಗರೊಗರಯಿತೆ ಯಂದು ತನ್ನ ಮುಖವನ್ನೊಂದು ನಮೂನಿ ಮಾಡಿಕೊಳ್ಳುತ ಮುಂದ ಮುಂದಕ ಹೆಜ್ಜೆ ಹಾಕುತಲಿದ್ದಿತು.. ಮತ ಮತ ಮುಂದಕ ಹೋದರೆ ತಾಯಂದಿರು ಸಕುಟುಂಬ

ಪರಿವಾರ ಆಕೆಯದುರು ಜಿಗಿದು ನಿಂತು ನೀನ್ನೇದೇನಾರ ಕುಡಿಸಿ ಯಿದಕ ಜೀವ ತುಂಬವ್ವಾ.."ಯಂದು ತಮ ತಮ್ಮ ಕೂಸು ಕುನ್ನಿಗಳನು ಆಕೇಯಾ ಸಮುಚ್ಛಮ ಚಾಚುತಲಿದ್ದರು. ಮತ ಮತ್ತ ಮುಂದಕ ಹೋದರ ಆಕೆಯ ಸಮುಚ್ಛಮ ತಾಯಂದಿರು ನುತಾ ನುಗ್ಗಿ ಪರಪರನಂತ ತಮ ತಮ್ಮ ಪೋಲಕಗಳನ್ನು ಹರದು ತಮ ದುರದಯವಿ ಮೊಲೆಗಳನ್ನು ಹಿಡಿದು ಚಾಚುತ "ಯಿವುಗಳ್ನ ನೀನಾರ ಕುಡುದು ನಿನ್ನೊಡಲು ತುಂಬಿಸಿ ಕೊಳ್ಳವ್ವಾ" ಯಂದು ಕಾಡತೊಡಗಿದರು.. ಮತ ಮತ್ತ ಮುಂದಕ ಹೋದರಲ್ಲಿ ತಾಯಂದಿರು ತಮ ತಮ್ಮ ಕಜ್ಜಿ ಪುಳ್ಳೆ ಕಂದಮ್ಮಗಳನ್ನು ಅಡ್ಡಡ್ಡ ಮಲಗಿಸೂತ.. "ನಿನ ಸೂಚುಮ ಪಾದಗಳ ನ್ನಿವುಗಳ ಮ್ಯಾಲಿಟ್ಟು ಗತಿ ಕಾಣಿಸೆವ್ವಾ, ಪುಣ್ಯ ಬರತಯಿತೇ" ಯಂದು ಗೋಗರೆಯುತೊಡಗಿದರು. ಮತಮತ ಮುಂದಕ್ಕೆ ಹೋಗುತಲಿದ್ದ ರಾಜಮಾತೆಯದುರು ಹೆಂಡಂದಿರು ತಮ ತಮ್ಮ ಗಂಡಂದಿರನು ತರುಬಿ "ನಿನ್ನ ಮುಖದ ನಗೆಯನ್ನಿವಕೆ ಧಾರೆಯರೆಯವ್ವಾ.. ನಿನ್ನ ಕಣ್ಣು ಹುಬ್ಬುಗಳನ್ನಿವಕ್ಕೆ ಮುಡಿಸೆವ್ವಾ.." ಯಂದು ಬಲು ಜಲುಮೀಲೆ ಕೇಳತೊಡಗಿದರು..

ರಾಜಮಾತೆಯ ಸರೀರವು ಮೊದಲೇ ರುದ್ಯಾಪ್ಯದಿಂದ ಮುದುಡಿ ಮುಪ್ಪಡರಿಸಿಕೊಂಡಿತ್ತು.. ಹೆಜ್ಜೆ ಹೆಜ್ಜೆಗೆ ಮುದುಡುತ್ತ, ಮುದುಡುತ್ತ ಗುಬ್ಬಚ್ಚಿ ಆತು.. ಗೋಲಿ ಗಜ್ಜುಗವಾತು.. ಆಕೆಯ ಸರೀರದಿಂದ ರಾಜಸತ್ತೆಯ ಗತ್ತು ಗಯ್ರತ್ತು ವುತಾರ ಆಗೀ ಆಗೀ.. ಸಾಂಬವೀ ಯಂಬ ಪದವು ಪಂಕಜದೋಪಾದಿ ಯಲ್ಲಿ ಆಕೆಯ ಬೊಚ್ಚು ಬಾಯೊಳಗಿಂದ ವಡಮೂಡಿತು.. ಅರಳಿ ಹೊರ ಚಾಚಿತು.. ಸಾಂಬವೀss ತಾಯೇ.. ನೀನು ನನ್ನ ಸರೀರವನ್ಯಾಕೆ ಬಗುಸಲಿಲ್ಲ.. ನನ್ನ ವುಗುಳು ಹಿಡಿಯೋನ ಮಯ್ಯೊಳಗ ತೂರಿಕೊಂಡು ನೀನು ನಿನ್ನ ದಯವತ್ತುವಕ್ಕೆ ದಕ್ಕೇನ ತಂದು ಬಿಟ್ಟೆಯಲ್ಲಾ.. ಪುವ್ವುಲ ರಾಜ ವಮುಸಸ್ಥರು ನಿನಗೇನು ಕಡಿಮೆ ಮಾಡಿದ್ದರೇ.. ನಿನ್ನ ನಾಮಾವಳೇಲಿ ಮೂರಿಗೊಂದೊಂದು ಗುಡಿಕಟ್ಟಿಸಿರುಲಿಲ್ಲವಾ.. ವಂದೊಂದು ಬೇಯಿನಮರದ ಪೊಟರೇಲಿ ಕೇಲುಗಳನ್ನಿಟ್ಟಿರಲಿಲ್ಲವಾ.. ಪ್ರತಿ ನವರಾತಿರೇಲಿ ದೇವಿಪುರಾಣ ಮೋದಿಸುತ್ತಿರಲಿಲ್ಲವಾ.. ಯೀಗೀಗ ಕುಂಪಣಿ ಸರಕಾರದಿಂದಾಗಿ ಕಯ್ಯಿ ಬಾಯಿ ಆಡದಂಗಾಗಯ್ತೆ, ಸರೆ ಸರೇ... ತುಪ್ಪದ್ದೀಪದ ಬದಲು ಹಳ್ಳೆಣ್ಣೆ ದೀಪ ಹಚ್ಚಲಕತ್ತೀವಿ, ಸರೆ ಸರೇ.. ಪುರಾಣದ ಬದಲಿಗೆ ಭಜನೆ ಮಾಡಿಸಲಕತ್ತೀವಿ, ಸರೇ ಸರೇ... ಅನ್ನ ಸಂತರುಪಣೇಯಾ.. ಅಯ್ಯೋ ಅರಮನೆಯೋರಾದ ನಾವೇ ಮೂರೊಪ್ಪತ್ತು ವುಂಬಲಕ ಹತ್ತೀವಿ ತಾಯೇ.. ಯೀ ಪ್ರಕಾರವಾಗಿ

ಮನದಲ್ಲೇ ಅಂದುಕೊಳುತ.. ಆಡಿಕೊಳುತ ರಾಜಮಾತೆ ತನ್ನ ಕಾಲಿಗೆ ಗೆದ್ದಲು ಹಿಡಿಯೋ ಮಟ ನಿಂತಲ್ಲೇ ನಿಂತಿದ್ದಳು. ತನ್ನ ಪ್ರಜೆಗಳನ್ನುದ್ದೇಶಿಸಿ ನಾಕು ಮಾತಾಡಲಕಂತ.. ಬುದ್ಧಿವಾದ ಹೇಳಲಕಂತ.. ಜರುಗುತಿರೋ ಅನಾವುತಕ್ಕೂ, ಅರಮನೆಗೂ ಯಾದೇ ಸಂಬಂಧ ಯಿಲ್ಲಂತ ಹೇಳಲಕಂತ.. ನೀವೇನು ಜಬರುದಸ್ತು ಮಾಡೋದಿದ್ದರ ಮೋಬಯ್ಯಗೆ ಮಾಡಿಕೊಳ್ಳಿರಿ.. ಅವನ ಸರೀರದ ಗೂಡೊಳಗೆ ಸೇರಿಕೊಂಡಿರುವ ಳೆನ್ನಲಾದ ಸಾಂಬವೀನ ಕೇಳಿಕೊಳ್ಳಿರಿ ಎಂದು ಖಡಾಖಡಿ ಹೇಳಲಕಂತ.. ಯೀ ಮುಪ್ಪಾನು ಮುದೇಕಿಯಾದ ತನ್ನನೇನು ಮಾಡ್ಯಾಳು ಸಾಂಬವೀ ಯಂದು ಖುಲ್ಲಮ ಖುಲ್ಲ ಸಾದರಪಡಿಸಲಕಂತ.. ಅಯ್ಯೋ ತಾನು ಸತ್ತಮ್ಯಾಲ ತನ್ನ ಕಳೇಬರವನ್ನು ತಾನು ವುಯಿಲಿನಲ್ಲಿ ಬರೆಯಿಸಬೇಕೆಂದಿರುವ ಜೆಗೇಮೊಳಗೆ ಸಮಾಧಿ ಮಾಡುವರೋ ಯಿಲ್ಲಮೋ? ಯಂಬ ಸಂದೇಹ ತಾನೇ ತಾನಾಗಿ ಮೂಡದೆಯಿರಲಿಲ್ಲ.. ಸಮಾಧಿಯ ವಾಸ್ತು ಮೂಡಿಸಿಕೊಳುತ.. ವಾಸ್ತುವಿನ ಶಿಲುಪವ ಕಲುಪಿಸಿಕೊಳುತ.. ಸಿಲುಪ ಕೆತ್ತುವ ಸಿಲುಪಿಯ ಕಲುಪಿಸಿಕೊಳುತ, ಸಿಲುಪಿಯ ಸಂಭಾವನೆ ಕಲುಪಿಸಿಕೊಳುತ.. ವಗಯ್ರೆವಗಯ್ರೆಕಲುಪಿಸಿಕೊಳುತಾ.. ಕಲುಪಿಸಿಕೊಳುತಾ ರಾಜಮಾತೆಯು ವರ್ತಮಾನದ ಕಡೇಕ ಬೆನ್ನು ಮಾಡಿದರೂ ಪ್ರಜೆಗಳು ಮಾತ್ರಪ್ರಜೆಗಳ ಬದುಕಿನಲ್ಲಿ ಕಯ್ನ ಹಾಕಿದ್ದರು.

ಅರಮನೆಯೇ ಅರಮನೆಯೊಳಗೆ ಸಜೀವ ಸಮಾಧಿಯಾಗಿರುವಾಗ, ನಿಗೂಢ ಆಕ್ರಂದನಗಳಿಂದದೂ ತುಂಬಿಕೊಂಡಿರುವಾಗ, ತನ್ನನ್ನು ಸಂತಯಿಸುವವರಿಗಾಗಿ ಕಂಗಾಲಾಗಿರುವಾಗ, ತನ್ನದು ತನಗೇ ಮಸ್ತು ಆಗಿರುವಾಗ ಅದನು ನಿರುಕಿಸುತ್ತ ಕುಂಡುರುವುದರಲ್ಲಿ ಯೇನರ್ಥವುಂಟು? ಮನುಷ್ಯ ಅಂದಮ್ಯಾಲ ವಬ್ಬರಿಗಿನ್ನೊಬ್ಬರು ಆಗಬೇಕು, ಕಣ್ಣೀರೊರೆಸಿ ಕಯ್ಯಿಕೊಟ್ಟಿರುವ ದೇವರ ಕ್ರಮವನ್ನು ಸಾರ್ಥಕವಾಗಿಸಬೇಕು.. ಪರೋಪಕಾರಾರ್ಥಮಿದಂ ಸರೀರಮು ಯಂದು ಧರೆಗೆ ದೊಡ್ಡವರು ಹೇಳಿರುವರು.. ಹಿಂಗ ಮುಂತಾಗಿ ಅವರಿಗಿವರು ಹೇಳಿಕೊಳುತ, ಯಿವರಿಗವರು ಹೇಳಿಕೊಳುತ, ತಮಗೆ ತಾವೆ ಹೇಳಿಕೊಳುತ ವಬ್ಬರೊಳಗಿನ್ನೊಬ್ಬರು ಚಕಚಕಾಂತ ವಡಮೂಡಲಕ ಆರಂಭಿಸಿದ್ದರು.

ಆಜುಬಾಜೂಕಿದ್ದ ಗ್ರಾಮಗಳಿಂದ ಹಸಿ ಹಸಿ ಬಾಣಂತಿಯರು, ಕೂಸುಳ್ಳ ತಾಯಂದಿರು ಸದರಿಪಟ್ಟಣದ ಚಿಟ್‌ಚಿಟಾರನೆ ಚೀರಿಕೊಳುತಲಿದ್ದ, ಕೆಳಗಣ್ಣು, ಮ್ಯಾಲಗಣ್ಣು ಮಾಡುತಲಿದ್ದ ಕೂಸು ಕಂದಮ್ಮಗಳಿಗೆ ಯದೆ ವುಂಬುಸಲಕಂತ ನಾ ಮುಂದು, ತಾ ಮುಂದು ಅಂತ ಮೋಡೋಡಿ ಬರುತಲಿದ್ದರು.

ನಗೆವಂಚಿತರನ್ನು ನಗಿಸಲೋಸುಗ ಅಕ್ಕಪಕ್ಕದ ಗ್ರಾಮಗಳಿಂದ ಹಗಲು ಯೇಸಗಾರರು, ದೊಂಬರರು ನಾ ಮುಂದು, ತಾ ಮುಂದು ಅಂತ ಬಂದು ಚಿತ್ರಯಿಚಿತ್ರವಾಗಿ ವರ್ತನೆ ಮಾಡುತಲಿದ್ದರು. ಅಗೋಚರ ಸ್ಥಿತೀಲಿದ್ದ ಸಾಂಬವಿಯ ರುದಯ ಕರಗಿಸಲಕೆಂದು ಅಕ್ಕಪಕ್ಕದ ಗ್ರಾಮಗಳಿಂದ ಆಗಮನ ಮಾಡುತಲಿದ್ದ ಭಜನೆ ತಂಡಗಳಂತೂ ಲೆಕ್ಕಯಿರಲಿಲ್ಲ.. ದುರುಗಾ ಮುರುಗ್ಯೋರಂತೂ ತಮ ತಮ್ಮ ಹೆಗಲ ಮ್ಯಾಲ ಪಕ್ಕಾ ಹೆಣ್‌ದೇವತೆಗಳನ್ನು ಹೊತ್ತುಕೊಂಡು ಬಂದು ಜಗದಂಬೆಯ ನಾಮಾವಳಿಗಳನು ಬೀದಿಗುಂಟೆಲ್ಲ ಬಿತ್ತಿ ಬೆಳೆಯಲಾರಂಭಿ ಸಿದ್ದರು. ಲೆಕ್ಕವಿರದಷ್ಟು ಮಂದಿ ಮಂತ್ರವಾದಿಗಳು ತಮ್ಮ ತವರು ನೆಲೆಯಾದ ಹಾರಕ ಬಾವಿಯಿಂದ ನಾ ಮುಂದು, ತಾ ಮುಂದು ಅಂತ ಸದರಿ ಪಟ್ಟಣದೊಳಗ ಬೀಡು ಬಿಟ್ಟು ಕಾರ್ಯ್ಯೋನ್ಮುಖರಾಗಿದ್ದರು.. ಅಂಥವರೆದುರು ವಂದಕ್ಕೆ ನಾಕರಷ್ಟು ದಕ್ಷಿಣೆಯಿಟ್ಟು ತಾಯಂದಿರು, ಹೆಂಡಂದಿರು ತಾಯಿತ, ಅಂತರ, ಮಂತ್ರಿಸಿದ ಲೋಬಾನ ಖರೀದಿಸದೆ ಯಿರಲಿಲ್ಲ.. ಖರೀದಿಸಿ ಅವರು ಹೇಳಿದಂಗೆ ಮಾಡದೆ ಯಿರಲಿಲ್ಲ.. ಯಲ್ಲಿ ನೋಡಿದರೂ ಹ್ರಾಂ ಹ್ರೀಂ ಹ್ರೂಂ ಮಂತ್ರಗಳೇ ಸಿವಸಿವಾ.. ಯಾರ ಸರೀರದ ಮ್ಯಾಲ ನೋಡಿದರೂ ತಾಯಿತ, ಅಂತರಗಳೇ ಸಿವಸಿವಾ.. ಯಾರ ಮನೇಲಿ ನೋಡಿದರೂ ಲೋಬಾನದ ಘಾಟು ಹೊಗೆ ತುಂಬಿ ಚೆಲ್ಲಾಡಲಕ ಹತ್ತಿತ್ತು ಸಿವನೇ.. ಯೇನು ಮಾಡಿದರೂ ವಂದು ಯೇರಿಕೆ ಆಗದ ಪರಿಣಾಮವಾಗಿ, ವಂದು ಯಿಳಿಕೆಯಾಗದ ಪರಿಣಾಮವಾಗಿ ಪಟ್ಟಣದೊಳಗ ತಾಯಂದಿರು ತಮ ತಮ್ಮ ಮೊಲೆಗಳನ್ನು ಹೀನಾಯ ರೀತಿಯಲ್ಲಿ ಗುದ್ದಿಕೊಳ್ಳತೊಡಗಿದರು ಸಿವನೇ, ತಮ ತಮ್ಮ ತಲೆಗೂದಲುಗಳನ್ನು ಕಿತಕಿತ ಕಿತ್ತಿಕೊಳ್ಳತೊಡಗಿದರು ಸಿವನೆ.. ನಗಲೋ, ನಗಲೋ ಯಂದು ತಮ ತಮ್ಮ ಗಂಡಂದಿರನು ಅವರವ ಹೆಂಡಂದಿರು ಪಿಡಪಿಡನೆ ಪೀಡಿಸತೊಡಗಿದರು ಸಿವನೇ.. ಯೀ ಅಟಾಟೋಪಕ್ಕೆ ಅರಮನೆಯೇ ಕಾರಣವೆಂದು ಬಗೆದು ತಮ ತಮ್ಮ ಕೂಸು ಕುನ್ನಿಗಳ ಸಮೇತ, ಕುವ್ವಾಡಕ್ಕೆ ಹೆಸರಾದ ತಮ ತಮ್ಮ ಗಂಡಂದಿರ ಸಮೇತ ಅರಮನೆಯ ಬಾಗಿಲು, ಕಿಟಕಿ, ಜಾಲಂದರಗಳ ಹಿಡಿದು ಜಗ್ಗಾಡತೊಡಗಿದರು ಸಿವನೇ.. ಗೋಡೆಗಳನು ಗುದಗುದನೆ ಗುದ್ದಿ ಹಣ್ಣುಗಾಯಿ, ನೀರುಗಾಯಿ ಮಾಡತೊಡಗಿದರು ಸಿವನೇ.. ಪಟ್ಟಣದ ತರಾವರಿ ಹಾಹಾಕಾರಗಳ ಚಂಡಮಾರುತಕ್ಕೆ ಸಿಲುಕಿ ತತ್ತರಿಸತೊಡಗಿದ್ದ ಅರಮನೆಯೊಳಗೆ ರಾಜಪರಿವಾರದ ಮಂದಿ ತಮ ತಮ್ಮ ಜೀವಗಳನು ಕಯ್ಯ ಮುಟುಗಿಯೊಳಗೆ ಹಿಡಕೊಂಡು ಜೀವಭಯದಿಂದ ಗಡಗಡಾಂತ ನಡುಗಲಕ ಹತ್ತಿದ್ದರು ಸಿವ ಸಂಕರ

ಮಾದೇವಾ.. ಅರಮನೇನ ದಾಟಿದರೆಂಗೋ? ವುಳಾಗೆ ವುಳಕೊಂಡರೆಂಗೋ? ಅಂಬ ಕಾರಣಕ್ಕೆ ಹೊರ ಪರಪಂಚದ ಸರುವ ಸಂಪರಕ ಕಡಿದುಕೊಂಡಿದ್ದ ಅರಮನೆ ವಳಾಗ ರಾಜಪರಿವಾರದ ಮಂದಿ ಪರಸ್ಪರ ಆರೋಪ, ಪ್ರತ್ಯಾರೋಪ ಮಾಡೋದು, ಅವರನ್ನಿವರು ನಿಂದಿಸೋದು, ಯಿವರನ್ನವರು ನಿಂದಿಸೋದು ನಿಲುಕಡೀಕಿಲ್ಲದೆ ಮುಂದುವರೆದಿತ್ತು ಸಿವನೇ.. ಅಸಂಖ್ಯಾತ ಸಂಖೆಯಲ್ಲಿ ಅರಮನೆಯೊಳಗೆ ಯಿವೆ ಯನ್ನಲಾದ ಸುರಂಗ ಮಾರಗಗಳ ಹುಡುಕಾಟ ನಿರುವಿರಾಮವಾಗಿ ನಡೆದೇಯಿತ್ತು ಮುರಹರನೇ, ಸಮಸ್ತ ಪಟ್ಟಣದ ದುಕ್ಕ ವಂದು ತೂಕವಾಗಿದ್ದರೆ ಅರಮನೆಯೊಳಗಿದ್ದ ದುಕ್ಕವೇ ಯಿನ್ನೊಂದು ತೂಕವಾಗಿತ್ತು.. ಸಾಂತುವನ ಮಾತುಗಳ ಘೋರ ಬರ ಅನುಭವಿಕೆ ಮಾಡುತಲಿದ್ದ, ಸಮಾಧಾನಕರ ವಂದೇ ವಂದು ಮಾತಿಗಾಗಿ ಪರದಾಡುತಲಿದ್ದ, ಘೋರ ಪರಾಭವದ ಛಣಗಳನ್ನು ಯಣಿಕೆ ಮಾಡುತಲಿದ್ದ, ನಿಂದಾಪನಿಂದನೆಯ ಮಾತುಗಳ ಬರಸಿಡಿಲ ಪ್ರಹಾರಕ್ಕೆ ತತ್ತರಿಸುತಲಿದ್ದ, ನಿಟ್ಟುಸಿರ ಝುಂಝಾನಿಲಕ್ಕೆ ಸಿಲುಕಿ ತರಗೆಲೆಯ ರೂಪ ಪಡೆಯುತಲಿದ್ದ ಅರಮನೇನ ಅಂದಾಡಿದರ ಯೇನು ಪ್ರಯೋಜನ...? ಅದೊಂದು ಅರಮನೇನಾ? ಅದರೊಳಗ ವಸ್ತಿಯಿರೋದು ರಾಜ ಪರಿವಾರವೇನಾ? ಕಾಲದ ಹೊಡೆತಕ್ಕೆ ಸಿಲುಕಿ ಸಾಂಬವಿಯ ಸಾಪಕ್ಕೆ ಸಿಲುಕಿ ಅದು ಯೀಗ ಹೆಂಗಯಿತೆಂದರ ವಂದು ನಾಕುಮಂದಿ ಸೇರಿಕೊಂಡು ವುಫೆಂದು ಮೂದಿದಲ್ಲಿ ಕಡಕೊಂಡು ಬೀಳೋವಂಗಯಿತೆ.. ಅದರೊಳಗಿನ ಮಂದಿ ಭೂತಕಾಲದ ನೆನಪುಗಳನುಂಡೂ ವುಂಡು ನರಪೇತಲಾಗವರೆ.. ಜೇಡೊಳಗೆ ತಲೆ ಮರೆಯಿಸಿಕೊಂಡಿರುವ ಸಿಮ್ಮಾಸನಕ್ಕೆ ಡೊಣ್ಣೇಕಾಟದ ಮಯ್ಯಿ ಭಾರವನ್ನು ತಡಕೊಳ್ಳೋ ತಾಕತ್ತಿಲ್ಲ.. ಬೊಟ್ಟು ದಮಡಿಗೆ ಕೊಡತೀವಂದರೂ ಅರಮನೆಯೊಳಗಿನ ಸಸ್ತರಾಸ್ತರಗಳನ್ನು ತಗೊಳ್ಳುವವರು ಯಾರೂ ಯಿಲ್ಲ.. ಅದಕ ಯಿದಕ್ಯಾಕ ಅಂಬುವಿರಿ.. ಯಿದಕ ಅದಕ್ಯಾಕ ಅಂಬುವಿರಿ.. ಯಂದು ಮುಂತಾಗಿ ಬುದ್ದಿವಾದ ಹೇಳೂತ ಹಿರೀಕರು ಸಂತರಸ್ತರನ್ನು ಅಲ್ಲಿಂದ ಕರಕೊಂಡೊಯ್ದು ಅವರನ್ನು ಮೂಲನೆಲೆಗೆ ಸೇರಿಸುವ ಪ್ರಯತ್ನ ಮಾಡಿರದೇ ಯಿದ್ದಲ್ಲಿ....

ಹಿರೀಕರss ನೀವು ಯೇನೇ ಹೇಳಿರಿ ತಂದೆಗೋಳಾ.. ಸುಮ್ಮಕ ಯಿದ್ದ ಮೋಬಯ್ಯನ ತಡವಿ ಯಿಡೀ ಪಟ್ಟಣದ ಬೆನ್ನಿಗೆ ಕೇರು ಬಡಿದಿರೋದು ಯಿದೇ ಅರಮನೆಯಾ.. ತನ್ನ ಪಾಡಿಗೆ ತಾನು ಆಡಿಕೋತಯಿದ್ದ ಪಟ್ಟಣದ ಕುಂಡಿ ಚಿವುಟಿ ಅಳೋಹಂಗ ಮಾಡಿ ಯೀಗ ಲೊಳ್ಳಾಳ್ಳಾಯಿ ಹಾಡ್ತಿರೋದು ಯಿದೇ

ಅರಮನೇಯಾ.. ಯಿಡೀ ಪಟ್ಟಣವನ್ನು ಕಸಬಾರಿಗೆ ಮಾಡಿಕೊಂಡಿರೋದು ಯಿದೇ ಅರಮನೇಯಾ.. ರೆಟ್ಟೇಲಿ ತಾಕತ್ತಿಲ್ಲದಿದ್ದರೂ ಹೊಟ್ಟೇಲಿ ಯೇಳುಕೊಪ್ಪರಿಗೆ ಸಿಟ್ಟು ಸೆಡವು ಯಿಟುಕೊಂಡಿರೋದು ಯಿದೇ ಅರಮನೇಯಾ.. ಯಿಡೀ ಪಟ್ಟಣವನ್ನು ಅಳಂಗಿ (ಚಳಿನಿವಾರಣಾರ್ಥವಾಗಿ ಕಸಕಡ್ಡಿ ಸೇರಿಸಿ ಹಚ್ಚುವ ಬೆಂಕಿ) ಮಾಡಿಕೊಂಡು ಚಳಿ ಕಾಯಿಸ್ತಿರೋದು ಯಿದೇ ಅರಮನೇಯಾ.. ಮುಂಜಾಲಿದ್ದರೂ ಚೆಂಜೀಕಿಲ್ಲದಿದ್ದರೂ, ಚೆಂಜೀಕಿದ್ದರೂ ಮುಂಜಾನೆಗಿಲ್ಲದಿದ್ದರೂ ಬಡಿವಾರ ಮಾಡುತ್ತಿರೋದು ಯಿದೇ ಅರಮನೇಯಾ.. ಕುಂಡಿ ಸುಟ್ಟ ಬೆಕ್ಕಿನಂಗಿದ್ದರೂ ಹುಲಿಯಂಗ ಘರಜನೆ ಮಾಡುತ್ತಿರೋದು ಯಿದೇ ಅರಮನೇಯಾ..

ಅಲಲಲಾss... ಕಜ್ಜಿ ಪುಳ್ಳೆ ಕೂಸಿನ ಗಡುತರ ಯಿರೋ ಯಿದೇ ಯೀಟೊಂದು ಧಿಮಾಕು ತೋರಿಸಲಾಕ ಹತ್ತೇತಿ.. ಯಿನ್ನು ಹರಪನಹಳ್ಳಿ ಅರಮನೆ ಹಾಂಗಿದ್ದಿದ್ದಲ್ಲಿ ಯಿನ್ನೇಟು ದಿಮಾಕು ತೋರಿಸುತ್ತಿತ್ತೋ? ಪುಣ್ಯಾತುಮ ಥಾಮಸು ಮನುರೋ ಸಾಹೇಬ ಯಿದರಾಸ್ತೀನ ಮುಟುಗೋಲು ಹಾಕ್ಕೊಂಡು ಯಿದರ ಟೊಂಕ ಮುರಿದ, ಸರೇ ಸರೆ.. ವಂದಕಿದ್ದರೂ ವಂದಕಿಲ್ಲದಂಗ ಮಾಡಿ ರಾಜಪರಿವಾರದ ಮಂದಿ ಬೀದೀಲಿ ಅಡ್ಡಾಡೋ ಹಾಂಗ ಮಾಡಿದ ಸರೇ ಸರೆ.. ಯಿಲ್ಲಾಂದರ ಯಿವರು ಪಟ್ಟಣದ ಮಂದೀನ ಸುಮ್ಮಕ ಬಿಡುತ್ತಿದ್ದರಾ? ಹರಕೊಂಡು ಬುಕ್ಕಿಬಿಡುತ್ತಿದ್ದರು.. ಅಲಲಾಲss...

ಅಲಲಲಾ ಕಾಟನಾಯಕಾss.. ಅಲಲಲಾ ಭಯ್ರಮಾಂಬೇss.. ಅಲಲಲಲಾ ಪುವ್ವಲ ರಾಜ ವಮುಸಸ್ಥರಾ.. ಅಲಲಲಾss..

ನಮ್ಮನ್ನು ನಮ್ಮ ಪಾಡಿಗೆ ಸುಮ್ಮಕ ಬಿಡಿರಿ ಯಜಮಾನರುಗಳಿರಾ.. ನಮ್ಮ ಕಷ್ಟನಷ್ಟ ಕ್ಕಾಗದ ಯೀ ಅರಮನೆ ಯಿದ್ದರೆಷ್ಟು ಹ್ವಾದರೆಷ್ಟು..?

ಯಂಥ ಬರಗಾಲ ಬಂದರೂ ನಾವು ಗುತ್ತಿಗೆ ಕಟ್ಟುತ್ತಿರಲಿಲ್ಲೇನು? ಸಯ್ನಿಕರನು ಕಳುಸಿ ವದ್ದು ಬಡದೂ ನಮ್ಮಿಂದ ತೆರಿಗೆ ವಸೂಲಿ ಮಾಡುತ್ತಿರಲಿಲ್ಲೇನು ಯಿವರು? ಯಿವರು ತಿಂಥಿರೋ ಕೂಳು ನಮ್ಮದು, ಯಿವರು ವುಟುಕೊಂಡಿರೋ ಅರಿವೆ ನಮ್ಮದು, ಯಿವರ ಮಯ್ಯಿಮ್ಯಾಲ ಲಕಲಕ ಹೊಳೀತಿರೋ ವಡವೆ ವಸ್ತ ನಮ್ಮದು, ಯಿವರ ತಿಜೋರಿಲಿರೋ ರೊಕ್ಕ ನಮ್ಮದು, ಯಿವರ ಅಗೇವುಗಳಲ್ಲಿರೋ ದವಸ ನಮ್ಮದು.. ಯಿವರ ಹೆಂಡಂದಿರ ಹಣೇಲಿರೋ ಕುಂಕುಮ ಬೊಟ್ಟು ಮಾತ್ರ...

ಯೀ ಅರಮನೇನ ನಾವು ಸುಮ್ಮಕ ಬುಡೋದಿಲ್ಲ..

ಯೀ ಅರಮನೆವಳಾಗಿರೋರನು ನಾವು ಸುಮ್ಮಕ ಬಿಡೋದಿಲ್ಲ..

ವೊದಲೆ ನೊಂದು ಪಿತ್ಥ ಕೆರಳಿಸಿಕೊಂಡಿದ್ದ ಮಂದಿ ಅದು. ತಲಾಕೊಂದೊಂದು ಅನ್ನೋದು ಅಂತು, ಅನ್ನುತ್ತಲ್ಲೇ ಯಿತ್ತು. ಸಿಟ್ಟು ಸೆಡವು ಅಂಬೋ ಮೋನ್ನಾಮವನ್ನು ಹೇಳಿಕೊಟ್ಟಿರುವಾಕೆ ಸಾಂಬವಿ.. ಯೀಗ ಆಕೆ ಯಿಲ್ಲದಾಳಂದರ ಅದಾಳ.. ಧರುಮ ಕರುಮ, ನ್ಯಾಯ ಅನ್ಯಾಯಕ್ಕೆಲ್ಲ ಆಕೆಯೇ ಬಾದ್ಯಸ್ಥಳು.. ಆ ಮಾತಾಯಿ ನೊಂದು ಬೆಂದಿರೋ ಮಂದಿ ಕಯ್ಯಿಯಿಂದ ಯೇನೇನು ಮಾಡಿಸುತಾಳೋ? ತಾವೇನು ಗತಿ ಆತೀವೋ? ಅರಮನೆ ಯೇನು ಗತಿ ಆತದೋ? ಯಂಬ ಚಿಂತೆಯೊಳಗೆ ಬೇಯುತ್ತ, ಗಡಗಡ ನಡುಗುತ್ತ, ವಂದು ತುತ್ತು ಬಾನ ಮುಟ್ಟದೆ, ವಂದು ಗುಟುಕು ನೀರನ್ನು ಬಾಯೊಳಗೆ ಹಾಕ್ಕಂಬದೆ ಅರಮನೆ ಯೊಳಗೆ ಅಯ್ದು ಮಂದಿ ಘನ ಸೊಸ್ತೇರು ತಮ್ಮ ಅತ್ತೆ ಭಯ್ರಮಾಂಬೆಯ ಕಡೇಕ, ತಮ ಗಂಡ ಪಾಂಚಾಲನ ಕಡೇಕ ಬೊಟ್ಟು ಮಾಡಿ ತೋರಿಸುತ್ತಿರು ವಾಗ್ಗೆ.. ಬಾಯಿಗೆ ಬಂದದ್ದನ್ನು ಅಂದಾಡುತ್ತಿರುವಾಗೆ.. ತಾವು ತಮ ತಮ್ಮ ತವರು ಮನೆಗೆ ಹೊಂಟೋತೀವಿ ಯಂದಾಡುತ್ತಿರುವಾಗ್ಗೆ.. ಯಿಡೀ ಪಟ್ಟಣವನ್ನು ಲಟ್ಟಿಗೆಯೊಳಗೆ ಮುರಿಯುತ್ತಿರುವಾಗ್ಗೆ, ಅರುವಾಚೀನ ಪಿಕದಾನಿ ಯೊಳಗೆ ಲಾವಾರಸ ಕೊತಕೊತನೆ ಕುದಿಯುತಿರುವಾಗ್ಗೆ.. ಅದು ವುಗಳ ಬಂದವರ ತುಟಿಗಳಿಗೆ ಬರೆ ಯಳೆಯುತಿರುವಾಗ್ಗೆ, ಅದು ಮುಟ್ಟ ಬಂದವರ ಬೆರಳುಗಳನ್ನು ಸುಡುತ್ತಿರುವಾಗ್ಗೆ.. ವಟ್ಟಿನಲ್ಲಿ ಯಲ್ಲ ಅಯೋಮಯ ವಾಗಿರುವಾಗ್ಗೆ....

ಯಿತ್ತ ಹೊರಗಡೀಕೆ ಸಿಟ್ಟಿನ ಕಯ್ಯಿಗೆ ಬುದ್ದಿಕೊಟ್ಟಿದ್ದ ಮಂದಿ ಯಾವ ಮಾದಿಯಿಂದಲೋ ತಮ ತಮ್ಮ ಕಯ್ಯೊಳಗೆ ಹಾರೆ, ಸಲಿಕೆ, ಗುದ್ದಲಿಯೇ ಮೊದಲಾದ ಕ್ರುಷಿಯ ಆಯುಧಗಳನ್ನು ಹಿಡಕೊಂಡು ವಕ್ಕೊರಲಿನಿಂದ ಸಿವನ್ನಾಮ ಪಾರೊತೀಪತಿ ಹರ ಹರ ಮಾದೇವss ಯಂದನ್ನಲಿಕ್ಕೂ ಲಚುಮವ್ವನ ತೋಪಿನಿಂದ ಯ್ಯೋಸೋ ವರುಸಗಳ ಹಿಂದೆ ಹುಟ್ಟಿದ್ದಂಥ ಜಡೇತಾತನು ಬ್ರೆಮ್ಮಾಸ್ತ್ರರದಂತೆ ಸುಯ್ಯಂತ ಬಂದು ಅರಮನೆಯ ಮೋಟು ಗ್ವಾಡೆ ಮ್ಯಾಲ ನಿಂತು ತನ್ನೇಳು ಮಾರುದ್ದದ ತಲೆಗೂದಲನ್ನು ಸಳ್ಳೊಡೆದು ನಿಗಿನಿಗಿ ವುರಿಯುತ್ತ "ಯಲೆರಲೋ ನರಮಾನ್ನವರುಗಳಿರಾ.. ಕೋಪತಾಪದಿಂದ ತ್ರಿಷಷಿ«ಽಪುರಾತನ ರಾಕ್ಷಸರುಗಳಾಗಿ ಬಿಟ್ಟಿರುವಿರಲ್ಲಾ.. ಅರಮನೆಗೆ ಪೆಟ್ಟಿಟ್ಟಲ್ಲಿ ಆದಿಸಗುತಿ ನಿಮ್ಮನ್ನು ಸುಮಕ ಬಿಡುವಳೆಂದು ಕೊಂಡಿ ರುವಿರೇನೋ ಮೂಢರುಗಳಿರಾ.. ಯಿದು ಅರಮನೆ ಮಾತ್ರವಲ್ಲ ಕಣರಪ್ಪಾ.. ಅರಮನೆ

ರೂಪದಲ್ಲಯ್ತೆ ಗುರುಮನೆ, ಗುರುಮನೆ ರೂಪದಲ್ಲಯ್ತೆ ತಾಯಿ ತವರುಮನೆ.. ಯಿದರ ಕಡೇಕ ನಿಮನಿಮ್ಮ ವಳಗಣ್ಣು ತೆರೆದು ನೋಡಿರೆಲೋ, ಹ್ಹಾ.. ಹ್ಹಾ..ನೀವು ಪೆಟ್ಟಿಡೋದಾದರ ಯೀ ನನ್ನ ಮುದಿ ಸರೀರಕ್ಕೆ ಪೆಟ್ಟಿಡಿರೆಲೋ..'' ಯಂದು ಗಡಗಡನೆ ನುಡಿದೇಟಿಗೆ ಕವಿದ ಮವುನದ ಪ್ರಾಂಗಣದಲ್ಲಿ ನೂರಾರು ಸಿಲಾ ಯಿಗ್ರಹಗಳು ಮೂಡಿದವು.. ನಾಕೆಕರೆ ಯಿಸ್ತೀರ್ಣ ಯಿದ್ದ ಅರಮನೆ ಯಂಬ ಕಟ್ಟಡದ ಅಣು ಅಣುವಿನೊಳಗೆ ಅಡಗಿದ್ದ ಕುದುರೆಡವು ನಿರ್ಮಾತ ಭಯ್ರವನಾಯಕನ ಆತುಮವು ಗುಂಗಾಡಿ ರೂಪಧರಿಸಿ ಹಾರುತ ಹಾರುತ ಮುದೇತನ ಮುಖದೆದುರು ಸುಳಿದಾಡಿ ಗುಯ್ ಯಂಬ ನಾದದ ದ್ವಾರಾ ಕ್ರುತಗ್ನತೆಯನ್ನು ಪ್ರಚುರಪಡಿಸಿ ಮಾಯವಾಯಿತು. ಯಿಲ್ಲದಿದ್ದರೆ ಯೇನು ಗತಿ ಸಂಭವಿಸುತ್ತಿತ್ತೋ ಸಿವನೇ..

ಅಪರೂಪಕ್ಕೆ ಹಿಂಗ ಬಂದ ಸಿಟ್ಟು ವಂದು ಛಣ ಕುದುರೆಡವ ಸಂಪನ್ನ ಮಂದಿಯನ್ನು ಅಯ್ರಾವಣ, ಮಯ್ರಾವಣರನ್ನಾಗಿ ಮಾಡಿದ್ದೂ ತಡಾ ಆಗಲಿಲ್ಲ.. ಸರ್‍ರಂತ ಯಿಳಿದು ಹಂಗ ಹೋದದ್ದೂ ತಡಾ ಆಗಲಿಲ್ಲ.. ಸಿಟ್ಟು ಬಂದಾಗ ವಂದ ನಮೂನಿ ಆಗಿದ್ದ ಮಂದಿ ಅದು ಅಳಿದ ಮ್ಯಾಲ ಯಿನ್ನೊಂದು ನಮೂನಿ ಆತು.. ಸಂಚುಗಾರ ಜಡೆತಾತನನ್ನು ಸಿಟ್ಟು ಸಾಪಳಿಸುತ್ತಿರುವ ಕಾಲಕ್ಕ ಅನಾಥಾತಿ ಅನಾಥ ಸ್ಥಿತಿಗೆ ತಲುಪಿದ ಮಂದಿ ತನ್ನತ್ತ ಬೆನ್ನು ಮಾಡಿದ್ದು ಖುದ್ದ ಕಂಡು ಅರಮನೆಯು ಅಯ್ಯೋ ತನ್ನ ಅರಮನೆತನವೇ ಯಂದು ಮಮ್ಮಲನೆ ಮರುಗಲಕ ಹತ್ತಿ ಜಲಜಲ ಬೆವತು ನೀರೊಡೆದು ಸಿಸಿರದೊಳಗ ವಯಿಶಾಖದ ಮುಖವಾಡ ತೊಟ್ಟಿದ್ದ ಸೂರ್‍ಯಾಮನ ಬೆಳಕಲ್ಲಿ ಥಳ ಥಳ ಹೊಳೆಯತೊಡಗಿತು.. ಮಿರಮಿರನೆ ಮಿಂಚ ತೊಡಗಿತು ಸಿವಸಂಕರ ಮಾದೇವಾ, ಹೋಗಬ್ಯಾಡಿರೋ ಹೋಗಬ್ಯಾಡಿರಿ.. ಬಂದು ನನ್ನ ಮ್ಯಾಲ ನಿಮ ಪವುರುಷ ತೋರಿಸಿಕೊಳ್ಳಿರಪ್ಪಾ.. ನನಗೂ ಯೀ ಭೂಮಿ ಮ್ಯಾಲ ಜೀವಚ್ಛವವಾಗಿ ಬದುಕೀ ಬದುಕೀ ಸಾಕಾಗಯ್ತೆ ಮಕ್ಕಳ.. ನನ್ನ ಕುತ್ತಿಗೆ ಹಿಚುಕಿ ಸತ್ತುಗೊಂದು ಪುಣ್ಯ ಕಟ್ಟಿಕೊಳ್ಳಿರಿ ಯಂದು ತಾನು ಅರಮನೆಯೆಂಬ ಗ್ಯಾನ ಯಿಲ್ಲದ ಬಡ ಝೋಪಡಿ ಥರ ಕೂಗಿಕೊಂತಿರುವಾಗ್ಗೆ...

ಥೂ ತಮ ಜನುಮಕ್ಕೀಟು ಬೆಂಕಿ ಹಾಕ.. ಸಿಟ್ಟಿನ ಕಯ್ಯಾಗ ಬುದ್ದಿ ಅಮರಿಸಿ ಬಂಗಾರದಂಥ ಅರಮನೆ ಮ್ಯಾಲ ಸೇಡು ತೀರಿಸಿಕೊಂತಿದ್ದೆವಲ್ಲಾ.. ಅರಮನೇನ ಕೊಂದ ಪಾಪಕ್ಕ ಗುರಿ ಆಗುತಲಿದ್ದೆವಲ್ಲಾ.. ಪುಣ್ಯಾತುಮ ಜಡೆತಾತ ದೇವರು ಬಂದಂಗ ಬಂದು ನಾಕು ಬುದ್ದಿವಾದ ಹೇಳಿ ತಡದss ಸರಿಹೋತು..

ಯಿಲ್ಲಾಂದರ ತಾವು ರವುರವ ನರಕಕ್ಕ ಭಾಜನರಾಗುತ್ತಿದ್ದೆವಲ್ಲಾ.. ಅದಕ ಹಿರೇರು ಯಿರಬೇಕಂತ ಹಿರೇರು ಹೇಳಿರೋದು...

ಅಯ್ಯಯ್ಯೋs ಅಲಲಲಾss... ಮುಂದ ಮುಂದಕ ಹೋದಂಗ ಮಾಡೋದು.. ಹಂಗss... ಹಿಂದ ಹಿಂದಕ ತಿರುಗಿ ಅರಮನೇನ ಕಣ್ಣೊಳಗ ತುಂಬಿಕೊಳ್ಳೋದು.. ತಮ ತೆಪ್ನ ಹೊಟ್ಟೇಲಿ ಹಾಕ್ಕೊಳ್ಳೇ ನಮ್ಮವ್ವಾ ಯಂದು ಸಣುವಾಡೋದು ಮಾಡುತ ಮಂದಿ ಮತ ಮತ್ತ ಹೊಳ್ಳೊಳ್ಳಿ ಹೋಗಲಾರಂಭಿಸಿದ ಯ್ಯಾಳ್ಳೆ ಯಾವುದಿತ್ತೆಂದರೆ ಅದೇ ಯಿತ್ತು.. ಬಿಸಿಲುಗುದುರೆಗಳ ಖುರಪುಟದ ಸದ್ದು ಕಿವಿಗಡಚಿಕ್ಕುವಂಥ ಯಾಳ್ಳೆ ಅದಾಗಿತ್ತು.. ಮ್ರುಗ ಜಲಧಾರೆಯಿಂದಾಗಿ ತೊಯ್ದು ತಪ್ಪಟಿಯಾಗಿದ್ದಂಥ ಯ್ಯಾಳ್ಳೇವು ಅದಾಗಿತ್ತು.. ಮಂದಿಯ ಕಣ್ಣುಗಳ ಮತ್ತು ಮೂಗುಗಳ ನಡುವೆ ಅಂಥ ಫರಕು ಯಿರಲಿಲ್ಲ.. ಅವೆರಡರ ಧಾರೆಯು ವಂದೇ ಆಗಿತ್ತು.. ಅವರ ದುಕ್ಕವು ಲಂಗು ಲಗಾಮಿಲ್ಲದ ಯ್ಯಾಳ್ಳೆ ಅದಾಗಿತ್ತು. ಅದೇ ಯ್ಯಾಳ್ಳೇಕ್ಕ ಸರಿಯಾಗಿ ಬಡೇಲಡುಕಿಗೆ ವಂದು ಗಾವುದ ದೂರದಲ್ಲಿದ್ದ ಬತ್ತಿ ಮರದಡೀಲಿ ಜಗಲೂರೆವ್ವ ಅದೇ ಯಿನ್ನು ತನ್ನ ಪತಿವುರೊತಾ ಸಿರಿ ಸಂಪತ್ತನ್ನು ನಾನಾ ನಮೂನಿ ಹಳಿದುಕೊಳ್ಳುತ್ತ ಮಯ್ನ ಚೆಲ್ಲಿದ್ದಳು.. ವಂದು ಜೊಂಪು ಗಾಢ ನಿದ್ರೆಆವರಿಸಿತ್ತು.. ಅದರ ತರುವಾಯ ಬಿದ್ದ ಕಣಸೊಳಗ ಬಿರುಕು ಬಿಟ್ಟಿರುವ ನೆಲ.. ಯಿರುಕುಲುಗಳಲ್ಲಿ ಹೊಳೆ ಹಳ್ಳಗಳ ಕಳೇಬರಗಳು.. ಅವುಸಧಕ್ಕೆ ಬೇಕೆಂದರೂ ವಂಥಟಗಾದರು ಹಸಿರಿಲ್ಲದ.. ಹಸಿರ ವುಸುರಿಲ್ಲದ ನೆಲದ ದುಕ್ಕವನ್ನು ವರಣನಾತುಮವಾಗಿ ಆಕಾಸಕ್ಕೆ ಪ್ರವರ ಸಲ್ಲಿಸುತ್ತಿರುವ ಬೋಳು ಮರಗಳು ಅಲ್ಲೊಂದು ಯಿಲ್ಲೊಂದು... ರೆಕ್ಕೆ ಹರಕೊಂಡಿರುವ, ಕೊಕ್ಕು ಮುರಕೊಂಡಿರುವ ಪಕ್ಷಿಗಳು ಅಲ್ಲೊಂದು, ಯಿಲ್ಲೊಂದು.. ಆ ತುದಿಯಿಂದ ಯೀ ತುದಿ ಮಟ ಮುಪ್ಪಾನು ಮುದುಕಿಯೊಂದು ತನ್ನತ್ತ ನಡಕೋತ ನಡಕೋತ ಬಂತು. ನೀನ್ಯಾರವ್ವಾ ಯಂದು ಜಗಲೂರೆವ್ವ ಕೇಳಿದ್ದಕ್ಕೆ ಅದು “ತಂಗೀ.. ನಾನು ಕಣವ್ವಾ.. ಪುವ್ವಲ ರಾಜವಮುಸದವರ ಕುದುರೆಡವರ ಮನೆಯವ್ವ” ಯಂದು ಖೂನ ಗುರುತು ಹೇಳಿಕೊಂಡಿತು.. ಆಗಿದ್ದು ಮೋಬಯ್ಯನ ಸತೀಮಣಿಯು “ಹೆಂಗಿದ್ದಾಕಿ ಹೆಂಗಾಗಿಬಿಟ್ಟೀಯಲ್ಲವ್ವಾ..” ಯಂದು ಪರಾಮರಿಸಿದ್ದಕ್ಕೆ ಅದು ಪಟ್ಟಣದ ಪ್ರತಿಯೊಂದು ಯಿದ್ಯಾಮಾನವನ್ನು ಕೂಲಂಕಷ ಯಿವರಿಸಿ ಹೇಳಿತು. ತನ್ನ ಮಕ್ಕಳು ತನ್ನ ಮ್ಯಾಲ ಮುಗಿಬಿದ್ದುದ್ದನ್ನೂ, ಜಡೇತಾತನು ಆಪದ್ಬಾಂಧವನಂತೆ ಬಂದು ತನ್ನನ್ನು ಕಾಪಾಡಿದ್ದನ್ನೂ ಹೇಳದೆಯಿರಲಿಲ್ಲ ಅದು.. ನೀನು

ಯೀಗಿಂದೀಗಲೆ ಕುದುರೆಡವಿಗೆ ಹೊಂಟು ಬಂದು ನನ್ನ ಮಕ್ಕಳ ಕಣ್ಣೀರೊರೆಸಬೇಕವ್ವಾ.. ಧಯರ್ಯ ತುಂಬಬೇಕವ್ವಾ ಯಂದು ಹೇಳುತ ಹಂಗೆss ಕರಗಿ ಗಪ್ಪಂತ ಮಾಯವಾಗಿಬಿಟ್ಟಿತು.. ಯದ್ದು ಯಚ್ಚರಾಗಿ ಜಗಲೂರೆವ್ವ ಸುತಮುತ್ತ ನೋಡುತ್ತಾಳೆ.. ಅದಾದೂ ಯಿಲ್ಲ.. ಅರಮನೇನೇ ಮುದುಕಿ ರೂಪಧಾರಣ ಮಾಡಿ ತನ್ನನ್ನಿಷ್ಟು ಕೇಳಿಕೊಂಡಿರುವಳೆಂದ ಮ್ಯಾಲ ತಾನು ತನ್ನ ಸ್ವಾರ್ಥಕ್ಕಾಗಿ ಬಡೇಲಡುಕಿಗೆ ಹೋಗುವುದು ಥರವಲ್ಲ.. ಬಡೇಲಡಕೊಳಗಿರುವ ಅಂಜಿಣೆಪ್ಪನ ಅಂಗಯ್ಯ ಅಂಜಣ ದರುಪಣದೊಳಗ ಕಾಣುವ ತನ್ನ ಗಂಡನ ಮುಖವನ್ನು ನೋಡಿ ಯೇನು ಮಾಡೋದಯ್ತೆ ಯಂದು ಭಾವಿಸಿದ ತಾನು ಚೆನ್ನವ್ವ, ಧರಮದೇವತೆಯನ್ನು ಯಡ ಬಲಕ ಯಿಟುಕೊಂಡು ವಂದೊಂದು ಫರಲಾಂಗಿಗೆ ವಂದೊಂದು ಹೆಜ್ಜೆಯನಿಕ್ಕುತ...

ಅಂತೂ ವಂದೇ ಮಾತಿಗೆ ಬಂದಳಲ್ಲ.. ಧರುಮದ ಕಾವಲುಗಿತ್ತಿ, ಅನಾಥ ರಕ್ಷಕಿ.. ತಾನಿನ್ನು ನಿಶ್ಚಿಂತೆಯಿಂದರಬೌದು ಯಂದು ಭಾವಿಸಿದ ಅರಮನೆಯು ನೆಮ್ಮದಿಯ ವುಸುರು ಬಿಡುತ ತನ್ನ ಮಯ್ಯ ಮ್ಯಾಲಿದ್ದ ನೂರೆಂಟು ಕಿಟಕಿ, ಕಿಂಡಿ, ಜಾಲಂದರ, ಡಬಾಕಲಿ, ಗಬಾಕಲಿ, ಆ ಬಾಗಿಲು, ಯೀ ಬಾಗಿಲು ಸಹಿತ ಹೆಬ್ಬಾಗಿಲನ್ನು ತೆರೆದು ಸ್ವಾಗತ ಪಲುಕಿತು. ಅದು ತನ್ನ ತವರುಮನೆಯುಂಬಂತೆ ವಳ ಹೋದಳು. “ಪಾಡದಿರೇನವ್ವಾ” ಅಂತ ರಾಜಪರಿವಾರದ ಹೆಣ್ಣು ಮಂದಿಯ ಕ್ಷೇಮಲಾಭ ಯಿಚಾರಿಸಿದಳು. ಪಲ್ಲಂಗದ ಮ್ಯಾಲ ವುಸುರು ಬಿಡುತ ಕೂಕಂಡಿದ್ದ ರಾಜಮಾತೆಯ ಸನೀಕ ಹೋಗಿ “ಭೇ, ಯವ್ವಾ.. ನೀನೇ ಹಿಂಗ ಯದೆ ಹೊಡಕೊಂಡು ಕೂಕಂಡಿದ್ದರೆಂಗಭೇ? ಯಿದ್ದೊಬ್ಬ ಗಂಡ ದೂರ ಆಗಿದ್ರೂಹೆಂಗ ಕಲ್ಲುಗುಂಡಿದ್ದಂಗದೀನಿ ನೋಡು? ರಾಜಮಾತೆಯಾಗಿ ನೀನ್ಯಾಕೆ ಅಳ್ಳೋಗಿಯವ್ವಾ... ಧಯರ್ಯ ತಂದುಕೊಂಡು ಬಂದದ್ನ ಯದುರಿಸಬೇಕಭೇ.. ನೀನ್ನವ್ವನ.. ಅದಿರ್‍ಲಿ ಯಲ್ಲಯ್ತೆ ನಿನ್ನೆಲಡಕಿ ಚೀಲ” ಅಂತಂದು ಆಕಿ ಮಗ್ಗುಲಿದ್ದ ತೊಂಬಲದ ಸಂಚೀನ ತಗಂಡು ವಂದು ಹಿಡಿ ಅಡಕೇನ ಬಾಯೊಳಗೆಸೆದುಕೊಂಡು ಕಡದು ಕಟುಂಕಟುಂ ಯಂದು ಸಬುಧ ಮಾಡಲದು ರಣದುಂದುಭಿ ಬಾರಿಸಿದಂತೆ ಕೇಳಿಸಿತು. ಯೇಳೆಂಟು ಯಲೆಗೆ ಸುಣ್ಣ ಹಚ್ಚಿಕೊಂಡು ಆಕೆ ತನ್ನ ಬಾಯೊಳಗಿರಿಸಿಕೊಂಡಿದ್ದೂ ತಡ ಆಗಲಿಲ್ಲ.. ವಂದು ಸಿವುಡು ತಂಬಾಕನ್ನು ನೀವಳಿಸಿ ಬಾಯೊಳಗೆ ತುಂಬಿಕೊಂಡು ನಮಲಿದ್ದು ತಡ ಆಗಲಿಲ್ಲ.. ಬಾಯಿ ವಟ್ಟರಿಸಿದ ಚರಕಲಿಗಾತುರದಷ್ಟು ರಸವನ್ನು ಅಲ್ಲೇಯಿದ್ದ ಅಯ್ತಿಹಾಸಿಕ ಪಿಕದಾನಿಯೊಳಗೆ ವುಗುಳಿ ತುಂಬಿದ್ದು ತಡ ಆಗಲಿಲ್ಲ..

ಯಲರು ಬೆಕ್ಕಸ ಬೆರಗಾಗಿರುವುದನ್ನು ಗಮನಿಸಿದ ತಾನು "ಬರ್ರೆವ್ವಾ.. ಬರ್ರಿ.. ನನಕೂಡೆ.. ಮಂದಿ ಸುಖ ದುಕ್ಕ ಯಿಚಾರಿಸೋಣ" ಯಂದಾಮಂತ್ರಿಸಿದ್ದು ತಡ ಆಗಲಿಲ್ಲ.. ಮತ್ತ ತಾನೇ ಯಿದ್ದು ನೀನೆಂಗ ಬಂದಿ? ಯಾಕ ಬಂದಿ? ಅಂಬ ಪ್ರಸ್ನೆಗಳು ನಿಮ್ಮ ಮನಸ್ಸಿನಾಗ ಯಿರಬೌದೆವ್ವಾ.. ಯೀ ಅರಮನೆಯವ್ವನೇ ಕನಸಿನಾಗ ಬಂದು ಕರದ್ಲು.. ಬಂದೆ ಕನರವ್ವಾ.. ಮೂರಾಗ ಯೇನಾಗಯ್ತೋ? ಯೇನು ಬುಟ್ತೋ.. ನಾನು ಬರತೀನರವ್ವಾ.. ನೀವು ಮೊದಲೇ ರಾಜವಮುಸಸ್ಥರು.. ನಮ್ಮಂಗ ಮಾಮೂಲು ಮನಶ್ಯೋರು ಅಲ್ಲ.. ನಿಧಾನಕೀಲೆ ಬನ್ನಿ" ಯಂದು ಮಾತಾಡೋದು ಮಾತಾಡಿ ಸರಸರಾಂತ ತಲಬಾಕಲು ದಾಟಿ, "ಅರಮನೆಯವ್ವಾ.. ನೀನು ರಾಜಪರಿವಾರದ ಮಂದೀನ ಕಾಪಾಡು.. ಪಾಪ ಹೆದರ್ಕೊಂಡು ಕೂಕಂಡಾವೆ" ಯಂದು ಕಯ್ನ ಮುಗುದು ಸರಸರಾಂತ ಕಟ್ಟೆಯಿಳಿದು ಯೀಚೆ ಬಂದಂಥವಳಾದ ಜಗಲೂರೆವ್ವ..

* * * *

ಹೋದ ವಾರಾನೇ ಬೆಳಗುಪ್ಪದಿಂದ ಹೊರಟ ಥಾಮಸು ಮನ್ರೋ ಸಾಹೇಬನು ವಯಾ ಸೋಮ್ಲಾಪ್ರ, ಜಾಬಾಲ, ಮುಷೂ«ರ ಯಂಬಿವೇ ಮೊದಲಾದ ತ್ರಯೋದಸ ಮೂರುಗಳನ್ನು ದಾಟತ್ತಾ.. ದಾಟುತ್ತಾ ಪತ್ತಿಕೊಂಡ ತಲುಪಿದ್ದನು. ದಾರೀಲಿ ಅವಯ್ಯನನ್ನು ತರುಬುತ್ತಿದ್ದ ವರೆಷ್ಟೋ? ನೀವಳಿಸಿ ಆರತಿ ಯತ್ತುತ್ತಿದ್ದವರೆಷ್ಟೋ? ಕಷ್ಟ ಸುಖ ಹೇಳಿಕೊಳ್ಳುತ್ತಿದ್ದವರೆಷ್ಟೋ? ಹಾಡಿ ಕೊಂಡಾಡುತ್ತಿದ್ದವರೆಷ್ಟೋ? ಹೆದರಿ ಮೋಟಕಿತ್ತುತ್ತಿದ್ದವರೆಷ್ಟೋ?.. ಹಿಂಗಾಗಿ ಅವಯ್ಯನು ಯೇಳೆಂಟು ಹರದಾರಿ ದೂರ ಯಿದ್ದ ಫಲಾನ ಮೂರು ತಲುಪಲಕ ವಾರ ದಿನಮಾನ ಹಿಡಿಯಿತು. ಅವಯ್ಯನ ಪಾಸಲೆಯೊಳಗೆ ಅಂಡಲೆಯುತಲಿದ್ದ ಕಥೆಗಳು ವಂದೇ ಯರಡೇ ಸಿವನೇ.. ಸ್ರೀ ಯಿಷ್ಣುಪರಮಾತುಮನು ಮೋಹಿನಿ ಅವತಾರ ಯತ್ತಿ ಸುಟ್ಟು ಭಸುಮ ಮಾಡಿದ್ದಂಥ ಭಸುಮಾಸುರನೇ ಥಾಮಸು ಮನ್ರೋ ಯಂಬಭಿದಾನ ಧರಿಸಿರುವನೆಂಬ ಕಥೆಯೂ, ಪರಮೇಸ್ವರನು ರುಷಭಾರೂಢನಾಗಿ ಸೊರಗದ ಗಡಿದಾಟಿ ಯಿಂಗಲೆಂಡು ದೇಸದೊಳಗ ವಾಯುಸಂಚಾರ ಕಯ್ಯಿಕೊಂಡಿದ್ದ ಸಂದರ್ಭದಲ್ಲಿ ಅಲ್ಲೊಂದು ನದಿಯಲ್ಲಿ ಜಲಕ್ರೀಡೆ ಆಡುತ್ತಿದ್ದ ಪರಂಗಿ ಸುಂದರಿಯೋರ್ವಳನ್ನು ಮೋಹಿಸಿ ಗಾಂಧರ್ವ ಯಿವಾಹವಾದನೆಂದೂ, ಇವರಿಬ್ಬರ ದಾಂಪತ್ಯದ ಫಲವಾಗಿ ಹುಟ್ಟಿದ ಕೂಸೇ ಮುಂದೆ ಥಾಮಸು ಮನ್ರೋ ಯಂಬಭಿದಾನ ಧರಿಸಿ ಸದರಿ ದೇಸಕ್ಕೆ ಆಗಮನ ಮಾಡಿರುವುದೆಂಬ ಕಥೆಯೂ, ಸತ್ಯಯುಗದಲ್ಲಿ ರಾಕ್ಷಸರ ಕುಲಗುರು

ಸುಕ್ಕರಾಚಾರ್ಯನು ನದಿಯೊಂದರೊಳಗ ಜಳಕ ಮಾಡುತಾ ಮಾಡುತಾ ಮುಷಿ«ಮಯ್ತುನ ಮಾಡಿಕೊಂಡ ಕಾಲಕ್ಕೆ ಜಲದೊಳಗ ವಜ್ರದೋಪಾದಿಯಲ್ಲಿ ಹೊಳೆಯುತಲಿದ್ದ ಯೀರ್ಯವನ್ನು ಮತ್ಸಕನ್ನೆಯೋರ್ವಳು ಕುಡಿದು ಬಸುರಾಗಿ ಮುಂದೊಂದಿವಸ ಹಡೆದ ಗಂಡು ಕೂಸೇ ಥಾಮಸು ಮನ್ರೋ ಯಂಬಭಿದಾನ ಧರಿಸಿ ಸದರಿ ದೇಸಕ್ಕ ಆಗಮನ ಮಾಡಿರುವುದೆಂಬ ಕಥೆಯೂ, ಯೇಳು ಸಮುದ್ರದಾಚೆಯ ಕೀಳು ಸಮುದ್ರದ ನಟ್ಟ ನಡುವೆ ಯಿರುವ ನಡುಗಡ್ಡೆಯ ಗವಿಯೊಳಗ ವಾಸ ಮಾಡುತಲಿದ್ದ ಬ್ರೆಮ್ಮ ರಾಕ್ಷಸ ಯಾವುದಪ್ಪಾ ಅಂದರೆ, ಅಟ್ಟಂಬಟ್ಟಾರಣ್ಯ ದೊಳಗ ಯಿರುವ ಅಡುಗೂಲಜ್ಜಿಯ ಗಂಟಲೊಳಗಿಂದ ಪಲಾಯನ ಮಾಡಿದ್ದ ರಾಕ್ಷಸ ಅದಾಗಿತ್ತು.. ಅದು ಕಿಂಪುರುಷನ ರೂಪ ಧರಿಸಿ ಪಾತಾಳಲೋಕದ ರಾಜನ ಮಗಳಾದ ಮಾಯಾವತಿಯನ್ನು ಅಪಹರಣ ಮಾಡಿ ಗವಿಯೊಳಗಿಟ್ಟುಕೊಂಡು ವರುಷಗಟ್ಟಲೆ ಸಂಸಾರ ನಡೆಸಿತು. ಅವರೀರ್ವರ ಸಂಸಾರದ ಫಲವೇ ಥಾಮಸು ಮನ್ರೋ ಯಂಬಭಿದಾನ ಧರಿಸಿ, ಸದರಿ ದೇಸಕ್ಕೆ ಆಗಮನ ಮಾಡಿರುವುದೆಂಬ ಕಥೆಯು.. ಯಿಂಥ ಕಥೆಗಳು ಕಾಸಿಗೊಂದು ಕಣಪ್ಪಾ.. ಕೊಸರಿಗೊಂದು ಕಣಪ್ಪಾ.. ಲೆಕ್ಕ ಹಾಕಿದರೆ ಸಾಯಿರದೆಂಟಾತವೆ.. ಯಿಂಥ ವದಂತಿ ದಂತ ಕಥೆ ಕಥಾಕಥಿತಗಳೊಳಗೆ ಮುಳುಮುಳುಗೇಳುತಲಿದ್ದ, ಖಾಸಗೀ ಕ್ಷಣಗಳೊಂದೂ ಯಿರದಿದ್ದ ತನ್ನ ಸರೀರದೊಳಗೆ ರಕುತಕ್ಕೆ ಬದಲಾಗಿ ಪಾದರಸ ತುಂಬಿಕೊಂಡಿದ್ದ, ಕೂಗುವ ಕೊರಡುಗಳ ತುಂಬ ಚಿಗುರು ಮುಡಿಸುತಲಿದ್ದ, ಅಯ್ಯಾ ಯಂದವರಿಗೆ ಕರಗುತಲಿದ್ದ, ಯಲಮೋ ಯಂದವರ ಯದೆಯೊಳಗೆ ದುಸೊಪ್ನವಾಗಿ ಮೂಡುತಲಿದ್ದ ಥಾಮಸು ಮನ್ರೋ ಸಾಹೇಬನು ಯದಕ ಪತ್ತಿಕೊಂಡಕ್ಕೆ ಬಂದು ತನ್ನ ಸರೀರವನ್ನು ಯಿಳುವಿದ್ದ ಯಂದರೆ..

ಸುತಮುತ್ತ ನಿಡುಗಲ್ಲು ಗುಡ್ಡಗಳ ನಡುವೆ ಬಿರುಬೇಸಗೆಯನ್ನು ವುಚ್ಚುವಾಸ, ನಿಚ್ಚುವಾಸ ತಗಂತಲಿದ್ದ ಸದರಿ ಪಟ್ಟಣದ ವಾಸಸ್ಥರು ತಮ ತಮ್ಮ ಸರೀರಗಳಿಂದ ಬೆವರು ಬಸಕೊಂಡು ಕುಡಿತಾ ತಮ್ಮ ಸತ ಸತಮಾನದ ಬಾಯಾರಿಕೆಯನ್ನು ತೀರಿಸಿಕೋತಿದ್ದರು. ಹೋದ ಸಲ ತಾನು ಬಂದಿದ್ದಾಗ ಮಂದಿ ಮಯ್ಯೊಳಗ ವಂಚೂರು ರಸಯಿಲ್ಲದುದನು ಮುಟಮುಟ್ಟಿ ನೋಡಿದ್ದನು. ಆಸಲು ಪಾಸಲೆಯಲ್ಲಿ ವಂದಾದರು ನೀರಿನ ವರತೆಯಿಲ್ಲದುದನ್ನು ಹುಡುಕಾಡಿ ಮನಗಂಡಿದ್ದನು, ದಾಹ ಯಂಬ ರಕ್ಕಸಿಗೆ ದಿನಕ್ಕೊಬ್ಬರಾದರೂ ಬಲಿಯಾಗುತ್ತಿದ್ದುದನು ಕೇಳಿ ತಿಳಕೊಂಡಿದ್ದನು. ತಾನು ಯೇನು ಬೇಕರಪ್ಪಾ

ಯಂದು ಕೇಳಿದೊಡನೆ ಮಂದಿಯು “ದೊರೆಯೇ ನಮಗ ಆಸ್ತಿ ಬ್ಯಾಡ, ಅಡವು ಬ್ಯಾಡ.. ನಮಗ ವಂದು ಬೊಗಸೆ ನೀರು ಕೊಡು” ಯಂದು ಅರಿಕೆ ಮಾಡಿಕೊಂಡೊಡನೆ ತಾನೇ ವಂದು ಕೊಳಗ ವುದಕವಾಗಿ ದ್ರವಿಸಿದ್ದನು. ಆ ಕೂಡಲೆ ತನ್ನ ಯಡ ಬಲಕಿದ್ದ ಅಧಿಕಾರಿಗಳ ಜೊತೆಗೂಡಿ ಪಾತಾಳ ಗಂಗವ್ವನ ಗುಡಿ ಯಂಬ ಸಿಲಾ ಮಂಟಪದ ಸನೀಕ ಹೋಗಿದ್ದನು. ಹಿಂದಿನ ಕಾಲದ ಫಲಾನ ಸಂವತ್ಸರ, ಫಲಾನ ಮಾಸದಲ್ಲಿ ಸದರಿ ಪಟ್ಟಣವನ್ನಾಳಿದ ನಿಡುಬೋಸಲಾ ವೆಂಗಪ್ಪನಾಯುಡು ಕಟ್ಟಿಸಿರ್ದುದು ಅದಾಗಿತ್ತು. ತಾನು ತನ್ನ ಕಣ್ಣುಗಳನ್ನು ಅರ್ಧಂಬರ್ಧ ಮುಚ್ಚಿ ಪಾತಾಳ ಅಂದರಾವುದು? ಗಂಗೆ ಅಂದರಾವುದು? ಪಾತಾಳದೊಳಗ ಗಂಗೆಯೋ, ಗಂಗೆಯೊಳಗೆ ಪಾತಾಳಮೋ ಯಂದು ತರ್ಜನ ಭರ್ಜನ ಮಾಡಿ ಆ ಸಿಲಾ ಮಂಟಪದ ಯದುರಿಗೆ ಮುವ್ವತ್ತು ಗಜ ವುದ್ದಗಲದ ಬಾವಿ ತೋಡಿಸುವ ಯೇರುಪಾಡು ಮಾಡಿ ಹೋಗಿದ್ದನು. ನೂರಾರು ಮಂದಿ ಅಹರ್ನಿಶಿ ತೋಡಿದಾ ಬಾವಿಯೊಳಗ “ಗಂಗಮ್ತಾಯಿ ನದಿಯೊಂದನ್ನು ವುಡಿ ತುಂಬಿಕೊಂಡು ವಡಮೂಡಿಬಿಟ್ಟಿದ್ದಳು. ಆ ಜೀವದಾಯಿನಿ ಯನ್ನು ಮಂದಿ ಸಣುಮಾಡಿ ಸ್ವಾಗತಿಸಿದರು. ಕೀರ್ತಿಸೇಸ ವೆಂಗಪ್ಪನಾಯುಡು ವಮುಸಸ್ಥ ಮಂದಿ ಜರನ್ನುದ್ದೇಸಸಿ ಗಂಗಮ್ತಾಯಿಯ ನಿಜಕಂದಯ್ಯನಾದ ಕಲೆಟ್ಟರು ಸಾಹೇಬ ಬಂದು ಪೂಜಿ ಮಾಡಲಪ್ಪ. ಆತನ ಮುಖ ನೋಡಲೆಂದು, ಅವಯ್ಯನ ಪ್ರತಿಬಿಂಬ ತನ್ನೊಳಗ ಮೂಡಬೇಕೆಂದು ಬಯಸಿ ದರುಸನ ನೀಡಿರುವ ತಾಯೀನ ನಾವ್ಯಾರು ವಮ್ಮಿಂದೊಮ್ಮಿಗೆ ಮುಟ್ಟಿ ಮಯ್ಲಿಗೆ ಮಾಡೋದು ಥರವಲ್ಲ” ಯಂದು ಹೇಳಿದ್ದಕ್ಕೆ ಪ್ರತಿ ಜವಾಬು ಯಿರಲಿಲ್ಲ..

ಆಸುಪರಿ ಹಾದಿಯಲ್ಲಿ ಸುರುವಾದ ಮೆರವಣಿಗೆಯೊಳಗ ನಡಕೋತ ಬಂದು ಥಾಮಸು ಮನ್ರೋ ಸಾಹೇಬ ಬಾವಿಗಿಳಿದು ಯಿದ್ಯುಕ್ತವಾಗಿ ಪೂಜೆ ಸಲ್ಲಿಸಿದನು.. ಅದರೊಳಗ ತನ್ನನ್ನು ತಾನು ನೋಡಿಕೊಳ್ಳುತ ವಂದು ಬೊಗಸೆ ನೀರೆತ್ತಿಕೊಂಡು ತನ ಮಯ್ಯಿಗೆ ಸುರುವಿಕೊಂಡನು. ಯಿನ್ನೊಂದು ಬೊಗಸೆ ತಗೊಂಡು ತಾಯಿಯೋರ್ವಳ ಕಂಕುಳಲ್ಲಿದ್ದ ಕಜ್ಜಿ ಪುಳ್ಳೆ ಕಂದಯ್ಯಗೆ ಕುಡಿಸಿದನು. ಮತ್ತೊಂದು ತಗೊಂಡು ತುಂಬು ಬಸುರಿಯೋರ್ವಳ ಬೊಗುಸಿಗೆ ವರ್ಗಾವಣೆ ಮಾಡಿದನು.. ತದನಂತರ ಯಿನ್ನೊಬ್ಬರಿಗೆ.. ಮತ್ತೊಬ್ಬರಿಗೆ..

ಥಾಮಸು ಮನ್ರೋನೆದುರು ದುತ್ತೆಂದು ಮೂಡಿದ ಮುದುಕಿ ಯಾರಪಾಂದರ ಪೂರುವಿಕರ ಪಯ್ಕಿ ಪೂರುವಿಕಳಾದ ಯಂಜಲೆಲೆ

ಯಲ್ಲಮ್ಮಾಯಿ. ಅದು ಅವಯ್ಯನ ಕೆಂದುಮುಖವನ್ನು ತನ್ನ ಹಂಚಿಕಡ್ಡಿ ಬೊಗಸೆಗಳೊಳಗೆ ಹಿಡಕಂತು. ಯಂಜಲೆಲೆ ಅಂದರ ನೀನೇ ಕಣಪ್ಪಾ.. ಯೇಟುಂಡರೂ ಸವೆಯಾಕಿಲ್ಲ ನೀನು.. ನಿನ ಸರೀರದ ಕೊನೆ ಅಗುಳನ್ನು ವುಂಡು ಯೀ ಬಾವಿಯೊಳಗ ಯಂಜಲಗಯ್ನ ತೊಳಕಂತೀನಿ.. ನಿನಗೋಸುಗರ ನಾನಿಲ್ಲೇ ಕಾಯುತ ಕೂಕಂಡಿರುತೀನಿ.. ಯಂದೇನೇನೋ ನುಡಿದೇಟಿಗೆ ಮಂದಿ ತತ್ತರಿಸಿತು. ಯವ್ವಾ.. ನಿನ ಬಾಯಿಂದ ಯಿಂಥ ಮಾತು ಬರೋದೇನು.. ಯೇನು ತೆಪ್ಪು ಮಾಡ್ಯಾನೆ ನಮ್ಮ ಕಲೆಟ್ಟರು ಸಾಹೇಬ.. ಬ್ಯಾಡವ್ವಾ ಬ್ಯಾಡss ತಾಯೀ.. ಆಡಿದ ಮಾತನ್ನು ವಾಪಾಸು ತಕ್ಕಾss ಯಂದು ಕಯ್ಯಿ ಮುಗುದು ಬೇಡಿಕಂತು.. ಅದಕಿದ್ದು ಮುದೇದು ತರಾವರಿ ನಗಾಡಿತು.. ಬೊಗಸೇನ ವಾಪಾಸು ತಕ್ಕಂಡು ಲಟಲಟಾಂತ ಲಟ್ಟಿಗೆ ಮುರಿಯಿತು.. ಮುಂದೊಂದಿವಸ ನೀನಿಲ್ಲಿಗೆ ಬಂದೇ ಬರುತಿ, ನನ್ನೆಂಜಲು ಯಲೆಯೇ ಯಂದನಕೋತ ಅನಕೋತ ತಿಪ್ಪೆಗಳ ಕಡೇಕ ಹೋತು ಸಿವಸಂಕರ ಮಾದೇವಾss

ಯಂಜಲೆಲೆ ಯಲ್ಲಮ್ಮಾಯಿಯ ಬಾಯಿಯಿಂದ ಹೊಂಟ ಮಾತುಗಳು ಹಾದಿ ನಡುವೆ ನಿಲ್ಲಲಿ.. ಅವು ಮುಂದಕ್ಕ ಪಯಣ ಬೆಳೆಸಿ ಸಾಹೇಬನನ್ನು ಮುಟ್ಟದಂಗ ಮಾಡು ಸಿವನೇ, ಯಂಜಲೆಲೆ ಅಂದರ ಯೇನರ್ಥ? ಕೊನೆ ಅಗುಳು ಅಂದರ ಯೇನರ್ಥ? ಯಿದು ಸಾಪವಾ, ವರವಾ.. ಸಾಸುವೆ ಕಾಳೊಳಗ ಸಮುದ್ರಅಡಗಿರುವಂಗಯಿತಲ್ಲಾ.. ಯಲ್ಲಾ ಅಯೋಮಯ.. ವಂಥಟಗಾದ ತಮ ತಮ್ಮ ಮುಖಗಳನ್ನು ಕ್ರುತಕವಾಗಿ ಅರಳಿಸುತ್ತ ಮಂದಿ ಹ್ಹಾ.. ಹ್ಹೂ ಅಂತಿದ್ದರು ಸಿವನೇ.. ವುಫೇ ಅಂತಿದ್ದರು ಸಿವನೇ.. ತಮ ತಮ್ಮ ಮಂದೇವರ ಮುಂದ ತುಪ್ಪದ ದೀಪ ಹಚ್ಚಿ ಸಾಹೇಬನಿಗೆ ಆಯುರಾರೋಗ್ಯ ಕೋರಬೇಕಂತ ಅಂದುಕೊಳ್ಳುತ್ತಿದ್ದರು ಸಿವನೇ..

ಅವರ ನಡುವೆ ಥಾವುಸು ಮುನ್ರೋ ಸಾಹೇಬನು ಅವಧೂತನೋಪಾದಿಯಲ್ಲಿ ಹೆಜ್ಜೆ ಹಾಕುತ್ತಿರಲು.. ಮಾಯಾ ಮುಚ್ಛಿಂದ್ರನಂತೆ ನೋಡುತ್ತಿರಲು.. ಸದರಿ ಪಟ್ಟಣದ ಬಿಕೋ ಯಂಬ ಬಯಲೊಳಗೆ ಟೆಮರಿಂಡು ಟ್ರೀಗಳನ್ನು ಬೆಳೆಸಿದರ ಹೆಂಗೆ ಯಂದು ಯೋಚಿಸುತ್ತಿರಲು.. ಜಡೆಗಟ್ಟಿದ ತಲೆಗಳ ಮ್ಯಾಲ ಕಯ್ನ ಆಡಿಸುತ್ತಿರಲು, ಮುಗುಳುನಗೆಯನ್ನು ಸಮ್ಮೋಹನಾಸ್ತರ ದೋಪಾದಿಯಲ್ಲಿ ಬೀರುತ್ತಿರಲು.. ತೆರೆದ ಕಣ್ಣೊಳಗೆ ಸುಖೀ ರಾಜ್ಯದ ಕನಸು ಕಾಣುತ್ತಿರಲು.. ಗವರ್ನರು ಮಾಶಯ ವೆಲ್ಲೆಸ್ಲಿಯ ಧೀರೋದಾತ್ತ ನಿಲುವನ್ನು ಧೇನಿಸುತ್ತಿರಲು..

ಅತ್ತ ಕೂಡ್ಲಿಗಿ ಪಟ್ಟಣದ ವಳ ಹೊರಗ ಸಂಭವಿಸುತಲಿದ್ದ ಸಣ್ಣದೊಡ್ಡ ಘಟನೆಗಳಿಗೆಲ್ಲಾ ಮಕುಟಪ್ರಾಯವಾದ ಘಟನೆಯೊಂದು ಸಂಭವಿಸಿತು. ಅದು ಯಾವುದೆಂದರೆ ಅದೇ. ಯಾದಾರ ದೂರ ದೇಸಕ್ಕ ಹೋಗಿ ಕೂಡ್ಲಿಗಿ ಅಂದರ ತಿಲ್ಲಾನ ತಾಯಕ್ಕ ಅದಾಳಲ್ಲss.. ಅದೆs ಕೂಡ್ಲಿಗಿ ಯೇನು? ಅಂತ ಕೇಳುತಾರ.. ತಿಲ್ಲಾನ ತಾಯಕ್ಕ ಅಂದರ ಕೂಡ್ಲಿಗಿಯೂ, ಕೂಡ್ಲಿಗಿ ಅಂದರ ತಿಲ್ಲಾನ ತಾಯಕ್ಕ, ವಂದಕೊಂದು ಬೆಸಗೊಂಡುಬಿಟ್ಟವೆ ಅವರೆಡೂ.. ಯೀ ವಯಸ್ಸಿನಲ್ಲೇ ಯೀಟೊಂದು ಚಂದ ಯಿರೋ ಆಕೆ ಹರೇದವಳಾಗಿದ್ದಾಗ ಯಿನ್ನೇಟೊಂದು ಚಂದಿರಬ್ಯಾಡ.. ಆ ಕಾಲದಲ್ಲಿ ಗುಡೇಕೋಟೆ ಮಾ ಸಮುಸ್ಥಾನವನ್ನು ಆಳುತಲಿದ್ದ ಯೀರ ಬಲ್ಲಾಳವರುಮನ ಅರಮನೆಯೊಳಗ ಆಸ್ಥಾನ ನರ್ತಕಿ ಆಗಿದ್ದಂಥಾಕೆಯೂ, ತನ್ನ ಗಾಯನ ಸಿರಿಯಿಂದ ಸಿರಾದ ಸಿರಾಜುದ್ದವುಲನನ್ನೂ, ಚಿತ್ರಕಲ್ಲು ದುರುಗದ ಚಿನ್ನ ಮದಕರಿನಾಯುಕನನ್ನೂ, ಪೆನುಕೊಂಡೆಯ ಯೀರ ಪ್ರತಾಪ ಜಗದೇವರಾಯನೇ ಮೊದಲಾದೋರ ರುದಯ ಸಾಮ್ರಾಜ್ಯವನ್ನು ಸೂರೆ ಗೊಂಡಂಥಾಕಿಯೂ ಆದ ತಾನು ತನ್ನ ನಡುವಯಸ್ಸಿನಲ್ಲಿ ಬುಗುಡೀ ನೀಲಕಂಠಪ್ಪನನ್ನು ಯಿಟ್ಟುಕೊಂಡು ಯಿದ್ದು ಸದರಿ ಪಟ್ಟಣಕ್ಕೆ ಹೊಸ ಮೆರಗು ನೀಡಿದ್ದಳು.. ಗಾಯನ ಕೋಗಿಲೆಯೂ, ನ್ರುತ್ಯ ಯಿಶಾರದೆಯೂ ಆದ ಆಕೆಗೋರ್ವ ಹೆಣ್ಣು ಕೂಸು ಯಿತ್ತಷ್ಟೆ.. ಅದು ದಿನಕ್ಕೊಂದು ಚಂದದಲ್ಲಿ ಬೆಳಿತಾ ಬೆಳಿತಾ ಯಿತ್ತಷ್ಟೆ.. ಯೇಳು ಬೆಂಚಿ ದೊಡ್ಡಾರ್ಯರಿಂದ ಸಂಗೀತ ಪಾಠವನ್ನೂ, ಮಾಲೂರು ಮೂಲದ ಯಿದುಷಿ ಪುಥಳೀ ಬಾಯಿಯಿಂದ ನ್ರುತ್ಯಶಾಸ್ತ್ರವನ್ನೂ ಅಭ್ಯಾಸ ಮಾಡುತಾಯಿತ್ತಷ್ಟೆ.. ತನ್ನ ಯಂಟೊಂಭತ್ತನೇ ವಯಸ್ಸಿನಿಂದ ಚಂದ್ರಾಮನ ಬೆಳದಿಂಗಳನ್ನು ಸರ್ರಂತ ಮಯ್ಯಿ ತುಂಬ ಹೀರಿಕೊಳ್ಳುತ್ತಿದ್ದಳಷ್ಟೆ, ಬಗೆಬಗೆಯ ಪುಷ್ಪರಾಜಿಯಿಂದ ವಲಸೆ ಬರುತಲಿದ್ದ ಪರಿಮಳ, ಸವುಂದರ್ಯಕ್ಕೆ ತಾನು ತನ್ನ ಸರೀರದ ತುಂಬೆಲ್ಲ ಆಸ್ರಯ ನೀಡುತ್ತಿದ್ದಳಷ್ಟೆ.. ನೋಡೋರ ಕಣ್ಣುಗಳೊಳಗ ಗೊಂಬಿಯಾಗಿದ್ದಳಷ್ಟೆ.. ಕಾರಿರುಳಿಗೆ ತನ್ನ ವಾರುದ್ದ ತಲೆಗೂದಲ ಅರಮನೆಯೊಳಗ ಆಶ್ರಯ ನೀಡಿದ್ದಳಷ್ಟೆ, ಕಾಮನಬಿಲ್ಲುಗಳಿಗೆ ತನ್ನ ಕಣ್ಣುಗಳಲ್ಲಿ ಆಶ್ರಯ ನೀಡಿದ್ದಳಷ್ಟೆ, ತಾನೇ ವಂದು ನಡೆದಾಡುವ ಹೂದೋಟವೆಂಬಂತೆ ದುಂಬಿ ಪತಂಗಗಳಿಗೆ ಭ್ರಮೆಯನ್ನುಂಟು ಮಾಡುತಲಿದ್ದಳಷ್ಟೆ, ತಾನು ಹೆಜ್ಜೆಯಿಟ್ಟ ಕಡೇಲೆಲ್ಲ ಪ್ರತಿ ಸೊರ್ಗವನ್ನು ಸ್ರುಷ್ಟಿ« ಮಾಡುತಲಿದ್ದಳಷ್ಟೆ, ತನ್ನತ್ತ ದ್ರುಷ್ಟಿ ಹಾಯಿಸಿದೋರ ಹಸಿವು ಬಾಯಾರಿಕೆ ದಣವು ಪರಿಹಾರ ಮಾಡುತಲಿದ್ದಳಷ್ಟೆ, ತಾನೋರ್ವ ಚೂತವನ ಚಯಿತ್ರಳಾಗಿದ್ದಳಷ್ಟೆ. ಹಿಂಗs ಮುಂದುವರಿದರೆಲ್ಲಿ

ತಮ್ಮೊಳಗಿನ ಸವುಂದರ್ಯ ಆಕೆಯತ್ತ ವಲಸೆ ಹೊಂಟು ತಾವು ಪುಟ್ಟಂ ಪೂರ ಬೋಳಾಗುವೆವೋ ಯಂಬ ತಕರಾರು ಪ್ರಾಕ್ರುತಿಕವಾಗಿ ಕೇಳಿ ಬರುವ ಕಾಲಕ್ಕಾಗಲೇ ಚಿನ್ನಾಸಾನಿಯ ಸರೀರ ಸಂಪತ್ತು ಹನ್ನೆರಡು ಪೂರಯಿಸಿ ಯಂಟು ತಿಂಗಳಾಗಿತ್ತು. ಪ್ರತಿ ದಿನ, ಪ್ರತಿ ಕ್ಷಣ ಯಂಥದೋ ವಂದು ನಮೂನಿ ಭಾವನಾ ಮೂಡುತಾ ಆಗುತಾ.. ಆಗುತಾs ಮೂಡುತಾss

ಚಿನ್ನಸಾನಿಯು ನ್ರುತ್ಯಾಭ್ಯಾಸ ಮಾಡುತ ಯಿದ್ದಾಗ ದೋರೆಗಾಯಿಯಿದ್ದದ್ದು ಹಣ್ಣಾದದ್ದು ತಡ ಆಗಲಿಲ್ಲ. ಹಣ್ಣಾಗಿದ್ದದ್ದು ಬಿರಿತು ಬಾಯಿ ಬಿಟ್ಟದ್ದು ತಡ ಆಗಲಿಲ್ಲ, ಬಿರಿತ ಬಾಯಿ ದ್ವಾರಾ ರಸವು ಚಿಲ್ಲೆಂದು ಸೋರಿದ್ದು ತಡ ಆಗಲಿಲ್ಲ.. ಹಂಗೇ ಲಂಗ ದಾಣಿಯನ್ನು ಹಿಡಕೊಂಡು ತನ್ನ ಖಾಸಾ ಕೋಣೆ ಸೇರಿಕೊಂಡಳು.. ನಿಲುಗನ್ನಡಿಯೊಳಗೆ ತನ್ನ ಸರೀರವನ್ನು ತಾನು ನೋಡಿಕೊಂಡಳು. ತನ್ನ ಲಂಗದೊಳಗ ಅರುಣೋದಯ ಸಂಧ್ಯಾ ಸಮಯವು ಯಾಕ ಆಗಿರುವುದು..? ಯಾವುದಾರ ಅಗೋಚರ ಸಗುತಿಯು ಚೂರಿಯಿಂದ ಯಿರಿದು ಗಾಯ ಮಾಡಿರುವುದಾ ಅಂದರೆ ಅಂಥ ಗಾಯ ಕಾಣುತಾಯಿಲ್ಲ.. ಯೇನಾಗಿದ್ದಿರಬೌದಿದು? ಯಾಕಾಗಿದ್ದಿರಬೌದಿದು..? ತನ ತೊಡೆ ಸಂಧಿಯೊಳಗ ಮಂದ ಮಾರುತ.. ರಾಗ ಸಂಚಾರ.. ತಿಲ್ಲಾನ ತಂನನನ.. ಗಾಯನ ಕಛೇರಿ ಸ್ರುತಿ ಸರಿಪಡಿಸಿಕೊಳ್ಳುತ್ತಿರುವಂಥ.. ಜಯದೇವ ಕವಿಯು ಲಲಿತಲವಂಗ ಲತಾ ಪರಿಸೀಲನ ಮಾಡುತ್ತಿರುವಂಥ... ನ್ರುತ್ಯಗಾತಿಯರು ಗೆಜ್ಜೆ ಕಟ್ಟಿಕೊಳ್ಳುತ್ತಿರು ವಂಥ... ಕೋಗಿಲೆಗಳು ವುಯಿಲಿಡುತ್ತಿರುವಂಥ, ನವುಲುಗಳು ಕುಣಿದಾಡುತ್ತಿರುವಂಥ, ವಸಂತಮಾಸವು ಅಂಬೆಗಾಲಿಡುತ್ತಿರುವಂಥ.... ಕಾಳಿದಾಸನ ರುತು ಸಮ್ಹಾರದ ಪುಟಗಳು ಪಟಪಟನೆ ತೆರೆಯುತ್ತಿರುವಂಥ.. ತನ್ನ ಸಮಸ್ತ ಸರೀರವು ಝುಗಝುಗಿಸುವ ರಂಗಸಜ್ಜಿಕೆಯಾಗುತ್ತಿರುವಂಥ.. ಹ್ಹಾ.. ಹ್ಹಾ.. ಯಷ್ಟೊಂದು ಅಗೋಚರ ಪುರುಷ ಕಣ್ಣುಗಳು.. ಹೋ..ಹೋ.. ಯಷ್ಟೊಂದು ಅಗೋಚರ ಕಿವಿಗಳು.. ಹ್ಹಾ.. ಹ್ಹಾ.. ಯಷ್ಟೊಂದು ಅಗೋಚರ ರೋಮಭರಿತ ಹಸ್ತಗಳು.. ಅವ್ವಾ.. ಯಂದು ಚೀರಿಕೊಂಡಳು ಚಿನ್ನಸಾನಿ.. ಆ ಕುಕಿಲ್ವ ಕೂಗಿನ ನೂಲೇಣಿಯೇರಿ ನಡಕೊಂಡೇ ಬಂದ ತಾಯಕ್ಕ...

ಗೋಯಿಂದಗಿರಿ ಕಡೇಲಿಂದ ಬೆಳ್ಳಿ ಗುಂಡಾಚಾರ್ಯರು, ಮುದ್ದನಗಿರಿಯಿಂದ ಬಂದ ಮುದ್ದು ಕ್ರುಷ್ಣಮಾಚಾರ್ಯರು ತಮ ತಮ್ಮ ಕಂಕುಳುಗಳಿಂದ ತಿಥಿವಾರಕರಣ ಸಂಬಂಧೀ ಹೊತ್ತಿಗೆ ಗಳಯಿಳುವಿದರು.. ಸಂಕಲನ, ಯವಕಲನ, ಗುಣಾಕಾರ ಭಾಗಾಕಾರ ಮಾಡೀ ಮಾಡಿ ಚಿನ್ನಾಸಾನೆಮ್ಮ ನವರು ರುತುಮತಿ

ಪಟ್ಟವನ್ನೇರಿರುವ ಗಳಿಗೆ ಸುಭದಾಯಕಯಿರುವುದು, ರಾಜಯೋಗ ಪ್ರದಾಯಕ ಯಿರುವುದು ಯಂದು ಜೋತಿಷ್ಯ ಸಾಸ್ತರವ ನುಡಿದರೆಂಬಲ್ಲಿಗೆ ಸಿವಸಂಕರ ಮಾದೇವಾss..

ಯವ್ವನದರಮನೆಯ ಹೊಸ್ತಿಲನ್ನು ಯೀಗ ತಾನೆ ದಾಟಿರುವ ತನ್ನ ವಮುಸ ಕುಡಿಯು, ತನ್ನ ಪಂಚಪ್ರಾಣವು ಯೇನು ತಿಂಬಬೇಕು? ಯೇನು ಕುಡಿಯಬೇಕು ಯಂದು ಯೋಚಿಸಿದ ತಾಯಕ್ಕ ವಣದ್ರಾಕ್ಷಿ, ಗೋಡಂಬಿ, ಬಾದಾಮು, ವುತ್ತತ್ತಿ, ಖರಜೂರ, ಕೆನೆತುಪ್ಪ, ಕೆನೆಮೊಸರು, ನೊರೆವಾಲು, ಬಂಗಾರುಮುಡಿ ಅಕ್ಕಿ, ಜವೆಗೋದಿ ಯಿವೇ ಮೊದಲಾದ ದುಬಾರಿಯೂ, ಪುಷ್ಟಿದಾಯಕಮೂಆದ ದಿನಿಸನ್ನು ದೂರದ ದೇಸಗಳಾದ, ದಾವಣಗೆರೆ, ರಾಣಿ ಬೆನ್ನೂರುಗಳಿಂದ ಗುಟ್ಟಾಗಿ ತರಿಸಿಕೊಂಡದ್ದು ಯಾಕಂದರ.. ಅದಕ್ಕssss.. ಆದರ ಯೀ ಯಲ್ಲ ಯೇರುಪಾಡು ಯೇಸು ದಿವಸಗಳ ಮಟ ನಡೆಯಲಕಾದೀತು? ಚಂದ್ರಾಮನಿಂದ ಬೆಳದಿಂಗಳನ್ನು ತಡೆಯಲಕಾದೀತಾ? ಪುಷ್ಪರಾಜಿಯಿಂದ ಪರಿಮಳಕ್ಕಡ್ಡ ಗೋಡೆ ಯಬ್ಬಿಸಲಕಾದೀತಾ? ರುತುಮತಿಗೊಂಡ ಸರೀರದ ಮ್ಯಾಲ ವುಬ್ಬು ತಗ್ಗುಗಳು ಮೂಡಧಾಂಗ... ಸಿವನೇ ಅದೆಲ್ಲ ಆಗದ ಮಾತು...

ಚಿನ್ನಾಸಾನಿ ಫಲಾನ ದಿವಸದಂದು ಹಿರೇಮನುಶ್ಯೋಳಾದಳೆಂಬ ಸಂಗತಿಯು ಪಟ್ಟಣದ ಕಿವಿಯೊಳಗ ಪಾನಕದ ಧಾರೆಯಾಗಿ ಸುರಿಯಿತು. ಯಿಡೀ ಪಟ್ಟಣವು ತಾನೇ ರುತುಮತಿ ಗೊಂಡೋಪಾದಿಯಲ್ಲಿ ಸಂಭ್ರಮಿಸಿತೆಂಬಲ್ಲಿಗೆ ಸಿವಸಂಕರ ಮಾದೇವಾss

ಅತ್ತ ಹರಪನಹಳ್ಳಿ ಸೀಮೆ ವಳಿತದೊಳಗೆ ತೆಲಗಿ, ಗುಂಡುಗತ್ತಿ, ಮಸುಲವಾಡ, ಅಲಗಿಲವಾಡ, ಚಿರಸ್ತಳ್ಳಿ, ಅರಸಿಕೆರೆ, ಕಂಬತ್ತಳ್ಳಿಯೇ ಮೊದಲಾದ ಕಾಸಿಗೊಂದು ಕೊಸರಿಗೊಂದ ರಂತಿದ್ದ ಸಮುಸ್ಥಾನಗಳ ರಾಜರುಗಳನ್ನು ನೋಡಿ ಮೂಸರುವಳ್ಳಿಗಳೇ ನಾಚಿಕೊಳ್ಳತೊಡಗಿದ್ದವು ಸಿವನೇ.. ಸಿಕ್ಕವರಿಗೆ ಸಿವಲಿಂಗ ಅಂತ ತಾವೇ ವಂದುಕಡೇಲಿಂದ ತಮ ತಮ್ಮ ಪ್ರಜೆಗಳನ್ನು ಮೇಯಲಾರಂಭಿಸಿದ್ದರು ಸಿವನೇ.. ಕಳ್ಳರಿಗ್ಯಾಕೆ ಪಾಲು ಕೊಡಬೇಕೆಂಬ ಲೆಕ್ಕಾಚಾರದಿಂದ ಕೆಲ ರಾಜರು ರಾತ್ರಿಯಾದೊಡನೆ ಬಂದಿಪೋಟು ಮುಖವಾಡ ಧರಿಸಿ ಖುದ್ದ ಕಳುವಿಗೆ ಹೋಗಲಾರಂಭಿಸಿದ್ದರು ಮುರಹರನೆ.. ತಮ್ಮೀ ವಾಮುಮಾರ್ಗಕ್ಕೆ ಅನುಕೂಲವಾಗುವಂತೆ ತಮ ತಮ್ಮ ರಾಜ್ಯಾಂಗದ ಕಾನೂನುಗಳನ್ನು ತಿದ್ದುಪಡಿ ಮಾಡಿ ಪ್ರಜೆಗಳ ಮ್ಯಾಲ ಯೇರಲ ಕಾರಂಭಿಸಿದ್ದರು 'ರಾಜಾ ಪ್ರತ್ಯಕ್ಷದೇವತಾ'ಯ ಸಿಲಾಪಲಕಗಳನ್ನು ತಮ ತಮ್ಮ ರಾಜ್ಯಗಳ ಬೀದಿ

ಬೀದಿಲಿ.. ಗಲ್ಲಿ ಗಲ್ಲಿಗಳಲ್ಲಿ ತೂಗುಬಿಟ್ಟಿದ್ದರು, ಕೆತ್ತಿಡಿಸಿದ್ದರು ಸಿವನೇ...

ಅಂಥ ರಾಜ್ಯಗಳಿಂದ ಕೊಸರಿಕೊಂಡು ಕೂಡ್ಲಿಗಿಯಂಥ ಪಟ್ಟಣಗಳಿಗೆ ವಲಸೆ ಹೋಗಿದ್ದ ಪ್ರಜೆಗಳ ಸ್ಥಿತಿಗತಿಯಂತೂ ಅಯೋಮಯವಾಗಿತ್ತು. ಯಿಂಥ ಸಂತರಸ್ತರಿಗೆ ಗುರುತಿನ ಚೀಟಿ ಕೊಡುವುದರ ಬಗ್ಗೆ, ಮರುವಸತೀನ ಕಲ್ಪಿಸುವ ಬಗ್ಗೆ, ವಮ್ಮತ ಆಳುವ ವರ್ಗಗಳಲ್ಲಿ ಮೂಡಿರಲಿಲ್ಲ.. ಯಿವರು ಆಯೋಗಗಳನ್ನು ಅವರಲ್ಲಿಗೆ ಕಳಿಸುವುದು, ಅವರು ಯಿವರಲ್ಲಿಗೆ ಕಳಿಸುವುದು.. ಯಾದೇ ವಂದು ನಿರ್ಣಯಕ್ಕೆ ತಗಲದಿರುವುದು, ಹಿಂಗs ಕಾಲಕ್ಷೇಪ ಮುಂದೊರೆದಿತ್ತು ಸಿವನೇ... ಹಿಂಗಾಗಿ ಸಂತರಸ್ತರು ವೂರುಗಳೊಳಗ ಯಿರಲಿಕ್ಕಾಗದೆ, ಅಡವಿ ಪಾಲಾಗಲಿಕ್ಕಾಗದೆ.. ಯಿಲಯಿಲನೆ ವದ್ದಾಡುತ್ತಿದ್ದರೆಂಬಲ್ಲಿಗೆ.. ಯಿಂಥ ಪರಿಸ್ಥಿತಿಗಳಿಂದ ತಲ್ಲಣಕ್ಕೀಡಾಗಿದ್ದ ಪ್ರದೇಶ ಗಳ ಬೆನ್ನ ಮ್ಯಾಲ ಬರೆಯಳದಂತೆ ಮೂಲೆಮುರುಕಟ್ಟಿನಲ್ಲಿದ್ದ ಕುದುರೆಡವಿನಿಂದ...

ಆಕಾಸದೆತ್ತರ ನಿಲುವಿನ ಹೆಣುವುಗಳ ಆ ಪಟ್ಟಣವನ್ನು ಸೇರಿಕೊಂಡವಳಂತೆ.. ಅದಾದೋ ಪಿಕದಾನಿಯವನ ಜಾಲಿಮರದಂಥ ಸರೀರದೊಳಗ ವಸಾಹತು ಸ್ಥಾಪನೆ ಮಾಡಿರುವಳಂತೆ.. ಕೆಂಗಣ್ಣುಗಳ ಮ್ಯಾಲಿನ ಹುಬ್ಬುಗಳನು ಮಾಯಮಾಡಿರುವಳಂತೆ.. ತಾಯಂದಿರ ಯದೆಯೊಳಗ ವುಪ್ಪು ನೀರು ತುಂಬಿರುವಳಂತೆ.. ಪಟ್ಟಣದಿಂದ ನಗೆಯನ್ನು ವುಪಸವ್ಮಾರ ಮಾಡಿರುವಳಂತೆ.. ಯಿಂಥ ನಾನಾ ನಮೂನಿ ವರ್ತಮಾನದ ಝುಳ ಹೊಂಟು ಬರುತ್ತಲೇಯಿತ್ತು. ಆಮಾತ್ಯ, ಸೇನಾಧಿಪತಿ, ಭಂಡಾರಿ ರಾಜಪರಿವಾರ ದಂಥವರನ್ನು ಆ ಅಗೋಚರ ಸಗುತಿ ಬಿಟ್ಟಿಲ್ಲವಂತಲ್ಲಾ.. ಅಯ್ಯೋ.. ಅಲ್ಲಿಗೆ ತಮ್ಮ ಮಗಳನ್ನು ಕೊಟ್ಟಿದ್ದೀವಿ.. ಅಯ್ಯೋ ಅಲ್ಲಿಂದ ಫಲಾನ ಯಿಂಥವರ ಮಗಳನ್ನು ತಂದುಕೊಂಡಿದೀವಿ.. ಅಯ್ಯೋ ಅವರ ಪರಿಸ್ಥಿತಿ ಯೇನಾಗಿರುವುದೋ.. ಹೋಗಿ ನೋಡಬೇಕಂದರ, ನೋಡಿ ಕರೆತರಬೇಕಂದರ ತಮ್ಮ ಹುಬ್ಬುಗಳು ನಿರ್ನಾಮವಾದರ ಹೆಂಗs ತಮ್ಮ ಮುಖದ ಮ್ಯಾಲಿಂದ ನಗೆ ವುತಾರಗೊಂಡರ ಹೆಂಗss ಹಿಂಗsಯಸನ ಮಾಡುತ ಮಂದಿ ಕುದುರೆಡವಿದ್ದ ದಿಕ್ಕಿನತ್ತ ತಾಸುಗಟ್ಟಲೆ ನೋಡುವುದು.. ಗಳಿಗ್ಗಳಿಗ್ಗೊಮ್ಮೆ ನಿಟ್ಟುಸಿರು ಬಿಡುವುದು ಯಂಬಲ್ಲಿಗೆ..

ಹಗಲು ರೂಪದ ರಾತ್ರಿಯಿದ್ದ, ಮನಾರ ಹುಣ್ಣುಮಿಯಂದೂ ಮೂಡಲು ಚಂದ್ರಾಮ ನಿರಾಕರಣೆ ಮಾಡಿದ್ದ.. ನೀರು ಸುರುದೂ ಸುರುದೂ ಬತ್ತಿದ ಕಣ್ಣುಗಳಿದ್ದ ಬರದೆಡೆಗಳ ತುಂಬೆಲ್ಲ ದುಹ್‌ಸೊಪುನಗಳ ತುಡುಗಿಗೆ ಬಿದ್ದಿದ್ದ,

ಯಿಲಿಗಳು ಬೆಕ್ಕುಗಳಾಗಿ ಮ್ಯಾವ್ ಗುಟ್ಟುತಲಿದ್ದ, ಬೆಕ್ಕುಗಳು ಹುಲಿಗಳಂತೆ ಗರ್ಜಿಸುತಲಿದ್ದ.. 'ಸಾಂಬವೀ' ಯಂಬ ಸಬುದವು ಸಾವುರ ರೆಕ್ಕೆಯ ಗಂಡ ಭೇರುಂಡೋಪಾದಿಯಲ್ಲಿ ಹಾರಾಡುತಲಿದ್ದ ಕುದುರೆಡವು ಪಟ್ಟಣದೊಳಗ ವಂಚೂರಂದರ ವಂಚೂರೇ ನೆಮ್ಮದಿ ನೆಲಸಿತ್ತು.. ಅದ್ಯಾವಾಗಿನಿಂದಪಾ ಸಿವನೆ ಅಂದರ ಆವಾಗಿನಿಂದಪಾ ಸಿವನss

ದವಲತ್ತಿನ ಸೂತಕಯಿದ್ದ ಅರಮನೆಯಿಂದ ಹೊರ ಬಿದ್ದ ಜಗ್ಲೂರೆವ್ವನು ದಿಬ್ಬದ ಕಡೆ ನೋಡಿದ್ದೇ ಪರಪಾಟಾಗಿತ್ತು.. ಸರ್‍ರನಂತ ಯಳಕೊಂಡುಬಿಟ್ಟಿದ್ದು ತಡ ಆಗಿರಲಿಲ್ಲ.. ತಾನು ಯೇರಿದ್ದು ತಡ ಆಗಿರಲಿಲ್ಲ.. ನೆತ್ತಿ ಮ್ಯಾಲ ಕಾಲೂರಿ ನಿಂತೊಡನೆ ಯಾರ‍್ಯಾರೋ ಅಂಗಾಲಗುಂಟ ತನ್ನ ಸರೀರದ ತುಂಬೆಲ್ಲ ತುಳುಕಾಡಿದಂಥ ಅನುಭವವಾತು.. ತಾನೇನು ಮಾಡಿದಳೋ? ಯೇನು ಬಿಟ್ಟಳೋ? ಯಲ್ಲಾ ಅಯೋಮಯ.. ಯೀಗ ಅನ್ನಿಸುತಾ ಅದೆ, ದಿಬ್ಬದ ನೆತ್ತಿ ಮ್ಯಾಲಿರೋ ರಂದ್ರಕ್ಕೂ ಅರಮನೆಗೂ ಸಂಬಂಧ ಅದೆ ಅಂಬುದು.. ತಾನಿಳಿವಾಗ 'ಜಗಲೂರೆವ್ವ ಮುಂದೆಂದಾದರು ತನ್ನನ್ನೇರಿ ಆತುಮಾಹುತಿ ಮಾಡಿಕೋ' ಯಂದು ಪಿಸುಗುಟ್ಟಿದಂತೆ ನೆನಪು.. ಅದರ ಮ್ಯಾಲ ನಿಂತುಕೊಂಡಿದ್ದು ಪಾಡನ್ನಿಸದೆ ಯಿರಲಿಲ್ಲ ಜಗಲೂರೆವ್ವಗೆ..

ದಿಬ್ಬದ ಮ್ಯಾಲಿಂದ ಕೆಳಗಿಳಿದೊಡನೆ ಪಟ್ಟಣದ ಮಂದಿ ಸುತ್ತಾಕ್ಕೊಂಡರು, ಬಿಡಲೇ ಯಿಲ್ಲ.. ಆಕೆ ಕೊಸರುವಾಗ ದಿಬ್ಬದ ಮ್ಯಾಲಿಂದ ಯಿಳುದು ಬಂದೀ ಅಂದರ ನೀನು ಸಾಮಾನ್ಯವಳಲ್ಲವ್ವಾ.. ನಿನ್ನ ಸರೀರದೊಳಗೂ ಅಲವುಕಿಕವಾದದ್ಧೇನೋ ವುಂಟು.. ಯಂದಾಡಿ ತರುಬುತಲಿದ್ದರು. ನೊಂದವಳಾದ ತನಗೆ ಬೇಯಿನ ಮರವೇ ಆಸ್ರಯ ನೀಡಿ ದೊಡ್ಡಸ್ತಿಕೆ ಮೆರೆದಿರುವುದೆಂದರ ತಾನ್ಯಾಕೆ ನೊಂದವರಿಗೆ ಕಯ್ಲಾದ ಸಾಯ ಮಾಡಬಾರದು ಯಂದು ನಿರ್ದರಿಸಿದ ಆಕೆಯು ಸೂರನನ್ನೇ ತನ್ನ ಸೇನಾಪತಿಯನ್ನಾಗಿಯೂ, ಚೆನ್ನವ್ವ, ಧರುಮದೇವತೆಯರನ್ನು ಆಮಾತ್ಯರನ್ನಾಗಿಯೂ ಮಾಡಿಕೊಂಡಳು.. ಕೆಲಮೊಮ್ಮೆ ಸಂತರಸ್ತರನ್ನು ತಾನೇ ಹುಡುಕಾಡಿ ಕೊಂಡು ಹೋಗುತಲಿದ್ದಳು. ಕೆಲಮೊಮ್ಮೆ ಸಂತರಸ್ತರೇ ಹುಡುಕಿಕೊಂಡು ತಾನಿದ್ದಲ್ಲಿಗೇ ಬರುತಲಿದ್ದರು.. ಹಿಂಗಾಗಿ ತಾನಿದ್ದಲ್ಲಿ ರಾಜಾಸ್ಥಾನ ಯೇರುಪಡುತಲಿದ್ದಿತು. ಧಯರ್ಯ, ಸಾಹಸಗಳ ಅಕ್ಷಯ ಪಾತ್ರೆಯನ್ನೇ ಯದೆಯೊಳಗಿಟ್ಟುಕೊಂಡಿದ್ದ ಆಕೆ ಧಣಿವರಿಯದೆ ದಯರ‍್ಯವನ್ನು ಧಾರೆಯರೆಯತೊಡಗಿದಳು.. ಯಾರಾದರೂ ಸತ್ತಮ್ಯಾಲ ಯೇನು ತಮ ಸಂಗಾಟ ವಯ್ಯುತ್ತಾರೆ.. ವಯ್ಯೋದು ಯರಡು ಮಾತ್ರ.. ವಳ್ಳೆದು ಮತ್ತು

ಕೆಟ್ಟದ್ದು.. ಯಂಬಂಥ ತಿಳುವಳಿಕೆಯುಳ್ಳವಳಾದ ತಾನು, ಸೊಯಂ ಧನುವಂತರಿಯಾಗಿದ್ದ ತಾನು, ವಂದೇ ಗದ್ದರಿಕೆ ಯಿಂದ ಜ್ವಾಲಾಮುಖಿಯ ಸದ್ದಡಗಿಸಬಲ್ಲವಳಾಗಿದ್ದ ತಾನು ನಿಂತಲ್ಲಿ ನಿಲ್ಲುತಲಿದ್ದುದುಂಟಾ..? ಕುಂತಲ್ಲಿ ಕುಂಡರುತ್ತಿದ್ದುದುಂಟಾ..? ಯಿಡೀ ಪಟ್ಟಣವು ಕಣ್ಣೀರೊಳಗೆ ಮುಖ ಪ್ರಕ್ಷಾಳನ ಮಾಡಿಕೊಳ್ಳುತ್ತಿರುವುದೆಂಬ ಕಾರಣಕ್ಕೆ ಯುರಡು ತುತ್ತು ಬಾಯೊಳಗಿಟ್ಟುಕೊಂಡಿದ್ದುಂಟಾ? ವಂದು ಬೊಗುಸೆ ನೀರು ಕುಡಿದು ತನ್ನ ಜೀವವನ್ನು ತಣ್ಣಗೆ ಮಾಡಿಕೊಂಡಿದ್ದುಂಟಾ? ಮಣ್ಣು ಮುಕ್ಕುವ ವುರಗಪತಾಕೆಯನ್ನೇ ತನ್ನ ಯಕ್ತಿತ್ವದ ಲಾಂಛನವಾಗಿಟ್ಟು ಕೊಂಡಿದ್ದ ಆಕೆಯು ರೆಪ್ಪೆಗೆ ರೆಪ್ಪೆಯ ಅಂಟಿಸಿ, ವಂದು ಜೋಂಪು ನಿದ್ದೆ ಮಾಡಿದ್ದುಂಟಾ..?

ಜಗಲೂರೆವ್ವನ ರೂಪದಲ್ಲಿ ಮೇರು ಪರುವತವೇ ತಮಗೆ ಆಸರೆ ನೀಡಯ್ತೆ ಯಂಬ ಭಾವನೆಯು ವಬ್ಬರೆದೆಯಿಂದ ಯಿನ್ನೊಬ್ಬರೆದೆಗೆ ಸರಾಗವಾಗಿ ಬಟವಾಡೆಗೊಂಡು ಯಿಡೀ ಪಟ್ಟಣಕ್ಕಿದ್ದ ಯರಡು ನಾಲಗೆಗಳ ಪಯ್ಕಿ ವಂದರ ವ್ಯಾಲ ಜಗಲೂರವ್ವ ಯಂಬ ನಾಮವು, ಯಿನ್ನೊಂದರ ವ್ಯಾಲ ಸಾಂಬವಿಯಂಬ ನಾಮವು.. ಯಿವು ಯರಡೂ ಸ್ತ್ರೀ ಸಂವಾದಿ ಪದಗಳೇ.. ಯೀ ಯರಡು ಪದಗಳ ಗುಣ ಧರುಮ ಯಿಭಜನೆ ಮಾಡಿದರ ವಂದರದ್ದು ವುತ್ತರಾದಿ, ಯಿನ್ನೊಂದರದ್ದು ದಕ್ಷಿಣಾದಿ.. ಯೀ ಯರಡರ ಪಯ್ಕಿ ಸಾಂಬವಿ ಯಂಬ ನಾಮವು ಕನಸಿನ ಗಂಟಾಗಿದ್ದರ, ಜಗಲೂರೆವ್ವ ಯಂಬ ನಾಮವು ನನಸಿನ ನಗದು ಗಂಟು.. ಸಾಂಬವಿ ಯಂಬ ನಾಮವು ಕಯ್ಯಿಗೆಟುಕದ, ಮೂಹೆಗೆಟುಕದ ಆಕಾಸವಾಗಿದ್ದರ, ಜಗಲೂರೆವ್ವ ಯಂಬ ನಾಮವು ಭೂಮಿಯು, ಸಾಂಬವಿಯಂಬ ನಾಮವು ತೀರ್ಥವಾದರ, ಜಗಲೂರೆವ್ವ ಯಂಬ ನಾಮವು ದೇಹಿಯಂದು ಬಂದವರ ದಾಹ ತಣಿಸುವಂಥ ಯರಡು ಬೊಗುಸೆ ವುದುಕವು.. ಮಂಗಳಾರತಿಯಿಂದ ಅಡುಗೆ ಮಾಡಲಾದೀತಾ.. ಲೋಬಾನದ ಹೊಗೆ ಅಡುಗೆ ಮನೇಯ ವಲೆಯಿಂದೇಳುವ ಹೊಗೆಗೆ ಸರಿಸಮಾನವಾ...?

ಹಿಂಗಾಗಿ ಯಾರ ನಾಲಗೆ ಮ್ಯಾಲ ನೋಡಿದರೂ ಜಗಲೂರೆವ್ವ ಯಂಬ ಪಂಚಾಕ್ಷರಗಳು, ಯಾರ ಕಿವಿಯೊಳಗಿಣುಕಿದರೂ ಜಗಲೂರೆವ್ವ ಯಂಬ ಪ್ರಣವನಾದವು.. ಹಿಂಗss ವಂದ ರವ್ವಷ್ಟು ದಿವಸಗಳುರುಳಿದಲ್ಲಿ ಸಾಂಬವಿಯಂಬ ನಾಮವು ನೇಪಥ್ಯಕ್ಕೆ ಸರಿಯುವ ಕಾಲ ದೂರಯಿಲ್ಲ.. ಜಗಲೂರವ್ವನ ಬಗ್ಗೆ ಸಾಂಬವಿಯ ಮನಸ್ಸಿನೊಳಗ ಸಕಾರಾತುಮಕ ಅಭಿಪ್ರಾಯ ಯಿರುವುದೋ? ನಕಾರಾತುಮಕ ಅಭಿಪ್ರಾಯ ಯಿರುವುದೋ? ಯಿದು ದೇವರಿಗೆ

ಮಾತ್ರಗೊತ್ತಿರಬೌದಾದ ಯಿಷಯವು.. ಯಂದು ಮುಂತಾಗಿ ಮುಂದಾಲೋಚನೆ ಮಾಡುತ ಗೊಂಜಾಡ ಲರಡವೆಜ್ಜ, ಜಡೆತಾತರಂಥ ಹಿರೀಕರೇನಿದ್ದರು.. ಅವರು ಸದರಿ ಪಟ್ಟಣದ ಹೆಣ್ಣು ದೇವತೆಗಳ ಗುಡಿಪವುಳಿಯೊಳಗ ದೀಪಗಳಾರದಂಗ, ಗಂಟೆ ಜಾಗಟೆಗಳು ಸದಾ ಮೊಳಗುತ್ತಿರುವಾಂಗ, ಪೂಜೆ ಪುನಸ್ಕಾರ ಸದಾ ಜರುಗುತ್ತಿರೋ ಹಾಂಗ ನೋಡಿಕೋತಿದ್ದರು.. ದೇವಿಭಾಗವತ ಪ್ರವಚನ ಪುಣ್ಯಕಥಾ ಶ್ರವಣ ಗಳಿತ್ಯಾದಿ ಸದಾ ಸಾಪಗ್ರಸ್ತರ ಕಿವಿಗೆ ಬೀಳುತ್ತಿರೋ ಹಾಂಗ ತಕ್ಕ ಯೇರುಪಾಡು ಮಾಡಿದ್ದರು.. ಪ್ರಜೆಗಳೆದೆಯೊಳಗ ದಯವಿಕ ಸೊರೂಪೀ ಅಂಜಿಕೆಯು ಭಾಡದಾಂಗಿರಲಿ ಯಂಬ ಕಾರಣಕ್ಕೆ ಸ್ತ್ರೀ ದೇವಿಯ ಯಿಯಿಧ ಅವತಾರಗಳನ್ನು ಯತ್ತಿ ತೋರಿಸುವಂಥ ಚಿತ್ರಪಟಗಳನ್ನು ಬರೆಯಿಸಲಕೆಂದೇ ದೂರ ದೂರದ ಪ್ರಾಂತಗಳಿಂದ ನಿಷ್ಣಾತ ಕಲಾಯಿದರಿಗೆ ಆಮಂತರಣಗಳನ್ನು ಕಳುವಿದ್ದರು. ಯಿವರ ಯೀ ಆಸ್ತೀಕ ಪ್ರಯತ್ನಗಳಿಗೆ ಹೆಗಲು ಕೊಟ್ಟಿದ್ದವರೆಷ್ಟೋ.. ಆದರs ಹೆಣ್ಣುದೇವರ ಕಾರ್ಯೆವಿಗೆ ದೇಣಿಗೆ ನೀಡಿದರೆಲ್ಲಿ ತಮ್ಮ ಕುಲದೇವರಾದ ತಿರುಪತಿ ಯಂಕಟರಮಣ ಸೋಮಿಯು ಮುನುಸಿಕೊಳ್ಳುವನೋ ಯಂಬ ಲೆಕ್ಕಾಚಾರದಿಂದ, ಅರಮನೆಯವರು ತನ್ನಿಂದ ಮತ್ತಷ್ಟು ಸಾಲ ಸೋಲ ಗಿಂಜುವರೋ ಯಂಬ ಅನುಮಾನದಿಂದ ರೊಕ್ಕಸ್ಥನಾದ ತಿರುಪಾಲಯ್ಯ ಸ್ರೇಷಿ«ಯು ಬೇಕೆಂದೆ ತಲೆಮರೆಯಿಸಿ ಕೊಂಡಿದ್ದನು.. ತನ್ನ ಮನೆ ಮುಂದ 'ನಾಳೆ ಬಾ ಆಸ್ತೀಕ' ಯಂಬ ಪಲಕವನ್ನು ತೂಗುಬಿಟ್ಟು ನೆಲಮಾಳಿಗೆಯೊಳಗ ಭೂಗತಗೊಂಡು ವುಪದ್ರವೀಪಟುಗಳಾದ ಮೂಷಿಕಗಳೊಂದಿಗೆ ವಾರ ಲಾಗಾಯ್ತು ಸಹಜೀವನ ಮಾಡುತಲಿದ್ದನು. ದೇಣಿಗೆ ಸಂಗ್ರಹ ಕಾರ್ಯದಲ್ಲಿ ಬಲವಂತ ಯಿರಲಿಲ್ಲವಾದ್ದರಿಂದ ಅರಮನೆಯವರಾಗಲೀ, ಪಟ್ಟಣದ ಹಿರೀಕರಾಗಲೀ ಸ್ರೇಷಿ«ಯರಂಥ ಲೋಭಿಗಳನ್ನು ಪತ್ತೆ ಹಚ್ಚುವ, ಹಚ್ಚಿ ಜಿಹ್ವಾಗ್ರದಿಂದ ಬಯ್ಗಳನ್ನು ಸಿಂಪಡಿಸುವ ಗೋಜಿಗೆ ಸುತರಾಂ ಹೋಗಿರಲಿಲ್ಲ. ಕೊಟ್ಟವರು ನಮ್ಮವರೆ, ಕೊಡದೆ ಯಿದ್ದವರೂ ತಮ್ಮವರೆ ಯಂಬ ವುದಾರ ಭಾವವಂದಿಗರಾಗಿದ್ದುದೇ ಅದಕ್ಕೆ ಕಾರಣ.. ಅದೂ ಅಲ್ಲದ ದಯವದ ವಾಸಕ್ಕೆ ಮೋಬಯ್ಯರಂಥವರ ಸರೀರಗಳೂ ಪ್ರಾಸಸ್ತ ್ಯ ಯಂದು ಯೀ ಹಿಂದ ಯಾರು ತಾನೆ ಮೂಹಿಸಿದ್ದರು? ಯೀ ಕಲಿ ಆಳುವಿಕೆಯೊಳಗ ನಿಕ್ರುಷ«ರಂದರ ಯಾರು? ವುತ್ಕ್ರುಸ್ಥರಂದರ ಯಾರು? ಯಾರ್‍ಯಾರ ಸರೀರಗಳನ್ನು ಯಾರ್‍ಯಾರು ಲಾವಣಿ ಹಿಡಕೊಂಡಿರುವರೋ, ಯಾವ ಯಾವ ಸರೀರದೊಳಗ ಯಾವ್ಯಾವ ಗರಡಿ ಮನೆಗಳಿರುವವೋ.. ವುಚ್ಚ ನೀಚಗಳ ನಡುವೆ ಪೂರುವ ಕಾಲದಿಂದ ಜೋಪಾನ

ವಾಗಿದ್ದು ಬಂದಿದ್ದಂಥಾ ಸೂಕ್ಷ್ಮಾತಿ ಸೂಕ್ಷುಮ ಗೆರೆಯನ್ನು ಅಳಿಸಿ ಹಾಕಿ ತಮ್ಮಂಥ ಹುಲುನರಮಾನ್ನವರಿಗೆ ಬುದ್ದಿ ಕಲಿಸಿರುವ ತಾಯಿ, ಸದರಿ ಪಟ್ಟಣವನ್ನು ತಾಯ್ತುನದಿಂದ ವಂಚಿಸಿರುವ ತಾಯಿಯು ತನ್ನ ವಸ್ತಿ ಸಮೇತ ಯಲ್ಲೋಗಿರುವಳೋ? ಯಲ್ಲಡಗಿ ಕೊಂಡಿರುವಳೊ? ಯೇನು ಕಥಿಯೋ ಸಿವನೆ..? ಯಲ್ಲಾ ಅಯೋಮಯ, ಯೀ ರವ್ವಸ್ಟು ದಿವಸಕ್ಕೇನೆ ತಲೆಯ ಹಕ್ಕನ್ನು ಮೊಣಕಾಲು ಕಸಕೊಂಡಯ್ತೆ.. ಯಿನ್ನು ಮುಂದೆ ಯೇನು ಕಾದಿರುವುದೋ? ಕುರುಗುಡ್ಡ, ಬೂದಿಗುಡ್ಡ, ಕೋಳಿ ಗುಡ್ಡಗಳಿಗೆ ಪವುರಾಣಿಕವಾಗಿ ಪ್ರಾಪ್ತ ವಾಗಿರುವಂಥ ಘನಘೋರ ಪಟ್ಟಣವು ಸದರೀ ಪಟ್ಟಣಕ್ಕೆ ಲಭ್ಯವಾಗದಂತೆ ಮಾಡಲು ಹಿರೀಕರಾದ ತಾವೇನು ಮಾಡಬೇಕು? ನಿಸ್ತೇಜಗೊಂಡಿರುವ ಅರಮನೆಗೆ ಯೇನು ಮಾಡಬೇಕು? ಹಿಂಗ ಮಾಡಿದರ ಹಂಗಾದೀತಾ? ಹಂಗ ಮಾಡಿದರ ಹಿಂಗಾದೀತಾ? ಸರುವಾಂತ ರ‍್ಯಾಮಿಯಾದ ಜಗದಂಬೇ ಅಲ್ಲಿರುವಳಾ, ಯಿಲ್ಲಿರುವಳಾ ಯಂದು ಹುಡುಕಾಡುತ್ತಿರುವಿರಲ್ಲ ಮೂಢರಿರಾ ಯಂದು ಜಡೆತಾತನು ಬ್ಯಾರೆ ನಿಷು«ರವಾಗಿ ಅಂದಾಡುತ್ತಿರುವನು.. ಯೇನು ಮಾಡುವುದಪ್ಪಾ.. ಯಂದು ಹಿರೀಕರು ಅರಳಿ ಮುದುಡುವ ಕಾರ‍್ಯ ಮಾಡುತಲಿದ್ದರೆಂಬಲ್ಲಿಗೆ...

ಯಿಂಥ ಹರಕತ್ತಿನ ಸಮಯದೊಳಗ ಕುಂಪಣಿ ಸರಕಾರ ಯಂಬ ಮಂತ್ರವು ಯಾರಿಗೆ ಹೊಳಿತೋ? ಯಾವಾಗ ಹೊಳಿತೋ? ಹೆಂಗ ಹೊಳಿತೋ? ಯದಕಂತ ಹೊಳಿತೋ? ಫಲಾನ ದಿವಸ ಫಲಾನ ಬ್ರಾಮ್ಮೀ ಮೂರ್ತದಂದು ಅರಮನೆಯ ವುಪ್ಪರಿಗೆ ಮ್ಯಾಲ ತೂಕಡಿಸು ತಲಿದ್ದ ರಾಜಮಾತೆ ಭಯ್ರಮಾಂಬೆಯ ಯದೆಯೊಳಗೆ ಪುವ್ವುಲ ರಾಜವಮುಸ ರುಕ್ಷವು ಅಗಾಧವಾಗಿ ಬೆಳೆಯಿತಂತೆ.. ಅದರ ಕೊಂಬೆ ಕೊಂಬೆಗುಂಟ ಜೋತಾಡುತಲಿದ್ದ ಕೀರ‍್ತಿಸೇಸರು ಆಕೆಗೆ ಅನಬಾರದ್ದನ್ನು ಅಂದಾಡಿದರಂತೆ.. ಅದಕಿದ್ದು ಮುದುಕಿಯು ಯಲವೋ ಥಾಮಸು ಮನ್ರೋss ಅನ್ಯಾಯವರ‍್ತು ಯೀ ಯಲ್ಲಾ ಅನಾಹುತಕ್ಕೆ ಕಾರಣ ಆದಿಯಲ್ಲಾ.. ಯೀ ಅರಮನೇನ ಪ್ರಜೆಗಳ ಕಾಲಡಿ ಕಸ ಮಾಡಿಬಿಟ್ಟೆಯಲ್ಲಾ.. ನೀನು ಹೇರಿದ ಅಡ್ಲಾಯುದಿಂದಲ್ಲಾ ಸಾಂಬವಿ ಪುರ ಪ್ರವೇಸ ಮಾಡುವಂತಾಗಿದ್ದುss ಪಿಕದಾನಿ ಮೋಬಯ್ಯನ ಸರೀರದೊಳಗ ವಸ್ತಿ ಮಾಡಿದ್ದುss ನಾನಾ ನಮೂನಿ ಸಂಕಟಗಳಿಗೀಡುಮಾಡಿದ್ದುss ಯಿದಕೆಲ್ಲಾ ನೀನು ಕಾರಣ.. ನಿನ್ನ ಕುಂಪಣಿ ಸರಕಾರ ಕಾರಣ.. ಯಾವತ್ತಾಸ್ತಿ ಅಧಿಕಾರ ನನ ಕಯ್ಯೊಳಗಿದ್ದಿದ್ದಲ್ಲಿ ನಾನು ಸುಮ್ಮಕ ಯಿರುತ್ತಿದ್ದೆನಾ?... ನಿನ್ನ ಕುಂಪಣಿ

ಸರಕಾರ ಬಂದ್ಯಾಕ ವದಗಿರೋ ಸಂಕಟಾನ ಪರಿಹಾರ ಮಾಡಬಾರದಂತೀನಿ..? ಯಂದು ಮುಂತಾಗಿ ರೋಧನ ಮಾಡಿದಳಂತೆ.. ಯಿದರೊಳಗ ಯಷ್ಟು ಖರೇಮೋ? ಯಷ್ಟು ಸುಳ್ಳೋ? ಆ ಭಗವಂತನಿಗೇ ಗೊತ್ತು? ಅದರ ಯಿಷ್ಟಂತು ನಿಜ.. ಯಿಡೀ ಪಟ್ಟಣದ ನಾಲಗೆ ಮ್ಯಾಲ ಕುಂಪಣಿ ಸರಕಾರ ಯಂಬ ಸಬುಧದ ಯೇಳು ಅಕ್ಷರಗಳು ಚಿಣಿದಾಂಡು ಆಟವನ್ನು ಆಡಲಾರಂಭಿಸಿದವು.. ಸರಕಾರ ಅರಮನೆಯ ಬೆನ್ನ ಮ್ಯಾಲ ಬರೆಯಳದರ ಸಾಂಬವಿಯ ಪಟ್ಟಣದ ಬೆನ್ನಮ್ಯಾಲ ಬರೆಯಳೆದಿರುವಳು. ಯಿವೆರಡಕ್ಕೂ ಸಂಬಂಧಯಿಲ್ಲ ದಿಲ್ಲ.. ಕುಂಪಣಿ ಸರಕಾರಕ್ಕೆ ಅಹವಾಲು ಮುಟ್ಟಿಸುವುದಾದರೂ ಹೆಂಗೆ? ಅಲ್ಲಿಗೆ ಯಾರನ್ನು? ಯಾವ ರೀತಿ ಕಳುವುದು? ಅರಮನೆಯವರ ಪಯ್ಕಿ ಯಾರಾದರೊಬ್ಬರು ಹೋಗಿ ಸುದ್ದಿ ಮುಟ್ಟಿಸಲಿ ಯಂಬ ಪ್ರಸ್ನೆ ವುದ್ಭವಿಸಿದಾಗ.. ರಾಜಸತ್ತೆಯೇ ಯಿಲ್ಲವೆಂದಾಗ ಅವರು ರಾಜರು ಹೆಂಗಾತಾರೆ.. ಆಳುವಿಕೆಯನ್ನು ಕಿತ್ತುಕೊಂಡಿರುವಾಗ ಅರಮನೆಯೊಳಗ ಅರಮನೆತನ ಯಲ್ಲಿಂದ ಬಂದೀತು..? ಅವರೂ ನಮ ತಮ್ಮಂಗ ಮಾಮೂಲು ಮನುಷ್ಯರು ಯಂಬ ಜವಾಬೂ ತೇಲಿ ಬಂತು. ರಾಜಪರಿವಾರದ ಮಂದಿಗಳೆಂಬುವ ಕಾಳೋರಗಗಳ ಬಾಯೊಳಗ ಅವುಸದಕ ಬೇಕೆಂದರೂ ವಂದಾದರೂ ಯಿಲ್ಲ ಹಲ್ಲು.. ಬಲು ನಿತ್ರಾಣವಾಗಿರೋ ಅರಮನೆಗೆ ಯಾಕ ಅಂಬುವಿರಿ.. ಅದರದಕs ಮಸ್ತು ಆಗಯ್ತೆ.. ಅದನು ಅದರ ಪಾಡಿಗೆ ಬಿಟ್ಟು ಮುಂದಿನದನ್ನು ಯೋಚನೆ ಮಾಡುವುದು.. ಅಚ್ಚೇ ಕಡೇಕ ಹಿರೀಕನೂ ಅಲ್ಲದ, ಯಿಚ್ಚೆ ಕಡೇಕ ಕಿರೀಕನೂ ಅಲ್ಲದ ನಡುಲ ವಯಸ್ಸಿನ ಗಣುಮಗ ಅಂದಾಡಿದ್ದು ಯಲ್ಲಾರಿಗೂ ಪಾಡನ್ನಿಸಿತು.. ಮದ್ದು ಅರೆಯೋರ ಮೋಣಿಯೊಳಗವರಿವರು ಆಡಿದ ಮಾತು ಅದೆಂಗ ತೆವಳಿಕೋತ ಹೋಗಿ ಅರಮನೆಯ ಕಿವಿ ಮೂದಿತೋ? ಅಯ್ಯೋ ತನ ದುರವಸ್ತೆಯೇ ಯಂದು ಮಮ್ಮಲನ ಮರುಗುತಲಿದ್ದ ಅರಮನೆಯೊಳಗ ಪ್ರಜೆಗಳು ತನ್ನನ್ನು ಯಾತಕ್ಕೂ ಕರಿತಾ ಯಿಲ್ಲವಲ್ಲಾ ಯಂದು ರಾಜಮಾತೆ ಭ್ರಮರಾಂಬೆಯು ಕಲ್ಲಾವುಲ್ಲಿಯಾಗಿಬಿಟ್ಟಳು. ಯೀ ಯಿಳಿಕೆ ವಯಸ್ಸಿನಲ್ಲಿರೋ ನೀನು ಯಾಕ ಮೂರ ವುಸಾಬರೀನ ಮಯ್ಯಿ ಮ್ಯಾಲ ಹಾಕ್ಕೋತಿ ಯಂದು ಸೊಸ್ತೇರು ಯಷ್ಟು ಗಲಗಲಾಂದರೂ..

ಅದೆಂಗ ಅರಮನೆಯಿಂದ ಹೊರಬಿದ್ದಳೋ? ಯಲಮೋ ಅಡವೆಜ್ಜ ನೀನು ಬಾ.. ಜಡೆಪ್ಪ ತಾತ ನೀನು ಬಾ ಯಂದು ಅದೆಂಗ ಕೂಗಿಕರೆದಳೋ? ವಟ್ಟಿನಲ್ಲಿ ಚಾವಡಿಯಲ್ಲಿ ನಾಕುಮಂದಿ ಹಿರೀಕರು ಸುತ್ನನ್ನಾಕಡೇಲಕಿಂದ ಬಂದು

ಯೇನು ತಾಯಿ? ಯಂದು ಬಲು ಗವುರವದಿಂದ ಕೇಳಿದ್ದಕ್ಕೆ ರಾಜಮಾತೆಯು ಕೂಡ್ಲಿಗಿಗೆ ತಾನು ಹೋಗಿ ಕುಂಪಣಿ ಸರಕಾರಕ್ಕೆ ತಾನು ಸದರಿಪಟ್ಟಣದ ಅಹವಾಲು ವಪ್ಪಿಸುವುದಾಗಿ ಹೇಳಿದಳು. "ನೀನು ಮುಪ್ಪಾನು ಮುದೇಕಿ.. ರಾಜಮಾತೆ ಯಾಗಿರೋ ನೀನು ಪಟ್ಟಣದ ಗಡಿ ದಾಟಿದಲ್ಲಿ ಸಾಂಬವಿ ಮುನುಸಿಕೋತಾಳೆ. ನೀನು ವುಡಿ ತುಂಬಿಸಿಕೊಂಡದೀ ಅಂತಾನೇ ಲೆಕ್ಕ ತಾಯೀss ಪಟ್ಟಣಕ್ಕ ವದಗಿರೋ ಧರಮ ಕರುಮಕ್ಕ ನೀನು ಹಕ್ಕುದಾರಳದೀ.." ಯಂದು ಮುಂತಾಗಿ ವಬ್ಬ ಕಿರೀಕನೂ.. "ಪುವ್ವಲ ರಾಜವಮುಸದ ಯಜಮಾನ ಮನುಶ್ಯಳಾದ ನೀನು ಯಕಶ್ಚಿತ ಕೂಡ್ಲಿಗಿವರೆಗೆ ಹೋಗುವುದೇನು..?" ಯಂದು ಮುಂತಾಗಿ ಯಿನ್ನೊಬ್ಬ ಹಿರೀಕನೂ, "ಕೂಡ್ಲಿಗಿ ಹಾದೀಲಿ ಕಾಡಡವಿ ಕಣವ್ವಾ.." ಹಾದಿಯಂಥ ಮಗ್ಗುಲು ಭೂತ ಪ್ರೇತ ಪಿಶಾಚಿ ಬೇತಾಳ ಅದಾವ ಕಣವ್ವಾ.. ಹುಲಿ ಸಿಮ್ಮ ಚಿರತೆಗಳ ವುಪಟಳ ರಗಡಯ್ತೆ ಕಣವ್ವಾ.. ಯಂದು ಮತ್ತೊಬ್ಬ ಹಿರೀಕನೂ.. "ನೀನು ಮುಪ್ಪಾನು ಮುದೇಕ ಅದಿs ನಿನಗ ಅನ್ನಲಕ ಬರತದಾ.. ಆಡಲಕ ಬರತದss" ಯಂದು ಮಗುದೊಬ್ಬ ಹಿರೀಕನೂ ಯೇಕ ಪ್ರಕಾರವಾಗಿ ಅಂದಾಡಿದರು.. ಅವರು ಆಡಿದ ಮಾತುಗಳ ತಳಬುಡ ಅರ್ಥವಾಗದೆ.. ಅವರು ತನ್ನನ್ನು ಹೊಗಳುತ್ತಿರುವರೋ, ತೆಗಳುತ್ತಿರುವರೋ ಯಂಬ ಸಂಗತಿ ತಿಳೀವಲ್ಲದೆ ರಾಜಮಾತೆಯು ಅಯ್ಯೋ ತಾನು ಚಲಾವಣೆ ಕಳಕೊಂಡಿರೋ ಸವಕಲು ನಾಣ್ಯದ ಚೂರು ಆಗಿರುವೆನಲ್ಲಾ.. ಯಂದು ವಳಗೊಳಗೆ ಹಲುಬುವುದು ಮಾಡಿ "ನೀವೆಲ್ಲರು ಪುವ್ವಲ ರಾಜವಮುಸದ ಹಿತಚಿಂತಕರದೀರಿ.. ನಿಮ್ಮ ಮಾತನು ತೆಗೆದು ಹಾಕಲಾಗದು.. ನಾನು ಹೋಗೋದು ಬ್ಯಾಡ ಅಂಬುತೀರಿ.. ಸರ್ರೆಸರೆ..ನಮ್ಮ ರಾಜಕುಮಾರ ಕಾಟನಾಯಕರನ್ನು ಕಳುವಿದರ ಹೆಂಗೆ?" ಯಂಬ ಪ್ರಸ್ನೆಯನ್ನು ಯಿಟ್ಟಳು.. ವಬ್ಬರ ಮುಖವನ್ನು ವಬ್ಬರು ನೋಡಿಕೊಳುತಲಿದ್ದ ಹಿರೀಕರ ಪರವಾಗಿ ಅಡುವಯ್ಯನು "ಅದೆಂಗಾಯತ್ತೆ ತಾಯಿ? ಬೋಳಾಗಿರುವ ಅವಯ್ಯನನ್ನು ಯುಡ್ಡವರ್ಡ್ಸು ಸಾಹೇಬ ತಿರಸ್ಕಾರದ ದ್ರುಸ್ಟಿಯಿಂದ ನೋಡದಿರುತ್ತಾನೆಯೇ?.. ಬ್ಯಾಡವೇ ಬ್ಯಾಡ.." ಯಂದು ಕಯ್ನ ತಿರುವಾಡುತ ಹೇಳಿಬಿಟ್ಟನು. ಆತನ ಮಾತು ಕೇಳಿದ ಮಂದಿ 'ಚಾಂಗು ಬಲಾ'ಯೆಂದು ಕೂಗಿತು.. (ಜರಿಮಲೆಯ ಸತ್ತುಸಯ್ನಿಕರು ಕುದುರೆಡವು ಮ್ಯಾಲ ಆಕ್ರಮಣ ಮಾಡಿದ್ದಾಗ ಕೂಗಿದ್ದ ಕೂಗು ಅದಾಗಿತ್ತು).. ಅಡುವಯ್ಯನ ಕಡೇಕ ದುರುಗುಟ್ಟುವ ಪ್ರಯತ್ನ ಮಾಡುತ ರಾಜಮಾತೆಯು "ನೀವು ಯಾರನ್ನಾದರು ಕೂಡ್ಲಿಗೀಗೆ ಕಳುವಿದರ ನನ್ನ ತಕರಾರಿಲ್ಲ ಕಣರಪ್ಪಾ.. ಅವರ ದಾರಿ ಖರ್ಚು, ಬುತ್ತಿರೊಟ್ಟಿ

ಬಾಬತ್ತು ಅರಮನೆ ನೋಡಿಕೋತದ.. ನಾನಿನ್ನು ಹೊಂಡುತೀನಿ" ಯಂದು ಕಟ್ಟೆಯಿಂದ ಯಿಳಿದು ಅದೇ ತಾನೆ ಕಾಮಗಾರಿಯಾಗಿದ್ದ ಡೋಲಿ ವಳಗೇರಿ ಕೂತಳೆಂಬಲ್ಲಿಗೆ.. ಮಂದಿ ಕಡೇಲಕಿಂದ ತಲಾ ವಂದೊಂದು ಮಾತುಗಳು ಕೂರ್ದಸೆಯೋಪಾದಿಯಲ್ಲಿ ಅರಮನೆ ಕಡೇಕ ಮುಖ ಮಾಡಿದ್ದ ಆಕೆಯ ಕಿವಿ ತಮಟೆಯನ್ನು ಘಾಸಿಗೊಳಿಸಿದವೆಂಬಲ್ಲಿಗೆ, ಡೋಲಿಗೆ ಯದುರಾಯ್ದು ಗಂಟಲಯ್ಯನು "ಯಂಥಾ ಹುಚ್ಚೆಣುಮಗಳದೀ ಯವ್ವಾ.. ಸಾಂಬವಿ ಪ್ರವೇಸ ಮಾಡಿರೋ ಯೀ ಪಟ್ಟಣದೊಳಗ ನೀನು ಡೋಲಿ ವಳಗೆ ಹೊಂಟಿರುವಿಯಲ್ಲಾ.. ವುಪ್ಪರಿಗೆ ಯೇರುತೀಯಲ್ಲಾ.. ನಿನಗಿನ್ನು ಬುದ್ದಿ ಬರಲಿಲ್ಲಾ.." ಯಂದು ಮುಂತಾಗಿ ಹಾಡತೊಡಗಿದ ಯಂಬಲ್ಲಿಗೆ..

ಯೀ ಪ್ರಕಾರವಾಗಿ ಅರಮನೆಯ ಮೇಟಿಗೂಟವು ರಾಜಮಾತೆ ಭಯ್ರಮಾಂಬೆಯ ರೂಪದಲ್ಲಿ ಅತ್ತ ಹೋಗುತ್ತಲೆ, ಯಿತ್ತ ಮಂದಿಗೆ ಮಂದಿ ಸೇರಿ ಪರಿಶೆ ನೆರೆಯಿತು. ಕಯ್ಯಿ ಸಂಗನೆ, ಬಾಯಿ ಸಂಗನೆ, ಅಂಗ ಸಂಗನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲಂಥವರ ಕಾರ್‍ಯ, ಯಾರ್‍ಯಾರ ಅಂತಸ್ತಿಗನುಗುಣವಾಗಿ ಹೆಂಗ ನಿಲ್ಲಬೇಕು, ಹೆಂಗ ಬಿಡಬೇಕು ಯಂಬಂಥವರ ಹುಡುಕಾಟದ ಕಾರ್‍ಯ, ಧಯರ್‍ಯ, ಯಕ್ತಿಗತ ಸ್ವಾಭಿಮಾನವುಳ್ಳಂಥವರ ಹುಡುಕಾಟದ ಕಾರ್‍ಯ, ಗಂಟೆ ಜಾಗಟೆ ಭಾರಿಸಿದಂತೆ ಸ್ಫುಟವಾಗಿ ಮಾತಾಡಬಲ್ಲಂಥವರ ಹುಡುಕಾಟದ ಕಾರ್‍ಯ, ಸಮಯಕ್ಕನುಸಾರವಾಗಿ ಮಾತ್ರುಭೂಮಿಗಾಗಿ ಸೊಯಂ ಬಲಿದಾನ ಮಾಡುವಂಥವರ ಹುಡುಕಾಟದ ಕಾರ್‍ಯ, ನಾನು ಹೋಡುತೀನಿ, ತಾನು ಹೋಡುತೀನಿ ಯಂದು ಮುಂದೆ ಬಂದವರ ದಫ್ತಿಕಾಂಗ, ಮಾನಸಿಕ ನ್ಯೂನತೆಗಳನ್ನು ಪತ್ತೆ ಹಚ್ಚಿ ವಜಾ ಮಾಡುವ ಕಾರ್‍ಯ ಯೇಕ ಪ್ರಕಾರವಾಗಿ ಆರಂಭವಾಯಿತು. ಯುದ್ಧಗಳಲ್ಲಿ ಭಾಗವಹಿಸಿ ರಣರಂಗದ ಮರುಮ ಬಲ್ಲಂಥವರ ಮನೆಗಳಿಗೆ, ಯುದ್ಧಗಳಲ್ಲಿ ಭಾಗವಹಿಸಬೇಕೆಂಬ ರಣೋತ್ಸಾಹವುಳ್ಳಂಥವರ ಮನೆಗಳಿಗೆ ಯಡತಾಕೀs ಯಡತಾಕಿದ ಪರಿಣಾಮವಾಗಿ ಹಿರೀಕರ ಅಂಗಾಲೊಳಗ ಆಣೆಗಳು ವುಲ್ಬಣಗೊಂಡವು. ಯಿರೋನೊಬ್ಬ ಮಗನರಪ್ಪಾ ಯನ್ನುವ ತಂದೆ ತಾಯಿಗಳು, ಯಿರೋನೊಬ್ಬ ಗಂಡನರಪ್ಪಾ ಯನ್ನುವ ಹೆಂಡಂದಿರು, ಯಿರೋನೊಬ್ಬ ಅಣ್ಣನರಪ್ಪಾ ಯನ್ನುವ ತಮ್ಮಂದಿರು, ಯಿರೋನೊಬ್ಬ ತಮ್ಮನರಪ್ಪಾ ಯನ್ನುವ ಅಣ್ಣಂದಿರು, ಯಿರೋನೊಬ್ಬ ಪ್ರಿಯತಮನರಪ್ಪಾ ಯನ್ನುವ ಪ್ರಿಯತಮೆಯರು, ಯಿರೋನೊಬ್ಬ ಅಳಿಯನರಪ್ಪಾ ಯನ್ನುವ ಮಾವಂದಿರು, ಹಿಂಗs ಮೋಣೋಣಿಗೊಂದು

ವರಾತವು.. ಹಿಂಗs ಮನೆಗೊಂದೊಂದು ವರಾತವು.. ಹಿಂಗs ಕರಲುಗಾಯಿಗ ಬಿದ್ದವರಂಗ ಕಣ್ತಪ್ಪಿಸಿ ಅಡ್ಡಾಡುವ, ಅವಿಚಿಟ್ಟುಕೊಳ್ಳುವ ವರಾತವು.. ಅಯ್ಯೋ ವಬ್ಬರಿಗಾದರೂ ತಮ್ಮ ಮಾತ್ರುಭೂಮಿ ಮ್ಯಾಲ ಪ್ರೀತಿ ಕಕ್ಕುಲಾತಿಯಿಲ್ಲವಲ್ಲ.. ಆ ಕಾಲದ ಕುದುರೆಡವು ಯಲ್ಲಿ? ಯೀ ಕಾಲದ ಕುದುರೆಡವೆಲ್ಲಿ? ತಾವು ಕಾಲದುದ್ದಕೂ ಬಿದುಕೋತ ಬಂದಿರೋರು. ಪಟ್ಟಣದ ವಳಿತು ಕೆಡುಕುಗಳನು ಅರಗಿಸಿಕೊಂಡು ಬದುಕಿರೋರು.. ಯಿಂಥ ತಮ್ಮ ಕಣ್ಣೆದುರಿಗೆ ತಮ್ಮ ಪಟ್ಟಣದ ಪ್ರಜೆಗಳ ರುದಯಗಳು ಮೊಂಡಾಗಿರುವವಲ್ಲಾ.. ಪಟ್ಟಣಕ್ಕಿಂತ ತಮ್ಮ ಮೋಣಿಯೇ ಹೆಚ್ಚಾಗಿರುವುದಲ್ಲಾ.. ತಮ್ಮ ಮೋಣಿಗಿಂತ ತಾವು ವಾಸಿಸುತ್ತಿರುವ ಮನೆಯೇ ಹೆಚ್ಚಾಗಿರುವುದಲ್ಲಾ.. ನನ್ನೋರು ತನ್ನೋರು ಯಂಬುವ ವಾಯು ಮಮಕಾರಗಳೇ ಹೆಚ್ಚಾಗಿರುವವಲ್ಲಾ.. ಯಿಂಥ ಪ್ರಜೆಗಳು ಯಿರುವ ಹೊತ್ತಿಗೆ ಕುಂಪಣಿ ಸರಕಾರ ಅರಮನೆಯಸವಲತ್ತುಗಳನ ಕಬ್ಜಾ ಮಾಡಿಕೊಂಡಿರುವುದು ಯಂದು ಮುಂತಾಗಿ ಚಿಂತೆಯ ಮಡುವಳಗೆ ಮುಳುಗುತೇಲುತಲಿದ್ದ ಹಿರೀಕರ ಪಯ್ಕಿ ಅಡುವಯ್ಯ ನಾನು ಹೋಗುತೀನೆನ್ನಲು ಜಡೆತಾತ “ಬ್ಯಾಡಕಣ ಮಗಾ.. ನೀನು ದಯವಸ್ಥರಿಗೆ ಬೆನ್ನೆಲು ಬಿದ್ದಂಗದೀ” ಯಂದು ತಕರಾರು ಯತ್ತಿದನು.. ಜಡೆತಾತನು ನಾನು ಹೋಗುತೀನೆನ್ನಲು ಅಡುವಯ್ಯನು “ಬ್ಯಾಡ ತಾತss ನೀನು ನಿನ್ನ ತಲಿಗೂದಲನ್ನು ಪರಸ್ಥಳದೊಳಗ ಹೆಂಗ ನಿಭಾಯಿಸುತ್ತೀ..?” ಯಂದು ತಕರಾರು ಯತ್ತಿದನು. ಕಾಡುಪಾಲಯ್ಯನು ನಾನು ಹೋಗುತೀನೆನ್ನಲು ನಾಡಪಾಲಯ್ಯನು “ಬ್ಯಾಡ ಮಾವಾ.. ನಿನ್ನ ನೋಡಿದರ ಯಡ್ಡವರ್ಡ ಸಾಹೇಬ ಹೆದರಿಕಂಡಾನು” ಯಂದು ತರುಬಿದನು.. ಹಿರೀಕರಾಗಿರೋ ತಾವು ಹುಟ್ಟಿರುವುದು ಯಿಲ್ಲೇಯಾ.. ಬೆಳೆದಿರುವುದು ಯಿಲ್ಲೇಯಾ.. ತಮ್ಮ ಪಯ್ಕಿ ಯಾರೊಬ್ಬರೂ ಹೊರಗಿನ ಪರಪಂಚ ನೋಡಿರೋರಲ್ಲ.. ಪರ ದೇಸದವರ ಮುಖಕ್ಕೆ ಮುಖಕೊಟ್ಟು ಮಾತಾಡಿರೋರಲ್ಲ.. ತಮಗ್ಯಾರಿಗೂ ಬೊಟ್ಟು ದಮ್ಮಡಿ ಯಣಸಾಕ ಬರಂಗಿಲ್ಲ.. ಯಿಂಥ ತಾವು ದೂರದ ದೇಸವಾದ ಕೂಡ್ಲಿಗೀಗೆ ಹೋಗುವುದೆಂದರೇನು? ಪರಂಗಿ ಮುಂದಿಯುದುರು ನಿಂತು ಮಾತಾಡುವುದೆಂದರೇನು? ಯಂದು ಮುಂತಾಗಿ ಯಸನ ಮಾಡುತಾss ಮಾಡುತಾ ಹಿರೀಕರು ಕುಗ್ಗುತ ಹೋಗಿಬಿಟ್ಟರು.. ತಮ್ಮನ್ನು ತಾವು ಸಾಪಳಿಸಿಕೊಂಡರು.. ಅವರೆಲ್ಲ ಯೀ ಪ್ರಕಾರವಾಗಿ ಮವುನವಾಗಿರುವ ಕಾಲಕ್ಕೆ ದೂರದಿಂದೆಲ್ಲಿಂದಲೋ ಅಲಲಲಾ ಸೂರss ಯಂಬ ನಿರಸ್ತಘನ ತೇಜದ ರವವು ಅಲೆಅಲೆಯಾಗಿ ತೇಲಿ ಬಂದು ಅವರ ಕಿವಿಗಳಿಗಟೆಯಿತು. ಮೊದ

ಮೊದಲಿಗೆ ಸೊರಗ, ನರಕಲೋಕಗಳ ಕಡೇಲಿಂದ ಬಂದಿರಬೌದೆಂದೇ ತಾವು ಭಾವಿಸಿ ಅರಗಳಿಗೆ ಕಂಗಾಲಾದರು. ಯೀ ಗುಡುಗು ಸದ್ರುಸ ದ್ವೊನಿಯು ಸೊರಗ ಲೋಕದ್ದೂ ಅಲ್ಲ.. ನರಕ ಲೋಕದ್ದೂ ಅಲ್ಲ.. ಯಿದು ತಮ್ಮ ಸದರಿ ಪಟ್ಟಣದ ಅದಾದೋ ಮೂಲೆಯಿಂದ ಹೊಂಟು ಗಾಳಿಗುಂಟ ಬಂದಂಗಿರುವುದು.. ಯಿದಾರದ್ದೋ ಯಿದ್ದಂಗಿರುವುದಲ್ಲಾ, ಯಂದವರವರು ತಮ ತಮ್ಮ ಮುಂಗಾಲ ಪುಟುಗೀಲೆ ಯೋಚಿಸುತಾ ಯೋಚಿಸುತಾ.. ಆ ದ್ವೊನಿಯ ಆಧಾರದ ಮ್ಯಾಲ ಆ ಯಕ್ತಿಯ ಆಕಾರ ಸೊರೂಪವನ್ನು ಕಲುಪಿಸುತಾ ಕಲುಪಿಸುತಾ.. ಆ ದ್ವೊನಿಯೇ ಹಿಂಗಿರುವುದೆಂದ ಮ್ಯಾಲ ಅದರ ಮೂಲಕಾರಕವಾಗಿರುವ ಮಾನವ ರೂಪವು ಹಂಗಿರಬೌದಾ ಯಂದು ಭಯಪಡುತಾ ಭಯಪಡುತಾ.. ಅಲಲಲಾ ಯಂಬ ವುದ್ಗಾರ ವಾಚಕದ ವುತ್ತರಾರ್ದಕ್ಕಂಟಿರುವ ‘ಸೂರ’ ಯಂಬ ನಾಮವಾಚಕವನ್ನು ಗಟ್ಟಿಯಾಗಿ ಹಿಡಕೊಳ್ಳುತಾs ಹಿಡಕೊಳ್ಳುತಾ.. ಅರರೇ ಯೀದ್ವೊನಿಯು ಜಗಲೂರವ್ವಂದಲ್ಲಾ ಯಂದು ಯೇಕಥಂ ನಿರಣಯಕ್ಕೆ ಬಂದರು.. ಹ್ವಾ.. ಹ್ವಾ.. ಜಗಲೂರವ್ವಾ.. ಹೊ ಹ್ವೋ ಜಗಲೂರೆವ್ವಾ.. ಯಂದು ಲಯದ ಸಾನ್ನಿಧ್ಯದಲ್ಲಿ ವುದ್ಗಾರ ಮಾಡಿದರು.. ಹ್ವಾ.. ಹ್ವಾ.. ತನ್ನ ಗಂಡನ ಸರೀರವನ್ನು ಸೊಯಂ ತ್ಯಾಗ ಮಾಡಿರುವಾಕೆ.. ಹೋಹ್ವೋ ಸೊಯಂ ಗಂಡನಿಂದ ಪರಿತ್ಯಕ್ತಗೊಂಡಿರುವಾಕೆ.. ಬಿರುಗಾಳಿ ಸದ್ರುಸದ ತನ್ನ ಸರೀರದೊಳಗ ಅಪಾರ ತಂಗಾಳಿಯನ್ನು ಬಚ್ಚಿಟ್ಟುಕೊಂಡಿರುವಾಕೆ.. ಸೊಯಂ ಸಾಂಬವಿ ಯಂಬ ಪ್ರಳಯ ರೂಪೀ ಪ್ರವಾಹದೆದುರು ಯೀಜುತಿರುವಾಕೆ.. ದಯವದ ಸಾಪಗಳಿಗಾತೀತೆಯಾಗಿ ಬದುಕುತ್ತಿರುವಾಕೆ.. ನೂರು ಮಂದಿ ಗಂಡಸರ ತಾಕತ್ತನ್ನು ತನ್ನ ಸರೀರ ಪರ್ಯಂತರ ಮುಡುಕೊಂಡಿರುವಾಕೆ, ತನ್ನ ಚೋಟುದ್ದ ನಾಲಗೆ ಅಟ್ಟದ ಮ್ಯಾಲ ಸಿಡಿಲುಗಳನ್ನು ವಟ್ಟಿಕೊಂಡಿರುವಾಕೆ, ತನ್ನೊಂದು ನೋಟ ಮಾತ್ರದಿಂದ ಭೂತ ಪ್ರೇತ ಪಿಶಾಚಿ ಬೇತಾಳಗಳನ್ನು ಹೆದರಿಸಿ ವೋಡಿಸುವಂಥಾಕೆ.. ರೋಗ ರುಜಿನಗಳಿಗಾತೀತೆಯಾಗಿ, ಮ್ರುತ್ಯುಂಜಯೆಯಾಗಿ ಬದುಕುತ್ತಿರುವಂಥಾಕೆ.. ತನ್ನೆದೆಯೊಳಗ ಹತ್ತಾರು ರಣರಂಗಗಳನ್ನು ಹುಟ್ಟಿದಾರಾಭ್ಯ ಪೋಷಿಸಿಕೊಂಡು ಬರುತ್ತಿರುವಂಥಾಕೆ.. ಹ್ವಾ.. ಹ್ವಾ.. ಜಗಲೂರೆವ್ವ.. ನೀನೇ ಕಣ ನಮ್ಮವ್ವನೇ, ಕುಂಪಣಿ ಸರಕಾರಕ್ಕೆ ಸರಿಯಾದ ಹುದ್ದರಿಯು.. ಹಿರೀಕರು ಸಡನ್ನಂತ ಯದ್ದದ್ದಾಗಲೀ, ಕುಂಡಿ ಅಡೀಲಿದ್ದ ವಲ್ಲಿಗಳನ್ನು ಕೊಡವಿ ತಮ್ಮ ತಮ್ಮ ಹೆಗಲ ಮ್ಯಾಲ ಯಿಳಿಬಿಟ್ಟುಕೊಂಡಿದ್ದಾಗಲೀ, ಕಂಕುಳೊಳಗ ಕೂಸಿಟ್ಟುಕೊಂಡು ಮೂರೆಲ್ಲಾ

ಹುಡುಕಾಡುತ್ತಿದ್ದೆವಲ್ಲಾ.. ಯಂದು ಮುಂತಾಗಿ ವುದ್ಗಾರ ವುದುರಿಸಿದ್ದಾಗಲೀ, ನೀನು ಬಾ.. ನೀನು ಬಾ ಯಂದು ಅವರಿವರನ್ನು ಕೂಗಿ ಕೂಗಿ ಕರೆದದ್ದಾಗಲೀ, ತವು ಹಿಂದೆ ವಂದು ಅಗಾಧ ಪರಿಶೇನ ತುರುಬಿನೋಪಾದಿಯಲ್ಲಿ ಮುಡುಕೊಂಡಿದ್ದಾಗಲೀ.. ಚಮತ್ತೀಲೆ ಹೆಜ್ಜೆ ಹಾಕತೊಡಗಿ ದ್ದಾಗಲೀ.. ತಡ ಆಗಲಿಲ್ಲ...

ಯೇನು ಮಾಡುತಲೋ, ಯೇನು ಬಿಡುತಲೋ ಬೇಯಿನಮರದವ್ವನ ನೆಳ್ಳರಮನೆಯೊಳಗೆ ಮಣ್ಣಿನ ಸಿವ್ಮಾಸನದ ವ್ಯಾಲ ನಿಟ್ಟುಸಿರು, ಬಿಸಿ ವುಸುರುಗಳೆಂಬ ವಾಯುರೂಪೀ ಆಯುಧಾಭರಣಗಳನ್ನು ಮೂಗೊಳಗ ಮುಡಕೊಂಡು ಗಳಿಗ್ಗಳಿಗ್ಗೊಂದೊಂದು ಸಲಕ ತನ ಗಂಡನ ವಯಿಭವೋಪೇತ ಸರೀರವನ್ನು ನೆನೆಯೂತ, ಮರೆಯೂತ.. ಮರೆಯೂತ.. ನೆನೆಯೂತ.. ನೆರಳೇ ತಾನೋ? ತಾನೇ ನೆರಳೋ? ಯಂಬಂತೆ ಬೆಳಕಿನ ಕಡಲನ್ನೆ ವಡಲೊಳಗಿಟ್ಟುಕೊಂಡು ಕತ್ತಲ ತತ್ತಿಯಂತೆ ಕೂಕಂಡಿದ್ದ ಜಗಲೂರೆವ್ವ ತನ್ನ ಕಣ್ಣಳತೆ ಯೊಳಗಾಗಮನಗಯ್ದ ಹಿರೀಕರನ್ನು ಬರ್ರೆಪ್ಪಾ.. ಬರ್ರೆಣ್ಣಾ ಯಂದು ಸ್ವಾಗತಿಸಿ ಕುಡಿಯಲಕ ಮನಾರ ನೆರಳು, ತಿಂಬಲಕ ಮನಾರ ನೆರಳು ನೀಡಿ ಸತ್ಕರಿಸಿದಳೆಂಬಲ್ಲಿಗೆ ಸಿವಸಂಕರ ಮಾದೇವss

* * * *

ಅವತ್ತು ಪತ್ತಿಕೊಂಡದೊಳಗ ಅಪಾರ ಜನಸ್ತೋಮದಿಂದ ದಾಹ ತಣಿಸಿದ ಕಾರಣಕ್ಕೆ ಭಗೀರಥ ಯಂಬ ಬಿರುದನ್ನು ಪಡಕೊಂಡಂಥವನಾದ ಥಾಮಸು ಮನ್ರೋ ಸಾಹೇಬನು, ಯಂಜಲೆಲೆ ಯಲ್ಲಮ್ಮಾಯಿ ಯಂಬ ಹಲವು ಮನುವಂತರಗಳಿಂದ ಮಜ್ಜಣ ಮಾಡದೆ ಯಿರುವ ಸರಣೆ ಬಾಯಿಂದ 'ಯಂಜಲೆಲೆ' ಯಂಬ ಪಾಪವನ್ನು ಮುಡಕೊಂಡಂಥವನಾದ ಕಲೆಟ್ಟರ ಸಾಹೇಬನು, ತುಂಬಿದ ಕೊಡದಂಥ ಜಾಯಮಾನವಂದಿಗನಾದ ಕುಂಪಣಿ ಸರಕಾರದ ಕಣುಮಣಿಯು, ದಂತ ಕಥಾ ದಿಗಂತ ಭಾನುವೆಂದೆನಿಸಿದ ಅಲೆಗ್ಜಾಂಡರ ಮನ್ರೋನ ಯೇಕಮಾತ್ರಪುತ್ರರತ್ನನು.. ಬಿರುಗಾಳಿ ಯಲ್ಲಲ್ಲಿದ್ದೀತೋ ಅಲ್ಲೆಲ್ಲ ತಂಗಾಳಿಯೋಪಾದಿಯಲ್ಲಿ ಸುಳುದಾಡುತ ರಾಯಲಸೀಮದ ಜನತೆಯನ್ನು ನೆರಳು ನೀರುಗಳೆಂಬುವ ಸಮ್ಮೋಹನಾಸ್ತರಗಳನ್ನು ಬೀರಿ ಪರವಸ ಮಾಡುತಲಿದ್ದನು. ತನಗ ತನ್ನದೇ ಆದ ಖಾಸಗೀ ಬದುಕಿನ ಕಡೇಕ ನಾಳೆ ಲಕ್ಷ್ಯ ಕೊಟ್ಟರಾತು, ನಾಡದ ಲಕ್ಷ್ಯ ಕೊಟ್ಟರಾತು ಯಂದು ತಾನು ಯಂದಿನಿಂದಲೋ ಅಂದುಕೊಳ್ಳು ತಲಿದ್ದುದು ಖರೆ. ಆದರ ರಾಯಲಸೀಮದ

ರಾಜಕೀಯದ, ಸಾಮಾಜಿಕವಾದ ಕಾರಣಗಳು ಬಿಟ್ಟುಕೊಡುತಾಯಿರಲಿಲ್ಲ ಯಂಬುದು ಕೂಡ ಅಷ್ಟೇ ಖರೆ.. ರಾಯಲಸೀಮೆ ಎಂದರ ಯೇನು ತಟಗು ರಾಜ್ಯವ.. ಅದು ಹಬ್ಬಿರುವುದು ಅಲ್ಲಿಂದ ಯಿಲ್ಲೀ ಮಟ.. ಯಿಲ್ಲಿಂದ ಅಲ್ಲೀ ಮಟ.. ಮೂರಿಗೊಬ್ಬೊಬ್ಬ ಸಾಮರಾಟನು? ಮೋಣೋಣಿಗೊಬ್ಬೊಬ್ಬ ಪಾಳ್ಳೇಗಾರನು? ಅವರನ್ನು ಹತೋಟಿಯಲ್ಲಿಡುವುದು ಕಪ್ಪೆಗಳನ್ನು ತೂಗಿದಷ್ಟೆ ತ್ರಾಸಕರವಾಗಿತ್ತು.. ಮನ್ರೋ ಆಗಿರುವ ಹೊತ್ತಿಗೆ ಚಾಕಚಕ್ಯತೆಯಿಂದ ನಿಭಾಯಿಸುತ್ತಿರುವನು.. ಯಿನ್ನೋರ್ವನಾಗಿದ್ದರೆ ಬೂಟು ಬಿಚ್ಚಿಟ್ಟು ಬರಿ ಅಂಗಾಲೀಲೆ ಮೋಡಿ ಬಿಡದೆಯಿರುತ್ತಿರಲಿಲ್ಲ. ಯೀ ಸದರಿ ಪ್ರದೇಸವನ್ನು ತನ್ನ ಪಂಚೇಂದ್ರಿಯಂಗಳ ಪೂರುವಕವಾಗಿ ನಿಭಾಯಿಸುತಲಿದ್ದ ಕಲೆಟ್ಟರು ಸಾಹೇಬ ಹೊತ್ತು ಹೊತ್ತಿಗೆ ಸರಿಯಾಗಿ ಕೂಳು ತಿನ್ನುತ್ತಿದ್ದುದುಂಟಾ? ರೆಪ್ಪೆಗೆ ರೆಪ್ಪೆ ಅಂಟಿಸಿ ನಾಲಕಯ್ದು ತಾಸು ನಿದ್ದೆ ಮಾಡುತ್ತಿದ್ದುದುಂಟಾ. ತನ್ನ ಅಧೀನ ಅಧಿಕಾರಿಗಳಿಗೂ ನಿದ್ದೆಮಾಡಲು ಬಿಡುತಲಿದ್ದುದುಂಟಾ? ಅವರಿಗೆಲ್ಲ ಸಾಕು ಸಾಕಾಗಿ ಹೋಗಿ ಯಾವಾಗ ಯೀ ಮಾರಾಯ ಯಿಲ್ಲಿಂದ ತೊಲಗಿ ಹೋಗುವನೋ ಯಂದನ್ನಿಸುತಲಿದ್ದುದುಂಟು. ನಾಲಕಾರು ತಿಂಗಳು ರಜೆ ಹಾಕಿ ಯಿಂಗಲೆಂಡು ಕಡೇಕ ಹೋಗುವಂತೆ ಕೆಲವು ಆಪ್ತರು ಮನ್ರೋಗೆ ತಾಕೀತು ಮಾಡುತಲಿದ್ದುದುಂಟು. ಅದಕಿದ್ದು ಸಾಹೇಬ ಯೀ ರಾಯಲಸೀಮೆಯನ್ನು ಮಡಚಿ ಕಡತದೊಳಗಿಡಲಕ ಬಂದಿರದಿದ್ದಲ್ಲಿ ತಾನು ನಾಕಾರು ತಿಂಗಳು ಯಾಕ ವರುಷೆರಡು ಹೋಗಲಕ ಸಿದ್ದಯಂದು ನಗು ನಗುತಲೆ ಹೇಳಿಕೊಂಡು ಬಂದಿದ್ದ. ತನಗೂ ತನ್ನ ಹುಟ್ಟೂರಾದ ಗ್ಲಾಸೋವಾ ವಂದಲ್ಲಾ ವಂದು ರೀತಿಯಿಂದ ಕಾಡದೇ ಯಿದ್ದಿರಲಿಲ್ಲ. ಆದರೇನು ಮಾಡುವುದು ಸರೆ ಸರೆss

ಪತ್ತಿಕೊಂಡದಲ್ಲಿ ಬಿರುದು ಸ್ವೀಕರಿಸುವಾಗ ಕಡಪಾ ಕಡೇಕೋ, ಮದನಪಲ್ಲಿಯ ಆರಿಸ್ಲೀಹಿಲ್ಸ್ ಕಡೇಕೋ ಹೋಗಿ ವಂದು ವಾರದ ಮಟ್ಟಿಗಾದರೂ ಯೇಕಾಂಗಿಯಾಗಿ ಯಿದ್ದುಬಿಡಬೇಕೆಂದು ತೀರುಮಾನಿಸಿದ್ದನು.. ಯಿನ್ನೇನು ಅಲ್ಲಿಂದ ಹೊಂಡಬೇಕೆನ್ನುವಷ್ಟರೊಳಗೆ ಬಸಲತ್‌ಜಂಗ್‌ನ ಮಗ ಕುದ್ರತುಲ್ಲಾ ತನ್ನನ್ನು ತಾನು ಸುಬೇದಾರನೆಂದು ಘೋಷಿಸಿಕೊಂಡ ವರ್ತಮಾನ ಬಂತು. ಮನ್ರೋ ಅಬಡಾ ದಬಡಾ ಅಲ್ಲಿಗೆ ಹೋಗಿ ಆತನನ್ನು ಸೆರೆಹಿಡಿಯದಿದ್ದಲ್ಲಿ ಗುತ್ತಿ ಸಮುಸ್ಥಾನವು ಕುಂಪಣಿ ಸರಕಾರದಿಂದ ಕಯ್ತಪ್ಪಿ ಹೋಗಿ ದೊಡ್ಡ ಅನಾಹುತವೇ ಸಂಭವಿಸಿಬಿಡುತಲಿತ್ತು. ಆದವಾನಿ ತಲೆನೋವು ಯಿನ್ನೇನು ಬಗೆಹರಿಯಿತೆಂದು ಕಲೆಟ್ಟರು ಸಾಹೇಬ ಭಾವಿಸುವಷ್ಟರೊಳಗೆ ಕಮ್ಮಲ

ಪಾಡುವಿನ ನಾಯಕನನ್ನು ಮಟ್ಟ ಹಾಕಬೇಕಾಗಿ ಬಂತು. ಯಿನ್ನೇನು ಕಮ್ಮಲಪಾಡುವಿನ ತಲೆನೋವು ಬಗೆಹರಿಯಿತೆಂದು ಭಾವಿಸುವಷ್ಟರಲ್ಲಿ ರಾಯದುರ್ಗದ ಯಿಮ್ಮಡಿ ರಾಜಗೋಪಾಲನಾಯಕನು ಗುತ್ತಿ ಸೆರೆಮನೆಯಲ್ಲಿ ಸಲ್ಲೇಖನ ರೊತ ಸ್ವೀಕರಿಸಿ ಮರಣಹೊಂದಿದನೆಂಬ ವಾರ್ತೆ ಬರ ಸಿಡಿಲಿನಂತೆರಗಿ ಬಿಡುವುದೇ? ನಾಯಕರನ್ನು ಯಾವುದಕ್ಕೂ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಸೆರೆಮನೆಯ ಅಧಿಕಾರಿಗೆ ತಾನು ನಿರ್ದೇಶನ ನೀಡಿರದೆಯಿರಲಿಲ್ಲ. ಆ ಹಠಮಾರಿ ನಾಯಕನು ಕುಂಪಣಿ ಸರಕಾರವನ್ನು ಮಾನ್ಯ ಮಾಡಿದ್ದಲ್ಲಿ ತನ್ನ ಪಾಡಿಗೆ ತಾನು ರಾಜ್ಯಬಾರ ಮಾಡಿಕೊಂಡು ರಾಣಿವಾಸದವರೊಡನೆ ಸುಖವಾಗಿರಬೌದಿತ್ತು. ಆದರೆ ತನ್ನ ಮಾತು ಕೇಳಲಿಲ್ಲ.. ತನ್ನ ಸ್ವಾಭಿಮಾನ ಆತುಮ ಗವುರವವೇ ತನಗೆ ಮುಳುವಾದವು. ಕಮ್ಮಲಪಾಡುವಿನಿಂದ ಗುತ್ತಿ ಅದೆಷ್ಟು ದೂರ.. ಮೊದಲೇ ತಾನು ನುರಿತ ಕುದುರೆ ಸವಾರನು ಕೇಳುವುದೇನಿದೆ? ಸರ್ರಂತ ಹೋದ. ಗುತ್ತಿ ಆಡಳಿತಾಧಿಕಾರಿ ಸ್ಯಾಮುಯಲ್ ಮತ್ತು ಸೆರೆಮನೆಯ ಅಧಿಕಾರಿ ಕ್ಯಾಂಪ್‌ಬೆಲ್‌ರವರೀರ್ವರೊಂದಿಗೆ ಗುಪ್ತಾಲೋಚನೆ ನಡೆಸಿದ. ತನ್ನ ಮೂಹೆ ಮತ್ತು ದೂರಾಲೋಚನೆಯಂತೆ ನಾಯುಕನ ಮರಣ ವಾರ್ತೆಯುನ್ನು ಯುರಡು ದಿವಸಗಳಿಂದಲೂ ಗುಟ್ಟಾಗಿಡಲಾಗಿತ್ತು. ಗೂಢಾಚಾರರಿಂದ ರಾಯದುರ್ಗ ಸಮುಸ್ಥಾನದ ರಾಜಕಾರಣದ ಯಿದ್ಯಾಮಾನಗಳನ್ನು ಕುಂತ ಬಯತಕ್ಕೀಲೆ ತರಿಸಿಕೊಂಡು ಖುದ್ದ ತಪಶೀಲು ನಡೆಸಿದ.. ನಾಯಕ ಸೆರೆಮನೆಯಲ್ಲಿ ಬದುಕಿರುವಾಗಲೇ ವಾರಸತ್ವಕ್ಕೆ ಕಿತ್ತಾಡುತಲಿದ್ದ ರಾಜಪರಿವಾರದವರು ನಾಯಕ ಸತ್ತ ಸುದ್ದಿ ಕಿವಿಗೆ ಬಿದ್ದೊಡನೆ ಪರಸ್ಪರ ಕಿತ್ತಾತಡದಿರುವರೇ? ರಕ್ತಪಾತ ನಡೆಯದಿರುವುದೇ..? ಅದೂ ಸಲ್ಲೇಖನಾರೊತಾರೂಢನಾಗಿ (ರಾಯದುರ್ಗದ ನಾಯುಕರು ಜಯ್ನರಲ್ಲಯಂಬುದನ್ನು ವಾಚಕ ಮಾಶಯರು ದಯವಿಟ್ಟು ಗಮನಿಸಬೇಕು) ಸತ್ತನೆಂದಲ್ಲಿ.. ಮೋ ಮಯ್ ಗಾಡ್ ಯಂದು ವುದ್ಗರಿಸಿದ ಮನ್ರೋ ಸಾಹೇಬ ಅಗತ್ಯಕ್ಕಿಂತ ಹೆಚ್ಚು ಸಯ್ನಿಕರನ್ನು ಮುಂದಾಗಿ ಕಳಿಸಿ ಗತಿಸಿದ ನಾಯಕನ ಸಮಸ್ತ ಬಂಧು ಬಾಂಧವರನ್ನು ನಿರಾಯುಧರನ್ನಾಗಿ ಮಾಡಿ ಗ್ರುಹಬಂಧನದಲ್ಲಿರಿಸಿದ. ತದನಂತರ ತಾನು ಮಾರ್ಬಲದೊಂದಿಗೆ ನಾಯಕನ ಕಳೇಬರದೊಂದಿಗೆ ರಾಯದುರ್ಗಕ್ಕೆ ಸೇರಿಕೊಂಡನು. ನಾಯಕನ ಗುಣಗಾನ ಮಾಡಿದನು.. ದೇಹ ನಸುವರ ಯಂದನು, ಹುಟ್ಟಿದೋರು ವಂದಲ್ಲಾ ವಂದು ದಿನ ಸಾಯಲಕಃಬೇಕು ಯಂದನು.. ಜಾತಸ್ಯ ಮರಣಂ ದ್ರುವಂ ಯಂದು

ಯೀಸೇಸವಾಗಿ ಅಂದಾಡಿ ಪರವಸಗೊಳಿಸಿದನು. ತದನಂತರ ಆ ಚಾಣಾಕ್ಷನು ಕಳೇಬರವನ್ನು ಅನಾವರಣ ಮಾಡಿದೊಡನೆ ಯೇನು ಹೇಳಲಿ ಸಿವನೇ.. ಕಣ್ಣೀರ ಕೋಡಿ ಹರಿಯಿತು. ದುರ್ಗದ ಸಮಸ್ತ ದುಕ್ಕವು ತಹಬಂದಿಗೆ ಬಂದ ಮ್ಯಾಲ ಅಲ್ಲೇ ನಾಕು ದಿನ ವುಳಕೊಂಡಿದ್ದು ನಾಯಕನ ವಂಸ ರುಕ್ಷವನ್ನು ತನ್ನ ಕಣ್ಣೆದುರಿಗೆ ಯುಳಕೊಂಡನು.. ಫಲಾನ ಸಂವತ್ಸರದಲ್ಲಿ ಹಂಡೇ ಹನುಮಪ್ಪನಾಯಕನೊಂದಿಗೆ ಹೋರಾಡಿ ಅಜೇಯವಾಗುಳಿದ ಜಿಲ್ಲೇಲ ರಘುಪತಿ ರಾಜಯ್ಯದೇವ ಮಾರಾಜನಿಂದ ಆರಂಭವಾಗಿದ್ದ ವಂಸರುಕ್ಷದೊಳಗ ಯೀರಲಿಂಗಣ್ಣನಾಯಕ, ಬೊಮ್ಮಲನಾಯಕ, ವೆರ್‍ರಿಬೊಮ್ಮಲನಾಯಕ, ಪೆದ್ದಕೋನೇಟಿ ನಾಯಕ, ಯಂಕಟಪತಿ ನಾಯಕ, ಮಾರಾಣಿ ಲಚ್ಚುರಾಮ ಅಮ್ಮ, ಪೆದ್ದ ತಿಮ್ಮಪ್ಪನಾಯಕರೇ ಮೊದಲಾದ ಕೊಂಬೆ ರೆಂಬೆಗಳು ಗೋಚರವಾದವು. ಯಿದೆಲ್ಲವನ್ನು ಕೂಲಂಕಷ ಪರಿಸೀಲಿಸಿದ ನಂತರ ಕೀರ್ತಿಸೇಸ ರಾಜಗೋಪಾಲನಾಯಕನ ದೊಡ್ಡ ತಮ್ಮನಾಗಿದ್ದ ಜೀವಪ್ಪನಾಯಕನನ್ನು ಮೊದಲ ಪಿಂಚಣಿ ದಾರನನ್ನಾಗಿಯೂ, ವಯಿಸ್ಸಿಗೆ ಬಂದಿದ್ದ ಆತನ ಮಗ ಕ್ರುಷ್ಣಪ್ಪನಾಯುಡನ್ನು ಯರಡನೇ ಪಿಂಚಣಿದಾರನನ್ನಾಗಿಯೂ ಘೋಷಿಸಿದನು. ತನ್ನಾಗ್ನೆಗೆ ಯದುರಾಡಲಿಕ್ಕೆ ವುಳಿಕೇ ರಾಜಪಾರಿ ವಾರದವರನ್ನು ತನ್ನ ತೀಕ್ಷ್ಣನೋಟ ಮಾತ್ರದಿಂದ ದೂರ ಸರಿಸಿದನು.. ತೆರಿಗೆಗಳನ್ನು ಅರ್ದಕ್ಕರ್ದ ಕಡಿಮೆ ಮಾಡಿ ಪ್ರಜೆಗಳನ್ನು ಸಂತುಷ್ಟರನ್ನಾಗಿ ಮಾಡಿದನು. ನಾಯಕರ ಮತ್ತು ದುರ್ಗದ ಕುಲದಯವಾದ ಶ್ರೀ ಯಂಕಟೇಸ್ವರ ಸ್ವಾಮಿಯ ದೇವುಳಕ್ಕೆ ಖುದ್ದ ನಡಕೊಂಡು ಹೋಗಿ ದರುಸನ ಪಡೆದನು.. ಅಗೋ ನಿಮ್ಮ ಸ್ವಾಮಿಯು ಸುಂದರ ಬಾಲಕನ ರೂಪಧಾರಣ ಮಾಡಿ ನನಗೆ ಆಸೀರುವಾದ ಮಾಡುತ್ತಿರುವನು ಯಂದುದ್ಗಾರ ತೆಗೆದು ವಯ್ದಿಕ ರುಂದದ ರುದಯ ಸೂರೆಗೊಂಡನು. ಕಲೆಟ್ಟರು ಸಾಹೇಬನಿಗೆ ತಮ್ಮ ಸ್ವಾಮಿಯು ಆಸೀರುವಾದ ಮಾಡಿದನೆಂಬ ಕಾರಣಕ್ಕೆ ಪ್ರಧಾನ ಅರ್ಚಕರಾದ ಗೋಯಿಂದಾಚಾರ್‍ಯರು 'ಸ್ರೀ ಪ್ರಸನ್ನಯಂಕಟೇಸ್ವರಸ್ವಾಮಿ' ಯಂದು ಪುನರ್‍ನಾಮಕರಣ ಮಾಡಿದರು.. ಈ ಪ್ರಕಾರವಾಗಿ ರಾಯದುರ್ಗದ ರಾಜಕಾರಣ ಸಂಬಂಧೀ ತರಲೆಗಳನ್ನು ತನ್ನ ಚಾಕಚಕ್ಯತೆಯಿಂದ ಬಗೆಹರಿಸಿದ ಥಾಮಸು ಮನ್ರೋ ಸಾಹೇಬನು ಅಲ್ಲಿಂದ ಪೊಡಮಟ್ಟು.. ಚಾಂಗು ಬಲಾ.. ಚಾಂಗು ಬಲಾ....

ಅತ್ತ ಕೂಡ್ಲಿಗಿ ಪಟ್ಟಣದೊಳಗೆ ರುತು ಪವನದ ತುಂಬೆಲ್ಲ ತಾರುಣ್ಯದ ಪರಿಮಳ ಘಮ್ಮಂತ ಹಬ್ಬುತಲಿತ್ತು. ಹರೇದವರಿಂದ ಹಿಡಿದು ಮುದೇರವರೆಗೂ

ಯಾರ ಬಾಯೊಳಗಿಣುಕಿದರೂ ಚೆನ್ನಾಸಾನಿ ಸವುಂದರ್ಯದ ಯಿರಾಟ್ ಸೊರೂಪವು.. ಯಾರ ಕಿವಿಯೊಳಗಣುಕಿದರೂ ಚೆನ್ನಾಸಾನಿಯ ಮಧುರ ಮಂಜುಳ ನಿನಾದವು.. ಯಾರ ಕಣ್ಣೊಳಗಣುಕಿದರೂ ಚೆನ್ನಾಸಾನಿಯ ಸಿರಿಗಂಧದ ಗೊಂಬಿಯು.. ಕಣ್ಣು ಮುಚ್ಚಿದೊಡನೆ ಬೀಳುತಲಿದ್ದ ಕಣಸುಗಳ ತುಂಬೆಲ್ಲ ತಾನೇ ತಾನಾಗಿ ಯಿಜ್ರುಂಭಿಸುತಲಿದ್ದ ಚೆನ್ನಾಸಾನಿಯ ಕಣ್ಣುಗಳನ್ನು ಹುಡುಕಿಕೊಂಡು ಕೋಲ್ಮಿಂಚುಗಳು ಬಂದವು. ಆಕೆಯ ಮುಖದಲ್ಲಿ ನೆಲಸಲಕಂತ ಸೊರಗಲೋಕದ ನಂದನ ವನದಿಂದ ಪಾರಿಜಾತವೇ ಮೊದಲಾದ ಪುಷ್ಪಗಳು ಬಂದವು. ಆಕೆಯ ಸೊಂಟದಲ್ಲಿ ತಳಮೂರಲಕಂತ ಸಿಂಹದ ನಡು ವಲಸೆ ಬಂತು. ಆಕೆಯ ಸ್ತನದ್ವಯಗಳಲ್ಲಿ ಬೀಡು ಬಿಡಲಕೆಂದು ತರಾವರಿ ಹಣ್ಣು ಹಂಪಲ ಗಳು ಬಂದವು. ಕೋಗಿಲೆಗಳ ಕಂಠಗಳಿಂದ ಯಿಂಪು ವಲಸೆ ಬಂದು ಆಕೆಯ ಕೋಮಲ ಕೊರಳೊಳಗೆ ಬೀಡುಬಿಟ್ಟಿತು.. ಹಿಂಗ ಕಿನ್ನರ, ಕಿಂಪುರುಷ, ಗಂಧರ್ವ ಸೊರಗಲೋಕ, ಸಸ್ಯಲೋಕ, ಜೀವಲೋಕ ಗಳಲ್ಲಿದ್ದಂಥ ಸಮಸ್ತ ಸವುಂದರ್ಯತನವು ನಾ ಮುಂದು ತಾ ಮುಂದು ಯಂದು ಅವಸರ ಬವಸರದಿಂದ ಬಂದು ಠಿಕಾಣಿ ಹೂಡಿದ ಪರಿಣಾಮವಾಗಿ ಚೆನ್ನಾಸಾನಿಯ ಸರೀರವು ಸವುಂದರ್ಯದ ವಸ್ತುಸಂಗ್ರಹಾಲಯವಾಯಿತು ಸಿವನೇ..

ಅಲ್ಲಲ್ಲಿಂದ, ಯಿಲ್ಲಲ್ಲಿಂದ, ಉಲ್ಲೆಲ್ಲಿಂದಲೋ ಆಗೋಚರ ಸವುಂದರತ್ವನಗಳು ಹೇಳದೇ ಕೇಳದೇ ಬಂದು ತನ್ನ ಸರೀರವನ್ನು ತುಂಬಿಕೊಂಡ ಫಲವಾಗಿ ಚೆನ್ನಾಸಾನಿಗೆ ಕಣ್ಣುಗಳೊಳ ಗೊಂದು ನಮೂನಿ ಆಗತೊಡಗಿದವು. ಕಿವಿಯೊಳಗೆ ಅನಿರ್ವಚನೀಯ ನಾದತರಂಗಗಳು ವುಲ್ಬಣಿಸ ತೊಡಗಿದವು. ಯದೆಭಾರ ಯಂದೆನ್ನಿಸಲಾರಂಭಿಸಿತು. ನಡುವಿನೊಳಗೊಂದು ನಮೂನಿ, ತೊಡೆಗಳೊಳಗೊಂದು ನಮೂನಿ, ರೆಪ್ಪೆಗಳೊಳಗೊಂದು ನಮೂನಿ ಅನಿರ್ವಚನೀಯ ಅನುಭೂತಿ ಆಗಲಾರಂಭಿಸಿತು. ಚಿಟ್ಟೆ, ಪತಂಗ, ದುಂಬಿಗಳು ತನ್ನ ಮುಖವನ್ನೆ ವಂದು ಹುವ್ವೆಂದು ಭಾವಿಸಿ ಮುತ್ತತೊಡಗಿದವು.. ಯಾರ್‍ಯಾರಮೋ ಕಣ್ಣುಗಳು ತನ್ನನ್ನು ನೋಡುತ್ತಿರುವವು, ಯಾರ್‍ಯಾರಮೋ ಕಿವಿಗಳು ತನ್ನನ್ನಾಲಿಸುತ್ತಿರುವವು.. ಗಾಳಿ ತನ್ನ ಗಲ್ಲಕ್ಕೆ ಮುದ್ದು ಕೊಟ್ಟಂಗಾಗತಯ್ತೆ.. ಗಾಳಿ ತನಗೆ ಚಕ್ಕಟೆಗುಳ್ಳಿಯಿಟ್ಟಂಗಾಗತಯ್ತೆ.. ಗೋಡೆ ಮ್ಯಾಲಿರೋ ಸ್ರೀ ಕ್ರುಷ್ಣ ಪರಮಾತುಮ, ಶಂಭಂತ ಮಾರಾಜ, ದುಶ್ಯಂತ ಮಾರಾಜ, ಸ್ರೀ ಕ್ರುಷ್ಣದೇವರಾಯ, ಪರಮೇಸ್ವರ ಯಿವರೆಲ್ಲ ತಮ ತಮ್ಮ ಚಿತ್ರಪಟಗಳಿಂದ ಹೊರ ಹಾಯ್ದು ತನ್ನನ್ನು ಜುಲುಮಿ ಮಾಡಿದಂಗಾಗತಯ್ತೆ.. ತಾನು ಕಲಿಯುತ್ತಿರೋ ತರಾವರಿ ರಾಗಗಳು

ಮನುಷ್ಯ ರೂಪ ಧಾರಣ ಮಾಡಿ ತನ್ನ ಮ್ಯಾಲ ಬಕಾಟಿ ಬಾರಲು ಬಿದ್ದಂಗಾಗತಯ್ತೆ.. ಬಳೆಗಳು ಮುಂಗಯ್ನ, ಗೆಜ್ಜೆಗಳು ಮುಂಗಾಲುಗಳನ್ನ, ಸರಗಳು ತನ್ನ ಕುತ್ತಿಗೆಯನ್ನ, ಕುಂಕುಮ ಬೊಟ್ಟು ತನ್ನ ನೊಸಲನ್ನ, ತೊಟ್ಟಿರೋ ಪೋಲಕ ತನ್ನ ಯದೆಯನ್ನ, ವುಟ್ಟಿರೋ ವಳ ಲಂಗ ತನ್ನ ತೊಡೆ ಜಘನಗಳನ್ನ, ಜಡೆ ತನ್ನ ಬೆನ್ನನ್ನ, ಮೂಗುಬೊಟ್ಟು ತನ್ನ ಮೂಗನ್ನ, ಮ್ಯಾಲ್ದುಟಿ ಕೆಳದುಟಿಯನ್ನ, ಕೆಳದುಟಿ ಮ್ಯಾಲ್ದುಟಿಯನ್ನ, ವಾಲೆ ತನ್ನ ಕಿವಿಗಳನ್ನ, ಪಾದರಕ್ಷೆ ತನ್ನ ಅಂಗಾಲುಗಳನ್ನು ಲೊಚಲೊಚಾಂತ ಮುದ್ದು ಕೊಟ್ಟಂಗಾಗತಯ್ತೆ.. ಯವ್ವಾ.. ಸರೀರದ ಹೊರಭಾಗ ವಳಭಾಗವನ್ನ ಮುದ್ದು ಕೊಟ್ಟಂಗಾಗತಯ್ತೆ ಯವ್ವಾ.. ಯವ್ವಾ ನನಗ ನನ್ನ ಸರೀರದ ಗೊಡವೆಯೇ ಬ್ಯಾಡs ಯವ್ವಾ ಕೆಳಗ ಹಾಸಿಕೊಳ್ಳುವ ಹಾಸಿಗೆ, ಹೊದ್ದುಕೊಳ್ಳುವ ದುಪ್ಪಟಿಯೊಳಗಿನ ಚಿತ್ರಗಳು ನನ್ನನ್ನು ಬಲು ಜುಲುಮಿ ಮಾಡಲಾಕ ಹತ್ಯಾವ.. ಕತ್ತಲು, ಬೆಳಕು, ಜಾಲಾಂದರ.. ದೀಪ ಯಿವೆಲ್ಲಮೂನನ್ನ ಯಿರುದ್ದ ಮಲಸತ್ತ ಹೂಡಿರೋ ಹಾಂಗ ಕಾಣತಯ್ತೆ.. ಯಂದು ಚಿನ್ನಾಸಾನಿ ತನ್ನ ತಾಯಿ ತಿಲ್ಲಾನ ತಾಯಕ್ಕಳ ಜೀವ ತಿಂಬತೊಡಗಿದಳು ಸಿವನೇ.. ತನ್ನ ಸುವಂದರ್ಯವೇ ತನಗ ಮುಳುವಾಗಿದ್ದಂಗಯ್ತೆ.. ಯಷ್ಟಿದ್ದರೂ ತಾನು ಯಿಜಯನಗರ ಸಾಮ್ರಾಟ ಸ್ರೀಕ್ರುಷ್ಣ ದೇವರಾಯನ ದ್ವಿತೀಯ ಪಟ್ಟಮಹಿಷಿ ಚಿನ್ನಾಂಬಿಕೆಯ ವಂಶೋದ್ಭವಳು. ಸಾವುರ ಸುಂದರಿಯರ ಮಯ್ಯಿ ವಲವಿನ ಸವುಂದರ್ಯವನ್ನು ತಾನೋರ್ವಳೇ ಧರಿಸಿರುವುದೇ ಯಿದಕ್ಕೆ ಕಾರಣ.. ಯಿದರ ಪಯ್ಕಿ ಪಾವಲಿ ಭಾಗವನ್ನಾದರೂ ವುತಾರ ಮಾಡಬೇಕೆಂದು ಕೊಂಡಳು ತಾಯಕ್ಕ.. ತನ್ನ ಮಗಳ ಮಯ್ಯ ಮ್ಯಾಲ ಆಭರಣಗಳಿದ್ದರೊಂದು ಚಂದ.. ತೆಗೆದರ ದುಪ್ಪಟ್ಟು ಚಂದ.. ತಾನು ತನ್ನ ಕಯ್ಯಾರ ತನ್ನ ಮಗಳನ್ನು ನಿರಾಭರಣ ಮಾಡಲಕಾದೀತಾ? ತನ್ನ ಮಗಳ ಮುಖದಿಂದ ಕಣ್ಣುಗಳನ್ನಿಳುವಲಕಾದೀತಾ? ಗಲ್ಲಗಳನ್ನಿಳುವಲಕಾದೀತಾ..? ಯದೆಯ ಗಾತ್ರವ ತಗ್ಗಿಸಲಕಾದೀತಾ?.. ಹೆಂಗಪ್ಪಾ ತನ್ನ ಮಗಳನ್ನು ಸಂತಯಿಸುವುದು? ಹೆಂಗಪ್ಪಾ ತನ್ನ ಮಗಳನ್ನು ರೂಪುಲಾವಣ್ಯದಿಂದ ಕಾಪಾಡುವುದು? ನಾಕು ಮಂದಿ ಗಂಡಸರ ಕೆಟ್ಟ ಕಣ್ಣುಗಳು ತನ್ನ ಮಗಳಿಗೆ ತಗುಲದಂತೆ ನೋಡಿಕೊಳ್ಳುವುದು ಹೆಂಗ? ತಾಯಕ್ಕ ಸವುಂದರ್ಯದುಪಟಳದ ಶಮನಾರ್ಥವಾಗಿ ಗಳಿಗ್ಗಳಿಗ್ಗೊಮ್ಮೆ ನೀವಳಿಸಿ ತೆಗೆಯುವ ಯೇರುಪಾಟು ಮಾಡಿದಳು.. ತನ್ನ ಮಗಳ ಕಡೇಕ ದಿಟ್ಟಿಸಿ ನೋಡಕೂಡದೆಂದು ಹೆಣ್ಣಾಳುಗಳಿಗೆ ತಾಕೀತು ಮಾಡಿದಳು. ನಿರೀಂದ್ರಿಯರಾದ ಖೊಜ್ಜಾಳುಗಳನ್ನು ಕಣ್ಣಾಗವಲಿಗೆ, ಮಯ್ಯಾಗವಲಿಗೆ ನೇಮಿಸಿದಳು.. ದೇಸ ದೇಸಗಳಿಂದ, ಪಾಳೈಗಾರ,

ಜಮೀಂದಾರ, ಮಾಂಡಲೀಕ, ಸಾಮಂತ ಕಡೇಲಿಂದ ಯಕ್ಕಾ ನಿನ ಮಗಳು ರುತುಮತಿ ಆಗವಳಂತಲ್ಲಾ.. ಯುತ್ತೇ ನಿನ ಮಗಳು ತ್ರಿಪುರಸುಂದರಿಯಂತವಳಂತಲ್ಲಾ.. ಆಕೆಯ ಸರೀರದ ಝಳ ಯಿಲ್ಲೀವರೆವಿಗೂ ಹೊಂಟು ಬಂದು ತಮ್ಮನ್ನು ಬಾದಿಸಲಕ ಹತ್ತಯ್ತೆ.. ಅನರಘ್ಯ ರತುನವನ್ನು ಯೇಸು ದಿನಾಂತ ದಾಚಿಕೊಂಡಿರುತೀ.. ನಿನ್ನ ತೂಕದ ಬಂಗಾರ ಕೊಡುತೇವಿ.. ನೀನು ಹೂ ಅಂದರ.. ಯಂಬಿವೇ ಮೊದಲಾದ ವಕ್ಕಣಿಕೆಗಳುಳ್ಳ ಅಹವಾಲುಗಳು ವಂದರ ಹಿಂದೊಂದರಂತೆ ಬರತೊಡಗಿದವು. ಅವಕ್ಕೆಲ್ಲ ತಾನೇನಂತ ಜವಾಬು ಕೊಟ್ಟಾಳು? ತನ್ನ ಮಗಳ ತಂಟೆಗೆ ಬಂದೀರಾ ಜ್ವಾಕೆ ಯಂಬ ಯಚ್ಚರಿಕೆಯ ಮಾತನ್ನು ಹೊರತು. ಬಲಕುಂದಿ ಬಲರಾಮರೆಡ್ಡಿ ಹೊಟ್ಟೆಗೇನು ತಿಂಥಿರಬೌದು..? ನಿನ್ನ ಮಗಳನ್ನು ಅಪಹರಿಸುತ್ತೇನೆಂದು ಬೆದರಿಕೆ ಹಾಕುವುದೇನು? ವುತ್ತುನೂರಿನ ತ್ರಿಪುರಾಂತಕ ನಾಯಕ ಹೊಟ್ಟೆಗೇನು ತಿಂಥಿದ್ದಿರಬೌದು..? ಮನೆಗೆ ಮುತ್ತಿಗೆ ಹಾಕಿ ಚಿನ್ನಾಸಾನಿಯನ್ನು ಗೆದ್ದೊಯ್ಯುವುದಾಗಿ ಬೆದರಿಕೆ ಹಾಕುವುದೇನು? ತಾಯಕ್ಕಳಾದ ತಾನು ಕಣ್ಣಸನ್ನೆ, ಬಾಯಿಸನ್ನೆಯಿಂದ ಸಾಯಿರಾರು ಮಂದಿಯನ್ನು ಕಲೆ ಹಾಕಿ ಆಕ್ರಮಣದ ಹುಟ್ಟಡಗಿಸ ಬಲ್ಲಳೆಂಬ ಕಾರಣಕ್ಕೆ ಯಿವತ್ತಿನವರೆಗೆ ಯಾವುದೇ ಅಹಿತ ಘಟನೆ ನಡೆದಿಲ್ಲ. ಆದರೂ ತನ್ನ ಜಾಗರೂಕತೆಯಿಂದ ತಾನಿರುವುದಂತೂ ನಿಜ. ತನ್ನ ಬೀಜ ಸಂಜಾತೆ ಅಲ್ಲದಿದ್ದರೂ ಬುಗಡೆ ನೀಲಕಂಠಪ್ಪಗೆ ಚಿನ್ನಾಸಾನಿ ಅಂದರ ಪಂಚಪ್ರಾಣ. ಖುದ್ದ ಪಯಿಲ್ವಾನನೂ, ಸದರಿ ಪಟ್ಟಣದ ಹತ್ತಾರು ಗರಡಿಮನೆಗಳ ಮಾಪೋಷಕನೂ ಆಗಿರುವ ಆತನು ಸಮುರೋಪಾದಿಯುಲ್ಲಿ ಚಿನ್ನಾಸಾನಿಯು ಕಾವಲನ್ನು ಸುಪರ್ದಿಗೆ ತೆಗೆದುಕೊಂಡಿರುವನೆಂದ ಮ್ಯಾಲ ಕೇಳುವುದೇನುಂಟು? ಯಿದರಿಂದಾಗಿ ಹೊರಗಿನ ಪ್ರಪಂಚವನ್ನು ನಿದ ನಿದಾನಿಕೀಲೆ ಕಡಕೊಳ್ಳುತ ತಾನಿರೋ ಮನೆಯೇ ವಂದು ಅಗಾಧ ಪ್ರಪಂಚಯಂದು ಪರಿಭಾವಿಸುತ್ತ.. ನ್ರುತ್ಯ ಗಾಯನಗಳ ಕಲಿಕೆಯ ನಡುವೆ ಬ್ಯಾಸರವಾದಾಗಲೆಲ್ಲ ವುಪ್ಪರಿಗೆ ಮ್ಯಾಲೇರಿ ಭವಂತಿ ಜಾಲಂದರದ ಮೂಲಕ ದೂರದ ಗುಡ್ಡ, ಆಕಾಸ, ಪಕ್ಷಿಗಳನ್ನೆಲ್ಲ ನೋಡುತ್ತ, ಕಯ್ಗನ್ನಡಿ ಯೊಳಗ ತನ್ನ ಪ್ರತಿಬಿಂಬವನ್ನು ನೋಡಿ ತನಗೆ ತಾನೇ ಮರುಳಾಗುತ್ತ ಯಿನಾಕಾರಣ ಆಗೊಮ್ಮೆ, ಯೀಗೊಮ್ಮೆ ನಿಟ್ಟುಸಿರು ಬಿಡುತ್ತ ಚಿನ್ನಾಸಾನಿಯು...

ಅತ್ತತ್ತ ಹರಪನಹಳ್ಳಿ ವಳೀತದೊಳಗ ಪ್ರಜಾಕಂಟಕರಾಗಿ ಪರಿಣಮಿಸಿದ್ದ ರಾಜಾಧಿರಾಜರು ನಾಯಿ, ಬೆಕ್ಕುಗಳು ತಾವು ಹೆತ್ತಂತ ಕಂದಮ್ಮಗಳನ ತಿನ್ನುವುದಿಲ್ಲವೇನು? ಅದರಂತೆ ತಾತ್ಕಾಲಿಕವಾಗಿ ತಮ್ಮ ಪ್ರಜೆಗಳು ಹಸಿದಿರೋ

ತಮಗ ಆಹಾರವಾದರ ತಪ್ಪೇನು? ಯಂಬ ಅಪಾಯಕಾರಿ ನಿಲುವಿಗೆ ಬಂದುದನ್ನು ಹೇಳುತಾ ಹೋದರೆ...

ಅತ್ತ ಸಂಡೂರು, ಕಣಿವೆಹಳ್ಳಿ, ಯತ್ತಿನಹಟ್ಟಿ, ಗಬ್ಬಲಗುಂಡಿ, ಅಂತಾಪ್ರದಂಥ ಗ್ರಾಮ ಗಳನ್ನಾಳುತಲಿದ್ದ ಜಮೀಂದಾರರು ಸಂತರಸ್ತರನ್ನು ಹತ್ತದಿನಯ್ದು ರೂಪಾಯಿಗಳಿಗೆ ಖರೀದಿ ಮಾಡುತ್ತಿದ್ದುದನು ಹೇಳುತಾss ಹೋದರೆ..

ಅತ್ತ ಮೋರಿಂಗೆರೆ ಗ್ರಾಮದ ಹಿರೇವತನದಾರ ತಿರುಕಪ್ಪಗವುಡನೂ, ಯಲ್ಲಾಪುರ ಕೊರಚರಟ್ಟಿಯ ಚೋರಾಗ್ರೇಸರನೂ ಯದುರಾ ಬದುರಾ ಕೂತುಕೊಂಡು ವುಭಯಕುಶಲೋಪರಿ ಯಿಚಾರಿಸುತ್ತ ವುಂಬುತಲಿದ್ದುದನು, ಅದೇಯಿನ್ನುರುತುಮತಿಯಾಗಿದ್ದ ಗವುಡನ ಮಗಳು ಪಾರೊತಿಯು ಅವರೀರ್ವರಿಗೆ ಅಪ್ಯಾಯಮಾನವಾಗಿ ವುಣಬಡಿಸುತಲಿದ್ದುದನ್ನು ಹೇಳುತ್ತಾ ಹೋದರ...

ಅತ್ತ ಕುದುರೆಡವು ಪಟ್ಟಣದರಮನೆಯೊಳಗೆ ಅಂಜಣ ಹಾಕುವವರನ್ನು ತಾನಿದ್ದಲ್ಲಿಗೆ ಕರೆಯಿಸಿಕೊಂಡು ನೋಡಿರಪ್ಪಾ.. ನಾನು ಕೀರ್ತಿಸೇಸಳಾದ ಬಳಿಕ ಸಮಾಧಿ ಕಟ್ಟಿಸಲಕ, ನನ್ನ ಕುರಿತು ಪುರಾಣ ಬರೆಸಲಕ, ಪುಣ್ಯತಿಥಿಗಳಂದು ಸಾವುರಾರು ಮಂದಿಗೆ ಅನ್ನಸಂತರ್ಪಣೆ ಮಾಡಿಸಲಕ ತುರ್ತಾಗಿ ಸಾಯಿರಾರು ಹೊನ್ನು ಬೇಕಾಗಯ್ತೆ.. ಯೇಳು ಕೊಪ್ಪರಿಗೆ ಚಿನ್ನವನ್ನು ನಮ್ಮ ಪೂರ್ವಿಕರು ಸದರಿ ಅರಮನೆಂಯೊಳಗೋ, ವೂರ ಅಚ್ಚೇಕಡೇಲಿರೋ ರಣಮಹಲಿನೊಳಗೆಲ್ಲೋ ವೂತಿಟ್ಟಿರುವಂತೆ.. ಅದನು ನೀವು ನಿಮ್ಮ ತಂತ್ರಯಿದ್ಯೇವ ಖರಚುಮಾಡಿ ಹುಡುಕಿಸಿ ಕೊಡಬೇಕೆಂದು ಸಂತೆ ಹೊತ್ತಿಗೆ ಮೂರು ಮೊಳ ನೇಯುವ ಜಾಯಮಾನದ ರಾಜಮಾತೆ ಭಯ್ರಮಾಂಬೆಯು ತಾಕೀತು ಮಾಡುತಲಿದ್ದುದನ್ನು ಹೇಳುತ್ತ ಹೋದರ..

ಅದೇ ಪಟ್ಟಣದ ಯಿನ್ನೊಂದು ಮೂಲೆಯೊಳಗೆ ಪಟ್ಟಣದ ದಯವಸ್ತರು ವಲ್ಲೇ ವಲ್ಲೇಯಂಬ ರಾಗವನ್ನು ಹಾಡುತಲಿದ್ದ ಜಗಲೂರೆವ್ವಳನ್ನು ರಾಯಭಾರಕ್ಕೆ ಕಳುವಲು ತಲೆಕೆಳಗಾಗಿ ನಿಂತಿದ್ದನ್ನು ಹೇಳುತ್ತ ಹೋದರ...

ಅದೇ ಪಟ್ಟಣದ ಮತ್ತೊಂದು ಮೂಲೆಂಯಲ್ಲಿ ಸೂರನೆಂಬಭಿದಾನವುಳ್ಳವನಾದ ಮಹಿಷನು ಮಿಚ್ಚೇರಿಯತ್ತ ಮುಖಮಾಡಿ ಹೊಂಯ್ಕು ಹೊಂಯ್ಕು ಯಂದು ವುದ್ದೇಸಯಿಟುಕೊಂಡು ಯಾಕೆ ಕೂಗುತ್ತಲಿದ್ದನೆಂಬುದನ್ನು ಹೇಳುತ್ತ ಹೋದರ..

ಅದೇ ಪಟ್ಟಣದ ಸೆರಗಿಗಂಟಿಕೊಂಡಂತಿದ್ದ ಚತುರ್ಮುಖೀ ಗುಡ್ಡಗಳ ಹಿಂದ

ಮುಂದ, ಆಜೂಕ ಬಾಜೂಕ, ಗವಿಗವ್ವರಗಳಲ್ಲಿ ಯವ್ವಾ ತಾಯಿ.. ಜಗಾನುಮಾತಾ ಯಂದು ಕೂಗುತ್ತಿದ್ದವರ ಗಂಟಲು ಅಂಗಾಲಪಾಡುಗಳನ್ನು ಹೇಳುತ್ತ ಹೋದರ.. ಅಲ್ಲಲ್ಲಿ ಮತಿಭ್ರಣ ಕ್ಕೊಳಗಾಗಿದ್ದವರ, ಕುಕಾನೆ ಕೂಗಿಕೊಳ್ಳುತ್ತಿದ್ದವರ, ಚಿಟ್ ಚಿಟಾರನೆ ಕೂಗಿಕೊಳ್ಳುತ್ತಿದ್ದವರ, ಕುಣಿದು ಕುಪ್ಪಳಿಸುತ್ತಿದ್ದವರ, ಸೊಯಂ ಕಲುಪಿತ ತಾಯಿಯ ಮೂರುತಿಗಳನ್ನು ಪುಜ ಪೂಜೆ ಮಾಡುತ್ತಿದ್ದವರ, ತಾಯಿ ಬಾರದ ಹೊರತು ವಂದು ತುತ್ತು ಮುಟ್ಟುವುದಿಲ್ಲ, ವಂದು ಗುಟುಕು ನೀರು ಮುಟ್ಟುವುದಿಲ್ಲವೆಂದು ಘೋರ ಸಪಥ ನಿರಸನರೊತಾರೂಢ ರಾಗಿದ್ದವರ, ಭಜನೆ, ಹೋಮ, ಹವನ ಮಾಡುತ್ತಿದ್ದವರ ಬಗ್ಗೆ ಹೇಳುತ್ತ ಹೋದರ...

ಅತ್ತ ಯಿಂದ್ರದಿಕ್ಕಿನಲ್ಲಿ ಸದರೀ ಕುದುರೆಡವಿಗೆ ಹಲವು ಗಾವುದ ದೂರದಲ್ಲಿ ದಾರಿದ್ರ್ಯ ದೇವತೆಯ ತವರೂರೋ ಯಂಬಂತೆ ವಂದು ಗ್ರಾಮ ಯಿರುವುದಷ್ಟೆ. ಅದರ ನಾಮದೇಯುವು ಹತ್ತಲವು ಸತಮಾನಗಳಿಂದ ಮಿಚ್ಚೇರಿ ಯಂಬುದಾಗಿತ್ತಷ್ಟೆ.. ವಾಡಿಕೆ ನಾಮವು ಅಪಭ್ರಂಸ ಗೊಂಡು ಮಿಂಚೇರಿ ಯಂಬುದಾಗಿ ಚಲಾವಣೆಯಿತ್ತಷ್ಟೆ.. ಅದನು ಅಸಾಯುಸೂರ ಜಾಲಿ ಮಂಚಯ್ಯನಾಯಕನು ಬರೋಬ್ಬರಿ ಹದಿನೆಂಟೊಂಭೊತ್ತು ಮಂದಿ ಸಯ್ನಿಕರನ್ನು, ಯಿಪ್ಪತ್ತೊಂದೂವರೆ ಹೆಂಡಂದಿರನ್ನು ಯಿಟ್ಟುಕೊಂಡು ಕೆಮ್ಮುತ್ತ, ಕ್ಯಾಕರಿಸುತ್ತ ಪರಿಪಾಲನ ಮಾಡುತ್ತಿದ್ದನಷ್ಟೆ. ಆ ಅರಮನೆಯು ವಂದು ಕಾಲಕ್ಕೆ ಮೂರ ತುಂಬೆಲ್ಲ ಯಿತ್ತು. ಕಾಲಭಯ್ರವನ ದಾಂಧಲೆಗೆ ಸಿಕ್ಕು ರಸ್ವಗೊಂಡೂ ಗೊಂಡೂ ಗ್ರಾಮದ ಕಾಲ ಬುಡಕ್ಕೆ ಬಂದು ಹಿಂಗಾಲ, ಮುಂಗಾಲ ಕಸುವಿಲ್ಲದೆ ಹಿಂದಕ್ಕಾಗಲೀ, ಮುಂದಕ್ಕಾಗಲೀ ತೆವಳಲಾರದೆ ವುಳಕೊಂಡುಬಿಟ್ಟಿತ್ತಷ್ಟೆ. ಮೂರು ಹೆಂಗಯಿತೆಂದು ಕೇಳುವುದಿಲ್ಲ.. ಅರಮನೆ ಹೆಂಗಯಿತೆಂದು ಕೇಳುವುದು ಲೋಕರೂಢಿ ಅಯಿತೆ ಯಂಬ ಲೆಕ್ಕಾಚಾರದಿಂದ ನಾಯಕನು ತನ್ನ ಅರಮನೆಗೆ ಪೂರ್ವ ಕಳೆಯನ್ನು ಮರಳಿ ಮುಡಿಸಲು ಬಗೆಬಗೆಯ ಜೀರ್ಣೋದ್ಧಾರ ಕಾರ್ಯಗಳನ್ನು ಯೋಚಿಸುತ್ತಲೇ ಬಂದಿದ್ದನು. ಆರ್ಥಿಕ ಸಂಬಂಧೀ ಅಸಾಯಕತೆಯಿಂದಾಗಿ ತನ್ನ ವಂದಾದರೂ ಯೋಚನೆಯನ್ನು ಕಾರ್ಯಗತ ಮಾಡುವು ದಾಗಿರಲಿಲ್ಲ. ಅರಮನೆಯ ಆರ್ಥಿಕ ಸಲಹೆಗಾರ ಯೀರಬಡಕಲಪ್ಪನ ಸಲಹೆ ಮೇರೆಗೆ ಅರಮನೆಯ ಜೀರ್ಣೋದ್ಧಾರ ಸಾಯಾರ್ಥವಾಗಿ ಚಿಂತರಪಳ್ಳಿ ವಳಿತದ ಹಂಪಾಪಟ್ಟಣದ ಗೊಂದಲಿಗರ ಚವುಡೋಜಿಯ ಆಟವನ್ನು ಪ್ರದರ್ಸನ ಮಾಡಿಸುವುದೆಂದು ತೀರುಮಾನಿಸಲು ಪುರ ಪ್ರಮುಖರು ಗಂದರ ಗೋಳವಾದರು. ಅಯ್ಯಯ್ಯೋ ಹುಳೇಬೀಡಿನ ಮೋಬುಳಾಂಬಿನ್ನ ಕರೆಸಿ ಕಥಕ್ಕಳ್ಳಿ ಮಾಡಸಬೌದಿತ್ತಲ್ಲ..

ಅಮ್ಮನಕೇರಿಯ ಅವುಲಮ್ಮನಿಂದ ಭರತನಾಟ್ಯವ ಯಿಡಿಸಬೌದಿತ್ತಲ್ಲ.. ಕೂಡ್ಲಿಗಿಯ ತಿಲ್ಲಾನ ತಾಯಕ್ಕನ್ನ ಕರೆಸಿ ಗಾತ್ರಕಛೇರಿ ಯಿಡಿಸಬೌದಿತ್ತಲ್ಲ.. ಅವೆಲ್ಲ ಬಿಟ್ಟು ಯಕಃಶ್ಚಿತ್ತ ಗೊಂದಲಿಗರ ಚವುಡೋಜಿ ಯಂಬ ಗೊರವರ ದುಂಡುಚಿಯನ್ನು ಯಿತಿಹಾಸ ಪ್ರಸಿದ್ಧಾಲಂಕ್ರುತ ಅರಮನೆಯೊಳಗ ಬಿಟ್ಟುಕೊಳ್ಳುವುದೆಂದರೇನು? ಗೊಂದಲಿಗರ ಆಟಪಾಟಗಳಿಂದ ಗತಲೋಕವಾಸಿಗಳಾಗಿರೋ ಪೂರುವಿಕ ರಾಜ ಮಾರಾಜರ ಕಿವಿಗಳನ್ನು ಮಯ್ಲಿಗೆ ಮಾಡುವುದೆಂದರೇನು? ಬ್ಯಾಡ ದೊರೆಯೇ ಬ್ಯಾಡ, ಜಾನಪದರ ಆಕಳಿಕೇನ ತಡಕೊಳ್ಳೋ ತಾಕತ್ತಿಲ್ಲದ ಯೀ ಅರಮನೆಯು ಯಿನ್ನು ಗೊಂದಲಿಗರು ಹಾಡಿದ ರಂದರ ವುಸುರುಗಟ್ಟಿ ಸಾಯ್ತದss ಯಂದು ತಕರಾರೆತ್ತಿದ್ದಕ್ಕೆ ಜಾಲಿ ಮಂಚಯ್ಯ ನಾಯಕನು "ನಮ್ಮೀ ಅರಮನೆಗೆ ಮೂತ್ರದೊಳಗೆ ಮೀನು ಹುಡುಕುವ ಸ್ಥಿತಿವುಂಟಾಗಿರುವುದರಯ್ಯಾ.. ಕಥಕ್ಕಳಿ ಆಡಿಸಿದರ ಕಡಕೊಂಡು ಬೀಳೋ ಹಂಗಯ್ತೆ.. ಭರತನಾಟ್ಯದ ಗೆಜ್ಜೆ ಸಬುದಕ್ಕೆ ಗಾಭರಿ ಆಗೋ ಹಂಗಯ್ತೆ.. ಗಾತ್ರಕಛೇರಿಯ ಗಾಯನದಲೆಗುಂಟ ತೇಲಿ ಹೇಗೋ ಹಂಗಯ್ತೆ.. ಯೀಣೆ, ಮ್ರುದಂಗ, ಚಂಡಕ, ತ್ರಿವಳಿ, ಮುರಜಗಳಂಥ ವಾದ್ಯಗಳ ಸಬುಧಕ್ಕೆ ಗಡಗಡಾಂತ ನಡುಗುವ ಹಂಗಯ್ತೆ.. ಯೇನಾರ ಯಿದು ತಡಕೊಳ್ಳೋದ ಯಿದ್ದರ ಸಂಬಾಳ, ಚವುಡಿಕೆಗಳಂಥ ವಾದ್ಯಗಳನ್ನು ಮಾತ್ರ.. ಚವುಡೋಜಿಯ ಕಂಠದ ಕೆಳ ಅಂತಸ್ತೀನ ದ್ದೊನಿಯನ್ನು ಮಾತ್ರ.. ಪೂರುವಾಪರ ಯೋಚನೆ ಮಾಡೀಯೇ ಯಿದನು ಯೇರುಪಾಟು ಮಾಡಿದ್ದೀವಿ.. ಯಿದಕ ಅಡ್ಡಗಾಲು ಹಾಕಿದಿರಂದರ ಮೂರು ಅರಮನೆಯೊಳಗೆ ಬಂದೀತು, ಅರಮನೆಯು ಮೂರೊಳೀಕ್ಕೆ ಹೋದೀತು. ಕಣಸಿನ ಕಜ್ಜಾಯಕ್ಕಿಂತ ನಣಸಿನ ನವಣಕ್ಕಿ ಬಾನವೇ ಯೇಟೋ ವಾಸಿ ಕಣರಪ್ಪಂದಿರುಗಳಿರಾss ನೀವೂನಿಮ್ಮ ಕಯ್ಲಾದೋಟು ಕೊಟ್ಟು ಗೊಂದಲಿಗರ ಆಟ ನೋಡಿ ರಪ್ಪಂದಿರುಗಳಿರಾ" ಯಂದು ಮುಂತಾಗಿ ಪರಿಪರಿಯಿಂದ ಹೇಳುತ ಅವರನು ವಂದು ದಾರಿಗೆ ತಂದನು. ಯೀ ಆಟ ನೋಡೋದುರ ಮೂಲಕ ಪ್ರಜೆಗಳು ತಮ್ಮರಮನೆಯ ಬುನಾದೀ ಕಲ್ಲುಗಳಾಗಬೇಕೆಂದು ಸಾಮುಸುಕ್ರುತಿಕ ಯಿಭಾಗದೋರು ಭರ್ಜರಿ ಪ್ರಚಾರ ಮಾಡುತs ಮಾಡುತss

ಯಿತ್ತ ಗೊಂದಲಿಗರ ಚವುಡೋಜಿ ಮತ್ತಾತನ ಹೆಂಡರು ಮಕ್ಕಳನು ಕಯ್ಯೊಳಗೆ ಕಿಲುಬುವ ಕಾಸಿಲ್ಲದ ಸುಂಕ ವಸೂಲಿ ಮಾಡುವ ಚವುಗಲೆಯವರ ಬಯಲು ಬಂಧನದಲ್ಲಿದ್ದರು. ಅವರ ಮಗ್ಗುಲಿದ್ದ ಚೀಲವು ಆಮೂರು ರಾಜ, ಯೀವುರ ರಾಜ ಕೊಟ್ಟಿದ್ದ ಪ್ರಮಾಣ ಪತ್ರಗಳಿಂದ ತುಂಬಿ ತುಳುಕಾಡುತಲಿತ್ತು.

ಚವುಗಲೆಯು ಸಂಬಾಳ, ಚವುಡಿಕೆಗಳ ಮ್ಯಾಲ ಬೇಕಾಬಿಟ್ಟಿ ಬಡಿಯೂತ ತನ್ನ ವರ್ತಮಾನದ ಸಂಕಟವನ್ನು ತೀರಿಸಿಕೊಳ್ಳುತ್ತಿರುವಾಗ್ಗೆ, ಸುಂಕ ತೇಯದ ಹೊರತು ಬಿಡೋದಿಲ್ಲ ಯನ್ನುತಿರುವಾಗ್ಗೆ, ನಾಯಕನ ಹುಕುಂ ಬಂದದ್ದೂ ತಡವಾಗಲಿಲ್ಲ.. ಗವುರವಪೂರುವಕವಾಗಿ ನಡೆಸಿಕೊಂಡೊಯ್ದು ಆಮಾತ್ಯ ಚರಕಲಯ್ಯನೆದುರು ಸಾದರ ಪಡಿಸಿದ್ದೂ ತಡವಾಗಲಿಲ್ಲ.. ಆವಯ್ಯನು ರಾಜಗಾಂಭೀರ್ಯದಿಂದ ಅರಮನೆಯ ತ್ರಿಕಾಲ ಸತ್ಯವನ್ನು ನಾಕೇ ನಾಕು ಮಾತುಗಳಲ್ಲಿ ಯಿವರಿಸಿ ಯೇನು ಕೊಡಬೇಕು, ಯೇನು ಬಿಡಬೇಕು ಯಂದು ಯಿರೋ ಯಿಷಯಕ್ಕೆ ಬಂದದ್ದೂ ತಡವಾಗಲಿಲ್ಲ.. ಅವರು ಯಿಂತಿಷ್ಟು ಯಂದು ನಯ ನಾಜೂಕಿನಿಂದ ಕೇಳಿದ್ದೂ ತಡವಾಗಲಿಲ್ಲ.. ಸಂದಾಯಗೊಳ್ಳೋ ಸಂಭಾವನೇಲಿ ತನಗಿಷ್ಟು, ಬಡಕಲಯ್ಯಗಿಷ್ಟು ಕೊಡತಕ್ಕದ್ದೆಂದೂ, ಮಾತು ವಪ್ಪದಿದ್ದಲ್ಲಿ, ವಪ್ಪಿ ತಪ್ಪಿದ್ದಲ್ಲಿ ರಾಜ ಯಿದ್ರೋಹದ ಆಪಾದನೆ ಹೊರಿಸಿ ಸಿಕ್ಸೆಗೆ ಗುರಿಪಡಿಸಲಾಗುವುದೆಂದು ಹೇಳಿದ್ದೂ ತಡವಾಗಲಿಲ್ಲ.. ಆಗಿದ್ದು ತಲೆ ಅಲ್ಲಾಡಿಸೂತ ಸರಸೋತೀಯ ವರಪುತ್ರನಾದ ಚವುಡೋಜಿ ನಿಂತ ನಿಲುವೀಲೆ ಅರಮನೆ ಕಡೀಕೊಮ್ಮೆ ನೋಡಲು ಅದರ ವುಪ್ಪರಿಗೆಯು ತನ್ನ ಸಂಬಾಳ ಗಾತುರದಷ್ಟು ಕಂಡಿತು. ಅದರ ಬುಡವು ತನ್ನ ಚವುಡಿಕೆಯ ಗಾತುರದಷ್ಟು ಗೋಚರ ಮಾಡಿತು. ಮುಪ್ಪಾನು ಮುದೇದೊಂದು ಅರಮನೆಯ ರೂಪದಲ್ಲಿ ತನ್ನತ್ತ ಬಲು ಕಕ್ಕುಲಾತಿಯಿಂದ ನೋಡುತ್ತಿರುವಂತೆ ಭಾಸ ಮಾಡಿತು. ಅದಕ್ಕೆ ಆ ಛಣ ಮರುಗಿದ ಆ ಗೊಂದಲಿಗನು ಅಮಾತ್ಯ, ವಯ್ದಿಕರನ್ನು ಕುರಿತು ಯೇನು ಹೇಳಿದ್ದೆಂದರೆ... ನೋಡಿರಪ್ಪಾ...ನಾವು ವುಂಡೊಡನೆ ಸಾಯುವಂಥ ಮಂದಿ ಅದೇವು. ವಪ್ಪತ್ತುವುಪಾಸ ಯಿದ್ದರss ಸಾಯುವಂಥ ನಯ ನಾಜೂಕಿನ ಮಂದಿ ನೀವದೀರಿ.. ಅದಕs ನಾವು ವಂದು ದುಗ್ಗಾಣಿ ತಗಳ್ಳಾಕಿಲ್ಲ.. ಮುಫತ್ತೇ ಬಂದೇವು, ಮುಫತ್ತ ಹೋದೇವು.. ನಮ್ಮಾಟ ನೋಡಿದೋರ ಕಣ್ಣೊಳಗ ದೀವಿಗೆ ನಾಕ್ಕಾಲ ಬೆಳಗಿದರದೇ ನಮಗ ಸಂಭಾವನೆ, ನಮ್ಮಾಟ ಪಾಟ ಕೇಳಿದೋರು ತಂಟೆಗೆ ರೋಗ ರುಜಿಣ ಬಾರದಿದ್ದರದೆss ನಮಗ ಗವುರವ ಧನ...

ಫಲಾನ ದಿನದಂದು ಫಲಾನ ಸಮಯದಂದು ವಂದೊಂದು ಮನೆಯಿಂದ ಹತ್ತಾರು ಮಂದಿಯು ಹರಕೋತ ಹರಕೋತ ಬಂದು ಅರಮನೆಯ ಕಟಾಂಜಣಿ ತುಂಬಲೆಡ ಬಲಕ ಯೇಳೆಂಟು ದೀವಟಿಗೆಗಳುರಿಯಲಕ ಹತ್ತಿದವು. ಕುದುರೆಡವ ಸ್ತ್ರೀದೇವಿಮಾತ್ಮೆ ಯಂಬಾಟವು ಅದಾಗಿದ್ದ ಕಾರಣಕ್ಕೆ ಹೆಬ್ಬಾಕಲ ತೂಕದ ಅಂತಾಡೆಪ್ಪನು ಯಿನಮ್ರವದನನಾಗಿ

ಹತ್ತು ಮಂದಿಯ ಜಗೇವನ್ನು ತಾನೋರ್ವನೇ ಆಕ್ರಮಿಸಿಕೊಂಡಿರುವಾಗ್ಗೆ...

**ಜಗನ್ಮಾಯೀ ಜಯತು ಜಗದಂಬಾ ಆಯಿಮಾ**
**ಕುದುರೆಡುವುವಾಸೇ ದೋಷ ಯಿನಾಶೇ**

ಯಂಬ ನಾಂದಿ ಪದದೊಂದಿಗೆ ಆರಂಭವಾಯಿತು.

ರಾಗಿದಾನ, ಅನ್ನದಾನ, ವಸ್ತ್ರದಾನ, ಗೋಪಿದಾನ, ಚಿನ್ನದಾನ, ಯಿರುವೆಗೂ ಸಕ್ಕರೆದಾನ, ಪಕ್ಷಿಗಳಿಗೆ ಕಾಳುಕಡಿದಾನ ಯಿವೇ ಮೊದಲಾದ ಅಯಿವತ್ತೆಂಟು ದಾನಗಳಿಂದ ವಂಚಿತ ಗೊಂಡಿದ್ದಂಥ ಕುದುರೆಡವು ಪಟ್ಟಣದ ವರುಣನವೂನಡೆಯಿತು.. ಕೊಪ್ಪರಿಕೆ ನೀರ ಮುಕ್ಕಳಿಸಿ ವುಗುಳೂತ ಬಂಡಿಗಾಲಿಯಗಲದ ಕಣ್ಣುಳ್ಳವಳಾದ, ಗುಂಬಿಗೇರಿಸುವಂಥ ಮೂಗುಳ್ಳವಳಾದ, ಅಗಸೀ ಬಾಕಲಷ್ಟಗಲದ ಬಾಯಿವುಳ್ಳಾಕಿಯಾದ ಸಾಂಬವಿಯು ಗುಡಿಹಿಂದಲ ಮೂಳೆ ಮೋಬಯ್ಯನ ಮಯ್ಯೊಳಗ ನೆಲಗೊಂಡ ಕಥಿಯೂ, ಅದನು ನಗೀ ಚಾಟಕಿ ಮಾಡಿದಕ ಭೂಮಿ-ಕಯ್ಲಾಸ ಜೋಡೂ, ಮರ-ಗಿಡ ಜೋಡೂ, ತಾಯಿ-ಮಗ ಜೋಡೂ, ಸತಿ-ಪತಿ ಜೋಡೂ, ಜೀವಾತುಮ-ಪರಮಾತುಗಳ ಜೋಡೂ ಅಗಲಯ್ತೆಂಬ ಕಥಿಯೂ, ಹಂಗss ಮುಂದೊರಿತಾss ಜಗಲೂರೆವ್ವಯಂಬ ಪತಿರೊತೆಯು ಕುದುರೆಡವು ಯಂಬು ಘೋರಾರಣ್ಯದೊಳಗss ನಿಟ್ಟುಸುರೆಂಬ ನತ್ತನ್ನು ಮೂಗಿಗೆ ಮುಡಕೊಂಡು ಗಾಳಿ ವುಂಬೂತss ಗಾಳಿ ತಿಂಬೂತs ಯನುತಲಿದ್ದ ಸಮಯಕ್ಕೆ ಥೆಳಗೇರಿಯೊಳಗ ಕೋಳಿ ಕೂಗಿದ್ದು.. ಬೆಳ್ಳಿ ಚುಮುಚುಮು ಮೂಡಿದ್ದು ತಡಾಗಲಿಲ್ಲ.. ಕೋಳಿ ಕೂಗಿನ ಸರಗುಣಿಕೆಯಲ್ಲಿ ಬಂಧಿತನಾಗಿ ಅಂತಾಡೆಪ್ಪನು ಬೆಳ್ಳಿಯ ರಂಗವಲ್ಲಿ ಗೆರೆಗುಂಟ ಹೊಂಟೇ ಬಿಟ್ಟ. ಬ್ಯಾಡಾ.. ಯೀ ಸರುವತ್ತಿನಾಗ ಹೋಗಬ್ಯಾಡss ಯಂದು ತಡೆಯಲು ಬಂದ ಹೆಂಡತಿ ಕಂಬಳೆವ್ವನ್ನ ಕೊಸರಿದ.. ಅಯ್ಯೋ ತನ್ನ ಮಗಳು ಗಂಡನ ಕಳಕೊಂಡಯ್ತಲ್ಲಾ.. ಆನಿಯಂಥಾ ಅದು ವನವಾಸ ಪಡುತಯ್ತಲ್ಲಾ.. ಯಂದನಕಂತ ಕುದುರೆಡವು ಯಿದ್ದ ದಿಕ್ಕಿನತ್ತ ಹಾದಿಯಿಲ್ಲದ ಕಡೇಕ ಹಾದಿ ಮಾಡಿಕೊಂಡು, ಬೀದಿಯಿಲ್ಲದ ಕಡೇಕ ಬೀದಿ ಮಾಡಿಕೊಂಡು ಹೆಜ್ಜೆ ಹಾಕತೊಡಗಿದ. ವಂದು ಕಾಲಕ್ಕೆ ಕುಂತಳ ಪ್ರಾಂತಕ್ಕೆಲ್ಲ ಜಗಜ್ಜಟ್ಟಿಯನಿಸಿದ್ದ ಅಂತಾಡೆಪ್ಪ.. ತಮ್ಮ ಕುಲದಯ್ವ ಜಗಲೂರೆಜ್ಜನ ವರಪರಸಾದದಿಂದ ಹುಟ್ಟಿದ್ದ ತನ್ನ ಮಗಳು.. ಸೇನಾದಿಪತಿ ತಾಂಡೂರಯ್ಯನ್ನ ವಲ್ಲೆಂದಾಕಿ, ಪಿಕದಾನಿ ಮೋಬಯ್ಯನ ಕಯ್ನ ಹಿಡಿದು ಯಿಪ್ಪತ್ತುವ್ವತ್ತೊರುಸ ಸಮುಸಾರ ನಡೆಸಿರುವಂಥ ತನ್ನ ಮಗಳು... ಯಂದನಕಂತ ಹೊಂಟಿದ್ದ ಅವಯ್ಯನ ಹಾದೀಲಿ ಕಲ್ಲುಗಳು

ಕರಗಿ ಹುಡಿಯಾದವು, ಮುಳ್ಳುಗಳು ಮರುಗಿ ಹುವ್ವಾದವು.. ಹಾವುಗಳು ಅಚ್ಚೇಕಡೇಕ, ಚೇಳುಗಳು ಯಿಚ್ಚೇಕಡೇಕ ಜರುಗಿ ಹಾದೀನ ಸೀದಾ ಸಾದಾ ಮಾಡಿದವು.. ಮಿಣುಕು ಹುಳುಗಳು ಮಿರಮಿರನೆ ಮಿರುಗುತ ಹಾದಿಗುಂಟ ಕಂದೀಲು ಹಿಡಿದವು.. ನೆಲವು ಅಗತ್ಯಕ್ಕೂ ಮೀರಿ ಹಿಂದಕ ಜರುಗುತಾ ಜರುಗುತಾ ಯಿರಲು ಕುದುರೆಡವು ಅಷ್ಟು ದೂರಕ ವುಳಕೊಂಡು ಬಿಡಲು..

ಕನ್ನೀರವ್ವನ ಬಾವಿಯೊಳಗಿಳಿದು ತನ್ನಂಗಾಲುಗಳನು ತಂಗಲು ಮಾಡಿಕೊಳ್ಳದೆ ಅವಯ್ಯ ನೆಂದೂ ಅಗಸೆ ಬಾಕಲು ದಾಟಿದಾತನಲ್ಲ.. ವಂದು ಕಾಲದಲ್ಲಿ ಪಟ್ಟಣದ ಬಾಯಾರಿಕೆ ತಣಿಸ ಲೋಸುಗ ಭಾವಿಗಾರಗೊಂಡು ಸರಣೆಪದವಿಗೇರಿದಂಥಾಕೆಯಾದ ಕನ್ನೀರವ್ವ, ಜಲರೂಪಧಾರಣ ಮಾಡಿ ಯೇಸು ವರುಸಂಗಳು ವುರುಳಿರುವವೆಂದರ ಆಸು ವರುಸಂಗಳು ವುರಳಯ್ಯಾವs... ಅದಕ ಅವಯ್ಯಗ ಆಕೆ ಅಂದರ ಬಲು ಭಕುತಿಯು.. ಸರಸರ ಯಿಳಿದವಯ್ಯ ಮೊಣಕಾಲಮಟ.. ಯಾಕೋ ಸುಳ್ಳಂದವು ತನ್ನ ಸರೀರದೊಳಗಿನ ನರಗಳು.. ಮಾರೀಗಿಸು ವುದಕ, ಗಂಟಲೊಳ ಗೊಂದೆರಡು ಬೊಗಸೆ ವುದಕು ಸುರುವಿಕೊಂಡ. ಅಂತರಾಳ ದುಕ್ಕದ ಬಗ್ಗಡವಾತು.. “ಯವ್ವಾ.. ನಿನ್ನಾಸೀರುವಾದ ನನ ಮಗಳ ಮ್ಯಾಲ ಇರಲಿ ತಾಯಿ” ಯಂದನಕಂತ ಜಲದವ್ವಂದು ದೊಡ್ಡ ಮನಸೆಂದು ಬಗದು ವಂದು ಸಲ ಯಾಕ.. ನೂರೊಂದು ಸಲ ಸಣುಮಾಡಿ ಮುವ್ವತ್ತೇಳು ಪಾವಟಿಗಳ ಮ್ಯಾಲ ಅಮೊರಿಕೀಲೆ ಹೆಜ್ಜೆಯನಿಕ್ಕುತ ಮ್ಯಾಲಕೇರಿದ. ನಡಿತಾ ನಡೀತಾss ದಳವಾಯಿ ಭೀಮಣ್ಣನಾಯಕನ ಹೆಸರನ್ನುಳಿದಿದ್ದ ಅಗಸೆ ಬಾಕಲ ಸನೀಕ ಬಂದ. ಪೂರುವ ಕಾಲದಲ್ಲಿ ಯಲ್ಲವ್ವ, ಮಲ್ಲವ್ವ ಯಂಬ ಘನ ಸೊಸ್ತೇರು ಬಾಕಲ ನಿಲುವಿಗೆ ಆತುಮಾಹುತಿಗೊಂಡು ಯಿಗ್ರಹ ರೂಪಧಾರಣ ಮಾಡಿ ಯಡ ತೋಳಲ್ಲೊಬ್ಬಾಕಿ, ಬಲತೋಳಲ್ಲೊಬ್ಬಾಕಿ ಅಭಯ ಪ್ರದಾನ ಮಾಡುತ ನಿಂತುಕೊಂಡು ಯಿಂದಿಗೆ ಯೇಸು ವರುಸಂಗಳು ಆಗಿರುವವೆಂದರ ಆಸು ವರುಸಂಗಳು ಆಗಿರುವವು. ಅವರ ದಯೆಯಿಂದಾಗಿಯೇ ಅಗಸೆ ಬಾಕಲನ್ನಲ್ಲಾಡಿಸುವ ತಾಕತ್ತು ಗುಡುಗು ಮಿಂಚು ಸಿಡಿಲು ಫಿರಂಗಿಗಳಿಗೆ ಹಿಂದ್ಯಾವತ್ತೂ ದಕ್ಕಿಲ್ಲ.. ಯಿವಯ್ಯಗ ಅವರೀರ್ವರೆಂದರ ಬಲು ಭಕುತಿ.. ನಮ್ಮವ್ವಂದಿರಾ ನಿಮ್ಮ ದಯ ಜಗ್ಲೂರವ್ವನ ಮ್ಯಾಲ ಅಯಿತೆಂಬುದಕ ಗುರುತು ಮಾಡಿರೆಂದೀವಯ್ಯನು ಸಣುಮಾಡುತ ಬೇಡಿಕೊಳ್ಳುವಾಗ್ಗೆ ತಲಬಾಕಲ ಹಣೆಮ್ಯಾಲಿಂದ ಹುವ್ವೊಂದು ವುದುರಿ ಹಿಂದಲೆ ಮ್ಯಾಲ ಬಿತ್ತು.. ಅದನು ತಕ್ಕೊಂಡು ಭಯ ಭಕುತಿಯಿಂದ ಸಣುಮಾಡಿ ನಿಮ್ಮದು ದೊಡ್ ಮನಸು

ಕನರವ್ವಾ.. ಯಂದು ತಾನಲ್ಲಿಂದ..

ಅಗೋ ಅಲ್ಲಿ ಮಗಳು.. ಯಿಗೋ ಯಿಲ್ಲಿ ಅಪ್ಪನು.. ಪರಸ್ಪೂರ ತಮ್ಮೀರ್ವರ ನಡುವೆ ದ್ರುಸ್ಟಿಕಾರ್‍ಯವು ಯೇರುಪಡದೆ ಯೇಸು ಕಾಲವಾತು? ಯೇನು ಕತೆಯು? ಮುಂದಕ ನಡಿತಾ ನಡಿತಾ ತಂದೆ ಮಗಳನ್ನು ನೋಡುವುದು, ಮುಂದ ಮುಂದಕ ನಡಿತಾ ನಡಿತಾ ಮಗಳು ತಂದೆಯನ್ನು ನೋಡುವುದು ವಂದರಗಳಿಗೆ ನಡಿತೂ.. ನಡಿತು. "ಯಾರಪ್ಪಾ.. ನೀನು ನನ್ನಪ್ಪಯಿದ್ದಂಗದೀಯಲ್ಲಾ"... "ಅವುದವ್ವಾ.. ಖರೇವಂದರ ನಿನಗ ಸೊಂತ ಅಪ್ಪ ಆಗಬೇಕು.. ಅದಿರ್‍ಲಿ.. ನೀನು ಯೀ ಅಂತಾಡೆಪ್ಪನ ಮಗಳು ಜಗ್ಲೂರೆವ್ವ ಅವುದಲ್ಲೋ?".. "ಅವುದಪ್ಪಾ.. ಅವುದು.. ಆ ಜಗಲೂರೆವ್ವ ನಾನೇಯಾ.. ಅದಿರ್‍ಲಿ.. ನೀನ್ಯಾಕ ಬಂದಿ.." .."ನಿನ್ನೋಡಲಕಂತ ಬಂದೀನಿ ತಾಯೀ?".."ನನಗೇನಾಗಯ್ತಂತ ಆಟು ದೂರದಿಂದ ನೋಡಲಕ ಬಂದೀಯಪ್ಪಾ.." .."ತಂದೆ ಆದವs ತನ್ನ ಮಗಳನ್ನು ನೋಡಲಕ ಸುಮಸುಮಕ ಬರಬಾರದಂತೀಯೇನು?".. "ನಿನ್ನೋಡಲಕಂsತ ಬಂದೀನಿ ತಾಯಿ ".. "ಅವುದಪ್ಪಾ ಅವುದು.. ಸುಮ ಸಮಕ ಬರಬಾರದು.. ತಂದೆ ಆದಾವs ಮಗಳು ಹೇಳಿಕಳುವಿದರs ಬರಬೇಕು..".. "ಯೀಟೆಲ್ಲ ಆದಮ್ಯಾಕೂ ನೀನ್ಯಾಕ ಹೇಳಿ ಕಳುವಲಿಲ್ಲವ್ವಾ..".. "ಯೇನಾಗಯ್ತಂತ ಹೇಳಿಕಳುವಲಪ್ಪ.. ಸತಿ ಆದವಳ ಬಾಳಿನೊಳಗ ಯಿದೆಲ್ಲ ಮಾಮೂಲು.." ಹಿಂಗs ತಂದೆ ಮಗಳ ನಡುವೆ ಮಸ್ತು ಮಾತುಕತೆ ನಡೆದದ್ದನ್ನು ನಾಕು ಮಂದಿ ನಿಂತು ಕುಂತು ನೋಡದೆ ಯಿರಲಿಲ್ಲ.. ಯಂಥ ತಂದೆಯಿದ್ದಿರಬೇಕಿತನು ಯಂದು ಹೆಣುಮಕ್ಕಳೂ, ಯಂಥ ಮಗಳಿದ್ದಿರಬೇಕೀಕೆಯು ಯಂದು ತಂದೆಯಂದಿರೂ.. ಅದೆಲ್ಲಿಂದಲೋ ಮೋಡಿ ಬಂದ ಸೂರನು ಅವಯ್ಯನ ಸುತ್ತ ಯಗರಾಡಿದ್ದೇನು? ವಯ್ಕ ವಯ್ಕ ಅಂದದ್ದೇನು? ಅವಯ್ಯನ ಮುಖಮಾರಿ ನೆಕ್ಕಾಡಿದ್ದೇನು? ಪೂಜಾಸ್ಥಳವಾಗಿ ಮಾರುಪಟ್ಟಿದ್ದ ತನ್ನ ಗಂಡನ ಮನೆಕಡೇಕ ಬೊಟ್ಟುಮಾಡಿ ತೋರಿಸದೆ ಹಡದಪ್ಪನನ್ನು ಸೀದss ಬೇಯಿನ ಮರದಡೀಕೆ ಕರೆದುಕೊಂಡು ಬಂದಳು.

ಅಲ್ಲಿಲ್ಲಿ ನಿಂತ ನಿಲುವೀಲೆ ನೋಡುತಲಿದ್ದವರೆಷ್ಟೋ? ಯಿಲ್ಲಲ್ಲಿ ಕುಂತ ಕೂನಕೀಲೆ ನೋಡುತಲಿದ್ದವರೆಷ್ಟೋ?.. ಮಿಂಚೇರಿ ಸಮುಸ್ಥಾನದ ಪಯಿಲುವಾನರಿಗೇನು ಕುದುರೆಡವೇನು ಖೂನ ಗುರುತ ಯಿರದಿದ್ದ ಸ್ಥಳಯೇನಾಗಿರಲಿಲ್ಲ.. ತಾನು ಹರೇದವನಾಗಿದ್ದಾಗ ಸದರಿಪಟ್ಟಣದ ಕಲ್ಲ, ಮಲ್ಲ ಯಂಬ ಮಲ್ಲರೀರ್ವರನ್ನು ಯಡಬಲಕ ಯಿಟುಕೊಂಡು ದೂರದ ಯಿಸಿಲ ಪಟ್ಟಣದ ರಾಜಾಸ್ರಯದಲ್ಲಿ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ

ಬಂಗಾರದ ಕಡಗ ಧರಿಸಿ ಬಂದಿದ್ದ.. ಯಿನ್ನೂ ಬೊದುಕದೀವಿ ಯಂದುಕೊಳುತ ಆ ಮುದೇರೀರ್ವರು ಅಗೋ ಅಲ್ಲಿ ಬರುತಿರುವಾಗ್ಗೆ, ಯಪ್ಪಾ ನಾನಿಂಗಿಂಗs ಹೋಗಿ ಬರುವೆನು ಯಂದು ಹೇಳುತ ಸಜ್ಜಾಗುತ ಸಜ್ಜಾಗುತ ಜಗಲೂರೆವ್ವ ಬಂದ ಹಿರೀಕರೊಂದಿಗೆ ಹೊರಟು ನಿಂತಳು. ಬರಲೇನವ್ವಾ ಯಂದ ಅಪ್ಪಂಗೆ ನೀನೇನು ಕಾಳಜಿ ಮಾಡೋದು ಬ್ಯಾಡ ಯಂದು ಹೇಳಿ ಹೊರಟೇಬಿಟ್ಟು ಕಣ್ಮರೆಯಾದಳೆಂಬಲ್ಲಿಗೆ.. ಮಗನ ಸಮಾನನಾದ ಸೂರನು ವಯ್ಯವಯ್ಯ ಯಂಬ ಭಾಷೆ ಯಲ್ಲೂ, ಚನ್ನವ್ವ ಧರುಮದೇವತೆಯರು ಬೊವ್.. ಬೊವ್ ಯಂಬ ಭಾಷೆಯಲ್ಲೂ ಸುಖ ಪ್ರಯಾಣ ಕೋರಿದರೆಂಬಲ್ಲಿಗೆ.. ಮುತ್ತಯ್ದೇರು ಆರತಿ ಬೆಳಗಿದರೆಂಬಲ್ಲಿಗೆ.. ನೂರಾರು ಮಂದಿ ತಮ ತಮ್ಮ ಕಣ್ಣುಗಳ ಹನಿಗಳಲ್ಲಿ ಸೂರ‍್ಯಾಮನನ್ನು ಪ್ರತಿಫಲಿಸಿದರೆಂಬಲ್ಲಿಗೆ.. ತಂಗಾಳಿ ಸೂಸ್ಯಾಡಿ ತಗುಲಿಕೋತ ಹೋತು ಯಂಬಲ್ಲಿಗೆ..

ಹೊತ್ತಲ್ಲದ ಹೊತ್ತು ಅದಾಗಿತ್ತು. ಜಗಲೂರೆವ್ವನ ಮುಂದಾಳತ್ವದಲ್ಲಿ ಕೂಡ್ಲಿಗಿ ಪಟ್ಟಣ ಯಿದ್ದಂಥ ಬಡಗಣ ದಿಕ್ಕಿನ ಗುಂಟ ಪಯಣ ಹೊಂಟ ನಿಯೋಗದಲ್ಲಿ ಯಾರ‍್ಯಾರಿದ್ದರೆಂದರೆ ಅವರಿವರೇ ಯಿದ್ದರು. ಪಯಣ ಸಾಂಗೋಪಾಂಗವಾಗಿ ಹೊಂಟಕಾಲಕ್ಕೆ ಹುಲಿ ವಾಸಕ್ಕಿದ್ದ ಹುಲಿಗುಡ್ಡ ಅಡ್ಡಬಂತು, ಚಿರತೆ ವಾಸಕ್ಕಿದ್ದ ಚಿರತೆ ಗುಡ್ಡ ಅಡ್ಡಬಂತು, ಅವರೆಡನ್ನೂ ಬೆಸೆದಿದ್ದ ಗವ್ವೆಂಬುವ ಕಾಡು ಅಡ್ಡಡ್ಡಬಂತು. ಜುಳುಜುಳೂ ಅಂತ ಹರಿಯುತಲಿದ್ದ ಹೊನ್ನಮ್ಮ ನಿಯೋಗದ ಅಂಗಾಲುಗಳನು ತಂಗಲು ಮಾಡಿದಳು. ಹಿಂಗs ಪಯಣವು ಯರಡು ರಾತ್ರಿ.. ಯರಡು ಹಗಲು ತಿಂತು..

ಪಾದದಲ್ಲಿ ಪದ್ಮರೇಖೆ, ಅಂಗಯ್ಯಲ್ಲಿ ಧನರೇಖೆ, ಮಸ್ತಕದಲ್ಲಿ ಮಾಣಿಕ್ಯ ರೇಖೆವುಳ್ಳಾಂಥಾಕೆಯೂ, ಮಾ ಪತಿವುರೊತಾ ಸಿರೋಮಣಿಯೂ ಆದ ಜಗಲೂರೆವ್ವನ ನೇತ್ರುತ್ವದಲ್ಲಿ ಹೊಲಮನಿ, ತಾಯಿಮನಿ, ಖಾಲಿಮನಿ, ವಸ್ತಿಮಾಡುವ ಮನಿ, ಗಸ್ತು ತಿರುಗುವ ಮನಿ, ಶಿಸ್ತಿನ ಮನಿ, ಚಿಂತಿಕಾಂತಿಯಮನಿ, ಸಂತಿ ಸೇರುವ ಮನಿ ಯಿಂಥಪ್ಪಿವೇ ಮೊದಲಾದ ಸಾಯಿರಾರು ಮನಿ ಮಾರುಗಳಿಂದ ತುಂಬಿ ತುಳುಕಾಡುತಲಿದ್ದ ಕೂಡ್ಲಿಗಿ ಪಟ್ಟಣವನ್ನು ಪ್ರವೇಸ ಮಾಡಿದಾಗ ಹೊತ್ತು ಯಷ್ಟಾಗಿತ್ತೆಂದರೆ ಅಷ್ಟಾಗಿತ್ತು.. ಮಟ ಮಟ ಮದ್ದಾಣದ ಬಿಸಿಲಲ್ಲಿ ಸಾಣಾ ಮಾಡುತಲಿದ್ದ ರಸ್ತಾಗುಂಟಾ ಅವರು ಹೋಗುತಿರಬೇಕಾದರೆ ನಿಮ್ಮದ್ಯಾವೂರು? ಯಾಕೆ ಬಂದೀರಿ? ಖೂನ ಗುರುತು ಯೇನಾರ ಅಯ್ತಾ? ಯಂದು ಸಯ್ನಿಕರು ಅಡ್ಡಡ್ಡ ಬಂದವರು ಕುದುರೆಡವು ಯಂಬ ಪಂಚಾಕ್ಷರ

ಮಂತ್ರವು ಕಿವಿಗೆ ಬೀಳುತ್ತಲೆ ಘಾಬರಿಯಿಂದ ಹೋ ಹ್ಹೋ ಕುದುರೆಡವು ಕಡೆಯೋರು ಬಂದೋರೆ.. ಹ್ಹಾ ಹ್ಹಾ ಕುದುರೆಡವು ಕಡೆಯೋರು ಬಂದೋರೆ.. ಯಂದನಕಂತ ಹೋದರು.. ಅದು ಮೊದಲೇ ಸದಾ ವಂದಲ್ಲಾ ವಂದು ಸುದ್ದಿಯನ್ನು ನಮಲುತ್ತಿದ್ದಂಥ ಮುಂದಿಯಿಂದ ತುಂಬಿ ತುಳುಕಾಡುತ್ತಿದ್ದಂಥ ಪಟ್ಟಣವು.. ತವ್ಮ ಯಿಡೀ ವಂದು ಕಿವಿಯನ್ನು ಕುದುರೆಡವು ಸಂಬಂಧೀಯಿದ್ಯಾಮಾನಗಳನ್ನಾಲಿಸಲು ಮೀಸಲು ಯಿಟ್ಟಿದ್ದಂಥಾ ಮಂದಿಯಿಂದ ತುಂಬಿ ತುಳುಕಾಡುತಲಿದ್ದಂಥಾ ಪಟ್ಟಣವು.. ಕುದುರೆಡವ ಮಂದಿ, ಅದರಲ್ಲೂ ಯಾವಾತನ ಸರೀರದೊಳಗೆ ಸಾಂಬವಿ ವಾಸ ಮಾಡುತ್ತಿರುವಳೋ ಅಂಥಾತನ ಧರುಮ ಪತ್ನಿಯೇ ತಮ್ಮ ಪಟ್ಟಣಕ್ಕೆ ಆಗಮನ ಮಾಡಿರುವಳೆಂದರೆ ಸಾಮಾನ್ಯ ಸಂಗತಿಯೇನು? ಮೊದಲು ವಬ್ಬೊಬ್ಬರಾಗಿ, ತದ ನಂತರ ಗುಂಪು ಗುಂಪಾಗಿ ಯುದುರಾಯ್ದು ಹ್ಹಾ.. ಹ್ಹಾ.. ಹ್ಹೋ.. ಹ್ಹೋ ಯುಂದುದ್ಗಾರ ತೆಗೆಯಾರಂಭಿಸಿದರು. "ಯೇಯ್.. ತಾಯೇ.. ಗುಡ್ಡದವ್ವಾ.. ನೀನು ದೊಡ್ಡ ಸರಣೆ ಅದಿ.. ಪಾದ ಕೊಡವ್ವಾ" ಯಂದಡ್ಡಡ್ಡ ಬರತೊಡಗಿದರು.. "ಯವ್ವಾ.. ನಮ್ಮನೀಗೆ ಬಾರೆವ್ವಾ.. ತಮ್ಮನೀಗೆ ಬಾರವ್ವಾ" ಯಂದು ಕಯ್ಯ ಮುಗುದು ಕರೆಯ ತೊಡಗಿದರು. ತಾಯಿ ಸಾಂಬವಿಯ ತೊಂಬಲದ ಘಾಟು ಯಿಲ್ಲೀಮಟ ಬರತಯ್ತೆ ಅಂದ ಮ್ಯಾಲ ಅದರ ಗಾತ್ರಯಷ್ಟಯ್ತೆ? ತಾಯ ಪಾದ ಮುದ್ರೆಗಳಿಗೆ ತಕ್ಕ ಬಂದೋಬಸ್ತು ಮಾಡಿರುವರೇನು? ಹಾಲು ನೀರಾಗುವ ಪರಿಯಂತು? ಯೇರಿದ ಹುಬ್ಬುಗಳು ಹೋಗಿರುವುದಾದರೂ ಯಲ್ಲಿಗೆ? ಆಸ್ತೀಕ ಭಾವ ನೂರ್ಮಡಿಗೊಂಡಿರುವುದಾ? ಯಿಲ್ಲವಾ? ಯುಂಬಿವೇ ವೊದಲಾದ ಸತಸಹಸ್ರಪ್ರಸ್ನೆಗಳಿಂದ ತಪ್ಪಿಸಿಕೊಳ್ಳುತಾ.. ತಪ್ಪಿಸಿಕೊಳ್ಳುತಾ ಸದರಿ ನಿಯೋಗವು ಧರುಮ ರತುನಾಕರ ರಾವಬಾದ್ದೂರ ಹೇರೂರು ಯಿರುಪನ ಗವುಡನು ಗ್ರುಹಸ್ಥಾಸ್ರಮ ಧರುಮಕ್ಕೆ ರೋಸಿ ಗೊಪಲಾಪುರದ ಕೆರೆಯೊಳಗ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಂಥಾ ತನ್ನ ಹೆಂಡತಿ ಗವುರಮ್ಮನ ಸ್ಮರಣಾರ್ಥವಾಗಿ ಕಟ್ಟಿಸಿದ್ದಂಥಾ ಧರುಮ ಛತ್ರದೊಳಗ ಅದರ ಧರುಮದರಶಿ ಸಾಂಬಸಿವರಾಯನ ವಸೀಲಿಯಿಂದ ವಂದು ಹಜಾರ ಪಡದು ಠಿಕಾಣಿ ಹೂಡಿದರೆಂಬಲ್ಲಿಗೆ ಸಿವಸಂಕರ ಮಾದೇವss

ಫಲಾನ ಯಿಂಥ ಕಡೆಯಿಂದ ಫಲಾನ ಯಿಂಥವರು ಸದರಿಪಟ್ಟಣಕ್ಕೆ ಆಗಮನ ಮಾಡಿರು ವರೆಂಬ ಸಂಗತಿಯನ್ನು ತನ್ನ ಗೂಢಾಚಾರರಿಂದ ತಿಳಿದುಕೊಂಡಿದ್ದಂಥ ಕುಂಪಣಿ ಅಧಿಕಾರಿಯಾದ ಯಡ್ಡವರ್ಡನು ಯಿಶೇಷ

ರೀತಿಯಲ್ಲಿ ಜಳಕ ಮಾಡಿ ಮುಖ ಮಯ್ಯಿಗೆಲ್ಲ ಘಮ ಘಮ ಪ್ರಸಾದನಗಳನ್ನು ಪೂಸಿಕೊಂಡನಲ್ಲದೆ ಯಿಶೇಷವಾದ ಸಮವಸ್ತ್ರ ಧರಿಸಿಕೊಂಡು ತಾನು ತನ್ನ ಪ್ರತಿಬಿಂಬವ ನೋಡಿಕೊಳ್ಳುವ ಸಲುವಾಗಿ ನಿಲುಗನ್ನಡಿಯದುರು ನಿಲ್ಲುವುದಕ್ಕೂ, ಜೆನ್ನಿಫರಮ್ಮಳು ತನ್ನ ಸುಂದರ ಮುಖದಲ್ಲಿ ಕುದುರೆಡವು ಸಂಬಂಧೀ ರೋಮಾಂಚನವನ್ನು ತುಂಬಿಕೊಂಡಲ್ಲಿಗೆ ಬರುವುದಕ್ಕೂ ಸರಿಹೋಯಿತು. ತಾನು ತಳೆವ ನಿರ್ಧಾರವನ್ನು ಬದಲಿಸದ, ಮುಂದಕ್ಕಿಟ್ಟ ಹೆಜ್ಜೆಯನ್ನು ಹಿಂದಕ್ಕಿಡದ ಆಕೆಯನ್ನು ದೊರೆಯು ತನ್ನೊಂದಿಗೇ ಆಸ್ಥಾನಕ್ಕೆ ಕರೆದೊಯ್ದನು. ಅಲ್ಲಿ ಆಗಲೇ ಯಿದ್ದ ಕುದುರೆಡವ ನಿಯೋಗದೊಂದಿಗೆ ಆತನು...

* * * *

ತಮ್ಮೂರ ದಯವವಾದ ಸ್ರೀಮದ್ ಪ್ರಸನ್ನ ವೆಂಕಟೇಸ್ವರ ಸ್ವಾಮಿಯು ಬಾಲಕನಾಗಿ ದರುಸನ ನೀಡಿರುವನೆಂದರೆ ಕಲೆಟ್ಟರು ಸಾಹೇಬ ಸಾಮಾನ್ಯ ಮನುಷ್ಯನಲ್ಲ.. ಆತನೊಳಗೆ ಸಪ್ತರ್ಷಿಗಳು ತಪಸ್ಸಿಗೆ ಕುಂತಿರಬೌದು? ಯಂದು ರಾಯದುರ್ಗದ ಮಂದಿ ಅಂಥ ಬರಪೀಡಿತ ಸಂಕಟ ತಾಪತ್ರಯಗಳ ನಡುವೆ ಥಾಮಸು ಮನ್ರೋನನ್ನು ಕೊಂಡಾಡುತಿರುವಾಗ್ಗೆ, ಸದರಿ ದುರ್ಗದ ರಾಜಪರಿವಾರದವರ ಕುಟುಂಬ ಕಲಹ ಯದ್ದು ಹೊಡೆದಾಡುತಿರುವಾಗ್ಗೆ, ರಾಯದುರ್ಗ ಸೀಮೆಯ ನೆತ್ತಿ ಮ್ಯಾಲಿದ್ದ ಆಗಸವು ವಂದಾರ ಮೋಡದ ತುಂಡಿಲ್ಲದೆ ಬಿಕೋ ಅಂತಿರುವಾಗ್ಗೆ, ಸದರೀ ಕಥಾನಕದ ಯರಡನೆಯ ನಾಯಕನಾಗಿರ್ದ ಕಲೆಟ್ಟರು ಸಾಹೇಬನು ಬಳ್ಳಾರಿಯ ಕಛೇರಿಯೊಳಗ ಕೂಕಂಡು ಕಡತಗಳನ್ನು ವಂದೊಂದಾಗಿ ಆತನ ಕಣ್ಣೊಳಗ 'ರೆಡ್ಡಿಲೋ ರೆಡ್ಡಿರಾ' ಯಂದು ಬಿರುದಾಂಕಿತವಾದ ಗಡೇಕಲ್ಲು ಬೊಬ್ಬಿಲಿ ನಾಗಿರೆಡ್ಡಿಯು ತೇಲುತ ಮುಳುಗತಲಿದ್ದನು. ತನ್ನಷ್ಟಕ್ಕೆ ತಾನು ಬಡವರ ಬಂಧುವೂ, ಸ್ರೀಮಂತರ ಪಾಲಿಗೆ ಸಿಮ್ಮ ಸೊಪ್ನವೂ ಆದಂಥ ರೆಡ್ಡಿಯನ್ನು ರಾಬಿನ್‌ಹುಡ್ಡಿಗೆ ಹೋಲಿಸಿಕೊಳ್ಳುತಲಿದ್ದನು. ಹಂಗs ಯಲ್ಲಾಪ್ರಕೊರಚರಟ್ಟಿಯ ಚೋರಾಗ್ರೇಸರನ್ನು ನೆನಪು ಮಾಡಿಕೊಳ್ಳದಿರಲಿಲ್ಲ ತಾನು. ಕಡತಗಳ ಪರಿಸೀಲನಾನಂತರ ತಾನು ಸದರಿ ಪಟ್ಟಣಕ್ಕೆ ಮಕುಟಪ್ರಾಯದ ರೀತಿಯಲ್ಲಿರುವ ಕಾರಾಗ್ರುಹಕ್ಕೆ ಭೆಟ್ಟಿ ನೀಡ ಬೇಕಿರುವುದು, ಅದರ ಆಡಳಿತಾಧಿಕಾರಿಯಾದ ವ್ಯಾಕನು ತನ್ನನ್ನು ಕರೆದೊಯ್ಯಲಕೆಂದೇ ಹೊರಗಡೆ ಕಾಯುತ್ತ ಕೂತಿರುವನು..

ಅತ್ತ ಕೂಡ್ಲಿಗೆ ಪಟ್ಟಣದೊಳಗಿದ್ದ ತಿಲ್ಲಾನ ತಾಯಕ್ಕ ತನ್ನ ಮಗಳು ಚಿನ್ನಸಾನಿ ಮತ್ತೆ ಮಯ್ಲಿಗಿ ಆದುದನ್ನು ಖುದ್ದನೋಡಿ 'ದೇವರೇ ನೀನು

ದೊಡ್ಡವನು' ಯಂದು ಕಯ್ಯು ಮುಗುದಳು. ಮಯ್ಲಿಗಿ ಬಟ್ಟೆಗಳನು ವಯ್ಯಲಕೆಂದು ಅಗಸರ ಅವುರಪ್ಪ ಅದೇ ತಾನೆ ಬಂದು ತನ್ನೆದುರು ಕುಕ್ಕುರುಗಾಲೀಲೆ ಕುಂತುಕೊಂಡ. ಅವನು ಬಟ್ಟೆಬರೆ ಯಣಿಸಿಕೊಳ್ಳುತ್ತಿರುವಾಗ್ಗೆ ತನಗೆ ಅನುಮಾನ ಬಂದು ವಯಸ್ಸು ಕೇಳಿದಳು. ಆತ "ಅಯವತ್ತರ ಮ್ಯಾಲಯ್ತೆ ದೊರೆಸಾನಿ" ಯಂದು ಜವಾಬು ನೀಡಿದೊಡನೆ ಆದ ಸಂತೋಷವನ್ನು ಯಕ್ತಪಡಿಸಲಿಲ್ಲ. ತನ್ನ ಮಗಳ ಬಟ್ಟೆಬರೆ ಯಾರ ಕಣ್ಣಿಗೂ ಬೀಳದಂತೆ ನೋಡಿಕೊಳ್ಳಬೇಕೆಂದು ಯಚ್ಚರಿಸಿದಳು. ನರ ವುಬ್ಬಿ ಯಿಳಿಯುತಲಿದ್ದ ಮುಂಗಯ್ಯಿಗಳಿಂದ ಬಟ್ಟೆ ಗಂಟನ್ನು ಹೆಗಲ ಮ್ಯಾಲಿಟ್ಟುಕೊಂಡು ವುಂಬಲಕ, ತಿಂಬಲಕ ನೀಡಿಸಿಕೊಂಡು ತನ್ನ ಕೇರಿ ದಾರಿ ಹಿಡಿದ. ಆಳೆತ್ತರದ ನಾಗರಕಲ್ಲಿನ ಹಿಂದೆ ಕಾಯುತ್ತ ಕೂಕಂಡಿದ್ದ ಸದರಿ ಪಟ್ಟಣದ ವಣಿಕ ವಂಕದಾರಿ ಗೋಯಿಂದಪ್ಪ ಸ್ರೇಷ್ಟಿ«ಯ ಮಗ ಸುಬ್ಬಣ್ಣನು ವಂದೇ ಜಿಗಿತಕ್ಕೆ ಮುಂದೆ ಬಂದ. ವಂದು ಬೆಳ್ಳಿ ರೂಪಾಯಿಯನ್ನು ಯಿಸಿದುಕೊಂಡು ಅಗಸರವನು ಬಟ್ಟೆಗಂಟನ್ನು ಅವನ ಸುಪರ್ದಿಗೆ ವಪ್ಪಸಿದ. ಆ ಹದಿಹರೆಯದ ಶಾಮಲ ಸುಂದರಾಂಗನು ಗಂಟನ್ನು ಬಿಚ್ಚಿ ಮಯ್ಲಿಗೆ ಕಲಾಕ್ರುತಿಗಳಿದ್ದ ಲಂಗ, ಚಡ್ಡಿ, ಪಯ್ಟುಗಳನ್ನೇ ಚಿನ್ನಾಸಾನಿಯಂದು ಭ್ರಮಿಸಿ ಮುತ್ತಿಕ್ಕುವುದನ್ನು ಭಾಳಾ ಹೊತ್ತಿನವರೆಗೆ ಮಾಡುತs ಮಾಡುತ ಸ್ಖಲಿಸಿ ಸುಖಿಪಟ್ಟನು. ಸುಬ್ಬಣ್ಣನ ಥರದ ಜಾಯಮಾನದವರು ಯೇನಿಲ್ಲಾಂದರು ಅಯಿದಾರು ಮಂದಿ ಹುಡುಗರಿದ್ದರು.. ಅವರೆಲ್ಲ ತಮ ತಮ್ಮ ಯೋಗ್ಯತಾನುಸಾರ ಅಗಸರಾತನಿಗೆ ಕಪ್ಪ ತೆತ್ತು ಸುಖಿಸುತಲಿದ್ದರು. ಯಿಂಥ ವಳ ಆದಾಯಗಳಿಂದಾಗಿ ಅವುರಪ್ಪನು ದುಂಡು ದುಂಡಕೆ, ಬೆಳು ಬೆಳ್ಳಗೆ ಆಗಿದ್ದನು.

ಅತ್ತ ಹರಪನಹಳ್ಳಿ ವಳಿತದೊಳಗ ಕಳ್ಳಕಾಕರ ವುಪಟಳ ಆಗದೀ ಅಂದರ ಅಗದೀ ಆಗಿ ಬಿಟ್ಟಿತ್ತು. ಜನರು ರಾಜನಾದವನಿಗೆ ದೂರು ಕೊಡುವುದನ್ನೇ ಬಿಟ್ಟುಬಿಟ್ಟಿದ್ದರು. ಅಲಗಿಲವಾಡ, ಕುಂಚೂರು, ಅರಸನಾಳು, ಗುಂಡಗತ್ತಿಗಳಂಥ ಮೂರುಗಳ ರಾಜರು ಪ್ರಜೆಗಳಾದವರು ರಾಜನಿಗೆ ದೂರು ಸಲ್ಲಿಸುವುದೆಂದರೆ ರಾಜಸತ್ತೆಯನ್ನು ಗವುರಿಸುವುದೆಂದೇ ಅರ್ಥ. ದೂರು ಕೊಡದವರನ್ನು ರಾಜದ್ರೋಹವೆಂದು ಪರಿಗಣಿಸಿ ಶಿಕ್ಷಿಸಲಾಗುವುದೆಂಬ ಕಾನೂನು ಮಾಡಿದರೂ ಪ್ರಯೋಜನವಾಗಲಿಲ್ಲ. ಅದನ್ನು ಕೇಳಿ ನಗಾಡಿದರು ಪ್ರಜೆಗಳು. ಚಿರಸ್ತಳ್ಳಿ, ಗುಂಡಲಳ್ಳಿ ಕಡೇಲಂತೂ ಪ್ರಜೆಗಳೇ ತಮ್ಮ ವುಸ್ತುವಾರಿಯನ್ನು ತಾವೇ ವಹಿಸಿಕೊಂಡಿದ್ದುಂಟು. ವ್ಯಾಗ್ಗೇರಿ, ತೆಲಿಗಿ ಕಡೇಲಂತೂ ಪ್ರಜೆಗಳೇ

ಮಾರುವೇಷದಲ್ಲಿ ಕಳುವು ಮಾಡುತಲಿದ್ದ ರಾಜರನ್ನು ಹಿಡಿದು ಕಂಭಕ್ಕೆ ಕಟ್ಟಿಹಾಕಿ ತಾವೇ ಹೊಡೆದು ಬಡಿದು ಶಿಕ್ಷಿಸುತ್ತಿದ್ದುದುಂಟು ಸಿವನೇ..

ಕುಂತಳಪ್ರಾಂತದ ಅತ್ತಲಿನ ಸಮಾಚಾರ ನಂಬುವುದು ಹೆಂಗs? ನಂಬದಿದ್ದರೆ ಹೆಂಗss? ಅವನ್ನೆಲ್ಲ ಬೆದಕ್ಕೋತ ಹೋದರ ಕಲಿಕ್ಕಾಲದ ಬಗ್ಗೇನೇ ಬಲೂ ಬ್ಯಾಸರ ಬಾರದೆ ಯಿರದು ಸಿವನೇ.. ಅತ್ತಲಿನ ಸಮಾಚಾರ ಅಚ್ಚೇ ಕಡೇಕs ಯಿರಲಿ.. ಯಿಚ್ಚೇ ಕಡೇಕ ಅಂದರ.. ಕುದುರೆಡವು ಪಟ್ಟಣದೊಳಗ ಮಂದಿ.. ಯೇನು ತಮ ಕಣ್ಣೀರಿನಿಂದ ತಮ ಕಪಾಳವನ್ನು ಪ್ರಕ್ಷಾಳನ ಮಾಡಿ ಕೊಳ್ಳುತಾ ಯಿದ್ದರಲ್ಲ.. ಅವರೆಲ್ಲ ಜಗಲೂರೆವ್ವನ ನೇತ್ರುತ್ವದಲ್ಲಿ ನಿಯೋಗ ತಮ್ಮೂರಿಗೆ ಮರಳಿದ ಲಗಾಯ್ತು ವಂದೊಂದು ಛಣವನ್ನು ವಂದೊಂದು ಕಡಲೆಕಾಳೆಂದು ಪರಿಗಣಿಸಿ ನಮಲಾಕ ಹತ್ತಿದ್ದರು.. ಅವರ ದ್ರುಸ್ಟೀಲಿ ಜಗಲೂರೆವ್ವ ಕೇವಲ ವಬ್ಬೆಣುಮಗಳು  ಮಾತ್ರವಾಗಿರಲಿಲ್ಲ.. ಆಕೆಯು ಆಪದ್ಬಾಂಧವಿ ಆಗಿಬಿಟ್ಟಿದ್ದಳು. ಆಕೆ ಕುರುತು ತಲಾ ವಂದೊಂದು ಕಥೆ ಕಟ್ಟಲಾಕ ಹತ್ತಿದ್ದರು, ಯಡ್ಡವರ್ಡು ಸಾಹೇಬ ಯೀ ಛಣ ಬಂದಾನು, ಆ ಛಣ ಬಂದಾನು ಅಂತ ಜೀವವನ್ನು ಮುಟುಗೀಲಿ ಹಿಡಕೊಂಡು ಕಾಯಲಾಕ ಹತ್ತಿದ್ದರು.. ಜಾವ ಜಾವಕ್ಕೊಂದಾವರ್ತಿಯಾದರು ತಾವು ಕೂಡ್ಲಿಗಿ ಕಡೇಕ ಬಿದ್ದಿದ್ದ ದಿಕ್ಕಿನ ಕಡೇಕ ನೋಡದೇ ಯಿರಲಿಲ್ಲ.. ಆ ಕಡೆ ಯಿನಾ ಕಾರಣ ಯೇಳುತಲಿದ್ದ ಕೆಂಧೂಳನ್ನು ಕುದುರೆಗಳ ಖುರಪುಟಕ್ಕೆ ಹೋಲಿಸದೆ ಯಿರಲಿಲ್ಲ.. ಮಾಮೂಲು ಮಂದಿಯ ಚಡಪಡಿಕೆ ವಂಥರಾ ಯಿದ್ದರ ಅರಮನೆ ಯೊಳಗಿನ ಚಡಪಡಿಕೇನೆ ಯಿನ್ನೊಂದು ಥರಾನೇ ಯಿತ್ತು. ಯಡ್ಡವರ್ಡು ಸಾಹೇಬನೇ ಖುದ್ದ ಬರುತಿರುವನೆಂದ ಮ್ಯಾಲ ಅರಮನೆಯ ಗೋಡೆಗಳಿಗೆ ಸುಣ್ಣದ ರುಚೀನ ತೋರಿಸದೆ ಯಿರಲಿಕ್ಕಾದೀತಾ.. ನೂರಾರು ಮಂದಿಗೆ ಭರ್ಜರಿ ಅನ್ನ ಸಂತರ್ಪಣೆ ಮಾಡದೆಯಿರಲಿಕ್ಕಾದೀತಾ.. ಯಂಬ ವಾದ ಭಯ್ರುಮಾಂಬೆಯದ್ದಾಗಿದ್ದರ, ಅರಮನೆಗೆ ಯಾಕ ಸುಣ್ಣ ಬಣ್ಣ ಬಳಿಸಬೇಕು? ಯಾಕ ಮೂರು ಮಂದಿಗೆ ಕೂಳು ಹಾಕಿಸಬೇಕು? ಬರುತ್ತಿರುವವ ಕುಂಪಣಿ ಸರಕಾರದ ಯಡ್ಡವರ್ಡು ಕಣವ್ವಾ.. ಅವನೇ ಅಲ್ಲೇನು ಅರಮನೆಯ ದವಡೆಯೊಳಗಿನ ಸಮಸ್ತ ಹುಲ್ಲುಗಳನ್ನುದುರಿಸಿ ಯಣಸಿಕೊಂಡೊಯ್ದು ಕುಂಪಣಿ ಸರಕಾರದ ತಿಜೋರೀಲಿ ಭರ್ತಿ ಮಾಡಿದ್ದು, ಅವನು ಬಂದು ಕಿಸಿಯೋದು ಅಷ್ಟರಲ್ಲೇ ಯಿರುವುದು ಯಂಬ ಯಿನ್ನೊಂದು ವಾದ ರಾಜಪರಿವಾರದ ವುಳಿಕೇ ಸದಸ್ಯರದಾಗಿತ್ತು. ಯಾರು ಯೇನೇ ಅನ್ನಲಿ.. ಯಿದು ಪುವ್ವಲ ರಾಜವಮುಸದ ಪ್ರತಿಷ್ಟೆಯ ಯಿಷಯ. ಪುವ್ವಲ ಯಂಬ ಸಬುಧದ

ಅರ್ಥ ಯೀಗಿನ ಕಾಲದ ಮಂದಿಗೆ ಅರ್ಥವಾದೀತಾ..? ತಮ್ಮ ಮೂಲ ಯಿರುವುದು ಸಾತವಾಹನರಲ್ಲಿ ಯಂಬುದು ಯಿವರಿಗೆ ಅರ್ಥವಾದೀತಾ..? ಯಡ್ಡವರ್ಡನ ಕಣ್ಣಿಗೆ ಅರಮನೆ ಯದ್ದುಕಾಣಬೇಕು.. ರಾಜ ಪರಿವಾರದವರೆದುರು ಅವ ಸೊಂಟ ಬಗ್ಗಿಸುವಂತಾಗಬೇಕು. ಯಿದಕ್ಕೆ ಯಷ್ಟೇ ಖರ್ಚಾದರೂ ತಾವು ಯದೆಗುಂದಬಾರದು.. ಯೀ ಯಿಷದಲ್ಲಿ ಮತ್ತಷ್ಟು ಸಾಲ ಮಾಡಿದರೂ ಚಿಂತೆಯಿಲ್ಲ.. ಹೆಂಗೋ ಕುಬೇರನ ವಾರಸುದಾರ ತಿರುಪಾಲಯ್ಯ ಸ್ರೇಷಿ« ತಮ್ಮ ಅರಮನೆಯ ಕಣ್ಣಳತೆಯಲ್ಲಿಯೇ ಅದಾನ.. ಯಂಬ ಕಾರಣಕ್ಕೆ..

ಹೇಳಿ ಕಳುವಿದೊಡನೆ ಸ್ರೇಷಿ«ಯು ದಾರಿದ್ರ್ಯ ಯಂಬ ಹಚ್ಚಡವನ್ನು ಮಯ್ತುಂಬ ಹೊದ್ದುಕೊಂಡು ಅರಮನೆಗೆ ಬಾರದೆಯಿರಲಿಲ್ಲ.. ಅರಮನೆಯ ದೀನಸ್ಥಿತಿಯನ್ನು ಕಂಡು ಮಮ್ಮಲನ ಮರುಗದೆ ಯಿರಲಿಲ್ಲ.. ಯಾರಿಗೆ ಸಾಲ ಕೊಟ್ಟರೂ ಲಚುಮೀದೇವಿ ಮುನುಸಿಕೊಳ್ಳಲ್ಲ ತಾಯೀ.. ಅರಮನೆಗೆ ಸಾಲ ಕೊಟ್ಟಿದ್ದೇ ಮಾಪರಾಧವಾಗಿ ಹೋಗಿರುವುದು. ವಂದರ ಹಿಂದ ವಂದರಂತೆ ಲುಕ್ಸಾಣ ಬಂದು ಕಯ್ಯಿಕಾಲು ಆಡದಂಗಾಗಿಬಿಟ್ಟಯ್ತೆ.. ದಾರಿದ್ರ್ಯವು ಕವುಕೊಂಡುಬಿಟ್ಟಯ್ತೆ.. ಅದೂ ಅಲ್ಲದೆ ಮೊನ್ನೆ ದಿವಸ ನಮ್ಮಾವ ವಂಕದಾರಿ ಗೋಯಿಂದಯ್ಯ ಕೂಡ್ಲಿಗಿಯಿಂದ ಬಂದು ಮನೇಲಿ ಯಿದ್ದ ಬಿದ್ದುದೆಲ್ಲವನ್ನೂ ಬಳಕೊಂಡು ಹೋಗಿಬಿಟ್ಟ.. ನೆಂಟರಲ್ಲಿ ಸಾಲ ಮಾಡಬಾರದೆಂದು ಹಿರೇಕರು ಹೇಳಿರೋದು ಯಿದಕ್ಕೇ ನೋಡು ತಾಯೀ.. ಯಿಷಾ ಕುಡೀಬೇಕೆಂದರೂ ವಂದೇ ವಂದು ದುಗ್ಗಾಣಿ ನನ್ನತ್ತರ ಯಿಲ್ಲದಂಗಾಗಯ್ತೆ.. ಯಂದು ಅವನು ಕಣ್ಣಲ್ಲಿ ನೀರು ತಂದುಕೊಂಡಿದ್ದೇನು..? ಸತ್ಯದ ತಲೆ ಮ್ಯಾಲ ಹೊಡಥಂಗ ಅಭಿನಯ ಮಾಡುತ ಹೇಳಿ ಹೋಗಿದ್ದೇನು? ವಂದು ಛಣ ಅಸಾಯಕತೆಯಿಂದ ನಖಸಿಖಾಂತ ಕಂಪನಕ್ಕೀಡಾಗಿಬಿಟ್ಟಳು ರಾಜಮಾತೆ.. ಯೇನಾರ ಮಾರಬೇಕಂದರ ಅಂಥ ಬೆಲೆ ಬಾಳುವಂಥ ಯಾವ ವಸ್ತುಮೂಅರಮನೆಯೊಳಗಿಲ್ಲ.. ಬೆಳೆಬಾಳುವಂಥ ವಸ್ತುಗಳೆಂದರ.. ಅವು ಕೇವಲ ನೆನಪುಗಳು ಮಾತ್ರ.. ನೆನಪುಗಳನ್ನು ಕೊಳ್ಳುವಂಥವರು ಸದರಿ ಕಲಿಯುಗದಲ್ಲಿ ವುಂಟೇನು? ಯೀಗಲೇ ತಮ್ಮ ಪರಿಸ್ಥಿತಿಯು ಅಧೋಗತಿಗೆ ತಲುಪಿರುವುದೆಂದ ಮ್ಯಾಲ ತಾನು ಸತ್ತಮ್ಯಾಲ ತನ್ನ ಸಮಾಧೀನ ಕಟ್ಟಿಸಲಿಕ್ಕಾದೀತಾ? ತನ್ನ ಪುರಾಣ ಬರೆಯಿಸಲಿಕ್ಕಾದೀತಾ.. ಪ್ರತಿ ಪುಣ್ಯ ತಿಥಿಯಂದು ಭರ್ಜರಿ ಅನ್ನ ಸಂತರ್ಪಣೆ ಮಾಡಿಸಲಿಕ್ಕಾದೀತಾ? ತನ್ನ ಸಮಾಧಿ ಮಂದಿರದೊಳಗೆ ಧೂಪ ದೀಪವ ನಯವೇದ್ಯೆ ನಡೆಸಲಿಕ್ಕಾದೀತಾ? ಅಯ್ಯೋ ತನ ಕರುಮವೇ.. ತನ್ನನ್ನು ಯಾಕ

ರಾಜಮನೆತನದಲ್ಲಿ ಹುಟ್ಟಿಸಿ ಬೆಳೆಸಿದಿ ಯಿಧಿಯೇ.. ಯಂದು ಮುಂತಾಗಿ ಭಯ್ರವಮಾಂಬೆಯು... ತನ್ನ ಕಣ್ಣೊಳಗಿಂದ ಅರಮನೆ ಯಲ್ಲಿ ವುದುರಿ ಹೋಗುವದೋ ಯಂದು ಮುಂತಾಗಿ.....

ಅದೇ ಕಾಲಕ್ಕೆ ಕೂಡ್ಲಿಗಿಯಿಂದ ಹೊಂಟವರೆ ಯಡ್ಡವರ್ಡು ದಂಪತಿಗಳು, ಬ್ಯಾಡ ಬ್ಯಾಡಾಂದರೂ ಕೇಳದೆ ಹೊಂಟವಳೆ ಗಂಡನ ಸಂಗಾಟ ಜೆನ್ನಿಫರ್ರೂ.. ಆಕೆಯ ಕಣ್ಣೊಳಗ ಬೆಳೆಯಲಕ ಹತ್ತಯ್ತೆ ಜಗಲೂರೆವ್ವ ಯಂಬ ಮೂರ್ತಿಯು. ಮದುವೆ ಆದ ಯೇಸೋ ವರುಷಗಳ ನಂತರ ತಾನು ಕಾಡಿನ ಹಾದಿಗುಂಟ ಪಯಣಿಸುತ್ತಿರುವುದು.. ಅಗೋ ಅಲ್ಲಿ ಆ ಮರ.. ಯಿಗೋ ಯಿಲ್ಲಿಯೀ ಮರ.. ಆಗೋ ಅಲ್ಲಿ ಆ ಪಕ್ಷಿ.. ಯಿಗೋ ಯಿಲ್ಲಿ ಯೀ ಪಕ್ಷಿ.. ಅಗೋ ಅಲ್ಲಿಂದ ಕೇಳಿ ಬರುತ್ತಿರುವುದು ಹುಲಿಯು ಘರ್ಜನೆಯು.. ಯಿಗೋ ಯಿಲ್ಲಿ ವುಯಿಲಿಡುತ್ತಿರುವುದು ನರಿಯು.. ಆಹ್ಹಾ.. ತನ್ನ ಕಾಡಿನ ಪ್ರಯಾಣವೇ? ತನ್ನೊಳಗ ಕಲಾಯಿದನೋರ್ವ.. ತನ್ನೆದೆಯೊಳಗೆ ಕವಿಯೋರ್ವ, ಬಣ್ಣದ ಕುಡಿಕೆಯೊಳಗೆ ತಾನು ಕುಂಚವ ಅದ್ದದೆ ಯೇಸುಕಾಲವಾಯಿತು.. ಲಂಡನ್ನಿನೊಳಗೆ ನಡೆಯಲಿರುವ ಚಿತ್ರಕಲಾ ಸ್ಪರ್ಧೆಗೆ ತಾನು ಕಲಾಕ್ರುತಿಯನ್ನು ಕಳಿಸುವ ದಿನ ದೂರವಿಲ್ಲ.. ಕಾಡಿನ ಪರಿಸರದೊಳಗೆ ಹಗುರವಾಗವಳೆ ಜೆನ್ನಿಫರ್ರು.. ಆಕೆಯ ಆನಂದೋದ್ಗಾರಕ್ಕೆ ಸರಿಯಾಗಿ ಸ್ಪಂದಿಸುತಾಯಿಲ್ಲ ಯಡ್ಡವರ್ಡು.. ತಾನು ಮ್ಯಾಂಚೆಸ್ಟರೊಳಗೆ ಶಿಕ್ಷಕಿಯಾಗಿರುವ ರೋಜುಮೇರಿಯನ್ನು ಮದುವೆಯಾಗಿದ್ದಲ್ಲಿ ಯಂದು ಯೋಚಿಸುತ್ತಿದ್ದಾನವನು.

ಯಿಗೋ ಯಿಚ್ಚೇಕಡೇಕ ಕುದುರೆಡವಳಗ ಮುಂಜಾಗ್ರತಾ ಸಲುವಾಗಿ ವಂದಿಬ್ಬರು ಕುಂಪಣಿ ಸಯ್ನಿಕರು ಬಂದು ಹೋದ ಲಗಾಯ್ತು ಮಂದಿಯು ವಂದೆರಡು ತುತ್ತು ಕಡಿಮೆ ಮಾಡಿದರು. ಕುಂಪಣಿ ಮಂದಿ ಹೆಂಗಿರುವರೆಂಬುದರ ಬಗ್ಗೆ ತಲಾಕೊಂದೊಂದು ಕಥೆ ಕಟ್ಟಿ ಬಿತ್ತಿ ಬೆಳೆಯತೊಡಗಿದರು.. ಅವರೆದುರು ಯಾರು ಹೆಂಗ ನಡಕೋ ಬೇಕು ಯಂದು ಲೋಕಗ್ನಾನ ಬಲ್ಲವರು ವುಳಿಕೇ ಮಂದಿಗೆ ಪರಿಪರಿಯಿಂದ ತಾಕೀತು ಮಾಡುತ್ತಿದ್ದುದೋ, ವಂದು ಸೆರೆ ಮುಕ್ಕ ಹಾಲು ಕಾಣದೆ ನಿಲುಗಣ್ಣಿಗೆ ಬಿದ್ದಿದ್ದ ಮಕ್ಕಳು ಮರಿಗಳನ್ನು ಕುಂಪಣಿ ಸಾಹೇಬನೆದುರು ವಸ್ತುವಿನೋಪಾದಿಯಲ್ಲಿ ಪ್ರದರ್ಸನ ಮಾಡುವ ಸಲುವಾಗಿ ತಾಯಂದಿರು ಬಗೆಬಗೆಯ ದುಕ್ಕದ ಯಿನ್ಯಾಸಗಳನ್ನು ತೊಡುತ್ತಿದ್ದುದೋ..? ನಾಯಿ ಅಡ್ಡ ಬಂದು ಬೊಗಳಿದರೇನು ಗತಿ? ಯಂಬ ಕಾರಣಕ್ಕೆ ನಾಯಿಗಳನ್ನೂ, ಬೆಕ್ಕು ಅಡ್ಡ ಬಂದು ಮ್ಯಾಂವೆಂದು ಅರಚಿ ಅಪಸವ್ಯ

ಮಾಡಿದರೆಂಬ ಕಾರಣಕ್ಕೆ ಬೆಕ್ಕುಗಳನ್ನೂ, ಕೊಕ್ಕೊಕ್ಕೋ ಯಂದು ಕೂಗಿ ಅಪಸವ್ಯ ಮಾಡಿದರೆಂಬ ಕಾರಣಕ್ಕೆ ಕೋಳಿಗಳನ್ನೂ ಬಚ್ಚಿಡುತ್ತಿದ್ದುದೋ.. ತಮ ತಮ್ಮ ಹುಡುಗರುಪ್ಪಡಿಯ ಸಿಂಬಳ ಗೊಣ್ಣೆಯನ್ನು ತಾಯಂದಿರು ವರೆಸುತ್ತಿದ್ದುದೋ, ತಲೆಗೂದಲನ್ನು ವಪ್ಪಮೋರಣ ಮಾಡುತ್ತಿದ್ದುದೋ.. ಅಳ್ಳೋಗಬಾರದೆಂದೂ, ಯದೆಯನ್ನು ಕಲ್ಲು ಮಾಡಿಕೊಂಡಿರಬೇಕೆಂದೂ ಧಯರ‍್ಯ ತುಂಬುತ್ತಿದ್ದುದೋ.. ತಮ ತಮ್ಮ ಮನೆ ಅಂಗಳದಲ್ಲಿ ಕಸ ಗುಡಿಸಿ ಸೆಳ್ಳೊಡೆದು ರಂಗವಲ್ಲಿ ಹಾಕುತ್ತಿದ್ದುದೋ.. ಮುಪ್ಪಾನು ಮುದುಕರಿಗೆ ಮನೆ ಬಿಟ್ಟು ಹೊಂಡಬ್ಯಾಡಿರೆಂದು ದಯನಾಸ ಪಡುತ್ತಿದ್ದುದೋ..

ಕುಂಪಣಿ ಸಾಹೇಬ ಪತ್ನಿ ಸಮೇತ ಕುದುರೆಡವಿಗೆ ಆಗಮನ ಮಾಡಲಿರುವನೆಂಬ ಸಂಗತಿ ಯಾವ ಮಾದರಿಯಲ್ಲೋ ಅಕ್ಕಪಕ್ಕದ ದೇಸಗಳಾದ ಗುಂಡುಮುಳುಗು, ಕಾನಾಮಡುಗು, ಕುಮತಿ, ವಟ್ಟಮ್ನಳ್ಳಿಗಳಿಗೆಲ್ಲಾ ಹಬ್ಬಿಬಿಟ್ಟಿತ್ತು.. ಹ್ಹಾ ಹ್ಹಾ.. ಸಮುದ್ರಗಳನ್ನು ಕಂಡುಂಡವರು.. ತಿಂಗಳು ಪರ‍್ಯಂತರ ಸಮುದ್ರಗಳೊಳಗ ಯಾನ ಮಾಡಿರೋರು.. ಗಂಧರ್ವಲೋಕದ ಆಜುಬಾಜಲ್ಲಿ ರೋರು ಫಲಾನ ಪಟ್ಟಣಕ್ಕ ಬರುತ್ತಿರುವರೆಂದ ಮ್ಯಾಲ ತಾವ್ಯಾಕ ಅವರನ್ನು ನೋಡಿ ತಮ ತಮ್ಮ ಕಣ್ಣುಗಳನು ಪಾವನಗೊಳಿಸಿಕೊಳ್ಳಬಾರದೆಂಬ ಯಿಚ್ಚೆಯಿಂದ ಗಂಡೂ, ಹೆಣ್ಣೂ, ಮಕ್ಕಳು ಮರಿ ಕಟ್ಟಿಕೊಂಡು ಸರ‍್ರನೆ ಯದ್ದು ಬಿರ‍್ರನೆ ಹೊಂಟು ಬಂದ ಪರಿಣಾಮವಾಗಿ... ಸಿವ ಸಿವಾss....

ಆ ತುದಿಯಲ್ಲಿ ಬಡಗಣ ದಿಕ್ಕು ಕೆಂಧೂಳಿನ ಆಭರಣ ಮುಡಕೊಂಡದ್ದು ತಡವಾಗಲಿಲ್ಲ.. ಧೂಳಿನೊಳಗ ಸಾರೋಟು ಪವ್ವನೆ ಮೂಡಿದ್ದು ತಡವಾಗಲಿಲ್ಲ.. ಕುದುರೆಗಳ ಖುರಪುಟಗಳ ಸದ್ದು ಮೃದಂಗದೋಪಾದಿಯಲ್ಲಿ ನುಡಿಯಲಕ ಹತ್ತಿದ್ದು ತಡ ಆಗಲಿಲ್ಲ.. ಹಾಯ್.. ನಮ್ಮಪ್ಪನೇ.. ಹಾಯ್ ನಮ್ಮವ್ವನೇ.. ಯೇಟು ಕೆಂಪಾನುಕೆಂಪಗದೀರಲ್ಲ.. ನಿಮ್ಮ ಮಯ್ಯಿ ಮ್ಯಾಲ ತೊಗಲಯ್ತೋ ಯಿಲ್ಲವಾ ಯಂದವರಿವರು ವುದ್ಗರಿಸೂತ ಬೊಟ್ಟುಗಳನ್ನು ಮೂಗಿನವ್ಯಾಲ ಯಿಟುಕೊಂಡಿದ್ದು ತಡವಾಗಲಿಲ್ಲ.. ಅವರಿವರು ಆರತಿ ಬೆಳಗಿದ್ದಾಗಲೀ.. ಕಾಲಿಗೆ ನೀರು ಸುರುವಿದ್ದಾಗಲೀ, ಯಪ್ಪಾ ನೀನು ಬಲಗಾಲಿಟ್ಟು ಪುರ ಪ್ರವೇಶ ಮಾಡು, ಯವ್ವಾ ನೀನು ಹೆಣುಮಗಳದಿ, ಯಡಗಾಲಿಟ್ಟು ಪುರಪ್ರವೇಶ ಮಾಡು ಯಂದದ್ದು ತಡವಾಗಲಿಲ್ಲ..

ಯಡ್ಡವರ‍್ಡು ಬೆದರುಬೊಂಬೆಯಂತೆಯೂ
ಜೆನ್ನಿಫರ‍್ರುಹೆತ್ತ ತಾಯಿಯಂತೆಯೂ....

ರಾಜಮಾತೆ ಭಯ್ರಮಾಂಬೆಯು ಆ ದಂಪತಿಗಳೀರ್ವರನ್ನು ಪರಾಧೀನ ಅರಮನೆಗೆ ಕರೆದೊಯ್ದು ಸತ್ಕರಿಸುತ್ತ ತನಗ ವಾರಸತ್ವರೀತ್ಯಾ ಸಲ್ಲಬೇಕಾದ ಚರಾಸ್ತಿ ಕೊಡಬೇಕೆಂದೂ.. ತನಗ ಪಿಂಚಣಿ ಗೊತ್ತುವಾಡಿದ್ದಲ್ಲಿ ಯಿಹಲೋಕವನ್ನು ತ್ರಿಕರಣಪೂರ್ವಕವಾಗಿ ತ್ಯಜಿಸುವುದಾಗಿಯೂ ಅರಕೆ ಮಾಡಿಕೊಳ್ಳುತ್ತಿರುವಾಗ್ಗೆ, ಜೆನ್ನಿಫರ್ರು, ಆ ಅರಮನೆಯೊಳಗೆ ಅಡ್ಡಾಡುತ ಯಿಂಗಲೆಂಡಿನ ಬಂಕಿಂಗ್ ಹ್ಯಾಮ್ ಅರಮನೆಯನ್ನು ತುಲನ ಮಾಡುತ ಯಿದ್ದಳು. ಅದು ಯತ್ತ? ಯಿದು ಯತ್ತ? ರೋಮ ರಹಿತ ಕಾಟಯ್ಯನಾಯಕನು ಆಕೆಯನ್ನು ಜಾಲಂದರದ ಕಿಂಡಿಯೊಳಗ ನೋಡುತ್ತಿರದೆ ಯಿರಲಿಲ್ಲ..

* * * *

ಅತ್ತ ಬಳ್ಳಾರಿಯೊಳಗ ವಸ್ತಿ ಮಾಡಿರ್ದ ಮನ್ರೋ ಸಾಹೇಬನು ಮುಂದ ಮುಂದ, ವ್ಯಾಕ ಸಾಹೇಬನು ಹಿಂದ ಹಿಂದ.. ವಾಸ್ತು ರೀತ್ಯಾ ಯೀಶಾನ್ಯಭಿಮುಖ ಬಾಗಿಲನ್ನು ಹೊಂದಿದ್ದ ಆ ಕಾರಾಗ್ರುಹವು ಕಲೆಟ್ಟರ ಸಾಹೇಬನ ಕನಸಿನ ಕೂಸು. ಕುಂಪಣಿ ಸರಕಾರದ ಪ್ರತಿಷೆ«ಯ ಲಾಂಛನ. ನೋಡಿದೊಡನೆ ಯಂಥವರೂ ಕುಂಪಣಿ ಸರಕಾರದ ಸ್ವಾಮಿತ್ವವನ್ನು ನೋಟ ಮಾತ್ರದಿಂದ ವಪ್ಪಿಕೊಂಡುಬಿಡಬೇಕು. ಅಂಥ ಕಟ್ಟಡವು.. ಮುಂದೆ ಬಂಧನಕ್ಕೊಳಗಾಗಲಿರುವ ಗಡೇಕಲ್ಲು ಭೀಮಲಿಂಗೇಸ್ವರನ ನಿಜಭಕುತನಾದ ಬೊಬ್ಬಿಲಿ ನಾಗಿರೆಡ್ಡಿಯ ವಝಿಯನ್ನು ಸದರಿ ಕಟ್ಟಡವು ತಡಕಂತದಾ ಯಂಬ ಪ್ರಸ್ನೆಯು.. ಹಲ್ಲಿ ಮೂಸರುವಳ್ಳಿ ಜಾಯಮಾನದ ಯಲ್ಲಾಪ್ರಕೊರಚರಟ್ಟಿಯ ಚೋರರನ್ನು ಸದರಿ ಕಟ್ಟಡವು ತಡಕಂತದಾ ಯಂಬ ಯಿನ್ನೊಂದು ಪ್ರಸ್ನೆಯು... ಹಾಲಿ ಕಟ್ಟಡದೊಳಗ ಶಿಕ್ಷೆಯು ಅನುಭವ ವೇದ್ಯವಾಗುತ್ತಿರುವುದೋ ಯಿಲ್ಲಮೋ ಯಂಬ ಮಗುದೊಂದು ಪ್ರಸ್ನೆಯು, ಯಿಂಥತ್ತಿಪ್ಪತ್ತು ಪ್ರಸ್ನೆ, ಅನುಮಾನಗಳನ್ನು ಹೆಜ್ಜೆಗೊಂದೊಂದರಂತೆ ಧರಿಸುತ್ತ ಅಷ್ಟು ದೂರದಲ್ಲಿದ್ದ ಕಾರಾಗ್ರುಹವನ್ನು ಅಲುಪ ಸೊಲುಪ ಆತಂಕದಿಂದಲೇ ಪ್ರವೇಶ ಮಾಡಿದನು. ಯಿಯಿಧ ಅಪರಾಧಗಳಂಗಯ್ದು ಶಿಕ್ಷೆ ಅನುಭವ ಮಾಡುತಲಿದ್ದ ಖಯ್ದಿಗಳ ಯೋಗ ಕ್ಷೇಮವನ್ನು ಯಿಚಾರಿಸಿದನು. ಹಂಗೆ ಹೋಗುತಾ ಹೋಗುತಾ ಬೊಬ್ಬಿಲನಾಗಿರೆಡ್ಡಿಯ ಬಲಗಯ್ಯಿ ಬಂಟನಾದ ವಲಸಾರೆಡ್ಡಿಯನ್ನು ತಲುಪಿ ಯೀಗಲಾದರೂ ಪ್ರಾಣವುಳುಸಿಕೋ ಯಂದು ಕೇಳಲಾಗಿ ಆ ಗಿಡ್ಡಾಕ್ರುತಿಯು 'ಪ್ರಾಣ ಕೊಡುವೆನೇ ವಿನಾ.. ನಮ್ಮ ದೇವರ ಗುಟ್ಟು ಬಿಟ್ಟುಕೊಡುವುದಿಲ್ಲ' ಯಂದು ಖಡಾಖಂಡಿತವಾಗಿ ಹೇಳಿದನು. ಅದಕ್ಕಿದ್ದು ಕಲೆಟ್ಟರು ಸಾಹೇಬನು

ಮ್ಯಾಕನ ಕಿವಿಯಲ್ಲಿ ಯಿಂಗಲೀಸು ಭಾಷೆಯೊಳಗ ಅದೇನನ್ನೋ ಹೇಳಿ ಮುಂದಕ ಹೊಂಟೂ ಹೊಂಟೂss

ಅತ್ತ ಕೂಡ್ಲಿಗಿ ಪಟ್ಟಣದೊಳಗ ತಾಯವ್ವ ತನ್ನ ಮಗಳು ಚಿನ್ನಾಸಾನಿಯ ಮಯ್ಲಿಗೆ ಬಟ್ಟೆಯನ್ನು ಮಡಿ ಮಾಡಿಕೊಂಡು ಬರುವುದಾಗಿ ವಯ್ದ ಅಗಸರವ ವಾರವಾದರೂ ಪತ್ತೆಯಿಲ್ಲವಲ್ಲಾ ಯಂಬ ಚಿಂತೆಯಲ್ಲಿದ್ದಳು. ವಾಸ್ತವದ ಸಂಗತಿ ಅಂದರ ಅವುರಯ್ಯ ತನ್ನ ಕುಟುಂಬದ ಅನುಗಾಲ ಬಡತನದ ನಿರ್ಮೂಲನಾರ್ಥವಾಗಿ ಚಿನ್ನಾಸಾನಿಯ ಅಮೂಲ್ಯ ಮಯ್ಲಿಗೆ ಬಟ್ಟೆಯನ್ನು ವನಾಂತರದೊಳಗೆ ಯ್ಯಾಕುಲ ಚಿತ್ತೀಯ ಸಿರಿಮಂತ ಹಯಕಳುಗಳಿಗೆ ಹರಾಜು ಹಾಕಿ ಸಿಕ್ಕ ಅರವತ್ತೆಪ್ಪತ್ತು ಬೆಳ್ಳಿ ರೂಪಾಯಿಗಳ ಹಿಡಿಗಂಟನ್ನು ಟೊಂಕಕ್ಕೆ ಕಟ್ಟಿಕೊಂಡು ಸಮುಸಾರ ಸಮೇತ ತನ್ನ ಬೀಗರೂರಾದ ಹಾರಾಳಿಗೆ ಪರಾರಿಯಾಗಿದ್ದನೆಂಬಲ್ಲಿಗೆ..

ಅತ್ತ ಕುದುರೆಡವಿನಿಂದ ಸಿಡೇಗಲ್ಲ ಕಡೇಕ ಬಯ್ತಲೆಯಂಥಾ ಹಾದಿಯೊಂದು ಅನಾದಿ ಕಾಲದಿಂದ ಬಿದ್ದಿರುವುದು. ಅದರ ವಂದು ಕಡೇಕ ಯೀರಗಲ್ಲುಯಿರುವುದು, ಕಾಳಾಯುಕ್ತನಾಮ ಸಂವತ್ಸರದಲ್ಲಿ ತಂಬರಹಳ್ಳಿ ಕೋಟೆಯ ದೊರೆ ಮುದಿಗೋಣೆಪ್ಪನಾಯಕನು ಸಿಡೇಗಲ್ಲು ಕೋಟೆ ಮ್ಯಾಲ ಧಾಳಿ ಮಾಡಿದ ಕಾಲದಲ್ಲಿ ನೆತ್ತರುಡುಗೆ ವುಟ್ಟು ತನ್ನ ರಕ್ಷಣೆಗೆ ನಿಂತಿದ್ದ ಯೀರ ಸಿರಿಗನು ಹೋರಾಡಿ ಮಡಿದದ್ದು ಯಿಥಿತವು. ಅವನು ಮಡಿದಂಥಾ ಆ ಜಾಗದಲ್ಲಿ ಆ ದೊರೆಯ ಯೀರ ಸಿರಿಗನ ಹೆಸರಲ್ಲಿ ನಡೆಸಿದಂಥಾ ಯೀರಗಲ್ಲು ಅದಾಗಿದ್ದಿತು. ಆ ಯೀರ ಸಿರಿಗನು ಕಾಲವಸನಾದ ತರುವಾಯ ಅವನ ತಂದಿ ತಾಯಿಗಳು ಯಿದ್ದೊಬ್ಬ ಮಗನನ್ನು ಕಳಕೊಂಡೆವು ಯಂದು ದುಕ್ಕವ ಮಾಡಿದರು. ರಂಡಮುಂಡೆಯಾಗಿ ಯಾಕ ಬದುಕಿರಬೇಕೂಂತ ಆತನ ಹೆಂಡತಿ ಜಕ್ಕವ್ವ ಚಿತಾ ಪ್ರವೇಸ ಮಾಡಿದಳು. ಬಂಧು ಬಳಗ ಅಸದಳ ರೀತಿ ವಳಗ ದುಕ್ಕ ಮಾಡಿತು.. ಯುದ್ಧದ ಗೊಡವೆಯೇ ಬ್ಯಾಡವೆಂದು ಆ ಕುಟುಂಬವು ತೀರುಮಾನವ ತಗೊಂಡಿದ್ದು ಕುಂತಳ ಪ್ರಾಂತೀಯದಲ್ಲಿ ಅದೇ ಪ್ರಪ್ರಥಮ. ಆ ಕುಟುಂಬವು ತುಂಬರಹಳ್ಳಿಯಿಂದ ಗುಳೇ ಹೊಂಟು ಬಂದು ಸಿಡೇಗಲ್ಲು ಮೂರೊಳಗೆ ನೆಲಗೊಂಡಿತು. ಆ ಯೀರ ವಮುಸಸ್ಥದ ಕರುಳು ಬಳ್ಳಿ ಯಲ್ಲೋ ವಂದು ರೀತಿಯುಲ್ಲಿ ಗುಡಿ ಹಿಂದಲ ಮೂಳೆ ವೋಬಯ್ಯನನ್ನು ತಗುಲಿಕೊಂಡಿರುವುದು. ಆ ಕರುಳು ಬಳ್ಳಿಯ ಸಂಬಂಧದ ತಳ ಬುಡ ಗೊತ್ತಿಲ್ಲದ ಮೋಬಯ್ಯನು ಪ್ರತಿ ಸಂವತ್ಸರ ಯಳ್ಳಮವಾಸೆಯ ಮಟಮಟ

ಮದ್ಯಾಣದಂದು ಅಲ್ಲಿಗೆ ಬಂದು ಸದರಿ ಯೀರಗಲ್ಲಿಗೆ ಕಾಯಿ ವಡದು ಸಣು ಮಾಡಿ ಹೋಗುತ್ತಿದ್ದನೆಂಬ ಸಂಗತಿ ಯಲ್ಲೋ ವಬ್ಬಿಬ್ಬರಿಗೆ ಗೊತ್ತಿದ್ದರೆ ಗೊತ್ತಿರಬೌದು.. ಸಿಡೇಗಲ್ಲಿನಿಂದ ಕುದುರೆಡವು ಕಡೇಕ, ಕುದುರೆಡವಿನಿಂದ ಸಿಡೇಗಲ್ಲಿನ ಕಡೇಕ ಹೋಗುವ ದಾರಿ ಹೋಕ ಮಂದಿ ತಮಗ ವಳ್ಳೇದು ಮಾಡಪ್ಪಾ ಯಂದು ಸದರಿ ಯೀರಗಲ್ಲಿಗೆ ವಂದು ಚಟಾಕು ಯಣ್ಣೆ ಯರೆದು ಪ್ರಾರ್ಥಿಸಿ ಸಣ ಮುಕ್ಕೊಳ್ಳುತ್ತಿರುವರು. ಹಿಂಗಾಗಿ ಯೀರ ಸೊರಗದಲ್ಲಿರೋ ಸಿರಿಗನಿಗೆ ದಯವತ್ವವು ಪ್ರಾಪ್ತವಾಗಿರುವುದು.

ಅಂಥ ಯೀರಗಲ್ಲಿನ ಬಲಗಡೇಕಿರೋ ಹಾದಿಗುಂಟ ವಂದು ದಮ್ಮು ನಡೆದಲ್ಲಿ ವಂದು ವಕ್ರಾಣಿ ಬರುವುದು. ಅದು ನುಂಕೇಮಲೇಲಿದ್ದ ರಸಾಸಿದ್ದರು ಕಟ್ಟಿಸಿರುವಂಥಾದ್ದು. ದಾರಿಹೋಕರ, ಕಾಗೆಮ್ಮ, ಗುಬ್ಬೆಮ್ಮಗಳ ದಾಹ ತಣಿಸುವಂಥ ತೆಂಗಿನೆಳನೀರಿನಂಥಾ ವುದಕ ಅದರೊಳಗ ವಂದು ಕಾಲಕ್ಕೆ ಯಿತ್ತು. ನಿಚ್ಚಾಪ್ರದ ಯುದ್ದಾಳುಗಳು ತಮ್ಮ ರಕ್ತಸಿಕ್ತ ಖಡುಗಗಳನ್ನು ಯಾವತ್ತದರಲ್ಲಿ ತೊಳಕೊಂಡರೋ ಆ ಹೊತ್ತಿನಿಂದ ಮಂದಗೊಂಡು, ಪಾಚಿ ಬೆಳೆದು ದಾಹ ತಣಿಸುವ ತಾಕತ್ತನ್ನು ಕಳಕೊಂಡಿರುವುದು. ಸದರಿ ವಕ್ರಾಣಿಯ ಯಡಕ್ಕೆ ಬರೋಬ್ಬರಿ ಮುವ್ವತ್ತೊಂದು ಹೆಜ್ಜೆ ಹಾಕಿದಲ್ಲಿ ಬರುವ ಮರವೇ ಅಗಾಧವಾದ ಬೇಯಿನ ಮರವು. ನೋಡಲಿಕ್ಕ ಗಿಡ್ಡ ಸೊಭಾವದ್ದಾದ ಅದು ದ್ವಾಪರ ಕಾಲದ್ದು. ಹತ್ತಾರು ಮಂದಿ ರಾಕ್ಷಸರನ್ನು ತನ್ನೆದೆಯೊಳಗಿಟುಕೊಂಡು ಪೊರೆಯುತ್ತಿದ್ದಂಥಾ ದಂಡು ದವಲತ್ತು, ಗತ್ತು ಗಯ್ರತ್ತು, ದಂಡು ಜಬರದಸ್ತುಗಳನ್ನು ಮುರಿದು ಮುಕ್ಕುತಲಿದ್ದಂಥಾ ಯುದ್ಧಮ್ಮಾರಿಯು ತನ್ನ ಹಲ್ಲು ಸಂದುಗಳೊಳಗ ಸಿಕ್ಕೊಂಡಿದ್ದಥಾ ಹೆಣಗಳನ್ನು ತೆಗೆಯಲು ವಂದು ಬೇಯಿನ ಕಡ್ಡಿಯನ್ನು ವುಪಯೋಗಿಸಿದಳಂತೆ. ಆಕೆ ತನ್ನ ಯರಡೂ ದವಡೆಗಳಿಂದ ಕಿತ್ತುಹಾಕಲ್ಪಟ್ಟ ಹೆಣಗಳು ವಂದಾ, ಯರಡಾ, ಸಾವಿರಾರು ಗುಡ್ಡೆ ಬಿದ್ದಂಥಾ ಹೆಣಗಳ ರಾಸಿಯೇ ಮುಂದ ಮುಂದಕ ಯಮುಕೇಮಲೆ ಯಂದು ಹೆಸರು ಪಡೆಯಿತಂತೆ. ಅದರೊಳಗ ಸಿದ್ದರ ಗವಿಯಂಬ ಠೊಳ್ಳು ಯಿತ್ತಂತೆ.. ಅದು ಯೀಗ್ಗೆ ಮುಚ್ಚಿಹೋಗಿರುವುದು. ಕಣ್ಣಿಗಟೆಯದೆ ಕೇವಲ ಕಿವಿಗಳಿಗಷ್ಟೆ ಅಟೆಯುತ್ತ ನಿಗೂಢವಾಗಿ ವುಳುಕೊಂಡು ಬಂದಿರುವ ಸದರಿ ಅಗೋಚರ ಗವಿಯ ಶತ್ರುವು ರಾಯದುರ್ಗದಲ್ಲಿದ್ದ ಸಿದ್ದನಾಥನೆಂಬ ಮುನಿಯಂತೆ.. ಯಿದಕ್ಕೊಂದು ತಳಕು ಹಾಕಿಕೊಂಡಿರುವ ಕಥೆಯು.. ವಂದಾನೊಂದು ಕಾಲದಲ್ಲಿ ರಾಯದುರ್ಗದ ಕೋಟೆಯನ್ನು ರಾಜರಾಜೇಂದ್ರಯಂಬುವ ಅರಸನು ಆಳುತ್ತಿದ್ದನಷ್ಟೆ. ಅವನಿಗೆ

ಗತಿಸಿದ ಹೆಂಡತಿಯ ಹೊಟ್ಟೆಯಲ್ಲಿ ಸಾರಂಗಧರನೆಂಬ ಸುಂದರಾಂಗನೂ, ಪರಾಕ್ರಮಿಯೂ ಆದ ರಾಜಕುಮಾರನು ಹುಟ್ಟಿ ಯವ್ವನಕ್ಕೆ ಬಂದಿದ್ದನಷ್ಟೆ. ರಾಜನು ಮದುವೆ ಮಾಡಿಕೊಂಡಿದ್ದ ರಾಣಿಯು ಕಾಮಾಗ್ನಿಯಿಂದ ದಹನವಾಗುತ್ತಿದ್ದಳಷ್ಟೆ, ಆಕೆ ರಾಜಕುಮಾರನನ್ನು ತನ್ನ ಸಯನ ಮಂದಿರಕ್ಕೆ ವತ್ತಾಯಪೂರುವಕವಾಗಿ ಕಯ್ಯ ಹಿಡಿದು ಯಳೆದಳಷ್ಟೆ, ಅವನು 'ತಾಯೇ' ಯಂದು ವುದ್ಗಾರ ತೆಗೆದ ಕಾರಣಕ್ಕೆ ತಾಯಿಗಂಡ ಯಂದು ಜರೆದು ಗಂಡಗೆ ದೂರುಕೊಟ್ಟಳಷ್ಟೆ, ರಾಜನು ಯಿಂಥ ಮಗನಿದ್ದರೆಷ್ಟು? ಸತ್ತರೆಷ್ಟು? ಯಂದು ಕೊಲೆ ಮಾಡಿಸಿ ತದನಂತರ ತಾನು ಗ್ನಾನೋದಯಗೊಂಡನಷ್ಟೆ...

ಸತ್ಯಾಸತ್ಯದ ಪರಿಸೋಧ ಮಾಡಿದ ರಾಜರಾಜೇಂದ್ರನು ಹೆಂಗಾದ್ರುಮಾಡಿ ತನ್ನ ಯಿದ್ದೊಬ್ಬ ಮಗನನ್ನು ಬದುಕಿಸಿಕೊಡಿರಿ ತಂದೆಯೇ ಯಂದು ರಸಾಸಿದ್ದನನ್ನು ಬೇಡಿಕೊಂಡನಂತೆ. ಅದಕ್ಕೆ ಸಮ್ಮತಿಸಿದ ಆ ಸಿದ್ಧನಾಥನು ದಿವ್ಯದ್ರುಸ್ಟಿ ತೆಗೆದು ನೋಡಲಾಗಿ ಹೆಣಗಳ ರಾಶಿ ಆಳದಲ್ಲಿ ಬಿದ್ದಿರುವುದು ಗಮನಕ್ಕೆ ಬಂತಂತೆ, ಮನೋ ವೇಗದಲ್ಲಿ ಅಲ್ಲಿಗೆ ತಲುಪಿದ ತಾಪಸಿಯು ತನ್ನ ಕಣ್ಣ ನೋಟದಿಂದ ಬಕ್ಕೋತ ಬಕ್ಕೋತ ವಳೀಕ್ಕೆ ಹೋಗಿ ಆ ಹೆಣವನ್ನು ಹೊರಕ್ಕೆ ತಂದು ಸಂಜೀಯಿನಿ ಮಂತ್ರಜಪಿಸಿ ಬದುಕಿಸಿ ಸಾರಂಗಧರನನ್ನಾಗಿ ಮಾಡಿ ದುಕ್ಕತಪ್ತ ತಂದೆಗೆ ವಪ್ಪಿಸಿದನಂತೆ, ಆ ಗವಿಯೇ ಯಿದಾಗಿರುವುದು, ಯುದ್ದಮ್ಮಾರಿ ಬಲಿ ತಗೋತಾಳೆಂಬ ಕಾರಣಕ್ಕೆ ಸದರಿ ಗವಿಯ ದ್ವಾರವು ಕಾಲ ಕ್ರಮೇಣ ಮುಚ್ಚಲ್ಪಟ್ಟಿರುವುದಂತೆ. ಸದರಿ ಯಮುಕೇ ಮಲೆಯ ಆಳದ ಯಲುವುಗಳಿಂದ ಬಂಗಾರ ಮಾಡಲಕಂತ, ವಜ್ರಮಾಡಲಕಂತ ವಬ್ಬರಲ್ಲಾ ವಬ್ಬರು ರಸಾಸಿದ್ದರು ಅಲ್ಲಿಗೆ ಬರುವುದು, ಹೋಗುವುದು ಮಾಡುತಲಿದ್ದರಂತೆ. ಅವರ ತಂತ್ರಯಿದ್ದೆಯ ಪುಣ್ಯ ಫಲವು ತಮಗೆ ದೊರೆಯಲೆಂದು ಕೆಲವು ಮಂದಿ ಪುಣ್ಯಾತುಮರು ಅದರ ಬಲ ಮಗ್ಗುಲು ವಂದು ಕಲ್ಲಿನ ಮಂಟಪ ಕಟ್ಟಿಸಿದರಂತೆ. ಅದು ಆ ಕಾಲದ ಮಾತು.. ರಸಾಸಿದ್ಧರ ಕಾಲ ಮುಗಿತೋ ಮುಗಿತು, ಅಲ್ಲಿಗೀಗ ಯಾರು ಬರಾಣಿಲ್ಲ.. ಹೋಗಾಣಿಲ್ಲ.. ಕೇಡುಂಟಾತದೆ ಯಂಬ ಕಾರಣಕ್ಕೆ ವಂದೇ ವಂದು ನರಹುಳುಮೂಅತ್ತ ಸುಳಿಯಾಣಿಲ್ಲದ ಕಾರಣಕ್ಕೆ ಹಗಲಿಪ್ಪತ್ನಾಕು ತಾಸು ಆ ಪ್ರದೇಸವು ಬಿಕೋ ಅಂತಿರುವುದು....

ಅಂಥ ನಿಗೂಢಮೂ, ಭಯ ಯಿಹ್ವಲಮೂಆದ ಆ ಪಾಳುಮಂಟಪದ ನಟ್ಟ ನಡುವೆ ಗುಡಿ ಹಿಂದಲ ಮೂಳೆ ಮೋಬಯ್ಯ ಯಂಬ ಹೆಸರುಳ್ಳ ಭವುತಿಕ ತನುವು ಮಲಕ್ಕೊಂಡಯಿತೆ ಸಿವ ಸಂಕರ ಮಾದೇವಾss ಕಣ್ಣು ತೆರೆದದ್ದು

ತೆರದಂಗಯ್ತೆ.. ಕಿವಿ ತೆರೆದದ್ದು ತೆರದಂಗಯ್ತೆ.. ಬಾಯಿ ತೆರದದ್ದು ತೆರದಂಗಯ್ತೆ.. ಆ ತಂಬೂರಿ ಸದ್ರುಶ ಸರೀರದಾಳದಿಂದ ಗುಯ್‌ss ಯಂಬ ನಾದವು ಹೊರಗೆ ಬಂದು ಹಂಗss ಅಂತರ್ಧಾನವಾಗಲಕ ಹತ್ತಯ್ತೆ ಸಿವನೇ.. ನೀನ್ಯಾರಪ್ಪಾ ತಂದೆಯೇ.. ನೀನ್ಯಾಕ ಹಿಂಗ ಅಂಡಾವರನ ಮಲಕ್ಕೊಂಡದೀಯಪ್ಪಾ ಯಂದು ಕೇಳುವಂಥ ಮಾನುಭಾವರು ಅದರ ಯಡಕಿಲ್ಲ, ಬಲಕಿಲ್ಲ ಸಿವನೆ.. ಅದು ಯೀಗ ಮಗ್ಗುಲು ಬದಲಿಸೀತು? ಆಗ ಮಗ್ಗುಲು ಬದಲಿಸೀತು, ಯಂಬ ಗ್ಯಾನ ಯಿಟುಕೊಂಡು ಅಷ್ಟದಿಕ್ಕುಪಾಲಕರು ಯಂಟು ನಮೂನಿ ಗೊದ್ದಿಗ ರೂಪದೊಳಗ ಅದರ ಯಂಟು ದಿಕ್ಕಿನಲ್ಲಿ ಕಾವಲು ಕಾಯುತ ಕೂಕಂಡಿರುವರಂತೆ, ಸ್ರೀ ಯಿಸ್ಣು ಪರಮಾತುಮನ ಪಾಂಚಜನ್ಯ, ಸರಸೊತಿಯ ಯೀಣೆ, ಕ್ರುಸ್ಣನ ಕೊಳಲು, ತುಂಬುರನ ತಂಬೂರಿ ಯಿವೇ ಮೊದಲಾದ ದಯವಸಂಪನ್ನನಾದ ವಾದನಾ ಪರಿಕರಗಳು ಗುಂಗಾಡಿ ರೂಪಧಾರಣ ಮಾಡಿ ಗುಯ್‌ಗುಡುತ ಹಾರಾಡುತಲಿವೆ ಸುತ್ತಮುತ್ತ, ದೇವಲೋಕದ ಸುಂದರಿಯರು ಬಣ್ಣ ಬಣ್ಣದ ಪತಂಗಗಳ ರೂಪಧಾರಣ ಮಾಡಿ ಹಾರಾಡುತ ಕಳೆಗಟ್ಟವರೆ.. ವಾಯುದೇವನು ಚಾಮರ ಸೇವೆ ಸಲ್ಲಿಸುತಲವನೆ, ಸೂರ್ಯ ಪರಮಾತುಮನು ಆಗಾಗ್ಗೆ ತನ್ನ ಕಿರಣಗಳನ್ನು ಕಳುವಿ ಪರಾಂಬರಿಸುತಲವನೆ, ಮಿಂಚುಳುಗಳು ಮಂಗಳಾರತಿಗಳನ್ನು ಬೆಳಗುತಲವೆ, ಕೂಗಳತೆ, ಕಣ್ಣಳತೆ ದೂರಗಳ ನಡುವೆ ಮೋಬಯ್ಯನ ಪ್ರಾಣವನ್ನು ಯೀಗ ವಯ್ಯುವುದೋ? ಆಗ ವಯ್ಯುವುದೋ ಯಂದು ಗುಣಾಕಾರ, ಭಾಗಾಕಾರ, ಸಂಕಲನ ಯವಕಲನ ಮಾಡುತಲವನೆ ಜವರಾಯ..

ಆ ಸರೀರದೊಳಗೋ ಸಾಂಬವಿ ಯಂಬುವ ಅಯ್ಲು ಬಡಕೊಂಡಿದ್ದ ಮೋಬಯ್ಯನಿಗಾಟು ದೂರದಲ್ಲಿ ಕಾಗೆಮ್ಮಗೆ ಗುಬ್ಬೆಮ್ಮ ಯೇನು ಹೇಳುತಯ್ತೆ ಯಂದರ...

"ಕಾಗೆಮ್ಮss ಕುದುರೆಡವು ಯಂಬೋ ಪಟ್ಟಣವು ಕಾದ ಕಾವಲಿಯಂಗಾಗಯ್ತೆ, ವಂದೊಂದು ನರಹುಳವು ವಂದೊಂದು ಬೆಂತರಾಗಯ್ತೆ. ಅರಮನೆಯೊಳಗ ಅರೆಮನೆತನ ಯಂಬುದಿಲ್ಲ.. ಅದು ದುಗ್ಗಾಣಿ ಪ್ರಮಾಣದಲ್ಲಿ ಬೀದಿಗುಂಟ ತೆವಳಾಡಲಕ ಹತ್ತಯ್ತೆ.. ರಾಜಮಾತೆ ಭಯ್ರಮಾಂಬೆಯು ಭೂತ ಮೆಲಕು ಹಾಕುವ ಅಡುಗೂಲಜ್ಜಿ ಆಗ್ಯಾಳ.. ಪ್ರತಿಯೊಂದು ನರ ಹುಳದ ಯದೆಗೂಡು ಪೂಜಾ ಖೋಲಿ ಆಗಯ್ತೆ ಕಾಗೆಮ್ಮ.. ಜಗಲೂರೆವ್ವ ಯಂಬ ಮೇಟಿಗೂಟದ ಸುತಮುತ್ತ ಸಂತರಸ್ತ ಮಂದಿ ವುಸುರಾಡುತ ತಿರುಗುತಿರುವ

ಅಪೂರ್ವ ಸೋಭೆಯನ್ನು ವರಣನ ಮಾಡಲಕ ಆದಿಸೇಸನಿಗೂ ಅಸದಳ..” ಯಂದು ಮುಂತಾಗಿ ಗುಬ್ಬೆಮ್ಮ ತಾನು ಕಂಡುಂಡ ಅನುಭವವನ್ನು ಸಾದರಪಡಿಸುತಲಿತ್ತು.. ತಾನೂ ಜಗಲೂರೆವ್ವನ ನೇತ್ರುತ್ವದ ನಿಯೋಗದೊಂದಿಗೆ ಕೂಡ್ಲಿಗಿ ಮಟ ಹೋಗಿ ಬಂದಿತ್ತಲ್ಲಾ.. ಆರಕ್ಕೇರದ ಮೂರಕ್ಕಿಳಿಯದ ಜಾಯಮಾನವಂದಿಗಳಾದ ಆಕೆಯ ಕಟ್ಟಾ ಅಭಿಮಾನಿಯಾಗಿ ತಾನೂ ಪರಿವರ್ತನಗೊಂಡಿತ್ತಲ್ಲಾ.. ನಿಯೋಗ ಕುದುರೆಡವು ಕಡೇಕ ಮರಳಿದ ತರುವಾಯ ತಾನೂ ಕುಂಪಣಿ ಸರಕಾರದ ಬಂಗಲೆಯೊಳಗೆ ವುಳಕೊಂಡಿತ್ತಲ್ಲಾ.. ಯಡ್ಡವರ್ಡನ ಹೆಂಡತಿ ಜೆನ್ನಿಫರಮ್ಮಳ ಸವುಂದರ್ಯಕ್ಕೆ ತಾನೂ ಮರುಳಾಗಿತ್ತಲ್ಲಾ....

‘ಯಲ್ಲೆ ಕಾಗೆಮ್ಮನೇ ಹೇಳುತೇನಿ ಕೇಳು.. ಆಕೆಯ ಸವುಂದರ್ಯ ಮಾಮೂಲು ಸವುಂದರ್ಯ ಅಲ್ಲ ಕಣೇ ನಮ್ಮವ್ವನೇ.. ಹಸುಕೊಂಡೋನಿಗೆ ವುಂಡೊಡನೆ ಆಗುವ ಅನುಭೂತಿಗೆ ಸರಿಸಮನಾದ ಸವುಂದರ್ಯ, ತತ್ವ ಗೀತೆಯೊಳಗಿರುವ ಅನುಭಾವ, ಹೂವಿನೊಳಗೆ ಅಡಕವಾಗಿರುವ ಸ್ನಿಗ್ದತೆ, ಅನ್ನದೊಳಗಿರುವ ಸಂತ್ರುಪ್ತಿ, ನೀರಿನೊಳಗಿರುವ ನೆಮ್ಮದಿ, ತಾಯಿ ಯದೆಯೊಳಗಿರುವ ವಾತ್ಸಲ್ಯ, ಹಿರಿಯರ ಮನಸ್ಸಿನೊಳಗಿರುವ ಸಾಂತುವನ ಯಿವೆಲ್ಲ ಕೂಡಿದಲ್ಲಿ ಯೇನಾಗುವುದೋ ಅವೆಲ್ಲ ತಾನಾಗಿರುವಳು ನೋಡು, ಆಕೆಗೆ ತನ್ನ ಬಗ್ಗೆ ವಂಥಟಗಾರ ಹಮ್ಮಿಲ್ಲ.. ವಂಥಟಗಾರ ಬಿಮ್ಮೊಯಿಲ್ಲ... ಆಕೆ ವಂದೊಂದು ಹೆಜ್ಜೆ ಯಿಕ್ಕುತಾ ಯಿದ್ದರ ಭೂವಮ್ತಾಯಿ ಪುಳಕ ಗೊಳ್ಳುತಲಿದ್ದಳು.. ತನ್ನೊಂದೊಂದು ನೋಟದಿಂದ ಮಂಪರನ್ನು ಬಿತ್ತಿ ಬೆಳೆಯುತ ಲಿದ್ದಳು.. ತನ್ನೊಂದೊಂದು ಮಾತಿನಿಂದ ತಾನು ಅದ್ವಿತೀಯ ತಾಯಿ ಯಂಬುದನು ಭಾಸ ಮಾಡುತಲಿದ್ದಳು.

ಆ ಮಾತುಗಳನ್ನು ಕೇಳಿಸಿಕೊಂಡು ಕಾಗೆಮ್ಮನ ಹೊಟ್ಟೆ ತೊಳಸಿ ಬಂತು.. “ಯಲಾಯ್ ಗುಬ್ಬೆಮ್ಮನೇ, ಆಕೆಯ ಸವುಂದರ್ಯನ ವರಣನ ಮಾಡಿ ನನಗ ಅವಮಾನ ಮಾಡಬ್ಯಾಡ. ಆಕೆ ಯೇಟಿದ್ದರೂ ಪರಂಗಿ ಹೆಣುಮಗಳಂಬುದನ ಮರೆಯಬ್ಯಾಡ.. ಮುಂದೇನಾತಂಬುದನ ಲಗೂನ ಹೇಳು” ಯಂದು ಕೊಸರಿ ನುಡಿಯಲದಕ್ಕೆಯಿದ್ದು ಗುಬ್ಬೆಮ್ಮನು,

“ಅದಕ್ಯಾಕೆ ಮನಸನ ತಟಗು ವಾಡಿಕಂತಿ ಕಾಗೆಮ್ಮ.. ನೀನು ಕರ್ರಗಿರುವುದಕಲ್ಲ ಯೀಟು ಸಿಟ್ಟು.. ಯವ್ವಾ ನೀನು ಸುಳ್ಳು ಹೇಳಿದರೆ ಕೇಳುತ್ತಿ, ಖರೆ ಹೇಳಿದರೂ ಕೇಳುತ್ತೀ. ಯಾಕಂದರ ನೀನು ಅರೀದಾಕಿ ಅದೀ.. ಆ ಅಯ್ಲುಗೇಡಿ ಮೋಬಯ್ಯನ ಅಯ್ಲು ಬಡಕೊಂಡು ಮಾರುವದಕನ ಬಿಟ್ಟು

ಬಂದವಳದೀ.. ಯಿರಲಿ ಕೇಳು.. ಆ ಪರಂಗಿ ಹೆಣುಮಗಳು ಕುದುರೆಡವಳಗ ವಂದೊಂದು ಮಗುವನ್ನು ಯದೆಗೆ ಅವುಚಿಕೊಂಡು ಮುದ್ದಾಡಿದಳವ್ವಾ.. ವಂದೊಂದು ಮಗುವಿಗೆ ತಾನs ಗಿಲಗಂಚಿ ಆದಳವ್ವಾ.. ಹಸಿದ ಕಂದಮ್ಮಗಳ ಬಾಯಿsಗ ತನ್ನ ಮೊಲೆಗುಂಡಿಗಳನ್ನ ಅಮುಕಿದಳವ್ವಾ.. ಆಕೆಯ ಮಾತ್ರುಪ್ರದಾನ ವರ್ತನಕ ಮರುಳಾಗಿ ತಾಯಂದಿರು ತಮ ತಮ್ಮ ಕೂಸುಗಳಿಗೆ ಜೆನ್ನಿಫರಮ್ಮಾ.. ಜೆನ್ನಿಫರಪ್ಪ ಯಂದು ಮರುನಾಮಕರಣ ಮಾಡಿದರೇ ಕಾಗೆಮ್ಮೋs.. ಹಿಂಗ ವಂದೆಲ್ಡು ದಿವಸ ಆ ಪಟ್ಟಣದ ಬೀದಿಬೀದಿ ತುಂಬೆಲ್ಲ ತಿರುಗಾಡೀ ತಿರುಗಾಡೀ ತನ್ನ ಮನಸ್ಸನ್ನು ವಝೀ ಮಾಡಿಕೊಂಡು ಕೂಡ್ಲಿಗಿ ಕಡೇಕ ಮುಖ ಮಾಡಿದಳು ಕಣವ್ವಾ.. ಆಕೆಯ ಗಂಟುಮೂತಿ ಗಂಡ ಸುಮಕಿರಬೇಕಲ್ಲ..” ಯಂದು ಮಾರುದ್ದನೆಯ ನಿಟ್ಟುಸುರು ಬಿಟ್ಟಿತು....

ಸಾಂಪ್ರತು ಅಲ್ಲಿ ಗಿಜಿಗಿಜಿಗುಡುತ್ತಿದ್ದ ತರಾವರಿ ಪಚ್ಚಿಗಳು ಕಾಗೆಮ್ಮ, ಗುಬ್ಬೆಮ್ಮಂದಿರ ಯೀಕ್ಷಕ ಯಿವರಣೆಯನ್ನು ಕೇಳಿಸಿಕೊಳ್ಳದಿರಲಿಲ್ಲ. ತಮ್ಮ ಪ್ರೀತಿಯ ಪಟ್ಟಣವಾದ ಕುದುರೆಡವ ಅಯ್ನಾತಿ ದುಸ್ಥಿತಿಗೆ ಮರುಗದೆ ಯಿರಲಿಲ್ಲ. ತಮ್ಮ ಪಚ್ಚಿ ಭಾಷೆಯೊಳಗ ಮೋಬಯ್ಯನ ಅಯ್ಲು ಗೇಡಿತನವನ್ನು ಸಪಿಸದೆ ಯಿರಲಿಲ್ಲ. ಹೆಂಗಪ್ಪಾ ಕುದುರೆಡವು ಗಮನವನ್ನು ಯಿವಯ್ಯನತ್ತ ಸೆಳೆಯುವುದು? ಯಂದು ಚಿಂತಿಸುತ್ತಿರಬೇಕಾದರ ಕೆಲ ಕವುಜಗಗಳು ಆ ಕೂಡಲೆ ಮುಂದೆ ಬಂದು...

ಹ್ಹಾ.. ಹ್ಹಾ.. ವಂದಲ್ಲಾ..ಯಂಟೊಂಬತ್ತು ಕವುಜಗ.. ಅಗೋ ಯಿಲ್ಲಿ.. ಯಿಗೋ ಯಿಲ್ಲಿ ವನುವಾಸಯ್ಯನು ಬೊಟ್ಟು ತೋರಿದೊಡನೆ ಗುರಿ ನಿಪುಣನಾದ ವುಪಾಸಯ್ಯನು ಬಿಲ್ಲು ಯದೆಗೇರಿಸಿ ಬಾಣ ಬಿಟ್ಟನು.. ಅದು ಸುಯ್ಯಂತ ಹೋಯಿತು. ಆದರೆ ಆ ಚಲಾಕಿ ಪಕ್ಷಿಗಳಿಗೆ ತಗುಲಬೇಕಲ್ಲ, ತಗುಲಲಿಲ್ಲ. ‘ಅರೆ ಯಿವನವ್ವನ’ ಯಂದನಕಂತ ಅವರೀರ್ವರು ಅವು ಹೆಂಗೆಂಗೋತಾಮೋ ಹಂಗಂಗೇ ಬಾಣ ಬಿಟುಗಂತ ಮುಂದ ಮುಂದಕ ಧಾವಿಸಿದರು. ಬರು ಬರುತಾ ವುಪಾಸಯ್ಯನು ತನ್ನ ಬತ್ತಳಿಕೆಯಲ್ಲಿದ್ದ ಬ್ರೆಮ್ಮಾಸ್ತರವನ್ನು ತೆಗೆದು ಅದಕ್ಕೆ ಛೂಮಂತರಗಾಳಿ ಯಂಬುವ ಮಂತರವ ಜಪಿಸಿ ಬೇಟೆಯ ಕುಲದೇವತೆಯಾದ ಬಾಹುಕಮ್ಮಳನ್ನು ಮನದಲ್ಲೇ ನೆನೆದು ಬಿಟ್ಟನು.. ಅದು ಮೊದಲೇ ಬ್ರೆಮ್ಮಾಸ್ತರವು.. ದ್ವಾಪರಕಾಲದ ಅರ್ಜುನಂದು.. ಅದು ಹೆಂಗ ಯಿವಯ್ಯನ ಬತ್ತಳಿಕೆಯೊಳಗ ಆಸ್ರಯ ಪಡಕೊಂಡಿತ್ತೋ.. ಅದು ಬಿಲ್ಲಿನಿಂದ ಹೊಂಟೊಡನೆ..

ಆ ಸೋದರೀರ್ವರು ಆನಂದ ತುಂದಿಲರಾಗಿ ಅದನ್ನು ಹುಡುಕ್ಕೋತ.. ಹುಡಕ್ಕೋತ ಯೀರಗಲ್ಲು ದಾಟುತ ಯಮುಕೇ ಮಲೆಯನ್ನು ಹತ್ತಿಳಿಯೊತ..

ವಕ್ರಾಣಿಯನ್ನು ಪರದಕ್ಷಿಣೆ ಹಾಕುತ ಬಂದೂ.. ಬಂದೂ ಆ ಪಾಳು ಮಂಟಪವನ್ನು ಪ್ರವೇಸ ಮಾಡಿದರೆಂಬಲ್ಲಿಗೆ..

ಯಾವ ನರಹುಳವು ಬರಲಕ ಹೆದರುತಯ್ತೋ.. ಅಲ್ಲಿಗೇ ತಾವು ಬಂದಿರುವುದು, ಜೀವವನ್ನು ಬಾಯಿಗೆ ತಂದುಕೊಂಡರು.. ತಮ್ಮ ಬಾಣಕ್ಕಾಹುತಿಗೊಂಡ ಕವುಜಗ ಅಲ್ಲುಂಟಾ? ಯಿಲ್ಲುಂಟಾ? ಅಯ್ಯೋ ಕಯ್ಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲಾ.. ಅದು ಸಿಕ್ಕರೆಷ್ಟು? ಬಿಟ್ಟರೆಷ್ಟು? ಯಿಲ್ಲಿಂದ ತಾವು ಬದುಕಿ ಹೋಗಲಕಂದರ ತಮ ತಮ್ಮ ಹೆಂಡಂದಿರ ತಾಳಿ ಪುಣ್ಯದ ಆಸರೆ ಬೇಕಾಗುವುದು. ಯಿನ್ನೇನು ತಾವು ಅಲ್ಲಿಂದ ಹೋಗಬೇಕೆಂದು ಯೇಟೋ ಯತ್ನ ಪ್ರಯತ್ನವ ಪಡುತಾರ ಸಿವನೇ.. ತಮ್ಮ ಯಿರುದ್ಧ ಯೇನೋ ಯಂದು ಅನುಮಾನ ಪಡುತಾರೆ.. ತಮ್ಮನ್ನು ಕಾಪಾಡು ಬಾಹುಕಮ್ಮಾ.. ಬಿಲ್ಲುಬಾಣ ವಲ್ಲೆಂದೇವು.. ಬೇಟೆಗೊಡವೆ ವಲ್ಲೆಂದೇವು.. ತಮ್ಮ ಹೆಂಡರು ಮಕ್ಕಳು ಅನಾಥವಾಗದಂಗೆ ಮಾಡವ್ವಾ ಯಂದನಕಂತ ಅವರು ಕಯ್ನ ಮುಕ್ಕಂತವರೆ.. ಅದೇ ಯಾಳ್ಯೇವಿಗೆ ಸರಿಯಾಗಿ ಯಾದೋ ವಂದು ನರಹುಳುವು ಯವ್ವೋ.. ಯುಪೊಃ ಯುಂದು ಮುಲುಕಾಡಿದಂಗಾತು.. ಯೀ ಮುಲುಕು ರಸಾಸಿದ್ಧಂದೋ? ಸಾರಂಗಧರಂದೋ? ಅಥವಾ ಯುದ್ಧಮ್ಮಾರಿಂದೋ? ಸಿವ.. ಸಿವಾ.. ಸಿವಭಕುತ ನಲ್ಲದವನು ಪ್ರವೇಸ ಮಾಡಲಾಗದು ಯಂಬ ಅಕ್ಕರಗಳಿದ್ದ ಸಿಲಾಪಲಕದಡಿ ನುಸುಗಿ ಹೋಗಿ ನೋಡುತ್ತಾರೆ.. ವಂದು ಮನುಶ್ಯಾಕ್ರುತಿಯು ಯೇಳೋದು ಮಲಗೋದು ಮಾಡುತ ಯಿರುವುದು. ಯಿದನ್ನೆಲ್ಲೋ ನೋಡಿದಂಗಯ್ತಲ್ಲಾ.. ಯಿದು ಯಾರದೋ ಯಿದ್ದಂಗಯ್ತಲ್ಲಾ.. ಯಿದರ ಸನೀಕ ಹೋಗುವುದೋ? ಹೋಗದಂಗ ಯಿರುವುದೋ? ಯಂದು ಅನುಮಾನಿಸೂತ ಸನೀಕಂದರ ಸನೀಕ ಹೋಗಿ ಬಗಬಗ್ಗಿ ನೋಡುತಾರೆ.. ಅರೆ! ತಮ್ಮ ಗುಡಿ ಹಿಂದಲ ಮೂಳೆ ಮೋಬಯ್ಯನು...

ಸಿವನ್ನಾಮ ಪಾರೋತಿ ಪತಿ ಹರ ಮಾದೇಮಾss
ಜಯಮಂಗಳಂ ನಿತ್ಯ ಸುಭಮಂಗಳಂsss

# ಪರ್ವ : ಯರಡು

ಅತ್ತ ಥಾಮಸು ಮನ್ರೋ ಸಾಹೇಬನು ವಾರ ಲಾಗಾಯ್ತು ಬಳ್ಳಾರಿ ವಳಗೇ ಮೊಕ್ಕಾಂ ಹೂಡಿ ಬಿಟ್ಟಿದ್ದನು. ತಾನೊಂದೇ ಸ್ಥಳದೊಳಗ ಯೀಸೊಂದು ದಿನಮಾನ ಯಿದ್ದಾತನಲ್ಲ.. ಜುಲುಮಿಗಳಿಗೆ ವಲಿದಾತನಲ್ಲ..

ಅವಯ್ಯಗ ಕಯ್ಯಿ ತುಂಬ ರಗಡ ಕೆಲಸ ಯಿತ್ತು. ಯಿನ್ನೊಂದು ಕಣಸು ಅವಯ್ಯನ ಕಣ್ಣೊಳಗ ಯಿಲ್ಲದಿರಲಿಲ್ಲ.. ಅದೆಂದರ ಸದರಿ ಪಟ್ಟಣದಲ್ಲಿ ವಂದು ನ್ಯಾಯಾಲಯ ಸ್ಥಾಪನೆ ಮಾಡಬೇಕೆಂಬುದು. ನ್ಯಾಯಾಲಯ ಮತ್ತು ಕಾರಾಗ್ರುಹಗಳ ನಡುವೆ ಹೆಚ್ಚಿನ ಅಂತರಯಿರ ಬಾರದೆಂಬ ಕಾರಣಕ್ಕೆ ವಂದು ಜಾಗವನ್ನು ಆಯ್ಕೆ ಮಾಡಿ ಕಟ್ಟಡದ ಕೆಲಸಕಾರ್ಯಗಳನ್ನಾ ರಂಭಿಸಿದ್ದನು. ಅದರ ನ್ಯಾಯಮೂರ್ತಿ ಯಡಿಸನ್‌ರೊಂದಿಗೆ ಪ್ರಾಂತದ ನ್ಯಾಯ ಯಿತರಣಾ ಯವಸ್ಥೆ ಕುರುತು ಸುದೀರ್ಘ ಚರ್ಚೆ ಮಾಡಿದನು. ಹಿಂಗ ಆತಗೆ ಹೆಜ್ಜೆ ಹೆಜ್ಜೆಗೊಂದೊಂದು ದಗದಯಿತ್ತು. ತದನಂತರ ಅಲ್ಲಿಂದ ಹೊಂಟು ಬೊಬ್ಬಿಲಿನಾಗಿರೆಡ್ಡಿಯಿಂದ ಸಂತರಸ್ತಗೊಂಡ ಸಣದೊಡ್ಡ ಜಮೀಂದಾರರ ಯೋಗಕ್ಷೇಮ ಯಿಚಾರಣೆ ಮಾಡಿದನು. ಅವರೆಲ್ಲ ಬೊಬ್ಬಿಲಿಯ ಗುಣಗಾನ ಮಾಡುತ್ತಲೇ ತಾವು ನಿಕ್ರುಷ್ಟ ಸ್ಥಿತಿಗಿಳಿದ ಪರಿಯನ್ನು ಯಿವರಿಸಿದರು. ತಮ್ಮ ನಡುವೆ ಬೊಬ್ಬಿಲಿಯ ಕಡೆಯೋರು ಯಾರ್‍ಯಾರ ಯಿದ್ದಾರು ಯಂಬ ಕಾರಣಕ್ಕೆ "ದೊರೆ, ಪಾಪ.. ನಾಗಿರೆಡ್ಡೀನ್ಯಾಕ ಅನ್ನಬೇಕು.. ಆತ ದೇವರಂಥಾತ, ವಟ್ಟಿನಲ್ಲಿ ನಮ್ಮ ಕರುಮ" ಯಂದು ತಮ್ಮನ್ನು ತಾವು ಹಳಿದುಕೊಂಡರು. ರಾಯಲಸೀಮಾದ ರಾಬಿನ್ ಹುಡ್‌ನನ್ನು ನೋಡಬೇಕೆಂಬ ಆಸೆ ಬಲವತ್ತರಗೊಂಡವನಾಗಿ ಕಲೆಕ್ಟರು ಸಾಹೇಬನು ರೆಡ್ಡಿಯೊಂದಿಗೆ ಮಾತಾಡುವ ಯಿರಾದೆಯನ್ನು ಯಕ್ತಪಡಿಸಿದನು. ಯಾಕಂದರ ತನ್ನಂತೆ ಆತನ ವುದ್ದೇಶ ಸ್ರೀಮಂತರ ಮತ್ತು ಬಡವರ ನಡುವಿನ ಅಂತರವನ್ನು ಕಡಿಮೆ ಮಾಡುವುದೇ ಆಗಿರುವುದು. ಕುಂಪಣಿ ಸರಕಾರದ ಕಾನೂನು ಕಟ್ಟಳೆಗಳನ್ನು ವುಲ್ಲಂಘಿಸುತ್ತಿರುವುದೊಂದೇ ಆತನು ಮಾಡುತ್ತಿರುವ

ಅಕ್ಷಮ್ಯ ಅಪರಾಧವು. ಯಿದನ್ನು ಯಾರೂ ಸಯ್ಯನ್ನಲಕ ಬಾರದು. ತಾನು ಅವಯ್ಯನನ್ನು ಹೆಂಗಾದರು ಮಾಡಿ ಕಾಣಬೇಕಲ್ಲ.. ಆತನ ಸಮಸ್ಯೆ ತಿಳಕೋ ಬೇಕಲ್ಲ.. ಜೀವನ ಸ್ರವಂತಿಯೊಳಗ ಅವಯ್ಯ ಸಮ ವಕ್ಕಲಾಗಿ ಬದುಕೋ ಹಂಗ ತಾನಾತನ ಮನಸೊಲಿಸ ಬೇಕಲ್ಲ.. ಕೇಳಿದರ ಯಿವರವರು "ನಾಗಿರೆಡ್ಡಿ ಯಲ್ಲಿರುತಾನಂತ ಹೆಂಗ ಹೇಳೋದು? ವಂದೇ ಮಾತಲ್ಲಿ ಹೇಳಲಕಂದರ ಆ ಮಾನುಭಾವ ಸರುವಂತರಯಾಮಿ ದೊರ" ಯಂದು ಹೇಳಿದ್ದಕ್ಕೀತನು "ಹಂಗಾರ ಆತ ನಮ ಸಮಕ್ಷಮ ಯಿದ್ದಾನಂತೀರೇನು?" ಯಂದು ಪ್ರಸ್ನೆ ಮಾಡಿದ್ದಕ್ಕವರು "ಯಾಕಾಗಬಾರದು ಸಾಹೇಬ? ನಮ್ಮೊಳಗ ಯಿದ್ದರೂ ಯಿದ್ದಾನು" ಯಂದು ಜವಾಬು ನೀಡಿದರು. ಯೀ ರೀತಿ ಮಾತುಕತೆ ನಡೆದ ಸಭೆಯನ್ನು ಬರಖಾಸ್ತು ಮಾಡಿದ ಮನ್ರೋ ಸಾಹೇಬನು ತನ್ನೆಡಗಯ್ಯನ್ನು ಚೂಪನೆಯ ಗದ್ದದ ಮ್ಯಾಲಿಟ್ಟುಕೊಂಡು ಅರಗಳಿಗೆ ಕಣ್ಣುಮುಚ್ಚಿ 'ಸಂಭವಾಮಿ ಯುಗೇ ಯುಗೇ' ಯಂಬ ಸ್ರೀ ಕ್ರುಷ್ಣನ ಮಾತನ್ನು ಗ್ನಪ್ತಿಗೆ ತಂದುಕೊಳ್ಳು ತ್ತಿರುವಾಗ್ಗೆ...

ಅತ್ತ ಹರಪನಹಳ್ಳಿ ಪ್ರಾಂತದೊಳಗ ಯಿದ್ದ ಕಂಬತ್ತಳ್ಳಿ ಗ್ರಾಮವನ್ನಾಳುತಲಿದ್ದ ರಾಜ ಯಾಕುಂದೇನಾಯಕನನ್ನು ಪುರಾವೆ ಸಮೇತ ಹಿಡಿದು ಮುಂಡದಿಂದ ಬೇರುಪಟ್ಟ ರುಂಡವನ್ನು ಭಲ್ಲೇವಿಗೆ ಸಿಕ್ಕಿಸಿಕೊಂಡು, ಹಲಗೆ ತಮ್ಮಟೆ ಕಾಳಿಯೇ ಮೊದಲಾದ ರಣವಾದ್ಯಗಳನ್ನು ಭಾರಿಸುತ್ತ ಬೀದಿಬೀದಿಗುಂಟ ಮೆರವಣಿಗೆ ಮಾಡುತಲಿದ್ದ ಪ್ರಜೆಗಳ ರಣೋತ್ಸಾಹದಲ್ಲಿ ಸಯ್ನಿಕರೂ ಪಾಲುಗೊಂಡಿರುವುದನ್ನು ಹೇಳುತ್ತ ಹೋದರಽಽ

ಅತ್ತ ಕೂಡ್ಲಿಗಿ ಪಟ್ಟಣದೊಳಗಿನ ಯಿದ್ಯಾಮಾನಗಳು ವಂದಽ ಯರಡಽ.. ಕುದುರೆಡವಿಗೆ ಹೋಗಿ ಬಂದ ಲಾಗಾಯ್ತು ಜೆನ್ನಿಫರಮ್ಮ ಮಾನಸಿಕ ಕ್ಷೋಭೆಗೆ ಯರವಾಗಿದ್ದಳು. ಕಣ್ಣು ಬಿಟ್ಟಿದ್ದು ಸೊಪುನಗಳನ್ನು ಕಾಣಲಾಕ ಹತ್ತಿದ್ದಳು.. ನೂರಾರು ಕೂಸು ಕಂದಮ್ಮಗಳು ಆಕೆಯ ಯದೆಯೊಳಗ ನಾನಾ ರೀತಿಯಲ್ಲಿ ಪೀಡಿಸತೊಡಗಿದ್ದವು. ಆಕೆಯು ತನ್ನ ಚಾಚಿಗಳ ಸಂಕಟವನ್ನು ಅನುಭವಿಸಲಾರಂಭಿಸಿದ್ದಳು.. ತಾನು ಕುದುರೆಡವಿಗೆ ಹೋಗಿ ನೊಂದವರ ಸೇವೆ ಮಾಡುತ ಯಿರುವೆನೆಂದು ಗಂಡ ಯಡ್ಡವರ್ಡರನೊಂದಿಗೆ ವಾದ ಮಾಡುತಲಿದ್ದಳು. ತನ್ನ ಸಮಸ್ಯಾತ್ಮಕ ಪ್ರಿಯ ಪತ್ನಿಯ ಮನಸ್ಸಿನಿಂದ ಕುದುರೆಡವನ್ನು ವುತಾರ ಮಾಡಿಸುವ ಸಲುವಾಗಿ ಅಧಿಕಾರಿಯು ಫಾದರಿಗಳ

ಮೊರೆ ಹೊಕ್ಕಿದ್ದನು. ಗೋಲ್ವಾಯಿಸು, ಮುಕುಡೆಪ್ಪ ಅಲಿಯಾಸ್ ಪ್ರಾನ್ಸಿಸ್, ಹುಸೇನಪ್ಪ ಅಲಿಯಾಸ್ ಅಂಥೋಣಿಯೇ ಮೊದಲಾದ ಫಾದರಿಗಳು ಆಕೆಯ ಯದುರು ಬಯಬಲ್ಲು ತೆರೆದು ಪಠಣ ಮಾಡುತಲಿದ್ದರು.. ಅದೇ ಬಂಗಲೆಯ ಯಿನ್ನೊಂದು ಕಡೇಕ ಯಿದ್ವಾನ್ ರಾಘುವಯ್ಯಂಗಾರರು ಮಂದ್ರಗತಿಯಲ್ಲಿ ಗಿಟಾರ ನುಡಿಸುತಲಿದ್ದರು.. ಮತ್ತೊಂದು ಕಡೇಕ?

ಅದೇ ಪಟ್ಟಣದ ಮೂಲೆ ಮೂಲೆಯಲ್ಲಿ ವಲಸಿಗರನ್ನು ವಕ್ಕಲೆಬ್ಬಿಸುವ ಕಾರ್ಯದಲ್ಲಿ ನಿರತರಾಗಿದ್ದ ಸಿಪಾಯಿಗಳು ಲಾಠಿ ಪ್ರಹಾರ ನಡೆಸುತಲಿದ್ದರು.. ಯೇಟು ಬಿದ್ದು ಯಿಷ್ಟ ಲಿಂಗಗಾತುರದ ಬುಗುಟೆಯೊಂದು ಹಣೆ ಮ್ಯಾಲ ಕಾಣಿಸಿಕೊಂಡಿದ್ದ ಪರಿಣಾಮ ವಾಗಿ ಬುಗುಡಿ ನೀಲಕಂಠಪ್ಪನು ತನ್ನ ಪ್ರಿಯತಮೆ ತಿಲ್ಲಾನ ತಾಯಕ್ಕಳ ನಿವಾಸದ ಕಡೆ ಸುಳಿಯದೆ ನಾಕಾರು ದಿವಸಗಳು ಭೂತಕಾಲಕ್ಕೆ ಸರಿದಿದ್ದವು. ಆತನ ನೀರಿಕ್ಷೆಯ ಮಡುವಿನೊಳಗಿದ್ದ ತಾಯಕ್ಕ ತನ್ನ ಮಗಳನ್ನು ಕಣ್ಣಳತೆಯೊಳಗಿಡಲು ಅಹರ್ನಿಶಿ ಸ್ರಮಿಸುತ ಯಿಷ್ಟೊಂದು ಸವುಂದರ್ಯವನ್ನು ತನ್ನ ಮಗಳಿಗೊಬ್ಬಳಿಗ್ಯಾಕ ಧಾರೆಯರೆದೆ ಸಿವನೇ ಯಂದು ನಾನಾ ಯಿನ್ಯಾಸದಲ್ಲಿ ಸಂಕಟ ಅನುಭವಿಸುತಲಿದ್ದಳು. ನ್ರುತ್ಯ, ಸಂಗೀತ, ಪೂಜೆ ಪುನಸ್ಕಾರ, ಯೇದಾಂತ ಪಠಣ, ಕಸೂತಿ ವಗಯ್ರೆವಗಯ್ರೆಗಳಿಂದಾಗಿ ಚೆನ್ನಾಸಾನಿಗೆ ತನ್ನ ಸವುಂದರ್ಯದ ಬಗ್ಗೆ ತಾನು ಯೋಚನೆ ಮಾಡಲು ಪುರುಸೊತ್ತು ಸಿಗುತಲಿರಲಿಲ್ಲ.. ತಾಯಕ್ಕಳು ಯಂಥ ಮನಶ್ಯಾಸ್ತ್ರಗ್ನೆಯಿದ್ದಳೆಂದರ.. ತನ್ನ ನಿವಾಸದೊಳಗ ಕೆಲಸ ಬೊಗಸೆಯ ಸಲುವಾಗಿ ರುದ್ದರೂ, ಕುರೂಪಿಗಳೂ ಆದವರನ್ನು ಮಾತ್ರಅಮೂಲಾಗ್ರವಾಗಿ ನೇಮಿಸಿಕೊಂಡಿದ್ದಳು, ಮನೆಯ ಆಯಕಟ್ಟಾದ ಜಾಗಗಳಲ್ಲಿ ಕಡಿಮೆ ದರ್ಜೆಯ ಕನ್ನಡಿಗಳನ್ನು ಯಿಟ್ಟಿದ್ದಳು, ಅದೂ ಗುಟ್ಟಾತಿ ಗುಟ್ಟಾಗಿ.. ತನ್ನನ್ನು ತಾನು ನೋಡಿಕೊಳ್ಳುವ ಜುಲುಮೆಯಿಂದಾಗಿ ಚೆನ್ನಾಸಾನಿ ಕನ್ನಡಿಗಳಲ್ಲಿಣುಕಿಕೊಂಡು ಅಂಯ್ಯೋ ಯಂದಾಡುತ ಸ್ವಯ್ಯಾಮೋಹವನ್ನು ಕಳಕೊಂತಯಿದ್ದಳು.. ತನ್ನ ಮಗಳು ನೀರೊಳಗೆ ಪ್ರತಿಬಿಂಬ ನೋಡಿಕೊಂಡರೆ ಯಂದಾಲೋಚನೆ ಮಾಡಿ ತಾಯಕ್ಕ ಮನೆಮುಂದಿನ ಕೊಳದಲ್ಲಿ ತರಾವರಿ ಮೀನುಗಳನ್ನೂ, ಹಿಂದಲ ಕೊಳದಲ್ಲಿ ವುಭಯ ಚರ ಪಕ್ಷಿಗಳನ್ನೂ ಬಿಟ್ಟು ಯಚ್ಚರ ವಹಿಸಿದ್ದಳು. ಯಿಂಥ ವಾತ್ಸಲ್ಯಮಯಿ ಸಂಚುಗಳಿಂದಾಗಿ ಚೆನ್ನಾಸಾನಿಯು...

ಯಿತ್ತ ಕುದುರೆಡವು ಗ್ರಾಮದೊಳಗ ಮಂದಿ ಕಲ್ಲಾವುಲ್ಲಿಯಾಗಿಬಿಟ್ಟಿತ್ತು

ಸಿವನೇ.. ಪಟ್ಟಣಸೋಮಿಗಳು ತಮಗೆ ಫಲಾನಯಿಂಥ ಕಡೇಕ ಮೋಬಯ್ಯನ ಸರೀರವು ಬೀಡು ಬಿಟ್ಟಯ್ತೆ ಯಂದು ಸಾವಾಸಯ್ಯ, ವನುವಾಸಯ್ಯರು ಸುದ್ದಿ ಮುಟ್ಟಿಸಿದಲಾಗಾಯ್ತು ಹ್ಞಾ.. ಅದು ಆ ಕಡೇಲಿಂದ ಬರಲಿ, ಯಿದು ಯೀ ಕಡೇಲಿಂದ ಬರಲಿಯಂದು ತಲಾವಬ್ಬೊಬ್ಬರು ನೂರು ಜೊತೆ ಕಾಲು, ನೂರು ಜೊತೆ ಕಯ್ಯಿಗಳನ್ನು ಮುಡಕೊಂಡು ಬಿಟ್ಟಿದ್ದರು ಹ್ಞಾಂ, ಸಾಂಬವಿಯು ಮೋಬಯ್ಯನ ಸರೀರವನ್ನು ಪುಷ್ಪಕ ಯಿಮಾನ ಮಾಡಿಕೊಂಡು ಸೊರಗದ ಕಡೇಕ ಹೋಗಿದ್ದಿರಬೌದೆಂದೇ ತಾವೆಲ್ಲ ನಂಬಿದ್ದ ಪಟ್ಟಣದ ಭೋಪಾಲು ಮಂದಿ ನಂಬುಗೆ ಮತ್ತು ಅಪನಂಬುಗೆಗಳ ನಡುವೆ ಜೋಕಾಲಿ ಆಡುತಲಿದ್ದರು ಹ್ಞಾ. ಸಾವಾಸಯ್ಯ, ವನುವಾಸಯ್ಯಂದಿರನ್ನು ಪರಾಂಬರಿಸುತ್ತ ಯೇನು ಕಂಡಿರಿ? ಯೇನು ಬಿಟ್ಟಿರಿ? ಅಲ್ಲಿ ಮೋಬಯ್ಯನ ಸರೀರ ದೊರಕಲಿಲ್ಲಾಂದರೆ ನಿಮ್ಮನ್ನೀಮೂರ ಮಂದಿ ವುಳಗೊಡುವರೇನು? ಯಂದು ಗತ್ತು ಹಾಕತೊಡಗಿದರು. ಯೀ ಸೋದರರೀರ್ವರು ಸುಳ್ಳು ಹೇಳಿರಲಿಕ್ಕಿಲ್ಲ ಯಂಬ ಬಲವಾದ ನಂಬಿಕೆಯಿಂದ.....

ಯೀರೇಳು ಲೋಕಗಳ ಸಂಭರವು ತುಂಬಿದ ಪರಿಣಾಮವಾಗಿ ಕುದುರೆಡವು ಪಟ್ಟಣವು ವಂದು ಲಕ್ಷ ಕಣ್ಣುಗಳನ್ನು ವಡೆದು ಪಿಳಿಪಿಳಿಗುಟ್ಟಲಾರಂಭಿಸಿತು, ಯರಡು ಲಕ್ಷ ಕಯ್ಯಿಕಾಲು ಗಳನ್ನು ಮುಡಕೊಂಡು ಚಲನೆಗೆ ಹಾತೊರೆಯಲಾರಂಭಿಸಿತು, ವಂದು ಲಕ್ಷ ಬಾಯಿಗಳನ್ನು ಮುಡಕೊಂಡು ಮಾತಾಡಲಾರಂಭಿಸಿತು. ನೂರು ಗಾವುದುದ್ದದ ರೆಕ್ಕೆಗಳನ್ನು ಮುಡಕೊಂಡು ಕುಂತಳ ಸೀಮೆ ವುದ್ದಗಲಕ್ಕೂ ಹರಡಲಾರಂಭಿಸಿತು.

ಆ ಕಡೇಲಿಂದ ಹಲಗೆ, ತಮ್ಮಟೆ, ಡೊಳ್ಳು, ರುಮ್ಮಿ, ಸೊನಾಯಿ, ಬಾಜಾಭಜಂತ್ರಿಗಳ ನಾದ ಪ್ರವಾಹದೊಡನೆ ಆಗಮಿಸಿದ್ದು ತಡ ಆಗಲಿಲ್ಲ. ಮನೆಮನೆಯಿಂದ ಮುತ್ತಯ್ದೇರು ಕಳಸ ಹಿಡಕೊಂಡು ಹೊರ ಬಿದ್ದದ್ದು ತಡ ಆಗಲಿಲ್ಲ. ಮೋಬಯ್ಯನ ಪಾದಗಳು ನೆಲ ಸೋಂಕದಂತೆ ಮಾಡಿ ಕರೆತರುವ ಸಲುವಾಗಿ ಅಯಿವತ್ತೊಂದು ಮಂದಿ ಮಡಿವಾಳರು ನೂರಾರು ಜರತಾರಿ, ಪೀತಾಂಬರಿ ಸೀರೆಗಳನ್ನು ತಮ ತಮ್ಮ ಹೆಗಲ ಮ್ಯಾಲ ಯಿಳಿಬಿಟ್ಟುಕೊಂಡು ಸಜ್ಜಾಗಿ ಬಂದದ್ದು ತಡ ಆಗಲಿಲ್ಲ. ಯೇಳೆಂಟು ಮೂರುಗಳ ನೂರೆಂಟು ಜೋಗತೇರು ಚವುಡಿಕೆಗಳನ್ನು ಭಾರಿಸೂತ ವುಧೋ ವುಧೋ ಯಂದು ವುದ್ಗಾರ ತೆಗೆಯುತ್ತ ಬಂದದ್ದು ತಡ ಆಗಲಿಲ್ಲ.

ಅರಗಳಿಗೆ ಹಿಂದ ಯೀ ಕಡೆ ಮುಖ ಮಾಡಿ ನಿಂತಿದ್ದ ಪಟ್ಟಣ ಯಂಬುವ ಪಟ್ಟಣವು ಸಿಡೇಗಲ್ಲು ಹಾದಿ ಕಡೇಕ ಮುಖ ಮಾಡಿಬಿಟ್ಟಿತು. ಯಿಡೀ ಪಟ್ಟಣವು ವಂದು ಸರೀರವಾಗಿ, ವಂದು ನಾದವಾಗಿ ಹೊಂಟೂ ಹೊಂಟೂ ಹಳ್ಳಕೊಳ್ಳ ದಾಟಿತು, ವುತ್ರಾಜಿ ವನ ದಾಟಿತು. ಬಾಳೆಯ ತೋಟ ದಾಟುವಷ್ಟರಲ್ಲಿ ಕುರಿಕ್ಕಿ ನಿಂಗನ ಮಗಳು ಮಯ್ನೆರತಳು, ಜೋಳದ ಹೊಲ ದಾಟುವಷ್ಟರಲ್ಲಿ ವಂಗೀರಪ್ಪನ ಹೆಂಡತಿ ಮಾದೇವಿ ಕಾಲರೀತವೆಯಂದು ಕುಂತುಬಿಟ್ಟಳು. ಸಜ್ಜೆ ಹೊಲ ದಾಟುವಷ್ಟರಲ್ಲಿ ಚಂಡರಜ್ಜನು ಕೆಳಗಣ್ಣು, ಮ್ಯಾಲಗಣ್ಣು ಮಾಡುತ ವುರುಳಿ ಬಿಟ್ಟನು. ಹೊಸದಾಗಿ ಮದುವೆಯಾಗಿದ್ದ ವಡ್ಡರ ರಂಗಯ್ಯನು ತನ್ನ ಹೆಂಡತಿಯಿದ್ದ ಬಡೇಲಡಕಿನ ಕಡೇಕ ಹೆಜ್ಜೆ ಹಾಕಿದನು. ನವಣೆ ಹೊಲ ದಾಟುವಷ್ಟರಲ್ಲಿ ಸಿಂಗಾರಯ್ಯನ ಸೊಸೆ ಬಿಮ್ಮನಸಿ ವಡ್ಡೂರವ್ವಗೆ ಬ್ಯಾನೆ ಕಾಣಸಿಕಂತು. ಯಿಂಥಪ್ಪ ಹಲವು ಮುಟ್ಟು ಮಯ್ಲಿಗೆ, ಸಾವು, ಸೂತಕ, ಆಯಾಸ ಪ್ರಯಾಸ ವಾಂಥೆಗಳ ನಡುವೆಯೂ ಜನಸಾಗರವು ತನುವೆಂಬ ರೊಟ್ಟಿ ಸುಡುತ ಮುಂದ ಮುಂದಕ ಸಾಗಿತು.

ಬಿಕ್ಕಿ ಮರಡಿ ದಿಬ್ಬವ ಹತ್ತಿಯಿಳುದು ಸಿರಿಗನ ಯೀರಗಲ್ಲು ತಲುಪುತ್ತಲೇ ಮೋಬಯ್ಯ ತಂದೆ ಯಲ್ಲದಿಯಾ.. ಯವ್ವಾ ಸಾಂಬವಿ ಯಲ್ಲದೀಯಾ ಯಂದಂಗಲಾಚಲಾರಂಭಿಸಿತು. ವಂದು ಮಾತss ವಂದು ಕಥಿಯಾsss ವಂದೊಂದು ಸಬುಧಮೂವಂದೊಂದು ದುಂಬಿಗಳಾದವು. ಜನಸಾಗರ ಮಾಡುತಲಿದ್ದ ಆರ್ತರವದೇಟಿಗೆ ಸಚರಾಚಗಳು ಪತರಗುಟ್ಟಲಾರಂಭಿಸಿದವು. ವಾಯುದೇವನ ಯಿಯಿಧ ರೂಪಗಳು ಯಲ್ಲಂದರಲ್ಲಿ ಬಿಚ್ಚಿಟ್ಟುಕೊಂಡವು. ಗಿಡಮರ ತ್ರುಣಲತೆ ಬರೆದ ಚಿತ್ರಗಳಾಗಿಬಿಟ್ಟವು. ವಾತಾವರಣದ ಮೂಕ ಯಿಸುಮಿತ ಹಾದಿಗುಂಟ....

ಅಲ್ಲೊಂದು ಹುಳವೇ.. ನರಹುಳವೇ! ಸಿವ..ಸಿವಾ.. ಭೀಕರ ಮೌನ.. ಅಂಥ ಮವುನದೊಳಗ ಯಿಹಲೋಕದ ವುಸಾಬರಿಯೇ ತನಗಿಲ್ಲಯಂಬಂತೆ.. ಪಾಳು ಮಂಟಪದೊಳಗ ವಂದು ಕಂಭಕ್ಕೆ ತಲೆಕೊಟ್ಟು ಹೆಂಗೆ ಆರಾಮಸೀರು ಮಲಗಿಕೊಂಡಿರುವನಲ್ಲಾ.. ಪನ್ನಗ ಸಯನನಂತೆ ತನ್ನೋಟಕ ತಾನು ಆನಂದ ಅನುಭೋಸುತ್ತಿರುವನಲ್ಲಾ.. ತನ್ನ ಸುತಮುತ್ತ ಯೇನು ನಡೀತಾ ಆಯ್ತೆ ಅಂಬುದರ ಪರಿಗನ್ನಾನ ಅಯ್ತೋ ಯಿಲ್ಲವಷ್ಟೇ? ನೀರು ಗುಡಾಣದೊಳಗಿನ ಗ್ರುತ ಬಿಂದುವಿನೋಪಾದಿಯಲ್ಲಿ ಅಳ್ಳಾಡದಂಗವನೆ.. ಅಲಲಾ.....

ಹ್ಹಾ...ಹ್ಹಾ ಅಗೋ ಅಲ್ಲಿ ಮೋಬಯ್ಯಾ....
ಹ್ಹಾ...ಹ್ಹಾ ಯಿಗೋ ಯಿಲ್ಲಿ ಮೋಬಯ್ಯಾ....

ಬೆಲ್ಲದ ಕಣ್ಣಿಗೆ ಕೋಟಿ ಯಿರುವೆ ಮುತ್ತುವಂತೆ.. ಮಾವಿನ ಹಣ್ಣಿಗೆ ನೊಣ ಕೋಟಿ ಮುತ್ತುವಂತೆ.. ನವಜಾತ ಸಿಸುವಿಗೆ ತಂದೆ ತಾಯಿ, ಬಂಧು ಭಗಿನಿ ನೆಂಟರಿಷ್ಟರು ಮುತ್ತುವಂತೆ.. ಮುಟು ಮುಟ್ಟಿದ ಜನರು ತಮ ತಮ್ಮ ಸರೀರಗಳಿಂದ ಪಂಚೇಂದ್ರಿಯಂಗಳನು ಕಿತುಕಿತ್ತಿಡುತ ಅವಯ್ಯಗ ಸಿಂಗಾರ ಮಾಡಿದರು. ತಮ ತಮ್ಮ ರುದಯಂಗಳನು ಹಾರ ಮಾಡಿ ಅವಯ್ಯನಿಗೆ ಹಾಕಿದರು. ತಮ ತಮ್ಮ ಯದೆಯೊಳಗಿಂದ ದಯವ ಸಂಬಂಧೀ ನೆನಪುಗಳನು ತೆಗೆದು ಪತ್ರೆ, ಪುಷ್ಪ ಮಾಡಿ ಯೇರಿಸಿ ಅವಯ್ಯನನ್ನು ಅರ್ಚಿಸಿದರು. ತಮ ತಮ್ಮ ಕಣ್ಣೊಳಗಿದ್ದ ಬೆಳಗನು ಬಗೆದು ಆರತಿ ಮಾಡಿ ಬೆಳಗಿದರು.. ತಮ ತಮ್ಮ ಬಾಯೊಳಗಿನ ನಾಲಿಗೆಗಳಿಂದ ಗಂಟೆ ಜಾಗಟೆಗಳನ ಬಡಿದರು... ತಮ ತಮ್ಮ ಮೂಗುಗಳೊಳಗಿನ ವುಚ್ಚುವಾಸ, ನಿಚ್ಚುವಾಸಗಳನೆ ಹಾಡುಗಳನು ಮಾಡಿ ಹಾಡಿದರು.. ಸೂತಕದೊಟ್ಟಿಗೆ ಹುಟ್ಟಿರುವ ತಾವು ಪಯಿತ್ರಮೋಬಯ್ಯನ ಸರೀರವನ್ನು ಮುಟ್ಟಿದರೆಲ್ಲಿ ಸುಟ್ಟು ಭಸುಮ ಆಯಿತೀಮೋ ಯಂಬ ಭಯಭೀತಿ, ತಟ್ಟಿದರೆಲ್ಲಿ ಸಿಲಾಯಿಗ್ರಹಗಳಾಗತೀಮೋ ಯಂಬ ಆತಂಕದಿಂದ ಯಾರೊಬ್ಬರು ಮುಂದಕ ಜರಗದಾದರು.. ಹಿಂದಕ ಸರಕಳ್ಳದಾದರು. ಮೊದಲೇ ಯಿದು ನರಜಲುಮ.. ನಷ್ಟ ಆಯಿಯಿತಂತ ಹೆದರಿದಲ್ಲಿ ಮುಂದಿನ ಮಂಗಳ ಕಾರ್ರ್ವೇವುಗಳು ಸುಸೂಸ್ತರವಾಗಿ ನಡೆಯುವ ಪರಿಯೆಂತು ಸಿವನೇ? ನೋಡಿದೊಡೆಲ್ಲಿ ಕಣ್ಣ ಕಳಕೊಂಡೇವು?... ಕೇಳಿದೊಡೆಲ್ಲಿ ಕಿವಿಗಳನ ಕಳಕೊಂಡೇವು? ನುಡಿದಾಡಿದಲ್ಲಿ ಬಾಯುನ ಕಳಕೊಂಡೇವು? ಮುಂದಕ್ಕಡಿಯಿಟ್ಟೊಡೆಲ್ಲಿ ಕಾಲು ಕಳಕೊಂಡೇವು? ಯಂದು ಮುಂತಾಗಿ ಯಾರಿಗವರು ಸಮುಸಯ ಪಟ್ಟರಾಗುವುದಾ?... ಹಂಗೆ ಬಂದಿರೋ ಸರೀರ ಹಿಂಗs ಹೊಂಟು ತಾಯಿಯ ಪಾದ ಸೇರಿಕೊಂಡರದು ಪೂರುವ ಜಲುಮದ ಪುಣ್ಯ ಯಂದು ತಿಳಕೊಂಡರ ಲೇಸಾಯಿತದ ಯಂದು ಹಿರೀಕರು ಬುದ್ಧಿ ಹೇಳುತ ಮಳ್ಳ ಮಂದಿಯನು ಹುರಿದುಂಬಿಸುತಾರೆ ಸಿವನೇ.. ಮೋಬಯ್ಯನನ್ನು ಹೊಂಡು ಹೊಂಡೂಂತ ಪರಿಪರಿಯಿಂದ ಕೇಳಿಕೋತಾರ.. ಆದರವನು ತುಟಿ ಪಿಟಕ್ಕನುವಲ್ಲ.. ಮುನುಸುಕೊಂಡವನಂತೆ ಮಗ್ಗುಲು ಬದಲಾಯಿಸುತವನೆ.. ಅವನೊಳಗ ರವುಸ ತುಂಬಲಕಂತ ಜೀವಮೂತ, ಸಂಜೀವ, ಕೆಂಧೂಳಿಗರೇ

ಮೊದಲಾದವರು ಕಸುವು ಕಿತ್ತು ಹಲಿಗೆ ಭಾರಿಸಲಾರಂಭಿಸಿದ್ದೇನು? ವುರುಪ, ಕುರುಪ, ಯರಪರೆಂಬ ತ್ರಿವಳಿ ಸೋದರರು ಕಸುವು ಕಿತ್ತು ಕಹಳೆ ಮೂದಿದುದೇನು? ಸವುಡ, ಕಿವುಡ, ಮರಿಯ, ಕರಿಯ, ಬರೆಯ, ಬಳಪರೇ ಮೊದಲಾದ ಛಲವಾದೇರು ಸೊನಾಯ ಮೂದಿದುದೇನು? ಯೇತಲ, ಪೀತಲ, ಅಯ್ಯಲ, ಬಯ್ಯಲರೇ ಮೊದಲಾದವರು ರುಮುರುಮು ರುಮ್ಮಿ ಭಾರಿಸಿದುದೇನು? ತಡಿಕೆವ್ವ ಮಡಕೆವ್ವ, ಕೆಸರವ್ವ, ತಂಗಳವ್ವ, ತಿಂಗಳವ್ವಂದಿರೇ ಮೊದಲಾದ ಜೋಗತೇರು ತಮ ತಮ್ಮ ಬಗಲ ಚವುಡಿಕೆಗಳನ್ನು ಭಾರಿಸೂತ ಸಿಪಾಯಿಗಳು "ಯೇಳಯ್ಯಾ ಮೋಬಯ್ಯ ಯೇಟೊತ್ತು ಸುಖನಿದ್ದೆ" ಯಂಬ ಛಂದನೆಯ ಹಾಡುಗಳನ ಹಾಡಿದುದೇನು? ನಿಂಬೆಹಣ್ಣಿನ ಪೂಜೆ, ಬನ್ನಿ, ಚೆಲುವ, ವುತ್ರಾಣಿ ಪೂಜೆಗಳನು ವಂದರ ಮ್ಯಾಲೊಂದರಂತೆ ಮಾಡಿದುದೇನು? ಕಣ್ಣುಗಳಿಂದ ಹನಿ ಹನಿ ವಕ್ರಾಣಿ ತುಂಬಿಸಿದುದೇನು? ಮಲಕ್ಕೊಂಡವರನ ಯಬ್ಬಿಸಬಹುದು ಯಚ್ಚರಯಿರೋರನ ಯಬ್ಬಿಸಲಕಾತದೇನು?...

ಯಿವರು ಯಬ್ಬಿಸಲಕಾದೀತಾ? ಅವಯ್ಯನು ಯದ್ದೇಳಲಕಾದೀತಾ? ಮಂದಿಯಂಬುವ ಮಂದಿ ತಮ ತಮ್ಮ ಮುಖಗಳ ಮ್ಯಾಲ ಚಿಂತಿಯೆಂಬ ಹುವ್ವ ಮುಡಕೊಂಡಿತು.

ಕುದುರೆಡವ ವ್ಯಾಲ ಮೋಬಯ್ಯ ಮುನುಸುಕೊಂಡವನೋ, ಮೋಬಯ್ಯನ ಸರೀರವೇ ಮುನುಸುಕೊಂಡಯ್ತೋ, ಸರೀರದೊಳಗ ವಸ್ತಿ ಮಾಡಿರುವ ಆದಿ ಸಗುತಿ ಮುನುಸು ಕೊಂಡವಳೋ, ತಮ್ಮದು ಯೇನು ಕರುಮ ಯಿದ್ದೀತು? ತಾಯಿಯ ಮುನುಸು ಬಗೆ ಹರಿಯಲಕಂದರ ತಾವೇನು ಮಾಡಬೇಕು? ಬಲಿ ಬಗಸಿದಲ್ಲಿ ತಾವು ತಮ ತಮ್ಮ ಸರೀರಗಳನ ಅಡ್ಡಡ್ಡ, ವುದ್ದುದ್ದ ಕುಯ್ದು ಬಲಿ ಕೊಡತೇವಿ ತಾಯೇ.. ಅಂದರೂ ಯಿವಯ್ಯನ ರುದಯ ಕರಗವಲ್ಲದಲ್ಲಾ.. ಅಯ್ಯೋ ತಾಯಿ ತಾವೇನು ಮಾಡಬೇಕೆಂಬುದನ್ನಾರ ಅಪ್ಪಣೆ ಕೊಡುವಲ್ಲಿಯಲ್ಲಾ.. ಸಾವುರ ಸಂಖೇಲಿದ್ದ ಮಂದಿ ವಂದು ಬಾಯಾಗಿ ಗಲಗಲಾ ಅನಕಂತಿರುವಾಗ್ಗೆ, ಅದರ ದುಕ್ಕದ ಕಡಲು ವುಕ್ಕಿ ಸುತ್ತನ್ನಾಕಡೇಕ ಹರಿತಿರುವಾಗ್ಗೆ ತ್ರುಣ ಲತೆಗಳು ಬಾಡಿದವು, ಹುವ್ವುಗಳು ಬಾಡಿ ಬಸವಳಿದವು, ಯಲ್ಲಿ ಸದರಿ ಪ್ರದೇಶ ಬರತಗುಲಿ ಬೆಂಗಾಡಾಗುವುದೋ ಯಂದು ಭೂಮ್ತಾಯಿ ಹವ್ವಾರಿದಳು.

"ಯದ್ದೇಳು ಮಾರಾಯ.. ಯದ್ದು ಹೊಂಡೋ ಮಾರಾಯ.. ನಮ ಜಗೇವನ ಕಬ್ಜಾ ಮಾಡಿಕೊಂಡೇಸು ದಿನವಾದುವು, ಯೇನು ಕಥಿ?" ಎಂದು

ಕಾಗೆಮ್ಮ, ಗುಬ್ಬೆಮ್ಮ ಸಾಪಳಿಸುತವರೆ ಸಿವನೇ...

ವಾರೆಗಣ್ಣೀಲಿ ನೋಡುತಲೂ, ಕಿವಿಯಾರೆ ಕೇಳಿಸಿಕೊಳ್ಳುತಲೂ ನಿದುರೆ ಮಾಡುತಲವನೆ ಮೋಬಯ್ಯ...

ಗಲಗಲಾಂತ ಮರುಗುತಲಿದ್ದ ಮಂದಿಯೊಳಗಿಂದ ವಡಮೂಡಿದ ಬಲಿದಾನದೋರ ಮನ್ತನದಿಂದ ಬಂದಿದ್ದಂಥವನಾದ ಕರುಪ್ಪಳಿಯು "ತಾಯೇss ನೀನು ಹೊಳೆಗೊಂಟು ನನ್ನ ತಾಯ್ನೆಲವಾದ ಕುದುರೆಡವಳಗ ನೆಲಗೊಂಡ ಮರುಗಳಿಗೇಲಿ ನಾನು ನಿನ್ನ ಪಾದಕ್ಕರುಪಿತ ನಾಗುವೆನು" ಯಂದುಗ್ರಅರಕೇಯ ಮಾಡಿಕೊಂಡು ಬಿಡಲು, ಮೋಬಯ್ಯ ಆನಂದ ವಂದಿಗನಾಗದೆಯಿರಲಿಲ್ಲ.. ತಾನು ಕಂಡ ಕಣಸು ನಿಜವಾಗತಯ್ತೆ, ತನ್ನ ಕರುಮಂಟ ಸರೀರಕ್ಕೆ ಸಾವುರಾರು ಮಂದಿ ಕಯ್ನ ಮುಗೀತಾರೆ.. ಕಾಲೀಗೆ ಬೀಳುತಾರೆ.. ಹ್ಹಾ..ಹ್ಹಾ..ಸಾಂಬವಿಯೇ.. ಯಂದನಕಂತ ಮಲಗವನೆ ಮೋಬಯ್ಯ.. ಯದ್ದು ಕುಂಡುರಬೇಕೆಂಬ ಯಿಚ್ಚ ತನಗೇನೋ ಯಿತ್ತು.. ಆದರ ಯೇಳಲಕ ಆಗುತಾಯಿಲ್ಲ.. ಯಾರ್‍ಯಾರು ಯೇನೇನು ಮಾಡುತಾರ ಯಂಬ ಕುತೂಹಲ ಬೇರೆ.. ಹಂಗ ಮಲಗವನೆ ಮೋಬಯ್ಯ..

ರೋಸಿಕೊಂಡ ಮಂದಿ ನಡುವಿದ್ದ ಬಡಕಲೋರ ಕರೆಲ್ಲವ್ವ ವಂದು ಹೆಜ್ಜೆ ಮುಂದೆ ಬಂದು ತನ್ನ ಸರೀರವನ್ನು ಮೂಪ್ಯಾಡಿದೊಡನೆ ಅವಯ್ಯನು ಸಾವುರ ವರುಷಂಗಳ ನಿದ್ದೆ ಮಾಡಿದವನಂಗೆ ಮೆಲುಮೆಲ್ಲಗೆ ಯದ್ದು ಕೂಕಂಡ.. ವಡನೆ

*ಸಿವನ್ನಾಯ ಪಾರೋತೀ ಪತಿ ಹರಹರ ಮಾದೇವss*
*ಸ್ರಿಮದ್ರಮಣ ಗೋಯಿಂದಾ ಗೋಯಿಂದss*
*ಯಾಕುಲ್ದೆ ಜೋಗ ವುಧೋ ವುಧೋss*

ಯದ್ದು ಕೂಕಂಡವಯ್ಯನು ವುಜ್ಜಿ ಥಳಥಳ ಮಾಡಿ ಕಣಬಿಟ್ಟು ಸುತಮುತ್ತ ನೋಡುತಾನೆ.. ಜಗೇವು ಅರ್ಥವಾಗುತಾ ಯಿಲ್ಲ ಯಂಬಂತೆ.. ಮಂದಿ ಅರ್ಥ ವಾಗುತಾಯಿಲ್ಲ ಯಂಬಂತೆ.. ತನ್ನ ಮಾರೀಯ ಸೊಟ ಸೊಟ್ಟ ಮಾಡಿಕಂತವನೆ.. ಹಿಂದಕ ಸರಕಂಡಂಗೆ, ಮುಂದಕ ಜರುಗಿದಂಗೆ ಮಾಡುತವನೆ.. ಯಡಕ್ಕೊರಳಿ ನೋಡಿದಂಗೆ ಮಾಡುತವನೆ.. ಬಲಕ್ಕೊರಳಿದಂಗೆ ಮಾಡುತವನೆ..

ಆದರ ಸುತ್ತನ್ನಾ ಕಡೇಲಿದ್ದ ಸಾಂಬವಿಯ ಅಯ್ಲು ಹಚಕೊಂಡಿದ್ದ ಮಂದಿ ಅವಯ್ಯನ ದಿವ್ಯ ನೋಟುಗಳಿಗೆ, ಸರದಾಟ, ಮುಲುಕಾಟ, ಜರುಗಾಟಗಳಿಗೆ

ತಲಾ ವಂದೊಂದು ಅಲವುಕಿಕ ಅರ್ಥವ ಕಟ್ಟುತಲಯ್ತೆ ಸಿವನೇ....

ಆರು ಬಾವಿಯಿಂದ ಆರು ಕೊಡ ಸೀವುದಕವನ್ನು, ಮೂರು ಬಾವಿಯಿಂದ ಮೂರು ಕೊಡ ವಗರುದಕವನ್ನು ತಂದು ಅವಯ್ಯನ ತಡಕಲಂತ ಸರೀರಕ್ಕೆ ಮಜ್ಜಣ ಮಾಡಿಸಿತು, ವಂಭತ್ತು ಗಜ ದೋತರವನ್ನು ಅವಯ್ಯನ ಬಡಕಲ ಸರೀರಕ್ಕೆ ವುಡುಸಿತು.. ಹದಿನಾರು ಮೊಳ ಜೆರಿ ರುಮಾಲನ್ನು ಅವಯ್ಯನ ತಲೆಗೆ ಸುತ್ತಿತು.. ಪಾದಕ್ಕೆ ಥಡಾವು ತೊಡಿಸಿದ್ದೇನು? ಹುವ್ವ ಮಾಲೆಗಳನ ಕೊಳ್ಳೀಗೆ ಹಾಕಿದ್ದೇನು? ಭಂಡಾರ ಲೇಪನವ ಮಾಡಿದ್ದೇನು? ಸಾವುರ ಮಂದಿ ವಂದು ಸೊರವಾಗಿ ಹಾಡಿ ಪಾಡಿದ್ದೇನು? ಆಮ್ಯಾಲ ಸಿವನ್ನಾಮಪಾರೋತಿ.. ಅಂತ ಕೂಗಿದ್ದೇನು? ಸತಾಪರಾಧವ ಮನ್ನಿಸವ್ವಾ.. ದಯ ಮಾಡಿಸಿ ಕುದುರೆಡವನ್ನ ಪಾವನ ಮಾಡವ್ವಾ.. ನೀನು ಪಾದದುಂಗುಟದಿಂದ ಹೇಳದ್ದನ್ನ ತಲೇಲಿ ಹೊತ್ತು ಮಾಡತೇವಂತ ಕೇಳಿಕೊಂಡಿದ್ದೇನು? ಆಸ್ತಿ ಕೊಡತೇವಂತ ಹೇಳಿದ್ದೇನು? ಪಾಸ್ತಿಕೊಡತೇವಂತ ಕೇಳಿಕೊಂಡಿದ್ದೇನು. ಹಂಗssನ ಮುಂದುವರಿದು ಬಗಸಿದೀ ಅಂದರ ನೆತ್ತರ ಧಾರೇನ ಹರಸತೀವಿ ಯಂದು ವಾಗ್ದಾನ ನೀಡಿದ್ದೇನು? ಪಟ್ಟಣದ ಕಡೇಕ ಮಕ ಮಾಡು ತಾಯೇ ಯಂದು ದಯ್ನಾಸ ಬಿದ್ದು ಕೇಳಿ ಕೊಂಡಿದ್ದೇನು?

ಜುಲುಮಿ ಮ್ಯಾಲ ಜುಲುಮಿ ಮಾಡಿಸಿಕೊಂಡ ಮೋಬಯ್ಯ ತನ್ನೋಟಕ ತಾನss ಅದೂ ನರ ಮಾನ್ನವರಿಗೆ ಅರ್ಥವಾಗದ ಭಾಷೆಯೊಳಗ ಮಾತಾಡಿಕೊಳ್ಳಲಾರಂಭಿಸಿದ.. ಅದನ್ನು ನೋಡಿದ ಭಕುತಾದಿಮಂದಿ ಸಾಂಬವಿ ಕೂಡೆ ಮಾತಾಡಿಕೊಳ್ಳುತ್ತಿರುವನೆಂದೇ ಕಲ್ಪನ ಮಾಡಿಕೊಳ್ಳದೆಯಿರಲಿಲ್ಲ.. ಸೊಲುಪೊತ್ತು ಆದ ಮ್ಯಾಲ ಅವಯ್ಯ ಜಯ್ ಜಗದಂಬೆ ಯಂದನಕಂತ ಯದ್ದು ನಿಂತೊಡನೆ ಯಾವತ್ತೂ ಮಂದಿ ಮಾಡಿದ ಹರುಷೋದ್ಗಾರ ಮುಗುಲು ಮುಟ್ಟಿತು ಸಿವನೇ.. ವಬ್ಬೊಬ್ಬರ ಯದೆಯೊಳಗೆ ಹರುಷದ ಹೊಳೆಗೆ ನೆರೆಬಂತು. ತಮ್ಮನ್ನು ತಾವು ತಡಕೊಳ್ಳದಾದರು. ತಾಯೀ ತಕ್ಕಾ ತಕ್ಕಾ ಅಂತ ವುಗುರುಗಳಿಂದ ತಮ ತಮ್ಮ ಯದೆಗಳ ವ್ಯಾಲ ಗೀರಿಕೊಂಡು ರಗುತ ರಂಪಾಟ ಮಾಡಿಕೊಂಡರು. ಮಳ್ಳರಂತೆ ಮರಗಿಡಗಳನ್ನೇರಿ ಕೊಂಬೆ, ರೆಂಬೆಗಳಿಗೆ ಜೋತು ಬಿದ್ದರು. ಯಮುಕೇಮಲೆಯನು ಸರಸರಾಂತ ಯೇರಿ "ಕೇಳಿರೆಪೋss ಕೇಳಿರಿ.. ಯಾರೇಳು ಲೋಕಗಳಿಗೆ ಮಾತೆಯಾಗಿರುವಂಥ ಸಾಂಬವಿಯು ನಮ್ಮ ಕುದುರೆಡವಿಗೆ ದಯಮಾಡಿ ಸಲಯ್ದಾಳೆ" ಯಂದು ಯಂಟೂ ದಿಕ್ಕಿಗೆ

ಕೇಳಿಸುವಂತೆ ಕೂಗಿದರು. ದುಡು ದುಡನೆ ಮೋಡಿದ ಬೊಬ್ಬುಳಿಯು ಯಿರಗಲ್ಲನ್ನವುಚಿಕೊಂಡು “ಸಿರಿಗರಾಯ.. ನೀನೀಗ ಬೊದುಕಿರಬೇಕಿತ್ತು ಕನಪ್ಪಾ.. ತಾಯಿ ಹೊಂಡುವ ಪರಿಯ ನೋಡುವ ಸಲುವಾಗಿ...” ಯಂದು ಗದ್ಗದಿತನಾದನಲ್ಲಿ...

ಮೋಬಯ್ಯನ ಸರೀರವು ಕುದುರೆಡವ ತುಂಬುವುದೆಂದರೆ ಸೊರಗಲೋಕವೇ ತಮ್ಮ ಪಟ್ಟಣ ಪ್ರವೇಶ ಮಾಡಲಿರುವುದೆಂದೇ ಲೆಕ್ಕ.. ಆ ಸುದ್ದಿಯು ಮ್ರುಗಸಿರ ಮಳೆಯಂತೆ ಜಿಟಿಜಿಟಿ ಹಿಡಕೊಂತು, ಹಿಡಕೊಂಡದು ಹಳ್ಳಗಳನ್ನು ನುಂಗುವ ಹೊಳೆಗಳಂತೆ.. ಹೊಳೆಗಳನ್ನು ನುಂಗುವ ನದಿಗಳಂತೆ.. ನದಿಗಳನ್ನು ನುಂಗುವ ಸಮುದ್ರಗಳಂತೆ.. ಸಮುದ್ರಗಳನ್ನು ನುಂಗುವ ಸಾಗರಗಳಂತೆ.. ಜನ ಯಂಟೂ ದಿಕ್ಕುಗಳಿಂದ ಹರಕೋತ ಹರಕೋತ ಅಲ್ಲಿಗೆ ಬಂದರು ಸಿವನೇ....

ನೂರಾರು ದೀವರರ ಕಯ್ಲಿದ್ದ ತುಪ್ಪದ್ದೀವಿಟಿಗಳು ದಗ್ಗಂತ ವುರಿದ ಬೆಳಕಲ್ಲಿ ಗಂಟಲಯ್ಯನು ಪ್ರಜ್ವಲಿಸಿದ ಗುಗ್ಗುಳದ ಬೆಳಕಲ್ಲಿ.. ಸಾವುರಾರು ಕಣ್ಣುಗಳ ಬೆಳಕಲ್ಲಿ ಮೋಬಯ್ಯನ ಸರೀರವು ನವರತುನ ಖಚಿತಮೋಯಂಬಂತೆ ದೇದಿಪ್ಯಮಾನವಾಗಿ ಕೋರಯಿಸಲಾರಂಭಿಸಿದೊಡನೆ ಹ್ಹಾ.. ಹ್ಹಾ.. ಸಾಂಬವೀ.. ಹ್ಹಾ.. ಹ್ಹಾ.. ದುರುಗೇ.. ಯಂದು ಮುಂತಾಗಿ ಗಂಟಲಯ್ಯನು ತನ್ನ ರಣಗಂಟಲನ್ನು ತೆರೆದೇಟಿಗೆ..

ಬಗೆ ಬಗೆ ಹುವ್ವುಗಳಿಂದಲೂ, ಯಾಲೆ ತೊಪ್ಪಲಿಂದಲೂ, ಗಿಡಗರಿಗಳಿಂದಲೂ, ಮುತ್ತಿನ ಗೊಂಡೇವುಗಳಿಂದಲೂ ಸಿಂಗಾರ ಮಾಡಲ್ಪಟ್ಟಂಥ ಪಲ್ಲಾಕಿಯು ಥಳಥಳ ಹೊಳೆಯಲಾರಂಭಿಸಿತು. ಅದರೊಳಗ ಯೇನೇನಿತ್ತು..? ಯೇನೇನಿರಲಿಲ್ಲ..?

ಮೋಬಯ್ಯ ಪಲ್ಲಾಕಿಯೊಳಗೆ ಪವಡಿಸುವ ಕಾಲಕ್ಕೆ, ಪವಡಿಸಿ ಮೂರ ಕಡೆ ಬಿಜಯಂ ಗಯ್ಲಿರೋ ಕಾಲಕ್ಕೆ ಯಾರ್‍ಯಾರು ಯಾವ್ಯಾವ ಕಾರ್‍ಯೇವುಗಳನ ನಿಭಾಯಿಸಬೇಕು? ಯಾರ್‍ಯಾರು ಹೆಂಗೆಂಗೆ ನಡಕೋಬೇಕು? ಯಂದು ಮುಂತಾಗಿ ಪಟ್ಟಣ ಸೋಮಿಗಳು ಅವರವರಿಗೆ ನಿರ್ದೇಸನ ನೀಡುತ್ತಲೇ ಜನಸ್ತೋಮ ವುಘೇ ವುಘೇ ಅಂತು. ವುಧೋ ವುಧೋ ಯಂಬ ನಿನಾದವು ಮುಗುಲ ಹುದುವಿನಲ್ಲಿ ನಾದದ ನದಿಯಾಗಿ ಹರಿಯಿತು. ನೂರಾರು ವಾದ್ಯಗಳ ಮೊಳಗು ಕುಂತಳ ಪ್ರಾಂತದಾದ್ಯಂತ ಹರಿದಾಡಿತು.

ತಂಬೂರಿ ತೂಕದ ಮೋಬಯ್ಯನು ವಂದೊಂದೆ ಹೆಜ್ಜೆ ಯಿಡುತ ಸಮೀಪಿಸಿ ಪಲ್ಲಾಕಿಯನ್ನು ಪ್ರವೇಶ ಮಾಡಿ ಸರೀರ ಚೆಲ್ಲಾಡಿದ....

ಪಯಿತ್ರಮೂ, ಗುರುತರಮೂಆದ ಪಲ್ಲಾಕಿಯನ್ನು ಹೋರುವ ಮಂಗಳ ಕಾರ್ಯೇವಿಗೆ ನಿಗದಿ ಮಾಡಲ್ಪಟ್ಟಿದ್ದ ಸಮಪ್ರಮಾಣದ ಪಯಲುವಾನರಾದ ಸಿವರಾಯ, ಯತ್ತಿನ ತಿಮ್ಮ, ತುಪ್ಪದ ಯರಬಾಲ, ಕನ್ನಪ್ಪರೇ ಮೊದಲಾದ ಹನ್ನೆಲ್ಡು ಮಂದಿಯು ಸ್ವಭಾವತಹ ಕಚ್ಚೆಬಾಯಿ ಭದ್ರವುಳ್ಳಂಥವರು ಮಿಂದು ಮಡಿಯುಡಿಯಿಂದ ಬಂದರು..

*ಆದಿಸಗುತಿ ಮಾಯಕಾರ್ತೆ ಸಾಂಬವಿsss*
*ನಿನ್ನ ಕಂಡವರಿಲ್ಲ ಸರುಪಾನ ಅರಮಲ್ಲಿsss*
*ದೀಪಾದ ಮಲ್ಲಿಯಾಗಿ ವುರಿಯೂತsss*

ಯಂದು ಸೊರಯತ್ತಿ ಹಾಡ ತೊಡಗಿದಳು.. ವುತ್ರಾಣಿ ಕಡ್ಡಿ ಗಾತುರದ ಪಕ್ಕೀರವ್ವ ಅದಕ್ಕೆ ದನಿ ಜೋಡಿಸದೆಯಿರಲಿಲ್ಲ....

ಹೋ ಹೋ ಕುದುರೆಡವ ಸಾಮ್ರಾಗ್ನಿ ನಿನಗಾರು ಸರಿಯವ್ವಾ.. ಸರಿ ಅಂದವರ ಹಲ್ಲು ನಷ್ಟ ಆಗಲವ್ವಾ.. ಭೋಪರಾಕ್ ಯಂದು ವಕ್ಕೊರಲಿನಿಂದ ಕೂಗಿತು ಜನಾರಣ್ಯವು.. ಮೇರು ಪರುವತದೊಳಗ ಮತ್ತೊಂದು ಪರುವತವು ಸೇರಿಕೊಂಡಂಗೆ ಆ ಸರೀರವು ವಲುವಾಯಿತಂತೆ. ಜಗಜಟ್ಟಿ ಪಯಿಲುವಾನರ ಕಯ್ಲಿ ಆ ಪಲ್ಲಾಕಿಯನ್ನು ಯತ್ತಲಾಗಲಿಲ್ಲವಂತೆ.. ಅಂಥವರ ಕಯ್ಲಿ ಆಗಲಿಲ್ಲವಂತೆ.. ಯಿಂಥವರ ಕಯ್ಲಿ ಆಗಲಿಲ್ಲವಂತೆ.. ಪಟ್ಟಣ ಸೋಮಿಗಳು ಚಿಂತಾಕ್ರಾಂತರಾಗಿ ಅವುರಾಗು ಅವುರಾಗು ಯಂದು ಪಲ್ಲಾಕಿಯನ್ನು ಅಂಗಲಾಚಿದರಂತೆ.. ಆದರೂ ಅದರ ರುದಯ ಕರಗಲಿಲ್ಲವಂತೆ.. ಕರಗಿ ಅವುರಾಗಲಿಲ್ಲವಂತೆ.. ಪಲ್ಲಾಕಿ ನೆಲ ಬಿಟ್ಟು ಮ್ಯಾಲಕ ಯದ್ದಲ್ಲಿ ಅದೇ ಪಾರಿತೋಸಕವು.. ಯೀ ಪಲ್ಲಾಕಿ ಬೇರೆ ಅಲ್ಲ.. ಹಿಮವತ್ಪರುವುತ ಬೇರೆ ಅಲ್ಲ.. ಯಂದನಕಂತ ಜನಸಾಗರವು ನಿಟ್ಟುಸುರುಬಿಡುತಿರುವಾಗ್ಗೆ.. ಯರಡು ಹುಡುರು ತಾವೆತ್ತುತೀವಂತ ಮುಂದಕ ಬಂದರಂತೆ.. ಯಿದೇನಿದು? ಯಂಥೆಂಥೋರ ಕಯ್ಲಾಗಿಲ್ಲ.. ಇವು ಯೆತ್ತುವುದೆಂದರೇನು? ಯಂದು ಪಟ್ಟಣ ಸೋಮಿಗಳು ಮೂಗಿನ ಮ್ಯಾಲ ಬೊಟ್ಟಿಟ್ಟುಕೊಂಡರಂತೆ.. ಯೆತ್ತಲಕ ಹೋಗಿ ಬಕಟೆಬಾರಲು ಬಿದ್ದೀರಪ್ಪಾ ಬ್ಯಾಡ ಮಕ್ಕಳ ಬ್ಯಾಡ ಯಂದು ದಯವಸ್ತರು ಹೇಳಿದರಂತೆ.. ಯಾರ ಮಕ್ಕಳಿವು ಯಂದು ಹಿರೀಕರು ಕೇಳಿದಕ ಹೊಲೇರ ಕತ್ತಲನು ಯಪ್ಪಾ ಇವು ನನ ಮಕ್ಕಳು

ಯಂದನಂತೆ.. ಹ್ಹಾಂ.. ಹೊಲೇರು ಪಲ್ಲಾಕೀನ ಮುಟ್ಟುವುದೆಂದರೇನು? ಅನಾಹುತ ಆದೀತು ಬ್ಯಾಡ ಕಣಾ ಕತ್ತಲಾ..ಯೀ ಅರೀದ ಹುಡುರನು ಆಚೆ ಕರೆದೊಯ್ಯಪ್ಪಾ ಯಂದು ಗೊಂಜಾಡಲರಡವಯ್ಯನು ತರುಬುತ್ತಲೇ ಹತ್ತಾರ ಊರುಗಳ ನೂರಾರು ಮಂದಿ ಹೊಲೇರು ಅದ್ಯಾಕಾಗಬಾರದಪ್ಪಾ ಯಂದು ಮುಂದಕ ಬಂದರಂತೆ.. ನಿಮಗ ಸಾಂಬವಿಯಾಗಿರಬೌದಪ್ಪಾ.. ನಮಗ ಯೀಕಿ ನಮ್ಮವ್ವ ಅದಾಳ.. ನಾವು ಯೀಕಿಯ ವಕ್ಕಲು ಮಕ್ಕಳದೀವಿ. ಯೀ ಹುಡುರು ತಮಗ ತಾವ ಮುಂದಕ ಬಂದಾವ.. ಇವು ಸುಟ್ಟು ಭಸುಮ ಆದರೂ ಚಿಂತೆಯಿಲ್ಲ.. ಯತ್ತಲಕ ಬುಡ್ರಿ.. ವಳ್ಳೇದು ಕೆಟ್ಟದ್ದನ್ನೆಲ್ಲಾ ತಾಯಿ ನೋಡಿಕೋತಾಳ.. ನಿಮಗ್ಯಾಕ ಯಿದರ ವುಸಾಬರಿ.. ಯಂದು ಜುಲುಮಿಯ ಮಾತುಗಳನ್ನಾಡಿದರಂತೆ. ತಾಯಿ ಮ್ಯಾಲ ಭಾರ ಹಾಕಿ ಬಿಡಿರಿ.. ಯಂದು ಜನಸ್ತೋಮವು ಮುಂದಕ ಮುಂದಕ ಜರುಗಿತಂತೆ. ಆಗ ಆ ಹುಡುರು ಮೋಬಯ್ಯನ ಪಾದ ಮುಟ್ಟಿ ಸಣು ಮಾಡಿ ಯತ್ತಿದರೋ ಯಿಲ್ಲಮೋ.. ಪಲ್ಲಾಕಿಯು ಸಟಕ್ಕನ ಬಂದು ಅವರ ಹೆಗಲ ವುಾ್ಯಲ ಯಿರಾಜಮಾನಗೊಂಡಿತಂತೆಂಬಲ್ಲಿಗೆ ಸಿವನ್ನಾಮಪಾರೋತಿss ಪತಿ ಹರಹರ ಮಾದೇವಾsss ಯಂದು ಜನಸಾಗರವು ವಕ್ಕೊರಲಿನಿಂದ ಕೂಗಿತೆಂಬಲ್ಲಿಗೆ..

ಫಲಾನ ಗಳಿಗೆಯಂದು ಹೊಂಟ ಆ ದಿಬ್ಬಣವು ಫಲಾನ ಗಳಿಗೆಗೆ ಸರಿಯಾಗಿ... ಸಿವಸಂಕರ ಮಾದೇವಾ...

* * * *

ವಂದು ಹಳ್ಳಿಯಾ, ವಂದು ಮೂರಾ.. ವಂದು ಹೋಬಳಿಯಾ? ಗುಂಡುಕಲ್ಲು, ಯಿಡಪಿನಕಲ್ಲು ಕಂಬಳಾಪುರ, ಕಸಾಪುರವೇ ಮೊದಲಾದ ಪಂಚಯಿಂಸತಿ ಮೂರುಗಳಲ್ಲೆಲ್ಲಾ ಸುತ್ತಾಡಿ, ಕೆಲವು ನೂರು ವರುರ್ಷಗಳ ಹಿಂದೆ ಸ್ರೀಮದ್ ವ್ಯಾಸರಾಯ ಮುನಿಸ್ರೇಷ«ರಿಂದ ಪ್ರತಿಷಾ«ಪಿಸಲ್ಪಟ್ಟಿರು ವಂಥ ನೇಮಕಲ್ಲು ಆಂಜನೇಯಸ್ವಾಮಿ ದೇವುಳದ ಪ್ರಾಂಗಣದೊಳಗ ದಣುವು ಆರಿಸಿ ಕೊಳ್ಳುತಲಿದ್ದ ಥಾಮಸು ಮನ್ರೋ ಸಾಹೇಬನೆದುರು ಜಾಬಾಲದ ಜಂಗಳರೆಡ್ಡಿ, ಕಂಬಾಳದ ಕರೆಪ್ಪನಾಯ್ಡು, ಹಲಗೇರಿಯ ಯೀರಾರೆಡ್ಡಿ, ಯಂಟಾಪುರದ ಪನ್ನಗ ಸಯನರೆಡ್ಡಿ, ಸಂಗಾಲದ ಜಾಗೀರುಗಾರ್ತಿ ಚೆನ್ನಮ್ಮರೇ ವೊದಲಾದ ಜಮೀಂದಾರರೆಲ್ಲ ತಮ ತಮ್ಮ ಮುಖಗಳ ಮ್ಯಾಲ ಬೊಬ್ಬಿಲಿರೆಡ್ಡಿಯ ವುಪಟಳವನ್ನು ಬರೆವುತ ಮ್ಲಾನತೆಯಿಂದ ಕೂಕಂಡಿದ್ದರು ಅಲ್ಲಲ್ಲಿ.. ಕಲೆಟ್ಟರು

ಸಾಹೇಬನು ಆಗಾಗ್ಗೆ ಬೀರುತಲಿದ್ದ ವಾರೆಗಣ್ಣ ನೋಟವನ್ನು ಯದುರಿಸಲಿಕ್ಕಾಗದೆ ಅವರು ತಮ ತಮ್ಮ ಮುಖಗಳನ್ನು ಯತ್ತುವುದೂ, ಯಿಳಿಸುವುದೂ ಮಾಡುತಲಿದ್ದರು. ಸದ್ಯಕ್ಕ ಅವರಾರೂ ನಾಗಿರೆಡ್ಡಿಯಿಂದ ಪ್ರಾಣಾಪಹರಣಕ್ಕೆ ತುತ್ತಾಗಿರಲಿಲ್ಲ. ಅದು ಅವರವರ ಹೆಂಡರ ಪುಣ್ಯ. ಸತ್ತ ಮ್ಯಾಲ ಸಿರಿಸಂಪತ್ತನ್ನ ಸಂಗಾಟ ವಯ್ತಾರ ಯಂದು ತಮ್ಮ ಗಂಡಂದಿರನ್ನು ತರಾಟೆಗೆ ತೆಗೆದುಕೊಳ್ಳುವ ಅವರವರ ಹೆಂಡಂದಿರ ನಾಲಗೆಗಳ ಪುಣ್ಯ. ತಮ್ಮ ಪಯ್ಕಿ ವಂದಿಬ್ಬರು ತಮ ಗಂಡಂದಿರುಗಳಿಗೆ ಗೊತ್ತಾಗದಂತೆ ಮಾರುಯೇಸದಲ್ಲಿ ಬಂದಿದ್ದಂಥ ನಾಗಿರೆಡ್ಡಿಯನ್ನು ಯಣ್ಣಾ ಯಂದು ಕರೆದು ಮಂಗಳಾರತಿ ಯತ್ತಿದವರುಂಟು, ದೀಪಾರತಿ ಯತ್ತಿ ದವಸ ದಾನ್ಯೇವು ತುಂಬಿದ ಅಗೇವುಗಳನ್ನು ಆಪದ್ಬಾಂದವ ರೆಡ್ಡೆಣ್ಣಗೆ ವಪ್ಪಿಸಿದವರುಂಟು, ತಾವೇ ಮುಂದೆ ನಿಂತು ಗಂಜಿ ಕೇಂದ್ರಗಳನ್ನು ತೆರೆದು ದಾನ ಧರುಮವ ಮಾಡಿದವರುಂಟು. ಯಿಂಥ ವಾತ್ಸಲ್ಯಮಯಿ ಅಕ್ಕತಂಗೇರು ಸದರಿ ಪ್ರಾಂತದ ಪ್ರತಿಯೊಂದು ಮನೆಯಲ್ಲಿರುವುದರಿಂದಾಗಿ ನಾಗಿರೆಡ್ಡಿ ತಮ್ಮ ಕುಂಪಣಿ ಸರಕಾರದ ವಸವಾಗುತ್ತಿಲ್ಲ. ಸದರಿ ಪ್ರಾಂತದ ಪ್ರತಿಯೊಂದು ಮೂರಿನ ಬಡಬಗ್ಗರು ಆ ಮಾನವ ರೂಪೀದೇವರ ಸುಳಿವು ಕೊಟ್ಟಲ್ಲಿ ರವುರವ ನರಕ ಪ್ರಾಪ್ತವಾಗುತ್ತದೆ ಯಂದು ಹೇಳುತ್ತಿರುವ ಪರಿಣಾಮವಾಗಿ ನಾಗಿರೆಡ್ಡಿಯು ಅಜೇಯ ನಾಗಿರುವನು. ಬಡಬಗ್ಗರೆಂದರ ಬಿದ್ದು ಸಾಯುತಲಿರುವ ಅವಯ್ಯನು ಯಾರೊಬ್ಬರಿಗಾರ ಪ್ರಾಣಾಪಾಯ ಮಾಡಿರುವುದುಂಟಾ? ಕಾಲು ಕಯ್ಯಿ ತೆಗೆದಿರುವುದುಂಟಾ? ವಾಕರಿಕೆ ಮಾತಾಡಿರುವುದುಂಟಾ? ಬ್ಯಾಸರಿಕ ಮಾತಾಡಿರುವುದುಂಟಾ? ಅವರ ಮನೆಯ ವಡವೆ ವಸ್ತವ ತಂದಿವರ ಮಯ್ಯ ಮ್ಯಾಲ ಹಾಕಿ ಬಡಮಕ್ಕಳ ಮದುವಿ ಮಾಡಿರುವುದೊಂದು ಅಪರಾಧವಾ? ಪ್ರಾಮಸರಿ ನೋಟುಗಳನ್ನು ಜುಲುಮಿ ಮಾಡಿ ತಿಜೋರಿಯಿಂದ ಕಿತ್ತು ಸುಟ್ಟಿರುವುದು ಅಪರಾಧವಾ? ಹಸಗೊಂಡ ಹೊಟ್ಟೆಗಳಿಗೆ ಬಾನ ನೀಡಿರುವುದು ಅಪರಾಧವಾ? ಮುತ್ತಯ್ದೆತನವನ್ನು ಕಾಪಾಡಿರುವುದು ಅಪರಾಧವಾ? ಕಣ್ಣೀರೊರೆಸಿರುವುದು ಅಪರಾಧವಾ? ತನ್ನ ಸ್ರೀಮಂತಿಕೆಯನ್ನು ಬಡಬಗ್ಗರಿಗೆ ಹಂಚಿಕೊಟ್ಟಿರುವುದು ಅಪರಾಧವಾ? ದುಡಿದುಂಬ ಬೇಕೆಂದು ತಾನು ತನ್ನ ಹೆಂಡರು ಮಕ್ಕಳಿಗೆ ಹೇಳಿರುವುದು ಅಪರಾಧವಾ? ಯಾತಕ್ಕೇಂತ ಅಧಿಕಾರಿಗಳು ನಾಗಿರೆಡ್ಡೀನ ಹಿಡಿದು ಮರಣದಂಡನೆ ಗುರಿಪಡಿಸಬೇಕೆಂದು ಕುಂಪಣಿ ಸರಕಾರದ ಮ್ಯಾಲ ವತ್ತಡ

ತರುತ್ತಿರುವರು? ಅವನನ್ನು ಜೀವ ಸಹಿತ ಹಿಡಿದು ಕೊಟ್ಟವರಿಗೆ ಯರಡು ಸಾವಿರ ರೂಪಾಯಿ, ಕೊಂದವರಿಗೆ ಸಾವುರದಯ್ನೂರು ರೂಪಾಯಿ, ಸುಳುವು ನೀಡಿದವರಿಗೆ ಸಾವುರ ರೂಪಾಯಿ ಯಿನಾಮು ನೀಡುವುದಾಗಿ ಪ್ರಚಾರ ಮಾಡುತ್ತಿರುವರು. ಮಾಡೋ ಕೆಲಸ ಬದುಕು ಮಸ್ತು ಯಿದ್ದರೂ ಸಿಪಾಯಿಗಳು ಕೋವಿ ಹಿಡಕೊಂಡು ಕಾಡುಮೇಡುಗಳಲ್ಲಿ ಯಾಕ ಅಂಡಲೆಯುತಲಿರುವರು. ಯೇಸಗೀಸ ಹಾಕಿಕೊಂಡ್ಯಾಕ ನಿಗಾಯಿರಿಸಿರುವರು. ಯಿದು ನ್ಯಾಯವಾ ಯಂದು ಕಲೆಟ್ಟರಾದ ತಾನು ವಮ್ಮೆ ಕೇಳಿದ್ದಕ್ಕೆ ಮಾರ್ಕೋನು ವಂದು ಪತ್ರವನ್ನು ತನ್ನ ಮುಂದೆ ಹಿಡಿದನು. ಅದರಲ್ಲಿ ತನ್ನನ್ನು ನಾಯಿಯಂದು ಕರೆದಿರುವುದಾಗಿ, ಕುಂಪಣಿ ಸರಕಾರವನ್ನು ಹೀನಾಯವಾಗಿ ಜರೆದಿರುವುದಾಗಿ ಅನುವಾದ ಮಾಡಿದನು. ಕಾನೂನು ಕಟ್ಟಳೆಗಳನ್ನು ತನ್ನ ಕಾಲಕಸ ಮಾಡಿಕೊಂಡಿರುವ ರೆಡ್ಡಿಯು ಮುಂದೊಂದಿವಸ ತಮ್ಮ ಸರಕಾರದ ಯಿರುದ್ದ ದಂಗೆ ಯಬ್ಬಿಸಬಹುದೆಂದೂ ಹೇಳಿದನು. ಅದಕ್ಕಾಗ ಮನ್ರೋಗೆ ಜವಾಬು ಕೊಡಲಾಗಿರಲಿಲ್ಲ. ಅದೆಲ್ಲವನ್ನು, ಯಿದೆಲ್ಲವನ್ನು ಯೋಚನೆ ಮಾಡೀ ಮಾಡೀ ಆತನು ಹನ್ನೊಂದನೆ ಸಲಕ್ಕೆ ನಿಟ್ಟುಸಿರು ಬಿಡುತ್ತಿರುವಾಗ್ಗೆ, ಆತನು ಬಿಟ್ಟ ನಿಟ್ಟುಸಿರುಗಳು ವಂದಕ್ಕೊಂದು ತಳಕು ಹಾಕಿಕೊಂಡು ಸುಂಟುರು ಗಾಳಿಯೋಪಾದಿಯಲ್ಲಿ ಸಂಚರಿಸುತ.. ಸಂಚರಿಸುತss ಅಲ್ಲಿಗೆ ಹರದಾರಿ ದೂರದ ಗುಬ್ಬಿಗುಡ್ಡದ ರಣಗವಿಯೊಳಗೆ ತನ್ನ ಸಹಚರರೊಂದಿಗೆ ತರ್ಜನ ಬರ್ಜನದಲ್ಲಿ ತೊಡಗಿದ್ದ ಬೊಬ್ಬಿಲಿ ನಾಗಿರೆಡ್ಡಿಯದುರು ಪ್ರತ್ಯಕ್ಷವಾದಾಗ್ಗೆ..

ಯಿತ್ತ ಹರಪನಹಳ್ಳಿ ಪ್ರಾಂತದ ಅರಸೀಕೆರೆಗೆ ಕಳ್ಳ ಅರಸೀಕೆರೆ ಯಂಬ, ಸುಳುವಾಯಿಗೆ ಸುಳ್ಳು ಸುಳುವಾಯಿ ಯಂಬ, ತಡಬಗೆರೆಗೆ ತಾರಾತಿಗಡಿಯೋರ ತಡಬಗರೆ ಯಂಬ ಬಿರುದುಗಳು ಯಾದ್ರುಚ್ಛಿಕವಾಗಿ ಪ್ರಾಪ್ತಗೊಂಡಿದ್ದವು. ಅಲ್ಲೆಲ್ಲಾ ಸುಳ್ಳುತನ, ಕಳ್ಳತನ, ತಾರಾತಿಗಡಿತನ, ದಗಲುಬಾಜಿತನಗಳೆಲ್ಲ ಸಾಮಾಜಿಕ ಮವುಲ್ಯಗಳಾಗಿಬಿಟ್ಟಿದ್ದವು. ಮೋಸದ ಯಿಯಿದ ಆಯಾಮಗಳ ಕುರಿತ ವಬ್ಬೊಬ್ಬರು ವಂದೊಂದು ಯಿದವಾಗಿ ಚರ್ಛೆ ಮಾಡುತಲಿದ್ದರು.. ಗಂಡನಾದವ ಹೆಂಡತಿಗೆ, ಹೆಂಡತಿಯಾದವಳು ಗಂಡಂಗೆ, ಮಕ್ಕಳಾದೊವು ತಮ ತಂದಿ ತಾಯಿಗಳಿಗೆ, ತಂದೆ ತಾಯಿಗಳಾಗಿದ್ದವರು ತಮ ಮಕ್ಕಳಿಗೆ, ಶಿಷ್ಯರಾದವರು ಗುರುಗಳಿಗೆ, ಗುರುಗಳಾಗಿದ್ದವರು ತಮ ಶಿಷ್ಯರುಗಳಿಗೆ ವೋಸ ಮಾಡಲಾರಂಭಿಸಿದ್ದರು. ಸುಳ್ಳಿನ ಸೂನ್ಯ ಸಿಮ್ಮಾಸನದ ಮ್ಯಾಲ ಹರಿಚ್ಚಂದ್ರನನ್ನೂ,

ಅಧರುಮ ಪೀಠದ ಮ್ಯಾಲ ಧುರುಮರಾಯನನ್ನೂ ಆರೂಢರನ್ನಾಗಿ ಮಾಡಲಾಗಿತ್ತು. ಸುಳ್ಳಿಗೊಂದು ಬೆಲೆ, ಕಳುವಿಗೊಂದು ಬೆಲೆ, ಕಣ್ಣೀರಿಗೊಂದು ಬೆಲೆ ಲಭ್ಯವಾಗಿದ್ದವು. ನೀನು ವಾ ಸುಳ್ಳುಗಾರನಾಗಪ್ಪ.. ನೀನು ಚೋರಾಗ್ರೇಸರನಾಗಪ್ಪ.. ನೀನು ನಾಕಾರು ಮಂದಿಯನ್ನು ಗೋಳೊಯ್ದುಕೊಂಡಾದರೂ ಬದುಕುವಂಥವನಾಗಬೇಕಪ್ಪ ಯಂದು ಹಿರೀಕರು ಕಿರೀಕರಿಗೆ ಆಸೀರುವಾದ ಮಾಡುವ ದ್ರುಸ್ಯಗಳು ಹೇರಳವಾಗಿದ್ದವು ಸಿವ ಸಂಕರ ಮಾದೇವಾss

ಯಿತ್ತ ಕೂಡ್ಲಿಗಿ ಪಟ್ಟಣದೊಳಗ ಸಂತರಸ್ತರಿಗೆ ನೂರೆಂಟು ಕಿರುಕುಳ ನೀಡುವ ಮೂಲಕ ಅವರನ್ನು ವಕ್ಕಲೆಬ್ಬಿಸುವ ಕಾಯಕದಲ್ಲಿ ಪ್ರಜೆಗಳು ತಮಗೆ ತಾವೇ ನಿರತರಾಗಿದ್ದರು. ಸದರಿ ಪಟ್ಟಣದ ಬಂಗಲೆಯೊಳಗೆ ಕುದುರೆಡವನ್ನು ಕನವರಿಸುವ ಜೆನ್ನಿಫರಮ್ಮ ಬಿಳಿವುಡುಗೆ ತೊಡುಗೆ ತೊಟ್ಟು ಥೇಟ್ ಸನ್ಯಾಸಿಣಿಯಂಥಾಗಿಬಿಟ್ಟಿದ್ದಳು. ತಾನು ರಚನೆ ಮಾಡಬೇಕೆಂದಿರುವ ಕಲಾಕ್ರುತಿ ವಳಗೆ ಜಗಲೂರೆವ್ವ, ರಾಜಮಾತೆ ಭಯ್ರಮಾಂಬೆಯರೀರ್ವರ ಯಕ್ತಿತ್ವಗಳನ್ನು ಮಿಸ್ರಣ ಮಾಡುವ ಕುರಿತು ಯೋಚಿಸುತಲಿದ್ದಳು. 'ಅವ್ವಾ ಯದೆ ಹಾಲು ನೀಡವ್ವಾ' ಯಂದು ಕೂಸುಗಳು ತನ್ನನ್ನು ಅಂಗಲಾಚುತ್ತಿರುವಂತೆ ಭ್ರಮೆಗೀಡಾಗಿ ನಿದ್ರಾದೆಸೆಯಲ್ಲಿ ನಡೆದಾಡುವುದನ್ನು ಮಾಡುತಲಿದ್ದಳು. ತನ್ನ ಪತ್ನಿಯು ಯಾಕೆ ಹಿಂಗ ವರ್ತನ ಮಾಡುತವಳೆ ಯಂದು ಯಡ್ಡವರ್ಡನು ಕೇಳುತಲಿದ್ದುದಕ್ಕೆ ಬಯಬಲ್ಲಿನ ಯಿದ್ವಾಂಸರಾದ ಫಾದರಿಗಳು "ಆಕೆಯೊಳಗೆ ಮಾಮಾತೆ ಮೇರಿಯಮ್ಮಳ ಪಯಿತ್ರಾತುಮವು ಹೊಡಮುರುದು ಯೇಳಲಕ ಹತ್ತಯ್ತೆ.. ಆಕೆ ಸಂತ ಪದವಿಗೇರುವ ದಿನ ದೂರಯಿಲ್ಲ" ಯಂದು ಅಭಿಪ್ರಾಯವ ಯಕ್ತಪಡಿಸುತಲಿದ್ದರು.. ಸಂಭೋಗ ಕಾರ್ಯದಿಂದೊಂಚಿತನೂ, ಯೇಕ ಪತ್ನೀರೊತಸ್ಥನೂ ಆಗಿದ್ದಂಥ ಯಡ್ಡವರ್ಡನು ಪರಪಾಟನಿಂದಾಗಿ ಯಲ್ಲೋ ದಸಗತ್ತು ಹಾಕುವುದನ್ನು ಬಿಟ್ಟು ಯಾವುದಕ್ಕೋ ದಸಗತ್ತು ಹಾಕಿ ಸರಕಾರದ ವಾಗ್‌ದಂಡನೆಗೆ ಗುರಿಯಾಗುತಲಿದ್ದನು. ಹತಭಾಗ್ಯ ಕುಟುಂಬವನ್ನು ಕಟ್ಟಿಕೊಂಡು ಯಿಂಗಲೆಂಡಿನ ಕಡೇಕ ತೊಲಗಿ ಬಿಡಬಾರದೇಕೆಂದೂ ತಾನೂ ವಮ್ಮೊಮ್ಮೆ ಯೋಚನೆ ಮಾಡುತಲಿದ್ದನು. ತನ್ನ ಕುಟುಂಬದ ನಡಗೆಗೆ ತೊಡರುಗಾಲು ಹಾಕುತ್ತಿರುವ ಕುದುರೆಡವನ್ನು ವುತ್ತರದೇಸದ ಕಡೇಕ ಸ್ಥಳಾಂತರ ಮಾಡುವ ತಾಕತ್ತು ತನಗಿದ್ದಿದ್ದಲ್ಲಿ...

ಸದರಿ ಪಟ್ಟಣದ ಯಿನ್ನೊಂದು ಮೂಲೆಯಲ್ಲಿದ್ದ ತಿಲ್ಲಾನ ತಾಯಕ್ಕ ಅಂತೂ ತನ್ನ ಮಗಳು ಚಿನ್ನಾಸಾನಿಯನ್ನು ಸೊರತಿ ಯಾಮೋಹದಿಂದ ಯಿಮುಕ್ತಿಗೊಳಿಸುವಲ್ಲಿ ತಕ್ಕಮಟ್ಟಿನ ಯಶಸ್ಸು ಸಾಧಿಸಿದ್ದಳೆಂದೇ ಹೇಳಬೌದು. ತನ್ನ ಕುಂಡಿಯ ಮ್ಯಾಲ ಬದನೇಕಾಯಿ ಗಡುತರದ ಯರಡು ಕುರುಗಳೆದ್ದಿದ್ದ ಕಾರಣಕ್ಕೆ ಬೋರಲು ಮಲಗಿಕೊಂಡೇ ಬುಗಡಿ ನೀಲಕಂಠಪ್ಪನು ಆಕೆಯ ಬುದ್ಧಿವುತ್ತೆಯುನ್ನು ಮನಸೇಚ್ಛೆ ಕೊಂಡಾಡಿದನು. ಪಾರಪಂಚಿಕ ಯಾಮೋಹದಿಂದ ಪುಟ್ಟಂ ಪೂರ್ತಿ ದೂರ ವುಳಿದಲ್ಲಿ, ಮಗಳು ಮುಂದೆ ಮದುವೆಯಾಗದಿದ್ದಲ್ಲೇನು ಗತಿ? ಮದುವೆಯಾಗಿ ಗಂಡನನ್ನು ಸೇರದಿದ್ದಲ್ಲೇನು ಗತಿ? ಗಂಡನ ಸೇರಿ ಮಕ್ಕಳ ತಾಯಿಯಾಗದಿದ್ದಲ್ಲೇನು ಗತಿ? ಅಪುತ್ರಸ್ಯಗತಿರ್ನಾಸ್ತಿ.. ಯಂದು ಮುಂತಾಗಿ ವಾದ ಮಂಡನೆ ಮಾಡಿದ ಅವಯ್ಯಗ ತಾಯಕ್ಕ ಹೇಳುತ್ತಾಳೆ, ತಮ್ಮ ಮನೆಯಲ್ಲಿ ಯೀಗಾಗಲೆ ಯಿರುವ ಕಳಪೆ ಗುಣಮಟ್ಟದ ಕನ್ನಡಿಗಳನ್ನು ಬದಲಾಯಿಸಿ ವುತ್ತಮ ದರ್ಜೆಯ ಕನ್ನಡಿಗಳನ್ನು ಅಮರಿಸುವುದೆಂದು....

ಯಿತ್ತ ಕುದುರೆಡವು ಪಟ್ಟಣದ ಸಿಡೇಗಲ್ಲ ಅಗಸೆ ಬಾಕಲಾಚ್ಚೇ ಕಡೇಕ ಯಿದ್ದ ಕರುಗಲ್ಲ ಜಗೇವಳಗ ಮೋಬಯ್ಯನು ಪಲ್ಲಾಕಿಯಿಂದ ಜಿಗಿದಿಳಿದು ಕೂತುಬಿಟ್ಟಿದ್ದನು. ಜಪ್ಪಯ್ಯಾ ಅಂದರೂ ಕರಗಲ್ಲೀಚ್ಚೆ ಕಡೇಕ ವಂದು ಹೆಜ್ಜೇನ ತೆಗೆದಿಡಲಿಲ್ಲ. ಯವ್ವಾ... ತಾಯೇ ಯಂದು ಮಂದಿ ಮನಾರ ಬೇಡಿಕಂತು.. ಆದರೆ ಅವಯ್ಯನ ರುದಯ ಕರಗಲಿಲ್ಲ.. ಆವಯ್ಯನ ರಾಯಭಾರಿ ಹಾಂಗಿದ್ದ ಗಂಟಲಯ್ಯನು "ಸುಮಸುಮಕ ತಾಯಿ ತನ್ನ ಪಾದವನ್ನು ಮೂರೊಳೀಕ್ಕೆ ಯಿಡೂಂದರ ಹೆಂಗ ಯಿಟ್ಟಾಳು. ಆಕೆ ಯೇನು ನಮ ನಿಮ್ಮಂಗ ಮಾಮೂಲು ಮನುಸ್ಯೋಳೇನು? ಭವುತಿಕ ರೂಪ ಅಯಿತಂದ ಮಾತ್ರಕ್ಕೆ ಅದೇನು ನಸ್ವರ ಜಾತಿಯ ಮಾಮೂಲ ಸರೀರವs ಯಿಂದ್ಯಾ ಪರವುತದ ಸಾಲೇ ಅದೆಂದು ತಿಳಕೋರಿ.. ಅದರೊಳಗೆ ವಸ್ತಿ ಮಾಡಿರುವಾಕಿ ಯಿಂದ್ಯಾವಾಸಿನಿ ಯಂದೇ ತಿಳಕೋರಿ.. ಆಕಿ ಕೋಟಿ ಕಿವಿಗಳಿಂದ ನೋಡಾವಳss ಆಕೆ ಕೋಟಿ ಕಣ್ಣುಗಳಿಂದ ಕೇಳಾವಳss ಆ ಮಾತಾಯಿ ಕರುಗಲ್ಲ ಮಟಾ ಬಿಜಯಂಗಯ್ದಿರೋದೆ ಪುಣ್ಯ ಅಂತ ತಿಳಕೋರಿ.. ಆಕೆ ನಮ ನಿಮ್ಮ ಕಣ್ಣಳತೆ, ಕೂಗಳತೆಯೊಳಗ ವಸ್ತಿ ಮಾಡಿರೋದೇ ಪಟ್ಟಣದ ಸುಕ್ರುತ ಅಂಥ ತಿಳಕೋರಿ.. ತಾಯಿದು ಸುಚುಮ ಪ್ರಕ್ರುತಿಯಿರತದ.. ಯೇನಾರ ಅಂದಾಡಿ ಮಾತಿನ ಮಯ್ಲಿಗಿ ಮಾಡಿದಿರಂದರ ಸುಟ್ಟು ಭಸುಮಾತೀರಿ..." ಯಂದನಕಂತ ಅವರನ್ನೆಲ್ಲ ಭಯದ ಮಿಣಿಯಿಂದ

ಕಟ್ಟಿ ಕೆಡವುತಲಿದ್ದನು....

ಆತನ ವಂದೊಂದು ಮಾತು ಕೇಳಿ ಮಂದಿ ಅಡಲ್ಲಾಗಿ ಹೋತಯ್ತೆ..

ಮಾನುಭಾವ ಮೋಬಯ್ಯನ ಸರೀರದ ನಾಡಿ ಬಡಿತಕ್ಕೆ ದೇವಿ ಭಾಗವತದ ಹೋಲಿಕೆ ಮಾಡುತಯ್ತೆ.. ಆತನ ವುಸುರಾಟಕ ಸುಳುದಾಡುವ ತಂಗಾಳಿಯ ರೂಪ ಕಲ್ಪಿಸುತಯ್ತೆ.. ಅವಯ್ಯನ ಸರೀರದ ಪುಣ್ಯಬಲದಿಂದಾಗಿ ರೋಗ ರುಜಿಣ, ಜಡ್ಡು ಜಾಪತ್ತು, ಭೂತ ಪಿರೇತ ಪಿಚಾಚಿಗಳು ಹೆದರಿ ದೂರ ಸರಕಂತವೆ ಯಂದು ತಮ್ಮಟಕ ತಾವೆs ಭಾವನೆ ಮಾಡತಯ್ತೆ.. ಆ ಸರೀರದ ತೊಟ್ಟಿಲೊಳಗ ತಮ್ಮ ಪಟ್ಟಣ ಕೊಸಿನೋಪಾದಿಯಲ್ಲಯ್ತೆ ಯಂದಂದರಗಳಿಗೆ ತರುವಾಯ ಅಲಲಾs ತಮ ಪಟ್ಟಣದ ಸವುಭಾಗ್ಯಾವೇ..

ಅಂದು ಸಾಮಾನ್ಯ ದಿವಸವಾಗಿರಲಿಲ್ಲ.. ಅಂದು ವುದಿಸಿದ ಸೂರ್ಯಪರುಮಾತುಮನು ಸಾಮಾನ್ಯ ಸೂರ್ಯಾಮನಾಗಿರಲಿಲ್ಲ.. ಅಂದು ಆಕಾಸದೊಳಗೆ ಹಾರಾಡುತಲಿದ್ದ ಪಕ್ಷಿಗಳು ಸಾಮಾನ್ಯ ಪಕ್ಷಿಗಳಾಗಿರಲಿಲ್ಲ.. ಅಂದು ಬೀಸುತಲಿದ್ದ ಗಾಳಿ ಸಾಮಾನ್ಯ ಗಾಳಿಯಾಗಿರಲಿಲ್ಲ.. ಅಂದು ಸಾವುರ ಸಾವುರ ಸಂಖೇಲಿ ನೆರೆದಿದ್ದ ಮಂದಿ ಸಾಮಾನ್ಯ ಮನುಷ್ಯರಾಗಿರಲಿಲ್ಲ. ಅಂದಿನ ಸಂವತ್ಸರ ಸಾಮಾನ್ಯ ಸಂವತ್ಸರ ಆಗಿರಲಿಲ್ಲ.. ಅಂದಿನ ನಕ್ಷತ್ರವು ಸಾಮಾನ್ಯ ನಕ್ಷತ್ರವು ಆಗಿರಲಿಲ್ಲ.. ಅಂದಿನ ಗಳಿಗೆ ಸಾಮಾನ್ಯಗಳಿಗೆ ಆಗಿರಲಿಲ್ಲ.. ಅಂದಿನ ಸನ್ನಿವೇಶವು ಸಾಮಾನ್ಯ ಸನ್ನಿವೇಶವು ಆಗಿರಲಿಲ್ಲ.. ಅಂದಿನ ಪಟ್ಟಣವು ಸಾಮಾನ್ಯ ಪಟ್ಟಣವಾಗಿರಲಿಲ್ಲ....

ಅವ್ವಾ ಯಂಬುವ ದಯಾಸಾಗರವು ಕುದುರೆಡವು ಪಟ್ಟಣ ಯಂಬುವ ಮಣ್ಣಿನ ಬೋಗುಣಿಯೊಳಗೆ ತುಂಬಿದ ಲಗಾಯ್ತು ಯಾರೊಬ್ಬರು ರೆಪ್ಪೆಗೆ ರೆಪ್ಪೆ ಅಂಟಿಸಿ ನಿದುರೆ ಮಾಡದಾದರು. ನೂರೊಂದು ವದಕನಗಳನ್ನು ತಮ ತಮ್ಮ ಮಂಯ್ಯ ವ್ಯಾಲೆಳೆದುಕೊಂಡರು. ಸಾಂತಿ ಪೂಜಾದಿಗಳಿಗೆ ಕರಿಯಗಂಬಳಿಗಳನ್ನು ಜೋಡಿಸುತ್ತಿದ್ದವರೆಷ್ಟೋ, ವಸೀಕರಣ, ಭೂತೋಚ್ಛಾಟನೆ ಕಾರ್ಯ ಕರುಮಗಳಿಗೆ ಬಿಳಿಗಂಬಳಿಗಳನ್ನು ಜೋಡಿಸುತ್ತಿದ್ದವರೆಷ್ಟೋ?

ಮೋಬಯ್ಯನ ಯಡ ಬಲ ಸುಳುದಾಡುತಲಿದ್ದ ಗಂಟಲಯ್ಯನ ಬಾಯಿಗಂತೂ ಪುರುಸೊತ್ತಂಬುದಿರಲಿಲ್ಲ.. ಬ್ರೆಮ್ಮ ಹರಿಹರ ರುದ್ರಾದಿಗಳಿಂದಲೂ, ಸಪ್ತರುಷಿ, ದೇವದಾನವ ಕಿನ್ನರ ಕಿಂಪುರುಷ, ಗಂಧರ್ವ, ಭೂಚರ ಖಚರ ಜಲಚರಗಳಿಂದ ಪೂಜೆ ಪುನಸ್ಕಾರ ಮಾಡಿಸಿಕೊಂಡಂಥವಳಾದ ದೇವಿಯು

ಕುದುರೆಡವನ್ನು ತನ್ನ ಕಯ್ಲಾಸ ಮಾಡಿಕೊಂಡಾಳಂತ ತಾನು ಸಾರುತ್ತಿದ್ದುದೇನು? ಹುಲು ನರಮಾನ್ನವರಿಂದ ಪೂಜಿಪುನಸ್ಕಾರ ಮಾಡಿಸಿಕೊಳ್ಳಲು ಹಾತೊರೆಯುತ್ತಿರುವಳೂಂತ ತಾನು ಹೇಳುತಲಿದ್ದುದೇನು? ಅವಯ್ಯನಾಡುತಲಿದ್ದ ದಯವ ಸಂಬಂಧೀ ಮಾತುಗಳಿಗ್ಯಾಪಾಟಿ ಕಿಮ್ಮತ್ತುಯಿತ್ತೆಂದರೆ....

ಆಕೆಯ ದಿವ್ಯ ನೆನಪಿಗೆ ಅಪಚಾರ ಮಾಡಬಾರದೆಂದೆಣಿಸಿ ಸದರಿ ಪಟ್ಟಣದ ಯಾವತ್ ಮಂದಿಯು ತಮ ತಮ್ಮ ಅಂತರಂಗ ಬಹಿರಂಗಗಳನ್ನು ಸಾರಿಸಿ ಚೊಕ್ಕಟಮಾಡುತಲಯ್ದಾರೆ.. ಕುಲ, ಸೀಲ, ಧನ, ರೂಪ, ಯವ್ವನ, ಯಿದ್ಯೆ, ತಪಸ್ಸು, ರಾಜ್ಯ ಯುಂಬಿವೇ ಮೊದಲಾದ ಅಷ್ಟ ಮದಗಳಿಗಾತೀತರಾಗಿರಲಕಂತ ಪ್ರಯತ್ನ ಮಾಡುತಲಯ್ದಾರ.. ಕಾಮಾದಿ ರಿಪುಗಳನ್ನು ಜಯಿಸಲು ಯತ್ನವ ಮಾಡುತಲಯ್ದಾರ.. ಯೇಕವಚನ ಸಂಭೋದನೆಗಳಿಗೆ ವಗ್ಗಿ ಹೋಗಿರುವ ತಮ ತಮ್ಮ ನಾಲಗೆಗಳಿಗೆ ಬಹುವಚನದ ಮಹತ್ವವ ಹೇಳಿಕೊಡುತಲಯ್ದಾರೆ, ಮೊಲೆ ಜಮಡುವ ಹೆಣ್ಣು ಗೂಸುಗಳಿಗೂ ಅವ್ವಾ ಅಂಬುತಲಯ್ದಾರೆ, ತಮ ತಮ್ಮ ಸರೀರಗಳೊಳಗಿನ ಅಟ್ಟಂಬಟ್ಟಾರಣ್ಯಗಳನ್ನು ಅಭಯಾರಣ್ಯೇವು ಗಳನ್ನಾಗಿ ಮಾರ್ಪಡಿಸಿಕೊಳ್ಳುತಲಯ್ದಾರೆ.. ಪ್ರಾತಃಕಾಲದಿ ಯದ್ದು ಅವ್ವಾ ಅಂಬುತಲಯ್ದಾರೆ.. ತಾಯಿಯ ನಾಮಸ್ಮರಣೆ ಮಾಡುವ ತಮ ತಮ್ಮ ಬಾಯಿಗಳು ಸುಚಿ ಸುಬ್ರವಾಗಿರಬೇಕೆಂಬ ವುದ್ದೇಸದಿಂದ ಅತ್ತಿ, ಆಲ, ವುತ್ತರಾಣಿ, ನೇರಲ, ಬೇವು ಮುಂತಾದ ಜಾತಿಯ ಕಾಷ«ಕಡ್ಡಿಗಳಿಂದ ದಂತ ದಾವನ ಮಾಡಿಕೊಳ್ಳುತಲಯ್ದಾರೆ.. ಮತ್ತೂ ಸಾಣಾದಿ ಕರುಮಗಳನ್ನೂ ಸಹ....

ಯಿತ್ತ ಕರಗಲ್ಲಿಗಷ್ಟು ದೂರಯಿದ್ದ ಹಾಸು ಬಂಡೆಯ ಮ್ಯಾಲ ಕೆತ್ತಲಕಂತ ಸಿಲುಪಿ ಮಾಯಾಚಾರಿಯು ತಾಯಿಯ ಪಾದಗಳ ನಕ್ಷೆಯನ್ನು ಬಿಡಿಸುತಲಿರುವಾಗ್ಗೆ, ಪಟ್ಟಣ ಸೋಮಿಗಳು, ದಯವಸ್ತರು, ಹಿರೀಕರು ಜಡೆತಾತನ ನೇತ್ರುತ್ವದಲ್ಲಿ ತಾಯಿ ಹೊಳೆಗೆ ಹೊಂಡುವ ಕಾರ್ಯಕ್ರಮದ ರೂಪುರೇಷೆ ತಯಾರಿಸುತಯಿರುವಾಗ್ಗೆ, ತಾಯಿಯ ಕಿವಿಗಿಂಪು ಮಾಡಲಕಂತ ಪದ ಹಾಡುವವರೆಲ್ಲವರೆ? ತಾಯಿಗೆ ಸೆಕೆ ಆಗದಿರಲಂತ ಚಮರಿಯಿಂದ ಗಾಳಿ ಬೀಸುವವರು ಯಲ್ಲವರೆ? ತಾಯಿಯನು ಜುವ್ವಾಲಿಯೊಳಗ ಮಲಗ ಹಾಕಿ ಲೊಳ್ಳೊಳ್ಳಾಯಿ ಯಂದು ತೂಗಿ ಮಲಗಿಸುವವರು ಯಲ್ಲವರೆ? ಮಲಗಿರುವ ತಾಯಿಯನ್ನು ಯಚ್ಚರಿಸುವವರು ಯಲ್ಲವರೆ? ಕಾಚು ಸುಣ್ಣ ಹಚ್ಚಿದ ಯಲೆಯ

ಮಡಚಿ ತಾಯ ಬಾಯೊಳಗಿಡ ಬಲ್ಲಂಥವರು ಯಲ್ಲವರೆ? ತಾಯೊಂದಿಗೆ ಬೆಳ್ಳಂಬೆಳಗು ಮಾತಾಡಬಲ್ಲಂಥವರು ಯಲ್ಲವರೆ? ಕಥೆ ಹೇಳುತ ತಾಯ ಬ್ಯಾಸರ ಕಳೆಯುವವರು ಯಲ್ಲವರೆ? ತಾಯೀಗ ಹಾಸೀಗೆ ಆಗುವವರು ಯಲ್ಲವರೆ? ತಲೆದಿಂಬಾಗುವವರು ಯಲ್ಲವರೆ? ತಾಯಿ ಮುಂಗಯ್ಯಿಗೆ ಬಳೆ ಯೇರಿಸುವವರು ಯಲ್ಲವರೆ? ತಾಯ ಕಾಲಿಗೆ ಕಾಲಂದಿಗೆ ಆಗುವವರು ಯಲ್ಲವರೆ? ತಾಯ ನಯನಾಜೂಕಿನ ನಡುವಿಗೆ ವಡ್ಯಾಣ ಆಗಬಲ್ಲಂಥವರು ಯಲ್ಲವರೆ? ಯಿಂಥ ಅಂಥವರನ್ನು ಪಟ್ಟಣದೊಳಗ ಕಂದೀಲು ಹಿಡಕೊಂಡು ಹುಡುಕಾಡುತಿರುವಾಗ್ಗೆ.. ಪಟ್ಟಣದ ತುಂಬೆಲ್ಲರು ತಮ ತಮ್ಮ ನಾಲಗೆಗಳೆಂಬುವ ಮೂರು ಕೂರಿಗೆ ಹೊಲದೊಳಗೆ ಸಾಂಬವಿ ಯಂಬುವ ಮೂರಕ್ಕರದ ಸೊಬಗ ಸಬುಧವನ್ನು ಬಿತ್ತಿ ಬೆಳೆಯುತ್ತಿರುವಾಗ್ಗೆ....

ಸದರಿಪಟ್ಟಣದ ಅರಮನೆಯೊಳಗೆ ರಾಜಮಾತೆ ಭಯ್ರಮಾಂಬೆಯು ಸಾಲಗುಂದಿ ಗುಂಡಯ್ಯ ಸಾಸ್ತ್ರಿಯನ್ನು ಯದುರಿಗೆ ಕುಂಡರಿಸಿಕೊಂಡು "ಯೇಳೇಳು ಕೊಪ್ಪರಿಗೆ ಹೊನ್ನು ಅಲ್ಲಯ್ಯಾss ಯಿಲ್ಲಯ್ಯಾ ಹೇಳು" ಯಂದು ತೂಕಡಿಕೆ ಮಾಡುತಲಿದ್ದಳು. ಆ ವಂದು ಗಳಿಗೆ ವಳಗೆ ತರಾವರಿ ಕಣಸುಗಳನ್ನು ಕಾಣುತ ಬೆಚ್ಚಿ ಬೀಳುತಲಿದ್ದಳು, ಸುಭ ಸೂಚಕವಾಗಿಯೋ, ಅಸುಭ ಸೂಚಕವಾಗಿಯೋ ಆಕೆಯ ಸರೀರದ ಆಯಕಟ್ಟಾದ ಜಾಗಗಳು ಅದರುತಲಿದ್ದವು. ತನ್ನ ಮಗ ಬಯಚಪ್ಪ ಯಿನ್ನೂ ಬದುಕಿರುವ ಬಗೆಗೂ, ಸವತಿಯ ಮಗ ಕಾಟಯ್ಯನ ಸರೀರದ ವ್ಯಾಲ ಅಲ್ಲೊಂದರಂತೆ, ಯಿಲ್ಲೊಂದರಂತೆ ಕೂದಲು ಕಾಣಿಸಿಕೊಳ್ಳುತ್ತಿರುವವೆಂಬ ವದಂತಿ ಬಗೆಗೂ ತಾನು ಯಾಕುಲಚಿತ್ತೀಯಳಾಗಿದ್ದಳು. ಸದರೀ ಅರಮನೆಯ ಯಿದ್ಯಾಮಾನಗಳೂ ವಂದೇ ಸಮಕ ಯಿರಲಿಲ್ಲ. ಯಲ್ಲಾ ಯೇಕರಿಕ ದೇಕರಿಗಳಿಗೂ ರೊಕ್ಕ ಬೇಕು. ಮಯ್ಯಿ ಮ್ಯಾಲಿದ್ದಂಥಾ ಚಿನ್ನದಾಭರಣಗಳನ್ನು ರೊಕ್ಕಸ್ಥನಾದ ತಿರುಪಾಲಯ್ಯ ಸ್ರೇಷ್ಠಿ«ಯ ಬಳಿ ಅಡವಿಟ್ಟಾಗಿತ್ತು. ವಂದೊಂದು ಆಭರಣವನ್ನು ವರೆಗಲ್ಲಿಗೆ ತಿಕ್ಕೀ ತಿಕ್ಕಿ ಯಿದರಾಗ ಬಂಗಾರ ಅಷ್ಟು ಅಯ್ತೆ.. ಅದರಾಗ ಬಂಗಾರ ಅಷ್ಟು ಅಯ್ತೆ ಯಂದು ಗೊಣಗುತ್ತಲೇ ನೂರು ಕೊಡುವಲ್ಲಿ ಅಯಿವತ್ತು ಕೊಟ್ಟು ಸರಿಮಾಡಿದ್ದನು. ಸಾಲಸೋಲದ ಯವಾರ ತಮ್ಮರಮನೆಯ ಘನಸ್ತ ಸೊಸ್ತೇರ ತವರು ಮನೆಗಳಿಂದಲೂ ನಡೆದಿರುವುದುಂಟು. ಅರಮನೆಯ ಜೀರ್ಣೋದ್ಧಾರಕ್ಕೆ ಪ್ರಜೆಗಳು ಹಿಂದೊಂದು ಸಲ ವುದಾರವಾಗಿ ಚಂದಾ ಯತ್ತಿ ಕೊಟ್ಟಿರುವುದುಂಟು.

ಜಮೀನಿನಂಥ ಸ್ಥಿರಾಸ್ತಿ ತನ್ನ ವಡೆತನದಲ್ಲಿದ್ದಿದ್ದಲ್ಲಿ.. ಭಯ್ರಮಾಂಬೆ ತೂಕಡಿಕೆಯಲ್ಲೆ ಯಚ್ಚರಗೊಳ್ಳು ತಲಿದ್ದಳು. ಚರಾಸ್ತಿ ಸ್ಥಿರಾಸ್ತಿ ಯಲ್ಲ ಚಂಚಲ ಸೊಭಾವದ್ದು ತಾಯೇ.. ಅದು ದೀವಿಗೆಯ ಕುಡಿಯಿದ್ದಂಗೆ ಯಂದು ಯಂಕಾವಧೂತರು ಪ್ರವಚನ ಸಂದರ್ಬದಲ್ಲಿ ಹೇಳಿದ್ದನ್ನು ಪದೇ ಪದೇ ಗ್ನಾಪಕ್ಕೆ ತಂದುಕೊಂಡಳು. ಯಿವೆಲ್ಲ ಚಾಣಾಕ್ಷರು ಆಡುವ ಮಾತು ಯಂದುಕೊಂಡಳು. ನೀತಿ, ಬುದ್ಧಿವಾದದ ಮಾತುಗಳು ಕೇವಲಾತಿ ಪ್ರಜೆಗಳಿಗೆ ಅನುವಯಿಸುತ್ತವೆ ಹೊರತು ತಮ್ಮಂಥ ಶ್ರೇಷ« ರಾಜಸಂಜಾತರಿಗಲ್ಲ.. ಕಣ್ಣಾಯಿಸುತ್ತಾಳೆ ಸುತಮುತ್ತ.. ಅಗೋ ಅಲ್ಲೊಂದು ಭಾರೀ ಗಾತುರದ ಕೊಳಗ.. ಯಿಗೋ ಯಿಲ್ಲೊಂದು ದೊಡ ದೊಡ್ಡ ಸಂದೂಕ. ಗೋಡೆಗಳ ವ್ಯಾಲ ಪೂರುವಿಕರ ತಯ್ಲ ವರ್ಣಪಟಗಳು.. ಯಿಲ್ಲಾಣ ಜೇಡೆಣೆದಿರುವ ಕತ್ತಿ ಗುರಾಣಿ ಕಿಂಕಾಪುಗಳು. ಮುಂದೊಂದಿವಸ ಕಾಟಯ್ಯನ ಹಸ್ತ ಚಳಕದಿಂದಾಗಿ ಯಿವೂಸಹ ನೆಸಲೇಯ ಸುಪರ್ದಿಗೆ ಹೋದರೂ ಹೋದಾವು.. ಸದ್ಯಕ್ಕ ಸಾಂಬವಿಯ ದಯೆಯಿಂದ ಅವನು ರೋಮ ವಂಚಿತಗೊಂಡು ಮೂಲೆಗುಂಪಾಗಿರುವನು. ಯಿಲ್ಲೆಂದಲ್ಲಿ ಅವಯ್ಯನು ಯೀ ಹೊತ್ತಿಗೆ ಯಲ್ಲೆಲ್ಲಿ ಚದುರಂಗವಾಡುತಲಿದ್ದನೋ?.... ಅವನ ಮಯ್ಯಿ ಮ್ಯಾಲ ಕೂದಲು ಚಿಗಿಸೋ ನಿಮಿತ್ತ.. ಹಲವು ತಯ್ಲಗಳ ಕುಡಿಕೆಗಳನ್ನು ಹಿಡಕೊಂಡು ವಳ ಹೋಗಿ ಬರುತ್ತಿರುವ ಅಯ್ದಾರು ಮಂದಿ ಆಯುರುವಯ್ದ ಪಂಡಿತರು.. ತನ್ನ ಮತ್ತು ಗುಂಡಯ್ಯಸಾಸ್ತ್ರಿ ನಡುವೆ ನಡೆಯುತ್ತಿರುವ ಮಾತುಕತೆಯ ಮ್ಯಾಲ ನಿಗಾ ಯಿಟ್ಟಿರಬೇಕವರು.. ನಿಗಾ ಯಿಡುವುದು, ಅನುಮಾನಿಸುವುದು ರಾಜಕಾರಣದ ಧರುಮವು.. ಪೂರುವಿಕ ರಾಜರು ತಮ್ಮ ಅರಮನೆಯೊಳಗೆಲ್ಲೋ ಅಪಾರ ನಿಧಿಯನ್ನು ಹೂತಿಟ್ಟಿರುವುದು ಖರೆ.. ಅದೂ ಆಪತ್ತಿಗಾಗಲೀ ಯಂಬ ಕಾರಣಕ್ಕ.. ಅದರ ದೆಲ್ಲಿದ್ದೀತು? ಸಾಸ್ತಿರಿಯ ಮುಂದೆ ತಾಳೆಗರಿ ಕಟ್ಟುಗಳನ್ನು, ತಾಮ್ರದ ಪಟಗಳನ್ನು, ನಿಗೂಢ ನಕ್ಷೆಯನ್ನು ಮುಂದೆ ಹರಡಿದ್ದಳು.. ರಾತ್ರಿಕಾವಳದೊಳಗ ಕೇಳಿಬರುತಲಿದ್ದ ಕಯ್ಯ ಬಳೆಗಳ, ಕಾಲುಗೆಜ್ಜೆಯ ಸದ್ದು, ಪಿಸು ಮಾತುಗಳು.. ಯಿವೆಲ್ಲವನ್ನೂ ಯಿವರಿಸಿದ್ದಳು. ನಾನು ಬರುತೀನಿ.. ನಾನು ಬರುತೀನಿ ಅಂಬುವಾಕೆ ಸಾಕ್ಷಾತ್ ಲಚುಮೀದೇವಿಯೇ ಯಿದ್ದಿರಬೇಕು ಯಂಬ ಕಾರಣಕ್ಕ.. ಸಂಕೇತಾಕ್ಕಸರಗಳನ್ನು ಮೋದುತಲಿದ್ದ, ಗುಣಾಕಾರ, ಭಾಗಾಕಾರ ಮಾಡುತಲಿದ್ದ ಸಾಸ್ತಿರಿ ಸಾಮಾನ್ಯ ಯಕ್ತಿಯಲ್ಲ.. ಅಮಲಿಮಲ ಯಿದ್ಯೆಗಳಲ್ಲಿ ನಿಷ್ಣಾತನು. ಯಿವಯ್ಯನು ತನ್ನ ವಾಮಾಚಾರ ಯಿದ್ಯೆಯಿಂದ

ಕುಂತಳ ನಾಡಿನಾದ್ಯಂತ ಯಿಖ್ಯಾತನಾಗಿರುವನು. ಪ್ರಾಂತದ ಯಷ್ಟೋ ಪಾಳೆಪಟ್ಟುಗಳಿಗೆ ತೀರಾ ಅಗದಿ ಆಗಿರುವನು. ಅಪ್ಪಟ ಸಸ್ಯಾಹಾರಿಯಾಗಿರುವ ತಾನು ಕುರಿಕೋಳಿಗಳನ್ನು ಬಲಿಕೊಟ್ಟಿರುವುದು ಲೆಕ್ಕಯಿಲ್ಲ. ಹತ್ತಾರು ಕಡೇಕ ಬಸುರೆಣುಮಕ್ಕಳನ್ನೂ ಸಹ.. ಮೂಲತಹ ಸೂದ್ರನೂ, ನಾಮತಹ ಬ್ರಾಹ್ಮಣನೂ ಆದಂಥ ಸಾಸ್ತಿರಿಯ ಅಂಜಣ ಯಿದ್ಯೆಯು ತನ್ನ ಪೂರುವಿಕರಿಂದ ಬಂದಿರುವಂಥಾದ್ದು. ಆಯ್ತವಾರ ಅಮವಾಸ್ಯೆ ಬಂದಲ್ಲಿ ಯಿರುಳ ಪರ್ಯಂತ ಮಸಣದೊಳಗೆ ಹಬ್ಬ ಮಾಡುವ ಜಾಯಮಾನ ದವಯ್ಯನು ನಿಧಿಯ ಸುಳಿವನ್ನು ಯೀಗ ನೀಡುತ್ತಾನೆ, ಆಗ ನೀಡುತ್ತಾನೆ. ಕುರಿ ಬಗಸಿದಲ್ಲಿ ನೂರು ಕುರಿ ಜೋಡಿಸುವುದು ಕಷ್ಟವಾಗಲಾರದು. ಕೋಳಿ ಬಗಸಿದಲ್ಲಿ ಅಯ್ನೂರು ಕೋಳಿ ಜೋಡಿಸುವುದು ಕಷ್ಟವಾಗಲಾರದು ಬಸುರೆಣುಮಗಳನ್ನು ಬಗಸಿದಲ್ಲಿ!... ತನ್ನ ಘನ ಸೊಸ್ತೇರ ಪಯ್ಕಿ ಬಸುರು ಯಾರಾಗಿರುವರು? ಅದೂ ಕಾಟಯ್ಯನಿಂದ ಅಂಥ ಪತಿವುರೊತಾ ಸಿರೋಮಣಿ ತನ್ನ ಸೊಸ್ತೇರ ಪಯ್ಕಿ ಯಾವಾಕೆ ವುಂಟು? ಅರಮನೆಯ ಯೇಳಿಗೆಗಾಗಿ ಅವರ ಪಯ್ಕಿ ಆತುಮಾಹುತಿಯಾಗೋರು ಯಾರುಂಟು? ಮಬ್ಬಿನ ಅವುಸಧ ಕುಡಿಸಿ ಬಲಿಕೊಟ್ಟಲ್ಲಿ ಯದುರಾಗುವ ಸಾಧಕ ಬಾದಕಗಳಾವುವು? ಭಯ್ರವಾಂಬೆ ತೂಕಡಿಕೆಯನ್ನು ಬದಿಗೊತ್ತಿ ಯೋಚಿಸುತ್ತಿರುವಾಗ್ಗೆ ಸಾಸ್ತಿರಿಯು ವಂದು ನಿಟ್ಟುಸುರು ಬಿಟ್ಟು ತನ್ನ ಹೊತ್ತಿಗೆಗಳನ್ನು ತಲೆಬರುಡೆಯೊಂದಿಗೆ ಗಂಟು ಕಟ್ಟಿದನು. ಯಾಕಪ್ಪಾ ನಿಟ್ಟುಸಿರು ಬಿಟ್ಟೆ ಯಂದು ರುದ್ದೆ ಬಾಯಿ ಬಿಟ್ಟು ಕೇಳಿದ್ದಕ್ಕಾವಯ್ಯನು "ತಾಯೇ.. ಯೀ ಅರಮನೆಯಲ್ಲಿ ಅಗೋ ಅಲ್ಲಿ, ಯಿಗೋ ಯಿಲ್ಲಿ ನಿಧಿ ಅಡಗಯ್ತೆ.. ವಜ್ರವಯ್ಡೂರ್ಯ ಮುತ್ತು ರತುನಗಳ ರೂಪದಲ್ಲವಳೆ ಲಚ್ಚುಮಿಯು. ಆಕೆಯೊಂದಿಗೆ ನಾನು ಮಸ್ತು ಮಾತಾಡಿದೆನವ್ವಾ.. ರಾಜಮಾತೆಯು ಗಂಡವುಳ್ಳಾಕೆಯಾ ಯಂದು ಪ್ರಸ್ನೆ ಹಾಕಿದಳು. ರಂಡ ಮುಂಡೆ ಯಂದು ಹೇಳಿದೆನು. ಅಯವತ್ತೊಂದು ಅಮವಾಸ್ಯೆ ಆಕೆ ಸುಡುಗಾಡಿಗೆ ಬಂದು ರೊತ ಮಾಡುತಾಳಾ ಯಂದು ಕೇಳಿದಳು. ಅದಕಿದ್ದು ನಾನು.. ಅದೆಂಗಾತತ ತಾಯೇ.. ಆಕೆ ಮುದೇಕಿ ಅದಾಳ.. ಮ್ಯಾಲಾಗಿ ರಾಜಮಾತೆ ಅದಾಳ ಯಂದು ವುತ್ತರಿಸಿದೆನು.. ಅಂದಮ್ಯಾಲ ನಾನಾಕೇಗೆ ವಲಿಯಾಕಿಲ್ಲ ಅಂದುಬಿಟ್ಟಳವ್ವಾ.. ಕಾಟಯ್ಯನಿಗೆ ವಲಿಯಾಕಿಲ್ಲ ಅಂದಳು. ಬಯಚಪ್ಪನ ಹೆಂಡತಿಗೆ ತಾನು ವಲಿಯುವ ಯೋಗ ವುಂಟೆಂದು ಹೇಳಿದಳು.. ಹಿಂಗಯ್ತೆ ನಿಧಿಯ ಪರಿಸ್ಥಿತಿ" ಯಂದನಕಂತ ಮತ್ತೊಂದು

ನಿಟ್ಟುಸಿರುಬಿಟ್ಟನು. ಅದನು ಕೇಳಿ ರಾಜಮಾತೆಯು “ಹ್ಹಾ...ಹ್ಹಾ.. ಸಾಸ್ತಿರಿಯೇ” ಯಂದಳು. ಬಯಚಪ್ಪ ಸಿಗುವುದು ಯಾವಾಗ? ಕೊಲೆಯಾಗಿರುವನೆಂಬ ವದಂತಿಗೆ ಭಾಜನನಾಗಿರೋ ಆ ತನ್ನ ಮುದ್ದು ಕುವರನು ಮದುವೆ ಯಾಗುವುದು ಯಾವಾಗ? ಸಾಂಬವಿಯ ವಲುಮೆಯಿಂದೇನಾದರೂ.. ತಾಯೇ ಸಾಂಬವೀ ಯಂದಾಕೆ ಕಯ್ನೆತ್ತ ಮುಗಿತಾ ಭಕುತಿಯ ಮಂಪರಿನಲ್ಲಿದ್ದಾಗ ಸಾಸ್ತಿರಿಯು ದಕ್ಷಿಣೆಯನ್ನು ಬೊಕ್ಕಣಕ್ಕಿಳಿಬಿಟುಕೊಂಡು ಅಲ್ಲಿಂದ ಯಾವಾಗಲೋ ಹೊತಾ ಹೋಗಿಬಿಟ್ಟಿದ್ದ ನೆಂಬಲ್ಲಿಗೆ ಸಿವ ಸಂಕರ ಮಾದೇವಾss

ಕಳೇಬರ ಯಂದು ಭಾವಿಸಿ ಮ್ಯಾಲೆಲ್ಲ ರಣಹದ್ದುಗಳು ಹಾರಾಡುತಲಿದ್ದ ಅರಮನೆಯಿಂದ ಹೊರ ಬೀಳುವ ಮೊದಲು ಭಯ್ರಮಾಂಬೆಯು ದೇವೀಕಥೀನ ಹಲಕುಂದಿ ಮೋಬುಳ ಸಾಸ್ತ್ರಿಬಾಯಿಯಿಂದ ಮೋದಿಸಿ ಸಾಂಬವಿಯ ಕ್ರುಪಾಕಟಾಕ್ಷಕ್ಕೆ ಪಾತ್ರಗಳಾಗಬೇಕೆಂಬ ಯಿಚ್ಚೆವುಳ್ಳ ವಳಾಗಿ ಅದಕ ತಕ್ಕ ಯೇರುಪಾಡು ಮಾಡದೆಯಿರಲಿಲ್ಲ. ಅರರೇ ಪಟ್ಟಣ ಸೋಮಿಗಳಾ.. ದಯವಸ್ತರಾ.. ಪಟ್ಟಣದ ಹಿರೀಕರಾss ಅಂತೂ ಅರಮನೆಯ ವುಪ್ಪಿಂಗೆ ದ್ರೋಹ ಬಗೆಯುತ್ತಿರುವಿರಲ್ಲಾ.. ಬರುತಲಿದ್ದೆನೋ.. ಬಿಡುತಲಿದ್ದೆನೋ.. ವಂದು ಮಾತು ಕರೆಯದೆ ರಾಜಸತ್ತೆಯನ್ನು ವಂಚಿಸಿದಿರಲ್ಲಾ.. ಬೇಬಿಷ್ಟಿ ಮಾಡಿದಿರಲ್ಲಾ.. ತಾನು ಮಾಮೂಲು ಮನುಶ್ಯೋಳು ಅಂದಕೊಂಡಂಗದೀರೀs ತನ್ನೆಡತೋಳ ಮ್ಯಾಲಿರೋ ಪುವ್ವುಲ ರಾಜ ಚಿನ್ನೆಗಾರಾ ಗವುರವ ಕೊಡಬೌದಿತ್ತಲ್ಲ.. ಯಿರಲಿ ಯಿರಲಿ.. ಯಡಬಿಡಂಗಿ ಮೋಬಯ್ಯನ ಸರೀರದೊಳಗ ಸಾಂಬವಿ ಯೇಸು ದಿನ ಯಿದ್ದಾಳು.. ಚರಾಸ್ತಿ ಸ್ಥಿರಾಸ್ತೀನ ಅನುಭೋಸೋ ಹಕ್ಕೊಂದೆ ಮನ್ರೋ ಸಾಹೇಬ ಮುಂದೊಂದಿವಸ ಕೊಡದಂಗಿದ್ದಾನಾ... ಆಗ ತೋರಿಸುತ್ತೀನಿ.. ಯೀ ರಾಜಮಾತೆ ಯಂಥವಳೆಂಬುದನ.. ನಿಮ್ಮನ್ನು ನಿಮ ನಿಮ್ಮ ಹುದ್ದೆಗಳಿಂದ ವಜಾ ಮಾಡಿ...

ತನ್ನನ್ನು ಯಾರೊಬ್ಬರು ಗುರುತು ಹಿಡಿತಾಯಿಲ್ಲವಲ್ಲಾ.. ಪಲ್ಲಾಕಿ, ಡೋಲಿಯೊಳಗ ಬರಬೇಕಿದ್ದಾಕೆ ನಡಕೊಂಡೇ ಹೊಂಟಿಯಲ್ಲ ತಾಯೀ ಯಂದು ಯಾರೊಬ್ಬರು ಕೇಳುತಾಯಿಲ್ಲ ವಲ್ಲಾ.. ವಬ್ಬರಾರ ಮುಜುರೆ ಸಲ್ಲಿಸುತಾಯಿಲ್ಲವಲ್ಲಾ.. ದಾರಿಬಿಟ್ಟು ಹೋಳಾಗುತಾ ಯಿಲ್ಲವಲ್ಲಾ ಯಂಬ ಸಂಕಟದ ಕಾವಲಿ ಮ್ಯಾಲ ಬೇಯೂತ ಬೇಯೂತ.. ಯಲ್ಲಿದ್ದೀತು ಆ ಸಿಡೇಗಲ್ಲಗಸೇ ಬಾಕಲು, ಯಲ್ಲಿದ್ದೀತು ಆ ಕರಗಲ್ಲು.. ತಾನು ನಡದಂಗೆಲ್ಲ

ಅದು ದೂರಕ ಜರಗತಯ್ತೋ ಹೆಂಗೆ? ಅನಕಂತ.. ಅನಕಂತ ನಡುವಿನ ಮ್ಯಾಲೊಂದು ಕಯ್ನ, ಚೂರಿಯಂಥ ಕಣ್ಣಹುಬ್ಬಿನ ಮ್ಯಾಲೊಂದು ಕಯ್ನ ಯಿರಿಸಿ ನೋಡುತ್ತಾಳೆ.. ಅರೇ! ತಾನು...

ಆ ಸಿಡೇಗಲ್ಲು ಹಾದಿವಳಗೆ ಕರಗಲ್ಲು ಯಿತ್ತಲ್ಲಾ.. ಅದರ ಮಗ್ಗುಲು ತಾಯಿಯ ಬಿಸಿವು ಸುರಿಗೆ ಬಾಡುತಲಿದ್ದ ಅನುವಾದ ಬೇಯಿನಮರ ಯಿತ್ತಲ್ಲಾ... ಅದರ ಅಡೀಕೆ ಕ್ರುತಯುಗ ಕಾಲದಲ್ಲಿ ಯಿಸುವಾ ಮಿತ್ರಮುನಿಯು ತನ್ನ ಬೆವರಿನಿಂದ ನಾದಿ ಕಟ್ಟಿರುವ ಗದ್ದುಗೆ ಯಿತ್ತಲ್ಲ.. ಅಲ್ಲಿಗೇ ತಾನು ಬಂದು ಮುಟ್ಟಿರುವುದು. ಅಲ್ಲೇ ತಾಯಿಯ ವಸ್ತಿಗೆ ತಕ್ಕ ಯೇರುಪಾಡು ಮಾಡಿರುವಲ್ಲ.. ಬೆಳ್ಳಂಬೆಳಗು ವುರಿದು ಬೆಳಕು ಕೊಡೋಕೆ ನೂರಾವಂದು ದೀವಟಿಗೆಗಳ ಯೇರುಪಾಡು ಮಾಡಿರುವರಲ್ಲ.. ಸುಕ್ಕಾಡಿ, ದೊಮ್ಮಾರಿ, ನೊಣ, ಕ್ರಿಮಿ, ಕೀಟ ಮೋಡಿಸಲಕಂತ ಧೂಪ ಯಬ್ಬಿಸಿರುವರಲ್ಲ.. ತಾಯಿ ಯಚ್ಚರಾಗಲಕೊಂದು ಪದ ಹಾಡಲಕ, ತಾಯಿ ಮಲಗಲ ಕೊಂದು ಪದ ಹಾಡಲಕ ಯಂದು ಹತ್ತಾರು ಮಂದಿ ಕಂತಸ್ತೇರನ್ನು ಗೊತ್ತುಮಾಡಿರುವರಲ್ಲ.. ತಾಯಿಯ ಬ್ಯಾಸರಿಕೆ ಕಳೆಯಲಕಂತ, ಕಥೆ ಹೇಳಲಕಂತ ಅಯ್ದಾರು ಮಂದಿ ಅಡುಗೂಲಜ್ಜಿ ಯರನು ಕುಂಡರಿಸಿರುವರಲ್ಲ.. ತಾಯಿಗೆ ಸೆಕೆ ಆಗದಿರಲಂತ ಚವರಿ ಚಾಮರ ಬೀಸಲಕಂತ ನಾಲಕಯ್ದು ಹುಡುಗರನು ಯಡಬಲಕ ನಿಲ್ಲಿಸಿರುವರಲ್ಲ. ತಾಯಿಯ ಸುಕೋಮಲ ಸರೀರಕ್ಕ ಬಿಸಿಲು ತಾಕದಿರಲಂತ ಛತ್ರಿಹಿಡಿಯೋರನು ಯೇರುಪಾಡು ಮಾಡಿರುವರಲ್ಲ.. ನಗೆ ಚಾಟಿಕೆ ಮಾತಾಡಿ ತಾಯಿಯನ್ನು ನಗಿಸಲಕಂತ ಯಿದೂಷಕರನು ಯೇರುಪಾಡು ಮಾಡಿರುವರಲ್ಲ.. ತಾಯಿಯ ಹಸಿವು ತೀರಿಸಲಕಂತ.. ಬಾಯಾರಿಕೆ ತೀರಿಸಲಕಂತ.. ನಾನಾ ನಮೂನಿ ಯೇರುಪಾಡು ಮಾಡಿರುವರಲ್ಲ.. ಅಲ್ಲಿಗೇ ತಾನು ಬಂದಿರುವುದು.. ತಾಯಿಯ ಮಯಿಮಾವಳಿಗಳ ಕುರುತು ಪದ ಕಟ್ಟಿ ಹಾಡಲಕ ಹತ್ತಿರೋರು ಅಗೋ ಅಲ್ಲಿ ಪೀರಾ ಸಾಸ್ತಿರಿಯು.. ಯಿಗೋ ಯಿಲ್ಲಿ ಕಾಸೀಮ ಸಾಸ್ತಿರಿಯು.. ಯಂಟೂ ದಿಕ್ಕುಗಳಿಂದ ಹಿಂಡು ಹಿಂಡು ಮಂದಿ ಭಕುತರಾಗುತ ಬಂದು ಅಲ್ಲಲ್ಲೆ ವುದ್ದಂಡ ಪ್ರಣಾಮ ಸಲ್ಲಿಕೆ ಮಾಡುತಲಿದ್ದವರೆಷ್ಟೋ? ಆನಂದಾತಿರೇಕದಿಂದ ತಮ ತಮ್ಮ ಯುದೆಗಳನ ಬಡಕೋತಲಿದ್ದವರೆಷ್ಟೋ? ಅವ್ವನ ಮಾತು ಕೇಳಿಸಿ ಕೊಂಡೆವೆಂದೆನ್ನುತಲಿದ್ದ ಕಿವುಡ ಮಂದಿಯಷ್ಟೋ? ಅವ್ವನ ರೂಪ ಹೊಳೀತು ಯಂದೆನ್ನುತಲಿದ್ದ ಕುರುಡ ಮಂದಿಯಷ್ಟೋ? ತಾಯಿಯೇ ತಮ್ಮನ್ನಿಲ್ಲಿಗೆ ತಾನs

ಕಯ್ಯಿಡಿದು ಕರೆಕೊಂಡು ಬಂದಳು ಯಂದು ಹೇಳುತಲಿದ್ದ ಹೆಳಮಂದಿಯಷ್ಟೋ? ವಟ್ಟಲ್ಲಿ ಹಿಂಗs ಹೇಳಲಕಂತ ಅಂಗಯಿಕಲರು ಪಯಿಪೋಟಿಗ ಬಿದ್ದಿದ್ದರಂದರ ಬರೋಬ್ಬರಿ ಆತದ.. ವಡಲೊಳಗಿನ ನೀರು ಅಳ್ಳಾಡದಾಂಗೆ ಕೂಕಂಡಿದ್ದ ಮೂಳೆ ಮೋಬಯ್ಯ ವಳಗೊಳಗ, ಭಲಾ..ಭಲಾ.. ಯಂದುದ್ಗರಿಸುತಲವನೆ, ಕಾಚಿನವಾಸಣೆ ಮೂಗಿಗೆ ತಗುಲಲು ತಿರುಗಿ ನೋಡುತಾನ.. ಅಗೋ ಆಟು ದೂರದ ಪಾಸಲೆಯಲ್ಲಿ ಮಮ್ಮಲನ ಮರುಗೂತ ನಿಂತಿರುವ ಮುದೇದಂದರ ಮುದೇದು.. ಅದು ತನ್ನ ಕಡೇಕ ಬರಲಕ ಬಲು ಮಿಜಿ ಮಿಜಿ ಮಾಡುತಲಿರುವುದು ಯಂದು ತನಗರ್ಥವಾಗದೆಯಿರಲಿಲ್ಲ.. ಮಯ್ಯೊಳಗೆ ಬುಸುಗುಡುತ್ತಿರುವ ವುಪ್ಪನ್ನು ಹಂಗs ತಮಣಿ ಮಾಡಿಕೊಂಡ. ಆಕೆ ಪಿಕದಾನಿಯೊಳಗೆ ವುಗುಳುವಾಗ ತನ್ನ ಮುಂಗಯ್ಯಿಗ್ಯಾಕ ಅದರ ತುಂತುರು ತನ್ನ ಮಾರಿಗೂ ಸಿಡಿಯುತಲಿದ್ದುದುಂಟು. ಆಕೆ ಯದುರು ಮಾರೀನ ಸಿಂಡರಿಸಿಕೊಳ್ಳುವಂತಿರಲಿಲ್ಲ, ವರಸಿಕೊಳ್ಳುವಂತಿರಲಿಲ್ಲ. ಹಂಗs ವಮ್ಮೆ ಮಾಡಿದಾಗ ಫಠಾರಂತ ಕಪಾಳಕ್ಕ ಭಾರಿಸಿದ್ದಳು. ಬಾಸಾಳ ವಾರ ದಿನ ಮಾನ ತನ್ನ ಕೆನ್ನೆ ಮ್ಯಾಲ ಹಂಗs ವುಳಕೊಂಡಿತ್ತು. ರಾಜ ಪರಿವಾರ ದೋರ ಯಂಜಲವನ್ನು ಮಾಪರಸಾದ ಯಂದು ವಾದ ಮಾಡುತಲಿದ್ದ ತನ್ನ ತಂದೆಗೆ ತೋರಿಸಲಿಕ್ಕಾಗದೆ ತಾನು ವದ್ದಾಡುತಲಿದ್ದುದಂಟು. "ಮುಂದೆಂದಾರ ನನ್ ಮಗ ತೆಪ್ ಮಾಡಿದನಂದರ ವದ್ದು ಬುದ್ದಿ ಹೇಳಿರವ್ವಾ ದೊರೆಸಾನಿ.. ಆದರೆ ಅರಮನಿಯಿಂದ ಮಾತ್ರತಳ್ಳ ಬ್ಯಾಡೂರಿ" ಯಂದು ತಂದೆಯಾದವ ಹೇಳಿದಂದಿನಿಂದ ತಾನು ವುಗುಳು, ಯಂಜಲೊಂದ ಯಾಕೆ ಯಲ್ಲಾ ಹಿಂಸೆ ತಾಪತ್ರಯಗಳನು ಸಯ್ರಿಸಿಕೊಂಡು ಯೇಗಿರುವುದುಂಟು, ನೀಸಿರುವುದುಂಟು, ತನ್ನ ಕಣಸೊಳಗ ಸಾಂಬವಿ ಕಾಣಿಸಿಕೊಂಡಂದಿನಿಂದ.. ಯಂದು ಮುಂತಾಗಿ ತನಗೆ ತಾನss

ಅವುದೋ ಅಲ್ಲಮೋ ಯಂಬಂತೆ ವಾರೆಗಣ್ಣಿಂದ ರಾಜಮಾತೆ ಕಡೇಕ ನೋಡಿದ. ತನ್ನ ಮಾರಿ ಮ್ಯಾಲ ದಯವಿಕ ಕಳೆ ತಂದುಕೊಳ್ಳಲು....

ಅವುದು, ರಾಜಮಾತೆ ಭಯ್ರಮಾಂಬೆ ಸನೀಕ ಬರು ಬರುತ್ತಲೇ ಮುಂಗಾಲ ಕಸುವು ಕಳಕೊಂಡು ಮುಂದಕ ಹೆಜ್ಜೆ ಯತ್ತಿಡಲಕಾಗದೆ ವದ್ದಾಡುತಲಿದ್ದಳು. ತನ್ನನ್ನು ಯಾರೊಬ್ಬರೂ ಮಾತಾಡಿಸುತ್ತಿಲ್ಲವಲ್ಲಾ... ತನ್ನ ಕಡೀಕೆ ಯಾರೊಬ್ಬರೂ ನೋಡುತಿಲ್ಲವಲ್ಲಾ...ತಾನು ಮುಂದಕ ಹೋಗಲೋ,

ಬ್ಯಾಡಮೋ ಯಂದು ಅನುಮಾನಿಸೂತ.. ಮುಂದಕ ಹೋದಲ್ಲಿ ತನ್ನೂಳಿಗದ ತೊತ್ತಿನ ಕಾಲ ಬುಡಕ ಕುಂಡುರ ಬೇಕು, ಹಿಂದಕ ಹೋದಲ್ಲಿ ದಯವದೊಂದಿಗಿನ ಸಂಬಂಧ ತೆಗವಾಗತಯ್ತೆ..ಯೇನು ಮಾಡುವುದು ಯಂದು ತನ್ನ ಬಗ್ಗೆ ತಾನ ಮಮ್ಮಲ ಮರುಗಿಕೊಳ್ಳುತ...

ಕಣ್ಣುಮುಚ್ಚಿ ದಯವದ ದ್ರುಸ್ಯಾವಳೀನ ಸವಿಯುತಲಿದ್ದ, ಕಿವಿಮುಚ್ಚಿ ದಯುವ ಸಂಬಂಧೀನಾನಾ ನಾವುಾವಳೀನ ಕೇಳುತಲಿದ್ದ.. ಜಾವಜಾವಕ್ಕೊಂದೊಂದಾವರ್ತಿ ಹ್ವಾ...ಹ್ವಾ ತಾಯೇ, ಹ್ವೊ ಹ್ವೋ ತಾಯೇ ಯಂದುದ್ಗಾರ ತೆಗೆಯುತಲಿದ್ದ ಜಡೆತಾತ ಸಡನ್ನಂತ ಅಚ್ಚೇ ಕಡೇಕ ನೋಡುತ್ತಲೆ ಯೇಯ್ ಮುದುಕೀ.. ಯಂದು ಕೂಗುತ್ತಾನೆ.. ಬೆಚ್ಚಿ ಬಿದ್ದೀಕೆಯು ತಾತೋ.. ನಾನ್ ಕಣಪ್ಪಾ ರಾಜಮಾತೆ ಭಯ್ರಮಾಂಮ್ತಾಯಿ.. ಯಂದು ಜೋರಾಗಿ ಖೂನ ಗುರುತು ಹೇಳುತ್ತಾಳೆ.. “ಯಂಥಾ ಹುಚ್ಚೇಣುಮಗಳದೀ ನೀನು.. ಮಾತೆ ಯುಂಬುವ ಸಬುಧಕ್ಕ ದೇವತೆಯೆನಿಸಿಕೊಂಡಿರೋ ಸಾಂಬವಿಗೇ ಸರಿಹುದ್ದರಿಯಂಬಂತೆ ಆಡೋದಾ ನೀನು, ಯೀ ಭೂಮಿಮ್ಯಾಲ ಹರದಾಡೋ ಕ್ರಿಮಿ ಕೀಟಕ್ಕಿಂತ ಕಡೇಕ್ಕಡೇ ಅಂತ ನಿನಗ ನೀನು ಭಾವನೆ ಮಾಡಿಕೊಳ್ಳುವುದಿದ್ದಲ್ಲಿ ಮುಂದಕ ಬಂದು ವಸ್ತಿಯ ಕಾಲಿಗೆ ಬೀಳು.. ಯಿಲ್ಲಾ ಬಂದ ದಾರಿಗೆ ಸುಂಕಯಿಲ್ಲಾಂತ ತಿಳಕೊಂಡು ಹೆಂಗ ಬಂದ್ಯೋ... ಹಂಗss ನಡಕೋತ ಹೋಗಿ ಬಿಡಬೇಕು ನೋಡವ್ವಾ” ಯಂದು ಜೆಡೆತಾತ ಖುಲ್ಲಮ ಖುಲ್ಲ ನುಡಿದಾಡುತ್ತಾನೆ. ಭಕುತಾದಿ ಮಂದಿ ಸಿವನ್ನಾಮ ಪಾರೋತಿಪತಿ ಹರಹರ ಮಾದೇವs ಯಂದು ಕೂಗುತಯ್ತೆ.. ಆ ಕೂಗಿನಗುಂಟ ನಡಕೋತ ನಡಕೋತ ಮುಂದ ಮುಂದಕ ಮುದುಕಿ ಬಂದದ್ದಾತು.. ಸರೀರದ ಪಾದಗಳಿಗೆ ಕಯ್ಯಿಂದ ಮುಟ್ಟುವ ಮನಸಾಗುತಾಯಿಲ್ಲ.. ಹಣೆ ಮುಟ್ಟುವ ಮನಸು ಬರುತಾಯಿಲ್ಲ.. ಅದನು ನೋಡಿ ಭಕುತಾದಿ ಮಂದಿಯು “ಕುದುರೆಡವ ದೊರೆಸಾನಿ. ಭಕುತರಾಧೀನಿ.. ನಿನಗಾರು ಸರಿಯವ್ವಾ.. ಸರಿ ಅಂದವರ ಹಲ್ಲು ಮುರಿಯವ್ವಾ” ಯಂದು ಹಾಕಿದ ಜಯಘೋಷವು ಯಲ್ಲಿ ತನ್ನನ್ನು ಹೆಡಮುರಿಗೆ ಕಟ್ಟುವುದೋ ಯಂದು ರಾಜಮಾತೆ ಹೆದರಿದಳೆಂಬಲ್ಲಿಗೆ ಸಿವಸಂಕರ ಮಾದೇವsss ತಾನು ಮುಂದಕ ಹೋದಲ್ಲಿ ವದಗುವ ಆಪತ್ತಾವುದು? ತಾನು ಹಿಂದಕ ಹೋದಲ್ಲಿ ವದಗುವ ಯಿಪತ್ತಾವುದು? ಯಂದು ಯಸನ ಮಾಡಕಂತ, ಹಿಂದಲ ದಿನಗಳಲ್ಲಿ ತನ್ನಿಂದ ಯುಾವಾತನು ಕಾಲಿಂದೊದೆಸಿಕೊಂಬುತ ವುಾಪ್ರಸಾದ

ಯುಂಬುತಲಿದ್ದನೋ, ತನ್ನ ಯುಂಜಲಿ ಗಾಗಿ ಯುವಾವಾತನು ಅಡ್ಡಬುರಿಸುತಲಿದ್ದನೋ, ಯಾವಾತನು ತನ್ನ ಕಾಲ ಕೆಳಗೆ ಕಸದೋಪಾದಿ ಯಲ್ಲಿ ಬಿದ್ದುರತಿಲಿದ್ದನೋ ಅಂಥವನ ಸರೀರದೊಳಗ ಸಾಂಬವಿಯ ಸಯನ ಮಂದಿರ ಯಿರುವುದೆಂಬ ಮೂಹಾ ಗಾನದ ಕಾರಣಕ ರಾಜಮಾತೆಯಾದ ತಾನು ಅವಯ್ಯನ ಪಾದಕ ಮುಟ್ಟಿ ಸಣು ಮಾಡುವುದಾದರೂ ಹೆಂಗ? ಮಾಡದಿದ್ದರೆ ಸಿಟ್ಟಾಗುವ ಸಾಂಬವಿಯನ್ನು ತಮಣಿ ಮಾಡುವುದಾದರೂ ಹೆಂಗ? ಯೀಗ ವಾಪಾಸಾಗಿಬಿಟ್ಟಲ್ಲಿ ಪಟ್ಟಣದ ಪ್ರಜೆಗಳ ದ್ರುಸ್ಟೀಲಿ ತಾನು ಅಪಮವುಲ್ಯಗೊಂಡು ಬಿಡುವೆನೇನು? ಚಲಾವಣೀನ ಕಳಕೊಂಡು ಬಿಡವೆನೇನು? ನಾಕಾರು ಮಂದಿ ನಾಲಗೇನ ಹಾರವಾಗುವನೇನು? ಹಿಂಗss ಜಾವಜಾವಕ್ಕೊಂದೊಂದು ಯಿದದಲ್ಲಿ ಯೋಚನೆಯ ಮಾಡುತ.. ತನ್ನ ಸರೀರದ ಅಂತರಂಗ ಬಹಿರಂಗಗಳಲ್ಲಿ ವರೆದು ಕಿಲುಬಿಡಿದಿದ್ದ ರಾಜಸತ್ತೆಯ ಡಂಭಾಚಾರವನ್ನು ವುತಾರ ಮಾಡಲು ಮಿಕ್ಕು ಯಿಫಲ ಪ್ರಯತ್ನಂಗಳ ಮಾಡುತಲಿದ್ದಳು. ಯಾಕ ತಾನು ರಾಜಮಾರಾಜರ ಹೊಟ್ಟೇಲಿ ಹುಟ್ಟಿದೆನೋ? ಯಾಕ ತಾನು ರಾಜಮಾರಾಜರ ಕಯ್ನ ಹಿಡಿದೆನೋ? ಯಾಕ ತಾನು ಅರಮನೆಯ ಸುಪ್ಪತ್ತಿಗೆ ಮ್ಯಾಲ ಬೆಳೆದೆನೋ? ಯಾಕ ತಾನು ಭಂಗಾರದ ತಳಿಗೆ ಮ್ಯಾಲ ಬೋನ ನೀಡಿಸಿಕೊಂಡು ವುಂಬುತ್ತಿದ್ದೆನೋ...? ಹಿಂಗss ಹುಟ್ಟಿಸಿದ್ದು.. ಹಿಂಗs ಬೆಳೆಸಿದ್ದು.. ಹಿಂಗs ತರತಮ ಯೋಚನೆ ಮಾಡೋ ಬುದ್ದೀನ ಕೊಟ್ಟಿದ್ದು ನಿನ ತಪ್ಪು ತಾಯಿ..? ಯಿದೆನೆಲ್ಲ ಹೋಗಲಾಡಿಸುವುದು, ಅದನ್ನೆಲ್ಲ ಹೋಗಲಾಡಿಸುವುದು ತಾಯಿಯ ಕರತವ್ಯಾ ಅದs ಯೀಗಲುs ಅದನ್ನು ಕಳೆದು ಮಾಮೂಲು ಮನುಶ್ಯೋಳನ್ನು ಮಾಡಿದೀ ಅಂದರ ಆಗಲs ಅದನ್ನು ತಾನು ಸಿರಸಾವಹಿಸಿ ಪಾಲನ ಮಾಡುತೇನವ್ವಾ ಯಂದನಕಂತ ಅಲ್ಲೇ ವಂದು ಕಡೇಕ ಯೇಟೋ ಹೊತ್ತಿನ ತನಕ ತಾನು ಕೂಕಂಡೇ ಯಿದ್ದ ಳೆಂಬಲ್ಲಿಗೆ ಸಿವಸಂಕರ ಮಾದೇವss

* * * *

ಬಾಲಯೀರಾರೆಡ್ಡಿ ಅತ್ತ ವುರವಕೊಂಡದ ವಳಿತದೊಳಗಿದ್ದ ಗೊನೆಗೊಂಡ್ಲಯಂಬ ಸಮುಸ್ಥಾನದ ವುಸ್ತುವಾರಿಯನ್ನು ಕುಂಪಣಿ ಸರಕಾರದ ಬೆಂಬಲದಿಂದ ಹಿಡಿದಿದ್ದನು. ಸದರಿ ಸಮುಸ್ಥಾನ ಮೋಣೋಣಿಗೊಬ್ಬಬ್ಬರಂತೆಯಿದ್ದ ಸಾಮಂತರೊಂದೇ ಅಲ್ಲದೆ ತನ್ನ ಸೊಂತ

ಮಕ್ಕಳೇ ಸದರಿ ಕ್ರಮಕ್ಕೆ ಯಿರೋಧ ಯಕ್ತಪಡಿಸಿದ್ದರು. ಹೊತ್ತು ವಾಲಿದಂತೆ ಕೊಡೆ ಹಿಡಿಯಬೇಕೆಂದೂ, ಪರಂಗಿ ಮಂದಿ ಬಲಾಢ್ಯರಿದ್ದಾರೆ ಯಂದು ತಮ್ಮವರಿಗೆಲ್ಲ ಸಬೂಬು ಹೇಳಿದ್ದನು. ಆ ಸಬೂಬನ್ನು ವಪ್ಪದೆ ಅವರೆಲ್ಲ ತಮಗ ತಾವs ಸೊಸಂತರರಾಗಿದ್ದರು, ಕಳೆದೆರಡು ವರುಷಗಳಿಂದ ಪರಸ್ಪರ ದೊಂಬಿ ಗಲಾಟೆ ಆಗುತಲಿದ್ದವು. ಅವರ ಪಾಳೆಯದಲ್ಲಿದ್ದವರು ಯಿವರ ಪಾಳೆಯಕ್ಕೆ, ಯಿವರ ಪಾಳೆಯದಲ್ಲಿದ್ದವರು ಅವರ ಪಾಳೆಯಕ್ಕೆ ಪಾಳೆಯಾಂತರ ಮಾಡುತಲಿದ್ದುದು ಮಗುಮ್ಮಾಗಿ ನಡೆದೇಯಿತ್ತು. ತನ್ನ ಸಿಮ್ಮಾಸನದ ಮ್ಯಾಲ ಅಗೊಂದು ಯೀಗೊಂದರಂತೆ ಯೇಳುತಲಿದ್ದ ಮುಳ್ಳುಗಳನ್ನು ರೆಡ್ಡಿಯು ನಿರ್ದಯವಾಗಿ ಕಿತ್ತುಹಾಕುತ್ತಲೇ ಬಂದಿದ್ದನು. ಗೋಚರ ವಾಗುವ ಮುಳ್ಳುಗಳನ್ನು ಕೀಳುವಷ್ಟು ಸುಲಭವಾಗಿ ಅಗೋಚರ ಮುಳ್ಳುಗಳನ್ನು ಕೀಳುವುದು ಸುಲಭ ಯಿರಲಿಲ್ಲ. ಯೀಗ್ಗೆ ಕೆಲ ಕಾಲದ ಹಿಂದs ರೆಡ್ಡಿಯು ಕಿರಸ್ತಾನ ಧರುಮ ಪ್ರಚಾರ ಮಾಡಬಯಸಿದ ಫಾದರಿಗಳಿಗೆ, ಹೆಂಗಸರ ವಳವುಡುಪಗಳನ್ನು, ಪ್ರಸಾದನ ಸಾಧನಗಳನ್ನು ಮಾರ ಬಯಸಿದ ಪರಂಗಿ ವರ್ತಕರಿಗೆ, ಸದರಿ ಪಟ್ಟಣದ ಅಧಿದೇವತೆಯಾದ ಗೊನೆಗೊಂಡ್ಲೇಸ್ವರನ ಅಸದಳ ಗಾತುರದ ಪಾದರಕ್ಷೆಗಳನ್ನು ಕುರಿತು ಸಂಸೋಧನ ಮಾಡ ಬಯಿಸಿದ ಪರಂಗಿ ಯಿದ್ವಾಂಸರಿಗೆ, ಬ್ರಿಟನ್ ರಾಣಿ ಯಾವ ಪದವನ್ನು ಹಾಡುತ್ತಿರುವಳೋ, ಆಕೆ ಯಾವ ನಮೂನಿಯ ನ್ರುತ್ಯವನ್ನು ಮಾಡುತ್ತಿರುವಳೋ ಅಂಥಾದ್ದೇ ಕಲಾಪ್ರಕಾರ ಗಳನ್ನು ಕಲಿಸ ಬಯಸಿದ ಕಲಾಯಿದರಿಗೆ, ಬ್ರಿಟೀಷರ ಮದ್ಯ ಖಾದ್ಯಗಳನ್ನು ತಯಾರಿಕೆ ಯನ್ನು ಕಲಿಸ ಬಯಸಿದ ಪರಂಗಿಯ ಪಾಕಸಾಸ್ತ್ರನಿಪುಣರಿಗೆ, ಹಣ ಲೇವಾದೇವಿ ಮಾಡ ಬಯಸಿದ ಪರಂಗಿ ಆರ್ಥಿಕ ತಗ್ನರಿಗೆ ತಲಾ ವಬ್ಬೊಬ್ಬರಿಂದ ಯಿಂತಿಷ್ಟು ರುಸುಮು ವಸೂಲು ಮಾಡಿ ಸುಮುಸ್ಥಾನದ ವಳೀಕ್ಕೆ ವುದಾರವಾಗಿ ಬಿಟ್ಟುಕೊಂಡಿದ್ದನು.. ಯಿದಕ್ಕೆ ಸದರೀ ಸಮುಸ್ಥಾನ ವಂದೇ ಅಲ್ಲದೆ ಭರತಖಂಡದ ಅನೇಕ ದೇಸಗಳಲ್ಲಿ ಪರಂಗಿಯವರಿಗೆ ರತುನಗಂಬಳಿ ಸ್ವಾಗತ ನೀಡಿ ಬರಮಾಡಿಕೊಳ್ಳುವುದು ನಡೆದೇಯಿತ್ತು. ರೆಡ್ಡಿಗೆ ವಂದರ ಹಿಂದೊಂದರಂತೆ ಯಿರೋಧ ಯಕ್ತಗೊಂಡಿತು. ಫರಿಂಗಿಯವರ ಯಿರುದ್ಧದ ಪ್ರತಿಭಟನೆ ಸದರಿ ಪಟ್ಟಣದೊಳಗ ರಾಡಿ ರಂಪಾಟವಾಯಿತು. ಸಯ್ನಿಕ ಅಟ್ಟಹಾಸ ಮೆರೆದ ಪರಿಣಾಮವಾಗಿ ಅನೇಕ ಪ್ರಜೆಗಳು ಸಂತರಸ್ತಗೊಂಡರು.. ಅವರ ಪಯ್ಕಿ ಕೆಲವರು ಮಾರುಯೇಸದಲ್ಲಿ ಗಡೇಕಲ್ಲಿಗೆ ಹೋಗಿ ಅದೇ ತಾನೆ ನಾಕು ತುತ್ತು ವುಂಡು ಕೂತಿದ್ದಂಥ ಬೊಬ್ಬಿಲಿಗೆ

ತಮ್ಮ ಅಳಲು ಅಲವತ್ತುಕೊಂಡರು. ಅದನ್ನು ಕೇಳಿ ನಾಗಿರೆಡ್ಡಿಯು ಮಮ್ಮಲನೆ ಮರುಗದೆಯಿರಲಿಲ್ಲ.. ಮಾರನೆ ದಿನವೇ ತನ್ನವರನ್ನು ಮಾರುಯಾಸದಲ್ಲಿ ಗೊನೇಗೊಂಡಲಕ ಕಳುವಿ ಸಕಲೊಂದು ಮಾಹಿತಿಯನ್ನು ಸಂಗ್ರಹ ಮಾಡದೆ ಯಿರಲಿಲ್ಲ...

ಗೊನೆಗೊಂಡಲದ ಪಾಲಕನು ತನ್ನ ಹೆಂಡತಿಯ ದೂರದ ಸಂಬಂಧಿ ಅಂಬುವ ಕಾರಣಕ್ಕೆ ವಂದರ ಮ್ಯಾಲೊಂದರಂತೆ ಯಚ್ಚರಿಕೆಯ ಪತ್ರಗಳನ್ನು ಬರೆಯದೆ ಯಿರಲಿಲ್ಲ.. ನಾಗಿರೆಡ್ಡಿಯಿಂದ ತನಗೆ ಪ್ರಾಣಾಪಾಯ ವುಂಟೆಂದು ಬಾಲ ಯೀರಾರೆಡ್ಡಿಯು ಕುಂಪಣಿ ಅಧಿಕಾರಿಗೆ ಮರಣ ಕಯಿಫಿಯತ್ತನ್ನು ಸಲ್ಲಿಕೆ ಮಾಡಿ ವಾರಯ್ದು ದಿವಸ ಆಗಿತ್ತು. "ಬ್ಯಾಡಯ್ಯಾ ಯಾಕೋ ನನಗ ಬಲಗಣ್ಣು ಹಾರತಯ್ತೆ.. ಯಾಕೋ ನನ್ನ ಬಲದೊಡೆಯು ಬಡಕಂತಯ್ತೆ.. ದುಸೊಪುನಗಳನು ವಂದರ ಹಿಂದೊಂದರಂತೆ ಕಂಡಿರುವೆನು. ನೀನು ಮಾತ್ರನಾಗನಾಥ ತಾತನೋರ ಆರಾಧನೆಗೆ ಹೋಗೋದು ಬ್ಯಾಡ"ಯಂದು ಸ್ರೀಮತಿ ಕಮಲಮ್ಮ ತನ್ನ ಗಂಡನನ್ನು ಪರಿಪರಿಯಿಂದ ಅಲವತ್ತುಕೊಂಡಿದ್ದು ಯಲ್ಲಾರ ನಾಲಗೆ ಮ್ಯಾಲುಂಟು, ನಾಗನಾಥರು ತಮ್ಮ ಕುಲಗುರು ಆಗಿದ್ದವರು, ಅವರ ಆಸೀರುವಾದದ ಫಲವೇ ಯಿಷ್ಟೆಲ್ಲ.. ಅವರ ನೂರಾನಾಲ್ಕನೇ ಆರಾಧನಾ ಮಹೋತ್ಸವಕ್ಕೆ ತಾನು ಹೋಗದೆ ಯಿರಲಕಾದೀತಾ? ಹೆಂಡತಿಗೆ ಧಯರ್ಯ ಹೇಳಿ ಪಾಲಕನು ನಸೀಗ್ಗಿಲೆ ಹೊರಟು ಮೂರು ಗಾವುದ ದೂರದ ನಾಗಾಪುರವನ್ನು ತಲುಪಿದ್ದನು. ಅಲ್ಲಿ ಜನಮೋ ಜನ.. ಸುತ್ತಮುತ್ತ ಗಾಂಜಾದ ವಾಸನೆ.. ಸಾಧು ಸಂತಾವಧೂತರ ತುಟಿ ಸಂಧೀಲಿ ಹೆಂಡದ ನೊರೆ.. ಕಿವಿಗಡಚಿಕ್ಕುವಂಥ ಭಜನೆ ಸದ್ದು, ಆರಾಧನಾ ಮಹೋತ್ಸವವು ಸಂಜೆ ಹೊತ್ತಿಗೆ ಮುಗುಲು ಮುಟ್ಟಿತ್ತು. ಪರಸ್ಪರ ಖೂನು ಗುರುತು ಹಿಡಿಯದಷ್ಟು ಮಬ್ಬು ಕವಿದಿತ್ತು. ನಾಗನಾಥ ಅವಧೂತರು ಯಿದ್ದಕ್ಕಿದ್ದಂತೆ ನೂರಾರು ಮಂದಿ ಭಕುತರ ಮಯ್ಯೊಳಗೆ ಕಾಣಿಸಿಕೊಂಡು ಮೂರು ಗಳಿಗೆ ಕಳೆದಿರಲಿಲ್ಲ. ಸರಣರ ಗದ್ದುಗೆ ಯದುರು ಕಯ್ನು ಮುಕ್ಕೊಂಡು ಕಣುಮುಚ್ಚಿ ನಿಂತುಕೊಂಡಿದ್ದ ಬಾಲ ಯೀರಾರೆಡ್ಡಿಯವರ ರುಂಡವನ್ನು ಯಾರೋ ದುರಾತುಮರು ಮಚ್ಚಿನಿಂದ ಕೊಚ್ಚಿ ಕೆಡವಿಬಿಟ್ಟರೆಂದರೇನು ಸಿವ ಸಿವಾs...

ಮುಂಡಕ್ಕೆ ರುಂಡವನ್ನು ಹೊಲಿದಂಟಿಸಿ ರೆಡ್ಡಿಯ ಕಳೇಬರವನ್ನು ಸೂತಕವನ್ನು ಬಿತ್ತುತಾs ಬಿತ್ತುತಾs ಗೊನೆಗೊಂಡಲಕ್ಕ ತಂದೊಡನೆ.. ಸಿವ ಸಿವಾ.. ಹೊಡಿ ಬಡಿ ಕಡೀ ಯಂಬ ಮೂರು ಮುತ್ತಿನಂಥ ಸಬುಧಗಳು

ತುಂಬಿ ತುಳುಕಾಡಿದೊಡನೆ ಗೊನೆಗೊಂಡಲವು ಸಿವ ಸಿವಾ.. ಯಜ್ಜೆಗೊಬ್ಬೊಬ್ಬರಂತೆ ಸಯ್ನಿಕರು ಕಾಣಿಸಿಕೊಂಡರು ಸಿವ ಸಿವಾ.. ಬೊಬ್ಬಿಲಿ ನಾಗಿರೆಡ್ಡಿಯ ಕ್ರುತ್ಯಯಿದಾಗಿರುವುದೆಂದು ಭಾವಿಸಿ ಅವನ ಪರ ನಿಲುವಿನ ನೂರಾರು ಮಂದಿ ಅಮಾಯಕರ ಕಯ್ಯಿಕಾಲಿಗೆ ಕಟ್ಟಿ ಧರಧರನೆ ಯಳಕೊಂಡು ಹೋದರು ಸಿವ ಸಿವಾ... ಹತ್ತಾರು ಪಾರಿವಾಳಗಳು ಯೀ ಸುದ್ದಿಯನ್ನು ಹೊತ್ತು ತಂದಾಗ ಬೊಬ್ಬಲಿ ನಾಗಿರೆಡ್ಡಿಯು ಸಂಗಾಲದ ಸೇಸಸಯನ ರೆಡ್ಡಿ ವಡೆತನದಲ್ಲಿದ್ದ ಅಯಿವತ್ತಾರು ಅಗೇವುಗಳಿಂದ ದವಸ ಧಾನ್ಯವ ತೆಗೆಸಿ ಸಾವುರಾರು ಮಂದಿ ಬಡವರಿಗೆ ಹಂಚಿ ಜಂಗಾಲಂಯುಂಬ ವೂರೊಳಗ ಬಡಬಗ್ಗರ ಮೊರೆಯನ್ನಾಲಿಸುತ ಲಿದ್ದನು. ಬಾಲಯೀರಾರೆಡ್ಡಿಯ ಕಗ್ಗೊಲೆ ಸುದ್ದಿ ಕಿವಿಗೆ ಬಿದ್ದೊಡನೆ ಮಾ ಅಹಿಂಸಾವಾದಿಯಾದ ತಾನು ದಿಗ್ಭ್ರಾಂತನಾದನು. ತನ್ನ ಪರ ಯಿದ್ದವರನ್ನು ಅನುಕಂಪದಾಧಾರದ ಮ್ಯಾಲ ಪರಂಗಿಯವರು ಹಿಡಕೊಂಡು ಹೊಯ್ದಿರುವರು ಯಂಬ ಸುದ್ದಿ ಕೇಳಿ ಹುಬ್ಬುಗಂಟಿಕ್ಕಿದನು. ಯಿಧವೆಯಾಗಿದ್ದ ಕಮಲಮ್ಮಗೆ ನಿನ್ನಂಥ ಸೋದರಿಯರ ಹಣೆಯ ಮ್ಯಾಲಿಂದ ಕುಂಕುಮದ ಬೊಟ್ಟು ಯಿಳುವು ವಂಥ ದುರುಮಾರ್ಗ ನಾನಲ್ಲ ತಂಗೀ ಯಂಬ ಸಾಲುಗಳಿದ್ದ ವಕ್ಕಣಿಕೆಯನ್ನು ಗೊನೆಗೊಂಡಲಕ ರವಾನೆ ಮಾಡಿದನು. ಅಮಾಯಕ ಮಂದೀನ ಕೂಡಲೇ ಬಿಡುಗಡೆ ಮಾಡಬೇಕೆಂದು ಕುಂಪಣಿ ಸರಕಾರವನ್ನು ಗದ್ದರಿಸಿದನು. ಆದರೆ ಸರಕಾರದ ಮಂದಿ ತನ್ನ ಗದ್ದರಿಕೆಗಾಗಲೀ, ಮನವಿಗಾಗಲೀ ಮಣಿಯದಿದ್ದಾಗ....

ಮುಂದೊಂದೇ ಯಿರುಳಿನಲ್ಲಿ ಕೋಡಮೂರಿಂದ ಸ್ಟೂವರ್ಟನನ್ನೂ, ಚಂಡಲಗರುಕಿಯಿಂದ ಆ್ಯಂಡಿಯನ್ನು, ಮೂಸಾಪ್ರದಿಂದ ಹೇಸ್ಟಿಂಗಸನನ್ನೂ, ಯಮ್ಮಿಗನೂರಿನಿಂದ ಬಡಮಾಸನನ್ನೂ, ಗುಂತಕಲ್ಲಿನಿಂದ ಮುನಸೋಬಯ್ಯನಾದ ಡಿಸಕ್ಕನನ್ನೂ ಯೇಕ ಕಾಲಕ್ಕೆ ಅಪಹರಣ ಮಾಡಲಾಯಿತು. ಯಿವಿಷ್ಟೂ ಮಂದಿಯ ಹೆಂಡರು ಯಿಂಗಲೀಸಿನಲ್ಲಿ ಅತ್ತದ್ದನ್ನು ಬಳ್ಳಾರಿಯ ಕಛೇರಿ ಕೇಳಿಸಿಕೊಂಡು ಅವುಡುಗಚ್ಚಿತು. ಅನಂತಪುರದ ಹಾದೀಲಿದ್ದ ಥಾಮಸು ಮನ್ರೋ ಸಾಹೇಬನು ಆ ಕೂಡಲೆ ಗೊನೆಗೊಂಡಲಕ್ಕಾಗಮನಗೊಂಡನು.. ಕಲೆಟ್ಟರು ಸಾಹೇಬರಾ ಯಿದು ನಾಗಿರೆಡ್ಡಣ್ಣನ ಕ್ರುತ್ಯವಲ್ಲ.. ಅವನ ಬೆಂಬಲಿಗರನ್ನು ಬಿಡುಗಡೆ ಮಾಡಿದಿರಂದರ ಅವಣ್ಣನು ನಿಮ್ಮವರನ್ನು ಬಿಡುಗಡೆ ಮಾಡುತಾನ.. ಯಂದು ಖುದ್ದ ಕಮಲಮ್ಮನೇ ಹೇಳಿಕೆ ನೀಡಿದ್ದನ್ನು ಪಡಕೊಂಡವಯ್ಯನು

ಕೋಡಮೂರು, ಚಂಡಲಗುರುಕಿಯೇ ಮೊದಲಾದ ಅಯ್ದು ಹೋಬಳಿಗಳಿಗೆ ಹೋಗಿ "ಹೆದರಬ್ಯಾಡಿರವ್ವಾ.. ನಿಮಗಂಡಂದಿರನು ಕ್ಷೇಮದಿಂದ ಬಿಡುಗಡೆ ಮಾಡಿಸೋದು ಸರಕಾರದ ಕರ್ತವ್ಯ ಅಯ್ತೆ" ಯಂದವರವರ ಹೆಂಡಂದಿರಿಗೆ ಧಯರ್ಯ ಹೇಳಿದನು.. ತಾನು ಹೋದ ಕಡೇಲೆಲ್ಲ ಅಪರ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡದಿರಲಿಲ್ಲ ತಾನು, ಅವರಿಗೆಲ್ಲ ಛೀಮಾರಿ ಹಾಕದಿರಲಿಲ್ಲ ತಾನು, ಅವರವರ ಮೂಗುಗಳ ತುದಿಯಿಂದ ಮುಂಗೋಪವನ್ನು ವುತಾರ ಮಾಡದೆಯಿರಲಿಲ್ಲ ತಾನು. "ನೋ�ಡಿದಿರೇನರಯ್ಯಾ.. ಕೋಡಮೂರು, ಚಂಡಲಗುರುಕಿ, ಮೂಸಾಪ್ರ, ಯಮ್ಮಿಗನೂರು ಗುಂತಕಲ್ಲು ತಲಾ ನೂರು ನೂರು ಮಯ್ಲು ಅಂತರದಲ್ಲದಾವ.. ಯೇಕಕಾಲಕ್ಕೆ ಅಪಹರಣ ಮಾಡುವುದರ ಮೂಲಕ ನಾಗಿರೆಡ್ಡಿಯು ತನ್ನ ತಾಕತ್ತು ಯಷ್ಟೆಂಬುದನು ತೋರಿಸಿಕೊಟ್ಟಿರುವನು. ತಾನೀ ಪ್ರದೇಸಕ್ಕೆಲ್ಲ ಅನಭಿಷಕ್ತ ಸಾಮ್ರಾಟನೆಂಬುದನ್ನು ಸಾಬೀತುಮಾಡಿ ಕೊಟ್ಟಿರುವನು. ಯಿದಕವಯ್ಯನು ಸಯ್ನಿಕರನ್ನು ಯಿಟುಕೊಂಡಿಲ್ಲ.. ಕಯ್ಯೊಳಗ ಕೋವಿ ಹಿಡಕೊಂಡಿಲ್ಲ.. ಪ್ರೀತಿ, ದಯೆ, ಅನುಕಂಪ, ಛಲ, ತ್ಯಾಗ, ಪರಾಕ್ರಮ ಯಂಬ ಆರು ಆಯುಧಗಳ ಸಾಯದಿಂದ ಕುಂಪಣಿ ಸರಕಾರಕ್ಕ ಸವಾಲಾಗಿದ್ದಾನೆ.. ಆ ಬಡವರ ಬಂಧುವನ್ನು ನೋಡಿ ಮಾತಾಡುವ ಆಸೆ ನನಗೂ ಅಯ್ತೆ.. ಅದಕ ನಾನು ವಂದು ತಕ್ಕ ಯೇರುಪಾಡು ಮಾಡಲಿರುವೆನು. ನೀವ್ಯಾರೂ ನನ್ನ ಗಮನಕ್ಕ ತಾರದೆ ತಪ್ಪು ಹೆಜ್ಜೆಯನ್ನು ಮತ್ತೊಂದು ಸಲ ಯಿಡಬ್ಯಾಡಿರಿ" ಯಂದು ಮುಂತಾಗಿ ಅಧಿಕಾರಿಗಳನ್ನು ವುದ್ದೇಸಿಸಿ ಬುದ್ದಿವಾದ ಹೇಳಿದ ತಾನು..

ಅವಯ್ಯನ ಪ್ರಯತ್ನದ ಫಲವಾಗಿ ಸೆರೆಯಾಳುಗಳು ಯರಡೂ ಪಾಳೆಯಗಳಿಂದ ಬಿಡುಗಡೆ ಯಾಗದೆಯಿರಲಿಲ್ಲ.. ನಡೆದ ವಂದು ಯಿಚಿತ್ರಘಟನೆ ಅಂದರೆ ಗುಂತಕಲ್ಲಿನ ಮುನುಸೋಬಯ್ಯ ಡಿಸಕ್ಕ ವಾಶಯುನು ಬೊಬ್ಬಿಲಿನಾಗಿರೆಡ್ಡಿಯ ಬಗ್ಗೆ ವಂದು ಅನುಭವ ಕಥನವನ್ನು ಬರೆದನು. ಅದು ಲಂಡನ್ನಿನ ಫ್ರಾಂಟಿಯರು ಯಂಬ ಪತ್ರಿಕೆಯೊಳಗ ಪ್ರಕಟವಾಯಿತು. ಬೊಬ್ಬಲಿ ನಾಗಿರೆಡ್ಡಿಯು ಜಾನಪದ, ಸಾಂಸ್ಕೃತಿಕ ಪ್ರತಿನಾಯಕನೆಂದೂ, ಆಳುವ ಯವಸ್ಥೆಯ ಪ್ರತಿನಾಯಕನೆಂದೂ ಅದರಲ್ಲಿ ಯಿಶೇಷವಾಗಿ ಪ್ರಸ್ತಾಪಿಸಿದ್ದನು. ಬ್ರಿಟನ್ ರಾಣಿಯ ಗಮನಕ್ಕೂ ಹೋಯಿತೆಂದರೆ ಅದರ ಜನಪ್ರಿಯತೆ ಯಷ್ಟಿದ್ದೀತು? ಅತ್ಯುಚ್ಚಮಟ್ಟದ ಬ್ರಿಟನ್ ಅಧಿಕಾರಿಗಳು ರಾಣಿಯ ಸೂಚನೆ ಮೇರೆಗೆ ಡಿಸಕ್ಕನ ಲೇಖನ ಕುರಿತು

ಸುದೀರ್ಘವಾಗಿ ಚರ್ಚೆ ನಡೆಸಿದರು. ಬೊಬ್ಬಿಲಿನಾಗಿರೆಡ್ಡಿಯರಂಥ ಪ್ರತಿನಾಯಕರನ್ನು ವುದಾಸೀನ ಮಾಡದೆ ಆಗಿಂದಾಗ್ಗೆ ನಿಗ್ರಹಿಸುತ್ತಿರ ಬೇಕೆಂದೂ, ಯಾಕ ಯಿಂಥವರು ವುದ್ಭವವಾಗುತಾರಂಬುದರ ಕುರಿತು ಥಾಮಸ್ ಮನ್ರೋ ಅಲ್ಲದೆ ಬ್ಯಾರೆ ಯಾರು ಯೋಚಿಸಲಕ ಸಾಧ್ಯ ಯಂದು ಮುಂತಾಗಿ ಬರೆದು ಬಂಕಿಂಗ್ಯಾಮು ಅರಮನೆಯಿಂದ ಸಮುದ್ಧರದ ದ್ವಾರಾ ಮದರಾಸು ನಗರಕ್ಕೆ ರವಾನೆ ಮಾಡಿದರು. ಅಲ್ಲಿದ್ದ ಗವರ್ನರು ಸಾಹೇಬನಾದ ಯಲ್ಲೆಸ್ಲಿಯು ಅದನ್ನು ಕೂಲಂಕುಷ ಮೋದಿ ಷರಾ ಬರೆದು ಸುರುಳಿ ಸುತ್ತಿ ಕಡಪಾಕ್ಕೆ ರವಾನಿಸಿದನು. ಅಲ್ಲಿಂದ ಬಳ್ಳಾರಿಗೆ ಬಂದದು ಹುಡುಕಾಡುತದss..

ಯಲ್ಲೆಲ್ಲಿ ಬೊಬ್ಬಿಲಿ ನಾಗಿರೆಡ್ಡಿಯ ಪ್ರಾಬಲ್ಯಯಿತ್ತೋ, ಯಲ್ಲೆಲ್ಲಿ ಬರಗಾಲವು ರುದ್ರತಾಂಡವನ್ರುತ್ಯವನ್ನಾಡುತಲಿತ್ತೋ ಅಲ್ಲಲ್ಲಿ ಮನ್ರೋ ಸಾಹೇಬನು ತಂಗಾಳಿಯೋಪಾದಿಯಲ್ಲಿ ಸುತ್ತಾಡುತಲಿದ್ದ.. 'ಸುಭಿಕ್ಷ' ಯಂದು ಹೊಸ ಯೋಜನೆಯನ್ನು ಆರಂಭಗೊಳಿಸಿದ್ದನು. ಅದರ ವುಸ್ತುವಾರಿಯನ್ನು ಮುನುಸೋಬಯ್ಯನಾದ ಡಿಸೆಕ್ಕಗೆ (ಡಿಕನ್ಸ್) ವಹಿಸಿದ್ದನು. ಕಲೆಟ್ಟರು ಸಾಹೇಬನು ಯೀ ಪ್ರಕಾರವಾಗಿ ಜನರ ವಲುಮೆಯನ್ನು ಸಂಪಾದನೆ ಮಾಡುತಲೂ, ನಾಗಿರೆಡ್ಡಿಯ ಸುಳಿವನ್ನು ನೀಡಬಲ್ಲಂಥ ಸಂಚುಕೋರರನ್ನು ಹುಡುಕುತ್ತಲೂ ಯಿರುವಾಗ್ಗೆ...

ಅತ್ತ ಹರಪನಳ್ಳಿ ಸೀಮೆಯೊಳಗ ಯಲ್ಲಾ ಅಯೋಮಯವಾಗಿತ್ತು.. ಆಯಾ ಗ್ರಾಮಗಳ  ಮಂದಿ ಸೊಯಂ ಸ್ಪೂರ್ತಿಯಿಂದ ತಮ ತಮ್ಮ ರಾಜರುಗಳನ್ನು ತೊರೆದು ಮಲಸೀಮೆ ಕಡೇಕ ಗುಳೇ ಹೊಂಟಿದ್ದರೆ, ಯಿನ್ನೂ ಕೆಲವು ರಾಜರು ತಾವು ಸಜ್ಜನರೆಂದು ಸಾಬೀತು ಮಾಡಲಕೆಂದು ಬಗೆಬಗೆಯ ಯೇಸ ಭೂಸಣಗಳನ್ನು ಧರಿಸಲಾರಂಭಿಸಿದ್ದರು. ತಾವು ವಳ್ಳೆಯವರದೀವಿ.. ತವು ತಂಟೆಗೆ ಬರಬ್ಯಾಡಿರಪ್ಪಾ ಯಂದು ಪ್ರಜೆಗಳೆದುರು ಅಂಗಲಾಚಲಾರಂಭಿಸಿದ್ದರು. ಯಿನ್ನೂ ಕೆಲವು ರಾಜರುಗಳು ಭೂಗತರಾಗಿ ತಮ್ಮ ಪ್ರಜೆಗಳ ಯಿರುದ್ಧ ಹೋರಾಟ ನಡೆಸಿದ್ದರೆ, ಯಿನ್ನೂ ಕೆಲವು ರಾಜರುಗಳು ತಮ ತಮ್ಮ ರಾಣಿವಾಸದವರನ್ನು ಮುಂದೆ ಬಿಟ್ಟು ತಾವು ಆ ಹೆಣ್ಣುಪಿಳ್ಳೆಗಳ ಹಿಂದೆ ಅಡಗಿದ್ದು ಜೀವನ ನಡೆಸಲಾರಂಭಿಸಿದ್ದರು. ಹಂಡಗಳೆತ್ತುಗಳಾಗಿದ್ದ ರಾಜರುಗಳಿಗಾಗಲೀ, ಹರಪನಹಳ್ಳಿ ಸೀಮೆವಳಗೆ ಬರಯಿರಲಿಲ್ಲ.. ಸಿವ ಸಂಕರ ಮಾದೇವಾss

ಅತ್ತ ಕೂಡ್ಲಿಗಿ ಪಟ್ಟಣದೊಳಗ ಜರುಗುತಲಿದ್ದ ವರ್ತಮಾನಗಳು ಮನೆಗೊಂದೊಂದರಂತೆ ಯಿದ್ದವು ಸಿವನೇ.. ತಮ್ಮನ್ನು ಯಾಕ ಮಾಫು ಮಾಡಬೇಕೆಂದರೆ... ಯಂಬಂಥ ವಕ್ಕಣಿಕೆಗಳುಳ್ಳ ಮನವಿ ಸುರುಳಿಗಳನು ಹಿಡಕೊಂಡು ಅಮ್ಮನಕೇರಿ, ಗೊಲ್ರಟ್ಟಿ, ಸಾಲಟಿಗಿ, ಜಮ್ಮೋಬನಹಳ್ಳಿ, ಮಾರಲ ಮಡಕಿಯೇ ವೊದಲಾದ ಗ್ರಾಮುಗಳ ರಾಜರುಗಳು ಯಡ್ಡವರ್ಡನನ್ನು ಕಾಣಲೋಸುಗ ಧರುಮಛತ್ರಗಳಲ್ಲಿ ಬೀಡುಬಿಟ್ಟಿದ್ದರು.. ಆ ಸೀಮೆಯೊಳಗಂಥ ಯಿದ್ಯಮಾನವು ಯೀ ಸೀಮೆ ವಳಗ ಯಿಂಥ ಯಿದ್ಯಾಮಾನವು ಯಂದು ಪ್ರವಾಸ ಮುಗಿಸಿ ಸಜೀವವಾಗಿ ವಾಪಾಸು ಬಂದಿದ್ದಂಥವರು ಹತ್ತಾರು ಮಂದಿ ಕುತೂಹಲಿಗರ ನಡುವೆ ಆಕರ್ಸಕರಾಗಿದ್ದರು. ತ್ರಾಣಯಿದ್ದವರ ಸುದ್ದಿ ಕೇಳುತ ನಿತ್ರಾಣಗೊಂಡಂಥವರು ತಾವು ಬಲಶಾಲಿಗಳಾದೆವೆಂದು ಭ್ರಮಿಸುತಲಿದ್ದರು ಹಲವು ಕಡೇಕ.. ಅವಧೂತೆಯ ಪಟ್ಟಕ್ಕೆ ಮೂರೇ ಮೂರು ಮಯ್ಲಿ ದೂರ ಯಿದ್ದ ಜೆನ್ನಿಫರಮ್ಮ, ಅಪ್ಪಟ ಸಸ್ಯಾಹಾರಿಯಾಗಿದ್ದ ಜೆನ್ನಿಫರಮ್ಮ, ವುಂಡು ವುಪಾಸಿಣಿಯಂತಿದ್ದ ಜೆನ್ನಿಫರಮ್ಮ, ಬಳಸಿ ಬ್ರೆಮ್ಮಚಾರಿಣಿಯಂತಿದ್ದ ಜೆನ್ನಿಫರಮ್ಮ ಬಂಗಲೆಯಿಂದ ಆಗೊಮ್ಮೆ, ಯೀಗೊಮ್ಮೆ ಹೊರಬಂದು ಮಂದಿಗೆ ಸೋಭಾಯ ಮಾನವಾಗಿ ಕಾಣಿಸಿಕೊಳ್ಳು ತಲಿದ್ದಳು. ಸದರಿ ಪಟ್ಟಣದೊಳಗ ಯಾದೇ ಮದುವೆ, ಮುಂಜಿ, ಮರಣ ಸೂತಕಯಿರಲಿ.. ಅಲ್ಲಿಗೆ ತಾನು ಮಾಮೂಲು ಮನುಷ್ಯಳಂಗೆ ಹೋಗಿ ಭಾಗವಹಿಸಿ ರೋಮಾಂಚನ ವನ್ನುಂಟು ಮಾಡುತಲಿದ್ದಳು. ಆಕೆಯ ಅನುಪಮ ಹಾಜರಾತಿಗೆಂದೇ ಕೆಲವರು ತಮ ತಮ್ಮ ಮನೆಯೊಳಗ ವಂದಲ್ಲಾ ವಂದು ಸುಭ ಕಾರ್‍ಯೇವನ್ನು ಹಮ್ಮಿಕೊಳ್ಳುತಲಿದ್ದುದೂವುಂಟು. ವಂದು ಪಕ್ಷ ಆಕೆ ಬರಲಿಲ್ಲಂದರ ಯಾರೊಬ್ಬರು ಬ್ಯಾಸರ ಮಾಡಿಕೊಳ್ಳು ತಲಿರಲಿಲ್ಲ. ಮದುಮಕ್ಕಳು ತಾವೇ ಬಂಗಲೆಗೆ ಹೋಗಿ ಆಕೆಯಿಂದ ಆಸೀರುವಾದ, ಸಣಪುಟ್ಟ ಕಾಣಿಕೆ ಪಡೆಯುತಲಿದ್ದರು. ಬಾಣಂತಿಯರು ಅಲ್ಲಿಗೇ ಹೋಗಿ ತಮ್ಮ ಕೂಸುಗಳನ್ನಾ ತಾಯಿಗೆ ತೋರಿಸಿ ಆಸೀರುವಾದ ಪಡೆಯುತಲಿದ್ದರು. ಹಿಂಗಾಗಿ ತನ್ನ ಪತ್ನಿಯಿಂದಾಗಿ ತಮ್ಮ ಪ್ರತಿಷಿ«ತ ನಿವಾಸವು ಬಂಗಲೆತನ ಕಳಕೊಂಡು ಚಾವಡಿ ರೂಪ ಪಡೆಯುತ್ತಿರುವುದಲ್ಲಾ ಯಂದು ಯಸನ ಮಾಡುತ ಯಡ್ಡವರ್ಡನು ಸುಮ್ಮಕ ಕಯ್ಯಿಕಟ್ಟಿ ಕೂಕಂಡಿಯಿರಲಿಲ್ಲ.. ನೀವು ಸೂಕ್ಷ್ಮ ಮನಸ್ತತ್ವವುಳ್ಳ ನಿಮ್ಮ ಪತ್ನಿಯನ್ನು ಕುದುರೆಡವಿಗೆ ಕರಕೊಂಡಯ್ಯಬಾರದಿತ್ತು. ಅಲ್ಲಿನ ಘನಘೋರ ದ್ರುಸ್ಯಗಳನು ನೋಡಿದ ಪರಿಣಾಮವಾಗಿ ಆ ತಾಯಿಯನ್ನು ವಯರಾಗ್ಯವು

ಕಯ್ಯ ಬೀಸಿ ಕರೆಯುತ್ತಿರುವುದು ಯಂದು ಕುಂತಳ ನಾಡಿನ ಖ್ಯಾತ ಮನಸ್ಶಾಸ್ತ್ರಗ್ನನೂ, ಸಂಡೂರು, ಗುತ್ತಿ, ಸಿಡಿಗಿನಮೊಳೆಯ ಅರಮನೆಗಳಲ್ಲಿ ಕವುಟುಂಬಿಕ ಸಲಹೆದಾರನೂ ಆಗಿದ್ದ ಮೋಂಕಾರಯ್ಯನು ಹೇಳುತ ಯ್ಯಥೆ ಪಟ್ಟಿದ್ದನು. ಆಕೆಯ ಮನಃಪರಿವರ್ತನೆಯ ಸಲುವಾಗಿ ಯಡ್ಡವರ್ಡನು ಪತ್ನಿಯ ಮನಸ್ಸನ್ನು ನೋಯಿಸುವ ರೀತಿಯಲ್ಲಿ ಮಾತಾಡುವುದನ್ನು ಬಿಟ್ಟಿದ್ದನು. ಸೊತಹ ವಳ್ಳೆಯ ವಾದಕನಾದ ತಾನು ಭಾರಿಗಾತ್ರದ ಪಿಯಾನೋ ವಂದನ್ನು ತರಿಸಿರಿಸಿದ್ದನು. ಮಾರ್ಕ್ ಅಕನ್ವೆ ಡ್, ಥಾಮಸ್ ಆಟ್ವೇ, ಇಬ್ನೇ ಬಟೂಟಾ, ಗೊಂಗೋರಾ ಯಿವರೇ ಮೊದಲಾದವರು ಯಿರಚಿತ ಕ್ರುತಿಗಳನ್ನು ತರಿಸಿ ಪತ್ನಿಯ ಕಯ್ಯಿಗೆ, ಕಣ್ಣಿಗೆ ಯಟಕುವಂತೆ ಯಿರಿಸಿದ್ದನು. ಲಿಯೊನಾರ್ಡೋನ ಅಮರ ಕಲಾಕ್ರುತಿ ಮೊನಾಲೀಸಾಳನ್ನೂ ಸಹ.. ಅಗೋ ಅಲ್ಲಿ ಮಯ್ಕೇಲೆಂಜೆಲೋ.. ಯಿಗೋ ಯಿಲ್ಲಿ!!.... ಹಲವು ಬಣ್ಣಗಳ ಕುಡಿಕೆಗಳೋ, ಹಲವು ಯಿನ್ಯಾಸಗಳ ಕುಂಚಗಳೋ, ತನ್ನ ಯೋಜನೆಗೆ ಮಕುಟಪ್ರಾಯವಾಗಿ "ಪ್ರಿಯೆ.. ಕೆಲವೇ ತಿಂಗಳುಗಳಲ್ಲಿ ಲಂಡನ್ನಿನೊಳಗ ನಡೆಯಲ್ಲಿರುವ ಚಿತ್ರಕಲಾ ಪ್ರದರ್ಸನದಲ್ಲಿ ನೀನು ರಚಿಸಬೌದಾದ ಕಲಾಕ್ರುತಿ ಯಿದ್ದರೆ ಯಷ್ಟು ಚನ್ನ? ಖುದ್ದ ಯಂಪರರ್ರೇ ಬಹುಮಾನ ಯಿತರಿಸಲಿರುವರೆಂಬುದನ್ನು ಗ್ನಾಪಿಸಲು ನನಗೆ ಹೆಮ್ಮೆಯನಿಸುತ್ತದೆ."

ಯಿಂಥ ಕಸರತ್ತುಗಳ ಪುನರಾವರ್ತನೆಯು ತಿಲ್ಲಾನರವರ ಮನೇಲಿ ನಡೆಯುತಲಿತ್ತು. ತ್ರಿಕಾಲ ಪೂಜಿ ಪುನಸ್ಕಾರ, ಮಂದ್ರಸ್ತರದಲ್ಲಿ ಸಾರಂಗಿ ವಾದನ, ಯಾವಾಗಲೂ ಅಲವುಕೀಕದ ಬಗೆಗೇನೇ ಮಾತುಕತೆ, ಯಲ್ಲರ ಬಾಯಿಯಿಂದಲೂ ಯಲ್ಲ ಭಗವಂತನ ಯಿಚ್ಚೆ ಯಂಬ ವುದ್ಗಾರ.. ಮನೆ ಮುಂದಲ ಹೂದೋಟ ಮಲ್ಲಿಗೆ ಬಿಟ್ಟಲ್ಲಿ ಯಿನ್ನೊಂದು ಬಣ್ಣದ ಹುವ್ವುಂಟೇನು? ಯರಡು ಗಂಡು ಜಿಂಕೆಗಳು.. ವಂದು ಹೆಣ್ಣು ನವುಲು.. ನೋಡುವ ಭವಿಗಳಲ್ಲಿ ಯಿರಕ್ತಿ ಮೂಡಿಸುವಂಥ ಮನೆ, ಯಿದು ತಿಲ್ಲಾನ ತಾಯಕ್ಕಂದಾ ಯಂದು ನೋಡಿದವರು ಮೂಗಿನ ಮ್ಯಾಲ ಬೆರಳಿಟ್ಟುಕೊಂಡು ಬಿಡುವಂಥ ಮನೆ. ಸದರಿ ಮನೆಯೊಳಗಿನ ಪಾಕಶಾಲೆಯಲ್ಲಂತೂ ತಾಪಸಿಗಳಿಗೆ ಮಾತ್ರಪ್ರಿಯ ಯೆನಿಸಬೌದಾದಂಥ ವುಪ್ಪು, ಹುಳಿ, ಖಾರ, ರಹಿತ ಖಾದ್ಯಗಳು ತಯಾರಾಗುತಲಿತ್ತು. ಹದಿಹರೆಯದ ಮಗಳಿಗೆ ಸನ್ಯಾಸಿಣಿ ಪಟ್ಟ ಕಟ್ಟುವ ತಾಯಕ್ಕನ ಕ್ರಮವನ್ನು ಬುಗಡೆ ಬಲವಾಗಿ ಯಿರೋಧಿ ಸಿದ್ದನು. ತಾನು

ಕರಕೊಂಡು ಬಂದ ವರಗಳು ಚಿನ್ನಾಸಾನಿಯನ್ನು ನೋಡುತ್ತಲೆ ಯಿರಾಗಿಗಳಾಗಿ ಹೋಗಿದ್ದವು. ಹೆಂಗಪ್ಪಾ ತನ್ನ ಮಲಮಗಳ ಮುಖವನ್ನು ಲವುಕಿಕದ ಕಡೆಗೆ ತಿರುಗಿಸುವುದು ಯಂದಾತನು ಹಲುಬುತ್ತಿದ್ದುದಕ್ಕೆ ಮನ ಕರಗಿದ ಅರಗಿಣಿಯೊಂದು ಅಂಬಾರದೊಳಗೆ ತೇಲಾಡುತ ವುಪ್ಪರಿಗೆ ಮ್ಯಾಲ ಯೇದಾಂತ ಗ್ನಾನಸಿಂಧು ಗ್ರಂಥದ ಯೇಳನೆ ಚರಣವನ್ನು ಬಾಯಿಪಾಠ ಮಾಡುತಲಿದ್ದ ಆ ಮಾಸ್ವೇತೆಯ ಮುಂಗಯ್ಯಿ ಮ್ಯಾಲ ಕೂತು ಆಕೆಯ ಸವುಂದರ್ಯದ ಗುಣಗಾನದಾಲಾಪನೆ ಮಾಡಿತು. ಆದರಾಕೆಯ ಮುಖದ ಮ್ಯಾಲ ಲವುಕಿಕದ ವಂದು ಭಾವನೆ ಯಾರ ಮೂಡಲಿಲ್ಲ.. ಯಂಥಾಕಿಯಿದ್ದೀ ತ್ರಿಪುರ ಸುಂದರಿಯೇ.. ನಿನ್ನೊಳಗ ಯಿರೋ ಸರುವ ಸಂಪತ್ತನ್ನು ಅರ್ಥಮಾಡಿಕೊಳ್ಳಲಾರದಷ್ಟು ಅಮಾಯಕಳಿರುವೆಯಲ್ಲಾ.. ಯಂದು ಛೀಮಾರಿ ಹಾಕಿ ಹಾರಿ ಹೋಯಿತು. ತದನಂತರ ಗೋಡೆ ಮ್ಯಾಲಿನ ವರುಣ ಚಿತ್ರಗಳು ಜೀವಧಾರಣ ಮಾಡಿ ನೀನು ಅಸಾಧಾರಣ ಚಲುವೆಯಿರುವಿ.. ನಿನ್ನನ್ನು ನೀನು ನೋಡಿಕೋ.. ಯಂದು ಸಾರಿ ಸಾರಿ ಹೇಳಿದವಾದರೂ ಪ್ರಯೋಜನವಾಗಲಿಲ್ಲ.. ಮನೆಯೊಳಗಿದ್ದ ಕನ್ನಡಿಗಳು “ಅಯ್ಯೋ ನಮ್ಮೊಳಗ ನಿನ್ನನ್ನು ನೀನು ನೋಡಿಕೋಬ್ಯಾಡ.. ನಿಮ್ಮ ತಾಯಿಯ ಸಂಚಿನೊಳಗ ನಮ್ಮ ಪಾಲುಂಟು” ಯಂದು ಸಾರಿ ಸಾರಿ ಹೇಳಿದರೂ ಪ್ರಯೋಜನವಾಗಲಿಲ್ಲ. ಯಾಕಿವೆಲ್ಲ ತನ್ನನ್ನು ಗೋಳೊಯ್ದುಕೊಳ್ಳುತ್ತಿರುವವು.. ತನ್ನೊಳಗ ಅಂಥಾದ್ದೇನುಂಟು? ಯಂದು ಚಿಂತೆ ಮಾಡುತ ಆಕೆ ಯೇದಾಂತ ಗ್ರಂಥವನ್ನು ಮಡಚಿಟ್ಟು ಮ್ಲಾನವದನೆಯಾಗಿ ಕೂಕಂಡಿರುವಾಗ್ಗೆ ಮುದುಕಿಯೊಂದು ಕೇಸರಿ ಮಿಸ್ರಿತ ಹಾಲು ತುಂಬಿದ ಬೆಳ್ಳಿ ಜಾಮು ಹಿಡಕೊಂಡು ಅಲ್ಲಿಗೆ ಬಂತು. “ಭೇ...ಯವ್ವಾ.. ನಾನು ಸುಂದರಿ ಅದೀನೇನು?” ಯಂದು ಮುಗ್ಧತೆಯಿಂದ ಕೇಳಿದಳು. ಆಗ ಮುದುಕಿ ತನ್ನ ಬಾಯನ್ನು ಆಕೆಯ ಕಿವಿ ಸನೀಕ ತಂದು.. “ನಿನ್ನಂಥ ಸುಂದರಿ ಯೀ ಜಗತ್ತಿನೊಳಗ ಯಾರೊಬ್ಬರು ಯಿಲ್ಲ ಮೊಮ್ಮಗಳs” ಯಂದು ಪಿಸುಗುಟ್ಟಿತು. ಆಗಿದ್ದು ಆ ಚಲುವೆಯು “ಹಂಗಾರ ಕನ್ನಡಿಯೊಳಗ್ಯಾಕ ನನ್ನ ಪ್ರತಿಬಿಂಬ ಹೆಂಗೆಂಗೋ ಮೂಡುತದs” ಯಂದು ಪ್ರಸ್ನೆ ಹಾಕಿದ್ದಕ್ಕೆ ಅದು.. “ಅದೆಲ್ಲ ನಿನ್ನವ್ವನ ಸಂಚಯ್ತೆ.. ನಿನ ಚಂದ ನಿನಗ ಕಾಣಬಾರದಂತ ಮನೀ ವಳ ಹೊರಗ ವಯಿರಾಗ್ಯದ ವಾತಾವರಣsನ ಬೇಕೆಂದೇ ಸ್ರುಷ್ಟಿ« ಮಾಡ್ಯಾಳ ನಿನ್ನ ಮಾಯಾವಿ ತಾಯಿ.. ಬೇಕಾರ ನನ್ನ ಕಣ್ಣೊಳಗ ಯಿಣುಕಿ ನೋಡು. ನಿನ ಗೊಂಬಿ ಹೆಂಗs

ಥಳಥಳ ಅಂತ ಹೊಳೀತಯ್ತೆ ಅಂಬುದನ" ಯಂದು ಮುಂದಕ ಜರುಗಿ ಕಣ್ಣು ಹಿಗ್ಗಲಿಸಿತು. ಅಂಜುತ್ತ.. ಅಳುಕುತ್ತ ಚಿನ್ನಾಸಾನಿ ಮೆಲುಮೆಲ್ಲಕ ಯಿಣುಕಿ ನೋಡುತ್ತಾಳೆ, ಮುದುಕಿಯ ಕಣ್ಣುಗಳ ಪಾತಾಳದೊಳಗ ತನ್ನ ಪ್ರತಿಬಿಂಬ ಅದ್ವಿತೀಯ ಸವುಂದರ್ಯ ರಾಸಿಯಿಂದ ತುಂಬಿ ತುಳುಕಾಡುತ್ತಿರುವುದು.. "ಹೊ ಹ್ಹೋ ನಾನು ಚಂದದೀನಿ.. ಹ್ಹಾ.. ಹ್ಹಾ.. ನಾನು ಚಂದದೀನಿ.." ಯಿನ್ನೇನು ಆಕೆ ಕೂಗಿ ಪ್ರಪಂಚಕ್ಕೆ ಸಾರಬೇಕೆನ್ನುವಷ್ಟರಲ್ಲಿ ಮುದುಕಿ ತನ್ನಂಗಯ್ಯನ್ನು ಆ ತರುಣಿಯ ಚೆಂದುಟಿಗಳ ಮ್ಯಾಲಿಟ್ಟು "ಶ್ಯ್.. ಯಿದು ತಾಯಕ್ಕಗ ಗೊತ್ತಾದರ ಯಲ್ಲಾ ಅಯೋಮಯ ಆಗ್ತದss ನೀನು ಚಲುವೆಯಂಬ ಗುಟ್ಟು ನಿನ್ನೊಳಗs ಯಿರಲಿ.. ಅವಕಾಸಕ್ಕಾಗಿ ಕಾಯೋದು ಲವುಕಿಕದ ಧರುಮ ಅಯ್ತೆ.." ಯಂದು ಪಿಸುಗುಟ್ಟಿ ಬೊಚ್ಚಬಾಯಿ ತುಂಬ ಮುಸುಮುಸಿ ನಗುತ ಅಲ್ಲಿಂದ ಹೋಯಿತು. ಹಾಲು ಕುಡಿದಾದ ಮ್ಯಾಲ..

ಚಿನ್ನಾಸಾನಿ.. "ಯಲಯ್ ಕನ್ನಡಿಗಳಿರಾ.. ನನಗs ನನ್ನ ಪ್ರತಿಬಿಂಬವನ್ನು ನಕಲಿಮಾಡಿ ತೋರಿಸುತ್ತಿರುವಿರಾ.. ಯಿಗೋ ನಿಮಗ ನನ್ನ ಸಾಪ.." ಯಂದು ಹೇಳುತ್ತಿರುವಷ್ಟರಲ್ಲಿ ಕನ್ನಡಿಯು "ಸಾಪ ಕೊಟ್ಟು ನಮ್ಮನ್ನು ರವುರವ ನರಕಕ್ಕ ದೂಕಬ್ಯಾಡ.. ಯಿದರಾಗ ನಮ್ದು ತಪ್ಪಿಲ್ಲ.. ಮಾಫ್ ಮಾಡು" ಯಂದು ದಯುನಾಸಪಟ್ಟು ಕೇಳಿಕೊಂಡವು. ಸದ್ಯಕ್ಕ ಆಕೆಯು ಕೋಪ ತಮಣಿಗೊಂಡಿತೆಂಬಲ್ಲಿಗೆ ಸಿವ ಸಂಕರ ಮಾದೇವಾss

ಆ ಕ್ಷಣದಿಂದ ಚಿನ್ನಾಸಾನಿಯು ದಿವ್ಯಸರೀರದಿಂದ ವಾಸ್ವೇತೆ ವುತಾರಗೊಂಡದ್ದು ತಡ ಆಗಲಿಲ್ಲ.. ಆ ಜಾಗವನ್ನು ಸ್ರುಂಗಾರ ನೈಷಧಮುಕಾವ್ಯಕ್ರುತಿಯ ನಾಯಕಿ ವರೂಥಿನಿ ಆಕ್ರಮಿಸಿದ್ದೂ ತಡ ಆಗಲಿಲ್ಲ.. ಆಕೆಯ ಸರೀರದೊಳಗಿನ ನಂದನ ವನ ಯಿಹಾರಿಣಿಯಾದ ವರೂಥಿನಿಯು ಕಿಲಕಿಲನ ನಗಾಡಲಕ.. ಕಚಗುಳ್ಳಿಯಿಟ್ಟು ನಗಾಡಿಸಲಕ.. ಅಗೋ ಅಲ್ಲಿ ಜಾತುರಿss ಯಿಗೋ ಯಿಲ್ಲಿ ಪರಿಶೆss ಯಂದು ಬೊಟ್ಟು ಮಾಡಿ ತೋರಿಸಲಕ ಹತ್ತಿದ್ದು ತಡ ಆಗಲಿಲ್ಲ....

ಕೊಂಗನಾಡಿನ ಕಡೇಲಿಂದ ಯೇಳು ಮಂದಿ ಮಾರೆಮ್ಮಗಳೊಂದೇ ಅಲ್ಲದೆ ದೊಡ್ಡಳ್ಳಿಯಿಂದ ದೊಡ್ಡಮ್ಮ, ಚಿಕ್ಕಳ್ಳಿಯಿಂದ ಚಿಕ್ಕಮ್ಮ, ನಡುನಳ್ಳಿಯಿಂದ ನಡುಲಮ್ಮ, ಪಡುವಳ್ಳಿಯಿಂದ ಪಡುಲಮ್ಮ, ಮೂಡಲಳ್ಳಿಯಿಂದ ಮೂಡಲಮ್ಮ, ತೆಂಕಲಳ್ಳಿಯಿಂದ ತೆಂಕಲಮ್ಮ, ಬಡಗಲಳ್ಳಿಯಿಂದ ಬಡಗಲಮ್ಮ ಮುಂತಾದ

ದೇವತೆಗಳು ನಸಿಗ್ಗೀಲೆ ಹೊಂಟಿದ್ದರು ಕುದುರೆಡವಲ್ಲಯ್ತೆ.. ಕುದುರೆಡವೆಲ್ಲಯ್ತೆ ಯಂದು ಕೇಳಿಕಂತ.. ತಾವು ಹೊಂಟಿರೋ ಪರಿಣಾಮವಾಗಿ ತಮ ತಮ್ಮ ವೂರುಗಳು ಅನಾಥವಾಗುತಾವಲ್ಲ.. ತಮ ತಮ್ಮ ದಿಕ್ಕುಗಳು ಅನಾಥವಾಗುತಾವಲ್ಲ.. ತಾವು ಕರನಾಟ ದೇಸಕ್ಕ ಗುಳೇ ಹೊಂಟು ಬಂದಿರುವ ಪರಿಣಾಮವಾಗಿ ತಮಕೊಂಗ ನಾಡೇ ಅನಾಥವಾಗತಯ್ತಲ್ಲಾ.. ವಬ್ಬರಿಗೊಬ್ಬರು ನಮ ಮೂರು ಪಾಡs ತಮ ಮೂರು ಪಾಡs ಯಂದು ವಾದಾಡಿಕೋತ ಕಾಲು ಹರಿಯೋ ಹಂಗ ನಡೀತಾರ. ಆದರ ಕುದುರೆಡವು ಯಂಬ ಹೆಸರಿನ ಮೂರು ಕಣ್ಣಿಗೆ ಬೀಳುತಾಯಿಲ್ಲ.. ಅವರನ್ನು ಕೇಳಿದರ ಹಂಗs ಹ್ವಾಗಿರಿ ಅಮುತಾರ.. ಯಿವರನ್ನು ಕೇಳಿದರ ಹಿಂಗss ಹ್ವಾಗಿರಿ ಅಮುತಾರ.. ಯಲ್ಲಿದ್ದೀತಪ್ಪಾ.. ಕುದುರೆಡವು? ಯಾವ ಕಡೇಕ ಯಿದ್ದೀ ತಪ್ಪಾ ಕುದುರೆಡವು? ಯಿನ್ನೇಸು ದೂರ ಯಿದ್ದೀತಪ್ಪಾ ಕುದುರೆಡವು? ತಮ್ಮ ಕಾಲಿಗಟೆವಲ್ಲದಲ್ಲಾ ಕುದುರೆಡವು? ತಮ್ಮ ಕಣ್ಣಿಗೆಟಕುವಲ್ಲದಲ್ಲಾ ಕುದುರೆಡವು.. ಮಾತಾಯಿ ಸಾಂಬವಿಯು, ಮಾ ಮಾಟಗಾರ್ತಿ ಸಾಂಬವಿಯು ಕುದುರೆಡವು ಯಂಬ ಪಟ್ಟಣವನ್ನು ಸುರುಳಿs ಸುತ್ತಿ ಬಗಲಾಗ ಯಿಟುಕೊಂಡು ದೇವಲೋಕದ ಕಡೆಕ ಹೊತಾ ಹೋಗಿರುವಳೋ ಹೆಂಗೆ? ಯಂದು ವುಂತಾಗಿ ಗಳಿಗ್ಗಳಿಗೊಂದೊಂದು ಸಲ ಮಾತಾಡಿಕೊಳ್ಳುತ.. ಜಾವ ಜಾವಕ್ಕೊಂದೊಂದು ಸಲ ಯಸನ ಮಾಡುತ.. ಮರ ಬಂದಲ್ಲಿ ದಣುವಾರಿಸಿಕೊಳ್ಳುತ.. ಹಣ್ಣು ಹಂಪಲ ಕಂಡಲ್ಲಿ ತಿಂದು ಹಸಿವೆ ತೀರಿಸಿಕೊಳ್ಳುತ.. ನೀರು ಕಂಡಲ್ಲಿ ಕುಡಿದು ಬಾಯಾರಿಸಿಕೊಳ್ಳುತ....

ಅತ್ತ ಕುದುರೆಡವು ಪಟ್ಟಣದ ತುಂಬೆಲ್ಲ ಮಡಿಯುಡಿತನವು.. ಸಖೇದ ಸಂಭರಮಾಶ್ಚರ್ಯವು.. ಆನಂದೋದ್ಗಾರವು.. ತಾಯಿ ಪಟ್ಟಣದೊಳಗೆ ಪಾದ ಮೂಡಿಸುವಳೋ ಯಿಲ್ಲವೋ ಯಂಬ ಭಯ ಆತಂಕವು.. ಆಕೇನ ಸಂಪ್ರೀತಿಗೊಳಿಸಲಕೆಂದು.. ಆಕೆಯ ಮುನುಸನ್ನು ತಮಣಿ ಮಾಡಲಕೆಂದು.. ಆಕೇನ ಬಗೆಬಗೇಲಿ ವೋಲಯಿಸಲಕೆಂದು..ಆಕೆಯು ಕ್ರುಪಾಕಟಾಕ್ಷಕ ಭಾಜನರಾಗಲಕೆಂದು.. ಆಕೆಯ ಪಾದಗಳ ಬುಡಕ ಕಡಕೊಂಡು ಬೀಳಲಕೆಂದು.. ಆಕೆಯ ಕರುಣೆಯ ಕಡಲೊಳಗಿಂದ ವಂದು ಬಿಂದು ಪಡೆದು ಧನ್ಯರಾಗಲಕೆಂದು..

ಸದರಿ ಪಟ್ಟಣದ ಮಂದಿ ವಂದೇ ಅಲ್ಲ ಸಿವನೇ...

ಆಜು ಬಾಜೂಕಿದ್ದ ಹಳ್ಳಿ ಪಳ್ಳಿ ಗ್ರಾಮು ಗೀಮು ಹೋಬಳಿ

ಗೀಬಳಿಗಳಿಂದೊಂದೇ ಅಲ್ಲ ಸಿವನೇ.. ಸಮಸ್ತ ಕುಂತಳ ಪ್ರಾಂತದೊಳಗೆ ಅನಾದಿ ಕಾಲದಿಂಲೂ ಅಮರಿದ್ದ, ಯಿಮುರಿದ್ದ ಮೂರು ಕೇರಿಗಳೆಲ್ಲ ತಮ ತಮ್ಮ ಕರಣ ಯಿಂದ್ರಿಯಂಗಳ ಸಮೇತ ಕುದುರೆಡವು ಕಡೇಕ ಮುಖ ಮಾಡಿದ್ದವು. ಸವುಡು ಸಿಕ್ಕವರು ತಮ ತಮ್ಮ ಸರೀರಗಳ ಸಮೇತ ಬೂದಿಮುಚ್ಚಿದ ಕೆಂಡದೋಪಾದಿಯ ಸದರಿ ಪಟ್ಟಣಕ್ಕ ಹೊಂಟು ಬಂದಿದ್ದರು.. ಪುರುಸೊತ್ತು ಸಿಕ್ಕದವರು ತಮ ತಮ್ಮ ಪಂಚೇಂದ್ರಿಯಂಗಳನು ಪುಣ್ಯದುದುಕದೊಳಗ ಮಿಂದೇಳುವ ನಿಮಿತ್ತ ಸದರಿ ಪಟ್ಟಣಕ್ಕ ಕಳುವಿದ್ದರು.. ಬರೋರು ಬರುತಲೇ ಯಿದ್ದರು.. ಹೋಗೋರು ಹೋಗುತಲೇ ಯಿದ್ದರು.. ಹಾಜರಿ, ಗಯ್ರುಹಾಜರಿಗಳ ನಡುವಿನ ಅಂತರ ಜಾವಜಾವಕ್ಕ ಹೆಚ್ಚು ಕಡಿಮೆ ಆಗುತಲಿತ್ತು..

ಬಿಲ್ವ, ಜುಮ್ಮಿ, ಬನ್ನಿ, ವುತ್ತರಾಣಿ, ಗರುಕೆ, ಹೊಂಗೆಯೇ ಮೊದಲಾದ ಛಪ್ಪನ್ನಾರು ಜಾತಿಯ ತರುಲತೆ ಗಿಡಗಳ ತೊಪ್ಪಲ ದೆಸೆಯಿಂದಲೂ, ಪಿತಾಂಬರಿ ಜರತಾರಿ ಅರುವೆಗಳಿಂದಲೂ, ಕಪ್ಪು ಬಿಳುಪು ಕಂಬಳಿಗಳಿಂದಲೂ ಸಜ್ಜುಗೊಳಿಸಿದ್ದ ಹಂಸತೂಲಿಕ ತಲ್ಪದ ಮ್ಯಾಲ ಗುಡಿ ಹಿಂದಲ ಮೂಳೆ ಮೋಬಯ್ಯ ಯಂಬ ಹೆಸರುಳ್ಳ ಸರೀರವು ಗಳಿಗ್ಗಳಿಗೊಂದು ಸಾರಿ ಕಾಲು ಚಾಚಿ ವುದ್ದವಾಗುತಲಿತ್ತು.. ಕಯ್ನ ಮಡಚಿ ತಲೆ ಅಡೀಕೆ, ಯದೆ ಮ್ಯಾಲ ಯಿಟ್ಟು ಕೊಳ್ಳುತಲಿತ್ತು.. ಬೆರಳುಗಳ ಮಿಸುಕಾಡಿ ಯೇನೇನೋ ಸಂಗನೆ ಮಾಡುತಲಿತ್ತು.. ಸುತಮುತ್ತ ಪಿಳಿಪಿಳಿ ಕಣ್ಣುಬಿಟ್ಟು ಯೇನನ್ನೋ ನೋಡುತಲಿತ್ತು.. ಕಿವಿ ಅಗ್ಗಲ ಮಾಡಿ ಯೇನನ್ನೋ ಕೇಳಿಸಿಕೊಳ್ಳುತಲಿತ್ತು.. ಬಾಯಿ ತೆರೆದು ದ್ದೊನಿ ಪರಂಪರೆಯನ್ನು ಹೊಂಡಿಸುತಲಿತ್ತು.. ಕೂಕಂಡಂಗೆ ಮಾಡುತಲಿತ್ತು.. ಯದ್ದಂಗೆ ಮಾಡುತಲಿತ್ತು.. ನಡದಾಡಿದಂಗೆ ಮಾಡುತಲಿತ್ತು.. ಆ ಸರೀರವು.. ಅವ್ವನ್ನ ಹೊಳೆಗ ಹೊಂಡಿಸುವ ಯಿದಿ ಯಿಧಾನಗಳ ಕುರಿತು ತರ್ಜನ ಭರ್ಜನ ಮಾಡುತ ಪಟ್ಟಣ ಸೋಮಿಗಳೊಂದಿಗೆ ಕೂಕಂಡಿದ್ದವರು ಯಾರಪಾ ಅಂದರ ಗೊಂಜಾಲರಡವೆಜ್ಜ. ತನ್ನ ಸರೀರದ ಮ್ಯಾಲ ಯೇಸು ಕೂದಲುಗಳಿರುವವೋ ಆಸು ವರುಷಗಳ ಹಿಂದೆ ಹುಟ್ಟಿದವನೆನ್ನಲಾದ ಪೂರುವಿಕ ಜಡೆತಾತ.. ಸಾವಿರಾರು ಕುರಿ ಕೋಳಿ ವಂದಿಗನೂ, ಪಸುರೋಗ ರುಜಿಣ ತಗ್ನನೂ, ಪ್ರತಿದಿನವನ್ನು ಜವರಾಯನಾಗಮನಕ್ಕೆ ಮೀಸಲಿಟ್ಟು ಕಾಯುತ್ತಿರುವಂಥವನೂ ಆದ ಕೆಂಗುರೆಜ್ಜ ಯಿವರೊಂದೇ ಅಲ್ಲದೆ ಫಲಾನ ತಕರಾರಯ್ಯನೂ, ಫಲಾನ ಅನುಮಾನಯ್ಯನೂ.. ಅವರೆಲ್ಲರ ನುಡವೆ.. ಯಿವರೆಲ್ಲರ ನಡುವೆ ಚರ್ಚೆ ನಡಿತಾ

ಅಯ್ತೆ.. ವಬ್ಬೊಬ್ಬರು ವಂದೊಂದು ಯಿದವಾಗಿ ಯಾಖ್ಯಾನ ಮಾಡುತವರೇss ಮಾಡು ತವರೇsss

ತಾವು ಹುಟ್ಟಿ ಯೇಸು ಸಮುವಚ್ಚರಗಳಳಿದಿರಬೌದು? ಯೇನು ಕಥೆ? ತಾಯಿ ಹೊಳೆಗೆ ಹೊಂಡುವ ಪರಿಕ್ರಮ ಕುರುತು ನಿಚ್ಚಳವಾಗಿ ಹೇಳುವಂಥ ಮಾನುಭಾವರು ತಮ್ಮ ಪಯ್ಕಿ ವಬ್ಬರಾರ ಯಿಲ್ಲವಲ್ಲ.. ಯಾಲಪಿ, ಕಗ್ಗಲ್ಲು, ಹಡಲಗಿ, ಸಿರುವಾರಗಳಲ್ಲಿ ಭೋ ಕಾಲದ ಹಿಂದೆ ಯಾಲಪಮ್ಮ, ಕಗ್ಗಲ್ಲಮ್ಮ, ಹಡಲಗೆಮ್ಮ, ಸಿರುವಾರದಮ್ಮಂದಿರನ್ನು ಹೊಳೆಗೊಂಡಿಸುವ ಕಾರ್ಯೇವು ನಡೆದ ಸಂಗತಿ ತಮಗಾರಿಗೆ ಗೊತ್ತುಂಟು? ತಮಗಾರಿಗೆ ಗೊತ್ತಿಲ್ಲದುಂಟು? ಆ ಸಮಯಕ್ಕ ತಮ್ಮ ಪಯ್ಕಿ ಯಾರು ಹುಟ್ಟಿದ್ದರು, ಯಾರು ವೊಲೆ ಜಮಡುತಲಿದ್ದರು.. ಯಾರು ಹರೇವಿಗೆ ಬಂದಿದ್ದರು.. ಯಂದು ಲೆಕ್ಕಾಚಾರ ಮಾಡುತ್ತ ಹೋದಲ್ಲಿ.. ಅವರಿವರ ನೆನಪುಗಳನ್ನು ಪೋಣಿಸಿ ಆಕಾರ ಕೊಡುತ್ತ ಹೋದಲ್ಲಿ.. ಅವ್ವನ್ನ ಹೊಳೆಗೆ ಹೊಂಡಿಸುವುದೆಂದರೆ, ಲಗ್ಗುನ, ಸೋಬುನ, ನಾಮಕರಣ ಕಾರ್ಯೇವುಗಳಷ್ಟು ಸುಬುನವಲ್ಲವೆಂದು ಹೇಳುತ್ತ ಹೋದಲ್ಲಿ.. ಅರೀದವರಾದ ತಾವು ಮುಂಗಾಲು ಪುಟುಗೇಲಿ ಮಾಡಿದೆವೆಂದರೆ ವಂದು ಹೆಚ್ಚು, ವಂದು ಕಡಿಮೆಯಾಗಿ ತಾಯಿ ಮುನುಸುಕೊಂಡು ಹಿಡಿ ಹಿಡಿ ಸಾಪಕೊಟ್ಟು ತಮ್ಮಂಥ ನರಹುಳುಗಳನ್ನು ಸುಟ್ಟು ಭಸುಮ ಮಾಡಿದಲ್ಲಿ.. ಯಾಕಿದ್ದೀತಪಾ? ಯಾಕಿದ್ದೀತಪಾ? ತಮಗಿಂತ ಪೂರುವಿಕರು ಯಾರಾದರುವುಂಟಾ ಸದರಿ ಪಟ್ಟಣದ ಕಣ್ಣಳತೆಯೊಳಗ.. ಕೂಗಳತೆಯೊಳಗ ಯಂದು ಯೋಜನೆ ಮಾಡುತಾ ಹೋದಲ್ಲಿ..

ಕರೆ ಕಳಿಸಿದೊಡನೆ ಬಡೇಲಡಕಿನಿಂದ ಸರಬಜ್ಜನು, ಕುಮತಿಯಿಂದ ಕರೆಜ್ಜನು, ಗುಂಡು ಮುಳುಗಿನಿಂದ ಡೋಮಜ್ಜನು, ಕಾನಾಮಡುಗಿನಿಂದ ಕಾವಳಜ್ಜ ಬಂದರೆಂದರೆ ಬಂದರು. "ನೋಡಿರೆಪ್ಪ.. ನಾವು ನಿಮ್ಮನ್ನೆಲ್ಲ ಯತ್ತಿ ಆಡಿಸಿದವರದೀವಿ.. ಕಯ್ತುತ್ತು ಮಾಡಿ ವುಂಬಿಸಿದವರದೀವಿ.. ನಿಮ್ಮ ಯಿಸಿ ವುಚ್ಚೇನ ಬಳದವರದೀವಿ.. ನಮ್ಮ ಕಣ್ಣಮುಂದ ಬೆಳದುss ಬೆಳದೂ ಮುದೇರಾದವರಾ.. ನಿಮಗಿಂತ ಪೂರುವಿಕರಾದ ನಮ್ಮನ್ನು ಕರೆಯಿಶಿಕೊಂಡ ಕಾರಣವೇನು?" ಯಂದು ಕಯ್ಯಿ ಕಾಲು ಪಂಚೇಂದ್ರಿಯಂಗಳು ನೆಟ್ಟಗಿದ್ದ ಅವರು ಕೇಳಲಾಗಿ ಯಿವರು "ಚೀಗ ದೊಡಪ್ಪಂದಿರಾ" ಯಂಬ ಸಂಬಂಧವಾಚಕ ಅನುಪಲ್ಲವಿಗಳೊಡನೆ ಫಲಾನ ಹಿಂಗಿಂಗೆ.. ಫಲಾನ ಹಿಂಗಿಂಗೇ ಯಂದು

ಕೇಳಿದರು. ಅದಕಿದ್ದು ಅವರು ವಸ್ತಿಯ ಪಾದಂಗಳ ವುಂಗುಟಕ ಹಣೆ ಹಚ್ಚಿ "ತಾಯೇ.. ಲೋಕಗ್ನಾನ, ದಯವಾನುಕೂಲಗ್ನಾನ ವಂಚೂರಿಲ್ಲದ ಸತದಡ್ಡ ಮಂದಿ ಅದೇವಿ ನಾವು.. ನಾವೇ ಹಳ್ಳದೊಳಗಂಗಾಲ ಯಿಳಿಬಿಟ್ಟವರಲ್ಲ.. ಹರಿವ ಜಲಧಿಯೊಳಗ ಮಖಮಾರಿ ನೋಡಿಕೊಂಡವರಲ್ಲ. ಮಯ್ಯೊಳಗ ಮಣಮಣ ಮಯ್ಲಿಗಿ ಯಿಟ್ಟುಕೊಂಡವರಾದ ನಾವು ನೀನು ಹೊಳೆಗೊಂಡುವ ಪರಿಯ ವರ್ಣನೆ ಮಾಡಲು ಅಸಕ್ಯರದೀವಿ ತಾಯೇ.. ನಮ್ಮನ್ನು ಮಾಫ್ ಮಾಡೆವ್ವಾ" ಯಂದು ಆತುಮ ನಿಯೇದನೆ ಮಾಡಿಕೊಂಡೊಡನೆ ತಡವಾಗಲಿಲ್ಲ ಸಿವನೇ, ತಲ ತಲಾಕ ನಿಟ್ಟುಸಿರು ಬಿಟ್ಟದ್ದು ತಡವಾಗಲಿಲ್ಲ ಸಿವನೇ.. ಯಾರುಂಟಪ್ಪಾ.. ಜಗದಂಬೆ ಹೊಳೆಗೊಂಡುವ ಮರುಮ ಗೊತ್ತಿರೋರು ಯಂದವರು ವುದ್ಗಾರ ತೆಗೆದೊಡನೆ ಸಿವನೇ..

ರೆವ್ವಂತ ಗಾಳಿ ಬೀಸಿತು. ತನ್ನೊಳಗಿಂದ ಅರವತ್ತೊರುಷ ಹಳತಾದ ಬೆವರು ಕಿವುಟುವಾಸನೆ ಯಲ್ಲಿ ಬೇಕಂದರಲ್ಲಿ ಚೆಲ್ಲಾಡಿತು. ನೆಲದೊಡಲೊಳಗಿಂದ ಯಾರೋ ಮೂಡಿ ಬರುತಾರೆಂಬಂತೆ ದಡ್‌ದಡ್ ಹೆಜ್ಜೆ ಸಬುಧವು ಕೇಳಿಬಂತು ಅದರೊಟ್ಟಿಗೆ.. ಮುಗುಲೊಳಗ ವುಲ್ಕಾಪಾತ ಆದಂಗಾತು.. ಸೂರ್‍ಯಾಮ ಮಂಕಾದಂಗಾದನು. ಅಲ್ಲೆಲ್ಲ.. ಯಾರೋ ಅವುಚಿಟ್ಟು ಕೊಂಡಂಗಾತಯ್ತೆ.. ಯಿಲ್ಲೆಲ್ಲ ಯಾರೋ ಹೊರ ಬಂದು ನಿಂತಂಗಾತಯ್ತೆ.. ಯಾರೋ ಮಾನುಭಾವ ವಡಮೂಡುತಾ ಯಿದ್ದಂಗ ಕಾಣಿಸುತಯ್ತಲ್ಲಾ.. ಹ್ವಾ.. ಅಗಾ.. ಹ್ವಾ.. ಯಿಗಾ.. ಯಂದು ಸಭೆಗೆ ಸಭೆಯೇ ತಲೆಯತ್ತಿ ನೋಡುತಯ್ತೆ.. ಅರೇ.. ಗೊರವನಂತೆ ಅಡಿಮುಡಿವರೆಗೆ ಕಂಬಳಿ ವುಡುಗೇನ ಧರಿಸಿ ಮಯ್ಲಾರಲಿಂಗನ ವರಪುತ್ರನಂಗವನಲ್ಲ.. ಕಪನಿ ಮುನೇಸ್ವರ ನಂಗವನಲ್ಲ.. ಅಡ್ಡಗುಡ್ಡರ ಮಲ್ಲನಂಗವನಲ್ಲ.. ಹಾಲ ಹರವಿಯ ಮ್ಯಾಲ ಆಡುತ ಬಂದಂಗವನಲ್ಲ.. ತುಪ್ಪದ ಹರವಿಯ ಮ್ಯಾಲ ತುಳುಕಾಡುತ ಬಂದಂಗವನಲ್ಲ.. ಬೂದಿ ಮುಚ್ಚಿದ ಕೆಂಡದುಂಡೆಯಂಗವನಲ್ಲಾ.. ಆರು ಖಂಡುಗ ಭಂಡಾರವ ಬಳಕೊಂಡಿರೋ ಮೂಲೋಕದ ಪ್ರಚಂಡನಂಗವನಲ್ಲ....

ಯದ್ದು ನಿಂತು ಯಿಯಿದ ಕೋನಗಳ ದ್ವಾರ ನೋಡುತಾರ ಪಟ್ಟಣ ಸೋಮಿಗಳು, ಅಡಿಯಿಂದ ಮುಡಿವರೆಗೆ, ಮುಡಿಯಿಂದ ಅಡಿವರೆಗೆ ನೋಡುತಾರ ದಯವಸ್ತರು, ಗುಂಗುಗುಂಗುರ ಸುತುಕೊಂಡು ಬೆಳೆದ ಬಯಟಕ್ಕೀಲೆ ಕುರುಚಲಡವಿಯಂಥಾಗಿರುವ ಹಂಡೇವಗಲದ ಮುಖವನ್ನೇ

ನೋಡುತಾರ ಹಿರೀಕರು.. ಗುಡ್ಡವೇ ಜೀವಧರಿಸಿದಂತಿರುವ ಯೀವಯ್ಯನು ಅವನಾಗಿರಬೌದೇ? ಅದಕ್ಕುತ್ತರವಾಗಿ ಆಗಂತುಕನು ತನ್ನ ಸೇವಕನ ಕಯ್ಯಲ್ಲಿದ್ದ ಹತ್ತು ಮಾರುದ್ದದ ಮಂಡಾಸನ್ನು ತಲೆಗೆ ಬಿಗಿದನು.. ಅಲ್ಲೇ ಯಿದ್ದ ಬಂಡಿಯ ಯೇರುಗೋಲನ್ನು ತನ್ನಂಗಯ್ಯಿ ಮ್ಯಾಲ ವುದ್ದೋಕೆ ನಿಲುವಿಳುವಿ ಮುಂಗಯ್ಯಿ ಕಸುವು ಯಷ್ಟಿರಬೌದೆಂದು ಸಾಬೀತು ಮಾಡಿದನು.. ಯೀ ವಯಸ್ಸಿನಲ್ಲೇ ಯೀ ಪಯ್ಕಿ ಯಿರುವ ತಾನು ವಳ್ಳೆ ಹಂಗಾಮಿನಲ್ಲಿ ಯಿನ್ನೆಂಗಿರಬೌದೆಂದು ಸಂದೇಹದ ಸಸಿಯನ್ನು ನೋಡುತಲಿದ್ದ ಪ್ರತಿಯೊಬ್ಬರ ಯದೆಯೊಳಗೆ ನಾಟಿ ಮಾಡಿದನು.

ನೋಡೋದು ನೋಡಿಯಾದ ಮ್ಯಾಲ ಪಟ್ಟಣಸ್ವಾಮಿಗಳ ಪಯ್ಕಿ ಮೋರ್ವನಾದ ಜಂಗಾಲಯ್ಯನು "ನೋಡಲಕ ಅಗಾಧವಾಗಿರುವ ನೀನದಾರಪ್ಪ.. ನಿನ್ನ ಸರೀರ ಮುಡುಕೊಂಡಿರುವ ನಾಮಾಂಕಿತವಾವುದಪ್ಪ" ಯಂದು ಕೇಳಿದ್ದಕ ಅವಯ್ಯನು ಕೆಮ್ಮಲು ತನ್ನ ಹತ್ತಾರು ಮಂದಿ ಮುಂದಕ ಬಂದರು.. ಅವರೂ ಸಹ ವಬ್ಬರಿಗಿಂತ ವಬ್ಬರು ಮಿಗಿಲಾಗಿರುವರು.. ಯಿವಯ್ಯನು ಸರುವೇ ಸಾಮಾನ್ಯ ಮಾನವನಿದ್ದಂಗಿಲ್ಲ, ಸಪ್ತರುಷಿಗಳು ಯೀ ಯಾಸದಲ್ಲಿ ತಾಯಿಯ ಸೇವಾ ಕಯಿಂಕರ್ಯಾರ್ಥವಾಗಿ ಬಂದಿದ್ದಿರಬೌದೇ? ಯಾದಾರ ಸೀಮೆಯ ರಾಜನು ಯೀ ಯಾಸದಲ್ಲಿ ಮಾರ್ಬಲ ಸಮೇತ ತಾಯಿಯ ಪಾದಕ್ಕ ಪೂಜೆ ಸಲ್ಲಿಸಲು ಬಂದಿದ್ದಿರಬೌದೇ? ಯಿದಕ್ಕೆಲ್ಲ ಪುಟುಗಿ ನೀಡುವಂತೆ ಪಯಿತ್ರವಸ್ತಿಯ ತುಟಿ ನಡುವೆ ಮಂದಹಾಸ ನಾಜೂಕು ರೀತಿಯಲ್ಲಿ ಕಾಣಿಸಿಕೊಂಡಿರುವುದು.

ಅವನ ಸೇವನಕನೋರ್ವನು ಅವರ ಯಾವತ್ತು ಸಂದೇಹಾನುಮಾನಂಗಳನು ಪರಿಹರಿಸಲೋಸುಗ.. "ಕೇಳಿರಪ್ಪಾ ಕೇಳಿರಿ.. ಯೀ ನಮ್ಮ ನಾಯಕನು ಯಾರಪ್ಪಾಂದರೆ.." ಯಂದು ಸುದೀರ್ಘವಾಗಿ ಸಲ್ಲಿಕೆ ಮಾಡಿದ ಪ್ರವರಾಖ್ಯಾನದ ಮುಖ್ಯ ಸಾರಾಂಸವು ಆವುದೆಂದರೆ..

"ಕುಂತಲ ಪ್ರಾಂತದ ಫಲಾನ ಯಿಂಥ ಕಡೇಕ ಕ್ಯಾರಟ್ಟಿ, ದೇವರಟ್ಟಿ, ದಿಂಡರಟ್ಟಿ, ಗೊಂಡರಟ್ಟಿ ಯಂಬ ನಾಕಾರು ಹಟ್ಟಿಗಳು ಯಿರುವವಷ್ಟೆ.. ಅವಕ್ಕೆಲ್ಲ ರಾಜಧಾನಿಯಾಗಿ ಗೊಲ್ಲರಟ್ಟಿ ಯಂಬುದಿರುವುದಷ್ಟೆ.. ಅಲ್ಲಿ ಯತ್ತಯ್ಯ, ಚಿತ್ತಯ್ಯ, ಯೀರಣ್ಣ, ನಿಂಗಣ್ಣ, ಬೊಮ್ಲಿಂಗರೇ ಮೊದಲಾದ ದ್ಯಾವಾನುದೇವತೆಗಳು ನೆಲಗೊಂಡಿಹರಷ್ಟೆ.. ಆ ದೇವತೆಗಳು ಆಡುಗೊಲ್ಲ, ಕಾಡುಗೊಲ್ಲರ ವಂದು ರಾಜ್ಯವನ್ನು ಕಟ್ಟಿ ಅದಕ್ಕೆ ಹರೇರಾಯ ಯಂಬಾತನನ್ನು ರಾಜನನ್ನಾಗಿ ಮಾಡಿದರು. ಆತನೇ ಮುರೇರಾಯ, ಆತನ ಮಗ ಬೆಣ್ಣೆರಾಯ, ಆತನ ಮಗ

ಬೆತ್ತಲರಾಯ.. ಆತನ ಮಗ ಅಂಬೇರಾಯ, ಆತನ ಮಗ ತುಂಬೇರಾಯ.. ತುಂಬೆರಾಯನ ಹೊಟ್ಟೆಯಲ್ಲಿ ಗವುರಸಂದ್ರಮಾರೆಮ್ಮನ ದಯದಿಂದಾಗಿ ವಂದು ಕೂಸು ಜೆನಿಸಿತು. ಅದು ಮುಂದ ಕಾಡುಗೊಲ್ಲರೀರಯ್ಯ ಎಂಬ ಹೆಸರಲ್ಲಿ ಲೋಕ ಪ್ರಸಿದ್ಧವಾಯಿತು. ಆ ಮಾನುಭಾವನೇ ಯೀವಯ್ಯನು.. ಯೀವಯ್ಯಗೂ ಮಕ್ಕಳ ಫಲ ಯಿರಲಿಲ್ಲ.. ಯಾಕ ತಾಯಿ ನನಗ ಮಕ್ಕಳ ಫಲಯಿಲ್ಲ ಯಂದು ಗವುರಸಂದ್ರಮಾರಮ್ಮನ್ನ ಕೇಳಿದ್ದಕ್ಕೆ ಆ ತಾಯಿಯು ವಂದು ಮುಷಿ« ಅಲಸಂದಿಕಾಳನ್ನು ಕೊಡುತ ಮಗನೇ.. ಯಿವನ್ನೊಯ್ದು ಮಣ್ಣಿನ ಚಟಿಗ್ಯಾಗ ಮೂರು ದಿವಸ ನೆನಿಡಪ್ಪಾ.. ನಾಕನೇ ದಿವಸ ಮುಂಜಾನೆ ತೆಗೆದು ನೋಡಪ್ಪಾ ಯಂದು ಅಪ್ಪಣೆ ಕೊಡಿಸಿದಳು. ಅದರಂತೆ ಮಾಡಿ ನೋಡುತ್ತಾನೆ.. ಚಟಗೀವಳಾಗೆ ಮುದ್ದಾದ ಹೆಣ್ಣು ಕೂಸೊಂದು ಅಲಸಂದೆ ಕಾಳೊಳಗ ಮೊಳಕೆಯೊಡೆದಂತೆ ಆಡುತಲಿತ್ತು. ಅದಕ್ಕೆ ಜೆಲುಮನಾಮ ಮಾರೆಮ್ಮ ಯಂಬುದಿತ್ತು. ವಂದೊಂದು ವರುಷಕ ವಂದೊದು ಹೆಸರು ಮುಡಕೋತ ಬೆಳೆದು ದೊಡ್ಡದಾತು. ಆಕೆಯ ಮುಂದಿನ ಕಥಿ ಸರುವರಿಗೂ ಗೊತ್ತಿದ್ದs ಅಯ್ತೆ.. ಕಾಟಯ್ಯ ನಾಯಕನೆಂಬುವವ ಯೇನವನೆ.. ಯಿವನ ತಾಯಿಯೇ ಆಕೆ.. ಮಾರಮ್ಮನ ಸಾಪ ಹೆಂಗೆಂಗಿತ್ತೋ ಹಂಗಂಗss ನಡೀತು.. ನಮ್ಮ ನಾಯಕಂಗೆ ಮಗಳೆಂಬ ಮಮಕಾರಯಿಲ್ಲ.. ಮೊಮ್ಮಗ ಯಂಬ ಮಮಕಾರಯಿಲ್ಲ.. ಆದಿಸಗುತಿಯು ಕಾಲಾನುಕಾಲಕ್ಕ ಯತ್ತಿದ ಸಾವುರಾರು ಅವತಾರಗಳಲ್ಲಿ ವಬ್ಬಾಕೆಯೂ, ಸಾವುರ ವಕ್ಕಲ ವಡತಿಯೂ, ಆದ ಗವುರಸಂದ್ರಮಾರೆಮ್ಮ ಮೊನ್ನೊಂದಿವಸ ನಾಯಕನ ಕಣಸೊಳಗ ಮೂಡಿ ಕಾಣಿಸಿಕೊಂಡು "ಮಗ ಯಚ್ಚರಾಗಪ್ಪ.." ಯಂದು ಯಬ್ಬಿಸಿ ತಾನು ಫಲಾನ ಮೂರಲ್ಲಿ, ಫಲಾನ ಸರೀರದೊಳಗ ವಸ್ತಿ ಮಾಡಿರುವ ಸಾಂಬವಿಯ ಹೊಳೆಗೆ ಹೊಂಡಿಸೋ ಕಾರ್ಯ ನಡೆಸಿಕೊಡಬೇಕೆಂದೂ, ತಾನಲ್ಲಿರೋ ಮಟ ಸೇವೆ ಮಾಡಿಕೊಂಡಿರ ತಕ್ಕದೆಂದೂ ಆಗ್ನೆ ಮಾಡಿದಳು.. ಅದರಂತೆ ನಾಯಕನು ನೂರು ಹರದಾರಿ ಸವೆಸಿ ಬಂದಿರುವನೆಂದೂ.."

ಅದನು ಕೇಳಿ ಭಕುತಾದಿ ಮಂದಿ ವುಘೇ ವುಘೇ ಅಂತು. ಗವುರಸಂದ್ರಮಾರೆಮ್ಮ ಭೋಪರಾಕ್, ಸಿವನ್ನಾಮ ಪಾರೋತಿಪತಿ ಹರಹರ ಮಾದೇವ ಯಂದು ಕೊನೆಯಾಡಿತು. ನೂರಾರು ಮಂದಿ ಜೋಗತೇರ ಕಂಠದಿಂದ ಸಾಂಬವಿ, ಮಾರೆಮ್ಮ ಅಕ್ಕ ತಂಗೇರಾಗಿ ವಡಮೂಡಿ ನಾದದ

ನದಿಯಾಗಿ ಹರಿದು ಸಮಸ್ತ ಪಟ್ಟಣವನ್ನು ತೊಯ್ಯಿಸಿ ತೊಪ್ಪೆ ಮಾಡಿದರು. ಆ ಅಗೋಚರ ನದಿಯೊಳಗ ಮಿಂದು ಮಡಿಯುಡಿಯಿಂದ ಕಾಡುಗೊಲ್ಲರೀರಯ್ಯನು ವಸ್ತಿಯ ಪಾದಗಳನ್ನು ಯದೆಗವುಚಿಕೊಂಡು ಯವ್ವಾ.. ಯವ್ವಾ ಯಂದು ಬಿಕು ಬಿಕು ಅತ್ತು ಯದೆ ಅಳಾರ ಮಾಡಿಕೊಂಡನೆಂಬಲ್ಲಿಗೆ ಸಿವಸಂಕರ ಮಾದೇವಾsss

ಯಜ್ಜಾ.. ಯಾವಾಗ ವುಂಡಿದ್ಯೋ ಯ್ಯೋನೋ? ಮೊದಲುಂಬು.. ಯಾವಾಗ ಕುಡಿದಿದ್ಯೋ ಯೇನೋ ಮೊದಲು ಕುಡಿ.. ನಡದೂ ನಡದೂ ದಣಕೊಂಡೀಯೇನೋ.. ಅಲ್ಲೆ ವುಳುಕೊಂಡು ಮೊದಲು ವಂದು ಜೊಂಪು ನಿದ್ದಿ ತಗಿss ಯಂದು ಪರಾಂಬರಿಸಿದ ದಯವಸ್ಥರಿಗೆ ಅವಯ್ಯನು.. ಅನಾಥಳಾಗಿರೋ ಜಗಾನುಮಾತೇನ ಯದುರಿಗಿಟ್ಟುಕೊಂಡು ಹೆಂಗ ವುಂಬಲೀ.. ಹೆಂಗ ಕುಡಿಯಲೀ.. ಹೆಂಗ ನಿದ್ದೆ ಮಾಡಲೀ.. ತಾಯಿ ಹೊಳೆಗೊಂಟು ನೆಲೆನಿಂತ ಮ್ಯಾಲss ಅದೆಲ್ಲಾ.. ಅಲ್ಲೀಗಂಟಾ ನಾನು ನಿರಸನ ರೊತ ಪಾಲನ ಮಾಡತೇನಿ.. ಅದಕಾಗಿ ಯಾರೊಬ್ಬರು ಯಸನ ಮಾಡೋದು ಬ್ಯಾಡ, ಜುಲುಮಿ ಮಾಡೋದು ಬ್ಯಾಡ. ಗವುರಸಂದರದಂಬೆ ನನ್ನ ನಾಲಗೆ ಮ್ಯಾಲ ಯಿರೋಗಂಟ ನನಗ ಯಾವ ಭಾದೆ ಕಾಡಾಕಿಲ್ಲ ತಿಳಿರಿ.. ಯಂದನಕಂತ ಸಭೆಯ ಚರ್ಚೆಯೊಳಗ ವಾಚಾಮಗೊಚರವಾಗಿ ಪಾಲ್ಗೊಂಡನು.. ನೋಡಿರಪ್ಪಾ.. ವುಚ್ಚಂಗಿದುರ್ಗದ ವುಚ್ಚೆಂಗೆವ್ವ, ಹುಲುಗಿ ಹುಲಿಗೆವ್ವ, ಮಡರಳ್ಳಿ ಚವುಡವ್ವ, ತುಪಾಕನಳ್ಳಿ ದುರುಗವ್ವರೆಲ್ಲ ವಂದು ತೂಕಯಿದ್ದರೆ ಸಾಂಬವಿಯಯು ಅವರೆಲ್ಲರಿಗಿಂತ ಸಾವುರಪಟ್ಟು ತೂಕ ಯಿರುವಾಕಿ. ಯಿಂಥಾಕೆ ಹೊಳೆಗೆ ಹೊಂಡಲು ಬಲು ಕಟಿಕಟಿ ಮಾಡುತ್ತಾಳೆ. ವಂದು ಗುಲಗಂಜಿ ಯೇರುಪೇರು ಆದಲ್ಲಿ ನರಮನುಶ್ಯೋರು ಹುಳುಗಳಾಗಿ ವುದುರಿ ಬಿದ್ದಾರು.. ಯಿಂಥ ಘನುವಾದ ಕಾರ್ಯೇವಿಗೆ ಘನುವಾದ ಹಿರೀಕರ ಪಯ್ಕಿ ಹಿರೀಕನೋರ್ವನ ಅಗತ್ಯವುಂಟು ಕನರಪ್ಪಾ.. ತಾಯಿಯ ಅಂತರಂಗಕ್ಕ ಸುರಂಗ ಹಾಕುವಂಥವನಿರಬೇಕು.. ಭೂತ ಪ್ರೇತ ಪಿಚಾಚಿ ಬೇತಾಳಗಳನ್ನು ಹೆಡಮುರುಗಿ ಕಟ್ಟುವಂಥವನಿರಬೇಕು.. ಸಾವುರ ಕಣ್ಣುಗಳ್ಳುಳ್ಳವ ನಿರಬೇಕು. ಸಾವುರ ಕಿವಿವುಳ್ಳವನಿರಬೇಕು.. ಸಾವುರ ಮಂದೀಯ ಕಸುವುಳ್ಳವನಿರಬೇಕು ಕನರಪ್ಪಾ.. ಅಂಥಾತ ಯಲ್ಲವನಂದರ ಫಲಾನ ಯಿಂತಲ್ಲವನೆ ಕನರಪ್ಪಾ.. ಆ ಮಾಮಯ್ಮೆವಂತನನ್ನು ಕರೆತರೋ ಯೇರುಪಾಡನ್ನು ಯೀಗಿಂದೀಗಲೇ ಮಾಡಬೇಕು ನೋಡಿರಿ.. ಯಂದವಯ್ಯ ಖಂಡತುಂಡವಾಗಿ ಮಾತಾಡಿದೊಡನೆ....

* * * *

ಅತ್ತ ಗುಂತಕಲ್ಲು ಪ್ರಾಂತದೊಳಗ ಮನ್ರೋ ನೂಲು ನುಂಗೆಂದರೆ ಮುನುಸೋಬಯ್ಯ ಹಚ್ಚಡವನ್ನೇ ನುಂಗಿಬಿಡಲೆಂದು.. ವಂದೊಂದು ಗ್ರಾಮದೊಳಗ ಅವಯ್ಯ ತೆಗೆದ ಗಂಜಿ ಕೇಂದ್ರಗಳೋ ಸಿವನೇ.. ಆಸುಪತ್ರೆಗಳೋ ಸಿವನೇ.. ಸಾಲೆಗಳೋ ಸಿವನೇ.. ಅಂದುಕೊಂಡಂಗ ಮಂದಿ ಯಡತಾಕಲಿಲ್ಲ. ಯಿದ್ದಕ್ಕಿದ್ದಂತೆ ಪರಂಗಿ ಮಂದಿ ತಮ್ಮ ಕುರುತು ಯೀಟೊಂದು ಕಕ್ಕುಲಾತಿ ತೋರುತಾರಂದರ.. ಯಾವತ್ತಿಲ್ಲದ ಕಕ್ಕುಲಾತಿ.. ಯಾವತ್ತಿಲ್ಲದ ಪ್ರಜಾಪ್ರೇಮ... ಯಾವತ್ತಿಲ್ಲದ.. ಮೊದಲೇ ಹಳ್ಳಿಪಳ್ಳಿಗಳ ಸಾದಾಸೀದಾ ಮಂದಿ.. ವಳಾಗೊಂದು ಹೊರಾಗೊಂದು ಯಿಲ್ಲದ ಜಳಜಳ ಮಂದಿ.. ತಾವು ನಂಬಿದ್ದ ಸಿದ್ಧಾಂತಗಳಿಗೆ ಪ್ರಾಣವನ್ನಾದರೂ ವದಲುವ ಮಂದಿ, ಬಣ್ಣದ ಮಾತುಗಳನ್ನು ವರೆಗೆ ಹಚ್ಚಿ ನೋಡುವ ಮಂದಿ.. ಯಿದರೊಳಗೇನೋ ಮಸಲತ್ತು ಯಿದ್ದಂಗಯ್ತೆ ಯಂದು ಅನುಮಾನಿಸುವ ಮಂದಿ....

ವಂದೊಂದು ಗಂಜಿಕೇಂದ್ರದೊಳಗ ಗಂಜಿ ಹಳಸಿ ಗಬ್ಬುನಾರ ತೊಡಗಲು, ವಂದೊಂದು ಆಸುಪತ್ರಿಯೊಳಗ ರೋಗಿಗಳಿಗಾಗಿ ಕಾದೂ ಕಾದ ಪರಿಣಾಮವಾಗಿ ವಯ್ದರೇ ರೋಗಿಗಳಾದರು.. ವಂದೊಂದು ಸಾಲೆಯೊಳಗ ವುಪಾಧ್ಯಾಯರು ನೊಣ ಹೊಡೆಯುತಾ ಹೊಡೆಯುತಾ ತಾವು ಕಲಿತದ್ದನ್ನು ಮರೆತುಬಿಟ್ಟು ಸತ ದಡ್ಡರಾದರು..

ಮುನುಸೋಬಯ್ಯ ನೇಮಕ ಮಾಡಿದ ತಂಡ ಪ್ರತಿಯೊಂದು ಮನೆಗೆ ಯಡತಾಕ ಲಾರಂಭಿಸಿತ್ತು, ಯಡತಾಕಿ ಬಣಬಣ್ಣದ ಮಾತುಗಳನ್ನಾಡಲು ಪ್ರಯತ್ನಿಸಿದಷ್ಟು ಕವಡೆ ಕಿಮ್ಮತ್ತು ದೊರಕದೆ ಯಿಫಲಗೊಂಡು ಬರಿಗಯ್ಲಿ ಮರಳಲಾರಂಭಿಸಿತು. ಆ ತಂಡದ ನಿಷ್ಠಾವಂತ ಸದಸ್ಯರ ಮ್ಯಾಲ ಕ್ರುದ್ಧ ಪ್ರಜೆಗಳು ಬಯ್ಗುಳ ಮಳೆ ಕರೆದದ್ದುಂಟು.. ಆಕ್ರಮಣ ಮಾಡಿದ್ದುಂಟು, ಪೆಕಪೆಕನೆ ವದ್ದದ್ದುಂಟು, ಪ್ರಜೆಗಳ ಯೀ ಕುತ್ಯಗಳಿಂದ ತನ್ನ ಮನಕ ಬಲು ಬ್ಯಾಸರ ಮಾಡಿಕೊಂಡಂಥವನಾದ ಮುನುಸೋಬಯ್ಯನು, ಧರುಮಗ್ರಂಥವಾದ ಬಯಬಲ್ಲಿನ ಮ್ಯಾಲ ಅಪಾರ ಸ್ರದ್ಧೆಯನ್ನು ಯಿಟುಕೊಂಡಿದ್ದಂಥವನಾದ ಮುನಸೋಬಯ್ಯನು ಪ್ರಜೆಗಳ ಮನಸ್ಸಿನೊಳಗೆ ಯೇನಯ್ತೆ ಯಂಬುದನ್ನು ಪತ್ತೆ ಮಾಡಿಕೊಂಡು ಬರಲೋಸುಗ ಮತ್ತೊಂದು ತಂಡವನ್ನು ರಚಿಸಿದನು. ಆ ತಂಡದೊಳಗ ಹಗಲು ಯಾಸಗಾರರಿದ್ದರು, ದೊಂಬರರಿದ್ದರು,

ಬುಡುಬುಡುಕ್ಯೋರು ಯಿದ್ದರು.. ಅವರೆಲ್ಲ ಪ್ರತಿಯೊಂದು ಗ್ರಾಮಕ್ಕೆ ಚದುರಿ ಪ್ರತಿಯೊಂದು ಹಾದಿಗೆ ಅಡರಿ ಹತ್ತು ಹಲವು ರೂಪಕಗಳ ದ್ವಾರ ಅನ್ನದ ಮಹತ್ವವನ್ನು, ಅವುಸಧದ ಮಹತ್ವವನ್ನು, ಅಕ್ಕಸರದ ಮಹತ್ವವನ್ನು ಸಾರಿ ಹೇಳಲೆತ್ನಿಸಿದವರಾದರೂ ವಬ್ಬೇ ವಬ್ಬ ಪ್ರೇಕ್ಷಕನಾಗಲೀ, ವಬ್ಬೇ ವಬ್ಬ ಸ್ರವಣಕನಾಗಲೀ ಬಾರದ ಪರಿಣಾಮವಾಗಿ ತಮ್ಮ ಮನಸ್ಸೆಂಬ ಪೆಟಾರಿಯೊಳಗೇನುಂಟು ಯಂಬುದರ ಗುಟ್ಟು ಬಿಟ್ಟುಕೊಡದ ಪರಿಣಾಮವಾಗಿ, ಕೆಕ್ಕರಿಸಿ ನೋಡಿದ ಪರಿಣಾಮವಾಗಿ, ಛೀ ಥೂ ಯಂದು ವುಗುಳಿದ ಪರಿಣಾಮವಾಗಿ....

ಮುನುಸೋಬಯ್ಯನ ಪ್ರಯತ್ನಗಳು ಹಿಂಗ ಬಂದು ಹಂಗ ಹೋದ ಬೆನ್ನಲ್ಲೆ ಬೊಮ್ಮಲಾಟ ಪಲ್ಲಿಯಿಂದ ತೊಗಲುಗೊಂಬಿ ಆಡಿಸೋರು, ಬುರ್ರಂಪಲ್ಲಿಯಿಂದ ಬುರ್ರಕಥಾ ಹಾಡುಗಾರರು ಬಂದು ಸಾವುರಾರು ಜನರು ನೋಡುವಂತೆ, ಸಾವುರಾರು ಜನರು ಕೇಳುವಂತೆ ಗೊಂಬಿಗಳ ಕುಣಿಸುತಲಿದ್ದರು, ಪದಗಳನು ಕಾಣುಕುಣುದು ಹಾಡುತಲಿದ್ದರು.. ಜನರು ನೋಡು ನೋಡುತಾ ಪರಂಗಿ ಸಕರಾಕ್ಕೆ ಧಿಕ್ಕಾರ ಯಂದು ಕೂಗುತಲಿದ್ದರು, ಬೊಬ್ಬಿಲಿನಾಗಿರೆಡ್ಡಿಗಾರಿಕಿ ಜಯವಾಗಲಿ ಯಂದು ಜಯಕಾರ ಹಾಕುತಲಿದ್ದರು.. ಆ ಕಲಾಕಾರರು ಮೊದಲೇ ಯಿಜಯನಗರದಧಿಪತಿ ಸ್ರೀ ಕ್ರುಸ್ನದೇವರಾಯನ ಕ್ರುಪಾಪೋಷಿತ ಆಸ್ಥಾನವಂದಿಗನಾಗಿದ್ದ ಬೊಮ್ಮಲಾಟದ ಪಿತಾಮಹ ಬೊಮ್ಮಯ್ಯನ ವಂಸರುಕ್ಷದ ಮಂದಿ. ಆ ಕಲಾಯಿದರು ಮೊದಲೇ ಮೋರಂಗಲ್ಲಾಧಿಪತಿ ಪ್ರತಾಪರುದ್ರಗಜಪತಿರಾಯನ ಕ್ರುಪಾಪೋಷಿತ ಆಸ್ಥಾನವಂದಿಗನಾಗಿದ್ದ ಬುರ್ರಕಥಾ ಪಿತಾಮಹ ಬುರ್ರಬ್ರೆಮ್ಮನ ವಂಸರುಕ್ಷದ ಮಂದಿ, ಆ ಕಲಾಯಿದರ ಪೂರುವಿಕರು ತುರುಕರ ದಾಳಿ ಕ್ರುತ್ಯದ ಯಿರುದ್ದ ತಮ್ಮ ಕಲೆಯನ್ನು ಝಳಪಿಸಿ ಸೊರ್ಗಸ್ಥರಾಗಿದ್ದರು. ಯೀಗ ಪರಂಗಿಯವರ ಯಿರುದ್ಧ ತಿರುಗಿ ಬಿದ್ದವರೆ.. ಬೊಬ್ಬಲಿನಾಗಿರೆಡ್ಡಿಯಂಥ ಪರೋಪಕಾರಿ ಯೀರನನ್ನು ಬೆನ್ನಿಗೆ ಕಟ್ಟಿಕೊಂಡವರೆ, ನಾಲಗೆ ಮ್ಯಾಲ ವಟ್ಟಿಕೊಂಡವರೆ.. ಅವರ ದ್ರುಸ್ಟೀಲಿ ಬೊಬ್ಬಿಲಿನಾಗಿರೆಡ್ಡಿ ಯಾರಪಾ ಅಂದರ.. ಥಾಮಸು ಮನ್ರೋ ಯಾರಪಾ ಅಂದರ..

ಪರಮಾತುಮಾ.. ಭೂಲೋಕದೊಳಗ ಅನ್ಯಾಯ ಹೆಚ್ಚಲಕ ಹತ್ತಯಿತ್ರೈ.. ದೇವತೆಗಳಿಂದ ಹತ್ಯೆಗೀಡಾದ ರಕ್ಕಸರು ರೆಡ್ಡಿ ಪಟುವಾರಿ, ಜಮೀಂದಾರಿ, ಜಾಗೀರುದಾರಿ, ಪಾಳೇಗಾಂಡಲುಗಳಾಗಿ ಪ್ರಜೆಗಳಿಗೆ ಕಂಟಕಪ್ರಾಯರಾಗಿದ್ದಾರೈ..

ರುಥಾ ಆಗದ ವುಳಕೊಂಡಿದ್ದ ರಕ್ಕಸರ ನೆತ್ತರು ಮನುಷ್ಯ ರೂಪ ಪಡದು ಪರಂಗಿ ಮಂದಿ ಆಗವರ್ರೈ... ಅವರು ಪ್ರಜೆಗಳ ಸುಖಸಾಂತಿಯನ್ನು ಅಪಹರಣ ಮಾಡುತಲಿದ್ದಾರ್ರೈ... ಪರಂಗಿ ಮಂದಿ ಜಂಬೂದ್ವೀಪದ ನೆಲವನ್ನೆ ನಾಕಲಕ ಹತ್ತಿರುವರ್ರೈ ಪ್ರಭುವೇ... ಯಂದು ಮುಂತಾಗಿ ನಾರದ ಮುನಿಯು ನೀಡಿದ ಖೇದದ ನುಡಿಗಳನ್ನಾಲಿಸಿದ ಸಿವನು ನಾಗರಾಜನ ಕುರಿತು "ಯಲಯ್ ನಾಗರಾಜನೇsss ನೀನು ಯೀಗಿಂದೀಗಲೆ ಭೂಲೋಕಕ್ಕಧಿಕವಾಗಿರುವಂಥ ಗಡೇಕಲ್ಲು ಗ್ರಾಮದೊಳಗೆ ಭೀಮಲಿಂಗಾರೆಡ್ಡಿ ಲಚುಮಮ್ಮ ಯಂಬ ದಂಪತಿಗಳ ವುದರದರಲ್ಲಿ ಜೆನಿಸಿ, ನಾಗಿರೆಡ್ಡಿಯಂಬಭಿದಾನ ಧರಿಸಿ, ಲೋಕಕಂಟಕರಾಗಿರುವ ಜಮೀಂದಾರರ ಯಿರುದ್ಧ, ಪರಂಗಿ ಮಂದಿ ಯಿರುದ್ಧ ಹೋರಾಡತಕ್ಕದ್ದು ಯಂದು ಆಗ್ನೆ ಮಾಡಿದನ್ನೈ. ಅಗಿದ್ದು ನಾಗರಾಜನು, ತಮ್ಮ ಚಿತ್ತ ಮಾದೇವss.. ಆದರೆ ನಿನ್ನ ಚರಣ ಕಮಲ ಸೇವೆಯ.. ಯಂದು ಯಾಕುಲಚಿತ್ತನಾಗುತ್ತಿದ್ದಂತೆ ಸಿವನು ನಾನು ಗಡೇಕಲ್ಲೊಳಗಿರುವ ಭೀಮಲಿಂಗೇಶ್ವರ ಲಿಂಗದೊಳಗೆ ವಸ್ತಿ ಮಾಡುವುದಾಗಿ ಮಾತು ಕೊಟ್ಟನ್ನೈ.. ಆ ಸುರಲೋಕದ ನಾಗರಾಜನೇ ಯಿವತ್ತಿನ ಬೊಬ್ಬಿಲಿ ಬಿರುದಾಂಕಿತ ನಾಗಿರೆಡ್ಡಿಯಯ್.. ಗಡೇಕಲ್ಲ ವುದ್ಭವಲಿಂಗ ಭೀಮಲಿಂಗೇಸ್ವರ ಸ್ವಾಮಿಯ ಪರಮ ಭಕುತನಯ್.. ರಾತ್ರಿಹೊತ್ತು ಭೀಮಲಿಂಗಯ್ಯನು ರೆಡ್ಡಿಯ ಸಂಗಾಟ ಚದುರಂಗದಾಟವನಾಡುತ್ತಾನೆಂಬ ಸಂಗತಿ ಜನಜನಿತವ್ವೈ.. ರೆಡ್ಡಿಯ ಕಯ್ತುತ್ತುಗಳನ್ನುಂಬುವನೆಂಬ ಪ್ರತೀತಿಯ್ಯೆ.. ಭೀಮಲಿಂಗಯ್ಯನ ದಯಯಿರುವನಕ ನಾಗಿರೆಡ್ಡಯ್ಯನ ವಂದೇ ರೋಮವನ್ನು ಅಲುಗಿಸುವ ತಾಕತ್ತು ಯಾರಿಗೆ ತಾನೇ ಯಿರುವುದೈ...

ಅದೆಲ್ಲ ಅಲ್ಲೇಯಿರಲಿ, ಯಿದೆಲ್ಲ ಯಿಲ್ಲೇ ಯಿರಲಿ.. ಗುಂತಕಲ್ಲು ಪ್ರಾಂತದ ಪಾಲಿಗೆ ಗಡೇಕಲ್ಲ ಭೀಮಲಿಂಗೇಶ್ವರ ಅಪರಾವತಾರವೇ ನಾಗಿರೆಡ್ಡಿಯು.. ಅಂಥಾತನನ್ನು ಹಿಡಿಯುವುದೆಂದರೇನು? ಅಂಥಾತನ ಜನಪ್ರಿಯತೆಯನ್ನು ತಗ್ಗಿಸುವುದೆಂದರೇನು?

ಬಳ್ಳಾರಿಯ ಅಠಾರ ಕಛೇರಿವಳಗ ಬ್ರೂಸು, ಮ್ಯಾಕ್ರೂ, ಯಾಂಡಿಯೇ ಮೊದಲಾದ ವುನ್ನತಾಧಿಕಾರಿಗಳಿಗೆ ನಾಗಿರೆಡ್ಡಿಯ ಅಜೇಯತನ ಕುರಿತು ಚಿಂತನ ಮಂಥನ ನಡೆಸುತಲಿದ್ದ ಥಾಮಸು ಮನ್ರೋನನ್ನು ಮುನುಸೋಬಯ್ಯ ಕಂಡು "ಸಾಹೇಬರೇ ತಗೊಳ್ಳಿ ರಾಜಿನಾಮೆಯ" ಯಂದು ಯೇಳೆಂಟು ಪುಟಗಳ ಕಡತವನ್ನು ಕೊಟ್ಟನು. ಅದರೊಳಗ ತಾನು ಬೊಬ್ಬಿಲಿ ನಾಗಿರೆಡ್ಡಿಯ

ಜನಪ್ರಿಯತೆಯನ್ನು ಯಾಕೆ ಕುಗ್ಗಿಸಲಾಗಲಿಲ್ಲವೆಂಬ ಯಿವರಣೆ ಸುದೀರ್ಘವಾಗಿತ್ತು. ಅದನ್ನು ಕೂಲಂಕುಷ ಪರಿಸೀಲನೆ ಮಾಡಿದ ಕಲೆಕಟ್ಟರನು ಹಿಂಗs ಆತುರದ ನಿರ್ಣಯಕ್ಕ ಬರಬ್ಯಾಡಿರಿ.. ನಿಮ್ಮ ಸೇವೆಯ ಅಗತ್ಯ ಕುಂಪಣಿ ಸರಕಾರಕ್ಕಯ್ತೆ ಯಂದು ಗಲಗಲಾಂತ ಅಂಗಲಾಚಿದರೂ ಪ್ರಯೋಜನವಾಗಲಿಲ್ಲ. ಕುಂಪಣಿ ಸರಕಾರದ ಮೂಳಿಗದಲ್ಲಿದ್ದು ನೂರು ವರುಷ ಬದುಕುವುದಕ್ಕಿಂತ ನಾಗಿರೆಡ್ಡಿಯ ಅಭಿಮಾನಿಯಾಗಿ ವಂದೇ ವಂದಿವಸ ಬದುಕುವುದು ಲೇಸು ಯಂದು ನುಡಿದ ಮುನುಸೋಬಯ್ಯನು ಆಗಿಂದಾಗಲೆ ಮಿಷನರಿಯೊಂದನ್ನು ಸ್ಥಾಪನೆ ಮಾಡುವ ನಿಮಿತ್ತ ಗುಂತಕಲ್ಲ ಕಡೇಕ ಪ್ರಯಾಣ ಬೆಳೆಸಿದನೆಂಬಲ್ಲಿಗೆ ಸಿವ ಸಂಕರ ಮಾದೇವss..

ಯಿತ್ತ ಯಿವರು ವಬ್ಬರಿಗೊಬ್ಬರು ಮಾತಾಡುತಲಿದ್ದುದು ನಾಗಿರೆಡ್ಡಿಯನ್ನು ಬಂಧಿಸುವ ಸಲುವಾಗಿ, ಬಂಧಿಸಿ ರೆಡ್ಡಿಯ ವಿಚಾರಣೆ ಮೂಲಕ ಹೊಸ ನ್ಯಾಯಾಲಯದ ಕಟ್ಟಡವನ್ನು ವುದ್ಘಾಟನೆ ಮಾಡುವ ಸಲುವಾಗಿ, ಯಿದಕ್ಕೆಂದೇ ನರಸಿವ್ಮರಾಯನೆಂಬಾತನನ್ನು ಗೊತ್ತುಮಾಡಿದ್ದರು. ಅಸಂಖ್ಯಾತ ಮಕ್ಕಳೊಂದಿಗನೂ, ರವುರವ ಬಡತನದ ಬೇಗೆಯಲ್ಲಿ ಬೇಯುತಲಿದ್ದಾತನೂ, ವುಪ್ಪುಂಡ ಮನೆಗೆ ಯರಡು ಬಗೆಯುವಲ್ಲಿ ನಿಷ್ಣಾತನೂ ಆಗಿದ್ದ ಸದರಿ ರಾಯನ ಮನವಲಿಸುವ ಸಲುವಾಗಿ ಹೆನ್ರಿಯಬ ತರುಣ ಅಧಿಕಾರಿಯನ್ನು ಗೋಪ್ಯವಾಗಿ ಕಳುಹಿ ಯರಡು ಮೂರು ದಿವಸಗಳುರುಳಿದ್ದವು. ಮುಂದೊಂದಿವಸ ವುನ್ನತ ಅಧಿಕಾರಿಯಾಗುವ ಕಣಸು ಸಹಿತ ಹೆನ್ರಿತಾನಿದ್ದ ನಡುವು ಗ್ರಾಮದ ಸೆರಗಲ್ಲಿದ್ದ ಮಾಯಿನ ತೋಪಿಗೆ ರಾಯನನ್ನು ಬರಮಾಡಿಕೊಂಡನು. ಯಿದ್ದ ಯಿಷಯ ತಿಳಿಪಡಿಸಿದನು. ರೆಡ್ಡಿ ತನಗುಪಕಾರ ಮಾಡಿರುವುದನ್ನು ಮೊದಮೊದಲಿಗೆ ನೆನೆಯೂತ ರಾಯನು ಯೀ ಕ್ರುತ್ಯ ಮಾಡಿ ನರಕಕ್ಕೆ ಹೋಗಲಾರೆನೆಂದು ಹೇಳಿದನು. ಭವಿಷತ್‌ಕಾಲದ ನರಕಕ್ಕಿಂತ ವರ್ತಮಾನಕಾಲದ ನರಕದಿಂದ ಪಾರಾಗುವ ಸಲುವಾಗಿಯಾದರೂ ಯೀ ಕ್ರುತ್ಯ ಮಾಡಬೇಕೆಂದೂ, ಮೂರು ತಲೆಮಾರು ಕುಂತು ತಿಂದರೂ ಸವೆಯದಷ್ಟು ಸಂಪತ್ತನ್ನು ಚರಾಸ್ತಿ ಸ್ಥಿರಾಸ್ತಿರೂಪದಲ್ಲಿ ಸರಕಾರವು ಮುಫತ್ತಾಗಿ ನೀಡುವುದೆಂದೂ ಹೆನ್ರಿಹೇಳಿದ್ದಕ್ಕೆ ಅವಯ್ಯನು ವಪ್ಪಿದನು. ಕಲೆಟ್ಟರ ಸಾಹೇಬನೆದುರು ಹೇಳಿಕೆ ನೀಡಬೇಕೆಂದು ಹೇಳಿ ಹೆನ್ರಿಯು ರಾಯನನ್ನು ಗೋಪ್ಯಾತಿಗೋಪ್ಯವಾಗಿ ಕರೆ ತಂದು ಸಾದರಪಡಿಸಿದನು.

ತನ್ನೆದುರು ಅಂತಜಲೀಬದ್ಧನಾಗಿ ನಿಂತಿರುವ ದ್ರೋಹಾಗ್ರೇಸರನನ್ನು ನಖಶಿಖಾಂತ ನೋಡುತ ಮನ್ರೋನು ತಾನೋದಿರುವ ಸೇಕ್ಸ್‌ಫೀಯರನ ನಾಟಕಗಳ ದ್ರೋಹಚಿಂತಕ ಪಾತ್ರಗಳನ್ನು ವಂದೊಂದಾಗಿ ನೆನಪಿಸಿಕೊಂಡನು. ತನ್ನ ಬಡತನವನ್ನು ಪೂರ್ಣ ತೊಲಗಿಸಲಾರದ ಕಾರಣಕ್ಕೆ ಬೊಬ್ಬಲಿ ನಾಗಿರೆಡ್ಡಿಯನ್ನು ಹಿಡಿದೊಪ್ಪಿಸಲು ತಾನು ನಿಶ್ಚಯಿಸಿರುವುದಾಗಿ ರಾಯನು ನಿಸ್ಸಂಕೋಚವಾಗಿ ಹೇಳಿಕೆಯಲ್ಲಿ ತಿಳಿಪಡಿಸಿದನು. ಫಲಾನ ಯಿಂಥ ಕಡೆ ಯಿಂಥ ದಿವಸ ಯಿದ್ವಾನ್ ಸಚ್ಚಿದಾನಂದ ಶಾಸ್ತ್ರಿಯಿರಚಿತ ಸ್ರೀ ಭೀಮಲಿಂಗೇಸ್ವರ ಪುರಾಣ ಪ್ರವಚನ ಕಾರ್ಯ ನಡೆಯಲಿರುವುದಾಗಿಯೂ, ಅಲ್ಲಿಗೆ ತಾನು ರೆಡ್ಡಿಯನ್ನು ಕರೆದುಕೊಂಡು ಬರುವುದಾಗಿಯೂ.. ಆಗ ಸಿಪಾಯಿಗಳು ಗಪ್ಪಂತ ಹಿಡಿಯಬೇಕೆಂದೂ ಹೇಳಿದನು. ಅವಯ್ಯನ ಅತ್ಯದ್ಭುತ ದ್ರೋಹ ಚಿಂತನಾ ಕವುಸಲ್ಯಕ್ಕೆ ಮಾರು ಹೋದ ಮನ್ರೋನು ಕೆಲವು ರೂಪಾಯಿಗಳಿದ್ದ ಸಂಚಿಯನ್ನು ವಗೆದನು. ಅದನ್ನು ಭಯ ಭಕುತಿಯಿಂದ ಯತ್ತಿಕೊಂಡ ರಾಯನು ಹಿಮ್ಮುಖವಾಗಿ ನಡೆಯುತ ಸದರಿ ನಗರದ ಪ್ಯಾಟಿಗೆ ಹೋಗಿ ಯೇನೇನು ಖರೀದಿ ಮಾಡಿದನೆಂದರೆ....

ಅತ್ತ ಹರಪನಹಳ್ಳಿ ಪ್ರಾಂತದ ಹತ್ತಾರು ಮೂರುಗಳೊಳಗೆ ಯೇನೇನು ನಡೆಯುತ್ತಿತ್ತೆಂದರೆ ಅದೇ ನಡೆಯುತಲಿತ್ತು. ಅಲ್ಲಿನ ಯಿದ್ಯಾಮಾನಗಳ ಬಗ್ಗೆ ಅರಸಿಕೇರಿಯ ನಿಬಿಡಾರಣ್ಯದೊಳಗಿದ್ದ ಯಲ್ಲಾ ಪ್ರಕೊರಚರಟ್ಟಿಯು ಆಕಾಸರಾಮಣ್ಣನ ನೇತ್ರುತ್ವದಲ್ಲಿ ಚರ್ಚೆ ನಡೆಸುತಲಿತ್ತು. ರಾಜಕಾರಣ ಮಟ್ಟದಲ್ಲಿ ಚೋರ ಕಲೆಯು ಜನಪ್ರಿಯಗೊಂಡಿರುವುದರ ಬಗ್ಗೆ ರುತ್ತಿನಿರತ ಕಳ್ಳರು ಮತ್ತೇಭಯಿಕ್ರೀಡಿತ ಛಂದಸ್ಸಿನಲ್ಲಿ ಮಾತಾಡಿಕೊಳ್ಳುತಲಿದ್ದರು. ಆಳುವ ರಾಜರುಗಳೇ ಚೋರ ಕಸುಬಿಗಿಳಿದಿರುವುದರಿಂದ ತಮ್ಮ ಕುಲದೇವತೆ ಪೋಲಾಚಮ್ಮ ಕ್ರುದ್ದೆಯಾಗುವ ಕಾಲ ದೂರ ಯಿಲ್ಲ ಯಂಬ ನಿರ್ಣಯಕ ಬಂದರು. ಕಳುಮೂವಂದು ಸಾಮಾಜಿಕ ಮವುಲ್ಯವಾಗಿ ಮಾರ್ಪಟ್ಟಿರುವುದೂ, ಮತ್ತದು ಗುರುಕುಲ ಪಠ್ಯಕ್ರಮಗಳೊಳಗ ಭೋದನಾಂಸವಾಗಿರುವುದೂ ಕಲಿಕಾಲದ ವಯಿಪರೀತ್ಯಗಳಲ್ಲಿ ವಂದು ಯಂಬ ನಿರ್ಣಯಕ ಬಂದರು. ತಾವೇ ಅರಾಜಕತೆ ಕಾಣಿಸಿಕೊಂಡಿರುವ ಮೂರುಗಳ ವುಸ್ತುವಾರಿಯನ್ನು ಕಯ್ಯಿಗೆತ್ತಿಕೊಂಡರೆ ಹೇಗೆ? ಯಿದಕ ಪೋಲಾಚಮ್ಮ ವಪ್ಪಿಗೆ ನೀಡುವಳೆ? ಹಿಂಗs ವಗಯ್ರೆ.. ವಗಯ್ರೆಕುರಿತು ಮಾತುಕತೆ ನಡೆಸುತಿರುವಾಗ್ಗೆ..ಯಿದು ತಪ್ಪು.. ತಪ್ಪು ಯಂಬರ್ಥ ಬರುವ ರೀತಿಯಲ್ಲಿ

ಗೂಗೆಗಳು ಗೂಗುಕ್ ಯಂದೂ.. ನರಿ, ತೋಳಗಳು ಹೋ ಹೋ ಯಂದು ಮುಗುಲಿಗೆ ಮುಖಮಾಡಿ ಕೂಗುತಿರುವಾಗ್ಗೆ....

ಅತ್ತ ಕೂಡ್ಲಿಗಿ ಪಟ್ಟಣದೊಳಗ ಮಂದಿಯು ಯಡ್ಡವರ್ಡನೂ, ಚೆನ್ನಫರಮ್ಮನೂ ಪರಸ್ಪರ ಅನ್ಯೋನ್ಯವಾಗಿರುವರೆಂಬ ವದಂತಿಯನ್ನು ಖಚಿತಪಡಿಸಿಕೊಳ್ಳಲು ಅನೇಕ ರೀತಿಯಲ್ಲಿ ಪ್ರಯತ್ನ ಪಡುತಲಿದ್ದರು.. ಬಂಗಲೆಯ ಪರಿಚಾರಕರನ್ನು ಅಲ್ಲಲ್ಲಿ ತರುಬಿ ತಮ್ಮನುಮಾನ ಪರಿಹಾರ ಮಾಡಿಕೊಳ್ಳುತಲಿದ್ದರು.. ಕೇವಲ ವಾರದ ಹಿಂದೆಯಷ್ಟೆ ಕವುಟುಂಬಿಕ ಸಲಹೆದಾರನೆಂದು ನೇಮಕಗೊಂಡಿದ್ದ ಮತ್ತು ಬಡತಿ ಪಡೆದು ವರ್ಗವಾಗಿ ಬಂದಿದ್ದ ಯಂಕೋಬ ಸಾಸ್ತ್ರಿಯು ತನ್ನ ವಾಗ್ವಯ್ಬರಿಯಿಂದ ಯಡ್ಡವರ್ಡು ಮತ್ತು ಜೆನ್ನಿಫರಮ್ಮ ಪಾರ್ವತಿ ಪರಮೇಸ್ವರರಷ್ಟೆ ಆದರ್ಸ ದಂಪತಿಗಳು ಯಂದು ಸದರಿ ಪಟ್ಟಣದ ಕವುಟುಂಬಿಕ ಯವಸ್ಥೆಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದ್ದನು. ಸರಕಾರವು ಪ್ರತಿಯೊಂದು ಹೋಬಳಿ ಪಟ್ಟಣಗಳಲ್ಲಿ ಸಮೀಕ್ಷೆ ನಡೆಸಿ ವಸಂತ ಪೂರ್ಣಿಮದ ಬೆಳದಿಂಗಳಲ್ಲಿ 'ಆದರ್ಸ ದಂಪತಿಗಳು' ಯಂಬ ಪ್ರಶಸ್ತಿ ನೀಡಲಿರುವುದಾಗಿ ಪ್ರಕಟಣೆ ಹೊರಡಿಸಿ ಸಂಚಲನವನ್ನು ಸ್ರುಸ್ಟಿಸಿದ್ದನು. ಪೂರಕ ಪ್ರಚಾರ ಸಾಹಿತ್ಯ ಸಾಮಾಗ್ರಿಯನ್ನೂ ಹೇರಳವಾಗಿ ಬಳಕೆ ಮಾಡಿದ್ದನು. ಯಿದರಿಂದಾಗಿ ಸದರಿ ಪಟ್ಟಣದ ಬಹುತೇಕ ದಾಂಪತ್ಯಗಳು ಬಿರುಕುಗಳಿಂದ ಮುಕ್ತಗೊಳ್ಳುವ ಪ್ರಯತ್ನ ನಡೆಸಿದವು.. ಗಂಡ ಹೆಂಡಿರು ಆದರ್ಸ ಪರಿಕಲ್ಪನೆ ಸಲುವಾಗಿ ಬೆಸುಗೆ ಕಾರ್ಯವನ್ನು ಗೋಪ್ಯವಾಗಿ ಆರಂಭಿಸಿದರು. ಮದುವೆ ವಯಸ್ಸಿಗೆ ಬಂದಿದ್ದ ತರುಣ, ತರುಣಿಯರೇನಿದ್ದರು, ಅವರು ತಮ ತಮ್ಮ ಅಪ್ಪ ಅವ್ವಂದಿರನು ತರುಬಿ ಯಾವಾಗ ತಮ್ಮ ಮದುವೆ ಯಂದು ಹಕ್ಕೊತ್ತಾಯ ಹೇರತೊಡಗಿದರು.. ಯೀಗಾಗಲೇ ಗುಟ್ಟಾಗಿ ಪ್ರೇಮ ಸಲ್ಲಾಪದಲ್ಲಿ ತೊಡಗಿದ್ದವರೇನಿದ್ದರು ಅಂಥವರ ಮದುವೆ ಕೆಲವು ಮಿಜಿ ಮಿಜಿಗಳ ನಡುವೆಯೂ ನಡೆಯಲಾರಂಭಿಸಿದವು. ಆದರೆ ಸದರಿ ಪಟ್ಟಣದ ಯಲ್ಲ ಯುವಕರಿಗೆ ಯೀ ತೆರನ ಯಿವಾಹ ಯೋಗ ಯಿರಲಿಲ್ಲ.. ಅದಕ್ಕೆ ಕಾರಣಮೂಯಿರಲಿಲ್ಲ.. ಯೇನೆಂದರೆ ವಂಕದಾರಿ ಗೋಯಿಂದಪ್ಪ ಸ್ರೇಷ್ಟಿ«ಯ ಯೇಕ ಮಾತ್ರಪುತ್ರಸುಬ್ಬಣ್ಣನ ಜಾಯಮಾನದವರಾದ ನೂರಾರು ಮಂದಿ ತರುಣರು ತಾವು ತಿಲ್ಲಾನ ತಾಯಕ್ಕನ ಮಗಳು ಚಿನ್ನಾಸಾನಿಯನ್ನೇ ಮದುವೆಯಾಗಬೇಕೆಂದು ತೀರ್ಮಾನಿಸಿದ್ದರು. ಯೀ ಯಿಷಯದಲ್ಲಿ ಅವರ ಕೆಲ

ಅಪ್ಪಂದಿರ ಸರೀರಗಳೊಳಗಿನ ವುಪ್ಪು ಹುಳಿ ಖಾರ ಸತ್ವ ಕಳೆದುಕೊಂಡಿರಲಿಲ್ಲ, ಚಿನ್ನಾಸಾನಿ ಮ್ಯಾಲಣ ಪಾರುಪತ್ಯೆ ಯಿಷಯದಲ್ಲಿ ಯಷ್ಟೋ ತಂದೆ ಮಕ್ಕಳ ನಡುವೆ ಮಾತಿಗೆ ಮಾತು ನಡೆಯದೆ ಯಿರಲಿಲ್ಲ, ಕೆಲವು ಕಡೆ ಜಗಳ ಹೊಡೆದಾಟ ನಡೆದು ಪಿತ್ರುತ್ವಕ್ಕೆ ಕಳಂಕ ತಗುಲದೆ ಯಿರಲಿಲ್ಲ, ಮದುವೆ ಅಂಬುದು ಆದಲ್ಲಿ ಆಕೆಯನ್ನೇ ಆಗುವುದೆಂದು ಘೋರ ಪ್ರತಿಗ್ನೆ ಮಾಡಿ ನಿರಸನ ರೊತಾರೂಢರಾದವರೆಷ್ಟೋ? ಮನೆ ಮಠ ತೊರೆದು ತಿಲ್ಲಾನ ತಾಯಕ್ಕನ ಚಂದುಳ್ಳ ಮನೆಗನತಿದೂರದಲ್ಲಿ ಕುಂಡಿಗೆ ಗೆದ್ದಲು ಹತ್ತುವಂತೆ ಕೂಕಂಡವರೆಷ್ಟೋ?

ಯಿದೇನೀ ಮುಂಡೇವು.. ತಮ್ಮ ಮನಿ ಕಡೇಕ ಪಿಳಿ ಪಿಳಿ ನೋಡಿಕೋತ ಕೂಕಂಡುಬಿಟ್ಟಿರುವವಲ್ಲಾ ಯಂದು ತಾಯಕ್ಕ ಅಂಥವುಗಳನ್ನಲ್ಲಿಂದ ವಕ್ಕಲೆಬ್ಬಿಸುವ ಸಲುವಾಗಿ ನಾನಾ ನಮೂನಿ ಸಾಹಸಗಳನ್ನು ಪ್ರದರ್ಸಿಸಿ ಯಿಫಲಳಾದಳೆಂಬುದು ಹಳೆಯ ಯಿಷಯ. ಬುಗಡಿ ನೀಲಕಂಠಪ್ಪನನ್ನು ಕಳುವಿ ಆದರ್ಸ ದಾಂಪತ್ಯದ ರೂವಾರಿಯಾದ ರಾಯನಿಗೆ ದೂರು ಸಲ್ಲಿಸಿದ್ದೂ ಹಳೆಯ ಯಿಷಯ. ತನ್ನ ಯೋಜನೆ ಯಿಷ್ಟೊಂದು ಯಿಷಮ ಪಡೆಯಬೌದೆಂದು ಯೀ ಮೊದಲು ಯಣಿಸಿರದಿದ್ದ ರಾಯನು ಪಟ್ಟಾಗಳ ಕಡತ ತರಿಸಿಕೊಂಡು ಯಾರ್‍ಯಾರ ಮನೆ ಯಷ್ಟೆಷ್ಟು ಯಿಸ್ತೀರ್ಣವುಂಟು ಯಂಬುದನ್ನು ಪರಿಸೀಲನೆ ಮಾಡಿ ಹರೇದ ಹುಡುರು ನಿರಸನ ರೊತ ಸ್ವೀಕಾರ ಮಾಡಿ ತಪಸ್‌ಚರ್ಯೆಯಲ್ಲಿ ತೊಡಗಿರುವುದು ಪರಂಪೂಕು ಜಾಗದಲ್ಲಿ ಯಂಬ ನಿರ್ಣಯಕ ಬಂದು ದೂರಿನ ಯಡಮಗ್ಗುಲು ಷರಾ ಬರೆದನು. ಸದರಿ ಪಟ್ಟಣದ ತಾರುಣ್ಯ ಪರಪಂಚದೊಳಗ ಯಿಂಥಾದ್ದೊಂದು ಚಂಡಮಾರುತವನ್ನೆಬ್ಬಿಸಿರುವ ಚಿನ್ನಾಸಾನಿಯ ಬಗ್ಗೆ ಅಯಿವತ್ತರ ಆಜುಬಾಜಿನಲ್ಲಿದ್ದ ತಾನೂ ಕುತೂಹಲ ತಳೆದನು. ಆಯಾ ಪರಂಪೂಕು ಜಾಗವನ್ನು ಮುದ್ದಾಂ ಪರಿಸೀಲಿಸುವ ನೆಪದಲ್ಲಿ ಅವಯ್ಯನು ಸಾಸ್ತ್ರೀಯವಾಗಿ ವುಡುಪು ಧರಿಸಿ ಫಲಾನ ಮೋಣಿಯನ್ನು ಪ್ರವೇಸ ಮಾಡಿದನು. ಯೇನರಯ್ಯಾ? ಯಾಕರಯ್ಯಾ? ಯಂದು ಕೇಳುತ "ಯಾರಿದ್ದೀರಿ ಮನೆಯೊಳಗ" ಯಂದು ಫಲಾನ ಮನೆಯನ್ನು ಪ್ರವೇಶ ಮಾಡೇ ಬಿಟ್ಟನು. "ಯೇನು ಸ್ವಾಮೀ.. ಬಡವಿಯ ಮನೆವರೆಗೆ ಪಾದ ಬೆಳೆಸಿರುವ ಕಾರಣವೇನು?" ಯಂದು ಸ್ವಾಗತ ಕೋರಿದ ತಾಯಕ್ಕಳನ್ನೇ ಚಿನ್ನಾಸಾನಿ ಯಂದು ಭಾವಿಸಿ ಹ್ಹಾಂ...ಹ್ಹಾಂ.. ಸವುಂದರ್ಯದ ರಾಸಿಯೇ ಯಂದು ಮನದೊಳಗ ವುದ್ಗಾರ

ತೆಗೆದು ಸ್ವಾಗತ ಸತ್ಕಾರಕ್ಕೆ ತಥಾಕಥಿತವಾಗಿ ಸ್ಪಂದಿಸಿದನು. ಯಷ್ಟೋ ಹೊತ್ತು ಗತಿಸಿದ ನಂತರ ನಿಧಾನಿಕೇಲೆ ಅರುವಿಗೆ ಬಂತು. ತಾಯಕ್ಕ ತಾಯಿಸ್ಥಾನದಲ್ಲಿರುವ ಸಂಗತಿ. ಯೀ ವಯಸ್ಸಿನಲ್ಲೂ ಯಿೂ ಪರಿ ಅಂಗಸವುಷ«ವ ಯಿಟ್ಟುಕೊಂಡಿರುವ ಯೀಕೆ ವಂದು ಕಾಲದಲ್ಲಿ ರಂಭೆಯೋ, ಮೂರ್ವಸಿಯೋ, ಮೇನಕೆಯೋ ಆಗಿದ್ದಿರಬೇಕು.. ಅರೆ! ತನ್ನ ಮನಸ್ಸು ಯಭಿಚಾರದ ಕಡೇಕ ತಪ್ಪು ಹೆಜ್ಜೆ ಹಾಕುತ್ತಿರುವುದಲ್ಲಾ?... ಪಾಪೋಹಂ, ದ್ರುಸ್ಟಿ ಚದುರಿಸಿದ. ತಲೆ ತಗ್ಗಿಸಿ ಯತ್ತಿದ. ತನ್ನ ಯೇಕಪತ್ನೀರೊತವನ್ನು ಚಾಚೂತಪ್ಪದೆ ಪಾಲಿಸಬೇಕು. ದ್ರುಢಮನಸ್ಕನಾದ. ತಂಗೀ ಅನ್ನಲಿಕ್ಕಾಗದೆ, ಅಕ್ಕಾಯನ್ನಲಿಕ್ಕಾಗದೆ ವದ್ದಾಡುತ.. ಆಕೆಯ ಮಗಳನ್ನು ನೋಡುವ, ನೋಡಿ ಮಾತಾಡುವ ಬಯಕೆ ಯಕ್ತಪಡಿಸಿದ. ಅವಯ್ಯನ ಸರೀರದೊಳಗೆ ಕಾಮಾದಿ ಭಾವನೆಗಳು ಲವಲೇಸುಯಿಲ್ಲಯಂಬುದನ್ನು ವಂದು ನೋಟ ಮಾತ್ರದಿಂದ ಖಾತರಿ ಮಾಡಿಕೊಂಡ ತಾಯಕ್ಕ (ತನಗಾ ಹೆಸರು ಹುಟ್ಟಿದಾರಾಭ್ಯದಿಂದ ಬಂದುದಾಗಿರಲಿಲ್ಲ.. ತನ್ನನ್ನು ನೋಡುವವರ ಮನಸ್ಸಿನಲ್ಲಿ ಸೋದರಿಯತ್ವದ ಭಾವನೆ ಬರಬೇಕೆಂದೇ ತಾನು ಮಧ್ಯಂತರದಲ್ಲಿ ಯಿಟ್ಟುಕೊಂಡಿರುವಂಥ ನಾಮವಾಚಕ ಅದಾಗಿರುವುದು. ಆಕೆಯನ್ನು ವಂದೊಂದು ಸವುಸ್ಥಾನದವರು ವಂದೊಂದು ರೀತಿಯಲ್ಲಿ ಸಂಬೋಧಿಸುತಲಿದ್ದರು. ಯಾವುದೊಂದು ಜಿಹ್ವಾ ಶಾಸನದಲ್ಲೂ ಆಕೆಯ ನಿಜನಾಮಧೇಯದ ಬಗ್ಗೆ ತಿಲ ಮಾತ್ರವುಲ್ಲೇಖಯಿಲ್ಲ) ಪುಟ್ಟಾ.. ಕಂದಾs ಅಮ್ಮಣ್ಣೀ ಯಂದು ಗಳಿಗ್ಗಳಿಗ್ಗೊಮ್ಮೆ ಮಾಲಕಂವುಸ ಲಯದಲ್ಲಿ ಕೂಗಿದಳು..

ಆಗಂತುಕನೊಂದಿಗೆ ತನ್ನ ತಾಯಿ ನಡೆಸಿದ್ದ ಮಾತುಕತೆಯನ್ನು ಚಿನ್ನಾಸಾನಿ ತಾನಿದ್ದ ಸಾಣಮಂದಿರದೊಳಗಿಂದಲೇ ಆಲಿಸದಿರಲಿಲ್ಲ.. ಅಪರಿಚಿತ ಗಂಡಸಿನ ದ್ದೊನಿಯಂಬುದರಲ್ಲಿ ಅನುಮಾನವಿಲ್ಲ.. ಸುಸಂಸುಕ್ರತನೋರ್ವ ಆಡುವಂಥ ಮಾತು. ಪ್ರಾಯಶಃ ಯೀ ಪ್ರಾಂತಕ್ಕಾತ ಹೊಸಬನಿದ್ದಿರಬೌದು. ಆದರ್ಸ ದಾಂಪತ್ಯ ಯೋಜನೆಯಿಂದ ಮನೆಮಾತಾಗಿರುವ ಸದರಿ ಪಟ್ಟಣದಲ್ಲಿ ಆತನು ಸಾಮಾನ್ಯನಿರಲಾರನು. ಗಂಧರ್ವಲೋಕದವನಾಗಿರಬೇಕು. ಯಿಲ್ಲವೆಂದರೆ ದಾಂಪತ್ಯದ ಪರಿಕಲ್ಪನೆ ಕುರಿತು ಅತ್ಯದ್ಭುತವಾಗಿ ಯೋಚಿಸಲಕಾದೀತಾ? ಕಾರ್ಯಗತ ಗೊಳಿಸಲಕಾದೀತಾ? ಅವರೀರ್ವರ ಮಾತಿನ ಧಾಟಿ ಅವಲೋಕನ ಮಾಡಿದಲ್ಲಿ ಆತ ತನ್ನ ತಾಯಿಯಲ್ಲಿ ಅನುರಕ್ತನಾಗಿದ್ದಿರಬೌದು, ಯಿಲ್ಲವೆ ತನ್ನ ತಾಯಿ ಆತನಲ್ಲಿ ಅನುರಕ್ತೆಯಾಗಿದ್ದಿರಬೌದು, ಮೋಹ ಅವರೀರ್ವರ ನಡುವೆ ಪ್ರಾಥಮಿಕ

ಹಂತದಲ್ಲಿರಬೇಕು, ಮಗಳಾದ ತನ್ನನ್ನೇ ವಯರಾಗ್ಯದ ಕಡೆ ನಡೆಸುತ್ತಿರುವ ತನ್ನ ತಾಯಿ ಮಾಯಾವಿನಿ ಯಂಬುದಂತೂ ಖರೆ....

ಹಿಂಗs ಂಯೋಚಿಸುತ್ತಲೇ ಬೆತ್ತಲಾಗಿದ್ದಳು ಚಿನ್ನಸಾನಿ. ವಾರದಿನಮಾನದಿಂದ ಗೋಪ್ಯವಾಗಿ ಅಡಗಿಸಿಕೊಂಡಿದ್ದ ಪುಟ್ಟ ಕನ್ನಡಿಯನ್ನು ತನ್ನ ಲಲಿತ ಸರೀರದ ಮ್ಯಾಲೆಲ್ಲ ಸುಲಲಿತವಾಗಿ ಹರಿದಾಡಿಸಿದಳು ಚಿನ್ನಾಸಾನಿ.. ನೀನಾದರೂ ಸುಖಪಟ್ಟೆಯಲ್ಲ ಯಂದು ಕನ್ನಡಿಯನ್ನು ಚುಂಬಿಸಿದಳು. ಚಿನ್ನಾಸಾನಿ.. ತಾನು ಲಗೂನ ಸಾಣ ಮಾಡಬೇಕೆಂದರೆ ನೀರು ಸಹಕರಿಸುತಲಿರಲಿಲ್ಲ. ಅದರ ವಂದೊಂದು ಬಿಂದು ತನ್ನ ಸರೀರದಿಂದ ಕೆಳಗೆ ಜಾರಲು ಅಗತ್ಯಕ್ಕಿಂತ ತುಸು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದುದೇ ಅದಕ ಕಾರಣ. ತಮ್ಮ ಮನೆಯಿಂದಾಚೆ ಹೊರಯಿರಬೌದಾದ ಪುರುಷರ ಆಸೆಬುರುಕ ಕಣ್ಣುಗಳು ಪವ್ವನೆ ಪಾರಿ ಬಂದು ತನ್ನ ಸರೀರದ ಮ್ಯಾಲೆಲ್ಲ ಹರಿದಾಡುತ ಕಚಗುಳ್ಳಿಯಿಕ್ಕುತ್ತಿರುವಂಥ ಅನುಭವ ಬೇರೆ, ಕಲ್ಪನೆಯೇ ಸೊಗಸು, ಕಲ್ಪನೆಯೇ ಮಾದಕ, ಕಲ್ಪನೆಯೇ ರೋಮಾಂಚನ... ಬಚ್ಚಲೆಂಬುದು ಬಯಲು, ಬಯಲು ಯಂಬುದೇ ಬಚ್ಚಲು.. ಬಯಲು ಬಚ್ಚಲ ನಡುವಿನ ಸಾಂಗತ್ಯವೇ ಅದ್ಭುತ!

ಸಾಣ ಮಾಡಿದ್ದಾಯಿತು. ಬಹುವರ್ಣಮಯ ವುಡುಪುಗಳಿಂದ ತನ್ನ ಸರೀರದ ಆಯಕಟ್ಟಾದ ಅಮೂಲ್ಯ ಅಂಗಗಳನ್ನು ಬಂಧಿಸಿದ್ದಾಯಿತು. ವುಳಿದಂತೆ.. ಯಿದರ ಮ್ಯಾಲ ಅದು, ಅದರ ಮ್ಯಾಲ ಯಿದು...

"ಪುಟ್ಟಾ.. ಕಂದಾ.. ಅಮ್ಮಣ್ಣೀ.. ತೀರ್ಥರೂಪರ ಸ್ಥಾನದಲ್ಲಿರುವ ಹಿರಿಯರನ್ನು ಕಾಯಿಸುವುದು ಸರಿಯಲ್ಲ ತಾಯೀ..."

ಚಿನ್ನಾಸಾನಿ ಅಗತ್ಯಕ್ಕಿಂತ ಹೆಚ್ಚು ವಯರಾಗ್ಯ, ಅಲವುಕಿಕ ವುಡುಗೆ, ತೊಡುಗೆ, ಪ್ರಸಾದನಗಳಿಂದ ತನ್ನ ಸರೀರವನ್ನು ಅಲಂಕರಿಸಿಕೊಂಡಳು. ಮರೆಮಾಚಿಕೊಂಡಳು. ಯಿದಕ್ಕೆ ಪೂರಕವಾಗಿ ದೇವರಕೋಣೆಯಲ್ಲಿ ಚಿನ್ನದ ಗಂಟೆಯನ್ನಲುಗಾಡಿಸುತ ನಾದ ಹರಿಸಿದಳು.. ತುಪ್ಪದ್ದೀವಿಗೆಯ ಬೆಳಕಲ್ಲಿ ಥಳಥಳ ಹೊಳೆದಳು.. ತೂಗು ನೀಲಾಂಜನದ ಬೆಳಕಲ್ಲಿ ನಳನಳಿಸಿದಳು, ಹಲವು ತಯ್ಲಗಳ ಹಲವು ದೀವಿಗೆಗಳ ಬೆಳಕಲ್ಲಿ ಹಲವು ತೆರನ ಕಾಮನ ಬಿಲ್ಲುಗಳಾಗಿ ದೇವರ ಕೋಣೆಯ ತುಂಬೆಲ್ಲ ಮೂಡಿದ ಆ ಚಂದ್ರವದನೆಯು ಲೋಬಾನಧೂಪದೊಳಗ ನಡೀತಾ ನಡಿತಾ.. ಹೊಸ್ತಿಲು ದಾಟಿ ಯೀಚೆ ಅಡಿಯಿರಿಸಿದೊಡನೆ ತನ್ನ ವುನ್ಮೀಲಿತ ನೇತ್ರಗಳಿಂದ ಸಮ್ಮೋಹನಾಸ್ತ್ರವ ಬಿಟ್ಟೊಡನೆ.. ಕಣ್ಣುಗಳಿಗಾವ

ವಯುರಾಗ್ಯ ಯಂಬುದನು ಸಾಬೀತುಪಡಿಸಿದೊಡನೆ.. ಅಯಿವತ್ತರ ಸರೀರದೊಳಗಿಂದ ಯಿಪ್ಪತ್ತರ ಹರೆಯನ್ನು ಹೆಕ್ಕಿ ತೆಗೆಯುವುದು ತನಗಾವ ಲೆಕ್ಕ ಯಂಬುದನು ಸಾಬೀತುಪಡಿಸಿದೊಡನೆ.. "ನಮಸ್ಕಾರ" ಯಂಬ ನಲ್ನುಡಿಯಿಂದ ಹೆಡಮುರುಗೆ ಕಟ್ಟಿದೊಡನೆ...

ಸಂಭವಿಸಲಿದ್ದ ಮೂರ್ಛೆಯಿಂದ ಚೇತರಿಸಿಕೊಂಡವನಾದ ರಾಯ, ನಭೂತೋ ನಭವಿಷ್ಯತಿ ಯಂಬ ಮುಖಬೆಳೆಯುಳ್ಳ ಸವುಂದರ್ಯವನ್ನು ಕಣ್ಣಾರೆ ನೋಡಿ ದಂಗಾದ ರಾಯ. ಯಲ್ಲಿ ತನ್ನೊಳಗಿನ ಯೇಕ ಪತ್ನಿತ್ವದ ನಿಷ್ಠೆ ದಹನಗೊಂಡಿತೋ? ಮೂರನೇ ತಿಂಗಳಲ್ಲೊ ತವರು ಮನೆಯೊಳಗುಳಿದಿರುವ ತ್ರಿಕಾಲಗ್ನಾನಿಣಿಯಾದ ತನ್ನ ಪತ್ನಿಗೆ ತಾನು ಅಪರಿಮಿತ ಸವುಂದರ್ಯರಾಸಿಯದುರು ವುಪಸ್ಥಿತಿನಿರುವ ಸಂಗತಿ ತಿಳಿದರೇನು ಗತಿ ಯಂದರಗಳಿಗೆ ಕಂಗಾಲಾದ ರಾಯ ಬೇರೆ ದಾರಿಯಿಲ್ಲದೆ..

**ಮಾಣಿಕ್ಯ ವೀಣಾ ಮುಪಲಾಸ ಯಂತೀಂ**ss
**ಮದಾಲಸಾಂ ಮಂಜುಳ ವಾಗ್ವಿಲಾಸಂ**sss
**ಮಹೇಂದ್ರನೀಲದ್ಯುತಿ ಕೋಮಲಾಂಗೀಂ**ss
**ಮಾತಂಗ ಕನ್ಯಾ ಮನಸಾಸ್ಮರಾಮಿ**ss
**ಚತುರ್ಭುಜೇ ಚಂದ್ರಕಳಾವತಂಸೇ**ss
**ಕುಚೋನ್ನತೇ ಕುಂಕುಮರಾಗ ಶೋಣೇ**sss
**ಪುಂಡ್ರೇಷು ಪಾಶಾಂಕುಶ ಪುಷ್ಪ ಬಾಣ ಹಸ್ತೇ**ss
**ನಮಸ್ತೇ ಜಗದೇಕ ಮಾತ**ss
**ಮಾತಾಮರಕತ ಶಾಮಾ ಮಾತಂಗೀ ಮಧುಶಾಲಿನೀ**sss
**ಕುರ್ಯಾತ್ಕಟಾಕ್ಷಂ ಕಲ್ಯಾಣೀ**s **ಕದಂಬ ವನವಾಸಿನೀಂ ಜಯ ಮಾತಂಗ ತನಯೇ**ssss

ಯಂದು ರಾಗದಿಂದ ಹಾಡಿಯಾದ ಮ್ಯಾಲ "ತಾಯಾಮ್ಮಾ.. ಮಾ ಲಕ್ಷ್ಮಿದೇವಿಯೇ ನಿನ್ನೀ ಮಗಳ ಸರೀರದೊಳಗ ನೆಲೆಸಿರುವಳು.. ಯೀಕೆಯ ಸವುಂದರ್ಯ ರುಥಾ ಆಗುವುದು ಬೇಡ.. ನ್ರುತ್ಯ ಕಲಿಸಿ ಖ್ಯಾತ ನ್ರುತ್ಯೆಕಲಾಯಿದೆಯನ್ನಾಗಿ ಮಾಡು" ಯಂದು ಆಸೀರುವಚನ ಭಂಗಿಯಲ್ಲಿ ನುಡಿದನು. ಅಪೂರ್ವ ಲಾವಣ್ಯವತಿಯಾದ ಯೀಕೆಯನ್ನು ಯಡ್ಡವರ್ಡನ ದ್ವಾರ ವಂದು ಸುಗ್ರೀವಾಗ್ನೆಯನ್ನು ಹೊಂಡಿಸಿ ಮುಟ್ಟುಗೋಲು ಹಾಕಿಕೊಂಡು

ಕುಂಪಣಿ ಸರಕಾರದ ಭಂಡಾರವನ್ನು ಸ್ರೀಮಂತಗೊಳಿಸಿದರೆ ಹೇಗೆ ಯಂದು ಅವಯ್ಯನು ವಳಗೊಳಗೆ ರುಥಾ ಆಲೋಚನೆಯಂ ಮಾಡುತ ಅಲ್ಲಿಂದ.....

ಅತ್ತ ಮಾರೆಮ್ಮನ ಜಾಗ್ರುತ ಸ್ಥಳವಾದ ಗವುರಸಂದ್ರದ ಕೂಗಳತೆ ದೂರದಲ್ಲಿದ್ದ ಮುರುಡಿಯೊಳಗ... ಸ್ರೀಮದ್ ವ್ಯಾಸರಾಯ ಮುನಿವರೇಂದ್ರರಿಂದ ಪ್ರತಿಷ್ಠಾಪಿಸಲ್ಪಟ್ಟಿರುವ, ಯದುರುಮುಖೀ ಆಂಜನೇಯಸ್ವಾಮಿ ನೆಲಗೊಂಡಿರುವ ಮುರುಡಿಯೊಳಗ, ದೊರವಡಿ ರಾಜಾಹನುಮಪ್ಪನಾಯಕ ನೆಂಬುವಾತ ಸಣ್ಣಾತಿ ಸಣ್ಣ ಮಾರ್ಬಲದೊಂದಿಗೆ ಆಳ್ವಿಕೆ ನಡೆಸಿದ್ದಂಥಾ ಮುರುಡಿಯೊಳಗ, ಯುಗಯುಗಾಂತರಗಳ ಹಿಂದೆ ಭಗೀರಥ ಮುನಿಯ ಹಿಂದ ಹಿಂದ ಹೊರಟಂಥ ಗಂಗಾದೇವಿಯ ಸಾವುರ ಮಯ್ಲುದ್ದದ ಕೂದಲೊಂದು ಕಂಪಳ ಮಲೆಯ ಕಣಿವೆಯಿಂದಿಳಿದು ಚುಟುಕಲಕನಂದೆಯಂಬ ವುಪನಾಮವನ್ನು ತಳೆದು ಸಂವತ್ಸರದ ಹನ್ನೆರಡೂ ಮಾಸಗಳ ಕಾಲ ಆರಕ್ಕೇರದೆ ಮೂರಕ್ಕಿಳಿಯದೆ ಜುಳುಜುಳು ಹರಿಯುತಲಿರುವ ಹಳ್ಳದ ತಟಾಕದಲ್ಲಿರುವ ಮುರುಡಿಯೊಳಗ, ಪಸುಪಾಲಕ ರುತ್ತಿಯನ್ನೇ ಆಧಾರ ಯಿಟ್ಟುಕೊಂಡಿದ್ದಂಥ ಮುರುಡಿಯೊಳಗ....

ಕಾಲುಬಾಯಿ ರೋಗ ಅಮರಿ ವಂದು ಹೆಜ್ಜೆ ಮುಂದಕ್ಕೆ ಕಿತ್ತಿಡಲಾಗದೆ, ವಂದು ಹೆಜ್ಜೆ ಹಿಂದಕ್ಕೆ ಕಿತ್ತಿಡಲಾಗದೆ, ಬಾಯಿಯಿಂದ ಲ್ವಾಳೆ ಲ್ವಾಳೆ ಜೊಲ್ಲು ಸುರಿಸುತ್ತ, ವಂದು ಹಿಡಿ ಸೊಪ್ಪೆ ನಮಲಲಾಗದೆ ಯಿಲಯಿಲಾಂತ ವದ್ದಾಡುತಲಿದ್ದ ಯತ್ತು ಯಮ್ಮೆ ದನಕರುಗಳ ದಯನಾತಿ ದಯ್ನ ಸ್ಥಿತಿಯನ್ನು ನೋಡಲಾಗದೆ "ಅಯ್ಯೋ.. ಗವುರಸಂದರ ಮಾರೆಮ್ಮ ತಾಯೀ.. ಬಾಯಿಲ್ಲದ ಪ್ರಾಣಿಗಳಿಗೆ ಘೋರಾತಿ ಘೋರ ರ್‍ವಾಗ ಬರುಸಿ ತ್ರಾಸು ಕೊಡುತಲಿದ್ದೀಯಲ್ಲಾ.. ಯಿದು ತರವಾ.. ನಮ್ಮಂಥ ನರಹುಳುಗಳಿಗೆ ಯಿಂಥ ರ್‍ವಾಗ ಬರುಸಬೇಕಿತ್ತು. ಯಲ್ಡು ತುತ್ತು ನಮಲುವ ಕಡೇಕ ವಂದು ತುತ್ತು ನಮಲಿ ಜೀವ್ಯನ ಹಿಡಕಂತಿದ್ದೆವಲ್ಲಾ.. ಹೋಗಿ ಹೋಗಿ ಮೂಗ ರಾಸುಗಳಿಗೆ ಕೊಟ್ಟಿರುವಿಯಲ್ಲಾ.. ಯಿವು ನಿನಗ ಮಾಡಿರುವ ದ್ರೋಹವಾದರು ಯೇನು? ವಂದು ಗಿಡಾ ಅಂಟಂಬಂಗಿಲ್ಲ.. ವಂದು ಮದ್ದು ಅಂಟಂಬಂಗಿಲ್ಲ.. ಯಿದೆಂಥ ಗತೀನ ತಂದೀ ತಾಯೀ" ಯಂದು ಸಣಕಂದಮ್ಮನಂಗೆ ದುಕುದುಕ್ಕಿಸಿ ಅಳುತ, ಬಿಕುಬಿಕ್ಕಿ ವುರುಳಾಡುತ, ದಬ್‌ದಬ್ಬಂತ ಯದೆ ಯದೇನ ನಿಂತ ನಿಲುವೀಕಿಲೆ ಬಡಕಮ್ತಿದ್ದ ಪೂರವಿಕ ಕಾಲದ ಹಿರೀಕರ ಪಯ್ಕಿ ಹಿರೀಕ ಮನುಷ್ಯನಾದ ನಡುಲಮನಿ ಹಂಪಜ್ಜನ ದುಕ್ಕ ನಿವಾರಣೆ

ಮಾಡಲಕೆಂದು ಯೇಳೆಂಟು ಮಂದಿ ಕಿಲಾರಿಗಳು ಯಿಫಲ ಪ್ರಯತ್ನ ನಡೆಸಿದ್ದರು. ಂಯ್ಯೋಂಯ್ ಂುಜ್ಜಾ ರಾಸುಕುಲದ ವ್ಯಾಲ ತಾಯಿ ರೋಸ ಮಾಡಿಕಂಡಗಂಗಯ್ತೆ.. ಪರೀಕ್ಷೆ ಮಾಡುತಿದ್ದಂಗಯ್ತೆ.. ಬಲಗಯ್ಲಿ ಕೊಟ್ಟು ಯಡಗಯ್ಲಿ ಕಸಗಳ್ಳೋ ಮಸಲತ್ತು ನಡದಂಗಯ್ತೆ.. ಯಂದು ಮುಂತಾಗಿ ಪಾಪಯ್ಯ ಯಂಬ ಕಿಲಾರಿಯೂ, ಯಿವು ಹಿಂದಲ ಜಲುಮದೊಳಗ ದಯವಕ್ಕ ಅಪಘಾತ ಮಾಡಿದ್ದಮೋ... ಅದಕ ತಾಯಿ ಲೆಕ್ಕಾಚಾರ ಸುರುವು ಮಾಡ್ಯಾಳ ತಂದೀss... ಗವುರಸಂದರದೊಳಗ ತಾಯಿಗೆ ನೆಗಡಿ ಬಂದು ಅಕ್ಸಾಯ್ss ಯಂದು ಸೀನಿರಬೌದು.. ಆಕೆಯ ಸೀನಿನ ಲಕ್ಷಾಂತರ ಬಿಂದುಗಳು ಹುಳುಗಳಾಗಿ ರಾಸುಗಳ ಮಯ್ಯೊಳಗ ಹೊಕ್ಕೊಂಡಂಗಯ್ತೆ ಕನಪ್ಪಾ.. ತೀಟೆ ತೀರಿಸ್ಕಂಡೇ ಆ ಹುಳುಗಳು ಹೊರಕ್ಕೆ ಬರೋದು.. ಅಲ್ಲೀಗಂಟಾ ತಡಕಂಬಾಣು" ಯಂದು ಮುಂತಾಗಿ ಪೂನಯ್ಯ ಯಂಬ ಕಿಲಾರಿಯೂ, 'ಅದೆಲ್ಲ ಹಳೇಕಾಲದ ಮಾತಾತು ತೆಗೀ.. ಮೊನ್ನೇನಾತಮ್ತೀ.. ಅಯಿದರಾಲಿ ಖಾನ ಚಿತ್ತರ ಕಲ್ಲು ದುರುಗದ ಕಿಮ್ಮತ್ತಿನ ಕ್ವಾಟೆ ಸುತಮುತ್ತ ನೂರಾರು ಪಿರಂಗಿಗಳ ತರುಬಿದ್ದು ಯಾರಿಗೆ ಗೊತ್ತಿಲ್ಲಯ್ಯಾ.. ಪಿರಂಗಿಗಳ ಸಿಡುತ ಯಿಲ್ಲೀಮಟ ಕೇಳಿಬಂತೆಂಬುದು ಹಿರೀಕರಿಗ್ಯಾರಿಗೆ ಗೊತ್ತಿಲ್ಲಯ್ಯಾ.. ನೂರಾರು ಗಾವುದ ದೂರ ದೂರ ಯಿರೋ ನರಮನುಸ್ರೇ ಯೀಟು ನೊಂದುಕೊಂಡವೆಂದ ವ್ಯಾಲ ಗಿರಿದುರುಗದ ಮ್ಯಾಲಿರೋ ಯೇಕನಾಥಮ್ಮ, ಹಿಡಿಂಬೆಮ್ಮ, ವುಚ್ಚೆಂಗಮ್ಮ ಭಯ್ರಾಮಮ್ಮ ಅವರೆಲ್ಲ ಯೇಟು ನೊಂದು ಕೊಂಡಿದ್ದಾರು.. ವಂದು ನರ ವುಳಾನಾರ ಪಿರಂಗಿ ಬಾಯಿಗ ಯದೆ ವಡ್ಡೋ ತಾಕತ್ನ ತೋರಿಸಿದ್ದುಂಟಾ?.. ತುರುಕರಾತ ಅಯ್ದರಾಲಿ ನಾಯಕರ ಅವ್ವಂದಿರೇನ ರಮುಸೋ ಯತ್ನವ ಮಾಡಿದ್ದುಂಟಾ?.. ತಾಯಿಂದಿರೆಲ್ಲ ರೋಸಿ ಗವುರಸಂದರಕ ಬಂದು ಮಾರೆಮ್ಮನೆದುರು ಯದೆ ಯದೇ ಬಡಕೊಂಡಿಲ್ಲ ದ್ದುಂಟಾ?.. ಅದಕssನss ಅವೀಸು ಮಂದಿ ತಾಯಂದಿರು ರಾಸುಗಳ ಮ್ಯಾಲ ಮುಗಿ ಬಿದ್ದಂಗಯಿತರಪ್ಪಾ.. ಅವರನು ಸಾಂತಿ ಮಾಡದ ಹೊರತುss...." ಯಂದು ಮುಂತಾಗಿ ಜುಮ್ಮಯ್ಯ ಯಂಬ ಕಿಲಾರಿಯೂ, "ಮಾಮೋss ನಿನ ಮಾತ್ಯಾಕೋss ನನಗ ಸಜ್ಜು ಕಾಂಬಲಿಲ್ಲ ನೋಡು.. ಯಲ್ಲಿ ಚಿತ್ತರಕಲ್ಲು ದುರುಗss ಯಲ್ಲಿ ಮುರುಡೀsss.... ಯುದ್ಧ ಜರುಗಿ ಯೇಸು ಕಾಲಾತು ಯೇನು ಕಥೀ.. ಆ ಅಮ್ಮಂದಿರಿಗೆ ಅವರದವರಿಗೇ ಮಸ್ತಾಗಿರತಯ್ತಿ.. ಅವರ್ಯಾಕ ಬಂದು ಮಾರೆಮ್ಮನ ಸೇರಿಕೊಂಡಾರು.. ಕಂಪಳರಾಯನ ಕಾಲದಾಗ ಅಮ್ಮೋರು

ವಬ್ಬರಿಗೊಬ್ಬರು ಮುನುಸುಕೊಂಡಿದ್ದು ಯಾರಿಗ್ಗಾತನೆ ಗೊತ್ತಿಲ್ಲಮ್ಮಿ? ನಮ್ಮಂಥ ನರಮನುಸ್ರುಯಿವತ್ತು ಗುದ್ದಾಡಿ ನಾಳೀಕೆ ರಾಜಿ ಆಗಿಬಿಡಬೌದು.. ಆದರವರಂಗಲ್ಲಪ್ಪಾ.. ಬಲು ರೋಸದೋವವ್ರು.. ಯಂದು ಮುಂತಾಗಿ ಪೀತಯ್ಯ ಯಂಬ ಕಿಲಾರಿಯೂ.. "ಹಿಂಗs ಮಾತಾಡ್ತಾ ಹೊತ್ತನ ತಿಮ್ಮಿರ್ತಿರೋ.. ಮುಂದ ಯೇನು ಮಾಡಬೇಕೆಂಬುದರ ಕಡೇಕ ದ್ರುಸ್ಟಿ ಹರವತೀರೋ.. ರ್‍ವಾಗ ರುಜಿಣsನೆಲ್ಲ ತಾಯಂದಿರ ತಲೀಗ ಕಟ್ಟೋದ್ಯಾಕ.. ಮಾತ್ರುಸ್ಥಾನದಾಗಿರೋ ಅವರು ತಮ್ ಸಂತಾನಾsನ ತಾವೇ ತಿಂಬೋದುಂಟಾ?.." ಯಂದು ಮುಂತಾಗಿ ಗದ್ದರಿಸಿದ ಕ್ಯಾತಲಯ್ಯ ಯಂಬ ಕಿಲಾರಿಯೂ, ಮುದೇತನ ಕಡೇಕ ಮುಖ ಮಾಡಿ "ಯಜ್ಜಾss.. ನೀನು ಸತವಾನವನs ವುಂಡವನದೀ.. ಅರಗಿಸಿ ಕೊಂಡವನದೀss.. ಮ್ಯಾಲಾಗಿ ಮಾರಮ್ಮಾತಾಯಿಯ ಖಾಸಾ ಮಗನದೀ... ನೀನss ಸರ್‍ಯಾದ್ದೊಂದು ಗಿಡಾನ ಗುರುತು ಮಾಡ ಬಾರ್‍ದೇನು?" ಯಂದಂದನೋ ಯಿಲ್ಲಮೋ....

ತನ್ನನ್ನು ತಾನು ಬಡಕೊಂಬುದನು, ಯಿದೀನ ಹಳಿವುದನು, ಹೋssಯಂದಳುವುದನು ಗಪ್ಪಂತ ನಿಲ್ಲಿಸಿದ ಹಂಪಜ್ಜನು ತನ್ನ ತಲೆಗೂದಲನ್ನು ಕುಂಡಿ ಅಡೀ ಹಾಕ್ಕೊಂಡು ಗಂಭೀರತೆಯಿಂದ ಕೂಕಂಡನು. 'ಗಿಡ' ಅಂಬುವ ಸಬುಧವು ಅವಯ್ಯನ ತಲೆಯೊಳಗ ಚಕ್‍ಚಕಾಂತ ಚಿಗಿಯತೊಡಿತು. ಲಗೂನ ಅದರ ಖೂನ ಗುರುತs ಹಿಡೀಲಾಗಲಿಲ್ಲ.. ಅದು ಕಾಸಕ್ಕರವಾ.. ಪೀತರವಾ.. ತಂಬುತವs, ಚೀಕಲಾತವs.. ಗೊರೇಗೊರವs.. ತೀಂಬಳತವಾs.. ಅದು ಆ ರೋಗಕ್ಕೆ ಬರುತದs. ಯಿದು ಯೀ ಜಡ್ಡಜಿಗಿ ಬರುತದs. ಯಿನ್ನೊಂದು ಆ ರುಜಿಣಕ್ಕೆ ಬರುತದs. ಕಂಪಳರಾಯನ ಕಾಲದೋವು ಅವೆಲ್ಲ, ಗಾದರಿಪಾಲನಾಯಕನ ಕಾಲದೋವು ಅವೆಲ್ಲ, ಅವರಿಬ್ಬರ ಪುಣ್ಯವೇ ಅವುಸಧ ರೂಪದಲ್ಲಿ.. ಆ ಗಿಡಗಂಟೆಗಳೊಳಗ ನಿಂದs.. ಕಾತರಿಕಿ, ಜಂಪಾಲಯ್ಯನ ಮಲೆ, ಕುಮತಿ ಹೂಡೇಮು ಕಡೇಲಿಂದ ಗಾದರಿಪಾಲದೇವರು ಸಾವುರಾರು ದನಗಳ ಮೇಯಿಸೂತ, ಅಲ್ಲಲ್ಲಿ ದಮ್ಮಾರಿಸಿಕೊಳುತ ಗವುರಸಂದರದ ಮೂಲಕ ಆ ಮಂಸ್ಮೆವಂತನು ಮುರುಡಿಗೆ ಆಗಮನ ಮಾಡಿರೋದುಂಟು, ಚುಟುಕಲಕನಂದೆವ್ವನ ಹಳ್ಳದೊಳಗ ರಾಸುಗಳ ಮಯ್ಯ ತೊಳೆದಿರುವುದಂಟು, ಕ್ಯಾತಯ್ನ ಮಲೆಯ ಮ್ಯಾಲಿನ ಯಿಸ್ತಾರವಾದ ಗುಡ್ಡದ ಕಾಡೊಳಗ ತನ್ನ ಸಾವುರಾರು ರಾಸುಗಳನ್ನು ತರುಬಿ ಮೇಯಿಸಿ ದಷ್ಟಪುಷ್ಟ ಮಾಡಿರುವುದುಂಟು,

ಆ ಪವಾಡಪುರುಸನ ಪಾದ ಮುದ್ರೆಗಳು ಆ ಮಲೆಯ ನೆತ್ತಿ ಮ್ಯಾಲುಂಟು, ಅವುಗಳ ಯಡ ಬಲಕ ಆ ಅವುಸದೀಯ ಗಿಡಗಂಟೆಗಳು ದಂಡಿದಂಡಿಯಾಗುಂಟು. ಅವುಗಳ ಪಯ್ಕಿ ಯಾದಾಗಿದ್ದಿರಬೌದು, ಗಾದರಿಪಾಲಯ್ಯನೇss.. ಯಂದು ವಂದರಗಳಿಗೆ ಕಣ್ಣು ಮುಚ್ಚಿಕೊಂಡು ಆ ಪಸುವಯ್ದ ಮಾರ್ತಾಂಡನಾದ ಹಂಪಜ್ಜ "ಯಲ್ಲಿ ಮತ್ತೆ ಕಂದೀಲು ತಗಂಬ್ರಿ" ಯಂದೊಡನೆ ವಬ್ಬಾತ ಕಂದೀಲು ತಂದುಕೊಟ್ಟ. 'ಬಡಿಗೆ ತಗಂಬರ್ರೀ' ಯಂದೊಡನೆ ಯಿನ್ನೊಬ್ಬಾತ ಮಂತ್ರದಂಡವ ತಂದುಕೊಟ್ಟ, ವಾನ ತಗಂಬರ್ರಿಯಂದೊಡನೆ ಮತ್ತೊಬ್ಬಾತ ಕತ್ತೆಯನ್ನು ತಂದು ಬಿಟ್ಟ. ಮಗುದೊಬ್ಬಾತ ಯೀ ಸರುವತ್ತಿನಾಗ ದೂರದ ಕ್ಯಾತಯ್ನ ಮಲೆಗೆ ಹೋಗೂದು ಬ್ಯಾಡೆಜ್ಜಾ... ಅಲ್ಲಿ ಹೊನ್ನಿಗ ಸೇರಿಕಂಡಯ್ತಂತೆ.. ನಾನಾ ಯಿಧ ಜಾತಿಯ ಹಾವುಗಳು ಕಾಲಿಗೆ ತೊಡರುತಾವಂತೆ.. ಯಂದು ಗಿಣೀಗ ಬಡಕೊಂಡಂತೆ ಬಡಕೊಂಡರೂ ಕೇಳದೆ ಅವಯ್ಯನು ಕಲಕಲ ಯಂದನಕಂತ..

ಯೇಸೋ ಸಂವತ್ಸರಗಳ ಹಿಂದಕ ಹುಟ್ಟಿರುವಂಥವನಾದ, ಯೇಸೋ ಸಂವತ್ಸರಗಳ ಪರ್‍ಯಂತರ ಬೆಳೆದಂಥವನಾದ, ಸದರಿ ಗ್ರಾಮದ ನಡೋ ಬತ್ತಿನಲ್ಲಿರುವ ಮನೆಯನ್ನು ಕೆಲವು ದಂಬಡಿಗೆ ಬೋಗ್ಯ ಮಾಡಿಸಿಕೊಂಡು ನಡುಲಮನೆಯಂಬ ಪದವನ್ನು ತನ್ನ ಹೆಸರಿನ ಪೂರುವಕ್ಕೆ ಅಂಟಿಸಿಕೊಂಡಂಥವನಾದ ಹಂಪಜ್ಜನ ಸ್ವಾಸ್ತಿ ಸದರಿ ಗ್ರಾಮವಲ್ಲ.. ಯಾವ ಸೀಮೆಯವನೋ? ಯಾವ ಕಾಲದವನೋ? ಅವಯ್ಯನ ಪೂರುವಿಕರು ಸ್ರೀಸಯ್ಲು ಕಡೇಲಿಂದ ಪಸು ಸಂಪತ್ತನ್ನು ಮೇಯಿಸುತ್ತಾs ಮೇಯಿಸುತ್ತಾss ವುಯ್ಯಾಲವಾಡ, ಕುಲುಮಿಗುಂಡಲ, ಚಲಿಮಲ, ಕರಿಯೇಮಲ ಯಿವೇ ಮೊದಲಾದ ಪ್ರಾಂತಗಳನ್ನಾಯ್ದು ಕೇವಲ ನಾಕಾರು ಪ್ರಜೆಗಳಷ್ಟೆ ವುಳಕೊಂಡಿದ್ದ ಯಿಜಯನಗರ ಸಾಮ್ರಾಜ್ಯದ ಯದೆ ಭಾಗದಲ್ಲಿರುವ ಹಂಪೆಗೆ ಬಂದರೆಂಬ ಪ್ರತೀತಿವುಂಟು. ಅವರ ಪಯ್ಕಿ ಮೋರ್ವ ತಾನು ತಂದೆಯಾಗಬೇಕೆಂಬ ಬಯಕೆಯನ್ನು ದೇವಿ ಹಂಪಾಂಬಿಕೆ ಸನ್ನಿಧಿಯಲ್ಲಿ ತೋಡಿಕೊಂಡಿರಬೇಕು, ಆಕೆಯ ಕ್ರುಪಾಸೀರುವಾದದಿಂದ ಗಂಡು ಕೂಸು ಜನನವಾಗಿರಬೇಕು.. ಅದಕ್ಕೆ ಹಂಪಯ್ಯನೆಂಬ ನಾಮಕರಣ ಮಾಡಿರಬೇಕು, ಸೊಯಂ ಆದಿಸಗುತಿಯಾದ ಹಂಪಾಂಬಿಕೆಯೇ ಆ ಕೂಸಿನ ಯೇಕರಿಕೆ ದೇಕರಿಕೆ, ಪಾಲನೆ ಪೋಸಣೆ ಮಾಡುವ ವುಸ್ತುವಾರಿಯನ್ನು ಕಯ್ಗೆ ತಗಂಡಿರಬೇಕು. ಆಕೆ ಆ ಮಗುವಿಗೆ

ಯೇನುಣ್ಣಿಸುತ್ತ ಬೆಳೆಸಿದಳೋ? ಯೇನು ಹೇಳುತ ಬೆಳೆಸಿದಳೋ? ವಟ್ಟಿನಲ್ಲಿ ಅದು ಮಾನವ ಸಹಜ ಯಿನ್ಯಾಸದಂತೆ ಬೆಳೆಯದೆ ತಾನೇ ವಂದು ನಮೂನಿಯಾಗಿ ಬೆಳಿ ಬೆಳಿತಾss ದೊಡ್ಡದಾಗಿ ಹರೇವಿಗೆ ಬಂತು. ಹಂಪಯ್ಯನ ಸರೀರದೊಳಗ ಯಾವ ಮೋಡಿ ಅಡಗಿತ್ತೋ.. ರಾಸುಗಳು ಅವಯ್ಯನ ಮ್ಯಾಲ ಬಿದ್ದು ಸಾಯತೊಡಗಿದವು. ಅವುಗಳೊಂದಿಗೆ ತಾನೂ, ತನ್ನೊಂದಿಗೆ ಅವುಗಳೂ ಸಂಭಾಷಿಸುತ್ತವೆಯೆಂಬ ಪ್ರತೀತಿವುಂಟು. ಅವರಿವರು ಮುಂಗಡ, ಕಯ್ಯಿಗಡ ದಾನ ರೂಪದಲ್ಲಿ ದನಕರುಗಳನ್ನು ನೀಡಿದ ಕಾರಣದಿಂದ ತಾನು ಪಸು ಸಾಮ್ರಾಜ್ಯಕ್ಕೆ ವಡೆಯನಾದನು. ತಾನು ಹೋದ ಕಡೇಲೆಲ್ಲ ಗಾದರಿಪಾಲಯ್ಯ, ಕಂಪಳದಯ್ಯ, ಯತ್ತಯ್ಯ, ಜುಂಜಯ್ಯರೇ ಮೊದಲಾದ ಸರಣರ ಕಥೆಗಳ ಪಾರಾಯಣ ಮಾಡುತ್ತ ಹಂಪಮ್ತಾಯಿಯ ಪಾದಂಗಳನು ಪ್ರತಿಷಾ«ಪನೆ ಮಾಡುತ್ತ ಹಿಂದಲ ಕಾಲದ ವಂದಿವಸ ಗವುರಸಂದರ ಸೇರಿಕೊಂಡನು. ಹಂಪಮ್ತಾಯಿಯೊಂದಿಗೆ ಮಾಡಿಕೊಂಡ ವಡಂಬಡಿಕೆಯಂತೆ ಮಾರೆಮ್ಮ ಆತನ ಕಣಸೊಳಗ ಮೂಡಿ ಪತ್ತೀಸು ಕಾಯಾಟ ಆಡಿದಳು. ತನ್ನಾರು ಕಾಯಿಗಳನ್ನು ಹಣ್ಣು ಮಾಡಿ ಗೆದ್ದ ಕಾರಣದಿಂದ ಸಂಪ್ರೀತಗೊಂಡ ತಾಯಿಯು 'ಮಗss ಯಿಲ್ಲಿಗೆ ನಯ್ರುತ್ಯ ದಿಕ್ಕಿನಲ್ಲಿ, ವಂದು ದಮ್ಮು ಕಾಲ್ನಡೆತದ ದೂರದಲ್ಲಿ ಮುರುಡಿ ಯಂಬ ಗ್ರಾಮವುಂಟು. ಅಲ್ಲಿ ಯಾಸರಾಯ ಯಂಬಾತನು ಪ್ರತಿಷ್ಟಾಪಣ ಮಾಡಿ ಆಂಜನೇಯದೇವರನ್ನು ನನ್ನ ಯಿರುದ್ದ ಯತ್ತಿ ಕಟ್ಟಿದ್ದಾನೆ. ಆತಂದೇ ಅಲ್ಲಿ ಬಲು ಜೋರು ನಡಿತಾ ಅಯ್ತೆ.. ನನ ಕಡೇಕ ತಲೆ ಮಾಡಿ ಮಲಗೋರ ಸಂಖೆ ದಿನದಿಂದ ದಿನಕ ಯಿಳಿತಾ ಅಯ್ತೆ.. ನನ್ನ ಹೆಸರಲ್ಲಿ ದೀಪಾರತಿ, ಧೂಪಾರತಿ ಮಾಡೋರ ಸಂಖೆ ದಿನದಿಂದ ದಿನಕ ಯಿಳಿತಾ ಅಯ್ತೆ.. ಅದಕ ನನ್ನ ಸಿಸುಮಗನಾದ ನೀನು ಅಲ್ಲಿಗೆ ಹೋಗಬೇಕಪ್ಪಾ.. ನನಗ ನಡಾವಳಿ ಮಾಡಬೇಕಪ್ಪಾ.. ವಂದು ಮಿಣಿ ತಯ್ಲದ್ದೀಪ ಹಚ್ಚಬೇಕಪ್ಪಾ.. ವಂದು ಚಿಮುಟಿಗಿ ಲೋಬಾನ ವುರಿಸಬೇಕಪ್ಪಾ.. ಯಂದು ದಯನಾಸದಿಂದ ಕೇಳಿಕೊಂಡಳು. ಆಗಲಿ ತಾಯೇ ಯಂದು ಜವಾಬು ನೀಡಿ ಹಂಪಜ್ಜನು ಸದರಿ ಗ್ರಾಮವನ್ನು ಪಸುಸಂಪತ್ತಿನಿಂದ ತುಂಬಿ ಯೇಸು ಕಾಲವಾತೋ, ಯೇನು ಕಥಿಯೋ..

ಯಿವನಾರಪ್ಪಾ.. ರಾವಣ ವಮುಸ ಸಂಜಾತ.. ಬಂದು ಯೀಸು ಕಾಲವಾತು.. ತನ್ನ ಸನ್ನಿಧಿಗೆ ವಂದು ಸಲವಾದರೂ ಬರಲಿಲ್ಲವಲ್ಲಾ.. ಕಯ್ನು ಯತ್ತಿ ಮುಗಿಲಿಲ್ಲವಲ್ಲಾ ಯಂದು ಬ್ಯಾಸರಗೊಂಡ ಮಾರುತಿಯು ವತನದಾರರ

ದ್ವಾರಾ ಹಂಪಜ್ಜನ ಮ್ಯಾಲ ವತ್ತಡ ತಂದದ್ದುಂಟಂತೆ. ಅದಕ್ಕಿವಯ್ಯನು ತಾನು ಮಾರಮ್ಮಾಯಿಯ ನಿಷಾ«ವಂತ ಭಕುತನದೀನಿ.. ಹೆಣ್ಣು ದೇವತೆಗಳ ಹೊರತು ತಾನು ಮತ್ತಾವ ದೇವರಿಗೆ ಕಯ್ಯ ಯತ್ತಿ ಮುಗಿಯಾಕಿಲ್ಲ ಯಂದು ಖಡಾಖಂಡಿತ ಹೇಳಿದನಂತೆ. ಪ್ರತಿ ದಿವಸ ಆಂಜನೇಯಸ್ವಾಮಿ ಅವಯ್ಯಗ ವಂದಲ್ಲಾವಂದು ಕಿರುಕುಳ ಕೊಡುತ್ತಲೇ ಬಂದಿರುವುದುಂಟಂತೆ.. ತಾಯಿ ಸಾಂಬವಿ ಅವನ್ನೆಲ್ಲ ನಿವಾರಣೆ ಮಾಡುತ ತನ್ನ ಪರಮ ಭಕುತನಿಗೆ ರಕ್ಷಣೆ ಕೊಡುತ ಬಂದಿರುವಳಂತೆ..

ಆ ಕಾಲದಿಂದ ಯೀ ಕಾಲದವರೆಗೆ ತಾಯಿಯ ಸ್ರದ್ಧೋಪಾಸಕನಾಗಿ ಮುಂದೊರೆದುಕೊಂಡು ಬಂದಿರುವ ಯಷ್ಟೋ ಪಾಳ್ಳೆಪಟ್ಟುಗಳ ಪತನಗಳನ್ನು ಕಣ್ಣಾರೆ ನೋಡಿರುವ, ಮೂಗ ಪ್ರಾಣಿಗಳೊಳಗ ವುದರ ವಯ್ರಾಗ್ಯ ಮೂಡದಂತೆ ನೋಡಿಕೋತಿರುವ, ಹೆಣ್ಣು ಯಂಬ ಸಬುಧಕ್ಕೆಲ್ಲಿ ಅಪಚಾರವಾಗುತದೋ ಯಂಬ ಲೆಕ್ಕಾಚಾರದಿಂದ ಲಗ್ನನವಾಗದೆ ಯಿದ್ದು ಪರನಾರಿ ಸೋದರನೆಂದೇ ಪ್ರಸಿದ್ಧಿ ಪಡೆದಿರುವ ಹಂಪಜ್ಜ ತಾನು ಹುಟ್ಟಿದಾರಾಭ್ಯದಿಂದ ತನ್ನ ಸರೀರದ ವಂದೇ ವಂದು ರೋಮವನ್ನು ಕತ್ತರಿಸಲಕ ಯಾವ ನಾದಿರಯ್ಯನಿಗೂ ಅವಕಾಸ ಕೊಟ್ಟಿಲ್ಲ.. ಯಾಕ ಕೊಟ್ಟಿಲ್ಲ ಅಂದರ ಅದಕss ಕೊಟ್ಟಿಲ್ಲವು. ಅದರಿಂದಾಗಿ ಯಿವಯ್ಯನ ಸರೀರದಾದ್ಯಂತ ರೋಮರಾಜಿ ಬೆಳಕೋತ ಬೆಳಕೋತ ವಂದು ಕಾಡೇ ಸ್ರುಷ್ಟಿಯಾಗಿಬಿಟ್ಟಿರುವುದು. ಮೂಗಿನಡಿ, ಗದ್ದದಡಿ, ತಲೆ ಮ್ಯಾಲ, ಕಂಕುಳದಡಿ, ತೊಡೆಸಂಧೀಲಿ ಹಿಂಗs ಯಲ್ಲಂದರಲ್ಲಿ ರೋಮರಾಜಿ ಸುರುಸುರಳಿ ಸರಗಂಟಿಗೆ ಬಿದ್ದು ಗಡ್ಡೆ ಕಟ್ಟಿಬಿಟ್ಟಿರುವುದು. ಹಿಂಗಾಗಿ ಅವಯ್ಯನನ್ನು ದೂರಕೆ ನಿಂತು ನೋಡುವುದು ವಂದು ಛಂದ, ಹತ್ತಿರಕ ಬಂದು ನೋಡುವುದು ವಂದು ಛಂದ. ಚುಟುಕಲಕನಂದೆಂಯೊಳಗ ಮಂಗಳವಾರ ನಸಿಗ್ಗೆ ಮುಳುಗೇಳುವುದೊಂದು ಬಿಟ್ಟರೆ ತನ್ನ ಯಾವ ಅಂಗವನ್ನು ವುಜ್ಜಿ ಪರಾಂಬರಿಸುವುದಿಲ್ಲ ಅವಯ್ಯನು.. ಹಿಂಗs ಯೇಸು ಕಾಲವಾತೋ? ಯೇನು ಕಥಿಯೋ? ನೂರಾರು ಹಾಡು ಕಥೆ ಕಥೆ ಕಬ್ಬುಗಳೊಳಗ ರಸ ತುಂಬವನೆ ಸಿವಸಂಕರ ಮಾದೇವಾss.....

ಬ್ಯಾನೆ, ಬ್ಯಾಸರಿಕೆ, ರೋಗ, ರುಜಿಣ, ಯಿವೇ ಮೊದಲಾದ ತರಾವರಿ ವುಸಾಬರಿಗಳನ್ನು ಅನುಗಾಲ ಮಯ್ಯಿ ಮ್ಯಾಲ ಯಳಕೊಂಡು, ಸಾವುರದೆಂಟು ಸುಕ್ಕುಗಳಿಂದ ನಗುತಲಿದ್ದ, ಸಕಲೊಂದು ಮಂದಿಯ ಯೋಗಕ್ಷೇಮಗಳನ್ನು

ಪರಾಂಬರಿಸುತಲಿದ್ದ, ಕುಂತಲ್ಲಿ ಕುಂಡ್ರದವನಾಗಿದ್ದ, ನಿಂತಲ್ಲಿ ನಿಂದರದವನಾಗಿದ್ದ, ಹತ್ತು ಮಂದಿ ಯಿರುವ ಕಡೆ ತಾನಿರುತಲಿದ್ದ, ತಾನಿದ್ದ ಕಡೇಕ ಹತ್ತು ಮಂದಿಯನ್ನು ಕೂಡಿಸಿಕೊಳ್ಳುತಲಿದ್ದ, ಲಚ್ಚಣವಂತನಾದ ಅವಯ್ಯನು ಕಂಗಾಲಾಗಿದ್ದು ಯೇಸೋ ವರುಸಗಳ ತರುವಾಯ, ಯಾವ ದಯವದ ಮುನುಸೋ? ಯೇನು ಕಥಿಯೋ? ಸದರಿ ಗ್ರಾಮದ ರಾಸುಗಳಿಗೆ ಕಾಲುಬಾಯಿ ರೋಗ ಅಮರಿಕೊಂಡುಬಿಟ್ಟಿತ್ತು. ರಾಸುಗಳಿಗೆ ತಗಲುವ ಹೇಮಾಹೇಮಿ ರೋಗಗಳನ್ನು ಕೇವಲ 'ಭೂಮಂತರಗಾಳಿ ಭೂ' ಯಂಬ ಮಾಮೂಲಿ ಮಂತರ ಮಾತ್ರದಿಂದ ಯಿಲಾಜು ಮಾಡುವಂಥ ಸಿದ್ಧಹಸ್ತಕ್ಕೊಡೆಯನಾದ ಹಂಪಜ್ಜನಿಗೆ ಅದರ ಹಾರ ಮೀರಿಬಿಟ್ಟಿತ್ತು. ಕಂದೀಲ ಬೆಳಕಿನಗುಂಟ ನಡೆವುತ ಪ್ರತಿಯೊಂದು ಮನೆಯನ್ನಾತ ಯಡತಾಕುತಲಿದ್ದುದೇನು? ವಂದೊಂದು ರಾಸನು ಹೆಸರಗುಂಟ ಮಾತಾಡುಸು ತಲಿದ್ದುದೇನು? ಮಮ್ಮಲ ಮರುಗತಲಿದ್ದುದೇನು?

ಹಂಪಜ್ಜನಿಗೇ ಹಾರ ಮೀರಿರುವುದೆಂದು ತಿಳಿದ ಮಂದಿ....

ಹೆಜ್ಜೆ ಹೆಜ್ಜೆಗೆ ಕಣ್ಣ ಕಟೆಂಯುತಲಿದ್ದ ದಯುವಕ್ಕೆಲ್ಲ ವೊರೆ ಹೋಗದೆಯಿರಲಿಲ್ಲ. ಮಾದ್ವ ಪ್ರಸಿದ್ಧ ಆಂಜನೇಯ ಸ್ವಾಮಿಗೆ ಬೆಣ್ಣೆಯಲಂಕಾರ ಮಾಡಿದರೆಂಬ ಬಗ್ಗೆ, ಪಂಚಕಜ್ಜಾಯ ನಯವೇದ್ಯ ಹಿಡಿದರೆಂಬ ಬಗ್ಗೆ, ರಾಯದುರ್ಗದ ಸ್ರೀಪತಿ ಜೋಯಿಸರನ್ನು ಕರೆತಂದು ಪಂಚ ಕಲಸಾಭಿಸೇಕ ಮಾಡಿಸಿದರೆಂಬ ಬಗ್ಗೆ, ಹೊತ್ತಿಗೆ ತೆಗೆಸಿ ನೋಡಿಸಿದರೆಂಬ ಬಗ್ಗೆ, ಹೇಳುತss ಹೋದರೆ!... ಯೇನಿದ್ದೀತಪ್ಪಾ... ಮಾಡೋದೆಲ್ಲ ಮಾಡಿದರೂ ಆಂಜನೇಯಸ್ವಾಮಿ ತಮ್ಮ ರಾಸುಗಳ ಕಡೇಕ ಬಲಗಣ್ಣಿಂದ ನೋಡುತಾ ಯಿಲ್ಲವಲ್ಲಾ.. ಪ್ರಾಯಶಃ ಸ್ವಾಮಿಯು ಹಂಪಜ್ಜನ ಸರಣಾಗತಿಯನ್ನು ಬಗಸುತ್ತಿರುಭೌದೆಂದು ಭಾವಿಸಿದವರಾಗಿ ತಮ್ಮ ನಾಯಕನ ಬಳಿಗೆ ಹೋಗಿ "ದೊರೆಯೇ, ನೀನಾರ ಆ ಮುದೇತನ ಮನುಸು ಬದಲಾವಣೆ ಮಾಡು" ಯಂದು ಕೇಳಿಕೊಳ್ಳಲಾಗಿ ಅವಯ್ಯನು ಆ ಕೂಡಲೇ ಮುದೇತನನ್ನು ತನ್ನ ಯೇಳೂವರೆ ಅಂಕಣದ ಅರಮನೆಗೆ ಕರೆಯಿಸಿಕೊಂಡು "ಯಜಮಾನss.. ಆಂಜನೇಯಸ್ವಾಮಿಯ ಗುಡಿಯ ಗಂಟೆ ಹೊಡದು, ಕಯ್ನ ಮುಗುದು ಬೇಡಿಕೊಳ್ಳಲಕ ಬೇಕಪ್ಪಾ.. ಆಗಲಾದರು ಮಾರುತಿ ಕರುಣೆ ತೋರಿಸ್ಯಾನು" ಯಂದು ಯಿನ್ನಪ ಮಾಡಿಕೊಂಡಿದ್ದಕ್ಕೆ ಮುದೇತನು "ಸಯ್ಯ ಬಿಡು ನಾಯಕss.. ನಿಮ್ಮಾಂಜನೇಯಸ್ವಾಮಿಗೆ ಕೋಪಯಿದ್ದರ ನನ ಮ್ಯಾಲ ತೋರಿಸಿಬೇಕಿತ್ತಪ್ಪಾ..?

ರಾಸುಗಳಿಗೆ ವಳ್ಳೇದಾಗೋದಾದರ ಪ್ರಾಣ ಬಿಡು ಅನ್ನು ಬಿಡುತೀನಿ.. ಮೂರು ಬಿಟ್ಟ ಹೋಗು ಅನ್ನು ಬಿಟ್ಟು ಹೋಂಡುತೀನಿ. ಆದರ ಯಿದೊಂದು ಮಾತನು ಮಾತ್ರನೀನು ಹೇಳೋದು ಬ್ಯಾಡ.. ನಾನು ಕೇಳಿ ಮಯ್ಲಿಗಿ ಆಗೋದು ಬ್ಯಾಡ" ಯಂದು ಕಡ್ಡಿ ಮುರಿದಂತೆ ಹೇಳಿದ್ದುಂಟು. ಆ ಕೂಡಲೆ ತಾನು ಹೋಗಿ ಚುಟುಕಲಕನಂದನೆಯಲ್ಲಿ ಮುಳುಗು ಹಾಕಿ ಮಯ್ಲಿಗೆ ಕಳೆದುಕೊಂಡದ್ದುಂಟು.

ಯಿಂಥ ದಯುವದ ಮುನುಸಿದ್ದೀತು. ತಾಯಿ ಮಾರೆಮ್ಮ ಗವುರಸಂದರದೊಳಗವಳಾ? ಯಿಲ್ಲವಾ..? ತನ್ನ ರೊತ, ನಿಷೆ« ನಿಯಮಗಳಿಗೆ ಕವಡೆ ಕಿಮ್ಮತ್ತು ಕೊಡುತಾ ಯಿಲ್ಲವಲ್ಲಾ.. ತಾಯಿss ನೀನಲ್ಲಿದೀಯಾ...? ಯಿಲ್ಲದೀಯಾ? ಯಲ್ಲದೀಯೇ ನಮ್ಮವ್ವ..? ಯಂದತಗಂತ ಮಲಕ್ಕೊಂಡಿದ್ದ ಮುದೇತನ ಕಣಸೊಳಗ ಮುಪ್ಪಾನು ಮುದುಕಿಯೊಬ್ಬಾಕಿ ಕಾಣಿಸಿಕೊಂಡು "ನಿನ ಯಸನ ನನಗರ್ಥ ಆತಯ್ತೆ ಕಂದಾ.. ಮಾರೆಮ್ಮ ತಾಯಿ ಸಾಂಬವೀನ ಕಾಣಲಕಂತ ಕುಂತಳಸೀಮೆ ಕಡೇಕ ನಡೆದವಳೆ.. ನಡದು ಹುಡುಕುತಾ ಅಲೀತವಳೆ.." ಯಂದು ನುಡುದು ಮಾಯವಾದಂಗಾತು. ಬಡದು ಯಬ್ಬಿಸಿದಂಗಾತು. ಕುಂತಲ ಸೀಮೆಯೆಂಬುದು ಯಲ್ಲುಂಟು? ಯಾವ ಕಡೇಕುಂಟು? ನಿನಗ ಗೊತ್ತಾ? ತನಗ ಗೊತ್ತಾ.. ಯಂದವರಿವರನ್ನು ಕೇಳುತ ಮುದೇತನು ಅಲೆಯುತ್ತಿರುವಾಗ್ಗೆ ಆಚ್ಚೇಕಡೇಕ ನಗಂದಿ ಬಸಪ್ಪ ತಗುಲಿದನು, ಯಿಚ್ಚೇ ಕಡೇಕ ನಗಾರಿ ಸುಗ್ಗುಲಪ್ಪನು ತಗುಲಿದನು. ಕುಂತಳ ದೇಸವು ಯಿಂಥಲ್ಲೇ ಅಯಿತೆಂದು ಹೇಳುವುದು ಕಡುಕಷ್ಟ. ತಾತಯ್ಯ.. ವಟ್ಟಿನಾಗ ಆ ಹೆಸರಿನ ದೇಸ ವಂದು ಪಡುವಲ ದಿಕ್ಕಿನಲ್ಲೆಲ್ಲೋ ಯೀಟಗಲ, ಆಟುದ್ದಕ ಬಿದ್ದುಕೊಂಡಿರುವುದಂತೆ. ತಡೀ.. ಹೇಳುತ, ಕೇಳುತ ಪತ್ತೆಕಾರ್ಯೇವ ಮಾಡಾಣss.. ಯಂದವರೀರ್ವರು ತಮತಮ ಹೆಗಲುಗಳನ್ನು ಅವಯ್ಯನ ಹೆಗಲಿಗೆ ಬೆಸೆದ ಸೊಲುಪ ಹೊತ್ತಲ್ಲಿ..

ಅಗಾ.. ಅಲ್ಲಿ ಮಲಿಯಪ್ಪ.. ಯಿಗಾ ಯಿಲ್ಲಿ ತಡಸಲಪ್ಪ.. ಕುರಿ ಮೇಯಿಸಿಕೋತ ಭೂಮಂಡಲವ ಸುತ್ತಾಡಿರೋರು ಕೇಳಿದ್ದಕ್ಕೆ ಅವರು ಅವುದೆಜಮಾನ.. ನಡಕೋತ, ನಡಕೋತ ಹೋಗಿ ಹೋಗಿ ಭೂಮಂಡಲದ ಬದುವು ಮುಟ್ಟಿದವರದೀವಿ.. ಸಮುದ್ಧರ ಯಂಬ ಹೆಸರಿನ ಅಗಾಧ ವುಪ್ಪು ನೀರೊಳಗ ಮಜ್ಜಣ ಮಾಡಿದವರದೀವಿ.. ಆದರ ಕುಂತಳ ದೇಸ ಯಂಬ ಹೆಸರಿನ ಯಾವ ಮೂರೂ ನಮ್ಮ ಕಾಲಿಗೆ ಅಟೆದದ್ದನ್ನು ಕಾಣೆವು.. ಯಿರಲಿ ತಡಕ.. ಸೆಟ್ಟಿಕ್ಕೆರೆ ಮತ್ತ ತಾಳಕ್ಕೆರೆ ನಡುವೆ ಪೂರುವದಲ್ಲಿ ಕಾಳಗ ನಡೀತಲ್ಲ..

ಅದಕ ಕುಂತಲದೇಸದ ಸಂಬಂಧ ಅಯ್ತಾ..? ಗಂಡ ಕಾಳಗದಲ್ಲಿ ಯೀರ ಸೊರ್ಗ್ಗಯೇರಿದ ಯಂಬ ಕಾರಣಕ್ಕ ಚಿತೆ ಹೊಕ್ಕು ಸಾಯುಜ್ಯ ಪದವಿ ಪಡಕೊಂಡ ಬೊಟ್ಲತಿಮ್ಮಕ್ಕನ ತವರೂರೇನಾದರು ಕುಂತಳ ದೇಸವಾಗಿದ್ದಿರಬೌದು? ಗವುರಸಂದರ ಯೀರಪ್ಪನಾಯಕನ ಸಯ್ನಿಕವರ್ಗ್ಗದಲ್ಲಿದ್ದ ಮುದ್ದಯ್ಯನ ಹೆಂಡತಿಯಾದ ತೊಟ್ಲ ತಾಯವ್ವನ ತವರೂರ ನಿಜನಾಮ ಕುಂತಳದೇಸವಾಗಿದ್ದಿರಬೌದಾ? ಯಿರಲಿ ತಡಕಾ.. ಆ ಯೀರ ಹೆಣುಮಕ್ಕಳ ಹೆಸರಲ್ಲಿ ಯರಡು ಮಾಸ್ತಿಕಲ್ಲುಗಳನ್ನು ನೆಡಸವರಲ್ಲಾ.. ಅವುಗಳೆದೆ ಪಂಚಾಕ್ಷರಗಳ ಸಮುಚ್ಚಯ ಯಿದ್ದಿರಬೌದಾ.. ಸಿಲಾಕ್ಕಸರಗಳನ್ನು ಮೋದಬಲ್ಲ.. ಮೋದಿ ಬಿಡುಸಿ ಹೇಳಬಲ್ಲ ಗಣುಮಗ ಸದರಿ ಗ್ರಾಮದೊಳಗ ಯಲ್ಲವನಂತೆ?

ಕ್ಯಾತನ ಮಲೆಯ ನೆತ್ತಿಮ್ಯಾಲ ಕಾಲೂರಿ ತನ್ನ ಕಣ್ಣ ಬೆಳಕಲ್ಲಿ ಹುಡುಹುಡುಕಾಡುತವನೆ ಹಂಪಜ್ಜ.. ಹೆಜ್ಜೆ ಹೆಜ್ಜೆಗೆ ಸರುಪಗಳು ತೊಡರುತವೆ.. ಅಗೋ ಅಲ್ಲಿ ಹೊನ್ನಿಗನ ಜೋಡಿ ಕಂದೀಲುಗಳಂಥ ಕಣ್ಣುಗಳು ಮಿರುಮಿರಗುತ್ತವೆ.. ಅಲ್ಲೆಲ್ಲೋ ನರಿ ಮೂಳಿಡುತಾ ಅಯ್ತೆ.. ಯಿಲ್ಲೆಲ್ಲೋ ದೆವ್ವಗಳು ಸರಪರ ಅಡ್ಡಾಡಿದಂಗಾತಯ್ತೆ.. ಅವಕ್ಕೆಲ್ಲ ಗಾದರಿಪಾಲಯ್ಯನ ಪಾದಗಳೇ ಅಂಜುತಾಯಿಲ್ಲ ಅಂದವ್ಮ್ಯಾಲ ತಾನ್ಯಾಕ ಅದುರಿಕಬೇಕು? ಯಿಲ್ಲಿ ಯಿನ್ನೊಂಚಾವತ್ತಿಗಲ್ಲಿ.. ಮೂಡುತ ಮುಳುಗುತ ಅಂಬ್ರುತಬಳ್ಳಿ ಕಣುಮುಚ್ಚಾಲೆ ಆಟ ಆಡಿತು.. ಕಾಡುಗೋಳಿ ಕೂಗಿದಾದ ಮ್ಯಾಲಕ.. ಮೂಡಲಕ ಮೂಡಿದ ಬೆಳ್ಳಿ ಹಿಡಿ ಬೆಳಕ ಭೂಮಿಗೆ ಚೆಲ್ಲಾಡಿದ ಮ್ಯಾಲಕ, ಬಳ್ಳಿ ಗೋಚರ ಮಾಡಿತು. ಹರಕs ಹರಕs ಯಂದು ಕಯ್ತುಂಬ ದೊರಕಿತು. ಹಂಪಜ್ಜ ಅಂಬ್ರುತವ್ವಾ.. ಅಂಬ್ರುತವ್ವಾ.. ಯಂದು ರಮಿಸುತ ವಂದು ಚೋಟುದ್ದದ ಬಳ್ಳಿಯಿಂದ ವಂದು ಹೊರೆ ಸಪ್ಪನ್ನು ಕಿತ್ತು ತಲೆಮ್ಯಾಲಿಟ್ಟುಕೊಂಡು ಅವುರೀಕಲೆ ಹೆಜ್ಜೆಯಿಡುತಾs ಯಿಡುತ ಮಲೆಯ ಕಾಲ ಸಂದಿಗೆ ಸೇರಿಕೊಂಡ. ಅಲ್ಲಿ ಕಾವುಕೋತಯಿದ್ದ ಅನುಕೂಲಸ್ಥರು ಅವಯ್ಯನನ್ನು ಜೋಪಾನವಾಗಿ ಕರಕೊಂಡು ಮೂರೊಳೀಕ್ಕೆ ಹೋಗುದಕೂ.. ಕುರುವ್ವಾ, ಭರುವ್ವಾ ಯಂಬೀರ್ವ್ವರು ಕುಂತಲ ದೇಶಯಲ್ಲಯಿತೆಂಬುದರ ಸುಳುವು ತಾವು ನೀಡಬಲ್ಲೆವು ಯಂದು ಬಸಪ್ಪ, ಸುಗ್ಗುಲಪ್ಪಂದಿರೆದುರು ಹೇಳುದಕ್ಕೂ ಸರಿಹೋಯಿತು. ಅದನು ಕೇಳುತಲೆ ಅನುಕೂಲಸ್ಥರೀರ್ವ್ವರು ಅಡಲ್ಲಾಗಿಬಿಟ್ಟರು.. ಕಾಲ ಕೆಟ್ಟಂಗಯಿತಲ್ಲಾ.. ತನ್ನೂಳಿಗದ ಕರುಮಾಚಾರಿಗಳೇ ಸಿಲಾಸಾಸನ ಮೋದಿದರೆಂದರೆ ನಾಯಕನಾದವನು

ತಲೆಯತ್ತಿ ಬದುಕುವುದುಂಟಾ?.. ಅವಯ್ಯ ಅಕ್ಕಸರ ಬಲ್ಲಂಥವರನ್ನು ಪ್ರೀತ್ಯರ್ಥವಾಗಿ ಸರಸೊತಿ ತಾಯಿಗೆ ಬಲಿಗೊಡದ ಬಿಟ್ಟಾನss.. ಮೂಡಿದ ಸಂದೇಹಗಳು ವಂದಾ ಯರಡಾ.. ಅದಕ್ಕುತ್ತರವಾಗಿ ಅವರೀರ್ವರು "ತಂದೆಗೋಳಾ.. ನಮಗ ನಿಮ್ಮ ರುಣಾ ತೀರಿಸೋ ಜರೂರತ್ತಯ್ತೆ.. ವದಿಗಿರೋ ಸಂಕಟವ ಪರಿಹಾರ ಮಾಡಲೋಸುಗ ಜೀವ ಕೊಡಲಕ ಸಿದ್ದರದೀವಿ.. ನೀವು ಮೋದಂದರ ಮೋದುತೀವಿ, ಮೋದೋದು ಬ್ಯಾಡs ಅಂದರೂ ಮೋದುತೀವಿ.. ಸಿಲಾ ಸಾಸನಗಳಿರೋದೇ ನಾಕು ಮಂದಿ ಮೋದಲಕಂತ.." ಯಂದು ಜವಾಬು ನೀಡಿದ್ದು ಪಾಡನಿಸಿತು..

'ಮೋದು' ಯಂಬ ಕ್ರಿಯಾ ಸಬುಧದ ದ್ವಾರಾ ಗ್ರಾಮದಾದ್ಯಂತ ಸಂಚಲನವನ್ನು ಸ್ರುಷ್ಟಿ« ಮಾಡಿದ ಆ ಘಟಾನುಘಟಿಗಳ ಪೂರುವಾಪರ ಸದರಿ ಗ್ರಾಮಸ್ಥರಿಗೆ ಗೊತ್ತಿಲ್ಲ.. ತಾಯಿ ಸಾಂಬವಿಯ ಅಗಾಧ ಪಾದಮುದ್ರೆಯ ದರುಸನ ಮಾತ್ರದಿಂದ ಕುದುರೆಡವಿನಿಂದ ವಾಯು ವೇಗದಿಂದ ಹೊರಟು ಹತ್ತಾರು ಮೂರುಗಳನ್ನು ಸುತ್ತಾಡೀ ಸುತ್ತಾಡಿ ಸದರಿ ಗ್ರಾಮದ ಹನುಮಂತಪ್ಪನಾಯಕನ ಮೂಳಿಗಕ್ಕೆ ನಾಮ ಬದಲಾವಣೆ ಮಾಡಿಕೊಂಡು ಸೇರಿಕೊಂಡಿದ್ದಂಥವರು ಯಾರಪ್ಪಾ ಅಂದರ ಮುಳುಗುವುರುಕುಂದನು, ದಳವಾಯಿ ಕೆಂಜೆಡೆಯ ಆಗಿದ್ದರು.. ನಿಜ ಹೇಳಲಕಂದರ ತಮ್ಮೆದೆಯೊಳಗೆಲ್ಲೂ ಅಕ್ಕಸರದ ಕೊಂಬು ಸಹ ಯಿರಲಿಲ್ಲ.. ಪರಿಭ್ರಮಣದಿಂದಾಗಿ ಲಭಿಸಿದ್ದಂಥ ಲವುಕಿಕ ಗ್ನಾನ ಸಾಕಷ್ಟಿತ್ತಲ್ಲ.. ಅದಕ ಅವರು ಸಿಲಾಸಾಸನವನ್ನು ಮೋದಿದಂತೆ ನಟನೆ ಮಾಡಿದರು(ಹೇಳಿಕೇಳಿ ಮಾಸ್ತಿಕಲ್ಲುಗಳ ಮ್ಯಾಲ ಅಕ್ಕಸರಯಿರದಿದ್ದರೂನೂವೆ).. "ತಂದೇಗೋಳಾ.. ಮೋದಲಾಗಿ.. ಕುಂತಲದೇಸ ಯಂಬುದು ವಂದುಮೂರಲ್ಲ.. ವಂದು ಪಟ್ಟಣವಲ್ಲ ಯಂಬುದು ಯೇದ್ಯವಾತು.. ಯಿಲ್ಲಿಗೆ ಯಿಪ್ಪತ್ತೊಂದು ಹರದಾರಿ ದೂರದಲ್ಲಿ ಕುಂತಲದೇಸದ ಬದುವುವುಂಟು.. ಕ್ಯಾತಯ್ಯನ ಮಲೆ ದಾಟಿದರ ಗಾದರಿಮಲೆ, ಅದನ್ನು ದಾಟಿದರ ಕಂಪಳದಯ್ಯನ ಮಲೆ.. ಕಾತರಿಕಿ, ಹೊಡೇಮು ರವುಡುಕುಂದ ದಾಟುತ ಹೋದರ ಗುಡೇಕೋಟೆ, ಅಲ್ಲಿಂದ ಸಿಡೇಗಲ್ಲು.. ಅದರಿಂದಾಚೆ ಕುದುರೆಡವು ಬರುವುದು, ಆ ಕುದುರೆಡವಳಗ ಮೋಬಯ್ಯನ ಸರೀರವನ್ನು ಹೆಣುದ್ಯಾವತೆಯೊಂದು ಭೋಗ್ಯ ಹಿಡದಯ್ತೆ ಯಂಬ ಗಾಳಿ ಸುದ್ದೀನ ಕೇಳಿ ಬಲ್ಲೆವು" ಯಂದು ಹೇಳುತs ಹೇಳುತ ತಮ್ಮನ್ನು ಹೆತ್ತವರನ್ನು ಯಾಕೋ ಯಿದ್ದಕ್ಕಿದ್ದಂತೆ ಗ್ನಾಪಕ ತಂದುಕೊಂಡು ಗದ್ಗದಿತರಾದರಲ್ಲದೆ ಬಿಕುಬಿಕು

ಬಿಕ್ಕಳಿಸಿ ಅಳತೊಡಗದಿದ್ದಲ್ಲಿ.. ಸದರಿ ಗ್ರಾಮದ ಮ್ಯಾಲ ಕುದುರೆಡವು ಯಂಬ ಪಂಚಾಕ್ಷರ ಮಂತ್ರವು ಯಾವ ರೀತಿ ಧಾಳಿ ಮಾಡುತಲಿತ್ತೋ ಸಿವನೇ....

ಅತ್ತ ಕಡೆ ಹಂಪಜ್ಜ "ತಾಯೀ.. ತಾಯೀ" ಯಂದು ರೋದನ ಮಾತಡುತಲಿದ್ದುದು ಮುಗುಲಿಗೆ ಮುಟ್ಟಿತ್ತು. ತನಗೊಂದು ಮಾತನ್ನಾರ ಹೇಳಿ ಹೋಗಿದ್ದರ ಬ್ಯಾಡ ಅಂಬುತಲಿರಲಿಲ್ಲ.. ತಾಯಿಯಾದಾಕಿಗೆ ತನ್ನಂಥ ಯೇಸು ಮಕ್ಕಳೋ? ತನ್ನ ನಡಾವಳಿ ಮ್ಯಾಲ ಆಕೆಯೂ, ಆಕೆಯ ನಡಾವಳಿ ಮ್ಯಾಲ ತಾನೂ ನಿಗಾಯಿಟ್ಟಿದ್ದನ್ನು ಯಾವತ್ತೂ ಬಿಟ್ಟಿದುದಿಲ್ಲ.. ಆಕೆ ಹೇಳದೆ, ಕೇಳದೆ ಹೊಂಟು ಹೋಗಿರುವಳೆಂದರೆ ತನ್ನಿಂದೇನಾದರೂ ಅಪಚಾರವಾಗಿರಭೌದೇ? ಪ್ರಾಣದೋಪಾದಿಯಲ್ಲಿ ಯಿದ್ದ ಆಕೆಯೇ ಯಿಲ್ಲೆಂದ ಮ್ಯಾಲ ಯೀ ಘಟವು ಯಾವ ಪುರುಸಾರ್ಥಕ್ಕೆ ಯಿರಬೇಕು ಯಂಬ ನಿರ್ಣಯಕ್ಕೆ ಅವಯ್ಯ ಬರಲಕ ಯಿನ್ನೆಷ್ಟು ಅಂತರ ಯಿತ್ತೆಂದರೆ.. ಅವಯ್ಯ ಮಾಡುತಲಿದ್ದ ದುಕ್ಕ ಗ್ರಾಮದ ಬೀದಿ ಬೀದಿಗಳ ಗುಂಟ ಹಂಪಿ ಹೊಳಿಯಾಗಿ ಯಾವ ಪ್ರಕಾರವಾಗಿ ಹರಿಯಲಾರಂಭಿಸಿತೆಂದರೆ.....

ಅದು ಮನೋಯೇಗದಲ್ಲಿ ಹರಕೋತss ಹರಕೋತss

ವಂದು ಕಾಲದಲ್ಲಿ ಗಂದರ್ವ ಕನ್ಯೆಯರು ಭೂಲೋಕಕ್ಕೆ ಬಂದು ಜಲಕ್ರೀಡೆ ಆಡುತಲಿದ್ದಂಥ ಯೀ ಕಲಿಕಾಲಕ್ಕ ನರಮಾನ್ನವರ ಪಾಪ ಪೆರಿಗಿದ ಕಾರಣಕ ಬತ್ತಿ ಬುರುದೆ ತುಂಬಿಕೊಂಡಿರುವ ಹೊನ್ನಮ್ಮನ ಹಳ್ಳವನ್ನು ಯೇನಕೇನ ದಾಟಿ ವುಸ್ಸಪ್ಪ ಅಂತ ಸಾಗುವಾನಿ ಮರದಡಿ ವುದ್ದಕ ಕಾಲುಚಾಚಿ ಕೂಕಂಡಿದ್ದ ಯೀಟಯ್ಯ, ಬ್ಯಾಟಯ್ಯ, ಬಲಯಯ್ಯ, ಬಿಲದಯ್ಯ, ಸಾಮಯ್ಯ, ದಾನಯ್ಯ, ಭೇದಯ್ಯ ಯಂಬ ಸಪ್ತರುಷಿಗಳಿಗೆ ಮುಖಂಡಯ್ಯನಾದ ಬೋಸಯ್ಯನ ರುದಯಕ್ಕ ತಗುಲಿತು. ಅವಯ್ಯನು ಆ ಕೂಡಲೆ ಬೆಚ್ಚಿಬಿದ್ದವನಾದನು. "ತ್ರೀಘಾತವಾಗುತಲಯ್ತೆ - ಭಿರ್ರನೆ ಹೊಂಡಿರಿ" ಯಂದು ತನ್ನವರನ್ನು ಹುರಿದುಂಬಿಸಿ ಸಾರೋಟನ್ನು ಸಜ್ಜುಗೊಳಿಸಿದನು. ತನ್ನ ಕಣ್ಣೊಳಗ ಮುರುಡಿಯ ಹಾದಿ ಮುಡುವುದು, ಮುಳುಗುವುದ ಮಾತಡಲು ಸಾರೋಟನ್ನು ತಕ್ಕ ಕಾವಲಿನೊಳಗ ಲಟಗೂ ಪುಟಗೂ ಸಾಗಿದನು. ಯಾದೋ ವಂದು ಅಗೋಚರ ಸಗುತಿ ತಮ್ಮನ್ನು ಕಯ್ಯಿ ಹಿಡದು ನಡೆಸಲಾರಂಭಿಸಿದ್ದ ಕಾರಣಕ್ಕ, ಹುಲಿಯಮ್ಮ ವಂದು ಅಗೋಚರ ಸಗುತಿ ತಮ್ಮನ್ನು ಕಯ್ಯಿ ಹಿಡದು ನಡೆಸಲಾರಂಭಿಸಿದ್ದ ಕಾರಣಕ್ಕ ಹುಲಿಯಮ್ಮ ಯದುರಿಗೆ ಬಂದು ಅಡರಗ್ ಯಂದು ಘರ್ಜನ

ಮಾಡಲಿಲ್ಲ.. ಚಿರತಪ್ಪ ಯದುರಿಗೆ ಬಂದು ಮ್ಯಾಂವ್ ಅನ್ನಲಿಲ್ಲ. ನರಿಯಣ್ಣ ಯದುರಿಗೆ ಬಂದು ಮೂಳಿಡಲಿಲ್ಲ.. ವಂದಾರ ಅಪಸಗುನ ವದಗಲಿಲ್ಲ..

ವಂದು ಹಗಲss ವಂದು ಘನಘೋರ ರಾತ್ರಿಯಾss ಜೀಂಗುಡತಲಿದ್ದ ಅಟ್ಟಂಬಟ್ಟಾರಣ್ಯೇವಿನೊಳಗ ಹೊಟ್ಟೆಯೊಳಗಿನ ನೀರು ಅಳ್ಳಾಡದಂಗ ಪ್ರಯಾಣ ಮಾಡೀss ಮಾಡೀ ಅಗೋ ನುಂಕೀಮಲೆ.. ಯಿಗೋ ಗಾದರಿಮಲೆ ಯಂದು ವುದ್ಗಾರ ಮಾಡುತ ಅವರು ಚುಟುಕಲಕನಂದನೆಯನ್ನು ಸುಸೂತ್ರವಾಗಿ ದಾಟಿದೊಡನೆ ಮುರುಡಿ ಯಂಬ ಗ್ರಾಮವು ಕಾಣಿಸಿಗಂತು, ಸೂರಾಂಜನೇಯ ಸ್ವಾಮಿಯ ಗುಡಿಗಂಟೆ ಢಣಾರಂತ ತನಗೆ ತಾನೆ ಬಡಕಂತು, ವಂದ್ನಾಕು ಮಂದಿ ಸಾರೋಟು ನೋಡಿ ಅಂಜುತಳುಕುತ ಬಂದು "ನಿಮ್ಮದು ಯಾಮೂರಪ್ಪಾ?.. ಯದಕ ಬಂದೀರಪ್ಪಾss?" ಯಂದು ಕೇಳಿದ್ದಕ್ಕೆ ಬೋಸಯ್ಯನು ತಾವು ಫಲಾನ ಯಿಂಥ ಪಟ್ಟಣದವರೆಂದೂ, ತಾವು ಬಂದಿರುವುದು ಫಲಾನ ಯಿಂಥ ಕಾರ್ಯೇವಿಗೆಂದೂ ಯಿದ್ದದ್ದು ಯಿದ್ದಂಗೆ ಹೇಳಲು ಕೇಳಿದ ಅವರು ಹಿರಿ ಹಿರಿ ಹಿಗ್ಗಿ ಯೀರೇಕಾಯಿಯಾದರು. ಯೀ ಯಿಷಯ ನಾಯಕಗೆ ತಿಳಿಯಲು ತಡ ಹಿಡಿಯಲಿಲ್ಲ. ಆತನು ಅತಿಥಿ ಅಭಾಗತರನ್ನು ತನ್ನರಮನೆಗೆ ಬರಮಾಡಿಕೊಂಡು ವುಂಬಲಕಿಟ್ಟಿದ್ದಾಗಲೀ, ಕುಡಿಯಲಕ ಕೊಟ್ಟಿದ್ದಾಗಲೀ ತಡಾ ಆಗಲಿಲ್ಲ. ತಾನೇ ಖುದ್ದ ಹೋಗಿ ಗುಡ್ಡವೊಂದು ಗುಬ್ಬಚ್ಚಿ ರೂಪ ತಳೆದಿರುವಂತೆ ಗೂಡಿಸಿಕೂಕಂಡಿದ್ದ ಹಂಪಜ್ಜನ ಕಿವಿಯೊಳಗ ಫಲಾನ ಸಂಗತಿಯನ್ನು ಧಾರೆಯರೆದನು. ತಾಯಿಯೇ ತನಗಾಗಿ ಯದುರು ನೋಡುತವಳೆ ಯಂದು ತಿಳಿಯುತ್ತಲೇ ಆ ಮುದೇತನ ಸರೀರ ಬುರುಬುರುನೆ ಮೂದಿತು. ಸುಕ್ಕುಗಳೆಲ್ಲ ಮಾಯವಾದವು. ಆತನು ಮುಂದ ಪ್ರಯಾಣಕ ಹೆಂಗ ಸಜ್ಜುಗೊಂಡನಂದರ ಹಂಗs ಸಜ್ಜುಗೊಂಡನು.

ಮುರುಡಿ ಗ್ರಾಮಕ್ಕೆ ಗ್ರಾಮವೇ ಕಣ್ಣೀರನ್ನು ಕಪಾಳಕ ತಂದುಕೊಂಡು ತಾಯನ್ನಗಲುವ ಯಳೆಗರುವಿನಂತೆ ಬಿಕ್ಕಿತು. ವಂದೇ ಸರೀರವಾಗಿ, ವಂದೇ ಬಾಯಿಯಾಗಿ ಯಜ್ಜೋ ಯಂದು ತೆಗೆದ ವುದ್ಗಾರವು ಯಲ್ಲಿಮಟ ಕೇಳಿಸಿತಂದರ ಅಲ್ಲಿಮಟ ಕೇಳಿಸಿತು.

*   *   *   *

ಅತ್ತ ಗುಂತಕಲ್ಲೊಳಗೆ ಕ್ಯಾಥರೀನಳ ಕಪಾಟಿನೊಳಗಿದ್ದ ತಾನು ಸುಂದರಿಯಾಗಿದ್ದ ಕಾಲದಲ್ಲಿ ಲಭಿಸಿದ ಕಿರೀಟವನ್ನೂ, ಆಪದ್ಧನವನ್ನು ತನ್ನ

ಗಂಡನಾದ ಡಿಸೆಕ್ಕಗೆ ಕೊಡುತ "ನೀವು ಸಂತ ಪದವಿಯನ್ನಲಂಕರಿಸುವ ದಿನ ನಾನು ಲೀಡಸದಲ್ಲಿರುತ್ತೇನೆ" ಯಂದು ಹೇಳಿದಳು. ಸುಮ್ಮನೆ ಯಿಸಕೊಂಡು ದಯವೇಚ್ಛೆ ಯಂದನು. ಸಾಮಾಜಿಕ ದುಕ್ಕ ನಿವಾರಣೆ ಮಾಡುವ ನಿಮಿತ್ತ, ನಾಸ್ತೀಕರನ್ನು ಆಸ್ತೀಕರನ್ನಾಗಿಸುವ ನಿಮಿತ್ತ, ರೋಗು ರುಜಿಣಗಳನ್ನು ನಿರ್ಮೂಲನ ಮಾಡುವ ನಿಮಿತ್ತ, ಪ್ರೀತಿ ಅಂತಃಕರಣಗಳ ಜೀರ್ಣೋದ್ಧಾರ ಮಾಡುವ ನಿಮಿತ್ತ ಸ್ವೇತಾಂಬರಧಾರಿಯಾಗಿ ತಾನು ಬೀದಿಗಳಿಗೆ ಹೋಗಲು ಜನರು "ಮುನುಸೋಬಯ್ಯಾ...ಮುನುಸೋಬಯ್ಯಾ" ಯಂದು ಬರಮಾಡಿಕೊಂಡರು. ಕಯ್ಲಾದ ದೇಣಿಗೆ ನೀಡಿದರು.. ಬೊಬ್ಬಿಲಿ ನಾಗಿರೆಡ್ಡಿಗೆ ಯೀ ಯಿಷಯ ತಿಳಿದು ರೊಕ್ಕಯಿದ್ದ ಸಂಚಿಯನ್ನು ತನ್ನ ಸಹಚರನ ಮೂಲಕ ಗುಟ್ಟಾಗಿ ಕಳುವಿದನೆಂದ ಮ್ಯಾಲ..

"ಅತ್ತ ಮುದ್ದನಗಿರಿ ಗ್ರಾಮದ ತೇರುಬೀದಿಯ ಬಲಮಗ್ಗುಲಿದ್ದ ಮನೆಯಲ್ಲಿ ರಿಂದಮ್ಮ ತನ್ನ ಗಂಡನ ಕೊರಳಪಟ್ಟಿಯನ್ನು ಹಿಡಿದು ಯಿಂಥ ದ್ರೋಹ ಬಗೆವಷ್ಟರಮಟ್ಟಿಗೆ ನೀಚರಾಗಿದ್ದೀರಲ್ಲ.. ಯೇದಶಾಸ್ತ್ರ, ನ್ಯಾಯಶಾಸ್ತ್ರಪಾರಂಗತರೆಂಬ ವಂದೇ ವಂದು ಕಾರಣಕ್ಕಲ್ಲವೇನು ನಾನು ನಿಮ್ಮನ್ನು ಮದುವೆಯಾದದ್ದು.. ಯೀಗ ನೋಡಿದರ ನೀವು... ಥೀ.. ಥೀ.." ಯಂದು ದುಕ್ಕುಮಾಡಿದಳು. ಮನಸ್ಸಿನೊಳಗಿನ ದ್ರೋಹ ಚಿಂತನೆ ತನ್ನ ಗಂಡನ ಮುಖದ ಮ್ಯಾಲ ಯರಡು ಮೂರು ದಿನಗಳ ಲಾಗಾಯ್ತು ಲಾಸ್ಯ ಮಾಡುತಲಿದ್ದುದನ್ನು ತಾನು ಗಮನಿಸಿರದೆಯಿರಲಿಲ್ಲ.. ಶನಿ ಬುಧ ಸ್ಥಾನ ಸೇರಿಕೊಂಡಿದ್ದಾನೆ ಕಣೇ, ತಿಂಗಳೊಳಗೆ ನೀನು ಜಾಗೀರುದಾರನೋರ್ವನ ಹೆಂಡತಿಯಾಗಿರುತ್ತೀ ಯಂದು ಗಂಡ ಯರಡನೇ ಸಲ ನುಡಿದಾಗಲೇ ತನಗೆ ಅನುಮಾನ ಬಾರದೆಯಿರಲಿಲ್ಲ. ಶನಿಯನ್ನು ಸಂಪ್ರೀತಗೊಳಿಸುವ ಸಲುವಾಗಿ ತಾನು ಅಲ್ಲಿಗೆ ಹೋಗಬೇಕಿದೆ, ಯಿಲ್ಲಿಗೆ ಹೋಗಬೇಕಿದೆ.. ವುಪಾಸನೆ ಮಾಡಬೇಕಿದೆ ಯಂದು ನೆಪ ಹೇಳಿ ಗಂಟೆಗಳ ತರಬಡಿ ಹೋಗುತಲಿದ್ದನು. ಶನಿ ಅಂದರೆ ಯಾರು? ವುಪಾಸನೆ ಅಂದರೇನು? ಯಂಬುದನ್ನು ವಯ್ದಿಕನ ಪತ್ನಿಯಾದವಳಿಗೆ ಗೊತ್ತಿರಲಿಕ್ಕಿಲ್ಲವಾ. ಹಿರಿಮಗ ಯಿಷ್ಣುವಿನ ಮೂಲಕ ಗಂಡನ ಚಲನವಲನಗಳ ಮ್ಯಾಲ ನಿಗಾಯಿರಿಸಿದಳು. ಪರಂಗಿ ಮನುಷ್ಯರೊಂದಿಗೆ ತನ್ನ ಗಂಡ ಗುಟ್ಟಾದ ವಡನಾಟ ಯಿಟ್ಟುಕೊಂಡಿರುವನು ಯಂಬ ಸಂಗತಿ ರುಜುವಾಯಿತು. ಆದರೂ ತಾನು ತಾಳ್ಮೆ ಕಳೆದುಕೊಳ್ಳಲಿಲ್ಲ. ಬೇಯಿನಾಳು ಗೋರಿಂಟಲ ಸ್ರೇಷಿ«ಯವರ ಮನೇಲಿ

ಸತ್ಯನಾರಾಯಣ ಪೂಜೆ ಮಾಡಲೆಂದು ಹೋಗುತಿರುವುದಾಗಿ ಹೇಳಿ ಹೋದ ತನ್ನ ಗಂಡ ತುಂಬಿದ ಸಂಚಿಗಳೊಡನೆ ಮರಳಿ ಬಂದದ್ದು ಪೂರಾ ವಂದೂವರೆ ದಿನ ನಂತರವೇ. ಮುನಿದಿದ್ದ ತನ್ನೆದುರಿಗೆ ಆತ ವಸ್ತುಪ್ರದರ್ಸನ ಯೇರುಪಡಿಸಿದೊಡನೆ ಸಯ್ರಣೆ ಕಳೆದುಕೊಂಡಳು. ಪ್ರಮಾಣ ಮಾಡಿಸಿ ಹಕೀಕತ್ತನ್ನುದುರಿಸುವ ಸಲುವಾಗಿ ಮಕ್ಕಳನ್ನೂ, ಪಯಿತ್ರಸಾಲಿಗ್ರಾಮವನ್ನೂ ಯದುರಿಗಿರಿಸಿ ಜಬರದಸ್ತಿನಿಂದ ಕೇಳಿದಳು. ಆತ ಬಾಯಿ ಬಿಡದಿದ್ದರೂ ಸಂಚು ಹೊಂಚು ಮೋಸಗಳಿತ್ಯಾದಿ ಗ್ರಹಿಸಿದ ತಾನು.

ತನ್ನ ಕುಟುಂಬದ ಸಲುವಾಗಿ, ವರ್ತಮಾನ ಅಯ್ಭೋಗವನ್ನು ಅನುಭವಿಸುವ ಸಲುವಾಗಿ, ಹೇಳಲೆಂದಿದ್ದ ಗಂಡನೆದುರೇ ಯರಡು ಮಡಿಸೀರೆಗಳನ್ನು ದರ್ಬೆಯ ಬುಟ್ಟಿಯೊಳಗಿಟ್ಟುಕೊಂಡು ತವರುಮನೆಗೆ ಹೋಗುವುದಾಗಿ ಹೇಳಿ ಹೊಸ್ತಿಲು ದಾಟಿದಳು, ಶಾಸ್ತ್ರಕ್ಕೆ ಹೋಗದಿರು ಅಂದ, ತರುಬಲಿಲ್ಲ, ಹೊರ ಹೋದ..

ರಿಂದಮ್ಮ ಹುಡುಕ್ಕೋತs ಹುಡುಕ್ಕೋತ ಫಲಾನ ಜಾಗವನ್ನು ಸೇರಿ ನಾಗಿರೆಡ್ಡಿಯನ್ನು ಕಂಡು ಸಂಭವಿಸಲಿರುವ ಘಾತ ಕುರಿತು ಹೇಳದೆ ಯಿರಲಿಲ್ಲ. ಆಗಿದ್ದು ನಾಗಿರೆಡ್ಡಿ ವಂದೇ ವಂದು ನಿಟ್ಟುಸಿರು ಬಿಡದೆ ಸಮಾಧಾನಚಿತ್ತದಿಂದ "ನಿನ್ನಂಥ ತಂಗೇರು ಯಿರುವಾಗ.." ಯಂದು ಮುಂತಾಗಿ ಯೇನು ಹೇಳಿದನೆಂದರೆ..

ಫಲಾನಗ್ರಾಮ ಯಂದರ ಕುರೇಕುಂಪೆಯು. ನೂರಾರು ಮಂದಿ ಭಕುತರ ಸಮಚ್ಛಮದಲ್ಲಿ ಗಮಕ ಕಲಾವರೇಣ್ಯನೆನಿಸಿರುವಂಥ ಮುಷೂ«ರು ಮುದ್ದು ಭರುಮನ ಗವುಡನು ಗಡೇಕಲ್ಲ ತವನಿಧಿ ಸ್ರೀ ಭೀಮಲಿಂಗೇಸ್ವರ ಸ್ವಾಮಿಯ ಪುರಾಣದ ಯೇಳನೇ ಚರಣವನ್ನು ತನ್ನ ಬಾಯಿಗೆತ್ತಿಕೊಂಡಿದ್ದಾನೆ. ಕೇಳಲೆಂದು ಬ್ಯಾರೇ ಬ್ಯಾರೇ ಲೋಕಗಳಿಂದ ಆಗಮಿಸಿ ಆಗೋಚರ ಸ್ಥಿತಿಯಲ್ಲಿ ವುಪಸ್ಥಿತರಿದ್ದಂಥ ಪುಣ್ಯಜೀವಿಗಳು ವಬ್ಬರೇ ಯಿಬ್ಬರೇ.. ಕಯ್ಲಾಸದಿಂದ ಸಾಚ್ಛಾತ್ ಪರಮೇಸ್ವರನೇ ತನ್ನ ಕುಟುಂಬ ಪರಿವಾರ ಸಮೇತನಾಗಿ ಆಗಮನ ಮಾಡಿದ್ದನೆಂದರೆ ಪುರಾಣಕತ್ರುವಾದ ಸಚ್ಚಿದಾನಂದ ಶಾಸ್ತ್ರಿಗಳ ಆತುಮಮೂವಯಕುಂಠ ಲೋಕದಿಂದ ಆಗಮನ ಮಾಡಿರದೆ ಯಿರಲಿಲ್ಲ.. ಆದಿಸೇಸ ಸ್ವಾಮಿಯ ಅಪರಾವತಾರವಾದ ನಾಗಿರೆಡ್ಡಿ ಅಲ್ಲಿದ್ದಾನೆ ಗಂಡುಗಲಿ.. ಅರರೆ ಸ್ವಾಮಿಯ ಪರಮ ಭಕುತನನ್ನು ಬಂಧಿಸಲೆಂದೊಂದು ಸಂಚು

ನಡೆದಿರುವುದಲ್ಲಾ.. ಕುಂಪಣಿ ಸಯ್ನಿಕರು ಮಾರು ಯೇಸದಲ್ಲಿ ಸ್ರೋತ್ರುಗಳ ನಡುವೆ ಅಲ್ಲಲ್ಲಿ ಅಡಗಿ ಕುಂತಿರುವರಲ್ಲಾ.. ತನ್ನ ಪ್ರಿಯಸಿಷ್ಯ ವರಹಾ ಯಂಕಟ ಪತಿರಾಯನ ಮೊಮ್ಮಗನಾದ ನರಸಿಮ್ಮರಾಯನೇ ಯೀ ಸಂಚನ್ನು ರೂಪಿಸಿರುವನಲ್ಲಾ... ತಾವು ರಚಿಸಿರುವುದೇ ಬ್ಯಾರೆ... ಯಿಲ್ಲಿ ಜರುಗಲಿರುವುದೇ ಬ್ಯಾರೆ... ಯೀ ಅಧ್ಯಾಯವನ್ನು ಪುರಾಣ ಕತ್ರುವಾದ ತಾವು ಹೆಂಗಾದರೂ ಮಾಡಿ ಬದಲಾಯಿಸಬೇಕು... ನಾಗಿರೆಡ್ಡಿಯನ್ನು ರಕ್ಷಿಸುವುದು ಪುರಾಣ ಧರುಮ ಯಿರುವುದು.. ಯಂದು ಮುಂತಾಗಿ ಯೋಚಿಸಿದ ಶಾಸ್ತ್ರಿಗಳ ಆತಮವು ಆ ಕೂಡಲೆ ಕಾರ್ಯ ಪ್ರವುರುತ್ತವಾಯಿತು. ತಾವೇ ಯೇದಿಕೆಗೆ ಧಾವಿಸಿ ಗವುಡನ ಸರೀರವನ್ನು ಆಕ್ರಮಿಸಿಕೊಂಡುಬಿಟ್ಟಿತು..

ಪುರಾಣದ ಲಯದೊಳಗ ವರ್ತಮಾನ ನಿಚ್ಚಳವಾಗಿ ಕಾಣಿಸಿಕೊಂಡೊಡನೆ ಭಕುತರು ಹ್ವಾ ಹ್ವಾ ಅಂತ ರೋಮಾಂಚನಗೊಂಡರು. ಜಯ ಹೋ ಭೀಮಲಿಂಗೇಸ್ವರಾ.. ಯಂದು ಜಯಕಾರ ಹಾಕಿದರು. ರೆಡ್ಡಿಲೋರೆಡ್ಡಿರಾ ಬೊಬ್ಬಿಲಿನಾಗಿರೆಡ್ಡಿರಾ ಯಂದೂ ಕೂಗಿದರು.. ಯೇಳನೆ ಚರಣದ ಚರಿತ್ರೆಗೆ ವರ್ತಮಾನದ ಭಾಷ್ಯ ಯೇನು ಮುಂದಕ ಬಂತೆಂದರೆ.. ಗೊನೆಗೊಂಡಲದ ರಂಪಾಟ ಲಾಗಾಯ್ತು ಕಥೆವಳಗ ಮನ್ರೋನು ಬಂದ, ಹೆನ್ರಿಯೂ ಬಂದ.. ಸಂಚಿನ ರೂವಾರಿಯಾಗಿ ನರಸಿಮ್ಮರಾಯನೂ ಬಾರದೆ ಯಿರಲಿಲ್ಲ.. ಕುರೆಕುಂಪೆಯೂ ಬಂತು.. ಸಿವನ್ನಾಮಪಾರೊತೀಪತಿ ಹರ ಹರ ಮಾದೇವs.. ಕುಂಪಣಿ ಸರಕಾರದ ಸಯ್ನಿಕರು ಮಾರು ಯೇಸದಲ್ಲಿ ಅಡಗವರೆ ಯಂಬ ಅಧಿಕುರುತ ಪ್ರಸ್ತಾಪ ಬಂದೊಡನೆ ಮುಂದಕ ಯೇನೇನು ಜರುಗಿತಂದರ.. ಅಗs..ಯಿಗss.. ತಗss...ಅಂತ ವಬ್ಬೊಬ್ಬ ಸಿಪಾಯಿಯನ ಹಿಡ ಹಿಡದು ಹಣ್ಣುಗಾಯಿ ನೀರುಗಾಯಿ ಮಾಡಿಬಿಟ್ಟರು. "ಯಿನ್ನೊಂದ್ಸಲ ನಮ್ಮ ನಾಗಿರೆಡ್ಡಿಣ್ಣನ ತಂಟೆಗೆ ಬಂದರ ನಿಮೆಂಡತಿ ರಂಡ್ಯಾಕಾಳ ಹುಷಾರು" ಯಂದು ಯಚ್ಚರಿಕೇನ ನೀಡಿ ಹೆನ್ರಿಯನ್ನು ಬಿಡುಗಡೆ ಮಾಡಿದರೆಂಬಲ್ಲಿಗೆ ಸಿವಸಂಕರ ಮಾದೇವಾss..

ಅತ್ತ ಹರಪನಹಳ್ಳಿ ಪ್ರಾಂತದೊಳಗಿನ ವರ್ತಮಾನ ಅಯೋಮಯವಾಗಿದುದರ ಬಗೆಗೆ ಹೇಳುತ್ತ ಹೋದರೆ.. ಸಿವ ಸಿವಾss...

ಅತ್ತ ಕೂಡ್ಲಿಗಿ ಪಟ್ಟಣದೊಳಗೆ ಆದರ್ಸ ದಾಂಪತ್ಯದ ಹರಿಕಾರನಾದ ಯಂಕೋಬರಾಯನ ತಲೆ ವಳಗ ತಾಯಕ್ಕ ಯಂಬ ವಂದು ತೊಲಿ ತೂಕದ ಗುಂಗಾಡಿಯೂ, ಚಿನ್ನಾಸಾನಿಯಂಬ ನೂರು ತೊಲ ತೂಕದ ಗುಂಗಾಡಿಯೂ

ಕೊರೆಯಲಕ ಹತ್ತಿದ್ದ ಪರಿಣಾಮದಿಂದಾಗಿ ಅವಯ್ಯನು ವಂದು ಮಾಡಲು ಹೋಗುತ ಪರಪಾಟಿಗೆ ಬಿದ್ದು ಯಿನ್ನೊಂದು ಮಾಡುತಲಿದ್ದನು. ತನ್ನ ಸೊಡರ ಕುಡಿಯಂಥ ಮನಸ್ಸಿನ ಮ್ಯಾಲ ನಿಯಂತ್ರಣ ಸಾಧಿಸುವ ನಿಮಿತ್ತ ದಿನವಂದರಲ್ಲಿ ಆರು ಸಂಧ್ಯಾ ಸಮಯಗಳನ್ನು ನಿಗಧಿ ಮಾಡಿಕೊಂಡಿದ್ದನು. ನೋಡು ನೋಡುತ್ತಿದ್ದಂತೆ ತಾನು ತುಂಬಿದ ಗಿಂಡಿಯಿಂದ ಜಲವನ್ನು ಮಯ್ಯೆಗ ಸಿಂಪಡಿಸಿಕೊಳ್ಳುತಲಿದ್ದುದೇನು? ನೋಡು ನೋಡುತ್ತಿದ್ದಂತೆ ತಾನು ತೋಚಿದ ಕಡೇಲೆಲ್ಲ ಕೂತು ಪ್ರಾಣಯಾಮ, ಧ್ಯಾನ ಮಾಡುತಲಿದ್ದುದೇನು? ಬಂಗಲೆಯನ್ನೇ ತಾಯಕ್ಕನ ಮನೆ ಯಂದೂ, ತಾಯಕ್ಕಳ ಮನೆಯನ್ನೇ ಸರಕಾರದ ಬಂಗಲೆ ಯಂದೂ, ಜೆನ್ನಿಫರಮ್ಮ ಚಿನ್ನಾಸಾನಿಯಂದೂ, ಚಿನ್ನಾಸಾನಿಯನ್ನೇ ಜೆನ್ನಿಫರಮ್ಮ ಯಂದೂ ತಾನು ಭ್ರಮಿಸುತಲಿದ್ದುದೇನು? ತನ್ನೊಳಗಿಂದ ಯೇದ ಪಾರಾಯಣದ ಪುಣ್ಯ ಸೋರಿ ಹೋಗದ ಮುನ್ನ, ತನ್ನ ಹೆಂಡತಿ ದುಸ್ವೊಪ್ನಗಳನ್ನು ಕಾಣದ ಮುನ್ನ, ತನ್ನನ್ನು ತಾನು ರಕ್ಷಿಸಿಕೊಳ್ಳಬೇಕೆಂದು ನಿರ್ಧರಿಸಿದ ರಾಯನು ಮ್ಲಾನ ವದನನಾಗಿ ಕಛೇರಿಗೆ ಹೋಗಿ ಸಯ್ನಿಕ ಸಾಯ ಪದ್ಧತಿ ಯೋಜನೆಗೆ ಸಂಬಂಧಿಸಿದ ಕಡತಗಳನ್ನು ವಂದೊಂದಾಗಿ ಕಯ್ಗೆತ್ತಿಕೊಂಡನು. ಯಾವ ಯಾವ ಸಮುಸ್ಥಾನಗಳಿಂದ ಯಷ್ಟೆಷ್ಟು ಸಯ್ನಿಕರು ಬೇಕೆಂಬ ಬೇಡಿಕೆ ಬಂದಿರುವುದು, ಕುಂಪಣಿ ಸಿಪಾಯಿಗಳು ಬಾಡಿಗೆ ಹೋಗಿ ವಾಪಾಸಾಗದೆ ಯಾವ ಯಾವ ಸಮುಸ್ಥಾನಗಳಲ್ಲಿ ವುಳಕೊಂಡವರೆ, ಯಾವ ಯಾವ ಸಮುಸ್ಥಾನಗಳಿಂದ ಕುಂಪಣಿ ಸರಕಾರಕ್ಕೆ ಸಂದಾಯವಾಗಬೇಕಿರುವ ಬಾಕಿ ಯಷ್ಟು ವಗಯ್ರೆವಗಯ್ರೆಕಡತಗಳು ಪರಿಸೀಲನ ಮಾಡಿ ಷರಾ ಬರೆವುತ ಕುಪ್ಪೆ ಹಾಕಿದನು.. ಯಲ್ಲಾ ಕಾರ್ಯೆವುಗಳನ್ನು ತಾನು ಪೂರ್ಣ ಮಾಡಿದ್ದಾಯಿತು. ಯಿನ್ನು ತಾನು ನಿಶ್ಚಿಂತೆಯಿಂದ ದೀರ್ಘಾವಧಿ ರಜೆ ಬಯಸಿ ಅರ್ಜಿ ಬರೆವುದೊಂದು ಬಾಕಿ ವುಳಕೊಂಡಿರುವುದು. ವಂದಿವಸ.. ಯರಡು ದಿವಸ.. ಅಂದರ ಸರ್ರೇ ಸರ್ರೆ.. ಆದರೆ ಹಲವು ತಿಂಗಳುಗಳ ಕಾಲ ಅಂದರ.. ಮನವಿ ಕೆಳಹಂತದ ಅಧಿಕಾರಿಗಳನು ದಾಟಿ ದಾಟೀ ಕಲೆಟ್ಟರು ಸಾಹೇಬನಿರುವಲ್ಲಿಗೆ ಹೋಗಿ ಮಂಜೂರಾಗಿ ಬರಬೇಕು. ಯಿದಕ್ಕೆ ಯೇನಿಲ್ಲಾಂದರೂ ವಂದೆರಡು ತಿಂಗಳುಗಳ ಕಾಲ ಕಾಯುವುದು ಅವಶ್ಯ.. ಪರಂಗಿ ನವುಕರರು ಸಲ್ಲಿಸುವ ಮನವಿಗಳನ್ನು ಕಣ್ಣುಮುಚ್ಚಿ ಪುರಸ್ಕರಿಸುವ ಸಾಹೇಬ ಪರಂಗಿ ಅಲ್ಲದ ತಮ್ಮಂಥವರ ಮನವಿಗಳ ತಳಬುಡ ಸೋಧಿಸದೆ ಬಿಡುವನಲ್ಲ.. ರಜೆಯ ಮ್ಯಾಲ ಹೋಗುವ ಪರಂಗೇತರ ವುದ್ಯೋಗಿಯು

ಯಾದಾರ ಸರಕಾರೀ ಯಿರುದ್ಧದ ಸಂಚಿಚನಲ್ಲಿ ಭಾಗಿಯಾದರೆ! ಲಂಚರುಷುವತ್ತು ಪಡೆದು ವಳ ಸೂಕ್ಷ್ಮಗಳನ್ನು ಮಾರಾಟ ಮಾಡಿದರೆ! ಯಿಂಥ ಹಲವು ರೀತಿಲ್ಲಿ ಸಂದೇಹಪಡಬೌದಾದ ಸಾಹೇಬ ಖುದ್ದ ತಾನೇ ವಂದೇ ವಂದು ರಜೆ ಪಡೆಯದೆ ಕುಂಪಣಿ ಸರಕಾರದ ಯೇಳಿಗೆಗಾಗಿ ದುಡಿಯುತ್ತಿರುವನೆಂಬ ವದಂತಿಯೂ ವುಂಟು, ಅಂಥಾದ್ದರಲ್ಲಿ ತಾನು..!!

ಆದರೂ ಪರಶುರಾಮ ಸೂಕ್ತವನ್ನು ನೆನೆಯುತ್ತಲೇ ರಾಯನು ಯಂಟು ಪುಟ ಗಾತ್ರದ ರಜೆ ಚೀಟಿಯನ್ನು ಬರೆದುಕೊಂಡು ಮಾಲಕಿನ್ನಳ ದ್ವಾರಾ ಸಿಪಾರಸು ಮಾಡಿಸಬೇಕೆಂಬ ನಿರ್ಣಯದಿಂದ ನಿವಾಸದ ಬಂಗಲೆಗೆ ಹೋದನು. ತಯ್ಲವರ್ಣಗಳ ಮಿಸ್ರಣದ ಕ್ರಿಯೆಯೊಳಗೆ ತಲ್ಲೀನಳಾಗಿದ್ದ ಆಕೆ ಮುಖ ತಿರುಗಿಸಿದೊಡನೆ ಚಿನ್ನಾಸಾನಿ ಯಂದು ವುದ್ಗಾರವನ್ನು ಯಿನ್ನೇನು ತೆಗೆಯಬೇಕು, ಅಷ್ಟರಲ್ಲಿ ನಿಯಂತ್ರಿಸಿಕೊಂಡನು. ಯೀ ಸಜ್ಜನನ ಗಂಟಲಲ್ಲಿ ಯೇನುಂಟು ಯಂದು ಮೂಹಿಸಿ ಖಚಿತಪಡಿಸಿ ಕೊಂಡವಳಾದ ತಾನು “ರಾಯರೇ ನಿಮ್ಮ ಗಂಟಲಲ್ಲಿರುವಾಕೆಯನ್ನು ನಾನು ನೋಡಬೇಕೆಂದಿರುವೆನಲ್ಲಾ” ಯಂದು ಅಭಿಲಾಷೆ ಯಕ್ತಪಡಿಸಿದೊಡನೆ ಜಂಘಾಬಲ ವುಡುಗಿ ಹೋಗಿ “ನಿಮ್ಮಂಥವರು ಆಕೆಯನ್ನು ಕಾಣುವುದು ಸೂಕ್ತವಲ್ಲವೆಂದು ನನ್ನ ಭಾವನೆ” ಯಂದನು.. ತಕ್ಕಮಟ್ಟಿಗೆ ಅವರೀರ್ವರ ನಡುವೆ ಯಿಂಗಲೀಸು ಭಾಷೆಯೊಳಗೆ ಮಾತುಕತೆ ನಡೆಯಲಕ ಹತ್ತಿತ್ತು.. ನ್ರುತ್ಯಗಾತಿಯನ್ನು ನೋಡಿದ ನಂತರವೇ ತಾನು ಚೀಟಿಯನ್ನು ಪರಿಸೀಲನೆಗೆ ಯತ್ತಿಕೊಳ್ಳುವುದೆಂದು ಖಂಡತುಂಡವಾಗಿ ಹೇಳಿದಳು.. ಮಾನಸಿಕವಾಗಿ ತಾನು ಆಕೆಯನ್ನು.. ತಾನೇ ಖುದ್ದು ನಿರೂಪ ವಯ್ಯುವುದೋ ಅಥವಾ ಸಿಪಾಯಿಗಳ ಮೂಲಕ.. ತಾನೇ ಭವುತಿಕವಾಗಿ ಹೋಗುವುದೇ ಯಿಹಿತವು.. ಯಾಕೆಂದರೆ ತನ್ನ ಅಂತಿಮ ಆಸೆಯೂ ಅದೇ ಆಗಿರುವುದು.. ಹೋದಲ್ಲಿ ನೋಟ ಮಾತ್ರದಿಂದ ಅಪಯಿತ್ರಆಗುವುದು ಖಚಿತ.. ಹೋಗದಿದ್ದಲ್ಲಿ.. ಅದೊಂದು ಯಿಧದ ಆತುಮ ವಂಚನೆಯು.. ಯೇನು ಮಾಡುವುದು ತಾನು? “ದಿವಸಕ್ಕೊಂದು ಸಲವಾದರೂ ಆಗಮಿಸಿ ಮನೆಯನ್ನು ಪಯಿತ್ರಮಾಡಿ ಸ್ವಾಮಿ..” ತಾಯಕ್ಕ ಯರಡು ಮೂರು ಸಲ ಹೇಳಿದ್ದ ಮಾತುಗಳು ನೆನಪಾಗುತ ಅದೊಂದು ನಮೂನಿ ಧರುಮ ಸಂಕಟಕ್ಕೆ ಸಿಲುಕಿಸಿರುವವು ತನ್ನನ್ನು. ಮೋಂ ಭೂರ್ಭವಸ್ವಃ.. ಸಾಧಿಸಿದ ಅರಗಳಿಗೆ ಯವಧಾನದೊಳಗೆ ಸಿಪಾಯಿ ಮೂಲಕ ತಾಯಕ್ಕನಲ್ಲಿಗೆ ನಿರೂಪ ಕಳಿಸಿದನು.. ಸಿಪಾಯಿ ಕರೆಗೆ ಹೂಂಗುಟ್ಟು ಆಕೆ

ಬರುವುದು ತನಗಿಷ್ಟಯಿಲ್ಲದಿದ್ದರೂ ಸಹ.. ಹರಿಯೇ ಆಕೆ ಸಿಪಾಯಿಯ ಹಿಂದೆ ಬಾರದಿರಲಿ.. ವುತ್ಕಂಠಭರಿತನಾಗಿರಲು ಚಣಮೊಂದು ಮನುವಂತರ ವಾಯಿತು.. ಅಂತೂ ಸಿಪಾಯಿ ಬರಿಗಯ್ಲಿ ವಾಪಾಸು ಬಂದ, ದೇವರು ದೊಡ್ಡವನು. ಸ್ವಾಮಿ.. ನಿನ್ನನ್ನೇ ಬರಲಕ ಹೇಳಿದಳು. ಬಹುವಚನದ ಬಳಕೆ ಗೊತ್ತಿಲ್ಲದ ಸಿಪಾಯಿಗಳಿಂದ ಕುಂಪಣಿ ಸರಕಾರಕ್ಕೆ ಗಂಡಾಂತರ ತಪ್ಪಿದ್ದಲ್ಲ. ಸಿಪಾಯಿಗಳಿಗೆ ಸವುಜನ್ಯ ಕಲಿಸುವ ಯೋಜನೆಯೊಂದನ್ನು ತಾನು ರೂಪಿಸಬೇಕಿದೆ.. ವುತ್ತಮ ವಮುಸೋದ್ಭವನಾದ ರಾಯನು ವುತ್ತಮ ವುಡುಪು ಧರಿಸಿದನು. ರುದ್ಯಾಪ್ಯದ ಲಕ್ಷಣ ಯಂದು ಬೆಳ್ಳಿ ಖಚಿತ ಮೂರುಗೋಲನ್ನು ಕಯ್ಗೆ ತೆಗೆದುಕೊಳ್ಳಲಿಲ್ಲ. ಪೂರ್ವಜರಿಂದ ಬಳುವಳಿಯಾಗಿ ಬಂದಿದ್ದಂತ ಪಂಚಲೋಹ ದರ್ಪಣದೊಳಗ ತನ್ನನ್ನು ತಾನು ನೋಡಿಕೊಂಡನು. ತನ್ನ ಪ್ರತಿಬಿಂಬ ಯಿಟಪುರುಷನದ್ದೋ.. ಗವುರವಾನ್ವಿತ ಸಜ್ಜನನದ್ದೋ.. ಯಿರಲಿ ಯೇನಾದರೊಂದು!

ಗತ್ತಿನಿಂದ ಬೀದಿಯಲ್ಲಿ ಕಾಣಿಸಿಕೊಂಡ ರಾಯನತ್ತ ಕೆಲವು ಹಯ್ಕಳು ಜಠರಾಗ್ನಿಯಿಂದ ದಹಿಸುತ್ತ ನೋಡಿದರು. ಯೀತನ ಗುರಿ ತಾಯಿಯಾಗಿರಬೌದಾ? ಮಗಳಾಗಿರಬೌದಾ? ವಾರ ದಿನಮಾನದಿಂದ ಗರಿಷ« ಮಟ್ಟದಲ್ಲಿ ಅಪಪ್ರಚಾರವನ್ನು ಪ್ರಗ್ನಾಪೂರುವಕವಾಗಿ ಮಾಡುತ್ತ ಬಂದಿದ್ದ ಹಯ್ಕಳು, ರಾಯನಿಗೆ ಜೀವನದಲ್ಲಿ ಜುಗುಪ್ಸೆ ಹುಟ್ಟುವಂತೆ ಮಾಡಿ ಸದರಿ ಪಟ್ಟಣದಿಂದ ತೊಲಗಿಸಬೇಕೆಂದು ತೆರೆಮರೆಯಲ್ಲಿ ಯುದ್ಧೋಪಾದಿಯಲ್ಲಿ ತಂತ್ರಗಳನ್ನು ರೂಪಿಸಿದ್ದ ಹಯ್ಕಳು, ರಾಯನಿಗೆ ತಾಯಕ್ಕನೊಂದಿಗೆ ದಹಿಕವಾಗಿಯೂ, ಚಿನ್ನಾಸಾನಿಯೊಂದಿಗೆ ಮಾನಸಿಕವಾಗಿಯೂ ಸಂಬಂಧವುಂಟೆಂದು ಚಾಡಿ ಟೊಂಗು ಟುಸುಕುಗಳನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಹಬ್ಬಿಸಿದ್ದ ಹಯ್ಕಳು, ರಾಯ ಕ್ರಮಿಸಲಿದ್ದ ವಂದೆರಡು ಫರಲಾಂಗು ವುದ್ದದ ಹಾದಿಯಲ್ಲಲ್ಲಿ ಅನೇಕ ಕಂಟಕಗಳನ್ನು ಮಿಂಚಿನಂತೆ ಸ್ರುಷ್ಟಿಸಿದ್ದ ಹಯ್ಕಳು.. 'ವೇದಕ್ಕೂ ಬೇಕೆ ಯಭಿಚಾರ' ಯಂಬ ಪದಪುಂಜಗಳನ್ನು ಅಲ್ಲಲ್ಲಿ ಗೋಡೆಗಳ ಮ್ಯಾಲ ಬರೆದಿದ್ದ ಹಯ್ಕಳು.. ಹ್ಹಾ.. ಹಾಯ್ ಹಯ್ಕಳೇ.. ಹ್ಹೊ.. ಹೋಯ್ ಹಯ್ಕಳೇ..

ತನ್ನ ಗಮನ ಯಾವ ಅರ್ಥ, ಅನಾರ್ಥಕ್ಕ ಭಾಜನವಾಗುವುದೋ.. ವಳ್ಳೊಳಗೆ ತಲೆಯಿಟ್ಟು ಯೇಸೋ ದಿವಸಗಳುರುಳಿರುವವು. ಯಿನ್ನು ವಣಕೆಗೆ ಹೆದರಿದರಾದೀತೇ? ರಾಯನ ಯಿಶೇಷ ಪಾದರಕ್ಷೆಗಳು ಮಾಡಿದ ಯಿಶೇಷ

ಸಬುಧವನ್ನು ಕೇಳಿಸಿಕೊಂಡವಳಾದ ತಾಯಕ್ಕ ತಲಬಾಕಲಿಗೋಡೋಡುತ ಬಂದು "ಯೀ ಬಡವಿಯ ಮನೆ ಯೀಗಲಾದರೂ ಗ್ನಾಪಕಕ್ಕೆ ಬಂದಿತಲ್ಲ" ಯಂದು ವುಸುರುಬಿಟ್ಟು ಸ್ವಾಗತಿಸಿದಳು. ವಾರೆಗಣ್ಣಿನಿಂದ ನೋಡಿದ. ವಯಸ್ಸು ಯರಡು ಮೂರು ದಿನಗಳೊಳಗೆ ಯೇನಿಲ್ಲಾಂದರೂ ಅಯಿದತ್ತು ವರುಷ ಕಡಿಮೆಗೊಂಡಿರುವಂತೆ ಯಿದ್ದಾಳೆ.. ದೇವರ ಮಾಯೆ.. ತಾನು ವುಚಿತಾಸನದಲ್ಲಿ ಕೂತದ್ದಾಯಿತು. ಯಂದಿನಂತೆ ಕೇಸರಿ ಮಿಸ್ರಣ ಮಾಡಿದ ವುಗುರು ಬೆಚ್ಚಗಿನ ಹಾಲನ್ನು ನಡುಗುವ ಕಯ್ಯಿಗಳಿಂದ ಕುಡಿದದ್ದಾಯಿತು. ಆಕೆಯು ವಜ್ರದುಂಗುರಗಳಿಂದಲಂಕ್ರುತ ನೀಳ ಬೆರಳುಗಳ ತುದಿ ಸೋಂಕಿನ ರೋಮಾಂಚನದಿಂದಾಗಿ ವಂದರಗಳಿಗೆ ಗದ್ಗದಿತಗೊಂಡನು. ರೇಚಕ, ಪೂರಕ, ಕುಂಭಗಳಿಂದ ಸಾವರಿಸಿಕೊಂಡ. ವಕ್ಷಸ್ಥಳದಲ್ಲಿ ಗೋಚರವಾಗುವುದೋ ಯಂಬ ಅಂಜಿಕೆಯಿಂದ ಗೋರಿಂಟಾಕು ರೇಖಾ ಚಿತ್ರಗಳಿದ್ದ ಆಕೆಯ ಪಾದಗಳನ್ನೇ ನೋಡುತ, ಆಯಾಚಿತವಾಗಿ ಮ್ಯಾಲಿನದೆಲ್ಲವನ್ನೂ ಕಲ್ಪಿಸಿಕೊಳ್ಳುತ್ತ.. ಅದರೊಟ್ಟಿಗೆ ತವರೂರಲ್ಲಿರುವ ತನ್ನ ಪತಿವುರೊತಾ ಸಿರೋಮಣಿ ಪತ್ನಿಯನ್ನೂ ಗ್ನಾಪಕಕ್ಕೆ ತಂದುಕೊಳ್ಳುತ, ತಾನು ಬಂದ ವುದ್ದೇಶವನ್ನು ನವುರಾದ ಮಾತುಗಳಲ್ಲಿ ತಿಳಿಸಿದ.. ಪಟ್ಟಣದಾದ್ಯಂತ ನಯನಾಜೂಕುಗಳಿಂದಲೂ, ಪ್ರಜಾವಾತ್ಸಲ್ಯದಿಂದಲೂ ಪ್ರಸಿದ್ಧಳಾಗಿರುವ ಜೆನ್ನಿಫರಮ್ಮಳೇ ತಮ್ಮ ನಿರೀಕ್ಷೆಯಲ್ಲಿರುವಳೆಂದ ಮ್ಯಾಲ ಹೊರಡದೆ ಯಿರಲಕಾದೀತೇ, ತನ್ನ ಮಗಳೊಡನೆ ತಾನೂ ಡೋಲಿಯಲ್ಲಿ ಹೊರಡದೆ ಯಿರಲಕಾದೀತೇ, ಯರಡು ಮೂರು ಫರಲಾಂಗು ದೂರವನ್ನು ಕ್ರಮಿಸಿ ಬಂಗಲೆಯನ್ನು ಫಲಾನ ಸಮಯಕ್ಕೆ ಸರಿಯಾಗಿ ತಲುಪುವುದಾಗಿ.....

ಅತ್ತ ಕುದುರೆಡವು ಪಟ್ಟಣಕ್ಕಂಟಿಕೊಂಡಂತೆ ಜಾನುಮಲೆ ಯಂಬ ಹೆಸರಿನ ಸಪೂರಾದ ಅಡವಿಯೊಂದು ಯಿತ್ತಷ್ಟೆ. ಮಾಸತಿ ಹೊನ್ನಮ್ಮ ಯಂಜಲು ಮಾಡಿ ಬಿಟ್ಟ ಮೊಲೆ ವುಂಡು ಬೆಳೆದಿದ್ದ ವಡ ಹುಟ್ಟಿದವರ ಪಯ್ಕಿ ಮೋರ್‍ವಳಾದ ಕಡದಮ್ಮ ಜುಳು ಜುಳು ಯಂಬ ಲಯದೊಂದಿಗೆ ಆ ಅಡವಿಯೊಳಗ ಹರಿಯುತಲಿದ್ದಳಷ್ಟೆ. ಆಕೆಯ ಬಂಗಾರ ವರ್ಣದ ದಡದಿಂದೇರುತಾ ಯೇರುತಾ ಜಾನುದಿಬ್ಬವನ್ನು ತಲುಪಿದ ತ್ರಿವಳಿ ಸೋದರರು ಯಾರು ಯಾರೆಂದರೆ ಗಾಳೆಯ್ಯ, ಬೀಳಯ್ಯ, ಪಾಳಯ್ಯರು.. ವನುವಾಸಯ್ಯ ವುಪಾಸಯ್ಯರು ದನುರ್ವಿದ್ಯೆಯನ್ನು ಯಲ್ಲಿ ಕಲಿತರೋ ಅದೇ ಗುರೀರಯ್ಯ ಯಂಬ ಕಲಿಯುಗದ ದ್ರೋಣಾಚಾರ್ಯನ ಬಳಿ.. ಬಿಲ್ಲು ಅವರ ಮುಂಡ.. ಬಾಣ ಅವರ ರುಂಡ.. ಬೇಟೆಯೇ ಆ ಮುವ್ವರ

ಜೀವನಾಧಾರವು.. ಪಕ್ಷಿಗಳೇ ಅವರಿಗೆ ಯಿದೇಸಿ ಯಿನಿಮುಯುವು.. ಆತುಮಮೊಂದರ ಮೂರು ಡಿಂಬಗಳಂತಿರುವ ಅವರು ಬ್ಯಾಟೆ ಆಡಲಕೆಂದು, ಅಪರೂಪದ ಪಕ್ಷಿಗಳನ್ನು ಅರೆಜೀವ ಮಾಡಿ ಭೂಮಿಗೆ ಕೆಡವಲಕೆಂದು ನಸಿಗ್ಗೀಲೆ ತಮ ಹಟ್ಟಿಯಿಂದ ಹೊರಟು ಬಂದಿದ್ದರು. ಪಕ್ಷಿ ಸಾಸ್ತರಗ್ನರಾದ ಅವರು, ಪಕ್ಷಿಗಳ ಸೊರವನ್ನು ಅನುಕರಣೆ ಮಾಡುವಲ್ಲಿ ನಿಷ್ಣಾತರಾದ ಅವರು, ಪಕ್ಷಿ ಸಗುನ ನಿಷ್ಣಾತರಾದ ಅವರು, ಅಗೋ ಅದಲ್ಲಿ ಅಮುತಾರ.. ಅದಾಗಿರುವುದಿಲ್ಲ, ಯಿಗೋ ಯಿಲ್ಲಿ ಅಮುತಾರ ಯಿದಾಗಿರುವುದಿಲ್ಲ.. ಸಾಂಬಾರು ಕಾಗೆ ಹದ್ದಾಗಿಬಿಡುತಯ್ತೆ.. ಕವುಜಗ ಕಾಗೆಯಾಗಿ ಮಾರ್ಪಾಡಾಗಿ ಬಿಡುತಯ್ತೆ.. ಕಾಡುಕೋಳಿ ಗುಬ್ಬೆಮ್ಮ ಆಗಿ ಪುಸಕ್ಕೊಂಡು ಹೋಗಿಬಿಡುತಯ್ತೆ.. ಯೀ ಮಾಯೆ ಯಿವತ್ತು ಆರಂಭವಾಗಿರುವಂಥದ್ದಲ್ಲ.. ಬರೋಬ್ಬರಿ ವಾರೇಳು ದಿವಸಗಳಿಂದ ಯಿಂಚು ಮಿಂಚು ಸಾಂಬವಿ ಕರಗಲ್ಲಿನ ಬಳಿ ವಸ್ತಿ ಮಾಡಿದಲಾಗಾಯ್ತು.. ಪಕ್ಷಿ ಮಾವುಸಯಿಲ್ಲದ ವಣಕೂಳನು ವುಂಡೂ ವುಂಡೂ ಅವರ ನಾಲಗೆಗಳು ಬತಗೆಟ್ಟು ಹೋಗಿರುವವು. ನೆಂಜಿಕೊಳ್ಳಲಕ ವಂದೇ ವಂದು ಕವುಜಗದ ಕಾಲೊಂದಿದ್ದಲ್ಲಿ ಆ ಸೊಗಸೇ ಬ್ಯಾರೆ.. ತಾವು ಮಾಡೋ ಯತ್ನ ಪ್ರಯತ್ನಂಗಳನು ಮಸ್ತು ಮಾಡುತಾವರೆ.. ಆದರ ಸಿವ ಕಣ್ಣು ತಗಿತಾಯಿಲ್ಲ.. ಸಾಂಬವಿಯ ಝಳ ಯಿಲ್ಲೆಲ್ಲ ತಗುಲಿದಂಗಿರುವುದು.. ತಾಯಿ ನೆಲ ಬಿಟ್ಟು ಯೇಳುವವರೆಗೆ ಯಾರೊಬ್ಬರೂ ಮಾವುಸವನ್ನು ಕಣಸು ಮಣಸಿನಲ್ಲೂ ನೆನೆಯಕೂಡದೆಂದು ಪಟ್ಟಣಸ್ವಾಮಿಗಳು ಹಾಕಿಸಿದ ಟಾಮುಟಾಮನು ಬಲಗಿವೀಲಿ ಕೇಳಿ ಯಡಗಿವಿ ದ್ವಾರ ವದಲಿದ್ದರು.

ವಂದೊಂದು ಪಕ್ಷಿಯನ್ನು ಗ್ನಾಪಿಸಿಕೊಂಡಾಗಲೆಲ್ಲ ನಾಲಿಗೆ ಮ್ಯಾಲ ಸುಟು ಸುಟು ಕಡುತ.. ಬಿಲ್ಲು ಹಿಡಕೊಂಡಿರುವ ಕಯ್ಯ ಬೆರಳುಗಳಲ್ಲೊಂದು ನಮೂನಿ ಠೆವ್ವ ಠೆವ್ವ ಕಡುತ.. ಹೆಜ್ಜೆ ಹೆಜ್ಜೆಗೊಂದೊಂದು ಹಿಡಿ ಹಿಡಿ ಜೊಲ್ಲು ಚೆಲ್ಲಾಡುತ ಅಲೆಯಲಕ ಹತ್ತಿರುವರು ಆ ಜಾನುಮಲೆ ಅಡವಿಯೊಳಗ.. ವಂದೊಂದು ಪ್ರಾಣಿಯೂ ಅಹಿಮುಸಾ ರೊತವನ್ನು ತಾಯಿ ಸಲುವಾಗಿ ನಿಷೆ«ಯಿಂದ ಪರಿಪಾಲನೆ ಮಾಡುತಲಿದ್ದ ಜಾನುಮಲೆ ಅಡವಿಯೊಳಗ.. ಅಲೆದಲೆದು ಸುಸ್ತಾದ ಅವರು ರೋಸಿ ತಾವಿನ್ನೇನು ಬಿಲ್ಲನ್ನೊಂದು ಕಡೇಕ, ಬಾಣವನ್ನೊಂದು ಕಡೆ ವತಾ ವಗೆದು ತಾವಿನ್ನು ಮುಂದೆ ಬೇಟೆ ಆಡುವುದಿಲ್ಲ ಯಂದ ಘನ ಘೋರ ಸಪಥ ಮಾಡಬೇಕೆನ್ನುವಷ್ಟರಲ್ಲಿ...

ಅಚ್ಚವ್ವನ ಮೊಲೆಯಂಬ ದಿಬ್ಬದ ಮ್ಯಾಲ ತೊಟ್ಟಿನಂಗೆ ಕೂಕಂಡಿದ್ದ ಗಾಳಯ್ಯನು ರೆಪ್ಪೆ ಕಿರಿದು ಮಾಡಿ ನೋಡುತ್ತಿರುವಾಗ ಮೂಡಲಪಾಳಯದಲ್ಲಿ ಸಾಸುವೆ ಗಾತುರದ ಪಕ್ಷಿಯೊಂದು ಬರುಬರುತಾ ದೊಡ್ಡದಾಗುತಾ ಬಂತು. ಅದು ಯಾದೆಂಬುದು ಆ ಕೂಡಲೆ ಮನವರಿಕೆ ಆಗಲಿಲ್ಲ.. ಸೂರ್‍ಯಾಮನ ಕಿರಣಗಳು ಚೂರಿಯಂತೆ ಕಣ್ಣಿಗೆ ಯಿರಿಯುತಲಿದ್ದುದೇ ಅದಕ್ಕೆ ಕಾರಣ.. ಬೀಳಾ ಪಾಳಾ ಯಂದು ಕೂಗಿ ಕರೆದು ಬೊಟ್ಟು ಮಾಡಿ ತೋರಿಸಿದ. ಹೊ ಹೋಯ್.. ಪಾರಿವಾಳ.. ಹಾ.. ಹಾಯ್ ಪಾರಿವಾಳ.. ಸೊರಗ ಲೋಕದಿಂದ ವಡಮೂಡಿ ವುದುರಿದಂಗಯ್ತೆ.. ಯೇಸು ದಿನಾದುಮೋ ಅದರ ಮಾವುಸವ ನೆಂಜಿಕೊಳ್ಳದೆ.. ಯಾರೇ ಹೊಡೆಯಲಿ.. ತಾವು ಮುವ್ವರು ತಲಾಕೊಂಚೊಂಚೂರು ಪಾಲನು ಹಂಚಿಕೋಬೇಕು.. ಯಾವ ಕಾರಣಕ್ಕೂ ಸಿಕ್ಕವರಿಗೆ ಸಿವಲಿಂಗ ಅನಲೇ ಕೂಡದು.. ತಮಗ ತಾವೇ ಪಂಚಾತಿ ಮಾಡಿ ವಂದು ನಿರ್ಣಯಕ್ಕ ಬಂದರು..

ಅರೆಗಳಿಗೆ ತರುವಾಯ ವಂದು ಪವಾಡ ಜರುಗಿತು.. ಅದೆಂದರ.. ಬಿಲ್ಲನು ಯತ್ತಲಕ ಆಸುಪದ ಕೊಡದೆ.. ಬಾಣ ಹೂಡಿ ಬಿಡಲಕ ಆಸುಪದ ಕೊಡದೆ.. ಕೇವಲ ಗಾಳಯ್ಯನು ಕವುಸಿಕ ಮುನಿಯೋಪಾದಿಯಲ್ಲಿ ದುರುಗುಟ್ಟಿ ನೋಡಿದೇಟಿಗೆ ಅದು ಮುಗುಲ ಕಡೇಲಿಂದ ಸುಯ್ಯಂತ ಸುರುಗಿ ಅವರ ಸಮಚ್ಛಮ ವುಪಸ್ಥಿತವಾಯಿತು. ಅದರ ನೋಟಮೋ.. ಅದರ ಗುಕು ಗುಕು ಸೊರಮೋ! ದೇವದಾನವರ ಪಯ್ಕಿ ಯಾರೋ ವಬ್ಬರು ಯಿದರ ರೂಪದಲ್ಲಿ ಬಂದಿರಭೌದೆಂದು ಹೆದರಿ ಅವರು ಹಿಂದಕ ಜರುಗಲು ಅದು ಮುಂದ ಮುಂದಕ ಬಂತು. ತಮಗ ಯೇನೋ ಹೇಳುವ ಪ್ರಯತ್ನ ಮಾಡುತಲಿದ್ದಂಗಯ್ತೆ ಯಿದು ಯಂದು ತೀಕ್ಷ್ಣವಾಗಿ ನೋಡುತ್ತಾರೆ.. ಅದರ ಕಾಲಬುಡದಲ್ಲೊಂದು ಜಾಬು ಯಿತ್ತು. ಅದರೊಟ್ಟಿಗೆ ಅದು ವಾಲೇಕಾರ ಪಾಮುಲಯ್ಯನ ಸೊತ್ತೆಂದು ಮನವರಿಕೆ ಆತು. ಯಿದು ಯೇಸು ಯೋಜನ ದೂರದಿಂದ ಹಾರಕೋತ ಬಂದಿರುವುದೇನೋ.. ರೆಕ್ಕೆಗಳಿಗೆ ದಣುವು ಆಗಿರಬೌದು. ತಮ್ಮನ್ನು ಅಹಿಂಸಾವಾದಿಗಳೆಂದು ಭಾವಿಸಿ ಯಿಳದಂಗಯ್ತೆ. ಅದು ತಮ್ಮ ಮ್ಯಾಲ ಯಿಟ್ಟಿರುವ ನಂಬುಕೆಯನ್ನು ತಾವು ವುಳುಸಿಕೊಳ್ಳಬೇಕಿರುವುದು.. ಜಾಗ್ರುತಗೊಂಡ ಅವರು....

ಪಾಮುಲಯ್ಯ ಪಾರಿವಾಳವನ್ನು ಕಯ್ಯಿಗೆ ಪಡಿತಾ ತ್ರಿವಳಿ ಸಹೋದರರಿಗೆ ನಗದು ನೀಡಿ ಸನ್ಮಾನಿಸಿದ್ದು ತಡ ಆಗಲಿಲ್ಲ. ಜಾಬಿನೊಳಗಿದ್ದ ಸಂಕೇತಗಳನ್ನು

ಅರ್ಥಮಾಡಿಕೊಂಡು ಪಟ್ಟಣದ ನಾಲ್ದೆಸೆಗೆ ಬಿತ್ತಿದ್ದ ತಡ ಆಗಲಿಲ್ಲ.. ಅರಗಳಿಗೆ ವಳಗ ಸಮಸ್ತ ಪಟ್ಟಣವು ಹಂಪಜ್ಜ ಯಂಬ ಪದ ಪುಂಜಕ್ಕೆ ಹೊಸ ಯಾಖ್ಯಾನ ಬರೆಯಲಕ ತೊಡಗಿದ ಪರಿಣಾಮವಾಗಿ ಸಡಗರ, ಕುತೂಹಲ, ರೋಮಾಂಚನಗಳೇ ಮೊದಲಾದ ಸಂಯೋದನೆಗಳು ಅಂಗಲಂಗುಲಕ್ಕೊಂದೊಂದರಂತೆ ಹುಟ್ಟಿಕೊಂಡು ಬಿಟ್ಟವು.. ವಬ್ಬರಿಬ್ಬರಾಗಿ, ಯಿಬ್ಬರು ನಾಕು ಮಂದಿಯಾಗಿ.. ನಾಕು ಮಂದಿ ಹದಿನಾರು ಮಂದಿಯಾಗಿ ಮೂಡಲ ಕಡೇಲಕಿದ್ದ ಡೊಳ್ಳಯ್ಯನಗಸೇ ಬಾಗಿಲ ಕಡೆ ಹರಿದು ಜಮಾವಣೆಗೊಳ್ಳತೊಡಗಿದರು. ಆ ಹೊತ್ತಿಗಾಗಲೇ ಹಂಪಜ್ಜನ ಬಗ್ಗೆ ಹುಟ್ಟಿಕೊಂಡಿದ್ದ ನೂರಾರು ಕಥೆಗಳ ಸ್ರವಣ ಕರುಮವೇ ಅದಕ್ಕೆ ಕಾರಣ.. ಪಟ್ಟಣದಾದ್ಯಂತ ಸಿವನ್ನಾಮ ಪಾರೋತಿ ಪತಿ ಹರಹರ ಮಾದೇವ.... ಮುಗುಲು ಮುಟ್ಟಿಬಿಟ್ಟಿತು. ಹತ್ತು ಕಡೇಲಿಂದ ಹತ್ತು ನಮೂನಿ ವಾದ್ಯಗಳ ನಾದದ ನೆರೆ ಬಂತು. ಯೀ ನಸ್ಸೂರ ಪರಪಂಚದೊಳಗ ತಮ್ಮೋಟು ವಯಸ್ಸಾಗಿರೋರು ಯಿನ್ನೊಬ್ಬರಿರಲಿಕ್ಕಿಲ್ಲ ಯಂದು ಬೀಗುತಲಿದ್ದ ಬಯ್ಯವ್ವ... ಬಯಲವ್ವ, ತೊಂಬಲವ್ವ, ಕಾಳಗಯ್ಯ, ನಗಾರಯ್ಯರೇ ಮೊದಲಾದ ನೂರಾರು ಮಂದಿ ಮುಪ್ಪಾನು ಮುದೇರು ನಾಮುಂದು, ತಾಮುಂದು ಅಂತ ಪಯಿಪೋಟಿಗೆ ಬಿದ್ದು ನಡಕೋತ ನಡಕೋತ ಬಂದು ಅಗಸೆ ಬಾಕಲ ಮುಂದಿದ್ದ ಬಯಲು ತುಂಬೆಲ್ಲ ಅಲಂಕ್ರುತರಾದರು, ಸಿಪ್ಪಗಿರಿಯ ಮ್ಯಾಲ ನಡೆದ ನಿರ್ಣಾಯಕ ಕಾಳಗದಲ್ಲಿ ಜಯ ಸಾಧಿಸಿದ ಸವಿ ನೆನಪಿಗಾಗಿ ಹಿರೇ ಮುದೆಪ್ಪನಾಯಕನು ಯಿಜಯೋತ್ಸವ ಆಚರಿಸಿದ್ದಂಥ ಬಯಲು ಅದಾಗಿತ್ತು, ಡೊಳ್ಳಯ್ಯನೆಂಬ ಪರಾಕ್ರಮಿ ಸವುರ್ಯ ಮೆರೆದು ಬಲಿಗೊಂಡಿದ್ದಂಥ ಬಯಲು ಅದಾಗಿತ್ತು, ನೂರಾರು ವರುಷಗಳ ಪೂರುವದಲ್ಲಿ ಸಾಯಿರಾರು ಮಂದಿ ರಣ ಕೇಕೆ ಹಾಕುತ ಕುಣಿದು ಕುಪ್ಪಳಿಸಿದ್ದಂಥ ಬಯಲು ಅದಾಗಿತ್ತು, ಆ ಬಯಲು ತುಂಬೆಲ್ಲ ಸಾಯಿರಾರು ಮಂದಿ ತಮ ತಮ್ಮ ಕಣ್ಣೊಳಗ ಯಣ್ಣೆ ಬಿಟುಕೊಂಡು ಯೀಗ ಬರುತಾನ.. ಆಗ ಬರುತಾನ ಯಂದು ಕಾಯಲಕ ಹತ್ಯಾರ ಸಿವನೇ.. ಸೂರ್ಯಪರಮಾತುಮ ಬಿಸಿಲ ಸುಗ್ಗಿಯನ್ನು ಘನುವಾಗಿಯೇ ನಡೆಸಿದ್ದ ಮಟ ಮಟ ಮದ್ಯಾಣದೊಳಗ. ಕಾವಳ ಕವಿದರ ಯಿರಲಂತ ನೂರಾರು ದೀವಟಿಗೆಗಳ ಹಿಡಕೊಂಡು ಸಜ್ಜಾಗಿ ನಿಂತವರೆ ಸಿವನೇ..

ಚಿಕ್ಕುಜ್ಜಣಿಯ ಸಿವರಾಮ ಸಾಸ್ತಿರಿಯು "ನೀನು ವಯಕುಂತ

ವಾಸಿಯಾಗುವ ಕಾಲ ದೂರಯಿಲ್ಲ ತಾಯೀ. ಮೂರು ತಿಂಗಳೊಳಗ ಕುಜ ಸಾಂತಿ ಮಾಡಿಸಿದಲ್ಲಿ ಅಮ್ಮಮ್ಮಾ ಅಂದರ ಆರು ತಿಂಗಳು ಬದುಕಿರುತ್ತೀ.. ಕಾಳಹಸ್ತೀಸ್ವರಂಗೆ ಪಂಚಾಂಬ್ರುತಾಭಿಸೇಕ ಮಾಡಿಸಿದಲ್ಲಿ ಅಮ್ಮಾಮ್ಮಾ ಅಂದರ ವಂಭತ್ತು ತಿಂಗಳು ಬದುಕಿರುತ್ತೀ.. ನವಗ್ರಹ ಸಾಂತಿ ಮಾಡಿಸಿದಲ್ಲಿ ಅಮ್ಮಾಮ್ಮಾ ಅಂದರ ವರುಷೊಪ್ಪತ್ತು ಬದುಕಿರುತ್ತೀ.. ಸಾವುರದಾವಂದು ಬ್ರಾಮ್ಮಣರಿಗೆ ಸೊರ್ಣದಾನ ಮಾಡಿಸಿದಲ್ಲಿ ಅಮ್ಮಮ್ಮಾ ಅಂದರ ಅಯ್ದು ವರುಷಗಳ ಕಾಲ ಬದುಕಿರುತ್ತೀ.. ಯಾವುದನಾಯ್ಕೆ ಮಾಡ್ಕೋತೀಯಾ?" ಯಂದು ಮುಂಜಾನೆ ಹೇಳಿದ್ದ ನಿಗಿನಿಗಿ ವುರಿಯುತಲಿದ್ದ ಮಾತುಗಳನ್ನು ಯದೆಯೊಳಗಿಟ್ಟುಕೊಂಡೇ ಅಲ್ಲಿಗೆ ಬಂದು ಬಿಕೋ ಅನುತ ನಿಂತಿದ್ದ ರಾಜಮಾತೆ ಭಯ್ರಮಾಂಬೆಯ ಕಡೇಕ ಯಾರೊಬ್ಬರೂ ನೋಡಿಯೂ ನೋಡದವರಂಗ ಯಿದ್ದರು ಸಿವನೇ.. ಮಂದಿ ತಮಗ ತಾವs ಬೇಯುತ್ತ, ಬೆಮರು ಚೆಲ್ಲುತ್ತ ನಿತ್ರಾಣವಾಗುತಲಿದ್ದರು ಸಿವನೇ... ಹಂಪಜ್ಜನ ಬರುವಿಕೆಗಾಗಿ ಯದುರು ನೋಡೀ ನೋಡೀ ಮಂದಿಯ ರಾಸಿರಾಸಿ ಕಣ್ಣುಗಳಿಗೆ ಬ್ಯಾನೆ ತಗುಲಿತು ಸಿವನೇ.. ಕುಂತವರ ಕುಂಡಿ ಮರಗಟ್ಟಿತು ಸಿವನೇ.. ನಿಂತವರ ಕಾಲು ಜಡ್ಡುಗಟ್ಟಿತು ಸಿವನೇ.. ಆದರೂ ಸಜೀವ ಸಮಾಧಿ ಆಗಲಿರುವವರಂತೆ ನಿಷೆ«ಯಿಂದ ಕಾಯುತಲಿದ್ದರು ಸಿವನೇ..

ಹೊತ್ತಿಗೆ ಕರುಣೆ ಬಂದು ನೆತ್ತಿಯಿಂದ ಪಡುವಣದ ಕಡೆ ವಾಲಿತು. ಅಗೋ ಆಟು ದೂರದಲ್ಲಿ ಕೆಂಧೂಳು ಕಾಣಿಸಿಕೊಂಡಿತು.. ಕಾಣಿಸಿಕೊಂಡ ಕೆಂಧೂಳೊಳಗಿಂದ ಖುರಪುಟಗಳ ಸದ್ದು ಕೇಳಿ ಬಂತು. ಅದರೊಟ್ಟಿಗೆ ಸಾರೋಟು ಕೆಂಧೂಳೊಳಗಿಂದ ಅನಾವರಣವಾಯಿತು.. ಅನಾವರಣಗೊಂಡಂಥ ಸಾರೋಟಿನ ತುದಿ ವ್ಯಾಲ ಮುತ್ತಯ್ದೆತನದ ಸಂಕೇತವಾದ ಹಳದಿ ಕುಂಕುಮವರಣದ ದೊಜ ಹಾರಾಡುತ್ತಿರುವುದು ಕಾಣ ಬಂತು.. ವಾದ್ಯಗಳ ನಾದ ಪ್ರವಾಹ ಹರಿಯಲಾರಂಭಿಸಿದೊಡನೆ, ಜನ ಸಾಗರವು ಸಿವನ್ನಾಮ ಪಾರೋತೀ ಯಂದು ಜಯಘೋಷ ಮಾಡಲಾರಂಭಿಸಿದೊಡನೆ, ವುಧೋ ವುಧೋ ಯಂಬ ನಿನಾದ ಮುಗುಲಿಗೆ ಮುಟ್ಟಿದೊಡನೆ, ಅಳ್ಳಾಡುತ ಅಳ್ಳಾಡುತ ಬಂದು ನಿಂತ ಸಾರೋಟೊಳಗಿಂದ... ಯಂಬಲ್ಲಿಗೆ ಸಿವಸಂಕರ ಮಾದೇವಾ...

ಬೋಸಯ್ಯ ತನ್ನ ಸಂಗಡಿಗರು ವಬ್ಬೊಬ್ಬರಾಗಿ ಯಿಳದದ್ದಾತು.. ನಾಕು ಗಾಲಿಗಳ ಕೀಲು ಸಂದುಗಳೊಳಗಿಂದ ಕೀರಕು ಕೀರುಕ ಯಂಬ ವುಧೋ ವುಧೋಕ್ಕ ಸಮನಾದ ನಾದವು ಹೊರ ಹೊಂಟು ಬಯುಲೊಳಗ

ಅಂತರ್ಧಾನವಾದದ್ದಾಯಿತು. ಸಾವಿರಾರು ಮಂದಿಯ ಕಣ್ಣುಗಳ ಗೂಡುಗಳಿಂದ ನೋಟಗಳೆಂಬುವ ಗೀಜಗಗಳು ಪುರ್‍ರಂತ ಹಾರಿ ಬಂದು ಸಾರೋಟೊಳಗೆ ರೋಮ ಯಂಬ ಮಾರುದ್ದಗಲದ ಹುತ್ತದೊಳಗ ಮಾಯಾದ ನಿದ್ದೆಗೆ ಬಲಿಯಾಗಿದ್ದ ಹಂಪಜ್ಜನ ಮ್ಯಾಲ ಕೂಕಂಡವು. ಗೊಂಜಾಡರಲಡವಯ್ಯ, ಜಡೆತಾತಪ್ಪಂದಿರೇ ಮೊದಲಾದ ತ್ರಿಷಷ್ಟಿ ಪುರಾತನರ ಮುಖಂಡತ್ವ ವಹಿಸಿದ ಕಾಡುಗೊಲ್ಲರೀರಯ್ಯನು ಮೆಲ್ಲಗೆ ಮುಂದ ಮುಂದಕ ಬಂದು ವಂದು ಕಾಲನ್ನು ಯೇರು ಕೋಲ ಮ್ಯಾಲಿಟ್ಟು ಹತ್ತಿ ಸಿವಧನಸ್ಸಿನಂತೆ ಬಾಗಿ ರೋಮರಾಜಿಯನ್ನು ಹಿಂದಕ್ಕ ಸರಿಸಿ ಹೊ ಹೋ ಅವನೇ ಯಿವನೆಂದು ಗುರುತಿಸಿ “ಹಂಪಜ್ಜಾss ಅಣಾs ಹಂಪಜ್ಜಾsss” ಯಂದು ಪಲುಕಿದ.. ಸತಮಾನ ಮೊತ್ತದ ನಿದ್ದೆಯನ್ನು ವಂದೇ ಯೇಟಿಗೆ ಮಾಡುತಲಿದ್ದಾತನು ಕಣ್ಣು ಬಿಟ್ಟು ಕ್ರುಪಾದ್ರುಸ್ಟಿ ಬೀರಲಿಲ್ಲ.. ಭುಜ ಹಿಡಿದು ಆ ಮೇರೋ ಪರವತವನ್ನು ಮಿಸುಕಾಡಿಸಲು ಪ್ರಯತ್ನಿಸಿದ. ಆದರವಯ್ಯನು ಯಚ್ಚರಾಗಲಿಲ್ಲ.. ಹ್ಹಾ.. ಹ್ಹಾ.. ಯಾಕ ಯಚ್ಚರಾಗುತಾಯಿಲ್ಲ.. ಜನರು ಗೀಜಗಗಳನ್ನು ವುಪಸಮ್ಮರಿಕೊಂಡು ಕುಸುಮಾಸ್ತರಗಳನ್ನು ಕಣ್ಣಿಂದ ಬಿಟ್ಟರು.. ಆದರೂ ಯಚ್ಚರಾಗಲಿಲ್ಲ.. ಬಿಸಿವುಸುರು ನಿಟ್ಟುಸಿರುಗಳ ಮಳೆಗರೆದರು.. ಆದರೂ ಯಚ್ಚರಾಗಲಿಲ್ಲ.. ದಾರೀಲಿ ಬರುವಾಗ್ಗೆ, ಭೂತ ಪ್ರೇತ ಪಿಚಾಚಿ ಬೆಂತರುಗಳ ಕೆಟ್ಟ ದ್ರುಸ್ಟಿ ತಾಕಿದ್ದಿರಭೌದೆಂದು ಭಾವಿಸಿ ನೀವಳಿಸಿ ತೆಗೆದರಾದರೂ, ಚುಟುಗಿ ಹಾಕಿದರಾದರೂ ಯಚ್ಚರಾಗಲಿಲ್ಲ.. ಕವಳೆಪ್ಪ ಕಿವಿಯೊಳಗ ಕಹಳೆಯಿಟ್ಟು ಮೊದಿದರೂ, ದ್ಯಾವಮ್ಮ ಚವುಡಿಕೆ ಭಾರಿಸಿದರೂ ಆತ ಯಚ್ಚರಾಗಿ ಕಣ್ಣು ಬಿಟ್ಟು ಪಿಳುಪಿಳಿ ನೋಡಲಿಲ್ಲ.. ಕಯ್ಗೆ ಬಂದ ತುತ್ತು ಬಾಯಿಗೆ ಯಟಕುವ ಪರಿಯೆಂತು? ಆತ ಯಚ್ಚರಾಗುವ ಪರಿಯೆಂತು? ಆತನನ್ನು ಯಚ್ಚರಮಾಡುವ ಪರಿಯಂತು? ತ್ರಿಲೋಕ ಸಂಚಾರ ಕಯ್ಕೊಂಡಿರಬೌದಾದ ಆತನ ಆತುಮವು ಮತ್ತೆ ತನ್ನ ಕಾಯ ಯಂಬ ಕದಳಿಯನ್ನು ಸೇರುವಂತೆ ಮಾಡುವ ಪರಿಯಂತು?

“ನೋಡಿರಯ್ಯಾ ನೋಡಿರಿ ನರಹುಳುಗಳಾ, ಪುರಾತನರ ಪಯ್ಕಿ ಪುರಾತನಾಗಿರುವ ಹಂಪಜ್ಜನನು.. ಕೇಳಿರಯ್ಯಾ ಕೇಳಿರಿ ನರಹುಳುಗಳಾ.. ಹಂಪಜ್ಜ ವುಸುರಾಡುವ ಪರಿಯ.. ಯೀವಯ್ಯನ ಮಯ್ಯೊಳಗ ಗವುರಸಂದ್ರಮಾರೆಮ್ಮ ತಾಯಿ ವಸ್ತಿ ಮಾಡಿದಂಗವಳೆ.. ಮುಂದೆ ಜರುಗಲಿರುವ ಮಂಗಳ ಕಾರ್‍ಯೆವುಗಳು ಸುಸೂತ್ರವಾಗಿ ನಡೆಸುವ ಸಲುವಾಗಿ, ತನ್ನ ಸಿಸುಮಗನನ್ನು ಅವಧೂತ ಪಟ್ಟಕ್ಕೇರಿಸುವ ಸಲುವಾಗಿ, ತನ್ನ ಸಿಸುಮಗನ ಪಂಚೇಂದ್ರಿಯಂಗಳ ಮೂಲಕ

ನರ ಕೋಟಿಯ ಯಿದ್ಯಾಮಾನಂಗಳನ್ನು ಅರಿಯುವ ಸಲುವಾಗಿ, ಮತ್ತಿನ್ನೆಷ್ಟೋ ಕಾರಣಗಳ ಸಲುವಾಗಿ ಯಿಸ್ರಾಂತಿ ಪಡೀತಿದ್ದಂಗವಳೆ.. ತನಗ ತಾನss ಯಚ್ಚರಾಗುವ ಪರ್ಯಂತರ ಯಲ್ಡು ವುಸುರಾಡೋರು ವಂದು ವುಸುರಾಡಿರಿ.. ವಂದು ವುಸುರಾಡೋರು ಅರ್ದ ವುಸುರಾಡಿರಿ.. ಹುಷಾರ್..." ಕಾಡುಗೊಲ್ಲರೀರಯ್ಯನ ಸರೀರವು ತನ್ನಟಗ ತಾನೆ ನುಡಿಯುತ್ತಲೆ ಮವುನ ಸಾಮುರಾಜ್ಯದ ಸ್ಥಾಪನೆಗೊಂಡಿತು ಯಂಬಲ್ಲಿಗೆ ಸಿವಸಂಕರ ಮಾದೇವss..

* * * *

ಅರಿಕೆ ಮಾಡೋದು ಮಾಡಿ ತನ್ನ ಜೀವಮಾನದಲ್ಲಿ ಮೊಟ್ಟಮೊದಲ ಬಾರಿಗೆ ತಲೆಬಗ್ಗಿಸಿ ಕುಂಬಳಕಾಯಿ ನಿಮ್ದು, ಕುಡುಕೋಲು ನಿಮ್ದು.. ಯೇನಾರರ ಮಾಡಿಕೊಳ್ಳಿ ಯಂಬಂತೆ ನಿಂತಿದ್ದ ಹೆನ್ನಿಯತ್ತ ತೀಕ್ಷ್ಣದ್ರುಸ್ಟಿ ಬೀರಿದ ಥಾಮಸು ಮನ್ರೋ ಸಾಹೇಬನು 'ಆಲ್ ರಯ್ಟು' ಅಂದನು. ಅವನು ಹೇಳಿದ್ದರಲ್ಲಿ ಯಿಚಿತ್ರಸತ್ಯಾಂಸವು ಅಡಗಿದಂಗಿರುವುದು.. ಬೊಬ್ಬಿಲಿನಾಗಿರೆಡ್ಡಿ ತಾನು ದಯವಾಂಸ ಸಂಭೂತನೆಂಬುದನ್ನೂ, ತಾನು ಅಜೇಯನೆಂಬುದನ್ನೂ ಪವಾಡ ಸದ್ರುಸ ರೂಪದಲ್ಲಿ ಸಾಬೀತು ಮಾಡಿರುವನು. ತನ್ಮೂಲಕ ತನ್ನ ಜನಪ್ರಿಯತೆಯನ್ನು ನೂರ್ಮಡಿಗೊಳಿಸಿಕೊಂಡಿರುವನು. ಬಿರುಗಾಳಿ ಸದ್ರುಸದ ಅವನನ್ನು ಹಿಡಿಯುವುದು ಹೇಗೆಂಬುದರ ಬಗ್ಗೆ ಮನ್ರೋ ತನ್ನ ಹತ್ತಾರುಮಂದಿ ಅಧಿಕಾರಿಗಳೊಡನೆ ಚಿಂತನ-ಮಂಥನ ನಡೆಸಿದನು. ಅವನ ಬಗ್ಗೆ ಅನುಕಂಪ ಹೊಂದಿದವರನ್ನು, ಅವನ ಹಿತಯ್ಸಿಗಳನ್ನು ನೂರಾರು ಸಂಖ್ಯೆಯಲ್ಲಿ ಬೇಟೆಯಾಡಿದಲ್ಲಿ ರೆಡ್ಡಿಯು ಸರಣಾಗತನಾಗಭೌದೆಂದು ಅಧಿಕಾರಿಗಳು ವುಂಡಾಗುತ್ತಿಗೆ ಅಭಿಪ್ರಾಯವನ್ನು ಯಕ್ತಪಡಿಸಿದರು. ಮನ್ರೋಗೆ ಸಿಟ್ಟು ಬಾರದಿರಲಿಲ್ಲ ಅವರ ಅಗ್ನಾನ ಕಂಡು.. ಸಮಸ್ತ ಯಿಂಡಿಯಾವನ್ನು ಕುಂಪಣಿ ಸರಕಾರ ಜಯಿಸಿರುವುದೆಂದು ಭಾವಿಸಿರುವ ಯಿವರನ್ನು ಸ್ಕವಂಡರಲ್ಲು.. ಯಂದು ಬಯ್ಯುವುದೋ, ರ‍್ಯಾಸ್ಕಲ್ಸು ಯಂದು ಬಯ್ಯುವುದೋ ಅಥವಾ ಯೂಜ್‌ಲೇಸ್ ಪೆಲೋಸೂ ಯಂದಾರ ಬಯ್ಯುವುದೋ, ಜನರು ಕೋವಿಗೆ ತಗುಲಿ ವುರುಳುರುಳಿ ಬೀಳುವುದನ್ನು ನೋಡಲು ತುದಿಗಾಲಲ್ಲಿ ನಿಂತಿರುವರು. ರುಥಾ ಮಾಡದೆ ಗುಂತಕಲ್ಲು ಸೀಮೆಯ ಮನೋ ಸಾಮುರಾಜ್ಯಕೊಡೆಯನಾಗಿರುವ ಬೊಬ್ಬಿಲಿನಾಗಿರೆಡ್ಡಿಯ ವಂದೇ ವಂದು ಹನಿ ರಗುತವನ್ನು ರುಥಾ ಮಾಡಿರುವುದುಂಟಾ? ತಮ್ಮವರು ಮನಪರಿವರ್ತನೆಗೊಂಡು ಮುನುಸೋಬಯ್ಯನ

ದಾರಿ ಹಿಡದಾರು ಯಂದು ಯಚ್ಚರಿಕೆ ವಹಿಸಿ ಅವುದೋ ಅಲ್ಲಮೋ ಯಂಬಂತೆ ರೆಡ್ಡಿಯನ್ನು ಕೊಂಡಾಡುತ ಅಪ್ಪಣೆ ಕೊಡಿಸಿದ ನೂರು ಮಾತುಗಳನ್ನು ನಾಕೇ ನಾಕು ಮಾತುಗಳಲ್ಲಿ ಕುಗ್ಗಿಸಿ ಹೇಳುವುದಾದರ....

ರೆಡ್ಡಿಯ ವುಪಟಳ ನಿವಾರಣಾರ್ಥವಾಗಿ ಯಿನ್ನೂ ಬೇರು ಬಿಡುತಲಿರುವ ಕುಂಪಣಿ ಸರಕಾರದ ಬೊಕ್ಕಸವು ಅರ್ಧಕ್ಕರ್ಧ ರುಥಾ ಆಗಿರುವುದು.. ಕೊಡಲಿಯನ್ನು ವುಪಯೋಗಿಸದೆ ಕೇವಲ ವುಗುರಿನಿಂದ ಕಾರ್‍ಯ ಸಾಧನೆ ಮಾಡುವುದು ಅವಶ್ಯವು. ರೆಡ್ಡಿಯನ್ನು ಹಿಡಿಯುಲಕೆಂದು ಯಲ್ಲೆಲ್ಲಿ ಸಿಪಾಯಿಗಳು ಕಾರ್‍ಯ ಪ್ರವೃತ್ತರಾಗಿರುವರೋ ಅವರನ್ನೆಲ್ಲ ಯೀ ಕೂಡಲೆ ಬಳ್ಳಾರಿ ರೆಜಿಮೆಂಟಿಗೆ ವಾಪಾಸು ಕರೆಯಿಸಿಕೊಳ್ಳಬೇಕು.. ಆಯಾ ಮೂರುಗಳ ಜಮೀಂದಾರರಿಗೆ ಅಸಂಗ್ರಹ ಬುದ್ಧಿಯಿಂದ ಯಿರಬೇಕೆಂದು ನಿರೂಪ ಕಳಿಸಬೇಕು, ಪೆತ್ತಂದಾರಿಕೆಯ ದವುರ್ಜನ್ಯ ಬಿಲ್‌ಕುಲ್ ಸಲ್ಲದು.. ತನ್ನ ಸರೀರವ ಸಡಲ ಬಿಡುತಾನ ರೆಡ್ಡಿ, ದುಷ್ಟರೆಲ್ಲ ಸಜ್ಜನರಾಗಿ ಪರಿವರ್ತನಗೊಂಡರೆಂದು ಹಿರಿ ಹಿರಿ ಹಿಗ್ಗುತಾನ ರೆಡ್ಡಿ.. ಜನರ ನಡುವೆ ಬಹಿರಂಗವಾಗಿ ಕಾಣಿಸಿಕೊಳ್ಳಲಕ ಸುರುವು ಮಾಡುತಾನ ರೆಡ್ಡಿ.. ಆಗ ಆತಗೆ ಕುಂಪಣಿ ಸರಕಾರದ ಸಂಗಾಟ ಮಾತುಕತೆಗೆ ಬರುವಂತೆ ಕೇಳಿಕೊಳ್ಳಬೇಕು. ಆ ಸಂದರ್ಭದಲ್ಲಿ ಆತನನ್ನು ಬಹುವಚನದಲ್ಲಿ ಶ್ಲಾಘಿಸುವುದನ್ನು ಮರೆಯಬಾರದು.. ಯಂದು ಮುಂತಾಗಿsss ..

ಅಲಲಾ ಯಂಬಂಥ ರುದಯಯಿದ್ರಾವಕ ಸುದ್ದಿಯು ಕಮಾಂಡರು ಥ್ಯಾಕರೆಯಿರುವ ಆದವಾನಿಯಿಂದ ಬಂತು. ಪ್ರಕ್ಷುಬ್ಧಗೊಂಡಿರುವಂಥಾ ಜನರಿಗೆ ಸಮಾಧಾನ ಹೇಳಲೋಸುಗ ಸರ್ ಬಿರುದಾಂಕಿತ ಥಾಮಸ್ ಮನ್ರೋ ಸಾಹೇಬನು ತೆರನೇಕಲ್ಲು ಕಡೇಕ ಬೀಳುಕೊಂಡು ಹೊರಟು ಹೋದೊಡನೆ ಯಿತ್ತ ಅಧಿಕಾರಿಗಳು ವಬ್ಬರ ಮುಖವನ್ನು ವಬ್ಬರು ನೋಡಿಕೊಳುತ ಪೆಚ್ಚಾದರು. ಕಲೆಕ್ಟರು ಸಾಹೇಬ ತನ್ನೊಂದು ಕಣ್ಣು, ತನ್ನೊಂದು ಕಿವಿಯನ್ನಲ್ಲಿ ಬಿಟ್ಟುಹೋಗಿರುವನೆಂಬುದು ನಿರ್ವಿವಾದವು.. ತಾವು ಸುಮ್ಮಕ ಕಯ್ನ ಕಟ್ಟಿ ಕುಂಡುರುವಂತಿಲ್ಲ.. ವಂದು ಜಾಮು ಮದ್ಯ ಸೇವನೆ ಮಾಡಿ ತಮ ತಮ್ಮ ಹೆಂಡರೊಂದಿಗೆ ವಂದು ಜಾವ ನಿದ್ದೆ ಮಾಡುವಂತಿಲ್ಲ.. ನಿಗದಿ ಸಮಯಕ್ಕನುಸಾರವಾಗಿ ತಾವು ಭೋಜನ ಮಾಡುವಂತಿಲ್ಲ.. ಯೇನಪ್ಪಾ ಕರುಮವಿದು? ಯಾವ ಪಾಪದ ಪ್ರಾಯಶ್ಚಿತ್ತ ಅನುಭವಿಸಲೋಸುಗ ತಾವು ಮೂಳಿಗಮಾನ್ಯ ಕುಂಪಣಿ ಸರಕಾರಕ್ಕೆ ಸೇರಿಕೊಂಡೆಮೋ ಸಿವನೆ.. ಹಿಂಗs

ತಮ್ಮನ್ನು ತಾವು ಹಳಿದುಕೊಳುತ ಯಾಮೊಬ್ಬ ಅಧಿಕಾರಿಯೂ ಸಮವಸ್ತ್ರ ಕಳಚಲಿಲ್ಲ.. ಸೆಕೆ ಸೆಕೆ ಕುಚ್ಚಿ ಅಂಗಾಲುಗಳಲ್ಲಿ ವುರಿ ಕಾಣಿಸಿಕೊಂಡಿದ್ದರೂ ದಡೇವು ತೂಕದ ಬೂಟುಗಳನ್ನು ವುದುರಿಸಲಿಲ್ಲ.. ತಾವೇ ತಲಾ ವಂದೊಂದು ದಿಕ್ಕನ್ನು ಹಂಚಿಕೊಂಡರು, ಆಯಾ ಮೂರುಗಳಲ್ಲಿದ್ದ ಸಾಂತಿಪಾಲನಾ ಪಡೆಗಳನ್ನು ಬಳ್ಳಾರಿ ರೆಜಿಮೆಂಟಿಗೆ ವಾಪಾಸು ಕರೆಯಿಸಿಕೊಂಡರು.. ನಿಮ ನಿಮ್ಮ ಕಯ್ನ ಸಡುಲ ಬಿಟ್ಟು ಬಡಬಗ್ಗರಿಗೆ ದಾನ ಮಾಡಬೇಕರಪ್ಪಾ ಯಂದು ಆಯಾ ಮೂರುಗಳ ಜಮೀಂದಾರ, ಗವುಡ, ಜಾಗೀರುದಾರ, ಪಟುವಾರಿಗಳಿಗೆ ಕಿವಿಮಾತ ಹೇಳಿದರು.. ತಮ ತಮ್ಮ ಹೆಂಡಂದಿರ ಕೊರಳ ಮಾಂಗಲ್ಯ ಭಾಗ್ಯ ವುಳಿಸುವ ಸಲುವಾಗಿ ದವುಳೇರೆಲ್ಲ ತಮ ತಮ್ಮ ಹಗೇವುಗಳನ್ನು ಹಾರು ಹೊಡೆದು ಕಾಳುಕಡಿ ಹಂಚಲಾರಂಭಿಸಿದರು.. ಸುಸ್ತಿದಾರರ ಬಡ್ಡಿ ಮಾಫು ಮಾಡಿದವರೆಷ್ಟೋ? ಸಾಲಪತ್ರ, ಕ್ರಯಪತ್ರಗಳನ್ನು ಯರಡೆರಡು ಭಾಗವಾಗಿ ಸೀಳಿ ಸಾಲಗಾರರಿಗೆ ವಾಪಾಸು ಮಾಡಿದವರೆಷ್ಟೋ..? ಪರನಾರಿ ಸೋದರರಾದವರೆಷ್ಟೋ? ಸತ್ಯ ಹರಿಶ್ಚಂದ್ರನ ಪದವಿಗೇರಿದವರೆಷ್ಟೋ?.. ಯಿದೇನಪಾ ಯಿದು!.. ಸಿವನ ಮಾಯೆಯಿಂದ ಹುಲಿ ಹುಲ್ಲು ತಿನ್ನಲುಬೌದು, ತೋಳ ಕುರಿಯೊಂದಿಗೆ ಆಟ ಆಡಬೌದು, ಮೊಲ ನಾಯಿಯನ್ನಟ್ಟಿಸಿಕೊಂಡು ಮೋಡಬೌದು.. ಆದರ ತಮ ಪ್ರಾಂತದ ಭೂಸ್ವಾಮಿಗಳು ಅಸಂಗ್ರಹ ಬುದ್ಧಿಯನ್ನು ಪ್ರಕಟಿಸುತ್ತಿರುವುದೆಂದರೇನು? ಯೇನೋ ಯಿದರಾಗ ಸಂಚು ಅಡಗಿದಂಗಯ್ತೆ.. ಮೋಸ ಅಡಗಿದಂಗಯ್ತೆ.. ಯಂದು ಅನುಮಾನಪಟಗಂತು ಮಂದಿ.. “ವದ್ದುದೊರಾ.. ವದ್ದುದೊರ” ಅನಕಂತಲೆ ಕೊಟ್ಟದ್ದನ ಹಿಸಗಂತು ಮಂದಿ.. ಕಡುಪು ಕೇಳಬೇಕಲ್ಲಾ.. ಬ್ರತುಕು ಕೇಳಬೇಕಲ್ಲ.. ಅದಕ್ಕ ಆದರೂ ದೊರಗಾರಿಕಿ ಜಯ್ ಅನಲಿಲ್ಲ.. ಅಯ್ಯೋ ನಮಕರುವೇ ಅಂತ ದೊರಲು ಬ್ಯಾಸರ ಮಾಡಿಕೊಂಡರು.. ಕುಂಪಣಿ ಸರಕಾರಕ್ಕೆ ಜಯ್ ಅನಲಿಲ್ಲ. ಸರಕಾರದ ಮಂದಿ ಬ್ಯಾಸರ ಮಾಡಕಂತು..

ವರ್ತಮಾನ ವಿನಿ ಬೊಬ್ಬಲಿ ನಾಗಿರೆಡ್ಡಿ ಗೋದಾರಿ ನದಿಗೆ ನೆರೆ ಬಂದಂತೆ ವುಬ್ಬಿದನು.. ತನ್ನ ಪ್ರಾಂತದ ದೊರೆಗಳಿಗೆ ಸದ್ಬುದ್ದಿ ಅಂತೂ ಬಂದಯ್ತಲ್ಲಾ...ತನ್ನ ಪ್ರಾಂತದ ಪ್ರಜೆಗಳು ಅಂತೂ ಸುಖವಾಗಿದ್ದಾರಲ್ಲಾ.. ಸದ್ಬುದ್ದಿ ಬಂದಿರುವ ದೊರೆಗಳನ್ನು ತಾನು ಅಭಿನಂದಿಸಬೇಕೆಂದು, ಸುಖವಾಗಿರುವ ತನ್ನ ಪ್ರಜೆಗಳನ್ನು ಕಣ್ತುಂಬ ನೋಡಬೇಕೆಂದು.. ಯಿದಕ್ಕೆಲ್ಲ ಕಾರಣೀಭೂತನಾದ

ಸ್ರೀಭೀಮಲಿಂಗೇಸ್ವರ ಸ್ವಾಮಿಗೆ ಯೀಡುಗಾಯಿ, ಜೋಡುಗಾಯಿ ಹೊಡೆಸಿ ವುದ್ದಂಡ ಪ್ರಣಾಮ ಸಲ್ಲಿಸಬೇಕೆಂದು ನಿಚ್ಚಯಿಸಿದ ನಾಗಿರೆಡ್ಡಿಯು ಹಗಲು ಹೊತ್ತಲ್ಲಿ ವಂದೊಂದು ಮೂರುಗಳಲ್ಲಿ ತಂಗಾಳಿಯಂತೆ ಸುಳಿದಾಡುತ ಜಮೀಂದಾರರ ಮನೆಗೆ ಹೋಗಿ ಯಿದೇ ಬುದ್ದೀನ ಮೊದಲೇ ತೋರಿಸಿದ್ದಲ್ಲಿ ತಾನ್ಯಾಕ ನಿಷು«ರ ಹೊತ್ತುಕೊಳ್ಳಬೇಕಾಗಿತಪ್ಪಾ ಯಂದು ಹೇಳುತ ಅಭಿನಂದಿಸಲಾರಂಭಿಸಿದನು. ಬಡಬಗ್ಗರ ತಲೆ, ಬೆನ್ನು ನೇವರಿಸಲಾರಂಭಿಸಿದನು. ಗಡೇಕಲ್ಲಿಗೆ ಮುದ್ದಾಂ ಹೋಗಿ ತನ್ನ ಯಿಷ್ಟದಯವಕ್ಕೆ ಹರಕೆ ಸಲ್ಲಿಸಿ ಗಳಗಳಾಂತ ಆನಂದಬಾಷ್ಪ ಸುರಿಸಿ ಅಭಿಸೇಕ ಮಾಡಿಸಿದನೆಂಬಲ್ಲಿಗೆ ಸಿವಸಂಕರ ಮಾದೇವಾ ss...

ಹ್ಹಾ.. ಹ್ಹಾ.. ಯಿನ್ನೇನು ನಾಗಿರೆಡ್ಡಿಯ ಸರೀರವನ್ನು ಸಡುಲ ಬಿಟ್ಟಿರುವನು.. ಯೀಗವಯ್ಯನ ಕಣ್ಣುಗಳಲ್ಲಿ ಗುಗ್ಗುಳಗಳಿಲ್ಲ.. ತುಪ್ಪದ್ದೀವಿಗೆಗಳು ಬೆಳುಗುತಾ ಅವೆ.. ಯೀಗವಯ್ಯನು ಮನಸೊಳಗ ಭಯೋತ್ಪಾದನಾ ಮಂತ್ರಯಿಲ್ಲ.. ಮಗು ಮಲಕ್ಕೊಂಡಿರೋ ತೊಟ್ಟುಲು ವಾಲಾಡುತಾ ಅದೆ.. ಯೀಗವಯ್ಯನು.. ಸಿವ ಸಿವಾ....

ಮಲಪನಗುಡಿ ಯಂಬ ಮೂರಲ್ಲಿದ್ದ ನಾಗಿರೆಡ್ಡಿಯನ್ನು ಹೆನ್ರಿಯೇ ಮುದ್ದಾಂ "ದೊರೆಯೇ ಬಡವರ ಬಂಧುವೇ.. ಅನಾಥ ರಕ್ಷಕನೇ" ಯಂದು ತರ್ಜುಮೆಗಾರರ ಸಾಯುದಿಂದ ಶ್ಲಾಘನೆ ಮಾಡುತ ಕಂಡನು. ನಾಗಿರೆಡ್ಡಿ ತಾನೆಂಥ ಕ್ರಾಂತಿಕಾರಿಯೆನಿಸಿದ್ದರೂ ಜನುಮತಹ ರೆಡ್ಡಿಯೇ. ನಾಕಾರು ಹೊಗಳಿಕೆ ಮಾತುಗಳಿಗೆ ತಾನು ಹಿಗ್ಗದಿದ್ದಾನೆಯೇ? ಸಾಕಷ್ಟು ವುಬ್ಬಿದ್ದನ್ನು ಗಮನಿಸಿದ ಹೆನ್ರಿಯು ಥಾಮಸು ಮನ್ರೋ ಸಾಹೇಬರು ತಮ್ಮೊಂದಿಗೆ ಸಹಭೋಜನ ಮಾಡಬೇಕೆಂಬ ಯಿಚ್ಚೆವುಳ್ಳವರಾಗಿರುವರೆಂದೂ, ಆ ಮೂಲಕ ಕುಂಪಣಿ ಸರಕಾರದೊಂದಿಗೆ ರಾಜಿ ಸಂಬಂಧೀ ಮಾತುಕತೆ ನಡೆಸಿ ಸಾಂತಿ ಸಂಧಾನ ಮಾಡಿಕೊಳ್ಳಬೇಕೆಂದೂ ಅರಕೆ ಮಾಡಿಕೊಂಡನು. ಮಗ್ಗುಲಿದ್ದ ಜೀವದ ಗೆಳೆಯ ಬಾಚಯ್ಯನು ತೊಡೆ ಸಿವುಟದಿದ್ದಲ್ಲಿ ರೆಡ್ಡಿ ಮತ್ತಷ್ಟು ವುಬ್ಬದಿರುತ್ತಿರಲಿಲ್ಲ. ರೆಡ್ಡಿಯ ಪರವಾಗಿ ಗೆಳೆಯನೇ ತರ್ಜುಮೆಗಾರನ ದ್ವಾರ ಯಿದರಾಗ ರಾಜಿ ಪ್ರಸಕ್ತಿ ಯೇನಯ್ತೆ..? ಯಲ್ಲಾರಿಗೂ ಬುದ್ದಿ ಬಂದಯ್ತೆಂದ ಮ್ಯಾಲ ರಾಜಿ ಮಾತುಕತೆ ಯಾಕ. ಕಲೆಕ್ಟರ ಸಾಹೇಬನೊಂದಿಗೆ ವುಣ್ಣುವುದ್ಯಾಕೆಂದು ಕಡ್ಡಿ ಮುರಿದಂತೆ ಜವಾಬು ನೀಡಿದನು. ಆಗಿದ್ದು ರೆಡ್ಡಿಯು ಮನ್ರೋ ಸಾಹೇಬ ಕರ್ನೂಲು

ಕಡೇಲಿಂದ ಬರಲಿ.. ಆ ಸಾಹೇಬ ಬಂದು ನಮ್ಮ ಗುಡಿಸೊಳಗೆ ಯೇಕಾಂಗಿಯಾಗಿ ವುಣ್ಣಲಿ.. ಯೇನಂತೀಯೋ ಗೆಳೆಯಾ?" ಯಂದು ಹೇಳಿದನಂಬಲ್ಲಿಗೆ..

ಅತ್ತ ಹರಪನಹಳ್ಳಿ ಪ್ರಾಂತದೊಳಗೆ ಅರಾಜಕತೆ ವುಂಟಾಗಿದ್ದ ಮೂರುಗಳ ಪ್ರಜೆಗಳನ್ನು ಯಲ್ಲಾಪ್ರಕೊರಚರಟ್ಟಿಯ ಚೋರಾಗ್ರೇಸರು ಅಲಾಯದವಾಗಿ ಭೆಟ್ಟಿಯಾಗಿ "ನಿಮ್ಮನಿಮ್ಮ ರಾಜರುಗಳಿಗಿಂತ ಯಷ್ಟೋ ಪಾಲು ವಾಸಿ ಅದೀವಿ.. ನಾವು ಮಾಡಿದ ಮತ್ತು ಮಾಡುತ್ತಿರುವ ಕಳುವು ಕಾರ್ಯೆವುಗಳಿಗೆ ವಂದು ನ್ಯಾಯವುಂಟು.. ವಂದು ಧರುಮವುಂಟು.. ನಾವು ಕಯ್ಲಾಗದೋರಿಗೆ ಸಾಯ ಮಾಡುತ ಬಂದೀವಿ.. ಅದಕ ನಿಮಗ ನಾವು ಸಾಯಾ ಮಾಡಬೇಕೆಂದದೀವಿ.. ನಮಗ ಯಾಕ ನೀವು ನಿಮ ನಿಮ್ಮ ಅರಮನೆಗಳನ್ನು ವಪ್ಪಿಸಬಾರದು.. ನಮ್ಮ ಆಡಳಿತ ನಿಮಗ ಸರಿ ಕಾಣಲಿಲ್ಲಾಂದರ ನಾವು ಬಿಟ್ಟು ಹೋಗಲಕ ಸಿದ್ಧ, ವಂದು ಅವಕಾಸ ಕೊಡಿರಿ ಯಿದರಾಗ ತಾರಾ ತಿಗಡಿ ಬಾರಾ ಯಿದ್ಯೆಯಿಲ್ಲ" ಯಂದು ಅಂಗಲಾಚುತಲಿದ್ದದ್ದು ಹಳೆಯ ಸಂಗತಿ. ಗುಂಡಗತ್ತಿ, ತುಂಬರಗುದ್ದಿ, ಚಿರಸ್ತಳ್ಳಿ ಗ್ರಾಮಸ್ಥರು ರಾಜರ ಯೇಸದ ಕಳ್ಳರಿಗಿಂತ ಕಳ್ಳರನ್ನೇ ರಾಜರನ್ನಾಗಿ ಮಾಡುವುದೇ ವಾಸಿಯಂದು ಯೋಚಿಸಿ 'ಆಗಲಿ ಕನರಪ್ಪಾ' ಯಂದು ವಪ್ಪಿದ ಪರಿಣಾಮವಾಗಿ ಲಾಗಯ್ಯನು ಗುಂಡಗತ್ತಿಯಯ ಸಿಮ್ಮಾಸನವನ್ನು ಲಾಗನಾಯಕ ಯಂಬ ಹೆಸರಿನಿಂದಲೂ, ಅಗುಳಯ್ಯನು ತುಂಬರ ಗುದ್ದಿಯ ಲಟಗೂ ಪುಟುಗೂ ಸಿಮ್ಮಾಸನವನ್ನು ಅಗುಳನಾಯಕ ಯಂಬ ಹೆಸರಿನಿಂದಲೂ, ಕನ್ನಯ್ಯನು ಚಿರಸ್ತಳ್ಳಿಯ ಸಿಲ ಸಿಲಾರೂಪಿ ಸಿಮ್ಮಾಸನವನ್ನು ಕನ್ನನಾಯಕ ಯಂಬ ಹೆಸರಿನಿಂದಲೂ ಅಲಂಕರಿಸಿದರೆಂಬಲ್ಲಿಗೆ..

ಗುಂಡಲಳ್ಳಿ, ಯಾಸಾಪ್ರ, ಕಣುವಳ್ಳಿಯ ಪ್ರಜೆಗಳು ವುಭಯ ಸಂಕಟವನ್ನು ಅನುಭವಿಸಿಯಾದ ಮ್ಯಾಲ "ಬ್ಯಾಡಿರಪ್ಪಾ ಬ್ಯಾಡಿರಿ" ಯಂದು ವಾಪಾಸು ಕಳಿಸಿದರು. 'ಭೂಗತಗೊಂಡು ತಮಗ ಕಿರುಕುಳ ಕೊಡುತಲಿರುವ ರಾಜರನ್ನು ಅಮೂಲಾಗ್ರವಾಗಿ ನಿಗ್ರಹ ಮಾಡಲು ಕುಂಪಣಿ ಸರಕಾರ ಸಹಾಯ ಸಯ್ನ ಪದ್ಧತಿ ಯೋಜನೆ'ಯ ನೆರವನ್ನು ಪಡೆಯಬೇಕೆಂದು ನಿರ್ಧರಿಸಿ ತಮ್ಮ ವಂದು ನಿಯೋಗವನ್ನು ಹರಪನಹಳ್ಳಿಯ ವುಸ್ತುವಾರಿ ನೋಡಿಕೊಳ್ಳುತಲಿರುವ ನಿಕೋಲಾಸ್ ಯಂಬ ಅಧಿಕಾರಿ ಬಳಿಗೆ ಕಳಿಸಿದರೆಂಬಲ್ಲಿಗೆ....

ಹನುಮಾಪ್ರ, ಕೆಂಚಿಕೆರೆ, ಹುಣುಸಳ್ಳಿಯ ಗ್ರಾಮಸ್ಥರನ್ನು ಕೆಲವು ಸಾಧು

ಸಂತರು, ಅವಧೂತರು ಧರುಮೋ ರಕ್ಷತಿ ರಕ್ಷೀಯೇತ್ ಯಂದು ಹೇಳುತ ತಡವಿಕೊಂಡು ಮಾನವರ ಸೇವೆಯೇ ಮಾಧವ ಸೇವೆ.. ಧರುಮಕ್ಕ ನೀವೆಲ್ಲ ಸರಣ ಹೋಗಿ.. ನಮಗss ರಾಜ್ಯಾಡಳಿತವನ್ನು ವಪ್ಪಿಸಿ, ನೆಮ್ಮದಿಯಿಂದ ಬಾಳಿರಿ ಯಂದು ಕಲೆ ಬಿದ್ದಿದ್ದರೆಂಬಲ್ಲಿಗೆ ಸಿವಸಂಕರ ಮಾದೇವಾss..

ಅತ್ತ ಕೂಡ್ಲಿಗಿ ಪಟ್ಟಣದೊಳಗ ಆದರ್ಸ ದಾಂಪತ್ಯ ಯೋಜನೆ ಮೊದಮೊದಲಿಗೆ ಫಲಕಾರಿ ಯಾದದ್ದುಂಟು.. ಕೊನೆ ಕೊನೀಕೆ ಯಿಫಲವಾಗಲಕ ಹತ್ತಿತ್ತು.. ಅದರ ರೂವಾರಿಯಾದ ರಾಯನು ಜೆನ್ನಿಫರಮ್ಮಗ ಮಾಡೋ ಯವಸ್ಥೆ ಮಾಡಿ ರಜೆ ಚೀಟಿ ಹಿಡಕೊಂಡು ಯಡ್ಡವರ್ಡನ ಬಳಿಗೆ ಹೋದೊಡನೆ ಆ ಸಾಹೇಬನು "ಯೇನರೀ ರಾಯರೇ.. ನೀವು ನಿಮ್ಮ ಗ್ರುಹಸ್ಥಾಸ್ರಮ ಧರುಮವನ್ನು ನಿರ್ಲಕ್ಷೆ ಮಾಡಿರುವುದು ಸರಿಯೇನು? ನೀವು ತಾಮಸ ಆಹಾರ ಸೇವನೆ ಮಾಡದವರಲ್ಲದಿದ್ದರೂ ತಾಮಸ ಸಂಬಂಧೀ ಯೋಚನೆಗಳನ್ನು ಯಶಸ್ವಿಯಾಗಿ ಮಾಡುತ್ತಿರುವಿರೆಂಬ ಆಪಾದನೆಗಳು ಕೇಳಿಬರುತ್ತಿರುವವಲ್ಲಾ.. ಸದ್ಯಕ ನಿಮ್ಮ ಆದರ್ಸ ದಾಂಪತ್ಯ ಯೋಜನೆಯನ್ನು ಸ್ಥಗಿತ ಮಾಡಬೇಕೆಂದಿರುವೆವು.. ಅದಕ ಮೊದಲು ನೀವು ನಿಮ್ಮ ಯಿವಾಹಿತ ಪತ್ನಿಯನ್ನು ಕರೆದುಕೊಂಡು ಬಂದು ಗ್ರುಹಸ್ಥರಾಗಬೇಕು" ಯಂದು ನಿರೂಪ ನುಡಿದನು. ಆತ ಹೇಳಿದ್ದರಲ್ಲಿ ಸುಳ್ಳು ಮಿಸ್ರಿತ ಸತ್ಯವುಂಟು.. ತಾನು ತನ್ನ ಕಣ್ಣುಗಳ ಮೂಲಕ, ಬಲಗಯ್ಯ ತುದಿ ಬೆರಳುಗಳ ಮೂಲಕ ಗ್ರುಹಸ್ಥ ಧರುಮವನ್ನು ವುಲ್ಲಂಘನೆ ಮಾಡಿರಬಹುದೇ ಹೊರತು... ವಾದ ಮಂಡಿಸಲಕಾಗದೆ ರಾಯನು ತನ್ನ ಮ್ಲಾನವದನ ಸಾರುವಜನಿಕವಾಗಿ ಕಾಣಬಾರದೆಂಬ ಹಿನ್ನೆಲೆಯಲ್ಲಿ ಫಲಾನ ದಿವಸದಂದು ಸೂರ್ಯೋದಯಕೂ ಪೂರುವದ ಬ್ರಾಮ್ಮೀ ಮೂರ್ತದ ಸಮಯದಲ್ಲಿ ಸದರಿ ಪಟ್ಟಣದಿಂದ ತನ್ನ ಪತ್ನಿಯಿದ್ದಂಥ ಫಲಾನ ಮೂರಿನ ಕಡೇಕ ಪಯಣ ಬೆಳೆಸಿದನೆಂಬಲ್ಲಿಗೆ..

ಯೀ ಸುದ್ದಿ ತಿಳಿದು ತಾಯಕ್ಕ ಅನಿರ್ವಚನೀಯವಾದ ಸಂಕಟವನ್ನು ಅನುಭವಿಸದೆಯಿರಲಿಲ್ಲ.. ಯಿವಾಹಿತನೂ, ಯೇದಸಾಸ್ತರ ಪಾರಂಗತನೂ, ರಾಜನೀತಿ ನಿಪುಣನೂ, ಯೋಗಧ್ಯಾನ ಪ್ರಾಮಾಯಾಮಗಳ ಸಾಧಕನೂ, ತೇಜಸ್ವಿಯೂ ಆದ ಅವಯ್ಯನ ಕುರಿತು ಯಾವುದ್ಯಾವುದೋ ಕನಸು ಕಂಡಿದ್ದಳು. ಸತ್ಕರಿಸುವಾಗ ಪರೀಕ್ಷಿಸಲೆಂದೇ ಸ್ಪರ್ಷಿಸುತ್ತಿದ್ದುದುಂಟು, ಅವನು ರೋಮಾಂಚನ ಗೊಳ್ಳುತ್ತಿದ್ದುದನ್ನು ನೋಡಿ ಪುಳಕಗೊಳ್ಳುತ್ತಿದ್ದುಂಟು, ಯಿನ್ನೂ ಯೀ ಯಿಷಯದಲ್ಲಿ

ಅನುಭವ ಕಡಿಮೆ.. ವಂದಲ್ಲಾ ವಂದು ದಿನ ದಾರಿಗೆ ಬಂದಾನು, ಬರುವಂತೆ ತಾನು ಮಾಡಬೇಕು ಯಂದುಕೊಳ್ಳುತ್ತಿರು ವಾಗಲೇ ಹೆಂಡತಿಯನ್ನು ಕರೆತರಲು ಹೋಗಿಬಿಡುವುದೇನು? ಯೀ ಯೇದ ಪಾರಂಗತರ ಹಣೆ ಬರಹವೇ ಯಿಷ್ಟು.. ಹೋದವನು ಹೋದ.. ಆದರೆ ತಮ್ಮನ್ಯಾಕೆ ಜೆನ್ನಿಫರಳಿಗೆ ಪರಿಚಯಿಸಬೇಕಿತ್ತು.. ಆಕೆಯನ್ನು ತಾನೋರ್ವಳೇ ಪರಿಚಯ ಮಾಡಿಕೊಂಡರೆ ಸಾಕಿತ್ತು. ಆದರೆ ತನ್ನ ಮಗಳು! ಯಿನ್ನು ಹೊಸ್ತಿಲು ದಾಟುತ್ತಿದ್ದಂತೆ ಆ ಪರಂಗಿ ಮಾಯಾವಿನಿ ವಯ್ಯಾರದಿಂದ ಧಾವಿಸಿ ಬಂದದ್ದೇನು? ಯೇಂಜಲ್ ವಂದು ವುದ್ಗರಿಸಿದ್ದೇನು? ಅಪ್ಪಿ ಕೊಂಡದ್ದೇನು? ನಾನೂ, ನೀನೂ ಗೆಳತಿಯರು ತಿಳಿಯಿತಾ ಅಂದದ್ದೇನು? ಅರೆಗಳಿಗೆಯೊಳಗ ತನ್ನ ಮಗಳನ್ನವಳು ವಶೀಕರಣ ಮಾಡಿಕೊಂಡು ಬಿಟ್ಟಳಲ್ಲಾ.. ಅಪರಿಚಿತ ಪರಂಗಿ ಹೆಂಗಸೊಡನೆ ಸೂಜಿಗೆ ಮುದ್ದುಕೊಟ್ಟಂತಿರ ಬೇಕೆಂಬುದು ತನ್ನ ಮಗಳಿಗೆ ತಿಳಿಯದಾಯಿತಲ್ಲಾ.. ಕೇಳಿದ ಬುಗುಡಿ ಕೂಡ "ಯಿದರಿಂದ ನಮ್ಮ ಸಾಮಾಜಿಕ ದರ್ಜೆ ಹೆಚ್ಚುತ್ತದೆ ಬಿಡು.. ಅಂಥ ಗೆಳತಿ ದೊರಕಿರುವುದು ನಮ್ಮ ಮಗಳ ಪುಣ್ಯ" ಯಂದು ಕುಮ್ಮಕ್ಕು ನೀಡುವುದೆ? ತನಗೆ ಹುಟ್ಟಿದ ಮಗಳಾಗಿದ್ದಲ್ಲಿ ಯಿದಕ್ಕೆ ಅನುಮೋದಿಸುತಲಿದ್ದನೇ ಅವನು? ಯಾರು ಯೇನೇ ಅನ್ನಲಿ, ಆಡಲಿ, ಅಡ್ಡಿ ಆತಂಕ ಮಾಡಲಿ.. ಚಿನ್ನೀನ ಅಲ್ಲಿಗೆ ಹೋಗದಾಂಗ ತಡೆಯಬೇಕು ಯಂದು ತಾನು ನಿರ್ಧಾರ ಮಾಡಿದ್ದು ಪ್ರಾಯಶಃ ನೂರರ ಆಜುಬಾಜು ಸಲ ಯಿದ್ದೀತು.

ಅತ್ತ ಸದರೀ ಪಟ್ಟಣದ ಕುಂಪಣಿ ಸರಕಾರದ ಬಂಗಲೆಯೊಳಗ ಯಂದಿನಂತೆ ಡೋಲಿಯಿಂದ ಯಿಳಿದು ಜೆನ್ನಿಫರಮ್ಮಗೆ ಗೊತ್ತಿಲ್ಲದ ಆಟಗಳಾದ ಪತ್ತೀಸು ಕಾಯಿ, ಕುಂಟೋಬಿಲ್ಲೆ ಆಟಗಳನ್ನು ರೂಪಕವಾಗಿ ಕಲಿಸುತಲಿದ್ದ ಚಿನ್ನಾಸಾನಿ ತನ್ನ ತಾಯಿ ಯೋಚಿಸುತಲಿದ್ದುದರ ಮುಕ್ಕಾಲು ವಾಸಿಯನ್ನು ಮೂಹಿಸಿಕೊಳ್ಳು ತಲಿದ್ದಳು. ಯರಡನೆ ಮನೆಗೆ ಜಿಗಿಯುವುದ ಬಿಟ್ಟು ವಂದನೇ ಮನೆಗೆ ಜಿಗಿಯುತಲೋ, ವಂದನೆ ಮನೆಗೆ ಜಿಗಿಯುವುದ ಬಿಟ್ಟು ಯರಡನೇ ಮನೆಗೆ ಜಿಗಿಯುತಲೋ ಪರಪಾಟು ಬೀಳುತಲಿದ್ದಳು.. ತನ್ನ ತಾಯಿಯ ಕಣ್ಣುಗಳು ತನ್ನನ್ನು ಹಿಂಬಾಲಿಸಿವೆ, ಕಾವಲು ಮಾಡುತವೆ ಯಂದು ಭಾವಿಸಲು ಜೆನ್ನಿಫರ್ ಅವಕಾಶವೇ ಕೊಡುತ್ತಿರಲಿಲ್ಲ.. ನೀನು ನಿನ್ನ ಮನೆಯಲ್ಲಿ ಚಿನ್ನಾಸಾನಿ.. ಆದರ ನನಗೆ ಮಾತ್ರನೀನು ಯೇಂಜಲ್ ಯಂದು ಸಂಭೋದಿಸುತಲಿದ್ದುದಂತೂ ಅಪ್ಯಾಯಮಾನ ವಾಗಿಲ್ಲದಿರಲಿಲ್ಲ.. ಮೊದಮೊದಲಿಗೆ ತಾನು ಯೇಂಜಲ್

ಅಂದರೆ ಯೆಂಜಲು ಯಂದು ಅಪಾರ್ಥ ಮಾಡಿಕೊಂಡಿದ್ದುಂಟು... ಯೇಂಜಲ್ ಅಂದರ.. ದೇವತಾಸುಂದರಿಯ ಹೆಸರು ಯಂದು ಯಿವರಿಸಿದ್ದುಂಟು ಆಕೆ.. ಓಹ್.. ತಾನು ದೇವಲೋಕದ ಸುಂದರಿ..!

ಅತ್ತ ಕುದುರೆಡವು ಪಟ್ಟಣದೊಳಗ ಜನರು ಹೆದರಿ ಯದ್ದೋಡುವಂತೆ ನಿಂತು ನಿಂತಲ್ಲೇ ಕುಂತ ಕುಂತಲ್ಲೇ ಜಲಜಲನೆ ಬೆವರುವಂತೆ, ಸಿವ ಸಂಕರ ಮಾದೇವ ಅಂಬುವಂತೆ, ವುಧೋ ವುದೋ ಯಂದು ವುಲಿಯುವಂತೆ, ಸತಮಾನ ಗಾತ್ರದ ನಿದ್ದೆಯಿಂದ ಯಿದ್ದಕ್ಕಿದ್ದಮೊಲು ಮರಳಿ ಸಡನ್ನ ಯಚ್ಚರ ಗೊಂಡಂಥವನಾದ ಹಂಪಜ್ಜನು ಬಿರುಗಾಳಿ ನೋಡಿದೊಡನೆ ಅದು ತಂಗಾಳಿ ರೂಪ ಧರಿಸಿ ತಾಯೇ ಗವುರಸಂದರದ ಮಾಯಗಾತಿಯ ನಿಜಸರಣೆ ಯಂದನಕಂತ ಅವಯ್ಯ ಪಾದದ ಬುಡಕೆ ಸರಣ ಹೋತು. ಅವಯ್ಯನ ಸರೀರದ ಲಕ್ಷಾಂತರ ಸ್ವೇದ ರಂದ್ರಗಳಿಂದ ಬುದುಬುದಕ್ಕಂತ ವುಕ್ಕಿದ ಬೆವರು ವಂದೊಂದು ರೋಮದ ತುದಿಯಿಂದ ಯಿಳಿತಾಽ ಯಿಳಿತಾ ಕೆಳಕ್ಕುದುರಿ ಭೂಮಿಯನ್ನು ಫಲವತ್ತು ಮಾಡಿದವು.. ಅವಯ್ಯನ ಸರೀರ ಯಂಬುವ ಗವುರ ಸಂದರದೊಳಗೆ ಮಾರೆಮ್ಮ ತಾಯಿ ಕ್ರಿಯಾಸೀಲಳಾಗಿರುವ ಸಂಗತಿ ಸದರಿ ಪಟ್ಟಣದ ಮಳ್ಳಮಂದಿಗೆ ಹೆಂಗ ಗೊತ್ತಾದೀತು? ಸಿವ ಸಿವಾ ಅಂದು ಬಿಟ್ಟಿತಲಾ.. ಯಿಧಿ ಮಾಯೇ ಅಂದು ಬಿಟ್ಟಿತಲ್ಲಾ.. ಯವಯ್ಯನ ಸರೀರ ಅದನು ನುಡಿತಯ್ತೆ.. ಯಿದನು ನುಡಿತಯ್ತೆ ಯಂದು ತಮ ತಮ್ಮ ಮುಖಗಳೊಳಗ ತುದಿಗಾಲ ಮೂಡಿಸಿಕೊಂಡು ಕಾಯಲಕ ಹತ್ತಿಬಿಟ್ಟಿತಲ್ಲಾ...! ಅದು ಯಿದ್ದ ಯಿದ್ದಲ್ಲೇ ನಾನಾ ಅಲವುಕಿಕ ಅವಧೂತ ಸಂಬಂಧೀ ಭಾವನೆಗಳನ್ನು ಅನುಭವಿಸುತ್ತಿರು ವಾಗಲೇ ಯತ್ತಲೆತ್ತಲಿಂದಲೋ ಡೊಳ್ಳು, ಕಹಳೆ, ಹಲಗೆ, ತಮ್ಮಟೆ, ಸೊನ್ನಾಯಿ ರುಮ್ಮಿಯೇ ಮೊದಲಾದ ಸತಯಿಂಸತಿ ವಾದ್ಯಗಳು ಬರು ಬರುತ್ತಲೇ ಮಾರ್ಮಲೆಯರಾಂಭಿಸಿ ಬಯಲ ತುಂಬೆಲ್ಲ ಅಗಾಧ ನಾದ ಸಾಗರವನ್ನು ತರುಬಿದ್ದರ ಬಗ್ಗೆ ಯೇನು ಹೇಳುವುದು ಸಿವನೇ, ಅವಯ್ಯನ ಸರೀರದ ವಂದೊಂದು ಸಂಧಿಯನ್ನು ಗುಡಿ, ಗುಂಡಾರ, ದೇವುಳ, ಜುಮ್ಮಿ, ಬನ್ನಿ, ಬೇವು, ವುತ್ರಾಣಿ ವನವೆಂದು ಭಾವಿಸಿ ಮಂದಿಯು ದೀಪಾರತಿ, ಭೂಪಾರತಿ ಯತ್ತಲಾರಂಭಿಸಿದ್ದರ ಬಗ್ಗೆ ಯೇನ ಹೇಳಲಿ ಸಿವನೇ,

ಆದರ ಹಂಪಜ್ಜನ ಭವುತಿಕ ಸರೀರವು ಹೇಳೋ ಸ್ಥಿತೀಲಿರಲಿಲ್ಲ.. ಕೇಳೋ ಸ್ಥಿತೀಲಿರಲಿಲ್ಲ... ಅವಯ್ಯನ ಸರೀರ ಸೊಸ್ಥಾನದಿಂದ ಪಂಚೇಂದ್ರಿಯಂಗಳು

ದೇಸಾಂತರ ಹೋಗೋದು, ಬರೋದು, ಯಿದ್ಯಾಮಾನಂಗಳ ವಸ್ತುಸ್ಥಿತಿ ಯಿವರಿಸೋದು ಮಾಡುತಲಿದ್ದವು. ಅವುಗಳ ಅವುಸರ ಬವುಸರದಿಂದಾಗಿ ಸ್ರವಣೇಂದ್ರಿಯ ನಯನೇಂದ್ರಿಯದೊಳಗೋ, ನಯನೇಂದ್ರಿಯ ಸ್ರವಣೇಂದ್ರಿಯದೊಳಗೋ, ನಾಲಗೆ ಚರುಮದೊಳಗೋ, ಚರುಮ ನಾಲಗೆಯೊಳಗೋ, ಯಾವುದೊಂದಕ್ಕೂ ನಿಲಕಡೇಕಯಿರಲಿಲ್ಲ.. ನೀರಡಕೆಯಿರಲಿಲ್ಲ... ಯಿದರ ಪರಿಣಾಮವಾಗಿ ಆ ಪೂರುವಿಕನು ಕಿವಿಯಿಂದ ನೋಡುತ್ತಾನೆ. ನಾಲಗೆಯಿಂದ ಕೇಳುತ್ತಾನೆ, ಚರುಮದೊಳಗೆ ನಾಲಗೆಯಿಂದ ಹರದಾಡುತ್ತಾನೆ.. ತನಗ ತಾನೇ ಯಿಸುಮಯಗೊಳ್ಳುತ್ತಾನೆ.. ತನ್ನ ಯಿಸುಮಯದ ಸ್ಪಂದನಕ.. ಚಲನಸೀಲ ದೇವುಳವಾಗಿದ್ದ ಸಾರೋಟ ಕಿರಕೂ ಕಿರಕೂ ಯಂದು ಅನುಪಲ್ಲವಿಯ ನುಡಿತಾ ಅಯ್ತೆ.. ವಂದು ಗಳಿಗೆ ಹೊತ್ತೊಳಗ ಗಿರ್ದ ಎಚ್ಚರಗೊಳ್ಳುತ್ತಾನೆ, ಯರಡು ಗಳಿಗೆ ಹೊತ್ತೊಳಗೆ ಅರ್ದ ಯಚ್ಚರಗೊಳ್ಳುತ್ತಾನೆ, ಮೂರು ಗಳಿಗೆ ಹೊತ್ತೊಳಗೆ ಮೂರು ಪಾವಲಿ ಯಚ್ಚರಗೊಳ್ಳುತ್ತಾನೆ.. ನಾಕು ಗಳಿಗೆ ಹೊತ್ತೊಳಗ.. ಸಿವ ಸಂಕರ ಮಾದೇವಾsss...

ಪೂರುವಿಕರ ಪಯ್ಕಿ ಪೂರುವಿಕನೂ, ಸಾಗರ ಗಾತರದವನೂ ಆದ ಹಂಪಜ್ಜನು ಸಾಸುವೆ ಗಾತುರದ ಸಾರೋಟಿನಿಂದಿಳಿದೇಟಿಗೆ ಭೂಮಿ ಲಘುವಾಗಿ ಕಂಪಿಸಿತು. ಮಂದಿ ನಿಂತು ನಿಂತಲ್ಲೆ ಹೊಯ್ದಾಡಿದರು, ಕುಂತು ಕುಂತಲ್ಲೇ ಹೊಯ್ದಾಡಿದರು. ಅವಯ್ಯ ವಂಚಣ ಕಣ್ಣಿನ್ನಂಗಯ್ಯಗಲ ಮಾಡಿ ಸುತ್ತಮುತ್ತ ನೋಡಿದೇಟಿಗೆ ಆಸ್ತೀಕಭಾರದಿಂದ ತತ್ತರಿಸಿ ಮಂದಿಯು ನಾಕು ಮೊಳ ಹಿಂದಕ್ಕೆ ಜರಕ್ಕಂತು, ಅವಯ್ಯ ಮಸಮಸಾಂತ ದವಡೆ ಮಸೆದೇಟಿಗೆ ನಾನಾ ಗಿಡಗಳ ಮ್ಯಾಲ ಕೂಕಂಡಿದ್ದ ತರಾವರಿ ಪಕ್ಷಿಗಳು ಹೆದರಕಂಡು ಚಿಮ್ಮಿ ಮುಗಲ ಬಯಲೊಳಗ ರಂಗೋಲಿ ಬಿಡಿಸಿದವು, ಅವಯ್ಯ ತಲೆಕೊಡವಿದೇಟಿಗೆ ಹೇನುಗಳ ರೂಪದಲ್ಲಿದ್ದ ಭೂತಗಣಂಗಳು ಪುತಪುತನೆ ನೆಲಕ್ಕುದುರಿ ಕಂಡಕಂಡವರ ಕಡೇಕ ಧಾವಿಸಿದವು, ತಲೆಗೂದಲ ಗಂಟುಗಳು ಸಯ್ಲಾಗಿ ಅವಯ್ಯನ ಪಾದದುಂಗುಟದವರೆಗೆ ಯಿಳಿ ಬಿದ್ದವು ಸಿವ.. ಸಿವಾss.. ಅವಯ್ಯ ಅಂಬಾ ಭವಾನೀ.. ಸಾಂಬವೀ ಯಂದುದ್ಗಾರ ತೆಗೆಯುತ ಗರ್ರನೆ ಕುಂಬಾರ ತಿಗರಿಯಂತೆ ತಿರುಗಿಸಿದೇಟಿಗೆ ತಲೆಗೂದಲು ಹತ್ತು ಮಾರುದ್ದದ ಚಕ್ರಬಿಂಬ ಕೋಟೆಯನ್ನು ರಚನೆ ಮಾಡಿತು ಸಿವನೇ.. ತಮ್ಮ ಪಟ್ಟಣವನ್ನು ಗುಳಮ್ಮಂತ ನುಂಗಲಕ ಬಂದಿರುವ ಕಾಲಭಯ್ರವನೋ ಯಂದು ಮಂದಿ ಯದೆ ಬಿದ್ದರು

ಸಿವನೇ....

ಅವರೆಲ್ಲರ, ಸಮಸ್ತ ಪಟ್ಟಣದ ಕಷ್ಟನಷ್ಟ, ಕಂಟಕ, ಸಂಕಟ, ದುಕ್ಕ ದುಮ್ಮಾನ, ಭೂತ, ವರ್ತ, ಭವಿಷತ್‌ಗಳೆಂಬ ತ್ರಿಕಾಲ ಸತ್ಯೇವುಗಳು ಅವಯ್ಯನ ಅರುವಿಗೆ ಬಂದು ನೆಲೆಗೊಳ್ಳಲಕ ವಂದು ಚಣವೇ ಸಾಕಾತು ಸಿವನೇ.. ಯಿನ್ನೇನು? ಮುಂದೆ ಯಿನ್ನೇನಿನ್ನೇನು? ಯಂದು ಪಟ್ಟಣದ ದೇವತೆಯು ನೋಡು ನೋಡುತಿರಲಕ.. ಮೇರೋ ಪರುವುತ ಪ್ರಾಯದವಯ್ಯನ ಸರೀರದೊಳಗ ಸಾವುರಾರು ವುಯ್ಯಾಲೆ, ಜುವ್ವಾಲೆ ತೂಗಾಡಲಕ ಹತ್ತಿದವು, ಳೊಳ್ಳೊಳ್ಳಾಯಿ ಮಾರ್ಮಲೆಯಲಕ ತೊಡಗಿತು.. ಕಜ್ಜಿ ಪುಳ್ಳೆ ಕಂದಮ್ಮನಂತೆ ಅಂಬೆಗಾಲಿಡುತ.. ಅಲೆಯುತ.. ತನ್ನ ತಾಯಿಗಾಗಿ ಹಂಬಲಿಸಲಕ ಹತ್ತಿತು. ಯವ್ವಾ... ಯವ್ವಾ ಯಲ್ಲದಿಯೇ ನಮ್ಮವ್ವನೇ.. ಯಾವ ರೂಪದಲ್ಲಿರುವೆ ನಮ್ಮವ್ವನೇ.. ಯಲ್ಲಿ ವಡಮೂಡಿರುವಿ ನಮ್ಮವ್ವನೇ.. ಯಂದವಯ್ಯ ಅಬ್ಬರಿಸುತ ಬೋರು ಬೋರಾಡಿ ಅಳತೊಡಗಲು, ವಂದೇ ಗುಕ್ಕಿಗೆ ಆಪೋಸನ ತೆಗೆದುಕೊಳ್ಳಲಿರುವಂತೆ ನೆಲಕ್ಕೆ ಬಾಯ್ನ ಹಚ್ಚಲು.. ಮಂದಿಯು ಅರಗಳಿಗೆಯೊಳಗೆ ಸಿಲಾಯಿಗ್ರಹಗಳಾದರು, ಯಿನ್ನೊಂದರ ಗಳಿಗೆಯೊಳಗ ಸಿಲಾಯಿಗ್ರಹಗಳಿಂದ ಜೀವಧಾರಣ ಮಾಡಿ ಮೂಡಿದರು. ಅವರೆಲ್ಲ ನೋಡುನೋಡುತ್ತಿದ್ದಂತೆ ಅವಯ್ಯನು ಸಾವುರ ಕಯ್ಯಿಗಳಿಂದ ತಾಯಿಯನ್ನು ಗೆಬರಾಡುತಲಿದ್ದಾನೆ, ಸಾವುರ ಕಾಲುಗಳಿಂದ ಸಾವುರ ದಿಕ್ಕಿಗೆ ಸುಳಿದಾಡುತಲಿದ್ದಾನೆ ಸುಂಟರಗಾಳಿಯಂತೆ ಅಲ್ಲದಿಯೇನವ್ವಾ ಯಂದನಕಂತ ಅಡ್ಡಡ್ಡ ಬಿತ್ತುವುದು ಮಾಡಿದನು ಮಾರಮ್ಮನ ಮಾರುದ್ದದ ನಾಮಾವಳಿಗಳ.. ಬಿರುಗಾಳಿಯೋಪಾದಿಯಲ್ಲಿ ಸಂಚಾರವಂ ಕಯ್ಯಕೊಂಡು ಪಟ್ಟಣದ ಆಯ್ದೂ ದಿಕ್ಕಿನಲ್ಲಿ ನೆಲಕ್ಕಮರಿಕೊಂಡಿದ್ದ ಕರಗಲ್ಲುಗಳ ನೇವರಿಕೆ ಮಾಡಿ ಅವುಗಳಿಗೆ ತಗುಲಿರುವ ದುಕ್ಕ ದುಮ್ಮಾನವನ್ನು ಸಂತಯಿಕೆ ಮಾಡಿದನು. ಅವಯ್ಯಗ ತನ್ನ ಹಿಂದಕ ಯಾರವರೆ? ಮುಂದಕ ಯಾರವರೆ? ಯಂಬ ಖಬರು ಯಿರಲಿಲ್ಲ. ಅವಯ್ಯನ ಮಯ್ಯೊಳಗ ಧಗಧಗನೆ ಕ್ರಿಯಾಸೀಲವಾಗಿದ್ದ ದಯವಂಗಳ ಮರುಮವನ್ನು ಅರಿತನಾಗಿದ್ದ ಜಡೆತಾತನು ಹಿಂದಲಕಿರೋರು ಹಿಂದಲಕ ಹೋಳಾಗಿರಿ, ಮುಂದಲಕಿರೋರು ಮುಂದಲಕ ಹೋಳಾಗಿರಿ ಯಂದನುತ ದಾರಿ ಸುಗಮ ಮಾಡತಲಿದ್ದನು. ಹಂಗೆ ಮಾಡಿಕೊಟ್ಟಂಥ ದಾರಿಯು ಸಿಡೇಗಲ್ಲು ಗ್ರಾಮಕ್ಕಭಿಮುಖವಾಗಿ ಮಳ್ಳಗೆ ಮಲಗಿಕೊಂಡಿತ್ತು. ಭಕುತಾದಿ ಮಂದಿಯು ವಾರ ದಿನಮಾನದಿಂದ ಅಂದಿದ್ದ, ಅನ್ನುತಲಿದ್ದ ಜಯನ್ನಾಮ

ಪಾರೊತಿ ಪತಿಹರಹರ ಮಾದೇವ ಜಯಘೋಷಗಳ ತೋರಣಗಳು ಹಾದಿ ಯಿಕ್ಕೆಲದಲ್ಲಿ ರಾರಾಜಿಸಲಾರಂಭಿಸಿದ್ದವು. ಅಂಥ ದಾರಿಗುಂಟ ಹಂಪಜ್ಜನು ನಡೆಯುತ್ತಿರುವಾಗ್ಗೆ ಗೇಣು ಗೇಣು ಹೆಜ್ಜೆ ಗುರುತುಗಳು ಮೂಡಲಾರಂಭಿ ಸಿದ್ದವು. ಅವಯ್ಯನ ಹೆಜ್ಜೆ ಕಂಪನಕ, ಯವ್ವಾ.. ಯವ್ವಾ.. ಯಂಬುವ ನಾದದಲೆಗಳಿಗೆ....

ಯಿತ್ತ ಕಡೆ ವಂದಾಳಗಲ, ವಂದಾಳುದ್ದದ ಹಮುಸತೂಲಿಕಾತಲ್ಪದ ಮ್ಯಾಲ ಅಂಗಾತ ವರಕ್ಕೊಂಡಿದ್ದ ವಸ್ತಿಯು ಮಿಸುಕಾಡಲಕ ಹತ್ತಿತು, ಕಣ್ಣುಗಳನ್ನರಳಿಸತೊಡಗಿತು, ಬಾಯನ ತೆರೆಯೋದು ಮುಚ್ಚೋದು ಮಾಡುತ ಸಿಸುಮಗನೇ ಯಂದು ವುಸುರುತಲಿದ್ದಿತು. ವಸ್ತಿಯೊಳಗೆ ಕಾಣಿಸಿಕೊಂಡಿದ್ದ ಚಲನೆಯನ್ನು ಭಕುತಾದಿ ಮಂದಿ ಅಗಾಧ ಯಂಬಂತೆ ನೋಡುತಲಿದ್ದಿತು. ಆಟು ದೂರದಲ್ಲಿದ್ದ ಹಂಪಜ್ಜನು 'ನನ್ನವ್ವಾ ನನ್ನ ತಾಯೀ.. ಅಲ್ಲದೀಯಲ್ಲೇ' ಯಂದಬ್ಬರಿಸುತ್ತ ಮೋಡೋಡಿ ಬಂದು ವಸ್ತಿಯ ಪಾದಂಗಳ ಬುಡಕ ಕಡಕೊಂಡು ಬಿದ್ದನು, ಬಿದ್ದವನೆ ಸಾವುರ ಸಲ ಮುತ್ತಿಕ್ಕಿದನು, ತನ್ನ ಕಣ್ಣಿಂದ ಜಲಧಾರೆ ಸುರಿದು ತೊಳೆದು ಅವುಗಳನ್ನು ಥಳಥಳ ಹೊಳೆಯುವಂತೆ ಮಾಡಿದನು, ಆ ಪಾದಂಗಳನ್ನು ತನ್ನೆದೆಗೆ ವತ್ತಿಕೊಂಡನು, ಹಿಂಗಾಗಿ ಆ ಯರಡೂ ಸರೀರಗಳ ನಡುವೆ ವರ್ತಮಾನದ ಕೊಡು ಕೊಳ್ಳಿಗೆ ಸರಾಗವಾಗಿ ನಡೆಯ ತೊಡಗಿತೆಂಬಲ್ಲಿಗೆ ಸಿವಸಂಕರ ಮಾದೇವಾS...

ಅದಕಿದು ಕಂದಯ್ಯನೋ? ಯಿದಕದು ಕಂದಯ್ಯನೋ?

ಯಿಲ್ಲಿ ನೋಯ್ತದೇನೇ ನನ್ನವ್ವಾ.. ಅಲ್ಲಿ ನೋಯ್ತದೇನೇ ತಾಯೀss.. ಅಯ್ಯೋ ಮುಟ್ಟಿದ ಕಡೇಲೆಲ್ಲ ಯಲುವುಗಳು ಕಯ್ಗೆ ಅಟೆತಾವಲ್ಲಾ.. ಪಕ್ಕೆಲುವುಗಳ ನಡುವೆ ಯದೆಗೂಡು ಹೊರಗೆ ಹೊಂಟಯ್ತಲ್ಲಾ.. ಕಣ್ಣುಗುಡ್ಡೆಗಳು ತಳ ಸೇರಿಕೊಂಡಿರುವವಲ್ಲಾ.. ಮುಖದೊಳಗ ಹಲ್ಲುಗಳೊಂದೇ ಕಾಣುತ್ತಿರುವವಲ್ಲಾ.. ಅಯ್ಯೋ ನನ ತಾಯಿ.. ನೀನು ವಸ್ತಿ ಮಾಡಿರೋ ಸರೀರವು ಹೆಂಗಯ್ತಲ್ಲವ್ವಾ.. ಯೀ ನಿನ್ನ ವಸ್ತಿಯು ವುಂಡು ಯೇಸುದಿನಗಳಾದುಮೋ.. ಯೀ ನಿನ್ನ ವಸ್ತಿಯು ನೀರು ಮುಟ್ಟದೆ ಯೇಸು ದಿನಗಳಾದುಮೋ? ಯೀ ನಿನ್ನ ವಸ್ತಿಯು ಮಜ್ಜಣ ಮಾಡದೆ ಯೇಸು ದಿನವಾತೋ? ಪ್ರತಿ ವುಸುರಾಟಕೂ ಕೀರಕು ಕೀರಕು ಯಂದು ಸಬುದ ಮಾಡುತ್ತಿರುವುದಲ್ಲಾ....

ಅದಕಿದು ಕಂದಯ್ಯನೋ? ಯಿದಕದು ಕಂದಯ್ಯನೋ?

"ವಸ್ತಿಗೆ ವುಂಬಲಕ ಕಡಿಮೆ ಮಾಡಿಲ್ಲ ಯಜಮಾನ, ವಸ್ತಿಗೆ ಕುಡಿಯಲಕ ಕಡಿಮೆ ಮಾಡಿಲ್ಲ ಯಜಮಾನ. ಮ್ರುಷ್ಟಾನ್ನ ಭೋಜನದ ಕಡೇಕ ವಸ್ತಿ ಕಣ್ಣೆತ್ತಿ ನೋಡುವಲ್ಲದು ಯಜಮಾನ. ನೀರ ಕಡೇಕ ಕಣ್ಣೆತ್ತಿ ಸಹ ನೋಡುವಲ್ಲದು ಯಜಮಾನ. ಕರಗಲ್ಲು ಬರುತ್ತಲೆ ಪರಸಿವನ ಆತುಮಲಿಂಗದಂತೆ ನೆಲಕಚ್ಚಿಬಿಟ್ಟಿತೀ ವಸ್ತಿಯು.. ಯಿದರೊಳಗ ಪಟ್ಟಣದ ತಪ್ಪೇನು ಯಿಲ್ಲ... ಅದರೊಳಗಿನ ತಾಯಿ ಪಟ್ಟಣದ ಮ್ಯಾಲ ಮುನುಸುಕೊಂಡವಳೆ.. ಪಟ್ಟಣದೊಳಗಿನ ವಂದೊಂದು ನರಹುಳ ಕಾದೂ ಕಾದೂ ಬಲು ನಿತ್ರಾಣವಾಗಯ್ತೆ ಕಣ ತಂದೆಯೇ.. ತ್ರಿಕಾಲಗ್ನಾನಿಯಾದ ನಿನಗಿದನ್ನೆಲ್ಲ ಬುಡುಸಿ ಹೇಳಲಕ ನಾವೆಷ್ಟರವರಪ್ಪಾ.. ಹೆಂಗೋ ತಾಯಿ ತಂದೆಯಂಗ ಬಂದಿರುವಿ.. ಯಿದರ ಯೇಕರಕೆ ದೇಕರಿಕೆಯಲ್ಲ ನಿನಗೆ ಸೇರಿದ್ದು" ಯಂದು ಜಡತಾತನೂ.. ಕಾಡುಗೊಲ್ಲರೀರಯ್ಯನೂ.. ಹೇಳಲಾರದೆ ಹೇಳುತ ದುಕ್ಕ ತಡೀಲಾರದೆ ವಲ್ಲಿಯನ್ನು ಬಾಯಿಗಡ್ಡ ಯಿಟ್ಟುಕೊಂಡರು.

ಅದಕಿದು ಕಂದಯ್ಯನೋ? ಯಿದಕದು ಕಂದಯ್ಯನೋ?

ಗೊಂಜಾಡರಲಡವಯ್ಯನೇ ಮೊದಲಾದವರು ಪಟ್ಟಣದ ಬದುಕು ವಂಚೂರು ಹಿಂದಕ ಹೋಗದೆ, ವಂಚೂರು ಮುಂದಕ ಹೋಗದೆ ನಿಂತಲ್ಲೆ ನಿಂತು ಬಲು ತ್ರಾಸುಪಡತಯ್ತೆ ಯಂದು ಮುಂತಾಗಿ ತಲಾ ವಂದೊಂದು ದುಕ್ಕ ತೋಡಿಕೊಳುತ ಬಿಕುಬಿಕ್ಕಿ ಅಳಲಾರಂಭಿಸಿದರು. ಯದೆ ವುಂಬದೆ ಸುಟ್ಟು ಕರಕಿಟ್ಟಂತಾಗಿದ್ದ ತಮ ತಮ್ಮ ಕಂದಮ್ಮಗಳನ್ನು ಹೊತ್ತುಕೊಂಡು ಆ ಕಡೇಲಕಿಂದ ಬಂದ ತಾಯಂದಿರೆಷ್ಟೋ.. ನಗೆ ಮಾಯವಾಗಿ ಗಂಟುಗಳೇ ತುಂಬಿದ್ದ ಮುಖೇಡಿ ಗಂಡಂದಿರನ್ನು ಕರಕೊಂಡು ಯೀ ಕಡೇಲಕಿಂದ ಬಂದ ಹೆಂಡಂದಿರೆಷ್ಟೋ? ತಪ್ಪು ಮಾಡುತೀವೆಂದೇ ನರ ಮನಶ್ಯೋರು ತಾವು.. ಪಶ್ಚಾತ್ತಾಪ ಪಡುತೀವೆಂದೇ ನರಮನುಶ್ಯೋರು ತಾವು.. ತಾವು ಅನುಭೋಸಿದ ಶಿಕ್ಷೆಯಿಷ್ಟು ಸಾಲದಾಯಿತೇನು ತಾಯಿಗೆ.. ತಾಯಿಯಾದವಳೆದೆಯೊಳಗ ವಂಥಟಗಾರ ಕರುಣೆ ಯಿರೋದು ಬ್ಯಾಡವೇನು? ತಾಯಿಯಾದವಳ ಕರುಳೊಳಗ ವಂಚೂರಾರ ಅಂತಃಕರಣ ಯಿರೋದು ಬ್ಯಾಡವೇನು? ತಾಯಿಯಾದವಳಿಗೆ ಹೆಣ್ತನ ಅರ್ಥವಾಗೋದು ಬ್ಯಾಡವೇನು?

ಸದರಿಪಟ್ಟಣದ ವರ್ತಮಾನದ ಮ್ಯಾಲ ತನ್ನ ತಾಯಿ ಯೀ ತೆರನ ಬರೆಯಳೆದಿರಬೌದೆಂದು ತಾನು ಕಣಸುಮಣಸಿನಲ್ಲೂ ತಾನು ಮೂಹಿಸಿರಲಿಲ್ಲ..

ಕಾಟ, ಸಾಂತುವನ ತಾಯಿ ರುದಯದ ಯರಡು ಮಗ್ಗಲುಗಳು, ಯೀ ಪರಿ ಕಾಡಲಕ ಹತ್ತಿರುವಳೆಂದ ಮ್ಯಾಲ.. ತನ್ನ ತಾಯಿಯೊಳಗೆ ತಾಯ್ತನ ವುಳಕೊಂಡಯ್ತಾ? ಯಿಲ್ಲವಾ?.. ತಾಯ್ತನವನ್ನು ಕಲಿ ಯೇನಾರ ಅಪಹರಣ ಮಾಡಿರುವನಾ?.. ಥೇ! ಥೇ.. ತನ್ನ ತಾಯಿ ತನ್ನ ತಾಯಿಯೇ...

ಯವ್ವಾ ತಾಯೇ.. ನಿನ್ನೆದೆ ಕರುಣೆ ನೆಂಜಾಗಿ ಬುಟ್ಟರೆಂಗವ್ವಾ.. ಯಾಕ ಮುನುಸುಕೊಂಡಿರುವಿ..? ಕೇಳ್ತಿರೋದು ಯೀ ನಿನ್ನ ಸಿಸುಮಗ ಹಂಪಜ್ಜ.. ಕೇಳುತಿರೋದು ಗವುರಸಂದರ ಮಾರೆಮ್ಮನ ನಿಜ ಭಕುತನಾದ ಹಂಪಜ್ಜ.. ಕೇಳುತಿರೋದು ದ್ವಾಪರ ಕಾಲದಲ್ಲಿ ಹುಟ್ಟಿ ಕಲಿ ಕಾಲದಲ್ಲಿ ಮುದೇನಾಗಿರೋ ಹಂಪಜ್ಜ.. ಅದೇನು ಮನಸಿನಾಗ ಯಿಟುಕೊಂಡಿದ್ದೀ.. ಬಾಯಿಬುಟ್ಟು ನೀನು ಹೇಳಾಕೆ ಬೇಕವ್ವಾ.. ಹೇಳದಿದ್ದರ ನನ್ನಾಣೆ ಆಯ್ತೆ.

ಅದಕಿದು ಕಂದಯ್ಯನೋ? ಯಿದಕದು ಕಂದಯ್ಯನೋ?

ವಂದು ಗಳಿಗಾತು, ಯರಡು ಗಳಿಗಾತು... ಬರೋಬ್ಬರಿ ಮೂರು ಗಳಿಗೇನೂ ಆತು. ಅದರ ವಸ್ತಿ ಮಾತ್ರಹೂ ಅನುವಲ್ಲದು, ವುಸುರು ಬಿಡವಲ್ಲದು. ನಗೆ ಚಾಟಿಕೆ ತುಂಬಿಕೊಂಡಯ್ತೆ ಮುಖದ ತುಂಬೆಲ್ಲ....

ಆಗ ಸಿಟ್ಟು ಬಂದು ಮುದೇತನು.. “ಿಂದ್ಯಾಕೋ ಅತಿ ಆತು ಬುಡವ್ವಾ... ನೀನಿಂಗs ಹಟ ಮಾಡಿದರ ನರಲೋಕದೊಳಗ ಆಸ್ತೀಕತೆಯು ಸುಟ್ಟು ಕರಕಾಗಿ ಹೋತಯ್ತೆ.. ನರಮಂದಿನೇಲ್ಲ ವಂದೇಟಿಗೆ ಮುಗಿಸಿ ಬಿಡು.. ಯಾರು ಅಡ್ಡ ಬಂದಾರು ನಿನಗೆ.. ಯೀ ಭೂಮಿ ಮ್ಯಾಲ ನೀನೊಬ್ಬೆಯಿದ್ದು ಅದ್ಯಾವ ಅಯಿಭೋಗನ ಅನುಭೋಸು” ಯಂದನು.

ಅದಕಾರ ವಸ್ತಿಯು ಪ್ರತಿ ಜವಾಬು ನುಡಿಯಲಿಲ್ಲ.

ಅದಕ ಮತ್ತೋಟು ಸಿಟ್ಟು ಬಂದು ಮುದೇತನು ಕುಂತಿದ್ದಾತನು ಯದ್ದು ನಿಲ್ಲುತ-

“ಯ್ಯೋಟು ಗಲಗಲಾಂದರೂ ವಂಚೂರಾರ ಮಿಸುಕಾಡವಲ್ಲಲ್ಲೇ ನಮ್ಮವ್ವನೇ.. ಯದಿ ಗುಂಡಿಗೀನ ಕಲ್ಲು ಮಾಡಿಕೊಂಡಿಯಾ ಹೆಂಗೆ? ನನ ಮಾತಿಗೆ ಬೆಲೆಕೊಟ್ಟು ಯದ್ದು ಕುಂತಗಂಡು ನಾಕು ಮಾತಾಡುತಿಯೋ ಯಿಲ್ಲಮೋ ಆಟೇಳು?” ಯಂದು ಜಬರದಸ್ತು ಮಾಡಿದ್ದೂ ಪ್ರಯೋಜನಕ ಬರಲಿಲ್ಲ.

“ಸರ್ರೆಬುಡು.. ಆದಿಸಗುತಿಯಾದ ನಿಂಗೆ ಯೀಟೊಂದು ಟೆಬರು

ಯಿರಬೇಕಾದರ ನಿನ್ನ ಕರುಣೆಯ ಕಂದಮ್ಮನಾದ ನಂಗೆ ಯೇಟಿರಬ್ಯಾಡ ತಾಯೀ.. ಯಾವ ಪುರಸಾರ್ಥಕ್ಕ ನನ್ನ ಆಟು ದೂರದಿಂದ ಕರಸ್ಗೆಂಡೀ.. ನಾಕು ಮಂದಿ ಯದುರಿಗೆ ನನ್ ಮರುವಾದೀನ ಕಳೆಯಲಕಂತ ಅಲ್ಲ.. ನನ್ನೊಳಗss ನೀನಿಲ್ಲ ಅಂದಮ್ಯಾಲ.. ನಿನ್ನೊಳಗss ನಾನಿಲ್ಲ ಅಂದಮ್ಯಾಲ.. ನಾನ್ಯಾಕ ಭೂಮಿಗೆ ಭಾರಾಗಿ ಬದುಕಿರಬೇಕವ್ವಾ" ಯಂದನಕಂತಾಲೇ ಅಲ್ಲೇ ವಂದು ಅನಕತದ ಬಿಸಿಲಿಗೆ ಮಿರಮಿರನೆ ಮಿಂಚುತಲಿದ್ದ ಗುದ್ದು ಬಾಕುವನ್ನು ಸರ್ರನೆ ಕಯ್ಗೆ ಯತ್ತಿಕೊಂಡನು.. ಅದರಿಂದ ಮುಂಗಯ್ಯ ಮ್ಯಾಲ ಚುಚ್ಚಿಕೊಂಡು ವಸ್ತಿಯ ಮ್ಯಾಲಕ ಚಾಚಿದನು.. ವಸ್ತಿಯ ಮುಖದ ಮ್ಯಾಲ ರಗುತವು ತೊಟ ತೊಟ ಸುರಿಯತೊಡಗಿತು. ಕುಡಿಯವ್ವಾ.. ಕುಡುಕ್ಯಾ.. ಯಂದವಯ್ಯನು....

ಆ ಭೀಕರ ದ್ರುಸ್ಯವ ನೋಡಿ ಮಂದಿ ಅಲಲಲಾ ಅಂತು.. ಕಲಾವುಲಿಗೊಂಡಿತು.. ರಗುತಾಲಂಕಾರದಿಂದ ವಸ್ತಿಯ ಮುಖವು ಕೆಂಬಣ್ಣ ಗುಡ್ಡವಾಗಲಾರಂಭಿಸಿತು.. ಅದರ ದರುಸನವು ರವುಸವಾಗಿ ರಭಸದಿಂದ ಸಾಂಕ್ರಾಮಿಕವಾಯಿತು.. ವಾದ್ಯಗಳು ನುಡಿ ನುಡಿವುತ ರವುಸಕ್ಕ ಪವುರಸದ ಡಾಬು ತೊಡಿಸಿದವು. ಚವುಡಿಕೆಗಳ ಆಕ್ರಂದನ ಮಾರ್ಮಲೆಯಾಯಿತು.. ಜಂಬುನ್ನಾಮು ಪಾರೊತೀ ಪತಿ ಹರಹರ ಮಾದೇವss ಯಂದಂಬುತಲಿದ್ದವರೆಷ್ಟೋ? ಕುದುರೆಡವ ದೊರೆಸಾನಿ.. ನಿನಗಾರು ಸರಿಕಾಣಿ.. ಸರಿ ಅಂದವರ ಹಲ್ಲು ಮುರಿ ತಾಯಿ.. ಭೋ ಪರಾಕ್.. ಭೋ ಪರಾಕ್.. ಯಂಬ ಘೋಷಣೆಗಳ ಅಟ್ಟವಣಿ ಮಾಡುತ ಲಿದ್ದವರೆಷ್ಟೋ...?

ಅದರ ವಸ್ತಿಯು ಅಂಡನು ಯತ್ತಿ ಯಿಡಲಿಲ್ಲ.. ಬಾಯಿ ಬಿಟ್ಟು ವಂದೇ ವಂದು ಕಾರಣಿಕವ ನುಡಿಯಲಿಲ್ಲ ಅಂದಮ್ಯಾಲ ನಿಜಭಕುತನಾದವಂಗೆ ಸರಿಸಾಟಿಯಿಲ್ಲದ ಪವುರಸ ಬರದಂಗಿರುವುದಾ?.. ಹಂಪಜ್ಜನು ತನ್ನ ಸರೀರದ ಭಾಗಗಳನ್ನು ಅಡ್ಡಡ್ಡ, ವುದ್ದುದ್ದ ಕುಯ್ದುಕೊಂಡು ಮುಕ್ಕಾಲುವಾಸಿ ರಗುತದಿಂದಾಭಿಸೇಕ ಮಾಡುತಲಿರುವಾಗ ವಸ್ತಿಯ ಕಪ್ಪಾನುಕಪ್ಪನೆಯ ಅಂಗಾಂಗವು ಕೆಂಪಾನುಕೆಂಪಗಾತು.

ವಂದು ಗಳಿಗಾತು.. ಯರಡು ಗಳಿಗಾತು.. ಮೂರು ಗಳಿಗೇನೂ ಆತು.. ತಾಯಿಗೆ ಯಿನ್ನೂ ಕರುಣೆ ಬಂದಂಗಾಗಲಿಲ್ಲ.. ತನ್ನ ಬಲಿ ಬಯಕೆಯಲ್ಲಿದ್ದಂಗವಳೆ.. ತಾನಿನ್ನು ಆತುಮಾಹುತಿ ಮಾಡಿಕೊಂಡು ಸಾಯುಜ್ಯ ಪದವಿ ಪಡೆಯುವುದೇ ವಾಸಿಯಂದು ಹಂಪಜ್ಜನು ನಿರ್ಧಾರ ಕಯ್ನ ಕೊಂಡನು

ಯಂಬಲ್ಲಿಗೆ ಸಿವ ಸಂಕರ ಮಾದೇವ.. ಯಿನ್ನೇನವಯ್ಯನು ಮುಂಡದಿಂದ ರುಂಡವನ್ನು ಬೇರುಪಡಿಸಿ ವಸ್ತಿಯ ಹೊಕ್ಕುಳ ಮ್ಯಾಲಿಟ್ಟು ಆಲಂಕರಿಸಬೇಕು ಯಂದು ನಿರ್ಧಾರ ಕಯ್ನಕೊಂಡನು ಯಂಬಲ್ಲಿಗೆ ಸಿವಸಂಕರ ಮಾದೇವಾs ಯಿನ್ನೇನವಯ್ಯನು....

ಆನೆಗಾತುರದ ಮೋಡಗಳು ಸೂರ್ಯ ಪರಮಾತುಮನಿಗಡ್ಡ ಪರಿಶೆಯೋಪಾದಿಯಲ್ಲಿ ನೆರೆತದ್ದೇನು ಸಿವನೇ.. ಗುಡುಗುಡೂಂತ ಗುಡುಗುಗಳು ಹುಟ್ಟಿದ್ದೇನು ಸಿವನೇ.. ಪಡ್‌ಪಡಿಲ್ ಯಂದು ಸಿಡಿಲುಗಳು ಹುಟ್ಟಿದ್ದೇನು ಸಿವನೇ.. ಫಳ್‌ಫಳಾರಂತ ಕೋಲ್ಮಿಂಚು ಕೋರಯಿಸಿದ್ದೇನು ಸಿವನೇ.. ಭಕುತಾದಿ ಮಂದಿಯ ಬೆವರ ವುದುಕದೊಳಗ ಗಾಳಿಯ ಯಿಯಿಧ ಅವತಾರಗಳೆಲ್ಲ ಮಜ್ಜಣಗಯ್ದು ಸೂತಕ ಮಯ್ಲಿಗೆಗಳ ಕಳಕೊಂಡದ್ದೇನು ಸಿವನೇ.. ವಸ್ತಿಯಚ್ಚರಗೊಳ್ಳುವ ಸೊಬಗನ್ನು ನೋಡಲೋಸುಗ ಹರಪನಳ್ಳಿ, ರಾಯದುರ್ಗ, ಕಂಕಾಳದುರ್ಗ ಯಂಬೀವೇ ಮೊದಲಾದ ಛಪ್ಪನ್ನಾರು ದೇಸ, ಯಿದೇಸಗಳಿಂದ ಹರಪಮ್ಮ, ರಾಯಮ್ಮ, ಕಂಕಾಳಮ್ಮ ಯಂಬಿವೇ ಮೊದಲಾದ ಛಪ್ಪನ್ನಾರು ಪಟ್ಟಣದಮ್ಮಂದಿರು ಮನೊಯೇಗದಲ್ಲಿ ಬಿಜಿಯಂಗಯ್ದು ಪರಿ ಯೇನಂತ ಹೇಳಲಿ ಸಿವನೇ.. ಅಲ್ಲಿ ಗೋಚರವಾಗುತಲಿದ್ದದ್ದು ಕಾಳಿನೋಟಿದ್ದರೆ ಅಗೋಚರವಾಗಿ ನೆಲೆಕಂಡಿದ್ದು ಸತ ಸಹಸ್ರಕೋಟಿಯಾಗಿತ್ತು ಸಿವ.. ಸಿವಾss..

ಅದಲ್ಲ ರೆಪ್ಪೆ ಮುಚ್ಚಿ ತೆರೆಯುವಷ್ಟರಲ್ಲಿ ಅಗಾಧವಾಗಿ ಘಟಿಸಿಬಿಟ್ಟಿತು. ಬಟಾ ಬಯಲೆಲ್ಲಾ ವಂದs ಕಣ್ಣs ಮುಡಕೊಂಡಿತ್ತು.. ವಂದs ಕಿವಿs ಮುಡಕೊಂಡಿತ್ತು.. ವಂದs ಬಾಯನ ಮುಡಕೊಂಡಿತ್ತು. ಆ ಅನರಘ್ಯ ಹೊತ್ತಲ್ಲಿ ವಸ್ತಿಯು ಮಿಸುಕಲಕ ಸುರುವು ಹಚ್ಚಿತ್ತು.. ಕಯ್ಯಿಗಳು ಮಿಸುಕಾಡಿದವು, ಕಾಲುಗಳೂ ಮಿಸುಕಾಡಿದವು.. ಯೇನು ನುಡಿಯೋದು? ಯೇನು ಬಿಡೋದು? ಯಂಬಂತೆ ಬಾಯಿ ತೆರೆಯೋದು ಮುಚ್ಚೋದು ಮಾಡಿತು...

ಹ್ಹಾ... ಹ್ಹಾ... ವಸ್ತೀss.. ಹ್ಹೋ.. ಹ್ಹೋ.. ವಸ್ತೀss.. ಗುಡಿಹಿಂದಲ ಮೂಳೆ ಮೋಬಯ್ಯನ ವಸ್ತಿಯೇ ಭೋ ಪರಾಕ್.. ಜಯನ್ನಾಮ ಪಾರೋತಿ ಪತಿ ಹರಹರ ಮಾದೇವss.. ಅವ್ವ ಯಿಗಾ ಯೀಗಾ ಯದ್ದು ಕುಂತಗಂತಾಳss.. ಅವ್ವ.. ಅಗಾs.. ಆಗ ಬಾಯನ ತೆರೆದು ಮಾತಾಡುತಾಳ.. ಅವ್ವ ಯಿಗs ಯೀಗ ಕಣ್ಣು ತೆರದು ನೋಡುತಾಳೆ.. ಅವ್ವ ಆಗs ಆಗ ಕಿವಿ ತೆರೆದು ಕೇಳಿಸಿಗಂತಾಳ ಯಂದನಕಂತ....

ಕೂಕಂಡಿದ್ದಂಥ ಮಂದಿಯು ಯದ್ದು ನಿಂತಗಂಡಿದ್ದು ತಡ ಆಗಲಿಲ್ಲ.. ಮುಂದುಕ ಯಿದ್ದಂಥ ಮಂದಿಯು ಹಿಂದ ಹಿಂದಕ ಜರುಗಿದ್ದಾಗಲೀ, ಹಿಂದಕ ಯಿದ್ದಂಥ ಮಂದಿಯು ಮುಂದ ಮುಂದಕ ಜರುಗಿದ್ದಾಗಲೀ ತಡಾ ಆಗಲಿಲ್ಲ.. ಅವ್ವನ ದಗ್ರುಸ್ಟಿಗೆ ನಾ ಬೀಳಬೇಕು, ತಾ ಬೀಳಬೇಕು ಯಂದು ಮಂದಿ ಯಂಬೋ ಮಂದಿಯು ತಮ ತಮ್ಮ ಕಣ್ಣುಗಳ ಗುಡ್ಡೆಗಳನ್ನು ಕಿತುಕಿತ್ತು ತಾಯಿ ಮುಂದಕ ಗುಡ್ಡೆ ಹಾಕಿದರು.. ತಾಯಿಯ ಮಾತುಗಳನ್ನು ನಾ ಕೇಳಬೇಕು, ತಾ ಕೇಳಬೇಕು ಯಂದು ಮಂದಿ ಯಂಭೋ ಮಂದಿಯು ತಮ ತಮ್ಮ ಕಿವಿಗಳನ್ನು ಕಿತ್ತುಹಾಕಿದರು ತಾಯಿ ಮುಂದಕ... ತಾಯಿಗೆ ತಮ ತಮ್ಮ ಕಂಟಕ ಸಂಕಟಗಳನು ನಾ ಹೇಳಿಕೊಳ್ಳಬೇಕು, ತಾ ಹೇಳಿಕೊಳ್ಳಬೇಕು ಯಂದು ಮಂದಿ ಯಂಭೋ ಮಂದಿಯು ತಮ ತಮ್ಮ ನಾಲಗೆಗಳನ್ನು ಕಿತ್ತು ಗುಡ್ಡೆ ಹಾಕಿದರು ತಾಯಿ ಮುಂದಕ.. ಯಿಂಥಪ್ಪ ಹತ್ತಾರು ಪಂಚೇಂದ್ರಿಯಗಳ ಗುಡ್ಡೆಗಳನ್ನು ಅಲಂಕಾರ ಮಾಡಿಕೊಂಡ ವಸ್ತಿಯು ಲಟಲಟ ಸಂಬಂಧ ಮಾಡುತ ಯದ್ದು ಕೂಕಂಡಿತೆಂಬಲ್ಲಿಗೆ ಸಿವ ಸಿವಾs ಹ್ಹಾ ಯಂದಾಕಳಿಸಿತೆಂಬಲ್ಲಿಗೆ ಸಿವ ಸಿವಾs ಸುತ್ತಮುತ್ತ ನೋಡಿತೆಂಬಲ್ಲಿಗೆ ಸಿವ ಸಿವಾs ಮವುನವನ್ನು ಕಿವಿಯಾರು ಆಲಿಸಿತೆಂಬಲ್ಲಿಗೆ ಸಿವಾ ಸಿವಾss

*ಜಯನ್ನಾಮ ಪಾರೋತಿ ಪತಿ ಹರ ಹರ ಮಾದೇವಾs*
*ಯಾಕ್ಕುಲ್ದೇ ಜೋಗss ವುಧೋ ವುಧೋss*

ಮಾವುಸ ಬಲುತು ಹಿಂದಕ್ಕ ಯರಡೂ ಕಯ್ಯೂರಿ, ಕುಂಡಿಮೂರಿ ಕೂಕಂಡಿದ್ದ ವಸ್ತಿಯ ಯಾವತ್ತೂ ಪಂಚೇಂದ್ರಿಯಂಗಳು ಸೊಸ್ಥಾನ ಸೇರಿರೋದನ್ನು ಅವಯ್ಯನು ತನ್ನ ಸಿರೋಭಾಗವನ್ನು ವಸ್ತಿಯ ಚರಣ್ಣಕ್ಕಂಟಿಸಿ ಅದೇ ಯಿನ್ನು ಮಾತು ಕಲಿತ ಕಂದಮ್ಮನಂತೆ ತೊದಲುತ್ತಾನೆ.. ಬಿಕುಬಿಕ್ಕಿ ಅಳುತ್ತಾನೆ, ತನ್ನ ಕಣ್ಣೀರಿನಿಂದ ಸದರಿ ನೆಲದ ವಳಗೆಲ್ಲ ಸುಖಸಂಪತ್ತು ತುಂಬುತ್ತಾನೆ..

ಆ ಪೂರುವಿಕನ ಮಾತಿನೊಳಗ ಸರುಮೊಂದು ಅಡಗಿತ್ತು, ಕಣ್ಣೊಳಗ ಸುರುಮೊಂದು ಅಡಗಿತ್ತು, ಆಕೆ ಅತ್ತಕಡೆ ಆಟು ಮಾಡುತ್ತಿರಬೇಕಾದರ ಯಿತ್ತಕಡೇಕ ಅಂದರ...

ಮುರುಡಿಗ್ರಾಮದ ನಯ್ರುತ್ಯ ದಿಕ್ಕಿನ ಹೆಬ್ಬಂಡೆ ವ್ಯಾಲ ದ್ವಾಪರ ಕಾಲದಿಂದಲೂ ಯಿದ್ದಂಥ ಗಾದರಿಪಾಲಯ್ಯನ ಸಾಪಕ್ಕೆ ತುತ್ತಾಗಿ ಸಿಲಸಿಲಾ

ಆಗಿದ್ದಂಥ ಕಲ್ಲು ಕೋಳಿಯು ಕೊಕ್ಕೊಕ್ಕೋ ಯಂದು ಕೂಗಿತಂತೆ ಸಿವನೇ.. ಹಂಪಿವಳಗ ಕಲ್ಲುರಥದ ಗಾಲಿಗಳು ಭರ್ರಂತ ತಿರುಗಿದವಂತೆ ಸಿವನೇ.. ಚುಟುಕಲಕನಂದನೆಯು ವುಪ್ಪೊಂಗಿದಗಳಂತೆ ಸಿವನೇ.. ದಿಗಂತದಂಚಿನಿಂದ ವಂದಂಗಯ್ಯಗಲದ ಮೋಡವು ಬೆಳೀತಾ ಯೇರುತಾ.. ಯೇರುತಾ ಬೆಳಿತಾ ಮುಗಿಲಗಲ ಯಿಸ್ತಾರಗೊಂಡು ಬಿಸಿಲ ಸೊಕ್ಕು ಮುರಿಯಿತಂತೆ ಸಿವನೇ.. ಕೋಳಿ ಕೂಗಿದಂತಾತಲ್ಲ ಯಾಕss? ಕತ್ತಲು ಕವುದಂಗಾತತಲ್ಲ ಯಾಕ..? ಪಕ್ಷಿಗಳು ಬಿಸಿಲನ್ನು ಬೆಳದಿಂಗಳೆಂದು ಭಾವಿಸಿ ಕುಡಿಯುತ್ತಿರುವವಲ್ಲಾ ಯಾಕss ಯಲ್ಲಿತ್ತೋ ಯಪ್ಪಾ ಗುಡುಗು.. ಯಲ್ಲಿತ್ತಪ್ಪೋ ಸಿಡಿಲು.. ಯಲ್ಲಿದ್ದವಪ್ಪಾ ಕೋಲ್ಮಿಂಚುಗಳು! ನೋಡು ನೋಡುವಷ್ಟರೊಳಗ ಆಕಾಸದ ತುಂಬೆಲ್ಲ ರಣಭೇರಿ.. ನೋಡು ನೋಡುತ್ತಿದ್ದಂತೆ ಆಕಾಸದ ತುಂಬೆಲ್ಲಾ ದೀಪಗಳ ಹಾವಳಿ.. ಮುಗುಲೊಳಗ ಸಕಲ ಹೊಳೆ ಹಳ್ಳಗಳ ಮಹಾಧಿವೇಸನ ಆರಂಭಗೊಂಡಿತಪ್ಪಾ ಸಿವನೇ!.. ಚಣೊಪ್ಪತ್ತಲ್ಲಿ ಧೋ ಯಂದು ಮಳೆರೂಪೀ ಅಂಬ್ರುತಧಾರೆ ಸುರಿಯಲಾರಂಭಿಸಿತು.. ಆ ಗ್ರಾಮದ ಸಚರಾಚರ ಸ್ಥಾವರ ಜಂಗಮಗಳೆಲ್ಲ ಅಭ್ಯಂಜನ ಮಜ್ಜಣ ಮಾಡಿದವು.. ಗುಂಡಿಗಳು ಸರೋವರಗಳಾದದ್ದು ತಡ ಆಗಲಿಲ್ಲ.. ತೊರೆಗಳು ಹಳ್ಳಗಳಾದದ್ದು ತಡ ಆಗಲಿಲ್ಲ.. ಹಳ್ಳಗಳು ಹೊಳೆಗಳಾದದ್ದು ತಡ ಆಗಲಿಲ್ಲ.. ಹೊಳೆಗಳು ನದಿಗಳಾದದ್ದು ತಡ ಆಗಲಿಲ್ಲ.. ಯ್ಯಾಸರಾಯರ ಪ್ರಾಣದೇವರು ಕುದುರೆಡವಿದ್ದ ಕುಂತಳ ಪ್ರಾಂತಕ್ಕಭಿಮುಖಗೊಂಡದ್ದು ತಡ ಆಗಲಿಲ್ಲ.. ಮುಖ ಮಾಡಿದಂಥಾ ಆಂಜನೇಯಸ್ವಾಮಿಯು “ತಾಯಿ ಸಾಂಬವೀss ನಿನ್ನೆದೆಯ ಕರುಣೆಯನ್ನು ಮುಗುಲಿಂದ ಸುರುಸಿ ಸಚರಾಚರಗಳ ಪ್ರಾಣ ವುಳಿಸಿದಿ ತಾಯಿ.. ನಿನ್ನ ಪವಾಡ ಅಂದಿಗುಂಟು ಯಿಂದಿಗಿಲ್ಲ ಯಂಬುವ ನರಾಧಮರನ್ನು ಆಸ್ತೀಕರನ್ನಾಗಿ ಮಾಡು.. ತುಪ್ಪದ್ದೀವಿಗೆಯ ಬೆಳಕೊಳಗ ನಿನ್ನ ಮುಖ ಆಯಿಭೋಗವನ್ನು ಯೀರೇಳು ಲೋಕಗಳೊಳಗೆ ತುಂಬ ಪ್ರಕಾಸಿಸು” ಯಂದು ಸಣಮಾಡಿದ್ದು ತಡ ಆಗಲಿಲ್ಲವಂತೆ ಸಿವನೇ..

ಮುರುಡಿಯ ಅಬಾಲರುದ್ಧರಾದಿಯಾಗಿ ಯಲ್ಲರೂ ಮಳೆಯ ವಂದೊಂದು ಹನಿಯನ್ನು ತಾಯಿ ಕೊಡಮಾಡಿದ್ದ ತೀರ್ಥವೆಂದು ಭಾವಿಸಿ ಮುಗುಲು ಕಡೇಕ ಮುಖ ಮಾಡಿ ಸವುದರು.. ಕಣ್ಣೊಳಗ ನೀರು ತುಳುಕಿಸಿಕೊಂಡು ಮ್ರುತದುಸ್ಯಾವಳಿಗಳಿಗೆ ಜೀವ ತುಂಬಿದರು.. ಕೆಸರ

ವಂದುಗುಳನ್ನು ತಮ್ಮ ತಮ್ಮ ಅಂಗಯ್ಯಿಗೆ ತಕ್ಕೊಂಡು ತಾಯ ಪರಸಾದ ಯಂದು ಭಾವಿಸಿ ಸೇವನ ಮಾಡಿದರು.. ಗತ ಪ್ರಾಣವಾಗಿದ್ದ ರಾಸುಗಳು, ಕುಟುಕು ಜೀವ ಹಿಡಕೊಂಡಿದ್ದ ರಾಸುಗಳು, ನೆಲಕಚ್ಚಿ ಮಲಕ್ಕಂಡಿದ್ದ ರಾಸುಗಳು, ಕಾಲುಬಾಯಿ ರೋಗ ವಡ್ಡಡಿ ಹೋದ ಪರಿಣಾಮವಾಗಿ ಮೆಲಮೆಲ್ಲಗೆ ಯದ್ದು 'ಅಂಬಾ' ಯಂದು ನಾದ ಮಾಡಿದವು....

ಯೀ ಪ್ರಕಾರವಾಗಿ ಹೊಸ ಜೀವದಿಂದ ಕಂಗೊಳಿಸಲಾರಂಭಿಸಿದ ಮುರುಡಿಗೆ ಮುರುಡಿಯೇ ಕುದುರೆಡವಿದ್ದ ಕುಂತಳ ಪ್ರಾಂತದ ಕಡೇಕ ಮುಖಮಾಡಿ 'ತಾಯೇ' ಯಂದು ಗದ್ಗದಿತಗೊಂಡಿತಂತೆ, ಸಣು ಮಾಡಿತಂತೆ....

ಆ ಚಣ ಚೆಲ್ಲಿದ ಮುಗುಳು ನಗೆಯು ವಸ್ತಿಯ ಕಪ್ಪಾನು ಕಪ್ಪನೆಯ ತುಟಿ ಸಂದುಗಳಿಂದ ಜಿನುಗಿ ಜಿನುಗು ಹಳ್ಳವಾಗಿ ಕುದುರೆಡವು ಪಟ್ಟಣದ ಹಾದಿ ಹಾದಿಗುಂಟ, ಬೀದಿ ಬೀದಿಗುಂಟ ಸುಧಾರಸ ಪ್ರಾಯವಾಗಿ ಹರಿದಾಡಿತಂಬಲ್ಲಿಗೆ.. ಅದು ಆಸ್ತೀಕವು ಆಗಿತ್ತೆಂಬಲ್ಲಿಗೆ.. ತಾಯಂದಿರ ಮೊಲೆಗಳು ಹಾಲಿನಿಂದ ಜೀಕಾಡಿದವೆಂಬಲ್ಲಿಗೆ.. ಸಂತರಸ್ತ ಕೂಸು ಕಂದಮ್ಮಗಳು ಅವುಗಳ ಗುಂಡಿಗಳನ್ನು ಜಮಡುತ್ತ ಅನುಗಾಲದ ಹಸಿವನ್ನು ತೀರಿಸಿಕೊಂಡವೆಂಬಲ್ಲಿಗೆ, ಕೇಕೆ ಹಾಕಲಾರಂಭಿಸಿದ ಕಂದಮ್ಮಗಳನ್ನು ಮುದ್ದಾಡಿ ಮುಗುಲಿಗೆತ್ತಿ ಹಿಡಿದರೆಂಬಲ್ಲಿಗೆ.. ಸಿವಸಂಕರ ಮಾದೇವsss...

* * * *

ನೀಳ ಸರೀರದ ಕಮಾಂಡರು ಥ್ಯಾಕರೆ ಅರ್ಧ ತಾಸು ಪರ್ಯಂತರ ಹೇಳಿದ್ದನ್ನು ಕೇಳಿಕೊಂಡ ಮನ್ರೋ ಸಾಹೇಬನು, ಕರಣಂ ಸ್ರೀನಿವಾಸರಾವನ ಸರೀರದ ಮ್ಯಾಲ ಅರ್ದಂಬರ್ದ ವಾಸಿಯಾಗಿದ್ದ ಗಾಯದ ಗುರುತುಗಳನ್ನು ಕಣ್ಣಾರೆ ನೋಡಿದ ರೀಡನ ಸಿಷ್ಯನಾದ ಮನ್ರೋ ಸಾಹೇಬನು ವಂದರಗಳಿಗೆ ಪಶ್ಚಾತ್ತಾಪದ ಅಗ್ಗಿನಿಯೊಳಗೆ ಧಗಧಗ ದಹನಗೊಂಡನು.. ತಾನು ಮತ್ತೊಮ್ಮೆ ನರಮೇಧಕ್ಕೆ ಕಾರಣನಾದೆನಲ್ಲ ಪ್ರಭುವೇ ಯಂದು ವುರಿಯುತಲಿದ್ದ ಮೇಣದ್ದೀಪದ ನೆರಳಲ್ಲಿ ಮುಷ್«ಯಿಟ್ಟು ಅದಕೆ ತನ್ನ ತಲೆಯನ್ನು ಜಜ್ಜಿಕೊಂಡನು.. ಕುರುಕ್ಷೇತ್ರದ ರಣರಂಗದಲ್ಲಿ ಅಸಾಯಕಗೊಂಡು ಪಾರ್ಥನಿಗೆ ಸ್ರೀಕ್ರುಷ್ಣ ಭಗವಾನ ಹೇಳಿದ ಮಾತುಗಳನ್ನು ಗ್ನಾಪಿಸಿಕೊಂಡನು.. ಯಿದರೊಳಗ ತನ್ನ ಪಾತ್ರಯಿರುವುದಾದರೂ ಯೇನು? ತಾನು ಹೇಳಿ ಕೇಳಿ ಕುಂಪಣಿ ಸರಕಾರದ ಯಿನಮ್ರುಸೇವಕನು.. ಸರಕಾರದ ಅಗೋಚರ ಹಸ್ತವನ್ನಲಂಕರಿಸಿರುವ ಮಾನವ ಆಯುಧವು.. ಕ್ರಿಯೆಯ

ಮೂಲಕ ಗುರಿ ತಲುಪುವದಷ್ಟೇ ತನ್ನ ಕರ್ತವ್ಯ.. ರಕ್ತತರ್ಪಣ, ತಲ್ಲಣಗಳ ನಡುವೆ ತನ್ನ ಸರಕಾರ ಮುಂದಡಿ ಯಿರಿಸುತ್ತ ನಡೆಯಬೇಕಿರುವುದು ಅನಿವಾರ್ಯ.. ಸಯ್ನಿಕ ಸಾಯಪದ್ಧತಿಯ ಕಬಂಧಬಾಹೊಳಗೆ ಬಂಧಿತನಾದಂಥ ಬನಗಾನಪಲ್ಲಿಯ ನವಾಬ ತನ್ನ ಅಧೀನದ ಯೀ ನಾಲ್ಕೂ ಪರಗಣ ಪ್ರಾಂತಗಳನ್ನು ಕುಂಪಣಿ ಸರಕಾರದ ಸುಪರ್ದಿಗೆ ವಪ್ಪಿಸುವಾಗ ನಿವೇದಿಸಿಕೊಂಡಿದ್ದಂಥ ಮಾತುಗಳನ್ನು ಕ್ಯಾಂಪ್‌ಬೆಲ್ ಕಣ್ಣಿಗೆ ಕಟ್ಟುವಂತೆ ಹೇಳಿದ್ದು ತನಗಿನ್ನೂ ನೆನಪಿರುವುದು. ಸತಮಾನಗಳಿಂದ ಪಾಳ್ಳೇಗಾರಿಕೆ ಪ್ರಬಲಗೊಂಡಿರುವ ಸದರಿ ಪ್ರದೇಶದ ಆಡಳಿತ ಸುಲಭವಲ್ಲವೆಂದೂ, ಸದರೀ ಯಿಸ್ತಾರವಾದ ಭೂಪ್ರದೇಸದೊಳಗ ಯಿನ್ನೂರಕ್ಕೂ ಮಿಕ್ಕು ಪಾಳೇಗಾಂಡ್ಲು ಯಿರುವರೆಂದೂ, ಅವರನ್ನು ಬಗ್ಗುಬಡಿಯಲು ಸಮರ್ಥ ಅಧಿಕಾರಿಯ ಜರೂರತ್ತು ಯಿರುವುದೆಂದೂ.. ಯಿತ್ಯಾದಿ.. ಯಿತ್ಯಾದಿ.. ಸ್ರೀರಂಗಪಟ್ಟಣದ ಯುದ್ಧದಿಂದ ಬೇಸತ್ತಿದ್ದ ತನಗೆ ಬಡ್ತಿ ನೀಡಿ ವರ್ಗಾವಣೆಗೊಂಡಂಥ ದತ್ತಮಂಡಲದ ಜಿಲ್ಲೆಗಳಿಗೆ ಕಲೆಟ್ಟರನನ್ನಾಗಿ ಸರಕಾರ ನೇಮಕ ಮಾಡಿದ್ದು ಹಳೆಯ ಯಿಚಾರ. ಕುಂಪಣಿ ಸರಕಾರದ ಸಾಮ್ರಾಜ್ಯಶಾಹಿ ದಾಹಕ್ಕೆ ವಂದೊಂದು ಪ್ರದೇಸವನ್ನು ಬಗ್ಗುಬಡಿದು ಬಲಿಕೊಡುವುದೇ ತನ್ನ ಕರ್ತವ್ಯ.. ಅದನ್ನು ತಾನು ಕಾಯಾ-ವಾಚಾ-ಮನಸಾ ನಿರ್ವಹಣೆ ಮಾಡುತ್ತ ಬಂದಿರುವುದಂತೂ ನಿಜ.. ದಿನಕ್ಕೊಂದು ಸಲವಾದರೂ ಯೇಸು ಪ್ರಭುವಿನೆದುರು ಮಂಡೆಯೂರಿ ಪಾಪ ನಿವೇದನೆ ಮಾಡಿಕೊಂಡು ಹಗರಾಗುತ್ತಿರುವುದೂ ನಿಜ.. ತನ್ನ ಅಧಿಕಾರಾವಧಿಯಲ್ಲಿ ಯಾವುದು ನಡೆಯುಕೂಡದೆಂದು ಅಂದುಕೊಳ್ಳುವೆನೋ ಮತ ಮತ್ತೆ ಅದೇ ಘಟಿಸುತ್ತಿರುವುದಲ್ಲಾ.. ತಾನು ಗಂಜಿಹಳ್ಳಿ ಸುಂಕಿರೆಡ್ಡಿ, ಪೆಸಲದಿನ್ನೆ ನಾರಪ್ಪರಂಥ ಮಿತ್ರದ್ರೋಹಿಗಳ ಮಾತು ಕೇಳಬಾರದಿತ್ತು.. ಮುತುಕೂರು ಗವುಡಪ್ಪನ ಆರ್ಥಿಕ ಪರಿಸ್ಥಿತಿಯನ್ನು ಹಾಳುಗೆಡುವಲು ಕಂದಾಯದ ಹೊರೆಯನ್ನು ದ್ವಿಗುಣ ಗೊಳಿಸಬಾರದಿತ್ತು. ಅದರಲ್ಲಿ ತಪ್ಪೇನುಂಟು? ಕುಂಪಣಿ ಸರಕಾರದ ಬೊಕ್ಕಸದ ಯೋಗಕ್ಷೇಮದ ಹೊಣೆ ತನ್ನಂಥ ಅಧಿಕಾರಿಗಳದ್ದು ತಾನೆ?

ಅತ್ತ ಸಂತಮುನುಸೋಬಯ್ಯನೆಂದೇ ಗುಂತಕಲ್ಲು ಪಟ್ಟಣದೊಳಗ ಜನಾದರಣವನ್ನು ದಿನದಿಂದ ದಿನಕ್ಕೆ ಹೆಚ್ಚಿಸಿಕೊಳ್ಳುತಲೇಯಿದ್ದ ಡಿಸೆಕ್ಕನು ಜಮೀಂದಾರು ಗೆಲುಪರೆಡ್ಡಿ ವುದಾರವಾಗಿ ನೀಡಿದ್ದ ಆರೆಕರೆ ಜೆಗೇವಳಗ ಮಿಷನರಿ ಸಂಬಂಧೀ ಕಟ್ಟಡಗಳನ್ನು ವಂದೊಂದಾಗಿ ಯಬ್ಬಿಸುವುದರಲ್ಲಿ

ಮಗ್ನಾಗಿದ್ದನು. ನಡುನಡುವೆ ತನ್ನ ಹೆಂಡತಿ ಕ್ಯಾಥರೀನಳು ಗ್ರೇಟ್ ಬ್ರಿಟನ್ನಿಗೆ ಯಷ್ಟು ದೂರದಲ್ಲಿ ಪಯಣಿಸುತ್ತಿರ ಬೌದೆಂದೂ ಯೋಚಿಸುತ್ತಲಿದ್ದನು. ಯಿನ್ನು ಮುಂದೆ ಯಾವತ್ತೂ ಆಕೆಯನ್ನು ತಾನಾಗಲೀ, ತನ್ನನ್ನು ಆಕೆಯಾಗಲೀ ಭೆಟ್ಟಿ ಮಾಡುವುದು ಅಸಂಭವ.. ತಾನ್ಯಾಕೆ ಭೂತಕಾಲವನ್ನು ಮೆಲುಕುಹಾಕುತ್ತ ವರ್ತಮಾನವನ್ನು ಯಿರೂಪಗೊಳಿಸಿಕೊಳ್ಳುವುದು ಛೇ.. ಛೇ.. ಥರವಲ್ಲ ತಗಿ ನಿನ್ನ.. ಯಂದು ತಾನು ಮುಂದೆ ಯೇನು ಮಾಡಬೇಕಿದೆ? ಯೇನು ಮಾಡಬಾರದಿದೆ? ಮಿಷನರಿ ಪೂರಣಗೊಂಡ ಬಳಿಕ ವುದ್ಘಾಟನಾ ಕಾರ್ಯಕ್ಕೆ ಸರ್ ಥಾಮಸ್ ಮನ್ರೋನನ್ನು ಆಮಂತ್ರಿಸುವುದೋ? ಜನಾನುರಾಗಿ ಬೊಬ್ಬಿಲಿ ನಾಗಿರೆಡ್ಡಿಯನ್ನು ಆಮಂತ್ರಿಸುವುದೋ? ಅಥವಾ ಸ್ರೀರಂಗಪಟ್ಟಣದ ಕಡೇಲಿಂದ ಫಾದರಿ ದುಬಾಯಿಸು ಸ್ವಾಮಿಯನ್ನು ಆಮಂತ್ರಿಸುವುದೋ ಯಂದು ಯೋಚಿಸುತಲಿದ್ದನೆಂಬಲ್ಲಿಗೆ..

ಅದೇ ಗುಂತಕಲ್ಲು ಸೀಮೆಯ ಸರುವನ್ನೊಂದು ಗ್ರಾಮುಗಳಲ್ಲಿ ಮುಂದೊಂದಿನ ಬೊಬ್ಬಿಲಿ ನಾಗಿರೆಡ್ಡಿಯೂ, ಕಲೆಟ್ಟರು ಸಾಹೇಬನೂ ಅಣ್ಣತಮ್ಮಂದಿರಂಗೆ ಯದುರು ಬದುರು ಕೂಕೊಂಡು ವುಂಬುತಾರಂತಲ್ಲಾ ಯಂಬ ಸುದ್ದಿಯನ್ನು ಕಿವಿಯಿಂದ ಬಾಯಿಗೆ, ಬಾಯಿಯಿಂದ ಕಿವಿಗೆ ವುರುಳಿಸಾಡುತ ಜಮಡಲಾರಂಭಿಸಿದ್ದರು. ತೆರನೇಕಲ್ಲಿನ ಮುತುಕೂರು ಗವುಡಪ್ಪನನ್ನೇ ಬಿಡದ ಪರಂಗಿ ಮಂದಿಗೆ ತಮ್ಮ ನಾಗಿರೆಡ್ಡೆಣ್ಣ ಯಾವ ಲೆಕ್ಕ? ಪರಂಗಿ ಮಂದಿ ಮೊದಲೇ ಮನುಷ್ಯರ ಪಯ್ಕಿ ಅಲ್ಲ.. ಪರಪಂಚದಿಂದ ಪರಪಂಚಕ್ಕೆ ಹೊಟ್ಟೆ ಹೊರೆಯುವ ಸಲುವಾಗಿ ಬಂದಿರುವಂಥಾ ಅವರು ಕೂದಲು ಸೀಳುವ ಯಿದ್ದೆಯಲ್ಲಿ ನಿಷ್ಣಾತರು.. ಅವರಿಗೆ ಅಣ್ಣ ತಮ್ಮ, ಅಕ್ಕ ತಂಗಿ ಅಂದರೇನು ಗೊತ್ತು? ಆ ಬೆರಕೀ ಮಂದಿಗೆ ನನ್ನೋರು ತನ್ನೋರು ಯಂಬುವವರು ಇದ್ದರ ತಾನೆ? ಅಂಥ ಅವರ ಬಣ್ಣದ ಮಾತುಗಳಿಗೆ ತಮ್ಮ ನಾಗಿರೆಡ್ಡೆಣ್ಣ ಮರುಳಾಗಥಂಗದಾನ.. ಮಯ್ಯನ ಮರತಂಗ ಅದಾನ.. ಯಿದು ತರವಲ್ಲ.. ಆತನ್ನ ಕಂಡು ಪರಂಗಿ ಮಂದಿಯ ಹಕೀಕತ್ತನ್ನು ಯಿವರಿಸಬೇಕು.. ಯಿಲ್ಲದಾನ.. ಅಲ್ಲದಾನ.. ಯಲ್ಲದಾನ.. ಅಯ್ಯೋ ಸಿವನ.. ಅವಯ್ಯ ಯಲ್ಲಲ್ಲೋ ಯಿದ್ದಾಂಗ ಅದಾನಲ್ಲ.. ಹಗ್ಗಕೊಟ್ಟು ಕಯ್ನ ಕಟ್ಟಿಸಿದಂಗಾತಾನಲ್ಲ!.. ಅಯ್ಯೋ ಪರಮಾತುಮ.. ನೀನೇ ಅವಯ್ಯನ ಕಾಪಾಡಬೇಕು.. ಯಂದನಕಂತ ಯಲ್ಲೆಲ್ಲೋ ಯಿದ್ದ ಮಂದಿ ಅಲ್ಲಲ್ಲೇ ಗಡೇಕಲ್ಲ ತವನಿಧಿ ಭೀಮಲಿಂಗೇಸ್ವರ ಸ್ವಾಮಿಯನ್ನು

ಕಯ್ಯನ ಮುಗುದು ಬೇಡಿಕೋತಿದ್ದರು ಯಂಬಲ್ಲಿಗೆ ಸಿವಸಂಕರ ಮಾದೇವಾss....

ಅತ್ತ ಹರಪನಹಳ್ಳಿ ಸೀಮೆಯೊಳಗ ಸಿರುಬಿಯ ಸಿವ್ಮಾಸನವನ್ನು ಕೊಳದಂಯ್ಯಸ್ವಾಮಿಯೂ, ಅಲಬೂರಿನ ಸಿಲಾ ಸಿವ್ಮಾಸನವನ್ನು ಕಣುವಂಯ್ಯಸ್ವಾಮಿಯೂ, ಬತ್ತನಳ್ಳಿಯೊಳಗ ವಂದು ಜಡೀವುಳಗೆ ಬಿದ್ದುಹೋಗುವಂತಿದ್ದ ಅರಮನೆಯನ್ನು ಗಡ್ದಯ್ಯ ಸ್ವಾಮಿಯೂ ತಮ ತಮ್ಮ ಕಮಂಡಲುಧಾರಿ ಶಿಷ್ಯರುಂದದವರಿಂದ ಕಬ್ಜಾ ಮಾಡಿಕೊಂಡು ಆಳ್ವಿಕೆ ನಡೆಸಿದ್ದರೆ, ಯಿತರೇ ಹಲವು ಮೂರುಗಳ ಪ್ರಜೆಗಳು ತಲಾ ಯಿಷ್ಟಿಷ್ಟು ವಂತಿಗೆ ಹಾಕಿ ತಮ್ಮ ಪಯ್ಕಿ ಕೆಲ ಮುಖಂಡರನ್ನು ಸಿಪಾಯಿಗಳನ್ನು ಸಾಯಮಾಡುವಂತೆ ಕೋರಲು ಕುಂಪಣಿ ಅಧಿಕಾರಿಗಳಿದ್ದಲ್ಲಿಗೆ ಕಳುವಿದ್ದರಷ್ಟೆ.. ಮುಖಂಡರ ಪಯ್ಕಿ ಕೆಲವರು ಅರ್ಧದಾರಿ ವುಟ ಹೋಗಿ 'ಯಿದು ಪಾಡಲ್ಲ' ಯಂಬ ಗ್ನಾನೋದಯಗೊಂಡು ವಾಪಾಸು ಬಂದರೆ, ಕೆಲವರು ವಂತಿಗೆ ಸಮೇತ ಅಲ್ಲಿಗೂ ಹೋಗದೆ, ಯಿಲ್ಲಿಗೂ ಬಾರದೆ ಮಂಗಮಾಯವಾಗಿಬಿಟ್ಟಿದ್ದರು.. ಮತ್ತೆ ಕೆಲವರು ಪ್ರಾಮಾಣಿಕವಾಗಿ ಗುರಿ ತಲುಪಿ ಅರಕೆ ಮಾಡಿಕೊಂಡಿದ್ದಕ್ಕೆ ಕುಂಪಣಿ ಅಧಿಕಾರಿಗಳು ನಿಮ್ಮೂರೊಳಗಿರುವುದು ವಂದು ಅರಮನೆಯೇನು? ವಂದು ದುಗ್ಗಾಣಿ ಸಹಯಿಲ್ಲದ ಬೊಕ್ಕಸ ವಂದು ಬೊಕ್ಕಸವಾ ನಿಮಗs ತಿಂಬಲಕ ಯಿಲ್ಲ ಅಂಬುತೀರಿ, ನಮ್ಮ ಸಿಪಾಯಿಗಳಿಗೆ ಯೇನು ತಿಂಬಲಕ ಕೊಡುತೀರಿ? ಯೇನು ಕುಡಿಯಲಕ ಕೊಡುತೀರಿ ನೀವು ಕೇಳೋದು ಸಜ್ಜಲ್ಲ.. ನಾವು ಕಳುವೋದು ಸಜ್ಜಲ್ಲ.. ನಿಮದು ನೀವ ನೋಡಿಕೊಳ್ಳಿರಿ ಯಂದು ಯವಹಾರಿಕವಾಗಿ ಆಡಿಕೊಳ್ಳಲಕ, ಕೆಲವು ಮೂರಗಳ ಅರಮನೆಗಳಂತೂ ಹರೇದವರು ತುಡುಗು ಕೆಲಸ ಕಾರ್ಯೆವುಗಳ ಕಾರಾಸ್ಥಾನವಾಗಿಬಿಟ್ಟಿದ್ದವು... ಕೆಲವು ಮೂರುಗಳಂತೂ ತಮ್ಮನ್ನಾಳುವ ರಾಜರಿಲ್ಲದೆ ಯಿಧವೆಯ ಮುಖದಂತೆ ಬಿಕೋ ಅನ್ನಲಾರಂಭಿಸಿದ್ದವು.

ಅತ್ತ ಕೂಡ್ಲಿಗಿ ಪಟ್ಟಣದೊಳಗ ಆದರ್ಸ ದಾಂಪತ್ಯ ಯೋಜನೆಯ ರೂವಾರಿ ರಾಯನು ಮುಖ ತಗ್ಗಿಸಿಕೊಂಡು ಪಲಾಯನ ಮಾಡಿದ ಲಾಗಾಯ್ತು ನೂರಾರು ದಂಪತಿಗಳು ಆದರ್ಸ ಮಟ್ಟಕ್ಕೆ ಯೇರಲಾರದೇ, ಪೂರುವ ಸ್ಥಿತಿಗೆ ಯಿಳಿಯಲಾರದೆ ತ್ರಿಸಂಕು ಸ್ಥಿತಿಯಲ್ಲೇ ವುಳಿದುಬಿಟ್ಟಿದ್ದವು.. ಅವುಗಳ ನಡುವೆ ಯಿರುಸು, ಮುರುಸು, ಬಿರುಕು ಕಾಣಿಸಿಕೊಳ್ಳಲಕ ಆರಂಭಗೊಂಡಿತ್ತು.. ಸದರಿ ಪಟ್ಟಣದೊಳಗ ಯಿಪ್ಪತ್ತಿಪ್ಪತ್ತಯ್ದಕ್ಕೇ ಸನ್ಯಾಸಿ ಪದವಿಯನ್ನಲಂಕರಿಸಿದ್ದ

ತರುಣರನೇಕರು ತಾಯವ್ವನ ಮನೆ ಆಜುಬಾಜುಕ ಆಸ್ರಮಗಳನ್ನು ಕಟ್ಟಿಕೊಂಡು ಭಗ್ನಪ್ರೇಮ ಕುರಿತ ಕಾವ್ಯರಚನೆಗೆ ತೊಡಗಿದ್ದರಷ್ಟೆ.. ಬಂಗಲೆಗೆ ಹೋಗುವಾಗಲಾದರೂ, ಬಂಗಲೆಯಿಂದ ಬರುವಾಗಲಾದರೂ ಲಾವಣ್ಯವತಿ ಡೋಲಿಯ ಪರದೆ ಸರಿಸಿ ತಮ್ಮತ್ತ ವಂದೇ ವಂದು ಸಲವಾದರೂ ಕ್ರುಪಾ ದ್ರುಸ್ಟಿ ಹರಿಸ್ಯಾಳು ಯಂದವರು ತುದಿಗಾಲಲ್ಲಿ ಕಾಯುತ ಪ್ರತಿಸಲ ನಿರಾಸರಾಗುತ್ತಿದ್ದರಷ್ಟೆ.. ಆ ಅಚಾನಕ ಕವಿಗಳು ತಮ್ಮ ಕಾವ್ಯಕ ಪರಿಕರಗಳನ್ನು ಸಂಗ್ರಹಿಸ ಲೋಸುಗ ತಿಲ್ಲಾನ ತಾಯಕ್ಕನ ನಡವಳಿಕೆಗಳನ್ನು ಅಭ್ಯಾಸ ಮಾಡುತ್ತಿರುವಂತೆಯೇ ಬಂಗಲೆ ಬಳಿ ಸುಳಿದಾಡುತ ಜೆನ್ನಿಫರಮ್ಮ ಮತ್ತು ಚಿನ್ನಾಸಾಮಿಯರೀರ್ವರ ಗಾಢ ಸಂಬಂಧವನ್ನು ತಮ್ಮದೇ ಆದ ರೀತಿಯಲ್ಲಿ ಪರಸ್ಪರ ಚರ್ಚೆಯ ದ್ವಾರ ಯಾಖ್ಯಾನಿಸಿಕೊಳ್ಳುತಲಿದ್ದರು.. ಜೆನ್ನಿಫರಮ್ಮ ಪೂರುವ ಜಲುಮದಲ್ಲಿ ಚಿನ್ನಾಸಾನಿಯ ಗಂಡನಾಗಿದ್ದಿರಬೇಕೆಂದು ವಬ್ಬರು, ಚಿನ್ನಾಸಾನಿಯೇ ಪೂರುವ ಜಲುಮದಲ್ಲಿ ಜೆನ್ನಿಫರಮ್ಮಗೆ ಗಂಡನಾಗಿದ್ದಿರಬೇಕೆಂದು ಯಿನ್ನೊಬ್ಬರು.. ಯೀ ನಿರುಪದ್ರವಿ ಚರ್ಚೆ ಬಗ್ಗೆ ತಾಯಕ್ಕೆ ತಲೆ ಕೆಡಿಸಿಕೊಳ್ಳದೆಯಿರಲಿಲ್ಲ.. ಆ ನತದ್ರುಷ್ಟರು ಬರೆದಿರಬಹುದಾದ ಬರೆಯುತ್ತಿರ ಬಹುದಾದ, ಕಾವ್ಯ ಭಾಗಗಳನ್ನು ಅಪಹರಿಸುವ ಪ್ರಯತ್ನದಲ್ಲಿ ತಾನಿಲ್ಲದೆಯಿರಲಿಲ್ಲ.. ಅವರ ಅಪ್ರಕಟಿತ ಕಾವ್ಯ ಭಾಗಗಳಲ್ಲಿ ತನ್ನನ್ನು ರಾಯನು ಸಂಭೋಗಿಸಿದ್ದನೆಂದು ವುತ್ಪ್ರೇಕ್ಷೆ ಮಾಡಿ ಬರೆದಿದ್ದರೆ ಯಂಬ ಅನುಮಾನ ಬಂದು ಆಕೆ ಯಿಂಥ ದುಷ್ಕ್ರುತ್ಯಗಳಲ್ಲಿ ತೊಡಗಿದ್ದಳು.. ಅಪಹರಣದ ಮೂಲಕ ತರಿಸಿಕೊಂಡ ಕಾವ್ಯಭಾಗಗಳನ್ನು ಹರಳೆಣ್ಣೆ ದೀಪದ ಬೆಳಕಲ್ಲಿ ಮೋದುವ ಪ್ರಯತ್ನ ಮಾಡುತಲಿದ್ದಳು ಯಂಬಲ್ಲಿಗೆ ಸಿವ ಸಂಕರ ಮಾದೇವss

ಅತ್ತ ಕುದುರೆಡವ ಪಟ್ಟಣದೊಳಗಿನ ಸಂಭರವ ಯೇನು ಹೇಳುವುದು? ಮವುನವ ಯೇನು ಹೇಳುವುದು? ಅಲ್ಲಿನ ಪ್ರತಿವಬ್ಬರ ರುದಯ ಬಡಿತದ ಯೇರಿಳಿತವ ಯೇನು ಹೇಳುವುದು? ತಮಗಂಗಾದಂಗಾತಯ್ತೆಂಬುವ, ಹಿಂಗಾದಂಗಾ ತಯ್ತೆಂಬುವ ವರ್ತಮಾನವ ಯೇನು ಹೇಳುವುದು? ಬರಡೆಂಬುವ ಸಬುಧದೊಡಲಿಂದ ಹಯನ ಯಂಬುವ ಸಬುಧ ವಡಮೂಡಿತು ಯಂಬುದರ ಕುರಿತು ಯೇನು ಹೇಳುವುದು? ದಯವ ಸಂಬಂಧೀ ಕ್ರಿಯೆಯ ಸಾಯಿರ ರೂಪ ಪಡೆಯಿತೆಂಬುದರ ಕುರಿತು ಯೇನು ಹೇಳುವುದು? ಸಚರಾಚರ ಪಂಚೇಂದ್ರಿಯಗಳು ನೆರೆ ಬಂದ ನದಿಯೋಪಾದಿ ಯಲ್ಲಿ ಸಿಡೇಗಲ್ಲಗಸೆ ಬಾಕಲ

ಕಡೆ ನಿತ್ಯ ಪ್ರವಹಿಸುತ್ತಲೇ ಯಿದ್ದುದರ ಕುರಿತು ಯೇನು ಹೇಳುವುದು? ಸದರಿ ಗ್ರಾಮದ ಅಲವುಕಿಕ ಸಂಗತಿಗಳನ್ನು ತಮ ತಮ್ಮ ಗಂಟಲುಗಳಲ್ಲಿ ತುಂಬಿಕೊಂಡು ಸುತಮುತ್ತಲ ಗ್ರಾಮಗಳಿಗೆ ತುತ್ತುಣ್ಣಿಸುವ ಸಲುವಾಗಿ ಬಟಾಬಯಲಿಗೆ ಹೊಸ ಯಾಖ್ಯೆ ಬರೆಯುತಲಿದ್ದ ತರಾವರಿ ಪಕ್ಷಿಗಳ ವಯ್ಯಾರದ ಬಗ್ಗೆ ಯೇನು ಹೇಳೋದು? ಹ್ಹಾ.. ಹ್ಹಾ.. ಹ್ಹೋ.. ಹ್ಹೋ.. ಯಂಬ ಅನುಭಾವಿ ವುದ್ಗಾರಗಳ ಬಗ್ಗೆ ಯೇನು ಹೇಳೋದು?

ದ್ವಾಪರದ ನಾಕನೇ ಪಾದದಲ್ಲಿ ಹುಟ್ಟಿರುವಂಥಾತನೂ, ನೆಲದ ವಳಗಿನ, ಹೊರಗಿನ ಹೊಳೆ ಹಳ್ಳಗಳ ನೀರು ಕುಡಿದಂಥಾತನೂ, ಗವುರಸಂದರ ಮಾರೆಮ್ಮನೊಂದಿಗೆ ಪತ್ತೀಸು ಕಾಯಾಟವ ಆಡುತ್ತಿದ್ದಂಥಾತನೂ ತನ್ನ ಸರೀರದ ಮ್ಯಾಲೆಲ್ಲ ಸಂಜೀವಿಣಿ ಪರುವತವನ್ನು ಮುಡುಕೊಂಡಿರುವಂಥಾತನೂ ಆಗಿರುವಂಥ ಮುರುಡಿ ಹಂಪಜ್ಜನು ಬಂದಲಾಗಾಯ್ತು ಯಿದೆಲ್ಲ ಜರುಗುತಲಿರುವುದು, ಅದೆಲ್ಲ ಜರುಗುತಲಿರುವುದು.. ಬಡೇಲಡಕು, ಗುಂಡುಮುಳುಗು, ಕುಮತಿ, ಹೊಡೇವೋ ಮೊದಲಾದ ದೇಸ ಯಿದೇಸಗಳನ್ನೊಳಗೊಂಡಂತೆ ಸದರೀ ಪಟ್ಟಣದ ಯಾವತ್ತೂ ಮಂದಿಯ ಕುತೂಹಲದ ಕೇಂದ್ರವಾಗಿರ್ಪ...

...ಆ ಪೂರುವಿಕನು ರೊತಾರೂಢನಾಗಿ ಯೇಸು ದಿವಸಗಳಾದವು ತ್ರಿಕಾಲ ಪೂಜಿ ಪುನಸ್ಕಾರ ಮಾಡಲಕ ಹತ್ತಿ ಯೇಸು ದಿವಸಗಳಾದವು? ಬಾಯಿಯ ಸಾಯವಿಲ್ಲದೆ ಹೇಳೋದು, ಕಿವಿಯ ಹಂಗಿಲ್ಲದ ಕೇಳೋದು ಮಾಡಲಕ ಹತ್ತಿ ಯೇಸು ದಿವಸಗಳಾದವು? ಸದರಿ ಪಟ್ಟಣವು ಹೇಳಲಕ ವಂದು ಬಾಯನ, ಕೇಳಲಕ ವಂದು ಕಿವೀನ ಮುಡಕೊಂಡು ಯೇಸು ದಿವಸಗಳಾದವು? ಸಿವ.. ಸಿವಾ.. ಬರೀ ವಗಟು, ಕಾರಣಿಕಗಳೇ ಕಣ್ಣಾಮುಚ್ಚಾಲೆ ಆಟವ ಆಡುತ್ತಿರುವವಲ್ಲ.. ಸಿವ.. ಸಿವಾ.. ನಿರಕ್ಕಸರ ಕುಕ್ಕಚಿಗಳಾದ ತಾವು ಯಿವನ್ನೆಂಗ ವಡಬಡದು ಅರ್ಥಮಾಡಿಕೊಳ್ಳೋದು ಹ್ಯಾಂಗ ಸಿವ.. ಸಿವಾ...

ಆದರೂ ಮಂದಿ ಹಿಂಗಂದಕಂತ ಸುಮ್ಮಕ ಕೂಕಂಡಿರಲಿಲ್ಲ.. ವಬ್ಬೊಬ್ಬರೊಳಗ ಮೂರು ನಾಕು ಮಂದಿಯಂತೆ ಯಿದ್ದ ಸೊಯಂ ಕಾರ್ಯೆವುಕರ್ತರು ಗೊಂಜಾಡಲರಡವಯ್ಯನ ಕಡೆಗೆ ನೋಡತಲಿದ್ದರ, ಆರು ಬೊಳ್ಳ ಮುದೇತನು ಲಚುಮವ್ವ ತೋಪಿನ ಸಮುಸ್ಥಾಪನಾಚಾರ್ಯ ಜಡೆತಾತನ ಕಡೇಕ ನೋಡುತಲಿದ್ದನು. ರಸಾಸಿದ್ದರ ವಮುಸದ ಮೊದಲ ಮತ್ತ ಅಖರ ಕುಡಿಯೂ

ಆದಂಥ ಅವಯ್ಯನು ಗವುರ ಸುಂದರ ಮಾರೆಮ್ಮ ದೇವತೆಯ ಕರುಣೆಯ ಕಂದಮ್ಮನಾದ ಕಾಡುಗೊಲ್ಲರೀರಯ್ಯನ ಕಡೇಕ ನೋಡುತಲಿದ್ದನು.. ವಂದು ಕಾಲಕ ವುಬ್ಬುತಾss.. ಯಿಂದಿನ ಕಾಲಕs ಹೆಂಗ ವುಳಕೊಂಡು ಬಿಟ್ಟಿರುವ ಮತ್ತು ಚಲನವಲನ ನಿಷ್ಣಾತನಾದ ಅವಯ್ಯನು ತನ್ನ ಪೂರುವಾಸ್ರಮದ ಗೆಣೆಕಾರನಾದ ಹಂಪಜ್ಜನ ಕಡೇಕ ನೋಡುತ.. ಆತನ ಆಂಗಿಕ ಕಂಪನಕ ವಂದೊಂದು ಅರ್ಥವನ್ನು ಕಟ್ಟುತ, ಕಿವಿಯಿಂದ ಕಿವಿಗೆ ಯಿಲೇವಾರಿ ಮಾಡುತಲಿದ್ದುದು ಬಲು ಚೋಜಿಗದ ದ್ರುಸ್ಯ ಅದಾಗಿತ್ತು...

ಯಿದು ಮೊದಲೇ ಅವಧೂತ ಸಂಬಂಧೀ ಮಾಯಾದ ಲೋಕವು.. ಯಾವ ಛಣದಲ್ಲಿ ಲಟಕ್ಕನ ಯದ್ದು ಕುಂಡುರುವುದೋ ಯಾರು ಬಲ್ಲರು? ಕರೆಯೋರನು ಕರೆದಿಟ್ಟುಕೋಬೇಕು? ಮಾಡೋದನು ಮಾಡಿಟ್ಟುಕೋಬೇಕು. ಹಂಪಜ್ಜ ಕಣ್ಣುಮುಚ್ಚಿ ತಾಯಿಯ ಯಿರಾಟ್‌ರೂಪವ ನೋಡುತಯ್ಯಾನಂತೆ.. ಕಿವಿಮುಚ್ಚಿ ತಾಯಿಯ ಅಗ್ನೇವುಗಳನು ಕೇಳುತಲಯ್ಯಾನಂತೆ.. ಬಾಯಿಯ ಹಂಗಿಲ್ಲದ ತಾಯಿಯೊಂದಿಗೆ ಮಾತಾಡುತಲಯ್ಯಾನಂತೆ.. ಕಾಲಿಲ್ಲದssನೆ ತಾಯಿಯ ರುನ್ಮಂದಿರದೊಳಗ ಅಡ್ಡಾಡುತಲಯ್ಯಾನಂತೆ.. ಅದಕss ಮಿಜಿಮಿಜಿ ಮಾಡುತಿರೋದು ಬ್ಯಾಡ.. ಯಂಬ ಕಾರಣಕ್ಕ ಮಂದಿಯು....

ಪ್ರಯೇಸ ಮಾಡುದಕೂ ಪೂರುವದಲ್ಲಿ ತಾಯಿ ಸಾಂಬವಿ ಪಟ್ಟಣದ ಅಜುಬಾಜಕ ಯೇನೇನು ಗುರುತು ತೋರಿಸವಳೆ.. ಅಲ್ಲೆಲ್ಲ ಪ್ರಹರಿಗೋಡೆಗಳ ಕಟ್ಟಿಸಬೇಕು, ಅರಿಷಣ ಕುಂಕುಮ ಹಚ್ಚಿ ಮೂರು ಯ್ಯಾಳೆ ಪೂಜಿಪುನಸ್ಕಾರ ಮಾಡಬೇಕು. ಅಲ್ಲೆಲ್ಲ.. ಅದೆಲ್ಲ ಕಾಪಾಡಿ ಕೊಳ್ಳಬೇಕು..

ನರಮಂದಿಯಾದ ತಮ್ಮಿಂದ ಸಂಭವಿಸಿರುವ ಅಪಚಾರಗಳು ವಂದಾss ಯರಡಾss

ತಾಯಿ ಸಾಂಬವಿ ಗುಡಿ ಹಿಂದಲ ಮೂಳೆಮೋಬಯ್ಯನ ಸರೀರದೊಳಗ ವಸ್ತಿಮಾಡಿದ ಚಣದಿಂದ ಸದರಿ ಪಟ್ಟಣವನ್ನು ಮಡಿವುಡಿಯಿಂದ ಯಿಡಬೇಕಿತ್ತಲ್ಲs ಬೇಬಿಷ್ಟೆ ತಾಚ್ಛಾರ ಮಾಡಬಾರದಾಗಿತ್ತಲ್ಲಾ.. ಪಟ್ಟಣಯಿರುವ ವಂದು ಮಯ್ಲಿ ಪಾಸಲೆಂಯೊಳಗ ವಂದವ ಮಾಡಬಾರದಾಗಿತಲ್ಲಾ.. ಯುರಡವ ಮಾಡಬಾರದಾಗಿತ್ತಲ್ಲಾ.. ಮುಟ್ಟು, ಮಯ್ಲಿಗಿ ಸೂತಕ ಮಾಡಬಾರದಾಗಿತ್ತಲ್ಲಾ.. ಜನನ ಯಂಬ ಸೂತಕ, ಮರಣ ಯಂಬ ಸೂತಕ, ಹೊರಗಾಗುವ ಸೂತಕ, ವಳಗಾಗುವ ಸೂತಕ, ಮ್ಯಾಲಾಗುವ ಸೂತಕ, ಕೆಳಗಾಗುವ ಸೂತಕ, ಗರುಭ

ಧರಿಸುವ ಸೂತಕ, ಬಸುರಿಳಿಯುವ ಸೂತಕ, ಕೆಮ್ಮುವ ಸೂತಕ, ಕ್ಯಾಕರಿಸುವ ಸೂತಕ ಯಿಂಥಪ್ಪ ಛಪ್ಪೀಸು ಸೂತಕಗಳು ಸಂಭವಿಸಬಾರದಾಗಿತ್ತಲ್ಲಾ.. ಹಸುದೋರ ಯದರು ಡೇಗಬಾರದಾಗಿತ್ತಲ್ಲಾ.. ವುಪ್ಪರಿಗೆಗಳೊಳಗ ಯಿರಬಾರದಾಗಿತ್ತಲ್ಲಾ.. ಮಂಚ ವರಸುಗಳ ಮ್ಯಾಲ ವರಗಬಾರದಾಗಿತ್ತಲ್ಲಾ.. ಹಾಸಿಗೆ ಪತ್ಯೇವು ಮಾಡಬೇಕಾಗಿತ್ತಲ್ಲಾ.. ಕೂಳು ಹೆಚ್ಚಾಗಿ ಕುಪ್ವಾಡ ಮಾಡಬಾರದಾಗಿತ್ತಲ್ಲಾ. ಸಿವಾ ಸಿವಾ.. ಯೇನೇನು ಮಾಡಬಾರದಾಗಿತ್ತೋ ಅದನ್ನೆಲ್ಲ ಮಾಡಿಬಿಟ್ಟೆವು.. ಕಲಿಯುಗ ಕವಕೊಂಡು ಬಿದ್ದಿರೋ ಸದರಿ ಪಟ್ಟಣದ ಮಂದಿ ಯೀವತ್ತು ಸುಧಾರಿಸಿಯಾರು.. ನಾಳೆ ಸುಧಾರಿಸಿಯಾರು ಯಂದು ಸಯ್ರಣೆ ಯಿಂದ ಕಾದದ್ದು ತಾಯಿಯ ದೊಡ್ಡಗುಣವಂತೆ.. ಸಿವ... ಸಿವಾ.. ಆಕೆಯ ರುದಯದಲ್ಲಿ ದಯಾಸಾಗರ ಯಿರುವುದಂತೆ.. ಯಿಡೀ ಪಟ್ಟಣವನ್ನು ವಾಂತಮ್ಮ, ಭೇದಮ್ಮಗಳಿಗೆ ಬಲಿ ಕೊಟ್ಟು ಬಿಟ್ಟಿದ್ದಲ್ಲಿ.. ಯಂದು ಮಮ್ಮಲನ ಮರುಗುತ್ತ ಪಶ್ಚಾತ್ತಾಪದ ಬೆಂಕಿಯೊಳಗ ಬೆಂದು ನಿಚ್ಚಳಾಗಲಾರಂಭಿಸಿದರು.....

ಮಯ್ಮೆವಂತನಾದ ಹಂಪಜ್ಜನೇ.. ನರಹುಳುಗಳು ನಾವು.. ನಮ್ಮ ಅಪಚಾರವ ಹೊಟ್ಟೇಲಿ ಹಾಕ್ಕೊಂಡು ಕಾಪಾಡು ಮಾನುಭಾವಽ ಯಂದನಕಂತ ಹೋಗಿ ದೀರುದಂಡ ನಮಸ್ಕಾರ ಮಾಡಿಕೊಳ್ಳತೊಡಗಿದರು..

ಯಿೂ ಪ್ರಕಾರವಾಗಿ ಯಿಡೀ ಪಟ್ಟಣವೇ ನಾನಾರೀತಿಯ ಪ್ರಾಯಶ್ಚಿತ್ತದ ಬಾಣಲೆಯೊಳಗೆ ಬೇಯುವಂತೆ ಮಾಡಿದಂಥ ಮುಪ್ಪಾನು ಮುದೇತನು ಮತ್ತಿನ್ನೇನನ್ನು ಮಾಡಿಸಿದನೆಂದರೆ.. ಆ ಕಾರ‍್ಯೇವುಗಳು ವಂದಲ್ಲಾ.. ಯರಡಲ್ಲಾ.. ಅರಮನೆಯ ಪ್ರಸಿದ್ಧ ಟಾಮು ಟಾಮುಗಾರರಾದ ಅಪರಾ ಯಂಬ ಆರು ಮೊಳದವನನ್ನೂ, ತಪರಾ ಯಂಬ ಮೂರು ಮೊಳದವನನ್ನೂ ಸನ್ನಿಧಾನಕ್ಕೆ ಕರೆಯಿಸಿಕೊಂಡು ಹಿಂಗಂಗಂತ ಹೇಳಿದರು.. ಯಿದು ತಮ್ಮ ಪೂರುವ ಜಲುಮದ ಸುಕ್ರತ ಯಂದು ಭಾವಿಸಿದ ಆ ವಡಹುಟ್ಟಿದೋರು ಭಲೇ ಹುರುಪಿನಿಂದ ಸದರಿ ಪಟ್ಟಣವನ್ನು ಮಡಿವುಡಿಯಿಂದ ಯಿಡಬೇಕರಪ್ಪಾ.. ಅದು ಯಾವ ಪ್ರಕಾರ ಯಂದರ....

ಪಟ್ಟಣ ಯಿರೋ ವಂದು ಮಯ್ಲಿ ಪಾಸಲೆಯೊಳಗ ವಂದಽ ಮಾಡಬಾರದು ಟಾಂ.. ಟಾಂ... ಯರಡಽ ಮಾಡಬಾರದು ಟಾಂ.. ಟಾಂ..

ಮಟ್ಟು ಮಯ್ಲಿಗೆ ಮಾಡಬಾರದು ಟಾಂ.. ಟಾಂ..

ಪಟ್ಟಣದೊಳಗ ಯಾರೂ ದೊಡ್ಡಾಕಿ ಆಗಬಾರದು.. ಹಡೆಯಬಾರದು

ಟಾಂ.. ಟಾಂ..

ಬಸುರಾಗಬಾರದು.. ಹಡವಣಿಗೆಯಾಗಬಾರದು ಟಾಂ.. ಟಾಂ..

ವುಪ್ಪರಿಗೆ ಯೇರಬಾರದು.. ಮಂಚದ ಮ್ಯಾಲ ಮಲಗಬಾರದು ಟಾಂ.. ಟಾಂ..

ಹಾಸಿಗೆ ಪತ್ಯೇವು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಟಾಂ.. ಟಾಂ..

ಚಾಸ್ಟಿಕುವ್ವಾಡ ಮಾಡಬಾರದು, ಬಾಯಿಯಿಂದ ಮೋಕು ಮಾತು ಆಡಬಾರದು ಟಾಂ.. ಟಾಂ..

ಮಯ್ಗೆ ಯರಕಂತಿರಬೇಕು ಟಾಂ.. ಟಾಂ...

ವುತ್ರಾಣಿ ಕಡ್ಡಿಯಿಂದ ದಂತ ಮಜ್ಜಣ ಮಾಡುತಿರಬೇಕು ಟಾಂ.. ಟಾಂ..

ವುಂಬುವ ಬಾನ ತಾಯ ಪರಸಾದ ಯಂದು ತಿಳಿಯಬೇಕು.. ಕುಡಿಯೋ ನೀರು ತಾಯಿಯ ತೀರ್ಥ ಯಂದು ತಿಳಿಯಬೇಕು ಟಾಂ.. ಟಾಂ..

ಜಾವ ಜಾವಕ್ಕೊಂದೊಂದು ಸಲ ತಾಯಿಯ ನಾಮಸ್ಮರಣೆ ಮಾಡಬೇಕು ಟಾಂ.. ಟಾಂ..

ಅವರು ಹಾಕಿದ ಟಾಮು ಟಾಮು ವಂದಾದರ, ಅದು ಮಂದಿಯ ಕಿವಿಯೊಳಗ ಬಿದ್ದು ಪಡಕಂಡ ರೂಪ ವಂದೇ ಯರಡೇ. ಆಸ್ತೀಕ ಮಂದಿ ವಂದs ಮಾಡಲಕೊಂದು ಮಯ್ಲು.. ಯರಡs ಮಾಡಲಕ ಯರಡು ಮಯ್ಲು ದೂರ ಹೋಗಲಾರಂಭಿಸಿದರು ಮಂದಿ.. ಯಲ್ಡು ತಂಬಿಗೆ ನೀರು ಕುಡಿಯೋರು ವಂದು ತಂಬಿಗೆ ನೀರು ಕುಡಿಯಲಾರಂಭಿಸಿದರು ಮಂದಿ.. ತಮ್ಮನ್ನು ಯೇರದವರಿಲ್ಲದೆ ವುಪ್ಪರಿಗೆಗಳು ಬಿಕೋ ಅಂಬತೊಡಗಿದವು. ಮಂಚ ವರಸುಗಳು ತಮ್ಮ ಮ್ಯಾಲ ಮಲಗುವವರಿಲ್ಲದೆ ಮೂಲೆಗುಂಪಾದವು.. ಗಂಡ ಹೆಂಡಿರು ಪರಸ್ಪರ ಬೆನ್ನು ಮಾಡಿ ಮಲಗಲಾರಂಭಿಸಿದರು.. ಚಾಸ್ಟಿ ಕುವ್ವಾಡಗಳನ್ನು ತಮ ತಮ್ಮ ಗಂಟಲುಗಳಿಂದ ವಕ್ಕಲೆಬ್ಬಿಸಿದರು ಮಂದಿ.. ಬಯ್ಗಳಿಂದ ದೂರವುಳಿದರು ಮಂದಿ.. ಸಾಂಬವಿ ಯಂಬ ಸಬುಧವು ಪಟ್ಟಣದ ಅಣುರೇಣು ತ್ರುಣಕಾಷ«ಗಳಲ್ಲಿ ರಸದುಂಬಿಕೊಂಡಿತು.. ಆ ಮಹಿಮಾನ್ವಿತ ಸಬುಧವು ಚಲಾವಣೆಗೊಳ್ಳುತ್ತ ತನಗ ತಾನೇ ರೂಢಿಗೊಂಡಿತು.. ಅರಮನೆಯೂ ಅಳುಕಿನಿಂದಲೇ ಟಾಂ ಟಾಮನ್ನು ಜಾರಿ ತಾರದೆ ಯಿರಲಿಲ್ಲ.. ಅದರ ಬೇಯಿನಮರದ ಬುಡದಲ್ಲಿ ಗುಡುಲು ಹಾಕಿಕೊಂಡು ವಾಸಿಸುತಲಿದ್ದ ಜಗಲೂರೆವ್ವ ಸರ್ರೆಸರ್ರೆ....

ಅತ್ತ ತ್ರಿಕಾಲಗಳ ನಡುವೆ ಅಯಿರತ ಸಂಚಾರ ಮಾಡುತಲಿದ್ದ ಹಂಪಜ್ಜನು ನಾಸ್ತೀಕ ಮಂದಿಯ ವುಸಾಬರಿಯನ್ನು ದಯವಾನುಕೂಲಕ್ಕೆ ಬಿಟ್ಟುಬಿಡಬೇಕೆಂದು ನಿರ್ಧಾರ ಮಾಡಿದನು.. ತಾನು ಯೀ ಮುಂದಕ ಯೇನು ಮಾಡಿದನಂದರ.. ವಸ್ತಿಗೆ ಮಜ್ಜಣ ಮಾಡಿಸಲಕ, ಹಾಸಿಗೆ ಹಾಲಸಕ, ಗಾಳಿ ಹಾಕಲಕ.. ಸರುವನ್ನೊಂದು ಕಾರ್ಯೆವುಗಳ ಮಾಡಲಕ ಹೊರಹೊರೆ ಬೇಯಿನ ತೊಪ್ಪಲು ತರಬೇಕರಪ್ಪಾ ಯಂದು ಅಪ್ಪಣೆ ಕೊಡಿಸಿದೊಡನೆ ಕವುಕಲ ಕಲ್ಲಯ್ಯ, ಬೇಲಯ್ಯ, ವುದುಳಯ್ಯ, ತಗ್ಗಯ್ಯ, ದಿನ್ನೆಯ್ಯರೇ ವೊದಲಾದ ಸರಸರ ಯೇರ ಬಲ್ಲಂಥೋರು.. ಸರಸರ ಯಿಳಿಯಬಲ್ಲಂಥೋರು ತಾವು ತರತೇವಿ ಯಂದು ಬಯಲು ದೇರಿದರು.. ಸದರಿ ನೆಲದ ಕಸುವು, ಸ್ಥಳಪುರಾಣ, ಆಯಿತ್ತಿಹ್ಯಗಳನ್ನರಗಿಸಿ ಕೊಂಡು ದಟ್ಟವಾಗಿ ಬೆಳೆದಿದ್ದ ಬೇಯಿನ ಮರಗಳೇನೋ ಆಗೋ ಅಲ್ಲಿ, ಯಿಗೋ ಯಿಲ್ಲಿ ಯಂಬಂತೆ ಯಿದ್ದವು. ವಬ್ಬನಾದರೂ ತಮ್ಮ ನೆಳ್ಳೊಳಗೆ ಯಿಸ್ರಮಿಸಿಕೊಂಡಿದ್ದುಂಟಾ? ಹುಡುಗರುಪ್ಪಡಿ ಗೋಲಿ ಗಜ್ಜುಗ ಆಡಿದ್ದುಂಟಾ? ತಮ್ಮ ಕಡ್ಡಿ ಮುರುದು ದಂತ ದಾವನ ಮಾಡಿದ್ದುಂಟಾ? ಯಿನ್ನೇನು ಅವ್ವ ಬಂದಳು, ತಮ್ಮ ಬದುಕಿಗೊಂದು ಅರ್ಥ ಕಟ್ಟುತ್ತಾಳೆ.. ಆಧಾರ ಮಾಡುತ್ತಾಳೆ ಯಂದವು ಭಾವನ ಮಾಡಿಕೊಂಡಿದ್ದು ಸುಳ್ಳಾಗಿತ್ತು. ರೋಸಿದ ಜಗಲೂರವ್ವಗೆ ನೆಳ್ಳು ಕೊಟ್ಟಿದ್ದೇ ಮಾಪರಾಧವಾಗಿತ್ತು. ತಮ್ಮ ಕರ್ತವ್ಯವೇ ತಮಗ ಮುಳ್ಳಾಗಿತ್ತು....

ಅಗೋ ಅಲ್ಲಿ.. ಯಿಗೋ ಯಿಲ್ಲಿ.. ಅವರು ಬರುತಲಿದ್ದುದನ್ನು ಆಟು ದೂರದಿಂದಲೇ ನೋಡಿದ ಸುನಕ ರೂಪಿಗಳಾದ ಸಿವ ಸರಣೆ ಚೆನ್ನವ್ವ, ಧರುಮ ದೇವತೆಯರು ತಮ್ಮ ಜಗಲೂರೆವ್ವ ಯಿನ್ನಾರ ತಾಯ ಕ್ರುಪಗೆ ಪಾತ್ರಳಾಗುತಾಳ.. ವುಸುರು ಬಿಡೋದನು ಕಡಿಮೆ ಮಾಡಿಕೊಳ್ಳುತಾಳ ಯಂದು ವಳಗೊಳಗೇ ಭಾವಿಸಿದರು.. ಬೊವ್ವಮ್ವೋ ಯಂದು ಮಂಗಳದ್ದೊನಿ ಮಾಡಿದರು.. ಯೇನವ್ವಾ.. ಯತ್ತವ್ವಾ ಯಂದು ಪಟ್ಟಣದ ಯಾವತ್ತೂ ಸುನಕ ಸಮುದಾಯವು ನೂರು ಕಡೇಲಿಂದ ಬಂದು ಅವರ ಹಿಂದ ಮುಂದ ಜಮಾವಣೆಗೊಳ್ಳುತ್ತಿದ್ದಂತೆ...

ಅತ್ತ ಕಡೇಲಿಂದ ಅವರು, ಯಿತ್ತ ಕಡೇಲಿಂದ ಯಿವರು ಆ ಅಯ್ನಾತಿ ಬೇಯಿನದ ಬುಡಕ ಬಂದರು, ನೆಳ್ಳಿನ ಅನುಭವವಾಗಲಿಲ್ಲ.. ಬೊಡ್ಡೆ ಮುಟ್ಟಿದೊಡನೆ ಕರಕೂ ಕರಕೂ ಯಂಬ ನರಳುವಿಕೆಯದ್ದೊನಿಯು ಬಂತು.. ತಲೆ ಯತ್ತಿ ನೋಡಿದರು.. ವಂದಾರ ಯಲೆ ಯಿತ್ತೇ ಸಿವ ಸಿವಾss ಯಲ್ಲಾ ಬಟಾಬಯಲು.. ಯಲುವಿನ ತಡಿಕೆ ನೆಲ್ಕಮ್ಮರಿಕೊಂಡಿರುವಂತೆ.. ಯಿದು ಬೇಯಿನ

ಮರವಾ.. ಜಾಲಿ ಮರವಾ ಯಂದು ಸಂದೇಹಪಟ್ಟುಕೊಂಡರು.. ಯಾಕೋ ಸದರಿ ರುಕ್ಷವು ತಮ್ಮನ್ನು ಬಿಟ್ಟುಕೊಳ್ಳುತ್ತಿಲ್ಲ.. ಮುಟ್ಟಿದರ ಜಾಡಿಸಿ ವದೆಸಿಕೊಂಡಂತ ಅನುಭವವಾಗುತ್ತಿರುವುದು.. ಯಿದು ಬ್ಯಾಡ ಅಂತ ಯಿನ್ನೊಂದು ಮರದವ್ವನ ಸನೀಕ ಹೋದರ.. ಅಲ್ಲಿ ಕೂಡ ಯಿದೇ ಗತಿಯಾ! ಮರದಿಂದ ಮರಕ್ಕೆ ಅಲದೂ ಅಲದೂ ಅಂಗಾಲ ಸವೆಸಿಕೊಂಡರು.. ಬೇಯಿನ ಮರಗಳೆಲ್ಲ ವಟ್ಟಾಗಿ ಅಸಹಕಾರ ಚಳುವಳಿಯನ್ನು ಆರಂಭಿಸಿವೆ ಯಂದು ಅವರು ಜಡೆತಾತನ ದ್ವಾರ ಹಂಪಜ್ಜಗೆ ಅರಕೆ ಮಾಡಿಕೊಂಡರು.. ಆಗಿದ್ದು ಹಂಪಜ್ಜನು ತನ್ನ ಕಣ್ಣುಗಳನು ಮಕಾಡೆ ಮುಚುಕೊಂಡು ಧ್ಯಾನಸ್ಥಗೊಂಡನಂತೆ.. ಆತನ ಕಣ್ಣಪಾಸಲೆಯೊಳಗ ಬೇಯಿನ ಮರಗಳೆಲ್ಲ ಸಜೀವಗೊಂಡು ಮೂಡಿ ದುಕ್ಕ ತೋಡಿಕೊಂಡವಂತೆ.. ಸಾಂಬವಿ ಮಾಡಿದ್ದು ಸರಿ ಅಯ್ತಾ ಯಂದು ಪ್ರಸ್ನೆಯನ್ನು ಹಾಕಿದವಂತೆ....

ಮುಂಗೋಪತನಕ್ಕ ಯುಗಯುಗಗಳಿಂದ ಹೆಸರಾಗಿರುವ ಸಾಂಬವಿಯದೇ ತಪ್ಪೆಂದು ನಿರ್ಧಾರಕ್ಕೆ ಬಂದ ಆ ಮುದೇತನು ಕುಂತ ಬಂಯುಟಕ್ಕೀಲೆ ತಾಯಿಗೂ, ಬೇಯಿನಮರದವ್ವಗಳ ನಡುವೆ ವುದ್ಭವಗೊಂಡಂತಿರುವ ಮನಸ್ತಾಪವನ್ನು ಪಂಚಾತಿ ಮೂಲಕ ಬಗೆಹರಿಸಬೇಕೆಂದುಕೊಂಡನಂತೆ. ತನ್ನೆಡಗಣ್ಣೊಳಗ ಸಾಂಬವಿಯನ್ನು ತರುಬಿದನಂತೆ ಅವಯ್ಯ.. ಬೇಯಿನಮರದಮ್ಮಿದಿರನ್ನು ತರುಬಿಟ್ಟನಂತೆ.. ತನ್ನ ಬಲಗಣ್ಣ ಪಾಸಲೆಯಲ್ಲಿ ಜಗಲೂರೆವ್ವಗ ಆಸ್ರಯ ಕೊಟ್ಟಿದ್ದು ತಪ್ಪೆಂದು ಸಾಂಬವಿಯೂ, ಅದರಲ್ಲಿ ತಪ್ಪೇನು ಯಂದು ಬೇಯಿನ ಮರದಮ್ಮದಿರೂ ವಾದ ಮಾಡಿದರಂತೆ.. ಪರಸ್ಪರ ಪಟ್ಟು ಸಡಿಲಿಸಲಿಲ್ಲವಂತೆ.. ವಬ್ಬರಾರ ಸರ್ದುಕೊಂಡು ವಂದು ಮೆಟ್ಟಿಲು ಯಿಳುದು ಬನ್ನಿ ಯಂದು ಮುದೇತನು ಹೇಳಿದ್ದನ್ನು ಯಾರೊಬ್ಬರು ಕಿವಿಮ್ಯಾಲ ಹಾಕ್ಕೊಳ್ಳಲಿಲ್ಲವಂತೆ.. ಬೇಯಿನ ಮರದಮ್ಮದಿರ ಸಾಯ ಸಾಕಾರಯಿಲ್ಲದ ತಾಯಿಯನ್ನು ಹೊಳಗೆ ಹೊಂಡಿಸೋದು ಆಗದ ಮಾತು.. ಹೊಳಗೆ ಹೊಂಡದ ತಾಯಿಯು ಯಿಷ್ಟೆಲ್ಲ ಮಾಡಿ ಯೇನು ಸಾರ್ಥಕ? ಹೆಂಗಾರ ಮಾಡಿ ಸಾಂಬವೀನ ವಪ್ಪಿಸವ್ವಾ ಯಂದು ಮುದೇತನ ಆತುಮವು ದಯನಾಸದಿಂದ ಕೇಳಿಕೊಂಡಿದ್ದಕ್ಕೆ ಸಮಸ್ತ ತ್ರುಣಲತೆ ತರುಗಳನ್ನು ಕಕ್ಕುಲಾತಿಯಿಂದ ಪೊರೆಯುವಂಥಾಕೆಯಾದ ಸಾಲುಮರದವ್ವ ಮದ್ಯಸ್ಥಿಕೆ ವಹಿಸಲು ವಪ್ಪಿಕೊಂಡಳಂತೆ.. ಸಾಂಬವಿಯ ಮುಂಗೋಪದಿಂದ

ತಾನೂ ರೋಸಿ ಹೋಗಿದ್ದಳಂತೆ.. ಗುಬ್ಬಿ ಮ್ಯಾಲ ಬ್ರೆಮ್ಮಾಸ್ತರ ಬಿಡುವುದು ತಾಯಿಯಾದಾಕೆಗೆ ಸೋಭಿಸುವುದಿಲ್ಲವೆಂದು ವಾದಿಸುತ್ತಲೇ ಬಂದಿದ್ದವಳಂತೆ ತಾನು, ಅವ್ವಾ ತಾಯೀ ನಿನ್ನಂಗೆ ನಾನೂ ಮುನುಸಿಕೊಂಡರ ಯೀ ಭೂಮಿವ್ಯಾಲ ಹಸುರೆಂಬುವ ಸಬುಧವೇ ಯಿರಾಕಿಲ್ಲ.. ಹಸಿರಿಲ್ಲದ ಭೂಮಿಯನ್ನು ಮೂಹಿಸಿಕೊಂಡಲ್ಲಿ ಸಿವ.. ಸಿವ.. ಪರೋಕ್ಷವಾಗಿ ತನ್ನ ಬೆಂಬಲಮೂಉಂಟು ಬೇಯಿನ ಮರದಮ್ಮದಿರಿಗೆ.. ತಿಳಿತಾ ಯಂದಾಕೆ ಅಂದೊಡನೆ ಸಾಂಬವಿಗೆ ನಡಗು ಹುಟ್ಟದೆಯಿರಲಿಲ್ಲವಂತೆ.. ಆಕೆಯ ನಡುಗಿಗೆ ವಸ್ತಿಯು ಅಳ್ಳಾಡಿತಂತೆ.. ಯಲ್ಲಿ ತನ್ನ ನೆಚ್ಚಿನ ತಂಗಿಯಾದ ಸಾಲುಮರದವ್ವ ತನ್ನನ್ನು ಬಿರುಬಿಸಿಲಿಗೆ ತಳ್ಳಿಬಿಡುವಳೋ, ಮುಂದ ಸಾಂಬವಿಯು ಸಾಲಮರದವ್ವಳೊಂದಿಗೆ ಮಾಡಿಕೊಂಡ ವಪ್ಪಂದ ಯಾವ ರೀತಿಯದು? ಸಾಲು ಮರದವ್ವ ಬೇಯಿನ ಮರದಮ್ಮದಿರಿಗೆ ಆಡಿರಬೌದಾದ ಕಿವಿಮಾತು ಯಂಥಾದ್ದು? ಅಂತೂ ಅಲವುಕಿಕಗಳ ನಡುವಿನ ತಂಟೆ ತಕರಾರು ಸುಖಾಂತಗೊಂಡಿತೆಂಬಲ್ಲಿಗೆ ಅಂತೆ ಕಂತೆಗಳು ಸಿವಸಂಕರ ಮಾದೇವಾs

ಆ ಕಾರಣದಿಂದ ಆ ಛಣದವರೆಗೆ ಭೂಮಿ ಮ್ಯಾಲೆ ವಣಕ್ಕೊಂಡು ತೇಜೋಹೀನವಾಗಿದ್ದ ಸಮಸ್ತ ಬೇಯಿನ ಮರಗಳೊಳಗ ರಸವಾಡಿತಂತೆ.. ಚಕಚಕಾಂತ ಚಿಗುರು ಮುಡುದು ಕಂಗೊಳಿಸಲು ಆರಂಭಿಸಿದವಂತೆ ಯಂಬಲ್ಲಿಗೆ.. ಯವ್ವಾss ಅಂತೂ ಯಿಂತೂ ನಿನ್ನ ಮುನುಸು ಪರಿ ಸಮಾಪ್ತಿ ಆಯಿತಲ್ಲಾ ತಾಯೀ.. ಮುಂದ್ಯಾವತ್ತೂ ನಮ್ಮ ಕಡೇಕ ಯಡಗಣ್ಣಿಂದ ನೋಡಬ್ಯಾಡ ತಾಯೀ ಯಂದು ಪ್ರತಿ ಚಿಗುರು ಸಣು ಮಾಡುತ ಅರಕೆ ಮಾಡಿಕೊಂಡವಂತೆ ಯಂಬಲ್ಲಿಗೆ.. ಯಿನ್ನುಳಿಕೇ ತರುಲತೆಗಳಿಂದ ಅಭಿನಂದನೆಗಳ ಮಾಪೂರವೇ ಹರಕೋತ ಬಂದು ಅವುಗಳ ಮಡಿಲು ತುಂಬಿ ತುಳುಕಾಡಿತಂತೆ ಯಂಬಲ್ಲಿಗೆ.. ತಾಯಿಯ ಹಾಸಿಗೆ ಆಗತೇವಿ.. ತಾಯಿಯ ಮಯ್ಯಾಂತಿಗೆ ಕಾರಕರಾಗುತೇವಿ.. ಆಕೆಯ ಸನೀಕ, ಆಕೆಯನ್ನು ನಂಬಿಕೊಂಡವರ ಸನೀಕ ರೋಗರುಜಿಣಗಳ ಸುಳಿಯದಾಂಗ ನೋಡ್ಕೋತೀವಿ ಯಂದು ಬಲು ಸಂಭರಮಪಟ್ಟವಂತೆ ಯಂಬಲ್ಲಿಗೆ.. ಹರಕೊಂಡವರ ತೆಕ್ಕೆ ತುಂಬಿದವು ಯಂಬಲ್ಲಿಗೆ.. ಮೂರ ಮಂದಿಯ ಬೊಗಸೆ ತುಂಬಿದವು ಯಂಬಲ್ಲಿಗೆ.. ಭಕುತಾದಿ ಮಂದಿಯು ಬೇಯಿನ ಮರದಮ್ಮದಿರ ಅಂತಃಕರಣವನ್ನು ಮನಸೋಯಿಚ್ಛೆ ಕೊಂಡಾಡಿದರು ಯಂಬಲ್ಲಿಗೆ..

ಬೇಯಿನತೊಪ್ಪಲ ರಸದಿಂದ ಮಜ್ಜಣ ಮಾಡಿಸಿಕೊಂಡ ಪರಿಣಾಮವಾಗಿ ಪಯಿತ್ರವಸ್ತಿಯು ದೇದಿಪ್ಯಮಾನವಾಗಿ ಹೊಳೆಯಲಾರಂಭಿಸಿದ್ದೇನೋ ನಿಜ.. ಅದನ್ನು ಬೇಯಿನ ತೊಪ್ಪಲ ತಲ್ಪದಮ್ಯಾಲ ಕುಂಡರಿಸಿದ್ದೇನೋ ನಿಜ.. ಮಡಿವುಡಿಯಿಂದ ಹೆಣ್ಣುಮಕ್ಕಳು ದಂಡುದಂಡಾಗಿ ಬಂದು ಬೇಯಿನತೊಪ್ಪಲ ಹೆಡೆವಾಡಿದ್ದೇನೋ ನಿಜ.. ಬೇಯಿನ ತೊಪ್ಪಲ ಚಾಮರ ಸೇವೆ ಮಾಡತೊಡಗಿದ್ದರೆಂಬುದೇನೋ ನಿಜ.. ಹಸಿರ ಪಲ್ಲಕಿಯೊಳಗ ವಸ್ತಿಯು ಜೀವ ಚಯ್ತನ್ಯದಿಂದ ಬೀಗಲಾರಂಭಿಸಿತೆಂಬುದೂ ನಿಜ.. ಯಿಷ್ಟಕ್ಕ ಯಾರೊಬ್ಬರೂ ನೆಮ್ಮದಿಯ ವುಸುರು ಬಿಡುವಂತಿಲ್ಲ.. ವಸ್ತಿಯ ಅಂದ ಚಂದ ನೋಡುತ ಮಯ್ನ ಮರತು ಸುಮ್ಮಕ ಕುಂಡ್ರುವಂತಿಲ್ಲ.. ದೇವಿಯ ಪವಾಡಗಳನ್ನು ನಮಲುತ ಕಾಲಕ್ಷೆಪ ಮಾಡುವಂತಿಲ್ಲ.. ಮಾಡಲಕ ವದಕನ ಮಸ್ತುವುಂಟು, ನೂರು ಮಂದಿಗೆ ಹೇಳುವುದುಂಟು, ನೂರು ಮಂದಿ ಹೇಳುವುದನು ಕೇಳುವುದುಂಟು.. ರೋಮ ರೋಮಕ್ಕೊಂದು ಜೊತೆ ಕಯ್ನ ಕಾಲನ ಮುಡುಕೊಂಡು ಬಲು ಸಂಭರದಿಂದ ಕ್ರಿಯಾಸೀಲರಾಗಿದ್ದವರೆಂದರ ಪಟ್ಟಣಸ್ವಾಮಿಗಳ ಪಯ್ಕಿ, ದಯವಸ್ತರ ಪಯ್ಕಿ, ಹಿರೀಕರ ಪಯ್ಕಿ ಗೊಂಜಾಡಲರಡವಯ್ಯ, ಜಡೆತಾತ, ಕಾಡುಗೊಲ್ಲರೀರಯ್ಯನೇ ಮೊದಲಾದವರು.. ಅವರೆಲ್ಲ, ಯಿವರೆಲ್ಲ ಕತ್ತಿಮ್ಯಾಲ ಸಾಮು ಮಾಡಿದಾಂಗ ಸೊನ್ನೆ ಸೂಕ್ಷುಮಗಳನರ್ಥ ಮಾಡಿಕೊಂಡು ಬಲು ಹುಶಾರಿಕೀಲೆ ಮುಂದಕ ಅಡಿಯಿಡುತಲಿದ್ದರು.. ಮಾನುಭಾವ ಹಂಪಜ್ಜನು ಯಾದೋ ಗಳಿಗೇಲಿ ಯಚ್ಚರಿರುತಲಿದ್ದನು.. ಯಾದೋ ಗಳಿಗೇಲಿ ಸಡನ್ನ ಧ್ಯಾನಮಗ್ನನಾಗಿ ಬಿಡುತಲಿದ್ದನು. ತಾನಿದ್ದಲ್ಲೆ ಡಿಂಬ ವದಲಿ ತ್ರಿಲೋಕ ಸಂಚಾರ ಮಾಡುತ ಆಯಾ ಲೋಕಗಳ ಕ್ರಿಯೆ, ಪ್ರತಿಕ್ರಿಯೆಗಳನ್ನರಿಯುವ ಕಾರ್ಯದಲ್ಲಿರುತಲಿದ್ದನಂತೆ.. ಗೋಚರವಾಗುತಲಿದ್ದ ತರಾವರಿ ದ್ರುಸ್ಯಾವಳಿಗಳನ್ನು ಕಾಂಬುತಲಿದ್ದನಂತೆ.. ತಲೆ ವಳಗೆ ಹೇಮಾಹೇಮಿ ಪರಿಶೆಗಳನ್ನು ತರುಬಿಕೊಂಡು ನಿಭಾಯಿಸುತಲಿದ್ದನಂತೆ.. ಅವನ್ನೆಲ್ಲ ಜರುಗಲಿರುವ ಪುಣ್ಯಕಾರ್ಯೆವುಗಳಿಗೆ ಚಾಣಾಕ್ಷತನದಿಂದ ವಗ್ಗಿಸುತಲಿದ್ದನಂತೆ.. ಗಡಿಬಿಡಿಯಿಂದಾಗಿ ತನ್ನನ್ನು ತಾನು ಕಳೆದುಕೊಳ್ಳುತಲಿದ್ದನಂತೆ.. ತನ್ನನ್ನು ತಾನು ಹುಡುಕಿಕೊಳ್ಳುತ ಲಿದ್ದನಂತೆ, ಓಹ್ ಅದನು ಕಂಡೆ.. ಓಹ್ ಯಿದನು ಕೇಳಿದೆ ಯಂದು ಮುಂತಾಗಿ ನಡುನಡುವೆ ವುದ್ಗಾರ ತೆಗೆಯುತಲಿದ್ದನು.. ನುಡಿವವರಿಗೆ ಬಾಯಿಯಾಗುತಲಿದ್ದನು.. ಕೇಳುವವರಿಗೆ ಕಿವಿಯಾಗುತಲಿದ್ದನು. ಮಾಡುವವರಿಗೆ ಕಯ್ಯಾಗುತಲಿದ್ದನು..

ನಡೆವವರಿಗೆ ಕಾಲಾಗುತಲಿದ್ದನು.. ಚೋಜಿಗದ ರೀತಿವಳಗss ಸಿವನೇ....

ದೇವಿ ಸಾಂಬವಿ ಹೊಳೆಗೆ ಬಿಜಯಂಗಯ್ಯಲಿರುವ ಸಂಗತಿ ಸುತ್ತೇಳೂ ಲೋಕಗಳೊಳಗ ಅಡಾವುಡೀನ ಯಬ್ಬಿಸಿದ್ದರ ಸಲುವಾಗಿ, ಬಂದವರನ್ನು ಬರ್ರಿಯಂಬುವ ಸಲುವಾಗಿ, ಹೋಗುವವರನ್ನು ಹೋಗಿ ಎಂಬುವ ಸಲುವಾಗಿ, ಯಾರ್ಯಾರಿಂದ ಯಾವ್ಯಾವ ಅನಾಹುತವಾಗುತ್ತದೆ ಯಂದು ಅರಿಯುವ ಸಲುವಾಗಿ, ಸರುವನ್ನೊಂದು ಯಿಗ್ನಗಳನ್ನು ಸಾಸ್ತರೋಕ್ತವಾಗಿ ನಿವಾರಣೆ ಮಾಡುವ ಸಲುವಾಗಿ, ದಿಗ್‌ಬಂಧನಗಳ ಜಗೇವುಗಳನ್ನು ಮುಂಗಡ ಪತ್ತೆ ಹಚ್ಚುವ ಸಲುವಾಗಿ, ಪೂರುವಿಕನಾದ ಹಂಪಜ್ಜನು ಆಗಾಗ್ಗೆ ಧ್ಯಾನಸ್ಥನಾಗುತಲಿದ್ದುದು ಅನಿವಾರ್ಯವಾಗಿತ್ತು.. ಸದರಿ ಮಹಿಮಾನ್ವಿತ ಪಟ್ಟಣಕ್ಕ ಯೇರುಪಟ್ಟಿದ್ದ ಅಗೋಚರ ಹಾದಿಗಳು ಸಾವುರ ಸಾವುರ ಸಂಖೆಯಲಿದ್ದವಷ್ಟೆ.. ಸಣ್ಣ ಬಲಿಯಿಂದ ಹಿಡುದು ಮಾ ಬಲಿವರೆಗೆ ಯಾವತ್ತೂ ಫಲವನ್ನು ಗಬಕಾಯಿಸುವಲ್ಲಿ ಸಿದ್ದಹಸ್ತೆಯರೆನಿಸಿರುವ ಗ್ರಾಮದೇವತೆಗಳು ವಂದಾ.. ಯರಡಾs ಅವರು ಯಾರು ಯಾರಪ್ಪಾ ಅಂದರ ಮಡ್ರಳ್ಳಿ ಮಡ್ಡಮ್ಮ, ಚೆನ್ನಾಪ್ರದ ಚೆನ್ನಮ್ಮ, ಬಯ್ನಳ್ಳಿ ಬಯ್ಯಮ್ಮ, ವುರುಕುಂದಿಯ ವುರುಕುಂದೆಮ್ಮ, ವುದ್ದಾನಳ್ಳಿಯ ವುದ್ದಾನಮ್ಮ, ಮದ್ದಿಕೇರಿಯ ಮದ್ದಮ್ಮ, ಗೂಳ್ಯಾದ ಗೂಳಮ್ಮ, ಆಲೂರಿನ ಆರುಮೊಳದಮ್ಮ, ಮಯಸೂರಿನ ಮಯಸೂರಮ್ಮ, ಚಿಕ್ಕನಳ್ಳಿಯ ಚಿಕ್ಕಮ್ಮ, ಸಕಲೇಸಪುರದ ಸಕಲೇಸಮ್ಮ, ಬೇಕನಳ್ಳಿಯ ಬೇಕಾದಮ್ಮ, ಕೋಟ್ಯಾಳಿನ ಕೋಟೆಮ್ಮ, ಬೇಲೂರಿನ ಬೇಲೂರಮ್ಮ, ಶೆಟ್ಟಿಗ್ಗೆರೆಯ ಶೆಟ್ಟೆಮ್ಮ ಯಿವರೇ ಮೊದಲಾದ ಸತಸಹಸ್ರಗ್ರಾಮದೇವತೆಗಳು.. ಅವರಾರಿಗೆ ಯೇಕರಿಕೆ ಯಂಬುದುಂಟಾ? ದೇಕರಿಕೆ ಯಂಬುದುಂಟಾ? ಮರಗಳ ಪೊಟರೆ ಗುಡ್ಡಗಳ ಕಲ್ಲು ಸಂಧು, ಪಾಳು ಮನೆಯ ತೊಲೆ ಸಂಧು, ಅಷ್ಟೇ ಯಾಕ? ಕಂಡಕಂಡವರ ತುರುಬುಗಳೊಳಗ, ಹಲ್ಲು ಸಂಧುಗಳೊಳಗ, ಅಂಗಯ್ಯ ರೇಖೆಗಳೊಳಗ, ಅಂಗಾಲ ಬಿರುಕುಗಳೊಳಗ ಹಿಂಗ ಯಲ್ಲಂದರಲ್ಲಿ ವಾಸ ಮಾಡುತ್ತಿರುವ ಅವರಿಗೆ ವಂದು ಗುಡಿ ಯಂಬುದುಂಟಾ? ವಂದು ಮನೆ ಯಂಬುದುಂಟಾ? ವಂದು ಮಠ ಯಂಬುದುಂಟಾ? ವಂದು ಥಟಗು ರಗುತದ ಮ್ಯಾಲ, ವಂದು ಬಿಂದು ಬೆವರ ಮ್ಯಾಲ, ವಂದು ನೆನಪ ಮ್ಯಾಲ ಜೀವನ ಮಾಡುವಂಥ ಅವರಿಗೆ ಪರಸಾದ ಅಂದರೇನು ಗೊತ್ತು? ತೀರ್ಥ ಅಂದರೇನು ಗೊತ್ತು? ಬಿಸಿಲಂದರೇನು ಗೊತ್ತು? ಚಳಿ ಅಂದರೇನು ಗೊತ್ತು? ಮಳೆ ಅಂದರೇನು

ಗೊತ್ತು? ಗಾಳಿ ಅಂದರೇನು ಗೊತ್ತು? ಸತ ಸತಮಾನಗಳ ಕ್ಷುದ್ಬಾಧೆ ತೀರಿಸಿಕೊಳ್ಳಲಕೆಂದು ಅವರು ಸಾಂಬವಿಯ ಚಲನವಲನದ ಮ್ಯಾಲ ಸದಾ ನಿಗಾಯಿಟ್ಟಿರುತ್ತಿದ್ದುದುಂಟಂತೆ? ನಾ ಮುಂದು, ತಾ ಮುಂದು ಅಂತ ಕಂಡ ಕಂಡ ಗ್ರಾಮಗಳೊಳಗ ನುಗ್ಗಿ ದಾಂಧಲೆ ಮಾಡುವುದುಂಟಂತೆ....

ಮಹಿಮಾ ಯಿಶೇಷನಾದ ಹಂಪಜ್ಜನು ಧ್ಯಾನಸ್ಥ ಮುದ್ರೇಲಿದ್ದು ಹಲವು ಯೋಜನ ದೂರದವರೆಗೆ ಹರದಾಡುವ ತನ್ನ ದ್ರುಸ್ಟಿಯಿಂದ ನಿಗಾಯಿಟ್ಟು ಅವರ ಚಲನವಲನಗಳನ್ನು ಕ್ಷುಣ್ಣವಾಗಿ ಗಮನಿಸುತಲಿದ್ದಾನಂತೆ.. ಅಗೋ ಅಲ್ಲಿ ಹೊಂಟವಳೆ ಮಡ್ಡಮ್ಮ ಹಕ್ಕಿ ಕಂಠದೊಳಗಡಗಿ, ಯಿಗೋ ಯಿಲ್ಲಿ ಚವುಡಮ್ಮ ಹೊಂಟವಳೆ ಯಿಲಿಚೆಮ್ಮನ ಬಾಲ ಹಿಡಕೊಂಡು, ಮಾತಾಡೋ ನಾಲಗೆ ಮ್ಯಾಲ ಯಿಸ್ರಮಿಸಿಕೊಂಡು ಹೊಂಟವಳೆ ಬಯ್ಯಮ್ಮ, ಕೇಳೋ ಕಿವಿಯೊಳಗ ಅಡಗಿ ಹೊಂಟವಳೆ ಬಿಸಿಲಮ್ಮ, ನೋಡೋ ಕಣ್ರೆಪ್ಪೆ ಸಂದಲ್ಲಡಗಿ ಹೊಂಟವಳೆ ಬೇಲೂರಮ್ಮ, ಬಲಾಕ ರುಕ್ಷದ ಬೇರಗುಂಟ ಹೊಂಟವಳೆ ತಿಂಗಳಮ್ಮ, ತುರುಬ ನಾಗರದಡಿ ಕೂತು ಹೊಂಟವಳೆ ಮಂಚಾಲಮ್ಮ, ಯೋಚನೆ ಮಾಡೋ ಮನಸೊಳಗ ಕೂತು ಮಂತರಮ್ಮ ಹೊಂಟವಳೆ.. ಭೂಮಿ ಪದರೊಳಗಿಂದ, ಬೀಸೋ ಗಾಳಿಯೊಳಗಿಂದ, ಆಡೋ ಮಾತುಗಳೊಳಗಿಂದ, ರುಚಿ ರಸ ಮಮಕಾರಗಳೊಳಗಿಂದ ಯಾವತ್ತೂ ದೇವತೆಗಳು ಪಯಣ ಹೊಂಟವರಂತೆ ಸಾಂಬವಿ ವಸ್ತಿ ಮಾಡಿರುವಂಥಾ ಘನ ಸಂಪನ್ನ ಕುದುರೆಡವು ಪಟ್ಟಣದ ಕಡೇಕ.. ಯಂದು ವುದ್ಗಾರ ಮಾಡುತಲವನೆ.

ಅವರನ್ನಲ್ಲಲ್ಲೆ ತಡೆಯಲಕಂತ ಆ ಪೂರುವಿಕನು ಕಯ್ಕೊಂಡ ಮುನ್ನೆಚ್ಚರಿಕೆ ಕಾರ್ಯೆವುಗಳೋ ನೂರಾರು ಸಿವನೇ....

ಪಟ್ಟಣದ ಸುತಮುತ್ತ ಯಲ್ಡಾಳೆತ್ತರದ ಬೇಲಿ ಹಾಕಿಸಿದ, ಅಗಸೆ ಬಾಕಲುಗಳ ನೆತ್ತಿಗೆ ಕುರಿದಲೆಗಳನ್ನು ಕಟ್ಟಿಸಿ ದಿಗ್‍ಬಂಧನ ಹಾಕಿಸಿದ, ಬೀಗರು ಬಿಜ್ಜರನ್ನು ಕರೆಯಲಕಂತ ಹೋಗುವರ ಕಯ್ಗೆ ಮಂತ್ರಿಸಿದ ನಿಂಬೆಹಣ್ಣನು ಕೊಟ್ಟ, ದೇಸ ಯಿದೇಸಗಳಿಂದ ಬರುವವರು ಕಡ್ಡಾಯವಾಗಿ ತಮ ತಮ್ಮ ಅಂಗಾಲುಗಳನ್ನು ತಂಗಲು ಮಾಡಿಕೊಳ್ಳಲಕ್ಕೆ ಪಟ್ಟಣದ ಸಿಮ್ಮದ್ವಾರದ ಆಜೂಬಾಜಕ ವಂದು ವಕ್ರಾಣಿಯ ನಿರುಮಿಸಿ ಅದರೊಳಗ ನೀರುತುಂಬಿ ಮಂತ್ರಿಸಿದನು. ಅವಯ್ಯನು ಹಿಂಗ ಮಾಡುವಾಗ್ಗೆ ಯಾರೊಬ್ಬರು ಯೇನು ಯಂತ ಯಂಬ ವುಪದ್ವಾಪಿ ಪ್ರಸ್ನೆಗಳನ್ನು ಕೇಳಲಿಲ್ಲ. ಯೀ ಯಲ್ಲಾ ಕೆಲಸ

ಕಾರ್‍ಯವು ನಿಂತ ನಿಂತೇಟಿಗಾತು, ಕುಂತ ಕುಂತೇಟಿಗಾತು. ಮಂದಿ ಹಲಗೆ ತಮ್ಮಟೆ ನಗಾರಿ ಕಹಳೆಯೇ ಮೊದಲಾದ ವಾದ್ಯಗಳನ್ನು ಕಯ್ಗೆ ಯೇರಿಸಿದ್ದು ತಡ ಆಗಲಿಲ್ಲ.. ಚರಕಲಿ, ಗುಂಡಾಲು, ಗಂಗಾಳ ಪಿಂಗಾಳಗಳೇ ಮೊದಲಾದ ಗ್ರುಹೋಪಯೋಗಿ ವಸ್ತುಗಳನ್ನೇ ವಾದ್ಯಗಳನ್ನಾಗಿ ಮಾಡಿಕೊಂಡಿದ್ದೂ ತಡ ಆಗಲಿಲ್ಲ.. ತಾಯೇ ಸಾಂಬವಿ ಯಂದನಕಂತ ಸಾಯಿರಾರು ಮಂದಿ ಸಾಯಿರಾರು ರೂಪಧಾರಣ ಮಾಡಿದವರಾಗಿ ಕಾಡಡವಿಯನ್ನು ಪೊಕ್ಕಿದ್ದು ತಡ ಆಗಲಿಲ್ಲ.. ಸಿವಾ.. ಸಿವಾ..

ಅವರು ವಾದ್ಯಗಳನ್ನು ತಮ್ಮದೇ ಆದ ರೀತಿ ವಳಗೆ ಮನಸೋಯಿಚ್ಚೆಯಿಂದ ಭಾರಿಸ ತೊಡಗಿದ್ದೇನು. ಕ್ಯಾ ಹ್ವೊ.. ಕೇಕಕಣ ಯಂದು ಕೇಕೆ ಹಾಕುತ ಗಲಾಟೆ ಮಾಡಿದ್ದೇನು? ಗಿಡ ಗಿಡ.. ಮರ ಮರಗಳ ಸೊಂಟ ಕತ್ತು ಹಿಡಿದು ಜಾಲಾಡತೊಡಗಿದ್ದೇನು? ಸಿವ.. ಸಿವಾ.. ಆ ರವರವ ಗದ್ದಲದೇಟಿಗೆ ಆ ಘಣದವರೆಗೆ ಮಾನಸ ಸರೋವರದಂತಿದ್ದ ಕಾಡಡವಿಯು ವಯಸಂಪಾಯನ ಸರೋವರವಾಗಿ ಮಾರುಪಟ್ಟಿತು. ಕಾಡೆಮ್ಮೆ, ಕಾಡುಕೋಣ, ಚಿರತೆ, ಚಿಗರೆ, ಮೊಲಗಳಿತ್ಯಾದಿ ವುಪದ್ರವಿ, ನಿರುಪದ್ರವಿ ಪ್ರಾಣಿಗಳು, ಪಕ್ಷಿಗಳು ಯದರಿಕೊಂಡು ದಿಕ್ಕಾಪಾಲಾಗಿ ಮೋಡಲಾರಂಭಿಸಿದವು ಸಿವ ಸಿವಾ..

ಕಳ್ಳಿಕಾಕಸು ಕವಳೆಕಾರೆ, ಹಾದರಗಿತ್ತಿ, ಜಾಲಿಯೇ ಮೊದಲಾದ ತರಾತರಿ ಮುಳ್ಳು ಕಂಟೆಗಳನು ಕಡದು ದರದರಾಂತ ಯಳಕೊಂಡು ಬಂದು ಹಚ್ಚಿ ಯಲ್ಡಾಳಿದ್ದ ಬೇಲಿಯುನ್ನು ಮೂರಾಳೆತ್ತರಕ್ಕೆ ಯೇರಿಸದರೆಂಬಲ್ಲಿಗೆ.. ನೋಡುನೋಡುವಷ್ಟರಲ್ಲಿ ಮುಳ್ಳುಕಂಟೆಯ ಯೇಳುಸುತ್ತಿನ ಕೋಟೆಯ ನಿರುಮಾಣಗೊಂಡಿತು ಪಟ್ಟಣದ ಸುತ್ತಮುತ್ತ.. ಆ ಕಡೆ ಯಿರೋರು ಯೀ ಕಡೇಕ ಕಾಣಿಸದಂಗಾತು, ಯೀ ಕಡೆ ಯಿರೋರು ಆಕಡೇಕ ಕಾಣಿಸದಂಗಾತು.. ಘಣಾರ್ದದೊಳಗ ಮಾಡೋದು ಮಾಡಿಯಾಯಿತು ಬಿಡೋದು ಬಿಟ್ಟು ಆಯಿತು.. ಪಟ್ಟಣದ ರಹದಾರಿ ಪಾಸಲೆಯೊಳಗೆ ಹಂಪಜ್ಜನು ಕಣ್ರೆಪ್ಪೆಗೆ ಅಂಜಣ ಲೇಪಿಸಿಕೊಂಡು ನೋಡುತ್ತಾನೆ.. ತರಾವರಿ ದ್ರುಸ್ಯಗಳು..ಹರದಾರಿ ಪಾಸಲೆ ಆಚೆಗೆ ಛಪ್ಪೀಸು ಸಹಸ್ರಛುದ್ರದೇವತೆಗಳು.. ಯಲಮೋ ಹಂಪಜ್ಜನೇ.. ಮಾಯಾವಿ ಮುದೇತನೆ ನಮ್ಮನ್ಯಾಕ ಯೀಟು ದ್ವೇಸ ಮಾಡುತ್ತಿರುವಿ ಪೂರುವಿಕನೆ.. ನಾವು ನಿನಗ ಮಾಡಿರುವ ಅನ್ಯಾಯವಾದರೂ ಯೇನು ಯಜ್ಜಾ.. ನಮ್ಮನ್ನು ಪಟ್ಟಣದೊಳೀಕ ಬಿಟ್ಟುಕೊಳ್ಳೋ.. ನಡೆಯಲಿರುವ ವಯಿಭೋಗವನ್ನು

ಅವಳೊಬ್ಬಳೇ ಅನುಬೋಸಬೇಕೆನಲೋ ಯಂದವು ಕೂಗಾಡುತ್ತಿರುವುದೇನು.. ಚೀರಾಡುತ್ತಿರುವುದೇನು ಲಂಚ ರುಷುವತ್ತು ಅಮಿಷ ವಡ್ಡುತ್ತಿರುವುದೇನು? ಆದರಾ ವಯ್ಯನು ನಿಷು«ರವಾಗಿದ್ದನಂತೆ... ಯಾದೋ ವಂದು ಛುದ್ರದೇವತೆಯು ಯಾದೋ ಮಾದಿಯೊಳಗ ಪಟ್ಟಣವನ್ನು ಪ್ರವೇಸ ಮಾಡಿರುವುದೆಂಬ ಅನುಮಾನ ಬಂತಂತೆ.. ದ್ರುಸ್ಟಿಯನ್ನು ಮತ್ತಷ್ಟು ಬಿಗಿಗೊಳಿಸಿದನಂತೆ.. ಆದರದು ಅವನ ನೋಟದ ಚಿಮುಟಿಗೆ ಸಿಕ್ಕಲಿಲ್ಲವಂತೆ.. ಯಿತರೇ ನಾಕು ಯಿಂದ್ರಿಯಂಗಳ ಸವಲತ್ತು ಯಿದ್ದ ಆ ನೋಟವು "ಯಾರಭೇ ನೀನು.. ಯಾಕಬಂದಿ.. ನೋಡಂಗಾಗಯ್ತೆ.. ನಿನ್ನ ಮುಖವನ್ನಾದರೂ ವಂಚೂರು ತೋರುಸು" ಯಂದು ಜಬರದಸ್ತೀಲೆ ಕೇಳಿದ್ದಕ್ಕದು ಕೊಸರಾಡುತ ದೂರ ಸರಕಂತಂತೆ.. ಯಿದನೆಂಗಪ್ಪಾ ಹಿಡಿಯೋದು ಯಂದು ನೋಟವು ಬಗೆಬಗೆಯ ರೀತಿಯಲ್ಲಿ ಯತ್ನ ಪ್ರಯತ್ನಂಗಳ ಮಾಡಿ ರೋಸಿಗಂತಂತೆ.. ಅದು ಹಂಪಜ್ಜನಿದ್ದಲ್ಲಿಗೆ ಮರಳಿ "ಯಜಮಾನss ಅದು ಮಂತ್ರಗಾತಿ ಛುದ್ರದೇವತೆ ಯಿದ್ದಂಗಯಿತೆ.. ಹಿಡಿತಕ್ಕೆ.. ಮಾತಿಗೆ.. ಕಯಿಗೆ ಯಟಕುತ್ತಿಲ್ಲ... ಕಾಲಿಗೆ ತೊಡರುತ್ತಿಲ್ಲ" ಯಂದು ಅಸಹಾಯಕತೆಯಿಂದ ನುಡಿಯಿತಂತೆ, ಅದನ್ನು ಕೇಳಿ ಮುದೇತನು ಘಟ ಸರುಪದೊಳು ಕಂಪಿಸಿದನಂತೆ.. ನೆತ್ತರು ಕಲೆಸಿ ಮಣ್ಣಿಂದ ಹೆಣ್ಣು ಗೊಂಬೆಯನ್ನು ಮಾಡಿದನಂತೆ.. ಅಂಗಾತ ಮಲಗಿಸಿ ಮುಂದಕ ಯೇನು ಮಾಡಿದನಂತೆಂದರೆ ಸಿವಸಂಕರ ಮಾದೇವss

* * * *

ಅತ್ತ ಮನ್ರೋ ಸಾಹೇಬನು ನತದ್ರುಸ್ಟ ತೆರನೇಕಲ್ಲನ್ನು ಕಣ್ಣೊಳಗ ತುಂಬಿಕೊಂಡು ಅಡಿಗಡಿಗೊಂದೊಂದು ಸಲಕ ನಿಟ್ಟುಸುರು ಬಿಡುತ್ತ "ದೇವರೇ ನನ್ನನ್ನು ಕ್ಷಮಿಸು ಯಂದು ಜಾವಕ್ಕೊಂದೊಂದು ಸಲ ಪಾಪ ನಿವೇದನೆ ಮಾಡಿಕೊಳ್ಳುತ ಅಸ್ಪರಿ, ಹಲಗೇರಿ, ಚಿನ್ನೊತ್ತೂರು, ಪೆದ್ದೊತ್ತೂರು, ಗುಡೇಕಲ್ಲುಗಳನ್ನು ವಂದೊಂದಾಗಿ ದಾಟುತ್ತ ಅದವಾನಿಗೆ ಬಂದೊಡನೆ ಸದರಿ ಪಟ್ಟಣದಲ್ಲಿ ಸಿದ್ದೇಮಸೂದುಖಾನ ಯಂಬ ನವಾಬನಿಂದ ಹಣಕಾಸಿನ ಸಾಯ ಪಡದು ದಳವಾಯಿ ಸಿದ್ದೆಂಕಣ್ಣನೆಂಬಾತನು ಕಟ್ಟಿಸಿರ್ಧ ಅಗಾದ ಸಯ್ಜಿಯ ಭಾವಿಯ ಸುತ್ತ ವಂದಾಳೆತ್ತರದ ತಂತಿ ಬೇಲಿಯನ್ನು ಹಾಕಿಸಿದನು. ಪ್ರಜೆಗಳು ಅದರ ನೀರನ್ನು ವುಪಯೋಗ ಮಾಡುವುದನ್ನು ಕಾನೂನು ಮೂಲಕ ನಿರ್ಬಂಧಿಸಿದನು. ಪೂರುವಿಕರು ಯಿಂಥ ಬಾವಿಗಳನ್ನು ಕಟ್ಟಿಸಿರುವುದು ವಂದಾನೊಂದು ಕಾಲದಲ್ಲಿ

ಮಂದಿ ಆತುಮಹತ್ತೆ ಮಾಡಿಕೊಳ್ಳಲಕ ಯಂದು ಯಿದ್ದಿರಬೇಕೆಂದು ತಾನು ಲೆಕ್ಕಾಚಾರ ಮಾಡಿಕೊಂಡಿದ್ದುದೇ ಅದಕ್ಕೆ ಕಾರಣವಾಗಿತ್ತು.. ತೆರನೇಕಲ್ಲೊಳಗಿರುವ ಗಿಡ್ಡಣ್ಣನ ಬಾವಿಯು ಮತಮತ್ತ ತನ್ನ ಕಣ್ಣೊಳಗ ಮೂಡಿ ಕಾಡಲಾರಂಭಿಸಿದ್ದುದೇ ಅದಕ್ಕೆ ಕಾರಣವಾಗಿತ್ತು..

ಪರಾಕ್ರಮದಿಂದ ನೂರ್ಮಡಿಗೊಂಡು ಬೀಗುತಲಿದ್ದ ಥ್ಯಾಕರೆಯು, ಕಲೆಟ್ಟರನ ಶಬ್ಬಾಷ್ ಗಿರಿಯು ಯೀಗ ಸಂದಾಯವಾದೀತು? ಆಗ ಸಂದಾಯವಾದೀತು ಯಂದು ಅಡಿಗಡಿಗ್ಗೆ ನಿರೀಕ್ಷೆಯಲ್ಲಿದ್ದನಷ್ಟೆ, ಅವನಿಗೇನು ಗೊತ್ತು? ಕಲೆಟ್ಟರ ಸಾಹೇಬನು ನೂರಾರು ಮಂದಿಯ ಕಗ್ಗೊಲೆಗೆ ಕಾರಣನಾಗಿರುವ ಮತ್ತು ರವ್ವಷ್ಟಾದರೂ ಪ್ರಾಯಶ್ಚಿತ ಭಾವನೆಯಿರದಿರುವ ತನ್ನನ್ನು ಬೆಳಗಾವಿ ಕಡೇಕ ಯಲ್ಲಾದರೂ ವರ್ಗಾವಣೆ ಮಾಡಬೇಕೆಂದು ಗವರ್ನರು ಸಾಹೇಬನಿಗೆ ಸಿಫಾರಸು ಮಾಡಬೇಕೆಂದು ಯೋಚಿಸುತ್ತಿರುವುದು? ಪ್ರಾಯಶ್ಚಿತ ಭಾವನೆಯೇ ಯಿಲ್ಲದಿರುವ ಥ್ಯಾಕರೆ ಯಂಥವರೊಂದಿಗೆ ಯಾವ ಕಲೆಟ್ಟರನು ಯಷ್ಟು ದಿನಾಂತ ಯೇಗಲಾದೀತು? ದಾರೀಲಿ ಬರುವಾಗ್ಗೆ ತಾನು ಅವನೆದೆಯಿಂದ ಪಶ್ಚಾತ್ತಾಪದ ಸಂಬಂಧೀ ವಂದೇ ವಂದು ಭಾವನೆಯನ್ನು ಹೆಕ್ಕಿ ತೆಗೆಯಲು ನಾನಾ ನಮೂನಿ ಪ್ರಯತ್ನ ಮಾಡಿದ್ದುಂಟು. ಆದರೀತನು ವಂದಾರ ಸಕಾರತ್ಮಕವೂ, ಸಮಂಜಸವೂಆದ ವುತ್ತರವನ್ನು ನೀಡಿದ್ದುಂಟೇನು?.. ಛೇ.. ಛೇ.. ಯಿಲ್ಲವೇ ಯಿಲ್ಲ.. ಸದಾ ಕಗ್ಗೊಲೆಗೆ ಹಾತೊರೆಯುವ ಯಿಂಥವರಿಂದಾಗಿ ಕುಂಪಣಿ ಸರಕಾರಕ್ಕೆ ಕೆಟ್ಟ ಹೆಸರು ಅಚಂದ್ರಾರ್ಕವಾಗಿ ತಗಲುವುದು ಯಂದು ಯಸನ ಮಾಡುತ್ತಲೇ ಮನ್ರೋ ಸಾಹೇಬನು ಅಲ್ಲಿ ಕಯ್ಯಿಕೊಂಡ ಕೆಲಸಕಾರ್ಯೇವುಗಳು ಹೆಡಿಗೆ ಪ್ರಮಾಣದಲ್ಲಿದ್ದವು. ಕೋಸಿಗಿ, ರವುಡೂರು, ತುಂಬಳ, ಮಾದಾಪುರ ಮೊದಲಾದ ಕಡೇಲಿಂದ ವಂದಲ್ಲಾ ವಂದು ತಲೆನೋವುಗಳು, ಅವನ್ನೆಲ್ಲ ವಂದೊಂದಾಗಿ ಬಗೆಹರಿಸುವ ಹೊತ್ತಿಗೆ ಅವಯ್ಯನ ತಲೆಯು ಬಾಯೊಳಗೆ ಯಿನ್ನೇನು ಬಂತು ಅಂಬುವಷ್ಟರೊಳಗೆ ಹೆನ್ರಿಕರೆ ಮೇರೆಗೆ ತಾನು ಬಳ್ಳಾರಿಗೆ ಹೋಗಬೇಕಾಗಿ ಬಂತು.

ಹೆನ್ರಿಯು ಯಾವತ್ತು ಸಂಗತಿಗಳನ್ನು ಅರಕೆ ಮಾಡಿಕೊಂಡ. ಅದೇ ಯಿನ್ನು ಹೊಸದಾಗಿ ತನ್ನ ಕಯ್ಯಿ ಕೆಳಗೆ ಬಂದಿದ್ದ ದುಪ್ಪಟಿ ಕಲೆಟ್ಟರನಾದ ಗೋಲ್ಡ್‌ಸಮ್ಮಿತ್ಥನು ದತ್ತಮಂಡಲದ ದೊರೆಯೇ ಅಪರಾಧಿಯೋರ್ವನ ಆತಿಥ್ಯ ಸ್ವೀಕರಿಸುವುದು ಸರಿಕಾಣುವಲ್ಲದು ಯಂದು ತಕರಾರು ಯಕ್ತಪಡಿಸಿದ. ಕಲೆಟ್ಟರ

ಸಾಹೇಬನು ರಕುತಪಾತಕ್ಕಿಂತ ರಾಜಿಕಬೂಲಿಯೇ ವಾಸಿ ಯಂದು ಹೇಳಿದ. ಯೀಗಾಗಲೆ ಗುಂತಕಲ್ಲು ಪ್ರಾಂತದ ಜನಸಾಮಾನ್ಯ ಮಂದಿಯ ಯದೆ ವಳಗೆ ಗುಡಿಗುಂಡಾರ ಕಟ್ಟಿಕೊಂಡಿರುವ ಬೊಬ್ಬಲಿ ಬಿರುದಾಂಕಿತ ನಾಗೆರಡ್ಡಿಯ ಯಿಸುವಾಸ ಸಂಪಾದನೆ ಮಾಡಬೇಕಾದರ ಕುಂಪಣಿ ಸರಕಾರದ ಪ್ರತಿನಿಧಿಯಾಗಿ ತಾನು ಆ ರಾಬಿನ್ ಹುಡ್ ಬಡಿಸುವ ಬಾನವನ್ನು ಸೊಯಂಪ್ರೀತಿಯಿಂದ ವುಂಬಲಿರುವುದಾಗಿ ಖಡಾಖಂಡಿತವಾಗಿ ಹೇಳಿದ. ಹೆನ್ರಿಯನ್ನು ಮಾತ್ರಹಿಂದೆ ಯಿಟುಕೊಂಡು ಫಲಾನ ದಿವಸದಂದು ಪ್ರಯಾಣ ಬೆಳೆಸಿ ಫಲಾನ ಮೂರನ್ನು ಸೇರಿಕೊಂಡ. ಅಸಂಖ್ಯಾತವಾಗಿ ಸೇರಿದ್ದ ಮಂದಿ ಅವರೀರ್ವರನ್ನು ದಿಬ್ದೀರ್ತಿಯಿಂದ ಸ್ವಾಗತಿಸಿದರು. ಮನ್ರೋನಿಗಾದರೋ ತಾನು ನಾಗಿರೆಡ್ಡಿಯನ್ನು ಯಾವಾಗ ಕಾಣುವೆನೋ ಯಂಬ ಹಂಬಲವು. ಆತನಿರಬೌದೆ ಅವಯ್ಯನು? ಯೀತನಿರಬೌದೇ ಅವಯ್ಯನು, ಹಂಗಿರಬೌದಾ ಅವಯ್ಯನು? ಹಿಂಗಿರಬೌದಾ ಅವಯ್ಯನು..

ಥೇ.. ಥೇ.. ಯಿವನಲ್ಲ ಅವಯ್ಯನು.. ಥೇ.. ಥೇ ಅವನಲ್ಲ ಯಿವಯ್ಯನು, ಮತ್ತಾರಿದ್ದಿರಬೌದು? ಯಂಬ ಸಂದೇಹದ ಸಂದೂಕದೊಳಗಿದ್ದ ಕಲೆಟ್ಟರ ಸಾಹೇಬನನ್ನು ವಂದ ನಾಕುಮಂದಿಯು ಕಕ್ಕುಲಾತಿಯಿಂದ ಸಿಂಗಾರಗೊಂಡಿದ್ದ ಝೋಪಡಿ ವಳಕ್ಕೆ ಕರೆದೊಯ್ದರು. ಗಿಡ್ಡನೆಯ ಬಾಗಿಲನ್ನು ಕಲೆಟ್ಟರನು ತಲೆಯೊಂದನ್ನಲ್ಲದೆ ನಡು ಬಗ್ಗಿಸಿ ದಾಟಿದೊಡನೆ ಜನ ವುಘೇ ವುಘೇ ಅಂತು. ರಂಡೀ ರಂಡೀ.. ಕಲೆಟ್ಟರ ಸಾಹೇಬss ಯಂದು ಸ್ವಾಗತ ಪಲುಕಿದ ಮಟ್ಟಸ ನಿಲುವಿನ ಯಕ್ತಿಯೇ ನಾಗಿರೆಡ್ಡಿ ಆಗಿದ್ದನು. ತಿಳಿದು ಭಾವಪರವಸನಾದ ಮನ್ರೋನು 'ಓಹ್.. ನಾಗಿರೆಡ್ಡಿಗಾರೂ' ಯಂದುದ್ಗಾರ ತೆಗೆಯುತ್ತ ಧಾವಿಸಿ ಆಲಿಂಗನ ಮಾಡಿದನು. ನಾಗಿರೆಡ್ಡಿಯ ರುದಯದೊಳಗ ಕುಂಪಣಿ ಸರಕಾರ ಸಂಲಗ್ನಗೊಂಡಿತೋ, ಅವರೀರ್ವರು ತಮ ತಮ್ಮ ಹಿಂದಲ ಜಲುಮದಲ್ಲಿ ವಂದೇ ತಾಯಿಯ ಹೊಟ್ಟೆಯ ವಳಗಿದ್ದರೋ, ವಂಭಣ ಹೊತ್ತು ಅಪ್ಪುಗೆ ಸಯ್ಲು ಆಗಲಿಲ್ಲ. ವಬ್ಬರ ವುಸುರನು ವಬ್ಬರು ಕುಡಿದರು, ಬೆವರ ಯಿನಿಮಯ ಮಾಡಿಕೊಂಡರು, ಗದ್ಗದಿತರಾದರು.. ಚಾವತ್ತಿನ ನಂತರ ಪರಸ್ಪರಹಿಡಿತ ಸಡಲ ಮಾಡಿದರು, ಯವೆಯಿಕ್ಕದೆ ನೋಡಿಕೊಂಡರು.. ಅವಯ್ಯನೊಳಗ ಯಿವಯ್ಯನು ತನ್ನನ್ನೂ, ಯಿವಯ್ಯನೊಳಗ ಅವಯ್ಯನು ತನ್ನನ್ನೂ ಬೆದಕಾಡಿಕೊಂಡರು, ವಬ್ಬರೊಳಗ ಯಿನ್ನೊಬ್ಬರ ದೀವಿಯಂದುಕೊಂಡರು ಸಿವನೇ.. ಅವರಿಗೆ ದ್ರುಸ್ಟಿ ತಗಲುವಂತೆ

ನೋಡುತಯ್ತೆ ಮಂದಿ ಸಿವನೇ.

ಅಗಾಧ ಯಿಸ್ತೀರಣವುಳ್ಳ ದತ್ತಮಂಡಲ ದೇಸಕ್ಕೋರ್ವನೇ ವಡೆಯನಾಗಿರುವಂಥ ಕಲೆಟ್ಟರ ಸಾಹೇಬನು ಕೂಲಿಕುಂಬಳಿಯವರ ಝೋಪಡಿಯಂ ಪೊಕ್ಕಿದ್ದೊಂದು ಜೋಜಿಗ ಸಿವನೇ, ತನ್ನೊಳಗೂ ಬ್ರಾತ್ರುತ್ವ ವುಂಟೆಂಬುದನು ತೋರಿದ್ದೊಂದು ಚೋಜಿಗ ಸಿವನೇ, ಮಾಮೂಲಿ ಮನುಶ್ಯನಂಗ ನೆಲದ ಮ್ಯಾಲ ಚಕ್ಕಳಮುಕ್ಕಳ ಹಾಕ್ಕೊಂಡು ಕೂಕಂಡದ್ದೊಂದು ಚೋಜಿಗವು ಸಿವನೇ, ಅವಯ್ಯ ಯೇನೇನು ವುಂಬಲಿರುವನೆಂದರೆ ಸಜ್ಜೆರೊಟ್ಟಿ, ಜ್ವಾಳದರೊಟ್ಟಿ, ಗಡುಸೊಪುE, ಯಣಗಾಯಿ, ಕಟಂಬಳಿ, ಜ್ವಾಳದನ್ನ, ಮೊಸರು, ಮಜ್ಜಿಗೆ, ನೆಂಜಿಕೊಳ್ಳಲುಕೊಂದು ಚಟ್ಟಣಿ, ಕಡಕೊಳ್ಳಲುಕೊಂದು ಮಜ್ಜಿಗೆ ಮೆಣಸಿನಕಾಯಿ, ವುಳ್ಳಾಗಡ್ಡೆ ಯಿತ್ಯಾದಿ.. ಅವಯ್ಯಗಿವಯ್ಯ ಬಡಸುತ್ತಾನೆ.. ಯಿವಯ್ಯಗ ಅವಯ್ಯ ಬಡುಸುತ್ತಾನೆ. ಅವಯ್ಯಗ ಯಿವಯ್ಯ ತುತ್ತು ಮಾಡಿ ವುಂಬುಸುತ್ತಾನೆ, ಯಿವಯ್ಯಗೆ ಅವಯ್ಯ ತುತ್ತು ಮಾಡಿ ವುಂಬುಸುತ್ತಾನೆ.. ಅವಯ್ಯಗ ಯಿವಯ್ಯನೊಳಗ ತಾಯಿ ಅದಾಳೆ, ಯಿವಯ್ಯಗ ಅವಯ್ಯನೊಳಗ ತಾಯಿ ಅದಾಳೆ ಸಿವನೇ.. ವಂದೊಂದು ದ್ರುಸ್ಯ ವಂದೊಂದು ಸಾವುರ ವರಹಾಕ್ಕೆ ಸಮಯಿತ್ತು. ಯಿಂಥ ದ್ರುಸ್ಯವು ಯುಗಕ್ಕೊಂದೊಂದು ಸಲ ನಡೆದಿರಬೌದು ಸಿವನೇ..

ಕಲೆಟ್ಟರು ಸಾಹೇಬನೂ, ಬೊಬ್ಬಿಲಿನಾಗಿರೆಡ್ಡಿಯೂ ನೋಡುನೋಡುವಷ್ಟರೊಳಗ ಅಣ್ಣ ತಮ್ಮಂದಿರಂಗಾಗಿಬಿಟ್ಟರಲ್ಲಾ.. ಯಂಜಲ ಮೂಲಕ ಪರಸ್ಪರ ಪರಕಾಯ ಪ್ರವೇಸ ಮಾಡಿಬಿಟ್ಟರಲ್ಲಾ, ಯಿದೇನು ಚೋದ್ಯವು? ಮೋ ಮಯ್ ಗಾಡ್ ಯಂದು ವುದ್ಗರಿಸುತ ನೋಡುತಲಿದ್ದ ಹೆನ್ರಿಯೂ ಕಣ್ಸನ್ನೆ ಮಾಡಿದ್ದು ಯರ್ಥವಾತು, ಬಾಯಿಸನ್ನೆ ಮಾಡಿದ್ದು ಯರ್ಥವಾತು, ಯಾರ್ಯಾರ ಮನಸ್ಸಿನೊಳಗ ಯಾವ್ಯಾವ ಅರಗಿನ ಮನೆಗಳುಂಟೋ? ಮಯಸಭಗಳುಂಟೋ.?. ವಬ್ಬರ ಮರುಮ ಯಿನ್ನೊಬ್ಬರಿಗೆ ತಿಳಿದು ಬರಾಣಿಲ್ಲವಲ್ಲಾ.. ನಿಬ್ಬೆರಗಾಗಿಸುವಂತೆ ನಡೆದ ಯಿನ್ನೊಂದು ಚೋಜಿಗ ಯಂದರ..

“ಯಣ್ಣಾss ಯಿ ದಿರಿಸಿನಾಗ ನೀನೆಂಗ ಕಾಣುತೀ ಯಂಬುದನು ನನಗ ಕಾಣ್ತುಂಬ ನೋಡುವಂಗಾಗಯ್ತೆ” ಯಂದು ನಾಗಿರೆಡ್ಡಿಯೂss

“ತಮ್ಮಾ ಯೀ ದಿರಿಸಿನಾಗ ನೀನೆಂಗ ಕಾಣುತೀ ಯಂಬುದನು ನನಗ

ನೋಡುವಂಗಾಗಯ್ತೆ" ಯಂದು ಮನ್ರೋ ಸಾಹೇಬನೂ..

ನೋಡು ನೋಡುವಷ್ಟರಲ್ಲಿ ಅವಯ್ಯ ತನ್ನುಡುಗೆಯನ್ನು ಯಿವಯ್ಯಗೆ ವುಡುಸಿದನು. ಯಿವಯ್ಯ ತನ್ನುಡುಗೆಯನ್ನು ಅವಯ್ಯಗ ವುಡುಸಿದನು. ಥಾಮಸು ಮನ್ರೋನು ನಾಗಿರೆಡ್ಡಿಯಾಗಿ ಬದಲಾದದ್ದು ತಡ ಆಗಲಿಲ್ಲ.. ನಾಗಿರೆಡ್ಡಿಯು ಥಾಮಸು ಮನ್ರೋನಾಗಿ ಬದಲಾದದ್ದು ತಡ ಆಗಲಿಲ್ಲ.. ಯಣ್ಣಾ.. ಯೀ ದೋತರದಾಗ ಬಲು ಪಾಡು ಕಾಣುತೀ ಯಂದು ರೆಡ್ಡಿಯೂ, ತಮ್ಮ ಯೀ ಟವುಜರೊಳಗ ಬಲುಪಾಡು ಕಾಣುತೀ ಯಂದು ಮನ್ರೋನೂ.. ವಂಥಣ ಪರಪಾಟಿಗೆ ಬಿದ್ದು ಹೆನ್ರಿಯು ರೆಡ್ಡಿಗೆ ಸಲೂಟು ಮಾಡಿದನು, ಮಂದಿಯು ಮನ್ರೋನನ್ನು ರೆಡ್ಡಿ ಯಂದು ಭಾವನ ಮಾಡಿತೆಂಬಲ್ಲಿಗೆ ಸಿವಸಂಕರ ಮಾದೇವss

ಅತ್ತ ಯಿಟ್ಟಂಗೆ ಪರಗಣದಲ್ಲಿರುವ ಮೋರಿಂಗರೆ ಗ್ರಾಮದ ಬಲಾಢ್ಯ ವತನದಾರನಾದ ತಿರುಕಪ್ಪ ಗವುಡನ ಯೇಕ ಮಾತ್ರಸುಪುತ್ರಿಪಾರೊತಿಯು ಭರಣಿ ನಕ್ಷತ್ರದ ನಾಕನೇ ಪಾದದಲ್ಲಿ ಹಿರೇ ಮನುಷ್ಯಳಾದಳೆಂಬ ಸಂಗತಿ ಅದು ಹೆಂಗೋ ಕಿವಿಗೆ ಬಿದ್ದಾಗ ಅಕಾಸ ರಾಮಣ್ಣ ವುಲಿಕ್ಕಿ ಪಡಿ "ದೇವರಾss ಆ ಮಗಳ ಯೇಕರಿಕೆ ದೇಕರಿಕೆ ನಿನಗs ಬಿಟ್ಟಿದ್ದಪ್ಪಾ" ಯಂದನಕಂತ ಕಯ್ನೆತ್ತಿ ಮುಗುದನು ಮನದಾಗ.. ಆಗ್ಗೆ ಹೊತ್ತು ತಗ್ಗಿನತ್ತ ಸಾಗಿತ್ತು, ಕಣ್ಣುಮುಚ್ಚಿದ್ದನು. ಸಿರಿವಂತ ಮನೆಗಳು ರೆಪ್ಪೆವಳಗ ವಂದೊಂದಾಗಿ ಮಾಡಿ ಸಾಕ್ಷಿ ನುಡಿಯುತಲಿದ್ದವು. ಅವುಗಳನ್ನೆಲ್ಲ ಬದಿಗೊತ್ತಿ ಪಾರೊತಿ ನೆನಪಾದಳು. ಯೇಸೊಂದು ದಿವಸಗಳಾದವು ತಾನಾ ಮಗೀನ ನೋಡದೆ.. ತಾನಾಕೆಯನ್ನು ನೋಡಿದಾಗ ಯಿನ್ನೂ ನಡಿಗೆಯನ್ನು ಕಲಿಯುತಲಿದ್ದಳು. ಯತ್ತಿಕೊಂಡೊಡನೆ ತನ್ನ ಮೀಸೆಯೊಂದಿಗೆ ಜಗ್ಗಾಟ ಆಡಿದ್ದಳು.. ತೊಂಬಲ ಮೆಲ್ಲುತ್ತ ಗವುಡ "ತಮ್ಮಾ ರಾಮಣ್ಣ.. ಮುಂದೊಂದಲ್ಲಾ ವಂದಿನ ನೀನೀಕೇನ ಸೊಂತ ಮಗಳೆಂದು ತಿಳಿಕೋಬೇಕಯ್ತುಪ್ಪಾ" ಯಂದಿದ್ದನು.. ಮೋರಿಂಗರೆ ಯಲ್ಲೋ? ಯಲ್ಲಾಪ್ರಕೊರಚರಟ್ಟಿ ಯಲ್ಲೋ? ಯಿವೆರಡನ್ನು ಅಗೋಚರ ಕರುಳ ಬಳ್ಳಿ ಬೆಸೆದಿರುವುದು.. ರಾಮಣ್ಣ ನಿಟ್ಟುಸುರು ಬಿಟ್ಟ.. "ಯಾಕ ಮಾವs ಯಸನ ಮಾಡ್ತಿದೀ" ಯಂದು ಚೋರ ತಂತ್ರಗ್ನ ಸಂಬುಗ ಕೇಳಿದನೆಂಬಲ್ಲಿಗೆ..

ಅತ್ತಕಡೆ ಹರಪನಹಳ್ಳಿ ಸೀಮೆಯೊಳಗ ಸಯ್ಯಿ ಅಂಬುವವರಿರಲಿಲ್ಲ.. ಪಾಡು ಬಿಡು ಅಂಬುವವರಿರಲಿಲ್ಲ.. ಗುಂಡಗತ್ತಿ ಅರಮನೆಯ ವಾರಸತ್ವದ ಯಿಷಯದಲ್ಲಿ ಹತ್ತು ದಿಕ್ಕಿನಿಂದ ಯಿಳದಿದ್ದ ವಾರಸುದಾರರ ನಡುವೆ ತಗಾದೆ

ಯದ್ದಿತ್ತು. ಹುಡುಕಿದರೆ ಸಿಗಬಹುದಿದ್ದ ಅರಮನೆಗೆ ಸಂಬಂಧಿಸಿದಂಥ ವಮುಸರುಕ್ಷಗಳು ಪ್ರತಿಯೊಬ್ಬರ ನಾಲಗೆ ಮ್ಯಾಲಿದ್ದವು.

ಅತ್ತ ಕೂಡ್ಲಿಗಿ ವಳಗ ನಡೆಯುತಲಿದ್ದ ಕಥಿ ಅಷ್ಟು ಲಗೂನ ಆರುವಿಗೆ ಬರುವಂತಿರಲಿಲ್ಲ. ಬರೋರು ಹೋಗೋರಿಗೆಲ್ಲ ಯಿಡೀ ಪಟ್ಟಣವು ಧರುಮಛತ್ರದ ರೂಪ ಪಡೆದಿತ್ತು. ಅಗೋ ಅಲ್ಲಿ ಆ ಮೂರ ರಾಜ.. ಯಿಗೋ ಯಿಲ್ಲಿ ಯೀಮೂರ ರಾಜ.. ಪ್ರತಿ ಹತ್ತು ಮಂದಿ ಪಯ್ಕಿ ವಬ್ಬರಲ್ಲಾ ವಬ್ಬ ರಾಜನು ಕಾಣಸಿಗುತಲಿದ್ದರು. ಅವರು ತಮ್ಮನ್ನು ತಾವು ಪರಿಚಯಿಸಿ ಕೊಳ್ಳುತಲಿದ್ದುದು, ಅವರು ತಮ ತಮ್ಮ ತುದಿನಾಲಗೆಗಳ ಮ್ಯಾಲ ಭೂತಕಾಲದ ಗೊಬ್ಬುರವನ್ನು ಯಿಟ್ಟುಕೊಂಡಿದ್ದುದು, ಅವರು ತಮ ತಮ್ಮ ನಿಲುವಂಗಿಗಳ ಮ್ಯಾಲ ಸವಕಲು ಪದಕಗಳನ್ನು ನೇತುಹಾಕಿಕೊಂಡಿದ್ದುದು, ಅವರು ಹೆಜ್ಜೆ ಹೆಜ್ಜೆಗೊಂದೊಂದು ಸಲ ತಮ ತಮ್ಮ ಭರ್ಜರಿ ಮೀಸೆಗಳ ವ್ಯಾಲ ಕಯ್ಯಾಡಿಸುತಲಿದ್ದುದು, ರಾಜರ ರೀತಿ ರಿವಾಜೊಳಗ ನಡೆಯಲೆತ್ನಿಸುತ್ತಿದ್ದುದು, ನುಡಿಯಲೆತ್ನಿಸುತ್ತಿದ್ದುದು ನಾಕು ಮಂದಿ ತಮಗ ಗವುರದ ದಯಪಾಲಿಸಲಂತ.. ಅದರ ಯಾರೊಬ್ಬನು ನಾಮ ಮಾತ್ರವುದ್ಗಾರ ಯತ್ತುತಲಿರಲಿಲ್ಲ.. ಯಲ್ಲೋ ಯಾವತ್ತೋ ವಬ್ಬಾನೆ ವಬ್ಬ ರಾಜನಿದ್ದರ.. ಅವನು ಆನೆ ವ್ಯಾಲ ಅಂಬಾರಿಯೊಳಗ ಬರುತಲಿದ್ದರೆ ಸರ್ರೆ.. ಸರ್ರೆ.. ಪದಕ ಕಿಂಕಾಪು ತೋರಿಸಿದ ಮಾತ್ರಕ ರಾಜನೆಂಗಾಗುತಾನ..? ವುಂಬಲಕ ಯಿಡೋರು ಯಂದು ಕೇಳುವವ ವಬ್ಬ ರಾಜನೇನು? ಕುಡಿಯಲಕ ನೀರು ಕೊಡೂರಿ ಯಂದು ಕೇಳುವವ ವಬ್ಬ ರಾಜನೇನು? ಮಲಗಲಕ ವಂಚೂರು ಜೆಗ್ಗೇವ ಕೊಡೂರಿ ಯಂದು ಕೇಳುವವ ವಬ್ಬ ರಾಜನೇನು? ಯಂದು ಯೋಚಿಸುತ ಮಂದಿ ಬಲು ತಾಚ್ಛಾರ ಮಾಡುತಲಿದ್ದರು. ಅದು ಮೊದಲೇ ಪರಸ್ಥಳ.. ವಂದಿನ ಯಿರಲಕಾದೀತು.. ಯಲ್ಡು ದಿನ ಯಿರಲಕಾದೀತು.. ಮೂರನೇ ದಿನ ಯಿರಲಕಂದರ ಬಲು ತ್ರಾಸಾಗುತಲಿದ್ದಿತು. ಭವುತಿಕವಾಗಿ ಯಂಥವೇ ಆದ ಲಡಾಸು ಕಿಂಕಾಪು ಪೋಸಾಕು ಧರಿಸಿಕೊಂಡಿದ್ದರೂ, ತಲೆಮ್ಯಾಲ ದುಗ್ಗಾಣಿ ಮವುಲ್ಯದ ಪೇಟಯಂಬ ಕಿರೀಟ ಧರಿಸಿದ್ದರೂ ಹೊಟ್ಟೆ ಮೊರೆ ಆಲಿಸಬೇಕಲ್ಲ. ಚಟಗಳ ಅಟ್ಟವಾಗಿದ್ದ ಪಂಚೇಂದ್ರಿಯಗಳು ಕೇಳಬೇಕಲ್ಲ.. ಸಂಚಾರಿ ಬೊಕ್ಕಸ ಖಾಲಿಯಾದೊಡನೆ ತಮ್ಮ ಯಾದಾರ ವಂದು ವಸ್ತುವನ್ನು ಅಮವುಲ್ಯ ಯಂದು ಭಾವಿಸಿ ಅಮಾತ್ಯರ ಕಯ್ಲೋ, ಭಂಡಾರಿಯರ ಕಯ್ಲೋ ಕೊಡುತ್ತ, ಯಿದು

ಯಿಂಥ ರಾಜರಿಗೆ ಸೇರಿದ್ದೆಂದು ಹೇಳದಿರುವಂತೆ ಅಂಗಲಾಚಿ ವತ್ತೆ ಯಿಡಲಕ ಯಂದೋ, ಮಾರಾಟ ಮಾಡಲಕ ಯಂದೋ ಬಾಜಾರಕ ಕಳುವುತ್ತಿದ್ದರು. ವತ್ತೆ ಯಿಡಿಸಿಕೊಂಡರುಂಟು, ಯಿಲ್ಲದಿದ್ದರ ಯಿಲ್ಲ.. ಚವುಕಾಸಿಯಿಂದ ಕೊಂಡು ಕೊಳ್ಳುತ್ತಿದ್ದುಂಟು, ಯಿಲ್ಲದಿದ್ದರ ಯಿಲ್ಲ.. ಯಿಂಥ ಮೂರಿನ ರಾಜರನದಾರಪ್ಪಾ ಯಂದಲ್ಲಿ ಯಾಮೂರ ರಾಜನಾದಾರ ನಮಗೇನು.. ಯೇನು ಕಲಿಯುಗಮೋ ಯೇನೋ.. ಕಾಸಿಗೊಬ್ಬ ರಾಜನದಾನ.. ಕೊಸರಿಗೊಬ್ಬ ರಾಜನದಾನး ಯಂದು ಲೇವಾದೇವಿಗಾರರು ಕೊಸರಿ ನುಡಿದು ವಾಪಾಸು ಮಾಡುತಲಿದ್ದುದು ಮಾಮೂಲು ದ್ರುಸ್ಯವಾಗಿತ್ತು ಕಣ ಸಿವನೇ.. ರಾಜಾ ಪರತಕ್ಷ ದೇವತಾ ಯಂಬ ಸಮುಸಕ್ರುತ ಸಂಜಾತ ನಾಣ್ಣುಡಿ ಮಂದೀಯ ಬಾಯೊಳಗ ಕಸವಾಗಿ ನುರಪಡಿಗೊಂಡುಬಿಟ್ಟಿತ್ತು ಸಿವನೇ.. ಯಡ್ಡವರ್ಡ ಸಾಹೇಬನ ದರುಸನಾರ್ಥವಾಗಿ ವಂದೆರಡು ದಿನಗಳ ಮಟ್ಟಿಗೆ ಯಂದು ಅಯ್ದಾರು ಹರದಾರಿ ದೂರದ ತಮ ತಮ್ಮ ದೇಸದೇಸಗಳಿಂದ ಬಂದಿದ್ದಂತ ರಾಜರು ವಾರ ದಿನಮಾನ ಯಂದರ ಹುಡುಗಾಟವೇನು ಸಿವನೇ, ಕುಂಪಣಿ ಸರಕಾರವು ತಮ್ಮಂಥ ರಾಜರುಗಳಿಗೆ ಕವುಡೆ ಕಿಮತ್ತು ಯಿಲ್ಲದಂಗ ಮಾಡಿ ಬಿಟ್ಟಿರುವುದಲ್ಲಾ ಯಂದವರು ವಾಚಾಮಗೋಚರವಾಗಿ ಹಲುಬುತಲಿದ್ದುದೇನು ಸಿವನೇ, ಯಿನಾ ಕಾರಣ ಹಿಡಿ ಹಿಡಿ ಸಾಪ ಗೊಣಗುತಲಿದ್ದುದೇನು ಸಿವನೇ.. ಕೆಲವರು ಯಿನ್ನೂ ತಾವು ರಾಜರೇ ಯಂದು ಮುಖಮಾರಿ ಬಿಕ್ಕೊಂಡು ನಟನ ಮಾಡುತಲಿದ್ದುದೇನು? ಕೆಲವರು ತಮ ತಮ್ಮ ರಾಜತನವನ್ನು ಮರೆಮಾಚಿಕೊಂಡು ಮಾಮೂಲು ಮನುಷ್ಯರಂಗ ಅವರಿವರ ಚಾಕರಿ ಮಾಡುತ ತಮ ತಮ್ಮ ಪಾಡಾ ಖರಚುಗಳನ್ನು ನಿಭಾವಣೆ ಮಾಡಿಕೊಳ್ಳುತಲಿದ್ದುದೇನು ಸಿವನೇ. ರಾಜ ರಾಜನಂದರ ಅದಕ ಮಯ್ಯಿಮಾಲ್ಯ ಯೇನಯ್ತೆ ಪುರಾವೆ, ಮಯ್ಯಿ ವಳಗೇನುಂಟು ಪುರಾವೆ ಯಂದು ಕೇಳುತಾರಲ್ಲ ಸಿವನೇ, ಹಿಂಗಾಗಿ ರಾಜರು ತಾನು ರಾಜ ಅಂಬಲು ಭಲೇ ಮಜುಗುರಪಟ್ಟು ಕೊಂಡರಾ ಪಟ್ಟಣದೊಳಗ.. ಯಲ್ಲಾ ರಾಜರು ಹಿಂಗ ಯಿರಲಿಲ್ಲ.. ಪೂರುವಿಕರು ಮಾಡಿಟ್ಟಿದ್ದ ಗಂಟು ಕರಗಿಸಲೆಂದೇ ಬಂದಂಥವರು ಯಿದ್ದರು. ಕುಂಪಣಿ ಸರಕಾರದ ಯಂಜಲು ತಿಂಬುವುದು ಥರವಲ್ಲ ಯಂಬ ಅಭಿಮಾನದಿಂದ ತಾವಾ ಸದರಿಪಟ್ಟಣದೊಳಗ ಬದುಕಲಕೆಂದು, ಮನರಂಜನಾ ಸಂಸ್ಥೆಗಳ ವಡೆಯರಾಗಲಕೆಂದು ಆಯಕಟ್ಟಾದ ಜೆಗೇವುಗಳ ತಲಾಷಿಯಲ್ಲಿದ್ದರು. ಆಗಲೇ ಯಿದ್ದ ಜೂಜಾಟದ ಕೇಂದ್ರಗಳೊಳಗ ಸರುವನ್ನೊಂದು ಮಾಡುತ

ತಮ ತಮ್ಮ ಗಡ್ಡ ಮೀಸೆಗಳನ್ನು ಲೆಕ್ಕಿಸದೆ ವುಳುದು ಬಿಟ್ಟಿದ್ದಂಥವರೂ ಯಿದ್ದರು. ಕೆಲವು ರಾಜರು ತಮ ತಮ್ಮ ಸರೀರಗಳ ಭಾದೆ ತೀರಿಸಲಕೆಂದು ಯೇಶ್ಯಾವಾಟಿಕೆಗಳ ಹೊಸ್ತಿಲು ದಾಟಲಾರಂಭಿಸಿದ್ದರು. ಅಂಥವರ ಪಯ್ಕಿ ಹೆಸರಗುಂಟ ಕರೆಯಬೌದದಂಥವರೆಂದರ ಯಾಲಪಿಯ ರಾಜನಾದ ಚನ್ನನಗವುಡನು, ಬೂದಾಳು ರಾಜನಾದ ಯತ್ತಪ್ಪನಾಯಕನು, ಬೊಮ್ಮಗಟ್ಟದ ರಾಜನಾದ ಬೊಮ್ಮನಾಯಕನು, ಕಣಕುಪ್ಪೆಯ ರಾಜನಾದ ತಡಸಾಲಯ್ಯನಾಯಕನು, ಗುಡ್ಡಗಾಡು ದೇಸಗಳಿಗೆ ಸೇರಿದವರಾದ ಯಿವರು ತಮ ತಮ್ಮ ಮುಂಗಯ್ಯಿಗಳಿಗೆ ಮಲ್ಲಿಗೆ ದಂಡೆಗಳನ್ನು ಕಟ್ಟಿಕೊಂಡು ಜಾವ ಜಾವಕ್ಕೊಂದು ಸಲ ಮೂಸುತ್ತ ಯರಕಲಮ್ಮ, ಪದುಮಾವತಮ್ಮ, ಮಾತರಮ್ಮ, ಗವರಮ್ಮ, ಗಿರಿಜಮ್ಮರೇ ಮೊದಲಾದ ರುತ್ತಿಪರ ಯೇಸ್ಯೆಯರ ಮನೆಗಳೊಳಗ ಗಾನಾ ಬಜಾನ ಕೇಳೂತs ಕೇಳೂತ ಮಯ್ನ ಮರತು ಯಿದ್ದು ಬಿಟ್ಟರು. ಅವರಿಗೆ ತಮ ತಮ್ಮ ರಾಣಿ ವಾಸದವರಿಂದಲೂ, ಆಡಳಿತ ವರ್ಗದ ಪದಾಧಿಕಾರಿಗಳಿಂದಲೂ ಬುಲಾವುಗಳು ವಂದರ ಮ್ಯಾಲ ವಂದರಂತೆ ಬರಲಾರಂಭಿಸಿದ್ದವು. ಅಂಥ ಬುಲಾವುಗಳನ್ನು ಅವರು ಗದ್ದರಿಸಿ ಕಳುಹಿಸುತಲಿದ್ದರು, ಪರಿಸ್ಥಿತಿ ಹಿಂಗs ಯಿರುವಾಗ್ಗೆsss

ಕುರುಗೊಡು ರಾಚಮಲ್ಲನ ಯೇಳನೇ ಹೆಂಡತಿಯ ವಮುಸಸ್ಥನೂ, ಬಾದನಟ್ಟಿ ಪಾಳೆಪಟ್ಟಿನ ನಾಯಕನೂ, ಬಲ್ಲಕುಂದೆ ಮಾಂಕಾಳಮ್ಮನ ಸದುಭಕುತನೂ ಆದಂಥ ಯೀರ ಭೋಜನಾಯಕನು ವಂಟೆ ಡುಬ್ಬದ ಮ್ಯಾಲ ಕೂಕಂಡು ಸದರಿ ಪಟ್ಟಣವನ್ನು ಪ್ರವೇಸ ಮಾಡಿದ್ದು ಯರಡು ಕಾರಣಗಳಿಗಾಗಿ.. ವಂದನೇದೆಂದರೆ ವಡ್ಡಟ್ಟಿ ಗುತ್ತೆಪ್ಪನಾಯಕನ ಮ್ಯಾಲ ಧಾಳಿ ಮಾಡುವ ಸಲುವಾಗಿ ಅಯಿವತ್ತು ಮಂದಿ ಸಿಪಾಯಿಗಳನ್ನು 'ಸಯ್ನಿಕ ಸಾಯ ಪದ್ದತಿ' ಅಡಿ ಕಳುವಿಕೊಡಬೇಕೆಂದು ಯೀ ಹಿಂದೆಯೇ ಕುಂಪಣಿ ಸರಕಾರಕ್ಕೆ ದರಖಾಸ್ತು ಸಲ್ಲಿಸಿದ್ದನು. ಅದು ಯೇನಾತು ಯಂದು ತಿಳಿದುಕೊಳ್ಳಲಕ ಬಂದಿದ್ದನು. ಯರಡನೇದು ಯಂದರೆ.. ತಿಲ್ಲಾನ ತಾಯಕ್ಕನ ಮಗಳು ಚೆನ್ನಾಸಾನಿ ರುತುಮತಿಯಾದಾಗ ಬಂದು ನಝುರಾನ ಸಲ್ಲಿಕೆ ಮಾಡುವುದಾಗಿರಲಿಲ್ಲ. ಆಕೆಯ ಮೂಗು ತನ್ನ ಮೂಗನ್ನು ಹೋಲುತ್ತಿರುವದಂತೆ, ಸುದ್ದಿ ಕಿವಿಗೆ ಬಿದ್ದಂದಿನಿಂದ ಕರುಳ ಸೆಳೆತಕ್ಕೆ ತುತ್ತಾಗಿದ್ದ, ಹಳೆಯ ನೆನಪುಗಳ ಮಂಕರಿಯೊಳಗ ಹುದುಗಿ ಚಡಪಡಿಸಿದ್ದ...

ಯಾವತ್ತೋ ತಾನು ಬರಬೌದಿತ್ತು.. ಯೇಸೋ ವರುಷಂಗಳ ಹಿಂಗಡ ಮಾತಿಗೆ ಮಾತು ಬಂದು ವಂಟೆ ಮ್ಯಾಲೆ ಬಂದು ಕಾಣುವುದಾಗಿ ಸಪಥ ಮಾಡಿದ್ದನಷ್ಟೆ.. ಕುದುರೆಯ ಮ್ಯಾಲ ಬಂದರ ಬರಬೌದು, ಆನಿ ಮ್ಯಾಲ ಬಂದರss ಬರಬೌದು, ಆದರ ವಂಟೆ ವ್ಯಾಲ ಪಯಣ ಹೊಂಟು ಬರುವುದೆಂದರೇನು? ಆ ಕಾಲದಲ್ಲಿಬಲು ಬ್ಯಾಸರ ಪಟ್ಟಿದ್ದ ಕಾರಣದಿಂದಾಗಿ ತಾಯಕ್ಕ 'ಹ್ದೂ ಸರ್ರೆ' ಅಂದಿದ್ದಳು...

ಹಿಂದಕ ಯರಡು ಮಂದಿ, ಮುಂದಕ ಮೂರು ಮಂದಿ, ಯಡಕ ಯರಡು ಮಂದಿ, ಬಲಕ ವಂದು ಮಂದಿಯನ್ನು ಅಲಂಕಾರಕ್ಕ ಯಿಟ್ಟುಕೊಂಡಿದ್ದ ಯೀರಭೋಜನು ಪ್ರವೇಸ ಮಾಡಿದೊಡನೆ ಪಟ್ಟಣದ ಪಂಚೇಂದ್ರಿಯಗಳು ಸರಕ್ಕಂತ ಆ ಕಡೇಕ ತಿರುಗಿಕೊಂಡುಬಿಟ್ಟವು. ಸದರಿಪಟ್ಟಣವು ವಂಟೆ ಯಂಬ ನಾಮವಾಚಕ ಕೇಳಿತ್ತೇ ಹೊರತು ಮುದ್ದಾಮು ನೋಡಿರಲಿಲ್ಲ. ಯೀತ ಯಾವ ಲೋಕದವ ಯಂದು ಸಂಭರಮಾಚ್ಚರ್ಯದಿಂದ ಕೇಳುತಲಿದ್ದವರಿಗೆ ಬಿರುದಾವಳಿ ಪರಾಕು ಸಹಿತ ಯಿಸದ ಮಾಡಲಕ ಯಂದೇ ಭಟ್ರಾಜು ಭದ್ರಿರಾಜು ಯಂಬಾತನನ್ನು ವಂದು ದಿನದ ಮಟ್ಟಿಗೆ ಬಾಡಿಗೆ ಪಡಕೊಂಡು ಮುಂದ ಮುಂದಕ ಬಿಟ್ಟಿದ್ದನು. ಆದ್ದರಿಂದ ತಾನು ರುಥಾ ತಲೇನ ಖರಚು ಮಾಡಿಕೊಳ್ಳುವ ಅಗತ್ಯಯಿರಲಿಲ್ಲ. ಮೀಸೆಯನ್ನು ಚೂರಿಯಾಕಾರಕ್ಕೆ ತರಲೆಂದು ತೀಡೀ ತೀಡಿ ತನ್ನ ಯಡ ಮುಂಗಯ್ಯಿ ನೋಯುತ್ತಿದ್ದರೂ ಲೆಕ್ಕಿಸದೆ ಕುಂಪಣಿ ಕಛೇರಿಗೆ ಹೂಗಿ ಯಿಚಾರಿಸಿದ. ಆ ಕಡತವನ್ನು ನೋಡಿಕೊಳ್ಳುವ ರಾಯನು ರಜೆಯ ಮೇಲಿರುವುದರಿಂದಲೂ, ಯಡ್ಡವರ್ಡ ಸಾಹೇಬನು ಅಂಥೋಣಿ ಫಾದರಿಯೊಂದಿಗೆ ಫಲಾನ ಕಾರ್ಯೇವಿಗೆಂದು ಫಲಾನ ವೂರಿಗೆ ಹೂಗಿರುವುದರಿಂದಲೂ... ಸರ್ರೆಸರ್ರೆಯಂದು ಆ ರಾಜನು ತನ್ನ ವಾಹನವನ್ನು ಯಲ್ಲಿಗೆ ತಿರುಗಿಸಿದನೆಂದರೆ..

ಯೀರಭೋಜ ಅಂದರ ಯಾರು? ಓಹೋ.. ಅವಯ್ಯನು.. ಅವಯ್ಯನು ಯಾಕ ವಂಟೆಯ ಮ್ಯಾಲ! ಓಹೋ ಅದಕ್ಕs...

ತನ್ನ ಮನೆಯ ಗುರಿಯಿಟುಕೊಂಡು ಬರುತ್ತಿರುವ, ವಂಟೆ ಮ್ಯಾಲ ಯಿರೋದು ಯೀರಭೋಜ ಯಂಬ ಸಂಗತಿ ತಿಳಿದು ತಾಯಕ್ಕ ವಂಥಣ ವುಲುಕ್ಕಿ ಪಡ್ಡಳು. ವಂಟೆ, ಆನೆಗಿಂತ ಮುಂಗಟ ಯಂದೇ ತಾನೀ ಮೊದಲು ಭಾವಿಸಿದುದುಂಟು. ಯಾವಾಗ ಚಿನ್ನಾಸಾನಿ ರುತುಮತಿಯಾದಾಗ ಬರಲಿಲ್ಲಮೋ

ಆಗ್ಗೆ ಕುರುಗೋಡು ಯಿರುವ ದಿಕ್ಕಿಗೆ ಲಟ್ಟಿಗೆ ತೆಗೆದಿದ್ದಳು.. ಅಯಿವತ್ತಯ್ದರ ತಾಯಕ್ಕ ವಡಮೂಡಿ ಹ್ಹಾ..ಹ್ಹಾ.. ಯೀರಭೋಜಃ ಹೋ ಹ್ಹೋ.. ಯೀರಭೋಜ ಯಂದುದ್ಗಾರ ಮಾಡಿದಳು ಸಿವನೇ.. ಸರೀರದ ಆಯಕಟ್ಟಾದ ಭಾಗಗಳು ಜಲಜಲಾಂತ ಬೆವೆತೊಡನೆ.. ದೇವರೇ ವಂದೆರಡು ತಾಸು ಬುಗುಡಿ ನೀಲಕಂಠಪ್ಪ ಬಾರದಿರಲಿ.. ಮಗಳು ಚಿನ್ನಾಸಾನಿ ಬಾರದಿರಲಿ.. ಬರಲಿರುವ ವಂಟಿಯ ಮ್ಯಾಲ ಅವನಿಲ್ಲದಿರಲಿ.. ಅವನಿಲ್ಲದ ವಂಟೆ ಬಾರದಿರಲಿ....

ತಾನು ಅಡ್ಡಾಡಿರುವ ಅವಿಷ್ಟು ಸಮುಸ್ಥಾನಗಳ ಪಯ್ಕಿ ವಂದಃ ವಂದು ಸಮುಸ್ಥಾನದಲ್ಲಿ ವಂಟೆ ಯಿತ್ತ ಯಂದಾಕೆ ಯೋಚನೆ ಮಾಡುತ್ತಿರುವಷ್ಟರಲ್ಲಿ....

ಅತ್ತ ಕುದುರೆಡವು ಪಟ್ಟಣದೊಳಗ ಸಾವುರ ಕಾಲುಗಳನ್ನೂರುತ ಮಯಸೂರಿ ಯಂಬುವ ಕ್ಷುದ್ರದೇವತೆಯು ತೂರಿಕೊಂಡಯ್ತೆ ಯಂಬ ಗಾಳಿ ವರ್ತಮಾನವನ್ನು ನಂಬಿ ಮಂದಿ ತಲಾಕೊಂದೊಂದು ಕಥೆಗಳನ ಕಟ್ಟಲಾರಂಭಿಸಿದ್ದರು ಸಿವನೇ.. ಮಯಸೂರಿ ಅಂದರ ಯಾರು ಅಂತ ಕೇಳುವ ಸಲುವಾಗಿ ತನ ಸುತಮುತ್ತ ಜಮಾಸಿದ ಮಂದಿಯನ್ನು ನೋಡಿದೊಡನೆ ತೂಕಡಿಸುವಾತನಿಗೆ ಹಾಸಿಗೇನ ಹಾಸಿಕೊಟ್ಟಂತಾಯಿತು ಮುದೇತನಿಗೆ.. ಯಲಾಯ್ ಮಯಸೂರಿ.. ನಿನ್ನ ಲಗಾಯ್ತಿನಿಂದ ನೋಡುತ ಬಂದೀನಿ ಕನಮ್ಮೀ.. ನಿನ್ನ ಬಾಕುಲಾಗ ಬುಟ್ರೆಗವಾಕ್ಷೀಲಿ ಬಂದು ಕಾಟ ಕೊಡುವಿ ಕನಮ್ಮೀ.. ನಿನ್ನ ನಾನು ಸುಮ್ಮಕ ಬುಡಾಕಿಲ್ಲ ಕನಮ್ಮೀ.. ಯಂದು ಜೋರು ಜೋರು ಹೇಳಿಕೋತ ಮಂತರ ವಟಗುಟ್ಟುತ್ತಿದ್ದುದೇನು? ತಾನು ಮಾಡುತಲಿದ್ದುದೇನು.. ಮಣ ಮಣ ಲೋಬಾನ ಸುಡಲಾರಂಭಿಸಿ ದ್ದುದೇನು? ಮಂದಿ ಯಂಭೋ ಮಂದಿಯನ್ನು ಭಯ ಭ್ರಾಂತಿಯ ಮಿಣಿಯಿಂದ ಕಟ್ಟಿ ಹಾಕುತಲಿದ್ದುದೇನು? ವಂದೊಂದು ಕಥೆಯೊಳಗ ತಾನು ತರಾವರಿ ಗೋಚರ ಮಾಡಲಾರಂಭಿಸಿದ್ದುದೇನು? ಆತನಿದ್ದ ಕಥೆಗಳು ವಂದೊಂದೂ ಸಹಸ್ರಪದಿಗಳಾಗಿ ಪಟ್ಟಣದ ಗಡಿ ದಾಟಿ....

ಸುತ್ತನ್ನಾಕಡೇಲಿದ್ದ ಮೂರು ಪಾರುಗಳಿಂದ ಮಂದಿ ಯಂಭೋ ಮಂದಿ ಸದರಿ ಪಟ್ಟಣದ ಕಡೇಕ ಹರಿಯಲಾರಂಭಿಸಿತು. ಅಲ್ಲಿ ನೋಡಿದರ ಆಸುಮಂದಿ ಸಿವನೇ.. ಯಿಲ್ಲಿ ನೋಡಿದರ ಯೀಸು ಮಂದಿ ಸಿವನೇ.. ಯಲ್ಲೆಲ್ಲಿ ನೋಡಿದರೂ ಯೇಸೇಸೋ ಮಂದಿ ಸಿವನೇ.. ಅವೀಸು ಮಂದಿ ವುಂಬುವುದೆಂಗ? ಕುಡಿಯೋದೆಂಗ? ಮಲಗೋದೆಂಗ ಸಿವನೇ? ದಾನ ದರುಮಿಷ«ರಿಂದಾಗಿ ಯಲ್ಲಿ

ನೋಡಿದೆಡಲ್ಲಿ ಧರುಮಛತ್ರಗಳು, ನೀರಿನರವಟ್ಟಿಗೆಗಳು, ಬಿಡದಿ ಮನೆಗಳು ಹುಟ್ಟಿಕೊಂಡವು.. ಯಲ್ಲಂದರಲ್ಲಿ ಹ್ವೋ.. ಹ್ವೋ.. ಯಲ್ಲಂದರಲ್ಲಿ ಹ್ವಾ.. ಹ್ವಾ.. ಯಂಬ ವುದ್ಗಾರಗಳು ಹುಟ್ಟಿಕೊಂಡವು....

ಆ ಗವುಜ ಗದ್ದಲ ಭರಾಟೆಯೊಳಗ ಅರಮನೆಯು ತನ್ನ ಖೂನ ಗುರುತ ಕಳಕೊಂಡು ಅಂಡಾವರನ ಪುಂಡೀಪಲ್ಲೆ ಆಗಿಬಿಟ್ಟಿತು ಸಿವನೇ.. ರಾಜಮಾತೆ ಭಯ್ರಮಾಂಬೆ ಯಸನ ಮಾಡುತ ಕುಂತಿದ್ದಾಕಿ ಮ್ಯಾಲಕ್ಕ ಯೇಳಲಿಲ್ಲ ಸಿವನೇ.. ತಾಯಿ ಸಾಂಬವಿಯಂಬುವ ಸಬುಧವು ಯಾವತ್ತೂ ಮಂದಿಯ ಥೆಲಿಯೊಳಗ ಹೇನಾಗಿ ಸುಟುಸುಟು ಅಂತಿತ್ತು ಸಿವನೇ.. ಯಾವತ್ತೂ ಮಂದಿಯ ಸರೀರದ ತುಂಬೆಲ್ಲ ತಾಯಿ ಸಾಂಬವಿಯಂಬುವ ಸಬುಧವು ತೊಣೆಚೆಯಾಗಿ ಹರದಾಡಲಕ ಹತ್ತಿತು ಸಿವನೇ.. ಅಲ್ಲಿ ಹಗಲೆಂಬುವುದು ಯಿರಥಂಗಾತು.. ಯಿರುಳು ಯಂಬುದು ಯಿರಥಂಗಾತು.. ಕಿವಿ ಅನಿಸಿದ ಕಡೇಲೆಲ್ಲ ಭಕುತಾದಿ ಮಂದಿಯ ದಿಂಡುರುಳಿಕೆಗಳು.. ನೆಲವೆಲ್ಲ ಪ್ರಸಾದ.. ಜಲವೆಲ್ಲ ಸರುವ ತೀರ್ಥ....

ಮಾಮೂಲು ಮನುಷ್ಯರದೇ ಯೀಪಾಟಿ ವರ್ತನ ಯಿರುವುದು ಕಂಡು ಯರಡಾ ನಾಕಲೆ ಯಂಟು ದಿಕ್ಕುಗಳು ಸುಮಸುಮ್ಮಕ ಯಿರಲಿಲ್ಲ.. ಅವುಗಳಿಗೆ ಗಳಿಗೆಗೊಂದೊಂದು ಸಲ ಅದಲಿ ಬದಲೀ ಕಂಭವಾಗಲಕ ಹತ್ತಿದವು.. ರುತುಗಳೂ ಸುಮುಸುಮ್ಮಕ ಯಿರಲಿಲ್ಲ.. ಅವೆಷ್ಟಿರುವವೋ ಅವಿಷ್ಟು ಸದರಿ ಪಟ್ಟಣವನ್ನು ಪ್ರವೇಸ ಮಾಡಿ ಸಂಚಾರ ಕಯ್ಕೊಂಡವು.. ಅದರ ಪರಿಣಾಮವಾಗಿ ಸೀಲವಂತರೋಣಿ ಮಂದಿ ಸಳಿ ಸಳಿ ಅಂಬಲಕ ಹತ್ತಿದರ, ಮಾಲ್ಯವಂತರ ಮೋಣಿ ಮಂದಿ ಸೆಕೆ ಸೆಕೆ ಅಂಬಲಕ ಹತ್ತಿದರು.. ದಳವಾಯಿಗಳೋಣಿಯ ಮರಗಿಡಗಳು ಯಲೆ ವುದುರಿ ಬೋಡಾಗುತಲಿದ್ದರ, ಮಡ್ಡೇರೋಣಿಯ ಗಿಡಮರಗಳು ಹೊಸ ಹೊಸ ಚಿಗುರು ಮುಡಕೊಂಡು ಮದಮಕ್ಕಳಂಗ ಗೋಚರವಾಗತೊಡಗಿದವು.. ವರುಷ ರುತವಂತೂ ಜಾವ ಜಾವಕ್ಕಂದೊಂದು ಸಲ ನೀರು ಚಿಮುಕಿಸುತ ಸುಳಿದಾಡಲಾರಂಭಿಸಿತ್ತು.. ಪ್ರಕ್ರುತಿ ನಿಯಮಗಳು ಅದಲು ಬದಲಾಗುತ ಸಂಭರಮಪಡುತಲಿದ್ದವು.. ವಂದೇ ಮಾತಲ್ಲಿ ಹೇಳಲಕಂದರ....

*    *    *    *

ಅತ್ತ ಗುಂತಕಲ್ಲು ಪಟ್ಟಣದೊಳಗ ಮಿಷನರಿ ಗೋಡೆ ಯಬ್ಬಿಸುತಲಿದ್ದ ಭಾವೀ ಸಂತ ಮುನುಸೋಬಯ್ಯಗೇ ಯೀ ಸುದ್ದಿ ತಿಳಿದು ನಂಬಲಿಕಾಗಲಿಲ್ಲ.

ಮನ್ರೋ ಮತ್ತು ನಾಗಿರೆಡ್ಡಿಯರೀರ್ವರ ಪಯ್ಕಿ ಪುಣ್ಯಕೋಟಿ ಯಾರಾಗಿದ್ದಿರಬೌದೆಂಬ ಸಂದೇಹ ಮೂಡಿತು. "ಓಹ್.. ದೇವರೇ ನಾಗಿರೆಡ್ಡಿಯ ಜೀವ ಕಾಪಾಡು.. ಹಾಗೆಯೇ ಮನ್ರೋನ ಮಾನಸಿಕ ಸ್ವಾಸ್ಥ್ಯ ಕಾಪಾಡು" ಯಂದು ಅವಯ್ಯನು ಯೇಸು ಪ್ರಭುವಿನೆದುರು ಮುಂಬತ್ತಿ ಬೆಳಗಿಸಿ ಮಂಡೆಯೂರಿ ಪ್ರಾರ್ಥಿಸುತ್ತಿರುವಾಗ್ಗೆ....

ಸದರೀ ಸೀಮೆ ಮಂದಿಯ ಯಾರ ಬಾಯಿಯನ್ನು ಹೋಳು ಮಾಡಿದರಲ್ಲಿ ನಾಗಿರೆಡ್ಡಿ ರೂಪದಲ್ಲಿರುವ ಮನ್ರೋನೂ, ಮನ್ರೋ ರೂಪದಲ್ಲಿರುವ ನಾಗಿರೆಡ್ಡಿಯೂ ಗೋಚರವಾಗುತಲಿದ್ದರು. ಅವರು ಬಿಟ್ಟು ಯಿವರು ಯಾರು? ಯಿವರು ಬಿಟ್ಟು ಅವರು ಯಾರು? ಅವರೀರ್ವರ ನಡುವೆ ವಂದು ವಪ್ಪಂದವು ಯೇರುಪಟ್ಟಿದ್ದಿರಬೌದಾ? ಅವರಿಬ್ಬರು ಸೇರಿ ತಮಗೆ ಮೋಸ ಮಾಡುತ್ತಿರಬೌದಾ? ಯಿತಿಹಾಸದೊಳಗ ಮೂಡಣ ಪಡುವಣ ವಂದಕ್ಕೊಂದು ಕೂಡಿರುವ ವುದಾಹರಣೆಗಳುಂಟಾ? ಪ್ರಕ್ರುತಿ ನಿಯಮದೊಳಗೆಲ್ಲಾದರೂ ಅರ್ರುದನೆಂಬ ಯಾಘ್ರನೂ, ಪುಣ್ಯಕೋಟಿ ಯಂಬ ಹಸುಮೂವಟ್ಟಿಗೆ ಭೋಜನ ಮಾಡಿರುವ ದ್ರುಸ್ಟಾಂತ ವುಂಟಾ? ಯಂಬಿವೇ ಮೊದಲಾದ ಸಂದೇಹಗಳಿಗೆ ತಮ ತಮ್ಮ ದಿನಚರಿಗಳನ್ನು ಬಲಿಕೊಟ್ಟಿದ್ದರು ಸಿವನೇ.. ಬಹಳಷ್ಟು ಮಂದಿ ಲೆಕ್ಕ ಹಾಕುತಲಿದ್ದುದು ಮನ್ರೋನು ಕುಂಪಣಿ ಸರಕಾರದ ಕಲೆಟ್ಟರನಾಗಿಯೇ ಯಿರಬೇಕೆಂಬುದಾಗಿತ್ತು.. ನಾಗಿರೆಡ್ಡಿಯು ಸದಾ ಬಡವರ ಪರ ಹೋರಾಡುತ್ತ ಕುಂಪಣಿ ಸರಕಾರದ ಯಿರೋಧವನ್ನು ಕಟ್ಟಿಕೊಳ್ಳುತ್ತಲೇ ಮುಂದುವರೆಯಬೇಕು ಯಂಬುದಾಗಿತ್ತು. ಆ ಯರಡೂ ದಿಕ್ಕಗಳ ನಡುವೆ ರಾಜಿ ಕಬೂಲಿ ಬಹಳಷ್ಟು ಮಂದಿಗೆ ಸುತಾರಾಂ ಯಿಷ್ಟಯಿರಲಿಲ್ಲ. ವುಂಬುವ ಬಾನದೊಳಗ ಯಿಷ ಕಲೆಸಿಟ್ಟು ಮನ್ರೋನನ್ನು ಬಲಿ ತೆಗೆದುಕೊಂಡಿದ್ದಲ್ಲಿ ನಾಗಿರೆಡ್ಡಿಯನ್ನು ಸಯ್ಯಿ ಅನುತಿದ್ದೆವಪ್ಪಾ.. ಆ ಯರಡೂ ಗುಂಪುಗಳ ನಡುವೆ ಕಾಳಗ ಸಂಭವಿಸಿ ನೂರಾರುಮಂದಿ ಸತ್ತಿದ್ದಲ್ಲಿ ಸಯ್ಯಿ ಅನುತಿದ್ದೆವಪ್ಪಾ.. ಯಿತಿಹಾಸದೊಳಗ ಮನ್ರೋ ಖಳನಾಯಕನಾಗೇ ಮುಂದುವರೆವುದು ತಮ್ಮ ಕಣಸಾಗಿರುವುದಪ್ಪಾ.. ಯಿತಿಹಾಸದೊಳಗ ನಾಗಿರೆಡ್ಡಿಯು ಹುತಾತುಮನಾಗುವುದು ತಮ್ಮ ಕಣಸಾಗಿರುವುದಪ್ಪಾ.. ತಾವು ಕಂಡ ಕಣಸು ಮಣ್ಣುಪಾಲಾಗಿ ಬಿಟ್ಟಿತಲ್ಲಾ.. "ಓಹ್.. ಭೀಮಲಿಂಗೇಸ್ವರ ಸ್ವಾಮಿಯೇ.. ನಮ್ಮ ಗಂಡುಮೆಟ್ಟಿನ ನಾಡಾದ ರಾಯಲ ಸೀಮೆಯ ಜಾಯಮಾನ ಬದಲಾಗದಂತೆ ನೋಡಿಕೋ. ಯೀ ನೆಲದ

ಗುಣವಾದ ವುಗ್ರಹೋರಾಟ, ರಕುತಪಾತಗಳಿಗೆ ದಕ್ಕೆವದಗದಂತೆ ನೋಡಿಕೋ. ಯಾರ್‍ಯಾರು ಹೆಂಗೆಂಗಿರುವರೋ ಹಂಗಂಗೇ ಮುಂದುವರೆಯುವಂತೆ ನೋಡಿಕೋ ದೇವರೇ" ಯಂದು ಸದರಿ ಪ್ರಾಂತದ ಭೋ ಪಾಲು ಮಂದಿ ತಮಗ ಗೊತ್ತಿದ್ದೋ, ಗೊತ್ತಿಲ್ಲದೆಯೋ ವಳಗೊಳಗ ಬೇಡಿಕೋತಿದ್ದುದು ಸಾಮಾನ್ಯ ದ್ರುಸ್ಯವಾಗಿತ್ತು ಸಿವನೇ...

ಸದರಿ ಪ್ರಾಂತದ ಫಲಾನ ವೂರೊಳಗ ಭೋಜನ ನಡದು ಯಿತಿಹಾಸವನ್ನು ಯಕ್ಕಿತ್ತಲ್ಲಾ.. ಅದು ಹಂಗs ನಡೆಯಿತು.. ಹಿಂಗs ಅದರ ಬೆನ್ನ ಹಿಂದುಗಡೆಗೇ ಮನ್ರೋನು, ನಾಗಿರೆಡ್ಡಿಯು ವುಂಡಂಥ ಪತ್ರೋಳಿಗಳಿಗೆ, ನೀರು ಕುಡಿದಂಥ ತಂಬಿಗೆ, ಲೋಟ್ಯಾಗಳಿಗೆ ಯಲ್ಲಿಲ್ಲದ ಬೆಲೆ ಬಂದು ಬಿಟ್ಟಿತ್ತು. ಅದು ನನಗೆ ಬೇಕು, ಯಿದು ತನಗೆ ಬೇಕು ಯಂದು ಸುತಮುತಲಿದ್ದ ಮಂದಿ ವಾದಾಡಿದ್ದುಂಟು, ಕಚ್ಚಾಡಿದ್ದುಂಟು.. ಕಯ್ಯಿ ಕಯ್ಯಿ ಮಿಲಾಯಿಸಿದ್ದುಂಟು.. ಯಿನ್ನೇನು ರಕುತಪಾತವಾತಯ್ತೆ ಅಂಬುವಷ್ಟರಲ್ಲಿ ಫಲಾನ ಗ್ರಾಮದ ಗವುಡ, ಸಾನಭೋಗರೀರ್‍ವರು ಪರಸ್ಪರ ಸಮಾಲೋಚನೆ ಮಾಡಿ "ನೋಡೋರು ನೋಡಿರಪ್ಪಾ.. ಕೇಳೋರು ಕೇಳಿರಪ್ಪಾ.. ಮನ್ರೋನು, ನಾಗಿರೆಡ್ಡೆಣ್ಣ ವುಂಡು ಬಿಟ್ಟಂಥ ಪತ್ರೋಳಿಯೊಳಗ ಸಾಕ್ಷತ್ ಭೀಮಲಿಂಗೇಸ್ವರಸ್ವಾಮಿಯೇ ಅಡಗ್ಯಾನ.. ಅವು ಯಾರ ಮನೆಯನ್ನು ಸೇರುತಾವೋ ಆ ಮನೆಯೊಳಗ ಕಾಲಾನುಕಾಲಕ್ಕೆ ಬಂಗಾರದ ಹೊಗೆ ಯೇಳುತಯ್ತೆ.. ಯಿಂಥ ಅಮೂಲ್ಯ ವಸ್ತುಗಳನ್ನು ಪುಗಸಟ್ಟೆ ವಯ್ಯುವುದು ಸುತರಾಂ ಸಲ್ಲದು.. ಯಿವನ್ನು ಲೀಲಾವು ಮಾಡಬೇಕೆಂದಿರುವೆವು.. ಯೀ ಲೀಲಾವಿನಿಂದ ಸಂದಾಯವಾಗುವ ಡಬ್ಬನ್ನು ಗ್ರಾಮದ ಅಭಿರುದ್ಧಿ ಕೆಲಸ ಕಾರ್‍ಯೇವುಗಳಿಗೆ ಬಳಕೆ ಮಾಡಬೇಕೆಂದಿರುವೆವು.. ಯಂದು ಹೇಳಿದ್ದಕ್ಕೆ ಯಲ್ಲಾರೂ ವಪ್ಪಿಕೊಳ್ಳದೆ ಯಿರಲಿಲ್ಲ.. ರೆಟ್ಟೆಯೊಳಗ ಕಸುವಿದ್ದರ ಸಾಲದು, ಬಕ್ಕಣದೊಳಗೆ ದಂಡಿ ದಂಡಿ ಡಬ್ಬುಯಿರುವುದು ಅವಶ್ಯವು.. ಅದರ ಸದರಿಗ್ರಾಮದಲ್ಲೊಂದೇ ಅಲ್ಲದ ಸುತ್ತಮುತ್ತಲ ಗ್ರಾಮಗಳಲ್ಲೂ ವಸ್ತು ಯಿಶೇಷ ಯಿವರಿಸಿ ಟಾಮು ಟಾಮು ಹಾಕಿಸಿದರು.. ಫಲಾನ ದಿವಸದಂದು ಫಲಾನ ಯಾಳ್ಯಕ್ಕೆ ಸರಿಯಾಗಿ ಡಬ್ಬುಳ್ಳ ಮಂದಿ ಫಲಾನ ಗ್ರಾಮಕ್ಕೆ ಆಗಮನ ಮಾಡಿದರು.. ಪಕಡ್ ಬಂಧಿಯೊಳಗ ಲೀಲಾವು ಯಶಸ್ವಿಯಾಗಿ ನಡೆಯಿತು. ವಂದೊಂದು ಯಂಜಲೆಲೆಯು ದಾಖಲೆ ಮಟ್ಟದಲ್ಲಿ ಯಿಂತಿಷ್ಟು ಮೊತ್ತಕ್ಕೆ ಲೀಲಾವು ಆಯಿತು.. ಜೊತೆಗೆ ತಂಬಿಗೆ ಲೋಟ್ಯಾಗಳು ಸಹ.. ಅವನ್ನು ಪಡಕೊಂಡಂಥರು ಮೆರವಣಿಗೆ

ಸಮೇತ ತಂತಮ್ಮ ಗ್ರಾಮಗಳಿಗೆ ವಾಪಸಾದರು ಯಂಬಲ್ಲಿಗೆ ಸಿವ ಸಂಕರ ಮಾದೇವss

ಫಲಾನ ಕಡೇಲಿದ್ದ ನಾಗಿರೆಡ್ಡಿಯೂ ಯಲ್ಲ ಮಾಮೂಲು ಮನುಷ್ಯರಂತೆ ತಾನೂ ಗೊಂದಲಕ್ಕೀಡಾಗದೇ ಯಿರಲಿಲ್ಲ.. ತಾನು ಮನ್ರೋನ ವುಡುಪನ್ನು ಧರಿಸಿಬೇಕಿತ್ಯಾಕೆ? ಧರಿಸಿದಾಗ ಅವರಿವರು ತನ್ನನ್ನು ನೋಡಿ "ಯಣ್ಣಾ ನೀನು ಥೇಟ್ ಮನ್ರೋನಂಗೆ ಕಾಣುತೀ" ಯಂದು ತಮ್ಮ ಅಭಿಪ್ರಾಯ ಯಕ್ತ ಮಾಡಿದ್ದುಂಟು.. ಆ ಅಭಿಪ್ರಾಯ ಕೇಳಿಸಿಕೊಂಡಾಕ್ಷಣಕ್ಕೂ, ಯೀಗ್ಗೂ ಅಜಗಜಾಂತರ ಯತ್ಯಾಸವುಂಟು.. ಧರಿಸಿಕೊಂಡ ಕ್ಷಣದಲ್ಲಿ ತನ್ನೊಳಗ ತಾನೇ ನಷ್ಟಗೊಂಡಿದ್ದನು. ಆಕ್ಷಣ ತನ್ನೊಳಗ ಪರಾಜಿತ ಸಿಪಾಯಿಯೋರ್ವ ಮೂಡಿದನೋ? ಖುದ್ದ ಮನ್ರೋ ಮೂಡಿದನೋ? ಹಬ್ಬಕ್ಕೆ ತಂದ ಹರಕೆಯ ಕುರಿಯೋಪಾದಿಯಲ್ಲಿ ತಾನು ವಂದು ಕ್ಷಣ ಸಂಭ್ರಮಿಸಿದ್ದೇನು? ವರ್ತಮಾನವನ್ನು, ವಸ್ತುಸ್ಥಿತಿಯನ್ನು ವಂದು ಕ್ಷಣ ಮರೆತದ್ದೇನು? ಮನ್ರೋನ ರಾಜಕಾರಣ ತಂತ್ರಕ್ಕೆ ತಾನು ಬಲಿಯಾದೆನೋ ಹೆಂಗೆ? ತನ್ನೆದುರಿಗಿದ್ದ ಕುಂಪಣಿ ಸರಕಾರದ ಸಮುವತ್ತರವು ತನ್ನತ್ತ ಯಂಗ್ಯವಾಗಿ ನೋಡುತ್ತಿರುವಂತೆ, ಪಕಪಕನೆ ನಗಾಡುತ್ತಿರುವಂತೆ, ಮುಠ್ಠಾಳ ಯಂದು ಬಯ್ಯುತ್ತಿರುವಂತೆ ಭಾಸವಾಗುತ್ತಿರುವುದು.. ಹಿಂಗs ಯೋಚನೆ ಮಾಡುತ ರೆಡ್ಡಿಯು ಮಾನಸಿಕ ಸ್ವಾಸ್ಥ್ಯ ಕಳಕೊಂಡನು.. ಅದು ಕಯ್ಯಿಗೆಟಕುವಂತೆ ಯಿದ್ದರೆಲ್ಲಿ ತಾನದನ್ನು ಮತ್ತೆ ಧರಿಸಿಬಿಡುವೆನೋ ಯಂದು ಹವ್ಹಾರಿದ.. ಅದು ತನ್ನ ಕಣ್ಣೆದುರಿಗೆ ಯಿರಲೇಬಾರದೆಂದುಕೊಂಡನು.. ಅದನ್ನು ತಿಪ್ಪೆಯೊಳಗ ಹೂತಿಡಿಸಿದನು.. ಅದು ಕೊಳತು ಗೊಬ್ಬರವಾಗಿ ಹೊಲಾ ಪಲಾ ಸೇರಿದರೇನು ಗತಿ? ಅದರ ಬೇಳೆ ತಿಂದವರು ಕುಂಪಣಿ ಸರಕಾರದ ಪರ ಪ್ರೀತಿ ತೋರಲಕ ಹತ್ತಿದರೇನು ಗತಿ ಯಂದೂ ಆಲೋಚಿಸಿದನು.. ಅದರ ಪರಿಣಾಮವಾಗಿ ತಿಪ್ಪೆಯಿಂದ ತೆಗೆಸಿ ಕೊಡ ಮುಳುಗೋ ಬಾವಿಯೊಳಗ ಹಾಕಿಸಿದನು.. ಅದರಿಂದಲೂ ತನಗೆ ಮಾನಸಿಕ ಶಾಂತಿ ಲಭಿಸಲಿಲ್ಲ.. ಅದಿರುವ ಬಾವಿ ನೀರ ಕುಡಿದವರು ಕುಂಪಣಿ ಸರಕಾರದ ಪರ ನಿಲುವು ತಾಳಿದರೇನು ಗತಿ ಯಂದೂ ಆಲೋಚಿಸಿದನು. ಅದರ ಪರಿಣಾಮವಾಗಿ ಅದನ್ನು ಬಾವಿಯಿಂದ ತೆಗೆಸಿ ವಣಗಿಸಿ ಬೆಂಕಿ ಹಚ್ಚಿಸಿದನು.. ಧಗ ಧಗ ವುರಿತೋ ವುರಿತು.. "ಯಲಯ್ ಮೂಢನೇ.. ಯೀಗ ನಾನು ಪಂಚಭೂತಗಳೊಳಗ ನೂರಾರು ವರುಷಗಳ ಪರ್ಯಂತ ಬದುಕಿರುತ್ತೇನೆ..

ವುಸುರಾಡೋ ಪ್ರತಿಯೊಬ್ಬರ ವಳಗ ಪ್ರವೇಸಿಸಿ ಕುಂಪಣಿ ಸರಕಾರದ ಗುಲಾಮರನ್ನಾಗಿ ಮಾಡಿಟ್ಟುಕೊಳ್ಳುವೆನು ಹ್ಹ.. ಹ್ಹ..” ಯಂದಂತೆ ಭಾಸವಾಯಿತು.. ಅಯ್ಯೋ ಭೀಮ್ಲಿಂಗೇಸ್ವರಸ್ವಾಮಿ.. ಯಂಥಾ ಪಾಪ ಕಾರ್ಯವನ್ನು ಮಾಡಿಬಿಟ್ಟೆನಲ್ಲಾ.. ಯಂದು ಬೊಬ್ಬಿಲಿ ಬಿರುದಾಂಕಿತ ನಾಗಿರೆಡ್ಡಿಯು ವುಮ್ಮಲನ ಮರುಗತಲಿರುವಾಗ್ಗೆ....

ಅತ್ತ ಬಳ್ಳಾರಿಯ ಅಠಾರ ಕಛೇರಿಯೊಳಗ ಮನ್ರೋನ ಪರಿಸ್ಥಿತಿಯು ನಾಗಿರೆಡ್ಡಿಯ ಪರಿಸ್ಥಿತಿಗಿಂತ ಸೊಲುಪ ಭಿನ್ನ ಯಿತ್ತು. ಅವರಿವರು ಯೇನು ಅಂದಾಡುವರೆಂಬುದರ ಕಡೆಗೆ ತಿಲ ಮಾತ್ರಗಮನ ಯಿಟ್ಟಿರಲಿಲ್ಲ.. ತಾನು ಮೊದಲೇ ಕಲೆಟ್ಟರು ಸಾಹೇಬ.. ತಾನು ನಡೆದದ್ದೇ ಹಾದಿ.. ತಾನು ಮಾಡಿದ್ದೇ ಸರಿ, ತಾನು ಪ್ರಸ್ನಾತೀತ.. ನಾಗಿರೆಡ್ಡಿಯ ರೂಪ ತನ್ನೊಳಗ ವುದಾರವಾಗಿ ಬೆಳೆಯುತಲಿತ್ತು.. ಆತನೊಳಗ ಯಿಂಡಿಯಾದ ಅವುದಾರ್ಯ, ಯಿಂಡಿಯಾದ ಅಂತಃಕರಣ, ಯಿಂಡಿಯಾದ ಸ್ನೇಹ ಪರತೆ ಯಿವೆಲ್ಲ ಸಂಗಮಿಸಿರುವುದು. ನೀನು ನನ್ನ ಗೆಲ್ಲಲಾರೆ ಯಂದು ಆತ ತನಗೆ ಸವಾಲು ಹಾಕಿರುವನೆಂದುಕೊಂಡ. ಆತ ಪ್ರಾಯಶಃ ತಾನು ಅವನೊಂದಿಗೆ ಭೋಜನಕೂಟದಲ್ಲಿ ಪಾಲ್ಗೊಳ್ಳದಿರಬೌದೆಂದೇ ಯೀ ಮೊದಲು ಭಾವಿಸಿದ್ದಿರಬೇಕು. ಅವನ ನಿರೀಕ್ಷೆಯನ್ನು ತಾನು ಸುಳ್ಳು ಮಾಡಿದೆನು. ಆ ಮೂಲಕ ತನ್ನ ಸರಳ ಸಹುರುದಯತೆಯನ್ನು ಮನವರಿಕೆ ಮಾಡಿಕೊಟ್ಟೆನು. ಅತನಷ್ಟೇ ತಾನು ಕೂಡ ಜನಪ್ರಿಯತೆಯನ್ನು ಸಂಪಾದಿಸಿದೆನು. ಆತನಲ್ಲಿ ಕುಂಪಣಿ ಸರಕಾರದ ಬಗೆಗಿರಬೌದಾದ ಸಿಟ್ಟು ಸೆಡವುಗಳನ್ನು ಕಡಿಮೆ ಮಾಡಿದೆನು, ಯಿದು ಕೂಡ ವಂದು ವಿಜಯೋತ್ಸವವೇ ಸರಿ.. ಹ್ಹಾ.. ಅದೆಲ್ಲ ವತ್ತಟ್ಟಿಗಿರಲಿ, ತನ್ನ ಸಮವಸ್ತ್ರದೊಳಗ ಆತ ಯಷ್ಟು ಸರಿಸಮವಾಗಿ ಗೋಚರಿಸಿದನಲ್ಲ.. ತನ್ನ.. ಅಂದರ ಕುಂಪಣಿ ಸರಕಾರ ಪ್ರತಿಷೆ«ಯ ಸಂಕೇತವಾಗಿದ್ದ ಆ ಸಮವಸ್ತ್ರವನ್ನು ಆತನೀಗ ಹ್ಯಾಂಗ ವುಪಯೋಗ ಮಾಡುತ್ತಿರಬೌದು? ಧಾರಣ ಮಾಡಿ ಸತಪತ ಅಡ್ಡಾಡುತ್ತಿರಭೌದೇ? ಮೀಸೆಮ್ಯಾಲ ಕಯ್ಯನಾಡಿಸುತ್ತಿರಬೌದೇ.. ಹ್ಹಾ.. ಹ್ಹಾ.. ತಾನು ಥಾಮಸು ಮನ್ರೋ, ತಾನೇ ಕಲೆಟ್ಟರು ಸಾಹೇಬನೆಂದೇ ಬೀಗುತ್ತಿರಬೌದೇ? ಯಂದೀವಯ್ಯನು ಯೋಚಿಸುತ್ತಿರುವಾಗ ಆ ಫಲಾನ ಮೂರು ಕಡೇಲಿಂದsss

ಅರುವೆ ಸುಟ್ಟ ವಾಸನೆಯು ತೇಲಾಡುತss ತೇಲಾಡುತ ಬಂದು ತನ್ನ ಸುತಮುತ್ತ ಗಿರಕಿ ಹೊಡೆಯಲಾರಂಭಿಸಿತು. ಕಲೆಟ್ಟರ ಮೂಗನ್ನೇ ಕಿವಿ ಯಂದು

ಭಾವಿಸಿ ತನಗೊದಗಿರುವ ದುಸ್ಥಿತಿಯನ್ನು ನಿವೇದನೆ ಮಾಡತೊಡಗಿತು. ಭದ್ರತಾದಳವು ಅಲ್ಲಿ ಅರವೆ ಸುಡುತಯ್ತಾ? ಯಿಲ್ಲಿ ಅರವೆ ಸುಡುತಯ್ತಾ ಯಂದು ಸುತಮುತ್ತ ಬೆದಕಾಡಲಾರಂಭಿಸಿದರು. ಅಲ್ಲಿ ಅರುವೆ ಸುಡಾತಾ ಯಿಲ್ಲ.. ಯಿಲ್ಲಿ ಅರುವೆ ಸುಡುತಾಯಿಲ್ಲ.. ಯಲ್ಲಿ ಅರುವೆ ಸುಡುತ್ತಿರಬಹುದು? ಯಂದು ಭದ್ರತಾ ದಳವು ಸುತಮುತ್ತ ಬೆದಕಾಡಲಾರಂಭಿಸಿತು. ಮನ್ರೋ ಸಾಹೇಬನು “ಭಲಾ ನಾಗಿರೆಡ್ಡೀ ಭಲಾ” ಯಂದು ವುದ್ಗಾರ ಮಾಡಿದನು. ನಾಗಿರೆಡ್ಡಿಯ ವಸ್ತರ ಯಿನ್ಯಾಸವು “ಗಂಡಸಾದರ ನೀನೂ ನನ್ನ ಸುಡು ಮತ್ತೆ” ಯಂದು ಸವಾಲು ಹಾಕುತ್ತಿರುವಂತೆ ಭಾಸವಾಯಿತು. ಸುಡುವುದು ದೊಡ್ಡ ಮಾತಲ್ಲ.. ಸುಟ್ಟಲ್ಲಿ ಅದೂ ಹೊಗೆ ರೂಪದ ರಾಯಭಾರಿಯಾಗಿ ಹೋಗಿ ನಾಗಿರೆಡ್ಡಿಗೆ ವರದಿ ಮಾಡದೆ ಯಿರದು? ಅದಕ್ಕೆಂದೆ ತಾನು ಯೇನು ಮಾಡಿದನೆಂದರೆ....

ವಂದು ಸ್ಕೆಲಟನ್ನನ್ನು ತರಿಸಿ ಅದಕ್ಕೆ ನಾಗಿರೆಡ್ಡಿಯ ವುಡುಪನ್ನು ತೊಡಿಸಿ ಯದುರಿಗೆ ಮುರುಕು ಕುರುಚಿಯ ಮ್ಯಾಲ ಕುಂಡರಿಸಿಟ್ಟುಕೊಂಡನು. ಕೂಡಲೆ ಕೇಂದ್ರಕಾರಾಗ್ರುಹಕ್ಕೆ ಹೋಗಿ ನಾಗಿರೆಡ್ಡಿಯ ಸಹಚರರನ್ನು ಕಂಡು ರೆಡ್ಡಿಯ ಗುಣಗಾನ ಮಾಡಿ ಬಿಡುಗಡೆ ಮಾಡಿದನು.. ಯಂಜಲು ಯಿನಿಮಯ ಮಾಡಿಕೊಂಡಿರುವುದರಿಂದ ತಾನಿಲ್ಲೇ ಯಿರುವುದು ವಳಿತಲ್ಲ ಯಂದು ಬಗೆದು ದುಪಟಿಕಲೆಟ್ಟರು ಕ್ಯಾಂಪಬೆಲ್ಲು, ಹೆನ್ರಿಮುಂತಾದವರನ್ನು ತನ್ನ ಖೋಲಿಗೆ ಕರೆಯಿಸಿಕೊಂಡು ಅವರ ಕಿವಿಯೊಳಗ ಪಿಸಿ ಪಿಸಿ ನುಡಿವುತ ತನ್ನ ಕಣ್ಣುಗಳಲಿ ಯರ�ಡು ಚಮಚ ನೀರು ತಂದುಕೊಂಡನು.. ಗದ್ಗದಿತನಾಗುತ್ತಲ್ಲೇ ಮಾತನ್ನು ಅರ್ಧಕ್ಕೆ ನಿಲ್ಲಿಸಿ ಸಭೆಯನ್ನು ಬರಕಾಸ್ತು ಮಾಡಿದನೆಂಬಲ್ಲಿಗೆ ಸಿವ ಸಂಕರ ಮಾದೇವss

ಅತ್ತ ಹರಪನಹಳ್ಳಿ ವಳಿತದ ಹಲವು ಗ್ರಾಮಗಳೊಳಗ ಸರ್ರೇ.. ಸರ್ರೇ...

ಅತ್ತ ಕೂಡ್ಲಿಗಿ ಪಟ್ಟಣದೊಳಗ ಜೆನ್ನಿಫರಮ್ಮಳ ಸಾಯದಿಂದ ಯಾವ ಬಣ್ಣಕ್ಕೆ ಯಾವ ಬಣ್ಣವನ್ನು ಕಲೆಯಿಸಿದರ ಯಾವ ಬಣ್ಣ ಮೂಡುತದ ಯಂಬುವಷ್ಟರ ಮಟ್ಟಿಗೆ, ಬಣ್ಣದ ಕುಡುಕೆಯೊಳಗ ಕುಂಚ ಅದ್ದಿ ತೆಗೆಯುವಷ್ಟರ ಮಟ್ಟಿಗೆ, ನಾಲಕಾರು ಚಿತ್ರಗಳನ್ನು ರಚನೆ ಮಾಡುವಷ್ಟರ ಮಟ್ಟಿಗೆ ಯೇಂಜಲು ಅಂದರ ಚಿನ್ನಾಸಾನಿ ಕಲಿತುಕೊಂಡಿದ್ದರ, ಚಿನ್ನಾಸಾನಿಯ ಸಾಯದಿಂದ ನಿರಿಗೆ ಬರುವಂತೆ ಸೀರೆ, ಕುಬುಸು ವುಟ್ಟುಕೊಳ್ಳುವಷ್ಟರಮಟ್ಟಿಗೆ, ಕಾಲಿಗೆ ಗೆಜ್ಜೆ ಕಟ್ಟಿಕೊಳ್ಳುವಷ್ಟರಮಟ್ಟಿಗೆ, ತಂದಾನ ಯಂದು ಹೆಜ್ಜೆ ಹಾಕುವಷ್ಟರಮಟ್ಟಿಗೆ, ಕರಿವದನ

ಹೇರಂಭ ಗಣಪತಿ ಯಂದು ಹಾಡುವಷ್ಟರ ಮಟ್ಟಿಗೆ ಜೆನ್ನಿಫರಮ್ಮ ಕಲಿತುಕೊಂಡಿದ್ದಳು.. ಅದೆಲ್ಲದಕ್ಕೂ ಮಕುಟಪ್ರಾಯವಾಗಿ ಮಗುವನ್ನು ತೊಟ್ಟಿಲೊಳಗಿರಿಸಿ ತೂಗುವುದನ್ನೂ, ಲೊಳ್ಳೊಳ್ಳಾಯಿ ಯಂದು ಹಾಡುವುದನ್ನೂ ಕಲಿತುಕೊಡಿದ್ದಳು.. ಅವರಿಬ್ಬರು ವಟ್ಟಿಗೆ ವುಂಬುವಷ್ಟರ ಮಟ್ಟಿಗೆ, ವಟ್ಟಿಗೆ ಯಲಡಕೆ ನಮಲುವಷ್ಟರ ಮಟ್ಟಿಗೆ, ವಟ್ಟಿಗೆ ತಬ್ಬಿಕೊಂಡು ಮಲಗುವಷ್ಟರ ಮಟ್ಟಿಗೆ, ಆಕೆ ಬದಲಿಗೆ ಯೀಕೆ, ಯೀಕೆ ಬದಲಿಗೆ ಆಕೆ ಕಿಲಕಿಲ ನಗುವಷ್ಟರ ಮಟ್ಟಿಗೆ, ವಟ್ಟಿಗೆ ವಂದೇ ಸಾರೋಟಿನಲ್ಲಿ ಪಟ್ಟಣದ ಹತ್ತಾರು ಕಡೆ ಹೋಗಿ ಬರುವಷ್ಟರ ಮಟ್ಟಿಗೆ ಅನ್ಯೋನ್ಯದಿಂದ ಯಿರಲಾರಂಭಿಸಿದ್ದರು. ನೋಡುವ ಮಂದಿಯು ಜೆನ್ನಿಪರಮ್ಮಳನ್ನೇ ಚಿನ್ನಾಸಾನಿಯಂದೂ, ಚಿನ್ನಾಸಾನಿಯನ್ನೇ ಜೆನ್ನಿಫರಮ್ಮಳೆಂದು ಭ್ರಮಿಸುತಲಿದ್ದರು.. ಯೀ ಪ್ರಕಾರವಾಗಿ ಅವರಿಬ್ಬರು ವಂದೇ ಯರಕದಿಂದ ಮಾಡಲ್ಪಟ್ಟವರಂತೆ, ವಂದೇ ತಾಯಿ ಯೆದೆ ಹಾಲು ಕುಡಿದವರಂತೆ ಅನ್ಯೋನ್ಯವಾಗಿ ಕಾಲ ಕಳೆಯುತಲಿದ್ದರು....

ತನ್ನ ಮನೆ ಮುಂದೆ ವಂಟೆಯ ಲದ್ದೆ ನೋಡಿದಲಾಗಾಯ್ತು.. ಯೀ ಯಿಳಿ ವಯಸ್ಸಿನಲ್ಲಿ ತನ್ನ ತಾಯಿಗೆ ಯಿದೆಲ್ಲ ಬೇಕಾಗಿತ್ತೇ ಯಂಬಂಥ ಅನುಮಾನ ಮೂಡಿದಲಾಗಾಯ್ತು ಚಿನ್ನಾಸಾನಿ ಜಾವ ಜಾವಕ್ಕೊಮ್ಮೆ ಛೇ ಛೇ ಯಂದೆನ್ನಲಾರಂಭಿಸಿದ್ದಳು. "ಯಾಕ ಯೇಂಜಲೂ? ಮೊನ್ನೆಯಿಂದ ಯೇನನ್ನೋ ಮನಸಿನಾಗಿಟುಕೊಂಡು ವಬ್ಬಾಕೆ ನೋವನು ತಿಂಬುತಿರುವಿಯಲ್ಲಾ" ಯಂದು ಚೆನ್ನಿಫರಮ್ಮ ಕೇಳಿದ್ದಕ್ಕೆ ಯೀ ತರುಣಿಯು ಮೊದಮೊದಲಿಗೆ ಹೇಳಲಾರದೆ ಮುಖವನ್ನು ತಿರುವಿದಳು. ತಡಕೊಳ್ಳಲಾರದೆ ತನ್ನ ಮುಖವನ್ನು ಆಕೆಯ ವಕ್ಷಸ್ಥಳದ ಮ್ಯಾಲಿರಿಸಿ ಗೊಳೋ ಯಂದು ಬಿಕು ಬಿಕ್ಕಿ ಅತ್ತಳು. ಜೆನ್ನಿಫರು ಅಳೂ.. ಅಳೂ.. ಮತ್ತಷ್ಟು ಅಳೂ ಯಂದು ತಬ್ಬಿಡಿದುಕೊಂಡಳು.. ಕೊನೀಕೆ ತಡೀಲಾರದೆ "ಗೆಳತೀ.. ನನ ತಂದೆ ಯಾರಿರಬೌದು ಯಂಬ ಪ್ರಸ್ನೆ ಬಗೆಹರಿವಲ್ಲದು, ಯೀಸು ದಿನ ಬುಗುಡಿ ನೀಲಕಂಠಪ್ಪನೇ ತಂದೆ ಯಂದು ತಿಳಕೊಂಡಿದ್ದೆ.. ಯೀಗ ನೋಡಿದರ ಯೀರ ಭೋಜನೆಂಬಾತ.. ಛೇಛೇ.." ಯಂದು ಮುಂದಕ ಹೇಳಲಾರದೆ ಗದ್ಗದಿತಳಾದಳು ಜೆನ್ನಿಫರಮ್ಮ ಕೇಳಿ ಅಚ್ಚರ್ಯಪಟ್ಟಳು.. ಯೀ ಸದರಿ ಯಿಂಡಿಯಾವು ಪುರಾಣ ಕಾಲದಿಂದ ಪಿತ್ರುತ್ವ, ಮಾತ್ರುತ್ವದ ಹಕ್ಕುದಾರಿಕೆಯನ್ನು ವುಳಿಸಿ, ಬೆಳೆಸಿಕೊಂಡು ಬಂದಿರುವುದಲ್ಲಾ.. ಯಿದೂ ವಂದು ಗಹನ ಸಮಸ್ಯೇಯಾ? "ಗೆಳತೀ ಅವರಿಬ್ಬರನ್ನೂ ತಂದೆಯೆಂದೇ

ಭಾವನೆ ಮಾಡಿಕೋ, ವಬ್ಬರಿಗಿಂತ ಹೆಚ್ಚು ತಂದೆಯಂದಿರು ಯಿರುವುದು ಅದ್ರುಷ್ಟವಲ್ಲವೇನು?" ಯಂದು ಮುಂತಾಗಿ.....

ಯಿದು ಆಡಬವುದಾದ ಮಾತಾ.. ಯಿದು ಕೇಳಬವುದಾದ ಮಾತಾ.. ಚಿನ್ನಸಾನಿ ಗೆಳತಿಯ ಕಡೇಕ ತೀಕ್ಷ್ಣವಾಗಿ ನೋಡಿದಳು.. ಪರಂಗಿ ಮಂದಿಗೆ ಸಂಬಂಧದ ರೀತಿ ರಿವಾಜು ಅರ್ಥವಾಗುವುದಿಲ್ಲ.. ಭೂಮಿಗೆ ಆಕಾಶ ವಂದೇ ಹೆಂಗೋ ಹಂಗೆ ಮಕ್ಕಳಾದವರಿಗೆ ತಂದೆ ವಂದೇ.. ಮನೆ ಬೇಸರವೆನ್ನಿಸಿ ತಾನಿಲ್ಲಿಗೆ ಬಂದಿದ್ದಳು.. ಯಿಲ್ಲಿ ನೋಡಿದರೆ ಗೆಳತಿ ಬಹು ಪಿತ್ರುತ್ವನ್ನು ಸಮರ್ಥಿಸುತ್ತಿರುವಳು. ತನ್ನ ಹೆಸರಿನ ಮುಂದೆ ಸಾನಿಯಂಬ ಯಿಶೇಷಣ ಯಿರುವುದರಿಂದಲ್ಲವೇನು ಯೀಕೆ ಹಿಂಗೆs ಬೇಕಾಬಿಟ್ಟಿ ನುಡಿಯುತ್ತಿರುವುದು, ಹಂಗಿಸುತ್ತಿರುವುದು.. ಯಿನ್ನು ತಾನಿಲ್ಲಿ ಯಿರಕೂಡದು. ಮುಂದೆಂದೂ ಯಿಲ್ಲಿಗೆ ತಾನು ಬರಲೇಕೂಡದು. ಗೆಜ್ಜೆ, ಕಂಜರಾ, ಯಿತ್ಯಾದಿಗಳನ್ನಲ್ಲೇ ಬಿಟ್ಟು....

ಛೇ.. ಛೇ.. ತಾನು ಯಂಥ ಕೆಲಸ ಮಾಡಿಬಿಟ್ಟೆ.. ಹೇಳದೆ ಕೇಳದೆ ತಾನು ಬರಬಾರದಾಗಿತ್ತು.. ತನ್ನನ್ನು ತಡೆಯಲೆಂದು ಆಕೆ ಬಾಗಿಲವರೆಗೆ ಮೋಡೋಡಿ ಬಂದಳಲ್ಲ.. ಗೆಜ್ಜೆಯ ನಾದ ತನ್ನನ್ನು ತಡೆಯಲೆತ್ನಿಸಿತಲ್ಲ.. ಯಿಷ್ಟು ದಿನದ ತಮ್ಮಿಬ್ಬರ ಸ್ನೇಹ ಯಿಂದಿಗೆ ಮುಗಿತೋ, ಯೇನೋ? ಅತ್ತ ತಾಯಿಯ ಯಿಸ್ವಾಸವನ್ನು ತಾನು ವುಳಿಸಿಕೊಳ್ಳಲಾಗುತ್ತಿಲ್ಲ.. ಯಿತ್ತ ಗೆಳತಿಯ ಸ್ನೇಹವನ್ನೂ ವುಳಿಸಿಕೊಳ್ಳಲಾಗಲಿಲ್ಲ..

ಸಾರೋಟಿನಿಂದ ಯಿಳಿಯುತ್ತ ಮನೆ ಕಡೆ ನೋಡಿದಳು. ಕುದುರೆಯ ಖುರಪುಟದ ಸದ್ದು ಕೇಳಿದೊಡನೆ ತನ್ನ ತಾಯಿ ಮೋಡೋಡಿ ಬಂದು ತನ್ನನ್ನು ಸ್ವಾಗತಿಸುತ್ತಿದ್ದಳು. ಆದರೆ ಆಕೆಯ ಸುಳಿವಿಲ್ಲ.. ಮನೆ ಮುಂದಿನ ರಂಗವಲ್ಲಿ ಮ್ಯಾಲ ಆಕೆಯ ಹೆಜ್ಜೆ ಗುರುತುಗಳಿಲ್ಲ.. ಮುಂದೆ ನಡೆದಳು. ವಂದೊಂದು ಹೆಜ್ಜೆ ವಂದೊಂದು ಮಣ ಭಾರ.. ವಳಗೆ ಯಿರಬೇಕಾದ ಕಡೆ ತನ್ನ ತಾಯಿ ಯಿಲ್ಲ.. ವುಪ್ಪರಿಗೆ ಖೋಲಿಯೊಳಗ ಮಲಗಿದ್ದಲ್ಲಿಗೆ ಹೋಗಿ "ಯಾಕವ್ವಾ ಯಿಷ್ಟೊತ್ತಿಗೆ ಮಲಗಿರುವಿಯಲ್ಲ" ಯಂದು ಕೇಳಿದಳು. "ಯಾಕೋ ಚಳಿ ಚಳಿ ಅದಂಗಾತು ಮಗಳs ಅದಕs ಮಲಕ್ಕಂಡೆ' ಯಂದಳು. ಯಷ್ಟಿದ್ದರೂ ತಾಯಿಯಾಗಿರುವಾಕೆ.. ಮಗಳು ಅಂದರ ತಾನೆ.. ಮಗss ಅಂದರೂ ತಾನೇ.. ಹಿಂಸೆ ಕೊಡುವುದು ಥರವಲ್ಲ.. ದುಕ್ಕ ವುಮ್ಮಳಿಸಿ ಬಂತು, ಯೀ ಕ್ಷಣ ತಾನು ಸಣ ಕಂದಮ್ಮನಾಗಲೇಬೇಕು, ಹೊತಾ ಹೋಗಿ ಮಗ್ಗುಲು ಮಲಗಿ ಯವ್ವಾ

ಯಂದನಕಂತ ತಬ್ಬಿಕೊಂಡು ಮಲಗಿದಳು.. ತನ್ನ ತಾಯಿಯ ಯದೆಯನ್ನು ಕಣ್ಣೀರಿನಿಂದ ತೊಯ್ಯಿಸಿದಳು, ಯಷ್ಟೋ ಹೊತ್ತಿನ ತನಕ....

"ಯವ್ವಾ.. ನೀನು ನನ್ನ ತಂದೆ ಕೂಡ ಮಾತಾಡಲಿಕ್ಕೆ ಯಾಕ ಅನುವು ಮಾಡಿಕೊಡಲಿಲ್ಲ" ಯಂದು ತಡೆಯಲಾರದೆ ಕೇಳಿದಳು.. ಅದಕ್ಕೆ ತಾಯಿಯ ಬಾಯಿಯಿಂದ ಮರು ಮಾತು ಹೊಂಡಲಿಲ್ಲ..

ಯಾವ ಖಾತರಿಯಿಂದ ತಾನು ಅನುವು ಮಾಡಿಕೊಡಬೇಕಿತ್ತು? ಯೀರಭೋಜ ಗದರಿಸಿದ, ಅಂಗಲಾಚಿದ.. ತಾನು ತನ್ನ ಮಗಳನ್ನು ನೋಡುವ ಸಲುವಾಗಿ, ಅಪ್ಪಾ ಯಂದು ವಂದೇ ವಂದು ಸಲ ಕರೆಯಿಸಿಕೊಳ್ಳುವ ಸಲುವಾಗಿ ಯಿಡೀ ತನ್ನ ರಾಜ್ಯ ಕೊಡುತೀನಂದ.. ಅದಕ್ಯಾಕೆ ತಾನು ಸಮ್ಮತಿಸಲಿಲ್ಲ..? ಮುಂದ ಹಕ್ಕುದಾರಿಕೆಯನ್ನು ಚಲಾಯಿಸಿದರೇನು ಗತಿ? ಮಗಳನ್ನು ತನ್ನಿಂದ ದೂರ ಮಾಡಿದರೇನು ಗತಿ? ಯಂಬ ಭಯದಿಂದ ತಾನು ನಿರಾಕರಿಸಿದ್ದುಂಟು. ಆತನೋ, ಯೀತನೋ, ಯಿನ್ಯಾವಾತನೋ ಯಂಬ ಸಂದೇಹದಿಂದ.. ಯಷ್ಟು ವರುಷಂಗಳ ಕಾಲ ತಾನು ಪರಂಪೋಕು ಜಮೀನಾಗಿದ್ದೆನು ಯಂಬ ಅವಮಾನದಿಂದ.. ತಾನು ಸಮ್ಮತಿಸಲಿಲ್ಲ.. ಸಾಮಾಜಿಕವಾಗಿ ಆತನು ತಂದೆ ಸ್ಥಾನದಲ್ಲಿ ನಿಂತು ಮಗಳ ಯೇಕರಿಕೆ ದೇಕರಿಕೆ ನೋಡಿಕೊಳ್ಳುವುದಾಗಿ ಮನವರಿಕೆ ಮಾಡಿಕೊಟ್ಟಿದ್ದಲ್ಲಿ ತಾನು ಬಾಯಿಯಿಂದ ವುದುರಲಿಲ್ಲವಲ್ಲಾ.. ಮುಂದೊಂದಿವಸ ಬಂದು ಕೇಳಿದರ ತಾನೇನು ಮಾಡುವುದು? ಪಿತ್ರುತ್ವ ಅನಿಶ್ಚಿತ.. ತನಗೂ ಆತಗೂ ವಾಗ್ವಾದ ನಡೆಯದೆ ಯಿರಲಿಲ್ಲ.. ತನ್ನ ರುದಯ ಕರಗದೆ ಪೆಡಸು ಆಗುತ ಹೋಯಿತು.. ಬಸುರು ಹೊತ್ತು ವನವಾಸ ಪಡುತ್ತಿದ್ದಾಗ ಯಲ್ಲಿದ್ದನೀತ..? ಹಡವಣಿಗೆ ಮಾಡಿಕೊಳ್ಳುತ್ತಿದ್ದಾಗ ಯಲ್ಲಿದ್ದನೀತ.? ಮಗಳು ಜೆನಿಸಿದಾಗ ಯಲ್ಲಿದ್ದನೀತ? ಕೂಸನ್ನು ವುಡಿಯೊಳಗ ಕಟ್ಟಿಕೊಂಡು ತಾನಲೆದಾಡುತಲಿದ್ದಾಗ ಯಲ್ಲಿದ್ದನೀತ? ಯಿದ್ದಕ್ಕಿದ್ದಂತೆ ಹದಿನೇಳು ಹದಿನೆಂಟು ವರುಷಂಗಳ ನಂತರ ವಂಟೆ ಮ್ಯಾಲ ಬಂದಾಕ್ಷಣ.. ಛೇ.. ಛೇ....

"ಮಗಳೇ.. ತಾನು ನಿನಗ ಕೇವಲ ತಾಯಿ ಮಾತ್ರಅಲ್ಲವ್ವಾ.. ತಂದೆಯೂ ಅವುದು" ಯಂದು ತಾಯಕ್ಕ ಸೋಲುಪ ದೂರ ನಿಟಾರನೆ ನಿಂತಳು ನೋಡಿಕೋ ಯಂಬಂತೆ.. ಚಿನ್ನಸಾನಿ ನೋಡಿದಳು, ತಾಯಿಯ ಸರೀರದಿಂದ ತನ್ನ ತಂದೆ ವಡ ಮೂಡಿದ.. ಅದರಾತಗೆ ವಂದು ಚಹರೆ ಮಾತ್ರಯಿರಲಿಲ್ಲ.. 'ಅವ್ವಾ.. ನನ್ನನ್ನು ಕ್ಷಮಿಸು' ಯಂದನಕಂತ ಮುಖವನ್ನು ಮೆಲ್ಲಗೆ

ತಗ್ಗಿಸಿದಳೆಂಬಲ್ಲಿಗೆ ಸಿವ ಸಂಕರ ಮಾದೇವಾss

ಅತ್ತ ಕುದುರೆಡವು ಪಟ್ಟಣದೊಳಗ ಕಾಲಿಟ್ಟೊಡನೆ..

ಹಂಪಜ್ಜನ ಚಿತ್ತಾರವನ್ನು ಕಣ್ಣೊಳಗ ಮೂಡಿಸಿಕೊಂಡ.. ಆತನ ಬಾಯ ವಾಸಣೆಗಾಗಿ.. ಆತನ ಮಯ್ಯ ಬೆಮರ ವಾಸಣೆಗಾಗಿ ಕಣ್ಣು ಚಾಚಿ, ಮೂಗು ಚಾಚಿ ಹಂಬಲಿಸಿದ. ಯಾರನ್ನು ಕೇಳುವುದು? ಯಾರನ್ನು ಬಿಡುವುದು? ಸುತಮುತ್ತ ಕಣ್ಣು ಪಿಳುಕಿಸಿದ. ಯಾರೊಬ್ಬರು ಕಣ್ಣಿಗಾಗಲೀ, ಮಾತಿಗಾಗಲೀ ತಗುಲುತಾಯಿಲ್ಲ. ತಾನ್ಯಾರು? ತಾನೆದಕ ಬಂದಿರುವುದು? ತಾನು ಯಾರನ್ನು ಹುಡುಕುತ್ತಿರುವುದು? ಯಂಬೀ ಮೂರು ಪ್ರಶ್ನೆಗಳನ್ನು ಬಾಯಿ ವಡದು ಹೇಳಬಾರದು ಯಂಬುದು ಕುಲಾಚಾರವುಂಟು.. ಅಲ್ಲದ ಸದರಿ ಪಟ್ಟಣವು ಕಣ್ಣಳತೆ, ಕೂಗಳತೆ ಮೀರಿ ಬೆಳೆದಿರುವುದು? ವಬ್ಬೊಬ್ಬರೂ ವಂದೊಂದು ವುಸಾಬರೀನ ಹೆಗಲಿಗೆ ಹಾಕ್ಕೊಂಡು ತಿರುಗಾಡುತ್ತಿರುವರು...

ಯಾರೊಬ್ಬರಿಗೂ ಪಂಚೇಂದ್ರಿಯಗಳು ಸ್ವಾಧೀನ ಯಿದ್ದಂಗ ಯಿಲ್ಲಲ್ಲಾ.. ಯಾರೊಬ್ಬರೂ ತನ್ನ ಕಡೇಕ ಕಣ್ಣೆತ್ತಿ ನೋಡುತ ಯಿಲ್ಲಲ್ಲಾ.. ತಾಯಿ ಸಾಂಬವಿ ಹೊಳೆಗೆ ಹೊಂಟು ಬಂದಳೋ ಹೆಂಗೆ? ಪರಿಶೆ ಮೂಡುತಾ ಅಯ್ತೆ.. ಮುಳುಗುತಾ ಅಯ್ತೆ.. ಫಲಾನ ಯಿಂಥೆಂಬೋ ದಿವಸಕ್ಕೆ ಕುದುರೆಡವನ್ನು ಸೇರಬೇಕು ಯಂದು ಖಬರನ್ನು ಯಾಕೆ ಕಳುವಬೇಕಿತ್ತೀ ಹಂಪಜ್ಜನು? ತಾನೇನು ಬರುವೆನೆಂದಿದ್ದೆನಾ? ಬಿಡುವೆನೆಂದಿದ್ದೆನಾ? ತನಗೇನು ಮೂರೊಳಗ ವದಕನ ಮಸ್ತು ಯಿರಲಿಲ್ಲವಾ? ಅನಾದಿತನದಿಂದಾಗಿ ತಾನು ಚಾಜ ಕೇಳುವವನೇ? ಹೇಳಿ ಕಳುವಿದವರ ಮ್ಯಾಲಿನ ಗವುರವ, ನಂಬುಕೆಯಿಂದಾಗಿ ಬರೀ ಬಾಯಿ ಮಾತನ್ನೇ ಚಾಜ ಯಂದು ಪರಿಭಾವಿಸಿದ್ದು ತನ್ನದು ತಪ್ಪಾ.. ಯಂದು ಮುಂತಾಗಿ ಸದರಿ ಆಗಂತುಕನು ಯೋಚನೆ ಮಾಡುತ ಹೋಗುತಿರಬೇಕಾದರ....

ಧರುಮಛತ್ತರಮೊಂದು ಕಣ್ಣಿಗೆ ಅಟೆಯಿತು.. ಅದು ತಿರುಪಾಲಯ್ಯ ಸ್ರೇಷಿ«ಯು ಪಾಪ ಪರಿಹಾರಾರ್ಥವಾಗಿ ನಡೆಸುತಲಿದ್ದ ಅನ್ನದಾನ ಛತ್ತರ ಅದಾಗಿತ್ತು.. ಖುದ್ದ ಸ್ರೇಷಿ«ಯೇ ಅತಿಥಿ ಅಭಾಗತರನ್ನು ಪಿರೀತಿಯಿಂದ ಬರಮಾಡಿಕೊಂಡು ವುಂಬಲಕ ಯಿಡಲು ಸಿದ್ದನಿದ್ದನು.. ನೂರಾರು ಮಂದಿ ಬಡಬಗ್ಗರ ಹೊಟ್ಟೆ ಬಡಿದು ಸಂಪಾದಿಸಿರಬವುದಾದ ಪಾಪಿಷ್ಟಗೇಡಿ ಹಾಕುವ ಕೂಳು ತಿಂದು ನರಕಕ್ಕೆ ಹೋಗುವುದು ಯಾಕಂತ ಯಾರೊಬ್ಬರೂ ಛತ್ತರದೊಳಗೂ ಕಾಲಿಡುತಲಿರಲಿಲ್ಲ.. ಆತ ಪ್ರತಿಯೊಬ್ಬ ಹಾದಿಹೋಕನನ್ನು

ತರುಬಿ ವುಣ್ಣುವಂತೆ ದಯನಾಸದಿಂದ ಕೇಳಿಕೊಳ್ಳುತಲಿದ್ದನು.. ಕೆಲವರು ಪರಪಾಟನಿಂದಾಗಿ ವುಂಡು ಅನ್ನದಾತ ಸುಖೀ ಭವ ಯಂದು ಹಾರಯಿಸಿ ತದನಂತರ ವಸ್ತುಸಂಗತಿ ತಿಳಿದು ಅಯ್ಯಯ್ಯೋ ಯಂಥ ಕೆಲಸ ಮಾಡಿದೆವಲ್ಲಾ ಯಂದು ಪಶ್ಚಾತ್ತಾಪ ಪಡುತಲಿದ್ದರು.. ಕೆಲವರು "ಯಲಮೋ ಸ್ರೇಷ್ಠಿ« ನಿನ್ನ ಪಾಪಿಷ«ಗೇಡಿ ಕೂಳನ್ನುಣ್ಣಲು ಬಡಿಸಿ ನಮ್ಮನ್ನು ರವುರವ ನರಕಕ್ಕೆ ಪಾತ್ರಮಾಡಿದೆಯಲ್ಲಾ.. ಸಾಂಬವಿ ನಿನ್ನನ್ನು ಕ್ಷಮಿಸುವುದಿಲ್ಲ" ಯಂದು ಹಿಡಿಹಿಡಿ ಸಾಪ ಹಾಕುತಲಿದ್ದರು. ಹಿಂಗಾಗಿ ಸದರಿ ಧರುಮಛತ್ತರವು ಬಿಕೋ ಗುಟ್ಟುತಲಿತ್ತು....

ತಾನು ಯಿನ್ನು ಮುಂದ ಅನುಭವಿಸಲಿರುವುದು ಯಿನ್ನೆಷ್ಟಿರುವುದೋ? ಮಾಡಿಟ್ಟಿರುವ ಅನ್ನ ಖರುಚಾಗದ ಹೊರತು ತನ್ನ ಪಾಪ ಪರಿಹಾರವಾಗುವುದಿಲ್ಲ.. ಕುಲಧರುಮಕ್ಕನುಸಾರವಾಗಿ ತಾನು ಹಣ ಸಂಪಾದನೆ ಮಾಡಿರುವೆನೇ ಹೊರತು...

ಚಿಂತೆ ಮಾಡುತ ಮನಸನ್ನು ನರಕಲೋಕಕ್ಕೆ ಹರಿಬಿಟ್ಟು ಮಯ್ಯನಮರತು ಕೂಕಂಡಿದ್ದ ತಿರುಪಾಲಯ್ಯ ಸ್ರೇಷ್ಠಿ«ಗೆ ಪರಪರ ಯಂಬ ಸಬುಧ ಆಶಾದಾಯಕವಾಗಿ ಕೇಳಿಸಿತು. ಬೆಚ್ಚಿ ಬಿದ್ದು ತಲೆಯತ್ತಿ ನೋಡಿದ. ಹೊಟ್ಟೆಯನ್ನು ಕೆರಕೊಳ್ಳುತಲಿರುವುದು ಯತ್ತರಮೂಅಲ್ಲದ, ಗಿಡ್ಡಮೂಅಲ್ಲದ ಮಟ್ಟದ ನಿಲುವಿನ ಯ್ಯಕ್ತಿಯು ನಯಮಿಷಾರಣ್ಯೇವನ್ನು ಪೊಕ್ಕು ವುಂಬಲಕ ಯಿಡು ಅಂತ ದ್ರವುಪದಿಯನ್ನು ಪೀಡಿಸಿದ ದೂರುವಾಸಮುನಿಯನ್ನೇ ಆಗಂತುಕನು ಹೋಲುತ್ತಿರುವನು. ಸದರಿ ಗ್ರಾಮದೊಳಗ ಯಾರ್‍ಯಾರ ಸರೀರದೊಳಗ ವಸ್ತಿ ಮಾಡಿರುವರೋ ಮೂಹಿಸಲಸದಳ.. ಸ್ರೇಷ್ಠಿ«ಯು ದಿಗ್ಗನ ಯೆದ್ದು "ಬಾರಣ್ಣಾ.. ಬಾ ತಂದೆಯೇ.." ಯಂದು ಸ್ವಾಗತ ಪಲುಕಿದನು.. ಕಾಲು ಕಯ್ನ ತೊಳಕೊಳ್ಳಲಕ ನೀರು ಕೊಟ್ಟನು. ನೀರಿನ ಅಭಾವ ಕಾರಣದಿಂದಾಗಿ ತನ್ನ ಮಗಳು ಗೋಯಿಂದಿಯು ಕುಂಡೀನ ತೊಳಕೊಂಡಯ್ತೋ ಯಿಲ್ಲಮೋ? ಯಂದು ಸಾಂಪ್ರತು ಆಲೋಚನೆ ಮಾಡುತ ಆಗಂತುಕನು ಧಾರಾಳವಾಗಿ ಕಯ್ಯಿ ಕಾಲು ಮಖಮಾರೀನ ತೊಳಕೊಂಡನು.. ಯಿಲ್ಲಿ ಕುಂತುಕೊಳ್ಳಪ್ಪಾ ತಂದೆಯೇ ಯಂಬಂತೆ ನೋಡಿದನು.. ಸ್ರೇಷ್ಠಿ«ಯು ತೋರಿಸಿದ ಮಟ್ಟಸವಾದ ಜಾಗದಲ್ಲಿ ಕೂಕಂಡನು.. ಚರಕಲಯ್ಯ ಪತ್ರೋಳಿ ಹಾಕಲು ಗುಂಡಾಲಯ್ಯನು ಬಾನ ಪಳದ್ಯಂಗಳನು ಬಡಿಸಿದನು.. ಬೊಗಸಯ್ಯನು ಸಾರು ಸುರುವುತ್ತಲೆ ಸ್ರೇಷ್ಠಿ«ಯು

“ಸಿವನ್ನಾಮ ಪಾರೊತೀ ಹರ ಹರ ಮಾದೇವss ಜಯ ಸಾಂಬವೀ ಜಯ್” ಯಂದಂದು ಪರಸಾದ ಸ್ವೀಕಾರ ಮಾಡಲಕ ಅನುವು ಮಾಡಿಕೊಟ್ಟನು.....

ಆಗಂತುಕನು ವಂದು ತುತ್ತು ಯತ್ತಿಕೊಂಡನೋ ಯಿಲ್ಲಮೋ ಅವಯ್ಯನ ಕಣ್ಣೊಳಗ ನೀರಾವರಿ ಮೂಡಿತು.. ಯಲ್ಡನೇ ತುತ್ತು ಯತ್ತಿಕೊಂಡನೋ ಯಿಲ್ಲಮೋ ಹೆಂಡತಿ ಮಕ್ಕಳ ಪರಿಸೆಯು ನೆರತು ಪುಳಕ್ಕು ಪುಳಕ್ಕು ಅಂತ ವಂದರ ಹಿಂದ ವಂದರಂತೆ ಹನಿಗಳು ವುದುರಲಾರಂಭಿಸಿದವು.. ಅವರೆಲ್ಲ ವುಂಡಿರುವರೋ ವುಪಾಸ ಯಿರುವರೋ? ತನ್ನಂಥ ನತದ್ರುಷ್ಟನ ಹೆಂಡತಿಯಾಗಲಕ ಆಕೆ ಯೇನು ಪಾಪ ಮಾಡಿರಬವುದು? ತನ್ನಂಥ ಅಸಾಯಕನ ಹೊಟ್ಟೆಯಿಂದ ವುದುರಲಕ ಮಕ್ಕಳೇನು ಪಾಪ ಮಾಡಿರಬವುದು? ಸಮುಸಾರ ನಿರುವಣೆಗಾಗಿ ತಾನು ಅವಲಂಭಿಸಿರುವ ಕಸುಬು ವಮುಸ ಪಾರಂಪರ್ಯವಾಗಿ ಬಂದಿರುವಂಥಾದ್ದು.. ಯಾವ ಛಣ ಮುಂಡದಿಂದ ರುಂಡವು ಬೇರುಪಡುವುದೋ? ತನ್ನ ಬದುಕೋ ಪಯಿತ್ರಸಾವಿಗೆ ಸಂಬಂಧಿಸಿರುವಂಥಾದ್ದು.. ವಂದೆಲ್ಡು ಮೂರು ದಿವಸಗಳ ಮಟ್ಟಿಗೆ ತನ್ನ ಬದುಕು ಪರಮ ಸುಖ.. ತನ್ನ ಸಾಮೂಪರಮ ಸುಖ.. ಯೀರ ಸೊರಗವಂತೂ ತನ್ನನ್ನು ನೆರಳಿನಂತೆ ಹಿಂಬಾಲಿಸುತ್ತಿರುವುದಂತೂ ಖರೇವು.. ಯೀಗ ಸದ್ಯಕ ತಾನು ಬದುಕಿರುವುದೇ ದೊಡ್ಡ ಮಾತು.. ಯಲ್ಲಾನು ತಾಯಿ ಸಾಂಬವಿಯ ದಯೆಯು....

ವಂದೊಂದು ತುತ್ತು ಸಿವನ ಧನುಸಿಗಿಂತ ವಝಿ ಅನಿಸಿತು.. ಆತ ವುಣ್ಣದಿರುವುದನು ಕಂಡು ಆತ ಕಣ್ಣೊಳಗ ದುಕ್ಕ ಹೆಡೆಬಿಚ್ಚಿರುವುದನು ಕಂಡು ಸ್ರೇಷ್ಠಿ«ಯು “ಯಾಕ ಯಸನ ಮಾಡುತ್ತಿರುವಿ ತಂದೇ.. ವುಂಬಲಕ ಯಾಕ ಹಿಂದೇಟು ಹಾಕುತ್ತಿರುವಿಯಪ್ಪಾ.. ವುಂಬಪ್ಪಾ.. ವುಂಬು.. ವುಂಡು ಪುಣ್ಯಕಟ್ಟಿಕೋ” ಯಂದು ಪರಿಪರಿಯಿಂದ ಕೇಳಿಕೊಂಡನು.. ತನ್ನ ಮನದೊಳಗಿನ ಕಾರುಪಣ್ಯವನ್ನು ಹೆಂಗಾತಂಗೆ ಬಿಡಿಸಿ ಹೇಳುವುದು?

ವುಂಬಲೇಬೇಕಯ್ತೆ.. ಅವ್ವಾ.. ತಾಯೀ.. ನಾವೆಲ್ಲ ನಿನ್ನೊಕ್ಕಲು ಮಂದಿ ಅದೇವಿ.. ಯೀ ಘಟಗಳು ಯಾವ ಛಣದಲ್ಲಿ ನಿನ್ನ ಪಾದದ ಬುಡಕ್ಕ ಕಡಕ್ಕೊಂಡು ಬೀಳುವವಮೋ.. ಯಿರೋ ನಾಕೇ ನಾಕು ಘಳಿಗೆ ಕಾಲ ನನ್ನೆಂಡರು ಮಕ್ಕಳನು ವುಪಾಸಗೊಲ್ಲಬ್ಯಾಡ ತಾಯೀ.. ಯಂದು ಮನದಾಗ ಅಂದುಕೊಳ್ಳುತ ಯಿನ್ನೊಂದು ತುತ್ತನ್ನು ಬಾಯೊಳಗ ಯಿಟ್ಟುಕೊಂಡನೋ ಯಿಲ್ಲಮೋ.. ಅತ್ತ

ಜಾಟಗೆರೆ ಹಾದಿಗುಂಟ ಹೊಂಟು ಬರುತಲಿದ್ದ ಅವಯ್ಯನ ಹೆಂಡರು ಮಕ್ಕಳು ಯಾರೋ ತಮ್ಮ ಬಾಯೊಳಗ ತುತ್ತುಗಳನ್ನು ದೂಡುತ್ತಿರುವರಲ್ಲಾ ಯಂದು ವುದ್ಗಾರ ಮಾಡಲಾರಂಭಿಸಿದರು.. ಯಿವಯ್ಯನಿಲ್ಲಿ ಹೆಂಗೆಂಗ ವುಂಬಲಕ ಹತ್ತಿದನೋ ಅಲ್ಲಿ ಅವರೆಲ್ಲರ ವಡಲುಗಳು ಹಂಗಂಗ ತುಂಬಲಕ ಹತ್ತಿದವು.. ವಂದು ವಡಲss ವಂದು ಕಥಿಯಾss.. ಆಗಂತುಕಗ ಬಡಸೀ ಬಡಸೀ ನೀಡೋರ ರೆಟ್ಟೆಗಳು ಸೋತು ಹೋದವು.. ಅವಯ್ಯ ಬರೋಬ್ಬರಿ ಹತ್ತನ್ನೆಲ್ಡು ಮಂದಿ ಬಾಬತ್ತನ್ನು ತಾನೊಬ್ಬನೆ ವುಂಡು ಮುಗಿಸಿದನೆಂಬಲ್ಲಿಗೆ ಸಿವಸಂಕರ ಮಾದೇವss

ಯೀ ಪ್ರಕಾರವಾಗಿ ವುಂಬುವ ಯಿಷಯದಲ್ಲಿ ದಾಖಲೆಯನ್ನು ಸ್ರುಷ್ಟಿಸಿದ ಅವಯ್ಯನು ಸ್ರೇಷ್ಟಿ«ಯಿಂದ ಫಲ ತಾಂಬೂಲ ಪಡದು ಬೀಳುಕೊಂಡು ಧರುಮ ಛತ್ತರದಿಂದ ಹೊರ ಬಂದನು. ಹೊಟ್ಟೆ ತುಂಬ ಮುದ್ದೆ, ಕಣ್ಣು ತುಂಬ ನಿದ್ದೆ ಅಂಬುತಾರಲ್ಲ.. ಅದಕ ವಂದು ಜೋಂಪು ಕಣ್ಣು ಮುಚ್ಚಿಕೊಳ್ಳಬೇಕೆಂದು ನಿರ್ದರಿಸಿ ಅಲ್ಲೇ ಯಿದ್ದ ಮರದಡಿ ಮಯ್ನ ಚೆಲ್ಲಿದನು. ಕಣ್ಣು ಮುಚ್ಚಿದ್ದು ತಡ ಆಗಲಿಲ್ಲ.. ನಿದ್ದೆ ಅಡರಿಬಂದದ್ದು ತಡ ಆಗಲಿಲ್ಲ.. ಆ ನಿದ್ದೆವಳಗ ಅದಾವ ಕಣಸು ಕಂಡನೋ....

ಅದೇ ಹೊತ್ತಿಗೆ ಸರಿಯಾಗಿ ಹಂಪಜ್ಜನು ಯಲ್ಲದೀಯಪ್ಪಾ.. ಯಾವ ವಸ್ತೇನ ಪಡುತಲಿದ್ದೇಯಪ್ಪಾ.. ಯಂದಾಡಿದಾದ ಮ್ಯಾಲ ಗೊಂಜಾಡಲರ ಅಡಿವಯ್ಯ, ಮೊಂಡು ಮೂಗಿನ ಮೂಗಯ್ಯಂದಿರನ್ನು ಕರೆದು ನೋಡಿರಪ್ಪಾ.. ಫಲಾನ ಯಿಂಥ ಜಗೇವದಲ್ಲಿ ಭೂತ ಬಿಲ್ಲೆ ಮಲಗಯ್ತೆ.. ಲಗೂನ ಹೋಗಿ ಅದನ್ನು ಕರಕೊಂಡು ಬರುವಂತವರಾಗಿ ಯಂದು ಆಗ್ನೆ ಮಾಡಿದನು.. ಭೂತ ಬಿಲ್ಲೆ ಯಂಬ ಸಬುಧವನ್ನು ಆಭರಣೋಪಾದಿಯಲ್ಲಿ ತಮ ತಮ್ಮ ಮುಖಗಳ ಮ್ಯಾಲ ಮುಡಕೊಂಡವರಾದ ಅವರು ಲಗುಬಗೆ ಹೆಜ್ಜೆ ಹಾಕುತ ಹೋಗಿ ಭೂತಬಿಲ್ಲೆಯನ್ನು ಗವುರವಾದರಗಳೊಡನೆ ಕರಕೊಂಡು ಬಂದು ಪೂರುವಿಕನ ಮುಂದ ಸಾದರಪಡಿಸಿದರು.

ಭೂತಬಿಲ್ಲೆ ಪದವಿಯನ್ನಲಂಕರಿಸಲಿರುವ, ಅಲಂಕರಿಸುವುದರ ದ್ವಾರಾ ಸಾಂಬವಿ ಹೊಳೆಗೆ ಹೊಂಡುವ ದಯವ ಕಾರ್ಯೇವನ್ನು ಯಿದ್ಯುಕ್ತವಾಗಿ ವುದ್ಘಾಟನೆ ಮಾಡಲಿರುವ, ಯೀ ಕಾರ್ಯೇವಿಗಾಗಿ ತನ್ನ ಜೀವವನ್ನೇ ಅಮಾನತ್ತಿನಲ್ಲಿಡಲಿರುವ ದ್ಯಾಮಯ್ಯನೂ, ಪೂರುವಿಕನಾದ ಹಂಪಜ್ಜನೂ ಸವಾಲು, ಜವಾಬುಗಳನ್ನು

ಯಿನಿಮಯ ಮಾಡಿಕೊಂಡರು. ವಬ್ಬರನ್ನೊಬ್ಬರು ಮನಸೋಯಿಚ್ಛೆ ನೋಡಿಕೊಂಡರು. ತಾಯಿ ಸಾಂಬವಿ ವಸ್ತಿ ಮಾಡಿದ್ದಂಥ ಗುಡಿ ಹಿಂದಲ ಮೂಳೆ ಮೋಬಯ್ಯನ ಸರೀರಕ್ಕೆ ಭಕುತಿಪೂರುವಕವಾಗಿ ಸಣುಮಾಡಿದ ದ್ಯಾಮಯ್ಯನಿಗೆ ಹಂಪಜ್ಜನು "ಯೇನಯ್ಯಾ, ನಿನ್ನೊಸ್ತಿಯನ್ನು ಅರಮನೇಲಿ ಮಾಡಬೇಕೋ, ಗುರುಮನೇಲಿ ಮಾಡಬೇಕೋ" ಯಂದು ಕೇಳಿದ್ದಕ್ಕವಯ್ಯನು "ಅರಮನೆ ಆಚ್ಚೇ ಕಡೇಕಿರಲಂಯ್ಯಾ.. ಗುರುಮನೆ ಯಿಚ್ಛೇ ಕಡೇಕಿರಲಂಯ್ಯಾ.. ನಂಗೆ ಯಾದಾದರೊಂದು ಅವ್ವನ ಮರದ ಬುಡದಲ್ಲಿ ವಸ್ತಿ ಯೇರುಪಾಡು ಮಾಡಿದರ ಸಾಕು" ಯಂದು ಯಿನ್ನಪ ಮಾಡಿಕೊಂಡನು. ಆ ಜವಾಬಿನಿಂದ ಸಂತುಷ್ಟಗೊಂಡ ಪೂರುವಿಕನು "ಭೂತಬಿಲ್ಲೆ ಅಂದರ ನೀನೆ.. ನೀನಂದರ ಭೂತಬಿಲ್ಲೆ ಕಣಯ್ಯಾ.." ಯಂದಂದನು.

ಮುಂದಕ ಭೂತಬಿಲ್ಲೆ ದ್ಯಾಮಯ್ಯನ ವಸ್ತಿ ಯಲ್ಲಾತೆಂದರೆ ಗುಡಿ ಹಿಂದಲ ಮೂಳೆ ಮೋಬಯ್ಯನ ಪೂರುವಾಸ್ರಮ ಯಿತ್ತಲ್ಲ.. ಅದರ ಯದುರಿಗೆ ಯಿಸಾಲವಾದ ಬೇಯಿನ ಮರ ಯಿತ್ತಲ್ಲ.. ಅಲ್ಲೇ ಜಗಲೂರೆವ್ವ ಝೋಪಡಿ ಕಟ್ಟಿಕೊಂಡು ವಾಸಮಾಡುತಲಿದ್ದಳಲ್ಲ.. ಸಿವಸರಣೆ ಚೆನ್ನವ್ವ ಧರುಮದೇವತೆ ಯಂದಿರು ನಾಯಿ ರೂಪ ತಾಳಿ ಆಕೆಗೆ ಕಾವಲಿದ್ದರಲ್ಲ.. ಅಲ್ಲಿ.. ಅಲ್ಲಿ ಅಂದರ ಅಲ್ಲೇಯಾ....

ಮರು ದಿವಸವೇ ಜಾಟಗೆರೆಯಿಂದ ಹೆಂಡರು, ಮಕ್ಕಳು ಬಂದು ಸೇರಿಕೊಂಡರು.. ದ್ಯಾಮಯ್ಯನ ಸಮಸ್ತ ಕುಟುಂಬವು ಜಗಲೂರವ್ವಗೆ "ಯಮ್ಮೋsss.. ಯಮ್ಮೋss.." ಯಂದನಕಂತ ಹೊಂದಿಕೊಂಡಿತು.. ಬೇಯಿನ ಮರದ ಹತ್ತಾರು ಕಡೇಕ ತೊಟ್ಟಿಲು ಜವ್ವಾಲೆಗಳು ಯಿಳಿಬಿದ್ದವು.. ದ್ಯಾಮಯ್ಯನ ಮಕ್ಕಳದು ಯೇನು ಸಿದುಗಾಟ? ಯೇನು ಕಥೆ?.. ಸಿವ ಸಿವಾ....

ಭೂತಬಿಲ್ಲೆ ಪಟ್ಟಯೇರಲಿರುವಾತ ಬಂದವನೆ, ಬೇಯಿನಮರ ಬುಡದಲ್ಲಿ ಸಮುಸಾರ ಸಮೇತ ಬೀಡು ಬಿಟ್ಟವನೆ ಯಂಬ ಸುದ್ದಿ ನಿಧಾನಿಕೀಲಿ ಪಟ್ಟಣದಾದ್ಯಂತ ಹಬ್ಬಿತು.. ಭೂತಬಿಲ್ಲೆಯಂಬ ನಾಲಕಕ್ಕರಗಳ ಸಮುಚ್ಚಯವೇ ಅದನುಚ್ಚಾರ ಮಾಡಲಕ ಭಯ ತಂದು ಬಿಟ್ಟಿದ್ದೇ ಆ ಯಿಳಂಬಕ ಕಾರಣವಾಗಿತ್ತು.. ಭೂತ ಅಂದರ ಯೇನು? ಬಿಲ್ಲೆ ಅಂದರ ಯೇನು? ಆ ಯರಡು ಸಬುಧಗಳ ನಡುವಿನ ನಂಟಸ್ತನ, ತೆಗಸ್ತನ ಯಂಥಾದ್ದು ಯಂದು ಮುಂತಾಗಿ ತಮಗ ತಾವ ಮಾತನಾಡಿಕೊಳ್ಳಲಕ ಹತ್ತಿದ್ದೇ ಆ ಯಿಳಂಬಕ

ಕಾರಣವಾಗಿತ್ತು.. ಆ ಸಬುಧ ಸಮುಚ್ಚವನ್ನು ಅಂದರ ನಾಲಗೆಗೆ ಯೇನಾತದೋ? ಕೇಳಿದರ ಯೇನಾತದೋ? ಯಂಬ ಅಂಜಿಕೆಯು ಪ್ರತಿಯೊಬ್ಬರೊಳಗ ಮೂಡಿದ್ದೇ ಆ ಯಿಳಂಬಕ ಕಾರಣವಾಗಿತ್ತು.. ಆ ಸಬುಧವೇ ಯೀಟೊಂದು ಭಯಂಕರಯಿರಬೇಕಾದರ.. ಆ ಸಬುಧವನ್ನು ತನ್ನ ನಾಮದ ಯಡಕ ಮುಡುಕೊಂಡಿರುವ ಅವಯ್ಯನು ಹೆಂಗಿರಬ್ಯಾಡ ಯಂಬ ಭಾವನೆ ಮೂಡಿದ್ದೇ ಆ ಯಿಳಂಬಕ್ಕೆ ಕಾರಣವಾಗಿತ್ತು....

ಆದರೆ ಆ ಸಬುಧ ಕಿವಿವಳಗ ವುದುರದಂಗ ಯಿದ್ದೀತಾ? ನಾಲಗೆ ಮ್ಯಾಲ ವುರುಳಾಡದಂಗ ಯಿದ್ದೀತಾ? ಮೂರಿಗೆ ಬಂದಿರೋದು ನೀರಿಗೆ ಬಾರದಂಗ ಯಿದ್ದೀತಾ?.. ದ್ಯಾಮಯ್ಯನನ್ನು ಸನೀಕದಿಂದ ನೋಡಿದವರಿಗೂ, ದೂರದಿಂದ ನೋಡಿದವರಿಗೂ ನಡುವೆ ನಾಲಗೆ ಜಗ್ಗಾಟಗಳು ನಡೆದವು.. ವಬ್ಬರು ಅವಯ್ಯನ ಯತ್ತರ ಯಂಟು ಮೊಳ ಅಂದರ, ಯಿನ್ನೊಬ್ಬರು ಮೂರುವರೆ ಮೊಳ ಯಂದು ವಾದಿಸಿದರು. ಕಣ್ಣಾರೆ ನೋಡಿದ ಮಂದಿ ತಮಗ ಗೋಚರವಾಗಿದ್ದೊಂದಿದ್ದರೆ ಯಿನ್ನೊಂದ ನಮೂನಿ ಕಲ್ಪನ ಮಾಡಿಕೊಳ್ಳುತಲಿದ್ದರು.. ಅವಯ್ಯ ನೋಡಲಕ ಮಾಮೂಲು ನರ್ರಮಾನ್ನವನಂಗೇನೋ ಅದಾನ.. ಆದರಾತ ಮನಸ್ಸು ಮಾಡಿದರ ಯಿಪ್ಪತ್ತೊಂದು ಮೊಳದುದ್ದಕ ಬೆಳೆದುಬಿಡಬಲ್ಲ.. ಅವಯ್ಯ ಸಮಯ ಬಿದ್ದಲ್ಲಿ ತನ್ನ ಮಾಮೂಲು ಬಾಯನ್ನೆ ಫರಲಾಂಗ ಅಗಲಕ ತೆರೆತಾನ.. ಕಯ್ಯಿಲ್ಲದ ಮಾಡಬಲ್ಲ.. ಕಾಲಿಲ್ಲದ ನಡೆದಾಡಬಲ್ಲ.. ಕಿವಿಯಿಲ್ಲದ ಕೇಳಬಲ್ಲ.. ಗಾಳಿ ಹಂಗ ಚಲಿಸಬಲ್ಲ.. ಹಿಂಗ ಮಂದಿಯಂಭೋ ಮಂದಿ ತಲಾ ವಂದೊಂದು ಮಾತನಾಡಿಕೊಳ್ಳುತಲಿದ್ದ ಕಾರಣಕ್ಕ ಯಿಳಂಬವಾಗಿತ್ತು....

ವಬ್ಬೊಬ್ಬರದು ವಂದೊಂದು ನಮೂನಿ ಅಭಿಪ್ರಾಯವಾಗಿತ್ತು. ಪ್ರತಿಯೊಂದು ಆಡಪಿಲ್ಲ.. ಮಗಪಿಲ್ಲ ಮನಸೊಳಗ ಭೂತಬಿಲ್ಲೆಯಂಬ ಅಮೂರ್ತವು ಅಗಾಧ ರೀತಿಯಲ್ಲಿ ಬೆಳೆಯತೊಡಗಿತ್ತು. ಅದು ಅರಮನೆ ಮಂದಿಗೂ ಹೊಸತೇ ಹೊಚ್ಚ ಹೊಸತಾಗಿತ್ತು.. ಅತ್ತ ಅರಮನೆಯೊಳಗ ರಾಜಮಾತೆ ಭಯ್ರಮಾಂಬೆ ಯಿನಹ ವುಳಿಕೇ ರಾಜಪರಿವಾರದ ಮಂದಿ ಕುತೂಹಲದಿಂದ ತತ್ತರಿಸತೊಡಗಿದ್ದರು. ಪೂರುವಿಕಳೂ ಹಿರೀಕಳೂ ಆದ ಭಯ್ರಮ್ಮವ್ವ ಪುವ್ವುಲ ರಾಜವಮುಸಸ್ಥರಾದವರು ಕುತೂಹಲಿಸುವು ದೆಂದರೇನು? ಭಯಪಡುವುದೆಂದರೇನು? ಯೀ ರೀತಿ ವರ್ತನ ಅರಮನೆಗೆ ಅಪಮಾನ.. ಅವನೂ

ನಮ ನಿಮ್ಮಂಗs ಮನುಶ್ಯನದಾನ ಅಂತ ಕೇಳಿದ್ದಕ್ಕೆ ಯಿವರು ಮೋಬಯ್ಯನೂ ಮನುಶ್ಯನೇ ಯಂದು ಬಿಡುತಲಿದ್ದರು.. ಅವರ ಪಯ್ಕಿ ವಬ್ಬಿಬ್ಬರು ತಮಗೂ ದ್ಯಾಮಯ್ಯನೆಂಬಾತನನ್ನು ನೋಡುವಂಗಾಗಯ್ತೆ ಯಂದು ಮುದೇಕಿಯನ್ನು ಪೀಡಿಸದೆ ಯಿರಲಿಲ್ಲ.. ಅರಮನೆ ಯಂಭೋ ಅರಮನೆಯನ್ನು ಭೂತ ಬಿಲ್ಲೆಯು ಸೂಜಿಗಲ್ಲಿನಂತೆ ಸೆಳೆಯುತ್ತಿರಬೇಕಾದ ಪಟ್ಟಣದ ಸರುವೇ ಸಾಮಾನ್ಯ ಮಂದಿ ಹೆಂಗ ಸುಮಕ ಯಿದ್ದಾರು?

ಅವರೆಲ್ಲರ ಒಳಗೂ ಭೂತಬಿಲ್ಲೆ ಸಂಬಂಧೀ ಕಥನಗಳು ಹುಟ್ಟಿಕೊಂಡು ನೋಡಲಕ ಬರ್‍ರಿ.. ನೋಡಲಕ ಹೋಗಿರಿ ಯಂದು ಸತಾಯಿಸಲಾರಂಭಿಸಿದ್ದವು.. ನೋಡಿದರ ವುಂಟಾಗುವ ಸಾಧಕಗಳೆಂಥವು? ನೋಡಿದಿದ್ದರ ವುಂಟಾಗುವ ಬಾದಕಗಳೆಂಥವು? ದ್ಯಾಮಯ್ಯನೆಂಬಾತ ಪಟ್ಟಣವನ್ನು ಪ್ರವೇಶ ಮಾಡಿದ ಹೊತ್ತಿನ ಫಲಾಫಲಗಳೇನು? ದಿಕ್ಕಿನ ಫಲಾಫಲಗಳೇನು? ವುಂಡ ಧರುಮ ಛತ್ತರದ ಫಲಾಫಲಗಳೇನು? ಧರುಮ ಛತ್ತರದ ವಡೆಯನಾದ ವಂಟಿಗಣ್ಣಿನ ತಿರುಪಾಲಯ್ಯ ಸ್ರೇಷಿ«ಯಂತೂ ಆ ಆಗಂತುಕನ ಗುಣಲಕ್ಷಣ ಸೊಭಾವಗಳನ್ನು ವಂದೊಂದು ನೆನಪು ಮಾಡಿಕೊಳ್ಳುತ್ತ ಅಡಲ್ಲಾಗಿಬಿಟ್ಟಿದ್ದನು.. ತನ್ನನ್ನು ಅಟಕಾಯಿಸಿ ಕೇಳುತಲಿದ್ದ ಮಂದಿಗೆ ಅವಯ್ಯ ಬಂದಾಗ ವಂದು ನಮೂನಿ ಯಿದ್ದನರಪಾ.. ವಂದು ನಮೂನಿ ಯಸನ ಮಾಡಿದನರಪ್ಪಾ.. ಅವಯ್ಯನ ಕಣ್ಣಿಂದ ವುದುರಿದ ವಂದೊಂದು ಹನಿಯು ವಂದೊಂದು ಗುಂಡುಕಲ್ಲುಗಳಾಗಿ ಮಾರುಪಟ್ಟಿದವರಪಾ.. ಹದಿನಯ್ದು ಯಿಪ್ಪತ್ತು ಮಂದಿ ವುಣ್ಣುವುದನು ತಾನೊಬ್ಬನೆ ವುಂಡುಬಿಟ್ಟನರಪಾ.. ಬೇಕಾದರ ಬಾನ ಬಡಿಸಿದ ಚರಕಲಯ್ಯನನ್ನು ಕೇಳಿರಪಾ.. ಬೇಕಾದರ ಸಾರು ಬಡಿಸಿದ ಗುಂಡಾಲಯ್ಯನನ್ನು ಕೇಳಿರಪಾ.. ಯಂದು ಬೊಟ್ಟು ಮಾಡಿ ತೋರಿಸುತಲಿದ್ದನು.. ಸ್ರೇಷಿ«ಯು ಯಿವರಣೆಯಿಂದ ಮತ್ತೋಟು ತತ್ತರಿಸಲಾರಂಭಿಸಿದ ಮಂದಿ ಸದರಿ ಪಟ್ಟಣದಲ್ಲಿ ದ್ವಾಪರ ಕಾಲದಿಂದ ವಾಸಿಸುತಲಿದ್ದ ಮುಪ್ಪಾನು ಮುದೇರನ್ನು ಅಟಕಾಯಿಸಲೆಂದು ಬೆದಕಾಡಲಾರಂಭಿದ್ದು ಯೀ ಯಿಳಂಬಕ್ಕೆ ಕಾರಣವಾಗಿತ್ತು.. ಮುದೇರ ಮುದೇರು ಯಾರಿದ್ದರಪಾ ಅಂದರ ಕವಣೆಗಲ್ಲಿನ ಮನತನದ ಸಮುಸ್ಥಾಪನಾಚಾರಿಣಿಯಾಗಿರುವಂಥ ಬಟಾ ಬಯಲವ್ವ ಯಂಬ ಮುದುಕಿಯು, ಅದು ತನ್ನ ಗಿರಿಮೊಮ್ಮಗ ಕಾಳಗಯ್ಯನಿಂದ ಜಾಬು ಯಿವತ್ತು ಬಂದೀತು? ನಾಳೆ ಬಂದೀತು? ಯಂಬ ನಿರೀಕ್ಷೆಯಲ್ಲಿತ್ತು.. ಅದು ಕೇಳಲಕ ಬಂದವರ

ಮ್ಯಾಲ ಬಾರದ ಜಾಬಿನ ಮ್ಯಾಲಣ ಸಿಟ್ಟನ್ನು ಹೇರುತಲಿತ್ತು.. ನೂರಾವಂದು ಬೇತಾಳಗಳನ್ನು ಯರಕ ಹೊಯ್ದರ ವಂದು ಭೂತಬಿಲ್ಲೆ ವುಂಟಾತದೆ ಯಂದು ಮುಂತಾಗಿ....

ಹಿಂಗss ಭೂತಬಿಲ್ಲೆಯ ಪೂರುವಾಪರ ಬೆದಕುತ ಕುಂತರ ತಮ್ಮ ಕುತೂಹಲ ತಮಣಿಗೊಳ್ಳುವ ಬಗೆ ಯಂತು? ನಾನೊಲ್ಲೆ ತಾನೊಲ್ಲೆ ಯಂದು ಮೊದಮೊದಲಿಗೆ ಹಿಂಜರಿಕೇನ ಯಕ್ತಪಡಿಸುತಲಿದ್ದ ಮಂದಿ ವಬ್ಬೊಬ್ಬರಾಗಿ ಥೆಳಗೇರಿಗೆ ಹೋಗೋದು ತಮ ತಮ್ಮ ಯೋಗ್ಯತಾನುಸಾರ ದೂರ ದೂರದಲ್ಲಿ ನಿಂತು ಭೂತಬಿಲ್ಲೆಯೂ, ಜಗಲೂರವ್ವನೂ ಪರಸ್ಪರ ಅನ್ಯೋನ್ಯತೆಯಿಂದ ಯಿರುವುದನ್ನು ನೋಡುವುದು.. ಹೊಳ್ಳಿ ಬರುವುದನು ಮಾಡತೊಡಗಿದರು.. ಕ್ರಮೇಣ ದೂರ ಕಿರಿದಾಗಲಾರಂಭಿಸಿತು.. ವಬ್ಬೊಬ್ಬರ ವಂದೊಂದು ಯಿಧದ ಆಹಾರವನ್ನು ವಯ್ದು ಬೇಯಿನ ಮರದ ಬುಡದಲ್ಲಿಡುವುದೋ? ನಿನ್ನನುಗ್ರಹ ತಮ್ಮ ಮ್ಯಾಲ ಅನುಗಾಲ ಯಿರಲೆಂದು ಬೇಡಿಕೊಳ್ಳುವುದೋ? ಕ್ರಮೇಣ ತುಸು ಹೊತ್ತು ಕಳೆವುದೋ.. ಆ ಅಂತರ ಬೆಂತರ ಮಕ್ಕಳ ಸಿದುಗಾಟವನ್ನು ಕಣ್ತುಂಬ ನೋಡುವುದೋ? ಮಾತುಗಳನು ಕಣ್ತುಂಬ ಕೇಳುವುದೋ, ಲೆಕ್ಕಾಚಾರದಲ್ಲಿ ಸ್ಪುರುಶ ಮಾಡುವುದೋ? ಮಾಡತೊಡಗಿದರೆಂಬಲ್ಲಿಗೆ ಸಿವಸಂಕರ ಮಾದೇವss...

* * * *

ಅತ್ತ ಬಳ್ಳಾರಿ ಪಟ್ಟಣದ ಕ್ಯಾಂಪಬೆಲ್ಲು, ಹೆನ್ರಿ, ಸ್ಟೋನ, ಹ್ಯಾರೀಸು ಯಂಬಿವೇ ಮೊದಲಾದ ಅಧಿಕಾರಿಗಳ ಕಿವಿಯೊಳಗ ಅನಬಾರದ ಮಾತುಗಳನ್ನು ಪಿಸುಗುಟ್ಟಿದ ಥಾಮಸು ಮನ್ರೋ ಸಾಹೇಬನು ಗುತ್ತಿ ತಾಡಪತ್ರಿ, ಚಾಗಲ ಮರ್ರಿ.. ಪುಲಿಯಂದುಲ, ಕವುಕುಂಟಲ ಯಿವೇ ಮೊದಲಾದ ಸಮುಸ್ಥಾನ ಪಾಳೇಪಟ್ಟು ಜಾಗೀರುಗಳನ್ನು ಹಾದೂss ಹಾದು ಕಡಪಾ ಯಂಬ ಮೂರು ಸರಳಾಕ್ಕರಗಳ ಹೆಸರಿನ ಪಟ್ಟಣವನ್ನು ಸೇರಿಕೊಂಡು ಯಿವತ್ತಿಗೆ ಯೇಸು ದಿವಸಗಳಾಗಿದ್ದವೆಂದರೆ ಫಲಾನ ಆಸು ದಿವಸಗಳಾಗಿದ್ದವು.. ತಾನು ಅಧಿಕಾರಿಗಳಿಗೆ ಹೇಳಿದ್ದ ಮಾತುಗಳು ಯಷ್ಟರ ಮಟ್ಟಿಗೆ ಸರಿ? ಆ ಮಾತುಗಳು ತನ್ನ ಘನಂದಾರಿಗೆ ತಕ್ಕದಾಗಿ ಯಿದ್ದವಾ? ಯಿಲ್ಲವಾ? ತಾನಾ ಸಂಚಿನ ರೂವಾರಿಯಾಗದಿದ್ದಲ್ಲಿ ತನ್ನ ಅಧಿಕಾರಿಗಳೇ ತನ್ನ ಸರಕಾರ ನಿಷೇ«ಯ ಬಗ್ಗೆ ಅನುಮಾನ ತಾಳುತ್ತಿರಲಿಲ್ಲವಾ? ತನ್ನ ನೆಮ್ಮದಿಗ ಭಂಗ ಬರುತ್ತಿರಲಿಲ್ಲವಾ? ನಾಗಿರೆಡ್ಡಿಯಿಂದ ಹಲವರು ಸ್ಪೂರ್ತಿ ಪಡೆಯುತ್ತಿರಲಿಲ್ಲವಾ? ಯಂಬಿವೇ

ಮೊದಲಾದ ಪ್ರಶ್ನೆಗಳನ್ನು ತನ್ನೊಳಗೆ ಸ್ರುಷ್ಟಿಸಿಕೊಂಡು ನರಳುತಲಿದ್ದನು.. ವಂದೊಂದು ಬಾರಿ ತಾನು ರೂಪಿಸಿರುವ ಸಂಚು ಯಿಫಲವಾಗಲಿ ಯಂದುಕೊಳ್ಳುತಲೂ.. ಮರುಗಳಿಗೆ ಸಂಚು ಸಫಲವಾಗಲಿ ಯಂದುಕೊಳ್ಳುತಲೂ ಅಸಂದಿಗ್ಧತೆಯಿಂದ ಕಂಪಿಸುತಲಿದ್ದನು. ನಾಗಿರೆಡ್ಡಿಯನ್ನು ಬಂಧಿಸಿದಲ್ಲಿ ಅದು ತನ್ನ ಸೋಲು.. ಆತನ ಬಂಧನ ಯಿಫಲಗೊಂಡಲ್ಲಿ ಅದು ತನ್ನ ಗೆಲವು.. ಓss ದೇವರೇ.. ನಾಗಿರೆಡ್ಡಿಯು ಸಾಯುವ ಪರ್ಯಂತರ ಅಜೇಯನಾಗೇ ವುಳಿಯಿಲಿ.. ಯಾವ ಕಾರಣಕ್ಕೂ ಆತನು ಸರಕಾರದ ಸಿಪಾಯಿಗಳಿಗೆ ದೊರಕದಿರಲಿ.. ಆತನು ಆ ಪ್ರಾಂತದಿಂದ ಬಹುದೂರ ಹೊರಟು ಹೋಗಿ ನೆಮ್ಮದಿಯಿಂದ ಬಾಳುವಂತಾಗಲಿ.. ಯಂಬ ವಂದೊಂದು ವಾತು ಹೇಳುವಾಗಲೂ.... ಸಮವಸ್ತ್ರಗಳನ್ನು ವಂದೊಂದಾಗಿ ಸರೀರದಿಂದ ಕಳಚಿ ನಗಂದಿಗೆ ತೂಗುಬಿಟ್ಟನು.. ಕೊನೆಯ ಮಾತನ್ನು ಯೋಚಿಸಿದ್ದು ತಾನು ದೋತರ ಜುಬ್ಬ ಧರಿಸಿ ತಲೆಮ್ಯಾಲ ರುಮ್ಮಾಲು ಸುತ್ತಿಕೊಂಡ ನಂತರವೇ.. ತಾನೀಗ ರೆಡ್ಡಿಗಳ ಪಯ್ಕಿ ರೆಡ್ಡಿಯು.. ಆ ಸಂಚಿನ ಜಯಾಪಜಯಗಳು ನಿಖರವಾಗಿ ತಿಳಿಯುವವರೆಗೆ ತಾನು ಖಂಡಿತ ರೆಡ್ಡಿಯೇ, ರೆಡ್ಡಿಗಳಂತೆಯೇ ತಾನು ಅಭಿನಯಿಸಬೇಕು.. ರೆಡ್ಡಿಗಳ ಯಿಸುವಾಸ ಸಂಪಾದಿಸಬೇಕು.. ಅತುಲ ಮಾನವ ಪ್ರೇಮಿಯಾದ ಮನ್ರೋ ಸಾಹೇಬನು ಯಂದೆಂದೂ ಕೀಳುಮಟ್ಟದ ಸಂಚುಗಳನ್ನು ರೂಪಿಸಿರಲಾರನು, ಆಲೋಚಿಸಿರಲಾರನು ಯಂದು ಪ್ರತಿಯೊಬ್ಬರು ತನ್ನ ಕುರಿತು ಮಾತಾಡಿಕೊಳ್ಳುವಂತಾಗಬೇಕು.. ಹಿಂಗss ಯೋಚನೆ ಮಾಡೂತ ತನ್ನನ್ನು ಕಾಣಲು ಬಂದ ಆ ರೆಡ್ಡಿ, ಯೀ ರೆಡ್ಡಿ, ಯಾವ್ಯಾಮೋ ರೆಡ್ಡಿಗಳನ್ನು ಓಹೋs ರೆಡ್ಡಿಗಾರು, ಹ್ಹಾ ಹ್ಹಾ.. ರೆಡ್ಡಿಗಾರು ಯಂದನಕಂತ ಆಲಿಂಗನ ಮಾಡಿಕೊಳ್ಳುತಲಿದ್ದುದೇನು? ವುಭಯ ಕುಸಲೋಪರಿ ಯಿಚಾರಿಸುತಲಿದ್ದುದೇನು..? ವಾಗ್ದಾನ ಮಾಡುತಲಿದ್ದುದೇನು? ಜಾವ ಜಾವಕ್ಕೊಮ್ಮೆಮ್ಮೆ ಮುಖದ ಬೆವರನ್ನು ಕರವಸ್ತ್ರದಿಂದ ವರಸಿಕೊಳ್ಳುತಲಿದ್ದುದೇನು ಸಿವ ಸಿವಾs...

ಅತ್ತ ಯೀ ಸುದ್ದಿಯನ್ನು ಗುಂತಕಲ್ಲು ಪಟ್ಟಣದೊಳಗ ಮಿಷನರಿ ನಿರುಮಾಣ ಮಾಡುತಲಿದ್ದ ಮುನುಸೋಬಯ್ಯನೇ ನಂಬಲಿಲ್ಲ.. ಸದರಿ ಸುದ್ದಿಯನ್ನು ಖಾತರಿ ಮಾಡಿಕೊಳ್ಳಲಕೋ, ಹರಿದು ಹಂಚಿಕೊಳ್ಳಲಕೋ.. ಹತ್ತಾರು ಮಂದಿ ಮಿಷನರಿಗೆ ಬರೋದು ಹೋಗೋದು ಮಾಡುತಲಿದ್ದರು..

ಯೀ ಕ್ರುತ್ಯ ಕುಂಪಣಿ ಸರಕಾರದ ಘನತೆಗೆ ತಕ್ಕುದಾ ಯಂದು ಕೇಳುವಾಗ್ಗೆ 'ನಿಮ್ಮ' ಯಂಬ ಸಬುಧವನ್ನು ಹಚ್ಚುವುದನು ಮಾತ್ರಮರೆಯುತಲಿರಲಿಲ್ಲ.. ಅದೇ ಯಿನ್ನು ಸಂತ ಪದವಿಗೆ ಅನತಿ ದೂರದಲ್ಲಿದ್ದ ಮುನುಸೋಬಯ್ಯನು ತಾನೀಗ ಕುಂಪಣಿ ಸರಕಾರದ ಮೂಳಿಗದವನು ಅಲ್ಲ ಯಂದೂ.. ನಿಮ್ಮೆಲ್ಲರ ಪಯ್ಕಿ ವಬ್ಬನೆಂದೂ ಮನವರಿಕೆ ಮಾಡಲು ಪ್ರಯತ್ನ ಮಾಡುತಲಿದ್ದನು.. ಅವರೆಲ್ಲರ ಸಮಕ್ಷಮ ಜೀಸಸು ದೇವರ ಮುಂದೆ ಮುಂಬತ್ತಿ ಬೆಳಗಿಸಿ 'ದೇವರೇ ಯೀ ಸುದ್ದಿ ಸುಳ್ಳಾಗಲಿ' ಯಂದು ಮಂದ್ರಸ್ಥಾಯಿಯಲ್ಲಿ ಬೇಡಿಕೊಳ್ಳುತಲಿದ್ದನು.. ನೇಮಕಲ್ಲು ಹನುಮಣ್ಣ ಭಟ್ಟರೊಂದಿಗೆ ಬಂದ ಚಿಪ್ಪಗಿರಿಯ ಗೆಲುಪುರೆಡ್ಡಿಯು "ಸ್ವಾಮೀ ಯೀ ಸುದ್ದಿ ಖರೇವಯ್ತೆ.." ಯಂದು ಕಣ್ಣಲ್ಲಿ ನೀರು ತಂದುಕೊಳುತ ಹೇಳಿದ ಮ್ಯಾಲs ಮುನುಸೋಬಯ್ಯನು ನಂಬಿದ್ದು.. ಮನ್ರೋನ ಬಗ್ಗೆ ತನ್ನೊಳಗಿದ್ದ ಗವುರವಯಂಬ ಸವುಧ ಆ ಕ್ಷಣ ದಡಕ್ಕನ ವಜಾ ಬಿಟ್ಟಿತು.. "ಕುಂಪಣಿ ಸರಕಾರದ ವಂದು ಹುಲ್ಲುಕಡ್ಡಿ ಕುಸಿಯಲಕೂ ಕಲೆಟ್ಟರ ಆಗ್ನೆ ಬೇಕು.. ಆತನೇ ಯೀ ಸಂಚಿನ ರೂವಾರಿಯಾಗಿರಲಕsಬೇಕು.. ತನ್ನ ಯಿತಿಹಾಸಕs ತಾನೇ ಕಪ್ಪು ಮಸಿ ಬಳಕೊಂಡನಲ್ಲಾ.. ಛೇ.. ಛೇ.. ಕುಂಪಣಿ ಸರಕಾರವೇ" ಯಂದು ಮುನೋಬಯ್ಯನು ಮಮ್ಮಲನ ಮರುಗಿದನು.. ಸರಕಾರದ ಯೀ ಕ್ರುತ್ಯದಿಂದ ತನ್ನ ಸಂತ ಪದವಿಗೆ ಧಕ್ಕೆ ವದಗುವುದೋ? ತನ್ನ ಮಿಷನರಿ ಕೆಲಸ ಕಾರ್ಯೇವುಗಳಿಗಿದರಿಂದ ಅಡ್ಡಿ ಆತಂಕಗಳು ಸಂಭವಿಸುವವೋ? ಮಿಷನರಿ ಕಟ್ಟಡದಿಂದ ಹೊರಗ ಕಾಣಿಸಿಕೊಂಡು ನೆರತಿದ್ದ ನೂರಾರು ಮಂದಿಯನ್ನುದ್ದೇಶಿಸಿ "ಸೋದರರಾss.. ನೀವ್ಯಾರೂ ಘಾಬರಿ ಆಗಬ್ಯಾಡಿರಿ.. ಯೀ ಸುದ್ದಿ ನಿಜ ಯಿರಲಾರದು.. ದೇವರ ವಲುಮೆಗೆ ಪಾತ್ರನಾಗಿರೋ ನಾಗಿರೆಡ್ಡಿ ಮೋಸದಿಂದ ಹಿಡಿಯೋದು ವಂದಾs ಕುಂಪಣಿ ಸರಕಾರದ ತನ್ನ ಕಾಲ ಮ್ಯಾಲ ತಾನs ಕಲ್ಲು ಹಾಕಿಕೊಳ್ಳುವುದು ವಂದss.. ಯಿದು ನಿಜ ಆಗಿದ್ದರ ನಾನು ನಿಮ್ಮೆಲ್ಲರ ಪರವಾಗಿ ಪ್ರತಿಭಟಿಸಿ ಬಂಧನಕ್ಕೊಳಗಾಗಲಕ ತಯ್ಯಾರದೀನಿ.. ಅವಯ್ಯನನ್ನು ಬಿಡುಗಡೆ ಮಾಡಿಸುವ ನಿಟ್ಟಿನಲ್ಲಿ ಪ್ರಾಣವನ ಬೇಕಾದರು ಕೊಡುತೇನಿ.. ಧಯರ್ರ್ಯವಾಗಿರಿ.. ತಾಳುಮೆ, ಸಹನೇನs ಕಳಕೋಬ್ಯಾಡಿರಿ" ಯಂದು ಮುಂತಾಗಿ ಮಾತಾಡಿದನು.. ಜನ ವಕ್ಕೊರಲಿನಿಂದ ಸರಕಾರಕ್ಕ ದಿಕ್ಕಾರ ಕೂಗಿದರು.. ನಾಗಿರೆಡ್ಡಿಗೆ ಜಯಘೋಷ ಹಾಕಿದರೆಂಬಲ್ಲಿಗೆ....

ಸದರಿ ಗುಂತಕಲ್ಲು ಪ್ರಾಂತವು ಯೀ ಸುದ್ದಿ ತಿಳಿದ ಕ್ಷಣದಿಂದ ಕನಲಿದ ಜೇನುಗೂಡಾಗಿ ಬಿಟ್ಟಿತ್ತು. ಯೀ ಸುದ್ದಿ ತಿಳಿಯುತಲೆ ಅಂಗಯ್ಯೊಳಗಿನ ತುತ್ತು ಮರೆತವರೆಷ್ಟೋ? ಬಾಯೊಳಗಿನ ಬಾನ ಮರೆತವರೆಷ್ಟೋ? ಮೊಲೆಗೆ ಹಾಕ್ಕೊಂಡಿದ್ದ ಕೂಸುಗಳನ್ನು ಮರೆತವರೆಷ್ಟೋ? ಸತ್ತವರೆದುರು ಅಳುವುದನು ಮರೆತವರೆಷ್ಟೋ? ಸರ್ರಂತ ಯಿಷಯಾಸಕ್ತಿಯುತ್ತ ಬೆನ್ನುವಮಾಡಿದ ದಂಪತಿಗಳೆಷ್ಟೋ? ಸಹಜ ಕ್ರಿಯೆಗಳನ್ನು ಆರ್ದಂಬರ್ದಕ್ಕೆ ಬಿಟ್ಟೆದ್ದವರೆಷ್ಟೋ..? ನಂಬುವಲ್ಲದಂಗಾದರು.. ನಂಬದೆ ಯಿರದಂಗಾದರು.. ಹಾಯ್ ಭೀಮಲಿಂಗೇಸ್ವರನೇ.. ಯಿದು ನಿಂದು ನ್ಯಾಯವಾ ಯಂದು ಪ್ರಸ್ನಿಸುತ್ತಲೇ....

ಜಾಬಾಲ, ಸಂಗಾಲ, ಚಕ್ರಾಲ, ಯಿಡುಪನಕಲ್ಲು, ಯಾಡಕಿ, ಹಾವಳಿಗಿ, ಪಾಲ್ತೂರು ಮುಂತಾದ ಚೂರು ಪಾರು ಗ್ರಾಮಗಳಂತೂ ಕಾದ ಕಾವಲಿ ಮ್ಯಾಲಿನ ಕೋಳಿ ಮರಿಗಳಂತಾದವು.. ನಿಟ್ಟುಸುರು, ಬಿಸಿವುಸುರುಗಳೆಲ್ಲ ಬಿರುಗಾಳಿ ರೂಪ ಪಡಕೊಂಡು ಅಂಡಲೆಯಲಾರಂಭಿಸಿದವು.. ಯಾರ್‍ಯಾರ ಸರೀರದೊಳಗ ಯ್ಯಾರ್‍ಯಾರೋ ತೂರಿಕೊಂಡಂಥ ಅನುಭವವಾಗತೊಡಗಿತು.. ನಾಯಿ, ನರಿಗಳು ಮುಗುಲಿಗೆ ಮುಖ ಮಾಡಿ ಮೊಳಿಡುತಲಿದ್ದುದೋ? ಮಂದಿ ಹರಕೋತ ಹರಕೋತ ಬಂದು ತಲುಪಿದ ಪರಿಣಾಮವಾಗಿ ಗಡೇಕಲ್ಲು ಗ್ರಾಮ ವಟ್ಟರಿಸಿಬಿಟ್ಟಿತು.. ರಥೋತ್ಸವದ ನಿಮಿತ್ತ ತೇರುಗಡ್ಡೆಯನ್ನು ಅದರ ಮೂಲ ಸ್ಥಾವರಿಂದ ಹೊರಗ ಹಾಕಿ ವಂದೆಲ್ಡು ದಿನಗಳಷ್ಟೆ ಕಳೆದಿದ್ದವು.. ಗುಡಿಯ ವಳ, ಹೊರ ಮಯ್ಯನ್ನು ತೊಳೆಯುವ, ಬಳಿಯುವ ಕಾರ್‍ಯೇವು ನಿಧಾನಕೀಲೆ ಸ್ಥಗಿತಗೊಳ್ಳತೊಡಗಿತ್ತು.. ಯಲ್ಡುಮೂರು ಸತಮಾನದಿಂದ ನಿರಂತರವಾಗಿ ವುರಿಯುತ್ತ ಬಂದಿದ್ದ ನಂದಾದೀಪವು ನಂದುವ ಸ್ಥಿತಿಗೆ ತಲುಪಿತ್ತು.. ತಮ್ಮನ್ನು ಭಾರಿಸುವವರಿಲ್ಲದೆ ದೇವುಳದ ಗಂಟೆ, ಜಾಗಟೆಗಳು ಬಿಕೋ ಗುಟ್ಟತೊಡಗಿದ್ದವು.. ಭೀಮಲಿಂಗೇಸ್ವರ ಸ್ವಾಮಿ ಯಿಗ್ರಹದ ಮ್ಯಾಲಿದ್ದ ಪತ್ರೆ, ಪುಷ್ಪಗಳು ವಂದೊಂದಾಗಿ ಬಾಡುತ ವುದರಲಾರಂಭಿಸಿದ್ದವು.. ರಥೋತ್ಸವವು ಫಲಾನ ದಿನದಂದು ಸಿವನೇ.. ನಾಗಿರೆಡ್ಡಿಯು ಮಡಿವುಡಿಯಿಂದ ಬಂದು ಮಿಣಿ ಹಿಡಿಯದ ಹೊರತು ತೇರು ವಂದು ಮೊಳ ಮುಂದಕ್ಕೆ ವುರುಳುವುದಿಲ್ಲವಲ್ಲ ಸಿವನೇ, ಜಾತುರೆ ನಿಂದುರತಯ್ತೆ.. ಪರಿಸೆ ನಿಂದುರತಯ್ತೆ.. ಯೇನು ಮಾಡುವುದೀಗ? ಯಲಯ್ ಭೀಮಲಿಂಗೇಸ್ವರ ಸ್ವಾಮಿಯೇ.. ನಿನ್ನ ತೇರನ್ನು ನೀನೇ ಯಳಕೋವಂತಿ.. ನಿನ್ನ ನಿಜ ಭಕುತನನ್ನು ನೀನೇ ಕಾಪಾಡಲಾರದಾದೆಯೇನು?.. ಯಂದು ಮಂದಿ

ಅಂದಾಡತೊಡಗಿದರು.. ಕುಂಪಣಿ ಸರಕಾರದ ಸಿಪಾಯಿಗಳ ಕಯ್ಗೆ ತಮ್ಮ ನಾಗಿರೆಡ್ಡಿಯು ಹಂಗ ಸಿಕ್ಕಿರಬವುದಾ? ಹಿಂಗ ಸಿಕ್ಕಿರಬವುದಾ? ತಮ್ಮ ಪಯ್ಕಿ ಯಾರಾದರು ಯೀ ಸಂಚೊಳಗ ಶಾಮೀಲಾಗಿದ್ದಿರಬವುದಾ?.. ಹಿಂಗs ಯೋಚನೆ ಮಾಡಿಕೋತ ತಲಾಕೊಂದೊಂದು ಆಯುಧ ಹಿಡಕೊಂಡಿದ್ದಾಗಲೀ, ಕತ್ತೆ, ಕುದುರೆ, ಬಂಡಿ ಬಡಗೋಲು ಯಿವೇ ಮೊದಲಾದ ವಾಹನಗಳನ್ನು ತಮ್ಮೋಟಕ ತಾವs ಯೇರಿದ್ದು ತಡ ಆಗಲಿಲ್ಲ.. ಬಳ್ಳಾರಿ ಯಂಬ ನಂಗನಾಚಿ ಪಟ್ಟಣದ ಕಡೇಕ ಸಾಲಿಟ್ಟಿದ್ದು ತಡ ಆಗಲಿಲ್ಲ.. ತಲುಪಿದ್ದು ತಡ ಆಗಲಿಲ್ಲ.. ಕುಂಪಣಿ ಸರಕಾರದ ಕಟ್ಟಡವನ್ನು ಮುತ್ತಿಗೆ ಹಾಕಿದ್ದು ತಡ ಆಗಲಿಲ್ಲ.. ಯಲಮೋ ಕ್ಯಾಂಪಬೆಲ್ಲು.. ಯಲಮೋ ಹೆನ್ರೀ.. ಯಲಮೋ ಥಾಮಸು ಮನ್ರೋ.. ಯಂದು ಕೂಗಿದ್ದು ತಡ ಆಗಲಿಲ್ಲ..

ಸಿಪಾಯಿಗಳು ತಮ ತಮ್ಮ ಬಂದೂಕುಗಳನ್ನು ಜನರತ್ತ ತಿರುಗಿಸವರೆ, ಫಿರಂಗಿಗಳು ಅವರತ್ತ ಮುಖ ಮಾಡವೆ, ಸಯಲನ್ಸೂ ಸಯಲನ್ಸೂ.. ಯಂದು ಕೂಗುತವೆ ಸಿಪಾಯಿ ಮಂದಿ.. ಅಧಿಕಾರಿಗಳು ಕಿಟಕಿ, ಜಾಲಂದರಗಳಲ್ಲಡಗಿ ಯಿಣುಕಿ ನೋಡುತ ವಣಕುತವರೆ.. ಕರದು ಕೇರು ಬಡಸಿಕೊಂಡಂತಾಯಿತಲ್ಲ ತಮ್ಮ ಪರಿಸ್ಥಿತಿ ಯಂದು ವಳಗೊಳಗ ಮರುಗುತವರೆ.. ಹೊರಗಡೆ ಯುದ್ಧ ವಾತಾವರಣ ನಿರುಮಾಣವಾಗಯ್ತೆ.. ನಾಗಿರೆಡ್ಡಿಯ ಸರೀರವೇ ವಂದು ಬವುದೊಡ್ಡ ಸಾಮ್ರಾಜ್ಯವು.. ಅದನು ಮರಳಿ ಪಡೆಯಲಕ.. ಗೆಲ್ಲಲಕ ಯೀ ಮಂದಿ ಯಾವ ತ್ಯಾಗಕ್ಕೂ ಸಜ್ಜಾಗಿ ಬಂದವರೆ.. ಹರಪನಹಳ್ಳಿಯ ಯಿಮ್ಮಡಿ ಸೋಮಸೇಕರ ನಾಯಕನ ಚರಾಸ್ತಿ, ಸ್ಥಿರಾಸ್ತಿಗಳನ್ನೆಲ್ಲ ಸರಕಾರದ ಬೊಕ್ಕಸಕ ಸೇರಿಸಿ ಹೆಸರು ಮಾಡಿದ್ದ ಕ್ಯಾಪ್ಟನ್ ರವುಡಲ್ಲನು ತಮ್ಮ ಪುಣ್ಯಕ್ಕೆ ಯಿದ್ದನಲ್ಲ.. ಮಂದಿಗೆ ನಾಕು ಮಾತು ನಚ್ಚ ಚೆಪ್ಪುವಂತೆ ಅವನನ್ನು ಕೇಳಿಕೊಂಡರು.. ಮತ್ತು ಭವಂತಿ ಕಡೆಗೆ ಅವನ ಹಿಂದೆ ಹೋದರು.. ಸಪ್ತಲೋಹದ ಫಿರಂಗಿಯ ಸೋದರನಂತಿದ್ದ ಅವನು ಜನರನ್ನುದ್ದೇಶಿಸಿ ನಾಗಿರೆಡ್ಡಿ ಸರಕಾರದ ಗವುರವಾನ್ವಿತ ಅತಿಥಿ ಯಂದೂ, ಅವನು ಕ್ಷೇಮದಿಂದ ಯಿರುವನೆಂದೂ ಹೇಳಿದನು.. ಅದರಿಂದ ಜನಕ ನಂಬುಕೆ ಬರಲಿಲ್ಲ.. ನೋಡಬೇಕು, ಮಾತಾಡಬೇಕು ಯಂದು ಚಂಡಿಹಿಡಿದರು.. ತದನಂತರ ಕೇಂದ್ರಕಾರಾಗ್ರುಹದತ್ತ ದವುಡಾಯಿಸಿದರು, ಅಲ್ಲಿ ಅದೇ ವುತ್ತರ ಬಂತು, ಕೋಪದ ಭರದಲ್ಲಿ ವಬ್ಬ ಯುವಕನು ಕಯ್ಗೆ ತಗುಲಿದ ಸಿಪಾಯಿ ಮ್ಯಾಲ ಮಾರಣಾಂತಿಕ ಹಲ್ಲೆ ನಡೆಸಿದನು.. ಅದರಿಂದ ಘರ್ಷಣ

ಜರುಗಿತು. ವುಭಯತ್ರಸಾವು, ನೋವು ಸಂಭವಿಸಿದವು.. ನಾಗಿರೆಡ್ಡಿಯನ್ನು ನೋಡಬವುದೆಂಬ ಕಾರಣದಿಂದ ಜನರು ತಮ್ಮನ್ನೆಲ್ಲ ಸೆರೆಮನೇಲಿ ಹಾಕುವಂತೆ ಹಠ ಮಾಡಿದರು. ಆದರೆ ಅಧಿಕಾರಿಗಳು ಅದಕ್ಕೆ ಸಮ್ಮತಿಸಲಿಲ್ಲ.. ನಾಗಿರೆಡ್ಡಿಗೆ ಜಯಕಾರ ಹಾಕುತ ಯರಡು ಮೂರು ದಿವಸಗಳ ಕಾಲ ವುಪುವಾಸ, ವನುವಾಸ ಅನುಭೋಸುತ ಅಲ್ಲೇ ಯಿದ್ದರು.. ಯೇಸು ದಿವಸಾಂತ ಅವರು ಅಲ್ಲೇ ಠಿಕಾಣಿ ಯಿರಲಕ ಆದೀತು.. ಭೀಮಲಿಂಗೇಸ್ವರ ಸ್ವಾಮಿ ಮ್ಯಾಲ ಭಾರ ಹಾಕಿ ಅಲ್ಲಿಂದ ಹೊಂಟು ತಮ ತಮ್ಮ ಗ್ರಾಮಗಳನ್ನು ಸೇರಿಕೊಂಡರೆಂಬಲ್ಲಿಗೆ ಸಿವಸಂಕರ ಮಾದೇವss.. ಸೆರೆಮನೇಲಿದ್ದ ನಾಗಿರೆಡ್ಡಿಯನ್ನು ಕಲವಡಾನಿಕ ಥಾಮಸು ಮನ್ರೋ ಸಾಹೇಬನು ಕಡಪಾದಿಂದ ಬಳ್ಳಾರಿ ಪಟ್ಟಣದ ಕಡೇಕ ಬಯಲ್ದೇರಿದ್ದ ನೆಂಬಲ್ಲಿಗೆ ಸಿವಸಂಕರ ಮಾದೇವss....

ಅತ್ತ ಹರಪನಹಳ್ಳಿ ಸೀಮೆ ವಳಿತದೊಳಗ ಹೇಳುವವರಿಲ್ಲದ, ಕೇಳುವವರಿಲ್ಲದ ಕಾರಣದಿಂದ ಅಲ್ಲೋಲ ಕಲ್ಲೋಲಗೊಂಡಿದ್ದ ಹತ್ತಾರು ದೇಸ ಯಿದೇಸಗಳಿಗೆ ವಂದು ಗತಿ ಕಾಣಿಸಬೇಕೆಂದು ಕುರುದುಗಡ್ಡೆ ದೇಸಾಯಿ ಭರಮನ ಗವುಡ, ಕುಂಚೂರು ಕೊಟ್ಟರಗವುಡ, ನಾಗತಿಬಸಾಪುರದ ಮೆಳ್ಳೆಕಟ್ಟೆಯ ಮಲ್ಲನಗವುಡರೆಲ್ಲ ಮಾಜಿ ದಿವಾನ ಹಂಪರಸಪ್ಪಯ್ಯನ ನಾಯಕತ್ವದಲ್ಲಿ ನೀಲಗುಂದದಲ್ಲಿ ಶೇಷಾಯುಷ್ಯವನ್ನು ಕಳೆಯುತಲಿದ್ದ ನೀಲಮ್ಮಾಜಿಯನ್ನು ಕಂಡರು. ಯೋಗಕ್ಷೇಮ ಯಿಚಾರಿಸಿದಾದ ಮ್ಯಾಲ "ತಾಯೀ ನೀನು ಯೀ ಪರದೇಸಕ್ಕೆಲ್ಲ ಹಿರೀಕಳದೀಯವ್ವಾ.. ನೀನು ಫಲಾನ ಮೂರುಗಳಿಗೆ ವಂದು ದಿಕ್ಕಾಗಬೇಕು" ಯಂದು ಹೇಳಿಕೊಂಡರು. ಅದಕಿದ್ದು ಆಕೆಯು "ಮಕ್ಕಳಾ.. ನಂದು ಪರಿಸ್ಥಿತಿ ನೆಟ್ಟಗಿಲ್ಲರಪ್ಪಾ.. ಯಾರ ಗೊಡವೆಗೆ ಹೋದರ ಪಿಂಚಣೀನ ನಿಲ್ಲಿಸುವುದಾಗಿ ಹ್ಯಾರೀಸು ಸಾಹೇಬ ಹುಕುಮು ಮಾಡ್ಯಾನ.. ಪಿಂಚಣಿ ಕಳಕೊಂಡು ಹ್ಯಾಂಗ ಬದುಕೋದು.. ಅದೂ ಅಲ್ಲದ ಬದುಕು ತಗ್ಗು ಮುಖಾನ ಹಿಡದಯ್ತೆ.. ಮೊದಲಿನಂಗ ಕಸುವುಯಿಲ್ಲ.. ನಾಕು ಮಂದಿ ಛಂದಾಗಿ ಬದುಕೋದನ ನೋಡಲಕಂದರ ಅಂಗಯ್ಯಿ ಬಿಕೋ ಅಂತಯ್ತೆ.. ಯಿನ್ನು ನಾಲಗೆ ಹುಕುಂ ನುಡಿದರ ಕೇಳುವವರ್ಯಾರು ಕನರಪ್ಪಾss" ಯಂದು ಫರಲಾಂಗುದುದ್ದ ನಿಟ್ಟುಸುರು ಬಿಟ್ಟಳು. ಅದಕ ಮೂಕರಾದರು ಅವರೆಲ್ಲ. "ಯವ್ವಾ.. ನೀನು ಹೇಳಿದ್ದು ಖರೇವಯ್ತೆ.. ಯಾರೊಬ್ಬರದು ನಸೀಬ ನೆಟ್ಟಗಿಲ್ಲ.. ಮುಂದಿನ ದಿವಸಗಳೂ ಸುಮಾರಯ್ದಾವ" ಯಂದು ಹಂಪರಸಪ್ಪಯ್ಯನೂ

ನಿಟ್ಟುಸುರುಬಿಟ್ಟ. ವಂದು ಕಾಲದಲ್ಲಿ ಅವಯ್ಯ ಹರಪನಹಳ್ಳಿ ಪಾಳ್ಳೇಗಾರರ ಬಳಿ ದಿವಾನಗಿರೀಲಿ ಯಿದ್ದಾತನು.. "ತಾಯೀ.. ನಿನ್ನ ಆಸಿರುವಾದ ಯಾವತ್ತು ಯೀ ಮಕ್ಕಳ ಮ್ಯಾಲಿರಲವ್ವಾ.." ಯಂದನಕಂತ ಸಣುಮಾಡಿದನು.. ವುಳಿದವರೂ ಸಣುಮಾಡಿ ಅಲ್ಲಿಂದ...

ಬಂದವರು ಸುಮ್ಮಕ ಕುಂಡರಲಿಲ್ಲ.. ಹಂಪರಸಪ್ಪಯ್ಯನ ನೇತ್ರುತ್ವದಲ್ಲಿ ಹರಪನಹಳ್ಳಿ ಸೀಮೆ ಸಮಗ್ರಅಭಿರುದ್ದಿ ಸಮಿತಿಯನ್ನು ರಚನೆ ಮಾಡಿಕೊಂಡರು.. ದೇವರು ತಮಗ ಯಾತರಲ್ಲೂ ಕಡಿಮೆ ಮಾಡಿಲ್ಲ.. ಕಯ್ಲಾದಷ್ಟು ವಂತಿಗೆ ಹಾಕಿದರು.. ದಿನಗೂಲಿ ಮ್ಯಾಲ ಕೆಲ ಯುವಕರನ್ನು ಸಿಪಾಯಿಗಳನ್ನಾಗಿ ನೇಮಕ ಮಾಡಿಕೊಂಡರು.. ಅದಕ "ಯಿಮ್ಮಡಿ ಸೋಮಶೇಖರನ ನಾಯಕನ ಪದಾತಿದಳ" ಯಂದು ನಾಮಕರಣ ಮಾಡಿದರು.. ಹುಲಿಯನ್ನು ಕೊಂದು ಹುಲಿ ಯಿನಾಮನ್ನೂ, ಕರಡಿಯನ್ನು ಕೊಂದು ಕರಡಿ ಯಿನಾಮನ್ನೂ ಪಡೆದಂಥವನೂ, ಆರೂವರೆ ಮೊಳ ವುದ್ದದವನೂ ಆದ ಕುರುದುಗಡ್ಡೆ ದೇಸಾಯಿ ಭರಮುನಗವುಡನನ್ನು ಸೇನಾಧಿಪತಿಯನ್ನಾಗಿ ನೇಮಕ ಮಾಡಲಾಯಿತು.. ಆ ಪರಾಕ್ರಮಿಗೆ ಅರಾಕಜತೆ ಯಿರುದ್ಧ ಹೋರಾಡುವ ರಾಜಸತ್ತೆಯನ್ನು ಪುನರ್‌ಸ್ಥಾಪನೆ ಮಾಡುವ ಸರುವ ಅಧಿಕಾರವನ್ನು ಯಿದ್ಯುಕ್ತವಾಗಿ ನೀಡಲಾಯಿತೆಂಬಲ್ಲಿಗೆ ಸಿವಸಂಕರ ಮಾದೇವss....

ಅತ್ತ ರಾಯನು ಹೆಂಡತಿ ಮಕ್ಕಳೊಡನೆ ಕೂಡ್ಲಿಗಿ ಪಟ್ಟಣಕ್ಕೆ ಆಗಮನ ಮಾಡಿದೊಡನೆ ಆದರ್ಸ ದಾಂಪತ್ಯ ಯೋಜನೆಯನ್ನು ಬರಖಾಸ್ತುಗೊಳಿಸಿ ಹಲವು ಗಂಡ ಹೆಂಡರ ನಿಷೂ«ರ ಕಟ್ಟಿಕೊಂಡನು.. ತ್ರಿಕಾಲ ಸಂಧ್ಯಾವಂದನೆ, ಗಾಯಿತ್ರಿ, ಸಹಸ್ರಲಲಿತನಾಮಗಳಿತ್ಯಾದಿಗಳನ್ನು ಚಾಚೂತಪ್ಪದೆ ಮಾಡತೊಡಗಿ ಸದರಿ ಪಟ್ಟಣದ ಸಮಸ್ತ ವಯ್ದಿಕರ ಪ್ರೀತಿಗೆ ಪಾತ್ರನಾದನು.. ಕುಂಪಣಿ ಸರಕಾರದ ಕರಚಳಕದಿಂದಾಗಿ ಸೊರಗಲಾರಂಭಿಸಿದ್ದ ಅಗ್ರಹಾರಗಳ ಜೀರ್ಣೋದ್ಧಾರದ ಸಲುವಾಗಿ ವಂದು ಯೋಜನೆಯನ್ನು ರೂಪಿಸಿದನು.. ಅದಕ್ಕೆ 'ಪುರಾಣ'ಯಂಬ ಹೆಸರನ್ನಿಟ್ಟನು.. 'ವರ್ತಮಾನದ ಆತುಮವೇ ಪುರಾಣ' ಯಂದದಕ ಉಪಶಿರ್ಷಿಕೆಯನ್ನು ಕೊಟ್ಟನು.. ಹುಟ್ಟು ಸಾವು ಸಂಭವಿಸುವ ಪ್ರತಿಯೊಂದು ಮನೆಯೂ, ಸಮೀಪದ ಅಗ್ರಹಾರದೊಂದಿಗೆ ನಿಕಟ ಸಂಪರ್ಕ ಯಿಟ್ಟುಕೊಳ್ಳಬೇಕೆಂದೂ, ವಯ್ದಿಕರು ನೊಂದುಕೊಂಡಲ್ಲಿ ಬರ ಸಂಭವಿಸುವುದೆಂದೂ, ದ್ವಿಜರ ಜೀವನಾವಶ್ಯಕ ಸಾಮಾಗ್ರಿಗಳನ್ನು

ತ್ರಿಕರಣಪೂರುವಕವಾಗಿ ಸರಬರಾಜು ಮಾಡಿದವರಿಗೆ ಮರಣಾನಂತರ ಸುಖ, ಸಂತೋಷ ಲಭ್ಯವಾಗುವುದೆಂದೂ ಅಲಿಖಿತ ಕಾನೂನು ಕಟ್ಟಳೆಗಳನ್ನು ಹೇರುವಲ್ಲಿ ಸಫಲನಾದನು.. ಯಿದು ಯಷ್ಟರ ಮಟ್ಟಿಗೆ ಸರಿ ಯಂಬ ಪ್ರಶ್ನೆಗಳನ್ನು ಕೇಳಿದವನಾದ ಯಡ್ಡವರ್ಡನಿಗೆ ಯೀ ಭರತಖಂಡದ ವಿಪ್ರರೂ, ಬ್ರಿಟನ್ ದೇಸದ ಆಂಗ್ಲರೂ ವಂದೇ ದ್ವಿದಳ ಧಾನ್ಯದ ಯರಡು ಹೋಳುಗಳೆಂದು ಯಿವರಿಸಿ ಸಯ್ ಅನ್ನಿಸಿಕೊಂಡನು.. ಆದರೂ ಕಾಕುಬಾಳು ಗುಣಸಾಗರ, ಗೋಯಿಂದ ಗಿರಿಯು ವಳಿತದೊಳಗಿದ್ದ ಅಗ್ರಹಾರಗಳು ಅನೇಕ ತತ್ವಾರಗಳಿಂದ ತತ್ತರಿಸತೊಡಗಿದ್ದವು ಸಿವನೇ...

ಅದೇ ಸದರಿಪಟ್ಟಣದ ಚೆನ್ನಿಫರಮ್ಮಳ ಕಣ್ಣೊಳಗಿಂದ ಚಿನ್ನಾಸಾನಿಯ ಗೊಂಬಿ ಪೂರ್ತಿ ವುದುರಿರಲಿಲ್ಲ.. ಅದು ಮುಳುಗೋದು, ಮೂಡೋದನು ಮಾಡುತಲೇಯಿತ್ತು. ಆ ಕ್ರಿಯೆಗೆ ಹೊತ್ತು ಗೊತ್ತು ಯಿರಲಿಲ್ಲ. ಮುಳುಗಿದಾಗ ವಂದು ನಮೂನಿ ಸಂಕಟ.. ಮೂಡಿದಾಗ ಯಿನ್ನೊಂದು ನಮೂನಿ ಸಂಕಟ. ಸುಮ್ಮನ ಕುಂಡರಕ ಬಿಡುವಲ್ಲದು.. ನಿಂದುರಲಕ ಬಿಡುವಲ್ಲದು. ಯಡ್ಡವರ್ಡು ''ಮರೆಯೋ, ಅದೇನು ದೊಡ್ ಸಂಗತಿ'' ಯಂದ.. ಅದೆಂಗ ಮರೆಯಲಕಾದೀತು? ಮರೆ ಅಂದರ.. ಅದಕ ತಾನೂನು ಮಸ್ತು ಯತ್ನ ಪ್ರಯತ್ನಗಳ ಮಾಡಿದಳು.. ಪರಿಚಯ ಮಾಡಿಸಿದಾತನೇ ಯಿದಕ್ಕೊಂದು ದಾರಿ ತೋರಿಸಿಯಾನು.. ಆದರ ರಾಯ "ತಾಯೀ.. ಆ ತಾಯಿ, ಆ ಮಗಳ ಹೆಸರನ್ನು ಮಾತ್ರನನ್ ಹತ್ರತಗೀಬ್ಯಾಡ.. ಕಿವಿಗೆ ಬಿದ್ದರ ಸರೀರದೊಳಗ ಯಡವಟ್ಟು ಕಾಣಿಸಿಕೋತಂಯ್ತೆ" ಯಂದು ರಾಯ ಹೇಳುತಾ ಹೇಳೂತ ಸ್ರವಣೇಂದ್ರಿಯಂಗಳನು ಮುಚ್ಚಿಕೊಂಡನು.. ಗಂಡಸರs ಹಿಂಗ ಅಂದರ ಹೆಂಗಸಾದ ತಾನೇನು ಮಾಡಲಾದೀತು.. ನಡಕೋತ ಹೋಗಬೇಕೆಂದರ ತಾನೇನು ಮಾಮೂಲು ಮನುಶೋಳಲ್ಲ.. ಅದಕಿದ್ದು ತಾನು ವಬ್ಬರ ಹಿಂದ ಬರಬೇಕಂತೆ ಅಂತ ಹೇಳಿ ಕಳುವಿದಳು. ಯಾವಳು ಕರೆದರೇನಂತೆ ಬರಕಿಲ್ಲಾಂದರ ಬರಾಕಿಲ್ಲ ಅಂತ ಹೆಂಗ ಜವಾಬು ಕೊಡಲಾದೀತು? ಯೀಗ ಚಿನ್ನಸಾನಿ ಮುಟ್ಟಾಗವಳೆ.. ವ್ರತಗಿತ ಮಾಡುತವಳೆ.. ವುವುನಾಚರಣೆ ಮಾಡುತವಳೆ.. ನ್ರುತ್ಯ ಸಂಗೀತಾಭ್ಯಾಸ ಮಾಡುತವಳೆ ಯಂಬ ಜವಾಬುಗಳು ವಂದರ ಹಿಂದ ವಂದರಂತೆ ಅಚ್ಚೇ ಕಡೇಲಿಂದ ಬರಲು ಜೆನ್ನಿಫರಮ್ಮ ತನ್ನ ಮ್ಯಾಲ ಪ್ರೀತಿಯಿದ್ದರ ತಾನೇ ಬರುತಾಳ ಯಂದು ನಿರ್ದರಿಸಿ ತನ್ನ ಪಾಡಿಗೆ ತಾನು ಅಪೂರ್ಣವಾಗಿದ್ದ

ಕಲಾಕ್ರುತಿಯನ್ನು ಪೂರ್ಣಗೊಳಿಸಲು ಮನಸು ಮಾಡಿದಳೆಂಬಲ್ಲಿಗೆ.....

ಅದೇ ಸದರಿ ಪಟ್ಟಣದೊಳಗೆ ಚಿನ್ನಾಸಾನಿ ತನ್ನ ತಂದೆ ಯಾರಾಗಿದ್ದಿರಬಹುದು ಯಂಬ ಪ್ರಸ್ನೇನ ಮನಸ್ಸಿಗೆ ಹಚಕೊಂಡು ಲಿಬಿಲಿಬಿ ವದ್ದಾಡುತಲಿದ್ದಳು.. ಯಿೂ ಪ್ರಸ್ನೆ ಅಷ್ಟು ಸುಲಭವಾಗಿ ಬಗೆಹರಿಯುವಂಥಾದ್ದು ಆಗಿರಲಿಲ್ಲ.. ಯೀ ವಂದು ಪ್ರಸ್ನೆಯ ಗರ್ಭದೊಳಗ ನೂರಾರು ಪ್ರಸ್ನೆಗಳು.. ವುತ್ತರಾತೀತ ಪ್ರಸ್ನೆಗಳು.. ಯಾವೊಂದು ಪ್ರಸ್ನೆಗೆ ಜವಾಬು ಯಿಲ್ಲ ಅಂದರ ಯಿಲ್ಲ, ಯಿದೆ ಅಂದರೆ ಯಿರುವುದು.. ತಾನಿಂಥದ್ದೊಂದು ಹುಟ್ಟಿಗೆ ಸಂಬಂಧಿಸಿದ ಪ್ರಸ್ನೆಯಿಂದ, ಸಮಸ್ಯೆಯಿಂದ ವಳಗೊಳಗೇ ಸಂಕಟಪಡುತ್ತಿರುವ ಸಂಗತಿ ತಾಯಿಗೆ ಗೊತ್ತುಂಟು.. ಸಾಕು ತಂದೆ ನೀಲಕಂಠಪ್ಪನೇ ತನ್ನ ನಿಜವಾದ ತಂದೆಯಂದು ಸಾದರಪಡಿಸಲು ಯಣೆಯಿಲ್ಲದ ಪ್ರಯತ್ನ ಮಾಡುತ್ತಿರುವಳು.. ತಾನು ಖಂಡಿತ ಆತನನ್ನು ಹೋಲುತ್ತಿಲ್ಲ.. ಆತನ ಮಕ್ಕಳೊಂದಿಗೂ ಹೋಲುತ್ತಿಲ್ಲ.. ಹಾಗಾದರೆ ತನ್ನ ತಂದೆ ಯಾರಾಗಿದ್ದಿರಬೌದು? ಚಹರೆಯೇ ಯಿಲ್ಲದ ಮುಖಗಳ ಪಯ್ಕಿ ಯಾವುದ್ದಿರಬೌದು ತನ್ನ ತಂದೆಯವರದು? ತನ್ನ ಮ್ಯಾಲ ಪಿತ್ರುತ್ವದ ಹಕ್ಕು ಚಲಾಯಿಸುತ್ತಿರುವವರು ವಬ್ಬರಿಗಿಂತ ಹೆಚ್ಚು ಮಂದಿ ಯಿರುವುದು ಯಾಕ?

ಹಿಂಗs ತ·ಲೆಯನ್ನು ಮೊಸರುಗಡಿಗೆ ಮಾಡಿಕೊಂಡು ಚಿನ್ನಾಸಾನಿ ಕಾಟಾಚಾರಕ್ಕೆ ನ್ರುತ್ಯ, ಸಂಗೀತಭ್ಯಾಸ ಮಾಡುತ್ತಿರುವಳು.. ತಾಳ ಲಯ ತಪ್ಪುತ ಗುರುಗಳ ಕಣ್ಣೋಟದ ನಿಂದನೆಗೆ ವಳಗಾಗುತ್ತಿರುವಳು.. ಆಗೊಮ್ಮೆ, ಯೀಗೊಮ್ಮೆ ಯೋಚನೆಗಳಿಗೆ ತೊಡರುತ್ತಿರುವ ಜೆನ್ನಿಫರಳ ನೆನಪು.. ವಬ್ಬರಿಗಿಂತ ಹೆಚ್ಚು ತಂದೆಗಳಿರುವುದು ಅದ್ರುಸ್ಟವಲ್ಲವೇನು? ಯಷ್ಟು ಸಲೀಸಲಾಗಿ ಅಂದುಬಿಟ್ಟಳಲ್ಲ ಆಕೆ.. ಆಕೆಯ ಯದೆಯ ಮ್ಯಾಲ ತಲೆಯಿಟ್ಟು ಮತ್ತೊಮ್ಮೆ ಆಳಬೇಕೆಂದೆನ್ನಿಸುತ್ತಾ ಅದೆ.. ತನ್ನ ಕಣ್ಣೀರನ ತಡಕೊಳ್ಳುವ ಶಕ್ತಿ ಆಕೆಯ ವಕ್ಷಸ್ಥಳಕ್ಕೆ ಮಾತ್ರಯಿರುವುದು, ಅಥವಾ ತಾನೇ ತನ್ನ ಯದೆಯ ಮ್ಯಾಲ ತಲೆಯಿಟ್ಟು ಗೊಳೋ ಯಂದು ಅತ್ತರೆ ಯಿನ್ನೂ ಚೆನ್ನ.. ಆದರೆ......

ತನ್ನ ಮಗಳ ಬೇಗುದಿ ತಾಯಕ್ಕ ಮೂಹಿಸದಿರಲಿಲ್ಲ.. ತಾನು ಯಾವ ಮಂಪರಿನಲ್ಲಿ ವಂಟೆ ಮ್ಯಾಲ ಬರಲಕ ಹೇಳಿದೆನೋ? ಆ ಯೀರಭೋಜನು ಯಾಕಾದರು ಬಂದನೋ? ಬಂದವನು ಸಾಂಪ್ರತು ನಾಕು ಮಾತಾಡಿ ಹೋದರಾಗುತ್ತಿರಲಿಲ್ಲವೇನು? ತನ್ನ ಮಗಳನ್ನು ತನಗೆ ತೋರಿಸು ಯಂದು

ಹಟ ಮಾಡಿದನಲ್ಲ.. ತೋರಿಸದಿದ್ದಲ್ಲಿ ಅಪಹರಣ ಮಾಡುವುದಾಗಿ ಯೇರಿಕೆ ದನಿಯಲ್ಲಿ ಬೆದರಿಕೆ ಹಾಕಿದನಲ್ಲಾ.. ಅದೂ ನಾಕಾರು ಮಂದಿ ಕೇಳಿಸಿಕೊಳ್ಳಲಿ ಯಂಬ ಲೆಕ್ಕಾಚಾರದಿಂದ.. ತಾನೇ ಮಹಾ ಗಂಡಸೆಂಬ ಅಹಂಕಾರದಿಂದ.. ಯಲಮೋ ಯೀರಭೋಜss ನೀನು ಖಂಡಿತ ನನ್ನ ಮಗಳ ತಂದೆಯಲ್ಲ.. ಆಮೂರ  ರಾಜನಲ್ಲ.. ಯೀಮೂರ ರಾಜನಲ್ಲ.. ಯಂದು ಗಟ್ಟಿಯಾಗಿ ಹೇಳಬೇಕೆಂಬ ಮನಸ್ಸಾಯಿತು ಆ ಕ್ಷಣದಲ್ಲಿ.. ಅವನಾರು ಯಂದು ಅವನು ಮರು ಸವಾಲು ಹಾಕಬೌದೆಂದು ತಾನು ತುದಿನಾಲಗೆಯನ್ನು ಕಚ್ಚಿ ಹಿಡಿದದ್ದುಂಟು.. ಆ ಕ್ಷಣ ಆ ಮುಖ ಯಾಕಾದರು ನೆಪನಾಯಿತೋ? ಯಷ್ಟು ಕೊಡಹಿದರೂ ಹೋಗುತಾಯಿಲ್ಲವಲ್ಲಾ.. ಆ ಗಡ್ಡ, ಆ ತಲೆ, ಆ ಹೊಳೆವ ಕಣ್ಣುಗಳು.. ಆ ಮಟ್ಟಸ ನಿಲುವು.. ಆ ಕಾಷಾಯಾಂಬರ.. 'ಜಯ್ ಗೋರಖನಾಥ' ಯಂದು ಅಡಿಗಡಿಗೆ ನುಡಿವ ಆ ದ್ಧೊನಿಯು.. ವಂದೇ ವಂದು ಸಣ್ಣ ಸ್ಪರುಷದಿಂದ ಪುಳಕಗೊಳಿಸಿದ, ಮಯ್ಯ ಮರೆಯಿಸಿದ ಆ ಸಾಂಗತ್ಯ.. ಛೇ.. ಛೇ....

ಹಿಂಗss ತಲೆಯನ್ನು ಮೊಸರುಗಡಿಗೆ ಮಾಡಿಕೊಂಡಿರುವ ತಾಯಕ್ಕ.. ಅನಾಕರ್ಷಕ ನಾಮವಾಚನವನ್ನು ಮಧ್ಯಂತರದೊಳಗ ತನಗ ತಾನೆ ಆರೋಪಿಸಿಕೊಂಡಿರುವಂಥ ತಾಯಕ್ಕ.. ಜಾವ ಜಾವಕ್ಕ ತನ್ನ ಕರುಳ ಕುಡಿಯನ್ನು ಅಪ್ಪಿಕೊಳ್ಳುತ್ತಿರುವ ತಾಯಕ್ಕ.. ತಲೆಯನ್ನು ನೇವರಿಸುತ್ತಿರುವ ತಾಯಕ್ಕ.. ವಳಗೊಳಗ ನಾಥ ಸಂಪ್ರದಾಯಸ್ಥೆಯಾಗಿರುವ ತಾಯಕ್ಕ.. ಯದೆಯೊಳಗಿನ ಜನುಮ ರಹಸ್ಯಯಲ್ಲಿ ಸ್ಫೋಟವಾಗವುದೋ ಯಂದು ಹೆದರುತ್ತಿರುವ ತಾಯಕ್ಕ.. ತನ್ನ ಪ್ರತಿಬಿಂಬದೆದುರು ಅಂಗಲಾಚುತ್ತಿರುವ ತಾಯಕ್ಕ.. ಕೆಲವು ದಿನಗಳ ಮಟ್ಟಿಗಾದರೂ ತಾನು ತನ್ನ ಮಗಳೊಂಡನೆ ಯಲ್ಲಿಗಾದರೂ ಹೋಗಿದ್ದು ಬರಬೇಕೆಂದು ನಿರ್ಧಾರ ಮಾಡಿದ ತಾಯಕ್ಕ.....

ಅತ್ತ ಭೂಲೋಕಕ್ಕ ಅಧಿಕವಾಗುತಲಿದ್ದ ಕುದುರೆಡವು ಪಟ್ಟಣದೊಳಗ ವಬ್ಬೊಬ್ಬರು ಅಯಿವತ್ತೊಂದು ಬಾಯಿಗಳನು ಮುಡಕೊಂಡು ಮಾತಾಡುತ್ತಿರಬೇಕಾದರ. ವಬ್ಬೊಬ್ಬರು ನೂರೊಂದು ಕಾಲುಗಳನು ಮುಡಕೊಂಡು ಅಡ್ಡಾಡುತ್ತಿರಬೇಕಾದರ.. ವಬ್ಬೊಬ್ಬರು ಸಾಯಿರ ಕಯ್ಯಿಗಳನು ಮುಡಕೊಂಡು ಕ್ರಿಯಾಕಟ್ಟಳೆ ಮಾಡುತ್ತಿರಬೇಕಾದರೆ.. ವಸ್ತಿ ಸಾನ್ನಿಧ್ಯದಲ್ಲಿ ನೂರಾರು ಮಂದಿ ಹಿರೇಕರು, ಕಿರೀಕರು, ಆಗ್ನಾವರ್ತಿಗಳು ಯೇನು

ಮಾಡುವುದಯ್ತೆ.. ಯೇನು ಬಿಡುವುದಯ್ತೆ ಯಂದು ತುದಿಗಾಲೀಲೆ ನಿಂತಿದ್ದರು.. ಬರಿ ನೆಲದ ಮ್ಯಾಲ ಅರಂಗುಲ ಕುಂಡಿ ನಾಟಿ ಮಾಡಿದ್ದರು.. ಕಯ್ಗೆ ಕಯ್ನ ಬೆಸೆದಿದ್ದರು.. ಮಯ್ಯೊಳಗಿನ ರವುಸ ಅರದಿರಲಂತ ತಮ ತಮ್ಮ ಬಾಯೊಳಗ ತೊಪ್ಪಲದುಂಡೇನ ಯಿಟುಕೊಂಡು ಯಡಕು ಬಲಕು ವುರುಳಾಡಿಸುತ, ರೆಪ್ಪೆಗೆ ರೆಪ್ಪೆ ಬಡಿಸದೆ....

ಮಾ ಬಲಿ ಅರಕೆ ಯೀಗಾದೀತು, ಆಗಾದೀತು ಅಂತ ಅವ್ವನ ನಿಜವಕ್ಕಲು ಮಂದಿ ಯೇನಿತ್ತು ಅದು ಹಂಪಜ್ಜನ ಬಾಯಿ ಕಡೇಕ ನಿಗಾಯಿಟ್ಟಿತ್ತು. ನಿಗಾಯಿಟ್ಟೂs ಯಿಟ್ಟು ಆ ಪೂರುವಿಕನ ಹುತ್ತ ಸದ್ರುಸದ ಮುಖವನ್ನು ತಮ ತಮ್ಮ ಕಣ್ಣೊಳಗ ಅಚ್ಚೊತ್ತುಕೊಂಡುಬಿಟ್ಟಿತ್ತು.. ಅದು ಆಗಬೇಕಂದರ ಅದು ಆಗಿತ್ತು.. ಯಿದು ಆಗಬೇಕೆಂದರ ಯಿದು ಆಗಿತ್ತು. ಮೂಳೂರು ಸೀಮೇಲಿಂದ ಮೂದೋರು, ಬಾಳೂರು ಸೀಮೆಕಡೇಲಿಂದ ಬಾರಿಸೋರು, ಯಲ್ಲಾರು ಬಂದು ಸದರಿ ಪಟ್ಟಣದ ಫಲಾನ ಜೆಗೇವಳಗ ಬೀಡುಬಿಟ್ಟು ತಮ ತಮ್ಮ ಕಲಾನಯಪುಣ್ಯದ ಸರದಿ ಸಲುವಾಗಿ ಕಾಯುತಲಿದ್ದರು. ಬಾನೊಳಗ ಚಂದ್ರಾಮ ದಿನದಿಂದ ದಿನಕ್ಕೆ ರುದ್ದಿ ಆಗುತಲಿದ್ದನು.. ಆತ ಬಿಳಿ ಜ್ವಾಳದ ರೊಟ್ಟಿ ಹಾಂಗ ದುಂಡಕಾಗುವ ದಿನ ದೂರಯಿಲ್ಲ.. ಅಮ್ಮಮ್ಮಾ ಅಂದರ... ಮಾ ಬಲಿಯ ಮೇಲು ಮಯ್ಯಿ ಲಕ್ಷಣ ಯೇನೆಂಬುದನು ಬಾಯಿ ಬಿಡುವುದೊಂದೇ ಬಾಕಿ.. ಅದನು ಹುಡುಕುವುದಯ್ತೆ.. ಹುಡುಕಿ ತರುವುದಯ್ತೆ.. ತಂದು ಕಟ್ಟುವುದಯ್ತೆ.. ಕಟ್ಟಿ ಸೊಕ್ಕಡಗಿಸುವುದಯ್ತೆ.. ಅಡಗಿಸಿ ಮುಂಡದಿಂದ ರುಂಡವನ್ನು ಬೇರುಪಡಿಸುವುದಯ್ತೆ.. ಯಿವೇ ಮುಂತಾದ ರಗಡ ವದಕನ ಅಯ್ತೆ.. ಮಾಬಲಿಯು ನೆತ್ತರು ಯೀ ನೆಲದ ಮ್ಯಾಲ ಬಿದ್ದು ಯೇಸು ಸತಮಾನಗಳಾದವೋ? ಅದು ವಬ್ಬರಿಗೂ ನಿಖರವಾಗಿ ನೆಪ್ಪಿಲ್ಲ.. ಮಾಬಲಿ ಅರುದಾತೂss ಅವ್ವನ ವಕ್ಕಲು ಮಂದಿ ಹಿಂಗಾಲು ಮುಂಗಾಲು ಕಸುವೆಲ್ಲ ಆವಿ ಆಗಯ್ತೆ.. ರೋಗ ರುಜಿಣ ಕಾಡುತಾವ.. ಸಂತಾನ ಛೀಣಿಸಯ್ತೆ.. ಕುಂಪಣಿ ಸರಕಾರ ದತ್ತ ಮಂಡಲದ ಮೂಗುದಾಣ ಹಿಡಕೊಂಡ ಮ್ಯಾಲ ಯಾವ ಮೂರೊಳಗ ಮಾಬಲಿ ಬಿದ್ದುದುಂಟಾ. ಥಾಮಸು ಮನ್ರೋ ಸಾಹೇಬ ಬಂದ ಮ್ಯಾಲ ಆಳೋರ ಕಯ್ಯೊಳಗಿನ ಬಡಿಗೇನ ಕಸಗೊಂಡ ಮ್ಯಾಲ ದಂಡು ದವಲತ್ತು ವುಪುಸಮ್ಹರಿಸಿಕೊಂಡ ಮ್ಯಾಲ, ಸಿಮ್ಮಾಸನಗಳನ್ನೆತ್ತಿ ಬೊಕಬಾರಲು ಮಲಗಿಸಿದ ಮ್ಯಾಲ ವಂದಾರ ದಯವತಾ ಕಾರ್ಯೇವು ನಡದಯ್ತಾ? ಕೂಲಿನಾಲಿಗೆ

ಸೋಪ್ತಿ ಆಗಿರೋ ಕಟುಗರ ಬಗ್ಗೆ ಆಳೋ ಅರಸರಿಗೆ ವಂಚೂರಾರ ಕರುಣೆವುಂಟಾ? ಪಟ್ಲಿಗಳ ಕುತ್ತಿಗಿಗೆ ಬಾಯನ್ನ ಹಚ್ಚಿ ಹಸಿರಗುತ ಕುಡಿಯೋ ಪೋತರಾಜರು ಅಂಡಾವರನ ಪುಂಡೀಪಲ್ಯೆ ಆಗ್ಯಾರಲ್ಲಾ.. ಅವರ ಬಗೆಗೇನಾರ ಪಟ್ಟಣ ಸೋಮಿಗಳಿಗೆ ಕನುಕರವುಂಟಾ? ಖಂಡಖಂಡುಗ ಬೆಳಿಯೋ ಭೂಮ್ತಾಯಿ ಅರವೆ, ಯರಡರವೆಗೆ ಸೋಪ್ತಿ ಆಗವಳಲ್ಲಾ, ಆಕೆ ಬಗೆಗೇನಾರ ಸರಕಾರಕ್ಕೆ ದರಕಾರವುಂಟಾ? ಧೋ ಅಂತ ಮಳಿ ಸುರಿದಿರುವುದುಂಟಾ? ಹೊಳೆ ಹಳ್ಳಗಳು ಅರಚಿರುವುದುಂಟಾ?

'ತಾಯೀ.. ಸಾಂಬವೀ.. ಹಂಪಜ್ಜನ ಬಾಯೊಳಗ ನಾಕಾರು ಸಬುದಗಳ ರೂಪ ಧರಿಸಿ ವಡ ಮೂಡು ಜಗದಂಬೆ' ಅವ್ವನ ವಕ್ಕಲು ಮಂದಿ ಜಾವ ಜಾವಕ್ಕ ಬಾಯಿ ತೆರೆಯೋದು, ಮುಚ್ಚೋದು ಮಾಡುತಲಿದ್ದರು....

ಅಲ್ಲೇ ಯಿನ್ನೊಂದು ಸೊಲುಪ ದೂರದ ಫಾಸಲೆಯಲ್ಲಿ ದೇವಿ ಪುರಾಣವನ್ನು ವುಸುರಾಡುತ ಬೆಳೆದಂಥವನಾದ ದಾಸರಯ್ಯನು ತನ್ನತ್ತ ಕಿವಿ ಚಾಚಿದ್ದ ಮಂದಿಯನ್ನುದ್ದೇಶಿಸಿ 'ಸತ್ಯಯುಗದಲ್ಲಿ ಗವುರಿಯ ಅದೇ ಯಿನ್ನು ಚಂಡನನ್ನು ಚೆಂಡಾಡಿ ಚಂಡಿಯಂಬ, ಮುಂಡನನ್ನು ಚೆಂಡಾಡಿ ಚಾಮುಂಡಿ ಯಂಬಭಿದಾನವ ಧಾರಣ ಮಾಡಿದ್ದಳು.. ಆಗ ಶಾಕಿನಿ ಡಾಕಿಣಿಯರು, ಸುಂಬ ನಿಸುಂಬರ ಬಾಡೂಟದ ಸಲುವಾಗಿ ಆಕೆಯನ್ನು ಬೆಂಬಲಿಸಿದ್ದರು.. ಅವರನ್ನು ಸವ್ಮಾರ ಮಾಡಿ ಸಾಂಬವಿ ಯಂಬಭಿದಾನ ಮುಡುದು ಲೋಕ ಯಿಖ್ಯಾತಳಾಗು ತಾಯೇ ಯಂದವರು ಪರಿಪರಿಯಿಂದ ಕಾಡತೊಡಗಿದರು.. ಸುಂಬನ ಸೇನಾಧಿಪತಿ ರಕುತಬೀಜಾಸುರನನ್ನು ಸಮ್ಮರಿಸಲೋಸುಗ ತಾಯಿಯು ಪತಿಪರಮೇಸುರನ ಅಪ್ಪಣೆಯಂತೆ ಮಾಂಕಾಳಿಯ ರೂಪ ತಾಳಿದವಳಾಗಿ, ಅಖಂಡ ಹಲಗೆ, ಮಾರಾಂಕ ಖಡುಗ ಧರಿಸಿದವಳಾಗಿ, ತ್ರಿಸೂಲ, ಸಂಖು, ಡಮುರುಗಗಳನ್ನು ಧಾರಣ ಮಾಡಿದವಳಾಗಿ, ಬಿಚ್ಚುಗತ್ತಿ, ಬಿದಿರಗತ್ತಿ, ಚಂದ್ರಬಾಣ, ಸೂರ್ಯಬಾಣ, ಅಗ್ನಿಬಾಣ, ಕಠಾರಿss ಯಿವೇ ಮೊದಲಾದss.. ಯಂದು ಪ್ರವಚನ ಮಾಡುತ್ತಿರುವುದ ರೊಳಗss....

ಮಂದಿ ವಸ್ತಿ ಸನೀಕಕ ಹೋಗುವುದು, ಬರುವುದು ಮಾಡುತಲಿತ್ತು, ಮಾಬಲಿಯ ಕಣಸು ಕಾಂಬುತಲಿತ್ತು. ತಮ ತಮ್ಮ ಸರೀರದಂಗಾಂಗಗಳನು ಮುಟು ಮುಟ್ಟಿ ನೋಡಿಕೊಳ್ಳುತಲಿತ್ತು.. ಮನದಾಗ ವಟವಟ ಅಂದನಕಂತಲೇಯಿತ್ತು.. ಸದರಿ ಪಟ್ಟಣದೊಳಗ ಮಾಬಲಿ ಯಾರದ್ದಾಗಿರಬೌದು?

ಅವರದ್ದಾಗಿರಬೌದಾ? ಯಿವರದ್ದಾಗಿರಬೌದಾ? ಯಂದು ಪ್ರತಿಯೊಬ್ಬರ ಪ್ರತಿಯೊಂದು ಜಂತನ್ನು ಕಣ್ಣ ಮುಂದೆ ತಂದುಕೊಂಡು ತೂಕನ ನೋಡುತಲಿತ್ತು....

ಜಡೆಪ್ಪತಾತನಲ್ಲದೆ ಕಾಡುಗೊಲ್ಲರೀರಯ್ಯ, ಕರುಬಸಪ್ಪ, ಮರುಬಾಲಪ್ಪರೇ ಮೊದಲಾದ ಪಟ್ಟಣಸೋಮಿ ದಯವಸ್ಥರ ನಡುವೆ ದೇದಿಪ್ಯಮಾನವಾಗಿ ಹೊಳೆಯುತಲಿದ್ದ ಹಂಪಜ್ಜನು ಸುಮ್ಮಕ ಕುಂತಿರಲಿಲ್ಲ.. ವಸ್ತಿಯು ಜಾವ ಜಾವಕ ಯೇಳುವುದು, ಕುಂಡುರುವುದು, ಆಕಳಿಸುವುದು, ಚಪಚಪನೆ ಬಾಯಿ ಚಪ್ಪರಿಸುವುದು ಮಾಡುತಲಿತ್ತು.. ಪೂರುವಿಕನು ನೋಡೀ ನೋಡೀ.. ಸಾಕಾಗಿ "ಯ್ಯೋನವ್ವಾ ನಿಂದು ಬಲು ಆತು.. ಚಾವತ್ತು ಸುಮ್ಮಕ ಕೂಕಳ್ಳಲಕ ಯೇನು ತಗಮ್ತಿ" ಯಂದು ಚಿಕ ಮಗೀನ ಗದರಿದಂಗ ಗದರುತ್ತಿದ್ದನು....

ಅಷ್ಟರೊಳಗ ಶಂಖಾರಾವ ಕೇಳಿ ಬಂತು.. ವಸ್ತಿ ಕಡೇಲಿಂದ. ಯಲ್ಲರೂ ಅಚ್ಚೇಕಡೇಕ ಹೊಳ್ಳಿದರು. "ಸಾಂಬವಿ ಬಯಸಿದ ಮಾಬಲಿಯ ಮೇಲುಮಯ್ಯ ಲಕ್ಷಣಗಳು ಯೇನೇನಪಾಂದರ.. ಕೋಡುಗಳು ತದಿಗೆ ಚಂದ್ರಾಮನನ್ನು ಹೋಲುತಿರಬೇಕು. ಭ್ರೂಮಧ್ಯೆ ಅಂಗಯ್ಯಗಲದೋಟು ಬೆಳದಿಂಗಳಿರಬೇಕು.. ನಾಕೂ ಕಾಲುಗಳ ಮೊಣಕಾಲ ಚಿಪ್ಪಿನ ಮ್ಯಾಲ ನೊರೆವಾಲ ಕೆನೆಯಂಥ ಪಯಿತ್ರಕಲೆಗಳಿರಬೇಕು.. ಮುಯ್ಯೆಂಬುವ ಮಯ್ಯಿಯು ಬಣ್ಣ ಕತ್ತಾಲೆ ಕಾವಳದಂಗಿರಬೇಕು.. ಅದರ ಯರಡೂ ಕಣ್ಣುಗಳು ಸಾವುರ ದೀವಟಿಗೆಗಳಿಗೆ ಸರಿಸಮಯಿರಬೇಕು.. ಅದರ ಮೂಗಿನ ಹೊಳ್ಳೆಗಳಲ್ಲಿ ಬಿರುಗಾಳಿ ಸುಂಟರಗಾಳಿಗಳು ನೆಲಗೊಂಡಿರಬೇಕು.. ಅದರ ವಂದೊಂದು ರುಷಣವು ರುಬ್ಬೋ ಗುಂಡಿಗೆ ಸರಿಸಮನಿರಬೇಕು, ಅದರ ಸಿಸ್ನ ಮೊಳವರೆಯಿರಬೇಕು.. ಅದರ ಮಯ್ಯೊಳಗ ವಂದು ಕೊಪ್ಪರಿಗೆ ಮಾವುಸ, ವಂದು ಕೊಳಗ ರಗುತ ಯಿರಲಕಬೇಕು.. ಯಿಡೀ ವಂದು ಸಮ್ಮತ್ಸರ ವುರಿಯುವಷ್ಟು ನೆಣ ಅದರ ಬೆನ್ನೆಲುವಲ್ಲಿರಲಕs ಬೇಕು.. ಯಿಂಥಪ್ಪಾ ಮಾ ಬಲಿಯನ್ನು ತಾಯಿ ಬಗುಸವಳೆ.."

ಸಿವನ್ನಾಮ ಪಾರೋತಿ ಪತಿ ಹರಹರ ಮಾದೇವ..

ಜೀಮೂತ ಮತ್ತವನ ಸಂಗಡಿಗರು ಹುರುಪಿನಿಂದ ತಮಟೆಗಳ ಮ್ರುದುದೊಗಲ ಮ್ಯಾಲ

ಕೋಲುರುಳಿಸಲಾರಂಭಿಸಿದರು. ಕವಳೆವ್ವ ಮತ್ತಾಕೆಯ ಸಂಗಡಗಿತ್ತಿಯರು "ಯವ್ವಾ ನಿನ್ನ ಕರುಳ ಬಳ್ಳಿ ಜಗದಲ ಹಬ್ಬಯ್ತೆ.. ಮುಗಿಲುದ್ದ ತುಂಬಯ್ತೆ..

“ಯಂದು ತಮ ತಮ್ಮ ಬಗಲ ಚವುಡಿಕೆಗಳನ್ನು ಮೀಟುತ್ತ ಯದೆ ತುಂಬಿ ಹಾಡತೊಡಗಿದರು.. ಸೊಲ್ಲು ಹೊಳೆಯೋಪಾದಿಯಲ್ಲಿ ಪಟ್ಟಣದ ಹಾದಿ ಬೀದಿಗಳಲ್ಲಿ ಅಷ್ಟೆ ಯಾಕೆ....

ಮಾಬಲಿಯ ಯಿಂಥಪ್ಪ ಲಕ್ಷಣಗಳನ್ನು ತಮ ತಮ್ಮ ಕಿವಿಗಳಲ್ಲಿ ತುಂಬಿಕೊಂಡು ಕಿವಿಯಿಂದ ಕಿವಿಗೆ ವರ್ಣಾವಣೆ ಮಾಡುತ, ಮಾಡಿಸೂತ ಹಿರೀಕ ಮಂದಿಯು ಯಡಗಯ್ಲಿ ದೋತರದ ಚುಂಗನ್ನು, ಬಲಗಯ್ಲಿ ಅನುವಾದ ಕೋಲನ್ನು ಹಿಡಕೊಂಡು ಮಾಬಲೀನ ಬೆದಕಲಕ ಬಯಲ್ದೇರಿದರು. ಮೋಣಿಯಿಂದ ಮೋಣಿಗೆ, ಮನೆಯಿಂದ ಮನೆಗೆ, ಧಂಧಕ್ಕಿಯಿಂದ ಧಂಧಕ್ಕಿಗೆ ಅಲದಾಡತೊಡಗಿದರು.. ಯಿನಾಮಿನ ಆಸೆ ತೋರಿಸಿ ಅವರಿವರನ್ನು ಯಿಚಾರಿಸಿದರು.. ಟಾಮು ಟಾಮು ಹಾಕಿಸಿದರು. ಮೋಕ್ಷದಾಮಿಷ ವಡ್ಡಿದರು....

ಹಿರೀಕ ಮಂದಿಗಿಂತ ಅಗದೀ ಕಾರ್ರ್ಯೋನ್ಮುಖರಾಗಿದ್ದವರೆಂದರ ಅವ್ವನ ಖಾಸಾ ವಕ್ಕಲು ಮಕ್ಕಳಾದ ಥೆಳಗೇರಿ ಮಂದಿಯು, ಬಿಟ್ಟ ಬಾಣಗಳಂತೆ ವಂದೇ ಸಮಕ ಹುಡುಕಾಡುತ ಸುಳಿದಾಡಿದರು. ಸುಳಿದಾಡುವ ತಿಕ್ಕಲು ಪರಿಣಾಮವಾಗಿ ಅವನಿಗಿವನು, ಯಿವನಿಗವನು ಅಂಥಪ್ಪ ಮಾಬಲಿಯು ರೂಪದಲ್ಲಿ ಗೋಚರವಾಗತೊಡಗಿದರೆಂಬಲ್ಲಿಗೆ....

ಹೀಗಿರುತ್ತಿರಲಾಗಿ ತೆಗ್ಗಿನಮನಿ ದಿಬ್ಬಯ್ಯನ ಮಗನಾದ ಯಿರಯ್ಯನು ಅವ್ವ ಹೊಳೆಗೆ ಹೊಂಡುವ ನಿಮಿತ್ತ ಅಕ್ಕ ತಂಗೇರನ್ನು ಕರೆತರಲೋಸುಗ ತುಪಾಕನಳ್ಳಿ ದಿಕ್ಕಿಗುಂಟ ಬಿದ್ದಿದ್ದ ಕಾಲು ಜಾಡುಗುಂಟ ಹೆಜ್ಜೆ ಹಾಕುತ್ತಿದ್ದವನು.. ಹುಲುಲಿ ಹಳ್ಳ ದಾಟುತಲಿದ್ದ ಸಂದರ್ಭದಲ್ಲಿ ವಯ್ಕ ವಯ್ಕ ಯಂಬ ರಾಗಾಲಾಪನೆ ಕೇಳಿ ಬರಲು ಗಕ್ಕನೆ ನಿಂತು ಕತ್ತು ಹೊರಳಿಸಲು ಗುಡುದಪ್ಪನ ಮಣಕಕ್ಕೆ ಗರ್ಭದಾನ ಮಾಡುವ ನಿಮಿತ್ತ ಧ್ಯಾನಮಗ್ನವಾಗಿದ್ದ ಮಹಿಷವೊಂದು ಛಟೀರನೆ ಕಣ್ಣಿಗೆ ಬಿತ್ತು.. ಅದರ ನೊಸಲ ಮ್ಯಾಲ ಯಿದ್ದ ಚಂದ್ರಾಮ ಲಕಲಕನೆ ಹೊಳೆದನು.. ವಂದೊಂದಾಗಿ ಲಕ್ಷಣಗಳನ್ನು ನೋಡಿ ಕುಪ್ಪೆ ಹಾಕಿದನು. ಅದೇ ಯಿದು.. ಯಿದೇ ಅದು.. ಯಿನ್ನು ತನ್ನ ಮತ್ತು ತಮ್ಮ ಪಟ್ಟಣದ ಅದ್ರುಸ್ಟ ಕುಲಾಯಿಸಿತು.. ತಾನು ಯಿನಾಮು ಪಡೆವುದಾದಲ್ಲಿ ಮೋಕ್ಷ ಪ್ರಾಪ್ತಿಯನ್ನೇ ಬೇಡಬೇಕು...

ಪಟ್ಟಣವನ್ನು ಸೇರಿಕೊಂಡೊಡನೆ ಹಿರೀಕರನ್ನು ಕಂಡು ಫಲಾನ ಹಿಂಗಿಂಗೇ ಅಂತ ಹೇಳಿದನು.. ಅದೇ ಗುಂಗಿನಲ್ಲಿದ್ದ ಅವರು ಜಯನ್ನಾಮ

ಪಾರೊತಿ ಪತಿ ಹರ ಹರ ಮಾದೇವ ಅಂದಕಂತ ಹಿರಿಹಿರಿ ಹಿಗ್ಗಿದರು. ಫಲಾನ ಜೆಗೇವು ತಲುಪಿದರು.. ಜಾಗ ಕದಲಿರದ ಮಹಿಷವು ಗವುರವ ಪೂರುವಕವಾಗಿ ಅವರನ್ನು ಸ್ವಾಗತಿಸಿತು. ತನ್ನ ಪವುರಾಣಿಕ ಕಾಲದ ದಿವ್ಯ ಸರೀರದ ಮ್ಯಾಲಣ ಕೂನ ಗುರುತುಗಳನ್ನು ತೋರಿಸಿಕೊಟ್ಟಿತು.. ಅದರಿಂದ ಸಂತುಷ್ಟರಾದ ಹಿರೀಕರು “ಯಿರಯ್ಯ್ಯss ನಸುವರವಾದ ಅಯ್ದು ಕೂರಿಗಿ ಹೊಲ ಬ್ಯಾಡಂಬುತಿ.. ಚಪಲವಾದ ಬೆಳ್ಳಿ ರೂಪಾಯಿಗಳನು ಬ್ಯಾಡಂಬುತಿ.. ಸಾಸುವತವಾದ ಮೋಕ್ಷ ಪದವಿ ಬೇಕೆಂಬುತೀ.. ಆಯ್ತು.. ಮೋಕ್ಷ ಪ್ರಾಪ್ತಿರಸ್ತು” ಯಂದಾಸಿರುವಾದ ಮಾಡಿದರು. ಹಂಪಜ್ಜನಿಗೆ ಅರಿಕೆ ಮಾಡಿಕೊಳ್ಳುವ ನಿಮಿತ್ತ ಪಟ್ಟಣದ ಕಡೇಕ....

ಅವರು ಆನಂದತುಂದಿಲರಾಗಿ ಪಟ್ಟಣವನ್ನು ಪ್ರವೇಸ ಮಾಡಿದ ಹೊತ್ತಿನಲ್ಲಿ ದಳವಾಯಿ ಬಾಗಿಲ ಮುಂದುಗಡೆ ಮುಳ್ಳಿನ ಪೀಠದ ಮ್ಯಾಲ ನಿಟಾರನೆ ನಿಂತಿದ್ದ ಕಾಲಗ್ನಾನಯ್ಯನು....

“.....ಆದಿ, ಅನಾದಿ, ಅನಂತ, ಅರ್ಬುದ, ತಮಂಧ, ತಂಡಜ, ವಾರಿಜ, ಭಿನ್ನಯುಕ್ತ, ಆಯುಕ್ತ ಮನಿರಣ, ಮಾನ್ಯರಣ, ಯಿಸುವಾವಸು, ಅಲಂಕ್ರುತ, ತ್ರೇತಾ, ದ್ವಾಪರ, ಕಲಿ.. ಕಲಿಯುಗದಲ್ಲಿ ಮೂಳೆಮೋಬಯ್ಯನೇ ನಿಜಭಕುತ ಕೇಳಿರಯ್ಯಾ.. ಸಾಂಬವಿಮೋರ್ವಳೇ ನಿಜದೇವತೆ ಕೇಳಿರಯ್ಯಾ.. ಯಿವರೀರ್ವರಲ್ಲಿ ಭಿನ್ನ ಬೇದವ ಮಾಡಬ್ಯಾಡಿರಯ್ಯಾ, ತಾಯ ಮಯ್ಮೆಯ ಪ್ರಾಬಲ್ಯವುಂಟು ಮಾಡಲಕೆಂದೇ ಮೋಬಯ್ಯನ ಜನನವಾಯಿತ್ತು ಕೇಳಿರಯ್ಯಾ.. ಆಕೆ ಪ್ರವೇಶ ಮಾಡಿದ್ದು ರಾಕ್ಷಸನಾಮ ಸಮುವತ್ಸರ ಪಾಲ್ಗುಣ ಸುಕ್ಲ ಹನ್ನೆರಡು ಮಂಗಳವಾರ ಯಿಪ್ಪತ್ತೆಂಟನೇ ಗಳಿಗೆಯಲ್ಲಿ ಕೇಳಿರಯ್ಯಾ.. ಯೀ ಹುಣ್ಣಿಮಿ ವಳಗಾಗಿ ಆದಿಸಗುತೀನ್ನ ಹೊಳೆಗೊಂಡಿಸದಿದ್ದಲ್ಲಿ ಆಗುವ ಅನಾಹುತವ ಕೇಳಿರಯ್ಯಾ.. ಬಂದವ್ವನ ಸರೀರದಿಂದ ಅಂದ ಅಳೀತದೆ ಕೇಳಿರಣ್ಣಾ.. ಹೆಂಗಸರ ಮುಖದ ಮ್ಯಾಲ ಗಡ್ಡಮೀಸೆ ಮೂಡುತಾವ ಕೇಳಿರಣ್ಣಾ.. ಗಂಡಸರು ಬಸುರಾಗುತಾರ ಕೇಳಿರಣ್ಣಾ... ಅವರು ಮೀಸೆವುಳ್ಳ ಕೂಸುಗಳನು ಹಡಿತಾರ ಕೇಳಿರಣ್ಣಾ.. ಮಳಿಗಾಲ ಅಡಗ್ಯಾವು, ಬೆಳೆಗಳು ವುಡುಗ್ಯಾವು ಮರೆಯದಿರಣ್ಣಾ.. ಕುದುರೆಡವು ಮಂದಿ ಅನ್ನವss ಕಾಣಾದೆ ಮನಿಮನಿಯ ತಿರುಗ್ಯಾರು ಕೇಳಿರಣ್ಣಾ.. ಆಕಾಸ ಅದುರೀತು.. ಭೂಮ್ತಾಯಿ ನಡುಗ್ಯಾಳು ಕೇಳಿರಣ್ಣಾ. ಕುಹಕಾರರ ಬಂದ ಕಡೆ ಮಾಟವಾದೀತು ನೋಡಿರಣ್ಣಾ.. ಲೋಕಕ್ಕೆ ಮೀರಿದ ಜ್ಯೋರ್‍ಯಾರು ಬರುತಾರ ನೋಡಿರಣ್ಣಾ.. ಮಾರಾಟ ನಡೆಯೂದು ಹೋರಾಟವಾದೀತು ಕೇಳಿರಣ್ಣಾ.. ಯಚ್ಚಾರ

ಸ್ತ್ರೀಯಾರು ಮೆಚ್ಚುಗಳ ಮಾಡುತಾರ ನೋಡಿರಣ್ಣಾ.. ಲೋಕಾವು ಹೆಚ್ಚೀತು ಹೆಚ್ಚಾಗಿವುದು......"

ತರಗೆಲೆಗಳುರುಳಿದಂತೆ ನಡೆಯುತಲಿದ್ದ ಹಿರೀಕರಿಗೆ ಅದನ್ನೆಲ್ಲ ಕೇಳುವ, ಕೇಳಿ ಅರ್ಥ ಬಗೆಯುವ ಯವಧಾನ ಯಿರಲಿಲ್ಲ.. ವಂದೆರಡು ಮಾತುಗಳನು ಕಿವಿಂಯೊಳಗ ಯಿಟ್ಟುಕೊಳ್ಳಬೇಕಂದರ ವಾದ್ಯಗಳ ರಬುಸ ಬ್ಯಾರೆ.. ಪಂಚೇಂದ್ರಿಯಂಗಳಿಗೆ ಅಟೆಯುತಲಿದ್ದ ಮೊರುಗಳು ವಂದೇ ಯರಡೇ.. ಸಿವ.. ಸಿವಾ.. ಗವುಜುಗ ಅಂದರ ಗವುಜುಗ.. ಖಾಂಡವವನ ಧಗಧಗಾಂತ ವುರಿದಾಗ ಯಾವ ಪ್ರಕಾರವಾಗಿ ಸರುಪಗಳು ನಡೆದವೋ, ಅದೇ ರೀತಿವಳಗ.... ಅವರು ನಡದು ಗಮ್ಯ ತಲುಪಿ ನಮಸ್ಕಾರ ಮಾಡಿ ಹಿಂಗಿಂಗೇ ಅಂತ ಅರಕೆ ಮಾಡಿಕೊಳ್ಳಲು ಹಂಪಜ್ಜನು "ಹ್ವೋ.. ಹ್ವೋ.. ಹಂಗಾ" ಯಂದು ವುದ್ಗಾರ ತೆಗೆದನು.

ಆ ಮಹಿಷದ ಮಾಲಕಳು ಯಾರು ಯಂಬ ಪತ್ತೆ ಕಾರ್ಯೇವು ನಡದೂ ನಡದೂss ಸದರಿ ಪಯಿತ್ರಆಸ್ತಿಯು ಧರುಮಪತ್ನಿಯಾದ ಜಗಲೂರೆವ್ವ ಯಂಬುದಾಗಿ ತೇಲಿ ಬಂತು.. ಯೀಳ್ನೆಸಮಾಚಾರ ಮಾಡಿ ವಪ್ಪಿಸಲೋಸುಗ ಗೊಂಜಾಡಲರಡವಯ್ಯನ ನೇತ್ರುತ್ವದಲ್ಲಿ ದಿಬ್ಬಣ ಥೆಳಗೇರಿಗೆ ಹೊಂಟಿತು.. ಹತ್ತು ಮನೆಗೊಬ್ಬಬ್ಬರಂತೆ ಮುತ್ತಯ್ದೇರು ಕಳಸಗಿತ್ತಿಯರಾಗಿ ಅದನ್ನು ಸೇರಿಕೊಂಡರು.. ಜಗಲೂರೆವ್ವನೂ, ಆಕೆಯ ಕೋಣಮೂಚಿರಾಯುವಾಗಲಿ ಯಂಬ ಅರ್ಥದ ಜಯಕಾರ ಗಳಿಂದ ದಿಬ್ಬಣ ನಳನಳಿಸಿತು....

ದಿಬ್ಬಣ ಥೆಳಗೇರಿಯನ್ನು ಪ್ರವೇಸ ಮಾಡಿದ ಸಮಯಕ್ಕೆ ಸರಿಯಾಗಿ ಯೇಕ ಪ್ರಕಾರವಾಗಿ ತಲೆ ಅಲ್ಲಾಡಿಸುತ್ತ ಜಗಲೂರೆವ್ವ ಕಾಯಿಸುತ್ತಿದ್ದ ಅಂಬಳಿಯ ಸುವಾಸಣೆಯನ್ನು ಘ್ರಾಣ ಮಾಡುತಲಿದ್ದ ಬೇಯಿನಮರಮೂ.. ಅದರ ಕೊಂಬೆರೆಂಬೆಗೆ ತೊಟ್ಟೀಲು.. ಗೂಡು ಕಟ್ಟಿಕೊಂಡು ಸಮುಸಾರ ನಡೆಸಿದ್ದ ತರಾವರಿ ಪಕ್ಷಿಗಳೂ ವಂದು ಛಣ ಮೂಕಯಿಸುಮಿತಗೊಳ್ಳದೆ ಯಿರಲಿಲ್ಲ.. ಭೂತಬಿಲ್ಲೆ ದ್ಯಾಮಯ್ಯ ಮತ್ತವನ ಪರಿವಾರ ಬಲು ಚೋಜಿಗದಿಂದ ನೋಡು ನೋಡುತ್ತಿರುವಾಗ್ಗೆ....

ಸಿವನ್ನಾಮ.. ಜಯನ್ನಾಮ...

ಯೀಳ್ಳೆ ಚಾಜವನ್ನು ಯಿಳುವಿದ್ದೆಲ್ಲಿ? ಮಂಡೆಮೂರಿದ್ದೆಲ್ಲಿ? ಕಯ್ನು ಕಟ್ಟಿದ್ದೆಲ್ಲಿ? ಸೊಂಟ ಬಗ್ಗಿಸಿದ್ದೆಲ್ಲಿ? ನಾಲಗೆಗೆ ನಯನಾಜೂಕು ಕಲಿಸಿದ್ದೆಲ್ಲಿ? ಸ್ತ್ರೀ ಸಂಕುಲವನ್ನು

ಕೊಂಡಾಡಿದ್ದಲ್ಲಿ ಅಂದರ ಜಗ್ಲೂರೆವ್ವನೆದುರು.. ಅದಕಾಕೆ ವಂದು ಯೇರಿಕೆ ಆಗಲಿಲ್ಲ.. ವಂದು ಯಿಳಿಕೆ ಆಗಲಿಲ್ಲ.. ಯದಕ ಬಂದಿರಿ ತಂದೆಗೋಳಾ ಅಂದಳು. ಅವರು ಯಿರೋ ಸಮಾಚಾರ ಹೇಳುತ್ತ ವುಗುಳು ನುಂಗಿದರು.. ಮೋಕ್ಷ ಪ್ರಾಪ್ತಿಯ ಅಮಿಷ ವಡ್ಡಿದ್ದಕ್ಕೆ ಆಕೆ "ಮೋಕ್ಷ ಗೀಕ್ಷಾ ಯಲ್ಲಾವು ನಿಮ್ಮ ಮನಿ ಬಚ್ಚಲಾಗಿರಲಪ್ಪಾ.. ಸೂರ ಬಲ.. ನೀವು ಬಲ" ಅಂದುಬಿಟ್ಟಳು. ಹೆಚ್ಚಿಗೆ ಮಾತು ಬೆಳಿಸುವ ಗೋಜಿಗೆ ಹೋಗಲಿಲ್ಲ.. ಯೀಯಮ್ಮಗೂ ಬುದ್ಧಿ ಬಂದಂಗಯ್ತೆ ಯಂದುಕೊಂಡ ಅವರು ಅಲ್ಲಿಂದ....

ಮಾಬಲಿಯ ಸದರಿ ಪಟ್ಟಣದೊಳಗ ಹುಟ್ಟಿದುದು ಅಲ್ಲವೇ ಅಲ್ಲ.. ಅದು ಆಕೆಯ ತವರೂರಿಂದು.. ಪಯಿಲುವಾನ ಅಂತಾಡೆಪ್ಪನು ತನ್ನ ಮಗಳಿಗೆ ಮುಫತ್ತಾಗಿ ನೀಡಿರುವಂಥಾದ್ದು.. ಆದ್ದರಿಂದ ಅದನ್ನಾಗಲೀ.. ಆಕೆಯನ್ನಾಗಲೀ ಜಬರದುಸ್ತು ಮಾಡುವಂತಿಲ್ಲ.. ದೇವರು ದೊಡ್ಡವನು.. ಆಕೆ ಸಡನ್ನ ವಪ್ಪಿಕೊಂಡಳು. ವಾದಕ್ಕೆ ಯಿಳಿಯಲಿಲ್ಲ. ದಯವವನ್ನು ಧಿಕ್ಕರಿಸಿ ಮಾತಾಡಲಿಲ್ಲ.. ವಪ್ಪದಿದ್ದಲ್ಲಿ ತಾವೇನು ಮಾಡಬೇಕಾಗಿ ಬರುತ್ತಿತ್ತೋ..? ಯಿನ್ನು ದಯವಸ್ತರಾದ ತಾವು ಸೂರನನ್ನು ವಪ್ಪಿಸುವುದು ಬಾಕಿ ಯಿರುವುದು....

ಸೂರ ಯಂಬ ಯರಡಕ್ಕರದ ಸಬುಧವನ್ನು ಪ್ರತಿಯೊಬ್ಬರು ತಮ ತಮ್ಮ ನಾಲಗೆಗಳ ಮ್ಯಾಲ ಕೆತ್ತಿಸಿಕೊಂಡರು ಯಂಬಲ್ಲಿಗೆ ಸಿವಸಂಕರ ಮಾದೇವ.....

* * * *

ಗುಂತಕಲ್ಲು ಪಟ್ಟಣದೊಳಗ ಖುದ್ದ ಮುನುಸೋಬಯ್ಯನೇ ನೂರಾರು ಮಂದಿಯ ನೇತ್ರುತ್ವ ವಹಿಸಿ ಕುಂಪಣಿ ಸರಕಾರದ ಮಾಯಾವಿ ಕ್ರುತ್ಯದ ಯಿರುದ್ಧ ಬಲಾಢ್ಯ ಮೆರವಣಿಗೆಯನ್ನು ತೆಗೆದನು. "ಮನ್ರೋ ಸಾಹೇಬನೇ ಯಿದು ನಿನ್ನ ಘನತೆಗೆ ತಕ್ಕುದ್ದಲ್ಲ" ಯಂದು ಬಹಿರಂಗ ಭಾಷಣ ಮಾಡಿದನು. ಸೊಂತ ಬಾಯಾರs ಬೊಬ್ಬಿಲಿ ನಾಗಿರೆಡ್ಡಿಗೆ ಜಯಕಾರ ಹಾಕುತ್ತ.. ಕುಂಪಣಿ ಸರಕಾರಕ ದಿಕ್ಕಾರ ಹಾಕುತ.. ಸದರಿ ಪಟ್ಟಣ ಪ್ರಾಂತದ ಆಡಳಿತಾಧಿಕಾರಿಯಾದ ಕೋವನನ್ನು ಭೆಟ್ಟಿಯಾಗಿ ನಾಗಿರೆಡ್ಡಿಯನ್ನು ಗವುರವಪೂರುವಕವಾಗಿ ಸರಕಾರ ಬಿಡುಗಡೆ ಮಾಡಬೇಕೆಂದೂ.. ನೊಂದಿರುವ ಪ್ರಜೆಗಳ ಕ್ಷಮಾಪಣೆ ಕೇಳಬೇಕೆಂದೂ.. ಮನವಿ ಸಲ್ಲಿಸಿದನು. ಅದಕಿದ್ದು ಕೋವನು "ಬ್ರಿಟಿಷವರಾಗಿ ಮತ್ತು ಸರಕಾರದ ಪಗಾರ ತಿಂದವರಾಗಿ ನೀವೇ...." ಯಂದು ಮುಂತಾಗಿ ಕೇಳಿದ್ದಕ್ಕೆ.. ಅವರೀರ್ವರ ನಡುವೆ

ಸವಾಲು ಪಾಟಿಸವಾಲು ನಡೆಯಿತು. ಮುನುಸೋಬಯ್ಯನು ಜಗ್ಗಲಿಲ್ಲ, ಬಗ್ಗಲಿಲ್ಲ.. ಅಸಂಪೂರ್ಣವಾಗಿ ಮಿಷನರಿ ಭವನವನ್ನೇ ಸೆರೆಮನೆಯನ್ನಾಗಿ ಪರಿವರ್ತಿಸಿ ಅವಯ್ಯನನ್ನು ಕೆಲ ದಿವಸಗಳ ಕಾಲ ಗ್ರುಹಬಂಧನದಲ್ಲಿರಿಸ ಲಾಯಿತು. ಮಂದಿ ಗಲಾಟೆ ಮಾಡಿದ್ದಕ್ಕೆ ಹೆದರಿ ಸಿಪಾಯಿಗಳನ್ನು ಹಿಂದಕ್ಕೆ ಪಡೆಯಲಾಯಿತು.. ಮಿಷನರಿಯನ್ನು ಮೂಸಿವೇಸಿದ ಆ ಮಾಜಿ ನ್ಯಾಯಾಧೀಸನು ಅಕ್ಕಪಕ್ಕದ ಗ್ರಾಮಗಳಲ್ಲಿ ಪ್ರವಾಸ ಕಯ್ಯಿಕೊಂಡನು. ಜನರ ಕೋಪವನ್ನು ತಮಣಿ ಮಾಡುವ ಯತ್ನ, ಪ್ರಯತ್ನ ಮಾಡಿದನು.. ಆದರ ಮಂದಿಯ ಪಂಚೇಂದ್ರಿಯಂಗಳು ಡಬಾಕಿಕೊಂಡು ಬಿಟ್ಟಿದ್ದವು....

ನಾಗಿರೆಡ್ಡಿಯವರು ಕುಂಪಣಿ ಸರಕಾರದ ಅತಿಥಿಗಳು.. ಅವರು ಕ್ಷೇಮವಾಗಿರುವರು.. ಕೆಲ ದಿನಗಳಲ್ಲಿ ಸರಕಾರವೇ ಅವರನ್ನು ಗವುರವಪೂರುವಕವಾಗಿ ಬಿಡುಗಡೆ ಮಾಡುವುದು ಯಂದು ಮುಂತಾಗಿ ಪ್ರಚಾರ ಮಾಡಲೆಂದು ಬಂದ ಸಿಪಾಯಿಗಳನ್ನು ಹಿಡಿದು ಹಿಗ್ಗಾಮುಗ್ಗಾ ತದಕಿ ಮೋಡಿಸಲಾರಂಭಿಸಿತು ಕ್ರುದ್ದಮಂದಿಯು ರೆಡ್ಡಿ ಬಿಡುಗಡೆಗೊಂಡು ಬರದs ಹೊರತು ತಾವ್ಯಾರು ವಂದಗುಳು ಬಾನ ಮುಟ್ಟುವುದಿಲ್ಲವೆಂದು ಸಪಥ ಮಾಡಿ ವುಪಾಸ ಯಿದ್ದು ಬಿಟ್ಟವರೆಷ್ಟೋ? ದುಕ್ಕದ ಸೆಳವಿಗೆ ಸಿಕ್ಕು ಆತುಮಾಹುತಿ ಮಾಡಿಕೊಂಡವರೆಷ್ಟೋ? ಅರೆ ಹುಚ್ಚರಾದವರೆಷ್ಟೋ? ಸರಕಾರದ ಆಸ್ತಿಪಾಸ್ತಿಗೆ ಹಾನಿ ಮಾಡಲಾರಂಭಿಸಿದವರೆಷ್ಟೋ? ಅವರಿವರನ್ನು ನಾಗಿರೆಡ್ಡಿಯಂದು ಭ್ರಮಾ ಮಾಡಲಾರಂಭಿಸಿದವರೆಷ್ಟೋ? ಸರಕಾರದ ಮ್ಯಾಲಣ ಕೋಪವನ್ನು ಅವರಿವರ ಮ್ಯಾಲ ತೋರಿಸಲಾರಂಭಿಸಿದವರೆಷ್ಟೋ?

ಅತ್ತ ಗಡೇಕಲ್ಲಿನೊಳಗ ಘಟಿಸಲಿರುವ ಪರಿಸೆಗೆ ಸಂಭ್ರಮ ಯಿರಲಿಲ್ಲ.. ನಡೆಯೋದನು ನಡೆಸಬೇಕು.. ಮಾಡೋದನು ಮಾಡಿಸಬೇಕು.. ಬಂಧನಕ್ಕೊಳಗಾಗಿರುವಾತನು ದಯವಾಮುಸ ಸಂಭೂತನು.. ಸಾಕ್ಷಾತ್ ಭೀಮಲಿಂಗೇಸ್ವರ ಸ್ವಾಮಿಯ ವರಪುತ್ರನು.. ಜೀವಂತ ಯಿರುವಾಗಲೇ ಪವುರಾಣಿಕ ನಾಯಕಪಟ್ಟವನ್ನು ಅಧಿಗಮನ ಮಾಡಿರುವಂಥಾತನು.. ತನ್ನದು ಯಷ್ಟೇ ಪಿಕಲಾಟ ಯಿದ್ದರೂ ಪರಿಸೆಯ ಚುಕ್ಕಾಣಿಯನ್ನು ಸಮರ್ಥವಾಗಿ ಹಿಡಕೊಂಡು ಯಿರುತಿದ್ದಂಥಾತನು.. ಬಡಬಗ್ಗರ ಬದುಕಿಗೆ ಮಮ್ಮಲನ ಮರುಗುತ್ತಿದ್ದಂಥಾತನು... ಸರಕಾರದ ಚರಸಾಲದೊಳಗ ಯೇನು ಪಡಿಪಾಟಲನು ಅನುಭವಿಸುತ್ತಿರುವನೋ? ಯಂಬ ಚಿಂತೆಯೊಳಗ ಬೇಯುತ್ತಲೇ....

ತಮ ತಮ್ಮ ಪಾಲಿನ ಕೆಲಸ ಬೊಗಸೆಗಳನ್ನು ಮಾಡುತಲಿದ್ದರು. ದ್ವಾಪರಯುಗದಲ್ಲಿ ಭೀಮಸೇನನಿಂದ ಸ್ಥಾಪಿತಗೊಂಡಿರುವಂಥ ಭೀಮಲಿಂಗೇಸ್ವರಸ್ವಾಮಿಯ ರಥೋತ್ಸವ ಯಾವ ಕಾರಣಕ್ಕೂ ನಿಂತುದುದಿಲ್ಲ.. ಯಂಥೆಂಥೋ ಪವಾಡ ತೋರಿಸಿರುವ ತಮ್ಮ ಸ್ವಾಮಿ ನಾಗಿರೆಡ್ಡಿ ಯಿಷಯದಲ್ಲಿ ತಾಚ್ಚಾರ ಮಾಡಲಾರನು.. ತನ್ನ ಮಗನ ಯೋಗಕ್ಷೇಮ ನೋಡಿಕೊಳ್ಳುವುದು ಪಿತ್ರುಸ್ಥಾನದಲ್ಲಿರುವಾತನ ಕರ್ತವ್ಯವು....

ಅತ್ತ ಹರಪನಹಳ್ಳಿ ಪ್ರಾಂತದೊಳಗ ಕೀರ್ತಿಸೇಷ ಸೋಮಶೇಖರ ನಾಯಕ ಫವುಜು ಭರಮನ ಗವುಡನ ನೇತ್ರುತ್ವದಲ್ಲಿ ಭಲೇ ಕ್ರಿಯಾಶೀಲವಾಗಿತ್ತು. ಕಮಾಂಡರು ಸ್ಟೂವರ್ಟನು ಆ ಸೊಯಂ ಘೋಷಿತ ಪವುಜಿನ ಮ್ಯಾಲ ನಿಗಾ ಯಿಟ್ಟೇ ಹರಪನಹಳ್ಳಿ ವಳಗ ಮೊಕ್ಕಾಂ ಹೂಡಿದ್ದನು. ಅವನ ಗೂಢಾಚಾರರು ವಂದಲ್ಲಾವಂದು ಸುದ್ದಿಯನ್ನು ತಂದು ಅವಯ್ಯನ ಕೆಂಗೂದಲ ಕಿವಿಯೊಳಗ ವುಸುರುತಲಿದ್ದರು. ಬಿಟ್ಟುದ ಬಿಟ್ಟು ಬಂದು ತನ್ನೆದುರು ಹಾಜರಾಗುವಂತೆ ಗವುಡಗೆ ಬುಲಾವು ಕಳಿಸಿದನು. ವ್ಯಾಗಳಗೇರಿಯನ್ನು ಅದೇ ಯಿನ್ನು ಕಬ್ಜಾ ಮಾಡಿಕೊಂಡು ಅದರ ವುಸ್ತುವಾರಿಯನ್ನು ಹಂಪರಸಪ್ಪಯ್ಯನ ಸಲಹೆ ಮೇರೆಗೆ ದೂದಯ್ಯನಿಗೆ ವಹಿಸಿ ಗ್ರಾಮದ ಹಿರಿಯ ವತನದಾರ ಬಲವಂತಪ್ಪನ ಮನೆಯೊಳಗ ಯಿಸ್ರಾಂತಿ ಪಡಕೊಳ್ಳುತಲಿದ್ದ ಭರಮನಗವುಡನು ಯೀಗ ತನಗೆ ಪುರುಸೊತ್ತಿಲ್ಲ ಯಂದು ಹೇಳಿ ಕಳುವಿದ್ದನು. ಮುಂಡುರುಗಿ, ಡಂಬಳ, ಕೊಂಬಳಿ, ಕುರವತ್ತಿ ಮೊದಲಾದ ಕಡೇಲೆಲ್ಲ ಕುಂಪಣಿ ಸರಕಾರದ ಯಿರುದ್ದದ ದಂಗೆಗಳನ್ನು ನಿರ್ದಾಕ್ಷಿಣ್ಯವಾಗಿ, ಕ್ರೂರವಾಗಿ ಅಡಗಿಸಿ ಕುಖ್ಯಾತನಾಗಿದ್ದ ಸ್ಟೂವರ್ಟನಾದರೋ ಯದುರಾಳಿಗಳ ಮೂಗು ಹಿಡಿದು ಬಾಯಿ ತೆರೆಯುವಂತೆ ಮಾಡಬಲ್ಲ ಚಾಣಾಕ್ಷನು.. ಗವುಡನ ಜವಾಬನ್ನು ವುದ್ದಟತನವೆಂದೇ ಭಾವಿಸಿದನು. ಪುಣೆಯ ಕಾಳಗದಲ್ಲಿ ಕುಂಪಣಿ ಸರಕಾರದ ಪರ ಸಂಚು ರೂಪಿಸಿದ್ದಂಥ, ಖೊಜ್ಜಾನೂ, ಸೂರ ಸಿಪಾಯಿಯು ಆಗಿದ್ದ ದಂಡೋಜಿ ನೇತ್ರುತ್ವದಲ್ಲಿ ಹತ್ತು ಮಂದಿ ಸಿಪಾಯಿಗಳನ್ನು ಬಂಧಿಸಿ ತರಲೆಂದು ಕಳುವಿದನು. ಅಷ್ಟು ಹೊತ್ತಿಗೆ ಮ್ಯಾಗಳಗೇರಿಯಿಂದ ಕಂಚಿಕೇರಿಗೆ ಮೊಕ್ಕಾಂ ಬದಲಾಯಿಸಿದ್ದ ಗವುಡನು ದಂಡೋಜಿ ಮತ್ತವನ ಸಿಪಾಯಿಗಳನ್ನು ಪ್ರೀತಿಯಿಂದ ಬರಮಾಡಿಕೊಂಡನಲ್ಲದೆ ಹೋಳಿಗೆ ಮೂಟ ಮಾಡಿಸಿ ಯಿಸ್ರಾಂತಿಗೆ ಬಿಡದಿ ಯೇರುಪಾಟು ಮಾಡಿದನು. ಆತಿಥ್ಯದಿಂದ ಅರ್ಧ ಬಲ ಕಳಕೊಂಡಿದ್ದ ದಂಡೋಜಿಯು ಸ್ಟೂವರ್ಟ್

ಸಾಹೇಬನನ್ನು ಕಂಡು ಯಿಚಾರ ಯಿನಿಮಯ ಮಾಡಿಕೊಳ್ಳಬೇಕೆಂದೂ, ಯಾವುದೇ ಕುತ್ರ್ಯ ಕುಂಪಣಿ ಸರಕಾರದ ಯಿರುದ್ದ ಅಲ್ಲವೆಂಬುದನು ಆತಗೆ ಮನವರಿಕೆ ಮಾಡಿಕೊಡಬೇಕೆಂದು ಗೆಳೆಯನಂತೆ ಸಲಹೆ ನೀಡಿದನು.. ಹಂಪರಸಪ್ಪಯ್ಯನೊಂದಿಗೆ ಗವುಡ ಪ್ರತ್ಯೇಕವಾಗಿ ಸಮಾಲೋಚನೆ ಮಾಡಿದನು. ಸ್ಟೂವರ್ಟನ ಮರ್ಮ ತಮ್ಮೀರ್ವರಿಗೆ ಗೊತ್ತಿಲ್ಲದಿಲ್ಲ.. ತಾನೋರ್ವನೆ ಹೋಗುವುದಾಗಿ ದಿವಾನನೂ, ತಾನೋರ್ವನೇ ಹೋಗುವುದಾಗಿ ಗವುಡನೂ ವಾದಿಸಿದರು. ಬುದ್ದಿಬಲದಲ್ಲಿ ದಿವಾಣಜಿ ಮುಂದಿದ್ದರೆ, ಬಾಹುಬಲದಲ್ಲಿ ಗವುಡನು ಮುಂದಿದ್ದನು. ಬಾಹುಬಲ ಅಂಗಸಾಧನೆಯಿಂದ ಲಭ್ಯವಾಗುವಂಥಾದ್ದು.. ಆದರೆ ಬುದ್ದಿಬಲ!.. ತನ್ನಂಥ ನೂರಾರು ಮಂದಿ ಶೂರರನ್ನು ರೂಪಿಸುವ, ಸಂಘಟಿಸುವ ತಾಕತ್ತು ಯಿರುವ ಹಂಪರಸಪ್ಪಯ್ಯನನ್ನು ಬಲಿಪೀಠದ ಕಡೆ ಕಳುವಲಕ ಗವುಡ ಸುತಾರಾಂ ಸಮ್ಮತಿಸಲಿಲ್ಲ.. ಸಾವುರಾರು ಮಂದಿ ತರುಣರೊಳಗ ಸಮರೋತ್ಸಾಹವನ್ನು ತುಂಬಬಲ್ಲಂಥ ಗವುಡನನ್ನು ಕಳುವಲಕ ದಿವಾಣಜಿ ಸುತಾರಾಂ ಸಮ್ಮತಿಸಲಿಲ್ಲ.. ಯಿಬ್ಬರೂ ಹೋಗಬೇಕಂದರ ಬುದ್ದಿಬಲ, ಬಾಹುಬಲ ಯರಡೂ ನಷ್ಟ ಹೊಂದುವವು.. ಮತ್ತೆ ಅವರ ನಡುವೆ ಯಾವ ಮಾತುಕತೆ ನಡೆಯಿತೋ ಯೇನೋ.. ಗವುಡನನ್ನು ಹರಪನಹಳ್ಳಿಗೆ ಫಲಾನ ದಿವಸದಂದು ಕಳುವಲು..

ಅತ್ತ ನಿನ್ನೆ ದಿವಸವೇ ಥಾಮಸು ಮನ್ರೋ ಬಳ್ಳಾರಿ ಪಟ್ಟಣವನ್ನು ತಲುಪಿದ್ದು.. ಯಿನ್ನೇನು ಬಂದ ನಾಗಿರೆಡ್ಡಿಯ ಯಿಚಾರಣೆ ಮಾಡಲು ಪ್ರತ್ಯೇಕ ನ್ಯಾಯಾಲಯ ಸ್ಥಾಪನೆಗೆ ಹುಕುಂ ಮಾಡುವನು, ಗೋಲ್ಡಿಂಗ್ ಹ್ಯಾಂ ಅಥವಾ ಮ್ಯಾಕ್‌ರವರ ಪಯ್ಕಿ ವಬ್ಬರನ್ನು ನ್ಯಾಯಪೀಠದ ಸ್ಥಾನಕ್ಕೆ ಆಯ್ಕೆ ಮಾಡುವನೆಂದೇ ಭಾವಿಸಿದ್ದ ಕ್ಯಾಂಪ್‌ಬೆಲ್ ಮತ್ತಿತರ ಹಿರಿಯ ಅಧಿಕಾರಿಗಳಿಗೆ ಕಲೆಕ್ಟರನ ವರ್ತನೆಯಿಂದ ಬಲು ಬ್ಯಾಸರಾತು. ಅವರೆಲ್ಲರ ಮಜುರೆ ಸ್ವೀಕರಿಸಿದ ನಂತರವಾದರೂ ರೆಡ್ಡಿಯನ್ನು ಕಾಣುವ ಕ್ರಿಯಾ ತೋರಿಸಬೇಕಿತ್ತಲ್ಲವೆ? ಯೇನು ಮಾಡಿದಿರಿ? ಯೇನು ಬಿಟ್ಟಿರಿ? ರೆಡ್ಡಿಯ ಬಂಧನಾ ನಂತರದ ಸಾದಕಬಾದಕಗಳೇನು? ಯಂದು ಮುಂತಾಗಿ ಯಿಚಾರಿಸಬೇಕಿತ್ತಲ್ಲವೇ? ಯೀ ಕ್ರಿಯಾಕಟ್ಟಳೆಗಳನ್ನೆಲ್ಲ ಬಿಟ್ಟು ತಾನು ಸೀದ ಬಂಗಲೆಯೊಳಗೆ ಸೇರಿಕೊಂಡು ಬಿಡುವುದೆಂದರೇನು? ಮುಚ್ಚಿದ ಬಾಗಿಲು ಮುಚ್ಚಿದಂಗೇ ಯಿರುವುದು, ಮುಚ್ಚಿದ ಕಿಟಕಿ ಮುಚ್ಚಿದಂಗೇ ಯಿರುವುದು? ವಳಗ ತಾನೋರ್ವನೇ....

ಬಳ್ಳಾರಿ ಪಟ್ಟಣದ ಸರಹದ್ದಿನೊಳಗ ಕಾಲಿರಿಸಿದ್ದೇ ತಡ ಮನ್ರೋಗೆ ಬಿಕ್ಕಳಿಕೆ ಸುರುವಾಗಿದ್ದವು. ದಾರಿವುದ್ದಕ್ಕೂ ಬಾಯಿ ಪಸೆ ಆರುತ್ತಲೇ ಯಿತ್ತು. ತನ್ನಂತರಂಗದಲ್ಲೋ ತಪ್ಪು ಸರಿಗಳ ಗೊಂದಲ.. ಯದುರಿಗೋ ಯಿತಿಹಾಸಕ್ಕೆ ಸೇರಲೆಂದು ಹಾತೊರೆಯುತ್ತಿರುವ ಮುಂಬರುವ ದಿನಗಳು.. ಆ ದಿನಗಳಲ್ಲಿ ತಾನು.. ದೇವರೇ.. ನಾಗಿರೆಡ್ಡಿ ಯಂಬ ಸಬುಧವು ಕೆಲಕಾಲ ಕಿವಿಗೆ ಬೀಳದಂತೆ ನಿಗಾ ವಹಿಸು ಯಂದು ಬೇಡಿಕೊಂಡೇ ತಾನು ಸರಹದ್ದು ಪ್ರವೇಶ ಮಾಡಿದ್ದು.. ಆದರೆ ಥತ್! ಆ ಥ್ಯಾಕರೆ ಜಾಯಮಾನದ ಹೆನ್ರಿವದರಿ ಬಿಟ್ಟನಲ್ಲ.. ಅವನು ವುಚ್ಚರಿಸಿದ ಯರಡು ವಾಕ್ಯಗಳಲ್ಲಿ ನಾಗಿರೆಡ್ಡಿಯಂಬ ಅಯ್ದು ಭಯಾನಕ ಸಬುಧಗಳಿದ್ದವು ಯಂದರೆ.. ಯಿನ್ನು ವುಳಿದವರು.. ಮನ್ರೋ ಸರಸರ ಬಂದವನೆ ಅತಿಥಿಗ್ರುಹ ಪ್ರವೇಶಿಸಿ ತನ್ನನ್ನು ತಾನೇ ಗ್ರುಹ ಬಂಧನದಲ್ಲಿ ಯಿರಿಸಿಕೊಂಡುಬಿಟ್ಟಿದ್ದನು.ತನಗೂ ಅಂತಃಕರಣಯಿರುವುದೆಂಬ ಸುಳಿವು ಯಿತರರಿಗೆ ತಿಳಿಯದಿರಲೆಂದು..... ಪಯಣದ ದಣುವು ಯಂಬುದನ್ನು ಮುಂದೆ ಬಿಟ್ಟಿದ್ದನು..

ಆತನೆಂಜಲನು ವುಂಡಿರುವ ನನ್ನೊಳಗ ಆತನೋ, ನನ್ನೆಂಜಲನು ವುಂಡಿರುವ ಆತನೊಳಗ ನಾನೋ! ವಂದರ್ಥದಲ್ಲಿ ನಾನೇ ಸೆರೆಮನೆಯೊಳಗ ಯಿರುವುದು.. ಯಿನ್ನೊಂದರ್ಥದಲ್ಲಿ ಅವನೇ ಯಿಲ್ಲಿರುವುದು. ಮೋ ಮಯ್ ಗಾಡ್.. ಕುಂಪಣಿ ಸರಕಾರದ ಸೇವೆಯುಲ್ಲಿರುವವರ ಚರುಮ ದಪ್ಪಯಿರಬೇಕೆಂದೂ, ತನ್ನ ಮನದೊಳಗ ಸೂಕ್ಷ್ಮ ಭಾವನೆಗಳನು ಬಿಟ್ಟುಕೊಳ್ಳಕೂಡದು ಯಂದೂ ಮೊದಲಾಗಿ ಗ್ರಹಾಂ ಹೇಳಿದ್ದ ಮಾತುಗಳನ್ನು ನೆನಪಿಸಿಕೊಳ್ಳುತ್ತ.. ಯಾಕೆ ತಾನಿಷ್ಟು ಸೆಂಟಿಮೆಂಟಾಗುತ್ತಿರುವೆನು ತಂದೆಯೇ..?

ವಂದು ಹಗಲು, ವಂದು ರಾತ್ರಿಕಳೆದು ಯರಡನೇ ಹಗಲು ಮೂಡಿತು.. ತಾನೀಗ ನಿನ್ನೆ ದಿವಸದ ಭಾವನೆಗಳನು ಅನುಭೋಗಿಸಕೂಡದು. ನಿನ್ನೇದು ನಿನ್ನೆಗೇ.. ಯಿವತ್ತಿಂದು ಯಿವತ್ತಿಗೇ. ತನ್ನೊಳಗ ಮಾನವನು ಪಾವಲಿ ಭಾಗ ಅದಾನ, ಯಂತ್ರಮೂರು ಪಾವಲಿ ಭಾಗ ಅದ.. ತಾನು ಹೇಳಿ, ಕೇಳಿ ಕುಂಪಣಿ ಗವರುಮೆಂಟಿನ ಸರವಂಟನು....

ಯಿಡೀ ರಾತಿರಿ ಪರ್ಯಂತ ನಿದುರೆಯಿಲ್ಲದೆ ಕನವರಿಸಿದ.. ಮಗ್ಗುಲು ಮ್ಯಾಲ ಮಗ್ಗುಲು ಬದಲಾಯಿಸುತ್ತ ವುರುಳಾಡಿದ.. ಮನ್ರೋ ಸಾಹೇಬನು ಯದ್ದು ಕುರುಬರ ಲೆಕ್ಕಾಚಾರದಲ್ಲಿ ಮೂಡಲ ಕಡೇಕ ನೋಡಿದ.. ಬೆಳ್ಳಿ ಚುಕ್ಕಿ

ಬಲು ವ್ಯಾಲಕೇರಿರುವುದು.. ಯೇರುತಲೆ ಬೆಳಕಿನೊಳಗ ಅಂತರ್ಧಾನವಾಗಲಿರುವುದು.. ಅಲ್ಲೊಂದು ಕಾಗೆಯು ಯಿಂಪಾಗಿ ಕೂಗುತಲಿರುವುದು.. ಯಿಲ್ಲೊಂದು ಕೋಗಿಲೆ ಕರ್ಕಶವಾಗಿ ಅರಚುತಲಿರುವುದು.. ಯಲ್ಲೋ ವಂದು ನಾಯಿ ಗರ್ಜನೆ ಮಾಡುತಲಿರುವುದು, ಅಲ್ಲೆಲ್ಲೋ ಬೆಳಕು ಕೆಂಪೆರಡಾಣೆ ಗಾತುರದ ಮೂಡಣದ ಗುಡುಲೊಳಗಿಂದ ಯಿಣುಕುತಲಿರುವುದು....

ಬಾತರೂಮಿಗೆ ಹೋಗಿ ಮನಸೋಯಿಚ್ಛೆ ಸಾಣಾನ ಮಾಡಿಯೇ ಮಾಡಿದ.. ನೀರು ಸಂಕಟಪಡುತ್ತಲೇ ಅವಯ್ಯನ ಸರೀರದ ಮ್ಯಾಲ ಹತ್ತಿ ಯಿಳಿದು ಹರಿಯಿತು.. ಅದೂ ದಣಿಯಿತು.. ತಾನು ದಣಿದನು.. ದಿರಿಸುಗಳೆದುರು ನಿಂತುಕೊಂಡ ಬೆತ್ತಲೆಯಾಗಿ.. ವಂದಲ್ಲ ಹತ್ತು ಬಗೆಯ ದಿರಿಸುಗಳು.. ಅಂಗಲಾಚುತ್ತಿರುವ ದಿರಿಸುಗಳು.. ಮುಟ್ಟಿ ಮಯ್ಲಿಗಿ ಮಾಡಬೇಡ ಯಂದು ದಯನಾಸ ಪಡುತ್ತಿರುವ ದಿರಿಸುಗಳು.. ಅದನು ತೊಟ್ಟುಕೊಂಡು ಬಿಸಾಡಿದ.. ಯಿದನು ತೊಟ್ಟುಕೊಂಡು ಬಿಸಾಡಿದ.. ಮತ್ತೇನೆಲ್ಲವನ್ನು ತೊಟ್ಟುಕೊಂಡು ಬಿಸಾಡಿದ.. ನಗ್ನನಾಗಿಯೇ ರೆಡ್ಡಿ ಯದುರು ಕಾಣಿಸಿಕೊಂಡು ಬಿಡಬೇಕೆಂದೆನಿಸಿತು ವಂದು ಛಣ..ಛೇ.. ಛೇ.. ಆ ಯಲ್ಲ ದಿರಿಸುಗಳ ನಡುವೆ.. ಹದಿನಾರು ಮೊಳದುದ್ದದ ದೋತರ.. ಬಾದಾಮಿ ಬಣ್ಣದ ನಿಲುವಂಗಿ.. ಆರು ಮೊಳದುದ್ದದ ಪೇಟ ಮೋಡೋಡಿ ಬಂದು ಮೂಡಿತು. ಗೋಚರವಾಯಿತು.. ನಿನ್ನೊಳಗಿನ ಕೇವಲ ಸ್ಕೆಲಟನ್ನಿಗೆ ನನ್ನನ್ಯಾಕ ತೊಡಿಸಬಾರದೆಂದು ಪೀಡಿಸಲಾರಂಭಿಸಿತು. ಅರೆ! ಯಿದು ರೆಡ್ಡಿಯ ವುಡುಪಾಗಿರುವುದಲ್ಲಾ.. ಯಲ್ಲೋ ಯಿದ್ದದ್ದು ಯಿಲ್ಲಿಗೆಂಗ ಬಂತು..? ಯಾರು ತಂದಿಟ್ಟರು ಯಿದನಿಲ್ಲಿ? ಮುಟ್ಟಿದರ ತಾನೆಲ್ಲಿ ಸುಟ್ಟುಕರಕಿಟ್ಟು ಹೋಗುವೆನೋ? ಅದಾವ ಸಂಚು ಅಡಗಿರಬವುದು ಯಿದರೊಳಗ..? ತನಗ್ಯಾವ ಪರೀಕ್ಷೆ ಕಾದಿರುವುದೋ..?

ಅದರ ಸನೀಕ ಹೋಗುವುದು ದೂರ ಸರಿಯುವುದು ಮಾಡಿದ ಮೂರು ನಾಲಕು ಸಲ.. ಬ್ಯಾಡ ಅಂದರೂ ಅದು ಬಿಡಬೇಕಲ್ಲ! ಸೂಜಿಗಲ್ಲಿನಂತೆ ಸೆಳೆಯಿತು.. ಕುಟಿಲೋಪಾಯದಿಂದ ಹೆಡೆ ಚಾಚಿತು.. ಅದರ ನೊಸಲೊಳಗ ರತುನ ಪ್ರಾಯದ ರಾಜಕಾರಣ ಥಳಥಳ ಹೊಳೆಯಿತು.. ಯೇನೇ ಆಗಲಿ.. ಬಂದದ್ದು ಬರಲಿ.. ಬಹುರೂಪಿ ಕಲೆಯನ್ನು ಕರಗತ ಮಾಡಿಕೊಂಡಿದ್ದ ಆ ಸರವಂಟನು ಮನದೊಳಗ ಯಲ್ಲೋ ಮಸುಕು ಮಸುಕಾಗಿ ಯಿರುವ

ಬಂಕಿಂಗುಹ್ಯಾಮು ಅರಮನೆಯನ್ನು ಧ್ಯಾನಿಸುತ್ತ.. ಅದರ ಮ್ಯಾಲ ಭಾರ ಹಾಕುತ್ತ ನಖಶಿಖಾಂತ ಧಾರಣ ಮಾಡಿಕೊಂಡನು.. ಅಷ್ಟು ಹೊತ್ತಿಗಾಗಲೆ ಬೆಳಕಿನ ಹಳ್ಳ ವಳ ಹೊರಗೆಲ್ಲ ಜುಳುಜುಳು ಹರಿಯಲಾರಂಭಿಸಿತ್ತು. ಕವಾಯತಿನ ಸದ್ದು ಅಂಬೆಗಾಲಿಡ ಲಾರಂಭಿಸಿತ್ತು ವಳಗೆಲ್ಲ.. ನಿಲುಗನ್ನಡಿ ಬಯಲಾಟದ ಸಾರಥಿಯಂತೆ ಬಂದೆದುರು ನಿಂತು "ಯಲಯ್ ನೀನಾರು? ನಿನ್ನ ನಾಮಾಂಕಿತ ಯೇನು?" ಯಂದು ಪ್ರಸ್ನೆ ಹಾಕಿತು. ಅದರೊಳಗ ನಖಶಿಖಾಂತ ಯಿಣುಕಿದ. ತಾನೀಗ ಕಲೆಕ್ಟರು ಸಾಹೇಬನೋ ಅಥವಾ.. ಅಲ್ಲ.. ಅಲ್ಲ.. ಅಲ್ಲವೇ ಅಲ್ಲ.. ತಾನೀಗ ಬೊಬ್ಬಿಲಿ ನಾಗಿರೆಡ್ಡಿಯ ಪಡಿಯಚ್ಚು.. ಅಲ್ಲ ಅಲ್ಲ.. ಅಲ್ಲವೇ ಅಲ್ಲ.. ತಾನೀಗ ನಾಗಿರೆಡ್ಡಿಯ ವೇಷದಲ್ಲಿರುವ ಕೊಲೆಗಡುಕನು.. ನಯವಂಚಕನು.. ತನ್ನನ್ನೇ ತಾನು ವಧಾಸ್ಥಾನಕ್ಕೆ...

ಕರೆಗಂಟೆ ಭಾರಿಸಿದ... ಯಾರಲ್ಲಿ ಯಂದು ಗುಟುರು ಹಾಕಿದ.. ಪತ್ತಿಕೊಂಡದಲ್ಲಿ ತನ್ನನ್ನು ಯಂಜಲೆಲೆಗೆ ಹೋಲಿಕೆ ಮಾಡಿದ ಯಲ್ಲಮ್ತಾಯಿ ಯಂಬ ತಿಪ್ಪೆಗಾತುರದ ಮುಪ್ಪಾನು ಮುದುಕಿ ಯದೆಯೊಳಗಿಂದ ಮೂಡಿ ಬಂದು ಪಕ ಪಕ ನಗಾಡುತ್ತಿರುವಂತೆ ಭಾಸವಾಯಿತು.. ಹ್ಞು.. ತಾನು ಯಂಜಲೆಲೆ.. ಯಂಜಲೆಲೆಯೊಳಗ ಅಳಿದುಳಿದಿರುವ ಅಗುಳು.. ಯೇನೀಗ! ಬಾಗಿಲು ಕಿರುಗುಟ್ಟಿ ತೆರಕಂತು....

ಸೆರೆಮನೆಯ ಅಧಿಕಾರಿ ಮೆಕೆನ್ರೋ.. ಯಿಶೇಷ ನ್ಯಾಯಾಲಯ ಶಾಬ್ದಿಕ ನಕ್ಷೆಯನ್ನು ನಾಲಗೆ ಮ್ಯಾಲ ಯಿಟುಕೊಂಡಿದ್ದ ನ್ಯಾಯಾಧೀಶರಾದ ಹ್ಯಾಮು, ಮ್ಯಾಕು, ಕ್ಯಾಂಪಬೆಲ್ಲು.. ಹೆನ್ರಿಮೊದಲಾದವರು ಯಿಣುಕಿ ನೋಡಿ "ಅರೆ!" ಯಂದು ವುದ್ಗಾರ ತೆಗೆದರು.. ಮರಣದಂಡನೆಗೆ ವಳಗಾಗಲಿರುವ ಯ್ಯಕ್ತಿ 'ಮೋ ಮಯ್ ಗಾಡ್' ಯಂದು ಮೂಗಿನ ಮ್ಯಾಲ ಬೊಟ್ಟಿಟ್ಟುಕೊಂಡರು..

ಮುಗುಳುನಗೆ ಮೂಲಕ ತಾನು ಥಾಮಸುಮನ್ರೋ ಸಾಹೇಬನೆಂದು ಗುರುತು ಮಾಡಿದ ಕಲೆಕ್ಟರನು..

ಸೆರೆಮನೆ ವಳಗೆ ಯಿಶೇಷ ನ್ಯಾಯಾಲಯ ಸ್ಥಾಪನೆಗೆ ಹುಕುಂ ಮಾಡಿದ್ದು ತಡಾ ಆಗಲಿಲ್ಲ.. ಅದಕ ಗೋಲ್ಡಿಂಗ್ ಹ್ಯಾಮರವರನ್ನು ನ್ಯಾಯಾಧೀಶರನ್ನಾಗಿ ನೇಮಕ ಮಾಡಿದ್ದೂ ತಡ ಆಗಲಿಲ್ಲ. ತನಗ ಧಿಕ್ಕಾರ ಕೂಗಲಕ ಯಂದು ಗುಂತಕಲ್ಲು ಸೀಮೆಕಡೇಲಿಂದ ಬಂದಿದ್ದ ಮಂದಿಯನ್ನುದ್ದೇಶಿಸಿ "ನೋಡಿರಯ್ಯಾ.. ನನ್ನೊಳಗ ನಿಮ್ಮ ನಾಗಿರೆಡ್ಡಿ ಜೀವಂತ ಅದಾನ.. ನನ್ನ ನೋಡಿ ಸಮಾಧಾನ

ಪಟುಕೊಳ್ಳಿ.. ಆತ ಯೇನು ಮಾಡುತಲಿದ್ದನೋ.. ಅದನೇ ಕಾಯಿದೆ ಸೀರ ನಾನೇ ಮಾಡುತೇನಿ.."ಯಂದು ಮುಂತಾಗಿ ಹೇಳಿ ಪರವಸಗೊಳಿಸಿದ್ದು ತಡ ಆಗಲಿಲ್ಲ.. ಅಲ್ಲಿಂದ ಆತನು ಯರಡೂ ಪಾತ್ರಗಳನ ವಟ್ಟಿಗೆ ಅಭಿನಯಿಸುತ್ತ ಮುಗುತಾಯದ ಹಂತದಲ್ಲಿದ್ದ ಕೇಂದ್ರಕಾರಾಗ್ರುಹವನ್ನು ಪ್ರವೇಶ ಮಾಡಿದನು. ಯಲ್ಲಿ ನನ್ನ ಸಹೋದರ..? ಯಲ್ಲಿ ಬಡವರ ಬಂಧು..? ಯಲ್ಲಿ ರೆಡ್ಡಿ ಲೋ ರೆಡ್ಡಿ, ಬಂಗಾರದ ಕಡ್ಡಿ? ಯಂದು ಹಂಬಲಿಕೆಯನ್ನು ಅಭಿನಯಿಸುತ್ತ ಸೀದ ಮೂರು ಮೊಳ ಅಗಲ ಆರು ಮೊಳ ವುದ್ದಯಿದ್ದ ಕೋಣೆ ತಲುಪಿದನು. ತನ್ನ ಕಣ್ಣೊಳಗಿನ ನೀರ ಮೂಲಕ ರೆಡ್ಡಿಯ ಬದ್ದಬ್ರುಕುಟಿಯನ್ನು ಸಯ್ಲು ಮಾಡುತ "ಸಹೋದರ, ಯೇನಿದು ನಿನ್ನೀ ಅವಸ್ಥೆಯು.. ನೀನು ಅಚಂದ್ರಾರ್ಕವಾಗಿ ನಾಯಕನಾಗಿ ವುಳಿಯಬೇಕೆಂದೇ..." ಯಂದು ಹೇಳುತ್ತಾs ಹೇಳುತ್ತಾ ಹೋಗಿ ನಾಗಿರೆಡ್ಡಿಯನ್ನು ಆಲಿಂಗಿಸಿ ಕೊಂಡನೆಂಬಲ್ಲಿಗೆ ಸಿವಸಂಕರ ಮಾದೇವss....

ಅತ್ತ ಕೂಡ್ಲಿಗಿ ಪಟ್ಟಣದೊಳಗ.... ಮದ್ಯಾಣದ ಸೂರ್‍ಯಾಮ ಮೂಡಣ ದಿಕ್ಕಿನಲ್ಲಿ ಮುಡುಮುಡನೆ ಮೂಡುತ್ತಲೇ ಸೆಕೆಯ ಬಿತ್ತಾವಣೆ ಮಾಡತೊಡಗಿದ. ಯಾವತ್ತು ಮಂದಿ ಯೇಳುಯೇಳುತ್ತಲೆ ಜಲಜಲನೆ ಬೆವೆಯಲಾರಂಭಿಸಿದರು.. ಬೀಸಣಿಕೆಗಳಿಗಾಗಿ ಹಂಬಲಿಸತೊಡಗಿದರು.. ಸುಂಟರುಗಾಳಿಗಳು ಸುಯ್ಯಂತ ಸುತ್ತಲಾರಂಭಿಸಿದ್ದೇನು? ಭರ್‍ರಂತ ಬಿರುಗಾಳಿಗಳು ಬೀಸಲಾರಂಭಿಸಿದ್ದೇನು? ಮಂದಿಯಂಭೋ ಮಂದಿ ಮನೆ ವಳಗ ಯಿರಲಿಕಾಗದೆ.. ಹೊರಗ ಯಿರಲಿಕಾಗದೆ.. ಲಿಬಿಲಿಬಿ ವದ್ದಾಡಲಾರಂಭಿಸಿದ್ದೇನು? ನೀರೊಳಗ ನೀರುತನ ಯಿಲ್ಲದಂಗಾಗಿ.. ಆಹಾರದೊಳಗ ಆಹಾರತನ ಯಿಲ್ಲದಂಗಾಗಿ ಹಸಿವು ತ್ರುಷೆಗಳಿಂದ ತತ್ತರಿಸಲಾರಂಭಿಸಿದ್ದೇನು? ಹೆಂಡತಿಯೊಳಗ ಹೆಂಡತಿತನ ಯಿಲ್ಲದಂಗಾಗಿ.. ಗಂಡನೊಳಗ ಗಂಡನತನ ಯಿಲ್ಲದಂಗಾಗಿ.. ದಾಂಪತ್ಯಗಳೊಳಗ ತರಾವರಿ ಬಿರುಕುಗಳು ನಿಚ್ಛಳವಾಗಿ ಕಾಣಿಸಿಕೊಂಡಿದ್ದೇನು? ಕೂಸು ಕಂದಮ್ಮಗಳು ಅವುಡುಗಚ್ಚಿ ತಮ ತಮ್ಮ ಮೊಲೆಗುಂಡಿಗಳನು ಕಚ್ಚಿದ್ದಕ್ಕೆ ತಾಯಂದಿರು ಹ್ಹಾss.. ಯಂದು ವುದ್ಗರಿಸಿದ್ದೇನು? ಮನೆ ಮುತ್ತಲಲ್ಲಿದ್ದ, ಹಿತ್ತಲಲ್ಲಿದ್ದ ಗಿಡಗಂಟೆಗಳು ಬಾಡಲಾರಂಭಿಸಿದ್ದೇನು? ಅರಳಿದೊಡನೆ ಹುವ್ವುಗಳು ಪಕಳೆಗಳುದುರಿ ಬೋಡಮ್ಮಗಳಾದುದೇನು? ವಟ್ಟಿನಲ್ಲಿ ಯಿಡೀ ಪಟ್ಟಣವು ನಿಂತ ನಿಲುವಿಕಲೆ, ಕುಂತ ಕುಲುವಿಕಲೆ ಸುಖ ನೆಮ್ಮದಿಯಿಲ್ಲದ ಬಿಕೋ ಅನ್ನಲಾರಂಭಿಸಿತು. ಯಾಕ ಹಿಂಗಾತು? ನಿನ್ನೆ ರಾತಿರಿ ಮಟ ಪಾಡಿತ್ತಲ್ಲ..

ಯಾದಾರ ಗಾಳಿ ಸವುಡೇನಾರ ತಮ್ಮ ಪಟ್ಟಣದೊಳಗ ಬಿಡಾರ ಹೂಡಯ್ತಾ ಹೆಂಗೆ? ಹೂಡಿದ್ದರ ಅದನು ತಮಣಿ ಮಾಡುವ ಬಗೆ ಯೇನು? ಯಂದು ಮುಂತಾಗಿ ಯಸನ ಮಾಡುತ ಹಿರೀಕ ಮಂದಿ ಅಗ್ಗಲು ಮಗ್ಗುಲಿದ್ದ ಅಗ್ರಹಾರಗಳಿಗೆ ಹೋಗಿ ದುಪ್ಪಟ್ಟು ದಕ್ಷಿಣ ಚಾಜಯಿಟ್ಟು ಪಟ್ಟಣಕ್ಕೆ ವದಗಿರುವ ಪಜೀತಿಯನ್ನು ಹೇಳಿಕೊಂಡರು. ತಾರೆ ಕರಣ ಯೋಗಗಳಲ್ಲಿ ನಿಷ್ಣಾತರಾದ ಜೋತಿಷಿಗಳು ಹೊತ್ತಿಗೆ ತೆಗೆದು ನೋಡಲಾಗಿ, ಕವಡೆ ಚೆಲ್ಲಿ ಪರಿಸೀಲನ ಮಾಡಲಾಗಿ, ಪಟ್ಟಣದ ವಾಸ್ತುವನ್ನು ಕಣ್ಣಳತೆಗೆ ಯಳಕೊಂಡು ತಖ್ತೆ ಮಾಡಲಾಗಿ ಸುಕ್ರನು ತನ್ನ ಜಾಗ ಖಾಲಿ ಮಾಡಿರುವ ಸಂಗತಿ ಬೆಳಕಿಗೆ ಬಂತು. ನವಗ್ರಹ ಪೂಜೆ ಮಾಡಿದರು. ಸಂಯುವರಾದವರು ಸಂಬುಲಿಂಗನ ರೊತ ಮಾಡಬೇಕೆಂದೂ, ವಯುಷ್ಣವರಾದವರು ಸತ್ಯನಾರಾಯಣ ರೊತ ಮಾಡಬೇಕೆಂದೂ, ಯರಡೂ ಅಲ್ಲದಿದ್ದವರು ದಾನ, ಧರುಮ ಮಾಡಬೇಕೆಂದೂ ಕರೆಕೊಟ್ಟರು.. ಯೀ ಯಲ್ಲಾ ಸಾಂತಿ ಪ್ರಕ್ರಿಯೆಗಳು ಅವರವರ ಯೋಗ್ಯತಾನುಸಾರ ಸಕ್ರಮವಾಗಿ ನಡೆಯಲಾರಂಭಿಸಿದವರಾದರೂ ತಿಕ್ಕಡಿ ಕಡಿಮೆಯಾಗಲಿಲ್ಲ.. ಯೇನಿದ್ದೀತು ಯಾತಕಿದ್ದೀತು ಯಂದು ಮುಂತಾಗಿ ಸಿವನೇ...

ತಮಗೆ ಯತ್ತತ್ತಲಾಗೋ ಆದಂಗ ಆಗತಯ್ತೆ ಯಂದು ನರಳುತಲಿದ್ದ ಯಿರಹಿಗಳ ಪಯ್ಕಿ ಮೋರ್ವನೂ, ವಂಕದಾರಿ ಗೋಯಿಂದಯ್ಯ ಸ್ರೇಷಿ«ಗಳ ಯೇಕಮಾತ್ರಪುತ್ರನೂ, ನಿನ್ನೆ ಮೊನ್ನೆ ಯುವ್ವನದ ಸೀಮೆಯೊಳಗ ಯಡಗಾಲನ್ನಿರಿಸಿದ್ದಂಥವನೂ ಆದ ಸುಬ್ಬರಮಣ್ಯ ವುರುಫ್ ಸುಬ್ಬಣ್ಣನು ಸುಕ್ರನು ಫಲಾನ ಯಿಂಥವರೊಂದಿಗೆ ಹೋಗಿರುವನೆಂದು ಪತ್ತೆ ಮಾಡಿ ಕ್ರುತಕ್ರುತ್ಯನಾದನು. ತನ್ನ ತಲೆ ಯಂಬ ಗುಂಡಾಲೊಳಗ ಮೇದಸ್ಸು ತುಳುಕಾಡುತಲಿತ್ತಲ್ಲ ಅದಕ್ಕs.. ಆ ಜಿಡ್ಡಿನೊಳಗ ಮೆದುಳು ಪರಮ ಸುಖ ಅನುಭವಿಸುತಲಿತ್ತಲ್ಲ ಅದಕ್ಕs.. ಯಿರಹ ರೊತಾರೂಢರಾಗಿದ್ದ ಯಿಯಿಧ ವಯೋಮಾನದ ಮಂದಿ ಹೋಗುವುದೋ? ಬ್ಯಾಡಮೋ ಯಂಬ ಅಂಜಿಕೆಯಿಂದಲೇ ಹೋದರು. ಫಲಾನ ಮನೆಯು ಸಾವುರ ಕಡೇಲಿಂದ ನಿಟ್ಟುಸುರು ಬಿಡುತಲಿತ್ತು.. ಯೇಕರಿಕೆ ದೇಕರಿಕೆ ನೋಡುತಲಿದ್ದ ಆಳು ಕಾಳು ಮಂದಿಯ ಮುಖ ಮಾರಿಗಳಂತೂ ಭಣಭಣಗುಟ್ಟುತಲಿದ್ದವು.. ಸಪ್ತ ಲೋಹದ ಪಂಜರದೊಳಗಿದ್ದ ಅರಗಿಳಿಯು ಮಾಡುತಲಿದ್ದ ಅರಣ್ಯರೋಧನ ಸದರಿ ಯರಡು ಭವಂತಿ ಮನೆಯ ಬಿಗುಮಾನಕ್ಕೆ

ಭಾಷ್ಯ ಬರೆಯುತಲಿತ್ತು.. ವಸ್ತುಸ್ಥಿತಿ ಅರ್ಥವಾಗಲು ಅಯ್ಯೋ ಯಂದು ಅಳಲಾರಂಭಿಸಿದೊಡನೆ ಸದರಿ ಪಟ್ಟಣದ ಯಾತ್ತು ಮಂದಿಯು....

ಅವುದು.. ತಿಲ್ಲಾನ ತಾಯಕ್ಕ ತನ್ನ ಮಗಳನ್ನು ಹಿಂದಲ ರಾತಿರಿ ವಂದು ಹೊತ್ತಿನಲ್ಲಿ ಯಿದ್ದಕ್ಕಿದ್ದಂತೆ ಯಬ್ಬಿಸಿ ''ಮಗಳೇ ಗುಣಸಾಗರದ ಯೇಣುಗೋಪಾಲಸ್ವಾಮಿಯು ಸೋಲುಪ ಹೊತ್ತಿನಲ್ಲಿ ಕಣಸೊಳಗ ಮೂಡಿ ಬೆಳಗಿನ ಪೂಜೆ ಹೊತ್ತಿಗೆ ಬಂದು ದರುಸನ ಪಡಕೋ ಯಂದು ಆಗ್ನೆ ಮಾಡಿದನವ್ವಾ.. ಅದಕ ಹೊಂಡು" ಯಂದು ಹೇಳಿದಳು. ಆ ದೇವರ ಮೂಲ ಸ್ವಾಸ್ಥಿ ಹಂಪಿಯೊಳಗಿತ್ತು. ಸ್ರೀಕ್ರುಷ್ಣದೇವರಾಯನ ದ್ವಿತೀಯ ಪತ್ನಿ ಚಿನ್ನಾಂಬಿಕೆಯು ಅದನ್ನು ತ್ರಿಕಾಲ ಪೂಜೆ ಮಾಡುತಲಿದ್ದಳು. ರಕ್ಕಸತಂಗಡಗಿ ಯುದ್ಧ ನಂತರ ಯಿಜಯನಗರ ಸಾಮ್ರಾಜ್ಯದಲ್ಲಿದ್ದ ಯಾವತ್ತು ವಯಷ್ಣವ ದೇವರುಗಳು ಅವರಿವರ ಹೆಗಲೇರಿಯೋ, ಬಗಲೊಳಗವಿಚಿಟ್ಟುಕೊಂಡೋ ಸುತ್ತನ್ನಾಕಡೆ ವಲಸೆ ಹೊಂಟವು.. ಯಂಟೇಸ್ವರ ಸ್ವಾಮಿಯು ಹರಪನಹಳ್ಳಿ ಸಮೀಪದ ತಿಮ್ಮಲಾಪುರದೊಳಗೂ, ಸ್ರೀ ಕ್ರುಷ್ಣನು ಮಲಸೀಮೆಯ ಆನಂದಾಪುರದೊಳಗೂ, ಯಿಜಯ ಯಿಠ್ಠಲಸ್ವಾಮಿಯು ಯಿಠ್ಠಲಾಪುರದೊಳಗೂ, ಯೇಣುಗೋಪಾಲಸ್ವಾಮಿಯು ಸಿಂಧವಾಡಿ ಪ್ರಾಂತದ ಗುಣಸಾಗರದೊಳಗೂ....

ಬುದ್ದಿ ಮೊಳೆದಾಗಿನಿಂದ ಯಲ್ಲೂ ಯಾವತ್ತೂ ಹೋಗಿರದಾಕೆಯಾಗಿದ್ದ ಚಿನ್ನಸಾನಿ ಹೊತ್ತು ಗೊತ್ತು ನೋಡದೆ ಬಲು ಸಂಭ್ರಮದಿಂದಲೇ ಸಜ್ಜಾಗಿ ಸಾರೋಟು ಯೇರಿದ್ದಳು. ಯೇಳೆಂಟು ಮಂದಿ ಪಯಿಲುವಾನರು ಹಿಂದ ಮುಂದ ಕಾಪಲು ಮಾಡುತಲಿದ್ದುದರಿಂದ ಭಯಪಡುವ ಅಗತ್ಯಯಿರಲಿಲ್ಲ.. ಮೊದ ಮೊದಲಿಗೆ ಸಾರೋಟೇನೋ ತೆಂಕಣ ದಿಕ್ಕಿನಲ್ಲಿದ್ದ ಗುಣಸಾಗರದ ದಾರಿಯನ್ನೇನೋ ಹಿಡಿದಿತ್ತು. ಆದರೆ ಸಿರುಬಿ ದಾಟಿ ಸೊಲದೇವರ ಹಳ್ಳಿ ಬರುತ್ತಲೇ ಬೇರೊಂದು ದಾರಿ ಹಿಡಿದುಬಿಟ್ಟಿತು. ಆ ದಾರಿ ಯಲ್ಲಿಗೆ ಹೋತದೆ ಯಂಬುದು ಸಾರಥಿಯಾದ ಮುಕುಂದನಿಗೆ ವತ್ತಟ್ಟಿಗಿರಲಿ ಖುದ್ದ ತಾಯಕ್ಕಗೇ ತಿಳಿದಿರಲಿಲ್ಲ. ತನ್ನ ಪಾಡಿಗೆ ತಾನೇ ಹೋತೂsss ಹೋತೂ ಹೋಗೇ ಹೋತು.. ಹೋಗಿ ಅದು ತಲುಪಿದ್ದೆಲ್ಲಿ ಅಂದರ....

ಗೋರಖನಾಥರು ಸಾಯಿರದಾವಂದು ವರುಷಗಳ ಪರ್ಯಂತ ವಂಟಿಗಾಲೀಲೆ ನಿಂತು ತಪಸ್ಸು ಮಾಡಿದ್ದಂಥ ಮಾನ್ಯರ ಮಸಲವಾಡ ಯಂಬ ಹೆಸರಿನ ಪುಣ್ಯಸಂಚಿತ ಗ್ರಾಮವನ್ನ.. ಅಂಗುಲಂಗುಲವಾಗಿ ತಾಯಕ್ಕಗ ಅದರ

ಗುರುತು ಹತ್ತಿತ್ತು.. ವಂದು ಛಣ ಕಣ್ಣುಗಳಿಗೆ ಮಂಪರಡರಿದಂಗಾತು.. ಬೆಮತು ವುಟ್ಟ ಬಟ್ಟೆ ವದ್ದೆ ಆದಂಗಾತು.. ವರ್ತಮಾನ ಕಾಲ ಯಂಬ ತಿಪ್ಪೆ ಅಡಿಯಿಂದ ಭೂತಕಾಲ ಮ್ಯಾಲಕೆದ್ದು ಬಂತು..ಹ್ಹಾ.. ಅಗೋ.. ಅದೇ ಮಂಟಪ!.. ಹ್ಹಾ.. ಅಗೋ ಅದೇ ಪುಷ್ಕರಣಿ!.. ಹ್ಹಾ.. ಅಗೋ ಅಲ್ಲಿ ವಂದು ದೇವದಾರು ರುಕ್ಷ ಯಿತ್ತಲ್ಲಾ.. ಹ್ಹಾ.. ಯಿಗೋ ಯಿಲ್ಲಿ.. ಮತ್ತಾ ್ಯವುದೋ ಯಿತ್ತಲ್ಲಾ!

"ಹಾಯ್.. ಯೇಣುಗೋಪಾಲಸ್ವಾಮಿ ಯೇನಿದಪ್ಪಾ ನಿನ್ನೀ ಮಾಯೇ.. ನೀನು ಕಣಸೊಳಗ ಮೂಡಿ ಅಪ್ಪಣೆ ಮಾಡಿದ್ದೇನು? ನೀನು ಯಾಕ ಹಾದಿ ತಪ್ಪಿಸಿದಿಯಪ್ಪಾ? ಯಿಲ್ಲಿಗೆ ಯಾಕ ಕರಕೊಂಡು ಬಂದು ಬಿಟ್ಟಿಯಪ್ಪಾ.. ನೆನಪುಗಳ ಬೆರಣಿ ವಟ್ಟಿ ನನ್ನ ಸುಡಬೇಕಂತ ಮಾಡಿಯಾ ಹೆಂಗ?" ಯಂದನಕಂತ ತಾಯಕ್ಕ ಬಾಯಿಗಡ್ಡ ಸೀರೆ ಸೆರಗನ ಯಿಟ್ಟುಕೊಂಡಳು.

ಹಾಯ್.. ಭೂತ ಭುಜಂಗನಾಥನೇ..!!

ಅಲ್ಲೇ ವಂದು ದರುಮ ಛತ್ರಯಿತ್ತಲ್ಲ.. ಅದರ ಮೇಲ್ವಿಚಾರಕ ದಯಾನಾಥ ಯಂಬಾತ ಯಿದ್ದನಲ್ಲ.. ಆತ ಅದಾವ ಪ್ರೇರಣೆಯಿಂದಲೋ ಬಂದು ಅವರನ್ನು ಕರೆಯೊಯ್ದು ಛತ್ರದೊಳಗ ವಸತಿ ಯಿತರೆ ಸವುಲಭ್ಯಗಳನ್ನು ಕಲ್ಪಿಸಿಕೊಟ್ಟ. "ಯಿದೇನವ್ವಾ.. ಯಿದಾವುದೋ ಗೊತ್ತು ಗುರಿಯಿಲ್ಲದ ದೇಸಕ್ಕ ಯಾಕ ಕರಕೊಂಡು ಬಂದಿ"ಯಂದು ಕೇಳುತ ಚೆನ್ನಾಸಾಮಿ ಆಕಳಿಸಿದಳು. "ಯೇನೋ ಮಗಳೇ ಆ ಭೂತ ಭುಜಂಗನಾಥಂದೇ" ಯಿದೆಲ್ಲ ಜವಾಬು ನೀಡುತಾ ತಾನೂ ಹ್ಹಾ.. ಯಂದಾಕಳಿಸಿದಳು ತಾಯಕ್ಕ...

ರಾತಿರಿ ವಂದು ಹೊತ್ತಿನಲ್ಲಿ.. ಯಿಷ್ಟಗಲ ಅಷ್ಟುದ್ದದ ವಂದು ಕಣಸು ಬಿತ್ತು.. ಅದರೊಳಗೆ ಸನ್ಯಾಸಿಯೋರ್ವ ಯೀಶಾನ್ಯ ದಿಕ್ಕಿನಿಂದ ನಡಕೋತ ಬಂದ, ಬಡಿದು ತಾಯಕ್ಕನನ್ನು ಯಬ್ಬಿಸಿದ.. ಯಾರಿರಬವುದಂತ ತಿಬ್ಬಳಿಸಿ ನೋಡಿದಳು.. ಅರೆ! ಭೂತಭುಜಂಗನಾಥರು.. ಯಷ್ಟು ವರುಷಂಗಳ ನಂತರ ತಾನಿವರನ್ನು ನೋಡುತ್ತಿರುವುದು.. "ಸ್ವಾಮಿ..." ಅಡಿಗಳಿಗೆರಗಿದಳು. ನಾಥರು ತಬ್ಬಿಕೊಂಡರು.. "ಪ್ರಿಯೇ.. ನಮಗೆ ನಮ್ಮ ಪ್ರೀತಿಯ ಕುವರಿಯನ್ನು ನೋಡುವ ಆಸೆ ಆಯಿತು ಅದಕ್ಕೆ...."

ಅತ್ತ ಕುದುರೆಡವು ಪಟ್ಟಣದೊಳಗ ಆ ಸುದ್ದಿ.. ಅಂದರ ಅದs ಸುದ್ದಿ ಕಿವಿಗೆ ಬಿದಲಾಗಾಯ್ತು ಮಾತ್ರುಮೂರ್ತಿಯಾದ ಜಗಲೂರೆವ್ವ ವಂದs ವಂದು ಅಗುಳು ಬಾನ ಮುಟ್ಟಲಿಲ್ಲ.. ವಂದs ವಂದು ಸೆರೆಮುಕ್ಕ ನೀರನ್ನು ಹಾಕ್ಕೊಂಡು

ಬಾಯಿ ಮುಕ್ಕಳಿಸಲಿಲ್ಲ.. ರೆಪ್ಪೆಗೆ ರೆಪ್ಪೆ ಅಂಟಿಸಿ ವಂದs ವಂದು ಜಾಮು ನಿದುರೆ ಮಾಡಲಿಲ್ಲ.. ವಂದs ವಂದು ಬಾರಿ ಮಯ್ನು ಲಟಲಟಾಂತ ಮುರೀಲಿಲ್ಲ.. ಸೂರಾss ಸೂರಾ ಯಂಬ ಮಂತರವನ್ನು ಜಪ ಮಾಡದೆ ಯಿರಲಿಲ್ಲ.. ನೋಡಿದವರಿಗೆ ಸುಬ್ರಸಾಗರದಂಗ ಗೋಚರ ಮಾಡುತಲಿದ್ದ ತಾನು ಅಂತರಂಗಿಕವಾಗಿ ಅಂಡಾವರನಾಗಿಬಿಟ್ಟಿದ್ದಳು. ಆಕೆಯು ಮಾಡಿದ ಬಾಣಂತನದ ರುಣದಲ್ಲಿದ್ದಂತವರು ಆಕೆಯನ್ನು ನಿಂತ ನಿಲುವುಕೀಲೆ ತರುಬಿ ವಂದs ವಂದು ತುತ್ತುಣ್ಣವ್ವಾ ಯಂದು ಬಗೆಬಗೆಯಿಂದ ಪೀಡಿಸಿ ನಿರಾಶರಾದರು.. ಆಕೆಯಿಂದ ವಂದಲ್ಲಾ ವಂದು ಯಿಧದ ಸಾಯ ಪಡದಿದ್ದಂಥೋರು ವಂದs ವಂದು ಬೊಗುಸೆ ನೀರು ಕುಡಿಯವ್ವಾ ಯಂದು ಆಕೆಯನ್ನು ಕುಂತ ಕುಲುವುಕೀಲೆ ತರುಬಿ ಪೀಡಿಸಿ ನಿರಾಶರಾದರು.. ಆಕೆಯ ಹಡದಪ್ಪನಾದ ಅಂತಾಡೆಪ್ಪನೂ ಮಸ್ತು ಹೇಳದೆ ಯಿರಲಿಲ್ಲ.. ಆಕೆಯ ಯದೆಯೊಳಗೆ ದುಕ್ಕ ಯಂಬುದು ಜಲಪಾತ ದೋಪಾದಿಯಲ್ಲಿ ದುಮ್ಮಿಕ್ಕಲಾರಂಭಿಸಿತ್ತು.. ಆಕೆಯು ಅರಣ್ಯರೋಧನದಿಂದಾಗಿ ಭೂತಬಿಲ್ಲೆ ದ್ಯಾಮಯ್ಯನ ವಸ್ತಿಯು ಬಗ್ಲೂರು ಬಲವಂತೆಪ್ಪನ ಬಿಡದಿ ಮನೆಗೆ ವರ್‍ಗಾವಣೆಗೊಂಡು ಬಿಟ್ಟಿತ್ತು. ಅಳಿದುಳಿದಿದ್ದ ದುಕ್ಕದಲ್ಲಿ ಬೇಯಿನ ಮರದವ್ವ ಯಂಥ ಬಿರುಗಾಳಿಗೂ ವಂದs ವಂದು ಯಲೆ ಅಲಗಾಡಿಸದೆ ಆಕೆಯ ದುಕ್ಕದಲ್ಲಿ ಯಿಂಬುಪಡಕೊಂಡಿತ್ತು.. ಮರದ ಮ್ಯಾಲಿದ್ದ ಬಾನಾಡಿಗಳಾದರೂ ಅಷ್ಟೇಯಾ?.....

ದುಕ್ಕ ಮತ್ತು ಕ್ರೋಧಗಳೆಂಬ ನದಿಗಳ ಸಂಗಮರೂಪಿಯಾಗಿ ಆಕೆ ಪಡುವಲ ಕಡೆ ಮುಖ ಮಾಡಿ "ಯಲಾಯ್ ಸೂರ್‍ಯಾಮನೇ.. ನನ್ನೆದಿ ಸಂಕಟ ನಿನಗ ಅರ್ಥ ಆಗುವಲ್ಲದೇನು? ಮುಳುಗಯ್ಯಾ ಮುಳುಗು" ಯಂದು ಗದರಿಸಿದೇಟಿಗೆ ನಾಕು ಮಾರು ಯತ್ತರದಲ್ಲಿದ್ದ ದಿನಕರನು ದುಬುಕ್ಕಂತ ಮುಳುಗಿಬಿಡಲು ಕತ್ತಲ ಸಾರಣೆಯಾತು. ಆಗಸದ ತುಂಬ ಯಲ್ಲಂದರಲ್ಲಿ ಚುಕ್ಕಿಗಳು ತಮ ತಮ್ಮ ಕಣ್ಣುಗಳನುಜ್ಜಿಕೊಳ್ಳುತ್ತ ಕಾಣಿಸಿಕೊಂಡವು.. ನಾಯಿ ರೂಪದಲ್ಲಿದ್ದ ಸಿವಸರಣೆ ಚನ್ನವ್ವ ಯಲಾಯ್ ತಾರೆ ನಿಹಾರಿಕೆಗಳಿರಾss ಮಾಸತಿಯಾದ ಜಗಲೂರೆವ್ವ ದುಕ್ಕ ಯಂಬ ನೋಂಪಿಯನ್ನು ಆಚರಣೆ ಮಾಡುತಲಿದ್ದಾಳೆ.. ನೀವೆಲ್ಲ....' ಯಂದು ಆಗ್ನೆ ಮಾಡಿದೊಡನೆ ಅವೆಲ್ಲ ಕಾವಳದ ಕಂಬಳಿಯನ್ನು ಹೊದ್ದು ಮರೆಯಾದವು. ವಂದಾರ ಚುಕ್ಕಿಯಿಲ್ಲುದುದನು ಕಂಡು ಚಂದ್ರಾಮ ಯಲಾಯ್ ಬೆಳ್ಳಿ ಯಲಾಯ್ ಮಂಗಳೀ.. ಯಲಾಯ್ ಬುಧೇ

ಯಂದು ತನ್ನ ವಬ್ಬೊಬ್ಬ ಪ್ರಿಯತಮೆಯಂದಿರ ಹೆಸರು ಹಿಡಿದು ಕೂಗುತ ಕಾಣಿಸಿಕೊಂಡ.. ಆಕೆ ಅವನತ್ತ ಮುಖ ಮಾಡಿ ಯಲಾಯ್ ಚಂದ್ರಾಮನೇ.. ನನ್ನ ಹಸುಗಂದಮ್ಮನಾದ ಸೂರನು ಜೀವನ್ಮರಣ ಹೋರಾಟವನ್ನು ಆರಂಭಿಸಲಿರುವನು ಆದ್ದರಿಂದ ನೀನು ಯಾವ ಕಾರಣಕ್ಕೂ ದುಂಡಗಾಗದಿರು' ಯಂದು ಆಗ್ನೆ ಮಾಡಲು ಆ ಶಶಿಕರನು "ಆಯ್ತುವ್ವಾ ಆಯಿತು.." ಯಂದು ಸಮ್ಮತಿಯನ್ನು ಸೂಚಿಸಿ ಬೆಳದಿಂಗಳ ಪಯ್ಕಿ ಮೂರು ಪಾವಲಿ ಭಾಗವನ್ನು ವುಪಸಮ್ಮರಿಸಿಕೊಂಡುಬಿಟ್ಟನು.

ಯೀ ಪ್ರಕಾರವಾಗಿ ಯಲ್ಲಂದರಲ್ಲಿ ಕತ್ತಲಾವರಿಕೆಯಾಗಲು ಪಟ್ಟಣದ ತುಂಬೆಲ್ಲ ಬೆಳಕಡಗಿತು. ಕುಂತ ನೆಲವನ್ನೇ ಸೂನ್ಯಸಿವ್ಮಾಸನವನ್ನಾಗಿ ಮಾಡಿಕೊಂಡು ಯಿಡೀ ಪಟ್ಟಣವನ್ನೇ ದುರುಗಟ್ಟಿ ನೋಡಿದ ಆ ಮಾಸಾದ್ವಿಯು ಕೂದಲನ್ನು ಹ್ಹಾ... ಹ್ಹಾ.. ಅಂತ ಚೆಲ್ಲೊಡೆದು ಪ್ರಭಾವಳಿ ರಚನೆ ಮಾಡಿಕೊಂಡಳು.. "ಯಲಮೋ ಸೂರನೇ" ಯಂದಾಕೆ ಕೂಗಿದೊಡನೆ....

ಪಟ್ಟಣದೊಳಗಿನ ಸಮಸ್ತ ಗಂಡಸರ ಯಡಗಣ್ಣು, ಹೆಂಗಸರ ಬಲಗಣ್ಣು ಕುಣಿಯಲಾರಂಭಿಸಿದ ವೆಂದ ಮ್ಯಾಲ, ವುಂಡ ಕೂಳು ವಡಲೊಳಗಿಂದ ತೊಳಸಿ ಗಂಟಲಿಗೆ ಬಂದಾಂಗಾಗತೊಡಗಿತೆಂದ ಮ್ಯಾಲ.. ಮೂಡೋ ಕಡೇಲೊಂದು, ಮುಣುಗೋ ಕಡೇಲೊಂದು ಕಡಗೋಲಿನಂಥ ಬಾಲದ ಚುಕ್ಕಿಗಳು ಮೂಡಿ ಕಡೇಲೊಂದು, ಮುಣುಗೋ ಕಡೇಲೊಂದು ಮೂಡಿ ಮರೆಯಾದವೆಂದ ಮ್ಯಾಲ, ಸನೀಕಲಿದ್ದ ಕುರುಚಲು ಕಾಡೊಳಗಿಂದ ತೋಳನರಿಗಳು ಮುಗುಲಿಗೆ ಮುಖ ಮಾಡಿ ಹೋಯ್ ಅಂತ ಹೂಳಿಡಲಾರಂಭಿಸಿದವೆಂದ ಮ್ಯಾಲ..

ಬಗೆಬಗೆ ರುಕ್ಷರಾಜಿಗಳಿಂದಲೂ, ಹರಿವ ಹಳ್ಳತೊರೆಗಳಿಂದಲೂ ಬಲು ಸೋಭಾಯ ಮಾನವಾಗಿದ್ದ ಬಯಲೊಳಗ ಸುರಸುಂದರ ಮಣಕಗಳ ನಡುವೆ ಸುರತ ಸಂಕಥಾಯಿನೋದದಿಂದ ಸೋಭನ ಪ್ರಸ್ತದಲ್ಲಿ ನಿರತನಾಗಿದ್ದ ಸೂರನ ಕುಂಡಲಗಳಿದ್ದ ಕರ್ಣಗಳಿಗೆ ತಾಯಿಯ ಕೂಗು ಬರಸಿಡಿಲಿನಂತೆರಗಿತು. ಕೂಡಲೆ ತನ್ನ ಮೊಳದುದ್ದದ ಸಿಸ್ನವನ್ನು ವುಪಸಮ್ಮರಿಸಿಕೊಂಡನು. ತನ್ನ ಡುಬ್ಬದ ಮ್ಯಾಲಿಂದ ಯಿಳಿದು ಯಿರಮಿಸಿಕೊಂಡುದಲ್ಲದೆ ನಖಸಿಖಾಂತ ಜಲಜಲನೆ ಬೆಮೆತ ತನ್ನ ಪ್ರಿಯತಮನನ್ನು ನೋಡಿ ಯಾಕುಂದೇ ತುಷಾರದ ಸರಸತಿಯು "ಯಾಕೆ ಪ್ರಿಯಾ ನಿನಗಾದ ಬ್ಯಾಸರಯೇನು?" ಯಂದು ಯಿಚಾರ ಮಾಡಲು ಅದಕಿದ್ದು ಸೂರನು "ನನ್ನ ಪ್ರಾಣಪದಕಳಾದ ಸರಸಿಯೇ.. ನನ್ನ ತಾಯಿ ಜಗಲೂರೆವ್ವ

ಸಂಕಷ್ಟದಲ್ಲಿರುವಂತಿರುವುದು.. ನಾನೀಗಲೇ ಹೊರಟು ಆ ಮಾತೆಯ ಯದುರು ಹಾಜರಿರಬೇಕಿರುವುದು. ನಿನ್ನ ಕಾಮತ್ರುಷೆಯನ್ನು ತಮಣಿ ಮಾಡಲಾಗದಿದ್ದುದಕೆ ಕ್ಷಮೆ ಯಾಚಿಸುವೆನು" ಯಂದು ಕೇಳಿಕೊಂಡನು. ಅದಕಿದ್ದು ಸರಸಿಯು "ನಿನ್ನ ಮಾತ್ರುಭಕ್ತಿಯು ಅಸದಳವಾದುದು. ಯೀಗಿಂದೀಗಲೇ ಹೋಗಿ ಬರುವಂತವನಾಗು.. ನೀನು ಮರಳಿ ಬರುವವರೆಗೆ ನಾವ್ಯಾರೂ ವಂದು ಹಿಡಿ ಹುಲ್ಲಾಗಲೀ, ವಂದು ಗುಟುಕು ನೀರನ್ನಾಗಲೀ ಮುಟ್ಟುವುದಿಲ್ಲ" ಯಂದು ಹೇಳಿ ಕಾಳಿ, ಮಾಳಿ, ಗಂಗಿ, ತುಂಗಿ, ರಂಗಿ, ಸಂಗಿ ಗೋಯಿಂದಿಯರೇ ಮೊದಲಾದ ಮಹಿಷಿಕಾ ಸುಂದರಿಯರು ತಮ್ಮ ಪ್ರಿಯತಮನನ್ನು ಬೀಳ್ಕೊಟ್ಟರು.

ಅವರಿಂದ ಬೀಳುಕೊಂಡ ಸೂರನು ಪಂಚಕಲ್ಯಾಣಿ ಕುದುರೆಯಂತೆ ಪಟ್ಟಣ ಪ್ರವೇಶ ಮಾಡಿದನು. ಅಗೋ ಅಲ್ಲಿ ದುಕ್ಕದಿಂದ ಬಳಲಿ ಅರೆ ಮೂರ್ಛೆ ಹೋಗಿರುವ ಮಾತ್ರುಮೂರ್ತಿಯು. ವಂದೊಂದು ಹೆಜ್ಜೆಯನಿಕ್ಕುತ ಬಳಿಸಾರ್ದು ಅಪ್ಯಾಯಮಾನತೆಯಿಂದ ಮುಖ ನೆಕ್ಕಿ "ತಾಯೇ.. ನನ್ನನ್ನು ಕೂಗಿ ಕರೆದ ಕಾರಣ ಯೇನು?" ಯಂದು ಗೊರಗುಟ್ಟಿದನು. ಆಕೆ ಆತನ ಕೊರಳನ್ನು ಬರಸೆಳೆದು ಅಪ್ಪಿಕೊಂಡು ಲೊಚಲೊಚ ಮುದ್ದಿಸಿದಳು. ಸೂರಾ.. ಸೂರಾss.. ನನಕಂದಾs.. ಯಂದುದ್ಗಾರ ಮಾಡಿದಳು. ಪಸು ಪಚ್ಚಿಗಳಷ್ಟೆ ಅರ್ಥಮಾಡಿಕೊಳ್ಳಬವುದಾದ ಸಂಭಾಷಣೆ ಅವರೀರ್ವರ ನಡುವೆ ನಡೆಯಿತು.. ಅದು ಯಾವ ಪ್ರಕಾರ ನಡೆಯಿತೆಂದರೆ ಯೀ ಪ್ರಕಾರವಾಗಿ ನಡೆಯಿತು...

ತಾಯಿಯ ಮಾತನ್ನು ಆ ಕಂದಯ್ಯನು ಬಿಲ್‌ಕುಲ್ ವಪ್ಪಲಿಲ್ಲ.. "ನಿನ್ನಂಥ ವೀರವನಿತೆ ಆಡೋ ಮಾತೇನು ತಾಯಿs.. ಹೆದರಿ ಪಲಾಯನ ಮಾಡಿದಲ್ಲಿ ಪ್ರಜೆಗಳು ಹೇಡಿಯಂದು ಆಡಿಕೊಳ್ಳುವು ದಿಲ್ಲವೇನು? ಮಿಂಚೇರಿಗೆ ಕೆಟ್ಟ ಹೆಸರು ತಗುಲುವುದಿಲ್ಲವೇನು? ಯಿಲ್ಲೇಯಿದ್ದು ಬಂದುದನ್ನು ಧಯರ್ಯದಿಂದ ಯದುರಿಸೋಣ.. ಸಮಯ ಬಂದಲ್ಲಿ ಪಟ್ಟಣದ ಕಲ್ಯಾಣಾರ್ಥವಾಗಿ ಯೀರ ಮರಣವನ್ನು ಅಪ್ಪಲಕ ಸಿದ್ಧನಿರುವೆನು. ಬಲಿಗೊಂಡಲ್ಲಿ ಅಚಂದ್ರಾರ್ಕವಾಗಿ ವುಳಿಯುವ ಯೀರಗಲ್ಲು.. ಯಿಲ್ಲದಿದ್ದಲ್ಲಿ ಮಾಮೂಲು ಲವುಕಿಕ ಜೀವನವು.. ನನ್ನಂಥ ಚತುಷ್ಪಾದಿಯ ಸಲುವಾಗಿ ನೀನೀ ಪರಿ ದುಕ್ಕಿಸುವುದು ಸರಿಯಲ್ಲ.. ಧಯರ್ಯದಿಂದಿರು ತಾಯೇ" ಯಂದು ಹೇಳಿದ್ದಕ್ಕೆ ಆ ತಾಯಿಯು "ನಿನಗಿರುವಷ್ಟು ಗ್ನಾನ ನನಗಿಲ್ಲ ಕನಪ್ಪಾ.. ನೀನೇ ನನಗ ದಿಕ್ಕೂ, ಬಂಧೂ ಬಳಗ ಯಲ್ಲಾವು.. ನಿನ್ನ ಕಳಕೊಂಡು ನಾನು ವಂದು ಛಣ ಬದುಕಿರಾಕಿಲ್ಲ.. ನಿನ್ನ ಪರಾಕ್ರಮದ

ಮ್ಯಾಲ ನನಗ ನಂಬುಕೆ ಅದss.. ನೀನು ಮಾತ್ರಯಾರ ಕಯ್ಯಾಗ ಸಿಕ್ಕೋದು ಬ್ಯಾಡ.. ಮಯ್ಯಿ ಮ್ಯಾಲ ಖಬುರಿರಲಿ.. ಹುಷಾರು..” ಯಂದು ನಾಕಾರು ಬುದ್ಧಿವಾದದ ಮಾತಾಡಿದಳು. ಅದಕಿದ್ದು ಸೂರನು “ಆಗಲಿ ತಾಯಿs” ಯೆಂದನು. ನಾಲಗೆ ಚಾಚಿ ಆಕೆಯ ಕಣ್ಣಾಲಿಗಳ ತುದಿಯಲ್ಲಿದ್ದ ಅಸ್ರುಬಿಂದುಗಳನ್ನು ಆಪೋಸನಗೊಂಡನು. ಆಕೆ ಬ್ಯಾಡಾಂದರೂ ಕೇಳದೆ ಪಟ್ಟಣದ ರಾಜಬೀದಿಯನ್ನು ಪ್ರವೇಸ ಮಾಡಿದನು. ಗಂಡಸರಿದ್ದಲ್ಲಿ ತನ್ನನ್ನು ಹಿಡಿಯಬವುದು ಯಂದು ಅರ್ಥ ಬರುವ ರೀತಿಯಲ್ಲಿ ಹತ್ತು ಹೆಜ್ಜೆಗೊಂದೊಂದು ಸಲ ಗರ್ಜನೆ ಹಾಕುತ, ಸಿಮ್ಮಾವಲೋಕನ ಮಾಡುತ ಮೋಣೋಣಿಗಳಲ್ಲೆಲ್ಲ ಸುಂಟರುಗಾಳಿಯೋ ಪಾದಿಯಲ್ಲಿ ಸುಳುಸುಳಿದಾಡಿದನು.. ತನಗೆ ಗೊತ್ತು ಬಲ್ಲಂಥ ವಂದೊಂದು ಮನೆಯದುರು ನಿಂತು ಯಲಾಯ್ ಜಲಜಾ.. ಯಲಾಯ್ ರುಕ್ಕೂss.. ಯಲಾಯ್ ಸುಂದರೀ.. ಯಲಾಯ್ ರಂಭಾss.. ಯಲಾಯ್ ಯಿಲೋತ್ತಮೇ.. ಯಂದು ಕೂಗಿ ಕರೆಯದಿರಲಿಲ್ಲ ತಾನು.. ತಮ್ಮ ಮನುಮಥನ ಕರೆ ಕೇಳಿಸಿಕೊಂಡ ಆ ಮಹಿಷಸಾನಿಯರು ತಾವಿದ್ದ ಕೊಟ್ಟಿಗೆಗಳೆಂಬ ಅಂತಃಪುರಗಳಿಂದ ಮುಕ್ತರಾಗಿ ಮೋಡೋಡಿ ಬಂದು ಆ ಚಿರಜವ್ವನಿಗನ ಹಿಂದ ಮುಂದ ಸೇರದ ಯಿರಲಿಲ್ಲ.. ಯಿದರಿಂದಾಗಿ ಮೋಣು ಮೋಣಿಯಿಂದ ಆ ಸಯ್ನವು ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ.. ಅವುಗಳ ಮೋಡಾಟವೇನು? ಅವುಗಳ ಖುರಪುಟದ ಸದ್ದೇನು? ಸದರಿ ಪಟ್ಟಣವನ್ನಾವರಿಕೆ ಮಾಡಿದ ಧೂಳೇನು? ಅವೆಲ್ಲವುಗಳನ್ನು ಮೋಡಾಡಿಸಿಕೊಂಡು ನಡೆಯುತ್ತ ಸಾಗಿದ ಅವನು ಸೀದ ಸಿಡೇಗಲ್ಲ ಕರಗಲ್ಲ ಬಳಿಗೆ ಬರುತಾನೆ.. ಆ ಮಹಿಷಾ ಸ್ತ್ರೀ ಸಮೂಹದ ವಡೆಯನು ಪ್ರತಿಯೊಬ್ಬರ ಕಡೆಗೆ ‘ನೀವೆಷ್ಟು ಗಡುತರದವರು’ ಯೆಂಬಂತೆ ನೋಡುತ್ತಾನೆ. ವಸ್ತಿಯನ್ನು ಸಮೀಪಿಸುತ್ತಾನೆ..ಮೂರು ಸಲ ಪರದಕ್ಷಿಣೆ ಹಾಕುತ್ತಾನೆ.. ಅದರ ವಂದೊಂದು ಭಾಗವನ್ನು ನೆಕ್ಕಿ ಸ್ವಾಮಿ ನಿಷೆ« ಮೆರೆಯುತ್ತಾನೆ.. “ನನ್ನ ಸ್ವಾಮಿಯ ಸರೀರದೊಳಗಡೆ ನೀನು ಅಡಗಿ ಕುಂತಿರುವೆ ಅಂತಲ್ಲಾ.. ಯಿದು ನಿಜವಾಗಿದ್ದ ಪಕ್ಷದಲ್ಲಿ ಹೊರಗಡೆ ಬಂದು ನನ್ನೊಡನೆ ಸೆಣಸಿ ಬಲಿ ತಗೋ..” ಯಂದು ಸಾಂಬವಿಗೇ ಸವಾಲೆಸೆಯುತ್ತಾನೆ.. ತನ್ನನ್ನು ಬಲಿ ತಗೊಳ್ಳುವುದೆಂದರ ಮಹಿಷಾಸುರನನ್ನು ಸಮ್ಹಾರ ಮಾಡಿದಷ್ಟು ಸುಲಭವೆಂದು ತಿಳಿಯದಿರು ಯಂದು ತನ್ನ ಪರಾಕ್ರಮದ ಸುಳಿವು ನೀಡುತ್ತಾನೆ.. ಅದಕ ವಸ್ತಿಯು ಮುಗುಳು ನಗುವುದು.

ಯೀ ಪ್ರಕಾರವಾಗಿ ಅಲ್ಲೆಲ್ಲ ಅಲಾಯಿ ಆಡಿದ ಸೂರನು ಹಂಪಜ್ಜ, ಅಡುವಯ್ಯ, ಯೀರಯ್ಯ, ಪಾಲಯ್ಯ, ಬೋರಯ್ಯ ಮೊದಲಾದ ಹಿರೀಕರತ್ತ ದುರುಗುಟ್ಟಿ ಅಲ್ಲಿಂದ ಸೀದ ನಡೆದು ಅರಮನೆಯ ಹಿತ್ತಲಗೋಡೆಯನ್ನು ಡಿಕ್ಕಿ ಹೊಡೆದು ಬೀಳಿಸಿದನು.. ನೆಲಗೆದರಿ ಧೂಳೆಬ್ಬಿಸಿ ಅರಗಳಿಗೆ ಅರಮನೆಯನ್ನು ಮಂಗಮಾಯ ಮಾಡಿದನು. ಅಲ್ಲಿಂದ ಸೀದ ನಡೆದು ರಣದಿಬ್ಬವನ್ನೇರಿ ಪಟ್ಟಣವನ್ನು ಸಿಮ್ಮಾವಲೋಕನ ಮಾಡಿ ಯಿಳಿದನು. ತರುವಾಯ ಮಹಿಷಿಕಾ ಸಾನಿಯರೊಂದಿಗೆ ಯೇಕಾಸೂರಿಯ ಗುಡ್ಡದ ತಪ್ಪಲ ಕಡೇಕ...

ಅರರೆ ಯಿದೇನಿದು? ಅಯ್ರಾವತದೋಪಾದಿಯಲ್ಲಿ ಮಾಬಲಿ ಯಿಲ್ಲೆಲ್ಲ ಅಡ್ಡಾಡಿ ಹೋದಂಗಾತಲ್ಲಾ, ತಮಗಾವಾಗ್ಗೆ ಮಯ್ಯೊಳಗ ಕಸುವಿಲ್ಲದಂಗಾಗಿತ್ತಲ್ಲ.. ಯಿಂದನಕಂತ ಪ್ರತಿಯೊಬ್ಬರು ಕ್ರಮಕ್ರಮವಾಗಿ ಸಹಜ ಸ್ಥಿತಿಗೆ ಮರಳಲಾರಂಭಿಸಿದರು.

ಯಾವತ್ತೂ ಕವಿದಿರದಿದ್ದ ಮಾಯಾದ ನಿದ್ದೆ ಅಂಬುದು ಸದರಿ ಕುದುರೆಡವು ಪಟ್ಟಣವನ್ನು ಕವಿದು ಸೊಲುಪ ಹೊತ್ತು ಅಳ್ಳಾಡಿಸಿಬಿಟ್ಟಿತ್ತು.. ಯಾವತ್ತು ಹೊತ್ತು ಮುಳುಗಿತ್ತೋ? ಯಾವತ್ತು ಬೆಳಗಾತೋ? ತಾವು ಮಲಗಿದ್ದೆವೋ? ಯಚ್ಚರಿದ್ದೆವೋ? ನಿದ್ದೆಯಚ್ಚರಗಳ ನಡುವೆ ಜುವ್ವಾಲೆ ಆಡುತಲಿದ್ದೆವೋ..? ನೀನೇ ಹಿಂಗ ಮಲಿಕ್ಕಂಡಿದ್ದರ ಹೆಂಗಪ್ಪಾ..? ತಾನೇ ಹಿಂಗ ಮಯ್ಯು ಮರತರ ಹೆಂಗಪ್ಪಾ..? ಅವರನ್ನಿವರು, ಯಿವರನ್ನವರು ಹೇಳೋದು, ಕೇಳೋದು ಮಾಡುತಲಿದ್ದರು ಸಿವನss ಯಿಲ್ಲೊಂದ ಅಲ್ಲ.. ಅಲ್ಲೊಂದ ಅಲ್ಲ.. ಸಮಸ್ತ ಪಟ್ಟಣದ ತುಂಬೆಲ್ಲ ಸಿವನೇ.. ಸಂಪೂರ್ಣ ಯಚ್ಚರಾಣ ಆಗೋರಾಗಿ ತಮ ತಮ್ಮ ಮನೆಗಳಿಂದ ಹೊರಬಂದು ನೋಡುತಾರ.. ಕಣ್ಣೆದುರುಗೇ ತಮ ತಮ್ಮ ಮಣಕಗಳು ಹೋದುವಲ್ಲ.. ಅವುಗಳನು ತರುಬುವ ತಾಕತ್ತು ತಮ್ಮಲ್ಲಿ ವುಡುಗಿತ್ತಲ್ಲ.. ಯಾಕ ಹಂಗಾತು? ಯಾಕ ಹಿಂಗಾತು?

ಯಿದಕೆಲ್ಲ ಜಗಲೂರೆವ್ವನ ಕೋಣವೇ ಕಾರಣ ಯಂಬ ನಿರಣಯಕ ಸಮಸ್ತ ಪಟ್ಟಣವು ಯಷ್ಟೋ ಹೊತ್ತಿನ ಮ್ಯಾಲ ಬಂತು.. ಮೂಲಿಂಟಿ ನಾಗಯ್ಯ, ನಡುಲಿಂಟಿ ನಗಾರಯ್ಯ, ಕುಂಬಾರ ಅಳ್ಳೆಪ್ಪ, ಯೀಡಿಗರ ಬಾಲಯ್ಯ, ಮದೇಟಿ ಬಂದೆವ್ವ ಯಿವರೇ ಮೊದಲಾದ ನೂರಾರು ಮಂದಿ ತಮ ತಮ್ಮ ಮಣಕಗಳಿಗಾಗಿ ಹುಡುಕ್ಕೋತ ಹುಡುಕ್ಕೋತ ಯೇಕಾಸೂರಿ ಗುಡ್ಡವ ತಲುಪದೆ ಯಿರಲಿಲ್ಲ.. ತಮ ತಮ್ಮ ರಾಸುಗಳನ ಗುರುತಿಸದೆ ಯಿರಲಿಲ್ಲ.. ಬರ್ರೆವ್ವಾ..

ಬಾರೆವ್ವಾ ಯಂದು ಗೋಗರೆಯದೆ ಯಿರಲಿಲ್ಲ. ಆದರ ಸತಿ ಕಂಕಣ ಮುಂಗಾಲಿಗೆ ಕಟ್ಟಿಕೊಂಡಿದ್ದ, ಸಮಯ ವದಗಿದಲ್ಲಿ ಸೂರನೊಡನೆ ಸಹಗಮನ ಮಾಡಲು ಸಜ್ಜುಗೊಂಡಿದ್ದ ಅವು ಸ್ವಾಮಿನಿಷೆ« ಮೆರೆಯದೆಯಿರಲಿಲ್ಲ.. ಕಜ್ಜಿಪುಳ್ಳೆ ಕಂದಮ್ಮಗಳಾಗಿದ್ದಲ್ಲಿ ಹೊಡದು ಬಡದು ಯಳಕೊಂಡು ಬರಬವುದಿತ್ತು.. ಆದರ ಅವು ಯಿರುವುದು ಸೂರ ಯಂಬ ಯೇಳು ಸುತ್ತಿನ ಕ್ವಾಟೆ ಸುಪರ್ದಿಯಲ್ಲಿ.. ತಮಗುಳಿದಿರುವ ದಾರಿ ಅಂದರ ಸೂರನನ್ನು ಹಿಡಿಸುವುದು.. ಸರೆ! ಅವರೆಲ್ಲ ಬಂದು ಪಟ್ಟಣಸ್ವಾಮಿ, ದಯವಸ್ಥ ಹಿರೀಕರನ್ನು ಕಂಡು ಫಲಾನ ಹಿಂಗಿಂಗೇ ಯಂದು ಅಳಲು ತೋಡಿಕೊಂಡೊಡನ.....

ಫಲಾನ ಜಗೇವಳಗಿರುವ ಮಾಬಲಿಯನ್ನು ಹಿಡಿದೆಳತರುವಂತೆ ಆಗ್ನೆ ಮಾಡಲು ತೊಲೆ ತುಂಡಿನಂಥವರು ಯಾಕಾಗಬಾರದೆಂದು ಹೋದರು.. ಆದರ ಸೂರನ ತೀಕ್ಷ್ಣದ್ರುಸ್ಟಿಯನ್ನು ಯದುರಿಸಲಾಗದೆ ವಾಪಾಸು ಬಂದು ತಮ ಕಯ್ಲಾಗಲ್ಲ ಯಂದರು.. ತರುವಾಯ ಹೋದ ಹದಿನಯ್ದಿಪ್ಪತ್ತು ಮಂದಿ ಅದರ ಬಾಲದೇಟಿಗೆ ತತ್ತರಿಸಿ ಮರಳಿದರು.. ತರುವಾಯ ಹೋದ ಮುವ್ವತ್ತು ನಲವತ್ತು ಮಂದಿಯನ್ನು ಸೂರನು ಕೋಡಿನಿದ ತಿವಿದು ಮೋಡೋಡುವಂತೆ ಮಾಡಿದನು.. ಹೆಂಗಪ್ಪಾ ಅದನ್ನು ಹಿಡಿಯುವುದೆಂಬ ಯಸನ ತಗುಲಿಕೊಂಡು ದಯವಸ್ಥ ಮಂದಿ ಮಾಬಲಿಯನ್ನು ಹಿಡಿದೆಳೆದು ತಂದವರಿಗೆ ಕೂರಿಗೆ ಹೊಲವನ್ನು ಯಿನಾಮು ರೂಪದಲ್ಲಿ ಕೊಡುವುದಾಗಿ ಟಾಮುಟಾಮು ಹಾಕಿಸಿದರು. ಆದರ ಸಿವ್ಮ್ಮದೊಂದಿಗೆ ಹೋರಾಡಿದವರಿಗಾಗಲಿಲ್ಲ.. ಹುಲಿಂಯೊಂದಿಗೆ ಹೋರಾಡಿದವರಿಗಾಗಲಿಲ್ಲ.. ಕರಡಿಗಳೊಂದಿಗೆ ಕುಸ್ತಿ ಆಡಿ ಗೆದ್ದವರಿಗೂ ಆಗಲಿಲ್ಲ.. ಹೋದವರೆಲ್ಲ ತಮ ತಮ್ಮ ಮಯ್ನಗಳನ ಮುಪ್ಪು ಮಾಡಿಕೊಂಡು ಬಂದರು.. ಹೆಳವರಾಗಿ ಬಂದರು.. ಅದು ಸಾಮಾನ್ಯ ಕೋಣವಲ್ಲ ತಂದೆಗೋಳಾ.. ಅಷ್ಟ ದಿಗ್ಗಜಗಳಿರುವುದು ವಂದೇಯಾ.. ಅದೊಂದೆ ಯಿರುವುದು ವಂದೇಯಾ.. ಅದರ ಸರೀರದೊಳಗ ನೂರು ಮಂದಿ ರಾಕ್ಷಸರಿದ್ದಂಗದಾರ.. ತ್ರಿಮೂರ್ತಿಗಳಿದ್ದಂಗದಾರ.. ಸಪ್ತ ರುಷಿಗಳದಂಗದಾರ.. ಯಿನಾಮಿನಾಸೆಗೆ ಅದನು ಹಿಡಿಯಲು ಪ್ರಯತ್ನಿಸಿ ತಾವು ಪಾಪ ಮಾಡಿದೆವಲ್ಲಾ.. ಯಂದು ಕೆಲವರು ಹಲುಬೂತ ಮತಿಭ್ರಮಿತರಾದರೆ.. ಕೆಲವರು ಬೋಧ ಪಡೆಯಲೋಸುಗ ಅವಧೂತರನ್ನು ಹುಡುಕಿಕೊಂಡು ಅಲೆಯಲಾರಂಭಿಸಿದರೆಂಬಲ್ಲಿಗೆ ಸಿವಸಂಕರ ಮಾದೇವss

ಹಂಗಂತ ಸುಮಕ ಬಿಡಲಕ ಅಯ್ತದಾ.. ದಯವಸ್ತ ಮಂದಿ ಅದನು ಬಂಧಿಸುವ ಯಿಷಯದಲ್ಲಿ ಮಸ್ತು ಯತ್ನ ಪ್ರಯತ್ನಗಳನು ಮುಂದುವರಿಸದೆ ಯಿರಲಿಲ್ಲ.. ಸಾಂಬವಿ ತಮಗ ವಡ್ಡಿರುವ ಪರೀಕ್ಷೆಗಳಲ್ಲಿ ಯಿದೂ ವಂದು ಯಂದು ಭಾವನೆ ಮೂಡಿತು. ಅದರ ಫಲವಾಗಿ ಖಡುಗ, ಭಲ್ಲೆ, ಗುರಾಣಿ ಹಿಡಕೊಂಡು ಹೋಗಿ ಮುಂಚ್ನು ಹುಣಸೆಹಣ್ಣು ಮಾಡಿಕೊಂಡು ವಾಪಾಸಾದವರೆಷ್ಟೋ? ಹೆಂಡ ಕುಡಿಸಲು ಹೋಗಿ ವದೆ ತಿಂದವರೆಷ್ಟೋ? ಸೂರ ಯಂಬುದು ಪ್ರಸ್ನಾರ್ಥಕ ಚಿನ್ನೆಯಾಗೇ ವುಳಿಯಿತೆಂಬಲ್ಲಿಗೆ.. ಅದಕ ಜವಾಬು ಅಲ್ಲುಂಟಾ? ಯಿಲ್ಲುಂಟಾ? ಯಲ್ಲುಂಟು? ಯಂಬಲ್ಲಿಗೆ....

* * * *

ಅನಂತಪುರದ ಕಡೇಕ ಹೊರಡುವ ಮೊದಲು ತನ್ನ ಸರೀರದ ಮ್ಯಾಲಿಂದ ಬೊಬ್ಬಿಲಿ ನಾಗಿರೆಡ್ಡಿಯ ದಿರಿಸನ್ನು ವುತಾರ ಮಾಡಲು ನಾನಾ ರೀತಿಯಲ್ಲಿ ಮನ್ರೋ ಸಾಹೇಬ ಪ್ರಯತ್ನವ ಮಾಡದೆ ಯಿರಲಿಲ್ಲ.. ಆದರದು ಬಡಪೆಟ್ಟಿಗೆ ವುತಾರಾಗಲಿಲ್ಲ.. ಬಲು ತ್ರಾಸು ಕೊಟ್ಟಿತು.. ಅದೆಂಗ ಯಿಳುವುತೀಯೋ ಯಿಳುವು ಯಂದು ಸವಾಲು ಹಾಕಿದಂತೆ, ಬಿಚ್ಚಲಕ ಹೋದಾಗ ಚರುಮ ಅದರೊಟ್ಟಿಗೆ ಕಿತ್ತುಕೊಂಡು ಬಂದಂತೆ ಭಾಸವಾಯಿತು.. ಕೊನೆಗೂ ಸರೀರದಿಂದ ಕಳಚುವಲ್ಲಿ ತಾನು ಸಫಲಗೊಂಡಿದ್ದುಂಟು.. ಆ ದಿರಿಸು ಅಂಗಲಾಚಿದಂತೆ, ಹಂಗಿಸಿದಂತೆ, 'ಅದೆಂಗ ಹೋತೀಯೋ ಹೋಗು' ಯಂದು ಯಚ್ಚರಿಸಿದಂತೆ ಭಾಸವಾಯಿತು. ಯಿದರೊಳಗ ತನ್ನದೇನು ತಪ್ಪಿಲ್ಲ.. ಅವಯ್ಯ ಮಾಮೂಲು ಮನುಷ್ಯನಂತೆ, ಯಿತಿಹಾಸದೊಳಗ ನಷ್ಟವಾಗದಂತೆ ನೋಡಿಕೊಳ್ಳಬೇಕೆಂಬ ವುದ್ದಿಶ್ಯದಿಂದಾಗಿಯೇ ತಾನು ಯಿಂಥ ಕ್ರುತ್ಯ ಯಸಗಬೇಕಾಯಿತೆಂದೂ, ಹುತಾತುಮ ಪಟ್ಟ ಯೇರದ ಯಾರೊಬ್ಬರನ್ನೂ ಯಿತಿಹಾಸ ತನ್ನೊಳಗ ಅನುವು ಮಾಡಿಕೊಟ್ಟಿಲ್ಲವೆಂದೂ ಆ ದಿರಿಸಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದನು. ನಾಗಿರೆಡ್ಡಿಗೆ ಲಭಿಸಲಿರುವುದು ಮರಣದಂಡನೆಯಲ್ಲ.. ಅದೊಂದು ಅನೂಹ್ಯ ಬಲಿದಾನ.. ಯಂಜಲು ಅದಲು ಬದಲು ಮಾಡಿಕೊಂಡ ನಂತರ ಅವಯ್ಯ ನಿರಮ್ಮಳತೆಯಿಂದ ಯಿದ್ದದ್ದು ತನಗೆ ಸರಿ ಕಾಣಲಿಲ್ಲ. ತನ್ನ ಯಿರುದ್ದ, ಕುಂಪಣಿ ಸರಕಾರದ ಯಿರುದ್ಧ ಹೋರಾಡಬೇಕಿತ್ತು.. ಹೋರಾಟವೇ ಹುತಾತುಮ ಪಟ್ಟದ ಪ್ರಥಮ ಸೋಪಾನ ಯಂದು ತಿಳಿಯಬೇಕಿತ್ತು.. ಸದರಿ ರೂರಲ್ಲಿಂಡಿಯಾ ಮಂದಿಯೇ ಯಿಷ್ಟು.. ಹಿಂದು ಮುಂದು ಆಲೋಚನೆ ಮಾಡದೆ ಕೆರಳುವುದು,

ವುದ್ವಿಗ್ನರಾಗುವುದು, ಭಾವಪರವಸರಾಗುವುದು ಯಿವರ ದವುರುಬಲ್ಯವು.. ಯಾಕಾದರು ತಾನು ಸಿರಿಮಂತರ ಬಡವರ ನಡುವೆ ಅಂತರವನ್ನು ಸರಿಪಡಿಸಬೇಕಿತ್ತು.. ಕಾಯಿದೆ ಕಾನೂನುಗಳನ್ನು ತನ್ನ ಕಯ್ಗೆ ತೆಗೆದುಕೊಳ್ಳಬೇಕಿತ್ತು.. ತಾನೇ ವಂದು ಸರಕಾರವೆಂಬ ಭ್ರಮೆಯನ್ನುಂಟು ಮಾಡಬೇಕಿತ್ತು. ಆತನಿಗೆ ವಾಸ್ತವದ ಅರಿವಿತ್ತಾ? ವಬ್ಬರ ಸ್ಥಿತಿ ಸುಧಾರಿಸಲಕಾಗಿ ಯಿನ್ನೊಬ್ಬರನ್ನು ಬಡವರನ್ನಾಗಿ ಪರಿವರ್ತಿಸಿದ್ದು ನ್ಯಾಯವಾ? ಯಿಂಥವರಿಗೆ ಪುರಾಣ ಮುಖ್ಯವಾಗುತ್ತದೆಯೇ ಹೊರತು ವರ್ತಮಾನವಲ್ಲ.. ಯಿಂಥವರು ಪುರಾಣದ ನಾಯಕರಾಗಲು ಹಾತೊರೆಯುತ್ತಾರೇ ವಿನಾ ಜನಸಮುದಾಯದ ನಾಯಕರಾಗಲು ಅಲ್ಲ.. ತಾನು ಮಾಡಿದ್ದೇ ಸರಿ.. ತಾನೀ ನಿರ್ಣಯ ತಗೊಂಡಿದ್ದು ಯಿದ್ದಕ್ಕಿದ್ದಂತೆ ಅಲ್ಲ.. ಹಲವು ದಿನಗಳ ಕಾಲ ಕೂಲಂಕಷ ಯೋಚನೆ ಮಾಡಿದ ನಂತರವೇ.. ಯಿಷ್ಟೆಲ್ಲ ಯೋಚಿಸುವ ತಾನೂ ವುದ್ವಿಗ್ನಗೊಳ್ಳದೆಯಿರಲಿಲ್ಲ.. ತಾನು ನಿರಾಪರಾಧಿಯಂದು ಸಾಬೀತು ಮಾಡುವ ಪ್ರಮೇಯ ಯೇನಿತ್ತು? ಮನ್ರೋ ತನ್ನನ್ನು ತಾನು ಸಮಾಧಾನಪಡಿಸಿಕೊಳ್ಳುತ್ತ.. ನಾಗಿರೆಡ್ಡಿಯಿಂದ ಬಿಡುಗಡೆ ಪಡೆಯಲು ಸರ್ವಥಾ ಯತ್ನಿಸುತ್ತ.. ಅವನನ್ನು ಮರೆಯಲೋಸುಗ ತನ್ನ ಸ್ಕಾಟ್ಲೆಂಡು, ತನ್ನ ಗ್ಲಾಸೋವಾಗಳೇನೆಲ್ಲವನ್ನೂ ನೆನಪಿಸಿಕೊಳ್ಳುತ್ತ ಅವಸರ ಬವಸರದಿಂದ ಬಳ್ಳಾರಿ ನಗರವನ್ನು ಯರಡು ದಿನಗಳ ಹಿಂದೆಯೇ ವದಲಿದ್ದ. ಕಾರ್ಯಸೂಚಿಯಂತೆ ತಾನು ಯೀ ದಿನ ವದಲಬೇಕಿತ್ತು.. ಆದರೆ ಪೂರುವ ನಿರ್ಧಾರಿತ ನ್ಯಾಯ ಯಿಚಾರಣೆಯನ್ನು ಕೂತಲ್ಲಿಂದಲೇ ಮೂಹಿಸಿಕೊಳ್ಳುವ ಹಿಂಸೆಯ ಭಯ ಕಾಡಿತ್ತು. ಆತನ ಕಳೇಬರದ ಮ್ಯಾಲ ಪುಷ್ಪಗುಚ್ಚ ಯಿರಿಸುವಾಗ ತಾನು ಚಿಕ್ಕ ಮಗುವಿನಂತೆ ಅಳುವ ಸಾಧ್ಯತೆ ಯಿಲ್ಲದಿರಲಿಲ್ಲ.. ಆದರ ತನ್ನೆದೆಯೊಳಗಿನ ನ್ಯಾಯಾಲಯವಿನ್ನೂ ಬರಖಾಸ್ತಾಗಿಲ್ಲವಲ್ಲ..ತನ್ನೆದೆಯ ಕಟಕಟೆಯೊಳಗ ರೆಡ್ಡಿಯು ಧೀರೊದಾತ್ತ ನಿಲುವಿನಿಂದ ನಿಂತಿರುವನಲ್ಲಾ.. ಯಿದು ಮನ್ರೋನ ಕುಟಿಲೋಪಾಯ ಯಂದು ಸಾರಿ ಸಾರಿ ಹೇಳುತ್ತಿರುವನಲ್ಲಾ.. ತೀರ್ಪನ್ನು ಮನಸ್ಸಿನೊಳಗ ಯಿಟ್ಟುಕೊಂಡಿರುವ ನ್ಯಾಯಾದೀಶ ಗೋಲ್ಡಿಂಗ್ ಹ್ಯಾಂ ಶ್ರವಣೇಂದ್ರಿಯದ ಸಹಾಯವಿಲ್ಲದೆ ಹೇಳಿಕೆಯನ್ನು ಆಲಿಸುತ್ತಿರುವನಲ್ಲ.. ಓಹ್ ಗೋಲ್ಡಿಂಗ್ ಹ್ಯಾಂ! ಓಹ್ ಸ್ವೀಡನ್ನಿನ ಸತ್‌ಪ್ರಜೆಯೇ.. ಓಹ್ ಧರುಮ ಪ್ರಚಾರಕನಾಗಲೆಂದೇ ಯಿಂಡಿಯಾಕ್ಕೆ ಬಂದವನು ಗವರ್ನರನ ಸಲಹೆಗೆ ಮನ್ನಣೆ ಕೊಟ್ಟು ನ್ಯಾಯಾಧೀಶನಾದವನೇ! ಯಿಂಥದೊಂದು ಯಿವೇಚನಾ ರಹಿತ ತೀರ್ಪು ಕೊಡಲು ಆತ ಮೊದ ಮೊದಲು ವಪ್ಪಲಿಲ್ಲ..

ನ್ಯಾಯಾದೀಶನೇ ಕೊಲೆಗಾರನಾಗಬೇಕೆ? ಯಂದು ಸಂದೇಹಿಸಿದ, 'ನೋಡಿ ಹ್ಯಾಂ.. ವಿಚಾರಣೆ ಸಂದರ್ಬದಲ್ಲಿ ಯಾವ ಕಾರಣಕ್ಕೂ ಬಯ್ಬಲ್ಲನ್ನು ನೆನಪಿಸಿಕೊಳ್ಳಬೇಡಿ.. ಯಿದು ಸರಕಾರದ ಯಿಚ್ಛೆಯೂ ಹವುದು' ಯಂದು ಪಿಸುಗುಟ್ಟಿದ್ದು ಯಷ್ಟು ಅರ್ಥಪೂರ್ಣ? ಆದರೂ ಹ್ಯಾಂನ ಸೊಲುಪ ಅಗಲ ಯನ್ನಬವುದಾದ ಮುಖವು ತಿಳಿಗೊಂಡಿರಲಿಲ್ಲ.. ಪ್ರಾಯಶಃ ಹ್ಯಾಂ ಮಹಾಶಯ ತಾನು ಕಟಕಟೆಯೊಳಗೂ... ನಾಗಿರೆಡ್ಡಿಯು ನ್ಯಾಯಾಧೀಶನ ಪೀಠದ ಮ್ಯಾಲೂ.. ಓಹ್ ಮಯ್ ಗಾಡ್! ಬೆವರೊರೆಸಿಕೊಂಡ ಕರವಸ್ತ್ರದಿಂದ..

ತಾನು ಅನಂತಪುರಕ್ಕೆ ಸಮೀಪಿಸಿರಬಹುದೇ? ಗುತ್ತಿಯ ಚರಸಾಲಕ್ಕೆ ತಾನು ಯೀ ಹಿಂದೆಯೇ ಭೇಟ್ಟಿ ಕೊಡಬೇಕಿತ್ತು. ಯೀಗ ಯಾರನ್ನೂ ನೋಡುವುದು ಸರಿಯಲ್ಲ. ತನ್ನೊಳಗೀಗ ವಿಚಾರಣೆ ನಡೆಯುತ್ತಿದೆ. ಪ್ರೇಕ್ಷಕರ ಮೊಗಸಾಲೆಯಲ್ಲಿ ಯಾರ್‍ಯಾರು ಕೂತಿರಬಹುದು..! ಛೇ.. ಮತ್ತೆ ತಾನು!.. ಅಗೋ ಅಲ್ಲಿ ಕವುಕುಂಟ್ಲ.. ಅಲ್ಲಿಗೆ ಹೋಗುವುದು ಬೇಡ.. ಯಿಲ್ಲಿ ಯಾವುದೋ ಹಳ್ಳ ಹರಿಯುತ್ತಿರುವಂತಿದೆ.. ಪಕ್ಕದಲ್ಲಿ ಮೊಸುಂಬಿ ತೋಟ.. ತಾನಲ್ಲಿ ತುಸು ಹೊತ್ತು ಯಿಸ್ರಮಿಸಿಕೊಳ್ಳುವುದೇ ಲೇಸೆಂಬ ನಿರ್ಣಯಕ್ಕೆ ಬಂದ.. ಹೇಳಿದೊಡನೆ ಪರಿಚಾರಕರು ಬಿಡಾರ ಯವಸ್ಥೆ ಮಾಡಿದರು.. ಬಿಡಾರದೊಳಗೆ ಯಂದಿನಂತೆ ಯೇಸುಪ್ರಭುವಿನ ಚಿತ್ರಪಟ ಯಿರಿಸಿದರು.. ಮನ್ರೋ ಸಮವಸ್ತ್ರ ಕಳಚಿದ.. ಮುಂಬತ್ತಿಯನ್ನು ಪ್ರಭುವಿನೆದುರು ಬೆಳಗಿಸಿ ಮಂಡೆವೂರಿ ಕಣ್ಮುಚ್ಚಿ ಕುಳಿತನೆಂಬಲ್ಲಿಗೆ....

ಅತ್ತ ಬಳ್ಳಾರಿಯ ಕೇಂದ್ರಕಾರಾಗ್ರುಹದೊಳಗೆ ಯಿಶೇಷ ನ್ಯಾಯಾಲಯದ ಏರುಪಾಡಾಗಿತ್ತಷ್ಟೆ.. ಕಟಕಟೆಯೊಳಗೆ ನಾಗಿರೆಡ್ಡಿಯ ಧೀರೋದಾತ್ತ ನಿಲುವು.. ಜಾವ ಜಾವಕ್ಕೊಂದೊಂದು ಸಲ ಬೆವರೊರೆಸಿಕೊಳ್ಳುತ್ತಿರುವ ನ್ಯಾಯಾಧೀಶ ಗೋಲ್ಡಿಂಗ್ ಹ್ಯಾಂ ಸಾಹೇಬ.. ತನ್ನೊಳಗೆ ಯಾರೋ ಮಾಡುತ್ತಿರುವ ಬಯಬಲ್ಲಿನ ಪಠಣ, ಕ್ಷಮೆಯನ್ನು ವತ್ತಿ ಹೇಳುತ್ತಿರುವ ಪ್ರತಿಯೊಂದು ಪುಟಗಳು.. ಪ್ರೇಕ್ಷಕರ ಮೊಗಸಾಲೆಯಲ್ಲಿ ಮುನುಸೋಬಯ್ಯ ಮತ್ತಿತರರು.. ಅವರೆಲ್ಲರ ಮುಖಗಳ ಮ್ಯಾಲ ಆತಂಕದ ಕರಿ ನೆರಳು.. ಅಪರಾಧಿಯ ಪರ ವಾದಿಸಲು ಕರ್ನೂಲಿನಿಂದ ಬಂದಿರುವ ಕೋನೇಟಿ ಶ್ರೀನಿವಾಸಶಾಸ್ತ್ರಿ .. ಸರಕಾರದ ಪರ ವಕೀಲ ಯಾರಿದ್ದರಪಾ ಅಂದರ ನಿಡುಸಾಲೆ ನೀಲಕಂಠರಾಯ ಯಂಬಾತನು.. ಯಾಂತ್ರಿಕ ರೀತಿಯಲ್ಲಿ ವಾದ, ಪ್ರತಿವಾದ..

ಸರಕಾರ ಯಂದರೆ ಯಾರು? ಅದಕ್ಕೊಂದು ಸಂವಿಧಾನ, ಶಿಕ್ಷಾಸಂಹಿತೆ, ರೀತಿ ರಿವಾಜು ಯಿರುವುದೇ? ಸರಕಾರ ಯೇಕಮುಖವಾಗಿ ಆಪಾದಿತನ ಯಿರುದ್ದ ಅಪರಾಧಗಳ ಜಾಬಿತ ಸಲ್ಲಿಸಿರುವುದು ಯಷ್ಟರ ಮಟ್ಟಿಗೆ ಸರಿ? ಆಪಾದಿತನು ಮಾಡಿರುವ ಗುರುತರ ಅಪರಾಧಗಳು ಯಾವುವು? ಸಾಕ್ಷಿ ಪುರಾವೆಗಳು ವಂದಾದರು ಯಿರುವವಾ? ಯಿಂಥ ನಿರಂಕುಶ ಯಿಚಾರಣೆಯಿಂದ ನಾಗರಿಕನೋರ್ವನ ಸಾರ್ವಜನಿಕ ಜೀವನದ ಮ್ಯಾಲ ಹಲ್ಲೆ ನಡೆಸಿದಂತೆ ಆಗುವುದಿಲ್ಲವೆ? ಯಂದು ಮುಂತಾಗಿ ನಿರರ್ಗಳವಾಗಿ ವಾದ ಮಂಡಿಸುತ್ತಿರುವ ಶಾಸ್ತ್ರಿಗಳು.. ಯೀ ಕೂಡಲೆ ತಮ್ಮ ಕಕ್ಷಿದಾರನನ್ನು ಬಿಡುಗಡೆ ಮಾಡಬೇಕೆಂದೂ, ಕ್ಷಮೆ ಕೋರುವುದರ ಮೂಲಕ ಸರಕಾರ ತನ್ನ ಘನತೆಯನ್ನು ಕಾಪಾಡಿಕೊಳ್ಳಬೇಕೆಂದೂ ಮನವಿ ಮಾಡಿಕೊಂಡರೆಂಬಲ್ಲಿಗೆ....

ಬ್ಯಾರಿಸ್ಟರ್ ಪದವಿಯ ಕನಸು ಕಾಣುತಲಿದ್ದ ನೀಲಕಂಠರಾಯರಲ್ಲಿ ತ್ರಾಣ ಯಿರಲಿಲ್ಲ.. ನ್ಯಾಯಾಲಯ ಪ್ರವೇಸ ಮಾಡಿದೊಡನೆ, ಆಪಾದಿತನ ಮುಖ ನೋಡಿದೊಡನೆ ನಿತ್ರಾಣ ಗೊಂಡಿದ್ದರು.. ನಾಲಗೆಯನ್ನು ತೇವ ಮಾಡಿಕೊಳ್ಳಲೋಸುಗ ಜಾವ ಜಾವಕ್ಕೊಂದೊಂದು ಸಲ ನೀರು ಕುಡಿಯುತಲಿದ್ದರು. ತಾವು ಯಲ್ಲೋ ಯಿರುವ ಗವರ್ನರು ಜನರಲ್ಲನ, ಕಲೆಟ್ಟರ ಸಾಹೇಬನ ಗಮನಕ್ಕೆ ಬೀಳಬೇಕೆಂಬ ವುದ್ದಿಶ್ಯದಿಂದ ಸದರಿ ಆಪಾದಿತನು ಕಾನೂನನ್ನು ತನ್ನ ಕಯ್ಗೆ ತಗೊಂಡು ಗುರುತರ ಅಪರಾಧ ಯಸಗಿರುವನಂದೂ, ಸಾಕ್ಷಿ ಪುರಾವೆಗಳಿಲ್ಲ ಯಂದ ಮಾತ್ರಕ್ಕೆ ಕ್ಷಮಿಸಬಾರದೆಂದೂ, ಮರಣದಂಡನೆಯನ್ನು ಯಿಧಿಸಬೇಕೆಂದೂ ವಾದ ಮಂಡಿಸದೆ ಯಿರಲಿಲ್ಲ..

ಯಿ ಪ್ರಕಾರವಾಗಿ ವಾದ ಪ್ರತಿವಾದ ಬಹಳ ಹೊತ್ತಿನ ತನಕ ನಡೆಯಿತು.. ಯೀ ಹಿಂದೆಯೇ ಬರೆದಿಟ್ಟುಕೊಂಡಿದ್ದ, ಅದನ್ನು ಪುನರ್ ಪರಿಸೀಲಿಸಿ ಥಾಮಸು ಮನ್ರೋ ಅಂಗೀಕಾರ ಮುದ್ರೆವತ್ತಿದ್ದ, ಯಲ್ಲಾ ಧರ್ಮ ಗ್ರಂಥಗಳ ಆಶಯಗಳಿಗೆ ಯಿರುದ್ದ ಯಿದ್ದಂಥ ತೀರ್ಪನ್ನು ಪಠಣ ಮಾಡುವಾಗ ಹ್ಯಾಂ ಸಾಹೇಬರು "ದೇವರೇss ಖಂಡಿತ ನೀನು ನನ್ನನ್ನು ಕ್ಷಮಿಸುವುದಿಲ್ಲ.." ಯಂದು ಮನದೊಳಗೆ ಅಂದುಕೊಂಡರು. ಹಲವು ಪುಟಗಳಿದ್ದ ಅದನ್ನು ಮೋದುವಾಗ್ಗೆ ಅವರ ದ್ದೊನಿಯ ಕಂಪನಗೊಳ್ಳದೆ ಯಿರಲಿಲ್ಲ.. ಮೋದಿದರೂ.. ಮೋದಿದರೂ.. ಮೋದುತ್ತಲೇ ಹೋದರು.. ಕೇವಲ ಯರಡು ವಾಕ್ಯಗಳು ಮಾತ್ರಬಾಕಿ ವುಳಿದವು.. ಮೆಲ್ಲಗ ತಲೆಯೆತ್ತಿ ಆಪಾದಿತನ ಮುಖ ನೋಡಿದರು.. "ರೆಡ್ಡಿಗಾರು.. ನೀವು

ಯೇನಾದರು ಹೇಳಲು ಯಿಚ್ಛಿಸುವಿರಾ?'' ಯಂದು ಕೇಳಿದರು.. ಅದಕ್ಕೆ ಯೇನು ತಾನೆ ಹೇಳಿಯಾನು ರೆಡ್ಡಿ.. ಕೃತಜ್ಞತಾಪೂರ್ವಕವಾಗಿ ತನ್ನ ಪರ ವಾದ ಮಂಡಿಸಿದ ಶಾಸ್ತ್ರಿಗಳ ಕಡೆ ನೋಡಿದ.. ಅವರ ಕಣ್ಣೊಳಗಿನ ಯರಡು ಹನಿಗಳಲ್ಲಿ ತನ್ನ ಪ್ರತಿಬಿಂಬ ಯಿರುವುದು ನೆಮ್ಮದಿಯ ಸಂಗತಿ.. ತನ್ನೆರಡೂ ಕಣ್ಣುಗಳನ್ನು ಕಯ್ಯಿಗಳೆಂದು ಭಾವಿಸಿ ಜೋಡಿಸಿ ತೆರೆದ.. ತರುವಾಯ ಸರಕಾರದ ಪರ ವಕೀಲ ನೀಲಕಂಠರಾಯರ ಕಡೆ ನೋಡಿದ.. ಆತನ ತಂದೆ ತಾಯಿಗಳು ತನಗೆ ಗೊತ್ತಿಲ್ಲದಿಲ್ಲ.. ಅವನ ವೋದಿನ ಖರ್ಚಿನೊಳಗ ತನ್ನ ಯಿಸ್ಸೆವುಂಟು. ''ನೀಲಕಂಠರಾಯ ನೀನು ಚಿರಾಯುವಾಗು''ಯಂದು ಮನದೊಳಗ ಹಾರಯಿಸಿದನು....

ತಾನಿನ್ನೇನು ಹೇಳುವುದಿದೆ? ವಕೀಲರಿಬ್ಬರು ಹೇಳುವುದನ್ನು ಹೇಳಿ ಮುಗಿಸಿರುವಾಗ.. ನ್ಯಾಯಾಧೀಶನ ಯದೆಯೊಳಗ ಯಿರುವ ತೀರ್ಪು ತನಗೆ ಗೊತ್ತುಂಟು ಯಂದು ಹೇಳಲೇ? ಕ್ಷಮಿಸಿರೆಂದು ಹೇಳಿ ಬದುಕಿದ್ದು ಸಾಯಲೇ? ಭೀಮಲಿಂಗೇಸ್ವರ ಸ್ವಾಮಿಯ ರಥದ ಮಿಣಿಗೆ ಕಯ್ನು ಹಚ್ಚಲಕ ಅವಕಾಶ ಬೇಡಲೇ? ಥಾಮಸು ಮನ್ರೋ ಬ್ರಾತ್ರುತ್ವ ಯಂಬ ಪಯಿತ್ರಸಬುಧಕ್ಕೆ ಯರಡು ಬಗೆದನೆಂದು ಹೇಳಲೇ?

ಮವುನವಾಗಿ ಹ್ಯಾಮರತ್ತ ದಿಟ್ಟಿಸಿದ. ಹೇಳುವುದೇನೂ ಯಿಲ್ಲವೆಂದು ತಲೆಯನ್ನು ಅಲ್ಲಾಡಿಸಿದ. ಆಯ್ದ ಪ್ರೇಕ್ಷಕರ ಪಯ್ಕಿ ತಾನೋರ್ವನಾಗಿದ್ದ ಮುನಸೋಬಯ್ಯ ಯದ್ದು ನಾಗಿರೆಡ್ಡಿ ನಿರಾಪರಾಧಿಯಂದೂ, ಭೇಷರತ್ತಿನ ಮ್ಯಾಲ ಬಿಡುಗಡೆ ಮಾಡಬೇಕೆಂದೂ ಮನವಿ ಸಲ್ಲಿಸಿದ, ನ್ಯಾಯಾಲಯದ ಹುನ್ನಾರು ತನಗೆ ತಿಳಿದಿದ್ದರೂನೂವೆ....

ಕಟ್ಟಿದ ಕಂಠವನ್ನು ಸಡಿಲ ಮಾಡಿ ಹ್ಯಾಂ ರೆಡ್ಡಿಗೆ ಮರಣದಂಡನೆಯನ್ನು ಯಿಧಿಸಿದರು. ಅದೂ ಭೀಮಲಿಂಗೇಸ್ವರ ಸ್ವಾಮಿಯ ರಥೋತ್ಸವದಂದೇ ಶಿಕ್ಷೆಯನ್ನು ಜಾರಿಗೊಳಿಸಬೇಕೆಂದು ಹೇಳಿ ಅಲ್ಲಿಂದ ನಿರ್ಗಮನ ಮಾಡಿದರು ಸಿವಸಿವss

ಯಿದು ಅನ್ಯಾಯವೆಂದು ಕೂಗಿದ ಮುನುಸೋಬಯ್ಯ, ಮತ್ತವನ ಸಂಗಡಿಗರನ್ನು ಸಿಪಾಯಿಗಳು ಬಲವಂತವಾಗಿ ಯಳದೊಯ್ದು ಹೊರಗೆ ದೂಡಿದರು...

ಮುಂದೇನಾಯಿತಪ್ಪಾ ಅಂದರ.. ಅದೇ ಆಯಿತೆಂಬಲ್ಲಿಗೆ ಸಿವಸಂಕರ

ಮಾದೇವss

ಅತ್ತ ಯಿಮ್ಮಡಿ ಸೋಮಸೇಕರ ಮಾರಾಜನ ಕಯ್ಯಿಂದ ಪಾರಿತೋಷಕ ಪಡೆವುತ್ತ.. ಬಾಯಿಯಿಂದ ರಣಭಯಂಕರ ಯಂದು ಹೊಗಳಿಸಿಕೊಂಡಿದ್ದಂಥ ಭರಮನಗೌಡನು ಸೂರ ಸಿಪಾಯಿ ದಂಡೋಜಿ ಜೊತೆ ಅದು ಯಿದು ಮಾತಾಡುತ್ತಾ ಮಾತಾಡುತ್ತಾ ಫಲಾನ ದಿವಸದಂದು ಹರಪನಳ್ಳಿಯ ಬಿಡದಿ ಮನೆಯಲ್ಲಿ ಕಳೆದೆರಡು ದಿವಸಗಳಿಂದ ಸ್ಟೂವರ್ಟನ ಕರೆಗಾಗಿ ಯದುರು ನೋಡುತಲಿದ್ದನು. ಅಲ್ಲಿ ಆತನು ಯಾರೊಂದಿಗೂ ಕಲೆಯುವಂತಿರಲಿಲ್ಲ.. ಪಟ್ಟಣದ  ಯಾವ ಕಡೆಗೂ ಹೋಗುವಂತಿರಲಿಲ್ಲ.. ತನ್ನ ಬಳಿಗೆ ಬಂದು ಹೋಗುತ್ತಿದ್ದಂಥವರು ಸೂಜಿಗೆ ಮುದ್ದುಕೊಟ್ಟಂತೆ ಅಗಾಧವಾಗಿ ಮಾತಾಡುತಲಿದ್ದರು. ಕ್ರಮೇಣ ಅವಯ್ಯಗೆ ಅರ್ಥವಾದದ್ದೇನೆಂದರೆ ತನ್ನನ್ನು ಗ್ರುಹಬಂಧನದಲ್ಲಿ ಯಿರಿಸಲಾಗಿದೆ ಯಂಬ ಸಂಗತಿಯು.. ಪಲಾಯನ ಮಾಡಬೇಕೆಂದರೆ.. ಅದೂ ಆಗುತ್ತಿಲ್ಲ.. ಯೇನು ಮಾಡುವುದಪ್ಪಾ ಯಂದು ಗವುಡನು ಯಸನ ಮಾಡುತ್ತಿರಬೇಕಾದರ ವಂದಿಬ್ಬರು ಸಿಪಾಯಿಗಳು ಬಂದು ಕರದೊಯ್ದು ಸ್ಟೂವರ್ಟನೆದುರು ಹಾಜರುಪಡಿಸಿದರು. ಅದೇ ಮೊದಲ ಸಲಕ್ಕ ತಾವಿಬ್ಬರು ಪರಸ್ಪರ ಭೆಟ್ಟಿಯಾದದ್ದು.. ವಳ್ಳೆ ಖಡುಗದಂತಿರುವನು ಗವುಡ ಯಂದು ಕುಂಪಣಿ ಅಧಿಕಾರಿಯೂ, ವಳ್ಳೆ ಯೀಟಿ ಯಿದ್ದಂತಿರುವನು ಸ್ಟೂವರ್ಟು ಯಂದು ಗವುಡನೂ ಅಂದುಕೊಂಡರು. ಸ್ಟೂವರ್ಟನು ತರುವಾಯ ವಂದರ ಮ್ಯಾಲ ವಂದರಂತೆ ಪ್ರಸ್ನೆಗಳನ್ನು ಹಾಕುತ್ತ ಹೋದನು. ಅದಕ ಗವುಡನು ಪ್ರತಿಯೊಂದಕೂ ಸಮಚಿತ್ತದಿಂದ ಜವಾಬು ಕೊಡುತ್ತ ಹೋದನು. ತಾನು ಕುಂಪಣಿ ಸರಕಾರದ ಯಿರುದ್ದ ಯಾವುದೇ ಮೂರನ್ನು ಯತ್ತಿ ಕಟ್ಟುತ್ತಿಲ್ಲವೆಂದೂ, ಫಲಾನಮೂರುಗಳಲ್ಲಿ ತಲೆದೋರಿರುವ  ಅರಾಜಕತೆಯನ್ನು ಹೋಗಲಾಡಿಸುವ ಸಲುವಾಗಿ, ಸುಖ ನೆಮ್ಮದಿ ನೆಲೆಗೊಳ್ಳುವಂತೆ ಮಾಡುವ ಸಲುವಾಗಿ ಸಂಚಾರ ಮಾಡುತ್ತಿರುವುದಾಗಿ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದನು. ಅದಕ್ಕಿದ್ದು ಅಧಿಕಾರಿಯು ಯಿದಕ್ಕೆ ಸರಕಾರದ ಪರವಾನಿಗೆ ಪಡೆಯಬೇಕಿತ್ತಲ್ಲಾ ಯಂದು ಕೇಳಿದ್ದಕ್ಕೆ ಆ ರಣ ಭಯಂಕರ ಬಿರುದಾಂಕಿತನು ಯಾವ ಸರಕಾರ? ಯಾಕ ಪಡೆಯಬೇಕು? ಯಂದು ತುಟಿ ಜಾರಿ ನುಡಿದು ಯಿರುಕಿನಲ್ಲಿ ಸಿಕ್ಕುಕೊಂಡನು. ಅಂಥದೇ ಜವಾಬಿಗಾಗಿ ಯದುರು ನೋಡುತಲಿದ್ದ ಅಧಿಕಾರಿಯು "ಹ್ಹಾ.. ಯಾವ ಸರಕಾರ? ಯಾಕ ಪರವಾನಿಗಿ?" ಯಂದು

ವುದ್ಗರಿಸುತ್ತ ತನ್ನ ಕಣ್ಣುಗಳನ್ನು ಕೆಂಜಗ ಮಾಡಿಕೊಂಡನು. ಯೀ ಜವಾಬು ಯಿದ್ರೋಹದ ಸುಳಿವು ನೀಡುವುದೆಂದೂ, ಯಿದನ್ನು ವಾಪಾಸು ತಕ್ಕೊಂಡು ತನ್ನ ಚಾವಡಗಳನ್ನು ಮುಟ್ಟಿ ಕ್ಷಮೆ ಯಾಚಿಸಬೇಕೆಂದೂ ಹುಕುಂ ಮಾಡಿದನು. ಅದನ್ನು ಕೇಳಿದೊಡನೆ ನಿಂತ ನಿಲುವಿಕೀಲೆ ಧಗ ಧಗಾಂತ ವುರಿದ ಗವುಡನು ಅಂಥ ಗುರುತರ ಅಪರಾಧ ತಾನು ಮಾಡಿಲ್ಲವೆಂದೂ, ಪ್ರತಿಯೊಂದು ಕ್ರಿಯಾಕಟ್ಟಲೆಗೆ ಪರವಾನಿಗಿ ಪಡೆಯಬೇಕೆಂದರ ಹೆಂಗಾದೀತು ಯಂದು ಹೇಳುತ್ತ ಯದೆಸೆಟೆಸಿದನು. ಸ್ಟೂವರ್ಟನು ತಾನಿದ್ದಲ್ಲಿಂದ ಯದ್ದು ಬಂದು ಅವಯ್ಯನ ಸುತ್ತ ವಂದು ಪರದಕ್ಷಿಣ ಹಾಕಿ, ಮುಖದಲ್ಲಿ ಮುಖಯಿಟ್ಟು ತೀಕ್ಷ್ಣವಾಗಿ ದಿಟ್ಟಿಸಿ "ಹುಲಿಯನ್ನು ಕೊಂದು ಹುಲಿ ಯಿನಾಮನ್ನೂ, ಕರಡಿಯನ್ನು ಕೊಂಡು ಕರಡಿ ಯಿನಾಮನ್ನೂ ಪಡಕೊಂಡಿರುವಿಯಂತಲ್ಲಾ ಯಿದು ನಿಜವೇನು?" ಯಂದು ವ್ಯಂಗ್ಯದಿಂದ ಪ್ರಸ್ನಿಸಿದನು. ಅದಕೆ ಗವುಡ 'ಹ್ಞೂ..' ಯಂದಷ್ಟೆ ಹೇಳಿದನು. ಸದರಿ ನೆಲದ ಗುಣವೇ ಯಿಂಥಾದ್ದು. ಯಿಲ್ಲಿ ಬೆಕ್ಕೂ ಹುಲಿಯಂತೆ ಘರ್ಜನೆ ಮಾಡುವುದು ಯಂಬುದಕ್ಕೆ ಯೀ ಸೂರನೇ ನಿದರ್ಸನ.. ಯಂದಂದುಕೊಂಡ ಸ್ಟೂವರ್ಟನಲ್ಲಿದ್ದ ವಂದು ಯಿಸೇಷ ಸಂಗತಿಯಂದರೆ ತನ್ನ ಪ್ರಯಾಣದ ಕಾಲದಲ್ಲಿ ಆಯಾಯಾ ಸೀಮೆಯ ಯಿತಿಹಾಸದ ಪುಟಗಳನ್ನು ತಿರುವಿಹಾಕುವುದು.. ಅದರಂತೆ ತಾನಿಲ್ಲಿಗೆ ಬರುವ ಮೊದಲು ಹರಪನಹಳ್ಳಿಯ ನೂರಿನ್ನೂರು ವರುಷಂಗಳ ಚರಿತ್ರೆಯನ್ನು ವಂದಕ್ಕರ ಬಿಡದಾಂಗ ಬಾಯಿಪಾಠ ಮಾಡಿಕೊಂಡಿದ್ದನು. ಯಿದರಿಂದಾಗಿ ಭರಮನ ಗವುಡಗೆ ಸಂಬಂಧಿಸಿದ ಪ್ರತಿಯೊಂದು ಯಿವರಮೂಸದರಿ ಅಧಿಕಾರಿಯ ತುದಿ ನಾಲಗೆ ಮ್ಯಾಲ ಯಿತ್ತು. ನಿನ್ನೆ ಮೊನ್ನೆ ಅಯಿವತ್ತನ್ನು ದಾಟಿದ್ದಿರಬವುದಾದ ಗೌಡನಿಗೆ "ಚಾವುಡ ಚುಂಬಿಸಿ ನೀನು ನಿನ್ನ ಯಿನಾಮುಗಳನ್ನು ಕಾಪಾಡಿಕೊಂಡು ಹೆಂಡರು, ಮಕ್ಕಳು, ಮೊಮ್ಮಕ್ಕಳೊಂದಿಗೆ ಸುಖವಾಗಿರು" ಯಂದು ಮರು ಯಚ್ಚರಿಕೆಯನ್ನು ನೀಡಿದನು. ಅದಕ್ಕಿದ್ದು ಗವುಡನು "ತಾನಿಂಥ ಹೀನ ಕ್ರುತ್ಯ ಯಸಗಿ ನೂರು ವರುಷಂಗಳ ಪರ್ಯಂತ ಬದುಕಲು ಯಿಷ್ಟ ಪಡುವುದಿಲ್ಲ" ಯಂದು ಖಡಾಖಂಡಿತವಾಗಿ ಜವಾಬು ನೀಡಿದನು. ಅಧಿಕಾರಿಯ ಪಾಳೆಯದಲ್ಲಿದ್ದ ಕೆಲವರು "ಚುಂಬಿಸಿದಲ್ಲಿ ತುಟಿ ಸವೆತಾವೇನು? ಸಣು ಮಾಡಿದಲ್ಲಿ ಕಯ್ಯಿ ಮೊಂಡಾಗುತಾವೇನು? ಕ್ಷಮಾ ಕೇಳಿದಲ್ಲಿ ಬಾಯಿ ವಣಗುತಾದೇನು? ಹೇಳಿಧಾಂಗ ಕೇಳಿಬಿಡಯ್ಯಾ ಕೇಳಿಬಿಡು" ಯಂದು ಮೂರೂ ಬಿಟ್ಟಿದ್ದವರಂತೆ ವಬ್ಬರ ಹಿಂದ

ವಬ್ಬರಂತೆ ಸಲಹೆ ನೀಡಿದರು. ಅವರ ಪಯ್ಕಿ ಬಹುಪಾಲು ಮಂದಿ ನಾಯಕರ ಮೂಳಿಗದಲ್ಲಿದ್ದವರು. ಕೊನೆ ಗಳಿಗೇಲಿ ಯರಡು ಬಗೆದವರು, ವಂದು ಕಾಲದಲ್ಲಿ ತನ್ನ ಅಂಗಾಲನ್ನು ನೆಕ್ಕಲು ತುದಿಗಾಲಲ್ಲಿ ನಿಂತಿದ್ದಂಥವರು.. ಗವುಡ ಅವರತ್ತ ನೋಡಿದ. ಥೂ ಅಂದ, ಛೀ ಅಂದ...

ಮುಂದ ಯೇನಾಯಿತಪ್ಪಾ ಅಂದರ.. ಅದs ಆತು..

ಸತ್ರುವಿನ ಜನಪ್ರಿಯತೆಯನ್ನ ಮೂಹಿಸಿ ಸ್ಟೂವರ್ಟನು ಗವುಡನಿಗೆ ಕುಂಚೂರು ಸೆರೆಮನೆಯಲ್ಲಿ ವಾಸ್ತವ್ಯ ಕಲ್ಪಿಸಿದ. ಅವನಿಗೆ ಸಂದಿದ್ದ ಯಿನಾಮು ಭೂಮಿಗಳನ್ನು ಸರಕಾರದ ಪರವಾಗಿ ಮುಟ್ಟುಗೋಲು ಹಾಕಿಕೊಂಡ. ಯೀ ಸಂಚಿನ ರೂವಾರಿಯನಿಸಿದ್ದ ಹಂಪರಸಪ್ಪಯ್ಯನನ್ನು ಕರೆಕಳಿಸಿಕೊಂಡು ಕುಂಪಣಿ ಸರಕಾರ ಕಛೇರಿಯ ಪ್ರಧಾನ ಕಾರಖೂನ ಪದವಿಯನ್ನು ನೀಡಿ ಆದೇಸ ಹೊಂಡಿಸಿದ. ಯಿಮ್ಮಡಿ ಸೋಮಸೇಖರನಾಯಕ ಫವುಜು ಮಾತ್ರಕುಂಪಣಿ ಸರಕಾರದ ಸಿಪಾಯಿಗಳ ಕಯ್ಯಿಗೆ ದೊರಕದೆ ತಲೆಮರೆಸಿಕೊಂಡಿತು. ಅದು ತೆರೆಮರೆಯಲ್ಲಿ ತನ್ನ ಕಾರ್ಯ ಚಟುವಟಿಕೆಯನ್ನು ಆರಂಭ ಮಾಡದೆ ಯಿರಲಿಲ್ಲ. ಅದು ಕೂಲಿ ಕಾರ್ಮಿಕರ ಯೇಷದಲ್ಲಿ ಕುಂಚೂರು ಕಡೇಕ ಪಾದ ಬೆಳೆಸಿತೆಂಬಲ್ಲಿಗೆ.. ಅವರಿಗೆ ಯಲ್ಲಾಪ್ರಕೊರಚರಟ್ಟಿಯ ಪೋಲಾರಮ್ಮನ ಕ್ರುಪೆಯಿತ್ತೆಂಬಲ್ಲಿಗೆ ಸಿವಸಂಕರ ಮಾದೇವss

ತಮ್ಮ ಪಟ್ಟಣದ ಸವುಭಾಗ್ಯವು ಯಾಕ ಹೋಗಯ್ತೆ? ಯಲ್ಲಿಗೆ ಹೋಗಯ್ತೆ? ಯಂಬ ತುರಿಕೆಯು ಅತ್ತ ಕೂಡ್ಲಿಗಿ ಪಟ್ಟಣದ ಮಯ್ಯಿತುಂಬ ಹಬ್ಬಿಬಿಟ್ಟಿತ್ತಷ್ಟೆ, ಯಸನ ಮಾಡುತ ಮಂದಿ ನೀನು ನೋಡಿದ್ಯಾ? ತಾನು ನೋಡಿದ್ಯಾ? ಯಂದು ಅವರಿವರನ್ನು ಯಿಚಾರಿಸಿ ನೋಡಿದರು. ಹಾದಿಗಳಲ್ಲಿದ್ದ ಹೆಜ್ಜೆ ಗುರುತುಗಳನ್ನು ಪರಾಂಬರಿಸಿದರು. ಹಾದಿಗಳ ಯಿಕ್ಕೆಲದಲ್ಲಿದ್ದ ಗಿಡಗಂಟೆಗಳನ್ನು ಕೇಳಿದರು, ಹಾರಾಡುತಲಿದ್ದ ಪಕ್ಷಿಗಳನ್ನು ಅಂಗಲಾಚಿದರು. ಕಲ್ಲು ಗುಂಡುಗಳನು, ಪಂಚಭೂತಗಳನು ಕೇಳಿ ನೋಡಿದರು. ಆದರೆ ಅವಾವುದರಿಂದಲೂ ಸರಿಯಾದ ಸಮಾಚಾರ ಲಭ್ಯವಾಗಲಿಲ್ಲ. ಯಲ್ಲಂತ ಹುಡುಕುವುದಪ್ಪಾ ತಮ್ಮ ಸಮುದಾಯದ ಸವುಭಾಗ್ಯವನ್ನು? ಫಜೀತಿಗಿಟ್ಟುಕೊಂಡಿತು.. ಸುಬ್ಬಣ್ಣನ ನೇತ್ರುತ್ವದಲ್ಲಿ ಯುವಕರ ತಂಡಮೊಂದು ನಿರಸನ ಆರಂಭಿಸಿದರೆ, ಗುಂಡೂರಾಯನ ನೇತ್ರುತ್ವದಲ್ಲಿ ನಡುಲ ವಯಸ್ಕರ ತಂಡಮೊಂದು ಪಟ್ಟಣದಾಚೆಯಿದ್ದ ದಿಬ್ಬಗಳನ್ನೇರಿ ಹುಬ್ಬುಗಳ ಮ್ಯಾಲ ತಮ

ಅಂಗಯ್ಯಿಗಳನು ಅಡ್ಡಯಿಟ್ಟುಕೊಂಡಿತು. ನಡುಲಿಂಟಿ ನರಸಿಮ್ಮನ ನೇತ್ರುತ್ವದಲ್ಲಿ ಯಿಧುರರ ತಂಡಮೊಂದು ಕಾಡುಹುವ್ವುಗಳ ಆಳಕ್ಕಿಣುಕಿ ಚಿನ್ನಾ ಯಂದು ಬೆದಕಲಾರಂಭಿಸಿತು.

ಸವುಭಾಗ್ಯದ ಗಯ್ರುಹಾಜರಿಯು ತಿಕ್ಕಡಿ ಕುಂಪಣಿ ಸರಕಾರದ ಪರಿಚಾರಕರನ್ನೂ ತಗುಲದೆ ಯಿರಲಿಲ್ಲ.. ಕಾರಖೂನರು ಯೇನೋ ಬರೆಯಲು ಹೋಗಿ ಯೇನೋ ಬರೆಯತೊಡಗಿದರ, ಸೂರ ಸಿಪಾಯಿಗಳಂತೂ ಸೂತಕ ಮುಖ ಹೊತ್ತು ತಿಕ್ಕಲು ತಿಕ್ಕಲಾಗಿ ವರ್ತಿಸಲಾರಂಭಿಸಿದರು. ಗಾಯತ್ರಿಜಪದ ಮಯ್ಮೆಯಿಂದ ತನ್ನ ಮನಸ್ಸಿನ ಮ್ಯಾಲ ಹತೋಟಿ ಸಾಧಿಸಿದ್ದ ಮುಖ್ಯ ಸಚೇತಕ ರಾಯನು ಮಾತ್ರಯಃಕಶ್ಚಿತ್ ವಂದು ಹೆಣ್ಣಿಗಾಗಿ.. ಯಂದು ಅಪೂರ್ಣ ವಾಕ್ಯಗಳನ್ನು ವುದ್ಗಾರ ಮಾಡುತ್ತ ಅಯ್ಯೋ ರಾಮ ರಾಮಾ ಯೇನಿದೇನಿದು ಯನ್ನುತಲಿದ್ದನು. ತಿಕ್ಕಡಿ ತನ್ನನ್ನೂ ಕಾಡಿರದೆ ಯಿರಲಿಲ್ಲ.. ರೆಪ್ಪೆಗೆ ರೆಪ್ಪೆ ಅಂಟಿದ್ದೊಂದೇ ತಡ ತಾಯಕ್ಕಳ ದಿವ್ಯರೂಪ ತಾಂಡವ ಆಡುತಲಿದ್ದಿತು. ಕಿವಿಯೊಳಗ ಆಕೆಯ ಮಾತುಗಳೇನು? ಗಾಯನ ದರಬಾರೇನು? ಮೂಟ ಬಡಿಸುತಲಿದ್ದ ತನ್ನ ಧರುಮಪತ್ನಿಗೇ ತಾಯಿ ಅಂದುಬಿಟ್ಟನೆಂದ ಮ್ಯಾಲ.. ಸಯನ ಗ್ರುಹದಲ್ಲಿ ತಾಯಿ ಯಂಬ ಸಬುಧವನ್ನುಚ್ಚಾರಮಾಡಿ ತನ್ನ ಧರುಮ ಪತ್ನಿಯ ಕಾಮಾವೇಶವನ್ನು ಸರ್ರಂತ ಯಿಳಿಸಿದನೆಂದ ಮ್ಯಾಲ.. "ನಿಮ್ಮ ತಲೆಯೊಳಗ ಯಾವುದೋ ಬ್ರೆಮ್ಮ ಪಿಚಾಚಿ ಹೊಕ್ಕೊಂಡಂಗಯ್ತೆ ಕಣ್ರೀ. ಮೊದಲದನು ಯಿಳುವಿ ಬಂದು ನನ್ ಕೂಡೆ ಸಮುಸಾರ ಮಾಡಿರಿ" ಯಂದು ಖುದ್ದ ತನ್ನ ಧರುಮಪತ್ನಿಯೇ ಸುಗ್ರೀವಾಗ್ನೆಯನ್ನು ಯಿಧಿಸಿದಳೆಂದ ಮ್ಯಾಲ.. ತನ್ನ ಕರುಳಿನ ಕಂದವ್ಮುಗಳೇ ತನ್ನತ್ತ ಪ್ರಸ್ನಾರ್ಥಕ ಚಿನ್ನೆಯುಂಬಂತೆ ನೋಡತೊಡಗಿದವೆಂದ ಮ್ಯಾಲ..

ತನ್ನ ಸೊಗ್ರುಹದೊಳಗ ಅಪವುವುಲ್ಯಗೊಂಡಿರುವ ತಾನು ಸಾಮಾಜಿಕವಾಗಿ ಅಪಮೌಲ್ಯಗೊಳ್ಳುವ ಮೊದಲೇ.. ರಾಯನು ಆ ಕ್ಷಣದಿಂದ ಕಯ್ನ ಕಟ್ಟಿ ಕುಂಡ್ರಲಿಲ್ಲ.. ಪಟ್ಟಣದ ಸವುಭಾಗ್ಯ ಯಲ್ಲಿಗೆ ಹೋಗಯ್ತೆ! ಯದಕ ಹೋಗಯ್ತೆ! ಅದನ್ನು ಪತ್ತೆಹಚ್ಚಿ ಕರೆತರುವ ಸಲುವಾಗಿ ಸರಕಾರಿ ಆಡಳಿತ ಯಂತ್ರವನ್ನು ಬಳಸಿಕೊಳ್ಳಬೇಕೆಂದು ನಿರ್ಧರಿಸಿದನು. ಸವುಭಾಗ್ಯ ಯಂಬ ಮಾರ್ಮಿಕ ಸಬುಧದ ಅರ್ಥವನ್ನು ಬೇರೊಂದು ಬಗೆಯಲ್ಲಿ ಅರ್ಥಯಿಸಿಕೊಂಡವನಾದ ಯಡ್ಡವರ್ಡು ರಾಯನ ಕ್ರಿಯಾ ಕಟ್ಟಳೆಗೆ ಹಸಿರು ನಿಶಾನೆ ತೋರಿಸಿದನು.

ಯಿದರಿಂದ ವುತ್ತೇಜಿತಗೊಂಡ ರಾಯನು ವಂದು ಯಿಶೇಷ ಕಾರ್ಯಾಚರಣೆ ಪಡೆಯನ್ನು ರಚನೆ ಮಾಡಿ ಅದಕ 'ಸವುಭಾಗ್ಯ' ಯಂಬ ಶಿರ್ಷಿಕೆಯನ್ನು ಮುಡುಸಿದನು. ಅದಕ ಮುರಾರಿರಾವ್ ಯಂಬ ಪತ್ತೆದಾರನನ್ನು ಮುಖ್ಯಸ್ಥನನ್ನಾಗಿ ನೇಮಿಸಿದನು. ಕೂದಲನ್ನು ಸೀಳಿ ಯರಡು ಹೋಳು ಮಾಡುವುದರಲ್ಲಿ ನಿಷ್ಣಾತನಾದ ಅವಯ್ಯನು ಆ ಕ್ಷಣದಿಂದ ತನಗೆ ಅನುಮಾನ ಬಂದವರ ಮನೆಗಳಿಗೆ ನುಗ್ಗಲಾರಂಭಿಸಿದನು. ಗುಮಾನಿಯಿಂದ ಹಲವರನ್ನು ಬಂಧಿಸಿ ಯಳದು ತಂದು ಪ್ರಸ್ನೆಗಳ ಮಳೆ ಕರೆಯತೊಡಗಿದನು.. ಸವುಭಾಗ್ಯದ ಆ ಯರಡು ನಮೂನೆಗಳನ್ನು ಅಪಹರಣ ಮಾಡಿರಬವುದು, ಅವೆರಡರ ಪಯ್ಕಿ ವಂದನ್ನು ಧಾರಣವಾಗಿ ಕೊಲೆ ಮಾಡಿರಬವುದೆಂಬ ಅನುಮಾನಕ್ಕೆ ಮೊದಲಿಗೆ ಬಂದನು. ಅದರ ಪರಿಣಾಮವಾಗಿ ಸುಬ್ಬಣ್ಣ ನೇತ್ರುತ್ವದ ತರುಣರು ಬಗೆಬಗೆಯ ಹಿಂಸೆಗೆ ತುತ್ತಾದರು.. ಯಷ್ಟೋ ಮಂದಿ ಅಯ್ಲುಗೇಡಿಗಳು ತಾತ್ಕಾಲಿಕವಾಗಿ ಪಟ್ಟಣವನ್ನು ವದಲಿ ಅಕ್ಕಪಕ್ಕದ ಕುರುಚುಲು ಕಾಡುಗಳಲ್ಲಿ ವಾಸ ಮಾಡತೊಡಗಿದರು. ವುಳಿದವರ ಅವಸ್ಥೆಯಂತೂ ಹರಹರ ಮಾದೇವs ಆಗಿಬಿಟ್ಟಿತು...

ಸವುಭಾಗ್ಯ ಪಡೆಯ ಸಿಪಾಯಿಗಳು ಮಾರು ವೇಷದಲ್ಲಿ ಅನತಿ ದೂರದ ಕಂದಗಲ್ಲು ಗ್ರಾಮದಿಂದ ಬುಗುಡಿ ನೀಲಕಂಠಪ್ಪನನ್ನು ಬಂಧಿಸಿ ಯಳ ತಂದು ತಮ್ಮ ಮುಖಂಡನೆದುರು ಹಾಜರು ಮಾಡಿದರು. ತಾಯಕ್ಕಳನ್ನು ಕೊಲೆ ಮಾಡಿದ್ಯಾಕೆ? ಮಾಡಿ ಹೆಣವನ್ನು ಯಲ್ಲಿ ಗಾಯಬ್ ಮಾಡಿರುವಿ? ಆಕೆಯ ಮಗಳಾದ ಚಿನ್ನಾಸಾನಿಯನ್ನು ಯಾವ ದೇಶಕ್ಕೆ ಸಾಗಿಸಿರುವಿ ಯಂಬಂಥ ಪ್ರಸ್ನೆಗಳನ್ನು ಮುಖಕ್ಕೆ ರಾಚಿದಂತೆ ಕೇಳಿ ಮುರಾರಿರಾವ್ ತನ್ನ ಗಿರಿಜಾಮೀಸೆ ತಿರುವಿದನು. ವಾಗ್ ಬಾಣಗಳಿಂದ ಘಾಸಿಗೊಂಡನು ಬುಗುಡಿಯು. ತಾನು ತನ್ನ ಪತ್ನಿಯನ್ನು.. ತಾನು ತನ್ನ ಕುವರಿಯನ್ನು!! ಯೇನೆಲ್ಲ ಹೇಳಲುಪಕ್ರಮಿಸಿದನು. ಆದರದೆಲ್ಲ ರಾವ್‌ನ ಕಿವಿ ಮ್ಯಾಲ ಬಿದ್ದರ ತಾನೆ!

ನಿಜಕ್ಕೂ ತಾಯಕ್ಕಳ ಯೀ ಕ್ರುತ್ಯದಿಂದ ತಾನೇ ಸೊಯಂ ಅಡಲ್ಲಾಗಿಬಿಟ್ಟಿದ್ದನು. ಕಳೆದ ರಾತ್ರಿಯಷ್ಟೋ ಹೊತ್ತಿನ ತನಕ ನಕ್ಕೋತ ಕೆಲಕೋತ ತಾಯಿ ಮಗಳೊಂದಿಗೆ ಯಿದ್ದು ಬಂದಿದ್ದನು. ಬರುವಾಗ್ಗೆ ಮುಂದಿನ ದಿನಚರಿಯನ್ನು ರೂಪಿಸಿರದೆ ಯಿರಲಿಲ್ಲ. ಆದರಂತೆ ಮಾರನೆ ದಿನ ಮುಂಜಾನೆ ಬಂದು ನೋಡುತ್ತಾನೆ.. ಬಿಕೋ ಬಿಕೋ.. ಆಳುಕಾಳುಮಂದಿಯನ್ನು ಕೇಳಿ

ನೋಡುತ್ತಾನೆ.. ಅವರೆಲ್ಲರ ಬಾಯಿಗಳೂ ಸಹ ಬಿಕೋ.. ಬಿಕೋ.. ಗೊತ್ತಿರುವ ಜಾಗಗಳನ್ನೆಲ್ಲ ಹುಡುಕಿ ನೋಡುತ್ತಾನೆ.. ಅಲ್ಲೂ ಸಹ ಬಿಕೋ ಬಿಕೋ.. ಕೊಲೆ ಅಥವಾ ಅಪಹರಣ.. ಯೀ ಯರಡೂ ಅನುಮಾನಗಳು ತನಗೂ ಬಾರದೆಯಿರಲಿಲ್ಲ.. ಹೊತ್ತಿಗೆ ತೆಗೆಸಿ ಕೇಳುವ ಸಲುವಾಗಿ ಮಲ್ಹಾರಿದೀಕ್ಷಿತರಿದ್ದ ಕಂದಗಲ್ಲಿಗೆ ಹೋಗಿದ್ದನು. ಅವರ ಮವುನರೊತ ವಂದೆರಡು ದಿವಸಗಳಲ್ಲಿ ಮುಗಿಯಲಿದ್ದುದರಿಂದ ಅದೇ ಗ್ರಾಮದಲ್ಲಿದ್ದ ತಮ್ಮ ದೂರದ ನೆಂಟರ ಮನೆಯಲ್ಲಿ ವಾಸ್ತವ್ಯ ಮಾಡಿದ್ದನು.. ಅಲ್ಲಿಗೆ ಬರಲಕ ತಾನು ಯಾರಿಗೂ ಹೇಳಿರಲಿಲ್ಲ.. ಕೇಳಿರಲಿಲ್ಲ.. ಬಹಿರ್ದೆಸೆಗೆ ಯಂದು ಹೊರಟವನು ಸವುಚ ಮಾಡಿದ್ದು ಕಂದಗಲ್ಲು ಸರಹದ್ದಿನಲ್ಲಿ.. ಯಿದs ವಂದು ಗುನ್ಹೆs ಆಗಿ ಪರಿಣಮಿಸಿಬಿಟ್ಟಿತ್ತು.

ತನ್ನದೇ ಆದ ವಂಯುಖರಿ ದ್ವಾರಾ ಅಪರಾಧಿಗಳನ್ನು ನಿರಾಪರಾಧಿಗಳನ್ನಾಗಿಯೂ, ನಿರಾಪರಾಧಿಗಳನ್ನು ಅಪರಾಧಿಗಳನ್ನಾಗಿಯೂ ಪರಿವರ್ತನೆ ಮಾಡುವುದರಲ್ಲಿ ಸಿದ್ಧಹಸ್ತನಾದ ಮುರಾರಿರಾವನು ಬಾಂಥೇದು ಯನ್ನುವುದರಲ್ಲಿದ್ದನು. ಆಗ ಬುಗುಡಿಯು ತಾನು ಮಾಜಿ ಪಟ್ಟಣಸ್ವಾಮಿಯಂದೂ, ಕುಂಪಣಿ ಸರಕಾರಕ್ಕೆ ಅತಿ ಹೆಚ್ಚು ತೆರಿಗೆ ಪಾವತಿ ಮಾಡುತ್ತಿರುವ ವತನದಾರನೆಂದೂ.. ತನಗಪಮಾನ ಮಾಡಿದವರು ನವುಕರಿ ಕಳೆದುಕೊಳ್ಳುವರೆಂದೂ.. ಹೇಳಿ ಸಂದಾಯವಾಗಲಿದ್ದ ಶಿಕ್ಷೆಗೆ ಲಗಾಮು ಹಾಕಿದನು. ಸಮಯಕ್ಕೆ ಸರಿಯಾಗಿ ವಂದು ಕಡೇಲಿಂದ ಆಪಾದಿತನ ಧರುಮಪತ್ನಿ ಗವುರವ್ವ, ಯಿನ್ನೊಂದು ಕಡೇಲಿಂದ ಖುದ್ದ ಯಂಕೋಬರಾಯನು ಬಂದರು. ಪೂರುವಾಗ್ರಹಗಳಿದ್ದರೂ ರಾಯನು ಸರಕಾರದ ಪರವಾಗಿ ಬುಗುಡಿಯಲ್ಲಿ ಕ್ಷಮೆ ಯಾಚಿಸುತ್ತಿರುವಾಗ....

ಅತ್ತ ಮಾನ್ಯರ ಮಸಲವಾಡದಲ್ಲಿ ಯಾವ ಚಿಂತೆಯಿಲ್ಲದೆ ತಾಯಕ್ಕ ಮಗಳೊಂದಿಗೆ ವುಳುಕೊಂಡು ರೋಮಾಂಚನಕ ಮರು ನಾಮಕರಣ ಮಾಡಿದ್ದಳು. ಮಲಗಿದಾಗೆಲ್ಲ ಭೂತಭುಜಂಗನಾಥರು ಕಣಸೊಳಗೆ ಮೂಡಿ ಮಧುರ ಹಳೆ ನೆನಪುಗಳನ್ನು ಕೆದಕಿ ತಿಕ್ಕಿ ಥಳಥಳ ಹೊಳೆಯುವಂತೆ ಮಾಡುತ್ತಿದ್ದುದರಿಂದ ಕೂಡ್ಲಿಗಿ ಕಡೇಕ ಮುಖ ಮಾಡಲು ಮನಸ್ಸೇ ಆಗಿರಲಿಲ್ಲ.. ಗತಿಸಿದ ಗುರುಗಳ ಪ್ರೇರಣೆಯಿಂದಾಗಿ ತಮ್ಮ ಬೇಕು ಬೇಡಗಳನ್ನು ಮ್ಯಾಲಿಂದ ಮ್ಯಾಲ ಯಿಚಾರಿಸುತ್ತಿರುವ ನಾಥ ಸಂಪ್ರದಾಯದ ಶಿಷ್ಯ ರುಂದವು.. ಸೊರಗವೇ ಕಡಕೊಂಡು ಬಿದ್ದು ಮೂರಾಗಿರುವಂತೆ ಭಾಸವಾಗುತ್ತಿರುವ ಮಾನ್ಯರ

ಮಸಲವಾಡವು.. ಜಾಗ ನಿಖಾಲಿ ಮಾಡಲು ಮನಸ್ಸಾಗುವುದೆಂದರೆ.. ಸಾವುರ ವರುಷಗಳ ಪರ್ಯಂತ ಬದುಕಿದ್ದು ದೀನದಲಿತರನ್ನುದ್ಧಾರ ಮಾಡಬೇಕಿದ್ದ ಭೂತಭುಜಂಗನಾಥರು ಯಾವ ಪಾಪಕ್ಕೆ ಅಕಾಲ ಮರಣಕ್ಕೆ ತುತ್ತಾದರು? ಕಣಸೊಳಗ ಬಂದಾಗ ಸದರಿ ಅನುಮಾನವನ್ನು ಪ್ರಸ್ತಾಪಿಸಬೇಕೆಂದು ತಾಯಕ್ಕ ಪ್ರತಿರಾತ್ರಿಅಂದುಕೊಳ್ಳುತ್ತಿದ್ದಳು. ಆದರೆ ನಾಥರ ಚಮತ್ಕಾರದ ಮಾತುಗಳೆದುರು ಮರೆತು ಬಿಡುತಲಿದ್ದಳು.. ಯಲ್ಲಿಯ ತಾರಾನಗರದ ತಾನು? ಯಲ್ಲಿಯ ಮಾನ್ಯರ ಮಸಲವಾಡ ಅವರು? ಯಂದಾಕೆ ಬಿಟ್ಟ ನಿಟ್ಟುಸಿರು....

ಹಿಂಗs ಸುತ್ತನ್ನಾಕಡೇಕ ವಂದಲ್ಲಾ ವಂದು ಯಿದ್ಯಾಮಾನವು ಸಂಭವಿಕೆ ಮಾಡುತಲಿದ್ದಾಗ..  ಅತ್ತ ಕುದುರೆಡವು ಪಟ್ಟಣ ಯಂಬುವ ವರ್ತಮಾನದ ಅಗಾಧದೊಳಗ....

ಸೂರನು ಪರಾಕ್ರಮ ಮೆರೆಯುತ್ತ ಪೂರುವಾಸ್ರಮದ ವಾಸಣೆಗುಂಟ ಬಂದು ವುದ್ದಕ ಮಲಕ್ಕೊಂಡಿದ್ದ ವಸ್ತಿಯನ್ನು ಅಂದರ ಮೋಬಯನನ್ನು ನಖ ಶಿಖಾಂತ ಮುಸು ಮುಸನೆ ಮೂಸಿತಲ್ಲಾ.. ಅದರ ಸುದೀರ್ಘ ವಾಕ್ಯಗಳಂಥ ನಿಚುವಾಸಗಳು ಬರೆ ಹಾಕಿದಂಗ ಅಟೆದಿದ್ದವಲ್ಲಾ.. ಅದು ತನ್ನ ಮೊಳವರೆ ನಾಲಗೆ ತೆಗೆದು ಅವಯ್ಯನ ಸರೀರದ ಮ್ಯಾಲಣ ವಂದೊಂದು ಸ್ವೇದರಂದ್ರವನ್ನು ನೆಕ್ಕಿ ಕಾಮಗಾರಿ ಮಾಡಿತ್ತಲ್ಲಾ.. ಆ ಕ್ರಿಯೆಯ ಮೂಲಕ ಅದು ಯಂಥದೋ ಸಂದೇಸಗಳನ ರವಾನಿಸುತ್ತಿತ್ತಲ್ಲಾ.. ಅದು ಯಲ್ಲಿ ತನ್ನನ್ನು ಹೊತ್ತೊಯ್ದು ಜಗಲೂರಿ ಯಂಬುವ ಬಂದಿಖಾನೆಯೊಳಗ ಹಾಕಿ ಬಿಡುವುದೋ ಯಂದೊಂದರಗಳಿಗೆ ಮೋಬಯ್ಯನು ಅಳ್ಕೋಗಿದ್ದನು. ಹಂಗs ಸಹಿಸಿಕೊಂಡು ಮಲಗಿದ್ದನಷ್ಟೆ.. ಮಲಗಿ ಹಂಗs ಗಾಢ ನಿದುರೆ ಮಾಡುತ್ತಿದ್ದನಷ್ಟೆ....

ಮುಂದೇನಾತೋ? ಯೇನು ಬುಟ್ತೋ? ಅವಯ್ಯನುಟ್ಟಿದ್ದ ದೋತರದ ಭಾಗವು ಕೆಂಪಾನು ಕೆಂಪಗಾಗಿತ್ತು. ಅದೆಂಗಾತೋ? ಯಾಕಾತೋ! ನೀನೇ ವಡದು ಹೇಳಬೇಕು ಸಿವನೇ.. ಅದೇ ಯಿನ್ನು ಮಜ್ಜಣ ಮಾಡಿ ಬಂದ ಹಂಪಜ್ಜಗೆ ಜಡೆತಾತನು 'ಯಲಾಯ್ ಪೂರುವಿಕನೇ ವಸ್ತಿಯ ದೋತರ ರಗುತ ರಂಬಾಟಾಗಯ್ತು ನೋಡು' ಯಂದು ಹೇಳುತ ಗಮನ ಸೆಳೆದನು. ಆಗಿದ್ದು ಮುದೇತನು ಹಂಗೇನು? ಅವುದೇನು? ಯಂದನಕಂತ ಕಣ್ಣುಗಳನ ಯೀಟಗಲ ಮಾಡಿ ನೋಡಿದ್ದಲ್ಲದೆ ಅದರ ರಸವನ್ನು ಬೆರಳಿನ ತುದಿಗೆ ವಂಚೂರು ತಗುಲಿಸಿಕೊಂಡು ಮೂಸಿ ನೋಡಿ "ಹ್ಹಾ ಹ್ಹಾ.. ಸಾಂಬವಿ" ಯಂದು ವುದ್ಗಾರ

ತೆಗೆದನು.. ಅದನು ತನ್ನ ಭ್ರೂಮಧ್ಯೆ ತಿಲಕದೋಪಾದಿಯಲ್ಲಿ ಧರಿಸಿ ಆಗಲೇ ನೆರೆತ್ತಿದ್ದ ಹತ್ತಾರು ಮಂದಿ ಹಿರೀಕರನ್ನುದ್ದೇಶಿಸಿ ಭಕ್ತರಾ.. ತಾಯಿ ಸಾಂಬವಿ ಮುಟ್ಟಾಗವ್ಳೆ ಕನರಪ್ಪಾ.. ಯಂದು ನುಡಿದೊಡನೆ..

ಜನ ಮರುಳೋ? ಜಾತುರೆ ಮರುಳೋ.. ಬೆಲ್ಲದ ಕಣ್ಣಿಗೆ ಯಿರುವೆ ಮುತ್ತುವಂತೆ, ಮಾಯಿನ ಹಣ್ಣಿಂಗೆ ನೋಣ ಮುತ್ತುವಂತೆ.. ಯಲ್ಲಿದ್ದರೋ ಯಂತಿದ್ದರೋ.. ಗಂಡು ಹೆಣ್ಣು ಯಂಬುವ ಬೇದಯಿಲ್ಲದ ಅಬಾಲ ರುದ್ಧರಾದಿಯಾಗಿ ಯಾವತ್ತೂ ಮಂದಿಯು ಮೋಬಯ್ಯನ ಸರೀರವನ್ನು ಮುತ್ತಿಬಿಟ್ಟಿತು. ಆ ಅಯಿಲುಗೇಡಿ ಮಂದಿ ಆವೇಸದಿಂದ ತನ್ನನ್ನೆಲ್ಲಿ ಹರಕೊಂಡು ತಿಂಥಾರೋ  ಯಂಬ ಭಯವಾಯಿತು ಮೋಬಯ್ಯಗ.. ಅವನ ಗ್ರಾಚಾರ ನೆಟ್ಟಗಿತ್ತು ಯಂಬಂತೆ.. ಮುಂದೆ ನಡೆಯಬೇಕಿರುವ ದಯವ ಸಂಬಂಧೀ ಕಾರ್‍ಯೇವು, ಕಟ್ಟಳೆಗಳಿಗೆ ದುಡ್ಡು ದುಗ್ಗಾಣಿ ಜೋಡಾವಣಿ ಮಾಡುವ ಸಲುವಾಗಿ ಯಂಬಂತೆ ಹಂಪಜ್ಜನ ಸಲಹೆ ಮೇರೆಗೆ ಪಟ್ಟಣ ಸೋಮಿಗಳು ಆ ಕೂಡಲೆ...

"ನೋಡಿರಯ್ಯಾ ತಾಯಿ ಮುಟ್ಟು ಮಯ್ಲಿಗೆ ಆಗೋದು ಮನುವಂತರಕೊಂದೊಂದು ಸಲ. ಮುಟ್ಟಾಗುವ ದ್ವಾರ ತಾನೂ ವಂದು ಹೆಣ್ಣೆಂಬುದನು ತಾಯಿ ಸಾಬೀತು ಮಾಡ್ಯಾಳ.. ತಾಯಿ ಮುಟ್ಟಾಗಿರುವ ಪಟ್ಟಣದೊಳಗ ಕ್ಷಾಮಡಾಮರ ಸುಳಿಯೋದಿಲ್ಲ.. ಯೀ ದ್ರವರೂಪೀ ಸವುಭಾಗ್ಯದ ಕಿಂಚಿತ್ತು ಯಾರ ಮನೆಯೊಳಗಿರುತಯ್ತೋ ಆ ಮನೆಯೊಳಗ ಅನುಗಾಲ ಚಿನ್ನದ ಹೊಗೆ ಆಡತಯ್ತೆ! ಅದನ್ನು ತಿಲಕದೋಪಾದಿಯಲ್ಲಿ ಧರಿಸಿದವರ ಸನೀಕ ರೋಗ ರುಜಿಣ ಸುಳಿಯಾಕಿಲ್ಲ. ಆದರ ವಂದು ಮಾತನ ಮರಿಬ್ಯಾಡೂರಿ..."

ಯಂದು ಮುಂತಾಗಿ ಯಿವರಿಸಿದ್ದಲ್ಲದೆ ಯಿಂಥಿಷ್ಟಕ್ಕೆ ಯಿಂಥಿಷ್ಟು ರುಸುಮುಯಂದು ನಿಗದಿಪಡಿಸಿದೊಡನೆ ಭಕುತಾದಿ ಮಂದಿ ಯಾಕಾಗಬಾರದಂತು. ನೋಡು ನೋಡುವಷ್ಟರೊಳಗ ಮೋಬಯ್ಯನ ಸರೀರವು ಕುಂಕುಮಭರಣಿ ಆತು ಸಿವನೇ.. ವಂದು ಕೊಡುವಲ್ಲಿ ಯರಡು ಕೊಟ್ಟವರೆಷ್ಟೋ? ಯರಡು ಕೊಡುವಲ್ಲಿ ನಾಲುಕು ಕೊಟ್ಟವರೆಷ್ಟೋ? ಪರಮೂರೊಳಗ  ಯಿರುವ ತಮ ತಮ್ಮ ನೆಂಟರಿಷ್ಟರಿಗೆ ಯಿರಲೆಂದವರೆಷ್ಟೋ? ಅಂತರ ಪಿಚಾಚಿಗಳಾಗಿರುವ ತಮತಮ ಹಿರೀಕರು ಸೊರಗ ಸೇರುವ ಸಲುವಾಗಿ ಯಿರಲಿ ಯಂದವರೆಷ್ಟೋ? ವಟ್ಟಿನಲ್ಲಿ ಯಾರ ಮನೆಯೊಳಗಿಣುಕಿದರೂ.. ಯಾರ ಮನದೊಳಗಿಣುಕಿದರೂ.. ಯಾರ ಹಣೇನ ನೋಡಿದರೂ..  ಸಾಂಬವಿಯ ಪಯಿತ್ರಮುಟ್ಟು ಮಯ್ಲಿಗೆ

ಮ್ಯಾಲ ತಮಗೂ ಹಕ್ಕಯ್ತೆ.. ತಾವು ಬರೋಗಂಟಾ ವಸ್ತೀಗೆ ಮಜ್ಜಣ ಮಾಡಿಸಬಾರದೆಂಬ ನಿರೂಪ ಅಕ್ಕಪಕ್ಕದ ಗ್ರಾಮಗಳ ಪಟ್ಟಣ ಸೋಮಿಗಳಿಂದ ಬರಲಾರಂಭಿಸಿದೊಡನೆ....

ತನ್ನ ಗಂಡನಿದ್ದಲ್ಲಿಗೆ ತಲುಪಿದ್ದ, ತನ್ನತ್ತ ಪಿಳಿಪಿಳಿಗುಟ್ಟುತಲಿದ್ದ ತನ್ನ ಗಂಡನ ಕಣ್ಣುಗಳನ್ನು ನೋಡುತ್ತಿದ್ದ.. ಜಗಲೂರೆವ್ವಗ ಹಿಸ್ಸೀ ಅನ್ನಿಸಿಬಿಟ್ಟಿತು. ಆ ವಂದರಗಳಿಗೆಯಲ್ಲಿ ಮುಖನ ಸಿಂಡರಿಸಿಕೊಂಡಳು.. ಏಸೋ ವರುಷಂಗಳ ಹಿಂದೆ ಮುಟ್ಟಾಗಿದ್ದ ಆ ಸಾಧ್ವಿಯು, ಹ್ಹಾ.. ಹ್ಹಾ.. ನಿನ್ ಕಟಕಂಡೀಸುವರುಸ ಬಾಳೂವೆ ಮಾಡಿದೆನಲ್ಲೋ ಸೂಗಾss ಯಂದನಕಂತ ತನ್ನ ಗಂಡನತ್ತ ನೋಡಿ ಹಲ್ಲು ಕಡಿದಳು.. ಕಳ್ಳರೆಂಬ ಅರ್ಥದಲ್ಲಿ ಹಿರೀಕರತ್ತ ದುರುಗುಟ್ಟಿ ನೋಡುತ್ತ ಪರಪರ ಕೆರೆದುಕೊಂಡು ತಲೆಗೂದಲನ್ನು ಸೆಲ್ಲೊಡೆದಳು.. "ಜಗಲೂರೆಜ್ಜನೇ.. ನನ್ನನ್ಯಾಕ ಬದುಕಲಕ ಹಚ್ಚೀ ತಂದೆಯೇ.." ಯಂದು ರವುಸದಿಂದ ಚೀರಿದಳು.. ತಾನೀ ಮೂರಾಗ ಯಿರೋದ್ಕಿಂತ ಬ್ಯಾರೆ ಮೂರಾಗ ಮಣ್ಣಾಗೋದೇವಾಸಿ.. ಯಲ್ಲದಿಯೋ ಸೂರಾs ಯಲ್ಲಿದೀಯೋ.. ಯೀ ಸೂಗನಿಗೆ ನನ್ನ ಕೊಟ್ಟಾತನೇ ಯಂದು ಚೀರಿಕೋತ ಅಲ್ಲಿಂದ ಬಿರುಗಾಳಿಂಯೋಪಾದಿಯಲ್ಲಿ ಹೊಂಟೋದೊಡನೆ....

ಹಿರೀಕರು ಹಂಪಜ್ಜನ ನೇತ್ರುತ್ವದೊಳಗ ಬಂದ ಯಿಚಾರದಾವುದೆಂದರೆ..

ನೆರಿಕೆ ಕಟ್ಟಿದ್ದೂ ತಡ ಹಿಡೀಲಿಲ್ಲ....

ಮೂರು ಗುಡ್ಡಗಳಿಂದ ಮೂರು ಕಲ್ಲು ಗುಂಡುಗಳನ ತರಿಸಿ ವಲೆ ಮಾಡಿದ್ದು ತಡ ಹಿಡೀಲಿಲ್ಲ...

ಅದರ ಮ್ಯಾಲ ಪುರಾತನಕಾಲದ ಹಂಡೇವ ಯಿಟ್ಟಿದ್ದು ತಡ ಹಿಡೀಲಿಲ್ಲ...

ಕೊಡಪಾನಗಟ್ಲೆ ಪಂಚೋದಕವನ್ನು ಸುರಿವಿದ್ದು ತಡ ಹಿಡೀಲಿಲ್ಲ..

ಬನ್ನಿ, ಬಿಲ್ವ, ಗಂಧದ ಕೊರಡುಗಳನ್ನು ವಲೆಯೊಳಗಮರಿಸಿದ್ದು ತಡs ಹಿಡೀಲಿಲ್ಲ..

ಸಿವನ್ನಾಮ ಪಾರೋತಿ ಪತಿ ಹರಹರ ಮಾದೇವ ಯಂದು ಹೇಳುತ ಬೆಂಕಿ ಮುಡಿಸಿದ್ದು ತಡs ಹಿಡೀಲಿಲ್ಲ....

ಸಾಂಬವಿಯ ನಾಮಸ್ಮರಣ ಮಾಡುತ ಚಳ್ಳಮ್ಮಳ್ಳ ನೀರು ಕಾಯಿಸಿದರು.. ವಸ್ತಿಯನ್ನು ಮೆಲುಮೆಲ್ಲಕ ಯಬ್ಬಿಸಿ ಬಚ್ಚಲಕ ಕರೆ ತಂದರು.. ಅದಕ್ಕಂಟಿದ್ದ ಬಟ್ಟೆಬರೆ ವುದುರಿಸಿ ಬೆಳ್ಳಿ ಪೀಠದ ಮ್ಯಾಲ ಕುಂಡುರಿಸಿದರು.. ಸುಡುಸುಡುವ

ನೀರು ಸುರುವುತಲೂ, ಸೀಗೇಕಾಯಿ ಪುಡಿಯಿಂದ ಅದರ ಮಯ್ಯನ್ನು ಗಸಗಸ ವುಜ್ಜುತಲೂ, ಮಜ್ಜಣವನ್ನು ತಾಸುಗಟ್ಟಲೆ ಮಾಡಿಸಿದರು.. ತರುವಾಯ ರೇಶಿಮೆ ಅರಿವೆಯಿಂದ ಮಯ್ಯ ತಂಗಲನ್ನು ವರೆಸಿದರು.. ಹೊಚ್ಚ ಹೊಸ ಬಟ್ಟೆಬರೆ ತೊಡಿಸಿದರು.. ಮುಖಕ ಅರುಷಣ ಕೊಂಬಿನ ಲೇಹ್ಯವ ಪೂಸಿದರು.. ಲೋಬಾನದ ಹೊಗೆ ಆಡಿಸಿದರು.. ವುತ್ತುತ್ತಿ, ಕರಜೂರ, ದ್ರಾಕ್ಷಿ, ಗೋಡಂಬಿ, ಬಾದಾಮು ತಿನ್ನಿಸಿದರು.. ಕೆನೆವಾಲು, ನೊರೆವಾಲು ಕುಡಿಸಿದರು.. ಜೋಂಪಿನಿಂದ ತೂಕಡಿಸಲಾರಂಭಿಸಿದ ವಸ್ತಿಯನ್ನು ತೂಗು ತೊಟ್ಟಿಲೊಳಗ ಮಲಗಿಸಿದರು.. “ಮಲಗವ್ವಾ ತಾಯಿ ಮಲಗವ್ವಾ ಮಾಮಾಯಿ” ಯಂದು ಪದ ಹಾಡುತ ತೂಗಿದರು.. ಹಂಗ ವಸ್ತಿಯು ಗಪ್ಪಂತ ಕಣ್ಣುಮುಚ್ಚಿ ಮೋಂಕಾರ ಸದ್ರುಸ ಗೊರಕೆಯನ್ನು...

ಹ್ಹಾ.. ಯಿನ್ನೇನು.. ತಾಯಿ ಸಾಂಬವಿ ನಿದ್ದೆಮಾಡುತಾಳ.. ಆಕೆ ಯಚ್ಚರಾಗುವುದರೊಳ ಗಾಗಿ ಹಿಡಿಯಲು ಬಂದ ಅಣ್ಣಂಗಳಿಗೆ ಅಜೇಯನಾಗಿ ವುಳಕೊಂಡಿರುವ ಮಾಬಲಿಯನ್ನು ಹಿಡಿಯಬೇಕದೆ, ಹಿಡಿದು ಕಟ್ಟಬೇಕದೆ! ಕಟ್ಟಿ ಸೊಕ್ಕಡಗಿಸಬೇಕದೆ.. ಅದನೆಂಗ ಹಿಡಿಯೋದು? ಯಂಬ ಪ್ರಸ್ನೆಯೊಂದೆ ನೆಲಮುಗುಲಿಗೇಕಾಗಿ ವುಳಕೊಂತು. ಸದರಿ ಸಮಸ್ಯೆಯನ್ನು ಬಗೆಹರಿಸಲು ನೆರೆತಿದ್ದ ಸಭೆಯ ಯಾರೊಬ್ಬರ ಬಾಯಿಯಿಂದ ವಂದೇ ವಂದು ಸರಿಯಾದ ಸಮಾಧಾನ ವುದುರಲಿಲ್ಲ.. ಯೀಟಿ ಭರಚಿ ಹಿಡಕೊಂಡು ಅದರ ಮ್ಯಾಲ ಯೇರಿ ಹೋಗುವಂತಿಲ್ಲ.. ಕಾಳಗ ಮಾಡುವಂತಿಲ್ಲ.. ಅದರ ಸರೀರದಿಂದ ವಂದೇ ವಂದು ಹನಿಯನ್ನು ನೆಲಕ್ಕ ವುದುರಿಸುವಂತಿಲ್ಲ.. ಯಿದು ವುಪಾಯದಿಂದ ಸಾಧಿಸಬೇಕಿರುವ ಗುರುತರ ಕಾರ‍್ಯವು.. ಯೇನು ಮಾಡುವುದು? ಹೆಂಗ ಮಾಡುವುದು? ದಾರಿ ಹುಡುಕಿರಪ್ಪಾ.. ದಾರಿ ಹುಡುಕಿರಿ.. ಯೀ ಪ್ರಕಾರವಾಗಿ ಕೇಳಿಕೊಂಡ ಹಿರೀಕರಿಗೆ ಗೊತ್ತಿಲ್ಲದ್ದೇನಯ್ತೆ?

ಹುಲಿ ಹಿಡಕೊಂಡು ಬರ‍್ರೆಂದರ ಯೇಳುಪಟ್ಟೆ ಹುಲಿಯನ್ನು ರೆಪ್ಪೆ ಮುಚ್ಚಿ ತೆರೆಯುವು ದರೊಳಗ ತಂದು ಮಲಗಿಸತೇವs ಸಿಮ್ಮಾನ ಹಿಡಕೊಂಡು ಬರ‍್ರೆಂದರ ಮಯ್ನ ಲಟಲಟ ಮುರಿಯುವುದರೊಳಗ ಹಿಡತಂದು ಕೆಡವತೇವss ಆದರs ಆ ಮಾಬಲಿ ಮಾಬಲನೇ ಸಯ್ಯಿ.. ಯಂದು ಜವಾಬು ನೀಡಿದರು ಕಿರೀಕರು...

ಅದರ ಹೊರ ರೂಪ ಕೋಣದ್ದೇನೋ ಸರೆ.. ಆದರ ಅದರೊಳಗ

ಬಿರುದಾಂಕಿತ ಚಕ್ರವರ್ತಿಗಳ ಡಗಿದಂಗವರ.. ಆ ಚಕ್ರವರ್ತಿಗಳು ಯಾವುದಕ ಮನಸೋಲುತವರಂದರss ಅರೆ ಅವುದಲ್ಲ..!

ಅಲ್ಲೊಂದು ಪಟ್ಟಣ ಯಿತ್ತಲ್ಲ.. ಅದೇ ಕುದುರೆಡವು ಯಂಬುದಾಗಿತ್ತಲ್ಲ.. ಅದರೊಳಾಗೊಂದು ಅರಮನೆ ಯಂಥದೋ ವಂದು ಅರಮನೆ ಯಿತ್ತಲ್ಲ.. ಅರಮನೆ ಯಂದ ಮ್ಯಾಲ ರಾಜಮಾರಾಜರುಗಳನು ಹೊಗಳಿ ಕಸುವು ತುಂಬಲಕಂತ ಕಸುಬಸ್ತ ಮಂದಿ ಯಿರುತಾರಪ್ಪಾ.. ಅವರನ್ನು ಭಟ್ರಾಜು ಭಟ್ರಾಜು ಅಂತ ಕರಿತಾಯಿದ್ದರು.. ಅವರ ನಾಲಗೆ ಮ್ಯಾಲ ಸರಸೊತಮ್ಮ ಗುಡುಲು ಹಾಕಿಕೊಂಡು ವಾಸ ಮಾಡುತಲಿರುವಳು. ಯೀ ಕಾರಣಕ್ಕವರು ಮೂರನ್ನು ಹೊಗಳಿ ಆರು ಮಾಡಲು ಬಲ್ಲರು, ಆರನ್ನು ತೆಗಳಿ ಮೂರರಂಕೆಗೆ ಯಿಳಿಸಲೂ ಬಲ್ಲರು.. ಕಪ್ಪನ್ನು ಬೆಳ್ಳಗೆ ಮಾಡಬಲ್ಲರು.. ಷಂಡರೊಳಗ ಪವುರುಷವನ್ನು ತುಂಬಬಲ್ಲರು.. ಕಲೆಟ್ಟರು ಥಾಮಸು ಮನ್ರೋ ಸಾಹೇಬನು ಅಂಥವರ ಪಾಲಿಗೆ ಸಾಡೇಸಾಥ ಸಣಿಯಾಗಿಬಿಟ್ಟಿರುವನು. ವಂದೊಂದು ಸಿಮ್ಮಾಸನವನ್ನು ಬೋರಲಿಟ್ಟ ಲಾಗಾಯ್ತು ಭಟ್ರಾಜು ವಮುಸಸ್ಥರು ಮೂಲೆಗುಂಪಾಗಿಬಿಟ್ಟಿರುವರು. ಆ ಸರಸೊತಿ ಪುತ್ರರ ಬಾಯಿಗೆ ದಗದ ಯಿಲ್ಲದಂಗಾತು.. ವಡಲಿಗೆ ಕಾಳೂ, ಕೂಳೂ, ನೀರೂ, ನಿಡಿ ಯಿಲ್ಲದಂಗಾತು.. ಅವರು ನಮ ನಿಮ್ಮಂಗ ಮಯ್ನ ಬಗ್ಗಿಸಿ ದುಡಿಯೋರಲ್ಲ.. ಯೀ ಕಡೆ ಬಿದ್ದ ಕಸಾ ಕಡ್ಡೀನ ಆ ಕಡೇಕ ಯತ್ತಿ ಹಾಕೋರಲ್ಲ.. ನಿಮ್ಮನ್ನು ಹೊಗಳುತೀವಪ್ಪಾ.. ಹೊಗಳಿ ನಿಮ್ಮೊಳಗ ಪವುರುಷ ತುಂಬುತೀವಪ್ಪಾ.. ನಮ್ಮ ಬಾಯಿಂದ ಹೊಗಳಿಸಿಕೊಂಡಲ್ಲಿ ನಿಮ್ಮ ಮನೆಯೊಳಗೆ ಭಂಗಾರದ ಹೊಗೆ ಆಡುತಯ್ತಪ್ಪಾ.. ಹೊಗಳಿಸಿ ಪುಣ್ಯ ಕಟ್ಟಿಕೊಳ್ಳಿರಪ್ಪಾ.. ನಮ್ಮ ಬದುಕಿಗೆ ವಂದು ದಾರಿ ಮಾಡಿಕೊಡಿರಪ್ಪಾ.. ಯಂದು ದವುಳೇರ ಮಂದಿ ಯದುರು ಅಂಗಲಾಚುತ್ತಿದ್ದುದುಂಟು. ಹೊಗಳಿಸಿಕೊಂಡು ನಾವು ರಾಜ್ಯಭಾರ ಮಾಡೋದಾಟರಾಗss ಅಯ್ತೆ.. ಯಂದವರಿವರಿಂದ ಅನ್ನಿಸಿಕೊಂಡದ್ದುಂಟು. ಹಿಂಗಾಗಿ ಅವರಿವರು ಮಾಡಲಕ ಕೆಲಸ ಬೊಗುಸೆಯಿಲ್ಲದೆ ಯಿವತ್ತಿಗೆಂಗ.. ನಾಳಿಗೆ ಹೆಂಗ ಯಂದು ಯಸನ ಮಾಡುತ ವಂದೊಂದು ದಿವಸವನ್ನು ವಂದೊಂದು ಮನುವಂತರೋಪಾದಿಯಲ್ಲಿ ನೂಕುತ ಕುಟುಕು ಜೀವ ಹಿಡಕೊಂಡಿಹರು. ಯೀ ಭಟ್ರಾಜ ಕುಲದ ತಿಲಕದೋಪಾದಿಯಲ್ಲಿ..

ಹನುಮಕೊಂಡ ರಾಮರಾಜು ಯಂಬ ಹಿರೀಕನಿದ್ದನು. ಆತನು ಸ್ವಾಸ್ಥಿಯ ಮೂಲ ಕಾಕತೀಯ ಸಾಮ್ರಾಜ್ಯದೊಳಗಿತ್ತು. ಮೋರಂಗಲ್ಲಿನ ಮ್ಯಾಲ ದಂಡೆತ್ತಿ

ಹೋಗಿ ಯೀರಪರತಾಪ ರುದ್ರಗಣಪತಿಯುನ್ನು ಸೋಲಿಸಿದ ಸ್ರೀಕ್ರುಸ್ಣದೇವರಾಯನ ಚತುರಂಗಬಲದೊಡನೆ ಅವನ ವಮುಸಸ್ಥರು ಹೊಂಟು ಬಂದು ಯಿಜಯನಗರದೊಳಗ ನೆಲಗೊಂಡಿದ್ದರು. ತರುವಾಯ ರಕ್ಕಸತಂಗಡಗಿ ಯುದ್ದದಲ್ಲಿ ಬಾಮನಿ ತುರುಕರ ಕಯ್ಲಿ ಅರಯೀಡೂ ರಾಮರಾಯನು ಹತನಾಗಲು ಸಿಂಧವಾಡಿ, ನೊಳಂಬವಾಡಿ, ಗಂಗವಾಡಿ, ತುಂಗವಾಡಿ ಮೊದಲಾದ ಛಪ್ಪನ್ನಾರು ದೇಸಗಳ ದೊರೆಗಳನ್ನು ಹೊಗಳಿದ್ದರು. ವುಚ್ಚಂಗಿ ದುರ್ಗದ ಮೇಲ್ಕೋಟೆ ಬುರುಜಿನಿಂದ ಬಿದ್ದು ಹೊನ್ನಾಗತಿ ಪ್ರಾಣಾರ್ಪಣೆ ಮಾಡಿಕೊಂಡ ತರುವಾಯು ತಂದೆ ಸಿವರಾಮರಾಜು ವಡನೆ ರಾಮರಾಜನು ಗುಡೇಕೋಟೆ ಮುಖಾಂತರ ಕುದುರೆಡವಿಗೆ ಬಂದು ನೆಲೆ ನಿಂತಿದ್ದನು. ಭಟ್ರಾಜು ಕುಲ ವಂದು ತೂಕವಿದ್ದರ ಯೀ ರಾಮರಾಜೂನೇ ವಂದು ತೂಕವು.. ವಾಗಾಡಂಬರದ ಭಂಡಾರವನ್ನು ಬಾಯೊಳಗಿಟ್ಟುಕೊಂಡಿರುವ ಯಿವಯ್ಯನು ತೊಂಬಲದುಂಡೆಯನ್ನು ದವಡೆಯಿಂದ ದವಡೆಗೆ ವುರುಳಾಡಿಸುತ್ತಿದ್ದನೆಂದರ ಅದರ ಕಾಮವಾಸಣೆಯು ಘಮ್ಮಂತ ಪಟ್ಟಣದ ತುಂಬೆಲ್ಲ ಹಬ್ಬುತ್ತಿತ್ತು. ಯೀವಯ್ಯ ಹೋಬ್ಬ ಯಂದು ಡೇಗಿದನೆಂದರೆ ಪಟ್ಟಣಕ್ಕೆ ಪಟ್ಟಣವು ಹ್ಹಾ.. ಹ್ಹಾ.. ಯಂದು ತಲೆದೂಗುತಲಿತ್ತು. ಆ ಕಾಲದಲ್ಲಿ ಯೀವಯ್ಯ ಕಿವಿಯೊಳಗ, ಕೊರಳೊಳಗ, ವಂದೊಂದು ಬೆರಳ ಸಂಧುಗಳೊಳಗ ಯೇಸು ನಮೂನಿ ಆಭರಣಗಳಿರುತ್ತಿದ್ದುದೇನು? ಆ ಕಾಲದಲ್ಲಿ ಯೀವಯ್ಯ ಡೋಲಿಯೊಳಗ ಸಂಚಾರ ಮಾಡುತ್ತಿದ್ದುದೇನು? ಕಲಿಕಾಲದ ಮಯ್ಮೆಯಿಂದಾಗಿ ರತುನ ತಿಂಬುವ ಪಕ್ಷಿ ಪತ್ರೋಳಿಗೆ ಸೊಪ್ಪಿಯಾಯಿತೆಂಬಂತೆ...

ರಾಮರಾಜು ಭಟ್ರಾಜು ತಮ್ಮ ಪಟ್ಟಣದೊಳಗ ಅದಾನಾ ಯಂಬ ಸಂಗತಿಯು ದಯುವಸ್ತರಿಗೆ ಹೊಳೆದದ್ದು ಅನಂತರವೇ.. ಪಟ್ಟಣದ ಯಾರೊಬ್ಬರೂ ಭಟ್ರಾಜು ಕುಟುಂಬದೊಂದಿಗೆ ವಡನಾಟ ಯಿಟ್ಟುಕೊಂಡಿರಲಿಲ್ಲ. ಆ ಕುಟುಂಬವೂಅನಾಮದೇಯತೆಯಿಂದ ಬಾಳುವೆ ಮಾಡುತಲಿದ್ದಿತು. ದಯವಸ್ತರು ಖಾಸಗೀ ಗೂಢಾಚಾರರ ಸಾಯದಿಂದ ಫಲಾನ ಯಿಂಥ ಮೋಣಿಯೊಳಗ, ಫಲಾನಯಿಂಥ ಮನೆಯೊಳಗ ಭಟ್ರಾಜು ಸಮುಸಾರ ಅದಾ ಯಂಬುದನ್ನು ಪತ್ತೆ ಹಚ್ಚಿದರು. ಬಾಜಾಬಜಂತ್ರಿಕರಕೊಂಡು, ಚಾಜಾಗೀಜಗಳನ್ನೆಲ್ಲ ತಳಿಗೆಯೊಳಗಿಟುಕೊಂಡು ಪಟ್ಟಣಸೋಮಿ, ದಯವ, ಹಿರೀಕರೆಂಬ ಸೊಯಂ ಆಡಳಿತ ಯವಸ್ಥೆಯ ಕೆಲ ಮುಖ್ಯ ಸದಸ್ಯರು ದಿಬ್ದೀರ್ತಿಯಿಂದ...

ಮನ್ರೋ ಸಾಹೇಬನನ್ನು ಹೊಗಳಿ ಹೊಲಮನಿ ವುಂಬಳಿ ಪಡೆಯಬೇಕೆಂಬ ಗುರಿಯೊಂದಿಗೆ ಹನುಮಕೊಂಡ ರಾಮರಾಜುವು ವಂದು ಹಿಡಿ ಅವಲಕ್ಕಿಯನ್ನು ಬಾಯೊಳಗ ನುರಿಯುತ ಹೊಗಳಿಕೆಗೆ ಸಂಬಂಧಿಸಿದಂಥ ಸಬುಧಗಳ ವಂದು ಮಹಾ ನಿಘಂಟು ರಚನಾಕಾರ್ಯದಲ್ಲಿ ನಿರತನಾಗಿದ್ದನು. 'ಅ' ಯಂಬ ಅಕ್ಕರದಿಂದ ಹೊಂಟು 'ಅಯ್' ಯಂಬ ಅಕ್ಕರದ ವರೆಗೆ ಬಂದಿದ್ದನು. ಅಯ್ ಯಂಬುದು ನತದ್ರುಸ್ಟ ಅಕ್ಕರವಾಗಿತ್ತು.. ಅಯ್ ಅಂದರ 'ಅಯಿಸ್ವರ್‍ಯ' ಯಂದೊಂದರಗಳಿಗೆ ಅಂದುಕೊಂಡನು. ಅದರಾವಯ್ಯಗ ಅದರ ಹಿಂದು ಮುಂದಲಿನ ಸಬುಧಗಳು ಹೊಳೆಯಲಿಲ್ಲ.. ಯಾದೋ ವಂದು ರಖಮಯ್ನ ಸಬುದಾವಳಿ ಬೀದಿ ಮೂಲೇಲಿಂದ ತೇಲಾಡುತ ಬಂತು. ಅದು ಯಿಂಥದೇ ಯಂದು ನಿರ್ಧಾರಕ್ಕೆ ಬರಲಾಗಲಿಲ್ಲ..ಅವಕ್ಕೂ ಯಾದೋ ವಂದು ಅರ್ಥ ಬಿಗಿದ. ಸ್ವಾಭಿಮಾನಧನನಾದ ತಾನು ಯಾವ ಕಾರಣಕ್ಕೂ ಮನೆ ಮುಂಗಟ್ಟಿಗೆ ಹೋಗಿ ಯಿಣುಕುವ ಸ್ವಭಾವದವನಲ್ಲ. ಆತನ ದರುಮಪತ್ನಿ ಶಾರದಮ್ಮಳನ್ನು ಆ ದಿಬ್ಬಣವು ಸೂಜಿಗಲ್ಲಿನಂತೆ ಸೆಳೆಯಿತು. ಆದರ ತಾನು ಯಾವತ್ತೂ ಭಟ್ರಾಜು ವಮುಸದ ರೀತಿರಿವಾಜುಗಳನ್ನು ವುಲ್ಲಂಘನೆ ಮಾಡಿದಾಕೆಯಾಗಿರಲಿಲ್ಲ.. ತಲಬಾಕಲು ದಾಟಿ ಯಿಣುಕಬೇಕೆಂದರೆ ಗಂಡನ ಪೊದೆ ಹುಬ್ಬುಗಳೊಳಗಿನ ಲಕ್ಷ್ಮಣರೇಖೆಗಳು ತಡೆಯುತ್ತಿರುವವು.. ಅದೆಲ್ಲೋ ಮುಂದಕ ಹೋತದೆಂದು ಭಾವಿಸುವಷ್ಟರೊಳಗ..

ದಿಬ್ಬಣವು ತಮ್ಮ ಮನೆ ಮುಂಗಟ್ಟಿನಲ್ಲಿ ನಿಂತಿದ್ದು ತಡ ಆಗಲಿಲ್ಲ.. ಅಡವುಲ ಪಾಲಯ್ಯನ ನೇತ್ರುತ್ವದಲ್ಲಿ ಚಾಜ ತಳಿಗೆಗಳು ವಳ ಬಂದದ್ದು ತಡ ಆಗಲಿಲ್ಲ. ತನಗೆ ನಮಸ್ಕರಿಸಿದ ಯಾರನ್ನೂ ಮಾತನಾಡಿಸದ ಸ್ವಭಾವದವನಾದ ರಾಮರಾಜು, ಕಣ್ಣಳತೆ ವುಸುರಳತೆಯಲ್ಲಿದ್ದ.. ಅವರೆಲ್ಲರತ್ತ ತೀಕ್ಷ್ಣನೋಟ ಬೀರಿದನು. ಪತ್ತೆಯಾದ ಯಾಕಲಯ್ಯನು ಮಾಡಿದ ಸಂಗನೆಯಂತೆ ಪಾಲಯ್ಯನು "ಅಯ್ಯಾಽ ಸರಸೊತೆಮ್ಮನ ವರಪುತ್ರನೇ.. ಯಿಗೋ ನಿನಗೆ ಪ್ರಣಾಮಗಳು" ಯಂದು ಕಯ್ನ ಜೋಡಿಸಲು ಪ್ರಸನ್ನವದನನಾದ.

ರಾಮರಾಜುಗೂ, ಪಾಲಯ್ಯಗೂ ನಡುವೆ ವುಭಯ ಕುಸಲೋಪರಿ ಯೇರ್ಪಟ್ಟಿತು.. ಪಟ್ಟಣದ ಯಾಮೊಂದು ಯಿದ್ಯಾಮಾನ, ವರ್ತಮಾನದ ಬಗ್ಗೆ ವಂಚೂರು ಅರುವಿರದಿದ್ದ ರಾಮರಾಜುವು "ಅದೆಲ್ಲ ಯಿರಲಿ, ನಿಯೋಗ ನಮ್ಮ ಬಳಿಗೆ ಬಂದ ಕಾರಣವೇನು?" ಯಂದು ಕೇಳಲಾಗಿ....

ಪಾಲಯ್ಯನು “ವಬ್ಬ ಮಾನುಭಾವನನ್ನು ಹೊಗಳಿ ಸಾಧು ಮಾಡಬೇಕು ಸ್ವಾಮೀ” ಯಂದು ಯಿನ್ನಯಿಸಿಕೊಳ್ಳಲಾಗಿ.. ಅವಯ್ಯನು “ಮಾನುಭಾವ ಯಂದರೆ ಯಾವೂರ ರಾಜನು?” ಯಂದು ಪ್ರಶ್ನೆ ಹಾಕಲಾಗಿ ಪಾಲಯ್ಯನು “ಆತನು ಚತುಷ್ಪಾದಿಗಳಿಗೆಲ್ಲ ಮಾರಾಜನು ಸ್ವಾಮೀ” ಯಂದುದಕ್ಕೆ ಅವಯ್ಯನು ಹುಬ್ಬೇರಿಸಿ “ಅಂದರ” ಯಂದು ಪ್ರಸ್ನಾರ್ಥಕ ಚಿನ್ನೇನ ಮುಡುದನು...

ಆಗ ಮುಖದ ಬೆಮರೊರೆಸಿಕೊಳುತ ಪಾಲಯ್ಯನು ಯಿದ್ದದ್ದು ಯಿದ್ದಂಗೆ ಯಿವರಿಸಲಾಗಿ ಸಿವ.. ಸಿವಾ.. ರಾಮರಾಜುವು ದುಕ್ಕದ ಕಡಲೊಳಗ ಮುಳುಗಿದನು. ರಾಜಮಾರಾಜರನ್ನು ಹೊಗಳಿದ ಬಾಯಿ ವಂದು ಯಕಃಶ್ಚಿತ್ ಕೋಣವನ್ನು ಹೊಗಳಲಕ ಸೋಪ್ತಿಯಾಯಿತಲ್ಲಾ.. ಅಯ್ಯೋ ತಾಯಿ ಸರಸತಿ, ಯಿದೇನು ಕರ್ಮ ನಿನ್ನದು.. ಛೀ.. ಛೀ ಯಿದು ತನ್ನಿಂದಾಗದು..ಛೇ.. ಛೇ ಅದು ತನ್ನಿಂದ ಸಾಧ್ಯಯಿಲ್ಲ.. ಯಂದನಕಂತ ತಲೆಗೆ ಕಯ್ನ ಹಚ್ಚಿ ರೋಧನ ಮಾಡಲಾರಂಭಿಸಿದ. ತನ್ನ ಪತಿ ದಯ್ವವನ್ನು ಶಾರದಮ್ಮ ಬಗೆಬಗೆಯಿಂದ ರಮಿಸತೊಡಗಿದಳು ಮರೆಯಿಂದ ಧಾವಿಸಿ ಬಂದು....

ಪಾಲಯ್ಯನು ಆ ಕೂಡಲೆ ವಂದರ ಹಿಂದ ವಂದರಂತೆ ಅಯ್ದು ಬೆಳ್ಳಿ ನಾಣ್ಯಗಳನು ತೆಗೆದು ಚಾಜದೊಳಗಿಟ್ಟು “ಹಂಗನ್ನ ಬ್ಯಾಡೂರಿ ಸ್ವಾಮಿ, ಯಿದು ಪಟ್ಟಣದ ಮರುವಾದಿ ಪ್ರಸ್ನೆ ಅಯ್ತೆ.. ಯಿದಕ ಸಾಕ್ಷಾತ್ ಆದಿಸಗುತಿಯ ವಪ್ಪಿತ ಅಯ್ತೆ.. ಸರಸೊತಿಯು ಬ್ಯಾರೆ ಅಲ್ಲ.. ಸಾಂಬವಿಯು ಬ್ಯಾರೆ ಅಲ್ಲ..” ಯಂದು ಕಯ್ನ ಮುಗುದು ಕೇಳಿಕೊಂಡನು....

ಬೆಳ್ಳಿ ರೂಪಾಯಿಗಳು ಚಿಮ್ಮತೊಡಗಿದ ಬೆಳಕಲ್ಲಿ ಸೂರ್‍ಯಾವು ಮಂಕಾದನು.. ಹೊಟ್ಟೆ ತುಂಬ ಚಾಜ, ಕಯ್ಯಿ ತುಂಬ ಬೆಳ್ಳಿ ರೂಪಾಯಿಗಳು.. ಮನಿಮಂದಿಯಲ್ಲ ಹೊಟ್ಟೆ ತುಂಬ ವುಂಬದೆ ಯೇಸು ಕಾಲವಾತು? ಕೋಣಾನ ಹೊಗಳಿದರ ತಪ್ಪೇನಯ್ತೆ..? ನಾಯೀನ ಹೊಗಳಿದರ ತಪ್ಪೇನಯ್ತೆ..? ವಪ್ಪಿಕೊಳ್ಳಿರೀ.. ವಪ್ಪಿಕೊಳ್ಳಿರೀ.. ವಪ್ಪಿಕೊಳ್ಳದಿದ್ದರ ತನ್ನ ಕೊಳ್ಳೊಳಗಿನ ಮಾಂಗಲ್ಯದ ಮ್ಯಾಲ ಆಣೆ ಪ್ರಮಾಣ ಅಯ್ತೆ.. ಯಂದು ಮುಂತಾಗಿ ಶಾರದಮ್ಮ ಜುಲುಮಿ ಮಾಡಲು....

ರಾಮರಾಜನು “ಅಯ್ಯೋ.. ನನ್ನ ಧರುಮಪತ್ನಿಯೇ.. ಆಣೆ ಪ್ರಮಾಣ ಮಾಡುತಿರುವಿಯಲ್ಲಾ.. ನೀನಾಡಿದ ವಂದೊಂದು ಮಾತು ಕೂರ್ದಸೆಯಂತೆ ಯಿರಿಯಿತಲ್ಲಾ.. ನೀನು ಯಿಂಥ ಮಾತನ್ನಾಡೋ ಬದಲಿಗೆ ವಂಥೊಟ್ಟು ಯಿಷ ನೀಡಿದ್ದರ ಮುತ್ತಯ್ದೆ ಸಾವನ್ನು ಸಾಯುವಂತೆ ಅಸೀರುವಾದ ಮಾಡಿ

ಸಾಯುತ್ತಿದ್ದೆನಲ್ಲಾ..” ಯಂದು ಚಾವತ್ತು ಮಮ್ಮಲನ ಮರುಗಿದನು. ರೂಪಾಯಿಗಳ ಮ್ಯಾಲಿದ್ದ ರಾಜನ ಮುಖ ‘ನಾನೂ ರಾಜ ಕಣಯ್ಯಾ’ ಯಂದು ಪಿಸುನುಡಿಯುತ್ತಿರುವಂತೆ ಭಾಸವಾಯಿತು. ವರ್ತಮಾನದ ಕ್ರವುರ‍್ಯವನ್ನು ಕಡಿಮೆ ಮಾಡಬೇಕಾದರ ತಾನು.. ಯಂದು ನಿರ್ದರಿಸಿದನೆಂಬಲ್ಲಿಗೆ ಸಿವಸಂಕರ ಮಾದೇವss

*      *      *      *

ಅತ್ತ ಕಡುಪದ ಸಮೀಪ ಯಿದ್ದ ಬೆಟ್ಟದ ಮ್ಯಾಲ ಯಿದ್ದ ಬ್ಯಾಸಗಿ ಬಂಗಲೆಯೊಳಗ ಯಿಸ್ರಾಂತಿ ತೆಗೆದುಕೊಳ್ಳುತಲಿದ್ದ ಥಾಮಸು ಮನ್ರೋ ಸಾಹೇಬನು ಬಳ್ಳಾರಿ ಸೀಮೆ ಕಡೇಕ ನಿಗಾಯಿಟ್ಟು ಅಲ್ಲಿನ ವಂದೊಂದು ವರ್ತಮಾನ ವನ್ನು ಕೇಳಿ ತಿಳಿಯುತ್ತ ತಾನು ಅಸಾಂತಿ ಗೀಡಾಗಿದ್ದನು. ಯಷ್ಟೋ ಸಾವುಗಳಿಗೆ ಕಾರಣ ನಾಗಿರುವ ತಾನು, ಯಷ್ಟೋ ಸಾವುಗಳನು ಕಣ್ಣಾರೆ ಕಂಡಿರುವ ತಾನು ವಬ್ಬ ಯಕಃಶ್ಚಿತ್ ನಾಗಿರೆಡ್ಡಿಯ ಸಾವಿಗಾಗಿ ಯಾಕೆ ಮರುಗುವುದು? ತಾನ್ಯಾಕ ಪಶ್ಚಾತ್ತಾಪ ಅನುಭವಿಸಬೇಕು.

ತಾನು ತನ್ನ ಮನಸ್ಸಿನ ಮ್ಯಾಲ ಸ್ಥಿಮಿತ ಸಾಧಿಸುವ ಸಲುವಾಗಿ ವಂದು ಗ್ರಂಥವನ್ನು ಬರೆಯುತ್ತಿದ್ದನಷ್ಟೆ.. ಅದನು ಕಯ್ಯಿಗೆ ಯತ್ತಿಕೊಂಡನು. ನಾಗಿರೆಡ್ಡಿಯನ್ನು ಕೊಂಡಾಡುವ ನಾಲಕು ಸಾಲುಗಳನ್ನು, ಸರಕಾರದ ಜಯ ವಂದು ಜಯವೇ ಯಂಬ ವಂದು ಪ್ರಸ್ನೆಯನ್ನು ಬರೆದನು. ತಾನು ಸ್ಕಾಟಲೆಂಡಿನವನಾಗಿದ್ದರೂ ಯಿಂಡಿಯಾವೇನು ತನಗೆ ಅಪರಿಚಿತ ದೇಸವಲ್ಲ.. ಗವರ್ನರು ಜನರಲ್ಲು ಲಾರ್ಡ್ ಯಲ್ಲೆಸ್ಲಿಯ ಆದೇಸದ ಮೇರೆಗೆ ತಾನು ಸದರಿ ದೇಸದ ಸಿಂಧ್, ಬೀಹಾರ ಮುಂತಾದ ವುತ್ತರಾಯಣದ ಪ್ರಾಂತಗಳಿಂದ ಹಿಡಿದು ದಖ್ಖಣಾಯಣದ ಸಿಲೋನಿನವರೆಗೆ ಅಡ್ಡಾಡಿರುವಂಥವನು. ಹಯ್ದರಾಲಿಯ ಸೋಲಿಗೆ, ಮತ್ತವನ ಯೀರಪುತ್ರಟಿಪ್ಪುಸುಲ್ತಾನನ ಸಾವಿಗೆ ಯಿಂಥ ಯಷ್ಟೋ ಯೀರ ಸೇನಾನಿಗಳ ಸೋಲಿಗೆ, ಸಾವಿಗೆ ಕಾರಣನಾಗಿರುವಂಥವನು. ಯಲ್ಲ ತಂತ್ರಕುತಂತ್ರಗಳನ್ನು ಲೀಲಾಜಾಲವಾಗಿ ಬಳಸಿ ಕುಂಪಣಿ ಸರಕಾರದ ಸಾಮ್ರಾಜ್ಯ ಯಿಸ್ತರಣಾ ದಾಹವನ್ನು ತಣಿಸಿರುವಂಥವನು.. ಸದರಿ ದೇಸದ ನಿತ್ಯ ಪರಾಭವದಲ್ಲಿ ಮುಖ್ಯ ಪಾತ್ರವಹಿಸುತಲಿರುವುದು ಭೂತಕಾಲದಾರಾಧನೆಯೇ ಹೊರತು ವರ್ತಮಾನ ಕಾಲವಲ್ಲ.. ವರ್ತಮಾನದ ಪರಿಗ್ಗಾನವಿಲ್ಲದ, ಗುಲಾಮೀ ಭಾವನೆಗಳಿಗೆ ಪರವಶರಾಗುವ ಪ್ರಜೆಗಳುಳ್ಳ ಯೀ ದೇಶವನ್ನು ಯಾರು

ಬೇಕಾದರೂ ಸುಲಭವಾಗಿ ಆಕ್ರಮಿಸಬಹುದು.. ಯಿವರು ಪ್ರಗ್ನಾವಂತರಾಗಲಕ....

ಮನ್ರೋ ಸಾಹೇಬನು ಮಾತ್ರುಭಾಷೆಯಲ್ಲಿ ಶಿಕ್ಷಣ ಕೊಡಿಸಬೇಕೆಂದು ನಿರ್ಧರಿಸಿ ಕೂಲಂಕಷ ಯೋಜನೆಯನ್ನು ತಯಾರಿಸಿ ಸರಕಾರದ ವರಿಷ«ರಿಗೆ ಕಳುಹಿಸಿರದೆಯಿರಲಿಲ್ಲ.. ಅದನ್ನು ಕಂಡು ಅವರು ಹುಬ್ಬೇರಿಸಿರದೆ ಯಿರಲಿಲ್ಲ. ತಮ್ಮ ಸರಕಾರದ ರೀತಿ ರಿವಾಜುಗಳನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ, ಆಡಳಿತದಲ್ಲಿ ಸ್ವಾಮಿನಿಷೆ«ಯಿಂದ ಭಾಗಿಯಾಗುವ ಸಲುವಾಗಿ ಸದರಿ ದೇಶದ ಸಾಮಾನ್ಯ ಪ್ರಜೆಗಳಿಗೆ ಯಿಂಗ್ಲೀಷು ಭಾಷೆಯಲ್ಲಿ ಶಿಕ್ಷಣ ಕೊಡಿಸಬೇಕೆಂದು ತಾಕೀತು ಮಾಡದೆ ಯಿರಲಿಲ್ಲ.. ಸರಕಾರದ ಯೀ ಸಮಾಜ ಯಿರೋಧಿ ನಿಲುವಿನಿಂದ ತನಗೆ ನಿರಾಸೆಯಾಗದೆ ಯಿರಲಿಲ್ಲ.. ಆದರೆ ತಾನೇನು ಮಾಡಲಾದೀತು. ಯಲಮೋ ಮನ್ರೋ! ಯಂದು ತನ್ನನ್ನು ತಾನು ಸೊಯಂ ನಿಂದನೆ ಮಾಡಿಕೊಳ್ಳದ ಹೊರತು....

ಮನ್ರೋ ಯೀಗ ಸದ್ಯ ಬರೆಯುತಲಿರುವ ಗ್ರಂಥ ಯಾವುದಪ್ಪ ಅಂದರ.. ಅದು ತನ್ನ ಆತುಮಸಾಕ್ಷಿಗೆ ಸಂಬಂಧಿಸಿದ್ದು.. ತಾನು ನಿವೃತ್ತನಾದ ನಂತರ.. ಅಷ್ಟೇ ಯಾಕೆ ತನ್ನ ಮರಣಾನಂತರ ಪ್ರಕಟವಾಗಲಿರು ವಂಥಾದ್ದು.. ಮನ್ರೋ ಅಂದರೇನು ಯಂಬುದನ್ನು ಮಾನವಕುಲಕ್ಕ ಅಚಂದ್ರಾರ್ಕವಾಗಿ ಪರಿಚಯಿಸಲಿರುವಂಥಾದ್ದು.. ಅದರೊಳಗ ತಾನು ಕಂಡುಂಡ ಅನುಭವಗಳನ್ನು ದಾಖಲು ಮಾಡುತವನೆ, ಅದರೊಳಗ ತನ್ನ ಅಸಹಾಯಕತೆಯನ್ನು ದಾಖಲು ಮಾಡುತವನೆ.

ಅತ್ತ ಅವತ್ತು ಬಳ್ಳಾರಿ ಕೇಂದ್ರಕಾರಾಗ್ರುಹದೊಳಗ ಫಲಾನ ದಿವಸ ಫಲಾನ ಮೂರ್ತದಂದು ರೆಡ್ಡಿಲೋ ರೆಡ್ಡಿಯೆನಿಸಿದ್ದ, ಬೊಬ್ಬಿಲಿ ಯಂಬ ಬಿರುದನ್ನು ಜನಸಾಮಾನ್ಯರಿಂದ ಪಡಕೊಂಡಿದ್ದ, ತನ್ನ ತುಟಿ ನಡುವೆ ಮುಗುಳುನಗೇನ ಮುಡಕೊಂಡಿದ್ದ, ವಂದೇ ಮಾತಲ್ಲಿ ಹೇಳಲಕಂದರೆ ಆಗ ತಾನೆ ಹುಟ್ಟಿದ ಮಗುವಿನಿಂತಿದ್ದ ನಾಗಿರೆಡ್ಡಿಯ ಆರೋಗ್ಯ ತಪಾಸಣೆ ಮಾಡಿದ ವಯ್ದ್ಯ ಬಿಕು ಬಿಕ್ಕಿ ಅಳುತ್ತ ಹೋದ. ಅವನೆದುರು ಮಂತ್ರಪಠಣ ಮಾಡುವಾಗ ಜೋಷಿ ಗದ್ಗದಿತನಾದ.. ಕುಂಪಣಿ ಅಧಿಕಾರಿಯೋರ್ವ "ನಿನ್ನ ಅಂತಿಮ ಆಸೆಯೇನು?" ಯಂದು ಕೇಳಿದ್ದಕ್ಕೆ ಯೇನೂ ಇಲ್ಲ ಯಂಬಂತೆ ತಲೆಯನ್ನು ಅಲ್ಲಾಡಿಸಿದ. ನಿಲುವಂಗಿ ತೊಡಿಸಿ.. ಫಲಾನ ಜಾಗಕ್ಕೆ ಕರೆದೊಯ್ದರು.. ಅದೇ ಪನಿಗೆಂದು ನಲಮಲಗೂಡೇಮಿನಿಂದ ವಂದೇ ಮಾತಿಗೆ ಬಂದಿದ್ದ....

ದಯಾನಿಧಿಯ ಅಸಲು ಹೆಸರು ಕೊಂಡಪಲ್ಲಿ ವಜ್ಜರಯ್ಯನು. ಮರಣದಂಡನೆಯ ಯಿಧಿಸುವುದರಲ್ಲಿ ಗೋಲ್ಕೊಂಡದ ಅಲಿ ಕುತುಬ್‌ಷಾನ ಕಯ್ಯಿಯಿಂದ ತರಬೇತು ಪಡಕೊಂಡಿದ್ದನು. ಅಕ್ಕಿ ರಾಜಪಲ್ಲೆಯ ಜಮೀಂದಾರು ಪದುಮನಾಭ ನಾಯುಡು ತಾನು ಕೊಲೆಯಾಗುವ ವಂದರಗಳಿಗೆ ಪೂರ್ವದಲ್ಲಿ ತನ್ನ ಕೊಲೆಗಡುಕನಾದ ವಜ್ಜರಯ್ಯಗೆ ದಯಾನಿಧಿಯಂದು ಪುನರ್ ನಾಮಕರಣ ಮಾಡಿ ಅಸುನೀಗಿದ್ದನು. ಅವನೆದೆಯೊಳಗ ತಿಲಗಾತುರದಷ್ಟಾದರೂ ಕರುಣೆಯಿಲ್ಲ ಯಂಬುದನ್ನು ಪರಿಸೋಧನೆ ಮಾಡಿದ ನಂತರವೇ ಅವುಕಿನ ಹಾರ್ವರ್ಡನ ಸಿಫಾರಸ್ಸಿನಿಂದಾಗಿ ಕುಂಪಣಿ ಸರಕಾರವು ಅವನಿಗೆ ಪ್ರಥಮ ದರ್ಜೆಯ ಕೊಲೆಗಡುಕನ ಸ್ಥಾನ ಮಾನ ನೀಡಿ ಯಿಟ್ಟುಕೊಂಡಿತ್ತು.. ಬ್ರೆಮ್ಮಾಸ್ತರ ಸೊರೂಪೀ ತೀಕ್ಷ್ಣ ನೋಟ ಮಾತ್ರದಿಂದ ಅಪರಾಧಿಯ ಅರ್ಧ ಪ್ರಾಣ ತೆಗೆಯಬಲ್ಲಂಥವನಾದ ಅವನು ಸದರಿ ಪಟ್ಟಣ ಸೇರಿಕೊಂಡದ್ದು ಯರಡು ದಿನಗಳ ಹಿಂದೆಯೇ.. ಯಂದಿನಂತೆ ರೆಡ್ಡಿಯ ಪೂರುವಾಪರ ತಿಳಿದುಕೊಂಡು "ಅಯ್ಯೋ ಯಿಧಿಯೇ, ಅನ್ಯಾಯವರ್ತು ಸರಕಾರವು ತನ್ನಿಂದ ಕೊಲೆ ಮಾಡಿಸುತ್ತಿರುವುದು" ಯಂದುಕೊಂಡ. ಆದರೇನು ಮಾಡುವುದು? ಯಿದು ತನ್ನ ಕಸುಬು. ಬದುಕಿರುವಾಗಲೇ ಪುರಾಣ ಪದವಿಯನ್ನಲಂಕರಿಸಿರುವ ರೆಡ್ಡಿಯನ್ನು ತಾನು ಕೊಲ್ಲಬೇಕಿರುವುದಿಲ್ಲಾ!.. ಸಾವಿರ ಕೊಲೆ ಯಿಂದೊದಗುವ ಪಾಪವು ಕೇವಲ ಯೀ ವಂದು ಕೊಲೆಯಿಂದಲೇ ಲಭ್ಯವಾಗುತ್ತಿರುವುದಲ್ಲಾ.. ತಾನೀ ಕಸುಬಿಗೆ ಯಾಕ ಅಂಟಿಕೊಂಡೆನೋ?

ಬಂದೋಬಸ್ತಿನ ನಡುವೆ ಹೋಗುತ್ತಿದ್ದ ತನ್ನನ್ನು ನೋಡಿದವರು ತನ್ನನ್ನು ತುಂಬಿದ ಕೊಡಕ್ಕೆ ಹೋಲಿಕೆ ಮಾಡಿದ್ದುಂಟು.. ಅನ್ವರ್ಥನಾಮವು ಯಂದುಕೊಂಡದ್ದುಂಟು.. ಕೊಲ್ಲೋದು ಕೊಂದೇ ಕೊಲ್ತಿದ್ದೀಯಾ! ಆದರ ರೆಡ್ಡಿಯ ಮನಸ್ಸಿಗೆ ನೋವನ್ನುಂಟುಮಾಡದಂಗ ಕೊಲ್ಲು ಯಂದು ಕಣ್ಣಂಚಲ್ಲೇ ಬೇಡಿಕೊಳ್ಳುತ್ತಿದ್ದುದುಂಟು....

ನಿಲುವಂಗಿ ವುಡುಸಿಕೊಂಡು ಬಂದು ರೆಡ್ಡಿಯನ್ನು ತನ್ನ ಮುಂದ ನಿಲ್ಲಿಸಿದರು. ಮೊಟ್ಟಮೊದಲ ಸಲ ತಲೆಯೆತ್ತಿ ನೋಡಿದ್ದು ಆಗಲೇ.. ಹೆಂಗವನಲ್ಲ ಪುಣ್ಯಾತುಮ? ಯೀವಯ್ಯ ಭೀಮಲಿಂಗೇಸ್ವರ ಸ್ವಾಮಿಯ ವರಪ್ರಸಾದವೇ ಸಯ್ಯಿ. ಕಣ್ಣೊಳಗ ರವ್ವಂತಾದರೂ ಭಯವಾ!.. ಮುಖದೊಳಗ ರವ್ವಂತಾದರೂ ಅಳುಕss ತುಂಟಿ ನಡುವೆ ನಂದಾದೀವಿಗೆ ಹಚ್ಚಿದ್ದು ಹಚ್ಚಿದಂಗೇ ಯಿರುವುದು,

ಯಿಂಥ ದೇವರಂಥಾ ಮನುಷ್ಯನಿಗೆ ಅಪರಾಧ ಪಟ್ಟ ಕಟ್ಟಿರುವುದಲ್ಲಾ ಕುಂಪಣಿ ಸರಕಾರ.. ಯಿಂಥಾತನನ್ನು ಕಾಯಿದೆ ಶೀರs ಕೊಲ್ಲಲಕ ತನ್ನನ್ನು.. ಸಿವ ಸಿವಾs

ಮುಖದೊಳಗ ಮುಖಯಿಟ್ಟು ನೋಡಲಕಂದರ ಯದೆ ನಡುಗಿತು. ನಡುಗುವ ಕಯ್ಯಿಗಳಿಂದ ತಲೆಗೆ ಕರಿ ಚೀಲವನ್ನು.. ಕೊರಳಿಗೆ ವುರುಳ ಸರಗಂಟನ್ನು...

ರೆಡ್ಡಿಗೆ ಮರಣದಂಡನೆ ಯಿಧಿಸಲಾಯಿತೆಂಬ ಸುದ್ದಿ ಅದಾವ ಮಾದಿಯಿಂದಲೋ.. ಯಷ್ಟೋ ಕಡೇಕ? ಯಷ್ಟೋ ಮಂದಿ ತಮಗ ಹೆಂಗ ತೋಚಿತೋ ಹಂಗಂಗ ಸತ್ತರು.. ಮುನುಸೋಬಯ್ಯ ರೆಡ್ಡಿಯ ಕಳೇಬರ ಪಡೆಯಲಕೆಂದು ಸಂಗಡಿಗರೊಡನೆ ಸೆರೆಮನೆಯ ಅಧಿಕಾರಿಗಳೊಂದಿಗೆ ಮಾತಿಗೆ ಯಿಳಿದಿದ್ದ ಹೊತ್ತಿನಲ್ಲಿ.. ಕೊಂಡಲಪಲ್ಲಿ ವಜ್ಜರಯ್ಯ ಅಳುತ್ತ ಯತ್ತಲೋ ಹೋದ ಹೊತ್ತಿನಲ್ಲಿ ರೆಡ್ಡಿಯ ಕಳೇಬರ ಯಿದ್ದ ಶವಪೆಟ್ಟಿಗೆ ಯೇಳುಮಲ್ಲಿಗೆ ತೂಕದ್ದಾದಂಗಯ್ತೆ ಯಂದು ಕಾರಾಗ್ರುಹದ ಸಿಪಾಯಿಗಳು ಪರಸ್ಪರ ಮಾತಾಡಿಕೊಳ್ಳುತಲಿದ್ದ ಹೊತ್ತಿನಲ್ಲಿ....

ಅತ್ತ ಗಡೇಕಲ್ಲೊಳಗ ದೇವರ ಮ್ಯಾಲ ಭಾರ ಹಾಕಿ ಭೀಮಲಿಂಗೇಸ್ವರ ಸ್ವಾಮಿ ರಥ ಸಾಗಯ್ತೆ. ಸ್ವಾಮಿ ರಥಾರೂಢನಾಗಿದ್ದು ವುತ್ತರ ನಕ್ಷತ್ರದ ಮೂರನೇ ಪಾದದಲ್ಲಿ.. ನಾಗಿರೆಡ್ಡಿ ಬಂದು ಮಿಣಿ ಹಿಡಿಯದ ರಥ ಮುಂದಕ ಚಲಿಸಂಗಿಲ್ಲ.. ಯಾರೊಬ್ಬರು ಮಿಣಿಗೆ ಕಯ್ನ ಹಚ್ಚುತಾಯಿಲ್ಲ.. ಸ್ವಾಮಿಯೇ ತನ್ನ ಕಂದಯ್ಯನ ನಿರೀಕ್ಷೆಯಲ್ಲಿರುವನು. ದೂರದ ಬಳ್ಳಾರಿ ಪಟ್ಟಣದೊಳಗ ಮಘ ನಕ್ಷತ್ರದಲ್ಲಿ ಮರಣದಂಡನೆಗೆ ವಳಗಾಗುವ ರೆಡ್ಡಿಯು ಬರುವುದುಂಟಾ.. ಮಿಣಿ ಹಿಡಿಯುವುದುಂಟಾ? ಯಂಥ ಪರೀಕ್ಷೆಯಿದ್ದೀತಪ್ಪಾ ಯಿದು? ಹಿಂಗss ವಬ್ಬಬ್ಬರ ಮನದೊಳಗ ವಂದೊಂದು ತರದೂದು..

ವುತ್ತರ ನಕ್ಷತ್ರಮೂರನೇ ಪಾದದಿಂದ ನಾಲಕನೆಯ ಪಾದಕ್ಕ ಕಾಲಿರಿಸಿತು.. ಯಿನ್ನೊಂದರ ಗಳಿಗೆಯಲ್ಲಿ ಪ್ರಶಸ್ತ ಮೂಲಾ ನಕ್ಷತ್ರಕಾಲಿರಿಸಲಿರುವುದು. ಆ ಮೂಲಾನಕ್ಷತ್ರದಲ್ಲಿ ಸ್ವಾಮಿ ಮುಂದಕ ಮೂರೇ ಮೂರು ಹೆಜ್ಜೆಯಿಡದಿದ್ದಲ್ಲಿ ರಥೋತ್ಸವದ ಕಥೆಯು ಯಿಂದಿಗೇ ಪರಿಸಮಾಪ್ತಿಯಾಗಲಿರುವುದು. ಜಯ್ ಭೀಮಲಿಂಗೇಶ್ವರ.. ಜಯ್ ಭೀಮಲಿಂಗೇಶ್ವರ.. ಯಂದು ಕೂಗುತ ರವುಸ ತುಂಬುವ ಪ್ರಯತ್ನವ ಮಾಡುತಲಿರುವರು..

ಯಿನ್ನೇನು ಮೂಲಾನಕ್ಷತ್ರದ ಮೊದಲ ಚರಣ ಕಾಲಿರಿಸಿತು.. ಮಂದಿ

ವುಸುರು ಬಿಗಿ ಹಿಡಿದರು.. ಅಷ್ಟೊತ್ತಿಗೆ ಸರಿಯಾಗಿ ರಥ ಮುಂದಕ್ಕ ಮೂರುರುಳಿಕೆ ವುರುಳಿಬಿಟ್ಟಿತು. ಯೇನಿದ್ದೀತು ಅಗಾಧವು ಯಂದು ಭಕುತಾದಿ ಮಂದಿ ತಮ ತಮ್ಮ ಕಣ್ಣುಗಳನ್ನು ಯಿಷ್ಟಗಲ ಹಿಗ್ಗಲಿಸಿ ನೋಡುತ್ತಾರೆ.. ಅರೆ! ನಾಗಿರೆಡ್ಡಿಯು ತಾನೋರ್ವನೆ ಮಿಣಿಗೆ ಕಯ್ನು ಹಚ್ಚಿರುವನು...

ಜಯಹೋ ಭೀಮಲಿಂಗೇಸ್ವರನೇ....

ರಥೋತ್ಸವ ಸಾಂಗೋಪಾಂಗವಾಗಿ ಬನ್ನಿಕಟ್ಟೆವರೆಗೆ ಹೋಗಿ ಮರಳಿತು. ದೇವರು ದೊಡ್ಡವನು.. ಅವನು ಯಿನ್ನೂ ಯಿದ್ದಾನೆ.. ಯಂಬುದು ಸರ್ವಯಿಧಿತವು.. ಮಘ ನಕ್ಷತ್ರದಲ್ಲಿ ಮರಣಹೊಂದಿ ಮೂಲಾನಕ್ಷತ್ರದಲ್ಲಿ ಮರಳಿ ಬಂದು ತನ್ನ ಯಿಷ್ಟದಯ್ವದ ಸೇವೆಯನ್ನು ಮಾಡಿ ಪುನೀತನಾದ ಬೊಬ್ಬಿಲಿ ನಾಗಿರೆಡ್ಡಿಯು ಗಡೇಕಲ್ಲ ಪ್ರಮುಖರನ್ನುದ್ದೇಶಿಸಿ...

ತರುವಾಯ...

ಅತ್ತ ಹರಪನಹಳ್ಳಿ ಪಟ್ಟಣದೊಳಗ ಸ್ಟೂವರ್ಟು ಕುಂಪಣಿ ಸರಕಾರದ ಯಿರುದ್ಧ ಯತ್ತುತಲಿದ್ದ ಸೊಲ್ಲುಗಳನ್ನು ವಂದೊಂದಾಗಿ ಅಡಗಿಸುವುದರಲ್ಲಿ ತಲ್ಲೀನನಾಗಿದ್ದ ಸಮಯದಲ್ಲಿ ಕೀ.ಶೇ.ಯಿಮ್ಮಡಿ ಸೋಮಶೇಖರನಾಯಕನ ಪವುಜು ಮಾರು ಯಾಸದಲ್ಲಿ ಕುಂಚೂರು ಗ್ರಾಮವನ್ನು ಮುತ್ತಿ ಸರಕಾರೀ ಸಿಪಾಯಿಗಳನ್ನು ಕೊಲೆಮಾಡಿ ಬಂಧನದಲ್ಲಿದ್ದ ರಣಭಯಂಕರ ಭರಮನ ಗವುಡನನ್ನು ಬಿಡಿಸಿಕೊಂಡು ಅರಸನಾಳು ಕಾಡಡವಿಯನ್ನು ಪ್ರವೇಸ ಮಾಡಿದರೆಂಬಲ್ಲಿಗೆ.. ಸ್ಟೂವರ್ಟನು ಕನಲಿ ಅವನನ್ನು ಹಿಡಿಕೊಟ್ಟವರಿಗೆ ಯಿಷ್ಟು, ಸುಳುವು ನೀಡಿದವರಿಗೆ ಯಿಷ್ಟು, ರುಂಡ ತಂದವರಿಗೆ ಯಿಷ್ಟು, ನಗದು ಬಹುಮಾನ ಕೊಡುವುದಾಗಿ ಘೋಷಣೆ ಮಾಡಿದನೆಂಬಲ್ಲಿಗೆ.. ಟಿಪ್ಪು ಸುಲ್ತಾನನಲ್ಲಿದ್ದ ದಿವಾನ ಪೂರ್ಣಯ್ಯನವರೇ ಕುಂಪಣಿ ಸರಕಾರದ ಸೇವೆಯನ್ನು ಸೇರಿಕೊಂಡಿರುವರೆಂದ ಮ್ಯಾಲ ತಾನ್ಯಾಕೆ ಸೇರಿಕೊಂಡಿರುವುದು ತಪ್ಪು ಯಂದು ಮುಂತಾಗಿ ಹಂಪರಸಪ್ಪಯ್ಯ ಅವರಿವರ ಬಳಿ ತನ್ನನ್ನು ತಾನು ಸಮರ್ಥಿಸಿ ಕೊಳ್ಳುತ್ತಿರುವಾಗ್ಗೆ.. ಯಲ್ಲಾಪ್ರಕೊರಚರಟ್ಟಿಯ ಚೋರ ಕಲಿ ಆಕಾಸರಾಮಣ್ಣನು ತಾನು ಕಳುವಿನಿಂದ ಸಂಪಾದಿಸಿದ ಸಂಪತ್ತಿನ ವಂದು ಭಾಗವನ್ನು ಕುಂಪಣಿ ಸರಕಾರದ ಯಿರುದ್ಧ ಹೋರಾಡುತ್ತಿದ್ದವರಿಗೆ ಧನಸಾಯ ಮಾಡತೊಡಗಿದನೆಂಬಲ್ಲಿಗೆ....

ಅತ್ತ ಕೂಡ್ಲಿಗಿ ಪಟ್ಟಣದೊಳಗ ವಾರಗಟ್ಟಲೆ ನಾಪತ್ತೆಯಾಗಿದ್ದ ಸವುಭಾಗ್ಯ

ಮೊನ್ನೆ ವಂದಿವಸ ತನಗ ತಾನ ಮಾನ್ಯರ ಮಸಲವಾಡದಿಂದ ಜುಲುಮಿಯಿಂದ ಪಯಣಿಸಿ ಮರಳಿ ಬಂದಿತ್ತು. ದಿಬ್‌ದೀರ್ತಿಯಿಂದ ಆರತಿ ಬೆಳಗಿ ಬರಮಾಡಿಕೊಂಡಿತ್ತು ಸಮಸ್ತ ಪಟ್ಟಣವು. ಅದೇ ಯಿದು ಅವುದೋ.. ಮತ್ತಾವುದೋ ಯಂದು ಅನುಮಾನದಿಂದ ಮಂದಿ ಫಲಾನ ಮನೆಯ ತಾವ ಯಡತಾಕಿ ಕಿವಿಯಾರೆ ಕೇಳೂತ, ಕಣ್ಣಾರೆ ನೋಡೂತ ಖಾತರಿಮಾಡಿಕೊಂಡು ಹೋಗುತಲಿದ್ದರು.. ಸದರಿ ಪಟ್ಟಣಕ ದರುಸನ ಭಾಗ್ಯ ನೀಡೀs ನೀಡಿ ಆ ಸವುಭಾಗ್ಯಕ್ಕೆ ದಣುವು ಬಂದಿತ್ತು.. ತಾನಲ್ಲಿಗೆ ಹೋದರೇನು ಗತಿ? ಹೋಗದಿದ್ದರೇನು ಗತಿ? ಯಂಬ ವುಭಯ ಸಂಕಟದಿಂದ ರಾಯನು ಅರ್ಧ ದಾರಿಗೆ ಬಂದು ಮರಳಿ ಹೋಗುವುದನು ಯರಡು ದಿನಗಳಲ್ಲಿ ನಾಲ್ಕಾರುಬಾರಿ ಮಾಡಿದ್ದನು.. ಸವುಭಾಗ್ಯ ಮರಳಿರುವುದರ ಬಗ್ಗೆ ಅಧಿಕ್ರುತವಾಗಿ ಮನವರಿಕೆ ಮಾಡಿಕೊಡಬೇಕೆಂದು ಖುದ್ದ ಯಡ್ಡವರ್ಡನು ಪರಮಾನು ನೀಡಿದ್ದಕ್ಕೆ ಮನ್ನಣೆ ಕೊಟ್ಟು ಫಲತಾಂಬೂಲ, ಪುಷ್ಪಗುಚ್ಛ, ರೇಸಿಮೆ ವಸ್ತರಗಳಿದ್ದ ತಳಿಗೆಯೊಂದಿಗೆ, ಯಡ ಬಲಕ ಸಿಪಾಯಿಗಳನ್ನು ಯಿಟ್ಟುಕೊಂಡು ರಾಯನು ಫಲಾನ ಸಮಯದಲ್ಲಿ ಫಲಾನ ಮನೆಯ ತಲಬಾಕಲನ್ನು ದಾಟಿ ತನ್ನ ಪಂಚೇಂದ್ರಿಯಂಗಳನ್ನು ಸಯ್ಲು ಮಾಡಿಕೊಂಡನು. ಆತನನ್ನು ಯೇಸೋ ದಿವಸಗಳ ತರುವಾಯ ನೋಡಿದ ತಾಯಕ್ಕ ಸ್ವಾಗತಿಸದೆ ಯಿರಲಿಲ್ಲ.. ಸಲ್ಲಿಕೆ ಮಾಡೋದು ಸಲ್ಲಿಕೆ ಆಯಿತು. ರಾಯನು ಯಷ್ಟು ಬೇಕೋ ಅಷ್ಟು ಮಾತ್ರಮಾತಾಡಿದನು.. ಯಷ್ಟು ಬೇಕೋ ಅಷ್ಟು ನೋಡಿದನು.. ಯಿನ್ನೇನು ಅಲ್ಲಿಂದ ಬಯಲುದೇರುವಾಗ್ಗೆ ಚೆನ್ನಾಸಾನಿಯನ್ನು 'ಮಗಳೇ' ಯಂದು ಸಂಬೋಧಿಸಿದ್ದೊಂದು ಪರಪಾಟು, ಹೊರತುಪಡಿಸಿದರೆ....

ಹೇಳದೇ ಕೇಳದೆ ಹೋಗಿ ತನ್ನನ್ನು ಪೇಚಿಗೆ ಸಿಕ್ಕಿಸಿದಳೆಂಬ ಕಾರಣಕ್ಕೆ ತಾಯಕ್ಕಳನ್ನು ಕಾಣದೆ ವುಳುದು ನೀಲಕಂಠಪ್ಪನು ತನ್ನ ಧರುಮಪತ್ನಿಯ ಮುಖದಲ್ಲಿ ನಸ್ವರವಾದ ಸಾರ್ಥಕ ಭಾವನೆಯನ್ನು ಮೂಡಿಸಿದ್ದನ್ನು ಬಿಟ್ಟರೆ....

ಮನವರಿಕೆ ಮಾಡಿಕೊಡುವ ಕಾರ್ಯಕ್ಕೆ ತನ್ನನ್ನು ನೇಮಕ ಮಾಡುವುದನ್ನು ಬಿಟ್ಟು ರಾಯನೊಬ್ಬನೇ ಹೋಗಿಬಂದ ಯಂಬ ಕಾರಣಕ್ಕೆ ಮುನುಸುಕೊಂಡಿದ್ದ ಮುರಾರಿರಾವನು ಸವುಭಾಗ್ಯ ಪಡೆಯನ್ನು ಯಿಸರ್ಜನ ಮಾಡಲಕ ಮೊದ ಮೊದಲು ಬಿಲ್‌ಕುಲ್ ವಪ್ಪಲಿಲ್ಲ.. ತನ್ನ ಹೆಂಡತಿ ಮ್ಯಾಲಣ ಸಿಟ್ಟನ್ನು ಆ ಸೂರ ಸೇನಾನಿಯ ಮ್ಯಾಲ ಪ್ರಯೋಗಿಸಲು ರಾಯನು ಯಿಫಲನಾಗದೆ ಯಿರಲಿಲ್ಲ..

ನೀನು ನಿನ್ನ ಫವುಜಿನೊಡನೆ ಕಕ್ಕುಪ್ಪಿಗೆ ಹೋಗಿ ಬುಡುಬುಡುಕೆಯವರಿಂದ ಮಂಗಗಳ ರಕ್ಷಣೆ ಮಾಡಯ್ಯ.. ಖುದ್ದ ಜೆನ್ನಿಫರಮ್ಮನೇ ಆಗ್ನೆ ಮಾಡಿದ್ದಾಳೆ ಯಂದು ರಾಯನು ಅಂಗಲಾಚುವ ದ್ದೊನಿಯಲ್ಲಿ ಹೇಳಿದ್ದಕ್ಕೆ ಮುರಾರಿರಾವನು "ದೇಖೋಜಿ.. ಸವುಭಾಗ್ಯ ಆಗಮಿಸಿರುವುದು, ಬಿಟ್ಟಿರುವುದು.. ಯಿದು ನಮಗೆ ಸೇರಿದ್ದು.. ಯೀ ಕುರಿತು ನೀವು ಸೊಯಂ ನಿರ್ಣಯ ಕಯ್ಕೊಂಡು ನನಗೆ ಅಪಮಾನ ಮಾಡಿರುವಿರಿ.. ಮಾನಸಿಕವಾಗಿ ನಮ್ಮ ಫವುಜಿಗೆ ಆಗಿರುವ ನಷ್ಟವನ್ನು ನೀವಾಗಲೀ, ಸರಕಾರವಾಗಲೀ ತುಂಬಿಕೊಡುವುದೇನು" ಯಂದು ಜಬರದಸ್ತೀಲೆ ಕೇಳಿದನು. ಆತನ ವಾದದ ತಳಬುಡ ಅರ್ಥವಾಗದೆ ರಾಯ ಕಕ್ಕಾವಿಕ್ಕಿಗೊಂಡನು. ಯಾರೆದುರಿಗೆ ತಾನು ಯಿರುವುದು ಯಂದು ತಿಳಿದುಕೊಳ್ಳುತ್ತಿಲ್ಲವಲ್ಲ ಯಿವನು. ಸಿರಾದ ಯುದ್ಧದಲ್ಲಿ ಮಾಮೂಲಿ ಸಿಪಾಯಿಯಾಗಿ ಕಾದಾಡಿದ ಯಿವನನ್ನು ತಾನೇ ಸಿಫಾರಸು ಮಾಡಿ ಸೇರಿಸಿಕೊಂಡಿರುವುದು. ಅಂಥ ತನಗೇ ಯದುರಾಡುತ್ತಿರುವುದೆಂದರೇನು? ತಾನೇ ಯಿವನನ್ನು ತಾಯಕ್ಕಳ ಮನೆಗೆ ಸರಕಾರದ ಪ್ರತಿನಿಧಿಯಾಗಿ ಕಳಿಸುವ ಯಿರಾದೆಯಿತ್ತು.. ಅದು ರೀತಿ ರಿವಾಜು ಕೂಡ.. ಆದರೆ ಯೀ ಚಪಲ ಚೆನ್ನಿಗರಾಯನು ತನ್ನ ಮಗಳ ಸಮಾನಳಾದ ಚಿನ್ನಾಸಾನಿಯ ಮ್ಯಾಲ ಕಣ್ಣು ಕಿಸುರು ಮಾಡಿಕೊಂಡರೆ ಯಂಬ ಅನುಮಾನದಿಂದಾಗಿ.. ಅದೂ ಅಲ್ಲದೆ ತಾನು ಯೀ ನೆಪದಲ್ಲಿ ತಾಯಕ್ಕಳನ್ನು ಯೇಸೋ ದಿನಗಳ ನಂತರ ನೋಡಬೇಕೆಂಬ ಮಹದೇಚ್ಛೆಯಿಂದಾಗಿ ತಾನೇ ಅಲ್ಲಿಗೆ ದಯಮಾಡಿದ್ದು. ಮೇಲಾಧಿಕಾರಿ ಯಾಗಿರುವ ತಾನು ನಿಯಮಾವಳಿಗಳನ್ನು ವುಲ್ಲಂಘಿಸಿದ್ದರಲ್ಲಿ ತಪ್ಪೇನುಂಟು? ಯಿದಕ್ಕೆ ಯೀ ಮಹಾನುಭಾವ ತನ್ನ ನಾಲಗೆಯನ್ನು ಅಗತ್ಯಕ್ಕಿಂತ ಹೆಚ್ಚುವುದ್ದಕ್ಕೆ ಚಾಚುವುದೆಂದರೇನು?

ರಾಯ ರಾವನನ್ನು ಅಪಾದಮಸ್ತಕ ನೋಡಿದ. ಕಸರತ್ತಿನಿಂದ ಕಟ್ಟು ಮಸ್ತಾಗಿರುವ ದೇಹದಾರ್ಢ್ಯವು.. ವಂದೇ ವಂದು ನೋಟದಿಂದ ಚಿತ್ ಮಾಡುವಂಥ ಚುರುಕು ಕಣ್ಣುಗಳು, ಮೇಲ್ದುಟಿ ಮ್ಯಾಲ ಚಾಚಿರುವ ಗಿಣಿ ಮೂಗು.. ಅದರಡಿ ಚೂರಿಯಂಥ ಮೀಸೆ.. ಯಿವೆಲ್ಲಕ್ಕೆ ಕಳಸವಿಟ್ಟಂತೆ ಕೇಸರಿವರ್ಣದ ಚರ್ಮ ಕವಚ ಬೇರೆ! ಛದ್ಮ ಯೇಷಧಾರಿ ಅರ್ಜುನನಂತಿರುವ ಯಿವನು ಸಾಮಾನ್ಯನಲ್ಲ.. ಯಿವನನ್ನು ಕಳಿಸಿದರೊಂದು ಕಷ್ಟ! ಕಳಿಸದಿದ್ದ ರೊಂದು ಕಷ್ಟ! ಯೇನು ಮಾಡುವುದು? ಛಟೀರಂತ ವಂದು ಯೇಟು ಕೊಟ್ಟು

ಬಾಯಿಮುಚ್ಚಿಕೊಂಡು ಬಿದ್ದಿರು ಯಂದು ಗದರಿಸುವ ಬಯಕೆ ಮೂಡದೆ ಯಿರಲಿಲ್ಲ.. ತಮ್ಮಂಥ ಮೇಧಾವಿಗಳಿಂದ ಹೊಡೆಸಿಕೊಳ್ಳಲಕ, ಬಯ್ಯಿಸಿಕೊಳ್ಳಲಕ ಅಹ್ರತೆ ಬೇಕು.. ಯೀ ಸಂಸ್ಕಾರರಾಹಿತ್ಯನಿಗೆ ಆ ಅಹ್ರತೆಯಿಲ್ಲ.. ಯಂದೆಲ್ಲ ಯೋಚಿಸಿ....

"ನೋಡು ಮುರಾರಿ.. ಅಂಥ ಕಡೆಗೆಲ್ಲ ನಿನ್ನಂಥವರು ಹೋಗಬಾರದಪ್ಪಾ.. ತಾಯಕ್ಕಗೆ ರಾಜಮಾರಾಜರಂದರs ಕಾಲ ಕಸ.. ಆ ಮನೆಯೊಳಗ ಆಕೆಯದೇ ಆದಂಥ ಸೊಯಂ ಸರಕಾರವುಂಟು. ನಿನಗ ಅಪಮಾನವಾಗಬಾರದುs ಅಂತ" ಯಂದು ರಾಯ ಹೇಳಿದ್ದಕ್ಕೆ.. ರಾವನು.. "ನಿಮ್ಮಂಥ ವಯಸ್ಸಾದೋರು.. ಹೋಗಿ ಬರಬೌದೆಂದ ವ್ಯಾಲ.. ಬಾರಾಖೂನಿ ಮಾಡಿರೋ ನಾನು ಯಾಕ ಹೋಗಬಾರದೂರ್‍ರಿ" ಯಂದೊಡನೆ....

ರಾಯ ಪಾತಾಳ ತಲುಪಿಬಿಟ್ಟನು. ಕೆಸರಿನಮ್ಯಾಲ ಕಲ್ಲುಹಾಕುವುದೇಕೆ? "ಆಯ್ತಪ್ಪಾ.. ಹೋಗಿ ಬಾರಪ್ಪಾ" ಯಂದು ಬಾಯುಪಚಾರಕ್ಕೆ ಹೇಳಿದನು.

ವಾಯುಯೇಗದಲ್ಲಿ ಹೋದ ಮುರಾರಿರಾವ್ ತನ್ನ ಸರೀರಕ್ಕೂ, ಕೋವಿಗೂ ಘಮ್ಮಂದೆಣ್ಣೆ ಪೂಸಿಕೊಂಡನು. ಭಯೋತ್ಪಾದನೆ ಮಾಡಲಕ ಯಿರಲಿ ಯಂದು ಕೋವಿಗೂ ಘಂಮ್ಮಂದೆಣ್ಣೆ ಪೂಸಿ ಹೆಗಲಿಗಿಳಿಬಿಟ್ಟು ತಾಯಕ್ಕನ ಮನೆಕಡೇಕ ಕುದುರೆಯೇರಿ ಹೊಂಟನು. ಸಂತರಸ್ತಗೊಂಡಿದ್ದವರು ವಾಸಣೆಗೆ ಹೊರ ಬಂದು ಹಿಡಿ ಹಿಡಿ ಸಾಪ ಹಾಕದೆಯಿರಲಿಲ್ಲ.. ರಾಯನು ಯೀ ಮೊದಲೇ ಗುಟ್ಟಾಗಿ ಖಬುರು ಕಳಿಸಿದ್ದರಿಂದ ತಾಯಕ್ಕ ವಂದ್ನಾಕು ಮಂದಿ ಭರ್ಜರಿ ಪಯಿಲುವಾನರ ನಡುವೆ ಯಿರಾಜಮಾನಳಾಗಿದ್ದಳು. ಯಾತಕ್ಕೆ ಬಂದಿರುವನೆಂದು ಅವನ ಮಯ್ಯಿಂದ ಹೊರಹೊಂಡುತಲಿದ್ದ ದುರ್‍ನಾತವೇ ಹೇಳುತಲಿತ್ತು. ತನ್ನನ್ನು ಸ್ವಾಗತಿಸುವುದು ವತ್ತಟ್ಟಿಗಿರಲಿ, ಕೂದ್ರಲಿಕ್ಕೆ ಆಸನವನ್ನಾದರೂ ತೋರಿಸಬಾರದಿತ್ತೇ..? ತಾನೇ ಜುಲುಮಿಯಿಂದ ಕುಂಡರಬೇಕೆಂದರೆ ಯಾದೇ ವಂದು ಆಸನ ಯಿರಲಿಲ್ಲ.. ಯೀ ವಯಸ್ಸಿನಲ್ಲೇ ಯಿಷ್ಟು ಸುಂದರಿಯಿರುವ ಯೀಕೆ ವಂದು ವಯಸ್ಸಿನಲ್ಲಿ.. ಯೀಕೆಯ ಮಗಳು ಯಿನ್ನದೆಷ್ಟು..?

ಮಾತನ್ನು ಆರಂಭಿಸುವುದು ಹೇಗೆ? ತನ್ನ ಪ್ರವರ ಹೇಳುತ್ತ ಹೋದ. ಅದಕ್ಕಿದ್ದು ಆಕೆಯು ನೀನ್ಯಾರಾದರೂ ಆಗಿರು? ಮೊದಲು ನೀನ್ಯಾಕೆ ಬಂದಿ ಅಂಬುದನು ಬೊಗುಳು? ಯಂದು ಮುಖಕ್ಕೆ ರಾಚಿದಳು.. ಅದರಿಂದ ಕನಲಿದ

ಆತನು "ನೀವು ಯಿಷ್ಟು ದಿವಸ ಹೇಳದೆ ಕೇಳದೆ ಯಲ್ಲಿಗೆ ಹೋಗಿದ್ದಿರಿ? ಸರಕಾರದ ಯಿರುದ್ದ ಮಸಲತ್ತು ಮಾಡುವುದಕ್ಕೆ ತಾನೆ? ನಿಮ್ಮ ಮಗಳೂ ಯೀ ಮಸಲತ್ತಿನಲ್ಲಿ ಮುಖ್ಯಪಾತ್ರವಹಿಸಿರುವಳೆಂದು ತನಿಖೆಯಿಂದ ತಿಳಿದು ಬಂದಿರುವುದು? ಆಕೆಯನ್ನು ಯೀ ಕೂಡಲೇ ಹಾಜರು ಪಡಿಸಬೇಕು.. ಯಿಚಾರಣೆ ಮಾಡಬೇಕಿರುವುದು.." ಯಂದು ಮುಂತಾಗಿ ವದರತೊಡಗಿದ. ಕೇಳಿ ಕೆಂಡಮಂಡಲಳಾದ ಆ ಯೀರವನಿತೆಯು 'ಓಹೋ ಹಾಗೋ ಸಮಾಚಾರ'ಯಂದು ಪಯಿಲುವಾನರಿಗೆ "ನೋಡಿರಪ್ಪಾ.. ಯೀತನನ್ನು ಚಿನ್ನಾಸಾನಿಯಿರುವ ಕೋಣೆಗೆ ಕರೆದೊಯ್ಯಿರಪ್ಪಾ" ಯಂದು ಹೇಳುತ ಕಣ್ಣು ಮಿಟುಕಿಸಿದಳು. ಆಕೆಯ ಮನದಿಂಗಿತವನ್ನು ಅರ್ಥ ಮಾಡಿಕೊಂಡ ಆ ಸೂಕ್ಷ್ಮಮತಿಗಳು "ಬರ್ರಿದೊರೆ" ಯಂದು ಗವುರವ ಪೂರ್ವಕವಾಗಿ ಹಿತ್ತಲಿಗಂಟಿಕೊಂಡಂತಿದ್ದ ವಂದು ಕೋಣೆಗೆ ಕರೆದೊಯ್ದರು. 'ಚಿನ್ನಾಸಾನಿ ತಂಟೆಗೆ ಬರ್ತೀಯಾ' ಯಂದು ಅವನ ಸರೀರದ ಕಾಮಗಾರಿಯನ್ನು ನಡೆಸಿದರು. ಛಪ್ಪನ್ನಾರು ಕೀಲುಗಳು ಸಯ್ಲುಗೊಂಡ ಪರಿಣಾಮವಾಗಿ ಅವನು....

ಮಾರನೆಯ ದಿವಸ.. ಮುಂಜಾನೆ ಮಂದಿ ಕೊತ್ತಲಯ್ಯನ ಗರುಡಗಂಭಕ್ಕೆ ಮೂರೇ ಮೂರು ಪರದಕ್ಷಿಣೆ ಹಾಕಿ ತಮ ತಮ್ಮ ದಯ್ನಂದಿನ ಕೆಲಸ ಬೊಗಸೆಗಳಿಗೆ ನಾಂದಿ ಹಾಡುವುದು ಮಾಮೂಲಿ.. ಅದರಂತೆ ಬಂದು ನೋಡುತ್ತಾರೆ.. ಯಾದೋ ದೇಹಮೊಂದು ಕಂಭಕ್ಕೆ ಕಟ್ಟಲ್ಪಟ್ಟಿರುವುದು.. ಅದು ಯಾರದೆಂದು ನೋಡುತ್ತಾರೆ.. ಸವುಭಾಗ್ಯ ಫವುಜಿನ ಮುಖಂಡನದ್ದು.. ತಮಗೆ ವಂದಲ್ಲಾ ವಂದು ಹಿಂಸೆ ನೀಡಿದ್ದ ಮುರಾರಿಯದ್ದು.. ಯಾರೋ ಬಲವಂತರು ಸರಿಯಾಗೇ ಮಾಡಿರುವರು? ಯಲಮೋ ಮುತ್ಠಾಳ ಯಂದನಕಂತ ಥೀ ಥೂ ಯಂದು ವುಗಿದರು.. ಕಾಲ್ಮರಿ ಸೇವೆ, ಪೊರಕೆ ಸೇವೆ ಮಾಡಿದರು. ತರುವಾಯ ಸಿಪಾಯಿಗಳು ಬಂದು ಅವನನ್ನು ಬಿಡಿಸಿಕೊಂಡೊಯ್ದು ಯಡ್ಡವರ್ಡನ ಆಗ್ನೆಯಂತೆ ರಾಯನ ಮುಂದೆ ಹಾಜರುಪಡಿಸಿದರು....

ಅವನ ಸರೀರದ ಮ್ಯಾಲಿನ ಗಾಯಗಳನ್ನು ವಂದೊಂದಾಗಿ ಯಣಿಕೆ ಮಾಡಿದ ರಾಯನು... 'ಮುರಾರಿರಾವ್.. ನೀನು ಸಾಳೇರ ಮೋಣಿಗೆ ಹೋಗಿ ಕುಡುದ ಅಮಲಿನಲ್ಲಿ ಹೆಣುಮಕ್ಕಳ ಮ್ಯಾಲ ದವುರ್ಜನ್ಯ ನಡೆಸಿದಿಯಂತೆಲ್ಲಾ.. ಯಿದಕ್ಕೇನು ಹೇಳುವಿ?" ಯಂದು ಪ್ರಸ್ನೆ ಹಾಕಿದೊಡನೆ ಜನರ ಕಡೇಲಿಂದ "ಅವುದೂss ಅವುದೂss" ಯಂಬ ಕೂಗು ಬಂತೆಂಬಲ್ಲಿಗೆ ಸಿವಸಂಕರ

ಮಾದೇವss.

ಅತ್ತ ಕುದುರೆಡವು ಪಟ್ಟಣದೊಳಗೋss..

ದಯವಸ್ತುರು ಕೊಡೋದು ಕೊಟ್ಟಾದುದನ್ನು, ತಗೊಳ್ಳೋದು ತಗೊಂಡಾದ ಮ್ಯಾಲ ಸುಮ್ಮನ ಯಿರಲಕ ಹೆಂಗ ಸಾಧ್ಯ? ಅದ್ಭುತ ಸಬುಧಯಿನ್ಯಾಸಕಾರನಾದ ತಾನು ಬದುಕುವುದು ಮುಖ್ಯ, ತಾನೀಗ ಯಾರನ್ನು ಹೊಗಳಲಿರುವೆನೆಂಬುದು ಮುಖ್ಯವಲ್ಲ.. ಯಾವ ನುಡಿ ಜಾಲದಲ್ಲಿ ಹೊಗಳಲಿರುವೆನೆಂಬುದು ಮುಖ್ಯ.. ಯೀ ಕ್ಷಣ ತನ್ನ ಮನದೊಳಗ ಮೂಡಿರುವುದು ಕೋಣವಲ್ಲ.. ಆ ಕೋಣದೊಳಗ ರಾಜಮಹಾರಾಜರಡಗವರೆ.. ತನ್ನ ಮಯ್ಯಿ ಬಣ್ಣವನ್ನು ಭಿತ್ತಿ ಬೆಳೆಯುತ್ತ ವುದಯವಾಗುತಲಿರು ವಂಥಾತನೇ ಮಹಿಷಾಸೂರನು.. ಅವನು ತನ್ನ ಹೊಗಳಿಕೆಯ ಕೇಂದ್ರಪಾತ್ರ.. ಕಂದ, ಸೀಸ, ಚಂಪಕ, ವುತ್ಪಲ, ಸ್ರಗ್ಧರಾ, ಮಾ ಸ್ರಗ್ಧರಾ.. ಭಾಮಿನೀ.. ವಾರ್ಧಕೇ.. ನೀವೆಲ್ಲೆಲ್ಲಿ ಯಾವ್ಯಾವ ಸ್ಥಿತಿಯಲ್ಲಿರುವಿರೋ ಹಂಗಂಗೆ ಬಂದು ನನ್ನ ನಾಲಗೆ ಮ್ಯಾಲ ಹಾಜರಾಗಿ ಯಂದವಯ್ಯ ಆಗ್ನೆ ಮಾಡಿದೊಡನೆ....

ನೋಡಲಕ ನೂರು ಕಣ್ಣು ಸಾಲದೆಂಬಂತೆ ವಾಚಸ್ಪತಿ ರಾಮರಾಜುವು ದಿರಿಸು ಧಾರಣ ಮಾಡಿದನು. ಆ ರಾಜರಿಂದ ಬಂದಿದ್ದ ಬಳವಳಿಯನ್ನು ಯೀ ಅಂಗದ ಮ್ಯಾಲ.. ಯೀ ರಾಜರಿಂದ ಸಂದಿದ್ದ ಬಳವಳಿಯನ್ನು ಆ ಅಂಗದ ವ್ಯಾಲೂ.. ಅಂಗ..ವಂಗ..ಕಳಿಂಗ.. ಕುಂತಳ ದೇಸಗಳ ರಾಜಮಾರಾಜರೆಲ್ಲ ಲಾಂಛನಪ್ರಾಯವಾಗಿ ಅವನ ಸರೀರದ ಮ್ಯಾಲ ಸವಾರಿ ಮಾಡಲಿರುವರೇನೋ ಯಂಬಂತೆ (ಯೀ ದಿರಿಸುಗಳನ್ನು ನೆಸ್ಲೆಯು ಹೆಚ್ಚಿನ ಬೆಲೆಗೆ ಕೊಳ್ಳುವುದಾಗಿ ತಿರುಪಾಲಯ್ಯ ಸ್ರೇಷ್ಠಿ«ಯ ಮೂಲಕ...) ಕಲೆಟ್ಟರು ಮನ್ರೋಸಾಹೇಬನ ಭೆಟ್ಟಿಗೆಂದೇ ಮೀಸಲಿಟ್ಟಿದ್ದ ಪರಿಕರಗಳು ಅವಾಗಿದ್ದವು.. ಶಾರದಮ್ಮ ಅಲಂಕ್ರುತಗೊಂಡ ತನ್ನ ಪತಿದೇವರನ್ನು ಯಿಯಿಧ ಕೋನಗಳಿಂದ ನೋಡಿದಳು.. ಚಕ್ರವರ್ತಿಯಿದ್ದಂಗದೀರಿ ಯಂದು ಪ್ರಶಂಸಿಸಿದಳು.. ನೀವಳಿಸಿ ತೆಗೆದು ಗಂಡನ ಗಲ್ಲದ ಮ್ಯಾಲ ಬೊಟ್ಟಿಟ್ಟಳು. ಕೋಣಕ್ಕೆ ಯಷ್ಟು ದೂರದಲ್ಲಿದ್ದು ಹೊಗಳಬೇಕೆಂಬುದರ ಬಗ್ಗೆ ಸೂಕ್ತ ಸಲಹೆ ನೀಡಿ ಬೀಳುಕೊಟ್ಟಳು....

ತಾನು ಮಾಮೂಲು ಮನುಷ್ಯನಲ್ಲ ಯಂದು ಭಾವಿಸಿದ್ದ ರಾಜುವು ಬೀದಿಗೆ ಬಂದದ್ದೇ ಅಪರೂಪ, ಮಂದಿಯ ಕಣ್ಣಿಗೆ ಗೋಚರ ಮಾಡಿದ್ದೇ ಅಪರೂಪ.. ತಾನು ತನ್ನ ಮೋಣಿಗೆ ಕುತೂಹಲದ, ಗುಟ್ಟಿನ ಕೇಂದ್ರವಾಗಿದ್ದನು.

ಅಂಥವ ಸಾಲಂಕೃತಗೊಂಡು ಬೀದಿಗೆ ಬಂದನೆಂದರೆ ಸಾಮಾನ್ಯವೇನು? ಅಪಾರ ಸಂಖೇಲಿ ಜನ ನೆರೆದು ನೋಡುನೋಡುತ್ತಿದ್ದಂತೆ, ನಿನ್ನ ವಾಕ್‌ಸಕ್ತಿಗೆ ಮಾಬಲಿ ಮರುಳಾಗಲಿ ಯಂದು ಸುಭ ಕೋರುತ್ತಿದ್ದಂತೆ.. ಹೋ ಹೋ.. ಹ್ಞಾ.. ಹ್ಞಾ.. ಯಂದು ವುದ್ಗಾರ ತೆಗೆಯುತ್ತಿದ್ದಂತೆ.. ಆತನು ಧೀರೋದಾತ್ತ ಹೆಜ್ಜೆ ಹಾಕುತss ಹಾಕುತss.. ನಡಕೋತ ನಡಕೋತ....

"ಅಗೋ! ಅದೇ ಮಹಿಷ, ಮಹಿಷಿಣಿಯರ ಆಡುಂಬೊಲಕ್ಕೆ ಹೇಳಿ ಮಾಡಿಸಿದಂತಿರುವ ಯೇಕಾಸೂರಿಯ ಗುಡ್ಡವು.. ಮಹಿಷಿಕಾ ಸ್ತ್ರೀ ಸಮೂಹದ ನಡುವೆ ಯೀರಬಾಹುಕನೋ ಯಂಬಂತೆ ಯಿರಾಜಮಾನನಾಗಿರುವ ಸೂರ ವಾಾಶಯನು. ಯೇನೋ? ಯತ್ತೋ? ಅಂತ ಆತಂಕಗೊಂಡ ತನ್ನ ಲಲನಾಮಣಿಯರಿಗೆ ಧಯರ್‍ಯದಿಂದಿರಿ ಯಂದು ಹೇಳಿದನು....

ಕೆಕ್ಕರಿಸಿ ನೋಡುತ್ತಿರೋ ಅದರ ಕಡೀಕೆ ಬೊಟ್ಟು ಮಾಡಿ ತೋರಿಸೂತ ಕಾಡುಗೊಲ್ಲರೀರಯ್ಯನು ಗಾಂಡ್ರಬೊಮ್ಮಯ್ಯನ ಹಿಂದ ಸರಕೊಂಡನು.. ಚಂಡಾಲಯ್ಯನು ಬೊಮ್ಮಯ್ಯನ ಬೆನ್ನ ಹಿಂದಕ ಜರುಗಿಕೊಂಡನು.. ಹಿಂಗss ವಬ್ಬರ ಹಿಂದಕ ವಬ್ಬರು ಸರಕೊಂಡು ರಾಮರಾಜುವನ್ನು ಮುಂದಕ ಬಿಟ್ಟು ನಡಕೋತ ನಡಕೋತ ಅದರ ಸಮೀಪಕ್ಕ ಬಂದರು.. ಗುಡ್ಡದ ಹಿಂದಣ ಗುಂಡುಕಲ್ಲುಗಳಂಗ....

ರಾಮರಾಜು ಸೂರನ ಅಪಾದಮಸ್ತಕ ದಿಟ್ಟಿಸಿದನು.. ಯಿದು ಕೋಣಮೋ ಅಥವಾ ಸಪ್ತರುಷಿಗಳ ಸಾಕಾರಮೋ ಯಂದು ಅನುಮಾನ ತಾಳಿದನು.. ಯಷ್ಟು ಧಯರ್‍ಯ ತಂದುಕೊಂಡರೂ ನಡುಗು ಹುಟ್ಟದೆ ಯಿರಲಿಲ್ಲ. ಅದಕ ಅರ್ಥವಾಗುವ ಭಾಷೆ ದೇಸ ಬಾಸಲಂದು ತೆಲುಗು ಲೆಸ್ಸಾಯಿದ್ದಿರಬೌದೇ? ಕಸ್ತೂರಿ ಕಂಪಿನ ಕನ್ನೂಡ ಯಿದ್ದಿರಬೌದೆ? ದೇವಾನುದೇವತೆಗಳ ಭಾಷೆಯಾದ ಗೀರುವಾಣಿ ಯಿದ್ದಿರಭೌದೇ ಯಂದು ಯೋಚಿಸುತ ಸಡನ್ನಂತ ವಂದು ನಿರ್ಣಯಕ್ಕೆ ಬಾರದಾದನು....

ಹೊಗಳಲಕಂತ ಬಂದಿರೋನು ಯಾಕ ಸುಮ್ಮಕ ನಿಂತಿರುವನಲ್ಲಾ.. ವಸೀಕರಣ ಮಂತ್ರಹಾಕಲಿರುವವನಂತೆ ದಿಟ್ಟಿಸಿ ನೋಡುತ್ತಿರುವನಲ್ಲಾ.. ಯೀವಯ್ಯನ ಮನದೊಳಗ ಯಿರುವುದಾದರೂ ಯೇನು?

ಹೊಗಳುವಿಯೋ? ಯಿಲ್ಲಾ ಕೋಡಿನಿಂದ ತಿವಿದು ಪರಲೋಕಕ್ಕೆ ಅಟ್ಟಿಬಿಡಲೋ ಯಂಬರ್ಥದಲ್ಲಿ ಡುರುಕಿ ಹಾಕಿ ಮುಂಗಾಲಿನಿಂದ ನೆಲ ಕೆದರಿ

ಧೂಳೆಬ್ಬಿಸಿತು. ಅದು ಅಪಾಯದ ಮನ್ಸೂಚನೆ ಯಂದರ್ಥ ಮಾಡಿಕೊಂಡ ಭಟ್ರಾಜುವು "ಸ್ರೀಮನ್ ಮಹಾರಾಜಧಿರಾಜ.. ರಾಜಪರಮೇಸ್ವರಾss.. ಭಾಷೆಗೆ ತಪ್ಪುವ ರಾಯರ ಗಂಡss ಪರರಾಜ ಭಯಂಕರಾss ದುಷ್ಟ ಶಾರ್ದೂಲ ಮರ್ಧನss ಗಂಡಭೇರುಂಡಾss.. ಕುದುರೆಡವು ರಾಜ್ಯ ರಮಾರಮಣss" ಯಂದು ಮುಂತಾಗಿ ದ್ಧೂನಿಯನ್ನು ಯೇರಿಸುತ್ತೇರಿಸುತ್ತ ಹೋಗಲು ಆ ದ್ಧೂನಿಯ ತರಂಗಗಳು ಬಯಲು ತುಂಬಿ ಜೀಕರಿಸಲು.. ಅದರಿಂದ ಪುಳಕಗೊಂಡ ಸೂರನು ನ್ರುತ್ಯ ಗತಿಯಲ್ಲಿ ಥೋಂ ತನನನ ಹೆಜ್ಜೆ ಹಾಕುತ ತನ್ನ ಪ್ರಿಯತಮೆಯರ ಕಡೇಕ ವಾರೆ ನೋಟ ಬೀರಿದನು.. ಅವರಾದರೋ ಆನಂದಾತಿಶಯದಿಂದ ತುಂಬಿತುಳುಕಾಡುತಲಿದ್ದರು....

ಹೊಗಳು ಪದಗಳ ಸಲುವಾಗಿ ತಡಕಾಡಿದರೆಲ್ಲದು ತನ್ನನ್ನು ಕೋಡುಗಳಿಂದ ಯತ್ತಿ ವಗೆವುದೋ ಯಂದು ಹೆದರಿದ ರಾಜುವು ಛಟ್ ಛಟೀಲ್ ಯಂಬ ಸೀಸಪದ್ಯವನ್ನೂ, ಗುಡ್ ಗುಡಿಲ್ ಯಂಬ ಕಂದ ಪದ್ಯವನ್ನೂ ಸುಶ್ರಾವ್ಯದಿಂದ ಹಾಡಿದನು. ತದನಂತರ ಮತ್ತೇಭಯಿಕ್ರೀಡಿತದಲ್ಲಿ 'ನೀನು ಕ್ರುತಯುಗದಲ್ಲಿ ಯಿಸ್ವಾಮಿತ್ರಮುನಿವರೇಣ್ಯನ ನೇತ್ರಗಳೊಳಗಡಗಿದ್ದೀ.. ತ್ರೇತಾಯುಗದಲ್ಲಿ ದಶಾನನ ಹತ್ತೂ ತಲೆಗಳೊಳಗ ಅಡಗಿದ್ದೀ..ದ್ವಾಪರದಲ್ಲಿ ದುರ್ಯ್ೋಧನನ ತೊಡೆಯೊಳಗಡಗಿದ್ದೀss.. ಮನುವಂತರಗಳನು ಲೀಲಾಜಾಲವಾಗಿ ದಾಟುತ್ತ ಕಲಿಯುಗ ಪ್ರವೇಶ ಮಾಡಿರೋ ನೀನು ಅಸಾಮಾನ್ಯ ಪರಾಕ್ರಮಿಯು.. ಕವುರವಾsss.. ಮಹಾ ಕವುರವಾsss... ಕಾಲಸೂತ್ರಾsss.. ಅಸಿ ಪತ್ರವನಾsss.. ಸೂಕರ ಮುಖಾsss.. ಅಂಧ ಕೂಪಾsss.. ಕ್ರಿಮಿ ಭೋಜನಾsss.. ತಪ್ತ ಸೂರ್ಮಿsss.. ವಜ್ರಕಂಟಿಕಾssss.. ಯಿವೇ ಮೊದಲಾದ ಯಿಪ್ಪತ್ತೊಂದು ನರಕಗಳನ್ನು ಲೀಲಾಜಾಲವಾಗಿ ದಾಟಿ, ಸುಖಸಂಪತ್ತುಗಳಿಗಾಗರವಾದ ಸೊರ್ಗಲೋಕದ ಮೂಲಕ ಹಾದು ಕಲಿಯುಗವನ್ನು ಪ್ರವೇಶ ಮಾಡಿರುವಂಥಾ ನೀನು...

ಮಹಾಸ್ರಗ್ಧರಾದಲ್ಲಿ...

ಯಲಯ್ ಸೂರ ಮಹಾಶಯನೇ.. ನಿನ್ನ ಪವುರಾಣಿಕ ಹಿನ್ನಲೆಯನ್ನು ಯೀ ಪ್ರಕಾರವಾಗಿ ಯಿವರಿಸುತ್ತೇನೆ. ಚಿತ್ತವಿಟ್ಟು ಆಲಿಸುವಂಥವನಾಗು. ದಕ್ಷಬ್ರಮ್ಮನಿಂದ ಧರಣಿಯಲ್ಲಿ ಜನಿಸಿದಾಕೆಯಾದ ದಿತಿಯೇ ನಿನ್ನ ಆದಿಮಾತ್ರುಮೂರ್ತಿಯು, ಆಕೆಯ ಪುಣ್ಯವುದರದಿಂದ ಜನಿಸಿದವರು ಯಾರು

ಯಾರೆಂದರ ಹಿರಣ್ಯಕಶಿಪು, ಹಿರಣ್ಯಾಕ್ಷರೇ ಮೊದಲಾದ ಅಸುರರು ಅವರನ್ನೆಲ್ಲ ಯಿಂದ್ರನು ನಯನಾಜೂಕಿನಿಂದ ಕೊಲೆ ಮಾಡಿದನು. ಯಿಂದ್ರನನ್ನು ಜಯಿಸುವಂಥ ಮಗನು ನಿನ್ನ ಗರ್ಭದಲ್ಲಿ ಜನಿಸುತ್ತಾನೆ ಯಂದು ಆಕೆಯ ಗಂಡ ಕಶ್ಯಪ ಹೇಳಿದಂತೆ ಆಕೆ ಮತ್ತೆ ಗರ್ಭವತಿಯಾದಳು...

(ಕಾಡುಗೊಲ್ಲರೀರಯ್ಯನ ಸಲಹೆಯಂತೆ ರಾಮರಾಜುವು ಹಿಂದಹಿಂದಕ ಹೆಜ್ಜೆಯನಿಕ್ಕುತ ಹೊಗಳುತ್ತಿರಲು ಹ್ಹಾ.. ಹ್ಹಾ.. ಯಂದು ವುದ್ಗಾರ ತೆಗೆಯುತ್ತ.. ಹೊಗಳಿಕೆಯ ವಂದೊಂದು ಮಾತುಗಳಿಗೆ ಮಯ್ಯು ಮರೆಯುತ್ತ ಸೂರನು ಮುಂದ ಮುಂದಕ ಹೆಜ್ಜೆಯನಿಕ್ಕುತಲಿದ್ದನು.. ಯಿದರ ಪರಿಣಾಮವಾಗಿ ಪಟ್ಟಣಕ್ಕ ಅನತಿ ದೂರದಲ್ಲಿದ್ದರು.. ಅಗೋ ಅಲ್ಲಿ ಜನರು.. ಯಿಗೋ ಯಿಲ್ಲಿ ಜನರು...)

ದಿತಿಯ ಗರ್ಭ ಯಂಟು ತಿಂಗಳಲ್ಲಿ ಬಿತ್ತು. ಆಕೆ ಹಗಲು ಹೊತ್ತಿನಲ್ಲಿ ತಲೆದಿಂಬೊಂದರ ಮ್ಯಾಲ ಕಾಲು ಚಾಚಿ ಶಾಸ್ತ್ರಕ್ಕೆ ಯಿರುದ್ಧವಾಗಿ ಮಲಗಿದ್ದುದನ್ನು ಯಿಂದ್ರನು ಗಮನಿಸಿದ.. ವುಪಾಯಾಂತರದಿಂದ ಆಕೆಯ ಗರ್ಭವನ್ನು ಪ್ರವೇಶ ಮಾಡಿ.. ವಜ್ರಾಯುಧದ ಸಾಯದಿಂದ ಭ್ರೂಣವನ್ನು ಯೇಳು ತುಂಡುಗಳನ್ನಾಗಿ ಕತ್ತರಿಸಿ ಹೊರಬಂದು ಕಯ್ಯ ಮುಗುದು 'ಯಲಾಯ್ ತಾಯೇ.. ನನ್ನ ಅಪರಾಧವನ್ನು ಮನ್ನಿಸು....'

(ಸರೀರಿ.. ಸರಕೊಳ್ಳಿರಿ.. ಹಿಂದ ಹಿಂದಕ.. ಅಗೋ ಅಲ್ಲಿ ಅವನು ರೆಟ್ಟೆಗಡುತರದ ಮಿಣಿ ತಂದಾನೆ, ಯಿಗೋ ಯಿಲ್ಲಿ ಯಿವನು ಗಾಂಜಾತೊಪ್ಪಲನು ಹಿಂಡಕೊಂಡವನೆ ಸದುವು ನೋಡಿ ತಿಂಬಲಕ ಯಿಡುವುದಕ.. ಹ್ಹಾ! ರಾಮರಾಜು.. ಸೂರನ ಪೂರುವಾಪರವನ್ನೆಲ್ಲ ಯಿನ್ನೂ ರಸವತ್ತಾಗಿ ವರಣನ ಮಾಡಬೇಕಪ್ಪಾ ಮತ್ತೆ.. ಯಿನ್ನೊಂದು ಸೊಲುಪದೂರ ಅಯ್ತೆ ಅಷ್ಟೆ..)

ತಾಯಿ ದಿತಿ ತನ್ನನ್ನು ತಾನು ನತದ್ರುಷ್ಟೆಯಂದು ತೆಗಳಿಕೊಂಡಳು.. ಪಿಂಡದ ತುಂಡುಗಳ ಪಯ್ಕಿ ವಂದನ್ನು ಬ್ರಮ್ಮಲೋಕದ ಕಡೆಗೂ, ಯಿನ್ನೊಂದನ್ನು ಯಿಂದ್ರಲೋಕದ ಕಡೆಗೂ, ಮೂರನೇದನ್ನು ದೇವಲೋಕದ ಕಡೆಗೂ ಯಸೆದಳು.. ವುಳಿದ ನಾಲ್ಕು ತುಂಡುಗಳನ್ನು ನಾಲ್ಕು ದಿಕ್ಕಿನ ಕಡೆಗೂ ಯಸೆದಳು..

(ಕೇಳುತ್ತಿರುವ ಸೂರನಿಗೆ ದುಕ್ಕ ತಡೆಯಲಕಾಗಲಿಲ್ಲ.. ಕೋಪ ತಡೆಯಲಕ ಆಗಲಿಲ್ಲ.. ಅಯ್ಯೋ ಯಿಂದ್ರಾನೀನೆಂಥಾ ಕಟುಕ.. ನಾನಿರಬೇಕಿತ್ತಾಗ..)

ಅದರ ಚಿತ್ತ ಕಲಕುವಲ್ಲಿ ಯಶಸ್ವಿಯಾಗಿದ್ದ ರಾಮರಾಜುವು ಅದರಿಂದ

ವುತ್ತೇಜಿತಗೊಂಡು ವುತ್ಪಲಮಾಲಾರುತ್ತದಲ್ಲಿ ಯೀ ಪ್ರಕಾರವಾಗಿ ಯೇನು ಪದ್ಯಕಟ್ಟಿ ಹಾಡುತ್ತ ಹಿಂದೆ ಸರಿದನೆಂದರೆ...

ಅಪುತ್ರವತಿಯಾದ ದಿತಿಯು ಯಮ್ಮೆಯಂತೆ ನಿಂತು ತಪಸ್ಸು ಮಾಡಲು ಬ್ರೆಮ್ಮದೇವನು ಪ್ರತ್ಯಕ್ಷನಾಗಿ ಕೋಣದಂತಿರುವ ಮಗನು ಜೆನಿಸುವನೆಂದೂ.. ರುಂಡ ಮಾತ್ರಮಹಿಷದಂತೆ ಯಿರುತ್ತದೆಂದೂ.. ವರವನಿತ್ತು ಅದ್ರುಶ್ಯನಾದನು. ಯಿೂ ಪ್ರಕಾರವಾಗಿ ಅವತರಿಸಿದ ಮಹಿಷಾಸೂರನು ದಿನಕ್ಕೊಂದು ಛಂದದಲ್ಲಿ ಬೆಳೆದು ಪ್ರವುಢನಾದನು.. ಅವನು ಘನಘೋರ ತಪವನಾಚರಿಸಲು ಶಿವನು ಪ್ರತ್ಯಕ್ಷನಾದನು. ಆಗ ಅಸುರನು ತನಗಾವ ಪುರುಷನಿಂದಲೂ ಮರಣ ಸಂಭವಿಸಬಾರದೆಂಬ ವರವ ಕೇಳಲು....

(ಸೂರನು ಕಥೆ ಕೇಳುತಾ ಕೇಳುತಾss ಮಯ್ಯ ಮರತು ವಂದೊಂದೆ ಹೆಜ್ಜೆ ಹಾಕೂತ ಅಗಸೆಬಾಗಿಲು ಪ್ರವೇಶ ಮಾಡಿದನು. ಮುಂದೇನಾತು ಯಂದು ಕೇಳುವ ಆತುರದಲ್ಲಿ ಯಿದ್ದ ಅವಯ್ಯಗೆ ಗೊಂಡ್ರಸಾಂಬಯ್ಯ ಗಾಂಜಾ ತೊಪ್ಪಲು ಕೊಟ್ಟಿದ್ದೂ ತಡ ಆಗಲಿಲ್ಲ.. ಆತನು ಗಬಗಬ ತಿಂದದ್ದೂ ತಡ ಆಗಲಿಲ್ಲ.. ಅಮಲು ತಲೆಗಮರತೊಡಗಿದ್ದು ತಡ ಆಗಲಿಲ್ಲ.. ವಾಲಾಡುತಾss ವಾಲಾಡುತಾsss)

"ಅಂಥ ವರವನ್ನು ಪಡೆದ ಮಹಿಷಾಸುರನು ಯೀರೇಳು ಲೋಕಂಗಳನ್ನು ಗೆದ್ದು ದೇವಾನುದೇವತೆಗಳ ಪಾಲಿಗೆ ಭಯೋತ್ಪಾದಕನಾದನು.. ಆಗ ತ್ರಿಮೂರ್ತಿಗಳು ಗವುರಿಯ ಬಳಿಗೆ ಬಿಜಯಂಗಯ್ದು.." ರಾಮರಾಜುವಿನ ಕಂಠ ಗದ್ಗದಿತವಾಗಿ ಬಿಕ್ಕೊಂಡಿತು..

ಸೂರನು ಕೆಳಗಣ್ಣು, ಮ್ಯಾಲಗಣ್ಣು ಮಾಡಲಾರಂಭಿಸಿದನು.. ಸರೀರ ಸ್ವಾಧೀನ ತಪ್ಪಿತು. ಪಂಚೇಂದ್ರಿಯಂಗಳು ಪಲ್ಟಿ ಹೊಡೆಯತೊಡಗಿದವು.. ಗೊಲ್ಲರೀರಯ್ಯನ ನೇತ್ರುತ್ವದಲ್ಲಿ ಪಯಿಲುವಾನ ಮಾರುದ್ರನ ಗರಡಿಮನೆಯ ಪಡ್ಡೆ ಹುಡುಗರು ಸೂರನ ಕುತ್ತಿಗೆಗೆ ತೊಡೆಗಡುತರದ ಮಿಣಿ ಬಿಗಿದರು. ಕಾಲಿಗೊಂದು ಸರಪಳಿ ಬಿಗಿದರು....

ಅಯ್ಯೋ ಮೋಸಾತು.. ಘಾತವಾತು ಅಂತ ಸರಸಿ, ಸಂಗೀಯರೇ ಮೊದಲಾದ ಮಹಿಷ ಸ್ತ್ರೀಯರು ಡುರುಕಿ ಹಾಕುತ, ಅವರಿವರನ್ನು ಹಾಯುತ ಪ್ರತಿಭಟನೆ ಮಾಡತೊಡಗಿದರು.. ಯಚ್ಚರಾಗು ಯಚ್ಚರಾಗು ಯಂದು ತಮ್ಮ ಪ್ರಿಯಕರನನ್ನು ಬೇಡಿಕೊಳ್ಳತೊಡಗಿದರು.. ವಂದು ತೆಕ್ಕೆ ಗಾಂಜಾ ತೊಪ್ಪಲನು

ನಮಲಿದ್ದ ಅವಯ್ಯನು ಯೇಳಲಕಾದೀತಾ?... ಕೊಸರಿ ಬರಲಕಾದೀತಾ?..

ಹಿಂಗ ಬಂಧನಕ್ಕೊಳಗಾದ ಸೂರನನ್ನು.. ಸಿವಸಂಕರ ಮಾದೇವss..

ಸದರಿ ಪಟ್ಟಣದ ಹೊರ ಮಗ್ಗುಲು ಕರುಪ್ಪಳಿ ಮಗಳು ಗಂಟೆವ್ವನ ಬಾಣಂತನವ ಸುಸೂತ್ರವಾಗಿ ಮಾಡಿ ಮುಗಿಸಿಕೊಂಡು ಅದೇ ತಾನೇ ಬಂದ್ದಂಥವಳಾದ ಜಗಲೂರೆವ್ವನ ವಡಲೊಳಗ ಅಸದಳವಾದ ಸಂಕಟ ಕಾಣಿಸಿಕೊಂಡಿತು.. ತನ್ನ ಕರುಳ ನಂದನವನದೊಳಗ ಸೂರ ಅವ್ವಾ.. ಅವ್ವಾ ಯಂದನಕಂತ ಹೊಲಬುಗೆಟ್ಟು ಅಡ್ಡಾಡುತ್ತಿರುವಂತೆ ಭಾಸವಾಗತೊಡಗಿತು.. ಯಲ್ಲವನೋ ತನ್ನ ಕಂದ? ಹೆಂಗವನೋ ತನ್ನ ಕಂದ? ಜಗಲೂರೆಜ್ಜ ಯಿರುವ ದಿಕ್ಕಿಗೆ ಕಯ್ನ ಮುಗುದು ಅವನ ವುಸಾಬರಿ ನಿಂದು ಯಜ್ಜಾ ಯಂದು ಬೇಡಿಕೊಂಡಳು.. ಯಿರಬೇಕಿದ್ದ ಅಮೂಕಾಣುತಾ ಯಿಲ್ಲವಲ್ಲಾ.. ಯಂದು ಆ ಅಕ್ಕತಂಗಿಯರಿಗಾಗಿ ಹುಡುಕಾಡಲಾರಂಭಿಸಿದಳು. ಯಿಲ್ಲೆಲ್ಲಾರ ಅದಾವೇನಂತ ಕಾಲಬುಡದಲ್ಲಿ ನೋಡಿಕೊಂಡಳು. ಅಲ್ಲೆಲ್ಲಾರ ಅದಾವೇನಂತ ಅಲ್ಲೆಲ್ಲ ಬಗ ಬಗ್ಗಿ ನೋಡಿದಳು. ಅಲ್ಲೆಲ್ಲೂ ಕಾಣುತಾ ಯಿಲ್ಲ.. ಯಿಲ್ಲೊಲ್ಲೂ ಕಾಣುತಾಯಿಲ್ಲ.. ಮುಚ್ಚುಳದಾಗ ಹಾಲು ಬಾನ ಕಲಸಿಟ್ಟಿದ್ದು ಯಿಟ್ಟಂಗೆ ಅಯ್ತೆ.. ಯಾವಾಕೇನೂ ವಂದಗುಳು ಮುಟ್ಟಿಲ್ಲ.. ಯಂದನಕಂತ "ಯ್ಯೋಯ್ ಚನ್ನಮ್ವೋ!" ಚನ್ನವ್ವ ಬಾಲ ಅಲ್ಲಾಡಿಸುತ ಬರಲಿಲ್ಲ.. ಯ್ಯೋಯ್ ಧರುಮಮ್ವೋ ಯಂದು ಕೂಗಿದಳು.. ಧರುಮವ್ವ ಬಾಲ ಅಲ್ಲಾಡಿಸುತ ಬರಲಿಲ್ಲ.. ಯಲ್ಲೋದವಿವು? ಅಂತ ಹುಡುಕಾಡೇ ಹುಡಾಕಾಡಿದಳು.. ತನ್ನ ಮುಂಗಯ್ಯಿ ಗಡುತರದ ಮೂಗನ್ನು ಮೂರು ಮೊಳ ಮುಂದಕ ಚಾಚಿ ಮುಸು ಮುಸನೆ ಮೂಸಿ ನೋಡಿದಳು. ಯಲ್ಲೂ ಅವುಗಳ ಹಿಂಬಡದ ವಾಸನೆ ಮೂಗಿಗಡರಲಿಲ್ಲ.. ಸಾಂಬವಿ ಹೊಳೆಗೆ ಹೊಂಡುವ ಕಾಲಕ್ಕೆ ವಂದು ನಾಯಿ ಕಣ್ಣಿಗೆ ಬೀಳಬಾರದು.. ವಂದು ಬೆಕ್ಕು ಕಣ್ಣಿಗೆ ಬೀಳಬಾರದು ಯಂದು ದಯವಸ್ತರು ಟಾಮು ಟಾಮು ಹಾಕಿಸಿದ್ದು ನಪ್ಪಿಗೆ ಬಂತು. ವಂದು ನಾಯಿ ಹಿಡಕೊಟ್ಟವರಿಗೆ ವಂದು ಬಿಲ್ಲೆ.. ವಂದು ಬೆಕ್ಕು ಹಿಡಕೊಟ್ಟವರಿಗೆ ಎರಡು ಬಿಲ್ಲೆ ಯಿನಾಮು ಕೊಡುವುದಾಗಿ ಘೋಷಣಾ ಮಾಡಿದ್ದೂ ನೆಪ್ಪಿಗೆ ಬಂತು. ಯೀ ಕಾರಣಕ್ಕಾಗಿ ಪಟ್ಟಣದೊಳಗ ಬೊವ್ ಬೊವ್ ಯಂದು ಬೊಗುಳೋ ನಾಯಿ ಯಿಲ್ಲ.. ಮ್ಯಾವ್ ಮ್ಯಾವ್ ಯಂದರಚೋ ಬೆಕ್ಕೂ ಯಿಲ್ಲ.. ತನ ನಾಯಿಗಳ ಗೊಡವೆಗೆ ಬರುವ ತಾಕತ್ತು ಸದರಿ ಪಟ್ಟಣದ ಯಾವ ಗಂಡಸಿಗೂ ಯಿಲ್ಲ. ಅವು ಯಲ್ಲೋ ಹೋಗಿದ್ದಿರಬೌದು.. ಜಗಲೂರಜ್ಜ

ಆ ಮೂಕ ಪ್ರಾಣಿಗಳ ಯೇಕರಿಕೆ ದೇಕರಿಕೆ ನಿಂಗೆ ಸೇರಿದ್ದು. ಯಲ್ಲೋ ಡೊಳ್ಳು ಬಡಿಯುತ್ತಿರುವ ನಾದವು.. ಯಲ್ಲೋ ರುಮ್ಮಿ ತೀಡುತ್ತಿರುವ ನಿನಾದವು.. ಯೇನೋ ಅರಕೆ ಮಾಡುವ ಪ್ರಯತ್ನದಲ್ಲಿದ್ದ ಬೇಯಿನ ಮರವು ಮಿಸುಕಾಡುತ ಕೊಂಬೆ ರೆಂಬೆ ಮಸೆದು  ಸಬುಧ ಮಾಡುತಲಿತ್ತು ಬಾಯಿ ಯಿರದ ಕಾರಣಕ್ಕೆ.. ಅದೇ ಆಗ ಹೊರಕಡೀಕೆ ಯಂದು ಹೋಗಿದ್ದ ಅಂತಾಡೆಪ್ಪ ಬಂದ. “ಯಪ್ಪಾ ನನ್ನ ಸೂರ ಕಾಣುತಾಯಿಲ್ಲ.. ನನ್ನ ನಾಯಿಗಳು ಕಾಣುತಾಯಿಲ್ಲ..” ಯಂದು ಕೇಳಿದಳು. ಅದಕ್ಕಿದ್ದು ಆತನು..” ಯಲ್ಲಿಗೋ ಹೋದಂಗದಾವ ತಾಯಿ.. ಬರತಾವ ಬಿಡು.. ಅದಕ್ಯಾಕ ಸಪ್ಪಗಾತೀ..” ಯಂದ ಸಮಾಧಾನ ಹೇಳಿದನು.. ಆಗ ಆಕೆ ಬಿಟ್ಟ ನಿಟ್ಟುಸಿರು....

ಅದೇ ಸಮಯಕ್ಕ ಸರಿಯಾಗಿ ತಿಂಡೀರ ಯಂಬ ಗುಂಡುಮುಣುಗು ದೇಸದ ಭಕುತನು ವಸ್ತಿಯ ಪೂರುವಾಸ್ರಮದ ಯದುರು ನಿಂತು “ಅಹಹಾ ರುದ್ರೇ.. ಅಹಹಾ ಸಾಂಬವೀ..” ಯಂದು ಮುಂತಾಗಿ ಹೇಳುತಲಿದ್ದ.. ಅವನೊಟ್ಟಿಗಿದ್ದ ಕೆಲಮಂದಿ ಸಿವನ್ನಾಮ.. ಯಂದು ಕೂಗಲಕ ತಮ ತಮ್ಮ ಗಂಟಲುಗಳ ಸ್ರುತಿ ಸರಿಪಡಿಸಿಕೊಳ್ಳುತಲಿದ್ದರು.. ಮತ್ತೊಂದು ಕಡೇಕ ಯಂಟಾಳು ತೂಕದ ಗಂಟಲಯ್ಯನು “ಪರಸಿವನ ಪಾಲನೇತ್ರದಿಂದ ವುದ್ಬಸಿದಂಥವಳೇss.. ರುದ್ರನ ಯೀರಕಾಂತಿಯಿಂದ ವಡಮೂಡಿರುವಂಥವಳೇss..” ಯಂದು ಕೂಗುತ ತನ್ನ ಪ್ರತಿಸ್ಪರ್ಧಿ ತಿಂಡೀರಯ್ಯ ನತ್ತ ದಾಪುಗಾಲು ಯಿಡುತಲಿದ್ದನು. ಅದನ್ನೆಲ್ಲ ಕೇಳಿ ಕೇಳಿ ರೋಸಿ ಹೋದ ಜಗಲೂರೆವ್ವ.. ‘ಹ್ಹಾ..’ ಯಂದು ತನ್ನ ಪರಣಕುಟಿಯಿಂದ ಹೊರ ಜಿಗಿದು ಕುಪ್ಪಳಿಸಿ ನಿಂತೊಡನೆ ಅವರೆಲ್ಲ ಅಂಡಾವರನಗೊಳ್ಳದೆ ಯಿರಲಿಲ್ಲ.. ಯೀ ಪ್ರಕಾರವಾಗಿ ನಿರಜನಗೊಂಡ ಕಡೆ ತಾನು ಯ್ಯೋಯ್ ಚನ್ನಮ್ವೋss ಯ್ಯೋಯ್ ಧರುಮಮೋ.. ಯಂದು ಮತ ಮತ್ತ ಕೂಗಲಾರಂಭಿಸಿದಳು.. ಆದರೆ ಯಲ್ಲಲ್ಲಿ ಅಂದರ ಅಲ್ಲಲ್ಲೆ ಯಿದ್ದ ಅವುಗಳ ರುದಯಕ್ಕೆ ಆಕೆಯ ಕಂಠೀರವ ನಾಟುತಲಿತ್ತಾದರೂ ‘ಬೊವ್ವಮ್ವೋ’ ಯಂದು ಬೊಗಳುವ ದುಸ್ಸಾಹಸಕ್ಕೆ ಮಾತ್ರಯಿಳಿಯಲಿಲ್ಲ....

ಬರುತಾವ ತಾಯೀ.. ಬಂದೇ ಬರುತಾವ ಬಿಡವ್ವಾ ಯಂದು ಅಂತಾತಡೆಪ್ಪನೂss.. ಯಿಲ್ಲೆಪ್ಪಾ.. ನನ್ನೆದೆಯೊಳಗ ಸಂಕಟ ಮೂಡಯ್ತೆ.. ಅವಕ ಅಪಾಯ ತಗಲಯ್ತೆ ಯಂದನಿಸಲಕ ಹತ್ತಯ್ತೆ.. ನಿಂಗೆ ಗೊತ್ತಿಲ್ಲ ಯೀ ಮೂರ ಸಮಾಚಾರ ಯಂದು ಜಗಲೂರೆವ್ವನೂ.. ಯಲ್ಲೋದವಿವು.. ತನ್ನ

ಕಣ್ಣಳತೆಯಲ್ಲಿರುತಲಿದ್ದವು.. ತನ್ನ ಕೂಗಳತೆಯಲ್ಲಿರುತಲಿದ್ದವು.. ನೋಡಿದೊಡನೆ ಮೋಡೋಡಿ ಬರುತಲಿದ್ದವು.. ಕೂಗಿದೊಡನೆ ಮರು ಜವಾಬು ನೀಡುತಲಿದ್ದವು.. ಅಷ್ಟ ದಿಕ್ಕಿಗೆ ಹರಿದಾಡಿದಳು. ಪೊದೆ ಹುಬ್ಬಿಗೆ ಕಯ್ಯ ಹಚ್ಚಿ ನಿರುಕಿಸಿದಳು. “ಯ್ಯೋಯ್ ವುಲುಗಿ ನೀನ್ನೋಡ್ದೇನೆ? ಯ್ನೋಯ್ ಯೀರಿ ನೀನ್ನೋಡ್ದೇನೆ” ಅಂತ ಹಾದು ಹೋಗುವವರನ್ನೆಲ್ಲ ತರುಬಿ ಕೇಳಿದಳು. ಗಂಟಲವರೆಗೆ ಬಂದ ಮಾತುಗಳಿಗೆ ಸಬುಧದ ಸೂತಕ ತಗುಲಿದ್ದ ಅವರು ಬಾಯಿಗೆ ಸೆರಗನ್ನಡ್ಡಯಿಟುಕೊಂಡು ಬಿಕ್ಕಳಿಸುತ ಹೊರಟು ಹೋದರು. ಯ್ಯೋನಾತಿವ್ಕೆ.. ಯದೆಯಾಗಿನ ಮಾತನ್ನು ಯದೆಯಾಗ ಯಿಟುಕೊಂಡು ಹೋತಾವಲ್ಲಂತೀನಿ.. ಯಂದನಕಂತ ತಾನು ತನ್ನ ಕರುಳ ಕೂಗಿಗೆ ಗಮನ ಕೊಟ್ಟಿದ್ದಳೇ ಯಿನಾ ವಡಲ ಕೂಗಿಗೆ ಗಮನಕೊಟ್ಟಿರಲಿಲ್ಲ. ವಡಲು ಸುರುಸುರು ಅನ್ನಲಕ ಹತ್ತಿತು. ಹೊತ್ತಾರೆ ಮಡೆಪ್ಪನೋರ ಹೊಲದಲ್ಲಿ ಬೆಳೆಸೆಗಾಳುಜ್ಜಿಕೊಂಡು ತಿಂದಂಥಾಕೆ. ಕಡುದಮ್ಮನ ಹಳ್ಳದಿಂದ ಯರಡು ಬೊಗಸೆ ನೀರು ಕುಡಿದಿದ್ದಾಕೆ, ಯೇನೇನೋ, ಯಂಥೆಂಥಮೋ ಅನುಮಾನಗಳಿಂದಾಗಿ ತನಗ ತನ್ನ ಮ್ಯಾಲ ವಂಚೂರಾರ ಖಬುರು ಯಿರಲಿಲ್ಲ.. ಹಂಗss ವಂದೇ ಸಮಕ ಕೂಗುತಾss ಕೂಗುತಾ ಹಾದಿಯಿಲ್ಲದ ಕಡೆ ಹಾದಿ ಮಾಡಿಕೊಂಡು ಹೋಗುತಲಿದ್ದ ಪರಸ್ಥಳದ ಮಂದಿ ಆಡುತಲಿದ್ದ ಸಪ್ಪನ ಬ್ಯಾಳಿಯಂಥ ಮಾತುಗಳನ್ನು ಕಿವಿಯಾರೆ ಕೇಳಿಸಿಕೊಂಡಳು.. ಅದರೊಟ್ಟಿಗೆ ತನ್ನನ್ಯಾರೋ ಕಾಲು ಹಿಡಿದು ಜಗ್ಗುತಲಿರುವಂಥ ಅನುಭವವಾತು.. ಯಿದ್ದಕ್ಕಿದ್ದಮೊಲು ತನ್ನೆದೆಯ ಗುಡುಲೊಳಗ ತನ್ನ ಗಂಡ ಮೋಬಯ್ಯನು ಹೊಡಮುರುದು ಯೇಳುತ್ತಿರುವಂತೆ ಭಾಸವಾಗತೊಡಗಿತು.. ಆತನನು ಅಲ್ಲಿಂದ ವುತಾರ ಮಾಡಲು ಪ್ರಯತ್ನಿಸಿದಳಾದರೂ ಸಾಧ್ಯವಾಗಲಿಲ್ಲ.. ಯಾಕ ಯೀ ಸೆವಗೇಡಿ ಹಿಂಗ ಕಾಣಿಸಿಕೊಂಡಯ್ತೆ ಅಂತ ಯಂದಿನಂತೆ ಅಂದಾಡಿಕೊಳ್ಳಲು ಮನಸ್ಸಾಗಲಿಲ್ಲ. ತನ್ನ ಪತಿ ದಯವದ ಬಗ್ಗೆ ವಂದು ನಮೂನಿ ಕನುಕರ ತುಂಬಿಕೊಂತು.. ಅದೇ ಆಕೆಯನ್ನು ಹಿಂದಹಿಂದಕ ನಡೆಸತೊಡಗಿತು.. ಹಂಗ ನಡೆಸತೊಡಗಿದ್ದಂಥವುಗಳು ವಂದಲ್ಲಾ ಯರಡು ಚೌಡಿಗಳು ಯಂಬುವ ಸಂಗತಿ ತನಗ ಹೆಂಗ ಅರ್ಥವಾದೀತು.. ಅವನ್ನಿಲ್ಲಿಗೆ ಗದುಮಿರುವುದು ಹಂಪಜ್ಜನೇ ಯಂಬ ಸಂಗತಿ ತನಗ ಹೆಂಗ ಅರ್ಥವಾದೀತು....

*ವುದುಕದಿಂದ ಅರ್ಥ ಬ್ಯಾರೆ ಆಗೋದಯ್ತೆ ಕೇಕಕಣss..*
*ಚಿತ್ತಾರದಿಂದ ರೂಪ ಬ್ಯಾರೆ ಆಗೋದಯ್ತೆ ಕೇಕಕಣss..*

*ವಾಕ್ಯದಿಂದ ಅರ್ಥ ಬ್ಯಾರೆ ಆಗೋದಯ್ತೆ ಕೇಕಕಣss..*
*ಮುಂಡದಿಂದ ರುಂಡ ಬ್ಯಾರೆ ಆಗೋದಯ್ತೆ ಕೇಕಕಣss..*

ಯಂದು ಮುಂತಾಗಿ ಚವುಡಿಗಳು ತನ್ನೊಳಗ ಹಾಡಿಪಾಡಿ ಕೇಕೆ ಹಾಕುತಲಿದ್ದುದು ತನಗ ಹೆಂಗ ಅರ್ಥವಾದೀತು....

ಅಗೋ! ಅಲ್ಲಿ! ಆಕೇನೇ ಜಗಲೂರೆವ್ವ! ಯೀಗೋ ಯಿಲ್ಲಿ ಯೀಕೇನೇ ಜಗಲೂರೆವ್ವ ಯಂದನಕಂತ ಮಂದಿ ತನ ಸುತ್ತಮುತ್ತ ಜಮಾವಣೆಗೊಳ್ಳುತಲಿದ್ದುದು ತನಗ ಹೆಂಗ ಅರ್ಥವಾದೀತು? ಸೂರ್ಯ ಪರಮಾತುಮನು ಮಮ್ಮಲನೆ, ವಾಯುದೇವನು ಮಮ್ಮಲನೆ.. ಕ್ರಿಮಿಕೀಟಗಳು ಮಮ್ಮಲನೆ, ರುತುಮಾನಗಳು ಮಮ್ಮಲನೆ.. ಹಿಂಗs ಯಾವತ್ತು ತ್ರುಣ ಕಾಷ« ಯಿರುವೆ ಯಂಭತ್ನಾಕು ಕೋಟಿ ಜೀವರಾಶಿಗಳು ಮಮ್ಮಲನೆ ಮರುಗುತಲಿದ್ದುದು ತನಗೆ ಹೆಂಗ ಅರ್ಥವಾದೀತು? ಅಗೋ ಆಟು ದೂರದಲ್ಲಿ ಬಾಯಿ ಮುಕ್ಕಳಿಸಿ ನೀರು ವುಗುಳೋಮೋಟು ದೂರದಲ್ಲಿ.. ವಬ್ಬಾಕಿ.. ಆಕೆ ಯಾರಿದ್ದಾಳಪ್ಪಾ ಅಂದರ ಕಳ್ಳಬುಳ್ಳವ್ವನ ಸೊಸೆ ದೇಯೀರಮ್ಮ. ಜಗಲೂರೆವ್ವ ಮಾಡಿದ್ದ ಅಡವಣಿಗೆಯಿಂದಾಗಿ ಸತ್ತು ಹುಟ್ಟಿದ್ದಂಥವಳು. ತನಗ ನರಕ ಪ್ರಾಪ್ತಿಯಾದರೂ ಚಿಂತೆಯಿಲ್ಲ.. ತನ್ನ ಘಟ ಬಿದ್ದುಹೋದರೂ ಚಿಂತೆಯಿಲ್ಲ, ತಾನು ಯಿದ್ದದ್ದು ಯಿದ್ದಂಗ ಹೇಳುವಾಕೆಯೇ ಸಯ್ಯಿ.. ಯಂದನಕಂತ ಹಿಡಿಯ ಬಂದವರಿಂದ ಕೊಸರಿಕೊಂಡು ಮೋಡೋಡಿ ಬರುತಾಳs.. ಬಂದು ಯವ್ವಾ ಯಂದು ಯಿನ್ನೇನು ಬಾಯಿ ತೆಗೆಯಬೇಕೆಂಬುವಷ್ಟರಲ್ಲಿ.. ನಾಲಗೆ ಸಡನ್ನ ಬಿದ್ದುಹೋತು ಸಿವನೇ...

ಮಲಗಿದ್ದಲ್ಲಿಂದ ಜಗ್ಗಿಸಿ ನಿಂತೇಟಿಗೆ ಕಾಪಲಿದ್ದ ತೊಣಸಯ್ಯಾ, ಯರ್‍ರಯ್ಯಾ, ಮುಗುಲಯ್ಯಾ, ಚಿತ್ತಾರಯ್ಯರು ಆಟು ದೂರ ವುರುಳಿಕೋತ ಹೋದರು. ಬಡಗಿಗಳನ್ನೆತ್ತಲಕ ಕಯ್ಯಿ ಯೇಳಲೊಲ್ಲದು.. ದುರುಗುಟ್ಟಿ ನೋಡಲಕ ತಮ್ಮ ಕಣ್ಣುಗಳು ಸಹಕರಿಸಲೊಲ್ಲವು.. ಬಯ್ಯಲಕಂದರ ತಮ ತಮ್ಮ ನಾಲಗೆಗಳು ಸಹಕರಿಸಲೊಲ್ಲವು.. ಯಾಕ ಹಿಂಗ ತಮ ತಮ್ಮ ಸರೀರಗಳು ವುಡುಗಲಕ ಹತ್ತ್ಯಾವ.. ಅವರಿಗೆ ಫಜೀತಿಗಿಟ್ಟುಕೊಂಡು ಬಿಟ್ಟಿತ್ತು. ವಂದರಗಳಿಗೆ ಹಿಂದ ಯಿದ್ದಂಗ ಯೀಗ ಯಿಲ್ಲ ಅವರು.. ಯಿಂಥ ಮಹಿಮಾನ್ವಿತ ಮಹಿಷವನ್ನು ಹೊಡದು ಬಡದು ಪಳಗಿಸಲಂಕತ ಯೀಳ್ಳೆ ಪಡೆದು ಬಂದಿದ್ದೇವಲ್ಲಾ ತಾವು! ತಮ್ಮ ಬುದ್ದಿ ಯೇನು ತಿಂದಿತ್ತು ಆವಾಗ.. ಆ ನಾಕೂ ಮಂದೀನೂ ತಮ್ಮ ನಿಯಾಮಕದ ಮೂಲ ವುದ್ದೇಶವನ್ನು ಬದಿಗಿಟ್ಟು ಅದರ ಯದುರು ಪಿಳಿ

ಪಿಳಿ ನೋಡುತ್ತ ಕೂಕಂಡರು.. ಯಿವತ್ತಿಗೆ ಯಿದನು ತಡಮೋದು ಪಾಡಲ್ಲ.. ಹೊತ್ತು ಮರುಹುಟ್ಟು ಪಡಕೊಂಡನಂತರ ಮಾಡಬೇಕೆಂದಿರುವುದನು ಮಾಡಿದರಾಯಿತು. ನಾಳೆ ದಿವಸ ತಾಯಿ ಸಾಂಬವಿ ತಮಗ ಯಾವ ಬುದ್ಧಿಕೊಡುವಳೋ? ಯೇನೋ? ನಾಳೆಗಂಟ ಯೀ ನಿರ್ಜನ ಪ್ರಾಂತದೊಳಗ ಯಿದ್ದು ಯೇನು ಮಾಡುವುದು?

ಅಲ್ಲಿಂದ ವಂದು ಧಮ್ಮು ಹಾದಿ ದೂರದಲ್ಲಿ ಕಾಳಾಪ್ರಯಂಬ ಮೂರು ಯಿತ್ತು.. ಅಲ್ಲಿ "ಸುಂದೋಸುಂದರ ವಧೆ" ಯಂಬ ದೊಡ್ಡಾಟ ಅವತ್ತೇ ನಡೆಯಲಿತ್ತು. ಬಡೇಲಡಕಿನ ಭಾನುಮತಿ, ಕಾನಾಮಡುಗಿನ ಕಳಾವತಿ, ಕುಮತಿಯ ಕುಮಾರಿಯೇ ಮೊದಲಾದ ಸುಂದರಿಯರು ಅದರೊಳಗ ವಟ್ಟಿಗೆ ನಟಿಸಿರುವುದು ಅಪರೂಪದ ಸಂಗತಿಯು.. ಅದನು ನೋಡಲಕ ಪುಣ್ಯ ಮಾಡಿರಬೇಕು.. ಹರೇದ ಹುಡುಗರಾದ ತಾವು ಯಿಂಥ ಸುವರ್ಣಾವಕಾಶವನ್ನು ಯಾಕ ಕಳಕೋಬೇಕು? ವಬ್ಬರ ಮುಖ ವಬ್ಬರು ನೋಡಿಕೊಂಡರು. ಸದರಿ ಪ್ರಾಂತದಿಂದ ಸೂರ ತಪ್ಪಿಸಿಕೊಂಡು ಹೋಗುವುದು ಕಣಸಿನ ಮಾತು. ಆದರೆ ಕೊಳ್ಳಿಗೆ ಕಾಲಿಗೆ ಬಿಗಿದಿರೋ ಸರಪಳಿಗಳಾದರು ಯಂಥವು? ಯೇನು ಕಥೆ? ಮಹಿಷ ಆನೆಗಾತುರದ್ದೇನಲ್ಲ.. ಅದೂ ಅಲ್ಲದೆ ಕುದುರೆಡವು ಯಿರುವುದು ಕೂಗಳತೆ ದೂರದಲ್ಲಿ.. ಯೀ ಹೊತ್ತಿನಲ್ಲಿ ನರಹುಳ ಯಿಲ್ಲಿಗೆ ಬರಲಾರದು.. ಸರ್‍ರನೆ ಹೋಗಿ ನೋಡಿಕೊಂಡು.. ಬೆಳ್ಳಿ ಮೂಡುವುದಕು ಮುಂಚೇನ ಭರ್‍ರಂತ ಬಂದು ಸೇರಿಕೊಂಡು ಬಿಡುವುದು.. ಪರಸ್ಪರ ವಪ್ಪಿಕೊಂಡರು.. ತೀರ ಹತ್ತಿರದಲ್ಲಿದ್ದ ಸೂರನಿಗೆ ಸಣುಮಾಡುತ ಬಿಟ್ಟು ಹೋಗುತ್ತಿರುವ ತಮ್ಮನ್ನು ಮಾಫ್ ಮಾಡೆಂದು ಕೇಳಿಕೊಂಡರು.. ಅಲ್ಲಿಂದ ಅವರು ಕಾಳಾಪ್ರದ ಕಡೇಕ....

ಅಕ್ಕತಂಗೇರ ಕಲ್ಲುಗುಂಡುಗಳ ಬುಡದಲ್ಲಿ ವುಸುರು ಬಿಗಿಹಿಡಿದು ಅಡಗಿದ್ದ ಚನ್ನವ್ವ, ಧರುಮವ್ವರು ಅಂತೂ ತಮ್ಮ ಯೋಜನೆ ಫಲನೀಡಿತಲ್ಲಾ ಯಂದು ಸಮಾಧಾನದ ವುಸುರುಬಿಟ್ಟರು. ಆ ಕೂಡಲೆ ಸೂರನಿದ್ದ ಜೆಗೇವನ್ನು ತಲುಪಿದರು. ಅವನ ದುಸ್ಥಿತೀನ ನೋಡಿ ಮರುಗಿದರು. ಬಂಧನಕ್ಕೆ ಬಳಸಿರುವುದು ರೆಟ್ಟೆ ಗಡುತರ ಕಬ್ಬುಣದ ಸರಪಣಿಯು.. ಅದನ್ನು ಕಡಿದು ತುಂಡು ಮಾಡುವುದು ತಮ್ಮ ಅಳತೆ ಮೀರಿದ್ದು. ವುಳಿದಿರುವುದೆಂದರೆ ಸೂರನೇ ಪರಾಕ್ರಮ ಮೆರೆದು ಸರಪಣಿಯನ್ನು ತುಂಡು ತುಂಡು ಮಾಡಬೇಕು. ವೋಡಿ ಹೋಗಿ ಜಗಲೂರವ್ವನ ಸರೀರದೊಳಗ ಜೀವ ತುಂಬಬೇಕು. ಸುನಕ ದ್ವಯರ

ಪ್ರೋತ್ಸಾಹದಾಯಕ ಮಾತುಗಳಿಂದ ವುತ್ತೇಜಿತನಾದ ಸೂರನು ಶಕ್ತಿಮೀರಿ ಪ್ರಯತ್ನಿಸಿದನಾದರೂ ಬಂಧನದ ಮೀಸೆ ಅಲುಗಿಸಲಾಗಲಿಲ್ಲ.. ಸುಸ್ತಾಗಿಬಿಟ್ಟನು. ಹೆಂಗಪ್ಪಾ ಯೀತನನ್ನು ಬಂಧನ ಮುಕ್ತನನ್ನಾಗಿಸುವುದು? ಆ ಶಕ್ತಿ ಯಿರುವುದು ಜಗಲೂರೆವ್ವಗ ಮಾತ್ರ.. ಆಕೆಯನ್ನು ಹೆಂಗ ಸದರಿ ಜಾಗಕ್ಕೆ ಕರೆತರುವುದು? ತಾವು ಹೋಗಿ ಬರಲಕಂದರ ಸೂರಯ್ಯ ವಂಟಿಯಾಗುತಾನ.. ಯೇನು ಮಾಡುವುದು ತಾವೀಗ!?..

ಯಂದು ಯಸನ ಮಾಡ ತೊಡಗಿದರು ಸಿವನೇss..

ಯೀ ಮುಂದಿನ ಪರಸಂಗ ಕುರುತು ವಬ್ಬೊಬ್ಬ ಕಥೆಗಾರ ವಂದೊಂದು ಕಥೆಯನ ಹೇಳವನೆ ಸಿವನೇ...

ಆ ವಂದಂದನು ನಂಬಲಕ ಆಗಂಗಿಲ್ಲ, ನಂಬದಿರಲಕ ಆಗಂಗಿಲ್ಲ ಸಿವನೇ..

ಸೂರಯ್ಯ ವುಯ್ದೋ ವುಯ್ದಂಥ ವುಚ್ಫೆ ಪಾದಗಳು, ರುಂಡ, ಮುಂಡವೇ ಮೊದಲಾದ ಅಂಗಾಂಗಳು ಮೂಡಿ ಜಲಗುದುರೆಯಾಕಾರ ಪಡಕೊಂಡಿತಂತೆ ಸಿವನೇ.. ಕೆನೆದೂ ಕೆನೆದೂ ಠಣ್ಣಂತ ಮುಗಿಲಿಗೆ ಜಿಗಿಯಿತಂತೆ.. ಬಯಲೊಳಗೆ ಲಯವಾಗಿ.. ಬಯಲೆ ತಾನಾಗಿ ಕುದುರೆಡವ ಪಟ್ಟಣದ ಮ್ಯಾಲೆಲ್ಲ ಹಾರಾಡ ತೊಡಗಿತಂತೆ.. ಘಲ್ಲು ಘಲ್ಲುಯಂಬ ನಾದವನ್ನು ಸೆಲ್ಲಾಡಲು ಯೇನಿದ್ದೀ ತಪ್ಪಾ ಅದು.. ಯಾತಕ್ಕಿದ್ದೀತಪ್ಪಾಯಿದು.. ಯಾದೋ ದೇವತೆ ಗಸ್ತು ತಿರುಗುತ್ತಿರಬೌದಾ.. ಯಾದಾರ ರಾಚ್ಚಸ ಅಡ್ಡಾಡುತ್ತಿರಬೌದಾ.. ಯಂದು ಅಬಾಲರುದ್ದರಾದಿ ಯಾಗಿ ದಿಗ್‌ಭ್ರಾಂತರಾಗಿ ಮುಗುಲ ಕಡೇಕ ಮುಖ ಮಾಡಿದರಂತೆ ಸಿವನೇss..

ಹಾಯ್ ಹಾಯ್ ಜಲಗುದುರೆಯೇ ಯಂದು ವುದ್ಗಾರ ಮಾಡಿದರಂತೆ.. ಅಲ್ಲಯಿತೆಂದರದು ಯಿಲ್ಲಿಗೆ ಬಂತಂತೆ. ಯಿಲ್ಲಯಿತೆಂದರದು ಅಲ್ಲಿಗೆ ಹೋಯಿತಂತೆ.. ಯಲಾಯ್ ನೀನೇನು ಅಸ್ವಮೇಧ ಯಾಗದ ಕುದುರೆಯಾತುಮವಾ.. ನೀನೇನು ಭಯ್ರವನ ಸೋದರ ಸಂಬಂಧಿಯಾ.. ಯಂದು ಪ್ರಸ್ನೆಗಳನು ಕೇಳಾಡಿದರಂತೆ.. ವುತ್ತರ ಕೊಡಲಕದಕೇನು ಬಹಿರಂಗಯಿತ್ತಾ.. ಅಂತರಂಗಯಿತ್ತಾ!.. ಅದು ಹಂಗss ಹಾರಿಕೋತ ಹೋಗಿ ತುಂಬ ತ್ರಾಸು ಕೊಡುತಂತೆ.. ಬಂಗಾರದ ಲಾಯದಾಸೆ ವಡ್ಡಿದರಂತೆ, ಬೆಳ್ಳಿಲಾಯದಾಮಿಷ ವಡ್ಡಿದರಂತೆ.. ಆದರದು ಆಸೆಗಳಿಗೆ ಬಲಿಯಾಗಲಿಲ್ಲಂತೆ, ಆಮಿಷಗಳಿಗೆ ವಲಿಯಲಿಲ್ಲವಂತೆ.. ಹಂಗs ಸತಾಯಿಸಿ ಸತಾಯಿಸಿ ಗಿಡದಿಂದ

ಮರಕ್ಕೆ, ಮರದಿಂದ ಮಾಡಿಗೆ, ಮಾಡಿನಿಂದ ಮೋಡಕ್ಕೆ, ಮೋಡದಿಂದ....ಹಿಂಗs ಹಾರಿಕೋತ ಹಾರಿಕೋತ ಹೋಗಿ ಚುಕ್ಕಿ ಚಕ್ಕಂತ ಮರೆಯಾದಂಗೆ ಮರೆಯಾಗಿ ಬಿಟ್ಟತಂತೆ ಸಿವನೇ.. ಅದು ಮುಂದೆ ಯಲ್ಲಿಗೆ ಹೋತೆಂಬುದರ ಬಗ್ಗೆ ವಬ್ಬರೆದೆಯೊಳಗಾದರೂ ವಂದಾರ ಸರಿಯಾದ ಸಮಜಾಷಿಯಿಲ್ಲ ಸಿವನೆ....

ಆದರ ಬ್ಯಾಗೇರ ಸವಾರೆವ್ವ ಕಟ್ಟಿ ಛೂ ಬಿಟ್ಟಿರುವ ಕಥೆಯ ಪ್ರಕಾರ...

ಆ ಜಲಗುದುರೆಯು....

ಮಾಳಿಗೆಯುಳ್ಳ ಮನೆಗಳನ್ನೇರಿ.. ಕೋಟೆ ಗೋಡೆಗಿದ್ದ ಬತೇರಿಯೇರಿ.. ಕಾವಲು ಗೋಪುರಗಳನ್ನೇರಿ.. ಬುಡಗಳಿದ್ದ ಮರಗಳನ್ನೇರಿ.. ಯ್ಯೋಯ್ ಸೂರಯ್ಯಾಯಂದೊರಲಿ ವರಲೀ.. ಸುಸ್ತಾಗಿದ್ದ ಜಗಲೂರವ್ವಗೆ ತಂದೆಯಾದ ಅಂತಾಡೆಪ್ಪನು “ಮಗಳೇ.. ಸೂರಯ್ಯನ ತಾಯಿ ಸಾಂಬವಿ ಬಗೆಸವಳೆಂದ ಮ್ಯಾಲ ಅವನ ಚಿಂತೇನ ಬುಟ್ಟು ಬುಡವ್ವಾ.. ಅವನಿರುವುದು ನೂರಾರು ವಡಲು ತುಂಬಲಕ.. ಯಿಂಗವಯ್ಯನ ತರುಬಿದಿ ಅಂದರೆ ದಯವಕ್ಕೆ ದ್ರೋಅ ಬಗದಂಗಾಯ್ತದೆ.. ಅದಕ ನೀನು ನಿನ್ನ ಕರುಳಿಗ ಮೂಗುದಾಣ ಪೋಣಸಲಕ ಬೇಕು ನೋಡವ್ವಾ” ಯಂದು ಪರಿಪರಿಯಿಂದ ಸಾಂತುವನ ಹೇಳುತಲಿದ್ದನಂತೆ.. ಯಿೂ ಕಾವಳದಾಗ ನಿನ್ನ ನಡೆಸಿಕೊಂಡ ಹೋಗುವ ಜವಾಬುದಾರಿ ನಂದು ಕಣವ್ವಾ.. ಗುಂಟುಮೂಟೆ ಕಟ್ಟಿಕ್ಯಾ.. ಯಂದು ಅಂಗಲಾಚುತಲಿದ್ದನಂತೆ.. ಅದಕ ಆಕೆಯು “ಯಪ್ಪಾ.. ಯಿಲ್ಲೇ ಬಿದ್ದು ಹ್ವಾದರೂ ಯಸನ ಮಾಡುವಾಕಿ ನಾನಲ್ಲ.. ಬೇಕಾದರೆ ದಯವ ನನ್ನ ಬಲಿ ತಗಳ್ಳಲಿ.. ಆದರೆ ನಾನು ನನ್ನ ಸೂರನನ್ನು ಬಲಿ ಕಳುವಾಕಿಯಲ್ಲ” ಯಂದು ಜವಾಬು ನೀಡು ತಲಿದ್ದಳಂತೆ.. ಅದಕ್ಕಿದ್ದು ಆ ತಂದೆಯು “ನಿನ್ನಣೇಲಿ ಬರಧಾಂಗಾಗಲೀ ತಾಯಿೂ.. ನನ್ನಂಥ ನರ ಮನುಸ ಮಾಡೋದೇನಯ್ತೆ..” ಯಂದು ನಿಟ್ಟುಸಿರು ಬಿಟ್ಟು ಸುಮಕಾಗಿದ್ದನಂತೆ....

ತಂದೆ ಮಗಳು ಪರಸ್ಪರ ಬೆನ್ನು ಮಾಡಿದ್ದ ಹೊತ್ತಿನಲ್ಲಿ.. ವಬ್ಬಾರ ಬಾಯೊಳಗ ವಂದಾರ ಮಾತು ಹೊಂಡದಿದ್ದ ಹೊತ್ತಿನಲ್ಲಿ.. ಪಸು ಪಚ್ಚಿಗಳು ತಮ ತಮ್ಮ ಬಾಯೊಳಗಿನ ಮೇವನ ನುರುಪಡಿ ಮಾಡದಿದ್ದ ಹೊತ್ತಿನಲ್ಲಿ.. ಕಜ್ಜಿ ತಡಸಾಲಯ್ಯನು ಅವರೀರುವರನ್ನು ಅದೇ ಯಿನ್ನು ವುಂಬಲಕ ಕರೆದು ಹೋಗಿದ್ದ ಹೊತ್ತಿನಲ್ಲಿ.. ಅಲ್ಲೇ ಸನೀಕ ಯಿದ್ದ ಆಳೆತ್ತರದ ಹುತ್ತದಲ್ಲಿ ಕಾಳಿಂಗ ಸರುಪವು ಬುಸು ಬುಸು ಅಂತ ವುಸುರಾಡುತಲಿದ್ದ ಹೊತ್ತಿನಲ್ಲಿ, ವಗ್ಗಪ್ಪೋರ ಸೊಸೆ ಅಯ್ಯಾಳವ್ವನ ಬಸುರೊಳಗ ಯೆಂಟು ತಿಂಗಳ ಕೂಸು ಮಗ್ಗುಲು

ಬದಲಿಸಿ ತಾಯ್ತನಕ್ಕೆ ಹಿತ ಮಾಡುತ್ತಿದ್ದ ಹೊತ್ತಿನಲ್ಲಿ....

ಯಿಳಿತಾss ಯಿಳಿತಾss ಬಂದಿಳಿಯಿತಂತೆ.. ಜಗಲೂರೆವ್ವಯೆಂಬುವ ಕನುಕರದ ಕಡಾಯಿ ಮುಂದುಗಡೇಕೆ.. ಮಂಪಡರಿದ್ದ ಆಕೆಯ ಕಣ್ಣಿಗೆ ವಂದು ಛಣ ಚಂದ್ರಾಮನ ಚಿಗದೊಡಪ್ಪನ ಮಗನೇನೋ ಯಂಬಂತೆ ಭಾಸವಾಯಿತಂತೆ.. ನೋಡಿದೊಡನೆ ಯದೆ ಧಸಕ್ಕಂದಂಗಾತಂತೆ.. ಯಪ್ಪಾ ನೋಡಿಲ್ಲಿ ಯಂದು ತೋರಿಸಲಾಕೆಯು ಅವುದಲ್ಲೆವ್ವಾಯಂದಾತನ ಯದೆಯೂ ಧಸಕ್ಕಂದಂಗಾತಂತೆ....

ಯಿದು ಕಣಸೋ ನಣಸೋ.. ಮಾಯಮೋ... ಮಂತುರಮೋ.. ಹಿಂದಕ ಜರುಗಿದರ ಮುಂದು ಮುಂದಕ.. ಮುಂದಕ ಸರುದರೆ ಹಿಂದು ಹಿಂದುಕ ಬರತಯ್ತಲ್ಲಾ.. ತಿಂಬಲಕ ಯಂಬಂತೆ ಬಾಯನ ಹಸು ಮಗೀನಂಗೆ ತೆರೆತಯ್ತಲ್ಲಾ.. ಕೆನೆಕೆನೆದು ನಿಶ್ಯಬುಧದ ಕೇಕೆ ಹಾಕತಯ್ತಲ್ಲಾ.. ಮೂಗಿನಿಂದ ಬುಸು ಬುಸನೆ ವುಸುರಾಡುತಯ್ತಲ್ಲಾ.. ಬಾಲ ಮೂಪ್ಯಾಡಿ ತಂಗಾಳಿ ಗದು ಮುತಯ್ತಲ್ಲಾ.. ಕಣ್ಣೊಳಗ ಕಂದೀಲು ಮುಡುದಯ್ತಲ್ಲಾ.. ನಾಲಿಗೆ ಚಾಚಿ ಬೆಳದಿಂಗಳನ ನಾಕತಯ್ತಲ್ಲಾ..

ಯಿದೇನಿದು ಸಿವನೇ.. ಯಿೀ ಜಲಗುದುರೆಂಯು ಯಾವ ಲೋಕದಿದ್ದರಬೌದು? ಮಾಯಾವಿ ಹಂಪಜ್ಜನೇನಾರ ತಮ್ಮನ್ನು ಸರುವನಾಶಣ ಮಾಡುವ ಸಲುವಾಗಿ ಕಳಿಸಿದ್ದಿರಬೌದಾ? ಯಂದೊಂದು ಛಣ.. ತಾಯಂದಿರ ಯದೆ ಹಾಲಿನಿಂದಿದು ಅವಿರ್ಭವಿಸಿರಬೌದಾ? ಸೃಷಿ«ಕರ್ತನು ತಮ್ಮನ್ನುದ್ಧಾರ ಮಾಡುವ ಸಲುವಾಗಿ ಕಳಿಸಿದ್ದಿರಬೌದಾ? ಯಂದೊಂದು ಛಣ ಆಲೋಚನೆ ಮಾಡೀ ಮಾಡೀ ಜಗಲೂರೆವ್ವ ಯಲಾಯ್ ಜಲಗುದುರೆಯೇ.. ನೀನ್ಯಾರು? ಯದಕ ಬಂದಿಯಂದು ರವುಸದಿಂದ ಕೇಳಿದಳಂತೆ. ಮಯ್ಯಕೊಡವಲಾಗಿ ಅದರ ವಂಚೂರು ದ್ರಾವಕ ಸೀದ ಆಕೆಯ ಮಯ್ಯೊಳಗ ಯಾಪನ ಮಾಡಿತಂತೆ.. ನಿಧ ನಿಧಾನವಾಗಿ ಮೂಡಲಾರಂಭಿಸಿದ ವಂದು ಚಿತ್ರವು ಕ್ರಮ ಕ್ರಮೇಣ ಸೂರಯ್ಯ ತಾನಾಗಿ ಬಿಟ್ಟಿತಂತೆ.. ತಾಯಿೊ.. ನಾನು ಬಂಧನದಲ್ಲಿರುವೆನು ಯಂದು ಹೇಳಿದಾಂಗಾತಂತೆ.. ಸೂರಯ್ಯಾ ಯಂದು ತಾನು ಅದರ ಡುಬ್ಬದ ಮ್ಯಾಲ ಕೂಕಳ್ಳುತ್ತ ತನ್ನಪ್ಪಗ ಯಪ್ಪಾ.. ಯಿರೋ ಸಂಗತೀನ ವಡಲೊಳಗಿಟುಕೊಂಡು ಯಿಲ್ಲೇ ಯಿರು.. ಹಿಂಗ ಹೋಗಿ ಹಂಗ ಬರುವ ನನಗೆ ಅಂಜಿಕೆ ಅಪೂಟಯಿಲ್ಲ ಯಂದು ಹೇಳಿದಳಂತೆ..

ರೆಕ್ಕೆಗಳನ ಮಾರಗಲ ಹರಡಿ, ಮುಂಗಾಲೂರಿ ಮುಗುಲಿಗೆ ನೆಗೆದ ಆ

ಜಲಗುದುರೆಯು ಚಿಟಿಕೆ ಹೊಡೆವಷ್ಟರೊಳಗೆ ಹಾರುತಾರುತಾ ಹೋಗಿ ಯೇಳೆಂಟು ಮಾರುದ್ದಗಲದ ಮಟ್ಟಸ ಗವಿಯೊಳಗ ಆಕೇನ ಯಿಳುವಿತಂತೆ....

ದೀವಟಿಗಳ ಹಿಡಿ ಬೆಳಕಲ್ಲಿ ತಾನು ಕಂಡದ್ದೇನೆಂದರೆ....

ಸೆರೆಸಿಕ್ಕ ಜಾಟಗೆರೆ ತಿಕ್ಕಲಯ್ಯನ ನಾಯಕನ ಕೊರಳಿಗೆ ವುರುಳು ಹಾಕಿಕೊಂದಿದ್ದ ಮಿಣಿಗಳಿಂದಲೂ, ಜರೂರು ರಾಜ ಮುಕುಂದ ನಾಯಕನ ಕಯ್ಯಿಕಾಲುಗಳಿಗೆ ತೊಡಿಸಿದ್ದ ಸರುಪಳಿಗಳಿಂದಲೂ ಸೂರಯ್ಯ ಬಂಧಿಸಲ್ಪಟ್ಟಿದ್ದನಂತೆ.. ಕರುಳು ಕಿತ್ತು ಬಂದು....

ಸೂರಯ್ಯಾs.. ಹೇ�ಡಿ ಹಾಂಗ ಬಂಧಿಯಾಗಿರುವಿಯಲ್ಲಾಯ್.. ನೀನು ನಿನ್ನಪ್ಪಗ ಹುಟ್ಟಿದ ಮಗನೇ ಆಗಿದ್ದಲ್ಲಿ.. ಜಗಲೂರೆಜ್ಜನ ವರಪ್ರಸಾದದಿಂದ ಹುಟ್ಟಿದ ಮಗನೇ ಆಗಿದ್ದಲ್ಲಿ.. ನನ್ನ ಕಯ್ತುತ್ತು ವುಂಡು ಬೆಳೆದವನೇ ಆಗಿದ್ದಲ್ಲಿ.. ಬಂಧನಾನ ಕಿತ್ತೊಗೆದು ನನ ಹಿಂದ ಬರುತೀಯಾಯ್... ಯಂದಾಕೆ ಸವಾಲು ಹಾಕುತ್ತಲೇ....

ಸೂರಯ್ಯನು ಅಷ್ಟದಿಕ್ಪಾಲಕರು, ನಡುಗುವಂತೆ ಡುರುಕಿ ಹಾಕಿದನಂತೆ.. ಭಟ್ರಾಜುರಾಮ ರಾಜು ಹಾಡಿ ಹೊಗಳಿದ್ದ ಪೂರುವಾಪರ ನೆನಸಿಕೊಂಡನಂತೆ.. ವುಸುರು ಬಿಗಿ ಹಿಡಿದು ಜಗ್ಗಾಡಿ ಮಿಣಿ, ಸರಪಳಿಗಳನ ತುಂಡು ತುಂಡು ಮಾಡಿದನಂತೆ.. "ಭಪ್ಪರೆ ಮಗನೇ.. ಭಳಾರೆ ಮಗನೇ" ಯಂದುದ್ಗಾರ ತೆಗೆದ ಆ ವೀರವನಿತೆಯು....

ತದನಂತರ ಆ ಜಲುಗುದುರೆಯು ಸರ್‍ರಂತ ಹರಿದಲ್ಲಿ ಮಡುವಾಯಿತಂತೆ.. ಯಿನ್ನು ತಾವಿನ್ಯಾಕೆ ಸ್ವಾನರೂಪದಲ್ಲಿದ್ದು ಮುಂದೊರೆಯಬೇಕೆಂದು ನಿರ್ಧರಿಸಿದಂತವರಾದ ಸಿವಸರಣೆಯರು ಆ ಕೂಡಲೇ ನಿಜರೂಪದಲ್ಲಿ ಕಾಣಿಸಿಕೊಂಡರಂತೆ.. ಆ ಸ್ತ್ರೀಯರೀರ್ವರ ದಿವ್ಯರೂಪವಂ ಕಂಡು ಜಗಲೂರೆವ್ವ ಭಕ್ತಿ ಪೂರ್ವಕವಾಗಿ ಸಣು ಮಾಡಿ "ನೀವ್ಯಾರವ್ವಾ ತಾಂಯಂದಿರಾ.. ನಾಯಿರೂಪದಲ್ಲಿದ್ದು ತನಗ್ಯಾಕ ಸೇವೆ ಮಾಡುತಲಿದ್ದಿರಿ..?" ಯಂದು ಕೇಳಲಾಗಿ ಅವರು "ವತ್ಸೆ.." ಯಂದು ತಮ್ಮ ಪರಿಚಯ ಮತ್ತು ವುದ್ದೇಶ ಹೇಳಿಕೊಂಡರಂತೆ.. ತರುವಾಯು "ಜಗಲೂರೆವ್ವ ನೀನು ಯೀ ಸೂರಯ್ಯನನ್ನು ಕರಕೊಂಡು ತವರೂರಾದ ಮಿಂಚೇರಿಗೆ ಹೋರಟುಹೋಗು.. ನಿನಗೆ ಮಂಗಳವಾಗಲಿ" ಯಂದು ಆಸೀರ್ವಾದ ಮಾಡಿ ಆಕಾಸದ ಕಡೆಗೆ ಮಾಯವಾದರಂತೆ.. ಆಗಲೀರಿ ತಾಯಂದಿರಾ ನಿಮ್ಮ ಯಿಚ್ಛಾದಾಂಗ ಆಗಲಿ "ಯಂದು ಸೂರಯ್ಯನ ಬೆನ್ನ ಮ್ಯಾಲ ಯಿರಾಜಮಾನಳಾದೊಡನೆ ನಾಗಾಲೋಟದಿಂದ....

* * * *

ಅತ್ತ ಮನ್ರೋನು ಗ್ರಂಥ ರಚನೆ ಮಾಡುತ್ತ ಕಡಪಾದ ಬಂಗಲೆಯೊಳಗೆ ಬಹಳ ಹೊತ್ತು ಯಿರಲಿಕ್ಕೆ ಆಗಲಿಲ್ಲ.. ಕುಂಪಣಿ ಸರಕಾರ ವಪ್ಪಲಿ, ಬಿಡಲಿ ತಾನು ಮಾತ್ರಸದರಿ ರೂರಲ್ಲಿಂಡಿಯಾದ ಪ್ರಜೆಗಳೊಳಗೆ ಆತುಮಾಭಿಮಾನ ಮೂಡಿಸುವ ಕಾರ್ಯಗಳನ್ನು ಕೈಕೊಳ್ಳಬೇಕು.. ಭೂತಕಾಲದಿಂದ ಯತ್ತಬೇಕು, ವರ್ತಮಾನದ ಅರುವು ಮೂಡಿಸಬೇಕು. ಯಿದಕ್ಕೆ ಅವರಿಗೆ ಅವರ ಮಾತ್ರುಭಾಷೆಯೊಳಗ ಶಿಕ್ಷಣ ಕೊಡಿಸುವುದೇ ಮದ್ದು? ಅವರ ಹೊಟ್ಟೆ, ಬಟ್ಟೆ, ನೆರಳು, ಅಬ್ಬಬ್ಬಾ! ಯಷ್ಟೊಂದು ಜವಾಬುದಾರಿಗಳೇರಿವೆ ತನ್ನ ಹೆಗಲ ಮ್ಯಾಲ.. ಯಿಂಥ ವುಸಾಬರಿಗಳ ಹತ್ತು ಹಲವು ಸುಂಟರಗಾಳಿಗಳನ್ನು ಮನದಲ್ಲಿ ಯಿಟ್ಟುಕೊಂಡಿರುವ ತಾನು ಗ್ರಂಥ ರಚನೆಯಲ್ಲಿ ಕಾಲಕ್ಷೇಪ ಮಾಡಲಕಾದೀತಾ? ಕುದುರೆಯೇರಿ ಸಂಬಂಧಿತ ಅಧಿಕಾರಿ, ಸಿಪಾಯಿಗಳನ್ನು ಯಡಬಲಕ ಯಿಟ್ಟುಕೊಂಡು ಕಡಪಾ ಬಿಟ್ಟು ವಾರ ದಿನಮಾನ ಆಗಿರುವುದು. ಆ ದಿವಸಗಳಲ್ಲಾತನು ಸಂದರ್ಸನ ಮಾಡಿದ್ದು ಹತ್ತು ಹಲವು ಮೂರುಗಳನ್ನು.. ಅಗ್ರಹಾರಗಳನ್ನು.. ಸಾಲೆಯನ್ಯಾಕೆ ಕಲಿಯಬೇಕೆಂಬುತ್ತಾರೆ ಮಂದಿ.. ಯಿಂಗ್ಲೀಷನ್ಯಾಕೆ ಕಲಿಯಬೇಕೆಂಬುತ್ತಾರೆ ಅಗ್ರಹಾರದ ಜನ.. ಸಾಲೆಗೆ ವಬ್ಬರೂ ಬರುತಾಯಿಲ್ಲ.. ಯಿಂಗ್ಲೀಷು ಕಲಿತರ ತಮ್ಮ ಕುಲಕ್ಕ ಮಯ್ಲಿಗೆ ತಗುಲತಯ್ತೆ.. ಕಲಿತರೆ ತಾವು ಯೇದೋಪನಿಷತ್ತುಗಳನ್ನು.. ಬಾಯಿಪಾಠ ಮಾಡಿದರೆ ಅಮರಕೋಸದ ಸ್ಲೋಕಗಳನ್ನು.. ಯೇನು ಹೇಳಬೇಕು ಯಿವರಿಗೆ? ಹೆಂಗ ವರ್ತಮಾನವನ್ನು ಪರಿಚಯ ಮಾಡಿಕೊಡುವುದು ಯಿವರಿಗೆ..? ಮನ್ರೋ ಜಾಗದಲ್ಲಿ ಯಿನ್ನೊಬ್ಬರಿದ್ದಿದ್ದಲ್ಲಿ ತಲೆ ಬ್ರೆಷ್ಟೆದ್ದು ಅದ್ವಾನವಾಗದೆ ಯಿರುತ್ತಿರಲಿಲ್ಲ.. ಆದರೆ ಮನ್ರೋ ಸಾಹೇಬ ಸಂಯಮದ ಸಾಕಾರ ಮೂರ್ತಿಯು.. ಯಾವ ಸಮಸ್ಯೆಗೂ ಬೇಸರ ಮಾಡಿಕೊಳ್ಳಲಾರನು.. ಹಿಂಗಲ್ಲರಯ್ಯಾ.. ಹಂಗೆ ಯಂದು ತಿಳಿವಳಿಕೆ ನೀಡುವನು.. ಕಾಲ ಬದಲಾದಂಗ ಸಮಾಜಮೂಬದಲಾಗಬೇಕು ಅನ್ನುವನು, ದುಡಿದುಂಬುವವರಿಗೆ ಅವರ ಮಾತ್ರುಭಾಷೆಯನ್ನೂ, ಅಗ್ರಹಾರದವರಿಗೆ ಯಿಂಗ್ಲೀಷು ಭಾಷೆ ಕಲಿಯಿರಯ್ಯಾಯಂದು ಹೇಳುವನು. ಸಮುಸ್ಕೃತದೊಳಗುಂಟ ಕನರಯ್ಯಾ ಯಿಂಗ್ಲೀಷು.. ಯಿಂಗ್ಲೀಷು ಭಾಷೆಯೊಳಗುಂಟು ಕನರಯ್ಯಾ ಸಮುಸ್ಕೃತವು.. ಯಿಂಗ್ಲೀಷು ಬಲ್ಲವರಾದ ನಾವು, ಸಮುಸ್ಕೃತ ಬಲ್ಲವರಾದ ನೀವು ಅಣ್ಣತಮ್ಮಂದಿರಯ್ಯಾ.. ಯಿಂಗ್ಲೀಷು

ಕಲತುಕೊಂಡು ಸಮುದ್ರಯಾನ ಮಾಡಿ ಯಿಲ್ಲಿಗೆ ನಾವೇ ಬಂದಿರುವಾಗ ನೀವ್ಯಾಕ ಯಿದನು ಕಲಿತು ಸಮಂದರ ಯಾನ ಮಾಡಬಾರದು ಕನರಯ್ಯಾ.. ಯಂದವಯ್ಯ ತಾನು ಹೋದಲ್ಲಿ, ಬಂದಲ್ಲಿ ಮನವರಿಕೆ ಮಾಡಲಾರಂಭಿಸಿದಂದಿನಿಂದ....

ಸದರಿ ಪ್ರಾಂತದ ಅಗ್ರಹಾರಗಳನ್ನು ಕುಂಪಣಿ ಸರಕಾರವು ಯಿಂಗ್ಲೀಷು ಕಲಿಸಲಕ ದತ್ತಕ ತಗೊಂತು. ದೇವುಳಗಳ ಸುತಮುತ್ತ, ಅಸುವತ್ಥ ಮರಗಳ ಮಯ್ಯಿ ಮ್ಯಾಲೆಲ್ಲ ಹ್ಯಾಟು ಬೂಟು ಧರಿಸಿರುವವರ ತಯ್ಲವರ್ಣ ಪಟಗಳನ್ನು ತೂಗುಬಿಡಲಾಯಿತು. ಯಿಂಗ್ಲೀಷ್ ಭಾಷೆ ಕಲಿಯಿರಿ.. ಪಗಾರ ಯಣಕೆ ಮಾಡಿಕೊಳ್ಳಿರಿ.. ಯಿಂಗ್ಲೀಷ್ ಕಲಿಯಿರಿ ಹಡಗನ್ನು ಹತ್ತಿರಿ.. ಯಿಂಗ್ಲೀಷು ಯಂಬ ಕನ್ನಡಕ ಧರಿಸಿರಿ.. ಯಿಶಾಲ ಪ್ರಪಂಚ ನೋಡಿರಿ ಯಂಬ ಪ್ರಚಾರ ವಾಕ್ಯಗಳನ್ನು ವಯ್ದಿಕರ, ಪುರೋಹಿತರ, ಜೋಯಿಸರ, ಯೇದ ಪಾರಂಗತರ ನಿವಾಸಗಳ ಗೋಡೆ ಗೋಡೆ ಮ್ಯಾಲ.. ತುಳುಸಿಕಟ್ಟೆಗಳ ಮ್ಯಾಲ ರಾತಿರೋ ರಾತಿರಿ ಬರೆಯಿಸಲಾಯಿತು.. ಹ್ಯಾಟು, ಬೂಟು, ಸೂಟು, ಟಯ್ಯಿಗಳನು ಕಡಿಮೆ ಬೆಲೆಗೆ ಮಾರಾಟ ಮಾಡುವ ಅಂಗಡಿಗಳನ್ನು ಪ್ರತಿಯೊಂದು ಅಗ್ರಹಾರದಲ್ಲಿ ತೆರೆಯಲಾಯಿತು. ಸರಕಾರದ ಯೀ ಕ್ರಮದಿಂದಾಗಿ ಅಗ್ರಹಾರಗಳು ರಾಮ ರಾಮ ಯಂದು ತಲೆ ಮ್ಯಾಲ ಕಯ್ನ ಯಿಟ್ಟುಕೊಂಡವು.. ನಾರಾಯಣಽಽ ಯನ್ನುತ್ತ ನಿಟ್ಟುಸುರು ಬಿಡಲಾರಂಭಿಸಿದವು..ಕನ್ನಡ, ತೆಲುಗು, ಅರವಗಳಂಥ ಭಾಷೆಗಳನ್ನು ಕಲಿತರೇನೆ ನರಕ ಪ್ರಾಪ್ತಿಯಾಗುತ್ತದೆ.. ಯಿನ್ನು ಯಿಂಗ್ಲೀಷಿನಂಥ ಯಿಲಾಯಿತಿ ಭಾಷೆಯನ್ನು ಕಲಿತರೆ ಯಂಥ ನರಕ ಪ್ರಾಪ್ತವಾಗುವುದೋ ಯಂದು ಯಿಲಯಿಲಾಂತ ವದ್ದಾಡ ಲಾರಂಭಿಸಿದವು... ಗರುಡ, ಗಂಧವತ, ದಧೀಚ, ಧ್ಯಾನಕಾಷ«, ಬಾಲಧಿ, ಬಡಬಾಗ್ನಿ, ಪ್ರಭಾಸ, ಮೋಕ್ಷ ಯಂಬಿವೇ ಮೊದಲಾದ ಅಗ್ರಹಾರಗಳು, ಸರಕಾರದ ಯೀ ಕ್ರುತ್ಯ ಅನಯ್ತಿಕ ಯಂದೂ, ಹಿಂದೂ ಧರುಮದ ವ್ಯಾಲ ನಡೆಸಲಿರುವ ಪ್ರಹಾರ ಯಂದೂ ಬಣ್ಣಿಸಲಾರಂಭಿಸಿದವು.. ಅಣಿ ಮಾಂಡವ್ಯಮಾಚಾರ್ಯರ ನೇತ್ರುತ್ವದಲ್ಲಿ ಯುಯುಧನಮಾಚಾರ್ಯ, ರಾಮಹ್ರದಮಾಚಾರ್ಯ, ರಾಷ್ಟ್ರವರ್ಧನಮಾಚಾರ್ಯ, ಲೋಮಶಾಚಾರ್ಯ, ಭಾರದ್ವಾಜಮಾಚಾರ್ಯರೇ ಮೊದಲಾದ ಯಿಭಿನ್ನ ಅಗ್ರಹಾರಗಳ ಮುಖ್ಯಸ್ಥರು ವಗ್ಗೂಡಿದರು. ಅವರೆಲ್ಲ ಸಾಮಾನ್ಯರಾಗಿರಲಿಲ್ಲ.. ತಮ ತಮ್ಮ ನಾಲಗೆಗಳ ಮ್ಯಾಲ ಯೇದೋಪನಿಷತ್ ಪುರಾಣಗಳ ಭಂಡಾರವನ್ನೇ ಯಿಟ್ಟುಕೊಂಡಿರುವಂಥವರು.. ಅವರು ಯೇದೋಪನಿಷತ್ತು, ಸ್ಮೃತಿಗಳಲ್ಲಿ

ಯೇನೇನು ಹೇಳಲ್ಪಟ್ಟಿರುವುದೋ ಅದರಂತೆ ಚಾಚೂ ತಪ್ಪದೆ ಜೀವನವನ್ನು ನಡೆಸುತ್ತಿರುವಂಥವರು.. ಪ್ರತಿವಂದಕು ನಕ್ಷತ್ರಗಳನ್ನವಲಂಬಿಸಿ ರುವಂಥವರು. ಗ್ರುಹಸ್ಥಾಶ್ರಮ, ವಾನಪ್ರಸ್ಥಾಶ್ರಮದ ಯಿಧಿ ಯಿಧಾನಗಳನ್ನು ತೂಚಾ ತಪ್ಪದೆ ಪಾಲಿಸುತ್ತಿರುವಂಥವರು.. ಅಂಥವರೆಲ್ಲ ತಮ್ಮ ಮುಖಂಡರನ್ನಾಗಿ ಆಯ್ಕೆ ಮಾಡಿರುವ ಅಣಿಮಾಂಡವ್ಯಮಾಚಾರ್ಯರರು ಸಾಮಾನ್ಯರಲ್ಲ.. ಪವುರಾಣಿಕ ಕಾಲದಲ್ಲಿ ವಸಿಷ« ಯಿಸುವಾಮಿತ್ರರಿಗೆ ಕ್ರುತಯುಗದಲ್ಲಿ ಯಾವ ಸ್ಥಾನಮಾನ ಯಿದ್ದುವೋ, ಯೀ ಕಲಿಯುಗದಲ್ಲೂ ಅವರಿಗೆ ಅವೇ ಸ್ಥಾನಮಾನಗಳಿರುವವು.. ಅವರ ಪೂರುವಿಕರು ಕದಂಬ ಸಾಮ್ರಾಜ್ಯ ಪ್ರತಿಷಾ«ಪನಾ ಯಿಷಯದಲ್ಲಿ ಮಯೂರವರ್ಮನಿಗೆ ಸಲಹೆಗಾರರಾಗಿದ್ದರಂತೆ.. ಯಿಜಯನಗರ ಸಂಸ್ಥಾಪನಾಚಾರ್ಯ ಶ್ರೀಮದ್ ಯಿದ್ಯಾರಣ್ಯ ಮಹಾಮುನಿಗಳಿಗೂ ಅತ್ಯಂತ ನಿಕಟರಾಗಿದ್ದರಂತೆ.. ಚತುರ್ಯೇದಗಳನ್ನೂ, ತ್ರಯೋದಶ ವುಪನಿಷತ್ತುಗಳನ್ನೂ, ಅಷ್ಟಾದಶ ಪುರಾಣಗಳನ್ನೂ, ಮನುಸ್ಮೃತಿ, ಯಾಗ್ನಾವಲ್ಕ ಸ್ಮೃತಿಗಳನ್ನೂ ಜೀರ್ಣ ಮಾಡಿಕೊಂಡಿರುವಂತೆ, ಚಾಣಕ್ಯನ ರಾಜನೀತಿಶಾಸ್ತ್ರವು ಅವರಿಗೆ ಬಾಯಿಪಾಠವಂತೆ.. ಜೋತಿಷ್ಯ ಶಾಸ್ತ್ರವನ್ನು ಕರಗತ ಮಾಡಿಕೊಂಡಿರುವರಂತೆ, ವುಪಾಸಕರಾದ ಅವರು ತಮ್ಮ ಭ್ರೂಮಧ್ಯೆ ಅಗ್ನಿನೇತ್ರವನ್ನು ಜೋಪಾನದಿಂದ ಯಿಟ್ಟುಕೊಂಡಿರುವರಂತೆ.. ಅವರು ಶಾಪಕೊಡಬಲ್ಲರಂತೆ, ವರಗಳನ್ನೂ ಕರುಣಿಸಬಲ್ಲರಂತೆ.. ಅಂಥವರು ಅಗ್ರಹಾರಗಳ ಮೂಲ ಸ್ವರೂಪದ ರಕ್ಷಣೆಗೆ ಕಂಕಣಬದ್ಧರಾಗಿರುವರೆಂದರೆ ಸಾಮಾನ್ಯ ಸಂಗತಿಯೇ?

ಸದರಿ ಸೀಮೆಯ ಫಲಾನ ಅಗ್ರಹಾರ ಗಳೊಂದೇ ಅಲ್ಲದೆ, ಶ್ರೀಶಯ್ಲ, ತಿರುಪತಿ, ಚಂದ್ರಗಿರಿ ಪ್ರಾಂತ್ಯದ ಅಗ್ರಹಾರಗಳನ್ನೂ ಸಂಘಟನೆಯ ತೆಕ್ಕೆಗೆ ತೆಗೆದುಕೊಳ್ಳಲಾಯಿತು. ಕೇವಲ ವಾಕ್ ಶಕ್ತಿಯಿಂದ ಸಾಮ್ರಾಜ್ಯಗಳನ್ನೇ ಬದಲಿಸಿರುವ.. ಪತನಗೊಳಿಸಿರುವ ತಮಗೆ ಯೀ ಯಕಃಶ್ಚಿತ್ ಮನ್ರೋನನ್ನು ನಿರ್ಮೂಲನ ಮಾಡುವುದು ಯಾವ ಮಹಾ!.. ಆದರೆ ತಮ್ಮ ಯೀ ಸಂಘಟನೆಯ ಸಂಗತಿ ಮುಖ್ಯವಾಗಿ ತಮ್ಮ ಅಗ್ರಹಾರಗಳ ಸ್ತ್ರೀಯರಿಗಾಲೀ, ಬ್ರಾಹ್ಮಣೇತರ ರಿಗಾಲೀ ತಿಳಿಯದಂತೆ ಯಚ್ಚರ ವಹಿಸಬೇಕು. ಗೋಪ್ಯಾತಿಗೋಪ್ಯವಾಗಿ ಫಲಾನ ಯಿಂಥಿಂಥ ಅಗ್ರಹಾರಗಳ, ಫಲಾನ ಯಿಂಥಿಂಥ ಮುಖಂಡರು ಫಲಾನ ಯಿಂಥ ಕಡೆ ಅಣಿ ಮಾಂಡವ್ಯಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಮಂತ್ರಾಲೋಚನೆ ಸಭೆಗೆ ಹಾಜರಾಗಬೇಕು ಯಂಬ ಸಂಸ್ಕೃತ ವಕ್ಕಣಿಕೆಯ ಸುತ್ತೋಲೆಯನ್ನು

ಕಳಿಸಲಾಯಿತೆಂಬಲ್ಲಿಗೆ ಸಿವಸಂಕರ ಮಾದೇವss..

ಅತ್ತ ಕುಂಚೂರು ಬಂಧೀಖಾನೆಯಲ್ಲಿದ್ದ ಭರಮನಗವುಡನನ್ನು ಕೀ. ಶೇ. ಯಿಮ್ಮಡಿ ಸೋಮಶೇಖರ ನಾಯಕನ ಫವುಜು ಅಪಹರಣ ಮಾಡಿಕೊಂಡ ಹೋದಲಾಗಾಯ್ತು ಕುಂಪಣಿ ಸರಕಾರದ ಅಧಿಕಾರಿ ಸ್ಟೂವರ್ಟ ದಿನವಂದಕ್ಕೆ ಮೂರು ತಾಸು ನಿದ್ದೆ ಮಾಡಿದರ ಹೆಚ್ಚು.. ಯರಡು ತಾಸು ಮಾಡಿದರ ಕಡಿಮೆ.. ಹಂಪರಸಪ್ಪಯ್ಯ "ಯುವರ್ ಮ್ಯಾಜೆಸ್ಟೀss" ಯಂಬ ಅಮೂಲ್ಯ ಯಿಶೇಷಣದೊಂದಿಗೆ ಗವುಡನನ್ನು ಗುಟ್ಟಾಗಿ ಕಗ್ಗೊಲೆ ಮಾಡಿಸಬೇಕೆಂಬ ದುಬಾರಿ ಸಲಹೆಯನ್ನು ನೀಡಿರದೆಯಿರಲಿಲ್ಲ.. ವಂದು ಕಾಲದಲ್ಲಿ ತನ್ನ ದಿವಾನಗಿರಿ ಪತನವಾಗಲು ಗವುಡ ಪ್ರಮುಖ ಪಾತ್ರವಹಿಸಿದ್ದ ಸಂಗತಿಯನ್ನು ತಾನು ಮರೆತಿರದಿದ್ದುದೇ ಅಂಥ ಕಠೋರ ಸಲಹೆ ನೀಡಲು ಕಾರಣ. ತಾಯ್ನಾಡನ್ನು ಅಪಾರವಾಗಿ ಪ್ರೀತಿಸುತ್ತಿರುವವನೂ.. ಅಭಿಮಾನ ಧನನೂ.. ಬ್ರಹ್ಮಹತ್ಯಾದೋಷವನ್ನು ಸಹಿಸಬಲ್ಲಂಥವನೂ ಆದ ಭರಮನಗವುಡ ಬದುಕಿದ್ದಲ್ಲಿ ವಂದಲ್ಲಾ ವಂದು ದಿವಸ ತನ್ನ ಪ್ರಾಣಕ್ಕೆ ಸಂಚಕಾರ ತರುವನೆಂಬ ಜೀವಭಯಮೂಯಿನ್ನೊಂದು ಕಾರಣ.. ಮೂರನೆ ಕಾರಣ ಯಂದರೆ ತನ್ನ ಜಾತಕದಲ್ಲಿ ದುರ್ಮರಣ ಯಂಬ ದಾಖಲೆಯಿರುವುದು.. ಸ್ಟೂವರ್ಟನಿಗೂ ಆ ಸಲಹೆ ಪಸಂದೆನ್ನಿಸದೆಯಿರಲಿಲ್ಲ.. ಮೀನುಗಳನ್ನು ಹಿಡಿಯಲು ಮಳೆ ಹುಳುಗಳ ಸಹಾಯ ಬೇಕಿರುವಂತೆ ಸರಕಾರೀ ಯಿರೋಧಿಗಳ ಹುಟ್ಟಡಗಿಸಲು ಗವುಡ ಕೆಲಕಾಲ ಜೀವಂತವಾಗಿರಬೇಕೆಂದು ತಾನು ಬಯಸಿದ್ದ.. ಆದರೆ!....

ತಿಂಗಳು ತಿಂಗಳಿಗೆ ಪಗಾರ ಯಣಿಸಿಕೊಳ್ಳುವ ಸಿಪಾಯಿಗಳಿಗೆ ಬದಲಾಗಿ ಬಿಜಾಪುರ ಸೀಮೆ ಝಳಕಿ ಕಡೇಲಿಂದ ನೂರಾರು ಮಂದಿ ನುರಿತ ಪಿಂಡಾರಿ ಕೊಲೆಗಾರರನ್ನು ಗುಟ್ಟಾಗಿ ಕರೆಯಿಸಿಕೊಂಡ.. ಅವರಿಗೆ ಸದರಿ ಸೀಮೆಯೊಳಗ ನೀವೇನು ಮಾಡಿದರೂ ಮಾಫಿ ಯಂದು ಹೇಳಿದ.. ತನಗೆ ಬೇಕಾಗಿರುವುದೇನಪಾ ಅಂದರ ಭರಮನಗವುಡ ತಲೆ ಮಾತ್ರಯಂದು ಹೇಳಿದ.. ತಿಂಗಳೊಪ್ಪತ್ತೊಳಗ ಗವುಡನ ರುಂಡವನ್ನು ತಾವು ತರತೀವಂತ ಹೇಳಿ ಹೊಂಟ ಅವರು ಅಮರದೇವರ ಗುಡ್ಡದ ಮ್ಯಾಲ ಸಭೆ ಸೇರಿದರು. ನೂರಾರು ಕೊಲೆಗಳ ಅನುಭವ ಯಿದ್ದ ಪುಳೆಯು "ನೋಡಿರಯ್ಯಾ.. ಸಾಹೇಬನ ಹುಕುಮನ್ನು ಯೀ ಕೂಡಲೆ ಜಾರಿ ತರೋದು ಬ್ಯಾಡ.. ಮೊದಲು ಹಳ್ಳಿಪಳ್ಳಿಗಳನ್ನು ಸುಲಿಗೆ ಮಾಡೋಣ.. ಸುಖ ಅನುಭೋಸೋಣ.. ಆಮ್ಯಾಲ ಗವುಡನನ್ನು ಹುಡುಕುವ

ಕೆಲಸಕ್ಕ ಕಯ್ಯನ ಹಾಕಿದರಾಯಿತು" ಯಂದು ಹೇಳಿ ವಪ್ಪಿಸಿದನು. ಲೂಟಿ ಮಾಡಿದ್ದನ್ನೆಲ್ಲ ತಂದು ಯೀದೇ ಗುಡ್ಡದ ಗವಿಯೊಳಗ ಗುಡ್ಡೆಹಾಕಿಡೋದು, ಕೊನೀಕ ಯಲ್ಲರು ಸರಿಸಮನಾಗಿ ಹಂಚಿಕೊಳ್ಳಬೇಕೆಂದು ನಿರ್ಧರಿಸಲಾಯಿತು. ಆ ನೂರು ಮಂದೀನು ಹತ್ತತ್ತು ಮಂದಿಯಂತೆ ಹತ್ತು ಭಾಗಗಳಾಗಿ ಯಿಂಗಡಣೆಗೊಂಡು ಹತ್ತೂ ದಿಕ್ಕಿಗೆ ಚದುರಿದರು.

ಮುಂದೆ ಅವರ ದವುರ್ಜನ್ಯಕ್ಕೆ ರೋಸಿಕೊಂಡುಬಿಟ್ಟಿತು ವಂದೊಂದು ಹಳ್ಳಿಯು.. ಹೆಂಗೋ ಪತ್ತೆಮಾಡಿ ಯಿಮ್ಮಡಿ ಸೋಮಸೇಖರ ಘವುಜಿನ ಸದಸ್ಯರನ್ನು ಕಂಡು ದೂರು ಕೊಡಲಾರಂಭಿಸಿದರು. ಸದಸ್ಯರು ಗವುಡನಿಗೆ ಫಲಾನ ಮಾಹಿತಿ ನೀಡದೆಯಿರಲಿಲ್ಲ.. ಕ್ರುದ್ಧನಾಗಿ ಗವುಡನು ಪುಳೆ ಕಡೆಯವರನ್ನು ಕಂಡಲ್ಲಿ ಕಗ್ಗೊಲೆ ಮಾಡಬೇಕೆಂದು ಆಗ್ನೆ ಮಾಡದೆ ಯಿರಲಿಲ್ಲ.. ಬೋಣಿಗೆ ಯಂಬಂತೆ ವಟ್ಟಮ್ಮನಹಳ್ಳಿ, ಅರಸನಾಳು ಗ್ರಾಮಗಳ ಸರಹದ್ದಿನಲ್ಲಿ ಪುಳೆ ಕಡೆಯ ನಾಲ್ಕು ಮಂದಿ ನಿಗೂಢವಾಗಿ ಕಗ್ಗೊಲೆಗೀಡಾದರು.. ಯೋಚನೆ ಮಾಡಿದ ಗವುಡನು "ಯೇನಯ್ಯಾ ಸ್ವೂವರ್ರೂ.. ನೀನು ಮಾಡುತ್ತಿರುವುದು ಸರಿ ಅಯ್ತಾ" ಯಂಬ ವಕ್ಕಣೆಯುಳ್ಳ ಜಾಬನ್ನು ಬರೆಯಿಸಿ ನಂಬುಗಸ್ಥನ ಕಯ್ಯೊಳಗ ನೀಡಿದನು. ಆಗ ಆ ನಂಬುಗಸ್ಥನು ಮಾರುಯೇಷದಲ್ಲಿ ಹರಪನಹಳ್ಳಿಯನ್ನು ಸೇರಿಕೊಂಡು ಹಂಪರಸಪ್ಪಯ್ಯನಿದ್ದ ಮನೆಯೊಳಗ ಕಿಟಕಿ ಮೂಲಕ ಯಸೆದನು. ಅಲ್ಲೇ ವೈದವ್ಯ ಪಟ್ಟಯೇರಲಕ ಬೇಕಿದ್ದ ಸಾಮಾಗ್ರಿಗಳನ್ನು ಮುಂಜಾಗ್ರತೆ ಸಲುವಾಗಿ ಜೋಡಿಸಿಟ್ಟುಕೊಳ್ಳುತಲಿದ್ದ.. ಯಾವ್ಯಾವ ಕ್ರಮಗಳನ್ನು ಅನುಸರಿಸಬೇಕೆಂಬುದರ ಕುರಿತು ತನ್ನ ಪಾಡಿಗೆ ತಾನು ತಾಲೀಮು ನಡೆಸುತಲಿದ್ದ.. ಶ್ರೀಮತಿ ಭುವ್ವಮ್ಮ ಟಪ್‌ಯಂಬ ಸಬುಧ ಕಿವಿಗೆ ಬಿದ್ದೊಡನೆ ತಿರುಗಿ ನೋಡಲಲ್ಲಿ ಲಕೋಟೆ ಕಾಣಿಸಿತು.. ಅಪಸಗುನಗಳ ಫಲಾನುಭವಿಕೆ ಮಾಡುತ ಲಕೋಟೆಯ ಕಡೆ ಕಯ್ನ ಚಾಚಿದಳು.. ಬಿಚ್ಚಿದಳು ರಾಮ ನಾಮ ಜಪಿಸುತ್ತ.. ಮೋದಲಾರಂಭಿಸಿದಳು ನಾರಾಯಣ ನಾಮ ಜಪಿಸುತ್ತ... "ಯಿಲ್ಲದಿದ್ದಲ್ಲಿ ಕಗ್ಗೊಲೆಗೆ ಸಿದ್ಧವಾಗಿರತಕ್ಕದ್ದು.." ಯಂಬೊಂದು ವಾಕ್ಯ ವೋದಿದೊಡನೆ.. 'ಅಯ್ಯೋss..' ಯಂದು ಚೀರಿದೊಡನೆ....

ಗಾಯಿತ್ರಿಜಪಕ್ಕೆ ಬದಲಾಗಿ ಮ್ರುತ್ಯುಂಜಯ ಜಪ ಮಾಡುತಲಿದ್ದ ಹಂಪರಸಯ್ಯ ಬುವ್ವಾs ಯಂದೊರಲುತ್ತ ಮೋಡಿ ಬಂದರು.. ವುತ್ತರೀಯದಿಂದ ಪತ್ನಿಯ ಮುಖದ ಬೆವರೊರೆಸುತ್ತ ಜಾಬು ಮೋದಿದರು.. ಜಂಘಾಬಲ

ವುಡುಗಿದರು.. ಸ್ಟೂವರ್ಟನು ಮಾತ್ರಕೊಲೆಯಾದಲ್ಲಿ ಯದುರು ಮುಖದ ಆಂಜನೇಯ ಸ್ವಾಮಿಗೆ ಬೆಣ್ಣೆಯಲಂಕಾರ ಮಾಡಿಸುವುದಾಗಿ ಹರಕೆ ಹೊತ್ತರೆಂಬಲ್ಲಿಗೆ ಸಿವಸಂಕರ ಮಾದೇವಾss...

ಅತ್ತ ಕೂಡ್ಲಿಗಿ ಪಟ್ಟಣದೊಳಗ...

ಮುರಾರಿಗೆ ಗಡಿಪಾರು ಶಿಕ್ಷೆ ಯಿಧಿಸಿದ ರಾಯನು ತಲೆನೋವ ಶಮನಕ್ಕಾಗಿ ಕಷಾಯ ಸೇವಿಸಿದನು. ಅಶಾಂತಿ ಶಮನಕ್ಕಾಗಿ ಹೆಚ್ಚುವರಿ ಸಂಧ್ಯಾವಂದನೆಯನ್ನೂ ಮಾಡಿದನು. ಆದರೆ ಸುಖ ಶಾಂತಿ ನಿರೀಕ್ಷಿತ ಪ್ರಮಾಣದಲ್ಲಿ ಲಭ್ಯವಾಗಲಿಲ್ಲ.. ಮುಖ್ಯವಾಗಿ ತಾಯಕ್ಕಳಿಗೂ, ಆಕೆಯ ಮಗಳಿಗೂ ಸೂಕ್ತ ಭದ್ರತಾ ಯೇರುಪಾಡು ಮಾಡಬೇಕೆಂದು ನಿರ್ಧರಿಸಿದ.. ತನ್ನ ಕರ್ತವ್ಯವೆಂದೂ ಬಗೆದ.. ಸಶಸ್ತ್ರಸಿಪಾಯಿಗಳೊಂದಿಗೆ ತಾನೀಗಲೇ ಅಲ್ಲಿಗೆ ಹೋಗಬೇಕು.. ಆಕೆಯ ಧಯರ‍್ಯ ಸಾಹಸವನ್ನು ಅಭಿನಂದಿಸಬೇಕು.. ಯಿಷ್ಟು ದಿವಸಗಳ ಕಾಲ ಯಲ್ಲಿಗೆ ಯಾವ ಕಾರಣಕ್ಕೆ ಹೋಗಿದ್ದಳೆಂಬುದನ್ನು ಗುಟ್ಟಾಗಿ ತಿಳಿದುಕೊಳ್ಳಬೇಕು? ಯಂಬಿವೇ ಮೊದಲಾದ ವುದ್ದೇಶಗಳನಿಟುಕೊಂಡು ರಾಯನು ಯಿನ್ನೇನು ಮನೆ ಬಿಡಬೇಕೆನುವಷ್ಟರೊಳಗ ಆತನ ಹೆಂಡತಿ ಛಟಾರಂತ ಛೀರಿಕೊಂಡು ಬಿಡುವುದೇನು? ಅದೇ ಸಮಯಕ್ಕ ಸರಿಯಾಗಿ....

ಅತ್ತ ಬಂಗಲೆಯೊಳಗ ಜೆನ್ನಿಫರಮ್ಮ ತಾನಿಷ್ಟು ದಿನಮಾನ ರಚನೆಯಲ್ಲಿ ಮುಳುಗಿದ್ದು ಪೂರ್ಣಗೊಂಡ ಕಲಾಕ್ರುತಿಗೆ 'ತಾಯಿ' ಯಂದು ನಾಮಕರಣ ಮಾಡಿದ ಮರುಗಳಿಗೆಯಲ್ಲೇ ವಾಸ್ತವಕ್ಕೆ ಮರಳಿ ಯೇಂಜಲ್ ಯಂದು ವುದ್ಗಾರ ತೆಗೆದಳು.

ಅತ್ತ ತಿಲ್ಲಾನರವರ ಮನೆಯೊಳಗ ತಾಯಕ್ಕ ಮುರಾರಿ ಯಂಬ ಶನಿ ತೊಲಗಿತೆಂಬ ಸುದ್ದಿ ತಿಳಿದೊಡನೆ ಕೊಬ್ಬರಿ ಚಿನ್ನಿ ಯಂಬ ಯಿಶೇಷ ತಿನಿಸನ್ನು ತನ್ನ ಕಯ್ಯಾರ ತನ್ನ ಸುಪುತ್ರಿಯ ಹೊಂದಾವರೆ ಯಂಥ ಬಾಯೊಳಗ ಯಿಟ್ಟಳಲ್ಲದೆ ಆ ನಾಲ್ಕು ಮಂದಿ ದಾಂಡಿಗರಿಗೆ ಪುಷ್ಕಳವಾಗಿ ನೀಡಿದಳು. ಅಂತೂ ತಮ್ಮ ಮನೆಗೆ ಸರಕಾರಿ ಸ್ಥಾನಮಾನ ಲಭಿಸಲು ಕಾರಣೀಭೂತನಾಗಿರುವ ರಾಯನನ್ನು ವಂದು ಸಲ ನೆನಪಿಸಿಕೊಂಡಳು.. ಆತನ ನಂದಗೋಕುಲ ಸದ್ರುಶ ರೂಪವು ತನ್ನೆದೆಯೊಳಗ ಯಿನ್ನೇನು ಬೆಳೆಯಬೇಕೆನ್ನುವಷ್ಟರಲ್ಲಿ ನೀಲಕಂಠಪ್ಪನನ್ನು ಕರೆದುಕೊಂಡು ಬರಲಕ ಯಿಶೇಷ ಧೂತನನ್ನು ಬಣಜಿಗರ ಮೋಣಿಗೆ ಕಳಿಸಿದಳು.. ಯಿಶೇಷ ಧೂತನ ಕರೆಗೆ ಮನ್ನಣೆ ಕೊಡಲು ನೀಲಕಂಠಪ್ಪ

ಮೊದಮೊದಲ ಮಿಜಿಮಿಜಿ ಮಾಡಿದ.. ಗ್ರುಹಸ್ಥಾಶ್ರಮ ಧರುಮದ ಕಟ್ಟುಪಾಡುಗಳನ್ನು ಮತ ಮತ್ತೆ ನೆನಪು ಮಾಡಿಕೊಟ್ಟ ತನ್ನ ಹೆಂಡತಿಗೆ ತಿಲ್ಲಾನ ನಿವಾಸದ ಸಹವಾಸದಿಂದಾಗಿಯೇ ತನಗೆ ಸಾಮಾಜಿಕ ಸ್ಥಾನಮಾನ ದ್ವಿಗುಣಗೊಂಡಿರುವುದೆಂದೂ.. ಆಕೆಯೊಂದಿಗೆ ತನ್ನದು ಕೇವಲ ಭಾವನಾತುಮಕ ಸಂಬಂಧವೆಂದೂ ಹೇಳಿ ವಪ್ಪಿಸದೆ ಯಿರಲಿಲ್ಲ.. ಧೂತನ ಮೋಹೆಗೂ ಮೀರಿ ರೂಪಾಲಂಕಾರ ಮಾಡಿಕೊಳ್ಳದೆ ಯಿರಲಿಲ್ಲ.. ಅಂತೂ ಹೊರಟು....

ಬಂದ ಬುಗುಡಿಯನ್ನು ತಾಯಕ್ಕ ದುಗುಡ, ಪ್ರೀತಿ, ಮವುನಗಳ ಸಮ್ಮಿಶ್ರಣದಿಂದ ಸ್ವಾಗತಿಸಿ ಕೊಬ್ಬರಿ ಚಿನ್ನಿಯಿದ್ದ ತಳಿಗೆಯನ್ನು ಆತನ ಮುಂದೆ ಯಿರಿಸಿದಳು.. ಚಿನ್ನಾಸಾನಿಯ ಸಮಕ್ಷಮದಲ್ಲಿ ಅವರೀರ್ವರು ತುಸು ಹೊತ್ತು ಕಾಲ ಮವುನದಿಂದ್ದು ನಿಟ್ಟುಸಿರುಗಳ ಬಿತ್ತಾಟ ಮಾಡಿದರೆಂಬಲ್ಲಿಗೆ ಸಿವನೆ....

ಅತ್ತ ಗುಂತಕಲ್ಲು ಪ್ರಾಂತದಾದ್ಯಂತ ಸೂತಕ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಯಿತ್ತು. ಬಳ್ಳಾರಿಗೆ ಬೊಬ್ಬಿಲಿ ನಾಗಿರೆಡ್ಡಿಯ ಕಳೇಬರ ತರಲೆಂದು ಹೋದವರು ಬರಿಗಯ್ಲಿ ಮರಳಿ ಬಂದರು. ಕಳೇಬರ ತಾನಿದ್ದ ಪೆಟ್ಟಿಗೆಯಿಂದ ಅತ್ಯಾಶ್ಚರ್ಯ ರೀತಿಯಲ್ಲಿ ಮಾಯವಾಗಿರುದೆಂಬ, ಮರಣದಂಡನೆಯನ್ನೇ ಯಿಧಿಸಿಲ್ಲ ಯಂಬ, ಶವಪೆಟ್ಟಿಗೆಯೊಳಗಿಂದೆದ್ದು ನಾಗಿರೆಡ್ಡಿಯು ಗಡೇಕಲ್ಲಿಗೆ ನಡೆದುಕೊಂಡೇ ಹೊರಟು ಹೋದನೆಂಬ ಯಿಂಥ ಅಂತೆ ಕಂತೆಗಳು ಸದರಿ ಸೀಮೆಯ ತುಂಬ ದಟ್ಟವಾಗಿ ಹಬ್ಬಿಬಿಟ್ಟಿದ್ದವು.. ಅದೂ ಅಲ್ಲದೆ ರಥೋತ್ಸವದ ನಂತರ ಭೀಮಲಿಂಗೇಸ್ವರ ಸ್ವಾಮಿಯ ಗರಭ ಗುಡಿ ಪ್ರವೇಶ ಮಾಡಿದ್ದನ್ನು ನೋಡಿದ್ದರೇ ಹೊರತು ಮತ್ತೆ ಹೊರಬಂದು ಸಾರುವಜನಿಕವಾಗಿ ಕಾಣಿಸಿಕೊಂಡದ್ದನ್ನು ಯಾರೊಬ್ಬರು ನೋಡಿರಲಿಲ್ಲ.. ದಯವಾಮುಸಸಂಭೂತನಾದ ರೆಡ್ಡಿಯು ಭೀಮೇಶ್ವರಸ್ವಾಮಿಲಿಂಗದೊಳಗೆ ಅಯ್‌ಕ್ಯವಾಗಿರದೆ ಯಿರಲಾರನು.. ಯಂಬಿವೇ ಮೊದಲಾದ ಸಮಾಧಾನಕರ ಅಂಶಗಳು ಗಡೇಕಲ್ಲಿಂದ ಆರಂಭಗೊಂಡು...!!?

ಅತ್ತ ಕುದುರೆಡವು ಪಟ್ಟಣದ ವಂದು ಕಡೇಕ ಗಂಟಲಯ್ಯನು "ಅಹಹಾss ದೇವಿ.. ಅಹಹಹಾss ಸಾಂಬವಿss ಕಾಯವಿಲ್ಲದ ಪುರುಷನು ಕಸವಿಲ್ಲದ ಭೂಮಿಯಲ್ಲಿ ಕಾಮಿತ ಯಂಬ ಬೀಜವ ಬಿತ್ತಲು.. ಅದು ಅಂಕುರಿಸಿತು ತಾಯೀss ವಂದು ಯರಡಾಯಿತು ತಾಯೀ.. ಯರಡು ನಾಲಕಾಯಿತು ತಾಯೀ.. ನಾಲಕು ಮುನ್ನೂರಾ ಅರವತ್ತಯ್ದು ಆಯಿತು ತಾಯೀ.. ಬಟಾ ಬಯಲೊಳಗ ತೊಟ್ಟು ಬಿಟ್ಟಿತ್ತು ತಾಯೀ.. ಜಗಜ್ಜನನಿಯಾದ.. ಬಹುಪರಾಕ್.."

ಯಂದೊಡನೆ ಭಕುತಾದಿ ಮಂದಿಯು ಬಾಯಿಯಿಂದ ಸಿವನ್ನಾಮು ಪಾರೊತೀsss....

ಹೂವ್ವಿನ ರಾಶಿಯೊಳಗ ಹುಟ್ಟಿ ರಕ್ಕಸರ ರಗುತ ಮಾವುಸದೊಳಗ ಬೆಳೆದಂತವಳಾದ ಆದಿಸಗುತಿಯಿರುವ ವಸ್ತಿಯ ಮಜ್ಜಣ ಅಲ್ಲಿ ಮಾಡಿಸುತಲಿದ್ದರೆ.. ಅದರ ವುದಕವು ಹರಕೋತ ಹಕೋತ ಅದೇ ತಾನೆ ಅಲ್ಲೀ ಮಟ ಬಂದಿತು.. ಗಪ್ಪಂತ ಪಾದ ಯತ್ತಿಟ್ಟಿತು.. ಖಡುಗ ಥಾಟಿಯ ಭಕುತಾದಿ ಮಂದಿಯು.. ಯೀರಭದ್ದುರಗವುಡನ ಹೆಂಡತಿ ಲೋಲಾಚಮ್ಮ ಯಂಬ ಮಧ್ಯವಯಸ್ಕ ಹೆಣುಮಗಳೋರುವಳು "ಮಾಬಲಿ ಮಾಯವಾಗಯ್ತೆ" ಯಂದು ಕೂಗುತ ಆಚೆ ಕಡೇಲಿಂದ ಮೋಡೋಡಿ ಬಂದು ಯೀಚ್ಚೇ ಕಡೇಕ ಮರೆಯಾದಳು.. ಕೇಳಿದ ಯಲ್ಲಾರು ತಮ ತಮ್ಮ ನಾಲಿಗೆ ಯಂಬ ಮುಳ್ಳು ಗದ್ದುಗೆ ಮ್ಯಾಲ ಆ ಸುದ್ದಿಯನ್ನು ಮುಡಕೊಂಡು ಯಾರಿಗೆ ಹೇಳಬೇಕು? ಯಾರಿಗೆ ಹೇಳಬಾರದು ಯಂದಾಲೋಚನೆ ಮಾಡುತ ಯಿರುವೆ ಹಿಂಡು ಧಾಳಿಗೆ ತುತ್ತಾದ ಬೆಲ್ಲದ ಕಣ್ಣೆ ಯಾವ ಪ್ರಕಾರವಾಗಿ ಕರುಗುವುದೋ ಹಂಗೇ ಅಂಡಾವರನಗೊಂಡರು. ಅಂಡಾವರನ ಗೊಂಡವರಲ್ಲಲ್ಲೆ ನಸುಗುನ್ನಿಕಾಯಿಗಳಂಗೆ ಸಿಡಿದು ಮೂಲ ಸುದ್ದಿಯ ವಮುಸಾಭಿರುದ್ಧಿಯನು ಮಾಡತೊಡಗಿದರು. ಹೇಳಲಕ ಬಾಯಿಗಳಿಗೆ ಪುರುಸೊತ್ತಿಲ್ಲದಂಗಾತು.. ಕೇಳಲಕ ಕಿವಿಗಳಿಗೆ ಪುರುಸೊತ್ತಿಲ್ಲದಂಗಾತು....

ಸುದ್ದಿ ತಿಳಿದ ಹಂಪಜ್ಜನು ಹಿರೇಕರೊಡನೆ ಸೂರನೊಡನೆ ತನ್ನ ತವರೂರಾದ ಮಿಂಚೇರಿಗೆ ಹೋಗಿರುವ ಜಗಲೂರೆವ್ವನನು ಹಿಡಿಯೋದು ಸಾಧ್ಯವಲ್ಲದ ಮಾತೆಂದೂ.. ಯಿದಕ್ಕೇನಾದರೊಂದು ಪರ್ಯಾಯ ಯವಸ್ಥೆ ಮಾಡಬೇಕೆಂದೂ ಸಮಾಲೋಚನೆ ನಡೆಸುತಲಿದ್ದನು....

ಮತ್ತೊಮ್ಮೆ ಅಭ್ಯಂಜಣ ಸಾಣಾ ಮಾಡಿ ಮಡಿವುಡಿ ವುಟ್ಟು ದರುಶನಾಕಾಂಕ್ಷಿಗಳ ಕಣ್ಣಿಗೆ ಹಬ್ಬವನ್ನುಂಟುಮಾಡುತಲಿದ್ದ ಪಯಿತ್ರವಸ್ತಿಯ ಸಮಚ್ಛಮ ಹಿರೀಕರು ತಲಾಕೊಂದೊಂದು ಮಾತಾಡುತಾs ಮಾತಾಡುತಾ ಯಾದೇ ವಂದು ತೀರಮಾನಕ್ಕೆ ಬರದವರಾಗಿ "ಯಜ್ಜಾ ನಿನ ಬಾಯಿಯಿಂದ ವುದರಲಿರುವ ನುಡಿಗೆ ಜೋತು ಬೀಳುತೀವಿ" ಯಂದರು. ಆತನಾಕ್ಷಣ ಯೇನೇನೋ ವಟಗುಟ್ಟಿ ಧಾಂಗ ಮಾಡಿ "ಹಿರೀಕರೇ ಕೇಳಿರಯ್ಯಾ ಕೇಳಿರಿ... ಅಂತಃಕರಣದ ಕಡಲ ವಡತಿಯಾದ ತಾಯಿ ತನಗ ಸೂರನೇ ಆಗ ಬೇಕಿಲ್ಲ

ಅಂಬುತಾಳ.. ಮಾಬಲಿ ಪಟ್ಟ ಯೇರುವ ಯೋಗ ಅದಕಿಲ್ಲ, ಅಂದಮ್ಯಾಲ ಯಾಕ ಅದನು ಮನಸ್ಸಿಗೆ ಹಚಕೊಂಡು ಕೊರಗೋದು.. ಹೋಗಲಿ ಬಿಡರಿ, ಅದು ಯಲ್ಲಾದರು ಸುಖವಾಗಿರಲಿ, ಅದನ ನೆಚ್ಚಿಕೊಂಡು ಯೇಸು ದಿನಾಂತ ತಾಯಿ ಹೊರಗ ಯಿರೋದು.. ನಿಮಗ ಸೊಸಂತರ ಕೊಟ್ಟೀನಿ.. ನೀವೆs ಯಿದಕೊಂದು ಯೇರುಪಾಡು ಮಾಡಿರಯ್ಯಾ" ಯಂದಾಡಲು....

ಅದಕೆಂದೇ ವಂದು ಲಚ್ಚಣ ಕಡಿಮೆಯಿದ್ದರೂ ಚಿಂತೆಯಿಲ್ಲ.. ಯಾದಾರ ವಂದು ಕೋಣವನ್ನೇ ಹುಡುಕಿ ತರಬೇಕು.. ಯಿದರ ಜವಾಬುದಾರಿಯನ್ನು ಸದರಿ ಪಟ್ಟಣದ ತಾಯಿಯ ವಕ್ಕಲು ಮಕ್ಕಳೇ ಹೊರಬೇಕು ಯಂಬ ಠರಾವನ್ನು ವಡ್ಡೋಲಗವು ಮಂಜೂರು ಮಾಡಿದೊಡನೆ ಹೊಲೆಮಾದಿಗ ಮಂದಿಯು "ಹಂಗೇ ಆಗಲಿ ದವುಳೇರಾs" ಯಂದು ವಪ್ಪಿಗೆ ಸೂಚಿಸಿತು.

ದಿಕ್ಕು ದಿಕ್ಕಿಗೆ ತಲಾ ಹತ್ತಿಪ್ಪತ್ತು ಮಂದಿಯಂತೆ ಚೆಲ್ಲಾಪಿಲ್ಲಿ ಆಯಿತು. ಅವರು ಹೋಗಿದ್ದು ವಂದು ಕಡೇಕಾ? ವಂದು ಕಥಿಯಾ? ವಂದೊಂದು ಮೂರಿಗೆ ಹೋಗಿ ವಂದೊಂದು ಮನೆಯದುರು ನಿಂತು ತಮ್ಮ ಜೋಳಿಗೆಗೆ ವಂದು ಕೋಣವನ್ನು ಭಿಕ್ಷಾ ಹಾಕಿ ಮೋಕ್ಷ ಪಡೆದುಕೊಳ್ಳಿರಿ ಯಂದು ಅಂಗಲಾಚಲಾರಂಭಿಸಿತು. ನವಣೆ ಬಗಸಿದರೆ ನೀಡಬವುದು.. ಜೋಳ ಬಗಸಿದರ ನೀಡಬವುದು. ಆದರೆ ತಮ್ಮ ದನದ ಕೊಟ್ಟಿಗೇಲಿ ಯಿಲ್ಲದುದನು ಯಲ್ಲಿಂದ ತರೋದು? 'ಯಿಲ್ಲಕನರಯ್ಯ ಯಿಲ್ಲ' ಯಂಬ ವುತ್ತರವು ಪ್ರತಿಯೊಂದು ಮನೆಯಿಂದಲೂ ಬಂತು. ಆ ಪ್ರಾಂತದಲ್ಲಿ ಕೋಣ ಹುಟ್ಟಿರುವುದುಂಟು, ಬೆಳೆದಿರುವುದೂ ವುಂಟು, ಅಲ್ಲಲ್ಲಿ ನಡೆದ ಕಾಳಗಗಳಿಗೆ ತಾವು ಅವುಗಳನ್ನು ಜುಲುಮಿಯಿಂದ ಸರಬರಾಜು ಮಾಡಿರುವುದೂವುಂಟು. ಹಿಂಗಾಗಿ ಗ್ರಾಮಗಳು ಬೀಜದ ಕೋಣಗಳ ಬರವನ್ನು ಯದುರಿಸುತಲಿದ್ದವು. ಪ್ರತಿಯೊಂದು ಯಮ್ಮೆ, ಮಣಕಮೂಬೆದೆಗೆ ಬಂದು ವಂದೇ ಸಮಕ ಅರಚುತಲಿದ್ದವು...

ಜಾಲಿ ಮರಗಳಿಂದಲೂ.. ಕಕ್ಕಸು ಪೆಳೆಗಳಿಂದಲೂ.. ಕಾರೆ, ಕವಳೆ, ಬೋರೆ, ಬಾರೆಯೇ ಮೊದಲಾದ ಪೊದೆಗಳಿಂದಲೂ, ಅಲ್ಲೊಂದು ಯಿಲ್ಲೊಂದರಂತೆ ಚಿಗಿತುಕೊಂಡಿದ್ದ ಹುಲ್ಲುಗರುಕೆಗಳಿಂದಲೂ ಸೋಭಾಯಮಾನವಾಗಿದ್ದ ಕಾಸರಕ ಯಂಬುವ ಗ್ರಾಮದೊಳಗ ಅಳ್ಳಾಡಪ್ಪ ಯಂಬ ಹೆಸರಿನಾತನು ತನ್ನ ಯೇಕಮಾತ್ರಪುತ್ರಿಕಂಕಾಳವ್ವಗೆ ಬರಬಾರದ ರೋಗ ಬಂದಿರುವ ಕಾರಣಕ್ಕೆ ಮುಗುಲು ಕಡೇಕ ಮುಖಮಾಡಿ ವಂದರ

ಮ್ಯಾಲೊಂದರಂತೆ ನಿಟ್ಟುಸುರು ಬಿಡುತ ಚಿಂತಾಕ್ರಾಂತನಾಗಿದ್ದನು. ಆತನು ತನ್ನ ಪಿಳ್ಳೆಯನ್ನು ಹರಾಳು, ಬರಾಳು, ತಿಂದರಾಳು, ಕುಡುದರಾಳು ಯಂಬಿವೇ ವೊದಲಾದ ದೇಸ ಯಿದೇಸಗಳ ವೈದ್ಯರಿಗೆ ತೋರಿಸಿದ್ದು ಫಲಕಾರಿಯಾಗಿರಲಿಲ್ಲ.. ನಾನಾ ನಮೂನಿ ಸಭ್ಯಸ್ಥ, ಅಸಭ್ಯಸ್ಥ ದೇವರು ದಿಂಡಿರುಗಳಿಗೆ ನಡಕೊಂಡದ್ದೂ ಫಲಕಾರಿಯಾಗಿರಲಿಲ್ಲ.. ರೋಸಿ ಹೋಗಿ ಆಕೆಯ ನಸೀಬದಲ್ಲಿದ್ದಂಗಾಯ್ತದೆ ಯಂದು ನಿರ್ಧಾರ ಮಾಡಿ ಕಯ್ನ ಚೆಲ್ಲಿದ್ದನು. ಯೀಗ್ಗೆರಡು ದಿವಸಗಳಿಂದ ರೋಗ ವುಲ್ಬಣಗೊಂಡು ಕಂಕಾಳಿ ಬಲು ನಿತ್ರಾಣಳಾಗಿದ್ದಳು.. ಕೂಳು ಸೇರಿಕೆಯಿರಲಿಲ್ಲ.. ನೀರು ನಿಡಿ ಸೇರಿಕೆಯಿರಲಿಲ್ಲ.. ಮುಂದೇಸಿಂದ ಮಗಳೂ ಕಯ್ನ ಬಿಡಲಿರುವಳು, ಹಿಂದೇಸಿಂದ ಅಳಿಯನೂ ಕಯ್ನ ಬಿಡಲಿರುವನು. ಆಮ್ಯಾಲ ಭೂಮಿಗೆ ಭಾರವಾಗಿ ವುಳುಕೊಳ್ಳಲಿರುವುದು ತಾನೋರ್ವನೆ.. ತಾನ್ಯಾವ ಪುರುಷಾರ್ಥಕ್ಕ ಬದುಕಿರಬೇಕು.. ತಾನೂ ಸಿವನ ಪಾದ ಸೇರಿಕೊಂಡರಾಯಿತು.. ಅದೇ ಸಮಯಕ್ಕೆ ಸರಿಯಾಗಿ....

ಕುದುರೆಡವ ಮಾದಿಗರ ಪಯ್ಕಿ ವೋರ್ವನಾದ ಯಾಕುಂದನು ಹಲಕುಂದನೊಂದಿಗೆ ಹೋಗಿ ಆ ಮನೆ ಯದುರು ನಿಂತು 'ಭವತೀ ಭಿಕ್ಷಾಂದೇಹಿ'ಯಂದು ಕೂಗು ಹಾಕಿದನು. ಯಾರೋ ಭಿಕ್ಷುಕರು ಬಂದವರಂತ ತಡಸಾಲವ್ವ ಮೊರದೊಳಗ ಜೋಳ ತಂದು ಜೋಳಿಗೆ ವಡ್ಡಿರಯ್ಯಾ ಅಂದಳು.. ಅದಕ್ಕವರು ದವಸ ಬ್ಯಾಡ ತಾಯೀ, ಧಾನ್ಯ ಬ್ಯಾಡ ತಾಯಿ ಅಂದರು. ಮತ್ತೇನು ಬಗಸುತೀರಯ್ಯಾ ಯಂದು ಕೇಳಿದಳು.. ಅದಕಿದ್ದು ಅವರು ನಾವು ಕುದುರೆಡವ ಸಾಂಬವಿ ಕಡೇರವ್ವಾ.. ತಾಯಿ ಕೋಣ ಬಗಸ್ಯಾಳ.. ಅದನು ಜೋಳಿಗೆಗೆ ಹಾಕಿ ಮೋಕ್ಷ ಪಡೀರವ್ವಾ ಯಂದರು.. ದಂಧಕ್ಕಿಯಲ್ಲಿದ್ದ ಹರೇದ ಕೋಣವು ವಯ್ಕ ವಯ್ಕ ಯಂಬ ಭಾಷೆಯಲ್ಲಿ ತನ್ನ ಯಿರುವನ್ನು ಸಾಬೀತುಪಡಿಸಿತು. ತಡಸಾಲವ್ವ "ಯೀ ಸೀಮೇಲಿ ವುಳುಕೊಂಡಿರುವುದು ಯಿದೊಂದೇ ಕ್ವಾಣ ಕನರಯ್ಯಾ.. ಯಿದನು ಕಳುವಿದಲ್ಲಿ ಸದರಿ ಸೀಮೆಯು ಹಾಲು ಹಯ್ನದಿಂದ ವಂಚಿತವಾಗುತಯ್ತೆ.. ಅದಕ್ಕ ಬದಲಾಗಿ ಯಿನ್ನೊಂದು ಮೊರ ಜ್ವಾಳ ನೀಡೇನು" ಯಂದು ಹೇಳಿದಳು.. ಅಲ್ಲೇ ಪಳುಗಟ್ಟೆ ಮ್ಯಾಲ ಯೀಗಲೋ ಆಗಲೋ ಅಂಬುತಲಿದ್ದ ಮಗಳ ಜೀವಚ್ಛವವನ್ನು ಯದುರಿಗೆ ಮಲಗಿಸಿಕೊಂಡು ರೋಧನ ಮಾಡುತಲಿದ್ದ ಅಳ್ಳಾಡೆಪ್ಪನು ನಮ್ಮದೇ ನಮಗ ಮಸ್ತಾಗಯ್ತಯ್ಯಾ.. ಠಿಪಿ ಠಿಪಿ ಮಾಡಿ ಹೊಟ್ಟೆ ವುರುಸಬೇಡಿರಯ್ಯಾ ಯಂದನಕಂತ ಕಯ್ನ ಮುಗುದು

ಕೇಳಿಕೊಂಡನು. ಯೇನಪ್ಪಾ.. ಯಂತಪ್ಪಾ ಯಂದಿವರು ಪ್ರಸ್ನೆ ಹಾಕಿದ್ದಕ್ಕೆ ಆತನು ಸಾದ್ಯಂತ ಯಿವರಿಸಿದನು. ಆಗ ಯಾಕುಂದನು ಕುದುರೆಡವೊಳಗ ತಾಯಿ ಸಾಂಬವಿ ತೋರುತಲಿರುವ ಪವಾಡ ಮಯ್ಮೆಗಳನ್ನು ವರಣನ ಮಾಡೀ ಮಾಡೀ ನೀವೂನಿಮ್ಮ ಕೋಣವನ್ನು ತಾಯಿಗರುಪಣ ಮಾಡಿ ಮೊರೆ ಹೋಗಿರಿ ಯಂದನು. ಆಗಿದ್ದು ಆ ತಂದೆಯು ಕುದುರೆಡವಿದ್ದ ದಿಕ್ಕಿಗೆ ಕಯ್ನ ಮುಗುದು ಹಂಗೇ ಕೇಳಿಕೊಂಡನು. ಆ ದಿಕ್ಕಿಗಿದ್ದ ವಂದು ಹಿಡಿ ಮಣ್ಣನ್ನು ಆದಾರ ಯಂದು ಭಾವಿಸಿ ತನ್ನ ಮಗಳ ಮ್ಯಾಲ ಪ್ರೋಕ್ಷಿಸಿದನು. ವಂದರಗಳಿಗೆ ಕಳೆವಷ್ಟರಲ್ಲಿ ಕಂಕಾಳವ್ವ ಆಶ್ಚರ್ಯಕರ ರೀತಿಯಲ್ಲಿ ಯದ್ದು ಕುಳಿತು "ಯಪ್ಪಾ.. ನಾನೀಗ ಪಾಡಾದೆ.. ನನ್ನನ್ನು ಗಂಡನ ಮನೆಗೆ ಕಳುವಪ್ಪಾ" ಯಂದು ಹೇಳಿದೊಡನೆ ಅದರಿಂದ ಸಂತುಷ್ಟಗೊಂಡ ಆತನು ಕೂಗಳತೆ ದೂರದೂರೊಳಗೆ ನೆಲಗೊಂಡಿರುವ ತಾಯಿಯ ಧ್ಯಾನ ಮಾಡದೆ ತಾನು ಮಾಪರಾಧ ಮಾಡಿದೆನು. 'ತಾಯೇ ತನ್ನನ್ನು ಕ್ಷಮಾ ಮಾಡು' ಯಂದು ಹೇಳಿದ ತರುವಾಯ "ನೋಡಿರಯ್ಯಾ, ನಾಳೀಕೆ ನಾನೇ ಆ ಸ್ರೀಕ್ಷೇತ್ರಕ್ಕೆ ಕಾಲ್ನಡಗೀಲೆ ಬರುತೀನಿ, ತಾಯಿ ದರುಸನ ಪಡಕೊಂಡು ಆಕೆಯ ಪಾದದ ಬುಡಕ ಹರಕೇನ ವಪ್ಪಿಗೆ ಮಾಡತೇನಿ.." ಯಂದು ಭಲೆ ಸಂತೋಷದಿಂದ ನುಡಿದನು.. ಅದಕ್ಕಿದ್ದು ಅವರು ಹಂಗೇ ಮಾಡಪ್ಪಾ ಯಂದು ಅಲ್ಲಿಂದ ಹಿಂದಕ ಹೊಳ್ಳಿದರು....

ನಾದದರಣ್ಯೇವಾಗಿದ್ದ ಕುದುರೆಡವೊಳಗ ದ್ಯಾನಸ್ಥ ಮುದ್ರೆಯಲ್ಲಿದ್ದ ಪೂರುವಿಕನು ಫಲಾನ ಯಿಂಥ ಕಡೇಕ ಹೋಗಿ ಮಾಬಲೀನ ಯದುರುಗೊಳ್ಳಲಕಬೇಕೆಂದು ಆಗ್ನೆ ಮಾಡಿದನು. ಅದನ್ನು ಆಗ್ನಾರಾಧಕರು ತಮ ತಮ್ಮ ಬಾಯಿಗಳೆಂಬ ಕವಣೆಗಳೊಳಗ ಅಜ್ಜನ ಮಾತೆಂಬುವ ಕಲ್ಲುಸಕ್ಕರೆಯನಿಟ್ಟು ಸುತ್ತನ್ನಾಕಡೆ ತೂರಲು ಕಸಕ್ಕಲ ಪಾಲಾಚವ್ವನ ನೇತ್ರುತ್ವದಲ್ಲಿ ನಿತ್ರೇರೂ, ಗವುಡರ ಲೋಲಾಚಮ್ಮನ ನೇತ್ರುತ್ವದಲ್ಲಿ ಮಿತ್ರೇರೂ, ಮೂದೋರೂ, ಭಾರಿಸೋರೂ ನಾನಾ ಕಡೇಲಿಂದ ಬಂದು ಫಲಾನ ಜೆಗೇವನ್ನು ಸೇರಲಕ ವಂದರಗಳಿಗೆ ಮಾತ್ರಹಿಡಿಯಿತು. ಗೊಲ್ಲರೀರಯ್ಯನ ನೇತ್ರುತ್ವದಲ್ಲಿ ಆ ದಿಬ್ಬಣವು ನಾದದ ನದಿಯೋಪಾದಿಯಲ್ಲಿ ಹರಕೋತ, ಹರಕೋತ ಕಾಸರಕದ ಹಾದಿಯ ಮುಂಗಟ್ಟಿಗೆ ಸೇರುದಕೂ ಮಗಳು, ಮಗಳ ಗಂಡ ಮತ್ತ ಮಾಬಲಿಯೊಡನೆ ಅಳ್ಳಾಡೆಪ್ಪನು ಬರುವುದಕೂ ಸರಿಹೋಯಿತು. ಸಿವನ್ನಾಮ.. ಮುಗುಲಿಗೆ ಮುಟ್ಟಿತು. ನಿತ್ರೇರು ಮಾಬಲಿಯನ್ನು ಕಣಗಿಲೆ, ದಾಸವಾಳ ಪೂಮಾಲೆಗಳಿಂದಲಂಕರಿಸಿ

ಆರತಿ ಯತ್ತಿ ತಿಲಕ ಯಿಟ್ಟರು. ಜಯ ಮಂಗಳಂ, ನಿತ್ಯ ಸುಭ ಮಂಗಳಂ ಪಾಡಿದರು.. ಗೊಲ್ಲರೀರಯ್ಯನು ಕೋಣದ ಮಯ್ಯಿಗೆ ತಾಯಿಯ ಪಾದೋದಕವನ್ನು ಪ್ರೋಕ್ಷಣೆ ಮಾಡಿ ಅದಕ್ಕೆ 'ಚಂಡ' ಯಂದು ನಾಮಕರಣ ಮಾಡಿದನು ಯಿದ್ಯುಕ್ತವಾಗಿ.. ಚಂಡ ಡುರುಕಿ ಹೊಡೆದು ಸಮ್ಮತಿ ನೀಡಿ ತಾನು ಸದರಿ ಪಟ್ಟಣದ ಸೂರಯ್ಯನ ಬೀಜೋತ್ಪಾದನೆಯಿಂದಾದಾತನೆಂದಿತು....

ಚಂಡನ ಮೆರವಣಿಗೆಯು ಆಮೆ ಯೇಗದಲ್ಲಿ ಸಾಗಿತು. ವಂದೊಂದು ಮನೆಯವರು ಅದನು ತರುಬುತ್ತಿದ್ದುದೇನು? ಆರತಿ ಯತ್ತುತ್ತಿದ್ದುದೇನು? ಹಣ್ಣುಹಂಪಲವನ್ನು ತಿನ್ನಲಕ ಕೊಡುತ್ತಿದ್ದುದೇನು? ಅದರ ಮಯ್ನ ಸವರಿ ಪುನೀತರಾಗುತ್ತಿದ್ದುದೇನು? ಅದರ ಪಾದದ ಬುಡಕ್ಕ ಸೆಳ್ಳುಹಾಕಿ ಬೀಳುಕೊಡುತ್ತಿದ್ದುದೇನು ಯಲ್ಲಿ ನೋಡಿದರೂ? ಯಾರ ಕಣ್ಣಲ್ಲಿಣುಕಿದರೂ.. ಯಾರ ಕಿವಿಯಲ್ಲಿಣುಕಿದರೂ.. ಯಾರ ಬಾಯಿಯನ್ನು ತೆಗೆದು ನೋಡಿದರೂ....

ಆ ದಿಬ್ಬಣವು ಸಾಗೀ ತಿರುಗೀ, ತಿರುಗೀ ಸಾಗಿ ವಸ್ತಿ ತಲುಪಲು ಖುದ್ದ ಪೂರುವಿಕನೇ ಸ್ವಾಗತಿಸಿ ಮಾಬಲಿ ಪಟ್ಟಕಟ್ಟಿದನು.

ಸಾವುರಾರು ಭಕುತಾದಿ ಮಂದಿ ತಮ್ಮತಂಡಕ್ಕೆ ಜಯಕಾರ ಹಾಕುತ್ತಿದ್ದುದನ್ನು ನೋಡಿದ ಅಳ್ಳಾಡೆಪ್ಪ ಹಿರಿ ಹಿರಿ ಹಿಗ್ಗಿದ. ಅಮಾಯಕತೆಯಿಂದದು ಭಕುತಾದಿ ಮಂದಿ ಕೊಡುತ್ತಿದ್ದುದಕ್ಕೆಲ್ಲಾ ತನ್ನ ಬಾಯನ ಚಾಚುತ್ತಿದ್ದುದನ್ನು ನೋಡಿ ಕಣ್ಣಲ್ಲಿ ಯರಡು ಹನಿ ವುದುಕವ ತಂದುಕೊಂಡ. ಚಂಡನನ್ನು ಅಪ್ಪಿಕೊಂಡು ನಗು ನಗುತ ಬಲಿಯಾಗೆಂದೂ.. ಸಾಂಬವಿಯ ದಯೆಯಿಂದ ನಿನಗೆ ಸರುಮೋಚ್ಚ ಪದವಿ ಲಭಿಸುತ್ತದೆಯೆಂದೂ ಬುದ್ಧಿ ಹೇಳಿದ. ವಸ್ತಿ ಪಾದಕ್ಕ ಹಣೆ ಮುಟ್ಟಿಸಿ ಸಣುಮಾಡಿ ಯದ್ದ. ತನಗೆ ಭಕುತಿ ಪೂರ್ವಕವಾಗಿ ಸಣುಮಾಡಿದ ಬತೇರಪ್ಪ ದಂಪತಿಗಳಿಗೆ ಪೂರುವಿಕನು 'ಯಿತೆಂಭೋ ದಿವಸಕ್ಕ ಹೆಣುಮಗುವನ್ನು ಹಡಕೊಂಡು ಬನ್ನಿರಿ' ಯಂದು ಆಸೀರುವಾದ ಮಾಡಿದ. ತಮ್ಮ ಆಸೀರುವಾದ ಯಂದ ಆ ದಂಪತಿಗಳು ಚಂಡನನ್ನವುಚಿಕೊಂಡು ಲೊಚಲೊಚ ಮುದ್ದುಕೊಟ್ಟರೆಂಬಲ್ಲಿಗೆ ಸಿವಸಿವಾ.. ಹೇಳುವುದ ಹೇಳಿ, ಕೇಳುವುದ ಕೇಳಿ ಅವರೆಲ್ಲ ಅವರಿಂದ ಬೀಳುಕೊಂಡು ಅಲ್ಲಿಂದ ತಮ್ಮ ಸೊಗ್ರಾಮವಾದ ಕಾಸರಕದ ಕಡೇಕ ಮುಖ ಮಾಡಿದರೆಂಬಲ್ಲಿಗೆ ಸಿವ.. ಸಿವಾ....

ಆ ಕಡೇಲಿಂದ ಕುರಿ, ಆಡು, ಮ್ಯಾಕೆಗಳನ್ನು ಅವುಚಿಕೊಂಡು ಸದರಿ ಪಟ್ಟಣವನ್ನು ತುಂಬುತಲಿದ್ದುದು ಲೆಕ್ಕಯಿಲ್ಲದಷ್ಟು ಮಂದಿ, ಬಲಿಕೊಡಲುತಿದ್ದಂಥ

ಪ್ರಾಣಿಗಳ ತೊಗಲನ್ನು ಖರೀದಿ ಮಾಡಲಕಂತ ಬರುತ್ತಿದ್ದೋರು ಲೆಕ್ಕಯಿಲ್ಲದಷ್ಟು ಮಂದಿ, ಪದ ಹಾಡಿ ನರ್ತನ ಮಾಡಲಕೆಂದು ಬರುತಲಿದ್ದ ಕಲಾಯಿದರೆಷ್ಟೋ ಮಂದಿ ಫಳಾರದಂಗಡಿ, ಬಳೆ ಅಂಗಡಿ, ಪಾತ್ರೆಪಗಡಗಳ ಅಂಗಡಿ, ಹಣ್ಣು ಕಾಯಿ ಲೋಬಾನ ಪಚ್ಚೆ ಕರುಪುರದಂಗೆಳಂಗಡಿ ಹಾಕಲಕಂತ ಬರುತಲಿದ್ದವರೆಷ್ಟೋ ಮಂದಿ, ಕಯ್ಯಿಗಡಕೊಟ್ಟು ಲೇವಾದೇವಿ ಮಾಡಲಕಂತ ಬರುತಲಿದ್ದವರೆಷ್ಟೋ ಮಂದಿ, ಸಣಪುಟ್ಟ ಕಳ್ಳತನ ಮಾಡಲಕಂತ ಬರುತಲಿದ್ದವರೆಷ್ಟೋ ಮಂದಿ, ಯಿಂತಪ್ಪ ಹತ್ತು ಹಲವು ನೂರಾರು, ಸಾವುರಾರು ಮಂದಿಯಿಂದ ಸದರಿ ಪಟ್ಟಣವು ಚಣದಿಂದ ಚಣಕ್ಕೆ ತುಂಬಿ ತುಳುಕಾಡಲಾರಂಭಿಸಿದ ಸಂದರ್ಭದಲ್ಲಿ....

ವಂದಲ್ಲಾ ವಂದು ಮನೆ ಮುಂದೆ ಮಸಾಲೆ ರುಬ್ಬುತ, ಕಯ್ಯಬಳೆ ಸಬುಧ ಮಾಡುತ ಹೆಣು ಮಕ್ಕಳು ಪದ ಹಾಡುತಲಿದ್ದುದೇನು? ಗಂಡಸರು ತಮ ತಮ್ಮ ದೋತರಗಳನ್ನೂ, ಹೆಂಗಸರು ತಮ ತಮ್ಮ ಸೀರೆಗಳನ್ನೂ, ತಾಯಂದಿರು ತಮ ತಮ್ಮ ಕೂಸು ಕಂದಮ್ಮಗಳ ರೊಳ್ಳೆ ರೊಂಕುಗಳನ್ನು ಅಡಗಿಸಲೋಸುಗ ಯತ್ತಿಕಟ್ಟುತಲಿದ್ದ ಸಂದರ್ಭದಲ್ಲಿ, ಮೊಲೆಗುಂಡಿಗಳನ್ನು ಅವುಗಳ ಬಾಯೊಳಗ ಅಮರುತಲಿದ್ದ ಸಂದರ್ಭದಲ್ಲಿ, ಬಂದ ಬೀಗರು ಬಿಜ್ಜರಿಗೆ ಕೊಡಲಕಂತ ಹೆಂಗಸರು ಚಕ್ಕುಲಿ, ಅಂಬೊಡೆ, ಅಳ್ಳು ಮಾಡಿ ಅಡಕಲಗಡುಗೆಗಳಲ್ಲಿ ತುಂಬಿಡುತಲಿದ್ದಂಥಾ ಸಂದರ್ಭದಲ್ಲಿ, ಗೋಡೆಗಳಿಗೆ ಸುಣ್ಣಬಣ್ಣ ಬಳಿಯತೊಡಗಿದ್ದಂಥ ಸಂದರ್ಭದಲ್ಲಿ,

ವಂದೊಂದು ಮೋಣಿ ವಳಗೆ, ವಂದೊಂದು ಕೇರಿ ವಳಗ ಯಿದ್ದಂಥ ಪಾವಲಿ ಭಾಗದೋಟು ಮಂದಿಯು ತಮ್ಮ ಅಂಗಯ್ಯಲಿ ದುಗ್ಗಾಣಿ ಯಿಲ್ಲ ದಂಗಾಗಯ್ತಲ್ಲಾ.. ಯಿವತ್ತಿಗೆಂಗ? ನಾಳಿಗೆಂಗ?.. ಹಬ್ಬವನೆಂಗ ಮಾಡುವುದು, ಬೀಗರು ಬಿಜ್ಜರನೆಂಗ ನೋಡಿಕೊಳ್ಳುವುದು ಯಂದು ಮುಂತಾಗಿ ಯಸನದ ಮ್ಯಾಲ ಯಸನ ಮಾಡುತಲಿದ್ದರು ಸಿವನೇ.. ಅಂಥವರ ಮನೆಗಳಲಿದ್ದ ಅಡಕಲ ಗಡುಗೆಗಳಲ್ಲಿ ಸೆರೆ ಮುಕ್ಕ ಕಾಳು ಕಡಿಯಿರಲಿಲ್ಲ ಸಿವನೇ.. ಅಂಥವರ ಮನೆಗಳಲಿದ್ದ ವಲೆಗಳು ಬೆಂಕಿಯ ಮುಖವ ನೋಡಿರಲಿಲ್ಲ ಸಿವನೇ.. ನಾಯಿಗಳು ಅಂಥವರ ಮನೆಯ ಮುಂದೇಸಿಂದ ಬರದಂಗಾಗಿದ್ದವು ಸಿವನೇ.. ಬೆಕ್ಕುಗಳು ಅಂಥವರ ಮನೆಯ ಹಿಂದೇಸಿಂದ ಬರದಂಗಾಗಿದ್ದವು ಸಿವನೇ.. ಅಂಥವರ ಮನೆಗಳ ಮಂದಿಯ ಮಯ್ಯಿ ಮ್ಯಾಲ ಯಂಥ ಬಟ್ಟೆಬರೆಗಳಿದ್ದವೆಂದರ

ಹೊಟ್ಟೆ ಮುಚ್ಚಲಕ ಹೋದರೆ ಕುಂಡಿ ಕಾಣಿಸುತಲಿತ್ತು.. ಕುಂಡಿ ಮುಚ್ಚಲಕ ಹೋದರೆ ಹೊಟ್ಟೆ ಕಾಣಿಸುತಲಿತ್ತು ಸಿವನೇ.. ವುಂಬಲಕ ಯಿಲ್ಲಾ.. ತಿಂಬಲಕ ಯಿಲ್ಲಾ.. ವುಡುಲಕ ಯಿಲ್ಲಾ ಯಿಂಥ ದುಬಾರಿ ಯಾಳ್ಯೇದೊಳಗ ತಾಯಿ ಸಾಂಬವಿ ಹೊಳೆಗೆ ಹೊಂಡುತ್ತಿರುವಳಲ್ಲಾ.. ಹೆಡೆ ಮಾಡಲಕ ತಮ ಕಯ್ಯೊಳಗ ಯೇನೂ ಯಿಲ್ಲದಂಗಾಗಿರುವುದಲ್ಲಾ.. ಯಂದು ಯಸನ ಮಾಡುತ ಆ ಬಡಬಗ್ಗ ಮಂದಿ ಅರಮನೆಗೆ ಹೋಗಿ 'ಅವ್ವಾ ತಾಯೀ.. ಹಬ್ಬ ಮಾಡಲಕ ಯೇನಾರ ಕೊಡವ್ವಾ' ಯಂದು ಕೇಳಿದ್ದಕ್ಕೆ ಅರಮನೆಯವರು "ಯಿದು ಹೆಸರಿಗೆ ಮಾತ್ರಅರಮನೆ ಅಯ್ತೆ.. ಕೊಡಲಕಂದರ ಕಾಳಿಲ್ಲ.. ನೀಡಲಕಂದರ ನೀರಿಲ್ಲ" ಯಂದು ಹೇಳಿ ವಾಪಾಸು ಕಳುವುತಾವ ಸಿವನೇ.. ಅರಮನೇನ ವುಪಾಸ ವನುವಾಸ ಅನುಭವಿಸುತ್ತಿರುದೆಂದ ಮ್ಯಾಲ ಯಿನ್ನಾರನ್ನು ಕೇಳೋದು? ತಿರುಪಾಲಯ್ಯಸ್ರೇಷ್ಠಿ« ದಾನ ದರುಮ ಮಾಡೀ ಮಾಡೀ ಕಯ್ಯಿಗೆ ದಣುವು ತಂದುಕೊಂಡವನೆ, ಗವುಡ, ರೆಡ್ಡಿ ಮಡ್ಡಿಯೇ ಮೊದಲಾದ ಧವುಳೇರು ಕೊಡಿರಿ ಯಂದರೆ ಯಲ್ಲಿಮಟ ಕೊಟ್ಟಾರು! ಬರಿಗಯ್ಲಿ ವಾಪಾಸಾದಂಥ ಬಡಬಗ್ಗ ಮಂದಿಯು ತಾಯಿ ಸಾಂಬವಿ ವಸ್ತಿ ಮಾಡಿದ್ದಂಥ ದಿಕ್ಕಿಗೆ ಅಡ್ಡಬಿದ್ದು "ಯವ್ವಾ ಜಗಾನುಮಾತೆಯೇ.. ನಿಂಗೆ ನಮ್ಮ ನಿಟ್ಟುಸುರೇ ಹೆಡೆ ಕನವ್ವಾ" ಯಂದು ನಿಷು«ರದಿಂದ ಅರಕೆ ಮಾಡಿಕೊಂಡರು ಸಿವನೇ...

ಯಲ್ಲಿ ನೋಡಿದರಲ್ಲಿ ಮಾಯಿನ ತೋರಣಗಳೇನು? ಸಾರಣೆ ಕಾರಣೆ ಕಂಡಿದ್ದ ನೆಲಗಳೇನು? ಅವರ ಮನೆಯಂಗಳದಿಂದ ಯಿವರ ಮನೆ ಅಂಗಳಕೂ, ಯಿವರ ಮನೆಯಂಗಳದಿಂದ ಅವರ ಮನೆಯಂಗಳಕೂ ಪಯಿಪೋಟಿಯಿಂದ ಹೋಗಿ ಬರುತಲಿದ್ದ ರಂಗವಲ್ಲಿ ಚಿತ್ತಾರಗಳೇನು? ರುಮರುಮು ಅನ್ನುತ್ತಲಿದ್ದ ರುಮ್ಮಿಗಳೇನು? ಡೊಳ್ ಡೊಳ್ ಅನ್ನುತಲಿದ್ದ ಡೊಳ್ಳುಗಳೇನು? ಟಡ್ಡೆಣಕ್ಕು ಣಕ್ಕು ಣಕ್ಕು ಯಂದು ಸಪ್ಪಳ ಮಾಡುತಲಿದ್ದ ಹಲಗೆ ತಮ್ಮಟೆಗಳೇನು? ದಯ್ ದಯ್ ದದ್ದಿಯಂದು ಕುಣುದಾಡುತಲಿದ್ದ ಕೋಲಾಟಗಳೇನು? ಅವ್ವನ ಮಯ್ಮೆ, ಪವಾಡಗಳನ್ನು ಪೋಣಿಸಿದ್ದ ಹಾಡುಗಳೇನು? ನ್ರುತ್ಯಗಳೇನು? ಜನರನ್ನು ರಂಜಿಸುತಲಿದ್ದ ಬಗೆಬಗೆ ಯಾಸಗಳೇನು? ಹೋಬ್ಬ ಹೋಬ್ಬ ಯಂದು ಪಲ್ಲವಿ ಹಾಡುತಲಿದ್ದ ಬಗೆಬಗೆ ಯಿನ್ಯಾಸದ ಡೇಗುಗಳೇನು? ಸಿವ ಸಿವಾ ಅನುವಂಗಿತ್ತು ಆ ಪಟ್ಟಣದ ವಂದೊಂದು ದ್ರುಸ್ಯವು..

ಸೂರ್‍ಯಾಮನಿಗೆ ಆಕಾಸದಾಗ ಯೇನು ಕೆಲಸ ಬೊಗುಸೆಯಿದ್ದೀತು?

ಯಿವತ್ತಾರ ಲಗೂನ ಮುಳುಗೋದು ಬ್ಯಾಡವೇನು? ಅವ ಲಗುಲಗೂನ ಮುಳುಗಿದರ ತಾನು ತನ್ನ ಸಖೀಮಣಿ ತಾರಾ ನಿಹಾರಿಕೆಗಳ ಸಂಗಾಟ ಮೂಡಿ ಸದರಿ ಪಟ್ಟಣದ ಸಂಭರದೊಳಗೆ ಭಾಗಿಯಾಗಬವುದು ಯಂದು ಚಂದ್ರಾಮ ಲೆಕ್ಕ ಹಾಕುತಲಿದ್ದ. ಆದರ ಸೂರ್ಯಾಮ ಚಂದ್ರಾಮನ ಲೆಕ್ಕಾಚಾರವನ್ನು ತಲೆಕೆಳಗ ಮಾಡಿರದೆ ಯಿರಲಿಲ್ಲ.. ಅವನು ತನ್ನ ವಂದೊಂದು ಕಿರಣಕ್ಕ ವಂದೊಂದು ಕಣ್ಣು ಮುಡಿಸಿ ನೋಡುತಲಿದ್ದ.. ತಾಯಿ ಹೊಳೆಗೆ ಹೊಂಡುವ ಪ್ರತಿ ಕಾರ್ಯೇವನ್ನು ನುಣ್ಣಗೆ ಗಮನಿಸುತಲಿದ್ದ.. ಅಗೋ ಅಲ್ಲಿ ಅದನು ಮಾಡುತಾರೆ, ಯಿಗೋ ಯಿಲ್ಲಿ ಯಿದನು ಮಾಡುತ್ತಾರೆ ಯಂದು ಮುಂತಾಗಿ ತನ್ನ ಕಿರಣಗಳು ಮಾಡುತಲಿದ್ದ ಯೀಕ್ಷಕಾ ಯಿವರಣೆಯನ್ನು ಸ್ರದ್ಧಾ ಭಕುತಿಯಿಂದ ಆಲಿಕೆ ಮಾಡುತಲಿದ್ದ.. ಬಿಸಿಲ ತಾಪ ಪಡೆಯಲಕೆಂದು ತಮ ತಮ್ಮ ತಲೆಗಳ ಮ್ಯಾಲ ಪಟಗವ ಯಳಕೊಳ್ಳುತಲಿದ್ದರು.. ಜಾವ ಜಾವಕ್ಕ ನೀರೂ ನೀರುs ಯಂದು ಕನವರಿಕೆ ಮಾಡುತಲಿದ್ದರು.. ಯಿವನೇನಪ್ಪಾ ಯಿನ್ನೂ ಮುಳುಗುವಲ್ಲನು ಯಂದು ಸೂರ್ಯಾಮನನ್ನೂ, ಯಿವನೇನಪ್ಪಾ ಯಿನ್ನೂ ಮೂಡುವಲ್ಲನು ಯಂದು ಚಂದ್ರಾಮನನ್ನೂ ತರಾಟೆಗೆ ತೆಗೆದುಕೊಳ್ಳುತಲಿದ್ದರು.. ಯೀ ಕಾರಣದಲ್ಲಿ ಸದರಿ ಪಟ್ಟಣದೊಳಗ ನೆರಳಿನ ಬೇಡಿಕೆ ಹೆಚ್ಚಿತ್ತು....

ಯಲ್ಲಿ ನೋಡಿದರೂ ಮೂಕಪ್ರಾಣಿಗಳ ಮೆಹೆಹೆಹೇ ರಾಗಗಳ ಡಪ್ಪಿನಾಟವು.. ಯಲ್ಲಿ ನೋಡಿದರೂ ಹರಕೆ ತೀರಿಸಲೋಸುಗ ಬತ್ತಲಾಗುತಲಿದ್ದವರೆಷ್ಟೋ? ತಮ ತಮ್ಮ ಬತ್ತಲು ಮಯ್ಯಿಗಳನ್ನು ಬೇಯಿನ ತೊಪ್ಪಲಿಂದ ಮರೆಮಾಚುತಲಿದ್ದವರೆಷ್ಟೋ? ತಮ ಸರೀರ ಬರುವಾಗ ಹೆಂಗಿತ್ತೋ ಹಂಗೇ ಯಿರಲಿ ಯಂದು ಮರೆಯ ಹಂಗನ್ನು ತೊರೆದಿದ್ದವರೆಷ್ಟೋ.. ವುಧೋ ವುಧೋ ಅಂಬುವ ಯರಡಕ್ಕರದ ಪದಗಳನು ಬಿತ್ತಿ ಬೆಳಕಂಬುತ್ತಿದ್ದವರೆಷ್ಟೋ? ಹಿಂಗss ಯಲ್ಲಿ ನೋಡಿದಡಲ್ಲಿ ಆ ರೂಪದಲ್ಲಿ ತಾಯಿಯಿದ್ದಳು.. ಯೀ ರೂಪದಲ್ಲಿ ತಾಯಿಯಿದ್ದಳು. ಸಾಧು ಸಂತಾವಧೂತರು  ಜಗದಂಬಾ.. ಜಗದಂಬಾ ಯಂದನಕಂತ ಸೇದುತಲಿದ್ದುದಂತೂ ಯಾಗ ಯಗ್ನಗಳ ಭ್ರಮಾ ವುಂಟುವಾಡುತಲಿತ್ತು.. ಭಕುತಿಯು ಅಮಲೇರಿಸುವ ಹೊಗೆಯು ಮೋಡದೋಪಾದಿಯಲ್ಲಿ ಸದರಿ ಪಟ್ಟವನ್ನಾವರಿಸಿ ಸುಳುದಾಡುತಲಿತ್ತು. ಯಲ್ಲಿ ನೋಡಿದಡಲ್ಲಿ ಹಸುರು ಚಪ್ಪರಗಳು, ಮೇಲ್ಕಟ್ಟಿನ ಚಪ್ಪರಗಳು, ರಾವುಳ ಚಡಿಗಳು, ರತುನದ ಗದಿಗಳು, ಭೂಚಕ್ರದ ಕೊಡೆಗಳು, ಅರುಶಣ ಕುಂಕುಮದ ರಾಶಿಗಳು

ಗೋಚರಾತಿ ಗೋಚರವಾಗುತ್ತಿರಲು.. ತರಾವರಿ ಮಂದಿ ತಲಾಕೊಂದೊಂದು ಸಳಿಜ್ವರದ ಮಾರಿ, ಸೀತಾಳಮಾರಿ, ಸಿಡುಬಿನ ಮಾರಿ, ಗದ್ದಕಟ್ಟಿನ ಮಾರಿ, ಫಳಕ್ಕನ ಮಾರಿಯೇ ಮೊದಲಾದ ಮಾರೆಮ್ಮಗಳ ಮುಖವಾಡ ಧಾರಣ ಮಾಡಿ ಮೂರು ಮೂರುಗಳ ಬಿಡಿಸುತಾಳ.. ಗುಡುಲು ಗುಡುಸುಲುಗಳ ಬಿಡಿಸುತಾಳ.. ನರ ಕಲಿಗಳ ವಳಗ ಪಳಗಿನ ಮಾರಿ ಬರುತಾಳsss.. ಯಂದು ಕೂಗುತ ತಮ ತಮ್ಮ ಮಯ್ಯ ಯಿಂಚಿಂಚೊಳಗ ಆವೇಸ ರವುಸ ತುಂಬಿಕೊಂಡು ಬಿರುಗಾಳಿ ಸುಂಟುರಗಾಳಿಯೋಪಾದಿಯಲ್ಲಿ ಬೀದಿ ಬೀದಿಗಳ ತುಂಬೆಲ್ಲ ಸುಳುದಾಡುತಿರುವ ಕಾಲಕ್ಕ, ತಾಯಂದಿರು ತಮ ತಮ್ಮ ಬೀದಿ ಬೀದಿಗಳ ತುಂಬೆಲ್ಲ ಸುಳುದಾಡುತಿರುವ ಕಾಲಕ್ಕ, ತಾಯಿಂದಿರು ತಮ ತಮ್ಮ ಕಜ್ಜಿ ಪುಳ್ಳೆ ಕಂದಮ್ಮನಗಳನ್ನವುಚಿ ಕೊಂಡು ಬಚ್ಚಿಟ್ಟುಕೊಳ್ಳುತ್ತಿರೋ ಕಾಲಕ್ಕ, ಪಡುವಣ ದಿಕ್ಕಲ್ಲಿದ್ದ ಯೇಕಾಸೂರಿಯ ಗುಡ್ಡವು ಕಸುವು ಕಿತ್ತು ಸೂರ್ಯಪರಮಾತುಮನನ್ನು ಜಗ್ಗಿ ಯಳೆಯುತ್ತಿರುವ ಕಾಲಕ್ಕ.. ಮೂಡಣದಲ್ಲಿದ್ದ ಕುರುಗುಡ್ಡವು ಕೆಸರ ಬುರುದಿಯಿಂದ ಚಂದ್ರಾಮನನ್ನು ಕಸುವು ಕಿತ್ತು ಮ್ಯಾಲಕ ಯತ್ತುತಿರುವ ಕಾಲಕ್ಕ, ದಿವಟೋರ ಚಿನ್ನೂರಪ್ಪನ ಮಕ್ಕಳಾದ ಹಲಕುಂದಿ, ಸಾಲಗುಂದಿ, ಅಲಸಂದಿ, ಕಾಳಂದಿ, ಮುಕ್ಕುಂದಿ, ನಾಗಂದೀರು ದೀವಟಿಗೆಗಳಿಗೆ ಹಳ್ಳೆಣ್ಣೆ, ಕುಸುಬೆಣ್ಣೆ ಉರುರೆಂಉರುತ್ತಿರುವ ಕಾಲಕ್ಕ, ವಂಥಟಗಾದರೂ ಧೂಳು ಮ್ಯಾಲಕೇಳುತ್ತಿಲ್ಲವಲ್ಲಾಯಂದು ತಮ ಖುರಗಳ ಬಗ್ಗೆ ಅಯ್ಯಾತಿ ಕುದುರೆಗಳು ಯಸನ ಮಾಡುತ್ತಿರುವ ಕಾಲಕ್ಕ....

ರಣಮಾರೆವ್ವನ ಪವುಳಿ ಬಳಿ ಭೂತ ಬಿಲ್ಲೆ ದ್ಯಾಮಯ್ಯನು ವಂದೊಂದಾಗಿ ತನ್ನ ಸರೀರದ ಮ್ಯಾಲಿದ್ದ ಅರುವೆಗಳನ್ನು ವುತಾರ ಮಾಡುತಲಿದ್ದನು.. ಅಲ್ಲೇ ಯಿದ್ದ ಬನ್ನಿಮರಕ್ಕೆ ಆತನ ಕ್ರಿಯಾ ಪತ್ನಿಯು ತನ್ನ ಕೊರಳೊಳಗಿದ್ದ ಮಾಂಗಲ್ಯದ ಸರವನ್ನು ತೆಗೆದು ನೇತುಹಾಕುತಲಿದ್ದಳು.. ಅವರ ಮಕ್ಕಳು ಬೆಕ್ಕಸಬೆರಗಾಗಿ ವಂದೊಂದು ದ್ರುಸ್ಯವನ್ನು ಕಣ್ಣಿಂದ ತಿಂಬುತಲಿದ್ದವು.. ಸೂರ್ಯ ಪರಮಾತುಮನ ಕಯ್ಲಿ ಪಡುವಣ ದಿಕ್ಕು ಕೊಲೆಯಾಗಿ.. ಯಲ್ಲಿ ನೋಡಿದಡದಲ್ಲಿ ರಾಮಾರಗುತ ವರಕೊಂಡುಬಿಟ್ಟಿತ್ತು. ಸದರೀ ಕಗ್ಗೊಲೆಯನ್ನು ಮುಚ್ಚಿಹಾಕುವ ಹುನ್ನಾರಿನಿಂದಾಗಿ ಕರಿಗಂಬಳಿಯೊಂದು ಪಡುವಣದ ಕಳೇಬರದ ಮ್ಯಾಲ ಕವುಚಿಕೊಳ್ಳುತ್ತಿರುವುದನ್ನು ಗಮನಿಸಿದವನಾದ ಗಂಜಲನು ತಾನಿದ್ದ ಪ್ರಹರಿ ಗೋಡೆ ಮ್ಯಾಲಿಂದ ಘೋಷಿಸುತ್ತಲೇ ಯಿಬ್ಬಂದಿ, ಚಕ್ಕುಬಂದಿಯರು ತಮ ತಮ್ಮ ಕಯ್ಲಿದ್ದ

ಮಚ್ಚುಗಳಿಂದ ಟಗರುಗಳ ತಲೆಗಳನ್ನು ಕತ್ತರಿಸಿದೊಡನೆ 'ಜೀss' ಯಂದು ಹರಿಯ ತೊಡಗಿದ ರಕುತವನ್ನು ತಪಾಲೆಯಲ್ಲಿ ಸಂಗ್ರಹಿಸಿದ್ದು ಯಾರೆಂದರೆ ರಣಗೋಪನು. "ಅಗೋ.. ಮುಡು ಮುಡುನೆ ಮೂಡುತಾಯಿರೋ ಚಂದ್ರಾಮನ ಕಿರಣಗಳು ಬಂದಮೋ ಬಂದವು" ಯಂದು ಆತುಮಾಹುತಿ ದಿಬ್ಬದ ವ್ಯಾಲ ನಿಂತಿದ್ದ ಸೆಂಡ್ರನು ಘೋಷಿಸುತ್ತಲೇ ಥಳ ಥಳ ಹೊಳೆಯತೊಡಗಿದ ರಾಶಿ ರಾಶಿ ಜೋಳದ ಅನ್ನದ ಮ್ಯಾಲ ಕರಯ್ಯ ರಗುತ ಸುರಿದು ವಂದೇ ಸಮಕ ತಾಳಿಸತೊಡಗಿದಾಗ ಸವಾರೆವ್ವ ಮತ್ತಾಕೆಯ ಸಂಗಡಗಿತ್ತೇರು "ಮಾತಾಯಿ ಕಿವಿಗೋಳು ಜೋತುಬಿದ್ದಾವೆ.. ಕಯ್ಲಿ ಗಗ್ಗರ ಹಿಡಿದು ಜಗದಂಬೆ ಮಾಯದವತಾರ ಯತ್ಯಾಳೆsss.." ಯಂದು ಯದೆ ವುಬ್ಬಿಸಿ ಹಾಡಲಾರಂಭಿಸಿದರು ಸಿವನೇ.. ಆ ಅವರ ಬಾಯಿಂದ ಹೊರಟ ಆ ಹಾಡು ಅಲೆ ಅಲೆಯಾಗಿ ಪಟ್ಟಣದ ತುಂಬೆಲ್ಲ ಹಬ್ಬಲು....

ಹತ್ತಾರು ಮಂದಿ.. ನೂರಾರು ಮಂದಿ ಆ ನಾದದ ಹಾದಿಗುಂಟ ನಡೆದು ಬಂದರು. ಅದನು ನಾನು ತಗಂಬುತೀನಿ, ಯಿದನು ನೀನು ತಗಾss ಅಂತ ತಲಾಕೊಂದೊಂದು ಕವಂಗವ ತೆಗೆದುಕೊಂಡರು.. ಸರಗದ ಕೆಂಗಳೂ ತುಂಬಿಕೊಂಡರು..

*ಮಾಯಾದ ರೂಪssನೆ ತಾಳ್ಯಾಳ ತಾಯೀss*
*ನಿಗಿನಿಗೀಲೆ ವುರಿತಾಳೆ ಸ್ರೀದೇವಿ*
*ಕುದುರೆಡವ ಮನೆ ಮನೆಯ ಸಾಂಬವೀ ಬೋ ಪರಾಕ್....*

ಹ್ಹಾ.. ಹ್ಹಾ.. ಮೋರುಗಲ್ಲಯ್ಯನ ವಂದೊಂದು ಬಿರುಬೀಸಾದ ಮಾತಿನಿಂದ ದ್ಯಾಮಯ್ಯನು ಭೂತ ಬಿಲ್ಲೆಯನ್ನು ತನ್ನ ಮಯ್ಗೆ ಬರಮಾಡಿಕೋತಾನೆ.. ಅದು ತುಂಬಿಕೊಳ್ಳುವುದು ತಾನು ಸೇರಿಕೊಂಡ ಸರೀರವನ್ನುಂಡು ತೇಗಲಿಕ್ಕೆ ಸಿವನೇ.. ಅದು ಆತನ ಮಯ್ಯೊಳಗ ಬೆಳ್ಳಿ ಬಾರಕೋಲು, ಬಂಗಾರದ ಗುದ್ದಲಿ ಹುಡುಕಾಡಿ ಪಡಕೊಳ್ತಿದೆ ಸಿವನೇ.. ಅದರಿಂದ ಯಿದೂ.. ಯಿದರಿಂದ ಅದೂ ಆವೇಸ ಪಡಕೊಳ್ಳಲಕ.. ರವುಸ ಪಡಕೊಳ್ಳಲಕ.. ರುಮು ರುಮೂಂತ ರುಮ್ಮಿಗಳು.. ಡೊಳ್ ಡೊಳ್ ಅಂತ ಡೊಳ್ಳುಗಳು.. ಜಡ್ಡೆಣಕ್ಕು ಜಡಜಡ್ಡಿ ಣಕ್ಕೂಣಕ್ಕೂ ಅಂತ ತಮ್ಮಟೆಗಳು. ಪೀss ಪೀss ಅಂತ ಸೊನ್ನಾಯಿಗಳೂ.. ಭೂತಬಿಲ್ಲೆಯನ್ನು ಕೆಡವಿ ಸದರಿ ಪಟ್ಟಣದ ಫಸಲನ್ನು ಫಲವತ್ತು ಮಾಡಲಕ ನಾರಾಯಣ ವಕ್ಕಲು ಮಂದಿ ಬಡಿಗೆಗಳನ್ನು ತೆಗೆದುಕೊಂಡರು, ನರಸಿಮ್ಮನ ವಕ್ಕಲು ಮಂದಿ ಭರ್ಜಿ

ಹಿಡಕೊಂಡರು.. ಯಂಟಸ್ವಾಮಿ ವಕ್ಕಲು ಮಂದಿ ಯೀಟಿಗಳನ್ನು ತೆಗೆದುಕೊಂಡರು.. ಅದನು ನೋಡುತಲಿದ್ದ ಕೆಚ್ಚುಗಾರ ಮುಂಡೇರು, ನೆಗಾರ ಮುಂಡೇರು "ತಾಯಿss ಸಾಂಬವೀsss ಭೂತಬಿಲ್ಲೆಯ ಹೆಂಡತಿಯ ಸವುಭಾಗ್ಯೇವ ಕಾಪಾಡವ್ವಾ" ಯಂದು ಕಯ್ನು ಮುಗುದು ಬೇಡಿಕೊಳ್ಳುತ್ತಿರುವಾಗ್ಗೆ, ಹುಟ್ಟು ಮಾರ್ಗದೆಸೇಲಿದ್ದ ಭೂತಬಿಲ್ಲೆಯು ವುರಿಭಂಡಾರದೋಪಾದಿಯಲ್ಲಿ ಮೂರ ಮ್ಯಾರೆಗುಂಟ ನಡೆಯುತ್ತಿರುವಾಗ್ಗೆ ಆಕಾಸ ಮಾರ್ಗದಲ್ಲಿ ಚಂದ್ರಾಮನು ಅವಿತಿಟ್ಟುಕೊಳ್ಳಲು ವಂದು ತುಂಡು ಮೋಡಕ್ಕಾಗಿ ಹುಡುಕಾಡುತ್ತಿದ್ದಾನೆ ಸಿವನೇss..

*ನಿನ್ನ ಮಾಯೇನ ಕಂಡವರಿಲ್ಲ ಸಾಂಬವೀ..*

*ನಿನ್ನ ಕೂಡೆ ಯುದ್ಧ ಮಾಡಿ ಗೆದ್ದೋರಿಲ್ಲ ಸಾಂಬವೀss...*

*ನೀನು ಬೂದಿ ಮುಚ್ಚಿದ ಕೆಂಡ ತಾಯೀss*

*ಭೂಲೋಕಕುದ್ದಂಡೆ ತಾಯೀssss..*

ಸರುವರ ನಾಲಗೆ ವಳಗ ತುಳುಕಾಡುತ ನೀನು ಯಲ್ಲಲ್ಲಿದೀ ಅಂದರೆ ಅಲ್ಲೆಲ್ಲ ಅದೀ, ನಿನ್ನ ನೆನೆಯೋರ ಬಾಯಿ ಆರಬಾರದು.. ನಡೆವ ಅಂಗಾಲಲ್ಲಿ ಅಪ್ಪುಳಿ, ಬೊಬ್ಬುಳಿ ಯೇಳಬಾರದುss.. ಬೀಸುದೋಳು ಬಡವಾಗಬಾರದು.. ಬಾಯೊಳಗಿನ ತೊಂಬಲ ಕರಗಬಾರದು.. ಭಕುತಾದಿ ಮಂದಿಯನ್ನು ಹಂಗ ಸಲುವೇ ಮಂಗಳವಾರದ ಮಾಯಕಾರ್ತೇ.. ಬುಧವಾರದ ಬುದ್ಧಿವಂತೇ.. ಗುರುವಾರದ ಗುರುತ್ಮವಂತೆ.. ಸುಕ್ಕುರುವಾರದ ಸೂಸ್ತರ ರಮಣಿಯೇ.. ಸಣಿವಾರದ ಸನ್ನಡತೆಯೇ.. ಆಯ್ತುವಾರದ ಆದಿಲಚುಮಿಯೇ.. ಹಿಂಗss ಮುಂತಾಗಿ ಮಿತ್ರೇರು ಹಾಡುತಲಿದ್ದ ಗುಣಗಾನವನ್ನು ಕೇಳಿಸಿಕೊಂಡ ಸರುವ ಮುನ್ನೂರು ಕೋಟಿ ದೇವಾನುದೇವತೆಗಳು ಅಗೋಚರ ಸ್ಥಿತಿಯಲ್ಲಿ ಸದರಿ ಪಟ್ಟಣದ ಕಡೇಕ ದಯಮಾಡಿಸುತಿರುವಾಗ್ಗೆ.. ವಂದೊಂದು ಜೀವವು ತಣ್ಣಗಾಗತಯ್ತೆ.. ಅನ್ನದ ಮದ ಅಳೀತಯ್ತೆ.. ತನುವಿನ ಮದ ತಣ್ಣಗಾಗತಯ್ತೆ.. ತಣ್ಣಗಾಗುತಲಿದ್ದಂಥ ಪ್ರತಿಯೊಂದು ಜೀವಿಯು ಭೂತಬಿಲ್ಲೆ ಅತ್ತ ಮರೆಯಾಗುತ್ತಲೇ ಅಮ್ಮವಾರಿ ನಿಧಿಸ್ಥಳಕ್ಕ ಹೋಗಿ ಜಗಾನುಜ್ಯೋತಿ ಯಂಬಂತೆ ನೋಡುತಲಿದ್ದ ಚಂಡಮಾಶಯನ ದರುಸನ ಪಡಕಂತು. ತರುವಾಯ ಪರಾನು ಜ್ಯೋತಿ ಹೆಂಗಾಳ? ಜಗಾನು ಜ್ಯೋತಿ ಹೆಂಗಾಳ? ಯಂದು ಕನವರಿಕೆ ಮಾಡುತ ಬಂದು ನೋಡುತದ....

ಮೋಬಯ್ಯನೆಂಬುವ ವಸ್ತಿಯು ಬಂಗಾರದ ತಗಡಿನಂಥ ಜಗೇದ ಮ್ಯಾಲ ಯಿರಾಜಮಾನಗೊಂಡಯ್ತೆ ಸಿವನೇ.. ಹಂಪಜ್ಜನ ನಾಲಿಗೆ ಪಾತ್ರಧಾರಿಯಾದ ಗಂಟಲಯ್ಯ 'ಕೇಳಿರಯ್ಯಾ.. ಕೇಳಿರಿ.. ಬೇಯಿನ ರುಕ್ಷದಲ್ಲಿ ಹುಟ್ಟಿ ಹೊನ್ನರಳಿ ಮರದಲ್ಲಿ ಬೆಳೆದಂಥವಳಾದ ತಾಯ ಯದುರುಗಡೆ ಯಿರೋದು ಮಣ್ಣಿನ ಕುಡಿಕೆ ಅಲ್ಲರಯ್ಯಾ.. ಅದಕ ಕೇಲು ಅಂಬುತಾರೆ.. ಆ ಕೇಲೇ ಸಾಂಬವಿ, ಯಿ ಸಾಂಬವಿಯೇ ಕೇಲು.. ಅದರೊಳಗೆ ಯಿರುವುದು ಸಾಮಾನ್ಯ ವುದಕವಲ್ಲ.. ಸಾವುರ ಸಿಡುಲು, ವಂದು ಲಕ್ಷ ಗುಡುಗುಗಳ ಜಲರೂಪವದು.. ಕಾನನ ಕಾಡು ಸಮುಂದರ ನದಿಸ್ಥಿರ ಗುಡ್ಡ ಗವಿಗವ್ವರರಾರಣ್ಯ ಹಿಮಾಲಯ, ಭೂಲೋಕ ನರಸುರರ ಲೋಕ ಕಯ್ಲಾಸ ವಯಿಕುಂತ ಯಿವೆಲ್ಲಮೂದ್ರಾವಕ ರೂಪಧರಿಸಿ ಅಡಕವಾಗಯ್ತೆ ಅದರೊಳಗ"ಯಂದು ಹೇಳು ಹೇಳುತಲೇ ಭಕುತಾದಿ ಮಂದಿಯನ್ನು ಮಂತ್ರಮುಗ್ಧರನ್ನಾಗಿ ಮಾಡುತವನೆ ಸಿವನೇss..

ಅವನ ಬಲಗಯ್ಯಿ ಬಂಟನಾದ ಕಹಳಯ್ಯನು "ಯಿದು ಸುಳ್ಳುಯೆಂದು ವಾದಿಸುವ ನಾಸ್ತಿಕರಾದವರಿಗೆ ಯದೇಲಿ ಫಾಸಿ ಆಗತಯ್ತೆ, ನಾಲಿಗೇಲಿ ನೆತ್ತರುಣ್ಣು ಅಡರುತಯ್ತೆ.. ಮೂಗಿಗೆ ಪಿನಾಸಿ ಆಗುತಯ್ತೆ.. ಕಿವೀಲಿ ಕರ್ಣ ಕುಂಡಲಿ ಯೇಳುತಯ್ತೆ.. ಗಂಟಲಿಗೆ ಗಂಡಾ ಮಾಲೆ, ಜಂತಕ್ಕೆ ಜಂತಾ ಬಾವು, ತಲೇಲಿ ತಲೆಕೋವಿ, ಬೆನ್ನೀಗೆ ಬೆನ್ನಫಣಿ, ದೊಕ್ಕೇಗೆ ದೊಕ್ಕೆ ಹಣ್ಣು, ಪಚ್ಚೆ ಮ್ಯಾಲ ಪರಮೇಸೂರನ ಹುಣ್ಣು..."ಯಂದು ಮುಂತಾಗಿ ವಂದೇ ಸಮಕ ಹೇಳುತ್ತ ಭಕುತಾದಿ ಮಂದಿಯ ಬಾಯಿಗಳನ ವಣಗಿಸುತವನೆ ಸಿವನೇss..

ಹ್ವೋ...ಹ್ವೋ ಹಂಗಾಗತಯ್ತಾ! ಹ್ವಾ...ಹ್ವಾ.. ಹಿಂಗಾಗತಯ್ತಾ.. ಯಂದು ಮಂದಿ ತಮ ತಮ್ಮ ಬಿಟುಗೊಂಡ ಕಣ್ಣುಗಳೊಳಗ ತರಾವರಿ ಬ್ಯಾನೆ ಬ್ಯಾಸರಿಕೆ, ರೋಗ ರುಜಿಣಗಳ ಕಣಸು ಕಾಂಬುತ ಬೆಚು ಬೆಚ್ಚ ಬೀಳುತವರೇ ಸಿವನೇsss..

ಅತ್ತ ಸೂರ್ಯ ಪರಮಾತುಮನ ಮುಳುಗುವಿಕೆಯಿಂದಾಗಿ ಪಡುವಣ ಗೆಡ್ಡೇಲಿ ಅರಾಜಕತೆ ಕಾಣಿಸಿಕೊಂಡಿತ್ತು. ಕತ್ತಲೆಯು ರಾಯಭಾರಿಕೆ ವಹಿಸಿಕೊಂಡಿತ್ತು. ಯಿತ್ತ ಚಂದ್ರಾಮ ವುದಿಸುತ್ತಲೇ ಮೋಬಯ್ಯ ಡೇಗಿದ್ದು ಆ ಗಲಾಟೆಯೊಳಗೆ ಯಾರಿಗೂ ಕೇಳಿಸಲಿಲ್ಲ...

*ಕೊಪ್ಪರಿಗೆ ಚಿನ್ನ ಬೇಡುವಾಕಿಯಲ್ಲ*

*ಮೇಲುಪ್ಪರಿಗೆ ಮನೆ ಬೇಡುವಾಕಿಯಲ್ಲ*

*ವಂದು ಹಿಡಿ ಭಕುತಿ ಕೊಟ್ಟವರೆದೆಯೊಳಗ*

*ತಾಯ್ತನವ ಬಿತ್ತಿ ಬೆಳೆವಾಕಿ*

*ಸಾವುರ ಸಂತಾನವ ಕರುಣಿಸುವಾಕಿ*

ಯಂದು ಮುಂತಾಗಿ ಹಾಡು ಹಾಡುತಲಿದ್ದ, ಹಾಡಿನ ಮೂಲಕ ಕೊಂಡಾಡುತಲಿದ್ದ ಗೊಗ್ಗಯ್ಯನ ಕಡೆ ನೋಡು ನೋಡುತ್ತ ವಸ್ತಿ ಹ್ಹಾ.. ಯಂದು ಆಕಳಿಸಿದೊಡನೆ ಸಿವನ್ನಾಮ ಪಾರೋತಿ ಪತಿ ಹರಹರ ಮಾದೇವss... ನೂರೊಂದನೆ ಸಲಕ್ಕ ಟಗರೊಂದು ಬಲಿಗೊಂಡು ಸಿವನೇss...

*ಬಲಗಾಲು ಕೊಯ್ದು ಬಾಯಿಗೆ ಕೊಟ್ಟೇವು*

*ಹೊಟ್ಟೆ ಕರುಳ ಕಿತ್ತು ನಿನ ಮುಂದ ಹರಡೇವು*

*ತಾಯೇ ದಯೆಮಾಡು...*

ಯಂದು ಹಾಡುತಲಿದ್ದ ಚರಕಲಯ್ಯನ ಕಡೇಕ ನೋಡೂತ ವಸ್ತಿಮೋಬಯ್ಯ ಲಟ ಲಟಾಂತ ಮಯ್ನ ಮುರಿದೊಡನೆ ನೂರೆರಡನೇ ಸಲಕ ಬಲಿಗೊಂಡ ಟಗರಿನ ರುಂಡವು ಮೆಹೆಹೇ ಅಂತ ನಿಶ್ಚಲಗೊಂಡಿತು ಸಿವನೇ...

*ಹ್ಹಾ..ಹ್ಹಾ.. ವಸ್ತೀಯ ಸರೀರದೊಳಗ ಯಚ್ಚರಾಗ್ಯಾಳ ತಾಯೀ..*

*ಹ್ಹಾ.. ಹ್ಹಾ... ಪಟ್ಟೆ ಪೀತಾಂಬುರವ ವುಟ್ಟವಳೆ ರವುಕೆ ತೊಟ್ಟವಳೆ*

*ಹ್ಹಾ.. ಹ್ಹಾ.. ತುರುಬು ಬಿಗಿದವಳೆ ಮಣಮಣ ಹುವ್ವ ಮುಡುದವಳೆ*

*ಹ್ಹಾ.. ಹ್ಹಾ.. ಹಣೆ ಮ್ಯಾಲ ತಿಲಕ ಬೊಟ್ಟನಯಿಟ್ಟವಳೆ ತೊಂಬಲ ನಮಲುತವಳೆ..*

*ಹ್ಹಾ.. ಹ್ಹಾ.. ಮಲ್ಲೀಗೆ ಮಹಾಕಾಂತೆ ಆನಂದ ಹೊಂದಿ ಮಂಡೀಗೆ ಕಯ್ನ ಹಚ್ಚಿ ಮ್ಯಾಲ ಕೇಳುತಲವಳೆ ಹ್ಹಾ.. ಹ್ಹಾ.. ಹೋ ಹೋ....*

ರುಮುರುಮು ರುಮ್ಮಿಗಳದು ಯೇನು ಹೇಳಲಿ ಸಿವನೇ.. ಡೊಳ್ ಡೊಳ್ ಡೊಳ್ಳುಗಳದು ಯೇನು ಹೇಳಲಿ ಸಿವನೇ.. ಮೆಹೆಹೇ ಯಂದು ಆನಂದೋದ್ಗಾರ ಹೊಂಡಿಸುತಲಿದ್ದ ಸಾವುರಾರು ಟಗರು ಮ್ಯಾಕೆಗಳ ಸಂಭರವ ಯೇನು ಹೇಳಲಿ ಸಿವನೇ....

ಸಿವನ್ನಾಮ ಪಾರೋತೀ ಪತಿ ಹರಹ ಮಾದೇವಾss...

ಪಲ್ಲಾಕಿ ಬಂತು.. ಅದು ಸೊರಗುದ ತುಂಡಿನಂಗಿತ್ತು.. ಸಿವನ್ನಾಮವೇ.. ಸಾಂಬವಿಯು ಆತುಮ ಸೊರೂಪಿಯಾದ ಕೇಲನ್ನೆತ್ತಿ ಹುವ್ವಿನ ಮಂಟಪದೊಳಗಿಡಲಕೆಂದು ಮಡಿವುಡಿಯಿಂದ ಬಂದೋರು ವಬ್ಬಾರ, ಯಿಬ್ಬಾರ,

ಸಿವಸಿವಾ.. ಅಂಥವರ ತಲೆಗಳನ್ನೆಣಕೆ ಮಾಡಿದರ ನೂರಾರು ಮಂದಿಯಾಗುತಾರೆ.. ಹುಟ್ಟಿನ ಪಲ್ಲಕ್ಕಿಯನೊಲ್ಲೆ ಯಂದು ವಸ್ತಿ ಅಂದುದಕ್ಕೆ ಭಕುತಾದಿ ಮಂದಿಯು ತಾಯಿೊ ನೀನು ಯದರಾಗ ಕುಂಡ್ರುತೀ ಅಂಬುದನ ಬಾಯಿಬಿಟ್ಟು ಹೇಳವ್ವಾ ಯಂದು ಅಂಗಲಾಚಿ ದುದಕ್ಕೆ ಸಾಂಬವಿಯು ವಸ್ತಿ ದ್ವಾರಾ ಬಗಸಿದ್ದೇನೆಂದರೆ... ಸಿವ ಸಂಕರ ಮಾದೇವಾss...

ಬ್ಯಾಡ ತಾಯೀ ಅವರಿವರು ಕುಂತು ಅದು ಯಂಜಲೆಲೆ ಆಗಯ್ತೆ.. ಜಗದಂಬೆಯಾದ ನೀನು ಅದರ ಮ್ಯಾಲ ಆರೂಢಳಾಗುವುದೆಂದರೇನು? ಯಂದು ಪರಿಪರಿಯಿಂದ, ಅದು ಅದೇ ಬೇಕೆಂದು ಹಠ ಹಿಡಿದ ಪರಿಣಾಮವಾಗಿ....

ಸಾವುರಾರು ಸಂಖೇಲಿದ್ದ ಮಂದಿ ವುಘೇ ವುಘೇ ಅಂತ ನಿನಾದವ ಮಾಡಿತು. ಯಾರ ಬಾಯನ ತೆರೆದು ನೋಡಿದರೂ ತಾಯಿ ಸಿಮ್ಮಾಸನ ಬಗಸ್ಯಾಳ ಯಂಬುವ ಮಾತು!

* * * *

ಅತ್ತ ಸಮಸ್ತ ಅಗ್ರಹಾರಗಳಿಗೊಡೆಯರೆಂದು ಯೇಕಗ್ರೀವವಾಗಿ ಚುನಾಯಿತಗೊಂಡಿದ್ದ ಯೇದಾಂತಿ ರಣ ಮಾಂಡ್ಯವ್ಯಮಾಚಾರ್ಯರು ಸಭೆಯಲ್ಲಿ ಭಾಗವಹಿಸಿದ್ದ ಕರ್ಮಠರನ್ನುದ್ದೇಶಿ "ನೋಡಿರಯ್ಯಾ ನೋಡಿರಿ.. ಕುಂಪಣಿ ಸರಕಾರದಿಂದ ಹಿಂದೂ ಧರ್ಮಕ್ಕ ಅಳಿಗಾಲ ಸಮೀಪಿಸಯ್ತೆ.. ಪ್ರತಿಭಟಿಸಬೇಕು.. ಯಿಲ್ಲಾ ಮಡಿದು ವಯಕುಂಠವಾಸಿ ಗಳಾಗಬೇಕಿರುವುದು" ಯಂದು ಕರೆ ನೀಡಿದೊಡನೆ ಸಭೆಯು ವಯಕುಂಠ ವಾಸಿಯಾಗುವುದೇ ಯಂದು ಮರು ಜವಾಬು ನೀಡಿತು. ಆತುಮವನ್ನು ಸೊಯಂ ಹತ್ಯೆಗಯ್ಯುವುದರಿಂದ ಯಷ್ಟು ಪಾಪ ಪ್ರಾಪ್ತಿಯಾಗುವುದೋ ಆತುಮವನ್ನು ಆಹುತಿ ಮಾಡುವುದರಿಂದಲೂ ಅಷ್ಟೇ ಪಾಪ ಪ್ರಾಪ್ತಿಯಾಗುವುದು. ವಂದನ್ನು ಬದುಕಲು ಹೆದರುವ ಹೇಡಿಗಳು ಮಾಡಿದರ, ಯಿನ್ನೊಂದನ್ನು ಪಲಾಯನವಾದಿಗಳು ಮಾಡುವರು. ಆದ್ದರಿಂದ ಯಿವೆರಡೂ ಸಲ್ಲದು. ಆದ್ದರಿಂದ ಮೊದಲು ತಮ ತಮ್ಮ ಅಗ್ರಹಾರಗಳೊಳಗೆ ತಲೆಯತ್ತುತಲಿರುವ ಪಾಪಿಷ«ಮೂ, ನರಕಸದ್ರುಶಮೂಆದ ಯಿಂಗ್ಲೀಷು ಭಾಷೆಯ ಕತ್ತು ಹಿಡಿದು ಹೊರ ತಳ್ಳುವ ಕಾರ್ಯವನ್ನು ವಗ್ಗಟ್ಟಿನಿಂದ ಮಾಡುವುದು, ತಮ ತಮ್ಮ ಅಗ್ರಹಾರದ ವಟುಗಳು ಹ್ಯಾಟು ಸೂಟು ಬೂಟುಗಳಿಗೆ ಮರುಳಾಗದಂತೆ ಯಚ್ಚರವಹಿಸುವುದು, ಯೀ ಪ್ರಯತ್ನವು ಫಲಕಾರಿಯಾಗದಿದ್ದ ಪಕ್ಷದಲ್ಲಿ

ಅಣಿಮಾಂಡವ್ಯಮಾಚಾರ್ಯರ ನೇತ್ರುತ್ವದಲ್ಲಿ ನಿಯೋಗಮೊಂದು ಕಲೆಟ್ಟರು (ಅಯ್ಯೋ ತಮ್ಮ ನಮಕ ಚಮಕದ ಜಿಹ್ವೆಯಿಂದ ಯೀ ಯಿಂಗ್ಲಿಷು ಸಬುಧವು!. ಛೆ..ಛೇ..ಯಿದಕ್ಕೆ ಸಮುಸ್ಕೃತದಲ್ಲಿ ಪರ್ಯಾಯವಾಗಿ ಯೇನುಂಟು?) ಸಾಹೇಬ (ಯಿದೂ ಮ್ಲೇಚ್ಛಸಬುಧವೇ) ನಾದ ಥಾಮಸು ಮನ್ರೋ (ಅಯ್ಯೋ ಸಾಂತಂ ಪಾಪಂ! ಯೀ ನಾಮವಾಚಕವನ್ನು ಸಮುಸ್ಕ್ರತದಲ್ಲಿ ಯಾವ ರೀತಿ ಹೇಳುವುದು!) ನನ್ನು ಭೆಟ್ಟಿ ಮಾಡಿ, ಚರಚೆ ಮಾಡುವುದು.. ಯಿತ್ಯಾದಿ.. ಯಿತ್ಯಾದಿ ನಿರ್ಣಯಗಳನ್ನು ಸಭೆಯು ಯೇಕಗ್ರೀವಂಗಾ ಕಯ್ಕೆ ಕೊಳ್ಳಲಾಯಿತು.. ಭಾಗವಹಿಸಿದ್ದ ಆಚಾರ್ಯರೆಲ್ಲರೂ ಮನುಸ್ಮೃತಿಯ ಮ್ಯಾಲ ತಮ ತಮ್ಮ ಹಸ್ತಂಬುಜಲನು ಯಿಟ್ಟು ಪ್ರತಿಗ್ನೆ ಮಾಡಿದರು. ಸಬೆ ಬರಖಾಸ್ತಾಯಿತು.. ಅವರೆಲ್ಲ ತಮ ತಮ್ಮ ಅಗ್ರಹಾರಂಗಳಿಗೆ ಚದುರಿ ಸೇರಿಕೊಂಡ ರೆಂಬಲ್ಲಿಗೆ..

ಯೀ ಪ್ರಕಾರವಾಗಿ ಸೇರಿಕೊಂಡ ಆಚಾರ್ಯರು ಪ್ರತಿಯೊಂದು ಗ್ರುಹದ ಯಜಮಾನನನ್ನು ಖುದ್ದ ಕಂಡು ನೀವು ನಿಮ ನಿಮ್ಮ ಗೋಡೆಗಳನ್ನು, ತುಳಸಿಕಟ್ಟೆಗಳನ್ನು ನಿಮ ನಿಮ್ಮ ಜಿಹ್ವೆಗಳನ್ನು ಮುಖ್ಯವಾಗಿ ನಿಮ ನಿಮ್ಮ ಮನಸ್ಸುಗಳನ್ನು ಫಲಾನ ಭಾಷೆಯಿಂದ ರಕ್ಷಿಸಬೇಕೆಂದು ಹೇಳ ತೊಡಗಿದರು.. ಅದಕ್ಕವರು ಸಮ್ಮತಿಸಿದ ಫಲವಾಗಿ, ಅವರವರ ಕುಟುಂಬದ ಸ್ತ್ರೀಸದಸ್ಯರು, ಬಾಲಸದಸ್ಯರು ಸಹಕಾರ ನೀಡಿದ ಫಲವಾಗಿ...

ಸುಣ್ಣಬಣ್ಣ ಪೊರಕೆಗಳ ಬೇಡಿಕೆ ಹೆಚ್ಚಿತು. ಯಲ್ಲೆಲ್ಲಿ ಯಿಂಗ್ಲೀಷು ಅಕ್ಷರಗಳಿದ್ದಮೋ ಅವುಗಳ ಮ್ಯಾಲೆಲ್ಲ ಸುಣ್ಣ ಲೇಪಿಸುವ, ಯಲ್ಲೆಲ್ಲಿ ಹ್ಯಾಟು ಸೂಟು ಬೂಟುಗಳ ವಯ್ಯಾರದ ಚಿತ್ರಗಳಿದ್ದಮೋ, ಅವುಗಳ ಮ್ಯಾಲೆಲ್ಲ ಬಣ್ಣವನ್ನು ಲೇಪಿಸುವ ಕಾರ್ಯಗಳು ಅಹರ್ನಿಶಿ ನಡೆಯುಲಾರಂಭಿಸಿದ ಪರಿಣಾಮವಾಗಿ..

ಆಚಾರ್ಯರು ತಮ ತಮ್ಮ ಅಗ್ರಹಾರದ ವಂದೊಂದು ಬೀದಿಯಲ್ಲಿ ಆಯಾರ್ಮೋಣಿಯ ಸದಸ್ಯರನ್ನುದ್ದೇಶಿಸಿ ಯಿಂಗ್ಲೀಷು ಭಾಷಾ ಪ್ರಚಾರಕರನ್ನು, ಯಿಂಗ್ಲೀಷು ಭಾಷೆಯ ರೂಪದರ್ಸಿಗಳನ್ನು, ಕಲಿತು ಕಲಿಸಲೆಂದು ಬರುವವರನ್ನು ಯಾವ ಕಾರಣಕ್ಕೂ ಹತ್ತಿರ ಸುಳಿಯದಂತೆ ನೋಡಿಕೊಳ್ಳಬೇಕೆಂಬ, ಅವರ ಅಮೇಧ್ಯ ನೆರಳು ಸೋಂಕದಂತೆ ಯಚ್ಚರವಹಿಸಬೇಕೆಂಬ, ಅವರನ್ನು ಮಾತಾಡಿಸಲೇಕೂಡದೆಂಬ, ಅವರಿಗೆ ಯಾವ ರೂಪದಲ್ಲಾದರೂ ಅಗ್ನಿ, ಜಲ, ಆಹಾರವನ್ನು ಪೂರಯಿಸಬಾರದೆಂಬ ಸಲಹೆ ನೀಡಿದ ಪರಿಣಾಮವಾಗಿ....

ಅವರು ಅಲ್ಲಿ ಬರುತ್ತಿರುವರೆಂದರೆ ಯಿವರು ಯಿಲ್ಲೇ ಮರೆಯಾಗಲಾರಂಭಿಸಿದರು, ಅನಿವಾರ್ಯವಾಗಿ ಅವರ ನೆರಳು ತಮ ದೇಹದ ಮ್ಯಾಲ ಬಿತ್ತೆಂದರೆ ಮರುಕ್ಷಣ ಸ್ನಾನ ಸಂಧ್ಯಾವಂದನೆ ಮಾಡಿ ಪಾಶ್ಚಾತ್ಯಾಪೀ ಮಂತ್ರಪಠಣ ಮಾಡತೊಡಗಿದರು.. ಅನಿವಾರ್ಯವಾಗಿ ಅವರೊಂದಿಗೆ ಸಂಭಾಷಿಸಲೇ ಬೇಕಾದಾಗ ಮರುಕ್ಷಣ ತಮ ತಮ್ಮ ಗ್ರುಹಗಳನ್ನು ಪ್ರವೇಶಿಸಿ ತಮ ತಮ್ಮ ಜಿಹ್ವೆಗಳನು ಜಗ್ಗಾಡಿಯೋ, ಮೂದಿನಕಡ್ಡಿಯ ತುದಿಯಿಂದ ಚುರುಕು ಮುಟ್ಟಿಸಿಯೋ ಪ್ರಾಯಃಶ್ಚಿತ್ತ ಶಿಕ್ಷೆ ನೀಡಿಕೊಳ್ಳತೊಡಗಿದರು. ಅನಿವಾರ್ಯವಾಗಿ ಅವರ ಮ್ಲೇಚ್ಛ ಭಾಷೆ ಯಿನ್ನೇನು ಬೀಳಲಿದೆಯನ್ನುವಷ್ಟರಲ್ಲಿ ತಮ ತಮ್ಮ ಹಸ್ತಾಂಬುಜಗಳಿಂದ ತಮ ತಮ್ಮ ಕರ್ಣಂಗಳನ್ನು ಮುಚ್ಚಿಕೊಳ್ಳಲಾರಂಭಿಸಿದರು..

ವಂದೊಂದು ಅಗ್ರಹಾರದ, ವಂದೊಂದು ಗೋಡೆಯ ಮ್ಯಾಲ ಯಷ್ಟು ಸಾಧ್ಯಮೋ ಅಷ್ಟು ಸುಂದರವಾಗಿ ಮರ್ಯಾದಾ ಪುರುಷೋತ್ತಮನ ಯಿಯಿಧ ಭಂಗಿಗಳ ಬಹುವರ್ಣ ಚಿತ್ರಗಳನ್ನು ಬರೆಯಿಸಲಾರಂಭಿಸಿದರು.. ಮನುಸ್ಮೃತಿ, ಭಗವದ್ಗೀತೆಯ ಪ್ರಮುಖ ಸ್ಲೋಕಗಳನ್ನು ಬರೆಯಿಸಲಾರಂಭಿಸಿದರು.. ಯಷ್ಟು ಸಾಧ್ಯಮೋ ಅಷ್ಟು ಕರ್ಮಠತೆಯಿಂದ ರಾರಾಜಿಸ ಲಾರಂಭಿಸಿದರು. ಪಯಿತ್ರತುಳಸಿ ಸಸಿಗಳನ್ನು, ದರ್ಬೆಗಳನ್ನು ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಸಂತರಸ್ತರಿಗೆ ಯಿತರಣೆ ಮಾಡುತ್ತ, ಮಾಡಿಸಲಾರಂಭಿಸಿದರು..

ಆಚಾರ್ಯರು ಪಂಚ ಅಗ್ರಹಾರಗಳ ವಕ್ಕೂಟವನ್ನುದ್ದೇಶಿಸಿ, ಅಗ್ರಹಾರ ಅಗ್ರಹಾರದ ನಡುವೆ ಸಮನ್ವಯ ಯಿರಬೇಕಂದೂ, ಸೊಯಂ ಸೇವಕರು ಅಕ್ಕಪಕ್ಕದ ಅಗ್ರಹಾರಗಳೊಂದಿಗೆ ನಿಕಟ ಸಂಪರ್ಕ ಯಿಟ್ಟುಕೊಳ್ಳಬೇಕೆಂದೂ ಹೇಳಿದ ಪರಿಣಾಮವಾಗಿ....

ಯೀ ಅಗ್ರಹಾರದವರು ಆ ಅಗ್ರಹಾರದ ಕಡೆಗೂ, ಆ ಅಗ್ರಹಾರದವರು ಯೀ ಅಗ್ರಹಾರದ ಕಡೆಗೂ ಹೋಗಿ ಬರಲಾರಂಭಿಸಿದರು, ಪುರುಷೋತ್ತಮನಿಗೇ 'ಮರ್ಯಾದಾ' ಯಂಬ ಬಿರುದನ್ನು ಮುಡಿಸಿದ ಆಂಜನೇಯ ಸ್ವಾಮಿಯನ್ನು ಆದರ್ಸವಾಗಿಟ್ಟುಕೊಂಡರು.. ಮಣಿಕಂಠಾಪುರ ಅಗ್ರಹಾರದ ಕಲಾಯಿದ ರಜತಾಚಾರ್ಯನು ಆಂಜನೇಯ ಸ್ವಾಮಿವುಳ್ಳ ಬಾವುಟವನ್ನು ರಚನೆ ಮಾಡಿಕೊಡುವ ಗುರುತರ ಕಾರ್ಯವನ್ನು ವಹಿಸಿಕೊಂಡ. ಅದಕ್ಕೆಂದೇ ಚಂದನಾಪುರಕ್ಕೆ ಹೋಗಿ ಆಂಜನೇಯಸ್ವಾಮಿ ಯಿಷಯದಲ್ಲಿ ಅನೇಕ ಸಮುಶೋಧನೆಗಳನ್ನು ಮಾಡಿ ರುಗ್ಣಶಯ್ಯೆಯಲ್ಲಿದ್ದ ಹಯಗ್ರೀವಾಚಾರ್ಯರನ್ನು ಕಂಡು ಚಿಂತನ ಮಂಥನ ನಡೆಸಿದ.

ವಾಯುಪುತ್ರನ ಯಿಯಿಧ ಭಂಗಿಗಳನ್ನು ಅಭ್ಯಾಸ ಮಾಡಿದ.. ಅಂತಿಮವಾಗಿ ಮಾರುತಿಯ ಸಾಕ್ಷಾತ್ಕಾರ ಪಡಕೊಳ್ಳುವಲ್ಲಿ ಯಶಸ್ವಿಯಾದ..

ಯಡಗಯ್ಲಿ ಗದೆಯನ್ನೂ, ಬಲಗಯ್ಲಿ ಸಂಜೀವಿನಿ ಪರುವುತವನ್ನೂ, ಹಿಡಕೊಂಡಿರುವ ಆಂಜನೇಯಯ ಸ್ವಾಮಿ ಆಕಾಶಮಾರ್ಗವಾಗಿ ವಂದೆರಡು ಮೋಡಗಳ ನಡುವೆ ಹಾರುತ್ತ ಸಾಗಿರುವನು. ವಪ್ಪಿಗೆ ಪಡೆಯುವ ನಿಮಿತ್ತ ಸೊಯಂ ಸೇವಕರೊಡನೆ ರಜತಾಚಾರ್‍ಯನು ಮೋಕ್ಷ ಅಗ್ರಹಾರಕ್ಕೆ ಹೋಗಿ ಅಣಿಂಯಾಂಡವ್ಯವಾಚಾರ್‍ಯರಿಗೆ ತೋರಿಸಿದನು. ಅವರು ಅದನ್ನು ಪರಾಮರ್ಸಿಸಿದರು. ಮೆಚ್ಚಿದರು, 'ದೀರ್ಘಾಯುಷ್ಮಾನ್ ಭವ' ಯಂದು ಹರಿಸಿದರು, ಅದಕ್ಕೆ 'ಜಯ್ ಭಜರಂಗಬಲಿ'ಯಂದು ನಾಮಕರಣ ಮಾಡಿದರು.. ಹೇಳುವುದ ಹೇಳಲಕ, ಕೇಳುವುದ ಕೇಳಲಕ ಸಮುಸ್ಕೃತ ಭಾಷೆಯನ್ನು ಬಳಕೆ ಮಾಡುವುದನ್ನು ಅಪ್ಪೀ ತಪ್ಪೀ ಮರೆಯಲಿಲ್ಲ..

'ಜಯ್ ಭಜರಂಗಬಲಿ'ಯಂದು ನಿನಾದಗಯ್ದು ಅವರು ತಮ್ಮ ತಮ್ಮ ಅಗ್ರಹಾರಗಳನ್ನು ಸೇರಿಕೊಂಡರೋ ಸೇರಿಕೊಂಡರು. ತಮ ತಮ್ಮ ಅಗ್ರಹಾರದ ಬಾಲಕ, ಬಾಲಕಿಯರು ಹೆಂಗಿರಬೇಕು? ಹೆಂಗಿರಕೂಡದು? ಮುದುಕ ಮುದುಕಿಯರು ಹೆಂಗಿರಬೇಕು? ಹೆಂಗಿರಕೂಡದು? ಯಿವಾಹಿತರು ಹೆಂಗಿರಬೇಕು? ಹೆಂಗಿಕೂಡದು? ಗ್ರುಹಸ್ಥಾಸ್ರಮಧರ್ಮ: ವಾನಪ್ರಸ್ತಾಸ್ರಮಧರ್ಮ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಯಂದು ಮುಂತಾಗಿ ನಿರ್ದೇಸನ ಮಾಡಲಾರಂಭಿಸಿದರು. ಪ್ರತಿಯೊಬ್ಬರೂ ಯಿಂತಿಷ್ಟೇ ಸಂಖ್ಯೆಯಲ್ಲಿ ರಾಮನಾಮ ಜಪಿಸಬೇಕೆಂದು ಆಗ್ನೆ ಮಾಡಲಾರಂಭಿಸಿದರು. ಜೊತೆಗೆ ತಮ್ಮ ಅಗ್ರಹಾರದ ಸಮವಸ್ತ್ರವ ಕೇಸರಿಮಯ ವಾಗಿರಬೇಕೆಂದು ಕೂಡ. ತಮ್ಮ ನೇತಾಜಿ ಅಣಿಮಾಂಡವ್ಯವಾಚಾರ್‍ಯರವರ ನಿರ್ದೇಸನದ ಪ್ರಕಾರ ತಮ ತಮ್ಮ ಅಗ್ರಹಾರಗಳದ್ದೇ ಆದ ಸಂಯಿಧಾನ, ನೀತಿಸಂಹಿತೆ, ದಂಡಸಂಹಿತೆ ರಚನೆ ಮಾಡಿಕೊಳ್ಳದೆಯಿರಲಿಲ್ಲ ಆ ಹಿಂದೂ ರಕ್ಷಕ ಭಟರು. ಯಾರು ಸಂಯಿಧಾನ ಯಿಧಿಯಿಧಾನಗಳನ್ನು ಚಾಚೂ ತಪ್ಪದೇ ಪಾಲಿಸುವುದಿಲ್ಲಮೋ, ಯಾರು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಅಂಗ್ರೇಜಿಯ ಕಡೇಕ ವಲಿದು ಸಹಕರಿಸುವರೋ, ಅಂಥವರನ್ನು ತಮ್ಮ ಗೂಢಚಾರರಿಂದ ಪತ್ತೆಹಚ್ಚಿ ದಂಡ, ಶಿಕ್ಷೆ ಯಿಧಿಸಲಾರಂಭಿಸಿದರು. ಮೊದಲ ಮೊದಲು ತರೆಮರೆಯಲ್ಲಿ, ಗುಟ್ಟಾಗಿ ನಡೆಯುತಲಿದ್ದ ಯಿ ಸಂರಕ್ಷಣಾ ಕಾರ್‍ಯಸೂಚಿಯು ಬರುಬರುತ್ತ

ರಾಜಾರೋಷವಾಗಿ ನಡೆಯಲಾರಂಭಿಸಿತು. ಸೊಯಂ ಸೇವಕರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿತು. ಹಿಂದೂ ಧರ್ಮ ರಕ್ಷಣೆ ಕೇವಲ ಬಾಯಿಮಾತಿನಲ್ಲಿದ್ದರೆ ಸಾಲದೆಂದು ಭಾವಿಸಿ, ಸೊಯಂ ಸೇವಕರು ಸಮಯ ಬಂದಲ್ಲಿ ಶಸ್ತ್ರಗಳನ್ನು ಹಿಡಿದು ಪ್ರಯೋಗಿಸು ವಂತಾಗಬೇಕೆಂದು ಕರೆಕೊಟ್ಟರು. ಅದರ ಪರಿಣಾಮವಾಗಿ ಸೋಯಂ ಸೇವಕರಿಗೆ ಅಂಗ ಸಾಧನೆ, ಕವಾಯತು, ಯಾವ ಶಸ್ತ್ರವನ್ನು ಯಾರ ಮ್ಯಾಲ, ಯಾವ ರೀತಿ ಪ್ರಯೋಗಿಸಬೇಕು ಯಂದು ಕಲಿಸಲಾರಂಭಿಸಿದರು.. ವಂದೊಂದು ಅಗ್ರಹಾರದಲ್ಲಿ ಯಿೂ ಪ್ರಕಾರವಾಗಿ ಹೆಚ್ಚಿದ ಸೊಯಂಸೇವಕರು ತಮ ತಮ್ಮ ಅಗ್ರಹಾರಗಳಿಂದ ಹ್ಯಾಟು, ಸೂಟು, ಬೂಟಿನ ಅಂಗಡಿಗಳನ್ನು, ಯಿಂಗ್ಲೀಷು ಶಿಕ್ಷಣ ಪ್ರಚಾರಕರನ್ನು, ದಟ್ಟು, ದಿಸ್ಸು ಯಂದು ಹೇಳಿಕೊಡಲಕ ಯಂದು ಯಿದ್ದಂಥ ಶಿಕ್ಷಕರನ್ನು ಬಲವಂತವಾಗಿ ಗದುಮಲಾರಂಭಿಸಿದರು. ಯಿಷ್ಟು ಸಾಲದೆಂಬಂತೆ ಕುಂಪಣಿ ಸರಕಾರದ ಅಧಿಕಾರಿಗಳು, ನವುಕರರು ತಮ್ಮ ಅಗ್ರಹಾರದೊಳಗೆ ಸುಳಿಯದಂತೆ ಯಚ್ಚರವಹಿಸಿದರು.. ಅನೇಕ ಕಡೆ ಸೊಯಂಸೇವಕರ ಲತ್ತೆ ಸೇವೆಯಿಂದ ಅಂಗ ಹೀನಗೊಂಡ ಆಂಗ್ಲರು ತೆವಳುತ್ತ ಹೋಗಿ ತಮ್ಮ ಮೇಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದುಂಟು. ಆ ಮೇಲಾಧಿಕಾರಿಗಳು ಖುದ್ದ ಹೋಗಿ ಥಾಮಸು ಮನ್ರೋ ಸಾಹೇಬನೆದುರು ಅಗ್ರಹಾರಗಳ ಸೊಯಂ ಸೇವಕರು ಕ್ಷಾತ್ರತೇಜದಿಂದ ಮಿನುಗುತಲಿರುವರು ಯಂದು ಯಿವರಿಸಿದ್ದುಂಟು. ಆಗ ನಮ್ಮ ಕಲೆಟ್ಟರ ಸಾಹೇಬನು, ತನ್ನ ಸರಕಾರದಲ್ಲಿ ಧರ್ಮಯಿಭಾಗದಲ್ಲಿ ಕಾರ್ಯ ನಿರ್ವಹಿಸುತಲಿದ್ದ ಪಂಡಿತ, ಯಿದ್ವಾಂಸರನ್ನು ತನ್ನ ಸಮಕ್ಷಮ ಕೂಡ್ರಿಸಿಕೊಂಡು ಬ್ರಹ್ಮಹತ್ಯೆ ಮತ್ತು ಸಂಭವಾಮಿ ಯುಗೇ ಯುಗೇ ಯಿೂ ಯರಡು ವಿಷಯಗಳ ಕುರಿತು ಸುದೀರ್ಗ ಚರ್ಚೆ ನಡೆಸಿದನೆಂಬಲ್ಲಿಗೆ ಸಿವಸಂಕರ ಮಾದೇವಾ..

ಅತ್ತ ಹರಪನಹಳ್ಳಿಯೊಳಗ ಪ್ರಧಾನ ಕಾರಖೂನ ಹಂಪರಸಪ್ಪಯ್ಯನು ಸ್ಟೂವರ್ಟನಿಗೆಂದೇ ಬಂದಿದ್ದ ಯಚ್ಚರಿಕೆ ಪತ್ರವನ್ನು ಗುಟ್ಟಾಗಿ ಯದೆಯೊಳಗೆ ಯಿಟ್ಟುಕೊಂಡಿದ್ದನಷ್ಟೆ. ಬ್ರಹ್ಮಹತ್ಯೆಯ ಭಯದಿಂದಾಗಿ ಯಿದ್ರೋಹಿ ಗವುಡನ ಕಡೆಯವರು ತನ್ನನ್ನು ಕೊಲ್ಲಲಾರರೆಂದೂ, ಸ್ಟೂವರ್ಟನ ಮ್ಯಾಲ ಹಲ್ಲೆಯಾಗಲೀ, ಹತ್ಯೆಯಾಗಲೀ ನಡೆಯಭೌದೆಂದೂ, ಪತ್ನಿಯ ಸ್ಥಾನದಲ್ಲಿರುವ ನೀನು ಯದೆಗುಂದ ಬಾರದೆಂದೂ,ಹೇಳುವುದ ಹೇಳಿ ಯೀ ಸಂಗತಿಯನ್ನು ಗುಟ್ಟಾಗಿ ಯಿಡಲೇಬೇಕೆಂದೂ ತನ್ನ ಧರ್ಮ ಪತ್ನಿಗೆ ತಾಕೀತು ಮಾಡಿದ್ದನಷ್ಟೆ. ಆದರೆ ಆ

ಸಾಧ್ವಿಯು ಪತಿಯ ಜೀವ ಸಂರಕ್ಷಣೆ ಮಾಡುವುದು ಸತಿಧರ್ಮಯಂದು ಭಾವಿಸಿದಳು.. ನೂರಾರು ದೇವರು ದಿಂಡಿರುಗಳ ಮೊರೆ ಹೋದಳು. ದುರ್ಗಕ್ಕೆ ಹೋಗಿ ವುಚ್ಚಂಗೆವ್ವನ ಗುಡೀಲೊಂದು ಅರ್ಧಮಣ ತೂಕದ ಗಂಟೆ ತೂಗುಬಿಟ್ಟಳು, ಹಂಪೆಯ ಭುವನೇಸ್ವರಿ ದೇವಿಗೆ ವಂದು ವಕ್ಕಳದ ಗದ್ದೆಯನ್ನು ಧಾರಾಪೂರ್ವಕವಾಗಿ ಕೊಟ್ಟಳು, ಪ್ರಾಪ್ತ ಷಡ್ದರ್ಸನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಸ್ವರ ಸ್ರುಂಗೇರಿ ಸ್ತ್ರೀ ನರಸಿಂಹ ಭಾರತೀ ಸ್ವಾಮಿಗಳ ಸನ್ನಿಧಿಗೆ ಬೆಳ್ಳಿಯ ಪೂಜಾ ಸಾಮಾನುಗಳನ್ನು ಭಕುತಿಪೂರಕವಾಗಿ ಕಳುವಿಕೊಟ್ಟಳು, ಯದುರು ಮುಖಾಂಜನೇಯ ಸ್ವಾಮಿಗಂತೂ ಸರೇ ಸರ್ರೆ...

ತನ್ನ ಧರ್ಮಪತ್ನಿ ಭುವನೇಸ್ವರಿಯ ಅಲವುಕಿಕ ವರ್ತನೆಗೆ ರೋಸಿ ಆರ್ಥಿಕ ದಿಗ್ಬಂಧನ ಯಿಧಿಸಿದ ಹಂಪರಸಪ್ಪಯ್ಯನವರು ಬಾಗುಳಿಗೆ ಕಾರ್‍ಯನಿಮಿತ್ತ ಹೋಗಿ ದೇವೋತ್ತಮ ಭಟ್ಟ, ಹನುಮಂತ ಭಟ್ಟ, ನ್ರುಸಿಂಹಭಟ್ಟರನ್ನು ಬೆಳಗಿನ ಮೂರನೇ ಜಾವದಲ್ಲಿ ಕಂಡು ಶತ್ರುನಾಶಕ್ಕೆಂದೇ ಯಿಶೇಷ ಜಪತಪ ಮಾಡಬೇಕೆಂದು ಯಿನಂತಿ ಮಾಡಿಕೊಳ್ಳದೆಯಿರಲಿಲ್ಲ. ನಿಧಿ, ನಿಕ್ಷೇಪ, ಜಲತರು, ಪಾಷಾಣ, ಅಕ್ಷಿಣಿ, ಆಗಮಸಿದ್ದ ಸಾಧ್ಯಗಳೆಂಬ ಅಷ್ಟಭೋಗ ಯಿದ್ಯೆಗಳನ್ನು ಕರಾತಲಮಲಕ ಮಾಡಿಕೊಂಡಿದ್ದ ಮತ್ತು ಪುತ್ರಪವುತ್ರಪಾರಂಪರ್‍ಯದಲ್ಲಿ ಸ್ವಾಸ್ಥಿಯನ್ನು ಅನುಭವಿಸುತಲಿದ್ದ ಅವರು ತಮ್ಮ ಆ ಹತ್ತಿರದ ಬಂಧುವಿನ ಪ್ರಾಣ ಭಯವನ್ನು ಅರ್ಥಮಾಡಿಕೊಂಡು ವಡನೆ ಮನವಿಯನ್ನು ಪುರಸ್ಕರಿಸಿದರು. ಸದ್ಯಕ್ಕೆ ವಂದು ತಾಯತವನ್ನು ಮಂತ್ರಿಸಿ ಬಲದೋಳಿಗೆ ಕಟ್ಟಿ, ಯಿನ್ನು ನಿಶ್ಚಿಂತರಾಗಿರಿ ಯಂದು ಧರ್‍ಯ ತುಂಬಿ ಕಳುವಿಕೊಟ್ಟರು. ಮಾರು ಯೇಷದಲ್ಲಿ ಹಂಪರಸಪ್ಪಯ್ಯನು ಅಂಗರಕ್ಷಕರೊಂದಿಗೆ ಹರಪನಹಳ್ಳಿ ಕಡೇಕ ಹೊಳ್ಳಿದರು. ಆ ತನ್ನ ಅಂಗರಕ್ಷಕರ ಪಯ್ಕಿ ಯಾವ ಬ್ರಹ್ಮಹತ್ಯಾದೋಷಕ್ಕೆ ಸೊಪುಕ ಹಾಕದವನೂ, ಭರಮನಗವುಡನ ಕಟ್ಟಾಭಿಮಾನಿಯೂ ಮತ್ತು ಹರಿಯಮ್ಮಾಜಿಯ ನುಡಿಸೇವಕನೂ ಆಗಿದ್ದಂಥ ಬಲವಂತನೆಂಬ ಯೀರ ಸಿಪಾಯಿಯು ಯಿದ್ದನು. ಅವನು ನಯವಂಚಕ ಹಂಪರಸಪ್ಪಯ್ಯನವರನ್ನು ಯೀಗ ಕೊಲ್ಲಬೇಕು.. ಆಗ ಕೊಲ್ಲಬೇಕು ಯಂದು ದಾರಿವುದ್ದಕ್ಕೂ ಪ್ರಯತ್ನಪಡದೆ ಯಿರಲಿಲ್ಲ.. ಆದರ ಪ್ರಧಾನ ಕಾರಖೂನನ ನಸೀಬು ಹರಪನಹಳ್ಳಿ ತಲುಪುವವರೆಗೆ ನೆಟ್ಟಗಿತ್ತು..

ತಲುಪಿದ ಯರಡೇ ದಿವಸ ಬ್ರಾಹ್ಮಿ ಮುಹೂರ್ತದಲ್ಲಿ ಯಂದಿನಂತೆ ಪತಿ ದಯವದ ಪಾದಕ್ಕೆ ಹಣೆ ಮುಟ್ಟಿಸಲಕೆಂದು ಭುವನೇಸ್ವರಿ ಹಲವು ವರುಷಂಗಳಿಂದ

ವಾನಪ್ರಸ್ತ ಧರುಮವನ್ನೂ, ಬ್ರಹ್ಮಚರ್ಯೆಯನ್ನೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತಲಿದ್ದ, ಮತ್ತು ಆ ಕಾರಣದಿಂದ ತಾನು ಪ್ರತ್ಯೇಕ ಕೋಣೆಯಲ್ಲಿ ಮಲಗುತಲಿದ್ದ ಗಂಡನಲ್ಲಿಗೆ ಹೋದಳು.. ಹರಳೆಣ್ಣೆದೀಪದ ಬೆಳಕಲ್ಲಿ ಬಿಳುಚಿಕೊಂಡಿದ್ದ ಗಂಡನ ಪಾದಗಳನ್ನು ಹಾಸಿಗೆಯೊಳಗೆ ಹುಡುಕಿ ಅನಾವರಣಗೊಳಿಸಿದಳು, ಕಯ್ಯಿಗಳಿಂದ ಮುಟ್ಟಿದಳು, ಹಣೆಯನ್ನು ತಾಕಿಸಿದಳು.. ತಣ್ಣಗೆ ಕೊರೆದಂತೆ ಭಾಸವಾಯಿತು, ಯೇನ್ರೀ ಅಂದಳು, ಮಾರುತ್ತರ ಲಭ್ಯವಾಗಲಿಲ್ಲ.. ಹಿಡಿದು ಅಲುಗಾಡಿಸಿದಳು.. ಪ್ರತಿಕ್ರಿಯೆ ಲಭ್ಯವಾಗಲಿಲ್ಲ.. ಗಾಬರಿಗೊಂಡು ಹರಳೆಣ್ಣೀ ದೀಪ ಹಿಡಿದು ನೋಡುತ್ತಾಳೆ.. ಬೆಳ್ಳನೆಯ ಬುರುಬುರುನೆ ನೊರೆಯೊಳಗೆ.. ಅಯ್ಯೋ ಯಂದು ಚೀರಿದಳು..

ಹಂಪರಸಪ್ಪಯ್ಯ ಯಿಹಲೋಕ ತ್ಯಜಿಸಿದರೆಂಬ ಸುದ್ದಿ ಪಟ್ಟಣದಾದ್ಯಂತ ಹಬ್ಬಿದ್ದಾಗಲೀ, ಜನ ತಂಡೋಪತಂಡವಾಗಿ ಬಂದು ನೋಡಿದ್ದಾಗಲೀ ತಡ ಆಗಲಿಲ್ಲ, ಸರಕಾರೀ ಧನ್ವಂತರಿಗಳಾದ ಹಿರೇ ಚಂದ್ರಭಟ್ಟರು, ಚಿಕ್ಕ ಚಂದ್ರಭಟ್ಟರು ಬಂದು ನಾಡಿ ಪರೀಕ್ಷಿಸಿ ಪ್ರಾಣಪಕ್ಷಿ ರಾತ್ರಿವಂದನೇ ಜಾವದ ಸುಮಾರಿನಲ್ಲಿ ಹಾರಿಹೋಗಿರುವುದೆಂದು ಸಾವನ್ನು ಖಾತರಿ ಮಾಡಿದರು. ಅದು ಆತುಮಹತ್ಯೆಯೋ, ಕೊಲೆಯೋ ಯಂಬ ಯಿಷಯದಲ್ಲಿ ಅವರಲ್ಲೇ ಜಿಗ್ನಾಸೆ ಹುಟ್ಟಿತು, ಯಿಂಥದ್ದೊಂದು ಯಚ್ಚರಿಕೆ ಪತ್ರಬಂದಿತ್ತು ಯಂದು ಬಾಯಿ ಬಿಚ್ಚುವ ಧಯರ್ರ ವಯ್ದವ್ಯದ ಪಟ್ಟಯೇರುತಲಿದ್ದ ಭುವನೇಸ್ವರಮ್ಮಗೂ ಬರಲಿಲ್ಲ.

ಕಳೇಬರ ತನ್ನ ಅಂತಿಮ ದರುಸನವನ್ನು ಯಾರಾದರೂ ಪಡಕೊಳ್ಳಲಿ ಅಂತ ಮದ್ಯಾಹ್ನದ ಮಟ ಅಂಗಳದಲ್ಲಿತ್ತು. ನಿರೀಕ್ಷಿತ ಸಂಖ್ಯೆಯಲ್ಲಿ ಅಭಿಮಾನಿಗಳು ಬರಲಿಲ್ಲ, ದರುಸನ ಪಡಕೊಳ್ಳಲಿಲ್ಲ.. ಜುಲುಮಿಗೆ ಬಂದವರು ತಮ ತಮ್ಮ ಯೋಗ್ಯಾನುಸಾರವಾಗಿ ಹಿಡಿ ಹಿಡಿ ಶಾಪ ಹಾಕದೆಯಿರಲಿಲ್ಲ.. ಮೊದಲೇ ಯಿಷ ಪ್ರಾಶನದಿಂದ ಸತ್ತಿರುವಂಥಾದ್ದು., ಮದ್ಯಾಣಕ್ಕೆಲ್ಲ ದುರ್ನಾತ ಬೀರಲಾರಂಭಿಸಿತು. ಸ್ಟೂವರ್ಟನ ಆಪ್ತಕಾರ್ಯದರ್ಸಿಯು ಪರಿಸರ ನೈರ್ಮಲ್ಯ ಕಾಪಾಡುವ ನಿಮಿತ್ತ, ಸದರಿ ಕಳೇಬರವು ಮತ್ತೊಂದು ಹತ್ಯೆಗೋ, ಆತುಮಹತ್ಯೆಗೋ ಸ್ಫೂರ್ತಿದಾಯಕ ವಾಗಬಹುದೆಂದು ಮೂಹಿಸಿ ಯಷ್ಟು ಸಾಧ್ಯಮೋ ಅಷ್ಟು ತ್ವರಿತವಾಗಿ ಸಂಸ್ಕಾರಮಾಡಿ ಮುಗಿಸುವಂತೆ..

ಗತಿಸಿದ ಪ್ರಧಾನ ಕಾರಖೂನನ ಬಗ್ಗೆ ಅಸಡ್ಡೆ ಭಾವನೆಯನ್ನು ಯಿಟುಕೊಂಡಿದ್ದ ಸ್ಟೂವರ್ಟನು ಅಲಗಿಲವಾಡದಲ್ಲಿ ಗವುಡನಿಗಾಗಿ ಜಾಲಾಡಿ,

ತುಂಗಭದ್ರೆನದೀಲಿ ಜಳಕಮಾಡಿ ಅದೇ ಯಿನ್ನು ಹಲುವಾಗುಲು ಯಂಬ ಗ್ರಾಮದ ಸರಹದ್ದಿನ ಗಿಡಮರದಡಿ ಯಿಸ್ರಮಿಸಿಕೊಂಡಿದ್ದನು. ಯಲ್ಲಾ ಪ್ರಕೋಚರಟ್ಟಿಯ ಆಕಾಸರಾಮಣ್ಣನ ನೇತ್ರುತ್ವ ಚೋರಪಡೆ ವಂದುಕಡೇಲಿಂದ ಸರಕಾರೀ ಚರಾಸ್ತಿಯನ್ನು ದೋಚಿ ಕೀ.ಶೇ.ಸೋ.ನಾ ಫವುಜಿಗೆ ಆರ್ಥಿಕ ಸಹಾಯ ಮಾಡುತ್ತಿದ್ದುದರಿಂದಲೂ, ಝಳಕಿನ ಕಡೆಯವರು ವಬ್ಬರ ಹಿಂದೊಬ್ಬರಂತೆ ಕಗ್ಗೊಲೆಯಾಗುತಲಿದ್ದುದರಿಂದಲೂ, ಗವುಡನು ಯಿಗಾ ಯಿಲ್ಲಿ., ಅಗಾ ಅಲ್ಲಿ ಯಂಬಂತೆ ಕಣ್ಣಾಮುಚ್ಚಾಲೆ ಆಡುತಲಿದ್ದುದರಿಂದಲೂ, ಯಿನ್ನು ಕೆಲವೇ ದಿನಗಳಲ್ಲಿ ಸದರಿ ಪ್ರಾಂತದ ಸೇವಾವಧಿ ಮುಗುತಾಯವಾಗುತಲಿರುವುದರಿಂದಲೂ ಚಿಂತಾಕ್ರಾಂತನಾಗಿದ್ದನು.. ಅದಾದ ಸೊಲುಪ ಹೊತ್ತಿಗೆ ಹಂಪರಸಪ್ಪಯ್ಯನವರ ಸಾವು ತನ್ನ ಕಿವಿಯಮ್ಯಾಲ ಅಪ್ಪಳಿಸಿಬಿಡುವುದೇ? ಅದು ಗವುಡನ ಕಡೆಯವರು ಮಾಡಿರಬವುದಾದ ಕೊಲೆಯೋ? ಆತುಮ ಹತ್ಯೆಯೋ? ಹುಳಮುಟ್ಟಿರುವುದರಿಂದ ಸಂಭವಿಸಿರುವುದೋ? ಅಥವಾ ಸಹಜ ಮರಣಮೋ? ಅಥವಾ ಅವರ ಹರೆಯದ ಪತ್ನಿ ಭುವನೇಶ್ವರಿಯ ಕ್ರುತ್ಯಮೋ?... ಯಿದೊಂದೂ ತಿಳಿಯದಾಗಿ ಅವಯ್ಯನು ಮೋ ಮಯ್ ಗಾಡ್ ಯಂದುದ್ಗಾರ ತೆಗೆದೊಡನೆ ಸೀನೋಜಿಯು ಜಾತಿ ಕುದುರೆಯ ಮ್ಯಾಲ ಜೀನು ಹಾಕಿದನೆಂಬಲ್ಲಿಗೆ ಸಿವಶಂಕರ ಮಾದೇವಾss..

ಮುರಾರಿಯು ಭಯದಿಂದಾಗಿ ತಾನು ಯಾವ ಕಾರಣಕ್ಕೂ ನಿಶಾಚರನಾಗಬಾರದೆಂದು ರಾಯ ನಿರ್ದರಿಸಿದ್ದ. ಕೂಡ್ಲಿಗಿ ಪಟ್ಟಣದೊಳಗ ಬುಗುಡಿ ನೀಲಕಂಠಪ್ಪನ ಸಂದೇಹಗಳನ್ನು ಪರಿಹಾರ ಮಾಡುವಲ್ಲಿ ತಿಲ್ಲಾನ ತಾಯಕ್ಕ ಸಂಪೂರ್ಣ ಸೋಲನ್ನು ವಪ್ಪಿಕೊಂಡಿದ್ದಳು. ತಾನು ಯೇಣುಗೋಪಾಲ ಸ್ವಾಮಿ ಕರೆಯ ಮೇರೆಗೆ ಗುಣಸಾಗರಕ್ಕೆ ಹೊಂಟದ್ದಾಗಿಯೂ, ಮಾರ್ಗ ಮಧ್ಯದಲ್ಲಿ ಗಾಳಿ ಚೇಷ್ಟೆಯಿಂದಾಗಿ ಮಾನ್ಯರ ಮಸಲವಾಡದ ಕಡೆ ಹೋದುದಾಗಿಯೂ, ತಲುಪಿದ ನಂತರವೇ ತನಗದರ ಅರಿವಾದುದಾಗಿಯೂ ಪರಿಪರಿಯಿಂದ ಹೇಳಿಕೊಂಡಿದ್ದಳು. ಆದರದು ಫಲಕಾರಿಯಾಗಲಿಲ್ಲ. ಪ್ರಶ್ನಿಸುವಲ್ಲಿ, ಸಂದೇಹಿಸುವಲ್ಲಿ ಚೆನ್ನಸಾನಿ ವಂದು ಹೆಜ್ಜೆ ಮುಂದಕ ಹೋಗಿದ್ದಳು. ಮಾನ್ಯರ ಮಸಲವಾಡಕ್ಕೆ ಯಿದ್ದಕ್ಕಿದ್ದಂತೆ ಹೋದ ಕಾರಣವೇನು? ಅಲ್ಲಿ ವಾರಗಟ್ಟಲೆ ವುಳಿದುಕೊಳ್ಳಲಕ ಯಾಕ ಯಿಷ್ಟಪಟ್ಟಿ? ರಾತ್ರಿಹೊತ್ತು ಸೂನ್ಯದೊಂದಿಗೆ ಯಾರೊಂದಿಗೆ ಮಾತನಾಡುತ್ತಿದ್ದಿ.. ಸೂನ್ಯದೊಳಗಿದ್ದವರೊಂದಿಗೆ ನಿನ್ನ ಸಂಬಂಧ

ಯಾವ ತೆರನದ್ದು? ಯಾವ ಕಾಲದ್ದು? ನಡುನಡುವೆ ನನ್ನ ಹೆಸರೂ ಪ್ರಸ್ತಾಪವಾಗುತ್ತಿತ್ತಲ್ಲ? ನನ್ನ ಜನುಮದ ಗುಟ್ಟಿಗೂ, ಆ ಪ್ರಸ್ತಾಪಕ್ಕೂ ಸಂಬಂಧಯಿರುವುದಾ? ಯಿಲ್ಲವಾ? ಯಿ ಯಲ್ಲ ನನ್ನ ಪ್ರಶ್ನೆಗಳಿಗೆ ಮುಖಕ್ಕೆ ಮುಖ ಕೊಟ್ಟು ಯಾಕ ಜವಾಬು ನೀಡುವೊಲ್ಲೆ? ಹೇಳಲಕಾಗಲೀ, ಕೇಳಲಕಾಗಲೀ ನನಗೆ ಅಧಿಕಾರ ಯಿಲ್ಲವಾ?..

ಮಗಳೆದೆಯಿಂದ ಹುಟ್ಟಿಕೊಂಡಿದ್ದ ಪ್ರಶ್ನೆಗಳಿಂದಾಗಿ ತಿಲ್ಲಾನ ತಾಯಕ್ಕಳ ದಯ್ನಂದಿನ ಬದುಕಿನಲ್ಲಿ ಹದ ತಪ್ಪಿತ್ತು.. ಮನಸ್ಸಿನ ನಾದ ತಪ್ಪಿತ್ತು. ಮಹಾನ್ ತೇಜಸ್ವಿ ಭೂತಭುಜಂಗನಾಥರ ವರಪ್ರಸಾದದ ಫಲವೇ ನೀನು ಮಗಳೇ ಯಂದು ಖುಲ್ಲಮ ಖುಲ್ಲ ಹೇಳಿಬಿಡಬೇಕೆಂದು ನಾಲಕಾರು ದಿವಸಗಳಲ್ಲಿ ಯಷ್ಟೋ ಸಲ ಅಂದುಕೊಂಡಳು.. ಯಾಕೋ ಯೇನೋ? ಅನ್ನಲಕ ಆಗಿರಲಿಲ್ಲ.. ಕಾರಣ ವಾನ್ಯರ ಮಸಲವಾಡ ಬಿಡುವ ಹಿಂದಲ ರಾತ್ರಿಕಣಸಿನಲ್ಲಿ ಕಾಣಿಸಿಕೊಂಡಿದ್ದ ನಾಥರು “ಪ್ರಿಯೇ.. ಸಾವುರಾರು ವರುಷಂಗಳ ಪರ್ಯಂತ ಬದುಕಿರಬೇಕಾದಂತ ನಾನು ಸ್ತ್ರೀ ವ್ಯಾಮೋಹದಿಂದಾಗಿ ಪ್ರಾಣ ನಷ್ಟ ಮಾಡಿಕೊಂಡಿರುವವನು. ನನ್ನ ನೆನಪಿನ ಮ್ಯಾಲ ಅಪವಾದಗಳ ಕರಿ ನೆರಳು ದಟ್ಟವಾಗಿ ಕವಿದುಕೊಂಡಿರುವುದು. ಆದ್ದರಿಂದ ನಮ್ಮಿಬ್ಬರ ನಡುವೆ ಯಿದ್ದ ಲಂಯ್ಗಿಕ ಸಂಬಂಧವನ್ನು ಯಾರ ಬಳಿಯೂ ಹೇಳುವುದಿಲ್ಲವೆಂದು ಮಾತು ಕೊಡು.. ಹ್ಞಾಂ..ಯೀಗ ಯಷ್ಟೋ ಸಮಾಧಾನವಾಯಿತು ನೋಡು. ನೀನು ನಂಬಿಕಸ್ಥಳು ಯಂದು ನಮಗೆ ಗೊತ್ತು. ಆದ್ದರಿಂದಾಗಿಯೇ ನಿನ್ನನ್ನಿಲ್ಲಿಗೆ ಬರಮಾಡಿಕೊಂಡದ್ದು.. ನಮ್ಮಿಬ್ಬರ ಪ್ರೇಮದ ಕುಡಿ ಬಾಡದಂತೆ ಜೋಪಾನವಾಗಿ ನೋಡಿಕೋ.. ಯಂದು ಮುಂತಾಗಿ ಹೇಳಿ ಮರೆಯಾಗಿದ್ದರು.. ಯೀ ಕಾರಣದಿಂದ ಆಕೆ ವುಭಯ ಸಂಕಟದಿಂದ ನರಳುತಲಿದ್ದಳು ಯಂಬಲ್ಲಿಗೆ ಸಿವಸಂಕರ ಮಾದೇವsss...

ಅತ್ತ ಕುದುರೆಡವು ಪಟ್ಟಣದೊಳಗ ಯಲ್ಲಿ ನೋಡಿದಡಲ್ಲಿ ತಾಯಿ ಬಗಸ್ಯಾಳ ಸಿಮ್ಮಾಸನ ಯಂದು ಮುಂತಾಗಿ ಹಾಡುತ್ತ ಕುಣಿದಾಡುತ್ತಿರುವ ದ್ರುಸ್ಯವು.. ಯಲ್ಲಿ ಕಿವಿಚಾಚಿದಡಲ್ಲಿ ಸಿಮ್ಮಾಸನ, ಪುವ್ವಲ ರಾಜವಮುಸಸ್ಥರ ಸಿಮ್ಮಾಸನ ಯಂಬ ವುದ್ಗಾರಗಳು..

ಸಾಂಬವಿಯು ಪುವ್ವಲ ಸಾವ್ರಾಜ್ಯ ಲಚ್ಚುಮಿಯಾಗಬೇಕೆಂದು ಯಿಚ್ಚಪಟ್ಟಿರುವಳು ಯಂದನಕಂತ ಮಠದೋರು, ಜಾತ್ಯೋರು, ವಕ್ಕಲೋರು,

ಡೊಕ್ಕಲೋರು, ಕೊರಚೋರು, ತಿರುಪೇರು, ಬಲ್ಲವರು, ಬಲ್ಲಿದರು ಯಿವರೇ ಮೊದಲಾದ ಯೇಳುನೂರಾಯಪ್ಪತ್ತೇಳು ಪಂಗ ಪಂಗಡವರು ಅತ್ತತ್ತ ಹೋಗುತ್ತಲೇ ಹತ್ತಾಗಿ, ಅತ್ತತ್ತ ಹೋಗುತ್ತಲೇ ನೂರಾಗಿ, ಅತ್ತತ್ತ ಹೋಗುತ್ತಲೇ ಸಾವುರ ಸಾವುರವಾಗಿ ನೆರೆ ಬಂದ ನದಿ ಹಾಂಗ ಹರಕೋತ ಹರಕೋತ ಹೋಗಿ ಅರಮನೆಯನ್ನು ಅಪ್ಪಳಿಸಿದರು.. ಮುಚ್ಚಿದ್ದ ಬಾಗಿಲುಗಳನು ಬಡಿಯ ತೊಡಗಿದರು.. ಗೋಡೆಗಳಿಗೆ ತಮ ತಮ್ಮ ತಲೆಗಳಿಂದ ಡಿಕ್ಕಿ ಹೊಡೆಯುತ್ತ ಧಡ್ ಡಡಾಲ್ ಯಂಬ ಸದ್ದು ಸ್ರುಷ್ಟಿಸತೊಡಗಿದರು.. ಯಾರದೀರವ್ವಾ ವಳಾಗೆ ಯಂದು ಕಂಡುಗ ಗ್ನಾನದ ಬುಕ್ಕು, ಕಾಲಗ್ನಾನದ ಬುಕ್ಕು ಹಾರೊಡೆಧಂಗ ಕೂಗುತಾರ.. ಆ ಅವರ ಕೂಗು ಪ್ರವಾಹದೋಪಾದಿಯಲ್ಲಿ ಹರಕೋತ ಹರಕೋತ ವಳ ಹೋಗಿ ರಾಜಪರಿವಾರದ ಮಂದೀಯ ಮೊಖದ ನಂದಾದೀವಿಗೇನ ನಂದಿಸಿತು.. ಆವಾಗ್ಗೆ ಪಟ್ಟೆ ಮಂಚದ ಮ್ಯಾಲಿದ್ದೋರು, ದಂಡು ದವಲತ್ತಿನ ನೆನಪಿನ ಬುತ್ತಿ ಬಿಚ್ಚಿ ವುಂಬುತಲಿದ್ದೋರು, ಕಿರೀಟ ಟಾಂಕು ಟೀಂಕಿನ ಕಣಸು ಕಾಂಬುತಲಿದ್ದೋರು ಬಚ್ಚಲಲ್ಲಿದ್ದೋರು, ಪಾಕಶಾಲೆಯಲ್ಲಿದ್ದೋರು, ಬಿಕೋ ಅಂಬುತಲಿದ್ದ ಅಂಗಯ್ಯಿ, ಮುಂಗಯ್ಯಿ ನಡು ಕುತ್ತಿಗೆ ಕಿವಿ ಮೂಖ ನೋಡು ನೋಡುತ ನಿಟ್ಟುಸಿರುಬಿಡುತಲಿದ್ದೋರು ಯಿಪ್ಪತ್ತು ಮಾರಗಲುದ್ದದ ಕೂಗು ಕೇಳಿಸಿಕೊಂಡು ಯಿದೇನಿದು ಕುಂಪಣಿಯ ಯಡ್ಡವರ್ಡು ಸಾಹೇಬನ ದಂಡು ದವಲತ್ತು ತಮ್ಮರಮನೆಗೆ ಮುತ್ತಿಗೆ ಹಾಕಿದಂಗಯ್ತಲ್ಲಾ ಯಂದಳ್ಕೋದರೊಂದರಗಳಿಗೆ..

ಯ್ಯಾಳ್ಳೇಕ್ಕ ಮುಟ್ಟು ನಿಂತು ಮುವ್ವತ್ತಾರು ವರುಷವಾಗಿದ್ದ ರಾಜಮಾತೆ ಭಯ್ರವಾಂಬೆಯು ಬಚ್ಚಲಲ್ಲಿದ್ದ ಮೂರು ಚೆಂಬು ನೀರೆರಕೊಂಡು ಪೆದ್ದೋಬಯ್ಯನಾಯಕ ಪಟ್ಟಯೇರುವಾಗ್ಗೆ, ಕೊಡಿಸಿದ್ದಂಥಾ ಮೊಣಕಾಲ್ಮೂರು ಜಾಡರ ಜಾನಯ್ಯ ನೇತಂಥಾ ಹದಿನೆಂಟು ಮೊಳದುದ್ದದ ಸೀರೆಯನ್ನು ಮಯ್ಗೆ ಸುತ್ತಿಕೊಂಡು, ಯಿಲಕಲ್ಲು ಕುಬುಸ ತೊಟ್ಟುಕೊಂಡು, ಹರೇದಾಕಿ ಮಾಡುವಂಗ ಮಾಡುತಾಳಲ್ಲಾಂತ ಅವರಿವರು ಅಂದು ಆಡಿಕೊಳ್ಳಬೌದೇ ಯಂದು ಯೋಚಿಸುತ್ತಿರುವಾಗ್ಗೆ ಆ ಕೂಗು ಕಿವಿಗೆ ಬಿದ್ದು ಭಕುತಾದಿ ಮಂದಿಯು ತನ್ನನ್ನು ಸಾಂಬವಿಗೆ ಸರಿಸಮನಾಗಿ ಕುಂಡ್ರಿಸಿ ಹೊಳೆಗೆ ಹೊಂಡಿಸಲಕೆಂದು ಬಂದಿರ ಬೌದೆಂದು ಭಾವಿಸಿ ತಂಗಲಗೂದಲ ತಲೆಯೊಡನೆ ತಲಬಾಗಿಲಿಗೆ ಬಂದು ಛತ್ರಿಯಲ್ಲಯ್ತಂತ, ಚಾಮರ ಯಲ್ಲಯ್ತಂತ, ಮುತ್ತಿನ ಛಡಾವು ಯಲ್ಲಯ್ತಂತ,

ವಂದಿಮಾಗದ ಮಂದಿ ಯಲ್ಲಯ್ತಂತ, ಸೊನ್ನಾಯಿ ಯಲ್ಲಯ್ತಂತ, ಕಳಸಗಿತ್ತೇರು ಯಲ್ಲದಾರಂತ ನೋಡುಲೋಸುಗ ಹುಬ್ಬಿಗೆ ಕಯ್ಯಿ ಹಚ್ಚಿ ವಂದು ಧಮ್ಮುಸುತಮುತ್ತ ನೋಡಿದಳು, ಯಾದೇ ವಂದು ಗವುರವ ಕೊಡೋದು ಕಣ್ಣಿಗೆ ಬೀಳುತಾಯಿಲ್ಲ ಯಂದಾಕೆ ಯಸನ ಮಾಡೂತ ನೋಡಿದಳು.. ಮುಚ್ಚಿದ್ದ ಬಾಗಿಲನ್ನು ತೆರೆಯುವುದೋ, ಬಿಡುವುದೋ ಯಂದೊಂದರಗಳಿಗೆ ಯೋಚನೆ ಮಾಡಿದಳು. ಯಾಕೋ ಬಾಗೀಲು ಹಿಂದಕೂ ಮುಂದಕೂ ವಾಲಾಡುತಿರುವುದು. ಯಿರಲಿ, 'ಯೇನಿರಬೌದು?' ಗಟ್ಟಿಮನಸು ಮಾಡಿ ತೆರೆದು ನೋಡುತ್ತಾಳೆ.. ಅಂಗಳದಲ್ಲಿ ಅಸಂಖ್ಯಾತ ಮಂದಿ.. ಯೇನರಪ್ಪಾ.. ಯಾಕ ಬಂದೀರಪ್ಪಾ.. ಅರಮನೆಯಿಂದ ಯೇನಾಗಬೇಕಯ್ತೆ ಯಂದು ಕೇಳಿದಳು ರಾಜಸತ್ತೆಯ ಗತ್ತಿನಿಂದ. ಅದಕಿದ್ದು ಗೊಲ್ಲರೀರಯ್ಯನು ಸದರಿ ಸಂಗತಿಯನ್ನು ಯಿವರಿಸಿ "ಯಿದಕ ಬಂದೀವವ್ವಾ" ಯಂದನು. ಸಂಗತಿ ಬರಸಿಡಿಲಿನಂತೆರಗಿತು. ಯಷ್ಟಿದ್ದರೂ ರಾಜವಮುಸದಾಕೆ., ತಡಕೊಂಡಳು. ತನ್ನ ಕಣ್ಣೊಳಗ ಮೂಡುತಲಿದ್ದ ದುಕ್ಕವನ್ನು ಹಂಗs ತಡಕೊಂಡಳು. ತಮ್ಮ ಅರಮನೆಯ ಸಿಮ್ಮಾಸನಯೇನು ಯೀಕಾಲದ್ದಾ.. ಅದರ ಮ್ಯಾಲ ವುಜ್ಜಯನಿಯ ಯಿಕ್ರಮಾದಿತ್ಯಮಾರಾಜ ಕುಂತಿದ್ದ ಅಂಬುತಾರ, ನೊಳಂಬ, ಕದಂಬ, ಗಂಗ, ಚೋಳ, ಚೇರ, ಪಲ್ಲವರಾದಿಯಾಗಿ ಯಲ್ಲಾ ಮಾರಾಜರು ಕುಂತಿದ್ದರು ಅಂಬುತಾರss.. ಪುಣ್ಯಬಲದಿಂದ ತಮ್ಮ ಪೂರುವಿಕರಾದ ಸಾತವಾಹನರು ಕುಂತಿದ್ದರು ಅಂಬುತಾರss.. ಅದು ಸಾಮಾನ್ಯದ್ದಾ? ಅದರ ವಳ ಹೊರಗೆ ಯಿರುವ ಕಥಿಗಳು ವಂದಾ ಯರಡಾ? ಮುಟ್ಟಿದವರು ಚಿಟ್ಟನೆ ಚೀರಿರುವುದುಂಟು, ಮುಟ್ಟಿದವರ ಮುಟ್ಟು ನಿಂತಿರುವುದುಂಟು, ಅಜಮಾಷೀ ಯೇರಿದವರು ಸುಟ್ಟು ಭಸುಮವಾಗಿರುವುಂಟು, ಅದರ ಬಗ್ಗೆ ಹೀನಾಯವಾಗಿ ಮಾತಾಡಿದೋರ ಪುರುಷತ್ವ ಪ್ರಮಾಣ ತಗ್ಗಿರುವುದುಂಟು, ವಯ್ರಾಗ್ಯ ತಾಳಿದವರೂ ವುಂಟು, ಯಿವೆಲ್ಲ ಸದರಿ ಕುಂತಳ ಸೀಮೆಯೊಳಗ ಯಾರಿಗೆ ತಾನೆ ಗೊತ್ತಿಲ್ಲ..? ಗೊತ್ತಿದ್ದೂ ಗೊತ್ತಿದ್ದೂ..

ಬರಸಿಡಿಲನ್ನು ಹಂಗೇ ತಲೆ ಮ್ಯಾಲ ಸಯ್ರಿಸಿಕೊಂಡೂ ರಾಜಮಾತೆಯು ಕೇಳಿದವರಿಗೆಷ್ಟು ದಯರ್ರ್ಯ? ಹೇಳಿದವರಿಗೆಷ್ಟು ಧಯರ್ರ್ಯ? ಯಂದು ಪ್ರಸ್ನೆ ಮಾಡಲಕ ಬರೋದಿಲ್ಲ.. ವತ್ತಾಯ ಮಾಡಲಕ ಮಂದಿ ಯಿಲ್ಲಿಂದ ಅಲ್ಲೀತನಕ ರೆಪ್ಪೆ ಅಲುಗಿಸದೆ ನಿಂತವರೆ.. ತಾವೇ ವಂದೊಂದು ಆಯುಧಯಂಬಂತೆ. ಅವರು ಬಗುಸುತಲಿರುವುದು ಕೇವಲ ಸಿಮ್ಮಾಸನವನ್ನಲ್ಲ.. ಅರಮನೆಯ

ಆತುಮವನ್ನು, ಪುರುಷತ್ವವನ್ನು. ಪುವ್ವುಲ ರಾಜವಮುಸದ ಬೆನ್ನೆಲುಬನ್ನು. ಚರಿತ್ರೆಯೊಳಗ ಯಾವುದೇ ಸಿಮ್ಮಾಸನವು ಸುಮಸುಮಕ ದಕ್ಕಿರುವುದುಂಟಾ? ಅದರ ವಶವರ್ತಿಗಾಗಿ ಘನಘೋರ ಕಾಳಗ ನಡೆಯೋದು ಬ್ಯಾಡವಾ? ನೆತ್ತರ ಹೊಳೆ ಹರಿಯೋದು ಬ್ಯಾಡವಾ? ಅಂಥ ಥಾಮಸು ಮನ್ರೋನಂಥಾತನೇ ಅದಕ ಸಣುಮಾಡಿ ಅಮಾನತಿನಲ್ಲಿಟ್ಟಿರುವನು. ಅಂಥಾದ್ದರಲ್ಲಿ ವಬ್ಬ ಯಕಃಶ್ಚಿತ್ ಪಿಕದಾನಿ ಹಿಡಿಯುತ್ತಿದ್ದೋನು, ಅರಮನೆಯ ಯಂಜಲುಂಡು ಬೆಳೆದೋನು ತಾನು ಕುಂಡ್ರಲಕ ಸಿಮ್ಮಾಸನ ಬಗಸಿರುವನಲ್ಲಾ.. ಅಯ್ಯೋ ಯಿಧಿಯೇ? ಯೇನಿದೇನಿದು ನಿನ್ನೀ ಆಟವು, ಮಾಯಮರ್ಮವು..?

"ಕೊಡೋದು ಬಿಡೋದು ದೊಡ್ಡ ಮಾತಲ್ಲ ಕನರಪ್ಪಾ. ಸೊಲುಪ ಯೋಚನೆ ಮಾಡಿರಿ!" ಯಂದು ರುದ್ದೆಯು ಗಿಣಿಗೆ ಹೇಳಿದಂತೆ ಹೇಳಿದಳು, ಅದಕ ಯೀರಯ್ಯನಾಗಲೀ, ಕಜ್ಜಾಲಯ್ಯನಾಗಲೀ ಮಣಿ ಹಾಕಲಿಲ್ಲ.. ಅದರ ವ್ಯಾಲ ಯಿರಾಜವಮಾನಳಾಗಲಕ ಯಿಚ್ಛಾ ಪಟ್ಟಿರುವುದು ಯೀರೇಳು ಲೋಕಗಳಿಗೊಡತಿಯಾಗಿರುವಂಥ ಲೋಕಮಾತೆಯು.. ವಂದೇ ಮಾತಿಗೆ ಕೊಟ್ಟು ಸಾಂಬವಿಯ ವಲುಮೆಗೆ ಪಾತ್ರಳಾಗುವುದು ಬಿಟ್ಟು ಮುದೇದು ಮಿಜಿಮಿಜಿ ಮಾಡುತ್ತಿರುವುದಲ್ಲ.. ಮುಹೂರ್ತವೆ ತಪ್ಪಿಸಲಕ ಯಿದು ಸಂಚು ನಡೆಸಿದಂಗಯ್ತೆ., "ಯೇನವ್ವಾ ವಳ್ಳೇ ಮಾತಿನಿಂದ ನೀನೇ ಸಂತೋಷದಿಂದ ಕೊಡುವಿಯೋ.. ಯಿಲ್ಲಾ ನಾವದನು ಬಲವಂತದಿಂದ ಹೊತ್ತೊಯ್ಯಬೇಕೋ!" ಯಂದು ಕಜ್ಜಾಲಯ್ಯ ನಿಷು«ರವಾಗಿ ಕೇಳಿದೊಡನೆ ಮಂದಿ ಅವುದೂ ಯಂದು ಕೂಗಿತು, ಹಿಂದೇಸಿಂದ ನಿವನ್ನಾಮ ಪಾರೊತಿಯು..

ಅರಮನೆಯೊಳಗಿಂದ ಘನಸ್ತ ಸೊಸೆಯರ ಪಯ್ಕಿ ವಬ್ಬಾಕಿ ಮೋಡೋಡಿ ಬಂದು "ಭೇ ಯತ್ತೇ, ಅದರ ಮ್ಯಾಲ ಹತ್ತೋರಿಲ್ಲ, ಯಿಳಿಯೋರಿಲ್ಲ. ಅರಮನೆಯೊಳಗ ಅದನಿಟುಕೊಂಡು ಮಾಡೋ ದೇನಯ್ತೆ, ಅದೇನು ವುಂಬಲಕಿಡ್ತದಾ.. ಪ್ರಜೆಗಳಿದ್ದರ ಅರಮನೆ, ಪ್ರಜೆಗಳಿದ್ದರ ಸಿಮ್ಮಾಸನ, ಪ್ರಜೆಗಳೇ ಕೇಳಲಕ ಹತ್ತಾ ್ಯರಂದ ಮ್ಯಾಕ ಕೊಟ್ಟು ಕಳುವು.. ಕೊಡೋದಾಗದಿದ್ದರ ತಗೊಂಡು ಹೋಗಿರಪ್ಪಾ ಅನ್ನು.. ಅದನು ಬಿಟ್ಟು ತಕರಾರು ಯತ್ತಿದ್ದೀಯಲ್ಲಾ.." ಯಂದು ಕೆಡ ಬಡ ನುಡಿದು "ಯತ್ತಲಕಾಗಲೀ, ಕೊಡಲಕಾಗಲೀ ನಮ್ಮಾ್ರ ಮಯ್ಯೊಳಗ ಕಸುವಿಲ್ಲ.. ಯಿ ಅರಮನೆ ನಿಮ್ದು, ನೀವೇ ವಳಗಡೀಕ ಬಂದು ತಗೊಂಡು ಹೋಗಿರಪ್ಪಾ.. ಅದು ದೇವರ ಕಾರ್ಯೇವಿಗೆ

ವುಪಯೋಗವಾಗುತಯ್ತಲ್ಲಾ, ನಮಗ ಅಷ್ಟೆ ಸಾಕು" ಯಂದು ತಿಳುವಳಿಕಸ್ಥೆ ಥರ ಮಾತಾಡಿ ಸಯ್ ಅನ್ನಿಸಿಕೊಂಡಳು.

"ಯೀ ಥಟಗು ವಯಸ್ಸಿಗೇನೇ ಅನುಭವದ ಮಾತ ಆಡಿದಿ ತಾಯಿ.. ಸಾಂಬವಿಯ ಕ್ರುಪೆ ಯಾವತ್ತೂ ನಿನ ಮ್ಯಾಲಿರಲಿ" ಯಂದು ಹರಸುತ್ತ ಗೊಲ್ಲರೀರಯ್ಯ, ಕಜ್ಜಾಲಯ್ಯ ವಳಹೋಗಿ ಸಿಮ್ಮಾಸನದ ಬುಡಕ್ಕೆ ಕಯ್ನ ಹಚ್ಚಿದರೋ ಯಿಲ್ಲಮೋ.. ವಂದು ಕಾಲದಲ್ಲಿ ಆನೆಯಿಂದ ಯಳಸಿಕೊಂಡಿದ್ದ ಅದು ಯಳೇ ಕಂದಮ್ಮನೋಪಾದಿಯಲ್ಲಿ, ಮಲ್ಲಿಗೆ ಹಾರದೋಪಾದಿಯಲ್ಲಿ, ಸಡನ್ನ ಖುಲಾಸೆಗೊಂಡ ಮರಣ ದಂಡನಾ ಶಿಕ್ಷೆಗೊಳಗಾದ ಖಯ್ದಿಯೋಪಾದಿಯಲ್ಲಿ ಅಸಾರಗೊಂಡು ಅವರ ಕಯ್ಗೆ ಬಂತು.. ಹಂಗs ಅವರ ಹೆಗಲೇರಿತು. ಜಯನ್ನಾಮ ಪಾರೊತೀ ಪತಿ ಹರ ಹರ ಮಾದೇವಾss ಯಂದನಕಂತ ತಲಬಾಗಿಲು ದಾಟಿದೊಡನೆ ಅರಮನೆಯವ್ವ ಅಲಲಾ ನನ ಕರುಮವೇ ಯಂದು ದುಕ್ಕ ಮಾಡಿದಳು...

ಜಡಜಡ್ಡಿ ಕಾಕ್ಕಟ ಣಕ್ಕ ಯಂದು ಬಾರಿಸಿಕೋತ.. ಕುಣಿಯೂತ.. ಕುಪ್ಪಳಿಸೂತ.. ಬೀದಿ ಬೀದಿಯಲ್ಲಿ ಮೆರೆಸಿಕೋತ.. ಪೂಮಾಲೆಗಳಂ ಹಾಕಿಸಿಕೋತ.. ಹುವ್ವಿನ ಮಳೆಯಲ್ಲಿ ನೆನೆಯೂತ ಮೆರೆಸಿಕೋತsss.. ನಿಧಿ ಸ್ಥಳಕ್ಕ ಬಂದು ವಸ್ತಿ ಸಮಚ್ಛಯದಲ್ಲಿ ಅದು ಸಾವುರ ಸಾವುರ.. ಲಚ್ಛ.. ಲಚ್ಛ ಜನರ ಕಣ್ಣೊಳಗ ರಾರಾಜಾತು..

*ಓ ಹ್ವೋ ಸಿಮ್ಮಾಸನಾss.. ಹ್ವಾ.. ಹ್ವಾ.. ಸಿಮ್ಮಾಸನಾss..*

*ಅಹ್ಹಹಾ ವೀರೇ.. ಅಹ್ಹಹಾ ದೀರೇ..*

ನಮ್ಮ ಸಾಂಬವಿ ಮುಡುದಿರುವ ಆಭರಣಗಳು ಯಾವ್ಯಾವೆಂದರೆ ಮುಂಗಯ್ಯಿಗೆ ಕಂಕಣ ಕಡಗ ತೋಳಬಂದಿ ವಂಕಿಯೇ ಮೊದಲಾದ ಯಿಪ್ಪತ್ತು ಸಹಸ್ರ.. ಯೀ ತಾಯಿಯ ವಂಭತ್ತು ಬೆರಳುಗಳಿಗಿರುವ ವಂಭತ್ತು ವುಂಗುರುಗಳು ವಂಭತ್ತು ಸೂರ್ಯರಿಗೆ ಸಮಾನ... ಹಾಲು ತುಂಬಿ ಕಳಸದಂತಿರುವ ಮೊಲೆಗಳಿಗೆ ಮನೋಹರವಾದ ಕೆಂಪು ವಸ್ತ್ರದ ರವಿಕೆಯಂತೂ ರತ್ನಾಭರಣದ ಪ್ರವಾಹದಂತೆ ಬಲು ಶೋಭಾಯಮಾನವಾಗಿರುವುದು.. ಯೀ ತಾಯಿಯು ತನ್ನ ನಡುವಿಗೆ ಬಿಗಿದಿರುವ ವಡ್ಯಾಣವು ಕೋಟಿ ಸೂರ್ಯರನ್ನು ಮುಚ್ಚಿ ಮುಳುಗಿಸಿರುವುದುss..

ಗಂಟಲಯ್ಯ ಖಂಡು ಖಂಡು ಖಡುಗ ಹೇಳುತ ಯಿರುವಾಗಲೇ ವಸ್ತಿಯು ಸಿವಮ್ಮಾಸನ ಕಡೇಕ ತೀಕ್ಷ್ಣವಾಗಿಯೂ, ಹೆಮ್ಮೆಯಿಂದಲೂ

ದ್ರುಷ್ಟಿಸಾರಿಸಿತು, ಮೆಲು ಮೆಲ್ಲಕ ಯದ್ದು ಬಂದು ಅದರ ಮಯ್ನ ಸವರಿ ತರುವಾಯು ಅದರ ಮ್ಯಾಲ ಮಟ್ಟಸವಾಗಿ ಯಿರಾಜಮಾನಗೊಂಡೊಂಡನೆ ಭಕುತಾದಿ ಮಂದಿ ವುಘೇ ವುಘೇ ಅಂತು. ಕುದುರೆಡವನಿಧಿಯೇ ನಿನಗಾರು ಬದಿಯೇ, ಬದಿ ಅಂದವರ ಹಲ್ಲು ಮುರಿಯೇ ಭೋ ಪರಾಕ್ ಯಂದು ಜಯಘೋಷ ಮಾಡಿತು, ಹುವ್ವಿನ ಮಳೆ ಕರೆಯಿತು. ಹತ್ತಾರುಮಂದಿಯ ಮಯ್ಯೊಳಗ ಹತ್ತಾರು ದೇವತೆಗಳು ಕಾಣಿಸಿಕೊಂಡು ಕುಣಿಯಲಾರಂಭಿಸಿದರು. ಕೆಲವರು ಆವೇಸದಿಂದ ತಮ್ಮ ಸರೀರಗಳನ್ನು ತಾವೇ ದಂಡನಮಾಡಿಕೊಳ್ಳ ತೊಡಗಿದರು. ಸಿಮ್ಮಾಸನಾರೂಢೆಯಾದ ತಾಯಿಯ ದರುಸನ ಪಡದು ಪಾವನರಾಗಲಕ ಮಂದಿಗೆ ನೆಲ ಸಾಲದಾಗಿ ಗಿಡ, ಮರ, ಮನೆ, ಮಠ, ಮಾಳಿಗೆಗಳನ್ನು, ಸರಸರಾಂತ ಯೇರತೊಡಗಿದರು.. ಯಲ್ಲಂದರಲ್ಲಿ ಗುಗ್ಗುಳಗಳು ಧಗ್ಗಂದು ಜಾಜ್ವಲ್ಯಮಾನವಾಗಿ ವುರಿಯಲಾರಂಭಿಸಿದವು.. ಆವೇಶ ರವುಷದ ಮಹಾಪೂರದ ಹೊಡೆತಕ್ಕೆ ಸಿಕ್ಕು ರುಮ್ಮಿಗಳು ರುಮುರುಮುಗುಟ್ಟಲಾರಂಭಿಸಿದ್ದೇನು? ಡೊಳ್ಳುಗಳು ಡೊಳ್‌ಡೊಳ್ ಗುಟ್ಟಲಾರಂಭಿಸಿದ್ದೇನು..? ಹಲಗೆ ತಮ್ಮಟೆಗಳು ಣಕ್ಕಣಕ್ಕಲಾರಂಭಿಸಿದ್ದೇನು? ನಾದ ಪ್ರವಾಹ ಭಕುತಿಯ ನೆರೆಯ ತಾಕತ್ತಿಗೆ ಸಿಲುಕಿದ ಸಿಮ್ಮಾಸನವು ಯಿದ್ದಕ್ಕಿದ್ದಂತೆ ನೆಲ ಬಿಟ್ಟು ವಂದು ಮೊಳ ಮ್ಯಾಲಕ್ಕೆದು ಅತಂತ್ರಸ್ಥಿತೀಲಿ ನಿಂತುಗಂತು.. ಸಿವಸಿವಾsss ಸದರಿ ಪಟ್ಟಣದ ಮುವ್ವತ್ತಾರು ಮಂದಿ ಮಡಿವಾಳರಲ್ಲದ ಸುತುಮುತ್ತಲ ಯಿಪ್ಪತ್ತಾರು ಪರಗಣ ಮೂರುಗಳಿಂದಾಗಮಿಸಿದ್ದ ಯಪ್ಪತ್ತೇಳು ಮಂದಿ ಮಡಿವಾಳರು ಸಿಮ್ಮಾಸನದ ಪಾದದ ಬುಡಕ್ಕ ಪಟ್ಟೆಪೀತಾಂಬರ, ಜರತಾರಿ ಸೀರೆಗಳನ್ನು ಹಿಂದೇಸಿಂದ, ಮುಂದೇಸಿಂದ ಹಾಸದೆ ಯಿರಲಿಲ್ಲ..

ಸಗುತಿ ಸಂಪನ್ನ ವಸ್ತಿಯ ಬಾಯಿಯಿಂದ ವಂದು ಮಾತಿಲ್ಲ ಸಿವನss.. ವಂದು ಕಥಿಯಿಲ್ಲ ಸಿವನೇ.. ಕಣ್ಣುಗಳನ್ನು ಕೊಂಡಮಾಡಿಕೊಂಡಯ್ತೆ.. ಕುಂತಲ್ಲಿಂದ ಸಿಮ್ಮಾವಲೋಕನ ಮಾಡುತಯ್ತೆ.. ಹಳ್ಳಗಳು ನದಿಗಳಾಗುವುದನ್ನು, ನದಿಗಳು ಸಮುಂದರಗಳಾಗುವುದನ್ನು, ಸಮುಂದರಗಳು ಸಾಗರಗಳಾಗುವುದನ್ನು, ತಂಗಾಳಿ ಬಿರುಗಾಳಿಯಾಗುವುದನ್ನು, ಬಿರುಗಾಳಿ ಸುಂಟರ ಗಾಳಿಯಾಗುವುದನ್ನು, ಭಕುತಾದಿ ಮಂದಿಯ ಸರೀರಗಳೊಳಗಿಂದ ಪಾಪಕರುಮಗಳು ಪುತುಪುತನೆ ವುದುರಿ ಭಸುಮವಾಗುತ್ತಿರುವುದನ್ನು, ಚಂದ್ರಾಮ ಸೂರ್ಯಮನೋಪಾದಿಯಲ್ಲಿ ಧಗಧಗನೆ ಪ್ರಜ್ವಲಿಸುತ್ತಿರುವುದನ್ನು ನೋಡುತಯ್ತೆ, ನಿರ್ದೇಶನ ಮಾಡುತಯ್ತೆ..

ಯೀ ಪ್ರಕಾರವಾಗಿ ಸಿಮ್ಮಾಸನಾರೂಢೆಯಾಗಿರುವ ತಾಯಿಯನ್ನು ಹೊಳಗೆ ಹೊಂಡಿಸುವಂಥಾ ಸುಭಕಾರ್ಯೇವು ಕಣ್ಣಿಗೆ ಹಬ್ಬ ಮಾಡುವಂತೆ, ಕಿವಿಗಡುಚಿಕ್ಕುವಂತೆ, ಅಳ್ಳೆದೆಗಳು ಕರಗಿ ನೀರಾಗಿ ಹರಿಯುವಂತೆ, ಆವೇಶ ಅಕ್ಕಯಿಸುತ್ತ, ರವುಸ ರಕ್ಕಯಿಸುತ್ತ ಯಿದ್ಯುಕ್ತವಾಗಿ ಆರಂಭಗೊಂಡಿತು ಸಿವನೇss..

*ಅದನು ಯೇನು ಕೇಳುವಿ ಸಿವನೇss ಯೇನು ಬಿಡುತಿ ಸಿವನೇss..*

*ಸಿವನ್ನಾಮ ಪಾರೊತೀ ಪತಿss..*

ತಾಯಿ ದಿಬ್ಬಣವು ಅರ್ದ ಮೊಳ ಕ್ರಮಿಸಲಕ ತಾಸೊಪ್ಪತ್ತು ಹಿಡಿಯಲಕ ಹತ್ತಿತು, ಮಂದಿ ವಂದಕ್ಕೊಂದು ಅಂಟಿಕೊಂಡುಬಿಟ್ಟಿತ್ತು, ಅವರದನ್ನು ಯಿವರೂ, ಯಿವರದನ್ನು ಅವರೂ ವುಸುರಾಡುತಲಿದ್ದ ಪರಿಣಾಮವಾಗಿ ವಂದು ಹಿಡಿ ಗಾಳಿಗೆ ಬರ ಬಂದಿತ್ತಲ್ಲಿ.. ಗುಡೇಕೋಟೆ, ಜರುಮಲಿ, ನೆಡುವಿ, ನಿಚ್ಚಾಪ್ರ, ತುಂಬರಗುದ್ದಿ, ಮರಿಗುದ್ದಿ ಯಿವೇ ಮೊದಲಾದ ಪ್ರಾಂತ ದೂರುಗಳಿಂದ ಭಕುತಾದಿ ಮಂದಿ ರಗಡ ಸಂಖೇಲಿ ಸದರಿ ಪಟ್ಟಣವನ್ನು ತುಂಬಿ ತುಳುಕಾಡತೊಡಗಿದ್ದರು.. ಬಂದ ಪ್ರತಿಯೋರ್ವನು ತಾನು ಸಾಂಬವಿಯ ಕಣ್ಣಳತೆಯೊಳಗಿರಬೇಕಂದರ ಹೆಂಗ? ಕೂಗಳತೆಯೊಳಗ ಯಿರಬೇಕಂದರ ಹೆಂಗ? ಆಟು ದೂರದಿಂದ ಪಾದ ಯಾತ್ರೆಮಾಡುತ ಬಂದ ತಮಗ ತಾಯ ದರುಸನ ಲಭ್ಯವಾಗುತಾ ಯಿಲ್ಲವಲ್ಲ ಯಂದು ಯುಸನ ಮಾಡುತ ತಾವೆಲ್ಲೆಲ್ಲಿದ್ದರೋ ಅಲ್ಲಲ್ಲೆ ನಿಂತೂ, ಕುಂತೂ ಜಗದಂಬೆ ಯಿಲ್ಲೇ ಯಿರುವಳು ಯಂದು ಭಾವಿಸಿ ಅಲ್ಲಲ್ಲೇ ಪೂಜೆ ಪುನಸ್ಕಾರ ಮಾಡುತ, ತಮ್ಮ ಹರಕೆಯ ಕುರಿಯುನ್ನು ಅಲ್ಲಲ್ಲೇ ಬಲಿ ಕೊಟ್ಟು ನಂವ್ವೇಧ್ಯ ಮಾಡುತ ಯಿರತೊಡಗಿದವರಷ್ಟೋ ಮಂದಿ..ಯಿದೊಂದೇ ಅಲ್ಲದೆ ಸುತ್ತನ್ನಾಕಡೆ ಮೂರುಗಳಲ್ಲಿದ್ದ ವುಡುಸಲಮ್ಮ, ತಡಸಲಮ್ಮ, ಮಾರೆಮ್ಮ, ಮಸಣಮ್ಮ, ಮೂರಮ್ಮ ಮೇರಮ್ಮರೇ ಮೊದಲಾದ ಹೆಣ್ಣು ದೇವರುಗಳು ತಮ ತಮ್ಮ ಪೂಜಾರಿಗಳ ಹೆಗಲೇರಿ ಸದರಿ ಪಟ್ಟಣವನ್ನು ಹಿಗ್ಗಾ ಮುಗ್ಗಾ ತುಂಬಿ ಬಿಟ್ಟಿದ್ದವು. ಅವು ಯಲ್ಲೆಲ್ಲಿದ್ದವೋ ಅಲ್ಲಲ್ಲೇ ಸಾಂಬವಿಯ ನಾಮಸ್ಮರಣವನ್ನು ಮಾಡುತ ಕುಣಿಯಲಾರಂಭಿಸಿದ್ದವು.. ಕೆಲವು ಹೆಣ್ಣು ದೇವರುಗಳಂತೂ ಅವರ ಸರೀರದೊಳಗೊಂದರಗಳಿಗೆ, ಯಿವರ ಸರೀರದೊಳಗೊಂದರಗಳಿಗೆ ಸ್ತಾನಪಲ್ಲಟ ಮಾಡಲಾರಂಭಿಸಿದ್ದವು.. ತಾಯಿಯ ನಿಬ್ಬಣ ಹೊಂಟ ಸೊಲುಪ ಹೊತ್ತಿಗೇನೇ ಕುದುರೆಡವು ಪಟ್ಟಣದ ಮೇರೆಯು ಬಡೇಲಡಕು, ಸಿಡೇಗಲ್ಲು

ದಾಟಿ ಮುಂದಕ ಹೋಗಿ ಬಿಟ್ಟಿತ್ತೆಂದರ..

ಹುಟ್ಟಿದಾರಾಭ್ಯ ಬಾಯನ ಕಳಕೊಂಡಿದ್ದೋರು ಯಿದ್ದಕ್ಕಿದ್ದಂತೆ ಸಿವನ್ನಾಮ ಪಾರೊತೀ ಪತಿಹರ ಹರ ಮಾದೇವ ಯಂದು ಕೂಗಲಕ ಆರಂಭ ಮಾಡಿದರೆಂದರ,

ಹುಟ್ಟಿದಾರಾಭ್ಯ ಕಾಲನ ಕಳಕೊಂಡಿದ್ದೋರು ಯಿದ್ದಕ್ಕಿದ್ದಂತೆ ಚಕಚಕ ನಡೆದಾಡ ಲಾರಂಭಿಸಿದ್ದರೆಂದರ..

ಹುಟ್ಟಿದಾರಾಭ್ಯ ಕಿವಿಕಳಕೊಂಡಿದ್ದೋರು ಯಲ್ಲಾ ಕೇಳಿಸಿಕೊಳುತ ಸಾನುಕೂಲವಾಗಿ ಪ್ರತಿಕ್ರಿಯಿಸಲಾರಂಭಿಸಿದ್ದರೆಂದರ.. ನೋಡದಿದ್ದವರೂ ನೋಡುತಲಿದ್ದರೆಂದರ, ಚಾಚದಿದ್ದವರೂ ಕಯ್ಯಿಗಳನು ಅಷ್ಟುದ್ದಗಲಕ ಚಾಚುತಲಿದ್ದವರೆಂದರ.. ಮುದೇರು ಹರೇದವರಾಗಿದ್ದರೆಂದರ.. ಹರೇದ ಹುಡುಗರು ಕೂಸುಕಂದಮ್ಮಗಳಾಗಿದ್ದರೆಂದರ.. ಕೂಸುಕಂದಮ್ಮಗಳಿಗೂ ಹರೆಯ ಮೂಡಿ ತಮ್ಮ ತಮ್ಮ ತಾಯಂದಿರ ಕಂಕುಳಗಳಿಂದ ಕೊಸರುತ್ತ ಕೆಳಕ್ಕೆ ಯಿಳಿಯುತ್ತಿದ್ದವೆಂದರ..

ಸಿಂಹವಿಷ«ರದಲ್ಲಿ ಅಲಂಕಾರ ಮಾಡಿದ್ದ ತಾಯಿಯು ತನ್ನ ಸಕಲ ಸರುವಸ್ವವನ್ನೂ ಪರಿಸೆ ದಿಬ್ಬಣದಲ್ಲಿದ್ದ ಯಾವತ್ತೂ ಸಚರಾಚರಕ್ಕೆ ಧಾರೆ ಯರಕೋತಲೇ ಮುಂದುಮುಂದಕ ಜರುಗುತಲಿದ್ದಳು. ಪಡ್ಲು ಚಿಮುಳೆವ್ವ, ಗೂಡ್ಲು ಲಿಂಗವ್ವ, ಗಾದರಿಪಾಲೆವ್ವ, ಕುರಿಯೋರ ಕಂಪಳವ್ವ ಮುಂತಾದೇಳುನೂರು ಮಂದಿ ಯದೆ ತುಂಬಿ, ಬಾಯಿ ತುಂಬಿ ಹಾಡುತಲಿದ್ದ ಪದಗಳನು ಆಲಿಸುತ್ತ ವಂದರಗಳಿಗೆ ಮಯ್ಯನ ಮರೆಯುತ್ತಿದ್ದಳು, ಸವುಟು ನಿಂಗಯ್ಯ, ಸಣ ಮುಂಡಯ್ಯ, ದೊಡ ರುಂಡಯ್ಯ, ಗೊಡಗು ಬೋರರೇ ಮೊದಲಾದ ವಂಭಯ್ನೂರು ಮಂದಿ ನಿಜ ಭಕುತರು ಕುಣಿದು ಕುಪ್ಪಳಿಗೆ ಮಾಡುತಲಿದ್ದುದನ್ನು ನೋಡುತ ವಂದರಗಳಿಗೆ ಮರು ಯಚ್ಚರ ಆಗುತಲಿದ್ದಳು. ಗಾದೆರಯ್ಯ, ಚತ್ತರಯ್ಯ, ಚಿತ್ತಾರಯ್ಯ, ಕೊಟ್ಟೆಹನುಮಂತಯ್ಯ, ಕೊರಲೀರಯ್ಯ ಯಿವರೇ ಯಿತ್ಯಾದಿನ್ನೂರು ಮಂದಿ ತಮ ತಮ್ಮ ಕಯ್ಲಿದ್ದ ಚಬಕು, ಬರಲುಗಳಿಂದ ತಮ ತಮ್ಮ ಮಯ್ಗೆ ಬಡಕೊಂಡು ರಾಮಾ ರಗುತ ಹನಿಯುತ್ತಿದ್ದುದನ್ನು ನೋಡುತ್ತ ಅವುಡುಗಚ್ಚಿ ವಂದರಗಳಿಗೆ ಮುಖ ಬಿಗಿಯುತಲಿದ್ದಳು.. ಕೊರಲಯ್ಯ, ಮ್ಯಾಸರೆಲ್ಲಯ್ಯ, ಕೊಲ್ಲಾರಯ್ಯ ಹೊಟ್ಟೆಯ್ಯ, ತಾಳ್ಳಕರಯ್ಯ, ಬುಡ್ಡೆನಿಂಗಯ್ಯ ಯಿವರೇ ಮುಂತಾದ ಮುನ್ನೂರು ಮಂದಿ

“ಯವ್ವಾs ನಿನ ಪಾದ ನನ ಮ್ಯಾಲಿಡು, ನನ ಮ್ಯಾಲ ಯಿಡು” ಯಂದು ಅಂಗಲಾಚುತ ಅಡ್ಡಡ್ಡ ಬಕ ಬೋರಲೆ ಮಲಗುತ್ತಿದ್ದುದನ್ನು ನೋಡಿ ಅಲಲಲಲಾಂತ ಕಿಲಕಿಲಗುಟ್ಟುತಲಿದ್ದಳು.. ಕುಂತೆಯ್ಯ, ಮಂಕಲಯ್ಯ, ಬೀಮಯ್ಯ, ಅಂಜಿಣಿ, ಕೆಂಗಯ್ಯ, ಭರುಮಯ್ಯ, ಅಪ್ಪಯ್ಯ, ಮರಿಪಾಲಿ ಯಿವರೇ ಮೊದಲಾದ ನೂರಾರು ಮಂದಿ ತಮ ತಮ್ಮ ಯಡಗಯ್ಯಿಗಳಿಗೆ ಬಟ್ಟೆಬರೆ ಸುತ್ತಿ ಅವುಡಲೆಣ್ಣೆ ಸುರುದು ದೀವಟಿಗೆ ಮಾಡಿ ವುರುಸುತ್ತಿದ್ದುದನ್ನು ನೋಡಿ ತನ್ನ ಕಣ್ಣುಗಳನ್ನು ಮೂರಗಲ ಹಿಗ್ಗಿಸುತಲಿದ್ದಳು.. ಯಿವರೊಂದೇ ಅಲ್ಲದೆ ತಲೆ ಕೆಳಗು ಮಾಡಿ ಅಂಗಯ್ಯಾಸರೆಯಿಂದ ನೆಡೆಯುತಲಿದ್ದ ಪುಲ್ಲಾದ ಪಾತಯ್ಯ, ತಿಪ್ಪಯ್ಯ, ಹಟ್ಟೆಯ್ಯ, ಸಿವಯ್ಯ, ಗೊಟ್ಟರಯ್ಯರೇ ಮುಂತಾದವರೂsss.. ಮೋಳುಮಗ್ಗುಲಲೇ ದುಡುದುಡುನೆ ವುರುಳಾಡುತಲಿದ್ದ ಗುರ್‍ರಯ್ಯ, ಪಾಪಯ್ಯ, ಪುನ್ನಯ್ಯ, ಕರೆಮೋರಯ್ಯ, ತೂಬಯ್ಯ ಮುಂತಾದವರೋsss.. ಸಿವ.. ಸಿವಾ...

ಯವ್ವಾss ಯಿದು ನಿನ್ನ ಕರುಣ ಪರಸಾದ ತಾಯಿss ಯಂದು ತಮ ತಮ್ಮ ಕೂಸು ಕುನ್ನಿಗಳನು ತಾಯಿಕಡೇಕ ಬೀಸಿ ಹಿಡಿಯುತಲಿದ್ದ ತಾಯಂದಿರೆಷ್ಟೋ ಮಂದಿ.. ಹೆಂಡಂದಿರು ತಮ ತಮ್ಮ ಗಂಡಂದಿರನ್ನೂ, ಗಂಡಂದಿರು ತಮ ತಮ್ಮ ಹರೇದ ಮಕ್ಕಳನ್ನೂ.. ಬಯಲೊಳಗ ಖಡುಗಗಳ ಹೊಳೆ ತುಳುಕಾಡುತಲಿತ್ತು.. ಬಯಲೊಳಗ.. ಪರಾಕು ವಕ್ಕಲು ನಡಿತಾ ಯಿತ್ತು.. ಮಾಡೋ ಕಯ್ಯಿಗಳಿಗೆ.. ನಡೆಯೋ ಕಾಲುಗಳಿಗೆ.. ನೋಡೋ ಕಣ್ಣುಗಳಿಗೆ.. ಕೇಳೋ ಕಿವಿಗಳಿಗೆ.. ಹೊಡಕೊಳ್ಳೋ ರುದೆಯಗಳಿಗೆ ರವ್ವಂಥಾದರೂ ಪುರುಸೊತ್ತುಯಿರಲಿಲ್ಲ.

ಯಿಂಥಾ ಪರಿಸ್ಥಿತೀಲಿ ಗಡಗಡಾ ನಡೆ ಅಂದರ ಹೆಂಗ ನಡದಾಳು ಸಾವುರ ಸಾವುರ ಪಾದಗಳ ತಾಯಿ. ಅದು ತನಗ ಅರುಪಿತ ಆಯ್ತಾ.. ಯಿದು ತನಗ ಅರುಪಿತ ಆಯ್ತಾ ಯಂದಾಕೆ ತನ್ನ ಸಾವುರ ಸಾವುರ ಕಣ್ಣುಗಳಿಂದ ಪರಾಂಬರಿಕೆ ಮಾಡುತಾ ಯಿದ್ದಳು.. ಭಕುತಾದಿ ಮಂದಿಯ ಸಮಸ್ತ ಪಂಚೇಂದ್ರಿಯಂಗಳಿಗೆ, ಅಂಗಾಂಗಗಳಿಗೆ ರವುಸ, ಕಸುವು ತುಂಬುತಲೇ ಯಿದ್ದಳು.. ಭಕುತಾದಿ ಮಂದಿಯ ಸಮಸ್ತ ಸರೀರಗಳನ್ನು ಹೊಕ್ಕು ಕಾಮಗಾರಿ ಮಾಡುತಲಿದ್ದಳು, ಆಸ್ತೀಕ ಭಾವದ ವಕ್ಕಲಾಟ ನಡೆಸಿದ್ದಳು, ಆದ್ದರಿಂದ ಜರಜರ ಜರುಗುತಲಿದ್ದ ಆ ಮಹಾನ್ ಪರಿಶೆ, ದಿಬ್ಬಣದಲ್ಲಿದ್ದ ಯಾರೊಬ್ಬರಿಗೂ ಬ್ಯಾನೆ ಬ್ಯಾಸರಿಕೆಯಾಗಲೀ, ಹಸುವು, ತ್ರುಷೆಯಾಗಲೀ ಬಾಧಿಸುತಲಿರಲಿಲ್ಲ.

ಹೊತ್ತು ಮುಂದಕ ಹೋಳ್ಳದಂಗಾಗಿತ್ತು, ಹಿಂದಕ ಹೋಳ್ಳದಂಗಾಗಿತ್ತು, ಅದು ನಿಂತಲ್ಲೆ ನಿಂತೇ ಯಿತ್ತು. ಅಂಥ ಮುಚ್ಚಂಜೆ ಮೂರುಗಳಿಗೆ ಹೊತ್ತಿನಲ್ಲಿ ಸಿಡೇಗಲ್ಲು ದ್ವಾರ ಬಾಕುಲಿಂದ ದಯಮಾಡಿದ ದಿಬ್ಬಣವು ಹತ್ತು ಮಾರು ದೂರದಲ್ಲಿದ್ದ ಮಾಸ್ತೀ ಬಾಕುಲು ತಲುಪೋ ಹೊತ್ತಿಗೆ ಮುಗುಲ ಆಕಾಸ ಮಾರ್ಗದಲ್ಲಿ ನಚ್ಛತ್ರಗಳು ಹೊತ್ತನ್ನು ಲೆಕ್ಕಿಸದೆ ನಡಕೋತss ನಡಕೋತ.. ಆಟು ದೂರಕ ಬಂದಿದ್ದವು.. ಮುಂದಲಕಿದ್ದ ನಚ್ಛತ್ರಗಳನ್ನು ಹಿಂದೇಸಿಂದ ಬಂದು ತಳ್ಳುತಲಿದ್ದ ನಚ್ಛತ್ರಗಳೆಷ್ಟೋ? ಹಿಂದಲಕಿದ್ದ ನಚ್ಛತ್ರಗಳನ್ನು ಮುಂದೇಸಿಂದ ನೂಕುತಲಿದ್ದ ನಚ್ಛತ್ರಗಳೆಷ್ಟೋ? ನಚ್ಛತ್ರಗಳ ವಡತಿಯಾಗಿದ್ದಂಥ ಸಿವಸರಣೆ ಚೆನ್ನವ್ವ ಮತ್ತು ಧರುಮ ದೇವತೇರು ಭೂಲೋಕದಿಂದ ಹೋಗಿ ಅಲ್ಲಿದ್ದಳಷ್ಟೆ. ಅವರು ಕಾಯಿದೆ ಶೀರಾ ಅವೆಲ್ಲವುಗಳ ಮುಖಂಡತ್ವ ವಹಿಸಿ ತಾಯಿ ದಿಬ್ಬಣ ಕಣ್ತುಂಬ ನೋಡಲಕ ಅನುವು ಮಾಡಿ ಕೊಟ್ಟಿದ್ದರು.

ಅಲ್ಲಿಗೆ ಮೂರೂವರೆ ಮಾರು ದೂರದಲ್ಲಿ, ಅಂದರೆ ಮಾರಮ್ಮನ ಬಯಲೂ ಅಂತ ಯೇನಿತ್ತೋ? ಅಲ್ಲಿ ಪೆದೋಬಯ್ಯ ನಾಯಕ ಪಟ್ಟ ಯೇರುವ ಸಮಯಕ್ಕ ಯಾವ ಜಾಗದಲ್ಲಿ ಹತ್ತಿಪ್ಪತ್ತೂರ ಜಟ್ಟಿಗಳು ಮಲ್ಲಯುದ್ಧ ಮಾಡಿ ಪವುರುಷ ಮೆರೆದಾಡಿದ್ದರೋ, ಅವರ ಪಯ್ಕಿ ಅಯಿದಾರು ಮಂದಿ ಯೀರ ಮರಣ ಅಪ್ಪಿದ್ದರೋ, ಅಲ್ಲಿ ತಾಯಿ ಸಾಂಬವಿ ಹಾದಿ ಆಯಾಸ ಪರಿಹಾರ ಮಾಡಿಕೊಳ್ಳೋ ಸಲುವಾಗಿ ವಂಬತ್ತು ಘನ ಮೊಳ ವುದ್ದಗಲ ಯತ್ತರದ ವಂದು ಕಟ್ಟೆ ನಿರುಮಾಣ ಮಾಡಿದ್ದರು. ತಾಯಿಯ ಬಾಯಾರಿಕೆ ತೀರಿಸಲಕೆಂದು ಕೊಳಗಗಟ್ಟಲೆ ನೊರೆವಾಲು ಯಿಟ್ಟಿದ್ದರು, ತಾಯಿಯ ಹಸುವೆ ಪರಿಹಾರಾರ್ತವಾಗಿ ಹೋಳಿಗೆ, ಕರಿಗಡುಬು, ಹುಗ್ಗಿ, ಕರಚೀಕಾಯಿ ಮೊದಲಾದ ಪದಾರ್ಥಗಳನ್ನು ಯಿಟ್ಟಿದ್ದರು. ತಾಯಿ ಚಾವತ್ತು ವರಕ್ಕೊಂಡು ಜೋಂಪು ನಿದ್ದೆ ಮಾಡಲೀ ಅಂತ ಕವುದಿ, ಗುಡಾರ, ಚಾದರ, ತಲೆದಿಂಬು ಯಿವೇ ವೊದಲಾದ ಹಾಸಿಗೊದ್ದಿಕೆಗಳನ್ನು ಯಿಟ್ಟಿದ್ದರು, ಅವ್ವನ ಸೆಕೆ ನೀಗಿಸಲಕಂತ ಚಾಮರಗಳನ್ನು, ಬೆಳದಿಂಗಳು ಬಿಸಿಲಾಗಿ ಸುರಿದಲ್ಲಿ ನೆರಳು ಮಾಡಲಕಂತ ಮುತ್ತಿನ ಗೊಂಡೇವ ಛತ್ರಿಗಳನ್ನೂ ಯಿಟ್ಟಿದ್ದರು. ಅವ್ವಗೆ ಬ್ಯಾಸರಿಕೆ ಆದಲ್ಲಿ ಅದನ್ನು ಕಳೆಯಲಕಂತ ಗೊಟ್ಟು ಪಾಪವ್ವ, ಪುಂಗಿ ನುಂಗವ್ವ, ಬಜ್ಜಿ ಕರಚವ್ವರೇ ಮೊದಲಾದ ಯಿಪ್ಪತ್ತೊಂದು ಮಂದಿ ಸೊಗಸುಗಾತಿಯರನ್ನು ಹಾಡಿಪಾಡಲಕಂತ, ನರ್ತನ ಮಾಡಲಕಂತ ಯಿಟ್ಟಿದ್ದರು. ಯಿೂ ಯೇರುಪಾಡಿನ ವುಸ್ತುವಾರಿ ನೋಡಲಕಂತ

ಅಜ್ಜನೋಬವ್ವ ಅವ್ವ ಯೀಗ ದಯಮಾಡ್ಯಾಳು.. ಆಗ ದಯಮಾಡ್ಯಾಳು, ಅಂತ ಯೇಟೋ ಹೊತ್ತಿನಿಂದ ಕಾದೂ ಕಾದೂ ತೂಕಡಿಸುತಲಿದ್ದಾಗ...

ಅವ್ವ ಗಕ್ಕಂತ ನಿಂತುಬಿಟ್ಟಳು ಹಿಂದಕ ಸರಿಯದೆ, ಮುಂದಕೂ ಸರಿಯದೆ.. ಗಂಟಲಯ್ಯ ಅಹಹಹಾss.. ಯಂದು ವಂದರ ಮ್ಯಾಲೊಂದರಂತೆ ಖಡುಗ ಹೇಳಿದರೂ, ಪಾಲಮುಲಯ್ಯ ವಂದರ ಮ್ಯಾಲ ವಂದರಂತೆ ಪರಾಕು ಹೇಳಿದರೂ ಅವ್ವ ವಂದೇ ವಂದು ಹೆಜ್ಜೇನ ಕಿತ್ತು ಮುಂದಕ ಯಿಡದೆ ಹ್ಹ.. ಹ್ಹಾ.. ಅಂತ ಯಡಕೂ, ಹ್ಹು.. ಹೂ ಅಂತ ಬಲಕೂ ವಾಲಾಡತೊಡಗಿದಳು. ಬಡಪಾಪಯ್ಯರೇ ಮೊದಲಾದ ಪುವು಼ೕಲ ಸಾಮ್ರಾಜ್ಯದಾಸ್ಥಾನ ಯಿಖ್ಯಾತ ಜಗಜಟ್ಟಿಗಳು ಯಷ್ಟು ತಿಣುಕಿದರೂ ತಾಯಿಯಿದ್ದ ಸಿಮ್ಮಾಸನವು ವಂಚೂರಾರ ಜರಗದಾಗಲು ವಬ್ಬೊಬ್ಬರು ವಂದೊಂದು ಯಿಧದ ಯಾಸನ ಮಾಡಲಾರಂಭಿಸಿದರು.. ಯಮ್ವೋ ಯಮ್ವೋss ಯಂದು ಗಗ್ಗರಿಸತೊಡಗಿದರು. ಯಾಕ ಮುನಸ್ಕೊಂಡಿ ತಾಯೇ ಯಂದಂಗಲಾಚಲಾರಂಭಿಸಿದರು.

ತಾಯಿ ಸುಮ ಸುಮಕ ನಿಲ್ಲುವಾಕೆಯಲ್ಲ, ತನ್ನ ಮನಸ್ಸಿನೊಳಗ ಯೇನೋ ಲೆಕ್ಕಾಚಾರ ನಡೆಸಿದ್ದಂಗಯ್ತೆ.. ಅದು ಯಿದಿರಬವುದಾ? ಅದು ಯಿರಬವುದಾ..?

*ಹರಕೆ ಮುಕ್ಕೊಂಡೋರು ಯಲ್ಲದೀರವ್ವಾ..*
*ಮುಡುಪು ಬೇಡಿಕೊಂಡೋರು ಯಲ್ಲದೀರಪ್ಪಾ..*
*ಮನಸಿನಾಗ ನಗಾಡಿಕೊಂಡೋರೆ.. ಕಣಸಿನಾಗ ನಗಾಡಿಕೊಂಡೋರೆ*
*ಬಿರ್‍ರನೇ ಬರ್‍ರವ್ವಾ.. ತಾಯಿಗರುಪಣ ಮಾಡಿರಪ್ಪಾ..*

ಬಾಯಿಯಿಂದ ಕಿವಿಗೆ, ಕಿಯಿಯಿಂದ ಬಾಯಿಗೆ ಪಿಸುಮಾತು ಹಬ್ಬುತಬ್ಬುತ ಹೋತು. ನೀನಿರಬವುದೇ? ನೀನಿರಬವುದೇ ಅಂತ ಅವರಿವರ ಮುಖಮಾರೀನ ನೋಡುತಿರುವಾಗ್ಗೆ, ಸಾಸುವೆಕಾಳು ಬಿದ್ದರೂ ಸಬುಧ ಆಗುವಷ್ಟು ಮವುನ ಅಮರಿರುವಾಗ್ಗೆ, ಅಂಥ ವಬ್ಬೊಬ್ಬರೂ ವುರುಳುತುರುಳುತ ಬಂದು ತಾಯಿ ಪಾದದ ಮುಂದ ದುಕುದುಕ್ಕಿಸುತ ಹೊರಳಾಡುತಿರುವಾಗ್ಗೆ, ತಮದದು ಹೋತು, ತಮದಿದು ಹೋತು ಯಂದು ತಮ ತಮ್ಮ ಸರೀರಗಳಲ್ಲಾದ ಲುಕ್ಷಾಣು ಕುರಿತು ಆಡ್ಯಾಡಿಕೋತ ಅಳುತಿರುವಾಗ್ಗೆ, ಸೀರೆ ವುಟುಕೊಂಡಿರುವಾಗ್ಗೆ, ಬಳೆ ತೊಟುಕೊಂಡಿರುವಾಗ್ಗೆ, ಕುಂಕುಮ ಭಂಡಾರದ ರಾಶಿಯನ್ನು ತೂರಾಡುತಿರುವಾಗ್ಗೆ, ತಮ ತಮ್ಮ ಮೂಗಿಗೆ ಪೋಣಿಸಿಕೊಳ್ಳಲಕೆಂದು

ಕವಡೆಗಳಿಗಾಗಿ ಹುಡುಕಾಡುತಿರುವಾಗ್ಗೆ, ಹಸಗಂದಮ್ಮಗಳಂತೆ ಬಿಕುಬಿಕ್ಕುತ ಅಳುತಿರುವಾಗ್ಗೆ, ವಂದೊಂದು ಸರೀರದೊಳಗೆ ಅನುಗಾಲ ವಾಸಮಾಡುತಲಿದ್ದಂಥ ದೆವ್ವ, ಪೀಡೆ, ಪಿಚಾಚಿಗಳು ಜಿಹ್ವಾಗ್ರಗಳಲ್ಲಿ ಜೋತಾಡುತ ವುದುರಲು ಹಿಂದೇಟು ಹಾಕುತಿರುವಾಗ್ಗೆ, ವಂದೊಂದು ಜೀವಿಗೂ ಅದರದರ ಪೂರುವ ಜಲುಮ ಕರುಮಕ್ಕನುಸಾರವಾಗಿ ತಾಯಿ ಪ್ರಾಯಶ್ಚಿತ್ತ ಯಿತರಣ ಮಾಡುತ್ತಿರುವಾಗ್ಗೆsss..

ಹ್ಹೋ.. ಹ್ಹೋss ದನಿಯು ನಯ್ರುತ್ಯ ದಿಕ್ಕಿನಿಂದ ಕೇಳಿ ಬಂತು. ಅದು ಆಮಾತ್ಯಗವುಡಿಕೆ ಸಣ ಸಿದ್ದಪ್ಪನದಾಗಿತ್ತು. ಅವಯ್ಯನು ಮೋಡೋಡಿ ಬಂದು ತಾಯಿಯ ಪಾದಾರಯಿಂದಗಳಿಗೆ  ಕಡಕೊಂಡು ಬಿದ್ದು “ಅವ್ವಾs ನನ್ನ ತಪ್ಪನ್ನು ಛೆಮಿಸು” ಯಂದು ಬೇಡಿಕೊಳ್ಳಲು ಸಿಮ್ಮಾಸನವು ವಂದು ಮೊಳ ಮುಂದಕ್ಕೆ ಚಲಿಸಿತು.

ಹ್ಹೋ.. ಹ್ಹೋss ಯಂಬ ದನಿಯು ಅಗ್ನಿ ದಿಕ್ಕಿನಿಂದ ಕೇಳಿ ಬಂತು. ಅದು ಭಂಡಾರಿ ಸನ್ಯಾಸಪ್ಪನದಾಗಿತ್ತು. ಯಿೂ ಪ್ರಕಾರವಾಗಿ ಯಿನ್ನೊಂದು ದಿಕ್ಕಿನಿಂದ ಯಿನ್ನೊಬ್ಬಾತನೂ, ಮತ್ತೊಂದು ದಿಕ್ಕಿನಿಂದ ಮತ್ತೊಬ್ಬಾತನೂ.. ಮಗುದೊಂದು ದಿಕ್ಕಿನಿಂದ ಮಗುದೊಬ್ಬಾತನೂss ತಾಯಿಯ ಪಾದದ ಬುಡಕ್ಕೆ ಪಾವಲಿ, ಯಂಟಾಣೆ ಚೂರುಗಳಂತೆ ವುರುಳುರುಳಿ ಬಂದು ತಮ ತಮ್ಮ ಪಾಪ ಕ್ರುತ್ಯಗಳನ್ನು ನಿಯೇದಿಸಿಕೊಂಡರು. ಸಿಮ್ಮಾಸನವು ಮೊಳ ಲೆಕ್ಕದಲ್ಲಿ ಹಲವು ಮಾರು ದೂರ ಮುಂದಕ್ಕ ಬಂದುದನ್ನು ಕಂಡು ಭಕುತಕೋಟಿಯು ಭೋ ಪರಾಕ್ ಯಂದು ಕೂಗಿತು. ಸಿಮ್ಮಾಸನವು ಯಿದ್ದ ಹುವ್ವಿನ ಪಲ್ಲಾಕಿಯು ಚಲಿಸುತss ಚಲಿಸುತ ಸಾಗಿ ಅಯ್ತಿಹಾಸಿಕ ಮೂರಮ್ಮನ ಬಯಲನ್ನು ಪ್ರವೇಶ ಮಾಡಿತೆಂಬಲ್ಲಿಗೆ.. ತಾಯಿ ಸಿಮ್ಮಾಸನ ಸಮೇತ ಸಾಲಂಕ್ರುತ ಕಟ್ಟೆಯೇರಿದಳೆಂಬಲ್ಲಿಗೆ, ನಾನಾಯಿಧದ ಸೇವೆ ಆರಂಭಗೊಂಡಿತೆಂಬಲ್ಲಿಗೆ, ಯಿಯಿಧ ವಯೋಮಾನ, ಗಾತುರದ ಹರಕೆ ಕುರಿಗಳ ರುಂಡಗಳನು ಚೆಂಡಾಡುತಲೇ ಯಿದ್ದರೆಂಬಲ್ಲಿಗೆ ಮನಾರ ಬೆಳುದಿಂಗಳು ಕೆಂದೋಕುಳಿಯೊಳಗ ಮುಳುಗೇಳುತಲಿ ತ್ತೆಂಬಲ್ಲಿಗೆ..

ಚಿಗ್ಯಾಟಿಯ ರಾಜ ಗಡ್ಡಮಯ ನಾಯಕ, ಪೆದ್ದಾಟಿರಾಜ ಚಿನನಿಂಗಯ್ಯನಾಯಕ, ಸುಳುವಾಯಿ ರಾಜ ಮುತ್ತೆಪ್ಪನಾಯಕ, ಯೀರಾಪ್ರದ ರಾಜ ಗುರುವೆಪ್ಪನಾಯಕ, ಬಿಳುಕಲ್ಲು ರಾಜ ಮೂಕರಂಗಪ್ಪ ನಾಯಕ,

ಹುಳೇಬೀಡಿನ ರಾಜ ಕೆಂಚೆಪ್ಪನಾಯಕ, ಡಾಣಾಪ್ರದ ರಾಜ ಚೆನ್ನು ಬೊಮ್ಮಯ್ಯನಾಯಕ, ಯಿವರೇ ಮೊದಲಾದ ಕುಂತಳ ಪ್ರಾಂತದ ಗಡಿ ಅಂಚಿನಲ್ಲಿರುವ ಅರಕೆರೆ ಸೀಮೇಯ ನಾಯಕರು ಕಾಲಾನುಕಾಲಕ್ಕೆ ಕುಂಪಣಿ ಸರಕಾರದಿಂದ ಸ್ಥಾನಭ್ರಷ್ಟರಾಗಿದ್ದಂಥವರು, ನಿನ್ನೆಮೊನ್ನೆವರೆಗೆ ತಮ ತಮ್ಮ ಪಾಳೈಪಟ್ಟುಗಳನ್ನು ಪರಿಪಾಲಿಕೆಮಾಡುತಲಿದ್ದಂಥವರು, ದತ್ತು ಯಂಬ ಗುನೇವಿಗೆ ವಳಗಾಗಿದ್ದಂಥವರು, ಸರಕಾರದಿಂದ ಆರ್ಥಿಕ ಸಾಯ, ಸಯ್ನಿಕ ಸಾಯ ಪಡೆದಿದ್ದಂಥವರು, ಮತ್ತಿನ್ಯಾವುದೋ ಕಾರಣಗಳಿಗಾಗಿ ತಮ ತಮ್ಮ ಅರಸೊತ್ತಿಗೆಗಳನ್ನು ಕಳಕೊಂಡು ಅಡವಿ ಪಾಲಾಗಿದ್ದಂಥವರು, ಕುಂಪಣಿ ಸರಕಾರದ ಬಲೆಗೆ ಬೀಳಬ್ಯಾಡಿರೆಂದು ಪ್ರಚಾರ ಮಾಡುತ ಮೂರಿಂದ ಮೂರಿಗೆ ತಿರುಗುತ್ತಿದ್ದಂಥವರು, ಸದರಿ ಪಟ್ಟಣಕ್ಕೆ ಬಂದು ಪುವ್ವಲ ರಾಜಪರಿವಾರದವರ ದುಸ್ಥಿತಿ ಕಂಡು ಮಮ್ಮಲನ ಮರುಗಿದಂಥವರು. ಸಾಂಬವಿಯು ತಮಗ ಅಭಯ ಹಸ್ತ ಚಾಚಿಯಾಳೆಂದು ಅಲ್ಲೊಬ್ಬರು ಯಿಲ್ಲೊಬ್ಬರಂತೆ ನಿಂತಿದ್ದಂಥವರು, ಅಂಜಿಕೆಯಿಂದ ನೋಡುತಾ ಅವರೆ ತಾಯಿಯತ್ತ....

ತರುವಾಯೂ ತಾಯಿ ಅಲ್ಲಿಂದ ಕದಲಲಕ ಹಿಂದುಮುಂದು ನೋಡುತ್ತಾಳೆ.

* * * *

ಅತ್ತ ಕದಿರಿ ಸೀಮೆಯೊಳಗಿದ್ದ ಅಗ್ರಹಾರಗಳ ಕರ್ಮಕತೆಯನ್ನು ಸಯ್ಲು ಮಾಡಲಕೆಂದು ಮನ್ರೋನು ಬ್ರಹ್ಮಹತ್ಯೆ ಮತ್ತು ಸಂಭವಾಮಿ ಯುಗೇ ಯುಗೇ ಮುಂತಾದ ಯಿಷಯಗಳ ಬಗ್ಗೆ ಚರ್ಚಿಸಲು ನವುಕರಿ ಶಾಹಿಯ ಧರ್ಮಪಂಡಿತರ ಸಭೆ ಕರೆದಿದ್ದನಷ್ಟೆ. ಅವರ ಪಯ್ಕಿ ಮನುಸ್ಮೃತಿ, ಯಗ್ನಾವಲ್ಕ ಸ್ಮೃತಿ ಭಗವದ್ಗೀತೆಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ನೃಸಿಂಹಭಟ್ಟರು ಅದರಿಂದ ಬರುವ ಪಾಪಗಳನ್ನು ನಿರ್ಭೀತಿಯಿಂದ ಕೂಲಂಕಷವಾಗಿ ಯಿವರಿಸಿದರು. ಆಹೋಬಲಭಟ್ಟರು ಹಿಂದೂ ಸಮಾಜವು ಯೀ ದೇಶದ ಬ್ರಾಹ್ಮಣರೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವುದೆಂದೂ, ರಾಜಾದಿ ರಾಜಾರಾದಿಯಾಗಿಯಲ್ಲರೂ ಬ್ರಾಹ್ಮಣರನ್ನು ನಡೆದಾಡುವ ದೇವತೆಗಳೆಂದು ತಿಳಿದುಕೊಂಡಿರುವರೆಂದೂ, ಬ್ರಾಹ್ಮಣರ ಸರೀರದಿಂದ ವಂಥೊಟ್ಟು ರಕ್ತ ಭೂಮಿಗೆ ಬೀಳದಂತೆ ಯಚ್ಚರ ವಹಿಸಬೇಕೆಂದೂ, ತಿಳುವಳಿಕೆ ನೀಡಿದರು. ಯಿದು ಸರಿಯನಿಸಿತು. ಆ ಕೂಡಲಾತನು ಅಂಗ್ರೇಜಿ ಶಿಕ್ಷಣ ಯಿಲಾಖೆಯ ಮುಖ್ಯಸ್ತರನ್ನು

ಕರೆಯಿಸಿಕೊಂಡು ಯೇನೇನು ಮಾಡಬೇಕು? ಯೇನೇನು ಮಾಡಬಾರದೆಂದು ಹೇಳಿ ಅಗ್ರೇಜಿ ಜನಪ್ರಿಯುಗೊಳಿಸಲು ಹೊಸ ಹೊಸ ಕ್ರಾಂತಿಕಾರಿ ಯೋಜನೆಗಳಿಗೆ ಚಾಲನೆ ಕೊಟ್ಟನು. ಯಿದರ ಪರಿಣಾಮವಾಗಿ....

ಸಕಲ ಯೇದಪಾರಂಗತರಾದ ತಾವು ಅಂಗ್ರೇಜಿ  ಕಲಿಸುತೀವಂತ ಅಗ್ರಹಾರಗಳಿಗ ಹೋದ ಬ್ರಾಹ್ಮಣ ವುಭಯ ಭಾಷಾ ಪಂಡಿತರೆಷ್ಟೋ, ತಮಗೂ ಯೇದೋಪನಿಷತ್ತು ಕಲಿಸಿರಯ್ಯಾ ಯಂದು ಅಗ್ರಹಾರಗಳಿಗೆ ಹೋದ ಕುಂಪಣಿ ಮಂದಿಂುಷ್ಟೋ? ಯಿಲಿಂುಂ ಬೆಂಟಿಂಕನಿಂದ ರಾಜಾರಾಮಮೋಹನರಾಯನೆಂಬ ಬ್ರಾಹ್ಮಣ ಯಿಂಗ್ಲೀಷು ಕಲಿತಿರುವನಯ್ಯಾ.. ರಾಜಾರಾಮ ಮೋಹನರಾಯನಿಂದ ಬೆಂಟಿಂಕು ಮಹಾಶಯನು ಸಂಸ್ಕೃತ ಕಲಿತು ಪಂಡಿತನಾಗಿರುವನಯ್ಯಾ.. ಯಿಂಗ್ಲೀಷು, ಸಂಸ್ಕೃತ ಯಿವೆರಡೂ ವಂದೇ ದ್ವಿದಳ ಧಾನ್ಯದ ಯರಡು ಹೋಳುಗಳಯ್ಯಾ. ಯಿವೆರಡೂ ಸರಸ್ವೋತೀದೇವಿಯ ಯರಡು ಮೊಲೆಗಳು ಕಣರಯ್ಯಾ, ಮಗು ಯಾವ ಪ್ರಕಾರವಾಗಿ ತನ್ನ ತಾಯಿಯ ಯರಡೂ ಮೊಲೆಗಳನ್ನು ಕುಡಿದು ಬೆಳೆವುದೋ ಅದೇ ರೀತಿ ಯರಡೂ ಭಾಷೆಗಳನ್ನು ಕಲಿಯುವುದರಿಂದ ನಷ್ಟವಿಲ್ಲ. ಯೇ ಯಂಬ ಅಕ್ಷರ ಕಲಿತರೆ ಯಿಷ್ಟು, ಬಿ ಯಂಬ ಅಕ್ಷರ ಕಲಿತರೆ ಯಿಷ್ಟು, ವಂದು ವಾಕ್ಯ ಕಲಿತರೆ ಯಿಷ್ಟು, ಯಿಷ್ಟು ಮೋದಿದರೆ ಅಷ್ಟು, ಅಷ್ಟು ಬರೆದರೆ ಯಿಷ್ಟು, ನಗದು ಬಹುಮಾನ ಕೊಡುತಯ್ತೆ ಸರಕಾರ. ಯಾವ ಅಗ್ರಹಾರದಲ್ಲಿ ಯಿಂಗ್ಲೀಷು ಕಲಿಯಲಕ ತಮ ತಮ್ಮ ಮಕ್ಕಳನ್ನು ಕಳುವರೋ ಆ ಅಗ್ರಹಾರದ ತೆರಿಗೆಯನ್ನು ಮಾಫ್ ಮಾಡಲಾಗುತ್ತದೆ. ಯಿಂಗ್ಲೀಷು ಕಲಿತವರಿಗೆ ಕುಂಪಣಿ ಸರಕಾರ ನವುಕರಿ ಕೊಡಲಿದೆ, ಕಯ್ಯಿ ತುಂಬ ಪಗಾರ ನೀಡಲಿದೆ. ಅವರ ಆಚಾರ ಯಿಚಾರಗಳಿಗೆ ಅಡ್ಡಿ ಆತಂಕ ಮಾಡುವುದಿಲ್ಲ. ನೋಡಿ ಯಂಥಂಥ ಪಂಡಿತರು ಕುಂಪಣಿ ಸರಕಾರದ ನವುಕರಿಯಲ್ಲಿರುವರು. ನೃಸಿಂಹಭಟ್ಟ, ಅಹೋಬಲಭಟ್ಟ, ಪರಾಸರಭಟ್ಟ, ಯಂಕೋಬರಾಯ, ಸ್ರೀಕರಾಚಾರ್ಯ ಮುಂತಾದವರು ಯಿರುವರು. ಅನುಮಾನ ಬಂದವರು ಹೋಗಿ ನೋಡಬಹುದು.. ಯಂದು ಮುಂತಾಗಿ ಪ್ರಚಾರ ಮಾಡತೊಡಗಿದರು.

ಹಿಂಗೆ ಯಿಚಾರಿಸುತ್ತಿದ್ದವರು ಅಪ್ಪಟ ಸಸ್ಯಾಹಾರಿಗಳು, ತ್ರಿಕಾಲ ಸಂಧ್ಯಾವಂದನೆಯುನ್ನು ಶಾಸ್ತ್ರೋಕ್ತವಾಗಿ ಮಾಡುತ್ತಿರುವಂಥವರು. ಯೇಷಭೂಷಣಗಳನ್ನಂತೂ ಅನುಮಾನಿಸುವಂತಿರಲಿಲ್ಲ. ಅಂದ ಮ್ಯಾಲ

ಪ್ರತಿಯೊಂದು ಮನೆಯೊಳಗ, ಮನದೊಳಗ ಅಂಗ್ರೇಜಿಯ ವಾಸನೆ ಆಡಲಾರಂಭಿಸಿತ್ತು. ಮೊದಮೊದಲು ತಮ ತಮ್ಮ ಮನಸಿನೊಳಗ 'ಯೇ' ಅನ್ನತೊಡಗಿದರು. 'ಬೀ' ಅನ್ನತೊಡಗಿದರು 'ಯೇಬೀಸೀಡೀ'.. ಯನ್ನತೊಡಗಿದರು. ಅವರ ಮನದೊಳಗ ಯಿದೇ, ಯಿವರ ಮನದೊಳಗ ಅದೇ, ಅಂದಮ್ಯಾಲ ಯಿವರ ಕಿವಿಯೊಳಗ ಅವರು, ಅವರ ಕಿವಿಯೊಳಗ... ಕ್ರಮ ಕ್ರಮೇಣ ಆ ಮೋಣಿ ಯೀ ಮೋಣಿಯ ಕಿವಿಯೊಳಗ, ತರುವಾಯ ಅಗ್ರಹಾರ, ಅಗ್ರಹಾರದ ನಡುವೆ ಸೂಯಂ ಸೇವಕರು ನಿಗಾಯಿಟ್ಟಿದ್ದರಲ್ಲ.. ಅಂಗ್ರೇಜಿ ಭಾಷೆಯ ಹುನ್ನಾರನ್ನು ಪತ್ತೆ ಹಚ್ಚದೆ ಯಿರಲಿಲ್ಲ, ಕೂಡಲೆ ಕಾರ್ಯಪ್ರವೃತ್ತರಾಗದೆ ಯಿರಲಿಲ್ಲ. ಅವರು ಪ್ರತಿಯೊಂದು ಮನೆಗೆ ಹೋಗಿ ಅಂಗ್ರೇಜಿಯ ಪ್ರಣವಾಕ್ಷರ ಗಳು ಅಲ್ಲುಂಟಾ? ಯಿಲ್ಲುಂಟಾ? ಯಂದು ತಪಾಸಣೆ ಆರಂಭಿಸಿದರು.. ಅವುಗಳನು ಮವುನವಾಗಿ ಅಂದುಕೊಂಡರೂ ಮನಸು ಮಲಿನವಾಗುವುದೆಂದೂ, ನರಕ ಪ್ರಾಪ್ತವಾಗುವುದೆಂದೂ, ಬಹಿರಂಗವಾಗಿ ನುಡಿದವರನ್ನು, ಅಮೇಧ್ಯಭಾಷೆಯನ್ನು ಕಲಿಯಲಕೆಂದು ಹೋಗುವವರನ್ನು, ಕಲಿಕೆಯನ್ನು ಪ್ರೋತ್ಸಾಹಿಸುವವರನ್ನು ಅಗ್ರಹಾರದಿಂದ ಬಹಿಷ್ಕರಿಸಲಾಗುವುದೆಂದೂ, ಬ್ರಾಹ್ಮಣ ರೂಪೀ ಉಪಾಧ್ಯಾಯರೊಳಗ ಕೇವಲ ಅಂಗ್ರೇಜಿತನ ತುಂಬಿ ತುಳುಕಾಡುತ್ತಿರುವುದೆಂದೂ, ಆದ್ದರಿಂದ ಕಲಿಯುವವರನ್ನೂ, ಕಲಿಸುವವರನ್ನೂ, ಪ್ರೋತ್ಸಾಹಿಸುತ್ತಿರುವವರನ್ನೂ ಅಗ್ರಹಾರದಿಂದ ಬಹಿಷ್ಕರಿಸಲಾಗುವುದೆಂದೂ ಯಚ್ಚರಿಕೆಯ ಗಂಟೆ ಭಾರಿಸತೊಡಗಿದರು. ಅಲ್ಲಿಗೆ ಬಿಡದೆ ಸೊಯಂ ಸೇವಕರು ಮಾರು ವೇಷದಲ್ಲಿ ತಿರುಗಾಡುತ್ತ ಕೆಲವು ಅಂಗ್ರೇಜಿ ಕಲಿಕಾ ಪ್ರಿಯರನ್ನು ಪತ್ತೆ ಹಚ್ಚಿ ಥಳಿಸತೊಡಗಿದರು.. ವಟುಗಳ ಪೋಷಕರಿಗೂ, ಸೊಯಂ ಸೇವಕರಿಗೂ ನಡುವೆ ದ್ರುಷ್ಟಿಯುದ್ಧ, ತರುವಾಯ ಜಗಳಗಳೂ, ತದನಂತರ ಹೊಡದಾಟಗಳೂ ನಡೆಯುಲಾರಂಭಿಸಿದವು. ಕೆಲವು ಅಗ್ರಹಾರಗಳಲ್ಲಂತೂ ಸೊಯಂ ಸೇವಕರೇ ಬಹಿಷ್ಕಾರ ಶಿಕ್ಷೆಗೆ ತುತ್ತಾದ ಘಟನೆಗಳೂ ನಡೆದವು.. ಅಂಥ ಸೊಯಂಸೇವಕರು ಪಯಣಿಸಿ ಅಣಿಮಾಂಡವ್ಯಮಾಚಾರ್ಯರನ್ನು ಖುದ್ದ ಕಂಡು ತಮ ತಮ್ಮ ಅಗ್ರಹಾರಗಳ ಅಳಲನ್ನು ತೋಡಿಕೊಂಡರು. ಆ ಆಚಾರ್ಯರು ತಮ್ಮ ನೇತ್ರಗಳು ಮಲಿನಗೊಂಡರೂ ಚಿಂತೆಯಿಲ್ಲ, ತಮ್ಮ ನಾಲಗೆ ಅಪವಿತ್ರಗೊಂಡರೂ ಚಿಂತೆಯಿಲ್ಲ, ಯೀ ಕೂಡಲೆ ಜಿಲ್ಲಾ ಕೇಂದ್ರಸ್ಥಾನಗಳಿಗೆ ಹೋಗಿ ಸರಕಾರದ

ಹಿರಿಯ ಅಧಿಕಾರಿಗಳನ್ನು, ಸಿಕ್ಕಲ್ಲಿ ಮನ್ರೋ ಸಾಹೇಬನನ್ನು ಖುದ್ದ ಭೆಟ್ಟಿಯಾಗಿ ಚರ್ಚಿಸಿ ಅಂಗ್ರೇಜಿ ಭಾಷೆಯ ಹಲ್ಲೆಯನ್ನು ತಡೆಯಬೇಕೆಂದು ನಿರ್ಧಾರ ಮಾಡಿದರು. ಆ ಕೂಡಲೆ ಅನಂತಪುರಕ್ಕೆ ನಿಯೋಗ ಕೊಂಡೊಯ್ದರು. ಮನ್ರೋಗೆ ಬದಲಿದ್ದ ಅಕ್ವಿನೋ ಯಂಬ ಹಿರಿಯ ಅಧಿಕಾರಿಯೊಂದಿಗೆ ಚರ್ಚೆ ನಡೆಸಿದರು, ಅಕ್ವಿನೋ ಕೇವಲ ಕೇಳುವುದ ಮಾಡಿದನು. ಅಂಗ್ರೇಜಿ ಕಲಿಯುವುದು, ಬಿಡುವುದು ಅವರವರ ಯಿಷ್ಟಯಂದಷ್ಟೆ ಹೇಳಿದನು. ತರುವಾಯ ನಿಯೋಗವು ತಮ ತಮ್ಮ ದೇಹಗಳನ್ನು ಶಾಸ್ತ್ರೋಕ್ತವಾಗಿ ಸುದ್ದಮಾಡಿಕೊಳಲಕೆಂದು ಹರಿವ ಜಲಧಿಯನ್ನು ಹುಡುಕಿಕೊಂಡು ಹೋಯಿತೆಂಬಲ್ಲಿಗೆ...

ಅತ್ತ ಹರಪನಹಳ್ಳಿ ಪಟ್ಟಣದೊಳಗೆ ಮಾಜಿ ದಿವಾನ ಹಂಪರಸಪ್ಪಯ್ಯನವರ ಕೊಲೆಯನ್ನು ತಾನೇ ಮಾಡಿದ್ದೆಂದು ಪರಾರಿಯಾಗಿದ್ದಂಥ ಬಲವಂತ ಪತ್ರದ ಮುಖೇನ ವಪ್ಪಿಕೊಂಡಿದ್ದ.. ಕೆಲವೇ ದಿವಸಗಳಲ್ಲಿ ಸ್ಟೂವರ್ಟನನ್ನು ಕೊಲೆ ಮಾಡಿ ಕೀರ್ತಿಶೇಷ ಯಿಮ್ಮಡಿ ಸೋಮಶೇಖರ ನಾಯಕರ ಆತ್ಮಕ್ಕೆ ನೆಮ್ಮದಿ ಮೂಡಿಸುವುದಾಗಿ ಅದೇ ಪತ್ರದಲ್ಲಿ ಯಚ್ಚರಿಕೆ ನೀಡಿದ್ದ. ವಿಧವೆ ಭುವ್ವಮ್ಮ ಕೇಶಮಂಡನ ಮಾಡಿಸಿಕೊಂಡು ಮುಂದಿನ ಮಾಸದಲ್ಲಿ ಆರಂಭವಾಗಲಿದ್ದ ಗೋದಾವರಿ ಪುಷ್ಕರದಲ್ಲಿ ಶಾಸ್ತ್ರೋಕ್ತವಾಗಿ ಭಾಗವಹಿಸಲಕೆಂದು ಪ್ರಯಾಣ ಹೊಂಟು ವಾರದ ಮ್ಯಾಲಾಗಿತ್ತು. ಬ್ರಾಹ್ಮಣ ಯಿಧವೆಯ ಗಂಟು ಮುಟ್ಟುವುದು ಬ್ಯಾಡವೆಂದು ನಿರ್ಧರಿಸಿ ಆಕೆಯನ್ನು ಅಡ್ಡಗಟ್ಟಲಕೆಂದು ಅರ್ಧ ದಾರಿವರೆಗೆ ಹೋಗಿ ಬರಿಗಯ್ಲಿ ವಾಪಾಸು ಬಂದ ಚೋರ ಸದಸ್ಯರನ್ನು ಆಕಾಶ ರಾಮಣ್ಣ ರುತ್ಪೂರ್ವಕವಾಗಿ ಅಭಿನಂದಿಸದೆ ಯಿರಲಿಲ್ಲ. ಸಿಪಾಯಿಗಳ ಕಯ್ಯಿಗೆ ದೊರಕದಂತೆ ತಲೆತಪ್ಪಿಸಿಕೊಂಡಂತ ಬಲವಂತನಿಗೆ ಕ್ರಾಂತಿಯೀರ ಯಂಬ ಬಿರುದು ನೀಡಿ ಸತ್ಕರಿಸಿ, ಸ್ಟೂವರ್ಟನ ಕೊಲೆ ಸಲುವಾಗಿ ವುಪಯೋಗಕ್ಕಿರಲಿ ಯಂದು ಹಿಡಿಗಂಟನ್ನು ರಾಮಣ್ಣನು ಆತನ ಕಯ್ಯೊಳಗೆ ಯಿರಸದೆ ಯಿರಲಿಲ್ಲ, ಆದರೆ ಬಲವಂತನು ನಿರುತ್ಸಾಹದಿಂದಲೇ ಆ ಗಂಟನ್ನು ಸ್ವೀಕಾರಮಾಡಿ ಭರಮನ ಗವುಡನನ್ನು ಹುಡುಕಿಕೊಂಡು ಪಯಣ ಹೊರಟನು.

ಅತ್ತ ಕುದುರೆಡವು ಪಟ್ಟಣದ ಮಾರಮ್ಮನ ಬಯಲೊಳಗೋsss ಹುವ್ವಿನ ಮಂಟಪದ ನಟ್ಟನಡುವೆ ಸಿಮ್ಮಾಸನಾರೂಢೆಯಾಗಿರುವ ತಾಯಿ ಸಾಂಬವಿ ಹಿಂದಕ್ಕೂ ಜರುಗದೆ ಮುಂದಕ್ಕೂ ಜರುಗದೆ ತನ್ನ ಕಣ್ಣುಗಳನು ಮಾರಗಲಕ್ಕೆ ಹಿಗ್ಗಿಸಿರುವಾಗ್ಗೆ.. ಅಗೋ ಅಲ್ಲಿ, ಮೋಡೋಡಿ ಬರುತವನೆ ಕರುಪ್ಪಾಳಿ ಯಂಬ

ನಿಜಭಕುತನು. ವಂದು ಕಾಲದಲ್ಲಿ ವಂದು ಮಾತಿಗೆ ಹರಕೆ ಹೊತ್ತಿದ್ದ ನಿಜಸರಣನು. ಬಲಗಯ್ಲಿ ಖಡುಗ, ಯಡಗಯ್ಲಿ ನಿಂಬೆಹಣ್ಣು, ಕೊರಳೊಳಗೆ ದಾಸವಾಳ, ಕಣಗಿಲ ಹುವ್ವಿನ ಹಾರ, ಹಣೇಲಿ ವಂದು ಗೆರೆ ಅರುಷಣ, ವಂದು ಗೆರೆ ಕುಂಕುಮ, ಬಾಯೊಳಗ ಮುಡಕೊಂಡವನೆ ತಾಯೇ ಯಂಬೆರಡಕ್ಕರದ ಆಭರಣವನ್ನು, ಯಿವೇ ವೊದಲಾದವುಗಳಿಂದ ಅಲಂಕ್ರುತಗೊಂಡಿರುವ ಅವಯ್ಯನು ಸಾಮಾನ್ಯ ಕುಟುಂಬದಿಂದ ಬಂದವನಲ್ಲ, ಸದರಿ ಪಟ್ಟಣದೊಳು ಬಲಿದಾನಕ್ಕೆ ಹೆಸರಾದ ಮೂಕಪ್ಪನವರ ನಿಜಗಲ್ಲಯ್ಯನ ಪುತ್ರರಲ್ಲೋರ್ವನು. ಅವರ ವಮುಸದ ಪ್ರತಿಯೊಂದು ತಲೆಮಾರಿನಲ್ಲೂ ಮಚ್ಚುಲು ಸ್ಥಾನದಲ್ಲಿ ಹುಟ್ಟಿದವರು ವಂದಲ್ಲಾ ವಂದು ಕಾರಣಕ್ಕೆ ಬಲಿಯಾದವರೇ ಯಿರುವರು ಸಿವನೇ, ಸಿಂಹಾಯದರಮನೆಯ ಹೆಬ್ಬಾಗಿಲಿಗೆ ರವುಷ ಪವುರುಷ ತುಂಬುವ ಕಾರಣಕ್ಕೆ ಬಲಿಯಾದ ಜಲ್ಲಯ್ಯ ಯೀವಯ್ಯಗೆ ಗಿರಿಮುತ್ತಾತನಾಗಬೇಕು. ಸುಭದ್ರಮೂ, ಸುಭಿಕ್ಷುಮೂಆಗಿರಲೆಂಬುವ ಕಾರಣಕ್ಕೆ ಕೆರೆ ಯೇರಿಯೊಳಗ ಜೀವಸಮಾಧಿಯಾದಂಥಾ ದೊಡ್ಡಯ್ಯನು ಯಿವಯ್ಯಗೆ ಮುತ್ತಾತನಾಗಬೇಕು. ಸದರಿ ಪಟ್ಟಣದ ಕಲ್ಯಾಣಾರ್ಥವಾಗಿ ಸತ್ರುಗಳೊಂದಿಗೆ ನೆತ್ತರುಡುಗೆ ವುಟ್ಟು ಹೋರಾಡಿ ಯೀರಮರಣವನ್ನಪ್ಪಿದ ಬೊಮ್ಮಲಿಂಗಯ್ಯ, ರಾಸುಗಳಿಗೆ ಬಲು ಕಾಟ ಕೊಡುತಲಿದ್ದ ಯೇಳುಪಟ್ಟೆ ಹುಲಿಯೊಂದಿಗೆ ಹೋರಾಡಿ ಮಡಿದ ಗೊಡ್ಲಯ್ಯ, ನುಂಕೇಮಲೇಲಿ ಶೂಲ ಯೇರಿ ಬಲಿಗೊಂಡು ಅರಾಧ್ಯ ದಯ್ವ ಭಯ್ರುಯೇಸ್ವರ ಸ್ವಾಮಿಯನ್ನು ಪ್ರಸನ್ನಗೊಳಿಸಿದ ಹೂಲಯ್ಯ, ಯಿಂಥ ಯೀರಾಧಿ ಯೀರರು ಯೀವಯ್ಯನ ವಮುಸದೊಳಗ ನೂರಾರು ಮಂದಿ ಯಿರಬೌದು. ಸದರಿಪಟ್ಟಣ ಅಸಲು ಘಾಸಲಲ್ಲೊಂದೇ ಅಲ್ಲದೆ ಕುಂತಲ ಪ್ರಾಂತದ ನೂರಾರು ಕಡೇಕ ಯಿಂಥೋರ ಹೆಸರಲ್ಲಿ ಯೀರಗಲ್ಲುಗಳುಂಟು, ಅಂಥ ವಮುಶೋದ್ಭವನಾಗಿರುವ ಕರುಪ್ಪಳಿ, ದ್ದೊನಿ ವಡದು ದೀಡು ವರುಷವಾಗಿರೋ, ಮೂಗು ಬಲಿತು ಮೂರು ವರುಷವಾಗಿರೋ, ಮೀಸೆ ಮೂಡಿ ಮೂರು ವರುಷವಾಗಿರೋ ಕರುಪ್ಪಳ್ಳಿ ಹೆಂಗ ಕುಣಿಯುತ್ತಿರುವನಲ್ಲಾss ಹೆಂಗ ಕುಪ್ಪಳಿಸುತ್ತಿರುವನಲ್ಲಾ.. ಹೆಂಗ ಹೆಜ್ಜೆ ಹೆಜ್ಜೆಗೆ ರವುಷ ತುಂಬಿಕೊಳ್ಳತ್ತಿರುವನಲ್ಲಾ, ಹೆಂಗ ಷವುರಷವನ್ನು ಸ್ರೀದೇವಿಗೆ ನಯ್ವೇಧ್ಯ ಮಾಡುತ್ತಿರುವನಲ್ಲಾ, ಹೆಂಗ ಖಡುಗವನ್ನು ಲಯಬದ್ಧವಾಗಿ ತಿರುವ್ಯಾಡತಲಿರುವನಲ್ಲಾ...

ಅವಯ್ಯ ಬಲಕ್ಕಿರುವಾತನೇ ತಂದೆ ನಿಜಗಲ್ಲಯ್ಯನು, ಅವಯ್ಯನ ಯಡಕ್ಕೆ ಯಿರುವಾಕೆಯೇ ಹೆಂಡತಿ ಮಾಸ್ತೆವ್ವ.. ತಾನು ತುಂಬು ಬಸುರಿಯಾಗಿರದಿದ್ದಲ್ಲಿ.. ಪಟ್ಟಣದ ಕಲ್ಯಾಣಾರ್ಥವಾಗಿ ಸೊಯಿಚ್ಛೆಯಿಂದ ಬಲಿಗೊಳ್ಳುವಂಥ ಯೂರಾದಿಯೀರ ಮಗನನ್ನು ಕರುಣಿಸೆವ್ವಾ ಯಂದಾಕೆ ಬೇಡಿಕೊಂಡಿರದಿದ್ದಲ್ಲಿ ತಾನೂ ತನ್ನ ಗಂಡನ ಕೂಡೆ ಬಲಿಗೊಳ್ಳುತ್ತಿದ್ದಳೇನೋ?

ಹ್ಹಾ...ಹ್ಹಾ. ಕರುಪ್ಪಳಿ ಬಂದೇಬಿಟ್ಟ, ತನ್ನ ನೀರಿಕ್ಷೆಯಲ್ಲಿದ್ದ ತಾಯಿಯ ಸಮಕ್ಷಮಕ್ಕೆ. ಯೀವಯ್ಯನಿಗಿಂತ ಮಿಗಿಲಾದ ಮಾಬಲ ಯಾವುದುಂಟು ಯೀ ಘಾಸಲೆಯೊಳಗ.. ಯೀ ಲೋಕದೊಳಗ... ಹ್ಹಾ.. ಹ್ಹಾ... ನಿಜಭಕುತನೇ, ಹ್ಹಾ.. ಸತ್ಯುಳ್ಳ ಸರಣನೇ.. ಯಿನ್ನಾರುಗಳಿಗೆಯೊಳಗೆ ತಾಯಿಯ ರುದಯದ ತೊಟ್ಟಿಲೊಳಗ ಮಗುವಾಗಿ ಆಡಲಿರುವವನೇ, ಯಿಗೋ ನಿನಗ ನಮ್ಮ ಸರಣು ಸರಣಾರ್ಥಿ.. ಯಂದನಕಂತ ಅವಯ್ಯನ ಕೊರಳೀಗೆ ಹುವ್ವಿನ ಹಾರಗಳನ್ನು ಹಾಕಲಾರಂಭಿಸಿದವರೆಷ್ಟೋ? ಮುಂದಿನ ಜಲುಮದಲ್ಲಿ ನೀನು ನಮ್ಮ ಹೊಟ್ಟೆಯೊಳಗ ಮಗನಾಗಿ ಹುಟ್ಟಯ್ಯಾ.. ಯಂದನಕಂತ ತಾಯಂದಿರು ಅವಯ್ಯನ ಮುಖಕ್ಕೆ ಮಂಗಳಾರತಿ ಬೆಳಗಿ ಹಣೆಗೆ ಅಂಗಾರ ಯಿಡಲಾರಂಭಿಸಿದರು.. ಮುಂದಿನ ಜಲುಮದಲ್ಲಿ ನೀನೇ ನಮಗ ಗಂಡನಾಗಬೇಕು ಯಂದನಕಂತ ಹರೇದ ಹುಡುಗಿಯರು ಅವಯ್ಯನ ಬಾಯಿಗೆ ವಣಕೊಬ್ಬರಿ, ವುತ್ತುತ್ತಿ, ಖರಜೂರ, ಬೆಲ್ಲದ ಕಣ್ಣೆ, ಯಿಡಲಾರಂಭಿಸಿದರು. ಅಯ್ಯೋ ನನ್ನ ಮೊಮ್ಮಗನೇ ಯಿಂದನಕಂತ ಮುದುಕಿಯರು ಅವಯ್ಯನ ಮುಖವನ್ನು ತಮ್ಮ ಬೊಗುಸೆಯಲ್ಲಿ ಹಿಡಿದು ಲಟಲಟಾಂತ ಲಟ್ಟಿಗೆ ತೆಗೆಯಲಾರಂಭಿಸಿದರು.

ಸತ್ಯುಳ್ಳ ಸರಣss ಕರುಪ್ಪಳೀss ನಿಜಭಕುತss ಕರುಪ್ಪಳೀss ಜನ ವಕ್ಕೊರಲಿನಿಂದ ವುದ್ಗರಿಸುತಿರುವಾಗ್ಗೆ ರಣವಾದ್ಯಂಗಳು ಮೊಳಮೊಳನೆ ಮೊಳಗುತ ಕಿವಿಗಡುಚಿಕ್ಕಿದವು.. ಸಿವನ್ನಾಮ ಪಾರೋತೀಪತಿ ಹರಹರ ಮಾದೇವಾss ರುಮ್..ರುಮ್.. ರುಮ್.. ಡೊಳ್.. ಡೊಳ್..ಡೊಳ್.. ಣಕ್ಕೂ.. ಜಡ್ಡೆಣಕ್ಕ ಜಡಜಡ್ಡಿ ಣಕ್ಕೂsss... ಅಹಹಹಾ ಸಾಂಬವೀsss.. ಅಹಹಹಾ ಜಗದಂಬೇsss... ನೀನು ಸತ್ಯ ಯುಗದಲ್ಲೀsss..

ಹುವ್ವಿನ ಮಳೆಯಲ್ಲಿ ನೆನೆಯೂತ.. ಪರಾಕುಗಳ ಮಳೆಯಲ್ಲಿ ತಂಗಲಾಗೂತ... ಖಡುಗ ಮಯ್ಯಲ್ಲಿ ಕೋಲ್ಮಿಂಚುಗಳ ಸುಗ್ಗಿ ಆಡೂತ.. ಮುಂದುಮುಂದಕ ಅವಯ್ಯ ಹೋಗುತ್ತಿರುವುದನು ಸಾಕ್ಷಾತ್ ಕಂಡ ಭಕುತಾದಿ

ಮಂದಿ ಹಿಂದಕಿದ್ದೋರು ಹಿಂದಲಕಾದರು.. ಮುಂದಕಿದ್ದೋರು ಮುಂದಲಕಾದರು. ಯಡಕಿದ್ದೋರು ಯಡಲಕಾದರು. ಬಲಕಿದ್ದೋರು ಬಲಗಡೇಲಕಾದರು.. ತನ್ನೊಳಗ ಐಕ್ಯಗೊಳ್ಳಲು ಹಾತೊರೆಯುತ್ತಿರುವೆಯಲ್ಲಾ ಭಲಾ ಭಲಾ.. ತನ್ನ ಪಾದಗಳಿಗೆ ನಿನ್ನ ತನುವಿಂದ ನೆತ್ತರು ಸುರಿದು ಅಭಿಷೇಕ ಮಾಡಲು ಹಾತೊರೆಯುತ್ತಿರುವೆಯಲ್ಲಾ, ಭಲಾss... ಭಲಾss... ಯಂದು ವುದ್ಗರಿಸುತಲಿದ್ದಾಳೆ ಚಮಾಲದೊಳಗ ಯಿರಾಜಮಾನಗೊಂಡಿದ್ದ ತಾಯಿ.. ಮೋಡಿ ತಬ್ಬಿಕೊಳ್ಳಲಿರು ವವಳಂತೆ ತನ್ನೆರಡು ಕಯ್ಯಿಗಳನ್ನು ಯತ್ತೆತ್ತಿ ಯಿಳುವುತ್ತಿದ್ದಾಳೆ ದೀಪದ ಮಲ್ಲಿಯಾಗಿ ವುರಿಯು ತ್ತಿರುವಂಥಾss.. ಆದಿಸಗುತಿಯು..

ಸದರಿ ಬಲಿಗೊಳ್ಳುವ ದ್ರುಸ್ಯವ ನೋಡಲಕಂತ, ತೋರಿಸಲಕಂತ, ಪರಾಂಬರಿಸಲಕಂತ ಚಂದ್ರಾಮ ಸೂರ್‍ಯಾಮನನ್ನು ಯಬ್ಬಿಸುತವನೆ, ಸೂರ್‍ಯಾಮನನ್ನು ಚಂದ್ರಾಮ ಯಬ್ಬಿಸುತವನೆ, ನಕ್ಷತ್ರನಕ್ಷತ್ರವನ್ನು ಯಬ್ಬಿಸುತಯ್ತೆ. ಸಕಲೊಂದು ಗೋಚರ ಅಗೋಚರ ಚರಾಚರವು ಯದ್ದುಕುಂತಯ್ತೆ ಸಿವನೇss.. ಆ ರುದಯ ಯಿದ್ರಾವಕ ದ್ರುಸ್ಯವನ್ನು ನೋಡಲಕ, ಬಾಯಿತುಂಬ ಹೊಗಳಲಕss..

ಪಟ್ಟಣದ ದಯವಸ್ತರು ಯಂಥ ಯಿರಗಲ್ಲನ್ನು ನೆಡಿಸಬೇಕು? ಅದಕ್ಕೆ ತಕ್ಕ ಶಿಲ್ಪಿ ಗುಡಿಗಾರರನ್ನು ಯಾವ ಮೂರಿಂದ ಕರೆಯಿಸಬೇಕೆಂದು ಯೋಚನೆ ಮಾಡುತಲಿದ್ದ ಹೊತ್ತಿನಲ್ಲಿ, ಸಿವನ್ನಾಮ ಪಾರೊತೀಪತೀss ಯಂಬ ಸಭುದವು ಜ್ವಾಲಾಮುಖಿಯಂತೆ ಆವರಿಸಿದ ಹೊತ್ತಿನಲ್ಲಿ.. ತಾರೆ, ನಿಹಾರಿಕೆಗಳ ಪಯ್ಕಿ ಹತ್ತು ಹಲವು ಆಯ ತಪ್ಪಿ ಕುದುರೆಡವು ಕಡೇಕ ವುದುರಲಾಂಭಿಸಿದ ಹೊತ್ತಿನಲ್ಲಿ, ಅಂತರಾತುಮವು ನೆಲಮುಗುಲಿಗೇಕಾಗಿ ನಿಂತ ಹೊತ್ತಿನಲ್ಲಿ,,

ಕರುಪ್ಪಳಿಯು "ತಾಯೇ.. ಜಗದಂಬಾss ಜಯಮ್ಮೋ... ಜಗಾನುಮಾತೇ, ಭವಾನೀss.." ಯಂದು ನುಡಿಯುತ್ತೋಡೋಡಿ ಹುವ್ವಿನ ಮಂಟಪದ ಸನೀಕ ಬಂದನು. ಲೋಕಾನುಮಾತೆಯನ್ನು ಕಣ್ಣೊಳಗ ತುಂಬಿಕೊಂಡನು.. ಪರದಕ್ಷಿಣೆ ವ್ಯಾಲ ಪರದಕ್ಷಿಣ ಹಾಕಿದನು.. "ತಾಯೇ.. ತಗಳ್ಳವ್ವಾ ತಗಾss" ಯಂದನಕಂತಲೇ ಬಲಗಯ್ಲಿದ್ದ ಖಡುಗವನ್ನು ಕುತ್ತಿಗೆಗೆ ಕಚಕ್ಕಂತ ಬೀಸಿದೊಡನೆ.. ಹಾರಿದ ರುಂಡವು ಅಗಾಧಪುಷ್ಪದಂತೆ ಆದಿಸಗುತಿಯ ಪಾದದ ಬುಡಕ್ಕೆ ಬಿದ್ದೊಡನೆ, 'ತಾಯೇ' ಯಂಬ ಸಬುಧವನ್ನು ಕೊನೇ ಸಲಕ್ಕ ನುಡಿದು ಹಂಗss

ನಿಶ್ಚಲಗೊಂಡಿತು. ರುಂಡ ರಹಿತ ಮುಂಡವು ಹಂಗss ವಂದ್ನಾಕು ಹೆಜ್ಜೆ ಮುಂದಕಿಡುತಾ ಯಿಡುತಾ ಹಂಗss ನಿಂತ ನಿಲುವೀಲೆ ನಿಶ್ಚಲಗೊಂಡಿತು ಸಿವನss..

ಅಬ್ಬಾ! ಆ ರಣಪ್ರಸಾದದ ದ್ರುಶ್ಯವೇ!. ಕಣ್ಣಾರೆ ನೋಡಿದ ಸವಾರೆವ್ವ ಸಂಗಡಗಿತ್ತಿಯರದೆಯೊಳಗ ಕುರಪ್ಪಳಿ ಬಲಿದಾನದ ಕುರುತಾದ ಲಾವಣಿ, ಗೀಗೀ, ಸೋೀಬಾನವೇ ವೊದಲಾದ ನಾನಾ ಪ್ರಕಾರದ ಹಾಡುಗಳು ಜೇನ್ನೊಣಗಳೋಪಾದಿಯಲ್ಲಿ ಗೂಡ ಕಟ್ಟಲಾರಂಭಿಸಿದರೆ.. ಅಲ್ಲಿಗೆ....

...ಯರಡು ಹರದಾರಿದಲ್ಲಿದ್ದ, ಶಿಲ್ಪಿ ಗುಡಿಗಾರರ ತವರೂರೆಂದೇ ಹೆಸರಾಗಿದ್ದ ಚಿಮುಟಾಲೂರಿನ ವಂದು ಮನೆಯೊಳಗ ಹೆಂಡತಿಯನ್ನು ತಬ್ಬಿಕೊಂಡು ಮಲಗಿದ್ದ ಶಿಲ್ಪಿ ಕಾಳಾಚಾರಿಯು ದಿಗ್ಗನೆ ಯಚ್ಚರಗೊಂಡನು.. ಬಂದೆ ತಾಯೀ ಬಂದೆ ಯಂದು ಮರು ಜವಾಬು ನೀಡುತ್ತಲೇ ಚಾಣ, ಸುತ್ತಿಗೆ, ವುಳಿಯೇ ವೊದಲಾದ ಪರಿಕರಗಳನ್ನು ಸಂಚಿಯೊಳಗ ಯಿಟ್ಟುಕೊಂಡನು. ತಾಯಿ ಸಾಂಬವಿಯ ಆಗ್ನೆ ಆದಂಗಾತು.. ಕುದುರೆಡವಿಗೆ ಹೋಗಿ ಬರುವೆನೆಂದು ಹೆಂಡತಿಗೆ ಹೇಳಿ ಹ್ವಾ.. ಹ್ವಾ ಅದೇ ದಿಕ್ಕಿನ ಕಡೇಕ ಹೆಜ್ಜೆ ಹಾಕಲಾರಂಭಿಸಿದನು ಸಿವನೇss..

ಬಲಿಗೊಂಡ ಸರೀರದಿಂದ ವುಕ್ಕಿದ ನೆತ್ತರು ಮಾರುದ್ದಗಲಕ್ಕ ಹರಿದು ಹಂಗss ಹೆಪ್ಪುಗಟ್ಟಿತು. ತನ್ನ ಸರೀರದಾದ್ಯಂತ ಸಿಂಪರಣೆಗೊಂಡ ನೆತ್ತರಿಂದ ಪುಲಕಿತಳಾದ ತಾಯಿಯು ತನ್ನ ಕೊರೆಳೊಳಗಿಂದ ವಂದು ಹುವ್ವಿನ ಹಾರವನ್ನು ತೆಗೆದು ರುಂಡದ ಮ್ಯಾಲ ವಗೆಯಲು ಕರುಪ್ಪಳಿಯ ಕಣ್ಣುಗಳು ವಂದರಗಳಿಗೆ ತೆರೆದು ಹಂಗss ಭಕುತಿಪೂರುವಕವಾಗಿ ಮುಚ್ಚಿದವು.. ರುಂಡದ ತುಟಿಗಳ ನಡುವೆ ಮುಗುಳ್ನಗೆ ಆಚಂದ್ರಾರ್ಕವಾಗಿ ವುಳಿದು ನಳನಳಿಸಿತು.

ಬಲಿದಾನದಿಂದ ಸಂತುಪ್ತಳಾದ ತಾಯಿಯು, ಮಂದಸ್ಮಿತಳಾದ ತಾಯಿಯು ಸಿಮ್ಮಾಸನದೊಳಗ ಮಿಸುಕಾಡಲಾರಂಭಿಸಿದಳು. ದಿಬ್ಬಣಮೋ... ಪರಿಶೆಯೋ.. ಜಾತುರೆಯೋ.. ವಂದರೊಳಗೊಂದು ಅಡರುಗಾಲು ಹಾಕಿದ್ದ ಜನಸಾಗರಮೋ.. ಯಲ್ಲಿ ನೋಡಿದರಲ್ಲಿ ಮೊಳಗುತ್ತಿರುವ ರಣವಾದ್ಯಗಳೇನು? ಹಾಡು ಕುಣುತದ ನರ್ತನಗಳೇನು? ಹರಕೆ ಮುಡುಪುಗಳ ಸಲ್ಲಿಕೆ ಮಾಡುತ್ತಿರುವವ ಸಡಗರಯೇನು?

ಹೆಜ್ಜೆಗೊಂದೊಂದು ಪವಾಡ ಮೆರೆಮೊತ ವುಘೇss ವುಘೇss ನಿನಾದದ ನಡುವೆ ಸಾಗಿದ ಮಾ ಮಾಯಿಯು ಜನಸಾಗರದ ಆವೇಸವನ್ನು ತಾನು

ವಳಗೊಳ್ಳುತ, ತನ್ನ ದಯ್ವತ್ವದ ವಂದಮುಸವನ್ನು ಜನಸಾಗರಕ್ಕೆ ಧಾರೆಯರೆಯೂತ ವಂದೊಂದು ಬಯಲನ್ನು ಪ್ರವೇಶ ಮಾಡೂತ, ವಂದೊಂದು ಹುವ್ವಿನ ಮಂಟಪದಲ್ಲಿ ಯಿರಾಜಮಾನಳಾಗೂತ, ಪವಾಡ ತೋರೂತ, ಮಯ್ಮೆ ಮೆರೆಯೂತ, ಆಸ್ತೀಕ ಭಾವ ತುಂಬೂತ..

ಅಲ್ಲಲ್ಲಿಗೆ ವಂದೊಂದು ಪರ್ಲಾಂಗು ದೂರದಲ್ಲಿದ್ದ ಹೊಳೆಯಂಬ ಜಲಧಿಯ ಯದೆ ದಸಕ್ಕಂತು. ಅದರ ಪೂರುವಿಕ ನಾಮವು ಹೊನ್ನವ್ವನ ಹೊಳೆ ಯಂದಿತ್ತು. ಜನ ಬಳಕೆಯ ನಾಮವು ಕಡದಮ್ಮಯಂಬುದಾಗಿತ್ತು. ಅದರ ಮೂಲ ಯಿಂಥಾದ್ದೇ ಯಂದು ತಿಳಿದವರಿಲ್ಲ. ಅದರ ಮಯ್ಮೆ ಅರಿತವರಿಲ್ಲ. ಅದರ ಮೂಲ ಹುಡುಕುತ ಹೋಗಿ ತಮ್ಮನ್ನು ತಾವು ಕಳಕೊಂಡವರುಂಟು.. ತಿಕಮಕರಾದವರುಂಟು.. ಅದು ಜಲುಮ ತಳೆದಿರುವುದು ಕುರುಗುಡ್ಡದಲ್ಲಿ ಯಂದು ಕೆಲವರೂ, ಯೇಕಾಸುರಿ ಗುಡ್ಡಯಂದು ಕೆಲವರೂ, ಕೋಳಿಗುಡ್ಡವೇ ಸರಿ ಅಂತ ಕೆಲವರೂ, ಆ ನಾಲಕೂ ಗುಡ್ಡಗಳು ಪರಸ್ಪರ ಕಲೆಯುವಲ್ಲಿ ವಂದಲ್ಲಾ ವಂದು ಜಲಪಾತಗಳುಂಟು, ವಂದಲ್ಲಾ ವಂದು ಚಿಲುಮೆಗಳುಂಟು ಯಂದು ಕೆಲವರೂ, ಆದರಾವುದನ್ನೂ ನಿರ್ಧಿಷ್ಟವಾಗಿ ಪತ್ತೆಹಚ್ಚಿದವರಿಲ್ಲ. ಅದಕ ಸಂಬಂಧಿಸಿದಂತೆ ಹತ್ತಾರು ಪವುರಾಣಿಕ ಕಥೆಗಳದಾವ.. ನೂರಾರು ದಂತಕಥೆಗಳಾದವ.. ಅವನ್ನೆಲ್ಲ ಹೇಳಲಕಾಗಲೀ, ಕೇಳಲಕಾಗಲೀ ಪೂರುವಜನುಮದ ಸುಕ್ರುತವು ಬೇಕು.. ಆದರ ಅನಾದಿ ಕಾಲದಿಂದ ತನ್ನ ಪಾಡಿಗೆ ತಾನು ಹರಿಯುತ್ತಿದ್ದಾಳಲ್ಲಾ, ವಂದು ಪಟ್ಟಣದ ನಿರುಮಾಣಕ್ಕೆ ಕಾರಣಕರ್ತಳಾಗಿರುವಳಲ್ಲಾ, ಸಚರಾಚರದ ತ್ರುಷೆ ತೀರಿಸುತ್ತಿರುವಳಲ್ಲಾ, ಪ್ರತಿಯೊಂದು ಯುದ್ಧ ಸಂಭವಿಸಿದಾಗಲೂ ಸಸ್ತ್ರಾಸ್ತ್ರಗಳಿಗೆ ತಗುಲಿದ ನೆತ್ತರಕಲೆಗಳನ್ನು ತೊಳೆದಿರುವಳಲ್ಲಾ.. ನರಹುಳುಗಳ ಪಾಪ ಮುಟ್ಟು ಮಯ್ಲಿಗೆ ಸೂತಕ ಕಳೆದಿರುವಳಲ್ಲಾ, ಅದೇ ಆ ಗಂಗಮ್ಮ ತಾಯಿಯ ಪುಣ್ಯ ಯಿಶೇಷವು.. ಸದರಿ ಪಟ್ಟಣದ ಸವುಭಾಗ್ಯವು.

ಆಕೆಯಷ್ಟು ನಾಚುವ, ಅಂಜುವ, ಹೆಜ್ಜೆ ಹೆಜ್ಜೆಗೆ ಮುದುಡಿಹೋಗುವ ಹೆಂಗಸು ನದೀ ಕುಲದೊಳಗ ಯಿನ್ನೊಬ್ಬರು ಯಿರಲಾರರು.. ಆ ಕಡೆಯಿಂದ, ಯೀ ಕಡೆಯಿಂದ, ಮುಂದೇಸಿಂದ, ಹಿಂದೇಸಿಂದ, ನಾಕಾರು ಮೋಣಿಯ ಹೆಣುಮಕ್ಕಳು ಬಟ್ಟೆ ವಗೆಯಲಕಂತ, ದೊಡ್ಡಿ ಮಾಡಲಕಂತ ಬಂದು ಯಾವ ಪ್ರಕಾರವಾಗಿ ವಂದು ಕಡೇಕ ಸೇರುವರೋ ಆ ಪ್ರಕಾರವಾಗಿ ಪರಗುಣಮಾಗಿ

ಜವುಗಿನವಳಗೆ ಸೇರಿ ತೊಡೆಗಾತುರದವಳಾಗುತ್ತಾಳೆ ಗಂಗಮ್ಮ ತಾಯಿ.. ತನಗೆ ಹರೆಯ ಬಂದಿರುವುದೆಂದು ಅಪಾರ್ಥ ಮಾಡಿಕೊಂಡು ನೆಲದಡಿ ಅಂತರ್ಧಾನಳಾಗುತ್ತಾಳೆ ಗಂಗಮ್ಮ ತಾಯಿ.. ನೆಲದಡಿ ಹರಕೋತs ಹರಕೋತ ಕಡಲೇರ ತೋಪಿನ ಮಗ್ಗುಲಿರೋ ಕಲ್ಲುಕೊರಕಲ ಸಂಧೀಲಿ ಲಜ್ಜೆಯಿಂದ ತೇಲಿ ಹೊರ ಕಾಣಿಸಿಕೊಳ್ಳುತ್ತಾಳೆ ಗಂಗಮ್ಮ ತಾಯಿ.. ಆಕೆಗಾಗ ಹೊನ್ನವ್ವ ಯಂಬ ನಾಮಾಂಕಿತ ಹೆಂಗ ಪ್ರಾಪ್ತವಾಯಿತೋ ಸಿವನಿಗೇ ಗೊತ್ತು? ತನ್ನ ನಸೀಬವನ್ನು ತಾನಳಿದುಕೊಳ್ಳುತ್ತ ತಾನು ಹುಟ್ಟಿ ಯೇಸು ಕಾಲವಾಯಿತೋ ಯೇನು ಕಥಿಯೋ, ತನಗ ನದೀ ಪಟ್ಟ ಲಭ್ಯವಾಗಲಿಲ್ಲವಲ್ಲಾ.. ಯಂದು ತನಗ ತಾನ ನಸೀಬವನ್ನು ಹಳಿದುಕೊಳ್ಳುತ್ತಾಳೆ.. ಗಂಗಮ್ಮ ತಾಯಿ..

ಯಿರಲಿ ನದೀ ಮೂಲ ಹುಡುಕ ಬಾರದೂ.. ಋಷಿ ಮೂಲ ಹುಡುಕ ಬಾರದು..

ಸಾಕ್ಷಾತ್ ಸಾಂಬವಿಯೇ ಮೀಯಲಕೆಂದು, ಜಳಕಮಾಡಲಕೆಂದು ತನ್ನಲ್ಲಿಗೆ ದಯಮಾಡಲಿರುವಳೆಂಬ ಗಾಳಿ ವರ್ತಮಾನ ತಿಳಿದೋ ತಿಳಿದು ಹಿರಿ ಹಿರಿ ಹಿಗ್ಗಿದಳು ಹೊನ್ನವ್ವ. ಯೀರೇಳು ಲೋಕಗಳನ್ನು ತನ್ನ ಅಗಾಧ ವುದುರದೊಳಗೆ ಯಿರಿಸಿಕೊಂಡಿರುವಂಥಾ ಲೋಕಮಾತೆಯ ಸರೀರನ ತಂಪು ಮಾಡಬೇಕಿರುವುದಲ್ಲಾ.. ಯಿದು ತನ್ನ ಪೂರುವಜಲುಮದ ಸುಕ್ರುತವೇ ಸರಿ. ಯಾವ ನದಿಗೂ ಲಭ್ಯವಾಗದ ಯೀ ಸವುಭಾಗ್ಯದವಕಾಶವು ತನಗೇ ಲಭಿಸಲಿರುವುದಲ್ಲಾ.. ಗಳಿಗ್ಗಳಿಗ್ಗೆ ರೋಮಾಂಚನ ಗೊಳ್ಳುತ್ತಾಳೆ ಗಂಗಮ್ಮ ತಾಯಿ.. ಜಾವಜಾವಕ್ಕೆ ಬೆಮರುತ್ತಾಳೆ ಗಂಗಮ್ಮ ತಾಯಿ.. ತನ್ನ ಮಯ್ಯನ್ನು ತಾನು ನೋಡಿಕೊಳ್ಳುತ್ತಾಳೆ ಗಂಗಮ್ಮ ತಾಯಿ... ಅರೆ, ಅವುದಲ್ಲಾ ಕಾಲಾಯ ತಸುಮಯ್ ನಮಹ.. ತಾನು ಯಷ್ಟೊಂದು ಸೊರಗಿ ಹೋಗಿರುವೆನಲ್ಲಾ.. ತಾಯಿಯ ಮಜ್ಜಣಕ್ಕೆ ತಾನು ಸಾಕಾಗುವೆನೋ ಯಿಲ್ಲವೋ? ಸಾಲದಿದ್ದರೇನು ಮಾಡುವುದು? ಅಪರೂಪಕ್ಕ ಮಜ್ಜಣ ಮಾಡಲಿರುವ ತಾಯಿಯು ಯಥೆ ಪಟ್ಟರೇನು ಮಾಡುವುದು? ಆಕೆ ಮುನುದು ಸಾಪ ಕೊಟ್ಟರೇನು ಗತಿ? ಆಕೆಯ ನಿಟ್ಟುಸುರು ತನಗ ತಗುಲಿದರೇನು ಗತಿ? ಯಂದು ಮುಂತಾಗಿ ಯಸನ ಮಾಡುತ್ತಾಳೆ ಹೊನ್ನವ್ವ.. ಮಮ್ಮಲನ ಮರುಗುತ್ತಾಳೆ ಹೊನ್ನವ್ವ.. ಸದರಿಪಟ್ಟಣದ ಭಕುತಾದಿ ಮಂದಿ ಮುಂಗಡವಾಗಿ ಬಂದು ತನಗ ವಂದು ಮಾತನ್ನು ಸೂಚನಪ್ರಾಯವಾಗಿ ಹೇಳಿದ್ದಲ್ಲಿ ತನ್ನನ್ನು ತಾನು ತಡೆಯದೆ ಯಿರುತ್ತಿರಲಿಲ್ಲ..

ವಂದು ಕಡೇಕ ನಿಂತು ಸಂಗ್ರಹಗೊಳ್ಳದೆ ಯಿರುತಲಿರಲಿಲ್ಲ.. ಆದರೆ ಯೀಗ ಯೇನು ಮಾಡುವುದು ತಾನು? ಯಂದೊಂದರಗಳಿಗೆ ಕಂಗಾಲಾದಳು ಹೊನ್ನವ್ವ, ಮಹಾಸ್ವಾಭಿಮಾನಿಯಾದ ಹೊನ್ನವ್ವ..

ಆಗಿದ್ದು ಆ ಪುಣ್ಯಾತ್ಗಿತ್ತಿಯು ಹಿಂಗs ಯಸನ ಮಾಡುತ ಕಾಲಕ್ಷೇಪ ಮಾಡಬಾರದೆಂದು ನಿರ್ಧರಿಸಿದಳು.. ತನ್ನ ಸ್ವಾಭಿಮಾನವನ್ನು ಗಂಟು ಕಟ್ಟಿ ವಂದು ಕಡೇಕ ಯಿಟ್ಟಳು. ಆ ಕ್ಷಣ ಆಕೆಯಯು ಬೇಡಿ ಪಡೆಯಲಕೆಂದು, ಅಂಗಲಾಚಿ ಪಡೆಯಲಕೆಂದು ಹೊಂಟಳು.. ಅತ್ತೆವ್ವನ ಹಳ್ಳ, ತಾಯವ್ವನ ಹಳ್ಳ, ಮಡದೆವ್ವನ ಹಳ್ಳ, ಅಕ್ಕತಂಗೇರ ಹಳ್ಳ, ಮಾಸ್ತೆವ್ವನ ಹಳ್ಳ ಯಿವೇ ಮೊದಲಾದ ಸ್ತ್ರೀಧನತ್ವವುಳ್ಳ, ಮಾಯ ಮಮಕಾರವುಳ್ಳ ಜಲನಿಧಿಗಳನ್ನು ಮುದ್ದಾಮು ಭೆಟ್ಟಿ ಮಾಡಿದಳು. ಅವರು ಅದಕಿದ್ದು 'ಯೇನು ಹೊನ್ನಮ್ಮ? ತಾಯಿ ಭಾಳ ದಿವಸಕ್ಕೆ ಬಂದಿದ್ದೀ.. ವುಂಬಲಕಿಡಲಾ, ಕುಡಿಯಲಕ ಕೊಡಲಾ'ಯಂದು ಪರಾಂಭರಿಸಿದ್ದಕ್ಕೆ ಯೀಯವ್ವ "ನಾನು ವುಂಬಲಕ ಬಂದಿಲ್ಲವ್ವಾ, ಕುಡಿಯಲಕ ಬಂದಿಲ್ಲವ್ವಾ.. ವಂದು ದಯವಿಕ ಕಾರ್‍ಯೇದ ಮ್ಯಾಲ ಬಂದೀನ್ರವ್ವಾ" ಯಂದು ಕೇಳಿದ್ದಕ್ಕೆ ಅವರಿದ್ದು "ಅಂಥ ದಯವಿಕಕ ಕಾರ್‍ಯವಾವುದವ್ವ? ನಮಕಯ್ಲಾಗೋದಿದ್ದರ ನಡೆಸಿಕೊಡತೇವಿ" ಯಂದು ಹೇಳಿದ್ದಕ್ಕೆ ಯೀವವ್ವ ಸೆರಗೊಡ್ಡಿ "ನೀವು ನನ್ನಂಗೆ ಹೆಣ್ಣೆಂಗಸರು ಕಣರವ್ವಾ.. ನನ್ ಮಾನ ಹೋದರೂ ವಂದೆ.. ನಿಮ್ಮ ಮಾನ ಹೋದರೂ ವಂದೇಯಾ. ಕುದುರೆಡಮೊಳಗ ಜಗಾನುಮಾತೆಯಾದ ಸಾಂಬವಿ ಯರಡು ಮೂರು ತಾಸೊಪ್ಪತ್ತೊಳಗ ಮಿಂದುಡಲಕಂತ ನನ್ನ ಹತ್ತಿರ ಬರಲಿದ್ದಾಳೆ.. ಆಕೆಯ ಮೊಣಕಾಲು ಚಿಪ್ಪು ತೊಯ್ಯೋವಷ್ಟು ನೀರು ನನ್ನಲ್ಲಿಲ್ಲ. ದಯಮಾಡಿ ನೀವೆಲ್ರೂಕೂಡಿ ಮಾನ ಕಾಪಾಡಬೇಕಯ್ತೆ ನೋಡಿರವ್ವಾ.. ಆಕೆ ಮಜ್ಜಣ ಮಾಡಿ ಹೋದವ್ಯಾಲ ನೀವು ನಿಮ್ಮ ನಿಮ್ಮ ಪುಣ್ಯದ ಪಾಲನ ತಗೊಂಡು ಹೋಗುವಿರಂತೆ" ಯಂದು ಅಂಗಲಾಚಿ ಯಿನ್ನಪ ಮಾಡಿಕೊಂಡಳು.

ಸಾಂಬವಿ ಜಳಕ ಮಾಡಲಕಂದರ ಯಾರು ತಾನೆ ಬ್ಯಾಡ ಅಂದಾರು? ಯಿಂಥದೊಂದು ಬಂಗಾರದಂಥ ಅವಕಾಶ ದೊರಕುವುದು ಪೂರುವ ಜಲುಮದ ಸುಕ್ರುತವೇ ಸರಿ. ಆ ಜಲರೂಪಿ ತಾಯಂದಿರು "ಯಂದ್ಯಾಕ ತಾಯಿ ಯೀಗಲೇ ಬಿಟ್ಟುದ ಬಿಟ್ಟು ಹೊಂಟು ಬರುತೀವವ್ವಾ, ನೀನೇ ನಮ್ಮ ಕಯ್ನ ಹಿಡಿದು ದಾರಿ ತೋರಿಸುತ ಕರಕೊಂಡು ಹೋಗು" ಯಂದು ವಪ್ಪಿಕೊಂಡರು. ಹಚ್ಚೋದು ಹಚ್ಚಿಕೊಂಡರು.. ಹಾಕೋದು ಹಾಕಿಕೊಂಡರು.

ಬಲು ವಯ್ಯಾರದಿಂದ ತನ್ನ ಹಿಂದುಗಡೇಕ ಹೊರಟು ನಿಂತ ಅವರನ್ನು ಹೊನ್ನವ್ವ ಗವುರವೂರವಕವಾಗಿ ಕರದೊಯ್ದು ತನ್ನ ಹರವನ್ನು ತುಂಬಿಸಿಕೊಂಡಳು. ಅವ್ವ ಬರಲಕ ವಂದೆರಡು ತಾನು ಬಾಕಿವುಳುದಯ್ತೆ ಅನುವಾಗ್ಗೆ ಸುರುವಾಯಿತು ನೋಡು ಸಿವನೇ ಯಿವರ ಸಡಗರ ಸಂಭರಮ. ಕಾಲಿಗೆ ಕಯ್ಗೆ ಅಂಟುತಯ್ತೆ ಯಂಬ ಕಾರಣಕ್ಕೆ ಕೆಸರು ಬುರುದೆಯನ್ನು ತುರ್ತುರಜೆಯ ಮ್ಯಾಲ ಕಳುವಿದ್ದೇನು? ತಮ ತಮ್ಮ ತಳದಲ್ಲಿದ್ದ ಮುಳ್ಳುಕಂಟೆ, ಚೂಪನೆಯ ಕಲ್ಲು ಗಿಲ್ಲುಗಳನ್ನು ಆಯ್ದು ವಗದದ್ದೇನು? ಅಲ್ಲೆಲ್ಲಾ ಫಳಫಳ ಮಿರುಗೋ ಬಂಗಾರದ ನುಸಿಯಂಥ ಮರಳನ್ನು ಹರವಿದ್ದೇನು? ಹೇಡಿಗಳನ್ನಲ್ಲಿಂದ ವಕ್ಕಲೆಬ್ಬಿಸಿದ್ದೇನು? ಹುವ್ವಿನ ಯಸಳನ್ನು ಹೋಲುವ ಬಣಬಣ್ಣದ ಮೀನುಗಳನ್ನು ತಮ್ಮೊಳಗ ತುಂಬಿ ಕೊಂಡಿದ್ದೇನು? ತಮ ತಮ್ಮ ಯಿಕ್ಕಲದಲ್ಲಿದ್ದ ಮುಳ್ಳಿನ ಗಿಡಗಳನ್ನು ಹುವ್ವಿನ ಗಿಡಗಳ ಹಿಂದಕ ಗದುಮಿದ್ದೇನು? ಕಾವ್ ಕಾವ್ ಯಂದರಚಬಾರದೆಂದೂ, ಕುಡಿದು ಯಂಜಲು ಮಾಡಬಾರದೆಂದು ಕಾಗೆಗಳಿಗೆ ಆದೇಸ ನೀಡಿದ್ದೇನು? ಗೂಗುಕ್ ಗೂಗುಕ್ ಯಂದು ಅಪಸಗುನ ನುಡಿಯಯ ಕೂಡದೆಂದು ಗೂಗೆಗಳಿಗೆ ಆಗ್ನೆ ಮಾಡಿದ್ದೇನು? ಯೀ ಪ್ರಕಾರವಾಗಿ ಹೊನ್ನಮ್ಮನ ಹಳ್ಳವು ಅಚ್ಛೋದಿತ ಸರೋವರವೇ ತಾನೆಂಬಂತೆ ಬೀಗಲಕ ಹತ್ತಲು...

*ಸಿವನ್ನಾಮ ಪಾರೊತೀ ಪತಿ ಹರ ಹರ ಮಾದೇವss ಜಗದಂಬಾ.. ಜಗದಂಬಾ..*

ಕಳಸಗಳೊಂದಿಗೆ ಅಯ್ನೂರುಮಂದಿ ಕಳಸಗಿತ್ತೇರು, ಕುಂಭಗಳೊಂದಿಗೆ ಸಾವುರದೊಂದು ಮಂದಿ ನಿತ್ರೇರು.. ಸಹಸ್ರದೀವಟಿಗೆಗಳ ಬೆಳಕೊಳಗ ಮಿರಮಿರನೆ ಮಿಂಚುತ್ತಿರಲು ಸಿಮ್ಮಾಸನಾರೂಢೆ ಜಗಾನು ಮಾತೆಯು ತನಗೆಂದೇ ಯೇರುಪಾಟು ಮಾಡಲಾಗಿದ್ದ ಹುವ್ವಿನ ಮಂಟಪದೊಳಗೆ ಯಿರಾಜಮಾನಳಾದೊಡನೆ ವುಘೇ.. ವುಘೇ.. ಆಗೊ ಆಚ್ಚೇಕಡೇಕ ನಿಲುಗಲ್ಲುಗಳನ್ನೇರಿದವರೆಷ್ಟೋ? ಯೀಗ್ಗೆ ಯಿಚ್ಚೇಕಡೇಕ ಡಡಯೇರಿ ನಿಂತವರೆಷ್ಟೋ? ತಾಯೀಯ ನೆನೆಯೂತ ವಂದೆಲೆ ವಂದಡಕೆ ವಂದು ದಮ್ಮಡಿ ಯಿಟ್ಟು ಬೆಳುದಿಂಗಳನ್ನು ಬಿಂದು ಬಿಂದುವಿನಲ್ಲಿ ಮುಡುಕೊಂಡಿದ್ದ ಹೊನ್ನಮ್ಮ ತಾಯಿಗೆ ಹರಿಬಿಟ್ಟು ಸಣುಮಾಡಿದವರೆಷ್ಟೋ? ಆಕೆಯ ಅಗಾಧ ಅಂತಃಕರಣಕ್ಕೆ ಬೆರಗಾದವರೆಷ್ಟೋ!

ಅದೇ ಹೊತ್ತಿಗೆ ಗಂಟಲಯ್ಯನು ಅಹಹಹಾ ತಾಯೇss.. ಆದಿ ಅನಾದಿ ಅನಂತ, ಅರ್ಭುಧ ತಮಂಧ, ತಂಡಜ, ವಾರಿಯುಕ್ತ, ಆಯುಕ್ತ, ಮುನಿರಣ, ಮಾನ್ಯರss ಯಂಬಿವೇ ಮೊದಲಾದ ಖಡುಗಾಲಾಪನೆ ಆರಂಭಿಸಿದ ಹೊತ್ತಿನಲ್ಲಿ ತಮಗೆ ಕಣ್ಣು ಬಂದವೆಂದ ಕುರುಡರೆಷ್ಟೋ, ತಮಗೆ ಕಿವಿ ಬಂದವೆಂದ ಕಿವುಡ, ಕೆಪ್ಪರೆಷ್ಟೋ.

ಅವ್ವನ ಪವಾಡವು ಅಂದಿಗುಂಟು ಯಿಂದಿಗಿಲ್ಲಯಂಬುವ ರಣಹೇಡಿಗಳಿಗೆ ಖಡೇ.. ಖಡೇ.. ತಾಯಿ ಸಾಂಬವಿಯು ಪೂಜೆ ಪುನಸ್ಕಾರಗಳು ಸಾಂಗೋಪಾಂಗವಾಗಿ ನೆರವೇರಲು.. ವಸ್ತಿಯು ಜಲನಿಧಿಯೊಳಗೆ ಮಿಂದು ಹೊಸ ಅರುವೆ ಧರಿಸಿಕೊಳ್ಳಲು.. ಪಯಿತ್ರಕೇಲು ತನ್ನೊಳಗ ಹೊಸ ವುದುಕು ತುಂಬಿಕೊಳ್ಳಲು..

* * * *

ಬಳ್ಳಾರಿ ಸೀಮೆಯೊಳಗ ತಲೆದೋರಿದ್ದ ಬೊಬ್ಬಿಲಿನಾಗಿರೆಡ್ಡಿಯನ್ನು ವುಪುಸಮ್ಮರಿಸಿದಷ್ಟು ಸುಲಭವಲ್ಲ ಕದಿರಿ ಸೀಮೆಯೊಳಗ ಹೊಸದಾಗಿ ತಲೆದೋರಿರುವ ಅಣಿಮಾಂಡವ್ಯ ಮಾಚಾರ್ಯರ ಸಾತ್ವಿಕ ವುಪಟಳವನ್ನು ಅಡಗಿಸುವುದು ಯಂದು ಯಸನ ಮಾಡುತಲಿದ್ದ ಥಾಮಸು ಮನ್ರೋ ಸಾಹೇಬನು ಅದೇ ತಾನೆ ಗೊನಗೊಂಡ್ಲ ಭೀಮರೆಡ್ಡಿಯ ಸುಪರ್ದಿಯಲ್ಲಿದ್ದ ಕರೂರರನ್ನು ವಶಪಡಿಸಿಕೊಂಡು ಅದಕ್ಕೆ ವಜ್ರಯಂಬ ಬಿರುದನ್ನು ದಯಪಾಲಿಸಿದನು. ಜನಸ್ತೋಮವು ಜಯಕಾರ ಮಾಡುತ ಬಿರುದನ್ನು ಸ್ವಾಗತಿಸಿತು. ಸರಕಾರಿ ದಪ್ತರುಕಡತಗಳಲ್ಲಿ ವಜ್ರದಕರೂರು ಯಂದು ನಮೂದಿಸಬೇಕೆಂದು ತನ್ನ ಕಯ್ಯಿಕೆಳಗಿನ ಅಧಿಕಾರಿಗಳನ್ನು ಆದೇಶಿಸಿದನು. ವಜ್ರದ ಗಣಿಗಾರಿಕೆಯಲ್ಲಿ ಸ್ಥಳೀಯರಿಗೆ ರೋಜಗಾರಿ ನೀಡುವುದಾಗಿಯೂ, ಬರಲಿರುವ ಆದಾಯದ ವಂದು ಭಾಗವನ್ನು ಸದರಿ ಗ್ರಾಮದ ಶ್ರೇಯೋಬಿರುದ್ಧಿ ಕೆಲಕಾರ್ಯಗಳಿಗಾಗಿ ವುಪಯೋಗಿಸುವುದಾಗಿಯೂ ಘೋಷಿಸಿದನು. ಭಾರಿ ಕರತಾಡನ ಕೇಳಿಬಂತು. ತನಗೆ ಪವುರ ಗವುರವ ನೀಡಲು ಬಯಸಿದ ಯುವಕರಿಗೆ ಯಾವ ತಂಟೆತಕರಾರು ಮಾಡದೆ ವಜ್ರದ ಗಣಿಗಳನ್ನು ಕುಂಪಣಿ ಸರಕಾರಕ್ಕೆ ದೊಡ್ಡ ಮನಸ್ಸಿನಿಂದ ವಪ್ಪಿಸಿದ ಭೀಮರೆಡ್ಡಿಗಾರರನ್ನು ತಮ್ಮ ಪರವಾಗಿ ಗವುರವಿಸಬೇಕೆಂದು ಕಳಕಳಿಯಿಂದ ಯಿನಂತಿ ಮಾಡಿಕೊಂಡು ತನ್ನ ಮುತ್ಸದ್ದಿತನವ ಮೆರೆದನು. ಆದರಾತನು ಯಿನ್ನೂ ಕೆಲದಿನಗಳ ಕಾಲ ತಾನೊಂದೇ

ಜಾಗದಲ್ಲಿ ನಿಲ್ಲುವಂತಿರಲಿಲ್ಲ. ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಕದಿರಿ ಪ್ರಾಂತ್ಯದಲ್ಲಿರುವ ಮಣಿಕರ್ಣಿಕಾ ಅಗ್ರಹಾರಕ್ಕೆ ಹೋಗಿ ಅಣಿಮಾಂಡವ್ಯ ಮಾಚಾರ್ಯರೊಂದಿಗೆ ಚರ್ಚಿಸಬೇಕಿರುವುದಂತೆ ಛೇ! ಛೇ, ಯೀ ವಿಪ್ರಮಹಾಶಯರು ತನಗೆ ದೊಡ್ಡ ತಲೆನೋವಾಗಿ ಬಿಟ್ಟಿರುವರಲ್ಲಾ, ಶಸ್ತ್ರನಿಪುಣರನ್ನು ಯದುರಿಸುವಷ್ಟು ಸುಲಭವಲ್ಲ ಯೀ ಶಾಸ್ತ್ರಕೋವಿದರನ್ನು ಯದುರಿಸುವುದು? ಶಾಸ್ತ್ರವನ್ನು ಶಾಸ್ತ್ರದಿಂದಲೇ ಯದುರಿಸಬೇಕೆಂದು ನಿರ್ಧರಿಸಿದ ಅಪರ ಚಾಣಕ್ಯನೆನಿಸಿದ ಮನ್ರೋನು ವಂದು ದಿನದಮಟ್ಟಿಗೆ ಅನಂತಪುರಕ್ಕೆ ಹೋಗಿ ಹಯಗ್ರೀವಾಚಾರ್ಯ, ತ್ರಯಂಭಕಾಚಾರ್ಯ, ಶತಾವದಾನಿ ಪರಮೇಶ್ವರ ಪಂತುಲು ಯಿವರೇ ಮೊದಲಾದ ದ್ವಿದಶ ಪಂಡಿತರ ಸಭೆ ಕರೆದು ಭೂತಕಾಲದ ಅಗ್ರಹಾರಗಳನ್ನು ವರ್ತಮಾನಕ್ಕೆ ಯತ್ತಬೇಕೆಂದೂ, ಯಿಂಗ್ಲೀಷು ಮಾಧ್ಯಮದ ಪಠ್ಯಕ್ರಮವನ್ನು ವಟುಪ್ರಿಯಗೊಳಿಸಬೇಕೆಂದೂ ಕಳಕಳಿಯಿಂದ ವಿನಂತಿ ಮಾಡಿಕೊಂಡನು. ಯಿದರಲ್ಲಿ ಯಶಸ್ಸು ಸಾಧಿಸಿದಲ್ಲಿ ಗವರ್ನರು ಜನರಲ್ಲನಿಗೆ ಸಿಫಾರಸ್ಸು ಮಾಡಿ 'ಸರ್' ಯಂಬ ಅತ್ಯುನ್ನತ ಬಿರುದನ್ನು ಕೊಡಿಸುವುದಾಗಿ ತಾನು ಹೇಳದೆ ಯಿರಲಿಲ್ಲ. 'ಸರ್' ಯಂಬ ಬಿರುದು ಜಹಗೀರ್ದಾರು ಪದವಿಗೆ ಸರಿಸಮಾನವು.. ಅದೂ ಗವರ್ನರು ಜನರಲ್ಲನ ಅಂಬ್ರುತಹಸ್ತದಿಂದ. ಅವರೆಲ್ಲರ ರುದಯಗಳು ಕಡಲುಕ್ಕಿದಂತೆ ವುಕ್ಕಿದವು. ಆಯ್ತು ಮಹಾಸ್ವಾಮಿ.. ತಮ್ಮ ಚಿತ್ತ ಯಂದು ಅಲ್ಲಿಂದ ನಿರ್ಗಮಿಸಿ....

ತುಸು ಹೊತ್ತಿನ ತನಕ ಆಲಿಸೀ ಆಲಿಸೀ ಅಣಿಮಾಂಡವ್ಯಮಾಚಾರ್ಯರು ಛೀ ಛೀ ಯಂದುಬಿಟ್ಟರು. ನಿಮ್ಮ ಬ್ರಾಹ್ಮಣ್ಯವನ್ನು ಅಗ್ನಿಗಾಹುತಿ ಕೊಡಬೇಕು, ನಿಮನಿಮ್ಮ ಕೊರಳಲ್ಲಿ ಪವಿತ್ರಯಗ್ನೋಪವೀತ ಯಾಕರಯ್ಯ, ನಿಮ ನಿಮ್ಮ ಯದಯೊಳಗ ನಮಕ ಚಮಕಗಳು ಯಾಕರಯ್ಯಾ.. ಅಂದುಬಿಟ್ಟರು.

ಕದಿರಿ ಸೀಮೆಯ ಅಗ್ರಹಾರಗಳಲ್ಲಿ ಹಯಗ್ರೀವಾಚಾರ್ಯರ, ತ್ರಯಂಭಕಾಚಾರ್ಯ, ಶತಾವಧಾನಿ ಪರಮೇಸ್ವರ ಪಂತುಲರವರ ಬ್ರಾಹ್ಮಣ ವಿರೋಧಿ ನಿಲುವನ್ನು ವುಗ್ರವಾಗಿ ಖಂಡಿಸಲಾಯಿತು. ಅವರನ್ನು ಬ್ರಾಹ್ಮಣಿಕೆಯಿಂದ ಬಹಿಷ್ಕರಿಸಲಾಯಿತು. ಅವರ ಪ್ರತಿಕ್ರುತಿಗಳನ್ನು ಸುಡಲಾಯಿತು. ಯಿಷ್ಟೆಲ್ಲಾ ಆದ ಮ್ಯಾಲೂ ಅವರು ಸಿಪಾಯಿಗಳ ರಕ್ಷಣೆಯಲ್ಲಿ ಅಗ್ರಹಾರದಿಂದ ಅಗ್ರಹಾರಕ್ಕೆ ಸುತ್ತಾಡುತ್ತಾ ಅಂಗ್ರೇಜಿಯೊಳಗೆ ಸಂಸ್ಕೃತವೋss... ಸಂಸ್ಕೃತದೊಳಗ ಅಂಗ್ರೇಜಿಯೋ.. ಯಂದು ಪ್ರಚಾರ ಮಾಡಲಾರಂಭಿಸಿದರು. ಥಾಮಸು ಮನ್ರೋ

ಮನುವಿನ ಅಪರಾವತಾರಯೆಂದು ಪ್ರಚಾರ ಮಾಡ ಲಾರಂಭಿಸಿದರು. ಯಿದಕ್ಕೆ ತದ್ವಿರುದ್ಧವಾಗಿ ಸೊಯಂಸೇವಕರೂ.. ಅನೇಕ ಕಡೆ ಅಂಗ್ರೇಜಿ ಪರ ನಿಲುವಿನ ಆಚಾರ್ಯತ್ರಯರಿಗೂ, ಅಣಿಮಾಂಡವ್ಯಮಾಚಾರ್ಯರ ಅಭಿಮಾನಿಗಳಿಗೂ ನಡುವೆ ವಾಗ್ವಾದ, ಜಗಳ, ಹೊಡದಾಟಗಳು ಸಂಭವಿಸತೊಡಗಿದವು.. ಸಿಪಾಯಿಗಳು ವಯೋರುದ್ದರನ್ನು ಅವರವರ ಗ್ರುಹಗಳನ್ನೇ ಸೆರೆಮನೆಗಳನ್ನಾಗಿ ಪರಿವರ್ತಿಸಿ ಬಂಧನದಲ್ಲಿರಿಸಿದರು. ಅನೇಕ ತರುಣ ಸೊಯಂಸೇವಕರನ್ನು ವುಪಾಯಾಂತರಿಂದ ಬಂಧಿಸಿ ದೂರ ದೂರದ ಸೆರೆಮನೆಗಳಲ್ಲಿಟ್ಟರು. ಯಿದರ ಪರಿಣಾಮವಾಗಿ ಅನೇಕ ಅಗ್ರಹಾರಗಳು ಸೆರೆಮನೆಗಳಾದವು, ಸೆರೆಮನೆಗಳು ಅಗ್ರಹಾರಗಳಾದವು.. ಸರಕಾರ ಅನೇಕ ಅಗ್ರಹಾರಗಳಿಗೆ ನೀಡಿದ್ದ ಸವಲತ್ತುಗಳನ್ನು ಹಿಂದಕ್ಕೆ ಪಡೆಯಿತು, ಹೆಚ್ಚಿನ ತೆರಿಗೆ ವಿಧಿಸಲಾರಂಭಿಸಿತು. ಸರಕಾರದ ಸಂಸ್ಕೃತ ವಿರೋಧೀ ಚಟುವಟಿಕೆಗಳಿಂದ ತತ್ತರಿಸಿದ ಅಗ್ರಹಾರೀ ಯುವ ಸೊಯಂಸೇವಕರು ಭೂಗತರಾಗಲಾರಂಭಿಸಿದರು, ಕೆಲವರು ಅಕ್ಕಪಕ್ಕದ ಜಾಗೀರುದಾರು, ದೇಶಮುಖ, ಪಟುವಾರಿಗಳನ್ನು ರಾತ್ರೋರಾತ್ರಿಭೆಟ್ಟಿಯಾಗಿ ಅಗ್ರಹಾರಗಳನ್ನು ರಕ್ಷಿಸಿ ಯಂದು ಬೇಡಿಕೊಳ್ಳತೊಡಗಿದರು. ಕೆಲವು ಅಗ್ರಹಾರಗಳ ಸಂಪನ್ನ ಬ್ರಾಹ್ಮಣರು ತಮ ತಮ್ಮ ಹೆಂಡರು ಮಕ್ಕಳನ್ನು ಕಟ್ಟಿಕೊಂಡು ದೂರದ ಪುಣೇ ಸೀಮೆಯ ವೂರುಗಳಿಗೆ ವಲಸೆ ಹೋಗಲಾರಂಭಿಸಿದರು.. ಯಾಕೆಂದರಲ್ಲೆಲ್ಲಾ ಪೇಶ್ವೇ ವಾರಸುದಾರರು ಚಿತ್‌ಪಾವನ ಬ್ರಾಹ್ಮಣರು....

ಅತ್ತ ಕುದುರೆಡವು ಪಟ್ಟಣದೊಳಗ ಮಜ್ಜಣ ಮಾಡಿದ ಸಾಂಬವಿಯ ಬಿಮ್ಮನಸಿಹಾಂಗ ಮೆರವಣಿಗೇಲಿ ಹೊಂಟೂ ಹೊಂಟೂ ಸೇರಿ ವುಪಸ್ಥಿತಳಾದ ಜೆಗೇವು ಯಷ್ಟುದ್ದ ಯಿತ್ತಂದ ಅಷ್ಟುದ್ದ ಯಿತ್ತು ಸಿವನೇ.. ಅಲ್ಲಿ ಮುತ್ತಿನ ಚಪ್ಪರಗಳನ್ನೇನು ಕೇಳುತ್ತೀ? ಮಾವಿನ ತೋರಣಗಳನ್ನೇನು ಕೇಳುತ್ತೀ? ಹೆಜ್ಜೆ ಹೆಜ್ಜೆಗೊಂದೊಂದರಂತೆಯಿದ್ದ ಹುವ್ವಿನ ಮಂಟಪಗಳನ್ನೇನು ಕೇಳುತ್ತೀ? ವಂದೊಂದು ಮಂಟಪದೊಳಗ ಸಾಕ್ಷೀಭೂತವಾಗಿ ಯಿರಾಜಮಾನಗೊಂಡಿದ್ದ ವಂದೊಂದು ಹೆಣ್ಣು ದೇವತೆಗಳನ್ನು ಯೇನು ಕೇಳುತ್ತೀ? ಆ ದೇವತೆ ಯೀತನ ಮಯ್ಯೊಳಗೆ ಹೊಕ್ಕೊಳ್ಳುತ್ತಿದ್ದುದೇನು ಕೇಳುತ್ತೀ? ಅವೆಲ್ಲ ಸರೀರಗಳನ್ನು ಅದರು ಬದಲು ಮಾಡುತಲಿದ್ದುದೇನು ಕೇಳುತ್ತೀ? ಸುತ್ತಾನ್ನಾಕಡೇಕ ಹೊತ್ತಿ ವುರಿಯಲು ಸಜ್ಜಾಗಿ ನೆಲದಡಿ ಅವಿತಿದ್ದ ಸುರುಸುರುಬತ್ತಿ ಪಟಾಕಿಗಳನ್ನೇನು ಕೇಳುತ್ತೀ? ತಾಯಿಯ ಪ್ರೀತ್ಯರ್ಥವಾಗಿ ಭಕುತಾದಿ ಮಂದಿ ತಮ ತಮ್ಮ ಸರೀರಗಳನ್ನು

ದಂಡಿಸಿಕೊಳ್ಳುತಲಿದ್ದುದೇನು ಕೇಳುತ್ತೀ ಸಿವನೇs.. ಅಲ್ಲೆಲ್ಲ ಸೊರ್ಗ ಮುರುಕೊಂಡು ಬಿದ್ದಿತ್ತು ಸಿವನೇ, ಸಾವುರ ಸಾವುರ ದೀವಟಿಗೆಗಳಿಂದಾಗಿ ನೂರೊಂದು ಹಗಲುಗಳು ಅಲ್ಲೆಲ್ಲ ತಳುಕು ಹಾಕಿಕೊಂಡಿದ್ದವು ಸಿವನೇ. ಸಾವುರ ಸಾವುರ ರಣವಾದ್ಯಗಳು ವಂದೇ ಸಮಕ ಮೊರೆಯಲಕ ಹತ್ತಿದ್ದ ಪರಿಣಾಮವಾಗಿ ಯೀರೇಳು ಲೋಕಗಳ ವೈಯಿದ್ಯನಾದ ರವುಸವೆಲ್ಲ ಅಲ್ಲೆಲ್ಲ ನೆಲಮುಗಿಲನ್ನು ಯ್ಯಾಪನ ಮಾಡಿಬಿಟ್ಟಿತ್ತು ಸಿವನೇ.

ಕಯ್ಗತ್ತಿ, ಖಂಡೆಯ, ಸೊರಟೆಯಾ, ಬಾಳ, ಕರಾಚೂರಿ, ಸುರುಗಿ, ಕಯ್ ಸುರುಗಿ, ಬಾಕು, ಕೊಂಬು ಗತ್ತಿ ಯಿವೇ ಮೊದಲಾದ ಕತ್ತಿಗಳನ್ನು ಧಾರಣ ಮಾಡಿದ್ದವರೂ, ಕವುಕ್ಷೇಯ, ಅಸಿ, ನಿಸ್ತ್ರಿಂಶ, ಕ್ರುಪಾಣ, ಕಲವಾಲಕ, ತರವಾರಿ ಮಂಡಲಾಗ್ರವೇ ಮೊದಲಾದ ಬಾಕುಗಳನ್ನು ಧಾರಣ ಮಾಡಿದ್ದವರೂ, ಕಡಿತಲೆ ಚರ್ಮದ ಗುರಾಣಿ ಧಾರಣ ಮಾಡಿದ್ದವರೂ ತಮ ತಮ್ಮ ರಣಕವುಸಲ್ಯವನ್ನು ತಾಯಿಯಯ ಪ್ರೀತ್ಯರ್ತವಾಗಿ ಪ್ರದರ್ಸನ ಮಾಡುತ್ತಿದ್ದುದನು ವರಣನ ಮಾಡಲಕ ಸಬುಧಗಳು ಸಾಕಾಗವು ಸಿವನೇ. ಆ ಸಂಭ್ರಮವು ಬೆಳಕೋತ ಬೆಳಕೋತ ಸುತ್ತನ್ನಾಕಡೆ ಹಲವು ಹರದಾರಿ ದೂರಕ ಪಸರವಾಗಿತ್ತೆಂದರೆ ನೀನೇ ಲೆಕ್ಕಹಾಕು ಸಿವನೇ..

ಯೇಳಾಳೆತ್ತರ ನಿಲುವಿನ ಹುವ್ವಿನ ಮಂಟಪದ ನಟ್ಟನಡುವೆ ಯಿರಾಜಮಾನಳಾಗಿದ್ದ ಸಾಂಬವಿ ತನ್ನ ಕಣ್ಣುಗುಡ್ಡೆಗಳನ್ನು ಸುತ್ತನ್ನಾಕಡೇಕ ಗರಗರನಂತ ತಿರುಮೊತs ಗಮನಿಸುತಾ ಅಯ್ತಾಳೆ.. ಅಗೋ! ಅಲ್ಲಿ ತನ್ನಲ್ಲಿ ಅಯ್ಕ್ಯವಾಗಲಿರುವ ಮಾಬಲಿ ಭಾಪ್ಪರೇ, ಸಾಸ್ತರಕ್ಕಾರ ವಂದೇ ವಂದು ಕಾಲನ ಮುರಿಸಿಕೊಂಡಿದ್ದುಂಟಾ..? ಸುಣ್ಣದ ನೀರನ ಕುಡಿದದ್ದುಂಟಾ? ಕಾಡಿಸಿದ್ದುಂಟಾ? ಪೀಡಿಸಿದ್ದುಂಟಾ? ತನಗ ತಾನೆ ಹೆಂಗ ಕೊರಳೊಡ್ಡಿರುವುದು ಕವೆಕಟ್ಟಿಗೆಯೊಳಗೆ.. ಭಪ್ಪರೇ! ಚಂಡ.. ಸದರೀ ಸದ್‌ಭಕುತ ಚಂಡನರುಂಡ ಚೆಂಡಾಲಕ ಬಂದಿರುವಂಥವನಾದ ಪುರಗುಂಡೀ ಗುರ‍್ರಪ್ಪನ ಸ್ವಾಸ್ಥೀ ಕುರಿತು ಹೇಳುವುದಾದರss.. ಅದೇ ವಂದು ರಾಮ್ಯಾಣವಾಗ್ತದss..

ಗುರ‍್ರಪ್ಪನ ಸ್ವಾಸ್ಥಿ ಸದರೀ ಪಟ್ಟಣ ಯಂದು ಮಂದಿ ಅಂಬೋಣವು, ಯಿದು ಖರೇ, ಯೀಗ ಸದ್ಯಕ ಅವಯ್ಯ ಸೊಕ್ಕೆಯ ರಾಜ ಮಾರನಾಯಕನ ಅರಮನೆಯ ಪಾಕಶಾಲೆಯ ವುಸ್ತುವಾರಿಯ ವುಜ್ಜುಗದಲ್ಲವನೆ..

ಗುರ‍್ರಪ್ಪ ಕುದುರೆಡವಿನಿಂದ ಅಲ್ಲಿಗೆ ಯಾವಾಗ? ಯದಕ?

ಹೋದನೆಂಬುದಕ ಕಥಿ, ವದಂತಿಗಳು ವಂದs ಯರಡss.. ಸದರಿ ಪಟ್ಟಣದೊಳಗ ಪುರುಗುಂಡಿಯವರದಂದರ ಕವಣಿಗಾರರ ಮನತನ. ಯೀವಯ್ಯನ ಪೂರುವಿಕರು ಕವಣಿಗಳೊಳಗ ಕಲ್ಲಿಟ್ಟು ಸತ್ರುರಾಜರ ಕಣ್ಣುಕಳೆದಿರುವುದುಂಟು? ತಲೆ ಹೊಡದಿರುವುದುಂಟು? ಕಂಪಣಿ ಸರಕಾರ ಬಂತೋ ಬಂತು, ಕಾಳಗಗಳು ಅಪರೂಪವಾದವು. ಕುಸಲ ಕವಣಿಗಾರರನ್ನು ಯಾರೊಬ್ಬರೂ ಮಾತನಾಡಿಸದಾದರು.. ವುಂಡೆಯಾ, ಯಿಲ್ಲವಾ ಯಂದು ಕೇಳದಾದರು. ಬರೆಯಳದಂತೆ ಬರ ಬ್ಯಾರೆ ಬಂತು. ಯೀವಯ್ಯನದು ಮೊದಲೇ ಹೊಲೇರ ಮನತನ.. ದವುಳೇರ ಮಂದಿ ವದಕನಕ್ಕ ಕರೆಯದಾದರು.. ಸದರಿ ಪಟ್ಟಣದೊಳಗ ವುಪಾಸ ವನುವಾಸ ಯಿರುವುದು ಯದಕಂತ ಗುರ‍್ರಪ್ಪ ಸಮುಸಾರವನ್ನು ಬೆನ್ನಿಗೆ ಕಟ್ಟಿಕೊಂಡು ಗುಳೇ ಹೊಂಟ.. ಹೊಂಟೂ ಹೊಂಟೂ ಸೊಕ್ಕೆಯಂಬ ಮೂರನ್ನು ಸೇರಿದ. ಆ ಗ್ರಾಮವನ್ನು ಕೊನೇರು ಮಾರಪ್ಪನಾಯಕ ಯಂಬರಸನು ಆಳುವಿಕೆ ಮಾಡುತಲಿದ್ದನು. ಆತನು ಕೆಲವು ಕಾಲದಿಂದ ಯೀರ‍್ಯನಾಶ ರೋಗ ರುಜಿಣದಿಂದ ನರಳುತಲಿದ್ದನು. ಯೀರ‍್ಯಾಭಿರುದ್ಧಿಯ ಸಲುವಾಗಿ ನೂರಾರು ಮಂದಿ ವೈದ್ಯರಿಗೆ ತನ್ನನ್ನು ತಾನು ತೋರಿಸಿಕೊಂಡು ಭಂಡಾರದ ಬವುಪಾಲು ಹೊನ್ನನ್ನು ಕಳಕೊಂಡಿದ್ದನು. ಯೀವಯ್ಯ ಯೀ ಸಂಗತಿಯನ್ನು ತಿಳಕೊಂಡ. ತಾನೂ ಅವುಷಧಿ ಯಿಷಯದಲ್ಲಿ ತಗ್ನನಿದ್ದ. ಯಿಷ್ಟುದ್ದ ಅಷ್ಟಗಲ ಯಿದ್ದ ಅರಮನೆಯನ್ನು ಪ್ರಯಾಸದಿಂದ ಪ್ರಯೇಸ ಮಾಡಿದ್ದ. ಹಂಸತೂಲಿಕಾ ತಲ್ಪ ಯಂಬ ಮುರುಕು ವರಸಿನ ಮ್ಯಾಲ ಚಿಂತಾಕ್ರಾಂತನಾಗಿ ವರಕೊಂಡಿದ್ದ ರಾಜನಿಗೆ ಅಡ್ಡಬಿದ್ದು ದೊರೆ ತಾನು ಹಿಂಗ ಹಿಂಗ ಯಂದು ಅರಕೆ ಮಾಡಿಕೊಂಡ. ರಾಜ ಯಿವಯ್ಯನ ಸರೀರದ ಕಡೇಕ ಸಿಮ್ಮಾವಲೋಕನ ಮಾಡಿದ. ವೈದ್ಯ ಅಂಬುತಿರುವನು, ವಯ್ಯಿ ಮ್ಯಾಲ ವಂದೇ ವಂದು ಬಿರುದು ಬಾವಲಿ ಕಾಣುತಾಯಿಲ್ಲ. “ನೋಡಪ್ಪಾ, ಅವುಷಧಿ ತಿಂದೂ ತಿಂದು ನಮ್ಮ ಸರೀರ ಜರ‍್ಜರಿತವಾಗಯ್ತೆ.. ಯಂಥೆಂಥೋರಿಂದ ಕಾಯಿಲೆಯನ್ನು ನಯ ಮಾಡುವುದಾಗಿಲ್ಲ.. ನೀನ್ಯಾಕ ಸುಮ ಸುಮಕ ಜೀವ ಕಳಕಂತೀ.. ಬಡವ ಯಿದ್ದಂಗದಿ, ಮಕ್ಕಳೊಂದಿಗ ಯಿದ್ದಂಗದಿ.. ಬ್ಯಾಡ ಹೋಗು” ಯಂದನು. ಅದರಿಂದ ನಿರಾಶನಾಗದೆ ಗುರ‍್ರಪ್ಪ ತನ್ನ ಕುಲದೇವತೆಯಾದ ಕಲ್ಲಳ್ಳಿ ಕವಣೆವ್ವನ ಮ್ಯಾಲ ಭಾರಹಾಕಿ “ಹಂಗನ್ನಬ್ಯಾಡರಿ ದೊರೆ, ಅವುಷಧಿ ಮಾಡಿಕೊಡಲಕ ನನಗೂ ವಂದು ಅವಕಾಶವನ ದಯಪಾಲಿಸಿರಿ.. ಯೀರ‍್ಯಯಿಲ್ಲದ ರಾಜನಂದರ

ಗಂಡನಿಲ್ಲದ ರಂಡೆಗೆ ಸಮಾನ ಮಾಸ್ವಾಮೀ. ನಿಮ ಕಾಯಿಲೆ ನಯವಾಗದ ಪಕ್ಷದಲ್ಲಿ ನನ್ನ ಜೀವ ತೆಗೆಯುವಿರಂತೆ" ಯಂದು ಅಂಗಲಾಚಿದನು. ಅದಕ ನಾಯಕ ಸಮ್ಮತಿಸಿದನು. ಗುರ‍್ರಪ್ಪ ಗವುರವಪೂರುವಕವಾಗಿ ಸಾನ್ನಿಧ್ಯದಿಂದ ನಿರ‍್ಗಮಿಸಿ..

ಕುಸಲ ಕವಣೆಗಾರನಾದ ತಾನು ಯೀಶಾನ್ಯ ದಿಕ್ಕಿನಲ್ಲಿ ಹಾರುತಲಿದ್ದ ಸಾಂಬಾರು ಕಾಗೆಯನ್ನೂ, ಆಗ್ನೇಯ ದಿಕ್ಕಿನಲ್ಲಿದ್ದ ಗಂಡು ಕೋತಿಯನ್ನೂ ಹೊಡದುರುಳಿಸಿದನು. ಅದರ ರಾಮಾ ರಗುತದಲ್ಲಿ ಯಿದರ ತರಡು ಬೀಜಗಳನ್ನು ತೇದು ಯೀರ‍್ಯವರ‍್ಧಕಾ ಲೇಹ್ಯವನ್ನು ತಯಾರಿಸಿ ಕಂಚಿನ ಚರಕಲಿಯಲ್ಲಿ ತುಂಬಿಕೊಂಡು ರಾಜನಲ್ಲಿಗೆ ಹೊಯ್ದು "ದಿನಂಪ್ರತಿ ಮೂರೊಪ್ಪತ್ತು ಸೇವನ ಮಾಡಬೇಕು ದೊರೆ" ಯಂದು ಹೇಳುತ ಅರುಪಣ ಮಾಡಿದನು. ರಾಜನು ಅದರಂತೆ ಮಾಡುತ ಮೂರನೆ ದಿವಸದಲ್ಲೇ ಲೈಂಗಿಕವಾಗಿ ಕ್ರಿಯಾಸೀಲನಾದನು. ಅದರಿಂದ ಸಂತುಷ್ಟಗೊಂಡು ಗುರ‍್ರಪ್ಪನನ್ನು ಆಸ್ಥಾನಕ್ಕೆ ಬರಮಾಡಿಕೊಂಡು "ಯೇನು ಬಗುಸುತಿಯೋ ಬಗುಸು" ಯಂದು ಕೇಳಿದನು. ಆಗಿದ್ದು ಯಿವಯ್ಯನು ತನ್ನ ಪರಿಸ್ಥಿತಿ ಯಿವರಿಸಿ ವುದ್ಯೋಗ ದಯಪಾಲಿಸಿ ಅರಮನೇಲಿ ಸೇವೆಗೆ ಯಿಟ್ಟುಕೊಳ್ಳಿರೆಂದು ಯಿನ್ನಪ್ಪ ಮಾಡಿಕೊಂಡನು. ಅದಕಿದ್ದು ನಾಯಕನು ಯೀ ಪವಾಡ ಸದ್ರುಸ ಲೇಹ್ಯವನ್ನು ತನ್ನೊಬ್ಬನಿಗಲ್ಲದೆ ಬ್ಯಾರೆ ಯಾವ ಪುರುಸನಿಗೆ ಮಾಡಿಕೊಡಬಾರದೆಂದೂ, ಹಾಗೆ ಮಾಡಿಕೊಟ್ಟಲ್ಲಿ ಮರಣದಂಡನೆಯನ್ನು ಯಿಧಿಸಲಾಗುವುದೆಂದೂ ಯಚ್ಚರಿಕೆ ನೀಡಿ ಅರಮನೆಯ ಪಾಕಶಾಲೆಯ ವುಸ್ತುವಾರಿಕೆ ವುದ್ಯೋಗ ನೀಡಿದನು.

ಯಿದು ಅಸಲು ಸಂಗತಿಯು..

ಹೀಗಿರುತ್ತಿರಲಾಗಿ ಕುದುರೆಡವು ಪಟ್ಟಣದಿಂದ "ತಾಯಿ ಸಾಂಬವಿ ಹೊಳೆಗೊಂಡಲಿ ರುವಳೆಂದೂ, ವಕ್ಕಲು ನಿಯಮದ ಪ್ರಕಾರ ಮಾಬಲಿಯ ಕೊರಳರದು ನಿನ ಯಿಸ್ಯೇನ ನೀನು ತಗೊಂಡೋಗ ತಕ್ಕದಂದೂ" ನಿರೂಪ ತನ್ನ ಮನಿ ಬಾಕಿಲಿಗೇ ಬಂತು. ಯಷ್ಟು ಲಕ್ಷ ಕೊಟ್ಟರೆ ಸಿಕ್ಕೀತು ಯೀ ಸವುಭಾಗ್ಯೇವು.. ಆ ಯಿಸ್ಯೇದಿಂದ ತನ್ನ ಸಂತಾನ ಸಾವರವಾಗುವುದು ಕೂಡ. ಗುರ‍್ರಪ್ಪ ಸಾನ್ನಿಧ್ಯಕ್ಕ ಹೋಗಿ ದೊರೆ ಹಿಂಗಂಗಂತ ಹೇಳಿಕೊಂಡ. ಯಲ್ಲಿ ಗುರ‍್ರಪ್ಪನ ರೂಪದಿಂ ತನ್ನ ಪುರುಷತ್ವವು ಪಲಾಯನವಾಗುವುದೋ ಯಂದು ನಾಯಕ ಮೊದಮೊದಲು ವಪ್ಪಲಿಲ್ಲ. ಕೊನೀಕಿದ್ದು ಆ ಚಾಣಾಕ್ಷನು "ದೊರೆ

ಮಾಬಲಿ ಅಂದರ ಸಾಮಾನ್ಯವಲ್ಲ.. ಅದರ ತೊಲ್ಡು ಬೀಜಗಳನ್ನು ಯಾವಾತನು ಸದಾ ತನ್ನ ಕೊರಳಲ್ಲಿ ಕಟ್ಟಿ ಕೊಂಡಿರುವನೋ ಅಂಥಾತನು ಸ್ತ್ರೀಸೌಖ್ಯವನ್ನು ಜೀವನ ಪರ್ಯಂತ ಅನುಭೋಸುವನು" ಯಂದು ಹೇಳಿದನು. ಅದರಿಂದ ಸಂತುಷ್ಟಗೊಂಡ ನಾಯಕನು "ಹಂಗಾದರೆ ಸರ್ರೆಸರ್ರೆ.. ಅವನು ತಂದು ಯಿದ್ಯುಕ್ತವಾಗಿ ಸನ್ನಿಧಾನಕ್ಕ ವಪ್ಪಿಸಬೇಕು. ಮಾತಿಗೆ ತಪ್ಪಿದಲ್ಲಿ ಯಿದ್ದೇಯಿದೆ" ಯಂದು ಹೇಳಿ ದಾರಿ ಖರ್ಚಿಗೆ ಕೊಟ್ಟು ಕಳುವಿದನು.

ಕಾಲುಮುಟ್ಟಲಕ ಹೋದರ ಕಾಲು ಕೊಸರಲಿಲ್ಲ, ಕೊಂಬು ಮುಟ್ಟಲಕ ಹೋದರ ಹಿರಿಹಿರಿ ಹಿರಿಯಲಕ ಬರಲಿಲ್ಲ. ಯಾವ ಪುಣ್ಯಾತುಮ ಅದೆಂಗ ಬೆಳೆಸಿರುವನೋ ಯಿದನು.. ಸಾದು ಸಂತರ ಪಯ್ಕಿ ಯಿರುವಂಗಯ್ತಲ್ಲಾ, ಯಿದರ ಹಿಂಗಾಲುಗಳ ನಡುವೆ ಸೋಭಾಯಮಾನವಾಗಿ ಜೋಡು ಯಿಷ್ಟಲಿಂಗಗಳೋಪಾದಿಯಲ್ಲಿ ತೊಲ್ಡು ಬೀಜಗಳು ಜೋತಾಡುತ್ತಿರುವವಲ್ಲ. ಹ್ಹಾ.. ಹ್ಹಾ.. ನಾಯಕಾss.. ಯಿವುಗಳನ್ನಲಂಕರಿಸಿಕೊಳ್ಳೋ ನಿನ್ನನ್ನು ನೋಡಲಕೊಂದು ಚಂದ.. ನಿನ್ನೊಡನೆ ಮಾತನಾಡಲಕೊಂದು ಚಂದ.. ಯಿನ್ನೊಂದೆರಡು ಮೂರು ದಿವಸಗಳಲ್ಲಿ ತಾನಿವನ್ನು ನೀಡುವ ಪೂರುವದಲ್ಲಿ ಹೇರಳ ಪೊಗದಿ ವಸೂಲು ಮಾಡಬೇಕಯ್ತೆ. ವಕ್ಕಲು ಮಂದಿಯು ತನಗ ಬಲಗಾಲು ಬೇಕು, ತನಗ ಡುಬ್ಬ ಬೇಕು, ತನಗ ಹಿಂಗಾಲು ಬೇಕು, ತನಗೆ ಬಾಲ ಬೇಕು ಯಂದು ವಾದಾಡಿದರು. ಪುಣ್ಯಕ್ಕ ಮಾಬಲಿಯ ತೊಲ್ಡು ಬೀಜಗಳನ್ನು ಯಾರೂ ಬಗಸುತ್ತಿಲ್ಲ. ರಾಜರ ಮೊಳಿಗದಲ್ಲಿರುವಾತ ಯಂಬ ಕಾರಣಕ್ಕೆ ಹಂಚುವ ಘನಕಾರ್ಯವನ್ನು ತನಗೆ ವಹಿಸಿದ್ದೂ ಸಾಂಬವಿಯ ಕರುಣೆಯೇ ಸರಿ.

ಸಿವನ್ನಾಮ ಪಾರೊತೀ ಪತಿ ಹರಹರ ಮಾದೇವss.. ಹತ್ತಾರು ಮೂರುಗಳಿಂದ ತಾಯಿಯ ಸೇವಕ್ಕೆಂದೇ ಆಗಮಿಸಿದ್ದ ನೂರಾರು ಮಂದಿ ಪೋತರಾಜರುಗಳು ತಮ ತಮ್ಮ ಬಾಯಿಗಳಿಂದ ವಂದರಮ್ಯಾಲೊಂದಂತೆ ಆಡು, ಮೇಕೆಗಳನು ಜಿಗಿಜಿಗಿದು ರಾಸಿರಾಸಿ ಹಾಕುತಲಿದ್ದರು ವಂದುಕಡೇಕ.. ಸದರಿ ಬಯಲ ಹತ್ತಾರು ಕಡೇಲಕಿದ್ದ ಸೂಲಗಂಭಗಳನ್ನೇರುತಲಿದ್ದೋರು ಯಷ್ಟೋ ಮಂದಿ? ಸಿಡಿ ಆಡುತಲಿದ್ದೋರು ಯಷ್ಟೋ ಮಂದಿ? ಬಲಿಗೊಂಡು ಹೆಣವಾಗುತಲಿದ್ದೋರು ಯಷ್ಟೋ ಮಂದಿ? ಆ ಹೆಣಗಳ ವಾರಸುದಾರರು ಯಷ್ಟೋ ಮಂದಿ..

ಜಯನ್ನಾಮ ಪಾರೊತೀ ಪತಿ ಹರಹರ ಮಾದೇವಾss..

ಅಷ್ಟದಿಕ್ಪಾಲಕರ ಹೆಸರುಳ್ಳ ಮೆಟ್ಟಲುಗಳನ್ನೇರಿ ರಾಯಾಪುರದ ವಾಸ್ತುಶಿಲ್ಪಿ ಮಾಯಾಚಾರಿಯಿಂದ ನಿರ್ಮಿತ ದ್ರುಸ್ಯಾವಳಿಗಳಿಂದಲಂಕ್ರುತಗೊಂಡಿರುವ ಹುವ್ವಿನ ಮಂಟಪದಲ್ಲಿ ಯಿರಾಜ ಮಾನಳಾಗಿರುವ ಸಾಂಬವಿ ಸಮಕ್ಷಮದಲ್ಲಿ ಚಂಡನ ಸರೀರದಿಂದ ರುಂಡವನ್ನು ಬೇರ್ಪಡಿಸಲಕೆಂದು ದಪದಪ ಹೆಜ್ಜೆಯನಿಡುತ ಗುರ್ರಪ್ಪ ಸಂಗಡಿಗರೊಂದಿಗೆ ಬಂದು ಸಿರಸಾಸ್ಟಾಂಗ ಪ್ರಣಾಮ ಸಲ್ಲಿಸಿ ಯದ್ದಂಥಾದ್ದು ರುಧಿರೋದ್ಗಾರಿ ಸಂವತ್ಸರದ ಆಶ್ವೀಜ ಬಹುಳ ಹನ್ನೆರಡನೇ ಮಂಗಳಾರ ದನಿಷ್ಟಾ ನಕ್ಷತ್ರಮೂರುಗಳಿಗೆ ಸಂದರ್ಭದಲ್ಲಿ.. ಆ ಕೂಡಲೆ ಶತಭೀಷಾ ನಕ್ಷತ್ರಫಳಫಳನೆ ಮಿರುಗಿ ಮೆರೆಯಾಯಿತು. ಆಕಾಶದ ರಣಬಯಲಲ್ಲಿ ಭಯಂಕರ ಕಾಡುತೂಸಿನ ಕಾಳಗ ಸಂಭವಿಸುತ್ತಿರುವುದೋ ಯಂಬಂತೆ ಸಾವುರಾರು ವುಲ್ಕಾಪಾತಗಳಾದವು. ಬಲಿಕಾರ್ಯಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಗೋಯಿಂದಗಿರಿಯ ರಾಜಾ ಲಚುಮಣ್ಣನಾಯಕ ಮತ್ತಾತನ ಆಮಾತ್ಯರಾದ ಕಲಕುಂದ ರಾಘಾಪ್ಪಾಚಾರ್ಯ, ಆನೆಗೊಂದಿ ವಲ್ಲಭಾಚಾರ್ಯರು ತಮ ತಮ್ಮ ಆಸನಗಳಿಂದೆದ್ದು ನಿಂತುಕೊಂಡರು. ಸಮಸ್ತ ಕುಂತಳ ಪ್ರಾಂತದೊಳಗಿನ ಮಜ್ಜಿಗೆ ಗುಡಾಣಗಳಲ್ಲಿ ಆ ಚಣದವರೆಗೆ ತೇಲಾಡುತಲಿದ್ದ ಬೆಣ್ಣೆವುಂಡೆಗಳು ದುಡುಂ ಅಂತ ಮುಳುಗಿದವು, ಸಿಂಧವಾಡಿ ಪ್ರಾಂತದ ಕೆರೆ ಗಿರೆ ಸರೋವರಗಳೆಲ್ಲ ಹೊಯ್ದಾಡಿದವು. ಯಿಸಿಲ ಪ್ರಾಂತದ ಗರುಭವತಿಯರ ಬಸಿರೊಳಗಿದ್ದ ಭ್ರೂಣಗಳು ಹಲ್ಲುಕಡಿದು ಕಟಕಟ ಕರ್ಕಷ ಸಬುಧ ಮಾಡಿದವು, ಅಷ್ಟೇ ಅಲ್ಲದೆ ಸಮಸ್ತ ತೆಂಕಣ ಪ್ರಾಂತದಲ್ಲಿದ್ದ ಗುಡಿ, ಗುಂಡಾರ, ದೇವುಳ ದೇವಾಲಯಗಳಲ್ಲಿನ ಗಂಟೆಜಾಗಟೆಗಳು ತಮಗ ತಾವ ಅಲುಗಾಡಿ ಗಣಗಣ ಸಬುಧಮಾಡಿದವು, ಅಡಕಲ ಗಡುಗೆಗಳು ಅದುರಿದವು, ಗಿಡಮರಗಳಿಂದ ಯಲೆ, ಹುವ್ವು, ಕಾಯಿ, ಯೀಚುಗಾಯಿಗಳು ತಮ ತಮ್ಮ ಶಕ್ತ್ಯಾನುಸಾರ ವುದುರಿದವು, ಯೀ ಪ್ರಕಾರವಾಗಿ ವಡಮೂಡಿದ ಸಗುನಗಳು, ಪವಾಡಗಳು ವಂದೇ ಯರಡೇ ಸಿವ ಸಿವಾss..

ದೆವ್ವ, ಪೀಡೆ, ಪಿಚಾಚಿಗಳು ತಾವು ಅವುಚಿಟ್ಟುಕೊಂಡಿದ್ದ ಸರೀರಗಳನ್ನು ರೋಮಾಂಚನ, ಬೆಮರಿನ ಸ್ವಾಧೀನಕ್ಕೊಪ್ಪಿಸಿ ಪ್ರಾಂತ ಬಿಟ್ಟು ಪಲಾಯನ ಮಾಡಿದವು ಸಿವನೇ.. ಸಾತ್ವಿಕ ಶಕ್ತಿಗಳು ತಮ ತಮ್ಮ ಅಡಗುದಾಣಗಳಿಂದೀಚೆ ಬಂದವು ಸಿವನೇ..

ಯೀ ಪ್ರಕಾರವಾಗಿ ಸದರಿ ಪಟ್ಟಣದೊಳಗ, ಸದರಿ ಪ್ರಾಂತದೊಳಗ, ಫಲಾನ ದೇಶವಿದೇಶಗಳೊಳಗ ಸಂಭವಿಸಿದ ಅಸಂಖ್ಯಾತ ಘಟನಾವಳಿಗಳನ ಪಟ್ಟಿಮಾಡುತ್ತ ಹೋದಲ್ಲಿ. ಸಿವ ಸಿವಾss.. ಸಿವ ಸಿವಾss..

ವಂದು ಗಳಿಗೆ ಆತು, ಯರಡು ಗಳಿಗೆ ಆತು, ಮೂರನೆ ಗಳಿಗೆ ಮೂಡುತ್ತಲೆ ಗುರ್ರಪ್ಪ, ಮತ್ತವನ ಸಂಗಡಿಗರು ಚಂಡನ ಮುಂಡದಿಂದ ರುಂಡವನ್ನು ಬೇರುಪಡಿಸಿದೊಡನೆ ಚಿಲ್ಲೆಂದು ಚಿಮ್ಮಿದ ರಗುತವು ಹರಿತಾ ಹರಿತಾ ಸದರಿ ಕುದುರೆಪಟ್ಟಣದ ತುಂಬೆಲ್ಲ ತುಳುಕಾಡಿ ಮುಂದಕ ಪಾದಯಾತ್ರೆಕಯ್ಯಿಕೊಂಡು ಸಮುದ್ರಯಾನ, ವಾಯುಯಾನ ಮಾಡುತ ಕುಂಪಣಿ ಸರಕಾರದ ಕಾರಾಸ್ಥಾನವಾದ ಬ್ರಿಟನ್ನನ್ನು ಪ್ರವೇಶ ಮಾಡಿತಂತೆ. ಬಂಕಿಂಗ್ಯಾಂ ಅರಮನೆಯ ಗೋಡೆಗಳಿಗೆ ಅಪ್ಪಳಿಸಿ ವಳನುಗ್ಗಿ ರಾಜರಾಣಿಯರ ಪಲ್ಲಂಗ ಗಳನ್ನಲ್ಲಾಡಿಸಿತಂತೆ. ಅಷ್ಟಕ್ಕೂ ತಮಣಿಯಾಗದೆ ಮತ್ತ ಸಮುದ್ರಯಾನ ಕಯ್ಯಿಕೊಂಡು ಖಂಡಾಂತರಗಳನ್ನು ದಾಟಿತಂತೆ. ಯಿರಲಿ ಅದೆಲ್ಲ ಯಿತ್ತ.. ಆ ಕೂಡಲೆ ಯಚ್ಚತ್ತ ವಕ್ಕಲು ಮಂದಿ ಚಂಡನ ರುಂಡವನ್ನು ಮಂಟಪದ ಯದುರಲ್ಲಿ ಪ್ರತಿಷಾ«ಪಿಸದಿದ್ದಲ್ಲಿ, ನೆಣ ಸುರಿದು ಹಣತೆ ಮಾಡದಿದ್ದಲ್ಲಿ, ಕರುಳು ಹೊಸೆದು ಬತ್ತಿ ಮಾಡದಿದ್ದಲ್ಲಿ, ತಮ್ಮ ಯಿಚ್ಚಾಸಗುತಿಯ ಮಂಥನದಿಂದ ಬೆಂಕಿಮಾಡಿ ಮುಡಿಸದಿದ್ದಲ್ಲಿ.. ಮುಡಿಸಿ ಬೆಳಕು ಮಾಡದಿದ್ದಲ್ಲಿ.. ಆದಿಸಗುತಿಯ ರಣದ್ರುಸ್ಟಿಯು ಭೂಮಂಡಲವನ್ನು ಸುಟ್ಟು ಭಸುಮ ಮಾಡದೆ ಯಿರುತ್ತಿರಲಿಲ್ಲವಂತೆ. ತಾಯಿಯ ಹಲವು ಯೋಜನದುದ್ದದ ನಾಲಗೆ ಸಚರಾಚರಗಳನ್ನು ನಾಕದೆ ಯಿರುತ್ತಿರಲಿಲ್ಲವಂತೆ. ಹಂಗss ತಮಣಿಗೊಂಡು ಚಿತ್‌ಜ್ಯೋತಿಯು ಬೆಳಕಿನ ಅಕ್ಷಯ ಪಾತ್ರೆಯಾಯಿತು ಯಂಬಲ್ಲಿಗೆ ಸಿವಸಂಕರ ಮಾದೇವಾss..

ಆಗ್ಗೆ ಲಕ್ಷಾಲಕ್ಷಾದಿ ಮಂದಿ ಬಾಯೊಳಗ ಜಗದಂಬೆಯಂಬ ಚತುರ್ಥಾಕ್ಕರ ವ್ಯಾಪ್ತಿಯ ಮಂತ್ರಬಿಟ್ಟರೆ ಯಿನ್ನೊಂದು ಸಬುಧವಿರಲಿಲ್ಲ. ವರಣನಕ ನಿಲುಕದಿದ್ದ ಆ ದ್ರುಸ್ಯಾವಳಿಯನ್ನು ಗಬಗಬಾಂತ ತಮ ತಮ್ಮ ಕಣ್ಣುಗಳಿಂದ ತಿಂಬಲಾರಂಭಿಸಿದರು. ನಿಂತು ನಿಂತ ಜೆಗೇವುಗಳ ಮ್ಯಾಲ ಕಡಕೊಂಡು ಬೀಳತೊಡಗಿದರು. ಮಂಟಪದ ತುಟ್ಟ ತುದಿಯಿಂದ.. ಭೋ ಪರಾಕ್ ಯಂಬುದಷ್ಟೇ ಕೇಳಿಬಂತೇ ಹೊರತು ಅದರ ಹಿಂದಲ ವಾಕ್ಯಗಳು ಕೇಳಿಬರಲಿಲ್ಲ. ಕೊಡಲಿಗಳು ನಕ್ಕಾವು.. ಸುಡುಗಾಡುಗಳು ಅತ್ತಾವು ಯಂಬ

ಕಾರಣಿಕವನ್ನು ತಮಗ ತಾವ ಚರ್ಚಿಸಿ ನಿಗದಿ ಮಾಡಿಕೊಂಡರು. ಅದರ ವಕ್ಕಣಿಕೆಯುಳ್ಳ ಜಾಬುಗಳನ್ನು ತಮ ತಮ್ಮ ಕಾಲುಗಳಿಗೆ ಕಟ್ಟಿಸಿಕೊಂಡಂಥ ಸಾವುರಾರು ಅಂಚೆಗಾರ ಪಾರಿವಾಳಗಳು ಮುಗಿಲ ತುಂಬೆಲ್ಲ ಗಗನಚುಕ್ಕಿ ಭರಚುಕ್ಕಿಗಳಂತೆ ಹರಡಿದವು.. ಚಿತ್‌ಜ್ಯೋತಿಯ ಬೆಳಕಿನ ಪರಸಾದವನ್ನು ತಮ ತಮ್ಮ ಹಣತೆಗಳಿಗೆ ಹಚ್ಚಿಕೊಂಡೊಯ್ಯಲಾರಂಭಿಸಿದರು ದೂರದೂರ ದೂರುಗಳಿಂದ ಬಂದಿದ್ದ ಭಕುತಾದಿಮಂದಿ.. ರಗುತಮಿಸ್ರಣದ ಮ್ರುತ್ತಿಕೆ, ಪತ್ರೆಪುಷ್ಪದ ಚೂರಗಳಂತೂ ಸಿಕ್ಕವರಿಗೆ ಸಿವಲಿಂಗಗಳಾದವು, ತಮ ತಮ್ಮ ಹೆಣುದೇವತೆಗಳನ್ನು ತಮ ತಮ್ಮ ಸೊಗ್ರಾಮಗಳಿಗೆ ಕರೆದೊಯ್ಯ ಲಾರಂಭಿಸಿದರು, ಆಯಾ ವೂರು ಗ್ರಾಮುಗಳ ಪಟ್ಟಸೋಮಿಗಳು.. ಕೆಲವೂರುಗಳ ದೇವತೆಗಳನ್ನಂತೂ ಬಲು ಜುಲುಮಿಯಿಂದಲ್ಲಿಂದ ಸಾಗಿಸುತಲಿದ್ದುದಂತೂ ನೋಡುಗರ ಕರುಳಿಗೆ ಚುರುಕು ಮುಟ್ಟಿಸುವ ದ್ರುಸ್ಯವಾಗಿತ್ತು ಸಿವನೇss.. ಅಯ್ತಿಹಾಸಿಕ ಪರಿಶೆಗೆ ನಾಂದಿ ಹಾಡಲಕಾಗಿ ಸಾವುರು ಗುಡಾರಗಳು ಅಲ್ಲಲ್ಲಿ ಚಿಗಿಯುಲಕತೊಡಗಿದ್ದವು ಸಿವನೇss.. ಅಂತೂ ತಾಯಿ ಹೊಳೆಗೆ ಹೊಂಟದ್ದಾಯಿತಲ್ಲಾ.. ಅನುವಾದ ಬಲಿಕೊಟ್ಟದ್ದಾಯಿತಲ್ಲಾ.. ಚಂಡನ ನೆತ್ತಿ ಮ್ಯಾಲ ವುರಿತಿರೋ ಚಿತ್‌ಜ್ಯೋತಿ ಆಕಾಸಮಾರ‍್ಗದಗುಂಟ ಪಯಣ ಹೊಂಡುವ ಮೊದಲೆ ನಯವೇದ್ಯ ಮಾಡಲಕಂತ ಸುತ್ತನ್ನಾಕಡೇಕ ತಮ ತಮ್ಮ ಸವಾರಿ ಬಂಡಿಗಳೊಡನೆ ಹರಿದು ಹಂಚಿಹೋಗಿದ್ದ ಭಕುತಾದಿ ಮಂದಿ ತಾವೆಲ್ಲೆಲ್ಲಿ ಯಿಳಕೊಂಡಿದ್ದರೋ ಅಲ್ಲಲ್ಲಿ ವಲೆ ಹೂಡಲಾರಂಭಿಸಿದರು. ತಾಯೀ ಅನಕಂತ ಬೆಂಕಿ ಮುಡಿಸುವುದು, ಮೇಕೆ, ಟಗರು, ಕುರಿಗಳನ್ನು ಬಗೆದು ಕಣ್ಣೆ ಕಣ್ಣೆ ಮಾಮಸ ತೆಗೆಯುವುದು, ಸನ್ನಾಯ ರುಬ್ಬುವುದು ಮಾಡಲಾರಂಭಿಸಿದರು. ಅಲ್ಲಲ್ಲಿ ಭಜನೆಗಳನ್ನೇನು ಕೇಳುತ್ತೀ? ಲಾವಣಿ ಗೀಗೀ ಪದಗಳನ್ನೇನು ಕೇಳುತ್ತೀ? ಡೊಂಬರರಾಟಗಳನ್ನೇನು ಕೇಳುತ್ತೀ? ಹಗಲು ವಯಾಸಗಾರರ ಆಟಗಳನ್ನೇನು ಕೇಳುತ್ತೀ? ಸುರುಸುರುಬತ್ತಿಗಳನ್ನು ಹಚ್ಚುವುದನ್ನೇನು ಕೇಳುತ್ತೀ? ಕೋಲಾಟಗಳನ್ನೇನು ಕೇಳುತ್ತೀ? ಡಪ್ಪಿನಾಟಗಳನ್ನೇನು ಕೇಳುತ್ತೀ? ಪರಸಾದ ಸೇವಿಸಲಕ ಯಾರು ಕರೀತಾರ? ಸೇದಲಕ ತಂಬಾಕು ಯಾರು ಕೊಡುತಾರ? ಕುಡಿಯಲಕ ಮಗಿ ಮಗಿ ಹೆಂಡವನ್ಯಾರು ಕೊಡುತಾರ ಅಂತ ಸಾದು ಸಂತ ಮಂದಿ ಅರ‍್ದಂಬರ‍್ದ ನಶೇಲಿ ಅತಡ್ಡಾಡಲಕ ಹತ್ತಿದ್ದೇನು ಕೇಳುತ್ತೀ? ನೋಡಲಕ ಸಿವಾ ಕೊಟ್ಟ ಯರಡೇ ಯರಡು ಕಣ್ಣುಗಳು ಸಾಕಾದಾವ? ಕೇಳಲಕ ಸಿವಾ ಕೊಟ್ಟ ಯರಡೇ ಯರಡು

ಕಿವಿಗಳು ಸಾಕಾದಾವಾss..

ಅತ್ತ ಮಾಯಾಚಾರಿ ಮಂಟಪದೊಳಗ ತಾಯಿ ಯಷ್ಟು ಹೊತ್ತೂಂತ ಯಿದ್ದಾಳು.. ನೋಡೋದು ನೋಡಿದಳು, ಕೇಳೋದು ಕೇಳಿದಳು, ಕೊಡೋದನ್ನು ಕೊಟ್ಟಳು.. ಆಕೆಗೂ ದಣುವು ಅಂಬುವುದು ಯಿರುತತಲ್ಲಾ? ತಾನು ಯಿಸ್ರಾಂತಿ ತಗೊಳ್ಳೋದೆಲ್ಲಿ? ಖಾಯಮ್ಮಾಗಿ ನೆಲಗೊಳ್ಳೋದೆಲ್ಲಿ? ಯಂದು ಪ್ರಸ್ನಾರ್ಥವಾಗಿ ಕುಂತೇಸಿಂದಲೇ ಸುತ್ತನಾಕಡೇಕ ದ್ರುಸ್ಟಿ ಬೀರಿದಳು.. ಸಾಲುಸಾಲಾಗಿ ಮಾಳಿಗೆ ಮನೆಗಳು, ವುಪ್ಪರಿಗೆ ಮನೆಗಳು, ತರಾವರಿ ಗುಡಿಸಿಲುಗಳು ಗೋಚರವಾಗಲಕ ಹತ್ತಿದವು.. ತಾನೀಗಾಗಲೇ ತನ್ನ ಪಯ್ಕಿ ಪಾವಲಿ ಭಾಗವನ್ನು ಭಕುತಾದಿ ಮಂದಿಯೊಳಗ ಮೊಕ್ಕಾಂ ಹೂಡಿಯಾಗಿರುವುದು, ಆಶ್ರಯ ಬೇಕಿರುವುದು ಮೂರು ಪಾವಲಿ ಭಾಗಕ್ಕೆ ಮಾತ್ರ..

ಮಂಟಪದೊಳಗ ಮೆಲುಮೆಲ್ಲಗ ಯದ್ದ ಅರಮಲ್ಲಿ ಲಟಲಟ ಅಂತ ಮಯ್ಯ ಮುರುದಳು. ದಣುವರಿಯದ ಸಿಸುಮಗ ಹಂಪಜ್ಜನ ಕಡೇಕ ನೋಡುತ ವಂದೆಸಳು ಮಲ್ಲಿಗೆ ಗಾತುರದ ಮುಗುಳು ನಗೆ ಚೆಲ್ಲಿದಳು. ನೀನು ವುಳುಕೊಳ್ಳಲಕ ಬಿಡದಿ ಯಲ್ಲಿ ಮಾಡಬೇಕು ತಾಯಿ ಯಂದವಜ್ಜ ಕೇಳಿದ್ದಕ್ಕೆ ಆಕೆ ಜವಾಬು ನೀಡಲಿಲ್ಲ. ಅರರೆ! ತಾಯಿ ವಂದು ಮೆಟ್ಟಿಲು ಯಿಳಿದೇಬಿಟ್ಟಳು, ಜಯನ್ನಾಮ ಪಾರೊತೀ ಪತಿ ಹರಹರ ಮಾದೇವsss.. ವಂದೊಂದು ಮೆಟ್ಟಲಿಳಿಯೂತ, ದಿಕ್ಪಾಲಕರೊಬ್ಬೊಬ್ಬರ ಕ್ಷೇಮ ಸಮಾಚಾರ ಯಿಚಾರಸೂತ.. ಬಯಲ ಅಣು ಅಣುವನ್ನು ಪುಳಕಗೊಳಿಸೂತ ಯಿಳಿದ ಮಾಮಾಯಿ ಮತ್ತೆ ಸಿವ್ಮಾಸನಾ ರೂಢೆಯಾದೊಡನೆ ಮಂಗಳವಾದ್ಯಗಳು ಮೊಳಗಿದವು, ದೀವಟಿಗೆಗಳು ವುರಿದವು, ಮಡಿವಾಳರು ನೆಲದ ಮ್ಯಾಲ ಹಾಸುತಲಿದ್ದ ಜರತಾರಿ ಪೀತಾಂಬರಿ ಸೀರೆಗಳ ವ್ಯಾಲ ಮಾತಾಯಿ ತನ್ನ ಬಿಡದಿ ಮನೆ ಹುಡುಕಿಕೊಂಡು ದಿಬ್ಬಣ ಹೊಂಟಳು ಸಿವನೇ..

ಯೀರೇಳು ಲೋಕಗಳನ್ನು ತನ್ನ ವಡಲೊಳಗಿಟ್ಟುಕೊಂಡು ಪೊರೆಯುತ್ತಿರುವ ಲೋಕಮಾತೆ ತಾನು ನಿರಂತರ ವಾಸ ಮಾಡಲಕೆಂದು ಮನೆ ಹುಡುಕುತವಳೆಯಂಬ ವರ್ತಮಾನವು ಬಿರುಬಿರನೆ ಪಟ್ಟಣದ ತುಂಬೆಲ್ಲ ಹಬ್ಬಿತು. ಅಂಥ ಪರಿಶೆ ಸಡಗರವನ್ನು ಬದಿಗೊತ್ತಿ ವಂದೊಂದು ಮನೆಯವರು ನಮ್ಮ ಮನೆಯೊಳಗ ತಾಯಿ ನೆಲಸಿದರ ಯಷ್ಟು ಚನ್ನ? ತಮ್ಮ ಮನೆಯೊಳಗ ನೆಲಸಿದರ ಯಷ್ಟು ಚನ್ನ ಯಂದು ವುದ್ಗರಿಸಿದರು.. ಆಕೆ ಯಿಲ್ಲಿಗೆ ಬರುವ

ಮೊದಲೇ.. ತಮ ತಮ್ಮ ಮನೆಗಳನ್ನು ಲಗುಬಗೆಯಿಂದ ಪವುರೋರಣ ಮಾಡಿ ತಾಯಿಂಯು ಆಗಮನಕ್ಕಾಗಿ ತವು ತವ್ಮು ಮುನೆಗಳ ಮುಂದೆ ಭಕುತಿಪೂರುವಕವಾಗಿ ನಿಂತರು..

ನೆಲೆಗಾಗಿ ಅರಸುತ್ತ ಹೊಂಟಂಥ ದಿಬ್ಬಣವು ವಂದೊಂದು ಮನೆ ಮುಂದೆ ನಿಲ್ಲುವುದು.. ಪಿಳಿ ಪಿಳಿ ನೋಡುವುದು.. ಮತ್ತೆ ಮುಂದೆ ಚಲಿಸುವುದು ಮಾಡತೊಡಗಿತು ಸಿವನೆ, ಪಟ್ಟಣಸೋಮಿಗಳು.. ತಾಯೇ ಯಿದು ಅಯ್ದಂಕಣದ ಮನೆ, ಯಿದು ಹತ್ತಂಕಣದ ಮನೆ.. ಯಿದು ವುಪ್ಪರಿಗೆ ಮನೆ ಯಂದು ಪರಿಚಯ ಮಾಡಿಕೊಡುತಲಿದ್ದುದೇನು? ತಾಯೇ ನಮ್ಮ ಮನೆಯೊಳಗ ನೆಲಸು.. ತಮ್ಮ ಮುನೆಂಯೊಳಗ ನೆಲಸು ಯುಂದಾಂಯಾಂಯು ಮುನೆಂಯುವರು ಅಂಗಲಾಚುತಲಿದ್ದುದೇನು? ಆದರೆ ತಾಯಿ ಯಿನ್ನೇನು ನೆಲಸಿ ಬಿಟ್ಟಳು ಯಂಬುವಷ್ಟರಲ್ಲಿ ಮತ್ತೆ ದಿಬ್ಬಣವು ಮುಂದ ಮುಂದಕ ಚಲಿಸುತಲಿದ್ದುದೇನು?

ತಾಯಿ ಮನೆ ಹುಡುಕುತಾss ಹುಡುಕುತಾ ಥಳಗೇರಿ, ವಕ್ಕಲುಗೇರಿ, ಹೊಲಗೇರಿ, ಮಾದಿಗ್ಗೇರಿ, ಕೊರಚರಗೇರಿ, ಡೊಂಬರಗೇರಿ, ಡೊಕ್ಕಲೋರಗೇರಿ, ಚಲವಾದಿಗ್ಗೇರಿ, ನೇಕಾರಗೇರಿ, ಕುಂಬಾರಗೇರಿ, ಸೂಳ್ಯಾರಗೇರಿ, ಕಾಟಿಗ್ಗೇರಿಯೇ ಪಟ್ಟಣದ ಛಪ್ಪನ್ನಾರುಗೇರಿಗಳನ್ನೆಲ್ಲೆಲ್ಲಾ ತಿರುಗಾಡಿದಳು.. ಸೋಸ್ಯಾಡಿದಳು. ಆಕೆಗೆ ಆ ಯಾವೊಂದು, ಗುಡಿಸಿಲಾಗಲೀ ಪಸಂದು ಬರಲಿಲ್ಲ.. ಅಲ್ಲಿಂದ ಪಿರಂಗ್ಯೋರಮೋಣಿಗುಂಟ, ದವುಳೇರ ಮೋಣಿಗುಂಟ ತಟಾದು ಬಂದು ಅರಮನೆಯ ಮುಂದ ಯದೆ ಸೆಟೆಸಿ ನಿಂತಳು. ಅರಮನೆಯ ಕಡೇಕ ದಿಟ್ಟಿಸಿ ನೋಡುತಿರುವಾಗ ಆ ಭಾರೀ ಮನೆಯ ಕಲ್ಲುಕಲ್ಲೊಳಗಿದ್ದ, ತೊಲೆ ಜಂತಿಗಳ ಸಂದೇಲಿದ್ದ, ಗಾರೆ ಗಾರೆ ನಡುವೆಯಿದ್ದ, ದೂಳು ದುಮ್ಮಾರದೊಳಗಿದ್ದ, ಕಂಭ ಕಂಭಗಳ ವಳಗಿದ್ದ, ಕಿಟಕಿ ಬಾಗಿಲ ಕೀಂ ಕಿಟಾರೆಂಬ ಸಬುಧದೊಳಗಿದ್ದ, ಪಲ್ಲಂಗಗಳ ಕೀರು ಕೀರೆಂಬ ನಾದದೊಳಗಿದ್ದ ಅರಮನೆಯವ್ವ ಅಗೋಚರ ಸ್ಥಿತೀಲಿ ಮೋಡೋಡಿ ಬಂದು ತಡೆಯಲೆತ್ನಿಸಿದಳು. ಆದರ ರಾಜಮಾತೆ ಭಯ್ರಮಾಂಬೆಯಾಗಲೀ, ವಂದೊಂದು ಭವಂತಿಯೊಳಗ ಅವಿಚಿಟ್ಟುಕೊಂಡಿದ್ದ ರಾಜಪರಿವಾರದ ಯಾರೊಬ್ಬರಾಗಲೀ ವಂದು ಹೆಜ್ಜೆ ಮುಂದಕ ಬಂದು ತಾಯಿಯ ದರುಸಣವನ್ನು ಪಡೆದುಕೊಳ್ಳಲಿಲ್ಲ. ಬಾರವ್ವ, ಕುಂತಗಳ್ಳವ್ವಾ ಯಂದು ನೆಳ್ಳುಮಾಡಲಿಲ್ಲ.. ಕುಡಿಯಲಕಂತ ವಂದು ಲೋಟ್ಯಾ ನೀರು ಕೊಡಲಿಲ್ಲ..

ವಂದು ಗಳಿಗೆ ಆತೂss ಯರಡು ಗಳಿಗೆ ಆತೂss ಮೂರನೇ

ಗಳಿಗೆಯೂ ಆತೂss ತಾಯಿ ಯಿದ್ದಕ್ಕಿದ್ದಂತೆ ನೋಡು ನೋಡುತ್ತಿದ್ದಂತೆ ಬಿರುಗಾಳಿಯೋಪಾದಿಯಲ್ಲಿ ಅರಮನೆಯನ್ನು ಪ್ರವೇಸ ಮಾಡಿಬಿಟ್ಟಳು ಸಿವನೇ.. ಯಿದಾದ ಮರುಗಳಿಗೀಲೆ ರಾಜಮಾತೆ ಭಯ್ರಮಾಂಬೆ ಸೇರಿದಂತೆ ರಾಜಪರಿವಾರದ ಸರುವನ್ನೊಂದು ಮಂದಿ ಗಂಟುಮೂಟೆ ಕಟ್ಟಿಕೊಂಡು ಅರಮನೆಯಿಂದ ಮುಂದಿದ್ದ ಅಂಗಳಕ ಪುತುಪುತನೆ ವುದುರಿ ಯಿದು ಅನ್ಯಾಯ ಅಕ್ರಮ ಯಂದು ತಮ ತಮ್ಮ ಬಾಯಿಗಳನು ಬಡಕೊಳ್ಳತೊಡಗಿದರು ಸಿವನೇ.. ತಾಯಿಯ ಯೀ ಪವಾಡ ಕ್ರುತ್ಯ ಕಿವಿಗೆ ಬಿದ್ದೊಡನೆ ಪರಿಶೆಗೆ ಪರಿಶೆಯೇ ಕಡ ಬಡ ಮೋಡೋಡಿ ಅರಮನೆ ಸುತಮುತ್ತ ನೆರೆದು ಕುದುರೆಡವ ದೊರೆಸಾನಿ.. ನಿನಗಾರು ಸರಿ ಕಾಣೆ ಸರಿಯಂದವರ ಹಲ್ಲು ಮುರಿ ಭೋ ಪರಾಕ್ ಯಂದು ನಿನಾದ ಮಾಡಲಾರಂಭಿಸಿದರು ಸಿವನss

ತಾಯಿ ಸಾಂಬವಿ ಸಿಮ್ಮಾಸನಾರೂಢೆಯಾದದ್ದು ಫಲಾನ ಮೂರ್ತವಾದರ ತಾಯಿ ಪುವ್ವುಲ ಅರಸುಮನತನದ ಮಂದಿ ವಡನಾಡಿದ್ದ ಯಿಪ್ಪಗಲ ಅಷ್ಟುದ್ದದ ಗಾರೆಗಚ್ಚು, ಭವಂತಿ, ವುಪ್ಪರಿಗೆಗಳಿದ್ದ ಅರಮನೆಯನ್ನು ಕಬಜಾ ಮಾಡಿಕೊಡಿದ್ದು ಫಲಾನ ಸಂವತ್ಸರ, ಫಲಾನ ಮಾಸ, ಫಲಾನ ನಕ್ಷತ್ರದಲ್ಲಂದು ಯಂಬಲ್ಲಿಗೆ ಸಿವಸಂಕರ ಮಾದೇವಾss.. ಜಯಮಂಗಳಂ ಸಿವಸಂಕರ ಮಾದೇವಾss.. ನಿತ್ಯಸುಭಮಂಗಳಂ ಸಿವಸಂಕರ ಮಾದೇವಾss.

# ಪರ್ವ : ಮೂರು

ತಾಯಿ ಸಾಂಬವಿಯ ಹೆಸರನ ಹೇಳಿಕೊಂಡು ಗುಡಿಹಿಂದಲ ಮೂಳೆ ಮೋಬಯ್ಯನು ಸ್ತ್ರೀಲಿಂಗ ವಾಚಕಕ್ಕೆ ಸೋಪ್ತಿಯಾಗಿ, ಮುಪ್ಪಾನು ಮುದುಕರ ದಂಡು ದವಲತ್ತು ಸಮೇತ ನಿವಸಿಸುತ್ತಿರುವಾಗ್ಗೆ.. ಅರಮನೆಯೊಳಗೆ ದೇವಳಮೋ, ದೇವಳದೊಳಗ ಅರಮನೆಯೋss.. ಜನ ಆ ನಸುಗುನ್ನಿ ಕಾಯಿಯಂಥ ಗುಡಿ ಹಿಂದಲ ಮೂಳೆಮೋಬಯ್ಯನನ್ನೇ ಮಾಮಾಯಿ ಯಂದು ತಿಳಕೊಂಡು ದರುಸನ ಪಡಕೊಳ್ಳುತಾ ಹೋಗುವ ಸಲುವಾಗಿ ಯಿರುವೆಯೋಪಾದಿಯಲ್ಲಿ ಕುದುರೆಡವು ಪಟ್ಟಣಕ ಬರತೊಡಗಿದರು. ಯಲ್ಲಿ ಬೇಕೆಂದರಲ್ಲಿ ಹಾದಿಗಳು ನಾನಾ ಯಿದದಲ್ಲಿ ಮೂಡಲಾರಂಭಿಸಿದವು. ಅವ್ವನ ದೆಸೆಯಿಂದಾಗಿ ಕುದುರೆಡವು ಪಟ್ಟಣವು ಪ್ರತಿಯೊಬ್ಬರ ನಾಲಗೆ ಮ್ಯಾಲ ತಾನೇ ತಾನಾಗಿ ಯಿಜ್ರುಂಭಿಸತೊಡಗಿತು. ಭಕುತಾದಿ ಮಂದಿಯ ಯೋಗ ಛೇಮಗಳನ್ನು ಪರಾಂಬರಿಕೆ ಮಾಡುವ ಸಲುವಾಗಿ ಅಲ್ಲಿ ಏರುಪಟ್ಟಂಥ ಸೊಯಂ ಸೇವೆಗಳು ನಾನಾ ಯಿಧವಾಗಿದ್ದವು. ವುಂಬಲಕಾಗಲೀ, ಕುಡಿಯಲಕಾಗಲೀ, ಆಯಾಸ ಪರಿಹಾರಾರ್ತವಾಗಿ ಕುಂತು ಮಲಗಲಕಾಗಲೀ ಯಾವುದೇ ಹರಕತ್ತು ಯಿರಲಿಲ್ಲ....

ಬಾಯೊಳಗೆ ಬೊಟ್ಟಿಟ್ಟರ ಕಡಿಯಲಕ ಬಾರದಾಂಗಿದ್ದ.. ದಯ್ವಿಕ ಅಯ್ಲು ಬಡಕೊಂಡವನಂತೆ ವರ್ತನ ಮಾಡುತಲಿದ್ದ ಮೋಬಯ್ಯ ರೂಪೀ ಸಾಚಾತ್ ಸಾಂಬವಿಗೆ ವರ್ತಮಾನದ ನಯನಾಜೂಕಿನ ಮೋನಾಮ ಕಲಿಸೋ ಸಲುವಾಗಿ.. ಸಾಂಬವಿಯಂಬುವ ಮೂರಕ್ಕರ ಸಬುಧವನ್ನು ಯಲ್ಲಿ ಬೇಕೆಂದರಲ್ಲಿ ನಾಟಿ ಮಾಡುವ ಸಲುವಾಗಿ.. ಹಂಪಜ್ಜನು ಟೊಂಕ ಕಟ್ಟಿ ಬಿಟ್ಟಿದ್ದನು. ಆತ ಹೇಳಿದಕ್ಕೆಲ್ಲಾ ತಲೆ ಅಲ್ಲಾಡಿಸುತಲಿದ್ದ ಕವಲೆತ್ತುಗಳು ವಂದs ಯರಡಾss.. ಜಡೆಪ್ಪ ತಾತ, ಕಾಡುಗೊಲ್ಲ ರೀರಯ್ಯ, ಗೊಂಜಾಡಲರ ಅಡವೆಜ್ಜ.. ಹಿಂಗs ಪಟ್ಟಿ ಬೆಳಕೋತ ಹೋತಯ್ತೆ.. ಆ ವಬ್ಬೊಬ್ಬರ ಹಿಂದಿದ್ದ ಮುದೇರನು ಲೆಕ್ಕ ಹಾಕುತ್ತ ಹೋದಲ್ಲಿ.. ಸಿವ ಸಿವಾ.. ನೋಡಿದೋರು ಯಿದೇನು ಅರೆಮನೆಯೋ.. ಸಾಧು ಸಂತ

ಅವಧೂತ ಪರಂಪರೆಯ ಮುದೇರಿಂದಲೇ ತುಂಬಿರುವ ಗುರುಮನೆಯೋ ಯಂದಂದುಕೊಳ್ಳದಿರರು.. ಅವರು ಅಂದಾಡುತಲಿದ್ದದು ಯಿ ಕಾಲದ ಭಾಷೆಯಾಗಿರಲಿಲ್ಲ.. ಅವರು ಮಾಡುತಲಿದ್ದುದು ಯಿ ಕಾಲದ ನಡಾವಳಿಯಾಗಿರಲಿಲ್ಲ.. ವರ್ತಮಾನ ಪೀಠದ ಮ್ಯಾಲ ಭೂತಕಾಲವನ್ನು ಕುಂಡರಿಸಿದ್ದರೋ.. ಭೂತಕಾಲಕ್ಕೆ ವರ್ತಮಾನವನ್ನೇ ನಯುವೇದ್ಯೆ ಮಾಡುತ್ತಿದ್ದರೋ.. ಭೂತಕಾಲದ ರೀತಿ ರಿವಾಜುಗಳನ್ನಳವಡಿಸಿಕೊಂಡು ಬದುಕಬೇಕೆಂದು ಭಕುತಾದಿ ಮಂದಿಗೆ ಜಬರದಸ್ತೀಲೆ ಹೇಳುತಲಿದ್ದದೋ ಅಥವಾ ವರ್ತಮಾನವನ್ನು ಬದುಕೀ ಬದುಕೀ ರೋಸಿಗೊಂಡಿದ್ದ ಭಕುತಾದಿ ಮಂದಿಯೇ ಭೂತಕಾಲವನ್ನು ಬದುಕಲಕೆಂದು ಯಿಚ್ಛೆ ಪಟ್ಟಿತ್ತೋ.. ವಟ್ಟಿನಲ್ಲಿ....

ನಾಸ್ತಿಕರನ್ನು ಆಸ್ತೀಕರನ್ನಾಗಿ ಮಾಡುವ ತಾಕತ್ತೊಂದಿದ್ದರ ಆಗತದಾ? ಆದರೆ ಅರಮನೆಯ ಗೋಡೆಗಳು ಮಳ್ಳಗೆ ಬಂದು ಯತ್ತುತಲಿದ್ದ ಪ್ರಸ್ನೆಗಳಿಗೆ ವುತ್ತರ ಕೊಡುವ ತಾಕತ್ತೂ ತನಗಿರದಿದ್ದರೆ ಆತಾದ? ಅಂಥದ್ದೊಂದು ಪ್ರಸಂಗವು ಬಂದೇ ಬಿಟ್ಟಿತು. ಅದಾವುದೆಂದರೆ....

ಯಲ್ಲಿತ್ತೋ? ಹೆಂಗಿತ್ತೋ? ಯದರಾಗಿಂದ ವಡಮೂಡಿತ್ತೋ? ಬಂದಂಥ ಮುಪ್ಪಾನು ಮುದೇದನ್ನು ಅದುವರೆಗೆ ಯಾರೊಬ್ಬರೂ ನೋಡಿದುದು ಯಿರಲಿಲ್ಲ.. ಖೂನ ಗುರುತು ಹಿಡಿದು ಮಾತನಾಡಿ ಸೋರಿರಲಿಲ್ಲ.. ಅದರ ಆಕಾರ ಹೆಂಗಿತ್ತೆಂದರ ಹಂಗಿತ್ತು....

ಬೀಳೇಪತ್ತಲ ವುಟುಕೊಂಡಿದ್ದ ಅದರ ಹಣೆ ಮೊದೆಮೊದೆ ಹುಬ್ಬಿನ ಮ್ಯಾಲ, ಹುಬ್ಬು ಗಲ್ಲದ ಮ್ಯಾಲ, ಮೊಲೆಗಳು ಹೊಟ್ಟೆಯ ಮ್ಯಾಲೆ, ಹೊಟ್ಟೆ ತೊಡೆಗಳ ಮೊಣಕಾಲ ಮ್ಯಾಲೆ ಯಿಳಿ ಬಿದ್ದಿದ್ದವು. ಯಲುಬೆಲುಬು ಹೊಂಟು ಆರುಮೊಳದೆತ್ತರದ ಜೋಟಿಕೋಲಿನಂಗಿದ್ದ ಆಕೆ ನೋಡುವವರನ್ನು ಬೆಕ್ಕಸಬೆರಗಾಗಿ ಸುತ್ತ ಮುಂದ ಮುಂದಕ್ಕೊಂದೊಂದೆ ಹೆಜ್ಜೆಯೆನಿಕ್ಕುತಲಿತ್ತು. ದಮ್ಮಡಿ ತೂಕವಿದ್ದ ಅದರ ಹೆಜ್ಜೆ ಗುರುತು ಭೂಮಿ ಮ್ಯಾಲ ಮೂಡುತಯಿರಲಿಲ್ಲ.. ಪಾರುಪತ್ಯೆಗಾರನಾಗಿದ್ದ ಅಡುವೆಜ್ಜನು ಯವ್ವಾ ಬೇ ಮುದಕೀ.. ಯ್ಯೋಯ್ ಮುದುಕೀ.. ರಮ್ವೋಟು ನಿಂತಗ.. ನೀನುದಾರು ಯಂದು ತರುಬಲೆತ್ನವ ಮಾಡಿದ.. ತಡೆಯಲೆಂದು ಬಂದ ಅವರಿವರನ್ನು ಮೋಳು ಮಾಡಿಕೊಂಡು ತುಟಿ ಪಿಟಕ್ಕೆಂಬಂತೆ ಸೀದ ಹೊತಾ ಹೋಗಿ ಅದೇ ತಾನೆ ವುಂಡು ಗಿಂಡು ಯಲಡಕೆ ನಮಲೂತ ಪಲ್ಲಂಗದ ಮ್ಯಾಲ ಮಯ್ನು ಚೆಲ್ಲಿದ್ದ

ಮೋಬಯ್ಯನೆದುರು ನಿಂತಗಂತು.. ಅವಯ್ಯನ ನಖ ಶಿಖಾಂತ ನೋಡಿತು. ಆದರಾವಯ್ಯ ತಿರುಗಿ ಸಹ ನೋಡಲಿಲ್ಲ.. ಕೂಕ ಯಂದೂ ಹೇಳಲಿಲ್ಲ.. “ಯಲಾಯ್ ಮೋಬಯ್ಯನೇ.. ವುಂಡರಮನೆಗೆ ದ್ರೋಆನ ಬಗೆದು ಬಿಟ್ಟೆಯಲ್ಲಾ.. ಅದ್ಯಾವ ಸೇಡಿಟುಕೊಂಡಿದ್ದಿ ಯಿೂ ಅರಮನೆ ವ್ಯಾಲ..” ಅಂತು.. ಕೇಳಿಸಿಕೊಂಡರೂ ಅವಯ್ಯ ಮರು ಜವಾಬು ನೀಡಲಿಲ್ಲ.. ಸಂಚಿ ಮೂಳಿಗದ ಪಿಕದಾನಿಯವನೂ ತನ್ನನ್ನು ಬೇಬಿಷಿ« ಮಾಡುತವನಲ್ಲಾ.. ಯಂಬ ಯಸನದಿಂದ ಕಣ್ಣೊಳಗ ನೀರು ತಂದಕಂತು.. ಆದರೆ ಅದನ ವುದುರಗೊಡಿಸಲಿಲ್ಲ....

ಮೋಬಯ್ಯನನ್ನು ಯೇನು ಮಾಡುವುದೋ ಯಂಬ ಅಂಜಿಕೆಯಿಂದ ಹಂಪಜ್ಜನು ಹಲವರನ ಬೆನ್ನ ಹಿಂದೆ ಯಿಟುಕೊಂಡು ಬಂದನು.. ನೀನ್ಯಾರು ಮುದುಕಿ.. ನೀನ್ಯಾಕ ದುಕ್ಕ ಮಾಡುತೀಯವ್ವಾ.. ಯಂದು ಕೇಳಿದ್ದಕ್ಕದು ಯೀವಯ್ಯನ ಸರೀರದೊಳಗಿರೋ ಸಾಂಬವಿ ಜೋಡಿ ತಾನು ಮಾತಾಡೋದಯ್ತೆ? ಅಂತಂತು. ವಂಭಣ ದಿಗ್ಭ್ರಮೆಗೊಂಡರೂ ಆ ಹಿರೀಕನು ತೋರಗೊಡಲಿಲ್ಲ.. “ಯೀವಯ್ಯನ ಸರೀರದೊಳಗ ತಾಯಿ ವಸ್ತಿಮಾಡಿರೋದು ಖರೇವಯ್ತವ್ವಾ.. ಆದರೆ ಆಕಿ ಹಾದಿ ಬೀದೀಲಿ ಹೋಗೋರ ಜೋಡಿ ಮಾತಾಡಲಕಾಯ್ತುದಾ? ಆಕೆ ಮಾತು ಬ್ಯಾರೆ ಅಲ್ಲ.. ನನ ಮಾತು ಬ್ಯಾರೆ ಅಲ್ಲ.. ಆಕಿ ಪರವಾಗಿ ನಾನು ಜವಾಬು ನೀಡೇನು?” ಯಂದು ಹೇಳಿದ್ದಕ್ಕೆ ವುಳಿಕೇ ಹಿರೀಕರು ಹವುದವುದೆಂದರು.. ಯಿವರವರ ಜೋಡಿ ತಾನು ಮಾತಾಡುವುದೋ? ಬ್ಯಾಡಮೋ ಯಂದನಕಂತದು ಆಟು ದೂರದಲ್ಲಿದ್ದ ಪುವ್ವುಲ ರಾಜರ ಸಿವ್ಮಾಸನ ಕಡೇಕ.. ಮೂಲೆ ಮೂಲೆ ಕಡೇಕ ನೋಡುತ ನಿಟ್ಟುಸಿರುಬಿಟ್ಟಿತು. ಅದರ ಮೇಲು ಮಯ್ಯ ಲಚ್ಚಣ ನೋಡಿದರೆ ವಂದು ವಯಸ್ಸಿನಲ್ಲಿ ಸುಖವಾಗಿ ಬಾಳಿ ಬದುಕಿದ್ದಿರಬೌದೆಂಬುದು ಖರೆ.. ರಾಜಮಾತೆ ಭಯ್ರಮಾಂಬೆಯ ಮುತ್ತಜ್ಜಿ ತಾನಾಗಿದ್ದಿರಬೌದಾ.. ಯಂದೆಂದುಕೊಂಡರು ಅವರಿವರು....

ಕುಂತ್ಗಳ್ಳವ್ವಾ ಯಂದಿದ್ದಕ್ಕೆ ತಾನು ಕೂಡರಲಕ ಬಂದಿಲ್ರಯ್ಯಾ ಅಂತು, ಯಲಡಕೇನಾರ ಹಾಕ್ಕೋ ಅಂದಿದ್ದಕ್ಕೆ ತಾನು ಯಾವ ಸವುಭಾಗ್ಯೇವಿಗೆ ತೊಂಬಲ ನಮಲಲೀ ಅಂತು.. ‘ನೀನ್ಯಾರು? ಯದಕ ಬಂದಿ’ ಅಂತ ಜುಲುಮಿ ಮಾಡಿದ್ದಕ್ಕಾ ಮುದೇದು ‘ನಾನು ಅರಮನೆಯವ್ವಾ.. ಅರಮನೆಯವ್ವ ಅಂದರೆ ನಾನೆ ಕನರಯ್ಯಾ..’ ಯಂದು ಹೇಳಿದೊಡನೆ ಗೊಳ್ಳನೆ ನಗಾಡಿದವರೆಷ್ಟೋ?

"ಯಾಕರಯ್ಯಾ ನಗಾಡಿದಿರಿ.. ಯಿ಼ೂ ಪಿಕದಾನಿ ಹಿಡಿಯೋನ ಸರೀರದೊಳಗ ಸಾಂಬವಿ ವಸ್ತಿ ಮಾಡಿರೋದನು ನಂಬುವ ನೀವು ಯಿ಼ೂ ಅರಮನೆ ನನ್ನಂಥ ಮುದುಕಿ ರೂಪಧಾರಣ ಮಾಡಿದರೆ ಯಾಕ ನಂಬುವಲ್ಲಿರಿ..? ತಿಬ್ಬಳಿಸಿ ನನ್ನss ನೋಡಿದರೆಂದರೆ ನಿಮ್ಮೆದೆಯೊಳಗೆ ಅರಮನೆ ಮೂಡೀತು.. ಅದು ನನ್ನನ್ನss ಹೋಲೀತು.." ಯಂದುದು ಅಂದದ್ದಕ್ಕೆ ಅವರೆಲ್ಲ ಬಾಯಿ ಮ್ಯಾಲ ಬೊಟ್ಟಿಟ್ಟು ಕೊಂಡರು. ಸಾಂಬವಿಯ ಸಿಸುಮಗ ಮೋಬಯ್ಯನ ಕಡೀಕೊಮ್ಮೆ, ಅದರ ಕಡೀಕೊಮ್ಮೆ ನೋಡುತ ನಂಬದಂಗಾದರು.. ನಂಬದಂಗೆ ಯಿರದಾದರು....

ಸದರಿ ಅರಮನೆಯನ್ನು ಯಿದರ ಭವುತಿಕ ಸರೀರ ಹೋಲುವುದಾ, ಯಿಲ್ಲವಾ ಯಂಬಂತೆ ಅವರು ನೋಡುತ್ತಿರಲು....

"ಯಾಕರಯ್ಯಾ.. ನಾನು ಅರಮನೇನ ಹೋಲುತ್ತಿಲ್ಲವಾ? ನನ್ನ ಸರೀರದ ಯಡ ಭಾಗಕ್ಕೆ ಹವಾಮಹಲಂಬುತಾರ.. ಬಲ ಭಾಗಕ್ಕೆ ರಾಜಮಹಲಂಬುತಾರೆ, ಸಿರೋಭಾಗಕ್ಕೆ ವುಪ್ಪರಿಗೆ.. ಮುಂಡ ಭಾಗಕ್ಕೆ ದರಬಾರು ಅಂಬುತಾರೆ.." ಯಂದದು ಹೇಳಲು ಯಲ್ಲಾರು ಅಡಲ್ಲಾದರು.

ನಾಲಕಯ್ದು ಯಕರೆ ಯಿಸ್ತೀರ್ಣದ ಪುರಾತನ ಅರಮನೆಯೇ ತಮ್ಮೆದುರು ಜಗ್ಗಿಸಿ ನುಡಿಯುತ್ತಿರುವಂತೆ ಭಾಸವಾಯಿತೆಲ್ಲರಿಗೆ....

ಅರಮನೆಯವ್ವಾ.. ಅಂಬದ ಯಿರಲಾಗಲಿಲ್ಲ.. ಯಾಕ ಕಣ್ಣಿನ ತೇವ ಮಾಡಿಕೊಂಡಿ ಪೂರುವಿಕಳೇ ಯಂದು ಕೇಳದೆ ಯಿರಲಾಗಲಿಲ್ಲ.

ಮುದೇದು ತನ್ನ ಕಣ್ಣೊಳಗ ಝಳ ತಂದಕಂಡು.. ಯಿವೀಸು ಮಂದಿಯೊಳಗ ಯಾರು ಅಸಲಿಯೋ, ಯಾರು ನಕಲಿಯೋ ನನಗರಿವಿಗ ಬರುತಾಯಿಲ್ಲ.. ಸಾಂಬವಿ ಅದಾಳಂಬುತಾರಿಲ್ಲಿ.. ಅಕೀಗ ನಾನು ಹೇಳುವಾಕೇ ಸಯ್ಯಿ.. ಆಕಿ ಕೇಳಿಸಿಕೊಂಡರೂ ಸಯ್ಯಿ.. ಕೇಳದಿದ್ದರೂ ಸಯ್ಯಿ.. ಅವ್ವಾ ಸಾಂಬವೀ.. ಯಾವ ಅಡ್ಲಾಯಕಂಡು ಅರಮನೇನ ಕಬ್ಜಾ ಮಾಡಿಕೊಂಡಿರುವಿ?.. ಬಂದು ವಂದ್ಸುತ್ತುಂಡೋಗಿದ್ದರ ನಂದೇನು ತಕರಾರ್ತಿರಲಿಲ್ಲ.. ಆದರ ನೀವು ಪುವ್ವುಲ ರಾಜ ವಮುಸದ  ಸಮಸ್ತರನ ಹೊರಗ ಹಾಕಿದ್ದು ನ್ಯಾಯವಾ? ನನ್ ಪುವ್ವುಲ ರಾಜರು ಮಾಡಿರೋ ವುಪಕಾರ ಸ್ಮರಣೆ ನಿನಗುಂಟಾ? ಗುಡೇಕ್ವಾಟೇಲಿ ಪಾರೊತಿದೇವಳ ಕಟ್ಟಿಸಿದಾತ ನಮ ಪೆದಬೊಮನಾಯಕ, ಮಡರಳ್ಳೀಲಿ ಮಡ್ಲಿಸೆವುಡವ್ವನ ಗುಡಿಕಟ್ಟಿಸಿದಾತ ನಮ ಚಿನ ಬೊಮ್ಮಯ

ನಾಯಕ.. ಸಿಡೇಗಲ್ಲಲಿ ಸಿಡ್ಲು ದುರುಗವ್ವನ ಗುಡಿ ಕಟ್ಟಿಸಿದಾತ ನಮ ಮದಕೇರೆಪ್ಪನಾಯಕ.. ಹಲಕುಂದೇಲಿ ರಣಮಾರೆವ್ವನ ಗುಡಿ ಕಟ್ಟಿಸಿದಾತ ನಮ ಹೊನ್ನಪ್ಪಯ ನಾಯಕ.. ಹಿಂಗs ವಂದೊಂದು ಮೂರೊಳಗ ವಂದೊಂದು ಗುಡಿಕಟ್ಟಿಸವರೇ.. ಆಸ್ತೀಕ ಭಾವನ ಮರೆದವರೇ.. ಕೆರೆಕಟ್ಟಿಸವರೇ.. ಬೇಯಿನ ಮರಗಳ ನೆಡುಸವರೇ.. ಮುತ್ತಯ್ದೇರ ವುಡಿ ತುಂಬಿ ಕಳಸವರೇ.. ಹಸಿದವರ ವಡಲಿಗೆ ಬಾನ ಹಾಕವರೇ.. ಹಬ್ಬಹರಿದಿನ ನಿಲ್ಲಿಸಿದೋರಲ್ಲ.. ದೇಹಿ ಅಂತ ಬಂದವರನ ಬರಿಗಯ್ಲಿ ಕಳಿಸಿಲ್ಲ ನಮ ಪುವ್ವುಲ ರಾಜವಮುಸಸ್ಥ ಮಂದಿ ಮಾದೇವಿ.. ಯಿಂಥ ಆಸ್ತೀಕ ಭಾವದ ನನ ಮಕ್ಕಳ ಕುಂಡಿಮ್ಯಾಲ ಬರೆಯಳೆಯೋ ದುರ್ಬುದ್ಧಿ ನಿನಗ್ಯಾಕ ಬಂತೂಂತ.. ನನ ಪುವ್ವುಲ ವಮುಸ್ಥ ಮಂದೀಯ ಸಿಮ್ಮಾಸನ ಕಸಗೊಂಡೀ.. ಅರಮನೇನ ಕಸಗೊಂಡೀ.. ಅವರು.. ಆ ಧರ್ಮಿಷ«ರು ಪದ ಭ್ರಷ್ಟಗೊಂಡು ಕೂಲಿ ನಾಲಿ ಮಾಡಿ ಬದುಕೋದು ನಿನ ಮನಸ್ಸಿಗೆ ವಪ್ಪುವಂಥ ಮಾತೇನವ್ವಾ? ಹಿಂಗss ಮುಂತಾಗಿ ಆ ಮುದೇದರ ಮಾತೊಳಗ ರವುಸ ಆಕ್ರೋಸಗಳು ಸಂಗಮಿಸಿದ್ದವು ಸಿವನೇ....

ಕೇಳುತಾs ಕೇಳುತಾ ಮೋಬಯ್ಯನು ತನ್ನ ಕಾಳರಾತ್ರಿಯಂಥಾ ತುಟಿಗಳ ನಡುವೆ ಬೆಳೆದಿಂಗಳೆಸಳಿನಂಥಾ ಮುಗುಳುನಗೆಯ ರೇಖೆಯನ್ನು ತಂದುಕೊಂಡನು. ಅದಕ್ಕೆ ಭಾಷೆಯ ರೂಪ ಕೊಡುವ ಸಲುವಾಗಿ ಹಂಪಜ್ಜನು ಗಾಳಿಯೊಳಗೆ ಕಯ್ಯಾಡಿಸುತಾ ಯೀ ಪ್ರಕಾರವಾಗಿ ಹೇಳಿದನು....

"ಅರಮನೆಯವ್ವಾ.. ರಾಜರನ್ನಷ್ಟೆ ನನ ಮಕ್ಳೂ.. ನನ ಮಕ್ಳೂ ಅಂಬುತೀಯಲ್ಲಾ.. ಯಿದು ನ್ಯಾಯ ಅಯ್ತಾ.. ಪ್ರಜೆಗಳೂ ನಿನ ಮಕ್ಕಳಲ್ಲವೇನವ್ವಾ?.. ಪ್ರಜೆಗಳಿಲ್ಲದಿದ್ದರೆ ನೀನೆಲ್ಲಿರುತೀ.. ರಾಜರೆಲ್ಲಿರುತಾರ.. ಸಾಂಬವಿಯಲ್ಲಿರುತಾಳ.. ರವ್ವೋಟು ಯೋಚನೆ ಮಾಡಿಯೇನು? ಯೀಗೀಗಂತೂ ಕುಂಪಣಿ ಸರಕಾರ ರಾಜಸತ್ತೆ ಕಿತ್ತಗಂಡಯ್ತೆ.. ಸರ್ರೇ ಸರೇ.. ಆದರೆ ಅವರು ತಮ್ಮ ಕಯ್ಯಿ ನಡೀತ್ತಿದ್ದ ಕಾಲದೊಳಗೆ ಪ್ರಜೆಗಳಿಗೆ ಯಾವ ವುಪಕಾರ ಮಾಡ್ಯಾರ ನೀನೇ ಹೇಳು.. ಬರ ಬಂದು ಪ್ರಜೆಗಳಿಲ್ಲಿ ವುಪಾಸ ವನುವಾಸ ಅನುಭೋಸುತಲಿದ್ದ ಕಾಲದಲ್ಲಿ ಯೀ ಪುವ್ವುಲ ರಾಜರು ಕೂಳು ನೀರು ನಿಡಿ ಜೋಡಿಸಿದ್ದುಂಟಾ.. ಪ್ರಜೆಗಳಿಂದ ಮಕ್ಕಳನ್ನು ಕಾಸಿಗೊಂದು ಕೊಸರಿಗೊಂದೊರಂತೆ ಕೊಂಡುಕೊಂಡು ಸಯ್ನಕ್ಕೆ ಸೇರಿಸಿಕೊಂಡರೇ ವಿನಾ ಕಣ್ಣೀರೊರೆಸಿದ್ದುಂಟೇನು? ಬರೀ ಗುಡಿಗಳನ ಕಟ್ಟಿಸಿದರಷ್ಟೇ ವಿನಾ

ಕೆರೆಕಟ್ಟಿಸಿದ್ದುಂಟೇನು? ನೀರು ತರುಬಿರೋದುಂಟೇನು? ನಿನ ಮಕ್ಕಳಾದ ಪೇದೋಬನಾಯಕ, ಬೊಮ್ಮನಾಯಕ, ಮದಕೆರೆಪ್ಪನಾಯಕ, ಭರಮಪ್ಪ ನಾಯಕರೇನು ಮಾಡಿರುವರೆಂಬ ಸಂಗತಿ ನಿನಗೂ ಗೊತ್ತು.. ಪ್ರಜೆಗಳಿಗೂ ಗೊತ್ತು.. ನೀನು ಯಿಗಲೇ ಹೋಗಿ ಅವರ ಆತುಮಗಳನ್ನು ಜಾಲಾಡಿಸಿ ಕೇಳು.. ಆ ರಾಜಮಾತೇನ ಕೇಳು.. ಸುಮ ಸುಮಕ ಸಾಂಬವೀನ ಅಂದಾಡ ಬ್ಯಾಡ... ಸಾಂಬವಿ ಯೇನು ಸುಮ ಸುಮಕ ಸಿಮ್ಮಾಸನನ ಬಗಸಲಿಲ್ಲ.. ಅರಮನೇನ ಬಗಸಲಿಲ್ಲ.. ಪ್ರಜೆಗಳೇ ರೋಸಿ ಕೊಟ್ಟಿರೋದಯ್ತೆ.. ತಿಳಕಾ.. ಪ್ರಜೆಗಳು ಬ್ಯಾಡನ್ನಲಿ.. ನಾವ್ಯಾರೂ ಅರೆಗಳಿಗೆ ಯಿಲ್ಲಿರುವವರಲ್ಲ.."

ಕೇಳಿಸಿಕೊಂಡ ಹಿರೀಕರೊಂದೇ ಅಲ್ಲದ ಸುತ ಮುತ್ತ ನೆರೆದಿದ್ದಂಥ ಭಕುತಾದಿ ಮಂದಿಯೂ ಸಯ್ಯಿ ಸಯ್ಯಿ ಅಂದು ಹಂಪಜ್ಜನ ಮಾತಿಗೆ ಪುಟಿಗೆ ನೀಡಿದರು.. ತಮ ತಮ್ಮ ಮೂರುಗಳ ರಾಜಸತ್ತೆಗಳದೂ ಯಿದೇ ಕಥೆಯಾ ಅಂದರು.

ಮುದಕಿ ಅರಮನೆಯವ್ವ ವಂಚಣ ಮಾರೀನ ಸಪ್ಪಗ ಮಾಡಿಕೊಂಡು ಹಂಪಜ್ಜನಾಡಿದ ಮಾತುಗಳ ಸತ್ಯಾಸತ್ಯತೆ ಕುರಿತು ಯೋಚನೆ ಮಾಡಿದಳು. ಹೊಗೆ ಆಡೋ ಕಡೇಕ ಬೆಂಕಿ ಯಾವ ರೀತಿ ಇರುವುದೋ ಹಂಗ ಪಾಪ ತುಂಬಿದ ಕಡೆ ಅದನ್ನು ಯಿಲೇವಾರಿ ಮಾಡುವುದಕೆಂದು ತಾಯಿ ಯಿರುತಾಳ ಯಂಬುದು ಯುಗ ಯುಗಗಳು ಕಂಡುಂಡಿರುವ ಸತ್ಯವು.. ತಾನು ಯೀ ಕಾಲದಾಕಿಯಲ್ಲ.. ಯೀಗ್ಗೆ ನಾನ್ನೂರು ವರುಷಂಗಳ ಹಿಂದೆ ಗುಡೇಕೋಟೆ ದುರುಗವನ್ನು ವಳಿತು ಮಾಡಿಕೊಂಡು ಆಳಿದಂಥಾ ರಣಕದಿರೇನಾಯಕನ ಯೇಕ ಮಾತ್ರಪುತ್ರರಣಕಲಿ ಭಯ್ರವನಾಯಕ ಕಟ್ಟಿಯಿಸಿದ್ದೆಂದು ಹೇಳಲಾಗುವ ಸಿಲಾ ಸಾಸನ ವಂದು ಸದರಿ ಪಟ್ಟಣದ ವುತ್ತರ ದಿಕ್ಕಿನಲ್ಲಿ ಯಿರುವುದು.. ಅದಕೂ ಪೂರ್ವದಲ್ಲಿ ಕೊಡ್ಲೆ ಸಣಮುಂಡಯ್ಯನೆಂಬಾತನು ತನಗ ತೋಚಿದಂಗ ರಾಜ್ಯಭಾರ ಮಾಡುತಲಿದ್ದ ಮೂರು ಅಂಗಯಿಯಗಲ ಯಿತ್ತು.. ಆ ಕಾಲಕ್ಕೇನೆ ತಾನು ನೆಲದಡೀಕೆ ಯಿದ್ದಳು. ಭಯ್ರವನಾಯಕ ತನ್ನ ಕುದುರೆ ಜಟಾಯು ಯಡವಿ ಬಿದ್ದ ಜಾಗದಲ್ಲಿ ವಂದು ರಾಜ್ಯವ ಕಟ್ಟಬೇಕು.. ವಂದು ಅರಮನೇನ ಯಬ್ಬಿಸಬೇಕು ಯಂದು ನಿರ್ಧಾರ ಮಾಡಿ ವಸ್ತಿ ಹಾಕಿಯೇ ಬಿಟ್ಟನು. ವಂದಿನ ಆತ ಮಕ್ಕೊಂಡಿರುವಾಗ "ಹೊರಗ ಬರುತೀನಿ.. ನನ್ನನ್ನಿಲ್ಲಿಂದ ಬಿಡುಗಡೆ ಮಾಡಿ ಪುಣ್ಯಕಟ್ಟುಕೋ" ಯಂದು ತಾನು ಪರಿಪರಿಯಿಂದ ಅಂಗಲಾಚಿದ್ದುಂಟು..

ಅದನು ಕೇಳಿ ರಾಜಕುಮಾರನು ವಂದೊಂದು ದಿಕ್ಕಿನಿಂದ ವಂದೊಂದು ಸಾವರ ವಡ್ಡರನ್ನು ಕರೆಯಿಸಿಕೊಂಡು ಕೆಲಸ ಸುರುಮಾಡಿಯೇ ಬಿಟ್ಟನು. ತೆಗೆಸಿದ ವಂದೊಂದು ಬುನಾದಿಯಲ್ಲಿ ಹೇರಳ ಹೊನ್ನು, ನಗನಾಣ್ಯ ಸಿಕ್ಕಿತು. ಅವನ ಕಣಸಿನಲ್ಲಿ ತಾನು ದೇವತಾ ಸ್ತ್ರೀಯಂತೆ ಕಾಣಿಸಿಕೊಂಡು "ಭಲಾ.. ರಾಜಕುಮಾರ ಭಲಾ" ಯಂದು ಹೊಗಳಿದ್ದುಂಟು. "ನೀನು ಯಾರು ತಾಯಿ?" ಯಂದಾತನು ಕೇಳಿದ್ದಕ್ಕೆ ತಾನು "ನಾನು ಅರಮನೆ ಕಣ ಮಗಾ" ಮಾನವನ ಬಾಯೊಳಗ ಹುಟ್ಟಿದ ಮಾತು ಮತ್ತು ನಾನು ಅವಳಿ ಜವುಳಿ.. ಗವಿಗಳಲಿ ಅಂಬೆಗಾಲಿಟ್ಟೆ.. ಮರ ಪೊಟರೆಗಳಲಿ ಪುಂಡುರೋದನು ಕಲಿತೆ.. ಗುಡಿಸಿಲುಗಳಲಿ ಗೂಡಿಸಿಕೊಂಡಿದ್ದೆ.. ಮನೆಗಳಲಿ ಮಾರುದ್ದ ಯಿದ್ದೆನಪ್ಪಾ.. ಕದಂಬರನು ನಂಬಿಕೊಂಡು ಬನವಾಸಿಯುಲಿ, ಚಾಲುಕ್ಯರನು ನಂಬಿಕೊಂಡು ವಾತಾಪಿಯಲ್ಲಿದ್ದೆ.. ಅವರಿಂದ ಬ್ಯಾಡಾಗಿ ಯಿವರಲ್ಲಿಗೆ.. ಯಿವರಿಂದ ಬ್ಯಾಡಾಗಿ ಅವರಲ್ಲಿಗೆ ಅಲದಾಡಿ ಅಲದಾಡಿ ಪೆನುಗೊಂಡೆಯಲ್ಲಿದ್ದಾಕಿ ಕೊನೀಕೆ ಇಲ್ಲಿಗೆ ಬಂದು ನೆಲಗೊಂಡಿರುವೆನಪ್ಪಾ.. ಅಂತೂ ನಾನು ನನ್ನ ಗುರಿ ಸಾಧಿಸಿಬಿಟ್ಟೆ.. ನೀನು ಬಲಾಢ್ಯ ರಾಜ್ಯ ಕಟ್ಟು.. ನ್ಯಾಯ ಧರುಮ ನಿನ್ನೆರಡು ಕಣ್ಣಾಗಲಿ" ಯಂದು ಹೇಳಿದ್ದುಂಟು.. ಮುಂದ ಅವನು ಅರಮನೆಯನ್ನು ಯಬ್ಬಿಸಿ ಅದಕ ಅಂದರ ತನಗ 'ಜಗನ್ಮೋಹಿನಿ' ಯಂದು ನಾಮಕರಣ ಮಾಡಿದ್ದುಂಟು.. ತದನಂತರ ಬಂದವರ್ದ್ಯಾರು ತನ್ನ ಸುಖ ದುಕ್ಕ ಯಿಚಾರಿಸಿದ್ದುಂಟಾ.. ಹಿಂಗಾಗಿ ತಾನು ಕಳಾಹೀನಳಾಗಿದ್ದುಂಟು.. ಯಂದು ತಾನು ಮಮ್ಮಲನೆ ಮರುಗಿದಳು. ತಾನಾದರೋ ಹೆಸರಿಗೆ ಮಾತ್ರಅರಮನೆಯು.. ಅರಸರೆಂಬುವವರು ತನ್ನೊಳಗಿರಲಕಬೇಕು.. ಅರಸೊತ್ತಿಗೆ ಯಲ್ಲಿವರೆಗೆ ಯಿರುತದೋ ಅಲ್ಲಿವರೆಗೆ ಅರಸೊತ್ತಿಗೆಯು.. ರಾಜರೇ ಯಿಲ್ಲೆಂದ ಮ್ಯಾಲ ತನಗಿಲ್ಲಿ ಯಿನ್ನೇನು ಕೆಲಸ? ತನಗಿನ್ನು ದಂಡಪಿಂಡದ ಪದವಿ.. ಅಂತರಪಿಚಾಚಿಯ ಸ್ಥಾನಮಾನ.. ಅರಮನೆವ್ವನು ದುಕ್ಕ ಪಡುತ ಕುದುರೆಡವು ಪಟ್ಟಣದ ....

.....ಬೀದಿ ಬೀದಿಗೆ ಬಂದಳು.. ಅಗೋಚರ ಸ್ಥಿತೀಲಿದ್ದು ಕಯ್ಯೊಳಗೆ ಮೂರುಗೋಲು ಹಿಡಿದು ನಡೆಯುತ್ತಿದ್ದ ಆ ಗೂನು ಬೆನ್ನಿನ ಮುದುಕಿಯು ಕೇವಲ ತಮಗಷ್ಟೆ ಕಾಣುತ್ತಿದ್ದುದರಿಂದ ವಂದೊಂದು ಮನೆಯು, ವಂದೊಂದು ಗುಡಿಸಿಲು 'ಓಹ್ ಅರಮನೆಯವ್ವಾ.. ಹ್ಹಾ.. ಹಾಯ್ ಅರಮನೆವ್ವಾ' ಯಂದು ವುದ್ಗಾರ ತೆಗೆಯುತಲಿದ್ದವು. ಕೆಲಮೊಂದು ಆಕೆಗಡ್ಡ ಹೋಗಿ "ಯೇನವ್ವಾ

ಯಾಕವ್ವಾ.. ಊರುಬಿಟ್ಟು ಯಲ್ಲಿಗೋಗುತೀ ತಾಯಿ?" ಯಂದು ಯಿಚಾರಿಸುತ್ತಿದ್ದವು. ತನ್ನ ಪರಿಸ್ಥಿತಿಯು ಅಂಗಯ್ಯ ಹುಣ್ಣಿನಷ್ಟೆ ಸತ್ಯವು. ಯೇನಂತ ಯಿವರಿಸಿಯಾಳು? ಯಾವುದಕ್ಕೂ ಮೋಬಯ್ಯ ಅರಮನೆಯನ್ನು ಕಬ್ಜಾ ಮಾಡಿರುವುದರ ಬಗೆಗಾಗಲೀ, ರಾಜಪರಿವಾರದೋರು ಭ್ರಷ್ಟೆದ್ದು ಹೋಗಿರುವುದರ ಬಗೆಗಾಗಲೀ ಖೇದ ವಂಥಟಗು ಯಿದ್ದಂಗಿಲ್ಲ.. ಯಂದು ಯೋಚಿಸುತ ಯೋಚಿಸುತ ಅರಮನೆಯವ್ವ....

* * * *

ಕುದುರೆಡವು ಪಟ್ಟಣವು ಸೋಭಾಯಮಾನವಾಗಲು ಕಾರಣಕರ್ತರಾದ ಕಸುಬಸ್ಥ ಮಂದಿ ಯೀ ಪ್ರಕಾರ ಯಿರುವರು...

ಅವ್ವನ ಖಾಸಾ ವಾರ ಯನಿಸಿದ ಮಂಗಳದಾಯಕ ಮಂಗಳವಾರದಂದು ನೂರಾರು ಕುರಿ ಮೇಕೆಗಳು ಬಲಿಗೊಳ್ಳುವವೆಂಬ ವರ್ತಮಾನಕ್ಕನುಸಾರವಾಗಿ ಅವಕ್ಕ ತುಸು ನೋವಾಗದಂತೆ ಕಡಿಯುವಲ್ಲಿ ನಿಪುಣರೂ, ದಯಾಮಯಸಂಪನ್ನರೂ ಆದಂಥ ಕಟುಕರ ದಯಾನಂದನು ಕವುತಾಳದಿಂದಲೂ.. ಕಟುಕರ ಕರುಣಾಕರನು ರವಡೂರಿನಿಂದಲೂ.. ಕಟುಕರ ಕರುಳಪ್ಪನು ಕಮ್ಮರ ಚೇಡುವಿನಿಂದಲೂss..

ಬರುವ ಭಕುತಾದಿಮಂದಿಯು ಪೂಜಾಕಯಿಂಕರ್ಯ್ಯಾರ್ತವಾಗಿ ಖರೀದಿಸುವಂಥ ಸಾಮಾನುಗಳಾದ ಕಾಯಿ, ಹೂವು, ಹಣ್ಣು, ಲೋಬಾನ, ಕುಂಕುಮ, ಲೋಭಾನ ಯಿವೇ ಮೊದಲಾದುವುಗಳನ್ನು ಮಾರು ವಂಥವರಾದ ಕರುಬಸಪ್ಪ ಕರಿಯೇಮಲದಿಂದಲೂ, ವಯ್ಯಾರಪ್ಪ ವಡ್ರಳ್ಳಿಯಿಂದಲೂ, ಮಯಿಲಾರಪ್ಪನು ಮಂಯ್ಲಾರದಿಂದಲೂ.. ವುರುಕುಂದೆಪ್ಪ ಹಾಲೇರಿಯಿಂದಲೂsss...

ಬರುವ ಭಕುತಾದಿ ಮಂದಿಯ ವುದರಪೋಷಣೆ ಮಾಡಲೆಂದು ಹೊರಟವರು, ಸಿವಲಿಂಗನು ಕುಕ್ಕುಪ್ಪಿಯಿಂಲೂ, ಮಾಲಿಂಗನು ಹರವದಿಯಿಂದಲೂ, ಕುಳ್ಳಾಯಿಯು ಕೊಕ್ಕರಚೇಡುವಿ ನಿಂದಲೂsss..

ಬರುವ ಭಕುತಾದಿಯ ಪ್ರಮುಖ ಯಿಂದ್ರಿಯ ಅಗತ್ಯ ಪೂರಯಿಕೆ ಮಾಡಲೆಂದು ರುಕ್ಕುಮಿಣಿಯು ಕಂದಗಲ್ಲಿನಿಂದಲೂ, ಲಚ್ಚುಮಿಯು ಮಾರಲಮಡಕೆಯಿಂದಲೂ, ಚಂದ್ರವ್ವನು ಹನಸಿಯಿಂದಲೂ, ಬಸವ್ವನು ಅಮ್ಮನಕೇರಿಯಿಂದಲೂss..

ಅವರವರು ಅವರವರ ಹಾದಿಯಲ್ಲಿದ್ದು ಕುದುರೆಡವು ಕಡೇಕ ತಮ ತಮ್ಮ ಸಮುಸಾರ ಸಮೇತ ಮುಖ ಮಾಡಿರುವಾಗ್ಗೆ.. ತಮ ತಮಗಾಗೋ ಲಾಭ ಲುಕ್ಸಾಣನ್ನು ಲೆಕ್ಕ ಹಾಕುತ್ತಿರುವಾಗ್ಗೆ.. ಹೆಜ್ಜೆ ಹೆಜ್ಜೆಗೆ ಸಿವನ್ನಾಮ ಪಾರೋತಿಯ ನಾಮ ಸರ್ಮಣೆ ಮಾಡುತ್ತಿರುವಾಗ್ಗೆ.. ಅವರು ಹೆಜ್ಜೆಯಿಡುತ್ತಿದ್ದೇಟಿಗೆ ಹಾದಿ ತಂತಾನೆ ವುದ್ದುದ್ದಕ ಆಗುತ್ತಿರುವಾಗ್ಗೆ....

"ನೀನೇ ರಾಜಮಾತೆ ಭಯ್ರವಮಾಂಬೆ ಅಂಬುದಕ ಖೂನ ಗುರುತ ತೋರಿಸಬೇಕು ತಾಯಿ" ಯಂದು ಧರುಮಛತ್ರದ ಧರುಮದರುಶಿ ಯಂಕೋಬರಾಯನು ಕೇಳಿದ್ದಕ್ಕೆ "ಯಿದೇ ನೋಡಪ್ಪಾ" ಯಂದು ಆಕೆಯು ಯಿದನ್ನು ತೋರಿಸುತ್ತಿದ್ದಳು. ಅದನ್ನು ನೋಡಿ ಅನುಮಾನ ವದಗಿ ರಾಯನು ಅಯವ್ವನನ್ನು ನಖಶಿಖಾಂತ ಪರಾಂಬರಿಸಿದನು. ರಾಜಕಳೆ ವಂಥಟಗಾದರೂ ಆಕೆಯ ಮಯ್ಯಿ ಮ್ಯಾಲ ವುಳುದಿರಲಿಲ್ಲ.. ಯಲ್ಡೂವರೆ ದಿನಮಾನದ ಪ್ರಯಾಣದಿಂದಾಗಿ ಕುದುರೆಡವು ಮತ್ತು ಕೂಡ್ಲಿಗಿ ಪಟ್ಟಣಗಳ ನಡುವೆ ಯಿದ್ದ ರಗಡು ಹಾದಿ ಆಕೆಯ ಸರೀರದ ಮ್ಯಾಲಿದ್ದ ರಾಜಕಳೆಯನ್ನು ಕಸುಕೊಂಡಿತ್ತು.. "ಯಿಲ್ಲ ಯಜಮಾನ ನಾನೇ ರಾಜಮಾತೆ" ಅಂದರೂ ಅವಯ್ಯ ಕೇಳುದಕ ತಯಾರಿರಲಿಲ್ಲ.. ಆಗ ಕೆಲದಿವಸಗಳ ಹಿಂದೆ ಜಗಲೂರೆವ್ವ ಯಂಬ ರಾಜಮಾತೆ ಬಂದಿದ್ದಳೆಂದೂ, ಆಕೆಗೂ, ನಿನಗೂ ರಗಡ ಫರುಕು ಯಿರುವುದೆಂದೂ ವಾದಿಸಿದ. ಆಕೆ ಜೀತಗಾರನ ಹೆಂಡತಿ ಯಂದೂ, ತಾನೇ ಖರೇವಂದರೂ ರಾಜಮಾತೆಯಂದೂ ಬಿಡುಬಿಡಿಸಿ ಹೇಳಿದಳು. ಆಕೆಯ ಸಂಗಾಟಯಿದ್ದಂಥ ಮನುಷ್ಯ ತಾನು ಅಮಾತ್ಯನೆಂದೂ,, ಯಿನ್ನೊಬ್ಬಾತ ತಾನು ಸೇನಾಪತಿ ಯಂದೂ, ಮಗುದೊಬ್ಬಾತ ತಾನು ಭಂಡಾರಿ ಯಂದೂ ಪರಿಚಯ ಹೇಳಿಕೊಳ್ಳಲು ರಾಯನು ಬಲು ಪರಪಾಟು ಬಿದ್ದನು. ಅಮಾತ್ಯ ಯಂಬುವಾತನ ಮಯ್ಯಿ ಮ್ಯಾಲ ಗುಲಗಂಜಿ ಗಾತುರದಷ್ಟಾದರೂ ಅಮಾತ್ಯನ ಯಿಲ್ಲವು.. ಸೇನಾಪತಿ ಯಂಬುವಾತನ ಮಯ್ಯಿ ಮಾಲ ತಿಲಗಾತುರದಷ್ಟಾದರೂ ಸೇನಾಪತಿತನ ಯಿಲ್ಲವು.. ಭಂಡಾರಿ ಯಂಬುವಾತನ ಸರೀರವಂತೂ ದುಗ್ಗಾಣಿಗೂ ಬೆಲೆ ಬಾಳುತಾ ಯಿಲ್ಲವು.. ಆಕೆಯಂಥ ರಾಜವಮಾತೆಯು, ಯಿವರೆಂಥ ರಾಜೋಳಿಗಮಾನ್ಯರು ಯಂದಂದುಕೊಂಡನು ಮ್ಯಾಲಿಂದ ಮ್ಯಾಲೆ.. ಯೇನು ಹೇಳಿದರೂ ಅವಯ್ಯ ತನ ಕಿವಿಮ್ಯಾಲ ಹಾಕೊಳ್ಳಲು ಸಿದ್ಧನಿರಲಿಲ್ಲ. ಆಗಿದ್ದು ರಾಜಮಾತೆಯು ತಾವು ರಾಜಮನೆತನದೋರು ಅಂಬುದಕ್ಕೆ ಅಗೋ ನೋಡಲ್ಲಿ

ಯಂದು ಸಾರೋಟು ಕುದುರೆಗಳತ್ತ ಬೊಟ್ಟು ಮಾಡಿದಳು. ಹುಬ್ಬಿಗೆ ಕಯ್ಯ ಹಚ್ಚಿ ನೋಡಿದ. ಆಗಿದ್ದು ಆತನು "ಯೇನವ್ವಾ ಮುದುಕಿ? ಮುರುಕು ಬಂಡಿಯನ್ನು ಸಾರೋಟಂಬುತ್ತೀ.. ಕತ್ತೆಗಳನ್ನು ಕುದುರೆಗಳಂಬುತೀ.. ನಿನ್ನ ತಲಿ ಸಜ್ಜಿದ್ದಂಗಿಲ್ಲ.. ನಡ್‌ನಡೀ" ಯಂದು ಗದರಿದನು. ಆಕೆಯ "ಬರ್ರೆಪ್ಪಾ.. ಬರ್ರಿ... ನಮಗಿನ್ನೂ ದಯವದ ತಿಕ್ಕಡಿ ಬಿಟ್ಟೋದಂಗಿಲ್ಲ" ಯಂದು ನೀರಿದ್ದಲ್ಲಿ ಕುಡುದು, ನೆಳ್ಳಿದ್ದಲ್ಲಿ ದಣುವಾರಿಸಿಕೊಂಡರಾಯಿತೆಂದು ಭಾವಿಸಿ ತಿರುಗುತ್ತಲೂ ಆರು ಮೊಳದುದ್ದದ ಸೀನೋಜಿರಾವ್ ಘೋರ್ಪಡೆ ಯಂಬಾತನು ಆಚೇ ಕಡೇಲಿಂದ ಯಿಚ್ಚೇ ಕಡೇಕ ಬರೋದಕ್ಕೂ ಸರಿಹೋತು. ಆತ ನರಸಾಪುರವನ್ನಾಳುತ್ತಿದ್ದಂಥಾ ಮರಾಠಿ ಸರದಾರ ಯಂಬ ವಿಷಯ ಗೊತ್ತಿದ್ದರೂ ತರುಬಿ ಮಾತಾಡಿಸುವ ಗೋಜಿಗೆ ರಾಜಮಾತೆ ಹೋಗಲಿಲ್ಲ. ಆತಗ ತನ್ನ ಗುರುತು ಅಯ್ತೋ? ಯಿಲ್ಲಮೋ? ಗುರುತಿಸಿದರೂ ಮಾತಾಡಿಸುತ್ತಾನೋ ಯಿಲ್ಲವೋ? ಆತನ ಕಣ್ಣಿಗೆ ಬೇರೊಂದು ಯಿದದಿ ಗೋಚರಿಸಿ ಅವಮಾನಗೊಳ್ಳೋದು ಯಾಕೆಂದು ಬಗೆದ ರಾಜಮಾತೆಯನ್ನು ಸರದಾರನೇ ಗುರುತಿಸಿ ಹತ್ತಿರ ಬಂದು ಮಜುರೆ ಸಲ್ಲಿಸಿದನು. ಕಲೆಟ್ರುಥಾಮಸು ಮನ್ರೋನ ಆದೇಸದಂತೆ ತಾಲೂಕಾಧಿಕಾರಿ ಯುಡ್ಡವರ್ಡ್ಡನಿಗೆ ಸಲ್ಲಿಸಲೆಂದು ದಾಸ್ತಾವೇಜುಗಳೊಂದಿಗೆ ಯೇಳೆಂಟು ದಿವಸಗಳ ಹಿಂದೆಯೇ ಬಂದು ಅದೇ ಧರುಮ ಛತ್ರದಲ್ಲಿ ಮುಕ್ಕಾಂ ಹೂಡಿದ್ದನು.

ರಾಜಮಾರಾಜರ ಬಿಡದಿಗೆಂದೇ ಕಟ್ಟಿಯಿಸಿದ್ದ ವಸತಿಗ್ರುಹ ಬೊಮ್ಮಘಟ್ಟದ ಹಾದಿಯುಲ್ಲಿತ್ತು. ಆದರೆ ಪಿಂಚಣಿ ಗೊತ್ತಾದ ರಾಜರು ಅಲ್ಲಿ ವುಳಕೊಳ್ಳುವಂತಿರಲಿಲ್ಲ.. ರಾಜಸತ್ತೆಯಿಂದ ಅವಾನುತು ಗೊಂಡೋರ ಹಣೆಬರಾವು ಅದೇ ಆಗಿತ್ತು. ಆದ್ದರಿಂದ ಸೀನೋಜಿರಾವ್ ಸಿಪಾರಸು ಮಾಡಿ ಅದೇ ಧರುಮ ಛತ್ರದಲ್ಲಿ ರಾಜಮಾತೆಗೆ, ಮತ್ತಾಕೆಯ ಪರಿವಾರದ ಮಂದಿಗೆ ವಸ್ತಿ ಯೇರುಪಾಟು ಮಾಡಿದನು.

"ಮುಂದೇನು ಮಾಡಲಕಂತ ಮಾಡಿ?" ಯಂದು ರಾಜಮಾತೆಯು ಕೇಳಿದ್ದಕ್ಕೆ ಸೀನೋಜಿರಾವನು ಗೊಂದಲದಲ್ಲಿ ಸಿಲುಕಿದನು. ಅದು ಯಾವುದೆಂದರೆ ಮರಾಠ ದೇಸಕ್ಕೆ ಹೋಗೋದೋ? ಅಥವಾ ಸಂಡೂರು ಗಡ್ಡೆಯಲ್ಲಿ ಮಾಂಸದಂಗಡಿಯನ್ನು ತೆರೆಯುವುದೋ? ಸಂಡೂರೊಳಗೆ ಯಿದ್ದಂಥ ರಾವ್ ಬಹಾದ್ದೂರು ರಾಜಾ ಪಂಪನಗವುಡರು ಕುಂಪಣಿ ಸಯ್ನಿಕರ ಮೊಟಕ್ಕೆ

ಅಗತ್ಯವಾದ ಮಾಂಸವನ್ನು ಸರಬರಾಜು ಮಾಡೋ ಗುತ್ತಿಗೆಯನ್ನು ಥಾಮಸು ಮನ್ರೋ ಸಾಹೇಬನಿಗೆ ಹೇಳಿ ಕೊಡಿಸುವುದಾಗಿ ವಚನ ಕೊಟ್ಟಿದ್ದರು. ಆದರೆ ತನ್ನ ಹೆಂಡತಿ ತುಳುಜಾಬಾಯಿಗೆ ಸುತಾರಂ ಅದು ಯಿಷ್ಟಯಿರಲಿಲ್ಲ.. ಸರ್ದಾರ ಯಂಬ ಬಿರುದನ್ನು ಕಿತ್ತೊಸೆದು ಆ ಕೆಲಸಕ್ಕೆ ಸೇರಿಕೊಳ್ಳಿ ಯಂದು ನಿಷು«ರವಾಗಿ ಹೇಳಿದ್ದಳು. ಆದ್ದರಿಂದ ಸೀನೋಜಿರಾವ್ ಯಿಪರೀತವಾದ ಸಂದಿಗ್ಧಕ್ಕೆ ಸಿಲುಕಿ ವದ್ದಾಡುತ್ತಿದ್ದನು. ಕುದುರೆಡವಿನ ಪರಿಸ್ಥಿತಿ ಗಾಳಿ ಮೂಲಕ ತನಗ ಗೊತ್ತಿದ್ದುದರಿಂದ "ಮುಂದೆ ನೀವೇನು ಮಾಡುತೀರಿ?" ಯಂಬ ಪ್ರಶ್ನೆಯನ್ನು ಆತ ರಾಜಮಾತೆಗೆ ಹಾಕುವ ಗೋಜಿಗೆ ಹೋಗಲಿಲ್ಲ....

ರಾಜಮಾತೆ ಭಯ್ರುವಾಂಬೆಯು ತನ್ನ ವಡಲೊಳಗಿನ ನೀರು ಅಳ್ಳಾಡದಂತೆ ಕುಂಪಣಿಯೋರ ಕಛೇರಿ ಮುಂದ ತಾಸುಗಟ್ಟಲೆ ಕೂಡುರೋದು ಯಡ್ಡವರ್ಡನು ಯೀಗ ಕರೆಯಿಸ್ಕಂತಾನೆ, ಆಗ ಕರೆಯಿಸ್ಕಂತಾನೆ ಯಂದು ತಾಸುಗಟ್ಟಲೆ ಕಾಯೋದು, ನಿರಾಸೆ ಹೊಂದಿ ವಾಪಸಾಗೋದು ಮಾಡತೊಡಗಿದ್ದಳು. ತಾನೂ ದೂತನ ಸಂಗಾಟ ಕಳುವುತ್ತಿದ್ದ ವಕ್ಕಣಿಕೆಯೊಳಗ ಯಿರುತ್ತಿದ್ದುದೇ ವಂದು.. ಯಡ್ಡವರ್ಡ ಸಾಹೇಬ ಮೋದಿಕೊಳ್ಳುತ್ತಿದ್ದುದೇ ವಂದಾಗಿತ್ತು... ಹಿಂಗಾಗಿ ರಾಜಮಾತೆಗೆ ಫಜೀತಿಗಿಟ್ಟುಕೊಂಡಿತ್ತು. ಆದರೂ ಬೇಸರವಾಗುತ್ತಿರಲಿಲ್ಲ. ಕುದುರೆಡವಲ್ಲಾದರೋ ತಲೆಯಳೆದುಕೊಂಡರ ಕಾಲುಗಳು ಹೊರಗ ವುಳಿಯುವಂಥ, ಕಾಲುಗಳನ್ನೆಳೆದುಕೊಂಡರ ತಲೆ ಹೊರಗುಳಿಯುವಂಥ ಬದುಕು. ಯಲ್ಲಿ ತಾವು ಕೂಲಿ ಕುಂಬಳಿ ಮಾಡಿ ಬದುಕಬೇಕಾಗಿ ಬರುವುದೋ ಯೇನೋ? ತಾವು ವುಪಾಸಯಿದ್ದರೂ ಅರಮನೆಯೊಳಗೇ ಯಿರಬೇಕು, ಸತ್ತರೂ ಅರಮನೆಯೊಳಗಾ ಸಾಯಬೇಕು. ಅದರೊಳಗ ಯಲ್ಲಾ ಕಡೇಕೂ ತಮ್ಮೆಲ್ಲರ ಸಮಾಧಿಗಳಿರಬೇಕು. ಯಾಕಂದರ ಆಗ ಯಾರೂ ಅರಮನೇನ ಖರೀದಿ ಮಾಡೋಕೆ ಹೋಗೋದಿಲ್ಲ.. ಹಿಂಗಾss ಯೇನೇನೋ ಯೋಚನೆ ಮಾಡೋ ರಾಜಮಾತೆಯು ಅಪ್ಪಿಯಾದರೂ, ತಪ್ಪಿಯಾದರೂ ಮೋಬಯ್ಯನ ಬಗ್ಗೆ ದುಸುರಾ ಮಾತನ ಆಡೋದಿಲ್ಲ.. ಅದೂ ಕೂಡ್ಲಿಗೀನ ಸೇರುವಿಕೆ ಮಾಡಿದ ನಂತರವೇ.. ವಂದು ರೀತೀಲಿ ಹೇಳಬೇಕೆಂದರೆ....

ಕುದುರೆಡವು ಕಡೇಲಿಂದ ಆಗಮಿಸುತಲಿದ್ದ ವಂದಲ್ಲಾವಂದು ವರ್ತಮಾನಗಳಿಂದಲೂ, ಪತ್ನಿ ಜೆನ್ನಿಫರಳ ಅಪರಿಮಿತ ಕಾಟದಿಂದಲೂ ಅಧಿಕಾರಿ ಯಡ್ಡವರ್ಡನು ರಾಜಮಾತೆ ಭಯ್ರುಮಾಂಬೆಯ ನಿರೀಕ್ಷೆಯಲ್ಲಿದ್ದ. ಗುಪ್ತಚಾರರು

ವಸ್ತು ಯಿಶೇಷ ತಂದು ಪಿಸುಗುಟ್ಟುತಲಿದ್ದರು, ಪ್ರತಿಯೊಂದು ಮಾಹಿತಿಗೂ ಯಿಂಡಿಯಾ ಹೀಗೂ ವುಂಟೇ ಯಂದು ವುದ್ಗರಿಸುತಲಿದ್ದ. ದಂಡು ಸಮೇತ ಹೋಗಿ ಅಲ್ಲಿನ ಅಲವುಕಿಕರ ವುಪಟಳವನ್ನು ನಿಗ್ರಹ ಮಾಡಬೇಕೆಂದರ ಕಲೆಟ್ರುಸಾಹೇಬ ಯಾವ ತಪಾಲಿಗೂ ಮಾರು ಜವಾಬು ಕೊಡುತ್ತಿಲ್ಲ. ಯಿಲ್ಲಿ ನೋಡಿದರೆ ಆಳೋರ, ಆಳಿಸಿಕೊಳ್ಳೋರ ಅಹವಾಲುಗಳ ರಾಶಿ ನಡುವೆ ತನಗೆ ವುಸಿರಾಡುವುದಕ್ಕೂ ಪುರುಸೊತ್ತಿಲ್ಲ.. ನಿಖಾಲೆ ಮಾಡಬೇಕಾದ ದಸ್ತಾವೇಜುಗಳ ನಿಟ್ಟಿನ ಯೀಚೆ ಕೂತರ ತಾನು ಆಚೆ ಕಡೆ ಗೋಚರಿಸುವುದೇ ಅಪರೂಪ, ತನ್ನ ಪತ್ನಿ ಜೆನ್ನಿಫರು ಮಾತ್ರಕುದುರೆಡವಿನ ಯಿದ್ಯಾಮಾನಗಳ ಕಟ್ಟಾ ಅಭಿಮಾನಿಯಾಗಿಬಿಟ್ಟಿರುವಳು. ಅತಿಮಾನುಷ ಘಟನೆಗಳಿಲ್ಲವೆಂದರೆ ಯಿಂಡಿಯಾಕ್ಕೆ ಅಸ್ತಿತ್ವವೇ ಯಿರುವುದಿಲ್ಲ ಯಂಬುದು ಆಕೆಯ ಅನ್ನಿಸಿಕೆ. ಸ್ವತಃ ಬ್ರಿಟೀಷ್ ಪ್ರಜೆಯಾಗಿರುವ ಆಕೆ ಯೀಸ್ಟ್ ಯಿಂಡಿಯಾ ಸರಕಾರದ ಆಕ್ರಮಣಶೀಲ ಪ್ರವುರುತ್ತಿಯನ್ನು ಬಲವಾಗಿ ಯಿರೋಧಿಸುತ್ತಿರುವಳು. ಯಿದು ಅನ್ಯಾಯವೆಂದೂ, ಯಿಂಡಿಯಾದ ನೆಲ ಕಂಪನಿಯನ್ನು ಕ್ಷಮಿಸುವುದಿಲ್ಲವೆಂದೂ.. ಸೂರ್‍ಯೋದಯ, ಸೂರ್‍ಯಾಸ್ತಗಳ ಗವುರವಕ್ಕೆ ಪಾತ್ರವಾಗಿರುವ ಬ್ರಿಟೀಷ್ ಸರಕಾರದ ಸೇವೆಯಲ್ಲಿರುವುದೇ ಹೆಮ್ಮೆಯ ಯಿಷಯವೆಂದು ಭಾವಿಸಿರುವ ತಾನು ಆಕೆಯನ್ನು ಯಿಂಡಿಯಾ ಕುರಿತು ಯೋಚಿಸದಂತೆ ಮಾಡಲು ಕಯ್ಕೊಂಡಿರುವ ಯೋಜನೆಗಳಾದರೋ ಹಲವಾರು.. ಸಂಗೀತ, ಕಲೆ, ಸಾಹಿತ್ಯ, ಆದ್ಯಾತುಮ ಯಿವೇ ಮೊದಲಾದವುಗಳು ಅವಾಗಿರುವವು.. ಅದಕ್ಕೆಂದೇ ಯಿಶೇಷ ಪರಿಣತರನ್ನು ನೇಮಿಸಿದ್ದನು. ಆದರೂ ವಮ್ಮೊಮ್ಮೆ ಬೆಚ್ಚಿಬಿದ್ದವಳಂತೆ ಕುದುರೆಡವನ್ನು ಗ್ನಾಫಿಸಿಕೊಳ್ಳುತ್ತಿದ್ದಳು ವುತ್ತಮ ವರ್ಣ ಚಿತ್ರಕಲಾವಿದೆಯೂ ಆಗಿದ್ದ ಜೆನ್ನಿಫರಮ್ಮಾss..

ಕವುಡು ಮತ್ತು ತಿಕ್ಕಡಿ ಕಡಿಮೆಯಾತು ಯಂಬುದಕ್ಕೆ ಸಾಕ್ಷಿಯಾಗಿ ಸೀನೋಜಿರಾವ್ ಹೇಳಿದ್ದನ್ನು ಕೇಳಿಸಿಕೊಂಡ ಯಡ್ಡವರ್ಡು "ಹ್ಹಾ.. ಭಯ್ರಮಾಂಬೆ ಯುವರ್ ಹಯ್ನೆಸ್ಸೂ" ಯಂದು ವುದ್ಗಾರ ಮಾಡಿದನು. ಕೂಡಲೆ ಆಕೆಯನ್ನು ಬರಮಾಡಿಕೊಂಡು ಕ್ಷೇಮ ಲಾಭ ಯಿಚಾರಿಸಿದನು. ಅವರಿಬ್ಬರ ನಡುವೆ ಮಾತುಕತೆ ಸಾಂಗೋಪಾಂಗವಾಗಿ ನಡೆಯಿತು. ಅವರಿಬ್ಬರಿಗೆ ದುಭಾಷಿಯಾಗಿ ಕಾರ್‍ಯ ನಿರುವಹಿಸಿದವರೆಂದರೆ ಹೆಬ್ಬೆಟಂ ಗೋಯಿಂದರಾಯರು. ಹಡಗಿನಲ್ಲಿ ಪ್ರಯಾಣ ಮಾಡಿದ ತಂದೆಯೋರ್ವನ ಮಕ್ಕಳೂ.. ಚತುರ್‌ಭಾಷಾಕೋಯಿದರೂ

ಆದ ರಾಯರು ಯಿದ್ದದ್ದು ಯಿದ್ದಂಗೆ ತರ್ಜುಮೆ ಮಾಡಿದರೆಲ್ಲಿ ತಿಕ್ಕಡಿ ತಮಗೆ ತಗುಲುವುದೋ ಯಂಬ ಅಳುಕಿಗೆ ಸಿಲುಕಿದರು.. ಕನ್ನೂಡ ಭಾಷೆಯನ್ನು ತಕ್ಕಮಟ್ಟಿಗೆ ಅರ್ತಮಾಡಿಕೊಳ್ಳಬಲ್ಲವನಾಗಿದ್ದ ಯಡ್ಡವರ್ಡುನ ಸಮಚ್ಛಮದಲ್ಲಿ ಸುಳ್ಳಿಗೆ ಅವಕಾಶಯಿರಲಿಲ್ಲ.. ಕುಂತಳ ಸೀಮೆಯ ಕೆಲ ರಾಜರಿಂದ ಲಂಚರುಷುವತ್ತು ಪಡೆದು ಕುದುರೆಯನ್ನು ಕತ್ತೆ ಮಾಡಿದ ಆರೋಪಕ್ಕೆ ಸಿಲುಕಿ ನಾಲಕಯ್ದು ಮಂದಿ ದುಭಾಷಿಗಳು ನವುಕರಿ ಕಳೆದುಕೊಂಡನಂತರವೇ ಗೋಯಿಂದರಾಯರು ದುಭಾಷಿಯಾಗಿ ನಿಯುಕ್ತರಾಗಿದ್ದರು. ಆದ್ದರಿಂದ ರಾಯರಿಗೆ ಕುದುರೆಗೆ ಕೋಡುಗಳಿವೆ ಯಂದು ಹೇಳುವ ಧಯರ್ರ್ಯ ಬರಲಿಲ್ಲ.. ಹೇಳೋದನು ಹೇಳಿಯಾದ ಮ್ಯಾಲ.. ಕೇಳೋದನು ಕೇಳಿಯಾದ ಮ್ಯಾಲ ಯಡ್ಡವರ್ಡು ರಾಜಮಾತೆಯನ್ನು ಆಪ್ತ ಸಹಾಯಕಿ ಪವುಲಿನ್ನಳ ಮುಖಾಂತರ....

ರೊತನೇಮ ಕುಲಾಚಾರಗಳ ಯಿಷಯದಲ್ಲಿ ಕಟ್ಟುನಿಟ್ಟಾಗಿದ್ದ ಭಯ್ರುಮಾಂಬೆಯನ್ನು ಜೆನ್ನಿಫರಮ್ಮ ಗವುರವಾದರಗಳಿಂದ ಬರಮಾಡಿಕೊಂಡಳು. ವಬ್ಬರೊಬ್ಬರು ಪರಸ್ಪರ ನೋಡಿ ಬೆರಗಾದರು. ಆಕೆಯಾಡುವ ಮಾತು ಯೀಕೆಗೆ ತಿಳಿವಲ್ಲದು, ಯೀಕೆಯಾಡುವ ಮಾತು ಆಕೆಗೆ ತಿಳಿವಲ್ಲದು. ಮಾತೆಂಬುದು ಕಟಕಟೆಯಲ್ಲಿ ನಿಂತಿತ್ತು. ಮುಂದಿನ ವರುಷ ಲಂಡನ್ನಿನ ಆರ್ಟುಗ್ಯಾಲರಿಯಲ್ಲಿ ನಡೆಯುವ ಚಿತ್ರಕಲಾ ಸ್ಪರ್ಧೆಗೆ ತನ್ನದೊಂದು ಕಲಾಕ್ರುತಿಯನ್ನು ಕಳಿಸಬೇಕಿದ್ದ ಜೆನ್ನಿಫರಮ್ಮ.. ಅದಕ್ಕೆಂದು ನೆನಪಿನ ಶಕ್ತ್ಯಾಧಾರ ಮ್ಯಾಲ ಜಗಲೂರೆವ್ವಳ ಚಿತ್ರಬಿಡಿಸಿದ್ದ ಜೆನ್ನಿಫರಮ್ಮ.. ಆಕೆಯ ಗರುಭದಲ್ಲಿ ರಾಜಮಾತೆಯ ಭಯ್ರುಮಾಂಬೆಯನ್ನು ಬಿಡಿಸಬೇಕೆಂದಿರುವ ಜೆನ್ನಿಫರಮ್ಮ.. ಅಯ್ಯೋ ತಾನ್ಯಾವತ್ತೂ ಚಿತ್ತಾರದೊಳಗ ಮೂಡಿದಾಕೆಯಲ್ಲ.. ಮೂಡುವ ಯಿರಾದೆ ತನಗಿಲ್ಲ.. ಬಣ್ಣ ಪೂಸಿಕೊಂಡು ಸರೀರದ ಅಂಗಾಂಗಾನ ಮಲಿನ ಮಾಡಿ ಕೊಂಡಾಕೆಯಲ್ಲ.. ಯಂದು ಮಿಡುಕಾಡೂತ ಆ ರುದ್ದೆಯು ಬ್ಯಾಡ ತಾಯೀ ಬ್ಯಾಡ ಮಗಳೇ ಯಂದು ಬಗೆ ಬಗೆ ರೀತೀಲಿ ಗೋಗರೆಯುತ್ತಾಳೆ. ಜೆನ್ನಿಫರಮ್ಮ ತೋರಿಸಿದ ವರ್ಣಚಿತ್ರದಲ್ಲಿ ಬಸುರಿ ಜಗಲೂರೆವ್ವ ಬ್ಯಾನೆ ತಿಂಬುತ್ತಿರುವುದನ್ನು ನೋಡಿದ ಮ್ಯಾಲ ರಾಜಮಾತೆಗೆ ಭೂಮ್ತಾಯಿ ಬಾಯಿತೆರೆದು ತನ್ನನ್ನು ನುಂಗಬಾರದೆ ಯಂದೆನ್ನಿಸಿತು. ಆಕೆಯ ಗರುಭದೊಳಗೆ ತನ್ನನ್ನು ಕೂಸಿನೋಪಾದಿಯಲ್ಲಿ ಅಮರಿಸಲು ಹೊಂಚಿರೋ ಯೀ ಕುಂಪಣಿ ಹೆಣುಮಗಳಿಗೆ ಬುದ್ದಿ ಅಯಿತೋ? ಯಿಲ್ಲಮೋ? ಆ ತೊತ್ತಿನ ಕುಲ ಯಾವುದು? ತನ್ನ ಕುಲ ಯಾವುದು? ಆಕೆಯ

ಬಸಿರೊಳಗೆ ರಾಜಮಾತೆಯಾದ ತಾನು!.. ಛೇ.. ಛೇ.. ರಾಜಮಾತೆಯ ಮಿಡುಕಾಟ ವಂದು ರೀತಿಯದಾ? ಯರಡು ರೀತಿಯದಾ?..ಯಿಲ್ಲಿ ಕುಲದ ಪ್ರಶ್ನೆಯಲ್ಲಿ ಬರುವುದಿಲ್ಲ.. ಯಿದು ಕೇವಲ ಚಿತ್ರಮಾತ್ರಯಂದಂತ ಜೆನ್ನಿಫರಮ್ಮ ಯಷ್ಟು ಹೇಳಿದರೂ ಕೇಳುತಾಯಿಲ್ಲ.. ಆಗಿದ್ದು ಚೆನ್ನಿಫರಮ್ಮ ಮಾರೀನ ಸೆಪ್ಪಗೆ ಮಾಡಿಕೊಂಡದ್ದನ್ನು ನೋಡಿ.. ಸಯ್ನಿಕನ ಕಿವೀಲಿ ಠಸ್ಯಾ ಪುಸ್ಯಾಂತ ಯಿಂಗಲೀಸು ಮಾತಾಡಿದ್ದನ್ನು ನೋಡಿ ಯಲ್ಲಿ ತಮ್ಮನ್ನು ಬಂಧಿಸಿ ಸೆರೆಯಲ್ಲಿಡುತಾರೋ ಯಂದು ಯಿಲಯಿಲಾಂತ ವದ್ದಾಡಿದಳು. ಕೊನೀಕೆ.. ನೀನೆಂಗ ಕುಂತಗ ಅಂದರ ಹಂಗ ಕುಂತಗಂತೀನಿ ಕನ್ತಾಯಿ.. ಹೇಳಿಧಂಗ ಕೇಳುತೀನಿ.. ನಿನ ಗಂಡಗ ಹೇಳಿ ಅರಮನೇಲಿಂದ ಮೋಬಯ್ಯನ್ನ ಮಾತ್ರಮೋಡ್ಸು ಯಂದು ದಯನಾಸದಿಂದ ಯಾವತ್ತೂ ತನ ಸರೀರದಿಂದ ಕೇಳಿಕೊಂಡಳು. ಅದು ನೀಡಿದ ನಾನಾ ಯಿಧದ ಪ್ರೇರಣೆಗಳಿಂದ ಸ್ಫೂರ್ತಿ ಪಡೆದು ಜೆನ್ನಿಫರಮ್ಮ ರಾಜಮಾತೆಯನ್ನು ಕಿರೀಟ, ಸಿಮ್ಮಾಸನ ಅರಮನೆ ಸಮೇತ ಜಗಲೂರೆವ್ವನ ಬಸಿರೊಳಗೆ ಯಿಮುರಿದಳು.. ಆ ಆಳೆತ್ತರದ ಚಿತ್ರವನ್ನು ಯಿಯಿದ ದೂರದಲ್ಲಿ ನಿಂತು ನಿರುಕಿಸಿ ತನ್ನೊಳಗಿನ ಕಲಾವಿದೆಯನ್ನು ಅಭಿನಂದಿಸಿಕೊಂಡಳು ಜೆನ್ನಿಫರಮ್ಮ. ಹ್ಹಾ.. ಹ್ಹಾ.. ರಾಜಮಾತೆಯೇ, ನೀನು ಅಜರಾಮರಾಗೋ ಕಾಲ ದೂರವಿಲ್ಲ.. ನೀನು ಜಗದ್ವಿಖ್ಯಾತಳಾಗೋ ಕಾಲ ದೂರಯಿಲ್ಲ ಯಂದು ಭಯ್ರಮಾಂಬೆಯನ್ನು ಅಪ್ಪಿಕೊಳ್ಳುತ್ತಿರುವಾಗ್ಗೆ....

ಯಿತ್ತ ಯಡ್ಡವರ್ಡು ಸೇನಾಪತಿಯಾದ ಅಲಬರ್ಟನನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಕುದುರೆಡವು ಅರಮನೆಯನ್ನು ಮೋಬಯ್ಯನಿಂದ ವಶಪಡಿಸಿಕೊಳ್ಳುವ ಸಂಬಂಧೀ ಯಿಚಾರಗಳನ್ನು ಕುರಿತು ಸಮಾಲೋಚನೆ ನಡೆಸುತ್ತಾ ಯಿದ್ದನು.. ಯಿಷ್ಟುದ್ದ, ಅಷ್ಟಗಲಯಿದ್ದ ಅಲಬರ್ಟು ಧಾರವಾಡದ ಥ್ಯಾಕರೆಸಾಹೇಬನಿಗೆ ತುಂಬಾ ಅಗದಿ ಯಿದ್ದನು. ಜಲ, ನೆಲ, ಪದಾತಿಗಳನ್ನು ಜಾಣಾಕ್ಷತನದಿಂದ ನಡೆಸಿ ಯಿಕ್ಟೋರಿಯಾ ರಾಣಿಯ ಸೊಂತ ಬಾಯಿಯಿಂದ ಶಬ್ಬಾಷ್‌ಗಿರಿ ಪಡೆದಿದ್ದನು. ಅಳ್ಳಗಡ್ಡ, ಕಪ್ಪಟ್ರಾಳ್ಳು, ಪಿಡುಗುರಾಳ್ಳು, ಸಿಂಗನಮಲ ಯಿವೇ ಮೊದಲಾದ ಪಾಳೈಪಟ್ಟುಗಳನ್ನು ಧೂಳಿಪಟ ಮಾಡಿದ್ದನು. ಪತ್ತಿಕೊಂಡ, ಹಲಗೇರಿ, ಆಸುಪರಿಯೇ ಮೊದಲಾದ ಕುರುಚಲು ಅಡವಿ ಪ್ರಾಂತಗಳ ಮುಸುಗು ಮರೆ ಬಂಡಾಯವನ್ನು ನಿರ್ದಯತೆಯಿಂದ ಹತ್ತಿಕ್ಕಿದ್ದನು. ಅವನ ಪರಾಕ್ರಮವನ್ನು ಮೆಚ್ಚಿದ ಥಾಮಸು ಮನ್ರೋ ಸಾಹೇಬನು ಕುಂತಳ ಪರಗಣ

ಸೀಮೆಯಲ್ಲಿ ವುಚ್ಛಾಟಿತ ಪಾಳೇಗಾಂಡ್ರುಗಳಿಂದ ತಲೆದೋರಲಿದ್ದ ಅಂತರ್‌ಯುದ್ಧವನ್ನು ಹತ್ತಿಕ್ಕಲೋಸುಗ ಕೂಡ್ಲಿಗಿಗೆ ಯಡ್ಡವರ್ಡನ ಕಯ್ಯಿಕೆಳಗೆ ಕಾರ್ಯ ನಿರುವಹಿಸಲು ಕಳುಹಿಸಿಕೊಟ್ಟು ಯರಡು ತಿಂಗಳಾಗಿರಲಿಲ್ಲ. ಕೆನ್ನೆಗೂದಲಿಗೂ, ಗಲ್ಲಿ ಮೀಸೆಗೂ ಸಂಬಂಧ ಬೆಸೆದಿದ್ದ ಅತುಲಬಲ ಪರಾಕ್ರಮಿ ಅಲಬರ್ಟನು "ನೆಪೋಲಿಯನ್ ಸಾಮ್ರಾಟನ ಸೇನಾಧಿಪತಿಯಾಗಿದ್ದ ಶೂರ ಕ್ರಿಷ್ಟೋಫರನ ಮಗನಾದ ನಾನು ವಬ್ಬ ಯಕಃಶ್ಚಿತ್ ಮೋಬಯ್ಯನೆಂಬ ಶಿಖಂಡಿಯ ಮೇಲೆ ದಂಡೆತ್ತಿ ಹೋಗುವುದೆ?" ಯಂದನು ಯಡ್ಡವರ್ಡುನ ಆದೇಸಕ್ಕೆ ವುತ್ತರವಾಗಿ....

* * * *

ಬರುವ ಭಕುತಾದಿ ಮಂದಿ ವುಂಡು ಚೆಲ್ಲುವ ಯಂಜಲನ್ನು ತಿಂದು ಸಿರಿಚ್ಛೇತ್ರದ ಪರಿಸರ ನಯರುಮಲ್ಯವನ್ನು ಕಾಪಾಡಲಕೆಂದು ಬೊಮ್ಮಗೊಂಡನ ಕೆರೆ, ತುಪ್ಪಾನಕನಳ್ಳಿ ಕಡೇಲಿಂದ ಕಾಗೆಗಳು ಸಾವುರ ಸಂಖ್ಯೆಯಲ್ಲಿ ಕುದುರೆಡವು ಕಡೇಕೆ ಮುಖ ಮಾಡಿರುವಾಗ್ಗೆ...

ಬರುವ ಭಕುತಾದಿ ಮಂದಿಯ ಮಾನ ಗವುರವ ಕಾಪಾಡಲಕೆಂದು.. ಆಸ್ತಿಪಾಸ್ತಿ ರಕ್ಷಣ ಮಾಡಲಕೆಂದು.. ಆಗಾಗ್ಗೆ ಅರಚಿ ಗಸ್ತು ತಿರುಗಲಕೆಂದು ಗಂಧರ್ವ ಲೋಕದ ಅತಿಗಣ್ಯ ಗಂಧರ್ವರು ನಾಯಿ ರೂಪಧಾರಣ ಮಾಡಿ ನೂರಾರರ ಸಂಖ್ಯೆಯಲ್ಲಿ ಬಾಲ ಅಳ್ಳಾಡಿಸುತ ಕುದುರೆಡವು ಪಟ್ಟಣದ ಕಡೆ ಮುಖ ಮಾಡಿರುವಾಗ್ಗೆ....

ಬರುವ ಭಕುತಾದಿ ಮಂದಿಯು ಕುಂಡಲಾಚ್ಛಾದಿತ ಕರ್ಣಗಳಿಗೆ ಸಂಗೀತಸುಧೆ ಹರಿಸಿ ತಂಪು ಮಾಡಲಕೆಂದು.. ಸುಖ ನಿದ್ದೆ ನೀಡಲಕೆಂದು.. ಯಲೆ, ಪತ್ರೊಳಿ ತಿಂದು ಗ್ರಾಮ ನಯರುಮಲ್ಯ ಕಾಪಾಡಲಕೆಂದು ಕಿನ್ನರ ಲೋಕದ ಕಿನ್ನರರು, ಕಿಂಪುರುಷಲೋಕದ ಕಿಂಪುರುಷರು ಗಾರ್ಧಭ ವೇಷಧಾರಣ ಮಾಡಿ ನಾಗಾಲೋಟದಲ್ಲಿ ಕುದುರೆಡವು ಪಟ್ಟಣದ ಕಡೆ ಮುಖ ಮಾಡಿರುವಾಗ್ಗೆ....

ಬರುವ ಭಕುತಾದಿ ಮಂದಿ ಕಣ್ಣುಗಳಿಗಿಂಪು ಮಾಡಲಕೆಂದು ಲಕುಸ ಸಂಖ್ಯೆಯಲ್ಲಿ ಬಣಬಣ್ಣದ ಚಿಟ್ಟೆ ಪತಂಗಗಳು ಗಾದರಿಮಲೆ ಪ್ರದೇಶದ ಕಡೇಲಿಂದಲೂ...

ಬರುವ ಭಕುತಾದಿ ಮಂದಿ ಮಲಗಿರುವಾಗ ಅವರ ಸರೀರಗಳ ಆಯಕಟ್ಟಾದ ಜಾಗಗಳನ್ನು ಚುಟುಚುಟನೆ ಕಡಿದು ಲವುಕಿಕದ ಪರಿಚಯ

ಮಾಡಿಸಲಕೆಂದು ಸೊಳ್ಳೆ, ದೊಮ್ಮಾರಿ, ಚಿಗಟಗಳು ಯಿಜಯನಗರ ಸಾಮುರಾಜ್ಯದ ಕಡೇಲಿಂದಲೂ ಹೊರಟು ಬರುತಿರುವಾಗ್ಗೆ....

ಮೋಬಯ್ಯ ಮತ್ತವನ ಸಂಗಡಿಗರನ್ನು ಅರಮನೆಯಿಂದ ನಿಖಾಲೆ ಮಾಡಿಸಲಕೆಂದು.. ಆಸ್ತೀಕರಿಗೆ ಗುಣ ಪಾಠ ಕಲಿಸಲಕೆಂದು.. ಕುಂಪಣಿ ಸರಕಾರದ ವತಿಯಿಂದ ಅಲಬರ್ಟನೆಂಬ  ಸೂರ ಸೇನಾಪತಿಯು ಸದರೀ ಪಟ್ಟಣಕ್ಕೆ ಆಗಮನ ಮಾಡಲಿರುವನೆಂಬ ವರ್ತಮಾನವು ಯತ್ತಲಿಂದಲೊ ಮೂಸು ಬಿಟ್ಟಂತೆ ಘಮ್ಮನೆ ಹಬ್ಬಿದೇಟಿಗೆ ಯಾವತ್ತೂ ಮಂದಿಯು ಜಗದಂಬಾ.. ಜಗದಂಬಾss.. ಯಂದು ತಮ ತಮ್ಮ ಕಿವಿಗಳನ್ನು ತಮ ತಮ್ಮ ಕರಕಮಲಗಳಿಂದ ಮುಚ್ಚಿಕೊಂಡುಬಿಟ್ಟಿತು....

ಆ ಸುದ್ದಿ ಯತ್ತಲಿಂದ ಬಂದಿತೋ ಸಿವ ಸಿವಾ.. ಪಾರಿವಾಳದ ಕಾಲಿಗಂಟಿಕೊಂಡು ಬಂದಿತೋ? ಅದರ ಯಿವರವುಳ್ಳ ಟಪಾಲು ಗಾಳಿಗುಂಟ ಹಾರಿ ಬಂದಿತೋ.. ಅಂತೂ ಜನರೆಂಭೋ ಜನರು ಕಲಾವುಲ್ಲಿಯಾದರು.. ತಮ್ಮನ್ನು ತಾವು ಬಚ್ಚಿಟ್ಟುಕೊಳ್ಳಲಕ ಜಗೇವುಗಳಿಗಾಗಿ ಸೋಧನ ಮಾಡಿದರು, ತಮ್ಮ ನಗನಾಣ್ಯ ವಡವೆ ವಸ್ತರ ಅಡಗಿಸಿಡಲಕ ಅಗೇವುಗಳಿಗಾಗಿ ಸೋಧನ ಮಾಡಿದರು.. ಕುಂಪಣಿ ಸಯ್ನಿಕರ ಕಣ್ಣಿಗೆ ಬಿದ್ದರೆಲ್ಲಿ ಸುಟ್ಟು ಭಸುಮ ಆಗುತೇವೋ ಅಂತ ತಮ ತಮ್ಮ ಮನೆಗಳ ಕಿಟಕಿ ಬಾಗಿಲು ಜಾಲಂದ್ರಗಳ ತಿದ್ದುಪಡಿ ಮಾಡಿದರು. ಕತ್ತಲು ಕವಳದಾಗ ಆಗಸದಲ್ಲಿ ಬಾಲದ ಚುಕ್ಕಿಗಳು ಕಾಣಿಸಿಕೊಂಡಿದ್ದವಾss.. ಚುಕ್ಕಿಗಳು ವುದರಿದವಾss.. ಯಂದು ವಿಚಾರಿಸಿದರು. ಕಾಗೆಗಳು ಅರಚಿದವಾss.. ಗೂಗೆಗಳು ಕೂಗಿದವಾss.. ನಾಯಿನರಿಗಳು ಮುಗುಲಿಗೆ ಮುಖ ಮಾಡಿ ಮೂಳಿಟ್ಟವಾ ಯಂದು ಯಿಚಾರಿಸಿದರು.. ವಂದಾರ ಅಪಸಗುನ ಕಾಣಿಸಿಕೊಂಡಿಲ್ಲ ಅಂದ ಮ್ಯಾಲ ಧಯರ್ಯತಾಳುವ ಧಯರ್ಯ ಅವರಿಗೆ ಬರಲಿಲ್ಲ. ಯಿದ್ದಿಲಾಕಾರದ ಕತ್ತಲೊಳಗೆ ಕೆಂಡದುಂಡೆಗಳಂತೆ ಗೋಚರಿಸೋ ಕುಂಪಣಿ ಮಂದಿ ಯೇನಾರ ತಮ್ಮ ಮಯ್ಯಿ ಮ್ಯಾಲ ಮುಗಿಬಿದ್ದಲ್ಲಿ ಆತುಮ ರಕ್ಷಣಾ ಮಾಡಿಕೊಳ್ಳಬೇಕೆಂದು ಭರ್ಚಿ ಭಲ್ಲೇವುಗಳನ್ನು ಮೂಲೆ ಮುರುಕಟ್ಟಿನಲ್ಲಿಂದ ತೆಗೆದು ಗಸಗಸ ವುಜ್ಜಿ, ಥಳಥಳ ಹೊಳೆಯುವಂತೆ ಮಾಡಿ ಸಡನ್ನ ಕಯ್ಗೆ ಯಟುಕೋ ರೀತಿಯಲ್ಲಿ ಯಿಟ್ಟುಕೊಂಡರು. ಯಿಷ್ಟು ಮಾಡುತಾ ಮಾಡುತಾss ಗುಸುಗುಸನೆ ಆಡುತಾs  ಮಾತಾಡುತಾ ಗುಂಪುಗಳಾಗಿ ಯಿಂಗಡಿಸಿಕೊಂಡು....

ಪಟ್ಟಣದ ಹೊರಗಡೆ ಯಿದ್ದ ರಣಬಯಲು ಪವುರಾಣಿಕ ಕಾಲದ್ದು.. ವಂದು ಕಾಲದಲ್ಲಿ ಅಲ್ಲಿ ಜರಾಸಂಧನ ಸರೀರದ ವಾಮಭಾಗಯಿತ್ತಂತ..

ಸಿಸುಪಾಲನ ರುಂಡವನ್ನು ಕತ್ತರಿಸಲೋಸುಗ ಕ್ರಷ್ಣ ಪರಮಾತುಮನೆಸೆದ ಮಾಯಾವಿ ತಳಿಗೆ ಅಲ್ಲಿ ಬಿದ್ದಿತ್ತಂತ.. ಅಲ್ಲಿ ವಂದೆರಡು ಯುದ್ಧಗಳಾಗಿದ್ದವಂತ.. ಅಲ್ಲಿ ರಣ ಭಯ್ರವನಾಯಕ ವಾಯುಸೇವನೆಗೆಂದೇ ಕಟ್ಟಿಸಿದ್ದ ಮೂರುಪ್ಪರಿಗೆ ಮಹಲು ಯಿತ್ತಂತ.. ಯೇಕರಿಕೆ ದೇಕರಿಕೆ ಮಾಡೋರಿಲ್ಲದಾಗಿ ಯರಡು ಮಹಡಿಗಳುದುರಿ ಆಗ್ಗೆ ವುಳಕೊಂಡಿದ್ದು ನೆಲ ಮಹಲು ಮಾತ್ರ.. ಅಂಥ ಘಟನಾವಳಿಗಳಿಂದಾಗಿ ಪ್ರಾಪ್ತವಾಗಿರುವ ರಣಬಯಲೊಳಗ.. ಅಂತರ್ ಪಿಚಾಚಿಯಂಥ ಮಹಲೊಳಗ ವುಳುಕೊಳ್ಳೋದು ವತ್ತಟ್ಟಿಗಿರಲಿ.. ಅದರತ್ತ ನೋಡುದಕ ಯಂಟೆದೆ ಯಿರಬೇಕು.. ಅರಮನೆಯಿಂದ ಪರಿತ್ಯಕ್ತಳಾದ ಕಾಲಕ್ಕೆ ವರ್ತಮಾನ ಬಲು ಬೇಸರವೆಂದು ಕಂಡು ಬಂದು ರಾಜಮಾತೆಯು ಪರಂಪರಾಗತ ಪಿಚಾಚಿಗಳು ತಮ್ಮನ್ನು ವಂದು ಕಡೇಲಿಂದ ಅಮೂಲಾಗ್ರತಿಂಬಲೆಂದೋ.. ಕುಂಪಣಿ ಸರಕಾರದ ಕರುಳಿಗೆ ಸುರುಕು ಮುಟ್ಟಿಸಲೇಂದೋ ಅಲ್ಲಿ ವಸ್ತಿ ಮಾಡಿದ್ದಳು.. ಮೂರವರು ಬಂದು ವಪ್ಪತ್ತಾದರೂ ವುಂಡಿರಾ ಯಂದು ಕೇಳಲಿಲ್ಲ.. ವುಪಾಸಯಿದ್ದೀರಾ ಯಂದು ಕೇಳಲಿಲ್ಲ.. ಯೀಸು ವರಸು ದಿನಮಾನ ತಮ್ಮ ವಂಶಸ್ತರಿಂದ ಆಳಿಸಿಕೊಂಡಂಥಾ ಪ್ರಜೆಗಳಿಗೆ ರಾಜರೆಂಬ ದರಕಾರುಯಿಲ್ಲ, ಯಿವರಿಗೆ ಕುಂಪಣಿ ಸರಕಾರದಿಂದ ತಕ್ಕ ಪಾಠ ಕಲಿಸಬೇಕೆಂದು ನಿಚ್ಚಯಿಸಿ...

"ಅಮ್ಮೋ ತಾಯಿ.. ಭಯ್ರಮಾಂಬೆ.. ಯಿದಾ ನ್ಯಾಯವೇನು? ಕುಂಪಣಿ ಸರಕಾರಕ್ಕ ಬುಲಾವು ಕೊಟ್ಟಿರೋದು ಸಯ್ಯಾ.." ಯಂದು ಮುಕ್ಕರಿದ್ದ ಜನರು ಕೂಗಿದರು.. ಅದಕ್ಕೆ ಪ್ರತ್ಯುತ್ತರ ವಳಗಿನಿಂದ ಬರಲಿಲ್ಲ.. ಆಗಿದ್ದು ಜನರ ಪಯ್ಕಿ ವಂದಿಬ್ಬರು 'ಯಾರಿದ್ದೀರವ್ವಾ.. ಯಾರಿದ್ದೀರವ್ವಾss' ಯಂದನಕಂತ ವಂದೊಂದು ಮೆಟ್ಟಿಲೇರುವುದಕು.. ಮಹಲು ಹಿಂದಕು ಮುಂದಕು ಅಳ್ಳಾಡುದಕು.. ವಬ್ಬಾಕಿ ವಳಗಿನಿಂದ ತಲಬಾಕಲಿಗೆ ಬಂದು ನಿಲ್ಲುವುದಕು ಸರಿಹೋತು.. ಆಕೆ ಯೀಕೆ ಯಿದ್ದಂಗದಾಳ.. ಆಕೆ ಯಿದ್ದಂಗದಾಳ.. ಯಾವಾಕೆಯಾದರೂ ಆಗಿರಲಿ ಯಂದು ಜನರು ಕೇಳಲಕಂತ ಬಾಯಿ ತೆರೆಯುತ್ತಲೆ ಆಕೆಯಿದ್ದು ರಾಜಮಾತೇನ ನೀವು ಮರೆತೀರಪ್ಪಾ.. ನಿಮ್ಮನ್ನು ರಾಜಮಾತೆ ಮರೆತಾಳರಪ್ಪಾ.. ಆಕೆ ತನ್ನ ವಲವು ಮುಯ್ಯುನು ನೀಗಿಕೊಳ್ಳಲಕ ಕಾಸೀಗೋಗಿರಬೌದು.. ರಾಮೇಸುರಕ ಹೋಗಿರಬೌದು.. ಚವುಕಾಸಿ ಮಾಡಲಕ ಕೂಡ್ಲಿಗೀಗೆ ಹೋಗಿದ್ದರೂ ಹೋಗಿರಬೌದು ಕನರಪ್ಪಾ.. ಯೀಗಿಲ್ಲಿರೋದು ಬಾಯಿಸತ್ತ ನಾವು ನಾಕಯ್ದು

ಮಂದಿ ಮಂದಿ ಮಾತ್ರ.. ಅವರ ಪಯ್ಕಿ ನಾನೂ ವಬ್ಬಾಕಿ ಅದೀನಿ.. ಪಟ್ಟಣದಿಂದ ರಣಬಯ್ಲಿಗೆ ಬಂದಿರೋ ನಿಮಗಿಲ್ಲಿ ತಿಂಬಲಕ ಹಣ್ಣು ಹಂಪಲ ಯಿಲ್ಲರಪ್ಪಾ.. ಕುಡಿಯಲಕ ನೀರುನಿಡಿಯಿಲ್ಲರಪ್ಪಾ.. ಅಷ್ಟೇ ಯಾಕ ಬರ್ರಿ.. ಕುಂತಗಳ್ರೀ ಅಂಬಲಕ ಬಾಯಿ ಯಿಲ್ಲರಪ್ಪಾ..” ಯಂದು ಗೊಳ ಗೊಳ ನುಡಿದು ವಳ ಹೋಗಿ ದಬಕ್ಕಂತ ಬಾಗಲಿಕ್ಕಿಕೊಂಡಳು.

“ಯೇನೀಕಿ? ಯಂಥಾಕಿ ಯಿದ್ದಾಳು? ಕೇಳೋ ಯವಧಾನ ತೋರಲಿಲ್ಲ” ಯಂದು ಮಂದಿ ತಮ್ಮ ಗಂಟಲಲ್ಲಿದ್ದ ಮಾತುಗಳನ್ನು ಅನ್ನನಾಳಕ್ಕೆ ಯಿಳಿಬಿಟ್ಟುಕೊಂಡಿತು. ವಡಲ ತಳ ಸೇರಿದಂಥ ಮಾತುಗಳು ತರಾವರಿ ನ್ರುತ್ಯಾಲಾಪಕ್ಕೆ ತೊಡಗಿರಲು, ಗತಿ ಕಾಣದೆ ವದ್ದಾಡುತ್ತಿರಲು, ಪರಸ್ಪರ ಸಂತಯಿಕೆಗೆ ತೊಡಗಿರಲು ಯಿಷಣ್ಣವದನಗೊಂಡ ಮಂದಿಯು ಪವಾಡ ಮಯ್ಮೆಗಳನ್ನು ವಂದರ ಮ್ಯಾಲೊಂದರಂತೆ ತೋರಿದ ಮೋಬಯ್ಯ ಯಿರುವಾಗ ತಾವ್ಯಾಕೆ ಯಸನಗಳನ್ನು ನವೆಯಬೇಕು ಯಂದು ನಿರ್ಧರಿಸಿದರು....

ತಮಗೆ ಯುದ್ಧ ರಣರಗಳೆಗಳೆಂಬುದೇನು ಹೊಸದಲ್ಲ.. ಅವು ವಂದರಮ್ಯಾಲೊಂದರಂತೆ ಬಂದಿರುವುದುಂಟು.. ಕಾಲಿಗೊಂದೊಂದು ಹಾನಿ ಮಾಡಿ ವಾಪಾಸೋರುವುದುಂಟು.. ಮನೆಮನೆಗಳಲ್ಲಿ ಪ್ರಾಣ ನಷ್ಟ ಮಾಡಿಕೊಂಡವರುಂಟು.. ಆಸ್ತಿಪಾಸ್ತಿ ನಷ್ಟ ಅನುಬೋಸಿದವರುಂಟು.. ವಂದಲ್ಲಾವಂದು ಅಂಗಾಂಗ ಲುಕ್ಸಾನು ಮಾಡಿಕೊಂಡೋರುಂಟು.. ಬಲಿದಾನಕ್ಕ ಹಿಂದು ಮುಂದು ನೋಡೋರು ವಬ್ಬರಾದರೂ ವುಂಟಾ ಪಟ್ಟಣದೊಳಗ?.. ಯೀರಗಲ್ಲುಗಳು, ಮಾಸ್ತಿಗಲ್ಲುಗಳು ಮನಾರ ಯಿರೋ ಪಟ್ಟಣದೊಳಗ....

“ಅಲಲಲಾss ರಾಜಮಾತೆ.. ನಿನ್ನ ಗಂಡಂದಿರು, ಮಕ್ಕಳು, ಮೊಮ್ಮಕ್ಕಳಂದಿರು ಮಾಡಿದ ಘನ ಕಾರ್ಯ ಬಾಯಿ ಬಿಚ್ಚಿ ಹೇಳಬೇಕಾ? ನಿನ್ನ ರಾಜರ ಪಾಪದ ಕೊಡ ತುಂಬ್ತು.. ಸಿಮ್ಮಾಸನ ಸಮೇತ ಅರಮನೇನ ಸಾಂಬವಿ ಕಬಜಾ ಮಾಡಿದಳು.. ಯಿದು ನಿನ್ನ ಪರೀಕ್ಸೆ ಕಾಲ ಅಂತ ತಿಳಕೊಳ್ಳಿಲ್ಲಲ್ಲಾ, ನಿನ್ನ ನಿಷ್ಟೇನ ತಾಯೀಗೆ ಮನವರಿಕೆ ಮಾಡಿಕೊಡ್ಲಿಲ್ಲಲ್ಲಾ.. ಕುಂಪಣಿ ಸರಕಾರದ ಮಟ ವಯ್ದು ದೂರು ಕೊಟ್ಟಿದ್ದೀಯಲ್ಲಾ.. ಯಿದು ಸರೀನಾ?.. ನಿನ್ನ ಸಾಂಬವಿ ನೋಡ್ಕಂತಾಳ.. ನಮಗ್ಯಾಕ ನಿನ್ನ ವುಸಾಬರಿ” ಯಂದನಕಂತ ಮಂದಿ ರಣಬಯಲಿನಿಂದ ಹೊರಟು ಬಂದು ಪಟ್ಟದೊಳಗೆ ಅಂಡಾವರನ ಗೊಂಡರು....

ಬತೇರಿಗಳನ್ನೇರಿ ಕೂಡ್ಲಿಗಿ ಹಾದಿಯುತ್ತ ತಮ ತಮ್ಮ ಕಣ್ಣುಗಳನ್ನು

ಬಿತ್ತಿದವರೆಷ್ಟೋ? ನಡೋ ದಾರೀಲೆ ಕುಂಪಣಿ ಸಯ್ನಿಕರ ಮ್ಯಾಲ ಮುಗಿಬಿದ್ದು ಮೋಡಿಸಬೇಕೆಂದವರೆಷ್ಟೋ? ಅವ್ವಾ.. ಅವ್ವಾ... ಯಂದನಕಂತ ಅರಮನೆ ಕಡೇಕ..

ಮಯ್ಯಿ ತೊಳೆದ ಮುತ್ತಿನಂಗ ಥಳ ಥಳ ಹೊಳೆಯುತ್ತಿದ್ದ ಅರಮನೆಯ ಸುತಮುತ್ತ ಯಲ್ಲಿ ನೋಡಿದರೂ ಜನಮೋ.. ಜನ.. ಮುಂದೊಂದು ಹೆಜ್ಜೆಯಿಟ್ಟಲ್ಲಿ ಯೇನಾಯ್ತದೋ ಯಂಬ ಅಳುಕು.. ತಾವು ನಿಂತಿರುವಂಥ ನೆಲವೇ ಅವ್ವನ ಸನ್ನಿಧಿ ಯಂದು ಭಾವಿಸಿ ಮುಕ್ಕುತಲಿದ್ದರು.. ನೆಲದ ಹುಡಿಯನ್ನೆ ಅಂಗಾರ ಯಂದು ಭಾವಿಸಿ ತಮ ತಮ್ಮ ಹಣೆಗೆ ತಿಲಕ ಯಿಕ್ಕಂತಿದ್ದರು.. ತುಟಿಮೋಳು ಮಾಡದೆ ತಮ ತಮ್ಮ ಯದೆಯಾಗಿನ ಗಿದ್ದುನ ಯಸನವನ್ನು ತೋಡುಕಂತಿದ್ದರು.. ತಮ ತಮ್ಮ ಕಣ್ಣು ಮುಚ್ಚಿ ಅವ್ವನ ಲೀಲಾಯಿನೋದದ ದರುಸನ ಪಡಕಂತಿದ್ದರು.. ತಮ ತಮ್ಮ ಕಿವಿಯೊಳಗೆ ಅವ್ವನ ಹೆಜ್ಜೆಯ ನಾದ ಕೇಳಿಸಿಕಂತಿದ್ದರು....

ಮೋಬಯ್ಯ ತನ ಮುಂದ ಯೊಟಗಲ.. ಆಟುದ್ದದ ತಳಿಗೆಯನ್ನು ಯಿರಿಸಿಕೊಂಡಿದ್ದ, ಅದು ಅಪ್ಪಟ ಚಿನ್ನದ್ದಾಗಿತ್ತು. ಸಂತಾನಾಪೇಕ್ಷೆವುಳ್ಳವನಾಗಿದ್ದ ಚೀಕಲಪರವಿಯ ಬೆಟ್ಟಪ್ಪೊಡೆಯನು ಭಕುತಿಪೂರುವಕವಾಗಿ ಅದನು ಅರುಪಣ ಮಾಡಿ ವಂದೆರಡು ದಿವಸವಾಗಿತ್ತು. ಅದರೊಳಗ ವಂದು ಚೆಟ್ಟಿ ಚಿಗುರೆಲೆ, ಬೆಣ್ಣೆಯಂಥ ಸುಣ್ಣ ತುಂಬಿದ್ದ ಬೆಳ್ಳಿ ಬಟ್ಟಲು, ಯಾಲಕ್ಕಿ, ಲವಂಗ, ಪತ್ರೆ, ಪಚ್ಚೆಕರುಪುರ ಗೋಟಡಕೆ, ವಂದು ಸಿವುಡು ಗರಿಗರಿ ತಂಬಾಕು ಮತ್ತಿತರ ತಾಂಬೂಲ ಸಾಮಾಗ್ರಿಗಳನು ಯಿರಿಸಲಾಗಿತ್ತು. ಹಾಯವ್ವ, ಅಂಜಿಕೆವ್ವ, ಗಾದಿರೆವ್ವ ವೊದಲಾದವರು ಅವಯ್ಯನ ಸಂಚಿ ವೂಳಿಗಕ್ಕೆ ತಮಗ ತಾವs ನಿಯುಕ್ತಗೊಂಡಿದ್ದರು. ತನಗ ಸದ್‌ಬುದ್ದಿ ದಯಪಾಲಿಸೆಂದು ಹುರುಳಳ್ಳಿಯ ಕೋರಿ ಚನ್ನನ ಗವುಡ ಹೋದ ವಾರ ಭಕುತಿಪೂರುವಕವಾಗಿ ಅರುಪಣ ಮಾಡಿದ್ದ ಪಂಚಲೋಹದ ಪಿಕದಾನಿಯನ್ನು ಕಾಡುಗೊಲ್ಲರೀರಜ್ಜನು ಅವಯ್ಯನ ಬಲ ಬದಿಯಲ್ಲೂ, ವಂದೆರಡು ತಲೆಮಾರು ಕಾಲದಿಂದ ಹೊಗೆಯಾಡುತ್ತಿರುವ ದಾಯಾದಿ ಕಲಹಕ್ಕೆ ವಂದು ಗತಿ ಕಾಣಿಸೆಂದು ಕೋರಿ ಮಾಕಮಡಿಗನ ಹೊಟ್ಟೆ ಕೊರಲಯ್ಯನು ನಾಕಯ್ದು ದಿವಸಗಳ ಹಿಂದೆಯೇ ಭಕುತಿಪೂರುವಕವಾಗಿ ಕೊಡ ಮಾಡಿದ್ದ ಚಾಮರ ಗಳಿಂದ ಗಾಳಿ ಬೀಸುತಲಿದ್ದ ಗೂಡ್ಲಪಾಲಯ್ಯನು ಅವಯ್ಯನ ಯಡ ಬದಿಯಲ್ಲಿದ್ದನು. ಗೊರ್ಲಿಪಾಲಕ್ಕ, ಮ್ಯಾಸರ ಮಲ್ಲವ್ವ, ಪುರಗುಂಡಿ ಕನ್ನವ್ವ ಮೊದಲಾದ ಕಂಚಿನ ಕಂಠದ ಗಾಯಕಿಯರು ಸನ್ನಿಧಿ ಯದುರಾ ಬದುರಾ ಕೂಕಂಡು ಸಾಂಬವಿ ಕುಡುರೆಡವು ಪಟ್ಟಣವನ್ನು

ಪ್ರವೇಶ ಮಾಡಿದ ಪರಿಯನ್ನು ಪದ ಮಾಡಿ ಕೊಂಡಾಡುತಲಿದ್ದರು. ಸದರಿ ಅರಮನೆಯೊಳಗs ಮುಂದೊಂದು ದಿವಸ ತಾನು ಸಜೀವ ಸಮಾಧಿ ಹೊಂದಲೋಸುಗ ಅಲ್ಲೆಲ್ಲೋ ವಂದು ಕಡೀಕೆ ಬಳಗಟ್ಟೆ ವಡ್ಡರಿಂದ ಸಮಾಧಿ ಕಾಮಗಾರಿ ನಡೆಸಿದ್ದನು. ಬಂದು ಹೋಗುತಲಿದ್ದ ಭಕುತಾದಿ ಕಣ್ಣಿಗೆ ಕೇವಲ ಮೋಬಯ್ಯನ ಭವುತಿಕಕಾಯ ಮಾತ್ರಗೋಚರ ಮಾಡುತಲಿರಲಿಲ್ಲ.. ಅದರ ಬದಲಿಗೆ ಸಾಚ್ಚಾತ್ ಆದಿ ಸಗುತಿಯನ್ನೇ ತಾವು ತಮ್ಮ ಕಲ್ಪನದೊಳಗೆ ಆರೋಪ ಮಾಡಿಕೊಳ್ಳುತಲಿದ್ದರು. ಸಾಂಬವಿ ತಾನಿರುವಲ್ಲಿಂದಲೇ ತ್ರಿಲೋಕ ಸಂಚಾರ ಮಾಡುತಲಯ್ದಾಳೆ.. ಸಚರಾಚರಗಳ ತಲೆ ನೇವರಿಕೆ ಮಾಡುತಲಯ್ದಾಳೆ.. ಯಾವ ಮೂರ್ತದಂದು ತಾನು ಸಿಮ್ಮಾಸನವ್ನೇರಿದಳೋ.. ಯಾವ ಚಣ ಅರಮನೇನ ಕಬ್ಜಾ ಮಾಡಿದಳೋ ಆ ಚಣದಿಂದಲೇ ಕುಂಪಣಿ ಸರಕಾರದ ಯಿರುದ್ಧ ಸೆಡ್ಡೊಡೆದು ನಿಂತವಳೆ ಯಂದು ಮುಂತಾಗಿ ತಮಗ ತಾವ ಮಾತಾಡಿಕೊಳ್ಳುತಲಿದ್ದರು....

ಯಿ ತರಾವರಿ ಮುಪ್ಪಾನು ಮುದೇರೊಟ್ಟಿಗೆ ಮೋಬಯ್ಯ ಸೇರಿಕೊಂಡು ಯೇನೋ ಮಸಲತ್ತು ನಡೆಸಿರುವಂಗಯ್ತೆ ಯಂಬ ಅನುಮಾನ ಪಟುಗೊಂಡು ಬರುತಲಿದ್ದವರೂ ಅವರಿವರಲ್ಲಿಲ್ಲದೆ ಯಿರಲಿಲ್ಲ.. ಅಂಥ ಅರೆಬರೆ ಆಸ್ತೀಕ ಮಂದಿಯ ಪಂಚೇಂದ್ರಿಯಂಗಳಿಗೆ ಮೂಗುದಾಣ ಪೋಣಿಸುವ ಕ್ರಿಯಾಕಟ್ಟಲೆ ಅಲ್ಲಿ ಲಗು ಲಗೂನ ನಡದೇ ಬಿಡುತಲಿತ್ತು.. ಆಗ ಅಂಥವರು ಯೇನೋ ನೋಡಲಕೆಂದು ಬಂದವರು ಬ್ಯಾರೆ ಯೇನೋ ವಂದು ನೋಡಿದಾಂಗುತ್ತಿರುವುದಲ್ಲಾ.. ಯೇನೋ ಕೇಳಲಕೆಂದು ಬಂದವರು ಬ್ಯಾರೆ ಯೇನೋ ಕೇಳಿದಾಂಗ ಆಗುತ್ತಿರುವುದಲ್ಲಾ.. ತಮಗ ಯಾರೋ ಮಾಯಾ ಮಂತರ ಮಾಡಿದಾಂಗುತ್ತಿರುವುದಲ್ಲಾ... ಯಂದು ಮುಂತಾಗಿ ತಮಗೆ ತಾವ ಅನಕಂತ ಹೋಗುತಲಿದ್ದರು. ಯಿದೆಂಗಾತದ.. ಅದೆಂಗಾತದ ಅಂತ ಕೇಳಬೇಕೆನ್ನುವವರಿಗೆ ಹಿರೀಕರು ಯಿದೆಲ್ಲ ಮೂಳೆ ತಡಿಕೆಯಂಥ ಹುಲುನರರಿಗೆ ಅರ್ಥ ಆಗೋ ಯಿಷಯವಲ್ಲ.. ನೀವೆಲ್ಲ ಅನುಭಾವದ ನೆಲೆಯೊಳಗೆ ನಿಂತು ಯೋಚಿಸುವುದನು ಮೊದಲು ಕಲ್ತುಗೊಳ್ಳಿರಿ.. ಆಗ ಮೋಬಯ್ಯನ ದಿವ್ಯ ಸರೀರದೊಳಗ ವಸ್ತಿ ಮಾಡಿರೋ ಆದಿಸಗುತಿಯ ಸಾಕ್ಷಾತ್ಕಾರ ಆಗ್ತದ.. ಯಂದು ನಚ್ಚ ಜೆಪ್ಪಿ ಕಳುವುತ್ತಿದ್ದರು. ಯಿನ್ನು ಕೆಲವರು ಮುಂದಕೆ ಹೋಗಿ ನಾಕುಮಂದಿ ನಂಬುವುದನ ನಂಬುವುದು, ನಂಬಿದಾಂಗ ನಟನ ಮಾಡುವುದು ಜಾಣ್ತನ

ಕಣರಯ್ಯಾ.. ಯಂದು ಹೇಳುತ ಲೋಕಗ್ನಾನ ಮೆರೆಯುತಲಿದ್ದರು. ಹಿಂಗs ಅರಮನೆಯೊಳಗ ಆರು ಮೂರಾಗುತಲಿದ್ದ ಪರಿಯ.. ಮೂರು ಆರಾಗುತಲಿದ್ದ ಪರಿಯ ಯೇನು ಹೇಳಲಿ ಸಿವನೇ....

ಬಜ್ಜಿ ಚಂಡಯ್ಯನ ಅವಳಿ ಜವಳಿ ಮಕ್ಕಳಾದ ರುಂಡಯ್ಯ, ಮುಂಡಯ್ಯ ತಾವಿದ್ದ ಬತೇರಿ ಮ್ಯಾಲಿಂದಲೇ ಅಟ್ಟಂಬಟ್ಟಾರಣ್ಯೇವಿನ ಬಯ್ತಲೆ ಯಂಥ ಹಾದಿಗುಂಟ ಕೆಂಧೂಳನ್ನೂ.. ಕೆಂಧೋಳೊಳಗೆ ಹತ್ತಾರು ಕುದುರೆ ಸವಾರರನ್ನೂ ಕಂಡರು. ಬತೇರಿಯಿಂದ ಅಬಡಾ ದಬಡಾ ಕೆಳಗಿಳಿದು ಹ್ಹಾ..ಹ್ಹಾ.. ಅಲಬರ್ರೊ.. ಹೋ.. ಹೋ.. ಅಲಬರ್ರೂ ಯಂಬ ಯಿಲಚ್ಛಣ ನಾಮವಾಚಕವನ್ನೂ, ಬಂದ್ರೂ.. ಬಂದ್ರೂ.. ಯಂಬೆರಡು ಮಾಯಾವಿ ಕ್ರಿಯಾಪದಗಳನ್ನು ಪ್ರತಿಯೊಂದು ಕಿವಿಯೊಳಗ ಬಿತ್ತುತ್ತ ಮಾಯವಾದರು. ಅದರ ಹಿಂದೆಯೇ.. ಬಜ್ಜಿ ಚಂಡಯ್ಯನ ಮಕ್ಕಳ ಮಾತನ್ನು ನಂಬುವುದೆಂತು? ಸುಳ್ಳೇ ಆತನ ಮನೆದೇವರು.. ನೀರಿಗೆ ಹಾಲು ಬೆರೆಸುವಲ್ಲಿ ನಿಪುಣರಾದ ಅವರ ಮಾತಿನಲ್ಲಿ....

ಅಲಬರ್ರು ತನ್ನ ಕಿರುಸೇನಾ ತುಕುಡಿಯೊಂದಿಗೆ ಬಂದೇ ಬಿಟ್ಟನು. ತಾನು ಅಂದುಕೊಂಡಿದ್ದೊಂದು.. ಯಿಲ್ಲಿ ತನಗೆ ಗೋಚರ ಆಗುತ್ತಿರುವುದೇ ಯಿನ್ನೊಂದು.. ಕೋಟೆಯ ದಿಡ್ಡಿಬಾಗಿಲು ಹಾರೊಡೆದಿರುವುದಲ್ಲಾ.. ಕಾವಲು ಕಾಯುವಂಥ ವಬ್ಬೇ ಸಯ್ನಿಕನ ಸುಳಿವಿಲ್ಲವಲ್ಲಾ.. ಯಿದೆಂಥಾ ಸಾಮುರಾಜ್ಯವಿದ್ದೀತು? ಯಂದು ವುದ್ಗಾರ ತೆಗೆದನು. ತಲುಪು ತಲುಪುತ್ತಿದ್ದಂತೆ ಕನಿಷ್ಟಪಕ್ಷ ವಂದುನೂರು ಮಂದಿ ಸತ್ರುಸಯ್ನಿಕರನ್ನು ಢಮ ಢಮಾರೆಂದು ಸಾಯಿಸಿ ಪರಾಕ್ರಮ ಮೆರೆಯಬೇಕೆಂದು ಭಾವಿಸಿದ್ದನು. ಆದರೆ ಅಂಥದ್ದೊಂದು ರಕುತಪಾತಕ್ಕೆ ಅಲ್ಲಿ ಆಮಂತ್ರಣ ಯಿರಲಿಲ್ಲ.. ಕಾಲು ಕೆದರಿ ಜಗಳ ತೆಗೆಯೋರಿರಲಿಲ್ಲ.. ಮುಖಮಾರೀನ ಗಂಟು ಹಾಕ್ಕೊಂಡು ದುರುದುರುಗುಟ್ಟಿ ನೋಡುವವರಿರಲಿಲ್ಲ.. ಅದಕ ಬದಲಾಗಿ....

ಬರ್ರೀ ಬರ್ರೀ.. ಬಿಸುಲಾಗ ಬಂದು ದಣುಕೊಂಡಂಗದೀರಿ.. ಕೂಕಳ್ಳುತೀವಂದರ ನೆಳ್ಳು ಮಾಡತೇವ.. ಹಸದೀವಂದರ ವುಂಬಲಕ ಬಾನ ಹಾಕತೇವ.. ನೀರಡಸೀದಿವಂದರ ಕುಡಿಯಲಕ ನೀರು ನಿಡಿ ಕೊಡುತೇವ ಅಂಬುವವರು ಹೆಜ್ಜೆ ಹೆಜ್ಜೆಗೆ ತಗುಲಿ ತನ್ನನ್ನು ಗಾಬರಿಗೊಳಿಸತೊಡಗಿದರು.

ತನಗಷ್ಟೆ ಅಲ್ಲ.. ತನ್ನಂಥ ಯಾವುದೇ ಸೂರ ಸೇನಾನಿ ಹೆಮ್ಮೆ ಪಡುವಂಥ ಪಟ್ಟಣವು ಕುದುರೆಡವು.. ಬಸರೊಳಗ ಶಿರಸ್ತ್ರಾಣ, ಕವಚ, ಸಸ್ತರಾಸ್ತರಧಾರಣ

ಮಾಡಿಯೇ ಯಿಲ್ಲಿ ಕೂಸು ಹುಟ್ಟು ತಯ್ತೆ ಯಂಬ ಪ್ರತೀತಿಯು.. ತಮ್ಮ ಮಗ ಹರೇವಿಗೆ ಬಂದೊಡನೆ ಕಾಳಗದೊಳಗ ನುಗ್ಗಾಡಿ ಸತ್ರುಸಯ್ನಿಕರನ್ನು ಸೆದೆ ಬಡಿದೇ ಯಿೂರ ಸೊರಗ ಸೇರಬೇಕೆಂದು ಯಿಲ್ಲಿರುವ ಪ್ರತಿಯೋರ್ವ ತಾಯಿಯ ಕನಸು ಯಂಬುದು ಜನಜನಿತವು.. ತಮ್ಮ ಕಣ್ಣೋಟ ಮಾತ್ರದಿಂದ ಸತ್ರುಗಳನ್ನು ಅರ್ಧ ಸಾಯಿಸಬಲ್ಲ ಸೂರರಿಗಿಲ್ಲಿ ಬರವಿಲ್ಲ ಯಂಬುದು ತಾನು ಕಂಡುಂಡಿರುವ ಸತ್ಯವು.. ಕುಂತಳ ಪ್ರಾಂತದೊಳಗ ಯಲ್ಲೇ ಯುದ್ದ ಕಾಳಗ ನಡೆಯಲಿ.. ಅಲ್ಲಿ ಸದರಿಪಟ್ಟಣದ ಮಂದಿ ಯಿದ್ದೇ ಯಿರುತಾರ.. ಕುಂತಳ ಪ್ರಾಂತದ ಮೂಲೆ ಮೂಲೆಯಲ್ಲಿರುವ ಯಿೂರಗಲ್ಲು, ಮಾಸ್ತಿಗಲ್ಲುಗಳೊಳಗ ಬದುಕಿರೋರು ಯಿೂ ಪಟ್ಟಣದವರss..

ಆದರ ತಾನೀಗ ನೋಡುತ್ತಿರುವುದೇನು? ಕೇಳುತ್ತಿರುವುದೇನು? ಮಾಯಾವಿ ಮೋಬಯ್ಯನ ಮಸಲತ್ತುಗಳ ಪಯ್ಕಿ ಯಿದೂ ವಂದಾಗಿರಬೌದಾ ಯಂಬ ಅನುಮಾನಮೂಬಾರದಿರಲಿಲ್ಲ ಅಲಬರ್ಟನಿಗೆ.. ಯೇನೇ ಆಗಲಿ ತಾನು..

ಪ್ರವೇಶ ಮಾಡಿದಂಥ ಅರಮನೆ ವಂದು ಅರಮನೆಯಾss.. ಸಿಮ್ಮಾಸನದ ಮ್ಯಾಲ ಲೀಲಾಯಿನೋದ ಮಾಡುತ, ವಂಚೂರಾದರೂ ಗಾಂಭೀರ್ಯಯಿಲ್ಲದ ಹೆಂಗಬೇಕೋ ಹಂಗ ಕೂಕಂಡಿರುವ ಮೋಬಯ್ಯನು ವಬ್ಬ ರಾಜನಾss.. ಆದರೆ ಅವಯ್ಯನ ಕರಿದುಟಿಗಳ ನಡುವೆ ನ್ರುತ್ಯ ಮಾಡುತಲಿದ್ದಲಾಸ್ಯವು ಯಾವ ಯಿಟ್ಟೋರಿಯಾ, ಯಲಿಜಬೆತ್ತು ರಾಣಿಯಂದಿರ ಮುಖಗಳ ಲಾಸ್ಯಕ್ಕಿಂತ ಕಡಿಮೆಯಿರಲಿಲ್ಲ.. ಆತನ ನಿಸ್ತೇಜ ಕಣ್ಣುಗಳಲ್ಲಿ ಯುದ್ಧಸಂಬಂಧೀ ತರಾವರಿ ಸಾಮಾಗ್ರಿಗಳಡಗಿರುವಂತೆ.. ಆತನ ಮುಖದ ನಿರಿಗೆಗಳಲ್ಲಿ ಬಯಬಲ್ಲಿನ ಪ್ರಾಚೀನಾಕ್ಕರಗಳಿರುವಂತೆ ತನಗೆ ಭಾಸವಾಗುತ್ತಿರುವುದು.. ತನ್ನೊಂದಿಗೆ ದುಭಾಷಿಯಾಗಿ ಬಂದಿರುವ ಯಂಕೋಬರಾಯನು ಗಂಟಲು ಕೆರಕೊಂಡು ವುಗುಳು ನುಂಗುತ್ತಿರುವ ಸದ್ದು ಕೇಳಿ ಬರುತಲಿರುವುದು....

ಅಲಬರ್ಟನ ಬಾಯಿಯಿಂದ ವಂದನೆಯದು ಯಾಕ ಹನ್ನೊಂದನೇ ಪ್ರಸ್ನೆಯೂ ಹೊರ ಹೊಂಡದಾಂಗಾತು.. ಮುಂದಕ ಯೇನಾತೋ? ಯೇನು ಬಿಟ್ಟಿತೋ..?

ಮೂಕ ಯಿಸುಮಿತಗೊಂಡ ಭಕುತಾದಿ ಮಂದಿ ಸಿವನ್ನಾಮ ಪಾರೊತೀ ಪತಿ ಹರಹರ ಮಾದೇವಾss ಯಂದು ವಕ್ಕೊರಲಿನಿಂದ ಕೂಗುತಿರುವಾಗ್ಗೆ....

ಸಿಟ್ಟು ಸೆಡವುಗಳಿಂದಾತೀತಗೊಂಡ ಅಲಬರ್ಟು ಯಿಚಿತ್ರಾನಂದಾವೇಸದಲ್ಲಿ

ತೇಲಾಡಿದನು. ಯುದ್ಧ ಸಂಬಂಧೀ ನೆನಪುಗಳ ವಸ್ತುಸಂಗ್ರಹಾಲಯದಂತಿದ್ದ ತನ್ನ ಸರೀರದ ವಳಗ ಆರಾಮು, ಹೊರಾಗ ಆರಾಮು ಆಗಿರುವಂತೆ ಭಾಸವಾಯಿತು. ಅಯ್ಲು ಸಾಂಕ್ರಾಮಿಕಗೊಂಡಾತನು ಓಹ್.. ಮದರಿಂಡಿಯಾ ಯಂದುದ್ಗಾರ ತೆಗೆದೆನೆಂಬಲ್ಲಿಗೆ ಸಿವ ಸಂಕರ ಮಾದೇವಾss...

* * * *

ಯಿೊ ಸುದ್ದೀನ ಸುತ್ತನ್ನಾಕಡೆ ಹಾಡುಕಟ್ಟಿ ಬಿತ್ತುವಣಿಗೆ ಮಾಡಲಕಂತ ಹೂಜಾಡ್ಲರ ಮಾಯವ್ವ, ವಡರಳ್ಳಿ ಸಣ್ಣಕ್ಕ, ಹಿರಿಯವ್ವ ಯಿವರೆಲ್ಲ ಕಿರಿಯವ್ವನ ನೇತ್ರುತ್ವದಲ್ಲಿ ಬಾನೂರು, ಬಸನೂರು, ಕಡೇಕೂ, ಜೀವವ್ವ, ಮಾಡೆವ್ವ, ಕಂಪ್ಲಿಬೋರವ್ವ, ಗೊಂಡೆಬೋಸವ್ವ ಯಿವರೆಲ್ಲ ಗರುಡವ್ವನ ನೇತ್ರುತ್ವದಲ್ಲಿ ಯಕ್ಕೇಗುಂದಿ, ವಳಗುಂದಿ, ಮುಕ್ಕುಂದಿ ಕಡೇಕೂ.. ಯತ್ತಪ್ಪ, ಆಕಳಪ್ಪ, ಗೂಳೆಪ್ಪಯಿವರೆಲ್ಲ ಕರುವಪ್ಪನ ನೇತ್ರುತ್ವದಲ್ಲಿ ಗೋನಾಳು, ಜಾಲ್ಯಾಳು, ಬ್ಯಾಲಾಳು ಕಡೇಕೂ ಹೊಂಟಿರುವಾಗ್ಗ....

ಅಲಬರ್ಟು ತನ್ನ ಮೇಲಧಿಕಾರಿ ಯಡ್ಡವರ್ಡನ ಪಾದದ ಬುಡದಲ್ಲಿ ಮಂಡೆಮೂರಿ ಕುದುರೆಡವು ಯಾಟಿಕಾನ್ ಪಟ್ಟಣ ಯಿದ್ದಂಗಯ್ತೆ.. ಅರಮನೆ ಗೋಲ್ಗೊಥಾ ಬೆಟ್ಟ ಯಿದ್ದಂಗಯ್ತೆ.. ಮೂಳೆಮೋಬಯ್ಯ ಸಾಚ್ಛಾತ್ ಜೀಸಸ್ ಯಿದ್ದಂಗವನೆ.. ಅಲ್ಲಿನ ಮುದುಕರೆಲ್ಲ ಬಯಬಲ್ಲಿನ ಹಾಳೆಯಿದ್ದಂಗವರೆ.. ಯಂದು ಮುಂತಾಗಿ ನಿವೇದಿಸಿಕೊಳ್ಳುತ್ತಿರುವಾಗ್ಗ....

ಜೆನ್ನಿಫರಮ್ಮ ರಚನೆ ಮಾಡಿದಂಥ ಕಲಾಕ್ರುತಿಯು ಚಿತ್ರಕಲಾ ಪ್ರದರ‍್ಯನದಲ್ಲಿ ಭಾಗಿಯಾಗುವ ನಿಮಿತ್ತ ಜಾರ‍್ಜು ಯಂಬ ಜಹಜಿನಲ್ಲಿ ಸಮುದ್ರದಗುಂಟ ಲಂಡನ್ನಿನತ್ತ ಪ್ರಯಾಣ ಕಯ್ಕೊಂಡಿರುವಾಗ್ಗ...

ಯಿತ್ತ ಕುದುರೆಡವು ಪಟ್ಟಣದೊಳಗೆ ಯಲ್ಲಿ ನೋಡಿದರಲ್ಲಿ ಸಂಭರಮೋ ಸಂಭರವು, ಬೀದಿ ಗತ್ತತ್ತರಂತೆ ತಳಿರುತೋರಣಗಳು.. ಮುತ್ತಿನ ಚಪ್ಪರಗಳು.. ಮಂಟಪಗಳು.. ಸಾರಣೆ ಕಾರಣೆ ಮಾಡಿದ ನೆಲವು.. ಹೆಜ್ಜೆ ಹೆಜ್ಜೆಗೊಂದೊಂದರಂತಿದ್ದ ರಂಗವಲ್ಲಿಗಳು.. ಕಿವಿ ಚಾಚಿದರಲ್ಲೆಲ್ಲ ತಾಯಿಯ ಮಯ್ಮೆ ಕೊಂಡಾಡುವ ಹಾಡುಪಾಡುಗಳು.. ಕಣ್ಣು ಚಾಚಿದರಲ್ಲೆಲ್ಲ ತಾಯಿಯ ಪವಾಡ ಗಳಿಗೊಂದೊಂದು ಯಾಸ ಕಟ್ಟಿ ಕುಣಿಯುತಲಿದ್ದ ಹಗಲು ಯಾಸಗಾರರ ತಂಡಗಳ ಆಟಗಳು....

ದುಕ್ಕತಪ್ತಾತನಂದಾವೇಸಭರಿತರಾದ ಜನರು ಯಜ್ಜಾss ಯಜ್ಜಾ ಅಂದಕಂತ

ಮುಂದಕ ಹಿಂದಕ ಸರಿದಾಡುತಲಿರುವಾಗ್ಗೆ.. ಯಜ್ಜಾ ನಿನ್ನ ಮುಖವನ್ನಾರ ತೋರ್ಸು ಯಂದು ಮೊರೆಯಿಡುತಿರುವಾಗ್ಗೆ ಅರಮನೆ ವಳಗಡೆ ಹಂಪಜ್ಜನು ಸುಗ್ಗುಲ, ಸುಂಕುಲ, ಕುಂತಲ, ಸಾಮಂತಲ, ಅವಿಮಲ ಯಂಬ ಸದಾ ಮುತ್ತಯ್ದೆಯರ ಕಯ್ಯಿಂದ ಅಭ್ಯಂಜ ಸಾಣ ಮಾಡಿ ಮುಗಿಸಿ.. ಬರತಯ್ಯ, ಪಾಂಡಯ್ಯ, ಕಿಷ್ಣಯ್ಯರು ತಂದುಡುಸಿದ ಹೊಸ ದೋತರ ವುಟಕಂಡು.. ಮುಕುಡಯ್ಯನ ಕಯ್ಯಿಂದ ಭಂಡಾರವನ್ನೂ.. ತಿಕ್ಕಡಯ್ಯನ ಕಯ್ಯಿಂದ ಕುಂಕುಮವನ್ನೂ, ಬಂಗಲಯ್ಯನ ಕಯ್ಯಿಂದ ಯಿಬತ್ತಿನ್ನೂ ಮಯ್ಯಿಗೆಲ್ಲಾ ಹಚಕಂಡು ದ್ಯಾವರ ಖೋಲಿಯಿಂದ ನಡಕೋತ ನಡಕೋತ ಬಂದು ಕಾಲುಚಾಚಿ ಕೂಕಂಡಿದ್ದ ಮೋಬಯ್ಯನ ಪಾದರಾಯಿಂದಗಳಿಗೆ ಸ್ರದ್ಧಾಭಕುತಿಪೂರುವಕವಾಗಿ ಪ್ರಣಾಮ ಸಲ್ಲಿಸಿ “ತಾಯೀ ಸಾಂಬವಿ, ಮುಂದಿನ ಮುನ್ನೂರು ಜಲುಮದಲ್ಲಿ ನಿನ್ನ ಸಿಸುಮಗನಾಗಿ ಹುಟ್ಟುತ್ತೀನವ್ವಾ.. ನರಜಲುಮ ಯಿವತ್ತಿಗೆ ನಿನ ದಯೆಯಿಂದ ಪರುಸಮಾಪ್ತಿ ಆಗತಯ್ತೆ.. ಮೋಚ್ಚ ದೊರಕಲೆಂದು ಆಸೀರುವಾದ ಮಾಡು ತಾಯೀ” ಯಂದು ನುಡಿಯಲು ಅವಯ್ಯನು ತನ್ನ ಕರಕಮಲಗಳಿಂದ ಆತನ ತಲೆಯನ್ನು ನೇವರಿಸಿದನು. ಯಿದರಿಂದ ಸಂಪ್ರೀತಗೊಂಡಂಥ ಹಂಪಜ್ಜನು ಅರಮನೆಯ ತಲಬಾಕುಲಿಗೆ ಬಂದು ನಿಲ್ಲುತ್ತಲೆ ನೆರೆದಿದ್ದ ಸಾವುರಾರು ಭಕುತಾದಿ ಮಂದಿಯ ಕಣ್ಣುಗಳಿಂದ ವುದುಕವು ತಟ ತಟ ಹನಿದು ನೆಲ ವಜ್ಜಲೊಜ್ಜಲಾತು.. ಸಿವನ್ನಾಮ ಪಾರೊತೀ ಪತಿ ಹರಹರ ಮಾದೇವ ಯಂಬ ಘೋಷಣೆ ಮುಗುಲಿಗೆ ಮುಟ್ಟಿತು.

ಅದಕ್ಕೂ ಯಲ್ಡು ದಿವಸದ ಹಿಂದೆಯೇ ತನ್ನ ಸೊಗ್ರಾಮವಾದ ಮುರುಡಿಯ ಪ್ರತಿ ವಬ್ಬರ ಕಣಸಿನಲ್ಲಿ ಹಂಪಜ್ಜನು ಕಾಣಿಸಿಕೊಂಡು ಛೇಮಲಾಭ ಯಿಚಾರಿಸಿ ತಾನು ಫಲಾನು ದಿವಸ ಪಲಾನ ಕಡೆ ಸಜೀವ ಸಮಾಧಿ ಹೊಂದುವುದಾಗಿ ಹೇಳಿದಂಗಾಗಲು ಆತನ ಅಂತಿಮ ದರುಶನ ಪಡೆಯಲೆಂದೇ ಅಬಡಾ ದಬಡಾ ಮುರುಡಿಯಿಂದ ಹೊರಟು ಬಂದಿದ್ದ ನೂರಾರು ಮಂದಿ ಯಜ್ಜಾss ಯಜ್ಜಾss.. ಯಂದು ಕಯ್ಯನೆತ್ತಿ ಕೂಗಿಕೊಂಡರು.. ಅವರೆಲ್ಲರೊಳಗೆ ಮುರುಡಿಯ ಗ್ರಾಮದೇವರಾದ ಆಂಜನೇಯ ಸ್ವಾಮಿಯೂ....

ಯಾವತ್ತೂ ಮಂದಿಯು ಹಂಪಜ್ಜನನ್ನು ಹುವ್ವಿನಿಂದಲಂಕ್ರುತ ಜೋಡೆತ್ತಿನ ಬಂಡಿಯೊಳಗೆ ಕುಂಡ್ರಿಸಿತು. ಯಮಧರುಮರಾಜನಿಗೆ ಸೆಡ್ಡೊಡೆದು ಬದುಕಿದ ಆ ಮಾನುಭಾವನನ್ನು ದಿಬ್ಬದೀರ್ತಿಯಿಂದ ಕುದುರೆಡವು ಪಟ್ಟಣದ ಬೀದಿ ಬೀದಿಗಳ

ಗುಂಟ ಮೆರವಣಿಗೆ ಮಾಡಿತು. ಕರಪೂರ, ಮೂದುಬತ್ತಿ ವಾಸನೆಯಿಂದ ಯಿಡೀ ಪಟ್ಟಣ ತುಂಬಿ ತುಳುಕಾಡುತ್ತಿರುವಾಗ್ಗೆ.. ಫಲಾನ ಸಂವತ್ಸರ ತ್ರಯೋದಶಿ ಮಂಗಳವಾರ ಕ್ರುತ್ತಿಕಾ ನಚ್ಚತ್ರದ ಮೂರನೆ ಚರಣದ ಸುಭ ಸಮಯದಂದು ಫಲಾನ ತಾಯಿ ತಂದೆಯ ಮಗನಾದ ಹಂಪಜ್ಜನು ಅರಮನೆಯ ದಿವಾನಖಾಸದ ನಟ್ಟ ನಡುವೆ ನಿರುಮಿಸಿದ್ದ ನೆಲಮಾಳಿಗೆ ಯೊಳಗಿಳಿದು ಅಂತರ್ಧಾನಗೊಂಡು ತನ್ನ ಲವುಕಿಕ ಬದುಕಿಗೆ ಸಮಾಪ್ತಿ ಪಲುಕಿದನು.. ಅದಾದ ವಂಬತ್ತನೇ ದಿವಸ ಗುಂಡುಮುಳುಗು, ಕಾನಾಮಡುಗು, ಬಡೇಲಡಕು ಗ್ರಾಮಸ್ಥರು ಬರೋಬ್ಬರಿ ನೂರು ಚೀಲ ಜೋಳದನ್ನ, ನೂರಾವಂದು ಕೊಪ್ಪರಿಗೆ ಹುಗ್ಗಿ ಮಾಡಿಸಲು, ಸದರಿ ಪಟ್ಟಣದವರೊಂದೇ ಅಲ್ಲದೆ ಸುತಮುತ್ತಲ ನಲವತ್ತಯ್ಯವತ್ತು ಗ್ರಾಮಸ್ತರು ವುಂಡು ಅಗಲಿದ ಆತುಮವನ್ನು ತ್ರುಪ್ತಿಪಡಿಸಿದರು. ಸಮಾಧಿ ವಳಗೆ ಸುಖನಿದ್ರೆಮಾಡುತಲಿರುವ ಹಂಪಜ್ಜನಿಗೆ ಬಿಸಿಲು ತಗುಲದಿರಲೆಂದು ಅದರ ಸುತಮುತ್ತ ಅರಳೆ, ಬೇವು, ಜಮ್ಮಿ, ಬಿಲ್ವ, ಸಿರಿಗಂಧ ಯಿವೇ ಮೊದಲಾದ ಕಿಮ್ಮತ್ತಿನ ಮರಗಳನ್ನು ನೆಡಲಾಯಿತು. ಆತನ ಕಿವಿಗೆ ಸದಾ ಅಂಬಾ.. ಅಂಬಾ.. ಯಂಬ ನಾದ ಕೇಳಿ ಬರುತ್ತಿರಲೆಂದು ನೂರಾರು ತಾಯಾಕಳುಗಳನ್ನು ಅವುಗಳ ಕರುಗಳ ಸಮೇತ ಅರಮನೆಯ ಪ್ರತಿಯೊಂದು ಕಂಭಕ್ಕೆ ಕಟ್ಟಿ ಅವುಗಳ ಮುಂದೆ ಸಣ ಸಣ್ಣ ಗೋದಲೆಗಳನ್ನು ನಿರುಮಿಸಲಾಯಿತು.

* * * *

ಸಸ್ಯ ಸಂಪತ್ತು, ಪಸು ಸಂಪತ್ತು ದಿನದಿನಕ್ಕೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಕುದುರೆಡವು ಅರಮನೆ ಕಾಲಗಳೆದಂತೆ ತಾಯಿಮನೆಯಂದು ಕುಂತಳ ಸೀಮೆ ವಳಗೆ..

ಅಲಬರ್ಟನು ಮನಃಪರಿವರ್ತನಗೊಂಡು ಹೋದುದರ ಕುರುತು ತಲಾವಂದೊಂದು ಕಥೆಗಳನ ಕಟ್ಟಿ ಹಬ್ಬಿಸುತಲಿದ್ದ ಮಂದಿ ಕಲ್ಪನಾಲೋಕದಿಂದ ವಾಸ್ತವಕ್ಕ ಮರಳಿ ದಿಗ್‌ಭ್ರಾಂತರಾದರು. ಮಳೆಗಾಲ ಸುರುವಾದಲಾಗಾಯ್ತು ವಂದೇ ವಂದು ಹನಿ ಮುಗುಲಿಂದ ಕಡಕೊಂಡು ನೆಲಕ್ಕೆ ಬಿದ್ದಿಲ್ಲವಲ್ಲಾ.. ಆಕಾಸದ ಯಾವ ಮೂಲೇಲೂ ಅಂಗಯ್ಯಗಲ ಮೋಡದ ಸುಳಿವಿಲ್ಲವಲ್ಲಾ.. ಯಂಜಲಗಯ್ನ ತೊಳಕೊಳ್ಳಲಕ, ಯಿಸ್ಸಿ ಕುಂತು ಬಂದ ಕಂದಮ್ಮಗಳ ಕುಂಡಿ ತೊಳೆಯಲಕ, ಬಿಕ್ಕು ಹತ್ತೋ ಗಂಟುಗಳನ ತೇವ ಮಾಡಿಕೊಳ್ಳಲಕ, ನೆಲದಡೀಲಿರೋ ಬೀಜ ಮೊಳೆಯಲಕ ನೀರಿಲ್ಲದಾಂಗಾ ಗಯ್ತಲ್ಲಾ ಯಂದು

ಯಮಯಸನ ಮಾಡತೊಡಗಿದರು. ರುತುಮಾನಗಳ ವಡತಿಯೇ ಮೋಬಯ್ಯನ ಸರೀರದೊಳಗ ನೆಲಗೊಂಡಿರುವಾಗ ತಾವ್ಯಾಕ ಚಿಂತೆ ಮಾಡಬೇಕು? ಯಂದಂದುಕೊಂಡ ಆ ಮಂದಿ ಅರಮನೆ ಯಂಗಳದಲ್ಲಿ ನಿಂತು ಯವ್ವಾ.. ತಾಯಿಯೊ.. ಮಳೆಯಿಲ್ಲದ ಮರಗಳು ವಣಕ್ಕೊಂಡೋಗಿ ಚಾವತ್ತು ಕೂಡರಲಕ ನೆಳ್ಳಿಲ್ಲದಂಗಾಗಯ್ತೆ.. ನೀರಿಲ್ಲದೆ ಜೀವ ಜೀವಗಳೆಲ್ಲ ಬಾಯಿ ಬಾಯಿ ಬಿಡಲಕ ಹತ್ಯಾವ ನಮ್ಮವ್ವನೇ.. ಯಂದು ಕಂಗಾಲಾಗಿ ಬೇಡಿಕೊಂತು..

ಕಾಗೆ ಕಾವ್ ಅಂತು ಕವಳೆ ಹಣ್ಣು ಕೆಳಕ್ಕುದುರಿತು ಅನ್ನೋಹಂಗ.. ವಾರೊಪ್ಪತ್ತೊಳಗ ಗುಡ್ಡಗಾತುರದ ಮೋಡಗಳು ಆಗಸದ ತುಂಬ ವಂದಕ್ಕೊಂದು ಬಡದಾಡಿ, ಗುಡುಗು ಸಿಡಿಲು ಕೋಲ್ಮಿಂಚುಗಳ ಭಾರಿಸಿ ಯಡಬಿಡದೆ ಮೂರು ಹಗಲು, ನಾಕು ರಾತ್ರಿಪರ್ಯಂತ ಮಳೆ ಧೋ ಯಂದು ಸುರಿಸಿದವು ಸಿವನೇ.. ನೀರಿನ ನೆರೆಗೆ ಭಯಭೀತಗೊಂಡು ಹೊಳೆಹಳ್ಳಗಳು ಅರಚಿದವು ಸಿವನೇ, ಕೆರೆಕಟ್ಟೆಗಳು ತುಂಬಿ ತುಳುಕಿದವು.. ನೀರೊಳಗ ನೆಂದ ಮಂದಿ ತಾಯಿss ನೀನು ಕರುಣಾಮಯಿ ಯಂದು ಕೊಂಡಾಡಿತು.. ಯಿನ್ನೇನು ಬರಕ್ಕೆ ಸೆಟೆದು ಪಿಂಡಗಳು ವುರುವಲಾಗಿ ತಾಯ ಬಸುರನ್ನು ದಹಿಸುತ್ತವೆ ಯಂದು ಭಾವಿಸಿದ್ದ ಸೂಲಗಿತ್ತೇರು ಪಿಂಡಗಳು ತಾವಿದ್ದ ಬಸುರೊಳಗರಳಿ ಮತ್ತೆ ಕಿಲಕಿಲ ಗುಟ್ಟಲಾರಂಭಿಸಿದುದನು ಕಂಡು ಅರಮನೆ ಕಡೇಕ ಮುಖ ಮಾಡಿ ಕಯ್ನ ಮುಗುದರು ಸಿವನೇ.. ನೆಲ ಹಸಿರು ಮುಕ್ಕಳಿಸಲಾರಂಭಿಸಿತು, ಯಲ್ಲಿ ನೋಡಿದರೂ ಸಂಭರಮೋ ಸಂಭರವು....

ತಾಯಿಯು ತನ್ನ ಹಳೆಪಳೆಯ ಸೀರೆಗಳನ ನೆಲದ ತುಂಬೆಲ್ಲ ಹರವಿದಳಂತೆ.. ನೀವು ಯಿಗಿಂದೀಗಲೇ ಮುಗುಲಿಗೆ ಹಾರಿ ಮೋಡಗಳಾಗಿರಿ ಯಂದಾಗ್ನೆ ಮಾಡಿದಳಂತೆ.. ಅವೆಲ್ಲ ಮುಗುಲಿಗೆ ಸುಯ್ಯಂತ.. ಹುಟ್ಟಿಕೊಂಡ ಕಥೆಗಳು ಕಪಾಳದಿಂದ ಕಪಾಳಕ್ಕೆ.. ಆ ಮಾರಾಗ್ನಿ ಪ್ರಜೆಗಳ ಕಷ್ಟಸುಖ ಯಿಚಾರಿಸುವ ಸಲುವಾಗಿ ಕುಂತಲ್ಲಿ ಕುಂಡ್ರದೆ, ನಿಂತಲ್ಲಿ ನಿಂದುರದೆ ಕುಂತಳ ಸೀಮೆಯಾದ್ಯಂತ ಸಂಚಾರ ಕಯ್ಕೊಂಡಿರುವಳಂತೆ.. ಹರಿದು ಹಂಚಿ ಹೋಗಿರುವ ಪುವ್ವಲ ಸಾಮುರಾಜ್ಯವನ್ನು ವಂದುಗೂಡಿಸಿ ಅರಮನೆಯೊಳಗಿಡಲು ಪ್ರಯತ್ನ ಮಾಡುತ್ತಿರುವಳಂತೆ.. ತಮ್ಮ ಸಾಂಬವಿಯ ವಸ್ತಿಯ ಪಾದಂಗಳ ಬುಡಕ್ಕ ಕಡಕೊಂಡ ಬೀಳಲಕೆಂದು ಮೋಡೋಡಿ ಬರುತ್ತಿರುವ ಅಗೋ ಅಲ್ಲಿ ಕೆಂಗನಾಯಕ, ಸೂರನಾಯಕ, ಮಾರನಾಯಕ, ಯಿಗೋ ಯಿಲ್ಲಿ ಗೋಯಿಂದ

ನಾಯಕ, ಗುಡದಪ್ಪ ನಾಯಕರು....

ಬರಡುಗಳ ಕೆಚ್ಚಲು ತುಂಬಿ ಹಾಲ ಹಯನ ತುಳುಕಾಡಿಸುತ್ತಿರುವಳಂತೆ.. ಹರೇವಿಗೆ ಬರುವಂತೆ, ಹೆರೇವಿಗೆ ಬಂದೋರು ರುತುಮತಿಯಾಗುವಂತೆ, ರುತುಮತಿ ಆದೋರು ಅನುವಾದ ಗಂಡನನ್ನು ಪಡೆಯುವಂತೆ.. ಗಂಡನನ್ನು ಪಡಕೊಂಡವರು ಬಸಿರಾಗುವಂತೆ.. ಬಸಿರಾದವರು ಸುಸೂತ್ರವಾಗಿ ಹೆರಿಗೆಯಾಗುವಂತೆ ಮಾಡುವಳಂತೆ, ಅದಕ್ಕ‌ನ ಯಿಲ್ಲಿ ರೋಗ ರುಜಿಣಗಳಿಂದ ನರಳಾಡುವವರಿಲ್ಲ..- ಕಳ್ಳಕಾಕರ ಭಯವಿಲ್ಲ.. ಅದಕ ನೋಡಿರಿ ಗುಡೇಕೋಟೆ, ಜರುಮಲಿ, ಹರಪನಹಳ್ಳಿ, ನುಂಕೇಮಲೆ, ಗಾದರಿಮಲೆಯೇ ಮೊದಲಾದ ಅಕ್ಕಪಕ್ಕದ ರಾಜ್ಯಗಳು ನಮ್ಮ ಕುದುರೆಡವ ಕಡೇಕ ನೋಡುವಂತಾಗಯ್ತೆ.. ಪುವ್ವುಲ ಸಾಮುರಾಜ್ಯದ ಸಾಮಂತರು, ಧೀಮಂತರು ಕುಂಪಣಿ ಸರಕಾರಕ್ಕೆ ಧಿಕ್ಕಾರ ಕೂಗುತ್ತಿರುವುದು ಅಗೋಯಿಲ್ಲಿ.. ಕಪ್ಪಕಾಣಿಕೆ ತಪ್ಪುದಂಡ ತಂದೊಪ್ಪಿಸುತ್ತಿರುವರು ಯಿಗೋ ಯಿಲ್ಲಿ.. ಕೂಡ್ಲಿಗಿ ವಳಗಿದ್ದ ನಿಷಾ«ವಂತ ಅಧಿಕಾರಿಯಾದ ಯಡ್ಡವರ್ಡು ರೆಪ್ಪೆಗೆರೆಪ್ಪ ಅಂಟಿಸದಂತಾದ....

ಗುಪ್ತಾಚಾರರು ಸರಬರಾಜು ಮಾಡುತ್ತಿದ್ದ ವಂದೊಂದೆ ವರ್ತಮಾನವನ್ನು ಕೇಳಿ ನಿಂತಲ್ಲಿ ನಿಲ್ಲದಂತಾದ.. ಕುಂತಲ್ಲಿ ಕೂಡ್ರದಂತಾದ.. ತಾನು ರಚಿಸಿರುವ ಕಲಾಕ್ರುತಿಯು ಪ್ರಯಾಣದ ಮಧ್ಯದಲ್ಲಿ ಕಣ್ಣುಪಿಳುಕಿಸುತ್ತಿದೆಯಂದೂ, ರಾಜವಾತೆಯು ಬಸುರು ಹೊತ್ತಿರುವ ಜಗಲೂರೆವ್ವ ವಾಮಿಕೆಲ್ಲರೂ ಮಲಗಿಕೊಂಡಿರುವಾಗ ಜಹಜಿನಲ್ಲಿ ತಾನೋರ್ವಳಂ ಅಡ್ಡಾಡುತ್ತಿರುವಂತೆ ಭಾಸವಾಗುತ್ತಿದೆಯಂತೆಯಂದೂ ಬಲು ಹೆಮ್ಮೆಯಿಂದ ಹೇಳಲಕೆಂದು ಬರುವ ಹೆಂಡತಿ ಜೆನ್ನಿಫರಮ್ಮನ ಹತ್ತಿರಕ್ಕೆ ಬಿಟ್ಟುಕೊಳ್ಳದಂತಾದನು.. ಡಾಡೀ.. ಡಾಡೀ.. ಯಂದು ಕಾಡಿ ಪೀಡಿಸುತ್ತಿದ್ದ ಕಿಸ್ಟೋಫರ್ರೂ, ಯಿಲ್ಲಿಯಮ್ಸೂ ಯಂಬೆರಡು ಮುದ್ದು ಮಕ್ಕಳೀರ್ವರನ್ನೂ ಸಹ.. ಆತನ ತಲೆಯೊಳಗಿದ್ದದ್ದು ಕುದುರೆಡವು ಸಮಾಚಾರ ಮಾತ್ರ.. ಅದು ಯಷ್ಟು ದುರ್ಬಲವಾಗಿರುತ್ತದೋ ಅಷ್ಟು ಬ್ರಿಟೀಷ್ ಪಾರುಪತ್ಯಕ್ಕೆ ಅನುಕೂಲ, ಆದರೆ ಅಲ್ಲಿ ಚಿನ್ನದ ಹೊಗೆ ಹಾಯುತ್ತಿರುವುದಂತೆ.. ಕಡ್ಡಿ ಪುಳ್ಳೆಯಂಗಿದ್ದ ಪ್ರಜೆಗಳು ಪಯಿಲುವಾನರಂತಾಗಿರುವಂತೆ.. ತಮ ತಮ್ಮ ತಲೆ ವಳಗಿಂದ ಬ್ರಿಟೀಶ್ ರಾಣಿ ರಾಜರ ಹೆಸರು ಕಿತ್ತುಹಾಕಿ ಸಾಂಬವಿ ಯಂಬುವ ನಾಮವನ್ನು ತುಂಬಿಕೊಂಡಿರುವಂತೆ.. ತನ್ನ ಸೂರ ಸೇನಾಪತಿಯಾದ ಅಲಬರ್ಟೇ ಸಾಂಬವಿಯ ಅನುಯಾಯಿ ಆಗಿರುವನೆಂದ ಮ್ಯಾಲ ಮಾಮೂಲು

ಮನುಷ್ಯರ ಪಾಡೇನು? ತನ್ನ ಹೆಂಡತಿ ಜೆನ್ನಿಫರು ಸಹ ವಳಗಿಂದೊಳಗೆ ಮೂಳೆ ಮೋಬಯ್ಯನ ಕಟ್ಟಾ ಅಭಿಮಾನಿಯಾಗಿರುವಂತಿರುವುದು.. ಲಂಡನ್ನಿನ ಪ್ರದರ್ಸನದಲ್ಲಿ ಆಕೆಯ ಕಲಾಕ್ರುತಿಗೆ ಪ್ರಶಸ್ತಿ ಬರದಿರುವಂತೆ ಮಾಡುವುದು ಹೇಗೆ? ಯಂದು ಯಸನದ ಮ್ಯಾಲ ಯಸನ ಮಾಡುತ ಆ ಅಧಿಕಾರಿಯು ಸತಪತ ಅಡ್ಡಾಡುತ್ತಿರುವನು.. ತಾನಿದ್ದ ಪಡಸಾಲೆಯ ವಂದು ಕಡೆ ಕಲೆಟ್ರುಸಾಹೇಬ ಥಾಮಸು ಮನ್ರೋನ ಆಳೆತ್ತರದ ತಯ್ಲವರಣ ಚಿತ್ರಯಿದ್ದಿತು.. ಅದು ವಂದು ಚಣ ನಕ್ಕಂತಾಯಿತು.. ಯಿನ್ನೊಂದು ಚಣ ತನ್ನ ವಬ್ಯಾಲ ಮುನುಸುಕೊಂಡಂತಾಯಿತು. ಅದಕ್ಕೆ ಜೀವ ಬಂದಿರಬಹುದೆಂಬ ಭ್ರಮೆಗೆ ವಳಗಾಗಿ ಮಂಡೆವೂರಿ ಕುಳಿತೆದ್ದು ಗವುರವಿಸಿದನು. ಜೀವ ಭಯದಿಂದಾಗಿಯೋ.. ಅತ್ಯುಗ್ರಸ್ವಾಭಿಮಾನದಿಂದಾಗಿಯೋ ಕುದುರೆಡವು ಕಡೇಕ ಹೋಗದೆ ಕೂಡ್ಲಿಗಿ ಅತಿಥಿಗ್ರುಹದಲ್ಲಿ ವಾಸ್ತವ್ಯ ಹೂಡಿರೋ ರಾಜಮಾತೆ ಭಯ್ರುಮಾಂಬೆಯನ್ನೂ.. ಆಕೆಯ ಪರಿವಾರವನ್ನೂ ನೆನಪಿಸಿಕೊಂಡನು. ಯಿದ್ದಕ್ಕಿದ್ದಂತೆ ಕುಂಪಣಿ ಸರಕಾರವು ಸಮಸ್ತ ಅಧಿಕಾರವನ್ನು ಅವರಿಂದ ಕಿತ್ತುಕೊಳ್ಳಬಾರದಿತ್ತು. ಯೇನಾದರೊಂದು ಪರ್ಯಾಯ ಯವಸ್ಥೆಯನ್ನು ಆ ಕೂಡಲೆ ಮಾಡಿರಬೇಕಿತ್ತು. ತನಗಿನ್ನೂ ನೆನಪಿಲ್ಲದಿಲ್ಲ, ಪುವ್ವಲ ರಾಜರ ಅಧಿಕಾರವನ್ನು ಮೊಟಕುಗೊಳಿಸಿದ್ದು, ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಟ್ಟಿದ್ದಕ್ಕೆ ಕಾರಣಗಳು ಬೇರೆ ಯಿರುವವು. ಸಾಮಂತ ಸಾಮಂತರ ನಡುವೆ ಕಚ್ಚಾಟ, ಹಗೆತನ, ದ್ವೇಷ ಸದಾ ಯಿರುವಂತೆ ನೋಡಿಕೊಳ್ಳುವುದು ಸಹ ತನ್ನ ಯೀಸ್ಟ್ ಯಿಂಡಿಯಾ ಕಂಪನಿಯ ಕುಟಿಲ ತಂತ್ರಗಳಲ್ಲೊಂದು. ಯಿವರು ಅವರ ಮ್ಯಾಲ ಯೇರಿ ಹೋಗಲಕ, ಅವರು ಯಿವರ ಮ್ಯಾಲ ಯೇರಿ ಹೋಗಲಕ ಕಂಪನಿ ಧನದ ರೂಪದಲ್ಲೋ.. ಮದ್ದು ಗುಂಡು ಪಿರಂಗಿ ಯಿವೇ ಮೊದಲಾದ ಯುದ್ದ ಸಾಮಾಗ್ರಿಗಳನ್ನು ಸಾಲವಾಗಿ ಸರಬರಾಜು ಮಾಡುವ ರೂಪದಲ್ಲೋ, ಸಯ್ನಿಕರನ್ನು ಯಿಂತಿಷ್ಟು ರುಸುಮು ಯಂದು ಗೊತ್ತುಪಡಿಸಿ ಕಳಿಸುವ ರೂಪದಲ್ಲೋ.. ಸಹಾಯ ಹಸ್ತ ಚಾಚುವುದು, ತನ್ಮೂಲಕ ವುಭಯ ಬಣಗಳನ್ನು ದುರ್ಬಲಗೊಳಿಸುವುದು.. ಬಡ್ಡಿ, ಚಕ್ರಬಡ್ಡಿ ಸೇರಿ ಸೇರಿ ಅಗಾಧ ರೂಪದಲ್ಲಿ ಸಾಲ ಬೆಳೆಯುವಂತೆ ನೋಡಿಕೊಳ್ಳುವುದು, ಅದನ್ನು ತೀರಿಸಲು ನಿಶ್ಯಕ್ತರಾಗೋ ರಾಜರನ್ನು ಪದಚ್ಯುತಿಗೊಳಿಸುವುದು ತಮ್ಮ ಕಂಪನಿಯ ತಂತ್ರಗಾರಿಕೆಗಳಲ್ಲಿ ವಂದು. ಕುದುರೆಡವಿಗೆ ಸಂಬಂಧಿಸಿದಂತೆ ಆಗಿದ್ದೂ ಯಿದೆ. ಅವರು ನಿರ್ವೀರ್ಯರಾಗಲು

ಕಾರಣ ಯುದ್ದವಂದೇ ಅಲ್ಲ.. ತಮ್ಮ ಕಡೆಯವರಾದ ಶ್ರೀನಿವಾಸ ರಾವು, ಪಣೀಂದ್ರರಾವು ಯಿನ್ನೂ ಮುಂತಾದವರೆಲ್ಲ ಗೆಳೆಯರಂತೆ ನಟಿಸಿ ಅವರನ್ನು ಯಿಷಯಲಂಪಟರನ್ನಾಗಿ ಮಾಡಿದ್ದು ಕೂಡ ವಂದು. ಸ್ಥಳೀಕ ರಾಜರನ್ನು ದುರ್ಬಲಗೊಳಿಸುವುದು ಕೂಡ ಕಂಪನಿಯ ಕಾರ್ಯತಂತ್ರ, ಸಾಲ ಅಗಾಧವಾಗಿ ಬೆಳೆದದ್ದೇನೋ ನಿಜ.. ವಂದೆರಡು ವರ್ಷ ಗಡುವು ನೀಡಿದ್ದಲ್ಲಿ ಪುವ್ವುಲ ರಾಜರು ಅದನ್ನು ಚುಕ್ತಾ ಮಾಡದೆ ಯಿರುತ್ತಿರಲಿಲ್ಲ. ಆದರೆ ತಮ್ಮ ಕಂಪನಿ ಅದಕ್ಕೆ ಅವಕಾಶ ನೀಡಿದರೆ ತಾನೆ? ಹಿತ್ತಾಳೆ ಕಿವಿಗಳುಳ್ಳವನೂ, ರಾಜನೀತಿ ನಿಪುಣನೂ, ಬ್ರಿಟೀಷ್ ಸಾಮ್ರಾಜ್ಯದ ನಿಷಾ«ವಂತ ಅಧಿಕಾರಿಯೂ, ಪಂಚತಂತ್ರಕೋಯಿದನೂ ಆದ ಥಾಮಸು ಮನ್ರೋ ಸಾಹೇಬ ಯಿದ್ದಕ್ಕಿದಂತೆ ಫರಮಾನು ಹೊಂಡಿಸಿ ಪುವ್ವುಲರಾಜರ ಸಮಸ್ತ ಅಧಿಕಾರವನ್ನು ಕಬ್ಜಾ ಮಾಡಿಸಿಬಿಟ್ಟ.. ಮುಕ್ಕಾಲು ವಾಸಿ ಸ್ಥಿರಾಸ್ತಿಯನ್ನು ವಶಪಡಿಸಿಕೊಂಡು ಗೇಣಿಗೆ ಕೊಟ್ಟುಬಿಟ್ಟ. ಪುಟ್ಟಂಪೂರ್ತಿ ಚರಾಸ್ತಿಯನ್ನು ಮುಟ್ಟುಗೋಲು ಹಾಕಿ ಕಂಪನಿ ತಿಜೋರಿಗೆ ಸೇರಿಸಿಯೂ ಬಿಟ್ಟ. ಆತನಿಗೆ ಮೊದಲೆ ಸಾಮಂತ ಪಾಳ್ಯೇಗಾರ ಜಮೀನ್ದಾರರೆಂದರೆ ಆಗದು. ಯಡ್ಡವರ್ಡು ಆಗಾಗ್ಗೆ ನೆನಪು ಮಾಡುಕೊಂಡು ನೋವು ಅನುಭೋಸುವ ಸಂಗತಿಯೆಂದರೆ (ಯಿದಕ್ಕೆ ಆತನ ಹೆಂಡತಿ ಜೆನ್ನಿಫರ ಕಾರಣ) ತಮ್ಮ ದರುಮ ಪ್ರಚಾರಕರಾದ ಫಾದರಿಗಳ ಹಕೀಕತ್ತು. ಪ್ರತಿಯೊಂದು ಸಾಮ್ರಾಜ್ಯದ ವುನ್ನತಿ, ಅವನತಿಗಳಿಗೆ ಆಯಾ ಧರುಮಗಳೇ ಕಾರಣಯೆಂಬುದು ನಿಶ್ಯಂಸಯ.. (ಹ್ಹಾ.. ಹ್ಹಾ.. ಫಾದರು ಅಂಥೋಣಿಯೇ.. ನೀನು ಹಿಂದಿನ ಜನುಮದಲ್ಲಿ ಹದ್ದಾಗಿ ಹುಟ್ಟಿದ್ದಿರಬಹುದು) ವುಭಯ ಕುಶಲೋಪರಿ ಯಿಚಾರಿಸಲೆಂದೋ, ಸೊಧರುಮ ಪ್ರಚಾರಕೆಂದೋ ಕುದುರೆಡವಿಗೆ ಹೋಗಿ ಜೀಸಸಗಿಂತ ಮಿಗಿಲಾದ ದಯವಯಿಲ್ಲಯಂದೂ, ಕ್ರಯಸ್ತ ಮತಕ್ಕಿಂತ ಮಿಗಿಲಾದ ಮತ ಯಿಲ್ಲ ಯಂದೂ ತಮ್ಮ ಮತಕ್ಕೆ ಮತಾಂತರ ಹೊಂದಿದ್ದಲ್ಲಿ ಕಲೆಟ್ರಮನ ವಲಿಸಿ ಮರಳಿ ಅಧಿಕಾರ ಕೊಡಿಸುವುದಾಗಿ ಆಮಿಷ ವಡ್ಡಿದ್ದರು. ಅದಕ್ಕೆ ರಾಜಮಾತೆಯು ರಾಜಸತ್ತೆಗಾಗಿ ನಮ್ಮ ಧರುಮ ಕುಲಾಚಾರವ ಬಿಟ್ಟುಕೊಡುವುದಿಲ್ಲ ಯಂದು ನಿಷು«ರವಾಗಿ ಹೇಳಿ ಕಳುವಿದ್ದಳು. ಕಂಪನಿ ಅಧಿಕಾರಿಗಳ ಪಯ್ಕಿ ಕೆಲವರು ಗೋಮಾಂಸ ಭಕ್ಷಣೆ ಮಾಡಿದಲ್ಲಿ... ಯಂದು ನಾಚಿಕೆಬಿಟ್ಟು ಕೇಳಿರದೆಯಿರಲಿಲ್ಲ.. ಅದನ್ನೆಲ್ಲ ನೆನಪಿಸಿಕೊಂಡೊಡನೆ ಯಡ್ಡವರ್ಡನ ಮನಸ್ಸು ಬಗ್ಗಡವಾಯಿತು. ಹೆಂಡತಿ ಜೆನ್ನಿಫರ್ ಸಲಹೆಯಂತೆ ನವುಕರಿಗೆ ರಾಜಿನಾಮೆಕೊಟ್ಟು ಹೋಗಬೇಕೆಂದು

ಕೊಂಡ.. ಆದರೆ ಎಲ್ಲಿಗೆ ಹೋಗುವುದು? ಯೇನು ಮಾಡುವುದು? ಹಾಗೆ ಮಾಡಿದಲ್ಲಿ ಕಂಪನಿ ತನ್ನನ್ನು ಯಿಚಾರಣೆಗೊಳಪಡಿಸಿ ಶಿಕ್ಷಿಸದೆ ಬಿಡುವುದಿಲ್ಲ....

ಯಿಡೀ ರಾತ್ರಿಕಣ್ಣಲ್ಲಿ ಯಣ್ಣೆ ಬಿಟ್ಟುಕೊಂಡು ಯೋಚಿಸಿದ ಯಡ್ಡವರ್ಡ್ಡು ಯಿಷ್ಟು ವರ್ಷ ತನಗೆ ಅನ್ನ ನೀಡಿದ, ಸಾಮಾನ್ಯ ಸೋಲ್ಜರನಾಗಿದ್ದ ತನ್ನನ್ನು ಅಧಿಕಾರಿ ಪದವಿಗೇರಿಸಿ ಗವುರವಿಸಿದ ಕಂಪನಿಗೆ ಸದಾ ನಿಷ«ನಾಗಿರಬೇಕೆಂದು ನಿರ್ಧರಿಸಿದ. ಹಾಗೆಯೇ ತನ್ನ ಕುಲಾಚಾರವೇ ಮೇಲೆಂದು ಕೊಂಡಿರುವ ರಾಜಮಾತೆಗೆ ಹೇಗಾದರೂ ಮಾಡಿ ಆಕೆ ಕುದುರೆಡವು ಅರಮನೆಯನ್ನು ಮರಳಿ ದೊರಕಿಸಿಕೊಡಬೇಕು.. ಯಿ ಕುರಿತು ಕಲೆಕ್ಟ್ರಸಾಹೇಬನಿಗೆ ತಾನು ರವಾನಿಸಿರುವ ದಸ್ತಾಯೇಜುಗಳು ಹತ್ತು ಹಲವು.. ಆದರೆ ಆತನಿಂದ ಯಾವುದೇ ಜವಾಬಿಲ್ಲ.. ಪ್ರಾಯಶಃ ಆತಗೆ ಪುರುಸೊತ್ತಾಗಿರಲಿಕ್ಕಿಲ್ಲ.. ದತ್ತಮಂಡಲದ ರಚನೆಯಾದ ಬಳಿಕ ಆತ ತನ್ನ ಆಯುರಾರೋಗ್ಯ ಲೆಕ್ಕಿಸದೆ ಮಂಡಲದ ನಾಲ್ಕು ಜಿಲ್ಲೆಗಳಲ್ಲಿ ಸುತ್ತಾಡುತ್ತಿರುವನು.. ಹೇಗೋ ಕ್ರಿಸ್‌ಮಸ್ ಹಬ್ಬಕ್ಕೆ ಆತ ಬಳ್ಳಾರಿಗೆ ಬಾರದೆಯಿರಲಾರರು.. ಕ್ರಿಸ್‌ಮಸ್ ಶುಭಾಶಯ ತಿಳಿಸುವ ನೆಪದಲ್ಲಿ ಹೋಗಿ ಕುದುರೆಡವಿನ ಅತಿಮಾನುಷ ಯಿದ್ಯಾಮಾನಗಳನ್ನು ತಾನಾತಗೆ ಮನವರಿಕೆ ಮಾಡಿಕೊಡಬೇಕು ಯಂದು ಯಿತ್ತ ಯಡ್ಡವರ್ಡ್ಡು ನಿರ್ದ್ಧಾರ ಕಯ್ಕೊಂಡ ಸಮಯದಲ್ಲಿ..

ಅತ್ತ ಕುದುರೆಡವು ಪಟ್ಟಣದೊಳಗ ನಡೆಯುತಲಿದ್ದ ದಯವೀ ಸಂಬಂಧೀ, ರಾಜಕಾರಣ ಸಂಬಂಧೀ ಘಟನೆಗಳು ವಂದಾ.. ಯರಡಾ.. ಹೇಳುತ ಹೋದರೆ ಕೊನೆ ಮೊದಲಿಲ್ಲ ಸಿವನೇss.. ಸ್ರವಣೇಂದ್ರಿಯಕೂ.. ನಯನೇಂದ್ರಿಯಕೂ ನಡುವೆ ಮಸ್ತು ದೂರ ಯೇರುಪಟ್ಟಿತ್ತು ಸಿವನೇ.. ಮೋಬಯ್ಯಗೆ ಸಾಂಬವಿ ಅಂಬುವ ಕವುಡು ಬಡಕೊಂಡಿರುವುದಂತೂ ಖರೇ.. ಆದರೆ ಅವಯ್ಯನ ಸುತಮುತ್ತ ಯಿದ್ದ ಮುದೇರಿಗೆ ಬುದ್ದಿ ಯಿತ್ತೆಂದರೆ ಯಿತ್ತು.. ಯಿಲ್ಲಾಂದರ ಯಿರಲಿಲ್ಲ.. ಅವರೆಲ್ಲ ಮೊದಲೇ ಸೊಯಂ ಪೋಷಿತ ಅವಧೂತರಾಗಿದ್ದರಷ್ಟೇ.. ಕಳ್ಳು ಕುಡಿದು ಹಸಿವು ಬಾಂಯಾರಿಕೆ ನೀಗಿಸಿಕೊಳ್ಳುತ, ತಂಬಾಕನ್ನೇ ವುಸುರಾಡುತಲಿದ್ದರು.. ಅರಮನೆ ಅಂಬುದು ಬ್ಯಾರೆ ಅಲ್ಲ.. ಲಚುಮವ್ವನ ತೋಪು ಬ್ಯಾರೆ ಅಲ್ಲ.. ಬಯಲು ಬ್ಯಾರೆ ಅಲ್ಲ.. ಅರಮನೆ ಬ್ಯಾರೆ ಅಲ್ಲ... ಅಂಬುವ ನಿರ್ಣಯಕ್ಕೆ ಬಂದಿದ್ದರು. ಸಮಸ್ತ ಬೀದಿಗಳು ಅರಮನೆ ವಳಗ ಕಲೆಯುವಂತಿರಬೇಕು.. ಪಕ್ಷಿಗಳು ಸಲೀಸಾಗಿ ಹಾರುತ ಬಂದು ಸದರೀ

ಅರಮನೆಯೊಳಗ ಯಿಸ್ರಮಿಸಿಕೊಳ್ಳುವಂತಿರಬೇಕು.. ಅದಕ್ಕೆ ಅನುವಾಗುವಂತೆ ಸೊಂಪಾಗಿ ಮರಗಿಡಗಳು ಯಲ್ಲಾ ಕಡೇಕು ಬೆಳೆದಿರಬೇಕು.. ಲವುಕಿಕ ಸಂಬಂಧೀ ಆಕ್ರಂದನಗಳು, ಅರಣ್ಯರೋಧನಗಳ ತವರು ನೆಲೆ ಆಗದಿರಲಕಬೇಕು.. ಮಟ್ಟಿನಲ್ಲಿ ಸದರೀ ಅರಮನೆಯು ಚಿದಾನಂದಾವಧೂತಯಿರಚಿತ ಯೇದಾಂತ ಗ್ನಾನ ಸಿಂಧೂವಿನ ಪಡಿಯಚ್ಚಿನಂತಿರಬೇಕೆಂದು ಕಾಮಗಾರಿಯ ವುಸ್ತುವಾರಿ ವಹಿಸಿದ್ದವರು ಯಾರ್ಯಾರೆಂದರೆ ಜಡೆತಾತ, ಕಾಡುಗೊಲ್ಲರೀರಯ್ಯರೇ ಮೊದಲಾದ ಪೂರುವಿಕರು.

ಅರಮನೆಗಿಂತ ದುಪ್ಪಟ್ಟು ತೂಗುವ ಮೋಬಯ್ಯನ, ಗಾಳಿಯೊಳಗ ಸುಮ ಸುಮಕ ಕಯ್ಯಿಗಳನ ಯತ್ತಿ ಆಡಿಸುವ ಮೋಬಯ್ಯನ, ಸೂನ್ಯದೊಳಗೊಂದು ಪಿಸು ಮಾತಿನ ಮೊಗಸಾಲೆ ಮಾಡಿಕೊಂಡು ಸುಮ ಸುಮಕ ಮಾತುಗಳನ್ನಾಡುವ ಮೋಬಯ್ಯನ, ಹಾದಿಯಿಲ್ಲದ ಕಡೇಕ ಹಾದಿ ಮಾಡಿಕೊಂಡು ಸುಮ ಸುಮಕ ನಡೆದಾಡುವ ಮೋಬಯ್ಯನ, ಸುಷುಪ್ತಿ, ಜಾಗರಣಗಳ ನಡುವಿನ ತಾರತಮ್ಯ ಅಳಿಸುವ ಮೋಬಯ್ಯನ, ನುಡಿದರೆ ನಿಶ್ಯಬ್ಧ, ನಡೆದರೆ ನಿರುಗಮನ ದಂತಿರುವ ಮೋಬಯ್ಯನ ವುಸ್ತುವಾರಿಯನ್ನು ವಹಿಸಿದ್ದವರ್ಯಾರ್ಯಾರೆಂದರೆ ಗೊಂಜಾಡರಲಡುವೆಜ್ಜ, ಕವಳೆಜ್ಜ, ಕವಣೆಜ್ಜರೇ ಮೊದಲಾದ ಪೂರುವಿಕರು..

ಯಿಂಥಪ್ಪ ಯರಡು ನಮೂನಿ ಪೂರುವಿಕರು ಕೂದಲನ ಸೀಳಬಲ್ಲಂಥವರು ಸಿವನೇ, ಬೆಣ್ಣೆಯೊಳಗ ಮುಳ್ಳು ಮುರಿಯುವಂಥವರು ಸಿವನೇ.. ಮಾತಿನ ಹಂಗಿಲ್ಲದೆ ಕಥೆ ಕಟ್ಟ ಬಲ್ಲಂಥವರು.. ತುಟಿ ಮೋಳು ಮಾಡದೇನೇ ಪದಗಳನ ಹೆಣೆಯಬಲ್ಲಂಥವರು ಸಿವನೇ.. ಅವರು ಕಟ್ಟುತಲಿದ್ದ ಕಥೆಗಳು, ಹೆಣೆಯುತಲಿದ್ದ ಪದಗಳು ಅಣು ಅಣುವನ್ನು ಸಾರೋಟು ಮಾಡಿಕೊಂಡು ಸುತ್ತನ್ನಾಕಡೇಕ ಪಯಣ ಬೆಳೆಸುತಲಿದ್ದವು.. ಕಿವಿವುಳ್ಳವರ ಕಿವಿಯೊಳಗಿಳಿಯುತಿದ್ದವು.. ಯಿಳಿದೊಡನೆ ವಂದೊಂದು ಕಥೆ ನೂರರಂಖೆಯಲ್ಲಿ ರೂಪು ಪಡೆಕೊಳ್ಳುತಿದ್ದವು.. ಅಂಥ ಸುದ್ದಿಗಳ ಪಯ್ಕಿ ಅದಾವುದೆಂದರೆ....

ಸೆಕೆ ಸೆಕೆ ಕುಚ್ಚಿದಂಗಾಗಲು ಆದಿಸಗುತಿ ಸಾಂಬವಿ ಮೋಬಯ್ಯನ ಸರೀರದೊಳಗಿಂದ ಹೊರ ಹೊಂಟು ನಡೆಕೋತ ನಡೆಕೋತ ವುಪ್ಪರಿಗೆ ತಲುಪಿದಳಂತೆ.. ಅಲ್ಲೊಂದಿದ್ದ ಜಾಲಂದ್ರವು ವಂದು ಬೋ ದೊಡ್ಡ ಕಣ್ಣಿಗೆ ಸಮಾನ.. ಅಲ್ಲಿ ನಿಂತು ನೋಡಿದರೆ ಪಟ್ಟಣದ ಯಾವತ್ತೂ ಯಿದ್ಯಾಮಾನಗಳು ಗೋಚರ ಮಾಡುತ್ತವೆ...

ಹಿಂಜಿದ ಅಳ್ಳೆ ಗಾಳಿವಳಗ ಹಾರಾಡುತ್ತಿರೋ ಹಂಗ ಆಡಕೋತ ಯಿರುವ ಮಕ್ಕಳನ, ತಮ ತಮ್ಮ ಮೊಲೆಗುಂಡಿಗಳನ ಹಸುಗಂದಮ್ಮಗಳ ಬಾಯೊಳಗಿರಿಸೋ ತಾಯಂದಿರನ, ಯಿಸಿ ಮಾಡಿ ಬಂದ ತಮ ತಮ್ಮ ಮಕ್ಕಳ ಕುಂಡಿಗಳನ ತೊಳೆಯುತಲಿರುವ ತಾಯಂದಿರನ, ರೊಳ್ಳೆ ತೆಗೆದ ತಮ ತಮ್ಮ ಕಂದಮ್ಮಗಳನ ಸುಮ್ಮನಿರಿಸಲೋಸುಗ ತರಾವರಿ ಪದಗಳನ ಹಾಡುತಲಿರೋ ತಾಯಂದಿರನ, ವುಯ್ಯಾಲೆಗಳನ ತೊನೆ ತೊನೆದು ತಮ ತಮ್ಮ ರೆಟ್ಟೆ ನಿಲು ಬೀಳೋ ಹಂಗ ತೂಗುತಲಿರೋ ತಾಯಂದಿರನ ಸಾಂಬವಿ ನೋಡಿದಳಂತೆ.. ತಾನೂ ಹಿಂದೆಂದಾದರೂ ತಾಯಿಯಾಗಿದ್ದುಂಟಾ? ಯಾವ ತಾಯಿಗಾದರೂ ತಾನು ಮಗುವಾಗಿದ್ದುದುಂಟಾ? ಅಯ್ಯೋ ನೆಪ್ಪಿಗೆ ಬರುತಾಯಿಲ್ಲವಲ್ಲಾ ಯಂದು ಮಿಡು ಮಿಡನೆ ಮಿಡುಕಾಡಿದಳಂತೆ. ತನ್ನ ಬಗ್ಗೆ ತಾನೆ ಯಸನ ಮಾಡುತ ವುಪ್ಪರಿಗೆ ಮ್ಯಾಲಿಂದ ಸರಸರನೆ ಕೆಳಗಿಳಿದು ಬಂದಳಂತೆ.. ತಾನೂ ತಾಯ್ತನದ ಪದವಿಯನ ಅನುಭವಿಸಬೇಕು.. ಅನುಭವಿಕೆ ಮಾಡಲಕಂದರ ತನಗೀಗೊಂದು ಕೂಸು ಬೇಕಲ್ಲ.. ಯಲ್ಲಯ್ತೆ ತಾನು ಯತ್ತಿ ಆಡಿಸಬೇಕೆಂದಿರುವ ಕೂಸು ಯಂದನಕಂತ, ನಿಮ್ಮ ಕೂಸುಗಳ ಪಯ್ಕಿ ನನಗೊಂದು ಭಿಕ್ಷೇನ ಹಾಕಿರವ್ವಾ ಯಂದು ತಾಯಂದಿರನು ಕೇಳುತ, ಭಿಕ್ಷೆ ಹಾಕೆಂದರೆ ಜೀವನಾದರ ಹಾಕೇವು ಆದರ ಕೂಸನು ಭಿಕ್ಷೆ ಹಾಕಿರೆಂದು ಕೇಳಬ್ಯಾಡವ್ವಾ ಯಂದು ತಾಯಂದಿರಿಂದ ಅನ್ನಿಸಿಕೊಳ್ಳುತ, ನೀನು ನನಗೆ ಕೂಸು ಆಗುವಿಯಾ ಯಂದು ಸಮಾಧಿಯೊಳಗಿದ್ದ ಹಂಪಜ್ಜ ಸೇರಿದಂತೆ ಮೊದಲಾದ ಮುದೇರನು ಕೇಳೂತ.. ಅವರ ಬಾಯಿಯಿಂದ ನಾವು ಕೂಸಾಗುವುದು ಬ್ಯಾಡ ತಾಯಿೊ, ನಿನ ಕಯ್ಯಿಂದ ಯತ್ತಾಡಿಸಿಕೊಂಡು ನಾವು ರವುರವ ನರಕಕ್ಕೆ ಹೋಗುವುದು ಬ್ಯಾಡತಾಯಿ ಯಂಬ ಜವಾಬುಗಳನ ಪಡಕೋತ.. ತನ್ನ ನಯನೇಂದ್ರಿಯಂಗಳ ತಮಣಿ ಮಾಡಲಕೆಂದು ಮತ್ತೆ ಬೀದಿಗಿಳಿದಳಂತೆ ತಾಯಿ....

ಅಲ್ಲಲ್ಲಿ....

ತಾಯಿ ಅಂಗಳದಾಗ ಕಾಲ ಯಿಕ್ಕಳಿಸಿ ಕೂಕಂಡು ತನ್ನ ಮಗುವಿಂದ ಯಿಸ್ಸಿ ಮಾಡಿಸುತವಳೆ.. "ಯಿದರ ಮುಕುಳಾಗ ಮುಂಚೇ ಬೋಟಿಟ್ರೂವಂಚೂರಾರ ಯಿಸಿ ಹೊರ ಹೊಂಡುತಾ ಯಿಲ್ಲಲ್ಲಾ" ಯಂದು ಆ ಪುಣ್ಯಾತ್ಗಿತ್ತಿ ಗೊಣಗಾಡುತ್ತಿರುವುದನು ಕೇಳಿಸಿಕೊಂಡಳಂತೆ....

ಅಗೋ ಅಲ್ಲಿ...

ಹಗಲು ಹೊತ್ತಿನಾಗ ಸೂರ್ಯಾಮನತ್ತ ಬೊಟ್ಟು ಮಾಡಿ “ಅಗೋ ಅಲ್ಲಿ ನೋಡು ಚಂದಪ್ಪ ಮಾಮ.. ಹಿಂಗ ನೀನತ್ತು ರಂಪಾಟ ಮಾಡುವುದನ್ನೋಡಿ ತನ್ನ ಮಾರೀನ ಹೆಂಗ ಸೊಟ್ಟ ಮಾಡಿಕೊಂಡ್ಯಾನ ನೋಡು.. ಅಳಬ್ಯಾಡಪ್ಪಾ ಅಳಬ್ಯಾಡ.. ನೀನು ದೊಡ್ಡೋ ನಾಗಬೇಕೋ ಬ್ಯಾಡೋ.. ಜಾಣಲ್ಲ ನನ್ನಪ್ಪಾ.. ಹ್ಞಾ.. ಅಂತ ಬಾಯಿ ತೆಗೆ” ಯಂದು ಆಡುತಿರುವ ತಾಯಿ ಯೋರ್ವಳನ್ನೂ, ಬುರುಬುರನೆ ಮೂದಿ ಬಾಯಿ ತೆಗೆವ ಆಕೆಯ ಮಗುವನ್ನೂ.. ನೋಡುತ ನಿಡುಸುಯ್ದಳಂತೆ..

ಹಂಗs ಆಕೆ ಮುಂದು ಮುಂದಕೆ ಹೋಗಿ..

ತಮ್ಮ ಕೂಸು ಕಂದಮ್ಮಗಳಿಗೆ ಅಪ್ಪ, ಅಮ್ಮ, ಅಜ್ಜ, ಅಜ್ಜಿ, ಮಾವ, ಅತ್ತೆ ಯಂಬಿವೇ ಮೊದಲಾದ ಸಂಬಂಧವಾಚಕ ನಾಮಪದಗಳನ ಕಲಿಸುತಲಿರುವ ತಾಯಂದಿರನ

ತಮ್ಮ ಕೂಸುಗಳಿಗೆ ನಡೆಯುವುದನ ಕಲಿಸುತಲಿರುವ ತಾಯಂದಿರನ..

ತಮ್ಮ ಮಕ್ಕಳಿಗೆ ವದೆವುದನ.. ಬಡಿವುದನ ಕಲಿಸುತಲಿರುವ ತಾಯಂದಿರನ...

ತಮ್ಮ ಮಕ್ಕಳಿಗೆ ತಗುಲಿರಬಹುದಾದ ಕಣ್ಣಾಸರೆಯನ್ನು ಕಳೆಯುವ ನಿಮಿತ್ತ ನೀವಳಿಸುತಲಿರುವ ತಾಯಂದಿರನ....

ಅಂತರ ಕಟ್ಟುತಲಿರುವ ತಾಯಂದಿರನ, ಲಟ್ಟಿಗೆ ತೆಗೆಯುತಲಿರುವ ತಾಯಂದಿರನ, ಕೂಸುಗಳಿಗೆ ಕುದುರೆಯಾಗಿರುವ ತಾಯಂದಿರನ ನೋಡುತ..

ಅಂಬಾ, ದಾತ್ರೀ, ಜನನೀ, ವೀರಸೂ, ಶಕ್ತಿಮಾತಾ ಯಂಬಿವೇ ಬಿರುದು ಬಾವಲಿಗಳನ ನೆನೆಸಿಕೊಂಡು ನಿಡುಸುಯ್ಯುತ ಅರಮನೆಗೆ ಮರಳಿದಳಂತೆ ತಾಯಿ..

ಯಾಕವ್ವಾ ಮಾರೀನ ದಿಮ್ಮಗ ಮಾಡಿಕೊಂಡದೀ ಯಂದು ಮೋಬಯ್ಯ ಕೇಳಿದನಂತೆ..

ನನಗ ತಾಯ್ತನದ ಜರೂರತ್ತಯ್ತೆ ಕನಪ್ಪಾ.. ಯಾರೊಬ್ಬರೂ ನನಗ ಕೂಸನ ಕೊಡುವಲ್ಲರು.. ನನಗ ಕೂಸಾಗವಲ್ಲರಯ್ಯಾ ಯಂದಳಂತೆ, ಅದಕಿದ್ದು ಮೋಬಯ್ಯನು ಅವರಿವರನ ಯಾಕ ಬಗಸುತೀ ಯವ್ವಾ.. ನನ್ನನ್ನೇ ನೀನು ಹೊಟ್ಟೇಲಿ ಹುಟ್ಟಿದ ಖಂದಯ್ಯ ಯಂದು ತಿಳಕಳ್ಳವ್ವಾ ಯಂದು ಪರವಾನಿಗಿ ನೀಡಿದನಂತೆ.. ಅರೆ ಅವುದಲ್ಲಾ.. ಕಂಕುಳೊಳಗ ಕೂಸಿಟುಕೊಂಡು ಮೂರೆಲ್ಲ

ತಿರುಗಿದೆನಲ್ಲಾ ಯಂದು ಸಾಂಬವಿ ಕಿಲ ಕಿಲ ನಗಾಡಿದಳಂತೆ.. ಕುದುರೆಡವರಮನೆಯೊಳಗ...

ಹಾಲುಗಲ್ಲ ಕಂದಮ್ಮನಾಗಿ ಮಾರುಪಟ್ಟಿರುವನಂತೆ ಮೋಬಯ್ಯಾ.. ಅಂಬೆಗಾಲಿಟ್ಟು ಅಡ್ಡಾಡುತಿರುವನಂತೆ ಮೋಬಯ್ಯ.. ತನ್ನ ರೊಳ್ಳೆಯನ್ನು ಅರಮನೆ ತುಂಬ ತುಂಬಿರುವನಂತೆ ಮೋಬಯ್ಯಾ..

ಅಂಥ ಮೋಬಯ್ಯಗ ತೊಟ್ಲುಕಾರ್‍ಯೇವ ಮಾಡಿಸುವ ಸಲುವಾಗಿ ಸಾಯಿರದನ್ನೊಂದು ಮಂದಿ ಮುತ್ತೈದ್ಯೇರನ ಕರೆಯಿಸಬೇಕೆಂದು, ವಯನಾದ ಹೆಸರನ್ನ ಯಿಡುವ ಸಲುವಾಗಿ ಸಾಸ್ತ್ರಿಗಳನ, ಮೋನಾಮ ಕಲಿಸುವ ಸಲುವಾಗಿ ಮೋಸಯ್ಯನವರನ.. ಜೋಡಿಸುವ ಸಲುವಾಗಿ ಕುದುರೆಡವೇಲಿ ಅರಮನೆಗೆ ಅರಮನೆಯೇss....

* * * *

ಚೆಲ್ಲೆಲ ಚೆಲಿಮಲದ ಚನ್ನಕೇಸುವರೆಡ್ಡಿಯ ಸೊಂಟ ಮುರಿದು, ಕಪ್ಪಟ್ರಾಳಿನ ಕರೆಪ್ಪನಾಯ್ಡುವಿನ ಯಲ್ಡು ಸಾಯಿರೆಕರೆ ಭೂಮಿಯನ್ನು ದೀನದಲಿತರಿಗೆ ಬಡಬಗ್ಗರಿಗೆ ಹಂಚಿ, ಮಾಕಲಚೆರುವಿನ ಅಯ್ನೂರು ಮಂದಿಯನ್ನು ತನ್ನ ಕುಲಕ್ಕೆ ಮತಾಂತರಗೊಳಿಸಿ, ಯಡ್ರಾಮಿಯೊಳಗೊಂದು, ಹಲಗೇರಿಯಲ್ಲೊಂದು, ಆಸುಪರಿಯಲ್ಲೊಂದು ಸಾಲೆ ತೆರೆದು ಯಲ್ಲಾಕಡೆ ಯೀಸ್ಟ್ ಯಿಂಡಿಯಾ ಕಂಪನಿಯ ಹೆಸರನ್ನು ರಾರಾಜಿಸುವಂತೆ ಮಾಡಿ ಕಡಪಾಕ್ಕೆ ಹೋಗುವ ಮಾರಗ ಮದ್ಯದ.. ಅಂದರೆ ಅನಂತಪುರಕ್ಕೆ ಸಮೀಪದ ಬುಕ್ಕಸಾಗರ ಚೆರುವಿನ ದಂಡೆ ಮ್ಯಾಲ ಟಂಟೊಡೆದು ದಣಿವಾರಿಸಿಕೊಳ್ಳುತ ಕೂತಿದ್ದ ಕಲೆಟ್ರುಥಾಮಸು ಮನ್ರೋಸಾಹೇಬನ ಯದುರು ಮಟ್ಟಸ ನಿಲುವಿಲೆ ನಿಂತು ಯಡ್ಡವರ್‍ಡನು ವಂದೇ ವುಸುರಿಗೆ ಕುದುರೆಡವಿನ ಸಮಸ್ತ ಯಿದ್ಯಾಮಾನಗಳನ್ನು ಹೇಳಿಕೊಳ್ಳುತ್ತಿದ್ದ ಹೊತ್ತಿನಲ್ಲಿ....

ಯಿತ್ತ ಕುದುರೆಡವಿನಲ್ಲಿ..

ಮಕಮಲ್ಲಿನಂಥ ನಸುಕು.. ಮುಳುಗಿದ್ದ ತಪ್ಪಿಗೆ ವುದಿಸದೆ ಬೇರೆ ದಾರಿಯಿರಲಿಲ್ಲ ಸೂರ್‍ಯನಿಗೆ, ಸೂರ್‍ಯ ವುದಿಸಿದ ಯಂಬ ಕಾರಣಕ್ಕ ಯಚ್ಚರಗೊಳ್ಳದೆ ಬೇರಿ ದಾರಿಯಿರಲಿಲ್ಲ ಪಕ್ಷಿಗಳಿಗೆ, ಬೀಸದೆ ಬೇರೆ ದಾರಿ ಯಿರಲಿಲ್ಲ ಗಾಳಿಗೆ, ಗಾಳಿ ಬೀಸುತ್ತಿರುವ ಕಾರಣದಿಂದಾಗಿ ಹಿಂದಕು ಮುಂದುಕು ವಾಲಾಡದೆ ಬೇರೆ ದಾರಿ ಯಿರಲಿಲ್ಲ ಗಿಡಮರಗಳಿಗೆ, ರಾತ್ರಿಬಳಿದಿದ್ದ ಕಪ್ಪು ಬಣ್ಣವನ್ನು ಬೆಳಕಿನ

ತಿಳಿ ಜಲದಿಂದ ಮಯ್ಯ ತೊಳಕೊಳ್ಳದೆ ಬೇರೆ ದಾರಿಯಿರಲಿಲ್ಲ ಗುಡ್ಡಗಳಿಗೆ, ನಿಡುಗಲ್ಲುಗಳಿಗೆ, ತಮ್ಮ ನವುರಾದ ನೀಳು ಬೆರಳುಗಳಿಂದ ಮಲಗಿದವರಿಗೆ ಕಚಗುಳ್ಳಿ ಯಿಕ್ಕದೆ ಬೇರೆ ದಾರಿ ಯಿರಲಿಲ್ಲ ಸೂರ್ಯನ ಕಿರಣಗಳಿಗೆ, ಮಲಗಿರೋ ತಪ್ಪಿಗೆ ಯಚ್ಚರಾಗದೆ ಬೇರೆ ದಾರಿ ಯಿರಲಿಲ್ಲ ಜನರಿಗೆ, ಯಚ್ಚರಗೊಂಡ ತಪ್ಪಿಗೆ ಕಣ್ಮುಚ್ಚಿಕೊಂಡು ವಾಸ್ತವ ಗ್ರಹಿಸದೆ ಬೇರೆ ದಾರಿ ಯಿರಲಿಲ್ಲ ಯಚ್ಚರ ಗೊಂಡವರಿಗೆ..

ಮಯ್ಯಂಬುದು ಅಳಾರಾಗಿರುವ ಅನುಭವ ಪ್ರತಿಯೊಬ್ಬರದು.. ಯಳೆಯ ಬಿಸಿಲನ್ನು ತಮ ತಮ್ಮ ಪುಟ್ಟಕಯ್ಯಿಗಳಿಂದ ಮೊಗೆಯುತ್ತಿರುವ, ಬೆಳಗಿನ ಬೆಳಕನ್ನೇ ನೊರೆವಾಲೆಂದು ಭ್ರಮಿಸಿ ಕುಡಿಯುತ್ತಿರುವ, ಮಲಗಿದ್ದ ಮಾರಗಲುದ್ದದ ಜಾಗವನ್ನೇ ಸುಂದರ ವುದ್ಯಾನ ಮಯ್ದಾನವೆಂದು ಭಾವಿಸಿ ಆಡುತ್ತಿರುವ, ಬೆಳಕಿನ ತಿಳಿಗೊಳದಲ್ಲಿ ಕಯ್ಯಿಕಾಲು ಬಡಿಯುತ್ತ ಯಿಜಾಡುತ್ತಿರುವ, ಹಾಲುಗಲ್ಲದ ಮ್ಯಾಲ ವರ್ತಮಾನಕ್ಕೊಂದು ಭವಿಷತ್ತಿನ ಭಾಷ್ಯ ಬರೆಯುತ್ತಿರುವ, ನಗುಕೇಕೆಗಳ ಗೀಗೀ ಲಾವಣಿಗಳನ್ನು ರಚಿಸುತ್ತಿರುವ, ತಮ ತಮ್ಮ ಬೊಚ್ಚು ಬಾಯಿಗಳೊಳಗೆ ಯಿರೇಳು ಲೋಕಗಳನು ತೋರುತ್ತಿರುವ ತಮ ತಮ್ಮ ಕೂಸು ಕಂದಮ್ಮಗಳ ಕಡೇಕ ನೋಡುತ್ತಾರೆ, ಸಿಕ್ಕವರಿಗೆ ಸಿವಲಿಂಗಾಂತ ಯತ್ತಿಕೊಳ್ಳುತ್ತಾರೆ.. ತುಟಿ ಖಜಾನೆಗಳಲ್ಲಿರೋ ಮುತ್ತು, ರತುನ, ವಜ್ರ, ವಯಢೂರ್ಯಗಳನ್ನು ಆ ಕ್ಷಣ ಖಾಲಿ ಮಾಡಿ ಬಿಡಬೇಕೆಂದು ನಿರ್ಧರಿಸಿರುವವರಂತೆ ಲೊಚ ಲೊಚ ಮುದ್ದು ಕೊಡ ತೊಡಗುತ್ತಾರೆ..

ಹೆಂಡತಿ ಕಯ್ಯೊಳಗಿನ ಕೂಸನ ಗಂಡ ಕಸಗೊಳ್ಳೋದು ತಡಾಗೋದಿಲ್ಲ.. ಗಂಡನ ಕಯ್ಯೊಳಗಿನ ಕೂಸನ ಹೆಂಡತಿ ಕಸಗೊಳ್ಳೋದು ತಡಾಗೋದಿಲ್ಲ.. ಗಂಡ ಹೆಂಡಂದಿರ ಕಯ್ಯೊಳಗಿನ ಕೂಸನ ನೆರೆಯೊರೆಯವರು ಕಸಗೊಳ್ಳೋದು ತಡಾಗೋದಿಲ್ಲ.. ಹಿಂಗs ಕೂಸುಗಳು ವಬ್ಬರ ಕಯ್ಯಿಂದ ಯಿನ್ನೊಬ್ಬರ ಕಯ್ಯಿಗೆ ಚಲಾವಣೆಗೊಳ್ಳುವ ಚಿನ್ನದ ನಾಣ್ಯಗಳಾದವು.. ಯೇಟು ತಿಂದರೂ ಸವೆಯದಂಥ ಹಣ್ಣು, ಮಿಠಾಯಿಗಳಾದವು.. ಯೇಟು ನೋಡಿದರೂ ಕಣ್ಣಿನ ದಾಹ ಹಿಂಗಿಸದಂಥ ಸುಂದರ ದ್ರುಸ್ಯಗಳಾದವು.. ಆಟಕ್ಕೆ ಜೀವಂತ ಆಟಿಗೆಗಳಾದವು.. ಮುದುಕರನ ಹರೇದ ಹುಡುರನ್ನಾಗಿ ಮಾಡಿದವು, ಯಲ್ಲೆಲ್ಲಿ ನೋಡಿದರೂ ಯಿಯಿದವಯೋಮಾನದ, ಯಿಯಿದ ಜಾಯಮಾನದ, ಯಿಯಿಧ ಗಾತುರದ ಹಸುಕಂದಮ್ಮಗಳೇ ಕಂದಮ್ಮಗಳು ಸಿವನೇ.. ಕುದುರೆಡವ ಯಿ ದ್ರುಸ್ಯಗಳಿಂದ

ಪ್ರಭಾವಿತನಾದ ಸೂರ್ಯಾಮನು ಸಹ ಚಂದ್ರಾಮನನ್ನು ಮಗು ಯಂದು ಭಾವಿಸಿ ಯತ್ತಾಡಿಕೊಂಡು ಕುಣುದಾಡಿದನು. ಅಷ್ಟೇ ಯಾಕೆ, ಯೊಚಲು ಮರಗಳು ತೆಂಗಿನ ಮರಗಳಾದುದೇನು? ಮುಳ್ಳುಗಳು ಹೂವುಗಳಾದುದೇನು? ಕಾಗೆಗಳು ಕೋಗಿಲೆಗಳಾದುದೇನು? ಗುಬ್ಬಿಗಳು ಜೇನುವಕ್ಕಿಗಳಾದುದೇನು? ಹುಲ್ಲ ಗರಿಗಳ ಮ್ಯಾಲಿದ್ದ ಯಿಬ್ಬನಿಗಳು ತೊಳೆದ ಮುತ್ತುಗಳಾಗಿ ಹೊಳೆದುದೇನು? ಸರಳ ಸಜ್ಜನಿಕೆಗಳು ಕೂಸುಗಳಿದ್ದ ಕಡೇಲೆಲ್ಲಾ ವಸಾಹತು ಸ್ಥಾಪನಾ ಮಾಡಿದುದೇನು? ಕೂಸಿದ್ದ ವಂದೊಂದು ಗುಡುಲೂ ಅರಮನೆಯಂತೆ ಕಂಗೊಳಿಸುತಲಿದ್ದುದೇನು? ಹ್ಹಾ.. ಹ್ಹಾ..

ಕೂಸಿದ್ದ ಮನೆ ಮಂದಿ...

ವುಣದಿದ್ದರೂ ವುಂಡವರಂತಿರುತಲಿದ್ದುದೇನು? ಬ್ಯಾನೆ, ಬ್ಯಾಸರಿಕೆ, ಆಯಾಸ, ರೋಗ ರುಜಿಣಗಳಿಂದ ದೂರಯಿದ್ದುದೇನು? ಯಲಮೋ ಯಂಬ ಸತ್ರುಗಳಿಲ್ಲ.. ಕೊಟ್ಟು ಮುಂದಕೆ ಹೋಗು ಯನ್ನುವ ಸಾಲಗಾರರ ಭಯವಿಲ್ಲ ಅವರವರಿಗೆ ಸಿವನೇ..

ಹೊತ್ತೇರಿದಂತೆ ಬಿಸಿಲು ಬೆಳದಿಂಗಳ ಪೊರೆ ಕಳಚತೊಡಗಿದಂತೆ ಕುದುರೆಡವಿಗೆ ಕುದುರೆಡವೇ ವಾಸ್ತವದ ಕಡೇಕ ನಿಧ ನಿಧಾನವಾಗಿ ಮುಖ ಮಾಡಿತು. ಮುಖ ಮಾಡಿರುವ ಕಾಲಕ್ಕ ಮೋರೋಯ್ ಮಾರಿತಾದಿss.. ಮೋರೋಯ್ ಮರುವಾದಿsss..ಮೋರೋಯ್ ಹಟವಾದಿsss.. ಯಂದು ಕೂಗಿಕೋತ, ಕೂಗಿಕೋತ ರತುನಗಿರಿಯ ಬಂಡೆಪ್ಪನೂss.. ಮೋರೋಯ್ ಗುಂತೆಲೀsss ಮೋರೋಯ್ ಸೆಮಂತಲೀsss ಮೋರೋಯ್ ಚರಕಲೀ.. ಯತ್ತಲಿಂದಲೋ ಬಂದೂss ಬಂದೂss...

ಗಂಡ ಹೆಂಡತಿಯನ್ನು ಮರೆತು, ಹೆಂಡತಿ ಕಂಕುಳದಲ್ಲಿದ್ದ ಕೂಸು ಕುನ್ನಿ ಮರೆತು, ತಂದೆ ಮಗನನ್ನು ಮರೆತು, ವದಕನ ಬದುಕನ್ನು ಮರೆತು, ವಬ್ಬರು ಯಿಬ್ಬರಾಗಿ, ಯಿಬ್ಬರು ನಾಲಕು ಮಂದಿಯಾಗಿ ನೆರೆ ಬಂದ ಹೊಳೆಯಂತೆ ಅರೆಮನೆಯಲ್ಲೆಯ್ತೆಲ್ಲಂತ ಧಾವಿಸಿ ಹೋಗುತ್ತದೆ.. ಬಗ ಬಗ್ಗಿ ನೋಡುತ್ತದೆ.. 'ಯುವ್ವೋ ಯಂಥ ಮಾಯಗಾರ್ತಿ ಅದೀಯವ್ವಾ ನೀನು.. ನಿನ್ನ ಕರುಣೆಯ ಕಡಲು ಅಗಾಧ ಅಯ್ತಲ್ಲವ್ವಾ'.. ಯಂದುದ್ಗಾರ ತೆಗೆಯುತ್ತದೆ..ಸಿವಸಂಕರ ಮಾದೇವಾ..

ಅಂಗಾತ ಮಲಗವನೆ ಮೋಬಯ್ಯ, ಕಯ್ನ ಕಾಲ್ನ ಬಯಲೊಳಗ ಯತ್ತಿ

ಆಡಿಸುತ ಯೊಜಾಡುತವನೆ ಮೋಬಯ್ಯ, ಬಯಲೊಳಗ ಬಯಲ ಹಿಡಿಯಲಕಂತ ಕಯ್ನ ಚಾಚುತವನೆ ಮೋಬಯ್ಯ.. ಬಯಲೊಳಗ ಬಯಲ ಚಂಡನ್ನು ವದೆಯುವವನಂತೆ ಕಾಲನ ಚಾಚುತವನೆ ಮೋಬಯ್ಯಾ..

ಯೊ ಅಲವುಕಿಕ ದ್ರುಸ್ಯವನ್ನು ಸವಿಯುತ್ತಿರುವ ಪರಮ ಲವುಕಿಕ ಮಂದಿ ಯಿದೇನಪ್ಪಾ ನಿನೆ ಮಾಯೆ, ತಾಯಿ ಸಾಂಬವೀ, ಯಿದೇನವ್ವಾ ನಿನ ಮಾಯೆ ಯಂದುದ್ಗಾರ ಮಾಡುತ್ತಿದ್ದುದನು ಯೇನೆಂದು ಹೇಳಲಿ ಸಿವನೇss.. ಮುಟ್ಟಲಕೆಂದು.. ಮುಟ್ಟದಿರಲಕೆಂದು ಹಿಂದಕ ಮುಂದಕ ಜರುಗಾಡುತಲಿದ್ದ ಜನರನ್ನುದ್ದೇಶಿಸಿ ಯೇಕನಾತಪ್ಪ ಯಂಬುವವಧೂತನು ಮುಟ್ಟು ಮಯ್ಲಿಗಿ ಆದೋರದರ ಸನೀಕ ಹೋಗ ಬ್ಯಾಡೂರಿ ಯಂದೂ.. ಸಾಣಗೀಣ ಮಾಡಿರದೋರು ಅದರ ಸಣೀಕ ಹೋಗ ಬ್ಯಾಡೂರಿ ಯಂದು ಯೆಕದಾರೆವ್ವನೂ ಯಚ್ಚರಿಸುತಲಿದ್ದುದರ ಬಗ್ಗೆ ಯೇನು ಹೇಳಲಿ ಸಿವನೇ..

ಯಿದ್ದ ಕಾಳಗಗಳಿಗೆ ಹೆದರದ ಮಂದಿ ಮೋಬಯ್ಯನ ಆ ಸ್ಥಿತೀನ ನೋಡಿ ಭಯದ ತತ್ತಿಯಿಡ ತೊಡಗಿದುದರ ಬಗ್ಗೆ ಯೇನು ಹೇಳಲಿ ಸಿವನೇss.. ಆ ಭಯಕ ಯಿದ್ದ ಕಾರಣಗಳು ವಂದss ಯರಡss...

ಆ ಮೂರ ರಾಜ ನಂಬುತ್ತಿರುವನೆಂದಮ್ಯಾಲ, ಯೀಮೂರ ರಾಜ ನಂಬುತ್ತಿರುವನೆಂದಮ್ಯಾಲ, ಸಮಸ್ತ ರಾಜರು ನಂಬುತ್ತಿರುವರೆಂದಮ್ಯಾಲ, ಯಥಾ ರಾಜಾ ತಥಾ ಪ್ರಜಾ ಯಂಬ ಮಾತೇ ಯಿರುವುದೆಂದ ಮ್ಯಾಲ ಮಾಮೂಲು ಮಂದಿ ನಂಬದಾಂಗ ಹೆಂಗಿರುತದss..

ವಂದಲ್ಲಾ ವಂದು ಕಪ್ಪಕಾಣಿಕೆ ಹಿಡಕೊಂಡು ಸಾಲು ಗಟ್ಟಿತು ಮಂದಿ ಅರಮನೆಯ ಮುಂದುಗಡೆ. ನಂದಗೋಕುಲದ ಕಂಪು ಸೂಸುತಲಯ್ತೆ.. ಅವುದವುದು.. ಸ್ರೀಕ್ರುಷ್ಣನ ಬಾಲಲೀಲೆಯ ನಂದಗೋಕುಲ ಬ್ಯಾರೆ ಅಲ್ಲ.. ಸಾಂಬವಿಯ ಸಿಸುಕಂದಮ್ಮನಿರುವ ಸದರಿ ಅರಮನೆಯು ಬ್ಯಾರೆ ಅಲ್ಲ.. ನಿಂತ ನಿಂತಲ್ಲೇ ಮಂದಿ ತಮಗಾದಾನಂದ ತಡಕೊಳ್ಳಲಾಗದ ಬುಳ ಬುಳನೆ ಅಳ ತೊಡಗಿದರು.. ತಮಗರಿವಿಲ್ಲದಂತೆ ಗೊಳ್ಳನೆ ನಗಾಡ ತೊಡಗಿದರು ಕೂಸಯ್ಲು ಹಚಕೊಂಡಿದ್ದ ಮಳ್ಳ ಮಂದಿ.. ಕೂಸು ಕಂದಯ್ಯನಾಗಿರೋ ಮೋಬಯ್ಯನ ದರುಸನ ಪಡಕೊಳ್ಳೋ ಸರದಿ ತಮಗ್ಯಾವಾಗ ಬರುತದೋ ಯಂದನಕಂತ ನಿಂತ ನಿಂತಲ್ಲೇ ಮಿಡುಕಾಡತೊಡಗಿದರು ಅಮಾಯಕ ಭಕುತಾದಿ ಮಂದಿ..

ಅರಮನೆಯೊಳಗಿನಿಂದ ಸೂಸಿ ಬರುತಲಿದ್ದ ಲಟಲಟನೆ ಲಟ್ಟಿಗೆ

ಮುರಿಯುತಲಿದ್ದ ಸದ್ದು, ನೀವಳಿಸಿ ದ್ರುಸ್ಟಿ ತೆಗೆಯುತಲಿದ್ದ ಸದ್ದು.. ಬೆಂಕಿ ಬಾಂಡೆಲೆಗೆ ಬಿದ್ದ ವುಪ್ಪು ಚಟಚಟನೆ ಸಿಡಿಯುತಲಿದ್ದ ಸದ್ದು.. ಕಸಬಾರಿಗೆ ನೀವಳಿಸಿ ಕಾಳಿಕಣ್ಣು, ಬೋಳಿಕಣ್ಣು ಮಾರಿಕಣ್ಣು, ಮಸಣೀ ಕಣ್ಣು.. ನಿನ ಕಡೀಕೆ ಸುಳಿಯದಾಂಗಿರಲಿ, ಸುಳಿದೊಡನೆ ಸೇದಿ ಹ್ವಾಗ್ಲಿ ಯಂದು ಮಣ ಮಣ ಅರಿತಿರೋ ಸದ್ದು.. ನಿಂಗೆ ಕೊಣ್ ಬುಡೋರ ಕಣ್ಣಿಗೆ ಕಾರೆ ಮುಳ್ಳು ಚುಚ್ಚಲೀ.. ನಿಂಗೆ ಕೊಣ್ ಬುಡೋರ ಕೊಣ್ಣೀಗೆ..

ಕೇಳಿಸಿಕೊಳುತಾss ಕೊಳುತಾ ಮಂದಿ ತಮ ತಮ್ಮ ಕಣ್ಣಾಲಿಗಳನ ಕಿರಿದುಗೊಳಿಸಿಕೊಳ್ಳ ತೊಡಗಿದರು..

ಚಲಿಸಲಾರದ ಚಲಿಸುತಲಿರುವ ಸರತಿ ಸಾಲು.. ಮುತ್ತಿನ ಪಲ್ಲಂಗದ ಮ್ಯಾಲ ಬಲಗಾಲ ಹೆಬ್ಬೊಟ್ಟನ ಬಾಯೊಳಗ ಯಿಟುಕೊಂಡು ವುಮ್ಚು ವುಮ್ಚು ಯಂದು ಜಮುಡುತಲಿರುವ ಅರವತ್ತೆಪ್ಪತ್ತರ ವಂಯೋವಾನದ ಮೋಬಯ್ಯನೆಂಬುವ ಕೂಸು.. ಅದರ ಯೇಕರಿಕೆ, ದೇಕರಿಕೆ ನೋಡಿಕೊಳ್ಳುತಲಿದ್ದ ಕಾರೆವ್ವ, ಬೋರೆವ್ವ, ಮಾಳವ್ವ, ಜಾಲಾಂದರದವ್ವ, ಮೆಂಬಾರವ್ವರೇ ಮೊದಲಾದ ಮುದುಕಿಯರು..

ಯೀ ಚೋಜಿಗವ ನೋಡಲು ಯಲ್ಲಾರು ಬಂದರು? ಯಲ್ಲಾರು ಹೋದರು? ಆದರ ಬರೋರು ಬಂದು ನೋಡಿಕೊಂಡು ಹೋಗಲಿಲ್ಲವಲ್ಲಾ.. ಯಂದು ಯಲ್ಲಾರು ಪೇಚಾಡಿ ಕೊಳ್ಳುತ್ತಿರುವಾಗ್ಗೆ..

ಮನಸನ ವಝಿ ಮಾಡಿಕೊಂಡು ಹೋಗಿರುವಾಕಿ ಅದೆಂಗ ಯೀಕಡೀಕೆ ಮುಖಮಾಡುತಾಳ ಯಂದೊಬ್ಬರು ಅನುವಾಗ್ಗೆ, ಪತ್ನಿ ಪದವೀನ ನಿಭಾಯಿಸುವುದೆಂದರ ಸುಮ್ಮನೇನರಪ್ಪಾ.. ಯಾದೇ ಪತ್ನಿ ತನ ಗಂಡಗ ಪತ್ನಿಯೂ ಆಗಬೇಕು, ತಾಯಿನೂ ಆಗಬೇಕು ಯಂದಿನ್ನೊಬ್ಬರು ಜವಾಬು ನೀಡುತಿರುವಾಗ್ಗೆ.. ವಟ್ಟಿನಾಗ ಆಕೆಗೆ ದಯವದ ತಿಕ್ಕಡಿ ಬಡಕೊಂಡಯ್ತೆ ಯಂದು ಮತ್ತೊಬ್ಬರು ಪೇಚಾಡಿಕೊಳುತಿರುವಾಗ್ಗೆ....

ರಣ ಬಯಲದೆಸೀಲಿಂದ ರಾಜ ಪರಿವಾರದವರ ಪಯ್ಕಿ ವಂದಿಬ್ಬರು ಬಂದು ಸಿಸುವಿನ ದರುಸನ ಪಡಕೊಂಡು ಹಿಮ್ಮುಖವಾಗಿ ಹೋದರು. ಅದಾದ ಸೊಲುಪ ಹೊತ್ತಿಗೆ ತನ್ನ ವಾರಿಗೆಯವನಾದ ಮೋಬಯ್ಯನು ತಾಯಿಯ ಪವಾಡದಿಂದ ಸಿಸುವಾಗಿ ಆಡುತಿರುವ ಅಲವುಕಿಕ ಯಿದ್ಯಾಮಾನವನ್ನು ಅರಗಿಸಿಕೊಳ್ಳಲಾಗದ ದಮ್ಮೂರು ಯಂಕಾವಧೂತರಿಂದ ಭೋದ ತಕ್ಕೊಂಡು

ಪಲಾನಾವಧೂತನಾಗುವ ಸಲುವಾಗಿ ಪಸುವುಲ ಪಾಲಯ್ಯನು 'ಜಗದಂಬ ಜಗದಂಬ' ಅನಕಂತ ಪಲಾನ ದಿಕ್ಕಿನ ಕಡೆ ಹೋದನು. ಅದಾದ ಸೊಲುಪ ಹೊತ್ತಿಗೆ ಯಿನ್ನೊಬ್ಬರು ಯಿನ್ನೊಂದು ರೀತೀಲಿ, ಮತ್ತೊಬ್ಬರು ಮತ್ತೊಂದು ರೀತೀಲಿ ಬಂದು ಕಂಡರಿಯದ ಕೇಳರಿಯದ ಆ ಮಾಯಾವಿ ಸಿಸುವಿನ ಲೀಲಾಯಿನೋದವನ್ನು ಕಣ್ಣಲ್ಲಿ ತುಂಬಿಕೊಂಡು ಹೋದರೆಂಬಲ್ಲಿಗೆ ಸಿವ ಸಂಕರ ಮಾದೇವಾss..

* * * *

ಗುರ್‍ರಪ್ಪನು ತಂದುಕೊಟ್ಟಲಾಗಾಯ್ತು ಮಾಬಲಿ ಚಂಡನ ರುಷಣ ಬೀಜದ್ವಯಗಳನ್ನು ತನ್ನ ಕೊಳ್ಳೊಳಗೆ ಜೋತಾಡುತ ಕಟ್ಟಿಕೊಂಡು ಮಾರನಾಯಕನು ತನ್ನ ಸೊಕ್ಕೆ ಪ್ರಜೆಗಳ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿರುವಾಗ್ಗೆ...

ಯಡ್ಡವರ್‍ಡನು ಸಲ್ಲಿಕೆ ಮಾಡಿದ ವರದಿಗಳ ಅತಿಮಾನುಷಶಕ್ತಿಯ ಪೂರುವಾಪರ ಸತ್ಯಾಸತ್ಯತೆಯನ್ನು ಅರಿಯೋ ನಿಮಿತ್ತ ನಾನಾ ನಮೂನಿ ಯಿಷಯಗಳ ಯಿದ್ವಾಂಸರನ್ನು ದುಂಡು ಮೇಜಿನ ಸುತ್ತ ಕುಳ್ಳಿರಿಸಿಕೊಂಡು ನಿಶಿತಮತಿಯೂ, ವಯುಗ್ನಾನಿಕ ಮನೋಭಾವದವನೂ ಆದಂಥ ಕಲೆಟ್ರುಥಾಮಸು ಮನ್ರೋ ಸಾಹೇಬನು ದತ್ತ ಮಂಡಲದ ಕೇಂದ್ರಸ್ಥಾನವಾದ ಕಡಪಾದ ಕಛೇರಿವಳಗೆ ಕೂಕಂಡು, ನಿಂತುಕೊಂಡು ಸತಪಥ ಅಡ್ಡಾಡುತ ಹುಸ್.. ಡುಸ್ ಯಂದು ವುದ್ಗಾರ ಮಾಡುತ ಯಿಂಡಿಯಾದ ಬ್ರುಹದ್ ಗಾತುರದ ನಕ್ಷೆಯ ಕಡೀಕೊಮ್ಮೊಮ್ಮೆ ಮುಖ ಸಿಂಡರಿಸಿಕೊಂಡೂ, ಮುಗುಳು ನಗುತ್ತಲೂ ನೋಡುತ್ತಿರುವಾಗ್ಗೆ...

ತವರಿಗೋಗುವ ಮಾರಗಮಧ್ಯದ ಕಾಡಡವಿಯೊಳಗೆ ತನ್ನ ತಂದೆ ಅಂತಾಡೆಪ್ಪನು ಆಡುತ್ತಿದ್ದ ಸಂತಯಿಕೆ ಮಾತುಗಳನ್ನು ಲೆಕ್ಕಿಸದೆ ಯಾದಾರ ಹುಲಿ ಚಿರತ ಬಂದು ನನ್ನನ್ನು ತಿಂಬಬಾರದೆ, ಯಿನ್ಯಾಕ ಭೂಮಿ ಮ್ಯಾಲ ನಾ ಬದುಕಿರಬೇಕು.. ಯಂದು ಜೋರಾಗಿ ಅಳಕಂತ ಜಗಲೂರೆವ್ವ ದುಕ್ಕ ಮಾಡುತಿರುವಾಗ್ಗೆ....

ಹ್ಹಾ.. ಹ್ಹಾ.. ವಂಡರಪುಲ್ಲು.. ಹೋ ಹೋ ವಂಡರಪುಲ್ಲು.. ಹೇ.. ಹೇ ಫಂಟಾಸ್ಟಿಕ್ ಯಂದು ಯಿಮರ್‍ಸಕರು ಜೆನ್ನಿಫರಮ್ಮಳ ಕಲಾಕ್ರುತಿಯನ್ನು ನೋಡುತ ಲಂಡನ್ನಿನ ಆರ್‍ಟು ಗಾಲರಿಯಲ್ಲಿ ಹೊಗಳುತಿರುವಾಗ್ಗೆ...

ವಲ್ಲದ ಮನಸಿನಿಂದ ಅಲಬರ್‍ಟನು ಬೆಳಗಾವಿ ಸೀಮೆವಳಿತದ ಥ್ಯಾಕರೆ

ಸಾಹೇಬನ ಹೆಗಲಿಗೆ ಹೆಗಲು ಕೊಡಲಿಕ್ಕೆಂದು ಧಾರವಾಡ ಪಟ್ಟಣದತ್ತ ಮಾರ್ಬಲ ಸಮೇತ ಪ್ರಯಾಣ ಕಯ್ಕೊಂಡಿರುವಾಗ್ಗೆ...

ಕುದುರೆಡವಿನ ಅವಳಿ ಗ್ರಾಮಗಳಾದ ಬಡೇಲಡಕು, ಕಾನಾಮಡುಗು, ಗುಂಡುಮುಳುಗು, ಜರಿಮಲೆ ಅವಳಿ ಗ್ರಾಮಗಳಾದ ಯದ್ದಡಕೆ, ಮಾರಲ ಮಡಕೆ, ಯಾಪಲಡಕೆ, ಸಿರಗುಂಪಿಯ ಅವಳಿ ಗ್ರಾಮಗಳಾದ ಸಾಲಗುಂದಿ, ಮುಕ್ಕುಂದಿ, ಹತಗುಂದಿ, ದರೂರು ಅವಳಿ ಗ್ರಾಮಗಳಾದ ಯಾಪಲದಿನ್ನಿ, ಮಾಪಲದಿನ್ನಿ, ಕಾಪಲದಿನ್ನಿ ಯಿವೇ ಮೊದಲಾದ ಛಪ್ಪನ್ನಾರು ಗ್ರಾಮಗಳಲ್ಲಿ ಹೋಗಲಿಕ್ಕಾಗದೋರು, ಬಾರಲಿಕ್ಕಾಗದೋರು ತಮತಮಗೆ ತಿಳಿದಂಗೆ ಗೊಂಬಿಮಾಡಿ ಅದಕ್ಕೆ ಮೋಬಯ್ಯ ಸಿಸುವು ಯಂದು ನಾಮಕರಣ ಮಾಡಿ ತೊಟ್ಟಿಲೊಳಗಿಟ್ಟು ತೂಗುತ ಪಾಡುತ್ತಿರುವಾಗ್ಗೆ....

ಆ ಮಾಯಾದ ಸಿಸುವು ಹೆಂಗಯ್ತೆ ಯೇನಯ್ತೆ ಯಂದು ನೋಡುವ ನಿಮಿತ್ತ ಮಂದಿ ನಡಕೊಂಡೋ, ಸವಾರಿ ಬಂಡಿ ಕಟ್ಟಿಕೊಂಡೋ, ಸಾರ್ಥದ ಕತ್ತೆಗಳ ಮ್ಯಾಲ ಕೂಕಂಡೋ ಕುದುರೆಡವಿನತ್ತ ಪ್ರಯಾಣ ಬೆಳೆಸಿರುವಾಗ್ಗೆ...

ಮಾಯಾದ ಸಿಸುವು, ಮಾಯಾದ ರೀತಿಯಲ್ಲಿ ಮಾಯಾದ ಸ್ಥಿತಿಯಲ್ಲಿ ಮನೋ ಯೇಗದಲ್ಲಿ ಕೂಡ್ಲಿಗಿ ತಲುಪಿ ಹಂಸತೂಲಿಕಾತಲ್ಪದ ಮ್ಯಾಲಂಗಾತ ಮಲಿಕ್ಕಂಡಿದ್ದ ಜೆನ್ನಿಫರಮ್ಮಳ ಕಣಸಲ್ಲಿ ಗೋಚರ ಮಾಡಿರುವಾಗ್ಗೆ...

ಯಿತ್ತ ಕುದುರೆಡವು ಪಟ್ಟಣವನ್ನೇ ಸಣ್ಣ ಕಂದಮ್ಮನನ್ನಾಗಿ ಮಾಡಿ ತೂಗಾಡುತಲಿದ್ದ ವೋಬಯ್ಯನೆಂಬ ಸಿಸುವು ಲೀಲಾಯಿನೋದವನ್ನು ಮೆರೆಯುತಲಿತ್ತು. ಆನಂದದ ಯಿಷಯದಲ್ಲಿ ಹೊಸ ಸಖೆಯನ್ನೇ ಆರಂಭವಾಡಿತ್ತು. ಅಲ್ಲಿ ಯಿಧ ಯಿಧದ ಜೋಗುಳ ಪದಗಳನ್ನು ಹಾಡುತ್ತಿದ್ದವರೆಷ್ಟೋ?

ಯೇನಿಲ್ಲಾಂದರು ಸಾಯಿರ ಮಂದಿ ಕಯ್ಯಿಂದ ರಾಗಿ ಅಂಬಲಿ, ಕೆನೆಮೊಸರು, ಆಕಳ ತುಪ್ಪದಲ್ಲಿ ತೇದ ವುತ್ತುತ್ತಿಯನ್ನು ನಯವೇದ್ಯ ಮಾಡಿಸಿಕೊಂಡಿರಬೌದು. ಅದರೊಳಗೆ ಸಾಂಬವಿಯೋ? ಸಾಂಬವಿಯೊಳಗೆ ಅದೋ? ವಟ್ಟಿನಲ್ಲಿ ಕುದುರೆಡವು ಪಟ್ಟಣದ ಕಣ್ಣಗೊಂಬಿಯಾಗಿಬಿಟ್ಟಿತ್ತು. ಅದು ಸದರಿ ಪಟ್ಟಣ ವಂದೇ ಅಲ್ಲದೆ ಗುಂಡುಮುಳುಗು, ಖಾನಾಮಡುಗು, ಬಡೇಲಡಕು, ಕುಮತಿ, ಜರುಮಲಿ, ಹ್ಯಾಳ್ಯಾ, ಕೊತ್ತಲಗಿಯೇ ಮೊದಲಾದ ಸುತಮುತ್ತಲ ಹೋಬಳಿ ಗ್ರಾಮಗಳ ತಲೆಯೊಳಗೆಲ್ಲ ಹೇನಾಗಿ

ಹರಿದಾಡಲಾರಂಭಿಸಿತು.

ಆಳರಸರ ದವುರ್ಜನ್ಯಕ್ಕೆ ಸಿಲುಕಿ ಕಿಲುಬು ದುಗ್ಗಾಣಿ ಯಂಥಾಗಿದ್ದ ಕುದುರೆಡವು ಪಟ್ಟಣವನ್ನು ದತ್ತಮಂಡಲ ಪ್ರಾಂತದೊಳಗ ಯದೆ ಸೆಟೆಸಿ ನಿಲ್ಲುವಂತೆ ಮಾಡಿರುವ ತಾಯಿಯು, ತಮ್ಮ ಗುಡಿಹಿಂದಲ ಮೂಳೆ ಮೋಬಯ್ಯನನ್ನು ಅಗಾಧ ಸಿಸುವಂ ಮಾಡಿರುವ ತಾಯಿಯ ರುಣವನ್ನು ಹೆಂಗ ತೀರಿಸಬೇಕೆಂಬ ಚಿಂತೆ ಯಾವತ್ತೂ ಪ್ರಜಾನಿಕವನ್ನು ಬೆಂಬತ್ತಿ ಕಾಡತೊಡಗಿತು. ಆಕೆ ಅದಾಳಂದರ ಅದಾಳ, ಯಿಲ್ಲಾಂದರ ಯಿಲ್ಲ. ಮೋಬಯ್ಯನ ರೂಪದಲ್ಲಿ ಸಿಸುಮೊಂದು ಅಯಿತೆಂದರ ಅಯಿತೆ, ಯಿಲ್ಲಂದರ ಯಿಲ್ಲ. ಅವುದೊ ಅಲ್ಲವೋ ಯಂಬುವ ಸಂದಿಗ್ದದೊಳಗ ತಾವು ವದ್ದಾಡುತಲಿದ್ದಲ್ಲಿ ದಯವ ಮತ್ತ ಮುನುಸುಕೊಂಡರೇನು ಗತಿ? ತಮ್ಮ ಕೂಸುಕಂದಮ್ಮಗಳನು ತಾಯಿ ತಮ್ಮ ಯಿರುದ್ದವೇ ಯತ್ತಿಕಟ್ಟಿದರೇನು ಗತಿ? ತಮ್ಮ ಹೆಂಡಂದಿರ ಹೊಟ್ಟೆಗಳನ ತಾಯಿ ಯಿಳುವಿದರೇನು ಗತಿ? ಅದಕ ತಾವು ಮುಂದಕ ಮಾಡೋದನು...

ಮೋಬಯ್ಯನಿಗೊಂದು ತೊಟ್ಟಿಲು ಕಾರ್ಯೇವು ಮಾಡಬೇಕು? ವಂದು ನಾಮಕರಣ ಕಾರ್ಯೇವು ಮಾಡಬೇಕು? ಮೋಬಯ್ಯ ಯಾವ ಚಣದಲ್ಲಿ ದೊಡ್ಡವನಾಗಿ ಬಿಡುವನೋ? ಅದು ಹೇಳಲಕ ಬರುವಂಗಿಲ್ಲ, ಕೇಳಲಕ ಬರುವಂಗಿಲ್ಲ. ಅಷ್ಟರೊಳಗ ಯಿಂಥದ್ದೊಂದು ಕಾರ್ಯೇವುಗಳ ಮಾಡಿ ತಾವು ಪುನೀತರಾಗಬೇಕು.. ತಾಯಿಯಿಂದ ಸಯ್ಯಿ ಅನಿಸಿಕೋಬೇಕು.. ಆದರ ಅರಮನೆಯೊಳಗಿರುವ ಮಂದಿ ತಮ ತಮ್ಮ ಬಾಯ ಹಲ್ಲುಗಳ ಸಂದೀಲಿ ಕಡ್ಡಿಗಳನ್ನಾಡಿಸುತ ಕೂಕಂಡಿರುವರೋ ಹೆಂಗೆ? ಅವರು ತಮ ತಮ್ಮ ಕಿವಿಗಳೊಳಗಿನ ಕೂಕಣಿಯನ ತೆಗಿಸಿಕೊಳ್ಳುತ ಕೂಕಂಡಿರುವರೋ ಹೆಂಗೆ..? ಯಂದನಕಂತ ಮಂದಿ ಅರಮನೆಯಂಗಳದಲ್ಲಿ ನೆಲ ಮುಗಿಲುಗೇಕಾಗಿ ನಿಂತು....

“ಯ್ಯೋನರಯ್ಯಾ ಪಟ್ಟಣ ಸೋಮಿಗಳಿರಾ.. ನಮ್ಮ ಮೋಬಯ್ಯ ಸಿಸುವಾಗಿ ಮಾರು ಪಟ್ಟು ಯ್ಯೋಸು ದಿವಸಗಳಾದವು ಯ್ಯೋನು ಕಥೆ.. ಮೂರ್ತ ಹುಡುಕಿ ಅದಕ ವಂದು ತೊಟ್ಲು ಕಾರ್ಯೇವು ಮಾಡೋದು ಬ್ಯಾಡವೇನು? ವಂದು ನಾಮಕರಣ ಕಾರ್ಯೇವು ಮಾಡೋದು ಬ್ಯಾಡವೇನು?” ಯಂದು ದಿನ ಬೆಳಗಾದರೂ ಕೂಗಿ ಕೇಳತೊಡಗಲು....

ಪ್ರಜೆಗಳ ಬಾಯಿಯಿಂದಲೇ ಯೀ ಮಾತು ಬರಲೀ ಅಂತ ಕಾಯುತಲಿದ್ದ

ಜಡೆಪ್ಪ ತಾತ, ಕಾಡುಗೊಲ್ಲರೀರಯ್ಯರೇ ಮೊದಲಾದ ಮುದೇರು ಅವ್ವ ಹೊಳೆಗೊಂಟದ್ದು ವಂದು ತೂಕವಾದರ ಆಕೆಯ ಕಂದಮ್ಮಗ ತೊಟ್ಲು ಕಾರ್‍ಯೇವು, ನಾಮಕರಣ ಮಾಡೋದು ಯಿನ್ನೊಂದು ತೂಕ ಕನರಪ್ಪಾ.. ಅಂದರು. ಅದಕ ಯಿದನು ಮಾಡಬೇಕರಪ್ಪಾ.. ಯಿದಕ ಅದನು ಮಾಡಬೇಕರಪ್ಪಾ.. ಅಂದರು.. ಅದಕ ಪ್ರಜೆಗಳು ಅದನು ಮಾಡುತೇವಂದರು, ಯಿದನು ಮಾಡುತೇವಂದರು..

ಅದೂ ಅಲ್ಲದ ತನ ಕಯ್ಲಿ ಸಿಸುವಾಗಿರಲಕ ಆಗುತಾಯಿಲ್ಲ.. ನಾನು ನಿಮ್ಮೆಲ್ಲರಂಗ ದೊಡ್ಡವ ಅದೀನಿ. ದೊಡ್ಡವ ಆಕ್ಕೀನಿ ಯಂದು ಮೋಬಯ್ಯ ರಿಪಿರಿಪಿ ಮಾಡಲಾರಂಭಿಸಿದ್ದ ಬ್ಯಾರೆ. ಕುದುರೆಡವು ಸಮುಸ್ಥಾನವುಳಿಯಲಕಂದರ, ಸಸ್ತರಾಸ್ತರಗಳಗೊಡವೆಯಿಲ್ಲದ ಸಾಮುರಾಜ್ಯವನ್ನು ಯಿಸ್ತರಿಸಬೇಕಂದರ, ತಮ್ಮ ಅವಧೂತತನವು ಯಲ್ಲಂದರಲ್ಲಿ ನೆಲೆಗೊಳ್ಳಬೇಕಂದರ, ಕುಂತಳ ಸೀಮೆಯ ಸಮಸ್ತ ಪ್ರಜಾನಿಕವು ಸಾಂಬವಿಯ ಸದ್‌ಭಕುತರಾಗಿರಬೇಕಂದರ ನೀನು ಕೆಲಕಾಲ ಸಿಸುವಾಗಿ ಯಿರಲಕs ಬೇಕು ದೊರೆಯೇ ಯಂದು ಪ್ರತಿ ಸರ್‍ತಿ ಹೇಳೀ ಹೇಳೀ ಸಾಕು ಮಾಡಿಕೊಂಡಿದ್ದರು. ಅದಕ ಅವರು ಪ್ರಜಾನಿಕದ ಮಾತಿಗೆ ಸಮ್ಮತಿಸಿದ್ದು.. ಮುಂದಲ ಕಾರ್‍ಯೇವುಗಳು ಸಾಸ್ತರ ಸಮ್ಮತವಾಗಿರಬೇಕಂದರ....

ವಂದು ಅನುವಾದ ಮೂರ್‍ತ ತೆಗೆದು ಗೊತ್ತು ಮಾಡಲಕ ಹೊತ್ತಿಗೆ ವುಳ್ಳೋರು, ತೆಗೆದು ಕರಾರುವಾಕ್ಕಾಗಿ ನೋಡಬಲ್ಲೋರು.. ನೋಡಿ ಹೇಳಬಲ್ಲೋರು ಕುಂತಳ ಸೀಮೆವಳಗ ಯಾರ್‍ಯಾರುಂಟು ಯಂದರ ಫಲಾನ ಯಿಂಥವರುಂಟೆಂಬುವ ಸಮಾಚಾರ ತೇಲಿ ಬಂತು. ಅಂಥವರು ಯಲ್ಲಲ್ಲುಂಟು ಅಂದರ ಫಲಾನ ಅಗ್ರಹಾರಂಗಳಲಿ ಯಂಬ ಸಮಾಚಾರ ತೇಲಿ ಬಂತು. ಅಂಥ ಮೂರುಗಳಲಿರೋ ಅಂಥವರನು ಸಕಲ ಗವುರವಗಳಿಂದ ಕರಕೊಂಡು ಬರಬೇಕರಪ್ಪಾ ಯಂದು ಹೇಳಿ ವಾಲಿಕಾರ, ತಳವಾರರನ್ನು ಅವರಿದ್ದ ದಿಕ್ಕುಗಳಿಗೆ ಗದುಮಿದರು. ಅವರು ವಂದೊಂದು ಯಿದದಿ ನಡದು ತಲುಪಿ ಅರಿಕೆ ಮಾಡಿಕೊಳ್ಳಲು ಫಲಾನ ಸಾಸ್ತಿರಿಗಳು, ಪಂಡಿತರು ಅದು ತಮ್ಮ ಪುಣ್ಯಯಂದು ಭಾವಿಸಿ ತಿಥಿ, ನಕ್ಷತ್ರ, ಕರಣ, ಯೋಗ ಪಂಚಾಂಗಗಳನ್ನು ತಮ ತಮ್ಮ ಬಗಲೊಳಗಿಟುಕೊಂಡು ಘಲ್ ಘಲ್ ಯಂದು ನಾದ ಮಾಡುತಲಿದ್ದ ಸವಾರಿ ಬಂಡಿಯೊಳಗ ಕೂಕಂಡು ಸದರಿ ಪಟ್ಟಣಕ್ಕೆ ಆಗಮಿಸಿದರು ಸಿವನೇ..

ಬಂದವರೇ ಸಿಸುರೂಪೀ ಸಾಂಬವಿಯ ದರುಸನ ಪಡದು ಹೊತ್ತಿಗೆ ತೆಗೆದು ಫಲಾನ ದಿನ, ಫಲಾನ ತಿಥಿ ಫಲಾನ ನಕ್ಷತ್ರಯಂದು ಗೊತ್ತುಮಾಡಿ

ಸಾಂಕೇತಿಕ ರೂಪದಲ್ಲಿ ದಕ್ಷಿಣೆ, ಫಲ ತಾಂಬೂಲ ಸ್ವೀಕಾರ ಮಾಡಿ ತಮ ತಮ್ಮ ಅಗ್ರಹಾರಂಗಳಿಗೆ ಜಗದಂಬೆ ನಾಮಸ್ಮರಣೆ ಮಾಡೂತ ವಾಪಾಸಾದರು. ಆ ಕ್ಷಣದಿಂದ ನೂರಾರು ದುಂಬಿಗಳಿಂದ ರಾಸ ಹಲ್ಲೆಗೀಡಾದ ಹುವ್ವಿನಂತಾಯಿತು ಕುದುರೆಡವು ಪಟ್ಟಣದ ಪರಿಸ್ಥಿತಿ. ಅದು ಮಾಡಬೇಕು, ಯಿದು ಮಾಡಬೇಕು ಯಂಬುವ ನಿಮಿತ್ತ ವಬ್ಬರಾದರು ನಿಂತಲ್ಲಿ ನಿಲ್ಲದಾದರು, ಕುಂತಲ್ಲಿ ಕೂದ್ರದಾದರು. ಅವರ ಸುತಮುತ್ತಲಿದ್ದೋವು ಅಯ್ತಿಹಾಸಿಕವಾಗಿಯೂ, ಪವುರಾಣಿಕವಾಗಿಯೂ ಪ್ರಸಿದ್ಧ ಮೂರುಗಳೇ.. ಫಲಾನ ಯಿಂಥಪ್ಪ ದಿನದಲ್ಲಿ, ಫಲಾನ ಯಿಂಥಪ್ಪ ಮೂರ್ತದಲ್ಲಿ ತಾಯಿ ಸಾಂಬವಿಯ ಸಿಸುವಿನ ತೊಟ್ಟಿಲು ಕಾರ್ಯೇವು ಯಿದೆ, ನಾಮಕರಣ ಮಮೋತ್ಸವಯಿದೆ ಯಂಬ ಪ್ರಚಾರ ಕಾರ್ಯ ಕಯ್ಯಿಕೊಂಡರು. ಯೀ ಪಯಿತ್ರಕಾರ್ಯೇವಿನಲ್ಲಿ ಸದುಭಕ್ತಾದಿಗಳು ಭಾಗಿಯಾಗಬೇಕು.. ತಮ ತಮ್ಮ ಯಿಚ್ಚಾನುಸಾರ ಕಾಣಿಕೆ ನೀಡಿ ಅವ್ವ ಸಾಂಬವಿಯ ಕ್ರುಪಾಕಟಾಕ್ಷಕ್ಕೆ ಪಾತ್ರರಾಗಬೇಕು.. ಅವ್ವ ಸಾಂಬವಿ ಮಾ ಕೋಪಿಷ್ಟೆಯಂಬ ಯರಡು ಮಾತುಗಳನ್ನೂ ಅತಿರಿಕ್ತವಾಗಿ ಸೇರಿಸಿರಲು ನಿಚ್ಚಯಿಸಲಾಯಿತು...

ಆಮಾತ್ಯ ಸ್ಥಾನದಲ್ಲಿದ್ದ ಕಾಡುಗೊಲ್ಲರೀರಯ್ಯನು ಆಸ್ತೀಕ ಮುದ್ರೆವುಳ್ಳ ವಕ್ಕಣಿಕೆಗಳನ್ನು ಸುತಮುತ್ತಲ ಗ್ರಾಮಗಳ ಸಾಮಂತರಿಗೆ, ರಾಜರುಗಳಿಗೆ ವಾಲಿಕಾರರ ಮೂಲಕ ರವಾನಿಸಿದನು. ಆಯಾ ಮೂರುಗಳಲ್ಲಿ ಆಯಾ ಮುಖಂಡರು ಟಾಮು ಟಾಮು ಹಾಕಿಸಿದರು. ಅದೂ ಅಲ್ಲದೆ ಯೀ ವುತ್ಸವಕ್ಕೆ ಮುಖ್ಯ ಅತಿಥಿಯೋರ್ವನನ್ನು ಕರೆಯಿಸಬೇಕು. ಆತ ಭಕುತಿಪೂರ್ವಕವಾಗಿ ಬರುವಂತವನಾಗಿರಬೇಕು.. ಅಂಥೋರು ಯಾರಿದ್ದಾರೆ? ಯಡ್ಡವರ್ಡನಿಗೆ ಕಳಿಸುವುದೇ? ಥಾಮಸು ಮನ್ರೋ ಸಾಹೇಬನಿಗೆ ಕಳಿಸುವುದೇ? ಯಂಬ ಬಗ್ಗೆ ದಯವಸ್ತರೊಳಗೆ ಬಿಸಿಬಿಸಿ ಚರ್ಚೆ ನಡೆಯಿತು. ಆದರೆ ಯಿವರಾರು ಭಕುತಿಪೂರುವಕವಾಗಿ ಅಗಮನ ಮಾಡುವಂಥಾ ಆಸ್ತಿಕರಲ್ಲ ಯಂದು ಕೆಲವರೂ, ಅವ್ವನೇ ಅಂಥವರಲ್ಲಿ ಆಸ್ತಿಕ ಭಾವ ತುಂಬುವಳೆಂದೂ, ಯಿದಕ್ಕೆ ಅಲ್ಬರ್ಟನ ಘಟನೆಯೇ ಸಾಕ್ಷಿ ಅಯ್ತೆಂದು ಕೆಲವರೂ ವಾದಿಸಿದರು. ಕೊನೇಕಿದ್ದು ಕಾರಡಿಯ ಯೆಪ್ಪತ್ತಿರಾಜನನ್ನು ಕರೆಯಿಸುವುದೆಂದು ಯೇಕಗ್ರೀವಂಗಾ ತೀರುಮಾನಿಸಲಾಯಿತು. ಆತನಾದರೋ ಸ್ರೀಕ್ರುಷ್ಣದೇವರಾಯನ ನಂತರ ಹಿಂದೂರಾಯ ಸುರತ್ರಾಣ ಯಂಬ ಬಿರುದನ್ನು ಮುಡಿದು

ಕೊಂಡಿರುವಂಥಾತನು.. ಯಿಪ್ಪತ್ತು ಮಣ ತೂಕದ ತನ್ನ ರಾಣಿಯನ್ನು ಹೆಗಲ ಮ್ಯಾಲ ಕುಳ್ಳಿರಿಸಿಕೊಂಡು ಸತ್ರುಪಾಳೇಯದಿಂದ ಯಿಪ್ಪತ್ತು ಗಾವುದ ದೂರ ವೋಡಿ ರಕ್ಷಿಸಿದಂಥಾತನು.. ಅಂಪ್ಡಂದ್ರಾಲಿ ಸಾಹೇಬನಿಗೆ ತಲೆನೋವಾಗಿದ್ದಂಥಾತನು.. ಯಿದಕ್ಕೆ ಯಲ್ಲಾರು ವಪ್ಪಲು ಗೊಂಜಾಡ್ಲರ ಅಡಿವೆಪ್ಪನ ಕಯ್ಗೆ ರಾಯಸ ಕೊಟ್ಟು ಕಾರಡಿಗೆ ಕಳುವಲಾಯಿತು, ಅವುಪಚಾರಿಕವಾಗಿ ಯಡ್ಡವರ್ಡನಿಗೂ.. ವುಳಿದವರಿಗೂ..

ಆಹಹಹಾ ದುರುಗೇ.. ಅಹಹ ಸಾಂಬವೀss.. ನೀನು ಯಾವ ಪ್ರಕಾರವಾಗಿ ತಾಯ್ತನದ ಪವಾಡವನ್ನು ಮರೆದಾಡುತ್ತಿರುವಿ ಯಂದರೆ.. ಯಂದು ಮುಂತಾಗಿ ಗಂಟಲಯ್ಯನು..

ಫಲಾನ ದಿನ ಅಗದಿ ಹತ್ತಿರ ಅಯ್ತೆ ಅನಲಿಕ್ಕೆ ಕುದುರೆಡವು ಪಟ್ಟಣಕ್ಕೆ ಯಂಟು ದಿಕ್ಕುಗಳಿಂದ ಮತ್ತೆ ಬಾಯಿತೆರೆದುಕೊಂಡ ನೂರಾರು ಹಾದಿಗಳಿಂದ ಭಕುತಾದಿ ಮಂದಿ ಸದುಭಕುತಿ ಕುತೂಹಲಭರಿತರಾಗಿ ಪ್ರವಾಹದೋಪಾದಿಯಲ್ಲಿ ಆಗಮಿಸತೊಡಗಿದರು. ಮೋಬಯ್ಯನೆಂಬ ಚಂದುಳ್ಳೆ ಕಂದನ ದರುಸನ ಪಡದು ಹರುಷಚಿತ್ತರಾಗ ತೊಡಗಿದರು. ಕಂದಯ್ಯನಿಗೆ ಮುದ್ದುಕೊಟ್ಟಲ್ಲಿ, ಅದು ಮಲಕ್ಕಂಡಿರೋ ತೊಟ್ಟಿಲು ತೂಗಿದಲ್ಲಿ ಮಕ್ಕಳಾಗಿ ಬಂಜೆ ಯಂಬ ಪಂಜರದಿಂದ ಬಿಡುಗಡೆ ಲಭಿಸುತ್ತದೆ ಯಂಬ ಕಾರಣಕ್ಕಾಗಿ ಬಂಜೆ ಯಂಬ ಹಯನಾತಿ ಬಿರುದಿಗೆ ಭಾಜನರಾಗಿದ್ದಂಥ ಸಂತಾನ ವಂಚಿತೆಯರು ಅರಮನೆಯ ಸುತಮುತ್ತ ಯಿಶೇಷವಾಗಿ ನೆರೆದಿದ್ದರು.

ತೊಟ್ಟಿಲು ಕಾರ್ಯ ನಾಮಕರಣ ಮಮೋತ್ಸವವನ್ನು ಆಚರಿಸಲಕ ಯುದ್ಧೋಪಾದಿಯಲ್ಲಿ ಕೆಲಸ ಕಾರ್ಯಗಳು ನಡೆಯತೊಡಗಿದವು. ಮತ್ತೊಮ್ಮೆ ರುಮ್ಮಿ, ಡೊಳ್ಳು ಸನ್ನಾಯಗಳೇ ಮೊದಲಾದ ಮಂಗಳ ವಾದ್ಯಗಳನ್ನು ಆಯಾ ಮೂರುಗಳಿಂದ ಕರೆಯಿಸಿಕೊಂಡದ್ದು ತಡ ಆಗಲಿಲ್ಲ.. ಪಟ್ಟಣದ ಪ್ರತಿಯೊಂದು ಬೀದಿ, ಮನೆಯಂಗಳಗಳನ್ನು ತಳಿರು ತೋರಣಗಳಿಂದ ಸಿಂಗರಿಸಿದ್ದು ತಡ ಆಗಲಿಲ್ಲ.. ನಾಮಕರಣ ಯಂಬ ಪಯಿತ್ರಕಾರ್ಯವನ್ನು ಸಾಸ್ತರೋಕ್ತವಾಗಿ ನಡೆಸಿಕೊಡಲು ಯಂಟಾಪುರದ ಯೇದಾಂತಿ ಶಾಮಾಚಾರ್ಯರನ್ನು ಅವರ ವಂಶದವರೇ ಆದ ಸ್ರೀ ಮುದ್ದುಕ್ರುಷ್ಣಮಾಚಾರ್ಯರು, ಶ್ರೀಮನ್ಮಹಾ ನಾಯಕಾಚಾರ್ಯ, ಭಾಷೆಗೆ ತಪ್ಪುವವರ ಗಂಡ, ಮೊರೆಹೊಕ್ಕವರ ಕಾಯ್ವ, ಮಾರಾಂತರ ಗೆಲ್ವ ಯೊವೇ ಮೊದಲಾದ ಬಿರುದುಗಳನ್ನು ಮುಡಕೊಂಡಿದ್ದಂಥ ಬಾಗುಳಿ

ಬಸಪ್ಪನಾಯಕರ ಮಗ ಸೋಮಸೇಖರ ನಾಯಕನ ಆಸ್ಥಾನದಲ್ಲಿದ್ದು ಪುರೋಹಿತ ಕಾರ್ಯಗಳನ್ನು ಮಾಡುತ್ತಿದ್ದಂಥವರಾಗಿದ್ದರು. ಯಿವರದೋ ಅಪಸ್ತಂಭ ಕವುಂಡಿನ್ಯ ಗೋತ್ರವು, ಮಹಾ ನಾಯಕರಿಂದ ಪಾಂಡ್ಯವಾಡ ದೇಸದ ಕೋಗಳಿ ವೆಂಟರೆ ಸಲುವ ಕೊಟ್ಟೂರು ಸೀಮೆಯೊಳಗಣ ನಿಚ್ಚಾಪುರ ಪಟ್ಟಡಿಯೊಳಗಣ ಯಂಟಾಪುರ ಗ್ರಾಮವನ್ನು ಸರ್ವಮಾನ್ಯವಾಗಿ ಪಡಕೊಂಡಿದ್ದಂಥವರು.. ನಿಧಿ ನಿಕ್ಷೇಪ ಜಲ ತರು ಪಾಷಾಣ ಅಷಿಣಿ ಆಗಮ ಸಿದ್ದ ಸಾಧ್ಯಂಗಗಳೆಂಬ ಅಷ್ಟಾಂಗ ತೇಜೋಪಾರ್ಜನೆಯನ್ನು ಅನುಭೋಕೆ ಮಾಡುತ್ತಿದ್ದಂಥವರು. ಸವಾರಿ ಬಂಡಿ ಕಳಿಸಿ ಕರೆಯಿಸಿಕೊಂಡದ್ದು ತಡ ಆಗಲಿಲ್ಲ. ಯೇದಾಂತಿಗಳೂ, ಜ್ಯೋತಿಷ್ಯ ಮಾರ್ತಾಂಡರೂ ಆದ ಅವರು ಬರುಬರುತ್ತಲೆ ಸೀದ ಅರಮನೆಗೆ ಧಾವಿಸಿ, ಮೋಬಯ್ಯನ ದುರುಸನ ಪಡದು "ಯಂಥ ತೇಜಸ್ವಿ ಶಿಶುವಿದು, ಯಿದಕ್ಕೆ ತೊಟ್ಟಿಲು ಕಾರ್ಯ ನಾಮಕರಣ ಕಾರ್ಯ ಮಾಡುವ ಸುವರ್ಣಾವಕಾಶ ಲಭಿಸಿರುವುದು ನಮ್ಮ ಪೂರ್ವಜನ್ಮದ ಸುಕ್ರುತವೇ ಸರಿ" ಯಂದು ವುದ್ಗಾರ ತೆಗೆದು ತಮ್ಮ ಬಿಡದಿ ಮನೆಗೆ ಹೋದರು....

ಅವರು ಯಿವತ್ತು ಬಂದರೆಂದರೆ ಕಾರಡಿಯಿಂದ ಯಪ್ಪತ್ತಿ ರಾಜನು ಮರುದಿವಸ ಬಂದನು, ಆತ ಯಿವತ್ತು ಮದ್ಯಾಣ ಬಂದನೆಂದರೆ ಮದರಂಗಿ ಕೋಟೆಯಿಂದ ಸುಬೇದುಲ್ಲಾಖಾನನ ರಾಯಭಾರಿಯಾದ ದಿವಾನ ಸಿವರಾಮ ರಾವ್ ಕಬಾಡಿಯು ಚಂಜೆ ಮುಂದುಗಡೆ ಬಂದನು. ತದ ನಂತರ ಕೂಡ್ಲಿಗಿಯಿಂದ ಯಡ್ಡವರ್ಡನ ಆಪ್ತ ಸಹಾಯಕನಾದ ದವಲತ್‌ರಾವ್ ಯೇಕಬೋಟೆ ಮುಚ್ಚಂಜೆ ಹೊತ್ತಿನಲ್ಲಿ ಬಂದ, ಯಿವರೊಂದೆ ಅಲ್ಲದೆ ಸುತಮುತ್ತಲ ಸಾಮಂತರು, ಮಾಂಡಲಿಕರು ಅವುದವುದೆಂಬಂತೆ ಬಂದರು. ವಂದು ಛಣದಲ್ಲಿ ಕುದುರೆಡವು ಪಟ್ಟಣವು ಪರತಾಪರುದ್ರಗಜಪತಿಯ ಮೋರಂಗಲ್ಲು ರಾಜಧಾನಿಯಂತೆ ಕಂಗೊಳಿಸಲಾರಂಭಿಸಿತು ಸಿವನೇಽ...

ಆ ಫಲಾನದಿನ ಬಂತೋ ಬಂತು! ಹ್ಹಾ.. ಹ್ಹಾ..

ಹುಗ್ಗಿಹೋಳಿಗೆ, ಪಾಯಸ, ಖೀರು, ಜೋಳದನ್ನ, ಗುಗ್ಗರಿ, ನವಣಕ್ಕಿ ಬಾನ, ನೆಲ್ಲಕ್ಕಿಬಾನ, ಯಿವೇ ಮೊದಲಾದ ಖಾದ್ಯಗಳನ್ನು ಯಂಥ ಬಡವರೂ ಮಾಡಿದ್ದು ತಡ ಆಗಲಿಲ್ಲ, ಮತ್ತೊಂದು ಪರಿಶೆ ಮರು ಹುಟ್ಟು ಪಡಕೊಂಡದ್ದು ತಡ ಆಗಲಿಲ್ಲ, ಮನೆಗೆ ಮನೆ, ಮೋಣಿಗೆ ಮೋಣಿ ಹೆಗಲುಕೊಟ್ಟು ನಿಂತುಬಿಟ್ಟವು. ಸೊಯಂಸೇವಾ ಕಾರ್ಯಕರ್ತರು ಸಾಯಿರ ಸಂಖೆಯಲ್ಲಿದ್ದು ಪುರುಸೊತ್ತಿಲ್ಲದೆ ಅಡ್ಡಾಡಿ

ಮಾಡಲಾರಂಭಿಸಿದರು....

ಮಂಗಳಕಾರ್ಯಗಳ ಪ್ರಕ್ರಿಯೆಗೆ ಅಯ್ತಿಹಾಸಿಕ ಚಾಲನೆ ಆರಂಭಗೊಂಡಿತು. ಸುತಮುತ್ತಲ ಹಳ್ಳಗಳನ್ನೇ ಪಯಿತ್ರನದಿಗಳೆಂದು ಭಾವಿಸಿ ತಂದ ಪಂಚೋದಕದಿಂದ ಪ್ರವುಥ ಸಿಸುವಿಗೆ ಸಾಣಾ ಮಾಡಿಸಿದರು.. ಬಗೆ ಬಗೆಯ ಅರಿವೆ ವುಡಿಸಿದರು.. ಬಗೆ ಬಗೆಯ ಆಭರಣ ತೊಡಿಸಿದರು.. ಸ್ರಕ್ಚಂದನಗಳ ಪೂಸಿದರು.

ನಾಮಕರಣಕ ಪೂರುವದಲ್ಲಿ ಯಲ್ಲಾರು ಕಂದನ ದರುಸನ ಪಡುಕೊಳ್ಳುವಂತಾಗಲಿ ಯಂಬ ಕಾರಣಕ್ಕ ಮೋಬಯ್ಯನನ್ನು ಹುವ್ವ ಪಲ್ಲಕಿಯೊಳಗ ಕುಂಡಿರಿಸಿ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು, ಆಗ ಹೊಂಟ ಮೆರವಣಿಗೆ ಅರಮನೆ ಸೇರಿದ್ದು ಯೀಗ....

ಮೋಬಯ್ಯನನ್ನು ಹಾಸಿಗೇಲಿ ಮಲಗಿಸಿ ಅವಯ್ಯನ ಕಯ್ಗೆ ಆಡಲಕಂತ ಚಿನ್ನದ ಗಿಲಗಂಜಿಯನ ಕೊಟ್ಟರು.. ಶಾಮಾಚಾರ್ಯರು ಮಂತ್ರಘೋಷಣೆ ಆರಂಭಿಸಿ ಅರ್ಧತಾಸಿನ ನಂತರ ಮುಗಿಸಿದರು. ತದನಂತರ ಅದೇ ಆಚಾರ್ಯರು ಯೇನು ಹೇಳಿದರೆಂದರ....

ಯಾರಾದ್ರುಮಗುವನ್ನೆತ್ತಿ ತೊಟ್ಟಿಲೊಳಗ ಹಾಕಿರಪ್ಪ..

ಅಯ್ಯೋ ಸಿವನ ತಾವು ಮಗುವನ ಮುಟ್ಟಿದರೆಂಗಂತ ಮಂದಿ ಹೆದರಿ ಹಿಂದಕ ಸರಕಂತು.. ಸಿವನೇಽ...

ಯುದ್ದ, ಕಾಳಗಗಳಿಗೆ ಹೆದರದ ಮಂದಿ....

ಯಿಚಿತ್ರವಾಗಿ ಬಾಯಿ ತೆರೆದು ಮುಚ್ಚುತಲಿದ್ದ ಮೋಬಯ್ಯನೆಂಬ ಸಿಸುವು ವಂಚಣ ಗುಗ್ಗಳದಂತೆ ಗೋಚರವಾಗುತಯ್ತೆ ಯಂದು ಕಣ್ಣಾಲಿಗಳನ್ನು ಹಿಗ್ಗಲಿಸಿತು. ಇದೇ ಸುವರ್ಣಾವಕಾಸಯಂದು ಬಗೆದ ಗಂಟಲಯ್ಯನು....

ಅಹ್ಹಾ ದುರ್ಗೇ.. ಹಾಹಾ ಸಾಂಬವೀ ಅಂದರೆ....

ಜಡೆತಾತನು ಯಾರೊಬ್ಬರೂ ತಮ್ಮ ಮೊಂಡುಗಯ್ನೆತ್ತಿ ಯಾವುದೇ ಕಂದಮ್ಮನನ್ನು ಹೊಡೀಬಾರದು.. ಕಾಲಕಾಲಕ್ಕೆ ಯಳೆ ನೆತ್ತಿಗಳಿಗೆ ಯಣ್ಣೆ ಬೆಣ್ಣೆ ಲೇಪನವ ಮಾಡಬೇಕು.. ಹೊಟ್ಟೆ ತುಂಬ ಯದೆ ಹಾಲನ ಕುಡಿಸುತ್ತಿರಬೇಕು. ರೋಗ ರುಜಿಣ ಬಂದರ ಯಿಲಾಜು ಮಾಡಿಸಬೇಕು.. ನಯ ನಾಜೂಕು ಕಲಿಸಬೇಕು.. ಅಯ್ದು ತುಂಬುತ್ತಲೇ ಮೋನಾಮ ಕಲಿಸಬೇಕು.. ವಂದೊಂದು ಮಗು ಹುಟ್ಟಿತೆಂದರ ಅರಮನೆಗೆ ಅದರಷ್ಟು ತೂಕದ..

ಅದೇ ಜಡೆತಾತನು ಕಿವಿಂಯೊಳಗ ಪಿಸುಗುಟ್ಟಿದ್ದಕ್ಕೆ ಕಾಡುಗೊಲ್ಲರೀರಯ್ಯನು..

ಯಾರು ಕೂಸನು ಯತ್ತಿ ತೊಟ್ಟಿಲೊಳಗೆ ಯಿಡುತಾರೋ ಅಂಥವರ ಮನೆಯೊಳಗ ಭಂಗಾರದ ಹೊಣೆ ಆಡುತದೆ.. ಅಂಥವರ ಸತ್ರುನಿಸ್ಯೇಷ ಆಗುತಾರ.. ಅಂಥವರು ನೂರರ ಮ್ಯಾಲ ಭಾಳಿ ಭದುಕುತಾರ.. ಅಂಥವರು.. ಯಂದನುತಿರುವಷ್ಟರಲ್ಲಿ ಹಿಂದಕ ಜರುಗಿದ್ದ ಮಂದಿ ಮುಂದ ಮುಂದಕ ಬಂತು.. ನಾನು ಯತ್ತಿ ಹಾಕುತೀನಿ ತಾನು ಯತ್ತಿ ಹಾಕುತೀನಿ ಯಂದು ಪಯಿಪೋಟಿಗೆ ಬಿತ್ತು.. ಯಲ್ಲಿ ತಾನು ಅವರ ಕಯ್ಯಿಗೆ ಸಿಕ್ಕು ಅಪ್ಪಚ್ಚಿಯಾಗೇ ಬಿಡುವೆನೋ ಯಂದು ಮೋಬಯ್ಯನು ವಳಗೊಳಗ ಯದುರುತಿರಬೇಕಾದರ ಅದೇ ಕಾಡುಗೊಲ್ಲರೀರಯ್ಯನು..

ಯತ್ತಿ ಹಾಕುವ ಮಂಗಳ ಕಾರ್ಯೇವನ್ನು ಹರಾಜು ಹಾಕುತೀವಪ್ಪಾ.. ಸವಾಲು ವಂದು ಸಾವುರ ಪಗೋಡಾ.. ಯಂದು ಘೋಷಣೆ ಮಾಡಿದೊಡನೆ ಭಕುತಾದಿಗಳ ಪಯ್ಕಿ ಬಹಳೋಸು ಮಂದಿ ಮುಖ ಸಣ್ಣದು ಮಾಡಿಕೊಂಡು ಹಿಂದು ಹಿಂದಕ ಜರುಗಲಾರಂಭಿಸಿತು.. ಸಿಸು ಗಹಗಹಿಸಿ.. ಅಲ್ಲಿಗೆ ಸುತ್ತನ್ನಾಕಡೆಯಿಂದ ಬಂದಿದ್ದಂಥ ಸಾಮಂತ, ಮಾಂಡಲಿಕ, ಪಟ್ವಾರಿ, ಜಾಗೀರುದಾರ, ಗವುಡರ ನಡುವೆ ಪಯಿಪೋಟಿ ಬಿದ್ದು ಸವಾಲು ವಂದುಸಾಯಿರದಿಂದ ಅಯ್ದು ಸಾಯಿರದವರೆಗೆ ಯೇರುತ್ತ ಹೋಯಿತು. ಅಯ್ದು ಸಾಯಿರದ ಮ್ಯಾಲ ನೂರಾವಂದು ಯಂದು ಕೂಗಿದ ಮದರಂಗಿ ಕೋಟೆಯ ದಿವಾನ್ ಸಿವರಾಮರಾವ್ ಕಬಾಡಿಯು ತನ್ನ ಮೀಸೆ ಮ್ಯಾಲ ಕಯ್ಯನ ಯಿಡಬೇಕೆಂಬವಷ್ಟರೊಳಗ ಕಾರಡಿಯ ಯುಪ್ಪತ್ತಿರಾಜನು ಹತ್ತು ಸಾಯಿರದಾವಂದು ಯಂದು ಕೂಗಿ ಬಿಡುವುದೇನು?

ಅದಕ ಯಾರೊಬ್ಬರೂ ಯುದುರಾಡಲಿಲ್ಲ.. ವುದ್ರಿಗಿದ್ರಿಹೇಳುವಂತಿರಲಿಲ್ಲವಾದ್ದರಿಂದ ಆ ಕೂಡಲೆ ಅಷ್ಟು ರೊಕ್ಕವನ್ನು ನಿಂತ ಬಯಟಕ್ಕೀಲೆ ಯಣಸಿದ ಹದಿಮೂರು ಮಣ ತೂಕದ ಯುಪ್ಪತ್ತಿರಾಜನು ಮೂರೂವರೆ ಮಣ ತೂಕಯಿದ್ದ ಸಿಸುವನ್ನು ಹುವ್ವಿನ ಪುಟ್ಟಿಯೋ ಯಂಬಂತೆ ಯತ್ತಿ ತೊಟ್ಟಿಲೊಳಗ ಹಾಕಿದೊಡನೆ ಭಕುತಾದಿ ಮಂದಿಯು ಸಿವನ್ನಾಮ ಪಾರೋತಿ ಪತಿ ಹರ ಹರ ಮಾದೇವಾss ಯಂದೊಕ್ಕರಲಿನಿಂದ...

ತೊಟ್ಟಿಲನು ಮುಟ್ಟುವುದಕಿಷ್ಟು, ಮುಟ್ಟಿ ತೂಗಿದರ ಯಿಷ್ಟು, ಲಟ್ಟಿಗೆ

ಮುರಿದರ ಯಿಷ್ಟು ಯಂದು ಗೊತ್ತು ಮಾಡಿದ ರುಸುಮನು ತೆತ್ತು ಭಕುತಾದಿ ತಮ್ಮ ಸೇವಾ ಕಯಿಂಕರ್‍ಯವ ಮೆರೆದರು ಸಿವನೆ. ಆ ಸಮಯದಾದ್ಯಂತ ಮರಮರನೆ ನಲುಗುತಲಿದ್ದ ವಾದ್ಯಗಳು ವಂದಾ ಯರಡಾ.. ರುಮ್ಮಿ, ಡೊಳ್ಳು, ತಪ್ಪಡಿ, ಕಾಳಿ, ಸಂಖ, ಜಾಗಟೆಯೇ ಮೊದಲಾದವುಗಳು.. ಅಲ್ಲಿದ್ದ ಮಂದಿಯ ಮಯ್ಯಿ ಯಷ್ಟೋ ಹೊತ್ತಿನ ತನಕ ಜುಮು ಜುಮು ಅಂತಾನssಯಿತ್ತು....

ಯಿನ್ನು ಮುಂದಕ ಯೇನು ನಡೆಯಿತೆಂದರ..

ಆಚಾರ್‍ಯರು ಮಂತರೋಚ್ಚಾರಣ ಮಾಡಿದ ಬಳಿಕ ದಯವಸ್ತರೊಳಗ ಯಾವ ಹೆಸರನು ಯಿಡಬೇಕೆಂಬ ಜಿಗ್ನಾಸೆ ಯದ್ದಿತು. ಸಿಸುತ್ವ ಲಭ್ಯವಾದ ಕ್ಷಣವೇ ಸದರೀ ಸರೀರದಿಂದ ಮೋಬಯ್ಯ ಯಂಬ ನಾಮದೇಯವು ವುತಾರವಾಗಿರುವುದೆಂಬುವ ಜಿಗ್ನಾಸೆಯು, ವಸ್ತಿಯು ಗಂಡೋ, ಹೆಣ್ಣೋ ಯಂಬುವ ಜಿಗ್ನಾಸೆಯು, ಅದನು ಕರೆದರ ಪಾಡೆಂದು ವಬ್ಬರು ಸಿವನೇ, ಯಿದನು ಕರದರ ಪಾಡೆಂದು ಯಿನ್ನೊಬ್ಬರು ಸಿವನೇ. ಕೊನೇಕಿದ್ದು ಸಾಂಬವಿಯ ವರಪುತ್ರರತುನವಾಗಿರುವುದರಿಂದ ಸಾಂಬಯ್ಯಾ ಸಾಂಬಯ್ಯಾ.. ಸಾಂಬಯ್ಯಾ.. ಯಂದು ಕರೆವುದೇ ಸೂಕ್ತ ಯಂಬುವ ಅಭಿಪ್ರಾಯವು ಬೆಣ್ಣೆವುಂಡೆಯಂತೆ ತೇಲಿ ಬಂತು. ಅದನು ಡಾಣಾಡಂಗುರವಾಗಿ ಅನಲಕಾಯ್ತದಾ..? ಕಂಬಳಿಯ ಮುಸುಕಿನೊಳಗ ತೇಲುತಾ.. ತೇಲುತಾ ಹೋಗಿ ರತುನ ಗಂಬಳಿಯೊಳಗಯಿದ್ದ ಆಚಾರ್‍ಯರ ಕರ್ಣಕುಂಡಲದೊಳಗ ವುದುರಿಸಲಾಯಿತು. ತದನಂತರ ಅವರು ಸಿಸುವಿನ ಕಿವಿಗೂದಲೊಳಗ ಬಾಯಿಯಿಟ್ಟು 'ನೀನು ಸಾಂಬಯ್ಯಾ.. ನೀನು ಸಾಂಬಯ್ಯಾ.. ನೀನು ಸಾಂಬಯ್ಯಾ..' ಯಂದು ಮೂರು ಬಾರಿ ಅಂದರು ಸಿವನೇ

ಸಾಂಬವಿಯ ಮಗ ಸಾಂಬಯ್ಯಾss ಭೋಪರಾಕ್..

ಸಾಂಬಯ್ಯನ ತಾಯಿ ಸಾಂಬವೀss ಭೋಪರಾಕ್..

ಕುದುರೆಡವ ದೊರೆಯೇ.. ನಿನಗಾರು ಸರಿಯೆ.. ಸರಿ ಅಂದವರ ಹಲ್ಲು ಮುರಿಯೇ.. ಭೋ ಪರಾಕ್....

ಹೋ.. ಹೋ.. ಸಾಂಬಯ್ಯಾ... ಹ್ವಾ.. ಹ್ವಾ.. ಸಾಂಬಯ್ಯಾ... ಅನಕಂತ ಸಾವುರ ಸಂಖೇಲಿದ್ದ ಭಕುತಾದಿ ಮಂದಿ ಗುಂಪು ನರ್ತನ ಮಾಡಿತು. ಸಾಮಂತ, ಮಾಂಡಲಿಕ, ಪಟುವಾರಿ, ಜಾಗಿರ್ದಾರು ಮಂದಿ ಯೇನಿದ್ದರು ಅವರು ಬಕುತಿಪೂರುವಕವಾಗಿ ಪೊಗದಿ ಸಲ್ಲಿಕೆ ಮಾಡಿದರು....

ತೊಟ್ಟಿಲು ಕಾರ್ಯೇವು, ನಾಮಕರಣ ಕಾರ್ಯೇವು ಅಂತೂ ಸುಸೂತ್ರವಾಗಿ ಮುಗಿದವು. ಆದರ ಆ ಮಹಾ ಮಂಗಳ ಕಾರ್ಯೇವುಗಳಿಗೆ ವುಪಯೋಗಿಸಿದ್ದ ವಯಿಯಿದ್ಯಮಂಯ ವಸ್ತುಗಳ ಯಿಲೇವಾರಿ ಸಮಸ್ಯೆಯನ ಹೆಂಗಪ್ಪಾ ಬಿಡಿಸುವುದು?..

* * * *

ಅತ್ತ ಕೂಡ್ಲಿಗಿ ವಳಗ ಯಲ್ಲಾಪ್ರಕೊರಚರಟ್ಟಿ ಕಳ್ಳಕಾಕರ ಯಿಷಯ ತುಂಬಿಕೊಂಡಿತ್ತು ಸಿವನೇ ಅಲ್ಲಿನ ಮಂದಿ ಆಕಾಸ ರಾಮಣ್ಣ, ಸರಬ, ಯಿಂದರ, ಕಂಠಿ, ಯೀರಗ, ಪೋಲಾರಿ, ಅಪಾರಿಯೇ ಮೊದಲಾದ ಚೋರಾಗ್ರೇಸರನು ತಮ್ಮ ಬಾಯೊಳಗ ಯಿಟುಕೊಂಡು ವಂದೇ ಸಮಕ ನಮಲಲಕ ಹತ್ತಿದ್ದರು ಸಿವನೇ.. ಅವರಿಗೆ ಚೋರ ಸಂಬಂಧೀ ಕವುಶಲ ದಯಪಾಲಿಸಿರುವ ಆ ಪರಾಮತುಮನನ್ನು ಹೊಗಳುತಲಿದ್ದರು.. ಅದರ ಜೋಡಿ ಕುದುರೆಡವ ಕಡೇಲಿನ ದಯವ ಸಂಬಂಧೀ ಯಿಚಾರಗಳು ತಗುಲಿಕೊಂಡವು ಬೇರೆ. ಹಿಂಗಾಗಿ ಆ ಪಟ್ಟಣದ ಮಂದಿ ಚೋರರೆಂಬ ಅಪ್ಪಟ ಲವುಕಿಕದ ಕುರುತು ಯೋಚಿಸುವುದೋ, ಮೋಬಯ್ಯನೆಂಬಾತ ಸಾಂಬಯ್ಯನಾದ ಪರಿಯ ಅಲವುಕಿಕದ ಕುರುತು ಯೋಚಿಸುವುದೋ ಯಂದು ವದ್ದಾಡಲಕ ಹತ್ತಿದ್ದರು ಸಿವನೇ...

ಕಳ್ಳಕಾಕರಿದ್ದರೇನೇ ಸಮಾಜಕ್ಕ ವಂದು ವರ್ಚಸ್ಸು ಲಭಿಸುತಯ್ತೆ ದೊರೆಯೇ.. ಅದನಷ್ಟು ಗಂಭೀರವಾಗಿ ತಗೊಂಡು ತಲೆಗೆ ಹಚ್ಚಿಕೋ ಬ್ಯಾಡಿರಿ ಸಾಹೇಬರಾ.. ಅವರು ವೊದಲs ಯಲ್ಲಾಪ್ರಕೊರಚರಟ್ಟಿಯವರದಾರ.. ಮೇಲಾಗಿ ಪೋಲಾರಮ್ಮಯಂಬ ದೇವತೆಯ ಖಾಸಾ ಮಕ್ಕಳಯ್ದಾರ.. ಅವರನ ಹಿಡಿಯೋದು ವಂದೇಯಾ.. ಗಾಳೀನ ಹಿಡಿಯೋದು ವಂದೇಯಾ.. ಅವರನ ಅವರ ಪಾಡಿಗೆ ಬಿಟ್ಟು ಬಿಡಿರಿ.. ಹಾವಿನಂಗ ವಂದೇ ಜಾಗದಾಗ ಯಿರೋ ಮಂದಿ ಅಲ್ಲ ಅದು.. ನೀವು ತಲೆ ಖರ್ಚು ಮಾಡೋದಿದ್ದರ ಕುದುರೆಡವಿಗೆ ಖರ್ಚು ಮಾಡುವುದs ಪಾಡನಸ್ತದ ನೋಡಿರಿ ಸಾಹೇಬರಾ.. ಯಂದು ಅತ್ತ ಬಂಗಲೆಯೊಳಗ ರಾಜಕಾರಣದ ಸಲಹೆಗಾರರಾದ ಹಣಮಂತರಾಯರು ಹೇಳಿದ್ದನ್ನು ಕೇಳಿಸಿಕೊಳ್ಳುತಲಿದ್ದ ಯಡ್ಡವರ್ಡ ಮಹಾಶಯನೂ ಅಷ್ಟೇಯಾ.. ಯಾದೇ ವಂದು ನಿಲುವಿಗೆ ಬಾರದೆ ವದ್ದಾಡುತಲಿದ್ದನು....

ತಾನು ಮೊದಲೇ ವಯಿಗ್ನಾನಿಕವಾಗಿ ಯೋಚಿಸುವ ಮನುಷ್ಯನು, ತನ್ನ ಹೆಂಡತಿಯಾದರೋ ಅತಿಮಾನುಷ ಶಕ್ತಿಯಲ್ಲಿ ನಂಬಿಕೆ ಯಿಟ್ಟಿರುವಾಕೆಯೂ..

ಅದರಲ್ಲೂ ಗ್ರೇಟ್ ಬ್ರಿಟನ್ನೊಳಗೆ ಹುಟ್ಟಿ ಬೆಳೆದಿರುವಾಕೆಯೂ.. ಅದರಲ್ಲೂ ಬಯಬಲ್ಲನ್ನು ಅರಗಿಸಿಕೊಂಡಿದ್ದವನ ಮಗಳು ಇಂಥದ್ದನ್ನೆಲ್ಲ ನಂಬುತ್ತಿರುವಳೆಂದ ಮೇಲೆ ಸದರೀ ದೇಶದ ಹಿಂದೂ ಮಂದಿ ನಂಬದೆ ಯಿರುವರೇನು? ಯಂದು ಮುಂತಾಗಿ ಯಿವಯ್ಯನಿಲ್ಲಿ ಯೋಚಿಸುತ್ತಿರುವಷ್ಟರಲ್ಲಿ ಸತ್ಯಸಂಶೋಧನ ಮಾಡಲೆಂದು ಪ್ರತಿನಿಧಿಯಾಗಿ ಕುದುರೆಡವಿಗೆ ಹೋಗಿದ್ದ ದವಲತ್ತುರಾವ್ ಯೇಕಬೋಟೆಯು ಬಾಗಿಲ ಬಳಿ ಕಾಣಿಸಿಕೊಂಡನು....

ಅವನನ್ನು ತನ್ನ ಖಾಸಾ ಕೋಣೆಗೆ ಕರೆದೊಯ್ದು ಯಡ್ಡವರ್ಡನು "ಯೇನೇನು ನೋಡಿದಿ.. ಅಲ್ಲೆಲ್ಲಾ ನಡೆಯುತ್ತಿರುವ ಅತಿಮಾನುಷ ಘಟನೆಗಳು ನಕಲಿ ಅವುದೋ ಅಲ್ಲಮೋ?" ಯಂದು ಕೇಳಿದ್ದಕ್ಕೆ ಯೇಕ ಬೋಟೆಯು "ನಕಲಿ ಯಂದು ಹೇಳಿ ನಾನ್ಯಾವ ನರಕಕ್ಕೆ ಹೋಗಲಿ ದೊರೆಯೇ" ಯಂದು ಬಿಡುವುದೇನು?

ಅಲ್ಲೇ ಯಿದ್ದ ಯಿನ್ನೊಂದು ಖೋಲಿಯೊಳಗಯಿದ್ದ ಜೆನ್ನಿಫರಮ್ಮನ ಮನಸ್ಸು ವಂದು ಚಣ ತ್ರಿಲೋಕದಾದ್ಯಂತ.. ತ್ರಿಕಾಲ ಪರ್‍ಯಂತ ಸಂಚಾರ ಮಾಡೀ ಮಾಡೀ ವಂದು ಸ್ಥಿತಿಗೆ ಅದೇ ತಾನೆ ಮರಳಿರುವುದು ಸಿವನೇ.. ಕುದುರೆಡಮೊಳಗಿನ ಅಲವುಕಿಕ ಯಿದ್ಯಾಮಾನಗಳನು ಮರೆಯಬೇಕೆಂದು ನಿರ್ಧರಿಸಿ ಕಪಾಟೊಳಗ ಯಿಲ್ಲದ ಪುಸ್ತಕಕ್ಕಾಗಿ ಬೆದಕಾಡುತಾಳ.. ಸಂಗೀತದಿಂದಲಾದರೂ ಅಂತ ಪಿಯಾನೋದ ಮೇಲೆ ಬೆರಳಾಡಿಸುತಾಳ.. ಬಣ್ಣದ ಕುಡಿಕೆ, ಕುಂಚಗಳನು ಕಯ್ಗೆತ್ತಿಕೊಳುತಾಳ.. ಮಲಗಬೇಕೆಂದುಕೊಳುತಾಳ.. ಯಚ್ಚರಿರಬೇಕೆಂದು ಕೊಳ್ಳುತಾಳ.. ಬೆತ್ಲೆಮ್ಮೂ, ಜರೂಸಲೆಮ್ಮುಗಳನ ಕಲ್ಪನ ಮಾಡಿಕೊಳುತಾಳ.. ಹೇ ಪ್ರಭೂ ಯಂದು ಯೇಸು ಪ್ರಭುವಿನ ಮೂರ್ತಿಯದುರು ಮಂಡಿಯೂರಿ ಕೂಡ್ರುತಾಳ....

* * * *

ಕುಂಪಣಿ ಸರಕಾರದ ದಯುವವೊಂದು ಬಗೆದರ ಕಳ್ಳಕಾಕರ ದಯುವವೊಂದು ಬಗೆದಿತ್ತು. ಯಡ್ಡವರ್ಡನು ಹಿಂಗ ಹೋಗಿ ಹಂಗ ಸಿಕ್ಷೆ ಕೊಡುತೀನಂದರ ಅವರೇನು ಮಾಮೂಲಿ ಕಳ್ಳರಾ? ಯಲ್ಲಾಪ್ರಕೊರಚರಟ್ಟಿ ಕೊರವರು. ಕನ್ನಡದೊಳಗೆ ತಿಗಳ ಭಾಷೇನ ಮಾತಾಡುವ ಸೂರರು. ಯೇಕಥಂ ಯಿಂಬಳಗಾತುರ ವಾಗುವುದು ತಡವಲ್ಲ.. ಸರಸರಾಂತ ಬೆಳೆದು ಬೇತಾಳದಷ್ಟೆತ್ತರವಾಗುವುದು ತಡವಲ್ಲ.. ಗೋಡೆಯ ಮ್ಯಾಲ ಸಲೀಸಾಗಿ

ಹರಿದಾಡಬಲ್ಲರು.. ಯಿಲಿಚಮ್ಮನಂಗೆ ಸಂದು ಗೊಂದುಗಳೊಳಗೆ ಸಲೀಸಾಗಿ ತೂರಿಕೊಳ್ಳಬಲ್ಲರು.. ನೋಡುನೋಡುವಷ್ಟರಲ್ಲಿ ವಬ್ಬರು ಯಿಬ್ಬರಾಗಬಲ್ಲರು.. ಯಿಬ್ಬರು ನಾಕುಮಂದಿ ಆಗಬಲ್ಲರು.. ಯಿಗೋ ಯಿಲ್ಲಿಂದರಲ್ಲಿ.. ಅಗೋ ಅಲ್ಲಿಂದರಿಲ್ಲಿ ಮೂಡಿ ಹಿಡಿಯ ಬಂದಣ್ಣಗಳಿಗೆ ಚಳ್ಳೆಹಣ್ಣು ತಿನಿಸಬಲ್ಲರು.. ತಮ್ಮ ಕಣ್ಣೋಟದ ಭಾವಿಯಿಂದ ತಿಜೋರಿ, ಕಬ್ಬಿಣ ಪೆಟಾರಿಗಳನ್ನು ತೆರೆಯಬಲ್ಲರು.. ತಮ್ಮ ಅಂಗಯ್ಯಿಗಳನ್ನಾಡಿಸಿ ಯದ್ದವರನ್ನು ಮಲಗಿಸಬಲ್ಲರು.. ಮಲಗಿದ್ದವರನ್ನು ಯಬ್ಬಿಸಬಲ್ಲರು.. ಯೇನು ನೋಡಿದಿವಿ.. ಯೇನು ಬಿಟ್ಟಿವಿ ಯಂಬುದನ್ನು ಮರೆಯೋ ಹಂಗ ಮಾಡಬಲ್ಲರು.. ತಮ್ಮ ಯಿಚ್ಛಾಸಕ್ತಿಯಿಂದ ಹಗಲನ್ನು ರಾತ್ರಿಯನ್ನಾಗಿಯೂ.. ರಾತ್ರಿಯನ್ನು ಹಗಲನ್ನಾಗಿಯೂ ಪರಿವರ್ತಿಸಬಲ್ಲರು. ಯಿದಕ್ಕೆಲ್ಲ ಅವರಿಗೆ ಅವರ ಕುಲದೇವತೆಯಾದ ಪೋಲಾರಮ್ಮನ ಆಶೀರುವಾದವುಂಟು.. ತನ್ನ ಭಕುತರು ಯಷ್ಟು ಕಳ್ಳತನ ಮಾಡುತ್ತಾರೋ ಆಕೆಗಷ್ಟು ಸಂತೋಸವು, ಕಳ್ಳತನ ಮಾಡದ ಸೋಮಾರಿಗಳನ್ನಾಕೆ ಸುಮ್ಮನೆ ಬಿಡುವಾಕೆಯಲ್ಲ.. ಯೇಳೇಳು ಕೆರೆಯ ನೀರು ಕುಡಿಸುತಾಳ.. ರವುರವ ನರಕ ಪ್ರಾಪ್ತ ಆಗುವಂತೆ ಮಾಡುತಾಳ.. ಗಾದರಿಮಲೆ, ನುಂಕೇಮಲೆ, ಸಂಡೂರುಗೆಡ್ಡೆಯು ಕಾರ್ತೀಕಮಲೆ ವಳಿತದೊಳಗಿರೋ ವೂರುಗಳ ಜಮಿಂದಾರರು, ಬಡ್ಡಿ ಲೇವಾದೇವಿ ಸ್ರೀಮಂತರು ಯಲ್ಲಾಪ್ರಕೊರಚಟ್ಟಿಯ ಕಳ್ಳರೊಂದಿಗೆ ಕೊಡುಕೊಳ್ಳೋದು ಯಿಟುಕೊಡಿರುವರೆಂಬುದು ಅನೇಕರಿಗೆ ಗೊತ್ತಿಲ್ಲದ ಸತ್ಯಸಂಗತಿಯು, ಯಲ್ಲಾಪ್ರಕೊರಚರಟ್ಟಿ ಅಂಬುದು ಹೆಸರಿಗೆ ಮಾತ್ರಹರಪನಹಳ್ಳಿಯನ್ನು  ವುಚ್ಚಂಗಿಯಿಂದಲೂ.. ವುಚ್ಚಂಗಿಯನ್ನು ಹರಪನಹಳ್ಳಿಯಿಂದಲೂ.. ಬೇರೆ ಮಾಡುವ ಪೋಲೇರಮ್ಮನ ಹಳ್ಳದ ಯಡದಂಡೆಯ ನಿತ್ಯ ಹರಿದ್ವರ್ಣ ಕಾಡಿನ ನಟ್ಟನಡುವೆ ಅದ ಅಂದರೆ ಅದ.. ಯಿಲ್ಲ ಅಂದರೆ ಯಿಲ್ಲ.. ವರುಷದ ಮುನ್ನೂರಾ ಅರವತ್ನಾಕು ದಿನಗಳ ಕಾಲ ಸುಂಟರಗಾಳಿ ಯಂಗ ಯಿಡೀ ಭೂಮಂಡಲ ಸುತ್ತಾಡುವ ಆ ಕುಸಲಕರುಮಿಗಳು ಆ ಮುನ್ನೂರಾ ಅರವತ್ತಯ್ದನೇ ದಿನ.. ಅಂದರ ಸೀಗೇ ವುಣ್ಣುಮಿಯ ಯಡ ಬಲ.. ಅಂದರ ಪೋಲೇರಮ್ಮ ಮೂಲಾನಚ್ಛತ್ರದಲ್ಲಿ ತನ್ನ ಗುಡಿಗೆದುರುಗಡೇಕಿರೋ ಬುಡುಮೆ ಕಲ್ಲೊಳಗೆ ಕಾಣಿಸಿಕೊಂಡು ತನ್ನ ಭಕುತಾದಿ ಮಂದಿಯ ಯಿಷ್ಟಾರ್ತ ಪೂರಯಿಸೋ ದಿನ.. ಅಸಂಗ್ರಹ ಯಂಬ ತತ್ವವನ್ನು ಬಿಡಿಸಿ ಹೇಳುವ ದಿನ ಅವರೆಲ್ಲ ಯೆಲ್ಲೇ ಯಿದ್ದರೂ.. ಸೆರೆಮನೆಗಳಲ್ಲಿದ್ದರೂ

ಬಂದು ಅಲ್ಲಿ ಸೇರುತ್ತಾರ.. ಸೇರಿದಾಗ್ಗೆ ತಮ ತಮ್ಮ ಪಿಳ್ಳೆಗಳ ಕೊಡು ಕೊಳ್ಳೋದು ನಡೆಸುತ್ತಾರ.. ತಮ್ಮ ದೇವತೆಯ ಮಯ್ಯ ಮ್ಯಾಲ ಬಗೆ ಬಗೆಯ ಬಂಗಾರದೊಡವೆಗಳನ್ನು ಹಾಕಿ ಸಿಂಗಾರ ಮಾಡುತ್ತಾರ.. ಕುರಿ ಕೋಳಿ ಕಡುದು ನಯವೇದ್ಯ ಮಾಡುತ್ತಾರ.. ಕುಣಿದು ಕುಪ್ಪಳಿಸುತ್ತಾರ.. ದೇವಿಯ ಪ್ರೀತ್ಯರ್ಥವಾಗಿ ಯಿಡೀ ರಾತ್ರಿಬೆಳದಿಂಗಳೊಳಗ ಸಂಭೋಗ ಮಾಡುತ್ತಾರ.. ಯಾಕಂದರೆ ಆ ಅಮ್ರುತ ಸಮಯದಲ್ಲಿ ಸಂಭೋಗಿಸಿದರ ಹೇಮಾಹೇಮಿ ಕಳ್ಳರು ಜನಿಸುವರೆಂಬ ನಂಬಿಕೆಯು....

ಯಂಥೆಂಥಾ ಖದೀಮರನ್ನು ಮಟ್ಟಹಾಕಿರುವಂಥಾ ಥಾಮಸು ಮನ್ರೋ ಸಾಹೇಬನು ಯಿವರ ಯೀ ಚಾಕಚಕ್ಯತೆಯನ್ನು ಕೇಳಿ ತಿಳಕೊಂಡು ಆಹ್ಹಾ.. ಯಂಥ ನಿಷ್ಣಾತರಿವರು.. ಯಿವರಿಂದಾಗಿ ಕಳ್ಳತನಮೂವಂದು ಅಪೂರ್ವ ಕಲೆಯಾಗಿ ಮಾರುಪಟ್ಟಿರುವುದಲ್ಲಾ.. ಕಳ್ಳತನ ಯಿದ್ಯಾಯಿಭಾಗಗಳನ್ನೊಳಗೊಂಡ ವಂದು ಯಿಸ್ವಯಿದ್ಯಾಲಯಮೊಂದನ್ನು ಆರಂಭಿಸಿ ಅದಕ್ಕೆ ಯಲ್ಲಾಪ್ರಕೊರಚರಟ್ಟಿ ಹಿರೀ ಕಿರೀಕರನ್ನೆ ಕುಲಪತಿ, ಪ್ರಾಧ್ಯಾಪಕರನ್ನಾಗಿ ನೇಮಿಸಿದಲ್ಲಿ ಯಷ್ಟು ಚೆನ್ನಾಗಿರುತ್ತದೆ ಯಂದಂದುಕೊಂಡಿರಲಿಕ್ಕೂ ಸಾಕು. ಮೊದಮೊದಲು ತನಗವರ ಮ್ಯಾಲ ಕೋಪ ಯಿಲ್ಲದಿರಲಿಲ್ಲ.. ಅವರನ್ನು ಹಿಡಿದು ಮಟ್ಟಹಾಕಿದವರಿಗೆ ಬಡ್ತಿ.. ನಗದು ಬಹುಮಾನ, ವುಂಬಳಿ, ಜಾಗೀರು, ರಾವ್ ಬಹದ್ದೂರು ಯಂಬಿವೇ ಮೊದಲಾದ ಅಮಿಷಗಳನ್ನು ಘೋಷಿಸಿರದೆ ಯಿರಲಿಲ್ಲ.. ಗಾಳಿಯನ್ನು ಹಿಡಿಯಲಕಾತದ? ಮಿಂಚನ್ನು ಹಿಡಿದು ಸಂಗ್ರಹ ಮಾಡಲಕಾತದ? ಯಂಬ ಕಾರಣಕ್ಕೆ ಯಾಮೊಬ್ಬ ಅಧಿಕಾರಿಯೂ ಅವರ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಂಡಿರಲಿಲ್ಲ. ಯಿನ್ನು ಸ್ಥಳೀಕರಂತೂ ಅವರು ಕುಂಪಣಿ ಸರಕಾರಕ್ಕೆ ಸದಾ ತಲೆನೋವಾಗಿರಬೇಕೆಂದು ಬಯಸಿಯೋ.. ಅವರ ಕಳ್ಳಕಸುಬಿನಿಂದಾಗಿ ತಮ್ಮ ಭೂಭಾಗದ ಗವುರವ ಪ್ರತಿಷೆ«ಯು ನೂರ್ಮಡಿಗೊಂಡಿರುವುದೆಂದು ಭಾವಿಸಿಯೋ.. ಯಲ್ಲಾಪ್ರಕೊರಚರಟ್ಟಿಯ ಬಗ್ಗೆ ವಳಗೊಳಗೆ ಹೆಮ್ಮೆ ಪಟ್ಟುಕೊಳ್ಳುತ್ತಲಿರುವರು. ಯಾರು ಹೆಂಗೇ ಯಿರಲಿ.. ಕಲೆಟ್ರುಸಾಹೇಬ ಮಾತ್ರಅವರನ್ನು ಸಜೀವವಾಗಿ ಹಿಡಿದು ತಂದು ತನಗೆ ವಪ್ಪಿಸಲೇಬೇಕೆಂದು ತನ್ನ ಕೆಳಗಿನ ಅಧಿಕಾರಿಗಳಿಗೆ ಕಟ್ಟುನಿಟ್ಟಾದ ಆಗ್ನೆ ಮಾಡಿರುವನು. ಸಂತೆ, ಪರಿಶೆ, ಜಾತುರೆಗಳಲ್ಲಿ ತಮ್ಮ ಕಂಪನಿಯ ಸಾಹಿತ್ಯಿಕ.. ಸಾಂಸ್ಕೃತಿಕ ಯಿಭಾಗದವರ ಕಡೇಲಿಂದ "ಯಲ್ಲಾಪ್ರಕೊರಚರಟ್ಟಿ ಕಳ್ಳರೇ ಕಲೆಟ್ರುಸಾಹೇಬರ ಸಮಕ್ಷಮ ಸರಣಾಗಿರಿ..

ಅವರಿಂದ ನಗದು ಬಹುಮಾನ ಬಿರುದು ಬಾವಲಿ ಪಡೆದುಕೊಳ್ಳಿರಿ.. ಸರಣಾದವರಿಗೆ ಯಿರಲಕೊಂದು ಮನೆ, ವುಳುಮೆ ಮಾಡಲಕೆಂದು ಹೊಲ, ಪಾಡಾ ಖರ್ಚಿಗೆಂದು ಮಾಸಾಸನ ಕೊಡಬೇಕೆಂದು ತೀರುಮಾನಿಸಿರುವುದು.. ಯಿಂದೇ ಸರಣಾಗಲು ತ್ವರೆಮಾಡಿರಿ" ಯಂದು ಪ್ರಚಾರ ಮಾಡಿಸತೊಡಗಿದರು. ಅದರೆ ಯಿದಾವುದೂ ಫಲ ಕಾಣಲಿಲ್ಲ....

ಆದರೆ ಯಡ್ಡವರ್ಡನು ಮಾತ್ರಯಲ್ಲಾಪ್ರಕೊರಚಕಟ್ಟಿ ಕಳ್ಳರನ್ನು ಹಿಡಿದೊಪ್ಪಿಸಿ ಕಲೆಟ್ರುಸಾಹೇಬರ ಕ್ರುಪೆಯಿಂದ ಬಡ್ತಿ ಪಡೆದುಕೊಳ್ಳಬೇಕೆಂದು ನಿರ್ಧರಿಸಿದನು. ಅವರನ್ನು ಹಿಡಿಯಲಿಕ್ಕೆಂದೆ ಗಣಪತರಾವ್ ಬೊಂಸ್ಲೇ ಯಂಬ ಪರಾಕ್ರಮಿಯ ನೇತ್ರುತ್ವದಲ್ಲಿ ವಂದು ಪವುಜನ್ನು ಕಳುವಿಕೊಟ್ಟಿದ್ದನು. ಕಳ್ಳರ ಯೇಸದಲ್ಲಿದ್ದ ಆ ಪವುಜು ನುಂಕೇಮಲೆಯ ಕಾಡೊಳಗೆ ಕಳ್ಳಕಾಕರ ತುಕಡಿಯನ್ನು ಸುತ್ತುವರಿದದ್ದೂ ನಿಜ.. ಸರಣಾಗುವವೆಂದು ಭರವಸೆ ನೀಡಿದ ಅವರಿಗೆ ವುಂಬಲಕ ಬಾನ, ಕುಡಿಯಲಕ ನೀರು ಕೊಟ್ಟಿದ್ದೂ ನಿಜ. ಕಳ್ಳತನದ ನಾನಾ ಮಾಯಾ ಯಿದ್ಯೆಗಳನ್ನು ಪ್ರದರ್ಸಿಸಿ ಅವರು ಪವುಜನ್ನು ರಂಜಿಸಿದ್ದೂ ನಿಜ.. ನಿಮ್ಮ ಯಡ್ಡವರ್ಡು ಸಾಹೇಬನನ್ನು ಕರೆಸಿದಲ್ಲಿ ಆತನೆದುರು ತಾವು ಸರಣಾಗುವೆವೆಂದು ಹೇಳಿದ್ದೂ ನಿಜ.. ಅದೇ ಪ್ರಕಾರ ಬೊಂಸ್ಲೆ ಕೂಡ್ಲಿಗಿಗೆ ಖಬರು ಕಳಿಸಿ ತನ್ನ ಮೇಲಧಿಕಾರಿಯ ಆಗಮನದ ನಿರೀಕ್ಷೆಯಲ್ಲಿದ್ದದ್ದೂ ನಿಜ, ಯಡ್ಡವರ್ಡು ವಂದೇವುಸಿರಿಗೆ ಬಂದು ಓಹ್ ಐಸೀ.. ಗುಡ್.. ವೆರಿಗುಡ್ ಯಂದುದ್ಗಾರ ತೆಗೆದದ್ದು ಕೂಡ ಅಷ್ಟೇ ನಿಜ.

ಆದರೆ ಮುಂದಿನೊಂದು ಗಳಿಗೆವಳಗ ಅದೇನಾತೋ.. ಅದೇನು ಬಿಟ್ಟಿತೋ.. ಯಲ್ಲಾಪ್ರಕೊರಚಕಟ್ಟಿ ಕಳ್ಳರು ಪೋಲೇರಮ್ಮನ ಕೃಪೆಯಿಂದ ಅದ್ರುಸ್ಯರಾಗಿಬಿಡುವುದೇನು? ಬಹಳ ಹೊತ್ತಿನವರೆಗೆ ಬೊಂಸ್ಲೆಯು ತನ್ನ ಸಯ್ನಿಕರನ್ನೇ ಅವರೆಂದು ಭ್ರಮಿಸಿದ್ದನೆಂದರೆ ಅವರ ಅಸಾಧಾರಣ ಚಾಕಚಕ್ಯತೆ ಅರ್ಥವಾದೀತು. ವುತ್ತಮ ಅಂಗ ಸವುಷ«ವ ಯಿಟ್ಟುಕೊಂಡಿದ್ದ ಯಡ್ಡವರ್ಡು ಸೇರಿದಂತೆ ಅವರೆಲ್ಲ ಹಗಲೆನ್ನದೆ, ರಾತ್ರಿಯನ್ನದೆ ಮೂರ್ನಾಕು ದಿನಗಳ ಕಾಲ ನುಂಕೇಮಲೆಯ ಅರಣ್ಯವನ್ನು ಜಾಲಾಡಿ ಮಯ್ನು ಕಯ್ನು ನೊವ್ವು ಮಾಡಿಕೊಂಡರೇ ಹೊರತು ಅವರ ವುಡುದಾರದ ಚೂರನ್ನಾದರೂ ಪತ್ತೆ ಹಚ್ಚಲಾಗಲಿಲ್ಲ. ಯಲ್ಲಾಪ್ರಕೊರಚರಟ್ಟಿಯ ಕಳ್ಳರಿಗೆ ಕರಗತವಾಗಿರುವ ಯಿದ್ಯೆ ಪಯ್ಕಿ ಕಾಲುಭಾಗವಾದರೂ ಕುಂಪಣಿ ಸರಕಾರದ ಕಯ್ಯಿವಸವಾದಲ್ಲಿ ಯಿಡೀ

ಯಿಂಡಿಯಾವನ್ನು ಗೆದ್ದು ಬಿಡಬಹುದೆಂದು ಯಡ್ಡವರ್ಡನು ಅಂಥ ನಿರಾಶಾ ಸ್ಥಿತಿಯೊಳಗೂ.....

ತಾನು ಕಾಡು ಸೇರಿ ಯಷ್ಟು ದಿನವಾಗಿದ್ದಿರಬೌದೆಂದು ಯಡ್ಡವರ್ಡು ಲೆಕ್ಕ ಹಾಕಿ ನೋಡಿಕೊಳ್ಳುತ್ತಾನೆ, ಬರೋಬ್ಬರಿ ಯಂಟು ದಿವಸವಾಗಿರುವುದು. ಮೊದಲೇ ಬಲು ಸ್ವಾಭಿಮಾನದ ಮನುಶ್ಯನಾದ ತಾನು ಬರುವಾಗ್ಗೆ ಹಂಗಿದ್ದಾತ.. ಹೊಳ್ಳಿ ಹೊಂಡುವಾಗ್ಗೆ ಹಿಂಗಾಗಿಬಿಟ್ಟಿರುವನಲ್ಲಾ.. ಯೀಸೊಂದು ದಿವಸಗಳ ಶ್ರಮವು ಯರ್ತವಾಯಿತಲ್ಲಾ.. ಕಲೆಟ್ರುಸಾಹೇಬನಿಗೆ ಯೇನೆಂದು ವುತ್ತರಕೊಡಲಿ? ಜೆನ್ನಿಫರಳಿಗೆ ಮುಖವನ್ಯಾಂಗ ತೋರಿಸಲಿ? ಯಂದು ವಳಗೊಳಗೆ ಮರುಗುತ ಅಜೇಯರಾಗಿ ವುಳಿದ ಯಲ್ಲಾಪ್ರರಕೊರಟ್ಟಿ ಕಳ್ಳರ ನೆನಪುಗಳನ್ನು ನಮಲುತ ಭಾರವಾದ ರುದಯದಿಂದ ಕೂಡ್ಲಿಗಿ ಹಾದಿ ಹಿಡಿದನು. ಹಾದಿ ಸವೆದಂತೆಲ್ಲಾ ಹೆಂಡತಿಯ ನೆನಪು ತರಾವರಿ ರೀತಿಯಲ್ಲಿ ಕಾಡಲಾರಂಭಿಸಿತು. ದೂರದ ವುದಕಮಂಡಲದ ವಸತಿ ಸಾಲೆಯಲ್ಲಿ ಮೋದುತ್ತಿರುವ ತನ್ನೆರಡು ಮಕ್ಕಳ ನೆನಪೂಮನಸ್ಸಿಗೆ ಅಟೆಯಲಾರಂಭಿಸಿತು. ಹೆಂಡತಿ ಯಿಚ್ಚೆಗೆ ಯಿರುದ್ಧವಾಗಿ ತಾನವರನ್ನು ಅಲ್ಲಿಗೆ ಸೇರಿಸಿದ್ದ. ಬ್ರಿಟೀಶ್ ಸಂಪ್ರದಾಯದ ಅಚ್ಚುಕಟ್ಟುತನ, ಶಿಸ್ತನ್ನು ರೂಡಿಸಿಕೊಳ್ಳಲಿ ಯಂಬ ಕಾರಣಕ್ಕಾಗಿ.. ತಮ್ಮ ಜೊತೆಗಿದ್ದರೆ ಅವು ಯಿಂಡೀಯತೆಗೆಲ್ಲಿ ಮಾರು ಹೋಗುವವೋ ಯಂಬ ಆತಂಕದಿಂದಾಗಿ.. ಆದರೆ ಜೆನ್ನಿಫರು ತನ್ನ ವುದ್ದೇಶವನ್ನು ಅರ್ತಮಾಡಿಕೊಳ್ಳದೆ ಸಿಡುಕಿದಳು.. ಸಿಡುಕನ್ನು ಮುಂದುವರಿಸಿಕೊಂಡೇ ಬಂದಳು. ಆಕೆಗ್ಯಾಕ ಯಿಂಡಿಯಾ ಅಂದರ ಯಾಕಿಷ್ಟು ಮೋಹಯಂಬುದೇ ತನಗರ್ತವಾಗುತ್ತಿಲ್ಲ. ಯಿಂಡಿಯಾದ ಮೂಲೆ ಮೂಲೆಲೆಲ್ಲಾ ತಾನು ಮಾನಸಿಕವಾಗಿ ವ್ಯಾಪಿಸಲು ಹಾತೊರೆಯುತ್ತಿದ್ದಾಳೆ.. ಯಿಂಡಿಯಾದ ಸಂಪ್ರದಾಯ ನಂಬಿಕೆಗಳನ್ನ ತಾನು ಅರಗಿಸಿಕೊಳ್ಳಬೇಕೆಂದು ತಹತಹಿಸುತ್ತಿದ್ದಾಳೆ.. ತಾನು ಯಿಂಡಿಯಾದ ಅಪ್ಪಟ ಗ್ರಾಮೀಣ ಮಹಿಳೆಯಾಗಬೇಕೆಂದು ಪ್ರತಿಕ್ಷಣ ಪ್ರಯತ್ನಿಸುತ್ತಿದ್ದಾಳೆ.. ಆಕೆಯ ವಳತೋಟಿಯನ್ನು ನಿಯಂತ್ರಿಸಲು ತಾನು ಮಾಡಿದ.. ಮಾಡುತ್ತಿರುವ ಪ್ರಯತ್ನಗಳು ವಂದೇs ಯರಡೇ?.. ಮಕ್ಕಳನ್ನು ತನ್ನೊಂದಿಗೆ ಬಿಟ್ಟಿದ್ದಲ್ಲಿ ಆಕೆಯು ಭಾವನೆಗಳಿಗೆ ತಾನು ಕಡಿವಾಣ ಹಾಕಬಹುದಿತ್ತೇನೋ?.. ಹಿಂಗss ಯೋಚಿಸುತ್ತ ಸಾಗಿದ್ದ ಯಡ್ಡವರ್ಡಗೆ ಯಿನ್ನೊಂದು ಗಳಿಗೆಯಲ್ಲಿ ತಾನು ಅತ್ತು ಬಿಡುವೆನೇನೋ ಅನ್ನಿಸಿತು. ದಾರಿಯುದ್ದಕ್ಕೂ ಯಿದ್ದ ಕವುಲರಟ್ಟಿ, ಗೊಲ್ಲರಟ್ಟಿ, ಯೇಡಿ ಗುಡ್ಡ, ಬೀಡಿ ಗುಡ್ಡ,

ಅಮಲಾಪ್ರಯಿವೇ ಮೊದಲಾದ ಹಳ್ಳಿಗಳು ತನ್ನ ಕುದುರೆಯ ಖುರಪುಟದ ಸದ್ದಿಗೆ ತತ್ತರಿಸುತ್ತಿವೆ.. ಕೇಂಧೂಳೊಳಗೆ ತಲೆಮರೆಸಿಕೊಳ್ಳುತ್ತಿವೆಯಂಬ ಅನುಮಾನ ಬಂತು. ತನ್ನ ದ್ರುಸ್ಟಿಗೆ ಯಡವುತ ಬಿದ್ದೋಡುತ್ತಿರುವವ ರೆಷ್ಟೋ? ತನ್ನ ಮಾತಿನ ಚಿಮುಟಿಗೆ ಸಿಲುಕದೆ ಪುಸುಗಿಕೊಳ್ಳುತ್ತಿರುವವರಷ್ಟೋ? ತಾನು ಯಲ್ಲಿ ಅಪ್ಪಿಬಿಡುವೆನೋ? ತನ್ನ ಮಾತಿನಿಂದ, ಸ್ಪರ್ಶದಿಂದ ಯಲ್ಲಿ ಮಯ್ಲಿಗೆಯಾಗಿಬಿಡುವೆಮೋ? ಯಲ್ಲಿ ತಮ್ಮ ಕಂದಮ್ಮಗಳನ್ನು ಕಿರಸ್ತಾನ ಮತಕ್ಕೆ ಪರಿವರ್ತಿಸಿಬಿಡುವರೋ? ಯಂಬ ಆತಂಕದಿಂದ ತಮ ತಮ್ಮ ಮಕ್ಕಳು ಮರಿಗಳನ್ನು ಯದೆಗವುಚಿಕೊಂಡು ನೆರಿಕೆಯ ಮರೆಗೆ ಸರಿಯುತ್ತಿರುವ ತಾಯಂದಿರು ಅಲ್ಲಲ್ಲಿ ಗೋಚರಿಸದೆ ಯಿರಲಿಲ್ಲ.. ತನ್ನ ಮಯ್ಯಿಗಂಟಿರುವ ಬಣ್ಣ, ತಾನು ಧರಿಸಿರುವ ಪೋಷಾಕು, ತನ್ನ ಬ್ರಿಟೀಷ್ ವ್ಯಕ್ತಿತ್ವ.. ಥೇ.. ಥೇ.. ವಂದು ಕ್ಷಣ ತನ್ನನ್ನು ತಾನು ಹಳಿದುಕೊಳ್ಳಬೇಕು.. ನಿಂದಿಸಿ ಕೊಳ್ಳಬೇಕು ಯಂದುಕೊಂಡ.. ಆದರದು ಅಷ್ಟು ಸುಲಭವಲ್ಲ ಯಂದೆನಿಸಿತು....

ತನ್ನನ್ನು ತಾನು ಸಾಂಬಳಿಸಿಕೊಳ್ಳುತ್ತ ಕೂಡ್ಲಿಗಿ ಸಮೀಪಿಸಿದಾಗ ಸಾಯಂಕಾಲ ತನ್ನ ಮೊದಲ ಪರ್ವವನ್ನು ವಿದ್ಯುಕ್ತವಾಗಿ ಆರಂಭಿಸಿತ್ತು. ಅಗೋ.. ಅಲ್ಲಿ.. ತೆಂಗಿನ ಮರಗಳ ನಡುವೆ ಕಾಣಿಸುತ್ತಿರುವುದೇ ತನ್ನ ನಿವಾಸ.. ಅದರ ವುಪ್ಪರಿಗೆ ಮೇಲೆ ನಿಂತಿರುವ ಬೆಳಕನ್ನು ಪ್ರತಿಫಲಿಸುತ್ತಿರುವ ವ್ಯಕ್ತಿಯೇ ತಾನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿರುವ ಜೆನ್ನಿಫರಳಿದ್ದಿರಬಹುದು.. ಹೋದೊಡನೆ ಆಕೆ ತನ್ನ ಮೇಲೆ ಮುನಿಸಿಕೊಳ್ಳಬಹುದು.. "ಸಂಜೆಯೊಳಗಾಗಿ ಮರಳಿ ಬರುವುದಾಗಿ ಹೋದವರು ಯಂಟು ದಿನಗಳ ನಂತರ ಬಂದಿರುವಿರಲ್ಲಾ.." ಯಂದಾಕೆ ತನ್ನನ್ನು ವಿಚಾರಣೆಗೆ ಗುರಿಪಡಿಸಬಹುದು.. ಆಕೆ ಕೇಳ ಬಹುದಾದ ಪ್ರಶ್ನೆಗಳಿಗೆ ವುತ್ತರಗಳಿರುವವೇ ತನ್ನ ಯದೆಯೊಳಗೆ....

* * * *

ಅತ್ತ ತಾಯ್ತನ ಯಂಬುವ ಜುವ್ವಾಲೆಯೊಳಗ ಅಗೋಚರ ತೋಳುಗಳಿಂದ ವಂದೇ ಸಮಕ ತೂಗಿಸಿಕೊಳ್ಳುತಲಿದ್ದ ಕುದುರೆಡವು ಪಟ್ಟಣವು ಯಾವಾಗ ಮಲಿಕ್ಕೋತಿತ್ತೋ? ಯಾವಾಗ ಯಚ್ಚರಿರುತಿತ್ತೋ?. ಹುಲುನರಮಾನ್ನವರ ನಾಲಿಗೆಗೆ ಗ್ರಾಸವಾಗಿರುವ ಬಾಯಿಗೆ ನಮಲುವ ತೊಂಬಲದುಂಡೆಯಾಗಿರುವ, ತಲೆ ಮೇಲೆಲ್ಲಾ ಹೇನಾಗಿ ಹರಿದಾಡುತಲಿರುವ ಅರಮನೆಯು ಹಗಲು ರಾತ್ರಿಗಳನು ಅದಲು ಬದಲು ಮಾಡಿದುದೇ ಅದಕ್ಕೆ

ಕಾರಣಯಿತ್ತು ಸಿವನೇ.. ಮಂದಿ ತಮ ತಮ್ಮ ಬದುಕು ವದಕನಂಗಳ ಬಿಟುಕೊಟ್ಟು ಅದೇ ಗತಿಯಾಗಿ ನಿಂತಿದ್ದರು ತಂದೆಯೇ.. ಕಣ್ಣುಳ್ಳವರ ಕಣ್ಣೊಳಗ, ಕಿವಿವುಳ್ಳವರ ಕಿವಿಯೊಳಗ ಬಯುಲ ಸ್ವರದ್ರೂಪಿ ಅರಮನೆಯು ಯಿದ್ಯಾಮಾನಂಗಳು ಅಸಂಗತ.. ಅಮೂರ್ತ ರೂಪಗಳಾಗಿ ಕಾಡಾಟ ಕೊಡಲಕ ಹತ್ತಿದ್ದುದೇ ಅದಕೆ ಕಾರಣ ಯಿತ್ತು ಸಿವನೇ.. ಮಂದಿ ಮನಸು ಅಂಥ ಮಾಯಾವೀ ಅರಮನೆಗೆ ಹೋಗೋದು ಬರೋದು ಮಾಡುತಲಿದ್ದುದೇ ಅದಕೆ ಕಾರಣ ಯಿತ್ತು ನನ್ನಪ್ಪಾ.. ನಂಬುಗೆ ಅಪನಂಬುಗೆಗಳ ನಡುವೆ, ಲವುಕಿಕ ಅಲವುಕಿಕಗಳ ನಡುವೆ, ಆಸ್ತೀಕ ನಾಸ್ತೀಕ ಭಾವನೆಗಳ ನಡುವೆ ಹೊಯ್ದಾಡುತಲಿದ್ದ ಮಂದಿ ಮಲಗು ಅಂದರ ಹೆಂಗ ಮಲಕ್ಕೊಂಡಾರು? ಯೆಚ್ಚರಿರು ಅಂದರ ಹೆಂಗ ಯಚ್ಚಾರ ಯಿದ್ದಾರು? ಅರಮನೆ ಸಲುವಾಗಿ ಕಣ್ಣು ಕಳಕೋ ಬ್ಯಾಡೀರಿ.. ಅರಮನೆ ಸುದ್ದಿಗಳನ ಯಿನಾ ಕಾರಣ ಕೇಳೀ ಕೇಳೀ ಕಿವೀನ ಕಳಕೋ ಬ್ಯಾಡೀರಿ ಅಂದರ ಹೆಂಗ ಸುಮಕ ಯಿದ್ದಾರು? ಯೇನಪಾ ಯೀ ಅರಮನೆಯು ತಮ ಮಯ್ಯಿ ತೊಗಲಿಗೆ ಅಂಟಯ್ತುಲ್ಲಾ.. ತಮ ತಮ್ಮ ಸರೀರಗಳಾದ್ಯಂತ ಜುಮುಜುಮು ಅಂತನಲಕ ಹತ್ತಯ್ತುಲ್ಲಾ....

ಅಗಸೆ ಬಾಕಲ ಕಡೇಲಿಂದ ಗಾಳಿಯೊಳಗಿಂದೊಡಮೂಡಿದ ಗಾಳಿಯೊಂದು ಪಟ್ಟಣವನ್ನು ಪ್ರವೇಸ ಮಾಡಿದೊಡನೆ.. ಬೀದಿ ಬೀದಿಗುಂಟ ಸುಳಿದಾಡಿದೊಡನೆ ಸಚರಾಚರಗಳ ಮಯ್ಯನ ದಡವಿ, ಅರಮನೆಯೊಳಗ ಹೋಗಿ ಅಲ್ಲಿದ್ದ ಪಟ್ಟಣ ಸೋಮಿಗಳನ, ಅದೇ ಯಿನ್ನು ಯಚ್ಚರಾಗಿದ್ದ ಮೋಬಯ್ಯ.. ಅಲ್ಲಲ್ಲಾ.. ಸಾಂಬಯ್ಯನ ಮಯ್ದಡವಿದೊಡನೆ.. ಯಲ್ಲಾರು ವಂಚಣ ಪುಲಕಿತರಾದರು.. ಯೇನೋ ಮುಟು ಮುಟ್ಟಿದಂಗಾಯ್ತುಲ್ಲಾ ಯಂದು ತಮ ತಮ್ಮ ಮಯ್ಯಗಳನ ಸವರಾಡಿಕೊಂಡರು.. ತಮ ತಮ್ಮ ಅಂತರಂಗಗಳೊಳಗೂ ಅಷ್ಟೇಯಾ? ತಮ ತಮ್ಮ ಮನಸುಗಳೊಳಗ ಯೇನೋ ವಂದು ನಮೂನಿ ಆಗಲಕ ಹತ್ತಯ್ತೆ ಯಂದವರಿವರ ಬಳಿ ತೋಡಿಕೊಳ್ಳಬೇಕೆಂಬ ಆಸೆಯಾಯಿತು ಯಲ್ಲರಿಗೂ.. ಆದರ ನಾಲಗೆ ಲಗೂನ ಹೊಳ್ಳುವಲ್ಲದಲ್ಲಾ.. ವಂದೊಂದು ಮನಸೊಳಗ ಅಸಂಖ್ಯಾತ ಮಸಿ ಕುಡಿಕೆಗಳು, ಲೆಕ್ಕವಿಲ್ಲದಷ್ಟು ಲೆಕ್ಕಣಿಕೆಗಳು, ಸಾವುರಾರು ಕಂಠ ಪತ್ರಗಳು, ವುಸುರಾಟಕ್ಕೆ ಮುಗುಚಿಕೊಳ್ಳುತ್ತಿರುವ ಕಾಗದಗಳು.. ಕೋಟ್ಯಾನು ಕೋಟಿ ಅಕ್ಕರಕ್ಕರಗಳು.. ಯೇಕ ವಚನದ ಕಡೆ ಬವುವಚನಗಳು, ಆಡುಮಾತುವಿರುವ ಕಡೆ ಗ್ರಾಂಥಿಕ ಮಾತುಗಳು.. ಅವುಗಳ ಖೂನ ಗುರುತು

ಆ ಮಂದಿಗೆ ಅಷ್ಟು ಲಗೂನವಾಗಲಿಲ್ಲ.. ಮೋದಬೇಕೆಂದೆನ್ನಿಸ್ತದ ಅಂತ ಹೆಂಗ ಹೇಳುವುದು? ಬರೆಯಬೇಕೆಂದೆನ್ನಿಸ್ತದ ಅಂತ ಹೆಂಗ ಹೇಳುವುದು? ತಮ್ಮ ವಳಗಣ್ಣುಗಳಿಗೆ ಗೋಚರ ಮಾಡುತ್ತಿರುವವು ಗ್ರಂಥಗಳಂತ ಹೆಂಗ ಹೇಳುವುದು? ಮಂದಿ ತಮ್ಮಟಕ ತಾವ ಹಿಂಗs ಯಿಲ್ಲಿ ವದ್ದಾಡುತಲಿರಲು....

ಅತ್ತ ಅರಮನೆಯೊಳಗ ಅಲ್ಲಿನ ಮಂದಿ ವಂದು ನಮೂನಿ ತ್ರಾಸು ತಗೊಂಡಿತ್ತು ಸಿವನೇ.. ಸಾಂಬಯ್ಯ 'ಯಜ್ಜಾ ನನ ಯಡಗಣ್ಣು, ಯಡದೊಡೆ ಹಾರಲಕ ಹತ್ತಯ್ತೆ.. ಯಜ್ಜಾ ಬ್ರೆಮಾಸ್ತರ ರೂಪ ಧರಿಸಿರುವ ಲೆಕ್ಕಣಿಕೆ ನನ್ನನ್ನು ಕೆಕ್ಕರಿಸಿ ನೋಡುತ್ತಿರುವಾಂಗಾಗತಯ್ತೆ.. ಮಾಯಾವಿ ಅಕ್ಕಸರಗಳು ಬಂದು ನನಗ ಚಕ್ಕಟಿ ಗುಳ್ಳಿ ಯಿಡಲಕ ಹತ್ಯಾವೆ' ಯಂದು ಮುಂತಾಗಿ ಹೇಳಬೇಕೆಂದುಕೊಳ್ಳುತ್ತಾನೆ.. ಆದರದು ಆಗುವಲ್ಲದು.. ಜಡೆ ತಾತನಾದರೂ ಅಷ್ಟೇಯಾ, ಕಾಡುಗೊಲ್ಲರೀರಯ್ಯನಾದರೂ ಅಷ್ಟೇಯಾ, ಅಲ್ಲಿದ್ದವರು ಯಾರಾದರೂ ಅಷ್ಟೇಯಾ.. ಯಾಕ ತಮಗಿಂಥ ಅನುಭವ ಆಗುತ್ತಿರುವುದು ಯಂದವರಿವರು ಅಂದುಕೊಳ್ಳುತ್ತಿರುವಷ್ಟರಲ್ಲಿ..

ಕುದುರೆಡವು ಪಟ್ಟಣದ ಅಗಸೆ ಬಾಗಿಲನ್ನು ದಾಟಿದ ತೇಜಸ್ವೀ ಪುರುಷ ಪುಂಗವ ಯಾರೆಂದರೆ ಅಯ್ಯಾಳೀ....

...ಯೀತನ ನಿಜನಾಮದೇಯವು ಅಯ್ಯಾಳೇಸ್ವರ ಯಂದಿರುವುದಾಗಲೀ.. ಯೀತನ ಸ್ವಾಸ್ಥಿಯು ರಾಂಪುರ ಪರಗಣದಲ್ಲಿರೋ ಕಣಕುಪ್ಪೆಯಂಬುದಾಗಲೀ.. ಯೀತನು ಯೇದ ಪಾರಾಂಗತ ದಂಪತಿಗಳಾದ ಗುರುವಯ್ಯ, ಯಂಕಮ್ಮ ಯಂಬುವವರ ಯೇಕಮಾತ್ರಸುಪುತ್ರನೆಂಬುದಾಗಲೀ.. ಯೀತ ತನ್ನ ಚಿಕ್ಕ ವಯಸ್ಸಿಗೆ ಬಳ್ಳಾರೇಸ್ವರ ಮಾತ್ಮೆ, ಬಲಕುಂದಿ ಮಾಂಕಾಳೇಸ್ವರ ಮಾತ್ಮೆ, ಕುರುಗೋಡು ದೊಡ್ಡ ಬಸವೇಸ್ವರ ಮಾತ್ಮೆಯಂಬ ಭಾಮಿನಿ, ವಾರ್ಧಕ ಷಟುಪದಿ ಮಾಕಾವ್ಯಗಳನ್ನು ರಚಿಸಿ ದೊಡ್ಡ ದೊಡ್ಡ ರಾಜ ಮಾರಾಜರುಗಳಿಂದ ಯೇಕಾನೇಕ ಪಾರಿತೋಷಕಗಳನ್ನು ಪಡಕೊಂಡಿರುವನೆಂದಾಗಲೀ ಸದರಿ ಪಟ್ಟಣದ ಮಂದಿಗಷೆ«ೀ ಯಾಕ ಕುಂತಳದ ಬಹುಪಾಲು ಸೀಮೆಗೆ ಗೊತ್ತೇ ಯಿಲ್ಲ.. ಯೀತ ಸುಮಸುಮಕ ಯಾವುದೇ ಕಾವ್ಯ ಬರೆಯುವವನಲ್ಲ. ಅದಕ ಯಾದಾದರೊಂದು ಪ್ರೇರಣ ದೊರಕಬೇಕು. ತಾನು ಯಿಂಥಾದ್ದೊಂದು ಕಾವ್ಯ ಬರೆಯುವೆನೆಂದು.. ಅದಕೆ ತನಗಯಿರಲಕೊಂದು ಸುಸಜ್ಜಿತ ಮನೆ, ಬಾಯಾಡಿಸಲಕ ವುತ್ತುತ್ತಿ, ಕರ್ಜೂರ, ಬಾದಾಮಿ, ಗೋಡಂಬಿ, ಕುಡಿಯಲಕ ಯಳನೀರು, ತಿಳಿಮಜ್ಜಿಗಿ, ನೊರೆವಾಲು ಬೇಕೆಂದು ಆಯಾ ರಾಜರನ್ನೆಂದೂ

ಜುಲುಮಿ ಮಾಡುವಾತ ನಲ್ಲ.. ತನ ಮಯ್ತೀಟಿ ತೀರಿಸಲಕ ರಾಜ ನರ್ತಕಿಯರೇ ಬೇಕೆಂದು ಯಂದೂ ಹಠ ಮಾಡಿದಾತನಲ್ಲ.. ಮಾರ್ಗ ಕಾವ್ಯಗಳನ್ನು, ಛಂದಸ್ಸು, ಅಲಂಕಾರಗಳನ್ನೂ ಆಳವಾಗಿ ಅಭ್ಯಾಸ ಮಾಡಿರುವ ಯೀವಯ್ಯನು ಪಂಪ, ರನ್ನ ಯಿತ್ಯಾದಿ ಕೀರ್ತಿ ಸೇಷರನ್ನು ಕುಂತರೂ ಸೇರಿದವನಲ್ಲ.. ನಿಂತರೂ ಸೇರಿ ದವನಲ್ಲ.. ಕಾರಣ ಅವರು ರಾಜಾಸ್ರಯ ಪಡಕೊಂಡೇ ಕಾವ್ಯಗಳನ ರಚನೆ ಮಾಡಿರುವರೆಂಬ ಕಾರಣದಿಂದ.. ಕವಿ ಥರ ಕಾಣಬೇಕೆಂದು ತಾನ್ಯಾವತ್ತೂ ತನ್ನ ಸರೀರದ ಮೇಲುಮಯ್ಯಿ ಲಚ್ಚಣಗಳನು ತಿದ್ದಿ ತೀಡಿಟ್ಟು ಕೊಂಡಾತನಲ್ಲ.. ಯಾರಾದರು ನೋಡಿದರ ಯಿವನ್ಯಾತರ ಕವಿಯಂದು ಹೀಗಳೆಯದಿರ ಲಾರರು.. ಮೇಲುನೋಟಕ್ಕೆ ಕಡಿಮೆ ವಯಸ್ಸಿಗೇನೆ ಸಾಕಷ್ಟು ವಯಸ್ಸಾದವ ನಂತೆಯೂ.. ತಿರುಪೆಗಾರರ ಸಂಘದ ಗವುರವ ಅಧ್ಯಕ್ಷನಂತೆಯೂ.. ಅರಸಿಕನಂತೆಯೂ.. ಜಿತೇಂದ್ರಿಯನಂತೆಯೂ.. ಅವಿವಾಹಿತನಾಗಿದ್ದರೂನೂವೆ ಬಹುಮಕ್ಕಳೊಂದಿಗನಂತೆಯೂ.. ಗೋಚರ ಮಾಡುವ ಯೀವಯ್ಯ ಕುದುರೆಡವ ಕಡೇಕ ತಲೆ ಮಾಡಿ ಮಲಗಿಕೊಂಡವನಲ್ಲ.. ಆದರ ಕಳೆದ ಕೆಲ ದಿವಸಗಳಿಂದ ಯಿಚಿತ್ರಾಯಿಚಿತ್ರಗಾಳಿ ಸುದ್ದಿಗಳು ಸದರೀ ಪಟ್ಟಣದಿಂದ ಬಂದೀವಯ್ಯನ ಕಿವಿಗಟೆಯ ತೊಡಗಿದವು.. ಸಾಂಬವಿಯಂಬುವ ಆದಿಸಗುತಿ ಪಿಕದಾನಿ ಹಿಡಿಯುವ ಗುಡಿ ಹಿಂದಲ ಮೂಳೆ ಮೋಬಯ್ಯನ ಸರೀರದೊಳಗ ವಸ್ತಿ ಮಾಡುವುದೆಂದರೇನು? ಅರಮನೆನ ಬಗಸಿ ಕಬ್ಜಾ ಮಾಡುವು ದೆಂದರೇನು? ಕಬ್ಜಾ ಮಾಡಿ ಪುವ್ವುಲ ವಮುಸದ ರಾಜ ಪರಿವಾರದವರನು ಬೀದಿಪಾಲು ಮಾಡುವು ದೆಂದರೇನು? ಸಮಾಜಕ್ಕೆ ದಯವ ಯಂಬುವ ನಶೆಯೇರಿಸಿ ರಾಜ್ಯಭಾರ ಮಾಡುವುದೆಂದರೇನು? ಮ್ರುತ್ಯುವನ್ನು ಗೆದ್ದಿರುವ ಮುಪ್ಪಾನು ಮುದುಕರು ಯಾದೇ ಸೂರಸೇನಾಪತಿಗಳಿಗಿಂತಲೂ ಕಡಿಮೆಯಿಲ್ಲದಂತೆ ಯಿದ್ದಾರಂಬುತಾರಲ್ಲ.. ಅವರು ನೋಡಲಕ ಹೆಂಗವರೆ? ಆಡಲಕ ಹೆಂಗವರೆ..? ಮುದುಕರು ಸಿಸುವಾಗುವುದೆಂದರೇನು? ಸಿಸುಗಳು ಮುದುಕರಂತಾಡುವುದಂದರೇನು? ಯಿದರೊಳಗೇನೋ ಮಸಲತ್ತು ಯಿದ್ದಂಗಿರುವುದು ತಾನೀ ಘಟನಾವಳಿಗಳನು ಹೆಣೆದು ಕಾವ್ಯ ರಚನೆ ಮಾಡಿದಲ್ಲಿ ಅಚಂದ್ರಾರ್ಕವಾಗಿ ವುಳಿಯುವುದು ಯಂದು ಮುಂತಾಗಿ ಯೋಚಿಸಿ ನಿರ್ದಾರಕ್ಕೆ ಬಂದನಂತೆ. ತಾನು ಕುದರೆಡವು ಪಟ್ಟಣದೊಳಗ ತಿಂಗಳ ದಿನಮಾನ ಮೊಕ್ಕಾಂ ಹೂಡಿ.. ಕೂಲಂಕಷ ಅಧ್ಯಯನ ನಡೆಸಿ.. ಸಪ್ಪಳವಾಗದಂತೆ ಕಾವ್ಯ ಬರೆಯಬೇಕೆಂದು ನಿರ್ಧಾರ ಮಾಡಿದನಂತೆ.. ಯಿನ್ನೊಂದು ತಿಂಗಳು ಬಿಟ್ಟು

ಹೊರಡಬೇಕೆಂಬುವಷ್ಟರೊಳಗ ಹಿಂದಲ ರಾತ್ರಿತಾನೊಂದು ಕಣಸು ಕಂಡನಂತೆ.. ಆ ಕಣಸೊಳಗ ವಡಮೂಡಿದ ಮುತ್ತಯ್ದೆ ಯೋರ್ವಳು 'ಮಗನೇ ಅಯ್ಯಾಳಿ, ನಾನು ಕಣಪ್ಪಾ ಸಾಂಬವಿ' ಅಂದಳಂತೆ. ಅದಕ ಯಿವಯ್ಯನು 'ಸಾಂಬವಿ ಅಂದರ ನನ ಕಲ್ಪನನ ಬ್ಯಾರೆ ಯಿತ್ತು ಕಣವ್ವಾ.. ನೀನು ನೋಡಲಕ ಮಾಮೂಲು ರಯ್ತಾಪಿ ಹೆಣುಮಗಳಂಗದಿ.. ನೀನ್ಯಾಕೆ ಬರಾಕ ಹೋದೆವ್ವಾ ನನ ಕಣಸೊಳಗ? ಅಂದಂನಂತೆ.. ಅದಕ ಆಕೆಯು 'ನೀನು ಕವಿ ಅದೀ ಅಂತ ಬಂದೆನಪ್ಪಾ' ಅಂದಳಂತೆ.. ಅಂತೂ ತನ್ನ ಖ್ಯಾತಿಯು ದೇವಲೋಕಕ್ಕೂ ತಲುಪಿರುವುದು ತನ್ನ ಸುಕ್ರುತವು ಯಂದು ಬಗೆದ ಯಿವಯ್ಯನು 'ತಾಯಿ ಸಾಂಬವಿ ನನ್ನಿಂದೇನಾಗಬೇಕವ್ವ?' ಯಂದು ಕೇಳಿದನಂತೆ.. ಆಗ ಆಕೆಯು "ತ್ರಿಕಾಲಗ್ನಾನಿಯಾಗಿರುವ ನಿನಗ ಹೇಳುವುದೇನಯ್ತಪ್ಪಾ.. ನಾನು ಗುಡಿಹಿಂದಲ ಮೂಳೆ ಮೋಬಯ್ಯನೆಂಬ ನಿತ್ರಾಣ ಮನುಷ್ಯನ ಮಂಯ್ಯೊಳಗ ಸೇರಿಕೊಂಡಿರುವುದೇ ಪರಪಾಟಾಗಯ್ತೆ ನೋಡು.. ನನ್ನ ಹೆಸರು ಹೇಳಿಕೊಂಡು ಅಲ್ಲಿನ ಮಂದಿ ತಮ್ಮ ಬ್ಯಾಳಿ ಬೇಯಿಸಕೊಳ್ಳಲಕ ಹತ್ಯಾರ.. ಮೋಬಯ್ಯನ ತಮ ಕೀಲುಗೊಂಬೆ ಮಾಡಿಕೊಂಡಾರ.. ಸಾಮಾಜಿಕರೇನೋ ಯಿಾಗ ಸದ್ಯಕ ಕವಲೆತ್ತುಗಳಂಗ ತಲೆ ಅಲ್ಲಾಡಿಸ್ತಿದಾರ.. ಆದರ ಕಾಲ ಸುಮ್ಮಕ ಬಿಡುವುದೇನು? ಮುಂದ ನನಗ ಲೋಕಾಪವಾದ ಬರಂಗಿಲ್ಲೇನು?" ಯಂದು ನಿಟ್ಟುಸಿರುಬಿಟ್ಟಳಂತೆ.. ಅದಕ ಯಿಾ ಕವಿವರ್ಯನು ಅವುದು ತಾಯಿ ಅವುದು.. ಯಿಾ ಕುಂತಳಸೀಮೆ ಹಿಂಗ ಗೊತ್ತು ಗುರಿಯಿಲ್ಲದಾಂಗ ಹೊಂಟದ ತಾಯಿ.. ಗಾಂಜಾ ಸೇದೋ.. ಹೆಂಡ ಕುಡಿಯೊ ಅವಧೂತ ಮಂದಿ ನಿನ್ನ ಹೆಸರಲ್ಲಿ ಮಾಡಬಾರದ ಕೆಲಸ ಮಾಡುತ್ತಿರುವುದು ನನಗೂ ಗೊತ್ತದ.. ಆದರೇನು ಮಾಡಲವ್ವಾ.. ಯಿಾಗ ಸದ್ಯಕ ನಮ್ಮ ಸಮಾಜ ಹಂಗs ತಯಾರಾಗಯ್ತೆ.. ಯಂದನಂತೆ.. ಆಗ ಆಕೆಯು "ನೀನು ನೋಡಲಕ ಬಡಪಾಯಿ ಪ್ರಾಣಿಯಂಗ ಕಾಣುತಿ.. ಆದರ ನಿನ್ನ ತಲಿಯೊಳಗ ಕ್ರಾಂತಿಕಾರಕ ಆಲೋಚನೆಗಳದಾವ.. ಅಲ್ಲದ ನೀನು ಕಂಡರಿಯದ, ಕೇಳರಿಯದ ಕವಿ ಅದೀ.. ವಂದು ಕಾಲದಲ್ಲಿ ಕಾಳಿದಾಸಗ ವಲಿದಂಥವಳಾದ ನಾನು ಯಿಾಗ ನಿನಗ ವಲಿದಿರುವೆನು ನೋಡು. ನೀನು ನಿನ್ನ ಕುರುತು ನಿಕ್ರುಷ« ಭಾವನೆ ಮಾಡಿಕೋಬ್ಯಾಡ. ನಿನ್ನೆದೆಯೊಳಗ ಮಸಿಯ ಕಡಲುಂಟು ಬಿದಿರು ಮೆಳೆ ಕಾಡಿನೋಪಾದಿಯಲ್ಲಿ ಲೆಕ್ಕಣಿಕೆಗಳು ಲೆಕ್ಕವಿಲ್ಲದಷ್ಟುಂಟು, ಪೆಂಡೆ ಪೆಂಡೆ ಹಾಳೆ ಕಾಗದವುಂಟು.. ನೀನು ತಡಮಾಡದೆ ನಾನು ನೆಲೆಗೊಂಡಿರುವ ಕುದುರೆಡವಿಗೆ ಹೊಂಟು ಬಂದು ನನ ಮ್ಯಾಲ

ವಂದು ಅಮೋಘ ಕಾವ್ಯ ಬರೀಬೇಕು ನೋಡಪ್ಪಾ” ಯಂದಳಂತೆ.. ಅದಕೀವಯ್ಯನು ‘ಆಗಲಿ ತಾಯಿ.. ನಾಳೀಕೆ ಪ್ರಯಾಣ ಬೆಳೆಸುವೆನು’ ಯಂದು ಆಸ್ವಾಸನೆ ನೀಡಿದನಂತೆ....

ಮಸಿ ಕುಡಿಕೆ, ಲೆಕ್ಕಣಿಕೆ, ಕಂಠ ಪತ್ರಗಳಿಂದಲೇ ತುಂಬಿದ್ದ ಹಂಡೇ ಚೀಲವನ್ನು ತಲೆ ವ್ಯಾಲ ಯಿಟುಕೊಂಡು ಗಂಗೆಯನ್ನು ತನ್ನ ಜಟಾಜೂಟದೊಳಗ ಬಚ್ಚಿಟ್ಟುಕೊಂಡಿರುವ ಗಂಗಾಧರನೇನೋ ಯಂಬಂತೆ ಅಯ್ಯಾಳೇಸ್ವರನು ತಾನು ಕುದುರೆಡವನ್ನು ನೋಡುತ್ತಿರುವುದು ಅದೇ ಮೊದಲ ಸಲ.. ತಾನು ಅಂದುಕೊಂಡಿದ್ದೊಂದು ಅದು ಯಿರುವುದು ಯಿನ್ನೊಂದು, ತುಪ್ಪ ಚೆಲ್ಲಿ ಬಳಕೋಬಹುದಾದಂಥ ಹಾದಿ ಬೀದಿಗಳೇನು? ಯಿಕ್ಕೆಲದಲ್ಲಿ ಬೆಳೆದು ನಿಂತಿರುವ ವುಪ್ಪರಿಗೆ ಮನೆಗಳೇನು? ಅಲವುಕಿಕತೆ, ಆದ್ಯಾತ್ಮಿಕತೆಯೇ ಮಯ್ಯಿವೆತ್ತಂತೆ ಅಡ್ಡಾಡುತ್ತಿರುವ ಪ್ರಜೆಗಳೇನು? ಯಾತ್ರಾರ್ಥಿಗಳ ಸಲುವಾಗಿ ಅಲ್ಲಲ್ಲಿರುವ ನೀರಿನರವಂಟಿಗೆಗಳೇನು? ಅನ್ನದಾನ ಛತ್ರಗಳೇನು? ವಸತಿ ನಿಲಯ ಧರುಮಸಾಲೆಗಳೇನು?

ತನ್ನ ಸ್ರವಣೇಂದ್ರಿಯ, ನಯನೇಂದ್ರಿಯಗಳಿಗೆ ಅಟೆಯುತಲಿದ್ದ ಯಾವತ್ತೂ ಸಂಗತಿ ದ್ರುಸ್ಯಗಳನ್ನು ಮಸ್ತಿಕದೊಳಗ ಸಂಗ್ರಹಿಸಿಕೊಳ್ಳುತ್ತ ಸಾಗಿದ್ದ ತಾನು ತನ್ನ ಮಯ್ಯಿ ಮ್ಯಾಲ ಯಲ್ಲಿಂದರಲ್ಲಿ ಅನುಷ«ಪ್, ಅಕ್ಕರಿಕೆ, ಆರ್ವೆ, ರಗಳೆ, ಸ್ಲೋಕ, ಸೀಸ, ಕಂದ ಯಿವೇ ಮೊದಲಾದ ಛಂದಸ್ಸುಗಳನ್ನು, ವುಪಮಾಲಂಕಾರ ಗಳನ್ನು ಮುಡಕೊಂಡಿದ್ದನು.. ಅಗೋ ಅಲ್ಲಿ ಮತ್ತೇ ಭಯಿಕ್ರೀಡಿತಾ ಯಂದಾತ ವುದ್ಗಾರ ತೆಗೆಯುತ್ತ ಭಕುತಾದಿ ಮಂದಿಯನ್ನು ಹೆದರಿಸಿ ದೂರ ಸರಿಸುತ್ತಿದ್ದನು.. ತರುಣಂ ಸಷ್ಮಪಶಾಕಂ ಯಂದು ದೂರ ಯಿದ್ದವರನು ಹತ್ತಿರ ಬರುವಂತೆ ಮಾಡುತ್ತಿದ್ದನು.. ಮೋಂ ಭೂರ್ಭುವಸ್ವಹ ಯಂದು ಹತ್ತಿರವಾದವರನ್ನು ದೂರಕ್ಕೆ ಗದುಮುತ್ತಿದ್ದನು.. ತನ್ನನ್ನು ನೋಡಿದವರೆದೆಯೊಳಗ ಪ್ರಾಣ ಸಂಕಟವನ್ನು ವುತ್ಪಾದಿಸುತ ಲಿದ್ದನು....

ನೀನ್ಯಾಕ ನೋಡಲಕ ಹೀಂಗದೀ ಅಂತ ಕೇಳುವುದೆಂತು?

ತಲಿವ್ಯಾಲಿನ ಹಂಡೇ ಚೀಲದೊಳಗ ಮಾಯಾ ಮಸಲತ್ತಿನ ಸಾಮಾನುಗಳೇನಾರ ವುಂಟಾ ಯಂದು ಕೇಳುವುದೆಂತು?

ನಿಂದ್ಯಾವುರಪ್ಪಾ? ನಿನೆದಕ ಬಂದೀಯಪ್ಪಾ? ನೀನು ಸೀದ ಅರಮನೆಗೆ ಹೋಗುವಲ್ಲಿಯಾಕ? ಸಾಂಬಯ್ಯನ ದರುಸನ ಪಡಕೊಳ್ಳಲಕ ಹಿಂದೂ ಮುಂದೂ

ನೋಡುತೀ ಯಾಕ ಯಂದು ಕೇಳುವುದೆಂತು?

ಕೇಳಲಾರದೆ ಮಂದಿ ವದ್ದಾಡುತಲಿತ್ತು....

ಅವರ ಯಿ ತೆರನ ವದ್ದಾಟನ್ನು ಸ್ರಗ್ಧರಾದಲ್ಲಿ ಹೇಳುವುದೋ? ಮತ್ತೇಭ ಯಿಕ್ರೀಡಿತದಲ್ಲಿ ಹೇಳುವುದೋ? ಯಂದೀವಯ್ಯ ಯೋಚಿಸುತಲಿದ್ದುದನ್ನು ಗೂಢಾಚಾರರು ಗಮನಿಸದೆ ಯಿರಲಿಲ್ಲ.. ಕಾಲಕಾಲಕ್ಕೆ ಅರಮನೆಗೆ ವರದಿ ಮಾಡುತ್ತಿರದೆ ಯಿರಲಿಲ್ಲ.. ಯಿನ್ನೇನೀವಯ್ಯನು ತಮ್ಮರಮನೆಗೆ ಬೆನ್ನು ಮಾಡಿ ಬಹಿರ್ದೆಸೆಯ ಹಾದಿಗುಂಟ ಕಾಲು ಹಾಕಿದ ಯನ್ನುವಷ್ಟರಲ್ಲಿ ನಿಲುವಂಜಿ ನಿಗೂಢಯ್ಯ ನೆಂಬ ಗೂಢಾಚಾರನು ಅಡ್ಡ ನಿಂತು "ಸ್ವಾಮಿ... ಕುದುರೆಡವು ತನಕ ಬಂದು ಅರಮನೆ ಕಡೆಗೆ ಬೆನ್ನು ಮಾಡಿದಿರೆಂದರೆ ನೀವು ಸರಸ್ವೊತಿಯ ವರಪುತ್ರರು ಯಂಬ ಅನುಮಾನ ನಮಗೆ ಬಂದಯ್ತೆ.. ತಲೆ ಮ್ಯಾಲಿರುವುದನ ತಲಿಮ್ಯಾಲ ಯಿಟುಕೊಂಡು ಅರಮನೆಗೆ ಬಂದು ಪಟ್ಟಣ ಸೋಮಿಗಳ ಮಾರಗ ದರುಸನದಲ್ಲಿ ಪೀಠಾಧಿಪತಿ ಸಿಸು ಸಾಂಬಯ್ಯನ ದರುಸನ ಪಡಕೊಂಡು ಪುನೀತರಾಗಬೇಕು ನೋಡಿರಿ" ಯೆಂದು ಜಬರ್ದಸ್ತೀಲೆ ಹೇಳಿದ್ದಕ...

ಅಯ್ಯಾಳಿಯು "ನಾವು ಅಕ್ಕಸರದ ಸಾಯದಿಂದ ಅರಮನೇನ ನೋಡುವವರೇ ಹೊರತು ಮುದ್ದಾಂ ಬಂದು ನೋಡುವವರಲ್ಲ.. ನಾವಿದ್ದಲ್ಲಿಗೆ ಅರಮನೆ ನಡಕೋತ ಬರುತಯ್ತೆ.. ಯಿದೆಲ್ಲ ನಿಮ್ಮಂಥ ಮಾಮೂಲು ಗೂಢಾಚಾರರಿಗೆ ಅರ್ಧವಾಗುವಂಥದ್ದಲ್ಲ.. ದಾರಿ ಬಿಡು" ಯಂದನು.

ಅದಕ್ಕೆ ನಿಗೂಢಯ್ಯನು "ಅರಮನೆ ತಾನಿದ್ದಲ್ಲೇ ಯಿರಬೇಕು ಯಂಬ ಕಾರಣಕ್ಕೆ ನೀವು ಬರೋ ಜರೂರತ್ತಯ್ತೆ ನೋಡ್ರಿ.. ವಳ್ಳೇ ಮಾತಲಿ ನೀವು ಬರಲಿಲ್ಲಾಂದರ ನಾವಾss.." ಯಂದು ಹೇಳುತ್ತಲೇ ನಾಲಕಾರು ಮಂದಿ ಭಟರನ್ನು ತೋರಿಸಿದನು. ವುದಯೋನ್ಮುಖ ಅವಧೂತರಂತಿದ್ದ ಅವರ್‍ಯಾರ ಕಯ್ಲೂ ವಂದೇ ವಂದು ಆಯುಧ ಯಿರಲಿಲ್ಲ.. ಆದರೆ ಅವರು ಯಾದೇ ಆಯುಧಕ್ಕಿಂತ ಕಡಿಮೆ ಯಿರಲಿಲ್ಲ..

ಅಯ್ಯಾಳಿಯು ಅರಮನೆ ಕಡೇಕ ಮುಖ ಮಾಡಿದನೆಂಬಲ್ಲಿಗೆ ಸಿವಸಂಕರ ಮಾದೇವಾss..

* * * *

ಅತ್ತ ಕೂಡ್ಲಿಗಿ ಪಟ್ಟಣದೊಳಗ ಯಾರ ಬಾಯಿ ತೆಗೆದು ನೋಡಿದರೂ ಕುದುರೆಡವಿನ ಅಲವುಕಿಕ ಯಿದ್ಯಾಮಾನಂಗಳು.. ಅವುಗಳಲ್ಲಿ ಭೋ ಪಾಲು

ಕಪೋಲ ಕಲ್ಪಿತಂಗಗಳು.. ತಾಮೂಕುದುರೆಡವಿಗೆ ಹೋಗಬೇಕು.. ಹೋಗಿ ಮಾಯಾವೀ ಸಿಸುವಿನ ಸೇವಾ ಮಾಡಿ ಪುನೀತರಾಗಬೇಕು.. ತಮ್ಮ ಜೆನ್ನಿಫರಮ್ಮ ತಾನು ಕಂಡ ಕಣಸೊಳಗ ಕುದುರೆಡವಿಗೆ ಹೋಗಿದ್ದಳಂತಲ್ಲಾ.. ಸಿಸು ಸಾಂಬಯ್ಯನ ಆಡಿಸಿ ಪಾಡಿಸಿ ಬಂದಿರುವಳಂತಲ್ಲಾ.. ಸಾಂಬಯ್ಯನೆಂಬ ಸಿಸುವಿಗೆ ಯದೆ ವುಣ್ಣಿಸಿ ಬಂದಿರುವಳಂತಲ್ಲಾ.. ಯಿಂಥ ಕಣಸನು ಹೆಂಗ ಕಂಡೀ ಯಂದು ಗಂಡ ಯಡ್ಡವರ್ಡನು ಪ್ರಸ್ನೆ ಹಾಕಿದನಂತಲ್ಲಾ.. "ನಾನೆಂಥೆಂಥಾರ ಕಣಸು ಕಾಣುತೇನು? ಅದು ನನ್ನ ಹಕ್ಕದೆ.. ಗಂಡನಾದ ನಿಮಗ ನನ್ನ ಸರೀರದ ಮ್ಯಾಲ ಹಕ್ಕಯ್ತೇ ಹೊರತು ನನ್ನ ಮನಸ್ಸಿನ ಮ್ಯಾಲಿಲ್ಲ.. ಕಣಸುಗಳು ನನ್ನ ಸ್ವಯಾರ್ಜಿತ ಅದಾವ.. ಕಷ್ಟಾರ್ಜಿತ ಅದಾವ.. ಯಿನ್ನೊಮ್ಮೆ ನನ್ನ ಕಣಸುಗಳ ತಂಟೆಗೆ ಬರಬ್ಯಾಡಿರಿ" ಯಂದು ಮುಖ ಮುಲಾಜು ನೋಡದೆ ಹೇಳಿದಳಂತಲ್ಲಾ....

ಹೆಂಡತಿಯಾದಾಕಿ ತನ ಗಂಡಗ ಹೇಳೋ ಮಾತೇನಿದು. ಗಂಡನಾದವಗ ಹೆಂಡತಿಯ ಸರೀರದ ಮ್ಯಾಲ್ಯಾಕ ಆಕೆಯ ಕಣಸುಗಳ ಮೇಲೂ ಅಧಿಕಾರ ಯಿದ್ದೇ ಯಿರತದ.. ನಮ್ಮೆಂಡ್ರುಹಿಂಗೇನಾರ ಅಂದಿದ್ದರ ಅವರ ಸೊಂಟಿನ ಮುರುದು ಮೂಲ್ಯಾಗ ಕುಂಡುರಸ್ತಿದ್ವಿ.. ಅವರು ಕಿರಸ್ತಾನ ಮಂದಿ.. ಮ್ಯಾಲಾಗಿ ಯಿಲಾಯಿತಿ ಮಂದಿ ಅಯ್ತೆ.. ಅವರ ಧರ್ಮದಾಗ ಹೆಂಡತಿಗೆ ಗಂಡ ಹೆದರsಕ ಬೇಕುಯಂದು ಕೆಲವರೂss..

ಯಿಂಥಿಂಥ ಕಣಸು ಕಾಣಬೇಕೆಂದರೆ ಹೆಂಗಾತದ? ಅದು ಅವರವರ ಯಿಚ್ಛಾ ಯಿರುತದ.. ಕಣಸು ಕಾಣೋ ಯಿಷಯದೊಳಗ ಯಾದೇ ಗಂಡ ತನ್ನ ಹೆಂಡತಿಗೆ ಜುಲುಮಿ ಮಾಡಬಾರದು.. ಯಿ ಯಡ್ಡವರ್ಡು ಸಾಹೇಬ ನಾಳೀಕೆ ಪ್ರಜೆಗಳಾದ ನಮ್ಮ ಕಣಸುಗಳ ಮ್ಯಾಲ ಹತೋಟಿ ಸಾಧಿಸಿದರೆ ಯೇನು ಮಾಡೋದು? ಕಂ□ಡ ಕಣಸುಗಳಿಗೆ ತೆರಿಗೆ ದಂಡ ಯಿಧಿಸಿದರೇನು ಗತಿ? ಅಂತೂ ಗಟ್ಟಿಗಿತ್ತಿ ಜೆನ್ನಿಫರಮ್ಮ ಗಂಡ ಯಡ್ಡವರ್ಡನ ಮೂಗಿಗೆ ಮುಗುದಾಣ ಪೋಣಿಸವಳಲ್ಲ.. ಅಷ್ಟೇ ಸಾಕು. ಯಿಲ್ಲಾಂದರ ಯಿ ಸಾಹೇಬನ ಹಿಡಿವವರ್‍ಯಾರಿರುತ್ತಿದ್ದರು ಯಂದು ಕೆಲವರೂss..

ಪರಂಗಿ ಹೆಣುಮಗಳಿದ್ದರೂ ಯಿ ಜೆನ್ನಿಫರಮ್ಮ ನಮ್ಮ ಹಿಂದೂ ರೀತಿ ರಿವಾಜುಗಳಲ್ಲದಾಳಲ್ಲ.. ಅಷ್ಟೇ ಸಾಕು.. ಯಿಲ್ಲದಿದ್ದರೆ ನಮ್ಮ ಸಾಂಪ್ರದಾಯಿಕ ನಂಬಿಕೆಗಳಿಗೆ ನಾವ್ಯಾವತ್ತೋ ಯಳ್ಳು ನೀರು ಬಿಟ್ಟಿರಬೇಕಿತ್ತು.. ನಾವು ಯಿನ್ನು ಮುಂದೆ ಆಕೆಯು ಅನುಯಾಯಿಗಳಾಗಿರಬೇಕು.. ಆಕೆಗೆ ಬೆಂಬಲ

ಕೊಡುತಿರಬೇಕು ಯಂದು ಕೆಲವರೂss....

ವಾದಿಸುತ್ತಿರುವಾಗ್ಗೆ ಅತ್ತ ಬಂಗಲೆಯೊಳಗ ಹೆಂಡತಿಯ ಹಿಂದೂ ಪರ ನಿಲುವಿನಿಂದ ರೋಸಿ ಹೋಗಿದ್ದ ಯಡ್ಡವರ್ಡನು ಕಪ್ಪೇನ ನುಂಗಿ ಹಾವಿನಂಗಾಗಿದ್ದ.. ತನ್ನನ್ನೂ, ತನ್ನ ಹೆಂಡತಿಯನ್ನೂ ಸಾಂಬವಿಯ ಗುಂಗಿನಿಂದ ಪಾರು ಮಾಡುವ ಬಗೆ ಹೇಗೆಂದು ಚಿಂತಿಸುತಲಿದ್ದ.. ಸಮಾಲೋಚಿಸುತಲಿದ್ದ.. ಮಾಯ ಮಂತ್ರಕ್ಕೆ ಬೆಲೆ ಕೊಟ್ಟು ಅದನ್ನೂ ಮಾಡಿಸಿ ನೋಡಿದ.. ವಂಚೂರಾದರು ನಯವಾಗಲಿಲ್ಲ.. ಆಗಿದ್ದು ಯಡ್ಡವರ್ಡು ಸಾಹೇಬ ದಸ್ತಾಯೇಜು ನಿರುಮಾಣ ನಿಪುಣಾಗ್ರೇಸರನೆಂದೇ ಹೆಸರು ಸಂಪಾದಿಸಿದ್ದ ರೆವರೆಂಡ್ ಗೋಯಿಂದರಾವ್ (ಯೀತನ ತಂದೆ ಮುಕುಂದರಾವನು ಸೊಜಾತಿ ವುಪಟಳಕ್ಕೆ ರೋಸಿ ಕಿರಸ್ತಾನ ಮತಕ್ಕೆ ಕುಲಾಂತರಗೊಂಡಿದ್ದನು. ಕುಂಪಣಿ ಸರಕಾರವು ಆತನಿಗೆ ಸುಬೆದಾರ್, ರೆವರೆಂಡ್ ಬಿರುದು ಬಾವಲಿಗಳನ್ನು ನೀಡಿ ಸತ್ಕಾರ ವಾಡಿತ್ತು) ಕರೆಯಿಸಿಕೊಂಡು ಪರಿಸ್ಥಿತೀನಿ ಯಿವರಿಸಿ ಆತನ ಕಯ್ಯಿಂದ ದತ್ತಮಂಡಲ ಪ್ರಾಂತವನ್ನಾಳುವಂಥಾ ಥಾಮಸು ಮನ್ರೋ ಸಾಹೇಬನಿಗೆ ತನ್ನನ್ನು ಯಿಂಡಿಯಾದಿಂದ ಹೊರಗೆಲ್ಲಾದರೂ ಕೂಡಲೆ ವರ್ಗ ಮಾಡಬೇಕೆಂಬ ವಕ್ಕಣಿಕೆವುಳ್ಳ ಮನವಿಪೂರುವಕ ದರಖಾಸ್ತನ್ನು ಬರೆಯಿಸತೊಡಗಿರುವಾಗ....

ಅತ್ತ ಸೊಕ್ಕೆ ರಾಜ್ಯದೊಳಗ ರಾಜ ಮಾರನಾಯಕನು ಮಲಕ್ಕಂಡಿದ್ದಾಗ ಯಾರೋ ದುರುಳರು ಆತನ ಕುತ್ತಿಗೆಯೊಳಗೆ ಜೋತಾಡುತಲಿದ್ದ ಚಂಡನ ತರಡುಬೀಜಗಳನ್ನು ಕಳುವು ಮಾಡಿಕೊಂಡು ಹೋಗಿ ಬಿಟ್ಟಿದ್ದರು. ಯುದ್ದು ಮುಟ್ಟಿ ನೋಡಿಕೊಳ್ಳುತಾನೆ.. ಯಿರಬೇಕಿದ್ದ ಜಾಗದಲ್ಲಿ ಅವು ಯಿರಲಿಲ್ಲ. ಗಾಬರಿ ಬಿದ್ದು ತನ್ನ ಸಾಮಾನಿನ ಮ್ಯಾಲ ಕಯ್ಯಾಡಿಸುತಾನೆ.. ಮಲಿಕ್ಕಂಬೋ ಹೊತ್ತಿನಾಗ ಆರಂಗುಲಯಿದ್ದದ್ದು ಯದ್ದಾಗ ವಂದಂಗುಲ ಆಗಿಬಿಟ್ಟಿತ್ತು.. ಆಗಿದ್ದು ಆತನು ಯಾರು ತಗಂಡೀರಿ? ಮರುವಾದಿಯಿಂದ ಕೊಡುವಿರೋ ಯಿಲ್ಲಾ.. ಚಬಕದೀಲೆ ಹೊಡ್ದು ಚರುಮ ಸುಲಿಸಲೋ ಯಂದು ತನ್ನ ಅರಮನೇಲಿದ್ದ ಆಳುಕಾಳುಗಳನ್ನು ಸಾಲಾಗಿ ನಿಲ್ಲಿಸಿ ಗದ್ದರಿಕೆ ಹಾಕುತಿದ್ದಾನೆ. ನಾನ್ತಗಂಡಿಲ್ಲ ಪ್ರಭೋ ನಾನ್ತಗಂಡಿಲ್ಲಾ. ನಮ್ಮದೇ ನಮಗೆ ಮಸ್ತು ಅಯ್ತೆ, ಅದನ ತಗಂಡೇನು ಮಾಡೇವು ಯಂದು ತಲಾಕೊಬ್ಬೊಬ್ಬರು ಹೇಳುತಿದ್ದಾರೆ.. "ಯಿದ್ದೋರು ಮುವ್ವರೋಳಗ ಕದ್ದೋರು ಯಾರು? ಮರುವಾದಿಯಿಂದ ವಪ್ಗಂಡು ತಂದು ವಾಪಾಸು ಮಾಡ್ರಿ.. ಯಿಲ್ಲಾಂದ್ರನಿಮ್ಮನ್ನು ವಂದು ಗತಿ ಕಾಣುಸ್ತೀನಿ ಯಂದು ಆತನು ಕೇಳುತಿದ್ದಾನೆ..

"ಯಿವರ್ನೆಲ್ಲ ಕಟ್ರಲೇ ವದ್ದು ಬಾಯಿ ಬುಡುಸ್ರಲೇ" ಯಂದು ತನ್ನ ಸಯ್ನಿಕರಿಗೆ ಆಗ್ನೆ ಮಾಡುತ್ತಿರುವಾಗ....

ಯಿತ್ತ ಕುದುರೆಡವು ಪಟ್ಟಣದ ರಣ ಬಯಲೊಳಗಿದ್ದ ಹವಾಮಹಲಿನಲ್ಲಿ ತನ್ನ ರಾಜಪರಿವಾರದ ಸಮಸ್ತ ಮಂದಿಯನ್ನು ಯದುರಿಗೆ ಕುಂಡ್ರಿಸಿಕೊಂಡು ರಾಜಮಾತೆಯು "ಯೇನರಪ್ಪಾ.. ಯೇನರವ್ವಾ.. ಅಲಬರ್ರೂನ ಕಯ್ಲೂ ಕಿಸಿಯಲಕಾಗಲಿಲ್ಲ.. ಯಡ್ಡವರ್ಡನ ಕಯ್ಲೂ ಕಿಸಿಯಲಕಾಗಲಿಲ್ಲ. ನಮ್ಮ ಕುದುರೆಡವು ಆ ಥಾಮಸು ಮನ್ರೋನ ಲೆಕ್ಕದಾಗಿದ್ದಂಗಿಲ್ಲ.. ಬುಕ್ಕುದಾಗಿದ್ದಂಗಿಲ್ಲ.. ಆತ ಬಂದು ಕಿಸಿಯೋದು ಆಟರಾಗಯ್ತೆ.. ನಿಮ್ಮನ್ನ ಸಲಮೋ ಸಕ್ತಿ ನನ್ನಲ್ಲಿಲ್ಲ.. ಯಲ್ಲಾರು ನಿಮಗೆಂಗ ತೋಚುತಯ್ತೆ ಹಂಗ ಬದುಕ್ರೀ.. ಆದರೆ ಯೀ ಮೂರೊಳಿಗಿದ್ದು ಮಾತ್ರನಿಮ್ಮ ಹಿರೇರು ಸಂಪಾಸಿರೋ ಗವುರವಾನ ಮಣ್ಣುಗೂಡಿಸಬ್ಯಾಡ್ರಿ.. ದಿಕ್ಕು ದಿಕ್ಕಿಗೊಬ್ಬೊಬ್ಬರಂತೆ ಹೊಂಟೋಗಿಬಿಡ್ರಿ.. ಆದ್ರಆ ಪಿಕದಾನಿ ಮೋಬಯ್ಯನೆದುರು ಮಾತ್ರಕಯ್ನ ಚಾಚಬ್ಯಾಡ್ರಿ. ಯೀಟೇ ನಾನ್ನಿಮ್ಮನ್ನ ಕೇಳಿಕೊಳ್ಳೋದು.. ನಂಗೆ ಬದುಕೀ ಬದುಕೀ ಸಾಕಾಗಂಯ್ತೆ.. ಕುಂತ್ರೆಯದ್ದೇಳೋಕಾಗ್ತಾಯಿಲ್ಲ.. ಯದ್ರೆಕುಂದುರೋಕಾಗ್ತಾಯಿಲ್ಲ.. ಕೆಮ್ಮು ದಮ್ಮು ಬಾದಿಸಲಿಕ್ಕತ್ತಯ್ತೆ.. ನಾನು ವಂದು ಚಲೋ ದಿನ ನೋಡ್ಕೊಂಡು ಕಣ್ಣುಮುಚ್ಚಲಾಕಂತ ಮಾಡೀನಿ" ಯಂದು ಹೇಳುತ ಕೊಕ್ ಕೊಕ್ ಅಂತ ಕೆಮ್ಮುತ್ತಿರುವಾಗ್ಗೆ..

ತನ್ನೆದೆಯೊಳಗ ಖ್ಯಾತ ಕರ್ನಾಟಂಗಳಿದ್ದರೂ ಕವಿ ಅಯ್ಯಾಳಿಯು ಅಂಜಿಕೆಯಿಂದಲೇ ನಡೆದನು. "ಯಿದೇ ಅರಮನೆ ಸ್ವಾಮಿೊ.. ಯಿಲ್ಲಿಂದ ಅಲ್ಲಿವರೆಗೆ ಅಯ್ತೆ" ಯಂದು ನಿಗೂಢಯ್ಯ ಅಂದಾಗ ಕಕ್ಕಾವಿಕ್ಕಿಯಾದನು. ಅರಮನೆ ಜಾಗದಲ್ಲಿ ಅರಮನೆಯಿರಲಿಲ್ಲ.. ಕಾವಲು ಭಟರ ಅಟಾಟೋಪ ಯಿರಲಿಲ್ಲ. ಅಲ್ಲಿದ್ದದ್ದು ಕೇವಲ ನೂರಾರು ದನಕರುಗಳ ಅಂಬಾss ಅಂಬಾss ಯಂಬ ನಿನಾದ.. ಅಲ್ಲಲ್ಲಿ ಸಾಧು ಸಂತ ಮಂದಿ ತಂಬಾಕು ಸೇದುತ್ತ, ತಂಬೂರಿಗಳ ಸ್ರುತಿ ಸರಿಪಡಿಸಿಕೊಳ್ಳುತ್ತ ಕೂತಿದ್ದರು.. ಅಲ್ಲಲ್ಲಿ ಕೆಲವರು ಹರಕೆ ತೀರಿಸುವ ಸಲುವಾಗಿ ತಮ ತಮ್ಮ ಸರೀರಗಳನ ದಂಡಿಸಿಕೊಳ್ಳ ತೊಡಗಿದ್ದರು. ಮೂಕ ಯಿಸುಮಿತಗೊಂಡಿದ್ದ ಅವಯ್ಯನನ್ನು ನಿಗೂಢಯ್ಯ ಪಟ್ಟಣ ಸೋಮಿಗಳ ಸಮಕ್ಷಮ ಸಾದರಪಡಿಸಿದನೆಂಬಲ್ಲಿಗೆ ಸಿವಸಂಕರ ಮಾದೇವಾss..

ವಳತನ, ಹೊರಗುತನಗಳೆರಡನ್ನೂ ಕಳಕೊಂಡಿದ್ದ ಅರಮನೆಯೊಳಗೆ ತನ್ನ ವಾರ್ಧಕಯಿರುವುದಾ? ಪರಿವಾರ್ಧಕ ಯಿರುವಾದಾ? ಬರೀ ಬಯಲ

ಸಾಂಗತ್ಯ, ಬರೀ ಬಯಲ ರೂಪಕ. ಯಿಂಥ ಅರಮನೆಯನ್ನು ವಸ್ತುವಾಗಿಟ್ಟು ತಾನು ರಚನೆ ಮಾಡುವ ಕಾವ್ಯ ಕಾಲಾನಂತರ ವುಳಿದೀತಾ? ಯಂಬ ಯಕ್ಷ ಪ್ರಸ್ನೆ ಕಾಡ ತೊಡಗಿತು ಕವಿಯನ್ನು..... ಹಂಗs ಮುಂದಕ ಹೊತಾ ಹೋಗುತಾ ಪಲ್ಲಂಗದ ಸನೀಕ ಬಂದನು. ಬಲಗಾಲ ಹೆಬ್ಬೊಟ್ಟನ್ನು ಲೀಲಾ ಜಾಲವಾಗಿ ಬಾಯೊಳಗಿಟ್ಟುಕೊಂಡು ಅದನ್ನೇ ಚಾಚಿ ಯಂದು ಪರಿಭಾವಿಸಿ ವುಮ್ಮ.. ವುಮ್ಮಯಂದು ಜಮಡುತಲಿದ್ದ ಮೋಬಯ್ಯಯಂಬುವ ದಯ್ವಿಕ ಸಿಸುವು ಕವಿಯನ್ನು ನೋಡುತ್ತಲೇ ಕಿಟಾರನೆ ಕಿರುಚಿಕೊಂಡು, ಅದರ ಯೇಕರಿಕೆ ನೋಡಿಕೋತಿದ್ದ ಯಲ್ಲಮ್ಮಜ್ಜಿ ಮುಗಿಯಲಕಾವಯ್ಯಗ ಕಾಲುಚಾಚಿ ಪಾದ ಕೊಡು ಅಂದಳು. ಅದರ ದೇಕರಿಕೆ ನೋಡಿಕೋತಿದ್ದ ದ್ಯಾಮವ್ವ ಅವಯ್ಯಗ ಆಸೀರುವಾದ ಮಾಡಲಕ ಕಯ್ಯ ಚಾಚು ಅಂದಳು. ಆದರದು ಕಾಲನss ಚಾಚಲಿಲ್ಲ.. ಕಯ್ಯನ ಚಾಚಿ ಆಸೀರುವಾದ ಮಾಡಲಿಲ್ಲ. ಯಿದು ಹಿಂಗ ಯಾರಿಗೂ ಮಾಡಿದುದಿಲ್ಲ. ಆದರೆ ಯೀಗ ಹಿಂಗ ಮಾಡುತ್ತಿರುವುದೆಂದರ ಆಗಂತುಕನ ಗ್ರಾಚಾರ ನೆಟ್ಟಗೆ ಯಿರುವಂಗಿಲ್ಲ.. ಯಂದುಕೊಂಡು ಆ ಮುದೇರೀರ್ವರೂ "ಯಲಾಯ್.. ನಿನ ಕಂಡೊಡನೆ ನಮ್ಮ ಸಾಂಬಯ್ಯ ಸಿಸುವು ಯಾಕ ಹೆದರಿಕಂತು? ನೀನು ನಿನ್ನ ಮನಸ್ಸಿನೊಳಗ ಮಣಮಣ ನಾಸ್ತೀಕ ಭಾವನೆಗಳನ ಯಿಟುಕೊಂಡಂಗದೀ.. ಯೀಗಿಂದೀಗಲೆ ಅವನ್ನು ವುತಾರ ಮಾಡು.. ಮಾಡು" ಯಂದು ಜುಲುಮಿ ಮಾಡತೊಡಗಿದರು.. ತುಪ್ಪದೊಳಗ ವುತ್ತುತ್ತಿ ತೇಯುತಲಿದ್ದ ತಿಂದವ್ವ "ನೀನು ನಿನ್ನ ಸರೀರದ ವ್ಯಾಲ ಭಯ ಹುಟ್ಟಿಸುವಂತಿರೋ ಲಚಣಗಳನ ವುತಾರ ಮಾಡು" ಯಂದೂ, ಮಿಳ್ಳೆಯೊಳಗೆ ಹಾಲನ ತುಂಬುತಲಿದ್ದ ಅಂಬವ್ವ "ನೀನು ನೀರಿನ ಮುಖನ ನೋಡಿ ಯೇಸು ದಿನವಾಗಿರುವುದೋ" ಯಂದೂ ಕ್ಯಾತೆ ತೆಗೆದು ಕವಿಯನ್ನು ಕಕ್ಕಾವಿಕ್ಕಿಗೊಳಿಸಿದರು..

ತನ್ನಂಥ ಕವಿ ಜಳಕ ಮಾಡುವುದೆಂದರೇನು? ತನ್ನಂಥ ಕವಿ ನಾಸ್ತೀಕನಾಗಿರಬಾರದೆಂದರೇನು? ಅಯ್ಯಾಳಿ ಪರಿವ್ರಾಜಕನಂತೆ ಅವರನ್ನೆಲ್ಲ ತೀಕ್ಷ್ಣವಾಗಿ ನೋಡಿದ. ತದನಂತರ ತಾನು ಪಟ್ಟಣ ಸೋಮಿಗಳ ಸಮಕ್ಷಮ ಯಿರಬೇಕಾಯಿತು. ತಾನು ಕಾವ್ಯ ಬರೆಯುವ ಸಲುವಾಗಿ ಕ್ಷೇತ್ರಕಾರ್ಯದ ಸಲುವಾಗಿ ಬಂದವನೆಂದು ವಪ್ಪಿಕೊಳ್ಳಬೇಕಾಯಿತು. ಜಡೆ ತಾತ ಹೇಳಿದ್ದೇನೆಂದರೆ..

ನೋಡಯ್ಯಾ.. ಅಯ್ಯಾಳೇಸ್ಸೂರನೇ.. ನೀನು ಬರೆಯಬೇಕೆಂದಿರೋ ಕಾವ್ಯದೊಳಗೆ ವಾಸ್ತವಕ್ಕಿಂತ ಕಲ್ಪನಾನೇ ಮುಕ್ಕಾಲು ವೀಸೆಯಿರಲಕss ಬೇಕು.. ಯಾಕೆಂದರೆ ಕಲ್ಪನ ಗ್ನಾನಕ್ಕೆ ತಾಯಿ ಅಂಬುತಾರೆ.. ಕಲ್ಪನ ಆಸ್ತೀಕಕ್ಕೆ ಸಂಬಂಧಿಸಿದ್ದಂಬುತಾರ.. ವರ್ತಮಾನ ಕಾವ್ಯನ ಕಟುಕೊಂಡು ಮಾಡುವುದೇನುಂಟು?.. ಮುಂದು ಮುಂದಲ ತಲೆಮಾರುಗಳಿಗದು ಬೇಕಾಗ್ತದೆ. ಅದಕೆ ನೀನು ಕಾವ್ಯದೊಳಗ ಕಲ್ಪನಕ್ಕ, ಅವಾಸ್ತವಕ್ಕ ಪ್ರಾಧಾನ್ಯತೆ ಕೊಡಬೇಕಯ್ಯಾ.. ಯಿಲಾತಿ ಹೆಣುಮಗಳಾದ ಜೆನ್ನಿಫರಮ್ಮ ಯಂಬಾಕೆ ಬಂದು ಸಾಂಬಯ್ಯಗ ಮೊಲೆ ವುಣ್ಣಿಸಿದಳೆಂದು ಚಿತ್ರಿಸಯ್ಯಾ.. ಯಡ್ಡವರ್ಡು ಮಹಿಷಾಸೂರನ ವಮುಸಸ್ಥನೆಂದು ಚಿತ್ರಿಸಯ್ಯಾ.. ಹಿಂಗs ನೀನು ಕಲ್ಪನಾ ಮಾಡೂತ ಹೋಗೀ ಹೋಗೀ ಕಾವ್ಯನ ರಚನೆ ಮಾಡಯ್ಯಾ.. ನಮ್ಮಯ್ವರನು ನೀನು ಅಯ್ದು ಯುಗಗಳ ಸಂಕೇತಗಳೆಂದು ತಿಳೀಬೇಕು ನೋಡಯ್ಯಾ.. ಹಂಗ ಮಾಡುತೀನೆಂದರ ನಿನಗೆ ರಾಜಾಸ್ರಯ ನೀಡತೇವು.. ಕವಿ ಕುಲ ತಿಲಕ ಯಂಬ ಬಿರುದನ ಕೂಡತೇವು...

ಕೇಳುತಾ ಕೇಳುತಾ ಮಂಪರು ಕವಿಧಾಂಗಾತು ಕವಿಗೆ.. ಯಾವುದಕ್ಕೂ ಹ್ಞೂ ಅನಲಿಲ್ಲ, ವುಸುರು ಬಿಡಲಿಲ್ಲ.. ನಾಲಗೆ ಹೊಳ್ಳಲಿಲ್ಲ. ಕಾರಣ ಪ್ರಾಣ ಭಯ.. ಕಾರಣ ತನ್ನ ಮ್ಯಾಲೂ ಯೀ ಪಟ್ಟಣ ಸೋಮಿಗಳು ಮಂತರ ಮಾಟ ಮಾಡಿಯಾರು ಯಂಬ ಭಯ... ಕಾರಣ ತಾನು ದಯಿಹಿಕವಾಗಿ ದುರ್ಬಲನೆಂಬ ಭಯ. ಯದುರಾಡುವುದ್ಯಾಕ? ನಿಷು«ರ ಕಟ್ಟಿಕೊಳ್ಳುವುದು ಯಾಕ? ವುಗುರಿನಿಂದ ಹೋಗುದುಕ ಕೊಡಲಿಯನ್ಯಾಕ ತೆಗೆದುಕೊಳ್ಳಬೇಕೆಂಬ ಅಪಾರ ಲೋಕಗ್ನಾನ.. ಕೇಳೋದನ ಕೇಳಿ, ಹೇಳೋದನ ಹೇಳಿ ಅಯ್ಯಾಳಿಯು ಅಲ್ಲಿಂದ....

ಪಿರಂಗಿಯವರೋಣಿಯ ಆಚ್ಚೇ ಕಡೇಕಿದ್ದ ಯೀರಾಂಜನೇಯ ಸೋಮಿಯ ಗುಡಿಯೊಳಗೆ ಠಿಕಾಣಿ ಹೂಡಿದನೆಂಬಲ್ಲಿಗೆ, ಪಟ್ಟಣ ಸೋಮಿಗಳು ಕವಿಯ ಚಲನವಲನ ಮ್ಯಾಲ ವಂದು ಕಣ್ಣನ ಯಿಡುವಂತೆ ಗೂಢಾಚಾರ ನಿಗೂಢಯ್ಯಗೆ ಸೂಚಿಸಿದರೆಂಬಲ್ಲಿಗೆ ಸಿವಸಂಕರ ಮಾದೇವಾss....

ಯಿತ್ತ ಕವಿಯ ನಿರ್ಗಮನದಿಂದ ಪುಳಕಿತನಾದವನೆಂದರೆ ಅರಮನೆಯ ನಾದಿರನಾದ ಗೋಯಿಂದನು. ಕಾಡುಗೊಲ್ಲರೀರಯ್ಯ ಬ್ಯಾರೆ ನಿನ್ನೆ ದಿವಸ ದಾರೀಲಿ ಸಿಕ್ಕು ಅಮಾಸೆ ಯಡಬಲಕ ಸಾಂಬಯ್ಯನ ಕಿವಿ ಚುಚ್ಚಿಸೋದಯ್ತೆ,

ಅದಕೆ ನೀನು ಮಿಂಜಾನೇಟೊತ್ತಿದ್ದರೂ ಅರಮನೆಗೆ ಬಂದು ಆತಗ ಕಷ್ಟವ ಮಾಡಿ ಹೋಗಲಕ ಬೇಕು ಯಂದು ದಟ್ಟಿಸಿ ಹೇಳಿದ್ದನು. ಮೂಲಿಂಟಿ ಮೂಡ್ಲಪ್ಪ ಬ್ಯಾರೆ ಮನೆ ತಂಕ ಬಂದು.. ಪಿಳ್ಳೆ ನೋಡಲಕ ಸೀಪುರಕ ಹೋಗುವದಯ್ತೆ.. ಲಗೂನ ಬಂದು ನಡುಲ ಮಗ ಸುಗ್ಗಲಪ್ಪನ ಥೆಲಿ ಚವುರ ಮಾಡಬೇಕು ನೋಡು ಯಂದು ಹೇಳಿದ್ದನು. ತನ್ನ ಮೊಮ್ಮಗನ ಜವುಳ ಕಾರ್ಯೇವು ಅಯ್ತೆಂದು ಚಾಕಲಿ ಟಾಕಯ್ಯನೂ, ಥೆಲಿ ಯಂಬುದು ಕಾಡಡವಿ ಆಗಯ್ತೆಂದು ಹುಲುಕುಂಟಿಯೂ,... ಹಿಂಗ ವಬ್ಬರಾ... ಯಿಬ್ಬರಾ... ತನಗಿರೋವು ಯಲ್ಡೇ ಯಲ್ಡು ಕಯ್ಯಿ.. ಯ್ಯೇಸು ಮುಂದೀದಂತ ಮಾಡುವುದು? ಸಾಂಬವಿ ಮೋಬಯ್ಯನ ಸಿಸುವನ ಮಾಡಿದ ಲಾಗಾಯ್ತು ಚವುರ ಮಾಡಿಸಿಕೊಂಬೋರು ಹೆಚ್ಚಾಗ್ಯಾರ... ಮಂದಿ ನಯ ನಾಜೂಕ ಕಲತಯ್ತೆ.. ಯಿದು ನಿನ್ನೊಬ್ಬನ ಕಯ್ಲಾಗಂಗಿಲ್ಲ.. ನನ ತಮ್ಮನ್ನೂ: ಅಣ್ಣನ್ನೂ ಕರೆಯಿಸಿಗಾ.. ಯಂದು ದಿನ ಮೂರು ಯ್ಯಾಳ್ಯೆ ನಾಲಗೆ ಯಂಬ ಕತ್ತಿಯಿಂದ ಚವುರ ಮಾಡುತ್ತಿರುವ ಹೆಂಡತಿ ಯಂಟಲಚುಮಿ, ಆಕೆಯ ಮಾತಿಗೆ ಬೆಲೆ ಕೊಡಲಕಂದರ ಮನೇಲಿ ಕುಂತು ತಿಂಬುವ ಹತ್ತಾರು ಮಂದಿ ಮಕ್ಕಳು. ಬಾಮಯ್ದುರೇನು ಸುಮಕ ಬಂದು ಕೂದಲು ತೆಗೆದಾರಾs. ಬರೋ ಬಾಬತ್ತಿನೊಳಗ ಮುಕ್ಕಾಲುವೀಸೇನ ಅವರಿಗೇ ಕೊಟ್ಟರ ತನಗುಳಿವುದಾದರೂ ಯ್ಯೋಟು?.. ಹೀಂಗ ಗುಣಾಕಾರ, ಭಾಗಾಕಾರ ಮಾಡಿ ತನ್ನ ಬಾಮಯ್ದುರನು ತಾನು ದೂರವಿಟ್ಟಿದ್ದನು.

ಹತ್ತಾರು ಮಂದಿಯ ಚವುರ ಮಾಡುವುದು ವಂದು ತೂಕವಾದರೆ ಸಾಂಬಯ್ಯನ ಚವುರ ಮಾಡುವುದು ಯಿನ್ನೊಂದು ತೂಕ ಯಿರುವದು. ವಂದು ಕಾಲದಲ್ಲಿ ಪೂರುವಾಸ್ರಮದ ಮೋಬಯ್ಯನ ಚವುರ ಮಾಡುತ್ತಿದ್ದವನೂ ತಾನೇಯಾ, ಮೋಬಯ್ಯ ಬಂಗಾರದಂಥವನು. ಯಾವತ್ತೂ ತನ್ನ ಮುಖಮಾರಿ ಕುರುತು ಚಿಂತನೆ ಮಾಡಿದವನಲ್ಲ.. ಆತನ ಹೆಂಡತಿ ಜಗಲೂರೆವ್ವ ರೋಸಿ ಬಂದು “ಗೋಯಿಂದss ನಮ್ಮುದೇದು ಮೊಳವರೆ ಗಡ್ಡನ ಬಿಟುಕೊಂಡಯ್ತೆ, ಬಂದು ಚವುರ ಮಾಡಪ್ಪಾ” ಯಂದು ತನ್ನನ್ನು ಕರೆದುಕೊಂಡು ಹೋಗುತ್ತಿದ್ದುದುಂಟು. ಕತ್ತಿ ಗಾಯ ಮಾಡಿದಾಗಲೂ ಹ್ಹಾ ಅಂದವನಲ್ಲ.. ಮಿಸೇನ ಹಿಂಗೇ ಬುಡೂಂತ ಕೇಳಿದವನಲ್ಲ.. ಆಕಳದಂಥವನು... ಅಂಥವನೀಗ...

ಗೋಯಿಂದ ಸಾಂಬಯ್ಯನ ಚವುರ ಕಾರ್ಯವ ಸುರುವು ಮಾಡಿದ. ಸಿಸುವು ಅಲುಪ ಸೊಲುಪ ಜಗ್ಗಾಡುತ ಕೂಕಂಡು ಸಹಕರಿಸಿತು. ಆ ಅಪೂರ್ವ ದ್ರುಸ್ಸವ

ನೋಡುವ ಸವುಭಾಗ್ಯ ಯಾರಿಗುಂಟು ಯಾರಿಗಿಲ್ಲ? ಆ ಮೂರು ಯಿ ಮೂರುಗಳಿಂದ ಬಂದಿದ್ದಂಥ ಭಕುತಾದಿ ಮಂದಿ ಸುತಮುತ್ತ ನಿಂತುಕೊಂಡು ಸಿವನ್ನಾಮ ಪಾರೊತೀ ಪತಿ ಹರ ಹರ ಮಾದೇವಾssಂತ ಘೋಷಣೆ ಹಾಕುತಲಿತ್ತು ಆಗ..

ಬರೋಬ್ಬರಿ ಮೂರುಗಳಿಗೆ ಕಳೆವಷ್ಟರೊಳಗ ಮಿಸಯೊಂದನ್ನು ಬಿಟ್ಟು, (ಹೆಣ್ಣು ದೇವತೆಯಾದ್ದರಿಂದ ಮಿಸೆ ಯಷ್ಟು ಗಡುತರ ಯಿರುತದೋ ಅಷ್ಟು ಚಂದ) ವುಳಿಕೇದನ್ನು ಚಕ ಚಕಾಂತ ಚವುರ ಮಾಡಿ ಮುಗಿಸಿ ಬಿಟ್ಟನು ನುರಿತ ಕ್ಷವುರಿಕನಾದ ಗೋಯಿಂದನು. ಆತನ ಕಯ್ಯಚಳಕವನ್ನು ಮನಸಾರೆ ಕೊಂಡಾಡಿದ ಮಂದಿ ತಾವು ಕ್ಷವುರ ಮಾಡಿಸಿಕೊಂಡರೆ ಆತನ ಕಯ್ಯಿಂದಲೇ ಮಾಡಿಸಿಕೊಳ್ಳಬೇಕೆಂದು ನಿರ್ಧರಿಸಿತು. ಆ ಮ್ಯಾಲ....

ಯಪ್ಪೋ ನಾದಿರಣ್ಣ ನಂಗೊಂದೆಲ್ಡು, ಯಣ್ಣೋ ನಾದಿರಣ್ಣ ನಂಗೊಂದೆಲ್ಡು...ಯಂದು ತನ್ನತ್ತ ಚಾಚಿದ ಕಯ್ಯಿಗಳಿಗೆ ರೋಮಗಳನ್ನು ಯಿತರಿಸಿದನು. ಲೇ ನಾದಿರss... ಲೇ ಹಜಾಮಯಂದು ಹೀನಾಯವಾಗಿ ಕರೆಯುತ್ತಿದ್ದ ಅದೇ ಮಂದಿ ತನಗೀಗ ಯಪ್ಪೋss ಯಣ್ಣೋ... ಯಂದು ಕರೆಯುತ್ತಿರುವರಲ್ಲಾ.. ಅದೇ ತನ್ನ ಪುಣ್ಯ ಯಂದುಕೊಂಡು ಅಲ್ಲಿಂದ..

* * * *

ಅತ್ತ ಕೂಡ್ಲಿಗಿ ಪ್ರಾಂತವನ್ನಾಳುತ್ತಿದ್ದ ಕುಂಪಣಿ ಅಧಿಕಾರಿ ಯಡ್ಡವರ್ಡನು ತನ್ನನ್ನು ಸಕುಟುಂಬ ಬೇರೆಲ್ಲಿಗಾದರೂ ವರ್ಗ ಮಾಡುವಂತೆ ಮಾಡಿಕೊಂಡಿದ್ದ ಮನವಿಯು ಪತ್ತಿಕೊಂಡ ಸಮೀಪ ತುಗ್ಗಲಿ ಗ್ರಾಮದ ಹೊರವಲಯದಲ್ಲಿ ಬಿಡಾರ ಹಾಕಿಕೊಂಡು ಜಮೀನ್ದಾರರುಪಟಳದ ನೀಲಿ ನಕ್ಷೆ ತಯಾರಿಸುವುದರಲ್ಲಿ ಮಗ್ನನಾಗಿದ್ದ ಕಲೆಟ್ರುಥಾಮಸು ಮನ್ರೋ ಸಾಹೇಬನಿಗೆ ತಲುಪಿತ್ತಷ್ಟೆ. ಆತ ಅದನ್ನು ಕೂಲಕಂಷ ಮೋದಿಕೊಂಡನಷ್ಟೆ. ಯಡ್ಡವರ್ಡನಂಥ ಸವುರ್ಯ ಪರಾಕ್ರಮಕ್ಕ ಹೆಸರಾಗಿರುವ ಅಧಿಕಾರಿಯು ಯದೆ ಗುಂದಲಕ ಕಾರಣವು ಯೇನಿರಬೌದು? ಅಂಥ ನಿಷಾ«ವಂತ ಅಧಿಕಾರಿಯ ಜೀವನದೊಳಗ ನಿಗೂಢವಾದದ್ದೇನೋ ಜರುಗಿದಂತಿರುವುದು. ಯಿದರ ಬಗ್ಗೆ ಖುದ್ದ ಕರೆಯಿಸಿಕೊಂಡು ಯಿಚಾರಿಸಬೇಕೆಂದು ನಿರ್ದರಿಸಿ ಕೂಡಲೆ ಬಂದು ಹಾಜರಾಗುವಂತೆ ಹಿಂದೆಲೇ ಬುಲಾವ್ ಕಳಿಸಿಕೊಟ್ಟನು. ಆ ಬುಲಾವು ಬಂದಂಥ ಸಮಯದಲ್ಲಿ ಯಡ್ಡವರ್ಡನೂ, ಆತನ ಹೆಂಡತಿ ಜೆನ್ನಿಫರೂ ಕುದುರೆಡವು ಬೆಲ್ತೆಮೋ, ಬೆಲ್ತೆಮ್ಮೋ

ಕುದುರೆಡಮೋ ಯಂಬ ಯಿಷಯದಲ್ಲಿ ವಾದಾಡುತಲಿದ್ದರು. ಅವರ ವಂದು ಪಕ್ಕದಲ್ಲಿ ದ್ರಾಕ್ಷಾರಸ ತುಂಬಿದ್ದ ಪಿಂಗಾಣಿ ಪಾತ್ರೆಯೂ, ಯಿನ್ನೊಂದು ಪಕ್ಕ ಅಪೂರ್ಣಗೊಂಡಿದ್ದ ತಂಬ್ಲವರ್ಣ ಚಿತ್ರವೂಯಿತ್ತು. ಕುದುರೆಡವೇ ಬೆತ್ಲೆಯೆಮ್ಮಂತೆಯೂ, ಸಾಂಬವಿಯೇ ಮೇರಿಯಮ್ಮನಂತೆಯೂ, ಆಕೆಯ ತೊಡೆಮ್ಯಾಲಿದ್ದ ಹಸುಗೂಸೇ ಬಾಲಯೇಸು ಯಂಬಂತೆಯೂ ಅದರೊಳಗೆ ಚಿತ್ರಸಲಾಗಿತ್ತು. ಚಿತ್ರಕಲಾ ಪ್ರದರ್ಸನದಲ್ಲಿ ಪ್ರದರ್ಸಿತಗೊಂಡಿದ್ದ ಜೆನ್ನಿಫರ ಯಿರಚಿತ ಕಲಾಕೃತಿಗೆ ಪ್ರಶಸ್ತಿ ಲಭಿಸಿರುವುದೆಂಬ ವರ್ತಮಾನವು ಲಂಡನ್ನಿನಿಂದ ಅದೇ ಸಮಯಕ್ಕೆ ಬಂದಿತ್ತು. ಕಲೆಯಿಂದಾಗಿಯೇ ತನ್ನ ಹೆಂಡತಿಯ ಮನಸ್ಸು ಯಿಕ್ರುತಿಗೆ ವಳಗಾಗಿರುವುದೆಂದು ಅನ್ಯಥಾ ಭಾವಿಸಿದ ಯಡ್ಡವರ್ಡನು ಯರಡು ಕುಂಚಗಳನ್ನು ತೆಗೆದುಕೊಂಡು ಯೀರಾಯೇಸದಿಂದ ಮುರಿದು ಲಟಕ್ಕೆಂಬುವ ಸದ್ದು ಮಾಡಿದ್ದು ಆವಾಗಲೇ, ತನ್ನ ಪಕ್ಕೆಲುವುಗಳೇ ಮುರಿದಂತೆ ಜೆನ್ನಿಫರು ಯಾತನೆಯನ್ನು ಅನುಭವಿಸ ತೊಡಗಿದ್ದು ಆವಾಗಲೇ, ನೀನು ನನ್ನನ್ನು ಲಂಡನ್ನಿಗೆ ಸಾಗ ಹಾಕಲೆಂದೇ ಪ್ರಶಸ್ತಿಯ ನಾಟಕವನ್ನು ಸ್ರುಸ್ಟಿಸಿರುವಿ, ಯಿದಕ ನಾನು ಬೆಲೆ ಕೊಡೋದಿಲ್ಲ ಯಂದು ಜೆನ್ನಿಫರ ಚೀರಿಕೊಳ್ಳುತ್ತಿರುವಾಗ್ಗೆ, ಯಡ್ಡವರ್ಡನು ತನ್ನ ತಲೆಯನ್ನು ಪರಪರನೆ ಕರೆದುಕೊಳ್ಳುತ್ತ ಸುಸಜ್ಜಿತಮೂ, ಸುಂದರಮೂಆಗಿದ್ದ ಆ ಕೋಣೆಯಿಂದ ಹೊರ ಹೋಗಿ ಕಲೆಟ್ರುಸಾಹೇಬನಿಂದ ಬಂದಿದ್ದಂಥ ಸನ್ನದನ್ನು ಕಯ್ಗೆ ತೆಗೆದುಕೊಂಡು ಮೋದಿಕೊಳ್ಳ ತೊಡಗಿದನು. ಯಿದಕ್ಕೆ ರೆವರೆಂಡ್ ಗೋಯಿಂದರಾವ್ ಸಹಾಯಕ ನಿಂತನು.

ಅದೇ ಪಟ್ಟಣದೊಳಗ ಪಾದ್ರಿಗಳು ಕುದುರೆಡವು ಖಂಡಿತ ಬೆತ್ಲೆಯಮ್ಮಲ್ಲವೆಂದೂ, ಮೇರಿಯಮ್ಮ ಆಗಲೀ, ಆಕೆಯ ಪಯಿತ್ರಕಂದಯ್ಯ ಬಾಲಯೇಸು ಪ್ರಭುವಾಗಲೀ ಯಿಂಡಿಯಾದೊಳಗೆ ಅವತಾರ ಯತ್ತಲಕ ಸಾಧ್ಯಯಿಲ್ಲ ಯಂದೂ ಸಾರುವ ನಿಮಿತ್ತ ಸಭೆ ಸವಾರಂಭಗಳನ್ನು ನಡೆಸುತಲಿದ್ದರು. ಅದಕ್ಕ ಪರ್ಯಾಯವಾಗಿ ನಗರದ ಗಣ್ಯ ಹಿಂದೂ ಮಂದಿ ಕಿರಸ್ತಾನರ ಯಿರುದ್ಧ ವುಯಿಲಿಡುತಲಿದ್ದರು. ಆ ಯರಡು ಕೋಮುಗಳ ನಡುವೆ ಯೀಗ ಹೊಡದಾಟ ಸುರುವಾಗಬೌದು.. ಆಗ ಹೊಡದಾಟ ಸುರುವಾಗಬೌದೆಂದು ಕುಂಪಣಿ ಸಯ್ನಿಕರು ಅಲ್ಲಲ್ಲಿ ನಿಂತು ಯದುರು ನೋಡುತಲಿದ್ದರು.

ಅತ್ತ ಸೊಕ್ಕೆ ಗ್ರಾಮಕ್ಕ ಬಂದಲ್ಲಿ ರಾಜ ಮಾರಾನಾಯಕನ ಕುತ್ತಿಗೇಲಿದ್ದ

ಚಂಡನ ತೊರಡು ಬೀಜಗಳು ಕಳುವಾಗಿದ್ದು ಸರುವ ಯಿದಿತ. ಕಂಡಕಂಡೋರನ್ನ ಹೊಡದು, ಕಯ್ಯಿಗೆ ಸಿಕ್ಕಿ ಸಿಕ್ಕಿದೋರನ್ನು ಬಡದು ನಾಯಕನು ತನ್ನ ಮಯ್ಗೆ ಹಳ್ಳೆಣ್ಣೆ ಕಾವು ಕೊಡಿಸಿಕೊಳ್ಳುತ ಹಂಗಿದ್ದದ್ದು ಹಿಂಗಾಗಯ್ತಲಾ ಯಂದು ಯಸನ ಮಾಡುತ ಯಿಳಿಯಲಕ ಹತ್ತಿದ್ದನು. ಸಾಕುನಾಯಿಯಾದ ಭೀಮನೇ ತಾನು ಮಲಗಿಕೊಂಡಿದ್ದ ಹೊತ್ತಿನಲ್ಲಿ ತನ್ನ ಕುತ್ತಿಗೇಲಿದ್ದ ಆ ಸಕ್ತಿಸಾಲಿ ಬೀಜಗಳಿಗೆ ಬಾಯಿ ಹಾಕಿ ನುಂಗಿತ್ತು. ಆದರಾತನಿಗೆ ಅದರ ಅರಿವಿರಲಿಲ್ಲ. ಹೆಚ್ಚಾದ ಕಾಮತ್ರುಷೆ ತೀರಿಸಿಕೊಳ್ಳಲೋಸುಗ ಭೀಮನು ಸೊಕ್ಕೆ ನಗರದ ಬೀದಿ ಹಾದಿಗಳಲಿ ಅಂಡಲೆಯುತಲಿತ್ತು.

ಯಿತ್ತ ಕುದುರೆಡವು ಪಟ್ಟಣದೊಳಗ ರಣ ಬಯಲ ಹವಾಮಹಲಲ್ಲಿ ವಾಸ್ತವ್ಯ ಹೂಡಿದ್ದ ವುವುï°ಲ ರಾಜಪರಿವಾರ ಚಿಂತೆಯ ಕಡಲಲ್ಲಿ ಮುಳುಗಿತ್ತು. ರಾಜಮಾತೆ ಭಯಮಾಂಬೆಯ ಮಯ್ಯಲ್ಲಿ ಸಜ್ಜಿರಲಿಲ್ಲ, ಮಣಿಮಂಚ ಯಂಬ ಹೆಸರಿನ ವರಸಿಗೆ ಬೆನ್ನಂಟಿಸಿ ಅಂಗಾತ ಮಲಗಿಬಿಟ್ಟಿದ್ದಳು, ಮೊನ್ನೆಯಿಂದ ಬಾಯಿ ಬಿದ್ದು ಹೋಗಿತ್ತು, ನಿನ್ನೆಯಿಂದ ಕಯ್ಯಿಕಾಲು ಆಡಿಸೋದೂ ನಿಂತುಹೋಗಿತ್ತು, ಗುಡ್ಡೆಗಳು ಮೇಲ್ರೆಪ್ಪೆಯೊಳಗೆ ಸೇರಿಕೊಂಡುಬಿಟ್ಟಿದ್ದವು, ಮಂಚ ಅಲ್ಲಾಡುವಂತೆ ವುಸುರ ಯಳಕಂತಿದ್ದಳು, ಬಿಡುತ್ತಿದ್ದಳು. ಯೀಗ ಪ್ರಾಣ ಬಿಟ್ಟಾಳು, ಆಗ ಪ್ರಾಣ ಬಿಟ್ಟಾಳು ಅಂತ ಮಣ್ಣಿಗಂತ ಬಂದಿದ್ದ ಬೀಗರು ಬಿಜ್ಜರು ಯದುರು ನೋಡುತ್ತಿದ್ದರು, ಹಿರೇ ಮನುಶ್ಯೋಳು ಪ್ರಾಣ ಬಿಟ್ಟರೇನು ಗತಿಯಪ್ಪಾ? ರಾಜರ ರೀತಿ ರಿವಾಜಿನಲ್ಲಿ ಹೆಣವನ್ನು ಸುಡುಗಾಡಿಗೆ ಸಾಗಿಸೋದೆಂಗ? ಮಣ್ಣು ಮಾಡೋದೆಂಗ? ತಿಥಿ ಸ್ರಾದ್ದ ಮಾಡೋದೆಂಗ? ಅಯ್ನೂರಾವಂದು ಮಂದಿ ಬ್ರಾಂಬ್ರಿಗೆ ಮೂಟ ಹಾಕಿ ಪಿಂಡಸಾಂತಿ ಮಾಡೋದೆಂಗ? ಅಂತ ಕಾಟಯ್ಯನೂ, ಅವನ ಸಂಗಡಿಗರೂ ತಲಾ ವಂದೊಂದು ಮೂಲಿ ಹಿಡಿದು ಯಸನ ಮಾಡುತಿದ್ದರು. ಸದ್ಯ ರಾಜವಂಸಕ್ಕೆ ಹತ್ತಿರದ ನೆಂಟನೂ, ಯಿಂಥ ಹತ್ತಾರು ಸಾವನ್ನು ಕಣ್ಣಾರೆ ಕಂಡುಂಡಂಥವನೂ ಆದಂಥ ಸಿಂಗನಮಲದ ಯಂಬಳಗಡಿಗೆಯ ಕ್ರುಸ್ಣವರ್ಮನಾಯಕನು ಪೆದಭರುಮನಾಯಕರ ಕಾಲದಲ್ಲಿ ಕಾಶೀ ದೇಸದಿಂದ ತರಿಸಿಟ್ಟುಕೊಂಡಿದ್ದ ಗಂಗೋದಕ ತಗಂಬರ್ರಿಅಂತಿದ್ದನು. ಯಿಲ್ಲದ್ದನು ಯಲ್ಲಿಂದ ಜೋಡಿಸೋದು? ಅದಿರುವ ತಿರುಗುಣಿ ಚಂಬು ಯೇಸೋ ವರುಷಗಳಿಂದ ಯಾರ ಕಣ್ಣಿಗೂ ಬಿದ್ದಿಲ್ಲ. ರಾಜಪರಿವಾರದ ಪಯ್ಕಿ ಯಾರಾದರೊಬ್ಬರು ಹಳೆ ಸಾಮಾನು ಖರೀದಿಸುವ ಪರಂಗಿ ಮಂದಿಗೆ

ಯಿಷ್ಟೋ ಅಷ್ಟಕ್ಕೆ ಮಾರಿದ್ದರೂ ಮಾರಿರಬೌದು? ಹೋಗಿ ತರಲಾಕಂದರ ಕಾಶಿ ಪಟ್ಟಣವೇನು ನಜದೀಕುದಾಗಯ್ತಾ? ಗಂಗಮ್ತಾಯಿ ವಂದು ಕುಲದವಳಾ? ವಂದು ಗೋತ್ರದವಳಾ? ವುತ್ತರ ದೇಸದಲ್ಲಿರೋದೂ ಅದೇಯಾ? ದಕ್ಷಿಣ ದೇಸದಲ್ಲಿರೋದು ಅದೇಯಾ? ಕಡುದಮ್ಮನಳ್ಳವಾಗಲೀ, ಹೊನ್ನಮ್ಮನ ಹಳ್ಳವಾಗಲೀ ಗಂಗಾನದಿಗಿಂತ ಯಾತರಲ್ಲಿ ಕಡಿಮೆ ಅವೆ... ಅವೇ ನೀರನು ಗಿಂಡೀಲಿ ತಂದು ಪಂಚಲೋಹದ ಚಮುಚಾದಿಂದ ಯಾಕೆ ಹನಿ ಹನಿ ಬಿಡಬಾರದು ಯಂಬ ತರ್ಕವು ವಂದು ಕಡೆ ನಡೆಯುತ್ತಿದ್ದರೆ.. ಪಿಕದಾನಿ ಹಿಡಿಯೋನು ಯಂಬ ಕಾರಣಕೊಟ್ಟು ಮೋಬಯ್ಯನನ್ನು ಯಡಗಣ್ಣಿಂದ ನೋಡಿದ್ದು ಸರಿಯೇ? ತನ್ನ ಸರೀರವನ್ನು ಸಾಂಬವಿಗೆ ಬಿಟ್ಟುಕೊಟ್ಟಂಥ ಅವಯ್ಯನ ಗುಣಗಾನವನ್ನು ತಮ್ಮೋರು ಮಾಡಿದ್ದುಂಟಾ? ಸಾಂಬವಿಯ ಕಣ್ಣಲ್ಲಿ ಬೊಟ್ಬಾಡಿಸಿದ್ದು ಸರಿಯಾ? ಯಿಡೀ ಕುಂತಳಸೀಮೆಯ ಯಾವತ್ತು ಮಂದಿ ಆ ಸಾಂಬಯ್ಯನ ಪಾದಕ್ಕೆ ಸರಣು ಹೋದರು. ಆದರೆ ತಮ್ಮವರು ಹೋಗಿ ಆತನ ಪಾದಕ ಹಣೆ ಅಂಟಿಸಿದರಾ? ಯವ್ವಾ ತಾಯಿ ಕಾಪಾಡು ಅಂತ ವಂದು ಮಾತು ಯಿನ್ನಪ ಮಾಡಿಕೊಂಡಿದ್ದಲ್ಲಿ ಜಗದಂಬೆಯು ರುದಯ ಕರಗದಂಗಿರುತಿತ್ತಾ? ಸಿಮ್ಮಾಸನ ಕಳಕೊಂಡರೂ ತಮ್ಮವರಿಗೆ ಬುದ್ದಿ ಬರಲಿಲ್ಲ, ಅರಮನೇನ ಕಳಕೊಂಡರೂ ತಮ್ಮವರಿಗೆ ಬುದ್ದಿ ಬರಲಿಲ್ಲ. ಯಿವರ್‍ಯಾವ ಸೀಮೆ ರಾಜರಪ್ಪಾ, ಪ್ರಜೆಗಳು ಹೆಂಗೋತಾರೋ? ರಾಜನಾದೋನು ಹಂಗೆss ಹೋಗಬೇಕು... ಅದು ಬಿಟ್ಟು ತಮ್ಮದೇ ವಂದು ದಾರಿ ಹಿಡಿದರು. ಆದದ್ದಾಯಿತು, ಹೋದದ್ದು ಹೋಯಿತು, ಯೀಗಲಾದರು ಸಾಂಬಯ್ಯನ ಪಾದೋದಕ ತಂದದೇ ಗಂಗೋದಕ ಅಂತ ತಿಳಕೊಂಡು ಯಾಕ ಮುದುಕಿಯ ಬಾಯೊಳಗ ಹನಿಯಬಾರ್‍ದುss.. ಯಂಬ ತರ್ಕವು ಯಿನ್ನೊಂದು ಕಡೇಕ ನಡೆಯುತಿತ್ತು. ಹಿರೇರು ನಾಕುಮಂದಿ ವಪ್ಪಿದಲ್ಲಿ ತಾನು ಅರಮನೆಗೆ ಹೋಗಿ ಸಾಂಬಯ್ಯ ಪಾದೋದಕಾನ ತಗಂಡು ಬರುತೀನಿ ಯಂದು ಪಾಂಚಾಲ ಕಾಟನಾಯಕನ ಹೆಂಡತಿಯರ ಪಯ್ಕಿ ವಬ್ಬಾಕಿಯಾದ ತಿರುಮಲಾಂಬೆ ದನಿ ಯತ್ತರಿಸಿ ಅಂದಳು. ರುಗ್ಣಸಯ್ಯೆ ಮ್ಯಾಲ ಯಿದ್ದ ರಾಜಮಾತೆಯ ಕಿವಿಗಾ ಮಾತು ಬೀಳದೆ ಯಿರಲಿಲ್ಲ. ಮುಖಾನ ಹೊಳ್ಳಾಡಿಸಿತು, ಯೇನೋ ಹೇಳುವ ಪ್ರಯತ್ನ ಮಾಡಿತು, ಅದೇನಿದ್ದೀತು ಯಂದು ಕುಲಬಾಂಧವರು ಯೋಚಿಸುತ್ತಿರುವಾಗ್ಗೆ.....

ಯಿದೇ ಪಟ್ಟಣದ ಅದೇ ಆಂಜನೇಯಸ್ವಾಮಿ ಗುಡಿ ಪವುಳೇಲಿ ಯಿಶೇಷ

ರುತ್ತ ರಚನೆ ಮಾಡೋ ನಿಮಿತ್ತ ತುಪ್ಪದ್ದೀವಿಗೆ ಹಚಕೊಂಡು ಲಘುಯಿಂದ ಗುರುವನ್ನೂ, ಗುರುಯಿಂದ ಲಘುವನ್ನೂ ಯಿಭಜನೆ ಮಾಡುತಾs ಮಡುತಾ ಕೂಕಂಡಿದ್ದಾತ ಶಾರ್ಙ್ಗದೇವ ಯಿರಚಿತ ಸಂಗೀತ ರತುನಾಕರವನ್ನೂ, ಮತಂಗ ಮುನಿ ಯಿರಚಿತ ಬ್ರುಹದ್ದೇಸಿಯುನ್ನೂ, ನಾಗುವರುಮ ಯಿರಚಿತ ಛಂದೋನ್ಬುದಿಯನ್ನೂ, ದಂಡಿಯಿರಚಿತ ಕಾವ್ಯಾದರುಶವನ್ನೂ ಬಾಯಿಪಾಠ ಮಾಡಿದ್ದಂಥ ಮಾ ಕವಿ ಅಯ್ಯಾಳೇಸ್ವರನು, ಯೇಕಾನೇಕ ಲಾಕ್ಷಣಿಕ ಗ್ರಂಥಗಳನ್ನು ಅರೆದು ಕುಡಿದು ಅರಗಿಸಿಕೊಂಡಿರುವಂಥಾತನು. ತನ್ನ ಹಿಂದಿನ ಯಾಮೊಬ್ಬ ಮಾಕವಿಯು ಕ್ಷವುರಿಕದಂಥ ಕುಲಕಸುಬನ್ನು ತಮ್ಮ ಕಾವ್ಯಗಳೊಳಗೆ ಪ್ರಸ್ತಾಪಿಸಿಲ್ಲ ವಲ್ಲಾಯಂದು ಮರುಗಲಕ ಹತ್ತಿದ್ದನು. ಯೀ ಕುರುತು ವಂದಾದರೂ ಕಂದಪದ್ಯವುಂಟೇನೆಂದು ತನ್ನ ನೆನಪಿನ ಕೋಶವನ್ನೆಲ್ಲ ತೆಗೆದು ಬೆದಕಿ ನಿರಾಶನಾದನು. ತಾನು ತನ್ನ ಶ್ರೀದೇವಿ ಮಾತ್ಮೆ ಕಾವ್ಯದೊಳಗೆ ನಾದಿರ ಗೋಯಿಂದನನ್ನು ವರ್ಣಿಸಿ ಯಿತಿಹಾಸದ ಭಾಜನಕ ವಳಗಾಗಬೇಕೆಂದು ತಹತಹಿಸಿದನು. ಯಕಃಶ್ಚಿತ್ ಕಂದಪದ್ಯದಲ್ಲಿ ವರ್ಣಿಸಿ ಕುಲಕಸುಬಗಳಿಗೆ ಅಪಚಾರ ಮಾಡಬಾರದೆಂದೂ, ವರ್ಣಿಸಿದರ ಖ್ಯಾತ ಕರ್ಣಾಟಂಕಗಳಲ್ಲೇ ವರ್ಣಿಸಬೇಕೆಂದೂ ನಿರ್ಧಾರ ಕಯ್ಕೊಂಡನು. ತಾಯೇ ಆಸೀರುವಾದ ಮಾಡು ಯಂದು ಸರಸತಿಗೆ ನಮಸ್ಕಾರ ಮಾಡಿದನು. ತಾನು ಕಂಡುಂಡ ಯೀ ಕರುಣಾಜನಕ ದ್ರುಸ್ಯವನ್ನು ನಜಭಜಜಂಜರದ ಚಂಪಕಮಾಲಾರುತ್ತದಲ್ಲಿ ಅಳವಡಿಸುವುದೋ, ಸತತಂ ನಂಸಂರರಂಗಂದ ಮಹಾಸಗ್ದರಾರುತ್ತದಲ್ಲಿ ಚಿತ್ರಿಸುವುದೋ, ಭರಂನಭಬಂರಲಂಗದ ವುತ್ಪಲ ಮಾಲಾರುತ್ತದಲ್ಲಿ ಸಾಕ್ಷಾತ್‌ಕರಿಸುವುದೋ ಯಂದು ಮುಂತಾಗಿ ಯೋಚಿಸೀ ಯೋಚಿಸಿ ತನ್ನ ಮೆಚ್ಚಿನ ಕವಿಯಾದ ಪಂಪನಿಗೆ ಪ್ರಿಯವಾದ ಮಹಾಸ್ರಗ್ದರಾ ರುತ್ತದಲ್ಲೇ ರಚಿಸಬೇಕೆಂದು ದ್ರುಢ ನಿರ್ಧಾರ ಮಾಡಿದನು. ವಂದು ಚಣ ಕಣ್ಣು ಮುಚ್ಚಿ ನಾದಿರ ಗೋಯಿಂದನನ್ನೂ, ಸರಸತಿ ದೇವಿಯನ್ನೂ ಯೇಕ ಕಾಲಕ್ಕ ಆವಹಿಸಿಕೊಳ್ಳುತ್ತಿರುವಾಗ್ಗೆ....

ಯಿತ್ತ ಅದೇ ಕುದುರೆಡವಿನ ಅರಮನೆಯೊಳಗ ಸಾಂಬಯ್ಯನು ಕುಂತಲ್ಲಿ ಕುಂಡ್ರುತಿರಲಿಲ್ಲ, ನಿಂತಲ್ಲಿ ನಿಂದುರುತ್ತಿರಲಿಲ್ಲ. ಹಿಡಿ ಹಿಡಿ ಅನ್ನುವಷ್ಟರಲ್ಲಿ ದುಡುದುಡನೆ ಮೋಡಿಬಿಡುತ್ತಿದ್ದನು ಹೊರಗೆ. ಅರಮನೆಯೇ ರಸ್ವಗೊಂಡು ಕಂದನ ರೂಪದಲ್ಲಿ ಬೀದಿಗುಂಟ ಅಡ್ಡಾಡುತ್ತಿರುವಂತೆ ನೋಡೋರಿಗೆ ಭ್ರಮಾ ಹುಟ್ಟಿಸುತ್ತಿದ್ದನು. ಅಗೋ ಅಲ್ಲಿ ಅಂದರೆ ಯಿಲ್ಲಿರುತಿದ್ದನು.. ಯಿಗೋ ಯಿಲ್ಲಿ

ಅಂದರೆ ಅಲ್ಲಿ ಜಿಗಿದಾಡುತಿದ್ದನು. ಬಾರಪ್ಪಾ... ಬಾ ಕಂದಾ.. ಯಂದು ಪ್ರತಿಯೊಂದು ಮನೆಯೋರು ಅಂಗಲಾಚುತ್ತಿದ್ದರು. ಆತ ತಮ್ಮನೆಗೆ ಬಂದಲ್ಲಿ ವಳ್ಳೇದಾಯ್ತದ ಯಂಬ ಕಾರಣದಿಂದ... ಆತನೊಳಗೆ ತಾಯಿ ಅಡಗಿರುವಳೆಂಬ ಕಾರಣದಿಂದ.. ಅದು ಪಡೆವ ಆನಂದ, ಅದು ಪಡೆವ ಸಿಸು ಸಹಜ ಅನುಭವವನ್ನು ತಾಯಿಯೂ ಅನುಭವಿಸುತ್ತಿರುವಳು ಯಂಬ ಕಾರಣದಿಂದ...

ಸಾಂಬಯ್ಯಗ ಯೊಗ ಕಾಲು ಬಂದಂಗದೆ.. ಜಾವ ಜಾವಕ ಹಾಲು, ಜೇನಿವೇ ಮೊದಲಾದ ದ್ರವ ಪದಾರ್ಥಂಗಳ ಕೊಟ್ಟೂ ಕೊಟ್ಟೂ ತಾಯಂದಿರ ರೆಟ್ಟೆಯಿಳಿದು ಹೋಗ್ಯಾವ, ಆನೆ ವಡಲಿಗೆ ಅರೆಕಾಸಿನ ಮಜ್ಜಿಗೆ ಕೊಟ್ಟಂಗ.. ಗುಟ್ಟಾಗಿ ಅವಯ್ಯನೂ ಪಟ್ಟಣ ಸೋಮಿಗಳನ ತರುಬಿ ತಾನು ಸಿಸುವೆಂದು ಅಭಿನಯಿಸೀ ಅಭಿನಯಿಸೀ ಸಾಕಾಗಿ ಹೋಗಿರುವುದೆಂದೂ, ತಾನೂ ದೊಡ್ಡನಾಗುವೆಂದೂ, ಯಲ್ಲರಂಗೆ ತಾನೂ ವುಣ್ಣುವೆನೆಂದೂ ಬ್ರತಿಮಾಲು ತಲಿದ್ದನು. ಅದಕಿದ್ದು ಅವರು ಅಷ್ಟು ಲಗೂನ ನೀನು ದೊಡ್ಡವನಾದಿ ಅಂದರ ಲೋಕಕ್ಕ ಅನುಮಾನ ಬರುತದ: ಅದಕ ನೀನು ಸ್ವಾಭಾವಿಕವಾಗಿ ದೊಡ್ಡವನಾಗಬೇಕಯ್ಯಾಯಂದು ಪರಿಪರಿಯಿಂದ ಹೇಳುತ ಬಂದಿದ್ದರು. ಆದರಾವಯ್ಯ ವಂದೇ ಹಟೀಗೆ ಬಿದ್ದದ್ದು ಅರಮನೆಯ ಆಡಳಿತ ವರ್ಗದವರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿತ್ತು. ಅದಕ ಅವರೇ ಸಾಂಬಯ್ಯಗ ಅನ್ನ ಪ್ರಾಶನವನ ಲಗೂನ ಮಾಡಿಸಬೇಕೆಂಬ ನಿರ್ಣಯಕ್ಕ ಬಂದು ಬಿಟ್ಟರು.

ಶಿಷ್ಟ ಮಂದಿಯ ಬಾಯಿಯಿಂದ 'ಅನ್ನ' ಯಂದುದುರುವ, ಪರಿಶಿಷ್ಟ ಮಂದಿ ಬಾಯಿಯಿಂದ 'ಬಾನ' ಯಂದುದುರವ ಅನ್ನಯಂಬುದು ಸಾಮಾನ್ಯ ಸಬುಧವಾss ಅದು ಷಡಾಕ್ಷರೀ ಮಂತ್ರಗಳ ಪಯ್ಕಿ ಅದೂ ವಂದು.. ಪ್ರಾಣ, ಶ್ರದ್ಧೆ, ಆಕಾಶ, ವಾಯು, ಜ್ಯೋತಿ, ನೀರು, ಭೂಮಿ, ಯಿಂದ್ರಿಯ, ಮನಸು, ಯೊರ‍್ಯ, ತಪಸ್ಸು, ಯಂತ್ರ, ಕರ್ಮ, ಲೋಕ, ನಾಮಗಳೆಂಬ ಷೋಡಷ ಕಲೆಗಳ ಪಯ್ಕಿ 'ಅನ್ನ' ಯಂಬುದೂ ವಂದು, ಸಚರಾಚರಗಳ್ಯಾವತ್ತೂ ಅನ್ನದಿಂದಲೇ ಹುಟ್ಟುತ್ತಾವ, ಅನ್ನದಿಂದಲೇ ಜೀವಿಸುತ್ತಾವ, ಸತ್ತು ಅನ್ನವನ್ನೇ ಪ್ರವೇಶಿಸುತ್ತಾವ. ಪ್ರಾಣಿಗಳಲ್ಲಿ ಅನ್ನವೇ ಜೇಷ«, ಅನ್ನವೇ ಸರ್ವಸ್ವ, ಅನ್ನ ಅವುಷಧ, ಅನ್ನವನ್ನು ಪ್ರಾಣಿಗಳೆಲ್ಲ ತಿನ್ನುತ್ತಾವ, ಅನ್ನವು ಪ್ರಾಣಿಗಳನ್ನು ತಿನ್ನುತ್ತದೆ, ಅನ್ನವನ್ನು ಭುಂಜಿಸುವವನು ಅನ್ನದಾನಿಯಾಗುವನು, ಪ್ರುಥವಿ ಅಂದರ ಅನ್ನ, ಅನ್ನ ಅಂದರೆ ಪ್ರುಥವಿ, ಆ ಪ್ರೇಮ ಕೊಡುವುದರಿಂದ ಅನ್ನವು 'ವಿ' ಯಂದೆನ್ನಿಸಿಕೊಳ್ಳುವುದು,

ಬಲ ಕೊಡುವುದರಿಂದ 'ರಂ' ಯಂದೆನ್ನಿಸಿಕೊಳ್ಳುವುದು, 'ವಿರಂ' ಯಂದರ ಬ್ರಹ್ಮನು, ಆದ್ದರಿಂದ ಭೋಜನವು ಬ್ರಹ್ಮೋಪಾಸನೆ ಸಮವಾದುದು, 'ಅನ್ನ' ಉಣ್ಣುವುದರಿಂದ ಮಾನವನು ಯಲ್ಲರಿಗೂ ಪ್ರಿಯನಾಗುವನು, ಆಶ್ರಯದಾತನೂ ತಾನಾಗುವನು.. ಅನ್ನಮಯ ಪುರುಷನಿಗೆ ಚೈತನ್ಯದಾಯಕವಾದುದು ಅನ್ನವೇ.. ಆದ್ದರಿಂದ ಅದರ ವುಣ್ಣುವಿಕೆಯನ್ನು ಶಾಸ್ತ್ರೋಕ್ತವಾಗಿ ಆರಂಭಿಸಬೇಕಿರುವುದು ಸಾಂಬಯ್ಯಾ.. ಸ್ವಲ್ಪ ದಿನ ತಡಕೊಳ್ಳಪ್ಪಾ.. ಯಂದು ಮುಂತಾಗಿ ಜಡೆತಾತ ಹೇಳಿದುದನು ಕೇಳಿಸಿಕೊಂಡ ಸಾಂಬಯ್ಯನು 'ಅರೆ ಅವುದಲ್ಲಾ' ಯಂದು ವುದ್ಗಾರ ತೆಗೆದನು..

ಫಲಾನ ಯಿಂಥ ದಿವಸ ಸಾಂಬಯ್ಯಗ ಅನ್ನ ಪ್ರಾಶನ ಮಾಡಿಸಲಾಗುವುದೆಂಬ ಪ್ರಕಟಣೆ ಅರಮನೆಯಿಂದ ಹೊರ ಹೊಂಟೊಡನೆ....

ಕುದುರೆಡವು ರಾಜ್ಯದ ಕರುಣೆಯ ಕಂದ ಸಾಂಬಯ್ಯಗೆ ಅನ್ನಪ್ರಾಸನ ಯಂಬ ಯಿಧಿಪೂರುವಕ ಆಚರಣೆ ಮಾಡಿಸಲಾಗುತ್ತದೆ ಯಂಬ ವರ್ತಮಾನವು ಯಾವ ವಾದಿಯಿಂದಲೋ ಸುತ್ತನ್ನಾಕಡೀಕೆ ಹಬ್ಬಿತು. ಸಾಸ್ತ್ರಿಗಳು, ಪಂಡಿತೋತ್ತಮರು ಅನ್ನಪ್ರಾಸನ ಮಾಡಿಸೋ ಯಿಸಯದಲ್ಲಿ ತಮಗೆ ತಾವೇ ಸಾಟಿಯಂದು, ಪುರಾಣೋಪನಿಷತ್ತುಗಳನ್ನು ತಮ ತಮ್ಮ ನಾಲಗೆ ಯಂಬ ವ್ಯಾಸಪೀಠದ ಮ್ಯಾಲಿಟ್ಟುಕೊಂಡು ಸದರಿ ಪಟ್ಟಣಕ್ಕೆ ಬಿಜಯಂಗಯ್ದರು. ಜೋಳದನ್ನ, ನವಣಕ್ಕಿ ಅನ್ನ, ನೆಲ್ಲಕ್ಕಿ ಅನ್ನ, ಕುಚಲಕ್ಕಿ ಅನ್ನ, ಬಿದುರಕ್ಕಿ ಅನ್ನ, ಬೆಂಬಿಡದಕ್ಕಿ ಅನ್ನ, ಹಿಂಬಿಡದಕ್ಕಿ ಅನ್ನ, ಛಲದಕ್ಕಿ ಅನ್ನ, ಬಲದಕ್ಕಿ ಅನ್ನ, ಬಿಲದಕ್ಕಿ ಅನ್ನ, ಕುಲದಕ್ಕಿ ಅನ್ನ, ಪಂಚವರುಣದಕ್ಕಿ ಅನ್ನ, ಕಂಚುವರುಣದಕ್ಕಿ ಅನ್ನ, ಮಿಂಚು ಮಿಣುವಕ್ಕಿ ಅನ್ನ, ಹೊನ್ನಕ್ಕಿ ಅನ್ನ, ಚಿನ್ನಕ್ಕಿ ಅನ್ನ, ಕರುಣಕ್ಕಿ ಅನ್ನ ಯಿಂಥಪ್ಪ ಮೊದಲಾದ ಪಂಚಯಿಂಸತಿ ನಮೂನೆಯ ಅನ್ನವನ್ನು ತಪತಪಾಲೆಯೊಳಗೆ ಕಟ್ಟಿಕೊಂಡು, ಗಟ್ಟಿಬ್ಯಾಳಿ, ಸಪ್ಪನ್ನ ಬ್ಯಾಳೆ, ಖಾರದ ಬ್ಯಾಳಿ, ಸೀಬ್ಯಾಳಿ, ಪನುಕನ ಪಲ್ಯೇದ ಸಾರು, ಹುಳುಪಾಕನ ಪಲ್ಯೇದ ಸಾರು, ಗಡುಸೊಪ್ಪು, ಬದನೇಕಾಯಿಪಲ್ಯೇವು, ಕರಿಂಡಿ, ಕೆಂಪಿಂಡಿ, ಹಸುರಿಂಡಿ, ವುಜ್ಜಿಗೆ ಮೆಂಚಿನಕಾಯಿ, ಹತ್ತಾರು ನಮೂನೆ ಬಾಳಕ, ಝುಣಕ ಕೆನೆಮೊಸರು, ಸೀಮೊಸರು, ಹುಳಿಮೊಸರು ಹಪ್ಪಳ ಸಂಡಿಗೆಯೇ ಮೊದಲಾದ ಕಲೆಸಿಕೊಳ್ಳುವ, ನೆಂಜಿಕೊಳ್ಳುವ ಚವ್ವೀಸು ನಮೂನೆಯ ಖಾದ್ಯಗಳನ್ನು ಕೊಳಗ ಕೊಳಗಗಳಲಿ ತುಂಬಿಕೊಂಡು, ಹೆಂಡರು ಮಕ್ಕಳು, ಬೀಗರು ಬಿಜ್ಜರು, ನೆಂಟರು ಗಿಂಟರು,

ಆಗೋರು, ಆಗದಿರೋರು ಯಲ್ಲರನ್ನೂ ಹಿಂದೆ ಮುಂದೆ ಕಟ್ಟಿಕೊಂಡು, ಬಂಡಿಬಡಗೋಲು ಹೂಡಿಕೊಂಡು, ಹ್ವಾ..ಹ್ವಾ..ಅದೇ ದಾರಿ....ಹ್ವಾ...ಹ್ವಾ...ಯಿದೇ ದಾರಿ ಯಂದು ಹಾದಿಯಿಲ್ಲದ ಕಡೀಕೆ ಹಾದಿ ಮಾಡಿಕೊಂಡು ಹೆಜ್ಜೆ ಹೆಜ್ಜೆಗೆ ತಾಯಿ ಸಾಂಬವೀನ ಸ್ಮರಣೆ ಮಾಡೂತ, ಆಕೆಯ ಪವಾಡ ಮಯ್ಮೆಗಳನು ಹಾಡುಕಟ್ಟಿ ಹಾಡೂತ, ಕೊಂಡಾಡೂತ ಕುದುರೆಡವಿಗೆ ಆಗಮಿಸಿ ಅರಮನೆಯ ಸುತಮುತ್ತಿದ್ದ ಬಂಗಾರದಂಥ ಬಯಲೊಳಗೆ ಬಿಡಾರ ಹೂಡಿದರು. ಫಲಾನ ದಿವಸ ಫಲಾನ ಹೊತ್ತು, ಫಲಾನ ಗಳಿಗೆ ಮೂರ್ತಕ್ಕೆ ಮಡಿವುಡಿಯಿಂದ ಯಲ್ಲಾರು ನೋಡುವ ಸಲುವಾಗಿ ಆಟು ಗಡುತರದ ಕಂದಯ್ಯನನ್ನು ಅರಮನೆಯ ಮುಂದಿದ್ದ ಯರಡಾಳೆತ್ತರದ ರಂಗುರಂಗಿನ ಯೇದಿಕೆಗೆ ಮಂತ್ರಘೋಷಣೆಗಳೊಂದಿಗೆ ಕರೆತಂದರು. ಕಡಬಗೆರೆಯಿಂದ ಹೊನ್ನಯ್ಯನೆಂಬ ಸಾವುಕಾರನೂ, ಕಗ್ಗೆರೆಯಿಂದ ಕಾಳಯ್ಯನೆಂಬ ಸಾವುಕಾರನೂ ತಂದಿದ್ದ ಬಂಗಾರದ ಬೋಗಾಣಿಗಳ ತುಂಬ ಅನ್ನಯಿತ್ತು, ಹತ್ತದಿನಯ್ದು ಬಂಗಾರದ ಸವುಟುಗಳಿದ್ದವು. ಕಂದಯ್ಯನ ವಾಕ್‌ಸಕ್ತಿ ರುದ್ದಿಸಲೋಸುಗ, ಬಲರುದ್ದಿಯಾಗಲೋಸುಗ ಪನ್ಡಿತರೂ, ಸಾಸ್ತ್ರಿಗಳೂ ಅಧಿದೇವಾನುದೇವತೆಗಳನ್ನು ಪ್ರಾರ್ಥಿಸುತ್ತಿದ್ದರು, ಸಾಯಿರಾರು ಭಕುತರ ಕಣ್ ಸಾಕ್ಷಿಯಲ್ಲಿ.

ವಂದು ಗಳಿಗೆ ಹೋತು, ಯರಡನೇ ಗಳಿಗೆಯೂ ಹೋತು, ಮೂರನೇ ಗಳಿಗೆ ಕಾಲಿಟ್ಟ ಹೊತ್ತಿನಲ್ಲಿ ಸಿವನ್ನಾಮ ಪಾರೋತಿಯ ನಾಮ ಸ್ಮರಣೆ ಮಾರ್ಮಲೆದ ಹೊತ್ತಿನಲ್ಲಿ ಹಿರೀಕರು ತಾವೇ ತಂದೆ ತಾಯಿಗಳೆಂದು ಭಾವಿಸಿ ಬಂಗಾರದ ಸವುಟಿನಿಂದ ಸಾಂಬಯ್ಯಗೆ ವುಣಿಸಲು ಪ್ರಯತ್ನಿಸಿದರು. ಅದೇ ಹೊತ್ತಿಗೆ ಬಂದ ಬಯ್ಯವ್ವ ತಾನು ತನ್ನ ಮನೇಲಿಂದ ಕುಚಿಕೊಂಡು ತಂದಿದ್ದ ನುಚ್ಚಂಬಲಿ ಗಡಿಗೆಯನ್ನು ಮುಂದಿಟ್ಟುಕೊಂಡಳು. ತನ್ನ ಬೊಟ್ಟುಗಳನ್ನೇ ಬಂಗಾರದ ಬೊಟ್ಟುಗಳೆಂದು ಭಾವಿಸಿ ವಂದೊಂದು ಮುಟುಗಿ ಕಲೆಸಿ ಅದರ ಬಾಯೊಳಗಿಟ್ಟಳು. ಅದು ಗಬಗಬಾಂತ ತಿಂತು ಸಿವನೇs.. ನೋಡು ನೋಡುವಷ್ಟರಲ್ಲಿ ವಂದು ಡಬರಿ ನುಚ್ಚಂಬಲೀನ ತಿಂದು ಮುಗಿಸಿತು ಸಿವನೇ, ಯೀ ನನಗಂಡ ಯ್ಯೇಸು ದಿನದಿಂದ ವುಪಾಸ ಯಿದ್ನೋ ಯ್ಯೋನೋ?.. ಅಂತೂ ವಟ್ಟೆ ತುಂಬ ತಿಂದನಲ್ಲಾ. ಆಟೇ ಸಾಕು ಯಂದು ಸಾಂಬಯ್ಯನ ಮೀಸೆಗಂಟುಕೊಂಡಿದ್ದ ಅಗುಳಗುಳನ್ನು ಸರೆ ಮುಕ್ಕ ನೀರಿನಿಂದ ತೊಳದು ಬೊರುತೀನಪ್ಪಾ.. ಬೊರುತೀನಿ, ನಾನು ಸಾಯಾಕರೆ ನೀನೇ ಬಂದು ನನ್

ಬಾಯ್ಗೆ ನೀರು ಬುಡಬೇಕು ನೋಡಪ್ಪಾ ಯಂದು ಹೇಳೋದು ಹೇಳಿ ಅಲ್ಲಿಂದ ನಿರುಗಮಿಸಿದಳು.

ಯೀ ಪ್ರಕಾರವಾಗಿ ಸಾಂಬಯ್ಯ ಮಾಡಿದ ಅನ್ನಪ್ರಾಸನದ ದ್ರುಸ್ಯವನ್ನು ಕಣ್‌ದಣಿಯೆ ನೋಡಿದ ಯಾವತ್ತು ಭಕುತಾದಿ ಮಂದಿಯು ಯಲ್ಲಲ್ಲಿದ್ದಿತೋ ಅಲ್ಲಲ್ಲೆ ಕೂಕಂಡು ತಮ ತಮ್ಮ ಬುತ್ತಿಗಂಟುಗಳನ್ನು ಬಿಚ್ಚಿದರು. ಅವರದು ಯಿವರು, ಯಿವರದು ಅವರು ಹಂಚಿಕೊಂಡರು. ದನಕರು, ನಾಯಿ ಬೆಕ್ಕಿವೇ ಮೊದಲಾದ ಚತುಷ್ಪಾದಿಗಳಿಗೂ, ಕಾಗೆ ಗುಬ್ಬಿವೇ ಮೊದಲಾದ ಪಕ್ಷಿಗಳಿಗೂ ತಲಾ ವಂದೊಂದ್ತುತ್ತು ಹಾಕಿದರು, ನೀನುಣ್ಣಪ್ಪಾ ಯಂದು ಸೂರ್‍ಯಪರಮಾತುಮನ ಕಡೆಗೆ ಹಾಕಿದರು, ಸೂರ್‍ಯಪರಮಾತುಮನ ಕಡೆಗೆ ಹಾಕಿದರು, ಗಂಗಮ್ತಾಯೀ ನೀನು ನಮ್ಮನ್ನ ಮರಿಬ್ಯಾಡವ್ವಾ ಅಂತ ಹರಿಯೋ ನೀರಿಗಾಕಿದರು, ನಿನ್ನ ಕರುಣೆ ಸದಾ ಯಿರಲವ್ವಾ ಭೂಮ್ತಾಯಿ ಯಂದು ನೆಲದ ಮ್ಯಾಲೆಲ್ಲ ಸರಗಾವ ಚೆಲ್ಲಿದರು, ಆಮ್ಯಾಕಿದ್ದು ತಾವು ಮಟ್ಟಸ ರೀತಿಯಲ್ಲಿ ಕೂತು ವಂದೊಂದ್ತುತ್ತು ದೇವರ ಪರಸಾದ ಯಂದು ಭಾವಿಕೆ ಮಾಡಿ ವಡಲು ದಣಿವಂತೆ ವುಂಡು ಮುಗಿಸಿದರು. ಮಬ್ಬು ಬಂದಂತಾಗಿ ತಾವಿದ್ದ ನೆಲದ ಮ್ಯಾಲ ಮಯ್ನ ಚೆಲ್ಲಿ ತಲಾಕೊಂದೊಂದು ಜೋಂಪು ನಿದ್ದೆ ತೆಗೆದರು.. ಮೂಡಿದ್ದ ಕಣಸು ಮುಗಿಯೋ ಮುಂದುಗಡೀಕೆ ಯದ್ದು ಸಾಂಬವೀ ಅಂತ ಕಣ್ಣುಜ್ಜಿಕೊಂಡು ನಿಚ್ಚಳದಾರು.

ಬಂದಂಥ ಭಕುತರನ್ನು ರಂಜನೆ ಮಾಡಲಕೆಂದು ಅದೇ ಪಟ್ಟಣದ ವಂದೊಂದು ಮೋಣಿವಳಗೆ ದೊಡ್ಡಾಟ, ಸಣ್ಣಾಟ, ಕೋಲಾಟ, ಜೋಗೇರಾಟ ಯದುರು ಬದುರಾಟ ಯಿವೇ ವೊದಲಾದ ತರಾವರಿ ಆಟಗಳನ್ನು ಹಮ್ಮಿಕೊಳ್ಳಲಾಗಿತ್ತಲ್ಲ... ಗೀಗೀ, ಲಾವಣಿ, ಸೋಬಾನ, ಭಜನೆ ಯಿವೇ ಮೊದಲಾದ ಗಾಯನ ಮೇಳಗಳನ್ನು ಹಮ್ಮಿಕೊಳ್ಳಾಗಿತ್ತಲ್ಲ.. ಮೋಡಿಗೀಡಿಯಿವೇ ಮೊದಲಾದ ಮಾಯಮರಾಟಿ ಪ್ರದರ್ಸನಗಳನ್ನು ಹಮ್ಮಿಕೊಳ್ಳಲಾಗಿತ್ತಲ್ಲ... ತಮ ತಮ್ಮ ಅಭಿರುಚಿಗನುಸಾರವಾಗಿ ಭಕುತಾದಿ ಮಂದಿ ಅಲ್ಲಿಗೆಲ್ಲ ಹೋಗಿ ಬೆಳಕರಿಯೋ ಮಟ ಕೇಳೋದನು ಕೇಳಿ, ನೋಡೋದನು ನೋಡಿ... ಭಯ ಭಕುತಿಯಂಬ ಮೂಟೆಯನ್ನು ತಮ ತಮ್ಮ ರುದಯಗಳೊಳಗೆ ಯಿಟುಕೊಂಡು ತಮ ತಮ್ಮ ಮೂರು ಕಡೆಗೆ ಮುಖ ಮಾಡಿದರೆಂಬಲ್ಲಿಗೆ....

* * * *

ಅತ್ತ ಕೂಡ್ಲಿಗಿ ಪಟ್ಟಣದೊಳಗ ಕುಂಪಣಿ ಸರಕಾರದ ಯಿದ್ಯಾಮಾನಗಳು ಛಿಪ್ರಗತಿಯಲ್ಲಿ ನಡೆಯುತಲಿದ್ದವು. ಯಡ್ಡವರ್ಡನನ್ನು ತನ್ನೆದುರಿಗೆ ಕುಂಡ್ರಿಸಿಕೊಂಡು, ನಿಂದ್ರಿಸಿಕೊಂಡು ಆಜುಬಾಜೂಕ್ಕ ಯಿಟುಕೊಂಡು, ತಮ್ಮ, ಮಗ, ಅಳಿಯ ಯಿತ್ಯಾದಿ ಸಂಬಂಧವಾಚಕಗಳನ್ನು ಪ್ರಯೋಗ ಮಾಡುತ ತೀಕ್ಷ್ಣಮತಿಯಾದ ಥಾಮಸು ಮನ್ರ್ರೋ ಸಾಹೇಬನು ಯಾಕಿಷ್ಟು ಲಗೂನ ವರ್ಗ ಆಗ ಬೇಕೂಂತ ಆಪೇಕ್ಷಿಸ್ತಿದ್ದೀಯಂದು ಯಿಚಾರಿಸಿದ್ದನು. ಮೊದಮೊದಲು ಯಿವಯ್ಯಗ ಯೇನು ಹೇಳೋದು? ಯೇನು ಬಿಡೋದು ಅಂಬಕಾರಣಕ್ಕ ಸರ್ಯಾದ ಜವಾಬು ಬಾಯಿಂದ ಹೊರ ಹೊಂಡಲಿಲ್ಲ. ಅವು ಹೇಳಿಕೇಳೀ ಆಡಳಿತಾತ್ಮಕ ಕಾರಣಗಳಲ್ಲ ಅಂಬೋದು ವಂದು ಕಡೆ, ಮೆಚ್ಚಿ ಮದುವ್ಯಾಗಿರೋ ತನ್ನ ಹೆಂಡತಿ ಜೆನ್ನಿಫರ ಕುದುರೆಡವಿಗೆ ಹೋಗಿ ಆ ಮಂತರ ಮರಾಟಿ ಮೋಬಯ್ಯನ ಕಾಲದ ಬುಡಕ ಯಿದ್ದು ಬಿಡುತ್ತಾಳೋ ಯಂಬಾತಂಕ ಯಿನ್ನೊಂದು ಕಡೆ, ಯಾವುದಂತ ಹೇಳೋದು? ಯೇನಂತ ಹೇಳೋದು? ಮನ್ರ್ರೋ ಸಾಹೇಬನೇನು ಅರೀದ ಮಳ್ಳನಂತೂ ಅಲ್ಲ. ಗೂಢಾಚಾರರನ್ನು ಅಟ್ಟಟ್ಟಿ ಯಿಷಯ ಸಂಗ್ರಹ ಮಾಡಿಕೊಟ್ಟು ಕೊಂಡಿರುವಂಥಾ ಸೀದಾ ಸಾದ ಮನುಷ್ಯ.. ಆತನ ಯಕ್ತಿತ್ವಾನೇ ಹಂಗಯ್ತೇ. ಮುಖಾ ನೋಡಿ ಮುಂದಲಗೆ ಮ್ಯಾಲ ಕುಂಡರಿಸಿ ಯದೆಯಾಗಿರೋದನ್ನೆಲ್ಲ ಕಕ್ಕೋಹಂಗ ಮಾಡೋ ಕುಸಾಗ್ರಮತಿ, ಅಂಥಾತನೆದುರು ಸುಳ್ಳು ಹೇಳೋದು ವಂದೆಯಾ, ಹಗಲು ಕಂಡ ಬಾವೀಲೆ ರಾತ್ರಿಬೀಳೋದೂ ವಂದೆಯಾ? ಆತನೇನು ತನಗೆ ಅರೀದಾತನಲ್ಲ. ಮಲಬಾರ ಕಾಡೊಳಗ ತಾನು ಪರಾಕ್ರಮ ಮೆರೆದಿದ್ದಾಗ ಆತ ಹೆಗಲ ಮ್ಯಾಲ ಕಯ್ಯಿ ಹಾಕಿ "ತಮ್ಮಾ ನೀನು ಮುಂದ ವಂದಲ್ಲಾ ವಂದಿನ ಕಲೆಟ್ರಾತಿ" ಯಂದಂದು ಆಶೀರುವಾದ ಮಾಡಿದ್ದ.. ತನಗೆ ಆತನೇ ಆದರ್ಸ.. ಆತನ ಆಳೆತ್ತರದ ತಯ್ಲುವರ್ಣ ಚಿತ್ರನೋಡೇ ತಾನು ವುಣ್ಣೋದು, ಮಲಿಕ್ಕಂಭೋದು.. ರಾಜಕೀಯ ನಿರ್ಧಾರ ಕಯ್ಯಿಕೊಂಭೋದು.. ಯೀ ಜೆನ್ನಿಫರೆಂಬ ಅತಂತ್ರಮನಃಸ್ಥಿತಿಯ ಸುಂದರಿಯನ್ನು ತಾನು ಮದುವೆಯಾಗಿರದಿದ್ದಲ್ಲಿ ಯೀ ಹೊತ್ತಿಗೆ ಯಾವ ಹುದ್ದೆಗೇರುತ್ತಿದ್ದೆನೋ? ಯೇನೋ? ಆಕೆಯಿಂದಾಗಿಯೇ ತಾನು ಬರುವ ಯಲ್ಲಾ ಸವಲತ್ತು ಸವುಕರ್ಯಗಳನ್ನು ಧಿಕ್ಕರಿಸಿ ಯಲ್ಲೋ ವಂದು ಕಡೆ ಹೋಗಿ ಬದುಕಬೇಕೆಂದು ಹಾತೊರೆಯುತ್ತಿರುವುದು. ಓಹ್! ದೇವರೇ.. ನನ್ನ ಜೆನ್ನಿಫರ ಮನಸ್ಸಿನಿಂದ ಕುದುರೆಡವನ್ನು ವುಪಸಂಹರಿಸಿಕೋ ಪ್ರಭೂ" ಯಂದು ದಯ್ನತೆಯಿಂದ ತಾನು

ಬೇಡಿಕೊಂಡಿದ್ದನ್ನು ಚಾಣಾಕ್ಷ ಮನ್ರೋ ಗಮನಿಸಿರಲಿಕ್ಕೇ ಬೇಕು. ಯಿಡೀ ಮದರಾಸು ಪ್ರಾಂತವನ್ನೇ ಬುಗುರಿ ಮಾಡಿಕೊಂಡು ಆಟ ಆಡಿಸುತ್ತಿರುವಂಥ, ಯತ್ತರ ಅಯ್ದು ಅಡಿ ಹನ್ನೊಂದಂಗಲ ಯಿರುವಂಥಾ, ಬರುವು ಆರೂವರೆ ಮಣ ಯಿರುವಂಥಾ ಥಾಮಸು ಮನ್ರೋ ಸಾಹೇಬನೆದುರು ಸುಳ್ಳು ತಾರಾತಿಗಡಿ ನಡೆಯೋದಿಲ್ಲ ಯಂಬ ಕಾರಣಕ್ಕೆ ತಾನು 'ಅಯ್ಯಾ ಮಾ ಪ್ರಭು.. ನನ್ನ ಪತ್ನಿ ಜೆನ್ನಿಫರಳಿಗೆ ಕುದುರೆಡವು ಯಂಬುವ ತಿಕ್ಕಡಿ ಬಡಕೊಂಡಯ್ತೆ, ಕುದುರೆಡವೆ ಬೆಳ್ಳೆಮ್ಮು ಯಂಬ ತಿಕ್ಕಡಿ ಬಡಕೊಂಡಯ್ತೆ.. ಅಲ್ಲಿ ವುದಿಸಿರೋ ಅರವತ್ತರ ವಯೋಮಾನದ ಮೋಬಯ್ಯಾ ಯಾ ಸಾಂಬಯ್ಯನೇ ಬಾಲಯೇಸುವೆಂಬ ತಿಕ್ಕಡಿ ಬಡಕೊಂಡಯ್ತೆ.. ನನ್ನ ಹೆಂಡತಿ ಆ ತಿಕ್ಕಡಿಯಿಂದ ಮ್ಯಾಲೇಳುವ ಲಕ್ಷಣ ಕಾಣಿಸುತಾಯಿಲ್ಲ.. ಸಯ್ಲುಕೊಟ್ಟಲ್ಲಿ ಆಕೆ ಕುದುರೆಡವಿಗೆ ಹೋಗಿ ನೆಲೆಗೊಳ್ಳುವಾಕಿ ಅಯ್ತಾಳೆ...' ಯಂದು ಮುಂತಾಗಿ ನಾನಾ ಸಮಾಚ್ಯಾರವನ್ನು ಯಾದ್ರುಚ್ಛಿಕವಾಗಿ ಅರಕೆ ಮಾಡಿಕೊಂಡನು. ಅದಕಿದ್ದು ಮನ್ರೋಸಾಹೇಬನು ತನಗೀಗಾಗಲೇ ಮನವರಿಕೆಯಾಗಿರುವಂಥಾ ಸುದ್ದಿ ಸಾಮಾಗ್ರಿಗಳೊಡನೆ ತಾಳೆ ಹಾಕಿ ನೋಡಿದನು, ಹಂಗ ನೋಡಿದರೆ ಆಕೆ ಸದ್ಯ ತನ್ನ ಗೆಳೆಯನ ಮಗಳೇ, ಆಕೆಯ ಅಜ್ಜ ಯಿಂಗಲಂಡು ಸಮೀಪದ ಯಾವುದೋ ವಂದೂರಲ್ಲಿ ಧರುಮ ಪ್ರಚಾರಕರಾಗಿದ್ದರೆಂಬ ಸಂಗತಿ ಬಹುಶಃ ಯಡ್ಡವರ್ಡ್‌ಗೆ ತಿಳಿದಿರಲಾರದು.. ಅದೇ ಅಂಸ ಆಕೆಯ ಮನೋವಿಕ್ರುತಿಗೆ ಕಾರಣಯಿದ್ದಿರಬೌದು.. ಅಲ್ಲದೆ ಅದೂ ಮನೋಯಿಕ್ರುತಿ ಯಿದ್ದಿರಲಾರದು. ಅಗೋಚರಮೂ, ಅತಿಮಾನುಷಮೂಆದ ಶಕ್ತಿಯೊಂದು ಮೋಬಯ್ಯನ ಸರೀರದಲ್ಲಿ ಜಾಗ್ರುತವಾಗಿದ್ದಿರಬೌದು.. ತಾನು ಮುಂದೊಂದು ದಿವಸ ಅಗದಿ ಕೆಲಸ ಕಾರ್ಯದ ನಿಮಿತ್ತ ಕರನಾಟ ದೇಸದ ಕೆನರಾ ಪ್ರಾಂತಕ್ಕೆ ಹೋಗಬೇಕಿರುವುದು.. ಕುದುರೆಡವು ತನಗ ತನ್ನ ಹೆತ್ತ ತಾಯಿಯಂತೆ ಭಾಸವಾಗತೊಡಗಿತು. ಮಂಗಳೂರಿಗೆ ಹೋಗುವಾಗಲಾದರೂ.. ಅಲ್ಲಿಂದ ಬರುವಾಗಲಾದರೂ.. ಕುದುರೆಡವು ಪಟ್ಟಣಕ್ಕೆ ಹೋಗೇತಿರಬೇಕೆಂದು ನಿರ್ಧರಿಸಿದ ಮನ್ರೋ ಸಾಹೇಬನು ಯಡ್ಡವರ್ಡನನ್ನು ಕುರಿತು ಹೇಳಿದ್ದೇನೆಂದರೆ.. "ಮುಂದೆ ಯಲ್ಲದೂ ತಂತಾನೆ ಸರಿ ಹೋಗುವುದೆಂದರೂ ನೀನು ಕೇಳುತ್ತಿಲ್ಲ. ದಾಂಪತ್ಯ ಜೀವನವನ್ನು ನಡೆಸಿಕೊಂಡು ಹೋಗೋದನು ನಾವೆಲ್ಲರೂ ಯಿಂಡಿಯಾ ನೋಡಿ ಕಲಿಯಬೇಕು. ನಿನ್ನ ಕೋರಿಕೆಯಂತೆ ನಿನ್ನನ್ನು ಕೊಂಗನಾಡಿನ ವೆಲ್ಲೂರಿಗೆ ವರ್ಗ ಮಾಡುತ್ತಿರುವೆ. ಅಲ್ಲಾದರೂ ನೀನು

ಹೆಂಡತಿಯೊಂದಿಗೆ ಸಮುಸಾರ ಮಾಡಿಕೊಂಡು ಹೋಗು...”

ಅದಕ್ಕೆ ಸಮ್ಮತಿಸಿದ ಯಡ್ಡವರ್ಡನು ಅಲ್ಲೇ ಮೂರ್ನಾಕುದಿನ ಕುಂತಿದ್ದು ಪರವಾನಿಗಿ ಪತ್ರವನ್ನು ಮಾಡಿಸಿಕೊಂಡು ಕೂಡ್ಲಿಗಿ ಪಟ್ಟಣವನ್ನು ಸೇರಿಕೊಂಡನು. ಅಲ್ಲಿ ಯೀ ಯಿಷಯ ಮೊದಲೇ ಗೊತ್ತು ಮಾಡಿಕೊಂಡಿದ್ದ ಕುಂಪಣಿ ಸರಕಾರದ ಸಿಬ್ಬಂದಿ “ಅಯ್ಯೋ ತಮಗಿನ್ನಾರು ದಿಕ್ಕು ಅಯ್ಯಾರೆ” ಯಂದು ಕಣ್ಣಲ್ಲಿ ನೀರು ತಂದುಕೊಂಡಿದ್ದಕ್ಕೆ ಆ ಅಧಿಕಾರಿಯು “ನನಗಿಂತ ವಳ್ಳೇ ಅಧಿಕಾರಿ ಬಂದೇ ಬರುತಾರೆ, ಅವರು ನಿಮ್ಮ ಕಷ್ಟ ಸುಖ ಯಿಚಾರಿಸಿಕೊಳ್ಳುತ್ತಾರೆ.. ಚಿಂತೆ ಮಾಡಬ್ಯಾಡ್ರಿ. ನೀವು ನನ್ನ ಅಧಿಕಾರಾವಧಿ ಯಲ್ಲಿ ತೋರಿಸಿದ ಪ್ರೀತಿ ಸಹಕಾರಗಳನ್ನು ಯಾವತ್ತು ಮರೆಯೋದಿಲ್ಲ. ನನ್ನಿಂದೇನಾದರೂ ತೊಂದರೆಯಾಗಿದ್ದಲ್ಲಿ ಮನಸ್ಸಿನಲ್ಲಿ ಯಿಟ್ಟುಕೋ ಬ್ಯಾಡಿರಿ” ಯಂದು ಪರಿಪರಿಯಿಂದ ಹೇಳಿ ಸಮಾಧಾನಪಡಿಸಿದನು.

ಆತನ ಹೆಂಡತಿ ಜೆನ್ನಿಫರ “ಅಯ್ಯೋs ನನ್ನ ಬೆತ್ಲೆಯಮ್ಮೋ.. ನನ ಬಾಲ ಯೇಸು ಪ್ರಭುವೇ... ಕುದುರೆಡವಿನಲ್ಲಿ ನಿಂಗೊಂದು ಯೀಗರ್ಜಿ ಕಟ್ಟಿಸಬೇಕೆಂದುಕೊಂಡಿದ್ದೆನಲ್ಲಾ” ಯಂದು ಗಳಗಳನೆ ಅತ್ತಳು. “ನಿನ್ನ ಹೆಸರಿನಲ್ಲಿ ಅಲ್ಲೊಂದು ಯೀಗರ್ಜಿ ಕಟ್ಟಿಸೋ ಯೇರುಪಾಡು ನಾನು ಮಾಡುವೆನು. ಅಳಬ್ಯಾಡ, ಸುಮ್ನಿರು” ಯಂದು ಆಕೆಯನ್ನು ಸಮಾಧಾನಪಡಿಸಿದ ಯಡ್ಡವರ್ಡನು ಕುಂತ ಬಂಯ್ಟುಕ್ಕೀಲೆ ತಮ್ಮ ಕಿರಸ್ತಾನ ಕೋಮಿನ ಪ್ರಮುಖರನ್ನು ಬರಮಾಡಿಕೊಂಡು ಕುದುರೆಡವು ಪಟ್ಟಣದಲ್ಲಿ ವಂದು ಸುಂದರವಾದ ಯೀಗರ್ಜಿ ಕಟ್ಟಿಸಿ ಅದಕ್ಕೆ ಸೇಂಟ್ ಜೆನ್ನಫರಮ್ಮ ಚರ್ಚ್ ಯಂದು ಹೆಸರಿಡಬೇಕೆಂದು ಹೇಳಿ.. ಅವರಿಂದ ವಾಗ್ದಾನ ಪಡೆದು ಅವರಿಗೆ ಹದಿನಯ್ದು ನೂರು ಬೆಳ್ಳಿ ರೂಪಾಯಿಗಳಿದ್ದ ತೊಗಲ ಚೀಲವನ್ನು ಹಸ್ತಾಂತರ ಮಾಡಿದನು. ಅದಕಿದ್ದು ಜೆನ್ನಿಫರ ಯೋನೋ ಗ್ನಾಪಕ ಮಾಡಿಕೊಂಡವಳಂತೆ ಯದ್ದು ಬಂದು” “ಅಯ್ಯಾ ಪಾದರರಿಗಳಾ... ಅದಕ್ಕೆ ನನ್ನ ಹೆಸರಿಡೋದು ಸರುವಂಥಾ ಯೋಗ್ಯವಲ್ಲ. ಅದಕ್ಕೆ ಸಾಂಬಯ್ಯನ ಹೆಸರಿಡಬೇಕು. ಅಲ್ಲಿ ಯೇಕಕಾಲಕ್ಕೆ ತಾಯಿ ಸಾಂಬವಿಗೂ, ಮಾತೆ ಮೇರಿಯಮ್ಮಗೂ ಪೂಜೆ ಪುನಸ್ಕಾರ ಪ್ರಾರ್ಥನೆ ನಡೆಯುವಂತೆ ನೋಡಿಕೊಳ್ಳಬೇಕು.. ಅಲ್ಲಿ ಮತಾಂತರ ನಡೆಸಬಾರದು” ಯಂದು ಮುಂತಾಗಿ ಕರಾರು ಯಿಧಿಸಿದಳು. ಅವರಿಂದ ವಾಗ್ದಾನ ಪಡೆದು ಅವರನ್ನು ಬೀಳ್ಕೊಟ್ಟಳು. ಯೀ ಪ್ರಕಾರವಾಗಿ ಸರಿಸುಮಾರಾಗಿ ಖುಷಿಗೊಂಡಂಥಾ ತನ್ನ

ಹೆಂಡತಿಯೊಂದಿಗೆ ಪ್ರಯಾಣಕ್ಕಣಿ ಯಾಗುವುದು ಯಡ್ಡವರ್ಡನಿಗೆ ತಡಹಿಡಿಯಲಿಲ್ಲ. ವದ್ದೆಗೊಳ್ಳುತಲಿದ್ದ ಕಣ್ಣುಗಳ ಮ್ಯಾಲ ವಂದು ಕಯ್ಯಿ ಯಿಟುಕೊಂಡೇ ಸಿಬ್ಬಂದಿ ಮಂದಿ ಸಾಮಾನು ಸರಂಜಾಮನ್ನು ಕುದುರೆಗಾಡಿಗಳ ಮ್ಯಾಲ ಯೇರಿದರು. ಯಲ್ಲಾಪ್ರಕೊರಚರಟ್ಟಿ ಕಳ್ಳಕಾರರು ಹೋಗೋ ಹಾದೀಲಿ ಅಡ್ಡಗಟ್ಟಿ ದರೋಡೆ ಮಾಡಿಯಾರೆಂಬ ಹೆದರಿಕೆಯಿಂದ ಸಶಸ್ತ್ರನೂರಾರು ಮಂದಿ ಸಯ್ನಿಕರು ಹಿಂದೆ ಮುಂದೆ ಹೊರಡಲು ಅಣಿಗೊಂಡರು....

ಸಾವುರ ಕಣ್ಣುಗಳೊಳಗಿಂದುದುರೀವುದುರೀ ವದ್ದೆಯಾಗಿದ್ದ ನೆಲದ ಮ್ಯಾಲ ಘಳಕ್ಕನೊಂದೊಂದು ಹನಿ ಕಣ್ಣೀರುದುರಿಸುತ್ತ ಅವರಿವರ ತಲೆ ನೇವರಿಸುತ್ತ, ಸಣ್ಣ ಕಂದಮ್ಮಗಳನ್ನಪ್ಪಿಕೊಳುತ.. ಯಿಡಬೋಕೋ ಬ್ಯಾಡಮೋ ಅಂಬುವಂತೆ ಹೆಜ್ಜೆಗಳನ್ನೆಣಿಸುತ್ತಿಡುತ.. ಕೋನಿಕೆ ಕುದುರೆಡವಿದ್ದ ದಿಕ್ಕಿಗೆ ಕಯ್ನೆತ್ತಿ ಮುಗುದು ಜೆನ್ನಿಘರಮ್ಮ ಜೋಡು ಕುದುರೆಗಳನ್ನೂಡಿದ್ದ ಸಾರೋಟೊಳಗೆ ಗಂಡನ ಪಕ್ಕ ಕೂಕೊಂಡಳು. ಆಕೆ ಬಿಟ್ಟು ವುದ್ದಾನ ವುಸುರೊಂದು ಸುಂಟರಗಾಳಿ ರೂಪಧಾರಣ ಮಾಡಿ ಸುಳುದಾಡುತಾ ಸುಳುದಾಡುತಾ ಹಿಡಿದ ತೆಂಕಣ ಹಾದಿ ಯಾವುದೆಂದರೆ.....

ಅತ್ತ ಸೊಕ್ಕೆ ಗ್ರಾಮದಲ್ಲಿ ಭೀಮನೆಂಬ ಸುನಕದ ಗಂಟಲೊಳಗೆ ಚಂಡನ ತರಡು ಬೀಜಗಳು ವಡಲಿಗಿಳಿಯದೆ ಅಲ್ಲೆ ಅಂಟಿಕೊಂಡುಬಿಟ್ಟಿದ್ದವು. ಯಿದ್ದ ಸ್ಥಿತಿಯಲ್ಲಿಯೇ ಅದರ ಸರೀರದಾದ್ಯಂತ ತನ್ನ ಅಗಾಧ ಮಯ್ಮೆ ಬೀರಲು ತೊಡಗಿ ಯೇಸೋ ದಿವಸಗಳು ವುರುಳಿದ್ದವಷ್ಟೆ.. ಅದು ರಾಸಲೀಲಾ ಯಿಷಯದಲ್ಲಿ ತಕ್ಕುದಾದ ನಯುಪುಣ್ಯವನ್ನು ಕೊನೆಕೊನೀಕೆ ನಷ್ಟ ಮಾಡಿಕೊಂಡಿತ್ತಷ್ಟೆ.. ಕಾಮತ್ರುಷೆ ಯನ್ನದುಮಿಡಲಾರದೆ ಅದು ಮುಗುಲಿಗೆ ಮುಖ ಚಾಚಿ ಬೊವ್ವವ್ವೋ ಯಂದು ಮೊಳಿಡುತಲಿದ್ದುದನ್ನು ಕೇಳೀ ಕೇಳಿ ಭೋ ಮಂದಿ ರೋಸಿಗೊಂಡು ಬಿಟ್ಟಿದ್ದರು. ಹೆಂಗಾದರು ಮಾಡಿ ಅದನು ಜೀವಧರಿಸಿರಲೆ ಹಿಡಿದು ಅದರ ಗಂಟಲು ಬಗೆದು ಚಂಡನ ತರಡು ಬೀಜಗಳನ್ನು ತೆಗೆದು ಜಳಜಳ ತೊಳೆದು ತಾವ್ಯಾರಾದರು ತಿಂದು ಯೀರ್‍ಯವಂತರಾಗಬೇಕೆಂದು ವಳಗೊಳಗೆ ನಿರ್ಧರಿಸಿದ್ದರು.. ಅಂಥ ತಮ್ಮ ಗಂಡಂದಿರಿಗೆ ಸಿಕ್ಕರೇನು ಗತಿಯಂದು ಅವರವರ ಹೆಂಡಂದಿರು ವುಸ್ಸೋss ಅಂತ ಅದನು ಗದುಮೋದು ಮಾಡುತಲಿದ್ದುದು ವಂದು ಕಡೀಕಿದ್ದರೆ.. ಯಿನ್ನೊಂದು ಕಡೀಕೆ ಅವರವರ ಗಂಡಂದಿರು ಹಿಡಿಯುಲೆಂದು

ಮುಂದಕೋಗೋದು.. ಹಿಂದ ಹಿಂದ ಹಿಂದಕ ಜರುಗೋದು ಮಾಡುತಲಿದ್ದರು. ಯೀ ನಡುವೆ ರಾಜಾ ಮಾರಾನಾಯಕನ ಆಗ್ನೆ ಮೇರೆಗೆ ಆತನ ಪ್ರಧಾನ ಮಂತ್ರಿಯಾದ ವುಪ್ಪುಲ ನರಸಿಮ್ಮಾತ್ಯನು ಗ್ರಾಮದಾದ್ಯಂತ ಹಾಕಿಸಿದ್ದ ಟಾಮು ಟಾಮು ಯೇನಿತ್ತೆಂದರೆ "ಭೀಮನೆಂಬ ಸ್ವಾನವು ಅರಮನೆಯೊಳಗಿಂದ ಅನರ್ಘ್ಯ ವಸ್ತುಮೊಂದನ್ನು ಕಳುವು ಮಾಡಿ ಗಂಟಲಲ್ಲಿ ದಾಚಿಕೊಂಡು ತಪ್ಪಿಸಿಕೊಂಡಿರುತ್ತದೆ.. ಚರಾಸ್ತಿಯಾದ ಅದೂ, ಸ್ಥಿರಾಸ್ತಿಯಾದ ಅದರ ಗಂಟಲೊಳಗಿರುವುದೂ ಅರಮನೆಯ ಸೊತ್ತಾಗಿರುತ್ತದೆ.. ಹೊಡೆದು ಬಡಿದು ಅದಕ್ಕಾಗಲೀ, ಅದರ ಗಂಟಲೊಳಗಿನ ಅಮೂಲ್ಯ ವಸ್ತುವಿಗಾಗಲಿ ಹಾನಿ ಮಾಡಿದವರನ್ನು.. ಆ ವಸ್ತುವನ್ನು ಲಪಟಾಯಿಸಿದವರನ್ನು.. ಆಸ್ಥಾನವು ದೇಸದ್ರೋಹಿಗಳೆಂದು ಪರಿಗಣಿಸಿ ಮರಣದಂಡನ ಶಿಕ್ಷೆಗೆ ಗುರಿ ಮಾಡಲಾಗುತ್ತದೆ. ಕೇಳಲಿಲ್ಲಾಂದೀರಿ.. ಹೇಳಲಿಲ್ಲಾಂದೀರಿ.. ಹುಷಾರ್...."

ಯೀ ಟಾಮು ಟಾಮೇ ಯಿಡೀ ಗ್ರಾಮದ ಲಕ್ಷ್ಯವನ್ನು ಅದರತ್ತ ಸೆಳೆದಿತ್ತು. ರಾಜಾಗ್ನೆಯನ್ನು ಧಿಕ್ಕರಿಸುವ ಯದೆಗಾರಿಕೆ ತೋರಿಸಿತ್ತು.. ಅದು ರಾಜನ ಕಯ್ಗೆ ಹಸ್ತಾಂತರವಾಗಬೇಕೋ.. ಬ್ಯಾಡಮೋ ಯಂಬ ಯಿಷಯದಲ್ಲಿ ವಡಕು ಮೂಡಿ ಗ್ರಾಮ ಯಿಬ್ಭಾಗವಾಗಿತ್ತು.. ಯಿಂಥ ವಡಕಿನ ಸಾಯದಿಂದಾಗಿಯೋ. ಚಂಡನ ತರಡು ಬೀಜಗಳ ಮಯಿಮೆಯಿಂದಾಗಿಯೋ ಭೀಮ ಯಾರ ಕಯ್ಗೂ ಸಿಕ್ಕದೆ ಕಣ್ಣಾಮುಚ್ಚಾಲೆಯಾಟ ನಡೆಸಿತ್ತು.. ಅತ್ತ ಅರಮನೆಯಲ್ಲಿ ರಾಜ ಮಾರನಾಯಕನು ಹಲಕುಂದಿ ಮೋಬುಳಾಚಾರ್ಯರ ಸಲಹೆ ಮೇರೆಗೆ ವಂದು ಮೊಳದುದ್ದದ ಬಂಗಾರದ ಸಿಸ್ನವನ್ನು ಅಂತಃಪುರದ ಕೋಣೆಯೊಳಗೆ ಯೇದಿಕೆ ಮ್ಯಾಲ ನಿಟಾರನೆ ಪ್ರತಿಷಾ«ಪಿಸಿ ತದೇಕಚಿತ್ತದಿಂದ ಅದನ್ನೇ ನೋಡುತ ಸಿಸ್ನೋಪಾಸನಾರೊತಾರೂಢನಾಗಿದ್ದನು.. ನಡುನಡುವೆ ಬೊವ್ ಬೊವ್ ಯಂಬ ಧ್ವನಿ ಕೇಳಿಸಿದಂತಾಗಿ 'ಭೀಮ ಸಿಕ್ಕಿತೇನ್ರಲೇ' ಯಂದು ಕೂಗುತ್ತಿದ್ದನು.. ಆತನ ರಾಣಿವಾಸದವರು ಲಟ್ಟಿಗೆ ಮುರುದು ತಮ್ಮಾ ಗಂಡನನ್ನು ಹೀನಾಯಮಾನಾಯವಾಗಿ ಸಪಿಸುತ್ತಿದ್ದರು.. ಗ್ರಾಮದೊಳಗಿದ್ದ ಹಿರೀಕ ಮಂದಿ ಯೀ ತಮ್ಮ ರಾಜನಿಗೆ ಪ್ರಜೆಗಳ ವಳಿತಿಗಿಂತ ತನ್ನ ಸಿಸ್ನವೇ ರಾಜತಾಂತ್ರಿಕ ಸಮಸ್ಯೆಯಾಗಿ ಬಿಟ್ಟಿರುವುದಲ್ಲಾ.. ದತ್ತಮಂಡಲ ಪ್ರಾಂತದ ಸಾಯಿರಾರು ಮಂದಿ ಜಮೀನ್ದಾರರನ್ನು ನುಂಗಿ ಅರಗಿಸಿಕೊಂಡಿರುವ ಕಲೆಟ್ರುಮನ್ರೋ ಸಾಹೇಬ ಹೇಳದೆ ಕೇಳದೆ ಬಂದು ಯಿವನ ಸೊಕ್ಕಡಿಸಬಾರದಾ ಯಂದಲ್ಲಲ್ಲಿ ಪೇಚಾಡಿ

ಕೊಳ್ಳುತ್ತಿದ್ದರ....

ಯಿತ್ತ ಕುದುರೆಡವು ಪಟ್ಟಣಯಂಬುದು ಅಯ್ತುಲ್ಲಾ.. ಅಲ್ಲೊಂದು ರಣಬಯಲೆಂಬುದು ವುಂಟಲ್ಲಾ.. ಅದರಲ್ಲೊಂದು ನೆರಿಕೆ ತಡಿಕೆ ಗೋಡೆಗಳಿಂದಾವೃತ ಹವಾಮಹಲೆಂಬುವ ಭವನಮೊಂದಿತ್ತಲ್ಲ. ಅದು ಕಣ್ಣೀರಿಂದ ಮುಖ ಮಾರೀ ತೊಳಕಂತಿದ್ದುದಕ್ಕೆ ಕಾರಣ ವಂದೇ ಯರಡೇ ಸಿವ ಸಿವಾ...

ಯಲ್ಲಿಂದಿದನು ಸುರುವು ಮಾಡೋದಪ್ಪಾ.. ಮಣಿಮಂಚಯಂಬ ವರಸಿನ ಮ್ಯಾಲ ಅಷ್ಟು ದಿನಗಳ ಕಾಲ ಮಲಕ್ಕಂಡಿದ್ದ ರಾಜಮಾತೆ ಭಯ್ರುಮಾಂಬೆಯ ಬೆನ್ನು ಸೆಲೆತು ಗಬ್ಬು ನಾರು ತಲಿತ್ತು. ಕಜ್ಜಿಪುಳ್ಳೆ ಕಂದಮ್ಮಳಂಥಾಗಿದ್ದ ಆಕೆ ಹರೇದಾಕಿ ಯಿದ್ದಾಗ ಹೆಂಗಿದ್ದಾಕಿ? ಯೇನುಕಥೆ? ಸತ್ರುಗಳ ಕಣ್ಣಿಗೆ ಯಾವತ್ತೂ ಮುಖಮಾಡಿರದಿದ್ದ ಬೆನ್ನನ್ನು ನೆಲಕ್ಕೆ ಮುಖ ಮಾಡಬೇಕಾಗಿ ಬಂತಲ್ಲ. ಕುಬುಸ, ಸೀರೆಸೆರಗೆಲ್ಲ ಬೆನ್ನ ತೊಗಲೊಳಗೆ ಕರಗಯ್ತುಲ್ಲಾ, ಯೇನು ಕರುಮ ತನ್ನ ರಾಜಮಾತೇದು? ಅದನ್ನೆತ್ತಿದರೆಲ್ಲಿ ಮಯ್ಯೆಲುವೆಲ್ಲ ಲಟಲಟಾಂತ ಮುರುಕೊಂಡು ಬಿಡುವಮೋ? ಯತ್ತಿದೋರಿಗೆಲ್ಲಿ ರಾಜಹತ್ಯಾ ಪಾಪ ಅಂಟುವುದೋ? ಆಕೆಯ ವಡಲು ಯಾವತ್ತಾದರು ಬರ ಅನುಭೋಸಿತ್ತಾ? ಗೊಡ್ಡು ಅನುಬೋಸಿತ್ತಾ? ತಕ್ಕೋರಿ ಅಂತ ವರುವರುಸ ಕೊಂದೊಂದರಂತೆ ಗಂಡುಕೂಸು ಹೆಣ್ಣುಕೂಸುಳನ್ನು ಹೆತ್ತೆತ್ತು ರಾಜನ ಕಯ್ಗೆ ಕೊಟ್ಟಿದ್ದಳಲ್ಲಾ, ಮಕ್ಕಳೇಸು ಯಂಬುದು ಲೆಕ್ಕಕ ಸಿಗುತಾಯಿಲ್ಲ. ಮೊಮ್ಮಕ್ಕಳೇಸು ಯಂಬುದು ಲೆಕ್ಕಕ ಸಿಗುತಾಯಿಲ್ಲ. ಮರಿಗಿರಿ ಮೊಮ್ಮಕ್ಕಳೇಸು ಯಂಬುದು ಲೆಕ್ಕಕ ಸಿಗುತಾಯಿಲ್ಲ, ಹೆಂಗೆಂಗೋ ಬೆಳಕಂಡ ಅವು ಹಂಗಂಗ ಹೊಂಟೋದರ ಲೆಕ್ಕ ಹೆಂಗ ಸಿಕ್ಕೀತು? ಅರಮನೆ ಬ್ಯಾರೆ ಅಲ್ಲ.. ತಾನು ಬ್ಯಾರೆ ಅಲ್ಲ ಯಂದು ದ್ರುಡ ನಿರ್ಧಾರ ಮಾಡಿ ನೆಟ್ಟಗ ನಿಂತುಕೊಂಡವನೆಂದರ ಕಾಟನಾಯಕ ವಾತ್ರ. ಅವನು ಮಿಸುಕಾಡದಂಗಿರಬೇಕೆಂದೇ ರಾಜಮಾತೆಯು ಆಯ್ದು ಮೂಲೆಗಳಿಂದ ಆಯ್ದು ಮಂದಿ ಗಾವಾದ ಪಿಳ್ಳೆಗಳನ್ನು ತೆಗೆದು ಗಂಟು ಹಾಕಿದ್ದಳು. ಚದುರಂಗದ ಮಾ ಚಟಗಾರನಾದ ಆತನು ತಾನೇ ವಂದು ಚದುರಂಗದ ಕಾಯಾಗಿ ತನ್ನ ಹೆಂಡತೀರಿಂದ ಆಟವಾಡಿಸಿಕೊಳ್ಳುತ್ತ ಅರಮನೇಲಿ ವುಳುಕೊಂಡುಬಿಟ್ಟಿದ್ದನು. ಅಲ್ಲದೆ ತನ ಬಲಂಗಯ್ಯಲ್ಲಿ ರಾಜಯೋಗದ ಗೆರೆ ನಿಚ್ಚಳವಾಗಿದೆಯಂಬ ಕಾರಣಕ್ಕೆ ರಾಜಮಾತೆ ತನ್ನ ಗಂಡನನ್ನು ಕಳಕೊಂಡಮೇಲೆ ಆಕೆ ರೋಸಿದ್ದು.. ಆಟು ಗಡುತರ ಯಿದ್ದಾಕಿ ಯೀಟು ಗಡುತರ ಆಗಿದ್ದಕ್ಕೆ ಕಾರಣಗಳು ವಂದೇ ಯರಡೇ..

ವಂದು ಕಡೀಕೆ ಕಲೆಟ್ರುಮನ್ರೋ ಸಾಹೇಬನ ಆಡಳಿತಾತುಮಕ ಕಾರಣ ಬೇರೆ.. ಯಿನ್ನೊಂದು ಕಡೇಕ ಮೋಬಯ್ಯನ ಕಾಟ ಬೇರೆ, ಮತ್ತೊಂದು ಕಡೇಕ ರಾಜಪರಿವಾರವನ್ನು ನಿಭಾಯಿಸೋ ಯಸನ ಬೇರೆ, ಮಗುದೊಂದು ಕಡೇಕ ತನ್ನ ಮೀಸೆಗೆ ಮಣ್ಣಂಟಬಾರದೆಂಬ ಹಠ ಬೇರೆ.. ಯಿಂಥಪ್ಪ ಹತ್ತು ಹಲವು ಚಿಂತೆ ಯಸನಗಳನ್ನು ಹಚ್ಚಿಕೊಂಡು ನುಜ್ಜುಗುಜ್ಜಾಗಿಬಿಟ್ಟಳು. ಆಕೆ ವರಸಿಗಂಟಿದ್ದೇ ಅಂಟಿದ್ದು ಮ್ಯಾಲಕೇಳಲೇ ಯಿಲ್ಲ.. ತಾವು ಅಥವಾ ತಮ್ಮ ವಮುಸಸ್ತರು ಅರಮನೆಯ ವುಪ್ಪನ್ನು ವುಂಡೀವಿ ಯಂಬ ಕಾರಣಕ್ಕೆ ಸುತ್ತಾನ್ನಾ ಕಡೇಲಕಿದ್ದ ಹೇಮಾ ಹೇಮಿ ವಯ್ದುರುಗಳು ತಮ್ಮನ್ನು ಯಾರು ಕರೆಯದಿದ್ದರೂ ತಮ್ಮೋಟಕೆ ತಾವೇ ಬಂದು ರಾಜಮಾತೆಯ ನಾಡಿ ಪರೀಕ್ಷೆ ಮಾಡಿ ಯಿದು ಮನೋಯಾದಿ ಅಯ್ತೆ.. ಸಿಮ್ಮಾಸನವನ್ನು ಮನಸ್ಸಿನಾಗಿಟುಕೊಂಡು ನೆಲ ಹಿಡುದಾಳ ಯಂದು ಹೇಳಿ ಹೋದರೇ ಹೊರತು ವಬ್ಬರಾದರೂ ಅವುಸಧವನ್ನು ಅರೆದು ಕೊಡಲಿಲ್ಲ.. ಕೆಲವು ಹಿರೀಕ ಮಂದಿ "ರಾಜ್ಯಲಕ್ಷ್ಮಿ ಬಲು ಚಂಚಲ ಸೊಭಾವದಾಕಿ.. ಆಕೆ ಯಿವತ್ತೊಬ್ಬರ ಕಯ್ಗೆ ಹೋತಾಳೆ.. ನಾಳೆ ಯಿನ್ನೊಬ್ಬರ ಕಯ್ಗೆ ಹೋತಾಳೆ.. ಅದನ್ಯಾಕ ಮನಸ್ಸಿಗೆ ಹಚಕಂಡೀಯವ್ವಾ.. ಯದ್ದು ಅಡ್ಡಾಡು ತಾಯಿ" ಯಂದು ಪರಿಪರಿಯಿಂದ ಅಂಗಲಾಚಿದರೂ ಭಯ್ರಮಾಂಬೆ ನೆಲಬಿಟ್ಟು ಮ್ಯಾಲೆದ್ದೇಳಲಿಲ್ಲ....

ದಿವಸಗಳು ವಂದರ ಮ್ಯಾಲೊಂದರಂತೆ ವುರುಳಿದವು.. ವುರುಳಿದಮೋs ವುರುಳುತಲೇ ಹೋದುವು.. ಕ್ರಮ ಕ್ರಮೇಣ ಅಂಗಾಂಗಗಳು ಚಲನಾ ಸವುಕರ್‍ಯಗಳನ್ನು ಕಳಕೊಳುತಾ ಹೋದವು. ಹೋದವು ಹೋಗೇ ಬಿಟ್ಟವು. ಬಾಯಿವೊಂದುಳಕೊಂಡಿತ್ತು, ಅದೂ ಬಿದ್ಹೋತು, ಕಣ್ಣುಗುಡ್ಡೆ ವೊಂದುಳುಕೊಂಡಿತ್ತು, ಅದೂ ರೆಪ್ಪೆಯೊಳಗ ಸೇರಿಕೊಂಡುಬಿಟ್ಟಿದ್ದು ಕೆಳಕ್ಕಿಳಿಯಲೇಯಿಲ್ಲ. ಯೀಗ ವುಳಕೊಂಡಿರೋದು ವುಸುರಾಟವೊಂದೆ. ಅದು ಆಗೊಮ್ಮೆ, ಯೀಗೊಮ್ಮೆ ಯೇರುತಾ ಯಿಳಿತಾ ಸರ್‍ರಂಭೋ ಸಬುಧ ಮಾಡುತಯ್ತೇ, ಸದರಿ ಸರೀರದಾಗಿನ ಯಾದಾರ ರಂದ್ರದಿಂದ ಪ್ರಾಣಪಚ್ಚಿ ಯೀಗೊರಬಂದೀತು.. ಆಗೊರ ಬಂದೀತೆಂದು ಯಮಧರುಮರಾಜ ಅಲ್ಲೇ ಮಗ್ಗುಲಿದ್ದು ಕಾಯಲಕ ಹತ್ತಿರುವನು. ಪ್ರತಿಯೊಬ್ಬರು ಕೂಡ ಅದೇ ನಿರೀಕ್ಷೆಯಲ್ಲಿದ್ದು ಯೀಗ್ಗೆ ಪುಟ್ಯಾಪೂರ್ತಿ ಸಾಯಬೇಕಾದರೆ ತಾವೇನು ಮಾಡಬೇಕೂಂತ ಯಸನ ಮಾಡುತಯ್ದಾರೆ. ಜಾವ ಜಾವಕ್ಕೊಮ್ಮೊಮ್ಮೆ ಆಕೇಯ ಮೂಗಿನಡಿ ಬೊಟ್ಟಿಟ್ಟು ಯಿನ್ನೂ ಜೀವ ಅಯ್ತೆ.. ಜೀವ ಅಯ್ತೇಂತ ವುದ್ಗಾರ

ತೆಗೆತಾ ಅಯ್ದಾರೆ.. “ಯವ್ವಾ ಲಗೂನ ಪ್ರಾಣಾನ ಬಿಟ್ಟು ಪುಣ್ಯ ಕಟ್ಟಿಕೊಳ್ಳವ್ವಾ.. ಅದನ್ಯಾಕ ಯಿಟುಕೊಂಡದ್ದೀ ಸರೀರದಾಗ.. ಜೀವ ಪಚ್ಚೀಗೆ ಚಿತ್ರಹಿಂಸೆ ಕೊಡುತ್ತಿದ್ದೀಯಲ್ಲಾ ಯಿದು ನ್ಯಾಯಾನ.. ಯಿದರಿಂದ ನೀನು ಯಾವ ಸುಖ ವುಂಬುತೀ” ಯಂದು ಅಂಗಲಾಚುತಯ್ದಾರೆ.. ಆಚೇಕ ಯಿಚೇಕ ಕೂಕಂಡಿದ್ದ ಜೋತಿಷಿಗಳು ಯೀ ಗಳಿಗೇಲಿ ಪ್ರಾಣಬಿಟ್ಟರೆ ಪಾಡು.. ಆ ಗಳಿಗೇಲಿ ಪ್ರಾಣಬಿಟ್ಟರೆ ಪಾಡು ಯಂದು ಅಡಿಗ್ಗಡಿಗೆ ಹೇಳುತಯ್ದಾರೆ.. ಬಾಗಿಲ ಮುಂದುಗಡೆ ಕಾಳಾಪ್ರದ ಪ್ರಸಿದ್ಧ ಭಜನೆ ತಂಡದೋರು ಹೇಳದೆ ಕೇಳದೆ ಬಂದೋರು ಹೇಳದೆ ಕೇಳದೆ ಹೋಗಬೇಕು.. ಸಾಯೋದು ಕೂಡ ಪಯಿತ್ರಕಾರ್ಯ ಯಂದು ಅರ್ಥ ಬರುವಂಥ ಹಾಡುಗಳನ್ನು ಯೇರುದೊನಿ ತೆಗೆದು ಹಾಡುತಯ್ದಾರೆ.. ಅದೆಲ್ಲವನ್ನೂ ತನ್ನ ಚೂರುಪಾರು ನೆಟ್ಟಗಿದ್ದ ಕಿವಿ ಮೂಲಕ ರಾಜಮಾತೆ ಭಯ್ರಮಾಂಬೆಯು ಕೇಳಿಸಿಕೊಳ್ಳುತಯ್ದಾಳಂದರ ಅಯ್ದಾಳ....

ಆದರೂ ಪ್ರಾಣಬಿಡುವ ದೊಡ್ಡ ಮನಸ್ಸನ್ನು ತಾನು ಮಾಡುತ್ತಿಲ್ಲ. ವಬ್ಬರಾರ ತಾನು ಯಿನ್ನೊಂದೀಸು ಕಾಲ ಬದುಕಿರಬೇಕೆಂದು ಯಸನ ಮಾಡುತ್ತಿಲ್ಲವಲ್ಲಾ, ವಬ್ಬರಿಗಾರ ವುಪಕಾರ ಸ್ಮರಣೆ ಯಿಲ್ಲವಲ್ಲಾ ಯಂದಾಕೆ ಯಸನ ಮಾಡುತ್ತಿರುವುದು ಯಾರಿಗೂ ತಿಳಿದು ಬರುತಾಯಿಲ್ಲ...

ಹೆಂಗಪ್ಪಾ ಯೀಕೇಯ ಸರೀರದಿಂದ ಪ್ರಾಣ ಪಚ್ಚಿ ಹಾರಿಹೋಗೋ ಹಾಂಗ ಮಾಡಬೇಕು ಯಂದು ಚಿಂತಿಸುತ್ತಿದ್ದವರ ಪಯ್ಕಿ ಕಾಟನಾಯಕ ಪ್ರಮುಖನಾಗಿದ್ದನು. ತನ್ನ ಅಯ್ದು ಮಂದಿ ಹೆಂಡಂದಿರು ವಕ್ಕೊರಲಿನಿಂದ “ಯಾರಾದ್ರುತಿಳುವಳಿಕಸ್ಥ ಮಂದೀನ ಕರಕೊಂಡು ಬಂದು ಲಗೂನ ಪ್ರಾಣ ಬಿಡೂಂತ ಹೇಳಿಸಬಾರ್ದೇನು?” ಯಂದು ಗದರಿಸಿ ಹೇಳುತ್ತಿದ್ದುದರಿಂದ ಆತನು ತಾನು ರಾಜನೆಂಬ ವುಯ್ಯ ಚಳಿ ಬಿಟ್ಟು ವೂರೊಳಕ್ಕೆ ಹೋಗಿ ಬಂಗಾಳಯ್ಯನನ್ನು ಕಂಡು “ಯಜಮಾನ.... ನಿನ್ನಿಂದೊಂದುಪಕಾರ ಆಗಬೇಕಪ್ಪಾ” ಯಂದು ಕೇಳಿದನು. ಯೇಸೋ ವರುಷಗಳ ಹಿಂದೆ ಹುಟ್ಟಿದ್ದ ಆ ಮುದೇತನು “ಅಂಥಾದ್ದು ಯೇನು ನಾಯಕರಾ?” ಯಂದು ಕೇಳಿದ್ದಕ್ಕೆ ಯೀತನಿದ್ದು ಯಲ್ಲಾ ಯಿವರಿಸಿ “ಹೆಂಗಾರ ಮಾಡಿ ಪ್ರಾಣ ಬಿಡು ಅಂತ ಹೇಳಬೇಕಪ್ಪಾ” ಅಂದನು. ಅದಕ್ಕಾತನು ಗಹಗಹಿಸಿ ನಗಾಡುತ “ನಾನ್ಯಾವ ನರಕಕ್ಕೋಗ್ಲಿ ನಾಯಕರಾ.. ಯಿದು ನನ್ನಿಂದಾ ಗದು” ಯಂದು ಹೇಳಿದನು. ತದನಂತರ ಈತ ಕಂಡ ಬೊಮ್ಮಲಿಂಗಯ್ಯನೆಂಬ ಹಣ್ಣು ಹಣ್ಣು ಮುದೇತನು “ಪ್ರಾಣ ಬಿಡು ಅಂತ

ನಾನೇಳಿದರೆ ಆಕೆ ಹೆಂಗ ಬಿಡುತಾಳಪ್ಪಾ.. ಯೀಸು ವರುಸ ಭೂಮಿ ಮ್ಯಾಲ ಯಿರಬೇಕಂತ ಆ ಬ್ರೆಮ್ಮನು ಪ್ರತಿಯೊಬ್ಬರ ಹಣೆಯಾಗ ಬರೆದಿರುತಾನಪ್ಪಾ.. ಅದನು ತಪ್ಪಿಸೋ ಸಕ್ತಿ ಯಾರಲ್ಲೂ ಯಿಲ್ಲ ಯಂದೇಳಿದನು. ಯೇನಾದರಾಗಲಿ ಅಂತ ಪಟ್ಟಣದ ನಿಷು«ರವಾದಿ ಮುಪ್ಪಾನು ಮುದೇತ ನಾದ ಮೂಡ್ಲು ಕೊಳ್ಳೆಪ್ಪನಲ್ಲಿಗೆ ಹೋಗಿ "ನೀನಾರ ಬಾರೆಜ್ಜಾ" ಯಂದು ಕೇಳಿದ್ದಕ್ಕೆ ಆತನಿದ್ದು "ನಾನೂ ಬಂದಿದ್ನೆಪ್ಪಾ.. ರಾಣೆವ್ವನ ತಡಿಕೆಯಂಗಿರೋ ಸರೀರದ ಯಾದೋ ವಂದು ಮೂಲ್ಯಾಗ ಪ್ರಾಣ ಸಿಕ್ಕಾಕ್ಕೊಂಡು ವದ್ದಾಡುತ್ತಿದ್ದಂಗಯ್ತಪ್ಪಾ.. ಬೇಲಿ ಮ್ಯಾಲ ವಣಾಕಿದ ದೋತರ ಬಿಡುಸ್ದಂಗ ಬಲು ಹುಷಾರಿಕೀಲೆ ಅದನು ಬಿಡಿಸಿ ಹೊರ ಬರೋ ಹಾಂಗ ಮಾಡಬೇಕು.. ನಾನೇ ಬಂದು ವಂದುಕಯ್ನ ನೋಡ್ಕಂತೀನಿ ನಡೀss" ಯಂದು ಯದ್ದು ಕುಂಡಿ ಬುಡಕಿದ್ದ ವಲ್ಲೀನ ಕೊಡವಿ ಹೆಗಲಿಗಿಳಿಬಿಟ್ಟುಕೊಂಡು ಹೊಂಟನು. ಹೋಗು ಹೋಗುತ ದಾರ್‍ಯಾಗ "ಯ್ಯೋ ಯ್ ಬಂಗಾಳಯ್ಯಾ. ಯ್ಯೋಯ್...ಕೊಳ್ಳೆಯ್ಯಾ, ಯ್ಯೋಯ್ ಜವರಯ್ಯಾ" ಯಂದು ವಬ್ಬೊಬ್ಬರನು ಹೆಸರಿಡಿದು ಕರೆದನು. ಪಟ್ಟಣದ ಮುದೇರಿಗೆಲ್ಲ ನಾಯಕಮಣಿಯಾದ ಆತ ಕರೆದದ್ದಕ್ಕೆ ಯಾರೂ ಬಾರದಿರಲಿಲ್ಲ.. ನೂರಾರು ಮುದೇರೆಲ್ಲರು ಪ್ರವಾಹದೋಪಾದಿಯಲ್ಲಿ ಹೊಂಟು ಹವಾ ಮಹಲು ತಲುಪಿದರು. ಯ್ಯೇಟೊಂದು ವಯಸ್ಸಾಗಯ್ತೆ ಯಿವರಿಗೆಲ್ಲ, ಹರೇದ ಹುಡುರಂಗಯ್ದಾರಲ್ಲ.. ಸದರಿ ಪಟ್ಟಣದ ಮಂದಿಗೆ ಬದುಕೋದಷ್ಟೆ ಗೊತ್ತುಂಟೇ ಹೊರ್ತು ಸಾಯೋದೇ ಗೊತ್ತಿಲ್ಲವಲ್ಲ.. ಯಿವರ ಆಯುಷ್ಯ ಯಾವಾಗ ತುಂಬುವುದೋ.. ತಾನ್ಯಾವಾಗ ಯಿವರ ಪ್ರಾಣ ತೆಗೆಯುವೆನೋ ಯಂದು ಅಲ್ಲೇ ಅಗೋಚರ ಸ್ಥಿತೀಲಿ ನಿಂತಿದ್ದ ಯಮದರುಮರಾಜನು ಅವರನ್ನೆಲ್ಲ ನೋಡಿ ಗೊಣಗಾಡಿಕೊಂಡನು. ಅವುದು.. ಆ ಮಾಶಯ ಹಂಗ ಅಂದುಕೊಂಡಿದ್ದರಲ್ಲಿ ವುತ್ಪ್ರೇಕ್ಷೆಯಿರಲಿಲ್ಲ. ವಂದೆರಡು ಮನುವಂತರಗಳ ಹಿಂದೆಯೇ ಹುಟ್ಟಿರುವಂಥೋರಿಗೆ ಸದರಿ ಪಟ್ಟಣದಲ್ಲಿ ಬರಯಿರಲಿಲ್ಲ.. ಹಾವು, ಆಮೆ, ಮೊಸುಳೆಗಳಂಗ ದೀರ್ಘಾವಧಿಕಾಲ ಬದುಕು ನೀಚಬಲ್ಲಂಥೋರು ಅವರಾಗಿದ್ದರು. ಅಂದಮಾತ್ರಕ್ಕೆ ಸಾವು ಅವರ ಗೊಡವೆಗೆ ಹೋಗುತ್ತಿರಲಿಲ್ಲ ಯಂದರ್ಥವಲ್ಲ.. ಆಗಾಗ್ಗೆ ಜರುಗುತ್ತಿದ್ದ ಯುದ್ಧಗಳಲ್ಲೋ, ಕಾಳಗಗಳಲ್ಲೋ ತಮ ತಮ್ಮ ರಾಜರ ಪರವಾಗಿ ಕಾದಾಡಿ ಯೀರಮರಣ ವನ್ನಪ್ಪುತ್ತಿದ್ದರು.. ಅಥವಾ ಗ್ರಾಮಕ್ಕಾಗಲೀ ತಮ್ಮ ಕುಲಕ್ಕಾಗಲೀ ಅನುವು ಆಪತ್ತು ಬಂದಾಗ ಅದನ್ನು

ನಿವಾರಿಸಲೋಸುಗ ನಾ ಮುಂದು, ತಾ ಮುಂದು ಅಂತ ಮುನುಗ್ಗಿ ಬಲಿಗೊಳ್ಳುತ್ತಿದ್ದರು.. ಅಥವಾ ತಮ್ಮ ಪ್ರೀತಿಪಾತ್ರರ ಪಯ್ಕಿ ಯಾರಾದರು "ಸಾಯ್ಲಿಕ್ಕೇನಾಗಯ್ತೆ ಧಾಡಿ" ಯಂದು ಗದರಿಸಿದೊಡನೆ ಹನುಮಪ್ಪನ ಬತೇರಿಯಿಂದ ಕೆಳಗೆ ಬಿದ್ದೋ.. ಜಯ್ನ ಮುನಿಗಳಂಗ ಸಲ್ಲೇಖನ ರೊತ ಕಯ್ಗೊಂಡೋ ಪ್ರಾಣ ಬಿಡುತ್ತಿದ್ದರು ಅಥವಾ ಬದುಕೋದು ಬಲು ಬ್ಯಾಸರಾಗಯ್ತೆ ಯಿದರಿಂದ ನನರುಂಡ ಕಡಿಯಂದು ಅವರಿವರಲ್ಲಿ ಅಂಗಲಾಚುತ್ತಿದ್ದರು.. ಹೇಳದೆ ಕೇಳದೆ ಅಟ್ಟಂಬಟ್ಟಾರಣ್ಯೇವಿನ ಗರುಭಸ್ಥಾನ ತಲುಪಿ ಮಟ್ಟಸ ಜಾಗದಲ್ಲಿ ಕೂಕಂಡು ಪುಣ್ಯ ಬರತಯ್ತೆ ನಮ್ಮನ್ನ ತಿಂಬ್ರೀ ಯಂದು ಕ್ರೂರ ಮ್ರುಗಗಳೆದುರು ಬೇಡಿಕಂತಿದ್ದರು ಸಿವನೇ....

ಅದೊತ್ತಟ್ಟಿಗಿರಲಿ.....

ಅಗೋ ಅಲ್ಲಿ ಹೊಂಗೆ, ಬೇವು, ವುಂಚಿ ಮರಗಳಾದವಲ್ಲ.. ಆ ತೋಪಿನೊಳಗ ಬರುತಲಯ್ದಾನ, ಯಡಕ ಗೊಂಜಾಡರಲಡುವಯ್ಯನೂ, ಬಲಕ ಕಾಡುಗೊಲ್ಲರೀರಯ್ಯನೂ.. ಯಿರುವಂಗದ.. ಹ್ಞಾ...ಹ್ಞಾ.. ಅವುದು.. ಆ ಮುವ್ವರು ಬಂದೇ ಬಿಟ್ಟರು.. ರಣಮಹಲ ಸನೀಕ ಬಂದೇ ಬಿಟ್ಟರು.. ಸಿವನೇ, ಹೊಳ್ಳಾಗಿರಿ ಅನಲಿಲ್ಲ.. ದಾರಿ ಬಿಡರಿ ಅನಲಿಲ್ಲ.. ಅಲಲಲಾ ಅಂಬುವಷ್ಟರೊಳಗ.. ಪರ ಯಿರೋಥ ನಿಲುವು ತಳೆವುದರೊಳಗ.. ಯಿವರಿಗೆ ಹೇಳಿ ಕಳುವಿದವರ್‍ಯಾರು ಯಂಬ ಅನುಮಾನ ತಾಳುವುದರೊಳಗ....

ಕಾಡುಗೊಲ್ಲರೀರಯ್ಯನು ಸೀದ ರುಗ್ಣ ಶಯ್ಯೆಗೆ ಬಂದು "ಯಕ್ಕಾss ನಾನವ್ವಾ.. ಕಾಡುಗೊಲ್ಲ ವೀರಯ್ಯ.. ಬಂದೀನಿ ನೋಡು.." ಯಂದನಕಂತ ಕಣ್ಣೊಳಗ ವಂಥಟಗು ನೀರನು ತಂದುಕೊಂಡನು. ಅದರ ಹಿಂದೆಯೇ ಬಂದ ಸಾಂಬಯ್ಯನು "ಯವ್ವಾ ನೋಡು" ಯಂದೇಟಿಗೆ ಮುದುಕಿ ತ್ರಾಸು ಪಟ್ಟು ಕಣ್ಣು ಬಿಟ್ಟು ಪಿಳಿ ಪಿಳಿ ನೋಡಿ "ಪಿಕದಾನಿ.. ಅಯ್ಯೋ ನನ ಪಿಕದಾನಿ ಮಾತಾಡು ತಯ್ತಲ್ಲಾ.. ಯೇನೋ ಅಂದುಕೊಂಡಿದ್ದೆ.. ಪಿಕದಾನಿಗೂ ರುದಯ ಅಯ್ತಲ್ಲಾ" ಯಂದು ಯಲ್ಲಾರನು ಗಾಬರಿಗೊಳಿಸಿತು....

ಸಾಂಬಯ್ಯಗ ನಡಕೋತಿದ್ದ ಸೊಸೆ ತಿರುಮಲಾಂಬೆಗೆ ತಮ್ಮತ್ತೆಗೆ ದಯವದ ತಿಕಡಿ ಬಡಕೊಂಡು ದೆವ್ವ ಆದರೇನು ಯಂಬ ಚಿಂತೆ ಕಾಡಲು ಹೇಳುತ್ತಾಳೆ.. "ಯತ್ತೀ..ಯಂಥಾ ಅಯ್ಲುಗೇಡಿ ಅದೀಯಲ್ಲ ನೀನು.. ಖುದ್ದ ಸಾಯುಜ್ಯ ಕರುಣಿಸಲಕಂತ ಸಾಂಬವಿಯು ಸಿಸುವುಗಗ ಪಿಕದಾನಿ

ಅಂಬುತೀಯಲ್ಲ..."

"ಪಿಕದಾನೀನ ಕನವರಿಸುತ್ತಿರ ಬೌದು.. ಅದಕ್ಯಾಕ ಬೇಸರ ಮಾಡಿಕಂತಿ ಮಗಳೇ.. ಮಯ್ಯಿ ಮ್ಯಾಲ ಕಬುರಿಲ್ಲದಾಕಿ ಆಟು ಮಾತಾಡಿದ್ದೇ ಹೆಚ್ಚು" ಯಂದು ಆಕೆಯ ತಂದಿಯೂ..

"ಅನ್ನೋದನ ಅಂದಾಳ ನಮ್ಮವ್ವ.. ಅಂದ ಮಾತನು ಯಿೂಗ ವಾಪಾಸು ಪಡೀಲಕ ಬರುತದೇನು? ಸಾಂಬವಿಯೇ ನಮ್ಮವ್ವನ ನಾಲಗೆ ಮ್ಯಾಲ ಕುಂತು ಹೀಂಗ ಮಾತಾಡಿಸಿರಬೌದು.. ತಿಳಕss" ಎಂದು ಗಂಡ ಕಾಟಯ್ಯನೂ...

"ಅದಕss ನೀನು ಕೂದಲು ಕಳಗೊಂಡು ಬೋಳಪ್ಪನಾಗೀss" ಯಂದು ಮತ್ತೆ ತಿರುಮಲಾಂಬೆಯೂ.. ಪತಿ ಭಕುತಿ ಲುಕ್ಸಾಣಗೊಂಡ ಪರಿಣಾಮವಾಗಿ....

ಕಪಾಳಕ ಬಡದಂಗಾದರೂ ಸಯ್ರಿಸಿಕೊಂಡ ಸಾಂಬಯ್ಯನು "ಮಗಳೇ....ಯಿನ್ಯಾಕ ತಡ ಮಾಡುವಿ.. ಹೆಂಗ ಬಂದಿದ್ಯೋ ಹಂಗ ಬರಿಗಯ್ಲಿ ನನ ಹಿಂದೆ ಹೊಂಟು ಬಂದು ಬಿಡು.. ಯಾಕ ಮಿಜಿ ಮಿಜಿ ಮಾಡುತೀ" ಯಂದಂದು ತನ್ನ ಕಯ್ಯಾರ ವಂದು ಚವುಟು ಗಂಗೋದಕ ವನ ಆಕೆಯ ಬಾಯಿಗೆ ಬಿಡಲು ಯತ್ನಿಸಿದನು....

ಆದರೆ ಆ ವಯೋರುದ್ದೆಯು ತನ್ನ ಬಾಯನು ದಿಮ್ಮಗ ಹಿಡಿಯಿತೇ ವಿನಾ ಅಪ್ಪೀ ತಪ್ಪೀ ತೆರೆಯಲಿಲ್ಲ.. ತನ್ನೊಂದು ಕಯ್ಯನ ಬಲವಂತದಿಂದೆತ್ತಿ ಬಾಯಿಗೆ ಅಡ್ಡಯಿಟುಕೊಂಡು ತನ್ನ ಕಣ್ಣುಗಳನ್ನು ಯಿೂಟಗಲ ತೆರೆದು ಮೋಬಯ್ಯನತ್ತ ದುರುಗುಟ್ಟಿ ನೋಡುತ್ತಲೇ ತನ್ನ ಜೀವವನ ವದಲಿತು ಯಂಬಲ್ಲಿಗೆ ಸಿವ ಸಂಕರ ಮಾದೇವಾss...

ನಡೆಯಬೇಕಿದ್ದುದೂ.. ನಡೆಯಬಾರದಿದ್ದುದೂ ನಡೆದು ಹೋಯಿತು.. ಅದೆಲ್ಲ ದಯವ ಸಂಕಲ್ಪ.. ಅದೆಲ್ಲಾ ಬರೋಬ್ಬರಿ.. ಆದರೆ ರಾಜಮಾತೆಯ ಭವುತಿಕ ಕಾಯವನು ಸಂಭಾಳಿಸುವುದು....

ಹೆಂಗ? ಹಿಂಗs ನಾಕು ಮಂದಿ ಹೆಗಲ ಮ್ಯಾಲ ಹೊರಿಸಿ ಸಲೀಸಲಾಗಿ ಸುಡುಗಾಡಿಗೆ ಸಾಗಿಸಿ ಗುದ್ದಿನಲ್ಲಿಟ್ಟು ಬರಲಕಂದರ ಆಕೆ ಸಾಮಾನ್ಯ ಮನುಶ್ಯಳೇನು? ಆಕೆ ತಾನು ಬದುಕಿದ್ದಾಗಲೇ ತನ್ನ ಭವುತಿಕ ಕಾಯದ ಯಿಲೇವಾರಿ ಕುರಿತು.. ಸಮಾಧಿಯ ವಾಸ್ತು ಕುರಿತು ಚಿಂತಿ ಮಾಡುತಲಿದ್ದುದು ಯಾರಿಗೆ ತಾನೆ ಗೊತ್ತಿಲ್ಲ?.. ಅದಕ್ಕೆಂದೇ ನುರಿತ ವಾಸ್ತುಸಿಲ್ಪಿಗಳನ್ನೂ.. ಅಪರ ಕರ್ಮಯಿಸಾರದರನ್ನೂ.. ಅರಮನೆಗೆ ಕರೆಯಿಸಿಕೊಂಡು ಚಿಂತನ ಮಂಥನ

ನಡೆಸಿದ್ದು ಯಾರಿಗೆ ತಾನೆ ಗೊತ್ತಿಲ್ಲ?...

ಮರಣಾನಂತರ ತನ್ನ ಸಮಾದಿ, ಯಷ್ಟುದ್ದ? ಯಷ್ಟಗಲ ಯಿರಬೇಕು? ಯಾವ ನಮೂನಿ ಕಲ್ಲುಗಳನ ತನ್ನ ಪಯಿತ್ರಕಳೇಬರದ ಸುತ್ತ ಪೇರಿಸಿಡಬೇಕು? ಅದಕ ವುಪಯೋಗಿಸುವ ಗಾರೆಯನ್ನು ನೀರಿನಿಂದ ತಯಾರಿಸುವುದೋ? ಹಾಲಿನಿಂದ ತಯಾರಿಸುವುದೋ? ಸಮಾಧಿವಳಗ ತನ್ನ ಸುತಮುತ್ತ ಪೇರಿಸಿಡಬೇಕಿರುವ ತನ್ನ ಪ್ರಿಯವಾದ ವಸ್ತುಗಳ್ಯಾವ್ಯಾವು? ಸಮಾಧಿ ಮ್ಯಾಲ ಪ್ರತಿಷ್ಠಾಪಿಸಬೇಕಿರುವ ತನ್ನ ಸುಂದರ ಮೂರ್ತಿಯನ್ನು ಸುಂದರವಾಗಿ ಕೆತ್ತುವಂಥ ಶಿಲ್ಪಿಗಳು ಯಲ್ಲಲ್ಲವರೆ? ಯಾರ್ಯಾರವರೆ?.. ಸಮಾಧಿ ಹಲವು ಅಂಕಣ.. ಬಾಗಿಲುಗಳ ಗುಡಿಯಂಗಿರಬೇಕು.. ಅದರ ಮ್ಯಾಲ ಬಿಸಿಲನು ಕಯ್ಯಿ ಬೀಸಿ ಕರೆಯುವಂಥ ಸಿಖರ ಕಳಸಯಿರಬೇಕು.. ತಾನು ಯಿಹಲೋಕ ತ್ಯಜಿಸಿದ ಮೂರನೆ ದಿವಸಕ್ಕೇನೆ ಕನಿಷ್ಟ ಮೂರು ಸಾವುರ ಮಂದಿ ಬ್ರಾಮ್ಮಣರಿಗೆ ಭೂರಿ ಭೋಜನ ಯವಸ್ಥೆ ಮಾಡಬೇಕು.. ತನ್ನ ಸಮಾಧಿಗೆ ತ್ರಿಕಾಲ ಪೂಜಿ ಪುನಸ್ಕಾರ ನಡೆಯುತ್ತಿರಬೇಕು.. ತನ್ನ ಜೀವ ರುತ್ತಾಂತ ಕುರುತು ಪುರಾಣ ಬರೆಸಬೇಕು.. ಅದರ ಪುಣ್ಯ ಸ್ರವಣ ಪ್ರತಿ ಸಂವತ್ಸರ.. ಅದಕ್ಕಿದ್ದ ಆಸೆಗಳನು ವಂದರ ಮ್ಯಾಲ ವಂದರಂತೆ ಪೇರಿಸಿಟ್ಟರೆ ಆನೆ ಮ್ಯಾಲ ಆರೇಳು ಮೊಳವುದ್ದದ ಗಂಡಾಳು ನಿಂತು ಕವಡೇನ ತೂರಿದರೆ ಅದು ಯೇಟೆತ್ತರ ಹೋಗುವುದೋ ಆಟಾಗುವುದು.. ಆ ಆಸೆಗಳ ಪೊರೆಯಿಸಲಕ ಹೋದರೆ ಯಿಡೀ ಕುದುರೆಡವು ಸಾಮುರಾಜ್ಯವನ ಮಾರಿದರೂ ಪಾವಲಿ ಭಾಗದಷ್ಟು ರೊಕ್ಕ ದೊರಕಲಾರದು.. ರೊಕ್ಕ ಯಿದ್ದಿದ್ದರ ಯಿ ಮುದೇದು ಮನ್ರೋ ಸಾಹೇಬನ್ನೊಂದು ಯಾಕ ಸಾಂಬವೀನೂ ತನ್ನ ಸಮಾಧಿ ಯೊಳಗಿಟುಕೊಂಡು ಬಿಡುತಲಿತ್ತೇನೋ?

ಅದು ಬದುಕಿದ್ದಾಗ ಅಂದುಕೊಂಡಿದ್ದರ ಗೊಡವೆಗೆ ಹೋಗುವುದು ಬ್ಯಾಡ.. ಅದರ ಪಯ್ಕಿ ಮದಮುಸವನ್ನಾದರೂ ಕಾರ್ಯಗತ ಮಾಡೋದೂ ಕಣಸಿನ ಮಾತು. ಯಿಗಾಗಲೇ ರಾಜಪರಿವಾರದವರು ಯಲ್ಲಾ ಕಳಕೊಂಡು ದುರ್ಗತಿ ತಲುಪಿದ್ದಾರೆ. ಹೆಣ ಸಾಗಿಸಿದೊಡನೆ ಅವರವರು ಅವರವರ ವೂರುಗಳಲ್ಲೇ ಜಳಕ ಮಾಡುತಾರೋ.. ಯೇನೋ? ಸದ್ಯಕ ಮಾಡಬೇಕಿರುವುದನ್ನು ಮಾಡಬೇಕಲ್ಲ.. ಹೆಣನ ಅನಾಥ ಸ್ಥಿತೀಲಿ ಬಿಟುಕೊಟ್ಟು ಹೋಗಲಕಾಯ್ತದಾ? ಬದುಕುವುದು ಕಷ್ಟ.. ಸಾಯುವುದು ಯಿನ್ನೂ ಕಷ್ಟ.. ಸತ್ತ ಮ್ಯಾಲ ಹೆಣಕ ಸಮುಸ್ಕಾರ ಮಾಡಿ ಮುಗಿಸಿ ಜಳಕಾ ಮಾಡುವುದಂತೂ

ಕಡುಕಷ್ಟ....

ಸಮುಸಾರಯಂಬ ಬೇತಾಳವನು ಹೆಗಲಿಗೇಳಿಬಿಟುಕೊಂಡಿದ್ದ ತಿಕ್ಕಲು ಸೊಭಾವದ ಕಾಟಯ್ಯ ನಾಯಕನು ಮುಖದ ಮ್ಯಾಲ ಸೆಲ್ಯೇವನ ಯಿಳಿಬಿಟ್ಟು ತಿರುಪಾಲಯ್ಯ ಸ್ರೇಷ್ಠಿ«ಯ ಮನೆ ಮುಂದಿನ ಪಳುಗಟ್ಟೆ ಮ್ಯಾಲ ಸೂತಕ ಯಂಬ ಕಾರಣಕ್ಕ ಕೂತು ಅಯ್ನೋರು ಕೇಳಿ ಲೇವಾದೇವಿಗಾರ ನೆದೆಯಲ್ಲಿ ಧರ್ಮಸಂಕಟವನ್ನುಂಟು ಮಾಡಿದ. ಅಯ್ನೋರನ ಯಲ್ಲಿಂದ ತರಲಿ ದೊರೆಯೇ.. ಅನ್ನದಾನ ಛತ್ರನಡೆಸೀ ನಡೆಸಿ ಕಯ್ಯಿ ಕಟ್ಟಯ್ತೆ.. ಯಂದು ಹೇಳಿ ನೂರು ಪಗೋಡಗಳನು ಕೊಟ್ಟು ಕಳುವಿದನು. ಯೀಟು ಯದಕಾದೀತು? ಅಳಲಕಾಂತ ಬರೋರ ಯಲಡಕೆ ಖರ್ದಿಗಾಗೋದಿಲ್ಲ...

ಕಳ್ಳಗಂಟು ಮಾಡಿಟ್ಟುಕೊಂಡಿರಬಹುದೆಂದೂಹಿಸಿ ನಾಯಕನು "ನೀನು ಕೊಡೇ.. ನೀನು ಕೊಡೇ" ಯಂದು ಸೆರಗೊಡ್ಡಿ ಬೇಡಿಕೊಂಡನು. "ಯೀದೇನು ನಿಂದಾ.. ನಿಮ್ಮಪ್ಪಂದಾ ಕೊಡೋಕೆ.. ನಮ್ಮ ತವರು ಮನೆಯೋರು ಹಾಕಿದ್ದು ಕನಪ್ಪಾ, ನಾವು ಕೊಡಲ್ಲ. ನೀನು ಪಂಚಲೋಹದ ಪಾತ್ರೇನ ನಮಗ ಕೊಡದಂಗ ಹೆಂಗ ಬಚ್ಚಿಕ್ಕಿದ್ದಿ.. ಗ್ನಾಪಕವುಂಟಾ? ಕೊಟ್ರೆಅದೇನು ಸವದುಹೋತಂತ ಮಾಡ್ತಿದ್ದಿಯುಲ್ಲಾ. ರಾಜರಂತೆ ರಾಜರು.. ನಿನ್ನನ್ನು ಮದುವೆ ಮಾಡಿಕೊಂಡಲಗಾಯ್ತು ವನವಾಸ ಅನುಭೋಸೋದೇ ಆಯ್ತು.. ವಂದಿನಾದ್ರುಸುಖಪಡಲಿಲ್ಲ ನಾವು.. ನಮ್ಮ ಕರುಮ.. ನೀನೇನು ಮಾಡ್ತಿ? ಅಲಲಲಾ.. ಅತ್ತೆಯೇss. ನಾವು ಕುಂತರೂ ಸೇರ್ತಿರಲಿಲ್ಲ, ನಿಂತರೂ ಸೇರ್ತಿರಲಿಲ್ಲ, ನಮ್ಮನ್ನ ಸೆರೆಯಾಳುಗಳಿಗಿಂತ ಕಡೆಯಾಗಿ ಕಂಡಳು ಪುಣ್ಯಾತ್ಗಿತ್ತಿ.. ನಿನ ತಾಯಿ.. ನಿನ ಮಾತು. ಅದೆಂಗ ಹೆಣಾನ ಮೋಣ್ ಮಾಡ್ತೀಯೋ ನಮಗ್ಗೊತ್ತಿಲ್ಲ ಕನಪ್ಪಾ.. ಮೋಣ್ ಮಾಡಿದ ಮ್ಯಾಲ ನಾಮೊಂದರಗಳಿಗೆ ಯಿಲ್ಲಿರೋರಲ್ಲ.. ನಾವು ನಮನಮ್ಮ ಮಕ್ಕಳು ಮರಿ ಕಟಕೊಂಡು ನಮನಮ್ಮ ತವರು ಮನೀ ಕಡೇಕ ಹೊಂಟೋಗೋರೇ ಸಯ್ಯಿ.. ಅಲಲಲಾ.. ಯಂದು ಮುಂತಾಗಿ ತಲಾ ವಬ್ಬೊಬ್ಬರು ತಮ್ಮೆದೇಲಿ ಬಚ್ಚಿಟ್ಟುಕೊಂಡಿದ್ದ ವಾಗ್ ಬಾಣಗಳನ್ನು ವಂದರ ಹಿಂದೊಂದರಂತೆ ತಮ್ಮ ಪತಿ ಪರಮಾತುಮನತ್ತ ಬಿಟ್ಟು ಘಾಸಿಗೊಳಿಸಿದರು.. ಘಾಸಿಗೊಂಡಾತನು ಯಿಲ ಯಿಲಾಂತ ವದ್ದಾಡಿ ಹೋದನು. ಹೊಟ್ಟೇಲಿರೋ ಸಿಟ್ಟು ರೆಟ್ಟೇಲಿಲ್ಲವಲ್ಲಾ ಯಂದು ಅವುಡುಗಚ್ಚಿ ದವಡೆ ಸಯ್ಲು ಮಾಡಿಕೊಂಡನು. ಯಂಥ ಹೆಂಡರವರಪ್ಪಾ ಯಿವರು, ಅನ್ನೋದು ಆಡೋದಿದ್ದರ ಹಾಸಿಗೆ

ಮ್ಯಾಲಾಡಲಿ.. ಅದು ಬಿಟ್ಟು ನಾಕು ಮಂದಿ ಸಮಚ್ಚಮ ಆಡಿ ಕಯ್ಯಿ ಹಿಡಿದ ಗಂಡನ ಮರುವಾದಿ ಕಳೆಯೋದೇನು?... ತನಗೇನು ಯಿವೀಸು ಮಂದೀನ ಮಾಡಿಕೊಳ್ಳಬೇಕೆಂಬ ವುದ್ದೇಶ ಸರುವಥಾ ಯಿರಲಿಲ್ಲ. ವಬ್ಬಾಕಿಯೇ ಸಾಕು ಯಂದು ತಾನು ಬಡಕೊಂಡಿದ್ದುಂಟು. ಅದಕಿದ್ದು ತನ್ನ ಮಲತಾಯಿಯು "ನಿಂಗೊತ್ತಿಲ್ಲಪ್ಪಾ.. ರಾಜಮನತನದೋರೆಂದರ ಯೇಸು ಹೆಂಡರಿರುತಾರೋ ಆಟು ವಳ್ಳೇದು. ಅನುವು ಆಪತ್ತಿಗಾಗೋ ಬೀಗರು ಬಿಜ್ಜರು ಯಿರಬೇಕಪ್ಪಾ. ವಬ್ಬೊಬ್ಬ ಹೆಂಡತಿ ನೂರು ಕಾಲಾಳಿಗೆ ಸಮ. ನೀನೊಂದೆ ಸುಮಕಿರು" ಯಂದು ಮೂಲೆಮುರುಕಟ್ಟಿನಲ್ಲಿ ಹೆಂಡರನ್ನು ಹುಡುಕಿ ತನ್ನ ಕೊಳ್ಳಿಗೇ ಕಟ್ಟಿಹಾಕಿದ್ದಳು. ಆಕೆಯ ವುದ್ದೇಶ ಮಲ ಮಗ ಕಾಟಯ್ಯನ ಸೊಕ್ಕು ಮುರಿಯೋದೆ ಆಗಿತ್ತು. ಆತ ಯೇನು ವುರೀತಿದ್ದ.. ಯೇನು ಕಥಿ? ಕಾಮಿನಾಳು ಜಮೀಂದಾರು್ರಯಂಟಯ್ಯನ ಸಪ್ತಮ ಸುಪುತ್ರಿರೇಣುಕಿಯನ್ನು ಆರನೇ ಸಲ ತಗುಲಿ ಹಾಕಬೇಕೆಂದು ಆಕೆ ಯೋಚಿಸಿದ್ದುಂಟು. ಅದಕ್ಕೆ ತಾನು "ಮೋಗಮ್ವೋ ಮೋಗು. ಯೀ ಅಯಿದು ಮಂದಿ ಹೆಂಡ್ರುಕಯ್ಲಿ ವದ್ದಾಡೋದೇ ಮಸ್ತು ಆಗಯ್ತೆ ಯಿನ್ನಾಕೇನೆಲ್ಲಿ ಸಂಭಾಳಿಸ್ಲಿ?" ಯಂದು ತಾನು ನಿರಾಕರಿಸಿದ್ದುಂಟು. ಅಬ್ಬಾ! ತನ ಅಯಿದು ಮಂದಿ ಹೆಂಡಿರೇ! ಗಂಟಿ ಸವುಡಿಯರೆ ಯಂದು ರವುಸದಿಂದ ಅವುಡುಗಚ್ಚಿದ. ದ್ರವುಪದಿಯ ವಸ್ತ್ರಾಪಹರಣವನ್ನು ದುಸ್ಯಾಸನನು ಮಾಡುತ್ತಿದ್ದಾಗ ಪಾಂಡವರು ತಲೆತಗ್ಗಿಸಿ ಕೂಕಂಡಿದ್ದರಲ್ಲ... ಹಂಗೆ ಕೂಕಂಡಿದ್ದ ತನ್ನ ಅಯ್ದು ಮಂದಿ ಹೆಣುಕೊಟ್ಟ ಮಾಮಂದಿರ ಕಡೀಕ ಕೆಕ್ಕರುಗಣ್ಣಿಂದ ನೋಡಿದ. ಅವರ ಪಯ್ಕಿ ವಬ್ಬರಾದರು "ಗಂಡ ದೇವ್ರಿದ್ದಂಗರವ್ವಾ.. ಯದುರುತ್ತರ ಕೊಡಬಾರ್ದು" ಯಂಬ ವಂದೇ ವಂದು ಮಾತು ಅಂದಿದ್ದಲ್ಲಿ ತನಗೇಟೋ ಸಮಾಧಾನ ಆಯ್ತಿತ್ತು. ಯಂಥೋರಿದ್ದಾರಿವರು? ಹೊಟ್ಟೆಗೇನು ತಿಂಬುತ್ತಿದ್ದಾರು? ವಂಚೂರಾರ ಅರುವು ಯಿರಬಾರದೇನು? ಯಿದ್ದಲ್ಲಿ ಅಂದಾಡಿ ತೋರಬಾರದಿತ್ತೇನು? ಯಿವರು ತನಗೆ ಆಗೊಮ್ಮೆ ಯೀಗೊಮ್ಮೆ ಸಾಯ ಮಾಡೇಯಿಲ್ಲ ಅಂದರ ದೇವರು ಮೆಚ್ಚಾಕಿಲ್ಲ. ಯಿವರು ಪಾವಲಿ ಭಾಗ ಕೊಟ್ಟಂತೆ ಮಾಡುತ್ತಿದ್ದುದು, ಅದಕ್ಕೆ ಬದಲಾಗಿ ಮೂರು ಪಾವಲಿ ಭಾಗವನ್ನು ತಮ್ಮ ಪುತ್ರಿಯರ ಸಾಯದಿಂದ ಕದ್ದು ಮುಚ್ಚಿ ಹೊತ್ತೊಯ್ಯುತ್ತಿದ್ದುದೂವುಂಟು. ಹೆತ್ತ ತಂದೆ ಬ್ಯಾರೆ ಅಲ್ಲ.. ಹೆಣುಕೊಟ್ಟ ಮಾವಂದಿರು ಬ್ಯಾರೆ ಅಲ್ಲ.. ಅಂತ ತಾನು ಗೊತ್ತಿದ್ದೂ ಗೊತ್ತಿಲ್ಲದವನಂಗೆ ಸುಮ್ಮಕ ಯಿರುತ್ತಿದ್ದುದೂ ವುಂಟು.

"ಲೋ ಕಾಟ್ಯಾ.. ಹೆಂಡ್ರೂನ ಆಗಾಗ್ಗೆ ವದ್ದೂಬಡುದೂ ಅಂಕೇಲಿಟುಕ್ಯಾ.. ಯಿಲ್ಲಾಂದರ ನೆತ್ತಿ ಮ್ಯಾಲ ಮೆಣಸು ಅರಿತಾರ?" ಯಂದು ಆಗಾಗ್ಗೆ ಹೇಳುತ್ತಿದ್ದ ದೊಡ್ಡಮ್ಮನ ಮಾತನ್ನು ಜಾರಿಗೆ ತರದೇ ಯಿದ್ದದ್ದು ತನ್ನ ಮೂರ್ಖತನ. ಆಗಲಿದ ತಂದೆ ತಾಯಿ ನೆಪ್ಪು ಮಾಡಿಕೊಂಡ.. ಮಲತಾಯಿಯ ಕಾಟ ನೆಪ್ಪು ಮಾಡಿಕೊಂಡ.. ಹೆಂಡಂದಿರಿಂದ ತಾನನುಭವಸಿದ ನರಕ ಯಾತನೇನ ನೆಪ್ಪು ಮಾಡಿಕೊಂಡ. ದೇಸಾಂತರ ಹೋಗಿರುವ ತನ್ನ ಹತ್ತದಿನಯ್ದು ಮಂದಿ ಮಕ್ಕಳನ್ನು ನೆಪ್ಪು ಮಾಡಿಕೊಂಡ.. ಯಿಗಾದ ಅವಮಾನದೊಂದಿಗೆ ಯೇನೆಲ್ಲವನ್ನು ತಳುಕ ಹಾಕಿ ನೋಡಿದ. ವಡಲೊಳಗಿಂದ ದುಕ್ಕ ದುಮ್ಮಾನ ವತ್ತರಿಸಿ ಬಂತು.. ಬಿಕು ಬಿಕ್ಕಿ ಅಳಬೇಕೆನಿಸಿತು. ತನ್ನ ದುಕ್ಕದ ಗವುರವ ಕಾಪಾಡಬಲ್ಲಂಥ ದೊಡ್ಡಮ್ಮನ ಕಳೇಬರ ಯಲ್ಲಯ್ತಂತ ಹುಡುಕಾಡಿದ. ಅದು ಯಿರಬೇಕಿದ್ದ ಜಗೇವಲ್ಲಿರಲಿಲ್ಲ.. ಆಗಲೇ ಅದನ್ನೆತ್ತಿ ಹೊತ್ತೊಯ್ದು ಅದೇ ಮಹಲೊಳಗಿದ್ದ ಯಿತಿಹಾಸ ಪ್ರಸಿದ್ಧ ಬಚ್ಚಲಲ್ಲಿ ಕುಂಡ್ರಿಸಿ ಸರುವಕಾಲಕ್ಕೂ.. ಸ್ರೇಷ«ಮೂ, ಪಯಿತ್ರಮೂಆದ ಪಂಚೋದಕದಿಂದ ಮಜ್ಜಣ ಮಾಡಿಸಿ.. ವಂದ್ನಾಕು ಮಂತ್ರಹೇಳಿಸುತ ಹೊಸ ಬಟ್ಟೆ ಬರೆ ವುಡುಸಿ, ಗೋಣು ಜೋಲಾಡದಿರಲಂತ ಸಿದಿಗೆ ಬಡದು.. ರಾಜ ಮಾರಾಜ್ರುತಾವು ಯಿಸ್ರಾಂತ ಪಡೆಯಲಕಂತ ಕಟ್ಟಿಯಿಸಿದ್ದ ಕಟ್ಟೆ ಮ್ಯಾಲ ದಕ್ಷಿಣಾಭಿಮುಖವಾಗಿ ಕುಂಡರಿಸಿದ್ದರು. ಯದುರಾ ಬದುರಾ ಸೂತಕ ಮುಡುದು ಕೂಕಂಡಿದ್ದಂಥಾ ಮಣ್ಣಿನ ರುಣವಂದಿಗರಿಗೆ ಅಷ್ಟಾದಶ ಪುರಾಣಗಳ ಪಯ್ಕಿ ವಂದೆನಿಸಿದ ಗರೂಡ ಪುರಾಣವನ್ನು ವಾಚನ ಮಾಡಲಕೆಂದು ಮೋಬುಳ ಸಾಸ್ತ್ರಿಯು ತನ ಗಂಟಲು ಸರಿಪಡಿಸಿಕೊಳ್ಳುತ್ತಿದ್ದ ಸಮಯದಲ್ಲೇ ಕಾಟಯ್ಯನು ತನ್ನೆದೆಯೊಳಗಿದ್ದ ಯಾವತ್ತು ದುಕ್ಕವನ್ನು ವಾಂತಿ ಮಾಡಿಕೊಳ್ಳಬೇಕೆಂದು ದುಡುದುಡನೆ ಮೋಡಿ ಹೆಣದ ಪಾದಕ ಬಿದ್ದು "ಯವ್ವಾss ನಿನಗಿಂಥಾ ಸಾವು ಬರಬಾರದಾಗಿತ್ತೇ.. ನಿನ ಘನ ಸೊಸ್ತೇರಿಗೆ ನಿನಗಿಂತ ಅವರವರ ವಸ್ತರ ವಡವೆಯೇ ಹೆಚ್ಚಾದವಲ್ಲೇ ಯವ್ವಾ... ವಬ್ಬಾಕಿಯ ಕಣ್ಣೊಳಗ ದುಕ್ಕಕ ಬೇಕಂದರ ವಂದನಿ ನೀರಿಲ್ಲವಲ್ಲೇ.. ಯೀ ರಾಜ್ಯದ ರಾಣಿಯಾದ ನಿನಕೊಳ್ಳಾಗ ವಂದ್ತೊಲ ತೂಕದ ಬಂಗಾರದೊಡವೆ ಯಿಲ್ಲವಲ್ಲೇ.. ಹಂಗ ಸಾಯಬೇಕು.. ಹಿಂಗ ಸಾಯಬೇಕಂತ ಕಣಸು ಕಾಂಬುತ್ತಿದ್ದೆಲ್ಲೇಯವ್ವಾ.. ನೀನಂದುಕೊಂಡಿದ್ದ ನೂರರ ಪಯ್ಕಿ ವಂದಾರ ಆಯ್ತೇನೆ? ನೀನು ನಿಜುವಾದ ರಾಣೀ ಆಗಿದ್ದಲ್ಲಿ.. ನಿನಗ ಸಿಟ್ಟು ಸೆಡವು ರವುಸಯಿದ್ದ ಪಕ್ಷದಲ್ಲಿ ನೀನು ದೆವ್ವ ಆಗಲಕೇ ಬೇಕು.. ಯೀ ಲವುಡೇರನ

ಹಿಡದು ಕಾಟ ಕೊಡಲಕೇಬೇಕು.. ಕಟಗಂಡ ಗಂಡನ್ನ ವುರುಸಿಗಂಡು ತಿನ್ನೋ ಯಿವುರು ಸುಮ್ಮಕ ಬದುಕಬಾರ್ದು.. ಯಲ್ಲಲ್ಲೋ ಯಿದ್ದವರನು ತಂದು ನನ ಕುತ್ತಿಗೀಗ ಗಂಟು ಹಾಕಿದಿ.. ಅರಮನೇನ ತುಂಬಿಸಿಕಂಡೀ, ನಿನರುಣಾನ ಸತ್ತಮ್ಯಾಲಾದರು ತೀರಿಸಬೇಕೆಂಬ ಗ್ಯಾನಾ ಅಯ್ತಾ ಯೀ ಲವುಡೇರಿಗೆ?..” ಯಂದು ಮುಂತಾಗಿ ಆಡ್ಯಾಡಿಕೋತ ಅಬ್ಬರಿಸಿ ಅಳತೊಡಗಿದನು. ಹಿಂಗ ತವುಗ ಅಳಲಕ ಬರೋದಿಲ್ಲಾಂತ ಸದರಿ ಪಟ್ಟಣದ ಪ್ರಸಿದ್ಧ ಅಳುಗಾರ್ತಿಯರೆಂದೆನ್ನಿಸಿ ಕೊಂಡಿದ್ದ ಬಾಲವ್ವ, ಬೀಳವ್ವ, ಬಲತವ್ವ, ಹಿತಲವ್ವ, ತಿಕ್ಕಡೆವ್ವರೇ ಮೊದಲಾದ ಮುದೇರು ತಮ ತಮ್ಮ ಮೂಗುಗಳ ಮ್ಯಾಲ ಬೊಟ್ಟಿಟ್ಟುಕೊಂಡರು ಆಚ್ಚರ್ಯದಿಂದ.. “ಅರಮನೆ ಗಂಡುಸರೇ ಹಿಂಗ ಥಂದಾಗಿ ಆಳುತಾರಂದ ಮ್ಯಾಲ. ನಮಗ್ಯಾತರ ಕೆಲಸಯ್ತೆ.. ಬನ್ರೆವ್ವಾ ಬರ್‍ರಿ” ಯಂದು ಮೂಳೆವ್ವ ಹೇಳುತ್ತಲೇ ವುಳಿಕೇರು ಆಕೆಯ ಹಿಂದ ನಿಂತರು. ಅವರು ಅಳೋದೆಂದರ ವಂದು ಗರೂಡ ಪುರಾಣವಾಚನಕ್ಕೆ ಸಮಯಂದೂ, ಅವರ ಅಳು ಕೇಳುತಾ ಕೇಳತಾ ಆತುಮವು ವಂದು ಜೊಂಪು ನಿದ್ದೆ ತೆಗೆದು ಪ್ರಸನ್ನಗೊಳ್ಳುವುದೆಂದೂ ಸದರಿ ರಾಜ್ಯದೊಳಗ ವಂದು ನಂಬಿಕೆ ನೆಲಗೊಂಡಿತ್ತಷ್ಟೆ. ಅದಕಿದ್ದು ಯಲ್ಲವರು ಹೊಂಟೋತಾರೆಂದು ಯದರಿದ ಗೀರಯ್ಯನು ಸಡನ್ನ ಯದ್ದೋಗಿ... “ನೀವಿಂಗ ಹೊಂಟೋದರೆಂಗರವ್ವಾ..? ರಾಜಮಾತೆಯ ಮಾರಿ ನೋಡಿರಿ.. ಕೊಡೋದು ಕೊಡುತಾರ, ತಗೋಳ್ಳೋದು ತಗವಂತಿರಿ” ಯಂದು ಧಯರ್ಯ ಹೇಳಿ ತರುಬಿ ಕುಂಡರಿಸಿ ಅವರ ಮುಂದಕ ಯಲಡಕೆ ಚೀಲ ದಬ್ಬಿದನು. ಅವರೂ ಸೇರಿಕಂಡಂತೆ ಯುಲ್ಲಾರು ಕಾಟಯ್ಯನಂಥ ರಾಜಕುವಾರನೂ ವಂದಲ್ಲಾ ವಂದಿವಸ ಅತ್ತೇತೀರುತ್ತಾನೆಯಂದು ತಿಳಿದುಕೊಂಡರು. ಅವರ ಆಚ್ಚರ್ಯಕ್ಕೆ ಯಿನ್ನೊಂದು ಕಾರಣಯಂದರೆ ತನ್ನ ಸೊಂತ ತಾಯಿ ಮೋಬುಳಾಂಬೆ ಸಾಯಲಕ್ಕ ದೊಡ್ಡಮ್ಮ ಪರೋಕ್ಷವಾಗಿ ಕುಮ್ಮಕ್ಕು ನೀಡಿದ್ದಳೆಂಬ ಯಿಷಯ ತಿಳಿದುಕೊಂಡ ಛಣದಿಂದ ರಾಜಕುಮಾರ ಕಾಟ ನಾಯಕನು ಭಯ್ರುಮಾಂಬೆಯನ್ನೂ.. ಯಾವಾತನ ಸರೀರದೊಳಗ ಹರಿತಿರಬೌದಾದ ರಗುತವು ನಾನಾ ನಮೂನೀ ಅನುಮಾನಗಳಿಗೆ ಆಸುಪದ ಮಾಡಿಕೊಡುತ್ತದೋ ಆ ಸರೀರವಂತನು ಹಕ್ಕುದಾರ ಹೆಂಗಾದಾನು ಯಂದು ಭಯ್ರುಮಾಂಬೆಯು ಮಲಮಗ ಕಾಟನಾಯಕನನ್ನೂ ವಳಗೊಳಗೆ ಯಾವತ್ತೂ ಸೇರಿದುದಿಲ್ಲ. ಪರಸ್ಪರ ಪ್ರೀತಿ, ಪ್ರೇಮ, ಮಮಕಾರ ಯಿರುವಂತೆ

ಅವರೀರುವರೂ ನಾಟಕವಾಡುತ್ತಿದ್ದರೆಂಬುದು ಸರುವ ಯಿದಿತ. ಆದರೆ ಅದೆಲ್ಲ ತಮ ತಮ್ಮ ಯಿರೋಧಿ ಸತ್ತಮ್ಯಾಲ ಪ್ರಕಟವಾಗೋದು ಲೋಕಾರೂಢಿ ಯಿರುವುದು. ಆದರೆ ಅದನ್ನು ರಾಜಕುಮಾರನು ತಿರುಗಾಮುರುಗಾ ಮಾಡುತ್ತಿರುವುದು ಯೇಟೊಂದು ಯಿಚಿತ್ರಅಯ್ತಲ್ಲಾ? ಅದನ್ನೆಲ್ಲ ವದ್ದುಕೊಂಡು ದುಕ್ಕವು ಮುನ್ನುಗ್ಗಿ ಬಂದಿರಬೌದಾ? ಯಂದೆಲ್ಲರು ಸಂದೇಹಿಸಿದರು.

ಮಣ್ಣಿನ ರಿಣ ಹರಕೋಬೇಕಂತ ಸುತ್ತನ್ನಾಕಡೇಲಿಂದ ಮಂದಿ ಹರಕೋತ ಬರುತ್ತಿದ್ದೋರು ಸುಮ್ಮನೆ ಕುಂತಿರಲಿಲ್ಲ. ಅದಾತಾ... ಯಿದಾತ...ನಾನಿದನು ಮಾಡಲೇನು? ಯಂದು ಗಾರಾಡುತಲಿದ್ದರು. ಪುವ್ವಲ ವಮುಸದ ಮೂಲ ಪುರುಸ ಯಿಲ್ಲಿ ರಾಜ್ಯ ಕಟ್ಟೋ ಮೊದಲ ಯೇನು ಕಣಸು ಕಂಡಿದ್ದನೋ? ಯೇನೋ?. ವಟ್ಟಿನಲ್ಲಿ ಯೀ ನೆಲದ ಮಣ್ಣಿನ ಜಾಯಮಾನವೇ ವಬ್ಬರ ದುಕ್ಕಕ್ಕ ಯಿನ್ನೊಬ್ಬರು ಆಗೋದಾಗಯ್ತೆ ಯಂಬುದು ನಿಚ್ಚಳ. ಮೊದಲಾ ಯಿಲ್ಲಿ ಸಾಯೋದಂದರ ಅಪರೂಪದ ದ್ರುಸ್ಯ ಆಗಿತ್ತಲ್ಲ. ಅದಕ ಯಾರಾದರು ಸತ್ತರೆಂದರ ಯಿಲ್ಲಿನ ಮಂದಿ ಬಿನ್ನ ಬೇದ ಮರತು, ಸತ್ರುತ್ವ, ಗಿತ್ರುತ್ವ ಮರತು ನೊಣ ಮುಕ್ಕುರಿದಂಗ ಗವ್ವಂತ ಮುಕ್ಕುರಿಕೋ ಸೊಬಾವದವರಾಗಿದ್ದರು ಯಂಬುದು ಖರೇ ಅಂದರ ಖರೆ, ಅದಲ್ಲದ ಯೀ ಸಾವಿಗೆ ಮೋಬಯ್ಯನೇ ಕಾರಣಕರ್ತ ಯಂಬ ಸಂಗತಿ ಪುಷ್ಟಿ ನೀಡಿತ್ತು. ಆ ಮಾತಾಯಿ ಮೋಬಯ್ಯನ ಕಣ್ಣಿನ ದ್ವಾರ, ಬಾಯಿ ದ್ವಾರಾ ಸುತ್ತಿಪ್ಪತ್ತೂರುಗಳಲ್ಲಿ ಸಾವಿನ ಸುದ್ದಿ ಬಿತ್ತರ ಮಾಡಿದ್ದಳಲ್ಲ. ರಾಜಮಾತೆ ಭಯ್ರಮಾಂಬೆ ಯಿಹಲೋಕ ತ್ಯಜಿಸಿದಂಗಯ್ತೆ.. ಸೂತಕದ ಸಕುನ ಅಲ್ಲಿ ಕಾಣಿಸುತಯ್ತೆ.. ಯಿಲ್ಲಿ ಕಾಣಿಸುತಯ್ತೆ.. ಯಂದನಕಂತ ಮಂದಿ ಹಕೋತ ಹರಕೋತ ಬಂದಿದ್ದರು, ಬರುತಲಿದ್ದರು. ಹೆಣ ಹೋರಲಕ ನಾಕು ಮಂದೀನ ಯಲ್ಲಿಂದ ತರೋದಪ್ಪಾ ಯಂದು ಅವರಿಗೆ ಹೇಳಿ ಕಳುವಬೇಕು, ಯಿವರಿಗೆ ಹೇಳಿ ಕಳುವಬೇಕು ಯಂದು ರಾಜಪರಿವಾರದೋರು ಯಸನ ಮಾಡೋದೀಗ ಅಗತ್ಯ ಯಿರಲಿಲ್ಲ. ಅದೆಲ್ಲ ತಂತಾನೆ ವದಗಿ ಬಂದುಬಿಟ್ಟಿತ್ತು.

ಕಾಟನಾಯಕನ ದುಕ್ಕದ ಯಳೆಗುಂಟ ನಡಕೋತ ಹೋದ ಆತನ ಅಯ್ದು ಮಂದಿ ಹೆಂಡರೂ, ಅವರನ್ನು ಹೆತ್ತಂಥೋರು ವಂಥಣ ಗಾಬರ್ಯಾಗಿಬಿಟ್ಟರು. ಆಕೆಯ ಅತುಮ ಸಂತ್ರುಪ್ತಗೊಳ್ಳಲಕ ತಾವೇನು ಮಾಡಬೇಕು ಯಂದು ತರ್ಜನ ಬರ್ಜನ ನಡೆಸಿದರು. ಯೀ ಮಾತಾಯಿ ಮನಸ್ಸಿನಾಗೇನಿತ್ತಳೀಮಯ್ಯಾ ಯಂದು ಹೆಣುಕೊಟ್ಟ ಮಾವಂದಿರು ಪಯ್ಕಿ

ವಬ್ಬರು ಕೇಳೇಬಿಡಲು ಅದಕ್ಕಿದು ಕಾಟಯ್ಯನು ಟಾಮು ಟಾಮು ಧೋನಿಯಲ್ಲಿ ತನ್ನ ಹೆಂಡಂದಿರ ಸುಪರ್ದಿಲೀರೋ ಯಾವತ್ತೂ ವಡವೆಗಳಿಂದ ಹೆಣವನ್ನು ಸಿಂಗಾರ ಮಾಡಬೇಕೆಂದೂ.. ಆಗ ಮಾತ್ರಆತುಮಕ್ಕೆ ಸಾಂತಿ ಲಭಿಸುವುದೆಂದೂ.. ಖುಲ್ಲಂಖುಲ್ಲಾ ಹೇಳಿಬಿಟ್ಟನು. ಯೀಗಲಾದರೂ ರಾಜರ ನಾನಾಯಿದವಾದ ವಡವೆಗಳನು ಕಣ್ತುಂಬ ನೋಡಿ ಆನಂದಿಸಬೌದಲ್ಲ.. ಯಂದು ಮಂದಿ ವಳಗೊಳಗೆ ಹಿಗ್ಗುಗ್ತಿತ್ತಿರುವಾಗ್ಗೆ.. ಘನ ಸೊಸ್ತೇರನ್ನು ಅವರವರ ತಂದೆಯಂದಿರು "ನಿಂದು ಕೊಡವ್ವಾ... ನಿಂದು ಕೊಡವ್ವಾ..." ಯಂದು ಗೋಗರೆಯ ತೊಡಗಿದರು. ಅದಕಿದ್ದು ಘನ ಸೊಸ್ತೇರು "ನಮಗಂಡನ ಕಂತರಾಟ ನಿಮಗ ಗೊತ್ತಾಗಲ್ಲರಪ್ಪಾ, ಯಿದರಾಗ ಯೇನೋ ಮಸಲತ್ತಿದ್ದಂಗಯ್ತೆ, ಬಿಚ್ರಿಅನಬ್ಯಾಡೂರೀ... ಕೊಡೂ ಅನಬ್ಯಾಡೂರಿ" ಯಂದು ಪಿಸುಗುಟ್ಟಿದರು. "ಯಿದರಾಗೇನಾರ ಮಸಲತ್ತಯ್ತೇನು ಅಳೀಮಯ್ಯಾ? ನಿನ ಹೆಂಡ್ರುಬಿಚ್ಚಲಕ ಹಿಂದು ಮುಂದು ನೋಡುತಾರೆ.. ಕೊಡಲಕ ಹಿಂದು ಮುಂದು ನೋಡತಾರ" ಯಂದು ತನ ಮಾವಂದಿರು ಕೇಳಿದ್ದಕ್ಕ ಆತನು ಸಿಮ್ಮಾಸನ ಹೋಗಿದ್ದಕ್ಕ ಯಸನ ಮಾಡಿದೋನಲ್ಲ ನಿಮ್ಮೀ ಅಳಿಮಯ್ಯಾ.. ಅರಮನೆ ಹೋಗಿದ್ದಕ್ಕ ಯಸನ ಮಾಡಿದೋನಲ್ಲ ನಿಮ್ಮೀ ಅಳಿಮಯ್ಯಾ.. ಪುವ್ವಲ ರಾಜಕುಲದಾಗ ಹುಟ್ಟಿ ಬೆಳೆದಿರೋ ನಿಮ್ಮೀ ಅಳಿಮಯ್ಯನಾದ ನಾನು ಯಕಚಿತ್ ಹೆಂಗಸರ ಸೊತ್ತಿಗೆ ಆಸೆಪಡುವಾತನಲ್ಲ ಯಂಬುದನು ಮರಿಬ್ಯಾಡೂರಿ..." ಯಂದವರಿಗೆ ಬಿಲ್ಲಕುಲ್ಲ ಹೇಳಿ "ಯಂಥ ಹೆಂಡರಿದ್ದಾರೋ ಯಿವನವ್ನ... ತಮ ಗಂಡ ಯಂಥಾತ ಯೇನ್ಕಥೆ ಯಂಬ ಅರುವಾದರೂ ಬ್ಯಾಡೇನವ್ರೀಗೆ.. ಛೀ..ಛೀ.. ಅವರವ್ರತವರ್ಮನೆಗೆ ಗದುಮಿ.. ನಾನು ಕಲೆಟ್ರುಸಾಬನತ್ರಹೋಗಿದ್ದುಬಿಡಬೇಕು. ಸಾಕಾಗಯ್ತೆ ಬದುಕು.." ಯಂದು ಮುಂತಾಗಿ ಪೇಚಾಡಿಕೊಳ್ಳುತ್ತಿರುವಾಗ್ಗೆ....

ಅತ್ತ ಮಾಕವಿ ರನ್ನನಿಗೆ ಪ್ರಿಯ ರುತ್ತವಾದ ವುತ್ಪಲಮಾಲೆಯನ್ನು ತನ್ನ ನಾಲಗೆಗೆ ಧರಿಸಿಕೊಂಡು ಮಾಕವಿಯಾದ ಅಯ್ಯಾಳೇಸ್ವರನು ಕಾವ್ಯಕ್ಕೆ ಸ್ಫೂರ್ತಿ ಪಡೆಯಲಕೆಂದು ರಾಜಮಾತೆ ಭಯ್ರಮಂಬೆಯ ಕಳೇಬರವನ್ನು ತದೇಕಚಿತ್ತದಿಂದ ಅವಲೋಕನ ಮಾಡುತ ಕೂಕಂಡಿದ್ದನು. ಆ ಸಹಸ್ರರೇಖಾಲಂಕ್ರುತ ಮುಖವನ್ನು ರೇಖಾಗಣಿತದ ಹೊತ್ತಿಗೆಗೆ ಹೋಲಿಸುವುದೋ.. ಸಾಪಗ್ರಸ್ತ ಮರಭೂಮಿಗೆ ಹೋಲಿಸುವುದೋ.. ಯಂದು ಆ ವುಪಮಾನಲಂಕಾರ ಚಕ್ರವರ್ತಿಯು ಯೋಚಿಸುತ್ತಿರುವಾಗ್ಗೆ..

ಯಿತ್ತ ವಲ್ಲದ ಮನಸ್ಸಿಸಿಂದ ಪಂಚ ಪತ್ನಿಯರು ಯಿದು ನಂದು, ಯಿದು ತಂದು ಯಂದು ವಂದೊಂದಾಗಿ ಆಭರಣಗಳನ್ನು ತಮ ವಲ್ಲಭನ ಮುಂದೆ ಕುಪ್ಪೆ ಹಾಕತೊಡಗಿದ್ದ ದ್ರುಸ್ಯವು ಕಂಗಳ ದಾಹ ತೀರಿಸುವಂತಿತ್ತು. ತಮ್ಮ ಮೂಗಿಗಂಟಿದ್ದ ಮುಕಬಟ್ಟು, ಕೊಳ್ಳಾಗಿನ ತಾಳಿ ಸರಮೊಂದನ್ನು ಬಿಟ್ಟು ಸಮಸ್ತವನ್ನೆಲ್ಲ ಕೊಟ್ಟಾದ ಮ್ಯಾಲ "ಯಿವು ನಮ್ಮ ವಡವೆ ಅಷ್ಟೇ ಅಲ್ಲ.. ನಮ್ಮ ಪ್ರಾಣ ಯಂದು ತಿಳಕಾ, ಯೇನಾರ ಹೆಚ್ಚು ಕಡಿಮೆ ಆದರ ನೀನೇ ಜವಾಬುದಾರ, ಹೆಣದ ಮೆರವಣಿಗೆ ಮುಗಿಯುತ್ಲೆ ಬಿಚ್ಚಿ ಕೊಡಬೇಕು" ಯಂದು ಕರಾರು ಯಿದಿಸಿದರು. ಅದಕ್ಕಾತನಿದ್ದು "ಯಿವ್ನೆಲ್ಲ ನಾನೇನು ಮಾಡ್ಲಿ... ಹೇಂಗೋ ನೀವೆಲ್ರೂಹಿಂದ ಮುಂದ ಯಿರುತೀರಲ್ಲ.. ಜಬರದಸ್ತೀಲೆ ಬಿಚಿಗ್ಯಾವಂತಿರಿ" ಯಂದು ಹೇಳಿದನು. ಮಾವಂದಿರು ಸಹಿತ ನಾಕಾರು ಮಂದಿ ಹಿರೀಕರೆಲ್ಲ ಸೇರಿ ಪಂಚನಾಮೆ ಕಾರ್ಯ ನಡೆಸಿ ವಂದು ಕಡೀಕೆ ಟುಕ್ಕು ಮಾಡಿಟ್ಟುಕೊಂಡರು...

ಆ ಆಭರಣಗಳ ಕುಪ್ಪೆಯನ್ನು ಕಳೇಬರದ ಮುಂದೆ ಯಿಡಲಾಯಿತು. ನೋಡುಗರಿಗೆ ರಾಜಮಾತೆ ವಂದರಚಣ ಕಣ್ಣು ತೆರೆದು ನೋಡಿ ಮುಚ್ಚಿದಂತೆ, ಅದರ ಅಂಗಾಂಗಗಳು ಕಂಪಿಸಿದಂತೆ, ಧರಿಸಲು ಹಾತೊರೆಯುತ್ತಿರುವಂತೆ ಭಾಸವಾಯಿತು. "ಯೇಟೊಂದು ಆಸೆ ಯಿಟ್ಟುಕೊಂಡಯ್ತಲ್ಲಾ ಮುದ್ಯಾಕಿ" ಯಂದು ಸಮೂಹ ವಮ್ಮನಸ್ಸಿನಿಂದ ಗೊಣಗಿಕೊಳ್ಳುತ್ತಿರುವಾಗ್ಗೆ...

ಕಳೇಬರದ ಕಿವಿಗೆ ಯಾವ ವಡವೆ, ಕೊಳ್ಳಿಗೆ ಯಾವ ವಡವೆ, ಮುಂಗಯ್ಯಿಗೆ ಯಾವ ವಡವೆ ಧರಿಸುವುದೆಂಬ ಅನುಮಾನ ಹುಟ್ಟಿ ನಿನಗೆ ಗೊತ್ತುಂಟಾ? ನಿನಗೆ ಗೊತ್ತುಂಟಾ ಯಂದು ಕೇಳುತ್ತಿರುವಾಗ್ಗೆ.. ನಂಗೊತ್ತಿಲ್ಲ.. ತಂಗೊತ್ತಿಲ್ಲ.. ಯಂದನೇಕರು ಹೇಳುತ್ತಿರುವಾಗ್ಗೆ.. ಅಸಾಮಾನ್ಯ ಕಳೇಬರದ ಮಯ್ನು ಮುಟ್ಟುವ ಧಯರ‍್ಯ ನಮಗಿಲ್ಲ.. ತಮಗಿಲ್ಲ ಯಂದನೇಕರು ಹೇಳುತ್ತಿರುವಾಗ್ಗೆ.. ಯುದುರಿಗೆ ಕುಂತು ನಿಂತಿದ್ದಂಥಾ ಜನಸಮೂಹದೊಡಲಾಗಿಂದ ವಬ್ಬಾನೊಬ್ಬ ಮನುಷ್ಯನು ಯದ್ದು ನಿಂತು "ನೋಡ್ರಪ್ಪಾ.. ನಮದು ಸ್ವಾಸ್ತಿ ವಳದೆರೆ ಯಂಬ ಗ್ರಾಮವು, ಮೋರಿಂಗೆರೆ ಪರಗಣ ಸೀಮೆಯೊಳಗಯ್ತೆ. ನಾವು ಮ್ಯಾಸ ಬ್ಯಾಡರ ಕುಲದ ವುಚ್ಚ ಪೀಠದೋರು, ನಮ್ಮ ಮೂರಾಗ ನಾವೇ ಕಾರ್ಯ ಕಟ್ಲೆ ನಡಸೋರು, ನಾವಿದ್ದಕಡೇಕ ಕಳವು ಸುಲಿಗೆ ನಡೆಯೋದಿಲ್ಲ.. ಆ ದ್ಯಾವರು ನಮಗ ಕೊಡೋದು ಕೊಟ್ಟು

ಮರತು ಬಿಟ್ಟಾನ. ಯೇಳು ತಲೆಮಾರು ಕುಂತು ತಿಂದರೂ ಸವೆಯೋದಷ್ಟು ಮಸ್ತು ಆಸ್ತಿ ನಮಗಯ್ತೆ. ಯಿನ್ನೊಬ್ಬರ ಸೊತ್ತಿಗೆ ನಾವೆಂದೂ ಆಸೆಪಡೋರಲ್ಲ. ಪರಸ್ತ್ರಿಸೋದರರು ನಾವು. ಸುಳ್ಳು ಯಂಬ ಸಬುಧವು ನಮ್ಮಮನೆ ತಲಬಾಕಲು ದಾಟೋದಿಲ್ಲ. ಸಾಂಬವಿಯ ಪ್ರೇರಣಾ ಆತು.. ಹಂಗ ನಿಂತನಿಲುವೀಲೆ ಹೊಂಟು ಬಂದೀವಿ. ನೀವು ಪರವಾನಿಗಿ ನೀಡಿದರ ಮಾತಾಯಿಯ ಸರೀರದ ಮ್ಯಾಲ ಆಭರಣ ಮುಡುಸುತೀವಿ'' ಯಂದು ಗಂಟೆ ಬಾರಿಸಿದಂತೆ ನುಡಿದು ಅವಕ್ಕಾಗಿಸಿದನು....

ಕಾಟಯ್ಯ ಮೊದಲಾದೋರು ಕೆಳಗು ಮ್ಯಾಲಕ್ಕು ನೋಡಿದರು. ಮಟ್ಟಸವಾದ ಸರೀರ.. ಮುಖದ ಮ್ಯಾಲ ರಾಜಕಳೆ....

``ನಿಮ್ಮ ನಾಮದಾವುದು?'' ಯಂದು ಮಾಮಂದಿರ ಪಯ್ಕಿ ವಬ್ಬನಾದ ಪೋತರಾಜ ಕೇಳಿದ್ದಕ್ಕೆ ಆತನು ``ಸ್ರೀಮಂತಪ್ಪ ಯಂಬುದು ಲೋಕರೂಢಿ ಅದೆ'' ಯಂದು ವುತ್ತರಿಸಿದನು. ಅದಕ್ಕೆ ಯಿದ್ದು ಯಿನ್ನೊಬ್ಬ ಮಾವನಾದ ಕುಬೇರ ನಾಯಕನು ``ಕಳೇಬರಗಳಿಗೆ ಆಭರಣ ಮುಡುಸಿದಂಥ ಅನುಭವವುಂಟೋ?'' ಯಂದು ಕೇಳಿದ್ದಕ್ಕೆ ಆತನು ``ಯಾಕಿಲ್ಲ ಕನಜ್ಜಾ.. ಕಳೇಬರಗಳಿಗೆ ಮುಡುಸೋದೇ ನಮ್ಮ ಕುಲಕಸುಬಯ್ತೆ. ಹರಪನಹಳ್ಳಿ ಪಾಳೇಗಾರ ದಾದಯ್ಯ ನಾಯಕನ ಹೆಂಡತಿ ಜಂಪನಾಗತಿಯ ಕಳೇಬರಕ, ಮಾಚೇನಾಯಕರ ತಾಯಿ ಯಿರುಪಾಂಬೆಯ ಕಳೇಬರಕ, ಬಾಗಳಿಯ ಕಾಮಭಟ್ಟರ ಕಳೇಬರಕ, ವುಚ್ಚಂಗಿ ಕೋಟೆಯನ್ನಾಳಿದ ಹೊನ್ನಾಗತಿಯ ಕಳೇಬರಕ, ತಾಂಬೂಲ ಜಗಿತಾ ಜಗಿತಾ ಮಡಿದ ಕೊಂಗಲೂರು ರಾಜ ಕೆಂಗಣ್ಣ ನಾಯಕ, ಯಿಷ್ಟೇ ಯಾಕ.. ಹಯ್ದರಾಲಿ ಖಾನ ಸಾಹೇಬನಿಗೂ ಆಭರಣದಲಂಕಾರ ಮಾಡಿದೋರದವೀ ನಾವು'' ಯಂದು ಹೇಳುತಾಃ ಹೇಳುತ ಆತನು ತನ್ನ ಕೊಳ್ಳೊಳಗೆ ಜೋತಾಡುತ್ತಿದ್ದ ಪದಕವನ್ನು ಹೊರ ತೆಗೆದು ಯಲ್ಲಾರಿಗೂ ತೋರಿಸುತ್ತ ``ನಮ್ಮ ಕರಕವುಸಲ್ಯವನ್ನು ಕಣ್ಣಾರ ಕಂಡು ತಿಪ್ಪು ಸುಲ್ತಾನ ಸಾಹೇಬರು ಯೀ ಪದಕವನ್ನು ತಮಕಯ್ಯಾರ ನಮ ಕೊಳ್ಳಾಗ ಹಾಕಿ ಸನ್ಮಾನ ಮಾಡ್ಯಾರ.. ಯಿದರ ಮ್ಯಾಲ 'ಕ್ಯಾಥುರಕೀದನ್' ಯಂದು ಪಾರಸಿ ಭಾಷೇಲಿ ಕೆತ್ತಲಾಗಯ್ತೆ. ನಿಮಗ ಮೋದಲಕ ಬರೋದಿಲ್ಲಾದ್ದರಿಂದ.. ನಿಮ್ಮಲ್ಲಿ ನಮ್ಮಂಗ ಸಾಲೇ ಕಲುತೋರು ಯಾರೂ ಯಿಲ್ಲಾದ್ದರಿಂದ ನಾವೇ ಯಿದರರ್ತ ಬುಡಿಸಿ ಹೇಳತೀವಿ. ಅದೇನಪಾ ಅಂದರ ಕಳೇಬರಾಲಂಕಾರ ಚಕ್ರವರ್ತಿ

ಅಂತ. ಯೀಗಾದರೂ ನಂಬುಕಿ ಬಂತೋ?" ಯಂದು ಜುಲಮೀಲೆ ಹೇಳಿದನು.

ಆತನ ವಾಗ್ಝರಿ ಆಲಿಸಿ ಬೆಕ್ಕಸ ಬೆರಗಾಗಿ ಯಲ್ಲಾರು ಪರಸ್ಪರ ಮುಖ ನೋಡಿಕೊಂಡರು, ಪಿಸಿ ಪಿಸಿ ಮಾತಾಡಿಕೊಂಡರು. ಅಳಿಯ ಮಾವಂದಿರ ವಕ್ಕೂಟದ ವಖ್ತಾರನಾಗಿದ್ದ ಬೋರಯ್ಯನು "ನಿನ ಮ್ಯಾಲ ನಮಗ ನಂಬುಕೆ ಬಂತಪ್ಪಾ.. ಹೆಂಗ ಮುಡುಸ್ತಿಯೋ ಮುಡುಸು. ವಟ್ಟಾರೆ ಹಾಕೋನು ನೀನೇ, ಬಿಚ್ಚಿ ಕೊಡೋನು ನೀನೆ ಕನಪ್ಪಾ.. ಕಳೇಬರ ನೊಂದು ವುಸುರು ಬಿಡಬಾರದು ನೋಡು, ಬಲ ಸೂಚುಮಿ ಅಯ್ತೆ ನಮ್ಮ ರಾಜಮಾತೆಯ ಸರೀರವು" ಯಂದು ವಪ್ಪಿಗೆ ನೀಡಲು...

ಸ್ರೀಮಂತಪ್ಪನು ಚಾಜಕ ಅದನು ತಗಂಬರ್ರಿ.. ಯಿದನು ತಗಂಬರ್ರಿಯಂದು ಕೇಳಿ ತರಿಸಿಟ್ಟುಕೊಂಡನು. ಮೂಕಯಿಸುಮಿತರಾಗಿದ್ದ ಮೋಬುಳಾಚಾರ್ಯರ ಸಹಿತ ಯಲ್ಲಾರಿಗೂ ಹುವ್ವುಗಳನ್ನು ಯಿತರಿಸಿ... "ನಾಮೊಂದೊಂದು ಮಂತ್ರಹೇಳುತ ವಂದೊಂದು ಆಭರಣ ಯೇರಿಸಿದೊಡನೆ 'ಸಮರ್ಪಯಾಮೀ' ಯಂದೆನ್ನುತ ಹುವ್ವೆಸೆಯುತ್ತಿರಬೇಕು" ಯಂದು ಹೇಳಿ ಹೆಣದೆದುರು ಮಟ್ಟಸ ರೀತಿಲಿ ಕೂಕಂಡನು.

ಓಂ ಹ್ರಾಂ ಹ್ರೀಂ ಚಟ ಚಟಾಯೆ ನಮಹ.. ಓಂ ಹ್ರಾಂ ಹ್ರೀಂ ಗಟ ಗಟಾಯೇನಮಹ.. ಓಂ ಹ್ರಾಂ ಹ್ರೀಂ ಪಟ ಪಟಾಯೇ ನಮಹ... ಯಂಬಿವೇ ಮೋದಲಾದ ನಿಗೂಢ ಮಂತ್ರಗಳನ್ನು ವುಚ್ಚಾರಣಾ ಮಾಡುತ ಆಭರಣಗಳನ್ನೆಲ್ಲ ಕಳೇಬರದ ಪ್ರತಿಯೊಂದು ಅಂಗೋಪಾಂಗಕ ಮುಡಿಸಿದನು. ಜನರೂ ತಮ ತಮ್ಮ ಕಯ್ಲಿದ್ದ ಹುವ್ವುಗಳನ್ನು ಸಮರ್ಪಯಾಮೀ ಯಂದಂದು ಆ ಯಿಶಿಷ್ಟ ಪದಕ್ಕೊಡೆಯರಾದರು..

ಸಾಲಂಕ್ರುತಗೊಂಡ ರಾಜಮಾತೆಯ ಕಳೇಬರವನ್ನು ಸಕಲರು ತಮ್ಮ ಕಣ್ಣುಗಳಲ್ಲಿ ತುಂಬಿಟ್ಟು ಕೊಳ್ಳುತ್ತಿರುವಾಗ್ಗೆ ಸ್ರೀಮಂತಪ್ಪನು "ನೋಡಿರೆಪ್ಪಾ ನಾವು ತೀರ್ಯಕ್ರಾತನ ಯಿದ್ಯೆಯಿಂದ ಮಾತಾಯಿಯ ಪಯಿತ್ರಶವವನ್ನು ಆಭರಣಗಳಿಂದ ಅಲಂಕಾರ ಮಾಡಿದ್ದೇವೆ. ತೀರ್ಯಕ್ರಾತನ ಯಂದರೆ ಆಗಲಿದ ಆತುಮವನ್ನು ಮರಳಿ ಸರೀರದೊಳಗ ತರಬುವುದೇ ಆಗಿದೆ. ಯಿದರೊಳಗೀಗ ರಾಜಮಾತೆ ಮರಳಿ ಬಂದಿದ್ದಾಳೆ. ನೀವು ಯಿಚ್ಚೆಪಟ್ಟಲ್ಲಿ ಕಳೇಬರವನ್ನು ಯದ್ದು ನಿಲ್ಲುವಂತೆ ಮಾಡಬಲ್ಲೆ! ನೋಡುವಂತೆ.. ಮಾತಾಡುವಂತೆ.. ನಡದಾಡುವಂತೆ.. ಬಲಿಷ್ಟರನ್ನು ನೆಲಕ್ಕೊಗೆಯುವಂತೆ ಮಾಡಬಲ್ಲೆ. ಆದರೊಂದು ಮಾತು.. ನೀವು ನಿಮ್ಮ

ಆಯುಷ್ಯದ ವಂದು ಭಾಗವನ್ನು ಧಾರೆಯೆರೆದು ಕೊಡಬೇಕಾಗತಯ್ತೆ.. ಬೇಡ... ಬೇಡ.. ನಿಮ್ಮಿಂದ ನಿಮ ಆಯುಷ್ಯವನ್ನು ನಷ್ಟ ಮಾಡೋಕೆ ನನ ಮನಸ್ಸು ವಪ್ತಾಯಿಲ್ಲ.. ನಿಮ್ಮ ಪಾಡಿಗೆ ನೀವು ನಿಶ್ಚಿಂತರಾಗಿರ್ರಿ.. ಮುಂದೆ ಯೇನೇನು ಮಾಡಬೇಕೋ ಅದನ್ನು ಮಾಡಿರಿ. ನಾಳೆ ಸೂರ್ಯೋದಯವಾದ ನಾಕನೇ ಆಯಾಮ ಶವ ಸಾಗಿಸಲಕ್ಕ ಪ್ರಶಸ್ತಯಿರುವುದು. ಶವ ಸ್ಥಾನ ಬದಲು ಮಾಡಿದರ ದೋಷ ಪರಿಹಾರ ಆಗ್ತದೆ'' ಯುಂದು ಹೇಳಿದನು. ಅದಕ್ಕೆ ಮೋಬುಳಾಚಾರ್ಯರೂ ಸಮ್ಮತಿಸಿದರು. ಯಂಟರಮಣಾ ಗೋಯಿಂದಾ ಗೋಯಿಂದಾ ಯಂದು ಘೋಷ ಮಾಡುತ ಕಳೇಬರವನ್ನು ಮಹಲಿನ ಬೆನ್ನಗೋಡೆಗಂಟಿಸಿ ಸಿದಿಗೆ ಬಡಿಯಲಾಯಿತು. ಸಂಪ್ರದಾಯದಂತೆ ಪೂಜೆಯನ್ನು ಮಾಡಿ ಮುಗಿಸಲಾಯಿತು...

ರಾಜಮಾತೆಯ ಗುಣಗಾನ ಮಾಡುತ ಅಳುವ ರುತ್ತಿವಂತ ಅಳೋರನ್ನು.. ಚಾಮರಸೇವೆ ಮಾಡೋರನ್ನು.. ಭಜನೆ ಮಾಡೋರನ್ನು.. ಗರೂಢ ಪುರಾಣ ಮೋದೋರನ್ನು.. ಅವರವರ ಘನತೆಗೆ ತಕ್ಕಂತೆ ವುಚಿತೋಚಿತ ಜಾಗಗಳಲ್ಲಿ ಕುಂಡ್ರಿಸಲಾಯಿತು. ದೀವಟಿಗೆ ಹಚ್ಚೋರನ್ನು, ವಾಲಗ ಮೂದೋರನ್ನು.. ಬಡಿಯೋರನ್ನು ಭಾರಿಸೋರನ್ನು.. ಪಟಾಕಿ ಹಚ್ಚೋರನ್ನು.. ಕಾಲಬುಡಕ ಸೀರೆ ಸೆರಗು ಹಾಸೋರನ್ನು.. ಧಯುರ್ಯ ಕಳೆಯುವವರನ್ನು.. ಧಯುರ್ಯ ತುಂಬುವವರನ್ನು.. ಲಗೂನ ಕರೆತರಲು ಯೋಗ್ಯರಾದವರನ್ನು ದಿಕ್ಕುದಿಕ್ಕಿಗೆ ಕಳಿಸಲಾಯಿತು....

ಅಗೋ ಅಲ್ಲಿ ಸೂರ್ಯ ಮುಳಗಲಕ.. ಯಿಗೋ ಯಿಲ್ಲಿ ಚಂದ್ರಹುಟ್ಟಲಕ... ಅವರಿಬ್ಬರ  ನಡುವೆ ಕುಜ ಮಾಶಯನು ಮೂಡಣದ ಮುಗುಲು ನೆತ್ತಿಮ್ಯಾಲ ರವರವ್ವೋಟೆ ಕಣ್ಣು ಬಿಚ್ಚುತ್ತಿರುವಾಗ್ಗೆ...

* * * *

ಅತ್ತ ಯಡ್ಡವರ್ಡು ದಂಪತಿಗಳು ವಂಚೂರಾರ ಅನುವು ಆಪತ್ತುಗಳಿಗೆ ಭಾಜನರಾಗದೆ ಯಿಲ್ಲಿ ಯಿದನು ನೋಡುತ, ಅಲ್ಲಿ ಅದನು ನೋಡುತ ತಿಂಗಳ ದಿನಮಾನ ಪ್ರಯಾಣ ಮಾಡೀ ಮಾಡೀ ಕಡೇಕ ವಂದಿವಸ ಕೊಂಗನಾಡಿಗ್ಗಧಿಕ ಯನಿಸಿದ್ದ ವೆಲ್ಲೂರು ಪಟ್ಟಣವನ್ನು ಸೇರಿಕೊಂಡು ಯಿಸ್ರಾಂತಿ ಪಡಕಂತಿರುವಾಗ್ಗೆ...

ಅತ್ತ, ಮನ್ರೋ ಸಾಹೇಬನು ಯಿಸ್ರಮಿಸಿಕೊಂಡಿದ್ದ ನರಸಿಮ್ಮಾರೆಡ್ಡಿಯ ಆಮಂತ್ರಣದ ಮೇರೆಗೆ ವುಯ್ಯಾಲವಾಡ ತಲುಪಿ ವಂಭಯ್ನೂರಾ

ತೊಂಬತ್ತೊಂಬತ್ತು ಕಂಭಗಳುಳ್ಳ, ಆರೆಕರೆ ಯಿಸ್ತೀರ್ಣ ಯಾಪ್ತಿಯ ಯಾವುದೇ ಅರಮನೆಗಿಂತ ಮಿಗಿಲಾದ ಗಾದೆ ಬರಗಾಲದೆದೆ ಮ್ಯಾಲ ಬರೆ ಯಳದೋಟು ಸೋಭಾಯಮಾನವಾಗಿತ್ತು. ತಮ್ಮ ಗೂಢಾಚಾರರು ಮೂರಲ್ಲಿ ನರಸಿಮ್ಮಾರೆಡ್ಡಿಯ ಬಗ್ಗೆ ಸಂಗ್ರಹ ಮಾಡುತ್ತಿರುವ ಮಾಹಿತಿ ಯಾವ ತೆರನದ್ದಿರಬೌದೆಂದು ಯೋಚನೆ ಮಾಡುತಲಿದ್ದ ಮನ್ರೋ ಸಾಹೇಬನಿಗೆ ಖುದ್ದ ಅರಿಭಂಯಕರನಾದ ರೆಡ್ಡಿಯು ಅಗೋ ಆತನೇ ರಾಜಾ ಪೆದ್ದ ಪಾಲಾಕ್ಷರೆಡ್ಡಿ, ಯಿಗೋ ಯಿತನೇ ತಮ್ಮಾರೆಡ್ಡಿ ಯಂದು ತನ್ನಪ್ಪ ತಾತ ಮುತ್ತಾತಂದಿರ ತಯ್ಲವರ್ಣ ಚಿತ್ರಗಳನ್ನು, ಅವರ ಸವುರ್ಯ ಪರಾಕ್ರಮಗಳೊಟ್ಟಿಗೆ ಪರಿಚಯ ಮಾಡಿಕೊಡುತಲಿದ್ದನು. ಹೊಗೆ ಗೋಡೆ ಮ್ಯಾಲ ಅಲಂಕಾರಪ್ರಾಯವಾಗಿ ಯಿರಿಸಿದ್ದ ನಾನಾ ಯಿದವಾದ ಸಸ್ತರಾಸ್ತರಗಳನ್ನೂ ಸಹ... ಯಲ್ಲಾ ನೋಡೋದು ನೋಡಿಯಾದ ಮ್ಯಾಲ, ಕೇಳೋದು ಕೇಳಿಯಾದ ಮ್ಯಾಲ ಬಗೆಬಗೆಯ ಮ್ರುಷ್ಟಾನ್ನ ಭೋಜನವಂನ್ನುಂಡಾದಮ್ಯಾಲ ಲೋಡಿಗಾತು ತಾಂಬೂಲ ನವಲುತ್ತಿರುವಾಗ ಮನ್ರೋ ಸಾಹೇಬನು "ರೆಡ್ಡಿಗಾರು ಯಿಂಕೊಂಕ್ಕಟಿಯಿ ಯಾರತನುಮಾಕು ಚೂಪಿಂಚಲೇದು.. ಅದೇಮಿಟಂಟೆ ಯಿಕ್ಕಡೆಕ್ಕಡೋ ಮರಣದಂಡನ ವಿಧಿಂಚೇ ವ್ಯವಸ್ಥ ವುಂದಂಟಿಗದಾ... ಯೇಮಿ ಅನುಕೋಕ ಪೋತ ಮೀರು ಮೀ..." ಯಂದಷ್ಟೆ ನುಡಿದು ತನ್ನ ಕಪೋಲ ರೋಮಗಳನ್ನು ಬಲಗಯ್ಯ ತುದಿಬೆರಳುಗಳಿಂದ ನೀವಿಕೊಳ್ಳುತ್ತಿರುವಾಗ್ಗೆ...

ಅತ್ತ ಅವಿವಾಹಿತನೂ, ಅಮರಪ್ರೇಮಿಂಯಾಗಬೇಕೆಂದು ತಹತಹಿಸುತ್ತದ್ದವನೂ, ದೇಹದ ಸಮಸ್ತ ಕಸುವನ್ನು ತಲೆಯೊಳಗಿಟ್ಟುಕೊಂಡಿದ್ದಥವನೂ, ಕುಂಪಣಿ ಸರಕಾರದ ನಿಷಾ«ವಂತ ಅಧಿಕಾರಿಯೂ ಆದಂಥ ಹೆನ್ರಿಯಂಬಾತನು ಕೂಡ್ಲಿಗಿ ತಹಶೀಲಿನ ಅಧಿಕಾರವನ್ನು ಯಿದ್ಯಕ್ತವಾಗಿ ಸ್ವೀಕರಿಸುತ್ತಿರುವಾಗ್ಗೆ...

ಅತ್ತ ಮದ್ದಿಕೇರಿಯಲ್ಲಿ ಜೊನ್ನಗಿರಿಯ ಸಂತರಸ್ತರ ಪಯ್ಕಿ ವಬ್ಬನಾದ ಗಬ್ಬುಲನನ್ನು ಗೂಡಾಚಾರಿ ಯಂದು ಯಿನಾಕಾರಣ ಅನುಮಾನಪಟ್ಟು ಗಲ್ಲಿಗೇರಿಸಿದ್ದಕ್ಕೆ ನೊಂದುಕೊಂಡು ಆ ರಾಜನು ತಮ್ಮ ಕುಲದೇವತೆಯಾದ ಮದ್ದಮ್ಮಗೆ ಕುಂಕುಮಾರ್ಚನೆ ಮಾಡಿಸುತ್ತಿರುವಾಗ್ಗೆ...

ಅತ್ತ ಹಿಡೀ ಬಡೀ ಕಡೀ ಯಂಬಿವೆ ಮೊದಲಾದ ಸರಳ ಸಬುಧಗಳನ್ನು ಕೇಳಿ ಕೇಳಿ ರೋಸಿ ಹೋಗಿ ಭೀಮನು ಯಿ ಮಾರಾನಾಯಕನ ರಾಜ್ಯ ಸಾಕಪ್ಪಾ ಯಂದು ನಿರ್ದರಿಸಿ ತನ್ನ ಮೂರುದ್ವ ರೇತೇಸ್ವರನಾಥ ಲಿಂಗವನ್ನು

ಹಾಳುಗೆಡವಿದ್ದ ಚಂಡನ ತರಡು ಬೀಜಗಳನ್ನು ಕುಯ್ ಕುಂಯ್ಯೋ ಯಂದು ಹಳಿಯುತ್ತ, ಕಾಡು ಮೇಡು ಅಲೆದೂ ಅಲೆದೂ ಮೂರುಕೇರಿಗಳನ್ನು ದಾಟೀ ದಾಟೀ ಸದರಿ ಪಟ್ಟಣವಾದ ಕುದುರೆಡವನ್ನು ಅಂಕಲಯ್ಯ ಬಾಗಿಲಿಂದ ಪ್ರವೇಶ ಮಾಡಿ, ಪಿರಂಗಿ ಮೋಣಿ ಗುಂಟ ನಡಕೋತ ಬಂದು ಆಂಜನೇಯಸ್ವಾಮಿಯ ಗುಡಿಯನ್ನು ಪೊಕ್ಕು ಸಿಮ್ಮಾವಲೋಕನ ಮಾಡಲು, ಅಲ್ಲಿ ಹರಳೆಣ್ಣೆ ಸೊಡರು ಬೆಳಕಲ್ಲಿ  ತಾಳೆಗರಿ ಕಟ್ಟನ್ನು ನೋಡಿ ಯಾದೋ ಬುತ್ತಿ ಗಂಟೆಂದು ಭಾವಿಸಿ ಹೋಗಿ ಬಾಯಿ ಹಚ್ಚಿತ್ತು. ಮಾಕವಿಯ ಬೆವರು ಮಿಸ್ರಿತ ಸಹಸ್ರಸಹಸ್ರಅಕ್ಕರಗಳು ಅಂತೂ ತಮ್ಮನ್ನ ಆಸ್ವಾದಿಸಬಲ್ಲ ವಬ್ಬ ಸವ್‌ರುದಯಿ ದೊರಕಿದನಲ್ಲಾ ಯಂಬ ಸಂತೋಷದಿಂದ ನನ್ನ ತಿನ್ನು, ನನ್ನ ತಿನ್ನು ಯಂದು ಹಾತೊರೆದು ತಮ್ಮ ರುಚಿಯನ್ನು ಹೆಚ್ಚಿಸಿಕೊಂಡವು.. ವಂದೊಂದು ಸಬುಧವು ತಾಮೊಂದೊಂದು ಖಾದ್ಯ ಯಂಬಂತೆ ಭ್ರಮಾ ಮಾಡಿದವು.. ವೊದೊಂದು ರುತ್ತವು ತಾಮೊಂದೊಂದು ಕಜ್ಜಾಯ ಯಂಬಂತೆ ಭ್ರಮಾ ಮಾಡಿದವು.. ವಟ್ಟಾರೆ ಆ ಅಪೂರ್ಣ ಕಾವ್ಯದ ಗಂಟು ತಾನೊಂದು ಫಳಾರದ ಅಂಗಡಿಯಂತೆ ಭ್ರಮಾ ಹುಟ್ಟಿಸಿತು.. ಯೇಸೋ ದಿವಸಗಳಿಂದ ಯಿಲಿಚಮ್ಮ, ಅಳಿಲಮ್ಮಗಳನ್ನೇ ತಿಂದು ಕಾಲನೂಕಿದ್ದ ಆ ಅಯಿಷರಾಮಿ ಸುನಕವು "ಯಿದಾವ ಭೋಜನಂಬು" ಯಂಬ ವುದ್ಗಾರದೊಂದಿಗೆ ಅದನು ಕಟಕಟ ನಮಲುತ್ತಿರುವಾಗ್ಗೆ....

ಮಾಕವಿ ಅಯ್ಯಾಳೇಸ್ವರನು ಗರುಭಗುಡಿಯೊಳಗೆ ತನ್ನ ಕುಲದೇವರಾದ ಆಂಜನೇಯ ಸ್ವಾಮಿ ಯದುರು ಪದುಮಾಸನ ಹಾಕಿ ಕೂಡುಕೊಂಡಿದ್ದನು. ಅವನ ಕಣ್ಣಪಟಲದ ಮ್ಯಾಲ ಹವಾಮಹಲೆಂಬ ಸೂತಕದರಮನೆಯ ತರಾವರಿ ದ್ರುಸ್ಯಾವಳಿಗಳು ಚಲಿಸ್ಯಾಡ ತೊಡಗಿದ್ದವು. ಸಕಲಾಭರಣಾಲಂಕ್ರುತ ಕಳೇಬರವು ತರಾವರಿ ರೂಪಧಾರಣ ಮಾಡುತ ಸಾಗಿದ್ದಿತು. ಯಿ ಯಿಳಿ ವಯಸ್ಸಿನಲ್ಲಿ ಯಿಷ್ಟು ಸುಂದರವಾಗಿರುವ ರಾಜಮಾತೆಯು ಯೇರು ಜವ್ವನದ ವಯಸ್ಸಿನಲ್ಲಿ ಯಷ್ಟೊಂದು ಸುಂದರಿಯಾಗಿದ್ದಿರಬೌದು? ಹ್ವಾ.. ಹ್ವಾ... ನೀಳನಾಸಿಕಮೋ, ಆ ನಿಲುಮೋ? ಆ ಭವತ್ ಕೇಸ ಪಾಸ ಪ್ರಪಂಚಮೋ?... ಅರೇ  ತಾನು ಯೋಚಿಸುವುದೇನು? ಮಾಕವಿಯೆನಿಸಿರುವ  ತಾನು ಯಿಲೋಮ ರೀತಿಯಲ್ಲಿ ಆಲೋಚಿಸುವುದು ಅಸಹ್ಯ. ಚೆದುರಿ ಚೆಲ್ಲಾಪಿಲ್ಲಿಯಾಗಲು ಹಾತೊರೆಯುತಲಿದ್ದ ಮನಸ್ಸನ್ನು ಯಳೆದು ತಂದು ಹದ್ದುಬಸ್ತಿನಲ್ಲಿಡುವ ಪ್ರಯತ್ನ ಮಾಡುತಲಿದ್ದನು. ತನ್ನ ಮನಸ್ಸಿನಲ್ಲಿ ಮುಡುಮುಡನೆ ಮೂಡುತಲಿದ್ದ ದಿವ್ಯ ಕಳೇಬರವನ್ನು

ಬಲವಂತದಿಂದ ಪಕ್ಕಕ್ಕೆ ತಳ್ಳಿ ಅದರ ಜಾಗದಲ್ಲಿ ಬೆಳೆದೆರೆಯ ಶ್ರೀಮಂತಪ್ಪನ ರೂಪವನ್ನು ಪ್ರತಿಷ್ಠಾಪಿಸಿಕೊಂಡನು. ಸಾಂಗತ್ಯಕ್ಕೆ ಯೀರನಾಯಕನಾಗುವ ಯಲ್ಲ ಲಕ್ಷಣಗಳು ಆತನಲ್ಲಿವೆ. ಆತನ ವಕ್ಷಸ್ಥಳದ ಸೊಬಗನ್ನು ನೂರುಪಟ್ಟು ಹೆಚ್ಚಿಸಿರುವ ಆ ಪದಕಮೋ? ಅದರ ಮ್ಯಾಲ ಕೆತ್ತಲ್ಪಟ್ಟಿರುವ ಪಾರಸಿ ಭಾಷೆಯ ಅಕ್ಕರಗಳೋ, ಅದನ್ನಾತ ಮೋದಿ ಹೇಳಿದ ರೀತಿಯೋ? ಹ್ಞಾ.. ಆತ, ಯೇನೋ ಅಂದನಲ್ಲ ಕ್ವಾಥುರಕೀದನ್ ಯಂದಲ್ಲವೇ? ಮೂರು ಗುರುಗಳ ನಡುವೆ ಯರಡು ಲಘುಗಳು, ಯಿ ವಿಲಕ್ಷಣಮೂ, ಆಕರ್ಷಕಮೂ, ಧ್ವನಿಪೂರ್ಣಮೂ, ಆದ ಯಿ ಅಕ್ಷರ ಸಮುಚ್ಚಯವನ್ನು ಯಾವ ರುತ್ತದೊಳಗೆ ಹೇಗೆ ಅಮರಿಸುವುದು? ಯಿದು ದುಕ್ಕದ ಸನ್ನಿವೇಸವಾದ್ದರಿಂದ ಕಂದದೊಳಗಳವಡಿಸಿದಲ್ಲಿ ಪಂಡಿತರು ಯಿಷ್ಟ ಪಡುತ್ತಾರೆಯೇ? ತಾನು ಧ್ಯಾನಮುದ್ರೆಯಲ್ಲಿದ್ದಕೊಂಡೇ ಯಿಷ್ಟೆಲ್ಲವನ್ನು, ಯೇನೆಲ್ಲವನ್ನು ಯೋಚಿಸುತ್ತಿರುವೆನೆಂದರ ತನ್ನ ಧಾರಣಶಕ್ತಿ, ಪ್ರತಿಭೆ, ಯಷಿ«ದ್ದಿರಬೌದೆಂದು ತನಗೆ ತಾನೇ ಹೆಮ್ಮೆಪಟ್ಟುಕೊಂಡನು. ಅಂತೂ ಕೊನೆಗೆ ತಂತಾನೆ ಯೇಕಾಗ್ರತೆ ಸಾಧಿಸಿಯೇ ಬಿಟ್ಟನು. ತನ್ನ ಕಿವಿಗೆ ಕೇಳಿ ಬರುತ್ತಿರುವ ಕರ್.. ಕರ್, ಕಿಚ್.. ಕಿಚ್ ಯಂಬ ಪ್ರಣವನಾದ ಯಾವುದಿರಬೌದು? ಸರಸೊತಿಯು ಯೀಣೆಯ ಸ್ರುತಿ ಸರಿಪಡಿಸಿಕೊಳ್ಳುತ್ತಿರುವುದಾಗಿರಬೌದೇ? ರಾಮನಾಮ ಜಪಿಸೋ ಪೂರ್ವದಲ್ಲಿ ಬಾಯಿ ಸುದ್ದಿ ಮಾಡಿಕೊಳ್ಳುವ ನಿಮಿತ್ತ ಆಂಜನೇಯಸ್ವಾಮಿಯು ದಂತದಾವನ ಮಾಡುತ್ತಿರುವದಾಗಿರಬೌದೇ? ತಾನೀಗಾಗಲೇ ಬರೆದಿರುವ ಕಾವ್ಯದೊಳಗಿನ ಪಾತ್ರಗಳು ನಾನು ಹೆಚ್ಚು ತಾನು ಹೆಚ್ಚು ಯಂದು ಜಗಳಾಡುತ್ತಿರುವುದಾಗಿರಬೌದೇ ಯಂದು ತಾನು ಅಂಥ ಧ್ಯಾನ ಮುದ್ರೆಸ್ಥಿತಿಯೊಳಗೆ ಮೂಹೆ ಮಾಡಿದನು. ಅದರೊಟ್ಟಿಗೆ ಯೇನೋ ಸುಯ್‌ಯಂಬ ಸಬುಧವು ಕೇಳಿ ಬಂದಂತಾಗಲು ಕಯ್ಮುಗಿವುತ ಕಣ್ಣುಬಿಟ್ಟು ನೋಡುತ್ತಾನೆ. ಅಗೋ ಅಲ್ಲಿ ಪವುಳೇಲಿ ಯಾರೋ ಮಹಾನುಭಾವನು ತಾನು ಯಿರಚಿತ ಕಾವ್ಯವನ್ನು ಪರಿಶೀಲನ ಮಾಡುತ್ತಿರುವಂತೆ ಅನುಭವವಾಯಿತು. ಕಣ್ಣುಗುರಿಯಿಟ್ಟು ಯಾರು ಸ್ವಾಮಿ ತಾವು? ಯಂದು ಕೇಳಿದನು. ಅಲ್ಲಿಂದ ವುತ್ತರಕ್ಕೆ ಬದಲಾಗಿ ತನ್ನತ್ತ ದುರುಗುಟ್ಟಿ ನೋಡುತ್ತಿರುವಂತೆ ಭಾಸವಾಯಿತು. ನೋಡುತ್ತಾನೆ... ಸುನಕವು. ಗತಿಸಿದ ಕವಿವರೇಣ್ಯರ ಪಯ್ಕಿ ಯಾರೋ ಸುನಕ ರೂಪದಲ್ಲಿ ಬಂದಿರುವರೆಂದು ತಾನು ಮೊದಮೊದಲಿಗೆ ಅಂದುಕೊಂಡನು. ಅವರನ್ನು ವುಭಯ ಕುಸಲೋಪರಿ ಯಿಚಾರಿಸಿ ಪರಾಂಬರಿಸಲಿಕ್ಕಂತ ಯದ್ದು

ವಂದೊಂದೆ ಹೆಜ್ಜೆಯನಿಕ್ಕುತ ಪವುಳಿ ಪ್ರವೇಶಿಸಿದನು. ಯಾರೋ ತನ್ನನ್ನು ಶಿಕ್ಷಿಸಲೆಂದು ಆಂಜನೇಯಸ್ವಾಮಿ ಯಿಗ್ರಹದಿಂದ ವಡಮೂಡಿ ಬಂದರೆಂದು ಭಾವಿಸಿದ ಭೀಮನು ತನ್ನ ಅಚಂದ್ರಾರ್ಕ ಬಾಲವನ್ನು ನಿಗುರಿದ್ದ ಸಿಸ್ನಕ್ಕೆ ಸುತ್ತಿಕೊಂಡು ಕುಂಯ್ ಕುಂಯ್ ಯಂದು ಮಂಗಳ ಪಲಕೂತ ಮೋಡಿ ಹೋಯಿತು.

ಗಾಬರಿಗೊಂಡು ಬಂದು ತಾಳೆಗರಿಗಳೆಲ್ಲ ಅಂಡಾವರನಗೊಂಡಿರುವುದನ್ನು, ಯೇಸೋ ತಾಳೆಗರಿಗಳು ಮಾಯವಾಗಿರುವುದನ್ನು, ಅಳಿದುಳಿದ ತಾಳೆಗರಿಗಳಲ್ಲಿ ಕಂದ ಸೀಸ ರುತ್ತಾದಿಗಳು ಕಾಣೆಯಾಗಿರುವುದನ್ನು ಕಂಡು ಅಯ್ಯೋ ಯಂದು ಅರಣ್ಯರೋಧನದ ಆರಂಭೋದ್ಗಾರವನ್ನು ಮಾಡಿದನು. ಆ ಕ್ಷಣ ಆತನ ಶಿತಿಕಂಠದೊಳಗ ದುಕ್ಕದ ಕಡಲು ಭೋರ್ಗರೆಯಿತು. ನತದ್ರುಷ್ಟೆ ಚಂದ್ರಮತಿಯು ತನ್ನ ಕಂದ ಲೋಯಿತಾಸ್ವನ ಕಳೇಬರವನ್ನು ಯತ್ತಿಕೊಂಡಂತೆ.. ವಂದೊಂದು ತಾಳೆಯೋಲೆ ಯಸಳನ್ನು ಕಯ್ಲಿ ಹಿಡಕಂಡು ಅಯ್ಯೋ.. ಯಾರೋ ಕುಕವಿಯು ಸ್ವಾನ ರೂಪದಲ್ಲಿ ಬಂದು ತನ್ನ ಕಾವ್ಯವನ್ನು ನುಂಗಿ ನೀರು ಕುಡಿದು ಬಿಟ್ಟನಲ್ಲಾ... ಸಾಂಬವಿಯನ್ನು ಕಾವ್ಯ ನಾಯಕಿಯನ್ನಾಗಿ ಮಾಡಿದ್ದಕ್ಕೇನಾದರೂ ರಾಜಮಾತೆ ಭಯ್ರಮಾಂಬೆಯ ಆತುಮವು ಸುನಕ ರೂಪ ಧರಿಸಿ ಬಂದು ತಿಂದು ಹಾಳುಮಾಡಿರಭೌದೇ ತನ್ನ ತಲೇಲಿದ್ದ ಸಮಸ್ತ ಯಿದ್ವತ್ತನ್ನೆ ಧಾರೆ ಯರೆದು ರಚನೆ ಮಾಡಿದ್ದೆನಲ್ಲಾ.. ಕಾವ್ಯ ಕ್ರುಷಿಗೆ ತಕ್ಕುದಲ್ಲದ ಯಿೂ ಅಯೋಗ್ಯ ಪಟ್ಟಣದೊಳಗ ನಾನ್ಯಾಕಿರಬೇಕು, ಅಯ್ಯೋ ನನ್ನ ಕರುಮವೇ.. ಯಂದು ಮುಂತಾಗಿ ಆತನಲ್ಲಿ ತಿರುಕ್ಕೊಳವಿನಾಚಿಯು ಪುನರವತಾರ ಯತ್ತಿರುವಾಗ್ಗೆ...

ಅತ್ತ ಸದರಿ ಕುದುರೆಡವು ಪಟ್ಟಣದ ಸೆರಗಿಗಂಟಿಕೊಂಡಂತಿದ್ದ ಕಡುದಮ್ಮನ ಹಳ್ಳದ ಕೊರಕಲಿನಲ್ಲಿ ಯಲ್ಲಾಪ್ರಕೊರಚರಟ್ಟಿಯ ಕಳ್ಳರ ಪಯ್ಕಿ ಮಾ ಮೇಧಾವಿಯೆನಿಸಿದ್ದ ಆಕಾಸ ರಾಮಣ್ಣನೆಂಬ ಚೋರಾಗ್ರೇಸರನು ತನ್ನ ಮೂರ್ನಾಕು ಮಂದಿ ನಿಷ್ಣಾತ ಚೋರಯಿದ್ಯಾದ್ಯಾಪಕರೊಂದಿಗೆ ಕಳೆದೆರಡು ಮೂರು ದಿವಸಗಳಿಂದಲ್ಲಿ ಬೀಡು ಬಿಟ್ಟಿದ್ದನು. ಆತನಲ್ಲಿಗೆ ಬರಲಕ ಕಾರಣಗಳಿಗೆ ಬರಯಿಲ್ಲ. ಕಳೆದಾರು ಮಾಸಗಳಿಂದ ಸಣಪುಟ್ಟ ಕಳ್ಳತನ ಮಾಡುತ್ತಿದ್ದನಾದರೂ ತನ್ನ ವರ್ಚಸ್ಸಿಗೆ ಸರಿ ಸಮಾನವಾದ ಹಿಡಿಗಂಟು ಕದಿಯಲಾಗಿರಲಿಲ್ಲ. ಅದೂ ಅಲ್ಲದೆ ಸೊನ್ನದ ಜಮೀಂದಾರ ತಿರುಕಪ್ಪಗವುಡನು ಆತನನ್ನು ಸಕಲ

ಗವುರವದಿಂದ ತನ್ನ ವಾಡೆಗೆ ಬರಮಾಡಿಕೊಂಡು ಯೇಕಾಂತದಲ್ಲಿ ಸತ್ಕಾರ ಮಾಡಿ ಪ್ರಸನ್ನಗೊಳಿಸಿ "ನೋಡು ರಾಮಣ್ಣ... ನೀನು ನನ್ನೊಡಹುಟ್ಟಿದಾತನಿದ್ದಂಗೆ ಅವುದಲ್ಲೋ.. ನನ್ ಮಗಳು ಪಾರೊತಿ ನಿನ್ ಮಗಳು ಯಿದ್ದಂಗೆ ಅವುದಲ್ಲೋ.." ಯಂದು ಕೇಳಿದ್ದಕ್ಕೆ ರಾಮಣ್ಣನು ಭಾವ ಪರವಶಗೊಂಡು 'ಅವುದು ಧಣೀ ಅವುದು' ಯಂದು ಹೇಳುತ ಕಂಠಬಿಕ್ಕೊಂಡನು. ಕಣ್ಣಲ್ಲಿ ಸೆರೆ ನೀರು ತಂದುಕೊಂಡನು. ಆಗಿದ್ದು ಗವುಡನು "ಹಂಗಾ ಕೇಳಪಾ ರಾಮಣ್ಣ, ಬರೋ ಪುಷ್ಯಮಾಸದಲ್ಲಿ ನೆಲುಕುದುರೀ ಜಮೀಂದಾರು ಸಕ್ಕರಪ್ಪಗವುಡನ ಯೇಕಮಾತ್ರಪುತ್ರಅಂದಾನಿ ಗವುಡನ ಜೋಡಿ ಲಗ್ಗುನ ಮಾಡಲಕಂತ ಮಾಡೀನಿ. ಬೀಗರು ಆದು ಬೇಕು, ಯಿದು ಬೇಕೂಂತ ಮಸ್ತು ಕೇಳ್ಯಾರ... ಕಾಲಕಾಲಕ್ಕ ಮಳೀ ಬೆಳೀ ಕುಸುದು ನನ ಕಯ್ಯೂ ಆಡದಂಗ ಆಗಯ್ತೆ ತಮ್ಮಾ... ನಿಮ್ಮತ್ತಿಗೇನೂ ಬಲು ಜುಲುಮಿ ಮಾಡುತಾಳೆ. ಲಗ್ಗುನಾನ ಮುಂದಕ ಹಾಕಿದರ ತಾನು ಕೆರೇನೋ, ಬಾವೀನೋ ನೋಡ್ಕಂತೀನಂತಾಳ ಮಗಳು. ಮೊದಲೇ ನಮ್ಮದು ಧಾಂ ಧೂಂ ಅಂತ ಖರಚು ಮಾಡೋ ಮನ್ತನ. ಕಯ್ನಿ ಬಿಗಿಹಿಡಿಯಾಕ ಬರಂಗಿಲ್ಲ. ಯೇನು ಮಾಡೋದಪ್ಪಾ? ಯಿದಕ ನೀನೇ ವಂದು ದಾರಿ ತೋರಿಸಬೇಕು. ಪಾರೋತಿ ಮ್ಯಾಲ ನಿಂಗೆ ಕನುಕರ ಯಿರೋದೆ ಆದರ ನೀನು ವಂದಡೇವು ಬಂಗಾರನ ವಾರೋಪ್ಪತ್ತೊಳಗ ತಂದುಕೊಡಬೇಕಪ್ಪಾ. ಯಿದಕ ಯೇನು ಮಾಡುತೀ? ಹೆಂಗ ಮಾಡುತೀ ನೋಡು? ನಿನ್ನೆಗಲ ಮ್ಯಾಲ ವಝ ಹಾಕೀನಿ" ಯಂದು ತನ್ನ ಧೊನೀನ ಗದ್ಗದ ಮಾಡಿಕೊಂಡು ಹೇಳಲು ರಾಮಣ್ಣನ ಕರುಳು ಚುರುಕ್ಕಂತು. 'ಆಯ್ತು ಧಣಿ.... ನೀನೇನು ಯಸನ ಮಾಡಬ್ಯಾಡ' ಯಂದು ಧಯರ್ಯ ತುಂಬಿ....

ಸೀದ ಯಲ್ಲಾಪ್ರಕೊರಚರಟ್ಟಿಗೆ ಬಂದು ತನ್ನ ಶಿಷ್ಯರೊಂದಿಗೆ ಸಮಾಲೋಚಿಸಿದನು. ಸಂಪ್ರದಾಯದ ಪ್ರಕಾರ ಕುಲದೇವತೆಯಾದ ಪೋಲಾರಮ್ಮನ ಮಯ್ಯಿ ತುಂಬ ತರಾವರಿ ಹುವ್ವ ಮುಡಿಸಿ, "ತಾಯಿ... ನೀನೇ ದಾರಿ ತೋರಿಸಬೇಕವ್ವಾ" ಯಂದು ಬೇಡಿಕೊಂಡನು. ವಂದು ಗಳಿಗಾತು, ಯರಡು ಗಳಿಗಾತು, ಮೂರನೇ ಗಳಿಗೆಯಲ್ಲಿ ಪೋಲಾರಮ್ಮ ವಾಯುವ್ಯ ದಿಕ್ಕಿಗೆ ಹುವ್ವದುರಿಸಿ ದಾರಿ ತೋರಿದಳು. ಆ ಕೂಡಲೆ ಸಣುಮಾಡಿ ಕಾರ್ಯೋನ್ಮುಖನಾದನು. ಆ ದಿಕ್ಕಿಗೆ ನಿಷ್ಣಾತ ಗೂಡಾಚಾರರನ್ನು ಕಳುವಿದನು. ಅವರು ತರಾವರಿ ಯೇಷಾಂಡಬರ ಧರಿಸಿ ವಂದೊಂದು ಗ್ರಾಮವನ್ನು

ಜಾಲಾಡಿದರು. ಗಾಳಿ ಯಂಬಾತನು ಕುದುರೆಡವಿನಿಂದ ಸುಯ್ಯಂತ ಬಂದು ರಾಜಮಾತೆ ಭಯ್ರಮಾಂಬೆ ಮುಂದನೊಂದೆಲ್ಡು ದಿವಸದೊಳಗೆ ಪ್ರಾಣ ಬಿಡಲಿರುವಳೆಂದೂ.. ಕಳೇಬರಕ ವಡವೆ ವಸ್ತರ ಧರಸೋದು ಪುವ್ವಲ ಅರಸರ ಕುಲಾಚಾರ ಅಯಿತೆಂದೂ... ವಗಯ್ರೆವಗಯ್ರೆಹೇಳಿದನು. ಅದು ಕಿವಿಗೆ ಬೀಳುತ್ತಲೇ ರಾಮಣ್ಣನು ವಂದೇ ವುಸುರಿನಲ್ಲಿ ಕುದುರೆಡವಿನ ಆಯಕಟ್ಟಾದ ಜಾಗ ಸೇರಿಕೊಂಡುಬಿಟ್ಟಿದ್ದನು. ಕೆಲ ತಮ್ಮವರನ್ನು ಹೆಸರು ಯೇಸ ಮರೆಸಿ ಮೂರೊಳಕ್ಕೆ ಬಿಟ್ಟಿದ್ದನು. ಚುಲಕ ಯಂಬಾತನೊಬ್ಬ ಸಿರಿಕಂಟಪ್ಪ ಯಂಬ ಹೆಸರನ್ನಿಟ್ಟುಕೊಂಡು ಕಾಟಯ್ಯನನ್ನು ಆತನು ಮುದೇರನ್ನು ಹುಡುಕುತ್ತಿರುವಾಗ್ಗೆ.. ಕಂಡು ಬೆಣ್ಣೇಲಿ ಕೂದಲು ತೆಗೆದಂತೆ ಹೇಳಿ ಆತನ ಹೆಂಡಂದಿರ ಮಯ್ಯಿ ಮ್ಯಾಗಳ ಬಂಗಾರ ಕಳೇಬರದ ಮಯ್ಯಿ ಮ್ಯಾಲ ಬರುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದನು. ಯಿನ್ನೊರ್‍ವ ಯಕ್ತಿಯಾದ ಜಂಬನು ಸ್ರೀಮಂತನೆಂಬ ಹೆಸರನ್ನಿಟ್ಟುಕೊಂಡು ಕಳೇಬರದ ಅಂಗಾಂಗವನ್ನು ಆಭರಣಗಳಿಂದ ಅಲಂಕರಿಸುವಲ್ಲಿ ಮತ್ತು ಮಹಲಿನ ಬೆನ್ನನು ಗೋಡೆಗಂಟಿಸಿ ಕಳೇಬರವನ್ನು ಯಿಡುವುದರಲ್ಲಿ ಯಶಸ್ವಿಯಾಗಿದ್ದನಷ್ಟೆ....

ತಕ್ಕ ಸಮಾಚಾರವು ಲಭ್ಯವಾದೊಡನೆ ರಾಮಣ್ಣನು ಯಿಷ್ಟು ಕಾರ್ಯ್ಯೋನ್ಮುಖಗೊಂಡನೆಂದರ ಅಷ್ಟು ಕಾರ್ಯ್ಯೋನ್ಮುಖಗೊಂಡನು. ವಂದು ನೂಲು ಹೆಚ್ಚು ಕಡಿಮೆ ರಾಜಮಾತೆಯನ್ನು ಹೋಲುವಂಥ ಯಲುಗನೆಂಬಮುಪ್ಪಾನು ಮುದೇತನನ್ನು ಆ ಹೊತ್ತಿಗೆ ಸಜ್ಜು ಮಾಡಿಟ್ಟು ಕೊಡಿದ್ದನು. ಹೇಳೋದು ಹೇಳಿ, ಕೇಳೋದು ಕೇಳಿ ಆತನನ್ನೂ.. ನಕಲಿ ಆಭರಣಗಳ ಪೆಟ್ಟಿಗೆಯನ್ನೂ.. ಹವಾಮಹಲಿನ ಹಿಂದಲಗೋಡೆ ಕಡೇಕ ಕರಕೊಂಡು ವಯ್ದನು...

ಅಲ್ಲಿ ಆಚ್ಚೇ ಕಡೇಕ ರಾಮಣ್ಣನು ಯಲುಗನಿಗೆ ಅದೇ ಥರದ ಸೀರೆ ವುಡಿಸುತ್ತಿರುವಾಗ್ಗೆ.. ಕುಬುಸ ತೊಡಿಸುತ್ತಿರುವಾಗ್ಗೆ.. ನಕಲಿ ಆಭರಣಗಳನ್ನು ನುಡಿಸುತ್ತಿರುವಾಗ್ಗೆ.. ಶಿಷ್ಯಂದಿರು ಬಲು ಸೂಚುಮಾತಿ ಸೂಚಮ ರೀತೀಲಿ ಗೋಡೆಗೆ ಕನ್ನ ಕೊರೆಯುತ್ತಿರುವಾಗ್ಗೆ....

ಯಿತ ಮಹಲಿನೊಳಗೆ ಕಳೇಬರದ ಸಮುಚ್ಚಮದಲ್ಲಿ ದುಕ್ಕಕರ ನಡಾವಳಿಯು ತಾರಕಕ್ಕೇರಿಬಿಟ್ಟಿತ್ತು. ವಂದು ಕಡೇಕ ಆಡ್ಯಾಡಿ ಅಳುತ್ತಿರುವವರೇನು? ವಂದು ಕಡೇಕ ಅಲವುಕಿಕ ಪದಗಳನ್ನು ಹಾಡುತ ಭಜನೆ ಮಾಡುವವರೇನು? ವಂದುಕಡೇಕ ಫಳಾರ ಹಂಚುತ್ತಿರುವವರೇನು? ತುಟ್ಟತುದೀಲಿ

ಮಾಕವಿ ಅಯ್ಯಾಳೇಸ್ವರನು ಕಳೇಬರವನ್ನು ಕಾವ್ಯಮಯವಾಗಿ ಸಾಪಳಿಸುತ್ತಿದ್ದುದೇನು? ನೋಡಲಕ ವಂದು ಕಣ್ಣು ಸಾಲದು, ಕೇಳಲಕ ಯಲ್ಡು ಕಿವಿ ಸಾಲದು ಸಿವ ಸಂಕರ ಮಾದೇವss..

ಅವಧೂತನೋಪಾದಿಯಲ್ಲಿ ಜಂಬ ಯಂಬ ಮೂಲ ಹೆಸರಿನ ಸ್ರೀಮಂತನೆಂಬಾತನಲ್ಲಿ ಯಿದ್ದನಷ್ಟೆ. ಜಾವಜಾವಕ ವಯ್ರಾಗ್ಯ, ಅಲವುಕಿಕ ಅಣಿಮುತ್ತುಗಳನ್ನುದುರಿಸುತ್ತ.. ಜಾವ ಜಾವಕ ಕಳೇಬರ ಪೂಜೆಯನ್ನು ಸಾಂಗೋಪಾಂಗವಾಗಿ ಮಾಡುತ್ತ.. ತೀರ್ಥ ಪ್ರಸಾದ ಯಿನಿಮಯ ಮಾಡುತ್ತ.. ರಾಜಮಾತೆ ಯಾರೊಬ್ಬರ ಹೊಟ್ಟೇಲಿ ಮತ್ತೆ ಹುಟ್ಟಿಬರಲಿರುವಳೆಂದೂ.. ತಮ್ಮ ಜೊತೆ ಆಕೆ ಮಾತಾಡುತ್ತಿರುವಳೆಂದೂ ಹೇಳುತ್ತ ಮರುಳು ಮಾಡುತ್ತಿದ್ದನು.

ಜಂಬನು ತಿನ್ನೋದರೊಳಗ, ಕುಡಿಯೋದರೊಳಗ ಯೇನು ಬೆರೆಸಿ ಕೊಟ್ಟನೋ ಯೇನೋ, ಅದು ಕೊಟ್ಟವನಿಗೆ ಗೊತ್ತು... ಸಿವನಿಗೇ ಗೊತ್ತು... ರಣಮಹಲಿನಲ್ಲಿದ್ದವರೆಲ್ಲರಿಗೆ ತೂಕಡಿಕೆ ಬಂತು. ಅವರ ತಲೆಗೆ ಯಿವರು ಯಿವರ ತಲೆಗೆ ಅವರ ಡಿಕ್ಕಿ ಹೊಡೆಯಲಕ ಹತ್ತಿದರು. ನೋಡು ನೋಡುತ್ತಿದ್ದಂತೆ ಹೆಣುಮಕ್ಕಳು, ಗಂಡು ಮಕ್ಕಳು ಯಲ್ಲರು ತಾವು ಯಲ್ಲೆಲ್ಲಿದ್ದರೋ ಅಲ್ಲಲ್ಲೆ ಗಪ್ಪಂತ ಮಲಗಿ ನಿದ್ದೆ ಮಾಡಲಕ ಹತ್ತಿದ್ದರು. ಸ್ರಿಂತನಾಗಿದ್ದಾತ ಜಂಬನಾಗಿ ಪಲ್ಲಟಗೊಂಡಂಥಾತನು ಯಲ್ಲರೂ ಗಾಢ ನಿದ್ದೆ ಹೋಗಿರುವುದನ್ನು ಖಾತರಿ ಮಾಡಿಕೊಂಡು ಬೆಳುವ ಪಕ್ಷಿಯಂತೆ ಕೂಗಿ ಸಂಗನೆ ಕೊಟ್ಟನು.

ಯಿತ್ತ ಹಿಂದಲ ಗೋಡೆಗೆ ಅಷ್ಟೇ ಪ್ರಮಾಣದ ಕನ್ನ ಕೊರೆದದ್ದೂ ಆಯಿತು.. ಸಾಲಂಕ್ರುತ ಯಲುಗನನ್ನು ಕನ್ನದ ಮೂಲಕ ವಳಗೆ ತಳ್ಳಿದ್ದಾಯಿತು. ಸಾಲಂಕ್ರುತ ರಾಜಮಾತೆಯ ಕಳೇಬರವನ್ನೀಚೆ ಯಳಕೊಂಡಿದ್ದೂ ಆಯಿತು.. ಯವ್ವಾ ತಾಯಿ, ನಮ್ಮನ್ನ ಮಾಫ್ ಮಾಡು, ಗವುಡನ ಮಗಳು ಪಾರೊತಿಗೆ ನಿನ್ನಾಸೀರುವಾದ ಬೇಕಾಗಯ್ತೆ. ನಿನ ಮಕ್ಕಳಾಗಿ ನಿಂತುಕೊಂಡು ನಿಂಗೆ ನಾವೇ ಮಣ್ಣು ಕೊಡುತೀವಿ. ಮಣ್ಣಿನ ರಿಣಾ ತೀರಿಸಿಕಂತೀವಿ ಯಂದು ರಾಮಣ್ಣನು ಯಿನಯಪುರುವಕವಾಗಿ ಹೇಳುತಾ ಹೇಳುತಾ ಕಳ್ಳೇಪುರಿಯಷ್ಟು ಅಳಾರ ಯಿದ್ದ ಕಳೇಬರವನ್ನು ತನ್ನ ಹೆಗಲ ಮ್ಯಾಲ ಹೊತ್ತುಕೊಂಡನು. ಸುಡುಗಾಡು ಯಲ್ಲಯ್ತಲ್ಲಯ್ತಂತ.. ಆ ಚೋರಾಗ್ರೇಸರರು....

ವಂದು ಜಾವ ಕಳೀತು.. ಯಲ್ಡು ಜಾವ ಕಳೀತು.. ಮೂರನೇ ಜಾವ ಮೂಡುವ ಹೊತ್ತಿನಲ್ಲಿ ಮೂಡಲ ಕಡೇಕ ಸಾಸುವೆ ಕಾಳಿನಷ್ಟು ಬೆಳಕು ಸೂರ್ಯ

ಪರಮಾತುಮನ ರಾಯಭಾರಿಯೋಪಾದಿಯಲ್ಲಿ ಕಾಣಿಸಿಕಂತು. ಅರೆ... ಅವುದಲ್ಲ ಯಂದು ಕಾವಲಿ ಹನುಮವ್ವನ ಹುಂಜವು ರಾಜಮುಕುಟದಂತಿದ್ದ ಹೆಳವರ ನಂಜಪ್ಪನ ಸಿಖರಾಗ್ರದ ಮ್ಯಾಲ ನಿಂತು ಕೊಕ್ಕೊಕ್ಕೋಕೋss ಯಂದು ವಂದಲ್ಲ ಹಲವು ಬಾರಿ ಕೂಗಿತು. ಅದನ್ನ ಕಬಳಿಸಲು ಹೊಂಚು ಹಾಕಿದ್ದ ಮತ್ತು ವಳಗೊಳಗೆ ಕವಿಯೂ ಆಗಿದ್ದ ಭೀಮ ಆ ಕೂಗು ಕೇಳುತ್ತಲೆ ಹೆದರಿ ಮೋಡಿ ಹೋಯಿತು. ನಚ್ಛತ್ತ ಸಮುದಾಯಕ್ಕೆಲ್ಲ ಹಿರಿಯಕ್ಕಳಂತಿದ್ದ ಬೆಳ್ಳಿಯು ಮುಗಿಲ ಹಾದಿಗುಂಟ ಹಲ್ಲುಜ್ಜಕಂತಾ.. ಬೆಳಕೆಂಬೋ ಕಫವನ್ನು ಪರಪಂಚದ ಮ್ಯಾಲ ವುಗುಳುತ್ತಾ.. ನಡಕೋತ ನಡಕೋತ ಬರಲಕ ಹತ್ತಿದ್ದಳು...

ಯಿತ್ತ ಹವಾಮಹಲಿನೊಳಗ ಮೊದಲು ತಡಬಡಿಸಿ ಯದ್ದವರೆಂದರೆ ಘನ ಸೊಸ್ತೇರು ಅಯ್ದು ಮಂದಿಯು... ಯಕ್ಕಾ ನೀನೇಳೆ, ತಂಗಿ ನೀನೇಳವ್ವಾ.. ಯಂದು ಪರಸ್ಪರ ಯಬ್ಬಿಸಿದರು. ಯೇs ಹಿಂಗ ಸತ್ತೋರಂಗ ಮಯ್ಯಿ ಮ್ಯಾಲ ಖಬುರಿಲ್ಲದಂಗ ಮಲಕ್ಕೊಂಡಾವಲ್ಲ ಸೆವಗೇಡಿಗಳು ಅಂತ ವಬ್ಬೊಬ್ಬರ ಮಯ್ನ ಅಳ್ಳಾಡಿಸುತ.. ಗದರಿಸೂತ.. ಯಬ್ಬಿಸುತ್ತಾ.. ತಮ್ಮತ್ತೆಯ ಕಳೇಬರವನ್ನು ದೂರದಿಂದಲೇ ನೋಡಿ ದರುಸನ ಪಡೆದರು. ಮಂಕಾಗಿದ್ದ ದೀವಟಿಗೆಯ ಬೆಳಕಲ್ಲಿ ಆಕೆಯೂ ಆಕೆಯ ಮಯ್ಯಿ ಮ್ಯಾಲಿದ್ದ ಯಾವತ್ತು ಆಭರಣಗಳು ಲಕಲಕಾಂತ ಹೊಳೆದವು.

ಮಲಗಿದ್ದೋರೆಲ್ಲ ವಬ್ಬೊಬರಾಗಿ ಬಲ ಮಗ್ಗುಲಿಂದ ಯದ್ದು ತಮ್ಮೆರಡೂ ಅಂಗಯ್ಯಿಗಳನ್ನು ತಮ ತಮ್ಮ ಕಣ್ಣ ಮುಂದೆ ಬಿಚ್ಚಿಕೊಂಡು.. ಕರಾಗ್ರೇವಸತೇ ಲಕ್ಷ್ಮಿ ಯಂದಂಬಲಕ ಬಾರದೆ ತಮ ಮಂದೇವರ ನಾಮಸ್ಮರಣೆ ಮಾಡುತ ನೋಡಿಕೊಂಡರು. ಮಯ್ಯಿ ಮುರುದರು ಲಟಲಟಾಂತ. ಹ್ಹಾ ಅಂತ ಆಕಳಿಸಿದರು ಹಿಮ್ಮೇಳ ಮುಮ್ಮೇಳದಂತೆ. ತಾವಿದ್ದ ದೂರದಿಂದಲೇ ಕಳೇಬರದ ಕಡೇಕ ಮಬ್ಬುಗಣ್ಣಿಂದ ನೋಡುತ "ಅವ್ವಾ.. ಯಿ ದಿನ ನಿನ್ನ ಯಿಲೋಕದ ಆಟ ಮುಗುತಾಯ ಆತಯ್ತವ್ವ.. ತಣ್ಣಗ ಕಳುವಿ ಕೊಡುತೀವಿ. ಯಿನ್ನೊಂದು ಜಲುಮ ಯತ್ತಬ್ಯಾಡ ತಾಯಿ. ಸೊರಗಲೋಕಕ್ಕೆ ಹೋಗಿ ಕಮ್ಮಗ ಯಿದ್ದುಬುಡುವಂತಿ" ಯಂದು ಹೇಳುತ ಸಣುಮಾಡಿದರು.

ಮಂದಿ ಯಂಬೋ ಮಂದಿ ತಮ ತಮ್ಮ ಸವುಕಲು ದಯ್ನಂದಿನ ಯಾಪಾರಕ ತೊಡಗಿತು. ಆಗವಕ್ಕ ಯಿದ್ದಕ್ಕಿದ್ದಂತೆ ಆ ವಂದು ಯತ್ತರದ ನಿಲುವು, ಆ ವಂದು ಕಂಚಿನ ಕಂಠ ನೆಪ್ಪಾತು. ಯಲ್ಲಾತ? ಗೋಚರ ಮಾಡುತ ಯಿಲ್ಲಲ್ಲಾ

ಯಂದು ತಾವಿದ್ದ ಕಡೇಕ ಸ್ರೀಮಂತನಿಗಾಗಿ ಹುಡುಕಾಡಿತು. ಯಪ್ಪೋ ಸ್ರೀಮಂತಪೋ ಯಂದು ಕೂಗಾಡಿತು. ನೀನು ನೋಡಿದ್ಯಾ? ಯಂದವರಿವರನ್ನು ಕೇಳಾಡಿತು. ಅವಯ್ಯ ಮಡಿವುಡಿ ಮಾಡಿಕಂಬರಲಕಂತ ಹೊಳೀಗ ಹೋಗಿರಬೇಕು, ಅವಯ್ಯ ಬ್ರಾಮ್ಮೀ ಮೂರ್ತದಲ್ಲಿ ಚೂರು ಪಾರು ತಪಸ್ಸು ಗಿಪಸ್ಸು ಮಾಡಲಕಂತ ಯಾದಾರ ಮರದಡೇಕ ಹೋಗಿರಬೇಕು ಯಂದನಕಂತ ತಮಗೆ ತಾವೇ ಸಮಾಧಾನಪಟ್ಟುಕೊಂಡರು. ಆತ ಯೀಟೊಂದು ಬಂಗಾರ ಧರಿಸಿರೋ ಕಳೆಬರಾನ ಬುಟುಕೊಟ್ಟು ಹೋಗ್ಯಾನಲ್ಲ ಯಂದು ಬ್ಯಾಸರ ಮಾಡಿಕೊಂಡರು. ಆತನ ಕಯ್ಯಿ ಬಲು ಸುದ್ದಯ್ತಪ್ಪಾ, ಸಾಂಬವಿಯ ಕ್ರುಪೆ ಆತನ ಮ್ಯಾಲ ಯಿದ್ದಂಗಯ್ತೆ. ಆತನನ್ನ ನೋಡಿದರ, ಆತನ ಬಾಯಿಯಿಂದ ಹೊಂಡೋ ಮಾತು ಕೇಳಿದರ ತಂಗಳಂಬಳಿ ವುಂಡೋಟು ಸಂತೋಸಾಗತಯ್ತೆ ಯಂದು ಆತನನ್ನು ಬಲು ಕೊಂಡಾಡಿದರು. ವಂದು ಗಳಿಗಾತು.. ಯರಡು ಗಳಿಗಾತು.. ಮೂರು ಗಳಿಗೇನೂ ಹೋತು.. ಬೆಳಗಿನ ಜಾವದ ಪೂಜೆ ಮಾಡಲಕಂದರಾತನ ಸುಳಿವಿಲ್ಲ. ಯಾರು ಯೇನಂದರೋ? ಬ್ಯಾಸರ ಮಾಡಿಕೊಂಡು ಹೋದಂಗಯ್ತೆ.. ಆತ ಮರಳಿ ಬರೋ ಲಚ್ಚಣಾ ಯಿಲ್ಲ. ಮುಂದಿನ ಕಾರ್ಯ ನಡೆಸಿಕೊಡೋದು ಯಿನ್ನಾರು?.. ಕಾಟನಾಯಕನಿದ್ದಾನಲ್ಲ. ಮಾವಂದಿರು ಬಲವಂತ ಮಾಡಿದರು.. ಯಷ್ಟು ಲಗೂನ ಹೆಣ ಯತ್ತುತ್ತಾರೋ ಅಷ್ಟು ಲಗೂನ ತಮ ತಮ್ಮ ಆಭರಣ ತಮಗೆ ದೊರಕುತಾವೆಂಬ ಭಾವನೆಯಿಂದ ಹೆಂಡರು ಮಾಡಿದ ಬಲವಂತಂದಿಂದಾಗಿಯೋ? ಶವ ಸಮುಸ್ಕಾರದ ಕಾರ್ಯ ಕಟ್ಲೆ ಮುಗಿಸಿ ಸಾಣಾ ಮಾಡಿ ಅಳಾರಾಗಬೇಕೆಂಬ ಭಾವನೆಯಿಂದಾಗಿಯೋ? ಕಾಟಯ್ಯ ಬಚ್ಚಲ ಮನೆಗೆ ಹೋಗಿ ನಾಕು ಚಂಬು ನೀರನ್ನು ಮಯ್ಗೆ ಹಾಕ್ಕೊಂಡು ಮಡಿ ವುಡಿಯಿಂದ ಹೆಣದ ಸನೀಕ ಬಂದ. ಅದರ ಮುಖ ನೋಡಲಕ ಧಯರ್ಯ ಸಾಲದೆ ವಂದು ಗಿಂಡಿ ನೀರು ಚುಮುಕಿಸಿದ, ಹೆಣ ಮಿಸುಕಾಡಿದಂಗಾತು.. ನೊಸಲಿಗೆ ಯಿಬತ್ತಿ ಗೀಟೆಳೆದ.. ಹೆಣ ಮಿಸುಕಾಡಿದಂಗಾತು.. ಕರಪೂರದ ಆರತಿ ಬೆಳಗಿದ, ಹೆಣ ಮಿಸುಕಾಡಿದಂಗಾತು.. ಅದೆಲ್ಲ ತನ್ನ ಭ್ರಮಾ ಅಂದುಕೊಂಡ. ಹೊರಗಡೆ ಯಿವಾನ ಸಿಂಗಾರ ಮಾಡುತ್ತಿರುವುದೇನು? ಬಾಜಾ ಬಜಂತ್ರಿ ಭಾರಿಸುತ್ತಿರುವುದೇನು? ಹೆಂಗಸರು ಸೊರ ಯುತ್ತರಿಸಿ ದುಕ್ಕ ಮಾಡುತ್ತಿರುವುದೇನು? ಹೆಣ್ಣೆನ್ನದೆ, ಗಂಡೆನ್ನದೆ ಮಂದಿ ನಾಮುಂದು

ತಾಮುಂದೂಂತ ಬಂದು ಹೆಂಗ ಕುಂತಾಳ ನೋಡು ನಮ್ಮವ್ವ, ಯಂಗಯ್ತೆ ನೋಡು ನಮ್ಮವ್ವ ನಗುಮಾರಿ? ಮದಲಿಂಗಿ ಯಿದ್ದಂಗದಾಳ ನೋಡು, ಯದ್ದು ಬರುತಾಳನ್ನಂಗದಾಳ ವರಚಸ್ಸು ಅಯ್ತೆ ನೋಡು ಯಂದು ಕೊಂಡಾಡುತ ಸಣುಮಾಡಿ ಹೋಗುತ್ತಿದ್ದುದೇನು? “ಯಸನ ಮಾಡ ಬ್ಯಾಡೂರಿ.. ಯಾರ್ಗೂ ಯೀ ಜಲುಮ ಸಾಸುವತವಲ್ಲ... ಯಲ್ಲಾರು ವಂದಲ್ಲಾ ವಂದಿವಸ ಹೋಗಲಕs ಬೇಕು. ಆಕಿ ಅದಾಳಂತ ತಿಳಕೊಂಡು ಬಾಳುವೇನ ಮಾಡಿಕೊಂಡು ಹೋಗಿರಿ..” ಯಂದು ಹಿರೀಕ ಮಂದಿ ರಾಜಪರಿವಾರದವರನ್ನ ಅಡ್ಡಡ್ಡ, ವುದ್ದುದ್ದ ತರುಬಿ ಧಯರ್ಯ ತುಂಬುತ್ತಿದ್ದುದೇನು? ಅದಿಲ್ಲ ಯಿದಿಲ್ಲ ಅಂತ ಯಸನ ಮಾಡಬ್ಯಾಡೂರಿ.. ನಮ್ಮದಿದನು ತಗಳ್ಳಿರಿ, ಅದನು ತಗಳ್ಳಿರಿ ಯಂದು ಮಂದಿ ಕಯ್ಯಿ ಬಿಚ್ಚಿ ತಂದು ಹಾಕುತ್ತಿದ್ದುದೇನು?

“ಹೊತ್ತು ನಿಲ್ಲಾಕಿಲ್ಲ.. ಮೂರ್ತ ಮೀರತಯ್ತೆ.. ಹೆಣಾನ ಯತ್ತಿ ಯಿಮಾನದೊಳಗೆ ಕುಂಡರಿಸಿರಿ. ಗಟ್ಟಿ ಮ್ಯಾಳ ಮೂದಲಕ ಹೇಳ್ರಿ” ಯಂದು ಹಲಕುಂದಿ ಮೋಬಳಾಚಾರ್ಯರು ತಮಗೆ ಅಪರಕರುಮ ಯಿದ್ಯೆ ಕಲಿಸಿದ ಸುಂಕದಕಲ್ಲ ಸಣಸಂಕರಾಚಾರ್ಯರನ್ನು ನೆನೆಯೂತ ಪಾದದುಂಗುಟದ ಮಟ ಯಿಳಿ ಬಿದ್ದಿದ್ದ ದೋತರವನ್ನು ಮೊಣಕಾಲ ಮಟ ಯತ್ತಿ ಕಟಗೊಂಡರು. ಅದರ ಹಿಂದೆಯೇ ಸಿವನ್ನಾಮ ಪಾರೊತೀಪತಿ ಹರಹರ ಮಾದೇವಾ.. ಯಂಬ ನಿನಾದ ಮಾಡುತ ಯಡದಿಕ್ಕಿನಿಂದಲೂ, ಯಂಟರಮಣ ಗೋಯಿಂದಾ.. ಗೋಯಿಂದಾs ಯಂಬ ನಿನಾದ ಮಾಡುತ ಬಲ ದಿಕ್ಕಿನಿಂದಲೂ.. ರಾಜಮಾತೆ ಭಯ್ರಮಾಂಬೆಗೆ ಜಯವಾಗಲಿ.. ಯಂದು ಕೂಗುತ ಯದುರುಗಡೆಯಿಂದಲೂ ಮಂದಿ ಬಂದು ಹೆಣದ ಸುತ್ತ ಜಮಾವಣೆಗೊಂಡರು. ಹೆಣದ ಸರೀರ ಬಲು ಸೂಚಮ ಅಯಿತರಪ್ಪಾ.. ಕಾಲು ಕಯ್ಯಿ ವುದುರಿ ಹೋದಾವು.. ವುಸಾರಿಂದ ಯತ್ತರೀ ಯಂದು ಹಿರೀಕನಾದ ತಡಿಕಯ್ಯ ಸೂಚನೆ ನೀಡಿದನು. “ಅಳರವ್ವಾ ಅಳರೀ.. ಯೇಟು ಅಳುತೀರೋ ಆಟು ಸಾಂತಿ ಸಿಗತಯ್ತೆ ತಾಯಿ ಆತುಮಕ್ಕss.. ಯೀಗತ್ತಂಗೆ ಮುಂದ ಅಳಲಾಕ ಬರೋದಿಲ್ಲ. ಅತ್ತೂ ಅತ್ತೂ ನಿಮನಿಮ್ಮ ಮನಸುಗಳನ ಅಳಾರ ಮಾಡಕಳ್ಳೀರಿ” ಯಂದು ಯಿನ್ನೊಬ್ಬ ಹಿರೀಕನಾದ ಕರಕಲಯ್ಯ ಅಳದೆ ಮುಖ ಮಾರೀನ ಬಿಕ್ಕಂಡಿದ್ದ ರಾಜಪರಿವಾರದ ಘನ ಸೊಸ್ತೇರಿಗೆ ತಾಕೀತು ಮಾಡಿದನು. ಲೋಕದಪವಾದಕ ಹೆದರಿಕಂಡು ಅವರೂ ತಮ ತಮ್ಮ ಕಣ್ಣೊಳಗ ಬಲವಂತದಿಂದ ನಾಕಾರು ಹನಿ ನೀರು

ತಂದುಕೊಂಡರು. ಯತ್ತೇ ಯಂಬ ಪದವನ್ನು ರಾಗ ಯಿನ್ಯಾಸ ಮಾಡಿ ವುದ್ಗರಿಸಿದರು. ಹೊರಗಡೆ ಮದ್ದಿನ ಕುಡಿಕೆಗಳನ್ನು ಢಮುಢಮಾರಂತ ಹಚ್ಚುತ್ತಿದ್ದುದರಿಂದ ಅವರು ತಮ ಸೊರವನ್ನು ಯುತ್ತರಿಸಿ ಯಿಸ್ತರಿಸಲೇಬೇಕಾಗಿತ್ತು..

ಢಣಢಣ ಜಾಗಟೆ ಭಾರಿಸುತ್ತಿರುವಾಗ.. ಗಣಗಣ ಗಂಟೆ ಭಾರಿಸುತ್ತಿರುವಾಗ.. ಕಣ್ಣೊಳಗಿನ ನೆಲ ಹಸನಾಗುತ್ತಿರುವಾಗ.. ಮೂಗುಗಳಿಂದ ಸಿಂಬಳ ಸೀಟಿ ಗೋಡೆಗಳು ಚಿತ್ರಮಯ ವಾಗುತ್ತಿರುವಾಗ... ಯತ್ತಬೇಕೆಂದು ಬಾಗಿದರೋ ಯಿಲ್ಲಮೋ... ಕಣ್ಣುತೆರಕಂಡಿದ್ದಲ್ಲದೆ.. ದಢಾರಂತ ಯದ್ದು ನಿಂತುಬಿಟ್ಟು ಗಹಗಹಿಸಿ ನಗಾಡಿಬಿಟ್ಟಿತು ಕಳೇಬರವು. ಅದನ್ನು ನೋಡಿ ಘಾಬರಿಗೊಂಡು "ಅಯ್ಯಯ್ಯೋ ಹೆಣಕ ಜೀವ ಬಂತೂ ಬಂತೂ" ಯಂದು ಕೂಗುತ ಮುಂಗಾಲೊಳಗ ಕಸುವಿದ್ದೋರು ದಿಕ್ಕು ದಿಕ್ಕಿಗೆ ಮೋಡಿ ಹೋದರ.. ವುಳಿಕೆ ಮಂದಿ ತಮ ತಮ್ಮ ಕಣ್ಣು ಬಾಯಿ ಹ್ಹಾ ಅಂತ ತೆರಕಂಡು ಹಂಗೇ ಮೂರ್ಛೆ ಹೋದರು. ಅಳಿದುಳಿಕೇ ಮಂದಿ ಹ್ಹಾ ಅಂತನಲಕಾಗದ.. ಹೂ ಅಂತನಲಕಾಗದ.. ಕಯ್ಯಿ ಯತ್ತಲಕಾಗದ.. ಕಾಲು ಯತ್ತಿ ಯಿಡಲಕಾಗದ.. ಬೆಕ್ಕಸಬೆರಗಾಗಿ ಸಂದು ಸದುವು ನೋಡಿಕೊಂಡು ಹೆಣದ ಯೇಸ ತೊಟ್ಟಿದ್ದ ಯಲುಗನೆಂಬ ಚೋರ ಕುಲ ಬೀಷುಮ ಪಿತಾಮಾನು ತನ್ನ ಕೊರಳ ಮಯ್ಯಿ ಮ್ಯಾಲಿದ್ದ ನಕಲೀ ವಡವೆಗಳನ್ನು ಅವಸರ ಬವಸರದಿಂದ ಕಿತ್ತೆಸೆದು ಹರೇದ ಹುಡುಗನಂಗೆ ಮಾರು ಮಾರಿಗೊಂದು ದಾಪು ಗಾಲಿಡುತಾ.. ಯಿಡುತಾ ನಡಕೋತss ನಡಕೋತ ಹೋಗೇಬಿಟ್ಟನು ಯಂಬಲ್ಲಿಗೆ ಸಿವಸಂಕರ ಮಾದೇವಾss

* * * *

ಅತ್ತ ಕೂಡ್ಲಿಗಿ ಸಮುಸ್ಥಾನದ ವುಸ್ತುವಾರಿಯನ್ನು ಕಯ್ಗೆ ಯೆತ್ತಿಕೊಂಡ ಹೆನ್ರಿಸಾಹೇಬ ಮೊದ ಮೊದಲಿಗೆ ನೋಡುವವರಿಂದ ನೋಡಿಸಿಕೊಂಡನು. ಕಲೆಟ್ರುಮನ್ರೋ ಸಾಹೇಬನ ಕಟ್ಟಪ್ಪಣೆ ಮೇರೆಗೆ ಕ್ಯಾನರೀಜು ಭಾಷೆಯನ್ನು ಚೂರು ಪಾರು ಕಲುತುಕೊಂಡಿದ್ದ ಆತನು ನೀನು ಯಾವುದು? ಯೀತ ಯಾವುದು? ಯಂಬ ಚೋಜಿಗದ ಪ್ರಸ್ನೆಗಳನು ಕೇಳುತ ಕಛೇರಿ ಸಿಬ್ಬಂದಿಯ ಪರಿಚಯ ಮಾಡಿಕೊಂಡನು. ಕತ್ರುಕರುಮ ಕ್ರಿಯಾಪದಗಳೊಂದಿಗೆ ಆಟವಾಡುತ ಪುರುಸ ಲಿಂಗವನ್ನು ಯಿಸ್ತ್ರೀಲಿಂಗ ಮಾಡುತ... ಅವೆರಡನ್ನೂ ಯಿದ್ದಕ್ಕಿದ್ದಂತೆ

ನಪೊಮುಸಕಲಿಂಗ ಮಾಡುತ ಸಮುಸ್ಥಾನದ ಯಾವತ್ತೂ ಪರಿಚಯ ಮಾಡಿಕೊಂಡನು. ಯಿಜಯನಗರ ಸಾಮುರಾಜ್ಯವು ಪತನಗೊಂಡ ಲಾಗಾಯ್ತು ಮುಸಲರ ಕಯ್ಯಿಗೆ ಸಿಕ್ಕಬಾರದೆಂದು ನಿರ್ಧರಿಸಿ ಗುಳೇ ಹೊಂಟು ಬಂದು ಅದೇ ಪಟ್ಟಣದೊಳಗ ನೆಲಗೊಂಡಿದ್ದ ಕಲಾಯಿದರ ಪಯ್ಕಿ 'ಮೇಲು' ಯಾರು? 'ಫಿಮೇಲೂ' ಯಂದು ಪರಿಚಯ ಮಾಡಿಕೊಂಡನು. 'ಫೀಮೇಲಿಗರ' ಪಯ್ಕಿ ಹರೇದ ಸುಂದರಿಯರು ಪಲಾನ ದಿವಸಗಳಂದು ತಮ್ಮ ಆಸ್ಥಾನಕ್ಕೆ ಬಂದು ನ್ರುತ್ಯ ವಮಾಡಬೇಕೆಂದು ಆಗ್ನೆ ಯಿಧಿಸಿದನು. ಯಿನ್ನೂ ಲಗ್ಗುನ ಮಾಡಿಕೊಂಡಿರದಿದ್ದವನೂ.. ಲಗ್ಗುನ ಮಾಡಿಕೊಂಡರೆಲ್ಲಿ ಕರತವ್ಯಕ್ಕೆ ಚುತಿ ವದಗುವದೋ.. ಯಂದು ಭಾವಿಸಿದ್ದವನೂ ಆದಂಥ ತಾನು ತಿಲ್ಲಾನು ತಾಯಕ್ಕನ ಮಗಳು ಚಿನ್ನಸಾನಿಯನ್ನು ತಲೆಗೆ ಬಲು ಹಚ್ಚಿಕೊಂಡನು.. ಕಾಮದ ಕವಿವ ಕರುಭೊಗೆಯೊಳಗಿದ್ದುಕೊಂಡೇ ಯಡ್ಡವರ್ಡನಂಥ ಅಧಿಕಾರಿಯ ವರುಗಾವಣೆಗೆ ಕಾರಣವಾದಂಥ ಕುದುರೆಡವು ಯಂಬ ಪುವ್ವುಲ ರಾಜರ ರಾಜಧಾನಿಯು ಯಲ್ಲಯ್ತ ಯಂದು ಹುಡುಕುವ ನಿಮಿತ್ತ ನಕಾಸೆಯನ್ನು ಟೇಬಲು ಮ್ಯಾಲೆ ಹರವಿಕೊಂಡು ಭೂತಗನ್ನಡಿಯು ಸಾಯುದಿಂದ ಆತ ಹುಡುಕೇ ಹುಡುಕುತ್ತಿರುವಾಗ್ಗೆ...

ಅತ್ತ ವುಯ್ಯಾಲವಾಡದಲ್ಲಿ ವುನ್ರೋ ಸಾಹೇಬನೆದುರಿಗೆ ನರಸಿಮ್ಮಾರೆಡ್ಡಿಯು ಆರೇಳು ಮೊಳ ಯಿದ್ದಾತ ಮೊಳವರೆಯಾಗಿಬಿಟ್ಟಿದ್ದನು. ತನ್ನ ಗಾದೆಯೊಳಗೆ ಮರಣದಂಡನೆಯನ್ನು ಬೇಕಾಬಿಟ್ಟಿ ಯಿಧಿಸುವ ಯವಸ್ಥೆ ಯಿಲ್ಲದಿರಲಿಲ್ಲ.. ಆ ಯವಸ್ಥೆ ಜಮೀಂದಾರಿಕೆಯ ಗತ್ತು ಗಯ್ರತ್ತುಗಳ ಪಯ್ಕಿ ವಂದಾಗಿತ್ತು. ರೆಡ್ಡಿಲೋ ರೆಡ್ಡಿರಾ ಯಂದು ಬುರ್ರಕಥಾ ಹಾಡುಗಾರರಿಂದ ಹಾಡಿಸಿಕೊಳ್ಳುವುದೆಂದರೆ ಸಾಮಾನ್ಯಯೇನು? ತಮ ತಮ್ಮ ಗಾದೆಗಳೊಳಗೆ ತಿಕ್ಕಡಿಗಳು ಕಾಣಿಸಿಕೊಳ್ಳದಿರಲೆಂದು ಪ್ರತಿಯೊಬ್ಬ ಜಮೀನುದಾರನು ಯಿಥಾದ್ದೊಂದು ಜನಾನುರಾಗಿ ಯವಸ್ಥೆಯನ್ನು ಯಿಟ್ಟುಕೊಂಡಿರುತ್ತಾನೆಂಬುದು ಸರುವ ಯಿಧಿತ. ಬುಡ್ಡಾ ವಮುಸಸ್ಥರಾದ ತಾವು ಅಯಿಮುಸಾವಾದಿಗಳೆಂಬ ಭಾವನೆಯನ್ನು ಕರೆತರುವ ಪೂರುವದಲ್ಲಿ ಮುನ್ರೋ ಸಾಹೇಬನಲ್ಲಿ ಮೂಡಿಸಿದ್ದನು. ಆದರೆ ನಿಸಿತಮತಿಯಾದ ಕಲೆಟ್ರು ತನ್ನ ಸೊಂತ ಮನೆಯಂಬಂತೆ ಸೀದ ಹೋಗಿ "ಯಿಕ್ಕಡುಂದಿ ಕದಾ ರೆಡ್ಡಿಗಾರು.. ಪ್ರಜಾಮೋದುಕಲಯ್ನ ಮೀರು ಚೂಚುಂಡರೇಮೋ" ಯಂದು ಮಾತಿನಿಂದ ತಿವಿದೇ ಬಿಟ್ಟನು. ಅಡಲ್ಲಾದ

ರೆಡ್ಡಿಯು ಮಿಸೆಯನ್ನು ಕೆಳ ಮುಖ ಮಾಡಿಕೊಂಡು ತಾನು ತನ್ನ ಜೀವಿತಾವಧಿಯಲ್ಲಿ ಯಾರಿಗೂ ಮರಣದಂಡನೆ ಯಿಧಿಸಿಲ್ಲ ಯಂದು ಹೇಳಿದನು. 'ಓಹೋ ಅಲಾಗೋ' ಯಂದು ಮನ್ರೋನು "ರಾಯಪಾಡು ಪೋತನ್ನ, ದೂರಾನಪಲ್ಲಿ ಯಂಟರಾಮುಡು, ಯದ್ದುಲ ದೊಡ್ಡಿ ಮದಕೇರಪ್ಪ" ಹಿಂಗ ವಂದರ ಹಿಂದೊಂದರ ಪ್ರಕಾರ ಹೆಸರು ಹೇಳುತ್ತ ಹೋಗಿದ್ದನು. ರಯ್ತ ಕೂಲಿ ಸಂಘ ಕಟ್ಟಿ ಹೋರಾಟ ಮಾಡುತ್ತಿದ್ದ ರಾಯಪಾಡು ಪೋತನ್ನನನ್ನು, ಸವರ್ಣೀಯರು ವುಪಯೋಗಿಸೋ ಬಾವಿಯಿಂದ ನೀರು ಸೇದಿದಿ ಯಂಬ ಕಾರಣಕ್ಕೆ ಯಂಟರಾಮುಡನನ್ನು, ತನ್ನ ಮಗನನ್ನು ವೆಟ್ಟಿಚಾರಿಗೆ ಬಿಡಲಿಲ್ಲ ಯಂಬ ಕಾರಣಕ್ಕೆ ಮದ್ದಿಕೇರಪ್ಪನನ್ನು ರೆಡ್ಡಿಯು ಗಲ್ಲಗೇರಿಸಿದ್ದು ಗುಟ್ಟಾಗಿರಲಿಲ್ಲ.. ಯಿಂಥ ಯಷ್ಟೋ ಸಂಗತಿಗಳನ್ನು ಪತ್ತೆದಾರರ ದ್ವಾರಾ ಸಂಗ್ರಹಿಸಿಟ್ಟುಕೊಂಡೇ ಮನ್ರೋ ಸಾಹೇಬನು ಅಲ್ಲಿಗೆ ದಯಮಾಡಿಸಿದ್ದನು. ಅಲ್ಲದೆ ಯಷ್ಟೋ ಮಂದಿ ವುಯ್ಯಾಲವಾಡ ಪ್ರಾಂತದ ಆಜುಬಾಜೂಕಿದ್ದ ಪ್ರಜೆಗಳು ರೋಸಿ ಕಲೆಟ್ರಿಗೆ ದೂರು ಸಲ್ಲಿಸಿದ್ದರು. ಯಲ್ಲೇಲ್ಲಿದ್ದರೋ ಅಲ್ಲಲ್ಲೇ ಕಲೆಟ್ರುರೆಡ್ಡಿಯ ಮ್ಯಾಲ ಯೇನು ಕ್ರಮ ಕಯ್ಯಿಗೊಳ್ಳುವನೆಂದು ಚಾತಕ ಪಕ್ಷಿಗಳಂಗೆ ಕಾಯುತ್ತಿದ್ದರು. ಜಲಜಲಾಂತ ಬೆವುರತೊಡಗಿದ್ದ ರೆಡ್ಡಿಗೆ ಮನ್ರೋನು ಕಂಪನಿ ಸರಕಾರವು ನಿಮ್ಮ ಸುಪರ್ದೀಲಿರೋ ಯಿಪ್ಪತ್ತೆರಡು ಸಹಸ್ರಯಕರೆ ಜಮೀನನ್ನು ಭೂಹೀನರಿಗೆ ಹಂಚಬೇಕೆಂದು ನಿರ್ದರಿಸಿದಲ್ಲಿ ನೀವೇನು ವುತ್ತರ ಕೊಡುತ್ತೀರಿ ರೆಡ್ಡಿಗಾರು.. ಯಂದು ಹೂವಿನೆಸಳನ್ನೆಸೆದಂತೆ ಕೇಳಿದ್ದಕ್ಕೆ ಅರಿಭಯಂಕರನೂ.. ನಿರಂಕುಸಮತಿಯೂ ಅದುವರೆಗೆ ಆಗಿದ್ದ ಬುಡ್ಡವೆಂಗಳ ರೆಡ್ಡಿಯು ಸುಪುತ್ರಕೊರಡಾ (ಕೊರಡಿನಿಂದ ದಿನಕ್ಕೊಬ್ಬರನ್ನಾದರೂ ಥಳಿಸುತ್ತಿದ್ದರಿಂದಾಗಿ) ನರಸಿಮ್ಮಾ ರೆಡ್ಡಿಯು ಆರು ಮೊಳಾವರೆ ಯಿದ್ದಾತ ಚೋಟುದ್ದ ಆದಾಗ್ಗೆ....

ಯಿತ್ತ ಗಂಟಲಲ್ಲಿ ಕಂದ, ಸೀಸ, ರಗಳ ಸಾಂಗತ್ಯ ರುತ್ತಾದಿಗಳಿಂದ ತನ್ನ ಗಂಟಲಲ್ಲಿದ್ದ ಚಂಡನ ತರಡು ಬೀಜಗಳಿಗೆ ಅಲಂಕಾರ ಮಾಡಿಕೊಂಡಿದ್ದ ಭೀಮನು ಸುಡುಗಾಡಲ್ಲಿ ಆಕಾಸ ರಾಮಣ್ಣನಿಂದ ಸಮುಸ್ಕಾರ ಮಾಡಿಸಿಕೊಂಡಿದ್ದ ರಾಜಮಾತೆ ಭಯ್ರಮಾಂಬೆಯ ಸಮಾಧಿಯನ್ನು ಗೆಬರಲಕ ಹತ್ತಿತ್ತು. ಹವಾಮಹಲಿನಿಂದ ಸದರೀ ಕಳೇಬರವನ್ನು ಹೊತ್ತು ತಂದಿದ್ದ ರಾಮಣ್ಣನು ಸೊತಹಾ ಕ್ರಿಯಾ ಮನುಷ್ಯನಾಗಿದ್ದುದರಿಂದ ಸಕಲ ಯಿದ್ಯಾಪಾರಂಗತನಾಗಿದ್ದ ಜಂಬನಿಂದ ಅಪಕರುಮ ಮಂತ್ರಹೇಳಿಸಿ ಸಕಲಗವುರವಗಳಿಂದ ಮಾ

ಮುಗಿಸಿದ್ದನು. ಹೆಣದ ಕಾಲಬುಡಕ ಹಣ್ಣು ಕಾಯಿ ಯಿಟ್ಟಿದ್ದನಲ್ಲ.. ಅದಕ್ಕೆ ಭೀಮ ಗೆಬರುತ್ತಿದ್ದದು....

ಯಿತ್ತ ಹವಾಮಹಲಿನಲ್ಲಿ ಮಾರು ಮಾರಿಗೊಂದರಂತೆ ಬಿದ್ದಿದ್ದ ಆಭರಣಗಳನ್ನು ಕಯ್ಗೆತ್ತಿಕೊಂಡು ತಿಕು ತಿಕ್ಕಿ ನೋಡುತ್ತ.. ಅವು ನಕಲಿ ಯಂದು ಖಾತರಿ ಮಾಡಿಕೊಳ್ಳುತ್ತ ರಾಜಪರಿವಾರದ ಮಂದಿ ಕಲ್ಲಾವುಲ್ಲಿಯಾಗಿಬಿಟ್ಟಿದ್ದರು. ಪಂಚಪತ್ನಿಯರು ಯೇಳು ಸುತ್ತಿನ ಕೋಟಿಯೋಪಾದಿಯಲ್ಲಿ ತಮ ಗಂಡನನ್ನು ಸುತುವರಿದು “ಯೀ ಅನಾವುತಕೆಲ್ಲ.. ನೀನೇ ಜವಾಬುದಾರ.. ನಮ್ಮ ವಡವೆಗಳನ ನೀನೆಂಗ ಕೊಡುತೀಯೋ ಕೊಡು.. ಯಿಲ್ಲಾಂದರ ನಾವಯ್ದು ಮಂದಿ ಯಿದೇ ಹವಾಮಹಲಿನೊಳಗೆ ವುರುಲು ಹಾಕ್ಕೊಂಡು ಸತ್ತೋಯ್ತೀವಿ.. ದೆವ್ವ ಪಿಚಾಚಿಗಳಾಗಿ ನಿನ್ನ ಹರಕೊಂಡು ತಿಂಥೀವಿ” ಯಂದು ಅಬ್ಬರಿಸತೊಡಗಿದ್ದರು. ಜಾವಜಾವಕ್ಕೊಮ್ಮೆ ಮೂರ್ಛೆ ಹೋಗೋದೂ.. ಯೇಳೋದು ಮಾಡುತ ಕಣ್ಣೀರನ್ನು ಕಪಾಳಗಳ ಮ್ಯಾಲ ಯಿಳಿಸುತ ತಮ ತಮ್ಮ ಅಪ್ಪಂದಿರ ಕೊಳ್ಳುಪಟ್ಟಿ ಜಗ್ಗಾಡುತ “ಯಿದರಾಗೇನೋ ಕಂತರಾಟ ಅಯ್ತಂತ ಹೇಳಿದರ ಕೇಳಿದಿರಾ ನೀವು. ನೀವು ನಿಮ್ಮ ಅಳೀಯನ ಸ್ಥಿತಿಗತಿ ಸುಧಾರಣಾ ಮಾಡಲಕಂತ ಯಿದೆಲ್ಲ ಆಟಾನ ಆಡಿದಿರಿ ಅಂತ ಕಾಣುತಯ್ತೆ” ಯಂದು ಕಲೆಬಿದ್ದರು. “ಯಿಲ್ಲರವ್ವಾ.. ಯಿದರಾಗ ನಮ್ಮದು ಯೇನೂ ತಪ್ಪಿಲ್ಲ.. ನಿಮ ಗಂಡಂದೇನೂ ತಪ್ಪಿಲ್ಲ.. ಯಲ್ಲಾಪ್ರಕೊರಚರಟ್ಟಿ ಕಳ್ಳರದ್ದೇ ಯೀ ಕೆಲಸಾss”.. ಯಂದಾಡಿದರು ಅವರಿಂದ ತಪ್ಪಿಸಿಕೊಳ್ಳುವ ನಿಮಿತ್ತ...

“ಯಾರನ್ನು ಅಂದಾಡಿ ಯೇನು ಪ್ರಯೋಜನ?.. ಮೊದಲು ಆ ಸ್ರೀಮಂತ ಯಂಬ ನನ್ನಾಟಗಳ್ಳ ಯಲ್ಲದಾನೋ ಹುಡುಕ್ರಲೇ..” ಯಂದು ವಂದುಕಡೆ ಸರುವಕ್ಕನೂss

“ಮೊದ್ಲು ರಾಜಮಾತೆಯ ಹೆಣ ಯಲ್ಲಯ್ತಂತ ಪತ್ತೆ ಮಾಡ್ರಲೋ” ಯಂದು ಕಾಡಕ್ಕನೂ..

ಅವುದವುದನಕಂತ ಮಂದಿ ದಿಕ್ಕು ದಿಕ್ಕಿಗೆ ಹರಡಿ ಅಂಡಾವರನ ಪುಂಡೀ ಪಲ್ಯೆಯಾದರು...

ಹೊತ್ತು ನೆತ್ತಿಮ್ಯಾಲಡರಿದ ಮ್ಯಾಲ ಸುಡುಗಾಡು ಕಾಯೋ ಕಳ್ಳಳ್ಳಿ ಬುವ್ವನು “ಯಪ್ಪಂದಿರಾ.. ನಿನ್ನೆ ರಾತ್ರಿಸರುಮೊತ್ತಿನಾಗ ವಂದ್ನಾಕು ಮಂದಿ ವಂದೆಣಾನ ತಂದು ಸಾಸ್ತರೋಕ್ತ ರೀತಿ ವಳಗ ಮಣ್ಣು ಮಾಡಿದರು” ಯಂದು ಹೇಳಿದನು..

ಹ್ಞಾ.. ಅವುದಾ ಅಂತ ಯಲ್ಲಾರು ದುಡು ದುಡೂಂತ ಸುಡುಗಾಡು ಕಡೀಕೆ ಮೋಡಿದರು.

ಖರೆ ಹೇಳಲಕಂದರ ರಾಜಮಾತೆಯ ಸಮಾಧಿಯನ್ನು ರಾಜಪರಿವಾರಕ್ಕ ಸಂಬಂಧಿಸಿದ ಪುವ್ವಲ ಘಾಟ್‌ನಲ್ಲಿ ಮಾಡಬೇಕಾಗಿತ್ತು. ತನ್ನ ಸಮಾಧಿ ತನ್ನ ಗಂಡನ ಚುತುಷ್ಕೋನಾಕ್ರುತಿ ಸಮಾಧಿ ಗಂಟಿಕೊಂಡಂತಿರಬೇಕೆಂದು ರಾಜಮಾತೆಯು ತನಗೆ ಬಾಯಿ ಬಿದ್ದಮ್ಯಾಲ ಅಂದುಕೊಂಡಿದ್ದುಂಟು. ಅದನ್ನು ಹೇಳಲು ನಾನಾರೀತೀಲಿ ಪ್ರಯತ್ನಿಸಿ ಯಿಫಲಗೊಂಡಿದ್ದುಂಟು. ಆಕೆ ದುರಾದ್ರುಸ್ಟಮೋ ಯೇನೋ? ಕಳ್ಳರ ಕಯ್ಯಿಂದ ಕೂಲಿಕುಂಬಳಿಯವರನ್ನು ಮಣ್ಣು ಮಾಡುವ ಸುಡುಗಾಡಿನಲ್ಲಿ ಮಣ್ಣು ಮಾಡಿಸಿಕೊಳ್ಳಬೇಕಾಗಿ ಬಂದಿತ್ತು...

ವಂದು ಯಿಷಯದಲ್ಲಿ ಯಲ್ಲಾ ಪ್ರಕೊರಚರಟ್ಟಿ ಕಳ್ಳರಿಗೆ ರುದಯ ಅಂಬುದುಂಟು ಯಂಬುದಕ, ಅವರಿಗೂ ವಳ್ಳೇದ್ಯಾವುದು ಕೆಟ್ಟದ್ದು ಯಾವುದು ಯಂಬುದು ಗೊತ್ತುಂಟು ಯಂಬುದಕ ಅವರು ಶವವನ್ನು ಸಾಸ್ತರೋಕ್ತವಾಗಿ ಮಣ್ಣು ಮಾಡಿರುವುದೇ ಸಾಕ್ಷಿ. ನಾಯಿ ನರಿ ಬಾಯಿಗೆಟುಕೋಹಂಗ ಕಳೇಬರವನ್ನು ಯಲ್ಲಾದರು ಬಿಸಾಡಿದ್ದರೇನು ಗತಿ? ಹಿಂಗ ಕೆಲವರು ಅವರ ಬಗ್ಗೆ ಗವುರವ ಪೂರುವಕವಾಗಿ ಯೋಚಿಸದೆ ಯಿರಲಿಲ್ಲ. ಅವುದಲ್ಲೋ ನೀನೇ ಹೇಳು? ಯಂದು ಅವರಿವರನ್ನು ಪುಸಲಾಯಿಸದೆ ಯಿರಲಿಲ್ಲ....

ಪಂಚಪತ್ನಿಯರು ವಂದೇ ವುಸುರಿಗೆ ಮೋಡಿ ತಮ್ಮತ್ತೆಯದ್ದೆನ್ನಲಾದ ಸಮಾಧಿಗೆ ಕಯ್ಯಿ ಹಚ್ಚಿ ಗೆಬರತೊಡಗಿದ್ದನ್ನು ನೋಡಿ ದೂರದಲ್ಲಿದ್ದ ನಾಯಿ ನರಿಗಳು 'ಪರವಾಗಿಲ್ವೇ!' ಯಂದು ವುದ್ಗಾರ ತೆಗೆದಿದ್ದಾಗ...

ಪಟ್ಟಣದ ಮಂದಿ ತಮ ತಮ್ಮ ಮಂಯ್ಯೊಳಗ ಸತಪದಿಗಳು ಹರದಾಡುತಿರುವಂಗೆ ಅಲ್ಲಿಂದ ಯಿಲ್ಲಿಗೆ.. ಯಿಲ್ಲಿಂದ ಅಲ್ಲಿಗೆ ಗಿರಕಿ ಹೊಡೆಯುತ್ತಿದ್ದರು. ತಮ ತಮ್ಮ ನಾಲಗೆ ಮ್ಯಾಲ ಯಲಾಪ್ರಕೊರಚರಟ್ಟಿ ಕಳ್ಳರನ್ನು ತರುಬಿಕೊಂಡಿದ್ದರು.. ಅವರನ್ನು ದಯವಾಂಸ ಸಂಭೂತರೆಂಬಂತೆ ಹೊಗಳಾಡುತಲಿದ್ದರು. ಕಳ್ಳಕಾಕರ ಕಯ್ಯಿಂದಲೇ ತಾನು ಮಣ್ಣಾಗಬೇಕೆಂಬ ಯಿಧಿಲಿಖಿಕ ಭಯ್ರಮಾಂಬೆಯ ಹಣೆ ಮ್ಯಾಲ ಯಿತ್ತೇನೋ?.. ಆಕೆಯಂಥ ಸಾವನ್ನು ತಮಗ್ಯಾರಿಗೂ ಕೊಡಬ್ಯಾಡ ಸಿವನೇ ಅಂದುಕೊಳುತ ಕಯ್ನೆತ್ತಿ ದಿಕುದಿಕ್ಕಿಗೆ ಮುಗಿಯುತಲಿದ್ದರು. ಪಟ್ಟಣಕೂ, ಸುಡುಗಾಡಿಗೂ ದಟ್ಟಂಡಿ ದಾರಂಡಿ ಯಿಟ್ಟಿದ್ದರು. ಸುಡುಗಾಡ ಯಿದ್ಯಮಾನಗಳನು ತಮ ತಮ್ಮ ಕಣ್ಣುಗಳೊಳಗ

ಯೇರಿಕೊಂಡು ಬಂದು ಕಂಡಕಂಡೋರ ಕಿವಿಯೊಳಗ ಕೆಡವುತಲಿದ್ದರು. ಕಣ್ಣಿಂದ ಕಿವಿಯು ಹಲವು ಗಾವುದ ದೂರ ಅಯಿತೇ.. ಕಿವಿಯಿಂದ ಕಣ್ಣು ಹಲವು ಗಾವುದ ದೂರ ಅಯಿತೇ.. ಕೇಳಿದ್ದನ್ನು ಕಣ್ಣಿಂದ ನೋಡಿ ಖಾತರಿ ಮಾಡಿಕೊಳ್ಳಲಕೆಂದು.. ಹಾದಿಗೊಂದು ಹಾದಿ ತಳಕು ಹಾಕಲಕೆಂದು.. ಲವುಕಿಕದಿಂದ ಅಲವುಕಿಕವನ್ನು ಬೇರುಪಡಿಸಲಕೆಂದು.. ಕಷ್ಟದಿಂದ ಸುಖ ಪಡೆಯಲಕೆಂದು.. ಸುಖದಿಂದ ಕಷ್ಟವ ಪಡೆಯಲಕೆಂದು ಯಾವತ್ತು ಮಂದಿಯು ಅವಧೂತರೋಪಾದಿಯಲ್ಲಿ ತಕ್ಕರಲಾಡುತಿರುವಾಗ್ಗೆ....

ಯಿತ್ತ ಅದೇ ಸುಡುಗಾಡ ವರ್ಣರಂಜಿತ ದ್ರುಸ್ಯಾವಳಿಯೊಳಗೆ ಮಾಕವಿ ಅಯ್ಯಾಳೇಸ್ವರನು ಸಿಲುಕಿ ಹಾಕಿಕೊಂಡಿದ್ದನು. ಕಾವ್ಯದ ತಿಕ್ಕಡಿಯಿಂದಾಗಿಯೋ.. ನಾಯಿ ರೂಪಧಾರಣ ಮಾಡಿ ತನ್ನ ಕಾವ್ಯವನ್ನು ನಮಲಿ ಹಾಕಿದ ರಾಜಮಾತೆಯನ್ನು ಬಯ್ದು ಕೋಪತಾಪ ತಮಣಿ ಮಾಡಿಕೊಳ್ಳಲಕೆಂದೋ, ಹೊಲಬುಗೆಟ್ಟೋ.. ಮಾಕವಿಯು ತನಗೆ ಗೊತ್ತಿದ್ದೋ.. ಗೊತ್ತಿಲ್ಲದೆಯೋ.. ಸುಡುಗಾಡನ್ನು ಸೇರಿಕೊಂಡು ಬಿಟ್ಟಿದ್ದನು. ಆಗಿನ್ನು ಆಕಾಸದೊಳಗ ಚುಕ್ಕಿಗಳು ಮೂಡೋದು ಮುಳುಗೋದು ಮಾಡುತಲಿದ್ದವು. ಬೆಳ್ಳಿ ಮೂಡಿ ಕತ್ತಲೆ ಯಂಬುವ ಕಳ್ಳು ಕುಡಿದು ಮತ್ತೇರಿ ಕೆಳಗಣ್ಣು ಮ್ಯಾಲಗಣ್ಣು ಮಾಡುತಲಿದ್ದ ಚುಕ್ಕಿಗಳನ್ನು ಬಲವಂತದಿಂದ ಜಾಗ ಖಾಲಿ ಮಾಡಿಸಲಾರಂಭಿಸಿತ್ತು. ಚುಕ್ಕಿಗಳು ವಲ್ಲದ ಮನಸಿನಿಂದ ಬೆಳಕಿನ ತೆರೆ ಹಿಂದೆ ಬಚ್ಚಿಟ್ಟುಕೊಳ್ಳಲಾರಂಭಿಸಿದ್ದವು. ಮೂಡಲ ದಿಡ್ಡಿ ಬಾಗಿಲಿಂದ ಕೆಂಗಿರಣಗಳು ಮೋಡುತೋಡುತ ಬಂದು ತಮ್ಮ ಸೂರ‍್ಯ ಪರಮಾತುಮನ ಆಗಮನಕ್ಕ ಹಾದಿ ಸುಗಮಗೊಂಡಿರುವುದೋ.. ಯಿಲ್ಲಮೋ ಯಂದು ಪರಿಸೀಲನಾ ಕಾರ‍್ಯಕ್ಕೆ ತೊಡಗಿದ್ದವು. ಸಾಯೋರಿಲ್ಲದ ಕಾರಣಕ್ಕಾಗಿ ಬಿಕೋಯನ್ನುತಲಿದ್ದ ಸುಡುಗಾಡ ಮಯ್ಯಿ ಮ್ಯಾಲ ಯಿಡೀ ರಾತ್ರಿಅಲೆದಲೆದು ನರಿ ತೋಳ ಕಿರುಬಗಳು ತಮ ತಮ್ಮ ಮಾರಿಗಳನು ಸಪ್ಪಗ ಮಾಡಿಕೊಂಡು ವಾಪಾಸು ಹೋಗಲಕ ಹತ್ತಿದ್ದವು.. ಅದೇ ತುಸು ಸಮಯದ ಹಿಂದೆಯಷ್ಟೆ ಕಳ್ಳರು ಸಾಸ್ತರೋಕ್ತವಾಗಿ ಕಳೇಬರವನ್ನು ಗುದ್ದೊಳಗಿಟ್ಟು ತಾವು ವಾಪಾಸು ಹೋಗುವಾಗ್ಗೆ.. ಕಾವಲುಗಾರ ಕಳ್ಳಳ್ಳಿ ಬುವ್ವನ ಕಯ್ಯಿ ಹಿಡಿದು ಹೆಗಲ ಮ್ಯಾಲ ಕಯ್ನ ಹಾಕಿ ಯೇದಾಂತವನ್ನಾಡಿ "ನೋಡೆಜಮಾನ ನಾವು ಯಲ್ಲಾಪ್ರಕೊರಚರಟ್ಟಿ ಚೋರರು.. ಯೀಗ ಮಣ್ಣು ಮಾಡಿದ್ದು ಕುದುರೆಡವು ರಾಣೆವ್ವನ್ನ.. ನಾಯಿ ನರಿ ಮುಟ್ಟಧಾಂಗ ಸರ‍್ಯಾಗಿ ನೋಡಿಕ್ಯಾ.. ಬಡವ ಅದೀ..

ತಗಾ ಯಿಟುಗ್ಯಾ” ಯಂದು ವಂಟೆಳೆ ಸರವನ್ನು ಕೊಟ್ಟಿದ್ದರು.. ಅವರು ಅತ್ತ ಹೋಗಿ ಯಷ್ಟೋ ಹೊತ್ತಾದ ಮ್ಯಾಲ ತಿಬ್ಬಳಿಸಿಕೊಂಡ ಕಳ್ಳಳ್ಳಿ ಬುವ್ವನು “ಯಿಧಿಯೇ.. ಯೇನಿದು ನಿನ್ನಾಟವು” ಯಂದು ಅಳುತಲಿದ್ದುದು ಮಾಕವಿಗೆ ಸುಸ್ರಾವ್ಯವಾಗಿ ಕೇಳಿ ಬಂದಿತ್ತು. ಯಿಲ್ಲೆಲ್ಲೋ ತನಗಿಂತ ಮಿಗಿಲಾದ ಕವಿಯೋರ್ವನು ದುಕ್ಕ ರಸಾತುಮಕ ಕಾವ್ಯವನ್ನು ಯಿಶಿಷ್ಟವಾದ ಗಮಕ ಸಯ್ಲಿಯಲ್ಲಿ ವಾಚನ ಮಾಡುತ್ತಿರುವಂತಿದೆ ಯಂದು ಪದದ ನಾದ ಹಿಡಿದು ತಡಕ್ಕೋತ ಹುಡುಕ್ಕೋತ ತಲುಪಿ “ಕವಿವರ್ಯಾ... ತಾವುದಾರು? ತಮ್ಮ ನಾಮಂಕಿತ ಯೇನು?” ಯಂದು ಕೇಳಿದನು. ಆತ ಯಲ್ಲಾಪ್ರಕೊರಚರಟ್ಟಿ ಯಂದೇನೋ ಹೇಳಿದನು. ಅದಕ್ಕೀತನು ತಾವು ವಾಚನ ಮಾಡುತ್ತಿರುವ ಕಾವ್ಯವಾವುದು ಯಂದು ಕೇಳಿದನು. ಅದಕ್ಕಾತನು ಕಾವ್ಯ ಯಂಬ ಪದವನ್ನು ಅವ್ವ ಯಂದು ಪರಿಭಾವಿಸಿಕೊಂಡು ‘ರಾಜಮಾತೆ ಭಯ್ರಮಾಂಬೆವ್ವ’ ಯಂದೇನೋ ಹೇಳಿದನು. ಅದಕ್ಕೀತನು ಯಾವ ಸಯ್ಲಿಯಲ್ಲಿ ರಚಿಸಿರುವಿರಿ ಚಂಪೂವಿನಲ್ಲೋ.. ಷಟುಪದಿಯಲ್ಲೋ.. ಯಂದು ಕೇಳುತ್ತಿರುವಾಗ್ಗೆ.. ಭೀಮ ಆಹಾರದ ಜಾಡು ಹಿಡಕೊಂಡು ಬಂದು ರಾಜಮಾತೆಯಿದ್ದ ಸಮಾಧಿಯನ್ನು ಗೆಬರಲಾರಂಭಿಸಿತ್ತು. ಯೇನಿದು ಸಬುಧ ಯಂದು ಮಾಕವಿಯು ಕತ್ತೊರಳಿಸಿ ನೋಡುತ್ತಾನೆ.. ಅದೇ ಸುನಕವು..! ಅದರೊಂದಿಗೆ ತಾನು ಮುಖಾ ಮುಖಿಯಾದಾಗ.. ಯಲಮೋ ಸುನಕವೇ.. ನಿನ ಗಂಟಲೊಳಗಿರೋ ಕಂದ ಸೀಸ ಖ್ಯಾತ ಕರ್ನಾಟರುತ್ತಾದಿ ಗಳನ್ನು ಕಕ್ಕು ಮರುವಾದಿಯಿಂದ ಯಂದು ಗದ್ದರಿಸುತ್ತಿದ್ದಾಗ... ವಾಗ್ವಾದ ತಾರಕಕ್ಕೇರಿದ್ದಾಗ ನಾಕಾರು ಮಂದಿ ಬಂದು ಗಬಕ್ಕಂತ ಮಾಕವಿಯನ್ನು ಹಿಡಕೊಂಡು ಯಲ್ಲಾಪ್ರಕೊರಚರಟ್ಟಿ ಕಳ್ಳಾ ಕಳ್ಳಾ ಯಂದು ಕೂಗಿದರಷ್ಟೆ. ನಾಕು ತದಕಿಸಿಕೊಂಡು ಮಾರ್ಛೆ ಹೋಗಿದ್ದಷ್ಟೆ ಮಾಕವಿಗೆ ಗೊತ್ತು. ಮುಂದ ಮುಂದ ಜರುಗಿದ್ದೇನೆಂದರೆ....

ಅತ್ತ ಅರಮನೆಯೊಳಗ.. ವರ್ತಮಾನದ ವುಸಾಬರಿಯಿಂದಲೇ ದೂರಯಿದ್ದಂಥ ಅರಮನೆಯೊಳಗೆ, ಕಾಡುಗೊಲ್ಲರೀರಯ್ಯ, ಜಡೆತಾತಂದಿರು ಯದುರಾ ಬದುರಾ ಕೂಕೊಂಡು ತೊಂಬಲ ಯಿನಿಮಯ ಮಾಡಿಕೊಳ್ಳುತಲಿದ್ದ ಅರಮನೆಯೊಳಗ.. ಮಲನಾಡ ಸೀಮೆಯಿಂದ ಗುಳೇಹೊಂಟು ಬಂದಿದ್ದ ನಾಕಾರು ಕೋಗಿಲೆಗಳಿಗೆ ಆಸ್ರಯ ಕಲ್ಪಿಸಿದಂಥ ಅರಮನೆಯೊಳಗ.. ಹಂಪಜನ ಜೀವ ಸಮಾಧಿ ಮ್ಯಾಲ ಯೇಳೆಂಟು ಬಿಲಗಳ ಹುತ್ತ ಚಿಗಿತಿದ್ದ

ಅರಮನೆಯೊಳಗೆ.. ನಾಗ ಮಿಥುನಗಳಿದ್ದ ಅರಮನೆಯೊಳಗ.. ವಳ ಹೊರಗಿನ ಯತ್ವಾಸ ಅಳಿಸಿ ಹಾಕಿದ್ದ ಅರಮನೆಯೊಳಗ.. ಹಿಂದಕ ಮುಂದಕ ವಾಲಾಡುತಲಿದ್ದ ತೊಟ್ಟಿಲುಗಳುಳ್ಳ ಅರಮನೆಯೊಳಗ.., ಜೋಗುಳದ ನಲ್ವಾಡುಗಳ ನಾದದ ಕೊಪ್ಪರಿಗೆಯಂತಿದ್ದ ಅರಮನೆಯೊಳಗ.. ಮೂಡದೆ ಮುಣುಗದೆ ವಂದೇ ಸಮನಾದ ಹೊತ್ತು ತುಳುಕಾಡುತಲಿದ್ದ ಅರಮನೆಯೊಳಗ.. ನಡೆಯುತಲಿದ್ದುದು ವಂದಾದರ ಭಕುತಾದಿ ಮಂದಿ ಕಲ್ಪನಾ ಮಾಡುತಾ ಮಾಡುತಾ ಕಟ್ಟುತಲಿದ್ದ ಕಟ್ಟಿ ಕಿವಿಯಿಂದ ಕಿವಿಗೆ ಹರಿಬಿಡುತಲಿದ್ದ ಕಥೆಗಳು ವಂದಾ ಯರಡಾ ಬರೋಬ್ಬರಿ ಸಾವುರಾರಿ ರಬಹುದು.. ಅವುಗಳನೊಂದೊಂದು ಹೇಳೂತ ಹೋದರ ರಾಮ್ಯಾಣವೇ ಆದೀತು ಸಿವನೇ..

ಕಾಸೀಗೆ ಹೋದವರು ಕವಡೆಮ್ಮನ ದರುಸನ ತಗೊಂಡ ಮ್ಯಾಲ ಯಿಸ್ನಾತನ ದರುಸನವನ ಹೆಂಗ ತಗೊಂತಾರೋ ಹಂಗ ಅಲ್ಲಿ ನಿನ್ನೆ ಮೊನ್ನೆ ಯದ್ದಿರುವ ಸಣಿದೇವರ ದರುಸನದ ನಂತರವೇ ಸಾಂಬವಿಯ ದರುಸನನ ಪಡಕೋ ಬೇಕಂತs.. ಸಾಂಬವಿ ಮತ್ತ ಸಣಿ ಮಾತುಮನ ನಡುವೆ ಅಂಥಾದ್ದೊಂದು ವಪ್ಪಂದ ಆಗಿರುವುದಂತ.. ಹೆಂಗ ನಂಬುವುದಂದರ ಹಂಗನ ನಂಬಬೇಕಪ್ಪಾ ಅಂಬುತಾರ ಕುದುರೆಡವ ಪಟ್ಟಣಾಕ ಹೋಗಿ ಬರುವ ಭಕುತಾದಿ ಮಂದಿ. ಸಣಿದೇವರಂದರ ತಿಗಣಿ ನೊರಜು ಯಿದ್ದಂಗ... ಆತ ಯಾಕಲ್ಲಿಗೆ ಬರಲಕ ಹೋದ.. ಅವರೀರ್ವರ ನಡುವೆ ಯೇನೇನು ನಡೀತು.. ಅಂಥ ವಪ್ಪಂದವನು ಆದಿ ಸಗುತಿಯಾಕ ವಪ್ಪಿಕೊಂಡು ತನ್ನ ಕಿಮ್ಮತ್ತು ಕಡಿಮೆ ಮಾಡಿಕೊಂಡಳು.. ಯಿ ಕಥಿಯನು ಕುಂತಳ ಸೀಮೆ ಮಂದಿ ಹೆಂಗ ನಮಲಿದರಂದರ....

ತನ್ನೆದೆ ಮ್ಯಾಲ ಚಿಂತೆ, ಯಾಕುಲ, ಯಸನ ಯಿವೇ ಮೊದಲಾದ ಆಭರಣಗಳನ್ನೂ ಧರಿಸಿಕೊಂಡು ಮುಂದುಗಡೆಯಿಳಿದ ಆತನೇ ಸಣಿದೇವ ಯಂದು ಸಾಂಬವಿ ಗುರುತು ಹಿಡಿಯಲಿಲ್ಲವಂತೆ ಮೊದ ಮೊದಲಿಗೆ, ಸಣಿಯೇ ತಾನು ಯಂದು ಪರಿಚಯ ಹೇಳಿಕೊಂಡನಂತೆ.. ನೀನೆದಕ ಬಂದೀ ಅಂತ ತಾಯಿ ಕೇಳಿದರೆ ಸಾಂಬಯ್ಯನ ಕಾಡಲಕ ಬಂದೀನಿ ಯಂದನಂತೆ.. ಕೇಳಿ ತಾಯಿ ಗಡಗಡ ನಡುಗಿದಳಂತೆ.. ಬ್ಯಾಡಪ್ಪಾ ಬ್ಯಾಡ ಯಂದು ಪರಿಪರಿಯಿಂದ ಕೇಳಿಕೊಂಡಳಂತೆ.. ಹಿಂಗ ಅವರಿಬ್ಬರ ನಡುವೆ ಮಸ್ತು ವಾದೋಪವಾದ ನಡೆಯಿತಂತೆ.. ಕೊನೀಕಿದ್ದು ತನಗೊಂದು ಗುಡಿ ಬೇಕೆಂದೂ.. ಅದರಲ್ಲಿ ತ್ರಿಕಾಲ

ಪೂಜಿ ಪುನಸ್ಕಾರ ನಡೆಯಬೇಕೆಂದೂ.. ಬರುವ ಭಕುತರು ಮೊದಲು ತನ್ನ ದರುಸನ ಪಡೆಯಬೇಕೆಂದೂ ಕರಾರು ಯಿಧಿಸಿದನಂತೆ, ಅದಕ ಸಾಂಬವಿಯು ವಪ್ಪಿಕೊಂಡಳಂತೆ.. ಆಮ್ಯಾಲ ಸಣಿ ದೇವನು ನೊರಜಿನ ಡುಬ್ಬದ ಮ್ಯಾಲ ಕೊಕಂಡಲ್ಲಿಂದ....

* * * *

ಅತ್ತ ಕೂಡ್ಲಿಗಿಯೊಳಗ ತಿಲ್ಲಾನ ತಾಯಕ್ಕ ಯಾವುದೇ ವಂದು ಛೀಜನ್ನು ಆಲಾಪನ ಮಾಡದಷ್ಟು ಕಲ್ಲಾವುಲ್ಲಿಯಾಗಿದ್ದಳು.

ವಂದು ಕಾಲಕ್ಕೆ ಪಟ್ಟಣಸ್ವಾಮಿಯಾಗಿದ್ದ ಮನತನದಿಂದ ಬಂದಾತನಾದ ನೀಲಕಂಠಪ್ಪ ಬರೋದು ಬಂದು ಲೋಡಿಗಾತು ಕೂಡ್ರಲಿಲ್ಲ.. ವಂದು ಜಾಮು ಕೇಸರಿ ಮಿಸ್ರಣ ಮಾಡಿದ ಹಾಲು ಕುಡಿಯಲಿಲ್ಲ.. ತಾಂಬೂಲ ನಮಲಲಿಲ್ಲ. ವಂದು ಚಿಟಿಕೆ ನಸ್ಯೆ ಯೇರಿಸಲಿಲ್ಲ.. ಯೇರಿಸಿ ಸೀನಲಿಲ್ಲ.. ಸೀತು ಯಂದಿನಂತೆ ರೇಸಿಮೆ ದೋತರದಿಂದ ವರೆಸಿಕೊಳ್ಳಲಿಲ್ಲ.. ತಾಯಕ್ಕನ ಕಡೆ ದುರುಗುಟ್ಟಿ ನೋಡಿ ಕಿಟಕಿ ದ್ವಾರಾ ಕೋಣೆಯೊಳಗಿಣಿಕಿ "ಯಿನ್ನೊಂದು ಸಾರಿ ನೀನು ಬಂಗಲೆ ಕಡೆ ಮುಖ ಮಾಡಿದೀ ಅಂದರ ಕಾಲು ಕತ್ತರಿಸಿಬಿಡುತೀನಿ" ಯಂದು ಯಚ್ಚರಿಕೆ ಮಾತುಗಳನ್ನಾಡಿ 'ಅಪ್ಪಾಜಿ ಅಪ್ಪಾಜಿ' ಯಂಬೆರಡು ಸಬುಧಗಳನ್ನು ಬೆನ್ನಫಣಿ ಮ್ಯಾಲ ಅಂಟಿಸಿಕೊಂಡು ರವುಸದಿಂದ ಹೊರಬಂದು ಸಾರೋಟೇರಿ ಹೊರಟು ಹೋದನು.

ಕಿಟಕಿಯಿಂದ ತನ್ನ ಕೋಮಲ ಕಯ್ಯಿಗಳನ್ನು ಹೊರಚಾಚಿ "ಯವ್ವಾ..ಯವ್ವಾ.. ಬಾಗಿಲು ತೆರೆಯೋ.. ನಾನು ಹೋಗದಿದ್ದರ ಅವರೇನೆಂದುಕೊಂಡಾರು.. ನನ ಮ್ಯಾಲ ಜೀವಯಿಟುಕೊಂಡಾರವ್ವಾ.. ಬಾಗಿಲು ತೆರೀತೀಯೋ... ಯಿಲ್ಲಾ ತಲೆ ಬಡಕೊಂಡು ಸಾಯ್ಲೋ." ಯಂದು ಚಿನ್ನಸಾವಿ ಹುವ್ವೊಂದು.. ಬೆಳದಿಂಗಳೊಂದು, ಖುದ್ದ ದುಕ್ಕಿಸುತ್ತಿರುವುದೇನೋ ಯಂಬಂತೆ ಅರಣ್ಯರೋಧನ ಮಾಡುತಲಿದ್ದಳು.

ತೊಡೆಮ್ಯಾಲಿದ್ದ ಯೀಣೆಯನ್ನು ಕೆಳಗೆ ತಳ್ಳುತ್ತ ತಾಯಕ್ಕ.. "ಹೆತ್ತೂ ಹೊತ್ತೂ ಹದಿನೇಳು ವರುಷ ಜ್ವಾಪಾನ ಜತುನ ಮಾಡಿದೋರಿಗಿಂತ ನಿನ್ನೆ ಮೊನ್ನೆ ಬಂದ ಆ ಪರಂಗಿಯುವನೇ ನಿನಗ ಹೆಚ್ಚಾದನಲಾ.. ಸ್ರೀಕ್ರುಷ್ಣದೇವರಾಯನಂಥ ಗಂಡನ್ನ ಹುಡುಕಿ ಮದುವೆ ಮಾಡಬೇಕೆಂದೇ ನಿನಗ ಚಿನ್ನಸಾನಿ ಅಂತ ಹೆಸರನ್ನಿಟ್ಟೆನಲ್ಲೇ" ಯಂದು ಅನ್ನಲು ತನ್ನ ಮ್ಯಾಲಿದ್ದ ಹತ್ತಾರು

ವಡವೆಗಳು ಘಿಲ್ ಘಿಲ್ ಸದ್ದು ಮಾಡಿದವು....

ಅದಕಿದ್ದು ಚಿನ್ನಾಸಾನಿಯು ತಾನಿದ್ದಲ್ಲಿಂದಲೇ "ಯವ್ವಾ... ಅವರು ನೀನಂದುಕೊಂಡಷ್ಟು ಸುಮಾರು ಮಂದಿ ಅಲ್ಲವ್ವಾ.. ವಳ್ಳೆಯವರದಾರ, ಮದುವೆ ಮಾಡಿಕೋತಾರಂತ.." ಯಂದು ಪಂಚಮ ಯೇದದ ನಾಂದಿ ಸ್ಲೋಕ ನುಡಿದಳು...

ಅದಕಿದ್ದು ತಾಯಕ್ಕ "ನನಗಿರೋದು ನೀನೊಬ್ಬಾಕಿ.. ನಿನ್ನವಗ ಮದುವೆ ಮಾಡಿಕೊಟ್ಟು ಸಾವಬೇಕಂತೀಯೇನು? ಅವ ವಳ್ಳೇವರಿದ್ದರೇನಾತು..? ಪರಂಗಿ ಮನುಷ್ಯಾ ಅದಾನ.. ಪರಂಗಿ ಮನುಷ್ಯಾ.. ಸಮುದ್ರದಾಗ ಪ್ರಯಾಣ ಮಾಡಿ ಯಿಂಗಲೆಂಡು ದೇಸದಿಂದ ಯಿಲ್ಲಿಗೆ ಬಂದಾವದಾನ.. ಖಬರ್ದಾರ್" ಯಂದು ತಾಯ್ತನವನ್ನು ಬಿಕ್ಕಳಿಸುತ್ತಿರಲು....

ತಬಲ, ಹಾರುಮೋನಿ, ಸಾರಂಗಿ, ತಂಬೂರಿಗಳೆಲ್ಲ ಮವುನವಾಗಿ ದುಕ್ಕಿಸುತ್ತಿರುವಾಗ್ಗೆ, ಬೆಳ್ಳಿ ಪಂಜರದೊಳಗಿದ್ದ ರಾಮ ಚಿಲುಕ ಆ ಕ್ಷಣ ಸಲ್ಲೇಖನಾರೊತರೂಢವಾಗ್ಗೆ....

ಯಿತ್ತ ಬಂಗಲೆಯಲ್ಲಿ ಮಟ್ಟಸ ನಿಲುವಿನ ಹೆನ್ರಿಸಾಹೇಬನು ಬೆನ್ನ ಹಿಂದೆ ಕಯ್ನ ಕಟ್ಟಿಕೊಂಡು ಸತಪತ ಹೆಜ್ಜೆ ಹಾಕುತಲಿದ್ದನು. ಆತನ ಕಣ್ಣೊಳಗೆ ಚಿನ್ನಾಸಾನಿಯ ಬಿಂಬವು ಮೂಡೋದು ಮರೆಯಾಗೋದು ಮಾಡುತಲಿದ್ದಿತು.. ಯಿನ್ನು ತನ್ನಿಂದ ತಡಕೊಳ್ಳೋದು ಸಾಧ್ಯವಾಗಲಿಲ್ಲ.. ಗಕ್ಕನೆ ನಿಂತು ಸುತ್ತಿಗೆ ತಕ್ಕೊಂಡು ತಾಯಕ್ಕನೆಂದೇ ಭಾವಿಸಿ ಕರೆ ಜಾಗಟೆ ಮ್ಯಾಲ ವಂದು ಸಾರಿ ಯಾಕ, ಯರಡು ಸಾರಿ ಬಾರಿಸಿದನು. ಡಣ್ ಯಂಬ ನಾದವು ಅದರಿಂದ ಹೊರಟು ಹರಕೋತ ಹರಕೋತ ಹೋಗಿ ವಜ್ರದ ಬೆಂಡೋಲೆಗಳಿದ್ದ ತಾಯಕ್ಕನ ಕಿವಿ ತುಂಬಿತು. ಜೊತೆಗೆ ಚಿನ್ನಾಸಾನಿಯ ಕಿವಿಯೊಳಗೆ ದರಬಾರಿ ಕಾನಡದ ಆಲಾಪನ ಮಾಡಿತು.

ಅತ್ತ ಮನ್ರೋ ಸಾಹೇಬನು ನರಸಿಮ್ಮಾರೆಡ್ಡಿಯೊಂದಿಗೆ ಯಿವೇ ಮೊದಲಾದ ಅಮುಸಗಳುಳ್ಳ ವಪ್ಪಂದ ಮಾಡಿಕೊಂಡು, ಜನಸಾಮಾನ್ಯರಿಂದ ಜಯಘೋಷ ಹಾಕಿಸಿಕೊಳ್ಳುತ ಕದಿರೆಪ್ಪನಾಯಕನನ್ನು ಯಿಚಾರಿಸುವ ಸಲುವಾಗಿ ಪತ್ತಿಕೊಂಡ ವಳಿತದ ಮದ್ದಿಕೇರಿ ಪಟ್ಟಣದ ಕಡೆ ಪ್ರಯಾಣ ಬೆಳೆಸಿರುವಾಗ್ಗೆ, ಯಿತ್ತ ಪಾದರಿ ಅಂಥೋಣಿ ನೇತ್ರುತ್ವದಲ್ಲಿ ತಂಡವೊಂದು ಜೆನ್ನಿಫರಮ್ಮಳ ಆಸೆ ಮೇರೆಗೆ ವಂದು ಯೀಗರ್ಜಿಯನ್ನು ನಿರುಮಾಣ ಮಾಡುವ ಸಲುವಾಗಿ

ಕುದುರೆಡವು ಕಡೇಕ ಪ್ರಯಾಣ ಬೆಳೆಸಿರುವಾಗ್ಗೆ...

ಯಿತ್ತ ಕುದುರೆಡವು ಪಟ್ಟಣದ ಯಿದ್ಯಾಮಾನಗಳನ್ನು ಯೇನೆಂದು ಹೇಳುವುದು ಸಿವಸಂಕರ ಮಾದೇವಾss.. ಸೆಖೆ ಯಂಬ ಪದವು ಸಾವುರ ರಾಗಗಳ ಸರದಾರನಾಗಿ ಪಟ್ಟಣದಾದ್ಯಂತ ಆಲಾಪನ ಮಾಡುತಲಿದ್ದಿತು.

ಅದೇಪಟ್ಟಣದ ಮುದ್ದಯ್ಯನ ದಿಡ್ಡಿ ಬಾಗಿಲ ಮುಂದಿದ್ದ ಯಲಾಪದ ಕಲ್ಲು ಗೂಟಕ್ಕೆ ಮಾಕವಿ ಅಯ್ಯಾಳೇಸ್ವರನನ್ನು ಕಟ್ಟಿ ಮಂದಿ ವಪ್ಪಿಕೋ ವಪ್ಪಿಕೋ ಯಂದು ವಾರದಿನಮಾನದಿಂದ ಯಿಚಾರಿಸುತಲಿದ್ದಾರೆ.. ಕೂಳು ನೀರಿಲ್ಲದೆ ವಾರೊಪ್ಪತ್ತಿನಲ್ಲಿ ಬಾದೆ ಹುಲ್ಲಿನ ಕಡ್ಡಿಯಂತಾಗಿಬಿಟ್ಟಿದ್ದ ಆತನು "ತಂದೆಗಳಿರಾ.. ತಾಯಂದಿರಾ.. ನಾನು ಕಳ್ಳನಲ್ಲ.. ನಾನು ಕವಿ ಅದೀನಿ.. ರಾಜಮಾರಾಜರು ನನ್ನ ಕಾವ್ಯಮೋದಿ ಬಿರುದುಬಾವಲಿ ಕೊಟ್ಟಾರ. ಸಾಂಬವಿ ಕನಸೊಳಗ ಕಾಣಿಸಿಕೊಂಡು ಅಪ್ಪಣೆ ಮಾಡಿದಕ ಕಾವ್ಯ ರಚನೆ ಮಾಡಲಕೆಂದು ಯೀ ಪಟ್ಟಣಕ್ಕೆ ಬಂದೆನು" ಯಂದು ಹೇಳುತ ತನ್ನ ಕಣ್ಣುಗಳನ್ನು ಬಾಷ್ಪದ ಜಲಗೊಳಗಳನ್ನಾಗಿ ಮಾಡಿಕೊಂಡಿದ್ದನು. "ಯಲ್ಲಯ್ತೆ ಆ ಕಾವ್ಯ ಅಂಬೋದು ತೋರುಸು" ಯಂದೊಬ್ಬ ಕೇಳಿದ್ದಕ್ಕೆ ರಾಜಮಾತೆಯು ನಾಯಿ ರೂಪದಲ್ಲಿ ಬಂದು ತಿಂದಳೆಂದು ಹೇಳಿ ಪಜೀತಿಗೆ ಸಿಲುಕಿಕೊಂಡನು. ನೀವು ಆಲಿಸುವುದಾದರ ತಲೆಯೊಳಗಿರೋ ನಾಲ್ಕು ರುತ್ತಗಳನ್ನು ವಾಚನ ಮಾಡುವುದಾಗಿ ಹೇಳಿದನು. ಯಲ್ಲಾಪ್ರಕೊರಚರಟ್ಟಿಯ ಕಳ್ಳನಾದ ಸ್ರೀಮಂತನೂ, ಯೀತನೂ ವಂದೇ ಹೊಟ್ಟೆಯಿಂದ ವುದುರಿರಬೌದೆಂದು ಭಾವಿಸಿದ ಮಂದಿಯು..

ಪರಿಪರಿಯಿಂದ ಯಿಚಾರಿಸುತ್ತಿರಲಾಗಿ ಯಿತ್ತ ಹವಾಮಹಲಲ್ಲಿ ಕಾಟಯ್ಯನಿಗೂ, ಆತನ ಪಂಚ ಪತ್ನಿಯರಿಗೂ ದೊಡ್ಡ ರಾದ್ಧಾಂತ ನಡೆದಿರುವಾಗ್ಗೆ...

ಅದೇ ಕುದುರೆಡವೊಳಗ ಸಣಿ ದೇವರ ದೇವಳವು ಅರಮನೆಗಿಂತ ವಂದು ಕಯ್ಯಿ ಮಿಗುಲಾಗುತಲೇ ಯಿತ್ತು. ಸಾಂಬಯ್ಯನ ದರುಸನಾಕಾಂಕ್ಷಿಗಳಾಗಿ ಬಂದೋರು ಆ ದೇವಳದ ಸೊಬಗಿಗೆ ಮಾರು ಹೋಗಿ ತಾಸುಗಟ್ಟಲೆ ಅಲ್ಲೇ ವುಳಕೊಂಡು ಬಿಡುತಲಿದ್ದರು. ಸಣಿ ದೇವರು ತನ್ನ ಮಯ್ಯೊಳಗ ಬರುವುದೆಂದು ಹೇಳಲಾಗುವ ತಂಬೂರಯ್ಯ ಅದಕೂ ಮೊದಲು ಅರಮನೆಯಲ್ಲಿ ಮೊಳಿಗದಲ್ಲಿದ್ದನು. "ಯ್ಯೋನಪ್ಪಾ ವಂದ್ನಾಕುದಿನ ಸಣಿ ದೇವರು ಮಯ್ಯಾಗ ಬಂದಾಂಗ ಮಾಡು ಯಂದು ಅರಮನೆ ನಿರ್ದೇಶನ ನೀಡಿದರ ತಾನು ಅದೇ

ಸಲುವಾಗಿ ನಿಂತು ಬಿಟ್ಟಿದ್ದನು. ಅರಮನೆಯ ಮೂಳಿಗಕ ವಾಪಾಸಾಗಿ ಬಿಡಬೇಕು" ಯಂದು ಪಟ್ಟಣ ಸೋಮಿಗಳು ಹೇಳಿದ್ದಕ್ಕೆ ತನ್ನ ಮಯ್ಯೊಳಗ ಸಣಿ ದೇವರು ಖಾಯಮ್ಮಾಗಿ ವಸ್ತಿ ಮಾಡಿರುವುದೆಂದೂ, ತಮ್ಮ ವಮುಸದ ಪೂರ್ವಿಕರು ಪಾವಗಡ ಪರಗಣದಲ್ಲಿರೋ ಸಣಿ ದೇವರಿಗೆ ನಡಕೋತಿದ್ದರೆಂದೂ ಹೇಳಿ ಅರಮನೆಯ ಕೆಂಗಣ್ಣಿಗೆ ಗುರಿಯಾಗಿದ್ದನು. ಸಣಿ ದೇವರ ವಾಹನಗಳನ್ನು ಸಾವುರ ಸಂಖೇಲಿ ಆಕರ್ಸಿಸುವ ಸಲುವಾಗಿ ಯಂಜಲು, ತಂಗಳನು ಯಲ್ಲಿ ಬೇಕಂದರಲ್ಲಿ ಚೆಲ್ಲಾಡುತಲಿದ್ದನು.. ಕಾಗೆಗಳಿಗೂ, ಪೂರುವಿಕರ ಆತುಮಗಳಿಗೂ ಸಂಬಂಧವಿರುವುದೆಂದೂ, ಕಾಗೆಗಳೆಲ್ಲಿ ಸುಖವಾಗಿರುವವೋ ಅಲ್ಲೆಲ್ಲ ಪ್ರಜೆಗಳು ಸುಖವಾಗಿರುವರೆಂದೂ, ಕಾಗೆ ಸುಭಿಕ್ಷತೆಯ ಸಂಕೇತವೆಂದೂ.. ಕಾವ್ss ಕಾವ್ss ಯಂಬುದು ವುತ್ತರಾದಿ, ದಕ್ಷಿಣಾದಿಗಿಂತ ಮಿಗಿಲೆಂದೂ.. ಸಣಿ ದೇವರು ನೆಲಗೊಂಡಿರುವ ಕಡೆ ಪ್ರತಿದಿನಮೂಸಣಿವಾರವೆಂದೂ ಪ್ರಚಾರ ಮಾಡುತಲಿದ್ದನು. ತಮಗ ರಾಜಾತಿಥ್ಯ ದೊರೆಯುವುದೆಂಬ ಖಾತರಿಯಿಂದ ಕುಂತಲ ಸೀಮೆಯ ಭೋಪಾಲು ಕಾಗೆಗಳು ಕುದುರೆಡವನ್ನು ಸೇರಿಕೊಂಡು ಬಿಟ್ಟಿದ್ದವು ಸಿವನೇ....

* * * *

ಅತ್ತ ಕೂಡ್ಲಿಗಿ ಪಟ್ಟಣದೊಳಗ ಹೆನ್ರಿಸಾಹೇಬ ಚಿನ್ನಾಸಾನಿಯೊಂದಿಗೆ ಪ್ರೇಮ ಸಂಭಾಷಣೆ ನಡೆಸೋ ಸಲುವಾಗಿ ಕನ್ನೂಡ ಭಾಷೇನ ಕಲಿಯಲಕ ಅಳಸಿಂಗಾಚಾರ್ಯರೆಂಬ ಕನ್ನೂಡ ಪಂಡಿತರನ್ನು ನೇಮಿಸಿಕೊಂಡಿದ್ದ ಸೀವಸಿವಾ.. ಕನ್ನೂಡವನ್ನು ಆಡಲಕ, ಮೋದಲಕ, ಬರೆಯಲಕ ತಾನು ಅತೀ ಸಣ್ಣ ಹುಡುಗನಂತೆ ಕಲಕಂತಿದ್ದ ಸಿವಸಿವಾ.. ತಾನು ಕನ್ನೂಡ ಭಾಷೆಯನ್ನು ಸಾಂಪ್ರತ ನುಡಿಯಬೇಕಿದ್ದ ತನ್ನ ಪ್ರಿಯತಮೆಯು ತನ್ನ ತಾಯಿ ಮನೆಯಂಬ ಬಂಧೀಖಾನೆಯೊಳಗ ಯಿರುವಳಲ್ಲಾ.. ಆಕೆಯನ್ನು ಬಿಡಿಸಿಕೊಂಡು ಬರುವುದು ಹೆಂಗ? ತಾನು ಕಲಿತಿರೋ ಕನ್ನೂಡವನ್ನು ಪ್ರದರಸನ ಮಾಡಿ ಆಕೇನ ಮೆಚ್ಚಿಸೋದು ಹೆಂಗ? ಆಕೆಯ ನಗೋ ಮುಖ ಮದ್ಯದ ಸೀಶೆ, ಆಕೆಯ ನಗು ಬ್ರವುನ ಕವಿಯ ಕವಿತೆಗಳಾಂಗ.. ವಂದು ನೋಟ ಮಾತ್ರದಿಂದ ತನ್ನ ರುದಯ ಗೆದ್ದುಬಿಟ್ಟ ಆಕೇನ ನೋಡಲಕಂತ ಹೆನ್ರಿಸಾಹೇಬನು ಮಾಡುತಿದ್ದ ಪ್ರಯತ್ನಗಳು ವಂದೇ ಯರಡೇ ಸಿವ ಸಿವಾ....

ತನ್ನ ರುದಯ ವಲ್ಲಭೆಯಾದ ಚಿನ್ನಾಸಾನಿಯನ್ನು ಆಕೇಯ ತಾಯಿಯ ಸೆರೆಯಿಂದ ಬಿಡಿಸಿ ತನ್ನ ಬಂಗಲೆಯನ್ನು ತುಂಬಿಕೊಂಡು ಕುಂಪಣಿ ಸರಕಾರದ

ಪ್ರತಿಷೆ« ಕಾಪಾಡಬೇಕು. ಆಕೆಯನ್ನು ಗೆಲ್ಲದ ತಾನು ಕುಂತಳ ವೇಂಟೆಯ ವಗಯ್ರೆಗಳನ್ನು ಗೆಲುವೆನೇನು? ತಾನೆಂದರೆ ಕುಂಪಣಿ ಸರಕಾರ.. ಕುಂಪಣಿ ಸರಕಾರ ಯಂದರೆ ತಾನು.. ಆ ತಾಯಕ್ಕ ತನ್ನನ್ನು ದಿಕ್ಕರಿಸುತ್ತಿರುವಳೆಂದರೆ ಕುಂಪಣಿ ಸರಕಾರವನ್ನೇ ದಿಕ್ಕರಿಸುತ್ತಿರುವಳೆಂದೇ ಅರ್ಥ. ಆಕೆಯನ್ನು ಮಣಿಗಿಸದಿದ್ದಲ್ಲಿ ತಾನು ಕುಂತಳ ಸೀಮೆಯನ್ನು ಮಣಿಗಿಸಬಲ್ಲೆನೇನು? ಹಿಂಗ ಯೇಕ ಪ್ರಕಾರವಾಗಿ ಯೋಚಿಸುತಲಿದ್ದ ಹೆನ್ರಿಸಾಹೇಬನು ವಂದು ಸಲ ಕೆಂಪಾನು ಕೆಂಪಗೆ, ಯಿನ್ನೊಂದು ಸಲ ಬೆಳ್ಳಾನು ಬೆಳ್ಳಗೆ ಆಗುತಲಿದ್ದನು....

ಸಯ್ನದ ವಂದು ತುಕುಡಿಯನ್ನು ಕಳುವಿ ಆ ಮನೆಯನ್ನು ದೊಮಸ ಮಾಡಿ ಚಿನ್ನಾಸಾನಿಯನ್ನು ಬಿಡಿಸಿಕೊಂಡು ಬರಬೇಕೆಂದೂ ಯೋಚಿಸದೆ ಯಿರಲಿಲ್ಲ ತಾನು. ಅದಕು ಮೊದಲು ಸಲಹೆ ಪಡೆಯ ಬೇಕೆಂದು ನಿರ್ಧರಿಸಿ ಸಿರಕಾಳಿ ಯಂಕೋಬಸಾಸ್ತ್ರಿಯವರನ್ನು ಬಂಗಲೆಗೆ ಬರ ಮಾಡಿಕೊಂಡನು.

ತಮ್ಮಿಂದ ನಮಸ್ಕಾರ ಮಾಡಿಸಿಕೊಂಡೋರಿಗೆ ಸ್ರೇಯಸ್ಸಲ್ಲಯಂಬ ಕಾರಣಕ್ಕೆ ಬಂದವರೆ ಹೆನ್ರಿಸಾಹೇಬನಿಗೆ ಆಸೀರುವಾದ ಮಾಡಿ ವುಚಿತಾಸನದಲ್ಲಿ ಪಾಂಡಿತ್ಯಮೂರ್ಣ ಮುಖಮುದ್ರೆಯಲ್ಲಿ ಕುಳಿತುಕೊಡರು. ಕ್ಷೇಮಲಾಭ ಯಿಚಾರಿಸಿ ಆದಮ್ಯಾಲ "ನಮ್ಮನ್ನು ಬರಮಾಡಿಕೊಂಡ ಕಾರಣಯೇನು?" ಯಂದು ಕೇಳಿದರು. ನ್ರುತ್ಯಗಾತಿ ಚಿನ್ನಸಾನಿಯನ್ನು ತಾನೂ.. ತನ್ನನ್ನು ಆಕೆಯೂ ಗಾಢವಾಗಿ ಪ್ರೇಮ ಮಾಡಿಕೊಳ್ಳುತ್ತಿರುವ ಕುರಿತು.. ಅದಕ್ಕೆ ಅಡ್ಡಿವುಂಟುಮಾಡುತ್ತಿರುವ ತಿಲ್ಲಾನ ತಾಯಕ್ಕ ಮತ್ತಾಕೆಯ ಕುಟುಂಬದ ಮೇಲುಸ್ತುವಾರಿ ನೋಡಿಕೊಳ್ಳುತ್ತಿರುವ ಬುಗುಡೇ ನೀಲಕಂಠಪ್ಪನ ಬಗ್ಗೆ ಅಮೂಲಾಗ್ರವಾಗಿ ಯಿವರಿಸಿದನು. ಸಮೀಪ ದ್ರುಸ್ಟಿ, ದೂರದ್ರುಸ್ಟಿವುಳ್ಳಂಥವರಾದ ಸಾಸ್ತ್ರಿಗಳಿಗೆ ಯಿದು ತಿಳಿಯದ ಯಿಷಯವಾಗಿರಲಿಲ್ಲ. ಆದರ ಅವುಪಚಾರಿಕವಾಗಿ ಹ್ಹಾ..ಹ್ಹೂ.. ಹಾಗೋ... ಅವುದೋ ಯಂಬಂಥ ವುದ್ಗಾರ ವಾಚಕಗಳನ್ನು ವುದುರಿಸುತ್ತ ಅಪಾರ ಯೇದರಾಶಿಯಿಂದ ತುಂಬಿದ್ದ ಮಸ್ತಿಷ್ಕವನ್ನು ಅಲ್ಲಾಡಿಸುತಿದ್ದರು. ಶ್ರಮಪಟ್ಟು ವಂದು ಅಪರೂಪದ ವಾಕ್ಯವನ್ನು ಸಂಯೋಜಿಸಿಟ್ಟಿಕೊಂಡಿದ್ದ ಹೆನ್ರಿಯು "ಸಾಸ್ತ್ರೀಜೀ.." ಯಂದು ಆರಂಭಿಸಿ ಬಲಪ್ರಯೋಗದ ಸಾದಕ ಬಾದಕಗಳ, ವಳಿತು ಕೆಡುಕಗಳ ಬಗ್ಗೆ ಸಲಹೆ ನೀಡುವಂತೆ ಕೇಳಿಕೊಂಡನು. ಸಾಸ್ತ್ರಿಗಳು ವಂದು ಹೆಣ್ಣಿನ ಯಿಷಯದಲ್ಲಿ ಬಲಪ್ರಯೋಗ ಮಾಡುವುದರಿಂದ ಕುಂಪಣಿ ಸರಕಾರದ ವರ್ಚಸ್ಸು ಕುಂದುವುದೆಂದು ಹೇಳಿದರು.. ವ್ಯಾಜ್ಯ ಸಂಬಂಧೀ

ಚತುರೋಪಾಯಗಳನ್ನೂ ಯಿವರಿಸಿದರು.

ಅದೇ ಸದರಿ ಪಟ್ಟಣದ ತನ್ನ ಮನೆಯೊಳಗೆ ತಾಯಕ್ಕ ತನ್ನ ಮಗಳು ಚಿನ್ನಾಸಾನಿಯನ್ನು ಯದುರಿಗೆ ಕೂಡ್ರಿಸಿಕೊಂಡು ಹೆನ್ರಿಯನ್ನು ಮರೆತುಬಿಡೂ.. ಮರೆತುಬಿಡು, ನೀನು ನನ್ನ ಮಾತು ಕೇಳದಿದ್ದಲ್ಲಿ ನಾನು ಯಿಷ ಪ್ರಾಸನ ಮಾಡಿ ಸತ್ತು ಹೋಗುವೆನು ಯಂದು ಖಡಾಖಂಡಿತವಾಗಿ ಹೇಳುತಲಿದ್ದಳು. ನೂರಾರು ಸುಂದರ ಕನಸುಗಳಲ್ಲಿ ಮುಳುಗೇಳುತಲಿದ್ದ ಆ ಕಮಲಮುಖಿಯು ಬುದ್ಧಿವಾದವನ್ನು ಯಡಗಿವೀಲಿ ಕೇಳಿ ಬಲಗಿವಿಯಿಂದ ಬಿಡುತಲಿದ್ದಳು. ತಾನಲ್ಲಿಂದ ಪರಾರಿಯಾಗಲು ಹರ ಸಾಹಸ ಮಾಡಿರದೆ ಯಿರಲಿಲ್ಲ. ಹತ್ತಾರು ಮಂದಿ ಪಯಿಲುವಾನರು ಹಗಲಿರುಳು ತನ್ನನ್ನು ಕಾಯುತ್ತಿರುವುದರಿಂದ ತಪ್ಪಿಸಿಕೊಳ್ಳುವುದಷ್ಟೇ ಯಾಕೆ ಅಂಗಳ ತುಳಿಯುವುದೂ ಸಾಧ್ಯವಾಗಿರಲಿಲ್ಲ. ತನ್ನ ಪ್ರಿಯತಮ ಹೆನ್ರಿಯು ತಬಲಾವಾದಕ ಪರಸುರಾಮ ಬಾವು ಮೂಲಕ ಕಳವಿನಿಂದ ಕಳಿಸಿಕೊಟ್ಟಿರುವ ಪ್ರೇಮಪತ್ರವು ರವಿಕೆಯೊಳಗೆ ಸ್ತನದ್ವಯದ ನಡುವೆ ಕಾಮನ ಬಿಲ್ಲಾಗಿ ಮೂಡಿ ತುಂಟಾಟ ಆಡುತ್ತಿರುವುದು...

ಚಿನ್ನಾಸಾನಿ ವಂದು ಕ್ಷಣ ಕಣ್ಣುಮುಚ್ಚಿ ತೆರೆದಳು.

ಯಷ್ಟು ತಾನು ಮಾತಾಡಿದರು ತನ್ನ ಮಗಳು ಪ್ರೇಮದ ಹೆಸರೆತ್ತಿ ಹೆತ್ತೊಡಲಿಗೆ ಕಿಚ್ಚಿಡಲಿಲ್ಲ. ಮನಸ್ಸನ್ನು ಬದಲಾಯಿಸಿಕೊಂಡಂತಿದೆ. ತಾಯವ್ವ ಮಗಳ ಮುಖಕ್ಕೆ ಯರಡೂ ಕಯ್ಯಿಗಳನ್ನು ಹಚ್ಚಿ ಲಟ್ಟಿಗೆ ತೆಗೆದಳು. "ನೀನು ರಾಗದಿಂದೊಡಮೂಡಿರೋ ಮಧುರ ರಾಗ ಕಣವ್ವಾ.. ಪ್ರೇಮ ಗೀಮ ಅಂತ ತಲೆಗೆ ಹಚ್ಚಿಕೊಂಡು ನಿನಗ ನೀನೇ ಮೋಸ ಮಾಡಿಕೋಬ್ಯಾಡ. ವಯಸ್ಸಿಗೆ ಮನಸ್ಸನ್ನು ಬಲಿಗೊಡಬ್ಯಾಡ" ಯಂದು ಪರಿಪರಿಯಿಂದ ಹೇಳಿ ಖೋಲಿಗೆ ಕಳುವಿದ ನಂತರ...

ತಮ್ಮ ಮನೆದೇವರ ಹೆಸರಿನಲ್ಲಿ ತುಪ್ಪದ ದೀವಿಗೆ ಹಚ್ಚಿದಳು. ಕಾವಲಿದ್ದ ಪಯಿಲುವಾನರ ಸಂಖ್ಯೆಯನ್ನು ಕಡಿತಗೊಳಿಸಬೇಕೆಂದು ವಂದುಕ್ಷಣ ಯೋಚಿಸಿದಳು. ಕರೆದೊಡನೆ ನಾಟ್ಯ ಗತಿಯಲ್ಲಿ ಬಂದ ನಟರಾಜನ ಕಿವಿಯಲ್ಲಿ ಬಾಯಿ ಯಿರಿಸಿ ತಾಯವ್ವ...

ಅತ್ತ ಮನ್ರೋಸಾಹೇಬನು ತನ್ನ ಸಿಂಹಸದ್ರುಶ ನೋಟ ಮಾತ್ರದಿಂದ ಮದ್ದಿಕೇರಿಯ ಕದಿರೆಪ್ಪನನ್ನು ವಂದೇ ಸಲಕ್ಕೆ ಚಿತ್‌ಮಾಡಿಬಿಟ್ಟನು...

ಅಲ್ಲೇ ನಾಕಾರು ದಿನ ವುಳಕೊಂಡು ಕಲೆಟ್ರುಸಾಹೇಬನು ಜನರ

ಬೇಕುಬೇಡಗಳನ್ನು ಕುಂದುಕೊರತೆಗಳನ್ನು ಯಿಚಾರಿಸಿದನು. ಶಾಲೆ, ರಸ್ತೆ, ಮತ್ತದರ ಯಿರುಮಗ್ಗುಲು ತಾನು ತನ್ನ ಕಯ್ಯಾರ ಮರವಾಗುವಂಥ ಗಿಡಗಳನ್ನು ನೆಟ್ಟನು. ನೀರು ಬೀಳುವಂಥ ಬಾವಿಗಳನ್ನು ತೋಡಿಸಿದನು. ಮದ್ದಿಕೇರಿ ಪಕ್ಕದಲ್ಲೆ ಕಸಾಪುರ ಯಂಬ ಕುಗ್ರಾಮಯಿತ್ತಲ್ಲ.. ಜಮೀಂದಾರರು ಸೂಚಿಸುವಂಥಾ ಯಕ್ತಿಗಳನ್ನು ಖೂನಿ ಮಾಡುತ ಹೊಟ್ಟೆ ಹೊರೆಯುತ್ತಿದ್ದ ಮಂದಿ ಯಿತ್ತಲ್ಲಾ.. ಅದು ಗುಂಪು ಗುಂಪಾಗಿ ಬಂದು ತಮ್ಮನ್ನು ಮಾಫ್ ಮಾಡಬೇಕೆಂದು ಕಲೆಟ್ರನ ಕಾಲು ಹಿಡಿದು ಬೇಡಿಕಂತು.. ಅವರಿಗೆ ಬುದ್ಧಿ ಹೇಳಿ ಮಾಫ್ ಮಾಡಿದಾತನು ಅವರ ವುದರಂಭರಣಕಂತ ತಲಾಕೊಂದೊಂದಿಷ್ಟು ಜಮೀನು ಮಂಜೂರು ಮಾಡಿ.. ಯಲ್ಲಾರ ಬಾಯಿಯಿಂದ ಹೊಗಳಿಸಿಕೊಳ್ಳುತ.. ಯಂಕಪ್ಪನಾಯ್ಡುವಿನ ವಳಿತದೊಳಿದ್ದ.. ತಂಟೆಕೋರರಿಂದಲೇ ತುಂಬಿದ್ದ ಕಪ್ಪಟ್ರಾಳು ಯಂಬ ಗ್ರಾಮದ ಕಡೇಕ ಪ್ರಯಾಣ ಹೊಂಟಿರುವಾಗ್ಗೆ...

ಅತ್ತ ಆಕಾಸರಾಮಣ್ಣನು ಸೊನ್ನದ ಜಮೀಂದಾರು ತಿರುಕಪ್ಪಗವುಡನ ಮುಂದೆ ತಂದಿದ್ದಂಥ ತರಾವರಿ ಆಭರಣಗಳನ್ನು ಸುರುವಿ “ಗವುಡಾ... ನಿನ್ನ ಮಗಳು ಬ್ಯಾರೆ ಅಲ್ಲ... ನನ ಮಗಳು ಬ್ಯಾರೆ ಅಲ್ಲ ಅಂತ ಹೇಳಿದ್ದೆಲ್ಲ.. ಅದಕ ತಂದೀನಿ.. ತಕ್ಕಳ್ಳಪ್ಪಾ” ಯಂದು ಹೇಳುತ ಹೊಂಟು ನಿಂತನು. ಅದಕಿದ್ದು ಗವುಡನು “ನಿನ್ನುಪಕಾರ ಮರೆಯೋದಿಲ್ಲ ತಮ್ಮಾ.. ಮದುವೆ ಮುಗುಸಿ, ನಿನ ಮಗಳಿಗೆ ಆಸೀರುವಾದ ಮಾಡಿ ಹುಗ್ಗಿ ವುಂಡುಕಂಡು ಹೋಗು” ಯಂದು ಬಲವಂತದಿಂದ ತರುಬಿದನು. ಸದ್ಯಕ ಯಿದನು ವುಟ್ಟುಕೋ.. ಅದನು ವುಟ್ಟುಕೋ ಯಂದು ತನ್ನ ಖಾಸಾ ಕಪಾಟಿನಿಂದ ತೆಗೆದು ಕೆಂಪು ಬಣ್ಣದ ದೋತರ, ಅರುಷಣ ಬಣ್ಣದ ಅಂಗಿ, ನೀಲಿ ಬಣ್ಣದ ರುಮಾಲು ಕೊಟ್ಟನು. ಆತನಿಗೊಂದೇ ಅಲ್ಲದ ಆತನ ವುಳಿಕೀ ಮಂದಿಗೂ ಸಹ.. ‘ಯಾರಾದರು ಕೇಳಿದರ ನೀನು ಮರಬದ ಯೀರಣ್ಣಗವುಡ ಯಂದು ಅನಪ್ಪಾ, ನೀನು ಕೊಡದಗುಡ್ಡದ ಸಂಬ್ಲಿಂಗ ಗವುಡ ಯಂದು ಅನಬೇಕಪ್ಪಾ’ ಯಂದು ತಲಾ ವಬ್ಬೊಬ್ಬರಿಗೆ ವಂದೊಂದು ಯಿದದ ನಾಮಕರಣ ಮಾಡಿ ಅವರಿಗಿರಲಕ ವಂದು ಬಿಡದಿ ಮನೆ ಮಾಡಿ ಕೊಟ್ಟಿಟ್ಟುಕೊಂಡನು. ಅವರ ಪಯ್ಕಿ ಯಿದ್ದಂಥ ಚೋರಸಾಸ್ತ್ರಕೋಯಿದನಾದ ಸಂಬನು “ಯಣ್ಣಾ ಅಪಸಗುನವಾಗಲಿಕ್ಕತ್ಯಾವೆ.. ಬೆಳ್ಳಗಿರೋದನ್ನೆಲ್ಲಾ ಹಾಲೆಂದು ನಂಬುವುದು ಥರವಲ್ಲ, ಹೊಂಟುಬಿಡಾಣು” ಯಂದು ಪರಿಪರಿಯಿಂದ ಹೇಳಿದ್ದಕ್ಕಿದ್ದು ಆಕಾಸ ರಾಮಣ್ಣನು ವುದಾಸೀನದ ಮಾತುಗಳನ್ನಾಡಿದನು.

ವಂದು ದಿವಸೊಪ್ಪತ್ತಿನಲ್ಲಿ ಸುತ್ತನ್ನಾಕಡೇಲಿಂದ ಬೀಗರು ಬಿಜ್ಜರುಗಳಿಂದ ಗವುಡನ ಮನೆ ತುಂಬಿ ತುಳುಕಾಡಲಾಂಭಿಸಿತು. ಹೆಣ್ಣು ಮಕ್ಕಳನ್ನು ಹಡಕೊಂಡು ಅವರನ್ನು ಖರಚು ಮಾಡುವ ಸಲುವಾಗಿ ಕೆಲವು ತಂದೆಗೋಳು, ತಾಯಿಗೋಳು ಮದುವೆ ಹಂದರದೊಳಗ ಕಟ್ಟುಮಸ್ತಾದ ಆಳುಗಳಿಗಾಗಿ ಹುಡುಕಾಡಲಾರಂಭಿಸಿದ್ದರಷ್ಟೆ.. ಅಂಥೋರ ಪಯ್ಕಿ ಯಲ್ಲಾಪ್ರಕೊರಚರಟ್ಟಿಯ ಗಾವಾದ ವರ ಮಾಶಯರು ಯಿದ್ದರಷ್ಟೆ.. ಸಂಬನಂಥೋರನು ತರುಬಿ ಕೆಳಗೂ ಮ್ಯಾಲೂ ನೋಡುತ್ತ "ಹುಡುಗಾ, ನೀನ್ಯಾಮೂರ ಗವುಡನ ಮಗನಪ್ಪಾ.. ನಮಗೊಂದು ಗಾವಾದ ಪಿಳ್ಳೆ ಅಯ್ತೆ.. ವರೋಪಚಾರ ಮಾಡತೀವಿ.. ಮದುವೆ ಆಗುವಿಯೇನಪ್ಪಾ?" ಯಂದು ಪೀಡಿಸಲಾರಂಭಿಸಿದ್ದೂವುಂಟು.. ವಳ್ಳೆ ಪಜೀತಿ ಆಯಿತಲ್ಲಾ ಯಂದಿವರಿವರು ತಪ್ಪಿಸಿಕೊಂಡು ಅಡ್ಡಾಡುತ್ತಿದ್ದುದೂವುಂಟು.. ಮದುವಣಗಿತ್ತಿಯ ಪಾರೊತಿ ಯಲ್ಲಾರ ಸಮಚ್ಛಮದಲ್ಲಿ ಆಕಾಸ ರಾಮಣ್ಣನ ಕಾಲಿಗೆ ಬಿದ್ದು "ಸಣಪ್ಪಾ....ವಂದು ಮಾತನು ಕೇಳುತೀನಿ.. ನಡೆಸಿಕೊಡಬೇಕು" ಯಂದು ಕೇಳಿದ್ದಕ್ಕೆ ಆತನು "ಅದೇನು ಹೇಳು ತಾಯಿ.. ನಡೆಸಿಕೊಡುತೀನಿ" ಯಂದುಪಿಸು ದನೀಲಿ ಹೇಳಿದನು. ಆಗ ಆಕೆಯು "ನಮ್ಮನೇಲಿ ವಂದುತ್ತು ವುಂಬಬ್ಯಾಡ ವಂದುಗ್ಗುಟುಕು ನೀರನ ಕುಡಿಬ್ಯಾಡ ಸಣಪ್ಪಾ.. ಘಾತ ಆಗೋದಯ್ತೆ" ಯಂದು ಕಿವೀಲಿ ಪಿಸುಗುಟ್ಟಿ ಹೇಳಿದಳು. ಆ ಕೂಡಲೆ ಆತನು ತನ್ನ ಸಹವರ್ತಿಗಳಿಗೆ "ವುಂಬಬ್ಯಾಡೂರಿ.. ಕುಡಿಯಬ್ಯಾಡೂರಿ" ಯಂದು ಕಯ್ಯಿಸಂಗ್ನೆ, ಬಾಯಿಸಂಗ್ನೆ ಮಾಡಿ ಹೇಳಿ ನಿಸೂರಾಗುತ್ತಿದ್ದಾಗ....

ವಂದು ಸೇರು ಪಾವಿನಷ್ಟು ಗಾಂಜಾ ತೊಪ್ಪಲು ಯಿದ್ದ ಕಯ್ಯಿ ಚೀಲವನ್ನು ಹಿಡಕೊಂಡು ಅಮಲಾಪುರ ಸಿಂಗಾಡಿ ಸಣಕಪ್ಪಗೆ ಕೊಡಲೆಂದು ಅಡುಗೆ ಮನೆಗೆ ಯಿಲೋಮ ಹೆಜ್ಜೆ ಹಾಕೂತ ಹೋದ ತಿರುಕಪ್ಪನ ಮನಸ್ಸಿನಲ್ಲಿ ಯೇನಿತ್ತೆಂದರ ಅದೇ ಯಿತ್ತು. ಕುಂಪಣಿ ಸರಕಾರದ ಅಧಿಕಾರಿಗಳ ಪಯ್ಕಿ ಮೋರ್ವನಾದ ನಂದವಾಡಿ ಸಾನಂದ ಚವುಗಲೆಯು ಸದರಿ ತಿರುಕಪ್ಪಗವುಡನನ್ನು ಭೆಟ್ಟಿಯಾಗಿ ಯಲ್ಲಾಪ್ರಕೊರಚರಟ್ಟಿ ಕಳ್ಳರನ್ನು ಹಿಡಿದುಕೊಟ್ಟಲ್ಲಿ ಅಥವಾ ಹಿಡಿಯಲು ಸಹಕರಿಸಿದಲ್ಲಿ ಸಾವುರ ಬೆಳ್ಳಿ ರೂಪಾಯಿಗಳ ನಗದು ಪಾರಿತೋಷಕವನ್ನೂ.. ಬಹದ್ದೂರ ಯಂಬ ಬಿರುದನ್ನೂ ಕೊಡಿಸುವುದಾಗಿ ಹೇಳಿ ಆತನ ಬಾಯಲ್ಲಿ ನೀರೂರಿಸಿದ್ದನು. ಅದಕ್ಕೆ ವಪ್ಪಿ ಗವುಡನು ಫಲಾನ ಯಿಂಥ ದಿವಸ ಆಕಾಸ ರಾಮಣ್ಣ ಮತ್ತವನ ಸಂಗಡಿಗರನ್ನು ಜೀವ ಸಮೇತ ಹಿಡಿದೊಪ್ಪಿಸುವುದಾಗಿ

ಮಾತು ಕೊಟ್ಟಿದ್ದನು ತಾನು ಬಹದ್ದೂರನಾಗುವ ಬಯಕೆಯಿಂದಾತನು....

ಅಯ್ಯೋ ಯಲ್ಲಾರು ವುಂಡು ಹೋದರು, ಆದರ ರಾಮಣ್ಣ ಮತ್ತಾತನ ಸಂಗಡಿಗರು ವಂದು ತುತ್ತು ಕೂಳು ಮುಟ್ಟಿಲ್ಲವಲ್ಲಾ, ವಂದು ಗುಟುಕು ನೀರು ಕುಡಿದಿಲ್ಲವಲ್ಲಾ.. ಯತ್ತಲಾಗ ಹೋದರು ಯಂದು ಸೊನ್ನ ಗ್ರಾಮದ ಯಂಟು ದಿಕ್ಕುಗಳನ್ನು ಜಾಲಾಡುತ್ತಿರುವಾಗ್ಗೆ.. "ವಡ ಹುಟ್ಟುದೋರಿಗಿಂತ ಮಿಗಿಲಿದ್ದೋರನ್ನು ನೀವು ನೋಡಿದಿರೇನ್ರಪ್ಪಾ?" ಯಂದು ಅವರಿವರನ್ನು ಆತನು ಕೇಳಾಡುತ್ತಿರುವಾಗ್ಗೆ, ಕಯ್ಗೆ ಬಂದ ತುತ್ತು ಬಾಯಿಗ ಬರಲಿಲ್ಲವಲ್ಲ ಯಂದಾವಯ್ಯನು ಪೇಚಾಡಿಕೊಳ್ಳುತ್ತಿರುವಾಗ್ಗೆ...

ಯಿತ್ತ ಫಾದರಿ ಅಂಥೋಣಿಯು ಕುದುರೆಡವು ಪಟ್ಟಣಕ ಯಾಕ ಬಂದಿದ್ದನೆಂದರ ಚರ್ಚು ಕಟ್ಟಿಸಲಕ...

ಯಿದೇ ಸದರಿ ಪಟ್ಟಣದಲ್ಲಿ ಮೂರವ್ವನ ಗುಡಿ ಹಿಂದಕ ಯಿದ್ದ ಮನೆವಳಗ ಬಟಾಬಯಲವ್ವ ಯಂಬ ಮುಪ್ಪಾನು ಮುದೇದು ಯಾರು ಬಂದರೂ ಯಮನೆಂದು ತಿಳಿದು ತರುಬಿ "ನನ್ನನ್ಯಾವಾಗ ತಗೊಂಡೋತೀಯಪ್ಪಾ" ಯಂದು ಕೇಳಾಡುತಲಿತ್ತು.. ವಂದಲ್ಲಾ ವಂದು ಕಾಳಗದಲ್ಲಿ ಅದು ತನ್ನ ಮಕ್ಕಳು ಮರಿಗಳನ ಕಳಕೊಂಡು ವಬ್ಬಂಟಿಯಾಗಿತ್ತು. ತನ್ನ ಮಯ್ಯಿ ಮ್ಯಾಲ ಯೇಸು ಸುಕ್ಕಿನ ಗೆರೆಗಳಿವೆಯೋ ಆಸು ವರುಷಗಳ ಹಿಂದೆ ಹುಟ್ಟಿರೋ ಅದು ಯೇನು ತಿಂಬುತ್ತಿತ್ತೋ? ಯೇನು ಕುಡಿಯುತ್ತಿತ್ತೋ? ಅದು ದೇವರಿಗೇ ಗೊತ್ತು. ಅದಕ ಹಿಂದಿರಬೇಕಾದ, ಮುಂದಿರಬೇಕಾದ ವಬ್ಬನೇ ವಬ್ಬಾತ ಮರಿ ಮೊಮ್ಮಗ ಯಿರುವನೆಂದರೆ ಯಿರುವನು, ಯಿಲ್ಲ ಅಂದರ ಯಿಲ್ಲ. ಜರುಮಲಿಗೂ, ನಿಜ್ಜಾಪುರಕೂ ನಿಲುವಂಜಿಯಲ್ಲಿ ನಡೆದ ನಿರಣಾಯಕ ಕಾಳಗದಲ್ಲಿ ಯೊರ ಮರಣವನ್ನು ಅಪ್ಪಿದ ತನ್ನ ಗಂಡ ಟಾಕಯ್ಯ(ಯೀತನ ನಿಜ ನಾಮಧೆಯ ಕರರಾಯನೆಂದಿತ್ತು, ಮಂದಿ ಬಾಯೊಳಗೆ..)ನ ಹೆಣ ಹುಡುಕೋ ಸಲುವಾಗಿ ಅದರ ಮೊಮ್ಮಗಳಾದ ಬತೇರವ್ವ ನಡಕೊಂಡು ಹೋದಳು. ಆಗ್ಗೆ ಆಕೆ ತುಂಬು ಗರುಬಿಣಿಯಿದ್ದಳು. ಯಿದು ತನ ಗಂಡನ ಹೆಣ ಯಿರಬೌದೇ, ಅದು ತನ ಗಂಡನ ಹೆಣ ಯಿರಬೌದೇ ಯಂದು ಹುಡುಕ್ಕೋತ ಹುಡುಕ್ಕೋತ ಬ್ಯಾನೆ ತಿಂಬಲಕ ಹತ್ತಿದಳು. ಯಿನ್ನೇನು ಹೆಣ ಸಿಕ್ಕೇಬುಟ್ಟಿತು ಅಂಬುವಷ್ಟರಲ್ಲಿ ವಂದು ಗಂಡುಕೂಸನ್ನು ಹಡದುಬುಟ್ಟಳು. ಹಸಿ ಹಸಿಗೂಸನ್ನು ಬೆನ್ನಿಗೂ, ಗಂಡನ ಹೆಣದ ವಂದು ತುಂಡನ್ನು ಹೆಗಲ ಮ್ಯಾಲೂ ಹಾಕ್ಕೊಂಡು ಕುದುರೆಡವಿಗ

ಬಂದಳು, ತನ್ನ ಮಯ್ಯಿ ಮ್ಯಾಲಿದ್ದ ವಡವೆಯನ್ನು ಮುದೇದಕ್ಕೆ ಕೊಡುತ ತನ್ನ ಗಂಡನ ಹೆಸರಲ್ಲಿ ಮೂರಂಕಣದ ವಂದು ಯೀರಗಲ್ಲನ್ನು ಸ್ಥಾಪನೆ ಮಾಡಬೇಕೆಂದು ಹೇಳಿದಳು. ಅದನ್ನು ಸ್ಥಾಪಿಸದಾದ ಮ್ಯಾಲ ತನ್ನ ಕರುಳಿನ ಕುಡಿಯನ್ನು ಮುದೇದರ ಕಯ್ಯಿಗಿಡುತ "ಯವ್ವಾ.. ಯಿದಕ ನೀನು ಸಸ್ತರಭ್ಯಾಸ ಮಾಡಿಸಬೇಕು, ದೊಡ್ಡೋನಾದ ಮ್ಯಾಲ ಕಾಳಗಕ ಕಳುವಬೇಕು.. ಮುಂದಿವನು ಸಾಯೋದಿದ್ದರ ರಣರಂಗದಲ್ಲೇ ಸಾಯಬೇಕು" ಯಂದು ತನ್ನ ಅಂತಿಮ ಆಸೇನ ಯಕ್ತಪಡಿಸುತ ಕಣ್ಣು ಮುಚ್ಚಿದಳು. ಮುದೇದು ತನ್ನ ಮರಿಮಮ್ಮಗನಿಗೆ ಕಾಳಗಯ್ಯ ಯಂದು ನಾಮಕರಣ ಮಾಡಿತು. ನಡುಲಿಂಟಿ ನಗರಾಯ್ಯ ಯಂಬ ಸಸ್ತರಾಸ್ತರ ಕೋಯಿದನಿಂದ ಸಸ್ತರಾಭ್ಯಾಸ ಮಾಡಿಸಿತು. ಕತ್ತಿವರಸೆ, ಬಿಲ್ಲುಯಿದ್ಯೆ, ಮಲ್ಲಯಿದ್ಯೆ, ದ್ರುಸ್ಟಿಯುದ್ದ, ಸಬುದಯೇದಿ ಯಿದ್ಯೆಯೇ ಮೊದಲಾದ ಯಿದ್ಯೆಗಳಲ್ಲಿ ಪಾರಂಗನಾಗುತ ದೊಡ್ಡವನಾದ ಕಾಳಗಯ್ಯನಿಗೆ ಪಿಳ್ಳೆ ಕೊಡತೀವಂತ ಹೆಣ್ಣು ಹಡಕೊಂಡೋರು ಬಂದು ಮನಿ ಮುಂದ ಸಾಲುಗಟ್ಟಿ ನಿಂತರು. ಯಾದಾರ ಪಿಳ್ಳೇನ ಲಗ್ಗುನಾಗು.. ನಮೊಮುಸ ನಿನ ತಲಿಮಾರಿಗೆ ನಿಂತುಹೋಗೂದು ಬ್ಯಾಡ ಯಂದು ಗಿಣೀಗ ಹೇಳಿದಂಗ ಹೇಳಿತು. ಅದಕಿದ್ದು ತರುಣ ಕಾಳಗಯ್ಯನು.. "ಯವ್ವಾ.. ಹುಟ್ಟುತ್ತಲೇ ರಣಯೀಳ್ಯೇನ ಕಟ್ಟಿಸಿಕೊಂಡಿರೋ ನಂಗೆ ಮದುವಿ ಮುಂಜಿ ಬ್ಯಾಡ.. ನನ ಬದುಕಿನ ವಯವಾಟು ಯೇನಿದ್ದರೂ ರಣರಂಗದ ಕೂಡೆ ಯಿರತಯ್ತೆ" ಯಂದು ಕಡ್ಡಿ ಮುರಿಧಂಗ ಹೇಳಿಬಿಟ್ಟನು. ಆಗ್ಗೆ ಯುದ್ದಗಳು ಯಲ್ಲಂದರಲ್ಲಿ ಬಲು ಜೋರಾಗಿ ನಡೆಯುತ್ತಿದ್ದವಷ್ಟೆ. ರಾಜರು ನಾಮುಂದು, ತಾಮುಂದು ಅಂತ ಹರೇದ ಹುಡುಗರನ್ನು ದಿನಗೂಲಿ ಅಥವಾ ವುಂಡಾಗುತ್ತಿಗೆ ಆಧಾರದ ಮ್ಯಾಲ ಪಯಪೋಟಿಗೆ ಬಿದ್ದು ತಮ ತಮ್ಮ ಸಯ್ನಕ್ಕೆ ಸೇರಿಸಿಕೊಳ್ಳುತ್ತಿದ್ದರಷ್ಟೆ.. ಹುಲ್ಲಿಕೆರೆಯ ರಾಜ ನರಸಿಂಗನ ಮ್ಯಾಲ ಯುದ್ಧ ಮಾಡಬೇಕೆಂದು ಆಲೋಚನೆ ಮಾಡುತಲಿದ್ದ ಕುಮತೀರಾಜನಾದ ಮಲ್ಲಣ್ಣೊಡೆಯನು ತನ್ನ ಕಣ್ಣಿಗೆ ಬಿದ್ದ ಕಾಳಗಯ್ಯನನ್ನು ತರುಬಿ ನೀನ್ಯಾರು ಯತ್ತ ಯಂದು ಯಿಚಾರಿಸಿದನು. ಅದಕಿದ್ದು ಕಾಳಗಯ್ಯನು ತಾನು ಫಲಾನ ಯಿಂಥಾತನೆಂದು ಹೇಳಿದನು. ತನ್ನ ಸಯ್ನಕ್ಕೆ ಸೇರುಪಡೆ ಆಗ್ತೀಯಾ ಯಂದು ಕೇಳಿದ್ದಕ್ಕೆ ಯಾಕಾಗಬಾರದು ದೊರೆ ಯಂದು ವಪ್ಪಿಕೊಂಡುಬಿಟ್ಟನು. ದೊರೆಯಿಂದ ಮುಂಗಡ ಹಿಸಕೊಂಡು ಬಂದ ಕಾಳಗಯ್ಯನು ಜೀವನಾರ್ಥಕ್ಕಾಗಿ ಮುದುಕಿಯ ಕಯ್ಗೆ ಕೊಡುತ "ನೋಡೋದಿದ್ದರ ಯೀಗಲೇ ನೋಡಿ ಬಿಡು.

ದಂಡಿನಿಂದ ನಾನು ವಾಪಾಸು ಬರಬೌದು... ಬರದಂಗಯಿರಬೌದು" ಯಂದು ಖಡಾಖಂಡಿತ ನುಡಿಬಿಟ್ಟನು. ಮುದುಕಿ ಆ ತನ್ನ ಮೊಮ್ಮಗನನ್ನು ನೋಡಿದ್ದು ಅದೇ ಕೊನೆ ಸಲ...

ಹೋದೋನು ಹೋಗಿ ಯೇಸು ವರುಷಾದವು? ಯೇನು ಕಥೆ? ಮುದೇದು ಬಟಾಬಯಲವ್ವ ದಿವಸಕ್ಕೊಂದೆರಡು ಸಲವಾದರೂ ಮುದ್ದಣ್ಣನ ಬತೇರಿ ಯೇರೋದು.. ಹುಬ್ಬಿಗೆ ಕಯ್ನ ಅಂಟಿಸಿ ಸುತ್ತಾನ್ನಾಕಡೆ ನೋಡೋದು.. ಯಿಳಿಯೋದು ದಂಡಿನಲ್ಲಿದ್ದೋರ ಮನೆಗಳನ್ನೆಡತಾಕೋದು.. ನಮ್ಮ ಕಾಳಗಯ್ಯ ಯಲ್ಲಾದನ? ಹೆಂಗಾದನ? ಯಂದು ಕೇಳೋದು.. ಗುಡ್ಲು ಸೇರಿಕಂಬುವುದು.. ಅದು ಯೇನು ವುಂಬುವುದೋ? ಯೇನು ಕುಡುಕಂಬುವುದೋ? ಮೋಣಿ ಮಂದಿ ಮದ ಮದಲು ಸತ್ತಯ್ತಾ! ಬೊದುಕಯ್ತಾ ಯಂದು ನೋಡಕಂತ ಯಿದ್ದರು. ಮುದೇದೇ.. ವುಪಾಸಯಿದ್ದು ಮೋಣೀನ ಕೊಲ್ಲತೀ ಯಾಕ? ತಕ್ಕಾ ಯಲ್ಡು ತುತ್ತು ವುಂಬು ಯಂದು ಅದಯಿದನು ಅದರ ಮುಂದಕ ತಳ್ಳುತಯಿದ್ದರು. ಕಾಲ ಸವೆತೂ ಸವೆತೂ.. ಹಗಲೆಲ್ಲ ಸಾಯೋರಿಗೆ ಅಳೋರು ಯಾರು? ಬರುಬರುತಾ ಗುಡುಲೊಳಗ ಯಿಣುಕಿ ನೋಡೋದೂ ಬಿಟ್ಟರು.. ವಂದೆಲ್ಡು ಮಾತನು ಆಡೋದು ಬಿಟ್ಟರು. ಹಿಂಗಾಗಿ ಅದು ತಾನಾತು, ತನ್ನ ಗುಡುಲಾತು ಯಂಬಂತೆ ವುಳುಕೊಂಡುಬಿಟ್ಟಿತು.. ಮೋಣೀಯ ಲೆಕ್ಕ ಬುಕ್ಕದೊಳಗ ಯಲ್ಲೂ ಯಿರದಿದ್ದ....

ಅದು ವಬ್ಬಂಟಿಯಾಗಿರಲಿಲ್ಲ.. ತನ್ನೆದೆಯೊಳಗಿಂದ ಯಿತಿಹಾಸದ ತಿಪ್ಪೆ ಸೇರಿರೋ ಮಕ್ಕಳು ಮೊಮ್ಮಕ್ಕಳನು ಯೀಚೆ ಕಡೇಕ ಯಳದು ಯದುರಿಗೆ ಕುಂಡ್ರಿಸಿಕೊಂಡು ಅಲಲಲಾಂತ.. ಯಿಲಲಾಂತ ಮಾತಾಡಿಕಂತಿತ್ತು. 'ನನ್ನೊಬ್ಬಳನ ಯಾಕ ಬುಟ್ಟೀಯಲೋ ಬಾಡಖಾವ್' ಯಂದು ಯಮಧರುಮ ರಾಜನನ್ನು ಬಯಕಂತಿತ್ತು. ಹೀಂಗೇ ಯಿರುತ್ತ ಯಿರಲಾಗಿ ವಂದಿವಸ.. ವಂದು ಗಳಿಗೆ ಹೊತ್ತಲ್ಲಿ ಅದರ ಗುಡುಲೊಳಗೆ ಕಾಲಿಟ್ಟಾತ ವಾಲಿಕಾರ ಮೋಲಾಡಯ್ಯನಾಗಿದ್ದ. ಕಯ್ಯಿ ಕಾಲಾಡಧಾಂಗ ವರಸಿಗಂಟಿ ಮಲಕ್ಕಂಡಿದ್ದ ಅದರ ಸನೀಕ ಹೋಗಿ "ಭೇss.. ಯ್ಯೋಯ್ ಬಟಾಬಯಲವ್ವ ಭೇss.." ಯಂದು ಕೂಗೀs ಕೂಗಿ ಅದರ ಕಣ್ಣೊಳಗ ಯತ್ತರಕ.. ಕಠ್ರಗ ಮೂಡಿದ. ಆಗ ಅದು ಮೊಣಕಯ್ಯಿ ಪುಟುಗಿಯಿಂದ ಮುಂಡವನ್ನು ಮ್ಯಾಲಕೆತ್ತಿ ತಿಬ್ಬಳಿಸಿ ನೋಡುತು. ಆತನೇ ಯೀತನೆಂದು ಅಂತೂ ನೆಪ್ಪು ಮಾಡಿಕಂಡು ಬಂದಿರುವನಲ್ಲಾ ಯಂದಂದಕಂತು.

“ಯಲ್ಲಿ ರಾತಿರಿ ಬರುತೀಯೋ ಅಂತಂದುಕಂತಿದ್ದೆನಪ್ಪಾ.. ಅಂತು ಮಟ ಮಟ ಮದ್ಯಾಣ ಬಂದೀಯಲ್ಲಪ್ಪಾ.. ಬೊದುಕೀ ಬೊದುಕೀ ಯೀ ಜೀವ ಬಲು ರೋಸಯ್ತೆ ತಂದೆ, ತಗೊಂಡೊಯ್ದುಬಿಡಪ್ಪ” ಯಂದಂತು. ಅದಕಿದ್ದು ಆತನು “ಭೇ.. ನಾನು ಜವರಾಯ ಅಲ್ಲಭೇ.. ನಿನ್ ಮರಿ ಮೊಮ್ಮಗ ವಾಲಿಕಾರ ವಾಲಾಡಯ್ಯ ಭೇ” ಯಂದು ಗುರುತ ಮಾಡಿಕೊಟ್ಟನು. “ಹ್ಹಾ.. ನೀನು ನನ್ನಾಟಗಳ್ಳ ವಾಲಾಡಿಯ್ಯೇನು? ನಾನವನಂದುಕಂಡಿದ್ದೆನೆಲೋ.. ಯಾಕ ಬಂದೀಯಲೋ?” ಯಂದು ಕೇಳಿದ್ದಕ್ಕೆ ಅವಯ್ಯನು “ಭೇ.. ನಿನಗ ಜಾಬು ಬಂದಯ್ತೆ ಭೇss ಜಾಬು” ಯಂದು ವಂದು ಸುರುಳಿಯನ್ನು ಅದರ ಕಣ್ಣಳತೆಯಲ್ಲಿ ಝಳಪಿಸಿದನು. “ಹ್ಹಾ... ಜಾಬು ಬಂದಯ್ತಾ ನನಗ.. ಯಲ್ಲಿಂದ ಬಂದಯ್ತಪ್ಪಾ? ಯಾವಾತನಿಂದ ಬಂದಯ್ತಪ್ಪಾ..? ಕೊಡಿಲ್ಲಿ... ಕೊಡಿಲ್ಲಿ” ಯಂದದನ್ನು ಕಯ್ಗೆ ಯಿಸಗಂತು. ಆ ಜಾಬಿನ ಸ್ಪುರುಸದ ಮಯ್ಮೆಯೋ ಯಂಬಂತೆ ಹರೇದ ಹುಡುಗಿ ಹಂಗ ದಡಕ್ಕನೆ ಯದ್ದು ಕುಂತಗಂತು. ತಾನು ಮಾ ಸಾನುಭೋಗಿ ಯಂಬಂತೆ ನಾಕು ಮಡಕೆಯಿದ್ದ ಅದನ್ನು ಬಿಚ್ಚಿ ಕಣ್ಣಿಗೆಳಕೊಂಡು ಮೋದಲುಪಕ್ರಮಿಸಿತು.. ಅದರಲ್ಲಿದ್ದ ಅಕ್ಷರಗಳು ಅದೇ ಯಿನ್ನು ರುತುಮತಿಯಾದ ಹರೇದ ಹುಡುಗಿಯರಂಗೆ ನಸುನಾಚುತ ಪತ್ತುರದ ಪಡಸಾಲೆಯಿಂದಿಳಿಯೋದು.. ಅದರ ಕಣ್ಣಂಗಳಕ ಹೋಗದು, ಮರಳೋದು ಮಾಡಲಾರಂಭಿಸಿದವು.. ಅಕ್ಷರಗಳು ತಮ್ಮ ನಯನಾಜೂಕು ಸರೀರದಿಂದ ಕಸುವನ್ನು ಧಾರೆಯರೆದವು ಅದಕ್ಕೆ. ಸಲ್ಲೇಖನ ರೊತ ಹಿಡಿದು ತುರೀಯಾವಸ್ತೆ ತಲುಪಿದ್ದ ಜಯ್ನ ಮುನಿಯಂಗಿದ್ದ ಅದು ದಿಗ್ಗನೆ ಯದ್ದು ಕೂಕಂಡಿದ್ದಾಗಲೀ.. ಸ□ಡನ್ನ ಯದ್ದು ನಿಂತು ಕಾಮನ ಬಿಲ್ಲಿನಂಗಾದದ್ದಾಗಲೀ ತಡಾಗಲಿಲ್ಲ....

ದಂಡಿನಲ್ಲಿರೋ ಕಾಳಗಂಯ್ಯನಿಂದ ಬಂದಿರುವುದೋ, ಮತ್ತಾರಿಂದಲಾದರೂ ಬಂದಿರುವುದೋ, ಅದರೊಳಗಿನ ಸಮಾಸ್ಸಾರ ಸಂಗತಿಯೇನುಂಟು ಯೇನಿಲ್ಲ ಯಂಬುದನ್ನು ತಿಳಕೊಳ್ಳೋ ಸಲುವಾಗಿ.. ಅವನು ಫಲಾನ ಯಿಂಥ ದಿವಸ ಬಂದರೆ ಕಣ್ಣು ತುಂಬ ನೋಡಿ ಲಟ್ಟಿಗೆ ತೆಗೆದು ಗಪ್ಪಂತ ಪ್ರಾಣ ಬಿಡುವ ಸಲುವಾಗಿ.. ಹರೇದ ಹುಡುಗಿಯಂತಾಗಿಬಿಡುವ ಸಲುವಾಗಿ.. ಗಾವಾದ ಪಿಳ್ಳೆಯಂಬ ಗೂಟಕ ಕಾಳಗಯ್ಯ ಯಂಬುವ ಹರೇದ ಹೋರಿಯನ್ನು ಕಟ್ಟಿಹಾಕುವ ಸಲುವಾಗಿ.. ಅವನ ಹೊಟ್ಟೇಲಿ ಹತ್ತಿಪ್ಪತ್ತು ಮಕ್ಕಳುಮರಿಗಳನು ಕಾಣುವ ಸಲುವಾಗಿ.. ಅವುಗಳನು ಯತ್ತಿ ಆಡಿಸುವ

ಸಲುವಾಗಿ.. ಮನೆಯನ್ನು ಯಬ್ಬಿಸಿ ನಂದಗೋಕುಲ ಮಾಡುವ ಸಲುವಾಗಿ.. ಮತ್ತಿನ್ನಿಷ್ಟೋ ಸಂದೂಕಗಳನ್ನು ತೆರೆದು ನೋಡುವ ಸಲುವಾಗಿ....

"ಯಿದನು ಮೋದಿ ನೀನು ನನಗ ತಂದೆಯಾಗಬೇಕಪ್ಪ" ಯಂದು ವಾಲಿಕಾರನಿಗೆ ಕಲೆ ಬಿತ್ತು. ಅದಕಿದ್ದು ಅವಯ್ಯನು "ನನ್ನೇನು ಗವುಡ ಅಂದಕಂಡೀಯಾ.. ಸಾನಭೋಗ ಅಂದಕಂಡೀಯಾ" ಯಂದನು. ಆಗಿದ್ದು ಮುದೇದು 'ನೀನು ಸಾಲಿ ಕಲಿಯಲಕ ಹೋತಿದ್ದುದನು ನಾನು ನೋಡಿಲ್ಲಾಂದು ಕಂಡಯಾ. ಅಕ್ಸರಕ ಅಕ್ಸರಾನ ಹೊಂದಿಸಿಕೊಂಡು ಮೋದಲೇಬೇಕಪ್ಪಾ" ಯಂದು ಪಟ್ಟುಹಿಡಿಯಿತು. "ನಂಗೆ ಮೋದಲಕ ಬರಾಕಿಲ್ಲೆಮ್ವೋ" ಯಂದಾತನು ಅದರ ಕಯ್ಯಿಂದ ತಪ್ಪಿಸಿಕೊಂಡು ಬೀದಿ ಪಾಲಾಗಿ ಕಣ್ಮರೆಯಾದನು.

ತನ್ನ ಕಾಳಗಯ್ಯನೇ ಅಕ್ಸರ ರೂಪಧಾರಣ ಮಾಡಿ ಜಾಬಿನೊಳಗ ಅಡಗಿ ಕುಂತಾನೆ ಯಂದು ಪರಿಭಾವಿಸಿದ ಬಟಾಬಯಲವ್ವನು ಆಗಿಂದಾಗಲೆ ಗುಡುಲನು ಪರಿತ್ಯಾಗ ಮಾಡಿ ಬೀದಿಗುಂಟ ನಡೆಯತೊಡಗಿತು. 'ಹೋಹೋss ಬಟಾಬಯಲವ್ವ..' 'ಹ್ವಾ.. ಹ್ವಾ.. ಬಟಾಬಯಲವ್ವಾ' ಯಂದುದ್ಗಾರ ಮಾಡುತ ಮಂದಿ ಯಡ ಬಲಕಾದರು.. ಬಟ್ಟಂಬಯಲವ್ವಗ ಜಾಬು ಬಂದಯ್ತೆ.. ಯಂಬ ಸುದ್ದಿಯು ಪರಿಮಳದೋಪಾದಿಯಲ್ಲಿ ಹರಡಿತು ಪಟ್ಟಣದ ತುಂಬೆಲ್ಲ.. ಆ ವಂದು ಛಣದಲ್ಲಿ ಜಾಬು ಯಂಬುವ ಪರಿಭಾಗ್ಯದಡವಿಯೊಳಗೆ ಹರಡಿತು.. ಯಿಡೀ ಪಟ್ಟಣವು ಸಿವ ಸಂಚಾರ ಕಯ್ಕಂತು.. ಜಾಬು ಅಂದರ ಹೆಂಗಿರತಯ್ತೆ? ಅದರೊಳಗೆ ಅಕ್ಸರಗಳು ಯಾವ ನಮೂನಿ ಯಿರತಾವು.. ಅವಕ ಕಯ್ಯಿ ಕಾಲು ಯಿರುತಾವಾ? ಯಿಲ್ಲವಾ? ಯಂದು ನೋಡಿ ತಾವು ಧನ್ಯರಾಗುವ ಸಲುವಾಗಿ ಅಬಾಲರುದ್ದಾರಾದಿಯಾಗಿ ಮಂದಿಯು 'ಬಟಾಬಯಲವ್ವಾ.. ಬಟ್ಟಂಬಯಲವ್ವ.. ಯಲ್ಲದೀಯೇ ನಮ್ಮವ್ವಾss' ಯಂದು ಕೂಗುತ ಆಕೆಗಾಗಿ ಗಾರಾಡತೊಡಗಿತು. ಸಂಭರದ ಮಾಯೆ ಮುಸುಕಿ ತಮ ತಮ್ಮ ಕಣ್ಣಳತೆ.. ಕೂಗಳತೆಯಲ್ಲಿದ್ದ ಮುದುಕಿಯನ್ನು ಆ ಛಣ ಗುರುತಿಸದಾಯಿತು. ಅರೆ ಯಿಲ್ಲಯಿತಲ್ಲಾ ಯಂದು ಕ್ರಮೇಣ ಗುರುತಿಸಿ "ಯಲಾ ನಮ್ಮವ್ವನೇ.. ಯೇಟು ಕಳೆ ಬಂದಯ್ತಲ್ಲಾ ನಿನಗ.. ಯಂಥ ಪುಣ್ಯವಂತಿ ಕನವ್ವಾ ನೀನು.. ಯಲ್ಲಾರನು ಬಿಟ್ಟು ಜಾಬು ನಿನಗೊಂದಾss ಬಂದಯಿತಂತಲ್ಲ... ಜಾಬು ಅಂದರ ಸುಕ್ಕರೆ ದೆಸೆ ತಾಯಿ.. ಸುಕ್ಕುರ ದೆಸೆ ಅಂದರ ಜಾಬು ಕನತಾಯಿ.. ಅದು ಹೆಂಗಯ್ತೆ? ತೋರಿಸಲಕ ಬೇಕವ್ವಾ... ನೋಡಿ ಧನ್ಯರಾಗತೇವಿ" ಯಂದು ಆಕೇಗಂಟಿಕೊಂಡಿತು. ಯಲ್ಲಿಯೊ

ನನ್ನಾಟಗಳ್ಳರು.

ಯಿದನು ಅಪಹರಿಸುವರೋ ಯಂಬಂಜಿಕೆಯಿಂದ.. ಮಂದಿಯ ಕೆಡುಗಣ್ಣು ತಾಕಿದರೆಲ್ಲಿ ಅಕ್ಸರಗಳು ತಮ್ಮ ಮೂಲ ರೂಪ ಕಳೆದುಕೊಳ್ಳುವವೋ.. ಅದಲು ಬದಲಾಗಿ ಬಿಡುವವೋ ಯಂಬಾತಂಕದಿಂದ ಮುದೇದು ಅದನ್ನು ತನ್ನ ಸರೀರದ ಸುಕ್ಕುಗಳೊಳಗ ಬಚ್ಚಿಟ್ಟುಕೊಳ್ಳೋದು ಮಾಡತೊಡಗಿತು.. ಮಂದಿ ಬಿಡಬೇಕಲ್ಲ.. ಕಾಡುತ, ಬೇಡುತ ನೋಡತೊಡಗಿದರು.. ನೋಡಿ ತಮ ತಮ್ಮ ಮಯ್ಯಿಗಳನು ಜಮ್ಮೆನ್ನಿಸಿಕೊಳ್ಳ ತೊಡಗಿದರು.. ಜಮ್ಮೆನ್ನಿಸಿಕೊಳ್ಳುತ 'ಜಾಬು ಜಾಬು' ಯಂದು ಅಯಿಬಿಗೀಡಾಗ ತೊಡಗಿದರು.....

ಯೀ ಪ್ರಕಾರವಾಗಿ ಸಂಚಲನ ಸ್ರುಸ್ಟಿ ಮಾಡುತ.. ಆನೆ ಬಲವನ್ನು ಆವಹಿಸಿಕೊಳುತ ಬಟಾಬಯಲವ್ವ, 'ಗವುಡ ನೀನು ಮೊದಪ್ಪಾ' ಯಂದು ಕೇಳಿದ್ದಕ್ಕೆ ಗವುಡನು "ಯಿದರೊಳಗಿರೋ ಅಕ್ಸರಗಳು ಕಣ್ಣಿಗಟಿತಾ ಯಿಲ್ಲವ್ವ, ಸಾನಭೋಗನ ಮನೆಗೆ ಹೋಗು" ಯಂದು ಹೇಳಲು ಅದು ಸಾನಭೋಗನ ಮನೆಗೆ ಹೋಗಿ "ಮೋದು ಸೋಮಿ" ಯಂದು ಬ್ರತಿಮಾಲಾಡಲು ಆತನಿದ್ದು "ಸಿಲಾಸಾಸನವನ್ನಾದರು ಮೋದೇನು.. ಆದರ ಯಿದನ್ನು ಮೋದಲಾರೆನು" ಯಂದು ಕಯ್ಯಿ ಚೆಲ್ಲಿದನು. ಯಿನ್ನುಳಿಕೇ ಮಂದಿ "ನಾವು ಮೋದಿದರೆ ಗವುಡ ಸಾನಭೋಗರಿಗೆ ಅವಮಾನ ಮಾಡಿದಂಗಾತಯ್ತವ್ವಾ.. ನೀನು ಸಗುತಿ ಸಾಂಬವಿಯ ವರ ಸಿಸುವಾದ ಸಾಂಬಯ್ಯನಲ್ಲಿಗೆ ಹೋಗು.. ಆತ ಮೋದಿದರ ಮೋದ್ಯಾನು" ಯಂದು ಹೇಳಲು....

ಬಟಾಬಯಲವ್ವ ನಡಕೋತ ನಡಕೋತ ಬರುತಲಿದ್ದುದನ್ನು ನೋಡಿ ಅರಮನೆಯೇ ಅಲ್ಲಾಡಿ ಹೋಯಿತಂತೆ.. ಮುದುಕಿಯ ಕಯ್ಯಲ್ಲಿದ್ದ ಜಾಬನ್ನು ಮಂತ್ರದಂಡವೆಂದೂ ಅದು ಮಂತ್ರವಾದಿಯಂದೂ ಅಪಾರ್ಥಮಾಡಿ ಕೊಂಡಿತಂತೆ.. ಅದಕ್ಕೆ ಕಾರಣ ಅದರ ಬೊಚ್ಚು ಬಾಯೋ.. ನೀಳ ನಾಸಿಕವೋ.. ಚೂಪನೆಯ ಗದ್ದವೋ.. ಮೊಣಕಾಲ ಮಟ ಯಿಳಿ ಬಿದ್ದಿದ್ದ ಮೊಲೆಗಳೋ.. ಸೊಂಟಕ್ಕ ಕಯ್ಯಿಟುಕೊಂಡು ಸಿವಧನಸ್ಸಿನಂತೆ ಯಿರುವ ರೀತಿಯೋ.. ಯೊಸು ದಿನಮಾನ ಯಲ್ಲಡಗಿಕೊಂಡಿತ್ತೋ? ಅದು ವಳಗಡೆ ಬಂದೊಡನೆ ಯಲ್ಲದಿಯಪ್ಪಾ.. ಸಾಂಬವಿಯ ಸಿಸು ಮಗನೇ ಯಂದು ಬೆದಕಾಡಿತಂತೆ.. ಮಣಿಮಂಚದ ಮ್ಯಾಲ ಪವಡಿಸಿದ್ದ ಸಾಂಬಯ್ಯ ಗಡಬಡಸಿ ಯದ್ದು ಅಲ್ಲಾಡಿ ಹೋದನಂತೆ.. ಮುಖಕ್ಕ ಕಯ್ಯಿಟ್ಟು ಲಟ್ಟಿಗೆ ತೆಗೆದು ಜಾಬನು ಮುಂದಕ್ಕ ಹಿಡಿದು ಮೋದು.. ಮೋದು..

ಯಂದೊಂದೇ ಸಮಕ ಪೀಡಿಸಿತಂತೆ.. ಯದೆಯೊಳಗ್ಯಾವ ಕಡೆಯೂ ವಂದೇ ವಂಚೂರು ಅಕ್ಕಸರ ಯಿರದಿದ್ದ ಅವಯ್ಯನು ಮೋದು ಅಂದರ ಹೆಂಗ ಮೋದ್ಯಾನು? ಕಣ್ಣಾಡಿಸಿ "ಯಿದರಾಗಿರೋದು ನನಗರ್ಥವಾಗಲ್ಲವ್ವಾ" ಯಂದಂದನಂತೆ.. ಅದಕಿದ್ದು ಆ ಮುದೇದು "ವಂದು ಜಾಬು ಮೋದಲಕ ಬರಲ್ಲಾಂದರ ನೀನ್ಯಾವ ಸೀಮೆ ಸಾಂಬವಿಯ ಮಗನೋ.. ಅಕ್ಕಸರದ ವಾಸಣೆ ಯಿಲ್ಲದ ನೀನೆಂಗ ಸಿಮ್ಮಾಸನವ ಬಗಸಿದಿ... ಅದೆಂಗ ಅರಮನೇನ ಕಬ್ಜಾ ಮಾಡಿಕೊಂಡೀಯಲೋ.. ಥೂ ನಿನ ಬಾಯಾಗ ನನ ಆಟುಯ್ಯಾ" ಯಂದು ಕೆಡಾಬಡಾ ಅಂದಾಡಿದೊಡನೆ ಭಕುತಾದಿ ಮಂದಿಯಷ್ಟೇ ಯಾಕ ಪಟ್ಟಣ ಸೋಮಿಗಳೂ ಸಿವ ಸಿವಾss ಯಂದುದ್ಗಾರ ಹೋಡಿಸಿದರಂತೆ....

* * * *

ಯೊಗ್ಗೆ ವಾರದಿನಯ್ದು ದಿನಗಳ ಹಿಂದಿನ ಮಾತು.....

ವುಯ್ಯಾವುಲ ಕೇಸುವರೆಡ್ಡಿಯೊಂದಿಗೆ ಬೆಳಗುಪ್ಪದ ಯಂಟಪ್ಪನಾಯ್ಡು ಸೇರಿಕೊಂಡು ಥಾಮಸು ಮನ್ರೋ ಸಾಹೇಬನನ್ನು ಕೊಲೆಮಾಡಿಸಲಕೆಂದು ನೆರಣಿಕೆಯಿಂದ ಹತ್ತು ಮಂದಿ ನುರಿತ ಕೊಲೆಗಡುಕರನ್ನು ಪಾಲ್ತೂರಿಗೆ ಕರೆಯಿಸಿಕೊಂಡು ಯೋಜನೆ ವಂದನ್ನು ತಯಾರಿಸಿದರು. ಪ್ರತಿಯಾಗಿ ತಲಾ ನೂರು ನೂರು ಯಕರೆಯಂಗೆ ವಟ್ಟು ಸಾವುರೆಕರೆ ಕೊಡುವುದಾಗಿ ಮಾತುಕೊಟ್ಟು ಯೀಳ್ಳೇವು ಅದಲು ಬದಲು ಮಾಡಿಕೊಂಡರು. ಫಲಾನ ದಿವಸ ಮನ್ರೋ ಸಾಹೇಬನು ಯಿಡುಪನಕಲ್ಲು ಗ್ರಾಮಕ್ಕೆ ಬಂದು ಗವುರರಮ್ಮ ಯೇರಿಕಂಡಿದ್ದ ಆನೆ ಸೊಂಡಿಲಿನಿಂದ ಹುವ್ವಿನ ಹಾರ ಹಾಕಿಸಿಕೊಂಡು ಗವುರಿ ಹಬ್ಬದಲ್ಲಿ ಭಾಗಿಯಾಗಿ ತದನಂತರ ನೆಲ ಹಿಡಕಂಡಿದ್ದ ವುಯ್ಯಾವುಲ ನಾರಾಯಣರೆಡ್ಡಿ(ಕೇಸುವರೆಡ್ಡಿಯ ತಂದೆ)ಯ ಕ್ಷೇಮಲಾಭ ಯಿಚಾರಿಸುವ ನಿಮಿತ್ತ ವುರುವಕೊಂಡದ ಕಡೆ ಪ್ರಯಾಣ ಬೆಳೆಸಿದ. ಮಾರಗ ಮದ್ಯದಲ್ಲಿ ಅಂದರ ಹಾವಳಿಗಿ ಗ್ರಾಮದ ಸರಹದ್ದಿನಲ್ಲಿ ನೆರಣಿಕೆ ಕೊಲೆಗಡುಕರು ಹೊಂಚಿಕಾದಿದ್ದರು. ಆದರೆ ಕೊಲ್ಲೋನಿಗಿಂತ ಕಾಯುವವನು ದೊಡ್ಡವನು ಯಿರುತ್ತಾನ ಅಂಬುದನ್ನು ಸತ್ಯಮಾಡಲೆಂಬಂತೆ.. ಗೂಢಾಚಾರರ ಮುಂಜಾಗ್ರತೆ ಫಲವಾಗಿ.. ಸಯ್ನಿಕರ ಮಿಂಚಿನ ಆಕ್ರಮಣದಿಂದಾಗಿ ಕೊಲೆಗಡುಕರು ಜೀವಂತವಾಗಿ ಸೆರೆಸಿಕ್ಕು ಬಿಟ್ಟರು.. ಅವರನ್ನು ಆಗಿಂದಾಗಲೆ ಬಳ್ಳಾರಿಯ ಕೇಂದ್ರಕಾರಾಗ್ರುಹಕ್ಕೆ ಕಳುವಿದ ಮನ್ರೋ ಸಾಹೇಬನು ವುರುವಕೊಂಡದಲ್ಲಿದ್ದ ವುಯ್ಯಾವುಲ ಅವರ ಹತ್ತೆಕರೆ ಗಾದೆಯಂ

ಪೊಕ್ಕು ಜಡ್ಡು ಹಿಡಿದು ಮಲಗಿದ್ದ ಪೆದರೆಡ್ಡಿಯ ಯೋಗಕ್ಷೇಮ ಯಿಚಾರಿಸಿದ್ದೂ ಅಲ್ಲದೆ.. ಅವನತಮುಖನಾಗಿದ್ದ ಕೇಸುವರೆಡ್ಡಿಯ ಮಯ್ದಡವಿ "ಗಾಡ್ ಬ್ಲೆಸ್ ಯು ಮಯ್ ಚಯ್ಲಡ್" ಯಂದೂ ಹರಸಿದನು. ವುಯ್ಯಾಲುವರ ಕುಟುಂಬದೊಂದಿಗೆ ದಕ್ಷಿಣಾತ್ಯ ಸುಗ್ರಾಸ ಭೋಜನ ಸವಿದು ಯೇಳಾ ಪಟ್ಟಿ ಪ್ರಕಾರ ಚಿನ್ನೋಬುಳವನ್ನು ತಲುಪಿದನು....

ರೆಡ್ಡಿ ನಾಯ್ಡು ಸಮುದಾಯದ ಆರಾಧ್ಯ ದಯವವಾದ ನರಸಿಮ್ಮ ದೇವರು ನೆಲಗೊಂಡಿರುವ ಪರಮ ಪಯಿತ್ರಕ್ಷೇತ್ರವದು. ವಂದು ಕಾಲಕ್ಕೆ ಯಿತ್ತ ಯಿಜಯನಗರದರಸರಿಂದಲೂ.. ಅತ್ತ ಕಾಕತೀಯ ರಾಜರುಗಳಿಂದಲೂ ಸೇವಿಸಿಕೊಂಡಿರುವಂಥಾ ದೇವರದು. ವಬ್ಬೊಬ್ಬ ರಾಜರು ಕಟ್ಟಯಿಸಿರುವ ಗೋಪುರಗಳು, ಆ ದೇವಾಲಯದ ಯಂಟೂ ದಿಕ್ಕಿನಲ್ಲಿ ಗಗನಚುಂಬಿಯಾಗಿ ಸಿಖರ ಚಾಚಿಕೊಂಡವೆ.. ಆ ದೇವರು ಬಹಿರಂಗವಾಗಿ ಸಸ್ಯಾಹಾರಿಯಾಗಿದ್ದು ಆಂತರಂಗಿಕವಾಗಿ ಮಾಮುಸಾಹಾರಿಯಾಗಿರುವುದು. ನಾಸ್ತೀಕರನ್ನು ವುರಿಗಣ್ಣು ಬಿಟ್ಟು ಸುಡುತ ತನ್ನ ಖ್ಯಾತಿ ಹೆಚ್ಚಿಸಿಕೊಂಡಿರುವುದು. ತನಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಕೊಲೆ ಸುಲಿಗೆಗಳನ್ನು ಪೋಷಿಸಿಕೊಂಡು ಬಂದಿರುವುದು. ಕೊಲೆ ಮಾಡಿಸೋರು, ಮಾಡೋರೆಲ್ಲ ಅದಕ ಅಡ್ಡಬಿದ್ದು ಆಸೀರುವಾದ ಪಡಿತಾ ಬಂದಿರುವರು.. ವಳ್ಳೆಯವರು, ಕೆಟ್ಟವರೆಲ್ಲ ಅದರ ನಾಮ ಜಪಿಸಿಕಂತ ಮಲಗುವುದು, ಯಚ್ಚರಾಗುವುದು ಮಾಡುತಾರೆ.. ಸುತ್ತನ್ನಾಕಡೆಮಂದಿ ಚಿನ್ನೋಬಳ ಯಿರೋ ದಿಕ್ಕಿನತ್ತ ಕಾಲು ಹಾಕಿ ಮಲಗುವುದಿಲ್ಲ, ವಂದs ಮಾಡುವುದಿಲ್ಲ, ಯರಡs ಮಾಡುವುದಿಲ್ಲ....

ಆ ಹೆಸರು ಯತ್ತಿದೊಡನೆ ಗಡಗಡನ ನಡುಗುತಾರ.. ಅಂಥ ವುಗ್ರಕ್ಷೇತ್ರವನ್ನು ದತ್ತಮಂಡಲದ ಕಲೆಟ್ರುಸಾಹೇಬನು ಬೇಕೆಂದೇ ತಡವಿಕೊಂಡನು. ಅರ್ಚಕರೂ, ಧರುಮಕರ್ತರೂ "ಬ್ಯಾಡ ಸ್ವಾಮೀ ಬ್ಯಾಡ.. ಯಿದನು ತಡವಿಕೊಂಡಲ್ಲಿ ನೀವು ರಗುತಕಾರಿ ಸಾಯುತೀರಿ" ಯಂದು ಗಿಳಿಗೆ ಹೇಳಿದಂಗ

ಗಲಗಲಾಂತ ಹೇಳಿದರು. ಅದಕಿದ್ದು ಮನ್ರೋ ಸಾಹೇಬನು ಅತಿಮಾನುಷ ಸಗುತಿಯನ್ನು ವಂದು ಕಯ್ಯಿ ನೋಡೇಬಿಡುವುದೆಂದು ನಿರ್ಧರಿಸಿದನು. ಕಿರಸ್ತಾನನಾದ ಆತನು ದೇವುಳ ಪ್ರವೇಶಿಸುವುದನ್ನು, ದಯವವನ್ನು ಯಿರುದ್ಧ ಹಾಕಿಕೊಳ್ಳುವುದನ್ನು, ರಗುತಕಾರಿ ಸಾಯೋದನ್ನು ನೋಡಲಕೆಂದು ಸಾಯಿರಾರು ಸಂಖೇಲಿ ಭಕುತಾದಿ ಮಂದಿ ನೆರೆದಿರುವಾಗ್ಗೆ...

ಅತ್ತ ಕೂಡ್ಲಿಗಿ ಪಟ್ಟಣದೊಳಗ ಹೆನ್ರಿಸಾಹೇಬನಿಗೆ ಚಿನ್ನಸಾನಿ ರೂಪದಲ್ಲಿ ತಿಕ್ಕಡಿ ಯೊಂದು ಕಾಡಲಕ ಹತ್ತಿತ್ತಲ್ಲ. ಆ ತಿಕ್ಕಡಿಯ ಮಯ್ಮೆಯನ್ನು ವರಣಿಸಲು ಆದಿಸೇಸನಿಗೂ ಅಸಾಧ್ಯವಾಗಿತ್ತು. ಪರಂಗಿಯವನು ತನ್ನ ಪ್ರಣಯ ಪ್ರೇಮ ಯಿರಹಗಳ ಹಾರಾಟವನ್ನು ಗುಟ್ಟಾತಿ ಗುಟ್ಟಾಗಿ ನಡೆಸಬೇಕೆಂದು ಯೇನೇನೋ ಪ್ರಯತ್ನಗಳನ್ನು ಮಾಡುತಲಿದ್ದನು. ಆದರದು ಸೋರಿಕೋತ ಪಟ್ಟಣದ ತುಂಬೆಲ್ಲ ಅಷ್ಟೇ ಯಾಕೆ, ಸುತಮುತ್ತಲ ಗ್ರಾಮುಗಳೆಲ್ಲ ಹರಕೋತ ಹರಕೋತ ಹೋಗಿಬಿಟ್ಟಿತ್ತು. ಪ್ರತಿಯೋರ್ವರ ಬಾಯೊಳಗ ನಮಲುವ ತೊಂಬಲವಾಗಿತ್ತು, ಕಿವಿಯೊಳಗೆ ಗುಂಯ್‌ಗುಟ್ಟುವ ಕೂಕಣಿ ಆಗಿತ್ತು.. ತಲೆ ತುಂಬೆಲ್ಲ ಹರದಾಡುವ ಹೇನಾಗಿತ್ತು.. ಅವಯ್ಯನ ಪ್ರೇಮ ಕಲಾಪ ಆರಕ್ಕೇರಿರಲಿಲ್ಲ.. ಮೂರಕ್ಕಿಳಿದಿರಲಿಲ್ಲ, ಹಾಡುವ ಮಂದಿ ಹಾಡು ಕಟ್ಟಿಬಿಟ್ಟಿದ್ದರು, ಹೇಳೋ ಮಂದಿ ಕಥಿ ಕಟ್ಟಿಬಿಟ್ಟಿದ್ದರು. ಹಾಡು ಕಥೆಗಳೊಳಗೆ ಹೆನ್ರಿಗಂಧರ್ವಲೋಕದವನಾಗಿದ್ದರೆ ಚಿನ್ನಸಾನಿ ಕಿನ್ನರಲೋಕದ ಕಿನ್ನರಸಾನಿ ಆಗಿ ಆವತರಿಸಿದ್ದಳು. ಜೋಗೇರು, ಲಾವಣಿ ಗೀಗಿ ತಂಡದವರು ತಮ ತಮ್ಮ ಮೇಳಗಳಲ್ಲಿ ಅವನ್ನೆಲ್ಲ ಬಳಸಿಕೊಳ್ಳದೆ ಯಿರಲಿಲ್ಲ. ವಂದು ಯಿಚಿತ್ರಸತ್ಯ ಅಂದರೆ ಆಯಾ ಪ್ರಾಕಾರದ ಜಾನಪದ ರುತ್ತಿಗಾಯಕರು ಅವರೀರ್ವರ ಪ್ರೇಮವಸ್ತುವುಳ್ಳ ಹಾಡುಗಳನ್ನು ಹಾಡಿಕೋತ ಮೂರಿಂದೂರಿಗೆ ಅಲೆಯತೊಡಗಿದ್ದದ್ದು. ಯಿನ್ನೂ ಯಿಚಿತ್ರಸತ್ಯ ಅಂದರೆ ಜಾನಪದ ಗಾಯಕರು ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಕೂಡ್ಲಿಗಿ ಪಟ್ಟಣದೊಳಗ ತಿಲ್ಲಾನ ತಾಯಕ್ಕನೆದುರು.. ಹೆನ್ರಿಸಾಹೇಬನ ಯುದುರು ಹಾಡಿ ಮೆಚ್ಚುಗೆ ಪಡೆಯುತಲಿದ್ದುದು. ಯೀ ಕಥೆಯನ್ನು ಯಲ್ಲೋ ಕೇಳಿದಂಗಯ್ತಲ್ಲಾ... ನೋಡಿದಂಗಯ್ತಲ್ಲಾ.. ಯಂದು ಯೋಚಿಸುತಾ ಯೋಚಿಸುತಾ ಅರೆ ಯಿದು ನಮ್ಮ ಕಥಿಯೇ ಆಗಯ್ತಲ್ಲಾ ಯಂದವರು ವುದ್ಗಾರ ಹೊಂಡಿಸುವ ಹೊತ್ತಿಗೆ ಜಾನಪದ ಗಾಯಕರು ಯಿನ್ನೆಲ್ಲೋ ಯಿದ್ದುಬಿಡುತಲಿದ್ದರು. ಯೀ ಪ್ರಕಾರವಾಗಿ...

ಯಿ ನಿಜಸಂಗತಿಯ ಸೊಲುಪ ಹಿಂದಕ ಮುಂದಕ ಬಂದರ....

ಯಂಕೋಬಯ್ಯ ಸಾಸ್ತ್ರಿಗಳನ್ನು ದೂತನಾಗಿ ತಾಯಕ್ಕನ ಬಳಿಗೆ ಹೆನ್ರಿಯು ಕಳುವಿದ್ದನಷ್ಟೆ. ಅಲ್ಲಿಂದ...

ಅದರ ಪ್ರಕಾರ ಮಾರನೆಯ ದಿನ ತಾನು ಯಾವ ಮಾರಾಣಿಗೂ ಕಡಿಮೆಯಿಲ್ಲ ಯಂದು ತೋರ್ಪಡಿಸಲೋಸುಗ ಸರುವಾಲಂಕಾರಭೂಷಿತೆಯಾಗಿ ತಿಲ್ಲಾನ ತಾಯಕ್ಕ ಬುಗುಡಿ ನೀಲಕಂಠಪ್ಪನ ಮುಂದಾಳತ್ವದಲ್ಲಿ ಯೇಳೆಂಟು

ಮಂದಿ ಹಿಂದೂ ಸುರತ್ರಾಣರಂತಿದ್ದ ಯೇಳೆಂಟು ಮಂದಿ ಪಯಿಲುವಾನರನ್ನು ಹಿಂದಕ ಮುಂದಕ ಯಿಟ್ಟುಕೊಂಡು ಬಂಗಲೆಗೆ ದಯಮಾಡಿಸಿದಳು. ಮದ್ಯವಯಸ್ಕ ಜೂಲಿಯಟ್ಟೋ, ಕ್ಲಿಯೋಪಾತ್ರಳೋ ಯಂಬಂತೆ ಆಕೆಯು ಹೆನ್ರಿಗೂ, ಕಿನ್ನರ ಕಿಂಪುರುಷನೋ, ಪುರುಷರೂಪ ತಳೆದಿರುವ ದರಭಾರಿಕಾನಡಮೋ, ಯೇಷ ಮರೆಮಾಚಿರಬಹುದಾದ ಮಾಯಾವಿಯೋ ಯಂಬಂತೆ ಆತನು ಆಕೆಗೂ ಪರಸ್ಪೂರ ಗೋಚರಿಕೆ ಮಾಡಿದರು. ಸೊಲಪೊತ್ತು ಪರಸ್ಪೂರ ದ್ರುಸ್ಟಿಯುದ್ದ ಮಾಡಿದರು. ಹೆನ್ರಿಯು ಅವುಪಚಾರಿಕವಾಗಿ ಕುಂಡ್ರೂಅಂತ ಹೇಳದ ಕಾರಣಕ ತಾಯಕ್ಕ, ಬುಗುಡಿ ನೀಲಕಂಠಪ್ಪ ತಮ್ಮಟಕ ತಾವೆ ಯಿದ್ದ ಆಸನಗಳ ಮ್ಯಾಲ ಕೂಕಂಡರು. ತನ್ನೊಟ್ಟಿಗೆ ದೇವರಾಜು ಮಾರಾಜು ಯಂಬ ಹೆಸರಿನ ಭಟ್ರಾಜುಮೋರ್ವನನ್ನು ಕರೆತಂದಿದ್ದಳಷ್ಟೆ.. ಆಕೆ ಮಾಡಿದ ಕಣ್ಸನ್ನೆ ಮೇರೆಗೆ ಆತನು ತಾಯಕ್ಕಳನ್ನು ಆಕೆಯ ವಂಸಾವಳಿ ಸಹಿತ ಯಿಜಯನಗರ ಕಾಲದಿಂದ ಆರಂಭಿಸಿ ಸದರೀ ಕಾಲವರೆಗೆ ಚಾವತ್ತಿನವರೆಗೆ ಹೇಳಿ ಹೆನ್ರಿಸಾಹೇಬನಿಗೆ ಯಿರುಸು ಮುರುಸುಂಟುಮಾಡಿದನು. ಯಿಸರ್ಜಿತ ಸೀಪುರಗ್ರಹಾರ ವಾಸಸ್ಥರೂ, ಯಗ್ನಾವಲ್ಕಸ್ಮ ೃತಿ, ಮನುಸ್ಮß ೃತಿಯೇ ವೊದಲಾದ ಗ್ರಂಥಗಳನ್ನು ಜೀರ್ಣಿಸಿಕೊಂಡಿದ್ದಂಥವರೂ ಆದ ಪ್ರಾಣೇಶಾಚಾರ್ಯರನ್ನು ತನ್ನ ಪರವಾಗಿ ವಕಾಲತ್ತುವಹಿಸಿ ಮಾತಾಡಲು ಜೊತೇಲಿ ಕರೆತಂದಿದ್ದಳಷ್ಟೆ. ಆಕೆ ಮಾಡಿದ ಕಣ್ಣುಸನ್ನೆ ಮೇರೆಗೆ ಆ ಆಚಾರ್ಯರು ತಂದೆಯ ಸ್ಥಾನದಲ್ಲಿರುವ ನೀವು ರಾಜ್ಯದ ಮಕ್ಕಳ ಪಯ್ಕಿ ಮೋರ್ವಳಾದ ಚಿನ್ನಾಸಾನಿಯನ್ನು ಪ್ರೇಮಿಸುತ್ತಿರುವುದು ಘೋರ ಅಪರಾಧವೆಂದೂ, ಯಿದರಿಂದ ಧಾರ್ಮಿಕ ಕ್ಷೋಭೆ ಸಂಭವಿಸುವುದೆಂದೂ, ಯೀ ಪಾಪಕ್ಕೆ ನರಕಲೋಕದಲ್ಲಿ ಯಿಂಥಿಂಥ ಘೋರ ಶಿಕ್ಷೆ ಕಾದಿರುವವೆಂದೂ ನಿರರ್ಗಳವಾಗಿ ಹೇಳಿದರು. ಅದನ್ನು ಕೇಳಿ ಸಿಟ್ಟು ಬಂದು ಹೆನ್ರಿಯು ಕಣ್ಣುಸನ್ನೆ ಮಾಡಲು ಸಿವರಾಮುರಾವ್ ತವಟೆ ಯಂಬ ಚತುರ್ಭಾಷಾಪಂಡಿತನು ಜಾತಿ ಧರ್ಮ ಯಿತ್ಯಾದಿ ವಗಯ್ರೆಗಳು ಯಂದು ಹುಟ್ಟಿದವು? ಯಾಕ ಹುಟ್ಟಿದವು ಯಂಬುದೆಲ್ಲವನ್ನು ಸಾಸ್ತರೋಕ್ತವಾಗಿ ಯಿವರಿಸಿ.. ಸಾಹೇಬರದು ನಿಷಕಲುಮಷ ಪ್ರೇಮ ಯಂದೂ, ಯಿದನ್ನು ತಡೆಯುವುದು ಮಹಾಪಾಪ ಯಂದೂ, ಹಿರಿಯರೆಲ್ಲರು ವಪ್ಪಿ ಮದುವೆ ಮಾಡಬೇಕೆಂದೂ, ತಪ್ಪಿದರೆ ಕುಂಪಣಿ ಸರಕಾರದ ಕೋಪಕ್ಕೆ ಬಲಿಯಾಗಬೇಕಾಗಿ ಬರಬೌದೆಂದೂ ತಾನೂ ನಿರರ್ಗಳವಾಗಿ ಯಿವರಿಸಿದನು. ಮದುವೆ ಮಾಡಿಕೊಡ ಬೇಕೆಂದು

ಹೆನ್ರಿಯೂ, ಕೊಡುವುದಿಲ್ಲ ಯಂದು ತಾಯಕ್ಕನೂ.. ಹಿಂಗೇ ಮಾತಿಗೆ ಮಾತು ಬೆಳೆಯಿತು. ಯಿದರಲ್ಲಿ ಜುಲುಮಿ ಯಂಬುದು ಯಳ್ಳಷ್ಟು ಯಿರಲಿಲ್ಲ. ಹೆನ್ರಿಚಿನ್ನಸಾನಿಯನ್ನು ಯಷ್ಟು ಪ್ರೀತಿಸುತ್ತಿರುವನೋ, ಆಕೆಯೂ ಯೀತನನ್ನು ಅಷ್ಟೇ ಪ್ರೀತಿಸುತ್ತಿರುವಳೆಂಬುದು ಸರುವ ಯೇದ್ಯವಾಗಿರುವುದು. ಕೊನೀಕೆ ಅಲ್ಲಿದ್ದ ಸಭಾಸದರು "ತಾಯಕ್ಕ, ನಿಮಗ ಯಿದ್ದಂಗ ನಮಗೂ ಹಿಂದೂ ಧರುಮದ ಬಗ್ಗೆ ಗವುರವ ನಿಷೆ«ವುಂಟು. ಯಿದೇ ಭಾವನ ನಿಮ್ಮ ಮಗಳಿಗೂ ಯಿರಬೇಕಾಗಿತ್ತು. ಆಕೆ ಬಂದು ಯಲ್ಲಾರ ಸಮಕ್ಷಮ ಹೆನ್ರಿಸಾಹೇಬರನ್ನು ಪ್ರೀತಿ ಮಾಡ್ತಾಯಿಲ್ಲ.. ಸಾಹೇಬರs ಜುಲುಮಿ ಮಾಡುತಾರ ಅಂತ ವಂದು ಮಾತನ ಹೇಳ್ಲಿ.. ಯೇನಂತೀರೀ ಸಾಹೇಬರ" ಯಂದು ಕೇಳಿದ್ದಕ್ಕೆ ಹೆನ್ರಿಯು "ಹಂಗ ಹೇಳಿದ ಕೂಡಲೆ ಆಕೇನ ಮರತುಬಿಡುತೀನಿ" ಯಂದು ಸಮ್ಮತಿಸಿದನು. ಸ್ರೀಮಂತ ಬುಗುಡಿಗೂ ಆ ಮಾತು ಸರಿ ಅನ್ನಿಸಿತು. ಅದೂ ಅಲ್ಲಿದ್ದ ಖುದ್ದ ತಾಯಿಯೇ ತನ್ನ ಮಗಳನ್ನು ಅಧಿಕಾರಿಗೆ ಪರಿಚಯ ಮಾಡಿಸಿರುವುದು. ಯಿಂಥ ತಪ್ಪು ಪರಪಾಟನ್ನು ಬಗಲೊಳಗಿಟ್ಟುಕೊಂಡು ಯಿನ್ನೊಬ್ಬರ ಕಡೇಕ ಬೊಟ್ಟುಮಾಡಿ ತೋರಿಸುವುದು ಯಷ್ಟರ ಮಟ್ಟಿಗೆ ಸರಿ? ಬುಗಡಿ ತಾಯಕ್ಕನ ವಜ್ರದೋಲೆ (ತಾನು ಕದ್ದು ಮುಚ್ಚಿ ಮಾಡಿಸಿಕೊಟ್ಟಿರುವುದು) ಯಿದ್ದ ಕಿವಿ ಸನೀಕ ಬಾಯ್ನ ವಯ್ದು ಚಾವತ್ತು ತರ್ಜನ ಭರ್ಜನೆ ನಡೆಸಿದ. ತದನಂತರ ನಿಮನಿಮ್ಮಲ್ಲಿ ಯಾರಾದ್ರುಬಂದು ಚಿನ್ನವ್ವನ ಅಭಿಪ್ರಾಯ ಪಡಕೊಳ್ಳಬೌದೆಂದು ಹೇಳಿದ...

ತಾಯಕ್ಕ ಬಲು ಬ್ಯಾಸರ ಹೊತ್ತುಕೊಂಡೇ ವಾಪಾಸಾದಳು. ಕುಂತರೂ, ನಿಂತರೂ ಅವರ ಹೆಸರಿನ ಜಪಮಾಡುತ್ತಿರುವ ತನ್ನ ಮಗಳು ಪ್ರೀತಿಸೋದಿಲ್ಲಾಂತ ಅದೆಂಗ ಹೇಳ್ಯಾಳು? ಮನೆಗೆ ಹೋಗುತ್ತಲೆ ತಾಯಕ್ಕನೂ, ಸಾಕುತಂದೆಯಾದ ಬುಗಡಿ ನೀಲಕಂಠಪ್ಪನೂ ಚಿನ್ನಾಸಾನೀನ ಯದುರಿಗೆ ಕೂಂಡ್ರಿಸಿಕೊಂಡು ಯಾರ‍್ಯಾರ ಬಂದು ಕೇಳಿದರ ವಲ್ಲೆನ್ನು, ಯಿಲ್ಲೆನ್ನು ಅಂತ ಪರಿಪರಿಯಿಂದ ಹೇಳಿಕೊಂಡರು, ಕೇಳಿಕೊಂಡರು. ಹ್ಞು ಅನ್ನದ, ವುಸುರು ಬಿಡದ ಸುಮ್ಮಕ ಯಿದ್ದ ಚಿನ್ನಾಸಾನಿ ತವಟೆ ನೇತ್ರುತ್ವದಲ್ಲಿ ಬಂದು ಕೇಳಿದ ನಿಯೋಗದ ಯದುರು "ಔದು.. ನಾನು ಮದುವಿ ಆದರ ಹೆನ್ರೀನ ಆಗೋದು" ಯಂದು ಹೇಳಿಬಿಡುವುದೇ?

ಅತ್ತ ಕುದುರೆಡವು ಪಟ್ಟಣದೊಳಗೆ ಮಡ್ಡೇರೋಣಿಯೊಳಗೆ ಸೊಕ್ಕೆ ಮಾರನಾಯಕ ಸಂಗಡಿಗರೊಂದಿಗೆ ಮಾರುಯೇಸದಲ್ಲಿ ಭೀಮನನ್ನು ಹುಡುಕಲಕ

ಬಂದಿಳಿದಿದ್ದರು. ಕಂಡವರೆದುರು ಆ ಸುನಕದ ಲಕ್ಷಣ ಯೀ ಪ್ರಕಾರವಾಗಿರುವುದು ಯಂದು ಯಿವರಿಸಲಕ ಹತ್ತಿದ್ದರು. ಆ ನಾಕು ಮಂದಿನೂ ಹುಡುಕ್ಕೋತ ಹುಡುಕ್ಕೋತ ಹೋಗುತ್ತಿರುವಾಗ್ಗೆ.. ಗುಡುಲೊಂದು ಅವರ ಕಣ್ಣಿಗಟೆಯಿತು. ಅದರೊಳಗಿನಿಂದ ಹೊರ ಜಿನುಗುತಲಿದ್ದ ಗೊರ ಗೊರ ಯಂಬ ಸಬುಧವು ಕಿವಿಗಟೆಯಿತು. ವುಂಡ ಕೂಳು ಗಂಟಲಿಗಡರಿ ಬಿದ್ದು ಬಿಕ್ಕು ಸಬುಧ ಅದಾಗಿತ್ತು. ತಾಳೆ ಹಾಕಿ ನೋಡಿದರು. ಯಿದು ತಮ್ಮ ಅಂಯ್ನಾತಿ ಭೀಮು ಮಾಡುತ್ತಿರಬವುದಾದ ಸಬುಧಯಂದು ಅರ್ಥಯಿಸಿ ಗವಿ ಸದ್ರುಸ ಗುಡುಲಂ ಪೊಕ್ಕು ತಿಬ್ಬಳಿಸಿ ನೋಡುತ್ತಾರೆ ವುಪ್ಪಾನು ವುದೇದೊಂದು ಯಮಧರುಮರಾಯನೊಂದಿಗೆ ಚವುಕಾಸಿಗೆ ತೊಡಗಿರುವುದು.. ಅರೆ ಯಿವನವ್ವುನ ಯಂದು ವಾಪಾಸಾಗಲಿದ್ದ ಅವರನ್ನು ಕಯ್ಯಿಸನ್ನೆ ಮಾಡಿ ಹತ್ತಿರ ಕರಕಂತು. ಯೇನಿದ್ದೀತಂತ ಯಿವರದರ ಸನೀಕ ಹೋದರು. ವಬ್ಬಬ್ಬರ ಮುಖವನ್ನು ಬೊಗಸೇಲಿ ಹಿಡಕಂಡು ನೀನು ನನಮಗನಲ್ಲಾ.. ನೀನು ನನ್ನ ಮಗಳ ಗಂಡನಲ್ಲಾ.. ನೀನು ನನ್ನ ಮರಿಮಮ್ಮಗ ಕಾಳಗಯ್ಯನಲ್ಲಾ ಯಂದಂತು. ಅವರು ಕಳ್ಳುಕರಗಿ ಅವುದಭೇ ಅಂದರು. ಅಂತೂ ಕೊನಿಗೂ ಬಂದಿರಲ್ಲ.. ಗಿಂಡಿ ತಗಳ್ರೀ.. ಬಾಯೊಳಗೆ ವುದುಕ ಬಿಡುರಿ ಅಂತು. ಅವರು ಗಿಂಡಿ ತಗಂಡರು. ತಮ ತಮ್ಮ ಕಣ್ಣಿಂದೊಂದೊಂದು ಹನಿಯನ್ನು ಅದರೊಳಗೆ ಬೆರಸಿದರು.. ಸೊರಗದ ಹಾದೀಯ ಹೆಬ್ಬಾಗಿಲಂತೆ ಆ ನಾಕೂ ಮಂದಿಯನ್ನು ಕಣ್ಣೊಳಗ ತುಂಬಿಕೊಂಡು ಗಪ್ ಅಂತ ಪ್ರಾಣ ಬಿಟ್ಟಿತು. ಹಂಗ ಪ್ರಾಣ ಬಿಡುವವರನ್ನು ಅವರು ಕಂಡದ್ದು ಅದೇ ಮೊದಲ ಸಲ. ಯಿರಾಟ್ ಸೊರೂಪೀ ದುಕ್ಕ ಅವರೊಳಗ ನೆಲ ಮುಗುಲಿಗೇಕಾಗಿ ನಿಂತುಕೊಂಡಿತು. ಯವ್ವಾ.. ಯವ್ವಾ... ಯಂದವರು ಅದರ ಕಳೇಬರದ ಮ್ಯಾಲ ಬಿದ್ದು ಅಳಲಕ ಹತ್ತಿದೊಡನೆ ನಾಕೂ ದಿಕ್ಕಿನಿಂದ ಮಂದಿ ಹರಕೋತ ಹರಕೋತ ಬಂದರು. ಅಯ್ಯೋ ಬಟ್ಟಂಬಯಲವ್ವ ಸತ್ತವಳಲ್ಲಾ.. ಜಾಬು ಹಿಡಕೊಂಡು ವಾರದಿನ ಮಾನ ವಂದು ಮೋಣಿ ಅಂಬದ.. ವಂದು ಕೇರಿ ಅಂಬದ ಅಲೆದಾಡಿದೆಯಲ್ಲಾ. ಸಾಂಬಯ್ಯನಮಟ ಹೋಗಿ ಬಂದ್ಯೆಲ್ಲಾ.. ವಂದು ಹೆಡಿಗೆ ಕಾಲಮಾನವನ್ನು ನವುದೂ ನವುದೂ ಪಿರಾಣ ಬಿಟ್ಟಿಯಲ್ಲಾ ಯಂದು ಕೊಂಡಾಡುತ...

ಆ ನಾಕು ಮಂದೀನು ಆ ಕಳೇಬರಕ ವಾರಸುದಾರರಾಗಿ ನಿಂತರು. ಆ ನಾಕುಮಂದಿ ಮುದೇರ ಕಣ್ಣಿಗೆ ಕಿಸುರಾಗುವಂತೆ ಅದನು ಖರಚು ಮಾಡುತ

ಹೆಣವನ್ನು ಸಾಸ್ತರೋಕ್ತವಾಗಿ...

ಅದೇ ಪಟ್ಟಣದೊಳಗ ಅರಮನೆಯಂಬುವ ಬಟಾಬಯಲೆಂಬುದು ಯಿತ್ತಲ್ಲ.. ಅದು ಬಟಾಬಯಲವ್ವ ಅನಬಾರದ್ದನ್ನು ಅಂದಾಡಿ ಹೋದ ಲಗಾಯ್ತು ಕಲಾವುಲ್ಲಿಯಾಗಿ ಬಿಟ್ಟಿತ್ತಲ್ಲಾ... ಅಲ್ಲಿದ್ದ ಯಾರೊಬ್ಬರ ಮುಖದಲ್ಲೂ ಅವುಸಧಕ್ಕ ಬೇಕೆಂದರೂ ಥಟಗು ರುಗುತ ಯಿರಲಿಲ್ಲಲ್ಲಾ... ಚಯಿತನ್ಯದ ಸಿಲುಮೆಯಂತಿದ್ದ ಸಾಂಬಯ್ಯ ತಂಬಾಕಿನ ಸಿಲುಮೆಯನು ಹಿಡಕೊಂಡಿದ್ದಾತ ಕೆಳಗಿಟ್ಟಿರಲಿಲ್ಲಲ್ಲಾ.. ಹಣೆಯ ರೇಖೆಗಳೊಳಗ ಆ ಮಾಯಾವಿ ಮುದೇದರ ರೂಪ ತರಾವರಿ ಆಕಾರ ಪಡಕೊಂಡಿತ್ತಲ್ಲಾ.. ಅಕ್ಕಸರ.. ಅಕ್ಕಸರ ಯಂಬುದಕ್ಕೆ ಬದಲಾವಯ್ಯನು ರಕ್ಕಸರ.. ರಕ್ಕಸರ ಯಂದು ಬೆಬ್ಬಳಿಸುತಲಿದ್ದುದು ಕಂಡು ಭಕುತಾದಿ ಮಂದಿ ವಸ್ತಿಯೊಳಗ ತಾಯಿ ಜಾಗ್ರುತಗೊಂಡಿರುವಳೆಂದೇ ಭಾವಿಸಿ ತಲಾವಬೊಬ್ಬರು ವಂದೊಂದು ರೀತಿ ವಳಗ ಅಲವುಕಿಕವಾಗಿ ಆಲೋಚಿಸತೊಡಗಿದರು.. ಕಲ್ಪನಾ ಯಿಲಾಸದೊಳಗ ಮುಳುಗೇಳ ತೊಡಗಿದರು.. ಕಟ್ಟುವ ಕಥೆಗಾರರಾಗ ತೊಡಗಿದವರೆಷ್ಟೋ ಹಾಡುವ ಹಾಡುಗಾರರಾದವರೆಷ್ಟೋ? ಪರಮೂರುಗಳಲ್ಲಿರೋ ಯಿನ್ನುಳಿಕೇ ಮಂದಿಯ ಕಿವಿ ಕಣಜಗಳಿಗೆ ತುಂಬುವ ಸಲುವಾಗಿ ತಾಳ ತಂಬೂರಿ, ಡೋಲಕು, ಕಂಜರಿವೇ ಮೊದಲಾದ ಹತಾರಗಳನ್ನವುಚಿಕೊಂಡು ತಮತಮೆಂಡರು ಮಕ್ಕಳು ಮರಿ ಮನೆಮಠ ಮರೆತು ಅಬಡಾ ದಬಡಾ ಪಯಣ ಹೊಂಟವರೆಷ್ಟೋ? ಅಲ್ಲೆಲ್ಲ ಹೇಳಿ ದಣಿದವರೆಷ್ಟೋ? ಹಾಡಿ ಹಗುರಾದವರೆಷ್ಟೋ? ಕುಣು ಕುಣುದು ಹಾರಾಡಿದವರೆಷ್ಟೋ? ಕೇಳಿಸಿಕೊಂಡವರೂ ಕೂಡ ಕಥೆಗಾರರಾದುದಾಗಲೀ, ಕವಿಗಳಾದುದಾಗಲೀ ತಡಾಗಲಿಲ್ಲ ಸಿವನೇ.. ಅವರೊಂದೊಂದು ವುವುಖಿಕ ಕಥೆಗಳೊಳಗ, ಕಾವ್ಯಗಳೊಳಗ ಸಾಂಬಯ್ಯ ವಂದು ನಮೂನಿ, ಬಟಾಬಯಲವ್ವ ವಂದು ನಮೂನಿ, ಸಾಂಬವಿ ವಂದು ನಮೂನಿ, ಪಟ್ಟಣ ಸೋಮಿಗಳು ತಲಾ ವಂದೊಂದು... ಆ ಮ್ಯಾಲ ಯಿನ್ನೊಂದು ನಮೂನಿ.. ಆ ಮ್ಯಾಲ.. ಸಿವ ಸಿವಾ.. ನಾದದ ಲಯದೊಳಗ ಅವರಿಗೊಂದು ಖಾಯಮ್ಮಾದ ಚಹರೆ ಯಿತ್ತಾ? ಅವರ ಸೊಂತ ಬದುಕಿನ ಮೊಹರೆ ಯಿತ್ತಾ? ಹೇಳುವುದಕ ಕೇಳುದಕ ನಡುವೆ ತಾಳಿಕೆಯಿತ್ತಾ.. ಹೇಳುಗರ ಬಾಯಿಯಿಂದ ಹೊಂಡುತಲಿದ್ದುದೊಂದಾದರ ಕೇಳುಗರೆದೆಯೊಳಗ ಅದು ಪಡಕೋತಿದ್ದ ರೂಪವೇ ಬೇರೆಯಾಗಿರುತ್ತಿತ್ತು.. ತ್ರಿಕಾಲಗಳು ಕೂಡ ಅದಲು ಬದಲು ಕಂಚೀ ಬದಲಾಗಿ ಬಿಡುತ್ತಿದ್ದವು.. ಹಿಂಗಾಗಿ

ಸತ್ಯ ಮಿಥ್ಯೆಗಳ ನಡುವೆ ತಾಕಲಾಟಮೋ ತಾಕಲಾಟ.. ಸುಳ್ಳು ಸತ್ಯವಾಯಿತು. ಸತ್ಯ ಸತ್ತುಳ್ಳ ಸರಣರನ ಹುಡುಕ್ಕೋತ ಹುಡುಕ್ಕೋತ ಹೊಂಟೋಗಿ ಬಿಟ್ಟಿತ್ತು ಸಿವನೇ.. ಯಿದ್ದದ್ದು ಯಿದ್ದಂಗ ಹೇಳಿದರೆ ಕೇಳುಗರನೆಲ್ಲಿಂದ ತರೋದು? ಮಾತಂದರ ಮಾಮೂಲಿ ಮಾತೇನು, ದಯವಕ್ಕ, ಅಲವುಕಿಕಕ್ಕ ಆಸ್ತೀಕಕ್ಕ ಸಂಬಂಧಿಸಿದ್ದಯ್ತೆ, ಮಾತಿಗೆ ಬೆಲೆ ಬರೋದು ವಾಸ್ತವವನ ಮೆಟ್ಟಿದಾಗ ಮಾತ್ರ.. ಆಗ ಮಾತ್ರಕಣ್ಣುಮುಚ್ಚಿ ನೋಡಲಕಾಯ್ತದ, ಕಿವಿ ಮುಚ್ಚಿ ಕೇಳಲಕಾಯ್ತದ... ಮೂಗಿನ ಹಂಗು ತೊರೆದು ವಾಸಣೆ ಹಿಡೀಲಕಾಯ್ತದ.. ವರ್ತಮಾನದ ರೇಜಿಗೆಯಿಂದ ದೂರ ವುಳುದು ಲೋಕ ಸಂಚಾರ ಮಾಡಲಕಾಯ್ತದ.. ಯಂದು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವವರನ್ನು ಯೇನೆಂದು ಕರೆಯಲಿ ಸಿವನೇ...

ಅದೂ ಅಲ್ಲದ ಸಾಂಬವಿಯ ಕವುಡು ಯಲ್ಲಲ್ಲಿ ಕವುಕೊಂಡಿತ್ತೋ ಅಲ್ಲೆಲ್ಲ ಯಾವ ಅಭಿರುದ್ದಿ ಕಾರ್ಯಗಳಾಗಿರಲಿಲ್ಲ.. ಪ್ರಜೆಗಳು ಮತ್ತಷ್ಟು ಪೂರುವ ಕಾಲಕ್ಕ ಸರಕೊಂಡು ಪೂರುವಿಕರಾಗಿ ಬಿಟ್ಟಿದ್ದರು. ದಯವದ ನಶೆಯೊಳಗ ಬದುಕಲಕ ಹತ್ತಿದ್ದ ಅವರಾರಿಗೂ ಅಕ್ಕಸರದ ವುಸಾಬರಿ ಯಿರಲೇ ಯಿಲ್ಲ.. ಅದನವರು ಕಣಸೊಳಗೂ ಕಾಂಬುವುದಾಗಿರಲಿಲ್ಲ.. ಆದ್ದರಿಂದ ರುತ್ತಿಗಾಯಕರೂ, ರುತ್ತಿಗಾಯಕರಲ್ಲದ ರುತ್ತಿಗಾಯಕರು ಅಕ್ಕಸರ ಯಂಬ ಸಬುಧವ ಕುರುತ ಕಲ್ಪನೆಗೂ ಕಥಿಗಳನ, ಕಾವ್ಯಗಳನ ಕಟ್ಟಿ ಹಾಡಲಾರಂಭಿಸಿದ್ದು ಸಹಜ...

ಅಂಥದೊಂದು ಕಥಿ ಯಲ್ಲುಂಟಂದರ ಯಿಲ್ಲುಂಟು...

ಆ ಕಥಿಯೊಳಗ...

ಜಾಬು ಮೋದಿಸಲಕೆಂದು ಬಂದ ಬಟಾಬಯಲವ್ವನ ಕಂಡು ಸಾಂಬವಿ ಅಲ್ಲಾಡಿ ಹೋದಳಂತೆ.. ಕಂದಯ್ಯನ ಮಯ್ಯೊಳಗಿಂದ ವಡಮೂಡಿ ಯಿೊ ಪುವ್ವಲ ಸಾಮುರಾಜ್ಯ ಬಗಸಿದಿ ಅಂದರ ಕೊಡುತೀನಿ, ಬೇಕೆಂದರೆ ನನ್ನೊಂದಮುಸುವನು ಧಾರೆಯೆರದು ನಿನ್ನನು ಹರೇದ ಹುಡುಗಿ ಹಾಂಗ ಮಾಡುತೀನಿ... ಕಾಳಗದೊಳಗ ಮಡಿದಿರುವ ನಿನ ಮೊಮ್ಮಗ ಕಾಳಗಯ್ಯನನ ನಿನ ಮುಂದೆ ಜೀವ ಪೋಸಿ ನಿಲ್ಲಸುತೀನಿ... ಆದರೆ ಜಾಬು ಮೋದೂss ಮೋದೂ ಯಂದು ನನ ಕಂದಯ್ಯಗೆ ಜುಲುಮಿ ಮಾಡಬ್ಯಾಡ ಯಂದು ದಯನಾಸ ಪಟ್ಟು ಕೇಳಿಕೊಂಡಳಂತೆ.. ಅದಕಾ ಮುದೇದು "ಪುವು೦ಲ ಸಾಮುರಾಜ್ಯ ನನಗೆ ಬ್ಯಾಡವ್ವಾ.. ನಿನ್ನಮುಸ ನನಗೆ ಬೇಕಾಗಿಲ್ಲವ್ವಾ.. ಸಾಂಬಯ್ಯ ಯಿೊ ಜಾಬನು ಮೋದಲಕss ಬೇಕು" ಯಂದು ಹಟೀ ಹಟ ಮಾಡಿತಂತೆ..

ಮೋದಂದರೆ ಹೆಂಗ ಮೋದೀತದು? ಮುದೇದು ಅಂದಾಡಿದ ಮಾತು ವಂದಾss ಯರಡಾss... ಯಾ ಕಾಲದಲ್ಲೊ ತನಗ ಯಾರೊಬ್ಬರು ಹಿಂಗ ಹೀಯಾಳಿಸಿ ಅಂದಾಡಿದ್ದಿಲ್ಲ...ತಾನೀಗ ವಂದೆಕಚಿತ್ ಮುದೇದರ ಬಾಯಿಯಿಂದ ಹಿಂಗ ಅನ್ನಿಸಿಕೊಳ್ಳಬೇಕಾಯಿತಲ್ಲ.. ಸಾಪ ಕೊಡಲಕಂದರ ಆ ಮುದೇದೇನು ಸುಮಸುಮಕ ಬಯ್ದಾಡಿಲ್ಲ.. ಯಿದ್ದದ್ದು ಯಿದ್ದಂಗ ಹೇಳಯಿತೆ.. ಪುವ್ವಲ ಸಿಮ್ಮಾಸನದ ಮ್ಯಾಲ ಕೂಕಂಡಿರೋ ತನ ಕಂದಯ್ಯನ ಯದಿಯೊಳಗ ವಂದೇ ವಂದು ಹಿಡಿ ಅಕ್ಕಸರಗಳಿಲ್ಲಾಂದರ ಹೆಂಗ ಯಂದು ತಾಯಿ ಯೋಚಿಸಿದಳಂತೆ.. ತಾನು ತನ್ನ ಮಗೀಗೆ ಅಕ್ಕಸರಾಭ್ಯಾಸವ ಸುರುವು ಮಾಡಿಸಬೇಕೆಂದು ಕ್ರುತು ನಿಚ್ಚಯವಂ ಮಾಡಿದಳಂತೆ.. ಆ ಕ್ಷಣವೆ ತಾನು ಕುಂತಳ ಪ್ರಾಂತದ ಸಮಸ್ತ ಅಗ್ರಹಾರಗಳನುದ್ದೇಶಿಸಿ ಆಗ್ನೆ ಮಾಡಲಾಗಿ....

ಬಡೇಲಡಕು ದಿಕ್ಕಿನಗುಂಟ ಅಂಟುಕೊಂಡಿದ್ದ ಯಿೂಶ, ಕೇನ, ಕಠ, ಮುಂಡಕ, ಮಾಂಡೂಕ್ಯ, ಭಾಷ್ಕಳ, ಬ್ರಹ್ಮಬಿಂದು, ವಾಜಸೇನ, ಮುದ್ದಲ, ಅರುಣ ಯಂಬಿವೇ ಮೊದಲಾದ ಅಗ್ರಹಾರ ಗಳಿಂದಲೂ, ಕಾನಾಮಡಗು ದಿಕ್ಕಿನಗುಂಟ ಅಂಟುಕೊಂಡಿದ್ದ ಸನತ್ಕುರ, ನಾರದೀಯ, ವಾರುಣ, ಕಾಳೀ, ವಸಿಷ«, ಸಾಂಬ, ಸವುರ, ಮರೀಚಿ, ಪರಾಸರ, ಹೇತು ಯಂಬಿವೇ ಮೊದಲಾದ ಅಗ್ರಹಾರ ಗಳಿಂದಲೂ, ಗುಂಡು ಮುಳುಗ ದಿಕ್ಕಿನ ಗುಂಟ ಅಂಟುಕೊಂಡಿದ್ದ ಅಗ್ರಹಾರಗಳಿಂದಲೂ ವುಚಥ್ಯಾಚಾರ್ಯ, ದೀರ್ಘತಮಾಚಾರ್ಯ, ಗವುತಮಾಚಾರ್ಯ, ಕ್ರುಪಾಚಾರ್ಯ, ಗಾಲವಾಚಾರ್ಯರೇ ಮೊದಲಾದ ಯೇದಾಂತ ದೇಸಿಕರೂ, ಪುರಾಣಿಕರೂ, ವಯ್ಯಾಕರಣಿಗಳೂ, ಛಾಂದಸಿಗಳೂ, ಯಮುನೆ, ಸರಸೊತಿ, ಗೋದಾವರಿ, ಕಾವೇರಿ, ಸಿಂಧೂ, ನರುಮದೆ, ಗಂಗೆ ನದಿಗಳೋಪಾದಿಯಲ್ಲಿ ಹರಕೋತ ನಡಕೋತ, ನಡಕೋತ ಹರಕೋತ ಕುದುರೆಡವು ಪಟ್ಟಣದ ಅರಮನೆಯ ತಲಬಾಕಲಲಿ ಅಂಜಲೀ ಬದ್ದರಾಗಿ ನಿಂತು “ತಾಯಿೂs ಯಾಕ ನಮ್ಮನು ನಿನ್ನ ಸನ್ನಿಧಾನಕ ಬರಲಕಂತ ಆಗ್ನೆ ಮಾಡಿದಿ” ಯಂದು ಕೇಳಿಕೊಂಡಿದ್ದಕ್ಕೆ ಜಗಾನುವಮಾತೆಯು “ನನ ಕಂದಯ್ಯಗ ಯಿದ್ಯೆ ಕಲಿಸಬೇಕರಯ್ಯಾ, ಅರವತ್ನಾಕು ಕಲೆಗಳಲ್ಲಿ ಪಾರಂಪರಾಗತ ನನ್ನಾಗಿ ಮಾಡಬೇಕರಯ್ಯಾ” ಯಂದು ಹೇಳಿದಳಂತೆ...

ಆಚಾರ್ಯರ ಪಯ್ಕಿ ಹಿರೀಕರಿದ್ದ ವುಚಥ್ಯಾಚಾರ್ಯರು ಸಾಂಬವಿಯ ಪ್ರೀತರ್ಥವಾಗಿ ಸಾಂಬಯ್ಯನನು ತಮ್ಮ ತೊಡೆ ಮ್ಯಾಲ ಕುಂಡ್ರಿಸಿಕೊಂಡು ಬ್ರೆಮ್ಮ

ಸೊರೂಪವಾದ, ಅ, ವು, ಮ ಕಾರಗಳೆಂಬ ಮಾತ್ರೆಗಳನ್ನರಗಿಸಿಕೊಂಡಿರುವ.. ಗ್ನಾನ ಸಂತತಿಗೆ ಮೂಲಾಧಾರವಾಗಿರುವ. ಗುಣ ಪೂರ್ಣತ್ವ, ರಕ್ಷಕ ತತ್ವ, ಗ್ನಾನ ಸೊರೂಪ ತತ್ವಗಳಿಗೆಲ್ಲ ಮೂಲಾಧಾರವಾಗಿರುವ 'ವೋಂ' ಯಂಬ ಪ್ರಣವಾಕ್ಕಸರವನು ತಿದ್ದಿಸುವ ಯತ್ನ ಪ್ರಯತ್ನಂಗಳ ಮಾಡೀ ಮಾಡಿ ಸುಸ್ತಾದರಂತೆ... ತದನಂತರ ಯಾರ ಕಯ್ಯಿಂದಲೂ ಅದು ಸಾಧ್ಯವಾಗಲಿಲ್ಲವಂತೆ....

ಕೊನೀಕೆ ಆಚಾರ್ಯರೆಲ್ಲರು "ತಾಯೇ ತಮ್ಮನ್ನು ಕ್ಷಮಾ ಮಾಡು" ಯಂತಲೂ, ಸಾಂಬಯ್ಯಗ ಅಕ್ಕಸರದ ವಲುಮೆ ಯಿಲ್ಲ ಯಂತಲೂ ಪ್ರಾರ್ಥನೆ ಸಲ್ಲಿಸಿ ಅಲ್ಲಿಂದ ತಮ ತಮ್ಮ ಅಗ್ರಹಾರಗಳ ಕಡೇಕ ಮುಖ ಮಾಡಿದರಂತೆ....

ಆಗ ಸಾಂಬವಿಯು ಮುಖವನು ಕೆಂಜಗ ಮಾಡಿಕೊಂಡಳಂತೆ. "ಯಲಾ ಸರಸೊತಿಯೇ ಯಿರೇಳು ಲೋಕಗಳೊಳಗ ನೀನೆಂಗ ಯಿರುತೀಯೋ ನೋಡೇ ಬುಡುತೀನಿ" ಯಂದು ಸಪಥ ಮಾಡಿ "ಯಲಾಯ್ ಅಕ್ಕಸರಗಳಿರಾ.. ನೀವೆಲ್ಲೆಲ್ಲಿರುವಿರೋ ಅಲ್ಲಲ್ಲಿಂದ ಹೊಂಟು ನನ ಸನ್ನಿಧಾನಕ್ಕ ಬರ್ರೀ" ಯಂದು ಆಗ್ನಾಪಿಸಿದೊಡನೆ ಸಾರಸೊತ ಪರಪಂಚವು ಅಳ್ಳಾಡಿ ಹೋಯಿತಂತೆ, ಪರಪಂಚದ ಸಾವಿರಾರು ಭಾಷಾ ಕುಟುಂಬಗಳು ಭಯಭೀತಿಗೊಂಡವಂತೆ, ಮಾತಾಯಿಯ ವಾಕ್ ಪ್ರವಾಹದೊಳಗ, ತಮ್ಮ ತಮ್ಮ ಅಸ್ತಿತ್ವ ಕಳಕೊಂಡು, ಗಂಟುಲುಗಳಿಂದ ಹೊತ್ತಿಗೆ, ಹೆಬ್ಬೊತ್ತಿಗೆ ಕಡತಗಳಿಂದ ವಂದೇ ಸಮಕ ಹರಕೋತ ಹರಕೋತ ಬಂದು ಸಾಂಬವಿಯ ಮುಂದೆ ರಾಸಿ ರಾಸಿಯಾಗಿ ಬಿದ್ದವಂತೆ ಸಿವಸಂಕರ ಮಾದೇವಾss..

ಯೀರೇಳು ಲೋಕಗಳಲ್ಲಿನ ಪಂಡಿತಪಾಮರರ ಗಂಟಲುಗಳಲ್ಲಿ, ಹೊತ್ತಿಗೆ ಹೆಬ್ಬೊತ್ತಿಗೆ ಕಡತಗಳಲ್ಲಿ ವಂದೇ ವಂದು ಅಕ್ಕಸರ ಯಿರಧಾಂಗಾತಂತೆ, ಯಾರೊಬ್ಬರಿಗೂ ಅನಲಿಕ್ಕಾಗಲೀ, ಬರೆಯಲಿಕ್ಕಾಗಲೀ ಭಾರಧಾಂಗಾತಂತೆ, 'ಯಲ್ಲಿ ಹೋದಿರಿ ಕಂದಮ್ಮಗಳಿರಾ' ಯಂದು ಪ್ರತಿಯೊಬ್ಬರೂ ಬಾಯಿ ಬಾಯಿ ಬಿಡಲಾರಂಭಿಸಿದರಂತೆ, ಅಕ್ಕಸರಗಳಿಂದ ವಂಚಿತಗೊಂಡು ಮಂದಿ ಯಂಬುವ ಮಂದಿ ಜೀವಚ್ಛವಗಳಾಗಿ 'ಅಕ್ಕಸರಗಳಿರಾ'... 'ಅಕ್ಕಸರಗಳಿರಾ' ಯಂದು ಬಾಯಿ ಬಾಯಿ ಬಿಡಲಾರಂಭಿಸಿತಂತೆ, ನೀವು ನೋಡಿದಿರೇನು? ನೀವು ನೋಡಿದಿರೇನು? ಯಂದು ಕಂಡಕಂಡವರನ್ನು ಕೇಳಲಾರಂಭಿಸಿತಂತೆ...

ತಾಯಿ ಸಾಂಬವಿಯ ಮುಂದೆ ಕುಪ್ಪೆ ಕುಪ್ಪೆಯಾಗಿ ಬಿದ್ದಂಥ ಅಕ್ಕಸರಗಳು ದೂರದಿಂದ ನೋಡಲಕೊಂದು ಚಂದ ಯಿದ್ದವಂತೆ, ಹತ್ತಿರದಿಂದ

ನೋಡಲಕೊಂದು ಛಂದ ಯಿದ್ದವಂತೆ....  ಸತ ಸಹಸ್ರಕೋಟಿ ದೀಪಗಳ ಕುಡಿಗಳಾಗಿದ್ದವಂತೆ.. ಸತ ಸಹಸ್ರಕೋಟಿ ಚಿಟ್ಟೆ ಪತಂಗಗಳಾಂಗ ಯಿದ್ದವಂತೆ, ಪರಮಾತುಮನೊಳು ಐಕ್ಯ ಆಗಲಕಂತ ಹೊಂಟು ಬಂದ ಸತ ಸಹಸ್ರಕೋಟಿ ಜೀವಾತುಮ ಗಳಾಂಗಿದ್ದವಂತೆ.. ಯವ್ವಾ ನಾನು ಕನ್ನೂಡ, ಯವ್ವಾ ನಾನು ತೆಲುಗು, ನಾನು ಇಂಗಲೀಸು, ನಾನು ಮಲಯಾಳಿ, ನಾನು ಅರವ, ಯಂದು ಮುಂತಾಗಿ ತಮಗ ತಾವ ಪರಿಚಯಿಸಿಕೊಂಡವಂತೆ, "ಆಹ್ಹಾ..  ನನ ಕಂದಯ್ಯಗ ವಲಿಯದ ನೀವು ಯಿೊ ಭೂಮಿ ಮ್ಯಾಗ ಯಾಕೆ ಯಿರುವಿರಿ?" ಯಂದನಕಂತ ತಾಯಿ ಅವನ್ನೆಲ್ಲಾ ಯಲ್ಡೇ ಯಲ್ಡು ಗುಕ್ಕು ಮಾಡಿ ಬಾಯೊಳಗ ಯಿಟುಕೊಂಡು ಬಿಟ್ಟಳಂತೆ....

ಆದಮ್ಯಾಲೂ ಸಾಂಬವಿಯ ಕೋಪ ತಮಣಿಯಾಗಲಿಲ್ಲವಂತೆ.. ಮಾನವ ಕೋಟಿಯ ಯದೆ ಗಂಟಲುಗಳೊಳಗ ರೂಪಯಿರದ ಅಕ್ಕಸರಗಳೆಂದರೆ ಭಾವನೆಗಳು, ಸಂಬೋಧನೆ ವಾಚಕಗಳು ಯಿದ್ದವಲ್ಲಾ.. ಅವಕ್ಕೂ ಹಾಜರಾಗುವಂತೆ ಆಗ್ನೆ ಮಾಡಿದಳಂತೆ.. ಯಿೊರೇಳು ಲೋಕಗಳೊಳಗ ಸತಸಹಸ್ರಕೋಟಿ ಗಂಟಲೊಳಗಿಂದ, ಯೆದೆಮಿದಿಳುಗಳೊಳಗಿಂದ ಭಾವನೆಗಳು ವುತಾರಗೊಂಡು ಮನೋ ಯೇಗದಲ್ಲಿ ಸಾಗಿ ಆಕೆಯ ವಡಲು ತುಂಬಿದವಂತೆ.

ಛಣಾರ್ದದಲ್ಲಿ ಲೋಕ ಲೋಕವೆಲ್ಲ ಅಕ್ಕಸರ ಭಾವನೆಗಳಿಂದ ವಂಚಿತಗೊಂಡು ಅಯೋಮಯ ವಾದವಂತೆ ಸಿವನೇ. ಅವರವರು ಯಿವರವರಿಂದಲೂ ತಮ ತಮ್ಮ ಪಂಚೇಂದ್ರಿಯಂಗಳ ನಿಗರಾವಣೆ ಯಿಂದಲೂ ದೂರವಾದರಂತೆ.. ವಬ್ಬೊಬ್ಬರು ವಂದೊಂದು ನಡುಗಡ್ಡೆಯಾದರಂತೆ. ಅಂತರ್ ಪಿಚಾಚಿ ಗಳಂತಾಗಿ ಬಿಟ್ಟರಂತೆ. ನರ್ರಮಾನವರೊಂದೇ ಯಾಕ ಅಡಡವಿಗಳಲ್ಲಿನ ಪಸುಪಚ್ಛಿಗಳೂ, ಪರುವತ ತಪ್ಪಲಲ್ಲಿ ತಪೋನಿರತ ತಾಪಸಿಗಳೂ ಸಿಲಾವಿಗ್ರಹಗಳಂತಾಗಿ ಬಿಟ್ಟರಂತೆ...ಗುಡಿಗಳೊಳಗ ಗಂಟೆ ಜಾಗಟೆಗಳನ ಭಾರಿಸವರಿಲ್ಲ ದಾಂಗಾಯಿತಂತೆ.. ಅರ್ಚಕರು ಆದಿವಾಸಿಗಳಂತಾಗಿ ಬಿಟ್ಟರಂತೆ.. ಯಿದರ ತಿಕ್ಕಡಿ ಗಂಧರ್ವ, ಕಿನ್ನರ, ಕಿಂಪುರುಸರಿದ್ದ ಲೋಕಗಳನ್ನೂ ಬಿಡಲಿಲ್ಲವಂತೆ.. ಯಿಂದ್ರನ ಅಂಬ್ರಾವತಿ ಪಟ್ಟಣದೊಳಗ ಸಂಗೀತದ ವಾದ್ಯಗಳು ನುಡಿಸುವವರಿಲ್ಲದೆ ಕಸಬಾರಿಗೆಗಳಿಗಿಂತ ಕಡೆಯಾಗಿ ಬಿಟ್ಟವಂತೆ ಸಿವನೇ, ರಂಭೆ, ಮೂರ್ವಸಿ, ತಿಲೋತ್ತಮೆಯರೇ ಮೊದಲಾದ ಸುಂದರಾಂಗಿಯರು ಕುಣಿಯಲಕಾಗದೆ ಕುಂಟು ಬಿದ್ದರಂತೆ ಸಿವನೇ...

ಅಕ್ಕಸರ ಪತ್ತೆಯಿಲ್ಲದಂಗಾಯಿತಲ್ಲಾ, ಭಾಷೆ ಪತ್ತೆಯಿಲ್ಲದಾಂಗಾಯಿತಲ್ಲಾ.. ನಡೆನುಡಿ ಆಚಾರ ಯಿಚಾರ ರೊತ ನೇಮಗಳೆಲ್ಲ ಪತ್ತೆಯಾಗದಾಂಗಾಯಿತಲ್ಲಾ ಯಂದು ದ್ಯಾವಾನುದೇವತೆಗಳು ಯಸನ ಮಾಡತೊಡಗಿದರಂತೆ.. ಹಿಂಗಾದರ ತಮ ಗತಿ ಹೆಂಗ ಅಂತ ಕೇಳಿಕೋತ ಬಂದ ಅವರಿಗೆ ತ್ರಿಮೂರ್ತಿಗಳು ಸರಸ್ಪೊತ್ತಮ್ಮನ್ನ ಕೇಳೀರಿ ಅಂದರಂತೆ.. ಅದರಂಗ ಅವರು ಯಿದ್ಯಾಲೋಕಕ ಹೋದರಂತೆ...

ಅಲ್ಲಿ ಚರುಮ ಸುಕ್ಕುಗಟ್ಟಿ.. ಕಣ್ಣುಗುಳಿ ಬಿದ್ದು.. ತ·ಲೆಯೂ ಬೆಳ್ಳಂ ಬೆಳ್ಳಗಾಗಿ.. ಬೆನ್ನು ಮುರುಕು ಬಿಲ್ಲಿನಂಗಾಗಿ ಅಕಾಲಿಕ ರುದ್ಯಾಪ್ಯ ತಗುಲಿ ಮುಪ್ಪಾನು ಮುದುಕಿಯೇ ಸರಸ್ಪೊತಮ್ಮ ಯಂದು ನಂಬಲಾಗಲಿಲ್ಲವಂತವರಿಗೆ, ಆಕೆಯ ದುಸ್ಥಿತಿ ಕಂಡು ಮಮ್ಮಲನ ಮರುಗಿದರಂತೆ. ಯಾಕ ನೀನ ಹಿಂಗಾಗಿರುವಿ ಯಂದು ಪರಾಂಬರಿಸಿದ ಅವರಿಗೆ ಕುದುರೆಡವು ಕಡೆ ಬೊಟ್ಟು ಮಾಡಿ ತೋರಿಸುತ ಯಿದ್ಯೆಯ ಮ್ಯಾಲ ಸಾಂಬವಿ ಮುನುಸುಕೊಂಡವಳರಯ್ಯಾ ಹೊತಾ ಹೋಗಿ ಆಕೇನ ಕೇಳಿಕೊಳ್ರಿಯಂದಳಂತೆ....

ಯಿದರ ಕಾಲಾಗಾ ಯೇನಾದೀತು ಹೋಗಿ ಕೇಳೇ ಬಿಡುತೇವಿ ಯಂದು ನಿರ್ಧಾರ ಮಾಡಿ ಸುರಲೋಕದ ಮಂದಿ ಭೂಲೋಕಕ ಬಂದು ಸಾಂಬವೀನ ಕಂಡು "ಯಾಕ ತಾಯಿ? ಯಾಕ ಅಕ್ಕಸರ ಸಂಪತ್ತನ ನುಂಗಿ ನೀರು ಕುಡಿದಿರುವಿ" ಯಂದು ಕೇಳಿದ್ದಕ್ಕ ಆಕೆಯು "ನನಕಂದಯ್ಯಗ ವಲಿಯದ ಅಕ್ಕಸರಗಳು ನಿಮಗೊಂದೆ ಯಾಕಿರಬೇಕರಯ್ಯಾ? ಸುಮಕ ಹೊಂಟೋತೀರೋ ಯಿಲ್ಲಾ ನಿಮ್ಮನ್ನೂ ನುಂಗಿ ಬಿಡಲೋ" ಯಂದು ಗುಡಿಗಿದಳಂತೆ.. ಅದಕ ಮುಕಳಿ ಬಾಯಿ ಮುಚಕೊಂಡು ದೇವತೆಗಳು ವಾಪಾಸಾಗಿ ತ್ರಿಮೂರ್ತಿಗಳನು ಕಂಡು "ನೀವೆ ಯಿದಕ ಯೇನಾದರೊಂದು ಯೇರುಪಾಡು ಮಾಡಿರಿ ತಂದೆ ಗೋಳಾ" ಯಂದು ಅತ್ತು ಕರೆದರಂತೆ.. ಅದಕ ಮನ ಕರಗಿ ತ್ರಿಮೂರ್ತಿಗಳು ರಾಯಲು ಸೀಮೆ ಯಂಗ ಬರ ಬಿದ್ದು ಸೀದು ಹೋಗಿದ್ದ ಯಿದ್ಯಾಲೋಕಕ ಹೋಗಿ ಯಿದ್ಯಾಧಿದೇವತೆಯ ದಯನಾವಸ್ಥೆಗೆ ಮರುಗಿ ಆಕೆಯ ಸರೀರಕ್ಕೆ ರಮ್ವೋಟು ಸಗುತಿ ತುಂಬಿ "ಅಮ್ಮೊಸರುಸ್ಪೋತಮ್ಮಾ ಯೀಗಿಂದೀಗಲೆ ನೀನು ಭೂಲೋಕಕ ಹೋಗಿ ಸಾಂಬವಿಯ ಮನವಲಿಸಿ ಅಕ್ಕಸರಗಳನ ಭಾವನೆಗಳನ ಬಿಡುಗಡೆ ಮಾಡಿ ಬಾರವ್ವಾ" ಯಂದು ಕೇಳಿಕೊಂಡಿದ್ದಕ್ಕೆ ಆಕೆಯು ಆಗಲರಪ್ಪಾ ಯಂದು ಕುದುರೆಡವಿಗೆ ಸಾಂಬವೀನ ಕಂಡು "ಆದಿಸಗುತಿಯೇ ಹೇಳುತ್ತೇನೆ

ಕೇಳುವಂಥವಳಾಗು, ಯತ್ತದೇಶ್ಚಂ ಅಂದರೆ ಯಾವುದನ್ನು ನೋಡಲಕ ಸಾಧ್ಯವಿಲ್ಲಮೋ, ಅಗ್ರಾಹ್ಯಂ ಅಂದರೆ ಯಾವುದನ್ನು ಗ್ರಹಿಸುವುದಕ ಅಸಾಧ್ಯಮೋ.. ಅಗೋತ್ರಅವರ್ಣಂ ಅಂದರ ಯಾವುದಕ್ಕೆ ಗೋತ್ರವಾಗಲೀ, ವರ್ಣವಾಗಲೀ ಯಿಲ್ಲಮೋ, ಅಚಕ್ಷುಹು ಶ್ರೇತಂ ತದಪಾಣಿಪದಂ ನಿತ್ಯಂ ಅಂದರೆ ಯಾವುದಕ್ಕೆ ಕಣ್ಣು ಕಿವಿ ಮೊದಲಾದ ಪಂಚೇಂದ್ರಿಯಗಳಿಲ್ಲಮೋ, ವಿಭುಂ ಸರ್ವಗತಂ ಅಂದರೆ ಯಾವುದು ನಿತ್ಯ ಸರ್ವಯಾಪಿಯಾಗಿರುವುದೋ ಆ ಅಂಥ ಅಕ್ಕಸರ ಸಂಪತ್ತನ ನುಂಗಿ ವಡಲೊಳಗಿಟ್ಟು ಕೊಂಡಿರುವಿಯಲ್ಲಾ, ಯಿದು ನ್ಯಾಯವೇನು?" ಯಂದು ಕೇಳಿದಳಂತೆ..

ಆಕೆಯ ವಾಗ್ ವಯ್ಖರಿಗೆ ಹೆದರಿದ ಸಾಂಬವಿ ನನ ಮಗ ಸಾಂಬಯ್ಯಗ ಅಕ್ಕಸರ ವಲಿಯೋ ಹಾಂಗ ಮಾಡು ಯಂದಳಂತೆ, ಅದಕ ನಗಾಡುತ ಸರಸ್ಯೊತಮ್ಮ ಆತನ ಹಣ್ಯಾಗ ಬರದಿಲ್ಲ ಅಂದ ಮ್ಯಾಲ ಹೆಂಗ ವಲಿದೀತು ಅಕ್ಕಸರ... ನೀನು ಬಿಡಲಿಲ್ಲಾಂದರ ಯಲ್ಲಾ ಸರ್ವನಾಶಣ ಆತಯ್ತೆ ತಾಯಿ.. ಅಕ್ಕಸರ ಯಿಲ್ಲಾಂದರ ನೀನು ಯಿರದಿಲ್ಲ.. ನಾನು ಯಿರದಿಲ್ಲ.. ಅದಕ ಬಿಟುಬಿಡು ಯಂದು ಹೇಳಿದಳಂತೆ..

ಅದರ ಬ್ಯಾರೆ ಅಕ್ಕಸರಗಳಿಂದಾಗಿ ಸಾಂಬವಿಯ ಮಯ್ಯಿ ತುಂಬಾನೆ ವಲುವಾಗಿತ್ತಂತೆ.. ಸರೀರದೊಳಗಡೆ ಅವು ವಂದಕ್ಕೊಂದು ಬಡಿದಾಡುತ್ತಿದ್ದವಂತೆ, ವಳಗೆ ಯೇಳೂರು ಸಂತೆ ನೆರೆತಂತಾಗಿತ್ತಂತೆ.. ಅದಕ ಸೋತ ಸಾಂಬವಿಯು ಯಲಾಯ್ ಭಾಷೆಗಳೇ ನನ್ನ ಸರೀರದಿಂದ ಹೊರಹೊಂಡಿರೆಂದು ಆಗ್ನಾಪಿಸಿದಳಂತೆ, ಆಗ ಭಾಷೆಗಳು, ಅಕ್ಕಸರಗಳು ಆಕೆಯ ಸರೀರದ ಮ್ಯಾಲಿದ್ದ ಕೋಟ್ಯಾನುಕೋಟಿ ಸ್ವೇದರಂದ್ರಗಳ ಮೂಲಕ ಸುಯ್ ಸೂಯ್ ಅಂತ ಹೊರ ಬಂದವಂತೆ.. ಸಮುಸಕ್ರುತ, ಗಿರ್ವಾಣಿ ಭಾಷೆಗಳು ಅಲ್ಲೇ ಯಿದ್ದ ತಮ್ಮ ಮೂಲ ಸ್ವಾಸ್ಥಿಯಾದ ಸರ್‍ಸೊತಮ್ಮನ ಸರೀರವನ್ನು ತುಂಬಿಕೊಂಡರೆ ವುಳಿದ ಭಾಷೆಗಳು ತಮ ತಮ್ಮ ನೆಲೆ ಹುಡುಕೊಂಡು ಹೊಂಟವಂತೆ..

ಹ್ಹಾ..ಹ್ಹಾ... ಯಂಥ ಕಥೆಗಳನ ಕಟ್ಟಿರುವರಲ್ಲಾ ನಿನ್ನೊಕ್ಕಲು ಮಂದಿ ಸಿವಸಂಕರ ಮಾದೇವಾss..

ಯಿ ಕಥಿ ಯಿಲ್ಲಿಗೆ ಮುಗುತಾಯ ಆ ತಂದುಕೋ ಬ್ಯಾಡ... ನಂಬ ಬ್ಯಾಡ.. ನಂಬದಾಂಗ ಯಿರಬ್ಯಾಡ ತಂದೆಯೇ.. ನಿನ್ನ ಸದ್‌ಭಕುತ ಜಾನಪದ ಮಂದಿ ಕುಂತಲ್ಲೆ ಕಲ್ಪನಾಲೋಕದೊಳಗ ಅಡ್ಡಾಡಿಕೊಂಡು ಬರೋರು.. ಅವರು

ತಮ್ಮ ಕಥಿಯೊಳಗ ಸಮಸ್ತ ಕುಂತಳಸೀಮೆಯನ್ನು ತರುಬವರೆ.. ಅತಿಮಾನುಷ ಸಗುತಿಗಳ ಆಡುಂಬೊಲ ಮಾಡಿಕೊಟ್ಟವರೆ.. ಅವರ ಲೆಕ್ಕದ ಪ್ರಕಾರ ಮುಂದಕ ಯೇನಾಯಿತೆಂದರೆ....

ಕುದುರೆಡವ ಸಾಂಬವಿ ಭಾಷೆಯು ತಂಟೆಗೆ ಹೋದುದರ ಪರಿಣಾಮವಾಗಿ.. ವುಪದ್ರವಿ, ನಿರುಪದ್ರವಿ ಅಕ್ಕಸರ ಯಂಬ ಹೆಜ್ಜೇನ ಗೂಡಿಗೆ ಕಯ್ಯಿಟ್ಟ ಪರಿಣಾಮವಾಗಿ ಯೀ ಸೀಮೆಯಿಂದ ಆ ಸೀಮೆಮಟ ಗಬ್ಬೆದ್ದು ನಾರಲಕ ಹತ್ತಿತಂತೆ.. ಅಕ್ಕಸರ ಯಿಹೀನ, ಭಾವನಾ ಯಿಹೀನ ಘನಘೋರ ಬದುಕನ ಯಿಡೀ ಕುಂತಳ ಸೀಮೆ ನೀಸಿತಂತೆ.. ಆ ಯಂಟು ಹತ್ತು ದಿನ ಮಾನ ಯಾರೊಬ್ಬರ ಪಂಚೇಂದ್ರಿಯ ಗಳಾಗಲೀ, ನವರಂಧ್ರಗಳಾಗಲೀ ಸ್ವಾಧೀನಯಿರಲಿಲ್ಲವಂತೆ.. ಸಾಂಬವಿಯ ಸರೀರದಿಂದ ಪಯಣ ಹೊಂಟ ಅಕ್ಕಸರಗಳು, ಭಾವನೆಗಳು ತಮ ತಮ್ಮ ನಿರ್ದಿಷ್ಟ ಠಿಕಾಣಿಗಳನ್ನು ತುಂಬಿಕೊಳ್ಳಲಾರಂಭಿಸಿದ ಛಣದಿಂದ ಪಂಚೇಂದ್ರಿಯಗಳು ನವರಂಧ್ರಗಳು ಮಿಸುಕ ತೊಡಗಿದವಂತೆ... ಅವರನ ಅವರು ಯಂತಲೂ, ಯಿವರನ ಯಿವರು ಯಂತಲೂ ಗುರುತಿಸಲಾರಂಭಿಸಿದರಂತೆ...

ಯಾಕಿಂಗಾತು? ಯದಕಿಂಗಾತು ಯಂದು ಯಲ್ಲಾರನು ಯಲ್ಲರು ಕೇಳುತ್ತಿದ್ದರಂತೆ.. ಕುಂಪಣಿ ಸರಕಾರದ ಬಂಗಲೆಯ ಯಿದ್ಯಾಮಾನಗಳನ್ನೇ ವುದಾಹರಣೆಯಾಗಿ ಕೊಡುತ್ತಾರೆ ಜಾನಪದ ಕಥೆಗಾರರು. ಯತ್ತೆತ್ತಲಿಂದಲೋ ಕಾರಖೂನರು, ಮೂಳಿಗ ಮಾನ್ಯರು, ಚಾಕರಿ ವಂದಿಗರು, ಯಿದರೊಳಗೇನೋ ಯಿದಿಯ ಕಯ್ವಾಡ ಯಿದ್ದಂಗದೆ.. ದಯವ ಮುನುದು ಕ್ಷಮಿಸಿದಂಗದೆ.. ಯಂದನಕಂತ ಬಂದ ಆಹೋಬಲ ಸಾಸ್ತ್ರಿಗಳು ನೋಡು ನೋಡುತ್ತಿದ್ದಂತೆ ಅವಸರದಿಂದ ಬವಸರದಿಂದ ಸಬುಧವಾಗುತ್ತಿದ್ದು ದೇನಂತೆ? ಸಬುಧಗಳು ವಾಕ್ಯಗಳಾಗಿ ರೂಪುಗೊಳ್ಳುತ್ತಿದ್ದುದೇನಂತೆ? ಕತ್ರುಜಾಗದಲ್ಲಿ ಕರುಮ ಬಂದು ನಿಂತಿತಂತೆ.. ಕರುಮದ ಜಾಗದಲ್ಲಿ ಕ್ರಿಯಾಪದವು ಕಯ್ಯಿ ಕಟ್ಟಿಕೊಂಡು ನಿಂತಿತಂತೆ.. ಕೆಲವು ವಾಕ್ಯಗಳು ಹಿಂದಕ ಮುಂದಕ ಜರಗಾಡಿದವಂತೆ.. ಯಾಮೊಂದು ವಾಕ್ಯವು ನಿಖರವಾದ ಅರ್ಥ ಕೊಡಲಿಲ್ಲವಂತೆ.. ಅಂಥ ಹಾಳೆಗಳೊಳಗೊಂಡಿದ್ದ ಕಡತಗಳೂ ತಮ್ಮ ಮೂಲ ಧ್ವನಿ ಕಳಕೊಂಡಿದ್ದವಂತೆ...

ಹೆನ್ರಿಯು ಪಡುತಲಿದ್ದ ಸಂಕಟವನ್ನು ಕಥೆಗಾರರು ಕರುಳು ಹಿಚುಕುವಂತೆ ವರಣನ ಮಾಡಿರುವರು ಸಿವನೇ.. ಕಾರಣ ಹೆನ್ರಿಚೆನ್ನಾಸಾನಿಯ ಮ್ಯಾಲ ಜೀವವನ

ಯಿಟುಕೊಂಡಿದ್ದನಷ್ಟೆ.. ತನ್ನ ಪ್ರಿಯತಮೆಗೆ ಪ್ರೇಮ ಪತ್ರಗಳನು ಬರೆಯುವಸಲುವಾಗಿ.. ಪ್ರೇಮದ ಮಾತುಗಳನು ಅನ್ನುವ ಸಲುವಾಗಿ, ಆಡುವ ಸಲುವಾಗಿ ಕಷ್ಟಪಟ್ಟು ಕನ್ನಡ ಭಾಷೆಯನ್ನು ಕಲಿತುಕೊಂಡಿದ್ದನಷ್ಟೆ.. ತನ್ನ ಕರುಮಮೋಯಂಬಂತೆ ಅವನೆದೆಯೊಳಗಿನ ಕನ್ನಡ ಭಾಷೆ, ಪ್ರೇಮ ಸಂಬಂಧೀ ಭಾವನೆಗಳೂ ಸಾಂಬವಿಯ ಆಗ್ನೆಯನ್ನು ಪಾಲಿಸದೆ ಯಿರಲಿಲ್ಲವಂತೆ.. ಯಲ್ಲಮೂಬಂದವು.. ಅವುಗಳ ಪಯ್ಕಿ ವಂದೇ ವಂದು ಭಾವನೆಯು ಬಂದು ಅವನೆದೆಗೂಡನು ಸೇರಿಕೊಳ್ಳಲಿಲ್ಲವಂತೆ....

ಗೊಂದಲಿಗರ ದುರುಗೋಜಿ ತಾನು ಕಟ್ಟಿದ ಕದಿ·ಯೊಳಗ ಅವುಗಳ ಕುರಿತಂತೆ ನವರಸಭರಿತವಾಗಿ ವರಣ ಮಾಡಿದ್ದಾನೆ ಸಿವನೇ.. ಅಂತೆಕಂತೆಯ ಹಂಗು ತೊರೆದು ನೇರವಾಗಿ ಹೇಳುವುದಾದರೆ..

ಕೂಡ್ಲಿಗಿ ತಹಸೀಲಿಗೆ ಅನತಿದೂರದಲ್ಲಿ ಅಂದರ ಮೂರು ಸಲಕ ನಿಂಬೇಹಣ್ಣನ್ನು ವಗೆಯುವಷ್ಟು ದೂರದಲ್ಲಿ... ಕಕ್ಕುಪ್ಪಿ ಯಂಬ ಗ್ರಾಮವು ಯರಡು ಗುಡಾರಗಳಷ್ಟ ಗಲಕಿರುವುದು. ಹೊನ್ನುರುಕಿ, ಬಂದುರುಕಿ, ಕಾಸರುಕಿ ಯಂಬ ಮೂರು ನಮೂನೆಯ ಕುರುಚಲು ಕಾಡುಗಳಿಂದದು ಸಯ್ತೋಪಚಾರ ಮಾಡಿಸಿಕೊಳ್ಳುತಲಿರುವುದು. ಅಲ್ಲೊಂದಿಲ್ಲೊಂದು ಕಡುಬುಗಳಂತೆ ಕಾಣಬರುವ ಝೋಪಡಿಗಳು ಹೆಚ್ಚೆಂದರೆ ಅಯವತ್ತರ ಮ್ಯಾಲ, ಅರವತ್ತರವಳಗೆ.. ಅವುಗಳಲ್ಲಿ ವಾಸಸ್ಥರು ಯಾರಪ್ಪಾ ಅಂದರೆ ಬುಡುಬುಡುಕ್ಯೋರು. ಅವರಿಗಂಟಿಕೊಂಡಿರುವ ನಾಮಧೇಯಗಳು ಯಾವ್ಯಾವಪ್ಪ ಅಂದರ ಸೀಮಡ, ಕಾವಡ, ತೇವಡ, ಜಾರಡ, ತೀರುಡ, ಯಾರಡ, ಬೇಕಡ, ಬೇರಡ ಮುಂತಾದ ಡಕಾರಂತಗಳು, ಅವರವರ ಹೆಂಡಂದಿರ ಹೆಸರುಗಳೂ ಡಿಕಾರಂತಗಳಾಗಿರುವವು. ಅವರ ಕುಲಕಸುಬು ಯಾವುದಪ್ಪ ಅಂದರ ಕಯ್ಯೊಳಗೊಂದು ಟಮಣಕ ಟಮಣಕಯಂದು ಸಬುಧಮಾಡುವ ಬುಡುಬುಡಕೆಯಂಬ ಗಾತುರದ ಚರುಮವಾದ್ಯ ಹಿಡಕೊಂಡು, ಬಲಗೊಂದು ಯೇಳು ಬಣ್ಣದ ತ್ಯಾಪೆಯ ಜೋಳಿಗೆ ಯಿಳಿಬಿಟುಕೊಂಡು, ಹಾಸಲಕೂ, ಹೊದೆಯಲಕೂ ಬರುವಂಥ ಅಯಿದೂವರೆ ಮೊಳದ ಮುಂಡಾಸು ಸುತುಕೊಂಡು, ಮಂಗಣ್ಣವಂದನ್ನು ಹೆಗಲ ಮ್ಯಾಲ ಕುಂಡ್ರಿಸಿಕೊಂಡು ಮುನ್ನೂರಾ ಮುವ್ವತ್ತುಕಾಲ ಮೂರೂರು ಅಲೆಯುವುದು. ಅವರ ಪಯ್ಕಿ ತಿಕ್ಕಡಯಂಬಾತ ತನ ಮಯ್ಯೊಳಗ ಆರಾಮಿಲ್ಲಯಂಬ ಕಾರಣಕ್ಕೋ, ತಾನು ಹೊಸದಾಗಿ ಸೀರುಡುಕೆ ಮಾಡಿಕೊಂಡು ತಂದಿರುವ

ಹೆಂಡತಿಯಾದ ತಿಕ್ಕಡಿಯನ್ನು ಬಸುರುಮಾಡುವ ಕಾರಣಕ್ಕೋ, ಹಟ್ಟಿಯೊಳಗ ವುಳುಕೊಂಡಿದ್ದನು. ತನ್ನ ಹೆಂಡತಿಯ ಸರೀರದ ಸಂದುಗಳಿಗೆ ಪುನುಗು ಬೆಕ್ಕಿನ ನೆಣ ಸವರಿ ಗಳಿಗೆ ಗಳಿಗೆಗೊಮ್ಮೆ ಮೂಸಿ ಸಂಭ್ರಮಪಡುವ, ವಂದೇ ತಳಿಗೆಯಲ್ಲಿ ಮೊಲದ ಮಾವುಸದಡುಗೆಯನ್ನು ವುಂಬುತ, ವುಣಿಸುತ ವಂದೊಂದು ದಿನವನ್ನು ವಂದೊಂದು ಗಳಿಗೆಯಂತೆ ಕಳೆಯುತ ಲೀಲಾ ಯಿನೋದದಿಂದ ಯಿದ್ದನು. ಅಂಜಿಣಿ ಯಂಬ ಹೆಸರಿನವನ ಮಂಗಣ್ಣವು ಕೂಗಳತೆಯೊಳಗಿದ್ದು ಹೋಗೋದು, ಬರೋದು ಮಾಡುತ ಆ ದಾಂಪತ್ಯದ ರಸಾವೇಸಕ್ಕೆ ಅಡಚಣೆ ಯನ್ನುಂಟು ಮಾಡುತಲಿದ್ದಿತು. ಅದರ ವುಪಟಳಕ್ಕೆ ರೋಸಿದ ತಿಕ್ಕಡನು "ಯಾಚಕಾರ ಪೋಚುಕುಂದೆಲ್ಲಾ ನೀಯಾಕಣಪ್ಪೋಡಾ" ಯಂದು ಗದರಿಸುತ್ತಲೆ ಅದು ಮನಸ್ಸಿಗೆ ನೊವು° ಮಾಡಿಕೊಂಡು ಜುಲುಮಿಂದಲೆ ಕಾಸರಕ ಯಂಬ ಅಡವಿಯಂ ಪೊಕ್ಕಿತು. ಹಸಿವೆಯಂಬ ಮುದ್ರೆವುಂಗುರವನ್ನು ಹೊಟ್ಟೆಯಂಬ ಅಂಗಯ್ಯೊಳಗ ಹಿಡಕೊಂಡು ಹಣ್ಣುಹಂಪಲ ಯಂಬ ಸೀತಾಮಾತೆಯನ್ನು ಹುಡುಕ್ಕೋತ, ಹುಡುಕ್ಕೋತ ಗಿಡದಿಂದ ಮರಕ್ಕೂ, ಮರದಿಂದ ಗಿಡಕ್ಕೂ ಜಿಕ್ಕೋತ ಜಿಕ್ಕೋತ ಅದು ಸಾಗಿರಲು...

ಅದೇ ಕಾಸರಕ ಕಾಡೊಳಗೆ ವಂದು ಬಲು ಚೋದ್ಯವು ನಡೆದಿತ್ತು... ಅದೇನೆಂದರೆ....

ಸಾಂಬವಿಯ ಸರೀರಸಾನ್ನಿದ್ಯದಿಂದ ಅಕ್ಕಸರಗಳೂ, ಭಾವನೆಗಳೂ, ಸಂಗನೆಗಳೂ ಬಿಡುಗಡೆಗೊಂಡು ತಂಡೋಪತಂಡವಾಗಿ ತಮ ತಮ್ಮ ಬಿಡದಿಗಳನ್ನು ಹುಡುಕಿ ಸೇರುವ ಸಲುವಾಗಿ ಪಯಣ ಹೊಂಟವು ಯಂಬ ಸಂಗತಿ ಸರುವ ಯಿಧಿತವಾಗಿರುವುದು. ತಮ್ಮ ತಂಡದ ಮುಖಂಡನ ಚುರುಕುತನ, ಗುರಿ ಬಗ್ಗೆ ಖಚಿತ ನಿಲುವುಗಳಿಂದಾಗಿ ಕೆಲವು ತಮ ತಮ್ಮ ಬಿಡದಿಗಳನ್ನು ಸೇರುವಲ್ಲಿ ಯಸಸ್ವಿಯಾದವು. ಕೆಲವು ತಮ್ಮ ನಿಧಾನಗತಿಯಿಂದಾಗಿಯೋ. ಸೋಮಾರಿತನ, ಆಲಸ್ಯದಿಂದಾಗಿಯೋ. ಗಿರಕಿ ಸೊಭಾವದ ಕಾರಣದಿಂದಾಗಿಯೋ ಅಲ್ಲೂ ಸೇರದೆ.. ಯಿಲ್ಲೂ ಸೇರದೆ, ನಡುದಾರಿಯಲ್ಲೆ ವುಳಿದುಬಿಟ್ಟು ಹೊಲಬುಗೆಟ್ಟು ಪರಿತಪಿಸುತಲಿದ್ದವು. ಅವುಗಳ ಪಯ್ಕಿ 'ಪ್ರೇಮ'ಯಂಬ ಮುಖಂಡನ ನೇತ್ರುತ್ವದಲ್ಲಿದ್ದ ತಂಡಮೂವಂದು. ಆ ತಂಡದ ಗಣ್ಯ ಸದಸ್ಯರು ಕಾಮ, ಸಲ್ಲಾಪ, ಬಿಟ್ಟಿರಲಾರೆ.. ಯೆಂದೆಂದೂ ಮರೆಯಲಾರೆ.. ಪ್ರಾಣ ಹೋದರೂ ಸರಿಯೇ, ರುದಯ ಸಿಮ್ಮಾಸನ, ಯೇಳೇಳು

ಜನುಮಕೂ, ನಿನ್ನ ರೂಪವೇ ಸುರಾಪಾನ ಯಂಬಿವೇ ಮೊದಲಾದ ಸಹಸ್ರಸಂಖ್ಯೆಯಲ್ಲಿದ್ದವು. ಸಾಂಬವಿ ಹಂಟುಬನ್ನಿ ಯಂದು ಸುಗ್ರೀವಾಗ್ನೆ ಮಾಡುತ್ತಲೇ ಅವು ಹೆನ್ರಿಯ ಸರೀರ ಮತ್ತು ಮನಸ್ಸಿನಿಂದ ಪಯಣ ಹೊಂಟು ಬಿಟ್ಟಿದ್ದವಷ್ಟೆ. ಭೋಸಂಖ್ಯಾತ ಆಂಗ್ಲ ಭಾಷೆಯ ಅಕ್ಕಸರs ಸಬುಧ ಭಾವನೆಗಳೊಂದಿಗೆ ಯೇಗಿ ಯೇಗೀ ಅವಕೂ ಸಾಕಾಗಿತ್ತು ಬೇರೆ. ಸಾಂಬವಿಯ ಸರೀರದೊಳಗ  ವಂದು ಮೂಲೆಯಲ್ಲಿ ಅವು ಅಯಿಷಾರಾಮಿ ರೀತಿಯಲ್ಲಿ ವುಳುಕೊಂಡುಬಿಟ್ಟವು. ಸರಸೊತಿಯ ಯಿನ್ನಪದ ಮೇರೆಗೆ ಜಗದಂಬೆಯು ಬಿಡುಗಡೆಯ ಆಗ್ನೆ ನೀಡಲು ಅವು ಅಡಲ್ಲಾಗಿ ಹೋದವು. ವಲ್ಲದ ಮನಸ್ಸಿನಿಂದ ಹೊರ ಹೊಂಡುವ ಹೊತ್ತಿಗೆ ಕಾಲ ಮೀರಿತ್ತು. ಹರಟೆ ಕೊಚ್ಚುತ್ತ, ಪ್ರಕೃತಿಯ ಸಹಜ ಸವುಂದರ್ಯವನ್ನು ಸವಿಯುತ್ತ, ತಮ್ಮ ಬಿಡದಿ ಯಾವುದಿರಬವುದೆಂದು ಪರಪಾಟು ಅನುಭವಿಸಿದವು. ಅವು ಹಂಗೆ ತಿರುಗಾಡಿಕೋತ, ತಿರುಗಾಡಿತ ಅದೇ ಕಾಸರಕನಡವೇಲಿ ಬೀಡು ಬಿಟ್ಟಿದ್ದವು. ತಾವು ಯಾವುದಾದರೊಂದು ಪ್ರಾಣಿಯ ಸರೀರದಲ್ಲಿ, ಮನಸಿನಲ್ಲಿ ಆಸ್ರಯ ಪಡೆಯಲಕೇ ಬೇಕು, ಯಿಲ್ಲವಾದರೆ ತಮಗೆ ವುಳಿಗಾಲವಿಲ್ಲ ಯಂದು ಮುಂತಾಗಿ ಯೋಚಿಸುತಲಿದ್ದ ಅವುಗಳ ಕಣ್ಣಿಗೆ ಆಹಾರಕ್ಕಾಗಿ ಹುಡುಕಾಟ ನಡೆಸುತಲಿದ್ದ ಅಂಜಣಿ ಕಣ್ಣಿಗೆ ಬಿತ್ತು. ಅಗೋ ಆ ಚುತುಷ್ಪಾದಿಯೊಳಗೆ ಸೇರಿಕೊಳ್ಳೋಣವೇ ಯಂದು ಮುಖಂಡನಾದ ಪ್ರೇಮವು ಹೇಳಿತು. ಹೋಗಿ ಹೋಗೀ ಆ ಮಂಗನಲ್ಲಿ ಆಸ್ರಯ ಪಡೆವುದೇ ಯಂದು ಕಾಮ, ಸಲ್ಲಾಪ, ರುದಯಮಂದಿರವೇ ಮೊದಲಾದ ಸದಸ್ಯರು ತಕರಾರು ಯತ್ತಿದವು. ಅದಕುತ್ತರವಾಗಿ ಪ್ರೇಮವು "ಚತುಷ್ಪಾದಿಯೋ.. ದ್ವಿಪಾದಿಯೋ? ನಮಗೆ ಮಾನವರೇ ಆಗಬೇಕೆಂದಿಲ್ಲ ಕಣರಯ್ಯಾ.. ನಮ್ಮನ್ನು ಚತುಷ್ಪಾದಿಗಳು ನೋಡಿಕೊಳ್ಳುವಷ್ಟು ಪ್ರೀತಿಯಿಂದ ಮಾನವರು ನೋಡಿಕೊಳ್ಳುವುದಿಲ್ಲ ಯಂಬುದನ್ನು ಮರೆಯಬ್ಯಾಡಿರಿ. ಅದಲ್ಲದೆ ನಮಗೆ ತುರ್ತಾಗಿ ಯಾವುದಾದರೊಂದು ಬಿಡದಿ ಬೇಕಾಗಿರುವುದು. ಯಿಲ್ಲದಿದ್ದಲ್ಲಿ ನಮಗೆ ವುಳಿಗಾಲ ಯಿಲ್ಲ ವಪ್ಪಿಕೊಳ್ಳಿರಿ" ಯಂದು ತಮ್ಮ ಯಿಷಮ ಪರಿಸ್ಥಿತಿಯನ್ನು ಮನೋಗ್ನವಾಗಿ ಯಿವರಿಸಿ ಅವರನ್ನೆಲ್ಲ ವಪ್ಪಿಸಿತು. ಸೇರಿಕೊಳ್ಳುವುದಾದರೂ ಹೆಂಗೆ? ತಮ್ಮ ಅದ್ರುಸ್ಟಮೋ ಯಂಬಂತೆ ಅದು ಆಹಾರಕ್ಕಾಗಿ ಹುಡುಕಾಟ ನಡೆಸಿರುವುದು. ಅಗೋ ಅಲ್ಲಿ ಕೆಂಪಗೆ ಥಳಥಳ ಹೊಳೆ ಯುತ್ತಿರುವ ಕಾರೆಹಣ್ಣುಗಳೊಳಗೆ....ತಡಮಾಡದೆ ಅವೆಲ್ಲ ಆ ಕೂಡಲೆ ಕಾರೆ ಹಣ್ಣುಗಳಲ್ಲಿ

ತೂರಿಕೊಂಡು ಬಿಟ್ಟವು. ಯಿನ್ನೂ ಕೆಂಪಗೆ, ಯಿನ್ನೂ ಕಮ್ಮಗೆ ಅಂಜಿಣಿಯನ್ನು ಆಕರ್ಷಿಸಿದವು.

ಗಿಡದಿಂದ ಗಿಡಕ್ಕೆ ಜಿಕ್ಕೋತ ಬಂದ ಅಂಜಿಣಿಯು ಮುಳ್ಳುಗಳನ್ನು ಲೆಕ್ಕಿಸದೆ ಕಾರೆ ಹಣ್ಣುಗಳನ್ನು ವಂದೊಂದಾಗಿ ಗುಳುಂ ಗುಳುಂ ಯಂದು ವಂದೂ ಬಿಡದಂತೆ ನುಂಗಿ ಕ್ಷುದ್ಬಾದೆ ತಣಿಸಿಕೊಂಡು ಬಿಟ್ಟಿತು. ತದನಂತರ ಯಿಚಿತ್ರವಾದ ಭಾವನೆಯನ್ನು ಅನುಭವಿಸಲಾರಂಭಿಸಿತು. ತಾನ್ಯಾರು? ತಾನೆತ್ತ? ತನ್ನ ಪೂರುವಾಪರ ಯಾವುದು? ಯಂದು ತರ್ಜನೆ ಭರ್ಜನೆ ನಡೆಸುತ್ತ ಗಂಭೀರವದನವಾಯಿತು. ತನಗೆ ಗೊತ್ತಿಲ್ಲ ದಂತೆ ಚಿನ್ನಸಾನಿ ಯಂದು ಗೊಣಗಿಕೊಂಡಿತು. ಯಿರಹ ಬಾಧೆಯನ್ನು ಆ ಕೂಡಲೆ ಅನುಭವಿಸತೊಡಗಿತು. ತಾನೀಗ ಮಂಗನಲ್ಲ, ತಾನು ಹೆನ್ರಿಯು ಯಂದು ಭಾವಿಸಿಕೊಂಡಿತು. ಸಾಕ್ಷಾತ್ ವೋರ್ವ ಕುಂಪಣಿ ಅಧಿಕಾರಿ ಥರ ವಂದು ಕಟ್ಟಿಗೆ ತುಂಡನ್ನು ಕೋವಿಯೋಪಾದಿಯಲ್ಲಿ ಹಿಡಿದುಕೊಂಡು ವಾಯು ಯಿಹಾರಕ್ಕೆ ಬಂದಿರುವುದೋ ಯಂಬಂತೆ ಘನ ಗಂಭೀರ ರೀತೀಲಿ ಹೆಜ್ಜೆ ಹಾಕುತ್ತ ಹಟ್ಟಿಯನ್ನು ಪ್ರವೇಶಿಸಿತು. ಅದೇ ಸಮಯಕ್ಕೆ ಸರಿಯಾಗಿ....

ಸ್ರುಷಿ« ಕ್ರಿಯೆ ನಡುವೆ ಬಿಡುವು ಮಾಡಿಕೊಂಡು, ಸಂಬಂಧಿಸಿದ ಕಾರ್ಯವನ್ನು ಯಶಸ್ವಿಯಾಗಿ ಮುಗಿಸಿಕೊಂಡು ದಣುವು ಆರಿಸಿಕೊಳ್ಳುವ ನಿಮಿತ್ತ ಹೊಂಗೆ ಮರದ ತಣ್ಣೆಳಲಲ್ಲಿ ತಿಕ್ಕಡಿಯ ತೊಡೆ ಮ್ಯಾಲ ತಲೆಯಿರಿಸಿ ತಿಕ್ಕಡನು ಕಾಯಿಚು ಕುಚಾರೆ..... ಕುಚ್ ಕುಚಾರೆ.... ಯಂಬ ಕಾಮೋತ್ತೇಜಕ ಪದವನ್ನು ಹಾಡುತ್ತ ಅಂಗಾತ ಮಲಗಿಕೊಂಡಿದ್ದನು. ಪೀಚಕ ಮುಚಾರೆ ತಾಮರಲ ತಾಂಚಾರ.. ತಂಚಾರೇ ಯಂದು ತಿಕ್ಕಡಿಯೂ ಅನುಪಲ್ಲವಿಯನ್ನು ಪ್ರಿಯಕರನ ಹಾಡಿಗೆ ಜೋಡಿಸುತಲಿದ್ದಳು. ಆಗ ತಿಕ್ಕಡನು ತನ್ನ ಅನುಗಾಲದ ಸಂಗಾತಿಯೂ, ತನ್ನ ಜೀವನೋಪಾಯುದ ವೂರುಗೋಲೂ ಆದಂಥ ಅಂಜಿಣಿಯುನ್ನು ನೆನಪಿಸಿಕೊಂಡನು. ಕೂಡಲೆ ಯದ್ದು ಮೋವೋಮೋಯ್ ಅಂಜಿಣೀ ಕುಡುದ್ಯಾಂಗಿ ರಿಕ್ಕಿರೋ.. ಕುಡುದ್ಯಾ... ಆಯ್ ಪೋಚ್ ಪೊಚುಕಾರೇ ಯಂದು ಕೂಗಿದನು. ಯಂಗೆ ಪೋಚಕರಿಚ್ಚು ಯಿಂಡಾಯಂದು ಸುತ್ತಲೂ ಕಣ್ಣಾಡಿಸಿದನು. ಯಲ್ಲೂ ಗೋಚರಾಗಲಿಲ್ಲ. ಯದ್ದು ಸೀರೆ ಝೂಢಿಸುತ್ತ ತಿಕ್ಕಡಿಯು (ಯಿವಾಹ ಪೂರ್ವದ ನಾಮ ಸಿಂಗನಲ್ಲಿಯಂದಿತ್ತು) ಗೋ ಅಂಗೆ ಕುಂದಡಚ್ಚ ಪಾಚಕಿಚಾರ ಯಂದು ಕೂಗಲು ತಿಕ್ಕಡನು ಹೊಳ್ಳಿ ನೋಡಲು....

ಅಂಜಣಿಯು ಕಯ್ಲಿ ಕೋಲನ್ನು ಬಲು ವಯನಾಗಿ ತಿರುಗಿಸುತ್ತಲೂ.. ಯಿವರಾರೀ ಅಪರಿಚಿತ ಆದಿವಾಸಿಗಳು ಯಂಬಂತೆ ನೋಡುತ್ತಲೂ ಆಟು ದೂರದಲ್ಲಿ ನಿಂತಿತ್ತು. "ಅರೇ ಕುಡುದ್ಯಾ ಯನ್ನ ಕುಳುಂದ್ಯೆ, ಯನ್ನ ಅಪ್ಪ, ವಾಚಾರಲೇ ವಾಚಾರು" ಯಂದು ಆತ ಕೂಗಿದನು. ಕೂಗಿದೊಡನೆ ಸನೀಕ ಬರುವುದು ವತ್ತಟ್ಟಿಗಿರಲಿ, ಅಪರಿಚಿತರೆಂಬಂತೆ ದುರುಗುಟ್ಟಿ ನೋಡಿತು. ಪಟ್ಟು ಪಾಚಿರೇ ಪಟ್ಟು ಪಾಚಿರೇ ಯಂದು ಕೂಗುತ್ತ ಹಿಡಿಯಲೆಂದು ಹತ್ತಿರ ಹತ್ತಿರಕ್ಕೆ ಹೋಗಲು ಅದು ಹಿಂದಕ ಜರಗೋದು ಮಾಡಿತು. ಕೀರ್ ಕಿಚಾರೆ ಯಂದು ಅರಚಲಿಲ್ಲ. ಮರ ಯೇರಿ ಕುಣಿದಾಡಿ ಜಿಗಿದಾಡಿ ಮರ್ಕಟ ಸೊಭಾವವನ್ನು ಮೆರೆಯಲಿಲ್ಲ. ಆಶ್ಚರ್ಯ ಮತ್ತು ದುಕ್ಕದ ಅಮಲನ್ನು ತಡಕೊಳ್ಳಲಾಗದೆ ಕಾವ್‌ಕುರೇ... ಕಾವ್‌ಕುರೇ ಯಂದು ಕೇಳಿದ್ದಕ್ಕದು ಅಶ್ಚರ್ಯದ ಮ್ಯಾಲ ಬರೆಯಳದಂತೆ "ಖಬರ್ದಾರ್ ....ನಾನು ಯಾರಂತ ತಿಳಿಕೊಂಡೀಯಲೇ ರ‍್ಯಾಸ್ಕಲ್.... ನಾನು ಹೆನ್ರಿಸಾಹೇಬ ಅದೀನಿ.. ನನಗೆ ಸಲ್ಯೂಟ್ ಮಾಡುತೀಯೋ ಯಿಲ್ಲ.... ನಾಕು ಭಾರಿಸಲೋ" ಯಂದು ಕೋಲು ಝುಳಪಿಸಿತು. ತಿಕ್ಕಡನು ಆ ಛಣ ಅಳಲಕ ಬಾರದಂಗಾದನು, ನಗಲಕೂ ಬಾರದಂಗಾದನು. ಯಿದ್ಯಾಕಿಂಗಾಡಲಕ ಹತ್ತಯ್ತೆ.. ಕಾಸರಕ ಕಾಡೊಳಗ ಯೇನಾಯ್ತಿದಕ್ಕೆ.. ಮಿಚ್ಚೇರಿ ಆಂಜನೇಯಸ್ವಾಮಿ ಯಿದಕ ತಗುಲಿರೋ ಭ್ರಾಂತಿ ಹೋಗಲಾಡಿಸಪ್ಪ ಯಂದು ತನ್ನ ಕುಲ ದೇವರನ್ನು ಪ್ರಾರ್ಥಿಸಿದನು. ಆಗಿದ್ದು ತಿಕ್ಕಡಿಯು ತನ ಬಾಯನ್ನು ಅವನ ಕಿವಿಯೊಳಗಿಟ್ಟು ಯಿದಕ್ಯಾಕ ಹಂಗ ಬೇಡಿಕಮ್ತೀ? ಪ್ಯಾಟಿ ಪ್ಯಾಟೀಲಿ ಆಡಿಸಿ ನಾಕು ಕಾಸು ಸಂಪಾದಿಸ ಬವುದಲ್ಲಾ.. ವುಪಾಯಾಂತರದಿಂದ ಹಿಡಿಯಬೇಕು ಯಂದು ಪಿಸುಗುಟ್ಟಿದಳು. ಅದು ಪಾಡೆನಿಸಿತು.

ಅವರಿಬ್ಬರೂ ತಾಸುಗಟ್ಟಲೆ ಪ್ರಯತ್ನಪಟ್ಟು ಅದನ್ನು ಬಂಧಿಸುವಲ್ಲಿ ಯಶಸ್ವಿ ಆದರು.. ಬಗೆಬಗೆಯ ಹಣ್ಣುಹಂಪಲನ್ನು ಅದಕ್ಕೆ ತಿಂಬಲಕಿಟ್ಟರು.. ಹೆನ್ರಿಸಾಹೇಬರೇ.... ನಿಮಗೆ ಬೇಕಾಗಿರುವುದಾದರು ಯೇನು? ಯಂದು ಕೇಳಿದ್ದಕ್ಕದು ನನಗೆ ಚಿನ್ನಾಸಾನಿ ಬೇಕು ಯಂದು ಹೇಳಿತು. ಅದಕ್ಕವರು ಹೊಟ್ಟೆ ಹುಣ್ಣಾಗುವಂತೆ ನಗಾಡುತ ಆಯ್ತು ಸಾಹೇಬರೇ.. ಕೂಡ್ಲಿಗಿ ಪಟ್ಟಣಕ್ಕೆ ಹೋಗೋಣ... ಚಿನ್ನಾಸಾನಿ ಯನ್ನು ಕೊಡಿಸೋಣ ಯಂದರು...

ಅವರು ಮಾರನೆಯ ದಿವಸದಿಂದಲೇ ಮಂಗಣ್ಣನಾಡಿಸಲಕ, ಬಡುಬುಡಕೆ ಹೇಳಲಕ, ಕಾಸು ಬಳಕೊಳ್ಳಲಕ ಹೊಂಟರು. ಸಾಂಪ್ರತು ಆಂಜನೇಯಸ್ವಾಮಿಗೆ

ಅಡ್ಡಬಿದ್ದು ಅವರು ಮೋಂ ಪ್ರಥವಾಗಿ ಆಟ ಸುರುವು ಮಾಡಿದ್ದು ರಾಂಪರ ಹಣಮಂದೇವರ ಗುಡಿಮುಂದ.. ಬುಡುಬುಡುಕೆ ಅಳ್ಳಾಡಿಸುತ, ತಿರುಗಿಸುತ ತೆಮತೆಮಣಕ್ಕ ಅಂತ ಸಬುಧ ಮಾಡುತ್ತ ನಿಂತ ಮಂದಿಯನ್ನು ಕುಳ್ಳರಿಸುತ್ತ, ಕುಂತ ಮಂದಿಯನ್ನು ನಿಲ್ಲಿಸುತ್ತ ಹೆನ್ರಿಸಾಬ ಬಂದಾನ್ನೋಡಿ, ಠಸ್ಸಾ ಪುಸ್ಸಾ ಮಾತಾಡತಾನ್ರೀ.. ವಂದು ರೂಪಾಯಿ ಕೊಟ್ಟವರಿಗೆ ವಂದು ಸಲಾಮು, ಯರಡು ರೂಪಾಯಿ ಕೊಟ್ಟವರಿಗೆ ಯರಡು ಸಲಾಮು.... ಮೂರು ಕೊಟ್ಟವರ ಮುಂದ ಮುಗ್ಗರಿಸಿ ಬೀಳುತಾನ, ನಾಕು ಕೊಟ್ಟವರ ಹಿಂದ ಕಾವಲು ಕಾಯತಾನ... ತೆಮ ತೆಮಣಕ್ಕ ತೆಮತೆಣಣ...

"ನೀನು ಯಾರಪ್ಪ"

"ನಾನು ಹೆನ್ರಿಸಾಹೇಬನದೀನಿ!"

"ನಿನ್ನ ರುದಯದೊಳಗ ಯಾರಿದಾರ?"

"ಚಂದುಳ್ಳಿ ಚಲುವೆ ಅದಾಳ"

"ಆಕೆಯ ನಾಮಾಂಕಿತ ಯೇನಪ್ಪಾ?"

"ಚಿನ್ನಸಾನಿ"

"ಆಕೇನಯೇನು ಮಾಡುತೀಯಪ್ಪಾ?"

"ಮದುವೆ ಆಗತೀನಿ"

"ಮದುವೆ ಆಗಿ ಯೇನು ಮಾಡುತೀs?"

"ಹತ್ತು ಮಕ್ಕಳಿಗೆ ತಂದೆ ಆಗುತೀನಿ"

"ಶಬ್ಬಾಷ್...ಹೆನ್ರೀ ಸಾಹೇಬ"

"ಹೆನ್ರಿಸಾಹೇಬನ ಹೆಸರು ಹೇಳಿಕೊಂಡು ಚಪ್ಪಾಳೆ ತಟ್ಟಿರುಪ್ಪಾ" ಯಂದು ತಿಕ್ಕಡ ಹೇಳುತ್ತಲೇ ಕುಂತ ನಿಂತ ಮಂದಿ ಕಿವಿಗಡುಚಿಕ್ಕುವಂತೆ ಚಪ್ಪಾಳೆ ತಟ್ಟುತಾರೆ. ನಮ ಹೆನ್ರಿಸಾಹೇಬಗೆ ಪಿಳ್ಳೆ ತೆಗೆಯೋದಯ್ತೆ.. ಯೀಳ್ಳೆನಾಮಾಚಾರ ಮಾಡೋದಯ್ತೆ.. ಚಿನ್ನಸಾನಿ ಸಂಗಾಟ ಧಾಂ ಧೂಂ ಅಂತ ಲಗ್ಗುನ ಮಾಡುವುದಯ್ತೆ ಕನರಪ್ಪಾ.. ಹೆನ್ರಿಅಂದರ ಮಾಮೂಲು ಮನುಶ್ಯಾ ಅಲ್ಲರಪ್ಪಾ. ಕುಂಪಣಿ ಸರಕಾರದ ಅಧಿಕಾರಿ ಅದಾನರಪ್ಪಾ. ಮದುವೆಗೆ ನೀವು ಬಂದು ಆಯಿರು ಮಾಡಬೇಕರಪ್ಪಾ. ಹುಗ್ಗಿ ಬೆಲ್ಲದಾಲು ವುಂಡುಕಂಡು ಹೋಗಬೇಕರಪ್ಪಾ. ಬಕ್ಕಣದಾಗ ಕಯ್ಯಿಟ್ಟು ರೊಕ್ಕಾನ ಕಿತ್ತು ಕೊಟ್ಟವರ ಮನೆವಳಗ ಬಂಗಾರದ ಹೊಗೆ ಆಡತಯ್ತೆ. ಮದುವೆ ಆಗಿರದವರಿಗೆ ಮದುವೆ ಆಗತಯ್ತೆ? ಮಕ್ಕಳಿಲ್ಲ

ದವರ ಮನೆಯಲ್ಲಿ ತೊಟ್ಟಿಲು ತೂಗುತಾವೆ, ತೊಡೆಮ್ಯಾಲ ಕಂದಮ್ಮಗಳು ರೊಳ್ಳೆ ತೆಗೆತಾವ.. ದಾನಮಾಡಿರಪ್ಪಾ ದಾನಮಾಡಿರಿ.. ಯಿದು ಹಣಮಂದೇವರ ಮಹೀಮಾ ಆಯ್ತೆ.... ಯಂದು ಹೇಳುತ ತಿಕ್ಕಡ ನೆಲದ ಮ್ಯಾಲ ಹರವಿದ ವಲ್ಲಿಮ್ಯಾಲ ರೂಪಾಯಿಗಳು ಝುಂಝುಣಣ ನಾದಮಾಡುತ ಬೀಳುತಾವ. ಅಂಜಿಣಿಗೆ ಸಣುಮಾಡಿ ಹೋಗುತಾರ ಹಣಮಂದೇವರ ಭಕುತಾದಿ ಮಂದಿ...

ರಾಂಪುರದಿಂದ ಹಿರಾಳು, ಹಿರಾಳಿನಿಂದ ಹಲಕುಂದಿ, ಹಲಕುಂದಿಯಿಂದ ಬಲಕುಂದಿ, ಬಲಕುಂದಿ ಯಿಂದ... ಮೊದಲಿಗೆ ಹತ್ತುಮಂದಿ.. ಬರುಬರುತ್ತ ನೂರು ಮಂದಿ ಸಾವುರ ಮಂದಿ ಸೇರಲಕ ಹತ್ತಿದರು. ಫಲಾನ ನಮ್ಮದು ಮೂರು ಯಿಂಥಾದ್ದಯ್ತೆ ಬರಬೇಕಪ್ಪಾ.. ಯಂದು ಮುಂಗಡವಾಗಿ ಕೇಳಲಕ ಹತ್ತಿದರು. ಹಣಮಂದೇವರು ಬರುತಾನಂತ, ಹೆನ್ರಿಸಾಹೇಬ ಬರುತಾನಂತ.. ನೆಲಕ ಸೆಳ್ಳೊಡೆದು ರಂಗವಲ್ಲಿ ಹಾಕಿ, ಬೀದಿ ಬೀದಿಗೆ ತಳಿರು ತೋರಣ ಕಟ್ಟಿ ಸ್ವಾಗತಿಸಲಕ ಹತ್ತಿದರು. ಮನ ದಣಿಯೆ ನೋಡಲಕ, ಕಿವಿದಣಿಯೆ ಕೇಳಲಕ ಹತ್ತಿದರು. ಹಣಮಂದೇವರು ವಲದಾನಂದರ ನೀನು ಮಾಮೂಲು ಬುಡು ಬುಡುಕ್ಯೋನಲ್ಲಪ್ಪಾ.. ನೀನು ತ್ರೇತಾಯುಗದ ಮನುಶ್ಯಾ ಅದೀ ಯಂದು ಕೊಂಡಾಡಲಕ ಹತ್ತಿದರು. ತಮ ತಮ್ಮ ಯೋಗ್ಯತಾನುಸಾರ ವಂದು ಕೊಡುವಲ್ಲಿ ಯರಡು, ಯರಡು ಕೊಡುವಲ್ಲಿ ಅಯ್ದು, ಅಯ್ದು ಕೊಡುವಲ್ಲಿ ಹತ್ತು ಹಿಂಗss...

ಕಯ್ಯಿತುಂಬ ರೊಕ್ಕ ಆಡಲಾರಂಭಿಸಿದ ಪರಿಣಾಮವಾಗಿ ತಿಕ್ಕಡ ದಂಪತಿಗಳು ಘನ ಗಂಭೀರತೆಯನ್ನು ರೂಢಿಸಿಕೊಂಡರು. ಹೆನ್ರಿಸಾಹೇಬನನ್ನು ಕದ್ದೊಯ್ಯುವ ಪ್ರಯತ್ನ ಯರಡು ಮೂರು ಬಾರಿ ನಡೆದ ಕಾರಣಕ್ಕೆ ನಾಕಾರು ಠೊಣಪ ಮಂದಿಯನ್ನು ತಮಗೆ ಕಾಪಲಿಟ್ಟುಕೊಂಡರು. ಪಯಣಾನುಕೂಲದ ಸಲುವಾಗಿ ಸವಾರಿ ಬಂಡಿಯನ್ನೂ ಖರೀದಿಸಿದರು. ಕುಂಪಣಿ ಸರಕಾರ ಯಂದರೆ ವುರಿದು ಬೀಳುವವ ರಿದ್ದರಲ್ಲ. ಅಂಥ ಸಂಸ್ಥಾನಿಕರು, ಜಾಗೀರುದಾರರು ತಿಕ್ಕಡನನ್ನು ಗವುರವ ಪೂರುವಕವಾಗಿ ತಮ ತಮ್ಮ ಆಸ್ಥಾನಗಳಿಗೆ ಆಮಂತ್ರಿಸದೆ ಯಿರಲಿಲ್ಲ. ಮಾತಾಡುವ ಮಂಗಣ್ಣನನ್ನು ನೋಡಿ ಯಿಸುಮಯ ಗೊಳ್ಳದೆಯಿರಲಿಲ್ಲ. "ನಮ ಹೆನ್ರಿಮಂಗ್ಯಾಗಿಬಿಟ್ಟವನಲ್ಲಪೋ" ಯಂದು ಕೀಟಲೆ ಮಾಡಿ ತಿಕ್ಕಡನ ಮಯ್ಯೆಗೆ ಸೆಲ್ಲೇ ಮೊದಿಸಿ, ಕಯ್ಯಿ ತುಂಬ ರೊಕ್ಕ ಕೊಟ್ಟು ಸನುಮಾನಿಸದೆ ಯಿರಲಿಲ್ಲ. ಹೊಳಗುಂದಿಯ ರಾಜಾಪಂಪನಗವುಡನಂತೂ "ತಿಕ್ಕಡss.. ನಿನ ಹೆನ್ರೀನ ಕೂಡ್ಲಿಗಿಗೆ ಕರಕೊಂಡು

ಹೋಗಿ ನಿಜವಾದ ಹೆನ್ರಿಗೆ ತೋರಿಸಪ್ಪಾ.. ಅವನು ನಿನಗೆ ಯೇನಿಲ್ಲಾಂದರೂ ನೂರೆಕರೆ ಜಮೀನನ್ನು ವುಂಬಳಿಯಾಗಿ ಬಿಟ್ಟು ಕೊಡುತ್ತಾನೆ” ಯಂದು ಪುಸಲಾಯಿಸಿದ ಪರಿಣಾಮವಾಗಿ..

ತಿಕ್ಕಡನ ಸವಾರಿ ಬಂಡಿಯು ಸೇರೋದಕ್ಕೂ ಮೊದಲೆ ಕೂಡ್ಲಿಗಿ ಪಟ್ಟಣದ ಸರುವನ್ನೊಂದು ಮಂದಿಯು ಮರಕಟ ಸಂಬಂಧೀ ಸುದ್ದಿಯನ್ನು ತೊಂಬಲೋಪಾದಿಯಲ್ಲಿ ತಮ ತಮ್ಮ ಬಾಯೊಳಗೆ ಯಿಟ್ಟುಕೊಂಡು ತಿರುಗಾಡುತಲಿದ್ದರು. ಸದರಿ ಪಟ್ಟಣದ ಮನರಂಜನಾ ಕಾರ್ಯಕ್ರಮಗಳ ಗುತ್ತಿಗೆ ಹಿಡಿದು ವುಸ್ತುವಾರಿ ನೋಡಿಕೊಳ್ಳುತಲಿದ್ದ ವಪ್ಪತ್ತಪ್ಪನು ಕುದುರೆ ಮ್ಯಾಲ ಪುವ್ವಿನ ಪೊಸವಡಂಗಿಲೆಗೆ ಹೋಗಿ ತಿಕ್ಕಡನನ್ನು ಕಂಡು ವಂದು ಪ್ರದರ್ಸನಕ್ಕಿಷ್ಟಂತೆ ಮಾತಾಡಿ ವಟ್ಟು ಹತ್ತು ಪ್ರದರ್ಸನಗಳೆಂದು ಗೊತ್ತು ಮಾಡಿ ಮುಂಗಡವಾಗಿ ಅಯಿವತ್ತು ಬೆಳ್ಳಿ ರೂಪಾಯಿಗಳನ್ನು ಕೊಟ್ಟು ಬಂದಿದ್ದನು. ಮಾತಾಡುವ ಮಂಗನನ್ನು ನೋಡಲು ಮರೆಯಬೇಡಿ.. ಅದು ಆಡುವ ಮಾತುಗಳನ್ನು ಕೇಳಲು ಮರೆಯಬೇಡಿ, ಮರೆತು ನಿರಾಶರಾಗಬೇಡಿ ಯಂದು ಮುಂತಾಗಿ ಟಾಮು ಟಾಮು ಹಾಕಿಸಿದ್ದಲ್ಲದೆ, ಪಟ್ಟಣದಾದ್ಯಂತ ಗೋಡೆಗಳ, ಅದರಲ್ಲೂ ಮುಖ್ಯವಾಗಿ ಕುಂಪಣಿ ಸರಕಾರದ ಕಛೇರಿ ಸಮೀಪದ ಯಲ್ಲಾ ಗೋಡೆಗಳ ಮ್ಯಾಲ ಮಾತಾಡುವ ಮಂಗಣ್ಣನ ಚಿತ್ರಗಳನ್ನು ತ್ರೀವರ್ಣಗಳಲ್ಲಿ ಬರೆಯಿಸಿ ಪ್ರಚಾರ ಮಾಡದೆ ಯಿರಲಿಲ್ಲ. ವುದ್ಘಾಟನಾ ಪ್ರದರ್ಯನಕ್ಕೆ ಯಂಕೋಬಸಾಸ್ತ್ರಿಗಳನ್ನು ಮುಖ್ಯ ಅತಿಥಿಯಾಗಿ ಆಮಂತ್ರಿಸದೆಯಿರಲಿಲ್ಲ...

ಪ್ರದರ್ಸನದಂದು ನೂಕು ನಗ್ಗಲು ಹೇಳತೀರದು. ವಂದು ರೂಪಾಯಿಯಲ್ಲ.. ಯರಡು ರೂಪಾಯಿ ತಕ್ಕೊಂಡು ವಳಗೆ ಬಿಡಿರಿ ಯಂದು ಕೂಗುತಲಿದ್ದ ಕಲಾಪ್ರೇಮಿಗಳನ್ನು ಸಮಾಧಾನಪಡಿಸಲು ವಪ್ಪತ್ತಯ್ಯನೂ, ಅವನ ಬಂಟರೂ ಮಿಕ್ಕು ಪ್ರಯತ್ನ ಮಾಡಿದರು. ನಿಗದಿತ ಸಮಯಕ ಸರಿಯಾಗಿ ಯಂಕೋಬ ಸಾಸ್ತ್ರಿಗಳು ಸಕುಟುಂಬ ಪರಿವಾರ ಸಮೇತ ಆಗಮಿಸಿದರು. ಕಿವಿಗಡಚಿಕ್ಕುವ ಕರತಾಡನದ ನಡುವೆ ರಂಗ ಪ್ರವೇಶ ಮಾಡಿದ ತಿಕ್ಕಡನು..

ಅವುಪಚಾರಿಕ ಕಾರ್ಯಕ್ರಮಗಳು ಮುಗಿದೊಡನೆ ತನ್ನ ಅಂಜಿಣಿ ವುರುಫ್ ಹೆನ್ರಿಯಿಂದ ಯಿಯಿಥ ಬಗೆಯ ಮಾತುಗಳನ್ನಾಡಿಸಿದನು. ಪ್ರಿಯತಮೆಗೆ ಅಣಕು ಪತ್ರಬರೆಯಿಸಿದನು. ಮೋದಿಸಿದನೂ ಸಹ. ಅದನ್ನು ನೋಡಿ ಸಾಸ್ತ್ರಿಗಳು ದಿಙ್ಮೂಢರಾದರು, ಭಾವಪರವಶರಾಗಿ ಕಣ್ಣಲ್ಲಿ ನೀರು ತಂದುಕೊಂಡರು.

“ಸ್ರೀರಾಮಚಂದ್ರಾಸ್ರೀರಾಮಚಂದ್ರಾ” ಯಂದು ವಾನರಸ್ರೇಷ«ನಿಗೆ ಪ್ರಣಾಮ ಸಲ್ಲಿಸಿದರೂ ಕೂಡ.

ಪ್ರದರ್ಸನದ ಮ್ಯಾಲ ಪ್ರದರ್ಸನ ನಡದೂ, ನಡದೂ ರೊಕ್ಕದ ಮಳೆಯೊಳಗೆ ಮಿಂದೂ, ಮಿಂದೂ ವಪ್ಪತ್ತಯ್ಯ ಯಿಪ್ಪತ್ತಯ್ಯ ಆಗಿಬಿಟ್ಟನು. ಯಿನ್ನೂ ಅತ್ತತ್ತ ಕಲಾಯಿದರೊಳಗೆ ಮಕುಟಪ್ರಾಯದಂತಿದ್ದ ವುಪ್ಪರಿಗೆ ಮನೆಯೊಳಗೆ...

ಯಿನ್ನು ಮಂದೆ ಹೆನ್ರಿಸಾಹೇಬನು ಚಿನ್ನಾಸಾನಿಯ ಗೊಡವೆಗೆ ವಾಪಸು ಬರಲಕ ಸಾಧ್ಯಯಿಲ್ಲ ಯಂದೂ.. ಪ್ರೇಮ ಕಾಮಸಂಬಂಧೀ ಭಾವನೆಗಳು ಆತನೊಳಗೆ ಪುಟ್ಟಂ ಪೂರ್ತಿ ಮಾಯವಾಗಿರುವವೆಂದೂ ಸಾಸ್ತ್ರಿಗಳು ಹಿಂದೆಯೇ ಕಳುವಿದ್ದ ಮಾಹಿತಿಯನ್ನು ಮೆಲುಕು ಹಾಕುತ್ತ ಜಾವ ಜಾವಕ ನೆಮ್ಮದಿಯ ವುಸುರುಬಿಡುತ ಮಿಯಾ ಮಲ್ಹಾರ ರಾಗವನ್ನು ತಾಯಕ್ಕ ಮಂದ್ರಸ್ಥಾಯಿಯಲ್ಲಿ ಆಲಾಪಿಸುತ್ತಿರುವಾಗ್ಗೆ....

ಯಿನ್ನೊಂದು ಖೋಲಿಯೊಳಗ ಯಿದ್ದ ಚಿನ್ನಾಸಾನಿಯ ಬೊಗಸೆ ಗಣ್ಣಿಗಳಲ್ಲಿ ಯಿರಹದುರಿ ಯೊಳಗಿಂದ ಮರಕಟವು ಪೂರ್ಣ ಚಂದಿರನೋಪಾದಿಯಲ್ಲಿ ಅರಳಿರುವಾಗ್ಗೆ....

* * * *

ನಮ್ಮ ಜಾನಪದ ಗಾಯಕ ವರೇಣ್ಯರು ಸಾಂಬವಿಯ ಮ್ಯಾಲ ಯೇಟೊಂದು ಭಕುತಿ ಯಿಟುಗೊಂಡಾರಂದರ ಆಟೊಂದು ಭಕುತಿ ಯಿಟುಕೊಂಡಾರೆ ಸಿವನೆ, ದುರುಗೋಜಿ ತನ್ನ ನಾದಲಯ ಯಿನ್ಯಾಸದೊಳಗೆ ಮನುಷ್ಯನ ಮಂಗ್ಯಾನ ಮಾಡಿರುವನಲ್ಲದೆ ಮಂಗ್ಯಾನ ಮನುಷ್ಯಾನ ಮಾಡವನೆ, ಮರೆ ಗಿಡಗಳ ಕಯ್ಲಿ ಮಾತಾಡಿಸ್ಯಾನೆ.. ನಕುಲಯ್ಯ, ಸಹದೇವಯ್ಯರಂಥ ನೀಲಗಾರರು ತಮ ತಮ್ಮ ಹಾಡುಗಳೊಳಗ ಸಾಂಬವಿಯ ಕೋಪವನು ಮೂಡಲಕಂದರ ಅನಂತಪುರ ದಾಟಿ ಕಡಪಾ ತನಕ, ಪಡುವಲ ದಾಟಿ ದಾವಣಗೆರೆಯಿಂದ ವುಕ್ಕಡಗಾತ್ರೀಲಿ ನೆಲಗೊಂಡಿರುವ ಮಾ ಸರಣ ಕರುಬಸಜ್ಜಗೂ ದಯವದ ಕವುಡು ಬಿಡಸ್ಯಾರ.. ಚಿತ್ತಲವ್ವ, ಸವಾರವ್ವರೇ ಮೊದಲಾದ ಚವುಡಿಕೆಯವರು ತಮ ತಮ್ಮ ಹಾಡುಗಳೊಳಗೆ ಸಾಂಬವಿಯ ತಿಕ್ಕಡಿಯನು ಬಡಗಣಕ ಯಿರೋ ಕಲ್ಯಾಣದ ಬಸವಣ್ಣಗೂ ಬಿಡಸ್ಯಾರ.. ಹೀಂಗ ವಬ್ಬೊಬ್ಬರು ವಂದೊಂದು ರೀತಿ ವಳಗೆ.. ಸಿವ ಸಿವಾ ಹೇಳೂತ ಹ್ವಾದಲ್ಲಿ ನಲವತ್ತೊಂದು ಹಗಲುಗಳು ಸಾಲದು ಬಿದಾವು.. ನಲವತ್ತು ರಾತಿರಿಗಳೂ

ಸಾಲದು ಬಿದ್ದಾವು....

ಆ ಯಲ್ಲಾ ಮವುಖಿಕ ಕಾವ್ಯಗಳ ರಸಾಯನವ ತಯಾರಿಸಿ ವಾಚಕ ಮಹಾಶಯರಿಗೆ ವುಣ ಬಡಿಸುವುದಾದರೆ ಆ ಯೇಳೆಂಟು ದಿವಸಗಳ ಪರ್ಯಂತ ಮಂದಿಯೊಂದೇ ಯಾಕೆ ಸಚರಾಚರ ಗೊಂಬಿ ಹಂಗಾಗಿ ಬಿಟ್ಟಿತ್ತಂತೆ.. ಪ್ರಕ್ರುತಿಯ ನಿಗಧಿತ ಯೇಳಾಪಟ್ಟಿ ಹಿಂದಕು ಮುಂದಕಾಗಿ ಬಿಟ್ಟತ್ತಂತೆ.. ವಂದು ಹರಾ ಯಿರಲಿಲ್ಲವಂತೆ, ವಂದು ಸಿವಾ ಯಿರಲಿಲ್ಲವಂತೆ.. ಕೊಂಗರ ಸೀಮೆ ಪರಗಣದಲ್ಲಿನ ತ್ರೀಷಷಿ«« ಪುರಾತನರೂ ಕುದುರೆಡವಿದ್ದ ದಿಕ್ಕಿನ ಕಡೇಕ ತಮ ತಮ್ಮ ಕಯ್ಯಿಗಳನೆತ್ತಿ ಸಾಂಬವೀವುಘೇ ವುಘೇ ಅಂದರಂತೆ... ಅನಂತಪುರ ಸನೀಕದ ಹಂದರಾದ ಮಗ್ಗುಲು ಡೇರೆ ಹಾಕಿದ್ದ ಥಾಮಸು ಮನ್ರೋ ಸಾಹೇಬ ಮತ್ತವನ ಮೂಳಿಗ ಮಾನ್ಯರೂ ಸಿಲಾ ಯಿಗ್ರಹಗಳಂತಾಗಿ ಬಿಟ್ಟಿದ್ದರಂತೆ.. ಮನ್ರೋನ ಆಪ್ತಕಾರ್ಯದರ್ಸಿಗಳಾದ ಚಿಲಕಲೂರಿ ವೆಂಪಾಟಿಗಳೂ ಕವುಡು ಬಗೆ ಹರಿದ ಮ್ಯಾಲ ಯೀಸೇಷ ಸ್ನಾನ ಸಂಧ್ಯಾವಂದನೆ ಮಾಡಿ ನವಗ್ರಹಗಳನು ಸ್ತುತಿಸಿದರಂತೆ.... ಹೀಂಗ ವಬ್ಬೊಬ್ಬರದು ವಂದೊಂದು ಕಥಿವುಂಟು...

ಲಾಲ್ಯಾ ನಾಯಕನ ಲಾವಣಿಗಳಲ್ಲಿ...

ಅತ್ತ ಯಲ್ಲಾಪ್ರಕೊರಚರಟ್ಟಿಯೊಳಗೆ ಆಕಾಸ ರಾಮಣ್ಣನು ತಮ್ಮ ವಮುಸ ಪಾರಂಪರ್ಯದಿಂದ ಬಂದಿರುವ ಚೋರಕಸುಬನ್ನು ಬಿಡಬೇಕೇ? ಬ್ಯಾಡವೇ? ಯಂಬ ಸಂದಿಗ್ದಕ್ಕೆ ಸಿಲುಕಿದ್ದನಷ್ಟೆ, ಯಿದನ್ನು ಆತನ ಸಂಗಡಿಗರು ಯಿರೋಧಿಸಿದ್ದರಷ್ಟೆ. ತಿರುಕಪ್ಪಗವುಡನೇ ತಮ್ಮನ್ನು ಕುಂಪಣಿ ಸರಕಾರಕ್ಕೆ ಹಿಡಿದು ಕೊಡಲು ಸಂಚು ಹೂಡಿದನೆಂದ ಮ್ಯಾಲ ಯಾರನ್ನು ನಂಬುವುದು? ತಮ್ಮ ಕುಲದೇವತೆಯಾದ ಪೋಲಾರಮ್ಮ ಮಾತಾಯಿ ಪಾರೊತಿಯು ದ್ವಾರ ಕಾಪಾಡಿದಳು ಸರೆ.. ಯಿಲ್ಲದಿದ್ದಲ್ಲಿ ತಾವು ಕುಂಪಣಿ ಸರಕಾರದ ತುರಂಗಗಳಲ್ಲೋ ಅಥವಾ ಮರಣದಂಡನೆಗೊಳಗಾಗಿ ಸತ್ತು ನರಕದಲ್ಲೋ ಯಿರುತ್ತಿದ್ದೆ ವಲ್ಲಾ... ಅದಲ್ಲದೆ ಚೋರ ಕೆಲಸವು ವಂದು ಕಸುಬೇನು? ಯಿದಕ ಯಾರಾದರು ಗವುರವ ಕೊಡುತಾರೇನು? ಚೋರ ಕೆಲಸ ಅಂದರ ಸಾಮಾನ್ಯವಾ? ತಾವ್ಯಾರಾದರು ಹೊಟ್ಟೆ ತುಂಬ ವುಂಡಿರುವುದುಂಟಾ, ರೆಪ್ಪೆಗೆ ರೆಪ್ಪೆ ಅಂಟಿಸಿ ಕಣ್ಣು ತುಂಬ ನಿದ್ದೆ ಮಾಡಿರುವುದುಂಟಾ? ಹೆಂಡರು ಮಕ್ಕಳು ಕೂಡೆ ಸರಿಯಾಗಿ ಬಾಳುವೆ ಮಾಡಿರುವುದುಂಟಾ? ಬ್ಯಾಡಿರಪ್ಪೋ ಬ್ಯಾಡಿರಿ ಕಣರಪ್ಪಾ.. ಕಳುವು ಮಾಡುವುದು ವಂದೇ, ಕತ್ತಿ ಮ್ಯಾಲ ಸಾಮು ತೆಗೆಯುವುದೂ ವಂದೇ.. ತಮ್ಮನ್ನು

ಹುಟ್ಟಿಸಿದವರ ನೆಪ್ಪುಂಟೇನು ಯಾರಿಗಾದರು? ತಮ್ಮನ್ನು ಬೆಳೆಸಿದವರ ಗುರುತುಂಟೇನು ಯಾರಿಗಾದರು? ಯಲ್ಲೋ ಹುಟ್ಟೋದು ಯಾಕೆ? ಹೆಂಗೋ ಬೆಳೆಯೋದಾದರೂ ಯಾಕೆ? ಮುಂದೆ ಹುಟ್ಟೋ ಮಕ್ಕಳು ಕಣ್ಣೀರಲ್ಲಿ ಕಯ್ನ ತೊಳೆಯೋದು ಬ್ಯಾಡ. ಚೋರ ಕೆಲಸಕ್ಕೆ ಕಯ್ನ ಮುಗುದು ಬಿಡೋಣ.. ಹುಟ್ಟಿಸಿದ ದೇವರು ಹುಲ್ಲು ಮೇಸೋದಿಲ್ಲ.. ಅದಲ್ಲದ ಕಲೆಟ್ಟರು ಸಾಹೇಬ ಯಂಥೆಂಥಾ ಕೊಲೆಗಡುಕರನ್ನೇ ಕ್ಷಮಾ ಮಾಡ್ಯಾನಂತೆ.. ಅವರಿಗೆ ಹೊಲಾ, ಮನೀ ಕೊಟ್ಟು ಕಮ್ಮಗೆ ದುಡಿದುಂಬಲಕ ಹಚ್ಚ್ಯಾನಂತೆ.. ತಾವ್ಯಾರ ಜೀವಕ್ಕ ಹಾನಿ ಮಾಡಿದೋರಲ್ಲ.. ಸರಣು ಹೋದಲ್ಲಿ ಆತ ಕ್ಷಮಾ ಮಾಡದೆ ಯಿರೋದಿಲ್ಲ.. ಹೊಲಾ ಮನಿ ಕೊಟ್ಟು ದುಡಿದುಂಬುರಪ್ಪಾ ಯಂದು ಆಸೀರುವಾದ ಮಾಡದೆ ಯಿರೋದಿಲ್ಲ.. ಆಕಾಸ ರಾಮಣ್ಣ ಗಿಣಿಗೆ ಹೇಳಿಧಾಂಗ ಗಲಗಲಾಂತ ಹೇಳಿದನು.. ಅದಕಿದ್ದು ಹಟ್ಟಿಯ ಭೋಪಾಲು ಮಂದಿ ಯ್ಯೋನಣ್ಣಾ.. ನಿನ ಬಾಯಾಗ ಯಿಂಥಾ ಮಾತು ಬರೋದ್ಯೋನು? ಯಾವ ಹಳ್ಳಿಯ ಹೆಸರು ಕೇಳಿದೊಡನೆ ಸಮಸ್ತ ಕುಂತಳ ಸೀಮೆ ಗಡಗಡ ನಡುಗುವುದೋ ಅಂಥ ನಮ ಹಳ್ಳಿಯ ಮುಖಂಡನಾಗಿರೋ ನೀನೇ ಯಿಂಥ ಮಾತಾಡುವುದೇನು? ಯಿಂಥ ಮಾತು ವುದುರುವುದಾ? ನೀನೇ ಕಳುವು ಮಾಡೋದು ಬ್ಯಾಡ... ಕಲೆಟ್ಟರಿಗೆ ಸರಣಾಗಿ ಬದುಕೋಣ ಅಮುತಿದೀಯಲ್ಲಾ.. ಮುಖಂಡನಾದ ನಿಂಗೆ ವಪ್ಪುವ ಮಾತೇನು? ಕುಂಪಣಿ ಸರಕಾರದೋರು ನಮ್ಮನ್ನೆಲ್ಲ ಕ್ಷಮಾ ಮಾಡುತಾರಂತ ಯೇನು ಖಾತರಿ? ನಾವು ತುರಂಗದ ಪಾಲಾದರ ನಮ್ಮ ಹೆಂಡರು ಮಕ್ಕಳ ಗತಿಯೇನು? ಪೋಲಾರಮ್ಮ ನಮ್ಮನ್ನ ಸುಮಕಾ ಬಿಡುತಾಳೇನು? ಯಂದು ಸಂಭುಗ, ಸರಭ ಹೇಳಿದರು. ಕಳುವು ಕಲೆಗೆ ಸಂಬಂಧಿಸಿದ ಭಾವನೆಗಳು ಸಾಂಬವಿಯ ಸರೀರದೊಳಗೆ ಸಜ್ಜನಿಕೆ ಸಂಬಂಧೀ ಭಾವನೆಗಳಿಂದ ಸಾಕಷ್ಟು ಹಲ್ಲೆಗೊಳಗಾಗಿದ್ದವಂತೆ. ಬಲು ನಿಕ್ರುಷ್ಟ ಸ್ಥಿತಿಯನ್ನು ಕಂಡುಂಡಿದ್ದವಂತೆ. ತಾಮೂಅರವತ್ನಾಲ್ಕು ಕಲೆಗಳಿಗೆ ಸಂಬಂಧ ಪಟ್ಟವು ಯಂದವು ವಾದ ಮಾಡಿದ್ದು ಪ್ರಯೋಜನಕ್ಕ ಬಂದಿರಲಿಲ್ಲವಂತೆ.. ಹಿಂಗಾಗಿ ಅವು ಕುಂಟುತ್ತ, ತೆವಳುತ್ತ ದೂರದ ಯಲ್ಲಾಪ್ರಕೊರಚರಟ್ಟಿ ತಲುಪುವಷ್ಟರೊಳಗೆ ವಂದಿವಸ ತಡಾ ಆಗಿತ್ತಂತೆ.. ಪ್ರಾಮಾಣಿಕವಾಗಿ ತಲುಪಿದ್ದೇ ದೊಡ್ಡ ಮಾತಂತೆ. ಅವೆಲ್ಲ ತಾವು ಯಲ್ಲೆಲ್ಲಿದ್ದವೋ ಅಲ್ಲೆಲ್ಲ ಕಡೇಕ ಜಾಗರೂಕವಾಗಿ ಸೇರಿಕೊಂಡು ಬಿಟ್ಟವಂತೆ. ಅದರ ಅವುಗಳೊಳಗೆ ತಲೆ ಮರೆಸಿಕೊಂಡು ಸುಡುಗಾಡಪ್ಪಾವಧೂತನಿಗೆ

ಸಂಬಂಧಿಸಿದಂಥ ಭಾವನೆಗಳೂ ಬಂದು ಬಿಟ್ಟಿದ್ದವಷ್ಟೆ.. ಅವು ಯೇನು ಮಾಡಿದಪ್ಪಾ ಅಂದರ ಖಾಲಿವುಳುಕೊಂಡಿದ್ದ ಆಕಾಸರಾಮಣ್ಣನ ಸರೀರದೊಳಗೆ ಹೊಕ್ಕೊಂಡು ಬಿಟ್ಟವಂತೆ.. ಮತ್ತೆ ಆಕಾಶರಾಮಣ್ಣಗ ಸಂಬಂಧಿಸಿದ ಕಳುವಿನ ಭಾವನೆಗಳು ಯಲ್ಲಿಗೆ ಹೋದವಪ್ಪಾ, ಯಾರ ಸರೀರದೊಳಗೆ ಆಸ್ರಯ ಪಡಕೊಂಡು ಬಿಟ್ಟವಪ್ಪಾ ಅಂದರ... ಅದೆಲ್ಲ ಮುಂದಿನ ಕಥಿ... ಯೀಗ್ಯಾಕ? ಯಲ್ಲಾ ಪ್ರಕೊರಚರಟ್ಟಿ ಹತ್ತನೇ ದಿವಸಕ್ಕ ಯಾಕ, ಬರೋಬ್ಬರಿ ಹನ್ನೊಂದನೇ ದಿವಸಕ ಪುಟ್ಟಂಪೂರ್ತಿ ಸೊಸ್ಥಿತಿಗೆ ಮರಳಿತು.. ಅರ್ದಂಬರ್ದಕ್ಕ ಮಾತು ನಿಲ್ಲಿಸಿದ್ದರಲ್ಲ ಸಂಭುಗ, ಸರಭರೇ ಮೊದಲಾದವರು....

"ನೋಡಿದ್ಯಾ ಯಜಮಾನ.. ನಮ ದ್ಯಾವರು ಪೋಲಾರಮ್ಮ ಕೆರಳಿ ಮಾಡಿದ ಅನಾವುತಾನ.. ಅದಕ ನಾವು ಹೇಳುವುದಪ್ಪಾ ನಮ ಕಸುಬನ್ನ ಯಟ್ಟಿ ಪರಿಸ್ತಿತಿಯಲ್ಲೂ ಬಿಡೋದು ಥರವಲ್ಲ.. ಪೋರಾಮ್ಮನೇ ಬೆಂಗಾವಲಿರುವಾಗ ತಿರುಕಪ್ಪಗವುಡನೊಂದೇ ಅಲ್ಲ, ಕಲೆಟ್ಟರು ಸಾಹೇಬನೂ ನಮಗ ಯೇನೂ ಮಾಡಲಕ ಆಗುವುದಿಲ್ಲ.. ಯಟ್ಟಿ ಪರಿಸ್ತಿತಿಯಲ್ಲೂ ನಮ್ಮಮ್ಮ ನಮ್ಮನ್ನ ಕಾಪಾಡುತಾಳ. ಮುಖಾ ಮಾರೀನ ಗಡಕ್ಕಂಡು ವುಂಡು ಗಿಂಡು ಸಜ್ಜಾಗು. ನಾವು ಕಳುವಿಗ ಹೋಗದ ಬಾಳೋಸು ದಿವಸಾಗೇವ.. ನಮ್ಮೆಲ್ಲರ ಕಯ್ಯಿ ಸುಟು ಸುಟು ಅನಲಕ ಹತ್ಯಾವ.. ಕುದುರೆಡವು ಸೀಮೆಯಿಂದ ವಂದು ವರ್ತಮಾನ ಬಂದಯ್ತೆ.. ಅಲ್ಲಿ ತಿರುಪಾಲಯ್ಯನೆಂಬ ಕೋಮಟಿಗನ ಮನೆವಳಗೆ.." ಯಂದು ಹೇಳುವಷ್ಟರಲ್ಲಿ ಆಕಾಶ ರಾಮಣ್ಣನು ತನ ಕಯ್ಯೊಂದು ತಂಬೂರಿಯನ್ನು ಹಿಡಕೊಂಡು ಬಿಟ್ಟಿದ್ದನು. ಟೆವ್ವ ಟೆವ್ವ ಅಂತ ಮೀಟಲಕ, ಗಂಟಲನ ಸ್ರುತಿ ಸರಿಪಡಿಸಿಕೊಳ್ಳಲಕ ಹತ್ತಿದ್ದನು.. ಯಿದ್ದಕ್ಕಿದ್ದಮೊಲು ಆತನು.. "ಕಳುವು ಗಿಳವು ಮಾಡಬ್ಯಾಡಿರಣ್ಣಾ... ಮಾಡಿದರ್‍ಯಾಕ ಮಾಡುವಲ್ಲಿರಿ ಹರಿಯ ನಾಮವ ಕಳುವು ಮಾಡಿರಣ್ಣಾ" ಯಂದು ಸುಸ್ರಾವ್ಯವಾಗಿ ಹಾಡಲಕ ತೊಡಗಿಬಿಡಲು....

ಅದನು ಕೇಳುತಲೆ ಯಲ್ಲಾರು ಅಡಲಾಗಿ ಹೋಗಿಬಿಟ್ಟರು. ತಾನಿನ್ನು ಮುಂದಕ ಆಕಾಸ ರಾಮಣ್ಣಾವ ಧೂತನೆಂದೂ.. ಚಂಚಲಮೂ, ಅಸ್ಥಿರಮೂಆದ ರೊಕ್ಕ, ವಡವೆ ವಸ್ತರಕ್ಕೆ ಬದಲಾಗಿ ಸುಸ್ಥಿರಮೂ, ಮೋಕ್ಷ ಪ್ರದಾಯಕಮೂಆದ ಭಕುತಿಯುನ್ನೇ ಕಳುವು ಮಾಡಿ ಯುದೆಯು ತಿಜೋರಿಯುನ್ನು ತುಂಬಿಕೊಳ್ಳಬೇಕಂದೂ ಹೇಳಿಬಿಡಲು....

ಹುಂಚಿ, ಜಾಲಿಮರಗಳು ತಳುಕು ಹಾಕ್ಕೊಂಡಿದ್ದ ಜೋಡು ಬೊಡ್ಡೆಯ

ಪೊಟರೆಯೊಳಗೆ ಅನಾದಿಕಾಲದಿಂದ ವಡ ಮೂಡಿದ್ದ ಪೋಲಾರಮ್ಮ ದೇವತೆ ಯದುರು ಮಂಡೆಯೂರಿ ತಮ ಮುಖಂಡನಾದ ಆಕಾಶರಾಮಣ್ಣನ್ನ ಛಮುಸೂ.. ಆತನ್ನ ಮೊದಲಿನಂಗ ಮಾಡುತಾಯೇ ಯಂದು ಕೇಳಿಕೊಂಡರು. ವಂದು ಗಳಿಗಾತು, ಯರಡು ಗಳಿಗಾತು, ಬರೋಬ್ಬರಿ ಮೂರನೇ ಗಳಿಗೆ ಕಳೆಯುವಷ್ಟ ರಲ್ಲಿ ಆಕೆಯು ತನ್ನ ಪ್ರಧಾನ ಅರ್ಛಕನಾದ ಕನ್ನಯ್ಯನ ಮಯ್ಯೊಳಗ ಕಾಣಿಸಿಕೊಂಡಳು. ಕಾಣಿಸಿಕೊಂಡಾಕೆ.. ಕಳುವು ಬಿಟ್ಟವರನ್ನು ರವುರವ ನರಕಕ್ಕೆ ಕಳುವುತ್ತೇನೆ. "ಯಲಮೋ ರಾಮಣ್ಣ ನೀನು ಕಳುವಿಗೆ ಹೊಂಡದಿದ್ದಲ್ಲಿ ಯೇನು ಮಾಡುತ್ತೀನೆಂದರೆ" ಮಸ್ತು ಹೇಳಿದಳಾದರೂ ಆತನು "ಯಿಲ್ಲಾ ತಾಯಿ, ಯಿಲ್ಲ.." ಯಂದು ಬಿಡುವುದೇನು..? ಮತ್ತ ಪೋಲಾರಮ್ಮ ಕನ್ನಯ್ಯನ ಬಾಯಿ ಮೂಲಕ.. "ಯಲಮೋ ಸಂಭುಗ.. ಯಿನು ಮುಂದಕ ನೀನು ಮುಖಂಡನಾಗು" ಯಂದು ಅಪ್ಪಣೆ ನೀಡಿದಳು. ಹಿರಿ ಹಿರಿ ಹಿಗ್ಗಿ ಸಂಭುಗನು ಭಯ ಭಕುತಿಯಿಂದ ಸಣುಮಾಡಿ "ತಾಯಿ.. ನನ್ನನ್ನ ಯೀ ಹಟ್ಟಿಗೆ ರಾಜಾನನ್ನಾಗಿ ಮಾಡಿ ಬಿಟ್ಟಿಯವ್ವಾ.. ಯಿದಕ ಪ್ರತಿಯಾಗಿ ನಾನು ನಿನಗ ಯ್ಯೋನು ಅರುಪಿಸಲವ್ವಾ" ಯಂದು ಕೇಳಿದ್ದಕ್ಕೆ ದೇವತೆಯು, "ಯಲಮೋ ಸಂಭುಗ, ನೀನು ಕೇಳಿದೀ ಅಂದಮ್ಯಾಲ ನಾನು ಯೀ ಪ್ರಕಾರವಾಗಿ ಹೇಳುತೀನಪ್ಪಾ.. ಥಾಮಸು ಮನ್ರೋ ಸಾಹೇಬನ ಕೊಳ್ಳೊಳಗ ವಂದು ಮುತ್ತಿನ ಸರ ಅಯ್ತಪ್ಪಾ. ಅದೊಂದನ ಕಳವು ಮಾಡಿ ತಂದು ನನ ಕೊಳ್ಳೀಗೆ ಹಾಕುತೀ ಯೇನಪ್ಪಾ?" ಯಂದು ಕೇಳಿದೊಡನೆ ಹಟ್ಟಿಗೆ ಹಟ್ಟಿಯೇ ಮಾತಾಡಥಂಗಾಗಿ ಬಿಟ್ಟಿತು ಸಿವಸಂಕರ ಮಾದೇವಾss...

ಅತ್ತ ಅಂದರೆ ಅದೇ ಕುಂತಳ ಸೀಮೆ ವಳಗ ಬಡಗಣ ದಿಕ್ಕಿನ ಗುಂಟ ಪಯಣ ಹೊಂಟಿದ್ದವು ಯಾವಪಾ ಅಂದರೆ ನಿಷ್ಣಾತ ಕಳುವು ಸಂಬಂಧೀ ಭಾವನೆಗಳು, ಆಲೋಚನೆಗಳು ಅಸಂಖ್ಯಾತ ಸಂಖ್ಯೆಯಲ್ಲಿದ್ದವಂತೆ.. ವಪ್ಪಂದದ ಪ್ರಕಾರ ಅವು ಆಕಾಸ ರಾವಂಣ್ಣನ ಸರೀರಕ್ಕೆ ಬದಲಾಗಿ ಸುಡುಗಾಡೆಪ್ಪಾವಧೂತನನ್ನು ಹುಡುಕಿಕೊಂಡು ಹೊಂಟಿದ್ದವು. ಅವು ರಾಮಣ್ಣನ ಸರೀರಕ್ಕೆ ನಿಷೆ« ಯಿಂದೇನೋ ಯಿದ್ದವು. ಆದರಾತನು ಕಳುವು ಮಾಡೋದೇ ಬ್ಯಾಡ ಅಂದು ತಮಗಪಮಾನ ಮಾಡಿ ಬಿಡುವುದೇನು? ಯಿದ್ದಕ್ಕಿದ್ದಂತೆ ತಮ್ಮನ್ನು ನಡೋ ನೀರೊಳಗೆ ಬಿಟ್ಟರೆ ತಾವು ಹೋಗುವುದಾದರು ಯಲ್ಲಿಗೆ? ತಾವು ಯೇನುಂಡು ಬದುಕಲಕಾದೀತು? ಬ್ಯಾಡಂದೋರ ಸರೀರದೊಳಗಿರಲಕ ತಮಗೇನು ಗ್ರಾಚಾರ? ತಮಗೂ ಆತ್ಮಾಭಿಮಾನ ಯಿರುವುದಿಲ್ಲವೇನು? ಆ

ಸಾಂಬವಿಯ ದಯದಿಂದ ಅಂತೂs ಯಿಂತೂ ತಮಗ ಸ್ವಾಸಂತ್ರದೊರಕಿತು ಸರೇಸರೆ. ಆ ತಾಯಿಯ ಸರೀರದೊಳಗ ಅತಿಥ್ಯ ಅನುಭವಿಸುತ್ತಿರು ವಾಗ ಅವಧೂತ ಸಂಬಂಧೀ ಭಾವನೆಗಳು ತಮ್ಮನ್ನು ಪರಿಚಯ ಮಾಡಿಕೊಂಡವು. “ಹೋ ಹೋ ನೀವು ಚೋರಕಲೆಗೆ ಸಂಬಂಧಿಸಿದ ಭಾವನೆಗಳೇನು? ನೋಡಲಕ ಯಷ್ಟೊಂದು ಸಜ್ಜನಿಕೆಯಿಂದ ಯಿದ್ದೀರಲ್ಲ.” ಯಂದು ಆಶ್ಚರ್ಯ ಯಕ್ತಪಡಿಸದೆ ಯಿರಲಿಲ್ಲ.. ನೀವು ಯಾರಪಾ ಯಂದು ತಾವು ಕೇಳಿದಾಗ ಅವು ಫಲಾನ ಯಿಂಥೋವುಯಂದು ಮ್ಲಾನತೆಯಿಂದ ಹೇಳದೆ ಯಿರಲಿಲ್ಲ.. “ಅವಧೂತ ಕುಟುಂಬಕ್ಕೆ ಸೇರಿದವರೆಂದು ಹೇಳ್ತೀರಿ.. ಆದರ ಯಷ್ಟೊಂದು ಗಲೀಜಾಗದೀರಲ್ಲ” ಯಂದು ಕೇಳಿದ್ದಕ್ಕವು “ಯೇನು ಮಾಡೋದರಪ್ಪಾ.. ನಮ ಕರುಮ ಫಲ” ಯಂದು ನಿಟ್ಟುಸಿರಿಟ್ಟು ವಂದು ರಾಮಾಯಣವನ್ನೇ ವಾಚನ ಮಾಡಿ ಬಿಟ್ಟವಂತೆ.. ಸುಖದುಕ್ಕ ಹಂಚಿಕೊಂಡವು, ಪರಸ್ಪೂರ ಮರುಗಿದವು, ತಮ್ಮ ತಮ್ಮ ಮೂಲ ಆಸ್ರಯದಾಣಗಳನ್ನು ಅದಲು ಬದಲು ಮಾಡಿಕೊಂಡು ಸೋಜಿಗ ಮೆರೆಯೋಣ ಯಂದುದಕ್ಕೆ ಅವು “ಅಷ್ಟು ಮಾಡಿ ಪುಣ್ಯ ಕಟ್ಟಿಕೊಳ್ಳಿರಪ್ಪಾ” ಯಂದು ಸಮ್ಮಿತಿಸಿದವಂತೆ.. ಬಿಡುಗಡೆಯ ಕಾಲಕ್ಕೆ ಆಕಾಸ ರಾಮಣ್ಣಯಂಬಾತನ ಖೂನ ಗುರುತಾ ಕೇಳಿ ತಿಳಿದುಕೊಂಡವು. ಯಾಸ ಮರೆ ಮಾಚಿಕೊಂಡೋ, ಯಿತರೇ ಕಳುವು ಸದಸ್ಯ ಭಾವನೆಗಳೊಂದಿಗೆ ಪಯಣ ಹೊಂಟು ಮರೆಯಾಗಿ ಬಿಟ್ಟವಂತೆ ಸಿವನೇ...

ಪಾಪ.. ಅವು ಮೊದಲೇ ಅವಧೂತ ಪರಂಪರೆಯ ಸಾದು ಸೊಭಾವದವು, ಸುಖಕರವಾಗಿ ಗಮ್ಯ ಸೇರಿಕೊಂಡಮೋ ಅಥವಾ ಹಾದಿ ಮದ್ಯದಲ್ಲೇನಾದರೂ?

ಕಳುವು ಭಾವನೆಗಳು ಯಷ್ಟೋ ತಾಸುಗಳ ಪರ್ಯಂತರ ನಡಕೋತ ನಡಕೋತ..

ಅವು ತಾವು ಸೇರಬೇಕಿದ್ದ ಗಮ್ಯ ಯಾವುದಿತ್ತಪ್ಪಾ ಅಂದರ..

ಬಡಗಣ ದಿಕ್ಕಿನ ಶಾನೇ ದೂರದಲ್ಲಿ ವನಪರ್ತಿ, ಕುಂದರ್ತಿ, ವೆಲುದುರ್ತಿ, ಚಿಲಕಮರ್ತಿ ಯಂಬ ನಾಕು ಮೂರುಗಳ ವಂದು ಸಮುಸ್ಥಾನ ಯಿರುವುದು. ಪರಸ್ಪೂರ ಕೂಗಳತೆ, ಕಣ್ಣಳತೆ ದೂರದಲ್ಲಿರುವ ಆ ನಾಕೂ ಮೂರುಗಳಿಗೊಂದೇ ವಂದು ಸುಡುಗಾಡು ಯಿರುವುದು. ಅದರೊಳಗೆ ಸುಡುಗಾಡೆಪ್ಪಾ ವಧೂತನೆಂಬಾತನು ಆರುಮೂಲೆಗಳ ವಂದು ಮನೆ ಥರದ ಮನೆಯನ್ನು

ಕಟ್ಟಿಕೊಂಡು ವಾಸ ಮಾಡುತ್ತಿರುವನು. ಆರುಮೂಲೆಗಳಿಗೂ ಅರಿಷಡ್‌ವರ್ಗಗಳ ನಾಮಕರಣ ಮಾಡಿದ್ದನು. ಅವನ್ನು ತನ್ನ ಮುಷಿ«ಯೊಳಗಿಟ್ಟುಕೊಂಡಿದ್ದನು. ತಾನು ಹೇಳಿಧಾಂಗೆ ಕೇಳುವಂತೆ ಆ ಮೂರುಗಳನ್ನು ಯಾಕ ಯಿಟ್ಟು ಕೊಂಡಿರುವನೆಂದರ ಅದಕss ಯಿಟ್ಟು ಕೊಂಡಿರುವನು. ಅದಕಾss ಮೂರುಗಳಿಂದ ಬೇಕಾದ್ದು ಹರಕೊಂಡು ಬರುತಯ್ತೆ.. ಆತಗೆ ಯಾವುದಕ್ಕೂ ಕಡಿಮೆ ಆಗದಾಂಗ ಆ ಮೂರುಗಳು ನೋಡಿಕೊಂತವೆ. ಯಿಂಥವರು ಯಿದಕಾs ಬರ್‍ರೆಂದರ ಅಂಥವರು ಅದಕಾss ಬಂದು ಹೋಗುವರು. ಆತನ ಹೆಸರು ಯಾಕ ಹಂಗಯ್ತಲ್ಲಾಂತ ಅಂದುಕೋ ಬ್ಯಾಡೂರಿ.. ಚಲಾಕುಂಟು ಅದರಾಗೇರಿ?

ಸುಡುಗಾಡೆಪ್ಪ ಅಂಬುವುದು ಆತನ ಜನುಮ ನಾಮಮೂಅಲ್ಲ.. ಹುಟ್ಟುತ್ತಲೆ ಆತಗೆ ಯಿಟ್ಟಿದ್ದಲ್ಲ, ಆತಂದು ಸ್ವಾಸ್ತಿ ಗ್ರಾಮಮೂಯಿದರೊಳಗಿಲ್ಲ, ಯಾದು ಮೂರೋ? ಯಾದು ಹೆಸರೋ? ಯೇನು ಕಥಿಯೋ? ವಟ್ಟಿನಾಗ ಕವುಡೆಪ್ಪ ಅಂತಲೋ? ಕಿವುಡೆಪ್ಪ ಅಂತಲೋ ಯಾದೋ ವಂದಿತ್ತು. ಆತಂದು ವುತ್ತರ ದೇಸದ ಯಾದೋ ವಂದು ಮೂರಂತೆ.. ಹೆಂಡರು ಅಯಿದಾರಂದರ ಅದಾರಂತೆ ಯಿಲ್ಲಾಂದರ ಯಿಲ್ಲ ಅಂತೆ.. ಮಕ್ಕಳಾದರು ಅಷ್ಟೇಯಾ? ಆವಯ್ಯ ಯೀ ಮೂರುಗಳಿಗ್ಯಾಕ ಬಂದ? ಯದಕ ಬಂದ? ಅಂಬುವುದೇ ನಿಗೂಢ.. ಹಿರೀಕರಿಗೆ, ಸ್ಥಳೀಕರಿಗೆ ಗೊತ್ತಿದ್ದಮಟ್ಟಿಗೆ ಹೇಳೋದಾದರ...

ಭಯ ನಾಮ ಸಮುವಂಚ್ಚರದ ಯಡ ಬಲಕ ಕರಿಲಿಂಗನ ಗವುಡಯಂಬ ಮುದೇತ ಯೀ ನಾಕೂ ಮೂರುಗಳಿಗ ಯಜಮಾನನಾಗಿದ್ದ.. ಆತ ಯಾರಪ್ಪಾ ಅಂದರ.. ಯೀಗ ಸೀಲಿಂಗ, ಮರಿಲಿಂಗ ಅಂತ ಗವುಡಮಂದಿ ಅಯಿತಲ್ಲ ಸದ್ಯಕ ಯಿವರಪ್ಪ.. ಆತ ವಳ್ಳೇತ ಅಂದರ ಬಲು ವಳ್ಳೇತ. ಯೀ ನಾಕೂ ಮೂರುಗಳು ಅಯಿಕಮತ್ಯದಿಂದ ಯಿರಬೇಕಂತಾಲೆ ಸದರಿ ವಂದೇ ವಂದು ಸುಡುಗಾಡನ್ನಾತನೇ ಮಾಡಿದ್ದು. ಸುಡುಗಾಡಿಗೆ ಸಂಬಂಧಿಸಿದ ಸಂಯಿಧಾನವನ್ನು ಪ್ರತಿಯೊಬ್ಬರ ನಾಲಗೆ ಮ್ಯಾಲ ಬರೆದಿರೋದೂ ಆತನೇಯಾ, “ಸುಡುಗಾಡು ಗ್ರಾಮಗಳ ರುದಯವು.. ಗ್ರಾಮಗಳೇ ಸುಡುಗಾಡಿನ ರುದಯವು” ಯಂಬುದು ಆ ಸಂಯಿಧಾನದ ಘೋಷ ವಾಕ್ಯಗಳ ಪಯ್ಕಿ ವಂದದ.. ಸುಡುಗಾಡು ಪಾಡಿದ್ದರ ಮೂರು ಪಾಡಿರುತಾವ ಯಂಬ ನಂಬುಕೆಯಿಂದ ಅದರ ಮ್ಯಾಲ ಸದಾ ನಿಗಾ ಯಿಟ್ಟಿರುತ್ತಿದ್ದ. ಸುಡುಗಾಡೊಳಗ ವಂದು ದನಾ ಹೋಗಧಂಗ, ವಂದು ಕುರಿ ಹೋಗಧಾಂಗ ನೋಡಿಕೊಂತಿದ್ದ.. ಅದರೊಳಗ ಸಿವ ಅದಾನಪಾ ಸಿವಾ

ಅನ್ನುತ್ತಿದ್ದ..

ಹೀಗಿರುತ್ತಿರಲಾಗಿ....

ವಬ್ಬ ಪರದೇಸದವ ಸುಡುಗಾಡೆಂಭೋ ಸುಬ್ಬರಾಗಸದಲ್ಲಿ ಬಾಲದ ಚುಕ್ಕಿಹಾಂಗ ಕಾಣಿಸಿಕೊಂಡನು. ಪ್ರತಿಯೊಂದು ಸಮಾಧಿಯದುರು ತಾಸುಗಟ್ಟಲೆ ನಿಲ್ಲುವುದು.. ಯೇನೇನೋ ವಟಗುಟ್ಟುವುದು ಮಾಡುತಿದ್ದನು. ಯಾಮೂರಪ್ಪಾ ಯಂದು ಕೇಳಿದವರಿಗೆ ತನ್ನದು ದೂರದ ಕೇರಳ ದೇಸ ಯಂದು ಹೇಳುತ್ತಿದ್ದ, ಯೇನು ಮಾಡಿತಿದ್ದಿ ಅಂದವರಿಗೆ ತಾನು ಸತ್ತವರ ಕೂಡೆ ಮಾತುಕಥಿ ಮಾಡುತೀನಿ ಅಂತ ಹೇಳಿ ಆಶ್ಚರ್ಯ ಹುಟ್ಟಿಸುತ್ತಿದ್ದನು. ಅಷ್ಟು ಬಿಟ್ಟರೆ ಮತ್ತೊಂದು ಮಾತಿರಲಿಲ್ಲ.. ಕಥಿ ಯಿರಲಿಲ್ಲ.. ಮೂರುಗಳ ಗಮನವನ್ನು ತನ್ನ ಕಡೇಕ ಸೆಳೆಯಲಿಕ್ಕಾಗಿ ತಾನು ಮುಂದ ಮುಂದಕ ಯೇನು ಮಾಡಿದನೆಂದರೆ...

ಅದೇ ಸುಡುಗಾಡೊಳಗ ಪುರಾತನ ಕಾಲದ್ದಾದ ಯಂಥದೋ ವಂದು ಮರಯಿತ್ತು. ಆದರೆ ಪೊಟರೆಯೊಳಗೆ ವಂದು ಗೂಬೆ ವಾಸವಾಗಿತ್ತು. ಭಾರೀ ರೆಕ್ಕೆಯ ಅದು ರಾತ್ರಿಯಲ್ಲಿ ಹಾರಾಡಿ ಸೂರ್ಯ ವುದಿಸಿದೊಡನೆ ಪೊಟರೆ ಸೇರಿಕೊಂತಿತ್ತು. ಆತನು ಮರಯೇರಿ ಪೊಟರೆಯೊಳಗ ಕಯ್ಯಾಕಿ ಹಿಡಿದು ಅದರ ಕೊಳ್ಳೀಗೆ ವಂದು ಮುಷಿ« ಗಾತುರದ ಗಂಟೆಯನ್ನು ಕಟ್ಟಿ ಬಿಟ್ಟನು, ತನಗ ಯಾರೋ ಲಿಂಗಧಾರಣೆ ಮಾಡಿದರೆಂದು ಭಾವಿಸಿದ, ಸಂಭ್ರಮಿಸಿದ ಆ ನಿಶಾಚರವು ಭಲೆ ವುತ್ಸಾಹದಿಂದ ರಾತಿರಿ ಆಯಿತೆಂದರೆ ಆ ನಾಕೂ ಮೂರುಗಳ ಯದೆ ಮ್ಯಾಲ ಘಲ್ ಘಲ್ ಯಂದು ಸಭುದ ಮಾಡುತ ಹಾರಾಡಲಾರಂಭಿಸಿತು. ಆ ಸಬುಧ ಕೇಳಿಸಿಕೊಂಡ ಮಂದಿ ಭಯಭೀತರಾದರು. ಗಂಧರ್ವರೋ.. ಕಿನ್ನರರೋ.. ಕಿಂಪುರುಷರೋ, ಪೀಡೆಯೋ, ಪಿಚಾಚಿಯೋ, ಬೇತಾಳಮೋ.. ಯಿವುಗಳ ಪಯ್ಕಿ ಯಾದಿರ ಬೌದೆಂದು ಆತಂಕಕ್ಕೀಡಾದರು. ರಾತಿರಿ ಆಯಿತೆಂದರ ಮುಗುಲ ಬಯಲು ತುಂಬೆಲ್ಲ ಅಂಡಲೆಯುತಲಿದ್ದ ಆ ನಾದ ಆಲಿಸುತ ರೆಪ್ಪೆಗೆ ರೆಪ್ಪೆ ಅಂಟಿಸಿ ನಿದ್ದೆ ಮಾಡದಾದರು. ಅದರ ತಲಾ ವಂದೊಂದು ಅತಿಮಾನುಷಮೂ, ಅಮಾನುಷಮೂಆದ ಕಥೆಗಳನ್ನು ಕಟ್ಟಿದರು, ಬಿತ್ತಿದರು. ತಮಗ ಕೇಡು ಕಾದಯ್ತೆಂದು ಭಾವಿಸಿದರು. ತಮ್ಮ ಕರಿಲಿಂಗನಗವುಡ ಯಿದ್ದಲ್ಲಿಗೆ ಹೋಗಿ ಯಜಮಾನ ನೀನೇ ದಾರಿ ತೋರಿಸಬೇಕು ಯಂದು ಕೇಳಿಕೊಳ್ಳಲಕ ಹತ್ತಿದರು. ಗವುಡನು ಜೋತಿಷಿಗಳನ್ನೂ, ವುಂತರ ಮರಾಟಿಗಳನ್ನು ಕರೆಯಿಸಿಕೊಂಡು ಸಲಹೆ ಪಡೆದನು. ಅವರ ಸಲಹೆಯಂತೆ

ಪೂಜೆ ಪುನಸ್ಕಾರ ಗ್ರಹಸಾಂತಿ ಮಾಡಿಸಿದನಾದರೂ ಆ ಸಬುಧದಾಡಂಬರವು ಅಂಬರದೊಳಗ ನಿಲ್ಲಲಿಲ್ಲ. ಆಗ ವಂದಿವಸ ಆ ನಾಕೂರುಗಳ ಮಂದಿಯು ವಂದು ಕಡೆ ಸಭೆ ಸೇರಿತು. ಪ್ರಳಯ ಸಂಭವಿಸುವ ಮೊದಲೇ ತಾವು ತಮ್ಮ ಹೆಂಡರು ಮಕ್ಕಳನು ಕಟ್ಟಿಕೊಂಡು ದೂರಕ ಗುಳೇ ಹೊಂಡುವುದೇ ಲೇಸೆಂದು ಅಭಿಪ್ರಾಯ ಯ್ಯಕ್ತಪಡಿಸಿತು. ಸಭೆ ಯಿನ್ನೇನು ಬರಕಾಸ್ತು ಆಗ ಬೇಕೆಂಬುವಷ್ಟರಲ್ಲಿ ಆತನು ಸುಡುಗಾಡಿಂದ ಬಂದು 'ಯೀ ನಾಕು ಮೂರುಗಳು ತನಗೆ ಸರಣಾದ ಪಕ್ಷದಲ್ಲಿ ನಾನಾ ಬ್ಯಾತಾಳದ ಅಟ್ಟಹಾಸವನ್ನು ಮಣಗಿಸುವುದಾಗಿ ಹೇಳಿದನು. "ಆಟು ಮಾಡಿ ಪುಣ್ಯ ಕಟ್ಟಿಕೊಳ್ಳಪ್ಪಾ"ಯಂದು ಗವುಡ ಸೇರಿದಂತೆ ಸಮಸ್ತರು ಸರಣಾದರು.. ಅಲ್ಲಿಂದಾತನು ಸೀದ ಸುಡುಗಾಡಿಗೆ ಹೋದವನೆ ಗೂಬೆಯ ಕೊಳ್ಳಲಿದ್ದ ಗಂಟೆಯನ್ನು ಬಿಚ್ಚಿಬಿಟ್ಟನು ಅಷ್ಟೆ. ತನ್ಮೂಲಕ ಆ ಸಬುಧದ ವುಪಟಳವು ನಿವಾರಣೆಗೊಂಡಿತು. ನಾಕುಮೂರುಗಳು ಸಮಾಧಾನದ ವುಸುರು ಬಿಟ್ಟವು.. ಮಂದಿ ಯಂಬುವ ಮಂದಿ ಯಿರುವೆಯೋಪಾದಿಯಲ್ಲಿ ಸುಡುಗಾಡಿಗೆ ಹರಿಯಲಾರಂಭಿಸಿತು. ನೀನೇ ನಮಗ ದೇವರಿದ್ದಂಗಪ್ಪಾಯಂದು ಹಣ್ಣುಹಂಪಳ ಕಾಣಿಕೆ ಯಿಟ್ಟು ಅಡ್ಡು ಬೀಳ ತೊಡಗಿತು.

ಯೀ ಪ್ರಕಾರವಾಗಿ ಆ ನಾಕೂ ಮೂರುಗಳನ್ನು ತನ್ನೊಶಮಾಡಿಕೊಂಡವನಾದ ಅವಯ್ಯನು ಆ ಸುಡುಗಾಡೊಳಗೆ ಆಸ್ರಮ ಕಟ್ಟಿಕೊಂಡು ತಳಮೂರಿ ಸುಡುಗಾಡೆಪ್ಪಾವಧೂತ ಯಂಬ ಹೆಸರಿನಲ್ಲಿ ಸುವಿಖ್ಯಾತನಾಗಿ ಅಯಿಭೋಗ ಅನುಭವಿಕೆ ಮಾಡಲಾರಂಭಿಸಿದನು. ಹೀಗಿರುತ್ತರಲಾಗಿ...

ಆಕಾಸ ರಾಮಣ್ಣನ ಸರೀರ ಯಂಬ ಗರಡಿಯೊಳಗೆ ಪಳಗಿದ್ದ ಕಳುವು ಸಂಬಂಧೀ ಭಾವನೆಗಳು ಆಲೋಚನೆಗಳು ಗಟ್ಟಿಮನಸ್ಸು ಮಾಡಿ ಆತನ ಸರೀರವನ್ನು ಪ್ರವೇಸ ಮಾಡಿ ಬಿಟ್ಟವು ಸಿವನೇ...

ಅದರ ಪರಿಣಾಮವಾಗಿ ಅಂಬ್ರುತ ಗಳಿಗೇಲಿ ಯಚ್ಚರಗೊಂಡಂಥವನಾದ ಸುಡುಗಾಡೆಪ್ಪಾವಧೂತನು ತಾನು ಅವರ ಮನೆಯನ್ನು ಹಂಗ ಕಳುವು ಮಾಡಬಾರದ್ಯಾಕ.. ಯಿವರ ಮನೆಯನ್ನು ಹಿಂಗ ಕಳುವು ಮಾಡಬಾರದ್ಯಾಕ.. ಯಂದು ಲೆಕ್ಕ ಹಾಕಲಾರಂಭಿಸಿದನು ಸಿವನೇs...

ತಾಯಿ ಸಾಂಬವೀ ಬಯಲು ಬಯಲಿಗೆ ತುರುಕಿ
ವುಟ್ಟೀಗಿ ವುಡಸಿದಿಯಲ್ಲೇ ಬನ್ನೀಯ ಮರದಾಕಿ

ಬತ್ತಲss ನಡಸೀಯಲ್ಲೇ ಬೆಳ್ಳೀಯ ಮಕದಾಕಿ
ನಕ್ಕವರನ್ನೆಲ್ಲ ಅಳಸೂತ, ಅತ್ತವರನ್ನ ನಗಿಸೂತ
ಭಂಡ ಮಾಡುವ ಜನರನ್ನು ಕಂಡ ಕಂಡಲ್ಲಿ ಕುಣಿಸೂತ
ಹಾದಿ ಹಾದಿಲಿ ಕುಂತು ಗರುಕೆ ಯಲೆಯೊಳಗಡಗಿ
ಕಾಡುತೀಯಲ್ಲೇ ತಾಯಿ ಜಗದಂಬ ಮಾ ಮಾಯಿss...

ಯೇನು ಸೋಜಿಗ ಅಯಿತಲ್ಲವ್ವಾ.. ಯೋಟೊಂದು ಪಸಂದಯಿತಲ್ಲವ್ವಾ.. ನಿನ್ನಾಟ ಅಂಬಾ ಭವಾನಿ.. ಅದರೊಳಗಿಂದು ಯಿದರೊಳಗಿಡುತ ಯಿದರೊಳಗಿಂದು ಅದರೊಳಗಿಡುತ ಮಾಯಾನ ಚಲ್ಲಾಡುತ.. ನಿನ್ನ ಪವಾಡ ಅಂದಿಗುಂಟು ಯಿಂದಿಗಿಲ್ಲ ಅಂಬುವವರನ್ನು ಕಾಡಡವಿಗೆ ಕಳುವು ಜಗದಂಬಾ.. ಗಂಟಲಯ್ಯ ತನಗೆ ಗೊತ್ತಿದ್ದೋ, ಗೊತ್ತಿಲ್ಲದೋ ತಾಯಿ ಸಾಂಬವಿಯನ್ನು ಹಾಡಿ ಹರಸುತಲಿದ್ದ ಕುದುರೆಡವು ಪಟ್ಟಣವು ಸಾವುರಾರು ಭಕುತಾದಿ ಮಂದಿಯ ಗೀಜಗನ ಗೂಡಾಗಿತ್ತು ಸಿವಸಂಕರ ಮಾದೇವಾss.. ಅದು ಅದೇ ಯಿನ್ನು ಪಟ್ಟಣದ ವರ್ಚಸ್ಸನ್ನು ತುಂಬಿಕೊಳ್ಳಲಕ ಹತ್ತಿದ್ದ.. ಸದರಿ ಪಟ್ಟಣದೊಳಗ....

ಯಪ್ಪಾ.. ನನಗೆ ನೋಡಂಗಾಗಯ್ತೆ ನೋಡಲೇನ? ಯಂದು ಕುರುಡಮಕ್ಕಳು ಅಂಬುತಲಿದ್ದರ, ಯಪ್ಪಾ ನನಗ ನಡದಾಡೋ ಆಸೆ ಆಗಯ್ತೆ ಯಂದು ಕುಂಟ ಮಕ್ಕಳು ಅಂಬುತಲಿದ್ದರ... ಯಪ್ಪಾ ನನಗ ಮಾತಾಡೋ ಆಸೆ ಆಗಯ್ತೆ.. ಗಲಗಲಾಂತ ಮಾತಾಡಲೇನ ಯಂದು ಮೂಗ ಮಕ್ಕಳು ಅಂಬುತಲಿದ್ದರ, ಯಪ್ಪ ನನಗ ಕೇಳುವ ಆಸೆ ಆಗಯ್ತೆ ಯಂದು ಕಿವುಡ ಮಕ್ಕಳು ಅಂಬುತಲಿದ್ದರು, ಅವರವರ ತಂದೆ ತಾಯಿಂದಿರು "ಯವ್ವಾ ಸಾಂಬವೀ.. ಯೇನಿದು ನಿನ ಮಯ್ಮೆ?" ಯಂದು ಕಯ್ಮುಂಯುತ್ತಿ ಮುಗಿಯತಲಿದ್ದರು ಸಿವಸಂಕರ ಮಾದೇವಾss..

ಸದರಿ ಪಟ್ಟಣದೊಳಗ ಹೇಳಪ್ಪಂದಿರಿದ್ದರು ಮಸ್ತು ಹೇಳಲಕ, ಕೇಳಪ್ಪಂದಿರಿದ್ದರು ಮಸ್ತು ಕೇಳಲಕ.. ಆದ್ದರಿಂದಾಗಿ ಯಾದಕ್ಕೂ ಹರಕತ್ತಿರಲಿಲ್ಲ. ಅಲ್ಲಿ ಯಾರನ್ನೋ ನೋಡಿದರ ಯಾರನ್ನೋ ನೋಡಿ ಧಾಂಗಾಗುತಲಿತ್ತು.. ಅವರೊಳಗ ಯಿವರು ಯಿದ್ದಿರಬೌದಾ? ಯಿವರೊಳಗ ಅವರು ಯಿದ್ದಿರಬೌದಾ? ಯಂಬ ಅನುಮಾನ ಮೂಡುತಲಿತ್ತು.. ಕೇಳುವ ಸರಳ ಮಾತೂ ವಗಟಿನಂತೆ ಕೇಳಿಸುತಲಿತ್ತು, ನೋಡುವ ವಂದೊಂದು ಸಾಮಾನ್ಯ ವಸ್ತುವೂಅಸಾಮಾನ್ಯ ಯಂಬಂತೆ ಗೋಚರವಾಗುತಲಿತ್ತು.. ಆದ್ದರಿಂದ ಭಕುತಾದಿ ಮಂದಿಯು ಬಲು

ಹುಷಾರಿಕೆಯಿಂದಲೆ ಮಾತಾಡುತಲಿದ್ದರು, ಬಲು ಹುಷಾರಿಕೆಯಿಂದಲೇ ಕೇಳುತಲಿದ್ದರು.. ಬಲು ಹುಷಾರಿಕೆಯಿಂದಲೆ ತಮ ವಂದೊಂದೆ ಹೆಜ್ಜೆಯ ಯಿಡುತಲಿದ್ದರು. ಕಣ್ತುಂಬ ನೋಡಲಕೊಂದು ನಮೂನಿ ಹೆದರಿಕೆ.. ಕೇಳಲಕೊಂದು ನಮೂನಿ ಹೆದರಿಕೆ.. ನಡೆಯಲಕೊಂದು ನಮೂನಿ ಹೆದರಿಕೆ.. ಗಲಗಲಾಂತ ಮಾತಾಡಲಕೊಂದು ನಮೂನಿ ಹೆದರಿಕೆ, ಮುಟ್ಟಲಕೊಂದು ನಮೂನಿ ಹೆದರಿಕೆ.. ಕುಂಡರಲಕೊಂದು ನಮೂನಿ ಹೆದರಿಕೆ.. ಮಲಗಲಕೊಂದು ನಮೂನಿ ಹೆದರಿಕೆ.. ಕಣಸು ಕಾಣಲಕೊಂದು ನಮೂನಿ ಹೆದರಿಕೆ.. ಯಚ್ಚರಾಗಲಕೊಂದು ನಮೂನಿ ಹೆದರಿಕೆ.. ಅನುಭವ ಹಂಚಿಕೊಳ್ಳಲಕೊಂದು ನಮೂನಿ ಹೆದರಿಕೆ.. ಬಾಯಿ ಮುಕ್ಕಳಿಸಲಕ, ಮುಕ್ಕಳಿಸಿದ ನೀರನ್ನು ಪೀಚಕ್ಕಂತ ವುಗುಳಲಕ, ಮುಖ, ಕಯ್ನ ಕಾಯ್ನ ತೊಳಕೊಳ್ಳಲಕ, ಮಯ್ಗೆ ಯರಕಂಬಲಕ, ಬಟ್ಟೆ ಬರೆ ವುಟ್ಟು ಕೊಂಬಲಕ, ಹೆಂಡತಿಯನ್ನು ಹೆಂಡತೀss ಯಂದಂಬಲಕ, ಮಕ್ಕಳನ್ನು ಅವರವರ ಹೆಸರುಗುಂಟ ಕೂಗಿ ಕರೆಯಲಕ, ವುಂಬಲಕ, ತಿಂಬಲಕ, ಜೀರ್ಣ ಮಾಡಿಕೊಳ್ಳಲಕ, ಜೀರ್ಣವಾದುದನ್ನು ಯಿಸರ್ಜನೆ ಮಾಡಿಕೊಳ್ಳಲಕ, ಮೆಲ ಮೆಲ್ಲಗ ನಡೆದಾಡಲಕ, ಜೋರು ಜೋರಾಗಿ ನಡೆದಾಡಲಕ..ಯಿಂಥಪ್ಪ ಹೆದರಿಕೆಗಳನು ಲೆಕ್ಕಹಾಕಿದರ ಮುವ್ವತ್ತಾರು ಸಂಖ್ಯೆಯ ಕುಪ್ಪೆಯಾಗುತ್ತವೆ.. ಸಿವಸಂಕರ ಮಾದೇವಾss..

ಭಯವು ಕುದುರೆಡವಿನಿಂದ ಜುಳು ಜುಳು ಹರಿಯಲಾರಂಭಿಸಿ ಕ್ರಮ ಕ್ರಮೇಣ ಸುತ್ತನ್ನಾಕಡೇಕ ಯಾಪನಗೊಂಡಿತು.. ಬೆಕ್ಕುಗಳು ಯಿಲಿಚೆಮ್ಮಗಳನ್ನು ಕಂಡು ಹೆದರುವಂತಾದವು. ಹಾವುಗಳು ಕಪ್ಪೆವ್ಮಗಳನು ಕಂಡು ಹೆದರುವಂತಾದವು.. ಕ್ರಿಮಿಕೀಟಗಳನು ಕಂಡು ಕಪ್ಪೆಗಳು ಹೆದರುವಂತಾದವು, ಪಡೆಯುವ ಕಯ್ಯಿಗಳನು ಕಂಡು ನೀಡುವ ಕಯ್ಯಿಗಳು ಹೆದರುವಂತಾದವು.. ಸಾಲ ಪಡೆದವರನು ಕಂಡು ಸಾಲ ಕೊಟ್ಟವರು ಹೆದರುವಂತಾದರು. ಬಡವರನು ಕಂಡು ಸ್ರೀಮಂತರು ಹೆದರುವಂತಾದರು.. ಪ್ರಜೆಗಳನು ಕಂಡು ರಾಜರು ಹೆದರುವಂತಾದರು. ಹೆತ್ತ ತಾಯಿಯ ಮೊಲೆ ಜಮಡಲಕ ಕೂಸುಗಳು ಹೆದರುತ್ತಿದ್ದುದೇನಲ್ಲಿ? ತಮ ತಮ್ಮ ಕೂಸು ಕಂದಮ್ಮಗಳನ ನೋಡಿ ತಾಯಂದಿರು ಹೆದರುತ್ತಿದ್ದು ದೇನಲ್ಲಿ? ತಮ ತಮ್ಮ ಹೆಂಡಂದಿರನ ನೋಡಿ ಗಂಡಂದಿರು ಹೆದರುತ್ತಿದ್ದೇನಲ್ಲಿ? ಬಾನ ಕಂಡು ಹಸದವರು ಹೆದರುತ್ತಿದ್ದೇನಲ್ಲಿ ಆಕಾಸವನ್ನು ನೋಡಿ ಭೂಮಿ ಹೆದರುತ್ತಿದ್ದುದೇನಲ್ಲಿ? ಮಣ್ಣಕಂಡು ಬೀಜಮೂ, ಬೀಜಗಳ

ಕಂಡು ಮಣ್ಣೂ ಹಿಂಗs ಸಚರಾಚರವು ಸಕಾರಣವಾಗಿಯೋ, ಯಿನಾ ಕಾರಣ ವಾಗಿಯೋ ಭಯವನ್ನು ಬಿತ್ತಿ ಭಯವನ್ನು ಬೆಳೆಯ ತೊಡಗಿದ್ದರ ಕುರುತು ಯೇನು ಹೇಳಲಿ ಸಿವನೇ....

*      *      *      *

ಮನ್ರೋ ಸಾಹೇಬನು ವರ್ತಮಾನಕ್ಕಿಂತ ಭೂತಕಾಲವನ್ನೇ ಹೆಚ್ಚಾಗಿ ಪ್ರೀತಿಸುತ್ತಿರುವುದೆಂದೂ ತಾನು ನಂಬಿದ್ದ ಜನರನ್ನು ವರ್ತಮಾನದ ಕಡೇಕ ಪ್ರಜೆಗಳ ಮುಖವನ್ನು ತಿರುಗಿಸಲಕೆಂದೇ ತಾನು ಹಿಂದೆ ಹಲವು ಸಲ ಕಠೋರ ನಿರ್ಧಾರ ಕಯ್ಯಿಕೊಂಡಿರುವುದುಂಟು. ಪ್ರಜೆಗಳು ವಯಿಗ್ನಾನಿಕವಾಗಿ ಆಲೋಚಿಸುವಂತೆ ಮಾಡಲು ತಾನು ಅನೇಕಾನೇಕ ಕಾರ್ಯಕ್ರಮಗಳನ್ನು ಕಯ್ಯಿಕೊಂಡಿರುವುದೂ ವುಂಟು. ಸಮುದ್ರದೊಳಗ ಪ್ರಯಾಣ ಮಾಡಿರುವ ತಾನೇ ಸದರಿ ಯಿಂಡಿಯಾದ ಅಸ್ಪ ್ರಶ್ಯರಿಗೇ ಅಸ್ಪ ್ರಶ್ಯನು ಯಂದ ಬಳಿಕ ವುಳಿದವರ ಪಾಡೇನು?.. ಸದರಿ ಯಿಂಡಿಯಾ ವನ್ನು ಭೂತಗನ್ನಡಿಯ ಮೂಲಕ ನೋಡಿದರೇನೇ ಛಂದ ಯಂದು ತಾನು ನಿರ್ಧರಿಸಿದ್ದೇನೋ ವುಂಟು. ಆದರೆ ಕುಂಪಣಿ ಸರಕಾರದ ಪ್ರಭ್ರುತಿಗಳು ಸುಮ್ಮನಿರಬೇಕಲ್ಲ.. ತಾನು ತನ್ನ ಅಭಿಪ್ರಾಯವನ್ನು ಅಯಿಫಿನ್ ಸ್ಟೋನ್ ಸಾಹೇಬನ ಯದುರಾಗಲೀ, ರೀಡನ ಯದುರಾಗಲೀ ಯ್ಯಕ್ತಪಡಿಸಲು ಯಂದೂ, ಯಾವತ್ತೂ ಹಿಂಜರಿದುದಿಲ್ಲ. ವಟ್ಟಿನಲ್ಲಿ ಬಂಕಿಂಗ್ ಹ್ಯಾಮ್ ಅರಮನೆಯ ವಂದು ಮೂಲೆಯು.. ಕೇಳೀರಿ ಕಿವಿಗೊಟ್ಟು ಕೇಳಿರಿ, ಪವುರಾತ್ಯ ದೇಸಗಳ ತೂಕ ವಂದೇ.. ಯಿಂಡಿಯಾದ ತೂಕವಂದೇ.. ಭೂತಕಾಲವನ್ನು ಮೂಲೋತ್ಪಾಟನ ಮಾಡಿದಾಗಲೇ, ವರ್ತಮಾನ ಪ್ರಜ್ವಲಿಸಿದಾಗಲೇ ಯಿಂಡಿಯಾಕ್ಕೆ ಕುಂಪಣಿ ಸರಕಾರದ ಮ್ಯಾಲ ಪ್ರೀತಿ ಬರಲಕ ಸಾಧ್ಯ. ಆದ್ದರಿಂದಾಗಿ ಯಲ್ಲೈ ಅಧಿಕಾರಿಗಳೇ ಭೂತಕಾಲದ ಕುರುಹುಗಳನ್ನು ನಿರ್ಭಿಡೆಯಿಂದ ಹೊಸಕಿ ಹಾಕಿರಿ, ಸೋಮಪಾನ ಮತ್ತು ಮದ್ಯಪಾನದ ನಡುವಿನ ಯತ್ಯಾಸವನ್ನು ಸನಮಾನ್ಯ ಪ್ರಜೆಗಳಿಗೆ ಅರ್ಥ ಮಾಡಿಕೊಡಬೇಕು. ವಾಮಮಾರ್ಗ ಹಿಡಿದಾದರೂ ನೀವು ಬ್ರಿಟೀಷ್ ಜೀವನ ಸಯ್ಲಿಯನ್ನು ಯಿಂಡಿಯಾದ ಮ್ಯಾಲ ಯಷ್ಟು ಸಾಧ್ಯಮೋ ಅಷ್ಟು ಹೇರಬೇಕು. ತಪ್ಪು ಅಥವಾ ಪಾಪಮಾಡಿದಲ್ಲಿ ಕ್ಷಮಿಸಲಕೆಂದೇ ಯೇಸುಕ್ರಿಸ್ತ ಅದಾನೆ. ಆದ್ದರಿಂದ ಪಾಪ ಪುಣ್ಯಗಳ ಕುರಿತು ಯೋಚಿಸಬ್ಯಾಡಿರಿ, ಯಂದು ಮುಂತಾಗಿ ಭಿತ್ತರ ಮಾಡಿ ಬಿಡಬೇಕೆ? ಆ ನಿರಂಕುಸರಿಗೇನು ಗೊತ್ತು ಯಿಂಡಿಯಾ ಅಂದರೇನೆಂಬುದು? ಯಿಂಡಿಯಾದೊಳಗೆ ಮನುಕುಲವು ನಿಸರ್ಗದೊಂದಿಗೆ

ಸಾಯುಜ್ಯ ಹೊಂದಲು ಸದಾ ಹಾತೊರೆಯುತ್ತಿದೆಯಂಬುದು. ಯಿಂಡಿಯಾ ಅಂದರ ಜೀವ ಜಗತ್ತು, ಸಸ್ಯ ಜಗತ್ತು, ಮತ್ತು ಅಲವುಕಿಕ ಜಗತ್ತುಗಳ ತ್ರಿವೇಣಿ ಸಂಗಮ ಯಂಬುದು; ಭೂತಕಾಲದಿಂದ ಬೇರು ಪಡಿಸಿದಲ್ಲಿ ಯಿಂಡಿಯಾಕ್ಕೆ ಅಸ್ತಿತ್ವ ಯಂಬುದೇ ಯಿರುವುದಿಲ್ಲಯಂಬುದು. ಯೀ ಪ್ರಕಾರವಾಗಿ ಥಾಮಸು ಮನ್ರೋ ತನ್ನ ಮೇಲಾಧಿಕಾರಿಗಳಿಗೆ ಮನದಟ್ಟು ಮಾಡಿಕೊಡುವಲ್ಲಿ ಸದಾ ತಿಪ್ಪರಲಾಗ ಹಾಕುತ್ತಿದ್ದನು. ಆದರೆ ಯೀ ಹಿಂದೆ ಘಟಿಸಿದ ಘಟನೆಯಿಂದಾಗಿ ತಾನು ಮತ್ತಷ್ಟು ಅಂಡಾವರನ ವಾಗಿದ್ದನು. ನೋಡಿದಿರಾ, ಯಿಂಡಿಯಾ ಅಂದರೆ ಯಿದು ಯಂಬ ತೀರುಮಾನಕ್ಕೆ ಲಗತ್ತಿಸಿಕೊಂಡಿದ್ದ. ಆದರೂ...

ತಾನು ಮೊದಲೇ ಹೇಳಿ ಕೇಳಿ ಯಿದೇಸೀ ಮನುಷ್ಯ.. ತನ್ನ ಮನದೊಳಗ ಒಂದು ಪ್ರಸ್ನೆಯು ಮರ, ಅದಕ ನೂರಾರು ವುಪಪ್ರಸ್ನೆಗಳೆಂಭೋ ಕೊಂಬೆರೆಂಬೆಗಳು. ತಾನೆಂದರೆ ಪ್ರಸ್ನೆ.. ಪ್ರಸ್ನೆ ಅಂದರೇ ತಾನು.. ಯಂಬುವಷ್ಟರ ಮಟ್ಟಿಗೆ.. ಸದರಿ ಯಿಂಡಿಯಾವು ತಾನೇನು ಯಂಬುದನು ಸದರಿ ಮನ್ರೋ ಸಾಹೇಬಗೆ ಸಾಬೀತು ಮಾಡಲು ಪ್ರತಿ ಛಣ ಹಾತೊರೆಯುತಲಿತ್ತು. ಮುಂದ ಮುಂದ ವಂದಲ್ಲಾ ವಂದಿವಸ ಕುಂಪಣಿ ಸರಕಾರವು ಯಿಲ್ಲಿನ ಪ್ರಜೆಗಳನ ಆಳಬೌದೇ ವಿನಾ ಸಹಸ್ರಾರು ಪವಾಡಗಳ ಬಸುರು ಹೊತ್ತಿರು ವಂಥ ನೆಲವಾದ ನನ್ನನ್ನು ಅಳಲಾರದು ಯಂದು ಠೇಕಾರದಿಂದ ಯಚ್ಚರಿಸುತ್ತಿರುವಂತೆ, ನಾನು ಕೇವಲ ಮಣ್ಣಲ್ಲ ಕಣಪ್ಪಾ.. ನನ ಮಣ್ಣ ಕಣ ಕಣದೊಳಗೆ ಯೇನಿಲ್ಲ ಅಂದರೆ ಯೇನೂ ಯಿಲ್ಲ.. ವುಂಟು ಅಂದರ ಯಲ್ಲಾ ವುಂಟು.. ನನ್ನ ತಂಟೆಗೆ ಬರಲು ನಿನಗ ಯಂಟೆದೆ ಬೇಕು. ನಿನ್ನ ನೀ ಬಲಿಕೊಡಲು ಸಿದ್ಧಯಿರುವುದಾದರ.. ನಾನೇನೆಂಬುದನು ನಿನಗ ತೋರಿಸುವೆನು.. ಯಂದು ಸವಾಲು ಹಾಕುತ್ತಿರುವಂತೆ ಸದರೀ ಸಾಹೇಬನಿಗೆ ಭಾಸವಾಗುತಲಿತ್ತು. ಯಲ್ಲದೀ? ಹ್ಯಾಂಗದೀ ಅಂತ ನೀ ನನ್ನ ಕೇಳಿದೀ ಅಂತ ಯಿಟ್ಟುಕೋ ಅದಕ ನನ ಜವಾಬು ಯೇನಯಿತಪ್ಪಾ ಅಂದರ.. ಯೀ ನೆಲದ ಮ್ಯಾಲ ಕಾಲೂರಿ ಯೀ ನೆಲವನ್ನವಲಂಬನ ಮಾಡಿ ಬದುಕುವ ಚರಾಚರದೊಳಗ ನಾನಿರುತೀನಿ.. ಅವರ ಚಲನ ವಲನ ನಂದೇ ಆಗಿರುತದಽಽ.. ಸಚರಾಚರದ ಸೂತಕ ಯಿರೋದು ನನ ಕಯ್ಯಲ್ಲಿ ಅಂಬುದನು ಮರೀಬ್ಯಾಡಪ್ಪಾ.. ನೆಲದೊಡನಾಡಿಗಳೂ.. ಬಾನಾಡಿಗಳೂ, ನನಗ ಕಳ್ಳು ಸೇರುವಿಕೆ ಅದಾವ.. ಕಾಗೆಯ ಕಾವ್ ಕಾವ್ ಕಾವ್, ಗೂಬೆಯ ಗೂಗುಕ್ ಗೂಗುಕ್.. ಗುಬ್ಬಿಯ ಚಿಂವ್ ಚಿಂವ್ ಯಿವೇ ಮೊದಲಾದ ಭಾಷೆಗಳು ನನ್ನ

ಮಾತ್ರುಭಾಷೆಯೇ ಔದು.. ಹಾವು ಚೇಳು ಯಿರುವೆ ಗೊದ್ದಿಗವೇ ಮೊದಲಾದ ಯಂಭತ್ನಾಕು ಕೋಟಿ ಜೀವರಾಸಿಗಳೆಲ್ಲ ನನ್ನ ರೂಪು ವಯಿವಿದ್ಯಗಳೇ. ವಂದು ಯರಡರ ನಡುವೆ ಫರುಕು ಯಿಲ್ಲ.. ವಂದಕ್ಕಿನ್ನೊಂದು ವಂದು ಸೇರಿಕೊಂಡರೆ ತಾನೆ ಯರಡಕ್ಕೆ ಯರಡರ ಗವುರವ ಪ್ರಾಪ್ತವಾಗುವುದು! ಹ್ಹಾ. ಹ್ಹಾ.. ಜವಾಬೇ....

ಮನ್ರೋನು ಸಂತರಸ್ತರನು ಸಯಿರಸಲಕೆಂದೇ ಚಿಲಕಲೂರಿ ವೆಂಪಾಟಿಗಳನ್ನು ಅಲಾಯುದವಾಗಿ ಬಿಟ್ಟಿದ್ದನಷ್ಟೆ. ಚಿನ್ನೋಬುಳ ನರಸಿಮ್ಮಸ್ವಾಮಿಯ ದೇವುಳವನ್ನು ಪ್ರವೇಶ ಮಾಡಿದ್ದೂ ಅಲ್ಲದೆ ಸ್ವಾಮಿವಾರಿ ಯಿನಾಮು ಭೂಮಿಯನ್ನು ಬಡವರಿಗೆ ಅದರಲ್ಲೂ ಅಂತ್ಯಜರಿಗೆ ಹಂಚಲೆತ್ನಿಸಿದ ತಮ್ಮ ಅನ್ನದಾತನ ಬಗ್ಗೆ ಅವರ ಅಂತರಂಗದಲ್ಲಿ ಬಹಿರಂಗ ಪಡಿಸಲಿಕ್ಕಾಗದಂಥ ಅಸಹನೆಯು ಸೇಡಿನ ರೂಪದಲ್ಲಿರುವುದು. ಮನ್ರೋಗೆ ಅತ್ಯುಗ್ರಪಾತ ಕಲಿಸು ಯಂದು ತಾವು ನರಸಿಮ್ಮಸ್ವಾಮಿಯನ್ನು ಬೇಡಿಕೊಂಡಿರದೆ ಯಿರಲಿಲ್ಲ.. ಕ್ರೈಸ್ತ ಧರ್ಮಿಯನ ಸ್ಪುರುಷದಿಂದ ಅಪಯಿತ್ರಗೊಂಡಿರುವ ಸಾಲಿಗ್ರಾಮವು ಮುನಿದು ವುಗ್ರರೂಪ ತಾಳಿದೆ ಯಂದೇ ಭಾವಿಸಿದ್ದ ಅವರು ಕ್ಷೋಭೆಯ ಬೀಜಕ್ಕಾಗಿ ಅವರಿವರಲ್ಲಿ ಹುಡುಕಾಡುತಲಿದ್ದರು. ಮನ್ರೋನ ಯದುರಲ್ಲಿ ಸವಿನಯ ಪೂರುವಕವಾಗಿ ಯಿಲಿಗಳ ಗರಭದೊಳಗೆ ಹುಲಿಗಳಿವೆ ಯಂದು ಹೇಳುತಲಿದ್ದರು.. ಯಿಲಿಯೊಳಗೆ ಹುಲಿಯಿರಲಿ, ಹುಲಿಯೊಳಗೆ ಯಿಲಿಯಿರಲಿ.. ಮನ್ರೋ ಮಾತ್ರಹ್ಹಾ.. ಅನ್ನುತ ಯಿರಲಿಲ್ಲ.. ಹ್ಹಾ.. ಹ್ಹಾ.. ಅನ್ನುತಲೂ ಯಿರಲಿಲ್ಲ..

ಹೀಗಿರುತ್ತಿರಲಾಗಿ ವಂದಿವಸ..

ಅತ್ತ ಕೂಡ್ಲಿಗಿ ಪಟ್ಟಣದೊಳಗ...

ಅಂಜಣಿ ಅರ್ಥಾತ್ ಹೆನ್ರಿಯಂಬ ಮರ್ಕಟಕ್ಕೆ ಪಟ್ಟಣಕ್ಕೇಕ ಕುಂತಳ ಪ್ರಾಂತಕ್ಕೇನೆ ಸುಂದರಿ ಯಂದಿನಿಸಿರ್ದ ಚಿನ್ನಸಾನಿಯು ಮನಸೋತಳೋ ಅಥವಾ ಆಕೆಗೆ ಅದೇ ಸಮರ್ಪಿಸಿಕೊಂಡಿತೋ? ಪರಸ್ಪೂರ ಜನುಮಾಂತರ ಸಂಬಂಧ ಅವರೀರ್ವರ ನಡುವೆಯಿತೋ? ಆ ಧರುಮಾರ್ಥ ವಡಕರಾಯನ ದೇವುಳ ಗೋಪುರ ಜೀರ್ಣೋದ್ಧಾರಾರ್ತ ಯೇರು ಪಡಿಸಿದ್ದ ಪ್ರದರ್ಸನ ರಾವುಕಾಲದೊಳಗ ಆರಂಭಗೊಂಡಿತ್ತೋ ಅಥವಾ.. ವಟ್ಟಿನಲ್ಲಿ ವಪ್ಪತ್ತಯ್ಯನ ಕರುಮಮೋ.. ತಿಕ್ಕಡ ದಂಪತಿಗಳ ಹತಭಾಗ್ಯಮೋ.. ಲಾಂದರಗಳ ಬೆಳಕೊಳಗೆ ಹಿಂಗss ನಡೆಯಿತೆಂದು ನಿಖರವಾಗಿ ಹೇಳಲಕ ಯಂಥವರಿಗೂ ಸಾಧ್ಯಯಿಲ್ಲ. ಆ ಹಿಡಿ ಬೆಳಕೊಳಗ ಗಂಡನಾದಾತ ಮಾಡಿಕೊಂಡ ಹೆಂಡತಿಯನ್ನು ಬಿರ್ರನೆ ಗುರುತಿಸುವುದು

ಸಾಧ್ಯಯಿರಲಿಲ್ಲ ಅಂಥಾದ್ದರಾಗ ಮಂಗಣ್ಣವು ಅಗೋ ಅಲ್ಲಿ ಮನದನ್ನೆ.. ಪ್ರಿಯತಮೆಯು ಯಂದು ವುದ್ಗರಿಸಿದ್ದೂ ಅಲ್ಲದೆ ಜಿಗಿದಾಕೆಗೆ ಅಂಟರುಗಾಲನ ಹಾಕಿ ಅಂಟರು ಪುಳುಕಿ ಹಾಂಗ, ಜೀವಾತುಮಪರಮಾತುಮಗಳು ತಮಗ ತಾವ ಅಯಿಕ್ಯಗೊಂಡಂಗ.. ಆದರ ವಟ್ಟಿನಾಗ ಪ್ರೇಕ್ಷಕ ರುಂದದೊಳಗ ಅಪಾರ ಸಂಖೆಯಲ್ಲಿದ್ದ ಆಸ್ತೀಕರಿಗೆ, ಅದರಲ್ಲೂ ಮುಖ್ಯವಾಗಿ ಆಂಜನೇಯ ಸ್ವಾಮಿಯ ಪರಮ ಭಕುತಾದಿಗಳಿಗೆ, ಆ ದ್ರುಶ್ಯ ವನ್ನು ತಮ್ಮ ಕಣ್ಣುಗಳಿಂದ ಅರಗಿಸಿಕೊಳ್ಳಲಾಗಲಿಲ್ಲ.. ಆ ಸುದ್ದಿಯನ್ನು ಕಿವಿಗಳಿಂದರಗಿಸಿಕೊಳ್ಳ ಲಾಗಲಿಲ್ಲ.. ಅಖಂಡ ಬ್ರ ಮ್ಮಾಚಾರಿಯೂ, ಸ್ರೀರಾಮದೇವರ ಪ್ರಾಣದೇವರೂ ಆದಂಥ ತಮ್ಮ ಭಜರಂಗ ಬಲಿಯು ಯಕಃಶ್ಚಿತ್ ಚೆನ್ನಾಸಾನಿಗೆ ಮನಸೋತು ಬಿಟ್ಟಿತಲ್ಲಾ.. ತಮ್ಮ ನಂಬಿಕೆ ಮಣ್ಣುಗೂಡಿ ತಲ್ಲಾ... ಯಂದು ಹಲುಬುತಿದ್ದುದ್ದು ಸಾಮಾನ್ಯ ದ್ರುಶ್ಯವಾಗಿತ್ತು. ಅವರ ಯದೆಯೊಳಗಿದ್ದ ಭಕುತಿಯು ಕೋಪದ ಕಿರೀಟ ಧರಿಸಿತ್ತು.. ಯಲಾ ಹಿಂದೂ ಧರುಮ ದ್ರೋಹಿಗಳಾದ ವಪ್ಪತ್ತಯ್ಯಾ.. ತಿಕ್ಕಡಾss ಯಂದು ಕೋಪಾಯೇಸದಿಂದ ಕೂಗುವಂತೆ ಮಾಡಿತ್ತು (ತಮ್ಮ ಆರಾಧ್ಯದಯವರ ಪ್ರಾಣಿ ರೂಪಕ್ಕೆ ಹೆನ್ರಿಯಂಬ ಕಿರಸ್ತಾನನ ಹೆಸರನ್ನು ಯಿಡುವುದೆಂದರೇನು ರಾಮ.. ರಾಮಾ..) ಆ ನಂತರವೇ.. ಅವರೆಲ್ಲ ಕೋಪದ ಭರದಲ್ಲಿ ಯೇನೇನು ಮಾಡಿದರಪ್ಪಾ.. ಸಿವ ಸಿವಾ..

ಅವರೆಲ್ಲ ಮಾಡಿದ ದಾಂಧಲೆಯು ಅಸಾಧಾರಣವಾಗಿತ್ತು. ಪ್ರಾಯೋಜಕ ವಪ್ಪತ್ತಯ್ಯನನ್ನು, ಮಾಲಕ ತಿಕ್ಕಡ ದಂಪತಿಗಳನ್ನು ಹಿಗ್ಗಾ ಮುಗ್ಗಾ ಥಳಿಸಿದ್ದಲ್ಲದೆ ತಾವೇ ಪಂಚಾತಿ ಮಾಡಿ ತಪ್ಪುದಂಡ ಕಟ್ಟಿಸಿಕೊಂಡು ಅವರನ್ನು ಮೂರು ಬಿಡಿಸಿದರು. ಅವರೊಳಗ ವಡಕರಾಯಗೋಪುರ ಜೀರ್ಣೋದ್ದಾರ ಸಮಿತಿಯೂ ವಂದಿತ್ತಲ್ಲ.. ಅವರು ದಯದ ಸೇವಾಕಯಂಕರ್ಯಾರ್ತವಾಗಿ ತಾಯಕ್ಕನ ಮನೆಗೆ ಹೋಗಿ ಯಿಂಥಿಷ್ಟು ರೊಕ್ಕ ಪಾವತಿಮಾಡಿ ರಸೀದಿ ಪಡೆಯಬೇಕು, ಯಿಲ್ಲವಾದಲ್ಲಿ ಮಂಗಣ್ಣನನ್ನು ತಮಗ ವಪ್ಪಿಸಬೇಕೆಂದು ಜಬರದಸ್ತಿನಿಂದ ಕೇಳಿದರು. ವಗಯ್ರೆವಗಯ್ರೆಹೇಳಿ ರೂಪಾಯಿ ಕೊಡುವಲ್ಲಿ ಹತ್ತಾಣೆ ಭಾಗದಷ್ಟು ಕೊಟ್ಟು ಕಳುಹಿಸುವಲ್ಲಿ ಯಶಸ್ವಿಯಾದಳು ಸಿವನೇ....

ಸದರಿ ಪಟ್ಟಣದಲ್ಲಿ ಚೆನ್ನೋಬುಳ ನರಸಿಂಹ ಸ್ವಾಮಿಯೇ ಯಂದು ಯಂಕೋಬಸಾಸ್ತ್ರಿಗಳು ಸಾಲಿಗ್ರಾಮವನ್ನು ಮುಟ್ಟಿ ನಮಸ್ಕರಿಸುವುದಕ್ಕೂ ಹಂದರಾವಳಿತದಲ್ಲಿದ್ದ ತಮ್ಮ ದೀನ ಬಂಧು ವೆಂಪಾಟಿ ಯವರಿಂದ ವಂದು

ಸುದೀರ್ಘ ಪತ್ರವನ್ನು ಹೊತ್ತು ಗರುಡ (ಪಾರಿವಾಳವದರ ಹೆಸರು) ಹಾರಿಬಂದು ತಮ್ಮೆದುರು ಕೂಡ್ರುವುದಕ್ಕೂ ಸರಿಹೋಯಿತು. ಲಗು ಬಗೆಯಿಂದ ಬಿಚ್ಚಿಕೊಂಡರು.. ಕಣ್ಣಿದುರಿಗೆ ಹರಡಿ ಹಿಡಿದುಕೊಂಡರು. ಕಯ್ಯಬರಹದ ಸುದೀರ್ಘ ವಕ್ಕಣಿಕೆ ಅದರಲ್ಲಿತ್ತು. ಯಿಲ್ಲಿ ಯೇನು ಜರುಗಿತ್ತೋ ಅದು ಅಲ್ಲೂ ಜರುಗಿತ್ತು. ಥಾಮಸು ಮನ್ರೋ ಮುಂದೊಂದಿವಸ ಸ್ರೀವಯಿಷ್ಣವ ಧರುಮಕ್ಕೆ ಮತಾಂತರಗೊಳ್ಳಲಿರುವನೆಂಬ ಸೂಚನೆಯೂ ಅದರಲ್ಲಿತ್ತು. ವೆಂಪಾಟಿಯವರು ಮನ್ರೋನು ಜನುಮ ತಾಳಿರ ಬೌದಾದ ನಕ್ಷತ್ರತಿಥಿ ವಾರ ಕರಣಗಳನ್ನು ಮಾಹಿಸಿ ಯಿಂಥ ಅಲ್ಲೋಲ ಕಲ್ಲೋಲದಾಯಕ ನಿರ್ಣಯಕ್ಕೆ ಬಂದಿದ್ದರು. ಮತಾಂತರ ಸಂಬಂಧೀ ಯಿದಿ ಯಿಧಾನ, ಸಾಧಕ ಬಾಧಕಗಳ ಬಗ್ಗೆ ಯಿವರಣೆ ಆಪೇಕ್ಷಿಸಿದ್ದರು. ಯಿಂಥದ್ದೊಂದು ಅತಿಮಾನುಷಮೂ, ಅಲವುಕಿಕಮೂಆದ ಘಟನ ಕುಂತಳ ಪ್ರಾಂತದಲ್ಲಿ ನಡೆಯಿತೇ? ನಡೆದಿದ್ದಲ್ಲಿ ಸಾಮಾಜಿಕರ ಸ್ಥಿತಿಗತಿಗಳೇನು? ಹೆನ್ರಿಯ ಯಕ್ತಿತ್ವದಲ್ಲಿ ಹಿಂದೂ ಪರ ವಲವುಗಳು ಗೋಚರವಾಗಿರುವವೇ? ಆಗಿದ್ದಲ್ಲಿ ಆತ ತಮ್ಮ ಸ್ರೀ ವಯಿಷ್ಣವ ಮತಾವಲಂಭಿಯಾಗ ಬೌದೇ? ವಯಿಷ್ಣವ ಧರುಮದ ಪುನರುತ್ಥಾನಕ್ಕೆ ಹೆನ್ರಿನೇತ್ರುತ್ವದ ಸರಕಾರ ಯಾವ ಯಾವ ಕಾರ್‍ಯಕ್ರಮ ಗಳನ್ನು ಹಮ್ಮಿಕೊಳ್ಳಲಿರುವುದು.. ವಗಯ್ರೆವಗಯ್ರೆ..

ಅತಿಮಾನುಷ ಶಕ್ತಿಯನ್ನು ವಳಗೊಳಗೇ ಶ್ಲಾಘಿಸಿದ ಸಾಸ್ತ್ರಿಗಳು ತಾಮೂವಂದು ಸುದೀರ್ಘ ಪತ್ರವನ್ನು ಅನುಷ್ಟುಪ್ ಛಂದಸ್ಸಿನಲ್ಲಿ ರಚಿಸಿದರು. “ಹೆನ್ರಿಅಂತರ್ಗತ ಮರ್ಕಟಸ್ಯಃ ಮರ್ಕಟಂತರ್ಗಸ್ಯಾ ಹೆನ್ರಿಃ” ಅದು ಸಾದ್ಯಂತ ಮುಂದುವರಿದಿತ್ತು. ವಾಹಕ ತರಲೆಂದು ಸೇವಕನನ್ನು ಕಳಿಸಿದರು. ಸಾಸ್ತ್ರಿಗಳ ಪತ್ರವನ್ನು ಕಾಲಿಗೆ ಕಟ್ಟಿಸಿಕೊಂಡು ಗರುಡ ರೆವ್ವನೆ ಹಾರಿತು.. ಅದು ಹಾರೂತ ಆಕಾಸದ ಹೆಬ್ಬಯಲೊಳಗ ಚುಕ್ಕಿಯಾಗಿ ಕರಗುವ ತನಕ ನೋಡೂತ ಸಾಸ್ತ್ರಿಗಳು ನಿಂತಿರುವಾಗ್ಗ....

ಅತ್ತ ಕಳ್ಳ ಕಾಕರ ಮುಖಂಡನಾದ ಸಂಭುಗನು ತನಗ ಬೇಕಾದ ಮಂದೀನ ಕರಕೊಂಡು, ಬೇಕಾದ ಹತಾರಗಳನ್ನು ತಗೊಂಡು ವಾರ ದಿನಮಾನ ಮೇದು ಬಲಿತಿದ್ದ ಕತ್ತೆಗಳ ಮ್ಯಾಲ ಕೂಕಂಡು ಪ್ರಯಾಣ ಹೊಂಟಾss ಹೊಂಟಾss ಹೊಂಟೇ ಬಿಟ್ಟನು...

ಅತ್ತ ಆಕಾಸ ರಾಮಣ್ಣನು ಬಲಗಯ್ಲಿ ತಂಬೂರಿ, ಯಡಬಗಲಲ್ಲಿ ಜೋಳಿಗೆ, ಪಾದದಡಿ ಪಾವುಡ, ತಲೆ ಮ್ಯಾಲ ಪಗಡ, ಹಣೆ ಮ್ಯಾಲ

ಯಿಬತ್ತಿಕುಂಕುಮ, ಯದೆ ಮ್ಯಾಲ ತರಾವರಿ ರುದ್ರಾಕ್ಷಿ ಮಾಲೆಗಳು, ಮುಂಡ ಮುಚುವಂತೆ ಕೆಂಪನೆಯ ದೋತರ, ಅಂಗಿ ಧರಿಸಿಕೊಂಡು ಮುದ್ದಾಪ್ರ, ಸಿದ್ದಾಪ್ರ, ಗುದ್ದಾಪ್ರಯಂಬ ತ್ರಿವಳಿ ಮೂರುಗಳನ್ನು ದಾಟಿ ಮೀಸೆಮ್ಮ, ಗಡ್ಡಮ್ಮ ರೆಂಬ ಅವಳಿ ದೇವತಾ ಸಹೋದರಿಯರು ವಡ ಮೂಡಿರುವಂಥಾ ಅಯಿಸಿಲ ಯಂಬ ಹೋಬುಳಿ ಗ್ರಾಮದ ಕಡೇಕ ನಡಕೋತ ನಡಕೋತ ಹೊಂಟಿದ್ದನು.

ಮುಂದಕ ಆತ ತಲುಪಿದ..

ಅಯಿಸಿಲ ಯಂಬ ಮೂರು ಅಸೋಕ ಚಕ್ರವರ್ತಿ ಕಾಲದಲ್ಲಿ ಭೋ ದೊಡ್ಡ ಪಟ್ಟಣವಾಗಿತ್ತು. ಅಲ್ಲಿರೋ ಮೀಸೆಮ್ಮನ ಗಡ್ಡಮ್ಮಂದಿರೂ ಆ ಕಾಲದವರು.. ಆ ದೇಸದವರು ಕಳಿಂಗ ಯುದ್ದ ದಲ್ಲಿ ಕಷ್ಟ ಅನುಭೋಸಿದವರು.. ಲಚ್ಚಾಂತರ ಮಂದಿಯ ಸಾವಿಗೆ ಕಾರಕನಾದ ಅಸೋಕ ಚಕ್ರವರ್ತಿಗೆ ಸನ್ಯಾಸಿ ಆಗು ಯಂದು ಸಾಪ ಕೊಟ್ಟವರು... ಯರಡು ಕೋಡು ಗಲ್ಲುಗಳೊಳಗ ವಾಯುವಾಗಿ ಬಿಟ್ಟಂಥವರು.. ಮೀಸೆಯಾಕಾರದಲ್ಲಿದ್ದ ಕಲ್ಲಿಗೆ ಮೀಸೆಮ್ಮಯಂತಲೂ.. ಗಡ್ಡದಾಕಾರ ದಲ್ಲಿದ್ದ ಕಲ್ಲಿಗೆ ಗಡ್ಡಮ್ಮ ಯಂತಲೂ ಹೆಸರಾದರಂತೆ...

ಸದರೀ ಪಟ್ಟಣದೊಳಗಿರುವ ದೇವತೆಗಳಿಗೆ ದೂರ ದೂರಿನವರೂ ಸ್ರದ್ಧಾ ಭಕುತಿಯಿಂದ ನಡೆದುಕೊಳ್ಳುವರು. ದೇವತೆಗಳ ಪ್ರೀತ್ಯರ್ಥದಿಂದ ಪಯಿಪೋಟಿ ಮ್ಯಾಲ ಗಡ್ಡ ಮೀಸೆ ಬೆಳೆಸುವರು. ಯಷ್ಟು ವುದ್ದಕ ಅಂದರ ಅಷ್ಟುದ್ದಕ.. ಕೇವಲ ಪವುರಾಣಿಕವಾಗಿ ಮಹತ್ವ ಪಡೆದಿದ್ದ ಗಡ್ಡ, ಮೀಸೆಗಳಿಗೆ ಅಯ್ತಿಹಾಸಿಕ ಮಹತ್ವ ಪ್ರಾಪ್ತವಾದದ್ದು ಸಿಂಗರೇಣಿಯ ಸಿಂಗಮನಾಯಕನ ಕಾಲದಲ್ಲಿ.. ಆತ ಹರೇವಿಗೆ ಬಂದರೂ ಮುಖದ ಮ್ಯಾಲ ಅವುಷಧಕ್ಕೆ ಬೇಕೆಂದರೂ ವಂದೇ ವಂದು ರೋಮ ಕಾಣಿಸಿಕೊಂಡಿರಲಿಲ್ಲ.. ಮೀಸೆಯಿಲ್ಲದ, ಗಡ್ಡಯಿಲ್ಲದ ಹೆಂಗಸಿನಂಗದಾನ ಯಂದಾಡಿ ಯಾರೊಬ್ಬರು ಆತಗ ಪಿಳ್ಳೆ ಕೊಡಲಿಲ್ಲ.. ತನ್ನ ಪ್ರಧಾನ ಮಂತ್ರಿಗುರುವಯ್ಯನ ಸೂಚನೆಯಂತೆ ಅಯಿಸಿಲಕ್ಕ ಹೋಗಿ ಮೀಸೆಮ್ಮ ಗಡ್ಡಮ್ಮಂದಿರನ್ನು ಬೇಡಿಕೊಂಡ.. ಅದಾದ ವಾರೊಪ್ಪತ್ತಿನಲ್ಲಿ ಆತನ ಮುಖದ ಮ್ಯಾಲ ಮೊಳಕೆ ಚಾಚಿದ ರೋಮರಾಜಿಯು ವಂದೆಲ್ಡು ತಿಂಗಳೊಪ್ಪತ್ತೊಳಗ ಪುಷ್ಕಳವಾಗಿ ಯಲ್ಲಂದರಲ್ಲಿ ದಟ್ಟವಾಗಿ ಕರ್‍ರಗ ಬೆಳೆದು ನಿಂತಿತಂತೆ. ಆಗ ಕುವ್ವಾಡ ಮಾಡಿದ್ದವರೇ ನಾ ಮುಂದು, ತಾ ಮುಂದು ಅಂತ ಬಂದು ಪಿಳ್ಳೆಗಳನ್ನು ಕೊಟ್ಟರು. ರೋಮಸಾಮುರಾಜ್ಯದಧಿದೇವತೆಗಳ ಪ್ರೀತ್ಯರ್ಥವಾಗಿ ನಾಯಕನು

ತನ್ನ ರಾಜ್ಯದೊಳಗೆ ಹಜಾಮತಿಯನ್ನು ಕಟ್ಟು ನಿಟ್ಟಾಗಿ ನಿಷೇಧಿಸಿದನು. ಕುಲ ರುತ್ತಿಬಿಟ್ಟ ಹಜಾಮರಿಗೆ ಪುನರ್ವಸತಿ ಮಾಡಿಕೊಟ್ಟನು. ಯಷ್ಟೋ ಮಂದಿ ಹಜಾಮರು ಅಲ್ಲಿಂದ ಪಲಾಯನಗಯ್ದು ಕುಂತಲಸೀಮೆಯನ್ನು ಸೇರಿಕೊಂಡರು(ಕುದುರೆಡವರಸರ ಆಸ್ಥಾನ ಕ್ಷವುರಿಕನಾಗಿರುವ ನಾದಿರ ಗೋಯಿಂದನ ಮುತ್ತಾತ ಯಂಟೇಸುವು ಅಲ್ಲಿಂದ ಯಿಲ್ಲಿಗೆ ವಲಸೆ ಬಂದಿದ್ದನು).

ಸಿಂಗಮ ನಾಯಕನು ತನ್ನ ಆಡಳಿತಾವಧಿಯಲ್ಲಿ ಜಾರಿಗೆ ತಂದ ಘನ ಕಾರ್ಯಗಳು ವಂದಾ, ಯರಡಾ!.. ಪ್ರತಿ ಸಂವತ್ಸರ ಪಾಲ್ಗುಣ ಮಾಸ ತ್ರಯೋದಸಿ ಮೂಲಾ ನಕ್ಷತ್ರದಂದು ಯಳೆದು ಜಾತ್ರೆಮಾಡಲಕಂತ ಜೋಡು ರಥಗಳನ್ನು ಮಾಡಿಸಿದ್ದಲ್ಲದೆ ಸಾವುರೆಕರೆ ಜಮೀನನ್ನು ಯಿನಾಮಿನ ರೂಪದಲ್ಲಿ ನೀಡಿದನು. ದೂರದಮರಾವತಿ ಪಟ್ಟಣದಿಂದ ಪೆದಗಂಟಾಸಾಸ್ತ್ರಿ, ಚಿನಗಂಟಾಸಾಸ್ತ್ರಿಯಂಬವಳಿ ಸೋದರರನ್ನು ಕರೆಯಿಸಿ ಮೀಸೆಮ್ಮ, ಗಡ್ಡಮ್ಮ ಪುರಾಣವನ್ನು ನಾರಿಕೇಳಪಾಕ ಯಂಬ ಛಂದಸ್ಸಿನಲ್ಲಿ ಬರೆಯಿಸಿ ತೆಲುಗು, ಅರವ ದೇಸಗಳಲ್ಲಿ ವುಚಿತವಾಗಿ ಹಂಚಿಸಿದನು. ಮುಖ್ಯವಾಗಿ ಸತ್ಪತಿಯಂಬ ವುಭಯ ಭಾಷಾ ಪಂಡಿತರ ಕಯ್ಯಿಂದ ಅದನ್ನು ವರಿಯಾ ಭಾಷೆಗೆ ಅನುವಾದಿಸಿ ಕಳಿಂಗ ನಾಡಿನ ತುಂಬೆಲ್ಲ ಪ್ರಚಾರಮಾಡಿದನು. ಅದರ ಪರಿಣಾಮವಾಗಿ ಕಳಿಂಗ ನಾಡಿನ ಮೂಲೆ ಮೂಲೆಗಳಿಂದ ಭಕುತರು ಅಯಿಸಿಲಕ್ಕೆ ಬರು ವಂತಾಯಿತು. ನಾಯಕನ ದೂರದ್ರುಸ್ಟಿಯ ಪರಿಣಾಮವಾಗಿಯೆ ಜಾತ್ರೆಸಂದರ್ಭದಲ್ಲಿ ಮೀಸೆ ಗಡ್ಡ ಸ್ಪರ್ಧೆ ಪ್ರದರ್ಯನವು ನಡೆಯುತ್ತಿರುವುದು. ಅದಕ್ಕೆಂದೇ ಚಿನ್ನದ, ಬೆಳ್ಳಿಯ ಪದಕಗಳನ್ನು ಯಿಜೇತರಿಗೆ ನೀಡಲಾಗುವುದು. ಅಂಥ ಯಿಜೇತರಿಗೆ ಸಂದರ್ಸಕ ಪ್ರಾಧ್ಯಾಪಕ ಹುದ್ದೆ ನೀಡಿ ಮೀಸೆ ಗಡ್ಡವನ್ನು ಹೇಗೆ ಬೆಳೆಸಿದೆವು, ಬೆಳೆಸುವಾಗ ತಾವು ಸೇವನೆ ಮಾಡಿದ ಪವುಷ್ಠಿಕ ಆಹಾರಗಳು ಯಾವುವು? ತಮ್ಮ ಮುಖ ಗಳಿಂದ ಗಡ್ಡ ಮೀಸೆಗಳನ್ನು ಕದಿಯುವ ಕಾನೂನುಬಾಹಿರ ಪ್ರಯತ್ನಗಳು ನಡೆದ ಬಗ್ಗೆ, ತಾವು ಕಯ್ಯಿಕೊಂಡ ರಕ್ಷಣೋಪಾಯಗಳ ಕುರಿತು ಯಂಬಿವೇ ಮೊದಲಾದ ಯಿಷಯಗಳನ್ನು ಕುರಿತು ವುಪನ್ಯಾಸ ನೀಡಲು ಪಾಠಶಾಲೆಯಿಂದ ಹಿಡಿದು ಯಿಸ್ವಯಿದ್ಯಾಲಯಗಳವರೆಗೆ ಸೂಕ್ತ ಗವುರವಧನ ನೀಡಿ ಕಳಿಸುತ್ತಿದ್ದರು. ಪಡುವಣಕ್ಕಿರುವ ದ್ರೋಣಾಚಲಂ ಯಿಸ್ವ ಯಿದ್ಯಾಲಯದಲ್ಲಿ ರೋಮ ಯಿಗ್ನಾನ ಸಂಸ್ಥೆಯನ್ನು ಸಿಂಗಮ ನಾಯಕನ ದೇಣಿಗೆಯಿಂದ ಸ್ಥಾಪಿಸಲಾಗಿದೆ. ಮತ್ತು ಭಾಷಾ ಅಧ್ಯಯನ ಯಿಭಾಗ ದಲ್ಲಿ ಮೀಸೆ ಗಡ್ಡವನ್ನು ಸ್ರುಜನಸೀಲವಾಗಿ

ನೋಡಲಾಗುತ್ತಿದೆ.. ಸಿಂಗಮನಾಯಕನ ದೇಹಾಂತ್ಯದ ನಂತರದ ವರುಷಗಳಲ್ಲಿ ಹಿಂದಿನ ಬಿಗುವು ವುಳಿಯಲಿಲ್ಲ. ನಗದು ಬಹುಮಾನ ಪ್ರಸಸ್ತಿಗಳ ದುರಾಸೆ ಯಿಂದಾಗಿ ಗಡ್ಡ ಮೀಸೆಗಳನ್ನು ವುಪಾಯಾಂತರದಿಂದ ಕದಿಯುವವರ, ಲಂಚರುಷುವತ್ತು ನೀಡಿ ತಮ್ಮ ವಂದು ಮೊಳ ಗಡ್ಡಕ್ಕೆ ಮೂರು ಮೊಳಯಂದು ನ್ಯಾಯಾಧೀಶರಿಂದ ಪ್ರಮಾಣ ಪತ್ರತರುವವರ ಹಾವಳಿ ಯಿತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಅಪಾತ್ರರೂ, ಅಯೋಗ್ಯರೂ ಯಿಜ್ರುಂಭಿಸುತ್ತಿರುವುದು ಸಾಮಾನ್ಯ ಸಂಗತಿಯಾಗಿರುವುದು. ವಂದು ವುದಾಹರಣೆ ಹೇಳಲಕಂದರೆ ತಾನು ಪ್ರಧಾನಮಂತ್ರಿಗುರುವಯ್ಯನ ಮೊಮ್ಮಗಯಂಬ ಕಾರಣದಿಂದ ಸತ್ಯರಾಜು ತನ್ನ ಕ್ರುತಕ ಗಡ್ಡ ಮೀಸೆಗೆ ಚಿನ್ನದ ಪದಕ ವುತ್ತು ಹತ್ತು ಸಹಸ್ರಗದ್ಯಾಣಗಿಟ್ಟಿಸಿಕೊಂಡ ಯಂದರೆ ನೀವೇ ಮೂಹಿಸಿಕೊಳ್ಳಿ.. ಯಿರಲಿ.. ಯಿದೆಲ್ಲ ಹೇಳುತ್ತ ಹೋದರೆ ಮೀಸೆ ಗಡ್ಡದ್ದೇ ದೊಡ್ಡ ರಾಮಾಯಣ ಆದೀತು.

ಚಿನ್ನೆಂಕಟಾಪುರದಿಂದ ಬೆಳಗ್ಗೆ ಹೊಂಟ ಆಕಾಸರಾಮಣ್ಣಾವಧೂತರು ಅಯಿಸಲದ ಕೊಂಡಾರೆಡ್ಡಿ ಬುರುಜಿನ (ಕೊಂಡಾರೆಡ್ಡಿ ಯೀ ಬುರುಜು ಕಟ್ಟಿಸಿದ್ದರ ಹಿಂದೆ ಬಹುದೊಡ್ಡ ಕಥೆ ಯಿರುವುದು..) ನನಿಹಕ್ಕೆ ಬಂದಾಗ ಮಟಮಟ ವುದ್ಯಾಣವಾಗಿತ್ತು. ಬೀದಿ ಬೀದಿಗಳನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ನೆಲವನ್ನು ರಂಗವಲ್ಲಿಗಳಿಂದ ಅಲಂಕರಿಸಲಾಗಿತ್ತು. ಶ್ರೀ ಶ್ರೀ ಶ್ರೀ ಆಕಾಸರಾಮಣ್ಣಾವಧೂತ ಮಹರಾಜರಿಗೆ ಸುಸ್ವಾಗತ ಯಂಬ ತ್ರಿವರ್ಣಕ್ಕಸರಗಳಿದ್ದ ಪಲಕಗಳನ್ನು ಯಲ್ಲಂದರಲ್ಲಿ ತೂಗು ಬಿಡಲಾಗಿತ್ತು.. ನೂರೊಂದು ತರುಣಿಯರು ತಮ ತಮ್ಮ ತಲೆ ಮ್ಯಾಲ ಪೂರ್ಣ ಕುಂಭಗಳನ್ನು ಹೊತ್ತು ನಿಂತಿದ್ದರು.. ಡೊಳ್ಳು, ಹಲಗೆ, ತಮ್ಮಟೆ, ವಾಲಗ, ವಾದ್ಯಗಳು ವಂದೇ ಯರಡೇ ಸಿವ ಸಿವಾss.. ಪ್ರತಿಯೊಬ್ಬರ ಮುಖದ ಮ್ಯಾಲೂ ಪಯಿಪೋಟಿಗೆ ಬಿದ್ದು ಛಲದಿಂದ ಬೆಳೆ ಬೆಳೆಯುತ್ತಲೇ ಯಿರುವ ಗಡ್ಡ ಮೀಸೆಗಳು, ಅವಧೂತರದ್ದೂಸಹ ಅವರಿಗಿಂತ ಕಡಿಮೆಂಯೇನಿರಲಿಲ್ಲ.. ದಯವಾನುಗ್ರಹದಿಂದಾಗಿ ವರುಷೊಪ್ಪತ್ತಿಗೆ ಬರ ಬೇಕಾಗಿದ್ದ ಬೆಳೆ ಮೂರು ನಾಕು ತಿಂಗಳಿಗೇನೆ ಪುಷ್ಕಳವಾಗಿ, ವಯಿವಿದ್ಯಮಯವಾಗಿ ಬೆಳೆದು ಯಷ್ಟು ಸಾಧ್ಯಮೋ ಅಷ್ಟನ್ನೂ ಮರೆಮಾಚಿಬಿಟ್ಟಿತ್ತು. ಆಸ್ತೀಕ ಭಾವದ ಗ್ರಾಮಸ್ಥರು ಮಂತ್ರಮುಗ್ಧರಾದರು, ಪೂರ್ಣ ಕುಂಭಗಳ ಸ್ವಾಗತ ನೀಡುತ ಕರೆದೊಯ್ದರು.. ಯೇರುಪಾಡು ಮಾಡಿದ್ದ ಬಿಡದಿ ಮನೆಗೆ...

ಅವಧೂತರಿಗೆ ಯಾವುದಕ್ಕೂ ಅಡಚಣೆಯಿರಲಿಲ್ಲ. ಸ್ನಾನ ಸಂಧ್ಯಾವಂದನೆ ನಂತರ ಮೀಸೆಗಡ್ಡಮ್ಮಂದಿರ ಪಯಿತ್ರದರುಸನ ಪಡೆದುಕೊಂಡರು.. ಲಘು ಆಹಾರ ಸೇವನಾನಂತರ ಅಲುಪ ಸೊಲುಪ ಯಿಸ್ರಾಂತಿ.. ಚಾವಡಿಗೆ ಹತ್ತಿರವೇ ಯಿದ್ದ ದೇವುಳದ ಯಿಶಾಲ ಪ್ರಾಂಗಣದಲ್ಲಿ ನಿರೀಕ್ಷೆಗೆ ಮೀರಿ ಪ್ರಜೆಗಳು ಆಗಮಿಸಿದ್ದರು. ಜಯಕಾರದ ನಡುವೆ ಯೇದಿಕೆಗೆ ಆಗಮಿಸಿದ ಅವರು ಕಳ್ಳತನ ಸಮಾಜದ ಬಹುದೊಡ್ಡ ಶತ್ರು, ಪರರ ಸೊತ್ತನ್ನು ಕಣ್ಣೆತ್ತಿ ನೋಡಬಾರದು ಯಂಬ ಸಾರಾಂಶದ ಪದಗಳನ್ನು ಹಾಡಿದರು. ಯೀ ಕುರಿತು ಜನರಿಂದ ಪ್ರತಿಗ್ನೆಯನ್ನೂ ಮಾಡಿಸಿದರು. ಯಂಥಾ ಮಾತಪಾ, ಯಂಥಾ ಮಾತಪಾ ಯಂದು ಜನತಲೆದೂಗಿದರು. ಸಾರ್ಥಕ ಭಾವ ಅನುಭವಿಸುತ್ತ ಅವಧೂತರು ತಮಗೆ ಯವಸ್ಥೆ ಮಾಡಿದ್ದ ಬಿಡದಿ ಮನೆಯೊಳಗೆ ಯಿಸ್ರಮಿಸಿಕೊಂಡರು. ಬಾಗಿಲು, ಕಿಟಕಿ, ಬೀಗಗಳಿಂದ ಮುಕ್ತಗೊಂಡ ಆದರ್ಸ ರಾಜ್ಯಮೊಂದು ಅವರ ಕಣಸಿನಲ್ಲಿ ಸ್ಥಾಪನೆಗೊಂಡಿತು...

ಯಥಾ ಪ್ರಕಾರ ಮುಂಗೋಳಿ ಕೂಗಿನೊಡನೆ ಯಚ್ಚರಗೊಂಡರು. ತಮ್ಮ ಸರೀರದ ರುಂಡಭಾಗವು ಅಳಾರಗೊಂಡಿರುವಂತೆ ಭಾಸವಾಯಿತು. ಅಕಸ್ಮಾತ್ತಾಗಿ ನೀವಿಕೊಳ್ಳಲಕೆಂದು ಹಾಕಿದ ಕಯ್ಗೆ ಗಡ್ಡವಾಗಲೀ, ಮೀಸೆಯಾಗಲೀ ತಗುಲಲಿಲ್ಲ.. ಬೆಳಕು ಹರಿದಂತೆ ಅವಧೂತರ ಮುಖದಿಂದ ಗಡ್ಡಮೀಸೆಗಳು ಕಾಣೆಯಾಗಿವೆ ಯಂಬ ಸುದ್ದಿಯು ಪಟ್ಟಣದ ತುಂಬೆಲ್ಲ ಹಬ್ಬಿಬಿಟ್ಟಿತು.. ಅವುಗಳನ್ನು ಹುಡುಕಲಕೆಂದು ಕೆಲವು ತರುಣರು ಮೂಲೆ ಮೂಲೆಗೆ ಮೋಡಿದರು.. ಆದರೆ ಅವಧೂತರ ಗಡ್ಡ ಮೀಸೆಗಳು ಸದರಿಪಟ್ಟಣದ ಪಾಲಕನಾದ ಹೆಡ್ರಾಮಿನಾಯಕನ ಮುಖವನ್ನಲಂಕರಿಸಿದ್ದವು ಯಂಬ ಸತ್ಯ ಅರಿವಾದೊಡನೆ ಶ್ರೀ ಶ್ರೀ ಶ್ರೀ ಆಕಾಸ ರಾಮಣ್ಣಾವಧೂತರು...

ಅತ್ತ ಬಡಗಣ ದಿಕ್ಕಿನ ಶಾನೇ ದೂರದಲ್ಲಿ ವನಪರ್ತಿ, ಕುಂದರ್ತಿ, ವೆಲುದುರ್ತಿ, ಚಿಲಕಮರ್ತಿ ಯಂಬ ನಾಕು ವೂರುಗಳ ವಂದು ಪುಟ್ಟ ಸಮುಸ್ಥಾನ ಯಿರುವುದೆಂಬ ಸಂಗತಿ ಯೀ ಪ್ರಕಾರ ಪುಣ್ಯಸ್ರವಣಿಕರಿಗೆ ಯಾವತ್ತೋ ತಿಳಿದುಂಟಲ್ಲ. ಕಳುವು ಭಾವನೆ ಆಲೋಚನೆಗಳು ತನ್ನ ಗಂಟಲೊಳಗೆ ಸೇರಿಕೊಂಡ ಲಾಗಾಯ್ತು ಸುಡುಗಾಡೆಪ್ಪಾವಧೂತರು ಹಗಲು ಹೊತ್ತಿನೊಳಗ ವಯಿರಾಗ್ಯದ ಸಾಕಾರ ಮೂರ್ತಿಯೂs ರಾತಿರಿ ಆಯಿತೆಂದರೆ ದರೋಡೆ ಚಿಂತನೆಯ ಯಿಕಾರ ಮೂರ್ತಿಯೂ ಆಗಲಕ ಹತ್ತಿ ಬಿಟ್ಟಿದ್ದರು. ನಾಮಕಾವಸ್ಥೆ

ಯಜಮಾನಿಕೆಯ ಸ್ಥಾನದಲ್ಲಿದ್ದ ಸೀಲಿಂಗನ ಗವುಡ, ಮರಿಲಿಂಗನ ಗವುಡರ ಖಾಸಾ ಕುದುರೆಯನ್ನು ಪಡಕೊಂಡಿದ್ದರು. ಅದು ವಾಯುಯೇಗದಲ್ಲಿ ಮೋಡಬಲ್ಲಂಥ ಪಂಚಕಲ್ಯಾಣಿಯಾಗಿತ್ತು. ಕಳುವುಕಲೆ ಕುರಿತು ಬೋಧ ಮಾಡೀ ಮಾಡಿ ತನ್ನ ಸಿಷ್ಟ ವರ್ಗದ ಅನೇಕರನ್ನು ನಿಷ್ಣಾತಕಳ್ಳರನ್ನಾಗಿ ಮಾಡಿಬಿಟ್ಟಿದ್ದರು. ಸೂರ್ಯಾಸ್ತವಾದೊಡನೆ ಅವಧೂತತನವನ್ನು ಸಂದೂಕದೊಳಗ ಭದ್ರಪಡಿಸಿ ಕಣ್ಣಷ್ಟೆ ಹೊರತುಪಡಿಸಿದಂತೆ ಕಪ್ಪನೆಯ ನಿಲುವಂಗಿಯನ್ನು ನಖಸಿಖಾಂತ ಧಾರಣ ಮಾಡಿ ಕುದುರೆಯೇರಿ ಕೆಂಚನಗುಡ್ಡ, ಕಲಕಂಭ, ಸುಳುವಾಯಿ ಯಿವೇ ವೊದಲಾದ ದೂರದೂರುಗಳಿಗೆ ಹೋಗಿ ದರೋಡೆ ಕಾರ್ಯವನ್ನು ಲೀಲಾಜಾಲವಾಗಿ ಮುಗಿಸಿ ಅದರ ಹೇರಳ ಫಲವನ್ನು ಕುದುರೆ ಮ್ಯಾಲ ಹೇರಿಕೊಂಡು ರಾತಿರೋರಾತಿರಿ ಸೊಸ್ಥಳ ಸೇರಿಕೊಂತಿದ್ದರು... ಹೇರಳ ಸಂಪತ್ತನ್ನು ಗಳಿಸಿ ಸದರೀ ಸಮುಸ್ಥಾನದ ವಡೆಯ ತಾವಾಗಬೇಕೆಂಬ ಕಣಸು ಕಾಂಬುತಲಿದ್ದರು.. ಹೀಗಿರುತ್ತಿರಲಾಗಿ ವಂದಿವಸ ಯೇನಾಯಿತೆಂದರೆ..

ಕಂತಳ ಪ್ರಾಂತವಂದಲ್ಲದೆ ದೂರ ದೂರದ ಪ್ರಾಂತಗಳಲ್ಲೂ ಸಹ ಜನ ಜೀವನದ ಸಯ್ಲಿಯು ನಿಧ ನಿಧಾನವಾಗಿ ಬದಲಾಗುತಲಿದ್ದಿತು. ಮೂರರಂಕೆಯು ಆರರಂಕೆಯ ಯಾಸವನ್ನು, ಆರರಂಕೆಯು ಮೂರರಂಕೆಯ ಯಾಸವನ್ನು .. ಸಿವ ಸಿವಾ...

ವಡಲೊಳಗಿನ ವುದಕವು ತುಳುಕಾಡಧಾಂಗ ವರ್ತಮಾನವನ್ನು ಭೋಗ್ಯ ಮಾಡಿಕೊಂಡಿದ್ದ ಕುದುರೆಡವು ಪಟ್ಟಣದೊಳಗ ಹಿಂದು ಮುಂದಿನ ನಡುವೆ ಲಜ್ಜೆಯ ರಂಗವಲ್ಲಿಯ ಲಕ್ಷ್ಣಗೆರೆ ಯಲ್ಲಂದರಲ್ಲಿ ಮೂಡಿತ್ತು ಸಿವನೇ, ಯಿಂಥ ಹೆದರಿಕೆಯ ಹೊತ್ತಿನಲ್ಲೇ ಸಾಬಯ್ಯಗ ಹರೇವು ಬಂದಿರುವುದೆಂಬ, ಹರೇವು ಸಾಂಬಯ್ಯಗ ಮತ್ತವಲಿದಿರುವುದೆಂಬ ಸಂಗತಿ ಲೋಬಾನದ ಹೊಂಗೆ ಹಾಂಗ ಪಟ್ಟಣದ ತುಂಬೆಲ್ಲ ಹರಡಲಕ ತಡಾ ಮಾಡಲಿಲ್ಲ. ಸಾಂಬಯ್ಯ ಹೆಂಗೆಂಗೋ ಆಗವನೆ ಯಂದು ತಮ ತಮ್ಮ ಹೆಂಡಂದಿರು ಕುವ್ವಾಡಕ ಹೇಳುತಿರುವರೆಂದೇ ಭೋಪಾಲು ಗಂಡಂದಿರು ಯಿ ತನಕ ತಿಳಕೊಂಡಿದ್ದರು. ವದಗಿರುವ ಹರೇವನ್ನು ಹೆಂಗ ಅನುಭವಿಸುತಲಿರುವನು? ತನ್ನ ಸರೀರದ ಮ್ಯಾಲ ಹೆಂಗ ಹದ ಪಡಕೊಂಡ? ತನ್ನ ಸರೀರದ ಅಯಿಭಾಜ್ಯವಾಗಿದ್ದ ಸುಕ್ಕುಗಳನ, ರುದ್ರಾಪ್ಯವನ ಅದೆಂಗ ಮಾಯ ಮಾಡಿಕೊಂಡಿರುವನಾ ಮಯಾವಿ ಯಂಬ ಅನುಮಾನಗಳ ಪರಿಹಾರ ಮಾಡಿಕೊಳ್ಳುವ ಸಲುವಾಗಿ ಅರಮನೆಯ ಮುಂದ

ಸಾಲುಗಟ್ಟಿತು ಮಂದಿ.. ಅಗೋಅಲ್ಲಿ ತಮಸಾಂಬಯ್ಯ.. ತಲೆಯುನು ಕರ್ರೆಗೆವಾಡಿಕೊಂಡಿರುವ ಸಾಂಬಯ್ಯ, ಹಲ್ಲು ಕಟ್ಟಿಸಿಕೊಂಡಿರುವ ಸಾಂಬಯ್ಯ,ಯವ್ವನೋನ್ಮತ್ತ ಕುದುರೆಯಂಗಾಗಿರುವ ಸಾಂಬಯ್ಯ, ಕಣ್ಣೋಟ ಮಾತ್ರದಿಂದ ಬಸುರು ಮಾಡಿ ಬಿಡುವನಂತೆ ಕೆಕ್ಕರಿಸಿ ಹರೇದ ಹುಡುಗಿಯರನು ನೋಡುತಿರುವ ಸಾಂಬಯ್ಯ.. ತಮ್ಮ ಸಾಂಬಯ್ಯಗ ವಲಿದಿರುವ ಹರೆಯ ಮಾನಸ ಸರೋವರದಾಂಗಿರ ಬೇಕೇ ಹೊರತು ವಯಶಂಪಾಯನ ಸರೋವರವಾಗಬಾರದೆಂಬ ಕಾರಣಕ್ಕೆ ಅವನ ಮಗ್ಗುಲು ಸಾವುರ ಕಣ್ಣು ಮುಡುದು ನಿಂತಿರುವ ಜಡೆತಾತ, ಕಾಡುಗೊಲ್ಲರೀರಯ್ಯರಂಥ ಮುದೇರು.. ಯಿನ್ನೊಂದು ಮಗ್ಗುಲು ಸಾಂಬಯ್ಯಗ ಹರೆಯ ಹೆಂಗ ಬಂತು? ಯಾವಾಗ ಬಂತು? ಯಂದು ಮುಂತಾಗಿ ವಡಪು ಧಾಟೀಲಿ ಭಕುತಾದಿ ಮಂದಿಗೆ ಯಿಕ್ಷಕ ಯಿವರಣೆ ನೀಡುತಿರುವ ಗಂಟಲಯ್ಯ, ಜಾಗಟಯ್ಯಂದಿರು..

ಹವುದು.. ಹರೇವು ಬಂದಂಗದೆ.. ಪಟ್ಟಣ ಸೋಮಿಗಳೇ ಯಿ ನಿರ್ಧಾರಕ್ಕ ಬಂದಿರುವರೆಂದ ಮ್ಯಾಲ ತಾವ್ಯಾಕ ನಂಬಬಾರದೆಂದು ಮಂದಿ.. ಪಟ್ಟಣವು ಹಬ್ಬದೋಪಾದಿಯಲ್ಲಿ ಆಚರಣೆ ಮಾಡಿತು. ಸದರಿ ವರ್ತಮಾನವು ಸುತ್ತನ್ನಾಕಡೇಕ ಹಬ್ಬಿದ ಪರಿಣಾಮವಾಗಿ ಸುತ್ತನ್ನಾಕಡೇಕ ಯಿದ್ದ ಭಕುತಾದಿ ಮಂದಿ ಕುದುರೆಡವು ಪಟ್ಟಣಕ ಹರಿದು ಬರಲಾರಂಭಿಸಿದರು. ಸಣಿ ಮಾತುಮನ ಗುಡಿಗೆ ಹೋಗಿ ಕಾಯಿ ಕರುಪುರ ಮಾಡಿಸಿ ಸಿಮ್ಮಾಸನಾರೂಢ ರುದ್ದನ ಹರೇವಿನಿಂದ ಯಾದೇ ಅನಾಹುತ ಸಂಭವಿಸಧಾಂಗ ನೋಡಿಕೋ ಯಂದು ಪ್ರಾರ್ಥಿಸ ತೊಡಗಿದರು...

ಹಿಂಗs ವಂದಿವಸಾತು, ನಾಕು ದಿವಸಾತು..ಯಿನ್ನೇನು ಅಯ್ದನೇ ದಿವಸ ಮುಗಿತತೆ ಯಂಬುವಷ್ಟ ರಲ್ಲಿ....

ಖುದ್ದ ಸಾಂಬಯ್ಯನೇ ಮುದೇರಿಬ್ಬರನು ಯದುರಿಗೆ ಕುಂಡ್ರಿಸಿಕೊಂಡು ಯಜ್ಜಂದಿರಾ ನನ ಮಯ್ಯೊಳಗ ವಂದು ನಮೂನಿ ಯಾತನ ಕಾಣಿಸಿಕೊಂಡಯ್ತೆ..ಸರೀರದ ವಂದೊಂದು ಮೂಲೇನೂ ಯದ್ದೆದ್ದು ಕುಣು ಕುಣುದಾಡುತಾವ.. ಮಲಕ್ಕೊಂಡರ ರೆಪ್ಪೆಗೆ ರೆಪ್ಪೆ ಅಂಟುವಲ್ಲವು.. ಹಾಸಿಗೆ ತೋದು ವಜ್ಜೊಜ್ಜಲಾಗತಯ್ತೆ.. ಅದಕ ನನಗೊಂದು ಗಾವಾದ ಪಿಳ್ಳೇನ ತಗದು ಮದುವಿ ಮಾಡಾಕ ಬೇಕು ಯಂದು ಹೇಳಿದ್ದನ್ನು ಹಿಂದಕ ಯಿದ್ದ ಸಿಮ್ಮಾಸನ ಕೇಳಿಸಿಕೊಂತು, ಚಿತ್ತಾರದ ಕಂಭಕ್ಕೆ ಅಂಟರುಗಾಲು ಹಾಕಿದ್ದ ಬಲ್ಲೆಮ್ಮ ಕೇಳಿಸಿಕೊಂತು, ದಿವಾನ ಖಾಸಾದ ನಟ್ಟ ನಡುವೆ ಬೆಳೆಯುತಲಿದ್ದ ಆಳೆತ್ತರದ

ಹುತ್ತ ಕೇಳಿಸಿಕೊಂತು.. ಪಟ್ಟಣದ ಲಕ್ಷಾಂತರ ಕಿವಿಗಳು ಕೇಳಿಸಿಕೊಂಡವು.. ಅರಮನೆಯ ನವರಂಧ್ರಗಳಿಂದ ಜಿನುಗಲಾರಂಭಿಸಿದ ಸದರಿ ವರ್ತಮಾನವು ವಂದು ಗ್ರಾಮ ಅಂಬದೆ, ವಂದು ಮೂರು ಅಂಬದೆ ಪ್ರವಾಹದೋಪಾದಿಯಲ್ಲಿ ಹರಕೋತ ಹರಕೋತ....

ಅಗೋಚರವಾದದ್ದೊಂದು ಅಂಗಳದಾಗ ಬಂದಂಗಾತಲ್ಲ .. ಮನೆಯೊಳಗ ಬಂದಂಗಾತಲ್ಲಾ.. ತಮ್ಮ ಕಿವಿಯೊಳಗ ಬಂದಂಗಾತಲ್ಲ.. ಮಯ್ಯ ಸಂದುಗಳಲ್ಲಿ ಕಚಗುಳ್ಳಿ ಯಿಟ್ಟಂಗಾತಲ್ಲಾ.. ಯಿದೇನಿದ್ದೀತು?

ಅದೇ ಕಣರಪ್ಪಾ.. ಸಾಂಬಯ್ಯಗೆ, ಸಾಂಬವಿಯ ವರಪುತ್ರಂಗೆ, ಅದೇ ಕುದುರೆಡವಿನ ಅನಭಿಷಕ್ತ ಸಾಮ್ರಾಂಟಂಗೆ.. ಹೊದವಾರ ಹರೇವು ಕಾಣಿಸಿಕೊಂಡಿತಂತೆ.. ನಿನ್ನೆ ಅವಯ್ಯ ಪಿಳ್ಳೆ ಬಗಸವನಂತೆ...

ಹೆಣ್ಣು ಮಕ್ಕಳನು ಹಡಕೊಂಡಿದ್ದೋರು ಕುಂತಳ ಸೀಮೆಯೊಳಗ ಮಸ್ತುಮಂದಿ ಯಿದ್ದರಲ್ಲಾ.. ಅಂಥವರು ತಮ ತಮ್ಮ ಸಾಲಂಕ್ರುತ ಪಳ್ಳೆಗಳನು ಬೆನ್ನ ಹಿಂದ ಯಿಟುಕೊಂಡು ಕುದುರೆಡವ ಹಾದಿ ಹಿಡಿದರು. ಅರಮನೆಯ ದಸ್ತಾವೇಜುಗಳೊಳಗ ತಮ್ಮ ಪಿಳ್ಳೆಗಳ ನಾಮಾಂಕಿತಗಳನು ನೋಂದಣಿ ಮಾಡಿಸ ತೊಡಗಿದರು. ತಾವೇ ವರದಕ್ಷಿಣೆ, ವರೋಪಚಾರ ಕೊಟ್ಟು ಸೊಂತ ಖರಚೀಲೆ ತಮ್ಮ ಪಿಳ್ಳೆಗಳನು ಧಾರೆ ಯರದು ಕೊಡತೇವಿ ಯಂದು ಪಟ್ಟಣ ಸೋಮಿಗಳನ್ನಂಗಲಾಚ ತೊಡಗಿದರು. ಪಟ್ಟಣ ಸೋಮಿಗಳು ಯಿ ಪಿಳ್ಳೇನ ಮಾಡಿಕೋತಿಯಾ, ಆ ಪಿಳ್ಳೇನ ಮಾಡಿಕೋತಿಯಾ ಯಂದು ಕೇಳುತ್ತಿದ್ದ ಕಾವಯ್ಯನು ದಿಕ್ಕೇ ತೋಚದವನಂತಾಗುತ್ತಿದ್ದನು....

*   *   *   *

ಹ್ಹಾ.. ಹ್ಹಾ.. ನನ್ನ ರೂರಲ್ಲಿಂಡಿಯಾವೇ.. ಹೋ ಹೋ ನನ್ನ ರೂರಲ್ಲಿಂಡಿಯಾವೇ.. ಸಯ್.. ಸಯ್.. ನನ್ನ ರೂರಲ್ಲಿಂಡಿಯಾವೇ ಯಂದು ದಿವಸಕೊಂದು ಹತ್ತು ಸಲವಾದರೂ ವುದ್ಗಾರ ತೆಗೆಯೂತ ವಂದು ಮೂರು ಅಂಬದೆ ವಂದು ಗ್ರಾಮ ಅಂಬದೆ ವಂದು ಪಟ್ಟಣ ಅಂಬದೆ ತಿರುಗುತಲಿದ್ದ ಮನ್ರೋಸಾಹೇಬನು ತನ್ನ ಸರೀರದ ವಂದರ್ಧ ಭಾಗವನ್ನು ಜಮೀಂದಾರರಿಗೆ ಮೀಸಲಿಟ್ಟಿದ್ದರೆ ವುಳಿದರ್ಧ ಭಾಗವನ್ನು ಮೋಣಿ ಮೋಣಿಗಳಿಗೆ, ಸಂಧುಸಂದಿಗಳಿಗೆ, ಬೆಮರು ವಾಸಣೆಗೆ ಬೆನ್ನಿಂಗಟ್ಟಿದ್ದ ಹೊಟ್ಟೆಗಳಿಗೆ ಆಳಕ್ಕಿಳಿದ ಕಣ್ಣುಗಳಿಗೆ, ತರಾವರಿ ಯಿಸುಮಯಗಳಿಗಾಗಿ ಮೀಸಲಿಟ್ಟಿದ್ದನು. ಕಲಿಯೂತ, ಕಲಿಸೂತ

ಮನ್ರೋ ಸಾಹೇಬನು ಅಗೋ ಅಲ್ಲಿ ಅಂದರೆ ಯಿಲ್ಲಿರುತಲಿದ್ದನು. ಯಿಗೋ ಯಿಲ್ಲಿ ಅಂದರೆ ಅಲ್ಲಿರುತ ಲಿದ್ದನು.. ರೋಮಾಂಚನವನ್ನು ಬಿತ್ತಿ ಬೆಳೆಯೂತ, ಪುಳಕಗೊಳ್ಳುತ ಹಂದರಾದ ಯಡ ಬಲಕ ಸುಂಟರ ಗಾಳಿ ಹಾಂಗ ಸುಳಿ ದಾಡುತಲಿದ್ದನು. ಅವನ ರುದಯ ಯಂಬ ಹಕ್ಕಿಯು ಹ್ಹಾ.. ಹ್ಹಾ ನನ್ನ ರೂರ ಲ್ಲಿಂಡಿಯಾ, ಹೋ ಹೋ ನನ್ನ ರೂರಲ್ಲಿಂಡಿಯಾ ಯಂದು ಪದ ಕಟ್ಟಿ ಹಾಡುತಲಿದ್ದಿತು....

ಸೆಟ್ಟಿ ವುಳಕೊಂಡಲ್ಲಿ ಪಟ್ಟಣ ಅಂಬುತಾರಲ್ಲ ಹಂಗೆ ಥಾಮಸು ಮನ್ರೋ ಯಲ್ಲಿ ವುಳಕೊಳ್ಳತ ಲಿದ್ದನೋ ಅಲ್ಲೇ ವಂದು ಪಟ್ಟಣಯೇರುಪಡುತಲಿದ್ದಿತು. ಯೀ ಪ್ರಕಾರವಾಗಿ ಯೇರುಪಡುತಲಿದ್ದ ಪಟ್ಟಣದೊಳಗ ಸ್ಥಳೀಕರೊಂದೇ ಅಲ್ಲದೆ ಅಕ್ಕಪಕ್ಕದ ಗ್ರಾಮಸ್ಥರೂ ನಾ ಮುಂದು ತಾ ಮುಂದು ಅಂತ ಬಂದು ತಮ ತಮ್ಮ ಕಷ್ಟ ಸುಖಗಳನ್ನು ಯೇಕ ಪ್ರಕಾರವಾಗಿ ತೋಡಿಕೊಳ್ಳುತಲಿದ್ದರು.. ತಮ ತಮ್ಮ ಅಂತಸ್ತುಗಳ ಪ್ರಕಾರ ದೂರ ನಿಲ್ಲುತಲಿದ್ದವರೆಷ್ಟೋ? ಹತ್ತಿರ ಹೋಗುತಲಿದ್ದವರೆಷ್ಟೋ? ಕಲೆಟ್ಟರು ಸಾಹೇಬಗೆ ಬಿಂಕಾಗಲೀ, ಬಿಗುಮಾನವಾಗಲೀ ಯಿಲ್ಲದ ಕಾರಣಕ್ಕೆ ಸೇಕೆಂಡೂ ಸೇಕೆಂಡೂ ಅನುತ ತಮ ತಮ್ಮ ಕಯ್ಯಿಗಳನ್ನು ಚಾಚುತ್ತಿದ್ದವರೆಷ್ಟೋ? ಆತನು ತನ್ನಂಗಯ್ಯ ಧನ ರೇಖೆಯು ಸವೆಯುತ್ತ ದೆಂಬ ಖಬುರಿಲ್ಲದೆ ಹಸ್ತಲಾಘವ ಮಾಡಿ ಪ್ರಜೆಗಳ ಆಸೆ ಪೂರಯಿಸುತಲಿದ್ದನು. ವಾಸ್ತವ್ಯ ಹೂಡಿದ ವಂದೆರಡುದಿವಸೊಪ್ಪತ್ತೊಳಗೆ 'ಸೇಕೆಂಡೂ'ಯಂಬ ಪದವು 'ಮೋಂ ಭೂರ್ಭುವಸ್ಸಃ' ಯಂಬ ಮಂತರದ ಸಾಲಿನಷ್ಟೆ ಜನಪ್ರಿಯವಾಗುತಲಿದ್ದಿತು. ತಮ ತಮ್ಮ ವಾರಿಗೆಯವರಿಗೆ ಸೇಕೆಂಡು ಕೊಡುವ ಆಟಮೂಜನ ಪ್ರಿಯವಾಗುತಲಿದ್ದಿತು, ಕೆಲವರಂತೂ ಡಬರಿ, ಚರಕಲಿ, ಕಸದ ಬುಟ್ಟಿ... ಯಾವುದೋ ವಂದನ್ನು ತಲೆಮ್ಯಾಲ ಯಿಟುಗೊಂಡು ಹುರುಮಂಜದಿಂದ ಗಲ್ಲಗದ್ದಗಳಿಗೆ ಗಡ್ಡರಚಿಸಿಕೊಂಡು? ಥಾಂ ಥೂಂ ದಿಸಕು ಮಸಕ ದಂಥ ಕ್ರುತಕ ಯಿಂಗಲೀಸನ್ನು ಮಾತಾಡುತ್ತ ಅಲಲಲಯ್ ನಾನು ಥಮಸ್ ಮನ್ರೋ ಸಾಹೇಬ ಯಂದು ತಿಳಿಯುವಂಥವನಾಗಲಯ್ ಸಾರಥಿ ಯಂದು ಹೇಳುತಲಿದ್ದದೂ ಜನಪ್ರಿಯ ವಾಗುತಲಿದ್ದಿತು ಸಿವನೇ.. ಅನೇಕರಂತೂ ತಮ್ಮ ಅಭಿನಯಕ್ಕೆ ಪೂರಕ ಯನಿಸುವ ಅಂಸಗಳಿಗಾಗಿ ಬಿಡದಿ ಸುತಮುತ್ತ ಹೊಂಚು ಹಾಕಿರುತಿದ್ದರು ಹಗಲಿರುಳೆನ್ನದೆ.. ಅವರ ಕುತೂಹಲ ಮುಖ್ಯವಾಗಿ ಸಾಹೇಬನು ತಮ್ಮಂಥ ಮಾಮೂಲು ಮನುಷ್ಯರಂಗೆ ಸೊಂತ ಪ್ರಯತ್ನದಿಂದ

ಸವುಚಕ್ಕೆ ಹೋಗುವನೋ? ಮಲಕ್ಕೊಂಡಾಗ ಸೊಂತ ಪ್ರಯತ್ನದಿಂದ ಗೊರಕೆ ಹೊಡೆವನೋ? ಗೊರಕೆ ಹೊಡೆಯುತ್ತಿದ್ದುದೇ ಆದರೆ ಅದರ ನಾದದ ಬಗೆ ಯಾರ ರೀತಿ ಯಿರ್ತದೆ ಯಂಬುದೇ ಆಗಿರುತ್ತಿತ್ತು. ತಿಳಿದುಕೊಳ್ಳಲು ಅವರಿವರನ್ನು ಪರಾಂಬರಿಸುತ್ತಿದ್ದುದೋ? ಕಾವಲು ಮಂದಿ ಅಂಥವರನ್ನು ಅಟ್ಟಾಡಿಸಿಕೊಂಡು ಮೋಡಿಸುತ್ತಿದ್ದುದೋ? ಆದರೆ ಯಾರು ಯಷ್ಟೇ ಪ್ರಯತ್ನ ಪಡುತಲಿದ್ದರೂ ಮನ್ರೋನ ಕೆಲವು ಖಾಸಗಿ ಸಂಗತಿಗಳು ಬಿಲ್‌ಕುಲ್ ಕಿವಿಗೆಟಕುತ್ತಲಿರಲಿಲ್ಲ.. ವಟ್ಟಿನಲ್ಲಿ ಆತನ ವಾಸ್ತವ್ಯವು ಆತ ಮೊಖ್ಖಾಮು ಹೂಡುತಲಿದ್ದ ಗ್ರಾಮ ಜನ ಜೀವನಕ್ಕೆ ಹೆಚ್ಚು ನಿಕಟವಾಗುತ್ತಲೇ ಸಾಗಿತ್ತು. ಆದರಾತನು ವುಚ್ಚವರಣೀ ಯರಿಗೆ ಬದಲಾಗಿ ಕೆಳದರ್ಜೆಯ ಸೂದ್ರವರಣೀಯರನ್ನು ಹೆಚ್ಚು ಹಚ್ಚಿಕೊಳ್ಳುತಲಿದ್ದುದನ್ನು ಕಂಡು....

ಅಲುಪಸಂಖ್ಯಾತ ಪದವಿಗಿಳಿದಿದ್ದ ಸಾಸ್ತ್ರಿದ್ವಯರು ಕಯ್ನು ಕಯ್ಯೊಳಗಿಟುಕೊಂಡು 'ಅಯ್ಯೋ ತಮ ಹಿಂದೂ ಧರುಮವೇ' ಯಂದು ಪೇಚಾಡಿಕೊಳ್ಳುತಲಿದ್ದುದು ಬಹಿರಂಗಗೊಂಡಿರಲಿಲ್ಲ.. ತಮ್ಮೀರ್ವರ ನಡೆ ನುಡಿ, ಸರೀರ ಸಂಬಂಧೀ ಯೀಸೇಸಗಳನ್ನು ಅನುಕರಣೆ ಮಾಡುತ ಹಿಂದೂ ಧರುಮವನ್ನು ಪುನಸ್ಚೇತನಗೊಳಿಸುವ ಬದಲು ಗ್ರಾಮೀಣ ಮಂದಿಯು ಯಿಂಗಲೀಸಿಗನಾದ ಕಲೆಟ್ಟರು ಸಾಹೇಬನನ್ನು ಅನುಕರಣೆ ಮಾಡುತಲಿರುವರಲ್ಲಾ? ಯಂದವರು ತಮ್ಮೀರ್ವರಿಗೆ ಮಾತ್ರಕೇಳಿಸುವಂತೆ ಪೇಚಾಡಿ ಕೊಳ್ಳುತಲಿದ್ದರು.. ವುದ್ದನೆಯ ನಿಲುವಂಗಿಗಳನು ತೊಟ್ಟಿರುತಲಿದ್ದ ಪಾದರಿಗಳು ಬಿಳಿ ಹಮುಸ ಪಕ್ಷಿಗಳಂತೆ ಆಗೊಮ್ಮೆ, ಯೀಗೊಮ್ಮೆ ಬಂದು ಮನ್ರೋನನ್ನು ಕಂಡ ಮಣಗಟ್ಟಲೆ ಮಾತಾಡಿ ಹೋಗುತಲಿದ್ದುದೂ ಅವರಿಗೆ ನುಂಗಲಾರದ ತುತ್ತಾಗಿತ್ತು. ಅವರ ಮಾತುಗಳನ್ನಿವರು ಗುಟ್ಟಾಗಿ ಕೇಳಿಸಿಕೊಳ್ಳುವ ಪ್ರಯತ್ನವ ಮಾಡದೆಯಿರುತ್ತಿರಲಿಲ್ಲ. ವಂದು ರೀತಿಯ ನಿರುವುದಿಗ್ನ ಮಾತು ಕಥೆ.. ಮನ್ರೋನ ಸರಳ ಸಜ್ಜನಿಕೆಗಳನ್ನೇ ಬಂಡವಾಳವಾಗಿಟ್ಟುಕೊಂಡು ಅವರೇನಾದರೂ ಗ್ರಾಮಕ್ಕೊಂದೊಂದು ಯಿಗರ್ಜಿಗಳನ್ನು ನಿರುಮಿಸಲೆತ್ನಿಸಿದರೆ, ಗ್ರಾಮೀಣ ಮಂದಿಯ ಸವುಕಳಿ ತನವನ್ನೆ ಆಧಾರವಾಗಿಟ್ಟುಕೊಂಡು ಮತಾಂತರ ಮಾಡಿಸಲೆತ್ನಿಸಿದರೆ?... ಸಾಸ್ತ್ರಿದ್ವಯರು ಯೋಚಿಸೀ ಯೋಚಿಸೀ ಅವಿಯಾಗುತಲಿದ್ದರು. ಕುಂಪಣಿ ಸರಕಾರ ತಳಮೂರಿ ಬಲಿಷ«ವಾಗಬೇಕಾದರೆ ಮನುಸ್ಮß ೃತಿಯನ್ನು ಜನಪ್ರಿಯಗೊಳಿಸಬೇಕೆಂದೂ, ಮನು ಪ್ರಣೀತ ಸಾಮಾಜಿಕ ಸಂವಿಧಾನವನ್ನು ಕರಗತ ಮಾಡಿಕೊಳ್ಳಬೇಕೆಂದೂ ತಾವು

ಕಲೆಕ್ಟರು ಸಾಹೇಬಗೆ ಮನವರಿಕೆ ಮಾಡಿದ್ದುಂಟು. ಸ್ಮೃತಿಯ ಕೆಲವು ಮುಖ್ಯ ಸ್ಲೋಕಗಳ ಅರ್ಥವನ್ನು ತಮ್ಮ ಹರಕು ಮುರುಕು ಇಂಗಲೀಸುಗುಂಟು ಯಿವರಿಸಿರುವುದೂ ವುಂಟು? ಆದರೇನು ವುಪಯೋಗ? ತಮ್ಮ ಕಿವಿ ತಮಟೆ ಮ್ಯಾಲೆ ಬರೆ ಹಾಕಿದಂತೆ ಜಾತಿ ಯಿನಾಸದ ಬಗ್ಗೆ ಮಾತಾಡುತ್ತಿರುವನಲ್ಲ.. ಕ್ಷುದ್ರದೇವತೆಗಳನ್ನೂ ಅವುಗಳ ಕಿಲುಬು ವಾರಸುದಾರರನ್ನೂ ತನ್ನ ಬಳಿ ಸುಳಿಯಲು ಆಸುಪದ ಮಾಡಿಕೊಟ್ಟು ಹೆಗಲೇರಿಸಿ ಕೊಳ್ಳುವ ವುಪದ್ರಕ್ಕೆ ತೊಡಗಿರುವನಲ್ಲ.. ಯೋಚಿಸುತ್ತಾ? ಯೋಚಿಸುತ್ತಾ ಸಾಸ್ತ್ರಿದ್ವಯರು ಕುಂತಲ್ಲಿ ಕುಂದರಧಾಂಗಾಗಿದ್ದರು ಸಿವನೇ.. ನಿಂತಲ್ಲಿ ನಿಂದುರದಂಗಾಗಿದ್ದರು ಸಿವನೇ.. ಅವರಿಗೆ ಮನ್ರೋ ಹಿಂದೂ ಧರುಮಕ್ಕೆ ಮತಾಂತರವಾಗುವುದು ವತ್ತಟ್ಟಿಗಿರಲಿ.. ಅವರ ಚಿಂತೆ ಯೀ ತೆರನಿದ್ದರೆ.. ಅವರ ಕಯ್ಯಲ್ಲಿದ್ದ ರಾಣಿಯು ತನ್ನ ಪ್ರಿಯತಮ ಗರುಡನಿಗಾಗಿ ಯದುರು ನೋಡುತಲಿತ್ತು.. ಅತ್ತ ಗರುಡ ಬಡಗಣಾಭಿಮುಖಿ ಯಾಗಿ ಹಾರುತಾರುತಾ ಹೋಗುತಿರಬೇಕಾದರೆss..

ಬಂಯಂಲು ಂಯಂಂಬುವ ಬಂಯಂಲು ಬಿಸಿಲ ಗುದುರೆಗಳ ಆಡೊಂಬಲವಾಗಿತ್ತು? ನೆಳ್ಳುಯಂಬುದು ಭಾಗ್ಯೇವಾಗಿತ್ತು? ದಣುವಿನ ತವರು ಮನೆಯಾಗಿತ್ತು? ಸಚರಾಚರಗಳು ಸುಟ್ಟು ಕರಕಲಾಗತೊಡಗಿದ್ದವು. ಹಾರುವ ರೆಕ್ಕೆಂಯೊಳಗೆ ಕಾಣಿಸಿಕೊಂಡ ದಣುವಿನ ಪರಿಹಾರಾರ್ಥವಾಗಿ ಗರುಡ ತಾನೆಲ್ಲಾದರೂ ವಂಚೂರು ಯಿಸ್ರಮಿಸಿಕೊಂಡು ಹೊತ್ತಿಳಿಯುತ್ತಲೇ ಪ್ರಯಾಣ ಮುಂದುವರಿಸಿದರಾಯಿತೆಂದು ನಿಚ್ಚಯಿಸಿ ಸುಯ್ಯಂತ ಧರೆಗಿಳಿಯಿತು. ಯಲ್ಲಯ್ತಪ್ಪಾ ವಂದು ಮರ? ಯಲ್ಲಯ್ತಪ್ಪ ವಂದು ಗಿಡ..? ಕುಡಿದು ಬಾಯನ್ನು ವದ್ದೆ ಮಾಡಿಕೊಳ್ಳಲಕ ಯಲ್ಲದವೆ ವಂದು ಬೊಗಸೆ ನೀರು? ತಿಂದು ಹಸುವು ತೀರಿಸಿಕೊಳ್ಳಲಕ ಯಲ್ಲದವೆ ಕಾಳು ಕಡಿ, ಹುಳುಪ್ಪಡಿ? ಅದುಂಟೆಂತೆಂದರೆ ಯಿದಿಲ್ಲ.. ಯಿದುಂಟೆಂತಂದರೆ ಅದಿಲ್ಲ? ಹುಡುಕ್ಕೋತ ಹುಡುಕ್ಕೋತ ಅಲೆದಾಡಲಾರಂಭಿಸಿತು. ಚಾವತ್ತು ಕೂಕಂಡು ದಣುವಾರಿಸಿಕೊಳ್ಳಲಕ ವಂಚೂರು ನೆಳ್ಳು ಕೊಡವ್ವಾ.. ಪುಣ್ಯ ಬರತಯ್ತೆಯಂದಿದು ಕೇಳಿದ್ದಕ್ಕೆ ಆ ಕಾಕವ್ವ "ನೀನು ಬಂಗಾರ ಕೊಡುತೀನಂದರೆ ನೆಳ್ಳು ಕೊಡಲ್ಲಪ್ಪಾ.. ನಮದೇ ನಮಗ ಮಸ್ತು ಆಗಯ್ತೆ ಮುಂದಕ ಹೋಗಪ್ಪಾ" ಯಂದು ಹೇಳಿದಳು.. ಅದು ಹಾಂಗ ಮುಂದಕ ಹೋಗಿ "ಬಾಯಿ ತ್ಯಾವ ಮಾಡಿಕೊಳ್ಳಲಕ ವಂದುಗುಟುಕು ನೀರು.. ನಮಲಲಕ ವಂದು ತುತ್ತು ಪರಸಾದ ಕೊಡುತಿ ಯೇನವ್ವಾ ಪುಣ್ಯ ಬರುತಯ್ತೆ"

ಯಂದಿದು ಕೇಳಿದಕ್ಕೆ ಆ ಗುಬ್ಬೆವ್ವನು "ಅಯ್ಯೋ ಸಿವನೇ ಯಂಥ ಪರೀಕ್ಷೆ ಕಾಲ ತಂದೊಡ್ಡಿರುವಿ ತಂದೆಯೇ, ಅತಿಥಿ ಅಭ್ಯಾಗತರನ್ನು ವುಪಚರಿಸಲಕ ಸಗುತಿಯಿಲ್ಲಧಾಂಗ ಮಾಡಿರುವಿಯಲ್ಲಪ್ಪಾ.." ಯಂದು ಸೊಗತ ಗೊಣಗಾಡಿದ ಬಳಿಕ "ಭೂಮ್ತಾಯಿ ಮಯ್ಯಿ ಮ್ಯಾಲ ಬಿಸಿಲು ಛಡಿಯೇಟು ಬಾಸುಂಡೆ ಮೂಡಿಸಿರುವದಪ್ಪಾ.. ಹಾರಲಕಾಗದ ನಿತ್ರಾಣಗೊಂಡು ಮಕ್ಕಳು ಮರಿ ಸಯ್ತ ಕೂಕಂಡವಿನೀ.. ನಿನ್ನದು ಯಾಮೂರೋ? ಯೇನು ಕಥಿಯೋ? ನೋಡಲಕ ಕಲೆಟ್ಟರು ಸಾಹೇಬನ ಮನುಶ್ಯಾ ಯಿದ್ದಂಗದೀ.. ನೀನೀಗ ಯೇನು ಮಾಡಬೇಕಪ್ಪಾ ಅಂದರ .. ಯೀಸಾನ್ಯ ದಿಕ್ಕಿನ ಗುಂಟ ಹರದಾರಿ ಹಾರಿಕೋತ ಹೋಗು. ಅಲ್ಲಿ ನಿನ್ನೆ ತನಕ ನೀರುನಿಡಿ ಯಿತ್ತು. ನೀ ಗಣುಮಗ ಅದಿ, ಮ್ಯಾಲಾಗಿ ಹರೇದವ.. ಹೋಗಿ ನೋಡಬಾರ್ದೇನು?" ಯಂದು ಹೇಳಲಿದು ಹಾರಿಕೋತ ತಲುಪಿ ನೋಡುತಯ್ತೆ...

ಅಲ್ಲಿ ಯೇನೋ ನದಿಯಿತ್ತು? ಆದರೆ ಅದೂ ಬಲು ನಿತ್ರಾಣಗೊಂಡಿತ್ತು. ತಗ್ಗಿದ್ದ ಕಡೇಲೆಲ್ಲ ನೀರು ಕನ್ನಡಿ ಹಾಂಗ ನಿಂತಿತ್ತು. ಹೋಗುತ್ತಲೆ ಸುಯ್ಯಂತ ಧುಮುಕಿತು. ಜಲಕ್ರೀಡೆ ಆಡುತಲಿದ್ದ ಯಿತರೇ ತರಾವರಿ ಪಕ್ಷಿಗಳು ನಮ್ಮ ಜಾಗೀರಿಗೆ ನೀನ್ಯಾಕೆ ಬಂದಿ ಯಂದು ತಕರಾರೆತ್ತಿದವು. ಅವೆಲ್ಲಕ್ಕಿಂತ ಬಲಾಢ್ಯ ಯಿದ್ದ ಯಿದು ಮರು ಜವಾಬು ಕೊಡದೆ ತನ್ನಪಾಡಿಗೆ ತಾನು ಜಳಕ ಮಾಡಿತು. ಹೊಟ್ಟೆ ತುಂಬೋ ಮಟ ನೀರು ಕುಡಿದು ದಡ ತಲುಪಿ ನದಿಗೊಂದು ನಮಸ್ಕಾರ ಹೇಳಿತು. ತೊಯ್ದು ತಪ್ಪಟೆ ಯಾಗಿದ್ದ ರೆಕ್ಕೆಗಳೊಡನೆ ಜುಲುಮೆಯಿಂದ ಹಾರ ತೊಡಗಿತ್ತು. ಯಲ್ಲಾದರೂ ವಂದು ತುತ್ತು ಬಾನ ದೊರಕುವುದೇ ಯಂದು ಹುಡುಕಾಡಲಾರಂಭಿಸಿದ ಸೊಲೂಪ ಹೊತ್ತಿನಲ್ಲೇ....

ಯಾರೋ ಪುಣ್ಯಾತುಮ ಹುಟ್ಟಿ ಹಾಕಿದ್ದ ಮರಗಳ ಸಮುಚ್ಚಯದ ತಣ್ಣೆಳಲ್ಲಿ ನಾಕಾರು ಮಂದಿ ಬುತ್ತಿಗಂಟು ಬಿಚ್ಚಿಕೊಂಡು ವುಂಬಲಕ ಹತ್ತಿದ್ದರು.. ನೋಡುವಷ್ಟರಲ್ಲಿ ಬುತ್ತಿಯ ಗುಮ್ಮಟ ಕರಗಿತು. ಅವರು ನೀರ ಕುಡಿಯಲಕಂತ ಹೊಳೆ ಕಡೇಕ ಹೋಗಿ ಬರುವಷ್ಟರಲ್ಲಿ ಗರಡು ಯಂಜಲು ತಿಂದು ಮುಗಿಸಿ ಲಗುಬಗೆಯಿಂದ ಹೊಂಗೆ ಮರದ ಕೊಂಬೆಯೊಂದರಲ್ಲಿ ಅಡಗಿ ಕೂತಿತು. ಹೋಬ್ಬಾಂತ ಡೇಗುತ ಬಂದ ಅವರು ಯುಲಡಕೆ ನವುಲುತ್ತ ಪಯಿಪೋಟಿಯಿಂದ ತಲಾ ವಂದೊಂದು ಪದ ಹಾಡಿದರು. ಅವರ ಪಯ್ಕಿ ಮಟ್ಟಸವಾಗಿದ್ದ ಯಕ್ತಿಯು ಯಿದ್ದಕ್ಕಿದ್ದಂತೆ ಥಾಮಸುಮನ್ರೋನನ್ನೂ, ಆತನ

ಕೊಳ್ಳೊಳಗೆ ಸೋಭಾಯ ಮಾನವಾಗಿರುವ ಮುತ್ತಿನಹಾರವನ್ನೂ ಪೀಠಿಕಾ ಪ್ರಕರಣವಾಗಿ ಪ್ರಸ್ತಾಪಿಸಿದೊಡನೆ ಮರೇಲಿ ಅಡಗಿ ಕೂತಿದ್ದ ಗರುಡನ ಕಿವಿಗಳು ಜುಮ್ಮೆಂದವು.. ಅದು ಮಯ್ಯಿ ತುಂಬ ಕಿವಿಮುಡಿದು ಕೊಂಡು ಅವರ ಮಾತುಕತೆಯತ್ತ ನಿಗಾಯಿಟ್ಟಿತು. ಅವರು ಯಲ್ಲಾ ಪ್ರಕೊರಚಟ್ಟಿಯ ಜೋರಾಗ್ರೇಸರರೆಂದು ಖಚಿಪಡಿಸಿಕೊಂಡಿತು. ಅವರು ಅಪಹರಣದ ಯಿಯಿಧ ನಮೂನೆಗಳ ಬಗ್ಗೆ ಚರ್ಚಿಸುತ್ತಿದ್ದುದನ್ನು ಕೇಳಿಸಿಕೊಂಡಿತು. ಅದೇ ಸಮಯಕ್ಕೆ ಸರಿಯಾಗಿ ಆಗಮಿಸಿದ ಯೇಳನೆ ಯ್ಯಕ್ತಿಯು ಕಲೆಟ್ಟರು ಸಾಹೇಬನು ಯಿಲ್ಲಿಗೆ ಹರದಾರಿ ದೂರದಲ್ಲಿರುವ ಚೆಲಿಮಲ ಯಂಬ ಕುಗ್ರಾಮದ ಹೊರ ವಲಯದ ಹಣುಮಂದೇವರ ಗುಡಿ ವವುಳಿಯಲ್ಲಿ ಬಿಡಾರ ಹೂಡಿರುವನೆಂದೂ, ನಾಡಿದ್ದು ರಾತ್ರಿಯೀರಭದ್ದರ ದೇವರ ಕೊಂಡುಚ್ಚಯ್ಯವನ್ನು ವುದ್ಘಾಟಿಸಲಿರುವನೆಂದೂ, ಆ ಗಲಾಟೆಯಲ್ಲಿ ತಾವು ಆತನ ಸರೀರದಿಂದ ಮುತ್ತಿನ ಸರವನ್ನು ವುತಾರ ಮಾಡಬೇಕೆಂದೂ ವರದಿ ವಪ್ಪಿಸಿದನು. ಅದನು ಕೇಳಿ ಸಂಬುಗನು ಬಲು ಸಂಬರ ಪಟ್ಟನು. ಆತನು ತನ್ನ ಸಹಚರರಿಗೆ ಸಲಹೆ ಸೂಚನೆಗಳನ್ನು ಕೊಡುತ್ತಿರುವಾಗ್ಗೆ....

ಯೀ ಸಮಾಚಾರವನ್ನು ಸಿಪಾಯಿಗಳಿಗೆ ಹೇಳಿ ಸ್ವಾಮಿನಿಷೆ« ಮೆರೆಯಬೇಕೆಂದು ಕ್ರುತು ನಿಚ್ಚಯವಂ ಮಾಡಿ ಗರುಡ ಚೆಲಿಮಲದ ಕಡೇಕ ಹಾರುತ್ತ ತಲುಪಿದಾಗ ಸೂರ್ಯ ಯಿಳಿಮುಖವಾಗಿದ್ದ.. ಜೀವಚ್ಛವವಾಗಿದ್ದ ರಾಣಿಯು ರೆಕ್ಕೆ ಯಿಗ್ಗಲಿಸಿ ಸ್ವಾಗತಿಸಿದಳು. ಭೋಜನ ಮಾಡಿ ದರ್ಬೆ ಚಾಪೆಯ ಮ್ಯಾಲ ಮಲಗಿದ್ದ ಸಾಸ್ತ್ರಿದ್ವಯರು ಗರುಡನ ಆಗಮನವಾಯಿತೆಂಬ ಸುದ್ದಿಯನ್ನು ಕೇಳಿ ಯಚ್ಚರಗೊಂಡ ರಲ್ಲದೆ ಅದರ ಕಾಲಲ್ಲಿದ್ದ ಪತ್ರವನ್ನು ಬಿಚ್ಚಿ 'ಹೆನ್ರಿಮರ್ಕಟಸ್ಯ ಮರ್ಕಟಸ್ಯೋ ಹೆನ್ರಿ..' ಯಂತು ಮುಂತಾಗಿ ಮೋದಿ ಆನಂದ ತುಂದಿಲರಾದರು.

ಮುಂದೆರಡು ದಿವಸಗಳಲ್ಲಿ ನಡೆಯಲಿರುವ ಯೀರಭದ್ದರದೇವರ ವುತ್ಸವಮೋ.. ವುತ್ಸವವು

ಸದರಿ ಗ್ರಾಮಕ್ಕೆ ಯಿರುವೆಯೋಪಾದಿಯಲ್ಲಿ ಹರಿದು ಬರುತಲಿದ್ದ ಭಕುತಾದಿ ಮುಂದಿಯು ಯೀರಭದ್ದರ ದೇವರೊಳಗ ಮನ್ರೋ ಸಾಹೇಬನುಂಟಾ.. ಮನ್ರೋ ಸಾಹೇಬನೊಳಗೆ ಯೀರಭದ್ದರದೇವ ರುಂಟಾ ಯಂದು ಯೋಚಿಸುತಲಿದ್ದ ರೀತಿ ಅಗಾಧವಾಗಿತ್ತು ಸಿವನೇ..

ಕೊಂಡ ಹಾದು ನಾನಾತನ ಕ್ರುಪೆಗೆ ಪಾತ್ರನಾಗಲಬೇಕು? ತಾನಾತನ

ಕ್ರುಪೆಗೆ ಪಾತ್ರನಾಗಲಕಬೇಕು ಯಂದು ಬೇಡಿಕೊಳ್ಳುತಲಿದ್ದವರು ಹತ್ತಾ.. ಯಿಪ್ಪತ್ತಾ... ನೂರಾರು ಮಂದಿ....

ಆಗಮಿಸಲಿದ್ದ ಸಮಾಳ ನಂದಿಕೋಲು, ಪುರವಂತರಂತೂ ಅಸಂಖ್ಯಾತ..

ಸದರಿ ಗ್ರಾಮದ ಕರಗಲ್ಲಿನ ಆಚೆ ಕಡೇಕ ಅದೇ ತಾನೆ ಬಂದಿಳಿದು ಸಂಬುಗ ಮತ್ತವನ ಸಂಗಡಿಗರು ತಮ್ಮ ತಮ್ಮ ಹೆಸರುಗಳನ್ನು ಬದಲು ಮಾಡಿಕೊಳ್ಳುತ್ತವರೆ.. ಸದರಿ ಗ್ರಾಮು ಯೆಂಬುವ ಗುಡಾಣದೊಳಗೆ ಬೆಣ್ಣೆವುಂಡೆಗಳಂತೆ ತೇಲುತಲವರೇ... ಅ ಅವರಿವರ ಸ್ನೆಹ ಸಂಪಾದನೆ ಮಾಡಿಕೊಳ್ಳುತಲವರೆ... ತಾಮೂಕೆಂಡಕೊಂಡ ಹಾಯ ಬೇಕೆಂದು ತಮ ತಮ್ಮ ಅಂಗಾಲುಗಳಿಗೆ ಯಕ್ಕೆ ಹಾಲು ಬಡಿದು ವಣಗಿಸಿಕೊಳ್ಳುತಲವರೆ... ಯೀರಭದ್ದರ ದೇವರೇ ನೀನು ನಮ್ಮ ಪೋಲಾರಮ್ಮನನ್ನು ಹೆಂಡತಿ ಯಂದಾದರೂ ತಿಳಕಾ.. ತಾಯಿಯಂದಾದರೂ ತಿಳಕಾ ಯಂದು ಬೇಡಿಕೊಳ್ಳುತಲವರೇ.. ಸಿವ ಸಂಕರ ಮಾದೇವಾ....

ಅತ್ತ ಕೂಡ್ಲಿಗಿ ಪಟ್ಟಣದೊಳಗ ಕಲಾಯಿದರೋಣಿಯ ವುಪ್ಪರಿಗೆ ಮನೆಯೊಳಗೆಯಿದ್ದ ಹಮುಸ ತೂಲಿಕಾ ತಲುಪದ ಮ್ಯಾಲ ಮಂಗಣ್ಣನೊಂದಿಗೆ ಚಿನ್ನಾಸಾನಿಯು.. ಚಿನ್ನಾಸಾನಿಯೊಂದಿಗೆ ಮಂಗಣ್ಣನೂ ವಂದೇ ನಾಣ್ಯದ ಯರಡು ಮುಖಗಳಂತೆ ವಬ್ಬರನ್ನು ಬಿಟ್ಟುವಬ್ಬರು ಅಗಲಲೊಲ್ಲರು.. ತಮ್ಮ ಮಗಳು ಸೂಕ್ಷ್ಮ ಸಂಯೇದನಾಸೀಲೆಯು. ಚತುಷ್ಪಾದಿಯನ್ನು ಯಿಟೊಂದು ಹಚ್ಚಿಕೊಂಡರೆ ಹ್ಯಾಂಗ? ಮದುವಿ ಮಾಡಿದರೆ ಚತುಷ್ಪಾದಿಯ ತಿಕ್ಕಡಿ ಕಡಿಮೆಯಾದೀತೆಂದು ಬುಗುಡಿ ನೀಲಕಂಠಪ್ಪ, ತಾಯಕ್ಕ ಅಂದುಕೊಂಡರು, ಮರೆಮ್ಮನಹಳ್ಳಿ ಸನೀಪದ ಡಣಾಪುರದ ಡಣ್ಣಾಯಕನ ಯೇಕಮಾತ್ರಪುತ್ರಕಲಿಯೀರ ನಾಯಕನಿಗೆ ಲಗ್ಗುಣ ಮಾಡಿಕೊಡುವುದೆಂದು ಯೋಚಿಸಿದರು. ಅದು ಮಾಮೂಲಿ ಸಂಬಂಧವಲ್ಲ.. ಯಿಜಯನಗರದರಸು ಅಚ್ಯುತರಾಯನ ಅಷ್ಟಮ ಪತ್ನಿ ವೋಬುಳಾಂಬೆಯು ವಂಸಸ್ಥರು, ತಿಮ್ಮಲಾಪುರದ ಪ್ರಸನ್ನ ಯಂಕಟಸ್ವಾಮಿಯ ದೇವಾಸ್ಥಾನ ಜೀರ್ಣೋದ್ಧಾರ ಮಾಡಿಸಿ ಸಿಲಾಸಾಸನದಿಂದ ಹೊಗಳಿಸಿಕೊಂಡಿರುವಂಥವರು. ಕಲಿಯೀರ ನಾಯಕ ಬರಿ ಬಾಯಿ ಮಾತಿಗೆ ವಪ್ಪಿಕೊಂಡಿದ್ದು ತಮ್ಮ ಅದ್ರುಷ್ಟ. ಆತ ಹುಡುಗಿಯನ್ನು ನಾರಾಯಣ ಕೆರೆ ಅಗ್ರಹಾರದ ರಾಮನವಮಿ ವುತ್ಸವದಲ್ಲಿ ನೋಡಿ ಮಾರು ಹೋಗಿರುವನಂತೆ.. ಸಾಸ್ತ್ರಕ್ಕೆ ನೋಡಿಕೊಂಡು ಹೋಗಲು ವಮ್ಮೆ ಬರುವರಂತೆ.. ಕೊನೀಕೆ

ಚಿನ್ನಾಸಾನಿಯು ತಾನು ತನ್ನ ಗಂಡನ ಮನೆಗೆ ಹೋಗಬೇಕಾಗಿ ಬಂದಲ್ಲಿ ಮಂಗಣ್ಣನೂ ತನ್ನ ಜೊತೆಯಲ್ಲಿರಬೇಕೆಂಬ ಷರತ್ತು ವಿಧಿಸಿ ವಪ್ಪಿದಳು. ಮರು ದಿನವೇ ಡಣಾಪುರಕ್ಕೆ ಖಬರು ಕಳಿಸಲಾಯಿತು. ಫಲಾನ ದಿವಸದಂದು ಡಣಾಯಕನು ಮಗನನ್ನೂ, ಕುಟುಂಬದ ತನ್ನಿತರೇ ಸ್ತ್ರೀ ಸದಸ್ಯರನ್ನೂ ಜೊತೇಲಿ ಕರೆದುಕೊಂಡು ಸದರೀ ಪಟ್ಟಣಕ್ಕೆ, ಸದರೀ ಮನೆಗೆ ಬಂದು ಸಾಸ್ತರೋಕ್ತವಾಗಿ ಕನ್ಯೆ ನೋಡಿದನು. ಅವರ ಜೊತೇಲಿ ಬಂದಿದ್ದ ಯರುಗುಂಟಾ ಸ್ರೀ ಪಾದಾಚಾರ್ಯರು ಸದರಿ ಕನ್ಯೆಯು ಫಲಾನ ನಕ್ಷತ್ರದಂದು ಋತುಮತಿಯಾಗಿರುವುದರಿಂದಲೂ, ಆಂಜನೇಯ ಸ್ವಾಮಿಯು ಯೀಕೆಗೆ ವಲಿದಿರು ವುದರಿಂದಲೂ, ಮುಂದೆ ಯೀಕೆಯ ಗರ್ಭದಲ್ಲಿ ಜನಿಸಲಿರುವ ಗಂಡುಕೂಸು ಅರಯೀಡು ರಾಮರಾಯನೇ ಆಗಿರುತದೆಂದೂ ಗುಣಿಸಿ, ಭಾಗಿಸಿ ಭವಿಷ್ಯ ನುಡಿದರು. ಯಿದಕ್ಕೆ ಮನ ದೂಗಿದ ನಾಯಕನು ವಪ್ಪಿಗೆ ನೀಡಿದನು. ವರಮಾಶಯನೂ ಅದಕ್ಕೆ ಅನುಮೋದಿಸಲಾಗಿ ಮದುವೆ ಮೂರ್ತವನ್ನು ಗುರು ಹಿರಿಯರು ಆ ಛಣವೇ ನಿರ್ಧರಿಸಿದರಲ್ಲದೆ, ಸುಭಸೂಚಕವಾದ ಯೀಳ್ಯೆಯನ್ನು ಪರಸ್ಪರ ಯಿನಿಮಯುವನ್ನೂ ಮಾಡಿಕೊಂಡರೆಂಬಲ್ಲಿಗೆ ಸಿವಸಂಕರ ಮಾದೇವಾss..

ತ್ರಿಭುವನ ಸುಂದರಿ ಚಿನ್ನಾಸಾನಿಯ ಮುದವೆಯು ಫಲಾನ ಯಿಂಥ ದಿವಸದಂದು.. ಯಂಬ ಸುದ್ದಿಯು ನಾನಾ ರೂಪದೊಳಗೆ, ನಾನಾ ವಾಸನೆಯೊಳಗೆ, ನಾನಾ ಗುರಿಯೊಳಗೆ ಪಟ್ಟಣದ ತುಂಬೆಲ್ಲ ಹರಡಲಕ ತಡ ಮಾಡಲಿಲ್ಲ.. ತಮ್ಮ ಪಟ್ಟಣದ ವಂಸತ ಮಾಸವೇ ಚಿನ್ನಾಸಾನಿ ರೂಪದಲ್ಲಿ ಡಣ್ಣಾಪುರಕ್ಕೆ ವಲಸೆ ಹೋಗಲಿರುವುದಲ್ಲಾ.. ಯಂದು ಹಣೆ ಹಣೆಯನ್ನು ಬಡಕೊಂಡವರೆಷ್ಟೋ ಮಂದಿ ಸಿವನೇ.

ಅತ್ತ ಅಯಿಸಿಲ ಪಟ್ಟಣದೊಳಗ ಶ್ರೀ ಶ್ರೀ ಆಕಾಸ ರಾಮಣ್ಣಾವಧೂತರು ಯಷ್ಟೋ ಹೊತ್ತಿನ ತನಕ ತಮ್ಮ ಗಡ್ಡ ಮೀಸೆ ಕಳುವಾಗಿದ್ದರ ಬಗ್ಗೆ ಮಮ್ಮಲನೆ ಮರುಗತಲೇ ಯಿದ್ದರು. ಸದರಿ ಪಟ್ಟಣ ದೊಳಗ ಗಡ್ಡಮೀಸೆಗಳಿಗೂ ವುಳಿಗಾಲ ಯಿಲ್ಲದಿರುವುದು? ಯಿವನ್ನೂ ಅಮೂಲ್ಯ ಯಂದು ಭಾವಿಸಿ ಕಳುವು ಮಾಡುವ ಜನರಿರುವುದು, ಕಳುವು ಮಾಡಿದ, ಮಾಡುವ ಯ್ಯಕ್ತಿಗಳು ಪ್ರಜೆಗಳ ಮುಖಂಡರೇ ಆಗಿರುವುದು ಯಂಥ ಛೋದ್ಯವು? ಯಿದು ಕಲಿಕಾಲದ ಮಯ್ಮೆಗಳ ಪಯ್ಕಿ ವಂದೇ ಸರಿ 'ದೇವರೇ ಜನತಾ ಜನಾರ್ದನರನ್ನು ಸಜ್ಜನರನ್ನಾಗಿ ಮಾಡು'

ಯಂದು ತಂಬೂರಿ ಮೀಟುತ್ತ ದೇವರನ್ನು ಪ್ರಾರ್ಥಿಸಿ ದರು. ಭಕುತರು ಅವರ ಕಾಲಿಗೆ ಬಿದ್ದು ನೀವು ಭೋ ದೊಡ್ಡ ಸರಣರದರೀ ತಂದೆ ಯಂದು ಯಿನಮ್ರತೆ ಯಿಂದ ನುಡಿದರು. "ಗಡ್ಡ ಮೀಸೆ ಬರೋತನಕನಾರ ಯಿದ್ದು ಹೋಗಿರಿ ಬುದ್ದಿ" ಯಂದು ಜುಲುಮಿ ಮಾಡಿದ್ದಕ್ಕೆ ಅವಧೂತರ "ಬ್ಯಾಡಿರಿ.. ನನ್ನ ತಡಿ ಬ್ಯಾಡಿರಿ.. ಮುಂದಿನೂರು ನನಗಾಗಿ ಕಾಯಲಕ ಹತ್ತಯ್ತೆ.." ಯಂದು ಹೇಳಿ ಹೊಂಟರು. ಆ ಅಯಿಸಿಲ ಪಟ್ಟಣದಿಂದ ಗವುರವಪೂರುವಕವಾಗಿ ಬೀಳುಕೊಂಡು ಮುಂದಕ ಯಾವ ಮೂರಿಗೆ ಪ್ರಯಾಣ ಬೆಳೆಸಿದರೆಂದರೆ...

ಅತ್ತ ಬಡಗಣ ದಿಕ್ಕಿನ ಶಾನೇ ದೂರದಲ್ಲಿ ವನಪರ್ತಿ, ಕುಂದರ್ತಿ, ವೆಲುದುರ್ತಿ, ಚಿಲಕ ಮರ್ತಿಯಂಬ ನಾಕು ಮೂರುಗಳ ವಂದು ಪುಟ್ಟ ಸಮುಸ್ಥಾನವು ಚೋಳ, ಪಲ್ಲವರ ಕಾಲದಿಂದಲೂ ಅಸ್ತಿತ್ವದಲ್ಲಿರುವುದೆಂಬ ಸಂಗತಿಯೂ, ಸುಡುಗಾಡೆಪ್ಪಾಧೂತರವುದರ ವಯಿರಾಗ್ಯದ ಕಥಿಯೂ ಸಿವಸಿವಾಯಂಬಂತಿತ್ತು. ಅವಧೂತರು ಕಳುವು ದರೋಡೆಗಳಿಂದ ಅಪಾರವಾಗಿ ಸಂಪಾದನೆ ಮಾಡಿದ್ದ ಸಂಪತ್ತನ್ನು ಕುಮತಿ, ಕುಮುಸಿ, ಮುಷೂ«ರು, ಬೆಳಗಟ್ಟೆಯೇ ಮೊದಲಾದ ಸಣಪುಟ್ಟ ಪಾಳೆಪಟ್ಟುಗಳನ್ನಾಳುತಲಿದ್ದ ಪಾಳ್ಳೇಗಾರ ರಿಗೆ ಯಿಂತಿಷ್ಟು ಬಡ್ಡಿಧರ ಲೆಕ್ಕದಲ್ಲಿ ಸಾಲದ ರೂಪದಲ್ಲಿ ಕೊಟ್ಟಿದ್ದರು. ಅವರವರ ಖಾಸಾ ಸಯ್ನದೊಳಗೆ ತನ್ನ ನಂಬುಕಸ್ತ ಆಳುಗಳನ್ನು ಭರ್ತಿ ಮಾಡಿದ್ದರು. ಯಿನ್ನೂ ವಂದು ಹೆಜ್ಜೆ ಮುಂದಕ ಹೋಗಿ ಕಿಸ್ಟೋಫರ್ರು, ರೀಚರ್ಡು, ಮ್ಯಾಕ್, ಹ್ಯಾಂ ರಂಥ ಕುಂಪಣಿ ಮಂದಿಗೂ ಸಾಲ ಕೊಟ್ಟಿದ್ದರು. ಮಹಿಸೂರ ಸೀಮೆ ವಳಿತದೊಳಗಿರುವ ಗಂಜಾಮು ಯಂಬ ನಗರ್ತ ಪಟ್ಟಣಕ್ಕೆ ಹೋಗಿ ಜೂ.ವೆಲ್ಲೆಸ್ಲಿಯಂಬ ಮಾನುಭಾವನ ಕಯ್ನ ಕುಲಕಿ ಸಂಗಮದಲ್ಲಿ ಮುಳುಗು ಹಾಕಿ ವಂದೆರಡು ಅಮೂಲ್ಯ ವಡವೆವಸ್ತಗಳನ್ನು ರಂಗನಾಥಸ್ವಾಮಿಗೆ ಸಮರ್ಪಿಸಿ ಪಾಪ ಪರಿಹಾರ ಮಾಡಿಕೊಂಡು ಮತ್ತಷ್ಟು ಜನಾನುರಾಗಿಯಾಗಬೇಕೆಂದು ಕಣಸು ಕಾಣುತಲಿದ್ದರು. ತಾವು ಯಾರ ಮನೆಯಲ್ಲಿ ಕಳ್ಳತನ ಮಾಡಿರುತ್ತಿದ್ದನೋ ಮರು ದಿವಸ ಅವರ ಮನೆಗೇ ಹೋಗಿ ಸಂತಾಪದ ನಾಕು ಮಾತುಗಳನ್ನಾಡಿ ಅವರಿಗೆ ಸಾಲ ಮಂಜೂರು ಮಾಡುತಲೂ ಜನಾನುರಾಗಿ ಯಾಗಿದ್ದರು. ಆ ಮೂರಲ್ಲಿ ಅವರ ಮನೆಯಲ್ಲಿ ಕದ್ದುದನು ಯೀಮೂರ ಯಿವರ ಮನೆಯ ವರಿಗೂ, ಯಿಮೂರ ಯಿವರ ಮನೆಯಲ್ಲಿ ಕದ್ದುದನು ಆ ಮೂರ ಅವರ ಮನೆಯವರಿಗೂss.. ಹ್ಯಾಂ.. ಹ್ಹಾಂ.. ತಮ್ಮ ಜಾಣತನವೇ? ಕಳ್ಳತನದ ಯಿರುದ್ದ ತಾಮೊಂದು ಭೋ

ದೊಡ್ಡ ಜನಾಂದೋಲವನ್ನೇ ಆರಂಭಿಸಬೇಕು.. ಹ್ಹೋ.. ಹ್ಹೋ... ತಮ್ಮ ಜಾಣತನವೇ.. ವುದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಯನ್ನಾಗಿ ಸುದ್ದಿಯಲ್ಲಿರೋ ಶ್ರೀ ಶ್ರೀ ಆಕಾಶ ರಾಮಣ್ಣಾವಧೂತರನ್ನು ಆಮಂತ್ರಿಸಬೇಕು! ಭಲಾ.. ಭಲಾ.. ತಮ್ಮ ಜಾಣತನವೇ....

ಹೀಂಗೆ ಯೋಚಿಸಿದ ಸುಡುಗಾಡೆಪ್ಪಾವಧೂತರು ಕರೆದೇಟಿಗೆ ಯಡ ಭಾಗದಲ್ಲಿ ನಿಂತಂಥ ಬಲಗಯ್ಯಿ ಬಂಟರನ್ನುದ್ದೇಸಿಸಿ, ಬಲಭಾಗದಲ್ಲಿ ನಿಂತ ಯಡಗಯ್ಯಿ ಬಂಟರನ್ನುದ್ದೇಸಿಸಿ ಶ್ರೀ ಶ್ರೀ ಆಕಾಸ ರಾಮಣ್ಣಾ ವಧೂತರರನ್ನು ಹುಡು ಹುಡುಕಿ ಡೋಲಿಯೊಳಗೆ ಕುಂಡ್ರಿಸಿ ಕರೆದುಕೊಂಡು ಬನ್ನಿರಯ್ಯಾ ಯಂದು ಆಗ್ನೆ ಮಾಡಲು ಸುಡುಗಾಡ ಗಿಡಗಂಟೆಗಳಲ್ಲಿದ್ದ ಪಕ್ಷಿಗಳು 'ಭಳಾರೆ ಯಿಚಿತ್ರಂ' ಯಂದು ವುದ್ಗಾರ ತೆಗೆದವು ಸಿವ ಸಂಕರ ಮಾದೇವಾss..

ಅತ್ತ ಭೂಲೋಕಕ್ಕಧಿಕವಾಗಿರ್ಧ ಕುದುರೆಡವು ಪಟ್ಟಣದ ವುಸಾಬರಿಗೆ ಬಂದಲ್ಲಿ.. ಅರಮನೆಯಂಬುದು ಮದುವಿ ನಿಷೇಕ ಸಂಬಂಧೀ ಸುದ್ದಿಗಳ ಜೇನು ಗೂಡಾಗಿ ಬಿಟ್ಟಿತ್ತು ಸಿವನೇ. ಕ್ರಮ ಕ್ರಮೇಣ ಹೆಣ್ಣು ಕೊಡತೇವಿಯಂಬ ಆಸೆ ಹೊತ್ತು ಬಂದು ಹೋಗುವವರ ಸಂಖ್ಯೆಯು ತಗ್ಗು ಮುಖಗೊಂಡ ಪರಿಣಾಮ ವಾಗಿ ಅರಮನೆಯ ಕಾರಖೂನರು ಲೆಖ್ಖಣಿಕೆಗಳನು ತಮ್ಮ ತಮ್ಮ ಕಿವಿಯೊಳಗ ತೂರಿಸಿ ಕೂಕಣಿ ತೆಗೆಯುತ್ತ ಕಾಲಕ್ಷೇಪವ ಮಾಡತೊಡಗಿದರು. ಕಿರೀಕರು ಮಂಕುಗವಿದವರಂತೆ, ಹಿರೀಕರು ದ್ರುಸ್ಟಿ ಮಾಂದ್ಯಗೊಂಡವರಂತೆ ಅಡ್ಡಾಡಲಾರಂಭಿಸಿದರು. ಯಿ ರೀತಿ ಸಂಭರವು ತಮಣಿಗೊಂಡ ಆಜುಮಾಷಿ ಯೊಳಗೆ ಅಲಬೂರಿನ ದಳವಾಯಿ ಯೇಳುಕೋಟೆಪ್ಪನ ಮಗಳಾದ ರುಕ್ಕುಮಿಣಿಯೂ ಅಂಬಳಿಯ ಮಾಂಡಲಿಕನಾದ ಮುಕ್ಕುಡೆಪ್ಪನ ಮಗಳಾದ ಚಂದಿರೆಯೂ ತಮ್ಮ ವನಪು ವಯ್ಯಾರಗಳಿಂದ ಸಾಂಬಯ್ಯನ ರುದಯ ಸೂರೆಗೊಂಡರು.. ಪಟ್ಟಣ ಸೋಮಿಗಳಿಗೆ ತಾನೀ ಪಿಳ್ಳೆಗಳನು ಲಗ್ಗುನವಾಗುವುದಾಗಿ ಸಾಂಬವಿಯ ಸಿಸುಮಗನು ಹೇಳಿದನು. ಅವರೂ ಆ ಪಿಳ್ಳೆಗಳನು ನೋಡಿ ಗರಡಿಸಾಮು ಮಾಡಿ ಗಾವಾಗವೆಯಂದು ಕೊಂಡರು. ಕಡತಗಳನು ಪರಿಸೀಲಿಸಿ ವಬ್ಬಾಕೆ ಸತತಾರ ನಕ್ಷತ್ರದಲ್ಲೂ, ಯಿನ್ನೊಬ್ಬಾಕೆ ಮಘ ನಕ್ಷತ್ರದಲ್ಲೂ ರುತುಮತಿ ಆಗಿರುವರೆಂದು ತಿಳಿದುಕೊಂಡರು. ಯಿನ್ನು ತಡ ಮಾಡುವುದ್ಯಾಕೆಂದು ಅವರವರ ತಂದೆಗಳನು ಯದುರಿಗೆ ಕುಂಡ್ರಿಸಿಕೊಂಡು ನೀವು ನಿಮ್ಮ ಮಕ್ಕಳನು ಸಾಂಬಯ್ಯಗ ಧಾರೆಯರದು ಕೊಡಬೇಕೆಂದು ಕೇಳಿದರು.

ಅದಕೆ ಅವರಿಬ್ಬರು ವಬ್ಬರ ಮುಖಗಳನ ವಬ್ಬರು ನೋಡಿಕೊಂಡು ಜಗಲೂರವ್ವನ ಕೊಳ್ಳಾಗ ಯಿರೋ ಮಾಂಗಲ್ಯಾನ ಯಿಳುವಿ ತಂದಿರಂದರೆ ನಾವು ನಮ ಮಕ್ಕಳನ ಧಾರೆಯರೆದು ಕೊಡತೇವಿರಿ" ಯಂದಂದು ಪಜೀತಿ ಸ್ರುಷ್ಟಿಮಾಡಿದರು. ಯಿದರೊಳಗೆ ಹೆಣ್ಣುಮಕ್ಕಳ ತಂದೆಯಂದಿರದು ತಪ್ಪೇನೂ ಯಿಲ್ಲ.. ಅವರಾಡಿರುವುದು ಲೋಕಾರೂಢಿ ಮಾತನು. ಆದ್ದರಿಂದ ತಾವು ಆದಷ್ಟು ಲಗೂನ ಮಿಂಚೇರಿಯೊಳಗಿರುವ ಜಗಲೂರೆವ್ವನ ಹಣೆಯಿಂದ ಕುಂಕುಮದ ಬೊಟ್ಟನ್ನೂ, ಆಕೆಯ ಕೊಳ್ಳಾಗಿಂದ ಮಾಂಗಲ್ಯವನ್ನೂ ವುಪಾಯಾಂತರದಿಂದ ಯಿಳುವಿ ತರುವ ಕೆಲಸವನು ಮಾಡಬೇಕೆಂದು ನಿರ್ಧರಿಸಿದವರೆಂಬಲ್ಲಿಗೆ ಸಿವಸಂಕರ ಮಾದೇವಾ....

ಯಿನು ಮುಂದಕ ತಾವು ಮಾಡಲಕಂದರ..

ತಾವು ಮಾಮೂಲು ಮನುಶ್ಯೋರಲ್ಲ ಯಂಬ ಕಾರಣಕ್ಕೆ, ತಾವು ಅರಮನೆಗೆ ಸೇರಿದವರು ಯಂಬ ಕಾರಣಕ್ಕೆ, ತಾವು ಆದಿ ಸಗುತಿ ಸಾಂಬವಿಯ ವಕ್ಕಲು ಮಂದಿಯಂಬ ಕಾರಣಕ್ಕೆ, ತಾವು ಸಾಂಬವಿಯ ಸುಪುತ್ರಸಾಂಬಯ್ಯನ ಪೂರುವಾಸ್ರಮದ ಹೆಂಡತಿಯೊಡನೆ ಪಂಚಾಯಿತಿ ಮಾಡಲು ಹೋಗತೇವಿಯಂಬ ಕಾರಣಕ್ಕೆ, ತಮ ತಮ್ಮ ಹಿಂಗಾಲು, ಮುಂಗಾಲುಗಳೊಳಗೆ ಮನಾರ ಕಸುವು ವುಂಟು ಯಂಬ ಕಾರಣಕ್ಕೆ.

ತಾವು ಫಲಾನ ಯಿಂಥ ದಿವಸಂದು? ಯೋಗ ಕ್ಷೇಮ ಯಿಚಾರಿಸಿಕೊಂಡು ಹೋಗುವ ಕಾರಣಾರ್ಥ ವಾಗಿ ಬರುತೇವಿ ಯಂದು ವಂದಿಬ್ಬರು ತಳವಾರ ಮಂದಿ ಕಯ್ಲಿ ಮಿಂಚೇರಿಗೆ ಹೇಳಿ ಕಳುವಿದರು. ಬರಲಕಾರ ಹರಕ್ತಿಲ್ಲ? ಯಂದು ಮಿಂಚೇರಿಯಿಂದ ಜಗಲೂರೆವ್ವ ಹೇಳಿ ಕಳುವಿದಳು. ಹಿರೀಕರು ಕರುಪ್ಪಳಿ ಅಧೀನದಲ್ಲಿದ್ದ ಸಾರ್ಥವಾಹಗಳಾದ ಬುಡುಮಯ್ಯ, ಕೆಡುಮಯ್ಯ, ನಡುಗಯ್ಯ, ಗುಡಗಯ್ಯ, ಸಿಡುಲಯ್ಯ ಯಂಬ ನಾಮಾಂಕಿತವುಳ್ಳ ಗಾರ್ಧಬಗಳನ್ನು ತರಿಸಿ ಬ್ರಾಮ್ಮೀ ಮೂರ್ತದಲ್ಲಿ ಯೇರಿ ಅಂಚೆಕಾರ ಅಮಲಯ್ಯ, ತಳವಾರ ತಡಸಾಲಯ್ಯರನ್ನು ಮುಂದ ಮುಂದಕ ಬಿಟ್ಟುಕೊಂಡು ಹಿಂದ ಹಿಂದಕ ಪಯಣ ಬೆಳೆಸಿದರು. ಪ್ರಯಾಣವು ಯರಡು ಹಗಲು ಮೂರು ರಾತಿರಿ ಹಿಡಿಯಿತು. ಸುಂಕತೆತ್ತುಪುರ ಪ್ರವೇಶ ಮಾಡಿದರು. ಮಾಳಿಗೆ ಮನೆಮುಂದೆ ಹುಬ್ಬಿಗಿ ಕಯ್ನೆಹಚ್ಚಿ ನಿಂತಿದ್ದ ಮಹಿಳಾ ಕ್ರುತಿಯು.. ಮೋ ಮೋಯ್ ಅಡಿವೆಪ್ಪ ಮಾಮೋ.. ಮೊಮೋಯ್ ಜಡೆತಾತೋಯ್.. ಮೊಮೋಯ್ ಗೊಲ್ಲೀರೆಜ್ಜೋ..

ಮೊಮೋಯ್ ಅಂಕಾಲಪ್ಪೋಯ್.. ಮೋಮೋಯ್ ಜಂಬಲಯ್ಯೋ ಯಂದು ಹೆಸರು ಹಿಡಿದು ಕೂಗಿ ತಾನು ಜಗಲೂರೆವ್ವ ಯಂಬುದಾಗಿ ಸಾಬೀತು ಮಾಡಿದಳು.

ಜಗಲೂರೆವ್ವ ಮನೆಯಂಗಳಕ ಬಂದವರನು 'ಬರ್ರೆಪಾ ಬರ್ರೆಪಾ' ಯಂದು ಕರೆದಳು. ಕಾಲು ತೊಳಕೊಳ್ಳಲಕ ವುಪ್ಪಿನ ನೀರು, ಕುಡಿಯಲಕ ಸೀ ನೀರು ಕೊಟ್ಟು.. ಪಳುಗಟ್ಟೆಯ್ಯಾಲ ಕರಿಗಂಬಳಿ ವುತಾರಿಸಿ ಕುಂಡರಿಸಿ ಕ್ಷೇಮ ಲಾಭ ಯಿಚಾರಿಸಿದಳು. ಕಟಂಬಲಿ ವುಂಬಲಿಕಿಟ್ಟು ಹಸಿವು ನೀಗಿಸಿದಳು. ಅವರು ಪಾಡದಾರ? ಯಿವರು ಪಾಡದಾರ? ಯಂದು ಹೆಸರು ಗುಂಟ ಕೇಳಿದಳೇ ಹೊರತು ತನ್ನ ಗಂಡ ಹೆಂಗದಾನಂತ ಕೇಳುವ ಗೋಜಿಗೆ ಹೋಗಲಿಲ್ಲ ಆ ಗಟ್ಟಿಗಿತ್ತಿ ಪತಿವ್ರತೆಯು..

ದಯವಸ್ತರು ಮಾರನೆ ದಿವಸ ಮುಂಜಾನೆ ಗ್ರಾಮದ ನಾಯಕ ಜಾಲಿಮಂಚಯ್ಯ ನಾಯಕನೆದುರು ಗುಟ್ಟಾಗಿ ಪಂಚಾತಿ ಹಾಕುವುದೆಂದು ನಿರ್ಧರಿಸಿದರು.

ನಡಕೋತ ಗ್ರಾಮದ ವಂದೊಂದು ಮನೆಯನ್ನು ಯಡತಾಕುತ ಯಿದು ಅರಮನೆಯಾ ಯಂದು ಕೇಳೂತss ಯದುರಾದ ವಬ್ಬಬ್ಬರನು ನೀನು ರಾಜನಾ.. ಯಂದು ಕೇಳೂತ ಅಲೆದಾಡಿದರು. ಕೊನೀಕೆ ಬಲ್ಲ ಮರೀನ ಹಿಡಕೊಂಡು ಅದೇ ತನ್ನ ಸಿರಿ ಸವುಭಾಗ್ಯಯಂದು ತಿಳಕೊಂಡು ಆಡುತ ಮಯ್ಮ ಮರತಿದ್ದ ತೇಜಸ್ವಿ ಹುಡುಗನೋರ್ವನನ್ನು ತರುಬಿ "ಯಿೊ ವೂರೊಳಗೆ ಅರಮನೆಯಲ್ಲಯ್ತುಪ್ಪಾ? ರಾಜನೆಲ್ಲವನಪ್ಪಾ" ಯಂದು ಕೇಳಿದಕ್ಕಾತನು "ಆಗೋ ಆಕಾಸದಾಗಯ್ತೆ.. ಯಿಗೋ ನೆಲದಡೀಲಯ್ತೆ.. ರಾಜನ್ಯಾರಪಾ ಅಂದರ ಅಗೋ ಅಲ್ಲಿ ಕೂಕಂಡಿರೋ ಕೆಪ್ಪನೇ ರಾಜ.. ಯಿಗೋ ಯಿಲ್ಲಿ ಕೂಕಂಡಿರೋ ಕುಲ್ಡನೇ ರಾಜ" ಯಂದು ನಗೆ ಚಾಸ್ಟಿ ಮಾಡಿದನು. ಪಜೀತಿಗಿಟ್ಟುಕೊಂಡ ಪಂಚರು ವಂದು ತೂತು ಬಿಲ್ಲಿಯನ್ನು ಅವನ ಅಂಗಯ್ಯೊಳಗಿಟ್ಟು "ಯಿಗಲಾದರು ತೋರಿಸೋ" ಯಂದು ಅಂಗಲಾಚಿದರು. ಆಗ ಆ ಬಾಲಕನು ಬಿಲ್ಲಿಯ ತೂತಿನೊಳಗಿಂದ ಹಾದಿ ನೋಡುತ ಹಂಗಾರ ಬನ್ನಿರೆಂದು ಅಷ್ಟು ದೂರ ಕರಕೊಂಡು ಹೋದನು. ಯಿಲ್ಲೆಲ್ಲೋ ವಂದಾನೊಂದು ಅರಮನೆಯಿತ್ತಲ್ಲಾ ಯಂದು ಸುತಮುತ್ತ ಹುಡುಕಾಡಿ ತದನಂತರ ವಂದು ನಿರ್ಣಯಕ್ಕೆ ಬಂದು ಅಗೋ ಅದೇ ಅರಮನೆಯಂದು ಬೊಟ್ಟು ಮಾಡಿ ತೋರಿಸಿ ಯಿನ್ನು

ಅದರೊಳೀಕ್ಕೆ ಹೋಗಿ ರಾಜನನ್ನು ಹುಡುಕಿಕೊಳ್ಳಿರಿ ಯಂದು ಹೇಳಿ ಸುಯ್ಯೆಂದು ಹೊರಟು ಹೋದನು.

ನೋಡುತ್ತಾರೆ ಅದೂ ವಂದು ಅರಮನೆಯಾ? ಅರಮನೆಯ ಹುಟ್ಟಾ..? ಯಂದು ಚಿಂತಿಸುತ ನಿಂತಿರುವುದನು ಕಂಡ ಗೊಂದಲಿಗರ ಮುದುಕನೊಬ್ಬ ಸಿವ ಧನಸ್ಸಿನಂತೆ ನಡಕೋತ ಬಂದು "ನಿಮ್ಮದ್ಯಾಮೂರೋ, ಯೇನು ಕಥಿಯೋ? ಹೊಸಬರಂಗದೀರಿ.. ರೊಕ್ಕಸ್ಥರಂಗದೀರಿ.. ನೀವು ಯಂಟಾಣೆ ಚೂರುಕೊಡೋದು ಬ್ಯಾಡ.. ನಾಕಾಣೆ ಚೂರು ಕೊಟ್ಟಿರಂದರ ಯೀ ಅರಮನೆಯ ಕಥಿಯ ಹೇಳತೀನಿ.." ಯಂದು ಅಡ್ಡ ನಿಂತು ತನ್ನ ಬಗಲ ವಾದ್ಯದ ಸ್ರುತಿ ಸರಿಪಡಿಸಿಕೊಳ್ಳಲಕ ಹತ್ತಿದನು. ಅದಕಿದ್ದು ಅಡಿವೆಪ್ಪನು "ಯೀ ಅರಮನೆಯ ಕಥಿ ಕೇಳಿ ಮಾಡೋದೇನಯ್ತಪ್ಪಾ.. ನಾವು ಪರಸ್ಥಳದ ಮಂದಿ ಅದೀವಿ.. ಘನುವಾದ ಕಾರ್ಯೇವಿಗೆ ಬಂದವರದೀವಿ" ಯಂದು ಹೇಳಿದನು.. ಅದಕ್ಕಿದ್ದು ಆ ಮುದೇತನು "ನಿಮ್ಮಂಥ ವುಳ್ಳವರೆ ಹಿಂಗಂದರ ನಮ್ಮಂಥವರು ಹೆಂಗ ಬದುಕಬೇಕಪ್ಪಾ ಹರಹರ ಮಾದೇವಾss ನೀವು ಅರಮನೆಯೊಳಗೆ ಹೋಗುವುದಕ ಬ್ಯಾಡ ಅಂಬಾಕಿಲ್ಲ..ರಾಜನನ್ನು ನೋಡುತೀವಂದರ ಬ್ಯಾಡ ಅಂಬಾಕಿಲ್ಲ ಹರಯನ್ನ ಮಾದೇವಾss.. ನಿಮ್ಮೆದೆಯೊಳಗ ವಂದು ಅರಮನೆ ಮೂಡಿಸೋದೆನಗ ಜರೂರತ್ತಯ್ತೆ.. ನಿಮ್ಮ ಕಣ್ಣೊಳಗ ರಾಜನ ಮೂರುತಿ ಕಡೆದಿಡೊ ಜರೂರತ್ತಯ್ತೆ ಹರಹರ ಮಾದೇವಾss.. ನೋಡುವಂಥ ಕಣ್ಣಿ, ಕೇಳುವಂಥ ಕಿವಿಯ.." ಯಂದಾತನು ಮುಂದೇನೋ ಹೇಳುತ್ತಿದ್ದುದನ್ನು ಸಯ್ರಿಸಲಾಗದ ಸಿಪಾಯಿ ಥರದೋರ್ವನು ಮೋಡುತೋಡುತಾ ಬಂದು "ಯ್ಯೋಯ್ ಚವುಡೋಜಿ.. ನೀನು ಹಾಡುಕಟ್ಟಿ ಅರಮನೆಯ ಮರುವಾದೀನ ಹರಾಜು ಹಾಕಬಾರದೂಂತ ರಾಜ ಮಾಡಿದ್ದ ಅಗ್ನೇನ ಮರೆತು ಬಿಟ್ಟಿಯೇನು?" ಯಂದು ಗದರಿದನು. ಅದಕ್ಕಿದ್ದು ಚವುಡೋಜಿಯಂಬ ಮುದೇತನು "ಹ್ಹಾ..ಹ್ಹಾ.. ಅಡವೀ ಸಿಪಾಯಿ.. ಬೆಕ್ಕಿನ ವುಚ್ಚೇನ ಕುಡುದೋರಂಗ ಯಾಕ ಆಡುತೀಯೋ ಮರಾಯss.. ಯಾರೂ ತಂಟೆಗೆ ಬರಬಾರದೂಂತ ಯಿದ್ದ ಅರಮನೇನ ಕೆಡವಿ ಕುಂತವನಲ್ಲೋ ನಿಮ್ಮ ಮಾರಾಜss.. ಅನುಬೋಸ್ರೀ.. ಅನುಭೋಸ್ರೀ.." ಯಂದು ಗೊಣಗೂತ ನಡಕೋತ ಹೋಗಿ ಹಾದಿ ಅರೀಗ್ಗೆಯಿದ್ದ ಪಳುಗಟ್ಟೆ ಮ್ಯಾಲ ಕೂಕಂಡು ತಂಬೂರಿ ಮೀಟೂತ "ಜಗನ್ಮಾಯೀ ಜಯತು ಜಗದಂಬಾ ಅಯಿಮಾss.." ಯಂದು ತನ್ನಟ್ಟಕ ತಾನ ಪದ ಹಾಡ್ಯಾಡಿಕೊಳ್ಳತೊಡಗಿದ.

ರ‍್ರುದ್ದ ಸಿಪಾಯಿಯು ಆಗಂತುಕರು ಕುದುರೆಡವು ಮೂಲದವರೆಂದು ಕೇಳಿ ತಿಳಿದು ಸರೀರ ಸವುಷ್ಠವ ಮಾತ್ರದಿಂದ ತಾನು ಮೋಹಿಸಿದ್ದು ಖರೇವಾಯಿತೆಂದು ತನಗೆ ತಾನೇ ವುಬ್ಬುತ್ತ ಅರಮನೆಯಂ ಪೊಕ್ಕು ನಿಮ ನಿಮ್ಮ ಶಕ್ತಾನುಸಾರವಾಗಿ ಅರಸನನ್ನು ಹುಡುಕಿಕೊಳ್ಳಬೌದೆಂದು ಹೇಳಿ ಅವರ ಪಾಡಿಗೆ ಅವರನ್ನು ಬಿಟ್ಟನು.

ಸಮಾಧಾನದ ವುಸುರು ಬಿಡುತ್ತ ಅವರು ಅರಮನೆಯ ರುಗ್ಣದ್ವಾರವನ್ನು ತಲುಪಲಾಗಿ ಕಾಪಲಿದ್ದ ಮಂದಿ ತಡೆಯಲು ತಾವು ಫಲಾನ ಯಿಂಥವರೆಂದೂ, ಅರಸನ ದರುಸನಾಕಾಂಕ್ಷಿಗಳಾಗಿ ಬಂದಿರುವುದಾಗಿ ಹೇಳಿದರು. ಹ್ಞಾಂ.. ಕುದುರೆಡವಿನವರೇನು? ಯಂದು ಅಭಿಮಾನ ತಳೆದನು. ಅನುಮತಿ ಪಡೆದು ಬರುವುದಾಗಿ ಹೇಳಿ ವಳ ಹೋದನು. ವಂದು ಗಳಿಗೆ ಆತು.. ಯರಡು ಗಳಿಗೆ ಆತು? ಬರೋಬ್ಬರಿ ಮೂರು ಗಳಿಗೆ ಯಂಬುವಷ್ಟರೊಳಗೆ ಆ ಸಿಪಾಯಿಯು ಬಂದು "ನೋಡಿರೆಜಮಾನರುಗಳಿರಾss.. ನಮ್ಮ ರಾಜನ ಪ್ರಕ್ರುತಿ ಬಲು ಚೂಚುಮ ಅಯ್ತೆ.. ಆತ ದುರುಗುಟ್ಟಿ ನೋಡಿದರೆ ತಡಕಳ್ಳಂಗಿಲ್ಲ... ಗಟ್ಟಿಯಾಗಿ ಮಾತಾಡಿದರ ತಡಕಳ್ಳಂಗಿಲ್ಲ.. ವುಸುರು ಬಡಿಯುವಂಗ ಸನೀಪ ನಿಂತರ ತಡಕಳ್ಳಂಗಿಲ್ಲ... ಅದಕ ಬಲು ಹುಷಾರಿರಬೇಕು.. ಅವುರೀಕಲೆ ನೋಡಬೇಕು, ಮಾತಾಡಬೇಕು, ಕೇಳಬೇಕು..ಹತ್ತು ಮಾತೊಳಗೇಳುವುದನು ಯಲ್ಡೇ ಮಾತುಗಳಲ್ಲಿ ಹೇಳಬೇಕು.." ಯಂದು ಮಾತಿನ ಕರಾರು ಯಿಧಿಸಿದನು. ಅದಕ್ಕಿವರು ಅನುಮೋದಿಸಿದರು. ತದನಂತರ ವಳೀಕ್ಕೆ ಹೋಗಲು ಪರವಾನಿಗಿ ಕೊಟ್ಟನು. ವಳ್ಳೆ ಪಜೀತಿ ಆತಲ್ಲ ಅಂತ ಯಿವರು ದ್ವಾರದ ತಲಬಾಕಲಿಗಿದ್ದ ಗಜಲಕ್ಷ್ಮಿಯಿಗ್ರಹಕ್ಕೆ ಸಣುಮಾಡಿ ಹೆಜ್ಜೆಕಿತ್ತು ವಳಗೆ ಯಿಟ್ಟು...

ನಡೆಕೋತ ಹೋಗುತ್ತಾರೆ.. ನೋಡಿಕೋತ ನಡೆಯುತ್ತಾರೆ? ಹೋಗುತ? ನಡೆಯುತ ಪಂಚರು ಯಿರುವಾಗ್ಗೆ.. ಯಿನ್ನೋರ‍್ವ ಯ್ಯಕ್ತಿ ಬಂದು ವಂದು ಹಜಾರ ಅಂದರ ಹಜಾರಕ್ಕೆ ಕರೆದೊಯ್ದು ಯಿದೇ ರಾಜಾಸ್ಥಾನ ಯಂದೂ ಹೇಳಿ ಕಲ್ಲಿನ ಬುಗುಟಿಗಳನ್ನೇ ಆಸನಗಳೆಂದು ಭಾವಿಸಿ ಕುಳಿತುಕೊಂಡು ರಾಜನ ಆಗಮನಕ್ಕಾಗಿ ಕಾಯಬೇಕೆಂದೂ ಹೇಳಿ ಹೋದನು. ಅವರು ಅದರಂಗೆ ಕೂಕಂಡು ಮಿಕಿ ಮಿಕಿ ನೋಡಲಿಕ್ಕೆ ಹತ್ತಿದರು. ರಾಜನ ಆಗಮನಾಕಾಂಕ್ಷಿಗಳಾಗಿ ತಾವಂದೆ ಅಲ್ಲದೆ ಯಿನ್ನು ಕೆಲವರಿದ್ದರು. ಅವರು ಯಿವರನ್ನು, ಯಿವರು ಅವರನ್ನು ಸುಮ ಸುಮ್ಮಕ ರಾಜರೆಂದು ಅನ್ಯಥಾ ಭಾವಿಸಿಕೊಳ್ಳುತಲಿದ್ದರು. ಹಂಗ ಭಾವಿಸಿಕೊಳ್ಳುತಲಿದ್ದುದು ಖರೆ ಯಿರದಿದ್ದರೂ ಸುಳ್ಳಂತು ಯಿರಲಿಲ್ಲ.

ಗುಂಡಲಹಳ್ಳಿ ರಾಜ ಹಂಗಜ್ಜನೂ, ಆಜಡ್ಲುವಿನ ರಾಜ ನನ್ನಲುಪಾಲನಾಯಕ, ದೂಪದಳ್ಳಿಯ ರಾಜ ಜುಮ್ಲಾನಾಯಕ, ಖುದ್ದ ಹಸ್ತಾಕ್ಷರದ ನಿರೂಪವನ್ನು ಸಂಗಾಟ ತಂದಿದ್ದ ರಾಯಭಾರಿ ರೊಟ್ಟೆಲುಕಾಲಯ್ಯ ಯಿವರೇ ಮೊದಲಾದವರಿದ್ದರು. ಯಿಂಥ ಸ್ಥಿತಿ ನಡುವೆಯೂ ಪರಸ್ಪೂರ ದ್ರುಸ್ಟಿಯುದ್ದ ಮಾಡುತ ತಮ್ಮ ತಮ್ಮ ಕಿವಿಗಳನ್ನು ಅರಮನೆ ವುದ್ದಗಲಕ್ಕೂ ಚಾಚಿ ಬೆಕ್ಕುಗಳ ಮ್ಯಾವ್.. ವ್ಯಾಮ್.. ಕುರಿಮೇಕೆಗಳ ಮಹೆಹೆಹೆ.. ಗಿಳಿಗಳ ಚುವ್.. ಚುವ್.. ಕೋಳಿಗಳ ಕೊ. ಕ್ಕೋ.. ಕೋ... ಬಳೆಗಳ ಘಿಲ್.. ಘಿಲ್.. ಕಾಲುಗೆಜ್ಜೆಗಳ ಘಲ್.. ಘಲ್.. ಸೆರಗುಗಳ ಸೆರಕ್.. ಸೆರಕ್.. ಹಸುಗೂಸುಗಳ ಅವ್ವವ್ವಾ.. ಗಂಟೆಯ ಗಣಗಣಲ್.. ಯಿವೇ ಮೊದಲಾದ ಸಬುಧಗಳನ್ನಾಲಿಸುತಲಿದ್ದರು. ತಮ ತಮ್ಮ ಕಣ್ಣುಗಳನ್ನು ತೂರಾ ಪುಟ್ಟಿ ಗಾತುರಕ್ಕಗ್ಗಲಿಸಿ ಹರುಕು ಮುರುಕು ಸುಣ್ಣ ಬಣ್ಣದ ಗೋಡೆಗಳನ್ನೂ.. ಗೋಡೆಗಳಿಗಂಟಿದ್ದ ಸೋಮ ವಮುಸದ ರಾಜ ಮಾರಾಜರ, ಪಾಂಡವರು ಕವುರವರು ಜೂಡಾಡುತ್ತಿರುವ, ದ್ರವುಪದಿಯ ವಸ್ತರಾಪಹರಣದ.. ನಳದಮಯಂತಿಯರ ಯಿವೇ ಮೊದಲಾದ ತಯ್ಲವರ್ಣದ ಚಿತ್ರಗಳನ್ನೂ.. ಬಗೆಬಗೆ ಯಿನ್ಯಾಸದ ಲಾಂದರಗಳನ್ನೂ.. ಮೂಲೆ ಮೂಲೆಯೊಳಗೆ ಯಣಕಂಡಿದ್ದ ಜೇಡರ ಬಲೆಗಳ ಕಲಾಕ್ರುತಿ ಗಳನ್ನೂ ಆಸ್ವಾದಿಸುತಲಿದ್ದರು.. ಆಗೋಮ್ಮೆ ಯಿಗೊಮ್ಮೆ ಪ್ರಹರಿ ಬಂದು ರಾಜನ ನಿತ್ಯಕರುಮ ಗಳನ್ನು ಯಿವರಿಸಿ ಹೋಗುತಲಿದ್ದನು.

ವಂದುಗಳಿಗೆ ಆತು, ಯರಡುಗಳಿಗೆ ಆತು, ಬರೋಬ್ಬರಿ ಮೂರುಗಳಿಗೆ ಆತು ಯಂಬುವಷ್ಟರಲ್ಲಿ ಪರಿಚಾರಕನೋರ್ವ ಬಂದು ಸಿಮ್ಮಾಸನದ ಮ್ಯಾಲ ಮೆತ್ತೆ ಹಾಸಿ ಹಿಂದಕ ಮುಂದಕ ಹೊಳ್ಳಾಡಿಸಿ, ಅದರ ಕಾಲುಗಳ ಗಟ್ಟಿತನವನ್ನು ಪರೀಕ್ಷಿಸಿ, ಹೋದ ಸೊಲುಪ ಹೊತ್ತಿಗೆ.. ಅಂತಾಪ್ರದ ದ್ವಾರದ ಜಾಗಟೆ ಢಣೀರೆಂದು ಭಾರಿಸಿದ ಸೊಲುಪ ಹೊತ್ತಿಗೆ.. ಯಿರ್ರಾಜು ಯಂಬ ಹೊಗಳು ಭಟ್ಟಾರಕನು ಬಂದು ಅಂತಸಹಾಯಸೂರಾss ಸಣಿವಾರ ಸಿದ್ದಿ, ಮಿಂಚೇರಿ ಗಿರಿದುರ್ಗಮಲ್ಲ...ಛಲದಂಕಮಲ್ಲss ಸಮಾಧಿಗತ ಪಂಚಮಹಾಸಬ್ಧ ಮಹಾಮಂಡಲೇಸ್ವರ.. ಮಿಂಚೇರಿ ಪುರಾದೀಸss.. ಸೋಮ ವಂಸ ಕುಲತಿಲಕss.. ವಸುಧಾಕರ ಚಕ್ರಕೂಟ.. ಕೋಟಿ... ಯಿಯಿಧ ಯಿಧಾನ.. ರಿಪುಜಲಧಿ.. ಬಡಬಾನಳss.. ಸವುರ್ಯ ಮ್ರುಗರಾಜಕುಲಪಾಲನ.. ವಜ್ರದಂಡss.. ಮಲೆ ಪರ್ಗೊಳ ಗಂಡss.. ಯಿಯಿಧ ಯಾಚಕ ಜನಯ್ಕ ಚಿಂತಾಮಣಿ.. ಸಮ್ಯಕ್ತ್ವ ಚೂಡಾಮಣಿ..

ಯಿಯೇಕ ಕಮಲಾಸನss.. ಚಲದಂಕ ಪ್ರತಾಪೀss.. ಸ್ರೀ ಮದ್ರಾಜಾಧಿರಾಜ ಜಾಲಿ ಮಂಚಯ್ಯ ನಾಯಕಾ ಭೋಪರಾಕ್.. ಭೋಪರಾಕ್... ಯಂದು ಹಾಡಿ ಹೊಗಳಿದ ಸೊಲುಪ ಹೊತ್ತಿಗೆ.. ಅರಸನು ತನ್ನ ಸ್ಥೂಲ ಸರೀರವನ್ನು ಯಿಬ್ಬರಾಸರೆ ಯಲ್ಲಿ ನಡೆಸಿಕೋತ.. ನಡೆಸಿಕೋತ ಆಗಮಿ ಸುತ್ತಲೆ.. ಯಲ್ಲಾರು ಯದ್ದು ನಿಂತು ಗವುರವ ತೋರಿಸಿ ಕೂಕಂಡರು. ಸಿಮ್ಮಾಸನಾರೂಢಗೊಂಡ ರಾಜನು ಸಿವಸ್ಮಾವಲೋಕನ ವಮಾಡಿದ ಸ್ರವು ದಿಂದಾಗಿ ಕೆಮ್ಮಿ ಸಾವರಿಸಿಕೊಂಡನು.....

ಪ್ರಧಾನಿ ನರಸಪ್ಪಯ್ಯ ಅರಮನೆಯ ರೀತಿ ರಿವಾಜು ಪ್ರಕಾರ ಆಸ್ಥಾನವನ್ನುದ್ದೇಸಿಸಿ ನಾಕು ಮಾತಾಡಿದರು. ರಾಜರುಗಳು, ರಾಯಭಾರಿ ಗಳು ತಮ ತಮ್ಮ ಪರಿಚಯ ಹೇಳಿಕೊಳ್ಳತ ಕುರಿ, ಕೋಳಿ, ಮೊಲ, ಸೆಲ್ಲೇವು, ಜೇನು ತುಪ್ಪ, ಯೀರ‍್ಯವರ್ಧಕ ಲೇಹ್ಯ ಯಿವೇ ಮೊದಲಾದ ಕಪ್ಪ ಕಾಣಿಕೆ ಅರ‍್ಪಿಸಿದರು.. ಪಂಚರ ಪಯ್ಕಿ ಅಡಿವೆಜ್ಜನು ತಮ್ಮ ಖೂನು ಗುರುತು ಹೇಳಿಕೊಂಡು ಟೊಂಕ ದಿಂದ ಕಂಚಿನ ಭರಣಿಯನ್ನು ತೆಗೆದು ಅರ‍್ಪಿಸುತ್ತ "ಮಾ ಪ್ರಭು.. ಯಿದರೊಳಗೆ ತಾಯಿ ಸಾಂಬವಿಯ ಪರಸಾದವುಂಟು.. ಯಿದನ್ನು ದಿನಕಯ್ದು ಬಾರಿ ಸೇವಿಸಿ ಆಯುರಾರೋಗ್ಯ ವರ್ಧನೆ ಮಾಡಿ ಕೊಳ್ಳುವುದು" ಯಂದು ಹೇಳುತ ಸಮಯ ಪ್ರಗ್ನೆ ಮೆರೆದನು. ರಾಜನು ಸಾಯಕರ ಸಾಯದಿಂದ ಸಿಮ್ಮಾಸನದಿಂದೆದ್ದು ಪರಸಾದ ಸ್ವೀಕರಿಸಿದನು ಯಂಬಲ್ಲಿಗೆ.. ಸಿವಸಂಕರ ಮಾದೇವಾss..

ಯಂಥ ಭಾಗ್ಯವಂತರು ಜಾಲಿಮುಚಯ್ಯ ನಾಯಕರು.. ತಾಯಿದ್ದಲ್ಲಿಗೇ ತಾಯಿ ಪರಸಾದ ಬರುವುದೆಂದರೇನು?

ಸಭೆ ತಾಸು ಪರ‍್ಯಂತರ ನಡೆದು ಬರ ಖಾಸ್ತಾಯಿತು. ರಾಜ, ರಾಯಭಾರಿ ಮೊದ ಲಾದವರು ರಾಜನಿಗೂ, ತಾಯಿವಕ್ಕಲು ಮಕ್ಕಳಿಗೂ ಪ್ರಣಾಮ ಸಲ್ಲಿಸಿ ವಾಪಸಾದರು. ರಾಜ ಪಂಚರನ್ನು ಮಂತರಾಲೋಚನೆಗೆಂದು ತನ್ನ ದಿವಾನಖಾಸಾಕ್ಕೆ ಕರೆದು ಕೊಂಡೊಯ್ದನು. ಕುಡಿಯಲಕ ಬೆಲ್ಲ, ನೀರುಕೊಟ್ಟು ಸತ್ಕಾರ ಮಾಡಿ ತನ್ನಿಂದೇನಾಗಬೇಕು ಯಂದು ಕೇಳಿಕೊಂಡನು. ಪಂಚರು ಯಿಶದವಾಗಿ ಯಿವರಿಸಿ ತಾವು ಬಂದಿರೋ ಕಾರ‍್ಯ ನಿವೇದಿಸಿಕೊಂಡರು. ಜಗಲೂರೆವ್ವನ ಹಣೆಯ ಕುಂಕುಮ ಬೊಟ್ಟಿಳುವಿ.. ಮಾಂಗಲ್ಯ ಪದಕವ ಕಸಿದು ಕೊಟ್ಟಲ್ಲಿ ಯಿಂತಿಷ್ಟು ಕಾಣಿಕೆ ಕೊಡುವುದಾಗಿ ಹೇಳಿದರು. ಯಿಂಥ ಪಾಪಕಾರ‍್ಯವನ್ನು ರಾಜ ನಾದವನು ಮಾಡುವುದರಿಂದ ಬರುವ ಪಾಪಗಳಾವುವು?

ಅವುಗಳನ್ನು ನಿವಾರಿಸಿಕೊಳ್ಳಲು ತಾನ್ಯಾವ ಪೂಜೆ ಪುನಸ್ಕಾರ ಮಾಡುವುದೆಂದು ತನ್ನ ಆಸ್ಥಾನದ ಗುರು ರಾಜಾಚಾರ್ಯನನ್ನು ಕೇಳಿದನು. ಅದಕ್ಕಿದ್ದು ಆತನು ಯಿಂಥಿಂಥ ಪೂಜಾ ಕಾರ್ಯ ಮಾಡಬೇಕಾಗುವುದೆಂದು ಸಲಹೆ ನೀಡಿದನು. ಅದರ ಖರ್ಚು ವೆಚ್ಚವನ್ನು ಕುದುರೆಡವು ಅರಮನೆಯು ವಹಿಸುವುದೆಂದು ಪಂಚರು ವಾಗ್ದಾನ ನೀಡಿದ ನಂತರ..

ಸಯ್ನಿಕನೋರ್ವನನ್ನು ಕಳಿಸಿ ಜಗಲೂರೆವ್ವನನ್ನು ಅರಮನೆಗೆ ಖುದ್ದ ಕರೆಯಿಸಿ ಕೊಳ್ಳಲಾಯಿತು. ನಾಯಕನು "ತಂಗೀ ಜಗಲೂರೆವ್ವ.. ಗಂಡನೇ ಯಿಲ್ಲೆಂದ ಮ್ಯಾಲ ಕುಂಕುಮಬೊಟ್ಟು ತಾಳಿಸರ ಯಿಟುಕೊಂಡು ಯೇನು ಮಾಡುತೀ? ಅವರು ಕೇಳಿದ್ದನ್ನು ಕೊಟ್ಟು ಸೊರ್ಗ ಪದವೀನ ಪಡಕಾ" ಯಂದೊಂದೇ ಸಾರಿಗೆ ಅಂದು ಬಿಟ್ಟನು.. ರಾಜನಾದವನಿಗೆ ನಯ ನಾಜೂಕು ಯಲ್ಲಿಂದ ಬರಬೇಕು? ಯಾಕ ಬರಬೇಕು? ಅದರಿಂದ ಜಗಲೂರೆವ್ವ ಆ ಛಣ ಕೆರಳಿ ಹಂಗss ತಮಣಿಗೊಂಡಳು. ದೊರೆ ಕಡೇಕ ತಿರುಗಿ "ದೊರೆಯೇss.. ಯಿನ್ನೊಂದು ಸಲ ನೀನು ಯಾರಿಗೂ ತಂಗಿ ಯಂದೆನ ಬ್ಯಾಡ".. ಯಂದಷ್ಟೆ ಹೇಳಿದಳು, ದಯವ ಕಾರ್ಯ ಅಂದರು.. ಸತಿಯಾದವಳ ಕೊಳ್ಳಿನಿಂದ ಮಾಂಗಲ್ಯಾನ ಸವುಭಾಗ್ಯವನ ಅಪಹರಿಸೋ ನಿಮ್ಮ ದಯವಕ್ಕೆ ಧಿಕ್ಕಾರ ಅಂದಳು.. ಹೊಲಮನಿ ಅಂದರು.. ಅವಕ್ಕೆ ಬೆಂಕಿ ಹಾಕಿರಿ ಅಂದಳು. ಸಾಂಬವಿ ಕೋಪ ಮಾಡ್ಕೋತಾಳಂದರು. ಆಕೆ ತನ್ ಕೊಳ್ಳಾಗಿನ ತಾಳೀನ ಕಿತ್ತುಕೊಡುತಾಳೇನೋ ಕೇಳಿರಿ ಮತ್ತೆ ಯಂದಳು. ಆಮ್ಯಾಕಿದ್ದು ನಾಯಕನು 'ತಾಯಿ.. ನೀನು ಬಲು ದೊಡ್ಡ ಸರಣೆ ಅದೀಯವ್ವಾ.. ನಿನ್ನಂಥಾಕಿ ನನ ರಾಜ್ಯದೊಳಗೆ ಯಿರುವುದೇ ಸವುಭಾಗ್ಯ.. ರಾಜನಾದೋನು ಮಾಫ್ ಕೇಳಬಾರದು.. ಆದರೂ ಕೇಳಕಂತದೀನಿ.. ಮಾಫ್ ಮಾಡು ತಾಯೇ' ಯಂದು ಕಣ್ಣನ್ನು ವಜ್ಜಲು ಮಾಡಿಕೊಡನು. ಅಂಥ ಮಾತನ ಆಡಬ್ಯಾಡಣ್ಣಾ.. ಯಿದರಾಗ ಯಾರದೂ ತಪ್ಪಿಲ್ಲ.. ನನ ಕರುಮ.. ಜಗಲೂರೆಜ್ಜನ ಪಾದ ಸೇರೋ ತನಕ ಯೇನೇನು ಅನುಭೋಸೋದಯ್ತೋ.. ಅದನೆಲ್ಲ ಅನುಭೋಸಲಕssಬೇಕು" ಯಂದು ಕಯ್ನು ಮುಗುದು... ಹೋಗುವಾಗ್ಗೆ "ವುಂಡಕಂಡು ಹೋಗುವಂತಿರಣ್ಣಾ.. ಮತ್ತೆ ಹಂಗss ಬರೀ ಹೊಟ್ಟೀಲಿ ಹೋದಿಗೀದೀರಾ" ಯಂದು ಹೇಳುವುದನು ಮರೆಯಲಿಲ್ಲ. ಆಕೆಯ ಮಾತು ಕೇಳಿದ....

ಪಂಚರಿಗೆ ಮರಳುಗಾಡೊಳಗ ಬರೀ ಬತ್ತಲೆ ನಿಂತಿರುವಂಥ

ಅನುಭವವಾತು. ಯಂಥ ಕೆಲಸ ಮಾಡಿದೆವಲ್ಲಾ ಯಂದು ಪಾಶ್ಚಾತ್ತಾಪದ ವುರಿಯೊಳಗ ಬೆಂದು ಸುದ್ದವಾದರು ವಂದು ಗಳಿಗೆ ಹೊತ್ತು.. ಯರಡನೆ ಗಳಿಗೆ ತಾವು ಸುಂಕವಿಲ್ಲದ ದಾರಿಗುಂಟ....

ಸುದ್ದಿ ತಿಳಿದೊಡನೆ ಅರಮನೆಯ ಮುಖವು ಬೆಳ್ಳಗೆ ಬಿಳುಚಿಕೊಂಡಿತು. ಹೆಂಗಪ್ಪಾ ಸಾಂಬಯ್ಯಗೆ ಸಮಾಧಾನ ಹೇಳುವುದು ಯಂದು ಮಮ್ಮಲನ ಮರುಗುತಲೇ ಪಟ್ಟಣ ಸೋಮಿಗಳು ಸಾಂಬವಿಯ ವರಪುತ್ರನೇ ಹಿಂಗಾಯ್ತಲ್ಲಾ.. ಯಂದರು. ತಮ ತಮ್ಮ ಹೆಣುಮಕ್ಕಳು ಕರಕೊಂಡು ಅವರವರ ತಂದೆಗೋಳು ತಮ ತಮ್ಮ ಸಂಸ್ಥಾನಗಳಿಗೆ ಕರಕೊಂಡು ಹೋದರು. ಕಣ್ಣೊಳಗೆ ನೀರು ತಂದುಕೊಂಡ ಸಾಂಬಯ್ಯನನ್ನದುರಿಗೆ ಸಾಂಬವೀ ಕರ್ತನೆನಿಸಿಕೊಂಡ ಜಡೆತಾತನು "ನಿನ ಹಣೆಯಾಗ ಯಲ್ಡನೇ ಲಗ್ಗುನ ಬರದಾಂಗಿಲ್ಲ.. ಯಿೂ ವಯಸ್ಸಿನಾಗ ನೀನು ಲಗ್ಗುನವಾದರ ಲೋಕಾಪವಾದ ಬರತಯ್ತೆ.. ಅದಲ್ಲದ ನಿನ ಸರೀರದೊಳಗ ತಾಯಿ ಸಾಂಬವಿ ವಸ್ತಿ ಮಾಡ್ಯಾಳ.. ನಿನ್ನ ನೋಡಿದರೆ ಅದಿ ಸಗುತಿಯನ ನೋಡಿದಂಗಾಗುತಯ್ತೆ.. ಕುವ್ವಾಡಕೂ ಆ ಸಂಗತಿಯನ ಯತ್ತ ಬ್ಯಾಡ.. ಕಯ್ಯಿಮುಗುದು ಕೇಳಿ ಕೊಂತೀನಿ.. ನೀನು ಪರನಾರಿ ಸೋದರನಾದಿ ಅಂದರ ಕುದುರೆಡವು ಸಾವ್ರಾಜ್ಯಕ್ಕೂ ಬಲ ಬರತಯ್ತೆ.. ಪರನಾರಿ ಸೋದರನೆಂದರ ಮಾತ್ರಅಚಂದ್ರಾರ್ಕವಾಗಿ ನೀನು ವುಳಕೊಂತೀ.. ಯಿದಕ ನಿನ ವಪ್ಪಿಗೆ ಅಯ್ತಾ? ಯಿಲ್ಲಾಂದೀ ಅಂದರೆ ನಾನು ಅರಮನೇನ ಬಿಟುಕೊಟ್ಟು ನನ್ನ ಲಚುಮವ್ವನ ತೋಪನು ಸೇರ್ಕೊಂತೀನಿ" ಯಂದು ಮನಸನು ವಲುವು ಮಾಡಿಕೊಂಡು ಹೇಳಿದನು. ಅದಕ ಪ್ರತಿಯಾಗಿ ಸಾಂಬಯ್ಯನು "ಅವುದೆಜ್ಜಾ, ನೀನು ಹೇಳೋದು ಖರೇವಯ್ತೆ.. ನಾನಿವತ್ತಿನಿಂದ ಪರನಾರಿ ಸೋದರ ನಾಗಿರುತೀನಿ.." ಯಂದು ಮಾತುಕೊಟ್ಟನೆಂಬಲ್ಲಿಗೆ ಸಿವಸಂಕರ ಮಾದೇವಾss..

* * * *

ಚೆಲಿಮಲದೊಳಗ ಯೇಸೋ ವರುಸಗಳಾದ ಮ್ಯಾಲ ಯಂಬ ಕಾರಣಕ್ಕೆ ಸ್ರೀ ಸ್ರೀ ಸ್ರೀ ಯೀರಭದ್ದರ ದೇವರ ರಥೋತ್ಸವವು ಯಿಜ್ರುಂಭಣೆಯಿಂದ ಅಯ್ದು ಹಗಲು, ಆರು, ರಾತ್ರಿಗಳ ಕಾಲ ಯಾಕ ನಡೆಯತೆಂದರೆ ಅದಕss ನಡೆಯಿತು. ಅಲ್ಲಿನ ಸಮಾಳಗಳ ಸದ್ದಿಗೆ ಪಕ್ಷಿಗಳು ದೂರ ದೂರಕೆ ಗುಳ್ಳೇ ಹೋಗಿಬಿಟ್ಟವು? ವಡಪುಗಳ ಭರಾಟೆಗೆ ಹತ್ತಾರು ಕಡೆ ಗರ್ಭಪಾತವಾದವು? ನಾಸ್ತೀಕರು ಆಸ್ತೀಕರಾದರು? ಮಂದೇವರುಗಳ ಪಕ್ಷಾಂತರವಾಯಿತು. ಹಿಂಗ

ಸಮಾಚಾರಗಳು ವಂದೇ ಯರಡೇ ಸಿವನೇss.. ಥಾಮಸು ಮನ್ರೋ ಸಾಹೇಬನೇ ದೇವರ ಅಟಾಟೋಪ ಕಂಡು ಸೊತಾ ದಂಗಾಗಿ ಹೋಗಿಬಿಟ್ಟನು. ಅದಾದ ಯರಡನೇ ದಿವಸ ರಾತ್ರಿಹೊತ್ತಲ್ಲಿ ತನ್ನ ಸಹಚರನಾದ ಯಿಲ್ಲಿಯಮ್ಸನ ಹೆಂಡತಿ ಜೇನಳು ಹೆತ್ತ ಗಂಡು ಕೂಸಿಗೆ ತಾನೇ ಖುದ್ದ ನಿಂತಿದ್ದು ಅದಕ್ಕೆ "ಜಾರ್ಜ್ ಯೀರಭದ್ದರ್" ಯಂದು ನಾಮಕರಣ ಮಾಡಿದಳೆಂದರೆ ದೇವರ ಮಯ್ಮೆಯನ್ನು ವಾಚಕರೇ ಲೆಕ್ಕ ಹಾಕುವುದು. ಸಾಹೇಬನು ದೇವರ ಗೋಪುರದ ಜೀರ್ಣೋದ್ಧಾರ ಕಾರ್ಯಕ್ಕ ನಿಂತ ಬಯ್ಪಕ್ಕೀಲೆ ಅಯ್ನೂರು ಬೆಳ್ಳಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಸ್ಥಳೀಕ ಆಸ್ತೀಕ ಮಂದಿಯ ಕಣ್ಣ ಗೊಂಬಿಯಾದನು. ಪರಸ್ಥಳದ ಮಂದಿ ಅವಯ್ಯನ ನೆನಪನ್ನು ಹೆಡಿ ಹೆಡಿಗೆ ತುಂಬಿಕೊಂಡು ತಮ ತಮ್ಮ ಮೂರುಗಳಿಗೆ ಕೊಂಡೊಯ್ದು ಮನೆದುಂಬಿಸಿಕೊಂಡರು. ಅವಯ್ಯನ ಕೆಂಗೊರಳಲ್ಲಿ ಫಳಫಳಾಂತ ಮಿಂಚುತಲಿದ್ದ ಮುತ್ತಿನ ಸರದ ಪ್ರಕರಣವು ಯಾವ ಪ್ರಕಾರವಾಗಿ ಬಗೆ ಹರಿಯತೆಂದರೆ ಯೀ ಪ್ರಕಾರವಾಗಿ ಬಗೆಹರಿಯಿತು. ಅದು ಹ್ಯಾಂಗಂದರ..ಹಂಗ...

ಸಂಬುಗನು ತಾವು ಯಾಕ ಮುತ್ತಿನ ಸರವನ್ನು ಕಳುವು ಮಾಡಬೇಕಾಗಿ ಬಂದಿತೆಂಬುದರ ಪೂರುವಾಪರ ಯಿವರಿಸಿ ಕಯ್ಯಿಕಟ್ಟಿ ತಲೆ ತಗ್ಗಿಸಿ ಯೇನಾದರು ಮಾಡಿಕೊಳ್ಳಿಯಂಬ ಅರ್ಥದಲ್ಲಿ ನಿಂತುಕೊಂಡನು. ಯೋಚಿಸೀ ಯೋಚಿಸೀ ಮನ್ರೋ ಸಾಹೇಬನು ಮುತ್ತಿನ ಸರವನ್ನು ಅವರಿಗೆ ಮರಳಿಸುತ "ನೀವಿದ ನೊಯ್ದು ನಿಮ್ಮ ದೇವತೆಗೆ ವಪ್ಪಿಸಿರಿ, ಆದರೆ ಯಿನ್ನು ಮುಂದೆ ಕಳುವು ಮಾಡಬ್ಯಾಡೂರಿ.. ಬದುಕಲಕ ನಾನು ಯವಸ್ಥೆ ಮಾಡುತ್ತೇನೆ. ಯೇನಂತೀರಿ?" ಯಂದು ಕೇಳಿದನು. ಅದಕಿದ್ದು ಅವರು "ಆಗಲಿ ಸಾಹೇಬರಾ" ಯಂದರು. ಯಲ್ಲಾಪ್ರಕೊರಚರಟ್ಟಿಯ ಕಳ್ಳಕಾಕರಿಗೆ ಪುನರ್ವಸತಿ ಸವುಕರ್ಯವದಗಿಸಬೇಕೆಂದೂ, ಸದರೀ ಹಳ್ಳೀಲಿ ವಂದು ಅಂಗ್ರೇಜಿ ಯಿಸ್ಕೂಲನ್ನು ತೆರೆಯಬೇಕೆಂದೂ ಕೂಡ್ಲಿಗಿಯ ಕುಂಪಣಿ ಅಧಿಕಾರಿ ಯಾದ ಹೆನ್ರಿಗೆ ಆ ಕೂಡಲೆ ನಿರೂಪವನ್ನು ಸಜ್ಜು ಮಾಡಿ ಕಳುವಿಕೊಟ್ಟನು. ಅಲ್ಲಿಂದ ಹೊಂಟ ಆ ಸಾಹೇಬನು...

ಮನ್ರೋನು ತನ್ನಧೀನ ಅಧಿಕಾರಿಗಳಿಗೆ ಹೇಳೋದನ್ನು ಹೇಳಿ, ಕೇಳೋದನ್ನು ಕೇಳಿ? ಹಗಲೆನ್ನದೆ? ಯಿರುಳೆನ್ನದೆ ಪ್ರಯಾಣ ಮಾಡೀ ಮಾಡೀ ಮುವ್ವತ್ತು ಮಯ್ಲು ಅಗಲ ವುಳ್ಳ? ನಲವತ್ತು ಮಯ್ಲು ವುದ್ದವುಳ್ಳ ಮದರಾಸು ಯಂಬ ಪಟ್ಟಣವನ್ನು ಮಟ ಮಟ ಮದ್ಯಾಣ ತಲುಪಿದನು. ಅವಯ್ಯನನ್ನು

ಖುದ್ದ ಪರಿಚಯ ಮಾಡಿಕೊಂಡು ಮವುಂಟು ರಸ್ತಾದ ಸುಸಜ್ಜಿತ ಬಂಗಲೆಗೆ ಕರೆದೊಯ್ದಾತ ಯಾರಪಾ ಅಂದರ.... ಜಾರ್ಜು ನಿಕೋಲಾಸನೂ, ಅವಯ್ಯನೂ ಟಿಪ್ಪುಸುಲ್ತಾನನ ಯಿರುದ್ದ ಪೊಲಿಯೂರ ಯುದ್ದದಲ್ಲಿ ಭಾಗವಹಿಸಿದ್ದರು. ಯೀಗ ಸದ್ಯಕ ಲೆಫ್ಟಿನೆಂಟ ಪದವಿಯಲ್ಲಿರುವ ನಿಕೋಲಾಸನೂ, ಮನ್ರೋ ಸಾಹೇಬನೂ ರಾತಿರಿ ಭಾಳಾ ಹೊತ್ತಿವರೆಗೆ ಅದೂ ಯಿದೂ ಮಾತಾಡೇ ಮಾತಾಡಿದರು. ಟಿಪ್ಪುವಿನ ನೆನಪಾಗಿ.. ಪಾಪ ಪ್ರಗ್ನೆಯ ಆಕ್ರಮಣಕ್ಕೀಡಾದರು. ಭಾಳ ಹೊತ್ತಿನ ತನಕ ನೆನಪುಗಳೊಂದಿಗೆ ಚೆಲ್ಲಾಟವಾಡಿದರು. ಸ್ರೀರಂಗಪಟ್ಟಣದ ವುಸ್ತುವಾರಿ ವಹಿಸಿಕೊಂಡಿರುವ ಯಲ್ಲೆಸ್ಲಿಯು ಟಿಪ್ಪು ಅವಸಾನ ನಂತರದ ವುಂಟಾದ ಅರಾಜಕತೆಯನ್ನು ಸಮರ್ಥವಾಗಿ ಅಡಗಿಸಿದ್ದರ ಬಗ್ಗೆ ಮಾತಾಡುತಾ, ಮಾತಾಡುತಾ ಹಂಗೆ ನಿದ್ದೆಯೊಳಗೆ ಕೊಚ್ಚಿ ದೂರ ದೂರಕ ಹೋದರು. ಕನಸುಗಳ ಪ್ರಭಾವಳಿಯೊಳಗಿಂದ ಮೂಡಿ ಬಂದ ಟಿಪ್ಪು "ಸೋತವನು ನಾನಲ್ಲ ಕನರೋ.. ನೀವು.. ನಿಮ್ಮ ಕುಂಪಣಿ ಸರಕಾರ" ಯಂದು ಕೆಕ್ಕರಿಸಿ ನುಡಿದಂತಾದಾಗ ಪ್ರಹರದವನು ನಾಲ್ಕು ಗಂಟೆ ಭಾರಿಸಿದ್ದು ಭೋ ದೂರದಿಂದ ಅಲೆ ಅಲೆಯಾಗಿ ತೇಲಿ ಬಂತು.

ಜಳಕ, ನಾಷ್ಟಾ ಮುಗಿಸಿಕೊಂಡ ಮನ್ರೋಸಾಹೇಬನು ಠಾಕುಠೀಕಾಗಿ ಸಮವಸ್ತರ ಧರಿಸಿ ನಿಗದಿತ ಸಮಯಕ್ಕೆ ಸರಿಯಾಗಿ ಗವರ್ನರು ಸಾಹೇಬನ ಖಾಸಾ ಬಂಗಲೆ ತಲುಪಲು ಅಲ್ಲಿ ಹಾರ್ದಿಕ ಸ್ವಾಗತ ಲಭ್ಯವಾಯಿತು. ಗೊಟ್ಟಿಯಲಿಂಪು ಸೊಂಪು ದೊರಕಿತು. ತನಗಿಂತ ರವ್ವೋಟು ಕಿರೀಕನಾದ ಮನ್ರೋನನ್ನು ಕುರಿತು ಖುದ್ಧ ಲಾರ್ಡು ಯೆಲ್ಲೆಸ್ಲಿಯೇ 'ನಿನ್ನ ಕಾರ್ಯತತ್ಪರತೆಯಿಂದ ಕುಂಪಣಿ ಸರಕಾರ ಪ್ರಸನ್ನವಾಗಿದೆ" ಯಂದು ಹೇಳಿ ಸೇಕೆಂಡು ಕೊಟ್ಟನು. ಯಿವಯ್ಯನೂ ಸೇಕೆಂಡು ಕೊಡುತ ಯೇನೆಲ್ಲ ಹೇಳಲು ಅವಯ್ಯ ಕೇಳಿಸಿಕೊಂಡನು. ಕಾರ್ಯಭಾರ ಕುರಿತಂತೆ ಅವರೀರ್‍ವರ ನಡುವೆ ಮಾತುಗಳ ಯಿನಿಮಯ ಗೋಪ್ಯವಾಗಿ ತಾಸು ಪರ್ಯಂತರ ನಡೆಯಿತು. ಯಲ್ಲ ನಡೆದಾದ ಮ್ಯಾಲ ಕೊನೀಕಿದ್ದು ಯೆಲ್ಲೆಸ್ಲಿಯು "ಅಯ್ಯಾ ಮನ್ರೋ.. ಸ್ರೀರಂಗಪಟ್ಟಣದ ಕಡೇಕ ಹೋಗಿ ವಂದು ವಾರ ಯಿದ್ದು ಬರುತೀಯೇನಪ್ಪಾ?" ಯಂದು ಕೇಳಿದ್ದಕ್ಕೆ ಯಿವಯ್ಯನು "ಯಾಕಾಗ ಬಾರದು.. ತಮ್ಮ ಚಿತ್ತ" ಯಂದು ಹೇಳಿದನು.

ಅತ್ತ ಅನಂತಪುರದ ವಳಿತದೊಳಗ ಸಾಸ್ತ್ರಿದ್ವಯರು ಮನ್ರೋನ ಸಲುವಾಗಿ ದುರ್ಮರಣ ಯೋಗದ ಪೂಜೆಯನ್ನು ಯಿಧಿವತ್ತಾಗಿ ಮಾಡಿರದೆ ಯಿರಲಿಲ್ಲ.

ರಾಯಲಸೀಮೆ ವಳಿತದ ಅಗ್ರಹಾರಗಳ ಯೇಳಿಗೆಗೆ ಚ್ಯುತಿ ತಂದಿರುವ, ಹಿಂದೂ ಸಾಮುಸ್ಥಾನಿಕ ಅವನತಿಗೆ ಕಾರಕನಾಗಿರುವ, ದೇವಾನು ದೇವತೆಗಳ ಯಿನಾಮು ಭೂಮಿಯನ್ನು ಹೊಲೆಮಾದಿಗ ಸೂದ್ರರಿಗೆ ನಿರಂತರ ಹಂಚಿ ಯದೆ ಸೆಟೆಸಿ ಅಡ್ಡಾಡುವಂತೆ ಮಾಡಿರುವ, ಯಿಲಾಯಿತಿ ಭಾಷೆಯಾದ ಯಿಂಗಲೀಸು ಕಲಿಸಿ ಹಿಂದೂ ದೇಸದ ಬ್ರಾಮ್ಮಣರನ್ನು, ಭಾಷಾ ಭಷ್ಟರನ್ನಾಗಿ ಮಾಡುತ್ತಿರುವ, ಹಿಂದೂ ದೇಸದ ಪಯಿತ್ರವೇದೋಪನಿಷತ್ ಪುರಾಣಗಳನ್ನು ಯಿಲಾಯಿತಿ ಭಾಷೆಗಳಿಗೆ ತರ್ಜುಮೆ ಮಾಡಿ ಅಪಚಾರವೆಸಗುತ್ತಿರುವ, ತಾನೇ ಸೊಯಂ ಪುರಾಣ ಪುಣ್ಯಕಥೆಗಳನ್ನು ಓದುತ್ತಿರುವ, ಕಲೆಟ್ಟರು ಸಾಹೇಬ ಥಾಮಸು ಮನ್ರೋಗೆ ಅಕಾಲಿಕ ಮರಣವನ್ನು ದಯಪಾಲಿಸುಯಂದು ವುಗ್ರವ್ಯಗ್ರದೇವತೆಯಾದ ಲಕ್ಷ್ಮೀನರಸಿಮ್ಮ ದೇವರಿಗೆ ಯಿಸೇಸ ಪೂಜೆ ಸಲ್ಲಿಸದಿರಲಿಲ್ಲ.

ಯಿತ್ತ ವೆಲ್ದುರ್ತಿ,ಕುಂದುರ್ಪಿ ಯಂಬಿವೇ ಮೊದಲಾದ ಸಂಯುಕ್ತಾಕ್ಕರಗಳ ಮಾಮಂಡಳದ ಸುಡುಗಾಡೊಳಗೆ ಸ್ರೀ ಸ್ರೀ ಸುಡುಗಾಡೆಪ್ಪಾವಧೂತನು ಆಸ್ರಮದ ಹೆಸರಲ್ಲಿ ಭವ್ಯಾತಿಭವ್ಯ ಬಂಗಲೆಯನ್ನೇ ಯಬ್ಬಿಸಿ ಬಿಟ್ಟಿದ್ದುದು ಸರಿಯಷ್ಟೇ.. ಕಳ್ಳಕಾಕರು ಯಿಲ್ಲದ ವಂದು ಆದರ್ಸ ಗ್ರಾಮದ ವುದ್ಘಾಟನೆಯನ್ನು ಸ್ರೀ ಸ್ರೀ ಆಕಾಸರಾಮಣ್ಣಾವಧೂತರಿಂದ ಮಾಡಿಸಲಕೆಂದು ನಿಚ್ಛಯಿಸಿ ಅವರನ್ನು ಹುಡುಕಿ ಕರೆತರಲೋಸುಗ ಕಟ್ಟಾಳುಗಳನ್ನು ಯಂಟರ ವ್ಯಾಲೊಂದು ದಿಕ್ಕಿಗೆ ಹರಿಯಬಿಟ್ಟಿದ್ದನಷ್ಟೇ.. ಹಂಗೆ ಹುಡುಕ್ಕೋತ ಹೋದ ಜಗ್ಗಲಿಗೆ ಜಾಗಟಯ್ಯ ಮತ್ತವನ ಸಂಗಡಿಗರು ಫಲಾನ ದಿವಸದಂದು ವುರುವಕೊಂಡ ವಳಿತದ ಯಿಡುಪನಕಲ್ಲು ಸಮುಸ್ಥಾನದ ಶಾಬಾಲಯಂಬ ಗ್ರಾಮವನ್ನು ತಲುಪಿದರು. ಯಾಕಂದರೆ ಅಲ್ಲಿ ಚೋರ ಚೋರೇಸ್ವರ ಪುರಾಣದ ವಾಚನ ಮಹೋತ್ಸವದ ಯೇರುಪಾಟಾಗಿದ್ದತು. ಛಂದಸ್ಸಲಂಕಾರಶಾಸ್ತ್ರದ ನೂರಾ ಹನ್ನೆರಡು ಪ್ರಾಕಾರಗಳಲ್ಲಿದ್ದ ಅದನ್ನು ರಚನೇ ಮಾಡಿದ್ದಾತ ಯಾರಪ್ಪ ಅಂದರೆ ಅದೇ ಅಯ್ಯಾಳೇಸ್ವರ ಮಾಕವಿಯು. ವಂದು ಕಾಲದಲ್ಲಿ ದುರ್ದೆಸೆಯಲ್ಲಿ ಹುಡುಕ್ಕೋತ ಹುಡುಕ್ಕೋತ ಸಾಬಾಲಾಕ್ಕೆ ಬಂದು ಜಮೀಂದಾರು ಬಂಡೆಪ್ಪನನ್ನು ಕಂಡು “ಸ್ವಾಮೀ ಮೂಟ ಹಾಕಿ ಪುಣ್ಯ ಬರುತಯ್ತೆ” ಯಂದು ಹೊಟ್ಟೆ ತೋರಿಸಿದನು. ಅವಯ್ಯನನ್ನು ಅಪಾದಮಸ್ತಕ ದಿಟ್ಟಿಸಿದ ಜಮೀಂದಾರನು “ಯೇನಪ್ಪಾ..? ನಿನ್ನ ಮುಖದಲ್ಲಿ ಸರಸೊತಿದೇವಿಯು ನ್ರುತ್ಯ ಮಾಡುತ್ತಿದ್ದಂಗಯ್ತಲ್ಲಾ.. ಯೇನು ಸಮಾಚಾರ?” ಯಂದು ಕೇಳಿದನು. ಅದಕಿದ್ದು ಅವಯ್ಯ ತನ್ನ

ಪೂರುವಾಪರವನ್ನು ಚಂಪೂಸಯ್ಲಿಯಲ್ಲಿ ಕರುಳು ಕರಗುವಂತೆ ಯಿವರಿಸಿ ತನ್ನ ಗ್ರಾಚಾರವು ಯೀ ಪ್ರಕಾರವಾಗಿ ಯಿರುವುದು ಯಂದು ಹೇಳುತ ಕಣ್ಣಲ್ಲಿ ನೀರು ತಂದುಕೊಂಡನು. ಅದಕಿದ್ದು ಭೂಸ್ವಾಮಿಯು “ಆಗಲಿ.. ಅಂಜುಕೋ ಬ್ಯಾಡಪ್ಪಾ.. ನಮ್ಮ ಧರುಮಪತ್ನಿಗೆ ವಂದು ಬರಬಾರದ ಕಾಯಿಲೆ ಬಂದಿರುವುದು. ಅದು ಅವುಸಧಕ್ಕೆ ಮಣಗವಲ್ಲದು.. ಯಾವುದಾರ ಕವಿ ಕಯ್ಲಿ ಪುರಾಣ ಬರೆಸಿ ಅದರ ನೂರಾವಂದು ಪ್ರತಿಗಳನ್ನು ನೂರೊಂದು ವಯ್ದಿ ಕೋತ್ತಮರುಗಳಿಗೆ ದಾನ ನೀಡಿದಿ ಅಂದರೆ ಯೀ ರೋಗ ವಾಸಿ ಆಗತಯ್ತೆಯಂದು ವಬ್ಬ ತಾತನು ಹೇಳಿದನು. ಅದರಂತೆ ಮಾಡಬೇಕಯ್ತೆ. ನೀನು ಬರಕೊಟ್ಟಿ ಅಂದರೆ ಪುರಾಣ ತೂಕದ ಬಂಗಾರವನ್ನು ನಿನಗೆ ದಾನವಾಗಿ ಕೊಡುವೆನು”ಯಂದು ಹೇಳಿದ್ದಕ್ಕೆ ಅವಯ್ಯನು ಸಂತೋಷದಿಂದ ವಪ್ಪಿದನು. ಆ ಕ್ಷಣದಿಂದ ಪುರಾಣ ರಚನಾ ಕಾರ‍್ಯಕ್ಕೆ ಸ್ರೀಕಾರವಂ ಹಾಕಿದನು. ಫಲಾನ ತೇದಿ ಯಂದು ಆರಂಭಿಸಿ ಫಲಾನ ತೇದಿ ಯಂದು ಮುಗಿಸಿದನು. ಅದೇ ಚೋರ ಚೋರೆಸ್ವರ ಪುರಾಣವು. ಅದರ ಸಾರಾಂಶವನ್ನು ಬರೀ ಬಾಯಿ ಮಾತಿನಿಂದ ಹೇಳಲಿಕ್ಕಾಗದು. ವಂದೇ ಮಾತಿನಲ್ಲಿ ಹೇಳಬೇಕೆಂದರೆ ಅಗಸ್ತ್ಯ ಮಹರ‍್ಸಿಗಳ ಸಾಪದಿಂದ ಪಾರೊತಿಯು ಭೂಲೋಕದ ಯಲ್ಲಾಪ್ರಕೊರಚರಟ್ಟಿಯ ರಾಮಣ್ಣನ ಗರ‍್ಭದಲ್ಲಿ ಜನಿಸುವಳು. ಆಕೆಯನ್ನು ಹುಡುಕಲೋಸುಗ ಪರಮೇಸ್ವರನು ಭೂಲೋಕದ ಯಿನ್ನೊಂದು ಕಳ್ಳರ ತವರೂರೆನಿಸಿದ ನೆರಣಿಕೆಯಲ್ಲಿ ಕನ್ನ ಕೊರೆಯುವ ಕನ್ನಯ್ಯನ ಹೊಟ್ಟೆಯಲ್ಲಿ ಹುಟ್ಟಿ ಕವುಮಾರ‍್ಯಾವಸ್ಥೆಯಲ್ಲಿಯೇ ಚೋರಾಗ್ರೇಸರನೆಂದು ಹೆಸರು ಪಡೆಯುವನು. ಅವನು ಮುಂದೆ ವುಡುಸಲಮ್ಮ ಜಾತ್ರೆಯಲ್ಲಿ.. ಹಿಂಗೇ ಕಥಿಯು ಮುಂದೊರೆದು.. ಯೀ ಪುರಾಣಮಂ ಕೇಳ್ದರಿಗೆ ಫಲಾನ ಫಲಾನ ಪುಣ್ಯ ಲಭಿಸುವುದೆಂಬ ಮಂಗಳಾಚಾರಣೆಯೊಂದಿಗೆ ಮುಕ್ತಾಯವಾಗುತ್ತದೆ.

ಶಾಬಾಲದಲ್ಲಿ ಯಾಲಪಿಯ ಗಮಕ ವರೇಣ್ಯರಾದ ಗೋಯಿಂದಾಚಾರ‍್ಯ, ಭವಹರಣಾ ಚಾರ‍್ಯರೀರ‍್ವರ ಮಧುರ ಕಂಠದಲ್ಲಿ ಯಂಟು ದಿನಗಳ ಪರ‍್ಯಂತರ ಕರ‍್ಣ ರಸಾಯನ ವನ್ನು ಸಹಸ್ರಾರು ಮಂದಿಗೆ ನಿಸ್ಸಂಕೋಚವಾಗಿ ವುಣ ಬಡಿಸಿ ವಂಭತ್ತನೇ ದಿವಸಕ್ಕೆ ಕಾಲಿರಿಸಿತು. ಪುರಾಣದ ಮಂಗಳಮಯ ಸಮಾರಂಭಕ್ಕೆ ಆಸೀರ‍್ವಚನ ನೀಡಲು ಸ್ರೀ ಸ್ರೀ ಆಕಾಸ ರಾಮಣ್ಣಾವಧೂತರೇ ಆಗಮಿಸಿದರೆಂದರ ಹೇಳೋದೇನುಂಟು? ಆರಂಭದಲ್ಲಿ ಪುರಾಣ ಕತ್ರುಗೆ ಪುರಾಣ ತೂಕದ ಬಂಗಾರದ ಗಟ್ಟಿ ಯನ್ನು ಸಮರ‍್ಪಿಸಿ ಅದ್ದೂರಿ ರೀತಿಯಲ್ಲಿ ಸನು

ಮಾನಿಸಲಾಯಿತು. ಪುರಾಣದ ನೂರಾವಂದು ಪ್ರತಿಗಳನ್ನು ಸುತ್ತನ್ನಾ ಕಡೇಲಿಂದ ಆಗಮಿಸಿದ್ದ ನೂರಾವಂದು ಯಿದ್ವತ್ತು ಯಿಪ್ರರಿಗೆ ವಸ್ತ್ರತಾಂಬೂಲ ಸಯ್ತ ಯಿತರಿಸಲಾಯಿತು. ಸ್ರೀ ಸ್ರೀ ಆಕಾಸರಾಮಣ್ಣಾವಧೂತರು ಆಸೀರ್ವಚನ ನೀಡುತ ಗದ್ಗದಿತರಾದರು. ತದನಂತರ ಪುರಾಣ ಸ್ರೋತೃಗಳಿಗೆಲ್ಲ ಅನ್ನಸಂತರ್ಪಣೆ ನಡೆಯಿತು.

"ಓಹೋಽ ಸುಡುಗಾಡೆಪ್ಪಾವಧೂತರ ಕಡೆಯವರೋ" ಯಂದು ವಂದೇ ಮಾತಲ್ಲಿ ವುದ್ಗರಿಸಿದ ಬಂಡೆಪ್ಪ ಜಾಗಟಯ್ಯನನ್ನು ವಳಗೆ ಕರೆದೊಯ್ದು ಭೆಟ್ಟಿ ಮಾಡಿಸಿದನು. ಜಾಗಟಯ್ಯನ ಬಾಯಿಯಿಂದ ಪ್ರವರ ಆಲಿಸಿದ ಸ್ರೀಗಳು "ಆಯ್ತು" ಯಂದು ವಪ್ಪಿಗೆ ಸೂಚಿಸಿದರಲ್ಲದೆ ಫಲಾನ ದಿವಸದಂದು ಆಗಮಿಸುವುದಾಗಿ ಮಾತುಕೊಟ್ಟರು. ಅಲ್ಲಿಂದ ಬಯಲ್ದೇರಿದ ಜಾಗಟಯ್ಯನ ಮನಸ್ಸಿನಲ್ಲಿ ಮಾಕವಿಯ ಸುಪರ್ದಿಯಲ್ಲಿರುವ ಬಂಗಾರದ ಗಟ್ಟಿ ಕಾಡದೆ ಯಿರಲಿಲ್ಲ.. ಮಾಕವಿಯು ಭವುತಿಕವಾಗಿ ದುರ್ಬಲನೇ ಯಿರುವನೆಂಬುದರಲ್ಲಿ ಯರಡು ಮಾತಿಲ್ಲ. ಬಲಿಷ«ನಾಗಿರುವ ತಾನು ಅದನ್ನು ಜುಲುಮಿಯಿಂದ ಕಿತ್ತುಕೊಳ್ಳುವಾಗ ದಂಡ ಪ್ರಯೋಗ ಮಾಡಲೂಬೌದು? ಆಗ್ಗೆ ಯೀರಾವೇಸದಿಂದ ಹೋರಾಡುವ ಆತನು ತನ್ನಿಂದ ಕೊಲೆಯಾಗಲೂಬೌದು? ಕೊಲೆಯಾಗುವ ಯಕ್ತಿಯು ಯಿದ್ವತ್ತು ಪ್ರವುಢಿಮೆಯ ಮಾಕವಿಯು, ಪ್ರಾಣಬಿಡುವಾಗ ಆತನು ತನಗೆ ಸಾಪ ಕೊಡಬೌದು? ವಂದು ಕ್ಷಣ ಜಾಗಟಯ್ಯ ಹೆದರಿದ. ಯಿ ಯಿಷಯವನ್ನು ತೂಚಾ ತಪ್ಪದೆ ತಮ್ಮ ವಡೆಯನಿಗೆ ಹೇಳದಿರುವುದೇ ವಾಸಿಯಂದು ಬಗೆದು, ಪ್ರಯಾಣ ಮಾಡಿ ಫಲಾನ ದಿವಸದಂದು ತಮ್ಮ ಸ್ವಾಸ್ಥಿ ಸೇರಿಕೊಂಡನು.

ಅವನು ಹೇಳಿದ ಮಾತುಗಳನ್ನು ಆಲಿಸಿದ ಸುಡುಗಾಡೆಪ್ಪಾವಧೂತನು ಭಲಾ ಭಲಾ ಯಂದು ಮೆಚ್ಚುಗೆ ಸೂಚಿಸಿದೆ ಯಿರಲಿಲ್ಲ.. ಫಲಾನ ದಿವಸ ಅಂದರೆ ದೂರವಿಲ್ಲ.. ತಾವೀಗಿಂದೀಗಲೇ ಕಾರ್‍ಯ ಪ್ರರುತ್ತರಾಗಬೇಕು. ಸಾಲವಂದಿಗರಾಗಿದ್ದ ಮತ್ತು ಅಧಿಕಾರ ಲಾಲಸೆಗೆ ಯಳ್ಳು ನೀರು ಬಿಟ್ಟಿದ್ದ ಗವುಡ ಸೋದರರು "ನೀವು ಕಾಲಿನಿಂದ ತೋರಿಸಿದ್ದನ್ನು ತಲೇಲಿ ಹೊತ್ತು ಮಾಡುತೀವಿ ಬುದ್ದಿ"ಯಂದು ಹೇಳುತ ಸ್ವಾಮಿ ನಿಷ« ಮೆರೆದರು.

ಚೋರ ನಯುರ್ಕ್ಮಲ್ಯ ಯೋಜನೆಯು ವುದ್ಘಾಟನೆಯುನ್ನು ಹಮ್ಮಿಕೊಂಡಿರುವುದಾಗಿಯೂ, ಯಿದಕ್ಕೆ ತ್ರಿಕರಣ ಪೂರುವಕವಾಗಿ ವಂತಿಗೆಗಳನ್ನು ಸಲ್ಲಿಸಿ ಯಶಸ್ವಿಗೊಳಿಸಬೇಕೆಂದೂ, ಸುತ್ತನ್ನಾಕಡೆ ಧೂತರ ಕಯ್ಲಿ ನಿರೂಪ

ಸರಬರಾಜು ಮಾಡಿದನು.

ಅದನ್ನು ಕೇಳಿ ಗ್ರಾಮಗಳ ಯಾವತ್ತು ಮಂದಿ ಅಲ್ಲಾಡಿ ಹೋಯಿತು. ಬೀದಿ ಬೀದಿಗಳನ್ನು ತಳಿರು ತೋರಣಗಳಿಂದ ಸಿಂಗರಿಸುವುದೇನೋ ಸರೆ ಸರೆ.. ಕಯ್ಲಾದಷ್ಟು ದೇಣಿಗೆ ನೀಡ ಬೌದು. ಆದರೆ ತಮ ತಮ್ಮ ಮನೆಗಳಿಗೀಗಾಲೇ ಯಿರುವ ಬಾಗಿಲು ಕಿಟಿಕಿಗಳನ್ನು ಪುಟ್ಟಂಪೂರ್ತಿ ತೆಗೆಯುವು ದೆಂದರೇನು? ತಮ ತಮ್ಮ ಸುಪರ್ದಿಲಿರುವ ಬೀಗ ಪತ್ತಗಳನ್ನು ಭಕುತಿಪೂರ್ವಕವಾಗಿ ಸುಡುಗಾಡಿಗೆ ಸಮರ್ಪಿಸುವುದೆಂದರೆ ಹೆಂಗೆ?.. ಅದೂ ಅಲ್ಲದೆ ಯಿನ್ನೊಂದು ವಾರೊಪ್ಪತ್ತಲ್ಲಿ ಸದರಿ ಗ್ರಾಮದ ಸುಡುಗಾಡು ತನ್ನ ನಯ್ಜ ಕಾರ್ಯ ಚಟುವಟಿಕೆಯನ್ನು ಸ್ಥಗಿತಗೊಳಿಸಲಿರುವುದಂತೆ. ಹೊಸ ಸುಡುಗಾಡು ಅಸ್ತಿತ್ವಕ್ಕೆ ಬರುವ ಮಟ ಯಾರೊಬ್ಬರೂ.. ಸಿವ ಸಿವಾ.. ಯಿದೇನು ತಂದೆಯಪ್ಪಾ ತಮಗೆ?

ಮಂದಿಯ ಕಣ್ಣೀರು ಹಳ್ಳದೋಪಾದಿಯಲ್ಲಿ ಅಮರಾವತಿಯಂತೆ ಕಂಗೊಳಿಸುತಲಿದ್ದ ಸುಡುಗಾಡಿಗೆ ಹರಿದು ಸಾಯಿರದಾಯಂಟು ಸುಡುಗಾಡು ಸಿದ್ದರ ನಡುವೆ ಛದ್ಮ ಯೇಸಧಾರಿ ದೇಯೇಂದ್ರನಂತೆ ಗೋಚರ ಮಾಡುತಲಿದ್ದ ಅವಧೂತನನ್ನು ಕಂಡು "ಯೇನಿದು ಯಚಿತ್ರವು" ಯಂದು ಯಿನ್ನಪ ಮಾಡಿಕೊಂಡಿತು. ಅದಕ ಸಿಲಾ ಮಾನ್ನವನಾದ ಅವಧೂತನು "ನೀವು ನಿಮ ನಿಮ್ಮ ಮನೆಗಳನ್ನು ಆತಮ ಬಲದಿಂದ ಮಾತ್ರಕಾಯಬೇಕೇ ಹೊರತು ಕಿಟಕಿ ಬಾಗಿಲು ಬೀಗಪತ್ತಗಳ ಆಸರೆ ಬಯುಸಬಾರದು. ನಿಮ್ಮಲ್ಲಿ ಯಿಂಥ ಆತುಮಬಲವನ್ನು ಸದ್ರುಢಗೊಳಿಸಲಕೆಂದೇ ನಾವು ಯೀ ಯೋಜನೆಯನ್ನು ಹಮ್ಮಿಕೊಂಡಿರುವುದು" ಯಂದು ಹೇಳುವುದೆಂದರೇನು ಸಿವನೇ..?

ಮನಾರ ಕಲೆತ ಧನಕನಕ ವಸ್ತ್ರರಾಸಿಯನ್ನು ಖರ್ಚು ಮಾಡಲಕ ಯಿದ್ದ ದಾರಿಗಳು ವಂದೇ ಯರಡೇ.. ಅವೂಸಯ್ತು ಮನಾರವೇ.. ಹೆಜ್ಜೆ ಹೆಜ್ಜೆಗೊಂದೊಂದು ತೋರಣವು ಮಂಟಪವು.. ನೂರೆಂಟು ಚುಕ್ಕಿಗಳ ರಂಗವಲ್ಲಿಯು.. ಯಾರ್ಯಾರು ಯೇನೇನು ಮಾಡಬೇಕೋ.. ಅದನು ಅವರೇ ಮಾಡಲಕ ಬೇಕು.. ಫಲಾನ ದಿವಸಕ್ಕ ಸರಿಯಾಗಿ, ಫಲಾ ಯೇಳೆಗೆ ಸರಿಯಾಗಿ ಸ್ರೀ ಸ್ರೀ ಆಕಾಸ ರಾಮಣ್ಣಾವಧೂತರು ಅಲ್ಲೇ ಬರುತಾರೆಂದರೆ ಯಿಲ್ಲೇ ಭಾರಿಸ ತೊಡಗಿದ ಡೊಳ್ಳುಗಳೇನು? ತಮಟೆ ತಪ್ಪಡಿಗಳೇನು? ಸನ್ನಾಯಿಗಳೇನು? ಸಿವಸಂಕರ ಮಾದೇವಾ.. ಪ್ರತಿಯೊಬ್ಬರ ಪಂಚೇಂದ್ರಿಯಗಳಿಗೆ ಹಬ್ಬಮೋ ಹಬ್ಬ ಸಿವನೇ.. ಕಾಡು ನಾಡೊಳಗೋ? ನಾಡು ಕಾಡೊಳಗೋ.. ಹಾವುಗಳ

ಹುತ್ತಗಳೊಳಗೋ? ಹುತ್ತಗಳೇ ಹಾವುಗಳೊಳಗೋ ಸಿವನೇ..

ಫಲಾನ ಸಮಯಕ್ಕೆ ಸರಿಯಾಗಿ ಆರಂಭಗೊಂಡಂಥ ಸಮಾರಂಭದಲ್ಲಿ ಸ್ರೀ ಸ್ರೀ ಆಕಾಶ ರಾಮಣ್ಣಾವಧೂತರು ತುಪ್ಪ ತುಳುಕಾಡುತಲಿದ್ದ ನೀಲಾಂಜನವೊಂದನ್ನು ಬೆಳಗಿಸಿ ಯೋಜನೆಯನ್ನು ವುದ್ಘಾಟನೆ ಮಾಡುತ ಯೇನು ಆಸೀರುವಚನ ನೀಡಿದರೆಂದರೆ ಅದನೆ ನೀಡಿದರು...

ಸುಡುಗಾಡಿಗೂ ಸಾತ್ವಿಕ ಕಳೆ ಕೊಟ್ಟಿರುವ ಕುರಿತು, ಸುಡುಗಾಡನ್ನು ಮೂರುಗಳೊಳಗೂ ಯಿಸ್ತಾರ ಮಾಡಿರುವ ಕುರಿತು ಮಾತಾಡುತ್ತಿರುವಾಗ್ಗೆ.. ಸುಡುಗಾಡುಗಳ ಜೀರ್ಣೋದ್ಧಾರ ಪುನರುತ್ಥಾನ ಸಲುವಾಗಿ ನಾಡಿನಾದ್ಯಂತ ಪ್ರವಾಸ ಕಯ್ಕೊಳ್ಳಬೇಕೆಂದು ರಾಜರುಗಳು ಸುಡುಗಾಡೆಪ್ಪಾವಧೂತರನ್ನು ಪ್ರಾರ್ಥಿಸುತ್ತಿರುವಾಗ್ಗೆ...

ಅತ್ತ ಕೂಡ್ಲಿಗಿ ಪಟ್ಟಣದೊಳಗ ಅಬಾಲ ರುದ್ದರಾದಿಯಾಗಿ ಸಮಸ್ತರು ಅಗೋಚರಮೂ, ಅಲವುಕಿಕಮೂ, ಆಧ್ಯಾತ್ಮಿಕ ಸದ್ರುಶಮೂಆದ ಯಿರಹ ಯೇದನೆಯಿಂದ ಫಲಾನ ದಿವಸದಂದು ಆರಂಭಿಸಿ ಫಲಾನ ದಿವಸದವರೆಗೆ ನರಳಾಡಿದರು.. ಫಲಾನ ಮೂರ್ತದಂದು ವಯಿಭಮೋಪೇತವಾಗಿ ಡಣ್ಣಾಯಕನ ಯೇಕ ಮಾತ್ರಪುತ್ರರತ್ನ ಕಲಿಯೀರನಾಯಕ ಯಂಬ ವರಸ್ರೇಷ«ನಿಗೂ, ತಿಲ್ಲಾನ ತಾಯಕ್ಕಳ ಯೇಕ ಮಾತ್ರಕುವರಿ ತ್ರಿಪುರಸುಂದರೀದೇವಿ(ವರನು ರಾಕ್ಷಸ ಗಣಕ್ಕೆ ಸೇರಿದ್ದುದರಿಂದಲೂ, ಕನ್ಯೆಯು ದೇವಗಣಕ್ಕೆ ಸೇರಿದ್ದರಿಂದಲೂ ಚಿನ್ನಾಸಾನಿ ಯಂಬ ನಿಜನಾಮಾಂಕಿತವನ್ನು ಮೇಲ್ಕಾಣಿಸಿದಂತೆ ಬದಲಾವಣೆ ಮಾಡಿ ಗಣಗಳನ್ನು ಸರಿದೂಗಿಸಿದ್ದರು)ಗೂ ಜರುಗಿದ ಯಿವಾಹ ಸಮಾರಂಭಕ್ಕೆ ಆಗೋರು, ಆಗದೋರೆಲ್ಲ ಆಗಮಿಸಿದರು, ಆಗಮಿಸಿ ವಧೂವರರಿಗೆ ಬೆಲೆಬಾಳುವ ಕಾಣಿಕೆಗಳನ್ನು ಕೊಡಮಾಡಿ ಶುಭ ಹಾರಯಿಸಿದರು. ತ್ರಿಪುರಸುಂದರಿ ನಾಮಾಂಕಿತದ ಚಿನ್ನಾಸಾನಿಯು ಮುತ್ತುಗಳಲಂಕ್ರುತ ಡೋಲಿಯೊಳಗೆ ಕೂತು ಡಣಾಪುರ ಸಮುಸ್ಥಾನದತ್ತ ಸಮೇತ ಪ್ರಯಾಣ ಬೆಳೆಸಿದಳು ಯಂಬಲ್ಲಿಗೆ ಸಿವಸಂಕರ ಮಾದೇವಾ..

ಯಿತ್ತ ತಿಲ್ಲಾನ ತಾಯಕ್ಕ ತನ್ನ ಚರಸ್ಥಿರ ಆಸ್ತಿಯನ್ನು ತನ್ನ ಆರಾಧ್ಯದಯವ ಯಿರುವ ತಿಮಲಾಪುರದ ಪ್ರಸನ್ನ ವೆಂಕಟೇಶ್ವರನಿಗೂ, ಸದರಿ ಗ್ರಾಮದ ಕೊತ್ತಲ ಸ್ವಾಮಿಗೂ ದಾನ ರೂಪದಲ್ಲಿ ಬರೆದು ಕೊಟ್ಟು ತಿರುಪತಿ ಕಡೇಕ ತೀರ್ಥಯಾತ್ರೆಹೊಂಟು ಹೋದಳೆಂಬಲ್ಲಿಗೆ ಸಿವಸಂಕರ ಮಾದೇವಾss..

ಅತ್ತ ಕಡೇಲಿರುವ ಸುದ್ದಿಗಳು ಅಚ್ಚೇಕಡೇಲಿಕೇಯಿರಲಿ.. ಯಿಚ್ಚೇಕಡೇಲ ಸುದ್ದಿಗಳು ಯಿಚ್ಚೇ ಕಡೇಲಿಕೇ ಯಿರಲಿ.. ಆದರೆ ಆ ಯಲ್ಲ ಸುದ್ದಿಗಳು ಯಲ್ಲಿ ತಳುಕು ಹಾಕಿಕೊಂಡಿದ್ದವೆಂದರೆ ಅಲ್ಲೇ ತಳುಕು ಹಾಕಿಕೊಂಡಿದ್ದವು.. ಅವನ್ನು ಕಟ್ಟಿಕೊಂಡು ಯೇನು ಮಾಡುವುದಯಿತೆಂದರೆ ಅದನೇ ಮಾಡುವು ದಯ್ತೆ.. ವಲೆ ಮ್ಯಾಲಿರೋ ಬಾನ ಬೆಂದಯ್ತೋ, ಯಿಲ್ಲೋ ಅಂತ ನೋಡಲಕ ಚರಕೇಲಿರೋ ಯಲ್ಲಾ ಅಗುಳುಗಳನು ಹಿಚುಕಿ ನೋಡುವುದ್ಯಾಕ? ವಂದೇ ವಂದು ಅಗುಳನು ಹಿಚುಗಿ ನೋಡಿದರೆ ಸಾಕು. ವಟ್ಟಿನಲ್ಲಿ ಆ ವಂದು ಪ್ರದೇಸವು ರಾಜಕೀಯವಾಗಿ, ಸಾಮಾಜಿಕವಾಗಿ ಕಿಲುಬಲಕ ಹತ್ತಿತ್ತು ಅಂಬುವು ದನ್ನು ಅಂದಾಡಲಕ ಹುಲು ಮಾನ್ನವರಾದ ನಾವು ಯಷ್ಟರವರು.....

ಅತ್ತ ಕುದುರೆಡವು ಪಟ್ಟಣದೊಳಗ ನರ್ರವಾನ್ನವರ ಅಂಕೆ ಅಟಾಟೋಪಗಳನ ಯೇನೆಂದು ಹೆಳಲಿ ಸಿವನೇ.. ಅಲ್ಲವರಿಗೆ ಲಗಾಮು ಹಾಕುವವರಿರಲಿಲ್ಲ.. ಹೇಳುವವರು ಯಿರಲಿಲ್ಲ, ಕೇಳುವವರೂ ಯಿರಲಿಲ್ಲ.. ಕುರಿ ಮೇಕೆಗೆಗಳ ಯಾಸ ಹಾಕಿದ್ದ ತೋಳಗಳ ಕಾರುಭಾರಯೇನು? ಗೋವಾತೆಯ ಯಾಸ ಹಾಕಿದ್ದ ಯಾಘ್ರಗಳು ಅಂಬಾ ಯೆಂದು ಕೂಗುತಲಿದ್ದುದೇನು? ಛದ್ಮಯಾಸಧಾರಿಗಳ ವಂದು ಕಯ್ಯಲ್ಲಿ ಗುಗ್ಗುಳದೋಪಾದಿಯಲ್ಲಿ ವುರಿಯುತಲಿದ್ದ ಚಿಲುಮೆಗಳೇನು? ಯಿನ್ನೊಂದು ಕಯ್ಯಲ್ಲಿ ನೊರೆಗೆರೆಯುತಲಿದ್ದ ಹೆಂಡದ ಮಗಿಗಳೇನು? ವಟ್ಟೊಳಗೆ ಸದರಿ ಪಟ್ಟಣವು ಸಿಕ್ಕವರಿಗೆ ಸಿವಲಿಂಗವಾಗಿ ಬಿಟ್ಟಿತ್ತು ಸಿವನೇ?

ಯಿವರನ್ನು ಅವರು ಮಟ್ಟ ಹಾಕುವ ಸಲುವಾಗಿ, ಅವರನ್ನು ಯಿವರು ಮಟ್ಟ ಹಾಕುವ ಸಲುವಾಗಿ ವೊರೆ ಹೊಕ್ಕಿದ್ದರಿಂದ ಯಲ್ಲಂದರಲ್ಲಿ ವಾಮಾಚಾರಿಗಳು ತುಂಬಿಕೊಂಡಿದ್ದರು ಸಿವನೇ....

* * * *

ಸ್ರೀರಂಗಪಟ್ಟಣವನ್ನು ಪ್ರವೇಸ ಮಾಡುವ ಮೊದಲು ಥಾಮಸು ಮನ್ರೋಸಾಹೇಬನು ತನ್ನ ಸಹಸ್ರಸಹಸ್ರವರುಷಗಳ ವಯೋ ಮಾನದ ಬಾಯಾರಿಕೇನ ತೀರಿಸಿಕೊಳ್ಳುವ ಸಲುವಾಗಿ ಲಗುಬಗೆಯಿಂದ ಗಿಡಗಳ ನಡುವೆ ಹಾಯ್ದು ಯಿಲ್ಲಿಂದಲ್ಲಿವರೆಗೆ ಗೋಚರಮಾಡಿದ ನದೀ ರೂಪದ ಕಾವೇರಿ ತಾಯಿಯನ್ನು ನೋಡಿ ವಂದುಕ್ಷಣ ಭಾವ ಪರವಶನಾಗಿ ಬಿಟ್ಟ.

ಕಾವೇರಿ ಕೆಂಪು ವುಡುಗೆ ತೊಟ್ಟು ಹರಿಯುತ್ತಿರುವಳೆಂದು ಭ್ರಮೆಪಟ್ಟ.

ಮುಟ್ಟದರೆಲ್ಲಿ ನೀರು ತನ್ನನ್ನು ದಹಿಸುವುದೋ ಯಂದು ಹೆದರಿದ. ನದಿಯ ತಳದಿಂದ ಅಲ್ಲಾಹು ಅಕಬರ್.. ಜಯ್ ಚಾಮುಂಡೇಸ್ವರಿ ಯಂಬ ಜಯ ಘೋಷಗಳು ಬುದು ಬುದನೆ ವುಕ್ಕಿ ಬಂದು ತನ್ನ ಕರ್ಣ ಪಟಲದ ಮ್ಯಾಲ ಅಪ್ಪಳಿಸಿದಂತೆ ಭಾಸವಾಯಿತು. ಅವೆಲ್ಲ ತನ್ನಿಂದ ಗಾಯಗೊಂಡು ನದಿಗೆ ಧುಮುಕಿ ಮೊಸಳೆಗಳಿಗೆ ಬಲಿಯಾದ ಯುದ್ಧಾಳುಗಳ ಕೂಗುಗಳು. ತಾನು ಯಿದೇ ನದಿಯಲ್ಲಲ್ಲವೆ ಯುಷ್ಟೋಸಲ ಯುದ್ಧದ ಮಯ್ಲಿಗೆಯನ್ನು ತೊಳೆದುಕೊಂಡಿರುವುದು? ತಾನು ತನ್ನ ಸರೀರದ ಮೇಲಿದ್ದ ರಕ್ತದ ಕಲೆಗಳನ್ನು ತೊಳೆದುಕೊಳ್ಳುವಲ್ಲಿ ಯಶಸ್ವಿಯಾಗಿರುವುದುಂಟಾ? ಯಿಲ್ಲ.. ಯಿಲ್ಲ.. ಅವೆಲ್ಲ ಮಾಯದ ಗಾಯಗಳು.. ಸಾಮ್ರಾಜ್ಯಶಾಹಿಯ ಕಿರಾತಕ ಗುಣಗಳ ಜಾತಕದ ಸಾಲುಗಳು. ಅವುಗಳನ್ನು ನಿರ್ಮೂಲನ ಮಾಡುವ ತಾಕತ್ತು ಕಾವೇರಿಗೊಂದೇ ಅಲ್ಲ.. ಥೇಮ್ಸ್ ನದಿಗೂ ಯಿಲ್ಲವೇ ಯಿಲ್ಲ..

ಯಿನ್ನೊಂದು ಛಣ ಗದ್ಗದಿತನಾದ ಥಾಮಸ್ ನೀರ ಮಯ್ಯಿ ಮ್ಯಾಲ ವುದ್ದೋಕೆ ಬಿದ್ದಿರುವ ತನ್ನ ನೆರಳನ್ನು ನೋಡಿಕೊಂಡ. ನೆರಳನ್ನು ಅಸ್ತವ್ಯಸ್ಥ ಮಾಡುತ್ತಿರುವ ಜಲಚರಗಳನ್ನೂ ಗಮನಿಸಿದ. “ತಾಯಿ ಕಾವೇರಿ.. ನನ್ನನ್ನು ಕ್ಷಮಿಸು.. ನಾನು ಕಂಪನಿ ಸರಕಾರದ ಕಯ್ಯಲ್ಲಿರುವ ಅಸಂಖ್ಯಾತ ಆಯುಧಗಳ ಪಯ್ಕಿ ಕೇವಲ ವಂದೇವಂದು ಜೀವಂತ ಅಸ್ತ್ರಮಾತ್ರ.. ನಾನು ವಿವೇಕಶೂನ್ಯ ನಿರಾಪರಾಧಿ.. ಕೇವಲ ವಂದೇ ವಂದು ಬೊಗಸೆ ನೀರನ್ನು ಪಡೆದುಕೊಳ್ಳಲು ಅನುಮತಿಸು ತಾಯಿ..” ಯಂದು ಕಯ್ಯಿ ಮುಗಿದು ಬಾಗಿ ವಂದು ಬೊಗಸೆ ನೀರನ್ನೆತ್ತಿಕೊಂಡು ಕುಡಿದ.. ಹ್ಹಾ..ಹ್ಹಾ.. ಯಂಥ ಕರುಣಾಮಯಿ ತಾಯಿ.. ತನ್ನ ದೇಹದೊಳಗೆ ಚಯ್ತನ್ಯವನ್ನು ನೂರ್ಮಡಿಗೊಳಿಸುತ್ತಿರುವಳಲ್ಲಾ.. ಮತ್ತೆ ಮತ್ತೆ ಕುಡಿದ.. ಕಾವೇರಿ ತಾಯಿ ತನ್ನೊಳಗೆ ವ್ಯಾಪಿಸುತ್ತಿರುವಳು. “ಯೀಗ ನಾನು ನಿನ್ನೊಳಗಿದ್ದೀನಿ.. ನಿನ್ನ ಸ್ಪರುಶದ ಅಂಶ ನನ್ನೊಳಗಿದೆ. ನದಿ ಅವಲಂಭಿತ ನನ್ನ ಮಕ್ಕಳ ಹಿತರಕ್ಷಿಸು ಯಂದು ಪದೆ ಪದೆ ಯಚ್ಚರಿಸುತ್ತಿರುವಳು.

ಭಾವಪರವಶನಾದ ಥಾಮಸ್ ನದಿಯ ವಿಸ್ತಾರವನ್ನು ಕಣ್ಣೊಳಗೆ ತುಂಬಿಕೊಂಡು ಅಲ್ಲಿಂದ ಹೊರಟು ನಿಂತ. ವಿಷಾದದ ಕಹಿ ವಾಸನೆ ಬೀರುತಲಿದ್ದ ಸ್ರೀರಂಗ ಪಟ್ಟಣವನ್ನು ಪ್ರವೇಶ ಮಾಡಿದ. ನಿರ್ಣಾಯಕ ಯುದ್ಧ ಸಂಬಂಧೀ ಅನಾಹುತದ ಅವಶೇಷಗಳು ಅಗೋ ಅಲ್ಲಿ? ಯಿಗೋ ಯಿಲ್ಲಿ.. ತನಗೆ ಹಿಡಿ ಹಿಡಿ ಶಾಪ ಹಾರುತ್ತಿರುವವರು ಅಗೋ ಅಲ್ಲಿ ಯಿಗೋ ಯಿಲ್ಲಿ.

ದೇವಾಲಯದೊಳಗೆ ತನ್ನನ್ನು ಯಚ್ಚರಿಸುವವರ ಸಲುವಾಗಿ ಕಾಯುತ್ತ ಮಲಗೇ ಯಿರುವ ಸ್ರೀರಂಗನಾಥ. ನೂರಾರು ಮುಗ್ದರ ಮರಣ ದಂಡನೆಗೆ ಮಾಧ್ಯಮವಾಗಿದ್ದ ಹಾದಿ ಯಿಕ್ಕೆಲದಲ್ಲಿ ಸಾಲು ಸಾಲು ಮರಗಳು.. ಯುದ್ದದ ನೆನಪುಗಳನ್ನು ಮೆಲುಕು ಹಾಕುತ್ತಿರುವ ಜನ ಅಗೋ ಅಲ್ಲಿ.. ಯಿಗೋ ಯಿಲ್ಲಿ. ಕಣ್ಣಾರೆ ಯುದ್ದವನ್ನು ನೋಡಿದ ಪರಿಣಾಮವಾಗಿ ಹುಚ್ಚರಾಗಿರುವ ಜನ ಅಗೋ ಅಲ್ಲಿ.. ಯಿಗೋ ಯಿಲ್ಲಿ.. ಸತ್ತು ಗೆದ್ದ ಟಿಪ್ಪು ಅಗೋ ಅಲ್ಲಿ? ಯಿಗೋ ಯಿಲ್ಲಿ.. ತನ್ನನ್ನು ಗುರುತಿಸಲು? ಗುರುತಿಸಿ ಕೊರಳಪಟ್ಟಿ ಹಿಡಿಯಲು, ಹಿಡಿದು ತನ್ನ ಕಪಾಳಕ್ಕೆ ನಾಲ್ಕು ಭಾರಿಸಲು, ಭಾರಿಸಿ ತನ್ನ ಮುಖಕ್ಕೆ ವುಗಿಯಲು, ವುಗಿದು ನಿನ್ನಂಥೋರು ಸುಖವಾಗಿರಥಂಗ ಸ್ರೀರಂಗನಾಥನೇ ನೋಡ್ಕೋತಾನೆ.. ಯಂದು ಛೀಮಾರಿ ಹಾಕಲೋಸುಗ ಕಾಯುತ್ತಿರುವವರು ಅಗೋ ಅಲ್ಲಿ? ಯಿಗೋ ಯಿಲ್ಲಿ.. ನೀವೆಲ್ಲ ಪೊಂಟೀಸ್ ಪಯ್ಲೇಟನ ವಾರಸುದಾರರು ಯಂದು ಸಾರಿಸಾರಿ ಹೇಳುತ್ತಿರುವ ಕರುಣಾಮಯಿ ಮೇರಿಯಮ್ಮ ಅಗೋ ಅಲ್ಲಿ.. ಯಿಗೋ ಯಿಲ್ಲಿ...ತನ್ನ ದೇಹದಿಂದ ಯಿಂಡಿಯಾದ ನೆತ್ತರನ್ನು ಹನಿಯುತ್ತಿರುವ ಗಾಯಸ್ಥ ಯೇಸುಪ್ರಭುನ ದೇಹ ಅಗೋ ಅಲ್ಲಿ.. ಯಿಗೋ ಯಿಲ್ಲಿ.. ಗೋಲ್ಗೊಥಾ ಬೆಟ್ಟಗಳು ಅಗೋ ಅಲ್ಲಿ. ಯಿಗೋ ಯಿಲ್ಲಿ....

ವಾಸಿಯಾಗದ ಸಹಸ್ರಸಹಸ್ರಗಾಯಗಳ ಆಭರಣಗಳನ್ನು ಧರಿಸಿರುವುದು ಸ್ರೀರಂಗಪಟ್ಟಣವಲ್ಲ.. ಬೆಥ್ಲೆಂ, ಜೆರೊಸೆಲೇಂ.. ಬಯ್ಬಲ್.. ಹೆಜ್ಜೆ ಹೆಜ್ಜೆಗೆ ಕತ್ತು ಹಿಡಿದು ನೂಕುತ್ತಿರುವಂಥ ಅನುಭವವಾಗಲು ಥಾಮಸ್ ಮನ್ರೋ ತನ್ನ ಬಿಡಾರಕ್ಕೆ ಆಗಮಿಸಿದ. ಯೇಸು ಪ್ರಭುವಿನ ಮೂರ್ತಿಯದುರು ದೀಪ ಬೆಳೆಗಿಸಿ ಯಷ್ಟೋ ಹೊತ್ತಿನವರೆಗೆ ಮಂಡಿ ಮೂರಿ ಕುಳಿತೇಯಿದ್ದ. ಕೊನೆಗೆ ಯೇನನ್ನು ತಾನು ನಿವೇದಿಸಿಕೊಂಡನೆಂದರೆ "ಮಹಾಪ್ರಭು.. ನನ್ನನ್ನು ನೀನು ಕ್ಷಮಿಸಬಹುದಿತ್ತಲ್ಲವೆ.."

ತಾನು ಡುಬಾಯಿಸ್‌ರವರನ್ನು ಕಾಣಬೇಕೆಂದು ನಿರ್ದರಿಸಿ ಗಂಜಾಂ ಕಡೆ ನಡೆದ. ಹಾದಿಯ ಯಡ ಬದಿಯಲ್ಲಿದ್ದ ಯಿಗರ್ಜಿಯಲ್ಲಿ ಫಾದರ್ ಯಿರಲಿಲ್ಲ. ಸಿಡುಬು ಕಾಯಿಲೆ ಪೀಡಿತರಿಗೆ ಚುಚ್ಚುಮದ್ದು ಹಾಕಿಸಲು ಪಕ್ಕದ ಹಂಗರವಳ್ಳಿಗೆ ಹೋಗಿರುವುದಾಗಿ ಪರಿಚಾರಕ ಹೇಳಿದ. ಯಿಗರ್ಜಿಯ ಆವರಣದಲ್ಲಿದ್ದ ಅನಾಥ ಮಕ್ಕಳ ಶಾಲೆಗೆ ಭೆಟ್ಟಿ ನೀಡಿದನು.

ಅತ್ತ ಕುಂದುರ್ಪಿ ವೆಲ್ದುರ್ತಿಗಳ ವಳಿತದಲ್ಲಿದ್ದ ಸುಡುಗಾಡಿನೊಳಗೆ ಬಾದಾಮಿ,

ಗದಗು ಪ್ರಾಂತಗಳಿಂದ ಆಗಮಿಸಿದ್ದ ಸಿಲ್ಪಿಗಳು ಚೋರಚೋರೇಸ್ವರ ದೇವಾಲಯ ನಿರುಮಾಣದ ಯಿಷಯದಲ್ಲಿ ಮುತುವರ್ಜಿ ವಹಿಸಿರುವಾಗ್ಗೆ, ಸುಡುಗಾಡೆಪ್ಪನವರು ಮಹಾಸಿಲ್ಪಿ ಸ್ರೀಕಂಠಾಚಾರಿಗೆ ಆಕಾಸ ರಾಮಣ್ಣಾವಧೂತರ ಭೌತಿಕ ಲಕ್ಷಣಗಳನ್ನು ಯಿವರಿಸುತ್ತಿರುವಾಗ್ಗೆ? ಆಕಾಸ ರಾಮಣ್ಣಾವಧೂತರು ಪುರಾಣದೊಳಗೆ ಪಾರ್ವತಿಗೆ ತನ್ನುದರದಲ್ಲಿ ಆಸ್ರಯ ನೀಡುವ ರಾಮಣ್ಣ ಬ್ಯಾರೆ ಅಲ್ಲ ತಾವು ಬ್ಯಾರೆ ಅಲ್ಲ ಅಂತ ತಿಳಿದುಕೊಳ್ಳಬೇಕೆಂದು ಪರಿಪರಿಯಿಂದ ಕೇಳಿಕೊಳ್ಳುತ್ತಿರುವಾಗ್ಗೆ...

ಅತ್ತ ನೂರಾರು ಮಯ್ಲಿ ಪ್ರಯಾಣ ಮಾಡಿದನಂತರಮೂಬಂಗಾರದ ಗಟ್ಟೀನ ಯಾರೂ ದೋಚಿಲ್ಲವಲ್ಲ.. ಯಿದು ಸೊಂಯಂ ಕಲ್ಪಿತ ಚೋರ ಚೋರೇಸ್ವರನ ಆಸೀರುವಾದವೇ ಸರಿ? ಯಿನ್ನು ತಾನು ಸಮುಸಾರಸ್ಥನಾಗದ ಹೊರತು ಮತ್ತಾವ ಪುರಾಣ ಕಾವ್ಯ ಸ್ರುಷ್ಟಿಗೆ ಕಯ್ನ ಹಾಕಬಾರದೆಂದು ನಿರ್ದರಿಸಿದ್ದ ಮಾಕವಿಯು ಮಾನ್ಯರ ಮಸಲವಾಡವನ್ನು ಪ್ರವೇಸಿಸುವ ಮೊದಲ ಆಯಾಸ ಪರಿಹಾರ ಮಾಡಿಕೊಳ್ಳಲಕೆಂದು ಹೊರವಲಯದಲ್ಲಿದ್ದ ಭೂತಭುಜಂಗ ಸ್ವಾಮಿಮಠದಲ್ಲಿ ಯಿಸ್ರಮಿಸಿ ಕಣ್ಣು ಮುಚ್ಚಿಕೊಂಡನು. ಕಣ್ಣುಮುಚ್ಚಿಕೊಂಡನೆ ನಿದ್ರಾದೇವಿಯ ವಲುಮೆ ಆಯಿತು. ವಲುಮೆ ಆದೊಡನೆ ವಂದಾನೊಂದು ಕನಸು ಬಿತ್ತು.. ಆ ವಂದಾನೊಂದು ಕನಸಿನಲ್ಲಿ ಬಟಾಬಯಲು. ಕೊನೇಲೊಂದು ಗಗನ ಚುಂಬೀ ಪರುವುತ.. ಅದರ ವ್ಯಾಲಿಂದ ಜಟಾಜೂಟಧಾರಿ ಮುನಿಯೋರ್ವನು ಲಗುಬಗೆಯಿಂದ ಯಿಳಿಯುತ್ತಿರುವನು.. ಪ್ರಾಯಶಃ ಆತನೇ ಚೋರ ಚೋರೇಸ್ವರನಿದ್ದಿರಬೌದು? ಆತ ತನ್ನನ್ನು ಗುರಿಯಿಟ್ಟುಕೊಂಡು ಬರುತ್ತಿರುವುದರ ಕಾರಣ? ಸರುವ ಸಂಗಪರಿವ್ರಾಜಕನಾದವನಿಗೆ ಚೋರನ ಪಟ್ಟಕಟ್ಟಿದ್ದೀಯಲ್ಲಾ ಯಂದು ಸಪಿಸುವುದಕ್ಕೋ ಅಥವಾ ವರ ಕೊಡುವುದಕ್ಕೋ? ಕಳ್ಳನ ಪಟ್ಟಕಟ್ಟಿದ್ದಕ್ಕೆ ಮಾನ ನಷ್ಟವಾಯಿತೆಂದು ವಾದಿಸಿದರೆ ಯೇನು ಮಾಡುವುದು? ಅದಕ್ಕೆ ಪರಿಹಾರವಾಗಿ ಸಂಭಾವನೆ ರೂಪದಲ್ಲಿರುವ ಬಂಗಾರದ ಗಟ್ಟಿಯನ್ನು ಕೊಡು ಯಂದು ಜುಲುಮಿ ಮಾಡಿದರೆ ಯೇನು ಮಾಡುವುದು? ಅಯ್ಯೋ ಯಂಥ ಪೇಚಿಗೆ ಸಿಲುಕಿಕೊಂಡೆನಲ್ಲಾ.. ಮಲಗುವ ಮೊದಲು ಚಿನ್ನದ ಗಟ್ಟಿಯನ್ನು ಕಲ್ಲು ಚಪ್ಪಡಿ ಅಡಿ ಹೂತಿಡಬೇಕಿತ್ತಲ್ಲಾ. ಮಲಗುವ ಅವರಸದಿಂದಾಗಿ ವಲ್ಲಿಯಲ್ಲಿಸುತ್ತಿ ತಲೆಯಡಿ ಯತ್ತರಕ್ಕೆ ಯಿಟ್ಟುಕೊಂಡು ಯಂಥ ತಪ್ಪು ಮಾಡಿದೆನಲ್ಲಾ.. ಯಿೂ ತಪ್ಪನ್ನು ತಾನು ಸರಿಪಡಿಸಬೇಕೆಂದರೆ ತಾನು ಯಚ್ಚರಗೊಳ್ಳುವುದು ಅವಶ್ಯವಾಗಿರುವುದೆಲ್ಲಾ.. ಕನಸೂ, ಮುನಿಯೂ ತಾನು

ಯಚ್ಚರಗೊಳ್ಳದಂತೆ ನೋಡಿಕೊಳ್ಳುತ್ತಿರುವರಲ್ಲಾ.. ಮಿಂಚಿ ಹೋದ ಕಾರ್ಯ ಕುರಿತು ಚಿಂತಿಸಿ ಫಲವಿಲ್ಲಾ, ಕವಿಯ ಹೊಗಳಿಕೆ ಮಯ್ಯುಮರೆಯದ ದೇವತೆಯಿಲ್ಲಾ, ಆ ಮುನಿ ರೂಪಿ ಪರಮೇಸ್ವರನು ಹತ್ತಿರ ಬಂದೊಡನೆ ತಾನು ಸ್ರೀ ಮದ್ಗಂಗಾ ತರಂಗ ಪ್ರಕರ ವಿಲಸಿತಂ ಚಂದ್ರಲೇಖಾಂಕ ಚೂಡೋದ್ದಾಮಂ.. ಯಂದು ಸುರುವು ಮಾಡಿಬಿಡಬೇಕಲ್ಲಾ....

ಸನೀಕ ಬಂದೇ ಬಿಟ್ಟ ಆ ಮುನಿವರನು 'ವತ್ಸಾ' ಯಂದು ಪಲುಕೇ ಬಿಟ್ಟನು. ಕೂಡಲೆ ಕವಿಯು ಕರ ಜೋಡಿಸಿ ಶ್ರೀಮದ್ಗಂಗಾ ತರಂಗ ಯಂದು ನಿರರ್ಗಳವಾಗಿ ಸುರುವು ಮಾಡಿ ಶ್ರೀ ಸೋಮನಾಥಂ ನಮಗಭಿಮತಂ ಮಾಳ್ಕುಂ ಸಂತೋಷದಿಂದಂ ಯಂದು ಮುಗುತಾಯ ಮಾಡಿದ್ದಕ್ಕೆ ಆ ಮುನಿಯ 'ಮೋಕ್ಷ ಸಿದ್ದಿ ಪ್ರಾಪ್ತಿ ರಸ್ತು' ಯಂದು ಆಸೀರುವಾದವಂ ಮಾಡಿಯೇ ಬಿಡಲು ಯೀತನು "ಚೋರ ಚೋರೆಸ್ವರ ಮಹಾ ಪ್ರಭೋ.. ನಾನಿನ್ನೂ ಅವಿವಾಹಿತನು.. ಶೀಘ್ರಮೇವ ಕಲ್ಯಾಣ ಮಸ್ತು ಯಂದು ಆಶೀರ್ವಾದ ಮಾಡುವುದನ್ನು ಬಿಟ್ಟು ಮೋಕ್ಷ ಸಿದ್ದಿ ಪ್ರಾಪ್ತಿ ರಸ್ತು ಯಂದು ನುಡಿದು ಬಿಟ್ಟಿರಲ್ಲಾ" ಯಂದು ಬಲು ಬಲು ಮಿಡುಕಿದ್ದಕಿದ್ದು ಮುನಿಯು "ನಾವು ನೀನು ಭಾವಿಸಿರುವಂತೆ ಚೋರ ಚೋರೇಸ್ವರನಲ್ಲ ಮಗೂ.. ನಾವು ನೂರ್ಮಡಿ ಭೂತಭುಜಂಗನಾಥರು.. ಹ್ವಾ ವಂದು ಮಾತು.. ನಿನ್ನ ಹಣೆಯಲ್ಲಿ ವಿವಾಹಯೋಗ ಬರೆದಿಲ್ಲ ವತ್ಸಾ.. ಅದಕ್ಕೆಂದೇ ನಾವು ಮೋಕ್ಷಸಿದ್ದಿ ಪ್ರಾಪ್ತಿಯರಸ್ತು ಯಂದು ಹರಸಿದ್ದು...." ಯಂದು ಖಚಿತವಾಗಿ ಹೇಳಿದೊಡನೆ ಮಾಕವಿಯು "ಅಯ್ಯೋ ವಿಧಿಯೇ" ಯಂದು ನೆಲಕ್ಕೆ ಕುಸಿದನು.

ಮುನಿಗಳು ಅವಯ್ಯನನ್ನು ಪರಿಪರಿಯಿಂದ ರಮಿಸಿ ತಲೆ ನೇವರಿಸಿ, ಬಿಗಿದಪ್ಪಿ ವುತ್ತರೀಯದ ಚುಂಗಿನಿಂದ ಕಣ್ಣೀರೊರೆಸಿದರು. ದುಕ್ಕ ತಮಣಿ ಮಾಡಿಕೊಂಡ ಮಾಕವಿಯು "ಚೋರ ಚೋರೆಸ್ವರಂ ಅಲ್ಲದಿರ್‍ದೊಡೆ ತಾವಾರು ಮುನಿವರ್‍ಯಾ?" ಯಂದು ಕೇಳಿದ್ದಕ್ಕೆ ಆ ಮನಿಯು ತಾವು ನೂರ್ಮಡಿ ಭೂತ ಭುಜಂಗನಾಥ ಮಹಾಸ್ವಾಮಿಯಂದು ಹೇಳುತಾ, ಹೇಳುತಾ.. ಅದಕ್ಕಿವಯ್ಯನು ಹೂಂಗುಟ್ಟುತಾ ಹೂಂಗುಟ್ಟುತಾ.. ಸಮಸ್ಯೆ ತಲೆದೋರಿಗಾಗಲೆಲ್ಲ ವುತ್ತರ ಪಡೆದು ಪರಿಹಾರ ಮಾಡಿಕೊಳ್ಳುತಾ, ಮಾಡಿಕೊಳ್ಳುತಾ....

"ಪೂರ್ವಕಾಲದಲ್ಲಿ ಗೋರಕಪುರದಿಂದ ದೇಸ ಸಂಚಾರ ಕಯ್ಯಿಕೊಂಡ ಗೋರಖನಾಥರು ತಮ್ಮೆಡ ಮುಂಗಯ್ಯನ್ನು ಗಂಟಲೊಳಗೆ ತೂರಿಸಿ

ಘನರೂಪೀ ಕಫದ ವುಂಡೆಯನ್ನು ಕಿತ್ತು ಯೆಸೆದರು.. ಅದು ಸಿವಲಿಂಗದ ರೂಪ ಪಡಿತಾ ಪಡಿತಾ ಯಿಲ್ಲಿ ಬಿದ್ದು ದೇದಿಪ್ಯಮಾನವಾಗಿ ಬೆಳಗಲಾರಂಭಿಸಿತು. ಅದನ್ನು ಯಿದ್ಯುಕ್ತವಾಗಿ ಪ್ರತಿಷ್ಠಾಪಿಸಿ ಪೂಜೆ ಪುನಸ್ಕಾರ ಮಾಡಿ ಮಠ ಕಟ್ಟಿದರು. ತಮ್ಮ ಬಲಮೂಗಿನಿಂದ ಆರುಮೊಳದೆತ್ತರದ ತೇಜಸ್ವೀ ಅರ್ಧನಾರೀಸ್ವರನನ್ನು ಹೊರ ತೆಗೆದು ಆತಂಗೆ ಮುಮ್ಮುಡಿ ಮಚ್ಛೇಂದ್ರನಾಥನೆಂದು ನಾಮಕರಣಮಂ ಮಾಡಿ ತಮ್ಮ ವಾರಸುದಾರನೆಂದು ಘೋಷಿಸಿ ಮಠದ ನಾಥರನ್ನಾಗಿ ನೇಮಿಸಿ ಅಂತರ್ಧಾನಗೊಂಡರು. ಅವರು ವಿಷಸ್ತಂಭನ, ಸೇನಾಸ್ತಂಭನ, ವಿದ್ವೇಷಣ, ಪಾದುಕಾಸಾಧನ ಯಿವೇ ಮೊದಲಾದ ತಂತ್ರಮಂತ್ರವಿದ್ಯೆಗಳನ್ನು ಜೇರ್ಣಿಸಿಕೊಂಡಿದ್ದರು. ಅವರ ಯೀ ವಿದ್ಯೆಗಳಿಗೆ ಮನಸೋತೋ? ಹೆದರಿಯೋ ಪುವ್ವಲ, ಗುತ್ತಲ, ಚರ, ಚೇರ, ಪಾಂಡ್ಯ, ಸಿಂಧ, ಚಲುಕರೇ ಮೊದಲಾದ ವಮುಸಗಳ ರಾಜ ಮಾರಾಜರು ಅವರ ಸಿಸ್ಯರಾದರು. ನಾಥರು ತಮ್ಮ ಪಾದುಕಾ ಸಾಧನ ವಿದ್ಯೆಯಿಂದ ಯಿರೇಳು ಲೋಕಗಳಾದ್ಯಂತ ಸಂಚರಿಸಬಲ್ಲವರಾಗಿದ್ದರು. ಭೂತಪ್ರೇತ ಪಿಚಾಚಿಗಳನ್ನು ಮಣಿಸಿ ತಮ್ಮಕಾವಿಯೊಳಗ ಕೆಲಸ ಕಾರ್ಯಗಳಿಗೆ ಯಿಟ್ಟು ಕೊಂಡವರಾಗಿದ್ದರು. ಯಕ್ಕೋಟಿ ಸಮಯ ಚಕ್ರವರ್ತಿ ಯಂಬ ಬಿರುದನ್ನು ಧರಿಸಿದ್ದ ತಾವು ಅದ್ರುಸ್ಯರಾಗುವುದಕ್ಕೂ ಮೊದಲು ಪಾಶುಪತನಾಥರ ಸಿಶ್ಯೋತ್ತಮರಾದ ಭೂತಭುಜಂಗನಾಥರ ಕಯ್ಗೆ ಮಠದ ಚುಕ್ಕಾಣಿಯನ್ನು ವಪ್ಪಿಸಿದರು. ಅವರ ನೂರನೇ ತಲೆ ಮಾರಿನವರಾದ ನಮ್ಮ...

ಪರಿಚಯ ನಿನ್ನ ಭವುತಿಕ ಸರೀರಕ್ಕಿಲ್ಲ.. ಆದರೆ ಅಂತರಾತುಮಕ್ಕುಂಟು ವತ್ಸಾ.. ಯೋಗ ಧ್ಯಾನ ಪ್ರಾಣಾಯಾಮ ಮಾಡುತ್ತಿಲ್ಲವಾದ್ದರಿಂದ ಅಂತರಾತುಮದೊಂದಿಗೆ ಸಂವಾದಿಸುವ ಶಕ್ತಿ ನಿನಗಿಲ್ಲ.. ಆದ್ದರಿಂದ ನಾವೇ ಅಪ್ಪಣೆ ಕೊಡಿಸುತ್ತೇವೆ ಕೇಳುವಂಥವನಾಗು..

ನೀನು ರಾಂಪುರ ಪರಗಣದಲ್ಲಿರೋ ಕಣ ಕುಪ್ಪೆಯಂಬ ಗ್ರಾಮ ನಿನ್ನ ಸ್ವಾಸ್ಥಿ ಅವುದೋ ಅಲ್ಲಮೋ... 'ಅವುದು ಮಾಸ್ವಾಮಿ..' ನಿನ್ನ ತಂದೆಯ ನಾಮಧೇಯ ಗುರುವಯ್ಯ ಅವುದೋ.. ಅಲ್ಲಮೋ..? 'ಅವುದು ಮುನಿವರ್ಯಾ...' ನಿನ್ನ ಜನನಿಯ ನಾಮಧೇಯ ಯಂಕಮಾಂಬೆ ಅವುದೋ ಅಲ್ಲಮೋ..? 'ಅವುದು ಮಹಾಪ್ರಭು..' ಆ ದಂಪತಿಗಳಿಗೆ ಭಾಳಾ ವರುಷಂಗಳವರೆಗೆ ಮಕ್ಕಳಾಗಿರಲಿಲ್ಲ ಅವುದೋ.. ಅಲ್ಲಮೋ.. ಅವುದು ಮುನಿಕುಲತಿಲಕ.. ಪರಮ ಆಸ್ತಿಕರೂ, ವೇದೋಪನಿಷತ್ ಪುರಾಣಗಳ ಜೀರ್ಣೋದ್ಧವರೂ ಆಗಿದ್ದ ಅವರು

ಸಂತಾಪ ಪ್ರಾಪ್ತಿಗಾಗಿ ತೀರ್ಥಯಾತ್ರೆಮಾಡಿದರು.. ಮುಕ್ಕೋಟಿ ದೇವತೆಗಳಿಗೆ ಹರಕೆ ಹೊತ್ತರು, ಆದರೆ ದೇವರು ಸಂತಾನ ಕರುಣಿಸಲಿಲ್ಲ.. ವರುಷೊಪ್ಪತ್ತೊಳಗೆ ಅವರು ಗೋರಖನಾಥ ಸಂಕಥಾಸ್ರವಣಕ್ಕೆಂದು ಬಂದು ಯೇಳು ದಿವಸಗಳ ಕಾಲ ಯಿಲ್ಲಿದ್ದರು. ನಿನಗೆ ಗೊತ್ತುಂಟೋ ಯಿಲ್ಲಮೋ ನಿನ್ನ ತಾಯಿ ಕಯ್ಯನ ತೊಳಕೊಂಡು ಮುಟ್ಟುವಂತಿದ್ದಳು.. ಅದೆಲ್ಲ ನೆನಪಿಸಿಕೊಂಡರೆ..! ಯಿರಲಿ.. ಅದೆಲ್ಲ ಯಾಕೀಗ.. ಗರುಭವತಿಯಾದಳು.. ನವ ಮಾಸ ತುಂಬಿದ ಮ್ಯಾಲೆ ನೀನು ಜೆನಿಸಿದಿ.. ನೀನು ಜನಿಸಿದ್ದು ಹೇವಳಂಬಿ ನಾಮ ಸಂವತ್ಸರ ಕಾರ್ತೀ ಸುದ್ದ ತ್ರಯೋದಸೀ ಗುರುವಾರ ರಾತ್ರಿಶತತಾರ ನಕ್ಷತ್ರದಲ್ಲಿ ಅವುದೋ.. ಅಲ್ಲಮೋ.. ಅವುದು ಮಹಾಮುನಿ ಅವುದು.. ನಿನ್ನ ಹಸ್ತಗಳಲ್ಲಿ ವಿದ್ಯಾರೇಖೆ ಮೂರುದ್ವ ಮುಖವಾಗಿ ಹರಡಿದೆ ಅವುದೋ ಅಲ್ಲಮೋ.. ಅವುದು ಸ್ವಾಮಿ ಅವುದು.. ನಿನ್ನ ಹಸ್ತಗಳಲ್ಲಿ ಯಂಟು ಶಂಖ ಯರಡು ಚಕ್ರಗಳಿವೆ ಅವುದೋ ಅಲ್ಲಮೋ.. ಅವುದು ಸ್ವಾಮೀ ಅವುದು.. ನಮ್ಮ ಅಮುಸ ನಿನ್ನಲ್ಲಿರುವ ಪರಿಣಾಮದಿಂದಾಗಿ ನಿನಗೆ ಸರಸೊತಿಯ ವಲುಮೆ ಆಯಿತು.. ನೀನು ಅತಿಚಿಕ್ಕವಯಸ್ಸಿನಲ್ಲಿಯೇ ಪುರಾಣ ಕಾವ್ಯಗಳನ್ನು ರಚಿಸಿದಿ.. ಅವುಗಳನ್ನು ಜಗಳೂರು ಕೆಂಜೆಡೆಪ್ಪನಾಯಕ, ವಾಗಾಣಿಯ ಮುದ್ದಪ್ಪನಾಯಕ, ಕಂಚುಗಾರುಬೆಳಗಲ್ಲಿನ ಸಿದ್ದೀರನಾಯಕರ ಬಳಿ ವಾಚನ ಮಾಡಿ ಬಿರುದು ಪಾರಿತೋಷಕಗಳನ್ನು ಪಡಕೊಂಡಿ, ಅವುದೋ ಅಲ್ಲಮೋ.. ಅವುದು ಮುನಿವರೇಣ್ಯನೇ ಅವುದು.. ಅವುಗಳ ರಚನೆಗೆ ಕಾರಣ ಕತ್ರುಯಾರೆಂದು ತಿಳಿದಿರುವಿ? ನಾವೇ ಅವರು ನಿನಗೆ ಬಿರುದು ಪಾರಿತೋಷಕಗಳನ್ನು ನೀಡುವಂತೆ ಮಾಡಿದ್ದು ನಾವೇ ಹ್ಹಾ.. ಅವುದಾ.. ಸರಣು ಸರಣಾರ್ಥಿ ಮಹಾಸ್ವಾಮಿ.. ಫಲಾನ ಮೂರನ್ನು ತಲುಪಲಕ ಕಾರಣರೂ ಚೋರ ಚೋರೇಸ್ವರ ಪುರಾಣ ರಚನೆಗೆ ಕಾರಣರೂ.. ಗವುಡ ಬಂಗಾರದ ಗಟ್ಟಿ ಕೊಡಲಕ ಕಾರಣರೂ.. ಯಾರೂ ಕದಿಯದಂಗೆ ಮಾಡಿದ್ದಕ್ಕೆ ಕಾರಣರೂ.. ಕನ್ಯೆ ಯಂಬ ತುಪ್ಪವನ್ನು ನಿನ್ನ ಮೂಗಿನ ತುದಿಗೆ ಅಂಟಿಸಿದವರೂ.. ನೀನೀಮೂರಿಗೆ ಬರುವುದಕ್ಕೆ ಕಾರಣರೂ.. ನೀನು ನಿದ್ದೆ ಮಾಡುವುದಕ ಕಾರಣರೂ, ನಿದ್ದೆಯೊಳಗೆ ಕನಸು ಮೂಡುವುದಕ ಕಾರಣರೂ, ಯಲ್ಲಾದಕೂ ನಾವೇ ಕಾರಣರು.. ವತ್ಸಾ.. ನಾವೇ ಕಾರಣರು.. ಮುನಿಗಳು ನಿಟ್ಟುಸಿರುಬಿಟ್ಟರು.

ಆ ಯಲ್ಲ ತನ್ನ ಪೂರುವಾಪರ ಕೇಳಿ ಮಾಕವಿಯು ಕಲ್ಲಾವುಲ್ಲಿಯಾಗಿ

ಬಿಟ್ಟನು.. ಯಿದು ಕನಸೋ.. ವಾಸ್ತವಮೋ.. ಯಿರಲಿ ಯೇನಾದರೊಂದಿರಲಿ.. ಅದೆಲ್ಲ ಸರಿ.. ಯೀಗೀ ಮಹಾನುಭಾವರು..

ವತ್ಸಾ.. ನೀನು ನಮ್ಮ ಅಗೋಚರತ್ವ ಕುರಿತು ಯೋಚಿಸುತ್ತಿರುವಿ ತಾನೆ.. ನಾವೀ ನಾಥ ಪಂಥದ ಮಠದ ಸರುವಾಂಗೀಣ ಅಭಿರುದ್ಧಿಗೆ ಮುವ್ವತ್ತು ನಾಲ್ವತ್ತು ವರುಷಗಳ ದುಡಿದೆವು.. ದುಡಿಯುವ ವುತ್ಸಾಹದಲ್ಲಿ ಕೆಲವು ಸಲ ವಾಮ ಮಾರ್ಗವನ್ನು ಹಿಡಿಯಬೇಕಾಯಿತು. ದಾರಿ ಹೋಕ ಅರಿಷಡ್‌ವರ್ಗಗಳಿಗೆ ನಾವು ನಮ್ಮ ಸರೀರವನ್ನು ಬಿಡದಿ ಕೊಡುತ್ತಿದ್ದುದೇ ಅಪಚಾರವಾಗಿ ಪರಿಣಮಿಸಿತು ವತ್ಸಾ.. ನಾವು ಸುಷುಪ್ತಿಯಿದ್ದಲ್ಲಿಗೆ ಬಂದು ಗೋರಖನಾಥರು ಪದೇ ಪದೆ ಯಚ್ಚರಿಸುತಲಿದ್ದರು. ಅದಕಿದ್ದು ನಾವು ವುಜ್ಜಯಿನಿಗೆ ಹೋಗಿ ಸ್ರೀ ಕಾಳ ಕಾಳೇಸ್ವರ ಲಿಂಗಕ್ಕೆ ಚಿತಾಭಸುಮಾಭಿಷೇಕವನ್ನು ಮಾಡಿಸಿ ಸೊಯ ಮಾರ್ಜಿತ ಪಾಪಗಳನ್ನು ನರುಮದೆಯಲ್ಲಿ ಯಿಸರ್ಜಿಸಬೇಕೆಂದು ನಿಚ್ಚಯಿಸಿ ಫಲಾನ ದಿವಸದಂದು ಯಿಲ್ಲಿಂದ ಪ್ರಂಯಾಣ ಬೆಳೆಸಿದೆವು.. ಹಾದಿ ಮಧ್ಯೆ ತ್ರಂಬಕೇಸ್ವರದಲ್ಲಿ ಯಿಸ್ರಮಿಸಿಕೊಂಡಿರುವಾಗ್ಗೆ.. ಘಟಸರುಪವೊಂದು ಯದುರಿಗೆ ಬಂದು ಸಿಂಬಿ ಸುತ್ತಿಕೂತಿತು. ನಾವು ಗಾಬರಿಗೊಳ್ಳದೆ ನಾಗರಾಜ ನೀನು ಯಾರಪ್ಪ ಯಂದು ಕೇಳಿದೆವು. ಅದಕಿದ್ದು ಆ ವುರಗವು “ನಾವು ಮಾನ್ಯರ ಮಸಲವಾಡ ನಾಥಮಠದ ಮೂಲನಾಥರು ಕಣಪ್ಪಾ.. ನಮ್ಮ ಹೆಸರು ಮಚ್ಛೇಂದ್ರನಾಥರು” ಯಂದು ಹೇಳಲು ನಾವು ಭಕುತಿ ಪೂರ್ವಕವಾಗಿ ನಮಸ್ಕರಿಸಿದೆವು. ಆಗಿದ್ದು ವುರಗ ರೂಪಿ ನಾಥರು “ವತ್ಸಾ.. ಯಲ್ಲಿಗೆ ಪ್ರಯಾಣ ಹೊಂಟಿರುವಿ? ಯದಕ ಹೊಂಟಿರುವಿ?” ಯಂದು ಕೇಳಲಾಗಿ ನಾವು ಯಿದ್ದ ಸಮಾಚಾರವ ಯಿದ್ದಂಗೆ ಅರಕೆ ಮಾಡಿಕೊಂಡೆವು. ಅದಕಿದ್ದು ಆ ಪೂರ್ವಿಕರು ಮಾಡಿದ ಪಾಪದಿಂದ ಮಯ್ಲಿಗೆಯಾಗಿರುವ ಆತುಮದ ಮಯ್ಲಿಗೇನ ತೊಡೆಯಬೇಕು ಮಗನೇ.. ಅದಕ್ಕೆ ಪ್ರಥಮ ಸೋಪಾನವಾಗಿ ನೀನು ನಿನ್ನ ಸರೀರವನ್ನು ತ್ಯಜಿಸಬೇಕಪ್ಪಾ.. ಸೊಯಂ ನೀನೇ ತ್ಯಜಿಸಬೇಕೆಂಬುದು ಗೋರಖರ ಯಿಚ್ಚೆ.. ಯೇನಂತೀಯಾ? ಯಂದು ಕೇಳಲು ನಾವು ಹೆದರಿದೆವು. ಹೆದರಿ “ನಾನು ನನ್ನ ಸರೀರವನ್ನು ತ್ಯಜಿಸಿ ಕೊಲೆಗಾರನಾಗಲಾರೆ” ಯಂದು ಹೇಳಿದೆವು.. ಆಗಿದ್ದು ಅವರು “ಮರುಳೇ.. ನೀನು ಯಾವತ್ತು ಗರ್ಭದಾನದಂಥ ಪಾಪ ಕ್ರುತ್ಯ ಆರಂಭ ಮಾಡಿದೆಯೋ.. ಆಗಲೇ ನೀನು ನಿನ್ನ ಸರೀರವನ್ನು ಹತ್ಯೆ ಮಾಡಿಬಿಟ್ಟೆ.. ನಾಥ ಮವುಲ್ಯಗಳಿಗೆ ಅಪಚಾರ ಮಾಡುತ ನಿನ್ನನ್ನು ನೀನು ಕೊಂದುಕೊಂಡಿರುವಿ.. ಯಿಗ ಸಾವುದು ಕೇವಲ ನೆಪಕ್ಕೆ ಮಾತ್ರಯಂದು

ನಿಷ«ರವಾಗಿ ಹೇಳಿಬಿಟ್ಟರು.. ಆಗ ನಾವು ಸಾವು ನಿಶ್ಚಿತಯಂದು ಭಾವಿಸಿದೆವು. ತಮ್ಮ ಗರ್ಭದಾನದಿಂದ ಜೆನಿಸಿ ಪ್ರವರ್ಧಮಾನಕ್ಕೆ ಬಂದಿರುವ ನಮ್ಮ ಅವುರಸ ಪುತ್ರನನ್ನು ಮಠದ ವುತ್ತರಾಧಿಕಾರಿಯನ್ನಾಗಿ ನೇಮಕ ಮಾಡುವುದಕ್ಕೆ ಅನುಮತಿ ದಯಪಾಲಿಸಿದಲ್ಲಿ ತಾವು ದೇಹ ತ್ಯಾಗಕ್ಕೆ ಸಿದ್ದ ಯಂದು ಕೇಳಿಕೊಂಡೆವು.. ಅದಕ್ಕೆ ಅವರೂ ವಿದ್ಯುಕ್ತವಾಗಿ ಸಮ್ಮತಿಸಿದರು.. ತದನಂತರ ನಮ್ಮನ್ನು ಕಚ್ಚಿಕೊಂದು ಯಿಹಲೋಕದಿಂದ ಮುಕ್ತಿಗೊಳಿಸಿದರು.. ಯೀ ಘಟನೆ ನಡೆದು ಸುಮಾರು ದಿವಸಗಳಾದವು ಮಗನೇ, ನಾನು ನಿನ್ನ ಕಯ್ಯಿ ಹಿಡಿದು ನಡೆಸುತಾಯಿದ್ದು ನೀನು ಯಿಲ್ಲಿಗೆ ತಲುಪುವುದನು ಕಾಯುತ ಲಿದ್ದೆನು. ನಿನ್ನ ನೋಡಿದಾಕ್ಷಣ ವಿಂದ್ಯಾ ಪರುವತದ ತುದಿಯಿಂದ  ಯಿಳಿದು ಬಂದು ಬಿಟ್ಟೆನು. ಯೀಗ ನೀನು ಯೀ ಭವ್ಯಪರಂಪರೆಯುಳ್ಳ ನಾಥ ಪೀಠದ ಸ್ವಾಮಿಯಾಗಬೇಕು.. ಯಿದಕ ನೀನು ಸಮ್ಮತಿಸು ವತ್ಸಾ..

ಮಾಕವಿ ಮಾಮುನಿಗಳ ಮಾತು ಕೇಳಿ ಅಳ್ಳಾಡಿ ಹೋದನು. ಗ್ರುಹಸ್ಥಾಶ್ರಮದ ಕನಸು ಭಗ್ನ ಗೊಂಡಿತಲ್ಲಾ ಯಂದು ಹಲುಬಿದನು. ತನ್ನ ಜನನದ ಪೂರುವಾಪರ ಸಂತೋಷ ಪಡುವಂಥದ್ದೋ.. ದುಕ್ಕಪಡುವಂಥದ್ದೋ....

"ಗುರುವೆಂದರೂ ನೀವೇ.. ತಂದೆಯಂತೂ ನೀವೇ.. ನೀವು ಅಪ್ಪಣೆ ಕೊಡಿಸಿದ್ದು ಕೇಳಿಸಿಕೊಂಡ ಮ್ಯಾಲಕ ನನ್ನ ಮ್ಯಾಲ ನನಗ ಸ್ವಾಸಂತ್ರಯಿಲ್ಲವೆಂಬುದರ ಅರಿವಾಯಿತು.. ದಯವ ನಿಯಾಮಕ ಯಂದ ಮ್ಯಾಲ ನಾನು ಯೀ ಪೀಠದ ಸ್ವಾಮಿ ಪದವಿಗೆ ಯೇರಲಕ ಸಿದ್ಧನಿರುವೆನು.. ಆದರ ಅಸರೀರ ಸ್ಥಿತಿಯಲ್ಲಿರುವ ತಾವು ನನ್ನ ಪೀಠಾರೋಹಣ ಮಹೋತ್ಸವವನ್ನು ಹೇಗೆ ನಡೆಸಿಕೊಡುವಿರಿ ತಂದೆಯೇ"

"ಅದರ ಚಿಂತೇನ ನೀನು ಮಾಡಬ್ಯಾಡ.. ಯೀಗ ನಾನು ನಿನ್ನ ಕನಸಲ್ಲಿ ಮೂಡಿ ಸಂಭಾಷಿಸುತ್ತಿರುವ ರೀತಿಯಲ್ಲಿಯೇ ಮಾನ್ಯರ ಮಸಲವಾಡದ ಸಮಸ್ತ ಹಿರೀಕ ಕಿರೀಕರ, ಪೋಷಕ ಸ್ಥಾನದಲ್ಲಿರುವ ಸಾಮಂತ ಮಾಂಡಲೀಕರ ಕನಸುಗಳಲ್ಲಿ ಸಹ.."

ಮಾಕವಿ ತಾವು ಕನಸ ಕಂಡು ಮುಗಿಸಿದ್ದಾಗಲೀ.. ಯಚ್ಚರದ ಸ್ಥಿತಿಯಲ್ಲಿ ಚಿನ್ನದ ಗಟ್ಟಿಯನ್ನು ಮುಟ್ಟಿ ನೋಡಿಕೊಂಡದ್ದಾಗಲೀ.. ತನ್ನೊಳಗ ಬಹುವಚನದ ಪ್ರಕ್ರಿಯೆ ನಡೆಯುತ್ತಿರುವುದಾಗಲೀ.. ತಾನು ತನ್ನ ಹೆಸರಿನ ನಮೂನಿಗಳನ್ನು, ನಾಮವಾಚಕಗಳನ್ನು, ಭೂತಕಾಲದ ನೆನಪಿನ ಭ್ರೂಣಗಳನ್ನು ಭಾಗಶಃ

ಮರೆತದ್ದಾಗಲೀ....

ಬಂದೇ ಬಿಡಲಾರಂಭಿಸಿದರು ಮಂದಿ.. ಅಗೋ ಅಲ್ಲೊಬ್ಬರು, ಯಿಗೋ ಯಿಲ್ಲೊಬ್ಬರು.. ಯಿಗೋ ಯಿಲ್ಲೊಂದು ಗುಂಪು.. ಅಗೋ ಅಲ್ಲೊಂದು ಗುಂಪು.. ಆ ವಾದ್ಯರುಂದವು ಅಲ್ಲಿಂದ ಬರುತ್ತಿರುವುದು, ಯೀ ವಾದ್ಯ ರುಂದವು ಯಿಲ್ಲಿಂದ ಬರುತ್ತಿರುವುದು.

ಗೋರಖ್‌ನಾಥ್ ಮಹಾ ಪ್ರಭೂ ಜಯ್...

ಅತ್ತ ಡಣಾಪುರದೊಳಗ ಚಿನ್ನಾ ಸಾನಿಯು ಹೊಟ್ಟೆಯೊಳಗಿನ ನೀರು ತುಳುಕಾಡದಂಗೆ ಜೋಪಾನದಿಂದಿದ್ದಳು. ಹೆಂಡತಿಯ ಗಂಟ ಲೊಳಗಿಳಿಯುವ ತೊಂಬಲದ ರಸವನ್ನು ನೋಡುತ ಮಯ್ಯಿಮರೆತಿರುವ ತಮ್ಮ ಮಗ ಕಲಿಯೀರ ನಾಯಕನು ಯಿವತ್ತು ರಾಜ್ಯಭಾರ ದೋಳಿಕ್ಕೆ ತಲೆಹಾಕ್ಯಾನು, ನಾಳೆ ಹಾಕ್ಯಾನು ಯಂದು ಕಾಯುತಲಿದ್ದ ಡಣ್ಣಾಯಕರು ಕೂಗಿ ಕರೆದರೆಲ್ಲಿ ಅವರ ದಾಂಪತ್ಯದೇಕಾಂತ ಭಂಗ ಗೊಳಿಸಿದ ಪಾಪ ಬರುವುದೋ ಯಂಬ ಗೊಂದಲದಲ್ಲಿ ಯಿರುವಾಗ್ಗೆ....

ಫಲಾನ ದಿವಸದಂದು ಹೊಂಟಿರುವ ಸಾಹೇಬನು ಫಲಾನ ದಿವಸಕ್ಕೆ ಫಲಾನ ಮೂರನ್ನು ತಲುಪಲಿರುವನೆಂಬ ಸಂಗತಿಯನ್ನು ಅಂಚೆ ಯಿಲಾಖೆಯ ಕುರುಕುಂದೆಪ್ಪ ಬಿತ್ತರ ಮಾಡಿದೊಡನೆ ಸಾಸ್ತ್ರಿದ್ವಯರು ದೂರದ ಚಿನ್ನೋಬಳವನ್ನು ಭಕುತಿಪೂರ್ವಕವಾಗಿ ನೆನಪಿಸಿಕೊಂಡರು. ಲಗು ಬಗೆಯಿಂದ ಜಳಕ ಸಂಧ್ಯಾವಂದನೆಗಳನ್ನು ಪೂರಯಿಸಿ ಸನೀಹದಲ್ಲಿದ್ದ ಅಳಲೆಕಟ್ಟೆಯ ಮ್ಯಾಲ ಮುಚ್ಚಿದ ಕಣ್ಣುಗಳೊಳಗೆ ಚಿನ್ನೋಬಳವನ್ನು ದೇವುಳ ಸಯ್ತ ಮೂಡಿಸಿಕೊಂಡರು.. ಮನೋ ಬಲದಿಂದ ಗರ್ಭ ಗುಡಿ ಪ್ರವೇಸ ಮಾಡಿದರು.. ತುಪ್ಪದ ದೀವಿಗೆಗಳ ಬೆಳಕಲ್ಲಿ ಸ್ವಾಮಿ ಮ್ಲಾನವದನರಾಗಿದ್ದಾರೆ.. ಅರ್ಚಕರ ಅರ್ಚನೆಯಿಂದ ಸ್ವಾಮಿಯ ಮುಖಾರವಿಂದ ಅರಳುತಾಯಿಲ್ಲ.. ಯಿದಕ್ಕೆಲ್ಲ ಮ್ಲೇಚ್ಚತನವೇ ಕಾರಣ.. ಅಗೋಚರ ಸೂತಕ ಮಯ್ಲಿಗೆ.. ಪ್ರಹ್ಲಾದ ಯಿರಚಿತ ನರಸಿಮ್ಮಾಷ್ಟಕ, ವೇದೋಕ್ತ, ಪುರುಷಸೂಕ್ತ, ಚಮಕ ನಮಕಗಳಿತ್ಯಾದಿಗಳನ್ನು ಪಟಪಟನೆ ಅಂದರು, ಕಣ್ಣುಬಿಟ್ಟರು. ಜಾಜ್ವಲ್ಯ ಮಾನತೆಯ ಜೀವಧರಿಸಿದ್ದ ಸ್ವಾಮಿಯು “ಯಿನ್ನೂ ಮ್ಲೇಚ್ಚರ ಯಂಜಲಿಗೆ ಜೋತು ಬಿದ್ದಿರುವಿರಲ್ಲವೇ.. ಛೀ ಧರ್ಮ ದ್ರೋಹಿಗಳಿರಾ..” ಯಂದು ಗದ್ದರಿಸಿದಂತೆ ಭಾಸವಾಯಿತು. ತಾಮೂತಮ್ಮ ತಮ್ಮ ಯತ್ನ ಪ್ರಯತ್ನಗಳನ್ನು ನಿವೇದಿಸಿಕೊಂಡಂತಾಯಿತು. ತಮ್ಮ ರುದಯದ ವಾಯು

ಭಾಗದೊಳಗೆ ಯಿಂಥಿಂಥ ದ್ರೋಹ ಚಿಂತನೆಗಳಿವೆ ಯಂಬುದನ್ನು ಅರಕೆ ಮಾಡಿಕೊಂಡಂತಾಯಿತು. ಅದಕ್ಕೆ ಸ್ವಾಮಿಯು ಆಸೀರುವಾದ ಮಾಡಿದಂತಾಯಿತು. ಕಣ್ಣು ರೆಪ್ಪೆಗಳನ್ನು ನಿಧಾನವಾಗಿ ತೆರ ತೆರೆದು ವಾಸ್ತವಕ್ಕೆ ಮರಳಿದರು. ಮನೋಬಲ ಮಾತ್ರದಿಂದ ಶ್ರೀಲಕ್ಷ್ಮೀ ನರಸಿಮ್ಮಸ್ವಾಮಿಯ ದರುಸನ ಮಾಡಿಕೊಂಡು ಬಂದ ತಾವು ಅತುಲ ಬಲಪರಾಕ್ರಮರು ಯಂಬ ಭಾವ ಮೂಡದೆ ಯಿರಲಿಲ್ಲ.. ತಮ್ಮ ಯಿಚ್ಚಾಶಕ್ತಿಯ ಫಲವಾಗಿ ಪ್ರಯಾಣದ ನಡುವಿರುವ ಕಲೆಟ್ಟರ ಸಾಹೇಬನು ಕುಬ್ಜಾತಿ ಕುಬ್ಜನಾಗುತ್ತಲೇ ಯಿರಭೌದೆಂದು ತಮ್ಮ ಮನಸ್ಸು ತಮ್ಮೊಳಗೆ ಷರಾ ಬರೆಯುತ್ತಿರುವುದು.. ಹ್ಹಾ.. ಹ್ಹಾ...

ಕಲೆಟ್ಟರ ಸಾಹೇಬನು ಹೊತ್ತು ವಾಲಿದ ನಂತರ ಗೋಚರವಾಗುವ ಮುನ್ಸೂಚನೆಯಿತ್ತು. ಕಛೇರಿಯ ಪ್ರಮುಖ ಅಧಿಕಾರಿಗಳೇ ಮೊದಲಾದವರು ಸಾಸ್ತ್ರಿಗಳ ವಾಸ್ತು ನಿರ್ಧೇಸನಕ್ಕನುಸಾರವಾಗಿ ನಿಂತೋ, ಕುಂತೋ ಕಾಯುತಲಿದ್ದರು.. ಯಿಡೀ ಅನಂತಪುರ ಪಟ್ಟಣವು ತಾನಿದ್ದಲ್ಲೇ ಕಾಯುವವರ ಕಾಲ ಸಂಕಟವನ್ನು ತನ್ನ ಪಾಡಿಗೆ ತಾನು ವ್ಯಾಖ್ಯಾನಿಸುತಲಿದ್ದಿತು.

ಸಾರ್ಜೆಂಟುಗಳು, ಕಮಾಂಡರುಗಳು ನೀವು ನಿಮ್ಮ ಮುಖಗಳನ್ನು ಗೆಲುವಾಗಿಟ್ಟುಕೊಳ್ಳಿರಿ.. ಪೆಚ್ಚಾಗದಂತೆ ನೋಡಿಕೊಳ್ಳಿರಿ.. ಕಲೆಟ್ಟರು ಸಾಹೇಬರು ಸುದೀರ್ಘ ಪ್ರಯಾಣದಿಂದಾಗಿ ಬಳಲಿರುತ್ತಾರೆಂಬುದನ್ನು ಮರೆಯದಿರಿ.. ಯಂದು ಸಂಚರಿಸುತ್ತ, ಸಲಹೆ, ಸೂಚನೆಗಳನ್ನು ನೀಡುತಲಿದ್ದರು. ಆಗಮಿಸಲಿರುವ ಸಾಹೇಬನತ್ತ ಯಸೆಯಲಕೆಂದು ಹುವ್ವುಗಳಿದ್ದ ಪುಟ್ಟಿಗಳನ್ನು ಕಯ್ಲಿ ಹಿಡಕೊಂಡು ದಾರಿ ಯಿಕ್ಕೆಲದಲ್ಲಿ ನಿಂತಿದ್ದ ಮಿಶಿನರಿ ಶಾಲೆಯ ಮಕ್ಕಳ ಕಿವಿಯಲ್ಲಿ ಸಿಹಿ ಖಾದ್ಯಗಳ ಹೆಸರುಗಳನ್ನುದುರಿಸುತ್ತ ವಾರ್ಡನ್ನುಗಳು, ಶಿಕ್ಷಕ, ಶಿಕ್ಷಕಿಯರು ಅವರು ಮ್ಲಾನವದನರಾಗದಂತೆ ನಿಗಾ ವಹಿಸಿದ್ದರು. ಯಿನ್ನೊಂದು ಕಡೆ ಸ್ವಾಗತಗೀತೆಯ ತಾಲೀಮು ಹಲವು ಯಿವಾದಗಳ ನಡುವೆ ನಡೆದಿತ್ತು. ಮತ್ತೊಂದು ಕಡೆ ಬ್ಯಾಂಡು ಡೋಲುಗಳ ವಾದನದ ತಾಲೀಮೂ ಮಗುದೊಂದು ಕಡೆ ಕವಾಯತಿನ ತಾಲೀಮೂ....

ಥಾಮಸು ಮನ್ರೋ ಸಾಹೇಬನು ತನ್ನ ಸುದೀರ್ಗ ಪ್ರವಾಸದ ಅಂತಿಮ ಚರಣವನ್ನು ತಲುಪಿಯೇ ಬಿಟ್ಟನು.. ಡೋಲಿಯೊಳಗಿಂದ ಮುಖವನ್ನು ಹೊರಚಾಚಿ ತಾನು ಸುಕ್ಷೇಮ ಯಂಬ ಸಂದೇಶವನ್ನು ಸಾರಿಯೇ ಬಿಟ್ಟನು. ತಾಪಮಾನ ಗರಿಷ« ಮಟ್ಟದಲ್ಲಿದ್ದುದರಿಂದ ಡೋಲಿಯೊಳಗೇ ಸಾಗುವುದೊಳಿತು

ಯಂದು ಹವಾಮಾನ ತಗ್ನರು ನೀಡಿದ ಸಲಹೆಯನ್ನು ಕೇಳಿಸಿಕೊಳ್ಳುತ್ತಲೇ ಕೆಳಗಿಳಿದು ಅವರಿವರತ್ತ ಮುಗುಳು ನಗೆ ಚೆಲ್ಲುತ್ತ, ಜನಗಡಣದತ್ತ ಕಯ್ನೆತ್ತಿ ಬೀಸುತ್ತ, ಸ್ಟೋನ್, ವಾಟರ್, ವಿಂಡ್ ಮುಂತಾದವರಿಗೆ ಸೇಕೆಂಡು ಕೊಡುತ್ತ, ಬೊಕ್ಕೆಗಳನ್ನು ಪಡೆಯುತ್ತ.. ನಿಸ್ತೇಜರಿಗೆ ಯಿಲೇವಾರಿ ಮಾಡುತ್ತ ಹೆಜ್ಜೆ ಹೆಜ್ಜೆಗೊಂದೊಂದು ಸಲಕ್ಕ ಯಡಕ ಬಲಕ ನೋಡುತ್ತ.. ವಬ್ಬೊಬ್ಬರ ಮುಖಗಳನ್ನು ಸಿಮ್ಮಾವ ಲೋಕಿಸುವುದರೊಂದಿಗೆ ಅವರವರ ಕಡತಗಳನ್ನು ನೆನಪು ಮಾಡಿಕೊಳ್ಳುತ್ತ.. ನೆನಪಿಸಿಕೊಡುತ್ತ.. ಹಲವರ ಯದೆಗಳೊಳಗಿಳಿಯುತ್ತ.. ಹಲವರಯದೆಗಳಿಂದ ಹೊರ ಬರುತ್ತ.. ಅಂಜಿಕೊಂಡವರ ಬಳಿ ಸಾರ್ದು ಕ್ಷೇಮಲಾಭ ಯಿಚಾರಿಸುತ್ತ ತಾಯಂದಿರ ಕಂಕುಳೊಳಗಿದ್ದ ಕಜ್ಜಿ ಪುಳ್ಳೆ ಕಂದಮ್ಮಗಳನ್ನು ಯತ್ತಿಕೊಂಡು ಮುದ್ದಾಡುತ್ತ.. ದಿಸೀಜ್ ಥಾಮಸ್ ಮನ್ರೋ ಯಂದು ಮನವರಿಕೆ ಮಾಡಿಕೊಡುತ್ತ.. ಹುಪ್ಪಿನೊಂದಿಗೆ ಮಕ್ಕಳನ್ನು ಹತ್ತಿರ ಕರೆಯುತ್ತ.. ತನ್ನೊಂದಿಗೆ ಹೆಜ್ಜೆ ಹಾಕಿರೆಂದು ಹೇಳುತ್ತ..

ಬಂಗಲೆ ಸೇರಿಕೊಂಡೊಡನೆ ತನ್ನ ಸರೀರ ಸವುಖ್ಯ ನೋಡಿಕೊಂಬದೆ ಥಾಮಸು ಮನ್ರೋನು ಕಡತಗಳ ಗುಡ್ಡವನ್ನು ಯದುರಿಗೆ ಯಳಕೊಂಡು ದಸಗತ್ತು ಮಾಡುತ ಯಿಲೇವಾರಿ ಮಾಡಿದನು. ಯರಡು ಮಯ್ಲುದ್ದ ನಿಂತುಕೊಂಡಿದ್ದ ಪ್ರಜೆಗಳ ಸಂಕಟ ಕಷ್ಟಗಳನ್ನಾಲಿಸಿ ವಬ್ಬೊಬ್ಬರಿಗೂ ವಂದೊಂದು ಕ್ರಮ ಕಯ್ಯಕೊಂಡನು. ತನ್ನೊಳಗೆ ದುಬಾಯಿಸು ಕಾರ್ಯಪ್ರವುರುತ್ತರಾಗಿದ್ದ ಕಾರಣಕ್ಕೆ ಅಗತ್ಯಕ್ಕಿಂತ ಕಡಿಮೆ ಅಲಂಕರಿಸಿಕೊಂಡು ಕುದುರೆ ಹೋಗುವ ಕಡೇಕ ಕುದುರೆ ಮ್ಯಾಲೂ.. ನಡಕೊಂಡೇ ಹೋಗುವ ಕಡೇಕ ನಡದುಕೊಂಡೇ ಹೋಗುತ ಸಂಚಲನ ಸ್ರುಷ್ಟಿ« ಮಾಡಿದನು. ರಾತರಿ ಮಲಗಿರುವಾಗ ಯಾಕೋ ವಂದರ ಮ್ಯಾಲ ವಂದರಂತೆ ಕಣಸುಗಳನು ಕಾಣಲಾರಂಭಿಸಿದನು.. ಅದ್ಯಾವ ಸೀಮೆ ಪಟ್ಟಣಗಳೋ.. ಸೌಧಗಳೋ.. ಜನಗಳೋ.. ಅದಾವುದೂ ಲವುಕಿಕಕ್ಕ ಸಂಬಂಧಿಸಿಧಂಗಿಲ್ಲ.. ಅನುಭವಕ್ಕ ನಿಲುಕುವಂತಂದ್ದಿದ್ದಂಗಿಲ್ಲ.. ಅದೆಲ್ಲವುಗಳ.. ಅವರೆಲ್ಲರ ನಡೂಲಕಿಂದ ಮುತ್ತಯಿದೆಯೋರ್ವಳು ನಡಕೋತ ನಡಕೋತ ತನ್ನ ಕಡೀಕೆ ಬರುತಾ ಅವಳೆ.. ಯಲ್ಲಾರಿಗಿಂತ ಯತ್ತರಕವಳೆ.. ಮುಂಗಾಲಿಗೆ ಕಡಗ.. ಬೆರಳುಗಳಿಗೆ ವುಂಗುರಗಳ ತೊಟ್ಟವಳೆ.. ಹಸಿರು ಸೀರೆ ವುಟ್ಟವಳೆ.. ಹಸಿರು ಕುಬುಸ ತೊಟ್ಟವಳೆ.. ಕೊರಳೊಳಗೆ ತರಾವರಿ ಸರಗಳನ ಧರಿಸವಳೆ.. ದವಡೆಯೊಳಗೆ ತೊಂಬಲದುಂಡೆಯನ್ನಿಟ್ಟವಳೆ.. ಕೆಂಪಾನ ತುಟಿ ಮ್ಯಾಲ

ಕಾಮನಬಿಲ್ಲು ಮಡಗವಳೆ.. ಹಣೆ ಮ್ಯಾಲ ರೂಪಾಯಗಲ ಕುಂಕುಮಬೊಟ್ಟು ಯಿಟ್ಟವಳೆ.. ಮುಂಗಯಿ ತುಂಬ ಹಸಿರು ಬಳೆ ಯೇರಿಸವಳೆ.. ವಡ್ಯಾಣದ ಯಡಬಲಕ ಸೂರ್‍ಯಾಮ ಚಂದ್ರಾಮರನ ಕಾವಲು ಯಿಟ್ಟುಕೊಂಡವಳೆ.. ತಾಯಂದಿರಿಗೆಲ್ಲ ತಾಯಿಯಂತಿರುವ.. ಅದೇ ಯಿನ್ನು ಕೋಟಿ ಕಂದಮ್ಮಗಳಿಗೆ ಹಾಲುಣ್ಣಿಸಿ ಯದೆಯನ್ನು ಯಂಜಲು ಮಾಡಿಕೊಂಡಂತಿರುವ ಮಹಾತಾಯಿ ಹೆಜ್ಜೆ ಹೆಜ್ಜೆಗೊಂದೊಂದು ತೊಟ್ಟಿಲ ತೂಗುತ.. ಜೋಗುಳದ ಪಲ್ಲವಿಯನ್ನು ಗೊಣಗೂತ.. ತನ್ನ ಕಡೀಕೆ ಬರುತಾ..ಅವಳೆ.. ಅರೆ? ಯೀಕೆಯನ್ನ ತಾನೆಲ್ಲೋ ನೋಡಿಧಂಗಿರುವುದಲ್ಲಾ.. ತನ್ನ ಹೆತ್ತಾಕಿಯಾದ ಯಡ್ವಿನಾ.. ತನಗೆ ಯದೆಹಾಲು ಕರುಣಿಸಿದ ಯಡ್ವಿನಾಳನ್ನು ಹೆಚ್ಚು ಹೋಲುತ್ತಿರುವಳಲ್ಲಾ.. ಯಾಕೆ ತನ್ನತ್ತ ಬರುತ್ತಿರುವಳು ತಾಯಿ.. ಯಾಕೆ ತನ್ನನ್ನು ಯೇನಕೇನ ನೆನಪಿಸಿಕೊಂಡಿರುವಳು ತಾಯಿ.. ತನ್ನಿಂದ ಯೇನು ಬಗಸಿ ಬರುತ್ತಿರುವಳು ತಾಯಿ.. ತನಗೆ ಯೇನನ್ನು ಆಗ್ನೆ ಮಾಡಲಕಂತ ಬರುತ್ತಿರುವಳು ತಾಯಿ.. ಆಕೆಯೇನಾದರೂ ತನ್ನ ಬಲಿ ಬಯಸಿ.. ಛೆ! ಛೆ! ಯಾವ ತಾಯಿಯೂ ಸೊಯಂ ಬಲಿ ಬಯಸಲಾರಳು.. ಹ್ಹಾ.. ಹ್ಹಾ.. ಯಿನ್ನೇನು ಬಂದೇ ಬಿಟ್ಟಳು ತನ್ನ ಸನೀಕ.. ಕಂದಾ ಅಂದಳು ವಾತ್ಸಲ್ಯದಿಂದ.. ತಾಯಿ ಅಂದ.. ನಿನಗ ನನ್ನ ಗುರುತು ಹತ್ತಿತೇನಪ್ಪಾ.. ಅಂದಳು.. ಛೆ.. ಛೆ.. ಅದೆಂಥ ಮಾತಂತ ಆಡತೀಯವ್ವಾ.. ನೀನು ತಾಯಿ ಕಣವ್ವಾ ತಾಯಿ.. ತಾಯಂದಿರಿಗೆಲ್ಲಾ ತಾಯಿಯವ್ವಾ.. ಮತ್ತ ನನ್ನ ನೋಡಲಕ ಯಾವಾಗ ಬರುತಿ ಮಗನೇ.. ಯಂದು ಕೇಳುವುದಕ್ಕೂ ಮುಂಗೋಳಿ ಕೂಗುವುದಕ್ಕೂ...

ಆಗ ಹೊತ್ತು ಯಷ್ಟಾಗಿತ್ತೆಂದರೆ....

ಅತ್ತ ಕುದುರೆಡವು ಪಟ್ಟಣದೊಳಗ ಕುಂತಳ ಪ್ರಾಂತದ ಕಣ್ಮಣಿ ಆಗಿದ್ದಂಥ ಸಾಂಬಯ್ಯನು ಪರನಾರಿ ಸೋದರನಯ್ದಾನೆಯಂಬ ವರ್ತಮಾನವು ಸುತ್ತನ್ನಾಕಡೇಕ ಹಬ್ಬಲು ಬಾಯೊಳಗ ವಂದು ಗುಟುಕು ನೀರು ಹಾಕ್ಕೊಂಡು ಮುಕ್ಕಳಿಸಿ ವುಗುಳಲಕ ಯಷ್ಟು ಸಮಯಬೇಕೋ ಅಷ್ಟು ಸಮಯ ತಗಂತು.. ಪರನಾರಿ ಸೋದರ ಯಂಬುವ ಸಪ್ತಾಕ್ಷರಿ ಮಂತ್ರಕ್ಕೆ ಸೋದರತ್ವ ಸಂಬಂಧೀ ಅಕ್ಷರಗಳು ಅಲವುಕಿದ ಅಮೂಲ್ಯ ಅನುಭಾವದ ಆಭರಣಗಳನ್ನು ತೊಡಿಸಿದ್ದು ತಡ ಆಗಲಿಲ್ಲ.. ಪಾದ ಬುಡಕ್ಕೆ ವಾತ್ಸಲ್ಯದ ಪಾವುಡಗಳನ್ನು ಮುಡಿಸಿದ್ದು ತಡ ಆಗಲಿಲ್ಲ.. ಸಚರಾಚರಗಳಿಗೆ, ನೆಲದ ಮರೆಯ ನಿಧಾನಕ್ಕೆ, ಪಂಚಭೂತಗಳಿಗೆ ಕಯ್ಯ ಮುಗಿಮೂತ ನೋಡಿರವ್ವಾ.. ನೋಡಿರಯ್ಯಾ.. ಕೇಳಿರಯ್ಯಾ.. ಕೇಳಿರವ್ವಾ...

ಯೀ ಸಪ್ತಾಕ್ಷರಿ ಮಂತ್ರವು ಕಣ್ಣು ತೊಳಕೊಂಡು ನೋಡುವಂಗಯ್ತೆ, ಕಯ್ನ ಗಂಗಾ ಜಲದಿಂದ ತೊಳಕೊಂಡು ಮುಟ್ಟುವಂಗಯ್ತೆ, ಯಿದನು ನುಡಿವ ನಾಲಗೆ ಸುದ್ದ ಆಗತಯ್ತೆ.. ಕೇಳುವ ಕಿವಿಯು ಪಾವನ ಆಗ ತಯ್ತೆ.. ಯೀ ಮಂತ್ರವನ್ನು ಯುಗ ಯುಗಗಳಿಂದ ಭೂಚರ ಖಚರ ಖೇಚರಾದಿಯಾಗಿ ಯಾರೊಬ್ಬರೂ ತ್ರಿಕರ್ಣಪೂರ್ವಕವಾಗಿ ಆಚರಣೆಗೆ ತಂದಿಲ್ಲ.. ಯಂಥೆಂಥ ರುಷಿಗಳನ್ನೆ ಯಿದು ಬಕಬೋರಲು ಕೆಡವಯ್ತೆ. ಆದರ ಯೀ ಕಲಿಯುಗದಲ್ಲಿ ಸಾಂಬವಿಯ ಮಾನಸಪುತ್ರನಾದ ಸಾಂಬಯ್ಯನಿಗೆ ಯೀ ಅನರಘ್ಯ ಮಂತ್ರದ ವಲುಮೆಯಾಗಿರುವುದು. ಯೀರೇಳು ಲೋಕದೊಳಗಿರುವ ತ್ರಿಪುರ ಸುಂದರಿಯರು ಬೇಕು ಬೇಕಾದಂಗ ಪರೀಕ್ಷೆ ಮಾಡಿಕೊಳ್ಳಲೀ.. ಹೋಗಿ ಸಾರೀರಿಯಂದು ಯಿನ್ನಪ ಮಾಡಿಕೊಳ್ಳಲು..

ಆ ಅಂಚೆ ಕಾರ್ಯಕರ್ತರು, ಸುದ್ದಿ ಮಾಧ್ಯಮಗಳು ಹಿರಿ ಹಿರಿ ಹಿಗ್ಗಿ ತಮಗೆಂಗ ತೋಚುವುದೋ ಹಂಗ ಹಂಗೆ ಹರಕೋತ ಹರಕೋತ ಛಪ್ಪನ್ನಾರು ದೇಸಗಳ ತುಂಬೆಲ್ಲ ಹರಡಲು, ಹೆಣ್ತನದ ಮಯ್ಯಿತುಂಬ ತಾಯ್ತನವು, ಸೋದರತ್ವ ಭಾವವು ಪಾರಿಜಾತ ಪುಷ್ಪದೋಪಾದಿಯಲ್ಲಿ ಅರಳಲು ತಂಗಿ, ಅಕ್ಕ, ತಾಯೇ, ದೊಡ್ಡಮ್ಮ, ಚಿಕ್ಕಮ್ಮ ಯಂಬೀವೇ ಮೊದಲಾದ ಬ್ರಾತ್ರುತ್ವ ಸಂಬಂಧೀ ಸಬುಧಗಳು ಯಲ್ಲರೆದೆಯೊಳಗೆ ಥಳಥಳ ಹೊಳೆಯತೊಡಗಿದವು. ಯಾರೋ ನಮ್ಮನ್ನು ಅಕ್ಕಾ ಯಂದು ಕರೆದಂಗಾಗತಯ್ತಾಲ್ಲಾ ಯಂದು ಅಕ್ಕಂದಿರು.. ಯಾರೋ ತಮ್ಮನ್ನು ತಂಗೀ ಯಂದು ಕರದಂಗಾತಯ್ತಲ್ಲಾ ಯಂದು ತಂಗಿಯಂದಿರು.. ಯಾರೋ ತಮ್ಮನ್ನು ತಾಯೇ ಯಂದು ಕೂಗಿಧಂಗಾತಯ್ತಲ್ಲಾ.. ಯಾರೋ ತಮ್ಮನ್ನು ದೊಡ್ಡಮ್ಮ, ಸಣ್ಣಮ್ಮ ಯಂದು ಕರೆದಂಗಾತಯ್ತಲ್ಲಾ.. ಅಂದು ಅಂದುಕೊಳ್ಳುತ.. ನೋಡಿ, ನೋಡಿಕೊಳ್ಳುತ.. ಕೇಳಿ, ಕೇಳಿಕೊಳ್ಳುತ.. ಆಡಿ, ಆಡಿಕೊಳ್ಳುತ.. ತಮ ತವರೂರು ಯಿಲ್ಲೆಲ್ಲೋ ಯಿದ್ದಂಗಯ್ತಲ್ಲಾ.. ಅದಿರಬೌದೇನು ತಮ್ಮ ತವರೂರು.. ಯಿದಿರಭೌದೇನು ತಮ್ಮ ತವರುಮನೆಯು.. ಯೀ ಪ್ರಕಾರವಾಗಿ ಹುಡುಕಾಡತೊಡಗಿದ.. ಬೆದಕಾಡತೊಡಗಿದ ಛಪ್ಪನ್ನಾರು ದೇಸಗಳ ಹೆಣ್ಣು ಮಕ್ಕಳ ಸಡಗರವನ ಯೇನೆಂದು ಹೇಳಲಿ ಸಿವನೇ?

ತಾವು ಹುಟ್ಟಿರುವ ಮನೆ ತಮ್ಮ ತವರಲ್ಲ.. ತಾವು ಹುಟ್ಟಿರುವ ಮೂರು ತಮ್ಮ ತವರೂರಲ್ಲ.. ಅಲ್ಲೆಲ್ಲ ಅಕ್ಕ ತಂಗಿ ಯಂಬ ಸಬುದಗಳು ಅಣ್ಣ ತಮ್ಮಂದಿರ ಬಾಯೊಳಗ ನುಸಿದೂ ನುಸಿದು ಸವಕಲುಗೊಂಡವೆ. ಪುಂಪುರುಸರ

ಯಂಜಲೊಳಗಿಂದ ಮೂಡಿರುವ ಅವಕ್ಕೆ ಮಟಮಟ ಮಯ್ಲಿಗೆ ತಗುಲದೆ, ಮಗಳು ಯಂಬ ಸಬುಧವಮೂಕಾಮದಿಂದ ಸಂಪೂರ್ಣ ಯಿನಾಯತಿ ಪಡಕೊಂಡಿಲ್ಲ, ತಂಗಿ ಯಂದಿರನ್ನು ತಂಗಿ ಥರ ನೋಡಲಕ ಅಣ್ಣಂದಿರಿಗೆ ಸಾಧ್ಯವಾಗಿಲ್ಲ.. ಅಕ್ಕಂದಿರನ್ನು ಅಕ್ಕನಥರ ನೋಡಲಕ ತಮ್ಮಂದಿರಿಗೆ ಸಾಧ್ಯವಾಗಿಲ್ಲ.. ಮಗಳನ್ನು ಮಗಳ ಥರ ನೋಡಲಕ ತಂದೆಯಂದಿರಿಗೆ ಸಾಧ್ಯವಾಗಿಲ್ಲ.. ಅಲವುಕಿಕ ಅನುಭಾವದ ಸೊಗಸಿನಿಂದ ನೋಡುವ, ಮಾತಾಡುವ, ಸಂಭೋದಿಸುವ ಅಣ್ಣ ತಮ್ಮಂದಿರು, ತಂದೆಯಂದಿರು ತಮಗ ಬೇಕು.. ಅಣ್ಣ, ತಮ್ಮ, ತಂದೆ ಯಂಬೀ ಮೂರು ಸಬುಧಗಳ ತ್ರಿವೇಣಿ ಸಂಗಮ ಯಿಲ್ಲಿಲ್ಲ.. ಅಲ್ಲಿಲ್ಲ.. ಲೋಕಕ್ಕತಿಶಯವಾದ ಕುದುರೆಡವು ಪಟ್ಟಣದೊಳಗ ಸಾಂಬಯ್ಯನ ರೂಪ ಧರಿಸಿ ಮಡುಗಟ್ಟಿ ನಿಂತಿರುವುದು ಯಂದು ಕ್ರುತು ನಿಶ್ಚಯವಂ ಮಾಡಿದ ಹೆಂಗೆಳೆಯರು ತಮ್ತಮ್ಮ ಗಂಡಂದಿರ ಹೆಂಗರಳನ್ನು ತಂತಿ ಮಾಡಿ ತಮ ತಮ್ಮ ತನುಯಂಬುವ ತಂಬೂರಿಗೆ ಬಿಗಿದು ಮಿಟಿದೊಡನೆ ಅಕ್ಕಾ ನಿನ್ನ ನೋಡಂಗಾಗಯ್ತಕ್ಕಾ.. ತಂಗೀ ನಿನ್ನ ನೋಡಂಗಾಗಯ್ತೆ ತಂಗೀ.. ತಾಯೇ ನಿನ ನೋಡಂಗಾಗಯ್ತೆ ಯವ್ವಾ.. ಯೀ ತಮ್ಮನಿಗೇನು ತರುವಿರೇ.. ಯೀ ಅಣ್ಣನಿಗೇನು ತರುವಿರೇ.. ಯೀ ಮಗನಿಗೇನು ತರುವಿರೇ ಯಂಬಂಥ ನುಡಿಗಡಲು ಹಾಡಾಗಿ ಹರಿಧಂಗಾತು...

ಹ್ವಾ.. ಹ್ವಾ.. ಅಣ್ಣನನ್ನು ಕಾಣಲಕಂತ.. ಹ್ವೋ.. ಹ್ವೋ.. ತಮ್ಮನನ್ನು ಕಾಣಲಕಂತ.. ಹೇ ಹೇ ಮಗನನ್ನು ಕಾಣಲಕಂತ ಹೆಣ್ಣು ಮಕ್ಕಳು ತರಾವರಿ ಅಡುಗೆ ಮಾಡಿಕೊಂಡು..

ಸವಾರಿ ಬಂಡಿಗಳೇರಿ ಕೂಕಂಡಿದ್ದೇನು.... ಯೊರೇಳು ಲೋಕಗಳ ಬಣ್ಣಬಣ್ಣದ ಪತಂಗಗಳೇ ಮಾನವ ರೂಪದಲ್ಲಿ ಕುದುರೆಡವ ಕಡೇಕ ಗುಳೇ ಹೊಂಟಿರುವವೇನೋ ಎಂಬಂತೆ ಭ್ರಮಾ ಮಾಡಿದ್ದೇನು? ಕರುಳ ಕಾಮಗಾರಿಗೆ ನಾಮುಂದು ತಾ ಮುಂದೂಂತ ಧಾವಂತ ಇಟ್ಟಿದ್ದೇನು? ಕಣ್ಣು ಹಾಯಿಸಿದ ಕಡೆಲ್ಲೆಲ್ಲಾ ನಡೆಯತೊಡಗಿದ ಮಮತೆ, ವಾತ್ಸಲ್ಯದ ದಾಸೋಹವೇನು? ಮಂದಿಯ ಮುತ್ತುವಿಕೆಯಿಂದಾಗಿ ಅರಮನೆ ಯಂಬುದು ಲಕ್ಷೋಪಲಕ್ಷ ಕೋಣೆಗಳುಳ್ಳ ಜೇನು ಗೂಡಾಗಿ ಮಾರ್ಪಟ್ಟಿತು ಸಿವನೇ...

ತಾವು ತಮ ತಮ್ಮ ಅವಧೂತ ಪ್ರವಾಹದೊಳಗ ಯಿಳಿದ ಲಾಗಾಯ್ತು ಕರುಳುಗಳಿಗೆ, ರುದಯಗಳಿಗೆ, ಮಿದಿಳುಗಳಿಗೆ ಬೆಲೆ ಕೆಟ್ಟಿರುವುದುಂಟಾ.. ತಾವೀಸುದಿನಮಾನ ಯೇಕತಾರಿ ಗುಂಗಿನೊಳಗ, ಭಂಗೀ ನಶಾದೊಳಗ,

ಹೆಂಡದ ಅಮಲಿನೊಳಗ ತಮ್ಮನ್ನು ತಾವು ಕಳಕೊಂಡಿದ್ದೆವಲ್ಲಾ, ಲವುಕಿಕದೊಳಗಿದ್ದ ಅಲವುಕಿಕತನವ ಗುರುತು ಹಿಡಿಯದಂತಾಗಿದ್ದೆವಲ್ಲಾ.. ಯಂದು ಮುಂತಾಗಿ ಕುಂತಳ ಸೀಮೆಯಾದ್ಯಂತ ಇದ್ದಂಥ ಸಾಧು ಸಂತ ಅವಧೂತ ಮಂದಿ ಯೇನಿತ್ತು, ಅದು ತಮ ತಮ್ಮ ಕಣ್ಣ ಅಟವಾಳಿಗೆಯೊಳಗ ಕುಂತಳ ಸೀಮೆಯ ನಕಾಶೆಯನ್ನು ಹರಡಿಕೊಂಡಿದ್ದು ತಡಾ ಆಗಲಿಲ್ಲವಂತೆ... ಫಲಾನ ಇಂಥ ಕಡೇಲುಂಟು ಕುದುರೆಡವು ಯಂದು ಪತ್ತೆ ಮಾಡಿದ್ದು ತಡಾ ಆಗಲಿಲ್ಲವಂತೆ.. ಅವರೆಲ್ಲ ಹೆಂಗೆಂಗ ಹೊಂಟರಂದಕ ಹಂಗಂಗs ಹೊಂಟರಂತೆ.....

ತೆಕ್ಕಲಕೋಟೆಯೊಳಗೆ ನೆಲಗೊಂಡಿದ್ದ ಕಾಡುಸಿದ್ಧಪ್ಪ ತಾತನು ತಾನು ಕಣ್ಣು ಬಿಟ್ಟೊಡನೆ ಗೋಚರ ಮಾಡಿದಂತಾ ಮೋಟು ಗೋಡೆಯನ್ನು ಕುರುತು "ಅಲಾಂಅ್ ಮೋಟುಗೋಡೆಪ್ಪಾ...ನೀನು ನನಗ ವಾಹನ ಆಗುವಿಯೇನಪ್ಪಾ"ಯಂದು ಕೇಳಿದೊಡನೆ ಆ ಮೋಟುಗೋಡೆಯು "ಯಜ್ಜಾ ನೀನು ಬಗಸೋದು ಹೆಚ್ಚಾ...ನಾನಾಗೋದು ಹೆಚ್ಚಾ" ಅಂತಂತೆ ಸಿವನೇ... ಹಿಂಗs ಗೂಳ್ಯದಿಂದ ಗಾದಿಲಿಂಗಪ್ಪ ತಾತನು ಕರಿಗಂಬಳಿ ಮ್ಯಾಲ....ಆದವಾನಿ ವಳಿತದಿಂದ ತಟ್ಟಿಲಚುಮವ್ವ ಪತ್ರೋಳಿಮ್ಯಾಲ, ಹೊಳಗುಂದಿಯಿಂದ ಸಾಯಿಬಣ್ಣ ತಾತನು ಹಿಂಜಿದ ಅರಳೆ ಮ್ಯಾಲ, ದಮ್ಮೂರಿನಿಂದ ಯಂಕಪ್ಪಾ ವಧೂತನು ತಂಬೂರಿ ಮ್ಯಾಲ, ಕುರುಗೋಡಿನಿಂದ ಕುರುಪ್ಪಜ್ಜನು ಕಲ್ಲುಗುಂಡಿನ ಮ್ಯಾಲ, ಸುಟ್ಟಮ್ಮನಳ್ಳಿ ಯಿಂದ ಮಸಣಾರೂಢತಾತನು ಸಮಾಧಿಯೊಂದರ ಮ್ಯಾಲ, ದ್ಯಾವಲಾಪುರದ ಲಿಂಗಪ್ಪಜ್ಜ ಕುರಿಕ್ಕಿ ಮ್ಯಾಲ.. ಹಿಂಗss ವಬ್ಬೊಬ್ಬ ತಾತನೂ ವಂದೊಂದು ವಾಹನ ಮಾಡಿಕೊಂಡು ಕುದುರೆಡವ ಕಡೇಕ..

* * * *

ತನ್ನೊಳಗೆ ಬೆಳೆಯುತ್ತಲೇ ಯಿದ್ದ ಸ್ರೀರಂಗಪಟ್ಟಣವನ್ನು ವಮ್ಮಿಂದೊಮ್ಮಿಗೆ ವುತಾರ ಮಾಡುವು ದೆಂದರೆ ಹುಡುಗಾಟದ ಮಾತೇನು? ತಾನು ಕಾವೇರಿ ನೀರನ ಕುಡಿದದ್ದೇ ಪರಪಾಟಾಗಿತ್ತು... ಅದರ ಅಣು ಅಣು ಜಲಧಾರೆಯಾಗಿ ತನ್ನ ದೇಹದಾದ್ಯಂತ ದುಮ್ಮಿಕ್ಕುತ್ತಲಿತ್ತು. ಯುದ್ಧದ ಗಾಯಗಳು ತನ್ನ ಸರೀರದೊಳಗೆಲ್ಲ ಆವರಿಸಿರುವಂತೆ ಭಾಸವಾಗತೊಡಗಿತು. ಸೈನ್ಯದ ತುಕಡಿಯೊಂದಿಗೆ ತನ್ನನ್ನು ಸೇರಿಕೊಂಡಿದ್ದ ಕರ್ನಲ್ ಬಯಲ್ಲನ್ನಾಗಲೀ.. ಆಯರ ಕೂಟನ್ನಾಗಲೀ.. ಯಿಡೀ ಯುದ್ಧ ಪ್ರಸಂಗವನ್ನು ತನ್ನೊಂದು ಕಿರುಬೆರಳಿನಿಂದಾಡಿಸಿದ ಕಾರ್ನವಾಲೀಸನ್ನಾಗಲೀ.. ತಾನು ಮರೆಯಲಕಾಗುತ್ತಿಲ್ಲ..

ಸಂತ ದುಬಾಯಿಸರ ಹಾದಿ ಹಿಡಿದಿರುವ ಮುನುಸೋಬಯ್ಯ ತನಗಿಂತ ಎಷ್ಟೋ ವಾಸಿ.. ಆದರೆ ತಾನು... ನಿಟ್ಟುಸಿರಿಟ್ಟ. ಸಾಯಿರಾರು ಕಡತಗಳ ಪಯ್ಕಿ ನೂರಯಿವತ್ತು ಕಡತಗಳನ್ನು ಮಾತ್ರನಿಖಾಲೆ ಮಾಡುವ ಹೊತ್ತಿಗೆ ಪ್ರಹರಿ ಮೂರರ ನಂತರ ಯಿನ್ನೊಂದು ಬಡಿದು ಹೊತ್ತು ಸೂಚಿಸಿದ. ದೂರದ ಪುಣೆ ಕಡೇಕ ವಲಸೆ ಹೋಗಿದ್ದ ಅಣಿ ಮಾಂಡವ್ಯಾಚಾರ್ಯರನ್ನು ಗ್ನಾಪಿಸಿಕೊಳುತ ಅಂಗಸಾಧನೆ, ವಾಯುವಿಹಾರ ಸ್ನಾನ ಪಾನಗಳಿತ್ಯಾದಿ ವಿಧಿಗಳನ್ನು ಪೂರಯಿಸಿದ ಮನ್ರೋ ಸಾಹೇಬನು ಮುಂದಕ ಯೇನು ಮಾಡಿದನೆಂದರೆ ಅದನ್ನೇ ಮಾಡಿದನೆಂಬಲ್ಲಿಗೆ ಸಿವಸಂಕರ ಮಾದೇವಾ....

ಅತ್ತ ವೆಲ್ದುರ್ತಿ ಮಂಡಲದ ಸುಡುಗಾಡು ತನ್ನ ಸುತ್ತಮುತ್ತಲಿದ್ದ ಮುವ್ವತ್ತು ಮೂರುಗಳನ್ನು ತನ್ನ ತೆಕ್ಕೆಗೆ ತಗೊಂಡು ಯೇಸೋ ಕಾಲವಾಗಿತ್ತು ಸಿವನೇ... ಅಲ್ಲಿ ಯದ್ದಿದ್ದ ಸ್ರೀ ಸ್ರೀ ಚೋರ ಚೋರೇಸ್ವರ ದೇವುಳವು ನರರ ಸಹಸ್ರಸಹಸ್ರಕಣ್ಣುಗಳಿಗೆ ಹಬ್ಬವನ್ನುಂಟು ಮಾಡುತಲಿತ್ತು ಸಿವನೇ.. ಕೊಟ್ಟವರಿಗೆ ಕೋರಭದ್ರಯಿಸುಕೊಂಡವರಿಗ ಯೀರಭದ್ರನಾಗಿತ್ತಾ ದೇವರು.. ಅಲ್ಲಿ ನಡೆಯುತಲಿದ್ದ ದ್ವಾದಶ ಅರ್ಚನೆಗಳೇನು? ಬೆಳ್ಳಿ ಪಲ್ಲಾಕಿಯೊಳಗೆ ಸುಡುಗಾಡಪ್ಪಾವಧೂತರು ಮೆರೆದಾಡುತಲಿದ್ದುದೇನು? ಭವುತಿಕ ತನುವ ತ್ಯಜಿಸುವ ಸಲುವಾಗಿ ಅದೇ ದೇವುಳದೊಳಗೆ ಆಕಾಸ ರಾಮಣ್ಣಾವಧೂತರು ಸಲ್ಲೇಖನಾ ರೊತಾರೂಢರಾಗಿದ್ದುದೇನು? ಅವರು ಜೀವ ಬಿಡುವ ಗ್ರಹಗತಿಗಳ ನಿರೀಕ್ಷೆಯಲ್ಲಿದ್ದ ಭಕುತಾದಿ ಮಂದಿಯೇನು? ಅಗೋಚರ ಸ್ಥಿತಿಯಲ್ಲಿ ಚೋರ ಸಂಬಂಧೀ ಭಾವನೆಗಳು ಅವಧೂತ ಸಂಬಂಧೀ ಭಾವನೆಗಳೊಂದಿಗೆ ವಾದಾಡುತಲಿದ್ದುದೇನು ಸಿವನೇ...

ಅತ್ತ ಪುಣೆಯ ಪ್ರಾಂತದ ಗ್ರಾಮದೊಳಗ ವಸ್ತಿಮಾಡಿದ್ದ ಅಣಿಮಾಂಡ್ಯಮಾಚಾರ್ಯರಿಗೆ ಹಿಂದೆಯೇ ಮನ್ರೋನ ನಿರೂಪ ತಲುಪಿತ್ತಷ್ಟೆ.. ಅವರನ್ನು ಸಾಂಬಾಜಿರಾವು ಪೇಶ್ವೆಯು ಅಗ್ರಹಾರ ಸಮಗ್ರಾಭಿರುದ್ಧಿ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದನಷ್ಟೆ.. ತೊಂಬತ್ತರ ಮ್ಯಾಲಿದ್ದ ಆಚಾರ್ಯರು ತಮ್ಮ ದೇಹಾವಸಾನ ಕದಿರಿಯೊಳಗ ನಡೆಯಬೇಕೆಂದು ವಾರ್ಧಕ್ಯಾರಾಭ್ಯ ಅಂದುಕೊಂಡಿದ್ದರಷ್ಟೆ.. ವಯ್ಕುಂಠದ ಬಾಗಿಲು ತಮ್ಮ ಆಗಮನದ ನಿರೀಕ್ಷೆಯಲ್ಲಿರುವುದೆಂದು ಭಾವಿಸಿ ರಾತಿರೋರಾತಿರಿ ದೋಂಡ್ ಪ್ರದೇಶದ ಅಬ್ದುಲ್ ಅಲಿ ಪಿಂಡಾರಿ ಗುಂಪು ಅವರ ಮೇಲೆ ಮಾರಣಾಂತಿಕ ಹಲ್ಲೆ

ನಡೆಸಿತೆಂಬಲ್ಲಿಗೆ ಸಿವನೇ..

ಅತ್ತ ತಿರುಪತಿಯೊಳಗೆ ತಿಲ್ಲಾನ ತಾಯಕ್ಕ ತನ್ನ ಮಗಳು ಬಸುರಾದಳೋ ಯಿಲ್ಲಮೋ, ಆಗಿದ್ದರೆ ಆಕೆ ಹಡೆದಿರುವಳೋ ಯಿಲ್ಲಮೋ? ಹಡೆದಿದ್ದರೆ ಕೂಸು ಗಂಡೋ ಹೆಣ್ಣೋ ಯಂದು ಯಸನ ಮಾಡುತ್ತಲೇ ಸ್ರೀಯಂಟೇಶ್ವರ ಸ್ವಾಮಿಯ ಪಾದ ಸೇರಿಕೊಂಡು ಬಿಟ್ಟಿದ್ದಳಷ್ಟೆ....

ಅತ್ತ ಅದೇ ಡಣಾಪುರದೊಳಗ ಅದss ನಿರಾತಂಕವಾಗಿ ಜರುಗಿದ್ದಿತು. ವಂದು ರಾತ್ರಿರಸಬಾಳೆಹಣ್ಣು ಸುಲಿದು ಬಾಯೊಳಗಿಟ್ಟಂತೆ ಚಿನ್ನಾಸಾನಿ ತನ್ನ ಗಂಡನನ್ನು ಕೂಡಿದಳು.. ಪಾಡಾತು, ತಿಂಗಳೊಳಗ ಮುಟ್ಟು ನಿಂತಿತು ಪಾಡಾತು, ಆಕೆಯ ಕಿಪ್ಪೊಟ್ಟೆ ಬಿದಿಗೆ ಚಂದ್ರಾಮನಂಗ ಬೆಳಿತಾ ಬೆಳಿತಾ ದುಂಡಗಾಗಿ ಪಾಡಾತು. ಮುಂದೊಂದಿವಸ ಕೂಡ್ಲಿಗಿ ಪಟ್ಟಣದಿಂದ ಬುಗುಡಿ ನೀಲಕಂಠಪ್ಪ ಧರುಮಪತ್ನಿಯ ಸಂಗಡ ಕರಜಿಕಾಯಿ ಬುತ್ತಿ ಮಾಡಿಕೊಂಡು ಬಂದ, ಹುವ್ವು ಮುಡಿಸುವಾಗ ಕಣ್ಣೊಳಗೆ ನೀರು ತಂದುಕೊಂಡ ಚಿನ್ನಾಸಾನಿಗೆ ನೀಲಕಂಠಪ್ಪನ ಪತ್ನಿಯು ನಿನ್ನ ತಾಯಿೂನ ನೆಪ್ಪು ಮಾಡಿಕೊಂಡಿಯೇನು? ಹುಚ್ಚವ್ವಾ ನನ್ನೇ ನಿನ್ನವ್ವ ಅಂತ ತಿಳಕಾ ಯಂದು ಕಣ್ಣೊರೆಸಿದಳು.. ಸೀಮಂತಿನಿ ಕಾರ್ಯ ಮುಗುದಾದ ಮ್ಯಾಲ ಮಗಳನ ಹಡುವಣಿಗೆಗೆ ಕೂಡ್ಲಿಗಿಗೆ ಕರಕೊಂಡೋತೀ ವಂದರು ಬುಗುಡಿ ದಂಪತಿಗಳು, ಅದಕಿದ್ದು ನಾಯಕನು ತಮಗೆ ಸೊಸಿ ಅಂದರು ಯಿೂಕೇನ, ಮಗಳಂದರ ಯಿೂಕೇನ.. ಅದಕ ಬಾಣಂತನನ ಯಿಲ್ಲೇ ಮಾಡುತೇವಿ ಅಂದರು... ಹಿಂಗಾಗಿ ಆಕೆ ಅಲ್ಲೇ ವುಳಕೊಂಡಿದ್ದಳು.

ಕಲಿಯಿೂರ ನಾಯಕನ ಮಲತಾಯಿ ರಂಗಮ್ಮ ಅಂಬುವಾಕಿ ಯೇನಿದ್ದಳು ಆಕೆಯ ಹೊಟ್ಟೆಯಲ್ಲಿ ವಂದೂ ಹುಟ್ಟಿರಲಿಲ್ಲ, ಆಕೆ ತನ್ನ ಸೊಸೆ ಮುದ್ದೆಯನ್ನು ಕಣ್ಣೊಳಗಿನ ಗೊಂಬಿಯಂತೆ ನೋಡಿಕೋತಿದ್ದಳು. ಆಕೆ ಬಗಸಿದ್ದನ್ನೆಲ್ಲ ಮಾಡಿಕೊಡುತಲಿದ್ದಳು, ಚಂದ ಚಂದನೆಯ ಬಟ್ಟೆ ಬರೆ ವುಡಿಸಿ.. ವಡವೆ ವಸ್ತತೊಡಿಸಿ ಕಣ್‌ಪ್ರೀತಿಯನ್ನು ಮೆರೆಯುತಲಿದ್ದಳು. ಯೇನು ಸುಖ ಯಿದ್ದರೆ ತಗೊಂಡು ಯೇನು ಮಾಡುವುದು, ಹಡದ ತಾಯಿ ಯಿಲ್ಲದನ್ನಕ್ಕ.. ತಾಯಕ್ಕ ಹೋಗಿರುವುದು ಮಾಮೂಲು ಜಾಗಕ್ಕಲ್ಲ... ತಿಮ್ಮಪ್ಪ ನೆಲಸಿರುವ ತಿರುಪತಿಗೆ.. ಅಲ್ಲಿ ಬದುಕಿದರೊಂದು ಪುಣ್ಯ, ಅಲ್ಲೇ ಸತ್ತರಂತೂ ದುಪ್ಪಟ್ಟು ಪುಣ್ಯ. ಆದ್ದರಿಂದ ಯಸನ ಮಾಡುವುದಾಗಲೀ, ಕಣ್ಣೊಳಗ ನೀರು ತಂದುಕೊಳ್ಳುವುದಾಗಲಿ ಥರವಲ್ಲ.. ಹಿರೀಕರ ಯಿಂಥ ಬುದ್ದಿವಾದವನ್ನು ಕೇಳಿಸಿಕೊಳ್ಳುತ್ತಲೇ ಚಿನ್ನಾಸಾನಿಯು

ನವಮಾಸಗಳನು ಹಿಂದಕ್ಕೆ ದೂಡಿ ಅದರ ಮ್ಯಾಲ ವಂಭತ್ತನೇ ದಿವಸಕ್ಕೆ ಕಾಲಿರಿಸಿದ್ದಳು...

ತನ್ನುದರದೊಳಗ ಕೂಸು ಚಿಣಿದಾಂಡಿನಾಟ ಆಡುತ್ತಿರುವಂತೆ, ಕೇಕೆ ಹಾಕುತ್ತಿರುವಂತೆ, ಕುಣಿದು ಕುಪ್ಪಳಿ ಸುತ್ತಿರುವಂತೆ, ಯವ್ವಾಯಂದು ಕೂಗುತ್ತಿರುವಂತೆ.. ದ್ವಾರದ ಬಾಗಿಲನ್ನು ಧಡಾರೆಂದು ಬಡಿಯುತ್ತಿರುವಂತೆ ಭಾಸವಾಗಲಿಕ ಹತ್ತಿತು.. ಜಲ ಜಲಾಂತ ಬೆವತಳು.. ಚಿಟಾರೆಂದು ಚೀರಿದಳು, ಮಗ್ಗುಲು ಮಲಗಿದ್ದ ಗಂಡ ಕಲಿಯೊರನಾಯಕ ಯಚ್ಚರಾದ.. ಅಕ್ಕಪಕ್ಕದ ಖೋಲಿಗಳಲ್ಲಿ ಮಲಗಿದ್ದ ಅವರಿವರು ಯಚ್ಚರಗೊಂಡು ಮೋಡೋಡಿ ಬಂದರು... ಯೇನಾತವ್ವಾ.. ಯೇನಾರ ಕೆಟ್ಟ ಗಣಸು ಗಿಣಸು ಕಂಡೇ ನ್ತಾಯಿ ಅಂತ ಯಿಚಾರಿಸಿದರು. ರೇಸಿಮೆ ನುಣುಪಿನ ವಸ್ತರದಿಂದ ಆಕೆಯ ಮುಖದ ಬೆವರೊರೆಸಿದರು, ನವುಲುಗರಿ ಬೀಸಣಿಕೆಯಿಂದ ಗಾಳಿ ಹಾಕಿದರು.. ಥಾಲಿಯೊಳಗಿದ್ದ ಪಂಚೋದಕವನ ಕುಡಿಸಿದರು.

ಆದರೆ ಮತ್ತೆ ಕಿಪ್ಪೊಟ್ಟೆ ನುಲಿಯಲಕ ಹತ್ತಿತು...

ಆಕೇನ ಬ್ಯಾನೆ ತಿಂಬಲಕೆಂದು ಸೇರಿಸಿದ್ದ ಪ್ರಸೊತಿ ಗ್ರುಹಮೋ....

ಮುಟ್ಟಿದರ ಮುನುಸುಕೊಳ್ಳುವಂತಿದ್ದ ಅರಮನೆಯೊಟ್ಟಿಗೆ ಹುಟ್ಟಿರುವಂಥಾ ಪ್ರಸೂತಿ ಗ್ರುಹವು.. ನೂರಾರು ಬಾಣಂತನಗಳ ಕಂಡಂಥ ಪ್ರಸೂತಿ ಗ್ರುಹವು.. ಅರಮನೆಯಷ್ಟೇ ತೂಕದ್ದಾಗಿರುವ ಪ್ರಸೂತಿ ಗ್ರುಹವು.. ಯದ್ಧಗಳಕಾಲಕ್ಕೆ ಸತ್ರುಗಳಿಂದ ರಕ್ಷಣೆ ನೀಡುತ್ತಿದ್ದಂಥೆ ಪ್ರಸೂತಿ ಗ್ರುಹವು.. ತಾನೇ ವಂದು ತಾಯಿಯಾಗಿ ಪೊರೆಯುತಲಿದ್ದಂಥ ಪ್ರಸೂತಿ ಗ್ರುಹವು.. ಜೀವಲೀಲಾ ಯಿನೋದ ಕ್ಷೇತ್ರವಾಗಿರುವಂಥಾ ಪ್ರಸೂತಿ ಗ್ರುಹವು.. ಅಲ್ಲಿಂದ ಹೊಂಟ ಚಿನ್ನಾಸಾನಿಯ ಬಾಣಂತನದ ಬ್ಯಾನೆಯು ತುಂಬಿ ತುಳುಕಾಡುತಾ ಸುತ್ತನ್ನಾಕಡೇಕ ಚೆಲ್ಲಾಡ ತೊಡಗಿತ್ತಷ್ಟೆ.. ಆ ಪ್ರಾಂತದ ಪ್ರಜೆಗಳು ವಾರ ದಿನ ಮಾನದಿಂದ ಕಣ್ರೆಪ್ಪೆಗಳನು ವಂದಕ್ಕೊಂದು ಅಂಟಿಸಿರಲಿಲ್ಲವಷ್ಟೆ.. ವಂದು ತುತ್ತು ಬಾನ ಮುಟ್ಟಿರಲಿಲ್ಲವಷ್ಟೆ.. ವಂದು ಗುಟುಕು ನೀರನು ಮುಟ್ಟಿರಲಿಲ್ಲವಷ್ಟೆ. ಯಾರೊಬ್ಬರೂ ಬದುಕುವದಕನಕ್ಕೆ ಹೋಗಿರಲಿಲ್ಲವಷ್ಟೆ....

ಬಾಣಂತಿ ಸಲುವಾಗಿ ಪ್ರಾಣ ಮುಡುಪಿಟ್ಟಿದ್ದವರ ಸಂಖ್ಯೆ ಮೂರು ಸಾವಿರಕ್ಕೆ ತಲುಪಿತ್ತು.. ತಮ್ಮ ತಮ್ಮ ಪಂಚೇಂದ್ರಿಯಗಳನು ಕುಯ್ದು ತಮ ತಮ್ಮ ಮಂದೇವರುಗಳನೆತ್ತಿಗೆ ಮುಡುಸುವುದಾಗಿ ಹರಕೆ ಹೊತ್ತಿದ್ದವರ ಸಂಖೆ

ಆರು ಸಾವಿರಕ್ಕೆ ತಲುಪಿತ್ತು.. ದಿಂಡುರುಳುವಿಕೆ ಸೇವೆ, ಪಾದಯಾತ್ರೆಸೇವೆ.. ಹೆಳವರಾಗುತೇವೆ ಅನಕೊಂಡಿದ್ದವರಂತೂ ಅಸಂಖ್ಯಾತ... ಸವಾರಿ ಬಂಡೀಲಿ ಬಂದಿಳಿದಿದ್ದ ಜಗಲೂರೆವ್ವ ಬಸುರಿಯ ಮಾಯಾವಿ ದ್ವಾರಕ್ಕ ಕಯ್ಯಿಟ್ಟು ಕುಂತು ಯರಡು ಮೂರು ದಿವಸಗಳೇ ಜರುಗಿದ್ದವು.. ವಾತ ಪಿತ್ಥ ಕಫ ನಾಡಿ ತಗ್ನರಾದ ವೈಯ್ದರುಗಳು ಬಾಣಂತಿಯ ನೋವಿನಾಲಾಪನೆಗಳಿಗನುಸಾರವಾಗಿ ಕಷಾಯ ತಯಾರು ಮಾಡುತ ಗಳಿಗ್ಗಳಿಗ್ಗೆವ್ಮೊಮ್ಮೆ ನಿಟ್ಟುಸಿರು ಬಿಡಲಾರಂಭಿಸಿ ನಾಲಕಯ್ದುದಿವಸಗಳು ಜರುಗಿದ್ದವು.. ಅತ್ತೆ ಮಾವಂದಿರ ದುಕ್ಕ ಮುಗುಲಿಗೆ ಮುಟ್ಟಿತ್ತು, ಗಂಡ ಕಲಿಯಿಓರ ನಾಯಕನಂತೂ ದುಕ್ಕವ ಮಾಡೀ ಮಾಡೀ ನೆಲದ ಪಾಲಾಗಿ ಬಿಟ್ಟಿದ್ದನು. ಸೂಲಗಿತ್ತೇರು ಆಗೊಮ್ಮೆ ಯಿಓಗೊಮ್ಮೆ ಹೊರಗಡೀಕೆ ಬಂದು ಬೆಮರೊರೆಸಿಕೊಳುತ “ಮುಂದಕ ಬರೋದು ಸರ್‍ರಂತ ಹಿಂದಕ ಜರುಗೋದು ಮಾಡಲಾಕ ಹತ್ತಯ್ತೆ ಕೂಸು.. ಕಾಲು ಕೊಡೂ ಅಂದರ ತೆಲೀಯ ಕೊಡುತಯ್ತೆ.. ತೆಲೀಯಕೊಡೂ ಅಂದರ ಕಾಲನು ಕೊಡಲಾಕ ಹತ್ತಯ್ತೆ ಕೂಸು.. ದ್ವಾರಕ್ಕೆ ಬಂದು ಅಡಡ್ಡ ಮಲಗತಯ್ತೆ ಕೂಸು... ಅಳ್ಳೋಗ ಬ್ಯಾಡೂರಿ.. ದ್ಯಾವರ ಮ್ಯಾಲ ಭಾರನ ಹಾಕಿ, ಚಿಂತೆ ಮಾಡದಿರಿ”ಯಂದು ದಯರ್‍ಯ ತುಂಬೂತ ವಳಗೆ ಹೋಗುತಯ್ದಾರೆ....

ವಬ್ಬೊಬ್ಬರು ತಮ ತಮ್ಮ ಪೂರುವಾಪರಗಳನ ಬೆದಕಿ ನೋಡುತಿರುವ ಕಾಲಕ್ಕೆ.. ಆಗಲೇ ಬಂದಿಳಿದಿದ್ದ ಮಂತರವಾದಿಗಳು ಅತಿಮಾನುಸ ಸಗುತಿಗಳಿಗೆ ದಿಗ್ಭಂದನ ಹಾಕುತಿರುವ ಕಾಲಕ್ಕೆ.. ಮ್ಯಾಸ ಬ್ಯಾಡರು ತಮ ಕುಲದಯವಂಗಳಾದ ಚಿತ್ತಯ್ಯ, ಪಾಲಯ್ಯ, ಗಾದಿರಯ್ಯಂಗಳನು ಸ್ತುತಿಸುತಿರುವ ಕಾಲಕ್ಕೆ.. ಕಾಡುಗೊಲ್ಲರು ತಮ ತಮ್ಮ ಕುಲದಯವಂಗಳಾದ ಯತ್ತಯ್ಯ, ಜಂಜಯ್ಯಗಳನು ನೆನೆಯುತ್ತಿರುವ ಕಾಲಕ್ಕೆ.. ಕೋಮಟಿಗ ಮಂದಿ ತಿರುಪತಿಯ ಯಂಟರಮಣ ಸೋಮಿಯ ಜಪ ಮಾಡುತಿರುವ ಕಾಲಕ್ಕೆ, ತಮ ತಮ್ಮ ಬೇರುಗಳನುಪಸಮ್ಮರಿಸಿಕೊಂಡು ಗಿಡಮರಗಳು ಬಾಡುತಿರುವ ಕಾಲಕ್ಕೆ.. ನಾಯಿ ನರಿಗಳು ಮೂಳಿಡುತಿರುವ ಕಾಲಕ್ಕೆ.. ಹೆಜ್ಜೆ ಹೆಜ್ಜೆ ಗೊಂದೊಂದರಂತೆ ಹುಟ್ಟಿಕೊಂಡ ಸುಂಟರಗಾಳಿಗಳು ಅಂಡಲೆಯಲಾರಂಭಿಸಿದ ಕಾಲಕ್ಕೆ.. ಸಂಕಲನ ಯವಕಲನಗಳು ಬದಲಾಗುತಿರುವ ಕಾಲಕ್ಕೆ.. ಆಡುವ ಭಾಷೆ ಯಾಕರಣ ಕಳಕೊಂಡಿರುವ ಕಾಲಕ್ಕೆ.. ಗದ್ಯ ಪದ್ಯವಾದ ಕಾಲಕ್ಕೆ.. ಪದ್ಯ ಗದ್ಯವಾದ ಕಾಲಕ್ಕೆ... ಅರಮನೆಗೆ ಅರಮನೆಯೇ ನೋವಿನ ಸಾಕಾರ ಮೂರ್ತಿಯಾಗಿರುವ ಕಾಲಕ್ಕೆ...

ಮುಂದಿನದನು ಹೆಂಗ ಹೇಳುವುದಪ್ಪಾ ಸಿವನೆ.. ಹೇಳದೆಯಿರುವುದಾದರೂ ಹೆಂಗೆ? ಪ್ರಸೂತಿ ಗ್ರುಹದ ನವರಂಧ್ರಗಳಿಂದ ಸಣಕಂದಮ್ಮನೊಂದು ಅಮ್ವೋss ಅಮ್ವೊ ಯಂದು ಅಳಲಾರಂಭಿಸಿದ ನಾದಕ್ಕ.. ದ್ಯಾವುರೇ ಬಂಗಾರದಂಥ ಬಾಣಂತೀನ ಕಸಗೊಂಡು ಬಿಟ್ಟೆಯಲ್ಲಾ ಯಂಬ ದುಕ್ಕದ ನಾದವು ಜೊತೆಗೂಡಿ ಪ್ರವಹಿಸಲಾರಂಭಿಸಿದೊಡನೆ....

ಯಿಾ ಘನಘೋರ ಸುದ್ದಿ ದಾವಾನಲದೋಲು ಸುತ್ತನ್ನಾಕಡೇಕ ಹಬ್ಬಿದ್ದಾಗಲೀ, ಸುತಮುತ್ತ ಹತ್ತಿಪ್ಪತ್ತು ಪಾಸಲೆಯೊಳಗಿದ್ದ ಮಂದಿ ದುಕ್ಕದ ನೂರಾರು ನದಿ ಹಳ್ಳ ಹೊಳೆಗಳಂತೆ ಸದರಿ ಪಟ್ಟಣಕ್ಕೆ.. ಹರಕೋತ ಹರಕೋತ ಬಂದಿದ್ದಾಗಲೀ ತಡಾ ಆಗಲಿಲ್ಲ.. ಮಾಮೂಲು ಮಂದಿಯೊಂದೇ ಅಲ್ಲದೆ ಕುರುಗೋಡು, ಬಲಕುಂದಿ, ಗುಡೇಕೋಟೆ ಯಿವೇ ಮೊದಲಾದ ಛಪ್ಪನ್ನಾರು ದೇಸಯಿದೇಸಗಳೊಳಗ ಸುಖ ಸಂಕಥಾ ಯಿನೋದದಿಂದ ತಮ ತಮ್ಮ ಸಮುಸ್ಥಾನಗಳನು ಪರಿಪಾಲಿಸುತಲಿದ್ದ ರಾಜ ಮಾರಾಜರುಗಳೆಲ್ಲ ತಮ ತಮ್ಮ ದೋತರಗಳನು ಸರಿಪಡಿಸಿಕೊಳ್ಳುತಲೂ.. ಯಂಜಲುಗಯ್ಯಿಗಳನು ವುತ್ತರೀಯಗಳಿಗೆ ವರೆಸಿಕೊಳ್ಳುತಲೂ.. ತಮ ತಮ್ಮ ಬಾಯಿಗಳೊಳಗಿನ ತೊಂಬಲ ದುಂಡೆಗಳನು ವಂದೊಂದು ಫರಲಾಂಗಿ ಗೊಂದೊಂದರಂತೆ ವುಗುಳುತಲೂ.. ಹಾದಿಗಳನು ಸವೆಸುತಲೂ ಹ್ಹಾ.. ಹ್ಹಾ.. ಅನುವಷ್ಟರಲ್ಲಿ ಸದರಿ ಪಟ್ಟಣವನ್ನು ಸೇರಿಕೊಂಡು ಬಿಟ್ಟರು ನನ್ನಯ್ಯಾ.. ತಮ ತಮ್ಮ ರುದಯದ ಜಗುಲಿಯ ಮ್ಯಾಲ ಚಿನ್ನಾಸಾನಿಯ ರೂಪಾರವಿಂದವನು ಯಿಟ್ಟು ತ್ರಿಕಾಲ ಪೂಜೆ ಮಾಡುತಲಿದ್ದ ಭಗ್ನ ಪ್ರೇಮಿಗಳೆಲ್ಲ ಸರಯೇಗದಲ್ಲಿ ಬಂದು ಸೇರಿಕೊಂಡ ಪರಿಣಾಮವಾಗಿ ರೆಪ್ಪೆ ಮಿಸುಕಾಡಿಸುವುದರೊಳಗ ಡಣಾಪುರ ಪಟ್ಟಣಕ ಪಟ್ಟಣವು 'ದುಕ್ಕದ ಬಹುದೊಡ್ಡ ಯಿಸುವ ಯಿದ್ಯಾಲಯವೇ' ಆಗಿಬಿಟ್ಟಿತು ಸಿವನೇ...

ರೊಟ್ಟಿ ಸುಡುವ ಕೊಣಗೆಯ್ಯೋಟಗಲದ ಡಣಾಪುರ ಲಕ್ಕುಸ ಲಕ್ಕುಸ ಮಂದಿಯು ಕಾಲೇಟಿಗೆ ತತ್ತರಿಸಲಾರಂಭಿಸಿತು. ಕಾಲ್ತುಳಿತಕ್ಕೆ ಸಿಕ್ಕು ಸಾಯುಲಾರಂಭಿಸಿದವರೆಷ್ಟೋ.. ಬತೇರಿಗಳಿಂದುರುಳಿ ಸಾಯಲಾರಂಭಿಸಿದವರೆಷ್ಟೋ.. ಸಾಯಲಕ ತಡಕಾಡಲಾರಂಭಿಸಿದವರೆಷ್ಟೋ.. ಯಿನು ಯಿನ್ನೂ ಅಳಲಕ... ಅತು ಅತ್ತುದುಕ್ಕ ಮಾಡಲಕ ತ್ರಾಣಕೊಡು ಪರಮಾತುಮಾ ಯಂದು ಬೇಡಿಕೊಳ್ಳಲಾರಂಭಿಸಿದವರೆಷ್ಟೋ.. ಸಮಸ್ತ ಜಲಧಿಯನ್ನು ತಮ ಕಣ್ಣೊಳಗ ತುಂಬು ಸಿವನೇ, ತಮ್ಮೆದೆಯೊಳಗಿನ ದುಕ್ಕದ

ಬಣವೆಗಳನು ಸುಟು ಸುಟ್ಟು ಭಸುಮ ಮಾಡು ಸಿವನೇ.. ತಾಸೊಪ್ಪತ್ತೊಳಗ ನೂರು ವರುಷದ ಅಳುವನ್ನು ತಾವು ಅತ್ತೇ ಬಿಡಬೇಕೆಂದು ನಿರ್ಧಾರ ಮಾಡಿದವರೆಷ್ಟೋ....

ಕಣ್ಣೀರಿನಿಂದ ತೊಯ್ದು ಪಟ್ಟಣದ ನೆಲವೆಲ್ಲ ವಜ್ಜುವಜ್ಜಲಾತು.. ಯಲ್ಲಿ ನೋಡಿದರೂ ಕಚಕ್ ಪಿಚಕ್.. ಯಲ್ಲಿ ಯಿವೀಸು, ಅವೀಸು ಮಂದಿ ಸೇರಿಕೊಂಡು ತಮ್ಮ ಸೊಸೆ ಮುದ್ದೆಯ ಕಳೇಬರವನ್ನು ಹರಕೊಂಡು ತಿಂದು ಬಿಡುವರೋ ಯಂದು ಅರಮನೆಗೆ ಅರಮನೆಯೇ ಹೆದರಿಕೊಂತು.. ಗೋಣಿಯ ನೇತ್ರುತ್ವದಲ್ಲಿ ಗರಡಿಯ ಸಾವುರಾರು ಹುಡುರು ಸೊಂಯಂ ಸಯ್ನಿಕರೋಪಾದಿಯಲ್ಲಿ ಅರಮನೆಗೆ ಕಾವಲು ನಿಂತದ್ದು ಯಾವ ಜಲುಮದ ರುಣಮೋ....

ಯಪ್ಪಾ.. ನನ ಹೆಂಡತಿ ಸತ್ತಿಲ್ಲ.. ಸತ್ತವಳಂಗ ನಾಟಕ ಆಡುತಲಯ್ದಾಳ.. ಆಕೆ ಮಾತನ ನಂಬ ಬ್ಯಾಡೂರಿ.. ಯಂದು ಅಯ್ಲುಗೇಡಿ ಹಾಂಗ ಆಡುತಲಿದ್ದ ಕಲಿಯಿರ ನಾಯಕನಿಗೇನಾರ ಆದರ ಡಣಾಪುರ ಸಮುಸ್ಥಾನವನ ಕಾಪಾಡುವರು ಯಾರು ಸಿವನೇ?... ಕಳೇಬರಕ ಜಳಕ ಮಾಡಿಸುವಾಗ ಬಯ್ಯಮ್ಮ, ಬತ್ತಲಮ್ಮ ಮೊದಲಾದೋರು ಹುಚ್ಚು ಹಿಡಿದು ಪರ ಪರ ತಲೆಕೆದರಿಕೊಳ್ಳುತ್ತ ಹೊಂಟೋಗಿ ಬಿಟ್ಟರು.. ಕಳೇಬರಕ್ಕ ಪಟ್ಟೆ ಪಿತಾಂಬ ಸೀರೆ ವುಡಿಸುವಾಗ.. ರಂಗವ್ವ, ರಿಂದವ್ವ ಮರವ್ವರೇ ಮೊದಲಾದೋರು ಅಯ್ಯೋ ಯಂದು ಚೀರಿ ಕೆಳಗಣ್ಣು ಮೇಲುಗಣ್ಣು ಮಾಡುತ ನೆಲಕ್ಕೊರಗಿ ಬಿಟ್ಟರು.. ಯಿಲಕಲ್ಲಿನ ಜರೆ ಅಂಚಿನ ಕುಬುಸ ತೊಡಿಸುವಾಗ.. ಚುಚೀಲ, ರುಕ್ಕುಮಿಣಿ, ಚಿಂತಾಮಣಿಯರೇ ಮೊದಲಾದೋರು ಯದೆಯದೆ ಬಡಕೊಳುತ ವುರುಳಾಡ ತೊಡಗಿದರು.. ವಂಕಿ, ಮುರುವು, ವಡ್ಯಾಣ ಯಿವೇ ಮೊದಲಾದ ಆಭರಣ ತೊಡಿಸುವಾಗ.. ತಲೆಗೂದಲು ಬಾಚಿ ತುರುಬುಕಟ್ಟಿ ನಾಗರ ಮುಡಿಸುವಾಗ.. ಕಳೇಬರವನು ಮುತ್ತಿನ ಮಂಟಪದೊಳಗ ಕುಂಡರಿಸುವಾಗ, ಪೂಜೆ ಮಾಡುವಾಗ, ಆರತಿ ಬೆಳಗುವಾಗ.. ಯತ್ತುವಾಗ.. ತಲೆಕೆಟ್ಟು ಕಲ್ಲಾವುಲ್ಲಿಗೊಂಡವರು ವಬ್ಬರಾ.. ಯಿಬ್ಬರಾ ಸಿವನೇ...

ಯಾಲಪಿ, ಸಿರುವಾರ, ಕಗ್ಗಲ್ಲು, ಗೋಟೂರು ಕಡೇಲಿಂದ ಬೊಮ್ಮಕ್ಕ, ಪಾತವ್ವ, ಗಾದಿರವ್ವ, ಡೆಮರುಗವ್ವರು ತಲಾ ಹದಿನಯ್ದದಿನಯ್ದು ಮಂದಿ ನುರಿತ ಕಲಾವಿದೆಯರ ತಂಡದೊಡನೆ ಸೊಯಂ ಪ್ರೇರಿ ತರಾಗಿ ಹಾಡ್ಯಾಡಿ ಅಳಲಕೆಂದೇ ಬಂದದ್ದು ಚಿನ್ನಾಸಾನಿಯ ಯೇಳೇಳು ಜಲುಮಗಳ ಪುಣ್ಯವೇ ಸರಿ. ಯಿವರು

ಅಷ್ಟು ಸುಲಭವಾಗಿ ಯಾರು ಸತ್ತರೂ ಸಲೀಸಾಗಿ ಹೋಗುವ ಪಯ್ಕಿ ಯಲ್ಲ.. ಅಯ್ದು ಕೊಡುವಲ್ಲಿ ಹತ್ತು ಕೊಡುತೇವಿ ಅನ್ನ ಬೇಕು.. ಸೀರೆ ಕುಬುಸ ಕೊಡ ತೇವಿ, ಚಾಚು ಕೊಡತೇವಿ, ಬರುವುದಕ ಹೋಗುದುಕ ಸಾರೋಟು ಬಂಡೀ ಯವಸ್ಥ ಮಾಡತೇವಿ ಯಂದೆಲ್ಲ ಅಂಗ ಲಾಚಬೇಕು.. ಯೊಟೆಲ್ಲಾ ಮಾಡಿದರೂ ಇವರು ತಮ್ಮೆದೆಯ ಗ್ನಾನ ಭಂಡಾರವನ್ನು ಸೂರೆ ಮಾಡುವುದು ಅಷ್ಟಕ್ಕಷ್ಟೇಯಾ? ಹಾಡಿ ಹಾಡಿ ಅಳುವುದೆಂದರೆ ಸಾಮಾನ್ಯವಾಗಿ ಅಳುವವರಿಗೆ ಸತ್ತವರ ಬಗ್ಗೆ ಸಂಪೂರ್ಣ ಮಾಹಿತಿಯಿರಬೇಕು.. ಹೆಣದ ಮ್ಯಾಲೂ ತಮಗ ಅಪಾರ ಗವುರವ ಯಿರಬೇಕು.. ಆಗಷ್ಟೆ ತಮಗ ತಮ್ಮ ಗಂಟಲ ಸಿರೀನ ಸೂರೆ ಮಾಡಲಕಾದೀತು.. ಯಿದು ಯಿವರ ಕುಲ ಕಸುಬು ಬೇರೆ? ತಲತಲಮಾರಿನಿಂದ ಬಂದಿರುವಂಥಾದ್ದು. ಇವರು ಹಾಡ್ಯಾಡಿ ಅಳಲಕ ಸುರುವು ಮಾಡಿದರಂದರ.. ಯಿವರ ಅಳುವಿನೊಳಗ ಯಾವುದು ವುತ್ತರಾದಿಯೋ? ಯಾವುದು ದಕ್ಷಿಣಾದಿಯೋ? ವಂದೇ ಮಾತಲಿ ಹೇಳಲಕಂದರ ಸಂಗೀತ ಸಾಸ್ತರ ದೊಳಗ ಯಷ್ಟು ರಾಗಗಳಿರುವವೋ, ಅವೀಸು ರಾಗಗಳ ಕಲಬೆರಕೆಯಿಂದ ಅಳುವಿನೊಳಗ ಹೊಸ ರಾಗವೇ ಸ್ರುಷ್ಟಿಗೊಂಡು ಬಿಡುವುದು. ಯಿವರು ಅಳುವುದನು ಕೇಳಿ ಆನಂದಿಸುವ ಸಲುವಾಗಿ ಕೆಲವರು ಸತ್ತಂತೆ ನಟನೆ ಮಾಡಿರುವುದರ ವುದಾಹರಣೆ ಗಳುಂಟು. ನಟಿಸುತ್ತಲೇ ಸತ್ತು ಹೋಗಿರುವ ವುದಾಹರಣೆಗಳೂ ವುಂಟು. ಕುಂತು ನಿಂತಂಥ ಸಭೆ ತಲೆ ದೂಗುವಾಂಗ ಅಳುವ ತಮ್ಮನ್ನು ತಾವು ಕಲಾವಿದೆಯರೆಂದು ಸೊಯಂ ಘೋಷಿಸಿಕೊಂಡಿರುವುದಲ್ಲದೆ ತುಪ್ಪಾರವಳ್ಳಿಯ ತುಪ್ಪೀರವ್ವನ ಅಧ್ಯಕ್ಷತೆಯಲ್ಲಿ ತಮ್ಮದೇ ಆದ ಸಂಘವನ್ನು ಸ್ಥಾಪಿಸಿಕೊಂಡಿರುವುದೂ ವುಂಟು.. ಅದಕ್ಕೆ ಕುಂಪಣಿ ಸರಕಾರದಿಂದ ಮಾನ್ಯತೆಯೂ ಲಭಿ ಸಿರುವುದು. ತಮ್ಮ ಸಂಘದ ಆಸ್ರಯ ದಲ್ಲಿ ಗುರುಕುಲ ಮಾದರಿಯ ಶಾಲೆಯೊಂದನ್ನು ತೆರೆದು ಅಳುವ ಕಲೆಯನ್ನು ಕಾಪಾಡುವ ಸದುದ್ದೇಶಮೂಯಿೂ ಯಿೂರವನಿತೆಯರಿಗಿರುವುದು. ಅತ್ತೂ ಅತ್ತೂ ಜೀವಚ್ಛವವಾಗಿರುವ ಅಶಕ್ತ ಕಲಾವಿದೆಯರಿಗೆ ಮಾಸಾಶನ ನೀಡಬೇಕೆಂಬ ಮನವಿಯನ್ನೂ ಕಲೆಕ್ಟರನಾದ ಮನ್ರೋ ಸಾಹೇಬನಿಗೆ ಸಲ್ಲಿಸಲಾಗಿದೆ. ಇಂಥ ಹಿನ್ನೆಲೆವುಳ್ಳ ಕಲಾವಿದೆಯರು ಹೇಳಿ ಕಳುವದಿದ್ದರೂ ಹೊತ್ತಿಗೆ ಸರಿಯಾಗಿ ಬಂದವರೆಂದ ಮ್ಯಾಲ ಚಿನ್ನಾಸಾನಿಯ ಪುಣ್ಯೇವು ಭಾಗ್ಯೇವು ಅಲ್ಲದ ಮತ್ತೇನು?

ಯಲಡಕೆ ಕರ್ಚಿಗೆ ಕೇಳಲಿಲ್ಲ.. ಅದು ಬೇಕು.. ಯಿದು ಬೇಕು.. ಅನ್ನಲಿಲ್ಲ.

ಬಂದ ಬಂದವರೆ ಸಾಲಂಕ್ರುತ ಕಳೇಬರದೆದುರು ಅಳುವ ಸುಸ್ರಾವ್ಯ ಕಾರ್‍ಯೇವನ್ನು ತಾರಕ ಸೊರದಲ್ಲಿ ಆರಂಭಿಸದಿದ್ದಲ್ಲಿ ಯಿನ್ನೆಷ್ಟು ಅನಾಹುತಗಳು ಸಂಭವಿಸುತ್ತಿದ್ದವೋ? ಅವರ ಅಳುವಿನ ಕರೆಗೆ ಓಗೊಟ್ಟು ಸರಸ್ಸೊತಿಯ ನಾನಾ ರೂಪಗಳು ನಾಮು ತಾಮುಂದೂಂತ ಬಂದು ಅವರೆಲ್ಲರ ನಾಲಗೆಗಳ ಮ್ಯಾಲ ಯಿಂಬು ಪಡಕೊಂಡ ಮ್ಯಾಲಂತೂ ಡಣಾಪುರದ ಚಹರೆಯೇ ಬದಲಾಗಿ ಬಿಟ್ಟಿತು. ದುಕ್ಕದ ನಾದದ ನದಿಯೇ ಬೊರ್ಗರೆಯ ಲಾರಂಭಿಸಿತು. ಅದು ಅಳುಮೋ? ಅಳುವಿನ ರೂಪದ ಸಂಕೀರ್ತನಮೋ? ಅವರ ಅಳು ಯಷ್ಟು ಪವಾಡ ಸದ್ರುಸವಾಗಿತ್ತೆಂದರೆ ಚಿನ್ನಾಸಾನಿ ಕಳೇಬರದ ಮುಖಾರವಿಂದ ಅಪೂರ್ವ ಲಾವಣ್ಯದಿಂದ  ಕಂಗೊಳಿಸ ತೊಡಗಿತು.. ಬಾಯಿಗೆ ಅರಿವೇನ ಯಿಟುಕೊಂಡು ತದೇಕ ಚಿತ್ತದಿಂದ ನೋಡುತಲಿದ್ದ ಮಂದಿಗೆ ಕಳೇ ಬರದ ಕಣ್ಣಾಲಿಗಳು ಮಿಸುಕಾಡುತ್ತಿರುವಂತೆ ಭಾಸವಾಗಲಾರಂಭಿಸಿತು.. ಕಳೇಬರವು ಮಯ್ಯಿ, ಕಯ್ಯಿ ತುಂಬಿಕೊಂಡಂತೆಯೂ ಕೆಂದುಟಿಗಳ ನಡುವೆ ಮಂದಹಾಸ ನೆಲೆಗೊಂಡಿರುವಂತೆಯೂ ಭಾಸವಾಗಲು ಅನೇಕರು ನಮ್ಮವ್ವಯದ್ದು ಬರುತಾಳನ್ನಂಗದಾಳಲ್ಲ ಯಂದು ಬೋರಾಡಿ  ಅಳತೊಡಗಿದರು ಸಿವನೇ.. "ನಗಬೇ ನಮ್ಮವ್ವನೇ.. ನಾಕೇ ನಾಕು ಮಾತಾಡಬೇ ನಮ್ಮವ್ವನೇ..." ಯಂದು ಅಂಗಲಾಚತೊಡಗಿದರು ಸಿವನೇ...

ಅವರು ಹಾಡ್ಯಾಡಿಕೊಂಡು ಅಳುತಲಿದ್ದುದು ಯಷ್ಟು ಪರಿಣಾಮಕಾರಿಯಾಗಿತ್ತೆಂದರೆ.. ಚಂದ್ರಗಿರಿ ಸೀಮೇಲಿ ಅಂಡಲೆಯುತಲಿದ್ದ ತಿಲ್ಲಾನ ತಾಯಕ್ಕಳ ಆತುಮವು ಮನೋವೇಗದಲ್ಲಿ ಡಣಾಪುರಕ್ಕೆ ಬಂದು ತನ್ನಷ್ಟೆ ವಯೋಮಾನದ ವಡಕವ್ವನ ಸರೀರದೊಳಗೆ ಆಶ್ರಯಪಡಕೊಂಡಳೋ ಪಡಕೊಂಡಳು. ಸಿವನೇ.. ಹಿಂಗss ಡಣಾಪುರ ಸಾಮ್ರಾಜ್ಯವನ್ನಾಳಿದ್ದಂಥ ಪೂರುವಿಕರ ಆತುಮಗಳು ಯಲ್ಲಲ್ಲಿದ್ದವೋ ಅಲ್ಲಿಂದಲೆ ಬಂದು ಅವರಿವರ ಸರೀರದೊಳಗೆ ವಂದರ ಹಿಂದ ವಂದರಂತೆ ಕಾಣಿಸಿಕೊಂಡ ಪರಿಣಾಮವಾಗಿ ಸಿವಸಂಕರ ಮಾದೇವಾ.. ವರ್ತಮಾನದೊಳಗೆ ಭೂತಕಾಲವೋ.. ಭೂತಕಾಲದೊಳಗೆss ವರ್ತಮಾನಮೋ.. ಯಾದು ಹೊಸದೋ.. ಯಾದು ಹಳೇದೋ.. ಯಲ್ಲಾ ಅಯೋಮಯವಾಯಿತು ಸಿವನೇ...

ಬಂದ ಡೊಳ್ಳುಗಳೆಷ್ಟೋ.. ಬಂದ ಹಲಗೆ ತಮ್ಮಟೆಗಳೆಷ್ಟೋ.. ಬಂದ ಸಮಾಳ ನಂದಿ ಕೋಲು ಗಳೆಷ್ಟೋ..ಸಿಡಿಯುಲಾರಂಭಿಸಿದ ಮದ್ದು

ಮಾತಾಪುಗಳೆಷ್ಟೋ..?

ಹೆಣ ಯತ್ತ ಬ್ಯಾಡಿರಿ.. ಅವರು ಬರೋರಿದ್ದಾರೆ. ಹೆಣ ಯತ್ತ ಬ್ಯಾಡಿರಿ ಯಿವರು ಬರೋರಿದ್ದಾರೆ. ಮಣ್ಣು ಕೊಡುವ ಭಾಗ್ಯ ಯಾರಿಗುಂಟು ಯಾರಿಗಿಲ್ಲ.. ಅಂಬುದಕ್ಕೆ ಪುರಾವೆಯಾಗಿ ಹೆಣವನ್ನು ಯದುರಿಗೆ ಕಣ್ದಣಿಯೆ ಯಿಟುಕೊಂಡು ವಂದಿವಸಾತು.. ಯಲ್ಡು ದಿವಸಾತು.. ಬರೋರು ಬರುತಲೇ ಅಯ್ದಾರೆ.... ಯಿನ್ನೂ ಬರೋರು ಮಸ್ತು ಮಂದಿ ಅಯ್ದಾರೆ.. ಅವರೆಲ್ಲ ಬರೋದು ಬ್ಯಾಡುವಾ.. ಚಿನ್ನಾಸಾನೆಮ್ಮನ ಅಂತಿಮ ದರುಸನ ಪಡಕೊಳ್ಳೋದು ಬ್ಯಾಡುವಾ.. ಹಿಂಗs ವಂದು ಮಾತಾss ವಂದು ಕಥಿಯಾ ಸಿವನೇss...

ತಮ ತಮ್ಮ ಮೂಗತುರಿಕೇನ ತಮಣಿ ಮಾಡಲಕಂತ ಕೆಲವು ಮಂದಿ ಕಳೇಬರದ ಸನೀಕ ಅಂದರ ಸನೀಕ ಹೋಗುವುದು ಮೂಸುವುದು ಮಾಡುತಲಿದ್ದರು.. ಮೊದಲೇ ಅವು ದಡ್ಡಖೋಡಿ ಮಂದಿ.. ವಾಸಣೆ ಬರುವುದಾದರೂ ಹೆಂಗೆ? ಅದೇನು ನಮನಿಮ್ಮಂಗ ಸಾಮಾನ್ಯ ಹೆಣುಮಗಳಾ? ಸಾಕ್ಷಾತ್ ಚಿನ್ನಾಸಾನೀದು.. ಯಂಬ ಅಲವುಕಿಕ ಸಂಗತಿ ಆ ಲವುಕಿಕ ಮಂದಿಗೆ ಹೆಂಗ ಅರ್ಥಾದೀತು?

ವಂದಿವಸಾತು ಯಲ್ಡುದಿವಸಾತು.. ಬರೋರೆಲ್ಲ ಬರುತಲೇ ಯಿದ್ದರು. ನಿನ್ನೆ ದಿವಸವೇ ತಟಾಯ ಬೇಕಿದ್ದ ಹೆನ್ರಿಸಾಹೇಬನು ಮದ್ಯಾಣವೇ ತಿಮಲಾಪುರ ದಾಟ ಚಿಲಕನಹಟ್ಟಿ ತಲುಪನಿರುವನಂತೆ. ಚಂಜಿ ಹೊತ್ತಿಗೆಲ್ಲ ಡಣಾಪುರ ಸೇರಿಕೊಳ್ಳಬಹುದು. ಆತ ಒಂದೇ ಒದು ಹನಿ ನೀರು ಮುಟ್ಟಿಲ್ಲವಂತೆ, ಒಂದಗುಳ ಅನ್ನವನ್ನು ತಿಂದಿಲ್ಲವಂತೆ.. ಅವುದು.. ಹುತಾತುಮಗೊಂಡಂಥ ಅಂಜಿಣಿ ಗಂಟಲೊಳಗಿದ್ದ ಪ್ರೇಮ ಸಂಬಂಧೀ ಭಾವನೆಗಳು ಮೊನ್ನೆ ತಾನೆ ಅವನ ಸರೀರದೊಳಗೆ ಆಸ್ರಯ ಪಡಕೊಂಡು ಕಲ್ಲಾವುಲ್ಲಿ ಸ್ರುಷ್ಟಿಸಿ ಬಿಟ್ಟಿರುವುವು. ಆತ ಹೆಜ್ಜೆ ಹೆಜ್ಜೆಗೊಮ್ಮೊಮ್ಮೆ ಸಲಕ್ಕ ಚಿನ್ನಾ.. ರುದಯ ವಲ್ಲಭೇ.. ಪ್ರಾಣಸಖಿ ಅಂಬುತಿರುವನು.. ಯೇಳೆಂಟು ಹೆಜ್ಜೆಗಳಿಗೊಂದೊಂದು ಸಲ ಮೂರ್ಛೆ ಹೋಗೋದೂ.. ಯದ್ದು ನಡೆಯೋದನು ಮಾಡುತ್ತಿರುವನು.. ಯಿರಲಿ.. ಬಂದೇ ಬರುತಾನೆ....

ಚಿನ್ನಾಸಾನಿ ನಮನಿಮ್ಮಂಗ ಸಾಮಾನ್ಯ ನರಮಾನ್ನವಳಾಗಿರಲಿಕ್ಕಿಲ್ಲ.. ಸಾಕ್ಷಾತ್ ದಯವಾಮುಸ ಸಂಭೂತಳಾಗಿದ್ದಿರಬೇಕು.. ಯಂದು ಮುಂತಾಗಿ ಯೋಚನೆ ಮಾಡುತಾss ಮಾಡೂತ ಸರಣೆ ತಾಯೀ.. ನೀನು ನಿಜಸರಣೆ

ಅನಕಂತ ಕಯ್ನ ಯತ್ತಿ ಮುಗಿಯಲಾರಂಭಿಸಿದರು ಸಿವನೇ..

ಯೀ ಪ್ರಕಾರವಾಗಿ ಘನುವಾದ ದಯ್ವೀ ಪಟ್ಟವನ್ನು ಚಿನ್ನಾಸಾನಿ ಮರಣೋತ್ತರವಾಗಿ ಪಡೆಯುವುದಕ್ಕೂ.. ಹೆನ್ರಿಸಾಹೇಬನು ಗದ್ಗದಿತನಾಗಿ ಬರುವುದಕ್ಕೂ ಸರಿಹೋಯಿತು.. ಬರು ಬರುತ್ತಲೇ ಕಳೇಬರದ ಬುಡದಲ್ಲಿ ಕಡಕೊಂಡ ಬಿದ್ದರಗಳಿಗೆಯೊಳಗೆ ಆತ ತೋಡಿಕೊಳ್ಳಲಾರಂಭಿಸಿದ ದುಕ್ಕವೇನು? ಕಾವ್ಯಮಯ ರೀತಿಯೊಳಗೆ ಮಾಡಲಾರಂಭಿಸಿದ ಗುಣಗಾನವೇನು? ತನ್ನ ಬದುಕಿಗೊಂದು ಅರ್ಥ ಯಿದೆಯಾ? ತಾನಿನ್ಯಾಕ ಬದುಕಿರಬೇಕು ಯಂದು ತನಗೆ ತಾನೆ ಪ್ರಸ್ನೆಗಳನು ಹಾಕಿಕೊಳ್ಳುತ್ತಿದ್ದುದೇನು? ಸಿವ ಸಂಕರ ಮಾದೇವಾ....

ಮಾಡಿಕೊಂಡು ಗಂಡನಿಗಿಂತ ಮಿಗಿಲಾಗಿ ದುಕ್ಕಿಸುತ್ತಿರುವನಲ್ಲಾ.. ಯಿದೇನು ಚೋಜಿಗ ಯಂದು ಅಂದುಕೊಳ್ಳುತ್ತಿದ್ದಂತೆಯೇ ಆತನು ತಾನು ಚಿನ್ನಾಸಾನಿಯು ಕಳೇಬರದೊಂದಿಗೆ ಜೀವನ ನಡೆಸಲು ನಿರ್ಧಾರ ಮಾಡಿರುವುದಾಗಿಯೂ, ತನ್ನ ಸುಪರ್ಧಿಗೆ ವಪ್ಪಿಸಬೇಕೆಂದೂ ಅರೆಬರೆ ಮನವಿ ಮಾಡಿಕೊಳ್ಳು ವುದೆಂದರೇನು ಸಿವನೇ.. ದಕ್ಷ ಅಧಿಕಾರಿಯಾದ ತಾನು ಯಾವ ಲೆಕ್ಕಾಚಾರವನ್ನು ತನ್ನೆದೆಯೊಳಗೆ ಮಾಡಿಟ್ಟುಕೊಂಡಿದ್ದನೆಂದರೆ ಅದು ಯೀ ಪ್ರಕಾರವಾಗಿರುವುದು....

ಹೆನ್ರಿಅಧಿಕಾರ ವಹಿಸಿಕೊಂಡ ಕೆಲವೇ ದಿವಸಗಳಲ್ಲಿ ಪಾಳ್ಳೇಗಾರರ, ಸಣ ದೊಡ್ಡ ಜಮೀನ್ದಾರರ ಬೆನ್ನ ಹುರಿಯಲ್ಲಿ ಚಳಕು ಹುಟ್ಟಿಸಿದ್ದನು. ಪ್ರೇಮಸಂಬಂಧೀ ಭಾವನೆಗಳ ಮುಷ್ಕರದಿಂದಾಗಿ, ಅಸಹಕಾರ ಚಳವಳಿಯಿಂದಾಗಿ ಆಡಳಿತದೊಳಗೆ ತನ್ನನ್ನು ತಾನು ಪೂರ್ತಿ ತೊಡಗಿಸಿಕೊಂಡಿದ್ದ.. ಮ್ಲೇಚ್ಛನೊಬ್ಬ ತಮ್ಮ ಚಿನ್ನಾಸಾನಿಯನ್ನು ಮರೆತದ್ದು ದೇವರ ದಯ ಯಂದೇ ಪ್ರಜೆಗಳು ಭಾವಿಸಿದರು. ಅವನೂ ಉತ್ತಮವಾಗಿ ಆಡಳಿತ ನಡೆಸುತ್ತ ಪ್ರಜಾಭಿಮಾನ ಸೂರೆಗೊಂಡನು. ಇನ್ನು ಕೆಲವೇ ಕೆಲವು ತಿಂಗಳಲ್ಲಿ ಡಿಸ್ಟಿಕ ಕಲೆಟ್ಟರನಾಗಿ ಬಡತಿ ಪಡೆಯಲಿದ್ದನು. ಅಷ್ಟರೊಳಗೆ.. ಇದಿಷ್ಟು.. ತಾನು ಕುಂಪಣಿ ಸರಕಾರದ ಸೇವೆಗೆ ರಾಜಿನಾಮೆ ಕೊಡುವುದು.. ತನ್ನ ಪ್ರಿಯತಮ ಚಿನ್ನಾಸಾನಿಯ ಕಳೇಬರದೊಂದಿಗೆ ತನ್ನ ಸೊಂತ ದೇಸವಾದ ಆಸ್ಟೀಯಾಕ್ಕೆ ಹೋಗುವುದು.. ಅಲ್ಲಿ ಆಕೆಯ ಭವ್ಯಮೂ, ಸುಂದರಮೂಆದ ಸಮಾಧಿಯನ್ನು ನಿರ್ಮಿಸುವುದು.. ಆಕೆ ಹೆಸರಿನಲ್ಲಿ ಆಸುಪತಾಲು, ಸ್ಕೂಲು, ಅನಾಥಾಶ್ರಮಗಳನ್ನು ತೆರೆಯುವುದು.. ತಾನು ಆಕೆಯ ಸವಿನೆನಪೊಳಗೆ ಶೇಷಾಯುಷ್ಯ ಸವೆಸುವುದು.. ಯಿತ್ಯಾದಿ.. ಯಿತ್ಯಾದಿ....

ಹೆನ್ರಿಆಡಿದ ಮಾತು ಕೇಳಿ ಡಣಾಪುರದ ರಾಜಮನ್ತನಸ್ಥರು ಹೌಹಾರಿದರು.. ಪರಂಗಿಯವಗೆ ಅಯ್ಲು ಬಡಕೊಂಡಗಯ್ತೆ ಅನಕಂತ ಮಂದಿ ಮೂಗಿನ ಮ್ಯಾಲ ಬೊಳ್ಳಿಟ್ಟುಕೊಂಡರು. ತಮಗ ಪಿಂಚಣಿ ಕೊಡಮಾಡ್ತಿರೋ ಕುಂಪಣಿ ಅಧಿಕಾರೀನೆ ಹಿಂಗಾಡುತ್ತಿರುವನಲ್ಲಾ ಯಂದು ರಾಜನು ಗಿದ್ದುನ ಯಸನ ಮಾಡಿದನು. ಯಿನ್ನೊಬ್ರೆಂಡ್ತಿ ಹೆಣsನ ಬಗಸೋದು ಥರವಲ್ಲವೆಂದೂ.. ಇದರಿಂದ ಯಕ್ತಿತ್ವಕ್ಕೆ ಕಳಂಕ ತಗುಲುವುದೆಂದೂ.. ಯೀ ಸಂಗತಿಯೇನಾರ ಮನ್ರೋ ಸಾಹೇಬನ ಕಿವಿಗೆ ಬಿತ್ತೆಂದರ ಅಮಾನತ್ತಿನಲ್ಲಿಡುವನೆಂದೂ.. ಆತನೊಟ್ಟಿಗೆ ಬಂದಿದ್ದ ರಾಯನು ಆತನ ಕಿವಿಯೊಳಗೆ ಪಿಸುಗುಟ್ಟಿದನು.

ಮನ್ರೋ ಸಾಹೇಬನ ಕೆಂಗಣ್ಣು ತಗಲಿ ಸೆರೆ ಅನುಭವಿಸುತ್ತಿರುವ ಹೆಸ್ಟಿಂಗ್ಸೂ, ನಿಕೋಲಾಸೂ, ಜಾನೂ, ಡೆವಿಡ್ಡೂ ಇವರೆಲ್ಲ ತನ್ನ ಕಣ್ಣ ಮುಂದೆ ಸುಳಿದು ಹೋದದ್ದು ವಂದು ಕಡೆಯಾದರೆ.. ಯಿನ್ನೊಂದು ಕಡೆ ಮಣ್ಣಿಗೇಂತ ಬಂದಿದ್ದ ಲಕುಸಾಂತರ ಮಂದಿ ಹೆನ್ರಿಸಾಹೇಬಗೆ ಧಿಕ್ಕಾರ.. ಧಿಕ್ಕಾರ.. ನಾವು ನಮ್ಮ ಪ್ರಾಣವನ್ನಾರ ಕೊಟ್ಟೇವು ಆದ್ರೆಸವವನ್ನು ಮಾತ್ರಬಿಟ್ಟುಕೊಡೋದಿಲ್ಲ ಯಂದು ಕೂಗಿದರು ಸಿವನೇ.. ಅದಾದ ಮ್ಯಾಲ....

ಮುತ್ತಯ್ದೆ ಸಾವುಂಡಿದ್ದ ಚಿರಂಜೀವಿ ಕುಂಕುಮ ಸವುಭಾಗ್ಯವತಿ ಚಿನ್ನಾಸಾನಿಯ ಸಾಲಂಕೃತ ಕಳೇಬರದ ಮೆರವಣಿಗೆಯನು ವರಣನ ಮಾಡಲಕ ಸಾವುರ ನಾಲಗೆಗಳ ವಡೆಯನಾದ ಆದಿಸೇಸನೇ ಆಗಬೇಕು.. ಸಿವಸಂಕರ ಮಾದೇವಾ..

ಡೊಳ್ಳು, ಹಲಗೆ, ತಮ್ಮಟೆ, ಸವಾಳ, ನಂದಿಕೋಲುಗಳೇನು? ರುಮ್ಮಿಗಳೇನು? ಬಾಜಾ ಬಜಂತ್ರಿಗಳೇನು? ಭಜನೆ ತಂಡಗಳೇನು? ಹಾಡ ಹೊಳೆಯಾಗಿದ್ದ ಅಳುವೇನು? ಕಣ್ಣೀರಿನಿಂದಾಗಿದ್ದ ವಜ್ಜಲೊಜ್ಜಲು ನೆಲವೇನು? ದುಮುದುಮು ಅಂತ ಬಡಿದಕೊಳ್ಳುತಲಿದ್ದ ಯದೆಗಳೇನು? ಸೂರ್ಯಾಡುತಲಿದ್ದ ಹೂವುಗಳೇನು? ಚಟಪಟನೆ ಸಿಡಿಯುತಲಿದ್ದ ಪಟಾಕಿಗಳೇನು? ಕಳೇಬರಯಿದ್ದ ಯಿಮಾನದ ನೊಗಕ್ಕೆ ಕೈ ಹಚ್ಚಲು ನಾ ಮುಂದು, ತಾ ಮುಂದು ಅಂತ ಪಯಿಪೋಟಿಗಿಳಿದಿದ್ದ ಹೆಗಲುಗಳೇನು? ಅಲ್ಲಿಲ್ಲಿ ನಡೆಯುತಲಿದ್ದ ಆತುವಾರ್ಪಣೆಗಳೇನು? ವಂದೇ ಮಾತಿನ ಗುಂಟ ಹೇಳಲಕೆಂದರೆ ಮಣ್ಣುಕೊಡಲಕಂತ ಬಯಲುದೇರಿದ್ದ ಮಂದಿ ಕಳೇಬರದೊದಿಗೆ ತಾವೆಲ್ಲ ಸಾಮೂಹಿಕವಾಗಿ ಮಣ್ಣಾಗಲ ಕೆಂದೇ ಹೊಂಟಿದ್ದರು ಸಿವನೇ..

ಆ ಕಡೆ ಸೂರ್‍ಯಾಮ.. ಯೀ ಕಡೆ ಚಂದ್ರಾಮ.. ಯಿವರೀರ್‍ವೊಟ್ಟಿಗೆ ಸಾವುರಾರು ನಚ್ಚತ್ರಗಳು ಕಣ್ಣೀರು ಸುರಿಸುತಲಿದ್ದ ಹಗಲು ಕಳೇಬರ ನೆಲ ಬಿಟ್ಟು ಮ್ಯಾಲಕೆದ್ದಾಗ ಯಲ್ಲಿತ್ತೋ ಯೀವಾಗಲೂ ಅಲ್ಲೇ ಯಿತ್ತು. ಕುಂತಳ ಸೀಮೆಯ ಸಮಸ್ತ ಸವುಂದರ್‍ಯಕ್ಕೇ ವಡತಿಯಾಗಿದ್ದ ಚಿನ್ನಾಸಾನಿಯ ಅಂತಿಮ ದರುಸನ ಪಡೆಯಲಕೆಂದಲ್ಲಿಗೇ ಬಂದಿತ್ತು. ಮಣ್ಣು ಕೊಡಲಿರುವವರಿಗೆ ತೊಂದರೆಯಾಗದಿರಲೀ ಅಂತ ಹಸಿವು ತ್ರುಷೆ ಆಯಾಸಗಳಿತ್ಯಾದಿ ತಾಪತ್ರಯಗಳೆಲ್ಲ ಡಣಾಪುರದಿಂದ ಪಿತುಗಿ ಅನತಿ ದೂರಯಿದ್ದ ಹನುಮಾನಪುರದ ಪುರಾತನ ಆಲದ ಮರದ ಕೊಂಬೆ ರೆಂಬೆಗುಂಟ ಜೋತು ಬಿದ್ದಿದ್ದವು ಸಿವನೇ..

ಹಿಂಗಾಗಿ ಮೆರವಣಿಗೆ ವಂದಿಂಚು ಕದಲಲಕ ವಂದೊಂದು ತಾಸು ತಗಂಡೂs ತಗಂಡು ಪರಂಧಾಮ ಯಂಬುಪನಾಮಧೇಯ ಮುಡಕೊಂಡಿದ್ದ ಮಸಣವನ್ನು ಸೇರಿಕೊಂಡಿತೆಂಬಲ್ಲಿಗೆ ಸಿವಸಂಕರ ಮಾದೇವಾss..

ಮುಂದ ಕಳೇಬರ ಮಣ್ಣಾದುದರ ಬಗ್ಗೆ, ನೂರಾರು ಮಂದಿ ತಾವು ಮಣ್ಣೊಳಗ ಮಣ್ಣಾಗಲಕಂತ ಮಣ್ಣೊಳಗ ವುರುಳಾಡಿದುದರ ಬಗ್ಗೆ, ಗಂಡ ಕಲಿಯಿರ ನಾಯಕನು ಚಿತಾಪ್ರವೇಸ ಮಾಡಿದುದರ ಬಗ್ಗೆ.. ಹಾಲಗಲ್ಲಿನ ಗುಡಿಯೊಂದು ಸಮಾಧಿ ಮ್ಯಾಲ ಮೂಡಿದುದರ ಬಗ್ಗೆ.. ಅದರೊಳಗೆ ಆಳೆತ್ತರ ಮೂರುತಿ ಸ್ಥಾಪಿಸಿ ಅದಕೆ ಚಿನ್ನಾದೇವಿಯಂದು ನಾಮಕರಣ ಮಾಡಿದುದರ ಬಗ್ಗೆ.. ರಾಜಮಾಹಾರಾಜರೇ ಮೊದಲಾದ ಪಿಂಚಣಿದಾರರು ಪಯಿಪೋಟಿಗೆ ಬಿದ್ದು ಧನ ಕನಕ ಭೂಮಿಗಳನ್ನದಕ ದಾನ ಮಾಡಿದುದರ ಬಗ್ಗೆ.. ಕಾಲಾನುಕಾಲಕ ಪುರಾಣ ಪುಣ್ಯ ಸ್ರವಣ ನಡೆಸಲಾರಂಭಿಸಿದುದರ ಬಗ್ಗೆ.. ಚಿನ್ನಾದೇವಿ ತನಗೆ ನಡಕೊಂಡವರ ಮನೆಯೊಳಗ ತುಪ್ಪದ್ದೀವಿಗೆಯಾಗಿ ಬೆಳಗಲಾರಂಭಿಸಿದುದರ ಬಗ್ಗೆ.. ಮುಂದೆ ಭಕುತ ಕೋಟಿಯ ವತ್ತಾಯದ ಮೇರೆಗೆ ಡಣಾಪುರಕ್ಕೆ ಚಿನ್ನಾದೇವಿಪುರಯಂದು ಪುನರ್‍ನಾಮಕರಣ ಮಾಡಿದುದರ ಬಗ್ಗೆ.. ಚಿನ್ನಾದೇವಿ ಜಾನಪದ ಕಥೆ, ಕಾವ್ಯಗಳೊಳಗೆ ಸಾಸ್ವತವಾಗಿ ಬದುಕಿದ್ದು ಬೆಳೆಯಲಾರಂಭಿಸಿದ ಬಗ್ಗೆ ಹೇಳೂತ ಹೋದಲಲಿ ಸಿವಸಂಕರ ಮಾದೇವss...

ಅತ್ತ ಕುಂತಳ ಪ್ರಾಂತಕ್ಕಧಿಕವೆನಿಸಿರ್‍ದ, ಬ್ರಾತ್ರುತ್ವ ಸಂಬಂಧೀ ವಾಚಕಗಳ ಆಡುಂಬೊಲವಾಗಿದ್ದ.. ಸಾಧು ಸಂತಾವಧೂತ ಮಂದಿ ಕಣ್ಣಮಲೊಳಗ ರಾರಾಜಿಸುತಲಿರ್‍ದ ಕುದುರೆಡವು ಪಟ್ಟಣ ಕಾಲಿಲ್ಲದೇನೆ ಕುಂತಳ ಸೀಮೆಯಾದ್ಯಂತ ಅಡ್ಡಾಡುತಲಿದ್ದಿತು.. ಬಾಯಿಲ್ಲದೇನೆ ಮಾತಾಡುತಲಿದ್ದಿತು, ಕಯ್ಯಿಲ್ಲಿದೇನೆ

ಆಸೀರುವಾದ ಮಾಡುತಲಿದ್ದಿತು.. ಸದರೀ ಪ್ರಾಂತದ ಬಹುಪಾಲು ಮಂದಿ ಸರೀರಂಗಳೊಳಗ ಪರಕಾಯ ಪ್ರವೇಶ ಮಾಡುತಲಿದ್ದಿತು....

ಯಲ್ಲಿಗೂ ಹೋಗುವಂಗಿಲ್ಲ ಬರುವಂಗಿಲ್ಲ.. ಯಿದ್ದಲ್ಲೇ ಯಿರುವಂಗಾಗಯ್ತೆಲ್ಲಾ ಯಂದು ಅರೆಮನೆಯೂ, ವಂದೇ ಕಡೆ ಕುಂತೂ ಕುಂತು ತನ್ನ ಕುಂಡಿಮ್ಯಾಲಿನ  ತೊಗಲು ಜಡ್ಡು ಗಟ್ಟಿರುವುದಲ್ಲಾ ಯಂದು ಸಾಂಬಯ್ಯನೂ ವಂದೇ ಸಲಕ ಯಸನ ಮಾಡುತಿರಬೇಕಾದರೆ ವಬ್ಬಾನೊಬ್ಬಾತ ಬಂದು ಸಾಂಬವಿಯ ಸಿಸುಮಗನ ಕಾಲು ಹಿಡಕೊಂಡು ತಮ್ಮೂರಾದ ಮಾಕನಡುಕ ಗ್ರಾಮಕ್ಕೆ ಬಿಜಯಂಗಯ್ದು ತಮ್ಮ ಭಕುತಿ ಸ್ವೀಕಾರ ಮಾಡಬೇಕೆಂದು ಅರಕೆ ಮಾಡಿಕೊಂಡನು. ಅದಕೆ ಬ್ರಾತ್ರುತ್ವ ಸಂಬಂಧೀ ವಾಚಕ ಚೂತವನ ಚಯಿತ್ರವು ಹ್ಞಾ ಅನ್ನಲಿಲ್ಲ ಹೂ ಅನ್ನಲಿಲ್ಲ.. ಸಣು ಮಾಡುತೇನೆಂದರೆ ಪಾದ ಕೊಡಲಿಲ್ಲ.. ಮುಖಕ್ಕೆ ಮುಖ ಕೊಟ್ಟು ಮಾತಾಡಲಿಲ್ಲ....

ಮಾಮೂಲು ಮನುಷ್ಯನೂ, ಸಂಸಾರವಂದಿಗನೂ, ಮ್ಯಾಲಾಗಿ ಗವುಡನೂ ಆಗಿದ್ದ ಆ ಆಗಂತುಕನು ನಾಕು ಮಂದಿ ಯುದುರು ಪೇಟನ ಸರಿಪಡಿಸಿಕೊಂಡಿರುವುದುಂಟು.. ಮಿಾಸೆ ತೀಡಿಕೊಂಡಿರುವುದುಂಟು.. ಅಂಥ ತಾನು ಅರಕೆ ಮಾತಡಿಕೊಂಡಿದ್ದರಲ್ಲಿ ತಪ್ಪೇನುಂಟು..? ಸಾಂಬವಿಯ ವಲುಮೆಯಾಗಿರುವಾತ ಕುಂಡಿಗೆ ಗೆದ್ದಲು ಹತ್ತೋ ಹಂಗ ವಂದೇ ಕಡೇಕ ಯಿದ್ದರೆ ಆತತೇನು? ತಾನೂ ನಾಕಾರು ಮೂರುಗಳನು ಸುತ್ತಾಡೋದು ಬ್ಯಾಡಯೇನು? ಮೂಲೆ ಮುರುಕಟ್ಟಿನಲ್ಲಿರುವ ಭಕುತಾದಿ ಮಂದಿಯ ಸುಖ ದುಕ್ಕನ ಯಿಚಾರಿಸಿ ಪರಿಹಾರ ಮಾಡೋದು ಬ್ಯಾಡವೇನು? ಮ್ಯಾಲಾಗಿ ತಾನು ಪುವ್ವಲ ರಾಜವಮುಸದ ಸಿಮ್ಮಾನಸನದ ಮ್ಯಾಲ ಕುಂತಿರುವಾತನು....

ಆಗಮನ ಮಾಡಲಕs ಬೇಕೆಂದು ಪಟ್ಟು ಹಿಡಿದನು.. ಬೆಳ್ಳಿ ಪಲ್ಲಾಕಿಯೊಳಗ ಮೆರವಣಿಗೆ ಮಾಡಿಸುತೀನೆಂದನು, ಪಾದಕ ಮುತ್ತಿನ ಪಾವುಡ ತೊಡಿಸುತೀನಂದನು, ತಂದೆಯೇ ಅಂದನು, ತಾಯಿಯೇ ಅಂದನು, ದಯಮಾಡಲಕ ವಪ್ಪಿಗೆ ಕೊಡಲಿಲ್ಲಾಂದರ ವುಪವಾಸ ವನುವಾಸ ಬಿದ್ದು ಪ್ರಾಣ ಬಿಡುತೇನೆಂದನು. ಅದಕೂ ಜುಮ್ಮೆನದಿರಲು ಸಿಮ್ಮಾಸನದೆದುರು ಚಕ್ಕಳ ಮುಕ್ಕಳ ಹಾಕ್ಕೊಂಡು ಕೂತು ಬಿಟ್ಟನು. ಯಿಗಾs ವಂದಾರ ಬಾಳೆಹಣ್ಣು ತಿಂಬು ಅಂದರ ವಲ್ಲೆ ಅಂದನು.. ಯಿಗಾ ವಂದು ಗುಟುಕು ನೀರ ಕುಡಿ ಅಂದರ ವಲ್ಲೆ ಅಂದನು. ಹಿಂಗs ವಂದಿವಸಾತು ಯಲ್ಡು ದಿವಸಾತು.. ಮೂರನೇ ದಿನಕ್ಕೆ ಯಾಕ ತಮ್ಮೂರ

ಗವುಡ ಬರಲಿಲ್ಲಾಂತ ಮಾಕ ನಡುಕಿನಿಂದ ಹತ್ತಾರ ಮಂದಿ ಪ್ರಜೆಗಳು ಬಂದರು. ಯಾಕ ತಮ್ಮಾತನಿಂದ ಸುದ್ದಿಲ್ಲ ಸುಳುವಿಲ್ಲಲ್ಲಾಂತ ಆತನ ಹೆಂಡರು ಮಕ್ಕಳು ಬಂದರು. ಯಲ್ಡೇ ಯಲ್ಡುಡಿ ದಿವಸಗಳೊಳಗೆ ಗುಡ್ಡದಾಂಗಿದ್ದ ತಮ್ಮಾತ ಹಂಚಿ ಕಡ್ಡಿ ಹಂಗಾಗಿರುವನಲ್ಲ ಯಂದು ಲಬ್ಬಗುಟ್ಟಿ ಅಳ ತೊಡಗಿದರು.

ಹಿಂಗ ಅರಮನೆಯು ಕರೆವವರ ಕಳ್ಳು ಸುಟ್ಟು ಪರೀಕ್ಷೆ ಮಾಡಿ ಇನ್ನು ತಮ್ಮ ಸಾಂಬಯ್ಯ ಮಾಕನಡಕು ಕಡೇಕ ದಯವಿಕ ಪ್ರವಾಸ ಕಯ್ಗೊಳ್ಳಲು ಹರಕತ್ತಿಲ್ಲ ಎಂದು ತೀರ್ಮಾನಿಸಿದೊಡನೆ..

ಸಾಂಬವಿಂಯು ಸಿಸುವುಗನ ಪಾದಕ್ಕೆ ವುುತ್ತಿಕ್ಕಿ ವುೂರ್ತ ನಿಗದಿಪಡಿಸಿಕೊಂಡು ಅಲ್ಲಿಂದ ಹೊಂಟ ಸಿಂಗಾರಯ್ಯ ತಲುಪಿದ ಮಾಕನಡುಕು ಯಂಬ ನಾಮವಾಚಕವು ವಂದು ಕಾಲದಲ್ಲಿ ಯಿತ್ತು ಅಂದರೆ ಯಿತ್ತು, ಯಿರಲಿಲ್ಲ ಅಂದರೆ ಯಿರಲಿಲ್ಲ. ಮೂರೊಳಗ ಇದ್ದಂಥ ಮಂದಿ ಅನಾದಿ ಕಾಲದಿಂದ ಆರಕ್ಕೇರಿಲ್ಲ, ಮೂರಕ್ಕಿಳಿದಿಲ್ಲ. ಸಿಂಗಾರಯ್ಯನ ಗಿರಿ ಗಿರಿ ಮುತ್ತಾತ ಸವುಚ ಸಲುವಾಗಿ ಗುಡ್ಡಗಳ ಸಾಲು ಕಡೇಕ ಹೋದಾಗ ಅಲ್ಲೊಂದು ಮರ ಯಿತ್ತು. ಅದರ ಕೊಂಬೆ ಗುಂಟ ಆಕಾರ ಸಾಕಾರ ಯಿಲ್ಲದ ಪ್ರಾಣಿಯೊಂದು ಜೋತು ಬಿದ್ದಿತ್ತು. ನೀನು ಯಾರು ಯತ್ತ ಯಂದೀವಯ್ಯ ಕೇಳಿದ್ದಕ್ಕದು ಹೇಳಿದ ಪ್ರವರ ಆವುದೆಂದರೆ "ಯಂಬಲಕು, ತಂಬಲಕು, ತಿಂಬಲಕು, ತೊಂಬಲಕು ಯಂಬಿವೇ ಮೊದಲಾದ ಮೂರುಗಳ ರಾಜರು ಮಾಡಿದ ದಾಳಿಯ ವುಪಟಳ ತಾಳಲಾರದೆ ಹೊಂಟೋಡಿ ಬಂದಿರುವೆನಯ್ಯಾ, ನನ್ನ ನಾಮಾಂಕಿತ ಮಾಕನಡಕುವುಂಟಯ್ಯಾ.. ನನ್ನನ್ನೊಯ್ದು ನಿನ್ನೂರೊಳಗ ಆಸ್ರಯ ಕೊಡಯ್ಯಾ.. ನೀನು ಹೇಳಿದಾಂಗ ಕೇಳಿಕೊಂಡು ಯಿರುತೀನಿ" ಯಂದು ಕೇಳಿಕೊಂಡಿತು.

ಗವುಡನು ಅದನ್ನು ಮರದಿಂದ ಬಿಡಿಸಿ ಕಂಕುಳಲ್ಲಿ ಇಟುಕೊಂಡು ಪುರ ಪ್ರವೇಸ ಮಾಡಿದನು. ಮಂದಿಯು ಯಿದೇನಪಾ ತಂದೆಯೇ.. ನಿನ ಬಗಲೊಳಗ ಯಾದೋ ವಂದು ಕರ್ರಗ ಅಯಿತಲ್ಲಾ ಯಂದು ಕೇಳುತಲೇ ಸ್ವಾಗತಿಸಿದರು. ಗವುಡನು ಮೂರ ನಡುವೆ ಗುಡಿಯಂ ಕಟ್ಟಿಸಿ ಅದನ್ನು ಪ್ರತಿಷ್ಠಾಪನ ಮಾಡಿದನು.. ಅವತ್ತಿನಿಂದ ಆ ಮೂರಿಗೆ ಮಾಕನಡುಕು ಯಂಬ ಹೆಸರು ಪ್ರಾಪ್ತವಾಯಿತು.. ಅದರ ಮಯ್ಮೆಯಿಂದಾಗಿ ಕಾಲಕಳೆದಂತೆ ಸದರಿ ಗ್ರಾಮದ ಚಹರೆ ಬದಲಾಯಿತು.. ವಲೆ ಹಿಂದಲ ಗೋಡೆಯ ಬಣ್ಣ, ಮೊಂಡು ಮೂಗು, ಗುಂಗುರುಗೂದಲು, ಬದನೆಕಾಯಿ ಗಾತ್ರದ ತುಟಿಗಳು ಪ್ರತಿಯೊಬ್ಬರಿಗೂ ಪ್ರಾಪ್ತವಾದವು.. ಕೆಂಪಾಗೆ

ಯಿದ್ದವರನ್ನೇ ಇಂದರ ಚಂದರ ಅಂತ ಹೊಗಳೋ ಕಲಿಕಾಲದೊಳಗ ಯಿೊ ತೆರನ ಚಹರೆವುಳ್ಳವರನ್ನು ಕೇಳೋರು ಯಾರು? ಭಂಗಾರಯ್ಯನ ವಮುಸಸ್ಥನಾದ ಸಿಂಗಾರಯ್ಯ ನಿದಕ ಹೊರತಲ್ಲ..

ಸಾಂಬಯ್ಯ ಮಾಕನಡುಕು ಕಡೆಗೆ ಮುಖ ಮಾಡಲು ಕುದುರೆಡವು ಕರುಳನ್ನು ಗಂಟಲಿಗೆ ತಂದುಕೊಂತು. ಕರುಮಯ್ಯ, ಅಡುವಯ್ಯ ಮೊದಲಾದ ಮುದೇರು ಬೆಂಗಾವಲಿಗೆ ಹೊಂಟು ನಿಂತರು. ಸರ್ರನೆ ಹೋಗಯ್ಯ ಬಿರ್ರನೆ ಬಾರಯ್ಯ ಯಂದು ಮಂದಿ ಬೀಳುಕೊಟ್ಟರು.. ಸಾಂಬಯ್ಯನ ವುರುಸು ಫಲಾನ ದಿವಸದಂದು ಹೊಂಟು ಫಲಾನ ದಿವಸದಂದು ಸಿಂಗಾರಗೊಂಡಿದ್ದ ಮಾಕನಡುಕನ್ನು ತಲುಪಿತು. ಅಲ್ಲಿ ಗೇಣು ಗೇಣಿಗೊಂದೊಂದರಂತೆ ತಳಿರು ತೋರಣಗಳಿದ್ದವು, ಹತ್ತತ್ತು ಹೆಜ್ಜೆಗೊಂದೊಂದರಂತೆ ಹುವ್ವಿನ ಮಂಟಪಗಳಿದ್ದವು, ಸಾಧು ಸಂತಾವವಧೂತ ಮಂದಿ ವಾರವೀಡಿ ಸೇದಿ ಬಿಟ್ಟಿದ್ದ ಭಂಗೀ ಹೊಗೆ ಕಾರು ಮೋಡೋಪಾದಿಯಲ್ಲಿ ಅತಂತರದ ಅಟ್ಟೆಗಳನ್ನು ನಿರುಮಿಸಿತ್ತು, ನೂರಾರು ಕುರಿ ಮೇಕೆಗಳ ಮೆಹೆಹೆಹೇ ಮಂಗಳ ನಿನಾದದ ಗುಂಟ ಸಾಂಬಯ್ಯ ಕೂಕಂಡಿದ್ದ ಬೆಳ್ಳಿ ಪಾಲಕಿಯ ಮೆರವಣಿಗೆಯು ಫಲಾನ ಗಳಿಗೆಯಲ್ಲಿ ಆರಂಭಗೊಂಡು ಫಲಾನ ಗಳಿಗೆಯಲ್ಲಿ ಮುಗುತಾಯ ಕಂಡಿತು.

ಅಲ್ಲಿಂದ ಅಡಕಲ ಯಂಬ ಮೂರಿಗೆ, ಅಲ್ಲಿಂದ ಬಡಕಲ ಯಂಬ ಮೂರಿಗೆ, ಅಲ್ಲಿಂದ ಡಬ್ಬಲಕ ಯಂಬ ಮೂರಿಗೆ.. ಹಿಂಗೆ ಹೊತಾ ಹೊತಾ ಹೋಗಿ ಸಾಂಬಯ್ಯನ ವುರುಸು ಕುಂತಳ ಸೀಮೆ ದಾಟಿ ಯಿಸಿಲ ಯಂಬ ಪಟ್ಟಣವನ್ನು ತಲುಪದೆ ಯಿರಲಿಲ್ಲ.. ಹೋದ ಕಡೇಲೆಲ್ಲ ಭಕುತಾದಿ ಮಂದಿ ಧನಕನಕ, ವಡವೆವಸ್ತ ಯಿವೇ ಮೊದಲಾದ ಕಾಣಿಕೆ ಪೊಗದಿಗಳನ್ನು ಸಮರ್ಪಿಸದೆ ಯಿರಲಿಲ್ಲ.. ಆ ಎಲ್ಲ ಚರ ಸಂಪತ್ತನ್ನು ಕತ್ತೆ ಕುದುರೆಗಳ ಮ್ಯಾಲ ಹೇರಿಕೊಂಡು ವುರುಸು ಯೇಸೋ ದಿವಸಗಳಾದ ಮ್ಯಾಲ ಪುನಃ ಕುದುರೆಡವನ್ನು... ಸಿವಸಂಕರ ಮಾದೇವಾ...

* * * *

ಮೋ ಮಯ್ ಗಾಡ್! ಯಂದುದ್ಗಾರ ಮಾಡುತ ಫಲಾನ ದಿವಸದಂದು ಅನಂತಪುರವನ್ನು ವದಲಿ ಫಲಾನ ದಿವಸದಂದು ಮನ್ರೋ ಸಾಹೇಬನು ತಲುಪಿದ ಕಡಪಾ ಪಟ್ಟಣವು ಪೂರುವ ಕಾಲಿದ್ದು ಸಿವನೇ..

ಆ ಕಡಪಾ ಸೀಮೆಯಂಬುದು ಯೀಕಾಲದಲ್ಲಿ ಸಿವನೇ.. ಪೂರುವ

ಕಾಲದ್ದು.. ಯೀ ಭೂಮ್ತಾಯಿಯ ವಡಲೊಳಗಿಂದ ಅಯಿರ್ಭವಿಸಿದ ಲಕ್ಕುಸಾನು ಲಕ್ಕುಸ ಸೀಮೆಗಳಲ್ಲಿ ಅದೂ ವಂದು ಆಗಿರುವುದು ಸಿವನೇ.. ಯಲ್ಲಾ ಸೀಮೆಯೊಳಗ ಮಂದಿ ಲಕ್ಕುಸಾನು ಲಕ್ಕುಸ ಮೂಡಿಧಾಂಗ ಆ ಸೀಮೆಯೊಳಗೂ ಪುತು ಪುತನೆ ಮೂಡಿದರು ಸಿವನೇ.. ಅವರೆಲ್ಲ ಯೀಟಿ, ಭರಚಿ, ಕೊಡಲಿ, ಕುಡುಗೋಲುಳಿತ್ಯಾದಿ ಆಟಿಗೆಗಳೊಡನೆ ಆಡುತ್ತ ಬೆಳೆದರಪ್ಪಾ.. ಅವರನ್ನಿವರು, ಯಿವರನ್ನವರು ಕೊಲ್ಲೋದು ಮಾಡುತ್ತ ತಮ್ಮ ತಮ್ಮ ಮಖದ ಮೀಸೆಗಳನ್ನು ತೀಡಿಕೊಳ್ಳುತ್ತ ನಗುವೆಂಬ ಹೇಷಾರವವ ಮಾಡುತ ಯಿರುವ ಕಾಲಕ್ಕೆ ಆ ಸೀಮೆ ಮ್ಯಾಲ ಚೋಳ, ಪಲ್ಲವ, ಚಾಲುಕ್ಯ, ರಾಷ್ಟ್ರಕೂಟ, ಹೊಯಿಸಳ, ಯಿಜಯನಗರದರಸುಗಳು ಧಾಳಿ ಮಾಡು ತಲಿದ್ದರು ಸಿವನೇ.. ಅದು ಸಿಕ್ಕವರಿಗೆ ಸಿವಲಿಂಗ ಆಯಿತಪ್ಪಾ.. ಯಾವ ರಾಜನೂ ಆ ಸೀಮೆಯೊಳಗ ವಂದುಗಳಿಗೆ ನೆಟ್ಟಗೆ ನಿಂತು ರಾಜ್ಯಭಾರ ಮಾಡಲಿಲ್ಲ. ಸ್ರೀರಂಗಪಟ್ಟಣದ ಹಯ್ದರಾಲಿ ಅವಯ್ಯನ ಮಗ.. ನಾಯಕನಟ್ಟಿ ತಿಪ್ಪೇಸ್ವಾಮಿ ವರಸಂಜಾತ ತಿಪ್ಪೂಸುಲ್ತಾನ ಯಿದನು ಕಬ್ಜಾ ಮಾಡಿಕೊಂಡಿದ್ದರು ಸಿವನೇ.. ವಯಸೂರು ಹುಲಿ ಫರಂಗಿ ಮಂದಿಯೊಡನೆ ಯೀರಾಯೇಸದಿಂದ ಹೋರಾಡಿ ಫಲಾನ ದಿವಸದಂದು ಯೀರ ಸೊರ್ಗದ ಕಡೇಕ ಪಯಣ ಮಾಡಿದ ಕಾಲಕ್ಕೆ ಆ ಸೀಮೆ ಹಯ್ದರಾಬಾದು ನವಾಬರ ಕಯ್ಯಿ ವಸವಾಯಿತಪ್ಪಾ.. ಮುಂದ ಕಮಾನುದ್ದೀನ ಖಾನನೆಂಬಾತ ಸದರೀ ಪ್ರಾಂತವನ್ನು ಕಿರಸ್ತಸಕ ವಂದು ಸಾಯಿರದಾ ಯಂಟುನೂರನೆ ಯಿಸವಿ ಅಕ್ಟೋಬರ ಮಾಹೆ ಯಿಪ್ಪತ್ನಾಕನೇ ಸುಕ್ಕುರವಾರ ಕುಂಪಣಿ ಸರಕಾರಕ್ಕೆ ವರುಸಕ್ಕೆ ಅರವತ್ತು ಮೂರು ಲಕ್ಕುಸ ಪಗೋಡ ಕೊಡಬೇಕಂತ ಮಾತಾಡಿ ಭೋಗ್ಯವ ಮಾಡಿಕೊಟ್ಟನಪ್ಪಾ.. ಆಗಿದ್ದು ಕುಂಪಣಿ ಸರಕಾರವು ಸವುತು ಕೆನರಾದಿಂದ ಸದರಿ ಸಾಹೇಬನನ್ನು ಬರಮಾಡಿ ಕೊಂಡು "ನೋಡಪ್ಪಾ ಮನ್ರೋ.. ನಿನ್ನ ಕಯ್ಗೆ ಫಲಾನ ಸೀಮೆಯನ್ನು ವಪ್ಪಿಸುತಲಿದ್ದೇವೆ. ಯಿದು ಆಳುವ ಮಂದಿಗೆ ಭಲೇ ತಲೆ ನೋವಾಗಯ್ತೆ.. ನೀನು ನಿನ್ನ ಬುದ್ಧಿವಂತಿಕೆ, ತೋಳುಬಲ ವನ್ನುಪಯೋಗಿಸಿ ಯೀ ಸೀಮೆಯೊಳಗಿನ ಮಂದಿ ಸಲೀಸಾಗಿ ವುಸುರಾಡುವಂತೆ ಮಾಡು" ಯಂದು ವಪ್ಪಿಸಿತಲ್ಲದೆ ಥಾಮಸು ಮನ್ರೋನನ್ನು ಕಲೆಟ್ಟರು ಪದವಿಗೇರಿಸಿತು. ಯೀ ಕಲೆಟ್ಟರನು ತನ್ನ ಚಾಕಚಕ್ಕತೆಯಿಂದ ವರುಸ ದಿನಮಾನ ಕಣ್ಣಿಗೆ ಯಣ್ಣೆ ಬಿಟುಕೊಂಡು ದುಡುದೂ ದುಡುದೂ ಮೆಟ್ಲ, ಪುಲಿಯೆಂದುಲ, ರಾಚೋಟಿ, ಯಿವೇ ಮೊದಲಾದ

ಸೀಮೆಗಳನ್ನು ಮನಸೇಚ್ಛೆ ಆಳುತಲಿದ್ದ ಸರಿಸುಮಾರು ಯಂಭತ್ತು ಮಂದಿ ನಿರಂಕುಸಮತಿ ಪಾಳ್ಳೇಗಾರರ ವುಪಟಳವನ್ನು ನಿರ್ಮೂಲನ ಮಾಡಿ ಬಡಬಗ್ಗರಿಂದ ಸಯ್ಯಿ ಅನ್ನಿಸಿಕೊಂಡನು ಸಿವನೇ.. ಮಂದಿ ಅಡ್ಡಾಡಲಕ ಸಪಾಟನೆಯ ದಾರಿಗಳನ್ನು ಮಾಡಿಸಿದನು ಸಿವನೇ.. ಮಂದಿಮಕ್ಕಳು ಯಿದ್ಯಾ ಬುದ್ದಿವಂತರಾಗಲಕೆಂದು ಮೂರೂರಿಗೊಂದೊಂದರಂತೆ ಸಾಲೆಗುಡಿಗಳನ್ನು, ರೋಗ ರುಜಿಣಗಳನ್ನು ಯಿಲಾಜು ಮಾಡಲಕೆಂದು ಮೂರೂರಿಗೊಂದೊಂದರಂತೆ ದವಾಖಾನೆಗಳನ್ನು ತೆರೆದನು ಸಿವನೇ.. ಭೂಮಿಯಿಲ್ಲದವರಿಗೆ ಪರಂಪೂಕುಭೂಮಿ ಕೊಟ್ಟನು ಮನೆಯಿಲ್ಲದವರಿಗೆ ಮನೆ ಮಾಡಿಕೊಟ್ಟನು. ಜನರ ಕಷ್ಟಸುಖ ಯಿಚಾರಿಸಲಕಂದು ಅಮಲ್ದಾರರನ್ನು, ತಾಸೀಲುದಾರರನ್ನು ನೇಮಕ ಮಾಡಿದನು. ಅವರೆಲ್ಲರ ಮ್ಯಾಲ ನಿಗಾ ಯಿಡಲಕೆಂದು ಕಡಪಾ ಪಟ್ಟಣದಲ್ಲಿ ಮೇಜರು ಜನರಲ್ಲು ಕ್ಯಾಂಪುಬೆಲ್ಲು ಯಂಬುವ ಅಧಿಕಾರಿಯನ್ನು ನೇಮಕ ಮಾಡಿದನು ಸಿವನೇ.. ತಮ್ಮ ಕಣ್ರೆಪ್ಪೆಯೊಳಗೆ ನಿದುರೆಯೆಂಬ ಕೂಸನು ಆಡಲು ಬಿಟ್ಟಂಥ.. ತಮ್ಮ ವಡಲುಗಳಿಗೆ ವಂತುತ್ತು ಅನ್ನವ ಕೊಟ್ಟಂಥ.. ಆರಿದ ಬಾಯಿಗೆ ವಂಸೆರೆಮುಕ್ಕ ವುದುಕುವ ಕೊಟ್ಟಂಥ.. ತಮ್ಮ ರಟ್ಟೆಯೊಳಗೆ ದುಡಿದುಂಬಲಕ ಸಗುತಿ ನೀಡಿದಂಥ.. ತಮ್ಮ ತಲಿವಳಗ ವಂಚೂರು ತಿಳುವಳಿಕೆ ತುಂಬಿದಂಥ.. ತಮ್ಮ ಬದುಕಿನಂಗಳದಲ್ಲಿ ಅಕ್ಕಸರ ಯೆಂಬುವ ಬೆಳಕನು ತರುಬಿದಂಥ.. ತಾಮೂಬದುಕಬಲ್ಲೆವು ಯಂಬುವ ಆತುಮ ಯಿಸುವಾಸನ ತುಂಬಿದಂಥ ಥಾಮಸು ಮನ್ರೋ ಸಾಹೇಬನನ್ನು ಕಡಪಾ ಸೀಮೆಯ ಮಂದಿಯು ಕರನಲು ಮಂಥೋಳ ಸಾಹೇಬಾಽಽ ಯಂದು ಕಕ್ಕುಲಾತಿಯಿಂದ ಕರೆಯಲಾರಂಭಿಸಿದವರೆಂಬಲ್ಲಿಗೆ ಸಿವನೇ....

ಗುರ್ರಮುಕೊಂಡ, ವೇಮುಲ, ಪುಲ್ಲಂಪೇಟ ಯಿವೇ ಮೊದಲಾದ ಕಾಳಿಂಗ ಸರುಪಗಳು ಸುಮ್ಮನಿರ ಬೇಕಲ್ಲ.. ಸಯಪುದ್ದೀನು, ಯಿಸುಮಾಯಿಲು, ಅಸ್ಲಮುಖಾನ, ಬಷೀರಾಮದ್ದು, ಅಸದುಲ್ಲಾಖಾನು ಯಂಬಿವೇ ಮೊದಲಾದ ಕಪ್ಪಲ್ನಾಟಗಳು ಸುಮ್ಮನಿರಬೇಕಲ್ಲ.. ಆ ಸೀಮೆಯ ಮಂದಿರ ಮಸೀದಿಗಳು ಮದ್ದಿನುಗ್ರಾಣಗಳಾದವು.. ಮುಸಲುಮಾನರನ್ನು ಹಿಂದೂ ಮಂದಿ ಮ್ಯಾಲ, ಹಿಂದೂ ಮಂದಿಯನ್ನು ಮುಸಲುಮಾನ ಮಂದಿಮ್ಯಾಲ ಛೂ ಬಿಡೋದು, ಯತ್ತಿಕಟ್ಟೋದು ವಂದರ ಮ್ಯಾಲ ವಂದರಂತೆ ನಡೆಯತೊಡಗಿದವು.. ಆಕಳ ಕಳೇಬರಗಳು ವಂದಲ್ಲಾ ವಂದು ದೇವುಳದಲ್ಲಿ.. ಹಂದಿ ಕಳೇಬರಗಳು ವಂದಲ್ಲಾ

ವಂದು ಮಸೀದಿಗಳಲ್ಲಿ.. ಸಿವ ಸಿವಾ.. ಯೇನು ಹೇಳುವುದಾ ಸೀಮೆಯ ಕಥೆಯಾ.. ಹಿಂದೊಮ್ಮೆ ಮಂಥೋಳ ಸಾಹೇಬನು ಆ ಪಟ್ಟಣದೊಳಗ 'ಕೋಮು ಸವ್ವಾರ್ದ ಸಮಾಯೇಸ' ಯೇರ್ಪಾಡು ಮಾಡಿ ರಾಮರಹೀಮ ಯೇಸು ಕಿರಸ್ತ ಭಗವಂತನ ಮೂರು ರೂಪಗಳು ಕಾಣಿರಯ್ಯಾss ಯಂದು ಮುಂತಾಗಿ ಭಾಷಣ ಮಾಡಿ ಆ ಯಲ್ಲಾ ಕೋಮುಗಳ ನಡುವೆ ವಪ್ಪಂದ ಮಾಡಿದ್ದನು. ಅವರೆಲ್ಲ ಆಗಲಿ ದೊರೆಯೇ ಯಂದಿದ್ದರು. ವಂದೆರಡು ವರುಷ ಆ ಸೀಮೆಯೊಳಗ ಯಾವುದೇ ಜಗಳ ತಾಪತ್ರಯ ಯಿರಲಿಲ್ಲ.. ಯೀಗ ಬಂದಿರೋ ಸಮಾಚಾರ ಪ್ರಕಾರss.. ಸಿವ ಸಂಕರ ಮಾದೇವಾss..

ಅತ್ತ ಡಣಾಪುರದೊಳಗೆ ನಡೆಯುತಲಿದ್ದ ಯಿದ್ಯಾಮಾನಂಗಳ ಯಾವ ಬಾಯನ ಯಿಟುಕೊಂಡು ಹೆಂಗ ಹೇಳಲಿ ಸಿವನೆ ಹೇಳದೆ ಹೆಂಗ ಯಿರಲಿ ಸಿವನೇss..

ಘನಸ್ತೆ ಸೊಸೆಯನ್ನು ಮಣ್ಣು ಮಾಡಿದ ಲಾಗಾಯ್ತು.. ಯಿದ್ದೋರ್ವ ಮಗಚಿತೆಯೊಳಗ ಧಗಧಗಾಂತ ವುರಿದು ಸುಟ್ಟು ಭಸುಮವಾದ ಲಾಗಾಯ್ತು.. ಡಣಾಪುರದ ಅರಮನೆಯೊಳಗಾಗಲೀ ಪಟ್ಟಣದ ಮನೆ ಮನೆಯೊಳಗಾಗಲೀ ಯ್ಯೋಸೋ ದಿವಸಂಗಳ ಪರ್ಯಂತ ನಿಲುಕಡಿ ಯಿರಲಿಲ್ಲ.. ಆಕಿ ತಮ್ಮ ಯದುರಿಗೆ ನಿಂತಂಗಾತು? ತಮ್ಮ ಜೋಡಿ ನಕ್ಕೋತ ಕೆಲಕೋತ ಕುಂತಂಗಾತು, ಆಕಿ ಮೋಡೋಡಿ ಬಂದು ತಮ್ಮ ತೊಡಿ ಮ್ಯಾಲಿನ ಕೂಸನ ಕಸಗೊಂಡು ಯದೀಗ ಹಾಕ್ಕೊಂಡಂಗಾತು.. ಅಂತಂತ ಅಂಬುತ್ತಿದ್ದವರಿಗಲ್ಲಿ ಬರಯಿರಲಿಲ್ಲ. ಆಕೆಯ ತಿಕ್ಕಡಿ ಕಡಿಮೆ ಮಾಡುವ ಸಲುವಾಗಿ ಶ್ರಾದ್ಧಾ ಮತ್ತಿತರ ಕ್ರಿಯಾಕಟ್ಟಳೆಗಳನ್ನು ಅರಮನೆಯ ಮಂದಿ ಸಾಸ್ತರೋಕ್ತವಾಗಿ ಮಾಡಿ ಮುಗಿಸಿದ ಯ್ಯೋಸೋ ದಿವಸಾದ ಮ್ಯಾಲಾನೆ ಮಂದಿ ಬೆಬ್ಬಿಳಿಸೋದು ಮುಕ್ಕಾಲು ವೀಸೆ ಕಡಿಮೆಗೊಂಡದ್ದು....

ವಂದು ಗಂಡು ಕೂಸ ಹೆತ್ತು ಕೊಟ್ಟ ಹೋದ ಆ ಪುಣ್ಯಾತ್ಗಿತ್ತೀನ ತಾವು ಸುಮ್ಮ ಸುಮ್ಮಕ್ಯಾಕ ಅಂದಾಡೋದು? ವಬ್ಬ ವಾರಸುದಾರ ಹುಟ್ಟಿರುವನೆಂದ ಮ್ಯಾಲ ನಾನಿದ್ದು ಮಾಡೋದೇನಯ್ತೆ? ದಿನಂಪ್ರತಿ ಸಾಯೋ ಬದಲು ವಂದೇ ಸಲಕ ಸತ್ತೋತೀನಿ ಯಂದು ಜೀವಂತ ದಹಿಸಿ ಹೋದ ತಮ್ಮ ಮಗ ಕಲಿಯೀರ ನಾಯಕನನ್ಯಾಕ ಅಂದಾಡೋದ್ಯಾಕಂತ ಅರಮನೆ ಮಂದಿ ಜೀವನ ಹಿಡಕೊಂಡಿತ್ತು. ದಿನಗಳೆದಂತೆ ನೆಲ ಕಚ್ಚಿದ್ದವರೆಲ್ಲ ಮೆಲು ಮೆಲ್ಲಕ ಯದ್ದು

ಕುಂತಗೊಂಡರು. ಮುಂದ ವಂದೊಳ್ಳೆ ದಿವಸ ನೋಡಿ ಕೂಸಿಗೆ ಅದ್ರುಸ್ಯ ನಾಯಕ ಅಂತ ನಾಮಕರಣ ಮಾಡಿದರು. ಅಂಥ ಹೆಸರಿಟ್ಟಿದ್ದಕ್ಕೋ, ತಾಯಿಯದೆ ಹಾಲ ಕೊರತೆಯಿಂದಾಗಿಯೋ ಅದರ ಮಯ್ಯಬಣ್ಣ ವಾರೊಪ್ಪತ್ತೊಳಗ ತಪಥರ ಬದಲಾಯಿತು. ಯತ್ತಾಡಿಸಲೆಂದು ಬಂದವರು ವಲುವಯ್ತೆಯಂದು ಯಿಳುವಿದರು.. ಹಾಲು ಕುಡಿಸಬೇಕೆಂದು ತಮ್ಮದೆಗೆ ಹಾಕಿಕೊಂಡವರು ಹ್ಹಾ.. ಯಂದು ನರಳಿ ಯಿದರ ಬಾಯೊಳಗ ಹಲ್ಲು ಬಂದಂಗದೆ ಯಂದು ಯಿಳುವಿ ಹೋದರು.. ಅವರಿವರೇನಿ ದಿಂಗ ಹೇಳುತವರಂತ ಅರಮನೆ ಮಂದಿ ಕೂಸನ ಲೀಲಾ ಜಾಲವಾಗಿ ಯತ್ತಿಳಿಸಿದರು. ಯದೆ ಹಾರೊಡೆದು ಮನದಣಿಯೆ ಹಾಲುಣ್ಣಿಸಿದರು.. ಹಿಂಗದು ವಬ್ಬೊಬ್ಬರಿಗೊಂದೊಂದು ಅನುಭವ ನೀಡುತಲಿತ್ತು....

ವಂದು ತಿಂಗಳು ತುಂಬುವುದರೊಳಗದಕ ಕುಂಡಿ ಬಂದು ಕುಂತಗಂತು.. ಯಲ್ಡು ತಿಂಗಳು ತುಂಬುವುದರೊಳಗದು ಅಂಬೆಗಾಲೂರಿ ತೆವಳಾಡಿತು.. ಮೂರು ತಿಂಗಳು ತುಂಬುವುದರೊಳಗದಕ ಕಾಲು ಬಂದು ಅಡ್ಡಾಡ ತೊಡಗಿದುದರ ಬಗ್ಗೆಯೇನೆಂದು ಹೇಳಲಿ ಸಿವನೇ.. ಮಿಳ್ಳೆ ಹಾಲು ಕುಡುದೇ ಯೊಟು? ತಾಯಿ ಯದೆ ಹಾಲು ಕುಡುದಿದ್ದರೆ ಯಿನ್ನೇಟು ಸಿದುಗಾಟ ಆಡುತ್ತಿತ್ತೋ, ಯಿ ಥಟಗು ವಯಸ್ಸಿಗೇ ಯೊಟು ಯಿನ್ನಲ್ಲಿದು ಹತ್ತನ್ನೊಂದು ತುಂಬುವುದರೊಳಗssನ ಹರಯಕ್ಕೆ ಬಂದು ಬಿಡುವುದೋ? ಬಂದು ಮದುವೆ ಮಾಡೂಂತ ತಮ್ಮರ ಮನೆಗೆ ಕಲೆ ಬೀಳುವುದೋ ಯಂದು ಮುಂತಾಗಿ ಅರೆಮನೆ ಪಡುತಲಿದ್ದುದು ಸಂಭರಮವೋ? ಯಸನಮೋ ವಂದೂ ಅರಿಯದಾಂಗಾಗಿತ್ತು ಸಿವನೇ.. ಮೊದಮೊದಲ ತಾಯಿಯಿಲ್ಲದ ತಬ್ಬಲಿ ಅಂತ ನೋಡಲಕ ಬರುತ್ತಿದ್ದವರು ದಿನಗಳದಂತೆ ಅದರ ಅಗಾಧ ಬೆಳವಣಿಗೆ, ಸಿಡುಗಾಟ ನೋಡುವ ಸಲುವಾಗೇ ಬಂದು, ನೋಡಿದಾದ ಮ್ಯಾಲ ಮೂಗಿನ ಮ್ಯಾಲ ಬೊಟ್ಟಿಟುಕೊಂಡು ಹೋಗ ತೊಡಗಿದರು ಸಿವನೇ.. ನೋಡುವ, ನೋಡಿ ಬೆರಗಾಗುವ ಪ್ರಕ್ರಿಯೆ ಕೇವಲ ಸದರಿ ಪಟ್ಟಣಕ್ಕssನೇ ಮೀಸಲಾಗಿರಲಿಲ್ಲ.. ಅಕ್ಕಪಕ್ಕ ಹಳ್ಳಿಪಳ್ಳಿಗಳಿಂದಲೂ ಅಬಾಲರುದ್ದರಾದಿಯಾಗಿ ಸರುವನ್ನೊಂದು ಮಂದಿ ಬಂದು ಹೋಗಲಾರಂಭಿಸಿದುದನು ಯೇನೆಂದು ಹೇಳಲಿ ಮಾದೇವಾss.. ಅದಕ್ಕ ದ್ರುಸ್ಟಿ ತಾಕುವುದನ್ನು ತೆಗೆಯುವ ಸಲುವಾಗಿ ಸದರಿ ಅರೆಮನೆಯು ವಂದು ಯಿಲಾಖೆಯನ್ನೇ ತೆರೆಯದೆ ಯಿರಲಿಲ್ಲ..

ಹಿಂಗೇ ಯಿರುತ್ತಿರಲಾಗಿ ಮುಂದೊಂದಿವಸ ಆ ಕೂಸು ನಾಪತ್ತೆಯಾಗಿ ಬಿಟ್ಟು ತನಗಿಟ್ಟ ಹೆಸರನ್ನು ಸಾರ್ಥಕ ಪಡಿಸಿಕೊಂಡು ಬಿಡಬೇಕೆ.. ಕಾಳ್ಗಿಚ್ಚಿನಂತೆ ಹಬ್ಬಿದ ಯಿೂ ಸುದ್ದಿಯಿಂದಾಗಿ ಅರಮನೆಯೊಂದೇ ಯಾಕ ಸದರಿ ಪಟ್ಟಣ ವಂದೇ ಯಾಕ ಯಿಡೀ ಸೀಮೆಯೇ ಬೆಚ್ಚಿ ಬಿತ್ತು.. ಅರಮನೆಯ ದುಕ್ಕ ಪಟ್ಟಣವನ್ನು ತೊಯ್ದು ತಪ್ಪಟಿ ಮಾಡಿತು..

ಅದನ್ನು ತೊಡೆ ಮ್ಯಾಲ ಹಾಕ್ಕೊಂಡು ರಂಗವ್ವ ಹಂಗ ಅಂಗಾತ ಮಲಕ್ಕೊಂಡು ನಿದ್ದೆ ಹೋಗಿ ದ್ದಳಂತೆ.. ಕೂಸು ಯದೆ ಮ್ಯಾಲಕ ಬಂದು ಕೂಕಂಡಿತಂತೆ.. ಅದು ಆಕೇಯ ಕುತ್ತಿಗೆ ಹಿಚುಕಿ ಕೊಲ್ಲುವ ಪ್ರಯತ್ನ ಮಾಡಿತಂತೆ.. ತನಗ ವುಸುರುಗಟ್ಟಿದಂತಾಗಲು ಕಣ್ಣು ಬಿಟ್ಟು ನೋಡಿದಳಂತೆ.. ಕೂಸು ಗಹಗಹಿಸಿ ನಗಾಡಿತಂತೆ.. ಕೊಸರಿ ತಳ್ಳಿದೇಟಿಗೆ ಅದು ಬಾದಾಳದ ಕಡೆ ಜಿಗಿದು ಬಯಲೊಳಗ ಮಾಯವಾಯಿತಂತೆ.

ಡಾಣಾಪುರದ ದಾಯಾದಿಯಾದ ನಾಗಲಾಪುರದ ಪೆದ್ದದೊಡಿನಾಯಕ ಆಸ್ತಿಸಲುವಾಗಿ ಅದನಪಹರಣ ಮಾಡಿರುವನಂತೆ....

ಚಿನ್ನಾಸಾನಿಯ ಆತುಮವೇ ಅದನು ಕದ್ದೊಯ್ದಿರುವುದಂತೆ..

ಅದೇ ತನ್ನ ತಾಯಿಯನ್ನು ಹುಡುಕಿಕೊಂಡು ಹೋಗಿರುವುದಂತೆ..

ಲೆಕ್ಕ ಹಾಕಿದರೆ ಯಿಂಥ ಅಂತೆ ಕಂತೆಗಳು ಮನಾರ ಯಿರುವವು ಸಿವನೇ...

ಯಿದರೊಳಗೆ ನಿಜ ಯಾವುದೋ ಸುಳ್ಳು ಯಾವುದೋ ಆ ಭಗವಂತನಿಗೇ ಗೊತ್ತು..? ಯಾರು ಯೇನು ಮಾಡಿದರೂ ಅಸಲೀ ಹಕೀಕೆತ್ತು ಹೊರ ಹೊಂಡಲಿಲ್ಲ.. ಅದ್ರುಸ್ಸವಿದ್ಯೇನ ಕರತಲಾಮಲಕ ಮಾಡಿಕೊಂಡಿದ್ದ, ಅದರ ಸಾಯದಿಂದಲೇ ಹತ್ತಾರು ಪಾಳೆಪಟ್ಟುಗಳನ್ನು ಗೆದ್ದು ಡಣಾಪುರ ರಾಜ್ಯವನ್ನು ವಿಸ್ತರಿಸಿದ್ದ ತಮ್ಮ ಪೂರುವಿಕ ಅದ್ರುಸ್ಯ ನಾಯಕನ ಹೆಸರನು ಯಿಡೋದು ಬ್ಯಾಡಾಂತ ಅರಮನೆಯ ಆಸ್ಥಾನ ಜೋತಿಷಿಗಳು ಗಿಣೀಗೆ ಹೇಳಿದಂತೆ ಹೇಳಿದ್ದರೂ ಅರಮನೆ ಕಿವಿಮ್ಯಾಲ ಹಾಕ್ಕೊಂಡಿರಲಿಲ್ಲ.. ಜನುಮನಾಮ 'ಅ' ಅಂತ್ ಬಂತು.. ಅದಕ ಅದ್ರುಸ್ಯ ನಾಯಕ ಅಂತ ಯಾರೋ ಕರೆದು ಬಿಟ್ಟರು. ಯಿೂಗೇನು ಮಾಡಲಕಾದೀತು? ಕೂಸನು ಹುಡುಕಿಸಿ ತರಿಸುವ ಸಲುವಾಗಿ ಯಿಡೀ ಸಾಮುರಾಜ್ಯ ಹೋದರೂ ಹೋಗಲಿ.. ಸಿಕ್ಕಿದ ಮ್ಯಾಲ ಅದಕ ಯಿನ್ನೊಂದ ಹೆಸರು ಯಿಟ್ಟರಾತು.. ಯಿೂಗ ಸದ್ಯಕ...

ಕೂಸನು ಹುಡುಕಲಕ ಹೋದ ಪದಾತಿ ದಳ ಹೋತೂss ಹೋತೂss

ಹಂಗs ಹೋಗೇ ಬಿಟ್ಟಿತು. ಅದನು ಹುಡುಕಿ ತಂದುಕೊಟ್ಟವರಿಗಿಷ್ಟು.. ಅದರ ಸುಳಿವು ನೀಡಿದವರಿಗಷ್ಟು ಯಂದು ಡಂಗೂರನ ಬ್ಯಾರೆ ಸಾರಿಸಿದ್ದರಲ್ಲ.. ಅದಕ ದವುಳೇರಾಗಬೇಕೆಂದೋ, ರಾಜನಿಷೆ«ಯಿಂದೋ.. ಚಿನ್ನಾಸಾನಿ ಮ್ಯಾಲಣ ಪ್ರೀತಿಯಿಂದೋss.. ಸದರಿ ಪಟ್ಟಣದ ಮಂದಿಯೊಂದೆ ಅಲ್ಲದ ಆಜೂ ಬಾಜೂಕಿದ್ದ ಗ್ರಾಮದ ಮಂದಿ ತರಾತುರೀಲೇ.. ನಿಂತ ನಿಲುವೀಕೀಲೆ ಹೊಂಟು ನಿಂತರು..ಅವರವರ ಹೆಂಡಂದಿರು, ತಂದೆ ತಾಯಂದಿರು, ವಡಹುಟ್ಟಿದೋರು "ಬ್ಯಾಡ, ಕೂಸಿನ ವುಸಾಬರಿಗೆ ಹೋಗಬ್ಯಾಡೂರಿ" ಯಂದು ಹೇಳುತ ತರುಬಲೆತ್ನವ ಮಾಡಿದರೂ ಅವರು ಹೆಂಗೆಂಗ ದಾರಿ ಗೋಚರ ಮಾಡುವುದೋ ಹಂಗಂಗ ಹೊಂಟೇ ಬಿಟ್ಟರು....

ಹುಡುಕಲಕ ಹೋದ ಗಂಡಂದಿರ ಕನವರಿಕೆಯಲ್ಲಿದ್ದ ಹೆಂಡಂದಿರ, ಹುಡುಕಲಕ ಹೋದ ಮಕ್ಕಳ ಕನವರಿಕೆಯಲ್ಲಿದ್ದ ತಂದೆ ತಾಯಂದಿರ, ಹುಡುಕಲಕ ಹೋದ ತಂದೆಗಳ ಕನವರಿಕೆಯಲ್ಲಿದ್ದ ಮಕ್ಕಳು ಮರಿಗಳ.. ಹುಡುಕಲಕ ಹೋದ ತಮ್ಮ ಸೂರಪರಾಕ್ರಮಿ ಪ್ರಿಯಕರರ ಕನವರಿಕೆಯಲ್ಲಿದ್ದ ಪ್ರಿಯಂವದೆ ಯರ.. ಹುಡುಕಲಕ ಹೋದ ಅಣ್ಣಂದಿರ ಕನವರಿಕೆಯಲ್ಲಿದ್ದ ತಮ್ಮಂದಿರ.. ಹುಡುಕಲಕ ಹೋದ ಗೆಳೆಯರ ಕನವರಿಕೆಯಲ್ಲಿದ್ದ ಜೀವದ ಗೆಣೆಕಾರರ.. ಹುಡುಕಲಕ ಹೋದ ಹರೇದ ಗಣುಮಕ್ಕಳ ಕನವರಿಕೆಯಲ್ಲಿದ್ದ ರುದ್ದರ.. ಹುಡುಕಲಕ ಹೋದ ಶಿಷ್ಯಂದಿರ ಕನವರಿಕೆಯಲ್ಲಿದ್ದ ಗುರುಗಳ ಮನೋಯಾಕುಲವನ್ನು ಯೇನೆಂದು ವರಣನ ಮಾಡುವುದು ಸಿವನೇ.. ಹೋದವರು ಹೋಗೇ ಬಿಟ್ಟಿರು ವರಲ್ಲಾ.. ಅವರಿಗೆ ಅವರವರ ಮನೆ ಸಮುಸಾರದ ಪುಸಾಬರಿ ವಂಥಟಗಾರ ಯಿರುವುದು ಬ್ಯಾಡವೇನು? ವಂದೆಲ್ಡು ದಿನ ಹುಡುಕಿದಾಂಗ ಮಾಡಿ ವಾಪಾಸು ಬರಲಕ ಅವರಿಗೇನು ದಾಡಿ.. ಯಂದು ಮುಂತಾಗಿ ಅವರೆಲ್ಲ ಗಳಿಗ್ಗಳಿಗ್ಗೊಮ್ಮೆ ನಿಟ್ಟುಸುರು ಬಿಡುತಲಿದ್ದುದೇನು? ಜಾವ ಜಾವಕ್ಕೊಂದೊಂದು ಸಲ ಆಟು ದೂರ ಹೋಗಿ ಹುಬ್ಬಿಗೆ ಕಯ್ಯನ್ಹಚ್ಚಿ ದೂರದವರೆಗೆ ನಿಟ್ಟಿಸುತಲಿದ್ದುದೇನು? ದುಡಿಯೋರೇ ಹೋದ ಮ್ಯಾಲ ತಮ ತಮ್ಮ ಮನಿಗಳ ಬಾಳೇವು ನಡಿ ಅಂದರ ಹೆಂಗ ನಡೆದೀತು.. ಯಂದು ಯೋಚಿಸುತ್ತಲೇ ಹೆಣ್ಣುಮಕ್ಕಳು ಅವರಿವರ ಹತ್ರಕಯ್ಯಿಗಡ ಸಾಲ ಸೋಲ ಮಾಡೇ ಮಾಡಿದರು. ಕೊಡೋರು ಯಷ್ಟಂತ ಕೊಟ್ಟಾರು? ಯಾರು ನಿಮ ನಿಮ್ಮ ಗಂಡಂದಿರ ಮೂಗಿಗೆ ಯಿನಾಮುಯಂಬುವ ತುಪ್ಪ ಹಚ್ಚಿ ಕಾಡಡವಿಗೆ

ಗದುವ್ವ್ಯಾರೋ.. ಅವರ್ನೇ ಕೇಳು ಹ್ವಾಗ್ರಿಯಂದು ಕಯ್ಯಿ ಬಾಯಿ ನಡೆಯುತ್ತಿದ್ದವರು ಬಂದವರಿಗೆ ಮುಖ ಮುಲಾಜಿಲ್ಲದೆ ಹೇಳೇಬಿಟ್ಟರು. ಅದೂ ಖರೇವನ್ನಿಸಿ ಹೆಣುಮಕ್ಕಳು ಅರಮನೆಯ ಮುಂದೆ ಸಾಲಗಟ್ಟಿದವರು ಸಿವನೇ... ದೊರೆಯೇ ನಮ್ಮ ನಮ್ಮ ಗಂಡಂದಿರು ವಾಪಾಸಾಗೋ ಮಟ ನಮ ನಮ್ಮ ಸಮುಸಾರವನ್ನು ನೀವೇ ನಡೆಸಬೇಕು ಯಂದು ಕೇಳಿಕೊಂಡಿದ್ದೇನು ಸಿವನೇ?.. ಅರಮನೆಯ ಸವುಭಾಗ್ಯೇವೆಲ್ಲ ಘನಸೊಸ್ತೆಯ ಹಿಂದ ಹಿಂದ ಹೋಗಿಬಿಟ್ಟಿತ್ತು.. ಸೊಯಾರ್ಜಿತ ಸ್ಥಿರಾಸ್ತಿ, ಚರಾಸ್ತಿ ಯಲ್ಲಾವು ಆ ಹುತಾತುಮೆಯ ಬೆನ್ನ ಹಿಂದ ನಡಕೊಂತ ಹೋಗಿ ಮಸಣಸೇರಿ ಬಿಟ್ಟಿತ್ತು.. ನೂರಾರು ಸಮುಸಾರಗಳನ್ನು ನೋಡು ಅಂದರ ಹೆಂಗ ನೋಡ್ಯಾನು ರಾಜ? “ನೋಡಿರಮ್ಮs ನಾವು ವುಂಡಲ್ಲಿ ವುಣ್ಣಿರಿ.. ನಾವು ವುಪಾಸಯಿದ್ದರೆ ನೀಮೂವುಪಾಸ ಯಿರೀರಿ.. ಯಿರೋ ವಂದು ರೊಟ್ಟೀನಿ ನಾವೆಲ್ಲರೂ ಹಂಚಿಕೊಂಡು ತಿನ್ನೋಣ” ಯಂದು ರಾಜ ಹೇಳಿದ್ದಕ್ಕೆ ಸಂತರಸ್ತ ಪ್ರಜೆಗಳೆಲ್ಲ ಮಮ್ಮಲನ ಮರುಗಿದರು.

ಅರಮನೆ ದಣದಯ್ತೆ.. ಯಿದನು ನೆಟ್ಟಿಗೆ ಮಾಡೋದು.. ಸಾಂಬಾಳಿಸೋದು ಪ್ರಜೆಗಳ ಕರ್ತವ್ಯ ಅಯ್ತೆ ಯಂದೊಂದಿವಸ ರಾಜನು ಆಸ್ಥಾನದಲ್ಲಿ ಕರೆ ನೀಡಿದ ಪರಿಣಾಮವಾಗಿ ಪಟ್ಟಣದಲ್ಲಿದ್ದ ಹಿರಿ ವತನದಾರರು ತಮ ತಮ್ಮ ಅಗೇವುಗಳನ್ನು ತೆರೆದು ಕಾಳು ಕಡೀನೆಲ್ಲ ಬಡ ಬಗ್ಗರಿಗೆ ಯತೇಚ್ಛ ದಾನ ಮಾಡಿದರು. ಹಸಕಂಡೋರಿಗೆ ಅಲ್ಲಲ್ಲಿ ಅನ್ನದ ಛತ್ರಗಳು.. ಬಾಯಾರಿದವರಿಗಲ್ಲಲ್ಲಿ ನೀರಿನರವಟ್ಟಿಗೆಗಳು.. ದುಕ್ಕ ದುಮ್ಮಾನಿತರಿಗಲ್ಲಲ್ಲಿ ಪುರಾಣಪುಣ್ಯ ಸ್ರವಣಗಳು ನೆರವೇರಿಕೆಯಾದವು ಸಿವನೆ...

ಗಂಡಂದಿರ ಕನವರಿಕೆಯಲ್ಲಿದ್ದ ಹೆಂಡಂದಿರ, ಮಕ್ಕಳ ಕನವರಿಕೆಯಲ್ಲಿದ್ದ ಹೆತ್ತಂದೆ ತಾಯಂದಿರ, ಗೆಣೆಗಾರರ ಕನವರಿಕೆಯಲ್ಲಿದ್ದ ಗೆಣೆಗಾರರ, ಶಿಷ್ಯಂದಿರರ ಕನವರಿಕೆಯಲ್ಲಿದ್ದ ಗುರುಗಳ, ಪ್ರಿಯತಮರ ಕನವರಿಕೆಯಲ್ಲಿ ಪ್ರಿಯಂವದೆಯರ ಮನದೊಳಗೆ ಮಾಯಾವಿ ಕೂಸು ಮುಳುಗೇಳಲಾರಂಭಿಸಿತಂತೆ. ಕನಸುಗಳಲ್ಲಿ ದುತ್ತಂತ ಮೂಡಿ ಮರೆಯಾಗಲಾರಂಭಿಸಿತಂತೆ. ಕಣ್ಣ ವಪೆಗಳ ನಡುವೆ ಕೂಡಿ ಕಳೆಯ ಲಾರಂಭಿತಂತೆ. ಕಿವಿಗಳ ತಮ್ಮಟೆಗಳನ್ನು ಡಡ್ಡೆಣಕ್ಕ.. ಣಕ್ಕ.. ಣಕ್ಕ.. ಯಂದು ಭಾರಿಸಲಾರಂಭಿಸಿತಂತೆ.. ಅಯ್ಯೋ ನನ ಕಣ್ಣೊಳಗೆ.. ಅಯ್ಯೋ ನನ ಕಿವಿಯೊಳಗೆ.. ಅಯ್ಯೋ ನನ ಮನದ ಜಗಲಿಯ ಮ್ಯಾಲ ಯಂದುದ್ಗಾರ ತೆಗೆಯತೊಡಗಿದವರನ್ನು ಸಾಂಬಾಳಿಸುವುದು ಹ್ಯಾಂಗ ಸಿವನೇ.. ಯಿದು

ಹೇಳೋ ಮಾತಲ್ಲ ಅಂತನ್ನುವುದು ಹ್ಯಾಂಗ ಸಿವನೇ.. ಯಿದು ಕೇಳೋ ಮಾತಲ್ಲಾಂತನ್ನುವುದು ಹ್ಯಾಂಗ ಸಿವನೇ..

ಅದರ ಕಡೀಕ ಧ್ಯಾಸ ಮಾಡಿಕೋ ಬ್ಯಾಡಿರಿ.. ಪುರಾಣ ಪುಣ್ಯ ಸ್ರವಣದ ಕಡೇಕ ಗಮನ ಕೊಡಿರಿ ಯಂದು ಮುಂತಾಗಿ ಅರಮನೆಯವರು ಡಂಗುರ ಸಾರಿಸಿದ ನಂತರವೂವಾಟಗಾರ ಕೂಸು ನೀರು ಸುರಿಂಯೋ ಹಂಡೇವಿನೊಳಗ.. ಕಾಳುಕಡಿಯಿಡೋ ಅಡಕಲ ಗಡುಗೆಗಳೊಳಗ.. ಕೂಳು ಬೇಯೋ ಚರಕಲಿಗಳೊಳಗ.. ವುಂಬುವ ತಟ್ಟೆಗಳೊಳಗ.. ಕುಡಿಯೋ ಲೋಟ್ಯಾಗಳೊಳಗ.. ಕಯ್ಯಿಗೆತ್ತಿಕೊಂಡ ತುತ್ತುಗಳೊಳಗ.. ಡೇಗಿದ ಡೇಗುಗಳೊಳಗ.. ಮಯ್ನ ಚೆಲ್ಲೋ ಹಾಸಿಗೆಗಳೊಳಗ.. ಹೊದ್ದುಕೊಳ್ಳೋ ದುಪ್ಪಟಿಗಳೊಳಗ.. ಹಿಂಗss ಯಲ್ಲಂದರಲ್ಲಿ ಕಾಣಿಸಿಕೊಳ್ಳಲಾರಂಭಿಸಿದಂತಾಗಲು ಮಂದಿ ಹಂಡೇಗಳೊಳಗ ನೀರು ಸುರಿಯೋದನ್ನು ಬಿಟ್ಟರಂತೆ.. ಲೋಟ್ಯಾಗಳೊಳಗಿಂದ ನೀರು ಕುಡಿಯೋದನ್ನು ಬಿಟ್ಟರಂತೆ.. ಅಡಕಲ ಗಡುಗೆಗಳನ್ನು ಯತ್ತಾಡುವುದನ್ನು ಬಿಟ್ಟರಂತೆ.. ಬಾನ ವುಂಬೋದನ್ನು ಬಿಟ್ಟರಂತೆ.. ಡೇಗುವುದನ್ನು ಬಿಟ್ಟರಂತೆ.. ಹೂಸುವುದನ್ನು ಬಿಟ್ಟರಂತೆ.. ಹಾಸಿಗೆಗಳ ಮ್ಯಾಲ ವುರುಳೋದನ್ನು ಬಿಟ್ಟರಂತೆ.. ದುಪ್ಪಟಿಗಳ ಹೊದ್ದುಕೊಳ್ಳುವುದನ್ನು ಬಿಟ್ಟರಂತೆ.. ರೆಪ್ಪೆಗೆ ರೆಪ್ಪೆ ಅಂಟಿಸುವುದನ್ನು ಬಿಟ್ಟು ಅಲ್ಲಿಂದಿಲ್ಲಿಗೆ, ಯಿಲ್ಲಿಂದಲ್ಲಿಗೆ ಅಂಡಲೆಯುತ್ತಿದ್ದುದನ್ನು ಯೇನೆಂದು ಹೇಳಲಿ ಸಿವನೇ..

ಯಿದು ಅರಮನೆಯ ಮಂದಿಗೆ ಬಲು ಚೋಜಿಗಯಂಬಂತೆ ಕಂಡಿತು. ಸುತ್ತನ್ನಾಕಡೇಲಿದ್ದ ನಾನಾಯಿಧದ ತಂತ್ರಗಾರರನ್ನ.. ಮಂತ್ರಗಾರರನ್ನು ಕರೆಯಿಸಿಕೊಂಡು ಅವರೊಂದಿಗೆ ಸಮಾಲೋಚನೆ ನಡೆಸಿದರು. ಅದನ್ನು ಕೇಳಿ ಆ ವಾಮಯಿದ್ಯಾಯಿಸಾರದರು ಕೂಸು ಮೂರ ಮೇರೆ ದಾಟದಂಗೆ ನಿರ್ಬಂಧಿಸಲು ಹಾದಿ ಹಾದಿಗೊಂದೊಂದರಂತೆ ಯಿದ್ದ ಕರಗಲ್ಲುಗಳಿಗೆ ಪ್ರಾಣ ಬಲಿಕೊಟ್ಟು ಹೋಮ ಹವನ ಮಾಡಿ ಭೂತಾಳ, ಬೇತಾಳ, ಕಂಕಾಳಗಳನ್ನು ಕಾವಲಿಟ್ಟರು.. ಪಟ್ಟಣದ ಮೇರೆಗುಂಟ ಸರಗ ಚೆಲ್ಲಿದರು.. ಕುಡಿಯೋ ನೀರಿಗೆ ವುಂಬುವ ಬಾನಕ್ಕ, ದವಸ ಧಾನ್ಯಗಳಿಗೆ.. ಮಯ್ನ ಚೆಲ್ಲೋ ಹಾಸಿಗೆಗಳಿಗೆ, ಹೊದ್ದುಕೊಳ್ಳೋ ದುಪ್ಪಟಗಳಿಗೆ ಹಾಕಲಕಂದು ವುದುಕವ ಮಂತ್ರಿಸಿ ಕೊಟ್ಟರಂತೆ ಸಿವನೇss..

ಯಿದೆಲ್ಲ ಆದ ಅರಗಳಿಗೆ ತರುವಾಯ ಸದರಿಪಟ್ಟಣದೊಳಗ ಯಿದ್ದಂಥ ತಾಯುಂದಿರು ಕೂಸೊಂದು ತಮ್ಮನೆಂಯೊಳಗೆಲ್ಲೋ ಬೋರಾಗಿ

ಅಳುತ್ತಿರುವಂತೆಯೂ.. ತಮ್ಮೆದೆಗಳನ್ನೇರಲು ಹಾತೊರೆಯುತ್ತಿರು ವಂತೆಯೂ.. ಯದೆಯೇರಿ ತಮ್ಮ ಮೊಲೆಗುಂಡಿಗಳಿಗೆ ಬಾಯನ ಯಿಕ್ಕುತ್ತಿರುವಂತೆಯೂ.. ಪಿಚಿ ಪಿಚಿ ಜಿಬುಕಿ ಹಾಲು ಕುಡಿಯುತ್ತಿರುವಂತೆಯೂ.. ತಮ್ಮೆದೆಯ ಹಾಲು ಖಾಲಿಯಾದಂತೆಯೂ.. ತೊಟ್ಟಿಲು, ಜುವ್ವಾಲಿಗಳು ಕುಸಿದು ಬಿದ್ದಂತೆಯೂ ಭಾವಿಸಲಾರಂಭಿಸಲು ಅವಕ್ಕೆಲ್ಲ ಮಂತರೋಪಚಾರ ನಡೆಸಲಾಯಿತು ಸಿವನೇ.. ಸದರಿ ಪಟ್ಟಣದೊಳಗಯಿದ್ದಂಥ ತುಂಬು ಗರುಭವತಿಯರು ಯೇನಿದ್ದರು ಅವರೆಲ್ಲ ಅಯ್ಯೋ ತಮ್ಮ ಹೊಟ್ಟೆ ಯಾದೋ ಕೂಸಿನ ಆಡುಂಬೊಲ ಆದಂತಯಿತಲ್ಲಾ.. ತಮ್ಮ ಬಸಿರೊಳಗ ಯಾದೋ ಕೂಸು ಪಕಪಕನೆ ನಗಾಡುತ್ತಿರುವಂತೆ ಭಾಸವಾಗುತ್ತಿರುವುದಲ್ಲಾ.. ತಮ್ಮ ಸರೀರದ ಸಮಸ್ತ ಕಸುವನ್ನು ತಿಂದದು ಡೇಗುತ್ತಿರುವಂತೆ ಭಾಸವಾಗುತ್ತಿರುವುದಲ್ಲಾ.. ತಮ್ಮ ಮಿದುಳಿನ ನೆನಪಿನ ಕೋಶವನ್ನು ಗಬಗಬನೆ ತಿಂದಂತೆ ಭಾಸವಾಗುತ್ತಿರುವುದಲ್ಲಾ.. 'ಯವ್ವಾ...ಹೊಟ್ಟೆ ಹರಕೊಂಡು ಹೊರಗಬರಲೇನು? ಅಂಬೆಗಾಲಿಟ್ಟು ವಳ ಹೊರಗ ಅಡ್ಡಾಡಲೇನು? ಹಾಲು ಕೊಡೋ ಕೆಚ್ಚಲ ತಿನ್ನಲೇನು? ಆಡೋ ಅರಗಿಳೀನ ತಿನ್ನಲೇನು? ಕುಣಿಯೋ ನವುಲನ್ನು ತಿನ್ನಲೇನು ಯಂದು ಮುಂತಾಗಿ ಕಾಡಾಡುತ್ತಿರುವಂತೆ.. ಭಾಸವಾಗತೊಡಗಿತಂತೆ.. ಅದರಿಂದವರು ಅಯ್ಯೋ ನನಗೀ ಬೊಸುರು ಬ್ಯಾಡಾ.. ಯಾರಾದರು ಬೊಸುರಿಳಿಸಿ ಪುಣ್ಯ ಕಟ್ಟಿಕೊಳ್ಳಿರಪ್ಪಾ.. ಯಂದು ಮತಿ ಭ್ರಮಣೆಗೊಳಗಾದವರಂತ ಕೂಗಾಡುತ್ತಿದ್ದುದರ ಬಗ್ಗೆ ಯೇನು ಹೇಳಲಿ ಸಿವನೇ..

ಹಿಂಗs ಸದರಿ ಡಣಾಪುರ ಪಟ್ಟಣದ ಮಂದಿ ಅಲ್ಲಾಕ ಬಲ್ಲಾಕ ಆದರು. ವಬ್ಬೊಬ್ಬರ ಭ್ರಮಾದೊಳಗ ಮೂಡಿ ಕಾಡುತ್ತಿರುವ ಕೂಸು ಹಿಂಗಿರಬೌದಾ... ಹಂಗಿರಬೌದಾ.. ಅದಕ ಗಡ್ಡ ಮೀಸೆ ಮೂಡಿದ್ದಿರ ಬೌದಾ... ಅದರ ಕೆಂದುಟಿ ಬಾಯೊಳಗ ಕ್ವಾರೆ ಹಲ್ಲುಗಳಿದ್ದಿರಬೌದಾ.. ಅದು ರೂಪದೊಳಗ ಹಲ್ಲಿ ಬಲ್ಲಿಯಂಗಿದ್ದಿರಬೌದಾ.. ಯಂಬ ತರಾವರಿ ಪ್ರಶ್ನೆ, ಸಂದೇಹಗಳ ಗೂಡಾದರು.. ಅಲ್ಲಿದ್ದ ಸ್ರುಜನಶೀಲ ಕಲಾಯಿದರು... ಅವರೆಲ್ಲರ ಕಲ್ಪನಾ ಲೋಕದೊಳಗ ಕೂಸು ನಾನಾ ರೂಪ ತಳೆದು ವಿಹರಿಸಲಾರಂಭಿಸಿತು.. ಅದರಿಂದ ಹುಟ್ಟಿಕೊಂಡ ತಯ್ಲುವರಣಿನ ಚಿತ್ರಗಳ ಬಗ್ಗೆಯೇನು ಹೇಳಲಿ ಸಿವನೇ... ಜಾನಪದಗಾರರ ಗೀಗೀ, ಲಾವಣಿ, ಸೋಬಾನೆ ಪದಗಳ ಬಗ್ಗೆ ಯೇನು ಹೇಳಲಿ ಸಿವನೇ, ಕಥಿ ಕಾವ್ಯಗಳ ಬಗ್ಗೆ ಯೇನು ಹೇಳಲಿ ಸಿವನೇ....

ಸದರಿ ಪಟ್ಟಣದ ಮಂದಿಯ ಭ್ರಮಾನೋ.. ಅಯ್ಯೋ.. ಅದರ ಕನವರಿಕೆ ಮಾತ್ರದಿಂದಲೇ ಯೀಟೊಂದು ಬೆಬ್ಬಳಿಕೆ ಮಾಡುವರೆಂದ ಮ್ಯಾಲ ಅದೇ ವಾರ ದುತ್ತನೆ ಪ್ರತ್ಯಕ್ಷಗೊಂಡಲ್ಲೇನು ಗತಿ? ವಾಪಾಸು ಬಂದೋರು ಬಂದದ್ದೆ ಅವರವರ ಹೆಂಡಂದಿರ ಸವುಭಾಗ್ಯವು.. ಯಾರು ವಾಪಾಸು ಬರಲಿಲ್ಲಮೋ ಅದು ಅವರವರ ಹೆಂಡಂದಿರರದು ದವುರುಭಾಗ್ಯವು.. ಸಿವ ಮಾಡಿದಂಗಾಗಯ್ತೆ ಅಂತ ಸಿವನ ಮ್ಯಾಲ ಭಾರ ಹಾಕಲಕ ಯಿವರಿಗೇನು ಧಾಡಿ?

ಆದರಾ ಕೂಸಿನ ವಂದಲ್ಲಾ ವಂದು ದುರ್ವಾರ್ತೆಗಳು ಅಕಪಕ್ಕದಲ್ಲಿದ್ದ ಗ್ರಾಮಗಳಿಂದ ಮೊದ ಮೊದಲು ಕೇಳಿ ಬಾರದೆ ಯಿರಲಿಲ್ಲ. ನೆರಣಿಕೆ ಗ್ರಾಮದ ಮೂಲಿಮನಿ ತಿರುಗಮ್ಮ ಅದೇ ಯಿನ್ನು ಯರಡು ತಿಂಗಳ ಬಾಣಂತಿ. ತುಸು ಹೊತ್ತ ಹಿಂದ ಹಡದಿದ್ದೆ ಕಂದಮ್ಮನ್ನ ಅದೇ ಯಿನ್ನು ಜುವ್ವಾಲೆಯಲ್ಲಿ ಹಾಕಿಳೊಳ್ಳಳ್ಳಾಯಿ ಹಾಡಿ ಅಂಗಾತ ಮಲಕ್ಕೊಂಡಿದ್ದಳಂತೆ.. ಸೆಕೆ ಸೆಕೆ ಆತಂತ ಗಂಡ ಮನೆ ಹೊರಗಡೆ ಅಂಗಳದಲ್ಲಿ ತಂಗಾಳಿಗೆ ಮಯ್ಯು ಚೆಲ್ಲಿ ಮಲಗಿಕೊಂಡೊಡನೆ ಗೊರಕೆ ಯೇರಿಸಿದ್ದನಂತೆ. ಹಗಲೆಲ್ಲ ಬೊದುಕಿಗೆ ಹೋಗಿ ಬಂದಿದ್ದ ತಿರುಗಮ್ಮ ಮಯ್ಯ ಮ್ಯಾಲ ಖಬುರಿಲ್ಲದಂಗ ಮಲಗಿದ್ದಳಂತೆ.. ಹಂಗs ಆಕಿ ಕಂಡ ಕಣಸಿನಲ್ಲಿತನ್ನ ಕಂದಮ್ಮ ಜುವ್ವಾಲಿಯಿಂದ ಯಿಳಿದು ಬಂದಂಗಾತಂತೆ.. ಸರಸರ ಬಂದದ್ದೆ ಕಿಪ್ಪೊಟ್ಟೆ ಮ್ಯಾಲ ಕೂಕಂಡು ಕುಬುಸದ ಗುಂಡಿ ಬಿಚ್ಚಿ ಮೊಲೆಗಳನ್ನು ಹಾರೊಡೆದಂಗಾತಂತೆ.. ತುಂಬು ಮೊಲೆಗಳನ್ನು ಸವರಾಡಿದಾಂಗ.. ಮೊಲೆಗುಂಡಿಗಳನ್ನು ಬಾಯೊಳಗಿಟ್ಟುಕೊಂಡು ಜಿಬುಕಲಾರಂಭಿಸಿದಾಗ.. ವಂದs ವಂದ ಹನಿ ಬಿಡದಾಂಗ ಹಾಲು ಕುಡಿದಂಗ.. ಯಿದೇನಿದು ಕಬಸಗೇಡಿ ಮೊಲೆಗುಂಡೀನ ಕಡೀತಯ್ತುಲ್ಲಾ.. ಯಾವಾಗ ಹಲ್ಲು ಮೂಡಿದವಿದರ ಬಾಯೊಳಗ.. ಯಂದನಕಂತ ಮಗ್ಗುಲಿದ್ದ ಕಯ್ನ ಚಾಚಿ ಕಂದಯ್ಯನ ಮಯ್ನ ತಡಕಾಡಲು ವರುಟುರುಟು ತಗಲಿದಂಗಾತಂತೆ, ಮಂಪರಿನಲ್ಲಿದ್ದ ತಾನು ಹಂಗs ತಡಕಾಡಿ ಕಂತ ಕಂದಯ್ಯನ ಮುಖ ಭಾಗಕ್ಕೆ ಬಂದಳಂತೆ... ಮೊಳವರೆ ತಲೆಗೊದಲು, ಗೇಣುದ್ದ ಮೀಸೆ, ಗಡ್ಡ.. ಸೂಚಿಯಂಥ ಹುಬ್ಬು.. ಅಲ್ಲದ ಯದೆ ಮ್ಯಾಲ ಹೆಬ್ಬಂಡೆಯೇ ಕುಂತಯ್ತೇನೋ ಯಂಬ ಅನುಭವ.. ಯೇನಿದ್ದೀತು? ಯಾದಿದ್ದೀತು? ಅಂತ ಪಕ್ಕನೆ ಕಣ್ಣುಬಿಟ್ಟು ನೋಡುತ್ತಾಳೆ.. ಹಳ್ಳೆಣ್ಣೆ ದೀಪದ ಮಂದ ಬೆಳಕಿನಲ್ಲಿ ರಾಚ್ಚಸನೇ ಕೂಸಿನ ರೂಪದಲ್ಲಿ ಕುಂತಯ್ತೇನೋ ಅಂತೆದರಿ ಕಿಟಾರನೆ ಕಿರುಚಿ, ಬಾಯಿ ತೆರೆದು ಕ್ವಾರೆ ಝಳಪಿಸುತ್ತಿರುವ, ಕೆಕ್ಕರಿಸಿ

ನೋಡುತ್ತಿರುವ  ಆ ಯಿಚಿತ್ರಕೂಸನ್ನು ಅರ್ದಬಲದಿಂದ ಝೂಡಿಸಿ ತಳ್ಳಿದಳಂತೆ.. ತಳ್ಳಿದೇಟಿಗೆ ಪಕಪಕನೆ ನಗಾಡಿದ ಅದು ಸುರುಸುರು ಬತ್ತಿಯಂತೆ ಮ್ಯಾಲಕೆ ಚಿಮ್ಮಿ ಡಬಾಕ್ಲಿ ಮೂಲಕ.. ಆ ಗಲಾಟೆಗೆ ಅಂಗಳದಲ್ಲಿ ಮಲಕ್ಕೊಂಡಿದ್ದ ಗಂಡನೂ.. ಮಾಳಗಿ ಮ್ಯಾಲ ಮಲಕ್ಕೊಂಡಿದ್ದ ಅತ್ತೆ ಮಾವಂದಿರೂ.. ಆಜು ಬಾಜು ಮನೆಯವರಿ ತ್ಯಾದಿಯಾಗಿ.. 'ಯೇನಾತೆವ್ವಾ.. ಯೇನಾರ ಕೆಟ್ಟ ಕಣಸು ಗಿಣಸೇನಾರ ಕಂಡು ಗಿಂಡಿಯೇನವ್ವಾ..' ಯಂದು ಮುಂತಾಗಿ ಕೇಳಿದ್ದಕ್ಕೆ.. ಆಕೆ ಹಿಂಗಗಂತ ಹೇಳಿದ್ದಕ್ಕ.. ನಂಬುವಲ್ಲರು ಸಿವನ.. ನಂಬಧಾಂಗ ಯಿರವಲ್ಲರು ಸಿವನೇ? ಅಂಥಾದ್ದೊಂದು ಕೂಸು ಅಯ್ತಂದರೆ ಹೆಂಗ? ಯಿರಲಕಿಲ್ಲಾಂದರ ಹೆಂಗ!?

ಯಿಂಥ ಅನುವಾದ ಕೂಸೊಂದು ನನ್ನೆದಿ ಹಾಲು ಕುಡೀತು, ತನ್ನೆದಿ ಹಾಲನ ಕುಡೀತು ಯಂಬುವ ನಿನಾದ ಹಾಹಾಕಾರ ಮೋಣಿ ಆದ್ಯಂತ ಕೇಳಿ ಬರಲಾಗಿ ನಂಬದೆಯಿರಲಿಲ್ಲ.. ಗಂಡಿಂದಿರು ತಮ ತಮ್ಮ ಹೆಂಡಂದಿರ ಮೊಲೆಗಳಿಗೆ ಕಾವಲು ನಿಂತಿರಲಕ, ತಾಯಂದಿರು ರೆಪ್ಪೆಗೆ ಅಂಟಿಸಿ ನಿದ್ದೆ ಮಾಡದೆ ಯಿರಲಕ..

ಮಾಯಾವಿ ಕೂಸಿನ ಅಟಾಟೋಪ ಯಿನ್ನುಳಿಕೆ ಗ್ರಾಮಗಳಾದ ಯಲಗುಂದ, ಹೊಳಗುಂದ, ಯಲ್ಲಾರತಿ, ಮುದ್ದಾಪುರವೇ ಮೊದಲಾದ ಕಡೇಲೆಲ್ಲ.. ಸಿವನೇ.. ಯೀ ಗ್ರಾಮಕ್ಕೆ ಆ ಗ್ರಾಮಮೂ.. ಆ ಗ್ರಾಮಕ್ಕೆ ಯೀ ಗ್ರಾಮಮೂಕಾವಲು ನಿಂತಿರಲಕ.. ಗ್ರಾಮಗಳ ಸಮುಚ್ಛಯಗಳೇ ವಂದು ಕಡೆ ಕಲೆತು ಕೂಸೊಂದರ ಗೊಂಬಿ ಮಾಡಿ ನೀನು ಬಕಾಸುರನಪರಾವತಾರಮೋ.. ಸುಂಬ ನಿಸುಂಬರೇ ಮೊದಲಾದ ರಾಕುಸರರಪರಾವತಾರಮೋ.. ನೀನು ಕುಡಿತೀನಂದರ ಕೊಪ್ಪ ಕೊಪ್ಪರಿಗೆ ಹಾಲು ಕೊಡತೇವೆ.. ನೀನು ತಿನ್ನುವಿಯಾದರ ಕೊಳ ಕೊಳಗ ಬಾನ ಬೇಯಿಸಿಡುತೇವ.. ನಿನಗೊಂದು ವಯನಾದ ಗುಡಿ ಕಟ್ಟಿಸಿ ಕೊಡತೇವ.. ತ್ರಿಕಾಲ ಪೂಜಿ ಪುನಸ್ಕಾರಕ್ಕೆ ಯೇರುಪಾಡು ಮಾಡುತೇವು ಯಂದು ಮುಂತಾಗಿ ಗಗ್ಗರಿಸಿ ಬೇಡಿಕೊಳ್ಳಲಾರಂಭಿಸಿದುದರ ಬಗ್ಗೆ ಯೇನು ಹೇಳುವುದು ಸಿವಸಂಕರ ಮಾದೇವಾss.. ಕೂಸು ನನ್ನೊಳಗ ಮೂಡಿತು, ತನ್ನೊಳಗ ಮೂಡಿತು ಯಂದು ಥೇಟ್ ಕೂಸಿನಂತೆ ವರ್ತನ ಮಾಡಲಾರಂಭಿಸಿದ ಮಂದಿ ವಬ್ಬರಾ.. ಯಿಬ್ಬರಾ.. ಅಂಥವರಿಗೆ ಅಗೋ ಅಲ್ಲೊಂದು ತೊಟ್ಟಿಲು.. ಯಿಗೋ ಯಿಲ್ಲೊಂದು ತೊಟ್ಟಿಲು.. ಗಿಡಕೊಂದು.. ಮರಕೊಂದು..

ಳೊಳ್ಳಳ್ಳಾಯೀss ಳೊಳ್ಳೊಳ್ಳಾಯೀss...

ಹಿಂಗss ಕೂಸಿನ ಸುದ್ದಿ ವಂದೊಂದು ಗ್ರಾಮದಲ್ಲಿ ತನ್ನ ಪರಮಾಧಿಕಾರ ಚಲಾಯಿಸುತ ಭಯ ಬಿತ್ತುತ್ತ ಭೀತಿ ಬೆಳೆಯುತ್ತ.. ತಾನು ಅಂಬೆಗಾಲಿಟ್ಟ ಕಡೇಲೆಲ್ಲಿ ವಸಾಹತು ಸ್ಥಾಪಿಸುತ್ತ.. ಹೋಬಳಿಯಿಂದ ಹೋಬಳಿಗೆ.. ತಾಲ್ಲೂಕಿನಿಂದ ತಾಲ್ಲೂಕಿಗೆ.. ಜಿಲ್ಲೆಯಿಂದ ಜಿಲ್ಲೆಗೆ.. ರಾಜ್ಯದಿಂದ ರಾಜ್ಯಕ್ಕೆ.. ದೇಸದಿಂದ ದೇಸಕ್ಕೆ.. ಪರಪಂಚದಿಂದ ಪರಪಂಚಕ್ಕೆ ನಿಗುರಾಡ ತೊಡಗಿದುದರ ಬಗ್ಗೆಯೇನೆಂದು ಹೇಳಲಿ ಸಿವನೇ....

* * * *

ಅತ್ತ ಹರಪನಹಳ್ಳಿ ಪ್ರಾಂತದೊಳಗ ಹೆಡ್ಡಿಂಗನದೇನು ಹೇಳುವುದು..? ಭರಮನ ಗವುಡನ ಕಡೆಯವರನ್ನೆಲ್ಲ ಹುಡುಕಾಡಿ ಹಿಡಿಹಿಡಿದು ತಂದು ಶಿರಶ್ಚೇಧನ ಮಾಡಿಸೀ ಮಾಡಿಸೀ ಸುಸ್ತಾಗಿದ್ದ.. ಬರೋಬ್ಬರಿ ತೊಂಭತ್ತೊಂಭತ್ತು ಮಂದಿಯನ್ನು ಯಶಸ್ವಿಯಾಗಿ ಯಮಲೋಕಕ್ಕೆ ಅಟ್ಟಿದ್ದ ಖಂಡೇರಾಯನು ನೂರನೇ ಅಪರಾಧಿಯ ತಲೆ ಕತ್ತರಿಸಲು ಹಿಂಜರಿದು “ನನ ಕಯ್ಲಾಗಲ್ಲ ಮಹಾ ಪ್ರಭೋ.. ಯೀಗಲೇ ಮಸ್ತು ಪಾಪ ಸುತ್ತಿಕೊಂಡಯ್ತೆ.. ನನಗ ಕುಂಪಣಿ ಸರಕಾರದ ಮೂಳಿಗ ಬ್ಯಾಡ.. ಪಗಾರಾನು ಬ್ಯಾಡ” ಯಂದು ಪರಿಪರಿಯಿಂದ ಕೇಳಿಕೊಂಡನು. ಹೆಡ್ಡಿಂಗನು ಬಲವಂತ ಮಾಡಿದ್ದಕ್ಕೆ ತನ್ನೆರಡು ಕಯ್ಯಿಗಳನ್ನು ತಾನೆ ಕಡಿದುಕೊಂಡು ಸ್ಥಳೀಕ ಬಾಯಿಯಿಂದ ವುಘೇ ಅನ್ನಿಸಿಕೊಳ್ಳುತ್ತ ವಿಜಾಪುರ ಸೀಮೆ ಕಡೇಕ ಹೋದನಂತೆ ಸಿವನೇ...

ಅತ್ತ ಕುಂಪಣಿ ಸರಕಾರದ ಕಯ್ಯಿವಶಗೊಂಡ ಸಮುಸ್ತಾನ ಪಾಳ್ಳೇ ಪಟ್ಟುಗಳು ವಂದೇ ಯರಡೇ, ಬೀದಿ ಪಾಲಾದ ರಾಜವಮುಸಗಳು ವಂದೇ ಯರಡೇ? ಕೂಲಿ ಕುಂಬಳಿಗಿಳಿದ ರಾಜ ಪರಿವಾರದವರು ವಬ್ಬರಾ ಯಿಬ್ಬರಾ.. ಆತುಮಾಭಿಮಾನ ಕಳಕೊಂಡಿನ್ಯಾಕೆ ಬದುಕಬೇಕೆಂದು ತಮ್ಮನ್ನು ತಾವು ಕೊಂದುಕೊಂಡು ಸತ್ತಂಥ ರಾಜಾಧಿರಾಜರು ವಬ್ಬರಾ ಯಿಬ್ಬರಾ.. ಅರಮನೆಗಳಿಂದ ಹೊರದೂಡಲ್ಪಟ್ಟ ಪರಿಣಾಮವಾಗಿ ವಾಸ್ತವವನ್ನು ಯದುರಿಸಲಿಕ್ಕಾಗದೆ ಮತಿ ಭ್ರಾಂತರಾಗಿ ಅಲೆಯತೊಡಗಿದ್ದಂಥ ರಾಜರು ವಬ್ಬರಾ, ಯಿಬ್ಬರಾ! ಸಿಮ್ಮಾಸನಗಳಿಂದಿಳೀತಲೆ ತಮ ತಮ್ಮ ಪ್ರಜೆಗಳಿಂದ ಹಲ್ಲೆಗೀಡಾಗಿ ಸತ್ತ ರಾಜರು ವಬ್ಬರಾ ಯಿಬ್ಬರಾ.. ಕುಂತಳ ಪ್ರಾಂತದೊಳಗ ಯೋಸೋ ಸಿಮ್ಮಾಸನಗಳು ಪ್ರಜೆಗಳ ಕಾಲಿನಿಂದೊದೆದು ಮಾಮೂಲು

ಮಂದಿಯ ಅಂಡುಗಳಡಿತಳ್ಳಲ್ಪಟ್ಟವು.. ತರಕಾರಿ ಕಾಯಿಗೆಡ್ಡೇನ ಹೆಚ್ಚೋ ಸಲುವಾಗಿ ಹೆಣುಮಕ್ಕಳೆಷ್ಟೋ ಮಂದಿ ಕತ್ತಿ ಕಠಾರಿಗಳನ್ನೆತ್ತೊಯ್ದರು.. ದಂಧಕ್ಕಿ ಹಾಳ್ಗಸವನ್ನೆತ್ತೊಯ್ದು ತಿಪ್ಪೆಗೆ ಹಾಕಲಕಂತ ರಂವ್ರಾಪಿ ಮಂದಿ ಗುರಾಣಿಗಳನ್ನೆತ್ತೊಯ್ದರು. ಹುಡುಗರುಪ್ಪಡಿಗಳ ಜಾರಕಿ ಬಂಡಿಗಳಾದ ಬುರುಜು ಬತೇರಿಗಳೆಷ್ಟೋ? ಗುಡ್ಲು ಕಟ್ಟಲಕಂತ ಸರಬರಾಜಾದ ಅರಮನೆಯ ಛತ್ರಿಚಾಮರಗಳೆಷ್ಟೋ? ಮನೆಗಳ ನಿರುಮಾಣದ ಸಲುವಾಗಿ ಬುನಾದಿ ಸೇರಿದ ಕೋಟೆ ಗೋಡೆಗಳೆಷ್ಟೋ? ಮಕ್ಕಳಿಗೆ ಆಟದಾಟಿಕೆಗಳಾದ ಅರಮನೆಯ ಸಾಮಾನುಗಳೆಷ್ಟೋ? ಪಟ್ಟಂಗದ ಚಾವಡಿಗಳಾದ ಅರಮನೆಗಳೆಷ್ಟೋ..? ಕಳ್ಳಕಾಕರಾಗಿ, ಕೊಲೆಗಡುಕರಾಗಿ ಬದುಕಲಾರಂಭಿಸಿದ ಹೇಮಾಹೇಮಿ ರಾಜರುಗಳೆಷ್ಟೋ..? ಕುಂಪಣಿ ಸರಕಾರದ ಆಸ್ತಿ ಪಾಸ್ತೀನ ನಷ್ಟ ಮಾಡುವ ಸಲುವಾಗಿ ಭೂಗತ ಚಟವಟಿಕೆಗಳನ್ನಾರಂಭಿಸಿದ ರಾಜರೆಷ್ಟೋ..? ಅಂತೂ ಯಿಂತೂ ಕುಂತಳ ಸೀಮೆಯೊಳಗ ಸತ ಸತಮಾನಗಳಿಂದ ಕಾಸಿಗೊಂದು ಕೊಸರಿಗೊಂದೊಂದರಂತೆ ಯಿರುಕಿದ ಯೇಸೋ ಪಾಳೈಪಟ್ಟು ಸಮುಸ್ಥಾನಗಳು ಹೇಳಲಕ ಹೆಸರಿಲ್ಲದಂತೆ ಯಕ್ಕುಟ್ಟಿ ಹೋಗಿ ಬಿಟ್ಟವು.. 'ರಾಜಾ ಪ್ರತ್ಯಕ್ಷ ದೇವತಾಹ' ಯಂಬ ಗೀರ್ವಾಣಿ ಪದಸಮುಚ್ಚಯ ಮಂದಿ ಬಾಯೊಳಗ ನಮಲುವ ಕಸವಾಯಿತು. ಆಳುವರಸರಿಲ್ಲ ದಂತಾಗಿ ಯೇಸೋ ಗ್ರಾಮಗಳೊಳಗ ಅರಾಜಕತೆ ಭುಗಿಲೆದ್ದಿತು. ಬಡಿಗೆ ಹಿಡಕೊಂಡವರ ಕಯ್ಯಿಗೆ ಕೋಣಗಳು ವಶವಾದವು. ಸಿಕ್ಕವರಿಗೆ ಸಿವಲಿಂಗಮೋ.. ರಂಡ ಮುಂಡೆ ಮನೆಯೊಳಗ ವುಂಡೇಳುತಲಿದ್ದ ಜಾಣರೋ.. ರಂವ್ರಾರದೋ ದುಡ್ಡು ಯುಲ್ಲಮುನ ಜಾತುರೆಗಳನ್ನು ವುಡಾಯಿಸಲಾರಂಭಿಸಿದ್ದ ಯಾತ್ರಾರ್ಥಿ ಗಳೋ..

ಮೊದುವುದನು ಬಿಟ್ಟು ಭಾರಿಸುವುದನು ತಗೊಂಡಂಗಾಗಿತ್ತು ಕುಂಪಣಿ ಸರಕಾರಕ್ಕೆ.. ಅದು ನೇಮಕ ಮಾಡಿದ್ದ.. ಮಾಡುತಲಿದ್ದ ಅಮಲ್ದಾರ, ತಾಸೀಲ್ದಾರರು ಪ್ರಜೆಗಳಿಂದ ತಕ್ಕ ಮರುವಾದೆ, ಗವುರವ ಸಿಗದೆ ತತ್ತರಿಸಲಾರಂಭಿ ಸಿದ್ದರು.. ನ್ಯಾಯ ಪಂಚಾಯಿತಿ ಬಗೆಹರಿಸೋ ಮುನುಸೋಬಗಳು ನಗೆ ಪಾಟಲಾಗಲಾರಂಭಿಸಿದ್ದರು. ಕೆಂಪನೆಯ ಬಣ್ಣ ಅಂದರೆ ಪ್ರಜೆ ಗಳು ವಾಕರಿಕೆ ಮಾಡಲಾರಂಭಿ ಸಿತ್ತು. ತೆರೆಗೆ ಯಾಕ ಕಟ್ಟಬೇಕು, ಗುತ್ತಿಗೆ ಯಾಕ ಕಟ್ಟಬೇಕು? ಯಿದನ್ನೆಲ್ಲ ಕೇಳುವುದಕ ಕುಂಪಣಿ ಮಂದಿಯೇನು ತಮ್ಮ ರಾಜರಾss ಯಂದು ಪ್ರಜೆಗಳು ತಮ್ಮಷ್ಟಕ್ಕ ತಾವ ಅಸಹಕಾರ ಚಳವಳಿ ಆರಂಭಿಸಿದ್ದರು.. ಪ್ರಜೆಗಳ

ವರ್ತನೆಯಿಂದ ಕುಂಪಣಿ ಸರಕಾರ ರೋಸಿಕೊಳ್ಳದೆ ಯಿರಲಿಲ್ಲ. ಆಯಾ ಗ್ರಾಮಗಳಿಂದ ಆಯಾ ರಾಜರನ್ನು ನಷ್ಟ ಮಾಡಿದರೆ ಮಂದಿ ತಮ್ಮ ಬಗ್ಗೆ ಗವುರವ ತಾಳುವುದೆಂದೇ ಭಾವಿಸಿದ್ದರು. ಯೀಗ ನೋಡಿದರೆ ಲೆಕ್ಕಾಚಾರ ಉಲ್ಟಾದು ತಲೆಕೆಳಗಾಗಯ್ತೆ.. ಪ್ರಜೆಗಳಲ್ಲಿ ತಮ್ಮ ಬಗ್ಗೆ ಗವುರವ ಗರಿಗೆದರುವಂತಾಗಲು ಯೇನು ಮಾಡಬೇಕು? ಪ್ರೀತಿ ಪೀಕ ಬೇಕೆಂದರೆ ಯೇನು ಮಾಡಬೇಕು? ಭಯವು ಭರ್ತಿಯಾಗುವಂತಾಗಲು ಯೇನು ಮಾಡಬೇಕು? ಭಕುತಿ ಬಿಕರಿಯಾಗುವಂತಾಗಲು ಯೇನು ಮಾಡಬೇಕು? ಯಿದನ್ನೆಲ್ಲ ಹೊಡದೂ, ಬಡದೂ ಪಡೆಯಲಕ ಸಾಧ್ಯವಿಲ್ಲ. ನೂರೆಂಟು ವುಪಾಯಗಳನ್ನು ತಲೆಯೊಳಗ ವಟ್ಟಿಕೊಂಡಿದ್ದ ಕುಂಪಣಿ ಸರಕಾರ ಮುಂದ ಮುಂದಕ ಯೇನು ಮಾಡಿಯಿತೆಂದರ....

ಅದು ತೋರಿಸಿದ ರೊಕ್ಕದಾಸೆಗೆ ಮಳ್ಳಾಗಿ ಕವಿಗಳು ಕುಂಪಣಿ ಸರಕಾರವನ್ನು ಹೊಗಳಿ ಕಂದ, ಸೀಸ, ಭಾಮಿನಿ, ವಾರ್ಧಕ, ಸ್ರಗ್ಧರ, ಚಂಪಕ, ವುತ್ಪಲ ಯಿವೇ ಮೊದಲಾದ ಛಂದೋ ರುತ್ತಗಳಲ್ಲಿ ಫಣಿರಾಯ ತಿಣುಕುವಂತೆ ಕಾವ್ಯಗಳನ್ನು ರಚನೆ ಮಾಡಿದ್ದಾಗಲೀ, ಗಮಕಿಗಳು ಪ್ರತಿಯೊಂದು ಮೂರಿಗೂ ಹೊತ್ತೊಯ್ದು ವಾಚನ ಮಾಡುವುದರ ಜೊತೆ ತಾತ್ಪರ್ಯ ಯಿವರಿಸಲಾರಂಭಿಸಿದ್ದಾಗಲೀ, ಮಂದಿ ಅಂಥವರನ್ನು 'ಅಯ್ಯಾ ನೀವು ಕವಿಗಳಾ ಕಪಿಗಳಾ... ಅಯ್ಯಾ ನೀವು ಗಮಕಿಗಳಾ.. ಅವಿವೇಕಿಗಳಾ.. ಎಂಜಲಿಗಾಸೆ ಬಿದ್ದು ನಿಮಗ ವಲುಮೆಯಾಗಿರೋ ಸರಸೊತಿಯನ್ನು ಜುಲುಮಿಯಿಂದ ಹಾದರಕ್ಕ ಹಚ್ಚಿದ್ದೀರಲ್ಲಾ.. ಯೆಂದು ಬಾಯಿಗ ಬಂಧ್ಹಂಗ ಬಯ್ದು ವದ್ದೋಡಿಸಲಾರಂಭಿಸಿದರು.. 'ಸಾಕ್ಷಾತ್ ದೇವರಾ! ನಮ್ಮ ಕುಂಪಣಿ ಸರಕಾರ! ಕೇಳಿರಿದರ ಮಜಕೂರ' ಯಂದು ಮುಂತಾಗಿ ಮೂರಿಂದೂರಿಗೆ ಹಾಡುತ ಬಂದ ಮವುಖಿಕ ಗಾಯಕ ವರೇಣ್ಯರಿಗೂ ಯಿದೇ ಗತಿ ಆಯಿತು. ಕುಂಪಣಿ ಸರ್ಕಾರಸ್ಯಾ ದೇವಾತಃ ಯಂದು ಮುಂತಾಗಿ ಮಂತ್ರಗಳನ್ನುಚ್ಚಾರ ಮಾಡುತ ಬಂದ ವೇದಪಾರಂಗತರಿಗೂ ಯಿದೇ ಗತಿ ಆಯಿತು. ಸರಕಾದ ಪರ ವಸ್ತುವುಳ್ಳ ಡಪ್ಪಿನಾಟಗಳನ್ನಾಡಿದವರಿಗೂ ಯಿದೇಗತಿ ಆಯಿತು. ಯಿವರೆಲ್ಲ.. ಅವರೆಲ್ಲ ಲಂಚರುಷುವತ್ತು ತೋಷಕ ಪಾರಿತೋಷಕಗಳನ್ನು ಹೊಳ್ಳಿ ಕೊಡುತ್ತ "ಸಾಹೇಬರೇ ನಮ್ಮಿಂದ ಹೇಲ್ತಿನ್ನೋ ಕೆಲಸವಾತು.. ನಾವು ನಮ ನಮ್ಮ ಯಿದ್ಯಕ್ಕೆ ದ್ರೋಅ ಬಗದು ತಕ್ಕ ಪಾಠ ಕಲಿತೆವು" ಯಂದು ಅಸಹಾಯಕತೆ ತೋಡಿಕೊಂಡ

ಮ್ಯಾಲೂ ಕುಂಪಣಿ ಸರಕಾರವು....

ಹಿಂದೊಂದಿವಸ ಅಬಡಾ ತೊಬಡಾ ಕಡಪಾಪಟ್ಟಣವ ಸೇರಿಕೊಂಡಿದ್ದವ ಯಾವಾತಂತೀರಿ ಸರ್ ಥಾಮಸು ಮನ್ರೋ ಸಾಹೇಬನಂತೀರಾ, ತೆನುಗು ಮಾತನಾಡೋ ಆಂಧ್ರದ ಮಂದಿ ಬಾಯಿತುಂಬ ಕರೆಯುತಲಿದ್ದ ಮಂತೋಳ ಸಾಬನಂತೀರಾ.. ಕಾದ ಕಾವಲಿ ಮ್ಯಾಲ ಕೋಳಿಮರಿ ನಿಂತಂಗಾಗಿತ್ತಾತನ ಪರಿಸ್ಥಿತಿ. ಹಸುವಾಯಿತಂತ ವುಣ್ಣುವಂಗಿರಲಿಲ್ಲ.. ಬಾಯಾರಿಕೇಂತ ನೀರುಕಾಳು ಬಾಂಯೊಳಗ ಹಾಕ್ಕೊಳ್ಳುವಂಗಿರಲಿಲ್ಲ.. ನಿದುರೇಂತ ರೆಪ್ಪೆಗೆ ರೆಪ್ಪೆ ಅಂಟಿಸುವಂತಿರಲಿಲ್ಲ.. ಸಳಿ ಆತಯ್ತಂತ ದುಪ್ಪಟೀನ ಹೊದ್ದುಕೊಳ್ಳುವಂತಿರಲಿಲ್ಲ.. ಸೆಕೆ ಆತಯ್ತಂತ ದುಪ್ಪಟಿ ಸರಿಸುವಂತಿರಲಿಲ್ಲ.. ಸಿರಿವಂತರ ಪಾಲಿಗೆ ವುಪದ್ರವಿಯೂ, ಬಡಬಗ್ಗರ ಪಾಲಿಗೆ ನಿರುಪದ್ರವಿಯೂ ಆದಂಥ ಮಂತೋಳ ಸಾಹೇಬನಿಗೆ ಯದುರಾಗಿದ್ದ ವುಪದ್ರವಗಳು ವಂದೇ ಯರಡೇ, ಕಲ್ಕತ್ತಾದಲ್ಲಿ ವಿಲಿಯಂ ಬೆಂಟಿಕ್ಕನೆಂಬ ವುಪದ್ರವಿಯೂ, ಮದ್ರಾಸಿನಲ್ಲಿ ವೆಲ್ಲೆಸ್ಲಿಯಂಬ ವುಪದ್ರವಿಯೂ, ಕಂಭಂನಲ್ಲಿ ತನಗೆ ಹಿಂಬಡ್ತಿ ನೀಡುವ ಸಲುವಾಗಿ ಮುಂಬಡ್ತಿಗಾಗಿ ಯದುರು ನೋಡುತಾಯಿರುವ ಡಬ್ಲೂ ಡಬ್ಲೂ ಚಾಪ್ಲಿನ್ ಯಂಬುವ ವುಪದ್ರವಿಯೂ.. ತನ್ನನ್ನವುಣ್ಣುತ್ತ ತನಗೇ ಬತ್ತಿ ಯಿಡಿಲು ಯೋಚಿಸುತ್ತಿರುವ ಕ್ಯಾಂಪ್‌ಬೆಲ್, ಮ್ಯಾಥ್ಯೂ.. ಹೇಡನ್ ಯೆಂಬ ಹೆಸರಿನ ವುಪದ್ರಗಳು.. ಯಿಂಥಪ್ಪ ಸಾವುರದೆಂಟು ವುಪದ್ರಗಳ ಸೆರೆಯೊಳಗೆ ಬಂಧಿಯಾಗಿದ್ದ ಮಂತೋಳ ಸಾಹೇಬ ಸುಖವಾಗಿರು ಅಂದರ ಹೆಂಗ ಸುಖವಾಗಿದ್ದಾನು ಸಿವನೇ..

ಕಡಪಾ ಪ್ರಾಂತದ ಸೀಮೆುವಳಗೆ ಯುಲ್ಲಂದರಲ್ಲಿ ನಿಟ್ಟುಸಿರ ಸುಂಟರಗಾಳಿಗಳು ಸುಯ್ಯಂತ ಸುತ್ತಲಕ ಹತ್ತಿದ್ದಮೋss ಆಕ್ರಂದನಗಳು ಬಿರುಗಾಳಿಯೋಪಾದಿಯಲ್ಲಿ ಭರ್ರಂತ ಬೀಸಲಕ ಹತ್ತಿದ್ದಮೋss ವಂದೊಂದು ಮೂರ ಅಗಸೆ ಬಾಗಲಲ್ಲಿ, ವಂದಲ್ಲಾ ವಂದು ಮರಗಳ ಕೊಂಬೆ ರೆಂಬೆಗಳಗುಂಟ ತೂಗಾಡು ತಲಿದ್ದ ಹೆಣಗಳೋ?.. ಹೊಳೆ ಹಳ್ಳಗಳಲ್ಲಿ ತೇಲಾಡುತಲಿದ್ದ ಕಳೇಬರಗಳೋ?

ಚೆನ್ನೂರು, ವಲ್ಲೂರು, ಪೆಂಡ್ಲಿಮರಿ, ಗಾಂಡ್ಲೂರು, ಯೇತೂರು ಕಡೇಲಿದ್ದ ಕೊರಚರು ಹಾದಿ ಬಡುಕರಾಗಿ ಪರಿವರ್ತನಗೊಂಡುದರ ಕುರಿತು ಬುರ್ರಕಥದೊಳಗೆ ಹೇಳೋರೆಲ್ಲದಾರ? ಪುಲ್ಲಮಪೇಟೆ, ಸಿದ್ದವುಟ,

ವುಂಯ್ಯಾಲಪಾಡು, ತಂಗಟೂರುಗಳ ಮೂಲವಾಸಸ್ಥರಾದ ದಾಸರಿ ಜನಾಂಗದವರು ಬಾಡಿಗೆ ಕೊಲೆಗಡುಗರಾಗಿ ಪರಿವರ್ತಗೊಂಡುದದರ ಬಗ್ಗೆ ಲಾವಣಿ ಪದ ಕಟ್ಟಿ ಹಾಡೋರೆಲ್ಲದಾರ? ಮುದಿ ರೆಡ್ಡಿ ಪಲ್ಲೆ, ನಲ್ಲಮಲಾ, ಪೊರಮಿಲಾ, ಮಯ್ಯುದ್ದುಕೂರು, ಚರುಕುಲಪಾಡು ಕಡೆಯ ಹೊಲೆಮಾದಿಗರು ಕಾಪು, ರೆಡ್ಡಿ, ಕಮ್ಮ, ಕೋಮಟಿಗ, ಯಿವೇ ಮೊದಲಾದ ಹೆಂಗಸರ ಮ್ಯಾಲ ಅತ್ಯಾಚಾರ ಮಾಡುತ ಸತ ಸತಮಾನಗಳ ಸೇಡು ತೀರಿಸಿಕೊಳ್ಳುತಲಿದ್ದುದರ ಬಗ್ಗೆ ಗೀಗೀ ಪದ ಕಟ್ಟುವವರು ಯಲ್ಲದಾರ? ಕುಂಟಿ, ಮೇಳೆ, ನೊಗ, ಬಂಡಿ ಮಾಡುತಲಿದ್ದಂಥ ಬಡಿಗೇರು ತಲೆಗಳನ್ನು ಹೊಡೆಯೋ ಬಡಗಿಗಳನ್ನು ಮಾಡುತಲಿದ್ದುದರ ಬಗ್ಗೆ ಕಥೆ ಕಟ್ಟಿ ಹೇಳುವವರು ಯಲ್ಲದಾರ? ರಯ್ತಾಪಿ ಜನರು ವುಪಯೋಗಿಸುತ್ತಿದ್ದಂಥ ಚಲಕೆ, ಗುದ್ದಲಿ, ಪಿಕಾಸಿ, ಮಾಡುತಲಿದ್ದಂಥ ಕುಲುಮೆಗಾರರು.. ಗಂಡರಗೊಡಲಿ ಮಚ್ಚು, ಚೂರಿ ಬಾಕುಗಳನ್ನು ಮಾಡುತ್ತ ಕೊಲೆಗಡುಕರಿಗೆ ಸರಬರಾಜು ಮಾಡುತಲಿದ್ದುದರ ಬಗ್ಗೆ ಭಾಮಾಕಲಾಪ ಮಾಡೋರು ಯಲ್ಲದಾರ.. ಅಗೋ ಅಲ್ಲಿ ದರೋಡೆ ಕೊಲೆ ಸುಲಿಗೆ.. ಯಿಗೋ ಯಿಲ್ಲಿ ಅತ್ಯಾಚಾರ ಅನಾಚಾರ.. ಅಗೋ ಅಲ್ಲಿ ಸೇಡಿಗೆ ಸೇಡು, ಯಿಗೋ ಯಿಲ್ಲಿ ಮುಯ್ಯಿಗೆ ಮುಯ್ಯಿ.. ಅಯ್ಯೋ ಮಂಥೋಳ ಸಾಹೇಬಾss ನೀನು ಹಾವು ಹೊಡೆದು ಹದ್ದಿಗೆ ಹಾಕಿದೆಯಲ್ಲಾ.. ನರಮಾನ್ನವರನ್ನು ನರಮಾಮುಸ ಭಕ್ಷಕರನ್ನಾಗಿ ಮಾಡಿದಿಯಲ್ಲಾ.. ನಿನ್ನೀ ಕ್ರುತ್ಯ ನ್ಯಾಯವೇನಯ್ಯಾ, ಕುರುಡರಿಗೆ ಚಾಳೇಸು ಸರಬರಾಜು ಮಾಡಿದಿಯಲ್ಲಾ. ಹೆಳವರಿಗೆ ಬೂಡುಸುಗಳನ್ನು ಬಟವಾಡೆ ಮಾಡಿದಿಯಲ್ಲಾ.. ಅಕಾಲಮರಣದ ಪಾಠ ಹೇಳಿಕೊಟ್ಟೆಯಲ್ಲಾ.. ನಿನ್ನೀ ಕ್ರುತ್ಯ ನ್ಯಾಯವೇನಯ್ಯಾ.. ಕಾಯೋ ಬೇಲಿಗಳಿಗೆ ಹೊಲಗಳನ್ನು ಮೇಯುವುದನ್ನು ಕಲಸಿದ್ದು ನೀನೇ.. ಯಡಗಯ್ಯಿಗೆ ಲೆಕ್ಕಣಿಕೆ, ಬಲಗಯ್ಯಿಗೆ ನಾಡ ಬಾಂಬನ್ನಿಟ್ಟವನು ನೀನೇ.. ಆಳಕ್ಕಿಳಿದ ಕಣ್ಣುಗಳನ್ನು ಗುಗ್ಗುಳ ಮಾಡಿದವನು ನೀನೇ.. ರಾಯಲ ಸೀಮೆಯನ್ನು ಗಾಯಗಳ ಸೀಮೆಯನ್ನಾಗಿ ಮಾಡಿದ ನೀನು ಹಸಿದೊಡೆ ವುಣ್ಣಲಿಕ್ಕಾದೀತಾ.. ತ್ರುಷೆಯಾದೊಡೆ ನೀರು ಕುಡಿಯಲಿಕ್ಕಾದೀತಾ..ನಿದ್ದೆ ಬಂದೊಡೆ ರೆಪ್ಪೆಗೆ ರೆಪ್ಪೆ ಅಂಟಿಸಿ ನಿದ್ದೆ ಮಾಡಲಿಕ್ಕಾದೀತಾ.. ನಿನಗೇನು ಹೆಂಡರಾ.. ಮಕ್ಕಳಾ.. ಮಾರಾ.. ವುದ್ಯಾನ.. ಮಂಥೋಳ ಸಾಹೇಬನೇ ನಿನಗೆ ರವುರವ ನರಕ ಅಗೋ ಯಿಲ್ಲಿ, ಯಿಗೋ ಯಿಲ್ಲಿ.. ಯಂದು ಮುಂತಾಗಿ ಅಂತರು ಬೆಂತರುಗಳು ಯತ್ತುತಲಿದ್ದ ಪ್ರಶ್ನೆಗಳಿಗೆ

ವುತ್ತರ ಕೊಡಲಾಗದೆ ಮಂಥೋಳ ಸಾಹೇಬನು ಯಿಲ ಯಿಲಾಂತ ವದ್ದಾಡುತಲಿದ್ದುದನ್ನು ಯೇನು ಹೇಳಲಿ ಸಿವನೆ...

ಅದರ ಹಿಂದೆಯೇ ಮತ್ತೊಂದು ಸೊರ ಲಬ್ಬಗುಟ್ಟುತ್ತ ಕೇಳಿ ಬಂತು. ಯಾರು ತಾಯಿ ನೀನು ಅಂದ. ನಾನು ಕಣಪ್ಪಾ ಕೇಂದ್ರೀಯ ಕಾರಾಗ್ರುಹ.. ಯೀಗ್ಗೆ ಕೆಲವು ವರುಷಂಗಳ ಹಿಂದೆ ದೂರದರ್ಸಿತ್ವಕ್ಕೆ ಹೆಸರಾದ ನೀನು ಸದರಿ ಪಟ್ಟಣದ ರುದಯ ಭಾಗದಲ್ಲಿ ಕಟ್ಟಿಸಿದ್ದೆಯಲ್ಲ.. ಮುವ್ವತ್ತು ವರುಷಂಗಳ ಅಂದಾಜಿನಲ್ಲಿ ಸಾವುರಾರೆಕರೆ ಯಿಸ್ತೀರ್ಣದಲ್ಲಿ ಕಟ್ಟಿಸಿದ್ದೆಯಲ್ಲ.. ಅದರೊಳಗೆ ಕಯ್ದಿಗಳಿಗೆ ಬೇಕು ಬೇಕಾದ್ದನ್ನೆಲ್ಲ ಅಳವಡಿಕೆ ಮಾಡಿದ್ದೆಯಲ್ಲ.. ನನ್ನೊಳಗಿನ ಗುಡಿ ಗುಂಡಾರಗಳೇನು? ಮಸೀದಿಗಳೇನು? ಯೀಗರ್ಜಿಗಳೇನು? ಭಜನೆ ಮಾಡಲಕ ತಾಳ ಮದ್ದಳೆಗಳೇನು? ಮೋದಲಿಕ್ಕೆ ಪುರಾಣ ಕುರಾಣಗಳೇನು? ಯಂದು ಮುಂತಾಗಿ ಪರಿಚಯ ಮಾಡಿಕೊಂಡ ನಂತರ ಗುರುತ ಹತ್ತಿತು. ಅವುದಲ್ಲಾ, ತಾನು ಕಟ್ಟಿಸಿದ್ದ ಸೆರೆಮನೆಯೇ ಯಿದು.. ಯರಡೂವರೆ ಆಳೆತ್ತರದ ಪ್ರಹರಿಗೋಡೆಯೇನು? ಅದರೊಳಗೆ ಮೊಸರು ಚೆಲ್ಲಿ ಬಳಕೊಳ್ಳುವಂತಿದ್ದ ನೆಲವೇನು? ಕಯ್ದಿಗಳು ಚಾವತ್ತು ಕೂತು ದಮ್ಮು ಆರಿಸಿಕೊಳ್ಳಲಕಂತ ತರಾವರಿ ಗಿಡಮರಗಳನ್ನು ನೆಟ್ಟು ಬೆಳೆಸಿದ್ದೇನು? ಅವರೊಳಗಿನ ಕ್ರವುರ್ಯ ಅಳಿಸಿ ಹಾಕುವ ಸಲುವಾಗಿ ತಾನು ಮಾಡಿದ್ದು ವಂದಾ.. ಯರಡಾ.. ಸವುಡು ಮಾಡಿಕೊಂಡು ಸಾಹೇಬನು "ತಾಯೀ..ನೀನು ಪಾಡದಿಯಷ್ಟೆ.. ನೀನು ನಿನ್ನ ಮಕ್ಕಳಾದ ಕೈದಿಗಳನ್ನು ಜೋಪಾನ ಜತನದಿಂದ ನೋಡಿಕೊಳ್ಳು ತ್ತಿದ್ದೀಯಷ್ಟೆ.. ನನ್ನಿಂದೇನಾರ ನಿನಗ ಮಾಡುವುದಯ್ತೇನು?" ಯಂದು ಯಿನಮ್ರತೆಯಿಂದ ಕೇಳಿಕೊಂಡಿದ್ದಕ್ಕೆ ಸೆರೆಮನೆಯವ್ವ ಮಾರುದ್ದ ನಿಟ್ಟುಸಿರುಬಿಟ್ಟು....

"ಯೇನು ಹೇಳಲಿ ಮಗನೇ.. ನನ್ನೊಳಗೀಗ ಹೆಜ್ಜೆ ಯಿಕ್ಕಲಕ ವಂದಿಂಚು ಜಾಗಯಿಲ್ಲದಂಗಾಗ ಯ್ತಪ್ಪಾ.. ನನ್ನೊಳಗೀಗ ಕಯ್ದಿಗಳ ಪರಿಶೆ ನೆರದಯ್ತೆ.. ಅವರಿಗೆ ಕೂಳು ನೀರು ಜೋಡಿಸೋದು ತ್ರಾಸಾಗಯ್ತೆ.. ಅಡುಗೆ ಮಾಡೋ ಪಾತ್ರೆಪಗಡ ತಟ್ಟೆಲೋಟಗಳೆಲ್ಲ ಕಯ್ದಿಗಳ ಕಯ್ಯಿಗೆ ಸಿಕ್ಕು ಮಾರಕಾಸ್ತರಗಳಾಗಿ ಪರಿವರ್ತನೆಗೊಂಡಿರುವವು. ಪರಸ್ಪೂರ ಹೊಡದಾಡಿ ಸಾಯಲಕ ಹತ್ಯಾರ.. ದಿನಕ್ಕೊಬ್ಬನಾದರೂ ಸಿಪಾಯಿ ಸಾಯ್ತಿದ್ದಾನೆ.. ಬಾಗಿಲು ಮುರುದು ಪರಾರಿ ಆಗ್ತಿರೋರೆಷ್ಟೋ ಮಂದಿ? ಪ್ರಹರಿ ಗೋಡೆ ಹಾರಿ ಪಲಾಯನ ಮಾಡ್ತಿರೋರೆಷ್ಟೋ ಮಂದಿ? ವಟ್ಟಿನಲ್ಲಿ ಬಿರುಗಾಳೀನ ಬಟ್ಟಲೊಳಗೆ

ಹಿಡಿದಿಟ್ಟಂಗಾಗಯ್ತೆ ನೋಡು.. ಸೆರೆಮನೆಯವ್ವಳಾದ ನಾನು ಮುಂದಿನ ಕೆಲವೇ ಕೆಲವು ದಿವಸಗಳೊಳಗ ಬಟಾಬಯಲವ್ವ ಆಗಿ ಪರಿವರ್ತನ ಹೊಂದಬಹುದು ನೋಡು ಮಗನೇ..” ಎಂದು ದುಕ್ಕದಿಂದ ಅಹವಾಲು ವಪ್ಪಿಸಿ ಬಿಕ್ಕಳಿಸುತ ಹೋದಂಗಾಗಲು....

ಯಿದರಿಂದ ಸಾವರಿಸಿಕೊಳ್ಳುತ್ತಿರುವಷ್ಟರಲ್ಲಿ ಮತ್ತೊಂದು ದುರ್ಘಟನೆ ಕಡಪಾ ಪಟ್ಟಣದೊಳಗ ಸಂಭವಿಸಿತು. ಕಂಡಲ್ಲಿ ಗುಂಡು ಯಂಬ ಆಗ್ನೆ ಯಿದ್ದರೂನೂವೆ ಮಂದಿರಗಳೊಳಗ ಆಕಳ ಕಳೇಬರಗಳು, ಮಸೀದಿಗಳೊಳಗ ಹಂದಿ ಕಳೇಬರಗಳು ಪತ್ತೆಯಾಗುತಲಿದ್ದವಷ್ಟೆ.. ಹಿಂದೂ ಮಂದಿ ಮುಸಲ್ಮಾನ ಮಂದಿ ಬಡಕೋತಿದ್ದರಷ್ಟೆ.. ಯಿರುಪಕ್ಷದಲ್ಲಿ ಹತ್ತಾರು ಹೆಣಗಳು ವುರುಳುತಲಿದ್ದವಷ್ಟೆ.. ಯಂಥ ಬುದ್ದಿಗೇಡಿ ಯಿದ್ದಾನು ಮೆಕ್ ಡೊನಾಲ್ಡ್‌ನೆಂಬ ಸಬ್ ಕಲೆಕ್ಟರನು.. ಕ್ರುದ್ದಕೋಮುಗಳ ನಡುವೆ ಸಾಮರಸ್ಯ ಮೂಡಿಸಬೇಕೆಂದು ಆತ ವಂದಲ್ಲಾ ವಂದು ಪ್ರಯತ್ನ ಮಾಡುತ್ತಲೇ ಯಿದ್ದ. ಸಶಸ್ತ್ರಕಾವಲಿಲ್ಲದೆ ಯಲ್ಲಿಗೂ ಹೋಗಕೂಡದೆಂದು ತಾನು ಹೇಳಿದಾಗಲೆಲ್ಲ.. ಯಿಪ್ಪತ್ನಾಲ್ಕರ ಹರೆಯದ ಆತನು ಮುಗುಳು ನಗೆಯೇ ಯಲ್ಲಾ ಆಯುಧಗಳಿಗಿಂತ ಬಲಾಢ್ಯ ಯಂದು ಹೇಳಿ ಬಾಯಿ ಮುಚ್ಚಿಸುತ್ತಿದ್ದ. ತನ್ನ ವುತ್ತರಾಧಿಕಾರಿಯಂದು ತಾನ್ಯಾವತ್ತೋ ಅಂದುಕೊಂಡಿದ್ದೆ. ಕಳೆದ ವರ್ಷ ಮದ್ರಾಸಿನ ಕೆಥಡ್ರಾಲಿನಲ್ಲಿ ನಡೆದ ಆತನ ಮದುವೆಗೂ ತಾನು ಹೋಗಿ ಬಂದಿದ್ದೆ.. ಆ ದಿನ ಯೇನಾಯಿತೋ ಸ್ಪಷ್ಟವಾಗಿ ತಿಳಿಯದು.. ಮೆಕ್ ನಾಕಾರು ಮಂದಿ ಜವಾನರ ನಡುವೆ ಡೋಲಿಯಲ್ಲಿ ಕುಳಿತು ಪ್ರಕ್ಷುಬ್ದತೆ ತುಂಬಿ ತುಳುಕುತಲಿದ್ದ ಜಾಗಕ್ಕೆ ಹೋದನಂತೆ.. ಡೋಲಿಯಿಂದ ಯಿಳಿದೊಡನೆ ಹಿಂದಿನಿಂದ ಬಂದ ಪಠಾಣನೋರ್ವ ಮಾರುದ್ದವಿದ್ದ ಖಡ್ಗ ಬೀಸಿ ಆತನ ರುಂಡ ಚೆಂಡಾಡಿದನಂತೆ.. ಅಪಾರ ಸಂಖ್ಯೆಯಲ್ಲಿದ್ದ ಮುಸಲ್ಮಾನ ಮಂದಿ ‘ಅಲ್ಲಾ ಹೋ ಅಕ್ಬರ್.. ಪಠಾಣ್ ಮೊಯಿದ್ದೀನ್ ಜಿಂದಾಬಾದ್’ ಯಂದು ಜಯಘೋಷ ಮಾಡಿದ್ದು ಪಟ್ಟಣದ ತುಂಬೆಲ್ಲ ಮಾರ್ಧನಿಸಿತಂತೆ. ಕಂಪನಿ ಸರಕಾರದ ಸಿಪಾಯಿಗಳು ಗುಂಡು ಹಾರಿಸಿ ಯಿಪ್ಪತ್ಮೂವ್ವತ್ತು ಮಂದಿ ಮತಾಂಧರನ್ನು ನೆಲಕ್ಕುರುಳಿಸದಿದ್ದಲ್ಲಿಮುಂದ್ಯಾವ ಅನಾಹುತ ಸಂಭವಿಸು ತ್ತಿತ್ತೇನೋ? ಮಂದಿ ಕಾವಲಲ್ಲಿ ತಲೆ ತಪ್ಪಿಸಿಕೊಂಡಿರುವ ಪಠಾಣ ನಾಳೆ ನಾಡಿದ್ದರಲ್ಲಿ ಕಂಪನಿ ಸರಕಾರಕ್ಕೆ ತಲೆನೋವಾಗುವುದರಲ್ಲಿ ಸಂದೇಹವಿಲ್ಲ.. ಬಂಧಿಸಿ ಮರಣದಂಡನೆ ನೀಡದಿದ್ದಲ್ಲಿ ಸರಕಾರದ ಬಗ್ಗೆ ಪ್ರಜೆಗಳ ವಿಶ್ವಾಸ

ಕುಸಿಯುವುದರಲ್ಲಿ ಅನುಮಾನವಿಲ್ಲ.. ಅವನ ಬಂಧನಕ್ಕೆ ಶೂರಸೇನಾನಿ ಕರ್ನಲ್ ಫಿಲಿಪ್ಸ್ ನೇತ್ರುತ್ವದಲ್ಲಿ ಕಾರ್ಯಪಡೆ ರಚನೆ ಮಾಡಿದ ನಂತರವೇ ಮನ್ರೋ ಯಿಗರ್ಜಿ ತಲುಪಿದ್ದು, ಚಾರ್ಲಸ್ ಯಡ್ವರ್ಡ್ ಮೆಕ್ ಡೋನಾಲ್ಡನ ಕಳೇಬರದ ಮೇಲೆ ಪುಷ್ಪಗುಚ್ಛವಿರಿಸಿ ಅಂತಿಮ ಗವುರವ ಸಲ್ಲಿಸಿದ್ದು.. ಮ್ರುತನ ಹದಿಹರೆಯದ ಪತ್ನಿ ಅಗ್ನೆಸಳಾದರೋ ಹಸಿಹಸಿ ಬಾಣಂತಿ ಆಕೆಯ ಕಂಕುಳಲ್ಲಿ ತಿಂಗಳು ತುಂಬಿರದ ಗಂಡುಕೂಸು ಸಂತಯಿಸಲಾಗದೆ ಮನ್ರೋ ಕಂಠಕಟ್ಟಿ ಬಿಕ್ಕಳಿಸಿದ....

ಯಿಂಥ ದುರ್ಘಟನೆಗಳು ವಂದರ ಹಿಂದೆ ವಂದರಂತೆ ಸಂಭವಿಸಲು ಥಾಮಸ್ ಮನ್ರೋ ಮಾನಸಿಕವಾಗಿ ಜರ್ಜರಿತನಾದ. ಬುಲಾವ್ ಮೇರೆಗೆ ಕಲ್ಕತ್ತಾಕ್ಕೆ ಹೋಗಿ ಲಾರ್ಡ್ ಮಿಂಟೋ ಕೇಳಿದ ಸವಾಲುಗಳಿಗೆ ಸರಿ ಜವಾಬು ನೀಡಿದನು. ಹೋಗಿ ಬರುವಾಗ್ಗೆ ಸಿಂಹದಂತೆ ಸ್ರೀಮದ್ಗಾಂಭೀರ್ಯದಿಂದ ಯಿದ್ದನು. ಅವನು ಶೋಷಿತರಲ್ಲಿ ಸ್ವಾಭಿಮಾನ, ಸ್ವಾವಲಂಭನೆ ಮತ್ತು ಸ್ವಲ್ಪಮಟ್ಟಿನ ಅಹಂಕಾರ ಬೆಳೆಸಿದ್ದು (ಅದೂ ಅಲ್ಪ ಕಾಲದಲ್ಲಿ) ಮಿಂಟೋ, ಬೆಂಟಿಂಕು, ವೆಲ್ಲೆಸ್ಲಿಯರೇ ಮೊದಲಾದ ವರಿಷಾ«ಧಿಕಾರಿಗಳಿಗೆ ಯಿರುಸು ಮುರುಸು ಮಾಡಿತ್ತು. ಅಲ್ಲದೆ ಆತನು ಗ್ರಾಮೀಣ ಜನರ ಸರ್ವಾಂಗೀಣ ಅಭಿರುದ್ಧಿ ಕುರಿತಂತೆ ತಾನು ರೂಪಿಸಿ ಸಲ್ಲಿಸಿದ್ದ ಯೋಜನೆಗಳು ಲಂಡನ್ನಿನ ಬಂಕಿಂಗ್‌ಹ್ಯಾಮ್ ಅರಮನೆಯನ್ನೇ ಹುಬ್ಬೇರಿಸಿದ್ದವು. ಆದರೂ ಅವನ ಸ್ವಾಮಿನಿಷೆ«ಯನ್ನು ಹವುಸಾಫ್ ಲಾರ್ಡ್ ಸಂದೇಹಿಸಿರಲಿಲ್ಲ. ಸಮಸ್ತ ದತ್ತ ಮಂಡಲಕ್ಕಾತನು ಅನಭಿಷಕ್ತ ಸಾಮ್ರಾಟನಾಗದಾನೆಂಬ ಆತಂಕದಿಂದ ಆಡಳಿತ ಮಂಡಳಿ ಆತನಿಗೆ ಪ್ರಾಪ್ತವಾಗಿದ್ದ ಪರಮಾಧಿಕಾರವನ್ನು ಮೊಟಕುಗೊಳಿಸುವ ಕಠಿಣ ನಿರ್ಧಾರವನ್ನು ಕಯ್ಗೊಂಡಿತು. ಅದರ ಪರಿಣಾಮವಾಗಿ ಕಡಪಾ ಜಿಲ್ಲೆಗೆ ಡಬ್ಲ್ಯು, ಡಬ್ಲ್ಯು ಚಾಪ್ಲಿನ್‌ನನ್ನು ಕಲೆಕ್ಟರನ್ನಾಗಿ ನೇಮಕ ಮಾಡಿತು. ಮನ್ರೋ ಸಾಹೇಬ ನನ್ನು ವಿಭಜಿತ ಬಳ್ಳಾರಿ ಜಿಲ್ಲೆಯ ಕಲೆಕ್ಟರನನ್ನಾಗಿ ನೇಮಕಾಗ್ನೆ ಹೊಂಡಿಸಿದೀ ಸುದ್ದಿ ಮೊದ ಮೊದಲು ಕೆಲ ಕಾಲ ಗುಟ್ಟಾಗಿತ್ತು. ರಯ್ತಾಪಿ ಮಂದಿಯ ಕಲೆಕ್ಟರನೆಂದು ಕಾರಲಮಾರ್ಕಸನ ಬಾಯಿಯಿಂದಲೇ ಹೊಗಳಿಸಿಕೊಂಡಿದ್ದಾ ಮಹಾಶಯನು ಸಪ್ಪಳ ಮಾಡದಂತೆ ಅಲ್ಲಿಂದ ಹೊರಡಲು ಪ್ರಯತ್ನಿಸದೆ ಯಿರಲಿಲ್ಲ.. ಆದರೆ ಯೀ ಸಂಗತಿ ಯಾವ ಮಾದಿಯಲ್ಲೋ ಸುತ್ತನ್ನಾಕಡೀಕೆ ಕಾಳ್ಗಿಚ್ಚಿನೋಪಾದಿಯಲ್ಲಿ ಭರ್ರಂತ ಹಬ್ಬದೆ ಯಿರಲಿಲ್ಲ.. ಸುತ ಮುತ್ತಲ ಹಳ್ಳಿಗಳಿಂದ ರಯ್ತಾಪಿ ಮಂದಿ ಕಛೇರಿ ಯದುರು ಜಮಾವಣೆಗೊಂಡು ಕಣ್ಣೀರೊಳಗೆ ತಮ ತಮ್ಮ

ಕಪಾಳಗಳನ್ನು ತೊಳಕೊಳ್ಳದೆಯಿರಲಿಲ್ಲ.. ಅದೆಂಗ ಹೋತಿಯೋ ಹೊಂಡು ಯಂದು ಸಣಕಂದಮ್ಮಗಳಂತೆ ಹಟೀ ಹಟೀ ಮಾಡದೆ ಯಿರಲಿಲ್ಲ.. ಅವರ ಪಯ್ಕಿ ರಯ್ತಾಪಿ ಮಂದಿಯೊಂದೇ ಅಲ್ಲದೆ ಜಮೀನ್ದಾರರೂ, ಪದಭ್ರಷ್ಟ ಪಾಳೇಗಾರರೂ, ಕಳ್ಳಕಾಕರೂ, ಕೊಲೆಗಡುಕರೂ ಯಿಲ್ಲದೆ ಯಿರಲಿಲ್ಲ.. ಬಾಣಂತಿಯರೂ, ಬಸುರೆಣುಮಕ್ಕಳೂ, ಹೊಸದಾಗಿ ಮದುವೆಯಾದೋರೂ ಹಸೆಮಣೆಯನ್ನೇರಬೇಕೆಂದಿದ್ದೋರೂ ಯಿಲ್ಲದಿರಲಿಲ್ಲ.. ಅಬಾಲರುದ್ದರಾದಿ ಯಾಗಿ ಪ್ರತಿಯೊಬ್ಬರ ಬಾಯೊಳಗೂ ಮಂತೋಳ ಸಾಹೇಬಾ.. ಮಂತೋಳ ಸಾಹೇಬ ಯಂಬೆರಡು ಪದಗಳು ಜಲಪಾತದೋಪಾದಿಯಲ್ಲಿ ದುಮ್ಮಿಕ್ಕುತಲಿದ್ದುದೇನು? ಹೋಗುವುದಿದ್ದಲ್ಲಿ ತಮ್ಮ ಹೆಣಗಳ ಮ್ಯಾಲ ನಡಕೊಂಡು ಹೋಗು ಯಂದೆಂಬುತಲಿದ್ದುದೇನು? ಕಣ್ಣೀರಿನಿಂದ ಸಾರಣೆ ಕಾರಣೆ ಮಾಡುತ ಲಿದ್ದುದೇನು? ಕಿರಿಯರಿಗೆ ಅಣ್ಣನಾಗಿದ್ದ.. ಹಿರಿಯರಿಗೆ ತಮ್ಮನಾಗಿದ್ದ.. ಮಕ್ಕಳಿಗೆ ತಂದೆಯಾಗಿದ್ದ.. ಕುರುಡರಿಗೆ ಕಣ್ಣಾಗಿದ್ದ.. ಹೆಳವರಿಗೆ ಮಾರುಗೋಲಾಗಿದ್ದ ಮಂಥೋಳ ಸಾಹೇಬ ಆವೀಸೂ ಮಂದಿಯ ಕಳ್ಳುಗಳು ಬಾಯಿಗೆ ಬಂದಿರುವುದ ಕಂಡು ಯಳೇ ಕಂದಮ್ಮನಂಗೆ ಬಿಕು ಬಿಕ್ಕಿ ಅತ್ತನು. ವಬ್ಬೊಬ್ಬರನು ವಂದೊಂದು ರೀತಿಯೊಳಗೆ ಸಂತಯಿಸಿದನು. ವಬ್ಬೊಬ್ಬರಿಂದ ವಂದಲ್ಲಾವಂದು ವಸ್ತುವ ಪಡೆಯುತ, ವಬ್ಬೊಬ್ಬರಿಗೆ ವಂದಲ್ಲಾ ವಂದು ವಸ್ತುವ ಕೊಡುತ.. ವಂದೊಂದಿಂಚು ಜಾಗವನ್ನು ವಂದೊಂದು ಯೋಜನವೆಂದು ಪರಿಭಾವಿಸುತ ನಡಕೋತ... ನಡ... ನಡಕೋತ....

ಕಡಪಾದಿಂದ ಬಳ್ಳಾರಿ ಯಷ್ಟು ದೂರಪ್ಪಾ ಅಂದರ ಅಷ್ಟು ದೂರ... ಕನಿಷ್ಟ ಪಕ್ಷ ಯೇಳೆಂಟು ಬಾರಿಯಾದರೂ ಗಡ್ಡ ಕೆರಕೋಬೇಕು.. ಬ್ಯಾಸರಿಕೆ ಆಯಿತೆಂದರೆ ಮರಗಿಡದ ತಣ್ಣೆಲಳೊಲಗ ವಿಶ್ರಮಿಸಿಕೊಳ್ಳಬೇಕು.. ರಾತ್ರಿಆಯಿತೆಂದರೆ ಅಲ್ಲಲ್ಲಿ ಬಿಡಾರ ಹೂಡಿ ವುಣ್ಣೋದು ವುಂಡು, ಹಾಸೋದು ಹಾಸಿಕೊಂಡು ಗಪ್ಪಂತ ಮಲಗಬೇಕು.. ಸೂರ್ಯ ಹುಟ್ಟತ್ತಲೆ ಯದ್ದು ಪ್ರಯಾಣ ಮುಂದೊರೆಸಬೇಕು.. ಮೆಟಕಾಫ್, ರೀಡರಂಥ ಕೆಳದರ್ಜೆಯ ಅಧಿಕಾರಿಗಳು ಯಿಲ್ಲಿಂದ ಅಲ್ಲಿಗೆ ಹೊಂಟರೆಂದರೆ ಗಾವುದ ಗಾವುದಕ್ಕೊಂದೊಂದು ಸಲ ಖಾನಾ ಪೀನಾ ಮಜಾ ವುಡಾನ... ಆದರೆ ನಮ್ಮ ಮಂಥೋಳ ಸಾಹೇಬ ಮಾತ್ರಯಲ್ಲರಂತವನಲ್ಲವೇ ಅಲ್ಲ.. ಯದುರಾಯುವ ವಂದೊಂದು ಮಾರೊಳಗ ನೆಂಟರಿಷ್ಟರು.. ವಂದೊಂದು ಮಾರ.. ವಬ್ಬೊಬ್ಬರ ಕಷ್ಟ ಸುಖ ವಿಚಾರಿಸುತ..

ಅವರು ಕೊಡಮಾಡೋ ಸತ್ಕಾರ ಸ್ವೀಕಾರ ಮಾಡುತ.. ಯೀವಯ್ಯನಿಗಿರುವ ದೊಡ್ಡಗುಣ ಬೇರಾರಿಗೆ ಬಂದೀತು? ಹುಟ್ ಹುಟ್ಟುತ್ತಲೇ ಮುಗುಳುನಗೆ ಯಂಬೊಡವೆಯನ್ನು ಮುಖದ ತುಂಬೆಲ್ಲ ಮುಡುಕೊಂಡೇ ಹುಟ್ಟಿದಂತಿದ್ದ ಮಂಥೋಳ ಸಾಹೇಬ ತಾನೆಲ್ಲೆಲ್ಲಿ ಪ್ರವೇಶ ಮಾಡುತ್ತಿದ್ದನೋ ಅಲ್ಲೆಲ್ಲ ವಸಂತ ರುತುವನ್ನು ಸ್ರುಷ್ಟಿ« ಮಾಡುತಲಿದ್ದ.. ತನ್ನೊಂದು ನೋಟ ಮಾತ್ರದಿಂದ ಭರವಸೆಯ ಬೆಳಕನ್ನು ಚೆಲ್ಲಾಡುತಲಿದ್ದ. ತನ್ನೊಂದು ಸ್ಪರುಷದಿಂದ ವಿದ್ಯುತ್ ಸಂಚಾರ ಮಾಡುತಲಿದ್ದ.. ತನ್ನೊಂದು ಜೋತಿರ್ಲಿಂಗ ಸದ್ರುಶ ಮಾತಿನಿಂದ ಜೀವನೋತ್ಸಾಹ ತುಂಬುತಲಿದ್ದ ಹತ್ತಾರು ಜಾನಪದ ಕಥೆ ಕಾವ್ಯಗಳ ನಾಯಕನಾಗಿದ್ದ.. ಪವುರಾಣಿಕ ಮಾತು ಕತೆಗಳ ಅವತಾರ ಪುರುಷನಾಗಿದ್ದ.. ತ್ರಿಕಾಲ ಸತ್ಯಗಳನು ಬಲ್ಲಂಥ ಗ್ನಾನಿಯಾಗಿದ್ದ ಮನ್ರೋ ಸಾಹೇಬಗೆ ವಂದೊಂದು ಮಾರೊಳಗೆ ವಂದೊಂದು ಕಥೆಗಳಿದ್ದವು.. ವಂದೊಂದು ಹೆಸರುಗಳಿದ್ದವು.. ಅಂಥ ಮಾರ ರೇಶಿಮೆ ಮಗ್ಗದೊಳಗ ಹಾಸುಹೊಕ್ಕಾಗುವುದೆಂದರೆ ವಂದೊಂದು ಚಲನೆಗೂ ವಂದೊಂದು ರೂಪಕೊಡುವುದೆಂದರೆ ಸಾಮಾನ್ಯ ಸಂಗತಿಯಲ್ಲ.. ಹಿಂಗಾಗಿ ಮನ್ರೋ ಸಾಹೇಬನು....

ಫಲಾನ ದಿವಸದಂದು ಬಳ್ಳಾರಿ ಪ್ರಾಂತವೆಂಬ ಮಾವಿನ ತೋಪನ್ನು ಚಯಿತ್ರಮಾಸವೇ ತಾನೆಂಬಂತೆ ಪ್ರವೇಶ ಮಾಡಿದನು. ಸೀದ ಗಡೇಕಲ್ಲಿಗೆ ಹೋಗಿ ಭೀಮಲಿಂಗೇಸ್ವರನ ದರುಸನ ಭಾಗ್ಯ ಪಡಕೊಂಡನು. ಅಲ್ಲಿಯೇ ಯಿದ್ದ ಬೊಬ್ಬಿಲಿನಾಗಿರೆಡ್ಡಿ ಸಮಾಧಿ ಮ್ಯಾಲ ಪುಷ್ಪಗುಚ್ಚವಿರಿಸಿ ಪ್ರಣಾಮ ಸಲ್ಲಿಸಿ ಅಲ್ಲೇ ಚಾವತ್ತು ಕಣ್ಮುಚ್ಚಿ ಕೂತುಕೊಂಡನು. ಸುತ್ತನ್ನಾಕಡೇಕ ನಿಂತಿದ್ದ ನೂರಾರು ಮಂದಿ ರೆಪ್ಪೆ ಪಿಳುಕಿಸದಂಗೆ ಆತನನ್ನೇ ನೋಡುತಲಿತ್ತು. ಪುಷ್ಪಗಿರಿ ನರಸಿಂಹಸ್ವಾಮಿಯೊಂದಿಗೆ ಪಗಡೆಯಾಟವನಾಡಿರುವ, ರಾಯದುರ್ಗದ ಪ್ರಸನ್ನ ವೆಂಕಟೇಶ್ವರ ಸ್ವಾಮಿಯೊಂದಿಗೆ ಗೆಳೆತನ ಸಾಧಿಸಿರುವ ಮನ್ರೋ ಸಾಹೇಬ ಕೀರ್ತಿಶೇಷನಾಗಿ ರೆಡ್ಡಿಂಯು ಆತುವುದೊಂದಿಗೆ ವುಭ'ಂಯು ಕುಶಲೋಪರಿಗಿಳಿದಿರಬಹುದೆಂದು ಅವರೆಲ್ಲ ಭಾವಿಸಿದ್ದುದೇ ಅದಕ್ಕೆ ಕಾರಣ. ಸೊಲುಪ ಹೊತ್ತಾದ ಮ್ಯಾಲ ಆತ ವಾಸ್ತವಕ್ಕೆ ಮರಳಿದ. ಮಂದಿ ದೊರೆಯೇ "ನಮ್ಮ ನಾಗಿರೆಡ್ಡೆಣ್ಣ ಹೆಂಗದಾನ, ಪಾಡದಾನ, ನೀನಾತಗ ಯೇನೇನು ಹೇಳಿದಿಯಪ್ಪಾ... ಆತನ ನಿನಗೇನೇನು ಹೇಳಿದ.. ಆತ ಪುನರ್ಜನ್ಮ ಪಡೆಯಲಕೇನಾದರೂ ಯೋಚನೆ ಮಾಡ್ತಿದ್ದಾನs" ಯಂಬಿವೇ ಮೊದಲಾದ

ಪ್ರಶ್ನೆಗಳನ್ನು ಕೇಳಲಾರಂಭಿಸಿದ್ದಕ್ಕೇನು ಹೇಳಲಿ ಸಿವನೇ.. ದೊರೆಯೇ... ಆ ಪುಣ್ಣಾತುಮ ನನ್ನೆಂಡತಿ ಹೊಟ್ಟೇಲಿ ಹುಟ್ಟುವುದಕ ಹೇಳು ಯಂದು ಯಲ್ಲಾರು ಪೀಡಿಸಲಾರಂಭಿಸಿದ್ದೇನು ಹೇಳಲಿ ಸಿವನೇ... ಅದಕ್ಕುತ್ತರವಾಗಿ ಮನ್ರೋ ಸಾಹೇಬನು ಅದನ್ನೆಲ್ಲ ತಾನು ಪ್ರಸ್ತಾಪಿಸಿದ್ದಾಗಿಯೂ, ಆತ ಯಿಗಾಗಲೇ ತನ್ನ ಹೆಂಡತಿಯ ವುದರವನ್ನು ಪ್ರವೇಶ ಮಾಡಿರುವನೆಂದೂ, ಯಿನ್ನೊಂದು ವರುಷೊಪ್ಪತ್ತೊಳಗೆ ತಾನೇ ಆತಗೆ ತಂದೆಯಾಗಲಿರುವುದಾಗಿಯೂ ಹೇಳಿದೊಡನೆ....

ಹಂಗs ಅಲ್ಲಿಂದ ಗುಂತಕಲ್ಲಿಗೆ ಹೋಗಿ ಸಂತತ್ವದ ಪರಾಕಾಷೆ« ತಲುಪಿದ್ದ ಮುನುಸೋಬಯ್ಯನನ್ನು ಕಂಡು ಕ್ಷೇಮ ಲಾಭ ವಿಚಾರಿಸಿದ. ಜೊತೆಗೆ ಬಳ್ಳಾರಿ ಪ್ರಾಂತದ ಸಮಗ್ರಅಭಿವೃದ್ಧಿ ಕುರಿತಂತೆ ಸಲಹೆ ಸೂಚನೆ ಪಡಕೊಳ್ಳದೆ ಯಿರಲಿಲ್ಲ.. ಯೀ ಪ್ರಕಾರವಾಗಿ ಸರ್ ಮನ್ರೋ ಸಾಹೇಬನು ವಂದೊಂದು ಕಡೆ ವಂದೊಂದು ರೀತಿಯ ವಿಸ್ಮಯ ಸ್ರುಷ್ಟಿಸುತ್ತ, ಅಂತಃಕರಣ ಬಿತ್ತುತ್ತ, ಬೆಳೆಯುತ್ತ ಫಲಾನ ದಿವಸದಂದು ಬಳ್ಳಾರಿ ಪ್ರಾಂತದ ಯೇಕರಿಕೆ ದೇಕರಿಕೆಯನ್ನು...

ಮನ್ರೋ ಬಳ್ಳಾರಿ ಜಿಲ್ಲೆಯ ಕಂದಾಯ ಯಿಲಾಖೆಗೆ ಹಿಡಿದಿದ್ದ ಗೆದ್ದಲು ಹುಳುಗಳನ್ನು ಹೊರ ಹಾಕಲು ಸಾಕಷ್ಟು ದಿನಗಳನ್ನು ಕಳೆಯಬೇಕಾಗಿತ್ತು. ಘೋರ್ಪಡೆಯಂಬ ಸಾಮಂತನ ನ್ನು ಕಾಣುವ ಸಲುವಾಗಿ ಸಂಡೂರಿಗೆ, ಅಲ್ಲಿಂದ ಕೂಡ್ಲಿಗಿ ಮೂಲಕ ಕುದುರೆಡವಿಗೆ ಹೊರಡಬೇಕೆಂದುಕೊಂಡಿದ್ದ.. ಆದರೆ ಆದವಾನಿಯಲ್ಲಿ ಯದ್ದಿದ್ದ ತಂಟೆ ತಕರಾರು ನಿವಾರಿಸುವ ಸಲುವಾಗಿ ದಯಮಾಡ ಬೇಕೆಂಬ ನಿರೂಪ ಮೆಕಂಜಿಯಿಂದ ಬರಬೇಕೆ! ಸರೆ.. ಅಬಡಾ ತೊಬಡಾ ಆ ಕಡೆ ತಾನು ಹೊರಡಬೇಕಾಯಿತು. ಜೊತೆಗೆ ಹಾಲಹರವಿ, ಬೆಳಗಲ್ಲು, ಆಲೂರು, ಹುಳೇಬೀಡು ಮಣಿಕುರ್ತಿಗಳ ತಗಾದೆಗಳನ್ನು ನಿವಾರಿಸುತ್ತ ಫಲಾನ ದಿವಸದಂದು ಆದವಾನಿಯನ್ನು ತಲುಪಿದ. ಆತನ ಆಗಮನದಿಂದಾಗಿ ಗಲಭೆಕೋರರ ಮೀಸೆಗಳು ಮ್ರುದುಗೊಂಡು ನೆಲ ನೋಡತೊಡಗಿದವು. ಆತ ನೆಮ್ಮದಿಯಿಂದ ವುಸುರು ಬಿಡುವಷ್ಟರಲ್ಲಿ ನಂದಾವರ ಕಡೆಯ ಕ್ರುಷಿ ಕಾರ್ಮಿಕರು ತಂಡೋಪ ತಂಡವಾಗಿ ಆಗಮಿಸಿ ತಮ ತಮ್ಮ ದುಕ್ಕ ತೋಡಿಕೊಂಡರು. ಕೋಸಿಗಿಯ ನಾರಾಯಣ ದೊರೆಯ ವಡೆತನದಲ್ಲಿದ್ದ ಸಾವಿರಾರೆಕರೆ ಜಮೀನನ್ನು ತಾನೆಂದೋ ವಶಪಡಿಸಿಕೊಂಡು ಭೂಹೀನರಿಗೆ ಹಂಚಿಕೆ ಮಾಡಿಯಾಗಿರುವುದು. ಪರಿಶೀಲಿಸಲಾಗಿ ಮಂತ್ರಾಲಯದ ರಾಘವೇಂದ್ರಸ್ವಾಮಿ ಹೆಸರಿನಲ್ಲಿ ಸಾವಿರಾರೆಕರೆ

ಜಮೀನಿರುವುದು.. ಅಲ್ಲದೆ ಹೇರಳ ಬಂಗಾರ ಬೆಳ್ಳಿಯಂಥ ಚರಾಸ್ತಿ ಕೂಡ...

ಅದರ ಮ್ಯಾಲ ಆತ ಕಣ್ಣಿಟ್ಟೊಡನೆ ಮಂತ್ರಾಲಯದೊಳಗ ಬ್ರುಂದಾವನದ ಶ್ರೀ ಶ್ರೀ ವಿಭುದೇಂದ್ರತೀರ್ಥಂಗಳ ಯಡ ಹುಬ್ಬು ಪಟಪಟಾಂತ ಬಡಕೊಳ್ಳತೊಡಗಿತು. ಯಾರ ತಂಟೆಗಾದ್ರುಹೋಗಿರಿ.. ಆದ್ರಆ ಗುರುವರ್ಯರ ಗೊಡವೆಗೆ ಮಾತ್ರಹೋಗಬ್ಯಾಡಿರೆಂದು ಸಿದ್ದಿಮಸೂದ್‌ಖಾನನ ವಾರಸುದಾರರಾದ ಅಬ್ದುಲ್ಲಾ, ಯಿಬ್ರಾಹಿಮ, ಷುಕೂರ್ ಮೊದಲಾದವರು ಪರಿಪರಿಯಿಂದ ಹೇಳಿದ್ದಕ್ಕೆ ಮನ್ರೋ ಸಾಹೇಬನು ಅದೆಂಗಾಯ್ತದೆ.. ನೂರಾರು ವರುಷಗಳ ಹಿಂದೆಂದೋ ಸತ್ತಿರುವಾತನ ಹೆಸರಲ್ಲಿ ಅಷ್ಟೊಂದು ಚರಾಸ್ತಿ, ಸ್ಥಿರಾಸ್ತಿಯಿರೋದೆಂದರೇನು? ದೀನದಲಿತರೂ ಗುರುವರ್ಯರಾದವರ ಮಕ್ಕಳು ತಾನೆ? ಬೃಂದಾವನವನ್ನ ಕಂಪನಿ ಸರಕಾರದ ಸುಪರ್ದಿಗೆ ತೆಗೆದುಕೊಂಡರೇನು ತಪ್ಪು? ಯಿನಾಮು ಭೂಮೀನ ಬಡಬಗ್ಗರಿಗೆ ಹಂಚಿದರೇನು ತಪ್ಪು ಯಂದೊಡನೆ.. ಅಲ್ಲಿ ಮಂತ್ರಾಲಯದಲ್ಲಿ ಅಯ್ಯಾರು ನಮೂನಿ ಸುಂಟರಗಾಳಿಗಳು ಕಾಣಿಸಿಕೊಂಡವು. ರಾಜಗೋಪಾಲಚಾರ್ಯ, ಗೋಯಿಂದಾಚಾರ್ಯರ ನೇತ್ರುತ್ವದ ತಂಡವು ಬೇಡಿ ದೊರಾ.. ಬೇಡಿ.. ಅವರು ಸತ ಸತಮಾನಗಳಿಂದ ಬೃಂದಾವನದೊಳಗ ಜೀವಂತ ಯಿದ್ದಾರ.. ಅವರ ಪವಾಡ ವಂದಾ.. ಯರಡಾ.. ಯಂದುದಕ್ಕೆ ಮನ್ರೋ ಸಾಹೇಬನು "ಹಂಗಾರ.. ಅವರು ಬ್ರುಂದಾವನದಿಂದ ಹೊರಗಡೆ ಬಂದು ತಕ್ಕ ಸಮಜಾಯಿಷಿ ನೀಡಲಿ" ಯಂದೊಡನೆ ಅಲ್ಲಿ ಮಂತ್ರಾಲಯದೊಳಗಿದ್ದ ಬ್ರುಂದಾವನ ಹಿಂದಕೂ ಮುಂದಕೂ ವಾಲಾಡಿದಂತೆ ಭಾಸವಾಯಿತು....

ನಂದಾವರದ ಕಡೆಯ ಹೊಲೆ ಮಾದಿಗರು ಬ್ಯಾಡ ಸ್ವಾಮೀ.. ಆ ಭೂಮಿ ಮಾತ್ರಬ್ಯಾಡ.. ಮಂತ್ರಾಲಯದ ಭೂಮಿನ ವುಳುಮೆ ಮಾಡಿ ನಾವ್ಯಾವ ನರಕಕ್ಕೆ ಹೋಗಲಕಾದೀತು.. ಭೂಮಿಸಾಮಿ ಯಿಲ್ದೆ ಬದುಕೋದು ನಮಗ ಅಭ್ಯಾಸ ಆಗಯ್ತೆ ಬುದ್ದಿ.. ನೀವು ಮಾತ್ರಮಂತ್ರಾಲಯದ ಕಡೆಯಿಂಥ ಯೋಚನೇನ ತಲೇಲಿಟುಕೊಂಡು ಮಾತ್ರಹೋಗಬ್ಯಾಡೂರಿ.. ವಂದು ಪಕ್ಷ ಹೋದಿರಂದರ ಹಂಗ ದರುಸನ ತಗೊಂಡು ಹಿಂಗs ವಾಪಾಸಾಗಿ ಬಿಡ್ರಿ" ಯಂದು ಯಷ್ಟು ಹೇಳಿದರೂ ಮನ್ರೋ ಸಾಹೇಬ ಹಿಡಿದ ಪಟ್ಟು ಬಿಡಲಿಲ್ಲ.. ರಾಘವೇಂದ್ರಗುರುವರ್ಯರ ಪೂರುವಾಪರ ಪವಾಡ ಮಹಿಮೆಗಳನ್ನು ಹಯಗ್ರೀವಾಚಾರ್ಯರ ಸ್ವಂತ ಬಾಯಿಯಿಂದ ಕೇಳಿಸಿಕೊಳ್ಳುತಲೂ, ಹ್ವಾ.. ಹ್ವಾ..

ಹೋ.. ಹೋ ಯಂದುದ್ಗಾರ ತೆಗೆಯುತಲೂ ದಾರಿ ಸವಸದೆ ಯಿರಲಿಲ್ಲ.

ಆತ ಮಂತ್ರಾಲಯ ಸೇರಿಕೊಳ್ಳುವ ಹೊತ್ತಿಗಾಗಲೇ ಸುತ್ತನ್ನಾಕಡೇಲಿಂದ ಸಾವುರಾರು ಮಂದಿ ಜಮಾವಣೆ ಗೊಂಡಿತ್ತಲ್ಲಿ. ಯಲ್ಲರ ವುಸುರಾಟ ಯಲ್ಲಾರಿಗೂ ಕೇಳಿಸುತ್ತಿತ್ತಲ್ಲಿ. ಯಿದೇನು ಪರೀಕ್ಷೆ ಬಂತಲ್ಲಾ ಗುರುವೇ ಯಂದು ಬ್ರುಂದಾವನಕ್ಕೆ ಸಣುವಮಾಡಿ ತಮ್ಮ ವಂದೊಂದು ನಿಟ್ಟುಸಿರನ್ನು ಪುಷ್ಪದೋಪಾದಿಯಲ್ಲಿ ಮುಡಿಸುತ್ತ ಹೋಗುತಯಿತ್ತಲ್ಲಿ... ಗುರುವೇ.. ನಮ್ಮ ಮನ್ರೋ ಸಾಹೇಬ ವಳ್ಳೆಯ ಮನುಷ್ಯನದಾನಯ್ಯಾ.. ಆತ ಮಾಡಬೇಕೆಂದಿರೋ ತಪ್ಪನ್ನು ಹೊಟ್ಟೇಲಿ ಹಾಕ್ಕೊಂಬಿಡು.. ಅವನನ್ನು ಕ್ಷಮಿಸಿ ತಾಯ್ತನ ಮೆರೆ ತಂದೆಯೇ.. ಯಂದು ಬೇಡಿಕೊಳ್ಳುತ ಯಿತ್ತಲ್ಲಿ..

ಯೀಗಾಗಲೇ ಅನೇಕ ದ್ಯಾವಾನುದೇವತೆಗಳ ರುದಂಯು ಗೆದ್ದಿರುವಂಥಾತನೂ.. ಅನೇಕ ದ್ಯಾವಾನು ದ್ಯಾವತೆಗಳ ನಿಷು«ರ ಕಟ್ಟಿಕೊಂಡಿರುವಂಥಾತನೂ.. ಪುರೋಹಿತ, ವಯ್ದಿಕ ಮಂದಿಯಿಂದ ಸಾಪಳಿಸಿ ಕೊಳ್ಳುತ್ತಿರುವಂಥಾತನೂ.. ಲಕ್ಷೋಪಲಕ್ಷ ಬಡ ಬಗ್ಗರಿಂದಲೂ ದೀನದಲಿತರಿಂದಲೂ ಸ್ತುತಿಸಿಕೊಳ್ಳುತ್ತಿರು ವಂಥಾತನೂ.. ಕುಂಪಣಿ ಸರಕಾರದಿಂದ ರೆಕ್ಕೆ ಪುಕ್ಕ ಕತ್ತರಿಸಿಕೊಂಡಿರುವಂಥ ಮನ್ರೋನು ಮಂತ್ರಾಲಯಕ್ಕೆ ಅಂಟಿಕೊಂಡಂತೆ ಯೇನು ಬಿಡಾರ ಹೂಡಿದ್ದನೋ ಅದರೊಳಗ ಯಿನಾಮು ಭೂಮಿಯಂಥ ಸ್ಥಿರಾಸ್ತಿಯ, ವಡವೆ ವಸ್ತ್ರಧನ ಕನಕ ನಗನಾಣ್ಯಗಳಂಥ ಚರಾಸ್ತಿಯ ಕಡತಗಳನ್ನು ವಂದೊಂದಾಗಿ ಪರಿಶೀಲಿಸುತಲಿದ್ದನು. ಆಗೊಮ್ಮೆ, ಯೀಗೊಮ್ಮೆ ಬಿಡುವು ಮಾಡಿಕೊಂಡು ಧರುಮಕ್ಷೇತ್ರದೊಳಗ ಸುತ್ತಾಡಿಕೊಂಡು ಬರುತಲಿದ್ದಾಗ ಭಕುತಾದಿ ಮಂದಿಯ ಕಣ್ಣ ಕವಣೆಗಳಿಂದ ನೋಟಯಂಬುವ ಕಲ್ಲೇಟು ತಿಂಬುತಲಿದ್ದನು.

ಹಿಂಗs ವಂದಿವಸ ಕಳೆದನು.. ಹಂಗs ಯರಡು ದಿವಸ ಕಳೆದನು.. ಮುಂದೊಂದು ರಾತ್ರಿಹಿಂಗs ಮಲಗಿಕೊಂಡು ಹಂಗss ಯದ್ದನೋ ಯಿಲ್ಲಮೋ.. ಸೀದ ತುಂಗಭದ್ರಾನದಿ ತಟಾಕಕ್ಕೆ ಹೋಗಿ ಜಳಕ ಮಾಡಿ ಮುಗಿಸಿ ಮಡಿಯುಡಿ ದಿರಿಸು ವುಟ್ಟುಕೊಂಡು ಅಂಗಾಲೊಳಗ ಕಣ್ಣು ಮುಡುಕೊಂಡು ಬರಿಗಾಲಲ್ಲಿ ನಡ.. ನಡಕೋತ ಬ್ರುಂದಾವನಕ್ಕೆ ಹೋಗಿ ಗುರುವೇ ರಾಘವೇಂದ್ರಸ್ವಾಮಿ, ನೀನು ಸಮಾಧಿಯೊಳಗ ಜೀವಂತವಿರುವಿ.. ನೀನು ನೀಡಿದ ಸಮಜಾಯಿಷಿ ತ್ರುಪ್ತಿಕರವಾಗಯ್ತೆ.. ನೀನು ನಿನ್ನ ಯಾವತ್ತೂ ಸ್ಥಿರಾಸ್ತೀನ,

ಚರಾಸ್ತೀನ ಬೇಕಾದಂಗ ಅನುಭೋಸು.. ಯಿದಕ್ಕೆ ನನ್ನ ತಕರಾರೇನೂ ಯಿಲ್ಲ.. ನನ್ನ ಯಾವತ್ತೂ ತಪ್ಪುಗಳನ್ನು ಮಾಫ್ ಮಾಡು ಯಂದು ಮುಂತಾಗಿ ನಿವೇದನೆ ಮಾಡಿ ಕೊಂಡೊಡನೆ.. ನೆರೆದಿದ್ದ ಪರಿಶೆ ಮೂಗಿನ ಮ್ಯಾಲ ಬೆರಳಿಟ್ಟುಕೊಂಡಿತು. ಮನ್ರೋ ಚಿರಾಯುವಾಗಲಿ ಯಂದು ಜಯ ಘೋಷ ಹಾಕಿತು. ಗುರುವೇ ರಾಘವೇಂದ್ರನಿನ್ನ ಪವಾಡ ಅಂದಿಗುಂಟು ಯಿಂದಿಗಿಲ್ಲ ಯಂಬುವವರಿಗೆ ಖಥ ಖಥೇ ಯಂದು ಬೆಕ್ಕಸ ಬೆರಗಾಗಿ ಕೂಗಿತು.

ಆದರೆ ಮೊಂಡು ಹಠದಾಸಾಮಿಯಾದ ಮನ್ರೋ ಸಾಹೇಬ ವಂದೇ ವಂದು ರಾತ್ರಿಯೊಳಗ ಅದೆಂಗ ಬದಲಾದ ಯಂಬ ಬಗ್ಗೆ ತಲಾ ವಂದೊಂದು ಕಲ್ಪನಾ ಮೂಡಲಾರಂಭಿಸಿತು. ಗುರುಸಾರ್ವಭೌಮರೇ ಬ್ರುಂದಾವನದೊಳಗಿಂದ ಹೊರಬಂದು ಬಿಡಾರದ ಕಡೇಕ ಬಿಜಯಂಗಯ್ದು ಯಿಂಗ್ಲೀಸು ಭಾಷೆಯಲ್ಲಿ ಮನ್ರೋನೆದುರು ವಾದ ಮಾಡಿದರೆಂಬ ಸಂಗತಿ ಯಷ್ಟು ಸುಳ್ಳೋ, ಯಷ್ಟು ನಿಜಮೋ.. ಮನ್ರೋನೇ ಸಾಮಾಜಿಕ ಶಾಂತಿ ಕಾಪಾಡುವ ಸಲುವಾಗಿ.. ರಕ್ತಪಾತ ತಡೆಯೋ ಸಲುವಾಗಿ.. ಪಡೆಯುವರಿಲ್ಲಲ್ಲದ ಮ್ಯಾಲ ತಾನ್ಯಾರಿಗೆ ಭೂಮಿ ಹಂಚುವುದು ಯಂದು ಮುಂತಾಗಿ ಯೋಚನೆ ಮಾಡಿ ಹಿಂದೇಟು ಹಾಕಿರಬಹುದೆಂಬ ಸಂಗತಿ ಯಷ್ಟು ಸುಳ್ಳೋ? ಯಷ್ಟು ನಿಜವೋ? ಯಾರಾದರೂ ಮನ್ರೋನ ಮ್ಯಾಲ ಮಾಯ ಮಂತ್ರಪ್ರಯೋಗ ಮಾಡಿದ್ದಿರಬಹುದೆಂಬ ಸಂಗತಿ ಯಷ್ಟು ಸುಳ್ಳೋ? ಯಷ್ಟು ನಿಜಮೋ? ಮನ್ರೋ ಮತ್ತು ರಾಘವೇಂದ್ರಸ್ವಾಮಿಗಳ ನಡುವೆ ಅಥವಾ ಮಠದ ವುತ್ತರಾಧಿಕಾರಿಗಳ ನಡುವೆ ಯೇನಾದರೂ....

ಮಂದಿ ಯಂಬುವ ಮಂದಿ ಕಲ್ಪನಾಲೋಕದಲ್ಲಿ ವಿಹರಿಸುತ್ತಿರಲು.. ಪವುರಾಣಿಕ ಪಾತ್ರವಾಗಿ ಸಾಕಷ್ಟು ಬೆಳೆದಿದ್ದ ಮನ್ರೋ ಮಂತ್ರಾಲಯದಿಂದ ಹೊರಟು ಬಳ್ಳಾರಿ ಪಟ್ಟಣವನ್ನು ಸೇರಿಕೊಂಡ ಕೆಲಕಾಲದವರೆಗೆ ನಿರುತ್ಸಾಹದಿಂದಲೇ ಯಿದ್ದನು. ಮುಡು ಮುಡನೆ ಮೂಡಿ ಕಾಡುತಲಿದ್ದ ಕುದುರೆಡವಿನ ಜೊತೆಗೆ ಮಂತ್ರಾಲಯ ಬೇರೆ ತಳುಕು ಹಾಕಿಕೊಂಡಿತ್ತು. ಯರಡು ದಿನಕ್ಕೊಂದು ಸಲವಾದರೂ ತಾನು ಕಾಣುತ್ತಿದ್ದ ಕನಸಿನೊಳಗೆ ತಾಯಿಯೋರ್ವಳು ಮತ್ತ ಮತ್ತ ಕಾಣಿಸಿಕೊಂಡು ಬಾ ಮಗನೇ.. ಬಾ ಮಗನೇ ಯಂದು ಕರೆದಂಗಾತಿತ್ತು.. ತಾನು ಯಷ್ಟು ಪ್ರಯತ್ನಿಸಿದರೂ ವರ್ತಮಾನದ ಜಗಲಿ ಮ್ಯಾಲಿಂದ ಭೂತಕಾಲವನ್ನು ಕದಲಿಸಲಾಗಲಿಲ್ಲವೆಂಬ ಹಳಹಳಿಕೆ ಬೇರೆ..

ವರ್ತಮಾನವೇ ಯಿಲ್ಲದ ಯಿಂಡಿಯಾ ವುದ್ದಾರವಾಗುವುದೋ? ಯಿಲ್ಲಮೋ ಯೆಂಬಾತಂಕ ಬೇರೆ.. ತಾನೂ ವಳಗೊಳಗೆ ಸನಾತನಿಯಾಗಿ ಮಾರ್ಪಟ್ಟಿದ್ದಿರಬಹುದೆಂಬ ಅನುಮಾನ ಬೇರೆ.. ಸರ್ವತೋಮುಖ ವತ್ತಡಕ್ಕೆ ಸಿಲುಕಿದಂಥ ತೆಳು ತಗಡಿನ ಡಬ್ಬಿ ತಾನಾಗಿದ್ದಿರಬಹುದೆಂಬ ಕೀಳರಿಮೆ.. ಯಿಂಥ ಅನೇಕ ಯೋಚನೆ, ವಿವೇಚನೆಗಳಿಂದಾಗಿ ಮನ್ರೋ ಸಾಹೇಬನು ವುಲ್ಲಸಿತನಾಗಿರಲಿಲ್ಲ. ಹಿಂಗಾಗಿ ಹೊತ್ತಿಗೆ ಸರಿಯಾಗಿ ವುಣ್ಣದಾದ.. ಹೊತ್ತಿಗೆ ಸರಿಯಾಗಿ ಮಲಗದಾದ. ಹತ್ತು ವರ್ಷಗಳಲ್ಲಿ ಕ್ಷೀಣಿಸಬಹುದಾದ ಆರೋಗ್ಯ ಕೇವಲ ಹತ್ತೇ ದಿವಸಗಳಲ್ಲಿ ಕ್ಷೀಣಿಸಿತು. ಕ್ಷೇಮ ಲಾಭ ವಿಚಾರಿಸಿಕೊಳ್ಳುವ ಸಲುವಾಗಿ ಆತಗೇನು ಹೆಂಡರಿದ್ದರಾ? ಮಕ್ಕಳಿದ್ದರಾ?.. ಆತ ಮೊದಲೇ ವುಂಡು ವುಪವಾಸಿ, ಬಳಸಿ ಬ್ರಹ್ಮಚಾರಿ.. ಯಡಕೇಸಿಂದ ನೋಡಿದರ ಮಾಮೂಲು ಆದಮಿಯಂತೆಯೂ.. ಬಲಕೇಸಿಯಿಂದ ನೋಡಿದರ ಸಾಧು ಪರಮಾತುಮನಂತೆಯೂ ಗೋಚರವಾಗುತಲಿದ್ದುದೂ ಸೋಜಿಗವೇ..

ಯಿಂಥ ಹೊತ್ತಲ್ಲೆ ಗುತ್ತಿವಳಿತದ ಪ್ರಾಂತದಲ್ಲಿ ವಾಂತಿಭೇದಿರೋಗ ಕಾಣಿಸಿ ಕೊಂಡಿರುವುದೆಂಬ, ಪ್ರಜೆಗಳು ನಿತ್ರಾಣಗೊಂಡಿರುವರೆಂಬ, ಯೀಗಾಗಲೇ ಪ್ರತಿಮನೆಯಲ್ಲಿ ವಂದಲ್ಲಾ ವಂದು ಹೆಣ ಕಾಣಿಸಿಕೊಂಡಿರುವುದೆಂಬ ಸುದ್ದಿ ಬಂದು ರಣಹದ್ದಿನಂತೆ ಕಿವಿಗೆ ತಗುಲಿದೊಡನೆ ಮನ್ರೋನ ತಲೆ ಗಿರ್ರಂತ ಸುತ್ತಿತು. ಹಂಗ ಗಪ್ಪಂತ ಮಲಕ್ಕೋಂಬೇಕೆಂಬ ಆಸೆ ಆಯಿತು. ಯಿನ್ನು ತಾನು ಗಟ್ಟಿಮುಟ್ಟಾಗಿರು ವಾಗಲೇ ತನ್ನ ಪ್ರೀತಿಯ ಪ್ರಜೆಗಳು ಕಣಮುಂದ ಸಾಯುವುದೆಂದರೇನು? ಅಯ್ಯೋ ತನ್ನ ಪ್ರೀತಿಯ ಪತ್ತಿಕೊಂಡ ಪ್ರಾಂತವೇ..

ನಿಂತ ನಿಲುವಿಕೀಲೆ ಹೊಂಟು ನಿಂತ ತಮ್ಮ ಸಾಹೇಬನನ್ನು ನೋಡಿ ಮ್ಯಾಥ್ಯೂ, ಅಳಸಿಂಗಯ್ಯ, ರಾಬರ್ಟರೇ ಮೊದಲಾದ ಅಧಿಕಾರಿಗಳು.. ನಿತ್ರಾಣಾಗಿರೋ ನೀವು ತ್ರಾಸು ತಗೋಬ್ಯಾಡಿರಿ ಖಾವಂದರೇ.. ನೀವು ಕಾಲಿಂದ ತೋರಿಸಿದನು ತಲೀಲೆ ಮಾಡಲಕ ನಾವದೀವಿ ಯಂದಂದು ತರುಬಲಕ ನೋಡಿದರು. ನಿಮಗೇನಾರ ಹೆಚ್ಚೂ ಕಮ್ಮಿ ಆದಲ್ಲಿ ಬಳ್ಳಾರಿ ದೇಸದ ಗತಿಯೇನು ಯಂದು ಮುಂತಾಗಿ ಹೇಳುತ್ತ ಯಾಕೂಬು, ಪಿಳ್ಳೆ, ಅಯ್ಯಂಗಾರಾದಿಯಾಗಿ ಯಲ್ಲರೂ ಅಡ್ಡಗಾಲು ಹಾಕಲಕ ನೋಡಿದರು.. ಆದರೆ ನಮ್ಮ ಮನ್ರೋ ಸಾಹೇಬನು ಅವರ್‍ಯಾರ ಮಾತನ್ನು ಕಿವಿ ಸನೀಕ ಬಿಟ್ಟುಕೊಳ್ಳಲಿಲ್ಲ.. ಯೀ ಘಟ ಯಿದ್ದರೆಷ್ಟು..? ಹೋದರೆಷ್ಟು? ಅಂದುಬಿಟ್ಟನು.. ತನ್ನ ಹಿಂದ ವಯ್ದರ ದಂಡು

ಕಟ್ಟಿಕೊಂಡು ಪತ್ತಿಕೊಂಡ ಪ್ರಾಂತವಿದ್ದ ಯೀಶಾನ್ಯ ದಿಕ್ಕಿನ ಹಾದಿ ತುಳಿದನು..

ದಾರಿ ವುದಕ್ಕಿದ್ದ ಸಿಡಿಗಿನಮೊಳ, ಕಾರೆಕಲ್ಲು, ಚಿಂತಕುಂಟಿ, ಹಾಲಹರವಿ, ಆಲೂರು ಯಿವೇ ಮೊದಲಾದ ಗ್ರಾಮೋಪಗ್ರಾಮಗಳು ತಲೆಗೆ ಕಯ್ಯಿ ಹೊತ್ತು ಕೂಕಂಡಿದ್ದವು.. ಮೂಲೆ ಮುರುಕಟ್ಟಿನಲ್ಲಿದ್ದ ಹೆಣ್ಣು ದೇವತೆಗಳನ್ನು ಹೊರ ತೆಗೆದು ತಿಕ್ಕಿ ತೀಡುತಲಿದ್ದವು.. ಮಾರೆಮ್ಮನನ್ನು ತಮಣಿ ಮಾಡುವ ಸಲುವಾಗಿ ಬೇಯಿನ ಮರಗಳಿಗೆ ಸುಣ್ಣ ಕೆಮ್ಮಣ್ಣು ಬಳಿದು ಸಿಂಗಾರ ಮಾಡುವ ರಣ ಸಡಗರದಲ್ಲಿದ್ದವು.. ಅದನ್ನೆಲ್ಲ ನೋಡುತ್ತ, ಅದನೆಲ್ಲ ಕೇಳುತ್ತ, ಮುಂದ ಮುಂದಕ ಸಾಗಿದ ಸಾಹೇಬನು ಆಸ್ಪರಿ ದಾಟಿ ಪತ್ತಿಕೊಂಡ ತಲುಪಿದ್ದು ಫಲಾನ ದಿವಸದಂದು..

ವಂದೊಂದು ಮನೆ ಮುಂದ ವಂದೊಂದು ಹೆಣ ಯಿಟ್ಟುಕೊಂಡು ಕೂತಿದ್ದವರು.. ಹೆಣ ವುಗಿಯಲಕ ಸುಡುಗಾಡು ಸಾಲದು ಬಿದ್ದಯ್ತಲ್ಲ ಯಂದು ಅಳುತಲಿದ್ದೋರು, ರಣಮಾರಿ ಹೆಣಗಳನು ತಿಂದು ತೇಗುತವಳೆ.. ಮಾರಿಗೊಂದೊಂದು ಮಸಣ ಮಾಡವಳೆ.. ಶಾಂತೆಮ್ಮ, ಬೇದೆಮ್ಮ ತಾನೆ ಆಗವಳೆ, ಮೋಣಿ ಮೋಣಿಯೊಳಗೊಡಮೂಡಿ ಕುಂಪಣಿ ಸರಕಾರ ಬಂದಲಾಗಾಯ್ತು ದೇವರು ದಿಂಡಿರುಗಳಿಗೆ ದಮ್ಮಡಿ ಕಿಮ್ಮತ್ತು ಯಿಲ್ಲದಂಗಾಗೋಯ್ತಲ್ಲಾ.. ವಂದು ಕುರಿ ಕಡೀಲಿಲ್ಲ.. ವಂದು ಕೋಳಿ ಸಿವುಟಲಿಲ್ಲ.. ವಂದಾರ ಕೋಣ ಬಲಿಕೊಡಲಿಲ್ಲ.. ಯಿಂಥ ಸರಕಾರ ಯಿದ್ದರೆಷ್ಟು? ಹೋದರೆಷ್ಟು? ಅಂಥ ಕಿಲುಬು ಸರಕಾರಕ್ಕೆ ಡೊಗ್ಗು ಸಲಾಮು ಹಾಕುವ ಮಂದಿ ಯಿದ್ದರೆಷ್ಟು? ಹೋದರೆಷ್ಟು? ಯಂದನಕಂತ ಯಿದ್ದೋರು ಮನ್ರೋನು ಕಣ್ಣಿಗೆ ಬೀಳುತ್ತಲೇ ಕಾಲುಕಾಲಿಗೆ ತೊಡರಿಕೊಳ್ಳಲಕ ಹತ್ತಿದರು..

ದೊರೆಯೇ ನೀನು ನಮ್ಮೂರೊಳೀಕ್ಕೆ ಕಾಲಿಟ್ಟೇ ಅಂದರ ತಾಯಿ ಮುನುಸ್ಕೋತಾಳಯ್ಯಾ.. ಹೆಂಗ ಬಂದ್ಯೋ ಹಂಗs ಹೊಳ್ಳಿ ಹೋಗಿ ಬಿಡಯ್ಯಾ.. ನಿನಗೆ ಪುಣ್ಯ ಬರತಯ್ತೆ ಯಂದು ಗದುಮಲಕ ಪ್ರಯತ್ನ ನಡೆಸಿದವರೆಷ್ಟೋ, ಬಾರಪ್ಪಾ.. ಬಾರಯ್ಯಾ.. ನಮ್ಮ ಕಣ್ಣೀರೊಳಗ, ನಮ್ಮ ಸಾವಿನೊಳಗ, ನಮ್ಮ ದುಕ್ಕದುಮ್ಮಾನದೊಳಗ ನೀನೂ ಪಾಲುಗಾರನಾಗಯ್ಯಾ.. ಯಂದು ಸ್ವಾಗತ ಕೋರುತ್ತಿದ್ದವ ರೆಷ್ಟೋ?

ಅದನ್ನೆಲ್ಲ ನೋಡಿ ಮನ್ರೋಗೆ ತಲೆ ಗಿರ್ರಂದಂಗಾತು.. ಕಣ್ಣುಗಳು ನೀರಿನ ತತ್ರಾಣಿ ಆದುವು.. ಹಿಂದಕ ನಡೆಯಲಕಂದರ ಹಿಂಗಾಲೊಳಗ

ಕಸುವಿಲ್ಲದಂಗಾತು.. ಮುಂದಕ ನಡೆಯಲಕಂದರ ಮುಂಗಾಲೊಳಗ ಕಸುವಿಲ್ಲದಂಗಾತು.. ಗಂಟಲೊಳಗ ಗೆಬರಿದರೂ ವಂದಾರ ಸಾಂತ್ವನದ ಮಾತು ಯಟಕದಂಗಾತು.. ಹೊರಗ ನೋಡಲಕ ತಾನೇನೋ ಕಲೆಟ್ಟರ ಸಾಹೇಬ.. ಆದರ ವಳಗಿಣುಕಿ ನೋಡಲಲ್ಲಿ ಮಾಮೂಲು ಮಾಂಸಲ ಮನುಷ್ಯನು.. ತನ್ನೊಳಗಿನ ಪರಪಂಚವೇ ರೋಗಪೀಡಿತಗೊಂಡಂಥ, ತನ್ನೊಳಗಿನ ರಾಜಕೀಯ ನಕಾಷೆಯೇ ವಾಂತಿ ಭೇದಿ ಮಾಡಿಕೊಂಡು ಸುಸ್ತಾಗಿರುವಂಥ ಅನುಭವವಾತು.. ದುಕ್ಕು ದುಕ್ಕಿಸಿ ಅಳಬೇಕೆಂದರ.. ವಬ್ಬೊಬ್ಬರನು ತಬ್ಬಿಕೊಂಡು ಆಳಬೇಕಂದರ.. ನಿಮ್ಮ ನೋವಿನೊಳಗ ತಾನೂ ಪಾಲುದಾರನಾಗುತೀನಿ ಯಂದು ಕೇಳಬೇಕಂದರ.. ತಾನೇನು ಮಾಮೂಲು ಮನುಷ್ಯನಲ್ಲ.. ತಾನು ಮಾಮೂಲು ಮನುಷ್ಯನಾದ ಪಕ್ಷದಲ್ಲಿ ಸದರಿ ಪ್ರದೇಶವು ಅಳ್ಳೋಗದಿರದು ಯಂದು ಮುಂತಾಗಿ ಯೋಚಿಸುತ್ತ ಮನ್ರೋ ಮಹಾಶಯನು ಯಿದ್ದೆರಡು ಕಾಲುಗಳನ್ನೇ ನೂರು ಮಾಡಿಕೊಂಡು ಸುತ್ತಾಡ ಲಾರಂಭಿಸಿದ.. ಯಿದ್ದೆರಡು ಕಯ್ಯಿಗಳನ್ನೆ ಸಾವಿರ ಮಾಡಿಕೊಂಡು ನೊಂದವರ, ನತದ್ರುಷ್ಟರ ಬೆನ್ನು ದಡವತೊಡಗಿದ.. ಯಿದ್ದೊಂದು ಬಾಯನ್ನು ಸಾವುರ ಮಾಡಿಕೊಂಡು ಪರಿಪರಿಯಿಂದ ಸಾಂತ್ವನದ ಮಾತುಗಳನ್ನು ಬಿತ್ತಲಾರಂಭಿಸಿದ....

ತಾಯೀನ ಕಳಕೊಂಡವರಿಗೆ ತಾಯಿಯಾಗುವೆನೆಂದ, ತಂದೀನ ಕಳಕೊಂಡವರಿಗೆ ತಂದೆಯಾಗುವೆನೆಂದ, ಮಕ್ಕಳನ್ನು ಕಳಕೊಂಡವರಿಗೆ ಮಗನಾಗುವೆನೆಂದ, ಮೊಮ್ಮಕ್ಕಳನ್ನು ಕಳಕೊಂಡವರಿಗೆ ಮೊಮ್ಮಗನಾಗುವೆ ನೆಂದ.. ಅಣ್ಣಂದಿರನ್ನು ಕಳಕೊಂಡವರಿಗೆ ತಾನಣ್ಣನಾಗುವೆನೆಂದ.. ತಮ್ಮಂದಿರನ್ನು ಕಳಕೊಂಡ ಅಣ್ಣಂದಿರಿಗೆ ತಾನೆ ತಮ್ಮನಾಗುವೆನೆಂದ.. ಯಿನ್ನು ಗಂಡಂದಿರನ್ನು ಕಳಕೊಂಡ ಹೆಂಡಂದಿರಿಗೆ ಹೆದರ ಬ್ಯಾಡಿರಿ ತಾಯಿ.. ಯಂದು ಧಯರ್ಯ ತುಂಬುವ ಮಾತುಗಳನ್ನಾಡಿದ.

ಕಾಮನ ಬಿಲ್ಲಿನಂಗೆ ಮೂಡಿರುವ.. ಕನಸುಗಳೊಳಗೊಡಮೂಡಿರುವ ಮನ್ರೋ ಇವತ್ತು ನೀನಿಲ್ಲಿರುತ್ತಿ.. ನಾಳೆ ಯಿನ್ನೆಲ್ಲೋ ಯಿರುವಿ.. ನೀನೇ ಅನುಗಾಲ ನೀಸುವುದಕಾದೀತಾ.. ಅಗೋಚರ ಸ್ಥಿತೀಲಿದ್ದು ದಟ್ಟಂಡಿ ದಾರಂಡಿ ಅಲೆಯುತಲಿರೋ.. ನೋಡಿದ ಕಡೇಲೆಲ್ಲ ಸುಡುಗಾಡುಗಳನ್ನು ಸ್ರುಷಿ« ಮಾಡುತಾಯಿರೋ ರಣಮಾರೀನ ನೀನು ಸಂತಯಿಸುವಿಯೇನಯ್ಯಾ? ಆಕೆ ಬಗಸಿದಲ್ಲಿ ನೀನು ನಿನ್ನ ಜೀವ ಕೊಡುತಿಯೇನಯ್ಯಾ..? ನೀನು ಮೊದಲೇ

ಕಿರಸ್ತಾನದವ.. ಅಂಗ್ರೇಜಿ ಕಲತಿರೋವ.. ನೀರ ಮ್ಯಾಲಣ ಬಣ್ಣದ ಗುಳ್ಳೆಯಂಥ ನಿನಗೆಂಗ ಅರ್ಥ ಆದೀತಯ್ಯಾ ರೋಗ ರುಜಿಣದ ಮರ್ಮಯಂಬೀವೇ ಮೊದಲಾದ ಮಾತುಗಳನ್ನು ತನ್ನ ಹಿಂದೆ ಹಿಂದೆ....

ಲಕ್ಷಾನುಲಕ್ಷ ವರುಷಗಳಿಂದ ಜೀವ ಲುಕ್ಷಾಣುಮಾಡಿಕೋತ ಬಂದಿರೋ ತಂದೆ, ತಾತ ಮುತ್ತಾಂದಿರೆಲ್ಲ ಕೋಟ್ಯಾನುಕೋಟಿ ನೊಣಗಳ ರೂಪದಲ್ಲಿದ್ದರಲ್ಲಾ.. ಯಲ್ಲಿ ಬೇಕಂದರಲ್ಲಿ ಗುಯ್ಯಂತ ಮುಕ್ಕುರುತ ಲಿದ್ದರಷ್ಟೆ. ಅವರೆಲ್ಲ ಮನ್ರೋ ಸರೀರದ ಬೆಲೆಬಾಳುವ ಅಂಗೋಪಾಂಗಳ ಮ್ಯಾಲ ಕೂತೇಳುತಲಿದ್ದರಷ್ಟೆ.. ನೊಣಗಳ ವುಪಟಳ ನಿವಾರಿಸಿಕೊಳ್ಳುವ ಸಲುವಾಗಿ ಸದರಿ ಸಾಹೇಬ ಹೆಜ್ಜೆ ಹೆಜ್ಜೆಗೆ ಕಯ್ಯಿಗಳನ್ನಾಡಿಸುತ ಲಿದ್ದನಷ್ಟೆ.. ಆತಗೆ ಕಣ್ಣು ತೆರೆಯಲಕಯಿರಲಿಲ್ಲ ಪುರುಸೊತ್ತು.. ಬಾಯಿತೆರೆಯಲಕಿರಲಿಲ್ಲ ಪುರುಸೊತ್ತು.. ಮೊದಲೇ ನಿತ್ರಾಣದ ಪ್ರಕ್ರುತಿ ಆತನದು.. ಪತ್ತಿಕೊಂಡ ಪ್ರವೇಶ ಮಾಡಿದ್ದೇ ಮಾಡಿದ್ದು, ವಂದು ತುತ್ತು ವುಂಡಿರಲಿಲ್ಲ.. ವಂದು ಗುಟುಕು ನೀರು ಕುಡಿದಿರಲಿಲ್ಲ.. ಬಾಯಿ ಮುಕ್ಕಳಿಸಿರಲಿಲ್ಲ.. ಕಣ್ಣ ಸಂದುಗಳ ಸಿಳ್ಳು ವರೆಸಿಕೊಂಡಿರಲಿಲ್ಲ.. ರೆಪ್ಪೆಗೆ ರೆಪ್ಪೆ ಅಂಟಿಸಿ ವಂದು ಜೋಂಪು ನಿದ್ದೆ ತೆಗೆದಿರಲಿಲ್ಲ. ತೂಕಡಿಸಿಯೂ ಯಿರಲಿಲ್ಲ..

ಮೂರಿದ್ದತೊಡೆ ಬದಲಿಸಬೇಕೆಂದರ.. ವಕ್ಕಲೆಬ್ಬಿಸಬೇಕೆಂದರೆ.. ನೊಣಗಳನು ನಿರ್ಮೂಲನ ಮಾಡಲಕೆಂದರೆ.. ಹೊಕ್ಕು ತುಂಬೋ ಬಾವಿಗಳೊಳಗೆ ಕ್ರಿಮಿನಾಶಕ ಚೆಲ್ಲಾಡಬೇಕಂದರ.. ಸಮಾಜ ತನಗೆ ಸಹಕರಿಸಲೊಲ್ಲದು.. ಬಾಗಿಲಕೇಸಿಂದ ಹೋದದ್ದು ಡಬಾಕ್ಲಿಕೇಸಿಂದ ಮತ್ತ ಹೊಳ್ಳಿ ಬಂದು ಭೂತಕ್ಕೆ ಜೋತು ಬೀಳುತ್ತಿರುವುದು.. ಹತ್ತು ಮಂದಿಗೊಬ್ಬರಂತೆ ಸಾಯುತಲಿದ್ದವರು ನೂರು ಮಂದಿ ಗೊಬ್ಬರಂತೆ ಮಣ್ಣು ಕಾಣಲಾರಂಭಿಸಿದ್ದರು. ಅಂತೂ ಸಾವವರ ಸಂಖ್ಯೆ ತಗ್ಗು ಮುಖ ಆಯಿತೆಂಬುದೇ ಸಮಾಧಾನಕರ ಸಂಗತಿ....

ನಿತ್ರಾಣದ ಪಯ್ಕಿ ನಿತ್ರಾಣಗೊಂಡಿದ್ದ ಮನ್ರೋಸಾಹೇಬನು ಆ ವಂದಿವಸ ಸಹಚರರ ಜುಲುಮಿ ಯಿಂದಾಗಿ ಬಿಡಾರ ಸೇರಿ, ಜುಲುಮಿಯಿಂದ ವಂದ್ತುತ್ತು ಬಾನವುಂಡ, ವಂದು ಗುಟುಕು ನೀರು ಕುಡಿದ.. ವಂದಾರ ಜೋಂಪು ನಿದ್ದೆ ಮಾಡುವುದರ ಮೂಲಕ ಪುನಶ್ಚೇತನಗೊಳ್ಳಬೇಕೆಂದು ನಿರ್ಧರಿಸಿ ಹಂಗ ರೆಪ್ಪೆಗೆ ರೆಪ್ಪೆ ಅಂಟಿಸಿಯೇ ಬಿಟ್ಟ. ಯಿನ್ನರಗಳಿಗೆಯಾಗಿಲ್ಲ.. ಗಾಢ ನಿದುರೆ ಆವರಿಸಿತು.. ಕನಸುಗಳು ವಂದರ ಹಿಂದೊಂದರಂತೆ ಗೋಚರ ಮಾಡಲಾರಂಭಿಸಿದವು.. ಗೋಚರಮಾದ ಪಟ್ಟಣ.. ತುಂಬೆಲ್ಲ ಗಗನಚುಂಬಿ ವುಪ್ಪರಿಗೆ ಮ್ಯಾಲುಪ್ಪರಿಗೆ

ಮನೆಗಳು.. ಮೊಸರನ್ನ ಚೆಲ್ಲಿ ಬಳಕೊಂಡು ವುಂಬುವಂತಿದ್ದ ಹಾದಿಗಳ ತುಂಬೆಲ್ಲ ವಿವಿಧ ಜಾಯಮಾನದ ಹೆಂಗಸರು, ಅವರೆಲ್ಲರ ಗಮನ ತನ್ನತ್ತಲೇ.. ಅವರೆಲ್ಲ ನಿಟ್ಟುಸಿರುಗಳ ಗಮ್ಯ ತಾನೇ.. ಅವರೆಲ್ಲ ತಾಯಂದಿರೆಂಬುದು ನಿರ್ವಿವಾದದ ಸಂಗತಿ. ಅವರೆಲ್ಲ ಯೀ ತನ್ನ ನಿರೀಕ್ಷೆ ಯಲ್ಲಿರುವರೆಂಬುದಲ್ಲಿ ದುಸುರಾ ಮಾತಿಲ್ಲ.. ಆದರೆ ಅವರೆಲ್ಲರ ಕಂಕುಳದಲ್ಲಿ ವಂದೇರೂಪದ ಮಗು ವಂದಿರುವುದಲ್ಲ.. ತನ್ನನ್ನದು ಹೋಲುತ್ತಿರುವುದಲ್ಲಾ.. ಅದೂ ತನ್ನತ್ತ ಆಸೆಗಣ್ಣಿಂದ ನೋಡುವಂತಿದೆ ಯಲ್ಲಾ.. ಆ ಯಲ್ಲ ತಾಯಂದಿರ ಮಧ್ಯೆಯಿರುವ ಮುಪ್ಪಾನು ಮುದಕಿ... ತಾನದನ್ನೆಲ್ಲೋ..

ಯಚ್ಚರಾಗುತ್ತಲೇ ಕನಸುಗಳೆಲ್ಲ ಚದುರಿ ಹೋಗಲು.. ಕನಸೊಳಗಿದ್ದ ತಾಯಂದಿರೆಲ್ಲ ತನ್ನೊಳಗೆ ಕರಗಿ ಹೋಗಲು.. ಆ ಮುದುಕಿಯೊಂದೇ ಹೊರಗುಳಿಯಲು...

ಹೊತ್ತಾಗಲೇ ಮೂರು ಮಾರು ಮೇಲಕ್ಕೇರಿದ್ದರೂ ಮನ್ರೋ ಹಾಸಿಗೆಯೆಂದೀಚೆ ಬಂದಿಲ್ಲ.. ಕನಸುಗಳು ತುಂಬಿಕೊಂಡಿದ್ದರಿಂದಾಗಿ ತನ್ನ ದೇಹ ಫಲ ಭರಿತ ಮಾವಿನ ಮರದಂತೆ ಭಾರವಾಗಿರುವಂಥ ಅನುಭವ. ತನ್ನ ದೇಹದೊಳಗೆಲ್ಲೆಲ್ಲೂ ತಾಯಂದಿರೇ ತಾಯಂದಿರು. ಸಾವಿರಾರು ಕಂದಮ್ಮಗಳು ನರನಾಡಿ ತುಂಬೆಲ್ಲ ಮೊಲೆ ಹಾಲು ಜೀಕುತ್ತಿರುವಂಥ, ಕೀಲು ಕೀಲುಗಳ ತುಂಬೆಲ್ಲ ತೊಟ್ಟಿಲುಗಳು ಜೀಕಾಡುತ್ತಿರುವಂಥ, ಜೋಗುಳಪದಗಳು ಮಾರ್ದನಿಸುತ್ತಿರುವಂಥ.. ಅನುಭವ, ಮನ್ರೋಗೆ ಅರ್ಥವಾಗದ ಸಂಕಟ, ಅನಿರ್ವಚನೀಯ ಆನಂದ.. ತಾನು ಕುಂಡ್ರಲಾರ.. ಯದ್ದು ನಿಲ್ಲಲಾರ..

ಅಷ್ಟರಲ್ಲಿ ಹೊರಗಡೆ..

ಮುದಕಿಯೊಂದು ಕಾವಲು ಸಿಪಾಯಿ ಗಳೊಂದಿಗೆ ವಾದಕ್ಕಿಳಿದಿರುವಂತಿದೆ, ಕೊಸ ರಾಡುತ್ತಿರುವಂತಿದೆ.. ನನ್‌ಮಗನ್ನ ನಾನ್ನೋಡ್ಲಿಕ್ಕೆ ನಿಮ್ದೇನ್ರೋ ತಕರಾರು.. ಯಂದು ಕೂಗಾಡುತ್ತಿರುವಂತಿದೆ.. ಅದು ಆಡುತ್ತಿರುವ ಭಾಷೆಗಾದರೋ ಭಾಷೆಯ ಸ್ಪಷ್ಟ ರೂಪವಾಗಲೀ, ವ್ಯಾಕರಣವಾಗಲೀ, ಭಾಷೆಯ ಸಹಜ ನಯ ನಾಜೂಕಾಗಲೀ ಯಿದ್ದಂತಿಲ್ಲ.. ತನ್ನ ಮಾತ್ರುಭಾಷೆ ಅಯ್ರಿಷ್ ಅದರೊಳಗೆ ತಳಕು ಹಾಕಿಕಂಡಿರುವಂತಿದೆ.

"ಲೋ, ಮಗನೇ ಮಂಡರಂಯ್ಯಾ.. ನಿನಗ ನೀನss ಕಾವಲಿಟ್ಕೊಂಡಿದ್ದೀಯಲ್ಲೋ.. ಯಿದು ನ್ಯಾಯ ಯೇನಲೋ.. ನನ್ನಂಥ

ಮುದುಕೀಗ ತನ್ನ ಮಗನ್ನ ನೋಡೋ ಅಧಿಕಾರಿಲ್ಲೇನಯ್ಯಾ.. ನಿನ್ನತ್ರಸೊಲುಪೊತ್ತು ಮಾತಾಡುವುದಯ್ತಯ್ಯಾ..” ಯಂದು ಅಬ್ಬರಿಸುತಯ್ತೆ ಮುದುಕಿ..

“ಯೀಗವರ ಮಯ್ಯಾಗ ಆರಾಮಿಲ್ಲ.. ಮಲಕ್ಕಂಡವ್ರೆಅಜ್ಜೀ.. ನಾಳೀಕೆ ಬರುವಂತಿ ಹೋಗು” ಯಂದು ಸಿಪಾಯಿ ಅಂಗಲಾಚುತ ವನೇ..

“ನಾಳೇ.. ನಾss ಳೇssಂತ ಯಾಕ ಬಡ ಕೋತಿಯೋ ಮೂಳಾss.. ನಾಳೇನ ಕಂಡವ ರ‍್ಯಾರದಾರ.. ನಾಳೀಕೆ ಆ ಮಂಡರಯ್ಯ ಯಿರೂ ಅಂದರ ಯಿರಾಕಿಲ್ಲಪ್ಪಾ.. ಅವನೆಲ್ಲೋ.. ನಾನೆಲ್ಲೋ.. ಅವನ್ನ ಕರದೊಯ್ಯಾಕ ಬಂದವರೆ ನೋಡು.. ಯೀಗ ಬ್ಯಾಡಂತಾ ನಾನೇ ಜುಲುಮೀಲಿ ತರುಬಿಟ್ಟೇನಿ ಕಣರಯ್ಯಾ”ಯಂದು ವಗಟೀಲೆ ಅಂದುದನು ಕೇಳಿದೊಡನೆ...

ಮನ್ರೋ ಜಲಜಲಾಂತ ಬೆವೆತನು, ದಿಗ್ಗನೆದ್ದು ನಿಂತನು.. ರೀತಿ ರಿವಾಜು ಬಿಟ್ಟು ತಾನೇ ಬಾಗಿಲವರೆಗೆ ಬಂದು ನೋಡುತ್ತಾನೆ.. ಅಲ್ಲಿ ನಿಂತಿರುವ ಗೂನು ಬೆನ್ನಿನ ಮುದುಕಿ ಯೀ ಕಾಲದ್ದಲ್ಲ ಯಾವ ಕಾಲದ್ದೋ? ಅದು ಯೀ ದೇಸದ್ದಲ್ಲ.. ಯಾವ ದೇಸದ್ದೋ..? ಅದು ಆಡುತ್ತಿರುವ ಮಾತು ಯೀ ಕಾಲದ್ದಲ್ಲ.. ಯಾವ ಕಾಲದ್ದೋ..? ಅಲಂಪುರದ ಜೋಗುಳಾಂಬೆಯೇ ಜೀವಧಾರಣ ಮಾಡಿ ಬಂದಿರುವಂತಿದೆಯಲ್ಲಾ.. ತಾನು ಕನಸಿನಲ್ಲಿ ಕಂಡುಂಡ ತಾಯಂದಿರ ಪಯ್ಕಿ ಯಿದೂ ಯಿದ್ದಂಗಿತ್ತಲ್ಲಾ.. ತನ್ನ ಹೆತ್ತಾಕೆ ಬದುಕಿದ್ದಲ್ಲಿ..

ನೋಡು ನೋಡುತ್ತಿದ್ದಂತೆ ಪಟ್ಟಣದ ಕಡೇಲಿಂದ ವಂದೇ ಫುಟುಗೀಲಿ ಮೋಡೋಡಿ ಬಂದ ಅಬಾಲರುದ್ದರು ನಿಂತ ನಿಲುವೀಲೆ ಕಡಕೊಂಡು ಬಿದ್ದೆದಕ “ಯವ್ವಾ.. ನೀನಿಲ್ಲದೀಯಾ.. ಯಲ್ಲೆಲ್ಲೋ ಹುಡುಕಿದೆವಲ್ಲಾ ನಮ್ಮವ್ವನೇ.. ಮನ್ರೋ ಸಾಹೇಬ ಮಂಚಾತ.. ಆತನ ತಂಟೆಗೋಗ ಬ್ಯಾಡ ತಾಯಿ.. ಬೇಕಾರ ನಮ್ತಾಕ ನಿನ್ನೆವ್ವಾರ ಯಿಟ್ಟುಕೋ.. ತಾಯೀ..” ಯಂದು ಗಲಗಲಾಂತ ಬೇಡಿಕೊಂಡಿದ್ದಕ್ಕೆ ಮುದುಕಿಯು..

“ಅದೆಂಗಾತದ ಹುಚು ಮುಂಡೇ ಮಕ್ಕಳಾ.. ನಾನು ನನ್ನೀ ಮಗನ್ನ ಬಿಟ್ಟು ನಿಮ್ಮ ತಂಟೆಗ್ಯಾಕ ಬರಲಿ.. ಯೀಗ ಬಿಟ್ಟರ ಮುಂದೆ ಸಿಕ್ಕಾನss ಯೀ ನನ ಮಗ.. ವಾಯಾದ ಹಡಗೇರಿ ಸುಯ್ಯಂತ ಹೊಂಟೋತಾನ..” ಯಂದಂದು ಪಕಪಕನಗಾಡುತ್ತಲೇ...

ಮನ್ರೋ ಹವ್ವಾರಿದ.. ತಾನೀ ಪತ್ತಿಕೊಂಡದ ವುಸಾಬರಿ ಮುಗಿಸಿಕೊಂಡು

ಶಾಶ್ವತವಾಗಿ ಯಿಂಗಲೆಂಡಿಗೆ ಹೋಗಿ ಬಿಡುವ ತಯ್ಯಾರಿ ನಡೆಸಿದ್ದ ಗುಟ್ಟಾಗಿ.. ಮುದುಕಿ ತನ್ನೆದೆ ಹೊಕ್ಕು ಯಲ್ಲಾ ತಿಳಿದುಕೊಂಡಂತಿರುವುದೆಂದುಕೊಂಡ..

ತನ್ನತ್ತ ಕಳೇಬರದೋಪಾದಿಯಲ್ಲಿ ನೋಡುತ್ತಿರುವ ಮಂದಿ.. ಆವರಿವರಿಗಾಗಿ ಹತ್ತಿರದಲ್ಲೆಲ್ಲೋ ಹೊಂಚಿ ನಿಂತಿರುವ ಸ್ಮಶಾನಮವುನ..!! ತನ್ನ ಕಣ್ಣ ಶುಕ್ಲ ಪಟಲದ ಮೇಲೆ ಮೂಡಿ ಮರೆಯಾಗುತ್ತಿರುವ ಹೆಂಡತಿ.. ಮಕ್ಕಳು.. ತಾಯಿ.. ತಂದೆ.. ಗ್ಲಾಸೋವಾ.. ಯಿಂಡಿಯಾ....

ಮಂದಿಯಿಂದ ಕೊಸರಿ ಮನ್ರೋ ಮುಂದಕ ಜಿಗಿದ ಮುದುಕಿ ಯಷ್ಟು ನೂರು ವರುಷಗಳ ಹಿಂದೆ ಜಳಕ ಮಾಡಿತ್ತೋ? ಯಾವ ಕಾಲದಲ್ಲೋ ತೊಟ್ಟಿದ್ದ ಬಟ್ಟೆಗಳೋ? ಆಕೆ ನಗುತಲಿದ್ದುದು ಯಾವ ಕಾಲದ ನಗೆಯೋ?

"ಮಗನss ಮಂಡ್ರಯ್ಯಾ" ಯಂದು ವುಸುರಿಗೆ ವುಸುರು ತಂದದ್ದಲ್ಲದೆ ಅವಯ್ಯನ ಮುಖಕ್ಕೆ ಬೊಗಸೆ ಹಾಕಿ ಲಟಲಟ ಅಂತ ಲಟ್ಟಿಗೆ ತೆಗೆಯಿತು. ಬಿಲ್ಲಿನಂಥ ಸರೀರವನ್ನು ನಿಟಾರನೆ ನಿಗುರಿಸಿ ಸಾಹೇಬನಿಗಿಂತ ಯರಡಂಗುಲ ಯತ್ತರಕಾಯಿತು. ಲೆಕ್ಕ ಜುಳ್ಳಿಯಂಥ ಸರೀರವನ್ನು ಹಿಗ್ಗಲಿಸಿದೊಡನದು ಮನ್ರೋನ ದೇಹ ತೂಕಕ್ಕಿಂತ ಯರಡೂವರೆ ಗುಲಗಂಜಿ ತೂಕ ಹೆಚ್ಚಾಯಿತು. ಯಲುಬೆಲುಬು ಹೊಂಟಿದ್ದ ತನ್ನೆರಡೂ ಅಂಗಯ್ಯಿಗಳನ್ನು ಆತನ ಅಪಾದ ಮಸ್ತಕದ ತುಂಬೆಲ್ಲ ಹರಿದಾಡಿಸಿತು. ಅದು ಬಲವಾಗಿ ಅಪ್ಪಿಕೊಂಡೊಡನೆ ಮನ್ರೋ ಅರಗಳಿಗೆ ಶಿಶುತನವನ್ನನುಭವಿಸಿದ. ಆನೆ ಕಸುವು ಆವಹಿಸಿಕೊಂಡಂತೆ ಭಾಸವಾಯಿತಾತನಿಗೆ..

ಯಿನ್ಯಾತರ ಭಯ ತಮ್ಮೆಲ್ಲರ ಪ್ರೀತಿಯ ಕಲೆಟ್ಟರು ಸಾಹೇಬಗೆ?

"ಥಾಮಸು ಮನ್ರೋ ಸಾಹೇಬ ಚಿರಾಯುವಾಗಲಿ" ಯಂದು ಮಂದಿ ಜಯಘೋಷ ಹಾಕಲಾಗಿ..

ಅವಯ್ಯ ವಂಥರಾ ಹೆದರಿಕೆಯಿಂದ ಯರಡು ಹೆಜ್ಜೆ ಹಿಂದಕ ಸರಿಯಲಾಗಿ, ಮುದುಕಿ ಮುಂದ ಮುಂದಕ ನಡೆಯಲಾಗಿ....

ಆತ ಚಿರಾಯು ಆಗಲಕ ದೋ ಅಂದರ ದೋ ಘೂಟಂತರ.. ಅಂತರವಲ್ಲದು, ತುಂಬಲಾರದ ಕಂದಕ.. ಆ ಕಂದಕದೊಳಗ ಗರುಡ ಪುರಾಣ..

ಅಯ್ಯೋ.. ಆ ಅಂತರವನ್ನು ಯಾಕವುಳಿಸಿಕೊಂಡ ತಮ್ಮ ಪ್ರೀತಿಯ ಮಂಡ್ರಯ್ಯನು?

ಅಯ್ಯೋ.. ಯಾಕ ತನ್ನ ಮುಖಸಿಂಡರಿಸಿಕೊಳ್ಳುತ್ತಿರುವನು ತಮ್ಮ ಪ್ರೀತಿಯ

ಮಂಡ್ರಯ್ಯ.?

ಅಯ್ಯೋ.. ತಾಯಿಯ ಗಲೀಜನ್ನು ಮಹಾಪ್ರಸಾದವೆಂದು ಪರಿಗಣಿಸುತ್ತಿಲ್ಲವಲ್ಲಾ ತಮ್ಮ ಪ್ರೀತಿಯ ಮಂಡ್ರಯ್ಯನು..

ದೇವರೇ.. ತಮ್ಮೆಲ್ಲರ ಮಂಡ್ರಯ್ಯಗೆ ತಾಯಿ ಪ್ರೀತಿಯನ್ನು ಆಸ್ವಾದಿಸುವ ಶಕ್ತಿಯನ್ನು ದಯ ಪಾಲಿಸು..

ಮಗs ಮಂಡ್ರಯ್ಯಾ.. ಯಂದನಕಂತ ಮುದುಕಿ ಸನಿಸನೀಕ ಹೋತು. ತನ್ನೆದೆಯನ್ನು ಅವಯ್ಯನೆದೆಗೆ ತಾಕಿಸುವ ಪ್ರಯತ್ನ ಮಾಡಿತು. ತನ್ನ ವುಡಿಯೊಳಗಿದ್ದ ಯಂಜಲನ್ನು ಹೊರ ತೆಗೆದು ಅವನ ಕಣ್ಣೆದುರಿ ಗಿಡಿಯಿತು. ಯಿದರೊಳಗಿರೋದ್ನು ತಿನ್ನು ಕಂದಾ.. ತಿನ್ನಪ್ಪಾ.. ತಿನ್ನಲೋ.. ಯಂದು ಬಲವಂತ ಮಾಡಲು.. ಅದರ ಹಳಸು ವಾಸನೆ ತನ್ನ ಮೂಗಿಗೆ ಬಡಿಯಲು...

ಮನ್ರೋ ಕಣ್ಣು ಬಿಚ್ಚಿ ನೋಡುತ್ತಾನೆ.. ಹಳಸಿದ ಯಂಜಲನ್ನ.. ಲಿಬಿಲಿಬಿ ಗುಟ್ಟುತ್ತಿರುವ ಬಾಲದ ಹುಳುಗಳು.. ಅದರೊಳಗಲ್ಲಲ್ಲಿ ನೊಣಗಳ ಕಳೇಬರಗಳು.. ಮೂಸಿದ ಮೂಗನ್ನೇ ವಿಸರ್ಜಿಸುವಷ್ಟು ಸಿಟ್ಟು ತಂದುಕೊಂಡ. ಮುಖವನ್ನು ಸಿಂಡರಿಸಿಕೊಂಡ. ಜೀವಿತಾವಧಿಯಲ್ಲಿ ಮೊಟ್ಟ ಮೊದಲ ಸಲ...

ಅಯ್ಯೋ ತಮ್ಮ ಮಂಡ್ರಯ್ಯ ಅದನ್ನು ಪ್ರಸಾದವೆಂದ್ಯಾಕ ಪರಿಗಣಿಸುತ್ತಿಲ್ಲ? ಅಂಗುಲದ ಹುಳುಗಳು ಅಶ್ವಿನಿ ದೇವತೆಗಳೆಂದ್ಯಾಕಿವ ಅರ್ಥಮಾಡಿಕೊಳ್ಳುತ್ತಿಲ್ಲ? ನೊಣಗಳನ್ನು ಅಷ್ಟದಿಕ್ಪಾಲಕರೆಂದ್ಯಾಕ ತಿಳಿದುಕೊಳ್ಳುತ್ತಿಲ್ಲ? ಅನ್ನದೊಳಗಿನ ಹಳಸು ಅಂಬ್ರುತವೆಂದ್ಯಾಕೆ ಯಿವ ತಿಳಿದುಕೊಳ್ಳುತ್ತಿಲ್ಲ..

"ಮಂಡ್ರೋ.. ಮಂಡ್ರಯ್ಯಾ.. ನೀನು ಕಲೆಟ್ಟರ ಪದವಿಯನ್ನಾಚೆ ತಳ್ಳು.. ಚಾವತ್ತು ತಾಯಿಯೋರ್ವಳ ಕಂದಯ್ಯನಾಗಯ್ಯಾ.. ಯಂಜಲೆಲೆಯನ್ನು ತಾಯಿಯ ಮೊಲೆಗಳೆಂದ್ಯಾಕೆ ಪರಿಗಣಿಸಲಾರೆ ದೊರೆಯೇ, ಅದರೊಳಗಿನ ಕೂಳನ್ಯಾಕ ತಾಯ ಹಾಲೆಂದು ತಿಳಿಯಲಾರೆ ದೊರೆಯೇ.."

"ಯಂಥ ಮಳ್ಳಾಟ ಮಾಡ್ತಿಯಲ್ಲಪ್ಪಾ.. ಸಣ್ಣವನಿದ್ದಾಗ ಯದೆಗಂಟಿದವನು ಕೆಳಗಿಳಿಯುತ್ತಿರ ಲಿಲ್ಲವಲ್ಲಪ್ಪಾ.. ಚಂದಾಮಾಮನನ್ನು ತೋರಿಸಿ ಜುಲುಮಿಯಿಂದ ಮಮ್ಮುಣ್ಣಿಸುತ್ತಿದ್ದೆನಲ್ಲಪ್ಪಾ.. ನಿನ್ ಹಟ ನನಗೇನು ಹೊಸದಾ.. ನೀನೊಲ್ಲೆ ಅಂದರ ನಾನು ಬಿಡುತೀನಾ..."

ಮುದುಕಿ ತುತ್ತು ಮಾಡಿ ಅವಯ್ಯನ ಬಾಯಿಗೆ ತುರುಕಲಕ ಹೋತು.. "ಶ್ಯಾಣೇನಲ್ಲಾ. ಹ್ಹಾ.. ಅಂತ ಬಾಯಿತೆಗೆಯಪ್ಪಾ" ಯಂದು

ಪೀಡಿಸತೊಡಗಿದೊಡನೆ ಮನ್ರೋ ವಂಭಣ ವಿವೇಚನೆ ಕಳೆದುಕೊಂಡ.. ಅವನು ಹಿಂದೆಂದೋ ಸಲ್ಲಿಸಿದ್ದ ಡಾಕ್ಟರಿನ್ನನ್ನು ಕುಂಪಣಿ ಸರಕಾರದ ವರಿಷ್ಟರು.. ಮುಖ್ಯವಾಗಿ ಹೆಸ್ಟಿಂಗ್ಯು.. ವೆಲ್ಲೆಸ್ಲಿ.. ಯಾವ ರೀತಿ ವಜಾ ಮಾಡಿದ್ದರೋ.. ಆ ರೀತಿ ಯಿವಯ್ಯನು ಯಡಗಯ್ಯಿಂದ ಆ ತುತ್ತನ್ನು ತಳ್ಳಿದೊಡನೆ....

ಯಡ ಬಲಕ ನಿಂತಿದ್ದ ನೂರಾರು ಮಂದಿ “ಅಯ್ಯೋ ನತದ್ರುಷ್ಟ ಮಂಡ್ರಯ್ಯಾ.. ಯಿನ್ನು ನಿನಗಾರು ದಿಕ್ಕು? ನಿನ್ನ ಶೇಷಾಯುಷ್ಯವನ್ನು ನಿನ್ನ ಕಯ್ಯಾರ ನೀನೇ ಮಣ್ಣು ಪಾಲುಮಾಡಿ ಬಿಟ್ಟೆಯಲ್ಲ..” ಯಂದನಕಂತಲೇ ಮಣ್ಣನೆಲದ ಮೇಲೆ ವುರುಳುರುಳಿ ಬಿದ್ದಿದ್ದ ಅನ್ನದ ಅಗುಳುಗಳನ್ನು ಮುತ್ತು, ರತುನ, ವಜ್ರ, ವಯಢೂರ್ಯವೇನೋ ಯಂಬಂತೆ ಪರಿಭಾವಿಸಿ ಆಯ್ದುಕೊಂಡು ತಮ ತಮ್ಮ ಬಾಯೊಳಗಿಟ್ಟುಕೊಳ್ಳಲಾರಂಭಿಸಿದೊಡನೆ..

ಮುಗಿಲಿಗೆ ಮುಖ ಮಾಡಿ ಮೂಳಿಡಲಾರಂಭಿಸಿದ ನಾಯಿ ನರಿಗಳೆಷ್ಟೋ? ಭೂ ವಾಪನ ಕರ್ಮಚಾರಿಗಳಂತೆ ಹಾರಾಡಲಾರಂಭಿಸಿದ ಹದ್ದು, ರಣಹದ್ದುಗಳೆಷ್ಟೋ? ಪಿತ್ರುರುಣವೋ..? ಪಿಂಡದ ಕೂಳೋ? ಯಂಬಂತೆ ನಿಂತಿದ್ದ ಮಂಡ್ರಯ್ಯನತ್ತ ನೋಡುತ್ತ ಕಾss ಕಾss ಯಂದು ರುಣವಿಮೋಚನಾ ಮಂತ್ರಜಪಿಸಲಾರಂಭಿಸಿದ ಕಾಗೆಗಳೆಷ್ಟೋ..?

ಮುದುಕಿ ಕ್ರಮೇಣ ತನ್ನ ಸರೀರದಾಕಾರವನ್ನು ಕಿರಿದುಗೊಳಿಸಿ ಮೂಲಸ್ಥಿತಿಗೆ ತಂದುಕೊಂಡಿತು.. “ಮುಂದಿನ ಜನುಮದಲ್ಲಿ ನಿನ್ನ ಹೊಟ್ಟೇಲಿ ಹುಟ್ಟಲಿರೋ ನನ್ನನ್ನು ಅದೆಂಗ ಸಂಬಾಳಿಸುತ್ತೀಯೋ ಯಂದು ಕಣ್ನೋಟ ಮಾತ್ರದಿಂದ ನುಡಿಯಿತು. ಮಂದಿ ಕಡೆ ತಿರುಗಿ...

“ಮಕ್ಕಳಾ.. ಮುಂದಿನೇರುಪಾಟು ವಾಡಿರಪ್ಪಾ.. ನೀವ್ಯಾರೂ ಅಳ್ಳೋಗಬಾರದss ಮತ್ತಾss..” ಯಂದು ಹೇಳುತ್ತ...

ಅದರ ನಾಲಗೆ ಮ್ಯಾಲ ಕುಂತಿದ್ದವರು ಯಾರೋ? ಕಾರಣಿಕವನ್ನೆಲ್ಲ ನುಡಿಸಿದವರು ಯಾರೋ? ಸನಾತನತೆಯ.. ಲೋಕಾರೂಢಿ ಮಾಲಿನ್ಯ ಗಲೀಜಿನ ವಿಶೇಷ ಸಂಚಿಕೆಯಂತಿದ್ದ ಮುದುಕಿಗೂ.. ಆಧುನಿಕತೆಯ ವಿಶೇಷ ಪುರವಣಿಯಂತಿದ್ದ ಮನ್ರೋಗೂ ನಡುವೆ ಯಾವ ಅವಿನಾಭಾವ ಸಂಬಂಧವಿತ್ತೋ? ಹಳಸಿದ ಅನ್ನದೊಳಗೆ ಯಾವ ಹಕೀಕತ್ತಿತ್ತೋ?

ತಾನು ಅಪ್ಪಿಕೊಳ್ಳಲಿರುವ ಮಣ್ಣು ಪತ್ತಿಕೊಂಡದ್ದೆಂದು ಮನ್ರೋ ಖಂಡಿತ ಭಾವಿಸಿರಲಿಲ್ಲ.. ತನ್ನ ಕಣ್ಣೊಳಗೆ ಬೀಡು ಬಿಟ್ಟಿದ ಯಂಜಲೆಯ ಛಾಯಾ

ಭಗವತಿಯನ್ನು ಗವುರಿಸುವ ಪ್ರಯತ್ನವನ್ನೂ ಮನ್ರೋ ಮಾಡಲಿಲ್ಲ.. ಪ್ರತಿ ಕ್ಷಣವನ್ನು ಅಸಹ್ಯಿಸಿಕೊಂಡ.. ಆಹಾರ ಪಾನೀಯದೊಳಗದನ್ನು ಆರೋಪಿಸಿ ಕೊಂಡು ನರಳಿದ, ಬೆಬ್ಬಳಿಸಿದ.. ತನ್ನ ಕಣ್ಣು ಮೂಗುಗಳ ಬಗ್ಗೆ ತಿರಸ್ಕಾರ ಭಾವ ತಾಳಿದ. ತನ್ನ ಮನಸ್ಸನ್ನೂ, ಮನಸ್ಸೆಂಬ ಅಠಾರ ಕಛೇರಿಯೊಳಗಿನ ನೆನಪಿನ ಕಡತಗಳನ್ನೂ..

ಕಾಕತಾಳೀಯವೋ? ಯೇನೋ? ಮನ್ರೋ ಸಂಜೆ ಹೊತ್ತಿಗೆ ಮೂರು ಸಾರಿ ವಾಂತಿ, ಯೇಳು ಸಲ ಭೇದಿ ಮಾಡಿಕೊಂಡ.. ಜನ ಅಯ್ಯೋ ಅನತಿರಲಕ್ಕ, ಮಧ್ಯರಾತ್ರಿ..

ಮನ್ರೋ ಯಿಹಲೋಕ ತ್ಯಜಿಸಿದನೆಂಬ ವರ್ತಮಾನವನ್ನು ಕಾಳ್ಗಿಚ್ಚಿಗೆ ಹೋಲಿಸಲಕಾದೀತಾ? ಬಿರುಗಾಳಿಗೆ ಹೋಲಿಕೆ ಮಾಡಲಕಾದೀತಾ? ತಂದೆಯೇ ಸತ್ತನೆಂದು ಭಾವಿಸಿ ಬಂದ ಮಕ್ಕಳೆಷ್ಟೋ? ಮಗನೇ ಸತ್ತನೆಂದು ಭಾವಿಸಿ ಬಂದ ತಂದೆಯಂದಿರೆಷ್ಟೋ? ಅಣ್ಣನೇ ಸತ್ತನೆಂದು ಭಾವಿಸಿ ಬಂದ ತಮ್ಮಂದಿರೆಷ್ಟೋ? ತಮ್ಮನೇ ಸತ್ತನೆಂದು ಭಾವಿಸಿ ಬಂದ ಅಣ್ಣಂದಿರೆಷ್ಟೋ? ಹೆಣುಮಕ್ಕಳಂತೂ ನಿರ್ದಯತೆಯಿಂದ ತಮ್ಮ ತಮ್ಮ ಕರುಳುಗಳನ್ನು ತೆಗೆ ತೆಗೆದೆಸೆಯ ತೊಡಗಿದ ದ್ರುಶ್ಯವಂತೂ ಸಿವ.. ಸಿವಾs..

ಪ್ರತಿಯೊಂದು ಗಂಟಲುಗಳು ದುಕ್ಕದ ವಾಂಗ್ಮೂಲವಾದವು ಸಿವನೇsss

ಪ್ರತಿಯೊಂದು ಕಣ್ಣು ನೀರ ವಕ್ರಾಣಿಯಾದವು ಸಿವನೇsss

ಪ್ರತಿಯೊಬ್ಬರ ಯದೆ ಗುಗ್ಗುಳದೋಪಾದಿಯಲ್ಲಿ ವುರಿದುರಿದು ಭಸ್ಮವಾಯಿತು ಸಿವನೇsss

ಯಾರ ಬಾಯಿ ತೆಗೆದು ನೋಡಿದರೂ ಮಂಥೋಳ ಸಾಹೇಬ, ಮನ್ರೋ ಸಾಹೇಬ, ಮಂಡ್ರಪ್ಪ ದೊರೆ, ಮಂಡ್ರಯ್ಯ ದೇವರು, ಯಿವೇ ಮೊದಲಾದ ವಿಶೇಷಣಾ ವಾಚಕಾ ಲೋಕಗಳು ಮುರಹರನೇ,

ಸದರಿಪಟ್ಟಣಕ್ಕೆ ಪಟ್ಟಣವಂದಲ್ಲದೆ ಸುತ್ತನ್ನಾಕಡೇಲಿದ್ದ ಆಸ್ಪರಿ, ಕರಿವೇಮಲ, ತೆರಲಿ, ದೇವರಕೊಂಡ, ತುಗ್ಗಲಿ, ಮದ್ದಿಕೆರ, ವನುಪರ್ತಿ, ತೆರನೇಕಲ್ಲು ಯಿವೇ ಮೊದಲಾದ ಗ್ರಾಮಾಧಿಗ್ರಾಮಗಳಿಂದ ಜನರು ಹೊಳೆಹಳ್ಳ ನದಿನದಗಳಾಗಿ ಹರಕೋತ ಬಂದು ಸೇರಲಲ್ಲಿ ಜನಸಾಗರವೇ ಆಗಿಬಿಟ್ಟಿತು. ದೂರ ದೂರದಲ್ಲಿದ್ದ ಕಡಪಾ, ಅನಂತಪುರ, ಬಳ್ಳಾರಿ, ಕರ್ನೂಲು ಕೇಂದ್ರಪಾಲಿತ ಪಟ್ಟಣಗಳ ಅಠಾರ ಕಛೇರಿ ಗಳಿಗೂ ಖಬರು ಹೊಂಟಿತು. ಅವರೆಂದು ಬರುತಾರೋ? ಬರದಂಗಯಿರುತಾರೋ? ಅಲ್ಲಿವರೆಗೆ ಮನ್ರೋ ಸಾಹೇಬನ ಭವುತಿಕ

ಕಾಯವನ್ನು ಕಣ್ಣೆದುರಿಗೆ ಯಿಟ್ಟುಕೊಳ್ಳಲಕ್ಕಾದೀತಾ? ಮನಸ್ಸು ಸುಟ್ಟುಕೋತ ಯಿರಲಕ್ಕಾದೀತಾ? ಯಂದವರವರು ಅವಸರ ಮಾಡುತ್ತಿದ್ದುದರ ಕುರಿತು ಯೇನ ಹೇಳಲಿ ಸಿವನೇ..

ಬರುತಲಿದ್ದ.. ಬರುತಲೇ ಯಿದ್ದ.. ಬಂದವರು ಜಪ್ಪಯ್ಯ ಅಂದರೂ ಕದಲದಾಂಗಿದ್ದ.. ಕದಲದಾಂಗಿದ್ದವರು ನಮ್ಮಪ್ಪನ ಮಣ್ಣಿನ ರಿಣ ಯಿಲ್ಲಿದ್ದುದೇ ನಮ್ಮ ಪುಣ್ಯ.. ಯಂದನ ಕಂತಿದ್ದುದೇನು? ಯಾವ ದೇಶದವನೋ? ತಂದ್ಯಾರೋ? ತಾಯ್ಯಾರೋ? ಹೆಂಡರೆಲ್ಲದಾರೋ? ಮಕ್ಕಳೆಲ್ಲದಾರೋ? ಬಂಧು ಬಳಗ ನೆಟ್ಟರಿಷ್ಟರು ಮಂದಿ ಯುಲ್ಲಲ್ಲದಾರೋ? ನನ್ನೋರು ತನ್ನೋರೆಂಬುವವರೆಲ್ಲೆಲ್ಲಿದಾರೋ.. ಅವರನ್ನೆಲ್ಲ ಬಿಟ್ಟುಕೊಟ್ಟು ಹೆಂಗ ಕುಂತವನಲ್ಲ ನಮ್ಮಪ್ಪಾ.. ಯಂದನಕಂತ ಲಟ್ಟಿಗೆ ತೆಗೆಯುತಲಿದ್ದವ ರೆಷ್ಟೋ? ಹಂಗ್ಯಾಕಂತೀರೇ ನಮ್ಮವ್ವಂದಿರಾ? ಮುದ್ಯೋರಿಗೆ ಮಗನಾಗಿದ್ದನಲ್ಲಾ.. ದಿಕ್ಕೂ ದೆಸೆಯಿಲ್ಲದೋವಕ್ಕೆ ತಂದೆಯಾಗಿದ್ದನಲ್ಲಾ.. ವಾರಿಗೆ ಮಂದಿಗೆ ವಡ ಹುಟ್ಟಿದವನಂಗಿದ್ದನಲ್ಲಾ.. ಯೀ ನೆಲಕ್ಕೆ, ಯೀ ಮಂದಿಗ ಆತ ಯೇನು ಕಡಿಮೆ ಮಾಡಿದ್ದನೇಳು.. ವುಳುಮೆ ಮಾಡಲಕ ಭೂಮಿಸಾಮಿ ಕೊಟ್ಟ.. ದುಡಿಯೋ ಕಯ್ಯಿಗಳಿಗೆ ಕಸುವು ಕೊಟ್ಟ.. ಮೂರೂರಿಗೊಂದೊಂದು ಭಾವಿ ತೋಡಿಸಿ ಕುಡಿಯೋದಕ್ಕೆ.. ಸೇದ್ಯವಿಗೆ ನೀರು ಕೊಟ್ಟ, ಮರ ಗಿಡ ನೆಟ್ಟು ಕುಂಡರಲಕ ನೆಳ್ಳು ಕೊಟ್ಟ.. ಮುಖ್ಯವಾಗಿ ಹೇಮಾಹೇಮಿ ಪಾಳ್ಳೇಗಾರರ, ಜಮೀನ್ದಾರರ ಸೊಂಟ ಮುರುದು ಬುದ್ದಿ ಕಲಿಸಿದ ಗಂಡುಗಲಿ ಯಂದು ಮುಂತಾಗಿ ಗುಣಗಾನ ಮಾಡುತಲಿದ್ದವರೆಷ್ಟೋ? ಯೀವಯ್ಯ ಯಂಜಲೆಲೆ ಯಲ್ಲಮ್ತಾಯಿ ಕಯ್ಯಿಂದ ಯಂಜಲುಂಡಿದ್ದಲ್ಲಿ ಮ್ರುತ್ತುಂಜಯನಾಗುತ್ತಿದ್ದ ನೋಡು.. ಮೊದಲೇ ಕಿರಸ್ತಾನದವರವ..ಯಂಗ ತಿಳಿದೀತು ಮುದುಕಿ ಮಯ್ಯಾ.. ಯಂದು ಮುಂತಾಗಿ ಸಾವಿನ ಪೂರುವಾಪರ ವಿವೇಚನೆ ಮಾಡುತ್ತಿದ್ದ ವರೆಷ್ಟೋ? ಮನ್ರೋನ ಕಾಯ ಕದಳಿ ತುಂಬೆಲ್ಲ ಕುಪ್ಪೆಕುಪ್ಪೆ ಬಿದ್ದಿದ್ದ ಕಣ್ಣುಗಳೆಷ್ಟೋ? ಮುಂದಕ ಹೋಗಿ ಹಿಂದಕ ಬರುತಲಿದ್ದ ಮಾತುಗಳೆಷ್ಟೋ?

ಹೊತ್ತು ನೆತ್ತಿ ಮ್ಯಾಲಕ ಬರುತ್ತಲೆ ಯೇಸು ನಮೂನಿ ವಾದ್ಯಗಳು ಬಂದವು ಯೇನು ಕಥೆ? ಯೇಸು ಮಂದಿ ಕಳಸಗಿತ್ತೇರು ಬಂದರು ಯೇನು ಕಥೆ? ದುಕುದುಕ್ಕಿಸುತ್ತ ವರಣನ ಗುಣಾಗಾನ ಮಾಡುತ್ತ ಅಳುವ ರುತ್ತಿಪರ ತಂಡಗಳು ಬಂದವು ಯೇನು ಕಥೆ? ಯೇಸು ಮತದ ಅಪರಕರ್ಮಕ್ರಿಯಾ

ಕೋವಿದರು ಬಂದರು ಯೇನು ಕಥೆ? ಅಗೋಚರ ಸ್ಥಿತೀಲಿ ನೀನೇ ಯೀ ಸಾವಿಗೆ ಕಾರಣ ಯಂದು ಪರಸ್ಪರ ಆರೋಪ ಪ್ರತ್ಯಾರೋಪ ಮಾಡುತಲಿದ್ದ ವಾಂತೆಮ್ಮ, ಬೇದಮ್ಮಂದಿರ ಅಂತಃಕರಣದ ಕಥೆ ಕೇಳುವವರಿರಲಿಲ್ಲ.. ಶಿವ ಸಂಕರ ಮಾದೇವಾ....

ಯುದ್ದು ಬರುತಾನ್ನಂಗಿದ್ದ ಮಂಥೋಣಿ ಸಾಹೇಬನ ಮುಖ ಬಿಕ್ಕೊಂಡಂಗಾಗಿದ್ದು ಹೊತ್ತು ನೆತ್ತಿಗೆ ಬಂದ ಮ್ಯಾಲ.. ಕುಲು ಕುಲು ನಗಾಡುತನ್ನಂಗಿದ್ದ ಮಂಡ್ರಯ್ಯ ದೊರೆಯ ಬಾಯಿ ಸೆಟಗೊಂಡು ಬಿಕುಕೊಂಡಂಗಾಗಿದ್ದು ಹೊತ್ತು ನೆತ್ತಿ ಮ್ಯಾಲಿಂದ ಸೊಲುಪ ಜಾರಿದ ಮ್ಯಾಲ.. ಘಮ್ಮಂದೆಣ್ಣೆ ಹಚಕೊಂಡು ಜಳಕ ಮಾಡಿ ಸೂಟು ಬೂಟು ತೊಟುಕೊಂಡಿದ್ದ ಮನ್ರೋ ಖಾವಂದನ ಸರೀರದಿಂದ ದುರ್ನಾತದೆಸಳು ತರಾವರಿ ಹೂವ್ಗಳ ದಾಟಿ ಬಂದು ಶೋಕ ತಪ್ತರ ಮೂಗುಗಳ ತಲಬಾಕಲು ತಟ್ಟಲಾರಂಭಿಸಿದೊಡನೆ...

ಪುಷ್ಪಕ ವಿಮಾನ ಸಿಂಗಾರ ಮಾಡಿದ್ದಾಯಿತು, ವಂದನೆ ಪೂಜೆ ಮಾಡಿದ್ದಾತು.. ಯರಡನೇ ಪೂಜೆ ಮಾಡಿದ್ದಾತು, ಮೂರನೇ ಪೂಜೆ ಮಾಡಬೇಕೆಂಬುವಷ್ಟರೊಳಗೆ ಪತ್ತಿಕೊಂಡದ ಯಿಗರ್ಜಿಯ ಫಾದರು ಅಂಥೋಣಯ್ಯ ಯಿವ ಕಿರಸ್ತಾನದವನಯ್ದಾನ.. ಯಂದು ಮುಂತಾಗಿ ಸುರುವು ಮಾಡಿದೊಡನೆ ಅದೆಂಗಾಯ್ತುದss ಯಂಬುವ ತಕರಾರು ಕಾಣಿಸಿಕೊಂಡು...

ಗುರುನಾನಕನನ್ನು ಹೋಲುತಲಿದ್ದ ಮನ್ರೋ ತಮ್ಮವನೆಂದು ಸಿಖ್ಖರೂss

ಪ್ರವಾದಿ ಪಯ್ಗಂಬರ ನನ್ನು ಹೋಲುತಲಿದ್ದ ಮನ್ರೋ ತಮ್ಮವನೆಂದು ಮುಸಲ್ಮಾನರೂss

ಬಸವಣ್ಣನನ್ನು ಹೋಲುತಲಿದ್ದ ಮನ್ರೋ ತಮ್ಮವನೆಂದು ವೀರಶೈವರೂss

ಮಹಾವೀರನನ್ನು ಹೋಲುತಲಿದ್ದ ಮನ್ರೋ ತಮ್ಮವನೆಂದು ಜಯ್ನರೂss

ಬುದ್ಧನನ್ನು ಹೋಲುತಲಿದ್ದ ಮನ್ರೋ ತಮ್ಮವನೆಂದು ಬವುದ್ದರೂss

ಕಾಟಮಯ್ಯ, ಗಾದರಿಪಾಲನಾಯಕರನ್ನು ಹೋಲುತಲಿದ್ದ ಮನ್ರೋ ತಮ್ಮವನೆಂದು ಮ್ಯಾಸ ಬ್ಯಾಡ ಕುಲದವರೂss..

ವಾದ ಮಾಡುತಲಿದ್ದುದನ್ನು ನೋಡಿ ವಯ್ದರೂ, ವಯ್ದಿಕರೂ ಪದಭ್ರಷ್ಟ ಭೂಸ್ವಾಮಿಗಳೂ ವಳಗೊಳಗ ಮುಸಿ ಮುಸಿ ನಗುವನ್ನ ನಗುತಲಿದ್ದುದನ್ನು ಯೇನೆಂದು ಹೇಳಲಿ ಸಿವನೇ.. ಗುಂತಕಲ್ಲಿಂದ ಹೊತ್ತಾರೆ ಬಂದಿದ್ದ ಸಂತ

ಮುನುಸೋಬಯ್ಯ, 'ಭಪ್ಪರೇ ಮನ್ರೋ' ಯಂದುದ್ಗಾರ ತೆಗೆದ ಮರುಗಳಿಗೆ ಯಲ್ಲೇ ಯಲ್ಲಿಂದಲೋ ಬಂದ ಆ ಅದೇ ಯಂಜಲೆಲೆ ಯಲ್ಲಮ್ತಾಯಿ "ನನಗ ಜಳಕ ಆಡೋ ಆಸೆ ಆಗಯ್ತೆ" ಯಂದು ಕೂಗಿ ಬಿಡುವುದೇ?

ಯಿದೇನು ಕೇಡುಗಾಲ ಬಂತಪ್ಪ ಪರಮಾತುಮಾ.. ತಮ್ಮೆಲ್ಲಮ್ಮವ್ವ ಜಳಕssನ ಮಾಡುತ್ತೀ ನಂಬುತಾಳಲ್ಲ.. ಆಕೆ ಮಯ್ಗೆ ನೀರೆರಕೊಂಡರ ಪರಪಂಚ ಸರುವ ನಾಶಣ ಆಗದಿದ್ದೀತಾ.. ಯಂದನಕಂತ ಮಂದಿ ಬೆಕ್ಕಸ ಬೆರಗಾದರು..

ಯಲ್ಲಮ್ಮ ತಾಯಿ ಯಾವ ಕಾಲದವಳೋ? ಆ ತಾಯಿ ಹುಟ್ಟಿ ಯೇಸು ಸತಮಾನಗಳುರುಳಿ ರುವುಮೋ.. ಆಕೆ ಕಂಡಿರುವ ರಾಜಮಾರಾಜರುಗಳು ಆಯಾ ಕಾಲದಲ್ಲಿ ಮಣ್ಣಪ್ಪಿಕೊಂಡಿದ್ದನ್ನು ಕಂಡಿರುವಾಕಿ.. ಚಿನ್ನದ ತಳಿಗೆಗಳನ್ನು ಧಿಕ್ಕರಿಸಿ ಯಂಜಲೆಲೆಗಳನ್ನು ಅಪ್ಪಿಕೊಂಡಿರುವಾಕಿ.. ವುಪ್ಪರಗಿ ಮೇಲುಪ್ಪರಿಗೆ ಮನೆಗಳನು ಯಡಗಾಲೀಲೊದ್ದು ತಿಪ್ಪೆಗಳನ್ನರಮನೆಯನ್ನಾಗಿ ಮಾಡಿಕೊಂಡಿರುವಾಕಿ.. ಆಕೆ ನೀರು ಚುಮುಕಿಸಿಕೊಂಡಾಕಿಯಲ್ಲ.. ತಾನ್ಯಾವತ್ತು ಜಳಕ ಮಾಡುವೆನೋ ಅವತ್ತೇ ಸುಡುಗಾಡು ನಡಕೋತ ಮೂರೊಳಗೆ ಬರ್ತದೆಯಂದೂ.. ತಾನ್ಯಾವತ್ತು ಹೊಸ ಅರಿವೆ ತೊಟುಕೊಂತೀನೋ ಅವತ್ತೇ ಸಿಮ್ಮಾಸನದ ಮ್ಯಾಲ ಕಾಗೆ, ನಾಯಿ ಕುಂಡ್ರತಾವೆ ಯಂದು ಡಾಣಾಡಂಗುರ ಸಾರುತ್ತಿದ್ದಾಕಿ.. ಪತ್ತಿಕೊಂಡ ಪ್ರಾಂತ್ಯಕ್ಕೆ ಪ್ರಾಂತವೇ ಆ ತಾಯಿ ಜಳಕ ಮಾಡದಂಗೆ.. ನೀರು ಆಕೆ ಸನೀಕ ಸುಳಿಯದಂಗ ಸತ ಸತಮಾನಗಳಿಂದ ನಿಗಾ ವಹಿಸುತ್ತ ಬಂದಿರುವುದು ಯಲ್ಲರಿಗೂ ಗೊತ್ತಿರೋ ಸಮಾಚಾರ.. ಕೇಳಿದವರ ಕಿವಿಯೊಳಗ, ನೋಡಿದವರ ಕಣ್ಣೊಳಗ, ನುಡಿದವರ ಗಂಟಲೊಳಗ, ಮುಟ್ಟಿದವರ ತೊಗಲೊಳಗ, ನೆನೆದವರ ಮನದೊಳಗ ಗಪ್ಪಂತ ತೂರಿಕೊಂಡು ಬಿಡುವ ಯಂಜಲೆಲೆ ಯಲ್ಲಮ್ತಾಯಿ ಹಿಂಗ ಬಗಸವಳಲ್ಲಾ.. ಯಂದನಕಂತ ಮಂದಿ ಆಕೆ ಕಾಲಿಗೆ ಬಿದ್ದು "ಬ್ಯಾಡವ್ವಾ ಬ್ಯಾಡ.. ಜಳಕ ಮಾಡುತೀನಿ ಯಂಬ ಮಾತನ್ನು ವಾಪಾಸು ತಕ್ಕೊಳ್ಳವ್ವಾ.. ನೀನು ಜಳಕ ಮಾಡಿದಿ ಅಂದರ ಹೊಳೆ ಹಳ್ಳ ನದಿಕೊಳ್ಳಗಳು ಬತ್ತುತಾವ.. ಮುಗಲಿಂದ ಮಳೆ ವುದುರದಂತಾಗತದss.. ನಿನ ಬದಲಿಗೆ ನರಮಾನ್ನವರಾದ ನಾವು ಜಳಕssನ ಮಾಡ್ತಿದ್ದೀವಲ್ಲಾ.. ಅದರ ಬದಲಿ ನಿನಗ ಯೇನು ಬೇಕು ಕೇಳು? ನಡೆಸಿಕೊಡುತೀವಿ" ಯಂದು ಗಲಗಲಾಂತ ಕೇಳಿಕೊಂಡಿದ್ದಕ್ಕೆ ಆ ಮುದುಕಿ "ಯೇನ್ರಲೋ ನರಹುಳುಗಳಾ.. ಮಂಡ್ರಯ್ಯನ ಮ್ಯಾಲ ನಿಮಗೀಟಾ ಪಿರೀತಿ ಯಿರೋದು.. ಅವನ ಹಿಂದ ಜನ ಜಾತುರಿ

ಹೊಂಡೋದು ಬ್ಯಾಡೇನು? ಅದಕ ನಾನು ಜಳಕ ಮಾಡೋದೇ ಸಯ್ಯಿ" ಯಂದು ಹಟ ಹಟಿ ಮಾಡತೊಡಗಿದಳು.. ಅದರಿಂದ ನೆರೆದಿದ್ದ ಮಂದಿ ಅಳ್ಳೋಗಿ ಹಳ್ಳ ಹಿಡಕಂಡು ಬಿಟ್ಟಿತು "ಯಮ್ಮಾ ತಾಯೀ.. ಯೀಸೊರುಸ ಯಿಲ್ಲದ್ದು ಯೀಗ್ಯಾಕ ಜಳಕ ಮಾಡಬೇಕೆಂಬ ಬವಕೆ ಹುಟ್ಟಿತವ್ವಾ.. ಯಾವ ಕೇಡುಗಾಲಕ್ಕಂತ ನೀನು ಜಳಕ ಮಾಡುತೀಯವ್ವಾ? ನೀನು ಜಳಕ ಮಾಡಿದೀ ಅಂದರ ನಮ್ಮ ಹೆಂಡರ ಗತಿಯೇನು ತಾಯೀ?" ಯಂದು ಗಂಡಂದಿರೂ.." ನೀನು ನೀರಿನ ಗೊಡವೆಗ್ವಾದ್ರೆನಮ್ಮ ಗಂಡಂದಿರ ಗತಿಯೇನು? ಯಂದು ಹೆಂಡಂದಿರೂ, ತಾವು ತಬ್ಬಲಿಯಾಗತೀವಂತ ಮಕ್ಕಳು ಮರಿ, ತಮ್ಮೂರುಗೋಲು ಕಸಗೋ ಬ್ಯಾಡವ್ವಾ ಯಂದು ಹಣ್ಣು ಹಣ್ಣು ಮುದುಕರೂ.. ಆ ರಾಶೀ ರಾಶೀ ಪ್ರಶ್ನೆಗಳಿಗೆಲ್ಲ ಯಂಜೆಲೆಲೆ ಯಲ್ಲಮ್ಮಾಯಿ.. "ನರಹುಳುಗಳಾss.. ನಿಮ್ ಪಾಪದ ಕೊಡ ತುಂಬಿರೋದ್ಕೆ ನಾನು ಜಳಕ ಮಾಡಲೇಬೇಕೆಂಬ ಅಪ್ಪಣೆ ಬಂದಯ್ತೆ.. ನಾನು ಜಳಕssನ ಮಾಡೇ ಮಾಡ್ತೀನಿ.. ನನ್ನ ಮಯ್ಯಕೊಳೆಯನ್ನು ಹೊಳೆಯೋಪಾದೀಲಿ ಹರಿಸ್ತೀನಿ.. ಅದರೊಳಗ ನೀವು ಕೊಚ್ಚಿಕೊಂಡು ಹೋಗುವುದನು ನಾನು ಕಣ್ತುಂಬ ನೋಡೇ ನೋಡ್ತೀನಿ.. ಯಂದು ವಂದೇ ಸಮನೆ ಅಬ್ಬರಿಸುತ್ತಿದ್ದುದ್ದನೇ ಕಾದುಕೊಂಡು ನಿಂತಿದ್ದ....

ಗುತ್ತಿ ಪ್ರಾಂತದ ಮಂದಿ ಸಾವಿರಾರು ಸಂಖ್ಯೇಲಿ ಯೇನು ನೆರೆದಿದ್ದರು.. ಅವರು ತಮ್ಮ ದಯವ ಸೊರೂಪೀ ಮನ್ರೋ ಸಾಹೇಬನ ಕಳೇಬರವನ್ನು ಕಂಕುಳಲ್ಲಿಟ್ಟುಕೊಂಡು ಗುತ್ತಿ ಪಟ್ಟಣದ ಕಡೇಕ ಹೊತ್ಗೊಯ್ದು ಬಿಟ್ಟರು.. ಸಶಸ್ತ್ರಕಾವಲಿನಲ್ಲಿ ಫಲಾನ ಜಾಗದೊಳಗ ಸಾಸ್ತರೋಕ್ತವಾಗಿ ಸಂಸ್ಕಾರ ಮಾಡೇಬಿಟ್ಟರು.. ಅದಕ್ಕೆ ಮೊದಲು ಕಿರಸ್ತಾನ ಮಂದಿಗೂ.. ಅವರಿಗೂ ನಡುವೆ ಕಳೇಬರದ ವಿಷಯದಲ್ಲಿ ಮಸ್ತು ವಾಗ್ವಾದ ನಡೆದಿರದೆಯಿರಲಿಲ್ಲ.. ತಾವು ತಮ್ಮ ಜೀವನಾದ್ರುಕೊಟ್ಟೇವು.. ಆದರ ಮನ್ರೋ ದೊರೆಯ ಶವವನ್ನು ಮಾತ್ರಕೊಡುವುದಿಲ್ಲ ಯಂದು ಖಡಾ ಖಂಡಿತ ನುಡಿದು ಬಿಟ್ಟಿರದೆಯಿರಲಿಲ್ಲ.. ಕಿರಸ್ತಾನ ಕುಲದ ಸಂಪನ್ನ ಮಂದಿ ಕಡಪಾ ಕಡೇಲಿಂದ.. ಅನಂತಪುರ ಕಡೇಲಿಂದ.. ಬಳ್ಳಾರಿ, ಕರ್ನೂಲು ಕಡೇಲಿಂದ ತಂಡೋಪತಂಡವಾಗಿ ಬಂದ ಗೋಲಿಂದಾಜ ಮಂದಿಯೊಂದಿಗೆ ಮನಸೋಚ್ಛೆ ಚರ್ಚೆ ಮಾಡದೆಯಿರಲಿಲ್ಲ.. ಕಳೇಬರವನ್ನು ಸುಪರ್ದಿಗೆ ತಗೊಳ್ಳೋ ವಿಷಯದಲ್ಲಿ ಯುದ್ಧ ಮಾಡುವುದಾಗಲೀ, ಮದ್ದುಗುಂಡ ಖರ್ಚು ಮಾಡಿ ರಕ್ತಪಾತ ನಡೆಸುದಾಗಲೀ ಅವರವರಿಗೆ ಸುತಾರಾಂ

ಯಿಷ್ಟಯಿರಲಿಲ್ಲ.. ಮನ್ರೋ ಸಾಹೇಬನ ತನ್ನ ಅಧಿಕಾರಾವಧಿಯಲ್ಲಿ ಸಮಸ್ತ ದತ್ತಮಂಡಲ ಪ್ರಾಂತದ ಅಂತಃಕರಣ ಕೊಳ್ಳೆ ಹೊಡೆದಿದ್ದುದೇ ಯಿದಕ್ಕೆ ಕಾರಣ.. ತಾವು ಹಿಂಗss ಕಯ್ಯಿ ಕಟ್ಟಿಕುಂತ ಪಕ್ಷದಲ್ಲಿ ಕಲೆಟ್ಟರ ಸಾಹೇಬನ ಕಳೇಬರವು ರಾಯಲಸೀಮ ಪ್ರಾಂತದಾದ್ಯಂತ ಪ್ರಯಾಣ ಹೊಂಡುವುದೋ ಯೇನೋ? .. ಕುಂಪಣಿ ಸರಕಾರದ ಹುಕುಂ ಮೇರೆಗೆ ಜನರಲ್ ಲಕ್ಕೀಫೆಲೋ ಯಂಬಾತನು ನೂರಾರು ಸಿಪಾಯಿ ಮಂದಿಯನ್ನು ಹಿಂದುಮುಂದು ಯಿಟ್ಟುಕೊಂಡು ಬಂದು ಫಲಾನ ಜಾಗದಲ್ಲಿ ವಿಶ್ರಾಮ ಭಂಗಿಯಲ್ಲಿದ್ದ ಸರ್ ಥಾಮಸ್ ಮನ್ರೋ ಸಾಹೇಬನ ಕಳೇಬರವನ್ನು ಕದ್ದು ದೂರ ದೇಶವಾದ ವೆಲ್ಲೂರಿನ ಗ್ರೇವ್‌ಯಾರ್ಡಿನಲ್ಲಿ ಕಿರಸ್ತಾನ ಪದ್ಧತಿ ಪ್ರಕಾರ ಸರಕಾರಿ ಸಕಲ ಗವುರವಗಳೊಡನೆ ಪುನಹ ಸಂಸ್ಕಾರ ಮಾಡಿದನೆಂಬಲ್ಲಿಗೆ..

ಅತ್ತ ಯಿತ್ತಗಳ ಸುತ್ತಮುತ್ತ ತರಾವರಿ ಘಟನೆಗಳು ಜರುಗುತಲಿದ್ದವು. ಆಯಾ ಪ್ರಾಂತಗಳು ಅವಕ್ಕೆ ದಡ್ಡು ಬಿದ್ದು ರೋಸಿ ಹೋಗಿದ್ದವು. ಸಾಮಾಜಿಕ ಜೀವನವು ಯದುರು ಜವಾಬು ಕೊಡದೆ ಕುಂಪಣಿ ಸರಕಾರ ಹೆಂಗೆಂಗ ಆಡಿಸುತಲಿತ್ತೋ ಹಂಗಂಗೆ ಆಡ ತೊಡಗಿತ್ತು. ಯಿದಕ ಅಪವಾದವೆಂಬಂತೆ ಕೆಲವು ಕಡೇಕ ಕುಂಪಣಿ ಸರಕಾರದ ಆಸ್ತಿಪಾಸ್ತಿ ನಷ್ಟ ಮಾಡುವುದು.. ಅವರ ಹೆಂಗಸರನ್ನು ಯಿವರು, ಯಿವರ ಹೆಂಗಸರನ್ನು ಅವರು ಅಪಹರಣ ಮಾಡುವುದು ಯಿಂಥ ಘಟನೆಗಳು ಅಲ್ಲೊಂದು, ಯಿನ್ನೊಂದು ನಡೆಯುತಲಿದ್ದವು.. ಯಿಂಥವರನ್ನು ವಂದು ಕಡೇಲಿಂದ ಮಟ್ಟ ಹಾಕುತ.. ಯಿನ್ನೊಂದು ಕಡೇಲಿಂದ ಪಾಳೆಪಟ್ಟು ಜಾಗೀರುಗಳನ್ನು ಕಬ್ಜಾ ಮಾಡಿಕೊಳ್ಳುತ ಕುಂಪಣಿ ಸರಕಾರದ ಬಾವುಟವು ಯಲ್ಲಂದರಲ್ಲಿ ಹಾರಾಡುತಲಿದ್ದುದು ಮಾಮೂಲು ಸಂಗತಿಯಾಗಿತ್ತು ಸಿವನೇ..

ಯ್ಯೋಸೋ ವರುಷಗಳ ತರುವಾಯ....

ಅತ್ತ ಕುದುರೆಡವು ಪಟ್ಟಣದೊಳಗಣ ಕಥಿಗಳು ವಂದs ಯರಡಾss....ಮುಕ್ಕೋಟಿ ದೇವತೆಗಳ ಅಗೋಚರ ದಾಳಿಯಿಂದ ತತ್ತರಿಸಿದ್ದ ಸದರಿ ಪಟ್ಟಣದ ಪ್ರಜೆಗಳು ಸೂನ್ಯದೊಳ ಗೇನಿರುವುದೋ? ತಮ್ಮ ಅಂಗಯ್ಯಗೆರೆಗಳ ಗುಂಟ ಯಾವ ಮಾಯಾವಿಗಳು ನಡೆಯುತ್ತಿರು ವರೋ? ತಮ್ಮ ಅಂಗಾಲ ಸಂದುಗಳಲ್ಲಿ ಮಾಟ ಮಂತ್ರವಾದಿಗಳು ನೆಲಗೊಂಡುಬಿಟ್ಟಿರುವರೋ? ಕಾಗೆ ರೂಪ ದೊಳಗಿರುವವರು ಯಾರೋ?

ಕೋಗಿಲೆಯ ದ್ವೊನಿಯೊಳಗಿರುತಕ್ಕಂಥವರು ಯಾರೋ? ತಮ್ಮ ಹೆಂಡಂದಿರು ಮಾಡಿಟ್ಟಿರುವ ಬಾನ ದೊಳಗ ಯಾರಾದರೂ ಮದ್ದು ಕಲೆಸಿಟ್ಟರೇನು ಗತಿ? ತಾವು ಕುಡಿಯುವ ನೀರೊಳಗೆ ಯಾರಾದರು ಗಿಡ ಅರದು ಹಾಕಿದರೇನು ಗತಿ ಯಂದು ವರ್ತಮಾನದ ಪ್ರತಿಯೊಂದು ಗಳಿಗೆ ಯನ್ನು ಬಲು ಅನುಮಾನದಿಂದ ನೋಡುತ ಲಿದ್ದರು... ತಮ್ಮ ಅಂತಿಮ ಚಣವೆಂದೇ ಮಲಗುತಲಿದ್ದರು.. ಯಚ್ಚರಾದೊಡನೆ ಸದ್ಯಕ ತಾವು ಬದುಕದೀವಲ್ಲಾಯಂದು ಸಂಭ್ರಮ ಪಡುತಲಿದ್ದರು. ಗಂಡಂದಿರನ್ನು ಅವರವರ ಹೆಂಡಂದಿರೂ, ಹೆಂಡಂದಿರನ್ನು ಅವರವರ ಗಂಡಂದಿರೂ ಮಕ್ಕಳು ಮರಿಯನ್ನು ಅವರವರ ಹೆತ್ತವರೂ, ಹೆತ್ತವರನ್ನು ಅವರವರ ಮಕ್ಕಳು ಮರಿ ಸದಾ ಅನುಮಾನಿಸುತ್ತಲೇ ಸಂಬಂಧಗಳನ್ನು ವಪ್ಪಿಕೊಳ್ಳುತಲಿದ್ದುದು ಸರುವೇ ಸಾಮಾನ್ಯವಾಗಿತ್ತು. ಯಾರನ್ನಾಕ ಅಂದಾಡುವುದು? ತಮ ತಮ್ಮ ಕರುಮ ಯಂದು ದಿನಕ್ಕೆ ಯರಡು ಮಾರು ಬ್ಯಾರಿಯಾದರೂ ವಳಗೊಳಗೆ ಅಂದುಕೊಳ್ಳದೆ ಯಿರುತ್ತಲಿರಲಿಲ್ಲ. ಕುದುರೆಡವ ತಂಟೆಗೆ ಹೋದವರು ಯೇನಾದರು? ಯಂಥಾದರು? ಕುದುರೆಡವು ಯಂಬುದು ಪಂಚಾಕ್ಷರಿ ಮಂತ್ರಸಿವನೇ.. ಅಂದುಕೊಂಡ ಕೂಡಲೆ ಜಟ್ಟನ ಹೊಂಟು ಬಂದು ಸಾಂಬಯ್ಯನ ದರುಶನ ಭಾಗ್ಯ ಪಡಕೊಂಡಿದ್ದಲ್ಲಿ ಮನ್ರೋ ಸಾಹೇಬನು ತಾನಷ್ಟು ಲಗೂನ ಸಿವನಪಾದ ಸೇರಿಕೋತಿದ್ದನಾ.. ಆತನಂಗ ಸಿವನ ಪಾದ ಸೇರಿರೋರು ವಬ್ಬರಾ ಯಿಬ್ಬರಾ.. ಸಾವುರಾರು ಮಂದಿ ಅದಾರು.. ಕುದುರೆಡವು ತನಗಿಂತ ಕಡಿಮೆ ತೂಕದ ಕುಂತಳ ಸೀಮೆಯನ್ನು ಮನ ಬಂದಾಂಗ ಆಟ ಆಡಿಸುತಲಿತ್ತು ಸಿವನೇ.. ಆ ಪಟ್ಟಣವಾಚಕ ನಾಮವು ಭಯ ಬಿತ್ತುತಲಿತ್ತು... ಭಕುತಿ ಬಿತ್ತುಲಿತ್ತು.. ಅವೆರಡರ ಸಮ್ಮಿಶ್ರಣವು ತಾನಾಗಿತ್ತು ಸಿವನ.... ಅದು ಲಕ್ಷಕಣ್ಣುಗಳಿಂದ ನೋಡುತಲಿತ್ತು, ಲಕ್ಷ ಕಿವಿಗಳಿಂದ ಕೇಳುತಲಿತ್ತು, ಲಕ್ಷ ಕಯ್ಯಿಗಳಿಂದ ತಬ್ಬುತಲಿತ್ತು.. ಲಕ್ಷ ಕಾಲುಗಳಿಂದ ನಡೆದಾಡುತಲಿತ್ತು ಸಿವನೇ.... ಅದು ವುತ್ತರವಿಲ್ಲದ ಪ್ರಶ್ನೆಯಾಗಿತ್ತು? ಯಾರೊಬ್ಬರೂ ಬಿಡಿಸಲಾಗದ ಬ್ರೆಮ್ಮೊಗಟಾಗಿತ್ತು. ತರಾವರಿ ರೂಪದಲ್ಲಿ ನರ್ರಮಾನ್ನವರ ಪಂಚೇಂದ್ರಿಯಂಗಳನ್ನಾಳುತಲಿತ್ತು.... ನೆನೆದವರ ಮನದೊಳಗ ಮೇರು ಪರುವತಾಗಿ ಅವತಾರ ಯೆತ್ತುತಲಿತ್ತು ಸಿವನೇ, ಹೊಲೆಮಾದಿಗ ಚಲುವಾದಿ ಮಂಗಲಿ ರಜಕ ಕೊಮಿನ ತನ್ನೊಕ್ಕಲು ಮಂದಿಯನ್ನು ಸಾಹೇಬರರ ದರ್ಜೆಗೇರಿಸಿತ್ತು.... ಅವರೆದೆಯ ಮಾತುಗಳನ್ನು ರುದಯದಿಂದ ರುದಯಕ್ಕೆ ತರ್ಜುಮೆ ಮಾಡುತಲಿತ್ತು ಸಿವನೇ.... ತನ್ನ ಹೆಸರು

ಹೇಳಿಕೊಂಡವರಿಗೆ ಸಿಗುತಲಿದ್ದ ಗವುರವವೇನು? ಮಾನಮರುವಾದಿಯೇನು? ಯೀ ಪ್ರಕಾರವಾಗಿ ಕುದುರೆಡವುಯಂಬ ಪದವು ಕುಂತಳ ಸೀಮೆಯನ್ನು ಯೇಕ ಪ್ರಕಾರವಾಗಿ ಆಳುತಲಿದ್ದುದನ್ನು ವರಣನ ಮಾಡಲಕ ಆದಿಶೇಷನೇ ಬೇಕು ಸಿವನೇ....

ಕುದುರೆಡವು ಸಂಸ್ಮರಣ ಮಾಡದಿದ್ದರೆಲ್ಲಿ ತಮ್ಮ ಮನೆಯೊಳಗ ತಿಕ್ಕಡಿಕಾಣಿಸಿಕೊಳ್ಳುವುದೋ? ಬೇಯುತ್ತಲೇ ಬಾನವೆಲ್ಲಿ ಹಳಸಿ ಬಿಡುವುದೋ? ಕುಡಿವ ನೀರೊಳಗೆಲ್ಲಿ ಹುಳಕಾಣಿಸಿಕೊಳ್ಳುವಮೋ? ತಮ್ಮ ಮನೆಯೊಳಗಿನ ಬಸುರಿಯ ಬಾಣಂತನ ಸುಸೂತ್ರವಾಗಿ ಆಗುವುದೋ ಯಿಲ್ಲಮೋ? ತಮ್ಮ ಶತ್ರುಗಳಿಂದ ತಾವೆಲ್ಲಿ ಹತರಾಗುವೆವೋ? ರೋಗ ರುಜಿಣಿಗಳಿಗೆಲ್ಲಿ ತುತ್ತಾಗುವೆಮೋ? ತಮ್ಮ ಬೆಳೆ ತಮ್ಮ ಕಯ್ಗೆ ಹತ್ತುವುದೋ ಯಿಲ್ಲಮೋ? ಹೆಣ್ಣುಹುಟ್ಟುವಲ್ಲಿ ಗಂಡು ಹುಟ್ಟಿದರೇನು ಗತಿ? ಗಂಡು ಹುಟ್ಟುವಲ್ಲಿ ಹೆಣ್ಣು ಹುಟ್ಟಿದರೇನು ಗತಿ? ಸಾಲ ಪಡದೋರು ಬಡ್ಡಿ ಸಮೇತ ಕೊಡುವರೊ ಯಿಲ್ಲಮೋ? ಯಂಬಿವೇ ಮೊದಲಾದ ಅನುಮಾನಗಳಿಂದಾಗಿ ಕುದುರೆಡವು ಕಡೇಕ ಮಡಿಯುಡಿಯಿಂದ ಬರಿಗಾಲೀಲೆ ನಡಕೊಂಡು ಹೋಗುತಲಿದ್ದವರು ವಬ್ಬರಾ ಯಿಬ್ಬರಾ... ವುಪಾಸ, ವನುವಾಸ, ಮವುನ ರೋತಾರೂಢರಾಗಿ ಹೋಗುತಲಿದ್ದವರು ವಬ್ಬರಾ.. ಯಿಬ್ಬರಾ.. ಯೀ ಭಕುತಾದಿ ಮಂದಿಯ ದಟ್ಟಂಡಿ ದಾರಂಡಿ ಅಲೆದಾಟದ ಪರಿಣಾಮವಾಗಿ ಕುದುರೆಡವು ಕಡೇಕ ಮೂಡಿದ್ದ ಕಾಲು ಹಾದಿಗಳು ನೂರಾರಿದ್ದವು.... ಬಂದು ಹೋಗುವ ಯಾತ್ರಾರ್ಥಿಗಳ ದಣುವು ಪರಿಹಾರಾರ್ಥವಾಗಿ ದಾರಿವುದ್ದಕ್ಕೂ ಅಗೋ ಅಲ್ಲೊಂದು ಛತ್ರ... ಯಿಗೋ ಯಿಲ್ಲೊಂದು ಛತ್ರ... ಅಗೋ ಅಲ್ಲಿ ಅನ್ನದಾನ, ವಸ್ತ್ರದಾನ, ಯಿಗೋ ಯಿಲ್ಲಿ ಪಾನಕ ಅರವಟ್ಟಿಗೆಗಳು. ಅಗೋ ಅಲ್ಲಿ ಸಂಕೀರ್ತನ, ಯಿಗೋ ಯಿಲ್ಲಿ ಪುರಾಣ ಪುಣ್ಯ ಶ್ರವಣ... ಅಗೋ ಅಲ್ಲಿ ಯಿವರ ಮಂಯ್ಯೊಳಗ ಅವರು ಕಾಣಿಸಿಕೊಳ್ಳುತಾರೆ... ಯಿಗೋ ಯಿವರ ಮಂಯ್ಯೊಳಗೆ ಅವರು ಕಾಣಿಸಿಕೊಳ್ಳುತ್ತಾರೆ.. ಕಾಣಿಸಿಕೊಂಡವರು ಯಾತ್ರಾರ್ಥಿಗಳ ಚಿಗದೊಡ್ಡಪ್ಪ ಮಾವ ಅತ್ತಂದಿರಾಗಿರಬಹುದು.. ಹಂಪಜ್ಜ, ಗೊಲ್ಲಲೀರಯ್ಯ, ಗೊಂಜಾಡಲರಡವಯ್ಯ, ಬಟಾಬಯಲವ್ವ ಮುಗುಲಯ್ಯ, ಬತ್ತಲವ್ವಂದಿರ ಆತುಮಗಳಾಗಿರಬಹುದು.. ಆ ಆತುಮಗಳೊಡಂಬಡಿಕೆಯಿಂದಾಗಿ ಅಕ್ಷರಸ್ಥರು ಅನಕ್ಷರಸ್ಥ ರಾಗುತಲಿದ್ದುದೋ? ಅನಕ್ಷರಸ್ಥರು ಅಕ್ಷರಸ್ಥರಾಗುತಲಿದ್ದುದೋ? ಅಳುಬುರುಕರು

ಕಿಲಕಿಲ ನಗಾಡುತಲಿದ್ದುದೋ? ಹರೇದವರು ಹಣ್ಣು ಹಣ್ಣು ಮುದೇರಾಗುತಲಿದ್ದುದೋ? ಮುದೇರು ಹರೇದ ಹುಡುಗರಾಗಿ ಪುಟಿದಾಡುತಲಿದ್ದುದೋ? ದ್ವಿಪಾದಿಗಳು ಚತುಷ್ಪಾದಿಗಳಾಗುತಲಿದ್ದುದೋ? ಚತುಷ್ಪಾದಿಗಳು ದ್ವಿಪಾದಿಗಳಾಗುತಲಿದ್ದುದೋ? ಜಾಬು ಮೋದಿರಿ... ಜಾಬು ಮೋದಿರಿ ಯಂದು ಅಂಗಲಾಚುತಲಿದ್ದುದೋ? ಬೋರಾಡಿ ಅಳುತಲಿದ್ದುದೋ? ಗತಕಾಲದ ನೆನಪುಗಳನ್ನು ಗ್ನಾಪಕ ಮಾಡಿಕೊಂಡು ಬಯಲಿಗೆ ಬಿತ್ತುತಲಿದ್ದುದೋ? ಆ ಆತುಮವನ್ನೀ ಆತುಮವು, ಯೀ ಆತುಮನ್ನಾತುಮವು ಕಾಲು ಕೆದರಿ ಜಗಳಕ್ಕೆ ಕರೆಯುತ್ತಿದ್ದುದೋ? ಪರಸ್ಪರ ಸಂತಯಿಸುತಲಿದ್ದುದೋ? ಹಾದಿವುದ್ದಕ್ಕೂ ಯೀತೆರನ ದ್ರುಶ್ಯಗಳನ್ನೇನು ಕೇಳುತೀ ಸಿವನೇ.. ಕುದುರೆಡವ ವಳ ಹೊರಗ ಯೇನು ನೋಡುತೀ ಸಿವನೇ. ಅಲ್ಲಿ ಯಿಲ್ಲಿ ಬಯಲ ಅಣು ಅಣುವಿಗೆ ಜೋತು ಬಿದ್ದಿರುವ ಆತುಮಗಳೋ ಲಕ್ಷೋಪಲಕ್ಷ. ಅವು ತಮ್ಮೆದೆಯ ದುಗುಡವನ್ನು ಬಗೆದಿಡಲಿಕೆಂದು ತೋಡಿಕೊಂಡು ಸಚರಾಚರಗಳಿಗೆ ವುಣಬಡಿಸಿ ಹಗುರಾಗಲಕೆಂದು, ಮೋಕ್ಷ ಪದವಿಯನ್ನು ವಂದಲ್ಲಾ ವಂದಿನ ಪಡಕೊಳ್ಳಲಕೆಂದು ಅವು ಪಂಚೇಂದ್ರಿಯಗಳನ್ನು ಬಾಡಿಗೆ ಪಡೆಯಲು ಸಜೀವ ಸರೀರಗಳನ್ನು ಗುತ್ತಿಗೆ ಹಿಡಿಯಲು ವಬ್ಬೊಬ್ಬರನ್ನು ಪರಿಪರಿಯಿಂದ ಅಂಗಲಾಚುತಲಿದ್ದವು.. ಕಯ್ಮುಗುದು ಬೇಡಿಕೋತಿದ್ದವು.. ಜುಲುಮಿ ಮಾಡುತ್ತಿದ್ದವು.. ಕಬ್ಜಾ ಮಾಡುತಲಿದ್ದವು.. ಅಟ್ಟಹಾಸಗಯ್ಯುತಲಿದ್ದವು.. ವಟ್ಟಿನಲ್ಲಿ ವುತ್ತರಾದಿ ಕಡೇಕ ಕಾಶೀ ಕ್ಷೇತ್ರಹೆಂಗಿರುವುದೋ? ಹಂಗೇ ದಕ್ಷಿಣಾದಿ ಕಡೇಕ ಕುದುರೆಡವು ಹಂಗಾಗಿ ಪರಿವರ್ತನಗೊಂಡು ಬಿಟ್ಟಿರುವುದು ಸಿವನೇ. ಅಲ್ಲಿ ಪವುರಾಣಿಕ ಕಾಲದಿಂದಲೂ ವಂದೇ ಸಮಕ ಹರೀತಿರೋ ಗಂಗಾಭವಾನಿ ಬ್ಯಾರೆ ಅಲ್ಲ, ಕುದುರೆಡವು ಮಗ್ಗುಲು ಹರಿತಿರೋ ಕುದುರೆಡಮ್ಮನಳ್ಳ ಬ್ಯಾರೆ ಅಲ್ಲ.. ಯಿವರಿಬ್ಬರು ಸದ್ಯಕ ಚೆಗದೊಡಪ್ಪನ ಮಕ್ಕಳು.. ಯೀ ಹೊಳೆಯೊಳಗೆ ಮಿಂದಲ್ಲಿ ತಾವು ಮಾಡಿದರ ಘನಘೋರಪಾಪಗಳು ಹೋತಾವು. ಯಿನ್ನಾ ಕುದುರೆಡಮೊಳಗ ಮಣ್ಣಾದರಂತೂ ತಮಗ ಮೋಕ್ಷ ಪ್ರಾಪ್ತಿ ಆತಯ್ತೆ.. ಯಂಬಿವೇ ಮೊದಲಾದ ನಂಬಿಕೆಗಳು ಕಾಲಿರದಿದ್ದರೂ ನಡೆದಾಡುತಲಿದ್ದವು, ಕಯ್ಯಿಯಿರದಿದ್ದರೂ ಸಿಕ್ಕಸಿಕ್ಕವರ ಮಯ್ನ ದಡವುತಲಿದ್ದವು.. ಬಾಯಿಯಿರದಿದ್ದರೂ ಕುದುರೆಡವು ಸ್ಥಳ ಪುರಾಣವನ್ನು ಸಾರಿ ಸಾರಿ ಹೇಳುತಲಿದ್ದವು ಸಿವನೇ. ಅವುಗಳ ಕರೆಗೆ ಯಿಡೀ ಕುಂತಳ ಪ್ರಾಂತ ಓ ಕೊಟ್ಟು ಯೇಸು ಕಾಲವಾಗಿತ್ತೋ.. ವಂದೊಂದು ಮೂರೊಳಗಿದ್ದ ಮುಪ್ಪಾನು

ಮುದೇರು ತಮ್ಮ ಮಕ್ಕಳನ್ನು ತರುಬಿ 'ಅಯ್ಯಾ ಮಕ್ಕಳಾ ನೀವು ನಿಮ್ಮ ಪಿತ್ರುರುಣ ತೀರಿಸಬೇಕಾದರ ನಾವು ಸತ್ತ ಮ್ಯಾಲ ನಮ್ಮ ಕಳೇಬರಗಳನ್ನು ಕುದುರೆಡವಿಗೆ ವಯ್ದು ಮಣ್ಣು ಮಾಡಬೇಕು. ಯೀ ತಮ್ಮ ಅಂತಿಮಾಪೇಕ್ಷೆಯನ್ನು ನೀವು ನೆರವೇರಸದಿದ್ದ ಪಕ್ಷದಲ್ಲಿ ತಾವು ದೆವ್ವ, ಪೀಡೆ, ಪಿಚಾಚಿಗಳಾಗುತೇವಿ ಯಂದು ನುಡಿಯತೊಡಗಿ ಯೇಸು ಕಾಲವಾಯಿತೊ? ತಮ್ಮ ಮಕ್ಕಳು ತಮ್ಮ ಅಂತಿಮಾಪೇಕ್ಷೇನ ಯೀಡೇರಿಸಲಾರದೆ ಹೋದರೇನು ಗತಿ? ಯಂಬ ಅನುಮಾನದಿಂದ ಕುಂತಳ ಸೀಮೆಯ ಯೇಸೋ ಮಂದಿ ಮುದೇರು ತಮಗೆ ತಾವ ಮಣ್ಣಾಗಬೇಕೆಂಬ ಯಿಚ್ಛೆ ಹೊಂದಿದ ವರಾಗಿ ಕಳ್ಳಗಂಟು ಮಾಡುತಲಿದ್ದರವರೆಷ್ಟೋ ಮಂದಿ? ಪಟ್ಟಿಯುತ್ತುತಲಿದ್ದವರು ಯೇಸೋ ಮಂದಿ? ತಮ್ಮ ಗತಕಾಲದ ಪಾಪ ಕೃತ್ಯಗಳನ್ನು ವಂದೊಂದಾಗಿ ನೆನಪು ಮಾಡಿಕೊಳುತ ಯಿಲಯಿಲಾಂತ ವದ್ದಾಡುತಲಿದ್ದವರು ಯೇಸೋ ಮಂದಿ? ಹೆಂಗೋ ತಮ್ಮ ಪಾಪ ಮಾಫ್ ಆಗುವುದೆಂದಮ್ಯಾಲ ತಾವ್ಯಾಕ.. ಯಂದನಕಂತ ಹೊಸ ಹೊಸ ಪಾಪ ಕುತ್ರ್ಯಗಳಿಗೆ ತೊಡಗಿದ್ದವರು ಯೇಸೊ ಮಂದಿ? ಯಿವರ ಜಲುಮ ಯಾಕ ಗಟ್ಟಿಯಾಗಿರಬೇಕು.. ನಾಳೆ ಬರೋ ಸಾವು ಯಿಂದೇ ಬರಲಿ.. ವುಪಾಸ ವನುವಾಸ ಅನುಭೋಸಿ ಅಲ್ಲೆ ಸಾಯಲಕೆಂದು ಕುದುರೆಡವು ಕಡೇಕ ಹೊಂಟಿದ್ದವರು ಯೇಸೋ ಮಂದಿ? ಸಿವನೇ.. ಯೀ ಯಾದಿಯೊಳಗೆ ಬರೀ ನಮ್ಮ ನಿಮ್ಮಂಥ ಸಾಮಾನ್ಯ ಮಂದಿಯಷ್ಟೇ ಯಿರಲಿಲ್ಲ. ತುಪಾಕನಳ್ಳಿಯ ಬೊಮ್ಮಂತ ರಾಜ, ಮದೇನಳ್ಳಿಯ ಮಾದಪ್ಪನಾಯುಡು, ಚಿಲಕಮರ್ತಿಯ ಸೀಗಂಧಾರನಾಯಕ, ಸೀಪ್ರದ ಸಿವಪ್ಪನಾಯಕ, ವಡಾರಹಳ್ಳಿಯ ಜಟ್ಟಿಂಗೆಪ್ಪ ವಡೆಯರೇ ಮೊದಲಾದ ರಾಜಮಾರಾಜರು ಯೇಕ ಪ್ರಕಾರವಾಗಿಯಿದ್ದರು. ಅವರ ಪಯ್ಕಿ ಜಮೀನ್ದಾರರು, ಜೋತಿಷಿಗಳೂ, ಕೋಮಟಿಗರೂ, ಅಲುಪಸೊಲುಪ ಬ್ರಾಹ್ಮಣ ಕೋಮಿನವರೂ ಯಿಲ್ಲದಿರಲಿಲ್ಲ ಸಿವನೇ.. ಯಿಂಥ ಜಾಯಮಾನದವರಿಂದಾಗಿ ಕುದುರೆಡವುಯೆಂಬ ಪಟ್ಟಣವು ಕರುಮಧರುಮ ತಮ್ಮ ಪಟ್ಟಣನ್ನಾಗಲೀ ತಿಟ್ಟಿಕೊಂಡರೇನು ಗತಿ? ಸಾವವರು ತಮ್ಮ ಪಾಪದ ಮೂಟೆಯನ್ನು ಕಣ್ಣಿಗೆಟುಕಿದವರ ತಲೆಗೆ ಕಟ್ಟಿದರೇನು ಗತಿ? ಪ್ರಾಣೋತ್ಕ್ರುಮಣ ಸಿದ್ಧಿಯೋಗದಲ್ಲಿರುವವರು ಪ್ರಾಣ ವದಲಿ ಕಳೇಬರದ ದಿವ್ಯ ಸ್ಥಿತಿ ಪಡಕೊಂಡವರು ದೇವರಿಗೆ ಸಮಾನಯಂಬುದು ಯೇದಗಳ ಸಾರವು ಯಂದು ಮುಂತಾಗಿ ಅಲವುಕಿಕ ಧಾಟೀಲಿ ಯೋಚನೆ ಮಾಡುತ ಸದರಿಪಟ್ಟಣದ ಪ್ರಜೆಗಳು

ತಮ್ಮ ಯಾಗ್ಯತಾನುಸಾರ ಮುದೇರನ್ನು ಬರಮಾಡಿಕೊಂಡು ಕೂಡ್ರಲು ನೆರಳನ್ನೂ, ತಿಂಬಲು ಬಾನವನ್ನು, ಕುಡಿಯಲು ನೀರು ನಿಡಿಯನ್ನೂ ವದಗಿಸಿ ಕ್ರುತಕ್ರುತ್ಯ ಭಾವನೆಯನ್ನು ಅನುಭವಿಸುತಲಿದ್ದುದು ಯೇಸು ಕಾಲದಿಂದಲೋ? ಯಿಹಲೋಕ ವ್ಯಾಪಾರ ತ್ಯಜಿಸಿದವರ ಶವಸಮುಸ್ಕಾರವನ್ನು ತ್ರಿಕರಣ ಪೂರ್ವಕವಾಗಿ ಮಾಡುತಲಿದ್ದುದು ಯೇಸು ಕಾಲದಿಂದಲೋ? ಯಿದೆಲ್ಲ ವಂದಿವಸದ್ದಲ್ಲ... ಎರಡು ದಿವಸದ್ದಲ್ಲ.. ದಿನಾಲು ಸಾವವರಿಗೆ ಆಳುವವರು ಯಾರು ಯಂಬುವ ಗಾದೆ ಮಾತುಂಟು. ತಮ್ಮ ಕುದುರೆಡವೆಂದರೆ ಬರೀ ಸಾಯುವವರಿಗಾ... ಬದುಕ ಬೇಕೆಂಬುವವರಿಗಲ್ಲವಾ, ಅಲವುಕಿಕವೂ, ಅನುಭಾವವೂಆದ ಸಾಯುವ ಕ್ರಿಯೆಯು ತಮಗೆಲ್ಲ ಸಾಂಕ್ರಾಮಿಕವಾಗಿ ಹಬ್ಬಿದರೇನು ಗತಿ ಸಿವನೇ? ತಮ್ಮ ಗಂಡಂದಿರು, ತಮ್ಮ ಹೆಂಡಂದಿರು, ತಮ್ಮ ಮಕ್ಕಳು ಯಿದ್ದಕ್ಕಿದ್ದಂತೆ ವಯ್ರಾಗ್ಯ ತಾಳಿದರೇನು ಗತಿ? ನಾಳೆ ಸಾವವರು ಯಿಂದ್ಯಾಕೆ ಸಾಯಬಾರದೆಂದು ನಿರ್ಧರಿಸಿದರೇನು ಗತಿ ಸಿವನೇ? ಯಂದು ಮುಂತಾಗಿ ಯಿಥಯಿಥದ ಆಲೋಚನೆ ಮಾಡೂತ ಸದರಿ ಪಟ್ಟಣದ ಮೂಲ ನಿವಾಸಿಗಳು ಮುದುಕರನ್ನಲ್ಲಲ್ಲೆ ಅಡ್ಡಡ್ಡಲಾಗಿ ತರುಬಿ ನೀವು ನಿಮ್ಮ ನಿಮ್ಮ ಮೂರುಗಳನ್ನೇ ಕುದುರೆಡವೆಂದೇ ಭಾವಿಸಿ ಸಾವಬೌದಿತ್ತಲ್ಲಾ.... ಯಿಲ್ಲೀದು ಅಲ್ಲೀದು ಮಣ್ಣು ವಂದೇ ಅಲ್ಲವಾ.. ಯಲ್ಲಾರಿಗೂ ಯಿರುವುದೊಂದೇ ಭೂಮಿ ಅಲ್ಲವಾ? ಯಂದು ಕೇಳಲಾರಂಭಿಸಿದ್ದುದಕ್ಕೆ ಯೇಸು ಕಾಲವಾಗಿತ್ತೋ.. ಯಿದೊಂದೇ ಅಲ್ಲದೆ, ಅದೊಂದೇ ಅಲ್ಲದೆ ಗರುಡ ಪುರಾಣವಾಚನ ಪ್ರವಚನ ಮಾಡುತ್ತ ಮರಣೋತ್ತರ ಪ್ರಾಪ್ತವಾಗುವ ನರಕಲೋಕದ ಬಗ್ಗೆ ಭಯಭೀತಿ ಹುಟ್ಟಿಸುತ್ತ ಶ್ರವಣಿಕರನ್ನು ಅಸಹಾಯಕರನ್ನಾಗಿ ಮಾಡಿ ಅವರ ಸರೀರಗಳ ಮೂಲೆ ಮುರುಕಟ್ಟಿನಲ್ಲಿರುತಲಿದ್ದ ಆಪದ್ಧನವನ್ನು ನಗು ಮೊಗದಿಂದಲೇ ವಸೂಲು ಮಾಡಿ ಬದುಕತಲಿದ್ದ ಪರಾವಲಂಬಿಗಳೂ ಸದರಿ ಪಟ್ಟದೊಳಗಿದ್ದುದು ೦ಯೇಸುಕಾಲದಿಂದಲೋ.. ಯಿವೆಲ್ಲದರ ಜೊತೆಗೆ ಅಪಕರುಮಯಿದ್ಯಾಪಾರಂಗತರಿಂದಲೂ, ನುರಿತ ಸಮಾಧಿ ವಾಸ್ತುಶಿಲ್ಪ ಪಾರಂಗತರಿಂದಲೂ, ಲಭೋಲಭೋ ಅತ್ತು ಬಾಯಿ ಬಡಿದುಕೊಳ್ಳುವವರಿಂದಲೂ ಸದರಿಪಟ್ಟಣವು ಜಗಮಗಿಸುತಲಿತ್ತು ಯಂಬಲ್ಲಿಗೆ ಸಿವಸಂಕರ ಮಾದೇವಾss...

ಜಂಬೂ ದ್ವೀಪಕಲ್ಪದ ಥೆಲಿ ಮ್ಯಾಲ ಕುಂತಳ ಸೀಮೆ, ಕುಂತಳ ಸೀಮೆಯ

ಥೆಲಿ ಮ್ಯಾಲ ಕುದುರೆಡವೆಂಬ ಪಟ್ಟಣ, ಆ ಪಟ್ಟಣದ ಥೆಲಿ ಮ್ಯಾಲ ಕೂಕಂಡು ಅಟ್ಟಹಾಸಗಯ್ಯುತಲಿದ್ದ ಸಾಧು ಸಂತಾವಧೂತ ಮಂದಿ ವಬ್ಬಿರಾ ಯಿಬ್ಬರಾ.. ರಣ ಮಹಲ ಬಯಲೊಳಗ ಸಲ್ಲೇಖನಾ ರೊತಾರೂಢನಾಗಿ ಆ ರೂಢ ಪದವೀನ ಗಿಟ್ಟಿಯಿಸಿಕೊಂಡಿದ್ದ ಸುಡುಗಾಡೆಪ್ಪಾಧೂತ. ತಾನು ಯಾವುದನ್ನು ವಾಹನ ಮಾಡಿಕೊಂಡು ಆಗಮಿಸಿದ್ದನೋ ಅದೇ ಮೋಟುಗೋಡೆಯೊಳಗ ಅಂತರ್ಧಾನಗೊಂಡಿದ್ದಂಥ ನಾಗಲಿಂಗ ತಾತ, ತನ್ನ ವಾಹನವಾದ ಹುಲಿಸಯ್ತ ನೆಲದೊಳಗ ಯಿಂಗಿ ಹೋದ ಕಾಡುಸಿದ್ಧಪ್ಪ ತಾತ, ಕಂಬಳಿ ಕೆಳಗಡೆ ಗಪ್ಪಂತ ಮಾಯವಾಗಿದ್ದ ಗೂಳ್ಯಾದ ಗಾದಿಲಿಂಗಪ್ಪ ತಾತ, ಯಿವರೊಂದೇ ಅಲ್ಲದೆ ಕರಡಿ ಗುಡ್ಡದ ಮಂಗಮ್ಮವ್ವ, ವುಪಾಸವ್ವ, ವನುವಾಸವ್ವ, ತಂಗಳವ್ವ, ತಿಂಗಳವ್ವಂದಿರೇ ಮೊದಲಾದ ಸರಣ ಸರಣೆಯರ ಸಮಾಧಿಗಳು ಅಗೋ ಅಲ್ಲಿ.. ಯಿಗೋ ಯಿಲ್ಲಿ.. ಅವಿವಕ್ಕೆಲ್ಲ ಕಳಸವಿಟ್ಟಂತೆ ಯಂಜಲೆಲೆ ಯಲ್ಲಮ್ತಾಯಿ ಸದರೀ ಪಟ್ಟಣದೊಳಗ ಅಂತರ್ಧಾನಗೊಂಡಿರುವ ಸಂಗತಿಯು.. ಅವರೊಟ್ಟಿಗೆ ಆಡಿದ ಬಾಯಿಗಳು, ಕೇಳಾಡಿದ ಕಿವಿಗಳು, ಪೇಟ, ರುಮಾಲು, ಜಡೆ, ಗಡ್ಡ ನೇವರಿಸಿದ ಕಯ್ಯಿಗಳು.. ಲಚುಮವ್ವನ ತೋಪಿನ ತನಕ ಅಡ್ಡಾಡಿದ ಕಾಲುಗಳು.. ಅವರನ್ನೆಲ್ಲದ ಶಿವರಿಯದೆ ನೋಡಿದ ಕಣ್ಣುಗಳು, ಬಿಟ್ಟೆಂಜಲುಂಡ ಬಾಯಿಗಳು.. ರೋವಾಂಚನಗೊಂಡಿದ್ದಂಥ ಮಯ್ತೊಗಲುಗಳಿವೇ ಮೊದಲಾದ ಅಂಗೋಪಾಂಗಗಳು.. ಯಿವುಗಳೊಂದೇ ಅಲ್ಲದ ಕೀರ್ತಿಸೇಷರುಪಯೋಗ ಮಾಡಿ ಬೀಸಾಡಿದ ಲೋಟ, ತಳಿಗೆ, ತಾಟು, ಬೆತ್ತ, ಬಾಚಣಿಗೆ, ಸೀರುಣಿಗೆ, ಗುಡುಗುಡಿ ಸೇದೆಸೆದ ಚಿಲುಮೆಗಳು, ಹೆಂಡ ಕುಡಿದೆಸೆದ ಮಗಿ ಕುಡಿಕೆಗಳು, ಅಂಗಿ, ಚಲ್ಲಣ, ಕಾಚ, ಗುಂಡಿ, ಕಾಲ್ಮರಿ ಯಿವೇ ಮೊದಲಾದ ನಸ್ವರವಸ್ತು ಯಿಸೇಷಗಳೂ ದಯ್ವಿಕ ಸ್ಥಾನ ಮಾನವನ ಪಡಕೊಂಡು ಬಿಟ್ಟಿದ್ದವು ಸಿವನೇ.. ಅವರಿವರು ಯಿವರವರ ಸರೀರಗಳನು ಕಬ್ಜಾ ಮಾಡಿಕೊಂಡು ಪ್ರಕಟವಾಗುತಲಿದ್ದುದೇನು? ತಾನು ಪಲಾನ ಯಿಂಥಾತನೆಂದು ಸಾರಿ ಹೇಳುತಲಿದ್ದುದೇನು? ವಂದೊಂದು ಸಮಾಧಿ ಸುತಮುತ್ತ ಯೇಳುತಲಿದ್ದ ಪ್ರಹರಿ ಗೋಡೆಗಳೇನು? ಅವರಿವರಿಗೆ ಯಿವರವ ಪಂಗಡಗಳು ಹುಟ್ಟಿಕೊಳ್ಳುತಲಿದ್ದುದೇನು? ಅಹರ್ನಿಶಿ ಪೂಜಿ ಪುನಸ್ಕಾರ ನಡೆಯುತಲಿದ್ದುದೇನು? ಯಿಡೀ ಪಟ್ಟಣದ ತುಂಬೆಲ್ಲ ದೂಪದೀಪ ಲೋಬಾನದ ಹೊಗೆ ದಟ್ಟಯಿಸುತಲಿದ್ದುದೇನು? ತಮ್ಮೊಂದೊಂದು ಕಾಯಿಲೆ, ಕಸಾಲೆ ಕಷ್ಟ ಕಾರ್ಪಣ್ಣೇವುಗಳ ನಿವಾರಣಾರ್ಥ ಸಲುವಾಗಿ, ತಮ ತಮ್ಮೆದೆಗಳೊಳಗೆ ಚಕ ಚಕನೆ

ಚಿಗಿತುಕೊಳ್ಳುತಲಿದ್ದ.. ಜಿಗಿತುಕೊಂಡು ವನಾಂತರ ರೂಪು ಪಡಕೋತಿದ್ದ ಭಯ ಭೀತಿಗಳನ ತಮಣಿ ಮಾಡುವ ಸಲುವಾಗಿ ಭಕುತಾದಿ ಮಂದಿಯು ಮಡಿವುಡಿಯಿಂದ ಯಿೊ ಸಮಾಧಿಯಿಂದ ಆ ಸಮಾಧಿಗೆ, ಆ ಸಮಾಧಿಯಿಂದ ಯಿೊ ಸಮಾಧಿಗೆ ದಟ್ಟಂಡಿ ದಾರಂಡಿ ಅಲದಾಡುತಲಿದ್ದುದೇನು? ಅಲದಾಡುವ ಅಲವುಕಿಕ ಸಡಗರದೊಳಗ ವರ್ತಮಾನವ ಮರೆವುತಲಿದ್ದುದೇನು? ಹಿಂಗಾಗಿ ಸದರಿ ಪಟ್ಟಣದೊಳಹೊರಗ ಯಲ್ಲಂದರಲ್ಲಿ ಭೂತಕಾಲದ ತೊಗಲ ಬಾವಲಿಗಳು ಜೋತಾಡುತಲಿದ್ದುದೇನು ಹೇಳಲಿ ಸಿವನೇ? ಭೂತಕಾಲದಿಂದ ವದೆಸಿಕೊಂಡಿದ್ದ ವರ್ತಮಾನವು ದೇಸಾಂತರ ಹೋಗಿ ಬಿಟ್ಟಿತ್ತು ಸಿವನೇ.. ಭಕುತಿ ಕರಿಗಡುಬಿನೊಳಗ ಭೀತಿಯ ಹೊರಣ ಯಿತ್ತಲ್ಲಿ.. ಮಂದಿ ತಮ ತಮ್ಮೆದೆಗಳನು ಅಂಗಯ್ಯೊಳಗ ಯಿಟುಕೊಂಡು ಅಯ್ಯೋ ತಮ್ಮ ನೆಚ್ಚಿನ ಪಟ್ಟಣವು ಸಾಯಿರಾರು ಸೊದೇಸಿ, ಪರದೇಶಿ ಆತುಮಗಳ ಆಡುಂಬೊಲವಾಗಿ ಬಿಟ್ಟಿರುವುದಲ್ಲಾ... ಯಿಲ್ಲಿನ ಮನೆ ಸಂಖ್ಯೆಗಳಿಗಿಂತ ಸಮಾಧಿಗಳೇ ದುಪ್ಪಟ್ಟಾಗಿರುವವಲ್ಲಾ... ಅವು ವಂದೊಂದು ನಯನ ಮನೋಹರವೂಭೀತಾವಾಹವೂಆಗಿರುವವಲ್ಲಾ, ನಿಶ್ಯಬ್ಧವಾಗಿ ಗಹಗಹಿಸುತ್ತಿರುವವಲ್ಲಾ.. ಆತುಮಗಳ ಅರಾಜಕತೆಯನ್ನು ತಡೆಯೋರು ಯಿಲ್ಲ ದಂಗಾಯ್ತಲ್ಲಾ ಯಂದು ಮಮ್ಮಾಲಾಂತ ಮರುಗುತ್ತಿರುವಾಗ್ಗೆ....

ತಳವಾರರ ಯೇಕಾಂಬರನು ಗ್ರುಹ ಕ್ರುತ್ಯದಾಕ್ರಮಣದಿಂಗಾಗಿ ನಜ್ಜುಗುಜ್ಜಾಗಿದ್ದ ಸಿಲವಾರ ಚಕಲಿಯನ್ನೇ ಹ್ಯಾಟಿನೋಪಾದಿಯಲ್ಲಿ ತಲಿಮ್ಯಾಲಯಿಟುಕೊಂಡು ಭಲೇ ಗತ್ತಿನಿಂದ ಬತೇರಿ ಯೇರಿ ವುದ್ದೋಕೆ ನಿಂತು "ಅಯ್ಯಾಮ್ ಥಾಮಸ್ ಮನ್ರೋ" ಯಂದು ಪಯಿಪೋಟಿಗೆ ಬಿದ್ದು ಕೂಗಲಾರಂಭಿಸಿದನು ಸಿವನೇ.. ಬಾಕಿ ವುಳುಕೊಂಡಿದ್ದ ಯಿೊ ಯರಡು ಆತುಮಗಳು ಮಂದಿಯೊಳಗೆ ಕಾಣಿಸಿಕೊಂಡವೆಂದ ಮ್ಯಾಲ ತಮ್ಮನ್ನು ಕಾಪಾಡುವವರೆಲ್ಲದಾರ? ಯಂದನಕಂತ ಕರುಳುಗಳನು ಬಾಯೊಳಗಿಟುಕೊಂಡು.. ಸಿವಸಂಕರ ಮಾದೇವಾss...

* * * *

ಯಿೊ ಕ್ರುತಿಯನ್ನು ಮೋದಿದವರಿಗೆ, ಮೋದಿಸಿ ಕೇಳಿದವರಿಗೆ.. ನಿಂದಿಸದೆ ಗುಣಗ್ರಹಣದಿಂದ ಸಂತೋಷ ಪಡುವವರಿಗೆ.. ಮೋದಿರೆಂದು ಸಿಫಾರಸ್ಸು ಮಾಡುವವರಿಗೆ.. ಕುದುರೆಡವ ಸಾಂಬವಿ ಅಮ್ಮನವರು ಆಯುರಾರೋಗ್ಯ, ಸಂತತಿ, ಸಂಪತ್ತು, ವಿದ್ಯಾವಿಶೇಷಗಳನ್ನು ಕರುಣಿಸಲಿ.. ಸಕಲ

ಮನೋಭಿಷ್ಟಂಗಳನು ಯಿಡೇರಿಸಲಿ.. ಅಂಥವರ ನವಚಿರಂಜೀವಿಗಳು ಸಾರ್ವಕಾಲಿಕವಾದ ಆರೋಗ್ಯದಿಂದ ನೂರು ಕಾಲ ಬಾಳಿ ಬದುಕಲಿ.. ಕುಬೇರನ ಐಶ್ವರ್ಯ ಪ್ರಾಪ್ತವಾಗಲಿ.. ಬ್ರಹುಸ್ಪತಿಯ ಪಾಂಡಿತ್ಯ ಲಭಿಸಲಿ.. ರೂಪ ಲಾವಣ್ಯ ಸವುಂದರ್ಯ ಸವುಕುಮಾರ್ಯಾಧಿಗಳಿಗೆ ವಡೆಯರಾದ ಅಸ್ವಿನಿ ದೇವತೆಗಳು ವಲಿಯಲಿ.. ಮೋದಿದ ತಂದೆ ತಾಯಿಗಳ ಮಕ್ಕಳು ಸಂಪತ್ತಿನಿಂದೊದಗೂಡಿ ಸುಕ್ಲಪಕ್ಷದ ಬಿದಿಗೆಯ ಚಂದ್ರಾಮನಂತೆ ವರ್ಧಿಷ್ಣುಗಳಾಗಲಿ.. ಮೋದುವ ಬ್ರೆಮ್ಮಾಚಾರಿಗಳಿಗೆ ಮದುವೆಯಾಗುವ ಬವಕೆ ಮೂಡಿ ಕುಲರೂಪ ಗುಣ ಚಾರಿತ್ರ್ಯವುಳ್ಳ ಕನ್ಯೆಯರು ಪಾಣಿಗ್ರಹಣವಂ ಮಾಡುವಂತಾಗಲಿ.. ಸುಪುತ್ರ, ಪುತ್ರೆಯರನ್ನು ಪಡೆವಂತಾಗಲಿ.. ಸಿವ ಸಂಕರ ಮಾದೇವಾss...

ಯಿ ನವೀನ ವಚನ ಕ್ರುತಿಯಲ್ಲಿ ಶಬ್ದಾರ್ಥಗಳೋಳ್ ಬುದ್ದಿ ಪ್ರಮಾದದಿಂದ ಬಂದ ನ್ಯೂನಾಧಿಕ ಭಾವ ಯಿದ್ದಲ್ಲಿ ಸಕಲ ಕಲಾಭಿಜ್ಞರಾದ ಲೇಖಕ, ವಾಚಕರು ತಿದ್ದಿ ಮೋದುತ್ತ ದೋಷವನ್ನೆಣಿಸದೆ ಗುಣವಂ ಕಂಡು ಆನಂದವಂ ಪಡುವುದು.. ಆಸೀರುವಾದವಂ ಮಾಡುವುದು ಯಂಬಲ್ಲಿಗೆ ಯಿ ಅರಮನೆಯಂಬ ಅಯ್ತಿಹಾಸಿಕ, ಪವುರಾಣಿಕ, ಸಾಮಾಜಿಕ ಕಥಾನಕವು ಪರಿಸಮಾಪ್ತಿಯಾದುದು

ಸಿವ ಮಂಗಳಂ ನಿತ್ಯ ಸುಭ ಮಂಗಳಂ..

* * * *